ನವಯುಗ

1)	3-9-1970	12
2)	10-9-1970	12
3)	17-9-1970	12
4)	24-9-1970	18
5)	1-10-1970	12
6)	8-10-1970	12
7)	15-10-1970	12
8)	29-10-1970	28
9)	5-11-1970	12
10)	12-11-1970	12
11)	19-11-1970	12
12)	26-11-1970	16
13)	3-12-1970	12
14)	10-12-1970	12
15)	17-12-1970	12
16)	24-12-1970	12
17)	31-12-1970	16
18)	7-1-1971	12
19)	14-1-1971	12
20)	28-1-1971	48 ಪ್ರಜಾರಾಜ್ಯೋತ್ಸವಾಂಕ
		306

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 1

NAVAYUGA

3—9—1970

ಶ್ರೀಮತಿ ಗಾಂಧಿಯವರು

ರಾಜ್ಯತಂತ್ರದಲ್ಲಿ ಚಾಣಕ್ಯನಿಗೂ ಮಿಗಿಲು

ಮಹಾರಾಷ್ಟ್ರದ ಮುಖ್ಯಮಂತ್ರಿ ವಸಂತರಾವ್ ನಾಯಕರಿಗೆ ಬೆಳಗಾಂವಿಯನ್ನು ನುಂಗುವುದೊಂದೇ ಚಿಂತೆ. ಅವರ ದನ್ನು ಬಯಸಬಹುದು; ಆದರೆ, ಮರಾಠಿಗರು ನಾಯಕರಿಂದ ಆ ಕೆಲಸ ಮಾಡಿಸಿಯೇ ತೀರುವ ಪ್ರತಿಜ್ಞೆ ತೊಟ್ಟಿದ್ದಾರೆ; ಇಲ್ಲವಾದರೆ, ಅಧಿಕಾರದಿಂದ ಇಳಿದು ಬಿಡಿರೆಂದವರು ಪಂಥಾಹ್ವಾನವನ್ನೇ ನೀಡಿದ್ದಾರೆ. ನಾಯಕರು ಇದಕ್ಕಾಗಿ ಚಡಪಡಿಸುತ್ತಾರೆ; ಕೈಕಾಲು ಬಿಡುತ್ತಾರೆ. ವಾರಕ್ಕೆ ಮೂರು ಬಾರಿ ಪ್ರಧಾನಿ ಇಂದಿರಾಜಿಯವರನ್ನು ಕಂಡು ಮೂರು ನಿಮಿಷ ಹಲ್ಲು ಕಿರಿಯುತ್ತಾರೆ; ಬೆಳಗಾಂವಿ ನಮಗೆ ಸೇರುವ ಬಗ್ಗೆ ಸ್ಪಷ್ಟ ಆಶ್ವಾಸನೆ ದೊರೆವವರೆಗೆ ಮರಾಠಿ ವಿಧಾನ ಸಭೆಗಳು ಸಭೆ ಸೇರಲು ನಿರಾಕರಿಸುತ್ತಿವೆ........ ಎಂದು ಮುಂದಾಗಿ ತನ್ನ ಗೋಳು ಹೊಯ್ದುಕೊಳ್ಳುತ್ತಾರೆ. ಇಂದಿರಾಜಿಯೂ ಪ್ರತಿಯಾಗಿ ಮುಗುಳ್ನಗುತ್ತಾರೆ; ಹೆದರಬೇಡಿ, ಎಲ್ಲರಿಗೂ ನ್ಯಾಯ ದೊರೆಯುತ್ತದೆ ಎಂದು ಸಮಾಧಾನಪಡಿಸಿ ಬೊಂಬಾಯಿ ಟಿಕೇಟುಕೊಳ್ಳುವಂತೆ ಮನವೊಲಿಸುತ್ತಾರೆ.

ಪ್ರಧಾನಿ ಇಂದಿರಾ ಗಾಂಧಿಯವರು ರಾಜ್ಯತಂತ್ರದಲ್ಲಿ ಆಕೆಯ ಅಪ್ಪನಿಗೂ ಮಿಗಿಲು ಎಂಬುದನ್ನು ಈ ಒಂದು ವರ್ಷದಲ್ಲಿ ಜಗಜ್ಜಾಹೀರು ಮಾಡಿದ್ದಾರೆ. ಚಾಣಕ್ಯನನ್ನು ನಾವು ಕಾಣಲಿಲ್ಲ; ಆದರೆ, ಆತನ ತಂತ್ರಗಳನ್ನು ಓದಿದ್ದೇವೆ. ಆತ ಮೌರ್ಯ ಚಂದ್ರಗುಪ್ತನಿಗಾಗಿ ತಂತ್ರ ನಿರ್ವಹಿಸಿದರೆ, ಶ್ರೀಮತಿಯವರು ತನ್ನ ಸಿಂಹಾಸನ ಭದ್ರತೆಗಾಗಿ ಅದಕ್ಕೂ ಮಿಗಿಲಾದ ತಂತ್ರವಾದಿಯಾಗಿದ್ದಾರೆ. ಮರಾಠಿಗಳ ಅನಭಿಷಿಕ್ತ ದೊರೆತನದಿಂದ ಶ್ರೀ ಚವಣರನ್ನು ಹಾಡುಹಗಲಲ್ಲಿ ಎಲ್ಲರೂ ನೋಡುತ್ತಿರುವಂತೆಯೇ ಯಾರಿಗೂ ಅರಿಯದಂತೆಯೇ ತಪ್ಪಿಸಿಬಿಟ್ಟರು. ಅವರ ಸ್ಥಾನಕ್ಕೆ ಮತ್ತಾರೂ ಏರದಂತೆ ಅವರು ಕಣ್ಣಿಗೆ ಎಣ್ಣೆ ಹಾಕಿ ನೋಡುತ್ತಾರೆ. ಮುಖ್ಯಮಂತ್ರಿ ನಾಯಕರು ಯುವರಾಜರೆಂಬುದನ್ನು ಅವರೆಂದೋ ಅರಿತುಕೊಂಡಿದ್ದು ಅವರನ್ನೂ ಸೆಲಕವು ಮಾಡಲು ಒಳ್ಳೆಯ ದಿನಕ್ಕಾಗಿ ಶ್ರೀಮತಿ ಗಾಂಧಿಯವರು ಕಾಯುತ್ತಿದ್ದಾರೆ.

ಶ್ರೀ ನಾಯಕರಿಗೂ ಉಳಿದ ಮರಾಠಿಗರಿಗೂ ಇದು ತಿಳಿಯದ ಸಂಗತಿಯಲ್ಲ. ಆದರೂ ಒಂದೊಂದು ಆಶೆ ಆಮಿಷಗಳಿಂದ ಅವರು ಶ್ರೀಮತಿಯವರನ್ನು ಬೆಂಬಲಿಸುತ್ತಾರೆ. ಕರ್ನಾಟಕದ ಎಸ್ಸೆನ್ ವಿರುದ್ಧ ಶ್ರೀಮತಿ ಹೋರಾಡಿದಾಗ ಬೆಳಗಾಂವಿ ಸುಲಭವಾಗೇ ದಕ್ಕುವುದೆಂಬ ಲಾಲಸೆಯಿಂದ ಆಕೆಯನ್ನು ಬೆಂಬಲಿಸಿದರು. ಶ್ರೀ ಚವಣರಿಗೆ ಇಂದಿರಾ ತಂತ್ರದ ಬಿಂದು ಪರಿಚಯವಿದ್ದುದರಿಂದಾಗಿಯೇ ಅವರು ಇಂಡಿಕೇಟ್ ಎಂದು ಸಾರಲು ಕೆಲದಿನ ದೂಡಿದರು. ಶ್ರೀ ಚವಣರು ಇಂಡಿಕೇಟಿಗರಾದರೆಂಬುದಕ್ಕಿಂತ ಮರಾಠಿಗಳ ಬೆಳಗಾಂವಿ ಲಾಲಸೆಯು ಅವರನ್ನು ಇಂದಿರಾ ಗಾಂಧಿಯ ಸೆರಗಿನಡಿಗೊಯ್ದಿತೆನ್ನುವುದು ಹೆಚ್ಚು ಸರಿಯಾದೀತು. ಈಗ್ಗೆ ಒಂದು ವರ್ಷದಿಂದ ಚವಣರು ಬಾಯಿಗೆ ಬೀಗಮುದ್ರೆ ಬಿದ್ದಿರುವುದು ಇದನ್ನು ಸಮರ್ಥಿಸುತ್ತದೆ.

ಮಹಾರಾಷ್ಟ್ರ—ಕರ್ನಾಟಕ ಸೀಮಾ ವಿವಾದ ಮರಾಠಿಗರು ಬೇಕೆಂದೇ ಮುಂದೆ ತಂದು ಕೊಂಡದ್ದು. ಹುರಿಯಾಗಿದ್ದ ಈ ಪ್ರಶ್ನೆಯೀಗ ಹೆಬ್ಬಾವಾಗಿ ಮರಾಠಿ ನಾಯಕರನ್ನು ನುಂಗ ಬಂದಿದೆ. ಯಾವುದೇ ಕ್ಷುಲ್ಲಕ ಸ್ವಾರ್ಥ ಸಾಧನೆಗಾಗಿ ತಾವು ಸೃಷ್ಟಿಸಿದ ಈ ನವೀನ ಬಸ್ಮಾಸುರ ತಮ್ಮ ತಲೆಯ ಮೇಲೇ ಕೈಯಿಡ ಬಂದಾಗ ಅವರು ಹಿಂದೂ ಮುಂದೂ ಕಾಣದೆ ಕಂಗಾಲಾಗಿದ್ದಾರೆ. ಆದುದರಿಂದ ಅಧಿಕಾರ ಸ್ಥಾನ ಮಂಡಿತರಾದವರು ಹತಮಂತರಾಗಿದ್ದಾರೆ, ಶ್ರೀ ರಾಮ–ಇಂದಿರಾರ ಮುಂದೆ ಕೈ ಮುಗಿಯುತ್ತಾರೆ; ಹಲ್ಲು ಕಿರಿದು ತಮ್ಮ ಮೇಲೆ ಅನುಗ್ರಹ ತೋರಿ ಎಂದು ದಂಬಾಳು ಬೀಳುತ್ತಾರೆ.

ಶ್ರೀಮತಿ ಗಾಂಧಿಯವರೂ ಈ ಸಂಬಂಧದಲ್ಲಿ ಬಾಯಿ ಬಿಗಿ ಹಿಡಿದಿದ್ದಾರೆ. ಹೆಂಗಸು ಬಾಯಿತುಂಬ ಮಾತಾಡಿದರೂ, ಬಾಯಿ ಮುಚ್ಚಿ ಕುಳಿತರೂ ಅದರ ಹಿಂದೇ ಭಾರೀ ತಂತ್ರ ವಿದೆಯೆನ್ನುವುದು ಲೋಕರೂಢಿ.. ಆದುದರಿಂದ ಆಕೆಯ ಗಂಭೀರ ಮೌನ ಮರಾಠೀ ಬಕಾಸುರರಿಗೆ ಮಿಷ್ಟಾನ್ನ ನೀಡುವುದಿಲ್ಲವೆಂದು ಗೊತ್ತು. ಅದಕ್ಕಾಗಿ ಹಲವು ಬಗೆಯ ಒತ್ತಡಗಳನ್ನು ಅವರು ಪ್ರಧಾನಿಯ ಮೇಲೆ ಹೇರುವ ಪ್ರಯತ್ನ ಮಾಡುತ್ತಿದ್ದಾರೆ. ಮಹಾರಾಷ್ಟ್ರದ ಕಾಂಗ್ರೆಸ್ಸಿಗರು ಇಂಡಿಕೇಟಿಗೆ ಬೆಂಬಲನೀಡುವುದನ್ನು ನಿಲ್ಲಿಸುವುದಿಲ್ಲ; ಏಕೆಂದರೆ, ಸಿಂಡಿಕೇಟು ಮಹಾಜನ ವರದಿಯನ್ನು ಒಪ್ಪಿಕೊಂಡಿದೆ. ಆದುದರಿಂದ ಶ್ರೀಮತಿ ಗಾಂಧೀಗೆ ಈ ಹೆದರಿಕೆಯಿಲ್ಲ. ಆದರೂ ಬಿಜೂ ಪಟ್ನಾಯಕರಂತೆ ವಸಂತ ರಾವ್ ನಾಯಕರೂ ಪ್ರತ್ಯೇಕ ಕಾಂಗ್ರೆಸ್ಸು ಆರಂಭಿಸಿಯಾರೇ ಎಂಬ ಸಂದೇಹ ಅವರಿಗೆ. ಗಡಿ ಪ್ರಶ್ನೆಯೊಂದನ್ನುಳಿದು ಉಳಿದೆಲ್ಲವನ್ನೂ ಮರಾಠಿಗರಿಗೆ ತೃಪ್ತಿಕರವಂತೆ ನಿರ್ವಹಿಸಿದ ಪ್ರಧಾನಿ ಅವರೊಲವನ್ನು ಉಳಿಸಿಕೊಂಡಿದ್ದಾರೆ.

ಗಡಿ ವಿವಾದದಲ್ಲಿ ತಮ್ಮ ಕುದುರೆಗೆ ಮೂರುಕಾಲು ಎಂದು ಹಾರಿದ್ದ ಮರಾಠಿಗರು ಅದನ್ನು ನೇರವಾಗಿಯಾಗಲೀ ಡೊಂಕಾಗಿಯಾಗಲೀ ಸಿದ್ಧ ಮಾಡ ಹೊರಟಿದ್ದಾರೆ. ಆದುದರಿಂದ ವಿಧಾನ ಸಭೆಗಳನ್ನು ಅನಿರ್ದಿಷ್ಟಾವಧಿ ಮುಂದೆ ಹಾಕುವ ಹವ್ಯಾಸಕ್ಕಿಳಿದಿದ್ದಾರೆ. ಇದು ಪ್ರಾಯಃ ಅವರ ಕೊನೆಯ ಅಸ್ತ್ರವಿರಬೇಕು. ಇದಕ್ಕೆ ಪ್ರಧಾನಿ ಸಗ್ಗು ಬಡೆಯುವವರಲ್ಲ. ಮಹಾರಾಷ್ಟ್ರ ವಿಧಾನ ಸಭೆ ಸೇರದಿದ್ದರೆ, ಆಕೆಯದೇನೂ ತಲೆ ಹೋಗುವುದಿಲ್ಲ. ಈ ನಡುವೆ ಶ್ರೀ ನಾಯಕರು ಮಹಾಜನ ವರದಿಗೆ ಪರ್ಯಾಯವಾಗಿ ಇತರ ಸೂಚನೆಗಳನ್ನಿಟ್ಟಿದ್ದಾರೆ.

ಬೆಳಗಾಂವಿಗೆ ಬದಲಾಗಿ ಕರ್ನಾಟಕಕ್ಕೆ ಪರಿಹಾರ ಕೊಡುವುದು; ಗಡಿಪ್ರದೇಶದಲ್ಲಿ ಜನಮತಗಣನೆ ನಡೆಸುವುದು, ಮತ್ತೊಂದು ಟ್ರಿಬ್ಯೂನಲ್ ನೇಮಿಸುವುದು ಇತ್ಯಾದಿ— ಅಂದರೆ, ಬೆಳಗಾಂವಿ ಅಪರೇಶನ್ ಇಲ್ಲವೆಂದರ್ಥವಲ್ಲ. ಅವಾವ ಸಲಹೆಯಿದ್ದರೂ ಇದಕ್ಕೆ ಕರ್ನಾಟಕವೆಂದೂ ಒಪ್ಪುವುದಿಲ್ಲ. ಎರಡೂ ರಾಜ್ಯಗಳು ಒಪ್ಪಬೇಕೆಂಬ ತಳಹದಿಯ ಮೇಲೆಯೇ ಮಹಾಜನ ಆಯೋಗ ರಚಿತವಾದದ್ದು. ಇಲ್ಲವಾದರೆ, ಆಯೋಗದ ಅಗತ್ಯವಾದರೂ ಏನಿತ್ತು? ಮರಾಠಿಗರು ವರದಿ ತಮಗನುಕೂಲವಿಲ್ಲವೆಂದದನ್ನು ತಿರಸ್ಕರಿಸುವುದಾದರೆ, ಅದಕ್ಕೆ ಕೇಂದ್ರ ಸರಕಾರದ ಒಪ್ಪಿಗೆಯಿರುವುದಾದರೆ, ಇನ್ನು ಮುಂದೆ ಆಯೋಗ ರಚನೆಗಳು ಕಾಲಹರಣ ಸಾಧನಗಳು ಮಾತ್ರವಾದಾವು.

ಇದೀಗ ಶ್ರೀಮತಿ ಗಾಂಧಿಯವರು ತನ್ನ ತಪ್ಪನ್ನು ಅರಿತುಕೊಂಡಿದ್ದಾರೆ. ಆಯೋಗದ ವರದಿಯನ್ನು ಹಳಸಲು ಮಾಡಿದ್ದರಿಂದಲೇ ಪೆಡಂಭೂತ ಹುಟ್ಟಿಕೊಂಡಿದೆ. ವರದಿಯ ಬಗ್ಗೆ ಎರಡೂ ರಾಜ್ಯಗಳ ನಡುವೆ ಒಮ್ಮತವೆಂದಿಗೂ ಅಸಾಧ್ಯ. ಹೀಗೆಂದು ವರದಿಯನ್ನು ಸಂಸತ್ತಿನ ಮುಂದಿಡುವುದು ಸಾಧ್ಯವಿಲ್ಲ. ಸಂಸತ್ತನ್ನು ಕೇಳಿ ಈ ಆಯೋಗ ನಿಯುಕ್ತವಾಗಲಿಲ್ಲ. ಆದುದರಿಂದ ಶ್ರೀಮತಿ ಗಾಂಧಿಯವರಿಗೆ ಈಗ ಉಳಿದಿರುವ ದಾರಿಯೆರಡು— ಮೊದಲನೆಯದಾಗಿ ಮಹಾಜನ ವರದಿಯನ್ನು ಇದ್ದಕ್ಕಿದ್ದಂತೆ ಕಾರ್ಯರೂಪಕ್ಕೆ ತರುವುದು—ಇಂತಹ ದಿಟ್ಟತನವನ್ನು ಆಕೆ ತೋರಿಸಲು ಹಿಂಜರಿಯಲಾರರು; ಆದರೆ, ಮರಾಠಿಗರ ಸಂಪೂರ್ಣ ತಿರಸ್ಕಾರ ತನ್ನ ಅಧಿಕಾರಕ್ಕೆ ಗಂಡಾಂತರಕಾರಿಯಾಗುವ ಸನ್ನಿವೇಶವನ್ನು ಆಕೆ ತಂದುಕೊಳ್ಳುವುದಿಲ್ಲ. ಆದುದರಿಂದ ಹೊಣೆಗಾ

(ಹನ್ನೆರಡನೇ ಪುಟ ನೋಡಿರಿ)

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 1

NAVAYUGA

3—9—1970

ಶ್ರೀಮತಿ ಗಾಂಧಿಯವರು

ರಾಜ್ಯತಂತ್ರದಲ್ಲಿ ಚಾಣಕ್ಯನಿಗೂ ಮಿಗಿಲು

ಮಹಾರಾಷ್ಟ್ರದ ಮುಖ್ಯಮಂತ್ರಿ ವಸಂತರಾವ್ ನಾಯಕರಿಗೆ ಬೆಳಗಾಂವಿಯನ್ನು ನುಂಗುವುದೊಂದೇ ಚಿಂತೆ. ಅವರದನ್ನು ಬಯಸದಿರಬಹುದು; ಆದರೆ, ಮರಾಠಿಗರು ನಾಯಕರಿಂದ ಆ ಕೆಲಸ ಮಾಡಿಸಿಯೇ ತೀರುವ ಪ್ರತಿಜ್ಞೆ ತೊಟ್ಟಿದ್ದಾರೆ; ಇಲ್ಲವಾದರೆ, ಅಧಿಕಾರದಿಂದ ಇಳಿದು ಬಿಡಿರೆಂದವರು ಪಂಥಾಹ್ವಾನವನ್ನೇ ನೀಡಿದ್ದಾರೆ. ನಾಯಕರು ಇದಕ್ಕಾಗಿ ಚಡಪಡಿಸುತ್ತಾರೆ; ಕೈರಾಲು ಬಿಡುತ್ತಾರೆ. ವಾರಕ್ಕೆ ಮೂರು ಬಾರಿ ಪ್ರಧಾನಿ ಇಂದಿರಾಜಿಯವರನ್ನು ಕಂಡು ಹತ್ತಾರು ನಿಮಿಷ ಹಲ್ಲು ಕಿರಿಯುತ್ತಾರೆ; ಬೆಳಗಾಂವಿ ನಮಗೆ ಸೇರುವ ಬಗ್ಗೆ ಸ್ಪಷ್ಟ ಆಶ್ವಾಸನೆ ದೊರೆವವರೆಗೆ ಮರಾಠಿ ವಿಧಾನ ಸಭೆಗಳು ಸಭೆ ಸೇರಲು ನಿರಾಕರಿಸುತ್ತಿವೆ....... ಎಂದು ಮಂಕಾಗಿ ತನ್ನ ಗೋಳು ಹೊಯ್ದುಕೊಳ್ಳುತ್ತಾರೆ. ಇಂದಿರಾಜಿಯೂ ಪ್ರತಿಯಾಗಿ ಮುಗುಳ್ನಗುತ್ತಾರೆ; ಹೆದರಬೇಡಿ, ಎಲ್ಲರಿಗೂ ನ್ಯಾಯ ದೊರೆಯುತ್ತದೆ ಎಂದು ಸಮಾಧಾನಪಡಿಸಿ ಬೊಂಬಾಯಿ ಟಿಕೇಟು ಕೊಳ್ಳುವಂತೆ ಮನವೊಲಿಸುತ್ತಾರೆ.

ಪ್ರಧಾನಿ ಇಂದಿರಾ ಗಾಂಧಿಯವರು ರಾಜ್ಯತಂತ್ರದಲ್ಲಿ ಆಕೆಯು ಅಪ್ಪನಿಗೂ ಮಿಗಿಲು ಎಂಬುದನ್ನು ಈ ಒಂದು ವರ್ಷದಲ್ಲಿ ಜಗಜ್ಜಾಹೀರು ಮಾಡಿದ್ದಾರೆ. ಚಾಣಕ್ಯನನ್ನು ನಾವು ಕಾಣಲಿಲ್ಲ; ಆದರೆ, ಆತನ ತಂತ್ರಗಳನ್ನು ಓದಿದ್ದೇವೆ. ಆತ ಮೌರ್ಯ ಚಂದ್ರಗುಪ್ತನಿಗಾಗಿ ತಂತ್ರ ನಿರ್ವಹಿಸಿದರೆ, ಶ್ರೀಮತಿಯವರು ತನ್ನ ಸಿಂಹಾಸನ ಭದ್ರತೆಗಾಗಿ ಅದಕ್ಕೂ ಮಿಗಿಲಾದ ತಂತ್ರವಾದಿಯಾಗಿದ್ದಾರೆ. ಮರಾಠಿಗಳ ಅನಭಿಷಿಕ್ತ ದೊರೆತನದಿಂದ ಶ್ರೀ ಚವನರನ್ನು ಹಾಡುಹಗಲಲ್ಲಿ ಎಲ್ಲರೂ ನೋಡುತ್ತಿರುವಂತೆಯೇ ಯಾರಿಗೂ ಅರಿಯದಂತೆಯೇ ತಿಪ್ಪೆಗೆಸೆದು ಬಿಟ್ಟರು. ಅವರ ಸ್ಥಾನಕ್ಕೆ ಮತ್ತಾರೂ ಏರದಂತೆ ಅವರು ಕಣ್ಣಿಗೆ ಎಣ್ಣೆ ಹಾಕಿ ನೋಡುತ್ತಾರೆ. ಮುಖ್ಯಮಂತ್ರಿ ನಾಯಕರು ಯುವರಾಜರೆಂಬುದನ್ನು ಅವರೆಂದೋ ಅರಿತುಕೊಂಡಿದ್ದು ಅವರನ್ನೂ ಪೇಲವ ಮಾಡಲು ಒಳ್ಳೆಯ ದಿನಕ್ಕಾಗಿ ಶ್ರೀಮತಿ ಗಾಂಧಿಯವರು ಕಾಯುತ್ತಿದ್ದಾರೆ.

ಶ್ರೀ ನಾಯಕರಿಗೂ ಉಳಿದ ಮರಾಠಿಗರಿಗೂ ಇದು ತಿಳಿಯದ ಸಂಗತಿಯಲ್ಲ. ಆದರೂ ಒಂದೊಂದು ಸಲ ಆವೇಶಗಳಿಂದ ಅವರು ಶ್ರೀಮತಿಯವರನ್ನು ಬೆಂಬಲಿಸುತ್ತಾರೆ. ಕರ್ನಾಟಕದ ಎಸ್ಸೆನ್ ವಿರುದ್ಧ ಶ್ರೀಮತಿ ಹೋರಾಡಿದಾಗ ಬೆಳಗಾಂವಿ ಸುಲಭವಾಗೇ ದಕ್ಕುವುದೆಂಬ ಲಾಲಸೆಯಿಂದ ಆಕೆಯನ್ನು ಬೆಂಬಲಿಸಿದರು. ಶ್ರೀ ಚವನರಿಗೆ ಇಂದಿರಾ ತಂತ್ರದ ಬಿಸಿ ಪರಿಚಯವಿದ್ದುದರಿಂದಾಗಿಯೇ ಅವರು ಇಂಡಿಕೇಟ್ ಎಂದು ಸಾರಲು ಕೆಲದಿನ ದೂಡಿದರು. ಶ್ರೀ ಚವನರು ಇಂಡಿಕೇಟಿಗರಾದರೆಂಬುದಕ್ಕಿಂತ ಮರಾಠಿಗಳ ಬೆಳಗಾಂವಿ ಲಾಲಸೆಯು ಅವರನ್ನು ಇಂದಿರಾ ಗಾಂಧಿಯ ನೆರಳಡಿಗೊಯ್ದಿತೆನ್ನುವುದು ಹೆಚ್ಚು ಸರಿಯಾದೀತು. ಈಗ್ಗೆ ಒಂದು ವರ್ಷದಿಂದ ಚವನರು ಬಾಯಿಗೆ ಬೀಗ ಮುದ್ರೆ ಬಿದ್ದಿರುವುದು ಇದನ್ನು ಸಮರ್ಥಿಸುತ್ತದೆ.

ಮಹಾರಾಷ್ಟ್ರ—ಕರ್ನಾಟಕ ಸೀಮಾ ವಿವಾದ ಮರಾಠಿಗರು ಬೇಕೆಂದೇ ಮುಂದೆ ತಂದು ಕೊಂಡದ್ದು. ಮರಿಯಾಗಿದ್ದ ಈ ಪ್ರಶ್ನೆಯೀಗ ಹೆಬ್ಬಾವಾಗಿ ಮರಾಠಿ ನಾಯಕರನ್ನು ನುಂಗ ಬಂದಿದೆ. ಯಾವುದೋ ಕ್ಷುಲ್ಲಕ ಸ್ವಾರ್ಥ ಸಾಧನೆಗಾಗಿ ತಾವು ಸೃಷ್ಟಿಸಿದ ಈ ನವೀನ ಭಸ್ಮಾಸುರ ತಮ್ಮ ತಲೆಯ ಮೇಲೇ ಕೈಯಿಡ ಬಂದಾಗ ಅವರು ಹಿಂದೂ ಮುಂದೂ ಕಾಣದೆ ಕಂಗಾಲಾಗಿದ್ದಾರೆ. ಆದುದರಿಂದ ಅಧಿಕಾರ ಸ್ಥಾನ ಮಂಡಿತರಾದವರು ಹಸು ಮಂಕರಾಗಿದ್ದಾರೆ, ಶ್ರೀ ರಾಮ—ಇಂದಿರಾರ ಮುಂದೆ ಕೈ ಮುಗಿಯುತ್ತಾರೆ; ಹಲ್ಲು ಕಿರಿದು ತಮ್ಮ ಮೇಲೆ ಅನುಗ್ರಹ ತೋರಿ ಎಂದು ದಂಬಾಲು ಬೀಳುತ್ತಾರೆ.

ಶ್ರೀಮತಿ ಗಾಂಧಿಯವರೂ ಈ ಸಂಬಂಧದಲ್ಲಿ ಬಾಯಿ ಬಿಗಿ ಹಿಡಿದಿದ್ದಾರೆ. ಹೆಂಗಸು ಬಾಯಿತುಂಬ ಮಾತಾಡಿದರೂ, ಬಾಯಿ ಮುಚ್ಚಿ ಕುಳಿತರೂ ಅದರ ಹಿಂದೇ ಭಾರೀ ತಂತ್ರವಿದೆಯೆನ್ನುವುದು ಲೋಕರೂಢಿ.. ಆದುದರಿಂದ ಆಕೆಯ ಗಂಭೀರ ಮೌನ ಮರಾಠೀ ಬಕಾಸುರರಿಗೆ ವಿಶ್ವಾಸವ ನೀಡುವುದಿಲ್ಲವೆಂದು ಗೊತ್ತು. ಅದಕ್ಕಾಗಿ ಹಲವು ಬಗೆಯ ಒತ್ತಡಗಳನ್ನು ಅವರು ಪ್ರಧಾನಿಯ ಮೇಲೆ ಹೇರುವ ಪ್ರಯತ್ನ ಮಾಡುತ್ತಿದ್ದಾರೆ. ಮಹಾರಾಷ್ಟ್ರದ ಕಾಂಗ್ರೆಸ್ಸಿಗರು ಇಂಡಿಕೇಟಿಗೆ ಬೆಂಬಲ ನೀಡುವುದನ್ನು ನಿಲ್ಲಿಸುವುದಿಲ್ಲ; ಏಕೆಂದರೆ, ಸಿಂಡಿಕೇಟು ಮಹಾಜನ ವರದಿಯನ್ನು ಒಪ್ಪಿಕೊಂಡಿದೆ. ಆದುದರಿಂದ ಶ್ರೀಮತಿ ಗಾಂಧೀಗೆ ಈ ಹೆದರಿಕೆಯಿಲ್ಲ. ಆದರೂ ಬಿಜೂ ಪಟ್ನಾಯಕರಂತೆ ವಸಂತ ರಾವ್ ನಾಯಕರೂ ಪ್ರತ್ಯೇಕ ಕಾಂಗ್ರೆಸ್ಸು ಆರಂಭಿಸಿಯಾರೇ ಎಂಬ ಸಂದೇಹ ಅವರಿಗೆ, ಗಡಿ ಪ್ರಶ್ನೆಯೊಂದನ್ನುಳಿದು ಉಳಿದೆಲ್ಲವನ್ನೂ ಮರಾಠಿಗರಿಗೆ ತೃಪ್ತಿತರುವಂತೆ ನಿರ್ವಹಿಸಿದ ಪ್ರಧಾನಿ ಅವರೊಲವನ್ನು ಉಳಿಸಿಕೊಂಡಿದ್ದಾರೆ.

ಗಡಿ ವಿವಾದದಲ್ಲಿ ತಮ್ಮ ಕುದುರೆಗೆ ಮೂರೇ ಕಾಲು ಎಂದು ಸಾರಿದ್ದ ಮರಾಠಿಗರು ಅದನ್ನು ನೇರವಾಗಿಯಾಗಲೀ ಡೊಂಕಾಗಿಯಾಗಲೀ ಸಿದ್ಧ ಮಾಡ ಹೊರಟಿದ್ದಾರೆ. ಆದುದರಿಂದ ವಿಧಾನ ಸಭೆಗಳನ್ನು ಅನಿರ್ದಿಷ್ಟಾವಧಿ ಮುಂದೆ ಹಾಕುವ ಹವ್ಯಾಸಕ್ಕಿಳಿದಿದ್ದಾರೆ. ಇದು ಪ್ರಾಯಶಃ ಅವರ ಕೊನೆಯ ಅಸ್ತ್ರವಿರಬೇಕು. ಇದಕ್ಕೆ ಪ್ರಧಾನಿ ಸಗ್ಗ ಬಡೆಯುವವರಲ್ಲ. ಮಹಾರಾಷ್ಟ್ರ ವಿಧಾನ ಸಭೆ ಸೇರದಿದ್ದರೆ, ಆಕೆಯದೇನೂ ತಲೆ ಹೋಗುವುದಿಲ್ಲ. ಈ ನಡುವೆ ಶ್ರೀ ನಾಯಕರು ಮಹಾಜನ ವರದಿಗೆ ಪರ್ಯಾಯವಾಗಿ ಇತರ ಸೂಚನೆಗಳನ್ನಿಟ್ಟಿದ್ದಾರೆ.

ಬೆಳಗಾಂವಿಗೆ ಬದಲಾಗಿ ಕರ್ನಾಟಕಕ್ಕೆ ಪರಿಹಾರ ಕೊಡುವುದು; ಗಡಿಪ್ರದೇಶದಲ್ಲಿ ಜನಮತಗಣನೆ ನಡೆಸುವುದು, ಮತ್ತೊಂದು ಟ್ರಿಬ್ಯುನಲ್ ನೇಮಿಸುವುದು ಇತ್ಯಾದಿ— ಅಂದರೆ, ಬೆಳಗಾಂವಿ ಅವರೇಕನ್ ಇಲ್ಲವೆಂದರ್ಥವಲ್ಲ. ಆದಾವ ಸಲಹೆಯಿದ್ದರೂ ಇದಕ್ಕೆ ಕರ್ನಾಟಕವೆಂದೂ ಒಪ್ಪುವುದಿಲ್ಲ. ಎರಡೂ ರಾಜ್ಯಗಳು ಒಪ್ಪಬೇಕೆಂಬ ತಳಹದಿಯ ಮೇಲೆಯೇ ಮಹಾಜನ ಆಯೋಗ ರಚಿತವಾದದ್ದು. ಇಲ್ಲವಾದರೆ, ಆಯೋಗದ ಅಗತ್ಯವಾದರೂ ಏನಿತ್ತು? ಮರಾಠಿಗರು ವರದಿ ತಮಗನುಕೂಲವಿಲ್ಲವೆಂದದನ್ನು ತಿರಸ್ಕರಿಸುವುದಾದರೆ, ಅದಕ್ಕೆ ಕೇಂದ್ರ ಸರಕಾರದ ಒಪ್ಪಿಗೆಯಿರುವುದಾದರೆ, ಇನ್ನು ಮುಂದೆ ಆಯೋಗ ರಚನೆಗಳು ಕಾಲಹರಣ ಸಾಧನೆಗಳು ಮಾತ್ರವಾದಾವು.

ಇದೀಗ ಶ್ರೀಮತಿ ಗಾಂಧಿಯವರು ತನ್ನ ತಪ್ಪನ್ನು ಅರಿತುಕೊಂಡಿದ್ದಾರೆ. ಆಯೋಗದ ವರದಿಯನ್ನು ಹಳಸಲು ಮಾಡಿದ್ದರಿಂದಲೇ ಪೆಡಂಭೂತ ಹುಟ್ಟಿಕೊಂಡಿದೆ. ವರದಿಯ ಬಗ್ಗೆ ಎರಡೂ ರಾಜ್ಯಗಳ ನಡುವೆ ಒಮ್ಮತವೆಂದಿಗೂ ಅಸಾಧ್ಯ. ಹೀಗೆಂದು ವರದಿಯನ್ನು ಸಂಸತ್ತಿನ ಮುಂದಿಡುವುದು ಸಾಧ್ಯವಿಲ್ಲ. ಸಂಸತ್ತನ್ನು ಕೇಳಿ ಈ ಆಯೋಗ ನಿಯುಕ್ತವಾಗಲಿಲ್ಲ. ಆದುದರಿಂದ ಶ್ರೀಮತಿ ಗಾಂಧಿಯವರಿಗೆ ಈಗ ಉಳಿದಿರುವ ದಾರಿಯೆರಡು— ಮೊದಲನೆಯದಾಗಿ ಮಹಾಜನ ವರದಿಯನ್ನು ಇದ್ದಕ್ಕಿದ್ದಂತೆ ಕಾರ್ಯರೂಪಕ್ಕೆ ತರುವುದು——ಇಂತಹ ದಿಟ್ಟತನವನ್ನು ಆಕೆ ತೋರಿಸಲು ಹಿಂಜರಿಯಲಾರರು; ಆದರೆ, ಮರಾಠಿಗರ ಸಂಪೂರ್ಣ ತಿರಸ್ಕಾರ ತನ್ನ ಅಧಿಕಾರಕ್ಕೆ ಗಂಡಾಂತರಕಾರಿಯಾಗುವ ಸನ್ನಿವೇಶವನ್ನು ಆಕೆ ತಂದು ಕೊಳ್ಳುವುದಿಲ್ಲ. ಆದುದರಿಂದ ಹೊಣೆಗಾ

(ಹನ್ನೆರಡನೇ ಪುಟ ನೋಡಿ)

21)	4-2-1971	12
22)	11-2-1971	12
23)	18-2-1971	12
24)	25-2-1971	12
25)	4-3-1971	12
26)	11-3-1971	12
27)	18-3-1971	12
28)	25-3-1971	12
29)	1-4-1971	12
30)	8-4-1971	12
31)	15-4-1971	12
32)	22-4-1971	8
33)	29-4-1971	12
34)	6-5-1971	12
35)	13-5-1971	12
36)	20-5-1971	12
37)	27-5-1971	12
38)	3-6-1971	12
39)	10-6-1971	12
40)	17-6-1971	
		236

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 1

NAVAYUGA

3—9—1970

ಶ್ರೀಮತಿ ಗಾಂಧಿಯವರು

ರಾಜ್ಯತಂತ್ರದಲ್ಲಿ ಚಾಣಕ್ಯನಿಗೂ ಮಿಗಿಲು

ಮಹಾರಾಷ್ಟ್ರದ ಮುಖ್ಯಮಂತ್ರಿ ವಸಂತರಾವ್ ನಾಯಕರಿಗೆ ಬೆಳಗಾಂವಿಯನ್ನು ನುಂಗುವುದೊಂದೇ ಚಿಂತೆ. ಅವರದನ್ನು ಬಯಸಿರಬಹುದು; ಆದರೆ, ಮರಾಠಿಗರು ನಾಯಕರಿಂದ ಆ ಕೆಲಸ ಮಾಡಿಸಿಯೇ ತೀರುವ ಪ್ರತಿಜ್ಞೆ ತೊಟ್ಟಿದ್ದಾರೆ; ಇಲ್ಲವಾದರೆ, ಅಧಿಕಾರದಿಂದ ಇಳಿದು ಬಿಡಿರೆಂದವರು ಪಂಥಾಹ್ವಾನವನ್ನೇ ನೀಡಿದ್ದಾರೆ. ನಾಯಕರು ಇದಕ್ಕಾಗಿ ಚಡಪಡಿಸುತ್ತಾರೆ; ಕೈಕಾಲು ಬಿಡುತ್ತಾರೆ, ವಾರಕ್ಕೆ ಮೂರು ಬಾರಿ ಪ್ರಧಾನಿ ಇಂದಿರಾಜಿಯವರನ್ನು ಕಂಡು ನೂರು ನಿಮಿಷ ಹಲ್ಲು ಕಿರಿಯುತ್ತಾರೆ; ಬೆಳಗಾಂವಿ ನಮಗೆ ಸೇರುವ ಬಗ್ಗೆ ಸ್ಪಷ್ಟ ಆಶ್ವಾಸನೆ ದೊರೆವವರೆಗೆ ಮರಾಠಿ ವಿಧಾನ ಸಭೆಗಳು ಸಭೆ ಸೇರಲು ನಿರಾಕರಿಸುತ್ತಿವೆ........ ಎಂದು ಮುಂದಾಗಿ ತನ್ನ ಗೋಳು ತೋಯ್ದುಕೊಳ್ಳುತ್ತಾರೆ. ಇಂದಿರಾಜಿಯವರೂ ಪ್ರತಿಯಾಗಿ ಮುಗುಳ್ನಗುತ್ತಾರೆ; ಹೆದರಬೇಡಿ, ಎಲ್ಲರಿಗೂ ನ್ಯಾಯ ದೊರೆಯುತ್ತದೆ ಎಂದು ಸಮಾಧಾನಪಡಿಸಿ ಬೊಂಬಾಯಿ ಟಿಕೇಟು ಕೊಳ್ಳುವಂತೆ ಮನವೊಲಿಸುತ್ತಾರೆ.

ಪ್ರಧಾನಿ ಇಂದಿರಾ ಗಾಂಧಿಯವರು ರಾಜ್ಯತಂತ್ರದಲ್ಲಿ ಆಕೆಯು ಅಪ್ಪನಿಗೂ ಮಿಗಿಲು ಎಂಬುದನ್ನು ಈ ಒಂದು ವರ್ಷದಲ್ಲಿ ಜಗಜ್ಜಾಹೀರು ಮಾಡಿದ್ದಾರೆ. ಚಾಣಕ್ಯನನ್ನು ನಾವು ಕಾಣಲಿಲ್ಲ; ಆದರೆ, ಆತನ ತಂತ್ರಗಳನ್ನು ಓದಿದ್ದೇವೆ. ಆತ ಮೌರ್ಯ ಚಂದ್ರಗುಪ್ತನಿಗಾಗಿ ತಂತ್ರ ನಿರ್ವಹಿಸಿದರೆ, ಶ್ರೀಮತಿಯವರು ತನ್ನ ಸಿಂಹಾಸನ ಭದ್ರತೆಗಾಗಿ ಅದಕ್ಕೂ ಮಿಗಿಲಾದ ತಂತ್ರವಾದಿಯಾಗಿದ್ದಾರೆ. ಮರಾಠಿಗಳ ಅನಭಿಷಿಕ್ತ ದೊರೆತನದಿಂದ ಶ್ರೀ ಚವನರನ್ನು ಹಾಡುಹಗಲಲ್ಲಿ ಎಲ್ಲರೂ ನೋಡುತ್ತಿರುವಂತೆಯೇ ಯಾರಿಗೂ ಅರಿಯದಂತೆಯೇ ತಿಪ್ಪೆಗೆಸೆದು ಬಿಟ್ಟರು. ಅವರ ಸ್ಥಾನಕ್ಕೆ ಮತ್ತಾರೂ ಏರದಂತೆ ಅವರು ಕಣ್ಣಿಗೆ ಎಣ್ಣೆ ಹಾಕಿ ನೋಡುತ್ತಾರೆ. ಮುಖ್ಯಮಂತ್ರಿ ನಾಯಕರು ಯುವರಾಜರೆಂಬುದನ್ನು ಅವರೇನೋ ಅರಿತುಕೊಂಡಿದ್ದು ಅವರನ್ನೂ ನೆಲಸಮ ಮಾಡಲು ಒಳ್ಳೆಯ ದಿವಸಕ್ಕಾಗಿ ಶ್ರೀಮತಿ ಗಾಂಧಿಯವರು ಕಾಯುತ್ತಿದ್ದಾರೆ.

ಶ್ರೀ ನಾಯಕರಿಗೂ ಉಳಿದ ಮರಾಠಿಗರಿಗೂ ಇದು ತಿಳಿಯದ ಸಂಗತಿಯಲ್ಲ. ಆದರೂ ಒಂದೊಂದು ಆಶೆ ಆಮಿಷಗಳಿಂದ ಅವರು ಶ್ರೀಮತಿಯವರನ್ನು ಬೆಂಬಲಿಸುತ್ತಾರೆ. ಕರ್ನಾಟಕದ ಎಸ್ಸೆನ್ ವಿರುದ್ಧ ಶ್ರೀಮತಿ ಹೋರಾಡಿದಾಗ ಬೆಳಗಾಂವಿ ಸುಲಭವಾಗೇ ದಕ್ಕುವುದೆಂಬ ಲಾಲಸೆಯಿಂದ ಆಕೆಯನ್ನು ಬೆಂಬಲಿಸಿದರು. ಶ್ರೀ ಚವನರಿಗೆ ಇಂದಿರಾ ತಂತ್ರದ ಬಿಂದು ಪರಿಚಯವಿದ್ದುದರಿಂದಾಗಿಯೇ ಅವರು ಇಂಡಿಕೇಟ್ ಎಂದು ಸಾರಲು ಕೆಲದಿನ ದೂಡಿದರು. ಶ್ರೀ ಚವನರು ಇಂಡಿಕೇಟಿಗರಾದರೆಂಬುದಕ್ಕಿಂತ ಮರಾಠಿಗಳ ಬೆಳಗಾಂವಿ ಲಾಲಸೆಯು ಅವರನ್ನು ಇಂದಿರಾ ಗಾಂಧಿಯ ಸೆರಗಿನಡಿಗೊಯ್ದು ತಳ್ಳಿತೆನ್ನುವುದು ಹೆಚ್ಚು ಸರಿಯಾದೀತು. ಈಗ್ಗೆ ಒಂದು ವರ್ಷದಿಂದ ಚವನರು ಬಾಯಿಗೆ ಬೀಗ ಮುದ್ರೆ ಬಿದ್ದಿರುವುದು ಇದನ್ನು ಸಮರ್ಥಿಸುತ್ತದೆ.

ಮಹಾರಾಷ್ಟ್ರ—ಕರ್ನಾಟಕ ಸೀಮಾ ವಿವಾದ ಮರಾಠಿಗರು ಬೇಕೆಂದೇ ಮುಂದೆ ತಂದು ಕೊಂಡದ್ದು. ಮರೆಯಾಗಿದ್ದ ಈ ಪ್ರಶ್ನೆಯೀಗ ಹೆಬ್ಬಾವಾಗಿ ಮರಾಠಿ ನಾಯಕರನ್ನು ನುಂಗ ಬಂದಿದೆ. ಯಾವುದೇ ಕ್ಷುಲ್ಲಕ ಸ್ವಾರ್ಥ ಸಾಧನೆಗಾಗಿ ತಾವು ಸೃಷ್ಟಿಸಿದ ಈ ನವೀನ ಬಸ್ಮಾಸುರ ತಮ್ಮ ತಲೆಯ ಮೇಲೇ ಕೈಯಿಡ ಬಂದಾಗ ಅವರು ಹಿಂದೂ ಮುಂದೂ ಕಾಣದೆ ಕಂಗಾಲಾಗಿದ್ದಾರೆ. ಆದುದರಿಂದ ಅಧಿಕಾರ ಸ್ಥಾನ ಮಂಡಿತರಾದವರು ಹತು ಮಂತರಾಗಿದ್ದಾರೆ, ಶ್ರೀ ರಾಮ–ಇಂದಿರಾರ ಮುಂದೆ ಕೈ ಮುಗಿಯುತ್ತಾರೆ; ಹಲ್ಲು ಕಿರಿದು ತಮ್ಮ ಮೇಲೆ ಅನುಗ್ರಹ ತೋರಿ ಎಂದು ದಂಬಾಲು ಬೀಳುತ್ತಾರೆ.

ಶ್ರೀಮತಿ ಗಾಂಧಿಯವರೂ ಈ ಸಂಬಂಧದಲ್ಲಿ ಬಾಯಿ ಬಿಗಿ ಹಿಡಿದಿದ್ದಾರೆ. ಹೆಂಗಸು ಬಾಯಿತುಂಬ ಮಾತಾಡಿದರೂ, ಬಾಯಿ ಮುಚ್ಚಿಕುಳಿತರೂ ಅದರ ಹಿಂದೇ ಧಾರೀ ತಂತ್ರವಿದೆಯೆನ್ನುವುದು ಲೋಕರೂಢಿ.. ಆದುದರಿಂದ ಆಕೆಯ ಗಂಭೀರ ಮೌನ ಮರಾಠೀ ಬಣಾಸುರರಿಗೆ ವಿಶ್ವಾಸ ನೀಡುವುದಿಲ್ಲವೆಂದು ಗೊತ್ತು. ಆದಕ್ಕಾಗಿ ಹಲವು ಬಗೆಯ ಒತ್ತಡಗಳನ್ನು ಅವರು ಪ್ರಧಾನಿಯ ಮೇಲೆ ಹೇರುವ ಪ್ರಯತ್ನ ಮಾಡುತ್ತಿದ್ದಾರೆ, ಮಹಾರಾಷ್ಟ್ರದ ಕಾಂಗ್ರೆಸ್ಸಿಗರು ಇಂಡಿಕೇಟಿಗೆ ಬೆಂಬಲನೀಡುವುದನ್ನು ನಿಲ್ಲಿಸ ವುದಿಲ್ಲ; ಏಕೆಂದರೆ, ಸಿಂಡಿಕೇಟು ಮಹಾಜನ ವರದಿಯನ್ನು ಒಪ್ಪಿಕೊಂಡಿದೆ. ಆದುದರಿಂದ ಶ್ರೀಮತಿ ಗಾಂಧೀಗೆ ಈ ಹೆದರಿಕೆಯಿಲ್ಲ. ಆದರೂ ಬಿಜೂ ಪಟ್ನಾಯಕರಂತೆ ವಸಂತ ರಾವ್ ನಾಯಕರೂ ಪ್ರತ್ಯೇಕ ಕಾಂಗ್ರೆಸ್ಸು ಆರಂಭಿಸಿಯಾರೇ ಎಂಬ ಸಂದೇಹ ಅವರಿಗೆ. ಗಡಿ ಪ್ರಶ್ನೆಯೊಂದನ್ನುಳಿದು ಉಳಿದೆಲ್ಲವನ್ನೂ ಮರಾಠಿಗರಿಗೆ ತೃಪ್ತಿಕರುವಂತೆ ನಿರ್ವಹಿಸಿದ ಪ್ರಧಾನಿ ಅವರೆಲ್ಲವನ್ನು ಉಳಿಸಿಕೊಂಡಿದ್ದಾರೆ.

ಗಡಿ ವಿವಾದದಲ್ಲಿ ತಮ್ಮ ಕುದುರೆಗೆ ಮೂರುಕಾಲು ಎಂದು ಸಾರಿದ್ದ ಮರಾಠಿಗರು ಅದನ್ನು ನೇರವಾಗಿಯಾಗಲೀ ಡೊಂಕಾಗಿಯಾಗಲೀ ಸಿದ್ಧಮಾಡ ಹೊರಟಿದ್ದಾರೆ. ಆದುದರಿಂದ ವಿಧಾನ ಸಭೆಗಳನ್ನು ಅನಿರ್ದಿಷ್ಟಾವಧಿ ಮುಂದೆ ಹಾಕುವ ಹವ್ಯಾಸಕ್ಕಿಳಿದಿದ್ದಾರೆ. ಇದು ವಿಪ್ರಿಯ ಅವರ ಕೊನೆಯ ಅಸ್ತ್ರವಿರಬೇಕು. ಇದಕ್ಕೆ ಪ್ರಧಾನಿ ಸಗ್ಗ ಬಡೆಯುವವರಲ್ಲ. ಮಹಾರಾಷ್ಟ್ರ ವಿಧಾನ ಸಭೆ ಸೇರದಿದ್ದರೆ, ಆಕೆಯದೇನೂ ತಲೆ ಹೋಗುವುದಿಲ್ಲ. ಈ ನಡುವೆ ಶ್ರೀ ನಾಯಕರು ಮಹಾಜನ ವರದಿಗೆ ಪರ್ಯಾಯವಾಗಿ ಇತರ ಸೂಚನೆಗಳನ್ನಿಟ್ಟಿದ್ದಾರೆ.

ಬೆಳಗಾಂವಿಗೆ ಬದಲಾಗಿ ಕರ್ನಾಟಕಕ್ಕೆ ಪರಿಹಾರ ಕೊಡುವುದು; ಗಡಿಪ್ರದೇಶದಲ್ಲಿ ಜನಮತಗಣನೆ ನಡೆಸುವುದು. ಮತ್ತೊಂದು ಟ್ರಿಬ್ಯುನಲ್ ನೇಮಿಸುವುದು ಇತ್ಯಾದಿ— ಅಂದರೆ, ಬೆಳಗಾಂವಿ ಅಪರೇಶನ್ ಇಲ್ಲವೆಂದರ್ಥವಲ್ಲ. ಆದಾವ ಸಲಹೆಯಿದ್ದರೂ ಇದಕ್ಕೆ ಕರ್ನಾಟಕವೆಂದೂ ಒಪ್ಪುವುದಿಲ್ಲ. ಎರಡೂ ರಾಜ್ಯಗಳು ಒಪ್ಪಬೇಕೆಂಬ ತಳಹದಿಯ ಮೇಲೆಯೇ ಮಹಾಜನ ಆಯೋಗ ರಚಿತವಾದದ್ದು. ಇಲ್ಲವಾದರೆ, ಆಯೋಗದ ಅಗತ್ಯವಾದರೂ ಏನಿತ್ತು? ಮರಾಠಿಗರು ವರದಿ ತಮಗನುಕೂಲವಿಲ್ಲವೆಂದದನ್ನು ತಿರಸ್ಕರಿಸುವುದಾದರೆ, ಅದಕ್ಕೆ ಕೇಂದ್ರ ಸರಕಾರದ ಒಪ್ಪಿಗೆಯಿರುವುದಾದರೆ, ಇನ್ನು ಮುಂದೆ ಆಯೋಗ ರಚನೆಗಳು ಕಾಲಹರಣ ಸಾಧನೆಗಳು ಮಾತ್ರವಾದಾವು.

ಇದೀಗ ಶ್ರೀಮತಿ ಗಾಂಧಿಯವರು ತನ್ನ ತಪ್ಪನ್ನು ಅರಿತುಕೊಂಡಿದ್ದಾರೆ. ಆಯೋಗದ ವರದಿಯನ್ನು ಹೇಳಸಲಿ ಮಾಡಿದ್ದರಿಂದಲೇ ಪೇಡಂಭೂತ ಹುಟ್ಟಿಕೊಂಡಿದೆ. ವರದಿಯ ಬಗ್ಗೆ ಎರಡೂ ರಾಜ್ಯಗಳ ನಡುವೆ ಒಮ್ಮತವೆಂದಿಗೂ ಅಸಾಧ್ಯ. ಹೀಗೆಂದು ವರದಿಯನ್ನು ಸಂಸತ್ತಿನ ಮುಂದಿಡುವುದು ಸಾಧ್ಯವಿಲ್ಲ. ಸಂಸತ್ತನ್ನು ಕೇಳಿ ಈ ಆಯೋಗ ನಿರ್ಮಿತವಾ[ಗ]ಲಿಲ್ಲ. ಆದುದರಿಂದ ಶ್ರೀಮತಿ ಗಾಂಧಿಯವರಿಗೆ ಈಗ ಉಳಿದಿರುವ ದಾರಿಯೆರಡು— ಮೊದಲನೆಯದಾಗಿ ಮಹಾಜನ ವರದಿಯನ್ನು ಇದ್ದಕ್ಕಿದ್ದಂತೆ ಕಾರ್ಯರೂಪಕ್ಕೆ ತರುವುದು—ಇಂತಹ ದಿಟ್ಟತನವನ್ನು ಆಕೆ ತೋರಿಸಲು ಹಿಂಜರಿಯಲಾರರು. ಆದರೆ, ಮರಾಠಿಗರ ಸಂಪೂರ್ಣ ತಿರಸ್ಕಾರ ತನ್ನ ಅಧಿಕಾರಕ್ಕೆ ಗಂಡಾಂತರಕಾರಿಯಾಗುವ ಸನ್ನಿವೇಶವನ್ನು ಆಕೆ ತಂದುಕೊಳ್ಳುವುದಿಲ್ಲ. ಆದುದರಿಂದ ಹೊಣೆಗಾ

(ಹನ್ನರಡನೇ ಪುಟ ನೋಡಿರಿ)

41)	24-6-1971	12
42)	1-7-1971	10
43)	8-7-1971	12
44)	15-7-1971	10
45)	22-7-1971	10
46)	29-7-1971	10
47)	5-8-1971	10
48)	12-8-1971	10
49)	19-8-1971	42 స్వాతంత్ర్య ఉత్సవం.
50)	26-8-1971	12
		138

1) 306
2) 236
3) 138

680

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 1

NAVAYUGA

3—9—1970

ಶ್ರೀಮತಿ ಗಾಂಧಿಯವರು

ರಾಜ್ಯತಂತ್ರದಲ್ಲಿ ಚಾಣಕ್ಯನಿಗೂ ಮಿಗಿಲು

ಮಹಾರಾಷ್ಟ್ರದ ಮುಖ್ಯಮಂತ್ರಿ ವಸಂತರಾವ್ ನಾಯಕರಿಗೆ ಬೆಳಗಾಂವಿಯನ್ನು ನುಂಗುವುದೊಂದೇ ಚಿಂತೆ. ಅವರದನ್ನು ಬಯಸಬಹುದು; ಆದರೆ, ಮರಾಠಿಗರು ನಾಯಕರಿಂದ ಆ ಕೆಲಸ ಮಾಡಿಸಿಯೇ ತೀರುವ ಪ್ರತಿಜ್ಞೆ ತೊಟ್ಟಿದ್ದಾರೆ; ಇಲ್ಲವಾದರೆ, ಅಧಿಕಾರದಿಂದ ಇಳಿದು ಬಿಡಿರೆಂದವರು ಪಂಥಾಹ್ವಾನವನ್ನೇ ನೀಡಿದ್ದಾರೆ. ನಾಯಕರು ಇದಕ್ಕಾಗಿ ಚಡಪಡಿಸುತ್ತಾರೆ; ಕೈಕಾಲು ಬಿಡುತ್ತಾರೆ. ವಾರಕ್ಕೆ ಮೂರು ಬಾರಿ ಪ್ರಧಾನಿ ಇಂದಿರಾಜಿಯವರನ್ನು ಕಂಡು ಮೂರು ನಿಮಿಷ ಹಲ್ಲು ಕಿರಿಯುತ್ತಾರೆ; ಬೆಳಗಾಂವಿ ನಮಗೆ ಸಿಗುವ ಬಗ್ಗೆ ಸ್ಪಷ್ಟ ಆಶ್ವಾಸನೆ ದೊರೆವವರೆಗೆ ಮರಾಠಿ ವಿಧಾನ ಸಭೆಗಳು ಸಭೆ ಸೇರಲು ನಿರಾಕರಿಸುತ್ತಿವೆ....... ಎಂದು ಮುಂಚಾಗಿ ತನ್ನ ಗೋಳು ಹೊಯ್ದುಕೊಳ್ಳುತ್ತಾರೆ. ಇಂದಿರಾಜಿಯವರೂ ಪ್ರತಿಯಾಗಿ ಮುಗುಳ್ನಗುತ್ತಾರೆ; ಹೆದರಬೇಡಿ, ಎಲ್ಲರಿಗೂ ನ್ಯಾಯ ದೊರೆಯುತ್ತದೆ ಎಂದು ಸಮಾಧಾನಪಡಿಸಿ ಬೊಂಬಾಯಿ ಟಿಕೇಟುಕೊಳ್ಳುವಂತೆ ಮನವೊಲಿಸುತ್ತಾರೆ.

ಪ್ರಧಾನಿ ಇಂದಿರಾ ಗಾಂಧಿಯವರು ರಾಜ್ಯತಂತ್ರದಲ್ಲಿ ಆಕೆಯು ಅಪ್ಪನಿಗೂ ಮಿಗಿಲು ಎಂಬುದನ್ನು ಈ ಒಂದು ವರ್ಷದಲ್ಲಿ ಜಗಜ್ಜಾಹೀರು ಮಾಡಿದ್ದಾರೆ. ಚಾಣಕ್ಯನನ್ನು ನಾವು ಕಾಣಲಿಲ್ಲ; ಆದರೆ, ಆತನ ತಂತ್ರಗಳನ್ನು ಓದಿದ್ದೇವೆ. ಆತ ಮೌರ್ಯ ಚಂದ್ರಗುಪ್ತನಿಗಾಗಿ ತಂತ್ರ ನಿರ್ವಹಿಸಿದರೆ, ಶ್ರೀಮತಿಯವರು ತನ್ನ ಸಿಂಹಾಸನ ಭದ್ರತೆಗಾಗಿ ಅದಕ್ಕೂ ಮಿಗಿಲಾದ ತಂತ್ರವಾದಿಯಾಗಿದ್ದಾರೆ. ಮರಾಠಿಗಳ ಅನಭಿಷಿಕ್ತ ಪೋಷಕನ ದಿಂದ ಶ್ರೀ ಚವನರನ್ನು ಹಾಡುಹಗಲಲ್ಲಿ ಎಲ್ಲರೂ ನೋಡುತ್ತಿರುವಂತೆಯೇ ಯಾರಿಗೂ ಅರಿಯದಂತೆಯೇ ತಿಪ್ಪೆಗೆಸೆದು ಬಿಟ್ಟರು. ಅವರ ಸ್ಥಾನಕ್ಕೆ ಮತ್ತಾರೂ ಏರದಂತೆ ಆಸರು ಕಜ್ಜಿಗೆ ಎಣ್ಣೆ ಹಾಕಿ ನೋಡುತ್ತಾರೆ. ಮುಖ್ಯಮಂತ್ರಿ ನಾಯಕರು ಯುವರಾಜರೆಂಬುದನ್ನು ಅವರೆಂದೋ ಅರಿತುಕೊಂಡಿದ್ದು ಅವರನ್ನೂ ನೆಲಸಮ ಮಾಡಲು ಒಳ್ಳೆಯ ದಿನಕ್ಕಾಗಿ ಶ್ರೀಮತಿ ಗಾಂಧಿಯವರು ಕಾಯುತ್ತಿದ್ದಾರೆ.

ಶ್ರೀ ನಾಯಕರಿಗೂ ಉಳಿದ ಮರಾಠಿಗರಿಗೂ ಇದು ತಿಳಿಯದ ಸಂಗತಿಯಲ್ಲ. ಆದರೂ ಒಂದೊಂದು ಆಶೆ ಆಮಿಷಗಳಿಂದ ಅವರು ಶ್ರೀಮತಿಯವರನ್ನು ಬೆಂಬಲಿಸುತ್ತಾರೆ. ಕರ್ನಾಟಕದ ಎಸ್ಸೆನ್ ವಿರುದ್ಧ ಶ್ರೀಮತಿ ಹೋರಾಡಿದಾಗ ಬೆಳಗಾಂವಿ ಸುಲಭವಾಗೇ ದಕ್ಕುವುದೆಂಬ ಲಾಲಸೆಯಿಂದ ಆಕೆಯನ್ನು ಬೆಂಬಲಿಸಿದರು. ಶ್ರೀ ಚವನರಿಗೆ ಇಂದಿರಾ ತಂತ್ರದ ಬಿಂದು ಪರಿಚಯವಿದ್ದುದರಿಂದಾಗಿಯೇ ಅವರು 'ಇಂಡಿಕೇಟ್' ಎಂದು ಸಾರಲು ಕೆಲದಿನ ದೂಡಿದರು. ಶ್ರೀ ಚವನರು ಇಂಡಿಕೇಟಿಗರಾದರೆಂಬುದಕ್ಕಿಂತ ಮರಾಠಿಗಳ ಬೆಳಗಾಂವಿ ಲಾಲಸೆಯು ಅವರನ್ನು ಇಂದಿರಾ ಗಾಂಧಿಯ ಸೆರಗಿನಡಿಗೊಯ್ದಿತೆನ್ನುವುದು ಹೆಚ್ಚು ಸರಿಯಾದೀತು. ಈಗ್ಗೆ ಒಂದು ವರ್ಷದಿಂದ ಚವನರು ಬಾಯಿಗೆ ಬೀಗ ಮುದ್ರೆ ಬಿದ್ದಿರುವುದು ಇದನ್ನು ಸಮರ್ಥಿಸುತ್ತದೆ.

ಮಹಾರಾಷ್ಟ್ರ—ಕರ್ನಾಟಕ ಸೀಮಾ ವಿವಾದ ಮರಾಠಿಗರು ಬೇಕೆಂದೇ ಮುಂದೆ ತಂದು ಕೊಂಡದ್ದು. ಮರಿಯಾಗಿದ್ದ ಈ ಪ್ರಶ್ನೆಯೀಗ ಹೆಬ್ಬಾವಾಗಿ ಮರಾಠಿ ನಾಯಕರನ್ನು ನುಂಗ ಬಂದಿದೆ. ಯಾವುದೇ ಕ್ಷುಲ್ಲಕ ಸ್ವಾರ್ಥ ಸಾಧನೆಗಾಗಿ ತಾವು ಸೃಷ್ಟಿಸಿದ ಈ ನವೀನ ಭಸ್ಮಾಸುರ ತಮ್ಮ ತಲೆಯ ಮೇಲೇ ಕೈಯಿಡ ಬಂದಾಗ ಅವರು ಹಿಂದೂ ಮುಂದೂ ಕಾಣದೆ ಕಂಗಾಲಾಗಿದ್ದಾರೆ. ಆದುದರಿಂದ ಅಧಿಕಾರ ಸ್ಥಾನ ಮಂಡಿತರಾದವರು ಹತ ಮಂಕರಾಗಿದ್ದಾರೆ, ಶ್ರೀ ರಾಮ—ಇಂದಿರಾರ ಮುಂದೆ ಕೈ ಮುಗಿಯುತ್ತಾರೆ; ಹಲ್ಲು ಕಿರಿದು ತಮ್ಮ ಮೇಲೆ ಅನುಗ್ರಹ ತೋರಿ ಎಂದು ದಂಬಾಲು ಬೀಳುತ್ತಾರೆ.

ಶ್ರೀಮತಿ ಗಾಂಧಿಯವರೂ ಈ ಸಂಬಂಧದಲ್ಲಿ ಬಾಯಿ ಬಿಗಿ ಹಿಡಿದಿದ್ದಾರೆ. ಹೆಂಗಸು ಬಾಯಿತೆರೆದು ಮಾತಾಡಿದರೂ, ಬಾಯಿ ಮುಚ್ಚಿ ಕುಳಿತರೂ ಅದರ ಹಿಂದೇ ಭಾರೀ ತಂತ್ರವಿದೆಯೆನ್ನುವುದು ಲೋಕರೂಢಿ.. ಆದುದರಿಂದ ಆಕೆಯ ಗಂಭೀರ ಮೌನ ಮರಾಠೀ ಬಲಾಸುರರಿಗೆ ವಿಶ್ವಾಸ ನೀಡುವುದಿಲ್ಲವೆಂದು ಗೊತ್ತು. ಆದಕ್ಕಾಗಿ ಹಲವು ಬಗೆಯ ಒತ್ತಡಗಳನ್ನು ಅವರು ಪ್ರಧಾನಿಯ ಮೇಲೆ ಹೇರುವ ಪ್ರಯತ್ನ ಮಾಡುತ್ತಿದ್ದಾರೆ. ಮಹಾರಾಷ್ಟ್ರದ ಕಾಂಗ್ರೆಸ್ಸಿಗರು ಇಂಡಿಕೇಟಿಗೆ ಬೆಂಬಲ ನೀಡುವುದನ್ನು ನಿಲ್ಲಿಸುವುದಿಲ್ಲ; ಏಕೆಂದರೆ, ಸಿಂಡಿಕೇಟು ಮಹಾಜನ ವರದಿಯನ್ನು ಒಪ್ಪಿಕೊಂಡಿದೆ. ಆದುದರಿಂದ ಶ್ರೀಮತಿ ಗಾಂಧೀಗೆ ಈ ಹೆದರಿಕೆಯಿಲ್ಲ. ಆದರೂ ಬಿಜೂ ಪಟ್ನಾಯಕರಂತೆ ವಸಂತ ರಾವ್ ನಾಯಕರೂ ಪ್ರತ್ಯೇಕ ಕಾಂಗ್ರೆಸ್ಸು ಆರಂಭಿಸಿಯಾರೇ ಎಂಬ ಸಂದೇಹ ಅವರಿಗೆ. ಗಡಿ ಪ್ರಶ್ನೆಯೊಂದನ್ನುಳಿದು ಉಳಿದೆಲ್ಲವನ್ನೂ ಮರಾಠಿಗರಿಗೆ ತೃಪ್ತಿಕರುವಂತೆ ನಿರ್ವಹಿಸಿದ ಪ್ರಧಾನಿ ಅಪರೂಪವನ್ನು ಉಳಿಸಿಕೊಂಡಿದ್ದಾರೆ.

ಗಡಿ ವಿವಾದದಲ್ಲಿ ತನ್ನ ಕುದುರೆಗೆ ಮೂರುಕಾಲು ಎಂದು ಸಾರಿದ್ದ ಮರಾಠಿಗರು ಅದನ್ನು ನೇರವಾಗಿಯಾಗಲೀ ಡೊಂಕಾಗಿಯಾಗಲೀ ಸಿದ್ಧ ಮಾಡ ಹೊರಟಿದ್ದಾರೆ. ಆದುದರಿಂದ ವಿಧಾನ ಸಭೆಗಳನ್ನು ಅನಿರ್ದಿಷ್ಟಾವಧಿ ಮುಂದೆ ಹಾಕುವ ಹವ್ಯಾಸಕ್ಕಿಳಿದಿದ್ದಾರೆ. ಇದು ಪ್ರಾಯಃ ಅವರ ಕೊನೆಯ ಅಸ್ತ್ರವಿರಬೇಕು. ಇದಕ್ಕೆ ಪ್ರಧಾನಿ ಸಗ್ಗ ಬಡೆಯುವವರಲ್ಲ. ಮಹಾರಾಷ್ಟ್ರ ವಿಧಾನ ಸಭೆ ಸೇರದಿದ್ದರೆ, ಆಕೆಯದೇನೂ ತಲೆ ಹೋಗುವುದಿಲ್ಲ. ಈ ನಡುವೆ ಶ್ರೀ ನಾಯಕರು ಮಹಾಜನ ವರದಿಗೆ ಪರ್ಯಾಯವಾಗಿ ಇತರ ಸೂಚನೆಗಳನ್ನಿಟ್ಟಿದ್ದಾರೆ.

ಬೆಳಗಾಂವಿಗೆ ಬದಲಾಗಿ ಕರ್ನಾಟಕಕ್ಕೆ ಪರಿಹಾರ ಕೊಡುವುದು; ಗಡಿಪ್ರದೇಶದಲ್ಲಿ ಜನಮತಗಣನೆ ನಡೆಸುವುದು, ಮತ್ತೊಂದು ಟ್ರಿಬ್ಯುನಲ್ ನೇಮಿಸುವುದು ಇತ್ಯಾದಿ— ಅಂದರೆ, ಬೆಳಗಾಂವಿ ಆಪರೇಶನ್ ಇಲ್ಲವೆಂದರ್ಥವಲ್ಲ. ಆದಾವ ಸಲಹೆಯಿದ್ದರೂ ಇದಕ್ಕೆ ಕರ್ನಾಟಕವೆಂದೂ ಒಪ್ಪುವುದಿಲ್ಲ. ಎರಡೂ ರಾಜ್ಯದವು ಒಪ್ಪಬೇಕೆಂಬ ತಳಹದಿಯ ಮೇಲೆಯೇ ಮಹಾಜನ ಆಯೋಗ ರಚಿತವಾದದ್ದು. ಇಲ್ಲವಾದರೆ, ಆಯೋಗದ ಆಗತ್ಯವಾದರೂ ಏನಿತ್ತು? ಮರಾಠಿಗರು ವರದಿ ತಮಗನುಕೂಲವಿಲ್ಲವೆಂದದನ್ನು ತಿರಸ್ಕರಿಸುವುದಾದರೆ, ಅದಕ್ಕೆ ಕೇಂದ್ರ ಸರಕಾರದ ಒಪ್ಪಿಗೆಯಿರುವುದಾದರೆ, ಇನ್ನು ಮುಂದೆ ಆಯೋಗ ರಚನೆಗಳು ಕಾಲಹರಣ ಸಾಧನೆಗಳು ಮಾತ್ರವಾದಾವು.

ಇದೀಗ ಶ್ರೀಮತಿ ಗಾಂಧಿಯವರು ತನ್ನ ತಪ್ಪನ್ನು ಅರಿತುಕೊಂಡಿದ್ದಾರೆ. ಆಯೋಗದ ವರದಿಯನ್ನು ಹಳಸಲು ಮಾಡಿದ್ದರಿಂದಲೇ ಪೇಡಂಭೂತ ಹುಟ್ಟಿಕೊಂಡಿದೆ. ವರದಿಯ ಬಗ್ಗೆ ಎರಡೂ ರಾಜ್ಯಗಳ ನಡುವೆ ಒಮ್ಮತವೆಂದಿಗೂ ಅಸಾಧ್ಯ. ಹೀಗೆಂದು ವರದಿಯನ್ನು ಸಂಸತ್ತಿನ ಮುಂದಿಡುವುದು ಸಾಧ್ಯವಿಲ್ಲ. ಸಂಸತ್ತನ್ನು ಕೇಳಿ ಈ ಆಯೋಗ ನಿಯುಕ್ತವಾಗಲಿಲ್ಲ. ಆದುದರಿಂದ ಶ್ರೀಮತಿ ಗಾಂಧಿಯವರಿಗೆ ಈಗ ಉಳಿದಿರುವ ದಾರಿಯೆರಡು— ಮೊದಲನೆಯದಾಗಿ ಮಹಾಜನ ವರದಿಯನ್ನು ಇದ್ದಕ್ಕಿದ್ದಂತೆ ಕಾರ್ಯರೂಪಕ್ಕೆ ತರುವುದು—ಇಂತಹ ದಿಟ್ಟತನವನ್ನು ಆಕೆ ತೋರಿಸಲು ಹಿಂಜರಿಯಲಾರರು; ಆದರೆ, ಮರಾಠಿಗರ ಸಂಪೂರ್ಣ ತಿರಸ್ಕಾರ ತನ್ನ ಅಧಿಕಾರಕ್ಕೆ ಗಂಡಾಂತರಕಾರಿಯಾಗುವ ಸನ್ನಿವೇಶವನ್ನು ಆಕೆ ತಂದುಕೊಳ್ಳುವುದಿಲ್ಲ. ಆದುದರಿಂದ ಹೊಣೆಗಾ

(ಹನ್ನೆರಡನೇ ಪುಟ ನೋಡಿ)

ದೇವ ಪ್ರಥಮ, ಪ್ರಮಥಾಧಿಪ

ಶ್ರೀ ಗಣಪತಿ

ಲೇಖಕರು: ಶ್ರೀ ಮ. ಶ್ರೀಧರಮೂರ್ತಿ.

ಹಿಮವಂತನ ಮೊಮ್ಮಗ ಗಣಪತಿಗೆ ದಕ್ಷಿಣದಲ್ಲಿ ಉತ್ಸವ, ಅಗ್ರಪೂಜೆ.

ಇದೇ ಭಾರತೀಯ 'ಭಿನ್ನತೆಯಲ್ಲಿ ಏಕತೆ'ಯ ವೈಶಿಷ್ಟ್ಯ; ಹಿಂದೂ ದೇವತಾ ಕಲ್ಪನೆಯ ಸಂಕೇತ; ಸಂಸ್ಕೃತಿಯ ಸಾರ ಸಂಗ್ರಹ.

ಗಣಪತಿಯ ಹುಟ್ಟು–ಮಹಾತ್ಮ್ಯೆ

ಅಗ್ರಪೂಜಾ-ಭಾಜನನಾದ ವಿನಾಯಕ ಗಣಪತಿ ಗಜಮುಖನಾದ ಇತಿಹಾಸ ಅಪೂರ್ವವಾದುದು. ವಿವಿಧ ಕಲ್ಪನೆಗಳಿಗೆ ಬಹುವಿಧ ಭಾವನೆಗಳಿಗೆ ಇದು ಪ್ರಚೋದಕ. ಹಲವು ಸಂಕೇತಗಳ ಆಗರ. ನಿಷ್ಠೆಗೆ, ಶ್ರದ್ಧೆಗೆ, ಸಾಧನೆಗೆ, ಸಿದ್ಧಿಗೆ ದಾರಿ.

ಋಗ್ವೇದದ 'ಕವಿಂ ಕವೀನಾಂ' ಆದ ಗಣಪತಿಯೇ ಬೇರೆ, ಗಜಮುಖ ಲಂಬೋದರನಾದ ವಿಘ್ನನಾಯಕನೇ ಬೇರೆ ಎಂಬ ವಾದವಿವಾದ ಆದಿ–ಅಂತ್ಯವಿಲ್ಲದ್ದು. ದ್ರಾವಿಡರ ಮಗ ದೇವರು-ಪಿಳ್ಳೆಯಾರು ಆರ್ಯರ ಪ್ರೀತಿಗೌರವಗಳಿಸಿ ವಿಘ್ನೇಶ್ವರನಾದ ಎಂಬ ಕತೆ ಐತಿಹಾಸಿಕ ವಿವೇಚನೆಗೆ ನಿಲುಕದ್ದು. ಗಣಪತಿಯ ಸುತ್ತ ಹುಟ್ಟಿಕೊಂಡಿರುವ ಇಂಥ ಕತೆಗಳಿಗೆ ಕೊನೆ ಮೊದಲಿಲ್ಲ. ಸ್ವಯಂ ಎರಡು ಪುರಾಣಗಳ ನಾಯಕನಾದ ವಿನಾಯಕ ಗಣಪತಿಯ ಹುಟ್ಟು, ಮಹಾತ್ಮೆಗಳನ್ನು ಕುರಿತು ಹತ್ತು ಪುರಾಣಗಳು ಕತೆ ಹೇಳುತ್ತವೆ. ಕನಿಷ್ಠ ಎಂಟು ಆಗಮ ಹಾಗೂ ತಂತ್ರಗಳು, ಬ್ರಾಹ್ಮಣಗಳು, ಸೂತ್ರ, ಧರ್ಮಶಾಸ್ತ್ರಗಳು ಈ ಮಹಾಪುರುಷನ ಮಹಿಮೆ ಹಾಡುತ್ತವೆ. ಅಸಂಖ್ಯ ದೇಶ-ವಿದೇಶೀಯ ಪಂಡಿತರು ಈ ವಿಚಿತ್ರರೂಪನ, ಅದ್ಭುತ ಶಕ್ತಿಸಾಮರ್ಥ್ಯಗಳ, ಪರಬ್ರಹ್ಮ ಸ್ವರೂಪನೆನಿಸಿದ ದೇವತೆಯ ಹುಟ್ಟು-ವ್ಯಾಪ್ತಿಯನ್ನು ಕುರಿತು ವಿಶ್ಲೇಷಿಸಿದ್ದಾರೆ. ಆದರೂ ಕುತೂಹಲ ಕೆಣಕುವ ಆಗರ ಇವನು.

ಸೇವಕ ವರ್ಗಕ್ಕೆ ಕೊರತೆ ಇಲ್ಲದ ಲೋಕಮಾತೆ, ತನ್ನ ಸ್ನಾನಗೃಹದ ಕಾವಲು ಕಾಯಲು ತನ್ನ ಮೈಬೆವರಿನ ಕಲ್ಮಶದಿಂದ ಈ ಮಗುವನ್ನು ಸೃಷ್ಟಿಸಿದಳಂತೆ. ಕರ್ತವ್ಯಮಗ್ನನಾಗಿ ಶಿವನನ್ನೇ ತಡೆದ ಈ ಸ್ವಾಮ್ಯಾರ್ತಿ ಅವನ ಆಯುಧಕ್ಕೆ ತಲೆಯೊಪ್ಪಿಸಿದ. ಮಗನೆಂದರಿಯದೆ ಮಾಡಿದ ತಪ್ಪಿಗಾಗಿ ಶಿವ ಜಗತ್ತನ್ನೆಲ್ಲ ಶೋಧಿಸಿ, ಕಡೆಗೆ ಆನೆಯೊಂದರ ತಲೆಯನ್ನು ತಂದು ಜೋಡಿಸಿ 'ಗಜಾನನ'ನನ್ನು ಸೃಷ್ಟಿಸಿದ ಎಂಬುದು ಸುಪ್ರಖ್ಯಾತವಾದ ಕಥೆ.

ಹಿಮವತ್ಪರ್ವತದ ತಪ್ಪಲಿನಲ್ಲಿ ಕಾಮಕೇಳಿಯಲ್ಲಿ ನಿರತವಾಗಿದ್ದ ಗಜಮಿಥುನವನ್ನು ಕಂಡು ತಾವು ಅಂತೆಯೇ ಕ್ರೀಡಿಸಬೇಕೆಂಬ ಅಲೌಕಿಕ ಬಯಕೆಯಿಂದ ಶಿವ-ಪಾರ್ವತಿಯರು ಗಜರೂಪದಲ್ಲಿ ಕ್ರೀಡಿಸಿದ ಫಲವಾಗಿ ಹುಟ್ಟಿದವನೇ ಗಜಾನನ ಗಣಪತಿ ಎಂಬುದು ಆಗಮ ಒಂದರ ವಿವರಣೆ.

"ಕ್ರಿ. ಶ. 6ರಿಂದ 8ನೆಯ ಶತಮಾನದ ಹೊತ್ತಿಗೆ ಒಂದು ವಿಶಿಷ್ಟ ಪಂಥದ ದೇವತೆಯಾದ ಗಣಮುಖ ಗಣಪತಿ 6ನೆಯ ಶತಮಾನಕ್ಕೆ ಮೊದಲು ಶಿಲ್ಪ, ಸಾಹಿತ್ಯಗಳಲ್ಲಾಗಲಿ, ಆಗ ಪ್ರಚಲಿತವಿದ್ದಿರಬಹುದಾದ ಯಾವುದೇ ಐತಿಹಾಸಿಕ ದಾಖಲೆಗಳಲ್ಲಾಗಲಿ ಕಾಣುತ್ತಿಲ್ಲವಾಗಿ, ಇವನು ವೈದಿಕ ದೇವತೆಯಲ್ಲ; ಅನಾಗರಿಕರಾದ ದಕ್ಷಿಣ ಭಾರತದ ಮೂಲವಾಸಿಗಳು ಪೂಜಿಸುತ್ತಿದ್ದ ವಿಘ್ನಕಾರಕ, ಅನಿಷ್ಟಕಾರಕ, ದುಷ್ಟಭೂತ. ಈ ಮೂಲವಾಸಿಗಳ ವಿಶ್ವಾಸ ಗಳಿಸಲೆಂದು, ಇವರ ಈ ಭೂತವನ್ನು ತಮ್ಮ ದೇವಗಣದಲ್ಲಿ ಸೇರಿಸಿಕೊಂಡ ಆರ್ಯರು ಇದಕ್ಕೆ ವಿಶಿಷ್ಟವಾದ, ಸರ್ವಶಕ್ತಿ ಸಂಪನ್ನವಾದ, ಪರಮ ಪೂಜನೀಯವಾದ ದೇವತಾಪೀಠವನ್ನು ನೀಡಿದರು"....ಎಂಬುದು ಆಂಗ್ಲ ಇತಿಹಾಸಕರ ತರ್ಕ.

ಋಗ್ವೇದದ ಅನೇಕ ದೇವತೆಗಳಂತೆ ನಾಮ—ರೂಪಗಳನ್ನು ಬದಲಾಯಿಸಿಕೊಂಡ ಹಿಂದೂಗಳ ಆದಿ ದೇವಗಣದಲ್ಲಿ ಗಣಪತಿಯೂ ಒಬ್ಬ. ರುದ್ರರ ಪುತ್ರನಾಗಿ 'ವಿ–ನಾಯಕ'ನಾಗಿ ಮೆರೆದ, ಬುದ್ಧಿಶೀಲನಾಗಿ ಬೃಹಸ್ಪತಿಯಾಗಿದ್ದ ಋಗ್ವೇದದ ದೇವತೆಯೇ ಪುರಾಣಕಾಲದ ಗಜಮುಖ ವಿನಾಯಕ—ಗಣಪತಿ ಎಂಬುದು ಭಾರತೀಯ ವಿದ್ವಾಂಸರ ನಿಲುವು.

ನಾಮ—ರೂಪಗಳ ವಿಶ್ಲೇಷಣೆ

ಈ ಎಲ್ಲ ತರ್ಕವಿತರ್ಕಗಳ ನಡುವೆ ವಿನಾಯಕನ ರೂಪ, ಗುಣ, ಶಕ್ತಿ, ಮತ್ತು ಹುಟ್ಟಿನ ಕತೆಗಳ ಹಿಂದೆ ಹಲವು ರಹಸ್ಯಗಳಿವೆ ಎಂಬುದು ಸಂಶೋಧಕರ ಹಾಗೂ ಸಿದ್ಧಾಂತಿಗಳ ಅಭಿಪ್ರಾಯ. ಪಾರ್ವತಿ ಎಂದರೆ ಭವಾನಿ, ಅರ್ಥಾತ್ ಮಣ್ಣು. ಆ ಮಣ್ಣಿನಿಂದ ಹುಟ್ಟಿದ್ದು ತೆನೆತುಂಬಿದ ಪೈರು- ಅದೇ ಪಾರ್ವತಿ ಸೃಷ್ಟಿಸಿದ ಜೀವನ ಮಗು. ಜನರಿಗೆಲ್ಲ ಅನ್ನನೀಡುವ 'ಶಿವ' ರೈತ ಆ ಜೀವರಿನ ಮಗುವನ್ನು ಕತ್ತರಿಸಿ ರಾಶಿ ಹಾಕಿದ. ಆ ಧಾನ್ಯರಾಶಿಯೇ ಸರ್ವ ದುಃಖ ನಿವಾರಕನಾದ ಗಣಪತಿ- ಎಂಬುದು ಕೆಲ ಜಿಜ್ಞಾಸುಗಳ ತರ್ಕ.

ಈ ತರ್ಕಕ್ಕೆ ಪೂರಕವಾದ ಮತ್ತೊಂದು ವಿಶ್ಲೇಷಣೆ ಗಣಪತಿ ಧಾನ್ಯಾಧಿದೇವತೆ—ಎಂಬುದು. ಗಣಪತಿಯ ರೂಪ ಹಾಗೂ ಲಾಂಛನಗಳೆಲ್ಲ ಈ ವಾದಕ್ಕೆ ಪುಷ್ಟಿ. ಲಂಬೋದರವೆನ್ನುವುದು ದವಸ ತುಂಬುವ ಕಣಜ. ಆ ಕಣಜದ ಬಾಯಿಗಟ್ಟಿ ಕೊಳಗ ಗಜಾನನ, ಸವೆದ ಕುಳವೇ ವಕ್ರತುಂಡ—ಈ ರೀತಿ ಗಣಪತಿಯ ರೂಪ ಚಿತ್ರಿಸಿರುವ ಜಾಣರೂ ಉಂಟು.

ಸುಂದರವೂ ಪರಿಪೂರ್ಣವೂ ಆದ ವಿಗ್ರಹಗಳನ್ನು ರಚಿಸಿಕೊಂಡು ಅವುಗಳಲ್ಲಿ ದೈವತ್ವವನ್ನು ಆವಾಹನೆಮಾಡಿ ಪೂಜಿಸುವ ಪದ್ಧತಿ ಆರಂಭವಾಗಲಿಕ್ಕೆ ಮೊದಲು ಚಿತ್ರ ಸಂಕೇತಗಳಿಂದ ದೇವತಾರೂಪವನ್ನು ಕಲ್ಪಿಸಿಕೊಳ್ಳುವ ಸಂಪ್ರದಾಯವಿತ್ತು. ಇಂಥ ಅಮೂರ್ತ ವಿಧಾನ ಇಂದಿಗೂ ಚಕ್ರಾರ್ಚನೆ, ಕಲಶ ಹಾಗೂ ಲಿಂಗಪೂಜಾ ವಿಧಿಯಾಗಿ ಪ್ರಚಲಿತವಿದೆ.

ಮಾನವನ ಬಾಳು ಬದುಕಿಗೆಲ್ಲ ಕಾರಣವಾದ ಪಂಚಭೂತಗಳೇ—ಪೃಥ್ವೀ, ಅಪ್, ವಾಯು, ತೇಜಸ್, ಆಕಾಶ,—ಆಗ ಪೂಜಾ ಭಾಜನವಾಗಿದ್ದವು. ಈ ಒಂದೊಂದು ಭೂತವನ್ನೂ ಅಥವ ತತ್ವವನ್ನೂ ಒಂದೊಂದು ಚಿತ್ರ ಸಂಕೇತದಿಂದ ಗುರುತಿಸಲಾಗುತ್ತಿತ್ತು. ಹಾಗೆ ಪಂಚಭೂತಾತ್ಮಕನಾದ ಗಣಪತಿ ಚಿತ್ರ ಸಂಕೇತಗಳಿಂದ ರೂಪಿತವಾದುದೇ ಇಂದಿನ ಗಜಾನನ ಗಣಪತಿ ವಿಗ್ರಹದ ಮೂಲ ಎಂಬುದು ಕೆಲ ತಾಂತ್ರಿಕರ ಅಭಿಮತ.

ಸಂಶೋಧಕರ ಬುದ್ಧಿ ಚಾತುರ್ಯದ ಪರೀಕ್ಷೆಗೆ ಕಾರಣನಾದ ವಿನಾಯಕ ಗಣಪತಿ ಪ್ರಕೃತಿಯ ಸಂಕೇತವಾದ ಪಾರ್ವತಿಯ ಪುತ್ರ. ಇವನಿಗೆ ಪ್ರಾಣದಾನ ನೀಡಿದ್ದು ಪುರುಷ ಪ್ರತೀಕನಾದ ಶಿವ. ಅರ್ಥಾತ್ ಶಿವ-ಶಕ್ತಿ ಸಮಾಗಮದ ಚಿಚ್ಛಕ್ತಿಯ ಫಲ ಜ್ಞಾನನಿಧಿ ಎನಿಸಿದ ಗಣಪ. ಇವನು ಉಪನಿಷತ್ಪುರುಷನಾದ ಸೋಮನೆಂಬ ಭಾವನೆಯೂ ಉಂಟು.

ಹೀಗೆ ಧಾನ್ಯಾಧಿ ದೇವತೆ ಎಂಬಲ್ಲಿಂದ ಆರಂಭಿಸಿ, ಮೋಕ್ಷದಾತನಾದ ಪರಬ್ರಹ್ಮಸ್ವರೂಪನೆಂಬವರೆಗೆ ಹಲವು ಕಲ್ಪನೆಗಳಿಗೆ ಪಾತ್ರನಾದ ಗಣಪತಿ ಎಲ್ಲ ವರ್ಗದ ಹಿಂದೂಗಳ ಆರಾಧ್ಯದೇವತೆ. ದೇಶಾತೀತನೂ ಕಾಲಾತೀತನೂ ಆದ ಗಣಪತಿಯ ರೂಪ—ಗುಣಗಳೂ ಸಹ ಅಸಂಖ್ಯ. ಸಂಶೋಧಕರ ಇದುವರೆಗಿನ ಹುಡುಕಾಟದ ಫಲವಾಗಿ ನಾಲ್ಕು ಕೈಗಳಿರುವ 53, ಆರು ಕೈಗಳ 14, ಎಂಟು ಕೈಗಳ 6, ಹತ್ತು ಕೈಗಳ 14, ಹನ್ನೆರಡು ಕೈಗಳ 4 ಗಣಪತಿಯ ಪ್ರಕಾರಗಳು ದೊರೆತಿವೆ. ಇಪ್ಪತ್ತೊಂದರಿಂದ ನೂರೆಂಟು ವಿಧಗಳವರೆಗೆ ಆತನ ಸ್ವರೂಪ ವಿಸ್ತರಿಸಿದೆ. ಪಂಚಮಕಾರ ಪೂಜೆಗೆ ಒಲಿವ ಶಾಕ್ತ ಗಣಪತಿ ಇರುವಂತೆಯೇ, ಮಕ್ಕಳಿಗೆ ಪ್ರಿಯನೆನಿಸಿದ ಬಾಲ ಗಣಪತಿಯೂ ಉಂಟು.

ಪೂಜೆಯಲ್ಲಿ ವೈವಿಧ್ಯತೆ

ಆಕಾರ ವೈವಿಧ್ಯವಿರುವಂತೆಯೇ ಪೂಜೆಗೆ ಪಾತ್ರವಾದ ರೀತಿಯಲ್ಲೂ ವೈವಿಧ್ಯತೆ ಉಂಟು. ಗೋಮಯವನ್ನು ಗೋಪುರಾಕಾರವಾಗಿ ಮಾಡಿ ಗರಿಕೆ ಸಿಕ್ಕಿಸಿ "ಪಿಳ್ಳೆಯಾರು"ಎಂದು ಪೂಜೆಗೊಳ್ಳುವ ಗಣಪತಿಯನ್ನು ಚಕ್ರ, ಕಲಶ ಮತ್ತು ಬಿಂಬ ರೂಪದಲ್ಲೂ ಪೂಜಿಸುವುದುಂಟು. ಅಷ್ಟಕೋಣ-ತ್ರಿಕೋಣಾತ್ಮಕವಾದ ಗಣಪತಿ ಚಕ್ರ ತಾಂತ್ರಿಕ ಸಾಧಕರಿಗೆ ಪ್ರಿಯ. ವಿಘ್ನ ನಿವಾರಣ ಕರ್ಮಾಂಗವಾದ ಪೂಜಾವಿಧಿಯಲ್ಲಿ ಕಲಶದಲ್ಲಿ ಆವಾಹಿತನಾದ ಗಣಪತಿಗೆ ಪ್ರಾಶಸ್ತ್ಯ. ಎಲ್ಲ ಶುಭಕರ್ಮಗಳ ಅಡಿಯಲ್ಲೂ ವಿಘ್ನನಿವಾರಕನಾದ "ಪಿಳ್ಳೆಯಾರು"ನಿಗೆ ಪೀಠ.

ಬರುವ ಭಾದ್ರಪದ ಶುದ್ಧ ಚೌತಿ ಹಿಂದೂಗಳಿಗೆ ಗಣಪತಿಯ ವಾರ್ಷಿಕ ಪೂಜೆಗೆ ನಿಯಮಿತವಾದ ದಿನ. ಅಂದು ಆಬಾಲವೃದ್ಧರೆಲ್ಲ ಪೂಜಿಸುವ ಗಣಪತಿ ಸಾಮಾನ್ಯವಾಗಿ ಮೃಣ್ಮೂರ್ತಿ. ಸಮುದ್ರ, ನದೀತೀರಗಳಲ್ಲಿ ನೆಲಸಿರುವ ಜನ ಎಳ್ಳೆಣ್ಣೆ ಹಚ್ಚಿಕೊಂಡು ಸ್ನಾನಮಾಡಿ ಸಮುದ್ರ—ನದೀ ತೀರದಲ್ಲಿ ಮಣ್ಣಿನಲ್ಲಿ ಗಣಪತಿಯನ್ನು ಮಾಡಿ, ಪ್ರಾಣಪ್ರತಿಷ್ಠೆಮಾಡಿ, ಪೂಜಿಸಿ, ಆಗಲೇ ನೀರಿನಲ್ಲಿ ವಿಸರ್ಜಿಸುವ ಪದ್ಧತಿ ಉಂಟು. ಬೆಳ್ಳಿಯ ಗಣಪತಿ ವಿಗ್ರಹವನ್ನು ಕಲಶದಲ್ಲಿಟ್ಟು ಪೂಜಿಸಿ, ಆ ವಿಗ್ರಹವನ್ನು ಬ್ರಾಹ್ಮಣರಿಗೆ ದಾನ ಮಾಡುವ ಸಂಪ್ರದಾಯ ಉಂಟು. ಮಣ್ಣಿನಲ್ಲಿ ರಚಿಸಿ, ಬಣ್ಣಬಣ್ಣಗಳಿಂದ ಅಲಂಕರಿಸಿ ಸುಂದರವಾದ ಮಂಟಪ ಕಟ್ಟಿ, ಷೋಡಶೋಪಚಾರ ಪೂಜೆ ಸಲ್ಲಿಸಿ, ಕಡುಬು ನೈವೇದ್ಯ ಮಾಡಿ ಬಂಧು—ಬಳಗವನ್ನು ಕರೆದು ಮಂಗಳಾರತಿ ಎತ್ತಿ, ಪಂಚಕಜ್ಜಾಯ ವಿನಿಯೋಗಿಸುವುದು ಪ್ರತಿ ಮನೆಗಳಲ್ಲಿ ಪ್ರಚಲಿತವಿರುವ ವಿಧಾನ.

ಗಣಪತಿಯ ಹಬ್ಬವನ್ನೇ ರಾಷ್ಟ್ರೀಯ ಸಂಘಟನೆಗೆ ಬಳಸಿಕೊಂಡ ತಿಲಕರು ಇದಕ್ಕೆ ಒಂದು ಸಾರ್ವತ್ರಿಕ ಸಮಾರಂಭದ ರೂಪಕೊಟ್ಟರು. ವಾರ—ಹತ್ತು ದಿನಗಳ ಕಾಲ ಸಾರ್ವಜನಿಕ ಸ್ಥಳದಲ್ಲಿ ಪ್ರತಿಷ್ಠಿಸಿದ ಗಣಪತಿಯ ಸನ್ನಿಧಿಯಲ್ಲಿ ಭಾಷಣ, ಸಂಗೀತ ಹರಿಕಥೆಗಳು ನಡೆಯುತ್ತವೆ.

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
118 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¼% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1

ಇದು ಇಂದಿರಾ ನ್ಯಾಯ!

ವಾರಪತ್ರಿಕೆ
ಉಡುಪಿ, ದ. ಕ.

NAVAYUGA
UDIPI, S. K.

ಸಂಪುಟ : 50
ಸಂಚಿಕೆ : 1

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ವಾರ್ಷಿಕ ಚಂದಾ ರೂ. 10
ವಿಶೇಷ ಸಂಚಿಕೆಗಳು ಸಹಿತ
ಬಿಡಿ ಪ್ರತಿ : ೦-೨೦

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವನೇ ಪ್ರಕಟಣೆಗಳು ಕನಿಷ್ಟ ಮೂರು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಕೇಂದ್ರ ಸರಕಾರವು ತನಗೆ ಬೇಡವಾದ ರಾಜ್ಯಸರಕಾರಗಳಿಗೆ ದ್ರೋಹ ಬಗೆಯುವುದಿಲ್ಲವೆಂದು ಇಂಡಿಕೇಟ್ ನಾಯಕರು ಡಂಗುರ ಸಾರುತ್ತಲೇ ಬಂದಿದ್ದಾರೆ. ಪ್ರಧಾನಿ ಇಂದಿರಾ ಗಾಂಧಿಯವರೂ ಇದೇ ಮಾತನ್ನು ಕರ್ನಾಟಕ ಸಂಚಾರದ ವೇಳೆ ಪದೇ ಪದೇ ಉಚ್ಚರಿಸುತ್ತ ಹೋದರು. ರಾಜ್ಯದ ಇಂಡಿಕೇಟರಾದರೂ ಇಂದಿರಾ ಹಾಡಿದ ಪಲ್ಲವಿಯನ್ನೇ ಗುಣುಗಟ್ಟಿದರು. ಆದರೆ, ಈ ಎಲ್ಲ ಆಶ್ವಾಸನ, ಭರವಸೆಗಳು ನೀರಲ್ಲಿ ಬರೆದ ಬರಹವೆಂಬುದಕ್ಕೆ ಈಗ ಎರಡು ಮುಖ್ಯ ನಿದರ್ಶನಗಳು ತೋರುತ್ತವೆ.

ಮೊದಲನೆಯದು ಮಹಾಜನ ಆಯೋಗದ ವರದಿ. ಯಾರ ಒತ್ತಾಯದ ಮೇರೆ ತಲೆವಾಗಿ ಆಯೋಗ ನೇಮಕವಾಯಿತೋ ಅವರ ತೃಪ್ತಿಗಾಗಿಯೇ ಆ ವರದಿಯನ್ನು ಸಮುದ್ರಕ್ಕೆ ಎಸೆಯಲಾಗುತ್ತಿದೆ. "ನೀವು ಹೇಳಿ ನೇಮಕಗೊಂಡ ಆಯೋಗ; ಅದರ ವರದಿಯನ್ನು ಒಪ್ಪಲು ನೀವೆ ಬಾಧ್ಯರಾಗಿದ್ದೀರಿ' ಎಂದು ಮಹಾರಾಷ್ಟ್ರದ ನಾಯಕರ ಮೇಲೆ ನ್ಯಾಯಸಮ್ಮತವಾದ ನಿರ್ಬಂಧ ಹೇರಲು ಶ್ರೀಮತಿ ಗಾಂಧಿಯವರಿಗೆ ಎದೆಯಿಲ್ಲ. ನಾಯಕಾಧಿನಾಯಕರ ಸೊಂಟಕ್ಕೆ ಸೂತ್ರ ಬಿಗಿದು ಗೊಂಬೆಯಾಟವಾಡುವ ಈ ಮಹಿಳೆಗೆ ಮರಾಠಿಗರ ಮೇಲೆ ನ್ಯಾಯ ನಿರ್ಬಂಧ ಹೇರಿದರೆ, ತನ್ನ ಗದ್ದುಗೆ ಅಲುಗುವುದೆಂಬ ಅಂಜಿಕೆ. ಅದಕ್ಕೆಂದೇ ಮಹಾಜನ ವರದಿಯನ್ನು ಮೂಲೆಗೆ ತಳ್ಳಿ ಬೇರೆ ಹಲವು ಬಗೆಯ ಪರಿಹಾರ ಸೂತ್ರಗಳನ್ನು ಆಕೆ ಕನ್ನಡಿಗರ ಮುಂದಿಟ್ಟಿದ್ದಾರೆ. ಇವೆಲ್ಲವೂ ಕನ್ನಡಿಗರಿಗೆ ಅನ್ಯಾಯವಾದುದರಿಂದ ಮುಖ್ಯ ಮಂತ್ರಿ ವೀರೇಂದ್ರ ಪಾಟೀಲರು ಅವೆಲ್ಲವನ್ನೂ ತಿರಸ್ಕರಿಸಿದ್ದಾರೆ. ಹೀಗೆ ಶ್ರೀ ವಿ. ಪಿ. ನಾಯಕರ ಮೊಂಡು ವಾದದ ಮುಂದೆ ಮಣಿದ ಶ್ರೀಮತಿ ಗಾಂಧಿಯವರು ತಾನು ಯಾರಿಗೂ ಅನ್ಯಾಯ ಮಾಡುವುದಿಲ್ಲವೆಂದು ಹೇಳುತ್ತ ಆಯೋಗದ ವರದಿಯನ್ನು ಸಂಸತ್ತಿನ ಮುಂದೆ ಇಡಲು ತಕರಾರು ನಡೆಸುತ್ತಿದ್ದಾರೆ. ಪ್ರಧಾನಿಯವರಿಂದ ಕರ್ನಾಟಕಕ್ಕೆ ಅನ್ಯಾಯವಾಗುವುದಿಲ್ಲವೆಂದು ಸಾರುವ ಅವರ ಚೇಲಾಗಳು ಸಂಸತ್ತಿನ ಸಾರ್ವಭೌಮತೆಯ ಬಲದಿಂದ ಕರ್ನಾಟಕಕ್ಕೆ ದ್ರೋಹ ಬಗೆಯಲು ದೃಢ ನಿಶ್ಚಯ ಮಾಡಿದ್ದಾರೆ.

ಇದೇ ಬಗೆಯ ಇನ್ನೊಂದು ಪ್ರಶ್ನೆ, ಕಾವೇರಿ ನದೀ ನೀರಿನದ್ದು. ತಮಿಳುನಾಡಿನ ಡಿಎಂಕೆ ಸರಕಾರ ಇಂದಿರಾ ಗಾಂಧಿಯವರಿಗೆ ಅತ್ಯಂತ ಪ್ರಿಯವಾದದ್ದು. ಏಕೆಂದರೆ, ಆಕೆಯ ಸಿಂಹಾಸನವನ್ನು ಹೊತ್ತ ಕಂಬಗಳಲ್ಲಿ ಒಂದು ಡಿಎಂಕೆಯವು. ಕರ್ನಾಟಕದ ಸಿಂಡಿಕೇಟ್ ಸರಕಾರವನ್ನು ಉರುಳಿಸಲು ತಾವು ಮಾಡಿದ, ಮಾಡಿಸಿದ ತಂತ್ರಗಳೆಲ್ಲ ವಿಫಲಗೊಂಡ ಬಳಿಕ "ಉರುಳಿಸುವುದು ನಮ್ಮ ಗುರಿಯಲ್ಲ'; 'ಸಹಕಾರ ನೀಡುತ್ತೇವೆ' ಎಂದು ಮುಂತಾದ ಉಗ್ಗಡಣೆಗಳು ಬಂದುವು–ನರಿ ದ್ರಾಕ್ಷೆ ಹಣ್ಣು ಹುಳಿಯೆಂದಂತೆ. ಆದರೆ ಶ್ರೀಮತಿ ಗಾಂಧಿಯವರ ಕಾನೂನು ಸಚಿವ ಶ್ರೀ ಕೆಂಗಲ್ಲರು ರಾಜ್ಯ ಸಂಚಾರಾವಧಿಯಲ್ಲಿ ತನ್ನ ನಾಯಕಿ ಶ್ರೀಮತಿ ಗಾಂಧಿಯನ್ನು ಹೊಗಳಿದ್ದೇ ಹೊಗಳಿದ್ದು; ಶ್ರೀ ಪಾಟೀಲರನ್ನು, ಅವರ ಆಡಳಿತೆಯನ್ನು ದೂರಿದ್ದೇ ದೂರಿದ್ದು. 'ಇಂದಿರಮ್ಮನನ್ನು ನಂಬಿ; ಆಕೆಯಲ್ಲಿ ವಿಶ್ವಾಸವಿಡಿ; ಆಕೆಯ ಕೈಯಲ್ಲಿ ಕನ್ನಡಿಗರ ಯೋಗಕ್ಷೇಮ ಚಲೋದಾಗಿರುತ್ತದೆ' ಎಂದು ಮೊದಲಾಗಿ ಉಪದೇಶಿಸಿದ್ದೇ ಉಪದೇಶಿಸಿದ್ದು. ಈ ಉಪದೇಶದ ಪರದೆಯ ಹಿಂದೆ ಯಾವ [illegible]ಭೂತವಿದೆಯೆಂಬುದು ಈಗ ದೃಗ್ಗೋಚರವಾಗಹತ್ತಿದೆ; ತಮಿಳುನಾಡಿನ ಪ್ರೀತ್ಯರ್ಥವಾಗಿ ಕಾವೇರಿ ನದೀ ನೀರಿನ ಬಗ್ಗೆ ಒಡಂಬಡಿಕೆಯನ್ನು ಸಾಧಿಸಲು ಪ್ರಧಾನಿಯವರು ಮುಖ್ಯ ಮಂತ್ರಿ ಕರುಣಾನಿಧಿಯವರಿಗೆ ಆಶ್ವಾಸನೆ ನೀಡಿದ್ದಾರೆ. ೧೯೨೪ರಲ್ಲಿ ಅಂದಿನ ವೈಸರಾಯರ ಸಹಕಾರದೊಡನೆ ಮದ್ರಾಸ–ಕೇರಳಗಳು ಮಾಡಿಕೊಂಡಿದ್ದ ಒಡಂಬಡಿಕೆಯ ತಳಹದಿಯಲ್ಲೇ ಮಾತುಕತೆ ನಡೆಯಬೇಕೆಂದು ಆಕೆಯ ಮತ್ತು ಕೇಂದ್ರ ಸರಕಾರದ ನೀರಾವರಿ ಸಚಿವರ ಉದ್ದೇಶ. ಹೀಗೆ ಮಾಡುವುದರಿಂದಲೇ ಕರ್ನಾಟಕಕ್ಕೆ ಸಹಿಸಲಾಗದಷ್ಟು ಅನ್ಯಾಯವಾಗುತ್ತದೆ; ಕನ್ನಡಿಗರ ರಕ್ತ ತಮಿಳುನಾಡಿಗೆ ಹರಿಯುವಂತಾಗುತ್ತದೆ.

ಇಂದು ಎರಡೂ ರಾಜ್ಯಗಳು ಸಮಾನ. ಕರ್ನಾಟಕದ ನೆಲವನ್ನು ಒಣಗಿಸಿ ಕಾವೇರಿಯು ತಮಿಳುನಾಡನ್ನು ತಣಿಸಬೇಕೇ? ಶ್ರೀ ವೀರೇಂದ್ರ ಪಾಟೀಲರು ರಾಜ್ಯದ ಹಿತದೃಷ್ಟಿಯಿಂದ ನ್ಯಾಯೋಚಿತ ಒಡಂಬಡಿಕೆಗೆ ಸಿದ್ಧರಾಗಿದ್ದಾರೆ; ಆದರೆ, ಶ್ರೀ ಕರುಣಾನಿಧಿಯವರು ತಾವೇ ನೀರುಣ್ಣುವ ಹೆಬ್ಬಯಕೆಯಿಂದ ೧೯೨೪ರಷ್ಟು ಹಿಂದೆ ಉಳಿದಿದ್ದಾರೆ. ಕೇಂದ್ರ ಸರಕಾರವೂ ಅವರಿಗೆ ಒತ್ತಾಸೆ ನೀಡುತ್ತದೆ. ಎಂದರೆ, ಇಂದಿರಾ ಗಾಂಧಿಯವರು ಕರ್ನಾಟಕಕ್ಕೆ ದ್ರೋಹ ಬಗೆಯುತ್ತಿದ್ದಾರೆಂದೇ ಅರ್ಥ.

ಶ್ರೀಮತಿ ಗಾಂಧಿ ಪೊದೆಯಲ್ಲಿರುವ ಎರಡು ಹಕ್ಕಿಗಳಿಗಿಂತ ಕೈಯಲ್ಲಿರುವ ಒಂದೇ ಉತ್ತಮವೆಂದು ಭಾವಿಸಿದಂತಿದೆ. ಅದರ ಮೇಲೆ ಕರ್ನಾಟಕದ ಸಿಂಡಿಕೇಟ್ ಸರಕಾರವನ್ನು ಪ್ರಜಾತಂತ್ರ ತತ್ವಗಳಿಂದ ಉರುಳಿಸಲಾಗದೆ ತನ್ನ ರಾಜಕೀಯ ದಿವಾಳಿಕೋರತನದಿಂದ ಅಪ್ರಿಯಗೊಳಿಸ ಹೊರಟಿದ್ದಾರೆ. ಇದಕ್ಕೆಂದೇ ಅವರು ಬೆಳಗಾಂವಿ–ಕಾರವಾರಗಳನ್ನು ಸಂಸತ್ತಿನ ಮೂಲಕ ಮರಾಠಿಗರಿಗೆ ಕೊಡಿಸುತ್ತಾರೆ. ಕಾವೇರಿಯ ನೀರನ್ನು ತಮಿಳುನಾಡಿಗೆ ಹರಿಸುತ್ತಾರೆ. ಇದು ಆಕೆಯ ಆತ್ಮಸಾಕ್ಷಿಗೆ ಸಮ್ಮತವಾಗಬಹುದು. ಆ ಆತ್ಮಸಾಕ್ಷಿ ಸ್ವಲಾಭದ ಪ್ರಶ್ನೆ ಎದ್ದುನಿಂತಾಗ ಜಾಗೃತವಾಗುತ್ತದೆ. ಆದರೆ ಆಕೆಯ ಆತ್ಮಸಾಕ್ಷಿಯಿಂದ ಕನ್ನಡಿಗರಿಗೆ ಎಂದೂ ಸರಿಗೊಳಿಸಲಾಗದ ಅನ್ಯಾಯವಾಗುತ್ತದೆ. ಈ ಬಗೆಯ ಅಪಮಾನವನ್ನು, ಅನ್ಯಾಯವನ್ನು ಕನ್ನಡಿಗರು ಮೂಕರಾಗಿ ಸಹಿಸುವುದು ಸಾಧ್ಯವಿಲ್ಲ. ತಮ್ಮ ನ್ಯಾಯಕ್ಕಾಗಿ ಅವರು ಬದ್ಧಕಟಿಯಾಗಲೇಬೇಕು.

ವರ್ಧಂತ್ಯುತ್ಸವ

ಉಡುಪಿ ಸಂಸ್ಕೃತ ಮಹಾಪಾಠಶಾಲೆಯ 66ನೇ ವರ್ಧಂತ್ಯುತ್ಸವವು ಪರ್ಯಾಯ ಶ್ರೀ ಪಲಿಮಾರು ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ತಾ. 18ರಂದು ಜರಗಿತು. ಶ್ರೀಗಳವರು ವ್ಯಾಸ ಪೂಜೆ ಮಾಡಿದ ತರುವಾಯ ಕಾಲೇಜಿನ ಪ್ರಿನ್ಸಿಪಾಲ್ ಮತ್ತು ಹೈಸ್ಕೂಲಿನ ಮುಖ್ಯೋಪಾಧ್ಯಾಯರು ಗತವರುಷದ ವರದಿಗಳನ್ನು ಓದಿದರು. ಹಳೇ ವಿದ್ಯಾರ್ಥಿ ಶ್ರೀ ಕೆ. ಎಸ್. ಎಸ್. ಉಪಾಧ್ಯಾಯ ಮತ್ತು ಈಗಿನ ವಿದ್ಯಾರ್ಥಿಗಳಾದ ಶ್ರೀ ಶಂಕರನಾರಾಯಣ ಅಡಿಗ ಮತ್ತು ಶ್ರೀ ಬಿ. ಎಸ್. ಶ್ರೀಧರ ಇವರು ಸ್ವಸ್ತಿವಾಚನ ಗೈದರು. ವರ್ಧಂತ್ಯುತ್ಸವದ ಅಂಗವಾಗಿ ಏರ್ಪಡಿಸಿದ್ದ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಶ್ರೀ ಅದಮಾರು ಮಠಾಧೀಶರು ಬಹುಮಾನ ವಿತರಣೆ ಮಾಡಿದರು. ಅವರು ಮಾತನಾಡುತ್ತಾ ಭಾರತೀಯರು ಸಂಸ್ಕೃತವನ್ನು ಈಗ ಕಲಿಯಲೇ ಬೇಕಾದ ಪ್ರಸಂಗ ಬಂದಿದೆಯೆಂದು ತಿಳಿಸಿದರು. ಸಂಸ್ಕೃತ ಭಾಷೆಯ ಅರಿವಿಲ್ಲದವರು ದೇಶೀಯ ಭಾಷೆಗಳಲ್ಲಿ ಪಾಂಡಿತ್ಯವನ್ನು ಗಳಿಸಲಾರರು. ಆದ್ದರಿಂದ ವಿದ್ಯಾರ್ಥಿಗಳ ಹಿರಿಯರು ಈ ವಿಷಯದಲ್ಲಿ ಗಮನ ಕೊಡಬೇಕಾಗಿ ತಿಳಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಸಂಸ್ಕೃತವು ಇಹಪರದ ಅಭಿವೃದ್ಧಿಗೆ ಕಾರಣವಾದ್ದರಿಂದ ಅದನ್ನು ಎಲ್ಲರೂ ಅಭ್ಯಾಸ ಮಾಡಬೇಕೆಂದೂ, ಸಂಸ್ಕೃತಭಾಷೆ ಜೀವಕ್ಕೆ ಸಂಬಂಧಿಸಿದ್ದು, ಇತರ ಭಾಷೆಗಳು ದೇಹಕ್ಕೆ ಸಂಬಂಧಿಸಿದ್ದು, ಆದ್ದರಿಂದ ಇತರ ಭಾಷೆಗಳ ಜತೆಗೆ ಸಂಸ್ಕೃತವನ್ನು ಕಲಿಯಲೇ ಬೇಕೆಂದು ತಿಳಿಸಿದರು.

ಸಮಾರಂಭದ ಅಂತ್ಯದಲ್ಲಿ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಎಸ್. ಅನಂತಕೃಷ್ಣಾಚಾರ್ಯರು ಧನ್ಯವಾದ ಸಲ್ಲಿಸಿದರು. ರಾತ್ರಿ ವಿದ್ಯಾರ್ಥಿಗಳಿಂದ 'ಮಾಗಧವಧೆ' ಎಂಬ ಯಕ್ಷಗಾನ ಕಾರ್ಯಕ್ರಮವಿತ್ತು.

ವಾರ್ಷಿಕ ಮಹಾಸಭೆ ನೋಟೀಸು

ಪುತ್ತೂರು ಡಿವಿಜನ್ ಮಹಾಳಿ ಪ್ರಿವೆನ್ಶನ್ ಸಹಕಾರಿ ಸಂಘ ಲಿ.
ನಂಬ್ರ 367 ಇಡ್ಕಿದು.
ಕಬಕ ಪೋಸ್ಟ್, ದ. ಕ.

ಈ ಸಂಘದ ವಾರ್ಷಿಕ ಮಹಾಸಭೆಯು ತಾ. 28-9-70ನೇ ಸೋಮವಾರ ಪೂರ್ವಾಹ್ನ ಘಂಟೆ 10–30ಕ್ಕೆ ದ. ಕ. ಸೆಂಟ್ರಲ್ ಬ್ಯಾಂಕಿನ ಪುತ್ತೂರು ಶಾಖೆಯ ಆಫೀಸಿನಲ್ಲಿ ಜರಗುವುದಾಗಿದೆ. ಎಲ್ಲಾ ಮೆಂಬರರೂ ಬರಬೇಕಾಗಿ ವಿನಂತಿ.

(Sd.) K. Venkappaya
ಅಧ್ಯಕ್ಷ

ಇಡ್ಕಿದು, ತಾ. 26—8—70

ವಿಷಯಗಳು

1) 1969-70ರ ವರದಿ ಓದುವುದು.
2) 1968-69ರ ಆಡಿಟ್ ರಿಪೋರ್ಟ್ ಬಂದಲ್ಲಿ ಮಂಜೂರಾತಿ, ಲಾಭ ವಿತರಣೆ.
3) 1970-71 ಅಂದಾಜು ಬಜೇಟು ಮಂಜೂರಾತಿ.
4) ಅಧ್ಯಕ್ಷರ ಅನುಮತಿಯಿಂದ ಇತರ ವಿಷಯಗಳು.

ಗೇಹರಾಜ್ಯದಲ್ಲಿ

ಪ್ಲಾಸ್ಟಿಕ್ ಛತ್ರಪತಿಗಳು

"ನೋಡಿದ್ರೇನ್ರಿ?"

'ಏನು?'

"ಮತ್ತಿನ್ನೇನು? ಪ್ರಧಾನಿ ಇಂದಿರಜ್ಜಿಯವರು ತಮ್ಮೊಬ್ಬ ಜಂಟಿ ಯಶವಂತರಾವ್ ಬಲವಂತರಾವ್ ಚವಣರನ್ನು ಪ್ಲಾಸ್ಟಿಕ್ಕಿನ ಛತ್ರಪತಿಯನ್ನಾಗಿ ಮಾಡಿಬಿಟ್ಟರು."

"ಅದು ಸರೀನ್ರಿ. ಅದ್ದರಿಂದ ತಮ್ಮ ಪ್ರಬಲ ಪ್ರತಿಸ್ಪರ್ಧಿಯೊಬ್ಬನನ್ನು ಮಟ್ಟಸ ಮಾಲಗಿಸಿಬಿಟ್ಟರು.'

"ಅಲ್ಲ, ಬೆಲೆಯೇರಿಕೆಯು ಗಗನದಲ್ಲಿ ಹಾರುತ್ತ ಚಂದ್ರಲೋಕವನ್ನು ಮುಟ್ಟುತ್ತಲಿರುವಾಗ, ಅದನ್ನು ಮತ್ತೆ ಭೂಮಿಗಿಳಿಯಲು ಚವಣರೇ ಬಲವಂತರೆಂದು ಆಕೆ ತಿಳಿದದ್ದರಿಂದ ಅವರಿಗೇ ಅರ್ಥ ಖಾತೆಯನ್ನು ವಹಿಸಿಕೊಟ್ಟರು."

"ಅದು ನಿಜ; ಆದರೆ, ಚವಣರು ಈ ದಿಸೆಯಲ್ಲಿ ಅಬಲರೆಂಬುದನ್ನು ತೋರಿಸಿಕೊಟ್ಟಿದ್ದಾರೆ."

"ಅದಕ್ಕೇನಂತೀ? ಚ್ಯವನಪ್ರಾಶ ನಾಲ್ಕು ಪೌಂಡು ತೆಗೆದುಕೊಂಡರೆ ಸಾಕಲ್ಲ?'

"ಹ್ಞಾಂ. ಆದರೇನು ನೋಡಿ, ಈ ಸರಕಾರ ಹುಟ್ಟಿದ್ದೆಲ್ಲ ಮುಕಿಯಾಗುತ್ತೆ."

"ಯಾಕೆ ಹಾಗಂತೀಯ?"

"ಹಿಂದಿನ ಕಥೆಯೆಲ್ಲ ಹೋಗ್ಲಿಬಿಡಿ. ಮೊನ್ನೆಮೊನ್ನೆ ಔಷಧಿಗಳ ಮೇಲೆ ನಿಯಂತ್ರಣ ಹೇರಿತು; ಬೆಲೆ ನಿಗದಿ ಮಾಡಿತು. ಆದದ್ದೇನು? ಪೇಟೆಂಟ್ ಔಷಧಿಗಳ ಬೆಲೆ ಏರಿ ಹಂಚಿತು. ಇದರಿಂದ ಎಷ್ಟೊ ಮಂದಿ ಉಳಿದದ್ದು ನೀರಿನಲ್ಲಿ ಹೋಯ್ತು ಅಂತಾಯ್ತು.'

'ಅದು ಹಾಗೂ ಹೌದು. ಈಗ ಮತ್ತೆ ಎಚ್ಚರಿಕೆ ನೀಡಿದ್ದಾರಲ್ಲಾ, ನ್ಯಾಯ ಬೆಲೆಗೇ ಮಾರಬೇಕೂಂತ...."

"ಅಲ್ರಿ, ಇದೂ ಒಂದು ಮಾತೆ?"

"ಯಾಕೆ?'

'ನೋಡಿ, ನಮ್ಮ ಅಂಗಡಿಗಳಲ್ಲಿ ನ್ಯಾಯಬೆಲೆಯ ಮಾಲುಗಳನ್ನು ಬಿಟ್ಟು ಉಳಿದೆಲ್ಲವೂ ಸಿಗುತ್ತದೆ.'

"ಅಲ್ರೀ, ಔಷಧಿಗಳನ್ನೆಲ್ಲ ಏನ್ಮಾಡೋ ಕಾಗುತ್ತೆ?"

"ಮತ್ತಿನ್ನೇನು ಮಾಡೋದು? ಮುಂದಿನ ಬಾಗಿಲು ಮುಚ್ಕೊಂಡು ಹಿಂದಿನ ಬಾಗಿಲಿಂದ ವ್ಯಾಪಾರ ಮಾಡೋದು...."

"ಹ್ಞಾಂ.... ಬೆಲೆನಿಯಂತ್ರಣ ಬಡವರ ಬಳಕೆಗೆ ನಿಯಂತ್ರಣ ತಂದಿತೂಂತಾಯ್ತು...."

"ನೋಡಿ, ಎಲ್ಲವೂ ಆರಂಭವಾಗುವುದು ಬಡವರ ಉದ್ಧಾರಕ್ಕಾಗಿ ಆದರೆ, ಅದು ಅವರ ಜೀವಕ್ಕೇನೇ ಅಪಾಯ ತರುತ್ತೆ...."

"ನೋಡು, ಇದಕ್ಕೆಲ್ಲ ಇಂದಿರಮ್ಮ ಏನು ಮಾಡೋದು? ಜನ ಸರಿಯಾಗ್ಬೇಕು; ಜನ...."

"ಹೌದ್ರಿ, ಅದು ನಿಜಾನ್ರಿ. ಜನರನ್ನ ಸರಿ ಮಾಡೋ ಸ್ಥಾನದಲ್ಲಿ ಆಕೆ ಕುಳಿತಿರುವಾಗ, ಸರಿಮಾಡೋ ಕೆಲಸದಿಂದ ಜಾರೋದು ಹೇಗೆ?"

'ಹೇಗೆ ಅಂದ್ರೆ? ಆಕೆ ಸರಕಾರದ ಅಧ್ಯಕ್ಷೆ. ಏನು ಮಾಡಿಯಾಳು? ಒಂದಷ್ಟು ಶಾಸನ ಮಾಡುತ್ತಾಳೆ, ಸುಗ್ರೀವಾಜ್ಞೆ ಹೊರಡಿಸುತ್ತಾಳೆ. ಇದಕ್ಕೆಲ್ಲಾ ಸಗ್ಗ ಬಡೆಯುವವರೇನು ಭಾರತೀಯರು? ಆಕೆಯೇನು ಮಾಡ್ತಾರೆ? ನೋಡು, ರಾಜ—ಮಹಾರಾಜರಿಗೆ ಕೊಡುವ ರಾಜಧನ ಮತ್ತಿತರ ಸೌಭಾಗ್ಯಗಳಿಗೆ ಮುಟ್ಟುಗೋಲು ಹಾಕುವ ಶಾಸನ ಪಾರ್ಲಿಮೆಂಟಿನ ಮುಂದೆ ಬರಲಿದೆ.'

"ಅಲ್ರಿ, ಇದರಿಂದ ಸರಕಾರಿ ಬೊಕ್ಕಸಕ್ಕೆ ಎಷ್ಟು ಉಳಿದೀತು?"

"ಉಳಿಯುವುದೇನು ಬಂತು? ಹಲವಾರು ಕೋಟಿ ರೂಪಾಯಿ ಉಳಿಯಬಹುದು...."

"ಇದೇನು ಇಂದಿರಾ ಸರ್ಕಾರಕ್ಕೆ ದೊಡ್ಡದೇನು? ಆಕೆಯ ಒಂದೊಂದು ಉದ್ಯಮವೂ ಇಷ್ಟಿಷ್ಟು ನಷ್ಟದಲ್ಲಿ ನಡೆಯುವಾಗ ಹಣಕ್ಕಾಗಿ ಇದು ಮಾಡಿದ್ದಲ್ಲವೆಂಬುದು ಗ್ಯಾರಂಟಿ.'

'ಮತ್ಯಾಕೆ?'

"ತಾನು ಪ್ರಗತಿಪರಳು; ಆದರೆ, ಕಮ್ಯುನಿಸ್ಟಳಲ್ಲವೆಂಬುದನ್ನು ಲೋಕಕ್ಕೆ ಜಾಹೀರು ಮಾಡಲು...."

"ಹ್ಞಾಂ...."

"ಅಲ್ರಿ, ನೋಡಿ, ಭೂದಾನ ಚಳುವಳಿಗಾರರು ತಮ್ಮ ಚಳುವಳಿಯನ್ನು ನಿಲ್ಲಿಸದೆ ಹೋದರೆ, ಅವರನ್ನು ಕೊಂದುಬಿಡುವುದಾಗಿ ಎಚ್ಚರಿಕೆ ನೀಡಿದ್ದಾರಂತೆ....'

"ಹೌದು, ಕಮ್ಯುನಿಸ್ಟರು."

"ಯಾಕೇಂತ?"

"ಯಾಕೆ ಅಂದರೆ, ದಾನ ಪಡೆದು ಭೂಮಿ ಹಂಚುವುದು ಕ್ರಾಂತಿ ವಿರೋಧಿ. ಭೂಮಿಯನ್ನು ಬೇಡಿ ಪಡೆಯುವುದಲ್ಲ, ಸುಲಿದು ಪಡೆಯಬೇಕು ಅಂತ ಅವರಿಗೆ.'

"ಅಂದರೆ, ರಕ್ತ ಬಸಿದು, ಕ್ರಾಂತಿಯೆಬ್ಬಿಸಿ......'

'ಹ್ಞಾಂ... ಅದೇ, ನೋಡು, ಶಾಸ್ತ್ರೀರದ ಶೇಖ ಅಬ್ದುಲ್ಲಾ ಹೇಳಲಿಲ್ಲವೆ?— ಸ್ವಾತಂತ್ರ್ಯವನ್ನು ಬಟ್ಟಲಲ್ಲಿಟ್ಟು ಯಾರೂ ಕಾಣಿಕೆ ನೀಡುವುದಿಲ್ಲ; ಅದನ್ನು ಹೋರಾಡಿ ಪಡೆಯಬೇಕೂಂತ...."

"ಹ್ಞಾಂ, ಅಂತೂ ಇಂದಿರಜ್ಜಿ ತನ್ನ ಸುತ್ತಮುತ್ತ ಮುಳ್ಳಿನ ಗಿಡಗಳನ್ನು ಬೆಳೆಸಿಕೊಂಡಿದ್ದಾರೆ...."

"ನೋಡು, ಪಶ್ಚಿಮ ಬಂಗಾಳಕ್ಕೆ ರಾಜ್ಯಪಾಲರನ್ನು ನೇಮಕ ಮಾಡುವಲ್ಲಿಯೂ ಆಕೆ ಹಾಗೇ ಮಾಡಿದ್ದಾರೆ."

"ಯಾಕೆ ಏನಾಯ್ತು?"

'ಅಲ್ಲ, ಸ್ವಯಂ ಧವನರೇ ತನ್ನ ಅಯೋಗ್ಯತೆಯ ಬಗ್ಗೆ ಹೇಳಿಕೊಂಡಿದ್ದಾರೆ....'

'ಏನಂತ?"

"ನ್ಯಾಯಾಂಗದ ಯಾವ ಅನುಭವವೂ ಇಲ್ಲದ ನನ್ನನ್ನು ನ್ಯಾಯಾಧೀಶನಾಗಿ ಮಾಡಲಾಯ್ತು. ವಿದೇಶಗಳ ಬಗ್ಗೆ ಏನೂ ಗೊತ್ತಿಲ್ಲದ ನನ್ನನ್ನು ಇಂಗ್ಲೆಂಡಿನಲ್ಲಿ ಹೈಕಮಿಶನರನಾಗಿ ನೇಮಿಸಲಾಯ್ತು. ಆಡಳಿತದ ಗಂಧಗಾಳಿಯಿಲ್ಲದ ನನ್ನನ್ನು ಪಶ್ಚಿಮ ಬಂಗಾಳದ ರಾಜ್ಯಪಾಲನನ್ನಾಗಿ ಮಾಡಲಾಯ್ತು....'

"ಅಲ್ರಿ, ಈಗ ಬಂಗಾಳದಲ್ಲಿ ಅವರದ್ದೇ ರಾಜ್ಯ...'

'ಅದೇ ನೋಡು, ಇಂದಿರಾ ರಾಜ್ಯದಲ್ಲಿ ಛತ್ರಪತಿ ಚವಣರು ಪ್ಲಾಸ್ಟಿಕ್ ಚವಣರಾಗುತ್ತಾರೆ; ಮಹಾಮಾರಕಗಾರರು ಸಂರಕ್ಷಣಾ ಮಂತ್ರಿಗಳಾಗುತ್ತಾರೆ.'

"ಅಂದರೆ, ಎರಡೂ ಕೋಟೆಗಳಲ್ಲಿ ಆಕೆಯದೇ ಕಾರುಬಾರು ನಡೆಯಬೇಕಾದರೆ ಹೀಗೇ ಆಗಬೇಕು...."

"ಏನೋಪ್ಪ...ಹೀಗೇ ನಡೆದರೆ, ಶಿವಾಜಿಯ ಕೋಟೆಗೆ ಪಾಕಿಸ್ತಾನ ಧ್ವಜ ಸಿಕ್ಕಿದರೂ ಆಶ್ಚರ್ಯವಿಲ್ಲ. ದ್ರಾವುಳ ಕೈಯಲ್ಲಿ ಏನು ಓಟುಗಳಿವೆಯಾನೆ?"

'ಹ್ಞಾಂ...ಈ ನೆಹರೂ ಪುತ್ರಿ ದೇಶವನ್ನು ಯಾವ ದಾರಿಗೆ ಒಯ್ಯುತ್ತಾರೆಯೋ ಆಕೆಗೇ ತಿಳಿದಿಲ್ಲ.'

'ತನಗೇ ದಾರಿಯೇ ಇಲ್ಲದವರು ಮಾರ್ಗ ರಾಬಟ್ಟೆ ಓಡುತ್ತಾರೆ..."

"ಹ್ಞಾಂ....'

"ನಮ್ಮನ್ನೂ ಓಡಿಸುತ್ತಾರೆ....'

'ನಾವು ಓಡದಿದ್ದರೆ?'

'ಬಾರುಕೋಲಿಂದ ಬಡಿದು....'

'ಛೆ....ಛೆ..."

"ಇದೀಗ ಪ್ರಜಾಪ್ರಭುತ್ವ....'

'ಅಂದರೆ, ಪ್ರಜೆಗಳೆಲ್ಲ ಪ್ಲಾಸ್ಟಿಕ್ ಛತ್ರಪತಿಗಳು.

'ಇಂದಿರಾ ಮಾತ್ರ ಜೀವಂತ.'

'ಹ್ಞಾಂ...'

'ಹ್ಞಾಂ...'

—ಗೋರಾ.

ಸಿದ್ಧಿ ವಿನಾಯಕನ ಆರ್ಥಿಕ ಸೂತ್ರ

ಸಫಲ ಬದುಕಿನ ಆರ್ಥಿಕ ಸೂತ್ರ ಸಿದ್ಧಿ ವಿನಾಯಕನ ರೂಪಾಕೃತಿಗಳಲ್ಲಿ ಬಿಂಬಿತವಾಗಿದೆ:

ದುಡಿಮೆಯ ಸಾಧನೆ ಮತ್ತು ವಿಪುಲತೆಯನ್ನು ಸೂಚಿಸುತ್ತದೆ
—ವಿನಾಯಕನ ನಾಲ್ಕು ಕೈಗಳು.

ದುಡಿಮೆಯ ಫಲವನ್ನು ಸಂತೋಷದಿಂದ ಚಾಚಿ ಸ್ವೀಕರಿಸುವಂತಿದೆ
—ಆತನ ನಿಡಿದಾದ ಸೊಂಡಿಲು.

ಫಲಾನುಭೋಗದಲ್ಲಿನ ಅನಾವ್ಯಯವನ್ನು ತಡೆ ಹಿಡಿಯುವಂತಿದೆ
—ಆತನ ಕೋರೆ ದವಡೆಗಳು.

ಉಂಡು ಮಿಕ್ಕಿದನ್ನು ಕೂಡಿಟ್ಟ ಸಂಪತ್ತಿನ ಬೊಕ್ಕಸದಂತಿದೆ
—ಆತನ ಉಬ್ಬಿದ ಉದರ.

ಸಂಪತ್ತಿಗೆ ಸರ್ಪಗಾವಲಿನ ರಕ್ಷಣೆ ನೀಡುತ್ತದೆ
—ಆತನ ಉದರವನ್ನು ಸುತ್ತುವರಿದಿರುವ ನಾಗಸರ್ಪ.

ದುಡಿತದ ಫಲವನ್ನು ಹಿತವಾಗಿ ಉಂಡು, ಮಿಕ್ಕಿದ್ದನ್ನು ನಾಳೆಯ ಸುಖಕ್ಕಾಗಿ ಭದ್ರವಾಗಿ ಉಳಿಸುವ ಆರ್ಥಿಕ ಸೂತ್ರವೇ ಸಿದ್ಧಿವಿನಾಯಕನ ಮೂಲಪಾಠ ಸಫಲ ಬದುಕಿನ ತಾರಕ ಮಂತ್ರ. ನಿಮ್ಮ ಸಂಪತ್ತಿನ ಭದ್ರತೆ ಮತ್ತು ಬೆಳವಣಿಗೆಗೆ ಸಿಂಡಿಕೇಟ್ ಬ್ಯಾಂಕು ಸದಾ ನಿಮ್ಮೊಡನೆ ಸಹಕರಿಸುತ್ತದೆ.

FAITHFUL · SB · FRIENDLY

ಸಿಂಡಿಕೇಟ್ ಬ್ಯಾಂಕ್

ಹೆಡ್ ಆಫೀಸು : ಮಣಿಪಾಲ

ಕೆ. ಕೆ. ಪೈ
ಕಸ್ಟೋಡಿಯನ್.

ಬಾಳಸಂಗಾತಿಯ ಆಯ್ಕೆಗೆ ಸಮಾಚಾರ ಪತ್ರಗಳ ಮಾಧ್ಯಮ

ಉದ್ಯಮಗಳ ಪ್ರಚಾರಕ್ಕೆ ಜಾಹೀರಾತುಗಳು ಉಪಯೋಗಿ. ವ್ಯಾಪಾರ-ವಹಿವಾಟಗಳಿಗೆಲ್ಲ ಜಾಹೀರಾತುಗಳು ನವ ಚೇತನ ನೀಡುತ್ತವೆ. ಅದೆಷ್ಟು ಕಳಪೆಯಾದ ವಸ್ತುವನ್ನಾದರೂ ಉದ್ದ-ಅಗಲ ಜಾಹೀರಾತುಗಳ ಮೂಲಕ ಜನಪ್ರಿಯಗೊಳಿಸಬಲ್ಲ ಕಲೆಯಲ್ಲಿ ಪಾರಂಗತರಾದವರೇ ಕೆಲಬರಿರುತ್ತಾರೆ. ನೋಡಿದ ನಂತರ 'ಅಯ್ಯೋ' ಎಂದು ನಿಟ್ಟುಸಿರು ಬಿಡುವ ಸಿನೆಮಾಗಳೂ ಪ್ರಚಾರ ವೈಖರಿಯ ಬಲದಿಂದ ತಿಂಗಳುಗಟ್ಟಲೆ ನಡೆಯುತ್ತವೆ. ಏಕೆಂದರೆ, ಇಂದಿನದು ಪ್ರಚಾರ ಯುಗ. ಸಣ್ಣದರಲ್ಲಿ, ದೊಡ್ಡದರಲ್ಲಿ, ಪ್ರಚಾರಪ್ರಧಾನವಾಗಿರಬೇಕಾದದ್ದು ಇಲ್ಲಿ ಅಗತ್ಯ.

ಈಗ್ಗೆ ಕೆಲವು ವರ್ಷಗಳಿಂದ ಈ ಜಾಹೀರಾತುಗಳು ದಾಂಪತ್ಯದ ಭವಿಷ್ಯ ನಿರ್ಣಯದಲ್ಲಿ ಪಾತ್ರ ವಹಿಸುತ್ತಿವೆ. ವಿದೇಶಗಳಲ್ಲಿ ತನಗೆ ಒಪ್ಪುವ ಪತಿಯನ್ನೋ ಪತ್ನಿಯನ್ನೋ ಜಾಹೀರಾತುಗಳ ಮೂಲಕ ಹೊಂದುವುದು ಸಾಧ್ಯ. ಆದರೆ, ವಿದೇಶೀಯ ದಾಂಪತ್ಯಕ್ಕೂ ಭಾರತೀಯ ದಾಂಪತ್ಯಕ್ಕೂ ಅಜಗಜಾಂತರವಿದೆಯೆಂಬುದನ್ನು ಮರೆಯಲಾಗದು. ಭಾರತದಲ್ಲಿ ಇತ್ತೀಚೆಗೆ 'ವರ ಬೇಕು', 'ವಧು ಬೇಕು,' ಎಂಬ ವಿವಾಹ ಸಂಬಂಧಿ ಜಾಹೀರಾತುಗಳು ದಿನಪತ್ರಿಕೆಗಳಲ್ಲಿ ಬರತೊಡಗಿವೆ. ಇದು ತೀರ ಸಂಪ್ರದಾಯವಾದಿಗಳ ಮನಸ್ಸು ನೋಯಿಸಬಹುದು.

ಹಿಂದಿನ ಕಾಲದಲ್ಲಿ ಹೆಣ್ಣಿಗೊಂದು ಗಂಡು, ಗಂಡಿಗೊಂದು ಹೆಣ್ಣು ಹುಡುಕುವುದು ಹೆಚ್ಚು ಪ್ರಯಾಸದ ಕಾರ್ಯವಾಗಿರಲಿಲ್ಲ. ತಂತಮ್ಮ ಸಂಬಂಧಿಗಳ ನಡುವೆಯೂ ಆಸುಪಾಸಿನೊಳಗೆಯೂ ಆಗ ಸಂಬಂಧವೇರ್ಪಡುತ್ತಿತ್ತು. ಆದರೆ, ಇಂದು ಈ ಪರಿಸ್ಥಿತಿಯುಳಿದಿಲ್ಲ. ಸಂಚಾರ-ಸೌಲಭ್ಯಗಳು ವಿಸ್ತಾರವಾಗುತ್ತ ಬಂದಂತೆ, ಶಿಕ್ಷಣ ಸೌಕರ್ಯಗಳು, ಉದ್ಯೋಗಾವಕಾಶಗಳು ವಿಶಾಲವಾಗುತ್ತ ಬಂದಂತೆ ಇಡಿಯ ದೇಶದಲ್ಲಿ ಒಂದು ಕಟ್ಟು ಒಡೆದು, ಜಾತಿ-ಮತಗಳ ಜನರು ಹಂಚಿ ಹೋಗಿದ್ದಾರೆ. ಯಾರು ಎಲ್ಲಿದ್ದಾರೆಂಬುದು ಯಾರಿಗೂ ತಿಳಿಯದು. ಹಾಗಾಗಿ ವಿವಾಹದ ಪ್ರಶ್ನೆ ಪೆಡಂಭೂತವಾಗಿ ನಿಂತಿದೆ, ನಮ್ಮ ಜಿಲ್ಲೆಯನ್ನು ತೆಗೆದುಕೊಂಡರೂ ಇಲ್ಲಿ ಹೆಣ್ಣುಗಳ ಸಂಖ್ಯೆಯೇ ಹೆಚ್ಚಾಗಿ ಕಾಣುತ್ತದೆ. ಇದಕ್ಕೆ ಕಾರಣವಿಲ್ಲದಿಲ್ಲ. ಗಂಡುಗಳು ಉಚ್ಚ ಶಿಕ್ಷಣ ಪಡೆಯುತ್ತಲೇ, ಬೊಂಬಾಯಿ-ಬೆಂಗಳೂರು ಮೊದಲಾದೆಡೆ ಉದ್ಯೋಗ ಮಾಡಿಕೊಂಡಿರುತ್ತಾರೆ. ಗಂಡು ತಿರುಗಿದಂತೆ ಹೆಣ್ಣು ಇನ್ನೂ ತಿರುಗಾಡುತ್ತಿಲ್ಲ.

ಗಂಡಿಗಾದರೇ ಹೆಣ್ಣಿಗಾಗಲೀ ಮದುವೆಯೆಂಬುದು ನೈಸರ್ಗಿಕ ನಿಯಮ. ಹಿಂದೆ ಕುಟುಂಬದ ಹಿರಿಯರು, ಪುರೋಹಿತರು ಮೊದಲಾದವರು ಈ ಕಾರ್ಯದಲ್ಲಿ ಮುಂದೆ ಬರುತಿದ್ದರು. ಇಂದವರ ಪ್ರಪಂಚ ಬಹಳ ಚಿಕ್ಕದಾಗಿ ಹೋಗಿದೆ. ಹಾಗಾಗಿ ಸಮಾಚಾರ ಪತ್ರಿಕೆಗಳ ಆಶ್ರಯ ಕೋರುವುದು ತಪ್ಪೆಂದು ಹೇಳಬರುವಂತಿಲ್ಲ. ಜಾಹೀರಾತುಗಳ ಮೂಲಕ ವರನನ್ನಾಗಲೀ ವಧುವನ್ನಾಗಲೀ ಬಯಸುವುದು ತನ್ನ ಲೋಪದೋಷಗಳನ್ನು ಮುಚ್ಚಿಡುವುದಕ್ಕೆಂದು ಕೆಲವರು ಹೇಳಬಹುದು. ತಾಯ್ತಂದೆಯರು ಅಸಹಾಯಕರಾಗಿ ಇವುಗಳ ಮರೆಹೋದರೆಂದಾಗಲೂ ಸಾಯೇ. ಇವುಗಳಲ್ಲಿ ಸತ್ಯಾಂಶ ಇದ್ದರೂ ಇರಬಹುದು; ಇಲ್ಲದೆಯೂ ಹೋಗಬಹುದು. 'ನೂರು ಸುಳ್ಳು ಹೇಳಿಯಾದರೂ ಒಂದು ಮದುವೆ ಮಾಡು' ಎಂಬ ಸೂಕ್ತಿಯ ಮುಂದೆ ಇವೆಲ್ಲ ಕ್ಷಮ್ಯ.

ಬೊಂಬಾಯಿಯಲ್ಲಿನ ಇಂಗ್ಲಿಷ್, ಹಿಂದಿ, ಗುಜರಾತಿ, ಮರಾಠಿ ಪತ್ರಿಕೆಗಳಲ್ಲಿ ವೈವಾಹಿಕ ಜಾಹೀರಾತುಗಳು ತುಂಬ ಇವೆ. ಮದ್ರಾಸು, ಕಲ್ಕತ್ತ, ದೆಹಲಿ, ಬೆಂಗಳೂರು ಕಡೆಯೂ ಹಿಂದೆ ಇಲ್ಲ. ಈ ಜಾಹೀರಾತುಗಳಲ್ಲಿ ಕೆಲವು ಸಂಪ್ರದಾಯ ಶರಣವಾಗಿವೆ; ಇನ್ನು ಕೆಲವು ಇದರಿಂದ ತುಸು ದೂರ ಸರಿದಿರುವುದು ಗೊತ್ತಾಗುತ್ತದೆ. ಜಾತಿ-ಉಪಜಾತಿ-ಮತಗಳ ಜಾಡಿನಲ್ಲೇ ಹೆಣ್ಣು-ಗಂಡುಗಳನ್ನು ಬಯಸುವವರು ಅಧಿಕ ಸಂಖ್ಯಾಕರಾದರೆ, ಇವನ್ನು ಗಣನೆಗೆ ತಾರದಿರುವ ಕ್ರಾಂತಿಕಾರಿಗಳೂ ಕೆಲವರಿದ್ದಾರೆ. ಬೊಂಬಾಯಿಯಲ್ಲಿ ಮನೆಗಳ ಅಭಾವವಿರುವುದರಿಂದ ಮನೆಯೊದಗಿಸಬಲ್ಲ ಹೆಣ್ಣಿಗೆ ಬೇಡಿಕೆ ಹೆಚ್ಚಿದೆ.

ಕಳೆದ ಇಪ್ಪತ್ತು ವರ್ಷಗಳಿಂದ ಜಾಹೀರಾತುಗಳ ಸಂಖ್ಯೆಯು ಹೆಚ್ಚಿದೆ; ಅವುಗಳ ರೀತಿ-ನೀತಿಯಲ್ಲೂ ಬದಲಾಗಿದೆ. ಹೆಣ್ಣಿನ ಉದ್ಯೋಗ, ಜಾತಿ, ವರದಕ್ಷಿಣೆ ಮೊದಲಾದವುಗಳ ಬಗ್ಗೆ ಪ್ರಗತಿ ಗೋಚರವಾಗಿದೆ. ವಧುಗಳಿಗಾಗಿ ಜಾಹೀರಾತು ಮಾಡಿದ ಗಂಡುಗಳಲ್ಲಿ ಇಂದು ಶೇ. ೪೦ರಷ್ಟು ಸುಶಿಕ್ಷಿತ ವಧುಗಳನ್ನು ಬಯಸಿದ್ದಾರೆ. ೧೯೫೦ರಲ್ಲಿ ಇದು ಶೇ. ೧೨ ಮಾತ್ರ ಇತ್ತು: ಜಾತಿಯ ಬಗ್ಗೆ ಆತಂಕ ತೋರ್ಪಡಿಸದವರ ಸಂಖ್ಯೆ ೧೯೫೦ರಲ್ಲಿ ಶೇ. ೧೧ ಮಂದಿಯಿದ್ದರೆ, ಇಂದು ಶೇ. ೨೬ ದಷ್ಟಿದೆ. ಅಂದು ಶೇ. ೫೦ರಷ್ಟು ವರಗಳು ವರದಕ್ಷಿಣೆಯನ್ನು ಬಯಸಲಿಲ್ಲ. ಇಂದು ಇವರ ಸಂಖ್ಯೆ ಶೇ. ೧೭ಕ್ಕೇರಿದೆ. ಆದರೆ, ಸೌಂದರ್ಯದ ಬಗ್ಗೆ ಇದ್ದ ಆಸಕ್ತಿ ಹಿಂದಿನಂತೆಯೇ ಇಂದೂ ಅಬಾಧಿತವಾಗಿದೆ.

ಜಾಹೀರಾತು ನೀಡಿದ ವಧುಗಳಲ್ಲಿ ಶೇ. ೪೦ ಸುಶಿಕ್ಷಿತರು, ಅಥವಾ ಉದ್ಯೋಗಿಗಳು. ಇವರಲ್ಲಿ ಹೆಚ್ಚಿನವರು ಅಧ್ಯಾಪಿಕೆಯರು. ಇವರ ಸಂಖ್ಯೆ ೧೯೫೦ರಲ್ಲಿ ಶೇ. ೧೪ ಮಾತ್ರವಿತ್ತು. ಹೆಣ್ಣುಗಳಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿ ಹೆಚ್ಚುತ್ತಿರುವುದು ಹಾಗೂ ಅವರು ಹೆಚ್ಚು ಹೆಚ್ಚಾಗಿ ಉದ್ಯೋಗಾವಲಂಬಿಯಾಗಿರುವುದು ಇದರಿಂದ ವ್ಯಕ್ತವಾಗುತ್ತದೆ. ದಿಲ್ಲಿ ವಿಶ್ವವಿದ್ಯಾಲಯದ ಲೆಕ್ಚರರ್ ೨೪ ವಯಸ್ಸಿನ ಅರೋರಾ ಹುಡುಗಿಯು ಸುಶಿಕ್ಷಿತ ನಾಲ್ಕು ಅಂಕೆಯಷ್ಟು ವೇತನವುಳ್ಳವರಿಂದ ವೈವಾಹಿಕ ವ್ಯವಹಾರವನ್ನು ನಿರೀಕ್ಷಿಸಿದ್ದಾಳೆ. ಹುಡುಗಿಯರಲ್ಲೂ ಅಂತರ್ಜಾತೀಯ ವಿವಾಹದ ಬಗ್ಗೆ ಆಸಕ್ತಿ ಹೆಚ್ಚಿದೆ. ೧೯೫೦ರಲ್ಲಿ ಶೇ. ೮ರಷ್ಟಿದ್ದ ಇವರ ಬಲ ಈಗ ಶೇ. ೨೪ಕ್ಕೇರಿದೆ. ತಾವು ವರದಕ್ಷಿಣೆ ನೀಡುವುದಿಲ್ಲವೆಂದು ಅಂದು ಶೇ. ೯ ಮಂದಿ ಹೇಳಿದ್ದರೆ, ಇಂದು ಶೇ. ೧೭ ಜನಕ್ಕೆ ಆ ಧೈರ್ಯ ಬಂದಿದೆ. ೧೯೫೦ರಲ್ಲಿ ಜಾಹೀರಾದ ವಧುಗಳಲ್ಲಿ ಶೇ. ೪ ವಿಧವೆಯರು. ಇಂದು ಈ ಪ್ರಮಾಣವು ಇಮ್ಮಡಿಯಾಗಿದೆ.

ಅಂದು ಶೇ. ೬೭ರಷ್ಟು ಕನ್ಯೆಗಳು ೨೦ ವರ್ಷ ಪ್ರಾಯಕ್ಕೆ ಮೀರಿದವರು. ಇಂದು ಇಂಥವರ ಪ್ರಮಾಣ ಶೇ. ೬೪ಕ್ಕೆ ಇಳಿದಿದೆ!

ಈ ಮೇಲಿನ ಅಂಕೆ ಸಂಖ್ಯೆಗಳು ದೇಶದ ಉತ್ತರದ ಸಾಮಾಜಿಕ ಪರಿವರ್ತನೆಗಳ ಮೇಲೆ ಬೆಳಕು ಹಿಡಿಯುತ್ತವೆ. ವರಗಳಿಗಿಂತಲೂ ವಧುಗಳ ಸಂಬಂಧದಲ್ಲಿ ಈ ಬದಲಾವಣೆಗಳು ತೀವ್ರಗತಿಯಿಂದಾಗುತ್ತಿವೆ. ಹೆಣ್ಣುಗಳಲ್ಲಿ ೨೦ ವರ್ಷಕ್ಕೆ ಮೊದಲೇ ವಿವಾಹವಾಗುವ ಪ್ರವೃತ್ತಿ ಬಹಳ ಕಡಿಮೆಯಾಗಿದೆ. ವಿಧವಾ ವಿವಾಹಕ್ಕೆ ಸಂಬಂಧಿಸಿದ ಸಾಮಾಜಿಕ ಅಡ್ಡಿ ದೂರವಾಗುತ್ತ ಬರುತ್ತಿದೆ. ಅಧಿಕಾಧಿಕ ಯುವತಿಯರು ಸುಶಿಕ್ಷಿತರಾಗಿ ಉದ್ಯೋಗಿಗಳಾಗಿ ಆರ್ಥಿಕವಾಗಿ ಸ್ವತಂತ್ರವಾಗಿ ನಿಂತಿದ್ದಾರೆ. ಆದುದರಿಂದಲೇ ವರದಕ್ಷಿಣೆಯಿಲ್ಲವೆಂದು ಗಂಟಾಘೋಷವಾಗಿ ಹೇಳಿದ್ದಾರೆ. ಅಂತರ್ಜಾತೀಯ ವಿವಾಹದ ಬಗ್ಗೆ ಯುವಕ-ಯುವತಿಯರಲ್ಲಿ ಸಮಪ್ರಮಾಣದ ಬೆಳವಣಿಗೆ ಗೋಚರವಾಗುತ್ತದೆ.

ಜಾತಿಯ ನಿಬಂಧನೆ ಉತ್ತರ ಭಾರತಕ್ಕಿಂತಲೂ ದಕ್ಷಿಣ ಭಾರತದಲ್ಲಿ ಹೆಚ್ಚು ಕಟ್ಟುನಿಟ್ಟು. ಜಾತಿ-ಉಪಜಾತಿ ಮಾತ್ರವಲ್ಲದೆ ಜಾತಕದಲ್ಲೂ ದಾಕ್ಷಿಣಾತ್ಯರಿಗೆ ನಂಬಿಕೆ ಹೆಚ್ಚು. ಜಾತಿಯ ಬಗ್ಗೆ ನಿರ್ಬಂಧವಿಲ್ಲದ ವಿದೇಶಿ ವಿದ್ಯಾಭ್ಯಾಸ ಪಡೆದ ೨೪ ವರ್ಷದ ಉದ್ಯೋಗಸ್ಥಗೆ ೧೯೭ ನಗರಗಳಿಂದ ಪತ್ರ ಬಂತು. ಇವರಲ್ಲಿ ೧೨ ಮುಸ್ಲಿಮರು, ೫ ಕ್ರಿಶ್ಚಿಯನ್ನರು, ೨೩ ಬ್ರಾಹ್ಮಣರು, ೨೬ ವೈಶ್ಯರು ಮತ್ತು ೩೦ ಕ್ಷತ್ರಿಯರು. ಉಳಿದವರು ತಮ್ಮ ಜಾತಿಯನ್ನು ನಿರ್ದೇಶಿಸಲಿಲ್ಲ. ಈ ನಗರಗಳೆಲ್ಲವೂ ಉತ್ತರ ಭಾರತದವು. ಆದರೆ, ದಕ್ಷಿಣ ಭಾರತದಲ್ಲಿ ಇಂತಹ ಪ್ರಸಂಗಗಳು ವಿರಳ.

ಜಾಹೀರಾತುಗಳ ಮೂಲಕ ವೈವಾಹಿಕ ಸಂಬಂಧ ಬಯಸುವವರು ಯಾರು? ಸಂಬಂಧ ಹುಡುಕಿ ಹುಡುಕಿ ಸೋತವರೂ ಇರಬಹುದು. ಆದರೆ, ಇಂಥವರಿಗಿಂತಲೂ ಇತರರೇ ಹೆಚ್ಚು ಮಂದಿ. ವಿದೇಶ ಅಥವಾ ದೂರ ಪ್ರಾಂತದಲ್ಲಿರುವವರು, ತಮ್ಮ ಅಂತಸ್ತಿಗೆ ತಕ್ಕ ಸಂಬಂಧವನ್ನು ಕುದುರಿಸಿಕೊಳ್ಳಲು ಅಶಕ್ತರಾದವರೂ ಇದ್ದಾರೆ. ಸಿಖ್ಖರು, ವೈಶ್ಯರು, ಅಗರ್ವಾಲರು ಮತ್ತು ಗುಪ್ತರು ಜಾಹೀರಾತುಗಳ ಮೂಲಕ ಹೆಚ್ಚಾಗಿ ಸಂಬಂಧ ಬೆಳೆಸುವವರು. ಅಗ್ರವಾಲರು ವ್ಯಾಪಾರದಿಂದಲೇ ಬದುಕುವವರು. ಜಾಹೀರಾತುಗಳು ವ್ಯಾಪಾರಕ್ಕೆ ಉತ್ತಮ ಸಾಧನವಾಗಬಲ್ಲುವಾದರೆ ವೈವಾಹಿಕ ಸಂಬಂಧಕ್ಕೂ ಏಕಾಗಬಾರದು ಎನ್ನುವವರು.

ಜಾಹೀರಾತು ಕಂಡವರು ತಮ್ಮನ್ನು ಅದಕ್ಕೆ ತಕ್ಕವರೆಂದು ತೋರ

(ಎಂಟನೇ ಪುಟ ನೋಡಿರಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಆತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಕಾಣುತಿಹುದಲ್ಲಿ ಕೆಂಪುಕೋಟೆ

ನವಯುಗದ ೨೦—೮—೧೯೭೦ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಸ್ವಾತಂತ್ರ್ಯದ ಸಂರಕ್ಷಣೆಗಾಗಿ.... ಲೇಖನವು ವಾಚಕರ ಮುಂದೆ ದೊಡ್ಡ ಪ್ರಶ್ನಾರ್ಥಕ ಚಿನ್ಹೆಯನ್ನು ನಿಲ್ಲಿಸಿರುತ್ತದೆ. ಇಂದಿರಾ ಗಾಂಧಿಯವರು ಗಾದಿಗಾಗಿ ಇಂತಹ ಕೀಳ್ಮಟ್ಟಕ್ಕಿಳಿದಾರೇ? ಕೆಂಪು ಕೋಟೆಯ ಮೇಲೆ ಕೆಂಪು ಕೇತುವನ್ನೇರಿಸಲು ಅವರು ಸಹಾಯ ಮಾಡುವರೇ? ಭಾರತವನ್ನು ಹಂಗೇರಿ.......ಝೆಕೊಸ್ಲೋವೆಕಿಯಾ ಮಾಡಲು ಇಂದಿರಾ ಗಾಂಧಿ ಒಪ್ಪಿಪಡುತ್ತಾರೇನ? ಇಂತಹ ವಿಷಯಗಳಲ್ಲಿ ಇನ್ನಾದರೂ ಇನಿತೂ ಸಂದೇಹವಿರಬಾರದೆಂಬುದನ್ನು ಸ್ವತಃ ಇಂದಿರಾ ದೇವಿಯವರು ಸ್ಪಷ್ಟಪಡಿಸಿದ್ದಾರೆ.

ಅಗೋಸ್ತ್ ಹದಿನೈದರಂದು ಕೆಂಪು ಕೋಟೆಯ ಮೇಲೆ ಪ್ರಧಾನಿಯವರು ಭಾರತ ಸರಕಾರದ ಧ್ವಜವನ್ನು ಹಾರಿಸುವದೊಂದು ಸಂಪ್ರದಾಯ. ಶ್ರೀಮತಿ ಇಂದಿರಾ ಗಾಂಧಿಯವರು ಸುಭದ್ರಾ ಜೋಷಿಯವರೊಂದಿಗೆ ಸಂಪ್ರದಾಯ ವಿರೋಧಿ ಪಕ್ಷದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾರಾದರೂ ಇಂತಹ ಸಂಪ್ರದಾಯಗಳನ್ನು ಇದುವರೆಗೆ ಬಿಟ್ಟುಕೊಟ್ಟಿರುವದಿಲ್ಲ. ಈ ಸಲವೂ ಅದಕ್ಕಾಗಿ ಏರ್ಪಾಡಾಗಿತ್ತು. ಆದರೆ....?

ಅಗೋಸ್ತ್ ದಿನಾಂಕ ೧೬,೧೭ ರಂದು ಸಂಸದಿನ ಅಧಿವೇಶನಗಳಿರಲಿಲ್ಲ. ದಿನಾಂಕ ಹದಿನೆಂಟರಂದು ಸಂಸದಿನ ಸಭೆ ಸೇರಿದಾಗ ಲೋಕಸಭೆಯಲ್ಲಿ ಸ್ವತಂತ್ರ ಪಾರ್ಟಿಯವರು, ಭಾರತೀಯ ಜನಸಂಘ ಹಾಗೂ ಸಂಸ್ಥಾ ಕಾಂಗ್ರೆಸ್ಸಿನವರು ದಿನಾಂಕ ೧೫ರ ಧ್ವಜ ಘಟನೆಯತ್ತ ಎಲ್ಲರ ಗಮನವನ್ನೆಳೆದರು. ಈ ವಿಷಯವನ್ನವರು ಲೋಕಸಭೆಯಲ್ಲಿ ಪ್ರಸ್ತಾಪಿಸದೆ ಇರುತ್ತಿದ್ದಲ್ಲಿ ಶ್ರೀಸಾಮಾನ್ಯನಿಗದು ಗೊತ್ತಾಗಲು ಸಾಧ್ಯವೇ ಇರುತ್ತಿರಲಿಲ್ಲ. ಸಮಾಚಾರ ಪತ್ರಿಕೆಗಳು ಅದನ್ನೊಂದು ಸುದ್ದಿಯೆಂದು ಪರಿಗಣಿಸಲೇ ಇಲ್ಲ. ಕೆಂಪುಕೋಟೆಯ ಕಾರ್ಯಕ್ರಮಗಳಿಗೆ ಸ್ವತಂತ್ರ ಪಾರ್ಟಿಯವರೂ ಸಂಸ್ಥಾ ಕಾಂಗ್ರೆಸ್ಸಿಗರೂ ಬಹಿಷ್ಕಾರ ಹಾಕಿದ್ದರಾದರೂ ಸ್ವತಂತ್ರ ಪಾರ್ಟಿಯವರೇ ಲೋಕಸಭೆಯಲ್ಲಿ ಈ ವಿಷಯವನ್ನೆತ್ತಿದರು. ಅವರಿಗೆ ಭಾರತೀಯ ಜನಸಂಘದವರೂ ಸಂಸ್ಥಾ ಕಾಂಗ್ರೆಸ್ಸಿಗರೂ ಪೂರ್ಣ ಬೆಂಬಲವಿತ್ತರು. ಇಂದಿರಾ ಕಾಂಗ್ರೆಸ್ಸಿಗರೂ ಕಮ್ಯೂನಿಸ್ಟರೂ ಅವರನ್ನೆದುರಿಸಿದರು. ಅಕಾಲಿಗಳೂ ದ್ರಾವಿಡ ಮುನ್ನೇತ್ರ ಕಳಗಮಿನವರೂ ಝಾರ್ಖಂಡ ಪಕ್ಷದವರೂ ವಾಗ್ವಾದವನ್ನು ಕೇಳುತ್ತಿದ್ದರು. ಮನಸ್ಸಿನಲ್ಲೇ ಅವರು ಸಂತೋಷಪಡುತ್ತಿದ್ದರಾದರೂ ಹೊರಗದನ್ನು ಸೂಚಿಸದೆ ಗಮ್ಮನಿದ್ದರು. ಸಂಸ್ಥಾ ಕಾಂಗ್ರೆಸ್ಸಿಗರೂ ಸ್ವತಂತ್ರಪಾರ್ಟಿಯವರೂ ಭಾರತೀಯ ಜನಸಂಘದವರೂ ಶ್ರೀಮತಿ ಗಾಂಧಿಯವರು ಕ್ಷಮೆ ಕೇಳಬೇಕೆಂದು ಒತ್ತಾಯಿಸಿದರು. ಆದರೆ ಆಗ ಅವರು ಅಲ್ಲಿರಲಿಲ್ಲ. ಭಾರತದ ರಕ್ಷಣಾ ಮಂತ್ರಿ ಮರವೆಯ ಮಹಾಮಲ್ಲ ಶ್ರೀಮಾನ್ ಜಗಜೀವನ ರಾಮರು ಶ್ರೀಮತಿ ಇಂದಿರಾದೇವಿಯವರ ರಕ್ಷಣೆಗೆ ಬಂದರು. ಕ್ಷಮೆ ಬೇಡುವ ಸಾಹಸಕ್ಕೆ ಅವರು ಸಿದ್ಧರಿಲ್ಲ. ಅವರು ಅದೇನೇನೋ ಕಾರಣಗಳನ್ನು ಹೇಳಿದರಾದರೂ ತಪ್ಪನ್ನೊಪ್ಪಿಕೊಳ್ಳಲಿಲ್ಲ. ಅವರಿಗೆ ಕಮ್ಯುನಿಸ್ಟರು ಬೆನ್ನೆಲುಬಾಗಿರುವವರೆಗೆ ಅವರೇತಕ್ಕೆ ಬಗ್ಗುವರು? ಬಗ್ಗದಿದ್ದರೂ ಅವರ ವಿವರಣೆ ಅದ್ಯಾರಿಗೂ ಸರಿಯೆನಿಸಲಿಲ್ಲ.

ಮರುದಿನ ಅದರ ಪ್ರತಿಧ್ವನಿ ರಾಜ್ಯಸಭೆಯಲ್ಲಿ ಕೇಳಿಬಂತು. ಇಲ್ಲಿ ಇದಕ್ಕೆ ಇನ್ನೊಂದು ವೈಶಿಷ್ಟ್ಯವಿದೆ. ಶ್ರೀಮತಿ ಕಾಂಗ್ರೆಸ್ಸಿನ ಚಂದ್ರಶೇಖರರವರೂ ಎದುರು ಪಕ್ಷಗಳವರೊಂದಿಗೆ ಧ್ವನಿಗೂಡಿಸಿದರು. ಸಂಯುಕ್ತ ಸೋಷ್ಯಾಲಿಸ್ಟ್ ಪಾರ್ಟಿಯ ರಾಜ ನಾರಾಯಣರವರು ಇಲ್ಲಿ ಈ ವಿಷಯವನ್ನೆತ್ತಿದರು. ಅವರಿಗೆ ಸಂಸ್ಥಾ ಕಾಂಗ್ರೆಸ್ಸಿಗರೂ ಭಾರತೀಯ ಜನ ಸಂಘದವರೂ ಬೆಂಬಲವನ್ನಿತ್ತರು. ಸಭಾಧ್ಯಕ್ಷರು ಶ್ರೀಮತಿ ಇಂದಿರಾ ಗಾಂಧಿಯವರನ್ನು ಸಭೆಗೆ ಕರೆಸಿ ಕ್ಷಮೆ ಕೇಳುವಂತೆ ಮಾಡಬೇಕೆಂದು ಅವರು ಹೇಳಿದರು. ಶ್ರೀಮತಿ ಗಾಂಧಿಯವರು ಈ ವಿಷಯದ ಕುರಿತು ಮಾತು ಬಂದಾಗ ರಾಜ್ಯಸಭೆಯಲ್ಲಿರಲಿಲ್ಲ. ಅವರ ಸಹಾಯಕ್ಕೆ ಕೆ. ಕೆ. ಶಾಹ ಬರಬೇಕಾಯಿತು. ಶ್ರೀಮತಿ ಇಂದಿರಾ ರಾಣಿಯವರು ಕ್ಷಮೆ ಬೇಡಲು ಅವರದೇನೂ ತಪ್ಪಿಲ್ಲವೆಂಬುದೇ ಶಾಹರ ವಾದ.

ಇದುವರೆಗೆ ಇಂದಿರಜ್ಜಿಯವರು ಅದ್ಯಾವ ಸಭೆಯಲ್ಲೂ ಕ್ಷಮೆಯನ್ನು ಬೇಡಿರುವದಿಲ್ಲ. ಅಂದರೆ ತನ್ನದೇನೂ ತಪ್ಪಿಲ್ಲವೆಂಬುದು ಅವರ ಖಚಿತ ಅಭಿಪ್ರಾಯವೆಂದಾಯಿತು. ಅಷ್ಟಕ್ಕೇನೇ ಅದು ನಿಂತಿತೇ? ಈ ಘಟನೆಯ ಹಿಂದುಗಡೆ ಏನಾದರೂ ದುರುದ್ದೇಶವಿದೆಯೋ? ಇದೊಂದು ಹಂಚಿಕೆಯ ಮುನ್ಸೂಚನೆಯೋ? ಧಿಕ್ಕಾರದ ಪ್ರದರ್ಶನವೇ? ಜನತೆ ಯೋಚಿಸಬೇಕಾಗಿದೆ.

ಸ್ವಾತಂತ್ರ್ಯದ ಸಂರಕ್ಷಣೆಗಾಗಿ....ಲೇಖನದ ಕೊನೆಯಲ್ಲಿ "ಬಿನ್ನಾಳನ್ನು ಬಗಮಾಡಿಕೊಂಡದ್ದರಿಂದ ಕೈಗಾಡಿನಲ್ಲಿದ್ದ ನವ್ಯ ಸರ್ಕಾರಿ ಧ್ವಜ ಸಿಕ್ಕಿಬಿತ್ತು. ಇನ್ನೂ ಬಿನ್ನಾಳ ಹಂಚಿಕೆ ಕೈಗೂಡಿತೆಂದರೆ ಕೆಂಪುಕೋಟೆಯ ಮೇಲೆ ಕೆಂಪು ಕೇತು ಹಾರಾಡಲೆಂದಿದೆ. ಅಂದರೆ ಈಗಿನ ತ್ರಿವರ್ಣವನ್ನು ಹಾರಿಸಲು ಇಂದಿರಜ್ಜಿಯವರಿಗೆ ಇಷ್ಟವಿಲ್ಲವೇನು? ಇಷ್ಟವಿರುತ್ತಿದ್ದಲ್ಲಿ ಅವರೇತಕ್ಕೆ ಅಂದು ಧ್ವಜ ಹಾರಿಸಲಿಲ್ಲ? ಅವರ ಮನಸ್ಸಿನಲ್ಲಿ ಅದೇನೋ ಇದೆ ಅನ್ನುವದು ಇದರಿಂದ ಸ್ಪಷ್ಟವಾಗುತ್ತದೆ. ಇದರ ತಪ್ಪನ್ನು ಸೈನಿಕ ಅಧಿಕಾರಿಯ ತಲೆಯ ಮೇಲೆ ಹಾಕಲಾಗುತ್ತಿದೆ. ಮೊಸರು ತಿಂದ ನರಿಯು ಕುರಿಮರಿಯ ಮುಖಕ್ಕೆ ಕೈಯನ್ನೊರಸಿ ಹೋದಂತೆ! ಮದರಾಸು ಮಹಾನಗರದ ವಾಸಿಗಳಿಗೆ ಇಂತಹ ಘಟನೆ ಏನೂ ಹೊಸತಲ್ಲ. ನಗರದ ನಗರಸಭೆ ದ್ರಾವಿಡ ಮುನ್ನೇತ್ರ ಕಳಗಮಿನವರ ಕೈಸೇರಿದಾಗ ನಗರ ಸಭಾಧ್ಯಕ್ಷರು ಆಗೋಸ್ತ್ ಹದಿನೈದು, ಜನವರಿ ಇಪ್ಪತ್ತಾರರಂದು ಬೇರೆ ಊರುಗಳಿಗೆ (ಬೆಂಗಳೂರಿಗೋ, ಪೊಂಡಿಚೇರಿಗೋ..) ಹೋಗುತ್ತಿದ್ದರು. ಇಲ್ಲದಿದ್ದಲ್ಲಿ ಅಂದು ಸೌಖ್ಯವಿಲ್ಲವೆಂಬ ಸುದ್ದಿಯನ್ನು ಹಬ್ಬಿಸುತ್ತಿದ್ದರು. ಹಾಗೆ ಧ್ವಜ ಹಾರಿಸುವ ಕೆಲಸದಿಂದ ತಪ್ಪಿಸಿಕೊಳ್ಳುತ್ತಿದ್ದರು. ಇದೇ ರೀತಿ ರಾಜ್ಯ ಸರಕಾರದ ಜವಾಬ್ದಾರಿ ದ್ರಾ. ಮು. ಕ.ಕ್ಕೆ ಬಂದಾಗಲೂ ಆರಂಭದಲ್ಲಿ ನಡೆದುಕೊಳ್ಳುತ್ತಿದ್ದರು. ಆದರೆ ಅನಂತರ ಅವರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಶ್ರೀಮತಿ ಇಂದಿರಾ ಗಾಂಧಿಯವರು ಅವರಿಂದ ಪಾಠವನ್ನು ಕಲಿತುಕೊಂಡಿದ್ದಾರೆ. ಅಷ್ಟಕ್ಕೇನೇ ಅವರು ನಿಲ್ಲುವದಿಲ್ಲ-

ನಿಶ್ಚಿತ ಸಮಯಕ್ಕೆ ಸರಿಯಾಗಿ ಶ್ರೀಮತಿಜೀಯವರು ಸ್ಥಳಕ್ಕೆ ಆಗಮಿಸಿದ್ದರೂ ರಕ್ಷಕರ ಉಪ್ರೇಕ್ಷಾವಸ್ಥೆ ಅಥವಾ ನರಕಂಪನದಿಂದಾಗಿ, ಅವರೆದುರಿಗೇನೇ ಅಧಿಕಾರಿ ಅಂದು ಧ್ವಜ ಹಾರಿಸಬೇಕಾಯಿತೆನ್ನುವದು ಮರೆವಿನ ಮಹಾಮಲ್ಲ ಜಗಜೀವನ ರಾಮರ ಸಿದ್ಧಾಂತ. ಇಷ್ಟನ್ನಾದರೂ ಅವರು ಮೂರು ದಿನಗಳನಂತರ ಕೂಡಾ ಜ್ಞಾಪಕದಲ್ಲಿಟ್ಟುಕೊಂಡದ್ದು ಬಹಳ ಆಶ್ಚರ್ಯವೇ ಸರಿ. ಆದಕ್ಕೆ ಕಾರಣ ಉಪ್ರೇಕ್ಷಾವಸ್ಥೆಯೋ ನರಕಂಪನವೋ ಅನ್ನುವದು ಅವರಿಗೆ ಜ್ಞಾಪಕ ಇಲ್ಲ. ಇಲ್ಲಿ ಅಧಿಕಾರಿಯು ತಪ್ಪು ನಿಜವೆಂದದಲ್ಲಿ ಅಕ್ರಮಣದ ಸಮಯ ಇವರು ಜೀವನನ್ನು ಉಳಿಸಮುಂಟೇ? ಆಕ್ರಮಣದ ಸಮಯ ಕೆಲವು ಅಧಿಕಾರಿಗಳು ರಜೆ ಹಾಕಿ ತಲೆ ತಪ್ಪಿಸಿಕೊಂಡು ಆಸ್ಪತ್ರೆಗಳಲ್ಲಿದ್ದ ವಿಷಯ ಇಷ್ಟು ಬೇಗನೆ ಮರೆಯುವಂತಿಲ್ಲ. ಇಲ್ಲಿ ಹಾಗಾಗಿರಲಾರದು. ಅದು ನಿಜವಾಗಿರುತ್ತಿದ್ದಲ್ಲಿ ಖಂಡಿತವಾಗಿ ಅವನಿಗೆ ಶಿಕ್ಷೆಯಾಗುತ್ತಿತ್ತು. ಹಾಗಾಗಿದೆ ಏನು? ಅಧಿಕಾರಿಯಿಂದಲೇ ತಪ್ಪಾಗಿದ್ದು ಗುಂಡು ಹಾರಿಸಲಾಗಿತ್ತಾದರೂ ಇಂದಿರಾ ಗಾಂಧಿಯವರಿಗೆ ಇಷ್ಟವಿರುತ್ತಿದ್ದಲ್ಲಿ ಒಡನೆ ಅವರು ಧ್ವಜಹಾರಿಸಲು ಮುಂದಾಗುತ್ತಿದ್ದರು. ಅದು ಅರ್ಧ ನಿಮಿಷದ ತಪ್ಪಲ್ಲ. ಅವಮನಸ್ಸಿನ ಘಾತಕತನ. ತ್ರಿರಂಗಿ ಮೇಲೇರುವದು ಅವರಿಗೆ ಬೇಕಾಗಿಲ್ಲ. ತ್ರಿರಂಗಿ ಇಂದು ಅವರ ಪಾಲಿಗೆ ಮೂರು ರಂಗಿನ ಬಟ್ಟೆ ಮಾತ್ರ ಬಟ್ಟೆಯಾಗಿದೆ. ಅವರಿಗಿಂದು ಅದು ಬೇಕಾಗಿಲ್ಲ. ಅದು ನಿಜವಾಗಿ ಬೇಕಾಗಿದ್ದಲ್ಲಿ ೧೯೭೦ರ ಆಗೋಸ್ತ್ ಹದಿನೈದರ ಉತ್ಸವದಂದು ಈ ರೀತಿ ಆಗುತ್ತಿರಲಿಲ್ಲ. ಅಷ್ಟೇ ಅಲ್ಲ, ಅಳಿದುಳಿದಿರುವ ಭಾರತದ ರಾಜಧಾನಿ ದಿಲ್ಲಿಯಲ್ಲಿ ಪ್ರಧಾನಿಯವರೆದುರಿಗೇನೇ, ಸೇನಾಧಿಕಾರಿಗಳೆದುರಿಗೇನೇ, ಎದುರು ಪಕ್ಷಗಳವರ ಕಣ್ಣೆದುರಿಗೇನೇ ಈ ರೀತಿ ಧ್ವಜಕ್ಕೆ ಅಪಮಾನ ನಡೆದಾಗ, ಅತ್ತ —ಕಲ್ಕತ್ತಾ, ಕಾಶ್ಮೀರ, ನಾಗಲೇಂಡ ಮುಂತಾದೆಡೆಗಳಲ್ಲಿ ಅದೇ ಧ್ವಜವನ್ನು ಕಿತ್ತೆಸೆದು, ಹರಿದೊಗೆದು, ಸುಟ್ಟು.... ಅಪಮಾನಗೊಳಿಸಲಾಗಿರುತ್ತದೆ. ಇದನ್ನಾದರೂ ಇಂದಿರಾಜೀ ಖಂಡಿಸಿರುವರೇ?— ತಪ್ಪಿತಸ್ಥರಿಗೆ ಶಿಕ್ಷೆಯಾಗುವದು ಹಾಗಿರಲಿ, ಆ ಘಟನೆಯನ್ನಾದರೂ ಖಂಡಿಸಲಾಗಿದೆಯೇ?—ಇಲ್ಲ. ಯಾಕೆ? ಅಲ್ಲೇ ಅಡಗಿರುವದು ಅದರ ರಹಸ್ಯ.

ಸಂಪ್ರದಾಯ ವಿರೋಧಿಯೆನಿಸಿಕೊಳ್ಳುತ್ತಿರುವ ಇಂದಿರಾ ಗಾಂಧಿಯವರು ಇದರಲ್ಲೇನೂ ವಿಶೇಷವಿಲ್ಲವೆನ್ನಬಹುದು. (ಅದಕ್ಕಾ ಅವರು ತುಟಿ ಎರಡುಮಾಡಿಲ್ಲ.) ಇದು ಹುಟ್ಟುಹಬ್ಬದಂದು 'ಕೇಕ' ತುಂಡ ಮಾಡುವ ಕಾರ್ಯಕ್ರಮವಲ್ಲ. ದೇಶದ ಗೌರವವನ್ನು ಮೇಲೆತ್ತುವ ಪರ್ವಕಾಲ. ಅದನ್ನು ಅರಿತುಕೊಂಡೇ ಅಂದು ಇಂದಿರಾಜೀ ತ್ರಿವರ್ಣವನ್ನು ಹಾರಿಸಲು ಹಿಂಜರಿದಿರುವರು.

ಅವರಿಗಿರುವ ಅಧಿಕಾರಲಾಲಸೆಯು, ತನಗಾಗದವರನ್ನೆದುರಿಸುವ ಛಲದ ಪೂರ್ಣ ಜ್ಞಾನವಿರುವ ಶಕ್ತಿಯೊಂದು ಅವರನ್ನು ಗೊಂಬೆಯಂತೆ ಆಡಿಸುತ್ತಿದೆ. ಅದನ್ನೇ ಅವರು ಚಾಂದ್ನೀ ಚೌಕದ ಸಭೆಯಲ್ಲೂ, ತನ್ನ ಕಾಂಗ್ರೆಸ್ಸಿನ ಸಭೆಗಳಲ್ಲಿ ಹೇಳಿರುವರು. ಈ ದೇಶದಲ್ಲಿ ಕಮ್ಯೂನಿಸ್ಟರ ಆಳ್ವಿಕೆ ಬರುವದು ಗೋಡೆಯ ಮೇಲೆ ಬರೆದಿಟ್ಟಂತೆ ಸ್ಪಷ್ಟವಿದೆಯೆನ್ನುವ ಅವರ ಮಾತುಗಳೇ ಆಗೋಸ್ತ್ ಹದಿನೈದರಂದು ಅವರೇತಕ್ಕೆ ಧ್ವಜ ಹಾರಿಸಲು ಹಿಂಜರಿದರೆನ್ನುವದಕ್ಕೆ ಉತ್ತರ ಕೊಡುತ್ತದೆ. ಅದಕ್ಕಾಗಿ ಅವರು ಸರಕಾರೀ ಸಾಹಿತ್ಯ, ಚಲಚಿತ್ರಗಳ ಮೂಲಕ ಪ್ರಚಾರ ಮಾಡುತ್ತಿದ್ದಾರೆ. ಇನ್ನೊಂದೆಡೆ ರಾಷ್ಟ್ರೀಯ ಶಕ್ತಿಗಳನ್ನು, ದೇಶವ್ಯಾಪೀ ಸಂಘಟನೆಯನ್ನು ಹತ್ತಿಕ್ಕಲು ಮುಂದಾಗುತ್ತಿದ್ದಾರೆ. ತ್ರಿರಂಗಿಯ ಬದಲು ಕೆಂಪು ಕೇತುವನ್ನು ಹಾರಿಸಲು ಅವರು ಇಚ್ಛೆಪಡುತ್ತಿದ್ದಾರೆ. ಅದನ್ನವರು ಲೋಕಸಭೆಯಲ್ಲೇ ಸ್ಪಷ್ಟಪಡಿಸಿದ್ದಾರೆ. ಅದೇನು? ಅದೇ ಮುಂದಿನ ವಾರ........

—ಶಿವಶಂಕರ

Gram : VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಜಾತ್ಯತೀತ ದೇಶದಲ್ಲಿ

ಕೃಷ್ಣನ ಮೆರವಣಿಗೆಯ ಮೇಲೆ ಕಲ್ಲು ತೂರಾಟ

ಮುಂಬಯಿಯ ಸಮೀಪದ ಭಿವಂಡಿಯ ಜಾತೀಯ ಗಲಭೆಗಳ ಗಾಯ ಮಾಯುತ್ತ ಬರುತ್ತಿರುವಾಗ ಶ್ರೀಕೃಷ್ಣಾಷ್ಟಮಿಯ ದಿನ ಮುಂಬಯಿಯಲ್ಲೇ ದುರಂತ ನಡೆಯಿತು. ಅಷ್ಟಮಿಯ ಮೆರವಣಿಗೆ ಹೋಗುತ್ತಿರುವಾಗ "ಯಾರೋ" ಕಲ್ಲು ತೂರಿದರು; ಸರಿ, ಸುರುವಾಯಿತು; ಪೋಲೀಸರು ಗೋಲಿಬಾರ್ ಮಾಡಿದರು; ಅನೇಕರು ಸುದೈವದಿಂದ ಸತ್ತವರು ಒಬ್ಬರು; ಗಾಯಗೊಂಡವರು ಕೆಲವರು; ತಲೆಬುಡ ತಿಳಿಯ ಬಹುದಾದದ್ದು ಉಳಿಯದೆ ನಷ್ಟಯೇ ಮುಕ್ತಾಯಗೊಂಡಿತು.

ಅದೇನೋ ಸರಿಯೇ. ಆದರೆ, ಇದೆಲ್ಲಾ ಏಕೆ ನಡೆಯುತ್ತದೆ? ಜಾತ್ಯತೀತ ರಾಷ್ಟ್ರದಲ್ಲಿ ಜಾತೀಯ ಉತ್ಸವಗಳು ನಡೆಯ ಬಾರದೆಂದಿದ್ದರ ಅರ್ಥವೇನು? ಹಾಗಾದಲ್ಲಿ ಜಾತ್ಯತೀತತೆಗೆ ಅಂದು ಹೇಳಿದ್ದ ಅರ್ಥ ಇಂದು ಇಲ್ಲವಾಯಿತ್ತು. ಪ್ರತಿಯೊಬ್ಬನಿಗೂ ತಂತಮ್ಮ ಮತಾಚರಣೆಯನ್ನು ಮಾಡುವ ಸ್ವಾತಂತ್ರ್ಯ ನಮ್ಮ ಸಂವಿಧಾನವೇನೋ ಕೊಡಮಾಡಿದೆ. ಆದರೆ, ಈ ಸ್ವಾತಂತ್ರ್ಯವನ್ನು ಸಂವಿಧಾನದತ್ತ ಅಧಿಕಾರವನ್ನು ಅನುಭವಿಸುವಾಗ ವಿಘ್ನ ವಿಚ್ಛಿದ್ರಗಳು ಬರುವುದೆಂದರೇನು?

ಪಂಡಿತ ಜವಾಹರಲಾಲ ನೆಹರುರವರು ಜಾತ್ಯತೀತತೆಯ ಆದರ್ಶವನ್ನು ನಮ್ಮ ಮುಂದೆ ಇಟ್ಟರು. ನಾವೆಲ್ಲರೂ ಭೂರು ಮಂಗಗಳಂತೆ ತಲೆಯಾಡಿಸಿದೆವು. ಮುಂದೆ ಏನಾಗಬಹುದೆಂಬುದನ್ನು ಆ ಉತ್ಸಾಹದ ಗುಂಗಿನಲ್ಲಿ ನಾವು ಯೋಚಿಸಲೂ ಇಲ್ಲ. ಶ್ರೀಕೃಷ್ಣನ ಮೆರವಣಿಗೆಯನ್ನು ಪೋಲೀಸು ಬಂದೋಬಸ್ತಿನಲ್ಲಿ ಹಿಂದೂಗಳು ನಡೆಸಬೇಕಾದರೆ, ತಾಜಿಯಾದ ಮೆರವಣಿಗೆಯನ್ನು ಮುಸ್ಲಿಮರು ಅದೇ ರೀತಿ ನಡೆಸಬೇಕಾದರೆ, ಅದಕ್ಕಿಂತ ದುರ್ದೈವದ ದಿನ ಮತ್ತೊಂದಿಲ್ಲವೆಂದೇ ಹೇಳಬೇಕಾಗುತ್ತದೆ. ಊರ ಶಾಲೆ-ಕಾಲೇಜುಗಳ ವರ್ಧಂತ್ಯುತ್ಸವವನ್ನು ಪೋಲೀಸು ಸರ್ಪಗಾವಲಿನಲ್ಲಿ ನಡೆಸಬೇಕಾದರೆ, ಆ ಪ್ರಯಾಸ ಯಾಕೆ ಬೇಕು?

ಪರೀಕ್ಷೆಗಳನ್ನು ಪೋಲೀಸರನ್ನಿಟ್ಟುಕೊಂಡೇ ನಡೆಸುವ ಪರಿಪಾಠ ಕೆಲವೆಡೆ ಬಂದಿದೆ. ರಾಜಕೀಯ ಪುಢಾರಿಗಳ ಭಾಷಣಗಳೂ ಪೋಲೀಸರ ಸಮಕ್ಷಮದಲ್ಲೇ ನಡೆಯುತ್ತಿವೆ. ನಾಳೆ, ತರಗತಿಗಳೂ ಇವರ ಮೇಲ್ವಿಚಾರಣೆಯಲ್ಲಿ ನಡೆಯಬೇಕಾದ ಪ್ರಸಂಗ ಬರಬಹುದು. ಬೆಂಗಳೂರಿನಲ್ಲಿ ವಿದ್ಯಾರ್ಥಿಯೊಬ್ಬ ಪ್ರಿನ್ಸಿಪಾಲರ ತಲೆಯೊಡೆದನೆಂದ ಮೇಲೆ ಅಧ್ಯಾಪಕರ ಜೀವಕ್ಕೆ ಯಾವ ಕಾಲದಲ್ಲೂ ಅಪಾಯ ಬಾರದೆಂದು ನಂಬುವುದು ಹೇಗೆ? ಭಕ್ತಿಪ್ರದರ್ಶನದ ಮೆರವಣಿಗೆಗಳಲ್ಲಿ ಗೊಂದಲ ನಡೆಯುವುದೆಂದರೆ, ಇದು ಅತ್ಯಂತ ಖಂಡನೀಯವಾದದ್ದು; ಅವಮಾನನೀಯವಾದದ್ದು.

ಶ್ರೀಕೃಷ್ಣನ ಮೆರವಣಿಗೆಗೆ ಕಲ್ಲು ತೂರಿದವರು ಯಾರು? ಕೃಷ್ಣ ಭಕ್ತ ಹಿಂದುಗಳೆ? ಅಥವಾ ಇತರ ಮತೀಯರೆ? ಜಾತೀಯ ಸೌಹಾರ್ದವೆಂಬುದು ಯುದ್ಧಾನಂತರದ ಶಾಂತಿ ಮಂತ್ರವಾತ್ರವಾದಂತಿದೆ. ಭಿವಂಡಿ ಅಹಮ್ಮದಾಬಾದ ಮೊದಲಾದೆಡೆಗಳ ಘೋರ ಹಿಂಸಾ ಕಾಂಡಗಳ ಮೂಲ ಪುರುಷರು ಯಾರೆಂದು ಹೇಳುವ ಧೈರ್ಯ ಸರಕಾರಗಳಿಗಿಲ್ಲ. ಮುಂಬಯಿಯ ಕಲ್ಲು ತೂರಾಟವನ್ನು ಶ್ರದ್ಧಾವಂತ ಹಿಂದುಗಳೇ ಮಾಡಿದರೆಂದು ಹೇಳುವುದು ದಾಷ್ಟ್ಯದ ಮಾತು. ಅಂದರೇನು? ಭಾರತೀಯ ಮುಸ್ಲಿಮರಲ್ಲಿ ಇನ್ನೂ ನವಾಬಗಿರಿಯ ಹಚ್ಚು ಪೂರ್ಣ ಆರಿ ಹೋಗಿಲ್ಲವೆಂದೇ ಅರ್ಥ. ವ್ಯವಸ್ಥಿತ ರೀತಿಯಲ್ಲಿ ಜಾತೀಯ ಗಲಭೆಗಳನ್ನು ನಡೆಸುವುದನ್ನೇ ಕಾಯಕ ಮಾಡಿಕೊಂಡವರೂ ಇದ್ದಾರೆಂದೇ ಅರ್ಥ. ಇವರಿಗೆ ಬೇಕಿಲ್ಲವಾದರೂ ಪಾಕಿಸ್ತಾನಿ ಏಜಂಟರ ಹಸ್ತಕರಾಗಿ ಅವರ ಪ್ರೇರಣೆಯಂತೆ ಇವರು ನಡೆಯುತ್ತಾರೆಂದೇ ಅರ್ಥ.

ಅಲ್ಪ ಸಂಖ್ಯಾಕರೆಂಬ ಹೆಸರಿನಲ್ಲಿ ತಾವು ಏನು ಮಾಡಿದರೂ ಸಲ್ಲುವುದೆಂದು ಅವರು ತಿಳಿದುಕೊಂಡಂತಿದೆ. ಮುಸಲ್ಮಾನರನ್ನು ತೃಪ್ತಿಗೊಳಿಸುವ ನೀತಿಯನ್ನು ಮೂರು ಮಂಗಗಳ ಇಂದಿರಾ ಸರಕಾರವು ಅನುಸರಿಸುತ್ತಾ, ಜಾತೀಯ ಗಲಭೆಗಳಿಗೆಲ್ಲ ಬಹುಸಂಖ್ಯಾಕರನ್ನೇ ಬೊಟ್ಟು ಮಾಡುವುದರಿಂದ ಅವರ ದಾಂಧಲೆಯೂ ಮಿತಿಮೀರ ತೊಡಗಿದೆ. ಜಾತೀಯ ಸೌಹಾರ್ದದ, ಜಾತ್ಯತೀತತೆಯ ಪಾಠವನ್ನು ನಾಗರಿಕರಿಗೆ ಹೇಳುತ್ತ ಇಂದಿರಾಜಿ ತಾವೇ ಅಲ್ಪ ಸಂಖ್ಯಾಕರನ್ನು ಬಹುಸಂಖ್ಯಾಕರ ಮೇಲೆ ಎತ್ತಿ ಕಟ್ಟುತ್ತಾರೆ; ಜಾತೀಯತೆಯ ದಾರಿಯಲ್ಲೇ ಒಂದೊಂದೂ ಹೆಜ್ಜೆಯಿಡುತ್ತಾರೆ.

ಜಾತ್ಯತೀತ ದೇಶದ ಸರಕಾರ ಜಾತೀಯವಾದಿಗಳೆಂದು ಬಹುಸಂಖ್ಯಾಕರನ್ನು ಕರೆಯುತ್ತದೆ. ಜನಸಂಘವನ್ನು ಜಾತೀಯ ಸಂಘಟನೆಯೆನ್ನುತ್ತದೆ. ಆದರೆ, ಮುಸ್ಲಿಂ ಲೀಗಿಗೆ ಜಾತೀಯತೆಯ ಲೇಬಲ್ ಹಚ್ಚುವ ಧೈರ್ಯ ಗೃಹ ಮಂತ್ರಿಗಾಗಲಿ ಪ್ರಧಾನ ಮಂತ್ರಿಗಿಲ್ಲ. ಇದು ಆಳುವ ಸರಕಾರದ ದುರ್ಬಲತೆ. ಅಲ್ಪ ಸಂಖ್ಯಾಕರಿಗಾಗಿ ಬಹು ಸಂಖ್ಯಾಕರು ತ್ಯಾಗ ಮಾಡಬೇಕಾದದ್ದು ನ್ಯಾಯವೇ. ಆದರೆ, ಈ ತ್ಯಾಗಕ್ಕೂ ಒಂದು ಮಿತಿಯಿದೆ. ಎಲ್ಲರೂ ಭಾರತೀಯರೆಂಬುದನ್ನು ಮರೆಮಾಚಿ ನಡೆದುಕೊಂಡು ಅಸಮರ್ಥನಾದ ಸರಕಾರ ಒಡೆದು ಆಳುತ್ತ ಅಧಿಕಾರದಲ್ಲಿ ಉಳಿಯಲು ಹವಣಿಸಿದೆ.

ಜಾತೀಯ ಸೌಹಾರ್ದವನ್ನು ಕೆಡಿಸುವ ಶಕ್ತಿಯ ಪರಿಚಯ ಸರಕಾರಕ್ಕಿದ್ದರೂ ಅದು ತನಗರಿಯದೆಂಬಂತೆ ಏನೇನೋ ಮಾಡುತ್ತಿದೆ. ಇದರಿಂದ ನೆಮ್ಮದಿಯಿಲ್ಲ. ಸೌಹಾರ್ದ ಭಂಜಕರು ಯಾವ ಕೋಮಿನವರೇ ಇರಲಿ, ಒಡೆದು ದಂಡಿಸುವೆನೆಂದು ಬೊಂಬಡಿ ಬಾರಿಸುವುದು ಸಾಕು ಮಾಡಬೇಕು. ಬಿಟ್ಟದನ್ನು ಆ ದುಷ್ಕೃತ್ಯ ಎಳ್ಳಿನಷ್ಟೂ ಮಾಡಲು ಅಶಕ್ತರಾದವರು ಮೊಸಳೆ ಕಣ್ಣೀರು ಸುರಿಸಿ ಅಧಿಕಾರದಲ್ಲಿ ಮುಂದುವರಿದಾರು. ಆದರೆ, ಎಲ್ಲ ಕಾಲಕ್ಕೂ ಈ ಕಪಟ ನಾಟಕ ಸಫಲವಾಗುತ್ತದೆಂದು ಅವರು ತಿಳಿದಿದ್ದರೆ, ಅದಕ್ಕಿಂತ ದೊಡ್ಡ ಮೂರ್ಖತನ ಬೇರೊಂದಿಲ್ಲವೆಂದೇ ಹೇಳಬೇಕು.

ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಆಗಾಗ್ಗೆ ಹೊಸ ಹೊಸ ಸ್ಟೋಕಿನಿಂದ
ಕೋಲಿಟಿಯಲ್ಲಿ, ಸ್ಟಾಜಿನಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂತಾ ಕೆರೆಟ ತೂಕದಲ್ಲಿ
ಬೇಕಾದವರು ಮುಂದಾಗಿ ಬಂದು ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾರ್ಟಿಯವರ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ನಿಜವಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಎಂ. ಜಿ. ಎಂ. ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನಾರಂಭ

ಉಡುಪಿಯ ಎಂ. ಜಿ. ಎಂ. ಕಾಲೇಜಿನ ರಜತೋತ್ಸವ ಮಂಟಪದಲ್ಲಿ ಕಳೆದ ತಾ. ೨೮ರಂದು "ನೇಶನಲ್ ಸರ್ವಿಸ್ ಸ್ಕೀಮ್" ಎಂಬ ನೂತನ ಕಾರ್ಯಕ್ರಮವೊಂದನ್ನು ರೋಟರಿ ಗವರ್ನರ್ ಶ್ರೀ ಬಿ. ರಮೇಶ ಪೈ ಅವರು ಉದ್ಘಾಟಿಸಿದರು. ಶಿಕ್ಷಣ ಸಂಸ್ಥೆಗಳ ಮತ್ತು ಜನಜೀವನದ ನಡುವಣ ಅಂತರವನ್ನು ಕಡಿಮೆ ಮಾಡುವುದೇ ಈ ಸ್ಕೀಮಿನ ಮುಖ್ಯ ಗುರಿಯಾಗಿದೆ. ಸಮಾರಂಭದ ಪ್ರಾರಂಭದಲ್ಲಿ ಕುಮಾರಿ ಲಲಿತ ಅವರು ಪ್ರಾರ್ಥನೆ ಗೈದರು. ಪ್ರಿನ್ಸಿಪಾಲ್ ಶ್ರೀ ಕೆ. ಶ್ರೀನಿವಾಸ ಭಟ್ಟರು ಸ್ವಾಗತಿಸಿದರು. ಕಾರ್ಯಕ್ರಮದ ಅಧಿಕಾರಿ ಶ್ರೀ ಎನ್. ವಜ್ರಕುಮಾರ್ ಅವರು ಕಾರ್ಯಕ್ರಮದ ಧ್ಯೇಯೋದ್ದೇಶಗಳನ್ನು ವಿವರಿಸಿದರು.

ಶ್ರೀ ರಮೇಶ ಪೈಯವರು ಈ ಕಾರ್ಯಕ್ರಮವನ್ನು ಉದ್ಘಾಟಿಸುತ್ತಾ ಇದರಲ್ಲಿ ನಮೂದಿಸಲ್ಪಟ್ಟ ಅಂಶಗಳು ಶಿಕ್ಷಣದ ಅಂಗವಾಗಿಯೇ ಬರಬೇಕಾದ ಅವಶ್ಯಕತೆಯನ್ನು ಸೂಚಿಸಿದರು. ಇಂದಿನ ಶಿಕ್ಷಣ ಕೇವಲ "ಪದವೀಧರ"ರನ್ನು ನಿರ್ಮಿಸುವ ಕೆಲಸ ಮಾತ್ರ ಮಾಡುತ್ತಿದೆ ಅವರಲ್ಲಿ ಭವಿಷ್ಯವನ್ನು ಎದುರಿಸುವ ಭರವಸೆ ಮೂಡಿಸುವಂತಿಲ್ಲ ಎಂದರು. ಈ ಹೊಸ ಕಾರ್ಯಕ್ರಮದ ಪ್ರಯೋಜನ ಎಲ್ಲ ವಿದ್ಯಾರ್ಥಿಗಳಿಗೂ ದೊರೆಯುವಂತಾಗಲಿ ಎಂದು ಹಾರೈಸಿದರು.

ಕೇಂದ್ರ ಸರಕಾರದ ಈ ಯೋಜನೆಗೆ ಮೈಸೂರು ವಿಶ್ವವಿದ್ಯಾನಿಲಯದ ಹತ್ತು ಕಾಲೇಜುಗಳು ಆಯ್ಕೆಯಾಗಿದ್ದು ದ. ಕ. ಜಿಲ್ಲೆಯಲ್ಲಿ ಪ್ರಸ್ತುತ ಈ ಕಾಲೇಜು ಮಾತ್ರ ಇದನ್ನು ಪಡೆದಿದೆ. ವಿವಿಧ ಚಟುವಟಿಕೆಗಳನ್ನೊಳಗೊಂಡ ಈ ಯೋಜನೆ ವಿದ್ಯಾರ್ಥಿಗಳಲ್ಲಿ ಶಿಸ್ತು, ಶೀಲ ದೊಡನೆಗಾರಿಕೆ ಮೊದಲಾದ ಗುಣ ಬೆಳವಣಿಗೆಗೆ ಸಹಾಯಕವಾಗುವುದೆಂದು ನಿರೀಕ್ಷಿಸಲಾಗಿದೆ.

ಸಮಾರಂಭದ ಅಂತ್ಯದಲ್ಲಿ ಶ್ರೀ ಬಿ. ಚಂದ್ರಶೇಖರ ರಾವ್ ಅವರು ಧನ್ಯವಾದಗಳನ್ನರ್ಪಿಸಿದರು.

ಸ್ವಾತಂತ್ರ್ಯೋತ್ಸವ

ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನಲ್ಲಿ ಸ್ವಾತಂತ್ರ್ಯೋತ್ಸವವು ವಿಜೃಂಭಣೆಯಿಂದ ಜರಗಿತು. ಪ್ರಿನ್ಸಿಪಾಲ್ ಡಾ. ಸ್ವ. ಗುರುರಾಜ ಭಟ್ಟರಿಂದ ಧ್ವಜಾರೋಹಣವಾಯಿತು. ಶ್ರೀಗಳಾದ ಡೇನಿಯಲ್ ಫರ್ನಾಂಡಿಸ್, ಫ್ರಿಟ್ಜ್ ಡಿ'ಸೋಜಾ, ವಾಸ್ಕರ್ ರೋಡ್ರಿಗಸ್, ರಾಮರಾವ್, ಜಾರ್ಜ್ ಡಯಾಸ್, ಹೆರಾಲ್ಡ್ ಜಯದೇವ, ಬಿಜ್ಜಲ್ ಸುವಾರಿಸ್ ಮೊದಲಾದವರು ಭಾಷಣಗೈದರು. ಇವರು ದೇಶಕ್ಕಾಗಿ ದುಡಿದವರು ಸ್ವಾತಂತ್ರ್ಯದ ದುರುಪಯೋಗವನ್ನು ವಿವರಿಸಿ ಪರಿಹಾರೋಪಾಯಗಳನ್ನು ಸೂಚಿಸಿದರು. ರೆ. ಫಾ. ಲಾರೆನ್ಸ್ ಸಭೆಯನ್ನು ನೆರವೇರಿಸಿದರು. ಪ್ರಿನ್ಸಿಪಾಲರ ಭಾಷಣದ ಬಳಿಕ ಮನೋರಂಜನಾ ಕಾರ್ಯಕ್ರಮಗಳಾದುವು.

○ ○ ○

ಅಧ್ಯಾಪಕ: ಮಹಾತ್ಮಾ ಗಾಂಧಿಯವರು ಏಕೆ ಪ್ರಸಿದ್ಧರು?

ವಿದ್ಯಾರ್ಥಿ: ಅವರ ಸ್ಮರಣೆಗಾಗಿ

ಅಧ್ಯಾಪಕ: ಅವರ ಸ್ಮರಣೆಯು ಏಕೆ ಅಮರವಾಗಿದೆ?

ವಿದ್ಯಾರ್ಥಿ: ಅವರ ಸ್ಮಾರಕಗಳಿಂದಾಗಿ.

○ ○ ○

ಸುಖದ ಮೀಮಾಂಸೆ

(ಓರ್ವ ಗ್ರೀಕ್ ತತ್ವವೇತ್ತರ ಅಭಿಪ್ರಾಯ)

ಸುಖವನ್ನು ಸಂಪಾದಿಸುವದೇ ಮಾನವರ ಎಲ್ಲ ಪ್ರವೃತ್ತಿಗಳ ಗುರಿ. ಸುಖಸಂಪಾದನೆಯೇ ಅವರ ಪರಮಾರ್ಥ. ಪ್ರತಿಯೊಂದು ಸುಖವೂ ಸುಖವಾಗಿರುವದರಿಂದಲೇ ಒಳ್ಳೆಯದು, ಪ್ರತಿಯೊಂದು ದುಃಖವು ದುಃಖವಾಗಿರುವದರಿಂದಲೇ ಕೆಟ್ಟದು. ಆದರೆ ಸುಖವನ್ನು ಆರಿಸಿಕೊಳ್ಳುವಾಗ ಬಹು ಜಾಗರೂಕರಾಗಿರಬೇಕು. ಒಂದು ಸುಖವೂ ಮತ್ತೊಂದು ಸುಖವೂ ತೀಕ್ಷ್ಣತೆಯಲ್ಲಿಯೂ ನಿಲ್ಲುವ ಕಾಲದಲ್ಲಿಯೂ ಸಮವಾಗಿದ್ದರೆ ಅವುಗಳಲ್ಲಿ ಆರಿಸಬೇಕಾದುದೇನೂ ಇರುವದಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ಕೆಲವು ಸುಖಗಳು ಸುಖವನ್ನುಂಟುಮಾಡುವವರ ಜೊತೆಗೆ ಅಧಿಕ ನೋವನ್ನು ಕೊಡುವವು. ವಿಷಯಲಂಪಟರು ಬಯಸುವ ಸುಖಗಳು ಅವರಿಗೆ ಮನಶ್ಶಾಂತಿಯನ್ನೂ ದುಃಖನಿವಾರಣೆಯನ್ನೂ ತರುವವಾಗಿದ್ದರೆ ಅವುಗಳನ್ನು ಯಾರೂ ಆಕ್ಷೇಪಿಸಲೇ ಬಾರದಾಗುತ್ತಿತ್ತು. ತಮ್ಮ ಜೊತೆಗೆ ವಿಶೇಷ ನೋವನ್ನು ತರುವ ಸುಖಗಳನ್ನು ವರ್ಜಿಸಲೇಬೇಕು. ಕೆಲವು ದುಃಖಗಳು ಹಿಂದೆಯೇ ವಿಶೇಷ ಸುಖವನ್ನು ಕೊಡುವವು. ಅಂತಹ ದುಃಖಗಳಾದರೂ ಮೊದಲಿನ ಸುಖಗಳಿಗಿಂತಲೂ ಮೇಲು. ಅಲ್ಲದೆ ಸುಖಗಳು ತೀಕ್ಷ್ಣತೆಯಲ್ಲಿ ಪರಸ್ಪರ ಬಹು ವ್ಯತ್ಯಾಸವನ್ನು ಹೊಂದುವವು. ಶರೀರ ಸುಖಗಳಿಗಿಂತಲೂ ಮಾನಸಿಕ ಸುಖಗಳು ಹೆಚ್ಚು ಸಂತೋಷಕರಗಳು, ತೀಕ್ಷ್ಣವಾದವುಗಳು. ಹಾಗೆಯೇ ಮಾನಸಿಕ ವ್ಯಸನಗಳು ಶರೀರದ ನೋವುಗಳಿಗಿಂತಲೂ ಕಟುತರವಾದವು. ಶರೀರದ ಸುಖ ದುಃಖಗಳು ವರ್ತಮಾನ ಕಾಲಕ್ಕೆ ಮಾತ್ರ ಸಂಬಂಧಿಸಿರುವವು. ವರ್ತಮಾನದ ಅನುಭವ ತೀರಿತು ಹೋದರೆ ಸುಖ ದುಃಖಗಳು ನಿವೃತ್ತಿಯಾಗುವವು. ಮಾನಸಿಕ ವ್ಯಾಪಾರಗಳಾದರೋ ಭೂತ ಭವಿಷ್ಯದ್ವರ್ತಮಾನ ತ್ರಿಕಾಲಗಳಲ್ಲಿಯೂ ಹರಡಿಕೊಂಡಿರುವವು. ಇಷ್ಟೇ ಅಲ್ಲ; ಮನಸ್ಸಿನ ಅನುಭವವಿಲ್ಲದಿದ್ದರೆ ಶರೀರದ ಸುಖ ದುಃಖಗಳು ಬೋಧೆಯಾಗುವ ಸಂಭವವೇ ಇರುತ್ತಿರಲಿಲ್ಲ. ಈ ಎಲ್ಲ ಕಾರಣಗಳಿಂದಲೂ ಮಾನಸಿಕ ಸುಖಗಳೇ ಅತ್ಯಂತ ಹಿತಕರವಾದವು. ಹೋಳಿಗೆಯನ್ನು ತಿನ್ನುವ ಸುಖಕ್ಕಿಂತ ಕಾಳಿದಾಸನ ಶಾಕುಂತಳವನ್ನು ಓದಿ ಗ್ರಹಿಸುವವನ ಸುಖ ಶ್ರೇಷ್ಠತರವಲ್ಲವೇ? ಆದುದರಿಂದ ಪ್ರತಿಯೊಬ್ಬನೂ ಸಾಧ್ಯವಾದಷ್ಟು ಮಟ್ಟಿಗೆ ತನ್ನ ಜ್ಞಾನವನ್ನೂ ಬುದ್ಧಿಯನ್ನೂ ವ್ಯವಸಾಯ ಮಾಡಿ ವೃದ್ಧಿ ಮಾಡಿಕೊಳ್ಳುವದರಿಂದುಂಟಾಗುವ ಸುಖ ಅನುಭವಿಸಲು ಪ್ರಯತ್ನಿಸಬೇಕು.

ಸಾಧಾರಣವಾಗಿ ಜನರು ಪ್ರಕೃತಿ ಸಂಘಟನೆಗಳಿಂದಲೂ ದೇವರು ದಿಂಡರುಗಳ ಕೋಪ ತಾಪಗಳೆಂಬ ಭಯದಿಂದಲೂ ಮುಖ್ಯ ಸಾವು ಇವುಗಳ ಭೀತಿಯಿಂದಲೂ ಸಂಕಟ ಪಡುವೆನೆಂಬ ನಂಬಿಗೆ ಇಟ್ಟುಕೊಂಡಿರುವರಲ್ಲವೆ? ಹಾಗೆ ನಂಬಿದರೆ ಹಾಗೆಯೇ ನೋವು ಪಡುವರು. ಜ್ಞಾನಾರ್ಜನೆಯಿಂದ ಪ್ರಕೃತಿಯ ಯಥಾರ್ಥ ತತ್ವ—ಸಂಶೋಧನೆಯಿಂದ ಪ್ರಪಂಚ ವ್ಯಾಪಾರಗಳೆಲ್ಲವೂ ಸ್ವಾಭಾವಿಕ ಕಾರಣಗಳಿಂದಲೇ ಉಂಟಾಗುವವೆಂದೂ ಅವಕ್ಕೆ ಭಯಪಡ ಬೇಕಾದುದೇನೂ ಇಲ್ಲವೆಂದೂ ಸಾಕ್ಷಿ ತಿಳಿಸುವದಾದರೆ ಆಗ ಅನೇಕ ವಿಧವಾದ ನಿಷ್ಕಾರಣ ವ್ಯಸನಗಳಿಂದ ಮುಕ್ತರಾಗುತ್ತೇವೆ. ಜನರಿಗೆ ತಾನಾಗಿ ಬರುವದು ಒಂದು ಕಷ್ಟವಾದರೆ ತಾವಾಗಿ ತಂದುಕೊಳ್ಳುವದು ಸಾವಿರವೆಷ್ಟು ವ ನಾಣ್ಣುಡಿ ಅನುಭವಸಿದ್ಧವಲ್ಲವೆ? ಆದುದರಿಂದ ಪ್ರಕೃತಿಯ ಯಥಾರ್ಥ ಜ್ಞಾನ ಹೊಂದಿದ ಹೊರತು ಮನುಷ್ಯ ನಿಷ್ಕಲ್ಮಷವಾದ ಸುಖ ಅನುಭವಿಸಲಾರ.

ಸುಖವನ್ನು ಅನುಭವಿಸುವದು ಎರಡು ವಿಧದಲ್ಲಿ. ಮನಸ್ಸಿನಲ್ಲಿ ಹುಟ್ಟುವ ಆಶೆಗಳನ್ನು ಸಂತೃಪ್ತಿಗೊಳಿಸುವದರಿಂದ ಉಂಟಾಗುವ ಸುಖವನ್ನನುಭವಿಸುವದು ಒಂದು ವಿಧ; ಆಶೆಯೇ ಇಲ್ಲದೆ ಶಾಂತ ಚಿತ್ತನಾಗಿರುವದರಿಂದ ಉಂಟಾಗುವ ಸುಖವನ್ನನುಭವಿಸುವದು ಮತ್ತೊಂದು ವಿಧ. ಇವೆರಡರಲ್ಲಿ ನಿಷ್ಕಾಮ ಸುಖವೇ ಶ್ರೇಷ್ಠವಾದುದು; ಏಕೆಂದರೆ ಆಶಾತೃಪ್ತಿಯಿಂದುಂಟಾಗುವ ಸುಖ ಶುದ್ಧ ಸುಖವೆಂದು ಹೇಳಲಿಕ್ಕಾಗುವದಿಲ್ಲ; ಅನೇಕ ವೇಳೆ ಅದರ ಜೊತೆಯಲ್ಲಿ ನೋವೂ ಸೇರುವದು. ಇದಕ್ಕೆ ಬದಲಾಗಿ ಒಮ್ಮೆ ಆಶೆ ಸಂತೃಪ್ತವಾದ ಬಳಿಕ ಪುನಃ ಆಶೆಯೇ ಜನಿಸದಂತೆ ನಿರ್ವಿಕಲ್ಪ ಚಿತ್ತನಾಗಿರುವದೇ ಪರಮ ಸುಖ. ಅಂದರೆ ಪ್ರತಿಯೊಂದು ಕಾಮವೂ ದುಃಖಜನಕ; ವ್ಯಸನಾತೀತನಾಗಿರುವದೇ ಸರ್ವೋತ್ಕೃಷ್ಟವಾದ ಸುಖ. ಪ್ರತಿಯೊಬ್ಬನೂ ವ್ಯಸನದಿಂದ ನಿವೃತ್ತನಾಗಲು ಯತ್ನಿಸಬೇಕು; ಇದಕ್ಕಿಂತ ಹೆಚ್ಚು ಸುಖವನ್ನು ಬಯಸುವವನು ವಿವೇಕಿಯಲ್ಲ.

ವಿವೇಕವಿಲ್ಲದಿದ್ದರೆ ಅಜ್ಞಾನಜನ್ಯಗಳಾದ ಭಯಗಳನ್ನೂ ಇತರ ಬಾಧಕ ತೊಂದರೆಗಳನ್ನೂ ತಪ್ಪಿಸಿಕೊಳ್ಳಲು ಆಗುವದಿಲ್ಲ. ವಿವೇಕಿಯಾದವನು ನೀತಿ ಧರ್ಮಗಳೆಲ್ಲವನ್ನೂ ಸಮುಚಿತ ಅನುಷ್ಠಿಸುವನು; ನ್ಯಾಯವನ್ನೂ, ವಿವೇಕವನ್ನೂ ಗೌರವವನ್ನೂ ಬಿಟ್ಟವನು ಸುಖಿಯಾಗಿ ಬಾಳುವದು ಅಸಂಭವ. ಆದುದರಿಂದ ಸುಖ ಜೀವನ ಧ್ಯೇಯನಾಗಿರುವವನು ಅದನ್ನು ಅನುಭವಿಸಲು ಸಹಾಯ ಮಾಡುವ ಸದ್ಗುಣಗಳನ್ನೆಲ್ಲಾ ಅಭ್ಯಾಸ ಮಾಡಬೇಕು. ಧರ್ಮಜೀವನ ಸುಖಜೀವನವನ್ನು ಪಡೆಯಲು ಸಹಕಾರಿ ಮಾತ್ರವಲ್ಲದೆ ಧರ್ಮಜೀವನವೇ ಪುರುಷಾರ್ಥವಲ್ಲ. ಸುಶೀಲದ ಅರ್ಥ (ಪ್ರಯೋಜನ) ಸುಖ. ಈ ಕಾರಣದಿಂದ ವಿಷಯಲಂಪಟತ್ವವು ಒಳ್ಳೆಯದಲ್ಲ. ಆದರಿಂದ ಸುಖಜೀವನ ಪತ್ರಿಷ್ಟಿನ ವದಿಲ್ಲ, ಸುಖಜೀವನ ದೊರೆಯುವದೇ ಆದರೆ ವಿವೇಕ, ವಿಚಕ್ಷಣೆಯಾದ ಜ್ಞಾನ, ನ್ಯಾಯ ನೀತಿ ಈ ಸಾಧನ ಚತುಷ್ಟಯವನ್ನೇ ಅಭ್ಯಾಸ ಮಾಡಬೇಕಾಗುವದು. ಕಾಮ ಸಂತೃಪ್ತಿ ನಿಜವಾದ ಸುಖವಲ್ಲ. ವ್ಯಸನಾತೀತನಾಗುವದೇ ಉತ್ಕೃಷ್ಟವಾದ ಸುಖ. ಆದ್ದರಿಂದ ವ್ಯಸನಗಳನ್ನು ನೀಗುವ ಉಪಾಯಗಳೇ ಸುಖಕರಗಳು.

(ಸಾವಧಾನ)

In The Court Of The District Judge Of S. K.

Mis. Case No. 25/1970

In the matter of 1) Minor Lathakumari and 2) Minor Srinivas, both children of and residing with Dr. A. Subba Rao Kunjal in Arur Village of Udipi Taluk.

NOTICE

Is hereby given to whomsoever it may concern that Dr. A. Subba Rao abovenamed has applied to this court as natural guardian of his minor children aforesaid for permission to sell the lands belonging to them and mentioned in the application and that anybody interested in opposing the same may do so on 7-9-1970 when the above case stands posted for first hearing before the District Court at 10-30 a. m.

(By order)

P. N. KRISHNAMOORTHY RAO

Advocate, Udipi, S. K.

Place: Udipi, S. K.

Dated: 26-8-1970.

ಬಾಳಸಂಗಾತಿಯ ಆಯ್ಕೆಗೆ ಸಮಾಚಾರ ಪತ್ರಗಳ ಮಾಧ್ಯಮ

(ಐದನೇ ಪುಟದಿಂದ)

ದರೆ, ವಿವರ ತಿಳಿಸುತ್ತಾರೆ, ವಿವರ ಪಡೆಯುತ್ತಾರೆ. ಫೋಟೋಗಳ ಅವಲು ಬದಲಾಗುತ್ತದೆ. ಪರಸ್ಪರ ಭೇಟಿಯೂ ಆಗುತ್ತದೆ. ವಿಚಾರ—ವಿನಿಮಯವಾಗುತ್ತದೆ. ಒಪ್ಪಿಗೆಯಾಯಿತೆಂದರೆ ಮದುವೆ ನಿಶ್ಚಯವಾಗುತ್ತದೆ. ಇದರಲ್ಲಿ ಹಿರಿಯರ ಸಮ್ಮತಿಯೂ ದೊರೆಯಬಹುದು. ಶಾಸ್ತ್ರೋಕ್ತ ವಿಧಾನದಲ್ಲಿಯೇ ವಿವಾಹ ನಡೆಯಬಹುದು. ಇಲ್ಲವೆ—ಬರಿ ಜೀವನ ಸಂಗಾತಿಗಳಾಗಿ ಮೆರೆಯಬಹುದು.

ಈ ಬಗೆಯಾಗಿ ಮದುವೆಯಾದವರ ದಾಂಪತ್ಯ ಜೀವನ ಹೇಗಿರುತ್ತದೆ? ಸಾಮರಸ್ಯದಿಂದಲೇ ತುಂಬಿರುವುದೆ? ಇದೊಂದು ಪ್ರಶ್ನೆ. ಸಾಂಪ್ರದಾಯಿಕ ವಿವಾಹಗಳೆಲ್ಲವೂ ಸುಖಾಂತವಾಗಿವೆಯೇ ಎಂದಿದಕ್ಕೆ ಮರುಸವಾಲು ಹಾಕಬಹುದು. ಎಲ್ಲಿಯೋ ಹುಟ್ಟಿ ಬೆಳೆದ ಎರಡು ಜೀವಗಳು ಒಂದಾಗಿ ಬಾಳುವ ಪ್ರಯತ್ನ ನಡೆಸುತ್ತವೆ. ಇದರಲ್ಲಿ ಅವು ಸಫಲವಾದರೂ ಆಗಬಹುದು; ಅಪಾತ್ರನೆಂಬ ಓಂದಿನವರ ವಿಶ್ವಾಸ; ಇಂದಿನವರ ಆಶಯ. ಮದುವೆಯೆಂಬುದು ಜೀವನದ ಪ್ರಮುಖ ವ್ಯವಹಾರಗಳಲ್ಲೊಂದು, ಅದು ಹಿರಿಯರ ಸಹಮತಿಯಿಂದ ಆಗಬಹುದು, ಪ್ರೇಮ ಮೂಲಕವಾಗಬಹುದು; ಜಾಹೀರಾತುಗಳ ಮುಖದಿಂದಲೂ ಆಗಬಹುದು. ನೀರಿಗಿಳಿಯುವವನು ಕೆಸರಿಗೆ ಅಂಜಿದರೆ ಹೇಗೆ?

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65—66ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ 10/- ಮಾತ್ರ

ಮೆನೇಜರ್, ನವಯುಗ, ಉಡುಪಿ

— ಜನಮತ —

ರಸ್ತೆಗೂ ರಾಜ್ಯಕೀಯವೆ?

ಉಚ್ಚಿಲದಿಂದ ಎಲ್ಲೂರು ಮುದರಂಗಡಿಗಳಿಗಾಗಿ ಬೆಳ್ಮಣ್ಣಿಗೆ ಹೋಗುವ ರಸ್ತೆಯಲ್ಲಿ ಎರಡು ಬಸ್ಸುಗಳು ದಿನಕ್ಕೆ ಎಂಟು ಬಾರಿ ಸಂಚಾರ ಮಾಡುತ್ತಿದ್ದುವೆ. ಮಳೆಗಾಲ ಕಾಲಿರಿಸಿದೊಡನೆಯೇ ಈ ರಸ್ತೆಯಲ್ಲಿ ಕಲ್ಲುಗಳು ಎದ್ದು ಬರುವುದು ಹಾಗೂ ಹೊಂಡಗಳು ಬೀಳುವುದು ಈಗ್ಗೆ ಹಲವು ವರ್ಷಗಳಿಂದಲೂ ನಡೆದು ಬಂದ ಸಂಗತಿ. ಕೆಲವೆಡೆ ಚಕ್ರಗಳು ಹೂತು ಹೋಗುವುದೂ ಇದೆ. ಈ ರಸ್ತೆಯು ಒಳನಾಡು—ಕರಾವಳಿಗಳ ನಡುವೆ ಸಂಬಂಧವನ್ನು ಕಲ್ಪಿಸುವುದರಿಂದ ಅತ್ಯಂತ ಮುಖ್ಯವಾದದ್ದು. ಇಲ್ಲಿ ಬಸ್ಸು ಸಂಚಾರವು ನಿಂತು ಹೋದರೆ, ಕಾಪು—ಮೂಲ್ಕಿ ಅಥವಾ ಉಡುಪಿಗಳಿಂದ ಈ ಪ್ರದೇಶವು ದೂರವಾಗುವುದು. ಗ್ರಾಮಾಂತರದಲ್ಲೂ ಈ ರಸ್ತೆಯು ತೀರ ಅಸಡ್ಡೆಗೆ ಗುರಿಯಾದದ್ದು ಸರ್ವವೇದ್ಯ. ಈ ಪ್ರದೇಶವು ವಿಧಾನ ಸಭೆಗೆ ವಿರೋಧಿ ಪಕ್ಷದವರನ್ನು ಆರಿಸಿ ಕಳಿಸಿದ್ದರಿಂದಲೇ ರಸ್ತೆಯ ಗತಿ ಉತ್ತಮಗೊಂಡಿಲ್ಲವೆಂದು ದೂರು ಕೇಳಿಬರುತ್ತಿದೆ. ಸೇವೆ—ಅಭಿವೃದ್ಧಿ ಕಾರ್ಯಗಳಲ್ಲಿ ರಾಜ್ಯಕಾರಣವು ತಲೆಹಾಕುವುದು ಸಂಕುಚಿತ ಮನೋಧರ್ಮ. ಆದುದರಿಂದ ಸಂಬಂಧಪಟ್ಟವರು ಮುಂದಿನ ಮಳೆಗಾಲದೊಳಗಾದರೂ ಸರ್ವಕಾಲದಲ್ಲೂ ಸಂಚಾರ ಯೋಗ್ಯವನ್ನಾಗಿ ಈ ರಸ್ತೆಯನ್ನು ರೂಪಿಸುವರೆಂದು ಆಶಿಸುತ್ತೇನೆ.

— ಎ. ಸುಬ್ರಹ್ಮಣ್ಯ.

ನಮ್ಮ ರಸ್ತೆ

ಸ್ವಾತಂತ್ರ್ಯ ಸಿಕ್ಕಿ ಎರಡು ದಶಕಗಳು ದಾಟಿದೆ. ಪಂಚವಾರ್ಷಿಕ ಯೋಜನೆಗಳು ಮೂರು ಕಳೆದು ನಾಲ್ಕನೆಯದು ಬಂದಿದೆ. ಹಲವು ಪ್ರಸಿದ್ಧ ವ್ಯಕ್ತಿಗಳು ಮೈಸೂರು ವಿಧಾನ ಸಭೆಗೆ ಆಯ್ಕೆ ಹೊಂದುವ ಸಂದರ್ಭದಲ್ಲಿ ಬೆಳ್ತಂಗಡಿ ತಾಲೂಕಿನ ಗಡಿಗ್ರಾಮಗಳಲ್ಲಿ ಹಾದು ಹೋಗುವ ಮುಂಡಾಜೆ-ಮಿತ್ತಬಾಗಿಲು ಪಂಚಾಯತ್ ರಸ್ತೆಯ ಅಭಿವೃದ್ಧಿಗಾಗಿ ದುಡಿಯುವ ಆಶ್ವಾಸನೆ ನೀಡಿ ಮತ ಪಡೆದು ಚುನಾಯಿತರಾಗಿದ್ದಾರೆ. ಮಾತ್ರವಲ್ಲ, ಈ ರಸ್ತೆಯಿಂದಾಗಿ ಕುದರೆಮುಖದ ಅದಿರು ಸಾಗಾಟ ಸಹಾ ಆರಂಭಿಸಲ್ಪಡುವುದಾಗಿ ಕೂಡಾ ಭರವಸೆ ಕೊಡಲಾಗಿತ್ತು. ಆದರೆ ಇಂದಿಗೂ ಈ ರಸ್ತೆ ಮಾತ್ರ ಯಾವ ಸುಧಾರಣೆಯನ್ನೂ ಕಾಣದೆ ಹಿಂದಿನ ಸ್ಥಿತಿಗಿಂತಲೂ ಇಂದು ಶೋಚನೀಯ ಪರಿಸ್ಥಿತಿಗಿಳಿದಿದೆ ಎಂದರೆ ಹಲವರು ಆಶ್ಚರ್ಯಪಡಬಹುದು. ಆದರೆ ಇದು ಸತ್ಯ ಪರಿಸ್ಥಿತಿ. ಹೀಗಾಗಲು ಓಟು ಪಡೆದ ಪ್ರತಿನಿಧಿಗಳ ಔದಾಸೀನ್ಯಕ್ಕೆ ಮೆಚ್ಚಬೇಕೆ? ಅಥವಾ ಅಂತಹ ಪ್ರತಿನಿಧಿಗಳ ಮೋಸದ ಆಶ್ವಾಸನೆಗಳನ್ನು ಪ್ರತೀ ಸಾರಿಯೂ ನಂಬಿ ಮತ ನೀಡಿದ ಮತದಾರರನ್ನು ಆಕ್ಷೇಪಿಸ ಬೇಕೆ? ಒಂದೂ ತಿಳಿಯದು.

ಕಾಮಗಾರೀ ಮಂತ್ರಿಗಳು ಬಂದಷ್ಟು ಸಾರಿ ಈ ರಸ್ತೆಯ ಸುಧಾರಣೆ ಮತ್ತು ಸೇತುವೆಗಳ ನಿರ್ಮಾಣದ ಬಗ್ಗೆ ಮನವಿಗಳ ಮೂಲಕ ವಿನಂತಿಸಿ ಕೊಂಡರೂ ಏನೂ ಸುಧಾರಣೆಯಾಗಲಿಲ್ಲ. P. W. D. ಇಲಾಖೆಯವರು ಈ ರಸ್ತೆಯ ಎರಡು ಸೇತುವೆಗಳಿಗೆ, ಟೆಂಡರು ಕರೆದು ಹಲವು ತಿಂಗಳಾದರೂ ಆ ಬಗ್ಗೆ ಹಣದ ಮಂಜೂರಾತಿ, ಬೆಂಗಳೂರು ಅಧಿಕಾರಿಗಳಿಂದ ಬಂದಿಲ್ಲವಂತೆ. ಈ ಪ್ರದೇಶದ ಜನರ ದೌರ್ಭಾಗ್ಯವೋ ಎಂಬಂತೆ ಇದೇ ರಸ್ತೆಯಲ್ಲಿ ಸುಮಾರು 2 ವರ್ಷಗಳ ಹಿಂದೆ ಇಲಾಖೆಯವರಿಂದ ಕಟ್ಟಲ್ಪಟ್ಟ ದೊಡ್ಡ ಮೋರಿಯೊಂದು ಬಿದ್ದು ಹೋಗಿದೆ. (ಇಲಾಖಾ ಕೆಲಸದ ಫಿರ್ಮ್, ಮೇಲ್ವಿಚಾರಣೆ ಮಟ್ಟಗಳಿಗೆ ಇದು ದೃಷ್ಟಾಂತ) ಕಬ್ಬಿಣದ ಅದಿರು ಸಾಗಾಟದ ಆಶ್ವಾಸನೆ ಬೇರೆ ದಾರಿಯಲ್ಲಿ ಹೊರಟು ಹೋಯಿತು. ಮುಂದೆ 1972ರ ಚುನಾವಣೆಗಾಗಿ ಕೊಡಲು ಆಶ್ವಾಸನೆಗಳ ಅಭಾವವಾಗದಂತೆ ಬಹುಶಃ ಈ ಮಾರ್ಗವನ್ನು ದುರುಸ್ತಿ ಮಾಡದೆ ಸೇತುವೆಗಳ ನಿರ್ಮಾಣವನ್ನು ತಡೆ ಹಿಡಿದು, ಕಾದಿರಿಸಿ ಕೊಳ್ಳಲಾಗಿದೆ ಎಂಬುದಾಗಿ ನಮ್ಮ ಊರ ಜನರು ಭಾವಿಸುತ್ತಿದ್ದಾರೆ. ಈ ಪ್ರದೇಶದ ಮತಗಳನ್ನು ಹೀಗೆ ಸುಲಭವಾಗಿ ಬರೀ ಆಶ್ವಾಸನೆಗಳನ್ನಿತ್ತು ದೊರಕಿಸಿಕೊಳ್ಳಲು ಪ್ರಯಾಸ ಪಡಬೇಕಾಗಿಲ್ಲ.

"ಮತದಾರ"

ತೆರಿಗೆ ಏರಿಕೆ ಸಾಧುವೆ?

ಉಡುಪಿ ನಗರ ಸಭೆಯ ಸರಹದ್ದಿನಲ್ಲಿ ಇರುವ ಕಟ್ಟಡಗಳ ಮೌಲ್ಯ ಮಾಪನವು ನಡೆಯಿತು. ಈ ಮಾಪನಾಧಿಕಾರಿಗಳು ಅಮಾನುಷ ರೀತಿಯಲ್ಲಿ ವರ್ತಿಸಿದ್ದಾರೆ ಎಂಬುದು ಹೊಸ ತೆರಿಗೆಯ ಮೊತ್ತವನ್ನು ನೋಡುವಾಗ ಮನವರಿಕೆಯಾಗುತ್ತದೆ. ಐದು ವರ್ಷಗಳ ಕೆಳಕ್ಕೆ ಇದ್ದ ಮೌಲ್ಯವು ಈಗ ಏಕಾಏಕಿಯಾಗಿ ರಾಕೆಟ್‌ನಂತೆ ಆಕಾಶಕ್ಕೆ ಹಾರಿದೆ. ಹೀಗಾಗುವುದು ಯಾವ ಮಾರುಕಟ್ಟೆಯಲ್ಲೂ ಸಾಧ್ಯವಿಲ್ಲ.

ಕಟ್ಟಡಗಳ ಮೌಲ್ಯವು ಅದು ಹೊಂದಿರುವ ಸನ್ನಿವೇಶವನ್ನು ಅನುಸರಿಸುತ್ತದೆ. ಸಂಚಾರ ಸೌಲಭ್ಯಗಳು ನಗರದ ಸಾಮೀಪ್ಯ, ವಿದ್ಯುತ್ ಸೌಕರ್ಯ, ಮುಂತಾದ ಕೆಲವು ಸತ್ಯ ಸಂಗತಿಗಳನ್ನು ಮೌಲ್ಯ ಮಾಪನ ಮಾಡುವಾಗ ಗಮನಿಸಬೇಕಿತ್ತು. ಮುಖ್ಯ ಬೀದಿಯ ಪಕ್ಕದಲ್ಲಿ ಇರುವ ಕಟ್ಟಡಗಳನ್ನು ನಗರ ಸಭೆಯ ಸರಹದ್ದಿನಲ್ಲಿರುವ ಮನೆಯನ್ನು ಏಕ ಸಮನಾಗಿ ಮಾಪನ ಮಾಡುವುದು ಸಾಧು ಅಲ್ಲ. ಇದೀಗ ನಗರ ಸಭಾ ಸರಹದ್ದಿನಲ್ಲಿ ಇವ್ವಡಿ ಮುಮ್ಮಡಿಯಾಗಿದೆಯೆಂದು ಗೊತ್ತಾಗುತ್ತದೆ. ಕೆಲವೊಮ್ಮೆ ಆರು ಪಟ್ಟು ಏಳು ಪಟ್ಟು ತೆರಿಗೆ ಹೆಚ್ಚಿದ ಉದಾಹರಣೆಗಳೂ ಇವೆ. ಒಂದು ಕಟ್ಟಡದ ಮೌಲ್ಯವು ಐದೇ ಐದು ವರ್ಷಗಳಲ್ಲಿ ಚಂದ್ರಲೋಕಕ್ಕೆ ಹಾರುವುದು—ಅಸಾಧ್ಯವೆಂಬುದು ಮಾಮೂಲಿಗೂ ತಿಳಿಯುವ ಸುಳ್ಳು—ಕಟ್ಟಡಗಳ ಮೌಲ್ಯವು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತ ಹೋಗುತ್ತದೆ. ಕಟ್ಟಡವು ಹಳತಾಗುತ್ತಾ ಬಂದಂತೆ ಹಲವು ಬಗೆಯ ದುರಸ್ತಿ ಮಾಡಬೇಕಾಗುತ್ತದೆ. ಈಗ ಮಾಡಬೇಕಾದ ಕೆಲಸವೆಂದರೆ ನಾಗರಿಕರಿಗೆ ಸೂಕ್ತ ಪರಿಹಾರವನ್ನು ತಂದು ಕೊಡುವುದು. ಮೌಲ್ಯಗಳ ಪುನಃ ವಿಮರ್ಶೆ ಈ ಬಾರಿ ಹೊಸತಾಗಿ ನಡೆಯುವುದಲ್ಲ. ಈ ಹಿಂದೆಯೂ ಹಲವು ಬಾರಿ ಪುನರ್ವಿಮರ್ಶೆ ನಡೆದಿತ್ತು. ಆದರೆ, ಇಂತಹ ಅನ್ಯಾಯ ಈ ಮೊದಲು ಎಂದಿಗೂ ಆಗಿರಲಿಲ್ಲ. ಆದುದರಿಂದ ಉಡುಪಿಯ ಸನ್ನಿವೇಶಗಳನ್ನು ಅರಿತುಕೊಂಡು ಅಪಿಲೇಟ್ ಅಧಿಕಾರಿಗಳು ನಾಗರಿಕರನ್ನು ನ್ಯಾಯವಾದ ರೀತಿಯಲ್ಲಿ ನಡೆಸಿಕೊಂಡು ಹೋಗುವರಾಗಿ ಅಪೇಕ್ಷೆ.

— ಗೋಕುಲ

ಶ್ರೀ ಜಿನರಾಜ ಹೆಗ್ಡೆಯವರ ನಿಧನ

ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ವಿಶೇಷ ಪಾತ್ರವಹಿಸಿ, ಕರ್ನಾಟಕ ಏಕೀಕರಣ ಸಮಿತಿಯ ಅಧ್ಯಕ್ಷರಾಗಿ ಕೆಲವು ವರ್ಷ ಸೇವೆಸಲ್ಲಿಸಿದವರೂ ಸಹಕಾರಿ ರಂಗದಲ್ಲಿ ದುಡಿದವರೂ, ಜೈನ ಸಮಾಜದ ಮುಂದಾಳುಗಳೂ ಜಿಲ್ಲೆಯ ಪ್ರಸಿದ್ಧ ವಕೀಲರೂ ರಾಜಕಾರಣಿಗಳೂ ಆಗಿದ್ದ ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರು ತಾ. 27-8-70ರಂದು ತಮ್ಮ 69ನೇ ವರುಷದಲ್ಲಿ ಮಂಗಳೂರಿನ ಸ್ವಗೃಹದಲ್ಲಿ ನಿಧನಗೊಂಡರು.

ದಿವಂಗತರು 1933ರಲ್ಲಿ ಸೆಂಟ್ರಲ್ ಲೆಜಿಸ್ಲೇಟಿವ್ ಎಸೆಂಬ್ಲಿಯ ಕಾಂಗ್ರೆಸ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಇವರು ಕಾಂಗ್ರೆಸ್ಸನ್ನು ಬಿಟ್ಟು ಪಿ. ಎಸ್. ಪಿ. ಅನಂತರ ಸ್ವತಂತ್ರ ಪಾರ್ಟಿಗೆ ಸೇರಿ ಸೇವೆ ಸಲ್ಲಿಸಿದ್ದರು. ಶ್ರೀ ಹೆಗ್ಡೆಯವರಿಗೆ ಮೂವರು ಗಂಡು ಮೂವರು ಹೆಣ್ಣು ಮಕ್ಕಳಿದ್ದು ಹಿರೀ ಮಗಳು ಮಂಗಳೂರಲ್ಲೇ ಡಾಕ್ಟರ್ ಆಗಿರುವರು.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 28337 2 29887 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಅನಪೇಕ್ಷಿತ ನಿಯಮಗಳಿಂದ ಖಾಸಗಿ ಶಾಲಾ ಮೆನೇಜರರಿಗೆ ಅನ್ಯಾಯ

ದ. ಕ. ಜಿಲ್ಲಾ ಖಾಸಗಿ ಶಾಲಾ ಮೆನೇಜರರ ಸಂಘದ ಅಧ್ಯಕ್ಷ ಶ್ರೀ ಪಾಲ್ಪೆ ಮಧ್ವರಾಜರು ಒಂದು ಪತ್ರಿಕಾ ಹೇಳಿಕೆಯನ್ನು ನೀಡುತ್ತ

"ಮೈಸೂರು ರಾಜ್ಯದ ಎಲ್ಲಾ ವಿಭಾಗಗಳಿಗೂ ಅನ್ವಯಿಸುವ ಪ್ರಾಥಮಿಕ ಶಾಲೆಗಳಿಗೆ ಗ್ರಾಂಟ್ ಕೊಡುವ ನಿಯಮಗಳು ತುಂಬಾ ಲೋಪದೋಷಗಳಿಂದ ಕೂಡಿದ್ದು, ಅಸ್ಪಷ್ಟವೂ ಅವ್ಯವಹಾರಿಕವೂ, ಶಾಲಾ ಮೆನೇಜರರಿಗೆ ಅನ್ಯಾಯ ಉಂಟುಮಾಡುವಂತಹವುಗಳೆಂದು ನಮ್ಮ ಸಂಘದ ಸದಸ್ಯರು ಆಕ್ಷೇಪ ಮಾಡಿದ್ದರು.

ಆದರೆ ಇಡೀ ರಾಜ್ಯಕ್ಕೆ ಅನ್ವಯಿಸುವ ಒಂದು ಕಾಯಿದೆಯು ಎಲ್ಲಾ ವಿಭಾಗಗಳ ಪದ್ಧತಿ, ಪರಂಪರೆ, ಸ್ಥಿತಿಗತಿಗಳಿಗೆ ಅನುಕೂಲವಾಗಿ ರೂಪಿಸುವುದು ಕಷ್ಟವಾದುದರಿಂದ, ಕೆಲವು ವಿಷಯಗಳಲ್ಲಿ ದ. ಕ. ಜಿಲ್ಲೆಯ ಶಾಲಾ ಮೆನೇಜರರು ಅನಾನುಕೂಲತೆಗಳನ್ನು ಲೆಕ್ಕಿಸದೆ ಸಹಕರಿಸಬೇಕಾದ ಅಗತ್ಯವನ್ನು ನಾನು ಮನಗಾಣಿಸಿ ಮಾನ್ಯ ವಿದ್ಯಾಮಂತ್ರಿಗಳಿಗೆ ಫೆಬ್ರವರಿ ತಾರೀಕು 8ರಂದು ಸಂಘದ ಪರವಾಗಿ ಒಂದು ವಿಜ್ಞಾಪನೆಯನ್ನು ಕಳುಹಿಸಿದ್ದೆ. ಅದರ ಪ್ರತಿಗಳನ್ನು ನಮ್ಮ ಶಾಸಕರಿಗೂ, ವಿದ್ಯಾಧಿಕಾರಿಗಳಿಗೂ ಸಹ ಕಳುಹಿಸಲಾಗಿತ್ತು.

ಅನಂತರ ಈ ಖಾತೆಯ ಶಿಕ್ಷಣಾಧಿಕಾರಿ ಶ್ರೀ ಕೆ. ವಿಠಲಶೆಟ್ಟಿಯವರು ಬೆಂಗಳೂರಿಂದ ಬಂದು ತಮ್ಮ ಮಂಗಳೂರು ಕೇಂಪಿನಲ್ಲಿ ಸಂಘದ ಪ್ರತಿನಿಧಿಗಳೊಂದಿಗೆ ಈ ಕುರಿತು ವಿಚಾರ ವಿನಿಮಯ ಮಾಡಿದ್ದರು. ಕಾಯಿದೆಯು ಯಶಸ್ವಿಯಾಗುವಂತೆ, ಶಾಲಾ ಮೆನೇಜರರಿಗೆ ಹೆಚ್ಚಿನ ಅನ್ಯಾಯವಾಗದಂತೆ, ಪ್ರಾಥಮಿಕ ವಿದ್ಯಾಭ್ಯಾಸವು ಸಾಂಗವಾಗಿ ನೆರವೇರುವಂತೆ ಅತಿ ಅಗತ್ಯವಿರುವ ಕೆಲವು ಬದಲಾವಣೆಗಳನ್ನು ಮಾತ್ರ ನಾವು ವಿಜ್ಞಾಪನಾ ಪತ್ರದಲ್ಲಿ ನಿವೇದಿಸಿದ್ದೆವು. ಮತ್ತು ಇವುಗಳನ್ನು ಅಂಗೀಕರಿಸುವುದರಿಂದ ಶಾಲಾ ಮೆನೇಜರರ ಸಂಘದ ಪರವಾಗಿ ಸಂಪೂರ್ಣ ಸಹಕಾರದ ಆಶ್ವಾಸನೆಯನ್ನು ಸರಕಾರಕ್ಕೆ ನೀಡಿದ್ದನ್ನು ಶ್ರೀ ಶೆಟ್ಟಿಯವರ ಗಮನಕ್ಕೆ ತರಲಾಗಿತ್ತು.

ಆದರೆ ಇಷ್ಟರ ತನಕ ನಮ್ಮ ನಿವೇದನೆಗಳನ್ನು ಸರಕಾರ ಅಂಗೀಕರಿಸಿದೆಯೆ, ನಿರಾಕರಿಸಿದೆಯೆ ಎಂಬುದು ತಿಳಿದಿಲ್ಲ. ಇದನ್ನು ತಿಳಿಯದೆ ಕೋರ್ಟಿನ ವಗೈರೆ ಇತರ ಪ್ರವೃತ್ತಿ ವಿಧಾನಗಳನ್ನು ಸಂಘವು ಕೈಗೊಳ್ಳುವಂತಿಲ್ಲ.

ಇದೀಗ ಅಧಿಕಾರಿಗಳು ಅನಪೇಕ್ಷಿತ ನಿಯಮಗಳನ್ನು ಮೆನೇಜರರ ಮೇಲೆ ಹೊರಿಸಲು ಬಲಾತ್ಕಾರದ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಅಂತಹ ಕಾರ್ಯಕ್ರಮಗಳಲ್ಲಿ ಒಂದು ಅಧ್ಯಾಪಕರ ಸಂಬಳವನ್ನು ತಡೆಹಿಡಿಯುವುದಾಗಿದೆ. ಇದರಿಂದ ಅತ್ಯಂತ ಮೇಲಣ ಸಿಟ್ಟನ್ನು ಮಗುವಿನ ಮೇಲೆ ತೀರಿಸಿಕೊಳ್ಳುವ ತಾಯಿಯ ಧೋರಣೆಯಂತೆ ಸರಕಾರ ಅಕ್ಷಮ್ಯ ಅಪರಾಧ ಮಾಡುತ್ತಿದೆ. ಈ ಕುರಿತು ವಿದ್ಯಾಮಂತ್ರಿಗಳಿಗೆ ಪುನಃ ಕಾಗದ ಬರೆದು ಸರಕಾರವು ನಮ್ಮ ಮನವಿಗೆ ಕೂಡಲೆ ಉತ್ತರ ಬರೆಯಬೇಕೆಂದು ವಿನಂತಿಸಿಕೊಂಡಿದ್ದೇನೆ. ಇದಕ್ಕೆ ಸಮರ್ಪಕ ಪ್ರತಿಕ್ರಿಯೆ ಬಾರದಿದ್ದರೆ ಮುಂದಿನ ನಿರ್ಧಾರವನ್ನು ಸಂಘ ಕೈಗೊಳ್ಳುವಂತೆ ಮಹಾ ಸಭೆಯನ್ನು ಕರೆಯಲಾಗುವುದು. ಅಷ್ಟರ ತನಕ ಸದಸ್ಯರು ಸಹನೆಯಿಂದ ವರ್ತಿಸಬೇಕಾಗಿ ವಿನಂತಿ.

ಸ್ವಾತಂತ್ರ್ಯೋತ್ಸವ

ಉಡುಪಿಯ ಕಲಾವೃಂದದಲ್ಲಿ ಸ್ವಾತಂತ್ರ್ಯೋತ್ಸವವು ಶ್ರೀ ಎ. ಜಿ ಅಲ್ವೆಯವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು. ಭಾಷಣ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ಕೊಡಲಾಯಿತು. ಮುಖ್ಯ ಅತಿಥಿ ಶ್ರೀ ಎಸ್. ವೆಂಕಟರಾಜ ಮತ್ತು ಅಧ್ಯಕ್ಷರ ಭಾಷಣಗಳಾದ ಬಳಿಕ ಶ್ರೀ ಬಿ. ಪದ್ಮನಾಭ ಭಟ್ಟರು ಆಭಾರಮನ್ನಿಸಿದರು. ಆರಂಭದಲ್ಲಿ ಶ್ರೀ ಕೆ. ಯಾದವ ಸರಳಾಯರು ಸ್ವಾಗತಿಸಿದರು.

ಟಿ. ಎ. ಪೈಗಳಿಗೆ ಸನ್ಮಾನ

ಜೀವವಿಮಾ ಸಂಸ್ಥೆಯ ಅಧ್ಯಕ್ಷ ಶ್ರೀ ಟಿ. ಎ. ಪೈಯವರಿಗೆ ಹಿರಿಯಡ್ಕ ಪಂಚಾಯತ್ ಮತ್ತು ನಾಗರಿಕರು ತಾ. 28-8-70ರಂದು ಸನ್ಮಾನವಿತ್ತು ಸತ್ಕರಿಸಿದರು. ಈ ಸಂದರ್ಭದಲ್ಲಿ ಶ್ರೀ ಪೈಗಳು ಮಾತನಾಡುತ್ತಾ ಭಾವೀಕಲ್ಯಾಣಕ್ಕಾಗಿ ಜನರು ಮಾಡುವ ಜೀವವಿಮೆಯು ಹೊಸ ಸಾಮಾಜಿಕ ಪರಿಪಾಠವಾಗಿ ಬೆಳೆಯುತ್ತಿದೆಯೆಂದೂ, ವಿಮಾ ಸಂಸ್ಥೆಯಲ್ಲಿ ಸಂಚಯವಾಗುವ ಹಣವು ನೀರು ಪೂರೈಕೆಯೇ ಮೊದಲಾದ ಪ್ರಜಾಹಿತ ಕೆಲಸಕ್ಕೆ ತಾತ್ಕಾಲಿಕವಾಗಿ ಸಿಗುವುದರಿಂದ ತೆರಿಗೆಯ ಭಾರ ಬೀಳದೆ ಜನರಿಗೆ ಉತ್ತಮ ಸೌಕರ್ಯಗಳು ಸಿಗುವಂತೆ ಸಾಧ್ಯವಾಗುವುದೆಂದೂ ಹೇಳಿದರು.

ಹಿರಿಯಡ್ಕ ಜೀವವಿಮಾ ಏಜಂಟರಾದ ಡಾ| ಯು. ಚಂದ್ರಶೇಖರ ಆಚಾರ್ಯ ಒಂದು ತಿಂಗಳೊಳಗೆ 101ಕ್ಕೂ ಹೆಚ್ಚಿನ ಜನರಿಗೆ ವಿಮೆ ಮಾಡಿಸಿ ಪಾಲಿಸಿಗಳನ್ನು ಶ್ರೀ ಪೈಯವರು ಪಾಲಿಸಿದಾರರಿಗೆ ವಿತರಣೆ ಮಾಡಿದರು. ಇದರ ಒಟ್ಟು ಮೊತ್ತ ರೂ. 4,14,000. ಪಂಚಾಯತಿನ ಪರವಾಗಿ ಅರ್ಪಿಸಿದ ಸನ್ಮಾನ ಪತ್ರದಲ್ಲಿ ಶ್ರೀ ಪೈಯವರು, ಈ ಕ್ಷೇತ್ರದ ಶಾಸಕರಾಗಿದ್ದಾಗ ಮಾಡಿದ ಸಾರ್ವಜನಿಕ ಸೇವೆಯನ್ನು ನೆನಪಿಗೆ ತರಲಾಗಿತ್ತಲ್ಲದೆ ಮುಂದಕ್ಕೂ ಅವರು ಉತ್ತಮ ಮಾರ್ಗದರ್ಶನ ಮಾಡುವಂತಾಗಲೆಂದು ಹಾರೈಸಲಾಗಿತ್ತು.

ಆರಂಭದಲ್ಲಿ ಡಾ| ಬಿ. ಚಂದಯ್ಯ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದ್ದರು.

23 ವರ್ಷಗಳ ಸಾಧನೆ

ಕಳೆದ 23 ವರ್ಷಗಳಿಂದ ಬಡತನ, ಹಸಿವು, ನಿರಕ್ಷರತೆ, ರೋಗ ರುಜೆ ಮತ್ತು ಇತರ ಕುಂದು ಕೊರತೆಗಳ ವಿರುದ್ಧ ನಿರಂತರ ಹೋರಾಟ ನಡೆಸುತ್ತಿದ್ದುದರ ಪರಿಣಾಮವಾಗಿ ಜನತೆಯ ಜೀವನದಲ್ಲಿ ಸುಧಾರಣೆಯ ಇಣುಕು ನೋಟ ಇಲ್ಲಿದೆ...

ಆಹಾರ ಉತ್ಪಾದನೆಯಲ್ಲಿ ಇಮ್ಮಡಿ ಹೆಚ್ಚಳ	ವರ್ಷಕ್ಕೆ 5 ಕೋಟಿ ಟನ್‌ಗಳಿಂದ 9.5 ಕೋಟಿ ಟನ್‌ಗಳಿಗೆ ಏರಿಕೆ.
ಹಳ್ಳಿಗಳಿಗೆ ವಿದ್ಯುತ್ ಶಕ್ತಿ	ದೇಶದಲ್ಲಿ ಪ್ರತಿ ಎಂಟು ಹಳ್ಳಿಗಳಲ್ಲಿ ಒಂದಕ್ಕೆ ವಿದ್ಯುತ್ ಪೂರೈಕೆಯಾಗುತ್ತಿದೆ.
ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಸಾಲದ ಸೌಕರ್ಯ	2.97 ಲಕ್ಷ ಕೃಷಿಕರಿಗೆ 80.71 ಕೋಟಿ ರೂಪಾಯಿ. 70,607 ಚಿಲ್ಲರೆ ವ್ಯಾಪಾರಿಗಳಿಗೆ 40.78 ಕೋಟಿ ರೂಪಾಯಿ. 4034 ವಿದ್ಯಾರ್ಥಿಗಳಿಗೆ 1.82 ಕೋಟಿ ರೂಪಾಯಿ.
ಉತ್ತಮ ಶಿಕ್ಷಣ ಸೌಕರ್ಯ	ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ 2.3 ಕೋಟಿಯಿಂದ 7.5 ಕೋಟಿಗೆ ಏರಿದೆ.
ಸುಧಾರಿತ ವೈದ್ಯಕೀಯ ಸೇವೆ	ಸರಾಸರಿ ಆಯುಷ್ಯ ಪ್ರಮಾಣ 31 ವರ್ಷಗಳಿಂದ 52 ವರ್ಷಗಳಿಗೆ ಏರಿದೆ.



ಅಭಿವೃದ್ಧಿ ಯೋಜನೆ ಸಾಮಾಜಿಕ ನ್ಯಾಯ

ಸಾಧನೆ

ಶ್ರೀ ಗಣಪತಿ

(ಎರಡನೇ ಪುಟದಿಂದ)

ಈ ಮೂಲಕ ಸಮಾಜ ಸಂಘಟನೆ ಸಾಧ್ಯವಾಗುತ್ತದೆ ಎಂಬ ವಿಶ್ವಾಸ.

ದೇಶ–ವಿದೇಶಗಳಲ್ಲಿ ಗಣಪತಿ

ಸರ್ವ ಜನಾದರಣೀಯನಾದ ಗಣಪತಿ ಕವಿ, ಕಲಾವಿದರಿಗೂ ಪ್ರಿಯ ದೇವತೆಯು. ಶಿಲ್ಪಿಗಳಂತೂ ಗಣಪತಿಯನ್ನು ಬೇರೆ-ಬೇರೆಯಾದ ಮನೋಹರ ಆಕಾರಗಳಲ್ಲಿ ನಿರ್ಮಿಸಿದ್ದಾರೆ. ಚೋಳಶಿಲ್ಪದ ಮಾದರಿಯಲ್ಲಿ ನಿರ್ಮಿತವಾಗಿರುವ ವಲಂಪುರಿಯ ಬಾಲಗಣಪತಿ (ಕಂಚು) ಅಪೂರ್ವ ಕಲಾಕೃತಿ. ನಾಲ್ಕು ಕೈಗಳ, ಗಜಮುಖನಾದ ಈ ಬಾಲಕ ನಗ್ನನಾಗಿ ನಿಂತಿದ್ದಾನೆ. ತಲೆಯ ಮೇಲೆ ಜಟೆ, ಕೈನಲ್ಲಿ ಬೆಣ್ಣೆಯುಂಡೆ.

ಅಫ್ಘಾನಿಸ್ತಾನದಲ್ಲಿ ಭೂಗರ್ಭದಲ್ಲಿ ದೊರೆತಿರುವ ಮಹಾವಿನಾಯಕ ಎರಡೇ ಕೈಗಳ, ಬೋಳು ತಲೆಯ ಮೂರ್ತಿ. ಲಂಬೋದರನನ್ನು ಅಲಂಕರಿಸಿರುವುದು ಸರ್ಪಯಜ್ಞೋಪವೀತ. ವೀರ್ಯವೇ ಮೈವೆತ್ತಂತಿರುವ ಈ ಮೂರ್ತಿಯ ನಿಲುವು ಮಗಧ ಶಿಲ್ಪ ಸಂಪ್ರದಾಯದ್ದು ಎಂದು ವೀಕ್ಷಕರ ಅಭಿಮತ.

ಇದೇ ಪ್ರದೇಶದಲ್ಲೇ ದೊರೆತಿರುವ, ಕಾಬೂಲಿನಲ್ಲಿ ಪ್ರತಿಷ್ಠಿತವಾಗಿರುವ ಎಸ್ಸೆಲಾದ ಮತ್ತೊಂದು ಗಣಪತಿಯ ವಿಗ್ರಹವೂ ವಿಶಿಷ್ಟವಾದುದೇ ಆಗಿದೆ. ಇದು ಬಹುಶಃ ಶಾಕ್ತ ಸಂಪ್ರದಾಯಕ್ಕೆ ಸೇರಿದ್ದಿರಬೇಕು. ಊರ್ಧ್ವಮೇಢ್ರವನ್ನು ಸ್ಪಷ್ಟವಾಗಿ ಚಿತ್ರಿಸಿರುವ ಈ ವಿಗ್ರಹದ ಭೂಷಣ-ಲಾಂಛನಗಳೆಲ್ಲ ಗುಪ್ತರ ಕಾಲದ ಶಿಲ್ಪವನ್ನು ಹೋಲುತ್ತದೆ ಎನ್ನಲಾಗಿದೆ.

ಭಾರತದಲ್ಲಿ ಹಂಪೆಯ ಬೃಹದಾಕಾರದ ಗಣಪತಿ, ಗೋಕರ್ಣದ ಮೂರ್ತಿ, ಗಣಪತಿಗಳು ಸುಪ್ರಸಿದ್ಧವಾದವು. ಹೊಯ್ಸಳ ಶಿಲ್ಪಿಗಳಿಗೆ ನೃತ್ಯಗಣಪತಿಯ ಮೇಲಿನ ಮೋಹ ಅವರ್ಣನೀಯವಾದುದು. ಬೊಜ್ಜು ಹೊಟ್ಟೆಯ ಮೂರ್ತಿ ಗಣಪತಿ ದಂಡಹಸ್ತ—ಅಭಯಹಸ್ತಗಳಿಂದ ಕೂಡಿ ನಿಂತಿರುವ ನಾಟ್ಯಭಂಗಿ ನಟರಾಜನೊಂದಿಗೆ ಸ್ಪರ್ಧೆಗೆ ಹೊರಟಂತಿದೆ. ಅಪಾದಮಸ್ತಕ ಕಂಗೊಳಿಸುವ ಭೂಷಣಗಳು ಅಪೂರ್ವ.

ಶ್ರೀಶೈಲದ ಮಲ್ಲಿಕಾರ್ಜುನ ದೇಗುಲದ ಗೋಡೆಯೊಂದರ ಮೇಲೆ ಕೊಳಲೂದುತ್ತಿರುವ ಗಣಪತಿಯ ಉಬ್ಬು ಶಿಲ್ಪವಿದೆ. ಗಣಪತಿ ಸಂಗೀತಲೋಲನೆಂಬುದನ್ನು ಪ್ರತಿಬಿಂಬಿಸುವ ಈ ಕೃತಿ ಅದ್ವಿತೀಯವಾದುದು.

ಮಧುರೆಯ ಲಕ್ಷ್ಮೀಗಣಪತಿ, ನಂಜನಗೂಡಿನ ಶಕ್ತಿಗಣಪತಿಗಳು ತಾಂತ್ರಿಕ ಸಂಪ್ರದಾಯಕ್ಕೆ ಸೇರಿದವು. ಮೊದಲನೆಯದರಲ್ಲಿ ಸರ್ವಾಲಂಕಾರ ಭೂಷಿತನಾದ ಗಣಪತಿ, ತನ್ನ ಹಾಗೆಯೇ ಸರ್ವಾಲಂಕಾರ ಭೂಷಿತೆಯಾದ ದೇವಿಯನ್ನು ತೊಡೆಯ ಮೇಲೆ ಕೂಡಿಸಿಕೊಂಡಿದ್ದಾನೆ.

ಎರಡನೆಯದು ದಿಗಂಬರನಾದ ಗಣಪತಿಯ ತೊಡೆಯೇರಿ ಕುಳಿತ ನಗ್ನ ದೇವತೆ. ಮಧುಪಾನದಿಂದ ಮತ್ತವಾದ ಕಣ್ಣುಗಳು; ಪರಸ್ಪರ ಮರ್ಮಾಂಗಗಳನ್ನು ಸ್ಪರ್ಶಿಸುತ್ತಿರುವ ಕಾಮಾಸಕ್ತ ಚಿತ್ರಣ.

ಆತ್ಮಜ್ಞಾನದ ಸಂಕೇತ

ಹಿಂದೂ ದೇವ–ದೇವತೆಗಳ ಸುತ್ತ ಬೆಳೆದು ನಿಂತ ಸಂಕೇತಗಳು, ದಂತಕತೆಗಳು, ರಹಸ್ಯಗಳೂ ಅಪಾರ. ಚಿತ್ರ-ವಿಚಿತ್ರ ಪೌರಾಣಿಕ ಕತೆಗಳಂತೂ ವಿವೇಕದ ಒರೆಗೆ ನಿಲ್ಲುವುದೂ ಇಲ್ಲ. ಆದರೆ ಈ ಎಲ್ಲ 'ಅದ್ಭುತ' ಸೃಷ್ಟಿಯ ಹಿಂದೆಯೂ ಆಧ್ಯಾತ್ಮಿಕ ಚಿಂತನೆ ಉಂಟು. ಅಜ್ಞಾನದ ಬಲವು ಉಂಟು, ವಿಜ್ಞಾನದ ವಿಶ್ಲೇಷಣೆಗೆ ಎಟುಕದ ಅತ್ಮ, ಪರಬ್ರಹ್ಮಗಳು ಇವೆಯೋ, ಇಲ್ಲವೋ. ಆದರೆ ಅವುಗಳನ್ನು ಕಾಣುವ ಶ್ರದ್ಧಾತ್ಮಕ ಕಾರ್ಯ ಸತತವಾಗಿ ನಡೆದಿದೆ. ಅಂತೆಯೇ ಗಣಪತಿಯ ರಹಸ್ಯ, ಸಂಕೇತಗಳ ಹಿಂದೆ ಅಡಗಿರುವ ಸತ್ಯಾನ್ವೇಷಣೆಯ ಪ್ರಯತ್ನ ಅನನ್ಯವಾದುದು.

"ಏಕದಂತಾಯ ವಿದ್ಮಹೇ ವಕ್ರತುಂಡಾಯ ಧೀಮಹಿ

ತನ್ನೋ ದಂತಿಃ ಪ್ರಚೋದಯಾತ್"

(ಲೇಖಕ)

ರಾಜ್ಯಗಳ ಕಾಮಧೇನು- ಲಾಟರಿ

ಇದು ಅನೈತಿಕತೆಗೆ ಹಾಲೂಡುತ್ತದೆ;

ಚಾರಿತ್ರ್ಯ ಭ್ರಷ್ಟತೆಗೆ ಅನ್ನಹಾಕುತ್ತದೆ.

ಜೀವನದಲ್ಲಿ ಲಾಭ–ಹಾನಿಗಳು ಪ್ರಾರಬ್ಧಾನುಸಾರ. ಕೆಲವರು ಆರಂಭದಿಂದಲೂ ಲಾಟರಿ ಟಿಕೇಟು ಕೊಳ್ಳುತ್ತಲೇ ಬಂದಿದ್ದಾರೆ; ಆದರೆ, ಒಂದೇ ಒಂದು ಚಿಕ್ಕದಾದರೂ ಬಹುಮಾನ ಅವರಿಗೆ ದೊರಕಿಲ್ಲ—ಇದವರ ಅದೃಷ್ಟಫಲ. ಆದರೆ, ಲಾಟರಿ ಒಳ್ಳೆಯದೆ? ಲಾಟರಿಯಿಂದ ಬಹುಮಾನ ಪಡೆಯುವುದು ಸಾಧುವಾದುದೆ? ಇಂತಹ ಬಹುಮಾನಗಳಿಂದ ದುಡಿಯದೆ ಗಳಿಸುವ ಮನೋವೃತ್ತಿ ಬೆಳೆಯುವುದಿಲ್ಲವೆ? ಕಾಯಕವೇ ಕೈಲಾಸ ದುಡಿಮೆಯೇ ದೇವರು ಎಂದು ಮುಂತಾದ ವೇದವಾಕ್ಯಗಳನ್ನು ವಾನಪ್ರಸ್ಥಕ್ಕೆ ಓಡಿಸಿದಂತೆಯೇ ಸರಿ.

ಇಂದು ನಾವೆಲ್ಲರೂ ಧನಲೋಲುಪರಾಗಿದ್ದೇವೆ; ಅಥವಾ ಆಗುತ್ತಲಿದ್ದೇವೆ. ಯಾವ ಮಾರ್ಗದಿಂದಲಾದರೂ ಸರಿಯೇ ನಮಗೆ ಹಣ ಬೇಕು. ಸರಕಾರವೂ ನಮ್ಮದೇ ಅಲ್ಲವೆ? ನಮ್ಮ ಸರಕಾರಕ್ಕೆ ಅಂಟಿದ ಧನಲೋಲುಪತೆಯ ವಿಷ ಫಲವೇ 'ಲಾಟರಿ' ಒಂದು ಧಾರ್ಮಿಕ ಕಾರ್ಯಕ್ಕಾಗಿಯೋ, ಶಿಕ್ಷಣಾಲಯಕ್ಕಾಗಿಯೋ ದೀನದಲಿತರ ಪುನರ್ವಸತಿಗಾಗಿಯೋ ಚಂದಾ ವಸೂಲಿಗೆಂದು ಹೊರಡಿ, ಮೂರು ಹರದಾರಿ ಸುತ್ತಾಡಿದರೂ ನೂರು ರೂಪಾಯಿ ಕೊಡುವುದಿಲ್ಲ. ಲಾಟರಿಯ ಕಥೆ ಇದಕ್ಕೆ ತದ್ವಿರುದ್ಧ. ಬಡವರಲ್ಲಿ ಬಡವನೂ ಹೊಟ್ಟೆಯನ್ನು ಬೆನ್ನಿಗೆ ಅಂಟುಹಾಕಿ, ಬಟ್ಟೆಗೆ ಚಿಂದಿ ಗಂಟುಹಾಕಿ ಲಾಟರಿ ಟಿಕೇಟು ಕೊಳ್ಳುತ್ತಾನೆ. ಯಾಕೆ? ಪ್ರಥಮ ಬಹುಮಾನವಾದ ರೂ...... ......ಲಕ್ಷ ತನ್ನದೇ ಕೈ ಸೇರುವುದೆಂಬ ಮಹಾನಂಬಿಕೆಯಿಂದ ಲಾಟರಿಯಲ್ಲಿ ಕೂಡುವ ಹಣದಲ್ಲಿ ಬಡವರದ್ದೇ ಹೆಚ್ಚು.

ಬಡವರನ್ನು ಪ್ರಲೋಭನಕ್ಕೆ ಗುರಿಮಾಡಿ ಅನೈತಿಕವಾಗಿ ಜೂಜಾಡುತ್ತ ಅದರಿಂದ ಹಣ ಕೂಡಿಸುವುದು ಸರಕಾರವು ಮಾಡುತ್ತಿರುವ ದುಷ್ಟ ಕೃತ್ಯ. ಈ ಜೂಜಾಟವು ಸರಕಾರಗಳಿಗೆ ಬಹಳ ಲಾಭಪ್ರದವಾಗಿ ಕಂಡಿದೆ. ಆದುದರಿಂದಲೇ ಕೆಲವು ರಾಜ್ಯಗಳು ವಾರಕ್ಕೊಂದು ಲಾಟರಿ ನಡೆಸಿ ಲಕ್ಷಗಟ್ಟಲೆಯ ಬಹುಮಾನ ನೀಡಲು ಮುಂದೆ ಬಂದಿವೆ. ಇನ್ನೂ ಕೆಲವು ದಿನ ಕಳೆದರೆ, ದಿನ ದಿನವೂ ಲಾಟರಿ ತೆಗೆಯುವ ಚಟವೂ ಅಂಟಿಕೊಂಡೀತು. ಸರಕಾರಕ್ಕೆ ಲಾಟರಿಗಳಿಂದ ಕುಬೇರನ ಭಂಡಾರವೇ ದೊರೆಯುತ್ತಿದೆ—ಯಾವ ಹೆಚ್ಚಿನ ವೆಚ್ಚವೂ ಇಲ್ಲ. ಮರುಪಾವತಿಯ ಪ್ರಶ್ನೆಯೇ ಏಳುವುದಿಲ್ಲ. ಆದುದರಿಂದಲೇ ಲಾಟರಿ ಆರ್ಥಿಕ ಕಾಮಧೇನು.

ಲಾಟರಿಗಳ ಜಾಹೀರಾತುಗಳೂ ವಿಲಕ್ಷಣ. ಸಭ್ಯ ಜನತೆಯನ್ನು ಬಹುಬೇಗ ಆಕರ್ಷಿಸುವ ಅಷ್ಟ ಸಂಖ್ಯೆ ಎಂಬ (ತಪ್ಪು) ಕಲ್ಪನೆಯನ್ನು ದೊಡ್ಡದೊಡ್ಡ ಜಾಹೀರಾತುಗಳು ಜನತೆಯಲ್ಲಿ ಮೂಡಿಸುತ್ತವೆ. ಔದ್ಯೋಗಿಕ, ಶೈಕ್ಷಣಿಕ, ಕೃಷಿಕ ಇತ್ಯಾದಿ ಇತ್ಯಾದಿ ರಂಗಗಳಲ್ಲಿ ಕ್ರಾಂತಿಕಾರಿ ಅಭಿವೃದ್ಧಿ ಸಾಧಿಸಲು ಲಾಟರಿಗಳೊಂದೇ ತಾರಕವೆಂಬರ್ಥದ ಭಿತ್ತಿಪತ್ರಗಳವೆ! ಜೂಜು ಕಟ್ಟೆಗಳಿಗೂ ಕಾಲ ಬಂತು. ಭಾರತದ ಕೊನೆಯ ಗವರ್ನರ್ ಜನರಲ್ ಶ್ರೀ ರಾಜಾಜಿ ಲಾಟರಿ ವಿರೋಧಿ. ಸರಕಾರವನ್ನೂ ಅದರ ಒಂದೊಂದು ಹೆಜ್ಜೆಯನ್ನೂ ಟೀಕಿಸುವ ಅವರ ವಾಗ್ಬಾಣ ಲಾಟರಿಗಳ ಮೇಲೆ ಬೀಳದಿರುವುದು ಸಾಧ್ಯವಿಲ್ಲ. "ಈ ಬಗೆಯಲ್ಲಿ ಬಡ ಜನರನ್ನು ಆಮಿಷಕ್ಕೆ ಮರುಳುಮಾಡಿ ಅವರನ್ನು ಸುಲಿಯಲು ಸರಕಾರಕ್ಕೆ ನಾಚಿಕೆಯಾಗುವುದಿಲ್ಲವೆ?" ಎಂದವರು ಕೇಳುತ್ತಾರೆ. ಆದರೆ, ಜನತೆಯ ಮುಂದೆ ಹಸಿಹಸಿ ಸುಳ್ಳು ಹೇಳಿಯೇ ಅಧಿಕಾರಕ್ಕೆ ಬಂದವರಿಗೆ 'ನಾಚಿಕೆ' ಯೆಂಬ ಶಬ್ದವೊಂದಿದೆಯೆಂಬುದರ ಪರಿವೆಯೇ ಉಳಿದಿಲ್ಲ.

ಸರಕಾರಗಳು ಲಾಟರಿಯೆತ್ತುವುದು ಕಾನೂನಿಗೆ ವಿರೋಧವಲ್ಲ. ಆದರೆ, ಕಾಯಿದೆ ಬದ್ಧವಾದ ಮಾತ್ರಕ್ಕೆ ಒಂದು ಕಾರ್ಯವು ನೈತಿಕವೆನಿಸುವುದಿಲ್ಲ; ಚಾರಿತ್ರ್ಯ ನಿರ್ಮಾಣಕ್ಕೆ ಸಹಕಾರಿ ಆಗುವುದಿಲ್ಲ. ಕಸಾಯಿಖಾನೆಗಳು ಕಾಯಿದೆಬದ್ಧವಾಗಿ ನಡೆಯುತ್ತಿವೆ. ಆದುದರಿಂದ ಅಲ್ಲಿ ನಡೆಯುವ ಹಿಂಸೆಯು ಹಿಂಸೆಯಲ್ಲವೇನು? ಈಗ 'ಮುಕ್ತಪಾನ' ಕಾನೂನುಬದ್ಧವಾಗಿದೆ. ಗಡಂಗುಗಳಲ್ಲಿ ಕುಡಿದವರು ಮತ್ತರಾಗಿ, ಸಮಾಜಕಂಟಕರಾಗಿ, ಕುಟುಂಬಕಂಟಕರಾಗಿ ಬೆಳೆಯುವುದಿಲ್ಲವೆ? ತಮ್ಮ ನೈತಿಕತೆಯಿಂದ ವ್ಯಕ್ತಿ ಮತ್ತೆಯಿಂದ ತಿಪ್ಪೆಗೆ ಉರುಳುವುದಿಲ್ಲವೆ? ಹಾಗೆಯೇ ಲಾಟರಿಯೂ ಕಾನೂನು ಬದ್ಧವೆನಿಸಬಹುದು; ಆದರೆ ಅದೆಂದೂ ನೈತಿಕವೆನಿಸದು. ಲಾಟರಿ ಏರ್ಪಡಿಸುವವರು ಅನೈತಿಕತೆಗೆ ಬೆಂಬಲ ನೀಡುತಿದ್ದಾರೆ. ಚಾರಿತ್ರ್ಯಹೀನತೆಗೆ ಪುಟಕೊಡುತ್ತಾರೆ.

ಬೇರೆ ಬೇರೆ ರಾಜ್ಯ ಸರಕಾರಗಳು ಇದುವರೆಗೆ ೬೦ರಿಂದ ೭೦ ಕೋಟಿ ರೂಪಾಯಿಗಳನ್ನು ಲಾಟರಿಗಳ ಮೂಲಕ ಸಂಗ್ರಹಿಸಿವೆ. (ಇದುವರೆಗೆ) ಇದರಲ್ಲಿ ಸುಮಾರು ೨೫ರಿಂದ ೩೦ ಕೋಟಿ ರೂಪಾಯಿಗಳನ್ನು ಬಹುಮಾನಗಳಾಗಿ, ಕಮಿಶನ್ ಆಗಿ ಹಾಗೂ ಮತ್ತಿತರ ವೆಚ್ಚಗಳಿಗಾಗಿ ಖರ್ಚುಮಾಡಿವೆ. ಲಾಟರಿಯೊಂದು ಅತ್ಯಂತ ಲಾಭದಾಯಕವಾದ ಆದರೆ, ಬಂಡವಾಳವೇ ಇಲ್ಲದ ಉದ್ಯಮವಾಗಿ ಬೆಳೆದು ಬಂದಿದೆ. ಒಂದೇ ರೂಪಾಯಿ ಬಂಡವಾಳದಿಂದ ಲಕ್ಷಾಧಿಪತಿಯಾದವರನ್ನು ತೋರಿಸುತ್ತ ಹೆಚ್ಚು ಹೆಚ್ಚಿನ ಮೊತ್ತದ ಬಹುಮಾನಗಳ ಆಸೆತೋರಿಸುತ್ತ ಜನರನ್ನು ತಪ್ಪು ದಾರಿಗೆಳೆಯುವ ಚಟ ದಿನೇ ದಿನೇ ಬಲಿಯುತ್ತ ಬಂದಿದೆ.

ಬಡತನದ ಸಂಕಟವನ್ನು ಕೆಲಕ್ಷಣವಾದರೂ ಕಳೆಯುವ ಲಾಲಸೆಯಿಂದ ಬಡವರು ಕುಡಿದು ಮತ್ತರಾಗುತ್ತಾರೆ; ಕಡುಬಡವರಾಗಿ ನೈತಿಕ ಅಧಃಪತಿತರಾಗುತಿದ್ದಾರೆ. ಒಂದಲ್ಲ ಒಂದು ದಿನ ಲಕ್ಷಪತಿಯಾಗುವೆವೆಂಬ ಹೇರಾಸೆಯಿಂದ ಲಾಟರಿ ಟಿಕೇಟು ಕೊಂಡು ರೊಕ್ಕದಿಂದ ತಿಪ್ಪೆಗೆ ಉರುಳುತ್ತಾರೆ. ಕಾಯಿದೆ ಬದ್ಧವಾದ ಈ ಜೂಜು ಜನತೆಯನ್ನು ಸುಲಿಯುವ ಇನ್ನೊಂದು ವಿಧಾನವಷ್ಟೆ. ಹತ್ತು ರೂಪಾಯಿಯನ್ನು ನಲ್ವತ್ತು ಮಾಡಿಕೊಡುವ ಆಸೆತೋರಿಸಿ ಸುಲಿಯುವವನು ಕಾನೂನಿನಿಂದ ವಂಚಕ. ಇಸ್ಪೀಟಿನ ಎಲೆಗಳ ಮೂಲಕ, ಮಟ್ಕಾದ ಮೂಲಕ, ಸಟ್ಟಾದ ಮೂಲಕ ಜೂಜಿನ ಮೂಲಕ ತನ್ನ ಅದೃಷ್ಟ ಪರೀಕ್ಷೆ ಮಾಡಿಕೊಳ್ಳಲು ಕಾಯಿದೆ ಬದ್ಧ ಅವಕಾಶ ದೊರೆಯದಿದ್ದರೂ ಲಾಟರಿ ಮೂಲಕ ಅಂತಹ ಸದವಕಾಶ ದೊರೆತಿದೆ.

ಪ್ರಜಾಪ್ರಭುತ್ವದಲ್ಲಿ ಸರಕಾರವು ಜನತೆಯ ಮನೋಭಾವದಂತೆಯೇ ಇರುತ್ತದೆ. ಜನರಿಗೆ ಜೂಜು ಬೇಕು; (ಇಲ್ಲವಾದರೆ, ಇಷ್ಟು ಕೋಟಿ ರೂಪಾಯಿ ಒಟ್ಟುಗೂಡುತ್ತಿತ್ತೆ?) ಎಂತಲೇ ಸರಕಾರ ತಾನೇ ಜೂಜಾಡತೊಡಗಿ ಅದಕ್ಕೆ ಕಾನೂನಿನ ಬದ್ಧತೆಯನ್ನು ದೊರಕಿಸಿಕೊಟ್ಟಿದೆ. ಆದರೆ, ಇದು ಹೀಗೆಯೇ ಮುಂದುವರಿದರೆ, ನಾಳೆ ವ್ಯಭಿಚಾರ, ಕೊಲೆ, ಸುಲಿಗೆ, ಕಳ್ಳತನ ಮೊದಲಾದವುಗಳಿಗೂ ಕಾನೂನಿನ ಬಲ ದೊರೆತರೂ ದೊರೆಯಬಹುದು —ನಕ್ಸಲೀಯರಿಗೆ, ಭೂಗ್ರಹಣವಾದಿಗಳಿಗೆ ಇಂದಿರಾರಕ್ಷೆ ದೊರೆತಿರುವಂತೆ!

ವಾಸನೆಗಳು ವಿಷಪೂರಿತ ಹಾವಿನ ಹಲ್ಲುಗಳಂತಿವೆ

o o o

ಸತ್ಯವನ್ನು ಸರಳವನ್ನಾಗಿ ಮಾಡುವುದೇ ದೊಡ್ಡ ಕಲೆ

o o o

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು–೪

NAVAYUGA 3—9—1970
Registered with the Registrar of News Papers for India under No. R. N. 3546/'57

REGD: No: B. G/ 178
LICENCE No: 33,
Licensed to Post without Prepayment

ಕುಮಾರಧಾರೆ ಪ್ರಾಣ ಹೀರಿದಳು

ಪಡುವಣ ನಾಡಿನ ಕಾರ್ಗಾಲದ ವೈಭವವೇನೆಂಬುದನ್ನು ಕವಿಗಳು ನಾನಾ ಪ್ರಕಾರವಾಗಿ ವರ್ಣಿಸಿದ್ದುಂಟು. ಈ ವೈಭವವು ಕೆಲವೊಮ್ಮೆ ಕಣ್ಣಿಗೆ ಕಾಣಿಸುವುದೂ ಉಂಟು. ಮೊದಲು ನದಿದಾಟುವಾಗ ದೋಣಿ ಕೊಚ್ಚಿ ಹೋದ ದುರ್ಘಟನೆಗಳು ವರದಿಯಾಗುತ್ತಿದ್ದುವು. ಇದೀಗ ನದಿಗಳಿಗೆಲ್ಲ ಸೇತುವೆಯಾದುದರಿಂದ ಅಂತಹ ಅಪಾಯಗಳಿಲ್ಲ. ಕೆಲವು ವರ್ಷಗಳಿಗೆ ಹಿಂದೆ ಹೊಸ ಬಾತಕ ಮುಳೂರು ಸೇತುವೆಯಲ್ಲಿ ಬಸ್ಸೊಂದು ಕೊಚ್ಚಿ ಹೋದ ವಿದ್ರಾವಕ ಪ್ರಸಂಗ ನಡೆದದ್ದು ಮರೆತು ಹೋಗುತ್ತಿರುವಾಗ, ಈ ವರ್ಷ ಸುಬ್ರಹ್ಮಣ್ಯದ ಬಳಿ ಕುಮಾರಧಾರೆಯಲ್ಲಿ ಇಂತಹುದೇ ಮತ್ತೊಂದು ಘಟನೆ ನಡೆದು ಹೋಯಿತು.

ಆಗಸ್ಟ್ ೨೦ನೆ ದಿನ. ಕೆಲ ದಿವಸಗಳಿಂದ ಹಿಡಿದಿದ್ದ ಜಡಿಮಳೆ ಒಂದೇ ಸಮನಾಗಿ ಸುರಿಯುತ್ತಲೇ ಇತ್ತು. ಸುಬ್ರಹ್ಮಣ್ಯ ಕ್ಷೇತ್ರದ ಬಳಿಯ ಕುಮಾರಧಾರೆ ತುಂಬಿ ಹರಿಯುತ್ತಲೇ ಇತ್ತು. ಮಧ್ಯಾಹ್ನದ ಮೂರು ಗಂಟೆಯ ಸಮಯ. ಹಾಸನದಿಂದ ಧರ್ಮಸ್ಥಳಕ್ಕೆ ಹೋಗುವ ಸರ್ಕಾರಿ ಬಸ್ಸು ಎಂ. ವೈ. ಎಫ್. ೬೯೩ ಸುಬ್ರಹ್ಮಣ್ಯ ನಿಲ್ದಾಣವನ್ನು ಬಿಟ್ಟಿತು. ಇದಕ್ಕೆ ತುಸು ಮೊದಲು ಮಂಗಳೂರಿನ ಬಸ್ಸು ಹೊರಟಿದ್ದರಿಂದ, ಪ್ರಯಾಣಿಕರ ನೂಕೂ ಇರಲಿಲ್ಲ; ನುಗ್ಗಲೂ ಇರಲಿಲ್ಲ. ಎಡೆಬಿಡದೆ ಜಿನುಗುತ್ತಿರುವ ಜಲ್ಲೋನೆಯಲ್ಲಿ ಪ್ರಯಾಣ ಮಾಡುವ ಉತ್ಸುಕತೆ ಯಾರಿಗಿದೆ? ಅನಿವಾರ್ಯ ಕಾರಣಗಳಿಂದ ಬಸ್ಸು ಹತ್ತಿ ಕುಳಿತವರು ಎಂಟು ಜನರು ಮಾತ್ರ; ಡ್ರೈವರು ಕಂಡಕ್ಟರು, ಮೆಕ್ಯಾನಿಕ್, ಮತ್ತಿತರರು.

ಕುಮಾರ ಧಾರಾ ನದಿಯ ಬಳಿ ಬರುವಾಗ ಸುಮಾರು ೩.೧೫. ನದಿಯಲ್ಲಿ ನೀರು ಏರಿತ್ತು, ಒಡ್ಡು ಹಾದಿಯ ಮೇಲೆ ನೀರು ಹರಿಯುತಿತ್ತು. ತುಸು ಮೊದಲೇ ಮಂಗಳೂರು ಬಸ್ಸು ದಾಟಿದ್ದನ್ನು ನೆನೆದುಕೊಂಡ ಚಾಲಕ ಕೇಶವ ಪೈ ಜಾಗ್ರತೆಯಾಗಿ ಒಡ್ಡುದಾರಿಯ ಮೇಲೆ ಬಸ್ಸು ನಡೆಸಿದ. ಚಕ್ರಗಳು ನೀರಿಗಿಳಿದುವೇನೋ ನಿಜ; ಆದರೆ, ಬಸ್ಸು ನೆಲದ ಮೇಲೆ ನಡೆಯಲಿಲ್ಲ, ಅದು ಅವನ ಮಾತು ಕೇಳಲಿಲ್ಲ. ನೀರ ಮೇಲೆ ತೇಲುತ್ತಿರುವ ಅನುಭವವಾದ ಕಂಡಕ್ಟರ್ ಹಿಂದಿನ ಬಾಗಿಲು ತೆರೆದು ನೀರಿಗೆ ದುಮುಕಿದ; ಅವನ ಹಿಂದೆಯೇ ಗೋವಿಂದ ಗೌಡನೂ ಪ್ರಾಣದ ಹಂಗು ತೊರೆದು ಪ್ರವಾಹಕ್ಕೆ ಹಾರಿದ. ಅತ್ತ ಇತ್ತ ಕಡೆ ಜನರು ನೋಡುನೋಡುತ್ತಿದ್ದಂತೆಯೇ ನತದೃಷ್ಟ ಸಾರಿಗೆ ಬಸ್ಸು ನೀರಿನಲ್ಲಿ ಮುಳುಗಿ ಹೋಯಿತು. ನೀರಿಗೆ ಹಾರಿದವರಿಬ್ಬರು ಹೇಗೆಹೇಗೋ ದೈವಬಲದಿಂದ ದಡ ಸೇರಿದರು.

ಸುದ್ದಿ ತಿಳಿದೊಡನೆಯೇ ಶೋಧ ಕಾರ್ಯ ನಡೆಯಿತು. ಬಿಟ್ಟುಬಿಡದೆ ಸುರಿಯುತ್ತಿದ್ದ ಜಡಿಮಳೆ ಕ್ಷಣಕ್ಷಣಕ್ಕೂ ಏರುತ್ತಿರುವ ಪ್ರವಾಹಗಳಿಂದ ಏನು ಮಾಡುವುದೂ ಸಾಧ್ಯವಾಗಲಿಲ್ಲ. ಅಗ್ನಿಶಾಮಕ ದಳದವರು ಬಂದರು; ಬಂದರು ಯೋಜನೆಯ ಮುಳುಗುವವರು ಬಂದರು. ಎಲ್ಲರೂ ಅಸಹಾಯಕರು. ಕೊನೆಗೂ ನೀರು ಇಳಿಯುತ್ತ ಬಂದಂತೆ ಪ್ರಯತ್ನ ರಭಸದಿಂದ ಸಾಗುತ್ತ ಬಂದಂತೆ ಬಸ್ಸಿನ ಅಸ್ತಿತ್ವ ನೀರಿನೊಳಗಡೆ ದೃಢಪಟ್ಟಿತು. ದೇವಾಲಯದ ಆನೆಯೂ ಸೇರಿ ಜನರೆಲ್ಲರೊಂದಾಗಿ ಬಸ್ಸನ್ನು ಎಳೆದರೂ ಅದು ನೀರಿಂದ ಕದಲಲಿಲ್ಲ. ಬಸ್ಸು ಉರುಳಿ ಉರುಳಿ ಹೋದದ್ದರಿಂದ ಹಲವು ಬಗೆಯಾಗಿ ಜಖಂಗೊಂಡದ್ದು ತಿಳಿದು ಬಂತು. ಬಸ್ಸಿನಲ್ಲಿರ ಬಹುದಾದ ಮೃತದೇಹಗಳ ಬಗ್ಗೆ ತಪಾಸಣೆ ನಡೆದರೂ ಯಾವ ಪರಿಣಾಮವೂ ಆಗಲಿಲ್ಲ. ಬಸ್ಸಿನ ಆಸನಗಳು ಪ್ರವಾಹದ ಹೊಡೆತಕ್ಕೆ ಸಿಕ್ಕು ನುಚ್ಚು ನೂರಾಗಿ ಕೊಚ್ಚಿ ಹೋಗಿದ್ದುವು.

ತಾ. ೨೩ರಂದು ಮುಂಜಾನೆ ಏಳು ಗಂಟೆಗೆ ಮತ್ತೆ ಬಸ್ಸನ್ನು ನೀರಿಂದ ಮೇಲೆತ್ತುವ ಕಾರ್ಯ ಆರಂಭವಾಯ್ತು. ಅಷ್ಟರಲ್ಲಿ ಮಳೆಯೂ ನಿಂತಿತ್ತು. ಬಸ್ಸಿನೊಳಗೆ ಹುಡುಕಾಡಿದಾಗ ಎರಡು ಶವಗಳು ದೊರಕಿದುವು. ಮತ್ತಾವ ಹೇಳಿಕೊಳ್ಳುವ ವಸ್ತುಗಳೂ ಇರಲಿಲ್ಲ. ಈ ಶವಗಳಲ್ಲಿ ಒಂದು ಚಾಲಕ ಕೇಶವ ಪೈಯವರದ್ದು, ಮತ್ತೊಂದು ಮೆಕ್ಯಾನಿಕ್ ದೊರೆಸ್ವಾಮಿಯದ್ದು. ಮೂರು ದಿವಸ ನೀರಿನೊಳಗೇ ಇದ್ದುದರಿಂದ ಅವು ಕೊಳೆತು ಹೋಗಿದ್ದು ಬಹಳ ಪರಿಣತಿಯಿಂದಲೇ ಗುರುತಿಸಲ್ಪಟ್ಟುವು. ಈ ಶವಗಳು ಒಯ್ಯುವ ಸ್ಥಿತಿಯಲ್ಲಿಲ್ಲದ್ದರಿಂದ ಕುಮಾರಧಾರೆಯ ದಡದಲ್ಲೇ ಅವರವರ ಸಂಪ್ರದಾಯದಂತೆ ಅಂತ್ಯಸಂಸ್ಕಾರ ನಡೆಸಲಾಯ್ತು. ಬಸ್ಸಿನ ಕಳೇವರವನ್ನು ಬ್ರೇಕ್ ಇನ್ಸ್ಪೆಕ್ಟರರ ವಶ ಒಪ್ಪಿಸಲಾಯ್ತು.

ಬಸ್ಸಿನಿಂದ ಹೊರ ಹಾರಿದ್ದ ಕಂಡಕ್ಟರನಿಗೆ ಅಲ್ಪಸ್ವಲ್ಪ ಗಾಯಗಳಾಗಿದ್ದು ಪುತ್ತೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದನು. ಇನ್ನೊಬ್ಬ ಗೋಪಾಲ ಗೌಡ ತನ್ನ ಧನಿಗಾಗಿ ತೋಟದಲ್ಲಿ ಗೇಯುತ್ತಲೇ ಇದ್ದಾನೆ. ಆತನಿಗೆ ಈ ರೋಮಾಂಚಕ ಘಟನೆಯನ್ನು ನೆನೆದಾಗ ಮೈ ಜುಮ್ಮೆನ್ನುತ್ತದೆ.

ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಇನ್ನು ನಾಲ್ವರ ಶವಗಳೆಲ್ಲಿ ಹೋದುವು? ಆ ಪ್ರಯಾಣಿಕರೂ ಪ್ರಾಣದುಳಿವಿಗಾಗಿ ಹೋರಾಡಿರಬಹುದು. ಹೊರಹಾರಲೆಂದು ಬಾಗಿಲ ಬಳಿ ಬಂದಿರಲೂ ಬಹುದು. ಆದರೆ, ಕುಮಾರಧಾರೆಯ ರಭಸವನ್ನು ಎದುರಿಸಲಾರದೆ ಆಕೆಯ ಉದರದಲ್ಲೇ ಸಮಾವೇಶಗೊಂಡಿರಬೇಕು. ಕುಮಾರಧಾರೆ ಅವರ ಪ್ರಾಣವನ್ನು ಹೀರಿ ದೇಹವನ್ನು ಮೀನು ಹಾವುಗಳಿಗೆ ಬಿಟ್ಟುಕೊಟ್ಟಿರಬೇಕು. ಆಕೆಯ ಅಬ್ಬರವಿಳಿದಾಗ ಎಲ್ಲಾದರೂ ಏನಾದರೂ ಕುರುಹು ಕಂಡರೂ ಕಂಡೀತು.

"ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ" ಎಂಬ ಮಾತು ಮಲೆನಾಡಿನ ನಿರ್ಝರಿಣಿಗಳಿಗೆ ಸದಾಕಾಲ ಅನ್ವಯಿಸುವುದು. ಕುಮಾರ ಧಾರೆಯ ವಜ್ರಕ್ಕಿಂತಲೂ ಕಠೋರವಾದ ಈ ಸ್ವರೂಪ ಯಾರನ್ನಾದರೂ ಹೆದರಿಸಿಯೇ ಹೆದರಿಸುತ್ತದೆ.

ಶ್ರೀಮತಿ ಗಾಂಧಿಯವರು

(ಒಂದನೇ ಪುಟದಿಂದ)

ರಿಕೆಯಿಂದ ತಾನು ಪಾಠ ಕಲಿತೊಂಡು ವಿವಾದರಾಗಲಿ ಎಂದು ಮಹಾಜನ ವರದಿಯ ಬಗ್ಗೆ ಸರಕಾರದ ಟಿಪ್ಪಣಿ ಸೇರಿಸಿ ಸಂಸತ್ತಿನ ಮುಂದಿಡುವ ಸಂಭವವೇ ಹೆಚ್ಚು.

ಹೀಗೆ ಮಾಡುವುದರಿಂದ ಬೆಳಗಾಂವಿ ಮರಾಠಿಗರಿಗಾದರೂ ಹೋಗ ಬಹುದು; ಕನ್ನಡಿಗರ ಕೈಯಲ್ಲೇ ಉಳಿದರೂ ಉಳಿಯಬಹುದು. ಶ್ರೀಮತಿ ಗಾಂಧಿಯವರ ಸಿಂಹಾಸನ ಮಾತ್ರ ಆ ಕ್ಷಣ ಕಂಪಿಸುವುದಿಲ್ಲ. ಹಿಂದಿನ ಸಾರ್ವತ್ರಿಕ ಚುನಾವಣೆಗೆ ಪೂರ್ವಭಾವಿಯಾಗಿ ಮಹಾಜನ ಆಯೋಗ ಏರ್ಪಟ್ಟಂತೆ ಮುಂದಿನ ಚುನಾವಣೆಗೆ ಮೊದಲು ಇಂತಹ ಕ್ರಮವೇರ್ಪಡುವ ಅವಕಾಶ ಸ್ಪಷ್ಟವಿದೆ. ಕನ್ನಡಿಗರು ಸಂಸತ್ತಿಗೆ ತಮ್ಮ ನ್ಯಾಯವಾದದ ಬಗ್ಗೆ ಸದಭಿಪ್ರಾಯ ಮೂಡಿಸಲು ಈಗಿಂದೀಗಲೇ ತೊಡಗಬೇಕು. ಕೃಷ್ಣನೇನೋ ಅರ್ಜುನನ ಬಾವನಂತೆ; ಆತನನ್ನೇ ಮೊದಲು ಮಾತಾಡಿಸಿದ. ಸಂಸತ್ತಿನಲ್ಲಿ ಕನ್ನಡಿಗರ ಸಂಖ್ಯಾ ಬಲ ಕಡಿಮೆ. ಆದುದರಿಂದ ಎಚ್ಚರದ ಕ್ರಮ ಅಗತ್ಯ.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy
ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲಸ್ವಯಂಬೋಧಿನಿ
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ
ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ,
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು Home Remedies
ಡಾ। ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ವೈದ್ಯಗ್ರಂಥ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ. ಹೇರಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳು ಸಿಗುವ ಸ್ಥಳ —
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ
ಮಿತ ಸಂತತಿ
ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0-75 ಪೈಸೆ ಮಾತ್ರ.
ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ.
ತಾಲೂಕೋಟೆ, ಉಡುಪಿ, ದ. ಕ.

Edited, Printed & Published by K. H. Shetty at the Navayuga Press, Udipi. S. India,

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 2

NAVAYUGA

10—9—1970

ಧರ್ಮದ ಹೆಸರಲ್ಲಿ

ಬಲವಂತದ ಮಾಘಸ್ನಾನ ಅನ್ಯಾಯ

ಒಂದು ಕಾಲದಲ್ಲಿ ಭುವನೇಶನೆಂಬ ರಾಜನಿದ್ದನು. ಅವನು ಅತ್ಯಂತ ಧಾರ್ಮಿಕ. ಅವನು ಅಶ್ವಮೇಧ, ವಾಜಪೇಯ ಆದಿ ಅನೇಕಾನೇಕ ಯಜ್ಞಗಳನ್ನು ಮಾಡಿದನು. ವಸ್ತ್ರದಾನ, ಸುವರ್ಣದಾನ, ರಥದಾನ, ಕನ್ಯಾದಾನಾದಿಗಳು ಅತನ ನಿತ್ಯಕರ್ಮಗಳು. ದೇಶದ ಆಡಳಿತ—ಸುವ್ಯವಸ್ಥೆ ಎಲ್ಲಾ ಅತನದು ಎತ್ತಿದ ಕೈ. ಆದರೆ ಅತನಲ್ಲಿ ಈ ಎಲ್ಲ ಉತ್ತಮೋತ್ತಮ ಗುಣಗಳಿದ್ದರೂ ಒಂದು ಕೊರತೆಯಿತ್ತು. ದೇವರ ಪೂಜೆಯನ್ನು ಹಾಡುತ್ತಾ ಮಾಡುವುದನ್ನು ಅವನು ಸಹಿಸುತ್ತಿರಲಿಲ್ಲ. ತಾನು ಅತ್ಯಂತ ಬಲಶಾಲಿ ಆದುದರಿಂದ ತನ್ನ ವಿಚಾರಧಾರೆಯನ್ನು ಪ್ರಚಾರಮಾಡಲು ಅವನು ನಾನಾ ಪ್ರಕಾರದ ಹೀನಾತಿಹೀನ ಉಪಾಯ ನಿರತನಾದನು. "ನನ್ನ ರಾಜ್ಯದಲ್ಲಿ ಯಾವನೊಬ್ಬನಾದರೂ ಪೂಜೆಯಲ್ಲಿ ಹಾಡಬಾರದು; ಎಲ್ಲರೂ ವೇದಮಂತ್ರ ಮೂಲಕವಾಗಿಯೇ ಪೂಜೆ ಮಾಡಬೇಕು. ಯಾರಾದರೂ ಹಾಡಿನ ಮೂಲಕ ಪೂಜೆ ಸಲ್ಲಿಸಿದರೆ, ಅತನನ್ನು ಬಂಧಿಸಿ ಮೃತ್ಯುದಂಡನೆಗೆ ಗುರಿಪಡಿಸಲಾಗುವುದು"—ಇದು ಭುವನೇಶನ ಭುವನ ಪ್ರಸಿದ್ಧ ಆಜ್ಞೆ.

ವೇದಮಂತ್ರಗಳ ಮೂಲಕವೇ ಪೂಜೆ ನಡೆಯುವುದು ಉತ್ತಮ ವಿಚಾರಧಾರೆಯೇನೋ ನಿಜ. ಆದರೆ, ಶಕ್ತಿಯ ಬಲದಿಂದ ಈ ಪಂಥವನ್ನು ಪ್ರಚಾರಮಾಡುವುದನ್ನು ಜನತೆ ಒಪ್ಪಲಿಲ್ಲ. ಆದರೂ ಶಕ್ತಿಯ ಹೆದರಿಕೆಯಿಂದ ಜನರೆಲ್ಲರಿಗೂ ಈ ಆಜ್ಞೆಯನ್ನು ಶಿರಸಾವಹಿಸ ಬೇಕಾಯ್ತು. ಅರಮನೆಯ ಅನತಿದೂರದಲ್ಲೇ ಹರಿಮಿತ್ರನೆಂಬೊಬ್ಬ ವಿಪ್ರ ಭಕ್ತನಿದ್ದನು. ಅತ ನಿರ್ಭೀಕ. ಈ ತಪಸ್ವಿಯು ನದಿದಂಡೆಗೆ ತೆರಳಿ, ಅದರ ಮರಳಿನಲ್ಲಿ ಕೂತು ಮೊದಲು ನಾರಾಯಣ ಪ್ರತಿಮೆಯನ್ನು ಶಾಸ್ತ್ರ ವಿಧಿಯಿಂದ ಪೂಜಿಸುತ್ತಿದ್ದನು; ಅನಂತರ ತನ್ನ ವೀಣೆಯಲ್ಲಿ ಪ್ರೇಮಪೂರ್ಣ ಭಗವಂತನ ಗುಣಗಾನ ಮಾಡುತ್ತಿದ್ದನು.

ತನ್ನ ಆಜ್ಞೆಯನ್ನು ಉಲ್ಲಂಘಿಸಿ ದರಿದ್ರ ಬ್ರಾಹ್ಮಣನೊಬ್ಬ ಗಾನದಿಂದ ದೇವರನ್ನು ಪೂಜಿಸುವನೆಂಬುದು ರಾಜನಿಗೆ ತಿಳಿಯಲು ಬಹಳ ಕಾಲ ಕಳೆಯಲಿಲ್ಲ. ಅತನ ಹುಬ್ಬೇರಿತು. ಆ ಬ್ರಾಹ್ಮಣನನ್ನು ತತ್‌ಕ್ಷಣ ಬಂಧಿಸಿ ತನ್ನೆದುರು ನಿಲ್ಲಿಸ ಬೇಕೆಂದಾತನ ಆದೇಶ ಹೊರಟಿತು. ರಾಜಸೈನಿಕರು ನದಿ ದಂಡೆಗೆ ಹೊರಟರು. ಬ್ರಾಹ್ಮಣನು ಆ ವೇಳೆ ಪೂಜಿಸುತ್ತಿದ್ದನು. ಅತನ ಪೂಜಾಸಾಮಗ್ರಿಗಳನ್ನು ರಾಜ ಭಟರು ಚೆಲ್ಲಾಪಿಲ್ಲಿಯಾಗಿ ಚೆಲ್ಲಿದರು; ಅತನನ್ನು ಸೆರೆಹಿಡಿದು ರಾಜನ ಸಮ್ಮುಖ ತಂದು ನಿಲ್ಲಿಸಿದರು.

ಮಹಾರಾಜನಿಗೆ ಮೊದಲೇ ರೇಗಿತ್ತು. ಅತನು ಬುಸುಗುಟ್ಟುತ್ತಾ ಹರಿಮಿತ್ರನನ್ನು ಭಂಗಿಸತೊಡಗಿದನು. ಹರಿಮಿತ್ರನು ತಾನು ನದೀತೀರದಲ್ಲಿ ಪೂರ್ಣ ಶಾಸ್ತ್ರವಿಧಿಯಿಂದಲೇ ಪೂಜೆಮಾಡಿದೆನೆಂದು ವಾದಿಸಿದ; ಇದನ್ನು ರಾಜಭಟರೂ ಒಪ್ಪಿದರು. ಅತನು ಪೂಜೆಯನ್ನು ವೇದಮಂತ್ರಗಳಿಂದ ಮಾಡಿದ್ದು ನಿಜವಾದರೂ ಅದರೊಡನೆ ವೀಣೆಯನ್ನು ಬಾರಿಸಿಯೂ ಗಾನಮಾಡಿದ್ದರಿಂದ ಅವನ ಅಪರಾಧವಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗಲಿಲ್ಲ. ರಾಜನು ಅತನಿಗೆ ಮೃತ್ಯು ದಂಡನೆ ನೀಡಲಿಲ್ಲ. ಅತನ ಎಲ್ಲ ಆಸ್ತಿಪಾಸ್ತಿಯನ್ನು ವಶಪಡಿಸಿಕೊಂಡು ಅವನಿಗೆ ದೇಶತ್ಯಾಗ ಮಾಡುವಂತೆ ಆದೇಶ ನೀಡಿದನು.

ತನ್ನ ಮಾತೃಭೂಮಿಯನ್ನು ಬಿಡಬೇಕಾಗಿ ಬಂದಾಗ ಹರಿಮಿತ್ರನಿಗೆ ಅತೀವ ದುಃಖವಾಯ್ತು. ಆದರೂ ರಾಜಾಜ್ಞೆಯನ್ನು ಮೀರುವುದು ಅಸಾಧ್ಯವಿತ್ತು. ಅವನು ದೇಶ ಬಿಟ್ಟು ಹೋದನು. ದಾರಿಯ ಹಲವು ದಿನ ಹಸಿವಿನಿಂದ ನರಳಬೇಕಾಯ್ತು. ತನ್ನ ವಿಚಾರಧಾರೆಯನ್ನು ಬಲಾತ್ಕಾರಪೂರ್ವಕವಾಗಿ ಪ್ರಚಾರ ಮಾಡುವುದರಲ್ಲಿ ತಾನು ಸಫಲನಾದುದರಿಂದ ರಾಜ ಭುವನೇಶನು ಸಂತೋಷದಿಂದ ಉಬ್ಬಿ ಹೋದನು. ಹರಿಮಿತ್ರನ ಕೈಯಿಂದ ನಿತ್ಯ ಪೂಜೆಗೊಳ್ಳುತ್ತಿದ್ದ ವಿಷ್ಣುಮೂರ್ತಿಯ ಗತಿಯೇನಾಯ್ತು? ಅದನ್ನು ರಾಜನೆಂದೂ ಕಣ್ಣಾರೆ ಕಾಣಲಿಲ್ಲ. ಇತರರ ಕಣ್ಣಿಗೆ ಅದೆಂತು ಬಿದ್ದೀತು? ರಾಜನಿಗೆ ಹಿಗ್ಗು—ಇದುವರೆಗೆ ಯಾರೊಬ್ಬರೂ ಮಾಡದ ಧರ್ಮಕಾರ್ಯವನ್ನು ತಾನು ಮಾಡಿದ್ದೇನೆಂದು. ಆದುದರಿಂದ ತಾನು ನೇರವಾಗಿ ಸ್ವರ್ಗಕ್ಕೇ ಹೋಗುವೆನೆಂದು ಅಚಲ ವಿಶ್ವಾಸ.

ರಾಜ ಭುವನೇಶನು ಕೊನೆಯುಸಿರೆಳೆದನು. ಮರುಜನ್ಮದಲ್ಲಿ ಅತನಿಗೆ ಗೂಗೆಯ ಯೋನಿಯಲ್ಲಿ ಜನ್ಮವಾಯ್ತು. ಗೂಗೆಯಾಗಿ ಅತ ಹಲವು ಕಾಲದವರೆಗೆ ದೂರದೂರ ಹಾರಾಡಿದನು. ಆದರೆ, ಅತನಿಗೆ ಎಳ್ಳನಿತೂ ತಿನ್ನುವುದಕ್ಕೆ ಸಿಗಲಿಲ್ಲ. ಹಸಿವೆಯಿಂದ ಕಂಗಾಲಾದ ಅತನೊಂದು ದಿನ ಯಮರಾಜನೊಡನೆ ಕೇಳಿದನು— "ದೇವ, ಯಾವ ಪಾಪ ಚರಣೆಯಿಂದಾಗಿ ನನಗೆ ಈ ಜನ್ಮ ದೊರೆಯುವಂತಾಯ್ತು? ಮತ್ತು ಹಸಿವೆಯಿಂದ ಸಂಕಟಪಡುವಂತಾಯ್ತು?"

ಧರ್ಮರಾಜನ ಆಜ್ಞೆಯಿಂದ ಯಮರಾಜನು ಉತ್ತರಿಸಿದನು— ಅಜ್ಞಾನವಶದಿಂದ ಧರ್ಮದ ಹೆಸರಲ್ಲಿ ನೀನು ಮಾಡಬಾರದ ಪಾಪಕೃತ್ಯಗಳನ್ನೆಸಗಿರುವೆ. ನೀನು ರಾಜನಾಗಿದ್ದಾಗ ಧರ್ಮದ ಹೆಸರಿನಲ್ಲಿ ಹರಿಮಿತ್ರನೆಂಬ ಬ್ರಾಹ್ಮಣನ ಮೇಲೆ ಅತ್ಯಾಚಾರ ಮಾಡಿದ್ದೀಯೆ? ಅದರ ಪರಿಣಾಮವಾಗಿಯೇ ನಿನಗೆ ಈ ಬಗೆಯ ದುರ್ಗತಿ ಬಂದಿದೆ. ನೀನು ಹಸಿವೆಯಿಂದ ನರಳುವಂತಾಗಿದೆ; ನಿನ್ನ ದಾನ, ಯಜ್ಞ ಮೊದಲಾದವುಗಳ ಸಂಚಿತ ಪುಣ್ಯವೆಲ್ಲ ನಷ್ಟವಾಗಿದೆ. ಎಲೈ ಗೂಗೆಯೇ, ದೇವರ ಮುಂದೆ ಹಾಡುವುದೂ ಅಪರಾಧವೇನ? ಅತನನ್ನು ಅಪರಾಧಿಯೆಂದು ಕರೆದು, ಅತನ ಸಂಪತ್ತೆಲ್ಲವನ್ನು ಮುಟ್ಟುಗೋಲು ಹಾಕಿದೆ. ನಿನ್ನ ಆಜ್ಞೆಯಿಂದಲೇ ನಿನ್ನ ಸೈನಿಕರು ಅತನ ಪೂಜಾಸಾಮಗ್ರಿಗಳನ್ನು ಮೂರಾಬಟ್ಟೆ ಮಾಡಿದರು. ಇದರಿಂದ ನೀನಾದರೊ ಹಿಗ್ಗಿ ಹೀರೇಕಾಯಿಯಾದೆ. ಈಗ ಆ [illegible] ಹೆಣವನ್ನೇ ತಿನ್ನು. ಆ ಪಾಪದಿಂದಾಗಿ ನೀನು ಸ್ವರ್ಗಲೋಕ ವಂಚಿತನಾಗಿರುವೆ. ಆದುದರಿಂದ, ಈ ಮಾನಸರಯ ಪರ್ವತದ ಗುಹೆಯಲ್ಲಿಟ್ಟುಕೊಂಡು ಮೃತ್ಯುವನ್ನು ನಿರೀಕ್ಷಿಸುತ್ತಿರು. ಸತ್ತ ಬಳಿಕವೂ ಒಂದು ಮನ್ವಂತರ ಕಾಲ ನೀನು ನರಕವಾಸವನ್ನನುಭವಿಸಬೇಕು; ಆ ಬಳಿಕ ಭೂಲೋಕದಲ್ಲಿ ನಾಯಿಯಾಗಿ ಜನಿಸುತ್ತೀಯೆ. ಆ ಮೇಲೆ ಹಲವು ವರ್ಷಾನಂತರ ನಿನಗೆ ಮನುಷ್ಯದೇಹವು ಮತ್ತೆ ಲಭ್ಯವಾಗುವುದು.

ಭುವನೇಶನ ಗೂಗೆಯಾಗಿ ಮಾನಸರಯ ಪರ್ವತದ ಗುಹೆಯ ಬಳಿ ಹೆಣವನ್ನು ತಿನ್ನುತ್ತ ಇರುತ್ತಿದ್ದನು. ದೈವಯೋಗದಿಂದ ಒಂದೊಮ್ಮೆ ಆ ದಾರಿಯಾಗಿ ಸ್ವರ್ಗಕ್ಕೆ ಹೋಗುತ್ತಿದ್ದ ಹರಿಮಿತ್ರನು ಹೆಣ ತಿನ್ನುವ ಗೂಗೆಯನ್ನು ಕಂಡು ಕೇಳಿದನು—"ಗೂಗೆಯೇ, ಇದು ಭುವನೇಶ ರಾಜನ ಶರೀರವಿರಬೇಕು. ಅದನ್ನು ನೀನೇಕೆ ತಿನ್ನುತ್ತಿ?" ಮಾತು ಕೇಳಿದ ಗೂಗೆಯು ಹರಿಮಿತ್ರನನ್ನು ಗುರುತಿಸಿತು. ಅತನಿಗೆ ಪ್ರಣಾಮ ಮಾಡಿತು. ವಿನಯಪೂರ್ವಕ ಕರುಣಾಪೂರ್ಣ ಧ್ವನಿಯಿಂದ ಹೇಳಿತು—ನಾನು ಅದೇ ಮಂದಬುದ್ಧಿಯ ರಾಜ ಭುವನೇಶ. ನನ್ನ ಧಾರ್ಮಿಕ ಭಾವನೆಯನ್ನು ಶಕ್ತಿಯ ಬಲದಿಂದ ಇತರರು ಮನ್ನಿಸುವಂತೆ ಮಾಡಿದ್ದರ ಫಲವಾಗಿ ನನಗೆ ಈ ದುರ್ದೆಸೆ ಬಂದಿದೆ. ನಾನು ನಿನಗೂ ಅಪರಾಧವೆಸಗಿದ್ದೇನೆ. ಅದನ್ನು ದಯವಿಟ್ಟು ಕ್ಷಮಿಸು. ಆ ಪಾಪದ ಫಲವಾಗಿಯೇ ಸತ್ತ ಬಳಿಕ ನಾನೀ ದುರ್ಗತಿಯಲ್ಲಿ ನವೆಯುತ್ತಿದ್ದೇನೆ. ಇನ್ನೂ ಒಂದು ಮನ್ವಂತರದ ಅವಧಿಯಲ್ಲಿ ಹೀಗೆಯೇ ಹೆಣ ತಿಂದುಕೊಂಡು ದುಃಖದಿಂದ ಬಾಳಬೇಕಾಗುವುದು; ಅನಂತರ ನಾಯಿಯಾಗಿ ಹುಟ್ಟಬೇಕಾಗುವುದು. ಮುಂದೆ ಹಲವಾರು ವರ್ಷಗಳ ಬಳಿಕ ಮತ್ತೆ ಮಾನವ ಯೋನಿಯಲ್ಲಿ ಜನ್ಮ ದೊರೆಯುವುದು."

ರಾಜನ ಸಂಕಟಮಯ ಪರಿಸ್ಥಿತಿಯನ್ನು ಕಂಡ ಹರಿಮಿತ್ರನಿಗೆ ಅತನ ಮೇಲೆ ಅನುಕಂಪ ಮೂಡಿತು. ರಾಜನ ತನಗೆಸಗಿದ ಅತ್ಯಾಚಾರವೊಂದೂ ಅತನಿಗೆ ನೆನಪಿಗೆ ಬರಲಿಲ್ಲ. ಹರಿಮಿತ್ರನೆಂದನು—"ಗೂಗೆಯೇ, ನೀನು ನನಗೆ ಮಾಡಿದೆನೆಂದ ಅತ್ಯಾಚಾರವೆಲ್ಲವನ್ನೂ ನಾನು ಕ್ಷಮಿಸಿಬಿಟ್ಟಿದ್ದೇನೆ. ನನ್ನ ತಪಸ್ಸಿನ ಪ್ರಭಾವದಿಂದ ಈ ಶವ ಅಂತರ್ಧಾನವಾಗಲಿ. ನಿನಗೆ ಮರಜನ್ಮದಲ್ಲಿ ನಾಯಿಯಾಗಿ ಜನಿಸುವುದೂ ತಪ್ಪಲಿ. ದೇವರು ನಿನಗೆ ಸದ್ಬುದ್ಧಿ ಪ್ರಧಾನ ಮಾಡಲಿ. ಆದರಿಂದ ವಿಷ್ಣು ಮಂದಿರಗಳಲ್ಲಿ ಹಾಡುವವರನ್ನು ನೀನು ದ್ವೇಷಿಸದಂತಾಗಲಿ ನೀನೂ ಗಾನವಿದ್ಯೆಯಲ್ಲಿ ಪಾರಂಗತನಾಗಿ ಭಗವದ್ಭಕ್ತಿ

(ಹನ್ನೆರಡನೇ ಪುಟ ನೋಡಿರಿ)

ಅನಾಥ ಮಕ್ಕಳ ದತ್ತು ಪ್ರಸಂಗ—

ಇಲ್ಲಿ ಸಲ್ಲದವು ಅಲ್ಲಾದರೂ ಸಲ್ಲಬಾರದೆ?

ಭಾರತ ಸರಕಾರವು ಮೊನ್ನೆ ಮೊನ್ನೆ ಒಂದು ನಿರ್ಧಾರ ಮಾಡಿತು. ವಿದೇಶೀಯರು ಭಾರತೀಯ ಮಕ್ಕಳನ್ನು ದತ್ತು ತೆಗೆದುಕೊಳ್ಳುವುದನ್ನು ಹತೋಟಿಯಲ್ಲಿಟ್ಟುಕೊಳ್ಳುವುದೇ ಈ ನಿರ್ಧಾರದ ಹಿನ್ನೆಲೆ. ಇದುವರೆಗೂ ಭಾರತದಲ್ಲಿ ವಿದೇಶೀಯರ ದತ್ತು ಸ್ವೀಕಾರದ ಬಗ್ಗೆ ಯಾವ ಕಾನೂನೂ ಇರುವುದಿಲ್ಲ. ಈ ನಿಯೋಜಿತ ಕಾನೂನಿನ ಪ್ರಕಾರ ಭಾರತೀಯ ಮಕ್ಕಳನ್ನು ದತ್ತು ತೆಗೆದುಕೊಳ್ಳುವ ವಿದೇಶೀಯರು ತಮ್ಮ ಸರಕಾರದಿಂದ ಹಾಗೂ ತಮ್ಮ ದೇಶದಲ್ಲಿರುವ ಭಾರತೀಯ ಕಛೇರಿಯಿಂದ ಅರ್ಹತಾ ಪತ್ರಗಳನ್ನು ಪಡೆಯಬೇಕು. ದತ್ತು ತೆಗೆದುಕೊಳ್ಳ ಬಯಸುವವರು ತಾವು ಸಾಕು ತಾಯ್ತಂದೆಯರಾಗಲು ಸಮರ್ಥರೆಂಬುದನ್ನು ತೋರಿಸಿ ಕೊಡಬೇಕು. ದತ್ತಾಗಿ ವಿದೇಶಕ್ಕೆ ಹೋಗುವ ಭಾರತೀಯ ಮಕ್ಕಳು ೧೮ ವರ್ಷಪ್ರಾಯ ತುಂಬುವವರೆಗೆ ಭಾರತೀಯ ಪೌರರಾಗಿ ಉಳಿಯುತ್ತಾರೆ.

ಇತ್ತೀಚೆಗೆ ವಿದೇಶೀಯರಲ್ಲಿ ಹರಡಿದ ಹೊಸ ರೋಗ ಭಾರತೀಯ ಮಕ್ಕಳನ್ನು ದತ್ತು ಪಡೆಯುವುದು. ವಿದೇಶೀಯರು ಅಂದರೆ ಮಾತ್ರರೂ ಅಲ್ಲ ಯುರೋಪಿಯನ್ನರೇ. ಮುಖ್ಯವಾಗಿ ಸ್ವೀಡನ್, ಬೆಲ್ಜಿಯಂ, ಫ್ರಾನ್ಸ್, ಇಟಲಿ, ಡೆನ್ಮಾರ್ಕ್, ಅಮೇರಿಕೆಗಳು. ಭಾರತದ ಮಹಾನಗರಗಳಲ್ಲಿ ಪ್ರತಿ ವರ್ಷವೂ ನೂರಾರು ಬೇಡವಾದ ಮಗುಗಳು ಹುಟ್ಟುತ್ತವೆ. ರಸ್ತೆ–ಚರಂಡಿಗಳಿಂದ, ಸಮುದ್ರ–ನದಿದಂಡೆಗಳಿಂದ, ಆಸ್ಪತ್ರೆಗಳಿಂದ–ಹೀಗೆ ನಾನಾ ಕಡೆಗಳಿಂದ ಅನಾಥ ಶಿಶುಗಳು ಅನಾಥಾಲಯಕ್ಕೆ ಬರುತ್ತವೆ. ಈ ಮಕ್ಕಳಲ್ಲಿ ತಿಂಗಳು ಪೂರ್ತಿಯಾಗದೆ ಹುಟ್ಟಿದವು, ಅನಾರೋಗ್ಯ ಪೀಡಿತವಾದವು ಹೆಚ್ಚು. ಆದುದರಿಂದ ಇವುಗಳತ್ತ ಹೆಚ್ಚಿನ ನಿಗಾ ಅಗತ್ಯ. ಇವು ಬೆಳೆಯುತ್ತ ಬಂದಂತೆ ಅದೃಷ್ಟಶಾಲಿ ಮಕ್ಕಳು ವಿದೇಶೀಯರ ದತ್ತು ಮಗುವಾಗುತ್ತವೆ. ಆದರೆ, ಈ ದತ್ತು ಈಗಿನ ಕಾನೂನುಗಳನ್ವಯ ಸಿಂಧುವಾಗುವುದಿಲ್ಲ.

ಕಳೆದ ಸಪ್ಟೆಂಬರದಲ್ಲಿ ಸಾಮಾಜಿಕ ಕಲ್ಯಾಣ ಮಂತ್ರಿ ಶಾಖೆಯು ಒಂದು ಆಜ್ಞೆ ಹೊರಡಿಸಿ ವಿದೇಶೀಯರಿಂದ ದತ್ತು ಸ್ವೀಕಾರವನ್ನು ಸಂಪೂರ್ಣವಾಗಿ ನಿಷೇಧಿಸಿತು. ಇದರಿಂದ ಹಲವು ವಿದೇಶಿ ದಂಪತಿಗಳು ನಿರಾಶರಾದರು. ದತ್ತು ಸ್ವೀಕಾರದ ಕಾಗದ–ಪತ್ರಗಳು ಸಂಪೂರ್ಣವಾಗಿ ನ್ಯಾಯಾಲಯದ ಆಜ್ಞೆ ಹೊರಟಿದ್ದರೂ ಅದು ರದ್ದಾದ ಹಲವು ನಿದರ್ಶನಗಳಿವೆ. ಇದರಿಂದ ಉತ್ತಮ ಕೌಟುಂಬಿಕ ಜೀವನಕ್ಕೆ ತೆರಳಬಹುದಾದ ಹಲವು ಮಕ್ಕಳು ಅನಾಥರಾಗಿಯೇ ಉಳಿಯುವಂತಾಯ್ತು.

ನಮ್ಮ ಅನಾಥಾಲಯಗಳು ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಲು ಅಶಕ್ತವಾಗಿವೆ. ಈ ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುವಷ್ಟು ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲ. ಅದರ ಮೇಲೆ ವರ್ಷದಿಂದ ವರ್ಷಕ್ಕೆ ಈ ಬೇಡವಾದ ಮಕ್ಕಳ ಸಂಖ್ಯೆ ಹೆಚ್ಚುತ್ತಲೇ ಹೋಗುತ್ತಿದೆ. ಹಾಗಿರುವಾಗ ಕೆಲವು ಮಕ್ಕಳಿಗಾದರೂ ದೊರೆಯುವ ಉತ್ತಮ ಸೌಲಭ್ಯಗಳನ್ನು ಏಕೆ ನಿರಾಕರಿಸಬೇಕು? ಇದುವರೆಗೆ ದತ್ತು ಹೋದ ಮಕ್ಕಳು ಸಂತೋಷವಾಗಿದ್ದಾರೆಂದು ಸಮಾಜ ಕಲ್ಯಾಣ ಶಾಖೆಗೆ ವರದಿ ಬರುತ್ತಿದೆ. ಹಾಗಿದ್ದರೂ ದತ್ತು ಏಕೆ ಪ್ರತಿಬಂಧಿಸಿದೆ? ಅನಾರೋಗ್ಯ ವಾತಾವರಣದಲ್ಲಿ ಬೆಳೆಯದೆ ಅಲ್ಲೆ ಸಾಯುವುದೇ ಉತ್ತಮವೆಂದೆ?

ವಿದೇಶಗಳಲ್ಲಿನ ಈ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವುದು ತನಗೆ ಅಸಾಧ್ಯವೆಂದದು ಹೇಳುತ್ತದೆ ಸಮಾಜ ಕಲ್ಯಾಣ ಶಾಖೆ. ಏಕೆಂದರೆ— ಹಿಂದಿನ ಒಂದೆರಡು ಪ್ರಸಂಗಗಳಲ್ಲಿ ಮಗುವಿಗೆ ಸುಖ ದೊರೆಯದ ವರದಿಗಳು ಬಂದಿವೆ. ಹಾಗೆಂದು ಉಳಿದ ನೂರಾರು ಮಕ್ಕಳ ಭವಿಷ್ಯವನ್ನು ಅಂಧಕಾರದ ಪಾಲಾಗಿಸುವುದು ನ್ಯಾಯವಾದುದೆ? ಸಾಮಾನ್ಯವಾಗಿ ಒಂದು ದೇಶದ ತಾಯ್ತಂದೆಗಳು ಇನ್ನೊಂದು ದೇಶದ ಮಗುವನ್ನು ದತ್ತು ತೆಗೆದುಕೊಳ್ಳುವುದಕ್ಕೆ ಮೊದಲು ಕಾನೂನಿನನ್ವಯ ಕ್ರಮ ಕೈಕೊಳ್ಳಬೇಕು. ಎರಡೂ ದೇಶದ ಸರಕಾರಗಳು ತೃಪ್ತವಾದರೆ ಮಾತ್ರ ದತ್ತು ಸಾಧ್ಯ. ದತ್ತು ಹೋದ ಮಗುವಿನ ಯೋಗಕ್ಷೇಮ ನೋಡಿಕೊಳ್ಳುವುದು ಆ ದೇಶದ ಅಧಿಕಾರ ವ್ಯಾಪ್ತಿಗೆ ಸೇರಿದ್ದು. ದತ್ತು ತಾಯ್ತಂದೆಗಳಿಗೇನಾದರೂ ಆದರೆ, ಇತರ ದತ್ತು ತಾಯ್ತಂದೆಗಳನ್ನು ಅದು ನೇಮಿಸುತ್ತದೆ.

ಹೀಗೆ ಮಗುವು ೧೮ ವರ್ಷ ತುಂಬುವವರೆಗೆ ಭಾರತೀಯ ಪೌರತ್ವವನ್ನೇ ಹೊಂದಿರುತ್ತದೆ. ಒಂದು ವೇಳೆ ದತ್ತು ತಾಯ್ತಂದೆಗಳು ತಮ್ಮ ದೇಶದ ಪೌರತ್ವವನ್ನು ಅದಕ್ಕೆ ಒದಗಿಸಲು ಬಯಸಿದರೂ ಭಾರತ ಸರಕಾರವು ತನ್ನ ಒಪ್ಪಿಗೆ ನೀಡದೆ ಇರಬಹುದು. ಈ ಅವಧಿಯಲ್ಲಿ ಮಗುವಿನ ಬಗ್ಗೆ ವಿಚಾರಿಸುವ ಅಧಿಕಾರ ಭಾರತಕ್ಕೆ ಇರುವುದು.

ಅನಾಥಾಲಯಗಳಿಂದ ದತ್ತು ಹೋದ ಮಕ್ಕಳನ್ನು ತಮ್ಮ ನೌಕರರಾಗಿ ಉಪಯೋಗಿಸುತ್ತಾರೆ ಎಂಬ ಸಂದೇಹಕ್ಕೆ ಸಾಕಷ್ಟು ಅವಕಾಶವಿದೆ. ಇದು ಕೆಲವೊಮ್ಮೆ ಸರಿಯಿರಬಹುದು. ಆದರೆ, ಎಲ್ಲ ವೇಳೆಯೂ ಸರಿಯಲ್ಲ. ದತ್ತು ತೆಗೆದುಕೊಳ್ಳುವ ವಿಷಯದಲ್ಲಿ ಭಾರತೀಯರಿಗೂ ವಿದೇಶೀಯರಿಗೂ ತುಂಬ ಅಂತರವಿದೆ. ಭಾರತೀಯರು ಸುಂದರ-ಸದೃಢರಾದ ಗಂಡುಮಕ್ಕಳನ್ನು ಬಯಸುತ್ತಾರೆ. ವಿದೇಶೀಯರು ಸಾಮಾನ್ಯವಾಗಿ ಹೆಣ್ಮಕ್ಕಳನ್ನು. ಅವು ಹೇಗಿದ್ದರೂ ಸರಿಯೇ ಮಕ್ಕಳಿಗೆ ಅವರ ಅಗತ್ಯವಿದೆಯೆಂದಲೇ ಅವರು ದತ್ತು ಪಡೆಯುತ್ತಾರೆ.

ವಿದೇಶೀಯರು ಈ ಮಕ್ಕಳನ್ನು ತಮ್ಮ ನೌಕರರಂತೆ ಬಳಸಬಹುದು ಎನ್ನುವ ಸಮಾಜ ಕಲ್ಯಾಣ ಶಾಖೆ ಭಾರತದೊಳಗಡೆ ದತ್ತು ಹೋದ ಮಕ್ಕಳ ಗತಿಯೇನಾಯಿತೆಂದು ಪರಿಶೀಲಿಸಿಲ್ಲ. ಹಿಂದೂ ಮಕ್ಕಳನ್ನು ಹಿಂದುವಲ್ಲದವರು ದತ್ತು ತೆಗೆದುಕೊಳ್ಳುವುದು ಕಾನೂನು ಬಾಹಿರ. ಆದುದರಿಂದ ಹಿಂದೂ ಮಕ್ಕಳನ್ನು ವಿದೇಶಿ ಕ್ರಿಶ್ಚಿಯನ್ನರು ದತ್ತು ತೆಗೆದುಕೊಳ್ಳಬಾರದು. ಆದರೆ, ಬೇಡವಾದ ಮಗು ಯಾವ ಮತಕ್ಕೆ ಸೇರಿದ್ದು ಎಂದು ಅದರ ಮರೆಯಲ್ಲಿರುವ ತಾಯ್ತಂದೆಗಳಿಗೂ ದೇವರಿಗೂ ಗೊತ್ತು. 'ಹಿಂದು'ವೆಂಬ ಶಂಕೆಯಿಂದ ಒಂದು ಮಗು ಉತ್ತಮ ವಾತಾವರಣವನ್ನು ಸೇರಬಾರದು ನಾವು ತಡೆ ಹಾಕುತ್ತೇವೆ.

ವಿದೇಶೀಯರಿಂದ ಭಾರತದ ಅನಾಥ ಮಕ್ಕಳಿಗಾಗಿ ಬಂದ ಬೇಡಿಕೆಗಳು ತುಂಬ ಇವೆ. ಇವನ್ನು ಈಡೇರಿಸಲು ತಡೆಯಾಜ್ಞೆಯಿದೆ. ವಿದೇಶೀಯರ ದತ್ತು ಸ್ವೀಕಾರ ಮಸೂದೆಯಿನ್ನೂ ಭ್ರೂಣಾವಸ್ಥೆಯಲ್ಲಿದೆ. ಅದು ಪಾರ್ಲಿಮೆಂಟಿನಲ್ಲಿ ಮಂಜೂರಾಗಿ ಶಾಸನವಾಗುವವರೆಗೆ ಯಾವ ದೇಶವೂ ಕೈಕೊಳ್ಳಲು ಸಾಧ್ಯವಾಗುವುದಿಲ್ಲ. ಅದುವರೆಗೂ ಗಳಿಗೆಯೊಂದು ಯುಗವಾಗಿ ಅದೃಷ್ಟಶಾಲಿ ಅನಾಥ ಮಕ್ಕಳು ಕಾಯಬೇಕಾಗಿದೆ. ಮೊದಲೀಯ ಪ್ರಶ್ನೆಗೆ ಇಲ್ಲಿಯೆಡೆಯಿಲ್ಲ.

ವಿದೇಶೀಯರು ನಮ್ಮ ಮಕ್ಕಳನ್ನು ದತ್ತು ತೆಗೆದುಕೊಳ್ಳುವುದು ಎಂದರೆ, ಅದು ನಡೆಯಬಾರದ ಕೇಸರೆಂದು ಆಡುವವರೂ ಇದ್ದಾರೆ ವಿದೇಶೀಯರು ಅವರನ್ನು ಅಪಹರಿಸಿಕೊಂಡು ಹೋಗುತ್ತಿದ್ದಾರೆ; ತಮ್ಮ ಊಳಿಗದವರನ್ನಾಗಿಸಲು ಒಯ್ಯುತ್ತಿದ್ದಾರೆ ಎಂದು ಮುಂತಾಗಿ ತಿಳಿಯುವವರಿದ್ದಾರೆ. ಆದರೆ, ಹೀಗೆ ದತ್ತು ಹೋಗುವ ಮಕ್ಕಳಿಗೆ ತಮ್ಮ ತಾಯಿ ಯಾರು ತಂದೆ ಯಾರು ಎಂಬುದರ ಗಂಧಗಾಳಿಯೇ ಇಲ್ಲವೆಂಬುದನ್ನು ಮರೆಯುತ್ತೇವೆ. ಭಾರತೀಯರೇ ಆ ಮಗುವನ್ನು ತಿಳಿತಿಳಿದೂ ಅನಾಥರನ್ನಾಗಿ ಮಾಡಿದ್ದಾರೆಂಬುದನ್ನು ಮರೆಯುತ್ತೇವೆ. ಅಂತಹ ಅಜ್ಞಾನ–ಅನಾಥ ಶಿಶುವನ್ನು ನಮಗೆ ಕೊಡಿ ಸಾಕುತ್ತೇವೆ ಎನ್ನುವವರನ್ನು ಹೀನಾಯದಿಂದ ನೋಡುತ್ತೇವೆ! ಇದೆಲ್ಲಿಯ ವಿರೋಧಾಭಾಸ! ಈ ಮಕ್ಕಳು ಅವುಗಳನ್ನು ಹುಟ್ಟಿಸಿದವರಿಗೆ ಬೇಡ, ನಮಗೂ ಬೇಡ; (ಸಾಕಲು ತಾಕತ್ತು ಇಲ್ಲ; ಇದ್ದರೂ ಹೇಗೆ ಹೇಗೋ ಹುಟ್ಟಿದ ಗಲೀಜ ಮಕ್ಕಳು ಇವು–ಯಾರಿಗೆ ಬೇಕು?) ಹಾಗಿರುವಾಗ, ನಮಗೆ ಕೊಡಿ ಎಂದು ಬೇಡಿ ಬಂದವರಿಗೆ ಕೊಟ್ಟು ಬಿಟ್ಟರೆ, ಎಷ್ಟು ನೆಮ್ಮದಿಯೆಂಬುದನ್ನು ನಾವು ಅರಿತುಕೊಳ್ಳುವುದಿಲ್ಲ.

ಎಲ್ಲಾದರೂ ಸುಖವಾಗಿ ಇರಲಿ ಎಂಬ ಮಾನವೀಯ ಆಶಯ ನಮ್ಮ ಹೃದಯದಲ್ಲಿ ಮೂಡದೆ ಹೋದರೆ, ನಮ್ಮ ದೇಶೀಯ ಗೌರವ ಬರಿಯ ಒಣ ಪ್ರತಿಷ್ಠೆಯಾಗುತ್ತದೆ. ಈ ಶುಷ್ಕ ಪ್ರತಿಷ್ಠೆಗಾಗಿ ನಿರೀಹ ಮಕ್ಕಳನ್ನು ಬಲಿ ಕೊಡುವುದು ಕಂಸನ ನೃಶಂಸತೆಯನ್ನೂ ಮೆಟ್ಟಿ ನಿಂತದ್ದು.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು–4

ವಾರಪತ್ರಿಕೆ
ಉಡುಪಿ, ದ. ಕ.

NAVAYUGA
UDIPI, S. K.

ಸಂಪುಟ : 50
ಸಂಚಿಕೆ : 2

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ವಾರ್ಷಿಕ ಚಂದಾ ರೂ. 10
ವಿಶೇಷ ಸಂಚಿಕೆಗಳು ಸಹಿತ
ಬಿಡಿ ಪ್ರತಿ : ೦–೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ಮೂರು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಆತ್ಮಸಾಕ್ಷಿ ಸತ್ತುಹೋಯ್ತು

ರಾಜಧನ ರದ್ಧತಿಯು 'ಸಮಾಜವಾದ ಕಡೆ' ಕಾಂಗ್ರೆಸ್ ಸ್ವೀಕರಿಸಿದ್ದ ದಶಾಂಶ ಆರ್ಥಿಕ ನೀತಿಗಳಲ್ಲಿ ಇದೂ ಒಂದು. ಪ್ರಧಾನಿ ಇಂದಿರಾ ಗಾಂಧಿಯವರು ಕಾಂಗ್ರೆಸ್ ವಿಘಟನಾನಂತರ ತಮ್ಮನ್ನು ಪ್ರಗತಿಗಾಮಿಯೆಂದು ಹೇಳಿಕೊಂಡಿದ್ದಾರೆ. ಅದಕ್ಕೆಂದೇ ರಾಜಧನ ರದ್ಧತಿಯನ್ನು ಸರಕಾರ ಸಾಧಿಸವುದೆಂದು ಈ ವರ್ಷದ ಆರಂಭದಲ್ಲೇ ಅವರು ರಾಷ್ಟ್ರಪತಿಯವರ ಭಾಷಣದಲ್ಲಿ ಹೇಳಿಸಿದ್ದಾರೆ. ಈಗ, ಆ ಸಂಬಂಧದ ಮಸೂದೆಯು ಮಂಡಿತವಾಗಿ ಅದರ ಅದೃಷ್ಟವೊಮ್ಮೆ ಬರೆಯಲ್ಪಟ್ಟಿತು.

ಈ ಮಸೂದೆಯು ಲೋಕಸಭೆಯಲ್ಲಿ ಮಂಡಿತವಾದಾಗ, ಕೆಲವೊಂದು ತಿದ್ದುಪಡಿಗಳು ಮಂಡಿತವಾದುವು. ಮುಖ್ಯವಾಗಿ, ರಾಜ-ಮಹಾರಾಜರಿಗೂ ಈ ಸಂವಿಧಾನ ತಿದ್ದುಪಡಿ ಮಸೂದೆಯ ಕ್ರಮಬದ್ಧತೆಯ ಬಗ್ಗೆ ನ್ಯಾಯಾಲಯಕ್ಕೆ ಹೋಗುವ ಅಧಿಕಾರ ನೀಡಬೇಕು, ರಾಜಧನದ ಬದಲಾಗಿ ಏಕಗಂಟಿನಲ್ಲಿ ನೀಡುವ ಪರಿಹಾರದ ಸಂಬಂಧಿ ಮಸೂದೆಯೂ ಒಟ್ಟಿಗೇ ಚರ್ಚೆಗೆ ಬರಬೇಕು—ಎಂಬಿತ್ಯಾದಿಗಳು. ಮಸೂದೆಯನ್ನು ಇದ್ದ ರೂಪದಲ್ಲೇ ಸ್ವೀಕರಿಸಲು ಸಿಂಡಿಕೇಟ್ ಕಾಂಗ್ರೆಸ್ಸು ನಿರಾಕರಿಸಿತು. ಜನಸಂಘವೂ ಸ್ವತಂತ್ರ ಪಕ್ಷವೂ ಅದಕ್ಕೆ ಬೆಂಬಲ ನೀಡಿತು. ಲೋಕಸಭೆಯಲ್ಲಿ ಮಸೂದೆಗಳು ಮಂಜೂರಾಯ್ತು. ಆವಶ್ಯಕ ಸಂಖ್ಯೆಗಿಂತ ಹೆಚ್ಚಿನ ಮತಗಳು ಅದಕ್ಕೆ ಲಭಿಸಿದುವು. ರಾಜಧನ ರದ್ಧತಿಯು ಸಮಾಜವಾದೀ ನೀತಿಯಲ್ಲಿ ಅನಿವಾರ್ಯವೆಂದು ಬಗೆದವರೆಲ್ಲರೂ ಇದರ ಗುಣಾವಗುಣಗಳನ್ನೂ ಲೋಪದೋಷಗಳನ್ನೂ ಸಮಾಜದ ಇನ್ನೊಂದು ಅಂಗವಾದ ರಾಜ-ಮಹಾರಾಜರ ಭವಿಷ್ಯವು ಗಾಢಾಂಧಕಾರಮಯವಾಗುವುದೆಂಬುದನ್ನೂ ಮರೆತು ಕೈಯೆತ್ತಿದರು. ಆದರೆ, ರಾಜ್ಯಸಭೆಯಲ್ಲಿ ಮಸೂದೆಯು ಬಿದ್ದು ಹೋದುದನ್ನು ಗಮನಿಸಬೇಕು. ಇದರಿಂದ ಪ್ರಧಾನಿ ಗಾಂಧಿಯವರು ತುಸ ಯೋಚಿಸಬೇಕಾಗಿದೆ. ಮೊದಲನೆಯದಾಗಿ, ಈ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಲೋಕ-ರಾಜ್ಯ ಸಭೆಗಳ ಜಂಟಿ ಅಧಿವೇಶನ ಕರೆದು ಅದರಲ್ಲಿ ಮಂಡಿಸಿ ಆವಶ್ಯಕ ಮತ ಗಳಿಸಬೇಕು. ಇಲ್ಲವೇ ಪ್ರತ್ಯೇಕ ಮಸೂದೆಯ ರೂಪದಲ್ಲಿ ಮತ್ತೊಮ್ಮೆ ಲೋಕ-ರಾಜ್ಯಸಭೆಗಳನ್ನು ಎದುರಿಸಬೇಕು. ಇವೆರಡು ವಿಧಾನಗಳಲ್ಲಿ ಆಕೆ ಯಾವುದನ್ನು ಹಿಡಿಯುತ್ತಾರೆಂಬುದನ್ನು ಕೆಲದಿನಗಳಲ್ಲಿ ಕಾಣಬಹುದು.

ಆದರೆ, ಸಂವಿಧಾನ ತಿದ್ದುಪಡಿ ಮಸೂದೆಯು ಮತದಾನದ ವೇಳೆ ಶ್ರೀಮತಿ ಗಾಂಧಿಯವರು ತಾವೇ ಸೃಷ್ಟಿ ಮಾಡಿದ ಆತ್ಮಸಾಕ್ಷಿ ಪಂಥವನ್ನು ನೆಲಸಮ ಮಾಡಿದರು. ಆಕೆಯ ಕಾಂಗ್ರೆಸ್ಸಿಗೆ ಸೇರಿದ್ದ ಹಲವರು ನೇರಾಗಿ ತಾವು ಆತ್ಮಸಾಕ್ಷಿ ಪಂಥ ಸ್ವೀಕರಿಸಲು ಅಪ್ಪಣೆ ಬೇಡಿದಾಗ, ಆಕೆ ಅದನ್ನು ಸಂಪೂರ್ಣವಾಗಿ ಕಿತ್ತು ಹಾಕಿದರು. ರಾಜ್ಯಕೀಯ ಪಕ್ಷದಲ್ಲಿ ಶಿಸ್ತು ಬೇಕು ಎಂಬುದನ್ನು ಆಕೆ ಈಗಲಾದರೂ ಕಂಡುಕೊಂಡರ. ತಮ್ಮ ಆತ್ಮಸಾಕ್ಷಿಯನ್ನು ಮೀರಲಾಗದೆ ಕೆಲವರು ಇಂಡಿಕೇಟ್ ತ್ಯಜಿಸಿದರು; ಆಕೆಯ ವಿವಾದಗ್ರಸ್ತ ಮಂತ್ರಿ, ಯುವತುರುಕರ ಬೇಟೆ ಶ್ರೀ ಭಾನುಪ್ರಕಾಶ ಸಿಂಗರು ರಾಜೀನಾಮೆಯನ್ನೇ ನೀಡಿದರು. ಇನ್ನು, ಆತ್ಮಸಾಕ್ಷಿಯಂತೆ ವರ್ತಿಸಿದವರ ಮೇಲೆ ಶಿಸ್ತಿನ ಕ್ರಮ ಕೈಕೊಳ್ಳಲು ಇಂಡಿಕೇಟ್ ನಿರ್ಧರಿಸುವ ಹಂತದಲ್ಲಿದೆ. ಅಂದರೇನು? ಪ್ರಧಾನಿಯ ಆತ್ಮಸಾಕ್ಷಿ ಪಂಥ ಬರಿಯ ಸಮಯ ಸಾಧಕವೆಂದಾಯ್ತು. ತಾನು ಶ್ರೀ ಸಂಜೀವರೆಡ್ಡಿಯವರು ಅಧ್ಯಕ್ಷರಾಗುವುದನ್ನು ಎಂದಿಗೂ ಒಪ್ಪುವುದಿಲ್ಲ; ಆದುದರಿಂದ ಅವರು ಸೋಲಲೇಬೇಕು ಎಂಬ ತನ್ನ ವ್ಯಕ್ತಿಗತ ನಿಲುವಿಗೆ ಸಾಮೂಹಿಕ ಬೆಂಬಲಗಳಿಸಲೆಂದೇ ಆಕೆ ಆತ್ಮಸಾಕ್ಷಿಯನ್ನು ಎತ್ತಿ ಹಿಡಿದರು; ಪಕ್ಷದ ಆದೇಶವನ್ನು ಮೀರಿದ್ದರಿಂದ ತಾನು ಪಕ್ಷ ಭ್ರಷ್ಟೆಯಾದರೂ ತಾನೂ ತನ್ನವರೂ ಪಕ್ಷೀಯರೆಂದು ಬಂಬಡಿ ಬಾರಿಸುವ ಆಕೆಯ ಮನೋಗತಕ್ಕೆ ಈಗೊಂದು ಕನ್ನಡಿ ಹಿಡಿದಂತಾಯ್ತು. ಒಂದು ವೇಳೆ ಆಕೆಯೂ ಆತ್ಮಸಾಕ್ಷಿಯಂತೆ ಮತೀಸಲು ಲೋಕಸಭಾ ಸದಸ್ಯರಿಗೆ ಅನುಮತಿ ನೀಡಿದ್ದರೆ, ಪ್ರಾಯಃ ಶ್ರೀಮತಿ ಗಾಂಧಿಯವರ ಮೂಲಧನಕ್ಕೇ ಚ್ಯುತಿ ಬರುತ್ತಿತ್ತು.

ಮುಂದೇನು? ಶ್ರೀಮತಿ ಗಾಂಧಿ ಶೀಘ್ರವಾಗಿ ರಾಜಧನ ರದ್ಧತಿಯನ್ನು ಈ ಮಸೂದೆಯ ರೂಪದಲ್ಲಿ ಬಯಸುತ್ತಾರೆಯೋ? ಕಮ್ಯುನಿಸ್ಟ್ ಮತ್ತು ಅದಕ್ಕೆ ಹತ್ತಿರ ಹತ್ತಿರ ಇರುವವರಿಂದಾಗಿ ತಾನು ಪ್ರಧಾನಿಯಾಗಿ ಉಳಿದಿದ್ದೇನೆಂಬುದು ಆಕೆಗೆ ಚೆನ್ನಾಗಿ ಗೊತ್ತು. ಆದುದರಿಂದ ಅವರ ಬೆಂಬಲವನ್ನು ಸದೈವ ಉಳಿಸಿಕೊಳ್ಳುವ ತಂತ್ರಗಳಲ್ಲಿ ಇದೂ ಒಂದು ಎನಿಸಿದರೂ ಆಶ್ಚರ್ಯವಿಲ್ಲ. ತಾನು ರಾಜಧನ ರದ್ಧತಿಗಾಗಿ ಪ್ರಯತ್ನಿಸಿದೆ—ರಾಜ್ಯಸಭೆಯಲ್ಲಿ ಅದು ಬಿದ್ದು ಹೋಯ್ತು—ಮುಂದೆ ಹೀಗಾಗದಂತೆ ದೀರ್ಘ ಯೋಚನೆಯಿಂದ ಮುಂದುವರಿಯಬೇಕು ಎಂದು ಹೇಳಿ, ಮುಂದಿನ ಚುನಾವಣೆಗಳ ವರೆಗೂ ಮುಂದೂಡುವ ಯೋಚನೆ ಆಕೆಗಿದ್ದೀತೆ? ಜಂಟಿ ಅಧಿವೇಶನ ಕರೆದರೂ, ಪ್ರತ್ಯೇಕ ಮಸೂದೆ ಮಂಡಿಸಿದರೂ ಆಕೆಯ ಪಕ್ಷದಿಂದಲೇ ಕೆಲವರು ಸರ್ವಾಂತರ ಈ ಮಧ್ಯಾವಧಿಯಲ್ಲಿ ಸಿಧ್ಯವಾದುದರಿಂದ ಮಸೂದೆಯು ಆವಶ್ಯಕ ಬೆಂಬಲ ಗಳಿಸುವ ಬಗ್ಗೆ ಆಕೆಗೇ ಅಧೈರ್ಯ; ಸಿಂಡಿಕೇಟು ಬಯಸಿದ ತಿದ್ದುಪಡಿಗಳೊಡನೆ ಮಸೂದೆಯನ್ನು ಮಂಡಿಸಿದರೆ, ಕಮ್ಯುನಿಸ್ಟರಾದಿ ತೀವ್ರಾತಿತೀವ್ರಗಾಮಿಗಳು ಮುನಿದೇಳುತ್ತಾರೆ. ಹಾಗಾಗಿ ನುಂಗಿದ ಬಿಸಿ ತುಪ್ಪ ಆಕೆಯ ಗಂಟಲು ಸುಡತೊಡಗಿದೆ. ಆಕೆಯೊಡುತ್ತಿರುವ ರಾಜ್ಯಕೀಯ ಡೊಂಬರಾಟದ ಗಳವೀಗ ಗುರುತ್ವ ಕೇಂದ್ರದಿಂದ ಜಾರುತ್ತ ಬರುತ್ತಿದೆ.

ವಿವೇಕಾನಂದ ಮೂರ್ತಿ

ಕನ್ಯಾಕುಮಾರಿಯ ಬಳಿಯ ವಿವೇಕಾನಂದ ಶಿಲೆಯ ಮೇಲೆ ಭಾರತೀಯ ಸಾಂಸ್ಕೃತಿಕ (ಅನಧಿಕೃತ) ರಾಯಭಾರಿ ಸ್ವಾಮಿ ವಿವೇಕಾನಂದರ ಶಿಲಾ ಪ್ರತಿಮೆಯೊಂದನ್ನು ಪ್ರತಿಷ್ಠಾಪಿಸಲಾಯ್ತು. ರಾಷ್ಟ್ರದ ಪ್ರಥಮ ಪ್ರಜೆ ಶ್ರೀ ವಿ. ವಿ. ಗಿರಿಯವರೇ ಇದರಲ್ಲಿ ಭಾಗವಹಿಸಿದರು. ಸ್ವಾಮಿ ವಿವೇಕಾನಂದರು ದೊಡ್ಡ ವ್ಯಕ್ತಿಯೆಂದು ನಾವೆಲ್ಲರೂ ಹೇಳುತ್ತೇವೆ. ಭಾರತದ ಸಾಂಸ್ಕೃತಿಕ ಮಹತ್ತಿಕೆಯನ್ನು ವಿಶ್ವಮಾನ್ಯವಾಗಿ ಮಾಡಿದವರೆಂದವರನ್ನು ಕೊಂಡಾಡುತ್ತೇವೆ; ಅವರ ಬಗ್ಗೆ ತಾಸುಗಟ್ಟಲೆ ಮಾತಾಡಿದರೂ ದಣಿಯದವರಿದ್ದಾರೆ; ಇನ್ನೀಗ ಅವರ ಭವ್ಯ ಮೂರ್ತಿಯನ್ನು ಕಣ್ಣಾರೆ ಕಂಡು ದಣಿಯದವರೂ ಹುಟ್ಟಿಕೊಳ್ಳುತ್ತಾರೆ. ಆದರೆ, ಸ್ವಾಮಿ ವಿವೇಕಾನಂದರ ಧೀರ ವಾಣಿಯಂತೆ, ನಡೆದುಕೊಳ್ಳುವವರು ಎಷ್ಟು ಜನರಿದ್ದಾರೆ?

ನಮ್ಮ ಜೀವನದಲ್ಲಿ ಧರ್ಮದ ಬಗ್ಗೆ ಅಸಡ್ಡೆ ಬೆಳೆದು ಬರುತ್ತಿದೆ. ಸಾಮಾಜಿಕ ಜೀವನದಲ್ಲಿ ಶಿಥಿಲತೆ ಕಂಡು ಬರುತ್ತಿದೆ. ಸಾಮೂಹಿಕ ಹಿತ ಸಂಬಂಧಗಳು ಕಡಿದು ಹೋಗಿವೆ. ಸಮಷ್ಟಿಯ ಮೇಲೆ ವ್ಯಷ್ಟಿಯು ಸಾಮ್ರಾಜ್ಯ ನಡೆಸುತ್ತಿದೆ. ವ್ಯಕ್ತಿಯಾದರೂ 'ಆತ್ಮಸಾಕ್ಷಿ'ಯ ಹೆಸರಿನಲ್ಲಿ ಸ್ವಾರ್ಥ ಸಾಧನೆಯತ್ತಲೇ ಧಾವಿಸುತ್ತಿದ್ದಾನೆ. 'ತಂತಮ್ಮ ಕರ್ತವ್ಯಗಳನ್ನು ಪಾಲಿಸಿ ನಿಜವಾದ ಮನುಷ್ಯರಾಗಬೇಕು' ಎಂಬ ವಿವೇಕಾನಂದರ ಕರೆಯನ್ನು ನಾವು ಕಡೆಗಣಿಸಿದ್ದೇವೆ. ಇದನ್ನು ಅನುಷ್ಠಾನಕ್ಕೆ ನಾವು ತರುವ ಪ್ರಯತ್ನವನ್ನು ಮಾಡದೆ ಹೋದರೆ, ನೂರು ಶಿಲಾಪ್ರತಿಮೆ ಸ್ಥಾಪನೆಯಿಂದಲೂ ಏನೂ ಪ್ರಯೋಜನವಿಲ್ಲ. 'ಓದುವುದು ಶಾಸ್ತ್ರ, ಇಕ್ಕುವುದು ಗಾಳ'ವೆಂಬ ನಾಣ್ಣುಡಿ ಭಾರತೀಯರಿಗೆ ಅನ್ವಯಿಸುವಷ್ಟು ಸರಿಯಾಗಿ ಮತ್ತಾರಿಗೂ ಹೊಂದಿಕೆಯಾಗುವುದಿಲ್ಲ. ಕಳ್ಳಿಯಿಂದ ದಿಲ್ಲಿಯವರೆಗೂ ನಾವಿಂದು ಕಾಣುವ ದೃಶ್ಯವಿದೇ. ಸ್ವಾಮಿ ವಿವೇಕಾನಂದರ ಮೂರ್ತಿಯು ಕನ್ಯಾಕುಮಾರಿಯಿಂದ ಬದರಿಯವರೆಗಣ ಭಾರತೀಯರಲ್ಲಿ ಕರ್ತವ್ಯ ಪ್ರಜ್ಞೆಯನ್ನೂ ರಾಷ್ಟ್ರೀಯ ಹೊಣೆಗಾರಿಕೆಯ ಅರಿವನ್ನೂ ಮೂಡಿಸ ಬಲ್ಲ ಸಮರ್ಥನಾಗುವುದಾದರೆ, ಇದಕ್ಕಾಗಿ ಮಾಡಿದ ಲಕ್ಷೋಪಲಕ್ಷ ರೂಪಾಯಿಗಳ ವೆಚ್ಚ ಸಾರ್ಥಕವಾದಂತೆ; ಹಾಗಾಗದೆ ಹೋದರೆ, ಇವೆಲ್ಲ ಬರಿಯ ಫ್ಯಾಶನ್! ಪಕ್ಷಿವ ಭಜನ ಕರಡೆ ಮೊತ್ತ.

ಉದ್ಯೋಗಿಯೂ ಕೂಡ ಒಬ್ಬ ಯೋಗಿಯೇ ಸರಿ.

೦ ೦ ೦

ಪರಿಣಾಮದ ಚಿಂತೆ ಮಾಡದಿರುವುದು ಬೇರೆ. ಆದರೆ ಪರಿಣಾಮದ ವಿಚಾರವನ್ನೇ ಮಾಡದಿರುವುದು ಬೇರೆ.

ಗೇಹರಾಜ್ಯದಲ್ಲಿ

ಪ್ರಗತಿಯ ಗೌರೀಶಂಕರಕ್ಕೆ...

"ಕೇಳಿದ್ದೀರಾ?"

"ಏನ?"

"ಮತ್ತಿನ್ನೇನ? ರಾಜಧನವನ್ನು ನಿಲ್ಲಿಸಿ ಬಿಡುವ ಬಗ್ಗೆ ಸಂವಿಧಾನ ತಿದ್ದುಪಡಿ ಮಸೂದೆ ಲೋಕಸಭೆಯಲ್ಲಿ ಮಂಜೂರಾಯ್ತು..."

"ಅಯ್ಯೋ, ಇದ್ರಲ್ಲೇನು ವಿಶೇಷ?'

"ಏನೂ ಇಲ್ಲಾಂತೀರಾ?"

"ಅದ್ಯಾಕೆ, ನೀವು ಇದೇನನ್ನುತ್ತೀರಾ?"

"ಇಲ್ಲದೇ ಉಂಟೆ? ಪಾಪ, ಇನ್ನು ರಾಜ–ಮಹಾರಾಜರು ತಿರುಪೆ ಎತ್ತೋಕೆ ಹೊರಟರೆ ಸರಿ...."

'ಹಾಗೆಲ್ಲಿ ಆಗುತ್ತೆ? ವರ್ಷವರ್ಷವೂ ಅವರಿಗೆ ಸಿಗುತ್ತಿದ್ದ ಗೌರವಧನ ಮತ್ತಿತರೆ ಕೆಲವು ವಿಶೇಷ ಸೌಕರ್ಯಗಳು ರದ್ದಾಗುತ್ತವೆ ಅಷ್ಟೆ. ಅದರ ಬದಲಿಗೆ ಅವರಿಗೆ ಏಕಗಂಟಿನಲ್ಲಿ ಪರಿಹಾರ ಕೊಡಲು ಒಪ್ಪಿದ್ದಾರಲ್ಲಾ ಇಂದಿರಾ ಗಾಂಧಿ?"

"ಹಾಗಲ್ಲವೆ, ರಾಜ–ಮಹಾರಾಜರಿಗೆ ಪರಿಹಾರ ನೀಡಲಿ; ಕೋಟಿ ಕೊಟ್ಟಾದರೂ ಮಾಡಲಿ. ಆದರೂ ನೋಡು, ಸರಕಾರದ ಕಾನೂನುಗಳನ್ನೇ ನಂಬುವುದು ಕಷ್ಟಸಾಧ್ಯವಿತ್ತು; ಇನ್ನು ಸಂವಿಧಾನವನ್ನೂ ನಂಬುವುದು ಹಾಗೆ ಹಾಗೇ ಫೇಂ ತಾಯ್ತು....'

"ಯಾಕೆ?"

"ನೋಡು, ಸರದಾರ ವಲ್ಲಭಭಾಯಿ ಪಟೇಲರ ದೂರದರ್ಶಿತ್ವದಿಂದ ಸಂಸ್ಥಾನಾಧೀಶರ ಮನವೊಲಿಸಿ, ಅವರೆಲ್ಲರೂ ತಮ್ಮ ರಾಜ್ಯವನ್ನು ಭಾರತ ಒಕ್ಕೂಟದಲ್ಲಿ ವಿಲೀನಗೊಳಿಸುವಂತಾಯ್ತು...."

'ಹೌದ, ಯಾರಲ್ಲಾಂತಾರೆ?"

"ಅವರ ತ್ಯಾಗದ ಬಗ್ಗೆ ಅಂದಿನ ಭಾರತ ಸರಕಾರವು ರಾಜಧನವನ್ನೂ ಕೆಲವೊಂದು ಸೌಲಭ್ಯಗಳನ್ನೂ ನೀಡುವ ಭರವಸೆ ನೀಡಿತು....'

"ಹೌದು..."

"ಈ ಭರವಸೆಗೆ ಸ್ಥಾಯಿ ರೂಪ ನೀಡಬೇಕೆಂದು ಈ ಅಂಶಗಳನ್ನು ಸಂವಿಧಾನದಲ್ಲಿಯೂ ಸೇರಿಸಲಾಯ್ತು...."

"ಏನಾಯಿತೀಗ?"

"ಅಲ್ವೆ, ಇನ್ನು ಆಗೋಕೆ ಬಾಕಿಯಿರೋದಾದ್ರೂ ಏನು? ಆ ಸಂವಿಧಾನವನ್ನೇ ತಿದ್ದುಪಡಿ ಮಾಡಿ ವಿಶ್ವಾಸವನ್ನೇ ಗಾಳಿಗೆ ತೂರಿಬಿಟ್ರಲ್ಲಾ....?'

"ನೋಡಿ, ಇದಾದ್ರೂ ಆಗಬಹುದೆನ್ನಿ. ರಾಜ– ಮಹಾರಾಜರನ್ನೂ ಅವರ ಪರಿವಾರದವರನ್ನೂ ಹಿಡಿದು ಮುಂಡಭೇದನ ಮಾಡಿಸಿ ಮೆರವಣಿಗೆ ಮಾಡಲಿಲ್ಲವಲ್ಲ?'

"ಹ್ಞೂಂ...ಇನ್ನು ಅದೊಂದು ಬಾಕಿಯಿದೆ. ಪಾಪ, ಹೀಗೆಲ್ಲಾ ಆಗುತ್ತೇಂತ ಗೊತ್ತಿರುತಿದ್ರೆ ರಾಜ ಮಹಾರಾಜರು ಅಂದೇ ಎಚ್ಚರಿಕೆ ವಹಿಸ್ತಿದ್ರು...."

"ಏನು ಮಾಡುವುದು ಹೇಳಿ, ಕ್ಷೌರ ಮಾಡಿಸಿದ ಮೇಲೆ ದಿನ ಕೇಳಿದವರಂತೆ"

'ನೋಡು, ರಾಜ– ಮಹಾರಾಜರು ಮಾಡಿದ್ದ ಮಹಾತ್ಯಾಗದ ಫಲವೇ ಹೀಗಾಯ್ತು ಎಂದ ಮೇಲೆ, ನಾಳೆ ಇನ್ನು ಏನೇನು ಆಗಲಿದೆಯೋ ದೇವರೇ ಬಲ್ಲ..'

'ಆಗೋಕೆ ಉಳಿಯೋದಾದ್ರೂ ಏನೂಂತ ಹೇಳಿ? ನೋಡಿ, ಹೇಳಿಕೇಳಿ ಇದು ಪ್ರಜಾರಾಜ್ಯ. ಬಹುಮುಖ ಮುಂದೆ ಉಳಿದವರು ತಲೆತಗ್ಗಿಸಲೇಬೇಕು. ರಾಜ–ಮಹಾರಾಜರಾದರೇನು, ಅವರೂ ಭಾರತದ ಶ್ರೀಸಾಮಾನ್ಯರೇ ತಾನೆ? ಯೋಗ ಇರದ ಆ ಧನ— ಸೌಲಭ್ಯ ಅವರಿಗೆ ಬಾರದು ಎಂದರು ಜನ."

"ಅದು ಸರೀನ್ನಿ. ನೋಡು, ಇವತ್ತು ರಾಜಧನ ರದ್ದು ಮಾಡಿದವ್ರೇ ನಾಳೆ ಮಾಜಿ ಎಂಪಿಗಳಿಗೆ ಪೆನ್ಶನ್ ಬೇಕೂಂತ ಶಾಸನ ಮಾಡ್ತಾರೆ."

"ಮಾಡ್ಲಿ ಬಿಡಿ. ರಾಮನ ಮತವೇ ಹನುಮನ ಮತವಾಗಬೇಕು.'

"ಅದು ಹಾಗಲ್ಲ, ಹನುಮನ ಮತವೇ ರಾಮನ ಮತ."

'ಅದು ಹೇಗೂ ಇರ್ಲಿ. ನಮಗೆ ಬೇಕಾದಲ್ಲಿಗೆ ಕೋಣ ಓಡದೆ ಹೋದ್ರೆ, ಅದು ಓಡಿದಲ್ಲಿಗೇ ನಾವು ಹೊಡೀಬೇಕು ತಾನೆ?"

'ಮತ್ತೆ ಮಾಡೋದಾದ್ರೂ ಏನು? ನಮ್ಮ ಸಂವಿಧಾನ ಇಪ್ಪತ್ತು ವರ್ಷಗಳಲ್ಲಿ ೨೪ ತಿದ್ದುಪಡಿಗಳನ್ನು ಕಂಡಿತು."

"ಸರಿ, ಏನಾಯ್ತೀಗ? ಜನಾಭಿಪ್ರಾಯದಲ್ಲಿಯೂ ಹೇಗೆ ಪ್ರಗತಿಯಾಗುತ್ತಿದೆ ಎಂಬುದಕ್ಕೆ ಈ ತಿದ್ದುಪಡಿಗಳ ಸಂಖ್ಯೆಯೇ ಸಾಕ್ಷಿ.'

'ನಿಜಕ್ಕೂ. ಇದೇ ರೀತಿ ತಿದ್ದುಪಡಿಯಾಗುತ್ತ ಹೋದರೆ, ಪ್ರಗತಿಯ ಗತಿ ಮತ್ತಷ್ಟು ಹೆಚ್ಚುತ್ತದೆ.'

'ಆಗಲೇ ಪ್ರತಿಗಾಮಿಗಳ ಮೇಲೆ ಪ್ರಗತಿಗಾಮಿಗಳು ವಿಜಯ ಸಂಪಾದಿಸುವುದು ಸಾಧ್ಯವಾಗುವುದು.'

'ಅದೆಲ್ಲ ಖರೆ. ಆದರೆ, ತಾನು ಮಾಡಿಕೊಂಡ ಒಡಂಬಡಿಕೆಯನ್ನೇ ಮುರಿದು ಬಿಡುವ ಸರಕಾರ ನಾಳೆ ಏನೇನೆಲ್ಲಾ ಮಾಡೀತೋಂತ......"

'ಮಾಡೋದೇನು? ನೋಡಿ, ನಾಳೆಯ ಚಿಂತೆಯೆಂಬುದನ್ನು ಮಾಡಬಾರದು. ಹಾಲಿದ್ದಾಗ ಹಬ್ಬ ಮಾಡಬೇಕು. ಇದ್ದುದನ್ನು ಪೂರ್ಣ ಖರ್ಚುಮಾಡಿ ಬಿಡಬೇಕು. ರಾಜ ಮಹಾರಾಜರೇನು ದುಡಿದು ರಾಜ್ಯ ಗಳಿಸಿಲ್ಲ ನೋಡಿ. ಯಾರುಯಾರಿಗೆ ಮೋಸಮಾಡಿ ಯಾರು ಯಾರ ಮೇಲೋ ಹಲ್ಲೆಮಾಡಿ ಗಳಿಸಿದ ಹರಾಮಿನ ಸಂಪತ್ತದು. ಅದನ್ನು ಜನರಿಗೆ ಬಿಟ್ಟುಕೊಟ್ಟಿದ್ದರಲ್ಲಿ ತ್ಯಾಗವೇನು ಬಂತು? ಅವರಾಗಿ ಕೊಡದಿದ್ರೆ ಜನರೇ ಕಿತ್ತುಕೊಳ್ಳುತಿದ್ದರು. ನಾನು ಹೇಳುವುದಾದರೆ, ಇನ್ನೊಂದು ಶಾಸನ ಮಾಡಿ, ರಾಜ–ಮಹಾರಾಜರು ಈಗ್ಗೆ ೨೩ ವರ್ಷಗಳಿಂದ ಪಡೆದ ರಾಜಧನವನ್ನು ಸಾಲಿಯಾನ್ ಸೇಕಡಾ ೧೦ರ ಸಲೆಯಲ್ಲಿ ಚಕ್ರಬಡ್ಡಿ ಸಮೇತ ಹಿಂದೆಕೊಡುವಂತೆ ಆದೇಶಿಸಬೇಕು. ಸರ್ದಾರ ಪಟೇಲರ ಹಿಂದೆಯೇ ಅವರು ಮಾಡಿಕೊಂಡ ಒಪ್ಪಂದ ರದ್ದೆಂದು ಪಾರ್ಲಿಮೆಂಟು ಹೇಳಿಬಿಡಬೇಕು.'

'ಹ್ಞೂಂ...'

"ನೋಡಿ ಇಷ್ಟು ದೊಡ್ಡ ಭಾರತವನ್ನು ಬ್ರಿಟಿಷರು ಬಿಟ್ಟುಕೊಟ್ಟರು. ಅವರಿಗೇನು ರಾಜಧನ—ವಿಶೇಷ ಸೌಲಭ್ಯ ಸರ್ದಾರರಾಗಲೀ ಮಹಾತ್ಮರೇ ಆಗಲೀ ಕೊಟ್ಟಿದ್ದುಂಟೇನು?"

"ಇಲ್ಲ, ಮಾರಾಯ್ತಿ, ಇಲ್ಲ.'

"ಹಾಗಿರುವಾಗ, ಈ ದೇಶೀಯ ರಾಜ-ಮಹಾರಾಜರಿಗೇಕೆ ರಾಜಧನ? ಪರಿಹಾರಧನ? ಅವರೂ ಅವರ ಹಿರಿಯರೂ ಅದುವರೆಗೆ ಮೆರೆದಾಡಿದ್ದೇ ತಪ್ಪು; ಅದಕ್ಕಾಗಿ ಅವರಿಂದಲೇ ಪರಿಹಾರ ಬರುವಂತೆ ನೋಡಬೇಕು.'

'ಹ್ಞೂಂ....'

"ಆದರೆ, ಅವರ ಹತ್ತಿರ ಹಣವೆಲ್ಲಿ? ಅದಕ್ಕಾಗಿ ಅವರ ಅರಮನೆ ಸೊತ್ತು ಎಲ್ಲವನ್ನೂ ಮುಟ್ಟುಗೋಲು ಹಾಕಬೇಕು. ಅವೆಲ್ಲವನ್ನು ಮಂತ್ರಿ–ಮಾಘರಿಗೆ, ಎಂಪಿಗಳಿಗೆ ಉಳಿದರೆ ಹರಿಜನ-ಗಿರಿಜನರಿಗೆ, ಭೂರಹಿತರಿಗೆ ಮನೆರಹಿತರಿಗೆ ಎಲ್ಲ ಹರಿದು ಹಂಚಿ ಬಿಡಬೇಕು.

"ಹ್ಞೂಂ...."

'ಇಲ್ಲದವರಿಗೆಲ್ಲ ಇದೆಯೆನ್ನಿಸುವುದಕ್ಕಿಂತ ಇದ್ದವರನ್ನೆಲ್ಲ ಇಲ್ಲದವರಂತೆ ಮಾಡುವುದೇ ಸುಲಭದ ಕೆಲಸ ನೋಡಿ...'

'ಅದು ಹೌದು....'

'ಮತ್ತ್ಯಾವುದು ಅಲ್ಲ?'

'ಅಲ್ಲ, ನೀನು ಭಾರೀ ಜಾಣೆ'

'ಯಾಕೆ ಹಾಗಂತೀರಿ?'

"ಪ್ರಧಾನಿ ಇಂದಿರಮ್ಮನಿಗೆ ನಿನ್ನಂತಹ ಒಬ್ಬಾಕೆ ಸಲಹೆಗಾರಳಿದ್ರೆ ರಾತ್ರಿ ಬೆಳಗಾಗೋದ್ರಲ್ಲೇ ಭಾರತ ಪ್ರಗತಿಯ ಗೌರೀಶಂಕರವೇರಿಬಿಡುತ್ತದೆ...'

"ಛಿ. ಹೋಗ್ಲಿ ಬಿಡೀಂದ್ರೆ.... ನಿಮಗೇನು, ಎಲ್ಲದ್ರಲ್ಲೂ......"

"ಅಲ್ಲವೇ ಮತ್ತೆ? ಇಂತಹ ಸಲಹೆಯನ್ನು ಆಕೆಗೆ ಯಾರೂ ಕೊಟ್ಟಿರಲಾರರು. ಆದ್ದರಿಂದ...."

"ನೋಡಿ, ಹಾಗೆಲ್ಲ ಅನ್ನಬೇಡಿ."

'ಯಾಕೆ?"

"ಅಲ್ಲ, ನನ್ನ ದಿಲ್ಲಿಗೆ ಕಳ್ಸಿದ್ರೆ..."

"ಅಯ್ಯೋ, ಪೆದ್ದಿ, ಅದೆಂದಾದ್ರೂ ಸಾಧ್ಯವೇನು?"

"ಖಂಡಿತಕ್ಕೂ...."

"ಖಂಡಿತಕ್ಕೂ...."

"ಇದು ಸಂವಿಧಾನದ ಭರವಸೆಯಲ್ಲ ತಾನೆ?"

'ಛೆ ...ಏನೇ ಇಷ್ಟು ಸಂಶಯ?"

"ಯಾಕೋ ಏನೋ, ಹೆದ್ರಿಕೆಯಾಗುತ್ತೆ...."

"ಹೆದ್ರಬೇಡ ಏನೂ ಪಾಪ....?"

"ಈಗೇನೂ ಇಲ್ಲ....'

"ಛಿ ..ಹುಚ್ಚಿ....'

—ಗೋರಾ.

ದಯಾಳುತನವು ಮನುಷ್ಯನನ್ನು ಈಶ್ವರ ತುಲ್ಯನನ್ನಾಗಿ ಮಾಡುತ್ತದೆ.

o o o

ಸಮಯವು ಎಲ್ಲಕ್ಕಿಂತ ಹೆಚ್ಚಿನ ಬುದ್ಧಿವಂತ ಸಲಹೆಗಾರನಾಗಿದೆ.

o o o

ಉಡುಪಿಗೆ ಬಂದಾಗ

ಮನರಂಜನೆಯ ಸಮಸ್ಯೆ ನಿಮಗಿಲ್ಲ!

ಅತ್ಯುತ್ತಮ ಚಲಚ್ಚಿತ್ರಗಳನ್ನು ಪ್ರದರ್ಶಿಸುವ

ಎರಡು ಶ್ರೇಷ್ಠ ದರ್ಜೆಯ ಚಿತ್ರಮಂದಿರಗಳು

ನಿಮ್ಮ ಬೇಸರವನ್ನು ನೀಗಿಸಲು ಇಲ್ಲಿವೆ.

ಅಲಂಕಾರ್ — ಕಲ್ಪನಾ

(ಫೋನ್: 327) ಆಸ್ಪತ್ರೆ ರಸ್ತೆ — (ಫೋನ್: 437) ಉಪೇಂದ್ರಬಾಗ್

ಕುಂದಾಪುರದ ನವೀಕೃತ ಭವ್ಯ ಚಿತ್ರಮಂದಿರ—

ಗೀತಾಂಜಲಿ

ವ್ಯಾಪಕರು:

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್

ರಿಜಿಸರ್ಡ್ ಆಫೀಸ್: ಎಸ್. ಆರ್. ಬಿಲ್ಡಿಂಗ್ಸ್, ಉಡುಪಿ (ದ. ಕ.)

ಕನ್ನಡದಲ್ಲಿ ಅಪರೂಪವಾದ ಪುಸ್ತಕ

ಸ್ವಪ್ನಲೋಕ

ಮನೋವಿಶ್ಲೇಷಣದ ಬೆಳಕಿನಲ್ಲಿ ಕನಸುಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ವಿವರಗಳನ್ನೊಳಗೊಂಡ 'ಕಾಶೀರೇಯ' ವಿರಚಿತ ಕಿರುಹೊತ್ತಗೆ ಬೆಲೆ 0—50

o o o

ದಿ। ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ ಪ್ರಸಂಗ ಪುಸ್ತಕಗಳು

ಸಾಹಸ ಭೀಮ ವಿಜಯ	0-50
ವಾಲಿ ಸುಗ್ರೀವ (ದುರಂತ ಯಕ್ಷಗಾನ ನಾಟಕ)	0-60
ಲಕ್ಷ ಪಗಡೆ	0-40
ಭಾರತದ ಗುರುಕುಲ	0-40
ಭರತೇಶ ದಿಗ್ವಿಜಯ	0-50

ಪ್ರತಿ ಪುಸ್ತಕಕ್ಕೂ ಬುಕ್ ಪೋಸ್ಟಿನಿಂದ ಕಳಿಸಲು 0-30 ಪೈಸೆ ಅಂಚೆ ವೆಚ್ಚ.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್) ಉಡುಪಿ, ದ. ಕ.

ಯು. ಯಸ್. ಯಸ್. ಆರಿನಂತೆ ಯು. ಯಸ್. ಐ.

ತನ್ನ ಪುಸ್ತೋಪ್ಯಕ್ಕೆ ಭಂಗ ಬಂದಾಗ, ಪ್ರಸಿದ್ಧ ಪುರಿಯಾಗಿರುವ ಶ್ರೀಮತಿ ಇಂದಿರಾ ಗಾಂಧಿ ನೆಹ್ರೂರವರು ತನಗೆ ದಕ್ಕದೆ ಇರುವದು, ಅನ್ಯರಿಗೂ ಸಿಗಕೂಡದೆಂಬ ಒಂದು ನಿರ್ಧಾರಕ್ಕೆ ಬಂದಿರುವರು; ಅದರಂತೆ ಕಾರ್ಯ ಪ್ರವೃತ್ತರಾಗಿರುವರು. ಅವರು ಕ್ರಮಶಃ ದೇಶೀಯ ಶಕ್ತಿಗಳ ನಮ್ಮ ಧ್ವಜಕ್ಕೆ ಅಪಮಾನ, ದೇಶವನ್ನು ಸ್ವಾಯತ್ತಾಧಿಕಾರ ಉಳ್ಳ ರಾಜ್ಯಗಳನ್ನಾಗಿ ವಿಂಗಡಿಸುವದು ಮತ್ತು ಅವುಗಳಿಗೆ ಪ್ರತ್ಯೇಕ ಧ್ವಜಗಳನ್ನೀಯುವದು, ಭೂಭಾಗವನ್ನು ಅನ್ಯ ರಾಷ್ಟ್ರೀಯರು ಸ್ವಂತವೆಂದಾಗ ಸುಮ್ಮಗಿರುವದು.... ಮುಂತಾದ ರಾಷ್ಟ್ರಘಾತುಕ ಕುಕೃತ್ಯಗಳಿಗೆ ಮುಂದಾಗಿರುವರು. ಅವರದೆಂತು ದೇಶೀಯ ಶಕ್ತಿಗಳ ದಮನಕ್ಕೆ ಚಕ್ರವನ್ನುರುಳಿಸಲು ಯೋಚಿಸುತ್ತಿದ್ದಾರೆ, ಅದರ ದುಷ್ಪರಿಣಾಮವೇನು, ಅವರದೆಂತು ಸರ್ಕಾರಿ ಧ್ವಜಕ್ಕೆ ಅಪಮಾನವೂ, ಯಾವ ಧ್ವಜವನ್ನು ಹಾರಿಸಲು ಇಚ್ಛಿಸುತ್ತಾರೆಂಬುದನ್ನು ಹಿಂದಿನ ಸಂಚಿಕೆಯಲ್ಲಿ ನಾವು ಓದಿರುವೆವು. ಈಗ, ದೇಶವನ್ನು ಸ್ವಾಯತ್ತಾಧಿಕಾರ ಉಳ್ಳ ರಾಜ್ಯಗಳನ್ನಾಗಿ ವಿಂಗಡಿಸಲು ಹಾಗೂ ಅವುಗಳಿಗೆ ಪ್ರತ್ಯೇಕ ಪತಾಕೆಗಳನ್ನೀಯಲು ಅವರು ಯೋಚಿಸುತ್ತಿದ್ದಾರೆ ಎಂಬುದನ್ನು ನೋಡುವ.

ಉಕ್ಕಿನ ಮನುಷ್ಯ ಸರ್ದಾರ ಪಟೇಲರು ಗೃಹಮಂತ್ರಿಯಾಗಿದ್ದಾಗ, ಇದ್ದ ನೂರಾರು ರಾಜ್ಯಗಳನ್ನು ಒಂದುಗೂಡಿಸಿದರು. ಅನಂತರ ಗೋವಾ, ಪಾಂಡಿಚೇರಿಗಳನ್ನು ಸೇರಿಸಿಕೊಳ್ಳಲಾಯಿತು. ಹಿಂದಿನವರು ಒಂದಾಗಿರಿಸಿದ್ದ ಕಾಂಗ್ರೆಸ್ಸನ್ನು ಎರಡು ಮಾಡಿದ ಪ್ರಗತಿಶೀಲೆ ಇಂದಿರಾದೇವಿಯವರು ಈದೀಗ ಹಲವಾರು ರಾಜ್ಯಗಳನ್ನು ಹೆಚ್ಚಿಸಲಾರಂಭಿಸಿದರು. ಅಸ್ಸಾಮನ್ನೊಡೆದು ನಾಗಲ್ಯಾಂಡ್ ಮಾಡಲಾಯಿತು. ಅನಂತರ ಮೇಘಾಲಯ ವಾಯಿತು. ಅದಕ್ಕಿನ್ನೂ ಪೂರ್ಣ ವಿರಾಮ ಸಿಕ್ಕಿಲ್ಲ. ಹಿಮಾಚಲ ಪ್ರದೇಶವಾದೊಡನೆ ಮಣಿಪುರದ ಸದ್ದು ಕೇಳಿಬರುತ್ತಿದೆ. ವಿದರ್ಭ ಹಾಗೂ ತೆಲಂಗಣದ ವಾದ ನಿಶ್ಶಬ್ದವಾಗಿರುವದಿಲ್ಲ. ಇವೆಲ್ಲವೂ ಭಾರತದೊಳಗೆ ತಾನೇ ಎನ್ನಬಹುದು. ಇದೇ ಸಮಯದಲ್ಲಿ ತಮಿಳ್ನಾಡಿನ ದ್ರಾವಿಡ ಮುನ್ನೇಟ್ರ ಕಳಗಂ ಬಲಶಾಲೀ ರಾಜ್ಯ, ಸ್ವಾಯತ್ತಾಧಿಕಾರ ಉಳ್ಳ ರಾಜ್ಯ, ಸ್ವತಂತ್ರ ರಾಜ್ಯ, ಒಕ್ಕೂಟಕ್ಕೊಳಪಟ್ಟಿರುವ ರಾಜ್ಯ....... ಮುಂತಾದ ಪದ ಪ್ರಯೋಗಕ್ಕೆ ಮುಂದೆ ಬಂದಿದೆ. ಇಂದಿರಾದೇವಿಯವರಿತ್ತಿರುವ ಧೈರ್ಯದಿಂದಾಗಿ ಅವರು ಈದೀಗ ಇನ್ನಷ್ಟು ಮುಂದರಿದು ಪ್ರತ್ಯೇಕ ಧ್ವಜದ ಮಾತನ್ನೆತ್ತಿರುವರು. ಅದಕ್ಕೆ ಇದುವರೆಗೂ ಇಂದಿರಾ ಗಾಂಧಿಯವರು ಇಲ್ಲ—ಉಂಟು ಎನ್ನದೆ, ಮೂಕಾಂಕಿತೆಯೂ ಡೋಣವನ್ನತ್ತಿದ್ದಾರೆ!

ಸಂವಿಧಾನದ ಪ್ರಕಾರ ಪ್ರಾಂತ್ಯಗಳು ಹೋಗಿ ರಾಜ್ಯಗಳಾದುವು. ಆಗ ಇಂಡಿಯಾವು ಅಂದರೆ ಭಾರತವು ಯೂನಿಯನ್ ಆಫ್ ಸ್ಟೇಟ್ಸ್ (ರಾಜ್ಯಗಳ ಒಕ್ಕೂಟ) ಆಯಿತು. ಸಂವಿಧಾನ ನಿರ್ಮಾತೃಗಳಿಗೆ ಈ ವಿಶಾಲ ದೇಶವನ್ನು ನೋಡಿದಾಗ ಅಮೇರಿಕಾದ ಹಾಗೂ ರಷ್ಯಾದ ಜ್ಞಾಪಕ ಬರುತ್ತಿತ್ತು. ಸಂವಿಧಾನವೇ ಹಲವಾರು ರಾಷ್ಟ್ರಗಳ ಸಂವಿಧಾನಗಳ ಸಾರವೆನ್ನಲಾಗುತ್ತಿದೆ. ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ (ಯು. ಯಸ್. ಎ) ಯುನೈಟೆಡ್ ಸ್ಟೇಟ್ಸ್ ಆಫ್ ಸೋವಿಯಟ್ ರಿಪಬ್ಲಿಕ್ (ಯು. ಯಸ್. ಯಸ್. ಆರ್.) ಆದಂತೆ ಭಾರತವನ್ನು ಯುನೈಟೆಡ್ ಸ್ಟೇಟ್ಸ್ ಆಫ್ ಸೋಷಿಯಲಿಸ್ಟ್ ಇಂಡಿಯಾವನ್ನಾಗಿ ಮಾಡಬೇಕೆಂದೀಗ ಇಂದಿರಾಜೀ ಇಷ್ಟಪಡುತ್ತಿದ್ದಾರೆ. ಅವರಿದರಿಗೆ ಝೆಕೊಸ್ಲೋವೇಕಿಯಾ, ಹಂಗೇರಿ, ಪೋಲೇಂಡ ಗಳಿವೆ. ರಷ್ಯಾದಲ್ಲಿ ಹಲವಾರು ಭಾಷೆಗಳ ಹಲವಾರು ರಾಜ್ಯಗಳಿದ್ದು ಅವುಗಳಿಗೆ ಪ್ರತ್ಯೇಕ ನಿಶಾನೆಗಳಿವೆ. ಅದರಂತೆ ಇಲ್ಲಿಯು ರಾಜ್ಯಗಳಿಗೂ ಪ್ರತ್ಯೇಕ ಧ್ವಜಗಳಿರಬೇಕೆನ್ನುವದೇ ಅವರ ಅಭಿಪ್ರಾಯ. ಆದರೆ ಅದನ್ನು ಧೈರ್ಯವಾಗಿ ಜನತೆಯ ಮುಂದೆ ಹೇಳುವ ಧೈರ್ಯ ಅವರಿಗಿರುವದಿಲ್ಲ, ಆದುದರಿಂದಲೇ 'ನೋಡೋಣ'ವೆನ್ನುತ್ತಿದ್ದಾರೆ.

ಕೆಂಪುಕೋಟೆಯ ಧ್ವಜಾರೋಹಣದ ನಂತರ ಆಗೋಸ್ಟ್ ಇಪ್ಪತ್ತರಂದು ಲೋಕಸಭೆಯಲ್ಲಿ ಇನ್ನೊಂದು ಪತಾಕೆ ಪ್ರಕರಣ ನಡೆಯಿತು. ಅದು ತಮಿಳ್ನಾಡಿಗೆ ಸಂಬಂಧಪಟ್ಟದ್ದು. ತಮಿಳ್ನಾಡಿನ ದ್ರಾವಿಡ ಮುನ್ನೇಟ್ರ ಕಳಗಂ ಸರಕಾರವು ಪ್ರತ್ಯೇಕ ಪತಾಕೆ ಬೇಕೆಂದು ಕೇಂದ್ರಕ್ಕೆ ಬರೆದಿರುವದನ್ನು ತಮಗೇಕೆ ತಿಳಿಸಿಲ್ಲ, ಸಾಧ್ಯವಿಲ್ಲವೆಂದೇಕೆ ಉತ್ತರ ಕೊಟ್ಟಿರುವದಿಲ್ಲವೆಂಬುದೇ ಲೋಕಸಭಾ ಸದಸ್ಯರ ಪ್ರಶ್ನೆ. ಲೋಕಸಭೆ ಬಹಳ ಬಿಸಿಯಾಗಿತ್ತು. ಸಂಸ್ಥಾ ಕಾಂಗ್ರೆಸ್ಸಿನ ನಾಯಕರವರು, ಈ ಪಕ್ಷ ಏಳಲು ಕಾಶ್ಮೀರಕ್ಕೆ ಪ್ರತ್ಯೇಕ ಪತಾಕೆ ಕೊಟ್ಟಿರುವದೇ ಕಾರಣವೆಂಬುದನ್ನು ಜ್ಞಾಪಕ ಪಡಿಸಿದರು. ನಾಯಕರವರು ಇಂದು ತಮಿಳ್ನಾಡಿಗೆ ಪ್ರತ್ಯೇಕ ಪತಾಕೆ ಕೊಟ್ಟಲ್ಲಿ ನಾಳೆ ಕೇರಳದಲ್ಲಿ ಚೈನಾದ ಅಥವಾ ರಷ್ಯಾದ ಧ್ವಜ ಹಾರಾಡಬಹುದೆಂದು ಎಚ್ಚರಿಕೆಯನ್ನಿತ್ತರು. ಅದೇ ಕಾಲಕ್ಕೆ ಅವರು ನಿಕ್ಷಿಸಿದರು. ಮಲಪ್ಪುರಮಿನಲ್ಲಿ ಪಾಕಿಸ್ತಾನದ ಪತಾಕೆ ಹಾರಾಡಿತು, ಬಂಗಾಲದಲ್ಲಿ ಚೈನಾದ ಧ್ವಜ ಹಾರಾಡಿತು, ಅಲಿಘರದಲ್ಲಿ ಪಾಕಿಸ್ತಾನ ಪತಾಕೆ ಹಾರಾಡಿತು... ಈ ಸಂಗತಿಯನ್ನೇಕೆ ಹೇಳಲು ಅವರು ಹಿಂಜರಿಯರೇ? ತಮಿಳ್ನಾಡು ಕೇಂದ್ರ ವ್ಯವಹಾರವನ್ನು ಸಭೆಯ ಮುಂದಿಡಬೇಕೆಂದು ಅವರು ಕೇಳಿಕೊಂಡರು. ಅದಕ್ಕೆ ಪ್ರಧಾನಿಯವರು ಅದರಲ್ಲಿ ರಹಸ್ಯವೇನೂ ಇಲ್ಲವೆಂದೂ ಈ ಎಲ್ಲಾ ಸಮಾಚಾರಗಳನ್ನು ಲಿಖಿತ ವಾಗ್ಮೂಲದ ಮೂಲಕ ತಿಳಿಸಲಾಗುತ್ತದೆಂದೂ, ಮೂಲ ಪ್ರತಿಯನ್ನು ಮಂಡಿಸುವದು ಸಾಧ್ಯವಿಲ್ಲ, ಹಾಗೆ ಮಾಡಿದಲ್ಲಿ ನಾಳೆಯಿಂದ ಆದ್ಯಾವ ಮುಖ್ಯಮಂತ್ರಿಯೂ ಪ್ರಧಾನಿಗೆ ಪತ್ರ ಬರೆಯಲಿಕ್ಕಿಲ್ಲವೆಂದೂ ಹೇಳಿದರು.

ಅವರಿತ್ತಿರುವ ಲಿಖಿತ ವಾಗ್ಮೂಲದ ಸಾರಾಂಶ:—ತಮಿಳ್ನಾಡಿನ ಒಂದು ಸೂಚನೆ ಜೂನಿನಲ್ಲಿ ಕೇಂದ್ರಕ್ಕೆ ಬಂದು ತಲುಪಿದೆ. ಅದರಲ್ಲಿ ಮುಖ್ಯಮಂತ್ರಿ ಹಾಗೂ ಇತರ ರಾಜ್ಯ ಮಂತ್ರಿಗಳ ಕಾರಿನ ಮೇಲೆ ಹಾಗೂ ಸಂಸ್ಥಾನಗಳ ಮೇಲೆ ಹಾರಾಡಿಸಲು ಒಂದು ಮಾನಸೂಚಿಯನ್ನು [Standard] ಕೇಳಲಾಗಿದೆ. ಅದರಲ್ಲಿ ರಾಷ್ಟ್ರೀಯ ಧ್ವಜ ಹಾಗೂ ತಮಿಳ್ನಾಡು ಸರ್ಕಾರದ ಮುದ್ರೆಯೂ ಇವೆ. ಈ ಮಾನಸೂಚಿಯಿಂದ ಆ ಮಂತ್ರಿ ಯಾವ ರಾಜ್ಯದವರೆಂಬುದನ್ನು ಒಕ್ಕೂಟ ಸಂಸ್ಥಾನಗಳಲ್ಲಿ ಸುಲಭವಾಗಿ ಕಂಡುಹಿಡಿಯಲು ಸಾಧ್ಯವಾಗುತ್ತದಲ್ಲದೆ, ಅವರಿಗೆ ಸರಿಯಾದ ಸತ್ಕಾರವನ್ನೀಯಲು ಸಹಾಯವಾಗುತ್ತದೆಂಬುದು ರಾಜ್ಯ ಸರ್ಕಾರದ ಅಭಿಪ್ರಾಯ. ಇದರಲ್ಲಿ ಹಲವಾರು ಪ್ರಶ್ನೆಗಳೇಳುವ ಕಾರಣ ಮುಖ್ಯಮಂತ್ರಿಗಳ ಬಳಿ ಸಮಾಲೋಚಿಸಿ ನಿರ್ಧಾರಕ್ಕೆ ಬರಲಾಗುತ್ತದೆ.

ಲೋಕಸಭೆಯ ಕಾರ್ಯಕಲಾಪಗಳ ವರದಿ ಪ್ರಕಟವಾದಂದೇ ಪತ್ರಿಕೆಯಲ್ಲಿ ತಮಿಳ್ನಾಡು ಸರಕಾರವು ಒಂದು ಪ್ರಕಟಣೆಯನ್ನಿತ್ತಿರುತ್ತದೆ. ಅದರಲ್ಲಿ ೨೭-೫-೧೯೭೦ರಂದು ತಮಿಳ್ನಾಡು ಸರಕಾರವು ಭಾರತ ಸರಕಾರಕ್ಕೆ ಕಳಹಿಸಿರುವ ಪ್ರಸ್ತಾಪಿತ ತಮಿಳ್ನಾಡು ಧ್ವಜದ ಚಿತ್ರವನ್ನು (Picture of the proposed Tamilnad Flag) ಪ್ರಕಟಿಸಲಾಗಿರುತ್ತದೆ. ಮೇ ದಿನಾಂಕ ಇಪ್ಪತ್ತೇಳರಂದು ತಮಿಳ್ನಾಡ ಸರಕಾರವು ಮದರಾಸಿನಿಂದ (ಸನ್ನೆ) ದಿಲ್ಲಿಗೆ ಅದನ್ನು ಕಳುಹಿಸಿದೆ. ಅದು ಜೂನಿನಲ್ಲಿ ಕೇಂದ್ರ ಸರಕಾರದ ಕೈಗೆ ಸಿಕ್ಕಿರುತ್ತದೆ! ಇಂತಹ ಮುಖ್ಯವಾದ ಪತ್ರಗಳ ಅವಸ್ಥೆಯೇ ಹೀಗಾದರೆ ಇನ್ನು ಶ್ರೀಸಾಮಾನ್ಯನ ಹಳ್ಳಿಯ ಪತ್ರಗಳ ಕುರಿತು ಹೇಳಬೇಕಾಗಿಯೇ ಇಲ್ಲ. ಅದು ತಲುಪಿರುವದೇ ದೈವಲೀಲೆಯೆನ್ನಬೇಕಾಗಿದೆ! ಜೂನಿನಲ್ಲಿ ಯಾವಾಗ ತಲುಪಿತ್ತೆಂಬುದು ಶ್ರೀಮತಿಯವರಿಗೆ ಜ್ಞಾಪಕ ಇಲ್ಲವೋ, ತಿಳಿಸಬಾರದಂಥ ರಹಸ್ಯವೋ... ಅವರಿಗೇನೇ ಗೊತ್ತು. ಸಾ. ಹೇಗೂ, ಯಾವಾಗಲೋ ತಲುಪಿತು. ಸಿಕ್ಕಿದ ಮೇಲೆ ಮೂರು ತಿಂಗಳಿನಿಂದ ಸಂಸತ್ ಸದಸ್ಯರ ಗಮನಕ್ಕೆ ಅದನ್ನೇತಕ್ಕೆ ತರಲಿಲ್ಲವೆಂಬುದು ಎರಡು ಪಕ್ಷಗಳ ತಾಯಿ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಪ್ರತ್ಯಕ್ಷವಾಗಿ ಅಟಲಬಿಹಾರಿ ವಾಜಪೇಯಿಯವರ ಸರಳ ಪ್ರಶ್ನೆ. ಕೆಲವು ವಿಷಯಗಳು ಒಡನೆ ಹೊರಬರುತ್ತವೆ. ಕೆಲವಕ್ಕೆ ಮೂರು ತಿಂಗಳು, ಕೆಲವಕ್ಕೆ ಒಂಭತ್ತು-ಹತ್ತು ತಿಂಗಳು ಹೀಗೆಲ್ಲಾ ಭಿನ್ನತೆ ಇದೆಯೆಂಬುದು ಪಾಪ ಅವರಿಗೇನು ಗೊತ್ತು. ಇಂಥ ವಿಷಯಗಳನ್ನು ಸಂಸದಿನ ಮುಂದೆ ತರುವದು ಒಳ್ಳೆಯದಲ್ಲ, ಹಾಗೆ ಮಾಡಿದಲ್ಲಿ ರಾಜ್ಯಸರಕಾರಗಳು ಕೇಂದ್ರ ಸರಕಾರಕ್ಕೆ ಪತ್ರ ವ್ಯವಹಾರ ನಡೆಸಲಾರವೆಂದು ಇಂದಿರಾಜೀ ಇನ್ನಿದಾಗ ಹೇಳುತ್ತಿದ್ದಾರೆ. ಸಮಾಚಾರ ಪತ್ರಿಕೆಗಳಿರುವಾಗ ಅವರೇತಕ್ಕೆ ಪತ್ರ ವ್ಯವಹಾರ ನಡೆಸಬೇಕು? ಕೇಂದ್ರ ಸರಕಾರ ಹೇಳುವ ಜನತೆಗೆ ಈ ವಿಷಯ ಗೊತ್ತಾದುದೇನು? ತಮಿಳ್ನಾಡು ಸರಕಾರವೇ ಈ ವಿಷಯವನ್ನು ಬಗೆಲಿಗೆ ತಂದ ಮೇಲೆ ಸಂಸದ್ ಸದಸ್ಯರು ಸಂಸದಿನಲ್ಲಿ ಕೇಳಿದರು ಅಷ್ಟೇ. ಪಾಪ! ಅವರು ಪ್ರಸ್ತಾಪಿತ ಧ್ವಜದ ಚಿತ್ರ ನೋಡಲೆಂದ ತಮಿಳ್ನಾಡು ಸರಕಾರ ಕರೆಯಿಂದ ಪ್ರಕಟಿಸಿರುತ್ತದೆ.

ಶ್ರೀಮತಿ ಇಂದಿರಾಜೀಯವರು ಲೋಕಸಭೆಯಲ್ಲಿ ಈ ವಿಷಯ ಹೇಳುತ್ತ ತಮಿಳ್ನಾಡು ಸರಕಾರವು ಪ್ರತ್ಯೇಕ ಧ್ವಜವನ್ನು [Separate flag] ಕೇಳಿರುವದಿಲ್ಲ. ಒಂದು ಮಾನಸೂಚಿಯನ್ನು [Standard] ಕೇಳಿರುತ್ತದೆಂದಿರುವರು. ತಮಿಳ್ನಾಡ ಸರಕಾರದ ಪ್ರಕಟಣೆ ಅದಕ್ಕೆ ತಕ್ಕುದಾದ ಉತ್ತರವನ್ನು ಕೊಡುತ್ತದೆ. ಅದು ಪ್ರಸ್ತಾಪಿತ ತಮಿಳ್ನಾಡ್ ಧ್ವಜದ [Picture of the proposed Tamilnad flag] ಚಿತ್ರವನ್ನು ಕೇಂದ್ರಕ್ಕೆ ಕಳುಹಿಸಿರುತ್ತದೆ ವಿನಃ ಪ್ರಸ್ತಾಪಿತ ಮಾನಸೂಚಿಯ ಚಿತ್ರ [Picture of the proposed Tamil Nad Standard] ವನ್ನು ಕಳುಹಿಸಿರುವದಿಲ್ಲ. ಇಲ್ಲಿ ಯಾರು ಅವರ ಕಣ್ಣಿಗೆ ಮಣ್ಣೆರಚುವ ಸಾಹಸಕ್ಕೆ ಮುಂದಾಗಿದ್ದಾರೆನ್ನುವದು ಸ್ಪಷ್ಟವಾಗಬೇಕು. [ಅಪೂರ್ಣ

(ಎಂಟನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
118 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನ್ನು ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¼% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ವೈಯಕ್ತಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು—3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪೋ. ಬಿ. ನಂಬ್ರ 156, ರೇಸ್ ಕೋರ್ಸ್ ರೋಡ್, ಬೆಂಗಳೂರು—1

ಸುಖ ಲಾಲಸೆಯ ನೆಪದಲ್ಲಿ

ಭ್ರಮ ಚಕ್ರ ಭ್ರಮಣ

ಮಾನವ ಜೀವನದ ಉದ್ದೇಶ್ಯವೇನು? —ಸುಖ. ಮನುಷ್ಯನ ಮನಸ್ಸಿನಲ್ಲಿ ಈ ಸುಖದ ವಾಸನೆಯೇಕೆ ಇರುತ್ತದೆ? ಇದನ್ನು ವೇದಾಂತದ ಉನ್ನತೋನ್ನತ ಪದ್ಧತಿಯಿಂದ ನಿರ್ಣಯ ಮಾಡಿದ್ದಾರೆ. ಸುಖದಿಂದ ಮಾನವನು ಬೇರೆಯಾಗಿದ್ದೇನೆಂಬ ಭ್ರಮೆಗೊಳಗಾಗಿದ್ದಾನೆ; ಆದುದರಿಂದಲೇ ಆತನಿಗೆ ಸುಖದ ಆಶೆ.

ನಾವು ಬುದ್ಧಿಪೂರ್ವಕ ಸುಖ-ದುಃಖಗಳ ಅನುಭವ ಮಾಡಿಕೊಳ್ಳುವುದಕ್ಕೆ ಆರಂಭಿಸಿದಂದಿನಿಂದ ಇಂದಿನ ವರೆಗೂ ಹಲವಾರು ಕೆಲಸ—ಕಾರ್ಯಗಳನ್ನು ಮಾಡುತ್ತ ಬಂದಿದ್ದೇವೆ. ಇವುಗಳ ಅಂತರಾಳದಲ್ಲಿ ಆತ್ಯಂತಿಕ ಪರಿಶುದ್ಧ ಸ್ವರೂಪಭೂತ ಸಚ್ಚಿದಾನಂದಮಯವಾದ ಸುಖದೊಡನೆ ತಾದಾತ್ಮ್ಯ ಹೊಂದುವ ಅವಕಾಶ ನಮಗೆ ಲಭ್ಯವಾಗುವುದು. ಆದರೆ, ಅನಾದಿ ಅಜ್ಞಾನದಿಂದಾಗಿ ಸುಖದ ಉದ್ಗಮಸ್ಥಾನ ಅಥವಾ ಮೂಲ ಸ್ರೋತವಾಗಿರುವುದು, ವಾಸ್ತವವಾಗಿ ನಮ್ಮ ಸ್ವರೂಪವಾಗಿರುವುದು— ಸಾಧನವಾಗುತ್ತ ಬಂದಿದೆ; ಜಗತ್ತಿನ ಒಂದಲ್ಲ ಒಂದು ಅನಿತ್ಯ ಕಲ್ಪಿತ ಸುಖವು ನಮ್ಮ ಸಾಧ್ಯವಾಗುತ್ತ ಬಂದಿದೆ.

ನಾವು ಇಂತಹ ದುಃಸ್ಥಿತಿಯಿಂದ ಮೇಲೇಳುವುದಾದರೆ, ನಮ್ಮೆಲ್ಲ ವಿವೇಕವನ್ನು ಒಂದುಗೂಡಿಸಿ, ಭಗವಂತನನ್ನು ಸಾಧ್ಯತತ್ವವೆಂದು ಮಾಡುವುದಾದರೆ, ಆತನೊಬ್ಬನನ್ನು ಬಿಟ್ಟು ನಮಗೆ ಗೋಚರವಾಗುವ ಎಲ್ಲವನ್ನೂ ಸಾಧನವನ್ನಾಗಿ ಮಾಡಿಕೊಳ್ಳುವುದಾದರೆ, ಜಗತ್ತಿನ ಜೀವಿಗಳಲ್ಲಿ ನಾವೇ ಅತ್ಯಂತ ಸುಖಿಗಳಾಗುತ್ತೇವೆ. ಆಗಲೇ ವಾಸ್ತವಿಕ ಸುಖದ ಅನುಭವ ನಮಗಾಗುತ್ತದೆ; ನಮ್ಮೆಲ್ಲ ಅಭಾವಗಳೂ ಕೊನೆಗಾಣುತ್ತವೆ. ಜೀವನದಲ್ಲಿ ಹೊಂದುವುದಕ್ಕೆ ಏನೇನೂ ಬಾಕಿ ಉಳಿಯುವುದಿಲ್ಲ. ಭಗವಂತನೊಬ್ಬನನ್ನೇ ಸಾಧ್ಯವೆಂದು ಪರಿಗಣಿಸಿ, ಉಳಿದ ಧನ, ಜನ, ಪರಿವಾರ ಮೊದಲಾದುವೆಲ್ಲವನ್ನೂ ಸಾಧನವನ್ನಾಗಿ ನಾವು ಮಾಡಿಕೊಂಡರೆ, ನೈಜ ಸುಖದ ದರ್ಶನ ನಮಗಾಗದೇ ತೀರುವುದೇ.

ಜೀವನವನ್ನು ವಿಶ್ಲೇಷಿಸಿ ನೋಡುವಾಗ, ಎಲ್ಲರೂ ಜೀವನದಲ್ಲಿ ಸುಖ ಪಡೆಯುವ ಅನಂತ ಪ್ರಯತ್ನಗಳನ್ನು ಮಾಡುತ್ತಲೇ ಬಂದಿರುವುದು ಸರ್ವವೇದ್ಯ. ಆದರೆ ಸುಖವು ಯಾರೊಬ್ಬರಿಗಾದರೂ ಕರಗತವಾದದ್ದುಂಟೇ? ಇಲ್ಲ. ಜೀವನವಿಡಿ ಸುಖಾಪೇಕ್ಷಿಗಳಾಗಿದ್ದುಕೊಂಡು, ಜೀವನವಿಡಿ ಸುಖ ಪ್ರಾಪ್ತಿಗಾಗಿ ಹೋರಾಡಿಕೊಂಡು, ಜೀವನವಿಡಿ ಸುಖಾಭಿಲಾಷೆಯನ್ನು ಹೆಚ್ಚಿಸುತ್ತ ಇರುವ ಮನುಜನಿಗೆ ಸುಖವೇಕೆ ಸಿಗಲಿಲ್ಲ? ಇದು ಯಕ್ಷ ಪ್ರಶ್ನೆ.

ನಮ್ಮ ಹೃದಯವನ್ನು ನಾವು ಕೇಳಬೇಕು. ಆಗ, ನಮಗೆ ಭಗವಂತನು ಇನ್ನೂ ಸಾಧ್ಯವಾಗಿ ಪರಿಣಮಿಸಲಿಲ್ಲವೆಂಬ ಸತ್ಯ ವೇದ್ಯವಾಗುವುದು. ನಮ್ಮ ಕಾಲ್ಪನಿಕ ಸುಖ ವೃತ್ತಿಗೆ ಆತನು ಸಾಧನ ಮಾತ್ರವಾಗಿದ್ದಾನೆಂಬುದು ಮನವರಿಕೆಯಾಗುತ್ತದೆ. ಭಗವಂತನ ಚಿನ್ಮಯ ವಿಲಾಸವೊಂದು ಅನಾದಿಕಾಲದಿಂದಲೂ ನಡೆಯುತ್ತ ಬಂದಿದೆ; ಅನಂತ ಕಾಲದ ವರೆಗೂ ನಡೆಯುತ್ತ ಹೋಗುತ್ತದೆ. ತನ್ನ ಪರಮ ಭಕ್ತನಿಗೇನು ಬೇಕೆಂಬುದನ್ನು ಭಗವಂತ ನಮಗಿಂತ ಚೆನ್ನಾಗಿ ಅರಿತಿದ್ದಾನೆ. ಆತನ ನಿರ್ಣಯವೆಂದಿಗೂ ತಪ್ಪಾಗುವುದಿಲ್ಲ. ತಾಯ್ತಂದೆಗಳು ತಮ್ಮ ಮಕ್ಕಳ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಅವರ ಬೇಕು—ಬೇಡಗಳನ್ನು, ಒಳಿತು-ಕೆಡುಕುಗಳನ್ನು ವಿವೇಕಯುತವಾಗಿ ನಿರ್ಣಯಿಸುತ್ತಾರೆ, ಮಕ್ಕಳ ಅವಶ್ಯಕತೆಯನ್ನು ಪೂರಯಿಸಿ, ಅವುಗಳು ಸಂತೋಷದಿಂದ ನಲಿಯುವಂತೆ ಮಾಡುತ್ತಾರೆ.

ಭಗವಂತನು ಮಾನವನಿಗೆ ತಂದೆಯಿದ್ದ ಹಾಗೆ. ತನ್ನ ಭಕ್ತನನ್ನು ಸಂರಕ್ಷಿಸುವುದು ಆತನ ಪ್ರತಿಜ್ಞೆ. ಭಗವಂತ ಸ್ವರೂಪದಲ್ಲಿ ಸದಾಕಾಲ ಅನಂತ ಅಪಾರ ಪ್ರೇಮವು ಅನಂತ ಸಾಗರದ ತೆರೆಗಳಂತೆ ಉಕ್ಕೇರುತ್ತಿರುತ್ತದೆ. ಇದರ ಪ್ರತಿಬಿಂಬವೇ ತಾಯ್ತಂದೆಗಳ ಹೃದಯದಲ್ಲೂ ಗೋಚರವಾಗುತ್ತದೆ. ಆದುದರಿಂದಲೇ ನಮ್ಮ ಮಕ್ಕಳಿಗೆ ಸುಖ ಸಿಗುವಂತಹ ಅನೇಕಾನೇಕ ಪ್ರಯತ್ನಗಳನ್ನು ಅವರು ಮಾಡುತ್ತಿರುತ್ತಾರೆ. ಭಕ್ತನಿಗೆ ಸುಖದೊರೆವಂತೆ ನೋಡಿಕೊಳ್ಳುವ ಭಾರವನ್ನು ಭಗವಂತ ತಾನೇ ವಹಿಸಿಕೊಂಡಿದ್ದಾನೆ.

ಮಾನವನದು ಚಂಚಲ ಮನಸ್ಸು. ತಾನು ಬಯಸಿದ ಒಂದು ವಸ್ತು ದೊರೆಯಿತೆಂದಾದ ಕೂಡಲೇ ಇನ್ನೊಂದರ ಕಡೆಗೆ ಅದು ಹರಿಯುತ್ತದೆ. ಹೀಗೇಕೆ ಆಗುತ್ತದೆ? ಮೊದಲು ತಾನು ಬಯಸಿದ ವಸ್ತುವು ಕರಗತವಾದರೆ ತನಗೆ ಸಂಪೂರ್ಣ ಸುಖ ಸಿಗುವುದೆಂದು ಅದು ನಿರೀಕ್ಷಿಸಿತ್ತು. ಆದರೆ, ವಸ್ತು ಸಿಕ್ಕ ಬಳಿಕ, ಅಂತಹ ಸುಖ ಅದಕ್ಕೆ ದೊರೆಯಲಿಲ್ಲ. ಹಾಗಾಗಿ, ಅದು ಮತ್ತೊಂದು ವಸ್ತುವಿನಲ್ಲಿ ಸುಖದ ಭಾವನೆ ಇಟ್ಟು ಅದನ್ನು ಬೇಡುತ್ತದೆ.

ಹೀಗೆ ಸುಖಾಪೇಕ್ಷೆಯು ಮಾನವನನ್ನು ಒಂದು ಚಕ್ರದಲ್ಲಿ ತಿರುಗುತ್ತಿರುವಂತೆ ಮಾಡುತ್ತದೆ—ಒಂದು ಹೊಸ ಬಗೆಯ ಸುಖದ ಅಭಿಲಾಷೆ—ಅದಕ್ಕಾಗಿ ಬೇಡಿಕೆ—ಬೇಡಿಕೆಯ ಪೂರ್ತಿ ಆದಾದ ಬಳಿಕ ಮತ್ತೆ ನವೀನ ಸುಖಾಭಿಲಾಷೆ—ಬೇಡಿಕೆ—ಪೂರ್ತಿ ಹೀಗೆ ತ್ರಿಕೋನದಲ್ಲಿ ಈ ಚಕ್ರ ಭ್ರಮಿಸುತ್ತಿರುತ್ತದೆ.

ದೇವರು ಮತ್ತು ನಮ್ಮ ಸಂಬಂಧವಾದರೂ ಇದಕ್ಕೆ ಹೊರತಾದುದಲ್ಲ. ನಾವು ಸುಖ ಬಯಸುತ್ತೇವೆ; ದೇವರು ಅದನ್ನು ನೀಡುತ್ತಾನೆ; ಪ್ರಾಪ್ತ ವಸ್ತುವಿನಿಂದ ನಮಗೆ ತೃಪ್ತಿಯಾಗುವುದಿಲ್ಲ; ಹೊಸ ಬಗೆಯ ಸುಖಲಾಲಸೆ ನಮ್ಮಲ್ಲಿ ಉದಿಸುತ್ತದೆ; ಭಗವಂತನು ಅದನ್ನೂ ಪೂರಯಿಸುತ್ತಾನೆ. ಆದರೂ ನಮಗೆ ಸುಖದೊರೆಯುವುದಿಲ್ಲ; ಅತೃಪ್ತಿಯೇ ಹೆಚ್ಚುತ್ತದೆ. ಭಗವಂತನನ್ನೇ ತಮ್ಮ ಲಕ್ಷ್ಯವನ್ನಾಗಿ ಮಾಡಿಕೊಳ್ಳುವುದರಲ್ಲಿ ನಾವು ಅಶಕ್ತರಾಗಿದ್ದೇವೆ. ಎಂತಲೇ ಈ ಬಗೆಯ ಭ್ರಮ ಚಕ್ರದಲ್ಲಿ ಸಿಲುಕಿ ನಾವು ಭ್ರಮಿಸುತ್ತಿದ್ದೇವೆ.

ದೂರದಲ್ಲೊಬ್ಬ ನಮ್ಮ ಮಿತ್ರನಿದ್ದಾನೆ. ನಾವು ಆತನನ್ನು ನೆನಪಿಸಿಕೊಳ್ಳುತ್ತೇವೆ. ಆಗ, ಆತನ ಮೂರ್ತಿ (ಸ್ವರೂಪ) ನಮ್ಮ ಕಣ್ಣ ಮುಂದೆ ಕಾಣಿಸಿಕೊಳ್ಳುತ್ತದೆ. ಆತನ ಶರೀರ ದೂರದಲ್ಲಿರುವುದರಿಂದ ಅದು ಅಗೋಚರ. ಆದರೆ, ಈ ಮಾತು ಭಗವಂತನಿಗೆ ಅನ್ವಯಿಸುವುದಿಲ್ಲ. ಭಗವಂತ ಬೇರೆ, ಆತನ ಸ್ಮರಣೆ ಬೇರೆಯಲ್ಲ. ನಾವು ಭಗವಂತನ ಸ್ವರೂಪವನ್ನು ನಮ್ಮ ಮಾನಸಪಟಲದಲ್ಲಿ ರೂಪಿಸಿಕೊಂಡಾಗಲೇ ಭಗವಂತನೂ ಅಲ್ಲಿ ಗೋಚರವಾಗುತ್ತಾನೆ. ಆದರೆ, ನಾವು ಆತನನ್ನು ಭಾವನಾಚಿತ್ರವೆಂದು ತಪ್ಪು ತಿಳಿದುಕೊಳ್ಳುತ್ತೇವೆ ಆದುದರಿಂದ ಆತನೊಡನೆ ಮಾತನಾಡುವುದಿಲ್ಲ. ಅತ್ಯಲ್ಪ ಕಾಲದಲ್ಲೇ ನಾವು ಅನ್ಯತ್ರ ಮನಸ್ಸು ಹರಿಸಿ ಬಿಡುತ್ತೇವೆ. ಭಗವಂತನ ಇಷ್ಟ ರೂಪವನ್ನೇ ನೆನೆದು ನಮ್ಮ ಚಿತ್ತ ಭಿತ್ತಿಯಲ್ಲಿ ಏಕಾಗ್ರ ಚಿತ್ತದಿಂದ ಅಂಕಿಸಿಕೊಂಡರೆ, ನಾವು ಭಗವಂತನನ್ನು ನಿಜರೂಪದಲ್ಲೇ ಗುರುತಿಸಬಹುದು. ಸರ್ವಾಂತರ್ಯಾಮಿಯಾದ ಭಗವಂತ ನಮ್ಮ ಚಿತ್ತ ಭಿತ್ತಿಯಲ್ಲೂ ಇದ್ದೇ ಇದ್ದಾನೆ. ಇದೇ ಸಾಧನಾ ಪಥ ಭಗವಂತನೇ ಸಾಧ್ಯ.

ಇದು ಹೇಗೆ ಸಾಧ್ಯ? ನಮಗೆ ಹಣ ಬೇಕು. ನಾವೇನು ಮಾಡುತ್ತೇವೆ? ನಮ್ಮ ಮನಸ್ಸನ್ನು ಹಣದ ಮೇಲೆಯೇ ಕೇಂದ್ರೀಕರಿಸುತ್ತೇವೆ. ಹಾಗೆಯೇ ಭಗವಂತನು ನಮಗೆ ಬೇಕಾದರೆ, ಆತನಲ್ಲೇ ಮನಸ್ಸನ್ನು ಕೇಂದ್ರೀಕರಿಸುವುದು ಅಗತ್ಯ. ಹಣವನ್ನು ಬಯಸಿದ ಮಾತ್ರಕ್ಕೆ ಅದು ನಮ್ಮ ಕೈಸೇರುವುದಿಲ್ಲ; ಅದಕ್ಕೋಸ್ಕರ ದುಡಿಯಬೇಕು; ಬೆವರು ಸುರಿಸಬೇಕು. ನಮ್ಮ ದುಡಿಮೆಯಾದರೂ ಸಫಲವಾದೀತೆಂಬ ನಂಬಿಕೆಯಿಲ್ಲ; ಬೆವರು ನೆರೆನೀರಿನಂತೆ ವ್ಯರ್ಥವಾಗಿ ಹರಿಯಬಹುದು. ಹಾಗಿದ್ದರೂ ಇಚ್ಛೆಯು ಅನಿರ್ಬಂಧಿತವಾಗಿರಲೇಬೇಕು. ದೇವರ ಸಂಗತಿಯಲ್ಲಿ ಇಂತಹ ಅಪನಂಬಿಕೆಯೆಂಬುದಿಲ್ಲ. ಆತನು ಸರ್ವವ್ಯಾಪಿಯಾದುದರಿಂದ ಪಡೆಯುವ ಅಭಿಲಾಷೆ ಮಾತ್ರ ತೀವ್ರವಾಗಿರಬೇಕು. "ನೀನ ನನ್ನವನಾಗು" ಎಂದ ಮಾತ್ರಕ್ಕೆ ಆತ ನಮ್ಮವನಾಗಿ ಬಿಡುತ್ತಾನೆ. "ಸುಲಭನೋ ಹರಿ" ಎಂದು ದಾಸರು ಹಾಡಿಲ್ಲವೆ? ಆದರೆ, ಏಕಾಗ್ರಚಿತ್ತತೆ ಮಾತ್ರ ಅಗತ್ಯ.

ನಾವು ದೇವರಿಗಿಂತ ಹೆಚ್ಚಾಗಿ ಅನ್ಯ ವಸ್ತುಗಳತ್ತ ಮನಸ್ಸು ಹರಿದಾಡಿಸುತ್ತೇವೆ. ನಮ್ಮ ಭೌತಿಕ ಅವಶ್ಯಕತೆಗಳನ್ನೇ ಮೇರುವನ್ನಾಗಿ ಮಾಡಿ ಅವುಗಳಿಗೇ ನಾವು ತಹತಹಿಸುತ್ತೇವೆ. ಹಾಗಿರುವಾಗ ನಮ್ಮ ದೃಷ್ಟಿಯಲ್ಲಿ ದೇವರಿಗಿಂತಲೂ ಈ ನಶ್ವರ ವಸ್ತುಗಳೇ ಶ್ರೇಷ್ಠವೆಂಬ ಭಾವನೆ ಮೂಡಿದೆಯೆಂದೇ ಅರ್ಥ. ನಮ್ಮ ಚಿತ್ತಪಟಲದಲ್ಲಿ ದೇವರು ಯಾವಾಗಲೂ ಕಾಣಿಸಿಕೊಳ್ಳುತ್ತಾನೆ? ಹೃತ್ಪೂರ್ವಕ ಅಭಿಲಾಷೆ ಮೂಡಿದಾಗಲೇ ಭಗವಂತನು ಅದನ್ನು ಪೂರ್ಣಮಾಡುತ್ತಾನೆಂಬುದು ಅನುಭವ ವೇದ್ಯ. ಇದು ಆತನ ಬಗ್ಗೆಯೂ ಸತ್ಯ.

ಪೂರ್ಣ ಮನಸ್ಸಿನಿಂದ ಮಾಡಿದ ಕೆಲಸವಷ್ಟೇ ಪರಿಣಾಮಕಾರಿ. ಆದುದರಿಂದ ದೇವರನ್ನು ಒಲಿಸಿಕೊಳ್ಳುವುದಕ್ಕಾದರೂ ಪರಿಪೂರ್ಣ ಮನಸ್ಸು ಬೇಕೇ ಬೇಕು. ಇದರಿಂದಲೇ ಸಂಪೂರ್ಣ ಸುಖ ಪ್ರಾಪ್ತಿಯಾಗುವುದು.

ಸಂಗ್ರಾಹ್ಯ ಸಂಕಲನಗಳು

ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—50
ಪಂಚಗಜ್ಞಾಯ	2—00
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಏಕಾಂಕ ನಾಟಕಗಳು	1—00
ಭಾರತದ ನಾಲ್ಕು ಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80

ನವಭಾರತ ಪುಸ್ತಕ ಭಂಡಾರ,
ಉಡುಪಿ.

Gram: VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಆಯೋಗ ರಚನೆ—

ರಾಜಕೀಯ ನಿರಾಶ್ರಿತರ ಶಿಬಿರ

ತಮಿಳುನಾಡಿನ ಶ್ರೀ ಸಿ. ಸುಬ್ರಹ್ಮಣ್ಯಂರವನ್ನು ಇಂಡಿಕೇಟಿನ ಮಧ್ಯಾವಧಿ ಅಧ್ಯಕ್ಷರಾಗಿ ವಿವಾದಾತ್ಮಕ ವ್ಯಕ್ತಿಯಾದರು. ಅವರನ್ನು ರಾಜ್ಯ ಸಭೆಗಾದರೂ ಎಳೆದು ತಂದು ಮಂತ್ರಿ ಮಾಡಿ ಬಾಯಿ ಮುಚ್ಚಿಸಲು ಶ್ರೀಮತಿ ಗಾಂಧಿ ಮಾಡಿದ ಪ್ರಯತ್ನ ನಿಷ್ಫಲವಾಯಿತು. ಅಧಿಕಾರದಿಂದ ಹೊರಗಿದ್ದ ವೇಳೆ ಸರಕಾರವನ್ನೂ ಅದರ ನೀತಿಯನ್ನೂ ಟೀಕಿಸುವ ಚಟ ಅವರಿಗೂ ಅಂಟಿದ್ದು ಸಹಜವೇ. ಆದುದರಿಂದ ದಕ್ಷಿಣದ ತನ್ನ ಪಕ್ಷೀಯ ಬಂಟನೊಬ್ಬನನ್ನು ಎಂತಾದರೂ ಮಾಡಿ ಬಾಯಿ ಮುಚ್ಚಿಸುವುದು ಶ್ರೀಮತಿ ಗಾಂಧಿಗೆ ಬೇಕಾಗಿದೆ.

ದಕ್ಷಿಣದ ಪತೆದ್ರಷ್ಟ ಇಂದಿರಾ ಭಕ್ತ ಶ್ರೀ ಕೆಂಗಲ್ ಹನುಮಂತಯ್ಯ. ಆದರೆ, ಈ ವ್ಯಕ್ತಿ ಹೀಗೇ ಎಂದು ಆಕೆಯನ್ನೂ ತಿಳಿಯಲು ಅಶಕ್ತರು. ಶ್ರೀಮತಿ ಗಾಂಧಿಯಲ್ಲಿ ವಿಶ್ವಾಸವಿಡಬೇಕು ಎನ್ನುವ ಅವರೇ, ನಾನೇನೂ ಆಕೆಯ ಗುಲಾಮನಲ್ಲವೆಂಬರ್ಥದ ಮಾತುಗಳನ್ನೂ ಆಡುತ್ತಾರೆ. ನೆಲದ ಮೇಲಿರುವಷ್ಟೇ ಅಡಿಯಲ್ಲೂ ಇವರಿರುವುದರಿಂದ ಶ್ರೀಮತಿ ಗಾಂಧಿ ಈ ಜನದಿಂದ ತನ್ನ ಬೇಳೆ ಬೇಯಿಸುವುದು ಅಸಾಧ್ಯವೆಂದು ತಿಳಿದುಕೊಂಡಿದ್ದಾರೆ. ಆದುದರಿಂದ ಶ್ರೀ ಕೆಂಗಲ್ಲರನ್ನು ಮುಂದಿನ ಬಾರಿ ಸಂಪುಟ ರಚಿಸುವ, ಪುನರ್ಘಟಿಸುವ ಅವಕಾಶವೊದಗಿದರೆ, ಆಕೆ ಕೈಬಿಟ್ಟರೂ ಆಶ್ಚರ್ಯವಲ್ಲ. ತನ್ನ ಆರಂಭದ ಬಂಟರಾದ ಶ್ರೀ ದೇವರಾಜ ಅರಸರಾದಿಗಳಲ್ಲಿ ಯಾರಾದರೊಬ್ಬರು ಲೋಕಸಭೆಯಲ್ಲಿರುತ್ತಿದ್ದರೆ, ಕೆಂಗಲ್ಲರು ಬೆಂಗಳೂರಲ್ಲೇ ಉಳಿಯುತ್ತಿದ್ದರು. ಶ್ರೀ ಕೆಂಗಲ್ಲರಿಗೆ ಇವನ್ನು ಹಳೆಯ ವೈಷಮ್ಯಗಳಲ್ಲಿ ದೆಂಬಲಿಸಿದ್ದಾಗ; ಅಂತಲೇ ಅವರು ಇಂದಿರಮ್ಮನಿಗೆ ಇಂದು ಬೇಕಾಗಿದ್ದಾರೆ.

ಶ್ರೀ ಸಿ. ಸ. ರವರು ಶ್ರೀ ಕೆ. ಹ. ವರಂತಲ್ಲ. ಇಡಿಯ ಮದ್ರಾಸ್ ಸರಕಾರವನ್ನು ತಾನೊಬ್ಬನೇ ಮುಖ್ಯಮಂತ್ರಿಯಾಗದೇ ನೇ ನಡೆಸಿಕೊಂಡ ಕೀರ್ತಿ ಅವರಿಗಿದೆ; ಕೇಂದ್ರದಲ್ಲೂ ಮಂತ್ರಿಯಾದ ಅನುಭವವಿದೆ; ಇನ್ನೂ ಆಗುನಕ್ಷರಗಡಿ ದಾಟದ ತರುಣ ರಕ್ತ ಅವರ ಧಮನಿಗಳಲ್ಲಿ ಹರಿಯುತ್ತಿದೆ. ಅಧಿಕಾರವೊಂದು ಕೊಟ್ಟು ಬಿಟ್ಟರೆ, ಇಂದಿರಾ ಪಕ್ಷವನ್ನು ಒಳ್ಳೆಯ ರೀತಿಯಲ್ಲಿ ಪ್ರಚಾರಕ್ಕೆ ತಂದರೂ ತರುವ ಸಾಧ್ಯತೆ ಇದೆ. ಏಕೆಂದರೆ; ಕಾಮರಾಜರು ಎಪ್ಪತ್ತರ ಗಡಿ ತಲುಪಿದ ಮೇಲೆ ಅವರ ಬಲ ಕಾಣಾಗೇ ಕುಸಿಯದಿದ್ದೀತೆ?

ಕೇಂದ್ರ ಸರಕಾರವು ರಾಷ್ಟ್ರೀಯ ಕೃಷಿ ಆಯೋಗವೊಂದನ್ನು ರಚಿಸುವುದೆಂದು ಕೇಳಿ ಸಂತೋಷವಾಗುತ್ತದೆ; ಆದರೆ, ಇದಕ್ಕೆ ಶ್ರೀ ಸಿ. ಸ. ರವನ್ನು ಅಧ್ಯಕ್ಷರನ್ನಾಗಿ ಮಾಡುತ್ತಾರೆ ಎಂದು ಕೇಳುವಾಗ ಮೇಲಿನ ಸಂಗತಿಗಳೆಲ್ಲ ನೆನಪಿಗೆ ಬರುತ್ತದೆ.

ಆಯೋಗವು ದೇಶದ ಕೃಷಿ ಕ್ಷೇತ್ರದಲ್ಲಿ ಆಗಿರುವ ಪ್ರಗತಿಯನ್ನು ಗಮನಿಸುತ್ತದೆ; ಮುಂದಿನ ಅಭಿವೃದ್ಧಿಯ ಬಗ್ಗೆ ಚಿಂತಿಸಿ ಶಿಫಾರಸುಗಳನ್ನು ಮಾಡುತ್ತದೆ. ಕೃಷಿಗೆ ದೊರೆಯುವ ಜಮೀನು, ನೀರಾವರಿ ಸೌಲಭ್ಯಗಳನ್ನು ಅಧ್ಯಯನಿಸುತ್ತದೆ. ಪಶು ಸಂಗೋಪನೆ, ಪಶುಸಂಗೋಪನೆ ಮತ್ತು ಅರಣ್ಯಗಳ ಅಭಿವೃದ್ಧಿಯ ಬಗ್ಗೆ ಅಭ್ಯಸಿಸುತ್ತದೆ. ಕೃಷಿ ಸಂಶೋಧನೆ, ಅದನ್ನು ಕಾರ್ಯರೂಪಕ್ಕೆ ತರುವ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸುತ್ತದೆ. ಕೃಷಿ ಉತ್ಪನ್ನಗಳ ಸಾಗಾಣಿಕೆ, ಶೇಖರಣೆ, ವಿಕ್ರಯಗಳ ಬಗೆಗೆ ಅಧ್ಯಯನ ನಡೆಸುತ್ತದೆ. ಸಣ್ಣ ರೈತರ ಸಮಸ್ಯೆಗಳು, ಉದ್ಯೋಗಾವಕಾಶಗಳು, ಕೃಷಿ ಕಾರ್ಮಿಕರಿಗೆ ಸಾಮಾಜಿಕ ನ್ಯಾಯ ಮತ್ತು ಸಮಾನಾವಕಾಶ, ಭೂಸುಧಾರಣಾ ಕ್ರಮಗಳು, ಹಿಡುವಳಿಗಳ ಕ್ರೋಢೀಕರಣ, ಕೃಷಿ ಉತ್ಪನ್ನಗಳ ಬೆಲೆ, ಮೊದಲಾದ ಅಂಶಗಳನ್ನೂ ನಿಯೋಜಿತ ಆಯೋಗವು ಪರಿಶೀಲಿಸುತ್ತದೆ.

ಈ ಆಯೋಗದ ಕಾರ್ಯವ್ಯಾಪ್ತಿಯು ಇಡಿಯ ಕೃಷಿರಂಗಕ್ಕೆ ವಿಸ್ತರಿಸಿದೆಯೇನೋ ನಿಜ. ಕೃಷಿ ಪ್ರಧಾನವಾದ ದೇಶದಲ್ಲಿ ಇಂತಹ ಆಯೋಗವೊಂದು ಎಂದೋ ನೇಮಕಗೊಳ್ಳಬೇಕಿತ್ತು ಎಂಬುದೂ ಸತ್ಯಕ್ಕೆ ದೂರವಲ್ಲ. ಆದರೆ, ಈಗ ನಿಯೋಜಿತವಾದ ತಜ್ಞಗಳಂತೆ ಆಯೋಗಕ್ಕೆ ಇರುವ ಅಧಿಕಾರವೆಂದರೆ ಶಿಫಾರಸು ಮಾಡುವುದು. ಈ ಶಿಫಾರಸುಗಳನ್ನು ಸರಕಾರ ಒಪ್ಪಬೇಕೆಂದೇನೂ ಇಲ್ಲ; ಒಪ್ಪುವುದೂ ಇಲ್ಲ.

ಆಯೋಗವು ಸುಮಾರು ಎರಡು ವರ್ಷಗಳಲ್ಲಿ ತನ್ನ ವರದಿಯನ್ನು ಸಲ್ಲಿಸುತ್ತದೆಂದು ನಿರೀಕ್ಷೆ. ಈ ವೇಳೆಗಾಗಲೇ ಐದನೆಯ ಸಾರ್ವತ್ರಿಕ ಚುನಾವಣೆಗಳ ಬಿಸಿ ವಾತಾವರಣ ಆರಂಭವಾಗುತ್ತದೆ. ಇದನ್ನು ಗಮನಿಸಿದಾಗ, ಶ್ರೀಮತಿ ಗಾಂಧಿಯವರು ಚುನಾವಣಾ ಪೂರ್ವ ತಂತ್ರವನ್ನೇ ಆಯೋಗ ರಚನೆಯಲ್ಲಿ ತೋರಿಸಿದ್ದಾರೆನ್ನಬೇಕು. ರೈತ ಜನರಲ್ಲಿ ಹುಟ್ಟಿರುವ ತೀವ್ರ ನಿರಾಶೆಯು ಚುನಾವಣೆಗಳಲ್ಲಿ ತನಗೆ ಮಾರಕವಾಗದಂತೆ ಒಡ್ಡು ಹಾಕುವ ಪ್ರಯತ್ನವಿದು ಎಂದು ಸ್ಪಷ್ಟವಾಗುತ್ತದೆ.

ಆಯೋಗವೇನೇ ಶಿಫಾರಸು ಮಾಡಲಿ, ಅದನ್ನು ಒಪ್ಪುವುದು-ಬಿಡುವುದು ಸರಕಾರಕ್ಕೆ ಸೇರಿದ್ದು. ಆಯೋಗವು ವರದಿ ಒಪ್ಪಿಸಬಹುದಾದ ಹೊತ್ತಿಗೆ ತಾನೇ ಪ್ರಧಾನಿ ಮಂತ್ರಿಯಾಗಿ ಉಳಿಯುತ್ತೇನೆಂಬ ಎಣಿಕೆಯೂ ಶ್ರೀಮತಿ ಗಾಂಧಿಗೆ ಇರುವುದಿಲ್ಲ. ಈ ಆಯೋಗದ ಪೂರ್ಣಾವಧಿ—ಅಂಶಾವಧಿ ಸದಸ್ಯರೆಂದು ತನ್ನ ಚೇಲರಿಗೊಂದು ಸಣ್ಣ ಉದ್ಯೋಗ ಕೊಡುವುದೇ ಆಕೆಯ ತಂತ್ರ—ಭಾವೀ ಚುನಾವಣೆಗಳಲ್ಲಿ ಗೆಲ್ಲುವ ಸಿಟ್ಟಿನಲ್ಲಿ. ಇದುವರೆಗೆ ಭೂಸುಧಾರಣೆಯ ಮಂತ್ರ ಜಪಿಸಿ ಓಟು ಪಡೆಯುತ್ತಿದ್ದದ್ದು, ಈಗ ಅದು ಮಂತ್ರ ಶಕ್ತಿಹೀನವಾದದ್ದು ಲೋಕವಿಖ್ಯಾತ. ಆದಕ್ಕಾಗೇ ಕೃಷಿ ಆಯೋಗದ ನೇಮಕದ ಆಮಿಷವನ್ನು ಆಕೆ ಮುಂದೂಡಿದ್ದಾರೆ.

ಕೃಷಿ ಆಯೋಗದ ಅಧ್ಯಕ್ಷಸ್ಥಾನಕ್ಕೆ ಶ್ರೀ ಸಿ. ಸ. ರವರಿಗಿಂತಲೂ ಯೋಗ್ಯ ವ್ಯಕ್ತಿ ಇಂದಿರಮ್ಮನಿಗೆ ದೊರೆಯಲಿಲ್ಲ! ಭಾರತದಂತಹ ವಿಶಾಲ ರಾಜ್ಯದಲ್ಲಿ ಕೃಷಿಯಲ್ಲೇ ತಮ್ಮ ಆಯುಷ್ಯವನ್ನು ಸವೆದು ಅದರ ಸಮಸ್ಯೆಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡ ಸುಶಿಕ್ಷಿತ-ಅನುಭವಿ ರೈತರಿಗೇ ಕೊರತೆ! ರಾಜಕೀಯ ಪುಢಾರಿಗಳು ರಾಜಕೀಯ ಶಿಫಾರಸುಗಳನ್ನಷ್ಟೇ ಮಾಡುತ್ತಾರೆ. ಇದರಿಂದ ಕೃಷಿರಂಗಕ್ಕೆ ಕಾಸಿನ ಪ್ರಯೋಜನವಿಲ್ಲ; ದೇಶದ ಬೊಕ್ಕಸಕ್ಕೆ ಮಾತ್ರ ದೊಡ್ಡ ತೂತು.

ಆಯೋಗಕ್ಕೆ ನೇಮಕಗೊಳ್ಳುವ ಸದಸ್ಯರಲ್ಲಾದರೂ ಕೃಷಿತಜ್ಞರಿಗೆ ಸ್ಥಾನ ನೀಡಿದರೆ, ವರದಿಯು ಕ್ರಾಂತಿಕಾರಿಯಾಗಿ ಒಂದರೂ ಬರಬಹುದು-ಆದರೆ, ಇಂತಹ ವರದಿಯನ್ನು ಕಾರ್ಯರೂಪಕ್ಕೆ ತರುವ ತಾಕತ್ತು ಸಮಗಿದೆಯೆ? ಶಿಕ್ಷಣ ಶಿಕ್ಷಕರ ಬಗ್ಗೆ ಕೊಠಾರಿ ಆಯೋಗ ಸಲ್ಲಿಸಿದ ಕ್ರಾಂತಿಕಾರಿ ವರದಿಯಲ್ಲಿ ಅದೆಷ್ಟು ಭಾಗವನ್ನು ನಾವು ಕಾರ್ಯಕೃತಗೊಳಿಸಿದ್ದೇವೆ? ಶಿಕ್ಷಕರ ವೇತನ-ಸಾರಿಗೆಗಳ ಸುಧಾರಣೆಯತ್ತ ಎಷ್ಟು ಸರಕಾರಗಳು ಗಮನ ಕೊಟ್ಟಿವೆ.ಂಟಿ? ಶ್ರೀ ಸಿ. ಸು. ಆಯೋಗದ ಶಿಫಾರಸುಗಳು ಇದಕ್ಕಿಂತ ಬೇರೆಯಾಗಲಾರವು. ಸರಕಾರಿ ಗೋದಾಮಿನಲ್ಲಿ ಬೀಳುವ ಕಡತಗಳಲ್ಲಿ ಇದೂ ಒಂದಾಗುವುದು.

ಯಾವುದೇ ಆಯೋಗ ನೇಮಿಸುವಾಗ, ಅದರ ಶಿಫಾರಸುಗಳನ್ನು ಕಟ್ಟುನಿಟ್ಟಾಗಿ ಕಾರ್ಯರೂಪಕ್ಕೆ ತರುವ ದೃಢ ನಿರ್ಧಾರ ಬೇಕು. ಕೆಲವು ಪುಢಾರಿಗಳಿಗೆ ಮಾಸಾಶನ ನೀಡುವ ಉದ್ದೇಶದಿಂದ ಆಯೋಗಗಳು ಏಕೆ ರಚನೆಗೊಳ್ಳಬೇಕು? ಜನರು ಕಷ್ಟದಿಂದ ತೆರುವ ತೆರಿಗೆಯ ಹಣ ಏಕೆ ವ್ಯರ್ಥವಾಗಿ ಅಪವ್ಯಯವಾಗಬೇಕು? ಸರಕಾರವು ನೇಮಿಸುವ ಆಯೋಗಗಳು 'ರಾಜಕೀಯ ನಿರಾಶ್ರಿತರ ಶಿಬಿರ'ಗಳಾಗಿರುವ ವರೆಗೆ ದೇಶಕ್ಕೆ ಲಾಭವಿಲ್ಲ; ಹಾನಿ ಮಾತ್ರ ತಪ್ಪಿದ್ದಲ್ಲ.

ಗಾಂಧಿಯವರ ಸ್ವಾತಂತ್ರ್ಯ ದಿನದ ಸಂದೇಶ

ಭಾರತವು ಸ್ವತಂತ್ರವಾದ ರಾತ್ರಿ ಗಾಂಧಿಯವರು ಎಲ್ಲಿ ಮಲಗಿದ್ದರು ಗೊತ್ತೇ? ಕಲಕತ್ತೆಯಲ್ಲಿ ಬೇಲಿಯಾಘಾಟ ಎಂಬುದೊಂದು ಎಡೆ. ಬಡವರ ಹಾಗೂ ಅಪಾಯಕಾರಿ ಗಲ್ಲಿ ಇದೆ. ಬಡವರ ಪಕ್ಷಪಾತಿಯಾದ ಗಾಂಧಿ ಅಲ್ಲಿಯೇ ಹೋಗಿ ಉಳಿದಿದ್ದರು ಚಿಕ್ಕದೊಂದು ಮನೆಯಲ್ಲಿ.

ಜೊತೆಗಿದ್ದ ಮಂಚ ಒಂದರ ಮೇಲೆ ಗಾಂಧಿಯವರ ಬಗ್ಗೆ ಹಾಸಿಗೆ ಹಾಸಿದ್ದರು! ಮತ್ತು ಉಳಿದವರೆಲ್ಲ ನೆಲದ ಮೇಲೆಯೇ ಸಿಕ್ಕಿದ್ದು ಹಾಸಿಕೊಂಡು ಮಲಗುವ ತಯಾರಿ ಮಾಡಿದ್ದರು.

ಗಾಂಧಿಯವರು ಅಲ್ಲಿಗೆ ಬಂದು ಮಲಗುವ ಬಗ್ಗೆ ಮಾಡಿದ ವ್ಯವಸ್ಥೆಯನ್ನು ನೋಡಿ ಹೇಳಿದರು "ನಿಮಗೆಲ್ಲ ನೆಲದ ಮೇಲೆ ಮಲಗಿಸಿ ನಾನೊಬ್ಬನೇ ಮಂಚದ ಮೇಲೆ ಮಲಗಲಾರೆ. ನನ್ನ ಹಾಸಿಗೆಯನ್ನೂ ನೆಲದ ಮೇಲೆಯೇ ಹಾಸಿಡಿ" ಎಂದು.

ಅದೇ ರಾತ್ರಿ, ದಿಲ್ಲಿಯಲ್ಲಿಯೂ ಇಡೀ ಭಾರತದಲ್ಲಿಯೂ ಭಾರತೀಯರೆಲ್ಲ ಭಾರೀ ಸ್ವಾತಂತ್ರ್ಯೋತ್ಸವ ನಡೆಸಿದ್ದರು! ಮತ್ತು ಅದೇ ಹೊತ್ತಿನಲ್ಲಿ ರಾಷ್ಟ್ರಪಿತಾ ಗಾಂಧಿಯವರು ಬಡವರ ಗುಡಿಸಲಿನಲ್ಲಿ ಬಡವರಂತೆಯೇ ಇದ್ದು ನಾವು ಇನ್ನೂ ಏನೇನು ಮಾಡುವುದು ಬಾಕಿ ಇದೆ ಎಂಬುದನ್ನು ಪ್ರತ್ಯಕ್ಷ ಆಚರಣೆಯಿಂದ ತೋರಿಸುತ್ತ ಇದ್ದರು!

ಉದಾರತನವು ಪಾಪದ ಸಮೂಹವನ್ನು ಸುಟ್ಟು ಹಾಕುತ್ತದೆ.

○ ○ ○

ಶ್ರಮವು ಜೀವನದ ಸೌಂದರ್ಯವಾಗಿದೆ.

○ ○ ○

ಶುದ್ಧ ವ್ಯವಹಾರದ ಮೂಲ ಸತ್ಯದ ಉಪಾಸನೆ ಹಾಗೂ ಧರ್ಮ.

○ ○ ○

ಹೃದಯದ ವಿಶಾಲತೆಯೇ ಉನ್ನತಿಯ ತಳಹದಿ.

○ ○ ○

ಯಾರಲ್ಲಿ ಲೋಭವಿದೆಯೋ ಅವರಿಗೆ ಇತರ ಅವಗುಣದ ಅವಶ್ಯಕತೆಯೇ ಇಲ್ಲ.

○ ○ ○

ಐಕ್ಯವು ಅಮೃದ ಗುಣ.

○ ○ ○

ವಿಚಾರವೇ ಚಂಚಲ್ಯದಲ್ಲಿ ಪರಿಣತವಾಗುತ್ತದೆ.

○ ○ ○

ಅತಿಥಿ ಸತ್ಕಾರದಲ್ಲಿ ವಂಚನೆ ಮಾಡುವುದು ಎಲ್ಲಕ್ಕಿಂತ ಹೆಚ್ಚಿನ ದರಿದ್ರತನವು.

○ ○ ○

ವಾಸನೆಗಳು ವಿಷಪೂರಿತ ಹಾವಿನ ಹಲ್ಲುಗಳಂತಿವೆ.

○ ○ ○

ನವಯುಗದ ಹೊಸ ವರ್ಷ

ಚಂದಾದಾರರಲ್ಲಿ ವಿನಂತಿ

ಇದೇ ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 49ನೆಯ ವರ್ಷ ಮುಗಿದು ಈ ತಿಂಗಳಿಂದ 50ನೆಯ ಹೊಸ ವರ್ಷಾರಂಭವಾಗಿದೆ. ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಅದಷ್ಟು ತ್ವರಿತವಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ. ಚಂದಾಹಣವನ್ನು ಮನಿಆರ್ಡರು ಮೂಲಕ, ಯಾ ಇಂಡಿಯನ್ ಪೋಸ್ಟಲ್ ಆರ್ಡರು ಮೂಲಕ ಕಳಿಸಬಹುದು. ಇಲ್ಲವೆ ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಪಾವತಿ ಮಾಡಬಹುದು. ಹಾಗೆ ಪಾವತಿ ಮಾಡುವಾಗ ತಮ್ಮ ಚಂದಾನಂಬ್ರ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇವೆ.

ಮೆನೇಜರ್.

ಯು. ಯಸ್. ಯಸ್. ಆರಿನಂತೆ ಯು. ಯಸ್. ಐ.

(ಐದನೇ ಪುಟದಿಂದ)

ಜೊರ್ಜೆ ಪಿ ಪ್ರಧಾನಮಂತ್ರಿಯವರಿಗೆ ಬರೆದ ಚೀಟಿಯ ಕುರಿತ ತಕರಾರು ನಡೆದಿರುವುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬೇಕು.] ತಮಿಳ್ನಾಡಿನ ಜಾಬಿನ್ ಈ ರೀತಿ ಇದೆ:

In a Communication to the Government of India the Government of Tamilnadu has made it very clear that the proposed flag,
(1) Will be used by the Ministers
(2) It will be used only within the State and
(3) It will not replace the national flag and the national flag will be used as usual during the national festivals and flown over the Government buildings.

[ತಮಿಳ್ನಾಡ ಸರಕಾರವು ಒಂದು ವರದಿಯ ಮೂಲಕ ಭಾರತ ಸರಕಾರಕ್ಕೆ ಪ್ರಸ್ತಾಪಿಸಿದ ಧ್ವಜವನ್ನು
(೧) ಮಂತ್ರಿಗಳು ಉಪಯೋಗಿಸುವರು
(೨) ರಾಜ್ಯದೊಳಗೆ ಮಾತ್ರ ಉಪಯೋಗಿಸಲಾಗುವದು ಮತ್ತು
(೩) ರಾಷ್ಟ್ರೀಯ ಧ್ವಜದ ಸ್ಥಾನವನ್ನು ಅದು ಪಡೆಯುವದಿಲ್ಲ ಮತ್ತು ರಾಷ್ಟ್ರೀಯ ಉತ್ಸವಗಳ ಸಮಯ ಮತ್ತು ಸರ್ಕಾರೀ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವನ್ನು ಯಥಾಪ್ರಕಾರವಾಗಿ ಹಾರಿಸಲಾಗುವದೆಂಬುದನ್ನು ಸ್ಪಷ್ಟವಾಗಿ ತಿಳಿಸಿರುತ್ತದೆ.]

ಇಲ್ಲಿ ಪ್ರಸ್ತಾಪಿತ ಧ್ವಜವೆಂದಿದೆ ವಿನಃ ಮೂರನೆಯದಿಲ್ಲ. ಇದರೊಡನೆ ಆಕ್ಸ್‌ಫೋರ್ಡ್ ಡಿಕ್ಷನರಿಯಲ್ಲಿ ಇಂದಿರಾ ಗಾಂಧಿಯವರು ಸ್ಟಾಂಡರ್ಡ್ ಅಂದರೆ, ಹಳ್ಳಿಗುಗ್ಗರಿಗೆ ಹಿಂದುಳಿದಿರುವ ರಾಷ್ಟ್ರಗಳವರಿಗೇನು ವರ್ಣ್ಣ ಗೊತ್ತಿರಬಹುದು. ಸ್ಟಾಂಡಾರ್ಡೆಂದರೂ ಧ್ವಜ, ಪತಾಕೆ, ಬಾವುಟ, ನಿಶಾನೆಯೆನ್ನುವ ಅರ್ಥವೂ ಇದೆ. ಹಾಗಿರುವಾಗ ಅವರ ಧ್ವಜ ಕೇಳಿಲ್ಲ ಪತಾಕೆ ಕೇಳಿದ್ದಾರೆನ್ನುವದರ ಮರ್ಮವಾದರೂ ಏನ? ಶಾಲೆಗೆ ಹೋಗುವ ಮಕ್ಕಳಿಗೂ ಸ್ಟಾಂಡರ್ಡೆಂದರೇನೆಂಬುದು ಗೊತ್ತು. ಹಾಗಿರುವಾಗ ಇಂದಿರಜ್ಜಿಯವರ ಸ್ಟಾಂಡಾರ್ಡ್ ಅದೇನಿದೆಯೋ? ಅವರಿಗಾದರೂ ಅದು ಗೊತ್ತಿದೆಯೋ ಇಲ್ಲವೋ!

ಶ್ರೀಮತಿ ಇಂದಿರಾಜೀಯವರ ಲಿಖಿತ ಹೇಳಿಕೆಗೂ ತಮಿಳ್ನಾಡ ಸರಕಾರದ ಜಾಬಿನಾತಿಗೂ ವ್ಯತ್ಯಾಸ ಇಲ್ಲವೇನ?

ಜಾಬಿನ ತಿನ ಪ್ರಕಾರ ಈ ಪತಾಕೆಯನ್ನು ತಮಿಳ್ನಾಡಿನೊಳಗೆ ಮಾತ್ರ ಮಂತ್ರಿಗಳು ಉಪಯೋಗಿಸುತ್ತಾರೆಂದಿದೆ. ಆದನ್ನವರು ಕಾರಿನಲ್ಲಿ ಉಪಯೋಗಿಸುತ್ತಾರೋ, ಎದೆಗೆ ಚುಚ್ಚಿಕೊಳ್ಳುತ್ತಾರೋ ಗೊತ್ತಿಲ್ಲ. ಸಂಯುಕ್ತ ಸಂಸ್ಥಾನದಲ್ಲಿ ಗುರುತಿಸಿಕೊಳ್ಳುವ ಸಮಸ್ಯೆಗೆ ಅಸ್ಪದ ಇಲ್ಲೆಲ್ಲಿದೆ? ದಿಲ್ಲಿಗೆ ಇಂತಹ ಧ್ವಜಗಳು ಬಂದರೆ ತಾನೇ, ಆಗ ಈ ಸಮಸ್ಯೆ. ಮದರಾಸು ಮಂತ್ರಿಗಳು ಕಾರಿನಲ್ಲೇ ದಿಲ್ಲಿಗೆ ಹೋಗುತ್ತಾರೇನ?

ಇನ್ನು ಮುಖ್ಯಮಂತ್ರಿಗಳ ಬಳಿ ವಿಚಾರಿಸಿ, ಆಲೋಚಿಸಿ ಎಲ್ಲಾ ಪ್ರಶ್ನೆಗಳನ್ನು ಪ್ರಧಾನಿಯವರು ಪರಿಹರಿಸಿಕೊಳ್ಳುವದಾದಲ್ಲಿ ಸಂಸದಿನ ಆವಶ್ಯಕತೆಯೊದರೂ ಏನ? ಇಂದಿರಾಜೀಯವರ ಇಷ್ಟ ಭಾರತವನ್ನು ಯುನೈಟೆಡ್ ಸ್ಟೇಟ್ಸ್ ಆಫ್ ಸೋಷಿಯಲಿಸ್ಟ್ ಇಂಡಿಯಾವನ್ನಾಗಿ ಮಾಡುವದೇ ಇದೆ. ಬಂಗಾಲ, ಕೇರಳಗಳ ಗೂಂಡಾಗಳು ಬಂದೆದ್ದು 'ಸ್ವತಂತ್ರ ರಾಜ್ಯ'ವನ್ನು ಸ್ಥಾಪಿಸಿ ಪ್ರತ್ಯೇಕ ಧ್ವಜವನ್ನು ಹಾರಿಸಿದಲ್ಲಿ ಇಂದಿರಾಜೀ ಸಂತೋಷಿಸದಿರಲಾರರು.

ಇಂದಿರಾಜೀಯವರ ಸ್ವೇಚ್ಛೆಗೆ ತ್ರಿರಂಗ ಸರಿ ಬಂದಿರುವದಿಲ್ಲ. ಅದನ್ನು ಕೆಳಗಿಳಿಸಿ ಕೆಂಪು ಕೇತುವನ್ನು ಹಾರಿಸಲು ಅವರು ಇಚ್ಛಿಸಿದ್ದಾರೆ—ಅಥವಾ ಬಲಾತ್ಕಾರಕ್ಕೊಳಗಾದ್ದಾರೆ. ಅದಕ್ಕಾಗಿಂದಲೇ ಆಗೋಸ್ಟ ಹದಿನೈದರಂದು ತ್ರಿರಂಗವನ್ನು ಅವರು ಮೇಲೇರಿಸಲು ಒಪ್ಪದೆ, ತಪ್ಪಿಸಿಕೊಂಡರು. ಇದನ್ನು ಅರ್ಥಮಾಡಿಕೊಳ್ಳದಿದ್ದಲ್ಲಿ ಪಾಕಿಸ್ಥಾನ–ಭಾಷಾವಾರು ರಾಜ್ಯ ನಿರ್ಮಾಣ....ತಪ್ಪನ್ನೇ ಮಾಡಿದಂತಾಗುತ್ತದೆ.

— ಶಿವಶಂಕರ

ಇಂದಿರಾ ಓನ್ನಡಿ

೪

ಶ್ರೀಮತಿ ಗಾಂಧಿಯವರ ಸ್ವರಾಜ್ಯ ಉತ್ತರ ಪ್ರದೇಶ. ಇಂಡಿಕೇಟ್ ರಚನೆ ಯೊಡನೆಯೇ ಅಲ್ಲಿನ ಸಿಂಡಿಕೇಟ್ ಸರಕಾರವನ್ನು ಉರುಳಿಸಲು ಶ್ರೀಮತಿ ಗಾಂಧಿಯವರಿಗೆ ಶ್ರೀ ಕಮಲಾಪತಿ ತ್ರಿಪಾಠಿ ನೆರವಾದರು. ಇಂಡಿಕೇಟ್ ಚರಣಸಿಂಗರ ಭಾರತೀಯ ಕ್ರಾಂತಿದಳಕ್ಕೆ ಶರಣಾಗತವಾಯಿತು. ಶ್ರೀ ಚರಣಸಿಂಗರನ್ನೇ ಮುಖ್ಯಮಂತ್ರಿಯೆಂದು ಒಪ್ಪಿಕೊಂಡಿತು. ದಿನ ಕಳೆದಂತೆ ಚರಣಸಿಂಗರು ತಮ್ಮ ಸ್ಥಾನವನ್ನು ಗಟ್ಟಿ ಮಾಡಿಕೊಂಡರು ಅಧಿಕಾರದಲ್ಲಿಲ್ಲವಾದರೂ ಅಲ್ಲಿ ಸಿಂಡಿಕೇಟ ಪ್ರಬಲವಾಗಿದೆ, ಆದದರಿಂದ ಭಾರತೀಯ ಕ್ರಾಂತಿದಳ ಮತ್ತು ಇಂಡಿಕೇಟ್ ಒಂದಾದರೆ ಮಾತ್ರ ಅಧಿಕಾರ ದೃಢ, ಇದಕ್ಕೊಂದು ವಿಲೀನ ಪ್ರಕ್ರಿಯೆ ಚರ್ಚಿತವಾಯಿತು. ಚರ್ಚಿತ ಚರ್ವಣವಾಯ್ತು. ಆದರೆ, ಚರಣಸಿಂಗರು ತಲೆಬಾಗಲಿಲ್ಲ. ತಾನು ಇಂದಿರಾ ಗಾಂಧಿಯ ಒಡೆತನ ಸ್ವೀಕರಿಸಿದರೆ, ತನ್ನನ್ನು ಕೇಳುವವರೇ ಇಲ್ಲವೆಂದು ಅವರಿಗೆ ಚೆನ್ನಾಗಿ ಗೊತ್ತು. ಇಬ್ಬರು ಜಿಪುಣರು ಕಾಫಿ ಹೋಟೆಲಲ್ಲಿ ಜೊತೆಯಾಗಿ ತಿಂದು ಬಿಲ್ಲು ಕೊಡುವಲ್ಲಿ ತಾನು–ತಾನು ಎಂದು ಜಗಳಾಡಿದರಂತೆ. ಇದರ ಪರಿಣಾಮವಾಗಿ ಮಾಲೀಕನೆಯವನೇ ಇಬ್ಬರೂ ಬೇಡಿ; ನಾನೇ ಕೊಡುತ್ತೇನೆಂದು ಜಗಳ ಕೊನೆಗೆ ಳಿಸಿದನಂತೆ. ಶ್ರೀಮತಿ ಗಾಂಧಿ ಮತ್ತು ಶ್ರೀ ಚರಣಸಿಂಗರು ಒಬ್ಬೊರು ಇನ್ನೊಬ್ಬರ ಮೇಲೆ ಕಾಲಿಡಲು ಹಾತೊರೆಯುತ್ತಿದ್ದಾರೆ. ಶ್ರೀಮತಿ ಗಾಂಧಿ ಚತುರ–ರಾಜಕಾರಣಿ ಪ್ರತಿದ್ವಂದ್ವಿಯನ್ನು ಕಡೆಗಣಿಸಿದಂತೆ ಸಿಂಗರನ್ನು ಕಡೆಗಣಿಸುವಲ್ಲಿ ಅಸಫಲರಾಗಿದ್ದಾರೆ. ತನ್ನ ಸ್ವರಾಜ್ಯದಲ್ಲೇ ಅಕೆಯೆದುರು ಈ ಸೋಲು. ಆಕೆಗೆ ಅಖಿಲಭಾರತೀಯ ವ್ಯಕ್ತಿತ್ವಕ್ಕೊಡ್ಡಿದ ಸವಾಲು. ಆದುದರಿಂದ ಮರಳಿ ಪೂರಿ ಇಗಿ ಅಕೆ ಸಂಹಾರಕಾರ್ಯಕ್ಕೆ ತೊಡಗುತ್ತಾರೆ.

ಶಾಸ್ತ್ರಿಯವರ ಉದಾರತೆ

ದಿ| ಲಾಲ ಬಹದ್ದೂರ ಶಾಸ್ತ್ರಿಗಳು ಆಗ ಕೇಂದ್ರ ಸರಕಾರದಲ್ಲಿ ಗೃಹಸಚಿವರಾಗಿದ್ದರು. ಅವರ ಮನೆಯ ಇಕ್ಕೆಲಗಳಲ್ಲೂ ಬಾಗಿಲಿತ್ತು. ಒಂದು ಜನಕಥ ಮಾರ್ಗಕ್ಕೆ ಮುಖ ಮಾಡಿಕೊಂಡಿತ್ತು; ಇನ್ನೊಂದು ಅಕಬರ್ ಮಾರ್ಗದತ್ತ.

ಒಂದು ದಿನ ಕೆಲವು ಮಜೂರ ಹೆಂಗಸರು ಅಲ್ಲಿಗೆ ಬಂದರು. ಅವರ ತಲೆಯ ಮೇಲೆ ಭಾರಿ ಕಟ್ಟಿಗೆಯ ಹೊರೆಯಿತ್ತು. ತಮ್ಮ ಗುರಿಮುಟ್ಟಲು ಹೆಂಗಸರು ಅವರೊಂದು ದೊಡ್ಡ ಸುತ್ತು ತೆಗೆಯಬೇಕಾಗಿತ್ತು. ಸ್ತ್ರೀಯರು ಒಂದರೆಕ್ಷಣ ಅತ್ತಿತ್ತ ನೋಡಿದರು. ನೆಟ್ಟಗೆ ಶಾಸ್ತ್ರಿಯವರ ಮನೆಯೊಳಗೇ ಕಾಲಿಟ್ಟರು. ಬಾಗಿಲು ಕಾಯುತ್ತಿದ್ದ ನೌಕರನು ಆ ಹೆಂಗಸರನ್ನು ಗದರಿಸಿದನು. ಅವರನ್ನು ಹೊರ ಹೋಗುವಂತೆ ಹೇಳುತ್ತಿದ್ದನು.

ಇದೇ ಹೊತ್ತಿಗೆ ಶಾಸ್ತ್ರಿಯವರೂ ಅಲ್ಲಿಗೆ ಬಂದರು. ಅವರು ನೋಡಿದ ಮಾತ್ರಕ್ಕೆ ಪರಿಸ್ಥಿತಿಯೆಲ್ಲವನ್ನೂ ಅರಿತುಕೊಂಡರು. ತನ ದ್ವಾರಪಾಲಕನನ್ನು ಶಾಂತಗೊಳಿಸುತ್ತ ಹೇಳಿದರು—ನೋಡು, ಇವರ ತಲೆಯ ಮೇಲೆ ಎಂತಹ ಹೊರೆಯಿದೆ! ಈ ದಾರಿಯಿಂದ ಅವರು ಹೋಗುವುದರಿಂದ ಇವರಿಗೆ ತುಸು ಆರಾಮ ದೊರೆಯುವುದಾದರೆ, ನೀನೇಕೆ ಅವರನ್ನು ತಡೆಯುತ್ತಿ? ಹೋಗಲಿ ಬಿಡು.'

ಮಜೂರ ಸ್ತ್ರೀಯರು ಕೃತಜ್ಞತೆ ತುಂಬಿ ತುಳುಕಾಡುವ ಕಣ್ಣುಗಳಿಂದ ಶಾಸ್ತ್ರಿಯವರನ್ನೊಮ್ಮೆ ದಿಟ್ಟಿಸಿ ನೋಡಿ ಮತ್ತೊಂದು ಬಾಗಿಲಿಂದ ಹೊರ ಹೋದರು.

ಸತ್ರ

ಶ್ರೀ

‡ ಮಲಿಯ ಪೋಲಿಕ ಕಲಿಯ ಹೆಂದರ
ನೋಡಲದುವೆ ಸುಂದರ
ಅರು ಮಾಡಿದರಿದರೆ ಶೋಗರ
ನು! ಗಂಧ ಕಸ್ತುರಿ ಸಾಗರ

ಅರು ಕಾಣದ ಕಾಡ ಬಯಲಿದು
ಕೊಸ್ಕಿ ನೀಕಹ ಸುತ್ತರು
ಅರ ಕೇಳ್ವರು ನಿನ್ನ ಕರಗನು
ಪರ್ಣ ಉರುಳಿದ ಕನಸನು

ನಿನ್ನ ನೆರಳಲಿ ತರುಕೊಳದಲಿ
ಉರುಳಿ ಹೂಗಳ ಸುಂದರ
ಕೂಗಿ ಕರೆದೆಸ ನಿನ್ನ ಬಯಲಲಿ
ಆರು ನಿನ್ನನು ಕರೆ?

ಸತ್ಯವೆಂಬುದ ನಿನ್ನ ನಂಬಿಗದು
ಮಳೆಗ ಹೋಯಿತು ಆಳಕೆ
ಅಳ ಬಾನಿಯು ಮಾಣಿಕ ಧನಿ ಪದ,
ನೀನೆ ಉಡಿಯಿತು ಮೆಲ್ಲಕೆ

'ಗುಂಡ್ಮಿ ಭಾಸ್ಕರ ಮಯ್ಯ'

(‡ ಮಲಿ ಎಂಬರಿ ಕಾಡಿಂಬ ಅರ್ಥದಲ್ಲಿ)

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17–4/65—66ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ

ಮೆನೇಜರ್, ನವಯುಗ, ಉಡುಪಿ

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 28337
2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦

ಜನಮತ

ಕಾಂಗ್ರೆಸ್ ಸಂಸ್ಥೆಯ ಜಗಳ

1887ರಲ್ಲಿ ಉದಯವಾಗಿ 1969ರ ಎಪ್ರಿಲ್ ವರೆಗೆ ಭಾರತೀಯ ಜನಜೀವನದಲ್ಲಿ ಹಾಸು ಹೊಕ್ಕಾಗಿ ಪರ ಆಡಳಿತದಲ್ಲಿ ಕಣ್ಣೀರಿನಲ್ಲಿ ಉಜ್ಜುತ್ತಿದ್ದ ನಮಗೆ ಆ ಥರ್ಡ್ ಭಾರತೀಯರಿಗೆ ಸ್ವಾತಂತ್ರ್ಯವನ್ನು ತಂದುಕೊಟ್ಟು ಸ್ವತಂತ್ರ ಭಾರತದ ಆಡಳಿತವನ್ನು 69ರ ಸಾಲಿನ ವರೆಗೆ ನಡೆಸಿಕೊಂಡು ಬಂದ ಭಾರತ ಪುತ್ರರ ಹೃದಯಮೇವಿ ಪಕ್ಷ ಕಾಂಗ್ರೆಸ್ ಪಕ್ಷವು ಜಾಕೀರ್ ಹುಸೇನ್ ನಿಧನಾನಂತರ ರಾಷ್ಟ್ರಪತಿ ಪದದ ಚುನಾವಣೆಯಿಂದ ಒಡೆದು ಇಬ್ಭಾಗವಾಗಿ, ಈ ಇಬ್ಬಣದ ಕಚ್ಚಾಟವು ಕೀಳುಮಟ್ಟದ ರಾಜಕೀಯಕ್ಕೆ ಇಳಿದಿರುವುದು ರಾಷ್ಟ್ರದಾದ್ಯಂತ ಆಬಾಲವೃದ್ಧರಾದಿಯಾಗಿ ಎಲ್ಲರಿಗೂ ತಿಳಿದಿರುವುದಷ್ಟೆ? ಇದನ್ನು ಎಣಿಸಿ ಬರೆಯುವ ಎಂಥವನಿಗೂ ಕಣ್ಣೀರು ಮಿಡಿಯುತ್ತದೆ, ಲೇಖನಿ ತುಳುಕುತ್ತದೆ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಮಥಿಸಿ ಹೇಳುವುದಾದರೆ ನಮ್ಮ ಭಾರತೀಯ ಇತಿಹಾಸದಲ್ಲಿ ಬಿಟ್ಟು ಯಾವೊಂದು ರಾಷ್ಟ್ರದ ಇತಿಹಾಸದಲ್ಲೂ ಒಂದೇ ಪಕ್ಷ ಎರಡಾಗಿ ಇಂತು ಕಚ್ಚಾಡಿಕೊಂಡು ನಿಂತದ್ದು ಯಾವುದೇ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಇಲ್ಲ. ಆದರೆ ನಮ್ಮ ಭಾರತವು ಕೆಲ ನೀತಿ ವಿಷಯಗಳಲ್ಲಿ ಶಿಷ್ಟಪಾಪಂತೆ ಈ ರಾಷ್ಟ್ರ ಮಾರಕ ತತ್ವದ ವಿಷಯದಲ್ಲೂ ವಿಶಿಷ್ಟವಾಗಿ ನಿಂತದ್ದು ರಾಷ್ಟ್ರಜನತೆಯ ದುರ್ದೈವವಲ್ಲದೆ ಇನ್ನೊಂದಲ್ಲ

ಕಾರಣವೇನೆಂದರೆ ಸಂಸ್ಥಾ-ನೀಪಲ್ ಜಗಳದೊಳಗೆ, ನಾವು, ಶ್ರೀಸಾಮಾನ್ಯ ಜನರೆಲ್ಲಾ ರಾಷ್ಟ್ರ ಅಂತಾರಾಷ್ಟ್ರೀಯ ಸಮಸ್ಯೆ ಮತ್ತು ತಮ್ಮಗಳ ಜನತಾ ಜವಾಬ್ದಾರಿಯನ್ನೆಲ್ಲಾ ಮರೆತು ತಮ್ಮತನದ ಬಣದ ರಾಜಕೀಯಕ್ಕೆ ಹೋರಾಡುವ ಪರಿಯನ್ನು ನೋಡಿದರೆ ಒಮ್ಮೊಮ್ಮೆ ನಮಗೆ, ಈ ಇಂಡಿಕೇಟ್ ಸಿಂಡಿಕೇಟ್‌ನಿಂದಾಗಿ ನಾವ ಹತ್ತರಾಗುತ್ತೇವೆಯೇ ಎಂದು ವ್ಯಥೆಪಡುವಂತಾಗುತ್ತದೆ. ಈ ವ್ಯಥೆಯ ಕಾರಣವನ್ನು ರಾಜಕೀಯ ನಿದರ್ಶನದಲ್ಲಿ ಬಿಂಬಿಸಬೇಕೆಂದರೆ ಸಂಸ್ಥಾ ಕಾಂಗ್ರೆಸ್ಸು ಒಂದು ರಾಜ್ಯದ ಪ್ರದೇಶ ಕಾಂಗ್ರೆಸ್ಸನ್ನು ಅಮಾನತು ಮಾಡಿದರೆ ಮರು ಮಾರನೆಯ ದಿನವೇ ಇಂಡಿಕೇಟ್ ಕಾಂಗ್ರೆಸ್ಸು ಮತ್ತೊಂದು ರಾಜ್ಯದ ಪಿ. ಸಿ. ಸಿ.ಯನ್ನು ಅಮಾನತು ಮಾಡಿ ಇನ್ನೊಂದು ಅಡ್‌ಹಾಕ್ ಕಮಿಟಿಯನ್ನು ನೇಮಿಸುತ್ತದೆ. ಇಂತು ಒಂದೆ ರಾಜ್ಯಕೀಯ ಗಾಡಿಗೆ ಎರಡು ರೀತಿಯ ಕುದುರೆಯನ್ನು ಕಟ್ಟಿ ಎಳೆದರೆ ಜನಸಾಮಾನ್ಯನು ಈ ನೀತಿಯ ಗಲಿಬಿಲಿಯುಡಿಯಲ್ಲಿ ಬಿದ್ದು ನುಚ್ಚುನೂರಾಗುವುದು ಖಂಡಿತ ಎಂದರೆ ತಪ್ಪಾಗಲಿಕ್ಕಿಲ್ಲ.

ಇಷ್ಟೆ ಅಲ್ಲದೆ ಈ ಇಂಡಿಕೇಟ್ ಸಿಂಡಿಕೇಟ್ ಜಗಳ ರಾಜ್ಯ ಸರಕಾರಗಳಿಗೂ ತಲೆನೋವಾಗಿ ಪರಿಣಮಿಸಿದೆ. ಎಂತೆಂದರೆ ಈ ಎರಡು ಬಣದೊಳಗೆ ಯಾವುದಾದರೊಂದು ಬಣಕ್ಕೆ ರಾಜ್ಯ ಸರಕಾರಗಳು ಎಳ್ಳುನೀರು ಬಿಟ್ಟು ಆಡಳಿತ ನಡೆಸಬೇಕಾಗುತ್ತದೆ. ಅಂದಮೇಲೆ ಇದರಿಂದಾಗ ಮರಾಜಕೀಯ ಆಡಳಿತ ದುಸ್ಥಿತಿಯು ಹೇಳಬೇಕಾಗಿಲ್ಲವಷ್ಟೆ?

ಇನ್ನು ಒಂದು ದುರ್ದೈವವೆಂದರೆ ಈ ಬಣದೊಳಗೆನೆ ಐಕ್ಯಮತ್ಯವಿಲ್ಲದಿರುವುದು. ನಿದರ್ಶನಕ್ಕೆ ಇಂಡಿಕೇಟಿನ ಅಧ್ಯಕ್ಷರಾದ ಜಗಜ್ಜೀವನರಾಮರ ಬಗ್ಗೆ ಅವರ ಆಧಾರಭೂತರಾದ ಯಂಗ್‌ಟರ್ಕ್‌ಗಳಿಗೆ ಒಳ್ಳೆಯ ಅಭಿಪ್ರಾಯವಿಲ್ಲ. ಇದನ್ನು ಯಂಗ್‌ಟರ್ಕರುಗಳು ಮಾತಾಡುವ ಪರಿಯಿಂದಲೆ ಅರ್ಥಮಾಡಿಕೊಳ್ಳಬಹುದು. ಅಂತೆ ಸಿಂಡಿಕೇಟಿನ ಅಧ್ಯಕ್ಷ ನಿಜಲಿಂಗಪ್ಪನವರ ಬಗ್ಗೆ ಸಿಂಡಿಕೇಟಿನ ಪ್ರಮುಖರೆ ಗುಸುಗುಸು ಮಾತಾಡಿಕೊಳ್ಳುವುದನ್ನು ಕೇಳಬಹುದು. ಇದರ ಸಣ್ಣ ನಿದರ್ಶನಕ್ಕೆ ಗುಜರಾತೆ ಸಾಕು. ಇಂತಿಲ್ಲಾ ಇದ್ದರೆ ಈ ಪಕ್ಷಗಳಿಂದ ರಾಷ್ಟ್ರ ಏಳಿಗೆ ಸಾಧ್ಯವೆ? ಒಟ್ಟಿನಲ್ಲಿ ಹೇಳುವುದಾದರೆ ಅಖಿಲಭಾರತ ಕಾಂಗ್ರೆಸ್ ಪಕ್ಷವು ಆತ್ಮ ಸಾಕ್ಷಿ, ಪಕ್ಷದ್ರೋಹವೆಂಬ ಕಾರಣಗಳಿಂದ ಒಡೆದು ಎರಡಾದುದು ಯಾವ ಬುದ್ಧಿಜೀವಿಯು ಸ್ವಾಗತಿಸಲಾರ. ಇದನ್ನು ಜನತೆ ಸ್ವಾರ್ಥಸಾಧಕತನದ ಕಚ್ಚಾಟವೆನ್ನುತ್ತಾರೆ ಹೊರತು ಸಿದ್ಧಾಂತದ ಕಚ್ಚಾಟವೆಂದು ಹೇಳುವುದಿಲ್ಲ. ಆದರಿಂದ ಗಾಂಧಿ ಶಿಷ್ಯರಾದ ಧುರೀಣರುಗಳು ಇಂತಹ ಕಚ್ಚಾಟಕ್ಕೆ ಇಳಿದು ರಾಷ್ಟ್ರದ ಮಾನಹಾನಿಯನ್ನು ಎಸಗಬಾರದಾಗಿ ಯಾಚಿಸುತ್ತೇನೆ. ಪ್ರಾಣಕ್ಕಿಂತಲೂ ಮಾನ ಮಿಗಿಲೆಂಬ ದೃಷ್ಟಿ ಇನ್ನಾದರೂ ಇವರು ಅರಿತು ನಡೆಯಬೇಕು.

—ಬಿ. ಎಚ್. ಶಾಂತರಾಮ ಶೆಟ್ಟಿ

ಅನರ್ಹರು ಯಾರು?

ಕೇಂದ್ರದಲ್ಲಿ ಕಾನೂನು ಮಂತ್ರಿಗಳೊಡನೆಯೇ ಶ್ರೀ ಕೆಂಗಲ್ ಹನುಮಂತಯ್ಯನವರಿಗೆ ನಾಲಿಗೆ ಬಹಳ ಹರಿತವಾಗಿದೆ. ಅವರು ಕರ್ನಾಟಕದ ಸಂಚಾರವನ್ನೇ ಮುಖ್ಯ ಗುರಿಯಾಗಿಟ್ಟು ಇಲ್ಲಿಗೆ ಬರುತ್ತಾರೆ. “ಇಡಬೇಕೆಂದಿರುವನ್ನೆಲ್ಲಿ ಭಕ್ತಿರಸವಂ, ವಿಶ್ವಾಸವನ್ನಿಂಡಿಕೇಟಿನೋಳ್” ಎಂದು ಮುಂತಾಗಿ ಹಾಡತೊಡಗಿದ್ದಾರೆ. ಈಗ, ತಾನು ಕಳೆದ ೨೦ ವರ್ಷಗಳಿಂದ ಲಂಚ ಕಲುಷಿತವಾದ ರಾಜ್ಯಕಾರಣವನ್ನು ನಿರ್ಮೂಲಗೊಳಿಸುವ ಜಾಡಮಾಲಿಯಾಗ ಬಯಸಿದ್ದಾರೆ; ಜತೆಗೆ ಅರ್ಹತೆಯಿಲ್ಲದವರು ಚುನಾವಣೆಗಳಲ್ಲಿ ಗೆದ್ದು ಬರದಂತೆ ನೋಡಿಕೊಳ್ಳಲು ಜನತೆಗೆ ಕರೆನೀಡಿದ್ದಾರೆ.

ಹೇಳಿಕೇಳಿ ಚುನಾವಣೆಗಳಿಗೆ ನಿಲ್ಲುವವರು ಯಾರು? ರಾಜ್ಯಕೀಯ ಪುಢಾರಿಗಳು. ಈ ಜನರಲ್ಲಿ ಯಾರಾದರೂ ತಮಗೆ ಅರ್ಹತೆಯಿಲ್ಲವೆಂದು ಒಪ್ಪಿಕೊಂಡದ್ದನ್ನು ಎಲ್ಲಾದರೂ ಉಂಟೆ ಒಂದು ವೇಳೆ ಈ ಪುಢಾರಿಗಳು ಯಾವುದಾದರೊಂದು ರಾಜ್ಯಕೀಯ ಪಕ್ಷಕ್ಕೆ ಸೇರಿದ್ದು, ಪಕ್ಷದ ಹೈಕಮಾಂಡು 'ನಿನಗೆ ಅರ್ಹತೆಯಿಲ್ಲ'ವೆಂದು ಸೀಟು ಕೊಡದೆ ಹೋದಾಗ, ಪಕ್ಷವನ್ನೇ ತ್ಯಾಗ ಮಾಡಿ ಸ್ಪರ್ಧಿಸಿ ಗೆದ್ದು, ತನ್ನ ಅರ್ಹತೆಯನ್ನು ಸಿದ್ಧಮಾಡಿಕೊಟ್ಟ ಉದಾಹರಣೆಗಳೂ ಧಾರಾಳವಿವೆ. ಹೈಕಮಾಂಡು 'ಅರ್ಹ'ನೆಂಬ ಪ್ರಶಸ್ತಿ ನೀಡಿದ ಮಹಾಮೇಧಾವಿ (ಉದಾಹರಣೆಗೆ ತಮಿಳ ನಾಡಿನ ಕಿಸು)ಗಳನ್ನು ಒಂದಲ್ಲ ಎರಡಲ್ಲ, ಮೂರು ಮೂರು ಬಾರಿಗೂ ಜನ ಅನರ್ಹರೆಂದು ತೋರಿಸಿಕೊಟ್ಟದ್ದುಂಟು.

ಹಾಗಿರುವಾಗ, ಅರ್ಹತೆಯ ಮಾನದಂಡ ಯಾವುದು? ಇದನ್ನು ಶ್ರೀ ಕೆಂಗಲ್ಲರು ವಿಶದಪಡಿಸಿಲ್ಲ. ಚುನಾವಣೆಯಲ್ಲಿ ಯೇನಕೇನಪ್ರಕಾರೇಣ ಗೆಲ್ಲುವುದೇ ನಿಜವಾದ ಅರ್ಹತೆ ಎಂದು ಪುಢಾರಿಗಳು ತಿಳಿದಿದ್ದಾರೆ. ಜನತೆ ಕಂಗಾಲಾಗಿ ಚುನಾವಣೆಗಳಲ್ಲಿ ಅನಾಸಕ್ತವಾಗುತ್ತ ಬರುತ್ತಿದೆ.

—ರವೀಂದ್ರ ಕುಮಾರ್



ಉಡುಪಿ ನಾಗರಿಕರ ತೆರಿಗೆ ಏರಿಕೆ ವಿರೋಧೀ ಕ್ರಿಯಾ ಸಮಿತಿ ರಚನೆ

ಉಡುಪಿಯಲ್ಲಿ ತಾ. 28-8-70ರಲ್ಲಿ ಡೋರ್ ಸ್ಟೆಪ್ಸ್ ಕ್ಲಬ್ಬಿನಲ್ಲಿ ಜರಗಿದ ಬೃಹತ್ ಪ್ರತಿಭಟನಾ ಸಭೆಯಲ್ಲಿ ರಚಿತವಾದ ಕ್ರಿಯಾ ಸಮಿತಿಯು ತಾ. 31ರಂದು ಡಾ ಪಿ. ಜಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ 'ತೆರಿಗೆ ಹೆಚ್ಚಳದ' ವಿರುದ್ಧ ಹೋರಾಟ ಮುಂದುವರಿಸಲು ಸರ್ವಾನುಮತದಿಂದ ನಿರ್ಧರಿಸಿತು.

ತಾಲೂಕು ಬೋರ್ಡು ಸದಸ್ಯ ಶ್ರೀ ಶಿಕಾರಿ ವಿಲಿಯಂ ಪಿಂಟೋರವರು ಹಿಂದಿನ ಸಭೆಯ ವರದಿ ಹಾಗೂ ಕೈಕೊಂಡ ನಿರ್ಧಾರಗಳನ್ನು ತಿಳಿಸಿದರು.

ಕ್ರಿಯಾ ಸಮಿತಿಗೆ ಈ ಕೆಳಗಿನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಡಾ. ಪಿ. ಜಿ. ಆಚಾರ್ (ಅಧ್ಯಕ್ಷ) ಡಾ. ಪಿ. ವ್ಯಾಸರಾವ್, ಮತ್ತು ಎಡ್ವಕೇಟ್ ಕೊಟ್ಟಾರ್ ವರದರಾಯ ಪೈ (ಉಪಾಧ್ಯಕ್ಷರು) ಶ್ರೀ ಶಿಕಾರಿ ವಿಲಿಯಂ ಪಿಂಟೋ (ಪ್ರಧಾನ ಕಾರ್ಯದರ್ಶಿ) ಶ್ರೀಗಳಾದ ಎನ್. ಸೀತಾರಾಮ ಕಾಮತ್, ಬಾವಜಾನ್ ಸಾಹೇಬ್ ಮತ್ತು ಶ್ರೀ ನರಸಿಂಹ ಬಾಂಗಣ್ಣಾಯ (ಜತೆ ಕಾರ್ಯದರ್ಶಿಗಳು) ಹಾಗೂ ಡಾ. ವಿ. ಎಸ್ ಶೆಟ್ಟಿ (ಖಜಾಂಚಿ)

ಶ್ರೀ ಬೈಲೂರು ವಾಸುದೇವರಾಯರು ಎಲ್ಲ ಮುನಿಸಿಪಲ್ ವಾರ್ಡುಗಳಲ್ಲಿ ಯಾವ ಕಟ್ಟಡಗಳಿಗೆ ಯಾವ ಯಾವ ರೀತಿಯ ತೆರಿಗೆಯನ್ನು ವಿಧಿಸಲಾಗಿದೆ? ಏನು ವಂಚನೆ ನಡೆದಿದೆಯೆನ್ನುವುದರ ಕುರಿತು ಸರಿಯಾದ ಮಾಹಿತಿ ಸಂಗ್ರಹಿಸಲು ಸೂಚಿಸಿದಂತೆ ಆ ಬಗ್ಗೆ ಒಂದು ಉಪಸಮಿತಿ ರಚಿಸಲಾಯಿತು.

ಈ ಉಪಸಮಿತಿಯಲ್ಲಿ ಶ್ರೀಗಳಾದ ವೈ. ವಿ. ಜತನ್ನ, ದಾಸಸೇರಿಗಾರ್, ಬಿ. ಎಸ್. ಲೂವಿಸ್, ಯು. ಮೋಹನದಾಸ್, ಕಾಳಪ್ಪ ಶೆಟ್ಟಿ, ನಾರಾಯಣ ಶೇರಿಗಾರ, ಗಂಗಯ್ಯ ಶೆಟ್ಟಿಗಾರ ಆರ್. ನರಸಿಂಹ ಬಾಂಗಣ್ಣಾಯ ಎನ್. ಎಸ್. ಕಾಮತ್, ಬಾವಜಾನ್ ಇವರುಗಳಿದ್ದಾರೆ.

ಉಡುಪಿ ನಾಗರಿಕರು ಕಟ್ಟಡ ತೆರಿಗೆ ಹೆಚ್ಚಳದ ಆಕ್ಷೇಪಗಳನ್ನು ಸಪ್ಟಂಬರ 15ನೇ ತಾರೀಕಿನೊಳಗೆ ಸಲ್ಲಿಸುವಂತೆ ಜನರನ್ನು ವಿನಂತಿಸಿ ಕೊಳ್ಳಲು ತೀರ್ಮಾನಿಸಲಾಯಿತು.

ನಗರದ ಬೀದಿಗಳು ತೆರಿಗೆ ಹೆಚ್ಚಳದಿಂದ ಎದುರಿಸುತ್ತಿರುವ ಸಂಕಷ್ಟಗಳನ್ನು ಶ್ರೀಗಳಾದ ಎಸ್. ಕೆ. ಅನಿಲನ್ ಎಂ. ಎಲ್. ಎ, ಶ್ರೀ ಎಸ್. ಎಸ್. ಅಡಿಗ ಎರಿ. ಎಲ್. ಸಿ ಮುಜೀಲ ಶ್ರೀನಿವಾಸ ನಾಯಕ ಎಂ. ಎಲ್. ಎ. ಶ್ರೀ ಬಿ. ಭಾಸ್ಕರ ಶೆಟ್ಟಿ ಎಂ. ಎಲ್. ಎ. ಶ್ರೀ ಜೆ. ಎಂ. ಲೋಬೋಪ್ರಭು ಎಂ. ಪಿ. ರವರೊಡನೆ ನಿವೇದಿಸಿ ಕೊಂಡು ನೆರವು ಕೋರಬೇಕೆಂದು ಈ ಕುರಿತು ತೆರಳುವ ನಿಯೋಗದಲ್ಲಿ, ಡಾ. ಪಿ ವ್ಯಾಸರಾವ್, ಶ್ರೀ ಯು. ಮೋಹನ ದಾಸ್, ಶ್ರೀ ಶಿಕಾರಿ ವಿಲಿಯಂ ಪಿಂಟೋ, ಶ್ರೀ ಎನ್. ಎಸ್. ಕಾಮತ್, ಶ್ರೀ ನಾರಾಯಣ ಶೇರಿಗಾರ ಮತ್ತು ಶ್ರೀ ಬಾವಜಾನ್ ಸಾಹೇಬ್ ಇವರುಗಳಿರಬೇಕೆಂದು ನಿರ್ಧರಿಸಲಾಯಿತು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C. No. 39/1970

ಶ್ರೀ ಗಜಾನನ ಕೋಟ್ ಸ್ಟೋರ್ಸಿನ ಹೋಲ್‌ಸೇಲ್ ಡಿಪಾರ್ಟ್‌ಮೆಂಟಿನ ಪಾರ್ಟ್‌ನರ್ಸ್ ಕೆ. ಮಾಧವ ಶೆಣೈ ಕೊಡಾ —ವಾದಿಗ್ಳು

ಮತ್ತು

ಜೆ. ಬಿ. ಮಿಸ್ಕಿತ್, ಜವುಳಿ ವ್ಯಾಪಾರಸ್ಥ, ಮೂಡುಗೆರೆ ತಾಲೂಕು, ನೀರು ಹೊಳೆ

—ಪ್ರತಿವಾದಿ

ಮೇಲ್ಕಂಡ ಪ್ರತಿವಾದಿಗೆ—

ವಾದಿರ ಅಂಗಡಿಯಲ್ಲಿ ಸದ್ರಿ ಪ್ರತಿವಾದಿಯು ತಾ. 14-3-67ರಿಂದ 9-12-69ರ ವರೆಗೆ ನಡೆಸಿದ ಲೇವಾದೇವಿ ಬಾಬ್ತು ಪ್ರತಿವಾದಿಯಿಂದ ವಾದಿರಿಗೆ ಬರತಕ್ಕ ಅಸಲು ಬಡ್ಡಿ ಕೂಡಾ ರೂಪಾಯಿ 414.66ಕ್ಕೆ ವಾದಿರು ಪ್ರತಿವಾದಿಯ ಮೇಲೆ ದಾಖಲು ಮಾಡಿದ ಸದರಿ ವ್ಯಾಜ್ಯವು ತಾ. 11-10-1970ಕ್ಕೆ ಇಟ್ಟಿದೆ. ಆ ದಿವಸ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉತ್ತರಿಸದೆ ಇದ್ರೆ ಪ್ರತಿವಾದಿಯ ಗೈರು ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುತ್ತದೆಂದು ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸಲಾಗಿಯದೆ.

H. Ramanath Pai

Advocate for Plffs.

ಉಡುಪಿ, ತಾರೀಕು 8-9-1970.

ಶ್ರೀಕೃಷ್ಣ ಜಯಂತಿಯ ಯಕ್ಷಗಾನ

ಉಡುಪಿ, ಬನ್ನಂಜೆ ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಮಂಡಳಿಯ ನುರಿತ ಕಲಾವಿದರ ಕೂಡುವಿಕೆಯಿಂದ "ಭಕ್ತ ಸುಧನ್ವ" ಎನ್ನುವ ಯಕ್ಷಗಾನ ಕೂಟವು ಉಡುಪಿಯ ಶ್ರೀ ಮದನಂತೇಶ್ವರ ದೇವಾಲಯದ ಹೊರ ಪೌಳಿಯಲ್ಲಿ ಶ್ರೀ ಕಾಣಿಯೂರು ಮಠಾಧೀಶ ಶ್ರೀ ವಿದ್ಯಾವಾರಿಧಿ ತೀರ್ಥ ಶ್ರೀಪಾದಂಗಳವರ ಆಶ್ರಯದಲ್ಲಿ ಜರಗಿತು. ಭಾಗವತ ಶ್ರೀ ಕೆ. ನಾರಾಯಣ ಶೆಟ್ಟರು ಸ್ವಾಗತಿಸಿದ ಬಳಿಕ ಶ್ರೀ ಪಾಲನಾ ಉಪಾಧ್ಯಾಯರು ಶ್ರೀಕೃಷ್ಣ ಜನ್ಮಾಷ್ಟಮಿಯ ಮಹತ್ವವನ್ನು ವಿವರಿಸಿದರು. ಬಳಿಕ ಯಕ್ಷಗಾನ ಕಾಲಕ್ಷೇಪ ನಡೆಯಿತು.

ಶ್ರೀ ಎಚ್. ಎನ್. ಪೈ ಜನರಲ್ ಮೆನೇಜರರಾದರು.

ಸಮರ್ಥ ಕಾರ್ಯನಿರ್ವಾಹಕರಲ್ಲೊಬ್ಬರಾಗಿ ಬ್ಯಾಂಕಿನ ಪ್ರಗತಿಗೆ ದೀರ್ಘಾವಧಿಯ ಗಣ್ಯ ಸೇವೆಸಲ್ಲಿಸಿದವರೂ ಸಿಂಡಿಕೇಟ್ ಬ್ಯಾಂಕಿನ ಕಂಟ್ರೋಲರ್ ಆಫ್ ಎಡ್ವಾನ್ಸಸ್ ಆಗಿರುವ ಶ್ರೀ ಎಚ್. ಎನ್. ಪೈ ಅವರು ಬ್ಯಾಂಕಿನ ಜನರಲ್ ಮೆನೇಜರ್ ಆಗಿ ನೇಮಕಗೊಂಡಿರುವರು.

ಜಿಲ್ಲಾ ಟಿ. ಬಿ ಅಸೋಸಿಯೇಷನ್

ಇತ್ತೀಚೆಗೆ ಜಿಲ್ಲಾಧಿಕಾರಿ ಶ್ರೀ ಟಿ. ಜೆ. ರಾಮಕೃಷ್ಣನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಟ್ಯುಬರ್‌ಕ್ಯುಲೋಸಿಸ್ ಅಸೋಸಿಯೇಶನ್ ಸಭೆಯಲ್ಲಿ ಅಸೋಸಿಯೇಶನಿನ ಕಾರ್ಯದರ್ಶಿಯಾಗಿ ಡಾ ಕೆ ಬಾಳಪ್ಪ ಶೆಟ್ಟರೂ ಖಜಾಂಚಿಯಾಗಿ ಶ್ರೀ ಮಹೇಲ ಶ್ರೀನಿವಾಸ ನಾಯಕ್ ಎಂ. ಎಲ್. ಎ. ಅವರೂ ಸರ್ವಾನುಮತದಿಂದ ಆರಿಸಲ್ಪಟ್ಟಿದ್ದಾರೆ.

ಕಾರ್ಯದರ್ಶಿ ಸ್ಥಾನವು ಡಾ! ಉಮೇಶ ರಾಯರ ನಿಧನದಿಂದ ತೆರವಾಗಿತ್ತು.

ಮುನ್ಸಿಪಾಲಿಟಿಯ ಮೇಲೆ ಇಂಜಕ್ಷನ್ ದಾವೆ

ತನ್ನ ಶಿಕ್ಷಿಗಾರ ಕಲ್ಯಂಜೆ ವಾದಿರಾಜ ಆಚಾರ್ಯರಿಗೆ ಉಡುಪಿ ತೆಂಕಪೇಟೆ ವಾರ್ಡಿನಲ್ಲಿ ಎತ್ತಿನ ಮಿಲ್ಲನ್ನು ನಡೆಸುವ ಬಾಬ್ತು ಮತ್ತು ಅದಕ್ಕೆ ಬೇಕಾಗುವ ಕಟ್ಟೋಣ ಕಟ್ಟುವವರೇ ಉಡುಪಿ ಮುನ್ಸಿಪಾಲಿಟಿಯು 1968ನೇ ಇಸವಿಯಲ್ಲಿ ಕೊಟ್ಟ ಲೈಸನ್ಸನ್ನು ಸದ್ರಿ ವಾದಿರಾಜ ಆಚಾರ್ಯರ 11 ಒಕ್ಕಲುಗಳು ರದ್ದು ಪಡಿಸ ಬೇಕೆಂತ ಉಡುಪಿ ಕೌನ್ಸಿಲಿನ ಮುಂದೆ ದಾಖಲು ಮಾಡಿದ ಅರ್ಜಿಯನ್ನು ಉಡುಪಿ ಮುನ್ಸಿಪಾಲಿಟಿಯವರು ಆಗಾಗ ಪರಿಶೀಲಿಸಿ ಕೊನೆದಾಗ 29-8-70ಕ್ಕೆ ಇಟ್ಟಿಕ್ಕುದಿಯ ಅನ್ಯಾಯಕರವೆಂಬುದಾಗಿ ವಿಚಾರಗಳನ್ನು ಕಾಣಿಸಿ ಕಲ್ಯಂಜೆ ವಾದಿರಾಜ ಆಚಾರ್ಯರು ದಾಖಲು ಮಾಡಿದ ವ್ಯಾಜ್ಯವನ್ನು ಉಡುಪಿಯ ಮುನ್ಸಿಫ್ ಗೋಪಾಲಕೃಷ್ಣನವರು ದಾಖಲೆಗೆ ತೆಗೆದು ಕೊಂಡಿದ್ದಾರೆ. ಸದ್ರಿ ಒಕ್ಕಲುಗಳು ದಾಖಲು ಮಾಡಿದ ಅರ್ಜಿಯ ವಿಚಾರ ತನ್ನ ಮಾಡಕೂಡದೆಂತಲೂ ಮತ್ತು ವಾದಿರಾಜ ಆಚಾರ್ಯರಿಗೆ ಒಮ್ಮೆ ಚೀಫ್ ಆಫೀಸರು ಸ್ವೀಕರಿಸಿದ ಲೈಸನ್ಸನ್ನು ರದ್ದು ಮಾಡದೆಂತ ಉಡುಪಿ ಟೌನ್ ಮುನ್ಸಿಪಾಲಿಟಿಯ ಮೇಲೆ ತಾತ್ಕಾಲಿಕ ಹುಕುಂನ್ನು ಕೊಟ್ಟಿರುತ್ತಾರೆ. ವಾದಿಯಾದ ವಾದಿರಾಜ ಆಚಾರ್ಯರ ಪರವಾಗಿ ಉಡುಪಿ ಎಡ್ವೊಕೇಟ್ ಶ್ರೀ ಪೆರೋಡಿ ವಿಠಲ ಶೆಟ್ಟರು ವಕಾಲತನ್ನು ನಡೆಸಿದರು.

—ಸ್ವೀಕಾರ—

Freedom Struggle in Karnataka Who is who

Vol : I

Published by, The Directorate of Text Books (Literary and Cultural Development Section) Government of Mysore, Bangalore.

Pages: ⅛ demi, xxi+378.

ಈ ಪುಸ್ತಕದಲ್ಲಿ ಜಿಲ್ಲಾವಾರಾಗಿ ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಿದವರ ಹೆಸರು, ವಿಳಾಸ, ಪ್ರಾಯ, ಶಿಕ್ಷೆಯ ಅವಧಿ ಮತ್ತು ವಿವರಗಳನ್ನು ಕೊಡಲಾಗಿದೆ. ಯಾರು ಯಾರು ಯಾವ ಯಾವ ಸ್ಥಾನವನ್ನು ಏರಿದ್ದಾರೆ ಎಂಬ ಮಾಹಿತಿಯೂ ಕೊಡಲ್ಪಟ್ಟಿದೆ. ಇದನ್ನು ಸಂಗ್ರಹಿಸಲು 1962ರಿಂದ ಪ್ರಯತ್ನ ನಡೆದು 1969ರ ದೀರ್ಘಾವಧಿಯಲ್ಲಿ ಪ್ರಕಟವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಹೆಸರುಗಳನ್ನು ನೋಡುವಾಗ ಬಹಳ ವಿಷಾದವಾಗುತ್ತದೆ. ಈ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ವಿಶೇಷವಾಗಿ ದುಡಿದು ಪ್ರಸಿದ್ಧರಾದ ಹಲವು ಮುಖಂಡರ ಹೆಸರುಗಳೇ ಇರುವುದಿಲ್ಲ. ಉದಾಹರಣೆ— ದಿವಂಗತರಾದ ಹಿರಿಯಡ್ಕ ರಾಮರಾಯ ಮಲ್ಯ, ಹಿರಿಯಡ್ಕ ನಾರಾಯಣ ರಾವ್, ಪಾಂಗಾಳ ಮಂಜುನಾಥ ನಾಯಕ್, ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್, ಎಸ್.ಯು. ಪಣಿಯಾಡಿ, ಎ. ಬಿ. ಶೆಟ್ಟಿ, ಎನ್. ಎಸ್. ಕಿಲ್ಲೆ, ಎಮ್. ಡಿ. ಅಧಿಕಾರಿ, ವೆಂಕಟ್ರಾಯ ಬಾಳಿಗಾ, ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಗಡೆ, ಬಿ. ಸದಾಶಿವ ಹೆಗ್ಡೆ, ಶಾಂತಾರಾಮ ರಾವ್, ಸಾಂತ್ಯಾರು ಅನಂತ ಪದ್ಮನಾಭ ಭಟ್, ಕಡಿಯಣ್ಣ ಶೆಟ್ಟಿ, ಶ್ರೀಮತಿ ಮನೋರಮಾ ನಾಯಕ್, ಶ್ರೀಗಳಾದ ಮದ್ರಾಡಿ ಕೃಷ್ಣಯ್ಯ ಶೆಟ್ಟಿ, ಎಮ್. ವಿ. ಹೆಗ್ಗಡೆ ಮೊದಲಾದವರ ಹೆಸರುಗಳೇ ಗೋಚರಿಸುವುದಿಲ್ಲ. ಹೀಗೆಯೇ ಇನ್ನೆಷ್ಟೋ ಹೆಸರುಗಳು ಬಿಟ್ಟು ಹೋಗಿರಬಹುದು. ಈ ಪುಸ್ತಕ ಮೊದಲನೇ ಭಾಗ ಎಂದಿದ್ದರೂ ಇನ್ನುಳಿದ ಭಾಗಗಳು ಯಾವ ಕಾಲಕ್ಕೆ ಪ್ರಕಟವಾಗುವವೋ ತಿಳಿಯದಾಗಿದೆ. ಇದಲ್ಲದೆ ಇದನ್ನು ಇಂಗ್ಲೀಷಿನಲ್ಲಿ ಮುದ್ರಿಸಿದ ಔಚಿತ್ಯವೇನೆಂದು ಗೊತ್ತಾಗುವುದಿಲ್ಲ.

Udipi Law College Magazine Vol. IX 1969-70

ಪ್ರಧಾನ ಸಂಪಾದಕರು: ಪ್ರಿನ್ಸಿಪಾಲ್ ಡಿ. ಜಿ. ದೇಶಪಾಂಡೆ. ಸಚಿತ್ರವಾದ ಈ ವಿವಿಧ ವಿಷಯಗಳ ಸಂಚಿಕೆಯಲ್ಲಿ ಕಾಲೇಜಿನ 13ನೇ ವಾರ್ಷಿಕ ವರದಿ, ಲಾ ಕಾಲೇಜ್ ಟ್ರಸ್ಟಿನ ಅಧ್ಯಕ್ಷರಾಗಿದ್ದ ದಿ। ಅರೂರು ಲಕ್ಷ್ಮೀನಾರಾಯಣ ರಾಯರ ಮತ್ತು ಪ್ರೊ। ಎಂ. ಡಿ. ಕಾಮತರ ಜೀವನ ಪರಿಚಯ ಮತ್ತಿತರ ಹಲವು ವಿಚಾರ ಪ್ರಚೋದಕ ಲೇಖನಗಳಿವೆ. ಸಂಪಾದಕರ ಪ್ರಯತ್ನ ಸ್ತುತ್ಯ.

ಶ್ರೀಕೃಷ್ಣ ಜಯಂತ್ಯುತ್ಸವ ಸಮಾರಂಭದ ಸ್ಮಾರಕ ಗ್ರಂಥ

ಶ್ರೀ ಕೃಷ್ಣ ಮಂದಿರ, ಅಶೋಕನಗರ, ಮಂಗಳೂರು-6, ಇದರ 27ನೇ ವರ್ಷದ ಶ್ರೀ ಕೃಷ್ಣ ಜಯಂತ್ಯುತ್ಸವ ಸಮಯದಲ್ಲಿ ಪ್ರಕಟಿಸಿದ ಸ್ಮಾರಕ ಗ್ರಂಥವಿದು. ಪ್ರಕಾಶಕರು: ಮಂದಿರದ ಕಾರ್ಯದರ್ಶಿ ಶ್ರೀ ಕೂಳೂರು ವಾಸುದೇವ ಕಾಮತ್.

ಗೃಹಭಂಗ

(ಸಾಮಾಜಿಕ ಕಾದಂಬರಿ)

ಬರೆದವರು: ಎಸ್. ಎಲ್. ಭೈರಪ್ಪ.

ಪ್ರಕಾಶಕರು: ಸಾಹಿತ್ಯ ಭಂಡಾರ, ಕೊಪ್ಪೀಕರ್ ಬೀದಿ, ಹುಬ್ಬಳ್ಳಿ -20. ರಾಷ್ಟ್ರೀಯ ವಿದ್ಯಾಲಯ ಬೀದಿ, ವಿಶ್ವೇಶ್ವರ ಪುರ, ಬೆಂಗಳೂರು -4

ಪುಟಗಳು; ⅛ ಕ್ರೌನ್ 520 ಬೆಲೆ: ಸಾದಾಪ್ರತಿ ರೂ. 11, ಕ್ಯಾಲಿಕೊ ಪ್ರತಿ ರೂ. 16.

ಲೇಖಕರೇ ಹೇಳುವಂತೆ ಈ ಕಾದಂಬರಿ ಯಾವ ಸಮಸ್ಯೆಯನ್ನೂ ಕುರಿತದ್ದಲ್ಲ. ವಸ್ತುನಿಷ್ಠವಾಗಿ ಜೀವನವನ್ನು ಕಾಣಿಸುವ ಪ್ರಯತ್ನ. ಜೀವನವೆಂಬುದು ಯಾರೊಬ್ಬನ ಅನುಭವ ಅಥವಾ ಬೌದ್ಧಿಕ ಹಿಡಿತದ ಸಮಗ್ರತೆಗೆ ಸಿಕ್ಕದಷ್ಟು ವಿಶಾಲವಾದದ್ದು, ಜಟಿಲವಾದದ್ದು.... ಈ ಕಾದಂಬರಿ ನಿಮ್ಮನ್ನು ನಾಗಾಲೋಟ ಓದಿಸಿಕೊಂಡು ಹೋಗದಿರ ಬಹುದು. ಆದರೆ ಜೀವನವನ್ನು ನಿರ್ವಿಕಾರ ದೃಷ್ಟಿಯಿಂದ ನೋಡಬಲ್ಲವರ, ಸಾಕಷ್ಟು ಕಷ್ಟ ಸುಖಗಳನ್ನು ಕಂಡವರ, ಕನಿಷ್ಟ ಪಟ್ಟಿಗಾದರೂ ಹಳ್ಳಿಗಳನ್ನು ತಿಳಿದಿರುವವರ ಅಂತರಂಗವನ್ನು ತಟ್ಟದಿರದು.

ಮಹಾಪುರುಷರ ವಾಣಿಗಳು

ಯಾವುದು ಅನೇಕಗಳಲ್ಲಿ ಏಕತ್ವವನ್ನೂ, ಭೇದಗಳಲ್ಲಿ ಅಭೇದವನ್ನೂ ಕಾಣುತ್ತದೆಯೋ ಅದೇ ಅಹಿಂಸೆ.

o o o

ನಗೆಯಲ್ಲಿ ಸುಳ್ಳು ಹೇಳುವದು, ವ್ಯವಹಾರದಲ್ಲಿ ಸ್ವಾರ್ಥಸಿದ್ಧಿಯ ಸಲುವಾಗಿ ಸುಳ್ಳು ಹೇಳುವದು, ಮತ್ತು ದೇಶಹಿತ ಅಥವಾ ಪರಾರ್ಥಕ್ಕಾಗಿ ಸುಳ್ಳು ಹೇಳುವದು ಈ ಮೂರೂ ಪ್ರಕಾರದ ಅಸತ್ಯಗಳೂ ತ್ಯಾಜ್ಯವಿರುತ್ತವೆ.

o o o

ಬುದ್ಧಿಯ ಸ್ಥಿರತೆ, ನಿಷ್ಕಾಮ ಸೇವೆ, ಇಂದ್ರಿಯ ನಿಗ್ರಹ, ಭಕ್ತಿಯ ಪ್ರೇಮ, ಆತ್ಮಜ್ಞಾನ, ದೈವೀ ಸಂಪತ್ತಿಯ ವಿಕಾಸ ಹಾಗೂ ಸನ್ಯಾಸ, ಈ ಏಳು ಅಂಗಗಳಿಂದ ಧರ್ಮವು ಪೂರ್ಣವಾಗುತ್ತದೆ.

o o o

ಭಕ್ತಿಯೇ ಶ್ರೇಷ್ಠ ಮೋಕ್ಷಪ್ರಾಪ್ತಿಯ ಸಾಧನ, ಭಕ್ತಿಯೇ ಆತ್ಮಸ್ವರೂಪ ಚಿಂತನ.

o o o

ಎ ಶ್ರದ್ಧಾಳುಗಳೇ, ನೀವು ಈಶ್ವರನ ಪ್ರೀತ್ಯರ್ಥವಾಗಿ ನಿಮ್ಮ ಕರ್ತವ್ಯಗಳನ್ನು ಪೂರ್ಣಮಾಡಿರಿ. ಅದರಿಂದ ನಿಮಗೆ ವಿವೇಕವನ್ನು ಕೊಡುವನು, ಬುದ್ಧಿಯನ್ನು ಕೊಡುವನು. ಮತ್ತು ನಿಮ್ಮ ದೋಷಗಳನ್ನು ದೂರ ಮಾಡುವನು. ಹಾಗೂ ನಿಮ್ಮನ್ನು ಕ್ಷಮಿಸುವನು.

o o o

ಕನ್ಯಾವಿಕ್ರಯದಲ್ಲಿ ತೊಡಗಿದ

ಕ್ರೈಸ್ತಮಠಗಳ ಗೋಮುಖವ್ಯಾಘ್ರಗಳು

ಕೇರಳ ಮತ್ಸ್ಯದರ ಆಹಾರಸಾಸುಗಳು ಜನಸಾಂದ್ರತೆಗೆ ಹೆಸರು. ಮಲಬಾರ್ ಕರಾವಳಿಯ ಜನರು ಸುಶಿಕ್ಷಿತರು. ಆದರೆ, ಅಪ್ರಿಯ: ಈ ಜನರಿಗೆ ಅಂಟಿದಷ್ಟು ದಾರಿದ್ರ್ಯ ಒಳನಾಡುಗಳಿಗೆ ಬಡಿದಿಲ್ಲ. ಈ ಮಿತಿಮೀರಿದ ಜನಸಂಖ್ಯೆ ದೇವರ ವರದಾನವೆಂದು ತಿಳಿದುಕೊಂಡಿದ್ದ ಕಾಲವೊಂದಿತ್ತು. ಇಂದೀಗ ಇದು ಶಾಪವಾಗಿ ಪರಿಣಮಿಸಿದೆ.

ಭಾರತೀಯರಿಗೆ ನಾನಾ ತರದ ಆಶೆ-ಆಮಿಷಗಳನ್ನು ತೋರಿಸಿಯೇ ವಿದೇಶೀಯ ಮತಗಳು ಇಲ್ಲಿ ಬೇರೂರಿದುವು. ಇಂದು ಮತಾಂತರಕ್ಕೆಂದು ಮಿತಿಯಿಡಿಯದಿದ್ದರೂ ಕ್ರೈಸ್ತ ಪಾದ್ರಿಗಳು ತಮ್ಮ ತಂತ್ರವನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟಿಲ್ಲ. ಈಗ ಈ ಕ್ರೈಸ್ತಮಠಗಳು ಮತ್ತೊಂದು ವ್ಯಾಪಾರಕ್ಕೆ ತೊಡಗಿದ ಸುದ್ದಿಯು ಬಟ್ಟಬಯಲಾಗಿದೆ. ಕೇರಳದಿಂದ ಹುಡುಗಿಯರನ್ನು ಯುರೋಪಿಗೆ ಕಳುಹಿಸುವುದು ಒಳ್ಳೆಯ ವಿದೇಶೀ ವ್ಯಾಪಾರವೆನಿಸಿದೆ.

ಬಡತನದಿಂದ ನವೆದ ಭಾರತೀಯ ತರುಣಿಯರಿಗೆ ಅರಬ ಮಾರುಕಟ್ಟೆಗಳಲ್ಲಿ ಬಹಳ ಬೇಡಿಕೆಯಿದೆ. ಅರಬ ಮಾರುಕಟ್ಟೆಗೆ ಭಾರತೀಯ ಯುವತಿಯರನ್ನು ಪೂರೈಸುವ ಅಂತರರಾಷ್ಟ್ರೀಯ ಜಾಲವೊಂದಿದೆಯೆಂದು ಕೆಲ ಸಮಯದ ಹಿಂದೆ ಕೇಳಿಬಂದಿತ್ತು. ಆದರೆ, ಈ ಸಂಬಂಧದ ಸಂಶೋಧನೆಗಳು ನಡೆದ ನಾಟಕ ನಡೆದರೂ ಪರಿಣಾಮವೇನೂ ಬಹಿರಂಗವಾಗಲಿಲ್ಲ. ಈಗ ಕೇರಳದ ತರುಣಿಯರನ್ನು ಯುರೋಪಿನ ಕಾನ್ವೆಂಟುಗಳಿಗೆ ಮಾರುವ ಪಾದ್ರಿಗಳ ಕಥೆಯನ್ನು ಹೊರಗೆಡಹಿದ್ದು ನಾವಲ್ಲ, ಲಂಡನ್ನಿನ ಪತ್ರಿಕಾಸಂಸ್ಥೆಯೊಂದು.

ದಿನದಿನಕ್ಕೂ ಇಂತಹ ತರುಣಿಯರ ವ್ಯಾಪಾರ ನಡೆಯುತ್ತಿದ್ದರೂ ನಮ್ಮ ರಾಜ್ಯ ಅಥವಾ ಕೇಂದ್ರ ಸರಕಾರಗಳಿಗೆ ಇದನ್ನು ಪತ್ತೆ ಮಾಡುವುದು ಸಾಧ್ಯವಾಗಲಿಲ್ಲವೆಂದರೆ, ನಾವೆಲ್ಲಿ ಇದ್ದೇವೆಯೆಂಬುದನ್ನು ತೋರಿಸುತ್ತದೆ. ಮಹಿಳೆಯರು ಕುರಿ—ನಾಯಿಗಳಂತೆ ಮಾರುಕಟ್ಟೆಯ ಸರಕುಗಳಾಗಿ ಪರಿಣಮಿಸುತ್ತಿರುವುದು ದೇಶದ ಮುಖಕ್ಕೆ ಮಸಿ ಹಚ್ಚಿದಂತೆ. ವಿದೇಶೀಯ ವಾರ್ತಾ ಸಂಸ್ಥೆಯೊಂದು ರಹಸ್ಯ ಸ್ಫೋಟ ಮಾಡಿದ ಮೇಲೆ ಸರಕಾರ ಎಚ್ಚರವಾಗಿದೆ. ಆದರೆ, ಸಟ್ಟಿ ಸಿಂಗಾರವಾಗುವಾಗ ಪಟ್ಟಣ ಸೂರೆಯಾಗಿ ಹೋಗಿದೆ.

ಯುರೋಪಿನ ದೇಶಗಳಲ್ಲಿ ಕಾನ್ವೆಂಟ್‌ಗಳಿಗೆ ಸನ್ಯಾಸಿನಿಯರು ಬೇಕು. ಆದರೆ, ಇತ್ತೀಚೆಗಿನ ವರ್ಷಗಳಲ್ಲಿ ಅಲ್ಲಿ ಸನ್ಯಾಸಿನಿಯರಾಗಲು ಯುವತಿಯರು ಮುಂದೆ ಬರುತ್ತಿಲ್ಲ. ಲೈಂಗಿಕ ತೃಪ್ತಿಯ ರುಚಿಗೆ ಅವರು ಮಾರು ಹೋಗಿದ್ದಾರೆ. ಹಾಗೆಂದು ತಮ್ಮ ಪ್ರತಿಷ್ಠೆಯ ಕಾನ್ವೆಂಟುಗಳನ್ನು ಮುಚ್ಚಿ ಬಿಡಲು ಸಿದ್ಧರಿಲ್ಲದ ಅವರು ಬಡತನ ಸತಾಯಿಸಿದ ಕೇರಳದ ಕುಟುಂಬಗಳಿಂದ ಹುಡುಗಿಯರನ್ನು ಕೊಂಡು ಕೊಂಡು ಒಳಸುತ್ತಾರೆ. ಪಾದ್ರಿಗಳು ಹೇಳುತ್ತಾರೆ — ಇದರಲ್ಲಿ ಜುಲ್ಮಿಯಿಲ್ಲ, ಮತಾಂತರವಿಲ್ಲ; ವಿಕ್ರಯವೂ ಅಲ್ಲ. ಈ ತರುಣಿಯರು ಸ್ವೇಚ್ಛೆಯಿಂದಲೇ ಸನ್ಯಾಸಿನಿಯರಾಗಲು ಅಥವಾ ನರ್ಸ್‌ಗಳಾಗಲು ಅಲ್ಲಿ ಹೋಗುತ್ತಾರೆ—ಇತ್ಯಾದಿ ಆದರೆ, ಇಲ್ಲಿ ವ್ಯಾಪಾರದ ತತ್ವ ಅಡಗಿದೆ. ಒಂದು ಹುಡುಗಿಯನ್ನು ಪಾದ್ರಿ ಒದಗಿಸಿದರೆ, ಆತನಿಗೆ ಸಾವಿರಗಟ್ಟಲೆ ಭಕ್ಷೀಸು ಸಿಗುತ್ತದೆ! ಬಡತನದಿಂದ ಕಂಗೆಟ್ಟ ಸಂಸಾರಗಳು ತಮ್ಮ ಹೊರೆಯನ್ನು ಕಳೆದುಕೊಂಡೆನೆಂದು ಸಮಾಧಾನದ ಉಸಿರು ಬಿಡುತ್ತವೆ!

ಈ ಮನುಷ್ಯನ ಬೂಟಾಟ ನಡೆಯುತ್ತಿರುವುದು ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ! ಕುಮಾರಿ ಸೇನಿಯಾ ಡಾಗಾಲ್ ಅವರು ಹೇಳುವಂತೆ ಕೇರಳದ ತರುಣಿಯರ ಅಸಹಾಯಕತೆಯಿಂದ ಪಾದ್ರಿಗಳು ಬೇಕಷ್ಟು ದುರ್ಲಾಭ ಪಡೆಯುತ್ತಾರೆ. ಇದನ್ನು ಸಂಪೂರ್ಣ ಅಲ್ಲಗಳೆಯಲು ಯಾವ ಪಾದ್ರಿಯೂ ತಯಾರಿಲ್ಲ. ೧೩ ವರ್ಷಗಳ ಕಾಲ ಮುಂಬಯಿಯಲ್ಲಿ ಆರ್ಚ್‌ಬಿಷಪರಾಗಿದ್ದ ರಾಬರ್ಟ್ಸ್‌ರವರು ಕೆಲವು ಪಾದ್ರಿಗಳು ನೀತಿಗೆಟ್ಟು ವರ್ತಿಸಿದ್ದು ಇರಬಹುದು; ಅವರೂ ಮಾನವರೇ ತಾನೇ ಎಂದು ಸಮಾಧಾನ ತಾಳಿದ್ದಾರೆ. ಜನತೆ ತೀರ ಬಡವರಾದುದರಿಂದ ಬಡತನದ ದುರ್ಲಾಭ ಪಡೆಯುವುದು ಸುಲಭಸಾಧ್ಯವೆಂದು ಅವರು ಒಪ್ಪುತ್ತಾರೆ.

ಅಮೆರಿಕನ್ ವರದಿಗಳಂತೆ ಇದೀಗ ಕೇರಳದ ಒಂದೂವರೆ ಸಾವಿರಕ್ಕೂ ಮಿಕ್ಕಿದ ತರುಣಿಯರು ಯುರೋಪಿನ ಕಾನ್ವೆಂಟುಗಳಲ್ಲಿದ್ದಾರೆ ಇವರಲ್ಲಿ ಒಬ್ಬೊಬ್ಬರ ಬೆಲೆ ಸು. ೭೦೦ ಡಾಲರ್‌ಗಳು. ಈ ತರುಣಿಯರಲ್ಲಿ ವೈದ್ಯಕೀಯ ಮತ್ತು ವೈಜ್ಞಾನಿಕ ತರಬೇತಿಗಳಿಗಾಗಿ ಬಂದಿದ್ದ ಹಲವರು ನರಗಳ ದೌರ್ಬಲ್ಯಕ್ಕೊಳಗಾಗಿದ್ದಾರೆ. ಯುರೋಪಿನ ಹವಾಗುಣ, ಆಹಾರ ಮತ್ತು ಮಠೀಯ ಕಟ್ಟುಪಾಡುಗಳಿಗೆ ಹೊಂದಿಕೊಳ್ಳಲಾಗದ್ದರಿಂದ ಹಲವರು ಎಲ್ಲರಿಗೂ ಸಮಸ್ಯೆಯಾಗಿದ್ದಾರೆ. ವ್ಯಾಟಿಕನ್ ಅಧಿಕಾರಿಯೊಬ್ಬರ ಹೇಳಿಕೆಯಂತೆ ಇಟೆಲಿಯ ಒಂದೇ ಕಾನ್ವೆಂಟು ೧೨ ಜನ ಯುವತಿಯರಿಗೆ ೧೦೦೦೦ ಡಾಲರ್ ತೆತ್ತು ಪಡೆದುಕೊಂಡಿತು!

ಇದು ಹೀಗೆಯೇ ಮುಂದುವರಿದರೆ, ದೊಡ್ಡ ವ್ಯಾಪಾರವೇ ಆಗುತ್ತದೆ. ಇದರಿಂದ ದೇಶದ ಮಾನ ಮೂರು ಕಾಸಿಗೆ ಮಾರಿ ಹೋಗುತ್ತದೆ. ಮಾನವಂತರಾಗಿ ಮಹಿಳೆಯರು ಬದುಕುವುದೇ ಅಸಾಧ್ಯವಾಗುತ್ತದೆ. ವಿದೇಶಕ್ಕೆ ಹೋದ ಈ ಹೆಣ್ಮಕ್ಕಳನ್ನು ಯಾವುದಕ್ಕೆ ಉಪಯೋಗಿಸಲಾಗುತ್ತಿದೆಯೆಂದು ನೋಡುವವರು ಯಾರು? ಬಡತನದ ಕಾರಣದಿಂದ ಈ ರೀತಿ ತರುಣಿಯರ ವಿಕ್ರಯವಾಗುವಾಗ, ಬಡಜನರ ಜೀವನವನ್ನು ಉತ್ತರಿಸುವ ಆತುರದ ಪ್ರಗತಿಗಾಮಿ ಸರಕಾರಗಳು ಏನು ಮಾಡುತ್ತಿವೆ? ತಮ್ಮ ಕರುಳ ತುಂಡುಗಳನ್ನು ಅಲ್ಪ ಆಸೆಗಾಗಿ ಮಾರಲು ಮುಂದೆ ಬರುವ ಈ ಬಡಪಾಯಿಗಳ ಬಡತನ ಹೇಗೆ ನೀಗಬೇಕು?

ವಿದೇಶೀ ಪಾದ್ರಿಗಳು ಇಲ್ಲಿ ಏನೇನು ಮಾಡುತ್ತಿದ್ದಾರೆಂಬುದಕ್ಕೆ ಈ ಕನ್ಯಾವಿಕ್ರಯ ಪ್ರಸಂಗವೊಂದು ಸಾಕ್ಷಿ. ಕ್ರೈಸ್ತ ಪಾದ್ರಿಗಳು ತಮ್ಮ ಉದ್ದನೆಯ ನಿಲುವಂಗಿಯೊಳಗೆ ತಮ್ಮ ಸತ್ಯ ಚಿತ್ರವನ್ನು ಬಚ್ಚಿಟ್ಟು, ಎಲ್ಲರನ್ನೂ ಮೋಸಗೊಳಿಸಹೊರಟಿದ್ದಾರೆ. ಈ ಬಗ್ಗೆ ಸರಕಾರವು ತೀವ್ರ ಗಮನಹರಿಸಿ ವಿಚಾರಣೆ ನಡೆಸಿ ಅನೈತಿಕ ವ್ಯವಹಾರದಲ್ಲಿ ತೊಡಗಿದವರನ್ನು ಉಗ್ರ ದಂಡನೆಗೆ ಗುರಿ ಮಾಡಬೇಕು; ಇಲ್ಲವಾದರೆ, ನಮ್ಮ ದೇಶದ ತರುಣಿಯರೆಲ್ಲ ಯುರೋಪಿನ ನೈಟ್ ಕ್ಲಬ್ಬುಗಳ ಗುಲಾಮರಾದರೂ ಆಶ್ಚರ್ಯಪಡಬೇಕಾಗಿಲ್ಲ.

ವಾರ್ಷಿಕ ಮಹಾಸಭೆ ನೋಟೀಸು

ಪುತ್ತೂರು ಡಿವಿಜನ್ ಮಹಾಲಿ ಫಿಶರ್‌ಮನ್ ಸಹಕಾರಿ ಸಂಘ ಲಿ.
ನಂಬ್ರ 367 ಇಡ್ಕಿದು.
ಕಬಕ ಪೋಸ್ಟ್ ದ. ಕ.

ಈ ಸಂಘದ ವಾರ್ಷಿಕ ಮಹಾಸಭೆಯನ್ನು ತಾ. 28-9-70ನೇ ಸೋಮವಾರ ಪೂರ್ವಾಹ್ನ ಘಂಟೆ 10—30ಕ್ಕೆ ದ. ಕ. ಸೆಂಟ್ರಲ್ ಬೇಂಕಿನ ಪುತ್ತೂರು ಶಾಖೆಯ ಆಫೀಸಿನಲ್ಲಿ ಜರಗಿಸುವುದಾಗಿದೆ. ಎಲ್ಲಾ ಮೆಂಬರರೂ ಬರಬೇಕಾಗಿ ವಿನಂತಿ.

(Sd.) K. Venkappaya
ಅಧ್ಯಕ್ಷ

ಇಡ್ಕಿದು, ತಾ. 26—8—70

ವಿಷಯಗಳು

1) 1969-70ರ ವರದಿ ಓದುವುದು.
2) 1968-69ರ ಆಡಿಟ್ ರಿಪೋರ್ಟ್ ಬಂದಲ್ಲಿ ಮಂಜೂರಾತಿ, ಲಾಭ ವಿತರಣೆ.
3) 1970-71 ಅಂದಾಜು ಬಜೇಟು ಮಂಜೂರಾತಿ.
4) ಅಧ್ಯಕ್ಷರ ಅನುಮತಿಯಿಂದ ಇತರ ವಿಷಯಗಳು.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit — ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ನಗೆಗಡಲು

ಅವನು ಕುಡಿಸುವಾಗ ಬಾಯಿ ಹರಿಯುತ್ತಿತ್ತು. ಇದಕ್ಕೊಂದು ರಾಮಬಾಣ ತರಲೆಂದು ಡಾಕ್ಟರರಲ್ಲಿಗೆ ಹೋದ.

ಡಾಕ್ಟರರು ಅವನನ್ನು ಚೆನ್ನಾಗಿ ಪರೀಕ್ಷಿಸಿದರು. ಕೊನೆಗೆ ಹೇಳಿದರು "ಸ್ವಾಮಿ, ಇದು ಗುಣವಾಗದ ರೋಗ."

ಅವನು ಗಾಬರಿಯಾಗಿ 'ಏಕೆ'? ಎಂದು ಹಾರಿಹಾರಿದ.

"ಗಾಬರಿಯಾಗಬೇಡಿರಿ. ನಿಮ್ಮ ಚರ್ಮ ಚಿಕ್ಕದು. ಆದ್ದರಿಂದ ಕಣ್ಣುಗಳು ಮುಚ್ಚಿದಾಗ ಬಾಯಿ ತೆರೆಯುತ್ತದೆ; ಬಾಯಿ ಮುಚ್ಚಿದಾಗ ಕಣ್ಣುಗಳು ತೆರೆಯುತ್ತವೆ ಅಷ್ಟೆ."

o o o

ಪ್ರಖ್ಯಾತ ಸರ್ಜನರೊಬ್ಬರು ಹೊಸ ಪುಸ್ತಕವೊಂದರ ಕೊನೆಯ ನಾಲ್ಕಾರು ಹಾಳೆಗಳನ್ನು ಹರಿದು ಬಿಸುಟರು. ಇದನ್ನು ಕಂಡ ಅವರ ಹೆಂಡತಿ ಆದೇಕೆಂದು ಪ್ರಶ್ನಿಸಿದಳು.

ಡಾಕ್ಟರು ಉತ್ತರಿಸಿದರು: ಏನೂ ಚಿಂತೆ ಮಾಡಬೇಡ. ಪುಸ್ತಕದ ಅಪೆಂಡಿಕ್ಸ್ (ಪರಿಶಿಷ್ಟ) ಅದು. ನಾನು ಅಪೆಂಡಿಕ್ಸನ್ನು (ಕರುಳಿನಲ್ಲಿ ಬೆಳೆದ ದುರ್ಮಾಂಸ) ಕಿತ್ತು ಒಗೆದೆ.

o o o

ಯುವತಿ: ಈ ಬೇಸಗೆಯಲ್ಲಿ ನಾನು ಏಳು ಜನರಿಗೆ ಇಲ್ಲ ಎಂದು ಬಿಟ್ಟಿದ್ದೇನೆ.

ಯುವಕ: ಅದು ಸರಿಯೇ. ಅವರೇನು ಮಾರುತ್ತ ನಿನ್ನ ಬಳಿ ಬಂದರು?

o o o

ಅಧ್ಯಾಪಕ: ರೇಲ್ವೆ ಪಟ್ಟಿಗಳ ನಡುವೆ ತುಸು ಎಡೆ ಬಿಡುವುದೇಕೆ?

ವಿದ್ಯಾರ್ಥಿ: ವಿಸ್ತರಣೆಯ ಶಕ್ತಿ ಸರ್.

READ &
ADVERTISE IN
NAVAYUGA WEEKLY

NAVAYUGA 10—9—1970
Registered with the Registrar
of News Papers for India
under No. R. N. 3546/'57

REGD. No. B. G 176
LICENCE No. 33,
Licensed to Post without Prepayment

ನಮ್ಮ ಭ್ರಮೆಯ ನಿರಸನ ಎಂದು?

ಬರೆದವರು— 'ದೇವಕಿನಂದನ', ಭದ್ರಾವತಿ.

ಸ್ಟಾಲಿನ್ನರ ನಿಧನದ ನಂತರ ರಶಿಯದ ರೀತಿ—ನೀತಿಯಲ್ಲಿ ತುಂಬ ಬದಲಾವಣೆಯಾಗಿದೆ, ಆಂತರ್ಯವು ಕಂಡು ಬರುತ್ತಿದೆ, ಎಂದು ಭಾವಿಸುವವರಿದ್ದಾರೆ. ಆದರೆ ನಿಜಕ್ಕೂ ರಶಿಯ ಅನುಸರಿಸುವ ಕಾರ್ಯನೀತಿಯಲ್ಲಿ ಸಡಿಲಿಕೆಯಾಗಿದೆಯೇ? ಆಗಿದ್ದರೆ ಎಷ್ಟು, ಎಲ್ಲಿ ಎಂಬುದರ ಪರಾಮರ್ಶೆ ಅಗತ್ಯ.

ತನ್ನ ಸಿದ್ಧಾಂತಕ್ಕೆ ಬಾಗಿ ಬರದ ಯಾರನ್ನೂ ಸ್ಟಾಲಿನ್ ತನ್ನ ಅಧಿಕಾರದ ಅವಧಿಯಲ್ಲಿ ಸಹನೆಯಿಂದ ಕಾಣಲಿಲ್ಲ. ಪ್ರತಿಸ್ಪರ್ಧಿಗಳನ್ನು ನಿರ್ದಯತೆಯಿಂದ ಕಡೆಸಿಕೊಂಡ ಅವನ ಕಪಿಮುಷ್ಟಿಯಿಂದ ರಶಿಯ ನುಣುಚಿಕೊಂಡಿತು. ಅವನ ಸಾವಿನ ನಂತರ ಅಲ್ಲಿ ಎಲ್ಲ ಸರಿಯಾಗಿದೆ ಎನ್ನುವವರು ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದಂತೆ ಕಾಣುವುದಿಲ್ಲ.

ಝೆಕೊಸ್ಲವೇಕಿಯದ ನಾಯಕ ಅಲೆಗ್ಸಾಂಡರ್ ಡುಬ್ಚೆಕರನ್ನು ರಶಿಯದ ನಾಯಕರು ನಡೆಸಿಕೊಂಡ ರೀತಿ ಯಾರ ಕಣ್ಣಿಗೂ ಅಂಜನ ಹಚ್ಚದಿರದು. ಪ್ರಗತಿಪರ ವಿಚಾರಗಳ ಕೇಂದ್ರ ಬಿಂದುವಾಗಿದ್ದ ಡುಬ್ಚೆಕರನ್ನು ರಶಿಯನ್ನರು ಅಪಮಾನಿಸಿದರು; ಹಿಂಸಿಸಿದರು. ಅನ್ಯರು ಅಸಹ್ಯಪಟ್ಟುಕೊಳ್ಳುವ ರೀತಿಯಲ್ಲಿ ನಡೆಸಿಕೊಂಡರು.

ಡುಬ್ಚೆಕ್, ಝೆಕೊಸ್ಲವೇಕಿಯದ ಅತ್ಯಂತ ಜನಪ್ರಿಯ ನಾಯಕರು. ಸುಪ್ರಸಿದ್ಧ ಕಮ್ಯೂನಿಸ್ಟ್ ಕಾರ್ಯಕರ್ತರು. ಪ್ರಗತಿಪರ ವಿಚಾರಗಳನ್ನು ಅರಗಿಸಿಕೊಂಡವರು. ದ್ವಿತೀಯ ಮಹಾಯುದ್ಧದ ನಂತರ ಝೆಕೊಸ್ಲವೇಕಿಯ ರಶಿಯದ ಪ್ರಭಾವಕ್ಕೆ ಒಳಗಾಯಿತು. ತಮ್ಮ ರಾಷ್ಟ್ರವನ್ನು ಪ್ರಗತಿಯ ಹಾದಿಯಲ್ಲಿ ಒಯ್ಯುವ ಆಸೆ ಇಟ್ಟುಕೊಂಡವರಲ್ಲಿ ಡುಬ್ಚೆಕರು ಒಬ್ಬರು. ಆಡಳಿತದಲ್ಲಿ ಅಲ್ಲಿಯ ಜನತೆ ಪ್ರತ್ಯಕ್ಷ ಪಾಲುಗೊಳ್ಳುವಂತೆ ಮಾಡಬೇಕೆಂಬುದು ಅವರ ಹಿರಿಯಾಸೆ.

ಈ ಗುರಿಯನ್ನಿಟ್ಟುಕೊಂಡ ಡುಬ್ಚೆಕ್ 1968ರಲ್ಲಿ ಪ್ರಗತಿಪರ ತಂಡಗಳ ಹಾಗೂ ತನ್ನ ಜನತೆಯ ಬೆಂಬಲದಿಂದ ಅಧಿಕಾರಕ್ಕೆ ಬಂದರು. ಅಧಿಕಾರಕ್ಕೆ ಬಂದ ಹೊಸದರಲ್ಲಿ ಆಡಳಿತದಲ್ಲಿ ಸುಧಾರಣೆಯನ್ನು ತರಲು ಹೆಣಗಿದರು. ಅದಕ್ಕಾಗಿ ರಾಜ್ಯಾಂಗದಲ್ಲಿ ಸೂಕ್ತ ತಿದ್ದುಪಡಿಗೆ ಕೈ ಹಾಕಿದರು. ರಶಿಯಕ್ಕೆ ಈ ಸುಧಾರಣೆ ಬೇಕಾಗಿರಲಿಲ್ಲ. ತಮ್ಮ ಕಕ್ಷೆಯೊಳಗೆ ಬಂದ ಇತರ ನೆರೆಹೊರೆಯ ರಾಷ್ಟ್ರಗಳು ಈ ಕ್ರಮವನ್ನು ಅನುಸರಿಸಿದರೆ—? ಈ ಮಾರ್ಗದರ್ಶನದಿಂದ ಪ್ರಭಾವಿತರಾದರೆ—? ಈ ಪ್ರವೃತ್ತಿ ಕೊನೆಯಲ್ಲಿ ರಶಿಯವನ್ನು ವ್ಯಾಪಿಸಿದರೆ—? ಇದು ರಶಿಯದ ನಾಯಕರಲ್ಲಿ ಮೂಡಿದ ಅನುಮಾನ; ಹುಟ್ಟಿದ ಭಯ.

ಇಟ್ಟ ಹೆಜ್ಜೆಯನ್ನು ಹಿಂದೆಗೆಯುವಂತೆ ರಶಿಯ ಡುಬ್ಚೆಕರಿಗೆ ಸೂಚನೆ ಕೊಟ್ಟಿತು. ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯದಿದ್ದರೆ ಪರಿಣಾಮ ನೆಟ್ಟಗಿರದು ಎಂದು ಎಚ್ಚರಿಸಿತು. ಡುಬ್ಚೆಕ್ ರಶಿಯದ ಆದೇಶವನ್ನು ಪ್ರತಿಭಟಿಸಿದರು. ಹಿಡಿದ ದಾರಿಯನ್ನು ಬಿಡಲು ಸಿದ್ಧರಾಗಲಿಲ್ಲ. ಅವರ ನಿರ್ಭೀತ ನಿಲುವು ರಶಿಯವನ್ನು ಕೆರಳಿಸಿತು. ಅದು ಝೆಕೊಸ್ಲವೇಕಿಯದ ಆಡಳಿತದಲ್ಲಿ ತನ್ನ ಕೈಹಾಕಿತು. ಸಾಮೂಹಿಕ ಬಂಡಾಯಕ್ಕೆ ಜನತೆಯನ್ನು ಉದ್ರೇಕಿಸಿತು. ವಾರ್ಸಾ ಒಪ್ಪಂದದ ನಿಯಮಾವಳಿಗಳನ್ನು ತನ್ನ ಲಾಭಕ್ಕೆ ಬಳಸಿಕೊಂಡಿತು. ತನ್ನ ಆಧುನಿಕ, ಸುಸಜ್ಜಿತ ಸೈನ್ಯವನ್ನು ಝೆಕೊಸ್ಲವೇಕಿಯಕ್ಕೆ ಕಳಿಸಿತು. ಅಲ್ಲಿದ್ದ ಉದಾರವಾದಿಗಳನ್ನು, ಸ್ವಾತಂತ್ರ್ಯಪ್ರಿಯರನ್ನು, ಅವರಿದ್ದ ಆಯಕಟ್ಟಿನ ಸ್ಥಳಗಳಿಂದ ಕಿತ್ತೊಗೆದು, ತನ್ನ ಬಾಲಬಡುಕರನ್ನು ಅಧಿಕಾರದಲ್ಲಿ ಕೂರಿಸಿತು.

ಡುಬ್ಚೆಕರನ್ನು ಬಂಧಿಸಲಾಯಿತು—ಬಂದಿ ಡುಬ್ಚೆಕರನ್ನು ಅನಂತರ ರಶಿಯಕ್ಕೆ ಒಯ್ಯಲಾಯಿತು. ಝೆಕೊಸ್ಲೊವೇಕಿಯ ಪೂರ್ಣ ತನ್ನ ಹತೋಟಿಗೆ ಬಂದ ವೇಳೆ ಡುಬ್ಚೆಕರ ಬಿಡುಗಡೆ ಮಾಡಲಾಯಿತು. ಅದೃಷ್ಟವಶಾತ್ ಡುಬ್ಚೆಕರ ಜೀವಕ್ಕೆ ಅಪಾಯವುಂಟಾಗಲಿಲ್ಲ. ಆದರೂ ಅಷ್ಟರೊಳಗಾಗಿ ರಶಿಯದ ನಾಯಕರು ಡುಬ್ಚೆಕರ ಚಾರಿತ್ರ್ಯದ ವಧೆ ಮಾಡಿದ್ದರು; ಅವರನ್ನು ಅಧಿಕಾರದಿಂದ ಕೆಳಗಿಳಿಸಿದ್ದರು. ಸ್ವದೇಶ ಬಾಂಧವರ ಪ್ರೀತಿ-ವಿಶ್ವಾಸದಿಂದ ಅವರಿಗೆ ದಕ್ಕಿದ ಅಧಿಕಾರವನ್ನು ಅವರಿಂದ ಕಸಿದುಕೊಳ್ಳಲಾಯಿತು. ಡುಬ್ಚೆಕರ ಪಾರ್ಲಿಮೆಂಟ್ ಸದಸ್ಯತ್ವಕ್ಕೂ ಸಂಚಕಾರ ಬಂತು.

ಇದು ಇಲ್ಲಿಗೇ ಮುಗಿಯಲಿಲ್ಲ. ಅನಾಮಧೇಯ ಪ್ರಜೆಯಾಗಿ ಝೆಕೊಸ್ಲವೇಕಿಯದಲ್ಲಿ ಡುಬ್ಚೆಕರಿರುವುದನ್ನೂ ರಶಿಯ ಸಹಿಸಲಿಲ್ಲ. ಡುಬ್ಚೆಕರು ಅಲ್ಲಿರುವಷ್ಟು ದಿನ ತಮ್ಮ ಹಿತಕ್ಕೆ ಧಕ್ಕೆಯೆಂದು ತಿಳಿದ ರಶಿಯದ ನಾಯಕರು ಅವರನ್ನು ಝೆಕೊಸ್ಲವೇಕಿಯದ ರಾಯಭಾರಿಯಾಗಿ ನೇಮಿಸಿ ತುರ್ಕಿಗೆ ಕಳಿಸಿದರು. ತುರ್ಕಿಗೆ ಹೊರಟು ನಿಂತ ಡುಬ್ಚೆಕರಿಗೆ, ಮಕ್ಕಳನ್ನು ಕರೆದೊಯ್ಯುವ ಸ್ವಾತಂತ್ರ್ಯವನ್ನು ನಿರಾಕರಿಸಲಾಯಿತು. ಅವರ ಮಕ್ಕಳು ಪ್ರಾಗ್‌ನಲ್ಲುಳಿದರು. ರಾಯಭಾರಿಯಾಗಿ ತುರ್ಕಿಯಲ್ಲಿದ್ದಷ್ಟು ಕಾಲ ಅವರ ಚಲನ-ವಲನಗಳ ಮೇಲೆ ರಶಿಯ ತನ್ನ ಸರ್ಪಗಾವಲನ್ನಿಟ್ಟಿತು. ಇತರ ದೇಶದ ರಾಯಭಾರಿಗಳು ಅವರ ಭೆಟ್ಟಿಗೆ ಬಂದಾಗಲೂ ರಶಿಯದ ಕಾಕದೃಷ್ಟಿಯಲ್ಲಿ ಸಡಿಲಿಕೆ ಇರಲಿಲ್ಲ.

ಈಗ ಈ ರಾಯಭಾರಿ ಹುದ್ದೆಯಿಂದಲೂ ಡುಬ್ಚೆಕ್ ವಂಚಿತರು. ಅವರನ್ನು ಸ್ವದೇಶಕ್ಕೆ ಕರೆಸಿಕೊಳ್ಳಲಾಗಿದೆ. ಅವರನ್ನು ಕಮ್ಯೂನಿಸ್ಟ್ ಪಾರ್ಟಿಯಿಂದ ಹೊರ ಹಾಕಲಾಗಿದೆ. ಅವರು ರಾಷ್ಟ್ರದ್ರೋಹಿ, ಪಕ್ಷದ್ರೋಹಿ ಎಂದು ಝೆಕೊಸ್ಲವೇಕಿಯದ ಬಾನುಲಿಯಿಂದ ಬಿತ್ತರಿಸಲಾಯಿತು. ಅವರಿಗೆ ಇನ್ನೇನು ಕಾದಿದೆಯೋ?

ಇವಿಷ್ಟನಾಗಿಯೂ ಸಾವಿನಿಂದ—ತ್ಯಾಗ ಬಲಿದಾನದಿಂದ—ನಮ್ಮ ಸರಕಾರ ಯಾವ ಪಾಠವನ್ನೂ ಕಲಿಯಲಿಲ್ಲ. ಡುಬ್ಚೆಕರ ಪತನದಿಂದಲಾದರೂ ಅದರ ಪಿತ್ಥ ಇಳಿಯುತ್ತದೆಯೋ ಕಾದು ನೋಡಬೇಕು.

ಪ್ರಗತಿಯ ಹೆಸರಲ್ಲಿ ನಮ್ಮ ಸರಕಾರ ನಮ್ಮ ದೇಶವನ್ನು ಪ್ರಪಾತದ ಅಂಚಿನಲ್ಲಿ ತಂದು ನಿಲ್ಲಿಸಿದೆ. ಬುದ್ಧಿಜೀವಿಗಳು ಈಗಲಾದರೂ ಜಾಗೃತರಾಗಿ ಕಮ್ಯೂನಿಸ್ಟರ ಅಪಾಯದಿಂದ ರಾಷ್ಟ್ರವನ್ನು ರಕ್ಷಿಸಲು, ಸರಕಾರದ ಅದೂರದೃಷ್ಟಿಯ ನಿಲುವಿಗೆ ಹೊಸ ತಿರುವು ಕೊಡಲು ಹೆಣಗಬೇಕು.

ಬಲವಂತದ ಮಾಘಸ್ನಾನ ಅನ್ಯಾಯ

(ಒಂದನೇ ಪುಟದಿಂದ)

ಕಾಲ್ದಿ ಮ್ಯವರಿಕು ಹಾಡುತ್ತಿರುವಂತಗಲಿ."

ಹರಿಮಿತ್ರನ ಮುಖದಿಂದ ಈ ಮಾತುಗಳು ಹೊರಟಿದ್ದೇ ತಡ, ಅಲ್ಲಿನ ನರಕ ಸದೃಶ ಸನ್ನಿವೇಶಗಳು ಮರೆಯಾದುವು. ಭಗವದ್ಭಕ್ತರು ಸ್ವಭಾವದಿಂದಲೇ ದಯಾಳುಗಳು. ತಮ್ಮನ್ನು ದುಃಖಕ್ಕೀಡು ಮಾಡಿದವರ ದುಃಖವನ್ನೂ ಅವರು ದೂರ ಮಾಡುತ್ತಾರೆ.

ಧರ್ಮದ ಬಗ್ಗೆ ಬಲವಂತದ ಮಾಘಸ್ನಾನ ಮಾಡುವುದರಿಂದ ಅನ್ಯಾಯವನ್ನೇ ಗೈದಂತಾಗುತ್ತದೆ.

—ಗೋ.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ **English Made Easy**

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ದಿನವಹಿ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
460 ಪುಟಗಳ ಸುಂದರ ಕೈಹೊತ್ತಿಗೆ. ಬೆಲೆ: ರೂ. 1—50

ಮನೆ-ಮದ್ದು **Home Remedies**

ಡಾ| ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ. ಹೇಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಚಾರಕ್ಕಿಂತ ಹೆಚ್ಚಿನ ವಸ್ತು ಬ್ರಹ್ಮಾಂಡದಲ್ಲಿ ಬೇರೆ ಇಲ್ಲ.

o o o

ಜಗತ್ತಿನ ಇತಿಹಾಸದಲ್ಲಿ ಪ್ರತಿಯೊಂದು ಮಹಾನ್ ಮತ್ತು ಮಹತ್ವಪೂರ್ಣ ಆಂದೋಲನಗಳು ಉತ್ಸಾಹದ ಮುಖಾಂತರವಾಗಿಯೇ ಯಶಸ್ವಿಯಾಗಿದೆ.

o o o

ಯಥಾರ್ಥತೆ ಮತ್ತು ನಂಬಿಗೆ ಈ ಎರಡೂ ಅಕ್ಕ ತಂಗಿಯರಿದ್ದಂತೆ.

o o o

ನಿಮಗೆ ಯಾವುದು ಗೊತ್ತಿದೆಯೋ ಅದನ್ನೇ ಮಾಡಿರಿ.

o o o

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 3

NAVAYUGA

17—9—1970

ಆಕ್ರಮಣಕ್ಕೆ ಆಮಂತ್ರಣ — ದೇಶಭಕ್ತಿಯ ದಮನ

ಇಂದಿರಾಜೀಯವರ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಇವರು ಆಕ್ರಮಿಸಿಕೊಂಡಿರುವ ನಮ್ಮ ದೇಶದ ಭೂಪ್ರದೇಶವನ್ನು ಬಿಡಿಸಿಕೊಳ್ಳುವ ಕುರಿತು ಅದ್ಯಾವುದೇ ಭರವಸೆ ನೀಡದಿರುವುದು ದೇಶಭಕ್ತರ ಹೃದಯದಲ್ಲಿ ತಳಮಳವನ್ನುಂಟುಮಾಡಿರುತ್ತದೆ. ಮುಸ್ಲಿಂ ಲೀಗಿಗಳೂ ಕಮ್ಯುನಿಸ್ಟರೂ ಅದರ ಕುರಿತು ಬಾಯಿ ತೆರೆಯುವುದೇ ಇಲ್ಲ. ಭಾರತವೇ ಆಕ್ರಮಣ ನಡೆಸಿರುವುದೆಂದು ಕಮ್ಯುನಿಸ್ಟರಲ್ಲಿ ಒಂದು ತಂಡದವರು ಹೇಳುತ್ತಿದ್ದಾರೆ. ಅವರ ಮೇಲೆ ಯಾವ ಕ್ರಮವನ್ನೂ ಸರಕಾರ ಕೈಗೊಂಡಿರುವುದಿಲ್ಲ. ಹುಣ್ಣಿನ ಮೇಲೆ ಬರೆ ಎಳೆಯುವಂತೆ, ಸಂಸತ್ತಿನ ಜಂಟಿಸಭೆ ಸೇರಿದಾಗ, ರಾಷ್ಟ್ರಾಧ್ಯಕ್ಷರ ಭಾಷಣದಲ್ಲೂ ಆಕ್ರಮಣಕ್ಕೊಳಗಾಗಿರುವ ಭೂಭಾಗವನ್ನು ಬಿಡಿಸಿಕೊಳ್ಳುವ ಕುರಿತು ಒಂದು ಮಾತೂ ಇಲ್ಲದಿರುವುದು ಆಶ್ಚರ್ಯವನ್ನುಂಟುಮಾಡಿತು. ಅಲ್ಪಸಂಖ್ಯಾತ ಇಂದಿರಾ ಕಾಂಗ್ರೆಸ್ಸಿಗೆ ಮುಸ್ಲಿಂ ಲೀಗು ಮತ್ತು ಕಮ್ಯುನಿಸ್ಟ್ ಪಕ್ಷಗಳು ನೇರವಾಗಿ ಬೆಂಬಲ ಕೊಡಲಾರಂಭಿಸಿದಂದಿನಿಂದ ಆಕ್ರಮಣಕಾರರನ್ನು ಹೊರದೂಡುವ ಮಾತಿನ ಬದಲು ಆಕ್ರಮಣಕ್ಕೆ ಆಮಂತ್ರಣ, ದೇಶಭಕ್ತಿಯ ದಮನ ಕಾರ್ಯ ನಡೆಯುತ್ತ ಬಂದಿದೆ.

ಕಮ್ಯುನಿಸ್ಟ್ ಚೈನಾ ನಮ್ಮ ಮೇಲೆ ಆಕ್ರಮಣ ನಡೆಸುವ ಮುಂಚೆ ರಷ್ಯಾ ಮತ್ತು ಚೈನಾ ದೇಶಗಳು ಪ್ರಕಟಿಸಿದ ಭೂಪಟಗಳಲ್ಲಿ ನಮ್ಮ ಭೂಪ್ರದೇಶವನ್ನು ಚೈನಾಕ್ಕೆ ಸೇರಿದ್ದೆಂದು ತೋರಿಸಲಾಗಿತ್ತು. ಈ ವಿಷಯದ ಕುರಿತು ಆಯಾ ರಾಷ್ಟ್ರಗಳ ಬಳಿ ಪ್ರಸ್ತಾಪಿಸಿದಾಗ ರಷ್ಯಾ ತನ್ನ ತಪ್ಪನ್ನೊಪ್ಪಿಕೊಂಡು ಮುಂದಿನ ಮುದ್ರಣದಲ್ಲಿ ಸರಿಪಡಿಸುವುದಾಗಿ ತಿಳಿಸಿತು. ಚಿಯಾಂಗ್ ಕೈಶೇಕ್ ಸರಕಾರ ಆ ಭೂಪಟಗಳನ್ನು ಪ್ರಕಟಿಸಿದ್ದು, ತಪ್ಪು ಅವರದ್ದಿದೆ, ಅದನ್ನು ಪರಿಶೀಲಿಸುವುದಾಗಿ ಕಮ್ಯುನಿಸ್ಟ್ ಚೈನಾ ತಿಳಿಸಿತು. ಅಂದಿನಿಂದ ಆಕ್ರಮಣವನ್ನು ನಡೆಸುತ್ತ ಬಂದಿದೆ. ಆದರೆ ರಷ್ಯಾ ಇದುವರೆಗೂ ಅದನ್ನು ತಿದ್ದಿರುವುದಿಲ್ಲ. ಆ ಭೂಪಟಗಳಲ್ಲಿ ತೋರಿಸಿದ ಪ್ರದೇಶವು, ಭಾರತವೇ ಆಕ್ರಮಣ ನಡೆಸಿರುವ ಕಾರಣ ಅದನ್ನು ಬಿಡಿಸಿಕೊಳ್ಳುತ್ತೇವೆಂದು ಚೈನಾ ನಮ್ಮ ಮೇಲೆ ಆಕ್ರಮಣ ನಡೆಸಿತು. ಇಲ್ಲಿ ಕಮ್ಯುನಿಸ್ಟ್ ಸರಕಾರ ಬರುತ್ತದೆಂದು ಕಮ್ಯುನಿಸ್ಟರು ನಂಬಿಕೊಂಡಿದ್ದು, ಅವರಲ್ಲಿ ಒಂದು ಗುಂಪು ಗಡಿಪ್ರದೇಶದ ಜನತೆಯ ಬಳಿ ಮಾವೋನ ಚಿತ್ರಗಳಿತ್ತು, ಅವು ಇದ್ದಲ್ಲಿ ಚೈನೀ ಕಮ್ಯುನಿಸ್ಟರು ಸ್ನೇಹಿತರಂತೆ ವರ್ತಿಸುತ್ತಾರೆಂದು ಹೇಳಿ ನಿಧಿ ಸಂಗ್ರಹಿಸಿದವರು. ನಮ್ಮ ಸರಕಾರ ಆಕ್ರಮಣಗಾರರನ್ನು ಹಿಂದಕ್ಕಟ್ಟಲಿಲ್ಲವಾದರೂ, ನಮ್ಮ ಧೀರ ಸೈನಿಕರು ಅಲ್ಲೇ ತಡೆದು ನಿಲ್ಲಿಸಿದರು. ಇಲ್ಲಿಯ ಕಮ್ಯುನಿಸ್ಟರ ಬಂಡೇಳುವ ಹಂಚಿಕೆ ಪುಡಿಪುಡಿಯಾಯಿತು. ಚೈನಿ ಕಮ್ಯುನಿಸ್ಟರಿಗೆ ನಿರಾಶೆಯಾಯಿತು. ಆದರೆ ಇಲ್ಲಿರುವ ಕಮ್ಯುನಿಸ್ಟರಿಗೆ ಧೈರ್ಯ ನೀಡಿದರು. ಅತ್ತ ರಷ್ಯಾ-ಚೈನಾ ತಾವು ಹೊಡೆದಾಡಿಕೊಳ್ಳುವಂತೆ ನಟಿಸುತ್ತಿದ್ದು ಅಲ್ಲಿರುವ ಮುಸ್ಲಿಮರನ್ನು ಜೀರ್ಣಮಾಡಿಕೊಳ್ಳುತ್ತಿವೆ. ಇತ್ತ ಭಾರತೀಯರ ಗಮನವನ್ನು ಬೇರೆಡೆಗೆ ಹರಿಸುತ್ತಿವೆ. ನಮ್ಮ ನೇತಾರರು ರಷ್ಯಾ-ಚೈನಾ ಚಿತ್ರಿಸುತ್ತ ನೋಟ ಬೀರಿದರೇ ವಿನಃ ಭೂಪಟದ ಮೂಲಕ ಆಕ್ರಮಣ ಹಾಗೂ ನೈಜ ಆಕ್ರಮಣದತ್ತ ನೇತ್ರ ತೆರೆಯಲಿಲ್ಲ. ಭೂಪಟದಲ್ಲಿ ತೋರಿಸಿದಂತೆ ಅದೇನಾಗುತ್ತದೆಂಬುದೇ ನಮ್ಮ ಭೂಪಟಗಳ ಪಟಪಟ ವಾದ.

ಬಲವಂತ ಚೈನಾ ಚಂಡಿಹಿಡಿದು ಕುಳಿತುಕೊಂಡಿರುವಾಗ ರಷ್ಯಾ ರಸ್ಥಾಂತಕ್ಕಾಗಿಯೋ ಎನ್ನುವಂತೆ ಹೊಸ ಭೂಪಟವನ್ನು ಪ್ರಕಟಿಸಿತು. ಭಾರತ ಮುದ್ರಣ ಹೊಸತು ಅಷ್ಟೇ, ಭಾರತದ ಭೂಪ್ರದೇಶದ ಮಟ್ಟಿಗೆ ಅದು ಹಳತು. ಅದು ಲಡಾಖ್, ನೇಫಾವನ್ನು ಚೈನಾದ ಭೂಪ್ರದೇಶವೆಂದೇ ಪ್ರಕಟಿಸಿದೆ. ಪರದೇಶ ಸಂಪರ್ಕ ಸಚಿವರುಗಳ ಬದಲಾವಣೆ ನಡೆದಿದೆಯಾದರೂ ಆ ಭೂಪಟದಲ್ಲಿ ಬದಲಾವಣೆಯಾಗಿರುವುದಿಲ್ಲ. ರೂಸಿ-ಹಿಂದೀ ಭಾಯಿ-ಭಾಯಿಯೆಂದು ಬಾಯಿತುಂಬಾ ಹೇಳಲಾಗುತ್ತಿದ್ದರೂ ರಷ್ಯಕ್ಕೆ ಅದರ ಅರ್ಥವನ್ನು ನಾವು ತಿಳಿಸಿರುವುದಿಲ್ಲ. ಅದುದರಿಂದಲೇ ರಷ್ಯಕ್ಕೆ ರಷ್ಯಾ ಮತ್ತು ಚೈನಾ ಸಹೋದರ ರಾಷ್ಟ್ರಗಳಾದವು, ರಷ್ಯಾ—ಭಾರತ ಮಿತ್ರರಾಷ್ಟ್ರಗಳೆಂಬುದನ್ನು ಸ್ಪಷ್ಟಪಡಿಸಿರುತ್ತದೆ. ಹರೀಂದ್ರನಾಥ ಚಟ್ಟೋಪಾಧ್ಯಾಯ, ಲಾಲ ಬಹದೂರ ಶಾಸ್ತ್ರಿಯವರ ಆತ್ಮ ನಮಗೆ ದಾರಿದೀಪಗಳಾಗಿವೆ. ಅಧಿಕಾರಾಂಧರಿಗೆ ಅದ್ಯಾವ ಬೆಳಕಿನಿಂದಾದರೂ ಪ್ರಯೋಜನ ಇದೆ ಏನು?

೧೯೫೬, ೧೯೫೮, ೧೯೬೬, ಮತ್ತು ೧೯೬೭ರಲ್ಲಿ ನಮ್ಮ ಸರಕಾರ ರಷ್ಯಾದ ಸರಕಾರಕ್ಕೆ ಭೂಪಟದ ಕುರಿತು ಬರೆದಿದೆಯಂತೆ. ಏನು ಬರೆದಿರುವಿರಿ? ಬಂದ ಉತ್ತರ ಎಲ್ಲಿ? ಲೋಕಸಭಾ ಸದಸ್ಯರ ಪ್ರಶ್ನೆಗೆ ಉತ್ತರವಿಲ್ಲ. ಆ ಪತ್ರವ್ಯವಹಾರವನ್ನು ಲೋಕಸಭಾಸದಸ್ಯರಿಗೆ ತೋರಿಸಲು ಮಂತ್ರಿ ಮಹಾಶಯರು ಸಿದ್ಧರಿಲ್ಲ. ಲೋಕಸಭಾ ಸದಸ್ಯರು ಜನತೆಯ ಪ್ರತಿನಿಧಿಗಳಿದ್ದಾರೆ. ನಮ್ಮದು ಪ್ರಜಾಸತ್ತಾತ್ಮಕ ರಾಷ್ಟ್ರವೆನ್ನಲಾಗುತ್ತಿದೆ. ಪ್ರಜಾಸತ್ತಾತ್ಮಕ ರಾಷ್ಟ್ರವೆನ್ನುವಾಗಲೇ ಹೀಗಾದಲ್ಲಿ ಇನ್ನು ಸಮಾಜವಾದಿ (ಸೋಶಿಯಾಲಿಸ್ಟ್) ಸಂಯುಕ್ತ ರಾಷ್ಟ್ರವೆಂದ ಮೇಲೆ ಅದೇನನ್ನೂ ಕೇಳಬೇಕಾಗಿಯೇ ಇಲ್ಲ. ಇದೇ ಸಮಯದಲ್ಲಿ ಸೋವಿಯಟ್ ರಷ್ಯವು ಹೊಸ 'ಗ್ರೇಟ್ ಸೋವಿಯಟ್ ಎನ್‌ಸೈಕ್ಲೊಪಿಡಿಯಾ'ದ (ವಿಶ್ವಕೋಶದ) ಮೊದಲ ಭಾಗವನ್ನು ಪ್ರಕಟಿಸುತ್ತದೆ. ಭೂಪಟದ ವಿಷಯ ರಷ್ಯಾ ಸರಕಾರಕ್ಕೆ ಬರೆದಿರುವುದು ನಮ್ಮ ಪ್ರತಿನಿಧಿಗಳಿಗೆ ಗೊತ್ತು. ಹೊಸ ಪುಸ್ತಕ ಪ್ರಕಟವಾದೊಡನೆ ಈ ಸಲ ತಿದ್ದಿದ್ದಾರೆಯೇ ಎನ್ನುವತ್ತ ನಮ್ಮ ಪ್ರತಿನಿಧಿಗಳ ಗಮನ ಹೋಗಲು ತಿಂಗಳುಗಳು ಬೇಕಾಗುತ್ತವೆ. ಸರಕಾರದ ಗಮನಕ್ಕೆ ಅದನ್ನು ತರಲು ಇನ್ನೂ ಸಮಯ ಬೇಕಾಗುತ್ತ! ಪ್ರಜಾಪ್ರತಿನಿಧಿಗಳೇ ಪ್ರಜಾಪ್ರಭುತ್ವದಲ್ಲಿ ಹೀಗಿರುವಾಗ ಸರ್ವಾಧಿಕಾರವನ್ನು ಬಯಸುವ ಪ್ರಧಾನಿಯವರ ಮಂತ್ರಿಮಂಡಲ ತುಟಿ ಬಿಚ್ಚುವುದು ಅಷ್ಟು ಸುಲಭವೇನು? ಸರಕಾರಕ್ಕೆ ಇದು ಜೂನಿನಲ್ಲಿ ಗೊತ್ತಾಯಿತಂತೆ. ಗೊತ್ತಾದ ಮೇಲೆ ಅವೇನು ಮಾಡಿವೆ? ಅದನ್ನು ತಿಳಿಸಲು ಸಚಿವರು ಸಿದ್ಧರಿಲ್ಲ. ಹಾಗೆ ಸದಸ್ಯರ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಡಲು ಮಂತ್ರಿಗಳೇನು ವಿದ್ಯಾರ್ಥಿಗಳೇ? ಈಗಿನ ಕಾಲದಲ್ಲಿ ವಿದ್ಯಾರ್ಥಿಗಳೇ ಉತ್ತರ ಕೊಡುವುದಿಲ್ಲವೆಂದ ಮೇಲೆ ಅಮಾತ್ಯರು ಅದೇತಕ್ಕೆ ಉತ್ತರ ಕೊಡಬೇಕು?

ಈ ವಿಶ್ವಕೋಶ ಪ್ರಕಟಣೆಗೆ ಅಲ್ಲಿಯ ಸರಕಾರ ಮಾತ್ರ ಜವಾಬ್ದಾರಿಯಲ್ಲ. ಹಾಗೆ ಅಲ್ಲಿ ಸರಕಾರ ಮತ್ತು ಕಮ್ಯುನಿಸ್ಟ್ ಪಕ್ಷ ಬೇರೆ ಇರುವುದಿಲ್ಲ. ಹಾಗಿದ್ದರೂ ಅದರ ಜವಾಬ್ದಾರಿ ಅಲ್ಲಿನ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿ ಹಾಗೂ ಸೋವಿಯಟ್ ಸಮಾಜವಾದಿ ಪ್ರಜಾಪ್ರಭುತ್ವ ಸಂಯುಕ್ತ ರಾಷ್ಟ್ರದ ಸಚಿವ ಸಂಪುಟಗಳ ಮೇಲಿದೆ. ಇಲ್ಲಿನ ಕಮ್ಯುನಿಸ್ಟ್ ಪಾರ್ಟಿಗಳಲ್ಲಿ ಡಾಂಗೆಯವರ ಕಮ್ಯುನಿಸ್ಟ್ ಪಕ್ಷ (ಬಲ ಕಮ್ಯುನಿಸ್ಟ್—ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ) ಇಂದಿರಾಜೀಯವರ ಬಲಸೈನ್ಯ ಇದೆ. ಆ ಪಕ್ಷದವರು ತಾವು ದೇಶಭಕ್ತರೆಂದು ಹೇಳಿಕೊಳ್ಳುತ್ತಿದ್ದಾರೆ. ಶ್ರೀಸಾಮಾನ್ಯನಿಗೆ ಆಗ ಅದರ ಅರ್ಥವೆಂದರೆ ಅವರು ಭಾರತ ದೇಶದ ಭಕ್ತರಿದ್ದಾರೆಂಬುದು. ಆದರೆ ಹಾಗಲ್ಲ. ಇಷ್ಟು ವರ್ಷಗಳಾದರೂ ಈ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾವು ಕಮ್ಯುನಿಸ್ಟ್ ಪಾರ್ಟಿ ಆಫ್ ಸೋವಿಯಟ್ ಯೂನಿಯನ್ನಿಗೆ ಈ ವಿಷಯ ಅದೇನನ್ನೂ ಬರೆದಿರುವುದಿಲ್ಲ. ಇತ್ತಿಂದ ಅದೆಷ್ಟೋ ಕಮ್ಯುನಿಸ್ಟರು ರಷ್ಯಾಕ್ಕೆ ಹೋಗಿದ್ದಾರೆ. ಅವರೂ ಈ ವಿಷಯ ಅಲ್ಲಿ ತುಟಿ ಎರಡು ಮಾಡಿರುವುದಿಲ್ಲ. ಅಷ್ಟೇ ಅಲ್ಲ, ಸಂಸತ್ತಿನಲ್ಲಿ ಈ ವಿಷಯದ ಕುರಿತು ವಾಗ್ವಾದ ನಡೆಯುತ್ತಿದ್ದಾಗ ಇವರು ಗಮ್ಮನೆ ಇದ್ದರಲ್ಲದೆ, ಅಮೇರಿಕಾ ಹಾಗೆ ಮಾಡುತ್ತಿದೆ, ಇದನ್ನೇನು ದೊಡ್ಡ ವಿಷಯವನ್ನಾಗಿ ಮಾಡಬಾರದು, ರಷ್ಯಾಕ್ಕೆ ಕೋಪ ಬರಿಸಬಾರದೆಂದಲ್ಲ ರಷ್ಯಾ ಹಿಂಬಾಲಕರಂತೆ ಹೇಳಿದ್ದಾರೆ. ಈ ಪಾರ್ಟಿಗೂ ದೇಶಪ್ರೇಮ ಇದೆಯಂತೆ! ಇದು ಇಂದಿರಾಜೀಯವರ ಅಚ್ಚುಮೆಚ್ಚಿನ ಪ್ರಗತಿಶೀಲ ಪಕ್ಷ. ಅವರ ಅಧಿಕಾರ ಭದ್ರತೆಗೆ ಈ ಪಕ್ಷದ ಬೆಂಬಲ ಬೇಕು!

ಸಂಸತ್ತಿನಲ್ಲಿ ಕೋಪೋದ್ರಿಕ್ತರಾದ ಸದಸ್ಯರನ್ನು ಸರಕಾರ ಸಮಾಧಾನಗೊಳಿಸಲು ಪ್ರಯತ್ನಿಸಿತು. ಈ ವಿಷಯ ಪತ್ರ ವ್ಯವಹಾರ ನಡೆಸುತ್ತಿದೆ, ನಾವು ನೋಡಿಕೊಳ್ಳುತ್ತೇವೆ... ಎನ್ನುತ್ತಾರೆ ಸ್ವರ್ಣಸಿಂಘರು

(ಹನ್ನೆರಡನೇ ಪುಟ ನೋಡಿ)

ಪ್ರವಾಸ ಕಥನಾ ಚತುರ—

ಶ್ರೀ ಜಾನ್ ಗುಂಥರ್

ಆರಡಿ ಎರಡಂಗುಲ ಉದ್ದ, ದೊಡ್ಡ ದೇಹ, ಬಿಳಿಯ ಬಣ್ಣ, ನೀಲಿಕಣ್ಣು ಮುಷ್ಟು ಆಶ್ಚರ್ಯ ಜನಕ ರೂಪದಿಂದ ಕೋಮಲ ಅಂಗಾಂಗಗಳು ಎಂದರೆ, ಜಾನ್ ಗುಂಥರ್. ವಿಶ್ವದಾದ್ಯಂತ ತನ್ನ ಕೃತಿಗಳಿಂದ ಸುಪ್ರಸಿದ್ಧನಾದ ಈ ಅಮೆರಿಕನ್ ಲೇಖಕ ಕೆಲವು ತಿಂಗಳುಗಳಿಗೆ ಮೊದಲು ತನ್ನ ೬೯ನೆಯ ವಯಸ್ಸಿನಲ್ಲಿ ಮೃತ್ಯುಮುಖನಾದನು. ಇನ್‌ಸೈಡ್ ಯೂರೋಪ್, ಇನ್‌ಸೈಡ್ ಅಮೆರಿಕಾ, ಇನ್‌ಸೈಡ್ ಏಶ್ಯಾ, ಇನ್‌ಸೈಡ್ ರಶ್ಯಾ-ಇವು ಮೊದಲಾದುವು ಅವನ ಹೆಸರಾಂತ ಪುಸ್ತಕಗಳು. 'ಇನ್‌ಸೈಡ್' ಮಾಲೆಯ ಈ ಪುಸ್ತಕಗಳು ಪ್ರಪಂಚದ ೨೭ ಭಾಷೆಗಳಲ್ಲಿ ಅನುವಾದಿತವಾಗಿವೆ; ಇವುಗಳ ಕೋಟ್ಯಂತರ ಪ್ರತಿಗಳು ಮಾರಿ ಹೋಗಿವೆ.

ಗುಂಥರನು ಈ ಮಾಲೆಯ ತನ್ನ ಚೊಚ್ಚಲ ಕೃತಿ "ಇನ್‌ಸೈಡ್ ಯೂರೋಪ್" ಅನ್ನು ಅರೆ ಮನಸ್ಸಿನಿಂದಲೇ ಬರೆದನು. ಆದರೆ, ಈ ಗ್ರಂಥವು ಅನಿರೀಕ್ಷಿತವಾಗಿ ಸರ್ವಜನಪ್ರಿಯವಾಯಿತು. ನಾಲ್ಕೇ ವರ್ಷಗಳಲ್ಲಿ ಅದು ಆರು ಸಂಶೋಧಿತ ಮುದ್ರಣಗಳನ್ನು ಕಂಡಿತು. ಇದರಿಂದ ಉತ್ತೇಜಿತನಾದ ಗುಂಥರ್ 'ಇನ್‌ಸೈಡ್ ಅಮೆರಿಕಾ'ವನ್ನು ಬರೆಯಲು ಮನದಂದನು. ಈ ಪುಸ್ತಕವು ಒಂದು ಸಾವಿರ ಪುಟಗಳದ್ದು; ೧೯೪೭ರಲ್ಲಿ ಮೊತ್ತ ಮೊದಲಿಗೆ ಪ್ರಕಟಗೊಂಡಿತು. ಇದೂ ಪುನರ್ಮುದ್ರಣಗೊಳ್ಳುತ್ತಲೇ ಇದೆ.

ಜಾನ್ ಗುಂಥರನ ಜನನ ಚಿಕಾಗೊ ನಗರದಲ್ಲಿ ೧೯೦೧ರ ಆಗಸ್ಟ್ ೩೦ರಂದು ಆಯಿತು. ಅವನ ತಂದೆ ವ್ಯಾಪಾರಿ. ಎಳೆಯಲ್ಲೇ ಗುಂಥರನಿಗೆ ಪತ್ರಿಕಾ ವ್ಯವಸಾಯದಲ್ಲಿ ಶಿಕ್ಷಣ ದೊರೆಯಿತು. ಅವನು ತನ್ನ ಶಾಲಾ ಪತ್ರಿಕೆಯ ಸಂಪಾದಕನಾಗಿದ್ದನು. ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದಾಗ, ಅಲ್ಲಿನ ದೈನಿಕ ಪತ್ರಿಕೆ 'ಮ್ಯಾರೂನ್'ನ ಸಾಹಿತ್ಯ ಸಂಪಾದಕನಾಗಿದ್ದನು.

ಅದೇ ವೇಳೆಗೆ ಅತನಿಗೆ ವಿಹಾರದಲ್ಲಿ ಆಸಕ್ತಿ ಹುಟ್ಟಿತು. ಪದವೀಧರನಾಗುವುದಕ್ಕೆ ಮೊದಲೇ ಅವನು ಪಶುಗಳನ್ನೊಯ್ಯುವ ಒಂದು ಹಡಗವನ್ನೇರಿ ಯೂರೋಪನ್ನು ಸೇರಿದನು. ಯುರೋಪದಲ್ಲೆಲ್ಲ ಸಂಚರಿಸಿ ಅವನು ಅಮೆರಿಕೆಗೆ ಹಿಂದಿರುಗಿ ಬಂದನು. ಆಗಲೇ "ಚಿಕಾಗೊ ಡೈಲೀ ನ್ಯೂಸ್" ಪತ್ರಿಕೆಯ ವರದಿಗಾರನಾದನು. ತನ್ನನ್ನು ವಿದೇಶಗಳಿಂದ ವರದಿ ಕಳಿಸುವುದಕ್ಕಾಗಿ ಪರದೇಶಗಳಿಗೆ ಕಳಿಸಬೇಕೆಂದಾತ ಬಯಸಿದನು. ಆದರೆ, ಈ ಎಳೆ ವಯಸ್ಸಿನ ವರದಿಗಾರನನ್ನು ವಿದೇಶಗಳಿಗೆ ಕಳಿಸಲು ಪತ್ರಿಕೆಯ ಯಜಮಾನರು ಒಪ್ಪಲಿಲ್ಲ. ಇದರಿಂದ ನೊಂದ ಗುಂಥರನು ತನ್ನ ವರದಿಗಾರಿಕೆಗೆ ರಾಜಿನಾಮೆ ನೀಡಿದನು. ಹಡಗೊಂದನ್ನೇರಿ ಮತ್ತೆ ಯುರೋಪಿಗೆ ಹೋದನು. ಈ ಯಾತ್ರೆಯ ವೆಚ್ಚವನ್ನು ತುಂಬಿಸಿಕೊಳ್ಳುವುದಕ್ಕಾಗಿ, ಅವನು ಹಡಗಿನಲ್ಲಿ ಪ್ರಯಾಣಿಸುತ್ತಿದ್ದ ದೊಡ್ಡ ವ್ಯಕ್ತಿಗಳ ಸಂದರ್ಶನವನ್ನು ತೆಗೆದುಕೊಂಡನು.

ಗುಂಥರನು ಲಂಡನ್ನಿಗೆ ಬಂದು ಸೇರಿದನು. ಅವನು "ಚಿಕಾಗೋ ಡೈಲೀ ನ್ಯೂಸ್"ನ ಲಂಡನ್ನಿನ ವರದಿಗಾರನಾದನು. ಆದರೆ, ಪತ್ರಿಕೆಯ ಕೇಂದ್ರೀಯ ಕಾರ್ಯಾಲಯಕ್ಕೆ ಗುಂಥರನ ಹೆಸರು ತಿಳಿದೊಡನೆಯೇ ಅವನನ್ನು ನೌಕರಿಯಿಂದ ತೆಗೆದುಹಾಕಿತು. ಆದರೆ, ಶೀಘ್ರದಲ್ಲೇ ಗುಂಥರನ ಯೋಗ್ಯತೆಯೇನೆಂಬುದು ಕೇಂದ್ರೀಯ ಕಾರ್ಯಾಲಯಕ್ಕೆ ಮನವರಿಕೆಯಾಯಿತು. ಅತನನ್ನು ಮತ್ತೆ ನೌಕರಿಗೆ ಸೇರಿಸಿಕೊಂಡಿತು.

ಇದು ನಡೆದದ್ದು ೧೯೨೪ರಲ್ಲಿ. ಅನಂತರ ಗುಂಥರನು ಯುರೋಪ್ ಮತ್ತು ಪಶ್ಚಿಮ ಏಶ್ಯಾಗಳ ದೇಶ ದೇಶಗಳನ್ನು ಸಂಚರಿಸಿ ವರದಿ ಕಳಿಸ ಹತ್ತಿದನು. ಇದು ಹನ್ನೆರಡು ವರ್ಷಗಳವರೆಗೆ ಅವ್ಯಾಹತವಾಗಿ ನಡೆಯಿತು. ಆ ಕಾಲದ ಖ್ಯಾತಿಶ್ರೇಷ್ಠ ವ್ಯಕ್ತಿಗಳಲ್ಲಿ ಒಬ್ಬನನ್ನೂ ಬಿಡದೆ ಅವನು ಸಂದರ್ಶನ ತೆಗೆದುಕೊಂಡನು. ಈ ಸಂದರ್ಶನ ವರದಿಗಳು ಅತ್ಯಂತ ಲೋಕಪ್ರಿಯವಾದುವು. ವರದಿಗಳಲ್ಲಿ ಗುಂಥರನ ವಿಶೇಷ ಶ್ರಮದಿಂದಾಗೇ ಅವು ಸ್ವಾಗತ ಪಡೆದುವು.

ಸಂದರ್ಶಿತ ವ್ಯಕ್ತಿಗಳ ಜೀವನ ಮತ್ತು ಕಾರ್ಯಗಳ ಅಂತರಂಗ ಮತ್ತು ಪೃಷ್ಠಭೂಮಿಯ ಮೇಲೆ ಈ ವರದಿಗಳು ಸ್ಪಷ್ಟ ಬೆಳಕು ಚೆಲ್ಲುತ್ತಿದ್ದುವು. ಇದರಿಂದ ಆ ವ್ಯಕ್ತಿಯ ಸ್ವ[illegible] ತಿಳಿಯಲು ತುಂಬ ಸಹಾಯವಾಗುತಿತ್ತು. ಈ ಗುಣಗಳಿಂದಾಗೇ ಗುಂಥರನ ವರದಿ ಜನಮಾನ್ಯವಾಗುತಿತ್ತು. ಮುಂದಿನ ಮಹಾಖಂಡಗಳ ಅತನ ಯಾತ್ರಾ ವರ್ಣನೆಯು ಸಂಪೂರ್ಣ ಯಶಗಳಿಸುವುದಕ್ಕೆ ಇದೇ ಬುನಿಯಾದಿಯಾಗಿತ್ತು.

೧೯೩೫ರ ಬೇಸಗೆಯ ದಿನಗಳಲ್ಲಿ ಗುಂಥರನು "ಇನ್‌ಸೈಡ್ ಯೂರೋಪ್" ಗ್ರಂಥವನ್ನು ಬರೆಯಲು ಆರಂಭಿಸಿದನು. ಈ ಗ್ರಂಥಕ್ಕೆ ದೊರೆತ ಪುರಸ್ಕಾರದಿಂದ ಉತ್ತೇಜಿತನಾದ ಗುಂಥರನು "ಇನ್‌ಸೈಡ್ ಅಮೆರಿಕಾ"ವನ್ನು ಬರೆದನು. ಇಂತಹ ಪುಸ್ತಕಗಳನ್ನು ಬರೆಯ ಬೇಕಾದರೆ, ದೇಶ-ದೇಶಾಂತರಗಳಲ್ಲಿ ಹೆಚ್ಚು ಹೆಚ್ಚಾಗಿ ಸಂಚಾರ ಮಾಡಬೇಕು; ಮತ್ತು ಹೆಚ್ಚು ಹೆಚ್ಚಾಗಿ ಸಂಶೋಧನೆ ನಡೆಸಬೇಕು. ಆದರೆ, ಗುಂಥರನು ಇವೆರಡನ್ನೂ ಮಾಡಲಿಲ್ಲ. ಆದುದರಿಂದ ಕೆಲವು ವಿಮರ್ಶಕರು ಈ ಗ್ರಂಥಗಳು ಸಮರ್ಪಕವಾಗಿಲ್ಲವೆಂದು ಅಭಿಪ್ರಾಯ ಪಡುತ್ತಾರೆ. ಸತ್ಯ ಹೇಳುವುದಾದರೆ, ಗ್ರಂಥ ಬರೆಯುವುದಕ್ಕೆ ಮೊದಲೇ ಬೇಕಷ್ಟು ಸಂಚಾರಮಾಡಿ ವಿಷಯವನ್ನು ಕೂಲಂಕಷವಾಗಿ ತಿಳಿದುಕೊಂಡದ್ದರಿಂದ ಅತನಿಗೆ ಬರೆಯುವ ವೇಳೆ ಸಂಚಾರ-ಸಂಶೋಧನೆಗಳು ಅಗತ್ಯ ಕಾಣಲಿಲ್ಲ. ಆಂತರಿಕ ಸಂಗತಿಗಳನ್ನು ಕ್ಷಣಮಾತ್ರದಲ್ಲಿ ತಿಳಿದುಕೊಳ್ಳುವ ಶಕ್ತಿ ಅತನಿಗೆ ಅನಾಯಾಸವಾಗಿ ಬಂದಿತ್ತು. ಅವನೇನೂ ಸಂಶೋಧನಾತ್ಮಕ ಗ್ರಂಥವನ್ನು ಬರೆಯಲಿಲ್ಲ. ಅವನು ಬರಿಯ ಯಾತ್ರಾ ವರ್ಣನೆಯನ್ನು ಮಾಡಿದ್ದನು; ಈ ವರ್ಣನೆಯು ಆ ಕಾಲದ ರಾಜಕೀಯದೊಡನೆ ಹಾಸು ಹೊಕ್ಕಾಗಿತ್ತು. ತನ್ನ ಪುಸ್ತಕದಲ್ಲಿ ವರ್ಣಿತವಾದ ವಿಷಯಗಳಿಗೆ ಸಂಬಂಧಿಸಿದ ಇತರ ಗ್ರಂಥಗಳ ಸೂಚಿಯನ್ನೂ ಅವನು ಕೊಟ್ಟಿದ್ದಾನೆ. ಇದರಿಂದ ಹೆಚ್ಚಿನ ಜ್ಞಾನ ಹೊಂದುವುದಕ್ಕೆ ಅನುಕೂಲ.

ಈ ಗ್ರಂಥಗಳು ಗುಂಥರನ ನಿರೀಕ್ಷೆಗೂ ಮೀರಿ ಯಶಗಳಿಸಿದ್ದರಿಂದ ಕಾದಂಬರಿ ಕ್ಷೇತ್ರದಲ್ಲಿ ಕೈಯಾಡಿಸಲು ಅತನು ಮನದಂದನು. ಆರು ವರ್ಷಗಳಲ್ಲಿ ಅವನು ನಾಲ್ಕು ಕಾದಂಬರಿಗಳನ್ನು ಬರೆದನು. ಆದರೆ, ಅತನ ಕಾದಂಬರಿಗಳಲ್ಲಿ ಒಂದಾದರೂ ಯಶ ಪಡೆಯಲಿಲ್ಲ.

"ಇನ್‌ಸೈಡ್ ಏಶ್ಯಾ"ದಲ್ಲಿ ಗುಂಥರನು ಭಾರತದ ಬಗ್ಗೆಯೂ ಬರೆದಿದ್ದಾನೆ. ಭಾರತವು ಸ್ವತಂತ್ರಗೊಳ್ಳುವುದಕ್ಕೆ ಮೊದಲು ಅವನು ಇಲ್ಲಿಗೆ ಭೇಟಿ ನೀಡಿದ್ದನು. ಆದುದರಿಂದ ಭಾರತಕ್ಕೆ ಸಂಬಂಧಪಟ್ಟ ಅಧ್ಯಾಯದಲ್ಲಿ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ವರ್ಣನೆಯಿದೆ. ಗಾಂಧೀ ಮತ್ತು ನೆಹರು ರವರ ಉಲ್ಲೇಖವಿದೆ. ಮಹಾತ್ಮಾ ಗಾಂಧಿಯವರ ಬಗ್ಗೆ ಗುಂಥರನು ಹೀಗೆ ಬರೆದಿದ್ದಾನೆ - "ಭಗವಾನ್ ಬುದ್ಧನ ಬಳಿಕ ಗಾಂಧಿಯು ಭಾರತದ ಮಹಾವ್ಯಕ್ತಿ. ಈತನು ವ್ಯತ್ಯಮಾನವಾದ ಬಳಿಕ ಬುದ್ಧನಂತೆಯೇ ಪೂಜೆಯನ್ನು ಪಡೆಯುವವನು. ಇಂದಿಗೂ ಲಕ್ಷೋಪಲಕ್ಷ ಜನರು ಅತನನ್ನು ಪೂಜಿಸುತ್ತಾರೆ. ಗಾಂಧಿಯು ನಡೆದ ದಾರಿಯ ಮೇಲೆ ರೈತರು ತಮ್ಮ ಹಣೆ ಹಚ್ಚುವುದನ್ನು ನಾನು ನೋಡಿದ್ದೇನೆ. ಸಂತನೂ ರಾಜಕೀಯ ನಾಯಕನೂ ಆಗಿರುವ ಈ ವ್ಯಕ್ತಿಯು ಎಲ್ಲ ಬಗೆಯ ಪರಿಭಾಷೆಗೂ ಮೀರಿ ನಿಂತವನು"

"ಇನ್‌ಸೈಡ್ ಮಾಲೆ"ಯಲ್ಲಿ ಜಾನ್ ಗುಂಥರನು ಏಳು ಪುಸ್ತಕಗಳನ್ನು ಬರೆದನು. ಅಮೆರಿಕೆಯ "ಬುಕ್ ಆಫ್ ದಿ ಮಂತ್ ಕ್ಲಬ್"ಗೆ ಈ ಎಲ್ಲ ಪುಸ್ತಕಗಳು ಆಯ್ಕೆಯಾಗಿವೆ. ಒಬ್ಬನೇ ಲೇಖಕನ ಇಷ್ಟು ಸಂಖ್ಯೆಯ ಪುಸ್ತಕಗಳನ್ನು ಕ್ಲಬ್ಬು ಆಯ್ಕೆ ಮಾಡಿದ್ದು ಇದೇ ಮೊದಲು. ಜಾನ್‌ಗುಂಥರನನ್ನು "ಸರ್ವೆಯರ್ ಜನರಲ್ ಆಫ್ ದಿ ಯುನಿವರ್ಸ್" ಎಂದು ಹೆಸರಿಸಬಹುದು. ಇದಕ್ಕೆ ಅತನ ಗ್ರಂಥಗಳೇ ಕಾರಣ. ಇನ್‌ಸೈಡ್ ಯುರೋಪ್ ಗ್ರಂಥವು ಇದುವರೆಗೆ ೨೦ ಸಂಸ್ಕರಣಗಳನ್ನು ಕಂಡಿದೆಯೆಂದರೆ, ಇದರ ಜನಪ್ರಿಯತೆಗೆ ಬೇರೆ ಸಾಕ್ಷಿ ಅನಗತ್ಯ.

ತನ್ನ ಮೊದಲನೆಯ ಹಂತದಲ್ಲಿ ಗುಂಥರನು ಒಬ್ಬಾಕೆ ಮಗಳನ್ನು ಪಡೆದನು; ಆದರೆ, ಈ ಹೆಮ್ಮಗಳು ಬಹುಕಾಲ ಬದುಕಲಿಲ್ಲ. ಅನಂತರ ಒಬ್ಬ ಹುಡುಗ ಹುಟ್ಟಿದ. ಈತನು ತನ್ನ ೧೭ನೆಯ ವಯಸ್ಸಿನಲ್ಲಿ ಸತ್ತು ಹೋದ. ಈ ದುರ್ಘಟನೆ ಗುಂಥರನ ಮೇಲೆ ಬಹಳ ಆಘಾತ ಮಾಡಿತು. ಅವನು 'ಡೆತ್ ಬಿ ನಾಟ್ ಪ್ರೌಡ್' ಎಂಬ ಹೆಸರಿನ ಪುಸ್ತಕವೊಂದನ್ನು ಬರೆದನು. ಇದರಲ್ಲಿ ತನ್ನ ಮಗನ ಜೀವನದ ಅಂತಿಮ ದಿನಗಳಲ್ಲಿ ಅಸಾಧ್ಯ ರೋಗದೊಡನೆ ಹೋರಾಡಿದ ಚಿತ್ರ ಶಬ್ದರೂಪದಲ್ಲಿದೆ. ಈ ಮಾರ್ಮಿಕ ಪುಸ್ತಕವು ಬಹಳಷ್ಟು ಲೋಕಪ್ರಿಯವಾಯಿತು; "ಬುಕ್ ಆಫ್ ದಿ ಮಂತ್ ಕ್ಲಬ್" ಇದನ್ನೂ ಆರಿಸಿಕೊಂಡಿತು. ಈ ಪುಸ್ತಕವೀಗ 'ಕ್ಲಾಸಿಕ್' ಎಂದು ಪರಿಗಣಿತವಾಗಿದೆ. ಗುಂಥರನ ಎರಡನೆಯ ಪತ್ನಿಯಲ್ಲಿ ಹುಟ್ಟಿದ ಮಗನು ಇದುವರೆಗೆ ಜೀವಂತನಿದ್ದಾನೆ.

ತನ್ನ ಶರೀರವು ಉದ್ದ-ದಪ್ಪಗಿದ್ದರೂ ಗುಂಥರನು ವ್ಯಾಯಾಮವನ್ನು ಮೆಚ್ಚುತ್ತಿರಲಿಲ್ಲ. ತಿನ್ನುವುದರಲ್ಲಿ-ಕುಡಿಯುವುದರಲ್ಲಿ ಅವನು ಬಹಳ ಸೊಗಸುಗಾರ. ಆದುದರಿಂದಲೇ ತನ್ನ ದೇಶ-ವಿದೇಶಗಳಿಗೆ ಸಂಬಂಧಿಸಿದ ಗ್ರಂಥಗಳಲ್ಲಿ ಆಯಾ ದೇಶಗಳ ಸ್ವಾದಿಷ್ಟ ಭೋಜನಗಳ ವರ್ಣನೆಯನ್ನು ವಿವರವಾಗೇ ಅವನು ಮಾಡಿದ್ದಾನೆ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
124 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¼% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು—1

ಅಮೃತಾಂಜನ

ತಲೆ ಸಿಡಿತ · ಮೈ ನೋವು · ಉಳುಕು · ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು—4

ವಾರಪತ್ರಿಕೆ
ಉಡುಪಿ, ದ. ಕ.

NAVAYUGA
UDIPI, S. K.

ಸಂಪುಟ : 50
ಸಂಚಿಕೆ : 3

ಸಂಸ್ಥಾಪಕರು :
ಡಾ! ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ವಾರ್ಷಿಕ ಚಂದಾ ರೂ. 10
ವಿಶೇಷ ಸಂಚಿಕೆಗಳು ಸಹಿತ
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಠ ಮೂರು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ದ್ರಾ. ಮು. ಕ. ತಂತ್ರ ನೀತಿ

ಕಾಂಗ್ರೆಸ್ ಪಕ್ಷದ ವಿಘಟನೆಯಿಂದ ಕಾಂಗ್ರೆಸ್ಸಿನ ಯಾವ ತುಂಡಿಗೂ ಲಾಭವಾಗದೆ ಹೋಗಿದೆಯಾದರೂ ಅದರ ಲಾಭ ಹೊಂದಿದವರು ಇತರರಿದ್ದಾರೆ. ಸಿ. ಪಿ. ಐ., ಸಿ. ಪಿ. ಎಂ. ಮತ್ತು ನಕ್ಸಲೀಯರ ತಂಡಗಳು ಪ್ರಗತಿಗಾಮಿತನದ ಹೆಸರಲ್ಲಿ, ಮುಸ್ಲಿಂ ಲೀಗು ಅಲ್ಪಸಂಖ್ಯಾತರೆಂಬ ನೆಪದಲ್ಲಿ, ದ್ರಾವಿಡ ಮುನ್ನೇತ್ರ ಕಳಗಂ ಅಧಿಕಾರ—ಬಲಗಳ ಕಾರಣದಲ್ಲಿ ಹೇಳಲಾಗದಷ್ಟು ಲಾಭ ಹೊಂದಿವೆ. ದ್ರಾ. ಮು. ಕ. ತಮಿಳುನಾಡಿನಲ್ಲಿ ಅಧಿಕಾರಾರೂಢ ಪಕ್ಷವಾದುದರಿಂದ, ಇಂತಹ ಸೌಲಭ್ಯ ಮತ್ತಾರಿಗೂ ಇರದ್ದರಿಂದ ಅದು ಇಷ್ಟೂ ಇನ್ನೂ ತನ್ನ ಲಾಭಬಡುಕತನವನ್ನು ತೋರಿಸುತ್ತಲೇ ಬರತೊಡಗಿದೆ. ಇದನ್ನು ದುರ್ಲಾಭನೆಂದರೂ ಸರಿಯೇ. ಸಣ್ಣ ಪುಟ್ಟ ವಿಷಯಗಳಲ್ಲೆಲ್ಲ ಖಂಡ ತುಂಡವಾಗಿ ಮಾತನಾಡುವ ಪ್ರಧಾನ ಮಂತ್ರಿ ಶ್ರೀಮತಿ ಗಾಂಧಿಯವರು ದ್ರಾಮುಕದ ಬೆನ್ನು ತಟ್ಟುತ್ತಾರೆ. ಇದೆಲ್ಲ ಸಂಸತ್ತಿನಲ್ಲಿ ತನ್ನ ಸಿಂಹಾಸನ ಹೊತ್ತುಕೊಂಡಿರುವ ದ್ರಾಮುಕ ಹೇಸಗಳ ಬೆಂಬಲಕ್ಕಾಗಿ.

ದ್ರಾ.ಮು.ಕ. ಸರಕಾರವು ಏನೋ ಒಂದು ಸುಸಮಯದಲ್ಲಿ ಅಧಿಕಾರವನ್ನು ಪಡೆಯಿತು. 'ಹಿಂದೀ ವಿರೋಧಿ ನೀತಿ' ಮತ್ತು ಜನತೆಯ ಬದಲಾವಣೆ ಬಯಸುವ ಸಹಜ ಪ್ರವೃತ್ತಿ ಅದಕ್ಕೆ ಅಧಿಕಾರ ತಂದುಕೊಟ್ಟಿತು. ಆಡಳಿತ ಸೂತ್ರ ಹಸ್ತಗತವಾದ ಮೇಲೆ 'ಜನ ಬಯಸದ ಹಿಂದಿ'ಯೂ ಹೋಗಲಿಲ್ಲ; ಸ್ವರ್ಗಕ್ಕೆ ಸೋಪಾನವೂ ಕಟ್ಟಲಿಲ್ಲ! ಇನ್ನೀಗ ಚುನಾವಣೆಗಳು ಹತ್ತಿರವಾಗುತ್ತಿವೆ. ತಮಿಳು ಜನತೆಯಲ್ಲಿ ದ್ರಾಮುಕದ ಬಗ್ಗೆ ನಿರಾಶೆ ಬೆಳೆಯತೊಡಗಿದೆ. ಕಾಂಗ್ರೆಸ್ಸ್ (ಐ) ಅಲ್ಲಿ ಮತ್ತೆ ಜನಪ್ರಿಯವಾಗ ಹತ್ತಿದೆಯೆಂದು ಪಂಚಾಯತಿ ಚುನಾವಣೆಗಳು ಸಾರುತ್ತವೆ. ಶ್ರೀ ಕರುಣಾನಿಧಿ—ಶ್ರೀ ನೆಡುಂಚೆಳಿಯನ್ ಕಾಳಗ ಅಂದು ಸೌಹಾರ್ದಮಯ—ವಾತಾವರಣದಲ್ಲಿ ಮುಕ್ತಾಯಗೊಂಡದ್ದು ನಿಜ; ಆದರೆ, ಪಕ್ಷದ ಸಂಘಟನೆ ಶಿಥಿಲವಾಗಿದೆಯೆಂಬುದೂ ಅಷ್ಟೇ ನಿಜ. ಪಕ್ಷದ ಕಾರ್ಯಕರ್ತರ ಗಳಿಗಾಗಿ ಮೂವರು [illegible]ರಿಗೆ 'ಕಾವಲ ಜೇಕರಣ'ವಾದದ್ದು ಇದಕ್ಕೆ ಪುಷ್ಟಿ ನೀಡುತ್ತದೆ. ಹೀಗೆ ಪಕ್ಷದಲ್ಲಿಯೂ ರಾಜ್ಯದಲ್ಲಿಯೂ ದ್ರಾಮುಕ ನಾಯಕರು ಜನಪ್ರಿಯತೆ ಕಳೆದುಕೊಳ್ಳುತ್ತಿದ್ದಾರೆ; ಇದನ್ನು ಉಳಿಸುವುದಕ್ಕಾಗಿ ಅವರು ಕೇಂದ್ರದೊಡನೆ ಹೋರಾಟಕ್ಕೆ ಹೊರಟಿದ್ದಾರೆ. ಇದು ಚುನಾವಣಾಪೂರ್ವ ತಂತ್ರ.

ಎಲ್ಲವುಗಳಿಗೂ ಶ್ರೀ ಕರುಣಾನಿಧಿ ಹೇಳಿದ್ದಕ್ಕೆ ಅಂಜಿ ಮತದಾನೆಯಿಂದ ಶ್ರೀಮತಿ ಗಾಂಧಿ ಸೈಗುಟ್ಟುತ್ತ ಬಂದರು. ಕಾವೇರಿ ನದೀ ನೀರಿನ ಮರೆಯುಬಿದ್ದ ಮೊಕದ್ದಮೆಯೂ ಮತ್ತೆ ಚಿಗುರುವಂತೆ ಕೆರೆದರು. "ಕರ್ನಾಟಕಕ್ಕೆ ಅನ್ಯಾಯವಾದರೂ ಚಿಂತಿಲ್ಲ; ನಿಮಗೆ ತೃಪ್ತಿಕರ ತೀರ್ಪೇ"ನೆಂದು ಅವರು ಭರವಸೆ ನೀಡಿದ್ದಾದರೂ ಹೋರಾಟ ಕೊನೆಗೊಳ್ಳಲಿಲ್ಲ. ಶ್ರೀ ಕರುಣಾನಿಧಿ ತಮಿಳುನಾಡು ರಾಜ್ಯಕ್ಕೆ ಪ್ರತ್ಯೇಕ ಧ್ವಜವನ್ನು ಕೇಳಿದ್ದಾರೆ. "ಮದ್ರಾಸ್ ವಾನೊಲಿ ನಿಲಯಂ" ಎಂಬುದನ್ನು "ಚೆನ್ನೈ ವಾನೊಲಿ ನಿಲಯಂ" ಎಂದು ಆಕಾಶವಾಣಿ ಕರೆಯದಿದ್ದರೆ ಅದನ್ನು ಬಹಿಷ್ಕರಿಸುವ ಬೆದರಿಕೆ ಹಾಕಿದ್ದಾರೆ. ಒಂದು ವೇಳೆ, ಕೇಂದ್ರ ಸರಕಾರ ತನ್ನ ಬೇಡಿಕೆಗಳನ್ನು ಮನ್ನಿಸದಿದ್ದರೆ, ಏಕಪಕ್ಷೀಯವಾಗಿ ಘೋಷಿಸಬೇಕೆಂದು ಆ ಪಕ್ಷದ ಅಗ್ರಣಿಗಳು ಬಹಿರಂಗವಾಗಿ ಹೇಳತೊಡಗಿದ್ದಾರೆ. ಇದಕ್ಕೆ ಪೂರಕವಾಗಿಯೆಂಬಂತೆ ಒಂದೆರಡೆಡೆಗಳಲ್ಲಿ ತಮಿಳುನಾಡು ಸೂಚಿಸಿದ ಪ್ರತ್ಯೇಕ ಧ್ವಜದ ಮಾದರಿಯನ್ನು ಕೆಲವರು ಹಾರಿಸಿಯೂ ಆಗಿದ್ದಾರೆ. ಪ್ರತ್ಯೇಕ ಧ್ವಜದ ಬೇಡಿಕೆಯ ಬಗ್ಗೆ ಪ್ರಧಾನಿ ನೀಡಿದ ಉತ್ತರ ಶ್ರೀ ಕರುಣಾನಿಧಿಯವರಿಗೆ ತೃಪ್ತಿ ತರಲಿಲ್ಲ. "ಉಳಿದವರೊಡನೆ ವಿಚಾರಿಸಿ ಉತ್ತರಿಸುತ್ತೇನೆ" ಎಂದರು ಸಂಸತ್ತಿನಲ್ಲಿ ಶ್ರೀಮತಿ. ಕೆಲವು ಮುಖ್ಯ ಮಂತ್ರಿಗಳು ತಮ್ಮ ಆಕ್ಷೇಪ ಸೂಚಿಸಿದ್ದರಿಂದ 'ಬೇಡಾದವರಿಗೆ ಕೊಡಬೇಡಿ; ನಾವು ಕೇಳಿದ್ದೇವೆ; ನಮಗೆ ಕೊಡಿ' ಎಂದಿದ್ದಾರೆ ಶ್ರೀ ಕರುಣಾನಿಧಿ. ಅವರು ಮತ್ತೂ ಮುಂದೆ ಹೋಗಿದ್ದಾರೆ. ಶ್ರೀಮತಿ ಗಾಂಧಿ ಅಧಿಕಾರ ಸಂರಕ್ಷಣೆಯ ಭಾರ ಹೊತ್ತ ದ್ರಾಮುಕದ ವಿರುದ್ಧ ತಮಿಳುನಾಡಿನಲ್ಲಿ ಅವಿಶ್ವಾಸ ಠರಾವಿನ ವೇಳೆ ಮತದಾನ ನಡೆದಾಗ (ಇ) ಕಾಂಗ್ರೆಸ್ಸು ವಿಧಾನಸಭೆಯಲ್ಲಿ ಗೈರು ಹಾಜರಾಯಿತು. ಇದರಿಂದ ದ್ರಾಮುಕಕ್ಕೇನೂ ನಷ್ಟವಾಗಲಿಲ್ಲ. ಆದರೂ ಇದನ್ನೇ ಎತ್ತಿಹಿಡಿದು 'ಸಂಸತ್ತಿನಲ್ಲಿ ನಾವು ಪ್ರಧಾನಿಯವರ ನೀತಿಯನ್ನು ಬದಲಾಯಿಸ ಬೇಕಾದೀತು' ಎಂಬ ಎಚ್ಚರಿಕೆ ಹೊರಟಿದೆ. ಅಂದರೆ, ಅಧಿಕಾರದ ಉಳಿವಿಗಾಗಿ ತನಗಾಗದವರೊಡನೆ ಹೋರಾಡುವ ಶ್ರೀಮತಿ ಗಾಂಧಿಯವರನ್ನು ಹಲಿವಾಗಿಸುವುದೂ ತನ್ನ ಜೇಬು ಪೃಥಗಾಗುವಂತೆ ಮಾಡುವ ಪ್ರಶ್ನೆ ದ್ರಾಮುಕದ ಗಂಜನತೆಯ ಲಕ್ಷ್ಯವನ್ನು ಸರಕಾರದ ಅಸಫಲತೆಯಿಂದ ಕೇಂದ್ರ ಸರಕಾರದತ್ತ ತಿರುಗಿಸುವ ಈಯೆಲ್ಲ ತಂತ್ರಗಳು ಚುನಾವಣಾ ಪೂರ್ವತಂತ್ರಗಳಲ್ಲವಾದರೆ, ಮತ್ತೇನು?

ಶ್ರೀಮತಿ ಗಾಂಧಿಯವರ ತುಷ್ಟೀಕರಣ ನೀತಿ ಬಹುಕಾಲ ಮುಂದುವರಿಯುವುದು ಸಾಧ್ಯವಿಲ್ಲ. ತನ್ನ ಬೆಂಬಲಿಗರೆಲ್ಲರೂ ಹೇಳುವಂತೆ ಕೇಳುವುದು ಅಸಾಧ್ಯವೆಂಬುದು ಈಗಲೇ ವ್ಯಕ್ತವಾಗಿದೆ. ತಾನೆಂದುದನ್ನೇ ಇತರರೆಲ್ಲರೂ ಒಪ್ಪಬೇಕೆಂಬ ಪ್ರವೃತ್ತಿಯ ಶ್ರೀಮತಿ ಗಾಂಧಿ ದ್ರಾಮುಕದ ಮುಂದೆ ಗರುಡನನ್ನು ಕಂಡ ಹಾವಿನಂತೆ ಆಗುತ್ತಾರೆ! ದ್ರಾಮುಕದ ಸಲಹೆಯನ್ನು ಮನ್ನಿಸಿದರೆ, ಮುಂದೆಯೂ ಹಲವು ಸಲಹೆಗಳು ಹೋಗುತ್ತವೆ— ತಮಿಳುನಾಡಿಗೆ ಪ್ರತ್ಯೇಕ ಸ್ಥಾನಮಾನ, ಪ್ರತ್ಯೇಕ ಪ್ರಧಾನ ಮಂತ್ರಿ... ಕೇವಲ ಅಷ್ಟಲ್ಲ ಸ್ವತಂತ್ರ ರಾಷ್ಟ್ರೀಯದ ಕನಸು ಕಾಣುವಂತೆ ದ್ರಾಮುಕ ಸ್ವತಂತ್ರ ತಮಿಳುನಾಡಿನ ಕನಸು ಕಾಣುತ್ತಿದೆ. ಅದು ಹುಟ್ಟಿದ್ದೂ ಅಲ್ಲಿಯೇ ಬೆಳೆಯುತ್ತಿರುವುದೂ ಅಲ್ಲಿಯೇ; ಮುಂದೊಂದು ದಿನ ಸಾಯುವುದೂ ಅಲ್ಲಿಯೇ. ತಾನು ಸಾಯುವುದಕ್ಕೆ ಮೊದಲು ಈ ದ್ರಾಮುಕ ಭೂತ ಅದೆಷ್ಟು ಬಲಿ ತೆಗೆದುಕೊಳ್ಳುತ್ತದೆಂದು ಕಾದು ನೋಡಬೇಕು.

ಎಕ್ಸ್ಪೋ ಹಗರಣ

ಜಪಾನದಲ್ಲಿನ ಎಕ್ಸ್ಪೋ—೭೦ಕ್ಕೆ ಕರ್ನಾಟಕದಿಂದ ಹೋಗಲು ಆಯ್ಕೆಯಾದ ಪ್ರತಿನಿಧಿಗಳ ಸಂಬಂಧದಲ್ಲಿ ಅನ್ಯಾಯ—ಅಕ್ರಮವಾಗಿದೆಯೆಂದು ರಾಜ್ಯದಲ್ಲೆಲ್ಲ ವಿದ್ಯಾರ್ಥಿಗಳು ಚಳುವಳಿ ಹೂಡಿದರು. ಎಕ್ಸ್ಪೋ-೭೦ರ ಪ್ರಯಾಣವನ್ನು ತಡೆಹಿಡಿಯಬೇಕೆಂದು ಅವರೂ ಕೆಲವು ರಾಜಕೀಯ ಪಕ್ಷಗಳೂ ಕರೆನೀಡಿದವು. ಆಯ್ಕೆಯು ಸಮರ್ಪಕವಾಗಿದೆಯೆಂದೂ ಲಭ್ಯವಾದ ಅಲ್ಪಾವಕಾಶದಲ್ಲಿ ಸಾಧ್ಯವಿರುವಷ್ಟು ಸರಿಯಾಗಿ ನಡೆದಿದೆಯೆಂದೂ ಆಯ್ಕೆಗಾರರು ಹೇಳಿದರು. ಪ್ರಯಾಣ ಪೂರ್ವನಿಯೋಜಿತ ನಡೆಯಿತು; ತಂಡ ಮರಳಿಯೂ ಬಂತು. ಆದರೂ ಚಳುವಳಿ ನಿಲ್ಲಲಿಲ್ಲ. ವಿದ್ಯಾರ್ಥಿ ಚಳುವಳಿ ಹೆಚ್ಚಿನೆಡೆ ಶಾಂತವಾಗೇ ನಡೆಯಿತಾದರೂ ಒಂದೆ[illegible] ತನ್ನ ಉಗ್ರರೂಪವನ್ನು ತಳೆಯಿತು. ಈ ಚಳುವಳಿಯೇನನ್ನು ಸಾಧಿಸಿತು? ಪ್ರಧಾನಿಗೆ, ರಾಷ್ಟ್ರಪತಿಗಳಿಗೆ ಈ ಸಂಬಂಧ ಮಾಡಿದ ದೂರಿನಿಂದ ಏನು ಲಾಭವಾದೀತು? ಜಪಾನ ಸಂತಹ ದೂರ ದೇಶಕ್ಕೆ ಯಾತ್ರೆ ಮಾಡುವ ಅವಕಾಶ ತಮಗೆ ಸಿಗಲಿಲ್ಲವೆಂದು ಅತೃಪ್ತರಾಗುವವರು ನಿಜಕ್ಕೂ ಲಕ್ಷಾಧಿಪತಿ-ಸಹಸ್ರಾಧಿಪತಿಗಳ ದರೂ ಆಗಿರಲೇಬೇಕು. ಆಯ್ಕೆಯು ಸಂಪೂರ್ಣ ಅಕ್ರಮವಾಗಿರಲಿಲ್ಲವೆನ್ನುವುದಕ್ಕೆ ರಾಜಕೀಯ ಪಕ್ಷಗಳು ಚಳುವಳಿಯಲ್ಲಿ ತೋರಿಸಿದ ನಿರುತ್ಸಾಹವೇ ಸಾಕ್ಷಿ. ಇಲ್ಲವಾದರೆ, ಸರಕಾರವನ್ನು ಗೋಳಿಡಿಸುವ, ಪೇಚಿಗೆ ಸಿಕ್ಕಿಸುವ ಎಳ್ಳಷ್ಟು ಅವಕಾಶದಿಂದ ಪರಿಪೂರ್ಣ ಪ್ರಯೋಜನ ಪಡೆಯುವ ವಿರೋಧಿ ಪಕ್ಷಗಳು ಇಷ್ಟರಲ್ಲೇ ತೃಪ್ತಿಹೊಂದುವುದುಂಟೆ? ಅಥವಾ ವಿದ್ಯಾರ್ಥಿಗಳನ್ನು ರಾಜಕೀಯಕ್ಕೆ ಬಳಸದಿರುವ ಸದ್ಬುದ್ಧಿ ಅವಕ್ಕೆ ಮೂಡಿತೆಂದು ತೃಪ್ತಿಪಡಬೇಕೆ?

ಸಂಪಾದನೆ ಮಾಡಿದ ಎಂಥ ಸರ್ವಶ್ರೇಷ್ಠ ಸಿದ್ಧಿಯೂ ಚಿತ್ತ ಅಪೂರ್ಣವಿರುತ್ತದೆಂಬುದನ್ನು ಯಾವನು ತಿಳಿಯುತ್ತಾನೋ ಅವನು ಆನಂದವಾಗಿ ಕಾರ್ಯ ಮಾಡುತ್ತಿರುತ್ತಾನೆ.

೦ ೦ ೦

ಅತಿ ದೊಡ್ಡ ಪ್ರಾಪ್ತಿಯು ಸಹ ಅಪೂರ್ಣವಿದೆಯೆಂದು ಯಾವನು ತಿಳಿಯುತ್ತಾನೆಯೋ ಅವನು ಯಾವಾಗಲೂ ಪ್ರಸನ್ನವಾಗಿ ಪ್ರಾಪ್ತಿ ಮಾಡಿಕೊಳ್ಳುತ್ತಿರುವನು.

೦ ೦ ೦

ತಲ್ಲೀನತೆ ನಿಷ್ಠೆಯು ಹೊರತಾಗಿ ಯಾರಲ್ಲಿಯೂ ಮಹಾನ್ ಪ್ರತಿಭೆ ಉತ್ಪನ್ನವಾಗವದಿಲ್ಲ.

ಗೇಹರಾಜ್ಯದಲ್ಲಿ

ಶ್ರೀಸಾಮಾನ್ಯರೊಳ್ ಮೂರುಂತೆರಂ

"ಏ ಇಲ್ಲಿ ಬಾರೆ ಸ್ವಲ್ಪ...."

"ಅಲ್ಲ, ಮನೆಗೆ ಬರುತ್ತೀನಾ ಏನಿದೂಂತ....'

'ಮತ್ತಿರೋದಾದ್ರೂ ಏನು? ಇನ್ನೀಗ ನೋಡ ....'

'ಹ್ಞಾಂ....ಏನಪ್ಪಾ....'

"ಅಲ್ಲ, ರಾಜ-ಮಹಾರಾಜರೆಲ್ಲ ಶ್ರೀಸಾಮಾನ್ಯರಾದ ಮೇಲೆ...."

"ಅದು ಸರೀನ್ನಿ. ಇನ್ನು ಮೊನ್ನೆ ಎಂಪಿ, ಎಂಎಲ್ಲೆಗಳು, ಸನ್ಮಾನ್ಯ ಮಂತ್ರಿ ಮಾಗಧರು ಎಲ್ಲರೂ ಶ್ರೀಮಾನ್ಯರೇ ಆಗಬೇಕು...."

"ಅದು ಹೇಗಾಗುತ್ತೆ?"

"ಹೇಗೆ ಅಂದರೆ? ಅದೆಲ್ಲ ಯುಗವಾಣಿ ಯುಗದ ಕರೆಗೆ ಜನವು ತಕ್ಕೆ ತಲೆಬಾಗುವುದು ಮಾಜಿ ರಾಜ-ಮಹಾರಾಜರ ಕರ್ತವ್ಯ. ಜನತೆಯೇ ಜನಾರ್ಧನನಾದುದರಿಂದ ಜನತೆಯ ಬಯಕೆಯೆಲ್ಲ ಜನಾರ್ಧನನ ಆಜ್ಞೆ."

"ಅದು ಸರೀನೇ ಅನ್ನಿ. ಈಗ ಆ ಹಳೆಕಾಲದ ರಾಜ-ಮಹಾರಾಜರೆಲ್ಲ ಶ್ರೀಸಾಮಾನ್ಯರಾದರೂನ್ನಿ. ಆದ್ರೆ ಪ್ರತಿವರ್ಷವೂ ಐನೂರು ಲಕ್ಷ ರೂಪಾಯಿಗಳನ್ನು ನುಂಗಿ ಹಾಕುವ ಮಂತ್ರಿ ಮಾಗಧರು ಶ್ರೀಸಾಮಾನ್ಯರಾಗ ಬೇಡವೆ?"

"ಅವರು ಶ್ರೀಸಾಮಾನ್ಯರಾಗಿದ್ದುಕೊಂಡು ಮತ್ತೆ 'ಸನ್ಮಾನ್ಯ' ಪದವಿಗೇರಿದವರು. ಅವರಿಗೆ ಜನಮತ ಕೊಟ್ಟಿದೆ; ಅಷ್ಟಷ್ಟು ಖುಲಾಯಿಸಿದೆ. ಆದರೆ ಆ ಹಿಂದಿನ ರಾಜ-ಮಹಾರಾಜರು ಹಾಗಲ್ಲ ನೋಡಿ....'

'ಅಂದರೆ ಅವರೀಗ ಸನ್ಮಾನ್ಯದಿಂದ ಸಾಮಾನ್ಯರಾದರು....'

"ಹ್ಞಾಂ...ಮತ್ತೆ ನೋಡಿ, ನಮ್ಮ ದಾಸರೊಂದು ಮಾತು ಹೇಳಿದ್ದಾರೆ..."

'ಏನಂತ?'

"ಒಕ್ಕಣ್ಣರ ಊರಿನಲ್ಲಿ ಒಂದು ಕಣ್ಣು ಮುಚ್ಚಿಕೊಂಡು ನಡೀಬೇಕು."

"ಇದೀಗ ಬರೋಬರಿ....ಅಲ್ವೆ, ಹೇಳ್ತಿನ್ನಿಲ್ವೆ, ಅತ್ತೆಗೊಂದು ಕಾಲ, ಸೊಸೆಗೊಂದು ಕಾಲಾಂತ?"

"ಹ್ಞೂನ್ನಿ ಅಂದು ಅವರಕಾಲ; ಇಂದು ಇವರ ಕಾಲ. ಅಂದಿಗೆ ಅವರು ರಾಜ-ಮಹಾರಾಜರು; ಇಂದಿಗೆ ಇವರೇ ಭೂಪರು...."

"ಅಲ್ಲ, ನನಗೊಂದು ಅನ್ನಿಸುತ್ತೆ...."

"ಏನ? ಮತ್ತಿನ್ನೇನೇನೂ ಇಲ್ಲ. ಮಠ-ಸಂಸ್ಥಾನಗಳು, ದೇವ-ಮಂದಿರಗಳು ಈಗೀಗ ತುಂಬ ಶ್ರೀಮಂತವಾಗುತ್ತ ಬರುತ್ತಿವೆ...."

"ಅದು ಹೌದೂನ್ನಿ. ಬ್ಲಾಕ್ ಮಾರ್ಕೆಟ್ ಖದೀಮರು, ದಗಲಬಾಜಿ ಕಂಟ್ರಾಕ್ಟರರು, ಅಕ್ರಮ ವಸ್ತುಗಳ ಮಹಾ ವ್ಯಾಪಾರಿಗಳು, ಇನ್ನು ಮಂತ್ರಿ-ಮಾಗಧರು, ಸೂಳೆ ಕೇರಿಗಳ ಯಜಮಾನಿಯರು,....ಇತ್ಯಾದಿ ಇತ್ಯಾದಿ ತುಂಬ ದೇವ ಭಕ್ತರಾಗಿದ್ದಾರೆ; ಸನ್ಯಾಸಿ ಪ್ರಿಯರಾಗಿದ್ದಾರೆ..."

'ಅಲ್ವೆ, ಮೊನ್ನೆ ಮೊನ್ನೆ ಯಾರೋ ಒಬ್ಬ ಸಿನಿಮಾ ನಿರ್ಮಾಪಕ ಯಾರೋ ಒಬ್ಬ ನಟಿ ಕಾಲ್ ಶೀಟಿಗೆ ದಸ್ತಕತ್ತು ಹಾಕಿದರೆ ತಿರುಪತಿ ತಿಮ್ಮಪ್ಪನಿಗೇನೇ ಭಾರೀ ಸೇವೆ ಹೊತ್ತನಂತೆ!'

"ಹ್ಞಾಂ. ಅದಕ್ಕೇ ಇವನ್ನೆಲ್ಲ ಸರಕಾರ ವಹಿಸಿ, ಒಬ್ಬ ಎಂಪಿಯನ್ನೇ ಸನ್ಯಾಸಿ ಸ್ಥಾನದಲ್ಲೋ ಅರ್ಚಕ ಸ್ಥಾನದಲ್ಲೋ ನಿಲ್ಲಿಸಿದರೆ ಆಗ ಎಲ್ಲ ಎಂಪಿ ಎಂಎಲ್ಲೆಗಳಿಗೂ ಒಂದೊಂದು ಪದವಿ ಸಿಕ್ಕಿದಂತಾಗುವುದು. ಈಗ ಒಂದು ಜಾತಿಯವರಿಗೆ ಮಾತ್ರ ಮೀಸಲಿದ್ದ ಈ ಅಧಿಕಾರ ಶ್ರೀಸಾಮಾನ್ಯನ ಕೈಸೇರುವುದು....'

"ಅಲ್ಲ, ಇದು ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆಯಲ್ಲವೇನ?'

"ಜಾತ್ಯತೀತ ನೀತಿಯನ್ನು ಒಪ್ಪಿಕೊಂಡ ನಾವು ಜಾತಿಗಳಿಂದಾಗುತ್ತಿರುವ ಗಲಭೆಗಳನ್ನು ಕಾಣುತ್ತಿರುವ ನಾವು ಇನ್ನೂ ಆ ಹಳೆ ಕಾಲದ ಪ್ರತಿಗಾಮಿಗಳಾಗಿರುವುದರಲ್ಲಿ ಅರ್ಥವಿದೆಯೇನು? ಈ ದಿಸೆಯಲ್ಲೂ ನಾವು ಪ್ರಗತಿ ಸಾಧಿಸಲೇಬೇಕು. ಜಾತ್ಯತೀತ ಪ್ರಗತಿಶೀಲ ರಾಷ್ಟ್ರರಚನೆ ಯುವವಾಣಿ ಆದರ್ಶವಾಗಿಯೆ. ಏಕೆ ಈ ಪ್ರಯತ್ನ ಮಾಡಬಾರದು? ಯುಗವಾಣಿ-ಜನವಾಣಿಗಳ ಮುಂದೆ ಧಾರ್ಮಿಕ ಸ್ವಾತಂತ್ರ್ಯ ತೆಂಗಿನ ಮುಂದೆ ಕೊಂಬೆ...."

"ಅದು ಸರೀನ್ನಿ. ಆದ್ರೆ, ಮೂಲಭೂತ ಹಕ್ಕುಗಳನ್ನು ಮೊಟಕುಮಾಡುವ ಅಧಿಕಾರ ಸಂಸತ್ತಿಗಿಲ್ಲವೆಂದು ಸರ್ವೋಚ್ಚ ನ್ಯಾಯಾಲಯ...'

'ನ್ಯಾಯಾಲಯ ಏನು ಹೇಳಿದರೂ ಅದು ಅದರ ಅಭಿಪ್ರಾಯ. ಅಕ್ಷರಸ್ಥರೂ ಮಾನವರೇ. ಮತ್ತೆ ಸಂಸತ್ತು ಜನತಾ ಪ್ರತಿನಿಧಿಗಳದ್ದು. ಅದರ ಮುಖದಿಂದ ಬರುವ ಒಂದೊಂದು ಮಾತು, ಅವರು ಮಾಡುವ ಒಂದೊಂದು ಕೃತಿ ಜನರಾಡುವ ಮಾತು, ಜನಮಾಡುವ ಕೃತಿ..."

"ಅಂದ್ರೆ, ಪರಸ್ಪರ ಬೈದುಕೊಳ್ಳುವುದು, ಚಪ್ಪಲಿ ಎಸೆಯುವುದು..."

"ಅದೇ ಜನವಾಣಿ ನೋಡಿ ಜನಪ್ರತಿನಿಧಿಗಳು ಚಳವಳಿ ಮಾಡಿ ತೋರಿಸುತ್ತಾರೆ; ಭಾವಿ ಜನಾಂಗದವರಾದ ವಿದ್ಯಾರ್ಥಿಗಳೂ ಅವರನ್ನು ಅನುಸರಿಸುತ್ತಾರೆ. ರಾಜ್ಯಕೀಯ ವಿರೋಧಿಗಳನ್ನು ಹತ್ತಿಕ್ಕುವುದು ಅಧಿಕಾರಿಗಳ ಧರ್ಮ; ತಾವೊಲ್ಲದನ್ನು ವಿರೋಧಿಸುವುದು ಇವರ ಕರ್ಮ ಯದ್ಯದಾಚರತಿ ಶ್ರೇಷ್ಠ...."

'ಅಲ್ವೆ, ಶ್ರೀಸಾಮಾನ್ಯರೇ ಎಲ್ಲರೂ ಆಗುವಾಗ...'

'ನೋಡಿ, ಶ್ರೀಸಾಮಾನ್ಯರೇ ಎಲ್ಲರೂ ಅಂಬೋ ಮಾತು ನೂರಕ್ಕೆ ನೂರು ನಿಜ. ಕುಂಬಳಕಾಯಿಯಲ್ಲದ ಹಲವು ಬಗೆಯಿದೆ ಅನ್ನೋದನ್ನು ಮರೆಯೋಕಾಗುತ್ಯೆ? ಬೇಡ, ನೋಡಿ, ಸೂರ್ಯನ ಕಿರಣಗಳನ್ನೇ ತೆಗೆದುಕೊಳ್ಳಿ ಅದಕ್ಕೆ ಯಾವ ಭೇದವೂ ಇಲ್ಲ. 'ಸಮಾನತೆ'ಗೆ ಹೆಸರೇ ಸೂರ್ಯ...."

"ಅದು ಹೌದು. ಜಾತಿಹೀನರ ಮನೆಯ ಜ್ಯೋತಿ ತಾ ಹೀನವೇ ಅಂದಿದ್ದಾನೆ ನೋಡು ಸರ್ವಜ್ಞ...."

'ಅಂಥ ಕಿರಣಗಳಾದ್ರೂ ನೋಡಿ, ಮುಂಜಾನೆ ನಿರ್ಬಲವಾಗಿರುತ್ತವೆ; ಬರಬರುತ್ತ ತೇಜಸ್ವಿಗಳಾಗುತ್ತವೆ; ಮತ್ತೆ ಅಶಕ್ತವಾಗುತ್ತ ಅಸ್ತಂಗತವಾಗುತ್ತವೆ.'

'ಅದು ಹೌದು....'

'ಹಾಗೇ ನೋಡಿ, ಪ್ರಗತಿವಾದವೂ ಹಾಗೇ, ಶ್ರೀಸಾಮಾನ್ಯನೂ ಹಾಗೇ'

'ಅಂದ್ರೆ?'

'ಅಧಿಕಾರದಲ್ಲಿದ್ದವರ ಪ್ರಗತಿವಾದವೊಂದು, ಅಧಿಕಾರದಲ್ಲಿಲ್ಲದವರ ಪ್ರಗತಿವಾದವಿನ್ನೊಂದು. ಇಬ್ಬರ ಬೆಂಬಲಿಗರ ಪ್ರಗತಿವಾದ ಬೇರೆಯೇ ಒಂದು. ಒಂದು ಯುವಸೂರ್ಯ; ಇನ್ನೊಂದು ಬಾಲಸೂರ್ಯ; ಮತ್ತೊಂದು ವೃದ್ಧಸೂರ್ಯ..."

'ಹ್ಞಾಂ...'

"ನೋಡಿ, ಶ್ರೀಸಾಮಾನ್ಯರಲ್ಲೂ ಹಾಗೇ. ಶ್ರೀಸಾಮಾನ್ಯರಲ್ಲಿ ಸಾಮಾನ್ಯ ಶ್ರೀಸಾಮಾನ್ಯರಲ್ಲಿ ಸನ್ಮಾನ್ಯ, ಸನ್ಮಾನ್ಯರಿಂದ ಶ್ರೀಸಾಮಾನ್ಯ ಎಂದು ಮುಖ್ಯವಾಗಿ ಮೂರು ವಿಧ. ಮೊದಲನೆಯ ವರ್ಗದವರು ನಾನು-ನೀವು ಎಲ್ಲ. ನಮ್ಮನ್ನು ಕೇಳುವವರು ಐದು ವರ್ಷಕ್ಕೊಂದು ಬಾರಿ ಹತ್ತಿರ ಬಂದು ಸಾಧ್ಯವಾದರೆ, ಮುಖ ತೋರಿಸಿ ಹಲ್ಲು ಕಿರಿದು ಹೋಗುತ್ತಾರೆ. ಎರಡನೆ ವರ್ಗದವರು ದಿಲ್ಲಿಯಲ್ಲಿ ಕುಳಿತು ಲಕ್ಷೋಪಲಕ್ಷ ರೂಪಾಯಿ ನುಂಗಿ ಹಾಕಿ ನಮ್ಮ ಮೇಲೆ ಸವಾರಿ ಮಾಡುತ್ತಿರುತ್ತಾರೆ. ಮೂರನೆಯ ವರ್ಗದವರು ಗತವೈಭವವನ್ನು ನೆನೆನೆನೆದು ಕೊರಗುತ್ತಿರುತ್ತಾರೆ...."

"ಹ್ಞಾಂ, ಇದೊಳ್ಳೆ ವ್ಯಾಖ್ಯಾನ...."

"ಶ್ರೀಸಾಮಾನ್ಯನನ್ನು ನಮ್ಮ ರಾಷ್ಟ್ರೀಯ ಮೃಗ ಹುಲಿಗೆ ಹೋಲಿಸುವುದಾದರೆ, ಒಂದು ಹಲ್ಲು ಮೂಡದ ಹುಲಿ; ಇನ್ನೊಂದು ಹಲ್ಲು ಮೂಡಿದ ಹುಲಿ; ಉಳಿದೊಂದು ಹಲ್ಲು ದುರಿದ ಹುಲಿ....'

'ಯಾವ ಹುಲಿಯಾದರೇನಂತೆ, ಹುಲಿ ಹುಲಿಯೇ....'

'ಅದು ಸರಿ. 'ಶ್ರೀಸಾಮಾನ್ಯ' ಶಬ್ದಕ್ಕೆ ಶ್ರೀಮತಿ ಇಂದಿರಮ್ಮ ಕಟ್ಟಿದ ಅರ್ಥವೇ ಇದ; ಎಲ್ಲರೂ ಹುಲಿಗಳೇ; ಉಳ್ಳವರೂ ಇಲ್ಲದವರೂ ಎಲ್ಲರೂ ಸಮಾನರು. ಇದೇ ನಮ್ಮ ಬಾಯಿ-ಸಮಾಜವಾದ; ಪ್ರಗತಿ."

"ಹೋಗಲಿ ಬಿಡು. ಒಟ್ಟಾರೆ ಕಾಲಕ್ಕೆ ಸರಿಯಾಗಿ ಕೋಲ ಕಟ್ಟಬೇಕಲ್ಲ?"

'ಅಲ್ಲವೇ ಮತ್ತೆ?'

'ಏನ ಹಾಗೆ...'

'ಹೇಗೆ?'

'ಹೀ...ಗೆ...'

—ಗೋರಾ

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. 76/70.

ಪದ್ಮರಾಜ ಪೂವಣಿ — ವಾದಿ

ಮತ್ತು

ಅಪ್ಪಿ ಯಾನೆ ಸುಂದರಿ — ಪ್ರತಿವಾದಿ

ಬೆಳ್ತಂಗಡಿ ತಾಲ್ಲೂಕು ಹೊಸಂಗಡಿ ಗ್ರಾಮದ ಕಟ್ಟೆ ಎಂಬಲ್ಲಿರುವ ಲಕ್ಷ್ಮೀ ಹೆಂಗ್ಸಿನ ಮಗಳು ಅಪ್ಪಿ ಯಾನೆ ಸುಂದರಿಯವರಿಗೆ—

ವಾದಿಯು ನಿಮ್ಮಿಂದ ಅಡವು ದಸ್ತಾವೇಜಿನಿಂದ ಬರಬೇಕಾದ ಅಸಲು ಬಡ್ಡಿ ಸಮೇತ ರೂ. 899-27ರ ವಸೂಲಿ ಬಗ್ಗೆ ಮಾಡಿದ ದಾವೆಯು ತಾ. 1-10-1970ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುವುದರಿಂದ ನೀವು ಆ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿವಾಯ್ ಮಾಡಿ ಕೈಪೇತು ಮುಂದುವರಿಸಲಾಗುವುದು.

(By order of court)

N. J. Kadamba
Advocate for Plaintiff.

ಬೆಳ್ತಂಗಡಿ, 8-9-1970.

ನವಯುಗದ ಹೊಸ ವರ್ಷ

ಚಂದಾದಾರರಲ್ಲಿ ವಿನಂತಿ

ಇದೇ ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 49ನೆಯ ವರ್ಷ ಮುಗಿದು ಈ ತಿಂಗಳಿಂದ 50ನೆಯ ಹೊಸ ವರ್ಷಾರಂಭವಾಗಿದೆ. ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತವಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ. ಚಂದಾಹಣವನ್ನು ಮನಿಯಾರ್ಡರು ಮೂಲಕ, ಯಾ ಇಂಡಿಯನ್ ಪೋಸ್ಟಲ್ ಆರ್ಡರು ಮೂಲಕ ಕಳಿಸಬಹುದು. ಇಲ್ಲವೆ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಪಾವತಿ ಮಾಡಬಹುದು. ಹಾಗೆ ಪಾವತಿ ಮಾಡುವಾಗ ತಮ್ಮ ಚಂದಾನಂಬ್ರ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇವೆ.

ಚಂದಾಹಣಕ್ಕಾಗಿ ಪತ್ರಿಕೆಯನ್ನು ವಿ. ಪಿ. ಮೂಲಕ ಕಳಿಸಿದರೆ ಈಗಿನ ಹೆಚ್ಚಿಸಿದ ಅಂಚೆ ದರದಿಂದಾಗಿ ರೂ. 1-40 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ದಯಮಾಡಿ ಚಂದಾವನ್ನು ಮೇಲಿನಂತೆ ಕಳಿಸಬೇಕಾಗಿ ಬಿನ್ನವಿಸುತ್ತೇವೆ.

ಮೆನೇಜರ್.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0-75 ಪೈಸೆ ಮಾತ್ರ.

ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ.
ಬಾಲಾಕೋಟೆ, ಉಡುಪಿ, ದ. ಕ.

ಮಾಜಿ ರಾಜ-ಮಹಾರಾಜರನ್ನು ನುಂಗಿದ

ಇತ್ತ್ಯಾಲೆ ಹಾವು-ಶ್ರೀಮತಿ ಗಾಂಧಿ

ಮಾಜಿ ರಾಜ-ಮಹಾರಾಜರ ರಾಜಧನ ಮತ್ತಿತರ ವಿಶೇಷ ಸೌಲಭ್ಯಗಳನ್ನು ಕಿತ್ತುಹಾಕುವ ಸಂವಿಧಾನಕ್ಕೆ ತಂದ ೨೪ನೆ ತಿದ್ದುಪಡಿ ಮಸೂದೆ ಲೋಕಸಭೆಯಲ್ಲಿ ಮಂಜೂರಾಯ್ತು; ಆದರೆ, ರಾಜ್ಯಸಭೆಯಲ್ಲಿ ಒಂದು ಮತ ಕಡಿಮೆ ದೊರಕಿ ತಿರಸ್ಕೃತವಾಯ್ತು. ಇದು ಸಂವಿಧಾನ ತಿದ್ದುಪಡಿ ಮಸೂದೆಯಾದುದರಿಂದ ಹಾಜರಿದ್ದ ಸದಸ್ಯರಲ್ಲಿ ಮೂವರಲ್ಲಿ ಇಬ್ಬರ ಬಹುಮತವನ್ನಿದು ಗಳಿಸಲು ಶಕ್ತವಾದರೆ ಮಾತ್ರ ಮಂಜೂರಾಗುತ್ತದೆ.

ಸಂವಿಧಾನ ತಿದ್ದುಪಡಿ ಮಸೂದೆ ಈ ಬಾರಿಯಾದರೂ ಸಂಸತ್ತಿನ ಉಭಯ ಸಭೆಗಳಲ್ಲಿಯೂ ಹೆಚ್ಚಿನ ಮತ ಪಡೆಯುವುದೆಂಬ ನಂಬಿಕೆ ಪ್ರಧಾನಿ ಶ್ರೀಮತಿ ಗಾಂಧಿಗಿತ್ತು. ಈ ಮಸೂದೆಯು ಅಕ್ಟೋಬರ ಹದಿನೈದರಿಂದ ಕಾನೂನಾಗಿ ಬರುವುದೆಂದೂ ಅವರು ಅದಕ್ಕೆಲ್ಲ ಲೆಕ್ಕಾಚಾರ ಮಾಡಿದ್ದರು. ಇದ್ದಕ್ಕಿದ್ದಂತೆಯೇ ಮಸೂದೆ ತಿರಸ್ಕೃತವಾದುದರಿಂದ ಆಕೆಯ ಎಲ್ಲ ಲೆಕ್ಕಾಚಾರಗಳೂ ಒಮ್ಮೆಗೆ ತಲೆಕೆಳಗಾದುವು.

ಶ್ರೀಮತಿ ಗಾಂಧಿಯವರು ಈ ಸಂಬಂಧದಲ್ಲಿ ಆಡಿದ ಮಾತು— "ಮುಂದಿನ ಹೋರಾಟಕ್ಕೆ ಸಿದ್ಧರಾಗೋಣ"—ಯಾರೊಡನೆ ಹೋರಾಟ? ಯಾಕಾಗಿ ಈ ಹೋರಾಟ? ತನ್ನ ಅಧಿಕಾರಕ್ಕಾಗಿ ಬೇರೆಯವರನ್ನು ಬೆಟ್ಟುಮಾಡುವ ಈ ಜಾಣೆ ವಹಿಸಿ ಎಲ್ಲರೊಡನೆಯೂ ನಿಷ್ಕಾರಣ ಕಾಲು ಕೆದರಿ ಜಗಳಕ್ಕೆ ನಿಲ್ಲುತ್ತಾರೆ! ರಾಷ್ಟ್ರಪತಿಯವರಿಂದ ಈ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಮಂಡಿಸಲು ಅವಕಾಶ ಬೇಡಿದವರೇ ಅದು ತಿರಸ್ಕೃತವಾಯಿತೆಂದ ಮೇಲೆ ಹಿಂದಿನ ಬಾಗಿಲಿನಿಂದ ಅದೇ ಮಸೂದೆಯನ್ನು ಬೇರೆ ರೂಪದಲ್ಲಿ ಹೇರಲು ತೊಡಗಿದ್ದಾರೆ. ರಾಷ್ಟ್ರಪತಿಗಳೇ ಒಂದು ಆಜ್ಞೆ ವಿಧಿಸಿ ರಾಜ-ಮಹಾರಾಜರ ರಾಜಧನ - ವಿಶೇಷ ಸೌಲಭ್ಯಗಳನ್ನು ವಜಾ ಮಾಡಿದ್ದಾರೆ.

ರಾಷ್ಟ್ರಪತಿಗಳಿಗೆ ಈ ಅಧಿಕಾರ ಇದೆಯೆಂದು ಹಿಂದಿನ ಕಾನೂನು ಸಚಿವ ಶ್ರೀ ಪಣಂಬಳ್ಳಿ ಗೋವಿಂದ ಮೆನನ್ನರು ಪ್ರಧಾನಿಗೆ ತಿಳಿಸಿದ್ದರು. ಈಗ ತನ್ನ ಸಲಹೆ ಕಾರ್ಯರೂಪಕ್ಕೆ ಬಂದುದನ್ನು ಕಂಡು ದಿವಂಗತ ಮೆನನ್ನರು ಪರಲೋಕದಲ್ಲಿದ್ದರೂ ತೃಪ್ತಿಯ ನಿಟ್ಟುಸಿರು ಬಿಡಬಹುದು. ರಾಷ್ಟ್ರಪತಿಯವರು ಇಂತಹ ಕೆಲಸ ಮಾಡಬಾರದೆಂದು ಮಾಜಿ ಗವರ್ನರ ಜನರಲ್ ಶ್ರೀ ರಾಜಾಜಿಯವರು ಸಲಹೆ ಮಾಡಿದ್ದರೂ ಅವರದನ್ನು ಕೇಳುವ ಭೂಪರು ಯಾರಿದ್ದಾರೆ? ರಾಷ್ಟ್ರಪತಿಗಳು ಒಪ್ಪಿಗೆ ನೀಡಿದರು; ಕಾಗದ ಪತ್ರಗಳಿಗೆ ಸಹಿಹಾಕಿದರು; ರಾಜ್ಯಸಭೆ ಎರಡು ದಿನ ಚರ್ಚಿಸಿ ತಿರಸ್ಕರಿಸಿದ "ಸಂಕ್ರಾಂತಿ"ಗಳಿಗೆ ಎರಡೇ ನಿಮಿಷಗಳಲ್ಲಿ ಅವರು ಜೀವದಾನ ಮಾಡಿದರು.

ಶ್ರೀಮತಿ ಗಾಂಧಿ ಹೇಳಿದರು; "ಸರಕಾರ ಬಯಸುತ್ತಿದ್ದರೆ, ರಾಷ್ಟ್ರಪತಿಗಳಿಂದ ಆಜ್ಞೆ ಹೊರಡಿಸಿ ರಾಜಧನಾದಿಗಳನ್ನು ಎಂದೋ ರದ್ದು ಮಾಡಬಹುದಿತ್ತು. ಆದರೂ ಇಂತಹ ಮುಖ್ಯ ವಿಚಾರಗಳಲ್ಲಿ ಸಂಸತ್ತೇ ನಿರ್ಧಾರ ಕೈಕೊಳ್ಳಲೆಂದು ಸರಕಾರ ಬಯಸಿತು." ಸರಕಾರ ತನ್ನ ನಿರ್ಧಾರವನ್ನೇನೋ ಘೋಷಿಸಿತು. ಆದರೆ, ಇದು ಶ್ರೀಮತಿ ಗಾಂಧಿಗೆ ಅನುಕೂಲಕರವಾಗಲಿಲ್ಲ. ಆದ್ದರಿಂದ ಆಕೆ ಸಂಸತ್ತಿನ ನಿರ್ಣಯವನ್ನು ಧಿಕ್ಕರಿಸಿ ತನಗನುಕೂಲವಾಗುವಂತೆ ರಾಷ್ಟ್ರಪತಿಗಳ ಮರೆ ಹೊಕ್ಕರು.

ಶ್ರೀಮತಿ ಗಾಂಧಿಯವರು ಸಂವಿಧಾನ ತಿದ್ದುಪಡಿ ಮಸೂದೆಯನ್ನು ಮಂಡಿಸದೆ, ಮೊದಲೇ ರಾಷ್ಟ್ರಪತಿಗಳ ಆಜ್ಞೆಯ ಮೂಲಕ ತನ್ನ ಇಷ್ಟಾರ್ಥ ಈಡೇರಿಸಿಕೊಂಡಿದ್ದರೆ, ಆ ಮಾತು ಬೇರೆ. ಈಗ ಸಂಸತ್ತಿನ ಒಂದು ಸಭೆ ಮಾಡಿದ ನಿರ್ಣಯವನ್ನು ಹತ್ತಿಕ್ಕಿ ತನ್ನ ನಿರಂಕುಶ ಪ್ರವೃತ್ತಿಯನ್ನು ಕಾರ್ಯರೂಪಕ್ಕೆ ತರಲು ಆಕೆ ಕೈಕೊಂಡ ಕ್ರಮ ಕಾನೂನಿನ ದೃಷ್ಟಿಯಲ್ಲಿ ಸರಿಯಿರಬಹುದು; ಆದರೆ, ಪ್ರಜಾಸತ್ತೆಯ ಉಳಿವಿನ ದೃಷ್ಟಿಯಲ್ಲಿ ಗಂಡಾಂತರಕಾರಿಯಾದುದು. ಅಂದರೆ, ಸಂಸತ್ತಿನ ಒಂದಂಗ ಒಪ್ಪದ ಒಂದು ಸಂಗತಿಯನ್ನು ಆಕೆ ಅಧಿಕಾರದ ಬಲದಿಂದ ಹೇರಿದಂತಾಯ್ತು.

ಪ್ರಧಾನಮಂತ್ರಿ ಗಾಂಧಿಯವರು ಸಚಿವ ಸಂಪುಟದ ಸಭೆಯನ್ನು ನಡುರಾತ್ರಿಯಲ್ಲೇ ಕರೆದರು. ಆಡಿಗೆ ಬಿಸ್ತರ ಮಾಗು ಮೇಲೆ ಮಾಡುವ ಹವಣಿಕೆ ಮಾಡಿದರು. ಸರಕಾರ ತನಗೆ ಬೇಕಾದ ಮತಗಳಲ್ಲಿ ಎರಡು ಮತ ಕೊಡುವುದಿಲ್ಲ; ಮತ್ತೊಂದು ಬಾರಿ ಇದೇ ಮಸೂದೆಯನ್ನು ಮಂಡಿಸಿದರೂ ಲೋಕಸಭೆಯಲ್ಲೇ ಅದು ಪರಾಭವಗೊಂಡೀತು. ಆದ್ದರಿಂದ ಆ ರಗಳೆಯೇ ಬೇಡ. 'ನನ್ನವರೇ ಆದ ಗಿರಿಯವರಿಂದಲೇ ದಸ್ಕತ್ತು ಹಾಕಿಸೋಣ'—ಇದು ಇಂದಿರಮ್ಮನ ಸಲಹೆ. "ಬರೋಬರಿ"– ಶ್ರೀಗಳಾದ ಜಗಜ್ಜೀವನ ರಾಮ್, ಫಕ್ರುದ್ದೀನಾಲಿ ತಲೆದೂಗಿದರು. ಶ್ರೀ ಚವಣರೂ ಒಂದು ಕೆಮ್ಮು ಕೆಮ್ಮಿ "ಮತ್ತೇನು ಮಾಡುವುದಕ್ಕಾಗುತ್ತೆ? ಅದೇ ಸರಿ" ಎಂದರು. ಉಳಿದವರೂ 'ಹ್ಞೂಂ' ಅಂದರು. ಅದಕ್ಕೆಂದೇ ಅವರನ್ನು ಆ ರಾತ್ರಿಯಲ್ಲೂ ಬರಹೇಳಿದ್ದು ತಾನೆ?

"ಜನತೆಯ ತೀರ್ಮಾನದ ಮುಂದೆ ತಲೆಬಾಗುವ"ನೆಂದು ಘೋಷಿಸಿದ ಶ್ರೀಮತಿ ಗಾಂಧಿ ಈಗ ಮಾಡಿದ್ದೇನು? ಹಿಂದಿನ ಬಾಗಿಲ ಪ್ರವೇಶವಲ್ಲವೆ? ಆಕೆ ಸಂಸತ್ತಿನಲ್ಲಿ ಬೆಂಬಲ ಗಳಿಸದೆ ಹೋದ ಮೇಲೆ ಅಂತಹ ಶಾಸನವನ್ನು ಜ್ಯಾರಿಗೆ ತರುವ ನೈತಿಕ ಹಕ್ಕು ಆಕೆಗಿದೆಯೆ?–ಇದು ಮುಖ್ಯ ಪ್ರಶ್ನೆ.

ರಾಷ್ಟ್ರಪತಿಗಳ ಆಜ್ಞೆಯು ಸಿಂಧುವಾಗಲು ಮುಂದೆ ಒಂದು ಮಸೂದೆಯನ್ನು ಸಂಸತ್ತಿನ ಮುಂದೆ ಇಡಬೇಕು. ಇದಕ್ಕೆ ಬರಿಯ ಬಹುಮತ ಸಾಕು; ಮೂರರಲ್ಲೆರಡು ಮತ ಬೇಡ. ಕಮ್ಯೂನಿಸ್ಟರು, ದ್ರಾವಿಡರು ಶ್ರೀಮತಿ ಗಾಂಧಿಗೆ ಬೆಂಬಲ ನೀಡುವ ತನಕ ಬಹುಮತಕ್ಕೇನೂ ಕೊರತೆಯಿಲ್ಲ. ಜನತೆಯ ನೇರ ಆಯ್ಕೆಯಿಂದ ರಚಿತವಾದ ಲೋಕಸಭೆಯ ನಿರ್ಣಯವನ್ನು ರಾಜ್ಯಸಭೆ ತಿರಸ್ಕರಿಸಬಾರದಿತ್ತು— ಲೋಕಸಭೆಯ ನಿರ್ಣಯವನ್ನೇ ಆಕೆ ಬೇರೆ ರೀತಿಯಲ್ಲಿ ಕಾರ್ಯರೂಪಕ್ಕೆ ತಂದಿದ್ದಾರೆ– ಎಂಬ ವಾದ ಬೇರೆ. ಸಂಸತ್ತಿನ ಮುಂದೆ ಒಂದು ಮಸೂದೆಯನ್ನು ತಂದು ಅದು ಪರಾಜಿತಗೊಂಡ ಮೇಲೆ ಆಜ್ಞೆಯನ್ನು ಹೊರಡಿಸುವುದು ಎಷ್ಟರ ಮಟ್ಟಿಗೆ ಸಂಗತ?

ಈ ಘಟನೆಯಿಂದ ಶ್ರೀಮತಿ ಗಾಂಧಿಯವರಿಗೆ ಒಂದು ಸಂಗತಿ ಸ್ಪಷ್ಟವಾಗುತ್ತದೆ. ತಾನು ಎಣಿಸಿದಂತೆ ಸಂವಿಧಾನ ತಿದ್ದುಪಡಿ ಆಗಲಾರದು. ಏಕೆಂದರೆ, ಒಂದೊಂದು ಪ್ರಶ್ನೆಯ ಮೇಲೂ ಒಂದೊಂದು ಪಕ್ಷದಲ್ಲೂ ಭಿನ್ನಮತಗಳಿರುವುದರಿಂದ ಯಾವ ಮಸೂದೆಯ ಮತದಾನದ ವೇಳೆ ಎಷ್ಟು ಜನ ಸದಸ್ಯರು ಪಕ್ಷಾಂತರಗೊಳ್ಳುತ್ತಾರೆ ಎಂದು ಹೇಳುವುದು ಸಾಧ್ಯವಿಲ್ಲ. ಅದೇನಿದ್ದರೂ ಸಂಸತ್ತಿನ ಉಭಯ ಸಭೆಗಳಲ್ಲೂ ಬರುವ ತಪ್ಪಳಿಕೆಯಲ್ಲಿ ಪ್ರಧಾನಿ ಶಕ್ತರಾಗಿದ್ದಾರೆ. ತನ್ನ ಬೆಂಬಲಿಗರಿಗೆ ಏನು ಬೇಕೋ ಅದನ್ನು ಕೊಡುವ ಕಾಮಧೇನು ಶ್ರೀಮತಿ ಗಾಂಧಿಯವರು ಇದ್ದಾರೆ. ಆದುದರಿಂದ ಅವರ ಮನಸ್ಸಿಗೆ ಚ್ಯುತಿ ಬಂದರೂ ಬರಬಹುದು; ಸ್ಥಾನಕ್ಕೆ ಧಕ್ಕೆ ಬಾರದು.

ಈ ಪರಾಜಿತ ಮಸೂದೆಯು ಶ್ರೀಮತಿ ಇಂದಿರಾ ಗಾಂಧಿಗೂ ಅದರ ಅನುಯಾಯಿಗಳಿಗೂ ಪಕ್ಷಾಂತರದ ಶಿಕ್ಷೆ ಬೇಕೆಂಬ ವಾಸ್ತವಿಕಾಂಶವನ್ನು ಮನವರಿಕೆ ಮಾಡಿಕೊಟ್ಟಿತು. ಈ ಮಸೂದೆಗೆ ತಮ್ಮ ಆತ್ಮಸಾಕ್ಷಿಯಂತೆ ಮತ ನೀಡಿದವರಿಗೆ ಪ್ರಧಾನಿಯವರು ನೋಟೀಸು ನೀಡಿದ್ದಾರೆ! ಅಧ್ಯಕ್ಷ ಶ್ರೀ ರಾಮರಿಗೂ ಪತ್ರ ಬರೆದು ಪಕ್ಷದ ಆದೇಶದ ಸಂಹಿತೆಯಂತೆ ಅವರ ವಿರುದ್ಧ ಕ್ರಮ ಕೈಕೊಳ್ಳಬೇಕೆಂದು ಕೇಳಿಕೊಂಡಿದ್ದಾರೆ. 'ಆತ್ಮಸಾಕ್ಷಿ' ಪಂಥವು ಈಗಲಾದರೂ ಸಮಾಧಿಯಾಯಿತೆ?

ಇತ್ತ್ಯಾಲೆ ಹಾವಿದೆ. ಅದು ಎರಡೂ ಬಾಯಿಯಿಂದ ತಿನ್ನಾರಿಯಾಡುತ್ತದೆ. ಶ್ರೀಮತಿ ಗಾಂಧಿಯವರೂ ಸಂಸತ್ತಿಗೆ ಒಪ್ಪದ ಕಾರ್ಯವನ್ನು ರಾಷ್ಟ್ರಪತಿಯವರಿಂದ ಸಾಧಿಸಿಕೊಂಡರು! ಸಂಸತ್ತಿಗೂ ನುಂಗಲು ರಾಷ್ಟ್ರಪತಿ; ಜನತೆಗೂ ನುಂಗಲು ಪ್ರಧಾನಿ.

ಮದುವೆ ಇದೀಗ ಮುಗಿದಿತ್ತು. ಮದುಮಗನಿಗೊಂದು ಟೆಲಿಗ್ರಾಂ ಬಂತು. 'ಅಪ್ಪನಿಂದ ಬಂದಿದೆ' ಯೆಂದನಾತ.

"ಏನಿದೆಯದರಲ್ಲಿ?" ಆತುರದಿಂದಲೇ ಕೇಳಿದಳು ಮದುವಣಿಗ.

"ಮನೆಗೆ ಮರಳಬೇಡ. ಎಲ್ಲವನ್ನೂ ಕ್ಷಮಿಸಲಾಗುವುದು."

೦ ೦ ೦

ವಾರ್ಷಿಕ ಮಹಾಸಭೆ
ನೋಟೀಸು

ಪುತ್ತೂರು ಡಿವಿಜನ್ ಮಹಾಲಿಂಗ ಪ್ರಿವೆನ್ಶನ್ ಸಹಕಾರಿ ಸಂಘ ಲಿ.
ನಂಬ್ರ 367 ಇಡ್ಕಿದು,
ಕಬಕ ಪೋಸ್ಟು ದ. ಕ.

ಈ ಸಂಘದ ವಾರ್ಷಿಕ ಮಹಾಸಭೆಯನ್ನು ತಾ. 28-9-70ನೇ ಸೋಮವಾರ ಪೂರ್ವಾಹ್ನ ಘಂಟೆ 10—30ಕ್ಕೆ ದ. ಕ. ಸೆಂಟ್ರಲ್ ಬ್ಯಾಂಕಿನ ಪುತ್ತೂರು ಶಾಖೆಯ ಆಫೀಸಿನಲ್ಲಿ ಜರಗುವುದಾಗಿದೆ. ಎಲ್ಲಾ ಮೆಂಬರರೂ ಬರಬೇಕಾಗಿ ವಿನಂತಿ.

(Sd.) K. Venkappaya
ಅಧ್ಯಕ್ಷ

ಇಡ್ಕಿದು, ತಾ. 26—8—70

ವಿಷಯಗಳು

1) 1969-70ರ ವರದಿ ಓದುವುದು.
2) 1968-69ರ ಆಡಿಟ್ ರಿಪೋರ್ಟ್ ಬಗ್ಗೆ ಮಂಜೂರಾತಿ, ಲಾಭ ವಿತರಣೆ.
3) 1970-71 ಅಂದಾಜು ಬಜೆಟು ಮಂಜೂರಾತಿ.
4) ಅಧ್ಯಕ್ಷರ ಅನುಮತಿಯಿಂದ ಇತರ ವಿಷಯಗಳು.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೋತ್ಸಾಹಕರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೇಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ರುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾರ್ಟಿಯುಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೇಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಶ್ರೀ ಟಾಟಾ ಹೇಳುತ್ತಾರೆ—

ನಾವೇಕೆ ಹಿಂದುಳಿದಿದ್ದೇವೆ?

ಜನರಿಗೆ ಇಂದು ವಿಪುಲ ನೌಕರಿಗಳು, ವಸ್ತುಗಳು ಹಾಗೂ ಸೇವೆಗಳು ಬೇಕಾಗಿವೆ. ಆದರೆ, ದುರ್ದೈವದಿಂದ ಅವೆಲ್ಲವೂ ಜನರಿಗೆ ನಿರಾಕೃತವಾಗಿವೆ. ನೆಹರೂ ಉದ್ದೇಶಿಸಿದ್ದ ಸಮ್ಮಿಶ್ರ ಸಾಂಪತ್ತಿಕ ಯೋಜನೆಯೊಂದೇ ಭಾರತಕ್ಕೆ ತಾರಕ. ಖಾಸಗಿ ಹಾಗೂ ಸಾರ್ವಜನಿಕ ರಂಗಗಳಲ್ಲಿ ಸಂಪೂರ್ಣ ಸಹಕಾರವಿದ್ದರೇನೇ ಸಾಂಪತ್ತಿಕ ಸಮೃದ್ಧಿ ಸಾಧ್ಯವಾಗುತ್ತದೆ.

ನಾನು ಇತ್ತೀಚೆಗೆ ಜಪಾನ್, ಆಸ್ಟ್ರೇಲಿಯ, ಸಿಂಗಾಪುರ, ತೈವಾನ್ ಹಾಗೂ ಕೋರಿಯಗಳಿಗೆ ಹೋಗಿ ಬಂದೆ. ಆ ದೇಶಗಳಿಗೆ ಹೋದವರಿಗೆ ಒಂದು ಸಂಗತಿ ಎದ್ದು ಕಾಣುತ್ತದೆ, ಅಲ್ಲಿಯ ಜನರ ಜೀವನ ಮಟ್ಟವು ತುಂಬ ಎತ್ತರವಾಗಿದೆ.

ಪಾಶ್ಚಾತ್ಯ ದೇಶಗಳ ಜನರ ಜೀವನ ಮಟ್ಟವು ಎತ್ತರವಾಗಿದೆ ಎಂಬುದು ನಮಗೆ ತಿಳಿದದ್ದೇ ಇದೆ. ಯಾಕೆಂದರೆ ಅಲ್ಲಿ ಔದ್ಯಮಿಕ ಕ್ರಾಂತಿಯು ಹತ್ತೊಂಬತ್ತನೆಯ ಶತಮಾನದಲ್ಲಿಯೇ ಆರಂಭವಾಗಿತ್ತು. ಆದರೆ ನಮಗೆ ಕೌತುಕ ಉಂಟುಮಾಡುವ ಸಂಗತಿಯೆಂದರೆ ಅಭಿವೃದ್ಧಿ ಹೊಂದುತ್ತಿರುವ ಈ ದೇಶಗಳು ಸಮೃದ್ಧಿಯ ಹಾದಿಯಲ್ಲಿ ಎಷ್ಟೊಂದು ಮುಂದೆ ಹೋಗಿವೆ ಎನ್ನುವುದು!

ಸಿಂಗಪುರವನ್ನೇ ತೆಗೆದುಕೊಳ್ಳಿ. ಅದು ಒಂದು ಚಿಕ್ಕ ದ್ವೀಪ ನಗರ ರಾಜ್ಯ. ಕೇವಲ ೨೨೫ ಚದರ ಮೈಲು ಕ್ಷೇತ್ರ ವಿಸ್ತೀರ್ಣವನ್ನು ಹೊಂದಿದೆ. ಅಲ್ಲಿಯ ಜನರ ಜೀವನ ಮಟ್ಟವು ಭಾರತಕ್ಕಿಂತಲೂ ಹತ್ತುಪಟ್ಟು ಹೆಚ್ಚು ಉತ್ತಮವಿದೆ. ಜಪಾನದ ಜೀವನ ಮಟ್ಟವು ಭಾರತಕ್ಕಿಂತಲೂ ಹದಿನಾರು ಪಟ್ಟು ಹೆಚ್ಚು ಎತ್ತರವಾಗಿದೆ. ಆಸ್ಟ್ರೇಲಿಯದ ಜೀವನ ಮಟ್ಟವು ಭಾರತಕ್ಕಿಂತಲೂ ಮೂವತ್ತಮೂರು ಪಟ್ಟು ಹೆಚ್ಚು ಎತ್ತರವಾಗಿದೆ.

ಜಪಾನ, ಸಿಂಗಾಪುರಗಳ ಸಾಧನೆಯು ಭಾರೀ ಕೌತುಕದಾಯಕವಾಗಿದೆ. ಇಪ್ಪತ್ತೈದು ವರ್ಷಗಳ ಹಿಂದೆ ಜಪಾನ ದೇಶವು ಕೂಡ ಜರ್ಮನಿಯಂತೆ ಜರ್ಝರಿತವಾಗಿ ಹೋಗಿತ್ತು. ಅದರ ಸಾಂಪತ್ತಿಕ ಶಕ್ತಿಯು ಸಂಪೂರ್ಣ ಹ್ರಾಸಗೊಂಡು ಹೋಗಿತ್ತು. ಅದರ ನಗರ ಹಾಗೂ ಉದ್ದಿಮೆಗಳೆಲ್ಲವೂ ಕುಸಿದು ಬಿದ್ದಿದ್ದವು. ಅದು ಆಗ ಸಂಪೂರ್ಣ ಸೋಲನ್ನು ಅನುಭವಿಸಿತ್ತು.

ಆದರೆ ಅಲ್ಲಿ ನಾವು ಇಂದು ಏನನ್ನು ಕಾಣುತ್ತೇವೆ? ಫೀನಿಕ್ಸ್ ಪಕ್ಷಿಯಂತೆ ಜಪಾನ್ ದೇಶವು ತನ್ನನ್ನು ಜೀರ್ಣಮಾಡಿದ್ದ ಬೆಂಕಿಯಿಂದ ಪುನರ್ಜನ್ಮ ಪಡೆದು ಮೇಲಕ್ಕೆದ್ದು ನಿಂತಿದೆ.

ಜಪಾನ್ ದೇಶವು ಈಗ ಪ್ರಪಂಚದಲ್ಲಿ ತೃತೀಯ ಔದ್ಯಮಿಕ ಶಕ್ತಿಯೆನಿಸಿದೆ. ಉಕ್ಕಿನ ಉತ್ಪಾದನೆಯಲ್ಲಿ ಅದರ ಸ್ಥಾನ ಮೂರನೆಯದು. ಮೋಟಾರ ವಾಹನಗಳ ಉತ್ಪಾದನೆಯಲ್ಲಿ ಅದರ ಸ್ಥಾನ ಎರಡನೆಯದು. ಹಡಗು ನಿರ್ಮಾಣದಲ್ಲಿ, ಎಲೆಕ್ಟ್ರಾನಿಕ್ ಉಪಕರಣಗಳ ಉತ್ಪಾದನೆಯಲ್ಲಿ ಅದು ಸಂದೇಹಾತೀತ ಸ್ಥಾನವನ್ನು ಹೊಂದಿದೆ.

೧೯೭೫ರ ಹೊತ್ತಿಗೆ ಅದು ಅಮೇರಿಕೆ ಹಾಗೂ ಸೋವಿಯಟ್ ರಶ್ಯಾಗಳನ್ನು ಉಕ್ಕಿನ ಉತ್ಪಾದನೆಯಲ್ಲಿ ಹಿಂದೆ ಹಾಕುವ ಗುರಿಯನ್ನು ಇರಿಸಿಕೊಂಡಿದೆ. ಹಾಗೆ ನೋಡಿದರೆ, ಜಪಾನಿನ ಜನಸಂಖ್ಯೆ ಆ ದೇಶಗಳ ಅರ್ಧದಷ್ಟು ಇದೆ. ಮತ್ತು ಉಕ್ಕಿನ ಉತ್ಪಾದನೆಗೆ ಬೇಕಾದ ಕಚ್ಚಾ ಸಾಮಗ್ರಿ ಯಾವುದೂ ಆ ದೇಶದಲ್ಲಿ ಇಲ್ಲ.

ಜಪಾನದ ಔದ್ಯಮಿಕ ಉತ್ಪಾದನೆಯು ಪ್ರತಿನಾಲ್ಕು ವರ್ಷಕ್ಕೊಮ್ಮೆ ಇಮ್ಮಡಿಯಾಗಿ ಹೆಚ್ಚುತ್ತಲೇ ನಡೆದಿದೆ. ಇದು ನಿಜವಾಗಿಯೂ ಒಂದು ಸಾಂಪತ್ತಿಕ ಪವಾಡವೇ ಸರಿ.

ಪುಟ್ಟ ಸಿಂಗಾಪುರವು ಕೂಡ, ಕಣ್ಣು ಕೋರೈಸುವ ಕೆಲಸವನ್ನು ಮಾಡಿ ತೋರಿಸಿದೆ. ಸ್ವಾತಂತ್ರ್ಯ ಸಂಪಾದಿಸಿದ ಆರು ವರ್ಷಗಳಲ್ಲಿಯೇ ಅದು ಪ್ರತಿಕೂಲಗಳನ್ನು ನಿವಾರಿಸಿಕೊಂಡು ಭಾರೀ ಸಾಂಪತ್ತಿಕ ಕೌತುಕವನ್ನು ಸಾಧಿಸಿದೆ. ಸಿಂಗಾಪುರದ ಸಾಧನೆಯು ನಂಬಲಾರದಷ್ಟು ಅಗಾಧವಾಗಿದೆ. ಅಲ್ಲಿ ಸ್ಥಿರತೆ ಇದೆ. ಸಾಂಪತ್ತಿಕ ಬೆಳವಣಿಗೆ ಇದೆ. ಸಿಂಗಾಪುರದ ಸಮಾಜವಾದೀ ಸರಕಾರಕ್ಕೆ, ಖಾಸಗೀ ಔದ್ಯಮಿಕ ಸಾಹಸ ಹಾಗೂ ವಿದೇಶೀ ಬಂಡವಾಳಗಳಿಲ್ಲದೆ ಶೀಘ್ರ ಪ್ರಗತಿ ಸಾಧ್ಯವಿಲ್ಲ ಎಂಬುದನ್ನು ತಿಳಿದುಕೊಳ್ಳಲು ತಡವಾಗಲಿಲ್ಲ. ಸಿಂಗಾಪುರದ ಡಾಲರ್, ಅಮೇರಿಕೆಯ ಡಾಲರಿಗಿಂತಲೂ ಹೆಚ್ಚು ಶಕ್ತಿಯನ್ನು ಹೊಂದಿದೆ.

ಜಗತ್ತಿನಲ್ಲಿಯೇ ಉಚ್ಚವೆನ್ನುವ ಜೀವನ ಮಟ್ಟವನ್ನು ಹೊಂದಿದ್ದರೂ ಆಸ್ಟ್ರೇಲಿಯಾ ದೇಶವು ಅದನ್ನು ಇನ್ನೂ ಹೆಚ್ಚು ಸಧಾರಿಸಿಕೊಳ್ಳಲು ಮುಂದಾಗಿದೆ.

ಜಪಾನ್ ಕೋರಿಯ ತೈವಾನ್ ಸಿಂಗಾಪುರ ಇವೆಲ್ಲವೂ ಏಶ್ಯಾದ ದೇಶಗಳೇ. ಆದರೆ ಅಲ್ಲಿ ಭಾರತವು ಹೊಂದಿರುವ ಪ್ರಾಕೃತಿಕ ಸಾಧನ ಸಂಪತ್ತು ಇಲ್ಲ. ಆದಾಗ್ಯೂ ಅವುಗಳ ಸಾಂಪತ್ತಿಕ ಬೆಳವಣಿಗೆ ಆಸ್ಟ್ರೇಲಿಯವನ್ನು ಸರಿಗಟ್ಟಿದೆ, ಇಲ್ಲವೆ ಅದನ್ನು ಮೀರಿ ಮುಂದೆ ಹೋಗಿದೆ.

ಆ ದೇಶಗಳು ಏಕೆ ಮತ್ತು ಹೇಗೆ ಮುಂದಕ್ಕೆ ಹೋಗಿವೆ ಎಂಬುದನ್ನು ಕುರಿತು ನಾವೇಕೆ ಆಲೋಚಿಸಬಾರದು? ಭಾರತವು ಮಾಡದೇ ಇರುವುದನ್ನು ಮಾಡಲು ಅವು ಸಮರ್ಥವಾಗಿವೆ. ಸಾರ್ವತ್ರಿಕ ಉದ್ಯೋಗ ಸಾರ್ವತ್ರಿಕ ಸಮೃದ್ಧಿ ಇಲ್ಲಿ ಇವೆ. ಇಪ್ಪತ್ತು ವರ್ಷದ ಯೋಜನೆ ಹಾಗೂ ಅಭಿವೃದ್ಧಿ ಇಲ್ಲಿ ಇವೆ. ಇಪ್ಪತ್ತು ವರ್ಷದ ಯೋಜನೆ ಹಾಗೂ ಅಭಿವೃದ್ಧಿ ಕಾರ್ಯದಲ್ಲಿ ೩೦,೦೦೦ ಕೋಟಿ ರೂಪಾಯಿ ಹಣ ತೊಡಗಿಸಿದ್ದರೂ ನಮ್ಮ ಸಾಂಪತ್ತಿಕ ಗೋಳು ಸುಧಾರಿಸಿಲ್ಲ. ನಿರುದ್ಯೋಗ ಹಾಗೂ ನಿರಂತರ ಕೊರತೆಗಳು ನಮ್ಮ ಬೆನ್ನು ಹತ್ತಿಕೊಂಡೇ ಇವೆ.

ಭಾರತದಲ್ಲಿ ಇಲ್ಲದೇ ಇರುವುದನ್ನು ಆ ದೇಶಗಳು ಏನ ಪಡೆದಿವೆ? ಅದನ್ನು ನಾವು ಆ ದೇಶಗಳ ಸಾಂಪತ್ತಿಕ ಧೋರಣೆಯಲ್ಲಿ ಕಾಣಬಹುದು. ಭಾರತಕ್ಕೆ ವ್ಯತಿರಿಕ್ತವಾಗಿ ಆ ದೇಶಗಳೆಲ್ಲವೂ ಪೂರ್ವಗ್ರಹದೂಷಿತವಾದ ಸಾಂಪತ್ತಿಕ ಧೋರಣೆಗಳಿಂದ ಸಂಪೂರ್ಣ ಮುಕ್ತವಾಗಿವೆ.

ಸಮಾಜವಾದೀ ಸರಕಾರಗಳನ್ನು ಹೊಂದಿದ್ದರೂ ಕೂಡಾ ಅವುಗಳಿಗೆ ಖಾಸಗೀ ಉದ್ದಿಮೆಯು ನಿಷಿದ್ಧವೆನಿಸಿಲ್ಲ. ಸಮಾಜವಾದಕ್ಕೆ ಬೇಕಾದ ಹಣಕಾಸನ್ನು ಖಾಸಗೀ ರಂಗವು ಒದಗಿಸಬಹುದೆಂಬುದು ನಮ್ಮ ಸಮಾಜವಾದಿಗಳಿಗೆ ತಿಳಿಯಲೊಲ್ಲದಾಗಿದೆ. ಅಭಿವೃದ್ಧಿ ಹೊಂದುತ್ತಿರುವ ಸಂಸ್ಥೆಯೇ ಅಭಿವೃದ್ಧಿಯ ಫಲಗಳು ಜನರಿಗೆ ಲಭಿಸಬಹುದೆನ್ನುವುದು ಇವರಿಗೆ ಅರ್ಥವಾಗಲೊಲ್ಲದು. ಹೋಳಿಗೆಯನ್ನು ಮಾಡುತ್ತಿದ್ದಂತೆಯೇ ಅದನ್ನು ಹಂಚಬಹುದು. ಸಮಾಜವಾದೀ ಸರಕಾರದ ಕಲ್ಯಾಣ ಯೋಜನೆಗಳಿಗೆ ಬೇಕಾದ ಹಣಕಾಸನ್ನು, ಖಾಸಗೀ ಉದ್ದಿಮೆಗಳಿಂದ ಬರುವ ಸಂಪತ್ತಿನ ಮೇಲೆ ಕರಾಕರಣೆ ಮಾಡಿ ದೊರಕಿಸಿಕೊಳ್ಳಬಹುದು.

ಸಿಂಗಾಪುರದಲ್ಲಿ ಉದ್ದಿಮೆ ಸ್ಥಾಪಿಸಬೇಕೆನ್ನುವ ವಿದೇಶೀಯರ ಮೇಲೆ ಸಿಂಗಾಪುರ ಸರಕಾರವು ಯಾವ ಪ್ರತಿಬಂಧಕಗಳನ್ನು ವಿಧಿಸಬಹುದೆಂದು ನಾನು ಅಲ್ಲಿಯ ಹಣಕಾಸಿನ ಮಂತ್ರಿಗಳನ್ನು ಕೇಳಿದೆ.

ಅವರು ಹೇಳಿದರು: ನಾನು ಹಾಕುವ ಕರಾರು ಒಂದೇ— ಅದೇನೆಂದರೆ ನೀವು ಲಾಭ ಮಾಡಬೇಕು. ನಮ್ಮ ಸಮಾಜವಾದೀ ಕಾರ್ಯಕ್ರಮಗಳಿಗೆ ನಿಮ್ಮ ಲಾಭದ ಹಣ ಬೇಕಾಗಿದೆ. ನಮಗೆ ಇಲ್ಲಿ ಖಾಲೀ ಜನ ಬೇಕಾಗಿಲ್ಲ."

ಇನ್ನೊಂದು ಪ್ರಕರಣ ಆಸ್ಟ್ರೇಲಿಯದ ಪರ್ಥ್‌ದಲ್ಲಿ ನಡೆಯಿತು. ಅಲ್ಲಿ ನಾನು ಪಶ್ಚಿಮ ಆಸ್ಟ್ರೇಲಿಯದ ಔದ್ಯಮಿಕ ಮಂತ್ರಿಯನ್ನು ಭೆಟ್ಟಿ ಆಗಿದ್ದೆ. ಯಾವ ಉದ್ದಿಮೆಗಳನ್ನು ಅಲ್ಲಿ ಸ್ಥಾಪಿಸಬಹುದೆಂಬುದನ್ನು ಕುರಿತು ಟಾಟಾದವರು ಅಲ್ಲಿ ಸಾಧ್ಯತೆಗಳನ್ನು ಕಂಡುಹಿಡಿಯಲು ಒಬ್ಬ ಅಧಿಕಾರಿಯನ್ನು ಇಡಬೇಕೆಂದು ಅವರು ಕೇಳಿದರು.

ಆ ಮಂತ್ರಿಗಳು ಹೇಳಿದರು: "ಪರ್ಥ್‌ದಲ್ಲಿ ಕಚೇರಿ ಸ್ಥಾಪಿಸಲು ನಿಮ್ಮ ಅಧಿಕಾರಿಗೆ ತೊಂದರೆಯೇನಾದರೂ ಆದರೆ, ಅವರಿಗೆ ನನ್ನ ಮಂತ್ರಿಶಾಖೆಯಲ್ಲಿಯೇ ಕಚೇರಿಗೆ ಸ್ಥಳವನ್ನು ಒದಗಿಸಿ ಕೊಡುತ್ತೇನೆ."

ಇಂಥದೇನಾದರೂ ನಮ್ಮ ದಿಲ್ಲಿಯಲ್ಲಿ ನಡೆಯಬಹುದೇ? ಆಸ್ಟ್ರೇಲಿಯದವನೊಬ್ಬನು ಬಂದರೆ ನಮ್ಮ ಮಂತ್ರಿಗಳು ಅವರಿಗೆ ಈ ಸವಲತ್ತನ್ನು ಒದಗಿಸಿ ಕೊಟ್ಟಾರೆಯೇ?

ಕೃಪೆ —"ಪ್ರಪಂಚ"

ಯುವತಿಯೊಬ್ಬಾಕೆ ಮೃದುವಾಗಿ ಉದ್ಗರಿಸಿದಳು—'ಡಾರ್ಲಿಂಗ್, ನೀನೇ ಮೊದಲಿಗೆ ನನ್ನನ್ನು ಪ್ರೇಮಿಸಿದೆಯೆಂಬುದನ್ನು ಮರೆತು ಬಿಟ್ಟೆಯಾ?"

ಯುವಕ ನಿಧಾನವಾಗೇ ಉತ್ತರಿಸಿದ- "ಏನು ಹೇಳುತ್ತೀಯೋ? ನಾನು ಹುಚ್ಚನಾಗುತ್ತ ಬಂದಾಗ ಜನರು ನಿನ್ನನ್ನು ಹುಚ್ಚಿಯೆನ್ನುತ್ತಿದ್ದರು.'

೦ ೦ ೦

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ಮಾದರಿ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ। ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ರೋಗಗಳಿಗೂ ಮನೆಯಲ್ಲಿ ಮದ್ದು ಮಾಡುವ ವಿಧಾನಗಳಿವೆ, ಪಥ್ಯ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿದ್ಯಾ ವಿನಯಸಂಪನ್ನರು

ಭಾರತ ದೇಶ ಯೋಗಭೂಮಿ, ತ್ಯಾಗ ಭೂಮಿ, ಮತ್ತು ಕರ್ಮಭೂಮಿ; ಪ್ರತಿಯೊಬ್ಬನಿಗೂ, ಯೋಗ— ತ್ಯಾಗ — ಕರ್ಮಗಳ ಅನುಭಾವಕ್ಕದ ಪವಿತ್ರ ಭೂಮಿ. ಈ ದೇಶವನ್ನು ನೆನೆಸಿದಾಕ್ಷಣ ಮನಸ್ಸಿನಲ್ಲಿ ಒಂದು ಚಿತ್ರ ಮೂಡುತ್ತಿದೆ. ಹಿಮಾಲಯದ ಉತ್ತುಂಗ ಶ್ರೇಣಿಗಳು ಬೆಳ್ಳಿಯಂತೆ ಬೆಳಗುತ್ತಿರುವ ಅದರ ಶಿಖರಗಳು ನೀವು "ಬೆಳ್ಳಿಯ ಹಬ್ಬ" ಎಂದಾಗ ಈ ಚಿತ್ರ ಎದುರು ನಿಂತಿತು. ನಿತ್ಯ ಪ್ರವಾಹಿಯಾದ ಪಾವನ ನದಿ ಗಂಗೆ, ಈ ಶ್ರೇಣಿಗಳಿಂದ ಹರಿಯುತ್ತಿರುವದರ ಚಿತ್ರ ಕಾಣುತ್ತೇವೆ. ಪರಿಶುದ್ಧ ಮತ್ತು ಪವಿತ್ರವಾದ ಗಂಗೆಯಂತೆ, ಪ್ರತಿಯೊಬ್ಬ ಭಾರತೀಯನ ರಕ್ತವೂ ಪುನೀತವಾದುದು. ಅದಕ್ಕೆ ಭಾರತೀಯ ಸಂಸ್ಕೃತಿ ಜಗತ್ತಿನಲ್ಲಿಯೇ ಉಚ್ಚತಮವಾದುದು ಎಂದು ಹೊಗಳುತ್ತಾರೆ. ಅದರ ಉಜ್ವಲ ಪರಂಪರೆ ಮಾನವ ಕುಲವನ್ನೇ ಉದ್ಧರಿಸಬಲ್ಲದು. ಅದು ಅನಂತಕಾಲ ಬಾಳುವದು. ಧರೆಯಲ್ಲಿ ಗಂಗೆ ಹರಿಯುವ ವರೆಗೂ ನಿಲ್ಲುವದು. ಈ ಪುರಾತನ ಸಂಸ್ಕೃತಿಯನ್ನು ಹತ್ತಿಕ್ಕಲು ಪ್ರಯತ್ನಿಸಲಾಯಿತು, ನಾಶಗೊಳಿಸಲು ಯತ್ನಿಸಲಾಯಿತು. ಆದರೂ ಅಬಾಧಿತವಾಗಿ ನಿಂತಿದೆ, ನಾಶವಾಗಲಿಲ್ಲ— ಗಂಗೆಯ ನೀರು ಬತ್ತಿದರೆ ಮಾತ್ರ ಇದು ಸಾಧ್ಯ. ಈ ಭೂಮಿಯ ಇತಿಹಾಸ, ಪರಂಪರೆಗಳೂ ಆ ಪುಣ್ಯ ನದಿಯಷ್ಟೇ ಪರಿಶುದ್ಧವಾದವು. ಹಿಮಾಲಯದಿಂದ ಹಂದ ಅವಿರತವಾಗಿ ಬರುತ್ತಿರುವ ಹಿಮಸ್ರೋತಗಳ ಗಂಗೆಯನ್ನು ಪೀಯೂಷವೂ, ಅಮೂಲ್ಯವಾಗಿಯೂ ಮಾಡಿವೆ. ನಮ್ಮ ದೇಶವು ಈಗ ಅನೇಕ ಕಷ್ಟಗಳಿಗೆ ಗುರಿಯಾಗಿದೆ. ಅದಕ್ಕೆ ನಮ್ಮ ಆಡಳಿತಗಾರರೇ ಕಾರಣ. ಈ ಸಂಸ್ಕೃತಿಯ ಅಮೂಲ್ಯ ತತ್ವಗಳನ್ನು ನಮ್ಮ ವಿದ್ಯಾರ್ಥಿಗಳಿಗೆ ಹೇಳಿಕೊಡುವದಿಲ್ಲ. ಆಳುವವರು ಇದಕ್ಕೆ ಮುಂದಾಗಿ ಯತ್ನ ಮಾಡಿಲ್ಲ.

ನಾವು ಅನೇಕ ವಿಷಯಗಳ ಅಧ್ಯಯನ ಮಾಡುತ್ತಿದ್ದೇವೆ. ಆದರೆ ಎಲ್ಲವುಗಳಿಗೂ ಮೂಲವಾದ ಆತ್ಮವಿದ್ಯೆಯ, ಅವಶ್ಯಕತೆಯನ್ನು ನಾವು ಕಡೆಗಣಿಸಿದ್ದೇವೆ. ಆತ್ಮತೃಪ್ತಿ ಇಲ್ಲದೇ ಬೆಳೆಸಿರುವ ಜ್ಞಾನ ನಿರುಪಯೋಗಿಯಾಗಿ ಬೆಲೆ ಇಲ್ಲದ್ದಾಗುತ್ತಿದೆ. ಭಾರತದಲ್ಲಿ ಈಗ ಶಿಕ್ಷಣವು ಕೇವಲ ಭೌತಿಕ ವಿಷಯಗಳಿಗೆ ಸಂಬಂಧಿಸಿದ್ದಾಗಿದೆ. ಹಾಗಾದರೆ, ಹೃದಯಕ್ಕೆ ಸಂಸ್ಕಾರ ನೀಡುವ, ಸತ್ಯ ಶಾಂತಿ, ಪ್ರೇಮಗಳನ್ನು ವಿಕಾಸಗೊಳಿಸುವ ಶಿಕ್ಷಣ ನೀಡುವದರಲ್ಲಿ ಶ್ರೇಯಸ್ಸಿದೆ. ಈಗಿನ ಕಾಲದಲ್ಲಿ ಶಿಕ್ಷಣಾನಂತರ ಸಿಗುವ ಪದವಿಗಳು ಭಿಕ್ಷಾಪಾತ್ರೆಗಳಂತಿವೆ. ವಿದ್ಯಾರ್ಥಿಯು ಈ ಪದವಿಗಳನ್ನು ಹಿಡಿದುಕೊಂಡು ವೃತ್ತಿಯೋಜನೆಗಾಗಿ ಅಲೆದಾಡುತ್ತಾನೆ. ಈ ಪದವಿಗಳು ವೃತ್ತಿಪಾತ್ರಗಳಿಂತ ಹೆಚ್ಚಿನದೇನೂ ಮಾಡಲಾರವು. ಇದಕ್ಕೆ ಶಿಕ್ಷಣವೆನ್ನುವದಿಲ್ಲ. ಭಾರತೀಯರು ಸ್ವಭಾವತಃ ಸ್ವಾವಲಂಬಿಗಳು, ಅಂತರಂಗದ ಕರೆಗೆ ಓಗೊಡುವ ಜನರು ಒಂದು ತುತ್ತಿಗಾಗಿ, ಬಾಗಿಲಿನಿಂದ ಬಾಗಿಲಿಗೆ ವೃತ್ತಿಯೋಜನೆಗಾಗಿ ಹೋಗಕೂಡದು. ಪರರ ದಾಸಾನುದಾಸರಾಗಿರ ಕೂಡದು; ಇದು ವಿದ್ಯಾರ್ಥಿಗಳ ದೋಷವಲ್ಲ. ಪರ್ವತ ಪ್ರದೇಶಗಳಲ್ಲಿ ಸಿಗುವ ಕಡೆಯದ ಕಲ್ಲುಗಳಂತಿರುವರು. ಅವರಲ್ಲಿ ಕಾಪಟ್ಯವಿಲ್ಲ. ನಿರ್ಮಲ ಹೃದಯಿಗಳು, ಕಲ್ಲುಗಳಿರುವ ಈ ಮಕ್ಕಳಿಗೆ ಆಕಾರ ಕೊಡುವಾಗ, ಶಿಲ್ಪಿಗಳಂತಿರುವ, ತಂದೆ ತಾಯಿಗಳು, ಗುರು-ಹಿರಿಯರು ಸರಿಯಾಗಿ ರೂಪಕೊಡುವದಿಲ್ಲ ಎನ್ನುವದು ಸ್ಪಷ್ಟ, ಶೈಶವ-ಬಾಲ್ಯದಲ್ಲಿಯೇ ಅವರಿಗೆ ಅನುಚಿತವಾದ ಸ್ವಾತಂತ್ರ್ಯವನ್ನು ತಂದೆ—ತಾಯಿಗಳು ನೀಡುತ್ತಾರೆ. ಮತ್ತು ಇದರ ಪರಿಣಾಮವಾಗಿ, ಅನಂತರ ಪೇಚಾಡುತ್ತಾರೆ. ವಿದ್ಯೆಯು ವಿನಯವನ್ನು ನೀಡಬೇಕು; ನಮ್ರತೆ ಮತ್ತು ಗೌರವಗಳನ್ನು ಹುಟ್ಟಿಸಬೇಕು; ಶಿಕ್ಷಣವು ವಿದ್ಯಾರ್ಥಿಗಳಿಗೆ ಗೌರವ, ನಮ್ರತೆಗಳನ್ನು ನೀಡದಿದ್ದರೆ ಆ ಶಿಕ್ಷಣದ ಪ್ರಯೋಜನವೇನು? ನಾವು ಶಾಲೆ ಮತ್ತು ಕಾಲೇಜುಗಳಲ್ಲಿ ಏಕೆ ಕಲಿಯುತ್ತೇವೆ ಎಂಬ ವಿಚಾರ ಗೊತ್ತಿರುವದಿಲ್ಲ. ನೀವು ಏಕೆ ಶಾಲೆಗೆ ಹೋಗುತ್ತಿದ್ದೀರಿ, ಎಂದು ಕೇಳಿದರೆ, ಕೇವಲ ಓದಲಿಕ್ಕಾಗಿ, ಪದವಿಗಾಗಿ ಅಭ್ಯಾಸಮಾಡಲು ಹೋಗುತ್ತೇವೆ ಎನ್ನುತ್ತಾರೆ. ಓದುವದು ಮತ್ತು ಅಭ್ಯಾಸ ಮಾಡುವದು, ಇವೇ ಉದ್ದೇಶಗಳಿದ್ದಲ್ಲಿ ಶಿಕ್ಷಕರನ್ನೇ ಮನೆಗೆ ಕರೆದು ಅಭ್ಯಾಸ ಮಾಡಲು ಶಕ್ಯವಾಗುತ್ತಿದೆ.

ಶಾಲೆಗಳಿಗೆ ಹೋಗುವದು ಚಾರಿತ್ರ್ಯ ಬೆಳವಣಿಗೆಯ ಕುರಿತು, ಶಿಸ್ತನ್ನು ಕಲಿಯಲು, ವಿನಾ ಕೆಲವು ವಿಷಯಗಳ ಪರಿಚಯಕ್ಕಾಗಿ ಅಲ್ಲ; ಶಾಲೆ ಕಾಲೇಜುಗಳಲ್ಲಿ ಕಲಿಯು ಬೇರಾದ ವಿಷಯಗಳಲ್ಲಿ ವ್ಯಾಸಂಗ ಒಂದು ಭಾಗ ಮಾತ್ರ. ಪ್ರತಿಯೊಂದು ವರ್ಗದವರ, ಇನ್ನೊಂದು ವರ್ಗದವರೊಡನೆ ಹೇಗೆ ನಡೆದುಕೊಳ್ಳಬೇಕು ವೇಳಾಪತ್ರಿಕೆಗೂ, ಶಿಸ್ತಿಗೂ ಹೇಗೆ ಹೊಂದಿಕೊಂಡಿರಬೇಕು ಎಂಬ ವಿಚಾರವನ್ನು ಚೆನ್ನಾಗಿ ಮನನಮಾಡಬೇಕು ಯಾವುದೇ ವಿಷಯದಲ್ಲಿ ನೀವು ಪಡೆಯುವ ಗುಣಗಳಿಗಿಂತ ನೀವು ನಿಮ್ಮ ನಡತೆಯ ಬಗ್ಗೆ ಪಡೆಯುವ ಅಭಿಪ್ರಾಯ ಮುಖ್ಯವಾದದ್ದು, ಸದ್ಯ ಶಿಸ್ತಿನ ಶಿಕ್ಷಣದ ಬಗ್ಗೆ ಏನೂ ಲಕ್ಷ್ಯ ಪೂರೈಸದೇ, ಹೇಗಾದರೂ ಗುಣಗಳನ್ನು ದೊರಕಿಸುವ ಕಡೆ ಪ್ರಯತ್ನ ಮಾಡುತ್ತಾರೆ. ವಿದ್ಯಾರ್ಥಿಯು ಪಡೆಯುವ ಗುಣಗಳು ಒಂದು ವೇಳೆ ಕಡಿಮೆಯಾದರೂ, ನಡೆ—ನುಡಿಗಳ ಚಾರಿತ್ರ್ಯಕ್ಕೆ ಸದಭಿಪ್ರಾಯ ಪಡೆಯಬೇಕು. ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವದರ ಸಲುವಾಗಿ, ತಾಯಿ-ತಂದೆಯರು ತುಂಬಾ ತ್ಯಾಗ ಮಾಡುತ್ತಾರೆ. ಆರ್ಥಿಕವಾಗಿ ತುಂಬಾ ಕಷ್ಟ ಪಡುತ್ತಾರೆ, ಮತ್ತು ಸಹಿಸಿಕೊಂಡು ಇರುತ್ತಾರೆ. ತಮ್ಮ ಶಿಕ್ಷಣದ ಕಾರಣದಿಂದ ತಂದೆ- ತಾಯಿಯಂದಿರಿಗೆ ತುಂಬ ತೊಂದರೆಯಾಗುತ್ತಿದ್ದರೆ, ಅದು ಮಕ್ಕಳು ತಮ್ಮ ತಂದೆ-ತಾಯಿಯಂದಿರಿಗೆ ತೋರಿಸಿದ ಕೃತಘ್ನತೆಯಾಗುವದು, ಉತ್ತಮ ಅಭ್ಯಾಸ ಮತ್ತು ನಡತೆಗಳಿಂದ ತಮ್ಮ ತಾಯಿ-ತಂದೆಯರಿಗೆ ಕೃತಜ್ಞರಾಗಬೇಕು. ವಿದ್ಯಾರ್ಥಿಯು ರಾಜಕೀಯದಿಂದ ದೂರವಿರಬೇಕು. ಆ ರಾಜಕೀಯವೇ ಈಗ ವಿದ್ಯಾರ್ಥಿಗಳನ್ನು ಕೆಡಿಸುತ್ತಿದೆ. ಶೀಲ ಕಲಿಸದ ಶಿಕ್ಷಣ, ಮಾನವತೆ ಬೆಳೆಸದ ವಿಜ್ಞಾನ, ನೀತಿರಹಿತ ವ್ಯಾಪಾರ, ಇವು ನಿಷ್ಪ್ರಯೋಜಕವಾದವುಗಳು. ವೃತ್ತಿ ಶಿಕ್ಷಣ ಮತ್ತು ಬುದ್ಧಿ ವಿಕಾಸಗಳಿಗಿಂತ ಶೀಲ ಸಂರಕ್ಷಣೆ ತುಂಬಾ ಮಹತ್ವವಾದವುಗಳು. ಈಗ ವಿದ್ಯಾರ್ಥಿಗಳಾಗಿರುವವರು, ಕೊನೆಯ ವರೆಗೆ ಹಾಗೆಯೇ ಇರುವದಿಲ್ಲ. ಅವರು ಮದುವೆಯಾಗುತ್ತಾರೆ. ತಾವು ತಂದೆಯರಾದಾಗ ಮಕ್ಕಳು ತಮ್ಮ ಬಗ್ಗೆ ಹೇಗೆ ವರ್ತಿಸುತ್ತಾರೊ ಆಗಲೇ ತಾವು ತಮ್ಮ ತಾಯಿತಂದೆಯರ ಕುರಿತು ಮಾಡಿದ್ದರ ತಪ್ಪು ಅರಿವಾಗುವದು. ಭಾವನೆಗಳಂತೆ ಆಚರಣೆಯಾಗುತ್ತಿದೆ. ನಮ್ಮ ತಂದೆ-ತಾಯಿಯರಿಗೆ ನಾವು ಕೃತಜ್ಞರಾಗಿ ಆನಂದ ನೀಡಿದರೆ, ನಮ್ಮ ಮಕ್ಕಳೂ ಅದೇ ರೀತಿ ನಮಗೆ ಆನಂದ ನೀಡುವರು. ವ್ಯಾಸಂಗವು ಮುಖ್ಯವಾದದ್ದೇನೋ ನಿಜ, ಅದಕ್ಕಿಂತಲೂ ಹೆಚ್ಚಿನದಾಗಿ ಆ ವ್ಯಾಸಂಗ ಆಧ್ಯಾತ್ಮಿಕ ಪ್ರೇಮದ ಮೇಲೆ ಆಧರಿಸಬೇಕು. ಇಷ್ಟಲ್ಲದೇ ಕಲಿಸುವ ಶಿಕ್ಷಕರಲ್ಲಿ ಕೂಡಾ ನೈತಿಕ ಮತ್ತು ಆಧ್ಯಾತ್ಮಿಕ ವರ್ತನೆ ಇರಬೇಕಾದದ್ದು ಅವಶ್ಯವು. ನಿನ್ನೆಯ ವಿದ್ಯಾರ್ಥಿಗಳು ಈ ಹೊತ್ತಿನ ಶಿಕ್ಷಕರು ಇರುವ ಕಾರಣ ಅವರಲ್ಲಿ ಬುಡದಿಂದ ಬೆಳೆದುನಿಂದ ದೋಷಗಳು ಈ ಹೊತ್ತಿನ ಅವರ ಶಿಕ್ಷಣದಲ್ಲಿ ಕಂಡು ಬರುತ್ತಿವೆ. ಶಿಕ್ಷಕರನ್ನು ದೊಡ್ಡ ನೀರಿನ ಸಂಗ್ರಹ ಅಥವಾ ಕೆರೆಗೆ ಹೋಲಿಸಬಹುದು. ವಿದ್ಯಾರ್ಥಿಗಳು ಆ ನೀರನ್ನು ಒಯ್ಯುವ ನಲ್ಲಿಗಳಂತೆ ಕೆರೆಯಲ್ಲಿ ಶುದ್ಧ ನೀರು ಇದ್ದರೆ, ವಿದ್ಯಾರ್ಥಿಗಳೂ ಶುದ್ಧ ನೀರನ್ನು ಪಡೆಯುವರು ನಮ್ಮ ಹೃದಯ ಸರೋವರದಲ್ಲಿ ಸತ್ಯ, ಧರ್ಮ, ಪ್ರೇಮಗಳೆಂಬ ಫಲವಿಲ್ಲದಿದ್ದರೆ ವಿದ್ಯಾರ್ಥಿಗಳು ಮತ್ತು ಮುಂದಿನ ಜನಾಂಗವು ನಮ್ಮಿಂದ ಈ ವಿಷಯಗಳನ್ನು ಪಡೆಯಲಾರದು.

—ಶ್ರೀ ಕರಸುಳ್ಳಿ ಪರಮೇಶ್ವರ ಶರ್ಮಾ.

(ಸತ್ಯಸಾಯಿ ಸುಧಾ ಪತ್ರಿಕೆಯಿಂದ)

ಹುಟ್ಟುಹಬ್ಬದ ದಿನದ ಆಭಾರ ಪತ್ರ

(ಗಾಂಧೀಜಿ)

ನನ್ನ ಹುಟ್ಟುಹಬ್ಬದ ಕುರಿತು ಅಸಂಖ್ಯ ಪತ್ರಗಳೂ, ತಾರುಗಳೂ ಬಂದಿವೆ. ನನ್ನ ವಿಷಯಕ ಜನರ ಪ್ರೇಮವನ್ನು ನಾನು ಯಾವ ರೀತಿಯಲ್ಲಿ ತೀರಿಸಲಿ? ಯಾವ ಶಬ್ದಗಳಲ್ಲಿ ಆಭಾರಮನ್ನಿಸಲಿ? ನಾನು ವಿವೇಕಪೂರ್ಣವಾದ ಅರ್ಥಾತ್ ಜ್ಞಾನಯುಕ್ತ ಶ್ರದ್ಧೆಯನ್ನೇ ಬಯಸುತ್ತೇನೆ. ಅವಿವೇಕಿಯಾದ ಅರ್ಥಾತ್ ಅಂಧ ಪ್ರೇಮಕ್ಕೆ ನಾನು ಅಂಜಿ ಓಡುತ್ತೇನೆ.

ಭಾರತದಲ್ಲಿಯ ದಾರಿದ್ರ್ಯದ ಕಹಿ ಅನುಭವ ನನಗೆ ಇರುವದರಿಂದ ಒಂದು ಪೈಸಾಕೂಡ ವ್ಯರ್ಥವಾಗಿ ಉಪಯೋಗಿಸುವದು ಕಂಡರೆ ಬಡವರ ಕಿಸೆಯನ್ನೇ ಕತ್ತರಿಸಿದೆ ಎಂಬಂತೆ ನನಗೆ ವೇದನೆ ಆಗುತ್ತದೆ. ನನಗೆ ತಾರುಗಳನ್ನು ಕಳಿಸಲಿಕ್ಕೆ ಎಷ್ಟೋ ರೂಪಾಯಿ ಖರ್ಚು ಮಾಡಿದ್ದಾರೆ. ಅದೇ ರೂಪಾಯಿ ಉಳಿತಾಯ ಮಾಡಿ ಅದರಿಂದ ಸ್ವದೇಶೀ ಖಾದೀ ಕೊಂಡು ಆ ದಿನ ಸತ್ಪಾತ್ರರಾದ ವಸ್ತ್ರಹೀನರಿಗೆ ಹಂಚಿದ್ದರೆ ಇಲ್ಲವೆ ಧಾನ್ಯ ಕೊಂಡು ನಿರಾಧಾರರಿಗಳಿಗೆ ಉಣ್ಣಿಸಿದ್ದರೆ ಅವರ ಹೃದಯಾಂತರಾಳದಿಂದ ಎಷ್ಟೊಂದು ಆಶೀರ್ವಾದ ಹೊರಡುತ್ತಿದ್ದವೊ! ಬಡವರ ಶಾಪದಿಂದ ಪ್ರಜೆಗಳು ನಾಶವಾಗಿದ್ದಾರೆ. ರಾಜರ ಕೋಟಿ ಜಾರಿವೆ-ಕೋಟ್ಯಾಧೀಶರು ಭಿಕ್ಷಾಧೀಶರಾಗಿದ್ದಾರೆ. ಕರ್ಮವು ಯಾರನ್ನು ಬಿಟ್ಟಿಲ್ಲ. ಬಡವರ ಆಶೀರ್ವಾದದಿಂದ ರಾಜರೂ ಪ್ರಜೆಗಳೂ ಉದ್ಧಾರ ಹೊಂದಿದ್ದಾರೆ.

ನನ್ನ ಮೇಲಿನ ಪರಿಶುದ್ಧವಾದ ಪ್ರೇಮವನ್ನು ಪ್ರದರ್ಶಿಸಲಿಕ್ಕೆ ಒಂದೇ ಒಂದು ಸರಳವಾದ ಮಾರ್ಗವಿದೆ—ನಾನು ಮಾಡುತ್ತಿರುವ ಕೆಲಸಗಳಲ್ಲಿ ನಾನು ಮಾಡುತ್ತಿರುವ ಸೇವಾಕಾರ್ಯದಲ್ಲಿ ಯಾವದು ಯಾ

(ಒಂಭತ್ತನೇ ಪುಟ ನೋಡಿರಿ)

Gram : VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water,
Telephone attached rooms.

ಒಳ್ಳಿದರ ಒಡನಿರ್ದ ಕಳ್ಳ...

ಭಗವತ್ಸ್ಮರಣೆಯಲ್ಲಿ ತ್ರುಟಿಯಾಗಬಾರದು. ನಾವು ಅನಾಸಕ್ತಿ ಅಥವಾ ನಿರಾಸಕ್ತಿಯಿಂದಿರುವುದರಿಂದಲೇ ತ್ರುಟಿಯಾಗುವುದು. ಭಗವತ್ಸ್ಮರಣೆಯೇನೂ ಕಠಿನ ಕಾರ್ಯವಲ್ಲ. ಮನಸ್ಸೊಂದಿದ್ದರೆ ಇದು ನಡೆದು ಹೋಗುತ್ತದೆ. ಮನಸ್ಸು ಮಂಗನಂತೆ ಅತ್ಯಂತ ಚಪಲವಾದರೂ ಅದರಲ್ಲೊಂದು ಒಳ್ಳೆಯ ಗುಣವಿದೆ. ನಾವು ಮನಸ್ಸಿಗೆ ಯೋಗ್ಯವಾದದೊಂದು ವಸ್ತುವನ್ನು ಅಂಟಿಸಿ ಬಿಟ್ಟರೆ, ಮನಸ್ಸು ಅದನ್ನು ಹಿಡಿದುಕೊಂಡರೆ, ಮತ್ತೆ ಅದನ್ನು ಸುಲಭವಾಗಿ ಬಿಟ್ಟುಕೊಡುವುದಿಲ್ಲ. ದುರಭ್ಯಾಸಗಳಲ್ಲಿ ಹೇಗೆ ಅಂಟುತ್ತದೆ! ಅನಾದಿ ಕಾಲದಿಂದಲೂ ಮಾನವನು ಈ ಪ್ರಪಂಚವನ್ನು ಮನಸ್ಸಿಗೆ ಹಚ್ಚಿಕೊಂಡು ಬಂದಿದ್ದಾನೆ. ಆದುದರಿಂದಲೇ ಪ್ರಾಪಂಚಿಕ ಜಂಜಾಟಗಳಿಂದ ಮನಸ್ಸು ಸುಲಭದಲ್ಲಿ ವಿಮುಖವಾಗುವುದಿಲ್ಲ.

ನಾವಿಂದು ಮಾಡಬೇಕಾದ ಕೆಲಸವೊಂದಿದೆ. ನಮ್ಮ ಮನಸ್ಸಿಗೆ ದೇವರ ಸ್ಮರಣೆಯನ್ನು ಗಟ್ಟಿಯಾಗಿ ಹಿಡಿಸಬೇಕು. ನಾವೊಮ್ಮೆ ಈ ಕಾರ್ಯದಲ್ಲಿ ಸಫಲರಾದೆವೆಂದರೆ, ಮುಂದೆ ಮನಸ್ಸು ಅದನ್ನೆಂದೂ ದೂರ ಮಾಡಲಾರದು. ನಮಗೆ ಆಸಕ್ತಿಯಿಲ್ಲದಿರುವುದರಿಂದಲೇ ನಾಮಸ್ಮರಣೆಯು ನಡೆಯುವುದಿಲ್ಲ. ನಾವೀಕಾರ್ಯದಲ್ಲಿ ಆಸಕ್ತಿಯನ್ನು ತೋರಿಸಿದೆವೆಂದರೆ, ಇದು ತನ್ನಿಂದ ತಾನೇ ನಡೆಯುತ್ತಲೇ ಬರುವುದು. ಮುಂದೆಂದೂ ತಪ್ಪಿಹೋಗಲಾರದು. ನಮಗೆ ಈ ಕೆಲಸವೇ ರಗಳೆಯೆನಿಸುವುದಾದರೆ, ಈ ರಗಳೆಗೆ ಯಾವನೇ ಭವರೋಗವೈದ್ಯನು ಮದ್ದುಕೊಡಲಾರನು. ತತ್ಪರತೆಯಿಂದ ನಾವು ಪ್ರಯತ್ನ ಮಾಡಬೇಕು; ಆಗಲೇ ಭಗವದನುಗ್ರಹದಿಂದ ಈ ಕಾರ್ಯವೂ ಕೊನೆಗೊಳ್ಳುವುದು ನಿಸ್ಸಂದೇಹ.

"ದೇವರ ನಾಮಸ್ಮರಣೆಯಲ್ಲಿ ಮನಸ್ಸೇ ನಾಟುವುದಿಲ್ಲ" ಎಂಬುದು ಹಲವರ ಅಂಬೋಣ. ಮನಸ್ಸು ನಾಟಿಸಿದರೆ ಮಾತ್ರ ನಾಟುವುದು ತಾನೆ? ನಮಗೆ ಉಳಿದೆಲ್ಲ ಕೆಲಸ ಕಾರ್ಯಗಳನ್ನು ಮಾಡಲು ಸಮಯಾವಕಾಶವಿದೆ; ಭಗವತ್ ಸ್ಮರಣೆಗೆ ಮಾತ್ರ ಪುರುಸೊತ್ತಿಲ್ಲ. ಇದೆಂತಹ ವಿರೋಧಾಭಾಸ! ನಮ್ಮ ದೈನಂದಿನ ಕಾರ್ಯಕ್ರಮವೊಂದನ್ನು ತಯಾರಿಸಬೇಕು. ಈ ಕಾರ್ಯಕ್ರಮವನ್ನು ನಿಯತವಾಗಿ ಅನುಸರಿಸಬೇಕು. ಇದರಲ್ಲಿ ಭಗವತ್ ಸ್ಮರಣೆಗೂ ಅವಕಾಶ ಬೇಕು. ಒಂದೆರಡು ತಿಂಗಳುಗಳ ಪ್ರಯತ್ನದಿಂದ ಈ ಕಾರ್ಯಕ್ರಮವು ನಮಗೆ ರಕ್ತಗತವಾಗುವುದು. ಆಗ ಅನಿರ್ವಚನೀಯ ಆನಂದವೂ ಲಭ್ಯವಾಗುವುದು. ಇಂತಹ ಯಾವುದೇ ಪ್ರಯತ್ನವನ್ನು ಮಾಡದೇನೇ ದೂರುವುದು ಒಂದು ಫ್ಯಾಷನ್ ಮಾತ್ರ!

ನಾವು ಮಲಿನರಿರಬಹುದು; ಪತಿತರಿರಬಹುದು. ಅಂತರಂಗ ಬಹಿರಂಗಗಳಲ್ಲಿ ಅಶುದ್ಧರಿರಬಹುದು. 'ಸಾಧು—ಸಂತರು' ಪರಿಶುದ್ಧರು. ಅವರು ನಮ್ಮನ್ನು ತಿರಸ್ಕಾರದಿಂದ ಕಾಣುವುದಿಲ್ಲ. ಪರುಷಸ್ಪರ್ಶದಿಂದ ಕಬ್ಬಿಣ ಬಂಗಾರವಾಗುವಂತೆ ಸಾಧು ಸಂಪರ್ಕದಿಂದ ನಾವೂ ಉತ್ತಮರಾದೇವು. ಬೆಂಕಿಯ ಸ್ವಭಾವವೇ ಸುಡುವುದು. ಕೊಳಕನ್ನು ಉರಿಗೆ ಸುರಿದರೂ ಅದು ಸುಟ್ಟು ಕೆಂಡವಾಗುವುದು. ಸಾಧು ಸಂತರನ್ನು ನಾವು ಕೂಡೋಣ. ಸಂತ ಸಂಪರ್ಕದಿಂದ ನಾವೂ ಸಂತರಾಗುತ್ತಾ ಬಂದೇವು. ಸಂತರ ಉದಾರ ನೀತಿಯ ಬಗೆ ನಮ್ಮಲ್ಲಿ ಸದ್ಭಾವನೆ ಮೂಡೀತು. 'ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ' ಎಂಬ ಸರ್ವಜ್ಞನ ವಚನದ ಸತ್ಯತೆ ನಮಗಾಗ ಮನವರಿಕೆಯಾದೀತು.

ಸಾಧು ಸಂತತನವು ಬಹಿರಂಗದಲ್ಲಿ ತೋರಿಬಂದರೆ ಪ್ರಯೋಜನವಿಲ್ಲ. ರಾವಣನು ಸ್ತ್ರೀವ್ಯಾಮೋಹದಿಂದ ಸನ್ಯಾಸಿಯ ವೇಷ ಧರಿಸಿ ಸೀತೆಯನ್ನು ಅಪಹರಿಸಿದನೆಂದು ಕೇಳಿದ್ದೇವೆ. ಇದು ಸನ್ಯಾಸಿತನವಲ್ಲ. ಸನ್ಯಾಸಿಯು ನಿಷ್ಕಾಮನು; ನಿರಹಂಕಾರಿ, ವಿಶ್ವಪ್ರೇಮಿ. ಸತ್ಯವೇ ಅವನ ನೀತಿ; ಕ್ಷಮೆ—ದಯೆಗಳೇ ಅವನ ಅಸ್ತ್ರಗಳು. ಇದು ಉಡಿಗೆ-ತೊಡಿಗೆಗಳಿಂದ ಬರುವುದಲ್ಲ; ಸನ್ಯಾಸತ್ವವು ಹೃದಯಶುದ್ಧಿಯಿಂದ ಮೂಡಿಬರಬೇಕು. ಅಂತರಂಗದಿಂದ ಅಂಕುರಿಸಬೇಕು. ಈ ಬಗೆಯ ಸನ್ಯಾಸಿಗಳ, ಸಾಧು ಸಂತರ ಸಂಪರ್ಕ ನಮಗಾಗುತ್ತ ಬಂದಂತೆ ನಮ್ಮ ಹೃದಯವೂ ಪವಿತ್ರವಾಗುತ್ತ ಬರುವುದು. ಉಪ್ಪು-ಮೆಣಸುಗಳ ನಡುವಿರುವ ಮಾವಿನ ಕಾಯಿ ರುಚಿಯಾದ ಉಪ್ಪಿನಕಾಯಿಯಾಗುವಂತೆ ನಾವು ಸಾಧುಸಂತರ ನಡುವಿರುವುದರಿಂದ ನಮ್ಮ ಹೃದಯವು ಪರಿಶುದ್ಧವಾಗುವುದು; ಮನಸ್ಸು ನಿಷ್ಕಲ್ಮಷವಾಗುವುದು.

"ಹರಿಯ ನಂಬದವರ ಸಂಗದಿಂದ ದೂರವಿರು; ಅವರ ಸಂಗದಿಂದ ಬುದ್ಧಿಗೆಡುವುದು; ಭಜನೆಯಲ್ಲಿ ಭಂಗವಾಗುವುದು" ಎಂದು ಮುಂತಾಗಿ ಸಂತ ಸೂರದಾಸರು ಹೇಳಿದ್ದಾರೆ. 'ಹರಿಯ ಕೊಂಡಾಡದ ನಾಲಗೆಯೇಕೆ?' ಎಂದು ಮುಂತಾಗಿ ಬನ್ನಹದ ದಾಸವರೇಣ್ಯರೂ ಹಾಡಿದ್ದಾರೆ. ಈ ಸಾಧು-ಸಂತರ ಮಾತು ಸತ್ಯಕ್ಕೆ ದೂರವಲ್ಲ. ಸಾಧು ಸಂತರ ಸಂಸರ್ಗದಿಂದ ನಾವು ಮನೋವಾಕ್ಕಾಯಗಳಲ್ಲಿ ಶುದ್ಧರಾಗುತ್ತೇವೆ.

'ಒಳ್ಳಿದರ ಒಡನಿರ್ದ ಕಳ್ಳನೊಳ್ಳಿದನಕ್ಕು' ಎಂದ ಸರ್ವಜ್ಞ ತನ್ನ ಅನುಭವವನ್ನೇ ಹಾಡಿದ್ದಾನೆ.

ಸತ್ಕಾರ್ಯ ನಿರತರೇ ಸಜ್ಜನರು

ಸಂತ ಸಮರ್ಥ ರಾಮದಾಸರು ಒಂದು ಮಧ್ಯಾಹ್ನ ಭಿಕ್ಷೆಗಾಗಿ ತಿರುಗಾಡುತ್ತ ಬಂದು ಮನೆಯ ಬಾಗಿಲಲ್ಲಿ ನಿಂತು "ಜಯ ಜಯ ರಘುವೀರ ಸಮರ್ಥ" ಎಂದು ಭಿಕ್ಷೆಯನ್ನು ಎದುರು ನೋಡುತ್ತಿದ್ದರು. ಆಗ ಮನೆಯ ಯಜಮಾನಿಯು ಮನೆಯೊಳಗೆ ನೆಲವೊರೆಸುವುದಕ್ಕಾಗಿ ಬಾಲ್ದಿಯಲ್ಲಿ ನೀರು ತುಂಬಿ ಒರಸು ಬಟ್ಟೆಯನ್ನು ಅದರಲ್ಲಿ ಅದ್ದುತ್ತಿದ್ದಳು. ಭಿಕ್ಷೆಗಾಗಿ ಬಂದ ಸಾಧುವಿನ ಮೇಲೆ ಆಕೆಗೆ ಅಪರಿಮಿತ ಕೋಪ ತಲೆದೋರಿತು. ರೋಷಾವೇಶದಿಂದ ಕೈಯಲ್ಲಿ ಆ ಬಟ್ಟೆ ಹಿಡಿದು ಕೊಂಡು ಆಕೆ ಹೊರ ಬಂದಳು. 'ತೆಗೆದುಕೋ ಭಿಕ್ಷೆ' ಎಂದು ಅದನ್ನು ಸಾಧುವಿನ ಮೇಲೆಸೆದು ಬಿಟ್ಟಳು.

ಒರಸು ಬಟ್ಟೆ ಸಮರ್ಥ ರಾಮದಾಸರ ದೇಹದ ಮೇಲೆ ಬಿತ್ತು. ಅದರಲ್ಲಿದ್ದ ಎಂಜಲ ಕಣಗಳೂ ಅವರ ಮೈಮೇಲೆ ಅಂಟಿಕೊಂಡವು. ಮಾನಿನಿಯಾಕೆಯ ಕೃತಿಯಿಂದ ರಾಮದಾಸರು ನೊಂದುಕೊಳ್ಳಲಿಲ್ಲ. ಅವರು ಆಕೆಯನ್ನು ಮನಃಪೂರ್ವಕ ಆಶೀರ್ವದಿಸಿದರು. ಆ ಬಟ್ಟೆಯನ್ನು ಎತ್ತಿಕೊಂಡು ಆ ಮನೆಯಂಗಳದಿಂದ ಹೊರಟು ಹೋದರು.

ಸಮರ್ಥರು ನೇರವಾಗಿ ನದಿ ಬಳಿಗೆ ಹೋದರು. ತಮ್ಮ ದೇಹವನ್ನು ತೊಳೆದುಕೊಂಡರು. ಬಟ್ಟೆಯನ್ನೂ ಒಗೆದರು. ನೆಟ್ಟಗೆ ತಮ್ಮ ಮಠಕ್ಕೆ ತೆರಳಿದರು. ಒಗೆದು ತಂದ ಒರಸು ಬಟ್ಟೆಯನ್ನು ಒಣಗಿಸಿದರು. ಅದು ಒಣಗಿದ ಮೇಲೆ ಅದರಿಂದ ಬತ್ತಿ ಮಾಡಿದರು. ತುಪ್ಪದಲ್ಲಿ ಅವನ್ನು ಅದ್ದಿದರು; ತಮ್ಮ ದೇವರ ಮುಂದೆ ಅದರಿಂದ ದೀಪ ಹಚ್ಚಿದರು. ದೀಪವುರಿಸುತ್ತ ಅವರು ಪ್ರಾರ್ಥಿಸಿದರು—"ದೇವಾಧಿದೇವನೆ, ಈ ದೀಪದಿಂದ ಇಲ್ಲಿನ ಕತ್ತಲೆಯು ದೂರವಾಗುವಂತೆ ಈ ಬಟ್ಟೆಯನ್ನು ಕೊಟ್ಟ ಮಾತಾಯಿಯ ಹೃದಯದಲ್ಲಿ ಮನೆಮಾಡಿದ ಕತ್ತಲೆಯನ್ನು ದೂರಮಾಡು. ಆಕೆಯ ಅಂತಃಕರಣದಲ್ಲಿ ಪ್ರಕಾಶಮಯ ಜ್ಯೋತಿಯು ಜಾಗೃತವಾಗಲಿ."

ದೇವರು ಸಮರ್ಥ ರಾಮದಾಸರ ಪ್ರಾರ್ಥನೆಯನ್ನು ಸ್ವೀಕರಿಸಿದನು. ಇವರ ಪ್ರಾರ್ಥನೆ ಮುಗಿದದ್ದೇ ತಡ ಅಲ್ಲಿ ಆ ನಾರಿಯ ಹೃದಯದಲ್ಲಿ ದಿವ್ಯ ಪ್ರಕಾಶ ಪ್ರಾದುರ್ಭವಿಸಿತು. ಆಕೆಯ ಸಕಲಾಪರಾಧಗಳ ಅಂಧಕಾರವು ಸಂಪೂರ್ಣ ಮಾಯವಾಯ್ತು. ತಾನು ಸಮರ್ಥರಿಗೆ ಮಾಡಿದ್ದು ಅಪಮಾನವೆಂಬುದಾಕೆಗೆ ಮನವರಿಕೆಯಾಯ್ತು; ತನ್ನ ಅಪಕೃತಿಯಿಂದ ಆಕೆ ಪಶ್ಚಾತ್ತಾಪ ದಗ್ಧಳಾದಳು. ತನ್ನ ಹೇಯಕಾರ್ಯಕ್ಕಾಗಿ ಸಮರ್ಥರಿಂದ ಕ್ಷಮೆ ಯಾಚಿಸಲು ಆಕೆ ಅವರ ಮಠಕ್ಕೆ ಓಡಿಯೋಡಿ ಬಂದಳು. ಸಮರ್ಥರು ಇನ್ನೂ ಭಗವಂತನ ಮೂರ್ತಿಯ ಮುಂದೆ ಕುಳಿತು ಧ್ಯಾನಮಗ್ನರಾಗಿದ್ದರು. ತುಪ್ಪದ ನಂದಾದೀಪ ಒಂದೇ ಸಮನೆ ಉರಿಯುತ್ತಿತ್ತು.

ಆ ಅಪರಾಧಿ ಮಾನಿನಿಯಾಕೆಯು ದೇವರಿಗೂ ಸಮರ್ಥರಿಗೂ ಏಕಕಾಲದಲ್ಲಿ ಹಣೆಚಾಚಿದಳು. ಇತ್ತ ಆಕೆಯು ತಪ್ಪನ್ನು ಕೇಳಿಕೊಳ್ಳುವುದಕ್ಕೆ ಮೊದಲೇ ಕ್ಷಮಿಸಿ ಬಿಟ್ಟಿದ್ದರು. ಈಗ ಆಕೆಯನ್ನು ಆಶೀರ್ವದಿಸಿ ಎಬ್ಬಿಸಿದರು. ಸಾಧು-ಸಂತರೆಂದರೆ ಮೂಗು ಮುರಿಯುತ್ತಿದ್ದ ಆಕೆ ಅಂದಿನಿಂದ ಭಕ್ತ ಪರಾಯಣೆಯಾದಳು.

ಮಹಾತ್ಮರು ತಮ್ಮ ಶತ್ರುವನ್ನು ಪ್ರೀತಿಸುತ್ತಾರೆ; ತಮಗೆ ಅಪರಾಧಗೈದವರನ್ನೂ ಉದ್ಧರಿಸುತ್ತಾರೆ. ಇದರಲ್ಲೇ ಅವರ ಮಹಾತ್ಮ್ಯ ಅಡಗಿದೆಯಲ್ಲವೆ?

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65—66ರ ಪತ್ರದಂತೆ ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ

ಮೆನೇಜರ್, ನವಯುಗ, ಉಡುಪಿ

— ಜನಮತ —

ಪ್ರಗತಿಶೀಲ ನಾಗರಿಕತೆಯೆ?

ತಂಗಡಗಿಯಲ್ಲಿ ಕೃಷ್ಣಾನದಿಯನ್ನು ದಾಟುತ್ತಿದ್ದ ದೋಣಿಯೊಂದು ಮುಗುಚಿ ಬಿದ್ದು ಹತ್ತಾರು ಜನರು (ಇವರಲ್ಲಿ ಹೆಚ್ಚಿನವರು ಮಹಿಳೆಯರು ಮತ್ತು ಮಕ್ಕಳು) ಜಲಸಮಾಧಿ ಹೊಂದಿದರು. ೨೫ ಜನ ಪ್ರಯಾಣಿಕರನ್ನು ಒಯ್ಯುವ ದೋಣಿಯಲ್ಲಿ ೧೦೬ ಜನ ಯಾತ್ರಿಕರು ಇದ್ದರು ಎಂದು ವರದಿ. ಮೈಸೂರು ರಾಜ್ಯದ ಕೋಲಾರ ಜಿಲ್ಲೆಯ ಚಿಂತಾಮಣಿ ತಾಲೂಕಿನ ಒಂದು ರಸ್ತೆಯಲ್ಲಿ ಮೂವತ್ತೇಳು ಜನ ಪ್ರಯಾಣಿಕರನ್ನು ಒಯ್ಯಲು ಅರ್ಹವಾದ ಒಂದು ಬಸ್ಸು ಟಿಕೇಟಿಲ್ಲದ ಮಕ್ಕಳನ್ನು ಬಿಟ್ಟು ೧೦೬ ಪ್ರಯಾಣಿಕರನ್ನು ಒಳಗಡೆ ಮತ್ತು ೩೦ ಜನರನ್ನು ಟಾಪ್‌ನ ಮೇಲೆ ಕುಳ್ಳಿರಿಸಿ 'ಗರುಡೋತ್ಸವ' ಮಾಡುತ್ತಿತ್ತೆಂದು ವರದಿ ಬಂದಿದೆ. ಬಸ್ಸುಗಳ ಫುಟ್ ಬೋರ್ಡಿನಲ್ಲಿ ನೇತಾಡಿಕೊಂಡು ಪ್ರಯಾಣ ಮಾಡುವುದು, ತಂತಿಕಂಬಕ್ಕೋ ವಿದ್ಯುತ್ ಕಂಬಕ್ಕೋ ಡಿಕ್ಕಿ ಹೊಡೆದು ಅಪಘಾತ ಸಂಭವಿಸುತ್ತಿರುವುದು ಇಂದು ದಿನನಿತ್ಯದ ಮಾತು. ದೇಶದಲ್ಲಿ ಪ್ರಗತಿ ಸಾಧಿಸುತ್ತ ಹೋಗುತ್ತಿದೆ; ಜನರಲ್ಲಿ ತಿಳುವಳಿಕೆ ಮೂಡುತ್ತಿದೆ ಎಂದು ಡಂಗುರ ಸಾರುವವರು ಈ ಘಟನೆಗಳಿಗೆ ಏನೆಂದು ವ್ಯಾಖ್ಯಾನ ಮಾಡುತ್ತಾರೆ? ಸಾರ್ವಜನಿಕ ಹಿತದೃಷ್ಟಿಯಿಂದ ಕಾನೂನು ಪಾಲಿಸಲು ತಪ್ಪಿ, ಅನುಕೂಲಸಿಂಧು ರೀತಿಗಾಗಿ ಕಾನೂನುಗಳನ್ನು ಮುರಿಯುವುದೇ ನಮ್ಮ ಪ್ರಗತಿಯೆ? ಒಬ್ಬ ರಾವಣನಿಂದಾಗಿ ಲಂಕೆ ಸರ್ವನಾಶವಾಯಿತು. ಈ ಸಾರಿಗೆ ವಾಹನಗಳ ನಿಯಂತ್ರಕರು ಕಾನೂನನ್ನೇ ತಮ್ಮ ಕೈಗಳಿಗೆ ತೆಗೆದುಕೊಳ್ಳುತ್ತಾರೆ; ಅಥವಾ ಪ್ರಯಾಣಿಕರೇ ಆ ರೀತಿ ಮಾಡಲೂ ಬಹುದು. ಈ ಬಗ್ಗೆ ಇಕ್ಕಡೆಯವರೂ ಧಾರಾಳತನ ತೋರಿದರೆ, ವಾಹನಾರೋಹಕರಿಗೆ ಮೊದಲು ಅಪಘಾತ ವಿಮಾ ವ್ಯವಸ್ಥೆಯಾಗಬೇಕಾದೀತೋ! ಜನರ ಮನೋಧರ್ಮ ಈ ರೀತಿಯಲ್ಲಿ ಬದಲಾಗದೆ ಹೋದರೆ, ನಾವು ನಾಗರಿಕರು ಹೇಗಾಗುತ್ತೇವೆ ಎಂಬುದೇ ಅರಿಯದಂತಾಗಿದೆ.

—ಕೃಷ್ಣ ಕುಮಾರ.

ಹುಟ್ಟುಹಬ್ಬದ ದಿನದ ಆಭಾರ ಪತ್ರ

(ಏಳನೇ ಪುಟದಿಂದ)

ರಿಗೆ ಸರಿ ಎನಿಸುತ್ತದೆಯೋ ಅವರೂ ಅದರಂತೆ ಮಾಡಹತ್ತಬೇಕು. ಯಾವನೊಬ್ಬ ಬೇಡಿದ್ದನ್ನೇ ಅವನಿಗೆ ಕೊಡುವುದು, ಅವನು ಮಾಡುವಂತೆಯೇ ತಾನೂ ಮಾಡುವುದು, ಇದಕ್ಕಿಂತಲೂ ಹೆಚ್ಚಿನ ಸನ್ಮಾನ ಬೇರೊಂದಿಲ್ಲ. ಅಂದು ಎಷ್ಟೋ ಭಗಿನಿಯರು ನೂತರು, ನೂಲುವ ವ್ರತ ತೊಟ್ಟರು. ಎಷ್ಟೋ ಜನರು ಅಂತ್ಯಜರ ಸೇವೆ ಮಾಡುವ ಪ್ರತಿಜ್ಞೆ ಕೈಕೊಂಡರು. ಈ ಪ್ರಕಾರವಾಗಿ ಹುಟ್ಟುಹಬ್ಬವನ್ನು ಆಚರಿಸುವುದೇ ಶುದ್ಧ ಪ್ರೇಮದ ಲಕ್ಷಣ ಎಂದು ನಾನು ತಿಳಿಯುತ್ತೇನೆ. ಮತ್ತು ಇಂಥ ಹುಟ್ಟುಹಬ್ಬ ಪ್ರತಿದಿನವೂ ಬರಲಿ, ಪ್ರತಿದಿನ ಅಸಂಖ್ಯ ಸ್ತ್ರೀಪುರುಷರು ಇಂಥ ವಿವಿಧ ಪ್ರತಿಜ್ಞೆಗಳನ್ನು ತೊಡಲಿ ಎಂದೇ ನಾನು ಬಯಸುತ್ತೇನೆ.

ಎಲ್ಲರೂ ನನಗೆ ದೀರ್ಘಾಯುಷ್ಯ ಬಯಸಿದ್ದಾರೆ. ನಾನು ಸತ್ಯವನ್ನೇ ಶೋಧಿಸುತ್ತ, ಸತ್ಯವನ್ನೇ ಆಚರಿಸುತ್ತ ಮತ್ತು ಸತ್ಯದ್ದೇ ಚಿಂತನ ಮಾಡುತ್ತ ಸಾಯಬಯಸುತ್ತೇನೆ. ಈ ನನ್ನ ಅಂತಃಕರಣದ ಬಯಕೆಯು ಸಫಲವಾಗಲೆಂದು ಹರಸಿರಿ ಎಂಬುದಾಗಿ ನಾನು ಪ್ರಜೆಗಳ ಹತ್ತಿರ ಬೇಡಿಕೊಳ್ಳುತ್ತೇನೆ.

ಗುಪ್ತ–ತ್ರಿಪಾಠಿ ಜಿಂದಾಬಾದ್

ಸಿಂಡಿಕೇಟ್‌ನ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ೧೯೭೦ರ ನಂತರ ಆ ದಳದ ಅಧ್ಯಕ್ಷರಾಗಿ ಮುಂದುವರಿಯಲು ನಿರಾಕರಿಸಿದ್ದಾರೆ. ಪ್ರತ್ಯಕ್ಷ ರಾಜ್ಯಕೀಯದಿಂದಲೇ ನಿವೃತ್ತರಾಗಲು ಬಯಸುವ ಅವರನ್ನು ಒತ್ತಾಯ ಮಾಡುವುದು ಸಾಧ್ಯವಿಲ್ಲ. ಅವರ ಸ್ಥಾನಕ್ಕೆ ಉತ್ತರ ಪ್ರದೇಶದ ಶ್ರೀ ಚಂದ್ರಭಾನು ಗುಪ್ತರ ಹೆಸರು ಕೇಳುತ್ತಿದೆ.

ಇಂಡಿಕೇಟಿನ ಅಧ್ಯಕ್ಷಗಿರಿಯನ್ನೂ ಹೊತ್ತುಕೊಂಡ ಭಾರತದ ಸಂರಕ್ಷಣಾ ಸಚಿವ ಶ್ರೀ ಜಗಜ್ಜೀವನ ರಾಮರ ಅಧ್ಯಕ್ಷತೆಯ ಅವಧಿಯೂ ಇದೇ ಸಮಯಕ್ಕೆ ಮುಗಿಯಲಿದ್ದು ಅವರೂ ಅದನ್ನು ಬಿಟ್ಟುಕೊಡುವ ಹವಣಿಕೆಯಲ್ಲಿದ್ದಾರೆ. ಶ್ರೀ ರಾಮರು ಯಾವುದಾದರೊಂದು ಪದಕ್ಕೆ ರಾಜೀನಾಮೆ ನೀಡಬೇಕೆಂದು ಯುವ ತುರುಕ್ಕರು ಒತ್ತಾಯ ಮಾಡಿದ್ದೇ ಮಾಡಿದ್ದು. ಶ್ರೀಮತಿ ಗಾಂಧಿಯವರಾಗಲೀ ಶ್ರೀ ಜಗಜ್ಜೀವನರಾಮರಾಗಲೀ ಜಪ್ಪೆನ್ನಲಿಲ್ಲ. ಯುವ ತುರುಕ್ಕರ ಮಾತಿಗೆ ಕಾಸಿನಷ್ಟೂ ಬೆಲೆ ಕೊಡುವವರಲ್ಲವೆಂದವರಿಬ್ಬರೂ ತೋರಿಸಿಕೊಟ್ಟು ಅವರ ಬಾಯಿ ಕಟ್ಟಿದ್ದಾರೆ.

ಈಗ ಯುವ ತುರುಕ್ಕರಿಗೆ ಬೊಬ್ಬಿಟ್ಟು ಸಾಕಾಯಿತೆಂದು ತೋರುತ್ತದೆ. ಅವರು ಈಗ ಮೌನರಾಗಿದ್ದಾರೆ. ಅವರ ಮೇಲೆಯೂ ತಾವು ವಿಜಯ ಸಾಧಿಸಿ ತಮ್ಮ ಸಾರ್ವಭೌಮತೆಯನ್ನು ತೋರಿಸಿದೆವೆಂದು ಹಿಗ್ಗಿದವರೀಗ ಮುಂದಿನ ಅಧ್ಯಕ್ಷರ ಆಯ್ಕೆಯ ಬಗ್ಗೆ ಯೋಚಿಸುತ್ತಾರೆ. ಪ್ರಾಯಃ ಪ್ರಧಾನಿಯ ಸ್ವಂತ ಜಿಲ್ಲೆಯ ಶ್ರೀ ಕಮಲಾಪತಿ ತ್ರಿಪಾಠಿಯವರು ಆ ಹುದ್ದೆಗೇರುವಂತೆ ಅವರ ಮನವೊಲಿಸಲಾಗುತ್ತಿದೆ. ಉತ್ತರ ಪ್ರದೇಶದಲ್ಲಿ ಆಡಿದ ಇಂದಿರಾ ಡೊಂಬರಾಟವನ್ನು ಮುಖ್ಯಮಂತ್ರಿ ಚರಣಸಿಂಗರು ಸಂಪೂರ್ಣ ಅಸಫಲಗೊಳಿಸಿದ್ದರಿಂದ ತೀರಾ ನಿರಾಶರಾದ ಕಮಲಾಪತಿ ತ್ರಿಪಾಠಿಯವರು ಇದರಿಂದಾದರೂ ತೃಪ್ತಿಪಡಬೇಕು.

ಆಗ, ೧೯೭೨ರ ಚುನಾವಣೆಗಳಿಗೊಂದು ಸತ್ವ ಬರುತ್ತದೆ. ಶ್ರೀ ಗುಪ್ತ ಶ್ರೀ ತ್ರಿಪಾಠಿಗಳು ಪರಸ್ಪರ ವಿರೋಧಿ ಶಕ್ತಿಗಳ ಪ್ರತೀಕಗಳು. ಅವರು ಕಾಂಗ್ರೆಸ್ಸಿನ ಎರಡು ತುಕಡಿಗಳ ಅಧ್ಯಕ್ಷರಾಗಿ ಚುನಾವಣಾ ಪ್ರಚಾರಕ್ಕಿಳಿದರೆ, ಅದೊಂದು ಮಜಾ ಆಗುತ್ತದೆ. ಶ್ರೀ ಗುಪ್ತರಿಗೆ ನೈತಿಕ ಬಲವೂ ಶ್ರೀ ತ್ರಿಪಾಠಿಗಳಿಗೆ ಅಧಿಕಾರ ಬಲವೂ ಅವಲಂಬನವಾಗುತ್ತದೆ.

—ಶಾಂತಾರಾಮ ಆಚಾರ್ಯ.

ಗುರುಕುಲ–ಉದ್ಘಾಟನೆ

ಉಡುಪಿಯ ಎಂ. ಜಿ. ಎಂ. ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಹೊಸತಾಗಿ ನಿರ್ಮಿಸಲಾದ "ಗುರುಕುಲ" ಎಂಬ ವಸತಿ ಸ್ಥಾನವನ್ನು ಡಾ. ಕೆ. ಶಿವರಾಮ ಕಾರಂತರು ತಾ. ೭ರಂದು ಉದ್ಘಾಟಿಸುತ್ತಾ ಮನೋಜ್ಞ ಪ್ರಸಂಗದಲ್ಲಿ ವ್ಯವಹರಿಸುತ್ತಿರುವ ವಿದ್ಯಾರ್ಥಿಗಳು ತಮ್ಮ ಬಿಡುವಿನ ವೇಳೆಯನ್ನು ತಮ್ಮ ಕುತೂಹಲಕ್ಕಾಗಿ ಉಪಯೋಗಿಸಿಕೊಂಡರೆ ಶಿಕ್ಷಿತ ವಿದ್ಯಾರ್ಥಿಗಳ ವಿಕಾಸಕ್ಕೆ ಯೋಗ್ಯವಾಗುವುದೆಂದೂ ನಾಲ್ವಾರು ವಿದ್ಯಾರ್ಥಿಗಳಿಗೆ ವಾಸಯೋಗ್ಯವಾದ ಹಿಂದಿನ ನಗರ ಮಠದ ಜಗಲಿ ಗುರುಕುಲ ಗೌರವ ಸ್ಥಾನದಲ್ಲಿದ್ದರೆ ಇಂದು ಉಪಾಧ್ಯಾಯರಿಗೆ ಬೈಗಳ ಸ್ಥಾನ ಸಿಗುತ್ತಿದೆಯೆಂದೂ ಇತರರು ಉಪಾಧ್ಯಾಯರ ಸ್ಥಾನವನ್ನು ಎತ್ತಿಸಲಾರರೆಂದೂ ಅವರ ಪರಿಶ್ರಮ ಆಸಕ್ತಿ ಜ್ಞಾನದ ಸಂಪತ್ತು ಮೊದಲಾದವೇ ಅವರಿಗೆ ರಕ್ಷೆಯಾಗಬಲ್ಲವೆಂದೂ ಹೇಳಿದರು. ಅಲ್ಲದೆ ಈ ಕಾಲೇಜಿನ ಉನ್ನತ ಮಟ್ಟಕ್ಕಾಗಿ ಸಂತೋಷ ವ್ಯಕ್ತಪಡಿಸಿದರು.

ಶ್ರೀ ಟಿ. ರಮೇಶ ಪೈ ಅವರು ಮಕ್ಕಳು ಮತ್ತು ಶಿಕ್ಷಕರು ಕಲಿಸುವುದಕ್ಕೆ ಕೊಡುವ ಪ್ರೇಮ ಮಹತ್ವವನ್ನು ಕಲಿಯುವುದಕ್ಕೂ ಕೊಡಬೇಕೆಂದರು.

ಆರಂಭದಲ್ಲಿ ಕಾಲೇಜಿನ ಕರೆಸ್ಪೊಂಡೆಂಟ್ ಶ್ರೀ ಪಿ. ಶ್ರೀಪತಿ ಆಚಾರ್ಯರು ಸ್ವಾಗತಿಸುತ್ತಾ ಕಾರಂತರು ಮಹಾ ಮಹೋಪಾಧ್ಯಾಯರೆಂದು ಹೇಳಿದರು. ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರು ಧನ್ಯವಾದವನ್ನರ್ಪಿಸಿದರು.

ಯುವಜನ ಮಂಡಲಿಯ ಸ್ಥಾಪನೆ

ದೇಲಂಪಾಡಿ ಸರಕಾರೀ ಆಸ್ಪತ್ರೆಯ ವಠಾರದಲ್ಲಿ ಸಾರ್ವಜನಿಕ ಸಭೆಯೊಂದು ಇತ್ತೀಚೆಗೆ (೬-೯-೭೦) ದಾ| ದೇಲಂಪಾಡಿ ಮಹಾಲಿಂಗೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ ಡಿ. ನಾರಾಯಣ ಗೌಡರು ಸ್ವಾಗತಿಸಿದರು. ಶ್ರೀ ವೆಂಕಪ್ಪ ಬಾಂಗೇಪ್ಪೂರರವರು ಯುವಕಮಂಡಳಿ ಸ್ಥಾಪಿಸುವ ಉದ್ದೇಶ ಹಾಗೂ ಮಹತ್ವದ ಕುರಿತು ಮಂಡಿಸಿ ಮಾತಾಡಿದರು. ಡಾ| ವಿ. ಮಹಮ್ಮದ್, ಶ್ರೀ ಕೇಶವ ಸರಳಾಯ, ಶ್ರೀ ಚಂದ್ರಶೇಖರ ಭಟ್ಟರವರು ಮಾತನಾಡಿದರು. ಶ್ರೀ ಕೆ. ಯಲ್. ಕೆಲ್ಲಾರಾಯ, ಡಾ| ವಿ. ವಿ. ಬನಾರಿ, ಮತ್ತು ಶ್ರೀ ಕೆ. ಕುಮಾರಪ್ಪ ಪೂಜಾರಿಯವರು ಸೂಕ್ತ ಸಲಹೆಗಳನ್ನಿತ್ತರು. ಯುವಕ ಮಂಡಳಿಯನ್ನು ಸ್ಥಾಪಿಸುವ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿದ ಬಳಿಕ ಡಾ| ವಿ. ಮಹಮ್ಮದರವರು ಧನ್ಯವಾದವಿತ್ತರು.

ಮಹಾಪುರುಷರ ವಾಣಿಗಳು

ಸ್ವಬುದ್ಧಿಗನುಸಾರವಾಗಿ ಸಾಧನೆಯನ್ನು ಮಾಡುವುದರ ಹೊರತಾಗಿ ಸಾಧಕನಿಗೆ ಬೇರೆ ಗತ್ಯಂತರವಿಲ್ಲ. ಆದರೆ ಕಟ್ಟಕಡೆಗೆ ಈಶ್ವರನಿಗೆ ಶರಣು ಹೋಗದಿದ್ದರೆ ಸಾಧನೆಯು ಪೂರ್ಣತೆಗಾಗುವ ಸಂಭವವಿಲ್ಲ.

o o o

ಒಳ್ಳೇ ಮನುಷ್ಯರು ಪ್ರೇಮದಿಂದ ಆಜ್ಞಾ ಪಾಲನೆ ಮಾಡುತ್ತಾರೆ. ದುಷ್ಟರು ಹೆದರಿಕೆಯಿಂದ.

o o o

ಸ್ತ್ರೀಯರ ಉನ್ನತಿ ಅಥವಾ ಅವನತಿಯ ಮೇಲಿಂದ ರಾಷ್ಟ್ರದ ಉನ್ನತಿ ಅಥವಾ ಅವನತಿಯು ನಿರ್ಧಾರವಾಗುತ್ತದೆ.

o o o

ಶ್ರಮದ ಅಂತ್ಯವೇ ವಿಶ್ರಾಂತಿ.

o o o

ತರುಣರಿಗೆ ಶಾಲೀನತೆ ಭೂಷಣವಾಗಿದೆ; ವೃದ್ಧರಿಗೆ ದೂಷಣವಾಗಿದೆ.

o o o

ಸುಂದರತೆಯು ಪ್ರಪಂಚದ ಯೋಗ್ಯತಾ ಪತ್ರಗಳಿಗಿಂತ ಹೆಚ್ಚಿನದಾಗಿರುತ್ತದೆ.

o o o

ತನ್ನ ಶಕ್ತಿಗಳನ್ನು ಕೆಲಸದಲ್ಲಿ ತೊಡಗಿಸುವುದರಿಂದಲೇ ಆನಂದ ಸಿಗುತ್ತದೆ.

o o o

ನ್ಯಾಯ ಸತ್ತನೇ ವಿಜಯವಾದ ಅನಂತರ, ಅನ್ಯಾಯತ್ತ ದುಃಖವಾಗಿರುತ್ತದೆ.

o o o

ಯಾವ ಮೂರ್ಖನು ತನ್ನ ಮೂರ್ಖತೆಯನ್ನು ತಿಳಿದುಕೊಳ್ಳುತ್ತಾನೆಯೋ ಆ ವನು ಮೆಲ್ಲ ಮೆಲ್ಲನೆ ಕಲಿತುಕೊಳ್ಳುತ್ತಾನೆ. ಆದರೆ ಯಾವನು ತಾನು ಬುದ್ಧಿವಂತನೆಂದು ತಿಳಿಯುತ್ತಾನೆಯೋ ಅಂಥವನ ರೋಗ ಅಸಾಧ್ಯವಾಗುತ್ತದೆ.

o o o

ಮಾನನೀಯ ವ್ಯಕ್ತಿಗೆ ಮಹತ್ವವಿದೆ. ಮೇಲೆ ಮೇಲೆ ತೋರಿಸಿಕೊಳ್ಳುವದಕ್ಕಲ್ಲ.

o o o

ಪ್ರಾಪ್ತವ್ಯ ಪ್ರೇರಣೆ, ಮತ್ತು ಕರ್ತವ್ಯ ಪ್ರೇರಣೆಗಳು ಈ ಎರಡು ಪ್ರೇರಣೆಗಳು ಮನುಷ್ಯನಿಗೆ ಉಪಲಬ್ಧ ಇವೆ. ಕರ್ತವ್ಯ ನಿಶ್ಚಯಕ್ಕೆ ಸಹಾಯವಾಗಿ ಮತ್ತು ಪ್ರಾಪ್ತವ್ಯ ವಿಶ್ವಾಸಕ್ಕೆ ಸಲುವಾಗಿ ಹೀಗೆ ಅವುಗಳ ವ್ಯವಸ್ಥೆಯನ್ನು ಮಾಡಬರುತ್ತದೆ. ಈ ಎರಡೂ ವರ್ಜಿತ ಸಹಜ ಪ್ರೇರಣೆಯೇ ಜ್ಞಾನೀ ಪುರುಷನ ಅಧಿಕಾರ.

o o o

ಕನ್ನಡ ಪುಸ್ತಕಗಳು

ಹೈಸ್ಕೂಲ್, ಹಯರ್ ಸೆಕೆಂಡರಿ ಸ್ಕೂಲ್, ಕಾಲೇಜು ಮೊದಲಾದುವುಗಳ ಯಾವತ್ತೂ ವಾಚನ ಭಂಡಾರಗಳಿಗೆ ಉಪಯುಕ್ತವಾದ ಕರ್ನಾಟಕದ ವಿವಿಧ ಲೇಖಕರ ಹಾಗೂ ಪ್ರಕಾಶಕರ ಕತೆ, ಕಾದಂಬರಿ, ಕವನ, ವಿಮರ್ಶೆ ಇತ್ಯಾದಿ

ಕನ್ನಡ ಪುಸ್ತಕಗಳು

ನಮ್ಮಲ್ಲಿ ದೊರೆಯುತ್ತವೆ.

ವಿವರವಾದ ಕೆಟಲಾಗಿಗೂ ವಿಶೇಷ ಸವಲತ್ತುಗಳಿಗೂ ಬರೆಯಿರಿ:

ನವಭಾರತ ಪುಸ್ತಕ ಭಂಡಾರ

ರಿಜಿಸ್ಟರ್ಡ್ ಪಬ್ಲಿಷರ್ಸ್,

ಪಾಲುಕೋಟೆ, ಉಡುಪಿ, ದ. ಕ.

ಶೈಕ್ಷಣಿಕ ಸೌಲಭ್ಯದ ಎರಡು ದಶಕಗಳು

ಸ್ವಾತಂತ್ರ್ಯಾನಂತರ ಭಾರತದಲ್ಲಿ ಬಹುಮುಖ ಪ್ರಗತಿಯನ್ನು ಸಾಧಿಸುವ ಉದ್ದೇಶದಿಂದ ಕೈಗೊಂಡ ಪಂಚವಾರ್ಷಿಕ ಯೋಜನೆಗಳಲ್ಲಿ ಶೈಕ್ಷಣಿಕ ಸೌಲಭ್ಯಗಳು ಗಣನೀಯ ಪ್ರಮಾಣದಲ್ಲಿ ಹೆಚ್ಚಿವೆ. 1951ರಿಂದೀಚೆಗೆ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಗಳ, ವರ್ಷಕ್ಕೆ ಸರಾಸರಿ ಶೇಕಡಾ 7ರಷ್ಟು ಹೆಚ್ಚುತ್ತಿವೆ. 1951ರಲ್ಲಿ ಇದ್ದ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ 1969ರ ವೇಳೆಗೆ ನಾಲ್ಕರಷ್ಟು ಹೆಚ್ಚಿದೆ. 1950ರಲ್ಲಿ ವಿದ್ಯಾರ್ಥಿಗಳ ಪ್ರವೇಶಸಂಖ್ಯೆ 25·5 ದಶಲಕ್ಷಗಳಷ್ಟಿದ್ದು ಇದು 1965ರ ವೇಳೆಗೆ 70.7 ದಶಲಕ್ಷಗಳಿಗೆ ಏರಿ 1969—70ರಲ್ಲಿ 81 ದಶಲಕ್ಷಗಳಷ್ಟಾಗಿದೆ. ವಿಶ್ವವಿದ್ಯಾನಿಲಯ ಮಟ್ಟದಲ್ಲಿ, ವೃತ್ತಿಶಿಕ್ಷಣ ಹಾಗೂ ಇತರ ವಿಶೇಷ ಶಿಕ್ಷಣದಲ್ಲಿ ಈ ಹೆಚ್ಚಳ ಶೇಕಡಾ 17.8ರಷ್ಟಿದೆ.

ಸ್ವಾತಂತ್ರ್ಯಪೂರ್ವದಲ್ಲಿ ಶಿಕ್ಷಣ ಸೌಲಭ್ಯಗಳು ಕೆಲವು ವರ್ಗಗಳಿಗೆ ಲಭಿಸಿರಲಿಲ್ಲ. ಸ್ವಾತಂತ್ರ್ಯಾನಂತರ ಶಿಕ್ಷಣ ಎಲ್ಲಾ ಜನರಿಗೆ ಅಗತ್ಯವಾದುದರಿಂದ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶ ಸಂಖ್ಯೆ ಈ ಭಾರಿ ಪ್ರಮಾಣದಲ್ಲಿ ವರ್ಷ ವರ್ಷ ಏರುತ್ತಲೇ ಇದೆ. ನಮ್ಮ ಪ್ರಜಾಪ್ರಭುತ್ವ ಸರ್ಕಾರವೂ ಈ ಶಿಕ್ಷಣ ಜನಪ್ರಿಯತೆಗೆ ಕಾರಣವಾಗಿದೆ.

1957ರಿಂದ ಶಿಕ್ಷಣ ಕ್ಷೇತ್ರಕ್ಕಾಗಿ ವೆಚ್ಚಮಾಡಿದ ಹಣದ ಮೊತ್ತ 144 ಕೋಟಿ ರೂ.ಗಳಿಂದ 1968-69ರ ವೇಳೆಗೆ 850 ಕೋಟಿ ರೂ.ಗಳಿಗೆ ಏರಿದೆ. ಮೊದಲನೇ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ (1966-67) ಕ್ರಮವಾಗಿ 152·9 ಕೋಟಿ, 273·0 ಕೋಟಿ, 588·7 ಕೋಟಿ ಮತ್ತು 1006·8 ಕೋಟಿ ರೂ.ಗಳನ್ನು ವೆಚ್ಚಮಾಡಲಾಗಿದೆ. ಇದರಿಂದಾಗ 1968-69ರಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿದ ಹಣ 1950—58ರಲ್ಲಿ ವೆಚ್ಚಮಾಡಿದ ಹಣಕ್ಕಿಂತ 6ರಷ್ಟು ಏರಿದೆ.

ಶಿಕ್ಷಣ ಸೌಲಭ್ಯಗಳು ದೇಶದಲ್ಲಿ ಸುಧಾರಿಸುತ್ತಿದ್ದರೂ ಮೂಲ ಶಿಕ್ಷಣ ಸೌಲಭ್ಯ ಪೂರ್ಣವಾಗಿ ವಿಸ್ತರಣಗೊಂಡಿಲ್ಲ. ಇದು ದುರದೃಷ್ಟಕರ ಸಂಗತಿ. ಬಾಲಕಿಯರ ಮೂಲ ಶಿಕ್ಷಣ ಇನ್ನೂ ಅಭಿವೃದ್ಧಿ ಹೊಂದಿರಬೇಕು. ದೇಶದ ಮುಂದಿನ ಮಹಿಳೆಯರಾಗಲಿರುವ ಇಂದಿನ ಬಾಲಕಿಯರಿಗೆ ಮೂಲ ಶಿಕ್ಷಣವನ್ನು ನೀಡುವುದು ದೇಶದ ದೃಷ್ಟಿಯಿಂದ ಅಗತ್ಯವಾಗಿದೆ. ಶಿಕ್ಷಣ ವಿಸ್ತರಣೆಯೊಂದಿಗೆ ಅದರ ಗುಣಾಂಶ ಹೆಚ್ಚಬೇಕು. ಉತ್ತಮ ಶಿಕ್ಷಣ ನೀಡುವುದಕ್ಕಾಗಿ ಅರ್ಹ ಶಿಕ್ಷಕರನ್ನು ನೇಮಕ ಮಾಡಿದರೆ ಸಮಸ್ಯೆಯನ್ನು ನಿವಾರಿಸಬಹುದು. ಶಿಕ್ಷಣದಲ್ಲಿನ ಪಠ್ಯಪುಸ್ತಕಗಳನ್ನು ಪುನರ್ವಿಮರ್ಶಿಸಿ ಅವುಗಳಲ್ಲಿ ರಾಷ್ಟ್ರೀಯ ಐಕ್ಯತೆ ಕುರಿತ ವಿಷಯ ತುಂಬಲು ಈಗಾಗಲೇ ಕೆಲವು ರಾಜ್ಯಗಳು ಕ್ರಮವಹಿಸುತ್ತಿವೆ. ರಜಾ ವೇಳೆಯ ಶಿಬಿರ, ವೃತ್ತಿ ಮಾರ್ಗದರ್ಶನ ಸೇವೆ ಬೋಧನ ಪದ್ಧತಿ ಕಾರ್ಯಕ್ರಮ ಮತ್ತು ವಿಜ್ಞಾನಶಿಕ್ಷಣ ಹಾಗೂ ಸಂಶೋಧನೆ ಇವುಗಳಿಗೂ ಆದ್ಯತೆಯನ್ನು ನೀಡಲಾಗುತ್ತಿದೆ.

ನಾಲ್ಕನೆ ಯೋಜನೆಯಲ್ಲಿ ಅಂದರೆ 1964—74ರಲ್ಲಿ ಪಠ್ಯಪುಸ್ತಕಗಳನ್ನು ಪರಿಶೀಲಿಸುವುದು, ಶಿಕ್ಷಕರ ತರಬೇತಿ, ಶಿಕ್ಷಣ ವಿಧಾನದಲ್ಲಿ ಸಂಶೋಧನೆ ನಡೆಸುವುದು ಇವುಗಳಿಗೆ ಉತ್ತೇಜನ ನೀಡಲಾಗುವುದು. ಈ ಶಿಕ್ಷಣ ಕಾರ್ಯಕ್ರಮ ದೇಶದ ಸಾಮಾಜಿಕ ಮತ್ತು ಆರ್ಥಿಕ ಗುರಿಗಳಿಗೆ ಅನುಗುಣವಾಗುವುವು. ನಾಲ್ಕನೆ ಯೋಜನೆಯಲ್ಲಿ 822. 66ಕೋಟಿ ರೂ.ಗಳನ್ನು ಮಂಜೂರು ಮಾಡಲಾಗಿದೆ.

ಮೂಲ ಶಿಕ್ಷಣಕ್ಕಾಗಿ—231. 74; ಸೆಕೆಂಡರಿ ಶಿಕ್ಷಣಕ್ಕಾಗಿ-118·32; ವಿಶ್ವವಿದ್ಯಾನಿಲಯ ಶಿಕ್ಷಣಕ್ಕಾಗಿ- 183·52; ಶಿಕ್ಷಣ ತರಬೇತಿಗಾಗಿ-21. 17; ಸಾರ್ವಜನಿಕ ಶಿಕ್ಷಣಕ್ಕಾಗಿ-8. 30; ಮತ್ತಿತರ ಕಾರ್ಯಕ್ರಮಗಳಿಗಾಗಿ - 118·75; ಸಾಂಸ್ಕೃತಿಕ ಶಿಕ್ಷಣಕ್ಕಾಗಿ—12.89 ತಾಂತ್ರಿಕ ಶಿಕ್ಷಣಕ್ಕಾಗಿ-125. 37.ಕೋಟಿ ರೂ.ಗಳನ್ನು ವೆಚ್ಚಮಾಡಲಾಗುವುದು. ಮೂಲಶಿಕ್ಷಣಕ್ಕಾಗಿ ಹಾಗೂ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಆದ್ಯತೆ ನೀಡಲಾಗುತ್ತಿದೆ. ದೇಶದ ಹಿಂದುಳಿದ ಪ್ರದೇಶಗಳ ಜನತೆಗೂ ಶಿಕ್ಷಣ ಸೌಲಭ್ಯಗಳನ್ನು ವಿಸ್ತರಿಸಲಾಗುವುದು.

ಇತಿಹಾಸಕ್ಕಿಂತ ಚರಿತ್ರೆಯು, ಸತ್ಯದ ಕಡೆ ಸಮೀಪದಲ್ಲಿರುತ್ತದೆ.

o o o

ಪ್ರೇಮದ ಸ್ಪರ್ಶ ಬಲದಿಂದ ಪ್ರತಿಯೊಬ್ಬರು ಕವಿಯಾಗ ಬಲ್ಲರು.

o o o

ಸಂಕಟದಿಂದಾದಷ್ಟು ಲಾಭ ಬೇರೆಯಾಗಿಲ್ಲ

o o o

"ನನಗೂ ಒಂದು ಬ್ಯಾಂಕ್ ಖಾತೆಯಿದೆ!"

ನಿಜ. ಸಿಂಡಿಕೇಟ್ ಬ್ಯಾಂಕಿನಲ್ಲಿ ಪಿಗ್ಮಿ ಠೇವಣಾತಿಯನ್ನು ತೆರೆಯಲು ನಿಮ್ಮಲ್ಲಿರಬೇಕಾದ ಮೊತ್ತ ಕೇವಲ 25 ಪೈಸೆ. ಈ ಯೋಜನೆಯ ಮೂಲಕ ಸಿಂಡಿಕೇಟ್ ಬ್ಯಾಂಕು ದಿನಕೂಲಿ ಪಡೆಯುವ ಕುಂಬಾರರು, ಮನೆಗೆಲಸದವರು, ಅಕ್ಕಸಾಲಿಗರು, ರಿಕ್ಷಾವಾಲರೇ ಮೊದಲಾದ ಜನಸಾಮಾನ್ಯರಿಂದ ಕೋಟ್ಯಂತರ ರೂಪಾಯಿಗಳಷ್ಟು ಉಳಿತಾಯದ ಹಣವನ್ನು ವರ್ಷಂಪ್ರತಿ ಸಂಗ್ರಹಿಸುತ್ತದೆ.

- ದಿನಂಪ್ರತಿ 25 ಪೈಸೆಯನ್ನು ಖಾತೆಯಲ್ಲಿ ಕಟ್ಟುತ್ತಾ ಬಂದರೆ 7 ವರ್ಷದ ಕೊನೆಗೆ ರೂಪಾಯಿ 700 ನ್ನು ನೀವು ಪಡೆಯುವಿರಿ.
- ಹಣ ಕಟ್ಟಲು ವಿಳಂಬವಾದಲ್ಲಿ ಇಲ್ಲವೆ ತಪ್ಪಿದಲ್ಲಿ ಯಾವ ದಂಡವನ್ನೂ ತೆರಬೇಕಾಗಿಲ್ಲ.
- ನಿಮಗೆ ಯಾವಾಗ ಸಾಧ್ಯವೋ ಆವಾಗ ಹಣವನ್ನು ತುಂಬಿರಿ — 7 ವರ್ಷಗಳ ವರೆಗೆ. ಹೀಗೆ ತುಂಬಿಸಿದ ಹಣದ ಮೇಲೆ ಬಡ್ಡಿಯನ್ನು ಗಳಿಸುವಿರಿ.
- ಪಿಗ್ಮಿ ಠೇವಣಾತಿಯು 4ನೇ ವರ್ಷದಲ್ಲಿರುವಾಗ ಖಾತೆಯಲ್ಲಿ ಜಮೆಯಾದ ರೂ. 1000ಕ್ಕಿಂತ ಹೆಚ್ಚಿನ ಮೊತ್ತವನ್ನು— ಹತ್ತಿರದ ಪೂರ್ಣಸಂಖ್ಯೆಗೆ ತಂದು— ಪಿಗ್ಮಿ ಫಿಕ್ಸೆಡ್ ಡಿಪಾಸಿಟ್ ಎಂಬ ಖಾತೆಗೆ ವರ್ಗಾಯಿಸುವ ಸೌಲಭ್ಯವಿದೆ. ಎರಡು ವರ್ಷಗಳ ಅವಧಿಯ ಈ ಪಿಗ್ಮಿ ಫಿಕ್ಸೆಡ್ ಡಿಪಾಸಿಟ್ ಖಾತೆಯು ನಿಮಗೆ 6% ಬಡ್ಡಿಯನ್ನು ಗಳಿಸಿಕೊಡುವುದು.

ಪಿಗ್ಮಿ ಠೇವಣಾತಿಗೆ ಹಣವನ್ನು ಸಂಗ್ರಹಿಸಲು ಬ್ಯಾಂಕಿನ ಪ್ರತಿನಿಧಿಯೇ ನಿಮ್ಮ ಬಾಗಿಲಿಗೆ ಬರುವನು.

1928ರಲ್ಲಿ ಪ್ರಾರಂಭವಾದ ಬ್ಯಾಂಕಿನ ಈ ಯೋಜನೆಯು ಈ ಅವಧಿಯಲ್ಲಿ ಶಕ್ತಿಯುತವಾಗಿಯೂ ಜನಪ್ರಿಯವಾಗಿಯೂ ಬೆಳೆದು ಬಂದಿದೆ

ನಿಮ್ಮ "ಪಿಗ್ಮಿ"ಯು
'ಗೋಮಟ' ಗಾತ್ರದಲ್ಲಿ ಬೆಳೆಯಲಿ

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಚೇರಿ :
ಮಣಿಪಾಲ (ಮೈಸೂರು ರಾಜ್ಯ)

ಕೆ. ಕೆ. ಪೈ
ಕಸ್ಟೋಡಿಯನ್.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. 80/70.

ಸೀತು ಮತ್ತು ಇತರರು —ವಾದಿಗಳು

ಮತ್ತು

ಒಬ್ಬಿದಿ ಮತ್ತು ಇತರರು —ಪ್ರತಿವಾದಿಗಳು

ಮೇಲಿನ ವ್ಯಾಜ್ಯದ 9, 4 ಪ್ರತಿವಾದಿಗಳಾದ ಬೆಳ್ತಂಗಡಿ ತಾಲೂಕು ಶಿಂಶಾರ್ದದೂರು ಗ್ರಾಮದ ಅರಂದೂರು ಮನೆಯಲ್ಲಿರುವ ದಿ।ವ. ಒಬ್ಬಿದಿಯವರ ಮಗಳು ಅಪ್ಪಿಯೂ ಚನ್ನಮ್ಮ ಮತ್ತು ಸಪ್ರಿಯವರ ಮಗ ಗೋಪು— ಇವರಿಗೆ ಕೋರ್ಟು ಮುಖಾಂತರ ತಿಳಿಸುವುದೇನೆಂದರೆ—

ವಾದಿಯು ನಿಮ್ಮ ಮೇಲೆ ದಾಖಲು ಮಾಡಿದ ದಾವೆಯ ಖರ್ಚಿನ ನಿಮ್ಮ ಹಾಜರಾತಿ ಬಗ್ಗೆ ಹಾಗೂ ಅಪ್ಪಿಯೂ ಚನ್ನಮ್ಮನವರ ಮೈನರ್ ಮಕ್ಕಳಾದ ಕೃಷ್ಣಪ್ಪ, ಲೋಕಯ್ಯ, ಸೀನಪ್ಪ, ಭೋಜ ಹಾಗೂ ನಾಣಪ್ಪನವರಿಗೆ ಗಾರ್ಡಿಯನ್ ನೇಮಕದ ಬಗ್ಗೆ ತಾ. 26.9.70ಕ್ಕೆ ಇಟ್ಟಿದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಬೆಳಗ್ಗೆ ಗಂಟೆ 11ಕ್ಕೆ ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗಿ ಉತ್ತರಿಸತಕ್ಕದ್ದು, ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷಿಯಾಗಿ ಮಾಡಿ ಅಪ್ಪಿಯೂ ಚನ್ನಮ್ಮನವರ ಮೈನರ್ ಮಕ್ಕಳಿಗೆ ಕೋರ್ಟು ಗಾರ್ಡಿಯನರನ್ನು ನೇಮಿಸಿ ವ್ಯಾಜ್ಯ ಮುಂದುವರಿಸಲಾಗುವುದು, ತಿಳಿದಿರಲಿ.

ಬಿ. ಕೆ. ಸೂರ್ಯನಾರಾಯಣ ರಾವ್

ವಾದಿಯ ಪರ ವಕೀಲ.

ಬೆಳ್ತಂಗಡಿ, 7.9.70

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ.

Ex.C. 63/70 in S. C. 75/68.

ದೋಟ ರಾಮಪ್ಪಯ್ಯ —ಅರ್ಜಿದಾರ

ಮತ್ತು

ನರಸಿಂಹ ಭಟ್ಟ —ಎದುರು

ಬೆಳ್ತಂಗಡಿ ತಾಲೂಕು ಗುಂಡೂರಿಗ್ರಾಮದ ತಂಬೆ ಎಂಬಲ್ಲಿರುವ ಶ್ರೀ ರಾಮ ಭಟ್ಟರ ಮಗ ಶ್ರೀ ನರಸಿಂಹ ಭಟ್ಟರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ:—

ಮೇಲೆ ಕಾಣಿಸಿದ ಅಮಲ್ದಾರಿಯಲ್ಲಿ ಡಿಕ್ರಿದಾರನಾದ ಅರ್ಜಿದಾರನು ನೀವು ಈ ವರೆಗೂ ಡಿಕ್ರಿ ಹಣ ಸಲ್ಲಿಸದೆ ಇರುವ ಕಾರಣ ನಿಮ್ಮನ್ನು ಏರೆಸ್ಟು ಮಾಡಿ ಸಿವಿಲ್ ಜೈಲಿಗೆ ರವಾನಿಸಬೇಕೆಂತ ಅರ್ಜಿ ಸಲ್ಲಿಸಿರುತ್ತಾನೆ. ಈ ಕುರಿತು ನಿಮ್ಮ ಆಕ್ಷೇಪವೇನಾದರೂ ಇದ್ದರೆ ತಾ. 25.9.70ರಂದು ಬೆಳಗ್ಗೆ ಗಂಟೆ 11ಕ್ಕೆ ಕೋರ್ಟು ಮುಂದೆ ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಅರೆಸ್ಟು ಕುರಿತು ಆಜ್ಞೆ ಹೊರಡಿಸಲಾದೀತು, ತಿಳಿದಿರಲಿ.

ಬಿ. ಕೆ. ಸೂರ್ಯನಾರಾಯಣ ರಾವ್

ಅರ್ಜಿದಾರ ಪರ ವಕೀಲ.

ಬೆಳ್ತಂಗಡಿ, 9.9.70

ಪ್ರಜಾಪೀಡಕನು ಪುಣ್ಯಕಾರ್ಯ ಮಾಡಿದರೆ?

ಶತಾನೀಕನ ಮಗ ಸಹಸ್ರಾನೀಕ. ಅವನು ತನ್ನ ಪ್ರಜೆಗಳನ್ನು ಆಂತರಿಕ ಮತ್ತು ಬಾಹ್ಯ ಶತ್ರುಗಳಿಂದ ರಕ್ಷಿಸುತ್ತಿದ್ದನು. ಅವರನ್ನು ನ್ಯಾಯ ಸಮ್ಮತವಾಗಿ ಪರಿಪಾಲಿಸುತ್ತಿದ್ದನು. ಆದರೆ, ತನ್ನ ತಂದೆಯಂತೆ ಬ್ರಾಹ್ಮಣರಿಗೆ ದಾನವನ್ನು ಮಾತ್ರ ಕೊಡುವುದರಲ್ಲಿ ಕೃಪಣಾಗ್ರೇಸರನಾಗಿದ್ದನು.

ಒಂದು ದಿನ ಕೆಲವು ಬ್ರಾಹ್ಮಣರು ಒಂದಾಗಿ ಮಹಾರಾಜ ಸಹಸ್ರಾನೀಕನ ಬಳಿಗೆ ಬಂದರು. ರಾಜನಲ್ಲಿ ನಿವೇದಿಸಿಕೊಂಡರು-"ಮಹಾರಾಜ, ದಯವಿಟ್ಟು ನಮ್ಮ ನಮ್ರ ಪ್ರಾರ್ಥನೆಯನ್ನು ಲಾಲಿಸಬೇಕು. ನಿಮ್ಮ ತಂದೆಯು ಬ್ರಾಹ್ಮಣರಾದ ನಮಗೆಲ್ಲ ಅಶನ-ವಸನ ಧನಗಳನ್ನು ದಾನ ನೀಡುತ್ತಿದ್ದನು. ಇದರಿಂದ ನಾವು ನಮ್ಮ ಮನೆಗಳಲ್ಲಿ ಸುಖ-ಸಂತೋಷಗಳಿಂದ ದಿನ ಯಾಪನೆ ಮಾಡುತ್ತಿದ್ದೆವು. ಆದರೆ, ಈಗ ನಾವೇನೋ ನಿನ್ನ ರಾಜ್ಯದಲ್ಲಿ ವಾಸವಿದ್ದೇವೆ; ದಾನಗಳು ಅಲಭ್ಯವಿರುವುದರಿಂದ ನಾವು ಸಕುಟುಂಬವಾಗಿ ದುಃಖವನ್ನು ಅನುಭವಿಸುತ್ತಿದ್ದೇವೆ. ನಾವೀ ದುಃಖ ಹೊತ್ತುಕೊಂಡು ಎಲ್ಲಿಗೆ ಹೋಗಲಿ? ನೀನೇ ಹೇಳು."

ಬ್ರಾಹ್ಮಣರು ನಿವೇದಿಸಿದ ಮಾತುಗಳನ್ನು ಕೇಳಿದ ರಾಜ ಸಹಸ್ರಾನೀಕನೆಂದನು: "ಬ್ರಾಹ್ಮಣರಿಗೆ ದಾನ ನೀಡುವುದರಿಂದ ಬಹಳ ಪುಣ್ಯ ಬರುವುದೆಂದು ಹೇಳುತ್ತಾರೆ. ನಾನೊಂದು ಮಾತನ್ನು ನಿಮ್ಮೊಡನೆ ಕೇಳುತ್ತೇನೆ—ದಾನ ಮಾಡುವುದರಿಂದ ಸ್ವರ್ಗ ಪ್ರಾಪ್ತವಾಗುತ್ತದೆ. ಪುನರ್ಜನ್ಮದಲ್ಲಿ ಸುಖ ಲಭ್ಯವಾಗುತ್ತದೆ ಎಂದು ಹೇಳುತ್ತಾರೆ. ಆದುದರಿಂದ, ಸ್ವರ್ಗಲೋಕದಲ್ಲಿ ನನ್ನ ತೀರ್ಥರೂಪರು ಹೇಗಿದ್ದಾರೆ?—ಎಂದು ನಾನು ತಿಳಿಯ ಬಯಸುತ್ತೇನೆ. ಈ ಸಂಗತಿಯನ್ನು ತಿಳಿದುಕೊಂಡು ನನಗೆ ಸ್ಪಷ್ಟವಾಗಿ ತಿಳಿಸಿರಿ. ಒಂದು ವೇಳೆ ನೀವದನ್ನು ಹೇಳಲಾರಿರಾದರೆ, ನನ್ನ ತಂದೆಯಿಂದ ಏನೇನು ದಾನ ಪಡೆದಿದ್ದಿರೋ ಅದನ್ನೆಲ್ಲ ಮರಳಿ ಕೊಡಬೇಕಾಗುವುದು". ಇದನ್ನು ಕೇಳಿದ ಬ್ರಾಹ್ಮಣರಿಗೆ ವಜ್ರಪಾತವಾದಂತಾಯಿತು. ಅವರೆಲ್ಲ ತಂತಮ್ಮಲ್ಲೇ ಆಡಿಕೊಳ್ಳತೊಡಗಿದರು—"ರಾಜ ಶತಾನೀಕನು ಸತ್ತ ಬಳಿಕ ಎಲ್ಲಿ ಹೋದನೆಂದು ನಾವೇನು ಬಲ್ಲೆವು?" ಅವರು ನೊಂದ ಮನಸ್ಸಿನಿಂದ ರಾಜಭವನದಿಂದ ಹೊರಬಿದ್ದರು. ಮನೆಗೆ ಮರಳಿ ಬಂದ ಬ್ರಾಹ್ಮಣರು ಬಹು ದಿನಗಳವರೆಗೆ ಅಗ್ನಿಹೋತ್ರ ಮಾಡಲಿಲ್ಲ.

ಆಗ ಭಗವಾನ್ ಧರ್ಮನು ಬ್ರಾಹ್ಮಣನ ರೂಪದಲ್ಲಿ ಅವರಿಗೆ ಕಾಣಿಸಿಕೊಂಡನು. ಅವರನ್ನು ವಿಚಾರಿಸಿದನು— "ಬ್ರಾಹ್ಮಣರೇ, ನೀವೇಕೆ ದುಃಖಿತರಂತೆ ತೋರುತ್ತೀರಿ? ನೀವೇನು ಮಾಡಬಯಸುತ್ತೀರಿ? ನಿಮ್ಮ ನಿತ್ಯ ಕರ್ಮವನ್ನು ಬಿಟ್ಟುಬಿಡಲೇನು ಕಾರಣ? ಪಂಚಯಜ್ಞಕರ್ಮಗಳನ್ನು ಎಂದಿಗೂ ತ್ಯಜಿಸಬಾರದು. ನಿತ್ಯ ಕರ್ಮಗಳಿಗೆ ಸ್ವತಂತ್ರವಾದ ಫಲಗಳಿಲ್ಲವೆಂಬುದು ನಿಜ; ಆದರೆ, ನಿತ್ಯ ಕರ್ಮನಿರತನಾದವನಿಗೆ ನೈಮಿತ್ತಿಕ ಕಾರ್ಯಗಳಲ್ಲಿ ನೂರುಪಾಲು ಫಲಪ್ರಾಪ್ತವಾಗುವುದು.

ಬ್ರಾಹ್ಮಣರ ಉದಾಸೀನತೆಯ ಕಾರಣವನ್ನು ತಿಳಿದುಕೊಂಡ ಆ ಬ್ರಾಹ್ಮಣನೆಂದನು— "ನಿಮ್ಮಲ್ಲಿ ಇದುವರೆಗೂ ದಾನಸ್ವೀಕರಿಸದವನೂ ಸದೈವ ಜಪನಿರತನಾದವನೂ ಯಾರಾದರೊಬ್ಬನಿದ್ದರೆ, ಅವನು ಆ ಸತ್ತ ರಾಜನ ಬಳಿಗೆ ಹೋಗಲಿ; ಅವನನ್ನು ಕಂಡು, ಅವನೆಲ್ಲ ಸಮಾಚಾರಗಳನ್ನು ತಿಳಿದುಕೊಂಡು ಸಹಸ್ರಾನೀಕನಿಗೆ ತಿಳಿಸಲಿ.' ಇದನ್ನು ಕೇಳಿದವರು ಉದ್ಗರಿಸಿದರು — "ಅಂಥವರು ನಮ್ಮಲ್ಲಿ ಯಾರೂ ಇಲ್ಲ. ಆದರೂ ಅಂತಹ ಬ್ರಾಹ್ಮಣನು ಇಲ್ಲವೇ ಇಲ್ಲ ಎನ್ನುವ ಹಾಗಿಲ್ಲ. ನಾವವನನ್ನು ಹುಡುಕುತ್ತೇವೆ." ಅವರೆಲ್ಲರೂ ಸಮಾಗತ ಬ್ರಾಹ್ಮಣನನ್ನು ವಂದಿಸಿ ಬೀಳ್ಕೊಟ್ಟರು. ಜಪನಿರತನೂ ದಾನಸ್ವೀಕಾರ ಮಾಡದವನೂ ಆದ ಬ್ರಾಹ್ಮಣನಿಗಾಗಿ ಹುಡುಕಾಡತೊಡಗಿದರು. ಆದರೆ, ಅಂತಹ ಬ್ರಾಹ್ಮಣನು ಅವರಿಗೆಲ್ಲಿಯೂ ದೊರೆಯಲಿಲ್ಲ. ಅವರೆಲ್ಲರೂ ಖಿನ್ನಮನರಾಗಿ ಕಾಡನ್ನು ಹೊಕ್ಕರು. ಅಲ್ಲಿ ಭೃಗುವಂಶೀಯ ಬ್ರಾಹ್ಮಣನೊಬ್ಬನು ತಪಸ್ಸು ಮಾಡುತ್ತಿರುವುದನ್ನು ಕಂಡರು. ಅವನು ತನ್ನ ವಾಸಕ್ಕೆಂದು ಆಶ್ರಮ ಕಟ್ಟಿಕೊಂಡಿರಲಿಲ್ಲ. ತೆರೆದ ಮೈದಾನದಲ್ಲಿ ತನ್ನ ಭುಜಗಳನ್ನೆತ್ತಿ ಒಂದು ಕಾಲ ಬಲದಲ್ಲಿ ನಿಂತು ಅವನು ತಪೋನಿರತನಾಗಿದ್ದನು. ಅವನನ್ನು ಕಂಡ ಬ್ರಾಹ್ಮಣರೆಲ್ಲರೂ ಅಲ್ಲೇ ನಿಂತು ಬಿಟ್ಟರು.

ಸೂರ್ಯಾಸ್ತಮಾನದ ಹೊತ್ತು. ಆ ಬ್ರಾಹ್ಮಣನು ಜಪ ಮುಗಿಸಿ ನಿತ್ಯಕರ್ಮಗಳನ್ನು ಮಾಡಿದನು. ಅನಂತರ ಅತಿಥಿಗಳಾಗಿ ಸಮಾಗಮಿಸಿದ ಬ್ರಾಹ್ಮಣರನ್ನು ಆದರಿಸಿ, ಅವರು ಬಂದ ಕಾರಣವನ್ನು ಕೇಳಿದನು. ಆವರು ಒಂದೇ ಉಸಿರಿನಿಂದ ಸಹಸ್ರಾನೀಕನು ಮಾಡಿದ ಪ್ರಶ್ನೆ ಮತ್ತು ಆಗಂತುಕ ಬ್ರಾಹ್ಮಣನು ನೀಡಿದ ಸಲಹೆಯ ವಿಚಾರಗಳನ್ನು ಅವನಿಗೆ ತಿಳಿಸಿದರು. "ನಾವೆಲ್ಲರೂ ಸಂತ್ರಸ್ತರು; ನಿನ್ನ ಕೈಲಾಗುವುದಾದರೆ, ನಮಗೆ ನೆರವಾಗೆಂದು ವಿನಂತಿಸಿದರು.

ಇದನ್ನು ತಿಳಿದ ಆ ಬ್ರಾಹ್ಮಣನು ಯೋಚನಾಮಗ್ನನಾದನು— "ನಾನೀಗ ಮಾಡಬೇಕಾದುದೇನು? ನಾನು ತಪೋಮಗ್ನನಾಗಿದ್ದೇನೆಂದು ಹೇಳಿ, ಇವರೆಲ್ಲರನ್ನೂ ನಿರಾಶಗೊಳಿಸಿ ಕಳಿಸಿ ಬಿಡಲೇ ಅಥವಾ ಮಾಡುತ್ತಿರುವ ತಪಸ್ಸನ್ನು ನಿಲ್ಲಿಸಿ ಈ ದೀನರ ಸಹಾಯಕ್ಕೆ ಕಟಿಬದ್ಧನಾಗಲೆ?" ದುಃಖಿತರ ದುಃಖ ದೂರ ಮಾಡುವುದು ತಪಸ್ಸಿಗೂ ಮಿಗಿಲು. ಭಯಭೀತರಿಗೆ ಅಭಯದಾನ ಮಾಡುವುದು ಸರ್ವೋತ್ತಮ ಧರ್ಮ.-ಹೀಗೆ ನಿಶ್ಚಯಿಸಿ ಬಂದ ಬ್ರಾಹ್ಮಣರನ್ನು ಕಾದುಕೊಳ್ಳುವಂತೆ ತಿಳಿಸಿ ತಾನು ತಪೋಬಲದಿಂದ ಪರಲೋಕ ಗಮನ ಮಾಡಿದನು.

ಪರಲೋಕದಲ್ಲಿ ಬ್ರಾಹ್ಮಣನು ಭಯಂಕರ ನರಕಲೋಕವನ್ನು ನೋಡಿದನು-ನರಕವಾಸಿಗಳಿಗೆ ದೊರಕುವ ಕಷ್ಟಗಳನ್ನು ಆತನು ಇದುವರೆಗೆ ಕೇಳಿದ್ದನಷ್ಟೆ. ಈಗ ಅವೆಲ್ಲವನ್ನೂ ಕಣ್ಣಾರೆ ಕಂಡನು. ಅವರ ಕರುಣ ಕ್ರಂದನಗಳನ್ನು ಕೇಳಿದನು. ಅವನು ತುಸ ಮುಂದುವರಿದನು. ಆಗ ಒಬ್ಬ ಬ್ರಾಹ್ಮಣನು ಕೈಯಲ್ಲಿ ದೊಣ್ಣೆಯೊಂದನ್ನು ಹಿಡಿದುಕೊಂಡು ಬಂದನು; ಈ ಬ್ರಾಹ್ಮಣನನ್ನು ತಡೆದು ಹೇಳಿದನು-"ಎಲೈ ಬ್ರಾಹ್ಮಣನೆ, ನನ್ನ ದಕ್ಷಿಣೆ ಕೊಡದೆ ಎಲ್ಲಿಗೆ ಹೋಗುತ್ತಿ? ಮೃತ್ಯುಲೋಕದಲ್ಲಿ ನನಗೆ ಕೊಡುವುದಾಗಿ ಮಾತುಕೊಟ್ಟಿದ್ದೆ; ಇನ್ನೂ ನೀಡಲಿಲ್ಲ. ಅದನ್ನು ನೆನಪಿಸಿಕೊ?" ಇದನ್ನು ಕೇಳಿದ ಭೃಗುವಂಶೀಯ ಬ್ರಾಹ್ಮಣನೆಂದನು-" ಹೌದು, ಹೌದು, ನೆನಪಿದೆ. ನೀನು ಬೇಡಿದಾಗ ಒಂದು ಪುರಾಣ (ನಾಣ್ಯ) ಕೊಡುವುದಾಗಿ ಹೇಳಿದ್ದೆ. ನನ್ನ ಎದುರಿಂದ ಸರಿದು ಹೋಗು; ಮನೆಗೆ ಹೋದ ಮೇಲೆ ಕೊಟ್ಟು ಬಿಡುವೆ" ಆಗ ಆ ಬ್ರಾಹ್ಮಣನೆಂದನು- 'ನಾನೀಗ ಮೃತ್ಯುಲೋಕದಲ್ಲಿಲ್ಲ ನೀನು ಯಾರಿಗೆ ಕೊಡುವೆ? ಅದೂ ಅಲ್ಲದೆ, ನೀನಿಲ್ಲಿ ಬಂದ ಮೇಲೆ ಅಲ್ಲಿ ನಿನ್ನದೆಂಬುದೇನೇನಿದೆಯೋ ಅವೆಲ್ಲವೂ ಬೇರೆಯವರ ಪಾಲಾಯಿತು. ಮೃತ್ಯುಲೋಕದ ವ್ಯವಹಾರವೇ ಇದು, ನೀನೀಗ ಅಲ್ಲಿ ಹೋದರೂ ನನಗೇನನ್ನು ಕೊಡಬಲ್ಲೆ?"

ಭೃಗುವಂಶೀಯನೆಂದನು - 'ಇಲ್ಲಿಗಾದರೂ ನನ್ನ ಬಳಿಯೇನೂ ಇಲ್ಲ. ನಾನು ನಿನಗೇನನ್ನು ಕೊಡಲಿ?' ಆ ಬ್ರಾಹ್ಮಣನು ಉತ್ತರವಿತ್ತನು - "ಅರೆ, ನೀನು ಗಳಿಸಿದ ಪುಣ್ಯವೇ ಇಲ್ಲಿ ಮಹದ್ಧನ. ಅದರಲ್ಲಿ ಅರ್ಧಪಾಲು ನನಗೆ ಕೊಟ್ಟುಬಿಡು.' ಭೃಗುವಂಶೀಯನು ಪ್ರಶ್ನಿಸಿದನು – 'ಇದೊಳ್ಳೆಯ ಮಾತು. ಒಂದು ಪುರಾಣ(೧೬ ಪೈಸೆ)ಕ್ಕಾಗಿ ನಾನು ಪುಣ್ಯಾರ್ಧವನ್ನು ಕೊಟ್ಟುಬಿಡಲೆ? ನಾನೆಂದಿಗೂ ಕೊಡಲಾರೆ." "ಕೊಡಲಾರೆನೆಂದರೆ ಹೇಗೆ? ಮಾತುಕೊಟ್ಟು ನೀಡದ ದಾನ ದಿನಗಳೆದಂತೆ ಹತ್ತುಪಾಲಷ್ಟು ಬೆಳೆಯುತ್ತದೆ, ನೀನು ಹೇಳು ಎಷ್ಟು ಸಮಯವಾಯಿತು? ನಾನು ಅರ್ಧಾಂಶ ಕೇಳಿದ್ದೇ ಕಡಿಮೆ. ಈಗ ಆ ದಾನ ಚಿಕ್ಕದಾಯ್ತು; ನಿನ್ನ ಮೇಲೆ ನನ್ನ ಋಣವಿರುವಾಗ, ನೀನು ಹೇಗೆ ಮುಂದುವರಿಯುತ್ತೀಯೋ ನೋಡೋಣ. ಇದೇನೂ ಮೃತ್ಯುಲೋಕವಲ್ಲ, ಪರಲೋಕ. ಇಲ್ಲಿ ಯಾವುದೇ ಬಗೆಯ ಮೋಸ ನಡೆಯುವುದಿಲ್ಲ. ಸಂಪೂರ್ಣ ನ್ಯಾಯವೇ ಇಲ್ಲಿನ ನೀತಿ." ಆ ಬ್ರಾಹ್ಮಣನು ಬಡಬಡಿಸಿದನು.

ಇವರಿಬ್ಬರ ಜಗಳವನ್ನು ಸೂರ್ಯನಾರಾಯಣನು ನೋಡುತ್ತಿದ್ದನು. ಇಬ್ಬರನ್ನೂ ಸಮಾಧಾನಪಡಿಸಿ ಭೃಗುವಂಶೀಯನ ಪುಣ್ಯದಲ್ಲಿ ಆರರಲ್ಲಿ ಒಂದಂಶವನ್ನು ಬ್ರಾಹ್ಮಣನಿಗೆ ಕೊಡಿಸಿದನು. ಆಗ ತಾನೇ ಆ ಬ್ರಾಹ್ಮಣ ಪ್ರೇತವು ಭೃಗುವಂಶೀಯನನ್ನು ಮುಂದಡಿಯಿಡಲು ಬಿಟ್ಟಿತು. ಅವನು ಮುಂದರಿದಂತೆ ಒಬ್ಬ ಗೌಳಿಗನು ಅವನನ್ನು ತಡೆದು ಹೇಳಿದನು— "ನೀನು ನಿನ್ನ ದನವನ್ನು ತಿಂಗಳಿಗೆ ಒಂದು ಕವಡೆಯ ಮೇಲೆ ರಕ್ಷಣೆಗಾಗಿ ನನಗೆ ಕೊಟ್ಟಿದ್ದಿ. ಆ ಒಂದು ಕವಡೆ ಮೊತ್ತವನ್ನು ನನಗೆ ನೀಡಲಿಲ್ಲ. ವಿಚಾರಿಸಿದಾಗ ನೀನೆಲ್ಲಿಯೋ ಕಾಡಿಗೆ ಓಡಿ ಹೋದೆಯೆಂದು ತಿಳಿಯಿತು; ಈಗ ಸಿಕ್ಕಿಬಿದ್ದೆ. ಮೊತ್ತ ನೀಡಿ, ಮುಂದುವರಿ."

ಬ್ರಾಹ್ಮಣನು ನಾಚಿಕೊಂಡು ಉತ್ತರಿಸಿದನು. "ತಡವಾದುದರಿಂದ ಮರೆತು

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

[illegible]

NAVAYUGA 17—9—1970
Registered with the Registrar
of News Papers for India
under No. R. N. 3546/'57

REGD. No. B. Cr 179
LICENCE No. 33,
Licensed to Post without Prepayment

ಬಿಟ್ಟಿದ್ದೆ." ಆಗ ಗಾಳಗನೂ ಬ್ರಾಹ್ಮಣನ ಪುಣ್ಯದ ಅರನೆಯೊಂದಂಶವನ್ನು ಬಲಾತ್ಕಾರದಿಂದಲೇ ವಸೂಲು ಮಾಡಿದನು. ಆವನು ಮುಂದುವರಿದಂತೆ, ಒಬ್ಬ ಮಡಿವಳ, ಒಬ್ಬ ಚಮ್ಮಾರ, ಒಬ್ಬ ಸಿಂಪಿಗ ಮತ್ತೊಬ್ಬ ವ್ಯಾಪಾರಿ ತಮ್ಮ ಸಾಲವನ್ನು ಮೃತ್ಯುಲೋಕದಲ್ಲಿ ತೀರಿಸಲಿಲ್ಲವೆಂದು ಹೇಳಿ ಆತನ ಪುಣ್ಯದಲ್ಲಿ ಪ್ರತಿಯೊಬ್ಬನೂ ಅರನೆಯೊಂದಂಶವನ್ನು ವಸೂಲು ಮಾಡಿದರು. ತನ್ನ ಪುಣ್ಯವೆಲ್ಲವೂ ಹೀಗೆ ಹಂಚಿ ಹೋದುದರಿಂದ ಭೃಗುವಂಶೀಯ ಬ್ರಾಹ್ಮಣನು ನಿಸ್ತೇಜನಾದನು; ಪರಲೋಕದಲ್ಲಿ ನಡೆಯುವ ಆತನ ಶಕ್ತಿ ಲುಪ್ತವಾಯಿತು. ಆಗ ಸೂರ್ಯದೇವನು ಆತನನ್ನು ಶತಾನೀಕ ರಾಜನಿರುವಲ್ಲಿಗೆ ತನ್ನ ಕಿರಣಗಳ ಸಹಾಯದಿಂದ ಮುಟ್ಟಿಸಿದನು.

ಶತಾನೀಕ ರಾಜನು ಕಷ್ಟ ಭೋಗಿಸುತ್ತಿದ್ದನು. ರಾಜನನ್ನು ಗುಡಾಣವೊಂದರಲ್ಲಿ ಹಾಕಿ ಬೇಯಿಸುತ್ತಿದ್ದರು. ಇದನ್ನು ಕಂಡು ತನಗೆ ವಿಸ್ಮಯವಾಯಿತು. ತುಸ ಹೊತ್ತು ಕಳೆದು ಆವನು ರಾಜನನ್ನು ಕೇಳಿದನು- 'ರಾಜನ್, ನೀನು ಷೋಡಶ ಮಹಾದಾನಗಳನ್ನು ಮಾಡಿದವನು. ಬ್ರಾಹ್ಮಣರಿಗೆ ರತ್ನಾಭರಣವಸ್ತ್ರಾದಿ ನೀಡಿದವನು. ಹಳ್ಳಿ ನಗರಗಳನ್ನು ದಾನಕೊಟ್ಟವನು. ಶ್ರೇಷ್ಠ ಮುನಿಗಳು ಹೇಳುತ್ತಾರೆ—ತಪಸ್ಸು ಮತ್ತು ದಾನಗಳಿಂದ ಸ್ವರ್ಗ ಸಿಗುತ್ತದೆ ಎಂದು. ನೀನೀಗ ಯಾವ ಕರ್ಮ ಫಲವನ್ನು ಅನುಭವಿಸುತ್ತಿದ್ದಿ? ತಿಳಿದಿದ್ದರೆ, ನನಗೆ ತಿಳಿಸು.'

ರಾಜ ಶತಾನೀಕನೆಂದನು-- ನಾನು ಬ್ರಾಹ್ಮಣರಿಗೆ ಧಾರಾಳವಾಗಿ ದಾನವನ್ನು ಇತ್ತೆನೆಂಬುದು ನಿಜ. ಆದರೆ, ಆ ಸಂಪತ್ತೆಲ್ಲವನ್ನೂ ನಾನು ಪ್ರಜೆಗಳಿಗೆ ಪೀಡೆನೀಡಿ ವಸೂಲು ಮಾಡಿದ್ದೆ. ಪ್ರಜಾ ಪೀಡನೆಯ ಸಂತಾಪದಿಂದ ಉತ್ಪನ್ನವಾದ ಬೆಂಕಿಯಿಂದ ಹಗಲಿರುಳು ಪ್ರೇತವಾಗಿ ಉರಿಯುತ್ತಲಿದ್ದೇನೆ. ಎಲೈ ಬ್ರಾಹ್ಮಣ, ನೀನಿಲ್ಲಿಂದ ಶೀಘ್ರವಾಗಿ ನನ್ನ ನಗರಕ್ಕೆ ಹೋಗು. ಆತನಿಗೆ ನನ್ನ ಈ ಕಷ್ಟವನ್ನು ನಿವೇದಿಸಿ ಆತನು ನನ್ನನ್ನು ಇದರಿಂದ ಬಿಡುಗಡೆಯಾಗುವಂತೆ ಏನಾದರೂ ಉಪಾಯ ಮಾಡಲಿ. ನನ್ನ ಜೀವನದಿಂದ ಆತನು ಪಾಠವನ್ನು ಕಲಿಯಲಿ."

'ಪ್ರಜಾಪೀಡನೆಯಿಂದ ಹಣ ಸಂಪಾದಿಸಬಹುದು; ಅದನ್ನು ಸದುಪಯೋಗಗೊಳಿಸಲೂ ಬಹುದು. ಆದರೆ, ಅದು ನಿಷ್ಫಲ"ವೆಂದು ತಿಳಿದು ಭೃಗುವಂಶೀಯ ಬ್ರಾಹ್ಮಣನ ಪಾಪ್ಮಲೋಕಕ್ಕೆ ಇಳಿದು ಬಂದನು.

READ &
ADVERTISE IN
NAVAYUGA WEEKLY

ಆಕ್ರಮಣಕ್ಕೆ ಆಮಂತ್ರಣ—ದೇಶಭಕ್ತಿಯ ದಮನ

(ಒಂದನೇ ಪುಟದಿಂದ)

ಹೇಳಿದರಾದರೂ ಅದು ಸಿಂಹ ಘರ್ಜನೆಯೂ ಆಗಿರಲಿಲ್ಲ, ಸ್ವರ್ಣದಂಶದ ಸೊಲ್ಲೂ ಆಗಿರಲಿಲ್ಲ. ಅದು ಸ್ವರ್ಣಸಿಂಘರ ಮಾತೂ ಅಲ್ಲ, ಇಂದಿರಾಜೀಯವರ ಮಾತೂ ಅಲ್ಲ, ಇವರಿಬ್ಬರದ್ದೂ ಅಲ್ಲ—ಅದಕ್ಕಿಂತಲೂ, ಇವರಿಬ್ಬರದ್ದೂ ಕಲಸುಮೇಲೋಗರ—ನಪುಂಸಕ ರೋಧನೆಯಾಗಿತ್ತು. ಇಷ್ಟು ವರ್ಷಗಳಿಂದ ನಮ್ಮ ಸರಕಾರ ಹೇಳುತ್ತಿದೆಯಾದರೂ ಅದನ್ನು ಸರಿಪಡಿಸುವ ಗೋಜಿಗೆ ಹೋಗುವ ಬದಲು ಇತ್ತೀಚಿನ ಭೂಗೋಲಿಕ ಗೋಲದಲ್ಲಿ (ಸೋವಿಯಟ್ ಜಿಯೊಗ್ರಾಫಿಕಲ್ ಎಟ್ಲಾಸ್) ರಷ್ಯಾ ಇದೇ ತಪ್ಪನ್ನು ಮಾಡಿರುತ್ತದೆ. ಕಮ್ಯೂನಿಸ್ಟರಿಗೆ ಗೊಬೆಲ್ಸ್‌ನ ಮಾತಿನಲ್ಲಿ ನಂಬಿಕೆ ಇದೆ. ಒಂದು ಸುಳ್ಳನ್ನು ನೂರು ಸಲ ಹೇಳಿದಲ್ಲಿ ಅದು ಸತ್ಯವಾಗುತ್ತದೆಂಬುದು ಅವರ ಅಭಿಪ್ರಾಯ. ಇದನ್ನು ಯಾರಾದರೂ ತಾಂತ್ರಿಕ ದೋಷ ಮುದ್ರಣ ದೋಷವೆಂದಲ್ಲಿ ಇನ್ನೂ ಒಪ್ಪಿಕೊಳ್ಳುವವರಿದ್ದಾರೆಂದಲ್ಲಿ ನಡು ಮಧ್ಯಾಹ್ನದಲ್ಲಿ ಚಂದ್ರ ಬೆಳಕನ್ನು ಒಪ್ಪಿಕೊಳ್ಳುವವರಿದ್ದಾರೆಂದಂತೆಯೇ ಸರಿ. ಆದರೆ ಸ್ವರ್ಣಸಿಂಘರು ಇನ್ನೂ ಹಾಗೆಯೇ ಹೇಳುತ್ತಿದ್ದಾರೆ ರಷ್ಯಾ ಹಾಗೆ ಹೇಳುತ್ತಿದೆಯಂತೆ! ಹೀಸ್ ಮಾಸ್ಟರ್ಸ್ ವಾಯ್ಸ್! ಅದರಲ್ಲೇನೂ ರಾಜಕೀಯ ಮಹತ್ವವಿಲ್ಲವಂತೆ. ಭಾರತದ ಗಡಿಯ ಕುರಿತು ರಷ್ಯಾಕ್ಕೆ ಸಂದೇಹವಿಲ್ಲವಂತೆ! ಸರಕಾರದ ಅಭಿಪ್ರಾಯಕ್ಕೂ ಭೂಪಟಕ್ಕೂ ಸಂಬಂಧವೇ ಇಲ್ಲವಂತೆ! ಸದಸ್ಯರೆದುರು ಇದನ್ನು ಪುನರುಚ್ಚರಿಸುವ ಬದಲು ರಷ್ಯಾ ಸರಕಾರಕ್ಕೆ ಮಹತ್ವ ಇಲ್ಲದ, ಸಂಬಂಧ ಇಲ್ಲದ ಆ ಕುಕೃತಿಯನ್ನು ಕಳಚಿ ಬಿಟ್ಟುಬಿಡಿ ಎಂದು ಏಕೆ ಹೇಳಲಿಕ್ಕೆ ಬರಲಿಲ್ಲ ಎನ್ನುವ ಬಗೆಗೇಕೆ, ಸ್ವರ್ಣಸಿಂಘರು ಹೇಳಬಾರದಿತ್ತು? ಮಹತ್ವ ಇಲ್ಲದ್ದು ತಾನೇ. ಮಣ್ಣುಪಾಲಾಗಲಿ. ಭಾರತದ ಭವಿತವ್ಯವನ್ನು ಮಣ್ಣುಪಾಲುಗೊಳಿಸಲು ಅವರೆಲ್ಲರೂ ಇದ್ದಾರೆಯೋ ವಿನಾ ಇಂತಹ ಅಪಮಾನಕಾರಕ ದಸ್ತಾವೇಜುಗಳನ್ನು ನಾಶಮಾಡಲಿಕ್ಕಾಗಿ ಇಲ್ಲ. ಕೆಂಪಣ್ಣನವರ ಕೆಂಗಣ್ಣಿಗೆ ಇವರು ಬೆದರುತ್ತಿದ್ದಾರೆ. ಈ ರೀತಿ ಭೂಪಟಗಳನ್ನು ತೋರಿಸುತ್ತಿರುವವರು ನಮ್ಮನ್ನು ಪರೋಕ್ಷವಾಗಿ ಆಕ್ರಮಣಕಾರರೆನ್ನದೆ ಇರುತ್ತಾರೇನು? ಈಸ್ಟೆಂಟ್ ತಂದ ಖ್ಯಾತಿ ನಮಗದು! ಅದನ್ನು ಶತ್ರುಕಾರ್ಯವೆಂದು ಸ್ವರ್ಣಸಿಂಘರು ಹೇಳುವದು ಹಾಗಿರಲಿ ಮಿತ್ರರಲ್ಲದವರ ಕೆಲಸವೆಂದೂ ಹೇಳಿರುವದಿಲ್ಲ. ಹೇಳಬೇಕೆಂದು ಇಂದಿರಾ ಗಾಂಧಿಯವರು ಅಪ್ಪಣೆ ಕೊಡಿಸಿರುವದಿಲ್ಲ ಈ ವಿಶ್ವಕೋಶ ಮೂವತ್ತು ಭಾಗಗಳಲ್ಲಿ ಪ್ರಕಟವಾಗುತ್ತದೆ. ಉಳಿದ ಭಾಗಗಳಲ್ಲಿಯಾದರೂ ತಿದ್ದುಪಡಿ ಸೂಚಿಸಲು ಸ್ವರ್ಣಸಿಂಘರು ಸೂಚಿಸಬಹುದಲ್ಲವೇ? ಅಯ್ಯೋ, ಆಡಿಷ್ಟು ವರ್ಷಗಳಿಂದ ಕೇಳದಿದ್ದವರು ಈಗ ಅದಕ್ಕೆ ಕಿವಿಗೊಡುತ್ತಾರೇನು?

ಸಂಸದಿನಲ್ಲಿ ಸ್ವರವೆತ್ತಿದ ಸದಸ್ಯರು ರಷ್ಯಾ ದೂತನಿವಾಸದತ್ತ ಹೋದರು. ಅನ್ಯಾನ್ಯ ಪಕ್ಷಗಳ ಅತಿರಥ—ಮಹಾರಥರು ಅದರಲ್ಲಿದ್ದರು. ದೂತನಿವಾಸದಿಂದ ಆದ್ಯಾರೂ ಹೊರಗೆ ಬರಲಿಲ್ಲ. ಅದೆಂತು ಬಂದಾರು? ಬೇಡದವರೇನು ಕಮ್ಯೂನಿಸ್ಟರೇ? ಆಳುವ ಸರಕಾರವೇ ಅವರ ಮಾತಿಗೆ ಕಿವಿ ಕೊಟ್ಟಿಲ್ಲವೆಂದ ಮೇಲೆ ಪರದೇಶದವರು ಕಿವಿಕೊಡುವದುಂಟೆ? ತೀನ್ ಮೂರ್ತಿಯಿಂದ ಹೊರಟ ಸಹಸ್ರಾರು ಪ್ರಜೆಗಳು ನಮ್ಮ ಮುಖಂಡರೊಂದಿಗೆ ರಷ್ಯಾ ದೂತನಿವಾಸಕ್ಕೆ ಹೋಗಿ ಅಲ್ಲಿ ಆ ಭೂಪಟಗಳನ್ನು ಸುಟ್ಟುಹಾಕಿದರು. ಅದರಿಂದ ಏನು ಮಾಡಿದಂತಾಯಿತು? ಎಲ್ಲಾ ಪ್ರತಿಗಳನ್ನು ಸುಟ್ಟುಹಾಕಿದಂತಾಯಿತೇ? ರಷ್ಯಾಕ್ಕೆ ಇನ್ನು ಮೇಲೆ ಪ್ರಕಟಿಸಲು ಸಾಧ್ಯವಿಲ್ಲವೇನು? ಇಂತಹ ಪ್ರಶ್ನೆಗಳಿಗೆ ಉತ್ತರ ಕೊಡುವ ಬದಲು ರಷ್ಯಾಕ್ಕೆ ಭಾರತದ ಜನತೆಯ ಅಭಿಪ್ರಾಯವನ್ನು ತಿಳಿಸಿದಂತಾಯಿತೆಂದು ಸೂಚಿಸಬಹುದು. ಇದನ್ನು ಭೂಪಟದ ಮೂಲಕ ಆಕ್ರಮಣವೆಂದು, ರಷ್ಯಾ ದೂತನಿವಾಸದಿಂದ ಹಿಂತಿರುಗಿದ ಸಂಸತ್ ಸದಸ್ಯರು ಪ್ರಧಾನಿ ಇಂದಿರಾ ಗಾಂಧಿಯವರೆದುರು ಹೇಳಿದಾಗ ಅವರು ಕೋಪಗೊಂಡು, ನಾವೇನು ಮಾಡಲು ಸಾಧ್ಯ?—ಯುದ್ಧ?- ಕೇಳಿದರು. ದಿಲ್ಲಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಇದನ್ನುಲ್ಲೇಖಿಸುತ್ತ ಭಾರತೀಯ ಜನಸಂಘದ ಅಧ್ಯಕ್ಷ ಅಟಲಬಿಹಾರಿ ವಾಜಪೇಯಿಯವರು, ಆಗದ ಆಕ್ರಮಣ ನಿಲ್ಲಿಸಲಾರದವರು ಸೈಜ ಕಾಳಗದ ಆಕ್ರಮಣವನ್ನೆದುರಿಸ ಬಲ್ಲರೇನೆಂದು ಕೇಳಿರುವರು.

ಇಂತಹ ಭೂಪಟಗಳ. ಭಾರತಕ್ಕೆ ಬರದಂತೆ ಏಕೆ ತಡೆಯುತ್ತಿಲ್ಲವೆಂದು ಸಂಸತ್ ಸದಸ್ಯರು ಪ್ರಧಾನಿಯವರನ್ನು ಕೇಳಿದಾಗ, ತಡೆಯುವ ಅಧಿಕಾರ ನಮಗಿದೆಯೆಂದರವರು. ಹಾಗಾದರೆ ಏಕೆ ತಡೆದಿಲ್ಲ? ಅದಕ್ಕೆ ಉತ್ತರವಿಲ್ಲ! ಇಂದಿರಾ ಗಾಂಧಿ "ತಿಳಿಸಲಿಕ್ಕಾಗಿ ಕೊಸಿಗಿನ್ ಪ್ರಕಟಿಸಿದ್ದೇನು? ನೀನು ಹೊಡೆದಂತೆ ನಟಿಸು, ನಾನು ಅಳುವಂತೆ ನಟಿಸುತ್ತೇನೆ- ಚೀನ ಪಡೆಯೊಳ್ಳೆ ಕಾ, ನಾನು ಭಾರತಕ್ಕೆ ಕಳುಹಿಸುವ ವಿಶ್ವಕೋಶದಲ್ಲಿ ಭೂಪಟ ಇಲ್ಲದಂತೆ ನೋಡಿಕೊಳ್ಳುತ್ತೇನೆ ನ್ನುವ ಆಶ್ವಾಸನೆ ಕೊಡುತ್ತೇನೆಂಬ ಮಾತು ರಷ್ಯಾದಿಂದ ಬಂದಲ್ಲಿ ಆಗ ಮಾತ್ರ ಇಂದಿರಾಜೀಯವರು ತಡೆಗೊಳ್ಳೆ ತಂದಾರು.

ದಿಲ್ಲಿಯ ಸಾರ್ವಜನಿಕ ಸಭೆಯೊಂದರಲ್ಲಿ ಮಾತಾಡುತ್ತ ಅಟಲ ಬಿಹಾರಿ ವಾಜಪೇಯಿಯವರು, ರಷ್ಯಾ ನಮ್ಮ ಭೂಪ್ರದೇಶವನ್ನು ಚೈನಾಕ್ಕೆ ಸೇರಿದ್ದೆಂದು ತೋರಿಸಿರುವುದಕ್ಕೆ ನಾವು ರಷ್ಯಾದ ಭೂಭಾಗವನ್ನು ಚೈನಾದ ಭೂಪ್ರದೇಶವೆಂದು ತೋರಿಸುವ ಭೂಪಟಗಳನ್ನು ಪ್ರಕಟಿಸಬೇಕೆಂದಿರುವರು. ಇದು ಮುಯ್ಯಿಗೆ ಮುಯ್ಯಿಯಾಗಬಹುದು. ಆದರೆ ಇದಕ್ಕೆ ಇಂದಿರಾಜೀ ಸಿದ್ಧರಿಲ್ಲವೆನ್ನಲು ಸಾಧ್ಯವಿಲ್ಲ. ಆದರೆ ಅವರ ಧೋರಣೆ ಸರದಾರ ಪಟೇಲರ ಧೋರಣೆ ಇರುವದಿಲ್ಲ. ಅವರೆದುರು ಇರುವದು ರಷ್ಯಾದ ಘೋಷಣೆ ಪ್ರಪಂಚದ ಕಾರ್ಮಿಕರೇ ರಷ್ಯಾದ ಧ್ವಜದಡಿಯಲ್ಲಿ ಒಂದಾಗಿರಿ. ಪ್ರಪಂಚವು ಒಂದೇ ಒಂದು ಸರಕಾರದ ಆಡಳಿತದಲ್ಲಿರಬೇಕು. ಆ ಸರಕಾರ ರಷ್ಯಾದಲ್ಲಿರಬೇಕು........

ಕಮ್ಯೂನಿಸ್ಟರ ಆಕ್ರಮಣವನ್ನು ಇಂದಿರಾ ಸರಕಾರ ಎದುರಿಸುತ್ತದೆನ್ನುವ ಭ್ರಮೆ ಇನ್ನೂ ಕೆಲವರಲ್ಲಿರುವದು ಬಹಳ ಆಶ್ಚರ್ಯ. ಕಮ್ಯೂನಿಸ್ಟರ ಆಧಾರ ಇಲ್ಲದಿದ್ದಲ್ಲಿ ಇಂದಿರಾಜೀ ನಿಲ್ಲುವಂತಿಲ್ಲ. ಕೆಂಪುಕೋಟೆಯಲ್ಲಿ ಕೇಸರಿ ಕೇತು ಹಾರುವದನ್ನು ಕಾಣುವ ಹಗಲು ಕನಸನ್ನು ಇಂದಿರಾಜೀ ಕಾಣುತ್ತಿದ್ದಾರೆ. ಅದಕ್ಕಾಗಿ ಅವರು ದೇಶಭಕ್ತರ ದಮನ ಕಾರ್ಯಕ್ಕೆ ಅಧಿಕಾರದ ಚಕ್ರವನ್ನುರುಳಿಸುತ್ತಿದ್ದಾರೆ. ದೇಶಭಕ್ತಿಯ ದಮನವೆಂದರೆ ಆಕ್ರಮಣಕ್ಕೆ ಆಮಂತ್ರಣವೇ ಅಲ್ಲವೇ.

—ಶ್ರೀ ಶಿವಶಂಕರ.

HOTEL SATKAR
Boarding, Lodging & Restaurant
Behind Corporation Office,
9 Mission Road — Bangalore—27.
Phone No.— 1 28337
2 29887
Grams: HOST SATKAR
Vegetarian Cuisine
Attached Bath Rooms and Phones.
Running H and C water.
Moderate Charges
Railway Station, Laundry, Post office and Entertainment Area Nearby.
Large airy Rooms; Roof garden
Quiet, Calm Atmosphere
Personalised Service.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ 50
ಸಂಚಿಕೆ 4

NAVAYUGA

24—9—1970

ತೆರಿಗೆ ಹಣದ ವಿನಿಯೋಗ

ಮಹರ್ಷಿ ಅಗಸ್ತ್ಯನ ಧರ್ಮಪತ್ನಿ ಲೋಪಾಮುದ್ರೆ. ಆಕೆಗೆ ಸುಖಭೋಗಗಳಲ್ಲಿ ಆಸಕ್ತಿ. ಆದರಿಂದ ಅಗಸ್ತ್ಯರಿಗೆ ಹಣದ ಅಗತ್ಯ. ಇದಕ್ಕೆಂದು ರಾಜ ಶ್ರುತವೀಣನಲ್ಲಿಗೆ ಪ್ರಯಾಣ. ರಾಜನಿಂದ ಹೃತ್ಪೂರ್ವಕ ಸ್ವಾಗತ; ತುಂಬು ಹೃದಯದ ಸತ್ಕಾರ. ಉಭಯ ಕುಶಲೋಪರಿಯಾದ ಬಳಿಕ ರಾಜನು ಬಂದ ಕಾರಣ ಕೇಳಿದನು. ಮಹರ್ಷಿ ಹೇಳಿದರು:— "ನನಗೀಗ ತುಂಬ ಹಣ ಬೇಕು. ಪ್ರಜಾಜನರ ವಿಕಾಸ ಕಾರ್ಯಗಳಿಗೆ ತೊಂದರೆಯಾಗುವುದಿಲ್ಲವಾದರೆ, ನೀನು ನನಗೆ ಹಣ ಕೊಡು. ಒಂದು ವೇಳೆ ತೊಂದರೆಯಾಗುವುದಾದರೆ, ಬೇರೊಬ್ಬನನ್ನು ಕೇಳುತ್ತೇನೆ. ನಿನ್ನ ಆಯ-ವ್ಯಯದ ದಾಖಲೆಗಳನ್ನು ನೋಡೋಣ." ರಾಜ ಶ್ರುತವೀಣನು ಭಂಡಾರಿಯನ್ನು ಕರೆದು ಲೆಕ್ಕಪತ್ರಗಳನ್ನು ತರಿಸಿ ಮಹರ್ಷಿಯ ಮುಂದಿಟ್ಟನು. ಅದನ್ನು ನೋಡಿದ ಋಷಿ ಹೇಳಿದರು— "ನಿನ್ನ ಆಯವೂ ವ್ಯಯವೂ ಸರಿಸಮ. ನಿನ್ನಿಂದ ನಾನು ಹಣ ಪಡೆದರೆ ನಿನಗೆ ಖಂಡಿತವಾಗಿಯೂ ತೊಂದರೆಯಾಗುವುದು. ಮತ್ತೊಬ್ಬ ರಾಜನನ್ನು ನಾನು ನೋಡುತ್ತೇನೆ." ಅಗಸ್ತ್ಯರು ಅಲ್ಲಿಂದ ಹೊರಟರು. ಅವರೊಡನೆ ರಾಜ ಶ್ರುತವೀಣನೂ ಹೊರಟು ನಿಂತನು.

ಅವರಿಬ್ಬರೂ ರಾಜ ಬ್ರಧ್ನಶ್ವನ ಬಳಿಗೆ ಹೋದರು. ಅವನು ಇವರಿಬ್ಬರನ್ನೂ ಸ್ವಾಗತಿಸಿ ಬಂದ ಕಾರಣ ಕೇಳಿದನು. ಋಷಿ ಹೇಳಿದರು—"ಮಹಾರಾಜ, ನನಗೆ ಬಹಳಷ್ಟು ಹಣ ಬೇಕಾಗಿದೆ. ನಿನ್ನ ದೇಶದ ಸಾಧಾರಣಾ ಕಾರ್ಯಗಳಿಗೆ ತೊಂದರೆಯಾಗುವುದಿಲ್ಲವಾದರೆ, ನೀನು ಕೊಡು." ಮಹಾರಾಜನು ತನ್ನ ಕೋಶದ ಆಯ-ವ್ಯಯ ಲೆಕ್ಕಪತ್ರಗಳನ್ನು ತರಿಸಿ ಋಷಿಯ ಮುಂದಿಟ್ಟನು; ಅದರಲ್ಲೂ ಆಯ-ವ್ಯಯ ಸರಿಸಮವಿತ್ತು. ಆದುದರಿಂದ ಒಲ್ಲೆನೆಂದು ಅಗಸ್ತ್ಯರು ಎದ್ದುನಿಂತರು. ಅವರೊಡನೆ ಶ್ರುತವೀಣನೂ ಬ್ರಧ್ನಶ್ವನೂ ಹೊರಟರು.

ಮೂವರೂ ಇಕ್ಷ್ವಾಕುವಂಶದ ಅರಸು ತ್ರಸದಸ್ಯುವಿನ ಬಳಿಗೆ ಹೋದರು. ರಾಜನು ಅತಿಥಿಗಳನ್ನು ತುಂಬಿದೆದೆಯಿಂದ ಸ್ವಾಗತಿಸಿದನು. ಆದರೋಪಚಾರಗಳ ಬಳಿಕ ರಾಜನೆಂದನು:-"ಋಷಿವರೇಣ್ಯರೇ, ತಮ್ಮ ಆಗಮನದಿಂದ ನನ್ನ ಅರಮನೆಯೂ ದೇಶವೂ ಪಾವನವಾದುವು. ಈ ಮಹಾರಾಜರಿಬ್ಬರು ಇಲ್ಲಿ ಬಂದುದರಿಂದ ನನ್ನ ಗೌರವವು ಇಮ್ಮಡಿಸಿತು. ನನ್ನ ಪೂರ್ವಪುಣ್ಯ ಪ್ರಭಾವದಿಂದಲೇ ನಿಮ್ಮೆಲ್ಲರನ್ನೂ ಇಲ್ಲಿ ಕಾಣುವಂತಾಯ್ತು. ತಾವು ನನ್ನಿಂದ ಏನನ್ನು ಬಯಸುತ್ತೀರೆಂದು ಆಜ್ಞಾಪಿಸಬೇಕು."

"ನನಗೆ ಹಣ ಬೇಕು. ನನಗಾಗಿ ಹಣ ಬೇಡಲು ಇವರಿಬ್ಬರೂ ನನ್ನೊಡನೆ ಬಂದಿದ್ದಾರೆ. ಪ್ರಜಾಜನರನ್ನು ಶೋಷಿಸಿ ಗಳಿಸಿದ ಹಣ ನನಗೆ ಬೇಡ. ಸಂಗ್ರಹಿತವಾದ ಕರವು ರಾಜ ಕೋಶದಲ್ಲಿ ಹೆಚ್ಚಾಗಿ ಬಿದ್ದಿರುವ ಹಣವಷ್ಟೇ ನನಗೆ ಬೇಕು" ಅಗಸ್ತ್ಯರು ಹೇಳಿದರು. ಲೆಕ್ಕಪತ್ರಗಳನ್ನು ಅವಲೋಕಿಸುವಾಗ ಅವನಲ್ಲೂ ಏನೂ ಉಳಿಯುತ್ತಿರಲಿಲ್ಲ. ಅಗಸ್ತ್ಯರು ಬೇರೆಡೆ ಹಣಪಡೆಯಲು ಹೊರಟರು. ಶ್ರುತವೀಣ, ಬ್ರಧ್ನಶ್ವ ಮತ್ತು ತ್ರಸದಸ್ಯುವೂ ಅವರನ್ನು ಹಿಂಬಾಲಿಸಿದರು.

ಮೂವರೂ ರಾಜರು ಮುನಿಯೊಡನೆ ಹೇಳಿದರು. 'ವರೇಣ್ಯರೇ, ಇಲ್ಲೇ ಸಮೀಪದಲ್ಲಿ ಇಲ್ವಲನೆಂಬ ಅಸುರ ರಾಜನಿದ್ದಾನೆ. ಅವನು ಬಹಳ ಶ್ರೀಮಂತ. ನಾವು ಅವನಲ್ಲಿಗೆ ಹೋಗೋಣ. ನೀವು ಬಯಸುವಷ್ಟು ಹಣ ಕೊಡುವುದು ಅವನಿಗೇನೂ ದೊಡ್ಡದಲ್ಲ. ಆದರೆ, ಅವನು ಅನಾರ್ಯ. ತಮ್ಮ ಪರಿಚಯ ಆತನಿಗಿರದು. ನಾವು ಮೂವರನ್ನು ನಿಮ್ಮೊಡನೆ ಕಂಡರೆ ನೀವು ಬಯಸುವಷ್ಟು ಹಣ ಕೊಡಬಹುದು.' ಅವರು ನಾಲ್ವರೂ ಇಲ್ವಲನಲ್ಲಿಗೆ ನಡೆದರು. ತಾವು ಬಂದ ಸಂಗತಿಯನ್ನು ಅಸುರರಾಜನಿಗೆ ತಿಳಿಸಿದರು.

ಒಬ್ಬ ಮಹರ್ಷಿಯೊಂದಿಗೆ ಮೂವರು ರಾಜರು ತನ್ನಲ್ಲಿಗೆ ಸಮಾಗಮಿಸಲಿದ್ದಾರೆಂದು ತಿಳಿದ ಇಲ್ವಲನು ವೈಭವ ಸ್ವಾಗತ ನೀಡಲು ಮಂತ್ರಿ ಸಾಮಂತರಿಗೆ ಆಜ್ಞೆ ಮಾಡಿದನು. ಸ್ವಾಗತವಾಗಿ, ರಾಜಧಾನಿಗೆ ಅತಿಥಿಗಳು ಪಾದಾರ್ಪಣ ಮಾಡಿದರು; ಅರಮನೆಗೆ ಸಮಾಗಮಿಸಿದವರನ್ನು ಮಹಾರಾಜನು ಭೋಜನಕ್ಕೆ ಆಹ್ವಾನಿಸಿದನು.

ಭೋಜನ ವ್ಯವಸ್ಥೆಯಾದಾಗ, ಇದರಲ್ಲೇನೋ ಮೋಸವಿರಬೇಕೆಂದು ಮುನಿ ಗ್ರಹಿಸಿದರು. 'ನಾವು ಈತನಿಂದ ಹಣ ಬೇಡಲು ಬಂದವರು. ಇವನಾದರೋ ರಾಜ

(ಹದಿನಾರನೇ ಪುಟ ನೋಡಿರಿ)

ಕುಟುಂಬ ಯೋಜನಾ ದ್ವಿಸಪ್ತಾಹ,
ಸೆಪ್ಟೆಂಬರ 14 ರಿಂದ 27, 1970

ದೇಶದಲ್ಲಿ ಎಷ್ಟೇ ಆಹಾರ ಬೆಳೆಯಲಿ, ಇತರ ಉತ್ಪಾದನೆ ಎಷ್ಟೇ ಹೆಚ್ಚಲಿ, ಬೆಳೆಯುತ್ತಿರುವ ಜನಸಂಖ್ಯೆಗೆ ಇದು ಸಾಲದು. ಕುಟುಂಬ ಯೋಜನೆಯೆಂದರೆ ಸಂಸಾರದ ಸಂಖ್ಯೆಯನ್ನು ಪರಿಮಿತಿಗೊಳಿಸುವುದಷ್ಟೇ ಅಲ್ಲ, ಕುಟುಂಬದ ಸುಖ ಸಂತೋಷ ಅದರ ಮುಖ್ಯ ಉದ್ದೇಶ, ಮುಂದಿನ ಜನಾಂಗದ ಅಭಿವೃದ್ಧಿಗೆ ಉತ್ತಮ ಸೌಕರ್ಯಗಳನ್ನು ಕಲ್ಪಿಸುವುದು ಅದರ ಗುರಿ.

—ಶ್ರೀಮತಿ ಇಂದಿರಾ ಗಾಂಧಿ

davp 70/293

ಕುಟುಂಬ ಯೋಜನಾ ಪುರವಣಿ

'ಅರುವತ್ತು' ಸಮೀಪಿಸುವಾಗ

"ನವಗಿರಿನಂದ"

ನೆನಪಿಗೆ ಕಾರಣ:

"ಷಷ್ಟ್ಯಬ್ಧ ಪೂರ್ತಿ ಕಲ್ಯಾಣ ಮಹೋತ್ಸವಾಹ್ವಾನ ಪತ್ರಿಕೆ" ಎಂಬ ತಲೆಬರಹದಲ್ಲಿ ನನಗೊಂದು ಆಹ್ವಾನ ಪತ್ರಿಕೆ ಬಂದಿತು.

ಪ್ರೋಗ್ರಾಂ ಭಾರೀ ಆಗಿತ್ತು. ಭಾಷಣಗಳ, ಗುಣಗಾನಗಳ, ಬಹುಮಾನ ದಾನ, ಗ್ರಂಥಸಮರ್ಪಣೆ ಮೊದಲಾದ ಆಧುನಿಕ ರೀತಿಯ ಕಾರ್ಯಕ್ರಮಗಳಿದ್ದುವು.

ಇದರಿಂದ ಉತ್ಸವ ಮಾಡಿಸಿಕೊಳ್ಳುವವರಿಗೆ ಎಲ್ಲರ ಶುಭಾಶಿಸ್ಸುಗಳು ದೊರೆಯುವುದೊಂದು ಬಹಿರಂಗ ಉದ್ದೇಶದಂತೆ ಕಾಣಿಸುವುದಾದರೂ ಇತರರಿಗೂ ತುಂಬ ಪ್ರಯೋಜನಗಳಿವೆ. ಅದು ಅರುವತ್ತು ವರ್ಷಗಳನ್ನು ಎಲ್ಲರಿಗೂ ಜ್ಞಾಪಿಸುವಂತಹ ಒಂದು ಸಂದರ್ಭ. ಹಾಗಿರುವುದರಿಂದಲೇ ಷಷ್ಟ್ಯಬ್ಧ ಪೂರ್ತಿ ಶಾಂತಿ ಮಾಡಿಸುವ ಪದ್ಧತಿ ಹೋಮ ಹವನ ಗ್ರಹಶಾಂತಿ ಮುಂತಾದ ವೈದಿಕ ಪದ್ಧತಿಗಳ ಮೂಲಕವಾಗಿ ಪೂರ್ವಕಾಲದಿಂದಲೇ ನಡೆದು ಬಂದಿರುತ್ತದೆ.

[illegible] ಇದ್ದವರು ದೊಡ್ಡ ರೀತಿಯಲ್ಲಿ ಮಾಡುತ್ತಾರೆ; ಇಲ್ಲದವರು ಸಣ್ಣ ರೀತಿಯಲ್ಲಿ ಮಾಡಿಸಿಕೊಳ್ಳುತ್ತಾರೆ.

ಈ ಆಹ್ವಾನ ಪತ್ರಿಕೆಯನ್ನು ನೋಡುವಾಗ ಅರುವತ್ತರ ಸಮೀಪವಿರುವುದಕ್ಕೆ ಮುಟ್ಟುವವರಿಗೆಲ್ಲಾ ಗತಕಾಲದ ನೆನಪು ಬರುವುದು ಸಹಜವೇ. ಇಂತಹ ಸ್ಮರಣೆಯಿಂದ—ಅದೂ ಒಳ್ಳೆಯ ಸ್ಮರಣೆಗಳಿಂದ ಉತ್ಸಾಹಗೊಂಡು, ಸ್ವಾತ್ಮ ಪ್ರೋತ್ಸಾಹದಿಂದ ಮತ್ತೆ ಅರುವತ್ತು ವರ್ಷ ಬಾಳುವಂತೆ ಆರೋಗ್ಯ ಸುಧಾರಿಸುವುದೂ ಅದರ ಆಶಯಗಳಲ್ಲೊಂದು ಎಂದು ಧಾರಾಳವಾಗಿ ಹೇಳಬಹುದು.

ಗತಜೀವನದ ಎಷ್ಟೋ ಸಿಹಿ ಕಹಿಗಳನ್ನು ನೆನೆಸಿಕೊಳ್ಳುವುದರಿಂದ ಆದಷ್ಟೀಗ ವಿಮರ್ಶಿಸಿಕೊಳ್ಳಬಹುದು. ಇನ್ನಷ್ಟು ಜೀವನದಲ್ಲಿ ನಡೆಯುವ ಹುಮ್ಮಸ್ಸನ್ನು ಪಡೆಯಬಹುದು. ಆಗ ಹಿಂದಿನ ಯೌವನವೇ ಮರುಕಳಿಸಿದಂತಾದೀತು. ಅದು ಆರೋಗ್ಯಕ್ಕೆ ಸಹಕಾರಿ. ಆರೋಗ್ಯದಿಂದ ದೀರ್ಘಾಯುಷ್ಯ. ಅಂತೆಯೇ ಷಷ್ಟ್ಯಬ್ಧ ಪೂರ್ತಿಯನ್ನು ದಂಪತೀ ಸಹಿತವಾಗಿ ಕಲ್ಯಾಣ ಮಹೋತ್ಸವವೆನಿಸುವ ಹಾಗೆ ಮಾಡುತ್ತಾರೆ. ಅರುವತ್ತನೇ ಪಡಿ ಇನ್ನೊಂದು ಅರುವತ್ತರ ಗಡಿಯವರೆಗೂ ಕೊಂಡೊಯ್ಯುವಂತೆ ಆಗಬೇಕು, ಆದೀತು.

ಏಕೆ ಹೇಳಲಿಕ್ಕೆ ಬಂದೆನೆಂದರೆ, ವಯಸ್ಸು ಎಲ್ಲರಿಗೂ ಒಂದೇ ಲೆಕ್ಕದಲ್ಲಿ ಆಗುತ್ತಾ ಇರುತ್ತದೆ. ಇದ್ದವರು ಇಲ್ಲದವರು ಎಂಬ ಭೇದ ಅದಕ್ಕಿಲ್ಲ. ನನ್ನಂತಹ ಇಲ್ಲದವನು ಊರನ್ನೆಲ್ಲ ಆಮಂತ್ರಿಸಿ ಉತ್ಸವ ಮಾಡಿಸಿಕೊಂಡು ಉತ್ಸಾಹ ತಂದುಕೊಳ್ಳಲು ಸಾಧ್ಯವೆ? ಹೌದು, ನನಗೂ ಅರುವತ್ತು ಹತ್ತಿರ ಹತ್ತಿರ ಆಗುತ್ತಾ ಇದೆ. ಈ ಸಂದರ್ಭದಲ್ಲಿ ಈ ಮಹನೀಯರ ಆಹ್ವಾನಪತ್ರಿಕೆ ನನಗೂ ಗತಕಾಲಸ್ಮರಣೆ ಮಾಡುತ್ತ ಉತ್ಸಾಹವನ್ನೂ ಸ್ವಾತ್ಮಪ್ರೋತ್ಸಾಹವನ್ನೂ ತಂದುಕೊಳ್ಳುವುದಕ್ಕೆ ಉಪಯೋಗವಾಯಿತು.

ಮೊದಲನೇ ನೆನಪು:

ಒಮ್ಮೆಗೇ ನಾನು ತೀರ ಸಣ್ಣವನಾಗಿಬಿಟ್ಟೆ; ಒಂಬತ್ತು ವಯಸ್ಸಿನ ಮಾಣಿ. ಆದೇ ಉಪನಯನವಾಗಿತ್ತು. ಅಪ್ಪ ಸಂಧ್ಯಾವಂದನೆ, ದೇವತಾರ್ಚನೆ ಪದ್ಧತಿ, ವಿಷ್ಣುಸಹಸ್ರನಾಮ ಪುಸ್ತಕಗಳನ್ನು ತೆಗೆಸಿಕೊಟ್ಟು ಕಲಿಯಲಿಕ್ಕೆ ಹೇಳಿದ್ದರು. ಅದರೊಂದಿಗೆ ತಮಗೆ ತಿಳಿದ ಒಂದು ಸ್ತೋತ್ರವನ್ನು ಬರೆದು "ಇದನ್ನು ಮುಖ್ಯವಾಗಿ ಕಲಿ. ಊಟಕ್ಕೆ ಮೊದಲು ಇದನ್ನು ಹೇಳಬೇಕು" ಎಂದು ಅಪ್ಪಣೆ ಮಾಡಿದ್ದರು.

ಅದು "ಊರ್ಧ್ವಮೂಲ ಮಧಶ್ಶಾಖ" ಎಂದು ಶುರುವಾಗುವುದು. ಬಾಯಿಯೊಳಗೆ, ಹಲ್ಲುಗಳೆಡೆಯಲ್ಲಿ ನಾಲಿಗೆಯನ್ನು ಹೊರಳಿಸಿ ಹೇಳುವುದಕ್ಕೆ ಬಹಳ ಕಷ್ಟವೆನಿಸಿತು. ಆಗಾಗ ಅವರೇ ಖುದ್ದು ಹೇಳಿ ಬಾಯಿ ಪರಿಶುತ್ತಿದ್ದರು. ಆದರೂ ನಾನು ಅದನ್ನು ಕಲಿಯಲಿಲ್ಲ. ಅದಕ್ಕಾಗಿ ಒಮ್ಮೆ ನನ್ನ ತೊಡೆಯಲ್ಲಿ ತಮ್ಮ ಐದು ಬಲಗೈ ಬೆರಳುಗಳ ಅಚ್ಚನ್ನೂ ಮೂಡಿಸಿದ್ದರು.

ನಾನು ಹೋ ಎಂದು ಅಳುವಾಗ "ದೊಡ್ಡವನಾದ ಮೇಲೆ ತನ್ನಂತೆ ಕಲೀತಾನೆ. ಹೀಗೆ ಹೊಡೆದರೆ ಬರುತ್ತಾ?" ಎಂದು ಕೋಪ ಮಿಶ್ರಿತ ಅನುತಾಪದಿಂದ ಅಮ್ಮ ಅಪ್ಪನನ್ನು ನಿವಾರಿಸಿ ನನ್ನ ತೊಡೆಯಲ್ಲಿದ್ದ ಅಚ್ಚುಗಳ ಮೇಲೆ ತೆಂಗಿನೆಣ್ಣೆ ಸವರುತ್ತ "ನಿಧಾನವಾಗಿ ಮನಸ್ಸುಗೊಟ್ಟು ಕಲೀಪ್ಪ. ಬರತ್ತೆ. ಬರಹವೇ ಕಲೀದವಳಾದ ನಾನು ಎಷ್ಟೋ ಹಾಡುಗಳನ್ನು ಕಲೀಲಿಲ್ಲವೆ? ಕಲಿತರೆ ನಿಂಗೇ ಒಳ್ಳೇದು" ಎಂದು ಬುದ್ಧಿ ಹೇಳಿದಳು.

ಆ ಬುದ್ಧಿ ನಾಟಲೂ ಇಲ್ಲ. ನಾನು ಕಲೀಲೂ ಇಲ್ಲ. ಅಪ್ಪನ ಬದಲಿಗೆ ಅಮ್ಮನೇ ಆಗಾಗ ಹೇಳುವಳು: 'ಊರ್ಧ್ವಮೂಲ ಕಲಿತೆಯೋ, ಓದೋ–' ಅಂತ. ಅಪ್ಪ ಪರಊರಿಗೆ ಹೋದುದರಿಂದ, ಅವರ ಭಯವೂ ಹೋಯಿತು. ಅಮ್ಮನ ರಾಗ ಒಂದು ಲೆಕ್ಕವೆ? ಏನೋ 'ಊರ್ಧ್ವಮೂಲ—' ಎಂಬ ಒಂದು ವಾಕ್ಯ ಮಾತ್ರ ಮನಸ್ಸಿನಾಳದಲ್ಲಿ ಇತ್ತು.

ಆ ಮೇಲೆ ನಾನು ಮೂರರಿಂದ ನಾಲ್ಕನೇ ಕ್ಲಾಸಿಗೆ ಬಿದ್ದಾಗ 'ಪಾವಂಜೆ ಮಾಸ್ತ್ರ' ಎಂಬವರು ಸಂಸ್ಕೃತ ಮತ್ತು ಕನ್ನಡ ಪಾಠಗಳಿಗೆ ಬಂದರು. ಆಗ ವಿದ್ಯಾದಾಯಿನೀ ಶಾಲೆಯಲ್ಲಿ ನಾಲ್ಕನೇ ಕ್ಲಾಸಿನಿಂದ ಸಂಸ್ಕೃತವೂ ಇಂಗ್ಲೀಷೂ ಪ್ರಾರಂಭ. ಇಂಗ್ಲೀಷಿಗೆ ದೊಡ್ಡನಾರಾಯಣ ಮಾಸ್ತರು. ತೆಳ್ಳಗೆ ಬೆಳ್ಳಗೆ ಸಪೂರರಾದ ದೊಡ್ಡ ನಾರಾಯಣ ಮಾಸ್ತರೆಂದರೆ ಹುಡುಗರಿಗೆಲ್ಲ ತುಂಬ ಭಯ—ಹುಲಿಯನ್ನು ಕಂಡ ಹಾಗೆ. ಆದರೆ ಮನೆಯಲ್ಲಿ ಪಳಗಿಸಿದ ಬೆಕ್ಕಿನಂತಹ ಹುಲಿ ಎಂಬುದನ್ನು ಕ್ರಮೇಣ ಗೊತ್ತುಪಡಿಸುವಂಥವರು.

ಸಂಸ್ಕೃತದ ಪಾವಂಜೇ ಮಾಸ್ತರು ಹಾಗಲ್ಲ. ಅವರು ಕನ್ನಡ ಪಾಠ ಮಾಡುವ ಕ್ರಮ ಬಹಳ ಆನಂದ. ಕತೆಗಳನ್ನು ಸರಾ ಒಳ್ಳೆಯ ಪದ್ಧತಿಯಲ್ಲಿ, ಆದಿನ ಹೇಳುವ ಕಥಾಭಾಗದ ತಲೆಬರಹಗಳನ್ನು ಬೋರ್ಡಿನಲ್ಲಿ ಬರೆದು, ಅಷ್ಟನ್ನು ಆಸ್ವಾದಕರವಾಗುವ ಹಾಗೆ ಹೇಳಿ, ಉಳಿದ ಭಾಗವನ್ನು ಇನ್ನೂ ಕೇಳಬೇಕೆಂದೆನಿಸುವಲ್ಲಿಗೆ ನಿಲ್ಲಿಸಿಬಿಡುತ್ತಾರೆ. ಅವರು ಮಾಡುವ ಸಂಸ್ಕೃತ ಪಾಠವೂ ಕಥಾ ರೂಪದಲ್ಲೇ ಇರುತ್ತದೆ.

'ಕಶ್ಚಿತ್ ಕುಕ್ಕುರಃ ಅಪೂಪಂ ಮುಖೆ ಆದಾಯ ನದ್ಯಾ ತೀರೆ ಆಗಚ್ಛತಿ' ಎಂದು ಪ್ರಾರಂಭಿಸಿದ ಕಥಾವಾಕ್ಯ ಇನ್ನೂ ನೆನಪಿನಲ್ಲಿದೆ. ಆದರೆ ನಾನು ನಾಲ್ಕನೇ ದರ್ಜೆಯಲ್ಲಿ ಅರ್ಧ ಕಲಿಯುವಾಗಲೇ ವಿಧಿ ನನ್ನನ್ನು ಶಾಲೆಯಿಂದ ಬಿಡಿಸಿ, ಎಲ್ಲಿಗೋ ಪರಿಚಾಕರಿ ಮಾಡಲು ಕಳುಹಿಸಿಬಿಟ್ಟಿತು.

ಆದರೂ "ವಿಘ್ನೇಶಾಯ ನಮಃ"ದಿಂದ ಪ್ರಾರಂಭಿಸಲ್ಪಟ್ಟ ಸಂಸ್ಕೃತ ಅಕ್ಷರಗಳು (ಇಂಗ್ಲೀಷ ಅಕ್ಷರಗಳೂ ಅಷ್ಟೇ) ನೆನಪಿನಲ್ಲಿದ್ದುವು. ಕಾರಣ ಅವು ಒಳ್ಳೆಯ ಗುರುಗಳಿಂದ ಒಳ್ಳೆಯ ರೀತಿಯಲ್ಲಿ ನಾಟಲ್ಪಟ್ಟ ಬೀಜಗಳು.

"ಊರ್ಧ್ವಮೂಲವಧಶ್ಶಾಖ–"ವೂ ಸಂಸ್ಕೃತ ಅಕ್ಷರಜ್ಞಾನವೂ ನನ್ನೊಳಗೆ ಅಡಗಿದ್ದುವು. ಅದರೊಂದಿಗೆ ಚಿತ್ರ ಬರೆಯುವ ಗೀಳೂ ನನಗಿತ್ತು. ಇದನ್ನು ನೋಡಿ ನಾನು ಕೆಲಸ ಮಾಡುವ ಮನೆಯ ಅಮ್ಮನವರು ಮೆಚ್ಚುತ್ತಿದ್ದರು. ಒಂದು ಸಾರಿ ಅವರು ತಾವು ಹೊಲಿಯುವ ಎಂಬ್ರಾಯಿಡರೀಗಾಗಿ "ನಮೋ ಭಕ್ತಃ ಪ್ರಣಶ್ಯತಿ' ಎಂಬ ಸಂಸ್ಕೃತ ಅಕ್ಷರಗಳನ್ನು ಚಂದಮಾಡಿ ಬರೆದು ಕೊಡಲು ನನ್ನನ್ನು ಕರೆದರು. ಪುಟ್ಟದೊಂದು ಪುಸ್ತಕದೊಳಗಿನಿಂದ ಸಂಸ್ಕೃತ ಅಕ್ಷರಗಳ ಆ ಶ್ಲೋಕ ವಾಕ್ಯವನ್ನು ತೋರಿಸಿ, ದೊಡ್ಡದಾಗಿ ಪೆನ್ಸಿಲಿನಲ್ಲಿ ಬರೆದು ಕೊಡಲು ನನಗೆ ಹೇಳಿದರು.

ಆಗ ಆ ಪುಟ್ಟ ಪುಸ್ತಕವನ್ನು ಪೂರಾ ಬಿಡಿಸಿ ನೋಡಿದೆ. ಅದು 'ಭಗವದ್ಗೀತಾ' ಸಂಸ್ಕೃತ ಅಕ್ಷರಗಳಲ್ಲಿ ಶ್ಲೋಕಗಳೂ ಇಂಗ್ಲೀಷ್‌ನಲ್ಲಿ ಸಂಕ್ಷಿಪ್ತ ವ್ಯಾಖ್ಯಾನವೂ ಇತ್ತು. ಬರೆದವರು ಆ್ಯನೀಬೆಸೆಂಟ್. ನನಗೂ ಆಗ ಜ್ಞಾನಪಿಪಾಸೆ ಪ್ರಾರಂಭವಾದ ಪ್ರಾಯ. ಆ ಗ್ರಂಥದೊಳಗಿನ "ನಮೇ ಭಕ್ತಃ ಪ್ರಣಶ್ಯತಿ" ಎಂಬ ಪುಟ್ಟ ವಾಕ್ಯವನ್ನು ಎಂಬ್ರಾಯಿಡರೀ ಮಾಡಿ ಫ್ರೇಮು ಹಾಕಿಸಿ ಗೋಡೆಯಲ್ಲಿ ಇಡಬೇಕಾದರೆ ಆ ಶ್ಲೋಕಗಳ ಮಹತ್ವವೆಷ್ಟಿರಬೇಡ—ಎನಿಸಿತು. ಕುತೂಹಲದಿಂದ ಆ ಪುಸ್ತಕದ ಸಂಸ್ಕೃತ ಅಕ್ಷರಗಳನ್ನು ಜೋಡಿಸಿ ಕಷ್ಟಪಟ್ಟು ಓದಲು ಪ್ರಯತ್ನಿಸುವಾಗ, (ಅರ್ಥ ಇಂಗ್ಲೀಷಿನಲ್ಲಿದ್ದುದರಿಂದ ನನಗೆ ಬಾರದು) ಸಂಸ್ಕೃತ ಅಕ್ಷರಜ್ಞಾನವೂ ಸರಾಗವಾಗುತ್ತಾ, ನನ್ನ ಅಪ್ಪ ಬರೆದು ಕೊಟ್ಟು ಕಲಿಯುವಂತೆ ತೊಡೆ ಕಾಯಿಸಿದ್ದು ಭಗವದ್ಗೀತೆಯ ೧೫ನೆಯ ಅಧ್ಯಾಯವೆಂದು ಆಗ ತಿಳಿಯಿತು.

ಆ ಮೇಲೆ ಆ ಗ್ರಂಥದ ೧೮ ಅಧ್ಯಾಯಗಳನ್ನೂ ಕನ್ನಡದಲ್ಲಿ ಬರೆದುಕೊಂಡೆ. ಹೀಗೆ ಮಾಡಿದರೆ ಕೈಗೂ ಅಭ್ಯಾಸವಾಗುತ್ತೆ, ದಿನಾ ಓದುತ್ತಾ ಇದ್ದರೆ, ಸ್ವಲ್ಪ ಸ್ವಲ್ಪವಾಗಿ ಅರ್ಥವಾಗುತ್ತಲೂ ಹೋದೀತು. ದುಡ್ಡೂ ಉಳಿಯಿತು. (ದುಡ್ಡು ಉಳಿಯುವ ವಿಚಾರ ಬಹು ಮುಖ್ಯವಾಗಿತ್ತು.) ಅದೇ ರೀತಿಯಾಗಿ ಅಲ್ಲಿ ದೊರಕಿದ ಸಂಸ್ಕೃತ ಅಕ್ಷರಗಳಲ್ಲಿರುವ ಶ್ಯಾಮಲಾದಂಡಕ, ಬೃಹಸ್ತೋತ್ರ ರತ್ನಾಕರಗಳನ್ನು ಕನ್ನಡ ಅಕ್ಷರಗಳಲ್ಲಿ ಬರೆದಿಟ್ಟುಕೊಂಡು, ದಿನಾ ಪಾರಾಯಣ ಮಾಡುತ್ತಿದ್ದಾಗ, ಆಶ್ಚರ್ಯವೆಂದರೆ, ಮೊತ್ತಮೊದಲು ಬಾಯಿಪಾಠವಾಗಿ ಹೋದುದು ಅಪ್ಪ ಕಲಿಯಲು ಒತ್ತಾಯಿಸಿದ 'ಊರ್ಧ್ವಮೂಲ—' ಎಂದು ತೊಡಗುವ ಗೀತೆಯ ೧೫ನೆಯ ಅಧ್ಯಾಯವೇ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಪಾರ್ಟಿಯವರ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit — ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

READ & ADVERTISE IN NAVAYUGA WEEKLY

ಸಂಪುಟ ೫೦
ಸಂಚಿಕೆ ೪

ನವಯುಗ

ವಾರಪತ್ರಿಕೆ, ಉಡುಪಿ, ದ. ಕ.

ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ಕೇರಳೀಯರಿಗೆ ಹೊಸತು ಬೇಕು

ಕೇರಳದಲ್ಲಿ ಮಧ್ಯಾವಧಿ ಚುನಾವಣೆಗಳು ನಡೆದುವು. ಪರಿಣಾಮವೂ ಪ್ರಕಟವಾಯಿತು. ಗೆದ್ದವರು ಹಿಗ್ಗಿದರು; ಸೋತವರೂ ಕುಗ್ಗಲಿಲ್ಲ. ಇದಕ್ಕೆ ಕಾರಣವಿಲ್ಲದಿಲ್ಲ. ಕೇರಳದ ಜನ ಈ ಇಪ್ಪತ್ತೈದು ವರ್ಷಗಳಲ್ಲಿ ಒಂದೇ ಒಂದು ಸ್ಥಿರವಾದ ಸರಕಾರವನ್ನು ಪಡೆಯಲಿಲ್ಲ. ರಾಷ್ಟ್ರಪತಿ ಆಳಿಕೆಗೆ ಈ ರಾಜ್ಯ ಒಳಪಟ್ಟಷ್ಟು ದೀರ್ಘಕಾಲ ಬೇರಾವುದೇ ರಾಜ್ಯ ಒಳಪಟ್ಟದ್ದಿಲ್ಲ. ಅಲ್ಲಿ ಸಾರ್ವಜನಿಕ ಚುನಾವಣೆಗಳು ನಡೆದಷ್ಟು ಬಾರಿ ಮತ್ತೆಲ್ಲಿಯೂ ನಡೆಯಲಿಲ್ಲ. ಪ್ರಜಾಸತ್ತೆಗೆ ಇದು ಅಭಿಮಾನವೆನ್ನಿ; ಅಥವಾ ಅವಮಾನವೆನ್ನಿ; ಇದು ಸತ್ಯಸಂಗತಿ. ಹಾಗಾಗಿ ಸ್ವಾತಂತ್ರ್ಯಾನಂತರ ಏನೇನೆಲ್ಲಾ ಆಗಬಹುದಿತ್ತೋ, ಆಗಬೇಕಾಗಿತ್ತೋ ಅವುಗಳೊಂದೂ ಅಲ್ಲಿ ಆಗಲಿಲ್ಲ. ಜನದಟ್ಟಣೆಯೂ ನಿಲ್ಲಲಿಲ್ಲ. ಅದು ಎಲ್ಲಿತ್ತೋ ಅಲ್ಲಿಯೇ ಉಳಿದಿದೆಯೆಂದರೆ ಸುಳ್ಳಲ್ಲ. ಏನಾದರೂ ಸುಧಾರಣೆ-ಪ್ರಗತಿ ಕಂಡು ಬಂದಿದ್ದರೆ, ಅದು ಆ ಕಾಲದ ಅಧಿಕಾರಾರೂಢರು ತಮ್ಮ ಸ್ಥಾನಭದ್ರತೆಗಾಗಿ ಎರಚಿದ ಮಂಕುಬೂದಿ ಮಾತ್ರ.

ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಮಾರ್ಕ್ಸಿಸ್ಟರ ನೇತೃತ್ವದ ಸಪ್ತರಂಗೀಯ ರಂಗವು ಗೆದ್ದು ಬಂತು. ಮಾರ್ಕ್ಸಿಸ್ಟರೂ ಐವತ್ತಕ್ಕೂ ಮಿಕ್ಕಿದ ಸ್ಥಾನಗಳನ್ನು ಪಡೆದಿದ್ದರು. ಆದರೆ, ಈ ಬಾರಿ ಅದರ ಅರ್ಧದಷ್ಟು ಸ್ಥಾನಗಳನ್ನು ದಕ್ಕಿಸಿಕೊಳ್ಳುವುದು ಅವರಿಗೆ ಕಷ್ಟವಾಯಿತು. ಎಲ್ಲಿಯವರೆಗೆಂದರೆ, ಮಾಜಿ ಮುಖ್ಯ ಮಂತ್ರಿ ಶ್ರೀ ನಂಬೂದರಿಪಾದರೂ ತಮ್ಮ ಸೀಟು ಉಳಿಸಿಕೊಳ್ಳಲು ಪಡಬಾರದ ಬನ್ನಪಡಬೇಕಾಯಿತು. ಇಂಡಿಕೇಟ್ ಕಾಂಗ್ರೆಸ್ಸಿ, ಮತ್ತು ಮುಸ್ಲಿಂ ಲೀಗಿನೊಂದಿಗೆ ಕೂಡಿಕೊಂಡ ಸಿ. ಪಿ. ಐ. ಯ ಸಂಯುಕ್ತ ರಂಗವು ಬಹುಮತವನ್ನು ಗಳಿಸಿತು. ಈ ಬಹುಮತವು ಸರಕಾರದ ಸ್ಥಿರತೆಗೆ ಸಾಕಾಗುವುದೆಂದು ಹೇಳಬಾರದಾದರೂ ಸರಕಾರ ರಚಿಸುವುದಕ್ಕೆ ಸಾಕು. ಇಲ್ಲಿಯೂ ಇಂಡಿಕೇಟ್ ಕಾಂಗ್ರೆಸ್ಸು ಅತ್ಯಧಿಕ (೩೨) ಸ್ಥಾನಗಳಿಸಿಕೊಂಡ ಏಕೈಕರಾಜ್ಯಕೀಯ ಪಕ್ಷವೆಂದು ಆಕಾಶವಾಣಿ ದಿನಕ್ಕೆ ನೂರು ಬಾರಿ ಪ್ರಸಾರಮಾಡಿತು. ಈ ರಂಗದ ಸರಕಾರ ಇಷ್ಟರಲ್ಲೇ ಕೇರಳದಲ್ಲಿ ರಚಿಸುವ ಸಿದ್ಧತೆಗಳು ನಡೆಯುತ್ತಿವೆ. ಮಾಜಿ ಮುಖ್ಯಮಂತ್ರಿ ಸಿ. ಪಿ. ಐ. ಯ ಶ್ರೀ ಅಚ್ಯುತ ಮೆನನ್ನರೇ ಪುನಃ ಮುಖ್ಯ ಮಂತ್ರಿ ಆಗುವರು. ಮತ್ತೊಬ್ಬ ಮಾಜಿ ಮಂತ್ರಿ ಮುಹಮ್ಮದ ಕೋಯಾರ ಮುಸ್ಲಿಂಲೀಗು ಮಂತ್ರಿ ಮಂಡಳದಲ್ಲಿ ಮಹತ್ವದ ಸ್ಥಾನ ಗಳಿಸೀತು. ಇಂಡಿಕೇಟು ಸಂಪುಟದಲ್ಲಿ ಸೇರಿದರೂ ಸೇರಬಹುದು; ಸೇರದೆ ಹೊರಗೆ ನಿಂತು ಶ್ರೀ ಮೆನನ್ನರಿಗೆ ಸದ್ಯಕ್ಕೆ ಬೆಂಬಲ ಕೊಡಿಯೇ ತೃಪ್ತಿಪಡೆಯಲೂ ಬಹುದು. ಶ್ರೀಮತಿ ಗಾಂಧಿಯವರು ಉತ್ತರ ಪ್ರದೇಶದಲ್ಲಿ ಒಲ್ಲದ ಗಂಡನೊಡನೆ ಸಂಸಾರ ಹೂಡಿ ಪೈಶ್ಯಕುಳ್ಳಿಕೊಂಡಿದ್ದಾರೆ. ಆದುದರಿಂದ ಕೇರಳದಲ್ಲಿ ಮತ್ತೊಮ್ಮೆ ಸನೆಗುದಿಗೆ ಬೀಳಲು ಅವರು ಸಿದ್ಧರಾಗರು. ಆದರೆ, ಭಾರತೀಯ ಕಮ್ಯೂನಿಸ್ಟ್ ಪಕ್ಷ (ಸಿ. ಪಿ. ಐ.) ಅವರನ್ನೂ ಮಂತ್ರಿಮಂಡಳದಲ್ಲಿ ಶಾಮೀಲಾಗಿರೆಂದು ಒತ್ತಾಯಿಸಬಹುದು. ಇದು ಸಫಲವಾದರೆ ಮಾತ್ರ ಕೇಂದ್ರ ಸರಕಾರದಲ್ಲೂ ತನಗೆ ಪ್ರಾತಿನಿಧ್ಯ ಬೇಡಲು ಅದಕ್ಕೆ ಸದವಕಾಶ ಲಭ್ಯವಾಗುವುದು. ಇದಕ್ಕಾಗೇ ಶ್ರೀಮತೀಜಿಯವರು ವಿಧಾನಸಭೆಯಲ್ಲಿ ಬೆಂಬಲ ಕೊಡಿ ಅಧಿಕಸಂಖ್ಯಾಕ ಪಕ್ಷವಾದ್ದರಿಂದ ಶ್ರೀ ಮೆನನ್ನರನ್ನು ಕೆಣಕುವ ಯೋಚನೆ ಮಾಡುತ್ತಿರಲೂ ಬಹುದು.

ಚುನಾವಣೆಗಳಲ್ಲಿ ಇನ್ನೂ ಕೆಲವಂಶಗಳು ಗಮನೀಯವಾಗಿವೆ. ಕಳೆದ ಬಾರಿ ಐದು ಸ್ಥಾನ ಗಳಿಸಿದ್ದ ಕೇರಳ ಕಾಂಗ್ರೆಸ್ಸು ಈ ಸಲ ಇಮ್ಮಡಿಯಷ್ಟು ಸ್ಥಾನ ಗಳಿಸಿದೆ. ಅಂದರೆ, ಪ್ರಾದೇಶಿಕ ಭಾವನೆಯು ಕೇರಳದಲ್ಲೂ ಬೆಳೆದು ಬರುತ್ತಿದೆಯೆಂದು ಹೇಳಬಹುದು. ಮುಸ್ಲಿಂ ಲೀಗಿನ ಯಶಸ್ಸು ಮುಸ್ಲಿಂ ಮತದಾರರಲ್ಲಿನ ಜಾತೀಯ ಪ್ರೇಮವನ್ನು ಎತ್ತಿ ತೋರಿಸುವುದಿಲ್ಲವೆ? ಸಿಂಡಿಕೇಟ್ ಕಾಂಗ್ರೆಸ್ಸು ತನ್ನ ಮೊದಲಿನ ಒಂದೆರಡು ಸ್ಥಾನಗಳನ್ನಾದರೂ ಉಳಿಸಿಕೊಳ್ಳಲು ಅಶಕ್ತವಾಯಿತು. ಜನಸಂಘ—ಸ್ವತಂತ್ರಗಳ ಪರಿಸ್ಥಿತಿಯೂ ಇದೇ. ಆದರೆ, ಮಾರ್ಕ್ಸಿಸ್ಟರು ಅನುಭವಿಸಿದ ಪ್ರಚಂಡ ಪರಾಭವದ ಮುಂದೆ ಇದೆಲ್ಲ ತೃಣ ಸಮಾನವೆಂದೇ ಹೇಳಬೇಕು.

ಶ್ರೀಮತಿ ಗಾಂಧಿಯವರು ತನ್ನ ಪಕ್ಷದ ವಿಜಯದಿಂದ ಉತ್ತೇಜಿತರಾಗಿದ್ದಾರೆ. ತನ್ನ ಕೃತಿಯೆಲ್ಲವನ್ನೂ ಸಮರ್ಥಿಸಿಕೊಳ್ಳುವ ಈ ಸರ್ವಾಧಿಕಾರಿಣಿ ಈ ವಿಜಯವನ್ನು ತನ್ನ ಪ್ರಗತಿಶೀಲತೆಯ ಮೇಲೆ ಭಾರತೀಯರಿಟ್ಟ ವಿಶ್ವಾಸವೆಂದು ವರ್ಣಿಸುತ್ತಾರೆ. ಅವರ ಅಧ್ಯಕ್ಷ ಶ್ರೀ ರಾಮರು ಪಕ್ಷದ ನೀತಿಗಳಲ್ಲಿ ಜನತೆಯಿಟ್ಟ ನಂಬಿಕೆ ಎಂದು ಹೊಗಳಿಕೊಳ್ಳುತ್ತಾರೆ. ಶ್ರೀ ನಿಜಲಿಂಗಪ್ಪನವರು ಇದಕ್ಕೆ ವಿರುದ್ಧವಾಗಿ ಜಾತೀಯತೆ ಮತ್ತು ಕಮ್ಯೂನಿಸ್ಟರ ವಿಜಯವೆಂದು ಬೊಬ್ಬಿಡುತ್ತಾರೆ. ಎಲ್ಲವುಗಳಲ್ಲಿಯೂ ಒಂದೊಂದಂಶ ಸರಿಯಿರಬಹುದು. ಆದರೆ ಪೂರ್ಣ ಸರಿಯೆಂದೆನ್ನಲು ಅವಕಾಶವೂ ಅಲ್ಲವೇ ಅಲ್ಲ. ಒಂದ ಚುನಾವಣೆಯಲ್ಲಿ ಗೆದ್ದು ಬಂದವರಿಗೆ ಕೇರಳದ ಜನತೆ ಮತ್ತೊಂದು ಚುನಾವಣೆಯ ವೇಳೆ ಅವಕಾಶ ನೀಡಿದ್ದಿಲ್ಲ. ತಾವು ಆರಿಸಿಕೊಂಡ ಸರಕಾರವನ್ನಾದರೂ ಪೂರ್ಣಾವಧಿಯವರೆಗೆ ಉಳಿಯಲು ಬಿಟ್ಟದ್ದಿಲ್ಲ. ಕೇರಳದಲ್ಲಿ ಸರಕಾರದಲ್ಲಿ ಸರ್ವಸಾಮಾನ್ಯವಾಗಿ ಎಲ್ಲ ರಾಜ್ಯಕೀಯ ಪಕ್ಷಗಳೂ ಸೇರಿಕೊಂಡಿವೆ; ಆದುದರಿಂದ ದೇಶದ ರಾಜ್ಯಕೀಯ ಪಕ್ಷಗಳ ನೀತಿ–ಸಿದ್ಧಾಂತಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡು ನಿರಾಶರಾದ ಜನತೆಯೆಂದರೆ ಕೇರಳೀಯರೆಂದೇ ಹೇಳಬೇಕು.

ಶ್ರೀ ಅಚ್ಯುತ ಮೆನನ್ನರು ಜನಪ್ರಿಯರಾಗಿದ್ದಾರೆಂದೂ ಹೇಳುವುದು ಸಾಧ್ಯವಿಲ್ಲ. ಏಕೆಂದರೆ, ಅವರ ಪಕ್ಷದ ಬಲವೇನೂ ಹೆಚ್ಚಾದಂತಿಲ್ಲ. ಅಂದರೆ, ಈ ಬಾರಿ ಶ್ರೀಮತಿ ಗಾಂಧಿಯವರ ಇಂಡಿಕೇಟು ಕೇರಳೀಯರಿಗೆ ಹೊಸತೆನಿಸಿದೆ. ಸದಾ ನೂತನವನ್ನೇ ಬಯಸುವ ಕೇರಳೀಯರು ಇಂಡಿಕೇಟಿಗೆ ೩೨ ಸ್ಥಾನಗಳನ್ನು ಒದಗಿಸಿ ಕೊಟ್ಟರಷ್ಟೇ. ಹೊಸತನದಿಂದ ಆಕರ್ಷಿತರಾಗುವ ಮಾನವನ ಸಹಜ ಸ್ವಭಾವದಿಂದ ಇದು ಘಟಿಸಿದೆ. ಇದರಿಂದ ಇಂದಿರಾಜಿ ಹಿರಿಹಿರಿಯಾಗಬೇಕಾಗಿಲ್ಲ. ತನ್ನ ಪಕ್ಷವು ಜನಪ್ರಿಯ, ತನ್ನ ನೀತಿ ಜನಪ್ರಿಯವೆಂದು ಹೇಳುವವರು ಮುಂದಿನ ಚುನಾವಣೆಗಳ ತನಕ ಕಾಯಬೇಕಾಗಿಲ್ಲ; ಕೇಂದ್ರದಲ್ಲಿ ಕಾನೂನು ಮಂತ್ರಿಯೂ ಆಗಿದ್ದ ಇಂಡಿಕೇಟಿನ ಶ್ರೀ ಪಾನಂಪಳ್ಳಿ ಗೋವಿಂದ ಮೆನನ್ನರ ನಿಧನದಿಂದ ತೆರವಾದ ಲೋಕಸಭಾ ಸ್ಥಾನದ ಉಪ ಚುನಾವಣೆಯ ಪರಿಣಾಮವನ್ನೇ ಗಮನಿಸಿದರೆ ಸಾಕು.

ಕುಟುಂಬ ಯೋಜನೆ ಕುರಿತು ವಿಶೇಷ ಸಂದೇಶ:—

ಜನಸಂಖ್ಯೆಯ ಏರಿಕೆ ಆರ್ಥಿಕ ಪ್ರಗತಿಗೆ ತೊಂದರೆ

ಶ್ರೀ ವೀರೇಂದ್ರ ಪಾಟೀಲ್.

"ರಾಷ್ಟ್ರೀಯ ಜನನ ನಿಯಂತ್ರಣದ ಚಳುವಳಿಯ ಶೀಘ್ರಗತಿಯ ಬಗೆಗೆ ದೇಶದ ಜನತೆ ಅನೇಕ ವಿಷಯಗಳನ್ನು ತಿಳಿಯಬೇಕಾಗಿದೆ. ಅಗಾಧವಾಗಿ ಏರುತ್ತಿರುವ ಜನಸಂಖ್ಯೆಯನ್ನು ತಡೆಗಟ್ಟಬೇಕಾದರೆ, ಸಂತಾನ ನಿರೋಧದ ಹೊರತು ಬೇರೆ ದಾರಿಯಿಲ್ಲ ಎಂಬುದನ್ನರಿತು, ಜನಪದ ಹೋರಾಟಕ್ಕೆ ಒಪ್ಪಿಕೊಳ್ಳಬೇಕು" ಎಂಬುದಾಗಿ ಮೈಸೂರಿನ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಕುಟುಂಬ ಯೋಜನಾ ಪ್ರಸಾರ ಸಪ್ತಾಹದ ಸಂದರ್ಭದಲ್ಲಿ ನೀಡಿದ ಪ್ರಸಾರ ಸಂದೇಶದಲ್ಲಿ ಹೇಳಿದ್ದಾರೆ. ಅವರು ಮತ್ತೂ ಹೇಳಿದ್ದೇನೆಂದರೆ:

"ಮುಂದಿನ ಮಗು ಈಗ ಬೇಕಿಲ್ಲ— ಮೂರಕ್ಕಿಂತ ಹೆಚ್ಚು ಮಕ್ಕಳು ಬೇಡ"— ಎಂಬ ನುಡಿಗೆ ಬದಲು, "ಮುಂದಿನ ಮಗು ಈಗ ಬೇಕಿಲ್ಲ—ಎರಡು ಅಥವಾ ಮೂರಕ್ಕಿಂತ ಹೆಚ್ಚು ಮಕ್ಕಳೇ ಬೇಡ"— ಎಂಬ ಕೂಗಿಗೆ ಬೆಲೆ ಕೊಡಬೇಕಾಗಿದೆ. ಸಾಂಸಾರಿಕ ಜೀವನಕ್ಕೆ ಅವಶ್ಯಕವಾದ ಸುಖಸಾಮಗ್ರಿಗಳು ಲಭಿಸಬೇಕಾದರೆ ಮಿತ ಸಂತಾನವಿರಬೇಕು. ಕೇವಲ ಎರಡು ಅಥವಾ ಮೂರು ಮಕ್ಕಳಿದ್ದರೆ ಸಂಸಾರದ ಖರ್ಚು-ವೆಚ್ಚಗಳಲ್ಲಿ ಸಮತೋಲನವಿರುವುದಲ್ಲದೆ ಹೆಚ್ಚು; ಅದರಿಂದ ದಾಂಪತ್ಯಕ್ಕೆ ಒಂದು ಆಸರೆ ಕಲ್ಪಿಸುವುದನ್ನು ಬೇರೆ ಹೇಳಬೇಕಿಲ್ಲ."

ಸಂತಾನ ನಿರೋಧದ ಕಾರ್ಯವಿಧಾನಗಳು ನಮ್ಮ ದೇಶದಲ್ಲಿ ಮಾದರಿ ಚಳುವಳಿಯ ರೂಪವನ್ನು ತಾಳುತ್ತಿವೆ. ಎಲ್ಲ ಜಿಲ್ಲೆ, ತಾಲೂಕು, ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಜನನ ನಿಯಂತ್ರಣದ ಪ್ರಚಾರ ಅವಶ್ಯಕವಾಗಿದೆ.

ಇದಕ್ಕಾಗಿ ಇದೇ ಸೆಪ್ಟೆಂಬರ್ ೨೧ರಿಂದ 27ರ ವರೆಗೆ ದೇಶದ ಎಲ್ಲೆಡೆಯೂ ಜನನ ನಿಯಂತ್ರಣದ ಮಹಾ ಆಂದೋಲನದ ಸಲುವಾಗಿ ಪ್ರಚಾರದ ಕಾರ್ಯಕ್ರಮಗಳು ನಡೆಯಲಿವೆ. ದೇಶ ಭಕ್ತರಾದ ಪ್ರಜಾಜನ [illegible]

(ಪತ್ರಿಕಾ ಪ್ರಕಟಣೆ [illegible])

ದೊಡ್ಡ ಕುಟುಂಬದ ದೊಡ್ಡ ವ್ಯಕ್ತಿ

ಶ್ರೀ ಅಮ್ಮೆಂಬಳ ನಾರಾಯಣ ಪೈಯವರು ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ನೇಮಕಗೊಂಡದ್ದು [illegible] ಅನುಭವದಿಂದ ಅವರು [illegible]; ಅದಕ್ಕೆ ಅವರು ಆ ಸ್ಥಾನಕ್ಕೆ ಸರ್ವಥಾ ಸಮರ್ಥ ಯೋಗ್ಯ ವ್ಯಕ್ತಿಯೆಂಬುದು ಸತ್ಯ. ತಮ್ಮ ವಿದ್ವತ್ತಿನಿಂದ ಸಂಸ್ಕೃತವನ್ನು ಅಧ್ಯಯನ ಮಾಡಿದ್ದ ಶ್ರೀ ಪೈ ಭಾರತೀಯ ಸಂಸ್ಕೃತಿಯ ಮೂಲ ಗ್ರಂಥಗಳಾದ ರಾಮಾಯಣ, ಮಹಾಭಾರತ, ಭಾಗವತ ಮೊದಲಾದವುಗಳ ಪರಿಪೂರ್ಣ [illegible] ಪಡೆದವರು, ಸಾಹಿತ್ಯದಲ್ಲೂ ನಿಷ್ಣಾತರು. [illegible] ಶ್ರೀ ಎ. ಶ್ರೀನಿವಾಸ ಪೈಯವರ [illegible] ಮಗನಾದ ಶ್ರೀ ನಾರಾಯಣ ಪೈಯವರಲ್ಲೂ ಅದೇ ಗುಣಗಳು ಮನೆಮಾಡಿಕೊಂಡಿವೆ. [illegible] ಹೈ.ಕೋರ್ಟಿನ [illegible] ಮದ್ರಾಸಿನಲ್ಲಿ ಶ್ರೀ [illegible] ಸೀತಾರಾಮಯ್ಯ [illegible] ಶ್ರೀ ಪೈಯವರು [illegible] ಶ್ರೀ [illegible] ಪ್ರಭಾವವೂ [illegible], ಮುಂದೆ ರಾಜ್ಯ [illegible], ಶ್ರೀ ಪೈಯವರ [illegible] ನ್ಯಾಯಾಧೀಶರಾದವರು [illegible] ಮುಖ್ಯ ನ್ಯಾಯಾಧೀಶರಾಗಿ ಅಧಿಕಾರವನ್ನು ಸ್ವೀಕರಿಸಿದರು.

ಶ್ರೀ ಪೈಯವರ ಕುಟುಂಬವು [illegible] ದೊಡ್ಡದು. [illegible] ಶ್ರೀ ಪೈ [illegible] ಬ್ಯಾಂಕುಗಳ [illegible] ಬ್ಯಾಂಕುಗಳಿಗೆ [illegible] ಶ್ರೀ [illegible] ಪೈಯವರು. ಭಾರತದ [illegible] ಪ್ರಧಾನ [illegible] ಈ ಮನೆತನ ಅದರಿಂದ [illegible] ಹಾಗಾಗಿ ದೇಶಭಕ್ತಿ, ಶ್ರದ್ಧೆ, ನಿಷ್ಪಕ್ಷಪಾತತೆ, ಸತ್ಯಸಂಧತೆ ಮೊದಲಾದ ಉತ್ತಮೋತ್ತಮ ಗುಣಗಳಿಗೆ ಹೆಸರಾದ ದೊಡ್ಡ ಕುಟುಂಬವೊಂದರ ದೊಡ್ಡ ವ್ಯಕ್ತಿ ಶ್ರೀ ಎ. ನಾರಾಯಣ ಪೈಯವರು ಮುಖ್ಯ ನ್ಯಾಯಾಧೀಶರಾಗಿ ನಿಯುಕ್ತಗೊಂಡ ಈ ಸಂದರ್ಭದಲ್ಲಿ ಅವರನ್ನು ನವಯುಗವು ಅಭಿನಂದಿಸುತ್ತದೆ.

ಕೆಣಕುವ ಪ್ರಶ್ನೆ

ರಾಜ್ಯಗಳಿಗೆ ಸ್ವಯಮಾಧಿಕಾರ ಬೇಕೆ?

ಪ್ರತ್ಯೇಕ ತಮಿಳುನಾಡಿನ (ದ್ರಾವಿಡ ಸ್ಥಾನ) ರಚನೆಯನ್ನೇ ತನ್ನ ಉದ್ದೇಶವಾಗಿಟ್ಟುಕೊಂಡು ದ್ರಾವಿಡ ಕಳಗಂ ಹುಟ್ಟಿದ್ದು. ಡಿ| ಅಣ್ಣಾ ದೊರೈ ಅವರು ಮೊದಲಿಗೆ ಇದಕ್ಕೆ ಸೇರಿದವರು. ಇಂದು ದ್ರಾ.ಮು.ಕ.ದ ಪ್ರಮುಖರಾಗಿರುವವರೆಲ್ಲ ಒಂದು ಕಾಲದಲ್ಲಿ ದ್ರಾ.ಕ. ಪರಮ ಭಕ್ತರಾಗಿದ್ದವರು. ಆದರೆ, ಪ್ರಚಲಿತ ರಾಜ್ಯಕಾರಣದಲ್ಲಿ ಪ್ರತ್ಯೇಕತೆಗೆ ಬೆಲೆಯಿಲ್ಲವೆಂದು ಸಾರಿ ಮುಕ್ಕೋತ್ತರರಾಗಿ ರಾಜ್ಯಕೀಯಕ್ಕೆ ಇವರು ಧುಮುಕಿದರು; ಗೆದ್ದುಬಂದರು; ಪ್ರಭುತ್ವ ನೆಲೆಗೊಳಿಸಿದರು.

ಹುಟ್ಟುಗುಣ ಗಟ್ಟ ಹತ್ತಿದರೂ ಹೋಗದು ಎಂಬ ಗಾದೆ ಮಾತು ನಮ್ಮ ದೇಶದಲ್ಲಿ ಕಮ್ಯುನಿಸ್ಟರಿಗೂ ದ್ರಾಮುಕದವರಿಗೂ ಸಮರ್ಪಕವಾಗಿ ಅನ್ವಯಿಸುತ್ತದೆ. ಪ್ರಜಾಪ್ರಭುತ್ವದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತ ಅದನ್ನು ಗಾಳಿಗೆ ತೂರುವುದು ಕಮ್ಯುನಿಸ್ಟರ ಹವ್ಯಾಸ. ಡೊಂಕು ಬಾಲ ಹಿಡಿದು ಪ್ರತ್ಯೇಕತೆಯನ್ನು ಬೇಡುವುದು ದ್ರಾಮುಕರ ಚಟ. ತಮಿಳುನಾಡಿಗೆ ಪ್ರತ್ಯೇಕ ಧ್ವಜ ಬೇಕೆಂಬ ವಾದ ಇದಕ್ಕೆ ಹುಟ್ಟಿಕೊಂಡ ಅರ್ಥ ಬೇರೆ. ದ್ರಾಮುಕವು ತನಗೆ ಸ್ವಯಮಾಧಿಕಾರವನ್ನು ಬಯಸುತ್ತದೆ; ಹಿಂದೀ ಭಾಷೆಯನ್ನೇ ವಿರೋಧಿಸುತ್ತದೆ.

ದ್ರಾಮುಕವು ಮದ್ರಾಸ ನಗರದಲ್ಲಿ 'ರಾಜ್ಯಸ್ವಯಮಾಧಿಕಾರ' ಸಂಬಂಧದಲ್ಲಿ ಸಮ್ಮೇಳನವೊಂದನ್ನು ಏರ್ಪಡಿಸಿತು. ಇದನ್ನು ಉದ್ಘಾಟಿಸಲು ಪಶ್ಚಿಮ ಬಂಗಾಳದ (ಬಂಗ್ಲಾ ಕಾಂಗ್ರೆಸಿನ) ಮಾಜಿ ಮುಖ್ಯಮಂತ್ರಿ ಶ್ರೀ ಅಜಯ ಮುಖರ್ಜಿಯವರನ್ನು ಕರೆಯಿತು. ಆದರೆ, ದ್ರಾಮುಕ ಮತ್ತು ಶ್ರೀ ಮುಖರ್ಜಿಯವರ ಅಭಿಪ್ರಾಯಗಳಲ್ಲಿ ಆಕಾಶ-ಪಾತಾಳಗಳಷ್ಟು ಅಂತರವಿರುವುದು ಗೋಚರವಾಗುತ್ತದೆ. ಈ ಸಮ್ಮೇಳನದಲ್ಲಿ ಶ್ರೀ ಮುಖರ್ಜಿಯವರು ವ್ಯಕ್ತಪಡಿಸಿದ ಕೆಲವು ಅಭಿಪ್ರಾಯಗಳಿವು.

ಸ್ವಯಮಾಧಿಕಾರ

ರಾಜ್ಯಗಳಿಗೆ ಸಂಪೂರ್ಣ ಸ್ವಯಮಾಧಿಕಾರ ನೀಡಿದರೆ, ರಾಷ್ಟ್ರವು ಚೂರು ಚೂರಾಗಿ ನಾವು ಮತ್ತೆ ಗುಲಾಮಗಿರಿಗೆ ಒಳಪಡಬೇಕಾಗಬಹುದು. ರಾಜ್ಯಾಂಗದನ್ವಯ ಎಷ್ಟು ಸಾಧ್ಯವೋ ಅಷ್ಟು ಸ್ವಯಮಾಧಿಕಾರವನ್ನು ಪಡೆದು ಅದರಿಂದಲೇ ರಾಜ್ಯಗಳು ತೃಪ್ತಿ ಪಡಬೇಕು. ಅಮೆರಿಕೆಯಲ್ಲಿರುವಂತೆ ವಿವಿಧ ರಾಜ್ಯಗಳಿಗೆ ಸಂಪೂರ್ಣ ಸ್ವಯಮಾಧಿಕಾರ ಬೇಕೆಂದು ಕೇಳಬಾರದು. ಹೀಗೆ ಕೇಳುವುದರಿಂದ ದೇಶವು ಭಗ್ನವಾಗುವುದು. ಒಂದೊಮ್ಮೆ ಭಗ್ನವಾದ ದೇಶವನ್ನು ಮತ್ತೆ ಒಗ್ಗೂಡಿಸುವುದು ಅಸಾಧ್ಯ. ಇದರಿಂದ ದೇಶವೂ ರಾಜ್ಯಗಳೂ ಭಗ್ನಗೊಂಡಾವು; ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಾವು.

ಸಂಪರ್ಕ ಭಾಷೆ

ದೇಶದ ಭಾವೈಕ್ಯವನ್ನು ಸಂರಕ್ಷಿಸಲು ಮತ್ತು ಅದನ್ನು ಬಲಪಡಿಸಲು ಇಡಿಯ ದೇಶಕ್ಕೊಂದು ಸಾಮಾನ್ಯ ಭಾಷೆ ಅಗತ್ಯ. ಇಂಗ್ಲಿಷ್ ಭಾಷೆ ಅಂತಾರಾಷ್ಟ್ರೀಯ ಭಾಷೆಯೆಂಬುದು ನಿಜ. ಆದರೆ, ಅದು ರಾಷ್ಟ್ರೀಯ ಸಂಪರ್ಕಭಾಷೆಯೆಂದಿಗೂ ಆಗಲಾರದು; ಆಗಲೂ ಬಾರದು. (ಹಿಂದೀ ಭಾಷೆಯೇ ಸಂಪರ್ಕ ಭಾಷೆಯಾಗಬೇಕು ಎಂದು ಬೇರೆ ಹೇಳುವ ಅಗತ್ಯವಿಲ್ಲ.)

ರಾಜ್ಯಪಾಲರು

ಒಂದು ರಾಜ್ಯಕ್ಕೆ ರಾಜ್ಯಪಾಲರನ್ನು ನೇಮಕ ಮಾಡುವುದಕ್ಕೆ ಮೊದಲು ಆ ರಾಜ್ಯದ ಮುಖ್ಯಮಂತ್ರಿಯೊಡನೆ ಸಮಾಲೋಚಿಸ ಬೇಕು. ಅವರ ಸಾಮಾನ್ಯ ಕರ್ತವ್ಯ ನಿರ್ವಹಣೆಯ ಬಗ್ಗೆ ಅವರಿಗೆ ಕೆಲವು ಸೂಚನೆಗಳನ್ನು ನೀಡ ಬೇಕು. ಇದಕ್ಕೆ ಮೊದಲು ಸಂಬಂಧಪಟ್ಟ ಮುಖ್ಯಮಂತ್ರಿಯೊಡನೆ ಚರ್ಚೆ ನಡೆಸ ಬೇಕು. ರಾಷ್ಟ್ರಪತಿಯವರಿಂದ ನೇಮಕಗೊಳ್ಳುವ ಅಂತಃರಾಜ್ಯ ಸಮಿತಿಗಳಿಗೆ ಪ್ರಧಾನಿ ಮತ್ತು ಕೇಂದ್ರ ಗೃಹ ಸಚಿವರು ಸದಸ್ಯರಾಗಿರ ಬೇಕು.

ಮಂತ್ರಿಮಂಡಳದ ಉಚ್ಚಾಟನೆ

ರಾಜ್ಯದ ಸಚಿವ ಸಂಪುಟವು ವಿಧಾನ ಸಭೆಗೆ ಜವಾಬ್ದಾರವಾದದ್ದು. ಆದ್ದರಿಂದ, ರಾಜ್ಯ ವಿಧಾನ ಸಭೆಯು ಸಚಿವ ಸಂಪುಟದ ಮೇಲೆ ಅವಿಶ್ವಾಸ ನಿರ್ಣಯವನ್ನು ಕೈಕೊಳ್ಳುವ ವರೆಗೆ ಸಚಿವ ಸಂಪುಟವನ್ನು ವಿಸರ್ಜಿಸಬಾರದು.

ಕಾನೂನು ವ್ಯವಸ್ಥೆ

ಕಾನೂನು ಮತ್ತು ಸುವ್ಯವಸ್ಥೆಗಳನ್ನು ರಕ್ಷಿಸುವುದು ರಾಜ್ಯ ಸರಕಾರದ ಹೊಣೆಗಾರಿಕೆ. ಆದರೂ ಕೇಂದ್ರ ಸರಕಾರವು ತನ್ನ ಸಂಸ್ಥೆಗಳ ಮತ್ತು ತನ್ನ ಆಸ್ತಿ-ಪಾಸ್ತಿಗಳ ಮತ್ತು ತನ್ನ ನೌಕರರ ಸಂರಕ್ಷಣೆಗಾಗಿ ತನ್ನ ಸ್ವಂತ ಪೋಲಿಸ್ ಪಡೆಯನ್ನು ಇಲ್ಲವೇ ಮಿಲಿಟರಿ ಪಡೆಗಳನ್ನು ಕಳಿಸುವ ಅಧಿಕಾರವನ್ನು ಪಡೆದಿರಬೇಕು.

ಅಂತಾರಾಜ್ಯ ವಿವಾದ

ಅಂತಾರಾಜ್ಯ ವಿವಾದಗಳು ಮೂರು ವರ್ಷಗಳೊಳಗೆ ಬಗೆಹರಿಯಬೇಕು. ಒಂದು ವೇಳೆ ಹೀಗಾಗದಿದ್ದರೆ, ಅವುಗಳನ್ನು ಕಡ್ಡಾಯವಾಗಿ ಮಧ್ಯಸ್ಥಿಕೆಗೆ ಒಳಪಡಿಸಬೇಕು. ಕೇಂದ್ರ ಸರಕಾರವು ಇದಕ್ಕಾಗಿ ಪಂಚಾಯತಿಗಳನ್ನು ನೇಮಿಸಬೇಕು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. 135/69. Ex. C. 40/1970

ಪೂಲಾಪಿಂಟೋ ಬಾಯಿ —ಡಿಕ್ರಿದಾರಳು,
ವಿದ್ದು ಶೆಡ್ತಿ ಸಹಾ—ಜಡ್ಜಮೆಂಟು ಡೆಟ್ಟರರು.

ಕಾರ್ಕಳ ತಾಲೂಕು ರಂಜಾಳ ಗ್ರಾಮದಲ್ಲಿರುವ ದೋಗು ಶೆಟ್ರ ಸೊಸೆ 1ನೇ J.D. ವಿದ್ದು ಶೆಡ್ತಿಯವರಿಗೆ.—

ಕೋರ್ಟಿನ ಡಿಕ್ರಿಯಲ್ಲಿ ಸ್ಥಿರಾಸ್ತಿ ನಿಲಂ ಕಾರಿಕು ಯಾಸ್ತಿಹಾಂನ ಶರ್ತುಗಳ ನಿರ್ಣಯದ ಬಗ್ಗೆ ಡಿಕ್ರಿ ಅಮಲ್ದಾರಿಯು ನಿಮ್ಮ ಹಾಜರಾತಿ ಕಾಂಕು ತಾ. 28-9-70ಕ್ಕೆ ಇಟ್ಟದ್ದು ಆ ಕಾಂಕು ನಿಮ್ಮ ಆಕ್ಷೇಪಗಳಿದ್ದಲ್ಲಿ ನೀವು ಸದ್ರಿ ದಿನ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉದಹಂಸ ತಕ್ಕದ್ದು. ತಪ್ಪಿದಲ್ಲಿ ಕೋರ್ಟಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

K. S. Hegde,
Advocate for D. Holder.

Karkala, 18-9-70

ಕುಟುಂಬ ಯೋಜನಾ ದ್ವಿಸಪ್ತಾಹ,

ಸೆಪ್ಟೆಂಬರ 14 ರಿಂದ 27, 1970

ನಾವು ಉಣ್ಣುವ ಆಹಾರಕ್ಕೂ ವಿದೇಶಗಳನ್ನು ಅವಲಂಬಿಸಿಕೊಂಡಿರಬೇಕಾದ ಪ್ರಮೇಯದಿಂದಾಗಿ ಜನಸಂಖ್ಯೆಯ ನಿಯಂತ್ರಣ ಎಷ್ಟು ಅಗತ್ಯವೆಂಬುದು ಸ್ಪಷ್ಟವಾಗುತ್ತದೆ. ಆದರೆ ಕೇವಲ ಸರ್ಕಾರದಿಂದ ಮಾತ್ರ ಆಗುವ ಕೆಲಸವಲ್ಲ. ಅದು ಜನತೆಯ ಕಾರ್ಯಕ್ರಮವಾದಾಗಲೇ ಅದಕ್ಕೆ ಯಶಸ್ಸು. ದೇಶದಲ್ಲಿರುವ ಸರ್ಕಾರೇತರ ಸಂಸ್ಥೆಗಳು, ಸಾಮಾಜಿಕ ಸಂಘಗಳು, ಸ್ಥಳೀಯ ಸಂಸ್ಥೆಗಳು, ಗ್ರಾಮೀಣ ಸಂಸ್ಥೆಗಳು ಎಲ್ಲವೂ ಈ ಮಹಾಕಾರ್ಯದಲ್ಲಿ ಭಾಗವಹಿಸಬೇಕು.

—ಡಾ. ಸರ್ವಪಳ್ಳಿ ರಾಧಾಕೃಷ್ಣನ್



ಡಿಎವಿಪಿ 70/200

ಪ್ರೇಮದ ಕಾಯಿದೆ ಇರುವಲ್ಲಿ ಮಾತ್ರ ಸ್ಥಿರತೆ ಇರುತ್ತದೆ.

○ ○ ○

ಪಶುಗಳ ಸಮಾಜದಲ್ಲಿ ಸ್ಥಿರತೆ ಇರುವದಿಲ್ಲ.

○ ○ ○

ತನ್ನ ಪರಿವಾರದ ಪುಟ್ಟಿಗೆ ಪರಿಮಿತನಾಗಿರುವ ಮನಸ್ಸಿನ ಪ್ರಗತಿಯು ಕುಂಠಿತವಾಗುತ್ತದೆ. ಆದ್ದರಿಂದ ಗೃಹಸ್ಥಾಶ್ರಮದ ಅನುಭವ ಪಟ್ಟವರು ತಮ್ಮ ಊರನ್ನೇ ತಮ್ಮ ಕುಟುಂಬವೆಂದು ತಿಳಿಯಬೇಕು. ಇದಕ್ಕೇ ವಾನಪ್ರಸ್ಥವೆನ್ನುವರು.

ಪಠಿಸ ಬೇಕಾದ ಕೆಲಸದ ಮಂತ್ರ

ನೀವು ಬಡವರಾಗಿದ್ದರೆ-ಕೆಲಸಮಾಡಿ.

ನೀವು ಆರೋಗ್ಯದ ಬಗೆಗೆ ಹೆದರಿಕೊಂಡಿದ್ದರೆ-ಕೆಲಸ ಮಾಡಿ

ನಿಮಗೆ ನಿರಾಶೆ ಎದುರಾದರೆ—ಕೆಲಸ ಮಾಡಿ

ನೀವು ಶ್ರೀಮಂತರಾಗಿದ್ದರೆ-ಕೆಲಸವನ್ನು ಮಾಡಿಯೇ ಮಾಡಿ

ನಿಮ್ಮ ಶ್ರದ್ಧೆ ಕುಗ್ಗಿರಿಸಿ, ನಿಮ್ಮ ವಿಚಾರ ಶಕ್ತಿ ಸೋತರೆ-ಕೆಲಸ ಮಾಡಿ

ನಿಮ್ಮ ಕನಸುಗಳು ನುಚ್ಚು ನುರಿಯಾಗಿ ಆಸೆ ಎನ್ನುವುದು ಸತ್ತಂತಾಗಿದ್ದರೆ-ಕೆಲಸ ಮಾಡಿ

ನಿಮ್ಮ ಮೇಲೆ ದುಃಖ ದಾಳಿಮಾಡಿ, ನೀವು ಪ್ರೀತಿಸುವವರೂ ನಿಮಗೆ ಅಪಚಾರವೆಸಗಿದರೆ-ಕೆಲಸಮಾಡಿ

ನಿಮ್ಮ ಮೇಲೆ ಯೋಗ್ಯವಲ್ಲದ ಜವಾಬ್ದಾರಿಗಳು ಬಿದ್ದು ನಿಮಗೆ ಭಾರವೆನಿಸಿದರೆ-ಕೆಲಸ ಮಾಡಿ

ನೀವು ಸುಖಿಯಾಗಿದ್ದರೆ ಕೆಲಸಮಾಡುತ್ತಲೇ ಹೋಗಿ-ಆಲಸ್ಯತನ, ಹೆದರಿಕೆ ಹಾಗೂ ಸಂದೇಹಗಳನ್ನು ತರುತ್ತವೆ.

ನಿಮಗೆ ಏನೇ ಆಗಿದ್ದರೂ - ಕೆಲಸಮಾಡಿ

ನಿಮ್ಮ ಜೀವನವು ಗಂಡಾಂತರದಲ್ಲಿರುವಂತೆ ಭಾವಿಸಿ ಅದು ಇದ್ದೇ ಇದೆ-ಕೆಲಸ ಮಾಡಿ!

○ ○ ○

(ಇದನ್ನು ಅಮೇರಿಕನನು ತನ್ನ ಮೇಜಿನ ಮೇಲೆ ಇರಿಸಿಕೊಂಡಿದ್ದಾನೆ. ಜೀವನದ ಎಲ್ಲ ಸಮಸ್ಯೆಗಳಿಗೂ ಇದರಲ್ಲಿ ಪರಿಹಾರವಿದೆಯೆಂದು ಅವನು ಹೇಳುತ್ತಾನೆ.) —ಪ್ರ.

(ಇ) ಕಾಂಗ್ರೆಸ್ಸಿನ ಧ್ಯೇಯ ಸ್ಪಷ್ಟ ಇಲ್ಲ

ಭಾರತದಲ್ಲಿ ಕಮ್ಯೂನಿಸಮಿನ ಪ್ರಚಾರಕ್ಕಾಗಿ ರಷ್ಯಾದ ಆದೇಶದಂತೆ ಬ್ರಿಟನಿನಿಂದ ಮೊತ್ತಮೊದಲಿಗೆ ಇಲ್ಲಿಗೆ ಬಂದವರು ಸ್ಪ್ರಾಟ್. ಇಂದಿನ ಕಮ್ಯೂನಿಸ್ಟ್ ಪ್ರಮುಖರನ್ನು ಸಿದ್ಧಗೊಳಿಸಿದ ಶ್ರೇಯಸ್ಸು, ಶ್ರಮ ಅವರದ್ದು. ಅದೇ ಸ್ಪ್ರಾಟ್ ಇಂದು ಸ್ವತಂತ್ರ ಪಾರ್ಟಿಯ ಮುಖಪತ್ರಿಕೆಯಾಗಿರುವ 'ಸ್ವರಾಜ್ಯ'ದ ಸಂಪಾದಕರಾಗಿದ್ದಾರೆ. ಭಾರತದಲ್ಲಿ ಕಮ್ಯೂನಿಸಮಿಗೆ ಸ್ಥಾನವಿಲ್ಲವೆಂಬುದನ್ನು ಅವರು ಕಂಡುಕೊಂಡಿರುವರು, ಅದೇ ರೀತಿ ಇಲ್ಲಿ ಸಮತಾವಾದಕ್ಕಾಗಿ ಹೆಣಗಾಡಿದವರಲ್ಲಿ ಅಗ್ರಸ್ಥಾನ ಡಾ. ಎಮ್. ಎನ್. ರಾಯ್ ಅವರಿಗೆ ಸಲ್ಲುತ್ತದೆ. ಕೊನೆಯಲ್ಲಿ ಅವರೂ ಇದೇ ನಿರ್ಧಾರಕ್ಕೆ ಬಂದು ಸಮತಾವಾದಕ್ಕೆ ತಿಲಾಂಜಲಿ ಕೊಟ್ಟಿರುವರು. ಹಾಗಿದ್ದರೂ ಪ್ರಚಲಿತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಭಾರತದಲ್ಲಿ ಕಮ್ಯೂನಿಸಂ ಬರುವದು ಗೋಡೆಯ ಮೇಲೆ ಬರೆದಿಟ್ಟಷ್ಟು ಸ್ಪಷ್ಟವಿದೆಯೆಂದು ಹೇಳಿರುವರು. ಅದಕ್ಕಾಗಿ ತನ್ನೆಲ್ಲ ಶಕ್ತಿಯನ್ನು ಬಲವನ್ನು ಕೇಂದ್ರೀಕರಿಸಿ ಅವರು ಹೋರಾಡುತ್ತಿದ್ದಾರೆ. ಚರಿತ್ರೆಯ ಪುಟಗಳಿಂದ ಅವರೇಕಿಷ್ಟು ಪಾಠ ಕಲಿತುಕೊಳ್ಳುವದಿಲ್ಲವೆಂಬುದು ರಹಸ್ಯವಿದೆ. ಅದಕ್ಕೆ ಭುವನದಲ್ಲಿ ಛಲದಂಕ ದುರ್ಯೋಧನನ ಅವಸ್ಥೆ ಏನಾಯ್ತೆಂಬುದನ್ನು ಅವರು ಜ್ಞಾಪಿಸಿಕೊಳ್ಳಬೇಕು. ನಡುಕಟ್ಟಿಕೊಂಡು ಅವರು ದೇಶೀಯ ಶಕ್ತಿಯ ದಮನಕಾರ್ಯಕ್ಕೆ ಸಟೆದೆದ್ದು ನಿಂತಿರುವರು. ಕಮ್ಯೂನಿಸಮಿನ ಪ್ರಚಾರಕ್ಕಾಗಿ ಅವರು ಅಧಿಕಾರದ ದುರುಪಯೋಗ ಮಾಡುತ್ತಿದ್ದಾರೆ. ಪ್ರಧಾನಿಯ ಸ್ಥಾನದಿಂದ ಹೋದಲ್ಲೆಲ್ಲ ಅವರು ಕಮ್ಯೂನಿಸಮಿನ ಪ್ರಚಾರ ಮಾಡುತ್ತಿದ್ದಾರೆ. ಅವರು ಸಚಿವ ಸಂಪುಟದಲ್ಲಿ ಕಮ್ಯೂನಿಸ್ಟರ (ಈಗ ಮಂತ್ರಿಗಳೆನ್ನುತ್ತಿರುವ) ತಂಡವನ್ನೇ ಸೇರಿಸಿಕೊಂಡಿದ್ದಾರೆ. ಉಳಿದ ಕಾಂಗ್ರೆಸ್ ಅನುಯಾಯಿಗಳು ಸಹಾ ಅವರ ಅಂತಃರಂಗವನ್ನು ಅರಿತುಕೊಂಡು ತಮ್ಮ ಸ್ಥಾನದ ಭದ್ರತೆಗಾಗಿ ಜೀ ಎನ್ನುತ್ತ ಶ್ರೀಮತಿಜೀಯವರು ಮಾಡುತ್ತಿರುವ ಕೆಲಸವನ್ನೇ ಅವರ ಪ್ರೀತ್ಯರ್ಥವೆಂಬಂತೆ ಮಾಡುತ್ತಿದ್ದಾರೆ. ತಮ್ಮ ಗಾದಿಯನ್ನುಳಿಸಿಕೊಳ್ಳಲು ಈ ತಂಡ ಶ್ರೀಮತಿ ಗಾಂಧಿಯವರ ಸಂತುಷ್ಟಿಗಾಗಿ ಪೈಪೋಟಿ ನಡೆಸುತ್ತಿದೆ. ಕೇಂದ್ರದ ವಿದ್ಯಾಖಾತೆ ರಷ್ಯಾದ ಅಕ್ಟೋಬರ್ ಕ್ರಾಂತಿಯ ನೆನಪಿಗಾಗಿ ಸ್ಮರಣ ಸಂಚಿಕೆ ಪ್ರಕಟಿಸಿ ಕಮ್ಯೂನಿಸಮಿನ (ನಕ್ಸಲೀಯತೆಯನ್ನು ಕೂಡಾ) ಪ್ರಚಾರ ಮಾಡಿದಲ್ಲಿ ಚಲಚ್ಚಿತ್ರ ವಿಭಾಗವು ಚಲಚಿತ್ರದ ಮೂಲಕ ಪ್ರಚಾರಕ್ಕೆ ಮುಂದಾಯಿತು. ಆಗ ಆಕಾಶವಾಣಿ ಹಿಂದಕ್ಕೆ ಬೀಳುತ್ತದೆ ಏನು? ಮಂತ್ರಿ ಮಹೋದಯರಿಗೆ ಅದರಿಂದಲೂ ತೃಪ್ತಿ ಇಲ್ಲ. ಅವರು ಸಂಸತ್ತನ್ನು ಅದಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಅಲ್ಲಿ ಅವರು ಕಮ್ಯೂನಿಸ್ಟರ ಅದರಲ್ಲೂ ನಕ್ಸಲೀಯರನ್ನು ಹೊಗಳಿ ಧೈರ್ಯದಿಂದ ಮಾತಾಡುತ್ತಿದ್ದಾರೆ! ಅದಕ್ಕೆ ಸಂದರ್ಭ ಸಿಗದಿರುವ ನವ್ಯಕಾಂಗ್ರೆಸ್ಸಿನ ಮುಂದಾಳುಗಳು ಹೋದೆಡೆಗಳಲ್ಲಿ ಆ ಕೆಲಸವನ್ನು ಮಾಡುತ್ತಿದ್ದಾರೆ. ಅದರಲ್ಲಿ ಪಂದ್ಯಾಟವೇ ನಡೆಯುತ್ತಿದೆ. ಈಗ ಅವರು ಕಾಂಗ್ರೆಸ್ಸನ್ನು ದೂರುವಷ್ಟರ ತನಕವೂ ಪ್ರಗತಿ ಹೊಂದಿದ್ದಾರೆ. ಅದಕ್ಕೊಂದು ಉದಾಹರಣೆ.

ಕೇಂದ್ರದ ವಿದ್ಯಾಸಚಿವ ಡಾ| ವಿ. ಕೆ. ಆರ್. ವಿ. ರಾವ್‌ರವರು ನವಕಾಂಗ್ರೆಸ್ಸಿನ ಕಾರ್ಯಕರ್ತರನ್ನುದ್ದೇಶಿಸಿ ಕೊಯಂಬತ್ತೂರಿನಲ್ಲಿ ಭಾಷಣಕೊಡುತ್ತ, ತಾನು ನಿರ್ಮಿಸಬೇಕೆಂದಿರುವ ಸಮಾಜವಾದಿ ಸಮಾಜದ ಹಾಗೂ ಅದನ್ನುಂಟುಮಾಡುವ ವಿಧಾನದ ಸ್ಪಷ್ಟ ಧ್ಯೇಯ ಕಾಂಗ್ರೆಸ್ಸಿಗಿಲ್ಲವೆಂದರು. ತಾವೇ ನೈಜ ಕಾಂಗ್ರೆಸ್ಸನ್ನವರ ಮುಖಂಡರು, ತಾನೇ ನೈಜ ಕಾಂಗ್ರೆಸ್ಸೆನ್ನುವ ಇಂದಿರಜ್ಜಿಯವರ ವಿದ್ಯಾಮಂತ್ರಿ ಕಾಂಗ್ರೆಸ್ಸಿನ ಕುರಿತು ಸ್ಪಷ್ಟವಾಗಿ ತನ್ನ ಅಭಿಪ್ರಾಯವನ್ನು ತಿಳಿಸಿದರು. ಅಂದರೆ ಕಮ್ಯೂನಿಸ್ಟರ ಬೆಂಬಲ ಗಳಿಸಲಿಕ್ಕಾಗಿ ಹಾಗೂ ಮುಗ್ಧ ಜನತೆಯನ್ನು ಮೋಸಗೊಳಿಸಲಿಕ್ಕಾಗಿ ಇಂದಿರಾ ಕಾಂಗ್ರೆಸ್ಸು ಸಮಾಜವಾದ ಹಾಗೂ ಸಮತಾವಾದದ ಘೋಷಣೆ ಹಾಕುತ್ತಿದೆಯೆಂದಾಯಿತು. ಮಂತ್ರಿಗಳೇ ಹಾಗೆಂದು ಹೇಳುವಾಗ ಅದನ್ನೆದುರಿಸುವ ಧೈರ್ಯ ಅದ್ಯಾರಿಗಿದೆ? ತನ್ನ ಮಾತಿಗೆ ಅಂದರೆ ಅಭಿಪ್ರಾಯವನ್ನು ಸ್ಪಷ್ಟೀಕರಿಸಲು ಹಾಗೂ ಸಮಾಜವಾದದ ಬಳಕೆಗೆ ಅದೇನು ಮಾಡಬೇಕೆಂಬುದನ್ನು ತಿಳಿಸಲೂ ಅವರು ಮರೆತಿರುವದಿಲ್ಲ. ಅವರು ಜಗಜೀವನ್‌ರಾಮ್‌ರಾಯರ ಕಾಂಗ್ರೆಸ್ಸಿನ ಅತ್ಸಾಕ್ಷಿಯುಳ್ಳ ನಿಷ್ಠಾವಂತ ಸದಸ್ಯರಾದರೂ ತನ್ನ ಅಧ್ಯಕ್ಷರ ಕೃಪಾಕಟಾಕ್ಷಕ್ಕೆ ಅವರು ಪಾತ್ರರಾಗಿರುವದಿಲ್ಲ. ಕೇವಲ ಕಾನೂನುಗಳನ್ನು ರಚಿಸುವದರಿಂದ ಹಾಗೂ ಸರಕಾರೀ ರಂಗಗಳನ್ನು ವಿಸ್ತರಿಸುವದರಿಂದ ಸಮಾಜವಾದವನ್ನು ಬಳಕೆಗೆ ತರಲು ಸಾಧ್ಯ ಇರುವದಿಲ್ಲ. ಪ್ರಜಾಸತ್ತಾತ್ಮಕ ಸಂಸತ್ತಿನ ಮೂಲಕ ಸಮಾಜವಾದವನ್ನು ತರಲು ಸಾಧ್ಯ ಇರುವದಿಲ್ಲ! ಸಮಾಜವಾದದ ಮೇಲೆ ನಂಬಿಕೆ ಇರುವವರು ಅಂತಹ ಸಮಾಜವನ್ನು ಸೃಷ್ಟಿಸಲು ಸರಕಾರವನ್ನೇ ನಂಬಿಕೊಂಡು ಇರಕೂಡದು. ಸಮಾಜವಾದವನ್ನು ಬಳಕೆಗೆ ತರಲು ಎಲ್ಲಾ ಕಾಂಗ್ರೆಸ್ಸಿಗರು ಮುಂದಕೆ ಬರಬೇಕು. ಹೀಗೆ ಮುಂದೆ ಬಂದ ಗ ತಾವು ಅದ್ಯಾವ ರೀತಿಯ ಸಮಾಜವನ್ನು ಸೃಷ್ಟಿಸಬೇಕೆಂಬ ಬಗ್ಗೆ ಸ್ಪಷ್ಟ ಕಲ್ಪನೆ ಅವರಿಗಿರಬೇಕು. ಹಾಗೇನೇ ಅದರ ಪ್ರಾಪ್ತಿಗೆ ಅಂದರೆ ರಚನೆಗೆ ಅದೇನೆಲ್ಲ ಮಾಡಬೇಕೆಂಬುದರ ಸ್ಪಷ್ಟ ಅಭಿಪ್ರಾಯ, ಯೋಜನೆ ಅವರಲ್ಲಿರಬೇಕು. ಪ್ರಪಂಚದಲ್ಲೆಲ್ಲಾದರೂ ಸಮಾಜವಾದೀ ಸಮಾಜಗಳಿವೆಯೇ? ಅಲ್ಲಿ ಹೇಗೆ ಸಮಾಜವಾದ ಬೇರು ಬಿಟ್ಟಿದೆ? ಈ ವಿಷಯದತ್ತ ನಾವು ದೃಷ್ಟಿಹಾಯಿಸಿದಲ್ಲಿ ರಷ್ಯಾ ಹಾಗೂ ಚೈನಾದತ್ತ ನಮ್ಮ ಗಮನ ಹೋಗುತ್ತದೆ. ಅಲ್ಲಿ ಸಮಾಜವಾದೀ ಸಮಾಜವನ್ನು ಸೃಷ್ಟಿಸಲಿಕ್ಕಾಗಿ ಬಂಡವಾಳಶಾಹಿಗಳನ್ನು ನಾಶಮಾಡಲಾಗಿರುತ್ತದೆ. ಉಳ್ಳವರು ಅದ್ಯಾವಾಗಲೂ ಅದನ್ನು ಸ್ವ-ಇಚ್ಛೆಯಿಂದ ಬಿಟ್ಟುಕೊಡುವದಿಲ್ಲವೆಂಬುದು ಕಮ್ಯೂನಿಸ್ಟರ ಅಭಿಪ್ರಾಯ.... ಇದು ಇಂದಿರಜ್ಜಿಯವರ ಮಹಾ ವಿದ್ಯಾಮಂತ್ರಿಗಳ ಅಮೋಘ ಭಾಷಣದ ಛಟ್ಟಿಯಿಂದ ತೆಗೆದಿರುವ ಸಾರ. ಇಂದಿರ ಜೀಯವರ ಇಷ್ಟವೇನಿದೆಯೆಂಬುದನ್ನು ಇದಕ್ಕಿಂತ ಚೆನ್ನಾಗಿ ಅದ್ಯಾರು ಪ್ರಜೆಗಳಿಗೆ ತಿಳಿಸಬಲ್ಲರು?

ಅವಡಿ ಅಧಿವೇಶನದ ನಂತರ ಕಾಂಗ್ರೆಸ್ಸಿಗರು ಸೋಷಿಯಲಿಸಂನ (ಸಮಾಜವಾದದ) ಕುರಿತು ಹೇಳುತ್ತ ಬಂದಿರುವರು. ಅದರಿಂದ ಅವಕ್ಕಾದ ಕಮ್ಯೂನಿಸ್ಟರು ಅದೇನು ಮಾಡುವದೆಂದು ಮೂಕವೇಷ ಎಣಿಸಿ, ರಷ್ಯಾದ ಆದೇಶದಂತೆ, ಕಾಂಗ್ರೆಸ್ಸಿನೊಳಗೆ ನುಸುಳಿಕೊಂಡು ಈಗ ಮಂತ್ರಿಗಳಾಗಿರುವರು. ಹಾಗಾಗಿಯೂ ಕಾಂಗ್ರೆಸ್ಸನ್ನು ಜೀರ್ಣಿಸಿಕೊಳ್ಳಲು ಕಮ್ಯೂನಿಸ್ಟರಿಗೆ ಸಾಧ್ಯವಾಗಿರುವದಿಲ್ಲ. ಕಾಂಗ್ರೆಸ್ಸು ತನ್ನ ಸಮಾಜವಾದದ ನೈಜ ವೇಷವನ್ನು ತಿಳಿಯಪಡಿಸದಿರುವದೇ ಅದಕ್ಕೆ ಕಾರಣವಿದೆ. ಅವರ ಪಾಲಿಗದು ರಾಜಕೀಯ ವಾರ್ದನ. ಪಂಡಿತ ಜವಾಹರಲಾಲ ನೆಹ್ರೂಜೀಯವರೇ ಸಮಾಜವಾದದ ರೂಪವೇನೆಂಬುದನ್ನು ತಿಳಿಸದೆ ಮೇನಕೆ-ಊರ್ವಶಿ-ರಂಭೆ-ತಿಲೋತ್ತಮೆ ... ಎನ್ನುತ್ತಿದ್ದರು. ಅವರ ಸಮಾಜವಾದದ ಅಧ್ಯಾಯ ಅಂತ್ಯವಾಯಿತು. ಇದೀಗ ಇಂದಿರಮ್ಮನವರ ವ್ಯಾಖ್ಯಾನ ನಡೆಯುತ್ತಿದೆ. ಇತಿಶ್ರೀಯ ಸಮಯ ಬಂದ. ಬಳುತ್ತಿದ್ದ ಸಮಾಜವಾದದ ಮೇಲೆ ಕಾಂಗ್ರೆಸ್ಸು ಇಬ್ಭಾಗವಾಯಿತು. ಆದರೆ 'ಸಮಾಜವಾದ' ಇಬ್ಭಾಗವಾಗಲಿಲ್ಲ. ಇಂದಿರಮ್ಮನವರು ನಿಜಲಿಂಗಪ್ಪನವರನ್ನು ಸಮಾಜವಾದಕ್ಕೆ ವಿರೋಧಿಯೆಂದಲ್ಲ, ನಿಜಲಿಂಗಪ್ಪನವರು ಇಂದಿರಮ್ಮನವರನ್ನು ಸಮಾಜದ್ರೋಹಿ, ವಿರೋಧಿಯೆನ್ನುತ್ತಿದ್ದಾರೆ. ಅಧಿಕಾರ ಇಂದಿರಾ ರಾಣಿಯವರ ಕೈಯಲ್ಲಿರುವದರಿಂದ ನಿಜಲಿಂಗಪ್ಪನವರು ಅದೇನಾಡಿದರೂ ಫಲವೇನು? ಇತ್ತ ಇಂದಿರಾದೇವಿಯವರು ಸಮಾಜದ ಹಿತ, ಸಂರಕ್ಷಣೆ ಮಾನ, ಧ್ಯೇಯಕ್ಕಾಗಿ ಅಲ್ಲವಾದರೂ ವಾದದ ಪ್ರಚಾರಕ್ಕಾಗಿ ತನ್ನ ಸಂಪೂರ್ಣ ಅಧಿಕಾರವನ್ನು ಬಳಸಿಕೊಳ್ಳುತ್ತಿದ್ದಾರೆ. ಅದಕ್ಕಾಗಿ ಅವರು ಜನರಿ ಜೀ, ಮೋಹಂ ಯೆನ್ನುವಂತಹವರನ್ನು ಅಲ್ಲಲ್ಲಿ ಉನ್ನತ ಅಂತಸ್ತುಗಳಲ್ಲಿ ಕೂಡಿಸಿಕೊಳ್ಳಿಸುತ್ತಿದ್ದಾರೆ. ರಾಜ್ಯಪಾಲರಿಂದ ರಾಷ್ಟ್ರಾಧ್ಯಕ್ಷರವರೆ

(ಹನ್ನೆರಡನೇ ಪುಟ ನೋಡಿರಿ)

ಕುಟುಂಬ ಯೋಜನಾ ದ್ವಿಸಪ್ತಾಹ,
ಸೆಪ್ಟೆಂಬರ 14 ರಿಂದ 27, 1970

ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರದಲ್ಲಿರುವ ಕೆಲಸಗಾರರೆಲ್ಲರೂ ಕುಟುಂಬ ಯೋಜನೆ ಮಾಡಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಅದರಿಂದ ಸಂಸಾರದ ತಾಪತ್ರಯಗಳು ಕಡಿಮೆಯಾಗುತ್ತವೆ. ಔದ್ಯೋಗಿಕ ಉತ್ಪಾದನೆ ಹೆಚ್ಚಿಸಲು ಹಾಗೂ ಇತರ ಸೇವೆಗಳನ್ನು ಅಭಿವೃದ್ಧಿಗೊಳಿಸಲು ಶಕ್ತಿ ಒದಗುತ್ತದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಜಡತನ ಹಾಗೂ ನಿರುದ್ಯೋಗದ ಸಮಸ್ಯೆ ಭೀಕರವಾಗಲು ಮುಖ್ಯ ಕಾರಣವೆಂದರೆ ಶೀಘ್ರಗತಿಯಿಂದ ಬೆಳೆಯುತ್ತಿರುವ ಜನಸಂಖ್ಯೆ. ಇದು ಆರ್ಥಿಕ ರಂಗದಲ್ಲಿ ಸಾಧಿಸಿದ ಪ್ರಗತಿಯನ್ನು ಇದು ನಿಷ್ಫಲಗೊಳಿಸುವುದು.

ವಿ. ವಿ. ಗಿರಿ.



ಡಿಎವಿಪಿ 70/292

ಪರೀಕ್ಷಾಪದ್ಧತಿ – ಅಂದು, ಇಂದು

ನಮ್ಮ ದೇಶದಲ್ಲಿನ ಪರೀಕ್ಷಾ ಪದ್ಧತಿ ದೋಷಪೂರ್ಣವೆಂದು ಎಲ್ಲರೂ ತೆಗಳುತ್ತಾರೆ. ಶಿಕ್ಷಣ ಪ್ರಣಾಳಿಯೇ ಅಪೂರ್ಣ ಮತ್ತು ದೋಷಯುಕ್ತವೆಂದು ದೂರು ಕೇಳುತ್ತಿರುವಾಗ ಪರೀಕ್ಷಾ ಪದ್ಧತಿಯ ಬಗ್ಗೆ ಹೆಚ್ಚು ಟೀಕಿಸುವುದು ಅನಗತ್ಯ. ಹಿಂದಿನ ಕಾಲದಲ್ಲಿ ಪರೀಕ್ಷೆಯು ಹೇಗೆ ನಡೆಯುತ್ತಿತ್ತು ಎಂದು ತಿಳಿದುಕೊಳ್ಳುವುದರಿಂದ ಇಂದಿನ ಪರೀಕ್ಷಾಪದ್ಧತಿಯಲ್ಲಿ ಸುಧಾರಣೆ ಮಾಡಿಕೊಳ್ಳುವಲ್ಲಿ ಮಾರ್ಗದರ್ಶನ ದೊರೆಯುವುದು ಸಾಧ್ಯವಾದ ಬಹುದೋ ಏನೋ!

ಅಂದು ಮತ್ತು ಇಂದುಗಳ ನಡುವೆ ಪರೀಕ್ಷಾ ಪದ್ಧತಿಯಲ್ಲಿ ಹೋಲಿಕೆ ಎಂಬುದೇ ಉಳಿದಿಲ್ಲ. ಅಂದು ಶಿಕ್ಷಣವು ತಪಸ್ಸು, ಉಪದೇಶ ಮತ್ತು ವ್ಯವಹಾರಗಳ ಮಾಧ್ಯಮದಿಂದ ದೊರೆಯುತಿತ್ತು. ಆಶ್ರಮ, ತಪೋವನ ಅಥವಾ ಗುರುಕುಲಗಳು, ಪರಿಷತ್ತುಗಳು, ಸಮ್ಮೇಳನಗಳು ಶಿಕ್ಷಣ ಕೇಂದ್ರಗಳೆಂದು ಪರಿಗಣಿತವಾಗಿದ್ದುವು. ಪ್ರಾಚೀನ ಭಾರತದ ಪ್ರಖ್ಯಾತ ಶಿಕ್ಷಣ ಕೇಂದ್ರಗಳು, ತಕ್ಷಶಿಲೆ, ಕಾಶಿ, ನಾಲಂದಾ, ವಲ್ಲಭಿ, ವಿಕ್ರಮಶಿಲೆ ಮೊದಲಾದ ವಿಶ್ವ ವಿದ್ಯಾಲಯಗಳು ಮತ್ತಿತರ ವಿದ್ಯಾಪೀಠಗಳಲ್ಲಿ ಪರೀಕ್ಷೆ ಮತ್ತು ಶಿಕ್ಷಣ ಪ್ರಣಾಳಿಯು ಮೌಖಿಕ ಮತ್ತು ಸಾಂಸ್ಕೃತಿಕ ತತ್ವಗಳ ಆಧಾರದಲ್ಲಿ ನಡೆಯುತ್ತಿದ್ದುವು.

ಇಂದು ತಿಂಗಳು ತಿಂಗಳೂ ಒಂದೊಂದು ಪರೀಕ್ಷೆ ನಡೆಯುತ್ತದೆ. ಇದೂ ಸಾಲದೆಂದು ಪ್ರತಿವಾರದ ಕೊನೆಯೂ ಒಂದೊಂದು ಪರೀಕ್ಷೆ ನಡೆಸಬೇಕೆಂದು ಹೇಳುವವರೂ ಇದ್ದಾರೆ. ಆದರೆ, ಅಂದು ವಾರ್ಷಿಕ ಪರೀಕ್ಷೆಯೂ ಇರಲಿಲ್ಲ. ವೈದಿಕಕಾಲದಲ್ಲಿ ವೇದ ಮಂತ್ರಗಳನ್ನು ಕಂಠಪಾಠ ಮಾಡುವುದೇ ಶಿಕ್ಷಣದ ಪ್ರಥಮ ಸೋಪಾನ. ಶುದ್ಧ ಉಚ್ಚಾರಣೆಗೆ ಮಹತ್ವದ ಸ್ಥಾನವಿತ್ತು. ಈ ಮೊದಲ ಮೆಟ್ಟಲೇರಿದ ನಂತರ ಆಚಾರ್ಯರು ಪರೀಕ್ಷಾರ್ಥಿಯಿಂದ ಮೌಖಿಕ ಪರೀಕ್ಷೆ ತೆಗೆದುಕೊಳ್ಳುತ್ತಿದ್ದರು. ಗುರುಗಳು ಸಂತೃಪ್ತರಾದರೆ ಮಾತ್ರ ಮುಂದೆ ವಿದ್ಯಾರ್ಥಿಯು ಓದಬಹುದಿತ್ತು. ಎರಡನೆ ಸೋಪಾನ ಅರ್ಥಬೋಧ ಮತ್ತು ವ್ಯಾಖ್ಯಾನ ಮಾಡುವುದು. ಇದು ಅತಿ ಮಹತ್ವದ್ದು. ಕಂಠಪಾಠ ಮಾಡುವಷ್ಟರಿಂದಲೇ ಎಲ್ಲ ಮುಗಿಯುತ್ತಿರಲಿಲ್ಲ; ಮೌಖಿಕ ಪರೀಕ್ಷೆಯೂ ಆ ಕಾಲದಲ್ಲಿ ಅನಿವಾರ್ಯವಾಗಿತ್ತು.

ಇಂದು ವ್ಯವಹಾರದಲ್ಲಿರುವ ಪರೀಕ್ಷಾ ಪ್ರಣಾಳಿಯ ಬಗ್ಗೆ ಪ್ರಾಚೀನ ಗ್ರಂಥಗಳಲ್ಲಿ ಯಾವುದೇ ಆಧಾರವು ಲಭ್ಯವಿಲ್ಲ. ಅಂದು ಪರೀಕ್ಷೆಯು ಅನೇಕ ವಿಧವಾಗಿ ನಡೆಯುತಿತ್ತು. ಗುರು ಮತ್ತು ಆಚಾರ್ಯರೇ ಪರೀಕ್ಷಕರಾಗಿದ್ದರು. ಇತರ ವಿದ್ವಾಂಸರೂ ಪರೀಕ್ಷಕರಾಗಿರುತಿದ್ದುದುಂಟು. ಇಂದಿನಂತೆ ಪರೀಕ್ಷೆಗೆ ಮಹತ್ವದ ಸ್ಥಾನವಿರಲಿಲ್ಲ. ಶಿಷ್ಯನ ವಿಷಯದಲ್ಲಿ ಗುರು ಅಥವಾ ಅಧ್ಯಾಪಕರ ಅಭಿಪ್ರಾಯ, ಪ್ರಶಂಸೆ, ತಿಳುವಳಿಕೆ ಮತ್ತು ತೀರ್ಮಾನಗಳಿಗೇ ಅಂದು ಪ್ರಾಧಾನ್ಯವಿತ್ತು. ಪರೀಕ್ಷೆಯ ಅಂತಿಮ ಒರೆಗಲ್ಲೇ ಇದು. ಆಚಾರ್ಯರದ್ದೇ ಅಂತಿಮ ನಿರ್ಣಯವಾಗಿತ್ತು.

ಪರೀಕ್ಷೆಯ ಇತರ ವಿಧಿವಿಧಾನಗಳಲ್ಲಿ ಶಾಸ್ತ್ರಾರ್ಥದ ಆಯೋಜನ, ಪರಿಷತ್ತು ಮತ್ತು ಸಮ್ಮೇಳನಗಳಲ್ಲಿ ವಾದವಿವಾದ ಮೊದಲಾದುವುಗಳಿರುತಿದ್ದುವು. ಇಂದು ನಮ್ಮ ವಿದ್ಯಾರ್ಥಿಗಳ ಚರಮಧ್ಯೇಯ ಹೇಗಾದರೂ ಮಾಡಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದು. ವಿದ್ಯಾರ್ಥಿ ಜೀವನದ ಅಂತಿಮ ಸಿದ್ಧಿಯೇ ಇದು. ಇದೊಮ್ಮೆಗೆ ಪ್ರಾಪ್ತವಾಯಿತೆಂದರೆ, ಅಧ್ಯಯನಕ್ಕೂ ಇತಿಶ್ರೀ ಹಾಡಿದಂತೆಯೇ. ಪರೀಕ್ಷೆಯಾದ ಅಲ್ಪಾವಧಿಯಲ್ಲೇ ಕಲಿತದ್ದೆಲ್ಲಾ ಮರೆತು ಹೋಗುವುದು.

ಅಂದು ವಿದ್ಯಾರ್ಥಿಯ ಸರ್ವತೋಮುಖ ವಿಕಾಸವೇ ಗುರುವಿನ ಗುರಿ, ವಿದ್ಯಾಭ್ಯಾಸದ ಲಕ್ಷ್ಯ. ಆದುದರಿಂದ ಪರೀಕ್ಷೆಯೂ ವಿವಿಧ—ವಿಶಿಷ್ಟ ಪ್ರಣಾಳಿಗಳಿಂದ ನಡೆಯುತಿತ್ತು. ವಿದ್ಯಾರ್ಥಿಯ ಚರಿತ್ರೆ, ಹೃದಯ, ಮಾನಸಿಕ ಶಕ್ತಿ—ಸಾಮರ್ಥ್ಯ, ಶಾರೀರಿಕ ಬಲ ಮತ್ತು ಆತ್ಮವಿಕಾಸದ ಪ್ರಸಂಗಗಳಲ್ಲಿ ಬಹುಪರಿಯಾಗಿ ಪರೀಕ್ಷೆ ನಡೆಯುತಿತ್ತು. ಉತ್ತರ ಪುಸ್ತಕ ಮಕ್ಕಿಕಪ್ಪಿ ಮಾಡುವುದೇ ಇಂದಿನ ವಿಧಾನ. ಇದರಿಂದ ವಿದ್ಯಾರ್ಥಿಯ ಸಾಂಗೋಪಾಂಗ ಮೌಲ್ಯಾಂಕನವಾಗುವುದಿಲ್ಲ. ಇದು ಎಲ್ಲರಿಗೂ ಗೊತ್ತು.

ಹಿಂದೆ ವಿದ್ಯಾರ್ಥಿಯು ಸ್ನಾತಕನಾಗಬೇಕಿದ್ದರೆ, ಬಹುಮುಖಿ ಪ್ರಯಾಸಪಡಬೇಕಿತ್ತು. ಬಹುಮುಖಿ ಪ್ರತಿಭೆಯೂ ಆತನಿಗೆ ಅಗತ್ಯವಾಗಿತ್ತು. ಶಾಸ್ತ್ರಾರ್ಥದ ಅಗ್ನಿಪರೀಕ್ಷೆಯಲ್ಲಿ ಆತನು ಉತ್ತೀರ್ಣನಾಗಬೇಕಿತ್ತು. ಸಾಧನೆ ಮತ್ತು ನಿಷ್ಠೆಗಳೇ ಯೋಗ್ಯತೆಯನ್ನು ಅಳೆಯುವ ಮಾನದಂಡವಾಗಿದ್ದುವು. ಕಠಿನ ತಪಸ್ಸಿನಿಂದಲೇ ಸಾಮರ್ಥ್ಯ ಲಭಿಸುತಿತ್ತು. ಅಧ್ಯಯನಾನಂತರ ಸ್ನಾತಕನನ್ನು ವಿದ್ವತ್ಸಭೆಯಲ್ಲಿ ಕುಳ್ಳಿರಿಸಲಾಗುತಿತ್ತು. ಆತನಿಗೆ ಪ್ರಶ್ನೆ ಕೇಳುತಿದ್ದರು. ಸಮಾವರ್ತನ ಸಂಸ್ಕಾರದ ಬಳಿಕ ಆತನು ಪಂಡಿತ ಮಂಡಲಿಯನ್ನು ಎದುರಿಸಬೇಕಿತ್ತು. ಇಂದಿಗೂ ಕೆಲವು ವಿಶ್ವವಿದ್ಯಾಲಯಗಳಲ್ಲಿ ಇದರ ವಿಕೃತರೂಪ ಗೋಚರವಾಗುತ್ತದೆ. ಸಂಶೋಧಕರಿಗೆ ಪಿ. ಎಚ್. ಡಿ. ಅಥವಾ ಡಿ. ಲಿಟ್. ಪದವಿಗಾಗಿ ಏರ್ಪಡಿಸುವ ಮೌಖಿಕ ಪರೀಕ್ಷೆಯನ್ನು ಸಭಾಭವನದಲ್ಲಿ ತೆಗೆದುಕೊಳ್ಳುತ್ತಾರೆ. ಇದರಿಂದ ಸಭೆಯಲ್ಲಿ ಹಾಜರಿದ್ದ ಯಾವನೊಬ್ಬನೂ ಆತನನ್ನು ಪ್ರಶ್ನಿಸಬಹುದು. ಅವನು ಉತ್ತರ ನೀಡಬೇಕಾಗುವುದು.

ಪ್ರಾಯೋಗಿಕ ಮತ್ತು ಅಭ್ಯಾಸಗತ ಪರೀಕ್ಷೆಗಳನ್ನು ಅಂದೂ ತೆಗೆದುಕೊಳ್ಳುತ್ತಿದ್ದರು. ತಕ್ಷಶಿಲೆಯ ವಿಶ್ವವಿದ್ಯಾಲಯದ ಆಯುರ್ವೇದ ಪರೀಕ್ಷಾರ್ಥಿ ಜೀವಕನೆಂಬವನು ತನ್ನನ್ನು ಪರೀಕ್ಷೆ ಮಾಡಿರೆಂದು ಆಚಾರ್ಯರೊಡನೆ ಬಹಳವಾಗಿ ಆಗ್ರಹಪಡಿಸಿದನು. ವನಸ್ಪತಿ ವಿಜ್ಞಾನದ ಆಚಾರ್ಯನು ವಿಶ್ವ ವಿದ್ಯಾಲಯದ ನಾಲ್ಕು ಯೋಜನ ಸೀಮೆಯೊಳಗಿನ ವನಸ್ಪತಿಗಳನ್ನು ಕೂಡಿಸಿ, ಆಯುರ್ವೇದದ ದೃಷ್ಟಿಯಿಂದ ಅವುಗಳ ಗುಣಾವಗುಣ ವಿವೇಚಿಸಲು ಆಜ್ಞೆ ಮಾಡಿದನು. ಜೀವಕನು ಈ ಕಾರ್ಯವನ್ನು ಮಾಡಿ, ಯಾವುದೇ ವನಸ್ಪತಿಯು ವ್ಯರ್ಥವಾಗಿಲ್ಲವೆಂದು ತೀರ್ಮಾನಿಸಿದನು.

ಕೆಲವೊಮ್ಮೆ ಆಚಾರ–ವ್ಯವಹಾರಗಳಿಂದಲೂ ಪರೀಕ್ಷಾರ್ಥಿಗಳನ್ನು ಪರೀಕ್ಷಿಸುತ್ತಿದ್ದರು. ಇದಕ್ಕೆಂದು ಹಲವಾರು ಉಪಾಯಗಳಿದ್ದುವು. ಪರಿಷತ್ತು ಮತ್ತು ಸಮ್ಮೇಳನಗಳ ಪರೀಕ್ಷೆಗಳಲ್ಲೂ ಅಂತರವಿತ್ತು. ಪರಿಷತ್ತು ಒಂದು ವಿಧದ ಜನಸಭೆ. ಸಮ್ಮೇಳನವು ರಾಜ-ಸಮಾಜಗಳ ಕಾರ್ಯ ಮಾಡುತ್ತಿತ್ತು. ರಾಜಶೇಖರನು ರಾಜಸಭೆಗಳಲ್ಲಿನ ಪರೀಕ್ಷೆಗಳನ್ನು ತನ್ನ ಕಾವ್ಯಮೀಮಾಂಸೆಯಲ್ಲಿ ವಿವೇಚಿಸಿದ್ದಾನೆ. ಆಚಾರ್ಯ ಚರಕನು ವೈದ್ಯರನ್ನು ಪರೀಕ್ಷಿಸುವ ಅನೇಕ ಪ್ರಕಾರಗಳನ್ನು ಚರ್ಚಿಸಿದ್ದಾನೆ. ಕನಿಷ್ಠ ಯೋಗ್ಯತೆಯಿದೆಯೆಂದು ಸಿದ್ಧಪಡಿಸುವುದಷ್ಟೇ ವಿದ್ಯಾರ್ಥಿಯ ಉದ್ದೇಶ್ಯವಲ್ಲ. ತಾನು ಸರ್ವಥಾ ಮೇಧಾವಿಯೂ ಸಕ್ಷಮನೂ ರಾಜ್ಯಾಶ್ರಯಕ್ಕೆ ಅಧಿಕಾರಿಯೂ ಆಗಿದ್ದೇನೆಂದು ಆತನು ತೋರಿಸಿಕೊಡಲು ಪ್ರಯತ್ನಿಸುತ್ತಿದ್ದನು. ನಿಯಮಿತ, ನಿರ್ಧರಿತ—ಅಥವಾ ಅನವರತ ಪರೀಕ್ಷೆಗಳು ನಡೆಯುತ್ತಿದ್ದುವೆಂಬುದಕ್ಕೆ ಆಧಾರಗಳು ದೊರೆಯುವುದಿಲ್ಲ.

ಪ್ರಾಚೀನ ಭಾರತದ ವಿದ್ಯಾರ್ಥಿಯು ತನ್ನ ವಿಶ್ವವಿದ್ಯಾಲಯದ ಮೇಲೆ ಪೂರ್ಣ ಅಭಿಮಾನವಿಡುತಿದ್ದನು. ತಕ್ಷಶಿಲೆ ಅಥವಾ ನಾಲಂದಾಗಳಿಂದ ಹೊರ ಬರುವ ವಿದ್ಯಾರ್ಥಿಯು ಭಾರತವನ್ನ[illegible]ಸುತಿದ್ದನು. ಯಾವುದೇ ಪರೀಕ್ಷೆ ಅಥವಾ ಸಾಕ್ಷಾತ್ಕಾರ ಇಲ್ಲದೇ ಅನ್ಯ ಔಪಚಾರಿಕತೆಗಳಿಲ್ಲದೇನೇ ಅವನು ಯಥಾಯೋಗ್ಯ ಸ್ಥಾನಕ್ಕೆ ಅಧಿಕಾರಿಯಾಗುತಿದ್ದನು. ಇದಕ್ಕೆ ಆತನ ವಿಶ್ವವಿದ್ಯಾಲಯದ ಗೌರವವೇ ಎಲ್ಲಕ್ಕಿಂತ ದೊಡ್ಡ ಪ್ರಶಸ್ತಿಪತ್ರವಾಗಿತ್ತು. ಭಾರತೀಯ ವಿದ್ಯಾರ್ಥಿಯು ಎಲ್ಲ ಕಾಲದಲ್ಲೂ ಪರೀಕ್ಷೆಗೆ ಸಿದ್ಧನಾಗಿದ್ದನು. ಅವನು ಪ್ರತಿ ರಂಗದಲ್ಲೂ ಪಾರಂಗತನಾಗಿರುತಿದ್ದನು. ಅವನ ರಕ್ತದಲ್ಲಿ ಜ್ಞಾನ ಪ್ರವಾಹ ಸದಾ ಹರಿಯುತಿತ್ತು. ಅವನು ಪದವಿ ಪತ್ರದ ಕವಚ ಧರಿಸುತ್ತಿರಲಿಲ್ಲ. ಪ್ರಮಾಣ ಪತ್ರಗಳ ಹೊರೆಯನ್ನೂ ಹೊರುತ್ತಿರಲಿಲ್ಲ. ತನ್ನ ಜೀ

(ಹನ್ನೊಂದನೇ ಪುಟ ನೋಡಿರಿ)

'ಕುಟುಂಬ ಯೋಜನಾ ದ್ವಿಸಪ್ತಾಹ,'
ಸೆಪ್ಟೆಂಬರ 14 ರಿಂದ 27, 1970

ಮಿತ ಸಂತಾನ ಚಳವಳಿಗೆ ವಿಶೇಷ ಮಹತ್ವವಿದೆ. ಅದರಿಂದ ತಾಯಂದಿರಿಗೆ ಅನಪೇಕ್ಷಿತ ಗರ್ಭಧಾರಣೆಯಿಂದ ರಕ್ಷಣೆ ದೊರೆಯುತ್ತದೆ. ಆಹಾರ ಮತ್ತು ನಿವೇಶನಕ್ಕಾಗಿ ಪರದಾಡುವ ದೇಶದಲ್ಲಿ ಜನಸಂಖ್ಯೆಯನ್ನು ಮಿತಗೊಳಿಸುವುದರಿಂದ ಶಾಂತಿ ಸ್ಥಾಪನೆಯೂ ಆಗುತ್ತದೆ. ಭಾರತದಂತಹ ದೇಶದಲ್ಲಿ ಬೇಕಾದುದಕ್ಕಿಂತಲೂ ಹೆಚ್ಚು ಮಕ್ಕಳನ್ನು ಪಡೆದು ಅವರೆಲ್ಲರನ್ನು ಹಸಿವು ಬಡತನಗಳಿಗೆ ಬಲಿಯಾಗುವಂತೆ ಮಾಡುವುದು ಕ್ರೂರ ಅಪರಾಧ.

—ರವೀಂದ್ರನಾಥ ಠಾಗೋರ್



davp 70/299

ಸುಖೀ ಸಂಸಾರದತ್ತ

ಲೇ: ಶ್ರೀ ಬಿ. ಎಸ್. ಮೂರ್ತಿ
ಕೇಂದ್ರ ಸರಕಾರದ ಆರೋಗ್ಯ, ಕುಟುಂಬಯೋಜನೆ, ಕಾಮಗಾರಿ, ಗೃಹನಿರ್ಮಾಣ ಮತ್ತು ನಗರಾಭಿವೃದ್ಧಿ ಮಂತ್ರಿ ಶಾಖೆಯ ಸ್ಟೇಟ್ ಮಂತ್ರಿಗಳು.

ನಮ್ಮದು ಅಭಿವೃದ್ಧಿಶೀಲ ಪ್ರಜಾಸತ್ತೆ. ದೇಶದ ನಾಗರಿಕರಿಗೆ ಸಾಮಾಜಿಕ ಭದ್ರತೆಯ ಅನೇಕ ಸೌಕರ್ಯಗಳನ್ನು ಇನ್ನೂ ಒದಗಿಸ ಬೇಕಾಗಿದೆ. ಸದ್ಯದ ಸ್ಥಿತಿಯಲ್ಲಿ ತಂದೆ—ತಾಯಿಗಳು ತಮ್ಮ ಮಕ್ಕಳ ಮೇಲೆ ಭಾರಹಾಕಿ ವೃದ್ಧಾಪ್ಯದ ದಿನಗಳನ್ನು ಕಳೆಯಬೇಕು. ಇದ್ದ ಮಕ್ಕಳ ಆರೋಗ್ಯ ಉತ್ತಮವಾಗಿದ್ದು, ಅವರು ದೀರ್ಘಾಯುಷ್ಯವಂತರಾದಾಗ, ತಂದೆ-ತಾಯಂದಿರು ಕುಟುಂಬಯೋಜನೆಯನ್ನು ಹೃತ್ಪೂರ್ವಕ ಸ್ವಾಗತಿಸಬಲ್ಲರು.

ಕುಟುಂಬಯೋಜನೆಯೊಂದನ್ನೇ ಪ್ರತ್ಯೇಕ ರೀತಿಯಲ್ಲಿ ನಡೆಸಿ ಜಯಗಳಿಸಲು ಸಾಧ್ಯವಿಲ್ಲ. ಜನತೆಯು ಮಹತ್ವವಿಟ್ಟಲು ಕುಟುಂಬ ಯೋಜನೆಗೆ ಪ್ರಸೂತಿ ಹಾಗು ಶಿಶು ಆರೋಗ್ಯ ಸೇವೆಗಳನ್ನು ಸೇರಿಸಬೇಕು. ಕೇವಲ ಸಣ್ಣ ಕುಟುಂಬವಲ್ಲ, ಸಣ್ಣ ಮತ್ತು ಸುಖೀ ಕುಟುಂಬ ಬೇಕು. 'ಸಣ್ಣ' ಮತ್ತು 'ಸುಖೀ' ವಿಶೇಷಣಗಳು ಕೈಕೈಹಿಡಿದು ಸಾಗಬೇಕು. ಆದುದರಿಂದಲೇ 'ಕಲ್ಯಾಣ ಕಾರ್ಯಕ್ರಮ'ವನ್ನು ರೂಪಿಸಲಾಗಿದೆ.

ದೇಶದಲ್ಲಿ ಕೈಕೊಂಡ ಕೆಲ ಸಮೀಕ್ಷೆಗಳ ವರದಿಗಳಂತೆ, ಚಿಕ್ಕ ಮಕ್ಕಳ ಅನಾರೋಗ್ಯ, ಅಕಾಲ ಮೃತ್ಯು ಮೊದಲಾದ ಘಟನೆಗಳಿಂದ ಆಘಾತಗೊಂಡ ಕುಟುಂಬಗಳು ಹೆಚ್ಚು ಮಕ್ಕಳ ಸಂಸಾರ ಹೊಂದುವುದರಲ್ಲಿ ಆಸೆ ವ್ಯಕ್ತಪಡಿಸಿದ್ದಾರೆ; ಕುಟುಂಬಯೋಜನೆಯ ಕೇಂದ್ರಗಳಿಗೆ ಹೋಗಲು ಅನೇಕ ಕುಟುಂಬಗಳು ಹಿಂದು ಮುಂದೆ ನೋಡುತ್ತಿವೆ. ಕಾರಣ ಕುಟುಂಬಯೋಜನೆಗೆ ಸಮುದಾಯ ಆರೋಗ್ಯಸೇವೆಯನ್ನೂ ಪ್ರಸೂತಿ ಹಾಗು ಶಿಶು ಆರೋಗ್ಯ ಸೇವೆಯನ್ನೂ 1968ರಲ್ಲಿ ಸೇರಿಸಲಾಯಿತು. ಈ ತಂತ್ರ ಸಂಪ್ರದಾಯದ ಪೂರ್ವಗ್ರಹ ದೋಷ ದೃಷ್ಟಿಯನ್ನು ಬದಲಾಯಿಸಿತು. ತಮ್ಮ ರೋಗ ನಿವಾರಣೆಗೆ ಹಾಗು ಕುಟುಂಬಯೋಜನೆಯ ಸಲಹೆಗೆಂದು ಜನ ಈಗ ಹೆಚ್ಚು ನಿರ್ಭೀತಿಯಿಂದ ಇಲ್ಲಿಗೆ ಬರುತ್ತಿದ್ದಾರೆ. ಮಿಡ್—ವೈಫ್ ಹಾಗು ಆರೋಗ್ಯ ಸಂದರ್ಶಿಕೆಯರು ಈಗ ಕುಟುಂಬಯೋಜನೆಯ ಬಗೆಗೂ ಜನರಿಗೆ ತಿಳುವಳಿಕೆ ನೀಡುತ್ತಿದ್ದಾರೆ. ವಿಶೇಷತಃ ಗ್ರಾಮಾಂತರ ಪ್ರದೇಶದಲ್ಲಿ ಕುಟುಂಬಯೋಜನೆಯ ಸಂದೇಶಕ್ಕೆ ಉತ್ತಮ ಪ್ರತಿಕ್ರಿಯೆ ಕಂಡು ಬಂದಿದೆ.

ಪ್ರಸೂತಿ ಹಾಗು ಶಿಶು ಆರೋಗ್ಯಸೇವೆಗಳು ಈ ಹಿಂದೆ ಇದ್ದಿರಲಿಲ್ಲವೆಂತೇನೂ ಅಲ್ಲ. ಆದರೆ ಈಗ ಬೇರೆ ಬೇರೆ ಮಟ್ಟದಲ್ಲಿ ಇವುಗಳನ್ನು ಕುಟುಂಬಯೋಜನಾ ಕಾರ್ಯಕ್ರಮದಲ್ಲಿ ಜೋಡಿಸಲಾಗಿದೆ. ಹೀಗೆ ಏಕೀಕೃತವಾದ ಯೋಜನೆಯು ಅಧಿಷ್ಠಾನದ ಜೊತೆ ರಾಜ್ಯಸರಕಾರಗಳದ್ದೇ ಆಗಿದೆ. ಜಿಲ್ಲಾ ಕುಟುಂಬಯೋಜನಾಧಿಕಾರಿಯನ್ನು ಈಗ ಜಿಲ್ಲಾ ಕುಟುಂಬ ಯೋಜನೆ ಮತ್ತು ಪ್ರಸೂತಿ ಹಾಗು ಶಿಶು ಆರೋಗ್ಯಾಧಿಕಾರಿ ಎಂದು ಕರೆಯಲಾಗುತ್ತಿದೆ.

ಕುಟುಂಬಯೋಜನೆಯ ಪ್ರಚಾರಕರ ಸಿಬ್ಬಂದಿ ಬೇರೆಯಿದ್ದರೂ, ಬೇಕಾದ ಸೇವೆಯನ್ನು ಪ್ರಸೂತಿ ಮತ್ತು ಶಿಶು ಆರೋಗ್ಯ ಸೇವಾ ಸಿಬ್ಬಂದಿಯವರೇ ನೀಡುತ್ತಾರೆ. ಇದಕ್ಕಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಬಲಪಡಿಸಲಾಗಿದೆ; ಈ ಕೇಂದ್ರಗಳಿಗೆ ದ್ವಿತೀಯ ಡಾಕ್ಟರರನ್ನು ಹಾಗೂ ಹೆಚ್ಚುವರಿ ಮಹಿಳಾ ಆರೋಗ್ಯ ಸಂದರ್ಶಕ ಸಿಬ್ಬಂದಿಯನ್ನು ನೀಡಲಾಗಿದೆ. ಪ್ರತಿ 40 ಸಾವಿರ ಜನತೆಗೆ ಇಂತಹ ಒಂದು ಕೇಂದ್ರದ ಸೌಲಭ್ಯ ಇಂದು ಸಾಧ್ಯವಾಗಿದೆ. ಇದಲ್ಲದೆ ಸ್ಥಳೀಯ ಸಂಸ್ಥೆಗಳು ತಮ್ಮ ತಮ್ಮ ದವಾಖಾನೆಗಳಲ್ಲಿ ಇಂತಹ ಸೇವೆಗಳನ್ನು ನೀಡುತ್ತಿವೆ.

ಗ್ರಾಮಾಂತರ ಪ್ರದೇಶದಲ್ಲಿ ಪ್ರಸೂತಿ ಹಾಗು ಶಿಶು ಆರೋಗ್ಯ ಸೇವಾ ಸೌಲಭ್ಯವನ್ನು ಒದಗಿಸುವ ಹೊಣೆ ಗ್ರಾಮಪಂಚಾಯಿತಿಗಳದು. ಆರೋಗ್ಯ ಶಾಖೆಯವರು ಗ್ರಾಮ ಪಂಚಾಯಿತಿಗಳಿಗೆ ಬೇಕಾದ ತಾಂತ್ರಿಕ ಸಹಾಯವನ್ನು ಒದಗಿಸುವರು. ಗ್ರಾಮಾಂತರ ಪ್ರದೇಶದಲ್ಲಿ ಇರುವ ಸಂಪ್ರದಾಯದ ದಾಯಿ (ಸೂಲಗಿತ್ತಿ)ಗಳಿಗೆಂದು ತರಬೇತಿ ಕಾರ್ಯಕ್ರಮವನ್ನು ಯೋಜಿಸಲಾಗಿದೆ. ಕುಟುಂಬಯೋಜನಾ ಕೇಂದ್ರಗಳಲ್ಲಿ ಇವರಿಗೆ ತರಬೇತಿಯನ್ನು ನೀಡಲಾಗುವುದು. ಇವರೂ ಕುಟುಂಬ ಯೋಜನೆಯ ಪ್ರಚಾರಕ್ಕೆ ಸಹಾಯಕರಾಗುವರು.

ಯುನಿಸೆಫ್ ಹಾಗು ಯು. ಎಸ್. ಎಡ್. ನಂತಹ ಅಂತರ್‌ರಾಷ್ಟ್ರೀಯ ಸಂಸ್ಥೆಗಳು ತರಬೇತಿ ಕಾರ್ಯಕ್ರಮಕ್ಕೆ ಸಹಾಯ ಮಾಡಲು ಮುಂದೆ ಬಂದಿವೆ.

ಸೇವಾ ಪ್ರಯೋಜನ

ಪ್ರಸೂತಿ ಹಾಗೂ ಶಿಶು ಆರೋಗ್ಯ ಸೇವಾ ಸಿಬ್ಬಂದಿಯವರು ಅರ್ಹ ದಂಪತಿಗಳನ್ನು ಕಂಡು ಅವರಿಗೆ ಬೇಕಾದ ಮಿತಸಂತಾನದ ಮಾರ್ಗಗಳನ್ನು ಹೇಳಿ ಕೊಡುವರು; ಆಸ್ಪತ್ರೆಯ ಸೌಕರ್ಯ ದೊರಕಿಸಲು ನೆರವಾಗುವರು ಹೀಗೆ ಆಸ್ಪತ್ರೆಗಳಲ್ಲಿ ಶೇಕಡ 10 ರಿಂದ 15 ತಾಯಂದಿರಿಗೆ ಹೆರಿಗೆಯಾದ ಮೇಲೆ, ಅವರ ಒಪ್ಪಿಗೆಯಂತೆ, ಶಸ್ತ್ರಕ್ರಿಯೆ ನಡೆಸಲಾಗಿದೆ.

ಶಿಶು ಆರೋಗ್ಯ

ಮಗುವಿನ ಆರೋಗ್ಯ ರಕ್ಷಣೆಯ ಬಗ್ಗೆ ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಶಿಶು ಕಲ್ಯಾಣ ಕೇಂದ್ರಗಳಲ್ಲಿ ಹಾಗೂ ಮನೆ ಮನೆಗೆ ಭೇಟಿ ನೀಡಿ, ಪ್ರಸೂತಿ ಹಾಗು ಶಿಶು ಆರೋಗ್ಯ ಸೇವಾ ಸಿಬ್ಬಂದಿಯವರು ಶಿಶು ಹಾಗು ಮಕ್ಕಳ ಆರೋಗ್ಯದ ಬಗ್ಗೆ ಸಲಹೆ ಸೌಲಭ್ಯಗಳನ್ನು ಸೂಚಿಸುತ್ತಾರೆ. ಕೋಡಿಗಗೆಮ್ಮು, ಕಾಲಗ್ರಹ, ಸಿಡುಬು ಮುಂತಾದ ಭಯಾನಕ ರೋಗಗಳಿಗೆ ನಿರೋಧಕ ಔಷಧಗಳನ್ನೂ ಚುಚ್ಚು ಮದ್ದನ್ನೂ ನೀಡಿ, ಮಗುಗಳ ಆರೋಗ್ಯವನ್ನು ಕಾಪಾಡಲು ಕ್ರಮ ಕೈಕೊಳ್ಳಲಾಗಿದೆ. ಅವುಗಳ ಬೆಳವಣಿಗೆಯ ಬಗೆಗೂ, ಔಷಧ ಚಿಕಿತ್ಸೆಯ ಬಗೆಗೂ, ಪೌಷ್ಟಿಕಾಂಶ ಅನ್ನಾಂಗವನ್ನು ನೀಡಲು ಕ್ರಮಗಳನ್ನು ಅನುಷ್ಠಾನಕ್ಕೆ ತರಲಾಗಿದೆ. ತಾಯಂದಿರಿಗೆ ಮಗುವಿನ ಆರೋಗ್ಯದ ಬಗ್ಗೆ ಸತತವಾದ ಶಿಕ್ಷಣವನ್ನು ನೀಡಬೇಕಾದುದು ಅಗತ್ಯ. ಫಾಲಿಕ್ ಆ್ಯಸಿಡ್ ಮತ್ತು ಫೆರಸ್ ಸಲ್ಫೇಟ್ ಗುಳಿಗೆಗಳನ್ನು ಮಗುಗಳಿಗೂ, ಗರ್ಭಧಾರಣ ಮಾಡಿಸಿಕೊಂಡ ತಾಯಂದಿರಿಗೂ ಹಂಚಿ ಪೌಷ್ಟಿಕಾಂಶ ಅಭಾವದಿಂದ ಬರಬಹುದಾದ ರಕ್ತಕ್ಷಯವನ್ನು ಹತೋಟಿಗೆ ತರಲು ಕ್ರಮ ಕೈಕೊಳ್ಳಲಾಗಿದೆ. ಚತುರ್ಥ ಯೋ

(ಹತ್ತನೇ ಪುಟ ನೋಡಿರಿ)

ರಾಷ್ಟ್ರಪತಿ ಭವನ,
ಹೊಸದಿಲ್ಲಿ,
ಆಗಸ್ಟ್ 7, 1970

ದೇಶದಾದ್ಯಂತ 1970ರ ಸೆಪ್ಟೆಂಬರ್ 14ರಿಂದ ಕುಟುಂಬ ಯೋಜನಾ ದ್ವಿಸಪ್ತಾಹ ಆಚರಿಸಲಾಗುವುದೆಂದು ತಿಳಿದು ಸಂತೋಷವಾಯಿತು.

[illegible] ಬೆಳೆಯುತ್ತಿರುವ ಜನಸಂಖ್ಯೆಯು ನಮ್ಮ ರಾಷ್ಟ್ರದ [illegible] ಸಮಸ್ಯೆ. ಜನರ ಆರ್ಥಿಕ ಜೀವನ [illegible] ನಾವು ಮಾಡುತ್ತಿರುವ ಪ್ರಯತ್ನಗಳು [illegible] ಜನಸಂಖ್ಯೆಯ ಬೆಳವಣಿಗೆಯನ್ನು ಹತೋಟಿಗೆ ತರಬೇಕು [illegible] 130 ಲಕ್ಷ ಜನರು ಪ್ರತಿ ವರ್ಷ ನಮ್ಮಲ್ಲಿ [illegible] 28 ವರ್ಷಗಳೊಳಗೆ ಭಾರತದ ಜನಸಂಖ್ಯೆ [illegible]

ಕುಟುಂಬ ಯೋಜನೆಯ ಕಾರ್ಯದಲ್ಲಿ [illegible]

ವಿ. ವಿ. ಗಿರಿ

ಪ್ರಧಾನ ಮಂತ್ರಿ
ಹೊಸದಿಲ್ಲಿ,
ಆಗಸ್ಟ್ 11, 1970

ಕುಟುಂಬ ಯೋಜನಾ ಚಳವಳಿಯ ಕಾರ್ಯಕರ್ತರೆಲ್ಲರಿಗೂ ನನ್ನ ಶುಭಾಶಯಗಳು. ಕುಟುಂಬ ಯೋಜನೆಯ ದ್ವಿಸಪ್ತಾಹ ಯಶಸ್ವಿಯಾಗುವಂತೆ ಹಾಗೂ ಈ ಕಾರ್ಯ ವರ್ಷವಿಡೀ ಉತ್ಸಾಹದಿಂದ ಮುಂದುವರಿಯುವಂತೆ ಅವರೆಲ್ಲರೂ ಪ್ರಯತ್ನಿಸುವರೆಂದು ನಾನು ಆಶಿಸುತ್ತೇನೆ.

ಇಂದಿರಾ ಗಾಂಧಿ

ಕುಟುಂಬ ಯೋಜನಾ ದ್ವಿಸಪ್ತಾಹ, ಸೆಪ್ಟೆಂಬರ 14–27, 1970

ರಾಷ್ಟ್ರೀಯ ಕುಟುಂಬಯೋಜನಾ ಪಕ್ಷ
ಸೆಪ್ಟೆಂಬರ್ 1 ರಿಂದ 27

ವಿಶೇಷ ಲೇಖನ

ಸದ್ದಿಲ್ಲದೇ ನಡೆದ ಸಮಾಜಕ್ರಾಂತಿ

ಕುಟುಂಬಯೋಜನೆ

ಲೇಖಕರು: ಶ್ರೀ ಬಿ. ಪಿ. ಪಟೇಲ್
ಕೇಂದ್ರ ಸರಕಾರದ ಆರೋಗ್ಯ, ಕುಟುಂಬಯೋಜನೆ, ಕಾಮಗಾರಿ, ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಶಾಖೆಯ ಕಾರ್ಯದರ್ಶಿಗಳು.

ವಿಶ್ವಸಂಸ್ಥೆಯ ಕುಟುಂಬಯೋಜನಾ ಅಧ್ಯಯನ ತಂಡದವರು ಕಳೆದ ವರ್ಷ ಭಾರತಕ್ಕೆ ಭೇಟಿ ನೀಡಿದ್ದರಷ್ಟೇ. ನಾವು ಕೈಗೊಂಡಿರುವ ಕುಟುಂಬಯೋಜನಾ ಚಳವಳಿ ದೇಶದ ಜನತೆಯ ಮೇಲೆ ಎಷ್ಟರಮಟ್ಟಿಗೆ ಪ್ರಭಾವ ಬೀರಿದೆ ಎಂಬುದನ್ನು ಕಂಡುಕೊಳ್ಳುವುದೇ ಅವರ ಭೇಟಿಯ ಉದ್ದೇಶವಾಗಿತ್ತು. ದೇಶದ ಉದ್ದಗಲಕ್ಕೂ ಸಂಚರಿಸಿದ ಅವರು ಹಾದಿಹೋಕರನ್ನು, ಹೊಲದಲ್ಲಿ ಉಳುತ್ತಿದ್ದ ರೈತರನ್ನು ಮತ್ತು ದನ ಮೇಯಿಸುವವರನ್ನು ಭೇಟಿಯಾಗಿ ಕೆಂಪು ತ್ರಿಕೋಣ ಹಾಗೂ ನಾಲ್ಕು ಮುಖಗಳ ಚಿತ್ರದ ಬಗ್ಗೆ ನಿಮ್ಮ ವಿಚಾರವೇನು? ಎಂದು ಕೇಳಿದರು. ಮಕ್ಕಳು ಕಡಿಮೆ ಇರಲಿ "ನಿಮ್ಮ ಕುಟುಂಬ ಮಿತವಾಗಿರಲಿ" "ಎರಡು ಅಥವಾ ಮೂರು ಮಕ್ಕಳು ಸಾಕು" ಎಂಬುದೇ ಈ ಚಿತ್ರಗಳು ಹೇಳುವ ಸಂದೇಶ ಎಂದು ಅವರೆಲ್ಲರಿಂದಲೂ ತಕ್ಷಣವೇ ಮಾರುತ್ತರ ಬಂದಿತು. ಪರೀಕ್ಷೆಯಲ್ಲಿ ಹತ್ತಿರ—ಹತ್ತಿರ ನೂರಕ್ಕೆ-ನೂರರಷ್ಟು ಯಶಸ್ಸು ಬಂದಂತಾಯಿತು.

ದೇಶದ ಜನತೆಯಲ್ಲಿ ಕುಟುಂಬಯೋಜನೆಯ ವಿಚಾರವಾಗಿ ಅಗಾಧವಾದ ರೀತಿಯಲ್ಲಿ ಜಾಗೃತಿಯಾಗಿದೆ ಎಂಬುದು ವಿಧಿವತ್ತಾದ ಅಧ್ಯಯನದಿಂದ ವ್ಯಕ್ತಪಟ್ಟಿದೆ. ಕುಟುಂಬಯೋಜನಾ ಸಂದೇಶ ಈಗ ದೇಶದ ಜನಸಂಖ್ಯೆಯಲ್ಲಿ ನೂರಕ್ಕೆ 90ರಷ್ಟು ಮಂದಿಗೆ ತಲುಪಿದೆ ಎಂಬುದು ನಿಜಕ್ಕೂ ಒಂದು ಗಮನಾರ್ಹವಾದ ಸಾಧನೆ ಎಂದು ಹೇಳಬಹುದಾಗಿದೆ.

ಕುಟುಂಬಯೋಜನೆ ಮುಖ್ಯವಾಗಿ ಮೂರು ವಿಧಾನಗಳಿವೆ. ಒಂದು ಸಂತಾನಶಕ್ತಿ ಹರಣ ಶಸ್ತ್ರಕ್ರಿಯೆ. ಎರಡನೆಯದು ವಂಕಿ. ಮೂರನೆಯದು ಸಾಂಪ್ರದಾಯಿಕವಾದ ಗರ್ಭನಿರೋಧ ಸಾಧನಗಳ ಬಳಕೆ. ಸಂತಾನಶಕ್ತಿ ಹರಣ ಶಸ್ತ್ರಕ್ರಿಯೆ ಈಗ ಅತ್ಯಂತ ಜನಪ್ರಿಯವಾಗುತ್ತಿದೆ. ಇತ್ತೀಚೆಗೆ "ನಿರೋಧ" ಸಹ ಜನಪ್ರಿಯತೆಯನ್ನು ಗಳಿಸುತ್ತಿದೆ.

1970ರ ಜೂನ್ ಹೊತ್ತಿಗೆ, ನಮ್ಮ ದೇಶದಲ್ಲಿ 75 ಲಕ್ಷ ಸ್ತ್ರೀ-ಪುರುಷರು ಸಂತಾನಶಕ್ತಿ ಹರಣ ಶಸ್ತ್ರಕ್ರಿಯೆ ಮಾಡಿಸಿಕೊಂಡರು. 34 ಲಕ್ಷ ಮಹಿಳೆಯರು ವಂಕಿಯನ್ನು ಧರಿಸಿದರು. ಇದು ಅಲ್ಲದೆ 15 ಲಕ್ಷಕ್ಕೂ ಹೆಚ್ಚು ಜನರು ಕುಟುಂಬ ಯೋಜನೆಗಾಗಿ ಸಾಂಪ್ರದಾಯಿಕ ವಿಧಾನಗಳನ್ನು ಅನುಸರಿಸುತ್ತಿದ್ದರು. ಇಷ್ಟೊಂದು ಜನರು ಕುಟುಂಬಯೋಜನೆಯನ್ನು ಸ್ವೀಕರಿಸಿದ್ದಾರೆ ಎನ್ನುವುದು ಒಂದು ಮಹಾನ್ ಸಾಮಾಜಿಕ ಕ್ರಾಂತಿಯ ಸಂಕೇತವಾಗಿದೆ. ಸದ್ದಿಲ್ಲದೇ ನಡೆದಿರುವ ಈ ಸಾಮಾಜಿಕ ಕ್ರಾಂತಿ ನಾಗರಿಕರಿಗೆ ಹಾಗೂ ಸಮಾಜಕ್ಕೆ ಅಪೇಕ್ಷಿತ ಫಲಗಳನ್ನು ನೀಡಬೇಕು. ಸುಖ-ಸಮೃದ್ಧಿಯ ಯುಗವನ್ನು ತರಬೇಕು. ಅದಿಲ್ಲದಿದ್ದರೆ ಈ ಕ್ರಾಂತಿ ಅರ್ಥ ಹೀನವೆನಿಸುತ್ತದೆ. ದೇಶವು ಕುಟುಂಬಯೋಜನಾ ಪಕ್ಷವನ್ನು ಆಚರಿಸುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಈ ಸಾಮಾಜಿಕ ಕ್ರಾಂತಿಯ ಗುರಿಗಳನ್ನು ಸಾಧಿಸುವ ಪ್ರಶ್ನೆ ಹೆಚ್ಚಿನ ಮಹತ್ವವನ್ನು ಪಡೆದಿದೆ.

ಭಾರತದ ಕುಟುಂಬ ಯೋಜನಾ ಕಾರ್ಯಕ್ರಮ ಸಾಮಾಜಿಕ—ಆರ್ಥಿಕ ಅಭಿವೃದ್ಧಿಯ ಒಂದು ಸಮಗ್ರ ಕಾರ್ಯಕ್ರಮವಾಗಿರುವುದು ಒಂದು ಗಮನಾರ್ಹವಾದ ಸಂಗತಿಯಾಗಿದೆ. ಕುಟುಂಬಯೋಜನಾ ಕಾರ್ಯಕ್ರಮವನ್ನು ಅಧಿಕೃತ ಕಾರ್ಯಕ್ರಮವನ್ನಾಗಿ ಪರಿಗಣಿಸಿರುವ ಸರ್ಕಾರಗಳಲ್ಲಿ ಭಾರತ ಸರ್ಕಾರವೇ ಮೊದಲನೆಯದು. ಈ ಕಾರ್ಯಕ್ರಮಕ್ಕೆ ಮೊದಮೊದಲು ಕೆಲವೊಂದು ಅಡಚಣೆಗಳು ಬಂದವಾದರೂ ಈ ಕಾರ್ಯಕ್ರಮದ ಪ್ರಗತಿ ತ್ವರಿತವಾಗಿದೆ.

ನಾವು ಇಂದು ಮೂರು ಬಗೆಯ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕಾಗಿದೆ. ಮೊದಲನೆಯದು ಕುಟುಂಬಯೋಜನೆಯನ್ನು ಸ್ವೀಕರಿಸಿದ ಒಂದು ಕೋಟಿಗಿಂತಲೂ ಹೆಚ್ಚು ದಂಪತಿಗಳಿಗೆ ಕುಟುಂಬ ಯೋಜನೆಯ ನಂತರ ದೊರೆಯಬೇಕಾದ ಗಮನ ದೊರೆಯಬೇಕು. ಅಲ್ಲದೇ ಅವರ ಕಲ್ಯಾಣಕ್ಕಾಗಿ ಅಗತ್ಯವಾದ ಸೌಕರ್ಯಗಳನ್ನು ನಿರಂತರವಾಗಿ ಒದಗಿಸುತ್ತಿರಬೇಕು. ಎರಡನೆಯದಾಗಿ ಕುಟುಂಬ ಯೋಜನಾ ಶಸ್ತ್ರಕ್ರಿಯೆಯ ಕಾರ್ಯಕ್ರಮವನ್ನು ಇನ್ನಷ್ಟು ತೀವ್ರಗೊಳಿಸಬೇಕು. ವರ್ಷದಿಂದ ವರ್ಷಕ್ಕೆ ಶಸ್ತ್ರಕ್ರಿಯೆಗೆ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಈ ಕ್ರಮ ಅಗತ್ಯ. ಮೂರನೆಯದಾಗಿ ದೀರ್ಘಾವಧಿ ದೃಷ್ಟಿಯನ್ನು ಇಟ್ಟುಕೊಂಡು ಕುಟುಂಬಯೋಜನಾ ಕಾರ್ಯಕ್ರಮಕ್ಕೆ ಅನುಕೂಲವಾದ ವಾತಾವರಣವನ್ನು ನಿರ್ಮಿಸುವ ಕಾರ್ಯ ಹಾಗೂ ಈ ಬಗ್ಗೆ ಜನರ ಮನವೊಲಿಸುವ ಕಾರ್ಯಕ್ಕೆ ಪ್ರಸ್ತುತ ಯೋಜನೆಯಲ್ಲೇ ನಾಂದಿಯಾಗಬೇಕು. ಇನ್ನೊಂದು ಮಹತ್ವದ ವಿಷಯವೆಂದರೆ, ಕುಟುಂಬ ಯೋಜನೆಗೆ ಅರ್ಹರಾದ ದಂಪತಿಗಳ ಸಂಖ್ಯೆಯ ಸಮೀಕ್ಷಾ ರಜಿಸ್ಟರ ಒಂದನ್ನು ಆರಂಭಿಸಿರುವುದೇ ಆಗಿದೆ. ದಂಪತಿಗಳಿಗೆ ಕುಟುಂಬಯೋಜನಾ ಸೌಕರ್ಯಗಳನ್ನು ನೀಡುವುದು ಮಾತ್ರವಲ್ಲದೇ ಚಿಕಿತ್ಸಾ ನಂತರದ ಸೌಲಭ್ಯಗಳನ್ನು ಕಲ್ಪಿಸಲು ಇದರಿಂದ ಹೆಚ್ಚು ಅನುಕೂಲವಾಗುವುದು.

ಕುಟುಂಬ ಯೋಜನಾ ಕಾರ್ಯಕ್ರಮ ಸ್ವಯಂ ಸೇವಾ ಪ್ರಧಾನವಾದ ಕಾರ್ಯಕ್ರಮವಾಗಿದೆ. ಇದರಲ್ಲಿ ಒತ್ತಾಯಕ್ಕೆ ಎಳ್ಳಷ್ಟು ಎಡೆ ಇಲ್ಲ. ಕುಟುಂಬ ಯೋಜನೆ ಮಾಡುವವರಿಗೆ ಅಧಿಕೃತವಾದ ಹಾಗೂ ಸಾಕಷ್ಟು ಪ್ರಯೋಗ—ಪರೀಕ್ಷೆ ನಡೆಸಿದ ಬಳಿಕ ಉತ್ತಮವೆಂದು ಖಚಿತವಾದ ಸಾಧನಗಳನ್ನು ಪೂರೈಸಲಾಗುತ್ತಿದೆ.

ಮೊದಲು ಹೆಚ್ಚು ಮಕ್ಕಳಿದ್ದವರು ಕುಟುಂಬಯೋಜನೆಯನ್ನು ಅನುಸರಿಸುತ್ತಿದ್ದರು. ಈಗ ಒಂದು ಅಥವಾ ಎರಡು ಮಕ್ಕಳಾದವರು ಕಿರಿಯ ವಯಸ್ಸಿನ ದಂಪತಿಗಳು ಕುಟುಂಬಯೋಜನೆಯನ್ನು ಅನುಸರಿಸುತ್ತಿದ್ದಾರೆ. ಇದು ನಿಜಕ್ಕೂ ಸಂತೋಷದ ಸಂಗತಿ.

ಕುಟುಂಬಯೋಜನೆ ಗ್ರಾಮಾಂತರ ಪ್ರದೇಶಗಳಲ್ಲಿ ಹಾಗೂ ಕೆಲವೊಂದು ಸಮುದಾಯಗಳಲ್ಲಿ ಜನಪ್ರಿಯವಾಗಿಲ್ಲ ಎಂಬ ತಪ್ಪು ಭಾವನೆ ಇದೆ. ಇದು ಸತ್ಯಕ್ಕೆ ದೂರವಾದುದು. ಕುಟುಂಬಯೋಜನೆ ಪಾಲಿಸುವವರಲ್ಲಿ ಮೂರರಲ್ಲಿ ಎರಡು ಭಾಗದಷ್ಟು ಜನ ಗ್ರಾಮಾಂತರದವರು. ಅಲ್ಲದೇ ಕುಟುಂಬಯೋಜನೆ ಜನಾಂಗ ಭೇದವಿಲ್ಲದೇ ಸರ್ವಜನಪ್ರಿಯವಾಗಿದೆ.

ದೇಶದಲ್ಲಿ ಕೈಗೊಳ್ಳುವ ಎಲ್ಲಾ ಸಾಮಾಜಿಕ ಸುಧಾರಣಾ ಕಾರ್ಯಕ್ರಮಗಳಲ್ಲಿ ಜನತೆಯ ಸಹಕಾರ ಅಗತ್ಯವಾಗಿದೆ. ಇಂತಹ ಕಾರ್ಯಕ್ರಮಗಳು ಹೆಚ್ಚು ಪರಿಪೂರ್ಣವಾಗಲು ಸ್ವಸಂತೋಷ ಸಂಸ್ಥೆಗಳು ಮತ್ತು ಕೈಗಾರಿಕಾ ಹಾಗೂ ವಾಣಿಜ್ಯ ಕ್ಷೇತ್ರದಲ್ಲಿನ ಸಂಸ್ಥೆಗಳು ಮುಂದೆ ಬರಬೇಕು. ಜನತೆಯೊಂದಿಗೆ ನೇರ ಸಂಪರ್ಕ ಪಡೆದಿರುವ ಈ ಸಂಸ್ಥೆಗಳ ನೆರವು ಯೋಜನೆಯ ಯಶಸ್ಸಿಗೆ ಕಾರಣವಾಗಬಹುದು. ಕುಟುಂಬ ಯೋಜನೆಯನ್ನು ಜನಪ್ರಿಯಗೊಳಿಸುವುದರಲ್ಲಿ ನಮ್ಮ ದೇಶದಲ್ಲಿ ಅಸಂಖ್ಯಾತ ಸ್ವಸಂತೋಷ ಸಂಸ್ಥೆಗಳು ತಮ್ಮದೇ ಆದ ಸಹಕಾರ ನೀಡುತ್ತಿವೆ. ಇವುಗಳಲ್ಲಿ ಸುಮಾರು 400 ಸಂಸ್ಥೆಗಳು ಕುಟುಂಬ ಯೋಜನೆಯ ಪ್ರಚಾರ ಕಾರ್ಯದಲ್ಲಿ ತಮ್ಮದೇ ಆದ ವಿಶಿಷ್ಟಸ್ಥಾನವನ್ನು ಗಳಿಸಿಕೊಂಡಿವೆ. ಇವುಗಳ ಪ್ರಯತ್ನದಿಂದಾಗಿಯೇ ಭಾರತದ ಕುಟುಂಬ ಯೋಜನಾ ಕೇಂದ್ರದೊಂದಿಗೆ ಭಾರತದ ಪ್ರಜಾ ಪರಿಷತ್ ಮತ್ತು ಕುಟುಂಬ ಯೋಜನಾ ಫೌಂಡೇಷನ ಸಂಸ್ಥೆಗಳು ಆರಂಭವಾಗಿವೆ. ಕುಟುಂಬಯೋಜನೆಯಲ್ಲಿ ಭಾಗವಹಿಸುವ ಸ್ವಸಂತೋಷ ಮತ್ತು ಇತರ ಖಾಸಗೀ ಸಂಸ್ಥೆಗಳಿಗೆ ಸರಕಾರ ಅವಶ್ಯವಾದ ನೆರವು ನೀಡುವುದು. ಕುಟುಂಬವನ್ನು ನಿಯಂತ್ರಿಸುವ ಕೈಗಾರಿಕಾ ಕಾರ್ಮಿಕರಿಗೆ ಕೆಲವು ಸಂಸ್ಥೆಗಳು ವಿಶೇಷ ಸೌಲಭ್ಯಗಳನ್ನು ನೀಡುತ್ತವೆ. ದೇಶದ ಕಾರ್ಮಿಕವರ್ಗ ನಿಯಂತ್ರಿತ ಕು

ಕುಟುಂಬ ಯೋಜನಾ ದ್ವಿಸಪ್ತಾಹ,
ಸಪ್ಟೆಂಬರ 14 ರಿಂದ 27, 1970

ಕುಟುಂಬ ಯೋಜನೆಯ ಪ್ರಶ್ನೆ ಮಹತ್ವದ್ದು. ಭಾರತದ ಇಂದಿನ ಪರಿಸ್ಥಿತಿಯಲ್ಲಿ ಪ್ರತಿಯೊಂದು ಕುಟುಂಬದ ಸುಖ ಸಂತೋಷಕ್ಕಾಗಿ ಈ ಕಾರ್ಯಕ್ರಮ ಅಗತ್ಯ. ಜನಸಂಖ್ಯೆಯ ಬೆಳವಣಿಗೆಗೂ ನಮ್ಮ ಅಭಿವೃದ್ಧಿ ಯೋಜನೆಗಳಿಗೂ ನಿಕಟ ಸಂಬಂಧವಿದೆ.

—ಜವಾಹರಲಾಲ ನೆಹರೂ.

ಡಿಎವಿಪಿ 70/234

ಗೇಹೆರಾಜ್ಯದಲ್ಲಿ

ವೆಚ್ಚ ಮಾಡು; ಆಸ್ತಿ ಕೂಡು

'ಏ, ಎಲ್ಲಿದೀಯಪ್ಪೋ....'

'ಅಲ್ಲಪ್ಪ, ಮೆಟ್ಟಲೇರುತ್ತಾ ನಿಮಗಿಲ್ಲಿ ಘಂಟೆಗಂಟ್ಲೇ ಬರುತ್ತೀಂತ....'

'ಅಲ್ವೋ, ನಿನ್ನಷ್ಟು ಎಷ್ಟೂಂತ ಕೂರ್ತೀಕು?'

'ಕೂಗೋಕೆ ಏನಾಗಿದೇಂತ....'

"ಹಾಗಲ್ವ, ಆಗಿಂದ್ಲೂ ಕರೀತಾ ಇದ್ದೀನೆ..."

"ಇರ್ಬಹುದು...."

'ಅಲ್ಲ, ಎಷ್ಟು ಸಲೀಸಾಗಿ ಅಂದು ಬಿಟ್ಟೆಯೇ ಇರ್ಬಹುದೂಂತ...."

"ಮತ್ತೇನನ್ನಬೇಕು?'

"ಅನ್ಯೋದಾಗಿನ್ನೇನೂ ಬೇಡ. ಎಸ್ಸೆಸ್ಪಿಯ ಜಾರ್ಜ್ ಫೆರ್ನಾಂಡಿಸರು...'

"ಹೋಗಿ ಬಿಡಿ. ಆ ರಾಜ್ಯಕೀಯ ಪುಢಾರಿಗಳ ಕತೆ ಕೇಳಿಕೇಳಿ....'

"ಸುಸ್ತಾಯಿತೇನು?'

'ಮತ್ತೆ ಆಗೋದಾದ್ರೂ ಏನು?'

"ಅಲ್ಲ, ನಿಸ್ಗೆ ಈಗ್ಲೇ ಸುಸ್ತಾಗಿ ಹೋದ್ರೆ ಇನ್ನು ಮುಂದಿನ ದಿನಗಳು ಹೇಗೆ ಕಳೆಯಬೇಕಪ್ಪಾಂತ....'

"ಅಲ್ರಿ, ಆ ರಾಜ್ಯಕೀಯ ಬಡಿವಾರಗಳ ಮೇಲೆ ಹಿಂಡೋ ಪ್ರಯೋಗಾನ ಏಕೆ ಕೈ ಹಡಬೇಕೂಂತ?'

'ಅದೇನೋ ಖರೇನ್ನಾ. ಆದ್ರೂ ನೋಡು....'

"ಏನು?"

"ಅಲ್ಲ, ನಮ್ಮ ಫೆರ್ನಾಂಡಿಸರು..."

"ಹೌದು, ಫೆರ್ನಾಂಡಿಸರು...."

"ಒಂದು ಒಳ್ಳೆಯ ಸಲಹೆ ನೀಡಿದ್ದಾರೆ."

"ಅಪ್ಪಪ್ಪ, ಏನದು ಅಮೂಲ್ಯ ಸಲಹೆ, ಹೇಳಿಬಿಡಿ...."

"ನೋಡು, ಅಧಿಕಾರ ಸ್ಥಾನದಲ್ಲಿರೋರು ಮತ್ತವರ ಬಂಧುಗಳು ಕೂಡಿಸೋ ಆಸ್ತಿ-ಪಾಸ್ತಿಗಳ ತನಿಖೆ ಮಾಡಲೆಂದು ರಾಷ್ಟ್ರೀಯ ನ್ಯಾಯಪೀಠ ಒಂದನ್ನು ರಚಿಸಬೇಕೂಂತ...."

"ಸರಿ ಹೋಯ್ತಲ್ಲಾ. ಉಳಿದ ಮೂರಾರು ಪೀಠಗಳ ಸಾಲಿನಲ್ಲಿ ಇದೂ ಒಂದು.'

'ಹಾಗಲ್ಲ ನೋಡು. ಈ ನ್ಯಾಯ ಪೀಠ ಎಲ್ಲವನ್ನೂ ವಿಚಾರಿಸುವುದ ....'

'ಇರಬಹುದು. ವಿಚಾರಿಸಿ ಮಾಡೋದೇನು?'

'ಅನ್ಯಾಯಾರ್ಜಿತರನ್ನ ದಂಡಿಸುವುದು.'

"ಹ್ಞೂಂ...ಅದ್ರೆ ನೋಡಿ, ಸಾರ್ವಜನಿಕ ಅಧಿಕಾರಿಗಳು ಹಣ-ಆಸ್ತಿ ಮಾಡುವುದಾದರೆ, ತಪ್ಪು ಹೇಗಿಲ್ಲಿ ಮಾಡುವುದಿಲ್ಲ..."

'ಅದಕ್ಕೇ ಅವರ ಬಂಧು-ಬಾಂಧವರನ್ನೂ ವಿಚಾರಿಸಬೇಕು...."

"ನೋಡಿ, ಇದೇ ತಪ್ಪು...."

'ಏನು? ಒಬ್ಬ ಮಂತ್ರಿಯ ಸಂಬಂಧಿಯೂ ತಪ್ಪಿಗೆ ಅವನು ಆಸ್ತಿ—ಪಾಸ್ತಿ ಕೂಡಿಸ ಬಾರದೇನು?'

'ಬಾರದೂಂತ ಅಂದವ್ರು ಯಾರು? ಆದರೆ, ಅದಕ್ಕೆ ಸಮರ್ಪಕವಾದ ಲೆಕ್ಕ ಇಡಬೇಕು....'

'ಲೆಕ್ಕ ಎಲ್ಲರದ್ದೂ ಸರಿಯಾಗೇ ಇರುತ್ತದೆ. ಅದ್ರೆ ನೋಡಿ, ಇದ್ರಲ್ಲೇ ರಾಮಲಕ್ಷ್ಮಣ ಎಲ್ಲಾ ಇರ್ತಾರೆ...'

"ಅಂದ್ರೆ?"

"ಅಲ್ರಿ, ಕಾಂಗ್ರೆಸ್ ಸಂಸ್ಥೆಯ ಕದೀಮರು ಆಸ್ತಿ ಮಾಡೋದಿಲ್ವೆ? ಲೆಕ್ಕ ಇಡೋದಿಲ್ವೆ? ಅವರು ಖದೀಮರೆಂದು ಸಾಧಿಸೋಕೆ ಯಾವ ರುಜುವಾತಾದ್ರೂ ಸಿಗೋದುಂಟೆ?"

'ಅದು ಹೌದು....'

"ನೋಡಿ, ನನ್ನ ಕೇಳೋದಾದ್ರೆ ಇದಕ್ಕೆಲ್ಲಾ ನ್ಯಾಯಪೀಠ ಏರ್ಪಡಿಸೋದ ಅನಗತ್ಯ."

"ಯಾಕೆ ಹಾಗಂತೀಯ?"

"ಯಾಕಂದ್ರೆ ನಮ್ಮ ಪ್ರಗತಿಶೀಲ ಸರ್ಕಾರದ ಆಡಳಿತದಲ್ಲಿ ಆಸ್ತಿ ಮಾಡುವ ಧೈರ್ಯ ಕಡಿಮೆಯಾಗ್ತಾ ಇದೆ."

'ಏಕೆ?'

'ಏಕೇಂದ್ರ ನೋಡಿ, ಇದ್ದುದನ್ನು ಉಳಿಸುವುದಕ್ಕಿಂತ ದರ್ಬಾರು ಮಾಡೋದೇ ನೆಮ್ಮದೀಂತ ಅನುಭವವಾಗ್ತಾ ಇದೆ.'

'ಹ್ಞೂಂ....'

'ಆಸ್ತಿ ಚಿರವಿರಲಿ ಚರವಿರಲಿ ಅದು "ದೇಶದ ಹಿತದೃಷ್ಟಿ"ಯಿಂದ ಮುಟ್ಟುಗೋಲು ಹಾಕಲು ಸರಕಾರಕ್ಕೆ ಅಧಿಕಾರವಿದೆ ತಾನೆ?'

'ಆದ್ರೂ ಆಸ್ತಿ ಗಳಿಸೋದು ಪ್ರಜೆಯ ಮೂಲಭೂತ ಹಕ್ಕು....'

'ಯಾರು ಅಲ್ಲಾಂತಾರೆ? ಪ್ರಜೆಗೆ ಆಸ್ತಿಗಳಿಸೋ ಅಧಿಕಾರವಿದೆ; ಅದನ್ನು ತಪಗೆ ಕಂಡಷ್ಟು ಪರಿಹಾರ ನೀಡಿ ವಶಪಡಿಸಿಕೊಳ್ಳೋ ಅಧಿಕಾರ ಸರಕಾರಕ್ಕೂ ಇದೆ. ಆದರೆ, 'ಸಾರ್ವಜನಿಕ ಹಿತ'ದ ಲೇಬಲು ಮಾತ್ರ ಹಚ್ಚಬೇಕು...'

'ಅದು ಹೌದೂನ್ನು. ಆದ್ರೂ...'

"ಆದ್ರೂ ನೋಡಿ, ನಾನು ಹೇಳೋದಾದ್ರೆ, ಸಾರ್ವಜನಿಕ ಅಧಿಕಾರಸ್ಥಾನದಲ್ಲಿ ಯಾರು ಎಷ್ಟು ಸಂಪಾದಿಸುತ್ತಾರೆಂದು ವಿಚಾರಿಸುವ ಬದಲು ಯಾರು ಎಷ್ಟು ಖರ್ಚು ಮಾಡುತ್ತಾರೆಂದು ಕಂಡುಹಿಡಿಯಬೇಕು....'

"ಆಮೇಲೆ?"

'ಹೆಚ್ಚು ಖರ್ಚು ಮಾಡುವವನನ್ನು ರಾಜ್ಯಕೀಯ ಸ್ಥಾನದಿಂದ ಖಡ್ಡಾಯ ನಿವೃತ್ತಿ ಮಾಡಬೇಕು...."

'ಅಂದ್ರೆ?'

'ನೋಡಿ, ಒಬ್ಬ ಮಂತ್ರಿ ದೇಶದ ಬೊಕ್ಕಸಕ್ಕೆ ಕೊರೆವ ತೂತನ್ನು ಅಳೆಯಬೇಕು. ಈ ದೊಡ್ಡ ಜನಗಳನ್ನು ಕಂಡು ಹಿಡಬೇಕು....'

'ಇದೊಳ್ಳೇ ಲಾಯಕ್ಕು...'

'ನೋಡಿ, ಕೇಂದ್ರದ ಒಬ್ಬೊಬ್ಬ ಮಂತ್ರಿ ವರ್ಷಕ್ಕೆ ಸುಮಾರು ಐದು ಲಕ್ಷ ರೂಪಾಯಿ ಖರ್ಚು ಮಾಡುತ್ತಾನಂತೆ. ಕೇಂದ್ರದ ಐವತ್ತು ಮಂತ್ರಿಗಳು ಸುಮಾರು ಕೋಟಿ ರೂಪಾಯಿಗಳಿಗೆ ತೂತು ಕೊರೆಯುತ್ತಾರೆಂತಾಯ್ತು. ದೇಶದಲ್ಲಿನ ಮಾಜಿ— ರಾಜ-ಮಹಾರಾಜ-ನವಾಬ-ಬೇಗಮರುಗಳ ಸಂಖ್ಯೆ ಸುಮಾರು ೩೦೦ ಅಂತ ಇಟ್ಟುಕೊಂಡ್ರೆ ಇವರಿಗೆ ಕೊಡುತ್ತಿದ್ದ ರಾಜಧನ ಐದಾರು ಕೋಟಿ ಮಾತ್ರ...."

'ನೋಡಿ, ಅದು ರಾಜಧನ. ಇನ್ನು ವಿದ್ಯುತ್, ರಕ್ಷಣೆ ಅದು— ಇದೂಂತ ಬೇರೆಯೂ ಇತ್ತು...'

"ಅದು ಏನೇ ಇರಲಿ, ಸರಾಸರಿ ಒಬ್ಬ ಮಂತ್ರಿಯ ಖರ್ಚನ್ನು ಮೀರುತ್ತಿರಲಿಲ್ಲ."

"ಹ್ಞೂಂ....ಮಂತ್ರಿ ಅಂದರೆ ಪ್ರಜಾಪ್ರಭುತ್ವದ ಪ್ರಭುಗಳು..."

"ಅದೇ ನೋಡಿ, ಶ್ರೀ ಸಾಮಾನ್ಯನು ಸರಾಸರಿ ದಿನಕ್ಕೆ ಒಂದು ರೂಪಾಯಿಯನ್ನೂ ಗಳಿಸಲು ಅಶಕ್ತನಾಗಿರುವ ನಮ್ಮ ದೇಶದಲ್ಲಿ ಒಬ್ಬೊಬ್ಬ ಮಂತ್ರಿ ಇಷ್ಟೊಂದು ವೆಚ್ಚ ಮಾಡುವುದು ಸಮಾಜವಾದವೇನು?"

'ಅಲ್ಲ ಮಂತ್ರೀಂತ ಆದ ಮೇಲೆ ಸುಮ್ನೇ ಇರೋಕಾಗುತ್ಯೆ?'

'ಯಾಕೆ ಇರಬಾರದೂಂತ? ಪ್ರಗತಿಯ ಕೆಸರು ಚೇಲುತ್ತಾ ತಾವು ಪೋಲು ಮಾಡುವುದು ಯಾವ ಧರ್ಮ?'

"ನೋಡು, ಅದೆಲ್ಲ ಅನಿವಾರ್ಯ...."

"ನೋಡಿ, ಮಹಾತ್ಮರು ಶ್ರೀಭಾರತೀಯನಿಗೆ ಸರಾಸರಿ ದೊರೆಯುವಷ್ಟೇ ಬಟ್ಟೆ ಉಪಯೋಗಿಸುತ್ತಿದ್ದರಂತೆ. ಹಾಗೇ ಈ ಮಂತ್ರಿಗಳೂ ದೇಶದ ಶ್ರೀ ಸಾಮಾನ್ಯನ ಸರಾಸರಿ ಆದಾಯದಷ್ಟೇ ವೇತನ-ಭತ್ತೆ ಇತ್ಯಾದಿ ರೂಪದಲ್ಲಿ ಪಡೆಯಬೇಕು....'

'ಅಲ್ವೇ, ಹಾಗಾದರೆ, ಅವರು ಚುನಾವಣೆಯಲ್ಲಿ ಗೆದ್ದು ಬರಲು ಮಾಡಿದ ಖರ್ಚು ಹೇಗೆ ಹುಟ್ಟಬೇಕು?'

'ಯಾಕೆ ಹುಟ್ಟಬೇಕೂಂತ?'

'ನಿನ್ನ ಕತೆ ಒಳ್ಳೇದಾಯ್ತು. ಅಲ್ವೇ, ಹಾಗಿಲ್ಲಾದ್ರೆ ನಾಳೆ ಚುನಾವಣೆಗೆ ನಿಲ್ಲೋರಾದ್ರೂ ಯಾರು?'

'ಜನಸೇವೆಯ ಜಪಮಣಿ ಸ್ವಾರ್ಥ ಸಾಧನೆ ಮಾಡುವವರು ನಿಲ್ಲೋದಾದ್ರೂ ಏಕೆ?'

"ಏನಪ್ಪ, ನೀನು ಭಾರೀ ಕ್ರಾಂತಿಕಾರಿ ಆಗ್ತಾ ಇದ್ದೀಯ?"

"ಇದು ಕ್ರಾಂತಿಯಲ್ಲ, ಪ್ರಗತಿ. ಹೀಗಾದಲ್ಲಿ ಮಾತ್ರ ನಿಜವಾದ ಪ್ರಗತಿ ಸಾಧ್ಯ. ಇಲ್ಲ, ಅದೇ ಬಡತನವನ್ನು ನಾವು ಮತ್ತೂ ಮತ್ತೂ ಕರೆಯ ಹೋಗುತ್ತೇವೆ."

"ಅಂತೂ ಫೆರ್ನಾಂಡಿಸರ ಸಲಹೆ ನಿನಗೆ ರುಚಿಸಲಿಲ್ಲಾಂತಾಯ್ತು."

"ಯಾರಿಲ್ಲಾಂತಂದ್ರು? ಆದ್ರೆ, ಆ ನ್ಯಾಯ ಪೀಠ ವೆಚ್ಚ ಎಷ್ಟಾಯಿತೆಂದು ಪರಿಶೀಲಿಸಬೇಕು; ಅಷ್ಟು ವೆಚ್ಚ ಮಾಡಿಯೂ ಆಸ್ತಿ ಕೂಡಿಸೋದು ಹೇಗೆ ಸಾಧ್ಯ ಆಯ್ತೂಂತ...."

'ಹ್ಞೂಂ...ಅದೇ ಈಗ ನಾನಂದದ್ದು.'

'ಯಾವುದ ?'

"..............."

'ಕತೆ..........?

—ಗೋರಾ

ಕುಟುಂಬ ಯೋಜನಾ ದ್ವಿಸಪ್ತಾಹ,
ಸೆಪ್ಟೆಂಬರ 14 ರಿಂದ 27, 1970

ಕುಟುಂಬ ಯೋಜನೆಯ ಉದ್ದೇಶ ವಿಶಾಲವಾದುದು. ಜನಸಂಖ್ಯೆಯನ್ನು ಮಿತಿಯಲ್ಲಿಟ್ಟುಕೊಳ್ಳುವುದಷ್ಟೇ ಅದರ ಗುರಿಯಲ್ಲ. ತಾಯಂದಿರ ಮತ್ತು ಮಕ್ಕಳ ಆರೋಗ್ಯಪಾಲನೆ ಕೂಡ ಅದರ ಧ್ಯೇಯಗಳಲ್ಲಿ ಒಂದು.

—ಶ್ರೀಮತಿ ಇಂದಿರಾ ಗಾಂಧಿ

ನಾವು ದಸ್ಯುಗಳಾಗುತ್ತೇವೆಯೆ?

ಕೋಲಾರ ಜಿಲ್ಲೆಯಲ್ಲಿ ಖಾಸಗಿ ಒಡೆತನಕ್ಕೆ ಸೇರಿದ ಸಾರಿಗೆ ಬಸ್ಸೊಂದು ತನ್ನ ಕೆಪಾಸಿಟಿಗೆ ಐದು ಪಾಲಷ್ಟು ಪ್ರಯಾಣಿಕರನ್ನು ಹೊತ್ತು ಹೋಗುತ್ತಿದ್ದ ವರದಿ ಬಂದು ಕೆಲವಾರು ದಿನಗಳು ಕಳೆದುವು. ಇದೀಗ ಕಾರ್ಗಲ್ಲಿನಿಂದ ಸಿರಸಿಗೆ ಹೋಗುತ್ತಿದ್ದ ರಾಜ್ಯ ಸಾರಿಗೆ ಸಂಸ್ಥೆಯ ಬಸ್ಸಿನಲ್ಲಿ ೧೭ ಜನ ಟಿಕೇಟಿಲ್ಲದ ಯಾತ್ರಿಕರು ಸಿಕ್ಕರೆಂದು ವರದಿ ಬಂದಿದೆ. ಸರ್ವೇಸಾಮಾನ್ಯವಾಗಿ ಸಾರಿಗೆ ಸಂಸ್ಥೆಯ ಬಸ್ಸುಗಳ ಕೆಪಾಸಿಟಿ ೩೪-೪೦ ಇರುತ್ತದೆ. ಹಾಗಿರುವಾಗ ಅರ್ಧಾಂಶದಷ್ಟು ಯಾತ್ರಿಕರು ಟಿಕೇಟು ಪಡೆದಿಲ್ಲವೆಂಬುದು ಬಹಳ ಸೋಜಿಗದ ಸಂಗತಿ.

ಸಾರಿಗೆ ಸಂಸ್ಥೆಯ ಮೇಲಿನ ಬಸ್ಸಿನಲ್ಲಿ ಒಟ್ಟು ಎಷ್ಟು ಪ್ರಯಾಣಿಕರಿದ್ದರೆಂದು ಯಾರೂ ಹೇಳಿಲ್ಲ. ಅದರಲ್ಲಿ ಪ್ರಯಾಣ ಮಾಡುತ್ತಿದ್ದವರ ಸಂಖ್ಯೆ ಡ್ರೈವರೂ ಕಂಡಕ್ಟರೂ ಬಿಟ್ಟು ಬರಿಯ ಹದಿನೇಳು ಎಂದು ಯಾರಾದರೂ ಹೇಳಿದರೆ ಅದು ಖಂಡಿತ ಹಕವಾದೀತು. ಹಾಗೆಯೇ ೧೭ ಮಂದಿ ಟಿಕೇಟಿಗೆ ಹಣ ತೆತ್ತಿಲ್ಲವೆನ್ನುವುದೂ ಸತ್ಯಕ್ಕೆ ಬಹುದೂರದ ಮಾತಾದೀತು.

ರಾಜ್ಯ ಸಾರಿಗೆ ಸಂಸ್ಥೆಯ ಬಸ್ಸುಗಳು ಟಿಕೇಟು ಪಡೆಯದ ಪ್ರಯಾಣಿಕರನ್ನು ಬಯ್ಯಬಹುದು; ಆದರೆ, ಹಣ ನೀಡದವರನ್ನು ಎಂದೂ ಬಯ್ಯಲಾರವು. ಕಂಡಕ್ಟರನನ್ನು ವಶೀಲಿ ಮಾಡಿ ಏನಾದರೂ ಕಾಸು ಕೊಟ್ಟುಬಿಟ್ಟರೆ, ಟಿಕೇಟಿಲ್ಲದೇನೇ ಗುರಿ ಸೇರುವುದು ಅಸಾಧ್ಯವಲ್ಲ. ಈ ವಶೀಲಿಗೇನೂ ಹೆಚ್ಚು ತ್ರಾಸ ಪಡಬೇಕಾದದ್ದಿಲ್ಲ. ಕಂಡಕ್ಟರನ ಬಗ್ಗೆ ಸಹಾನುಭೂತಿಯ ಒಂದು ಮಾತಾಡಿ, ಒಂದು ಮುಗುಳ್ನಗೆ ಸೂಸಿ, ಒಂದು ಬೀಡಿಯೋ ಸಿಗರೇಟೋ ನೀಡಿ ಅದಕ್ಕೆ ಬೆಂಕಿ ಹೊತ್ತಿಸಿದಿರೆಂದರೆ, ಅವನು ನಿಮ್ಮವನಾಗೇ ಬಿಡುತ್ತಾನೆ. ಬಸ್ಸಿನ ದರ ದುಬಾರಿಯಾಗಿದೆಯೆಂದು ನೀವು ನುಡಿಯಬೇಕು. ಹಾಗಿದ್ದಾರೂ ಕಂಡಕ್ಟರು—ಡ್ರೈವರುಗಳ ಸಂಬಳ ಸಾರಿಗೆ ಏರಿಲ್ಲವೆಂದು ಅನುಕಂಪ ತೋರಿಸಬೇಕು. "ಇಲ್ಲಿ ಬಿಡಿಸಾರ್, ನಿಮಗೆ ಟಿಕೇಟು ಯಾಕೆ? ಹೋದ್ರೆ ಸಂತಾಕ್?" ಎನ್ನುತ್ತಾನೆ ಆತ. ನೀವೂ ತಲೆಯಾಡಿಸಿ ಬಿಡುತ್ತೀರಿ. ನಿಮ್ಮ ಗುರಿ ಬಂದಾಗ ಏನಾದರೂ ಜೇಬಿಗೆ ಹಾಕಿ ಕೆಳಗಿಳಿಯುತ್ತೀರಿ.

ಸರಕಾರಿ ಸಂಸ್ಥೆಗಳು ನಷ್ಟದಲ್ಲಿ ನಡೆಯುತ್ತಿವೆ ನಿಜ. ರಾಜ್ಯದ ಸಾರಿಗೆ ಸಂಸ್ಥೆಯೂ ಅಷ್ಟೊಂದು ಲಾಭಕರವಾಗಿ ನಡೆಯುತ್ತಿಲ್ಲ. ಕೆಲವರ್ಷಗಳಿಗೆ ಹಿಂದೆ ಇದು ಲಕ್ಷಾಂತರ ರೂಪಾಯಿಗಳ ನಷ್ಟದಲ್ಲೇ ನಡೆಯುತ್ತಿತ್ತು. ಸಾರಿಗೆ ಸಂಸ್ಥೆಯ ಬಸ್ಸುಗಳ ಡ್ರೈವರು ಕಂಡಕ್ಟರು, ಇನ್ಸ್‌ಪೆಕ್ಟರು ಇತ್ಯಾದಿಯಾಗಿ ತಾರೀಸಿನ ಮನೆ ಕಟ್ಟಿಕೊಂಡದ್ದು ಇದೆ. ಇದರಿಂದೇನಾಯ್ತು? ಸಂಸ್ಥೆ ಮಾತ್ರ ಬಡವಾಯ್ತು; ಜನ ದುಬಾರಿ ಬೆಲೆ ತೆರಬೇಕಾಯ್ತು.

ಪಾಶ್ಚಾತ್ಯ ದೇಶಗಳಲ್ಲಿ ಸಮಾಚಾರ ಪತ್ರಗಳ ಅಂಗಡಿಗಳಲ್ಲಿ ಕೆಲವೆಡೆ ಮಾರಾಟಗಾರರಿರುವುದಿಲ್ಲ. ನಿಮಗೆ ಬೇಕಾಗುವ ಪತ್ರಿಕೆ ತೆಗೆಯುವುದು, ಅದರ ಬೆಲೆಯನ್ನಿಡುವುದು—ಸಾಂಗೋಪಾಂಗ ನಡೆದು ಬರುತ್ತಿದೆ. ಚಿಕ್ಕಾಸಿನ ಮೋಸ ವಂಚನೆ ನಡೆಯುವುದಿಲ್ಲ. ಆದರೆ ನಮ್ಮಲ್ಲೇನಾಗುತ್ತಿದೆ? ನಾವು ಹತ್ತಾರು ವಿಧಗಳಲ್ಲಿ ಪಾಶ್ಚಾತ್ಯರನ್ನು ಅನುಕರಿಸಿದ್ದೇವೆ. ಮುಖ್ಯವಾಗಿ ಈ ಅನುಕರಣೆ ಬಹಿರಂಗದಲ್ಲಿ ಮಾತ್ರ ಕಂಡುಬರುತ್ತದೆ. ಅಂತರಂಗದಲ್ಲಿಯೂ ನಾವು ಭಾರತೀಯರಾಗಿ ಉಳಿದಿಲ್ಲ; ದಿನೇದಿನೇ ದಸ್ಯುಗಳಾಗಿ ಹೋಗುತ್ತಿದ್ದೇವೆ. ಸತ್ಯ—ಸದಾಚಾರ—ನೀತಿ—ಪ್ರಾಮಾಣಿಕತೆಗಳನ್ನು ತಿಪ್ಪೆಗೆಸೆದಿದ್ದೇವೆ. ಸ್ವಾರ್ಥಸಾಧನೆಗಾಗಿ ತಾಯಿ-ತಂದೆಯ ಕುತ್ತಿಗೆ ಮುರಿಯಲಿಕ್ಕೂ ನಾವು ಹೇಸುವುದಿಲ್ಲ.

ಸಾರಿಗೆ ಬಸ್ಸುಗಳಲ್ಲಿ ಟಿಕೇಟಿಲ್ಲದೆ ಪ್ರಯಾಣ ಮಾಡುವುದು ಅಪರಾಧ. ಇದು ಸಾಮಾಜಿಕ ಅಪರಾಧ. ಕಂಡಕ್ಟರರನ್ನು ತೃಪ್ತಿಪಡಿಸಿ ಒಲಿಸಿಕೊಳ್ಳುವುದು ಭ್ರಷ್ಟಾಚಾರ. ನಮ್ಮ ಜನತೆಯಾಗಿ ಎತ್ತ ನಡೆಯುತ್ತಿದೆ ಎಂಬುದಕ್ಕೆ ಸ್ಪಷ್ಟ ಉದಾಹರಣೆ ಬೇರೆ ಬೇಕೆ? ಸಾರ್ವಜನಿಕ ಸಂಸ್ಥೆಗಳು ನಷ್ಟದಲ್ಲಿ ನಡೆಯುತ್ತಿರುವುದರ ಹಿನ್ನೆಲೆ ಇದೇ. ಇದರಿಂದ ದೇಶದ ಅರ್ಥವ್ಯವಸ್ಥೆ ಕೆಡುವುದು ಮಾತ್ರವಲ್ಲ, ನಷ್ಟವನ್ನು ಪ್ರಜೆಗಳೇ ತೆರಿಗೆಗಳ ರೂಪದಲ್ಲಿ ತುಂಬಬೇಕಾಗುವುದು.

ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದರೆ ಪ್ರಜೆಗಳು ಚಾರಿತ್ರ್ಯವಂತರಾಗಬೇಕು. ಚಾರಿತ್ರ್ಯಹೀನರೇ ತುಂಬಿದ ದೇಶ ಪ್ರಜಾಪ್ರಭುತ್ವದ ನಕಲಿ ಮಾಡುತ್ತದೆ; ಇರುವ ಚಾರಿತ್ರ್ಯವಂತರನ್ನು ಚಿತ್ರಹಿಂಸೆಗೆ ಗುರಿಮಾಡುತ್ತದೆ. ಪ್ರಜಾಪ್ರಭುತ್ವದ ಕೈವಾರಿಗಳೂ ಮಂತ್ರಿ-ಮಹೋದಯರೂ-ನಾಟಾಳಿಗಳೂ ಮೊತ್ತಮೊದಲಿಗೆ ಚಾರಿತ್ರ್ಯವಂತರಾದ ಬೇಕು. ಸ್ವಾರ್ಥಲಾಲಸೆಯಿಂದ ತುಂಬಿದವರು, ಆತ್ಮಸಾಕ್ಷಿಯ ಹೆಸರಲ್ಲಿ ಗಾಳಿ ಬಂದತ್ತ ತೂರಿಕೊಳ್ಳುವವರು ಎಂಥ ಪ್ರಾಮಾಣಿಕತೆಯನ್ನು ಜನತೆಗೆ ಕಲಿಸಿಯಾರು?

ನಾವಿಬ್ಬರು
ನಮಗಿಬ್ಬರೇ ಮಕ್ಕಳು
ಚಿಕ್ಕ ಸಂಸಾರ
ಸುಖಕ್ಕೆ ಆಧಾರ

ಎರಡು ಅಥವಾ ಮೂರು ಮಕ್ಕಳನಂತರ ಮುಂದೆ ಮಕ್ಕಳಾಗದ ಹಾಗೆ ಚಿಕಿತ್ಸೆ ಪಡೆಯುವುದು ಅತ್ಯುತ್ತಮ.

ಹೆಂಗಸರಿಗೆ— ಸಂತಾನ ನಿರೋಧ ಶಸ್ತ್ರ ಚಿಕಿತ್ಸೆ.
ಗಂಡಸರಿಗೆ— ಸಂತಾನ ನಿರೋಧ ಶಸ್ತ್ರ ಚಿಕಿತ್ಸೆ.

ನುರಿತ ವೈದ್ಯರುಗಳಿಂದ ಶಸ್ತ್ರ ಚಿಕಿತ್ಸೆ ಪಡೆಯುವ ಅವಕಾಶವಿದೆ.

ಹೆಂಗಸರಿಗಿಂತ ಗಂಡಸರು ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುವುದು ಉತ್ತಮ
ಏಕೆಂದರೆ—

1) ತುಂಬಾ ಸುಲಭ.
2) 30 ನಿಮಿಷಗಳಲ್ಲಿ ಚಿಕಿತ್ಸೆ ಮುಗಿದು ಮನೆಗೇ ಹೋಗಬಹುದು. ಹೆಂಗಸರಾದರೆ 7 ದಿನ ಆಸ್ಪತ್ರೆಯಲ್ಲಿರಬೇಕು.
3) ಸಂಸಾರ ಸುಖಕ್ಕೆ ಯಾವ ಆತಂಕವೂ ಇಲ್ಲ.

ಗಂಡಸರೇ— ಸಂತಾನ ನಿರೋಧ ಶಸ್ತ್ರ ಚಿಕಿತ್ಸೆಯ ಅವಕಾಶವನ್ನು ಉಪಯೋಗಿಸಿಕೊಳ್ಳಿ.
ನಿಮ್ಮ ತಾತ್ಕಾಲಿಕ ಖರ್ಚಿಗಾಗಿ ಹಣ ಕೊಡುವ ವ್ಯವಸ್ಥೆಯೂ ಇದೆ.
ನೆನಪಿಡಿ— ಕುಟುಂಬ ಯೋಜನೆ ಕೇಂದ್ರದ ಚಿನ್ಹೆ— ಕೆಂಪು ತ್ರಿಕೋಣ.

ಕುಟುಂಬ ಯೋಜನೆ : ಮಹಿಳೆಯರ ಪಾತ್ರ

ಲೇಖಕಿ : ಶ್ರೀಮತಿ ಇಳಾ ಪಾಲಚೌಧುರಿ
ಸಂಸತ್ ಸದಸ್ಯೆ.

ಪ್ರತಿ ಸಲ ನಿಮ್ಮ ನಾಡಿ ಬಡಿತವಾದಾಗಲೂ ವಿಶ್ವದಲ್ಲಿ ಮೂರು ಮಕ್ಕಳು ಹುಟ್ಟುತ್ತಿರುತ್ತವೆ. ಪ್ರಗತಿಶೀಲ ಹಾಗೂ ಪ್ರವರ್ಧಮಾನ ರಾಷ್ಟ್ರಗಳು ಈ ಅಂಶವನ್ನು ಪರಿಶೀಲಿಸಬೇಕಾಗಿದೆ. ಏಕೆಂದರೆ ಈ ಜಗತ್ತಿನಲ್ಲಿ ಹುಟ್ಟುವ ಪ್ರತಿ ಶಿಶುವಿಗೂ ಪ್ರೇಮ, ಪಾಲನೆ ಹಾಗೂ ಜೀವನದ ಉತ್ತಮ ಅವಕಾಶಗಳನ್ನು ಪಡೆಯುವ ಹಕ್ಕಿದೆ.

ಭಾರತದಲ್ಲಿ 1970—71ನೇ ಸಾಲಿನಲ್ಲಿ ಜನಸಂಖ್ಯೆ 55.4 ಕೋಟಿಯೆಂದು ಅಂದಾಜು ಮಾಡಲಾಗಿದೆ. ದೇಶದ ಜನಸಂಖ್ಯೆ ವರ್ಷಕ್ಕೆ 1.3ಕೋಟಿ ಏರುತ್ತಿದೆ.

ಭಾರತದ ಭೂಪ್ರದೇಶ 32 ಲಕ್ಷ ಚದರ ಕಿಲೋಮೀಟರ್ ವ್ಯಾಪಿಸಿದೆ. ಪ್ರತಿ ಚದರ ಕಿಲೋಮೀಟರ್ ಪ್ರದೇಶದಲ್ಲಿ ಸರಾಸರಿ 174 ಜನಸಾಂದ್ರತೆಯಿದೆ. ದೇಶದ 2690 ಪಟ್ಟಣಗಳು ಮತ್ತು 6.22 ಲಕ್ಷ ಗ್ರಾಮಗಳಲ್ಲಿ ಜನರು ಜೀವಿಸುತ್ತಿದ್ದಾರೆ. ಭಾರತವು ವಿಶ್ವದ ಶೇಕಡ 2.4ರಷ್ಟು ಭೂಪ್ರದೇಶ ಹೊಂದಿದ್ದರೂ ಜಗತ್ತಿನ ಶೇಕಡ 14ರಷ್ಟು ಜನಸಂಖ್ಯೆಯನ್ನು ಹೊಂದಿದೆ!

ಅಗತ್ಯ ಸಹಕಾರ

ಅದ್ದರಿಂದ ಜನಸಂಖ್ಯಾ ಹತೋಟಿಯ ಕಾರ್ಯಕ್ರಮ ಯಶಸ್ವಿಯಾಗಲು ಜನ್ಮದಾತೆಯರಾದ ಮಹಿಳೆಯರ ಹಾಗೂ ಪುರುಷರ ಪ್ರತ್ಯಕ್ಷ ಸಹಕಾರ ಅತ್ಯಗತ್ಯ. ಜನನ ಪ್ರಮಾಣವನ್ನು ತಗ್ಗಿಸದಿದ್ದರೆ ಪ್ರವರ್ಧಮಾನ ರಾಷ್ಟ್ರದ ಸರ್ವಾಂಗೀಣ ಪ್ರಯತ್ನಗಳು ವಿಫಲವಾಗುವುವೆಂಬುದನ್ನು ಮನಗಾಣಬೇಕಾಗಿದೆ.

ಮಹಿಳೆಯರೇ ಜನಸಂಖ್ಯಾ ನಿಯಂತ್ರಣದ ಕಾರ್ಯಭಾರವನ್ನು ವಹಿಸಿಕೊಳ್ಳಬೇಕು. ಇದು ತಮ್ಮ ಹಾಗೂ ದೇಶದ ಅಭ್ಯುದಯದ ಜವಾಬ್ದಾರಿಯೆಂಬುದನ್ನು ಮನಗಾಣದಿದ್ದರೆ ಎಷ್ಟೊಂದು ಮನವೊಲಿಕೆಯ ಕಾರ್ಯಕ್ರಮ ಕೈಗೊಂಡರೂ ನಿರರ್ಥಕವಾಗುತ್ತವೆ.

ಈ ಹೊಣೆಗಾರಿಕೆಯನ್ನು ಅರಿತಿರುವ ಪುರುಷರು, ಮಹಿಳೆಯರ ಸಹಕಾರದಿಂದ ಕುಟುಂಬ ಯೋಜನಾ ರಂಗದಲ್ಲಿ ಉತ್ತಮ ಫಲಿತಾಂಶ ಗೋಚರವಾಗುತ್ತಿದೆ. 1961 – 69ರ ಅವಧಿಯಲ್ಲಿ ಭಾರತದಲ್ಲಿ 14.17 ಲಕ್ಷ ಹೊಸ ಜನನಗಳನ್ನು ತಡೆಗಟ್ಟಲಾಗಿದೆ. 1968-69ರ ವರೆಗೆ ಕೈಗೊಂಡ ಕಾರ್ಯಕ್ರಮದ ಫಲವಾಗಿ 1973—74ನೇ ಸಾಲಿನ ವರೆಗೆ 1ಕೋಟಿ 8ಲಕ್ಷ ಹೊಸ ಶಿಶುಗಳ ಜನನವನ್ನು ತಡೆಗಟ್ಟಲಾಗುತ್ತಿದೆ. 1978—79ನೇ ಸಾಲಿನವರೆಗೆ 1 ಕೋಟಿ 48 ಲಕ್ಷ ಶಿಶುಗಳ ಜನನವನ್ನೂ 1990—91ರ ವರೆಗೆ 1ಕೋಟಿ 77ಲಕ್ಷ ಶಿಶುಗಳ ಜನನವನ್ನೂ ತಡೆಗಟ್ಟಲಾಗುತ್ತದೆ.

ಈ ಅಂಕಿ — ಅಂಶಗಳು ಉತ್ತೇಜನಕಾರಿಯಾಗಿದೆ. ಇವುಗಳ ಪ್ರಕಟಣೆಯಿಂದ ಈ ಕಾರ್ಯಕ್ರಮ ಪ್ರಭಾವಶಾಲಿಯಾಗಿ ಬೆಳೆದು ತಡೆಗಟ್ಟಿದ ಹೊಸ ಶಿಶುಗಳ ಜನನ 1.77 ಕೋಟಿಗೆ ಏರುತ್ತದೆ.

ಈಗ ದೇಶದಾದ್ಯಂತ 1782 ಕುಟುಂಬ ಯೋಜನಾ ನಗರಕೇಂದ್ರಗಳೂ, 4887 ಪ್ರಮುಖ ಗ್ರಾಮಾಂತರ ಕುಟುಂಬ ಯೋಜನಾ ಕೇಂದ್ರಗಳೂ, 24,762 ಉಪಕೇಂದ್ರಗಳೂ ಕಾರ್ಯಶೀಲವಾಗಿವೆ. ಇತರ 7427 ವೈದ್ಯಕೀಯ ಸಂಸ್ಥೆಗಳು ಕುಟುಂಬ ಯೋಜನಾ ಕಾರ್ಯದಲ್ಲಿ ನಿರತವಾಗಿವೆ. ಇವಲ್ಲದೆ 409 ಸಂಚಾರಿ ಸಂತತಿ ನಿಯಂತ್ರಣ ಚಿಕಿತ್ಸಾ ಘಟಕಗಳೂ, 413 ವಂಕಿಧಾರಣ ಘಟಕಗಳೂ 400 ಸ್ವಯಂ ಸೇವಾ ಸಂಸ್ಥೆಗಳು ಈ ದಿಸೆಯಲ್ಲಿ ಕಾರ್ಯವೆಸಗುತ್ತಿವೆ.

ಭಾರತೀಯ ಮಹಿಳೆಯರು ಸೌಲಭ್ಯಗಳ ಸಂಪೂರ್ಣ ಪ್ರಯೋಜನವನ್ನು ಪಡೆದರೆ ಜನಸಂಖ್ಯಾ ನಿಯಂತ್ರಣದ ಮಾಧ್ಯಮಗಳ ಅಭಾವ ಕಂಡು ಬರುವುದಿಲ್ಲ. ಜನನಗಳ ಇಳಿಮುಖ ಹಾಗೂ ಜನಸಂಖ್ಯಾ ನಿಯಂತ್ರಣದಲ್ಲಿ ಸಿಂಗಪುರ, ಜಪಾನ ಮತ್ತು ಇಂಡೋನೇಷ್ಯಾ ಪ್ರಗತಿ ಸಾಧಿಸಿವೆ.

ಮಹಿಳೆಯರ ಕರ್ತವ್ಯ

ಮೂವತ್ತು ವರುಷಕ್ಕಿಂತ ಹಿರಿಯರಾದ ಮಹಿಳೆಯರು, ಮೂರು ಅಥವ ಅದಕ್ಕಿಂತ ಹೆಚ್ಚು ಸಂಖ್ಯೆಯ ಮಕ್ಕಳನ್ನು ಪಡೆದಿರುವವರು ಜನನ ನಿಯಂತ್ರಣ ಸಾಧಿಸಬೇಕಾಗಿದೆ. 17—25ರ ನಡುವಣ ವಯೋಮಿತಿಯ ದಂಪತಿಗಳು ಒಂದೇ ಮಗು ಹೊಂದಿರಬೇಕು. ಅವರಿಗೆ ವರಮಾನ ಹೆಚ್ಚಾದಂತೆ ಸೂಕ್ತ ಅಂತರದಲ್ಲಿ ಮಕ್ಕಳನ್ನು ಪಡೆಯುವಂತೆ ಯೋಜನೆ ರೂಪಿಸಿಕೊಳ್ಳಬೇಕು. ಆದರೆ ಭಾರತದಲ್ಲಾಗಲಿ ಅಥವಾ ಇತರ ಪ್ರವರ್ಧಮಾನ ರಾಷ್ಟ್ರಗಳಲ್ಲಾಗಲಿ ಎರಡು ಮಕ್ಕಳಿಗೆ ಪೂರ್ಣ ಸೌಲಭ್ಯಗಳನ್ನು ನೀಡುವಷ್ಟು ವರಮಾನವಿಲ್ಲ.

ಉದ್ಯೋಗ, ಶಿಕ್ಷಣ ಹಾಗೂ ಶಾಲೆಗಳ ರಾಷ್ಟ್ರೀಯ ಕಾರ್ಯಕ್ರಮವನ್ನು ಜನಸಂಖ್ಯಾ ಕಾರ್ಯಕ್ರಮದತ್ತ ಸಜ್ಜುಗೊಳಿಸಬೇಕಾಗಿದೆ. ಇದನ್ನು ಯೋಜನಾ ಕಾರ್ಯಕ್ರಮದಲ್ಲಿ ಅಳವಡಿಸಿದರೆ ಭಾರತದ ಭವಿತವ್ಯ ಅಂಧಕಾರದಲ್ಲಿ ಮುಳುಗುವುದಿಲ್ಲ. ಭಾರತೀಯ ಮಾತೆಯರ ಕಣ್ಣು ಆಶಾಂಕುರದಿಂದ ಮಿನುಗುತ್ತದೆ. ಆರೋಗ್ಯ ಸಂಪನ್ನ ಮಕ್ಕಳು ನಗೆ ಚಿಮ್ಮಿಸುತ್ತವೆ. ಭಾರತದಲ್ಲಿ ಬೆಳೆಯುವ ಹಣ್ಣುಗಳು ಅವರಿಗೆ ಪೋಷಣೆ ನೀಡುತ್ತವೆ. ಗ್ರಾಮೀಣ ಜನತೆಯ ಜೀವನ ಅರ್ಥಪೂರ್ಣವಾಗುತ್ತದೆ.

ಟುಂಬಗಳು ಹೊಂದಿರುವುದೇ ಆದರೆ ಅದು ಆ ಕುಟುಂಬಗಳ ಶಾಂತಿ ಮತ್ತು ಸುಖಗಳ ಸಾಧನವಾಗುವುದು.

ಇತ್ತೀಚಿನ ಕುಟುಂಬ ಯೋಜನೆಗೆ ನಮ್ಮ ದೇಶದಲ್ಲಿ ಸಾಕಷ್ಟು ಉತ್ತೇಜನ ದೊರೆಯುತ್ತಿದೆ. ಚಿತ್ರ ಕಲಾವಿದರು ತಮ್ಮ ಕೃತಿಗಳ ಮೂಲಕ ಈ ಯೋಜನೆಯ ಮುಖ್ಯಗುರಿ ಮತ್ತು ಅದರಿಂದ ಲಭ್ಯವಾಗುವ ಸೌಲಭ್ಯಗಳ ಬಗ್ಗೆ ಜನತೆಗೆ ತಿಳಿಯಪಡಿಸುತ್ತಿದ್ದಾರೆ. ಇತ್ತೀಚೆಗೆ ದೆಹಲಿಯ ಒಬ್ಬ ಮಹಿಳೆ ನಾವಿಬ್ಬರು–ನಮಗಿಬ್ಬರು ಎಂಬ ಶೀರ್ಷಿಕೆಯಲ್ಲಿ ಚಿತ್ರಕೃತಿಯನ್ನು ರಚಿಸಿ ಪ್ರಥಮ ಬಹುಮಾನ ಗಳಿಸಿದ್ದಾರೆ. ಅನೇಕಾನೇಕ ಕವಿಗಳು, ನಾಟಕಕಾರರು, ಸಂಗೀತಗಾರರು ಈ ಬಗ್ಗೆ ಶ್ರಮವಹಿಸುತ್ತಿದ್ದಾರೆ. ತಮ್ಮ ಪ್ರದರ್ಶನಗಳಲ್ಲಿ ಕುಟುಂಬಯೋಜನೆಯನ್ನು ಜನಪ್ರಿಯಗೊಳಿಸುತ್ತಿದ್ದಾರೆ. ಇದು ನಿಜಕ್ಕೂ ಸ್ವಾಗತಾರ್ಹ ವಿಷಯವಾಗಿದೆ. ಇದೇ ದೃಷ್ಟಿಯಿಂದ ಇತ್ತೀಚೆಗೆ ಕುಟುಂಬಯೋಜನೆಯ ಸಾಹಿತ್ಯವನ್ನು ವಿವಿಧ ಕ್ಷೇತ್ರಗಳಲ್ಲಿ ಒದಗಿಸುವ ಹೊಸ ಕಾರ್ಯಯೋಜನೆ ಮತ್ತು ಕಾರ್ಯಗತಗೊಳಿಸಲಾಗುತ್ತಿವೆ. ಕುಟುಂಬಯೋಜನೆ ಜನತಾ ಯೋಜನೆ ಎಂಬುದನ್ನು ತಿಳಿಸಲು ಇವು ಸಾಧನೆಗಳು.

ಜನಸಂಖ್ಯಾ ಸಮಸ್ಯೆ ಕೇವಲ ಭಾರತದ ಸಮಸ್ಯೆಯಲ್ಲ. ಇಂದು ಅಂತಾರಾಷ್ಟ್ರೀಯ ಸಮಸ್ಯೆ. 1920 ರಿಂದ 70ರ ಅವಧಿಯಲ್ಲಿ ವಿಶ್ವದ ಜನಸಂಖ್ಯೆ ಶೇಕಡಾ 60ರಷ್ಟು ಏರಿದೆ. ಇದೇ ಅವಧಿಯಲ್ಲಿ ನಮ್ಮ ಜನಸಂಖ್ಯೆ ಶೇಕಡ 120ರಷ್ಟು ಹೆಚ್ಚಿದೆ. ಇದನ್ನೇ ಗಮನದಲ್ಲಿಟ್ಟುಕೊಂಡು ನಮ್ಮ ಸರ್ಕಾರದವರು ಕುಟುಂಬ ಯೋಜನೆಯನ್ನು ಸರಕಾರಿ ಮಟ್ಟದಲ್ಲಿ ಕೈಗೊಂಡಿದ್ದಾರೆ. ನಮ್ಮ ಜನಸಂಖ್ಯೆ ಇದೇ ರೀತಿ ಹೆಚ್ಚುತ್ತ ಹೋದರೆ ನಮ್ಮ ಜೀವನಮಟ್ಟ ಸುಧಾರಿಸಲು ಸಾಧ್ಯವಾಗುವುದಿಲ್ಲ.

ನಮ್ಮ ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚಿಸುವ ಈ ಯೋಜನೆಯು ಹೆಚ್ಚು ಫಲಪ್ರದವಾಗಲು ಸರ್ಕಾರದವರು ಅಗತ್ಯವಾದಷ್ಟು ಹಣವನ್ನು ಒದಗಿಸುತ್ತಿದ್ದಾರೆ. ನಮ್ಮ ನೆರೆಹೊರೆಯ ರಾಷ್ಟ್ರಗಳು ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳು ಈ ಯೋಜನೆಗೆ ನೆರವು ನೀಡಲು ಮುಂದೆ ಬರುತ್ತಿವೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಕಾರ್ಯ ಯೋಜನೆಗಾಗಿ 315 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ವಿಶ್ವಸಂಸ್ಥೆಯ ರಾಷ್ಟ್ರೀಯ ಅಭಿವೃದ್ಧಿಯ ಇಲಾಖೆಯವರು 16 ಕೋಟಿ ರೂ.ಗಳಷ್ಟು ನೆರವು ನೀಡಿದ್ದಾರೆ.

ಕುಟುಂಬ ಯೋಜನಾ ದ್ವಿಸಪ್ತಾಹ,
ಸೆಪ್ಟೆಂಬರ 14 ರಿಂದ 27, 1970

ದೇಶದ ಅಗಾಧ ಜನ ಸಂಖ್ಯೆಯಿಂದಾಗಿ ನಮ್ಮ ಕೆಲಸದ ಅಗಾಧತೆಯೂ ಹೆಚ್ಚಿದೆ. ಇಲ್ಲಿ ಉತ್ಪಾದನೆಯಾಗುವ ವಸ್ತುಗಳು ಮತ್ತು ಸೇವೆಗಳು ಇಷ್ಟೊಂದು ಜನರಲ್ಲಿ ಹಂಚಲ್ಪಡಬೇಕು. ಸದಾಕಾಲ ಹೆಚ್ಚುತ್ತಲೇ ಹೋಗುತ್ತಿರುವ ಜನಸಂಖ್ಯೆ ನಮ್ಮದು. ವರ್ಷಕ್ಕೆ ಒಂದು ಕೋಟಿಗಿಂತಲೂ ಮಿಕ್ಕಿ ಹೆಚ್ಚಾಗುತ್ತಿದೆ. ದೇಶದ ಆರ್ಥಿಕ ಅಭಿವೃದ್ಧಿಯ ಪ್ರಯೋಜನಗಳು ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ಪರಿಣಾಮಕಾರಿಯಾಗುತ್ತಿಲ್ಲ. [illegible] ಪರಿಸ್ಥಿತಿ ಗಂಭೀರವಾಗಲು ಕೂಡ ಇದೇ ಕಾರಣ. ದೊಡ್ಡ ಸಂಸಾರವಿರುವ ವ್ಯಕ್ತಿಯ [illegible] ಅಸ್ವಾಸ್ಥ್ಯಕರ. ಹೆಚ್ಚು ಮಕ್ಕಳಿದ್ದರೆ ಅವರಿಗೆಲ್ಲ ಸಾಕಷ್ಟು ಉತ್ತಮ ಆಹಾರ, ಬಟ್ಟೆ ಬರೆ [illegible] ಕೆಲಸ. ವ್ಯಕ್ತಿಯ [illegible] ರಾಷ್ಟ್ರದ ಅಭಿವೃದ್ಧಿಯ ದೃಷ್ಟಿಯಿಂದಲೂ ಕುಟುಂಬ ಯೋಜನೆಯು ಅತ್ಯಂತ ಮಹತ್ವದ ವಿಷಯವಾಗಿದೆ.

— ಲಾಲ್ ಬಹದ್ದೂರ್ ಶಾಸ್ತ್ರಿ

davp 70/298

ಬೆಳೆಯುತ್ತಿರುವ ಪ್ರಜಾಸಂಖ್ಯೆ
ಒಂದು ಜಟಿಲ ಸಮಸ್ಯೆ.
ಕೆಂಪು ತ್ರಿಕೋಣ
ಪ್ರಗತಿಯ ಪಥ ಪ್ರದರ್ಶಕ.

ವಿಶೇಷ ಲೇಖನ

ರಾಷ್ಟ್ರೀಯ ಕುಟುಂಬಯೋಜನಾ ಪಕ್ಷ
ಸೆಪ್ಟೆಂಬರ್ 14—27, 1970

ಕಿರಿಯರ ಹಿರಿಯ ಸಾಧನೆ

ಭಾರತದ ಕುಟುಂಬಯೋಜನಾ ಕಾರ್ಯಕ್ರಮಕ್ಕೆ ಕಾಯಾ ವಾಚಾ ಮನಸಾ ಸೇವೆ ಸಲ್ಲಿಸುತ್ತಿರುವ ಕೆಲವು ಶ್ರದ್ಧಾವಂತ ವ್ಯಕ್ತಿಗಳ ಅಪೂರ್ವ ಸಾಧನೆಗಳನ್ನು ಇಲ್ಲಿ ಕೊಡಲಾಗಿದೆ.

● ● ●

ಎರ್ನಾಕುಲಂ ಜಿಲ್ಲೆಯ ಎಡಕ್ಕಾರ್ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಮುದಾಯ ವಿಸ್ತರಣಾ ಶಿಕ್ಷಕರಾಗಿರುವ ಶ್ರೀ ಟಿ. ವಿ. ಕೃಷ್ಣನ್ ಕುಟ್ಟಿ ಪೊದುವಲ್ ಅವರು ಎರಡು ಬಾರಿ ಜಿಲ್ಲಾ ಮಟ್ಟದ ನಗದು ಬಹುಮಾನವನ್ನು ಗಳಿಸಿದ್ದಾರೆ. ಕುಟುಂಬ ಯೋಜನೆಯ ಬಗ್ಗೆ ಜನತೆಯ ಮನವೊಲಿಸುವ ಪ್ರಯತ್ನದಲ್ಲಿ ಶ್ರೀ ಕುಟ್ಟಿಗೆ ಈ ಬಹುಮಾನಗಳು ದೊರೆತಿವೆ. ತಾನು ವ್ಯಾಸಕ್ಟಮಿ ಚಿಕಿತ್ಸೆಯನ್ನು ಮಾಡಿಸಿಕೊಂಡಿದ್ದಾನಲ್ಲದೆ ತನ್ನ ಕುಟುಂಬದ ಅರ್ಹ ವ್ಯಕ್ತಿಗಳನ್ನೆಲ್ಲಾ ಪ್ರೋತ್ಸಾಹಿಸಿ ವ್ಯಾಸಕ್ಟಮಿ ಚಿಕಿತ್ಸೆ ಮಾಡಿಸಿದ್ದಾರೆ. ಇದೇ ಆತ ತನ್ನ ಪ್ರಯತ್ನದಲ್ಲಿ ಹೆಚ್ಚು ಯಶಸ್ವಿಯಾದುದರ ಗುಟ್ಟು.

○ ○ ○

ಮಧ್ಯಪ್ರದೇಶದ ಧಾರ್ ಜಿಲ್ಲೆಯಲ್ಲಿ ರಾಜಗಢ್ ಎಂಬ ನಗರವಿದೆ. ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಹೆರಿಗೆ ವಾರ್ಡ್ ಒಂದನ್ನು ನಿರ್ಮಿಸುವುದಕ್ಕಾಗಿ ಅಲ್ಲಿನ ಜನ ಸುಮಾರು 1700 ರೂ.ಗಳ ನಿಧಿಯನ್ನು ಸಂಗ್ರಹಿಸಿದರು. ಹೀಗೆ ಸಂಗ್ರಹಿಸಿದ ಹಣವನ್ನು ಸಂಬಂಧಪಟ್ಟ ಜಿಲ್ಲೆಯ ಅಧಿಕಾರಿಗಳಿಗೆ ಒಪ್ಪಿಸಿದರು. ಇದಾದ ನಂತರ ಉತ್ಸಾಹಿ ಅಧಿಕಾರಿಗಳು ವಾರ್ಡಿನ ನಿರ್ಮಾಣಕಾರ್ಯವನ್ನು ಕೇವಲ ಆರು ತಿಂಗಳಲ್ಲಿಯೇ ಮುಗಿಸಿದರು. ಹತ್ತು ಮಂದಿಗೆ ಅನುಕೂಲವಿರುವ ಪ್ರಸೂತಿ ಗೃಹ ಸೌಲಭ್ಯ ಆ ಊರಿಗೆ ದೊರೆಯಿತು. ಅದರಿಂದಾಗಿ ಅಲ್ಲಿನ ಮಹಿಳೆಯರಿಗೆ ಟ್ಯುಬೆಕ್ಟಮಿ ಚಿಕಿತ್ಸಾ ಸೌಲಭ್ಯಗಳು ಮನೆಬಾಗಿಲಿಗೆ ದೊರೆಯಂತಾಯಿತು.

○ ○ ○

ಬಾಬುಲ್‌ಗಾವ್ ಎಂಬುದು ಔರಂಗಾಬಾದ್ ಜಿಲ್ಲೆಯಲ್ಲಿರುವ ಒಂದು ಗ್ರಾಮ. ಬಾಗಾ ಬಾನಾಜ ಆ ಹಳ್ಳಿಯ ಹಿರಿಯ ರೈತ. ತನ್ನ ಎಪ್ಪತ್ತರ ವಯಸ್ಸಿನಲ್ಲಿ ಆತ ಕುಟುಂಬ ಯೋಜನೆಯ ಉತ್ತೇಜಕನಾಗಿದ್ದಾನೆ. ಹಣದಾಸೆಗಾಗಿ ಆತ ಈ ಬಗ್ಗೆ ಆಸಕ್ತಿ ವಹಿಸಿಲ್ಲ, ಅರ್ಹ ದಂಪತಿಗಳ ಮನವೊಲಿಸಿ ಕುಟುಂಬಯೋಜನಾ ಚಿಕಿತ್ಸೆಯನ್ನು ಮಾಡಿಸಿಕೊಳ್ಳುವಂತೆ ಉತ್ತೇಜಿಸುತ್ತಿದ್ದಾನೆ. ತನಗೆ ಬಂದ ಹಣವನ್ನು ಅವರಿಗೆ ನೀಡುವುದು ಆತನ ಇನ್ನೊಂದು ವಿಶೇಷ ಗುಣ. ನಿಯಂತ್ರಿತ ಕುಟುಂಬ ಸುಖ ಜೀವನಕ್ಕೆ ದಾರಿ ಎಂಬುದು ಆತನ ಅಭಿಪ್ರಾಯ. ಈ ಉದ್ದೇಶದಿಂದಲೇ ತನ್ನೂರಿನಲ್ಲಿ ಆತನು ಶ್ರಮ ವಹಿಸುತ್ತಿದ್ದಾನೆ. ಆತನ ಶ್ರಮ ಸಾರ್ಥಕವಾಗಿದೆ.

○ ○ ○

ಫರಿದಾಕೋಟ್ ಪಂಜಾಬಿನಲ್ಲಿ ಹೆಸರಾಂತ ಸ್ಥಳ. ಅಲ್ಲಿ ಇತ್ತೀಚೆಗೆ ಸಾಮೂಹಿಕ ಟ್ಯುಬೆಕ್ಟಮಿ ಚಿಕಿತ್ಸಾ ಶಿಬಿರವೊಂದು ನಡೆಯಿತು. ಆ ಶಿಬಿರದಲ್ಲಿ ಒಂದೇ ದಿನ 1030 ಮಂದಿ ಮಹಿಳೆಯರು ಟ್ಯುಬೆಕ್ಟಮಿ ಚಿಕಿತ್ಸೆಯನ್ನು ಮಾಡಿಸಿಕೊಂಡು ದಾಖಲೆ ಸ್ಥಾಪಿಸಿದ್ದಾರೆ. ಈ ದಾಖಲೆ ವಿಷಯದಲ್ಲಿ ಇದು ವಿಶ್ವದ ಎಲ್ಲಾ ದಾಖಲೆಗಳನ್ನು ಮೀರಿದೆ.

○ ○ ○

"ನಮ್ಮ ಮಕ್ಕಳಿಗೆ ಸ್ವರ್ಗವನ್ನು ನಿರ್ಮಿಸುವುದಂತೂ ಅಸಾಧ್ಯ ನಿಜ, ಆದರೆ ಅವರನ್ನು ನರಕಕ್ಕೆ ತಳ್ಳುವುದು ಬೇಡ" ಎಂಬುದು ಶಾವಣ್ಣ ಹಡಗಿಯ ಉವಾಚ. 28 ವಯಸ್ಸಿನ ಆತ ತನ್ನ ಹೆಂಡತಿಗೆ ಟ್ಯುಬೆಕ್ಟಮಿ ಚಿಕಿತ್ಸೆ ಮಾಡಿಸಿದ್ದಾನೆ. ಕುಟುಂಬಯೋಜನೆಯನ್ನು ತಾನೂ ಅನುಸರಿಸುತ್ತಿರುವುದಲ್ಲದೆ ಬೇರೆಯವರೂ ತನ್ನಂತಾಗಲಿ ಎಂಬುದರಲ್ಲಿ ಆತನ ವಿಶ್ವಾಸ.

○ ○ ○

ತನ್ನ ಊರಿನ ಅರ್ಹ ದಂಪತಿಗಳನ್ನೆಲ್ಲಾ ನಿಯಂತ್ರಿತ ಕುಟುಂಬವನ್ನು ಹೊಂದಿರುವಂತೆ ಮಾಡಿದ ಕೀರ್ತಿ ಮಣಿಪುರದ ಕಿಪ್ರೋಲ್ ಗ್ರಾಮದ ಗೌರ ಹರಿ ಶರ್ಮನಿಗೆ ಸೇರಿದೆ. ತನ್ನ ಗುರಿ ಸಾಧನೆಯಲ್ಲಿ ಆತ ಪೂರ್ಣ ಯಶಸ್ವಿಯಾಗಿದ್ದಾನೆ.



ಸುಖೀ ಸಂಸಾರದತ್ತ

(ಹಿಂದಿನ ಪುಟದಿಂದ)

ಜನೆಯಲ್ಲಿ ಒಟ್ಟು 15 ದಶಲಕ್ಷ ಮಗುಗಳನ್ನೂ ತಾಯಂದಿರನ್ನೂ ಆರೋಗ್ಯ ಸೇವಾ ಕಕ್ಷೆಯಲ್ಲಿ ತರಲು ಯೋಜನೆಯಿದೆ. ಈ ಯೋಜನೆಯಲ್ಲಿ 'ಎ' ಜೀವಸತ್ವದ ಅಭಾವದಿಂದ ಬರಬಹುದಾದ ಅಂಧತ್ವವನ್ನು ನಿವಾರಿಸಲೂ ಕ್ರಮ ಕೈಕೊಳ್ಳಲಾಗುತ್ತಿದೆ. ಅರವತ್ತು ಲಕ್ಷ ಮಕ್ಕಳಿಗೆ 'ಎ' ಜೀವಸತ್ವದ ಔಷಧವನ್ನು, ಅವರು ಆರು ವರ್ಷದವರಾಗುವವರೆಗೆ, ನೀಡಲು ನಿರ್ಧರಿಸಲಾಗಿದೆ.

ತಾಯಂದಿರು ಹಾಗೂ ಮಕ್ಕಳ ಆರೋಗ್ಯವನ್ನು ಸುಧಾರಿಸಲು ಸಮಗ್ರ ಕಾರ್ಯಕ್ರಮವನ್ನು ನಡೆಸಿಕೊಂಡು ಬರಲಾಗುವುದು. ಇದರಿಂದ ಕುಟುಂಬಯೋಜನೆಗೆ ಶೀಘ್ರವಾದ ಚಾಲನೆ ದೊರೆಯುವುದು!

ಪರೀಕ್ಷಾಪದ್ಧತಿ — ಅಂದು, ಇಂದು

(೨ನೇ ಪುಟದಿಂದ)

ವನ, ಆಚರಣ ಮತ್ತು ಅರ್ಹತೆಗಳೇ ಆತನಿಗೆ ರಾಮಬಾಣಗಳಾಗಿದ್ದುವು. ತನ್ನೆಲ್ಲ ಜ್ಞಾನಭಂಡಾರವನ್ನು ತುದಿನಾಲಗೆಯಲ್ಲೇ ಸೂಸುತ್ತಿದ್ದನು. ನವೀನ ಶೋಧನೆಗಳೆಲ್ಲ ಆತನಿಗೆ ಕರತಲಾಮಲಕವಾಗಿದ್ದುವು. ಜ್ಞಾನಕ್ಕೆ ಬರುವ ಎಲ್ಲ ಪಂಥಾಹ್ವಾನವನ್ನು ಸ್ವೀಕರಿಸಲು ಅವನು ಸದಾ ಸಿದ್ಧನಾಗಿರುತ್ತಿದ್ದನು. ವಿದ್ವನ್ಮಂಡಲಿಗಳಲ್ಲಿ ಆತನು ತನ್ನ ಜ್ಞಾನವನ್ನು ಒರೆಗೆ ಹಚ್ಚುತ್ತಿದ್ದನು.

ಪ್ರಾಚೀನ ಭಾರತದಲ್ಲಿ ಸಾಮಾನ್ಯವಾಗಿ ಪದವಿ ಪತ್ರಗಳಿರಲಿಲ್ಲ; ಪ್ರಶಸ್ತಿ ಪತ್ರಗಳೂ ವಿತರಿತವಾಗುತ್ತಿರಲಿಲ್ಲ; ಪದವಿದಾನವು ಮಧ್ಯಕಾಲದಿಂದ ಆರಂಭವಾದ ಪದ್ಧತಿ. ಪದವಿಯ ಮೇಲೆ ಯಾರಿಗೂ ಮೋಹವಿರಲಿಲ್ಲ. ಜ್ಞಾನತೃಷೆ, ರಾಷ್ಟ್ರೀಯತಾ ರಕ್ಷೆ—ಇವೇ ವಿದ್ಯಾರ್ಥಿಯ ಧ್ಯೇಯಗಳು. ವಿಕ್ರಮ ಶಿಲೆಯ ವಿಶ್ವವಿದ್ಯಾಲಯದಲ್ಲಿ ಪದವಿ ಪತ್ರಗಳನ್ನು ನೀಡುತ್ತಿದ್ದರು. ಬಂಗಾಳದ ವಿದ್ವತ್‌ಸಭೆಗಳು "ತರ್ಕ ಚಕ್ರವರ್ತಿ" ಮತ್ತು 'ತರ್ಕಾಲಂಕಾರ'ವೆಂಬ ಪದವಿಗಳನ್ನು ಕೊಡುತ್ತಿದ್ದುವು.

ಸ್ಪರ್ಧಾ ಮನೋಭಾವನೆಗೆ ಅಂದು ಸ್ಥಾನವಿತ್ತು. ಆದರೂ ಆರೋಗ್ಯವನ್ನು ಕೆಡಿಸಿಕೊಳ್ಳಬೇಕಾದ ಅಗತ್ಯವಿರಲಿಲ್ಲ. ಪರೀಕ್ಷೆಯ ಭೂತ ತಲೆಯ ಮೇಲೆ ಸವಾರಿ ಮಾಡುತ್ತಿರಲಿಲ್ಲ. ಪರೀಕ್ಷೆಗಳು ಭಾರವಾಗಿಯೂ ಇರಲಿಲ್ಲ; ಹುಚ್ಚುಚ್ಚಾರಿಯೂ ಇರಲಿಲ್ಲ. ಅವು ಪರೀಕ್ಷಕರಿಗೆ ಆದಾಯ ತರುವ ಬಾಬುಗಳೂ ಆಗಿರಲಿಲ್ಲ. ಶುದ್ಧ ಮತ್ತು ಪವಿತ್ರ ಭಾವನೆಗಳೇ ಕಾರ್ಯರತವಾಗಿದ್ದುವು. ಆಕಾಶದಿಂದ ಉದುರಿದ ನೀರ ಹನಿಗಳೆಲ್ಲವೂ ಸಾಗರದತ್ತ ಹರಿಯುವಂತೆ ಇಂದಿನ ಎಲ್ಲ ಶಿಕ್ಷಣ ಪ್ರಣಾಳಿಗಳು ಪರೀಕ್ಷೆಯತ್ತ ಸಾಗುತ್ತವೆ. ಈ ಪದ್ಧತಿಯು ಶಿಕ್ಷಣ ರಂಗದಲ್ಲಿ ವ್ಯಾಪಾರ—ವಾಣಿಜ್ಯದ ವಸಾಹತುಗಳನ್ನು ಸ್ಥಾಪಿಸಿದೆ. ಪರೀಕ್ಷಕನು ವಿದ್ಯಾರ್ಥಿಯ ಭಾಗ್ಯವಿಧಾತನಾಗಿ ಪರಿಣಮಿಸಿದ್ದಾನೆ. ವಿಶೇಷಾಧ್ಯಯನವು ಜ್ಞಾನ—ವಿದ್ಯೆಗಳನ್ನು ಪಂಜರದಲ್ಲಿ ಕೆಡಹಿತು. ಸದ್ಭಾವಗಳು ತಿಲಾಂಜಲಿ ಪಡೆದುವು. ಅನಂತ ಸಮಾವೇಶ ಜ್ಞಾನಗಳಿಗೆ ಆಪರೇಶನ್ ನಡೆಯಿತು. ಒಂದಂಶದಲ್ಲಿನ ದಕ್ಷತೆಯೇ ವಿದ್ವತ್ತಿನ ಮಾಪದಂಡವಾಯ್ತು. ಅಂದಿನ ವಿದ್ಯಾರ್ಥಿಯು ಅಸಿ-ಮಸಿ (ಶಾರೀರಿಕ-ಬೌದ್ಧಿಕ)ಗಳೆರಡರಲ್ಲೂ ವಿಶೇಷಜ್ಞನಾಗುತ್ತಿದ್ದನು. ಅವನು ಟೀಕೆ-ಪ್ರಶ್ನೋತ್ತರ ಮಾಲಿಕೆಗಳ ಮುಖ ನೋಡುತ್ತಿರಲಿಲ್ಲ. ಇಂದು ಉತ್ತೀರ್ಣತೆಯೇ ಪರಮಾತ್ಮ, ಪ್ರಶ್ನಪತ್ರವೇ ಭಗವದ್ದರ್ಶನ; ಗೈಡುಗಳೇ ಸಾಧನ ಪಥವಾಗಿವೆ.

ವೈದಿಕ ಮತ್ತು ಉಪನಿಷತ್-ಸೂತ್ರ ಕಾಲದವರೆಗೆ ಶಿಕ್ಷಣರಂಗವು ತನ್ನ ಜಾಡಿನಲ್ಲೇ ನಡೆಯಿತು. ಆದರೆ, ಧರ್ಮಶಾಸ್ತ್ರಗಳ ಕಾಲದಲ್ಲಿ ಈ ವಿಶಿಷ್ಟತೆಗಳು ಕಂಡು ಬಂದುವು. ಪುರಾಣಯುಗದಲ್ಲಿ ಇವು ಮತ್ತೆ ವಿಕಾಸಗೊಂಡುವು. ನ್ಯಾಯ ಗಣಿತ ಮತ್ತು ಅಲಂಕಾರ ಶಾಸ್ತ್ರದ ಪಂಡಿತರು ಬೇರೆ ಬೇರೆಯಾಗ ತೊಡಗಿದರು. ಹಾಗಿದ್ದರೂ ಇಂದಿನಂತಿರಲಿಲ್ಲ. ನಾಲಂದ ವಿಶ್ವವಿದ್ಯಾಲಯದಲ್ಲಿ ದ್ವಾರ ಪಂಡಿತನೂ ಪರೀಕ್ಷಕನಾಗುತ್ತಿದ್ದನು. ಅವನು ಪ್ರವೇಶಾರ್ಥಿ-ಪರೀಕ್ಷಾರ್ಥಿಗೆ ಕಠಿನ ಪ್ರಶ್ನೆಯನ್ನೇ ಕೇಳುತ್ತಿದ್ದನು. ಹ್ಯುವೆನ್‌ತ್ಸಾಂಗಾದಿ ವಿದೇಶೀ ಯಾತ್ರಾರ್ಥಿಗಳು ಈ ವಿಶ್ವವಿದ್ಯಾಲಯವನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ. ಪ್ರಾಚೀನ ಭಾರತದಲ್ಲಿ ವಿಕ್ರಮ ಶಿಲೆಯ ವಿಶ್ವ ವಿದ್ಯಾಲಯದ ಪಾಠ್ಯಕ್ರಮವು ಅತ್ಯಂತ ವ್ಯವಸ್ಥಿತವಾಗಿತ್ತು; ವೈಜ್ಞಾನಿಕವೂ ಆಗಿತ್ತು.

ಅಂದು ಪರೀಕ್ಷಕರೂ ಪರೀಕ್ಷಾರ್ಥಿಗಳೂ ರಾಷ್ಟ್ರೀಯ ಚರಿತ್ರ ಸಂಪನ್ನರಾಗಿದ್ದರು. ಪವಿತ್ರ ಪ್ರವೃತ್ತಿ ಶೀಲರಾಗಿದ್ದರು ಅವರು ಜೀವನ ಮತ್ತು ಪ್ರಕೃತಿಗಳ ಮಡಿಲಲ್ಲಿ ತೀವ್ರಾಸಕ್ತಿಯಿಂದ ಜ್ಞಾನಾರ್ಜನೆ ಮಾಡುತ್ತಿದ್ದರು. ಇಂದಿನ ಪರಿಸ್ಥಿತಿ-ಸನ್ನಿವೇಶ ಹೇಗೆ ನಿಂತಿದೆ! ವಿಶ್ವವಿದ್ಯಾಲಯಗಳು ತೆರೆದಿರುವುದಕ್ಕಿಂತ ಹೆಚ್ಚು ಮುಚ್ಚಿರುವುದೇ ದೃಷ್ಟಿಗೋಚರವಾಗುತ್ತಿದೆ. ವಿದ್ಯಾರ್ಥಿಗಳು ವಿದ್ಯೆಯ ಬದಲು ಏನೇನನ್ನೋ ಬಯಸಿ ಅಥವಾ ಏನನ್ನೂ ಬಯಸದೇನೇ ಕಾಲೇಜುಗಳಲ್ಲಿ ತುಂಬಿಕೊಂಡಿದ್ದಾರೆ. ಪರೀಕ್ಷೆಯೆಂಬ ಭೂತವನ್ನು ಮೆಚ್ಚಿಸಿಕೊಳ್ಳಲು ವಾಮ ಮಾರ್ಗಾವಲಂಬನೆಯೇ ಅನಿವಾರ್ಯವೆನಿಸಿದೆ.

ತನ್ನ ಶಿಷ್ಯರಲ್ಲಿದ್ದ ಮೇಲು-ಕೀಳು ಭಾವನೆಯಿಂದ ನೊಂದ ಶ್ರೀ ವ್ಯಾಸರಾಯರು ಅವರನ್ನು ಪರೀಕ್ಷೆ ಮಾಡಿದರು. ಒಬ್ಬೊಬ್ಬರಿಗೂ ಒಂದೊಂದು ಹಣ್ಣು ಕೊಟ್ಟು ಯಾರೂ ನೋಡದಂತೆ ತಿನ್ನಹೇಳಿದರು. ಎಲ್ಲರೂ ಒಂದೊಂದೆಡೆ ತಿಂದರು; ಆದರೆ ಕನಕದಾಸರಿಗೆ ಎಲ್ಲೆಲ್ಲೂ ಭಗವಂತ ಗೋಚರನಾದ. ಹಾಗಾಗಿ ತಿನ್ನದೆ ಉಳಿದರು. ಪರೀಕ್ಷೆಯಲ್ಲಿ ಕನಕದಾಸರೊಬ್ಬರು ಉತ್ತೀರ್ಣರಾದರು. 'ಜ್ಞಾನ'ದ ಈ ಬಗೆಯ ಪರೀಕ್ಷೆ ಇಂದು ನಡೆಯುತ್ತಿಲ್ಲ. ನಡೆಯುವುದು ಸಾಧ್ಯವೂ ಇಲ್ಲ. ವಾತಾವರಣ ಅಷ್ಟಕ್ಕೂ ಕೆಟ್ಟಿದೆ. ಪರೀಕ್ಷೆಯಿಲ್ಲದೇನೇ ಪದವಿ ನೀಡಬೇಕೆಂದು ಕೇಳುವವರೂ ಇದ್ದಾರೆ. ಪದವಿ ಪತ್ರದ ಬೆಲೆ ಅಲ್ಲಿಯ ವರೆಗೆ ಇಳಿದಿದೆ. ಇದನ್ನು ಎತ್ತರಿಸುವುದು ಸಾಧ್ಯವೆ?

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ಕುಟುಂಬ ಯೋಜನಾ ದ್ವಿಸಪ್ತಾಹ,
ಸಪ್ಟೆಂಬರ 14 ರಿಂದ 27, 1970

ಜನಸಂಖ್ಯೆಯ ಬೆಳವಣಿಗೆಯು ರಾಷ್ಟ್ರೀಯ ದೃಷ್ಟಿಯಿಂದ ಅತ್ಯಂತ ಮಹತ್ವದ ಸಮಸ್ಯೆ. ನಮ್ಮ ಅಭಿವೃದ್ಧಿ ಯೋಜನೆಗಳ ಗತಿಯನ್ನು ಮೀರಿ ಜನಸಂಖ್ಯೆ ತೀವ್ರವಾಗಿ ಹೆಚ್ಚುತ್ತಿದೆ. ಇದರ ಪರಿಣಾಮವಾಗಿ ಅಭಿವೃದ್ಧಿಯ ಫಲ ಜನಸಾಮಾನ್ಯರ ಕೈಗೆ ಎಟುಕದಂತಾಗಿದೆ. ಜನಸಂಖ್ಯೆಯ ನಿಯಂತ್ರಣದಿಂದ ಈ ಸ್ಥಿತಿ ಬದಲಾಗಲು ಸಾಧ್ಯ.

ಈ ಸಮಸ್ಯೆಯ ಪರಿಹಾರಕ್ಕಾಗಿ ದೇಶದ ಎಲ್ಲಾ ಪ್ರಜ್ಞಾವಂತ ಜನರು ಸಂತಾನ ನಿಯಮಿತಗೊಳಿಸಲು ಪ್ರಯತ್ನಿಸಬೇಕು. ಅದಕ್ಕೆ ಬೇಕಾದ ಎಲ್ಲಾ ಸಾಧನಗಳನ್ನು ಬಳಸಿಕೊಳ್ಳಬೇಕು. ಇದು ಕುಟುಂಬದ ಸುಖ ಸಂತೋಷಕ್ಕೆ ಹಾಗೂ ರಾಷ್ಟ್ರದ ಸಮೃದ್ಧಿಗೆ ಮೂಲ.

—ಡಾ. ಜಾಕಿರ್ ಹುಸೇನ್

davp 70/297

ವಿಚಾರ ವಾಹಿನಿ.

ನಾವು ಸಜ್ಜನರನ್ನು ತಯಾರಿಸಬೇಕಿಲ್ಲ ಅವರು ಇದ್ದೇ ಇದ್ದಾರೆ. ಅವರನ್ನು ಹುಡುಕಿ ತೆಗೆಯುವುದು ಮಾತ್ರವಿದೆ. ಅವರನ್ನು ತಯಾರಿಸುವುದು ಸಾಧ್ಯವಾಗಲಿಕ್ಕಿಲ್ಲ. ಹೊಸದಾಗಿ ತಯಾರಿಸಬೇಕಾದದ್ದೇ ಇದ್ದರೆ ಬ್ರಹ್ಮನಿಂದಲೂ ಆಗದ್ದನ್ನು ನಾವು ಮಾಡುವದೆಂತು? ಇಂಥ ಅಹಂಕಾರ ಬೇಡ. ಈ ಹುಡುಕುವ ಕಾರ್ಯವನ್ನು ದುರ್ಜನರು ಮಾಡಲಾರರು. ಕಬ್ಬಿಣವನ್ನು ಆಕರ್ಷಿಸುವ ಶಕ್ತಿಯು ಲೋಹ ಚುಂಬಕದಲ್ಲಿರುತ್ತದೆ. ಅದರಂತೆ ಸಜ್ಜನರನ್ನು ಆಕರ್ಷಿಸಲಿಕ್ಕೆ ಸಜ್ಜನರಿಗೇ ಮಾತ್ರ ಸಾಧ್ಯ.

o o o

ಕರ್ಮ-ಜ್ಞಾನಗಳ ಮತ್ತು ಭಕ್ತಿಗಳ ಐಕ್ಯತೆಯೇ ಪುರುಷಾರ್ಥ

o o o

ಪುಣ್ಯದ ಸುಗಂಧವು ದೂರದವರೆಗೆ ಹರಡುತ್ತದೆ.

o o o

ವಿಚಾರವೇ ಚರಿತ್ರೆಯಲ್ಲಿ ಪರಿಣತವಾಗುತ್ತದೆ.

o o o

ಅತಿಥಿ ಸತ್ಕಾರದಲ್ಲಿ ವಂಚನೆ ಮಾಡುವದು ಎಲ್ಲಕಿಂತ ಹೆಚ್ಚಿನ ದರಿದ್ರತನವು.

o o o

ವಾಸನೆಗಳು ವಿಷಪೂರಿತ ಹಾವಿನ ಹಲ್ಲುಗಳಂತೆ.

o o o

ಸತ್ಯವನ್ನು ಸರ್ವಸ್ವನ್ನಾಗಿ ಮಾಡುವದೇ ದೊಡ್ಡ ಕಲೆ.

o o o

ದಯವಿಲ್ಲದ ಧರ್ಮವು ಅವುದಯ್ಯಾ! ದಯವೇ ಬೇಕು ಸಕಲ ಪ್ರಾಣಿಗಳಲ್ಲಿ! ದಯವೇ ಧರ್ಮದ ಮೂಲವಯ್ಯಾ ಕೂಡಲ ಸಂಗಮ ದೇವಾ.

o o o

ಭಯವು ಪತನ ಮತ್ತು ನಾಶದ ನಿಶ್ಚಿತ ಕಾರಣವಾಗಿದೆ.

o o o

ದುರ್ಬಲರು, ನೀತಿಹೀನರು, ಎಷ್ಟೇ ಸಂಘಟನೆ ಮಾಡಿಕೊಂಡರೂ ಅವರಲ್ಲಿ ಶಕ್ತಿ ಬರುವುದಿಲ್ಲ. ನೂರಾರು ಶೂನ್ಯಗಳನ್ನು ಒಂದೆಡೆ ಇಟ್ಟ ಮಾತ್ರಕ್ಕೆ ಸಂಖ್ಯೆ ಆಗಬಲ್ಲದೇ?

o o o

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ.

ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ.
ತಾಲೂಕೋಟೆ, ಉಡುಪಿ, ದ. ಕ.

"ಹಗಲು ಹೊತ್ತಿನ ನಕ್ಷತ್ರಗಳು"

1942ರ ಚಳಿಗಾಲದ ಲೆನಿನ್‌ಗ್ರಾಡ್. ಮಹಾಯುದ್ಧ. ಫ್ಯಾಸಿಸ್ಟರು ನಗರವನ್ನು ಮುತ್ತಿಕ್ಕಿದ್ದಾರೆ. ದೇಶದ ಬೇರೆ ಭಾಗಗಳೊಡನೆ ಅದರ ಸಂಪರ್ಕಗಳೆಲ್ಲವನ್ನೂ ಕತ್ತರಿಸಿ ಹಾಕಿದ್ದಾರೆ. ಸಂಪೂರ್ಣ ದಿಗ್ಬಂಧನ. ದಿಗ್ಬಂಧನವೆಂದರೆ ಕೇವಲ ದಿಗ್ಬಂಧನವಲ್ಲ, ನಿತ್ಯವೂ ಭಯಂಕರವಾದ ಆಕಾಶದಾಳಿ, ಬೀಳುವ ಬಾಂಬುಗಳು, ನಗರದ ಹೊರವಲಯಗಳಲ್ಲಿ ಕಾಳಗಗಳು. ದಿಗ್ಬಂಧನವೆಂದರೆ ಬಾಂಬುಗಳಿಗಿಂತಲೂ ಹೆಚ್ಚು ಜನರನ್ನು ಸಾಯಿಸುವ ಭೀಕರ ಕ್ಷಾಮವೂ ಹೌದು. ಕವಯಿತ್ರಿ ಪಾಂಡೊವ್ನ ಹೇಳಿದಂತೆ "ರಕ್ತ ಮತ್ತು ಮಣ್ಣುಗಳು ಅರ್ಧಕ್ಕರ್ಧ ದಷ್ಟು ಮಿಶ್ರವಾದ ಒಣಒಣಗಿದ 125 ಗ್ರಾಮು ಗಳಷ್ಟು ಬ್ರೆಡ್ಡು ಒಂದು ಇಡೀ ದಿನಕ್ಕೆ ಆಹಾರ"ವಾಗಿತ್ತು. 'ಲೆನಿನ್‌ಗ್ರಾಡು ತನ್ನನ್ನು ತಾನೆ ತಿಂದು ಸಾಯುತ್ತದೆ' ಎಂದು ಹಿಟ್ಲರ್ ಆಶಿಸುತ್ತಿದ್ದ. ಆದರೆ ಅವನ ಆಸೆ ಕೈಗೂಡಲಿಲ್ಲ. ನಗರವು ಇಡೀ 900 ದಿನಗಳ ದಿಗ್ಬಂಧನವನ್ನು ಧೀರೋದಾತ್ತತೆಯಿಂದ ಎದುರಿಸಿ ನಿಂತಿತು.

'ಇಲ್ಲಿಯೇ ಇರುವುದು, ನನ್ನ ಜೀವ,
ನನ್ನ ಉಸಿರು,
ಓ ತಾಯಿನಾಡೇ, ಅವರೆಲ್ಲ ನಿನ್ನವರು
ತೆಗೆದುಕೋ ನೀ ಅವರನ್ನು!'

ಆ ದಿನಗಳಲ್ಲಿ 'ಲೆನಿನ್‌ಗ್ರಾಡ್ ಕರೆಯುತ್ತಿದೆ' ಬಾನುಲಿಯಲ್ಲಿ ಲೆನಿನ್‌ಗ್ರಾಡ್ ನಿವಾಸಿಗಳು ಇಂಥ ಧ್ವನಿಯೇರಿಳಿವ ನುಡಿಗಳನ್ನು ಕೇಳುತ್ತಿದ್ದರು. ಲೆನಿನ್‌ಗ್ರಾಡ್ ಕವಯಿತ್ರಿ ಓಲ್ಗಾ ಬೆರ್ಗೋಲ್ಟ್ಸ್ ಅವರ ನುಡಿಗಳೇ ಇದಾಗಿದ್ದುವು. ನಿಜಸಂಗತಿಯೆಂದರೆ ಕವಯಿತ್ರಿ ಲೆನಿನ್‌ಗ್ರಾಡ್ ನಿವಾಸಿಗಳೆಲ್ಲರು, ಇಡೀ ಸೋವಿಯೆತ್ ಜನರ ಭಾವನೆಗಳನ್ನೇ ವ್ಯಕ್ತಪಡಿಸುತ್ತಿದ್ದರು. ಸಾಮೂಹಿಕ ದುರದೃಷ್ಟದ ಎದುರಲ್ಲಿ ವ್ಯಕ್ತಿಯ ದುರದೃಷ್ಟಗಳೆಲ್ಲ ಹಿಂದೆ ಬಿದ್ದುಹೋದುವು. ಸಾಮೂಹಿಕ ದುರದೃಷ್ಟವು ಎಲ್ಲರನ್ನೂ ಒಂದು ಕುಟುಂಬದವರನ್ನಾಗಿಸುತ್ತದೆ. ಒಂದು ಯೋಧ ಕುಟುಂಬವಾಗಿ ಪರಿವರ್ತಿಸುತ್ತದೆ. ಎಲ್ಲರೂ ಹೋರಾಟಗಾರರೆ.

ಯುದ್ಧ ಮುಗಿದ ಬಳಿಕ, ಓಲ್ಗಾ ಬೆರ್ಗೋಲ್ಟ್ಸ್ ತಮ್ಮೆಲ್ಲ ಭಾಷಣಗಳನ್ನು ಸಂಗ್ರಹಿಸಿ ಒಂದು ಪುಸ್ತಕವನ್ನಾಗಿಸಿದರು; ಅದು ಕ್ರೋಧಕಪ್ಪ, ರಣಭೇರಿ ಮೊಳಗುವ ನಗರದ ವೀರ ರಕ್ಷಕರ ಕುರಿತ ವೀರಗಾಥೆ.' ಅಪರಿಚಿತರೊಂದಿಗೆ ತಮ್ಮ ಕಟ್ಟಕಡೆಯ ಚೂರು ಬ್ರೆಡ್ಡನ್ನೂ ಹಂಚಿಕೊಂಡ ಲೆನಿನ್‌ಗ್ರಾಡ ಮಹಿಳೆಯರ ಕುರಿತು,' ಭೀಕರ ಕಾಲದ ಭಯಗ್ರಸ್ತ ಮಕ್ಕಳ ಕುರಿತು, ಸಾವೆಂದರೇನೆಂಬುದನ್ನರಿಯದ ಹಸುಳೆಗಳ ಕುರಿತು, ಆದರೆ ನಿತ್ಯವೂ ಹತ್ತಿರದವರೊಬ್ಬರು ಅಸು ನೀಗುತ್ತಿದ್ದುದನ್ನು ಕಾಣುತ್ತಿದ್ದ ಮಕ್ಕಳ ಕುರಿತು, ಲೆನಿನ್‌ಗ್ರಾಡಿನ ಅಜಾನಿವಾಸಿಗಳ ಯ ರಶಿಯನ್ ಸಂಸ್ಕೃತಿ ಮತ್ತು ಇತಿಹಾಸದ ಅಮೂಲ್ಯ ಸ್ಥಳಗಳನ್ನು ಫ್ಯಾಸಿಸ್ಟರು ಹಾಳುಗೆಡವಿದುದನ್ನು ಸುಂದರವಾದ ಅರಮನೆಗಳನ್ನು ಕುದುರೆ ಲಾಯಗಳಾಗಿ ಪರಿವರ್ತಿಸಿದುದನ್ನೂ ಕುರಿತು ಬರೆದ ಚಿತ್ತಭೇದಕ ಕೃತಿ ಅದಾಯಿತು.

ಕವಯಿತ್ರಿಯ ಧೈರ್ಯವಾಣಿಯೂ ಕ್ರೋಧಕಪ್ಪ ಧ್ವನಿಯೂ ಈ ಪುಸ್ತಕದಲ್ಲಿ ಮೊಳಗುತ್ತದೆ. ಘಂಟಾರವದಂತಹ ಆಕೆಯ ಧ್ವನಿ ಇಡೀ ನಗರವನ್ನೇ ಸಂಕೇತಿಸುವಂತೆ ಪ್ರತಿಧ್ವನಿಸುತ್ತದೆ. ಲೆನಿನ್‌ಗ್ರಾಡ್ ಪಟ್ಟಣವು ತನ್ನ ಕವಯಿತ್ರಿಯನ್ನು ನಿಷ್ಕಳಂಕವಾಗಿ ಪ್ರೀತಿಸಿತು ಮತ್ತು ನಂಬಿತು. ಓಲ್ಗಾ ಬೆರ್ಗೋಲ್ಟ್ಸ್ ಅವರೆಲ್ಲರ ಭೀಕರ ದುರವಸ್ಥೆಯನ್ನು ಪೂರ್ಣವಾಗಿ ಹಂಚಿಕೊಂಡರು—ಪತಿ ಹಸಿವಿನಿಂದಲೇ ತೀರಿಹೋದರು.

ಓಲ್ಗಾ ಬೆರ್ಗೋಲ್ಟ್ಸ್ ತನ್ನ ಮತ್ತು ತನ್ನ ದೇಶದ ಹಣೆಬರಹವನ್ನು ಎಂದೆಂದೂ ಬೇರೆ ಬೇರೆಯಾಗಿ ಕಾಣಲಿಲ್ಲ. ಅವರ ಪ್ರಥಮ ಕವಿತೆಗಳು ಲೆನಿನ್‌ರ ಮರಣಕ್ಕೆ ಅರ್ಪಿಸಲ್ಪಟ್ಟಿದ್ದುವು ಮತ್ತು ಕಾರ್ಖಾನೆಯ ವೃತ್ತಪತ್ರಿಕೆಯಲ್ಲಿ ಪ್ರಕಟಗೊಂಡಿದ್ದುವು. ಆಗ ಓಲ್ಗಾರ ವಯಸ್ಸು ಕೇವಲ ಹದಿನಾಲ್ಕು. ಕೊಮ್ಸೊಮೋಲ್ ಸದಸ್ಯೆಯಾಗಿ, ಇನ್ನೂ ವಿದ್ಯಾರ್ಥಿನಿಯಾಗಿ ಅನಂತರ ವಿಸ್ತೃತ ಪ್ರಸಾರವುಳ್ಳ ಫ್ಯಾಕ್ಟರಿ ಪತ್ರಿಕೆಯೊಂದರ ಪತ್ರಕರ್ತಳಾಗಿ, ಆ ಬಳಿಕ ಪುನಃ ಲೆನಿನ್‌ಗ್ರಾಡ್‌ನಲ್ಲಿದ್ದು ಯಾವತ್ಕಾಲವೂ ಆಕೆ ಜನರ ಮಧ್ಯದಲ್ಲೇ ನಿಂತರು, ಜನರಿಗೆ ತಾನು ಉಪಯುಕ್ತಳಾಗಿರಬೇಕೆಂದು ಸದಾ ಹಂಬಲಿಸಿದರು; ಮಕ್ಕಳಿಗಾಗಿ ಬರೆದ ಪದ್ಯಗಳ ಸಂಗ್ರಹವೆ ಅವರ ಮೊದಲ ಕೃತಿ. ಆಕೆ ಬರೆದ ಪ್ರಥಮ ಕೃತಿಗಳ, ಸಮಾಜವಾದದ ನಿರ್ಮಾಣದಲ್ಲಿ ತೊಡಗಿರುವವರನ್ನು ಕುರಿತೇ.

ಹಗಲು ಹೊತ್ತಿನ ನಕ್ಷತ್ರಗಳು

ಅವರ ಪ್ರಾಮಾಣಿಕ ಜೀವನ, ಅವರ ಆತ್ಮದ ಚರಿತ್ರೆ ನಮ್ಮ ಬುದ್ಧಿಜೀವಿ ವರ್ಗದ ಜನರ ಜೀವನ ಚರಿತ್ರೆಯೇ ಆಗಿದೆ "ಹಗಲು ಹೊತ್ತಿನ ನಕ್ಷತ್ರಗಳು" ಎಂಬ ಅವರ ಕೃತಿಯಲ್ಲಿ (1959) ಅವರ ಶ್ರದ್ಧೆ ನಂಬಿಕೆಗಳು ಸ್ಪಷ್ಟವಾಗಿ ರೂಪುಗೊಂಡಿವೆ.

ಆದರೆ ಈ ಪುಸ್ತಕದ ಪ್ರಾಕಾರ ಎಂಥದೆಂದು ಹೇಳುವುದು ಕಷ್ಟ. ಇದು ಸ್ಮರಣ ಕೃತಿ ಹೌದು; ಭಾವಗೀತೆಯಂತೆ ಬರೆದ ದಿನಚರಿಯೂ ಹೌದು. ಒಂದು 'ಫ್ಯಾಂಟಸಿ'ಯೂ ಹೌದು; ಕೊನೆಗೆ ಅವರ ಹೃದಯದಲ್ಲಿ ಪ್ರವೃತ್ತಿ ಅಂಗೀಕರಿಸಿರುವ ಕಮ್ಯೂನಿಸಮ್ ಆದರ್ಶಗಳ ಚಿತ್ರಣವೂ ಹೌದು. ಅತ್ಯುತ್ತಮ ಕವಿ ಬರೆದ ಗದ್ಯವಿದು. "ಹಗಲುಹೊತ್ತಿನ ನಕ್ಷತ್ರಗಳು" ವಿನಲ್ಲಿ ಆಕರ್ಷಕ ಮಾನವ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಮೊದಲು ಓಲ್ಗಾ-ವೋಲ್ಗಾ ತೀರದ ರಶಿಯನ್ ಪಟ್ಟಣ ಉಗ್ಲಿಚ್‌ನಲ್ಲಿಯ ಹತ್ತು ವರ್ಷದ ಹುಡುಗಿ. ಆಗಷ್ಟೆ ಜನತೆಯು ಆಳದಿಂದ ಹೊಸ ಜೀವನವು ಜಾಗೃತಗೊಂಡ ಕಾಲ. ಅನಂತರ ಲೆನಿನ್‌ಗ್ರಾಡ್ ವಿಧವೆ ಓಲ್ಗಾ-ವೃಕ್ಷ್ಯಪ್ರಾಯ ಲೆನಿನ್‌ಗ್ರಾಡ್ ಬೀದಿಗಳಲ್ಲಿ ನಡೆದು ಹೋಗುವ, ಪತಿಯ ಸಮಾಧಿಯೊಡನೆ ಬಳಿಕ ವ ಸಣ್ಣ ಪೆಟ್ಟಿಯಿಂದ ಹಿಂದಿರುಗಿ ಹಸಿವಿನಿಂದ ನಿರ್ಜೀವವಾಗಿದ್ದ ತಂದೆಯನ್ನು ನೋಡಲು ತೆರಳುವ ಓಲ್ಗಾಳನ್ನು ನಾವು ಕಾಣುತ್ತೇವೆ. ಮತ್ತೆ ಯುದ್ಧದ ಬಳಿಕ ಕವಯಿತ್ರಿಯಾಗಿ ತನ್ನ ಸವಿ ಬಾಲ್ಯದ ಉಗ್ಲಿಚ್ ಪಟ್ಟಣವನ್ನು ನೋಡಲು ಪ್ರಯಾಣ ಬೆಳೆಸುವ ಓಲ್ಗಾಳನ್ನು ಮೂರನೆ ಚಿತ್ರದಲ್ಲಿ ಕಾಣುತ್ತೇವೆ.

ಪುಟ್ಟ ಓಲ್ಗಾ ಒಮ್ಮೆ ಈ ಕೆಳಗಿನ ಕಥೆ ಹೇಳಿದಳು: ನಕ್ಷತ್ರಗಳನ್ನು ರಾತ್ರಿ ಕಾಲದಲ್ಲಿ ಮಾತ್ರವೇ ಅಲ್ಲ, ಹಗಲು ಹೊತ್ತಿನಲ್ಲಿ ಕೂಡ ನೋಡಬಹುದು - ಹಗಲು ಹೊತ್ತಿನಲ್ಲಿ ಅವು ಇನ್ನಷ್ಟು ದೊಡ್ಡವಾಗಿರುತ್ತವೆ, ಉಜ್ವಲವಾಗಿರುತ್ತವೆ. ಆದರೆ ನಿರ್ಮಲವಾದ ಆಳವಾದ ಬಾವಿಯ ತಳದಲ್ಲಿಂದ ಪ್ರತಿಬಿಂಬಿತಗೊಳ್ಳುವಾಗ ಮಾತ್ರವೆ ಅವುಗಳನ್ನು ನೋಡಬಹುದು. ಪುಟ್ಟ ಹುಡುಗಿ ಓಲ್ಗಾ ಅನೇಕ ಬಾರಿ ಇವುಗಳನ್ನು ನೋಡಲು ಪ್ರಯತ್ನಿಸಿದಳು. ಆದರೆ ಅವಳು ಮತ್ತು ಎಂದೂ ಅವುಗಳನ್ನು ನೋಡಲು ಶಕ್ತಳಾಗಲಿಲ್ಲ. ಆದರೆ ಜೀವನದ ಉದ್ದಕ್ಕೂ ಆಕೆ ಈ ಕಥೆಯನ್ನು ನಂಬಿಕೊಂಡೇ ಬಂದಳು—ಪ್ರತಿಯೊಂದು ಮಾನವ ಜೀವನವೂ ಸುಂದರವಾಗಿದೆಯೆಂಬುದನ್ನು ನಂಬಿಕೊಂಡಂತೆಯೆ. ಆದರೆ ಈ ಸೌಂದರ್ಯವು ಕೂಡ ಹಗಲು ಹೊತ್ತಿನ ನಕ್ಷತ್ರದಂತೆ ಗೋಚರಿಸುವುದಿಲ್ಲ ಮತ್ತೆ ಆಕೆಯ, ಈ ಕವಯಿತ್ರಿಯ ಆ ಸೌಂದರ್ಯವನ್ನು ಪ್ರತಿಬಿಂಬಿಸುವ ನಿರ್ಮಲವೂ ಆಳವೂ ಆದ ಕೊಳ.

"ಹಗಲು ಹೊತ್ತಿನ ನಕ್ಷತ್ರಗಳು" ಕೃತಿಯನ್ನು ಚಿತ್ರೀಕರಿಸಲಾಗಿದೆ. ಇನ್ನೂ ಜೀವಿಸಿದ್ದಾಗಲೆ ಒಂದು ಚಲಚ್ಚಿತ್ರದಲ್ಲಿ ಸಾಹಿತ್ಯಕರಿಗೆ ದೊರೆತ ಅತ್ಯಂತ ವಿರಲ ಗೌರವಗಳಲ್ಲಿ ಇದೂ ಒಂದು. (ಯೂಕೆಂಟರೆ ಸುತ್ತಿನಲ್ಲಿಯ ನಾಯಿಕೆಯ ಪ್ರತಿರೂಪ ಓಲ್ಗಾ ಬೆರ್ಗೋಲ್ಟ್ಸ್ ಅವರಾಗಿದ್ದಾರೆ.)

ಫ್ಯಾಸಿಸ್ಟ್ ಜರ್ಮನಿಯ ಮೇಲೆ ವಿಜಯ ಸಾಧಿಸಿದ 25ನೆ ವಾರ್ಷಿಕೋತ್ಸವದ ಬಗ್ಗೆ ಪತ್ರಿಕೆಗಳು ಸ್ವಲ್ಪ ಕಾಲದ ಹಿಂದೆ ಅವರ ಲೇಖನವನ್ನು ಪ್ರಕಟಿಸಿದುವು. ತಮ್ಮ ಜೀವನದ ಪ್ರಧಾನ ಪುಸ್ತಕವನ್ನು ಬರೆಯುವ ಕನಸನ್ನು ಅವರು ಕಾಣುತ್ತಾರೆ. ಅದನ್ನೇ ಅವರು ಆದರ್ಶವಾಗಿ ಹೀಗೆ ಹೇಳುತ್ತಾರೆ: 'ನನ್ನ ಪ್ರಧಾನ ಪುಸ್ತಕವೊಂದನ್ನು ಬರೆಯಬೇಕೆಂದು ಯೋಜಿಸುತ್ತಿದ್ದೇನೆ. ನನ್ನ ಹೃದಯದ ಮೂಲಕ ಸೋಸಿ ಬಂದ ನಮ್ಮ ಪೀಳಿಗೆಯ, ಜೀವನದ ಕುರಿತು ಅಂತಿಮ ಸತ್ಯದ ಪುಸ್ತಕವನ್ನು ಬರೆಯಬೇಕೆಂದಿದ್ದೇನೆ.'

(ಇ) ಕಾಂಗ್ರೆಸ್ಸಿನ ಧ್ಯೇಯ ಸ್ಪಷ್ಟ ಇಲ್ಲ

(ಐದನೇ ಪುಟದಿಂದ)

ಗೂ ಈ ರಾದ್ಧಾಂತ ನಡೆದಿರುತ್ತದೆ. ಇನ್ನು ಸರ್ವೋಚ್ಚ ನ್ಯಾಯಾಲಯದ ಸರ್ವೋಚ್ಚ ನ್ಯಾಯಾಧೀಶ ಹಾಗೂ ದಂಡನಾಯಕರ ಸ್ಥಾನದಲ್ಲಿ ಅಂತಹ 'ಒಸರಣ್ಣ'ಗಳನ್ನು ಕೂತುಕೊಳ್ಳಿಸಿದರೆ ಮುಗಿಯಿತು. ಆಗ ಇದಿರಾ ಪ್ರಿಯದರ್ಶಿನಿಯವರು ತಮಗೆ ಪ್ರಿಯವಾದ ಸಮಾಜವಾದದ ದರ್ಶನವನ್ನು ಸಮಾಜದ ಮುಂದಿಡಬಹುದು. ಇದುವರೆಗೆ ಇದೇ ರೀತಿ ತನ್ನ ಮಂತ್ರಿ ವರ್ಗದವರ, ಚೇಲಾಗಳ ಭಟ್ಟರ, ಭಟ್ಟಂಗಿಗಳ ಮೂಲಕ ಕಮ್ಯೂನಿಸಮಿನ ಪ್ರಚಾರ ನಡೆಸುತ್ತಿರುತ್ತಾರೆ. ತನ್ನ ಕಾರ್ಯರಂಗದಲ್ಲಿ ಆಡೆಸಿಡಿ ಕಂಡು ಬಂದಲ್ಲಿ ಏನು ಮಾಡುವುದ? ಅದನ್ನೇ ಅವರ ವಿದ್ಯಾ ಮಂತ್ರಿ ಮಹಾಶಯರು ಜನತೆಗೆ ತಿಳಿಯಪಡಿಸಿದ್ದಾರೆ. ರಷ್ಯಾ — ಚೈನಾಗಳಲ್ಲಿ 'ಕ್ರಾಂತಿ' ನಡೆದಂತೆ ಇಲ್ಲೂ ನಡೆಯಲಿ. ಸರಕಾರವೇ ಸಮಾಜವಾದವನ್ನು ಕರುಳ್ತದಿಂದ ಸ್ವಾಗಿರ ಬಾರದು. ಅದಕ್ಕೆ ಸರ್ಕಾರದ ಸಹಕಾರ ಸದಾ ಸಿದ್ಧವಿದೆ.

ತನ್ನ ಮನೋಬಯಕೆಯನ್ನು ಇಂದಿರಾದೇವಿಯವರು ಜನತೆಗೆ ಸ್ಪಷ್ಟಪಡಿಸಿದ್ದಾರೆ. ಜನತೆ ಈಗ ಯೋಚನೆ ಮಾಡಬೇಕು - ರಷ್ಯಾ-ಚೈನಾದ ಗುಲಾಮಿ ಜೀವನ ನಮಗೆ ಬೇಕೇ? ಸ್ವಾತಂತ್ರ್ಯ ನಮಗೆ ಬೇಕಾಗಿಲ್ಲವೇನು? ನಾವೆಲ್ಲರೂ ಜಯಚಂದ, ಶಕ್ತಿಸಿಂಹ, ಮಾನಸಿಂಹ, ಜಯಸಿಂಹ....ಸಂತಾನದವರೇನು? ನಮ್ಮ ರಕ್ತನಾಳಗಳಲ್ಲಿ ಪೃಥ್ವೀರಾಜ, ಪ್ರತಾಪಸಿಂಹ, ಶಿವಾಜಿ,ಗುರುಗೋವಿಂದ ಸಿಂಹ, ವಿದ್ಯಾರಣ್ಯಾದಿಗಳ ಅದೇ ರಕ್ತ ಹರಿಯುತ್ತಿಲ್ಲವೇನು? ಯಾವ ಸಮಾಜದ ಸಂದೇಶವನ್ನು ಜಗತ್ತಿಗೆ ಸ್ವಾಮಿ ವಿವೇಕಾನಂದರು ಸಾರಿದರೋ ಆ ಸಮಾಜವು ಅಸ್ತಿತ್ವ ಅಪೇಕ್ಷಣೀಯವಾಗಿ ಏನೇ ಕರ್ತವ್ಯರಾಗಿ ದೇಶದ್ರೋಹಿಗಳಾಗಿ, ಸಮಾಜದ್ರೋಹಿಗಳಾಗಿ ಬಾಳುವ ಬಯಕೆಯುಳ್ಳ ಟ್ಟಕೊಂಡಿದೆ ಏನು? ಸಮಾಜವಾದದ ಕುರಿತು ಕಾಂಗ್ರೆಸ್ಸಿನ ಧ್ಯೇಯ ಸ್ಪಷ್ಟ ಇಲ್ಲದಿರಬಹುದು -ಆದರೆ ದೇಶಭಕ್ತ ಭಾರತೀಯರ ಹೃದಯಹಣತೆಯಲ್ಲಿ ರಾಷ್ಟ್ರಪ್ರೇಮದ ಜ್ಯೋತಿ ಉರಿಯುತ್ತಿದೆ.

—ಶಿವಶಂಕರ್

Gram : VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಸುಧಾರಣೆಗೆ ಸ್ವಾಗತ

ಮೈಸೂರಿನಿಂದ ಪಿರಿಯಾಪಟ್ಟಣ. ಇಲ್ಲಿಂದ ಬೆಟ್ಟದಪುರ. ದೂರ ಸುಮಾರು 52 ಮೈಲಿ. ಮುಗಿಲು ಮುಟ್ಟುತ್ತಿರುವ ಸುಂದರ ಬೆಟ್ಟ. ಅದರ ಮೇಲಿದೆ ಮಲ್ಲಿಕಾರ್ಜುನ ಸ್ವಾಮಿ ದೇವಾಲಯ. ಬೆಟ್ಟದ ಕೆಳಗಿನ ಬಯಲು ಪ್ರದೇಶದಲ್ಲಿದೆ ಚಿಕ್ಕ ಪಟ್ಟಣ. ಇದರ ಸಮೀಪದಲ್ಲಿರುವ ಬೆಟ್ಟದಿಂದಲೇ ಇದಕ್ಕೆ ಬೆಟ್ಟದಪುರ ಎಂಬ ಹೆಸರು. ಇಡೀ ಹೋಬಳಿಗೂ ಇದೇ ಹೆಸರು. ಸುಮಾರು 2500 ಜನರಿರುವ ಈ ಪಟ್ಟಣದ ಆಡಳಿತೆಗೆ ಪಂಚಾಯತಿ ಇದೆ. ಮೂವತ್ತಮೂರು ಹಳ್ಳಿಗಳುಳ್ಳ ಈ ಹೋಬಳಿಯ ಒಟ್ಟು ಜನಸಂಖ್ಯೆ ಸುಮಾರು 5000.

ಬೆಟ್ಟದಪುರ ಚಿಕ್ಕ ಪಟ್ಟಣವಾದರೂ ದೂರದಿಂದ ನೋಡಲು ಚೊಕ್ಕಟವಾಗಿದೆ. ಮಾಧ್ಯಮಿಕ ಶಾಲೆ, ಪ್ರೌಢಶಾಲೆ, ಪ್ರಾಥಮಿಕ ಶಾಲೆ, ಪಶುವೈದ್ಯ ಶಾಲೆ, ಪ್ರಾಥಮಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕೇಂದ್ರ ಇವೆಲ್ಲಾ ಇಲ್ಲಿವೆ.

ಬೆಟ್ಟದಪುರ ಪಟ್ಟಣದ ಒಂದು ಬದಿಯಲ್ಲಿದೆ ವಿಶಾಲವಾದ ಸರೋವರ. ಬೆಳ್ದಾವರೆಗಳಿಂದ ರಮಣೀಯವಾಗಿ ಕಂಗೊಳಿಸುತ್ತಿರುವ ಈ ಸರೋವರವೇ ಇಲ್ಲಿ ದೊಡ್ಡ ಜಲಾಶಯ. ಇದು ಜನರ ಅಸಡ್ಡೆಯಿಂದಲೇ ಎಂಬಂತೆ ಕೆಸರಿನಿಂದ ತುಂಬಿದೆ. ನೀರು ಇಂಗಿದೆ. ಕಣ್ಣಿಗೆ ಚಂದವಾಗಿದೆ. ಆದರೆ ಜನರಿಗೆ ಇದರ ಸಂಪೂರ್ಣ ಪ್ರಯೋಜನ ಇಲ್ಲದಾಗಿದೆ.

ಬೆಟ್ಟದ ಪುರದ ಸುತ್ತ ಮುತ್ತ ನೀರಾವರಿ ಸೌಕರ್ಯವಿಲ್ಲ. ಇದರಿಂದ ಇಲ್ಲಿ ರೈತರು ಬೆಳೆಯುವ ಬೆಳೆ ರಾಗಿ, ಜೋಳ. ಕೆಲವು ಕಡೆಗಳಲ್ಲಿ ಹೊಗೆಸೊಪ್ಪು, ಹತ್ತಿ ಬೆಳೆಯುವುದುಂಟು.

"ನಾವು ನೀರಿದ್ದರೆ ನಮ್ಮ ಹೊಲ ಗದ್ದೆಗಳಲ್ಲಿ ಚೆನ್ನಾಗಿ ಬೇಸಾಯ ಮಾಡಬಲ್ಲೆವು. ಈಗ ರಾಗಿ, ಜೋಳ ಇವನ್ನು ಮಾತ್ರ ಮುಖ್ಯವಾಗಿ ಬೆಳೆಯುತ್ತಿದ್ದೇವೆ. ಇವಕ್ಕೆ ಭತ್ತಕ್ಕೆ ಬೇಕಾದಷ್ಟು ನೀರು ಬೇಕಾಗಿಲ್ಲ" ಎನ್ನುತ್ತಾರೆ ಬೆಟ್ಟದ ಪುರದ ಶ್ರೀ ಓಬಯ್ಯನವರು. ಇವರಿಗೆ ಎರಡೂವರೆ ಎಕರೆ ಬೆಟ್ಟು ಭೂಮಿ ಇದೆ.

ಶ್ರೀ ಓಬಯ್ಯನವರದ್ದು ಮಾತ್ರವಲ್ಲ, ಮಲ್ಲೂರು ಹಳ್ಳಿಯ ಶ್ರೀ ಲಿಂಗಪ್ಪನವರದ್ದೂ ಇದೇ ಅಭಿಪ್ರಾಯ. ನೀರಿನ ಅನುಕೂಲತೆ ಇರುತ್ತಿದ್ದರೆ ಭತ್ತ ಚೆನ್ನಾಗಿ ಬೆಳೆಯಬಹುದಿತ್ತು. ನಾವು ಏನಾದರೂ ಬೆಳೆಸಬೇಕಾದರೆ ಮಳೆ ದೇವರನ್ನೇ ನೆಚ್ಚಿರಬೇಕು. ಮಳೆ ಬಂದರೆ ಬೆಳೆ. ಮಳೆಯಿಲ್ಲದೆ ಬೆಳೆಯಾಗದಿದ್ದಾಗ ಸಾಲ. ಅದನ್ನು ತೀರಿಸಲು ಒಳ್ಳೆಯ ಮೂರು ಬೆಳೆ ಬಂದರೂ ಸಾಲದು—ಎನ್ನುತ್ತಾರೆ ಶ್ರೀ ಲಿಂಗಪ್ಪನವರು. ಚಿತ್ರಗೋಡು ಹಳ್ಳಿಯ ಪಟೇಲ ಶ್ರೀ ಶೆಟ್ಟಿಯವರೂ ಹೀಗೇ ಹೇಳುತ್ತಾರೆ. ಇವರಿಗೆ ಹನ್ನೆರಡು ಎಕರೆ ಬೆಟ್ಟು ಭೂಮಿ ಇದೆ. "ವರ್ಷಕ್ಕೆ ಈ ಭೂಮಿಯಿಂದ ಎರಡು ಸಾವಿರ ರೂಪಾಯಿ ದೊರೆತರೆ ಪುಣ್ಯ" ಎನ್ನುತ್ತಾರೆ ಶ್ರೀ ಶೆಟ್ಟರು.

ಬೆಟ್ಟದ ಪುರದ ಜನರಿಗೆ ಅಂದಿನ ದಿನ ನಿಜವಾಗಿಯೂ ಒಂದು ಸುದಿನ. ಅದೇ ಕೆನರಾ ಬ್ಯಾಂಕು ತನ್ನ ಗ್ರಾಮಾಂತರ ಶಾಖೆಯನ್ನು ಇಲ್ಲಿ ಆರಂಭಿಸಿದ ದಿನ.

ಆ ದಿನ ಭಾನುವಾರ. ಬೆಟ್ಟದ ಪುರದಲ್ಲಿ ಸಂತೆಯ ದಿನ. ಇದರಿಂದ ಬ್ಯಾಂಕಿನ ಆರಂಭೋತ್ಸವಕ್ಕೆ ನೂರಾರು ಮಂದಿ ದಯಮಾಡಿಸಿದ್ದರು. ಅವರಲ್ಲಿ ಹೆಚ್ಚಿನವರು ಬ್ಯಾಂಕ್ ವ್ಯವಹಾರ ತಿಳಿಯದವರು. ಆದರೆ ಇವರಲ್ಲಿ ಅನೇಕರು ಸಹಕಾರಿ ಸಂಘಗಳ ಮೂಲಕ ವ್ಯವಹಾರ ನಡೆಸಿ ಅನುಭವವಿದ್ದವರು. ಇದರಿಂದ ಆರಂಭದ ದಿನವೇ ಬ್ಯಾಂಕಿನ ಠೇವಣಾತಿ ರೂ. ಒಂದೂವರೆ ಲಕ್ಷಕ್ಕೂ ಹೆಚ್ಚಾಗಿತ್ತೆಂದರೆ ಸಂತೋಷದ ಸಂಗತಿ. ಆರಂಭೋತ್ಸವದಲ್ಲಿ ಪಾಲುಗೊಂಡ ಪ್ರಜಾಪ್ರತಿನಿಧಿಗಳು ಹಾಗೂ ಸ್ಥಳೀಯ ಮುಂದಾಳುಗಳು ಬ್ಯಾಂಕಿನಿಂದ ಜನರಿಗೆ ಒದಗುವ ಲಾಭವನ್ನು ವಿವರಿಸಿದಾಗ, ಅನೇಕರ ಮುಖದಲ್ಲಿ ತಮ್ಮ ತಮ್ಮ ಭವಿಷ್ಯದ ಸಂತೋಷ ಹೊರಹೊಮ್ಮುತ್ತಿತ್ತು.

ಚಿಕ್ಕೋಡ ಹಳ್ಳಿಯ ಶ್ರೀ ಶಂಕರ ಗೌಡರಿಗೆ ಹನ್ನೆರಡು ಎಕರೆ ಬೆಟ್ಟು ಭೂಮಿ ಇದೆ. ಇವರಿಗೆ ಬ್ಯಾಂಕಿನ ಸಾಲದಿಂದ ಬಾವಿ ತೋಡಿಸಿ ತಮ್ಮ 6 ಎಕರೆಗಳಲ್ಲಿ ಭತ್ತ ಬೆಳೆಸಬೇಕೆಂಬ ಆಸೆ ಹುಟ್ಟಿದೆ.

ಬೆಟ್ಟದ ಪುರದ ಸರೋವರದ ದಂಡೆಯಲ್ಲಿ ಕುಳಿತು ಮಾತನಾಡುತ್ತಿದ್ದ ಮಹಿಳೆಯರ ಪೈಕಿ ಬ್ಯಾಂಕಿನಿಂದ ಬೇಕಾದರೆ ನೂರು ರೂಪಾಯಿಗಳಷ್ಟು ಕೂಡ ಸಾಲ ಪಡೆಯಬಹುದೆಂದು ಕೇಳಿದಾಗ "ಬ್ಯಾಂಕನ್ನು ದೇವರು ಕಾಪಾಡಲಿ. ಬಡ್ಡಿಗೆ ಬಡ್ಡಿ ವಸೂಲು ಮಾಡುವ ಸಾಲಿಗರ ಪೀಡೆ ಹೋದರೂ ಇಷ್ಟು ಮುಂದೆ ತಪ್ಪಬಹುದು" ಎಂದರು ಶ್ರೀಮತಿ ಲಿಂಗಮ್ಮ.

ಬೆಟ್ಟದ ಪುರದಲ್ಲಿ ಬೇರೆ ಹಳ್ಳಿಗಳಂತೆ ಜನಸಂಖ್ಯೆ ಮೊದಲಿಗಿಂತ ಎಷ್ಟೋ ಹೆಚ್ಚಾಗಿದೆ. ಇಲ್ಲಿಯ ಜನರಿಗೆ ಜನಸಂಖ್ಯೆಯ ಹೆಚ್ಚಳದಿಂದ ಉಂಟಾಗುವ ತೊಂದರೆಗಳ ಅನುಭವ ಬಂದಿದೆ. ಶ್ರೀ ಮಹಮ್ಮದ್ ಮಸ್ತಾನ್ ಸಾಹೇಬರಿಗೆ 9ನೇ ಮಗು ಜನಿಸುವವರೆಗೆ ಕುಟುಂಬಯೋಜನೆಯ ರಹಸ್ಯ ತಿಳಿದಿಲ್ಲವೆಂಬ ಪಶ್ಚಾತ್ತಾಪ. ಆದರೆ ಬೆಟ್ಟದ ಪುರ ಹೋಬಳಿಯ ಹಾರನಹಳ್ಳಿ ಶ್ರೀ ರಾಜೇಗೌಡರಿಗೆ ಕುಟುಂಬ ಯೋಜನೆಯ ವಿಷಯ ಚೆನ್ನಾಗಿ ತಿಳಿದಿದೆ. ಮೂರನೇ ಮಗು ಹುಟ್ಟಿದ ಮೇಲೆ ಕುಟುಂಬ ಯೋಜನೆ ಮಾಡಿಸಿಕೊಳ್ಳಬೇಕೆಂದು ಇವರ ನಿರ್ಧಾರ. ಹೀಗೆ ಸರ್ವಶ್ರೀ ಲಕ್ಷ್ಮಯ್ಯ, ರಾಮೇಗೌಡ, ಸಿದ್ದೇಗೌಡ, ಕರಿಯಪ್ಪ ಇವರೆಲ್ಲ ಬೆಟ್ಟದ ಪುರದ ಭಾನುವಾರ ಸಂತೆಗೆ ರಾಗಿ, ಜೋಳ, ಹುರುಳಿ, ಈರುಳ್ಳಿ ಇತ್ಯಾದಿಗಳನ್ನು ಮಾರಾಟಕ್ಕೆ ತಂದಿದ್ದರು. ಭೂಸುಧಾರಣೆಯಿಂದ ಹಿಡುವಳಿಗಳ ಮಿತಿ ನಿರ್ಣಯ, ಸಂಪತ್ತಿನ ಮೇಲೆ ತೆರಿಗೆ, ಇವು ತೀವ್ರವಾಗಿ ಜಾರಿಗೆ ಬಂದಾಗ ಹೆಚ್ಚು ಮಕ್ಕಳಿದ್ದರೆ ಇದ್ದ ಭೂಮಿ ಚೂರು ಚೂರಾಗಿ ಮಕ್ಕಳ ಜೀವನಕ್ಕೆ ಕಷ್ಟವಾಗಬಹುದೆಂದು ಇವರಿಗೆಲ್ಲ ತಿಳಿದಿದೆ. ಆದ ಕಾರಣ ಕುಟುಂಬ ಯೋಜನೆ ಅತ್ಯಗತ್ಯ ಎಂಬುದು ಇವರ ಅಭಿಪ್ರಾಯ.

ಕುಟುಂಬ ಯೋಜನಾ ದ್ವಿಸಪ್ತಾಹ,
ಸೆಪ್ಟೆಂಬರ 14 ರಿಂದ 27, 1970



davp 70/293

ಉತ್ತರಪ್ರದೇಶದಲ್ಲಿ ಕುಟುಂಬಯೋಜನೆ

ಉತ್ತರಪ್ರದೇಶದ ಜನಸಂಖ್ಯೆ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 17ರಷ್ಟು ಇದೆ. ಪ್ರಸ್ತುತದಲ್ಲಿ ಈ ರಾಜ್ಯದಲ್ಲಿ 91 ದಶಲಕ್ಷಕ್ಕೂ ಹೆಚ್ಚು ಜನರಿದ್ದಾರೆ. ಇದು 1901ರಲ್ಲಿ ಇದ್ದ ಸಂಖ್ಯೆಗಿಂತ ಎರಡರಷ್ಟು ಹೆಚ್ಚಿದೆ. ಉತ್ತರಪ್ರದೇಶದ ಪೂರ್ವಭಾಗ ಬಹಳ ಹಿಂದುಳಿದ ಪ್ರದೇಶಗಳಿಂದ ಕೂಡಿದೆ. ಆದರೆ ಅಲ್ಲಿನ ಜನಸಂಖ್ಯೆ ಒತ್ತಡವೂ ಹೆಚ್ಚು. ಜನಸಂಖ್ಯೆಯು ಹೆಚ್ಚುತ್ತಿರುವುದೇ ಆ ಪ್ರದೇಶಗಳು ಹಿಂದುಳಿದಿರುವುದಕ್ಕೆ ಕಾರಣವಾಗಿದೆ. ಕುಟುಂಬ ಯೋಜನೆಯ ಮೂಲಕ ಇಲ್ಲಿನ ಜನಸಂಖ್ಯೆ ಹೆಚ್ಚುತ್ತಿರುವುದನ್ನು ತಡೆಯಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ರಾಜ್ಯದ ನಾನಾ ಕಡೆಗಳಲ್ಲಿ ಇತ್ತೀಚೆಗೆ ಕುಟುಂಬಯೋಜನಾ ಕೇಂದ್ರಗಳನ್ನೂ ಉಪಕೇಂದ್ರಗಳನ್ನೂ ಸ್ಥಾಪಿಸಲಾಗಿದೆ. ಒಟ್ಟು ಜನಸಂಖ್ಯೆಗಾಗಿ ಈ ರಾಜ್ಯದಲ್ಲಿ ಈಗ 8022 ಇಂತಹ ಕೇಂದ್ರಗಳು ಕಾರ್ಯಾಚರಣೆಯಲ್ಲಿವೆ. ಈ ವಿವಿಧ ಕೇಂದ್ರಗಳಲ್ಲಿ ಕುಟುಂಬಯೋಜನೆಗಾಗಿ ಅರ್ಹ ದಂಪತಿಗಳು ಆಗತ್ಯವಾದ ಸಲಹೆಗಳನ್ನು ಉಚಿತವಾಗಿ ಪಡೆಯಲು ಅನುಕೂಲ ಮಾಡಿಕೊಟ್ಟಿದೆ. ಇಷ್ಟೇ ಅಲ್ಲದೆ ಎಲ್ಲ ಕುಟುಂಬಯೋಜನಾ ಕೇಂದ್ರಗಳ ಆಡಳಿತಕ್ಕೆ ಒಳಪಟ್ಟಿರುವಂತೆ ಸಂಚಾರಿ ಆಸ್ಪತ್ರೆಗಳನ್ನು ಪ್ರಾರಂಭಿಸಲಾಗಿದೆ. ಈ ಸಂಚಾರಿ ಆಸ್ಪತ್ರೆಯವರು ಆಗಿಂದಾಗ್ಗೆ ಗ್ರಾಮಾಂತರ ಪ್ರದೇಶಗಳಿಗೆ ಭೇಟಿ ನೀಡಿ ಯೋಜನೆಯ ಸೌಲಭ್ಯಗಳನ್ನು ಜನತೆಗೆ ಒದಗಿಸಿ ಕೊಡುತ್ತಿರುವರು.

ಜನತೆಯ ಸಹಕಾರ

ಸರ್ಕಾರ ಸ್ಥಾಪಿಸಿರುವ ಸಂಸ್ಥೆಗಳಷ್ಟೇ ಅಲ್ಲದೆ ಈ ರಾಜ್ಯದ ಅನೇಕ ಸ್ವಸಂತೋಷ ಸಂಸ್ಥೆಗಳು ಯೋಜನೆಯ ಯಶಸ್ಸಿಗಾಗಿ ಶ್ರಮಿಸುತ್ತಿವೆ. ರೆಡ್‌ಕ್ರಾಸ್, ಮಹಿಳಾ ಸಹಾಯಕ ಸಂಘ, ಕುಟುಂಬಯೋಜನಾ ಸಂಸ್ಥೆ, ಜೂನಿಯರ್ ಛೇಂಬರ್ ಆಫ್ ಕಾಮರ್ಸ್ ಮತ್ತು ಇತರ ಸಂಘಸಂಸ್ಥೆಗಳು ಆ ಬಗ್ಗೆ

ದುಡಿಯುತ್ತಿವೆ. ಜೊತೆಗೆ ಅಧಿಕಾರಿಗಳ ನೆರವೂ ಈ ಯೋಜನೆಗೆ ಸಿಗುತ್ತಿದೆ. ಈ ಯೋಜನೆಗಾಗಿ ಶ್ರಮಿಸುವ ವ್ಯಕ್ತಿಗಳಿಗೆ 50 ರೂಪಾಯಿಗಳ ಸಂಭಾವನೆ ನೀಡುವ "ಸಹಾಯಕರ ಯೋಜನೆ"ಯೂ ಈ ರಾಜ್ಯದಲ್ಲಿ ಜಾರಿಯಲ್ಲಿದೆ.

ಕುಟುಂಬಯೋಜನಾ ಕಾರ್ಯಕರ್ತರಿಗೆ ಅವಶ್ಯವಾದ ತರಬೇತಿ ನೀಡಲು ವ್ಯವಸ್ಥೆ ಮಾಡಲಾಗಿದೆ. ಏಳು ಪ್ರಾದೇಶಿಕ ಕುಟುಂಬಯೋಜನಾ ತರಬೇತಿ ಸಂಸ್ಥೆಗಳನ್ನು ಈ ರಾಜ್ಯದಲ್ಲಿ ಸ್ಥಾಪಿಸಲಾಗಿದೆ. ಇಷ್ಟೇ ಅಲ್ಲದೆ ಆರೋಗ್ಯ ಪರೀಕ್ಷಕರಿಗಾಗಿ ಮೂರು ತರಬೇತಿ ಸಂಸ್ಥೆಗಳು ಮತ್ತು ನರ್ಸುಗಳ 17 ತರಬೇತಿ ವಿಭಾಗಗಳು ಆರಂಭಿಸಲಾಗಿದೆ. ಈ ವರ್ಷ ಮಾರ್ಚಿ ವೇಳೆಗೆ ಸುಮಾರು 10,000 ಮಂದಿ ಕುಟುಂಬಯೋಜನಾ ಕಾರ್ಯಕರ್ತರು ವಿವಿಧ ಸಂಸ್ಥೆಗಳಲ್ಲಿ ತರಬೇತಿ ಸೌಲಭ್ಯ ಪಡೆದಿದ್ದಾರೆ.

ಬಹುಮಾನ ಯೋಜನೆ

ಯೋಜನಾ ಕಾರ್ಯಕರ್ತರಲ್ಲಿ ಹೆಚ್ಚಿನ ಉತ್ಸಾಹವನ್ನು ತುಂಬುವ ದೃಷ್ಟಿಯಿಂದ ಉತ್ತರಪ್ರದೇಶ ರಾಜ್ಯಸರ್ಕಾರದವರು ಬಹುಮಾನ ಯೋಜನೆಯನ್ನು ಆರಂಭಿಸಿದ್ದಾರೆ. ಈ ಯೋಜನೆಯ ಅನ್ವಯ ವಿಶಿಷ್ಟ ಸೇವೆ ಸಲ್ಲಿಸುವ ವ್ಯಕ್ತಿಗಳಿಗೆ ಸಂಸ್ಥೆಗಳು ಮತ್ತು ವಿಭಾಗಸಂಸ್ಥೆಗಳಿಗೆ ಬಹುಮಾನ ನೀಡಲಾಗುವುದು. ರಾಜ್ಯದ ಪ್ರಚಾರ ಮತ್ತು ಪ್ರಸಾರ ಸಂಸ್ಥೆಗಳ ಮೂಲಕ ಈ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲಾಗುತ್ತಿದೆ.

ಜನಸಂಖ್ಯೆಯ ಏರಿಕೆ ಆರ್ಥಿಕ ಪ್ರಗತಿಗೆ ತೊಂದರೆ

(ಮೂರನೇ ಪುಟದಿಂದ)

ದವರು, ಜನನ ನಿಯಂತ್ರಣದ ಸಂಪೂರ್ಣಾರ್ಥವನ್ನು ಗ್ರಹಿಸಿ, ಆ ಚಳುವಳಿಯ ಇಂಗಿತವೇನೆಂಬುದನ್ನು ಗ್ರಹಿಸಬೇಕು.

ಮುಖ್ಯವಾಗಿ, ಮಿತಸಂತಾನ ಸೌಲಭ್ಯದ ಅರಿವಿದ್ದರೆ, ತಾಯಂದಿರ ಆರೋಗ್ಯ ಭಾಗ್ಯಕ್ಕೆ ಚ್ಯುತಿ ಇರುವುದಿಲ್ಲ. ಹುಟ್ಟಿದ ಮಕ್ಕಳೂ ಪುಷ್ಟಿಯಾಗಿ ಬೆಳೆಯಬಲ್ಲವು. ಮೇಲಿಂದ ಮೇಲೆ ಹೆರಿಗೆಯಾಗುತ್ತಿದ್ದರೆ ತಾಯಂದಿರ ದೇಹ ಪುಷ್ಟಿ ಕ್ಷೀಣಿಸುವುದಲ್ಲದೆ, ಆದರಿಂದ ಸಾಂಸಾರಿಕ ಕಲ್ಯಾಣಕ್ಕೆ ಧಕ್ಕೆ ಒದಗಬಹುದು ನಿಶ್ಚಯ. ಈ ಅವಶ್ಯಕತೆಯನ್ನು ಮನಗಾಣಿಸುವುದಕ್ಕಾಗಿ, ಕೇಂದ್ರ ಸರಕಾರದ ಜನನ ನಿಯಂತ್ರಣದ ಖಾತೆಯವರು, ಸಮನ್ವಯ ದೃಷ್ಟಿಯಿಂದ ಸಂತಾನ ನಿರೋಧ ಮತ್ತು ಗರ್ಭಿಣಿ, ಶಿಶು ಸಂಗೋಪನೆಯ ಮಹಾ ಯೋಜನೆಯನ್ನು ರೂಪಿಸಿ, ಅದನ್ನು ಜನತೆಯ ಮುಂದಿಡಲು ಸಂಕಲ್ಪಿಸಿದ್ದಾರೆ. ರಾಜ್ಯ ಮಟ್ಟದಲ್ಲಿಯೂ, ಜಿಲ್ಲಾ ಮಟ್ಟದಲ್ಲಿಯೂ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿರುವ ಕ್ಷೇತ್ರದಲ್ಲಿಯೂ ತೀವ್ರಗತಿಯ ಪ್ರಚಾರವು ಏರ್ಪಡಲಿದೆ.

ಸಂತಾನಾಭಿವೃದ್ಧಿಯ ಸಮಸ್ಯೆಗಳು ಅನೇಕವಿವೆ. ಭೂ ಭಾಗದ ಒಟ್ಟು ವಿಸ್ತೀರ್ಣದಲ್ಲಿ ಭಾರತದ ಭಾಗ ಶೇಕಡ 2.4. ರಷ್ಟಿದ್ದರೆ, ಇಲ್ಲಿ ಪ್ರಪಂಚದ ಇಡೀ ಜನಸಂಖ್ಯೆಯಲ್ಲಿ ಶೇಕಡ 14ರಷ್ಟು ಜನರಿದ್ದಾರೆ.

ಪ್ರಪಂಚದ ಏಳು ಜನರಲ್ಲಿ ಒಬ್ಬನು ಭಾರತೀಯನಾಗಿದ್ದಾನೆ. ನಮ್ಮ ದೇಶದಲ್ಲಿ ಪ್ರತಿ ಒಂದೂವರೆ ಸೆಕೆಂಡಿಗೆ ಒಂದು ಮಗು ಜನಿಸುತ್ತದೆ. ಪ್ರತಿ 24 ಗಂಟೆಗಳಲ್ಲಿ 55,000 ಮಕ್ಕಳು ಹುಟ್ಟುತ್ತವೆ. ಪ್ರತಿ ವರ್ಷ 21 ದಶಲಕ್ಷ ಮಕ್ಕಳು ಹುಟ್ಟಿದರೆ ಅದು ಹೆಚ್ಚಲ್ಲವೇ? ಆದುದರಿಂದ ರಾಷ್ಟ್ರೀಯ ಆರ್ಥಿಕ ಭದ್ರತೆ ಕುಸಿದು ಬೀಳುವುದಿಲ್ಲವೇ?

ವರ್ಷಕ್ಕೆ 21 ದಶಲಕ್ಷ ಶಿಶುಗಳು ತಾಯಂದಿರ ಗರ್ಭದಿಂದ ಹೊರಬಿದ್ದರೆ, 8 ದಶಲಕ್ಷ ಜನರು ಸಾವನ್ನಪ್ಪುತ್ತಿದ್ದಾರೆ. ಆದರಿಂದ ದೇಶದ ಜನಸಂಖ್ಯೆ ಪ್ರತಿವರ್ಷ 13 ದಶಲಕ್ಷದಷ್ಟು ಹೆಚ್ಚಾಗುತ್ತಿದೆ.

ಸಂತಾನದ ಮೇಲೆ ಹತೋಟಿ ಇಡದೆ, ಅದನ್ನು ಹಾಗೆಯೇ ಬಿಟ್ಟರೆ, ಈಗಿನಿಂದ ಬರುವ 27 ವರ್ಷಗಳಲ್ಲಿ ಪ್ರಪಂಚದ ಜನಸಂಖ್ಯೆ ಅಗಾಧವಾಗಿ ಬೆಳೆಯುವುದು. ಭಾರತದ ಜನಸಂಖ್ಯೆ 100 ಕೋಟಿಗಳಿಗೆ ಬೆಳೆಯಬಲ್ಲದು. ಜನನ ಪ್ರಮಾಣವನ್ನು ಸಾವಿರಜನಕ್ಕೆ 20 ಅಥವಾ 25ರಷ್ಟು ಇಳಿಸದೇ ಇದ್ದರೆ, ನಮ್ಮ ಪ್ರಗತಿ ಕುಂಠಿತವಾಗುವುದು ಖಂಡಿತ. ಎಲ್ಲ ದಂಪತಿಗಳೂ ಒಂದೇ ಒಂದು ಮಗು ಸಾಕೆಂದರೆ, ಜನನ ಪ್ರಮಾಣವು ಸಾವಿರಕ್ಕೆ 17ರಷ್ಟು ಇಳಿಯುವುದು. ಎರಡು ಮಕ್ಕಳಿಗಿಂತ ಹೆಚ್ಚು ಬೇಡ ಅಂದರೆ, ಜನನ ಪ್ರಮಾಣವು ಸಾವಿರಕ್ಕೆ 19ರಷ್ಟು ಇಳಿಯುವುದು.

ಈ ಅಂಕಿ ಸಂಖ್ಯೆಗಳಿಂದ ನಾವು ತಿಳಿಯಬೇಕಾಗುವುದೇನೆಂದರೆ, ಪ್ರತಿ ಸಂಸಾರದಲ್ಲೂ ಎರಡು ಮಕ್ಕಳುಗಳಿಗಿಂತ ಹೆಚ್ಚಿನ ಮಕ್ಕಳಾಗುವುದು ಬೇಡ. ಇದನ್ನು ನಾನು ಈ ಮಹಾ ಆಂದೋಲನದ ಸಮಯದಲ್ಲಿ ಒತ್ತಿ ಹೇಳುತ್ತೇನೆ. ಸಂತಾನ ನಿರೋಧದ ಇಂಗಿತವೇ ಇದು.



ಬರೀ
5 ಪೈಸೆಯಲ್ಲಿ
ನಿಮಗೆ
ಸಂತಾನ
ನಿರೋಧ
ಶಕ್ತಿ

ನಿರೋಧ್
ಉಪಯೋಗಿಸಿರಿ

ಕುಟುಂಬ ಯೋಜನೆ
ಅತ್ಯುತ್ತಮ ರಬ್ಬರ್ ಸಾಧನ
15 ಪೈಸೆಗೆ 3
ಸರ್ಕಾರದ ಸಹಾಯಧನದಿಂದಾಗಿ ಕಡಿಮೆ ಬೆಲೆ

ಬಯಸಿದಾಗ ಮಾತ್ರ ಮಕ್ಕಳು

ನಿರೋಧ್ ಉಪಯೋಗಿಸುವುದರಿಂದ ನಿಮಗೆ ಇಷ್ಟಸಂತಾನ ಪ್ರಾಪ್ತಿ. ಅಂದರೆ, ಬೇಕಾದಾಗ ಮಾತ್ರ ಮಕ್ಕಳನ್ನು ಪಡೆಯುವ ಸೌಭಾಗ್ಯ.

ತಾಯಿ ಮತ್ತು ಮಗುವಿನ ಆರೋಗ್ಯ

ಪ್ರತಿ ಮಗುವಿಗೆ ಮೊದಲಿನ ಮೂರು ನಾಲ್ಕು ವರ್ಷ ವಿಶೇಷ ಆರೈಕೆಯ ಅಗತ್ಯವಿದೆ ಎಂದು ಡಾಕ್ಟರುಗಳು ಹೇಳುತ್ತಾರೆ. ಹೆರಿಗೆಯಾದ ಮೇಲೆ ಸ್ವಲ್ಪ ಸಮಯ ತಾಯಿಗೂ ವಿಶ್ರಾಂತಿ ಬೇಕು. ಅದಕ್ಕಾಗಿ ಎರಡು ಮಕ್ಕಳ ಜನನದ ನಡುವೆ ಸಾಕಷ್ಟು ಅಂತರವಿರುವಂತೆ ಮಾಡಬೇಕು.

ನಿರೋಧ್—ಗಂಡಸರು ಉಪಯೋಗಿಸುವ ಅತ್ಯುತ್ತಮ ಗುಣಮಟ್ಟದ ಗರ್ಭನಿರೋಧಕ ರಬ್ಬರು ಚೀಲ. ಇದನ್ನು ಪ್ರಪಂಚದಾದ್ಯಂತ ಉಪಯೋಗಿಸುತ್ತಿದ್ದಾರೆ. ಸರಳ, ಸುಲಭ ಹಾಗೂ ಸುರಕ್ಷಿತ ಸಾಧನವಿದು. ಇದನ್ನು ಉಪಯೋಗಿಸುವುದರಿಂದ ಪತಿ ಪತ್ನಿಯರ ಆರೋಗ್ಯಕ್ಕೆ ಏನೂ ಹಾನಿಯಾಗುವುದಿಲ್ಲ. ನಿರೋಧ್ ಎಲ್ಲೆಲ್ಲೂ ದೊರೆಯುತ್ತದೆ.

ದಿನಬಳಕೆ ವಸ್ತುಗಳನ್ನು ಮಾರುವ ಅಂಗಡಿಗಳಲ್ಲಿ, ಔಷಧಿ ವ್ಯಾಪಾರಿಗಳಲ್ಲಿ, ಬೀಡಾ ಅಂಗಡಿಗಳಲ್ಲಿ, ಮತ್ತು ಇತರ ಚಿಲ್ಲರೆ ಸಾಮಾನುಗಳ ಮಾರಾಟಗಾರರಲ್ಲಿ ನಿರೋಧ್ ಮಾರಾಟವಾಗುತ್ತಿದೆ.

davp 70/16

ಲುಸಾಕದಲ್ಲಿ

ಭಾಷಣಭೈರವರ ಒಡ್ಡೋಲಗ

ಲುಸಾಕದಲ್ಲಿ ಸೇರಲಿದ್ದ ಅಲಿಪ್ತ ರಾಷ್ಟ್ರಗಳ ಸಮ್ಮೇಳನದಲ್ಲಿ ಪ್ರಧಾನಿ ಗಾಂಧಿಯವರು ಭಾಗವಹಿಸುವುದು ಅಗತ್ಯವಿತ್ತು. ರಾಜ-ಮಹಾರಾಜರ ರಾಜಧನ—ವಿಶೇಷ ಸೌಲಭ್ಯಗಳನ್ನು ಹಿಂತೆಗೆದುಕೊಳ್ಳುವ ಸಂವಿಧಾನ ತಿದ್ದುಪಡಿ ಮಸೂದೆ ರಾಜ್ಯಸಭೆಯಲ್ಲಿ ಬಿದ್ದುಹೋದುದು ಇದರ ಪೂರ್ವ ಸಂಧ್ಯೆಯಲ್ಲಿ. ತನ್ನ ಇರಾದೆ ಈಡೇರದೆ ಹೋದದ್ದರಿಂದ ಉರಿದುಬಿದ್ದ ಇಂದಿರಾ ಗಾಂಧಿಯವರು ರಾಷ್ಟ್ರಪತಿಗಳ ಆಜ್ಞೆಯ ಮೂಲಕವೇ ತನ್ನ ಹೆಬ್ಬಯಕೆಯನ್ನು ಸಾಧಿಸುವ ವ್ಯವಸ್ಥೆ ಮಾಡಿ ಲುಸಾಕಕ್ಕೆ ಎದ್ದುನಿಂತರು. ಅವರು ಅಲ್ಲೇನು ಮಾಡಿದರು? ಮತ್ತೇನನ್ನು ಮಾಡದಿದ್ದರೂ ಭಾಷಣ ಮಾಡಿದರು; ಉಳಿದವರಿಂದ ಕೈತಟ್ಟಿಸಿಕೊಂಡರು. ಸಮ್ಮೇಳನವಿರುವುದು ಅದಕ್ಕೇ ತಾನೆ?

ಲುಸಾಕದಲ್ಲಿ ಸೇರಿದ್ದು ಅಲಿಪ್ತ ರಾಷ್ಟ್ರಗಳ ಸಮ್ಮೇಳನ. ಇದು ನಾಲ್ಕನೆಯ ಬಾರಿಗೆ ಸೇರಿದ್ದು. ಬಾಂಡುಂಗದಲ್ಲಿ ಸೇರಿದ್ದ ಈ ರಾಷ್ಟ್ರಗಳ ಮೊತ್ತಮೊದಲ ಸಮ್ಮೇಳನದ ವೇಳೆ ಪೂರ್ವ-ಪಶ್ಚಿಮ ಶಕ್ತಿಕೂಟಗಳಲ್ಲಿ ಸೇರಿಕೊಳ್ಳದ ಈ ಒಕ್ಕೂಟ ವಿಶ್ವಶಾಂತಿಗೂ ಅರ್ಥವ್ಯವಸ್ಥೆಗೂ ಮಹತ್ವದ ದೇಣಿಗೆ ಸಲ್ಲಿಸುವುದೆಂಬ ಭರವಸೆಯಿಟ್ಟುಕೊಳ್ಳಲಾಗಿತ್ತು. ಅದು ಸಫಲವಾಗುವುದೆಂಬ ಆಸೆಯೂ ಇತ್ತು. ಆಗತಾನೇ ಸ್ವತಂತ್ರಗೊಂಡ ಆಫ್ರೋಏಷ್ಯಾದ ಈ ರಾಷ್ಟ್ರಗಳು ತಮ್ಮ ನೀತಿ-ನಿಯಮಗಳನ್ನು ಹೇಗೆ ರೂಪಿಸಿಕೊಳ್ಳುವವೆಂದು ಪೂರ್ವ—ಪಶ್ಚಿಮ ಬಣಗಳೂ ಕಣ್ಣಲ್ಲಿ ಎಣ್ಣೆ ಸುರಿದು ಇದಿರು ನೋಡುತಿದ್ದವು. ಆದುದರಿಂದ ಅವುಗಳೂ ಸ್ನೇಹಾಚಾರದ ಹೆಸರಲ್ಲಿ ಇಂತಹ ಸಮ್ಮೇಳನಕ್ಕೆ ಮಹತ್ವ ನೀಡಿದ್ದವು.

ಆದರೆ, ಬಲ್ಗ್ರೇಡದಲ್ಲಿ ಎರಡನೆಯ ಸಮ್ಮೇಳನ ನಡೆಯುವ ಹೊತ್ತಿಗೆ ಸಾಕಷ್ಟು ಸತ್ಯಸಂಗತಿಗಳು ಹೊರಬಿದ್ದುವು. ಈ ಹೊತ್ತಿನಲ್ಲಿ ಅಲಿಪ್ತ ರಾಷ್ಟ್ರಗಳು ಅತ್ತ-ಇತ್ತ ವಾಲಿಕೊಂಡಂತೆ ಗೋಚರವಾದವು. ಆದರೂ ಎರಡು ಶಕ್ತಿ-ಕೂಟಗಳ ನಡುವೆ ಸ್ಫೋಟಕ ಪರಿಸ್ಥಿತಿ ತಲೆದೋರುವಂತಿದ್ದರಿಂದ, ಈ ಮೂರನೆಯ ಕೂಟ ವಸ್ತುಸ್ಥಿತಿಯನ್ನು ಮನವರಿಕೆ ಮಾಡಿಕೊಂಡು ನ್ಯಾಯದಾರಿ ಹಿಡಿದಾವೆಂದು ಆಶಿಸಲಾಗಿತ್ತು; ಹೀಗಾದಲ್ಲಿ ಅಲಿಪ್ತ ನೀತಿಯು ಮತ್ತೆ ಚಿಗಿದರಿ ಹೇರಿದಾಡುತ್ತದೆಂದು ನಂಬಲಾಗಿತ್ತು. ಆದರೆ, ಈ ನಂಬಿಕೆ ಹುರುಳು ರಹಿತವೆಂಬುದು ಕೈರೋದಲ್ಲಿ ಸೇರಿದ ಮೂರನೆಯ ಸಮ್ಮೇಳನದ ಹೊತ್ತಿಗೆ ವ್ಯಕ್ತವಾಯ್ತು. ಈ ಹೊತ್ತಿಗಾಗಲೇ ಅಲಿಪ್ತ ರಾಷ್ಟ್ರಗಳ ಅಲಿಪ್ತತೆಯ ಬಗ್ಗೆ ಉಭಯ ಶಕ್ತಿ ಕೂಟಗಳೂ ತಂತಮ್ಮದೇ ಆದ ಪರಿಭಾಷೆಯನ್ನು ಕಟ್ಟಿಕೊಂಡವು. ಈ ಮೂರನೆಯ ಕೂಟವೊಂದು ದಿನಗಳೆದಂತೆ ಸುದೃಢವಾಗುವುದು ತಪ್ಪಿ ಶಿಥಿಲವಾಗುತ್ತ ಬರುತ್ತಿರುವುದನ್ನು ಕಂಡುಕೊಂಡ ಅವು ಈ ಅಲಿಪ್ತರ ಕೂಟವು ಏನೂ ಅಲ್ಲವೆಂಬಂತೆಯೇ ನಡೆದುಕೊಳ್ಳ ತೊಡಗಿದವು.

ಈಗ, ನಾಲ್ಕನೆಯ ಬಾರಿಗೆ ಅಲಿಪ್ತರ ಕೂಟ ಪರಿಷತ್ತು ಸೇರಿತು. ಇದು ಸೇರುವುದು ಅಗತ್ಯವೆ? ಇದರ ಕಾರ್ಯ ಕಲಾಪಗಳು ಏನಿರಬೇಕು?-ಈ ಮೊದಲಾದ ಬಗ್ಗೆ ಜಿಜ್ಞಾಸೆ-ಪ್ರತಿ ಜಿಜ್ಞಾಸೆ ನಡೆಯಿತು. ಬಾಯಲ್ಲಿ ಹಲ್ಲಿಲ್ಲದವನು ಚಕ್ಕುಲಿ ತಿನ್ನುವ ನಾಟಕವಾಡಿದಂತೆ ಲುಸಾಕದಲ್ಲಿ ಅಲಿಪ್ತ ಶೃಂಗ ಸಭೆ ಸೇರಿತು. ಅಮೇರಿಕೆಯು ಈ ಸಂಬಂಧದಲ್ಲಿ 'ನಡೆಯುಲಿ ನಾಟಕ' ಎಂದು ಉದ್ಗರಿಸಿತು! ನಿಜಕ್ಕೂ ಲುಸಾಕದಲ್ಲಿ ನಡೆದದ್ದು ನಾಟಕಕ್ಕಿಂತ ಬೇರೆಯಲ್ಲ. ಇಸ್ಪೀಟಿನ ರಾಜ-ಮಹಾರಾಜರು ಏನೂ ಮಾಡಲಾರರೆಂದು ಅವರಿಗೆ ಚೆನ್ನಾಗಿ ಗೊತ್ತು.

ತಾಸುಗಟ್ಟಲೆ ಭಾಷಣಗಳು, ಈ ಭಾಷಣಗಳಲ್ಲಿ ಅಲಿಪ್ತತೆಯ ವಿಶ್ವರೂಪ ದರ್ಶನ ಮಾಡಿಕೊಡುವುದು ಸತ್ಸಂಪ್ರದಾಯ. ಮಹಾತ್ಮಾ ಗಾಂಧಿಯ ಸತ್ಯ-ಅಹಿಂಸೆಗಳ ಬಗ್ಗೆ ಭಾಷಣ ಬಿಗಿಯುವ ನಮ್ಮ ಮಂತ್ರಿ-ಮಾಗಧರಂತೆ ವಿವಿಧ ರಾಷ್ಟ್ರನಾಯಕರು ಒಂದಾಗಿ ಅಲಿಪ್ತತೆಯನ್ನು ಹೊಗಳಿದರು. ಆದರೆ, ಅಲಿಪ್ತರೆಂದರೆ ಯಾರು? ಹಿಂದೆ ಇದ್ದ ಅರ್ಥ ಇಂದು ಈ ಪದಕ್ಕೆ ಉಳಿದಿಲ್ಲ. ವಿವಿಧ ಶಕ್ತಿಕೂಟಗಳ ಸರಸ್ಕರಣ ಅಲಿಪ್ತತೆಯ ಪಟ್ಟಿ ಹಚ್ಚಿಕೊಂಡು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಎಂದಮೇಲೆ ಮೂನ ಸಕಲಿಪ್ತರಿಗೆ ಕೊರತೆಯಿದೆಯೆ?

ಕಂಬೋಡಿಯಾದ ಸಿಂಹನೂಕರು ಚೀನಾದಲ್ಲಿ ಜೀವತ್ತಳೆಸಿಕೊಂಡಿರುವುದರಿಂದ ಅವರನ್ನು ಅಲಿಪ್ತರೆಂದು ಕರೆಯಲು ಲುಸಾಕ ಒಪ್ಪಲಿಲ್ಲ! ಕಾಂಬೋಡಿಯಾದಲ್ಲಿ ಅಮೇರಿಕನ್ ಹಸ್ತಕರು ಸಿಂಹಾಸನಾರೂಢರಾಗಿದ್ದಾರೆ; ಸಿಂಹನೂಕರು ಅಸಹಾಯಕರಾಗಿದ್ದಾರೆ. ಹಾಗೆಂದು ಅಲಿಪ್ತರೂ ಅವರಿಗೆ ಯಾವುದೇ ರೀತಿಯ ಸಹಾಯ ನೀಡಲು ಮನಸ್ಸು ಮಾಡಿಲ್ಲ. ಅವರು ಚೀನಾದಲ್ಲಿರುವುದರಿಂದ ಲಿಪ್ತರಾದರು! ಆದರೆ, ಒಂದಲ್ಲ ಒಂದು ಶಕ್ತಿಕೂಟದೊಡನೆ ನೇರವಾಗಿಯೋ ಹಿಂದಿನ ಬಾಗಿಲಿಂದಲೋ ಸಂಬಂಧವಿರಿಸಿಕೊಂಡವರು ಅಲಿಪ್ತರಾಗಿದ್ದಾರೆ.

ಒಗ್ಗೂಡಿದ ಕಾರ್ಯಕ್ಕಾಗಿ ಸಂಯುಕ್ತ ವ್ಯವಸ್ಥೆಯೊಂದನ್ನು ರೂಪಿಸುವ ನಿರ್ಧಾರವನ್ನು ಈ ಅಲಿಪ್ತರು ಮಾಡಿದ್ದಾರೆ. ಆದರೆ, ಈ ವ್ಯವಸ್ಥೆಯು ಕಾರ್ಯರೂಪಕ್ಕೆ ಬರುವುದೆಂಬ ನಂಬಿಕೆಯಿಲ್ಲ; ಒಂದು ವೇಳೆ ಬಂದರೂ ಅದರ ಸ್ವರೂಪದಲ್ಲಿ ನಿಶ್ಚಿತತೆಯಿಲ್ಲ; ಅದು ಎಷ್ಟರ ಮಟ್ಟಿಗೆ ವ್ಯವಹಾರ್ಯವೆಂದು ಹೇಳ ಬರುವುದಿಲ್ಲ.

ಅಲಿಪ್ತರ ಅಲಿಪ್ತತೆಯ ಬಣ್ಣವನ್ನು ತಿಳಿದುಕೊಂಡ ಅಲಿಪ್ತೇತರರು ಲುಸಾಕದ ಭಾಷಣ ಮಾಲೆಗಳ ವರದಿಗಳನ್ನು ಓದಿ ಮುಗುಳ್ನಗುತ್ತಾರೆ. ಭಾಷಣಗಳಿಗೆ ಸಮಸ್ಯೆಗಳನ್ನು ಸೃಷ್ಟಿಸುವ ಶಕ್ತಿಯಿದೆ; ಅವನ್ನು ಪರಿಹರಿಸುವ ಶಕ್ತಿಯಿಲ್ಲವೆಂದವರು ಅಂದುಕೊಳ್ಳುತ್ತಾರೆ. ನಾಲ್ಕು-ಆರು ದಿನಗಳ ನಾಯಕರು ಸೇರಿದ ಲುಸಾಕ ಸಮ್ಮೇಳನ ಭಾಷಣ ಭೈರವರ ಒಡ್ಡೋಲಗಕ್ಕಿಂತ ಬೇರೆಯಾಗಲಿಲ್ಲವೆಂದು ಎಲ್ಲರೂ ಬಲ್ಲರು. ಕೆಲವರು ಇದನ್ನು ಬಹಿರಂಗವಾಗಿ ಒಪ್ಪಿಕೊಳ್ಳಬಹುದು; ಕೆಲವರಿಗೆ ಸತ್ಯವನ್ನು ಒಪ್ಪಿಕೊಳ್ಳಲು ಆತ್ಮಾಭಿಮಾನ ಅಡ್ಡಬರಬಹುದು; ಅಷ್ಟೆ.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮತ್ತು ಇತರ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

"ನಾನು—ಎಲ್ಲಿ"

ಕನಸು:—

ಗಗನದ ಚುಕ್ಕಿ ಗಾಳಿಗೆ ಕೈ ಹಚ್ಚಿ
ಬೆಟ್ಟಗೆ ನಿಂತಿರಲು
ಹದಿನೊಂದು ಹಾರಿ.. ಎನ್ನೆದೆಯ ಸೀಳಿ
ಕೂಡಲದು ಕಟ್ಟಿರಲು
ನೋವು ತಿಂದು ನಗುವ ಉಗುಳಿ
ನಾ ನನ್ನ ಕಂಡಾಗ...
ಹದ್ದೆ ವಿಧಿಯಾಗಿ ನಾ ಕೆಳಗುರುಳಿ
ಹಂಡೆ ನೀರಾಗಿ
ಎಲ್ಲಿ ಗಗನ? ಎಲ್ಲಿ ಪವನ?
"ನಾನು" ನಾನೆ?
"ಅಹಂ" ಉರುಳಿ "ಸೋಽಹಂ" ಮೆರೆಳಿ
'ನಾನೆ' ಇಲ್ಲ...

ಹೊಟ್ಟು:—

ಆ ಹದ್ದು ಯಾವು ಈ ಗಗನವೇನು!
ಆ "ನಾನು" ನಾಮಿಯೆಲ್ಲಿ?
ಅಂದೊಂದೆ ಆಗಿ ಹುಗಲೆಲ್ಲ ಹೋಗಿ
ನನಗೆಂತು ಈ 'ನಾನು—ಎಲ್ಲಿ'...
ನಾನೇನು ಅರಿಯೆ ಸಾಧನೆಯ ಪರಿಯ
ನನಗೆಂತು ಈ 'ನಾನು ಎಲ್ಲಿ'
ನೂರೆಂಟು ಜನ್ಮ ಅಳಿದೆಳೆಯ ಸರಿಯ
"ನಾನು ಎಲ್ಲಿ" ಅಮಿತೊಟ್ಟಿ,

ಗುಂಡ್ಮಿ ಭಾಸ್ಕರ ಮೈಯ್ಯ

(ವಿ. ಸಾ. ಆಧ್ಯಾತ್ಮಿಕ ವಿಚಾರಧಾರೆಯ ಮೇಲೆ)

ದೇಹದಿಂದಿರುವಾಗಲೇ ಮರಣದ ಅನುಭವ

(ವಿನೋಬಾ)

ಸೂಕ್ಷ್ಮದಲ್ಲಿ ಪ್ರವೇಶ ಮಾಡಿದ ತರುವಾಯ ನಾನು ಸತ್ತೇ ಹೋಗಿದ್ದೇನೆ ಎಂದು ತಿಳಿಯಬೇಕು ಎಂಬುದಾಗಿ ನಿರ್ಧಾರ ಮಾಡಿದ್ದೇನೆ. ಸತ್ತ ತರುವಾಯ ಆಗಲಿರುವುದೆಲ್ಲ ಜೀವಂತ ಇರುವಾಗಲೇ ಆಗಿಬಿಟ್ಟರೆ ನನಗೆ ಮುಂದಿನ ದರ್ಶನವೂ ಆದಂತೆ ಆಯಿತು. ಸತ್ತನಂತರ ಆಗುವುದೆಲ್ಲ ಸತ್ತ ಮೊದಲೇ ಆಗಿಬಿಟ್ಟರೆ ಅದರಿಂದ ಒಂದು ಸಂಗತಿ ಲಕ್ಷ್ಯದಲ್ಲಿ ಬಂದೀತು. ಮನುಷ್ಯನ ಕರ್ತವ್ಯದಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಆಗುವದಿಲ್ಲ. ಆದ್ದರಿಂದ ಶಾಂತಿಯಿಂದ ಭಗವಂತನ ಸ್ಮರಣೆ ಮಾಡಬೇಕು. ಪುರಾಣಿಗರೂ ಹೇಳಿದ್ದಾರೆ "ನಾವು ಮೊದಲೇ ಸತ್ತೆನೆಂದು ತಿಳಿದು ಆನಂದ ತೆಗೆದುಕೊಳ್ಳಬೇಕು. ಅದರಿಂದ ಸತ್ತ ನಂತರ ಆಗಬೇಕಾದ ದರ್ಶನ ಜೀವಂತ ಇರುವಾಗಲೇ ದೊರೆತದ್ದರಿಂದ ಆನಂದವನ್ನು ಅನುಭವಿಸಬೇಕು" ಎಂದು. ಅಂಥ ಆನಂದದ ಆಸ್ವಾದ ತೆಗೆದುಕೊಳ್ಳಲು ನಾನೂ ಬಯಸುತ್ತಿದ್ದೇನೆ.

ಈಗ ಭಾರತದ ಮಧ್ಯದಲ್ಲಿ ಇದ್ದೇನೆ. ಮತ್ತು ಧ್ಯಾನದ ಮುಖಾಂತರ ಇಡೀ ಭಾರತದೊಂದಿಗೆ ಸಂಪರ್ಕ ಇರಿಸಿಕೊಂಡಿದ್ದೇನೆ. ಎಲ್ಲಿಯಾದರೂ ದೊಡ್ಡ ಸಂಕಟ ಉತ್ಪನ್ನವಾಗಿದ್ದು, ಅಲ್ಲಿಗೆ ನಾನು ಹೋಗಲೇ ಬೇಕು ಎಂದು ನನ್ನ ಅಂತರ್ಧ್ವನಿಯು ಹೇಳಿದರೆ ಅದನ್ನು ನಿರ್ವಹಿಸಲಿಕ್ಕೆ ಆಗದಂತೆ ನಾನು ಜ್ಞಾನಜಡನಾಗಿರಲು ಬಯಸುವದಿಲ್ಲ. ಆದ್ದರಿಂದ ಮನಸ್ಸನ್ನು ಮತ್ತೂ ಗಟ್ಟಿ ಇಡುತ್ತೇನೆ. ಒಂದು ವಾರಕ್ಕಿಂತ ಮುಂದಿನ ವಿಚಾರ ಮಾಡುವದಿಲ್ಲ. ಹೆಚ್ಚಾಗಿ ಸ್ಥಿರತೆಯ ಕಡೆಗೇ ಚಿತ್ತದ ಪ್ರವಾಹವಿದೆ. ಮತ್ತು ಒಂದೆಡೆಯಲ್ಲಿ ಇದ್ದೇ ಧ್ಯಾನದ ಮುಖಾಂತರ ದೂರದ ಪೂರದಲ್ಲಿ ಪರಿಣಾಮವಾಗ ಬಲ್ಲುದು ಎಂಬುದನ್ನು ನೋಡುತ್ತಿದ್ದೇನೆ.

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ತೆರಿಗೆ ಹಣದ ವಿನಿಯೋಗ

(ಒಂದನೇ ಪುಟದಿಂದ)

ರ ಮೈಮೇಲಿನ ಆಭರಣಗಳ ಮೋಹದಿಂದ ನಮ್ಮ ಪ್ರಾಣಕ್ಕೆ ಸಂಚಕಾರ ತರಲು ಹವಣಿಸಿದ್ದಾನೆ" ಎಂದು ತಿಳಿದ ಅಗಸ್ತ್ಯರು ಹೇಳಿದರು– 'ನಾನು ಮೊದಲು ಉಣ್ಣುತ್ತೇನೆ. ನಾನು ಉಂಡು ತೇಗಿದ ನಂತರ, ನೀವು ಊಟಕ್ಕೆ ಕೂತುಕೊಳ್ಳಬೇಕು." ಋಷಿಯೊಡನೆ ಅತಿಥಿಗಳಾಗಿ ಬಂದ ಮೂವರು ರಾಜರೂ ಭೋಜನಕ್ಕೆ ಕೂರಬೇಕೆಂದು ಇಲ್ವಲನ ಆಶಯವಾಗಿತ್ತು. ಆದರೆ, ಮಹರ್ಷಿಯ ಇಚ್ಛೆಯನ್ನು ಅವನು ಮೀರುವುದು ಸಾಧ್ಯವಿರಲಿಲ್ಲ. ಆದುದರಿಂದ ಅವರು ಇಲ್ವಲನನ್ನು ಸಮಾಧಾನಗೊಳಿಸಿದರು– "ನಮಗೆ ಋಷಿಗಳು ಪೂಜ್ಯರು. ಅವರ ಆಶಯದಂತೇ ಆಗಲಿ, ನಮ್ಮ ಸಂಪ್ರದಾಯವೂ ಇದೆ. ಶಿಷ್ಟಾಚಾರದಂತೆ ನೀನೂ ಅವರ ಆಶಯದಂತೆ ನಡೆಯಬೇಕು." ಇಲ್ವಲ ಮತ್ತೂ ಮತ್ತೂ ಆಗ್ರಹ ಪಡಿಸಿದನು. ಆದರೂ ರಾಜರು ಒಡಂಬಡಲಿಲ್ಲ.

ಇಲ್ವಲನು ಹತಾಶನಾಗಿ ಅಗಸ್ತ್ಯರನ್ನು ಊಟಕ್ಕೆ ಕುಳ್ಳಿರಿಸಿದನು. ತಯಾರಿಸಿದ ಪಕ್ವಾನ್ನವನ್ನೆಲ್ಲವನ್ನೂ ಬರಿದು ಮಾಡಿಯೇ ಅವರು ಎದ್ದು ಕೈ ತೊಳೆದರು. ಇಲ್ವಲನು ತನ್ನ ಪಾಪಾಲೋಚನೆಯನ್ನು ಮರೆಮಾಚುವುದಕ್ಕಾಗಿ ಏಕಾಂತದಲ್ಲಿ ವಿಶ್ರಾಂತಿ ಪಡೆಯಿರೆಂದು ಋಷಿಯನ್ನು ಕೇಳಿಕೊಂಡನು. ಋಷಿಯೊಡನೆ ರಾಜರೂ ಉಳಿದು ಕೊಂಡರೆ ತನ್ನ ಹೆಬ್ಬಯಕೆ ವ್ಯರ್ಥವಾಗುವುದೆಂದು ಅವನಿಗೆ ಅಂಜಿಕೆ. ಆದದರಿಂದ ಅವನು ಅತಿಥಿರಾಜರೊಡನೆಂದನು—"ಮಾಡಿದ ಅಡುಗೆ ಕಡಿಮೆಯಾಗಿದೆ; ಅದೂ ತಣ್ಣಗಾಗಿದೆ. ಈಗತಾನೇ ಬಿಸಿ ಬಿಸಿ ಮೃಷ್ಟಾನ್ನ ತಯಾರಾಗುತ್ತಿದೆ. ಆ ವೇಳೆ ನಾವೆಲ್ಲರೂ ಉಣ್ಣೋಣ. ಅದುವರೆಗೆ ಮಹರ್ಷಿಗಳ ವಿಶ್ರಾಂತಿ ಪಡೆಯಲಿ." ಅಗಸ್ತ್ಯನನ್ನು ಏಕಾಂತಕ್ಕೆ ಕರೆದುಕೊಂಡು ಅಲ್ಲಿ ಮಲಗಿಸಿದನು ಇಲ್ವಲ.

ಅಗಸ್ತ್ಯರು ವಿಶ್ರಾಂತಿ ಪಡೆಯುತ್ತಿದ್ದರು. ಆಗ ಇಲ್ವಲನು ಕೋಣೆಯ ಹೊರಗೆ ನಿಂತು "ವಾತಾಪಿ, ವಾತಾಪಿ" ಎಂದು ಕೂಗತೊಡಗಿದನು. ಒಳಗಡೆ ಅಗಸ್ತ್ಯರು ಕೇಳಿದರು ಏಕೆ ಕಿರಿಚುತ್ತೀಯೋ? ಅವನನ್ನು ಕೈಯಾರೆ ಕೊಂದು ಈಗ ಕರೆಯುತ್ತಿದ್ದಾನೆ! ವಾತಾಪಿ....ವಾತಾಪಿ ಈಗ ವಾತಾಪಿ ಎಲ್ಲಿದ್ದಾನೆ? ಅವನೆಂದೋ ಕರಗಿ ಹೋದ. ಇಡಿಯ ಸಮುದ್ರವನ್ನೇ ತುಂಬಿಸಿಕೊಂಡ ಹೊಟ್ಟೆಯಿಂದ ವಾತಾಪಿಯು ಹೊರ ಬರುವ ಆಶೆಯನ್ನು ಬಿಟ್ಟುಬಿಟ್ಟು ನೀನೂ ಆರಾಮವಾಗಿರು; ನನಗೂ ವಿಶ್ರಾಂತಿ ತೆಗೆದುಕೊಳ್ಳಬಿಡು. ಅವನು ಲೋಭಿ ಲಾಲಸಿ ಮತ್ತು ಭೀರು. ಜನರ ಹೊಟ್ಟೆ ಒಡೆದು ಹೊರಗೆ ಬರುತ್ತಿದ್ದನು ನಿಜ. ಆದರೆ, ಈಗ ಮಾತ್ರ ಅವನು ಹೊರ ಬರಲಾರನು. ಅವನೀಗ ಎಲ್ಲಕಾಲಕ್ಕೂ ಸ್ವಾಹಾ ಆಗಿ ಹೋದನು.' ಇದನ್ನು ಕೇಳಿದ ಇಲ್ವಲು ಬೆಚ್ಚಿಬಿದ್ದನು.

ಅವನು ಬಹಳವಾಗಿ ಯೋಚಿಸಿದನು– 'ನಾವು ನಿತ್ಯ ವಾತಾಪಿಯನ್ನು ಕೊಂದು ಅವನ ಮಾಂಸವನ್ನು ಜನರಿಗೆ ಉಣಬಡಿಸುತ್ತಿದ್ದೆವು. ಉಂಡವರು ಆರಾಮ ತೆಗೆದುಕೊಳ್ಳುತ್ತಿರುವಾಗ ಹೆಸರೆತ್ತಿ ಕೂಗಿದೊಡನೆಯೇ ವಾತಾಪಿಯ ಅಂಗ ಅಂಗವೂ ಉಂಡವರ ಹೊಟ್ಟೆಯೊಡೆದು ಹೊರ ಬರುತ್ತಿತ್ತು. ಅವೆಲ್ಲವೂ ಒಂದುಗೂಡಿ ಮತ್ತೆ ತಮ್ಮ ವಾತಾಪಿಯಾಗುತ್ತಿದ್ದ. ಆದರೆ, ಇಂದೇನಾಯಿತು? ಹೊರಬರುವುದಿಲ್ಲ; ಹೂಂ ಎನ್ನುವುದೂ ಇಲ್ಲ. ಇವನೊಬ್ಬನೆಂಥ ಋಷಿ?' ಇಲ್ವಲನಿಗೆ ಆಶ್ಚರ್ಯವಾಯಿತು; ಮುಂದೆ ಭಯವೂ ತಲೆದೋರಿತು. ಅವನು ಹೇಳಿದನು– 'ಹಾಗೇನೂ ಇಲ್ಲ. ತಮಗೇನೋ ಭ್ರಮೆ. ಆದದ್ದೆಲ್ಲಾ ಒಳಿತೇ ಹೋಗಲಿ ಬಿಡಿ. ಈಗ ತಾವೆಲ್ಲರೂ ನನ್ನ ಬಳಿಗೆ ಆಗಮಿಸಿದ ಕಾರಣವೇನೆಂಬುದನ್ನು ನಿವೇದಿಸಬೇಕು.'

ಅಷ್ಟರಲ್ಲಿ ಮೂವರೂ ರಾಜರು ಅಲ್ಲಿ ಬಂದು ಮುಟ್ಟಿದರು. ಇಲ್ವಲನಿಗೆ ಮತ್ತಷ್ಟು ಗಾಬರಿಯಾಯಿತು. ಅವರೆಲ್ಲರೂ ಬಂದ ಕಾರಣವನ್ನು ಮತ್ತೆ ಕೇಳಿದನು. ಆಗ, ಅವರೆಲ್ಲರೂ ಏಕಸ್ವರದಲ್ಲಿ ಹೇಳಿದರು 'ನಾವು ಮಹರ್ಷಿಗಾಗಿ ನಿನ್ನಿಂದ ಹಣ ಬೇಡುವುದಕ್ಕಾಗಿ ಬಂದಿದ್ದೇವೆ. ನಾವು ಪ್ರಜೆಗಳಿಂದ ವಸೂಲು ಮಾಡಿದ ತೆರಿಗೆಯ ಮೊಬಲಗನ್ನೆಲ್ಲ ಅವರ ಕಲ್ಯಾಣ ಕಾರ್ಯಗಳಲ್ಲಿ ವಿನಿಯೋಗಿಸುತ್ತೇವೆ. ಆದುದರಿಂದ ಮಹರ್ಷಿ ಬಯಸುವಷ್ಟು ಹಣ ಕೊಡಲು ನಾವು ಅಶಕ್ತರು. ನಿನ್ನೊಡನೆ ಬೇಕಷ್ಟು ಸಂಪತ್ತಿದೆ. ಕೂಡಿಸಿದ ತೆರಿಗೆಯ ಹಣ ಕೋಶದಲ್ಲಿ ಕೊಳೆಯುತ್ತಿದೆ. ಆದುದರಿಂದ ನಿನ್ನ ಬಳಿ ಆವಶ್ಯಕತೆಗಿಂತ ಹೆಚ್ಚು ಹಣವಿದೆ.'

ಮೂವರು ರಾಜರು ಏಕಸ್ವರದಿಂದ ಹೇಳಿದ ಮಾತನ್ನು ಕೇಳಿದ ಇಲ್ವಲನು ಕಕ್ಕಾಬಿಕ್ಕಿಯಾದನು. "ಇದೆಲ್ಲಿಯ ಹೊಸ ಆಪತ್ತು? ಇವರನ್ನು ಹೇಗೆ ಮರಳಿಸಲಿ?" ಎಂದು ಯೋಚಿಸಿದನು. ಬಹಳ ಹೊತ್ತು ಚಿಂತಾಮಗ್ನನಾಗಿ ಬಳಿಕ ಅಂದನು— "ಆದರಣೀಯ ರಾಜರೆ, ಋಷಿಗಾಗಿ ನೀವು ನನ್ನಿಂದ ಹಣ ಪಡೆಯ ಬಯಸುತ್ತೀರಿ, ನಿಮಗೆ ಅವರು ಪೂಜ್ಯರು; ಅಂತೆಯೇ ನನಗೂ ಪೂಜ್ಯರೇ. ಅವರು ನನ್ನ ಮನೆಗೆ ಬಂದದ್ದು ನನ್ನ ಅಹೋಭಾಗ್ಯ. ನಾನು ಮಹರ್ಷಿಗೆ ಮಾತ್ರವಲ್ಲ, ನಿಮಗೂ ಸಂಪತ್ತನ್ನು ಕಾಣಿಕೆಯಾಗಿ ಅರ್ಪಿಸುತ್ತೇನೆ. ನಾನು ಏನೇನನ್ನು ಕೊಡ ಬಯಸುತ್ತೇನೆಂಬುದನ್ನು ನಿಮ್ಮಲ್ಲಿ ಯಾರಾದರೊಬ್ಬರು ಹೇಳಲಿ, ಉಡುಗೊರೆ ನಿಮ್ಮ ಕೈ ಸೇರುವುದು."

ಆಗ ರಾಜರೆಂದರು— "ನಾವೇನು ತೆಗೆದು ಕೊಳ್ಳ ಬಯಸುತ್ತೇವೆಂಬುದನ್ನು ಹೇಳಬಹುದು; ಆದರೆ, ಕೊಡುವವನ ಮನಸ್ಸಿನಲ್ಲೇನಿದೆಯೆಂಬುದನ್ನು ಹೇಗೆ ಹೇಳಲಿ? ಕೊಡುವುದಿಲ್ಲ ಎಂದು ಹೇಳುವುದಕ್ಕೆ ಬದಲಾಗಿ ಹೀಗನ್ನುವುದೆ?"

ಇಲ್ವಲನೆಂದನು—"ನೀವು ಹೇಗೆ ಬೇಕಾದರೂ ತಿಳಿದುಕೊಳ್ಳಿ. ಆದರೆ, ನಾನು ಕೊಡುವುದಾದರೆ, ಈ ಶರ್ತದ ಮೇಲೆ. ಈಗ ಅದನ್ನು ಸ್ವೀಕರಿಸುವುದು ಅಥವಾ ನಿರಾಕರಿಸುವುದು ನಿಮ್ಮ ಕೈಯಲ್ಲಿದೆ.' ಮೂವರು ಮಹಾರಾಜರು ನಿರುತ್ತರರಾದರು. ಅಷ್ಟರಲ್ಲಿ ಅಗಸ್ತ್ಯ ಮುನಿಗಳೆಂದರು– "ನೀನು ಏನು ಕೊಡಲು ಯೋಚಿಸುತ್ತಿದ್ದೀಯೆಂದು ನಾನು ಹೇಳಬಲ್ಲೆ. ಈ ಮೂವರು ರಾಜರು ನಿನ್ನ ಬಳಿಗೆ ಬೇಡಲು ಬಂದಿದ್ದಾರೆ. ಅವರಲ್ಲಿ ಒಬ್ಬೊಬ್ಬನಿಗೆ ಹತ್ತು-ಹತ್ತು ಸಾವಿರ ಗೋವುಗಳನ್ನೂ ಅಷ್ಟೇ ಸುವರ್ಣ ನಾಣ್ಯಗಳನ್ನೂ ಕೊಡಬೇಕೆಂದು ಯೋಚಿಸಿದ್ದೀಯೋ, ನನ್ನ ಬಗ್ಗೆ ಆಲೋಚಿಸುತ್ತ ಇದ್ದೀಯೇ—ಇವನು ಇವರಿಗೆ ಗುರು, ಆದುದರಿಂದ ಅದರ ಇಮ್ಮಡಿ ಗೋವುಗಳು ಇಮ್ಮಡಿ ಬಂಗಾರದ ನಾಣ್ಯಗಳು ಮತ್ತೊಂದು ಬಂಗಾರದ ರಥ ಕೊಡಬೇಕು ಎಂದು ಯೋಚಿಸಿದ್ದೀ ತಾನೆ?"

ಇದನ್ನು ಕೇಳಿದ ಇಲ್ವಲನ ಆಶ್ಚರ್ಯಕ್ಕೆ ಮಿತಿಯುಳಿಯಲಿಲ್ಲ. ಅವನು ಬಹಳಷ್ಟು ಬೆದರಿದನು. ಋಷಿಯು ಹೇಳಿದಷ್ಟನ್ನು ನೀಡಿ ಅವರೆಲ್ಲರನ್ನೂ ಬೀಳ್ಕೊಟ್ಟನು. ವಾತಾಪಿಯ ಮೃತ್ಯುವಿನಿಂದ ಅನೇಕರ ಪ್ರಾಣವುಳಿಯಿತು; ಇಲ್ವಲನ ಬಲವೂ ಕುಂದಿತು.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
124 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನ್ನು
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¼% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.
ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1

HOTEL SATKAR
Boarding, Lodging & Restaurant
Behind Corporation Office,
9 Mission Road — Bangalore—27.
Phone No.— 1 28337, 2 29887
Grams: HOST SATKAR
Vegetarian Cuisine
Attached Bath Rooms and Phones.
Running H and C water.
Moderate Charges
Railway Station, Laundry, Post office and Entertainment Area Nearby.
Large airy Rooms; Roof garden
Quiet, Calm Atmosphere
Personalised Service.

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 5

NAVAYUGA

1—10—1970

ಕೈಗೆ ಬಂದ ತುತ್ತು ಉಗುಳಿದ

ಭರತನು ಕೈಕೇಯಿಯ ಮನೆಗೆ ಬಂದನು. ಭಕ್ತಿಪರವಶನಾಗಿ ಆಕೆಗೆ ನಮಸ್ಕರಿಸಿದನು. ತಾಯಿ ಮಗನನ್ನೆತ್ತಿ ಅಪ್ಪಿಕೊಂಡಳು. ತಂದೆಯನ್ನು ಕಾಣದ ಭರತನು ಆತನೆಲ್ಲೆಂದು ತಾಯನ್ನು ಕೇಳಿದನು. "ಮಗು, ನಿನ್ನ ತಂದೆ ದಿವಂಗತರಾದರು. ಧರ್ಮಪರಾಯಣರು ಹೊಂದುವ ಸ್ವರ್ಗಲೋಕಕ್ಕೆ ತೆರಳಿದರು" ಕೈಕೇಯಿಯೆಂದಳು. ಇದನ್ನು ಕೇಳಿದ ಕೂಡಲೆ ಭರತನು ಮೂರ್ಛೆಗೊಂಡನು. ಕುಸು ಸಮಯಾನಂತರ ಚೇತರಿಸಿ "ಅಪ್ಪಾ, ಅಪ್ಪಾ, ನನ್ನನ್ನು ದುಃಖಸಾಗರಕ್ಕೆ ಕೆಡಹಿ, ನೀನೆಲ್ಲಿ ಹೋದೆ? ರಾಮನ ಕೈಗಳಿಗೆ ನನ್ನನ್ನು ಒಪ್ಪಿಸಿಕೊಡದೇನೇ ಎತ್ತ ಹೋದೆ?" ಎಂದು ಮರುಗಿದನು. ಮಗನ ಆಕ್ರೋಶವನ್ನಾಲಿಸುತ್ತ ಕೈಕೇಯಿ ಸಮಾಧಾನ ಪಡಿಸಿದಳು— "ಮಗು, ನಿನಗೆ ಒಳ್ಳೆಯದಾಗಲಿ. ಧೈರ್ಯಗೆಡಬೇಡ. ನಿನಗಾಗಿ ನಾನೆಲ್ಲ ಏರ್ಪಾಡು ಮಾಡಿಟ್ಟಿದ್ದೇನೆ."

'ಕೊನೆಯ ಗಳಿಗೆಯಲ್ಲಿ ಮಹಾರಾಜನೇನೆಂದನು?' ಬಿಕ್ಕಳಿಸುತ್ತಲೇ ಭರತನು ತಾಯನ್ನು ಕೇಳಿದನು. ಆಕೆ ನಡುಗಿಬಿಟ್ಟಳು. ಆದರೂ ಧೈರ್ಯ ತಂದುಕೊಂಡು ಹೇಳಿದಳು—"ಅವರು ಹಾ ರಾಮ, ಹಾ ಲಕ್ಷ್ಮಣ, ಹಾ ಸೀತೆ ಎಂದು ಪದೇ ಪದೇ ಒರಲುತ್ತಾ ಸ್ವರ್ಗಕ್ಕೆ ಸಂದರು."

'ಹಾಗಾದರೆ, ಆ ಸಮಯದಲ್ಲಿ ರಾಮ, ಲಕ್ಷ್ಮಣ ಮತ್ತು ಸೀತೆಯರು ಅವರ ಬಳಿಯಿರಲಿಲ್ಲ. ಅವರೆಲ್ಲಿ ಹೋಗಿದ್ದರು?'

"ನಿನ್ನ ತಂದೆಯು ರಾಮನನ್ನು ಯುವರಾಜನಾಗಿ ಮಾಡಲು ಎಲ್ಲ ತಯಾರಿ ನಡೆಸಿದ್ದರು. ಹಲವು ಕಾಲಕ್ಕೆ ಮೊದಲು ಮಹಾರಾಜರು ನನಗೆರಡು ವರ ನೀಡಿದ್ದರು. ನಾನು ಆಗ ಅವನ್ನು ಕೇಳಿ ಬಿಟ್ಟೆ. ಒಂದರಿಂದ ನಿನಗೆ ರಾಜ್ಯವನ್ನು ಪಡೆದೆ ಇನ್ನೊಂದರಿಂದ ರಾಮನನ್ನು ಕಾಡಿಗಟ್ಟಿದೆ. ಪತಿವ್ರತಾ ಶಿರೋಮಣಿ ಸೀತಾದೇವಿಯು ಆತನೊಡನೆ ಹೋದಳು. ಸಹೋದರ ಪ್ರೇಮ ಪ್ರದರ್ಶನಕ್ಕಾಗಿ ಲಕ್ಷ್ಮಣನೂ ಆತನನ್ನು ಹಿಂಬಾಲಿಸಿದನು. ಅವರೆಲ್ಲರೂ ಹೊರಟು ಹೋದ ಬಳಿಕ ಮಹಾರಾಜನು "ರಾಮ ರಾಮ" ಎಂದೆನ್ನುತ್ತ ಪ್ರಾಣ ತ್ಯಜಿಸಿದನು."

ಭರತನ ಮೇಲೆ ವಜ್ರಾಘಾತವಾಯ್ತು. ಆವನು ಭೂಮಿಯ ಮೇಲೆ ಬಿದ್ದು ಬಿಟ್ಟನ; ಮತ್ತೊಮ್ಮೆ ಮೈಮರೆತನು. ಕೈಕೇಯಿಯು ತನ್ನ ಮಗನ ಈ ದಯನೀಯ ಸ್ಥಿತಿಯನ್ನು ಕಂಡು ದುಃಖಗೊಂಡು ನುಡಿದಳು—"ಮಗು, ನೀನೇಕೆ ಮರುಗುವೆ? ಇಷ್ಟು ದೊಡ್ಡ ರಾಜ್ಯವು ನಿನ್ನದಾದ ಮೇಲೆ ಎಲ್ಲ ದುಃಖವೂ ಹಗುರವಾಗಬೇಕು. ನೀನು ದುಃಖಪಡುವ ಯಾವ ಕಾರಣವೂ ಇಲ್ಲ. ಈಗ ಸುಖ ಸಂತೋಷಗಳಿಂದ ರಾಜ್ಯವನ್ನು ಭೋಗಿಸು."

ಇದನ್ನು ಕೇಳಿದ ಭರತನು ಅಳುತ್ತಲೇ ಹೇಳಿದನು- "ನಿನ್ನ ಗಂಡನನ್ನು ಕೊಂದು ತಿಂದೆ; ನಿನ್ನ ಹೊಟ್ಟೆಯಿಂದ ಹುಟ್ಟಿದ ನಾನು ಮಹಾಪಾಪಿ. ಆದಕ್ಕಾಗಿ ನಾನು ಬೆಂಕಿಗೆ ಹಾರಿ ಆಹುತಿಯಾಗುತ್ತೇನೆ; ಇಲ್ಲವೇ ವಿಷಪಾನ ಮಾಡುತ್ತೇನೆ; ಏಕೆ, ಖಡ್ಗದಿಂದಲೇ ಕತ್ತು ಕಡಿದುಕೊಳ್ಳುತ್ತೇನೆ." ಭರತನಲ್ಲಿ ನಿಲ್ಲಲಾಗದೆ ಕೌಸಲ್ಯೆಯ ಬಳಿಗೆ ಎದ್ದು ಹೋದನು.

ಭರತನನ್ನು ಕಂಡ ಕೌಸಲ್ಯೆ ಜೋರ ಸ್ವರದಲ್ಲಿ ರೋದಿಸತೊಡಗಿದಳು. ಆಕೆಯ ಪಾದದ ಮೇಲೆ ಬಿದ್ದ ಭರತನು ಗೋಳಿಟ್ಟನು. ತಾಯಿಯು ಮಗನನ್ನೆತ್ತಿ ಆಲಂಗಿಸಿದಳು. "ಮಗು, ನೀನು ಮನೆಯಲ್ಲಿಲ್ಲದಾಗ ನಡೆದ ಅನಾಹುತಗಳನ್ನು ನಿನ್ನ ತಾಯಿಯಿಂದ ತಿಳಿದುಕೊಂಡಿರಬಹುದು. ನನ್ನ ರಾಮನು ಸೀತೆ ಲಕ್ಷ್ಮಣರೊಡನೆ ಕಷ್ಟವನ್ನನುಭವಿಸುತ್ತಿದ್ದಾನೆ. ರಾಮನಂತಹ ಮಗನನ್ನು ಹೆತ್ತ ನನ್ನನ್ನು ದುಃಖ ನುಂಗಿ ಬಿಟ್ಟಿತು. ದೈವಸಂಕಲ್ಪವನ್ನು ಯಾರು ತಾನೇ ಮೀರಬಲ್ಲರು?'

ಕೌಸಲ್ಯೆಯ ಪ್ರಲಾಪದಿಂದ ಮನನೊಂದ ಭರತನೆಂದನು "ಅಮ್ಮಾ, ಈ ಎಲ್ಲ ಕಾರಸ್ಥಾನಗಳು ನನಗೆ ತಿಳಿದಂತೆ ನಡೆದದ್ದಾದರೆ, ನೂರು ಬ್ರಹ್ಮಹತ್ಯೆಗೆಯ್ದ ಪಾಪ ನನಗೆ ಬರಲಿ." ಭರತನು ಗೋಳಿಟ್ಟನು. 'ಮಗು, ನಿನ್ನನ್ನು ನಾನು ಚೆನ್ನಾಗಿ ಬಲ್ಲೆ. ನೀನೇಕೆ ಈ ಬಗ್ಗೆ ಕೊರಗುತ್ತೀಯೆ?' ಎಂದು ಆತನನ್ನು ಸಮಾಧಾನಗೊಳಿಸಿದಳು ಕೌಸಲ್ಯೆ.

ತಂದೆಯ ಕ್ರಿಯಾಕರ್ಮಕ್ಕಾಗಿ ಭರತನು ಅಯೋಧ್ಯೆಯಲ್ಲೇ ಉಳಿಯಬೇಕಾಯ್ತು. "ರಾಮ, ಸೀತೆ, ಲಕ್ಷ್ಮಣರು ಕಾಡಿನಲ್ಲಿ ಕಷ್ಟವನ್ನನುಭವಿಸುತ್ತಿರಬಹುದು. ಈ ಎಲ್ಲ ಸಂಪತ್ತನ್ನು ತ್ಯಜಿಸಿ ನಾನೂ ಅವರೊಡನೆ ಕಾಡಿನಲ್ಲೇ ಇದ್ದರೆ ಎಷ್ಟು ಚಂದವಾಗುವುದು!" ಎಂದು ಯೋಚಿಸಿದನು. ಕ್ರಿಯಾಕರ್ಮಾನಂತರ ಒಂದು ದಿನ ಮುನಿ ವಶಿಷ್ಠರು ಮಂತ್ರಿಗಳನ್ನು ಕೂಡಿಕೊಂಡು ರಾಜಸಭೆಗೆ ಆಗಮಿಸಿದನು. ಭರತನೊಡನೆ ಹೇಳಿದನು: "ವತ್ಸ, ನಿನ್ನ ತಂದೆಯ ಮಾತಿನಂತೆ ನಾವಿಂದು ನಿನಗೆ ರಾಜ್ಯಾಭಿಷೇಕ ಮಾಡುತ್ತೇವೆ.'

"ಮಹರ್ಷಿಗಳೇ, ರಾಜ್ಯಕ್ಕೂ ನನಗೂ ಯಾವ ಸಂಬಂಧ? ರಾಮನೇ ನಮ್ಮ ರಾಜ, ನಾನವನ ದಾಸಾನುದಾಸ. ಇದುವರೆಗೆ ಕಾರ್ಯಭಾರದಿಂದ ಇಲ್ಲಿ ಉಳಿಯಬೇಕಾಯ್ತು. ಕೈಕೇಯಿಯೊಬ್ಬಳನ್ನುಳಿದು ಉಳಿದವರನ್ನು ಕೂಡಿ ನಾನು ನಾಳೆ ರಾಮನನ್ನು ಮರಳಿ ಕರೆದು ತರುವುದಕ್ಕಾಗಿ ಕಾಡಿಗೆ ಹೋಗುತ್ತೇನೆ. ಯಾರು ಬಾರದುಳಿದರೂ ನಾನೂ ಶತ್ರುಘ್ನನೂ ಹೋಗುತ್ತೇವೆ. ಹೋದ ರಾಮನು ಮರಳಿ ಬರುವ ವರೆಗೆ ತಾನೂ ಜಟಾಜೂಟ ವಲ್ಕಲಧಾರಿಯಾಗಿ ಕಂದಮೂಲಾದಿ ಭುಂಜಿಸಿ ಭೂಶಯನ ಮಾಡುತ್ತಿರುವೆನು." ತನ್ನ ನಿಶ್ಚಯವನ್ನು ತಿಳಿಸಿ ಭರತ ಮೌನನಾದನು. ರಾಜಸಭೆಯಲ್ಲಿ ಎಲ್ಲರೂ ಭರತನನ್ನು ಹೊಗಳತೊಡಗಿದರು.

ಬೆಳಗಾಗುತ್ತಲೇ ಭರತನ ಪ್ರಯಾಣದ ಸಿದ್ಧತೆಗಳನ್ನು ನಡೆಸಿದನು. ಕುದುರೆಗಳು, ಆನೆಗಳು ಮತ್ತು ಸೇನೆಗಳೂ ಹೊರಟುವು. ಅಭಿಷೇಕದ ಸಕಲ ಸಾಮಗ್ರಿಗಳನ್ನೂ ಹಿಡಿದುಕೊಂಡರು. ಗುರು ವಶಿಷ್ಠಾದಿ ಅನೇಕ ಬ್ರಾಹ್ಮಣರೂ ಎಲ್ಲ ತಾಯಂದಿರೂ ವನದತ್ತ ಹೊರಟರು.

ಕಾಲ್ನಡೆಯಾಗಿ ಭರತಾದಿಗಳು ಶೃಂಗಬೇರಪುರ ತಲುಪಿದರು. ಈತನು ಶ್ರೀರಾಮನಿಗೆ ಉಪದ್ರವ ನೀಡಲೆಂದು ಬಂದವನೆಂದು ಗುಹನು ತಿಳಿದನು. 'ತೀರದಲ್ಲಿರುವ ನಾವೆಗಳನ್ನು ನದೀ ನಡುವೆ ಒಯ್ಯಿರಿ. ಉಳಿದವರೆಲ್ಲರೂ ಶಸ್ತ್ರಾಸ್ತ್ರಧಾರಿಯಾಗಿ ತಯಾರಾಗಿರಿ. ಭರತನೇಕೆ ಈ ರೀತಿ ಸೇನಾಸಮೇತನಾಗಿ ಬಂದಿದ್ದಾನೆಂದು ನಾನು ತಿಳಿದುಕೊಳ್ಳುತ್ತೇನೆ' ಎಂದು ಗುಹನು ತನ್ನವರಿಗೆ ಆಜ್ಞಾಪಿಸಿದನು. ಗುಹನು ಕಾಣಿಕೆ ಹಿಡಿದುಕೊಂಡು, ಅಂಗರಕ್ಷಕರನ್ನು ಕೂಡಿಕೊಂಡು ಭರತನಲ್ಲಿಗೆ ನಡೆದನು. ವಲ್ಕಲಧಾರಿಯಾಗಿ, ರಾಮ ಜಪ ನಿರತನಾಗಿ ರಾಮವಿಯೋಗ ದುಃಖದಿಂದ ನೊಂದು ಬೆಂದ ಭರತನನ್ನು ಕಂಡ ಗುಹನು ತನ್ನ ಕಣ್ಣುಗಳನ್ನೇ ನಂಬಲಿಲ್ಲ. ಅವನು ಭರತನ ಮುಂದೆ ತಲೆವಾಗಿದನು. ತಾನು ಬಂದವನು ಗುಹನೆಂದು ತಿಳಿಸಿದನು. ಭರತನು ಆತನನ್ನು ಎತ್ತಿ ಎದೆಗಪ್ಪಿಕೊಂಡನು. "ಅಣ್ಣಾ, ನೀನಿಲ್ಲಿ ರಾಮನೊಡನೆ ಸಖ್ಯದಿನವಿದ್ದಿ ತಾನೆ? ಆತನು ನಿನ್ನನ್ನು ಅಪ್ಪಿಕೊಂಡನೆಂದು ಕೇಳಿದ್ದೇನೆ. ಸೀತಾ ಲಕ್ಷ್ಮಣರೊಡನೆ ಆತನ ನಿನ್ನೊಡನೆ ಮಾತಾಡಿದನ. ನೀನೇ ಧನ್ಯ. ನೀನು ಶ್ರೀರಾಮನನ್ನು ಎಲ್ಲಿ ಕಂಡಿದ್ದೀಯೋ ಅಲ್ಲಿಗೆ ನನ್ನನ್ನು ಕರೆದೊಯ್ಯು.' ಭರತನು ವಿಹ್ವಲನಾಗಿ ಕೇಳಿಕೊಂಡನ. ರಾಮನು ಆ ರಾತ್ರಿ ಕಳೆದಲ್ಲಿಗೆ ಗುಹನು ಭರತನನ್ನು ಕರೆದುಕೊಂಡು ಹೋದನು. ಅಲ್ಲಿ ಮಲಗಲು ಹಾಸಿದ್ದ ದರ್ಭೆಯು ಹಾಗೇ ಇತ್ತು. ಆದನ್ನು ಕಂಡ ಭರತನ ಕಣ್ಣುಗಳು ತುಂಬಿ ಬಂದುವು. 'ರಾಜ ಭವನದಲ್ಲಿ ರತ್ನಜಟಿತ ಪರ್ಯಂಕದ ಮೇಲೆ ಹಂಸತೂಲಿಕಾತಲ್ಪ ಹಾಸಿ ಮಲಗುತ್ತಿದ್ದ ಅವನಿಗೆ ನನ್ನಿಂದಾಗಿ ದರ್ಭೆಯ ಮೇಲೆ ಮಲಗುವಂತಾಯ್ತು' ಎಂದು ಮರುಗಿದನು.

ಗುಹನೊಡನೆ ಗಂಗಾನದಿ ದಾಟಿ ಭರತಾದಿಗಳು ಭರದ್ವಾಜರ ಆಶ್ರಮಕ್ಕೆ ಬಂದರು. ತನ್ನ ಸೇನೆ ಮತ್ತು ಪರಿವಾರವನ್ನು ದೂರದಲ್ಲೇ ಉಳಿಸಿ ಶತ್ರುಘ್ನನನ್ನು ಕರೆದುಕೊಂಡು ಭರತನು ಆಶ್ರಮದೊಳಕ್ಕೆ ಹೋದನು. ಮುನಿಗವರಿಬ್ಬರೂ ಸಾಷ್ಟಾಂಗವೆರಗಿದರು. ನಾರುಬಟ್ಟೆ ತೊಟ್ಟ ಭರತನನ್ನು ಕಂಡು ಭರದ್ವಾಜನು ಕೇಳಿದನು— 'ಭರತ, ರಾಜನಾಗಿರುವ ನೀನು ಮುನಿವೇಷವನ್ನೇಕೆ ಧರಿಸಿದ್ದೀಯ? ಈ ಕಾಡಿಗೇಕೆ ಬಂದಿದ್ದೀಯ?' ಭರತನಿಗೆ ತನ್ನನ್ನು ಮುನಿಯು ಹಾಸ್ಯ ಮಾಡುತ್ತಿರುವನೆನಿಸಿತು. ಅವನ ನೇತ್ರಗಳಿಂದ ನೀರ ಪ್ರವಾಹ ಹರಿಯಿತು. ಖೇದ ತುಂಬಿದ ಧ್ವನಿಯಿಂದ ಅವನು ಬಿನ್ನಯಿಸಿದನು— "ಪೂಜ್ಯರೆ, ತಾವು ಸರ್ವಜ್ಞರು. ಹಾಗಿದ್ದೂ ನನ್ನನ್ನೇನು ಕೇಳುತ್ತೀರಿ? ರಾಮ ಪಟ್ಟಾಭಿಷೇಕಕ್ಕೆ ಕೈಕೇಯಿ ಒಡ್ಡಿದ ಆತಂಕದಲ್ಲಿ ನನ್ನದೇನೂ ಕೈವಾಡವಿಲ್ಲ. ಇದಕ್ಕೆ ತಮ್ಮ ಚರಣಕಮಲವೇ ಸಾಕ್ಷಿ.'

(ಹನ್ನೆರಡನೇ ಪುಟ ನೋಡಿ)

ಚಿತಾರುಚರಯನ

ಗೋಡೆಗಳ ನಡುವೆ ತೀರ್ಮಾನ

ಕರ್ನಾಟಕ—ಮಹಾರಾಷ್ಟ್ರದ ಹದಗೆಟ್ಟ ಸೀಮಾವಿವಾದಕ್ಕೆ ರಾಷ್ಟ್ರಪತಿ ಶ್ರೀ ವಿ. ವಿ. ಗಿರಿಯವರು ಸುಲಭ ಸರಳ ಮತ್ತು ಹೆಚ್ಚು ಹೊಸ ರೀತಿಯ ಸಲಹೆ ನೀಡಿದ್ದಾರೆ.

ಉಭಯ ರಾಜ್ಯ ಮುಖ್ಯ ಮಂತ್ರಿಗಳನ್ನು ಒಂದು ಕೋಣೆಯೊಳಗೆ ಕೂರಿಸಿ ಯಾವುದಾದರೂ ಒಮ್ಮತದ ನಿರ್ಣಯಕ್ಕೆ ಬರುವವರೆಗೆ ಹೊರ ಹೋಗಲು ಬಿಡಬಾರದು ಎಂಬುದೇ ಆ ಸಲಹೆ. ಸಲಹೆಯೇನೋ ಅತ್ಯಂತ ಅಮೂಲ್ಯವಾದುದು.

ಆದರೆ ಒಂದು ಸಂದೇಹ. ಕೋಣೆಯ ಹೊರಗೆ ಹತ್ತು ಜನರ ಮುಂದೆ ನಡೆದ ತೀರ್ಮಾನಗಳನ್ನೇ ಮತ್ತೆ ಒಲ್ಲೆನೆಂದು ಬೇರೆ ದಾರಿ ಹಿಡಿಯುವ ರಾಜಕಾರಣಿಗಳು ಕೋಣೆಯೊಳಗೆ ಏನು ನಿರ್ಧಾರಕ್ಕೆ ಬಂದರು ಎಂದು ಯಾರಿಗೆ ಹೇಗೆ ಗೊತ್ತಾಗಬೇಕು?

ಉದಾಹರಣೆಗೆ ದೂರವೇಕೆ ಹೋಗಬೇಕು? ಕಾಂಗ್ರೆಸು ಒಂದಾಗಿದ್ದಾಗ ಬೆಂಗಳೂರಲ್ಲಿ ರಾಷ್ಟ್ರಪತಿ ಸ್ಥಾನದ ಹುದ್ದೆಗಾಗಿ ಶ್ರೀ ಸಂಜೀವ ರೆಡ್ಡಿಯವರನ್ನು ಬಹುಮತದಿಂದ ಆರಿಸಿದರು. ಅಂದು ಕಾಂಗ್ರೆಸ್ ಅಗ್ರ ಪ್ರಭಾವಿ ಶ್ರೀಮತಿ ಗಾಂಧಿಯವರು ಅದನ್ನು ತಡವಾಗಿಯಾದರೂ ಒಪ್ಪಿಕೊಂಡರು.

ಮುಂದೇನಾಯ್ತು? ಅವರ ಆತ್ಮಸಾಕ್ಷಿ ಅದುವರೆಗೆ ಬೂದಿಯಲ್ಲಿ ಮುಳುಗಿತ್ತು. ಅದು ಒಂದೇ ಜಾಗೃತವಾಗಿ ಪ್ರಜ್ವಲಿಸಿತು. ಆಗ ಬೇರೆದ್ದೆಲ್ಲ ನಡೆಯಿತು.

ಅದು ಹೋಗಲಿ. ಮಹಾರಾಷ್ಟ್ರ—ಕರ್ನಾಟಕ ಸೀಮಾ ವಿವಾದಕ್ಕೇ ಸಂಬಂಧಿಸಿದ ಮಹಾಜನ ಆಯೋಗವನ್ನೇ ತೆಗೆದುಕೊಳ್ಳಿ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಆಯೋಗದ ವರದಿಯನ್ನು ಒಪ್ಪಿಕೊಳ್ಳಬೇಕೆಂಬುದು ಸಾಮೂಹಿಕ ತೀರ್ಮಾನವಾಗಿತ್ತು. ಇದ ಇರಲಿಲ್ಲವಾದರೆ, ಆಯೋಗ ರಚನೆಯು ಆಗಬೇಕಾದರೂ ಏತಕ್ಕೆ?

ವರದಿ ಬಂದ ವೇಳೆ ತಗಾದೆ ಕೊನೆಗೊಳ್ಳಲಿಲ್ಲ. ಮಹಾಜನರು ಪಕ್ಷಪಾತಿಯೆಂಬ ಅಪಕೀರ್ತಿಗೂ ಗುರಿಯಾದರು. ಅವರು ಇನ್ನೇ ಕೊರಗಿನಿಂದ ಸತ್ತರೆಂದರೂ ಸಲ್ಲಬಹುದು.

ರಾಜಕೀಯದಲ್ಲಿ ಇಂತಹ ಉದಾಹರಣೆಗಳು ನೂರಾರು ದೊರೆಯುತ್ತವೆ. ಸ್ವೇಚ್ಛಾ–ನಿರಾಕಾರಣೆಗಳೇ ನಮ್ಮ ರಾಜಕೀಯ ಚಾಣಕ್ಯರ ತಂತ್ರವಾಗಿ ಪರಿಣಮಿಸಿದೆ.

ಕೋಣೆಯ ನಾಲ್ಕು ಗೋಡೆಗಳ ಬಂಧನದಿಂದ ಬಿಡುಗಡೆ ಹೊಂದಲು ಅವರು ಏನಾದರೂ ಒಮ್ಮತದ ತೀರ್ಮಾನಕ್ಕೆ ಬಂದರೂ ಬರಬಹುದೆ?

ಯಾವುದೇ ತೀರ್ಮಾನಕ್ಕೆ ಬಾರದೆ ಬಂದೆವೆಂದು ಬಾಗಿಲು ಕಾಯುತ್ತಿರುವ ವರದಿಗಾರರಿಗೆ ತಿಳಿಸಿ ಹೊರಗೆ ಬಂದರೂ ಬರಬಹುದು.

ಅಥವಾ ಸಮಸ್ಯೆ ಸಮಸ್ಯೆಯಾಗಿಯೇ ಮುಂದುವರಿಯಲಿ; ಇದರಿಂದ ನಮಗೆ ಕೇಂದ್ರದ ಮೇಲೆ ಸವಾರಿ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಒಮ್ಮತದ ತೀರ್ಮಾನಕ್ಕೆ ಬರಬಾರದೇಕೆ?

ಅಥವಾ ಹೊರಗೆ ಬರಲೇ ಬೇಕಾಗಿರುವುದರಿಂದ ಏನಾದರೊಂದು ತೀರ್ಮಾನಕ್ಕೆ ಬರಲೇ ಬೇಕಾಗಿರುವುದರಿಂದ ಬಂದರೂ ಬರಬಹುದು. ದ್ವಾರಪಾಲ ವರದಿಗಾರರಿಗೆ ನೀಡುವ ತೀರ್ಮಾನದ ವರದಿಗಳು ಮಾಡು ಬಡವಾದರೂ ಆಗಬಹುದು.

ಅಥವಾ ಅಲ್ಲೊಂದು ಹೇಳಿ ಇತರತ್ರ ಬೇರೊಂದು ಹೇಳಬಹುದು.

○ ○ ○

ಸನ್ಮಾನ್ಯ ಮುಖ್ಯ ಮಂತ್ರಿಗಳ ನಡುವಿನ ಸಂಭಾಷಣೆ ಹೇಗೆ ನಡೆಯಬಹುದೆ?

ನಾಯಕರು: ನೋಡಿ ಪಾಟೀಲರೇ, ನಾವು ಬೆಳಗಾಂವಿಯನ್ನು ತಿನ್ನದೆ ಬಿಡುವುದಿಲ್ಲ. ಆದ್ದರಿಂದ ನಾವು ಕಿತ್ತುಕೊಂಡೆನೆಂದ ಮತ್ತೆ ಆಳುವುದಕ್ಕಿಂತ ನೀವೇ ದಾನ ಕೊಟ್ಟು ಬಿಡಿ, ದಕ್ಷಿಣೆ ಬೇಡುವುದಿಲ್ಲ.

ಪಾಟೀಲರು: ಅದೆಂದಿಗೂ ಅಸಾಧ್ಯ ಜೈ ಮಹಾಜನ್....

ನಾ : ಆ ಮಹಾಜನ ಮಣ್ಣುಮುಕ್ಕಿದರು. ಅವರ ವರದಿಗೂ ಗೆದ್ದಲು ಹಿಡಿಯಿತು. ನೋಡಿ, ಪ್ರತಿಗಳು ಮಹಾಪುಂಡರೆಂದು ತಿಳಿದಿದ್ದೀರಿ. ಇಂದಿರಾಗಾಂಧಿಯೂ ನಮ್ಮ ಪರವಂತಿ ತಲೆವಾಗುತ್ತಾರೆ.

ಪಾ : ನಮಗೆ ನ್ಯಾಯ ಬೇಕು.

ನಾ : ಪ್ರಜಾತಂತ್ರದಲ್ಲಿ ಜನಬಲವಿದ್ದವರದ್ದೇ ನ್ಯಾಯ. ಗೆದ್ದವರದ್ದೇ ಸತ್ಯ. ನಿಮ್ಮನ್ನು ಕೇಳುತ್ತಾರೆ ಯಾರು?

ಪಾ : ನನ್ನ ಜನರಿಲ್ಲವೆ?

ನಾ : ನಮ್ಮ ಜನರ ಮುಂದೆ ನಿಮ್ಮ ಜನ ಏತಕ್ಕಾದಾರು? ನೋಡಿ, ಕೊಡುತ್ತೀರೋ ಇಲ್ಲವೋ ಹೇಳಿ. ನಾನು ಅನ್ನೋದೆಲ್ಲ ನಿಮ್ಮ ಒಳ್ಳೇದಕ್ಕೆ.

ಪಾ : ಊಹ್ಞೂಂ. ನಮಗೆ ಮಹಾಜನವರದ್ದೇ ವೇದವಾಕ್ಯ.

ನಾ : ನನಗೆ ಹಸಿವಾಗುತ್ತಿದೆ. ತೀರ್ಮಾನವಾಗದೆ ಹೊರಗೆ ಹೋಗುವಂತಿಲ್ಲ. ಆದ್ದರಿಂದ ಹ್ಞೂಂ ಎನ್ನಿ.

ಪಾ : ನೀವೇಕೆ ಹ್ಞೂಂ ಎನ್ನಬಾರದು?

ನಾ : ನಾನ್ಯಾಕೆ ಅನ್ನಬೇಕು?

ಪಾ : ನಾನ್ಯಾಕೆ ಅನ್ನಬೇಕು?

ನಾ: ಯಾಕೆ ಅನ್ನುತ್ತೀರಾ? ನೋಡಿ ......ಇದಕ್ಕೇ ತಿಳಿಯಿತೇನು?

ಪಾ: ಅಯ್ಯಯ್ಯೋ....

ನಾ: ಕೂಗಿದರೆ ಜಾಗ್ರತೆ. ಹೊರಗಡೆ ವರದಿಗಾರರಿದ್ದಾರೆ....

ಪಾ : ಇರಲಿ. ಸತ್ಯದ ವರದಿ ಮಾಡಲಿ...

ನಾ: ಶಿವ್ಮ ಸತ್ಯ ಅಹಿಂಸೆಯೆಲ್ಲ ಎಂದೋ ಹಾರಿಹೋಗಿದೆ. ಅಲ್ಲ ಇಂಥ ಗಾಂಧಿ ವಾದಿಗಳಿಗೆ ರಾಜಕೀಯವೇಕೆ? ಆಶ್ರಮ ಕಟ್ಟಿ ಹಾಯಾಗಿರಬಾರದೇನು? ಅದು ಹೋಗಲಿ, ಏನು ಹ್ಞೂಂ ಅಂತೀರೋ ಇಲ್ಲ?

ಪಾ: ಹಾ...

ನಾ: ಹಾಗೆ ಬನ್ನಿ. ವರದಿಗಾರರೇ ಪಾಟೀಲರು ಹ್ಞೂಂ ಅಂದುಬಿಟ್ಟರು. ಬೆಳಗಾಂವಿ ನಮಗೆ ದಕ್ಕಿತು. ಜಯ್ ಮಹಾರಾಷ್ಟ್ರ— ಇನ್ನಾದರೂ ಬಾಗಿಲು ತೆರೆಯಿರಿ....

ಪಾ : ಇ....ಲ್ಲ....ಇ...ಲ್ಲ....

ಅಷ್ಟರೊಳಗೆ ತೀರ್ಮಾನ ವರದಿಯ ವಾಸನೆ ತುದಿಗಾಲಲ್ಲಿ ನಿಂತಿದ್ದ ವರದಿಗಾರರು ಬಾಗಿಲು ತೆರೆದುಬಿಟ್ಟಿದ್ದರು. ಪಾಟೀಲರು ತೊದಲುತ್ತಿದ್ದುದು ಯಾರಿಗೂ ಅರ್ಥವಾಗಲಿಲ್ಲ.

ಒಬ್ಬರ ಅಟ್ಟಹಾಸದ ನಡುವೆ ನನ್ನೊಬ್ಬರ ಹಾಹಾಕಾರ ಅವರಿಗೆ ಕೇಳಲಿಲ್ಲ.

ಮರ ದಿನದ ಪತ್ರಿಕೆಗಳಲ್ಲಿ ವರದಿ— ಬಹುಕಾಲದ ಸಮಸ್ಯೆಗೆ ಸರಳ ತೀರ್ಮಾನ! ಬೆಳಗಾಂವಿಯನ್ನು ಮಹಾರಾಷ್ಟ್ರಕ್ಕೆ ಬಿಟ್ಟುಕೊಡಲು ಮೈಸೂರಿನ ಒಪ್ಪಿಗೆ! ರಾಷ್ಟ್ರಪತಿ ವಿ. ವಿ. ಗಿರಿಯವರ ಸಲಹೆಯಂತೆ ಏರ್ಪಟ್ಟ ವಿಶೇಷ ಭೇಟಿಯು ಸಫಲವಾದುದಕ್ಕೆ ಪ್ರಧಾನಿ ಗಾಂಧಿಯವರು ಅತೀವ ಸಂತೋಷ ವ್ಯಕ್ತಪಡಿಸಿದರು. ತಮ್ಮ ನಿಲುವನ್ನು ಕೊನೆಗಾದರೂ ಬಿಟ್ಟುಕೊಟ್ಟುದಕ್ಕೆ ಅವರು ಶ್ರೀ ಪಾಟೀಲರನ್ನು ಹೃತ್ಪೂರ್ವಕ ಅಭಿನಂದಿಸಿದರು. ಶ್ರೀ ಗಿರಿಯವರಿಗೆ ಕೃತಜ್ಞತೆ ಸಲ್ಲಿಸಲು ರಾಷ್ಟ್ರಪತಿ ಭವನಕ್ಕೆ ತೆರಳಿದರು. ಮಹಾರಾಷ್ಟ್ರದಲ್ಲಿ ಮೂರು ದಿನಗಳ ವಿಶೇಷ ಹೋಳಿಯನ್ನು ಆಚರಿಸಲು ಸರಕಾರ ಆಜ್ಞೆ ಹೊರಡಿಸಿತು.

"ಕರ್ನಾಟಕಕ್ಕೆ ಮಾಡಿದ ಅಪಮಾನಕ್ಕೆಂದು ಶ್ರೀ ವೀರೇಂದ್ರ ಪಾಟೀಲರು ಕೂಡಲೇ ರಾಜೀನಾಮೆಕೊಡಬೇಕು. ಇದನ್ನು ಒತ್ತಾಯಿಸಲು 'ಕರ್ನಾಟಕ ಬಂದ್' ಆಚರಿಸಬೇಕೆ"ಂದು ಮೈಸೂರಿನ ಸರ್ವಪಕ್ಷಗಳೂ ತೀರ್ಮಾನಿಸಿದುವು....

ಶ್ರೀ ಪಾಟೀಲರ ಹೇಳಿಕೆ ಕೇಳಬೇಕೆನ್ನರಲ್ಲ?

○ ○ ○

ಇದು ಹಾಗೇ ನಡೆದರೆ ಹೇಗೆ ಆಗದು ಆದೀತೆ?

ದೇವಾಲಯದ ಜೀರ್ಣೋದ್ಧಾರಕ್ಕೆಂದು ಚಂದಾಕೆತ್ತುವವರು ಶ್ರೀಯುವರಲ್ಲಿಗೆ ಬಂದರು. "ಸ್ವಾಮಿ, ತಮ್ಮ ಹೆಸರಲ್ಲಿ ಎಷ್ಟು ಬರೆಯಲಿ?"

"ಏನೂ ಬರೆಯಬೇಡಿ."

"ಅದು ಹೇಗಾಗುತ್ತದೆ? ದೇವರ ಕೆಲಸ, ದೊಡ್ಡ ಕೆಲಸ...."

"ಅದೆಲ್ಲ ಸರಿಯೇ. ಆದರೆ ನಾನೇನೂ ಕೊಡಲಾರೆ."

"ಹೀಗೆಲ್ಲ ಅನ್ನಬಾರದು...."

"ಹೌದು, ನಾನು ಈಗಾಗಲೇ ಹೊರಗೆ ತುಂಬ ಕೊಡುತ್ತಿದ್ದೇನೆ."

"ಇರಲೇಳಿ. ದೇವರ ಬಗೆಗೂ ನಿಮ್ಮ ಸಾಲವಿದೆಯೆಂಬುದನ್ನು ಮರೆಯುವುದು ಸಾಧ್ಯವೇನು?"

"ಹೇಗೆ ಮರೆಯಲಿ? ಆದರೆ, ಉಳಿದವರಂತೆ ದೇವರು ಕಿಬ್ಬದಿಯ ಕೀಲು ಮುರಿಯುವುದಿಲ್ಲ ತಾನೆ?"

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

READ &
ADVERTISE IN
NAVAYUGA WEEKLY

ಸಮಾಜವಾದಕ್ಕೆ ಪುನಶ್ಚೇತನ

ವಾರಪತ್ರಿಕೆ
ಉಡುಪಿ, ದ. ಕ.

NAVAYUGA
UDIPI, S. K.

ಸಂಪುಟ : 50
ಸಂಚಿಕೆ : 5

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ವಾರ್ಷಿಕ ಚಂದಾ ರೂ. 10
ವಿಶೇಷ ಸಂಚಿಕೆಗಳು ಸಹಿತ
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನೂರು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಇಂಡಿಕೇಟಿಗೆ ಲೋಕಸಭೆಯಲ್ಲಿ ಬಹುಮತವಿಲ್ಲ; ಆದರೂ ಅದು ಅಧಿಕಾರಾರೂಢವಾಗಿದೆ. ಇದಕ್ಕೆ ಕಾರಣ ಸ್ಪಷ್ಟ. ಇಂಡಿಕೇಟಿಗೆ ಬಹುಮತವಿಲ್ಲವಾದರೂ ಶ್ರೀಮತಿ ಗಾಂಧಿಗೆ ಬಹುಮತವಿದೆ. ಶ್ರೀಮತಿ ಗಾಂಧಿಯವರು ಪ್ರಧಾನಿಯಾಗಿರುವ ವರೆಗೆ ಅವರನ್ನು ಕಮ್ಯುನಿಸ್ಟರು, ದ್ರಾವಿಡರು ಪ್ರಸವಾದಿ ಇತ್ಯಾದಿಯಾಗಿ ಕೆಲಕೆಲವರು ಬೆಂಬಲಿಸುತ್ತಾರೆ. ಅಧಿಕಾರ ಬೇಕೆಂದ ಹಾತೊರೆಯುತ್ತಿರುವ ಇಂಡಿಕೇಟಿಗರು ಶ್ರೀಮತಿ ಗಾಂಧಿಯವರೇ ತಮ್ಮ ನಾಯಕರೆಂದು ಒಪ್ಪಿಕೊಳ್ಳಬೇಕಾಗಿದೆ. ಅವರು ಯೋಚಿಸಿದ್ದೆಲ್ಲ ಧರ್ಮವೆಂದೂ ಆಡಿದ್ದೆಲ್ಲ ಸಮಾಜವಾದವೆಂದೂ ಮಾಡಿದ್ದೆಲ್ಲ ನ್ಯಾಯಸಮ್ಮತವೆಂದೂ ತಲೆದೂಗಲೇ ಬೇಕಾಗಿದೆ. ಈ ಬಗೆಯ ಇಂಡಿಕೇಟಿಗರ ಅಸಹಾಯಕತೆಯಿಂದಾಗಿಯೇ ಪ್ರಧಾನಿಯು ಸರ್ವಾಧಿಕಾರ ನಡೆಸುತ್ತದೆ.

ದೇಶದ ಬೃಹತ್ ರಾಜ್ಯಗಳು ಮೂರು— ಉತ್ತರ ಪ್ರದೇಶ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ. ಈ ಮೂರು ರಾಜ್ಯಗಳು ಎಂದಿನವರೆಗೆ ಶ್ರೀಮತಿ ಗಾಂಧಿಯವರನ್ನು ಬೆಂಬಲಿಸವುವೋ ಅಲ್ಲಿಯ ತನಕ ಅವರು ಅಧಿಕಾರದಲ್ಲಿ ಉಳಿಯುತ್ತಾರೆ. ಇಂಡಿಕೇಟ್ ಅಧ್ಯಕ್ಷಗಿರಿಯನ್ನು ಹರಿಜನ ಶ್ರೀ ಡಿ. ಸಂಜೀವಯ್ಯನವರು ವಹಿಸಬೇಕೆಂದು ಪ್ರಧಾನಿ ಇಚ್ಛೆಯಿದ್ದರೂ ಆಂಧ್ರದ ಶ್ರೀ ಬ್ರಹ್ಮಾನಂದ ರೆಡ್ಡಿಯವರು ಇದನ್ನು ವಿರೋಧಿಸಿದ್ದರಿಂದ ಮತ್ತೊಬ್ಬ ಹರಿಜನ ಎಪ್ಪತ್ತೆಳ್ಳ ಹತ್ತಿರದ ಪ್ರಾಯದ ಶ್ರೀ ಜಗಜ್ಜೀವನರಾಮರು ಮಂತ್ರಿತನವೊಂದಿಗೆ ಇದನ್ನು ಹೊತ್ತುಕೊಳ್ಳಬೇಕಾಯ್ತು. ಮಹಾರಾಷ್ಟ್ರದ ಶ್ರೀ ವಿ. ಪಿ. ನಾಯಕರ ಬೆಂಬಲ ಉಳಿಸುವುದಕ್ಕಾಗಿಯೇ ಮಹಾಜನ ಆಯೋಗದ ವರದಿಯನ್ನು ಮೂಲೆಗೆ ತಳ್ಳುವ ಸತತ ಪ್ರಯತ್ನ ಶ್ರೀಮತಿ ಗಾಂಧಿಯವರು ಮಾಡುತ್ತಿದ್ದಾರೆ; ವರದಿಯನ್ನು ಪೆಟ್ಟಿಗೆಯಲ್ಲಿಟ್ಟು ಕೊಡಲು ವೇಳೆ ಬಡಿದಾಗಿದೆ; ಇನ್ನು ನಾಲ್ಕು ವೇಳೆ ಹೊಡೆದು ನೆಲದಲ್ಲಿ ಹೂಳಿಡುವುದು ಮಾತ್ರ ಉಳಿದಿದೆ. ಇದಕ್ಕಾಗಿ ಅವರು ಸಕ್ಷಿನ ನೆರವು ಬಳಸುತ್ತಾರೆಂದು ಪಟ್ಟ ತರದಿ ಗೃಹಸಚಿವರಾದ ಶ್ರೀ ಚವನರನ್ನು ಅರ್ಥ ಶಾಖೆಗೆ ವರ್ಗಾಯಿಸಿರುವ ಶ್ರೀಮತಿ ಗಾಂಧಿಯವರು ಶ್ರೀ ಚವನರ ಪ್ರಭಾವವನ್ನು ಅಳಿದು ಬಿಟ್ಟಿದ್ದಾರೆ. ಬೆಳಗಾಂವಿ ಬಿಣ್ಣೆಯ ಅವಿಯಿಂದ ಮರಾಠಿ ಬೆಕ್ಕುಗಳು ತಣ್ಣಗಿರುವುದನ್ನು ನೋಡುವಾಗ, ಕೇಂದ್ರದಲ್ಲಿ ಅವುಗಳ ಶಕ್ತಿ ಕುಂದಿದೆಯೆಂದೇ ಹೇಳಬೇಕು. ಚವನರೂ ತೆಪ್ಪಗಾಗಿ ತನ್ನ ಅಧಃಪತನವನ್ನು ನೋಡುತ್ತಲೇ ಕುಳಿತಿದ್ದಾರಲ್ಲದೆ, ಸಂಪೂರ್ಣ ಅಶಕ್ತರೂ ಆಗಿದ್ದಾರೆ.

ಉತ್ತರ ಪ್ರದೇಶದಲ್ಲಿದ್ದ ಗುಪ್ತ ಸರಕಾರವನ್ನು ಉರುಳಿಸುವಲ್ಲಿ ಶ್ರೀಮತಿ ಗಾಂಧಿ ಸಫಲರಾದರು. ಭಾರತೀಯ ಕ್ರಾಂತಿದಳಕ್ಕಿಂತಲೂ ಅವರು ಅದರ ನಾಯಕ ಶ್ರೀ ಚರಣಸಿಂಗರನ್ನು ಹೇಗಾದರೂ ಬುಟ್ಟಿಗೆ ಹಾಕಿಕೊಳ್ಳಲು ಹವಣಿಸಿ, ಅವರನ್ನೇ ಮುಖ್ಯಮಂತ್ರಿ ಮಾಡಿದರು, "ಸಮಾಜವಾದದಲ್ಲಿ ವಿಶ್ವಾಸವುಳ್ಳ ಪ್ರಜಾತಂತ್ರವಾದಿ ಪಕ್ಷಗಳೆಲ್ಲ ಒಂದುಗೂಡಬೇಕು; ಪ್ರತಿಗಾಮಿಗಳ ಕೈಯಿಂದ ನೊಂದ ಹಳೆಯ ಕಾಂಗ್ರೆಸಿಗರೆಲ್ಲ ಇಂಡಿಕೇಟ್ ಸೇರಬೇಕು" ಎಂದವರು ಕರೆ ನೀಡಿದರು. ಈ ಕರೆ ಶ್ರೀ ಚರಣಸಿಂಗರಿಗೇ ಇತ್ತು. ಇಂಡಿಕೇಟ್-ಬಿಕೆಡಿ ವಿಲೀನತೆಯ ಮಾತುಕತೆ ಆರಂಭವಾಯ್ತು. ಆದರೆ, ಶ್ರೀಮತಿ ಗಾಂಧಿಯನ್ನು ಎಳೆತನದಿಂದಲೂ ಕಂಡ ಕೊಂಡ ಚರಣಸಿಂಗರು ಜಪ್ಪೆನ್ನಲಿಲ್ಲ. ಕೊನೆಗೂ ಮಾತುಕತೆ ಮುರಿದು ಬಿತ್ತು; ಇಂಡಿಕೇಟ್ ಚರಣಸಿಂಗರಿಗೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಂಡಿತು. ಚರಣಸಿಂಗರು ಉಳಿಯುವುದಕ್ಕಾಗಿ ಶ್ರೀ ತ್ರಿಪಾಠಿಯವರು ಅವರನ್ನು ಉರುಳಿಸುವುದಕ್ಕಾಗಿ ಭಗೀರಥ ಪ್ರಯತ್ನದಲ್ಲಿ ತೊಡಗಿದ್ದಾರೆ. ಸಿಂಡಿಕೇಟಿನ ಗುಪ್ತರು ಶ್ರೀ ಸಿಂಗರಿಗೆ ಬೆಂಬಲ ನೀಡಿದರೂ ನೀಡಬಹುದು; ಆಗ ಹಲವಾರು ಇಂಡಿಕೇಟಿಗರು ಮತ್ತೆ ಸಿಂಡಿಕೇಟಿಗರಾದರೂ ವಿಸ್ಮಯವಿಲ್ಲ. ಶ್ರೀ ಚರಣಸಿಂಗರು ಶ್ರೀಮತಿ ಗಾಂಧಿಯವರ ಒಂದು ಮಾತನ್ನೂ ಒಪ್ಪದೆ ದಿಟ್ಟತನ ತೋರಿದ ಏಕೈಕ ಮುಖ್ಯಮಂತ್ರಿಯೆನ್ನಬಹುದು. ಪ್ರಧಾನಿಯ ಸ್ವರಾಜ್ಯದಲ್ಲೇ ಆಕೆಯ ಬಗ್ಗೆ ಎಂತಹ ಭಾವನೆಯಿದೆಯೆಂಬುದನ್ನಿದು ತೋರಿಸುತ್ತದೆ.

ಮುಖ್ಯಮಂತ್ರಿಗಳ ಸಭೆಯೊಂದು ಇತ್ತೀಚೆಗೆ ದೆಹಲಿಯಲ್ಲಿ ನಡೆಯಿತು. ಇಡಿಯ ದೇಶಕ್ಕೆ ಒಂದು ವಿಧವಾದ ಭೂಸುಧಾರಣೆಯನ್ನು ತ್ವರಿತಗತಿಯಲ್ಲಿ ಜಾರಿಗೆ ತರಬೇಕೆಂದು ಪ್ರಧಾನಿ ಹೇಳಿದರೆ, ಅವರ ಮಾತನ್ನು ಅವರ ಪಕ್ಷದ ಮುಖ್ಯಮಂತ್ರಿಗಳೇ ವಿರೋಧಿಸಿದರೆಂದು ವರದಿ ಬಂದಿದೆ. ಆದರಲ್ಲೂ ಆಂಧ್ರದ ಶ್ರೀ ಬ್ರಹ್ಮಾನಂದ ರೆಡ್ಡಿಯವರು ಇವರಲ್ಲಿ ಪ್ರಮುಖರೆಂದು ಕೇಳುತ್ತೇವೆ. ಕಾಂಗ್ರೆಸ್ ವಿಘಟನೆಯಾಗಿ ಒಂದು ವರ್ಷದ ಅಧಿಕಾರವುಳಿಸುವುದಕ್ಕಾಗಿ ಆಲಾಪ-ಬಾಲಾಪ ಒಂದು ಮಧ್ಯಾವಧಿ ಚುನಾವಣೆ ಸಮೀಪಿಸುತ್ತಿರುವುದರಿಂದ ತನ್ನ "ಪ್ರಗತಿವಾದ"ಕ್ಕೆ 'ರಿಚಾರ್ಜ್' ಮಾಡಲು ಅವರು ಹವಣಿಸಿದ್ದಾರೆ. ಈ ವೇಳೆಯಲ್ಲೇ ಭಿನ್ನಾಭಿಪ್ರಾಯದ ಬೀಜ ಮೂಡಿರುವುದು ಗಮನಾರ್ಹ. ಇದು ಮೊಳಕೆ ಬಂದರೆ ಬರಬಹುದು. ಆಗ ಶ್ರೀಮತಿ ಗಾಂಧಿಯವರು ಏನು ಮಾಡುತ್ತಾರೆ ಎಂಬುದೇ ಮುಖ್ಯ ಪ್ರಶ್ನೆ. ತನಗೆ ಅಧಿಕಾರ ಬೇಕಾಗಿಲ್ಲ; ವಿರೋಧಿ ಪಕ್ಷವಾಗಿರುವುದಕ್ಕೂ ಸಿದ್ಧ ಎಂಬ ಆಕೆಯು ನುಡಿಸಿದ ಹೊಸ ರಾಗ ತನ್ನ ಭವಿಷ್ಯದ ಬಗ್ಗೆಯೇ ದೃಢತೆಯಿಲ್ಲವೆಂದು ತಿಳಿದೇ ಆಕೆ ಹೇರಡಿಸಿದ್ದಿರಬಹುದೆ? ತಾನು ಪ್ರಜಾಸತ್ತೆಯ ಕೈವಾರಿಯೆಂಬ ಅಸತ್ಯವನ್ನು ಸತ್ಯವೆಂದು ಜನ ಭ್ರಮಿಸುವಂತೆ ಮಾಡುವ ಹೊಸ ತಂತ್ರವಿರಬಹುದೆ?

ಜಂಬೂ ಸವಾರಿ ಬೇಡ

ರಾಜ—ಮಹಾರಾಜರಿಗೆ ನೀಡುತ್ತಿದ್ದ ಮಾನ್ಯತೆ–ರಾಜಧನ–ಮತ್ತಿತರ ಸೌಲಭ್ಯಗಳನ್ನು ಶ್ರೀಮತಿ ಗಾಂಧಿಯವರು ರದ್ದುಪಡಿಸಲು ಸಂಸತ್ತಿನ ಬೆಂಬಲ ಗಳಿಸುವಲ್ಲಿ ಸೋತು ಹೋದದ್ದು, ರೊಚ್ಚಿಗೆದ್ದಾಕೆ ರಾಷ್ಟ್ರಪತಿಯವರ ಆಜ್ಞೆಯಿಂದ ತನ್ನ ಇಷ್ಟವನ್ನು ನೀಗಿಸಿಕೊಂಡದ್ದು ಜಗಜ್ಜಾಹಿರ. ಇದರ ಪರಿಣಾಮ ಪ್ರಜೆಗಳ ಮೇಲೆ ಏನಾದರೂ ಬೀಳುವುದಿದ್ದರೆ, ಅದು ಕನ್ನಡಿಗರ ಮೇಲೆ ಮಾತ್ರ. ಮೈಸೂರಿನ "ಆಳುವ ಮಹಾಪ್ರಭು"ಗಳಾಗಿದ್ದವರು ವೈಭವದ ದಸರಾ ವಿರ್ವಹಿಸುವುದು ಸಂಪ್ರದಾಯವಾಗಿ ಬಂದಿದೆ. ಮಹಾಪ್ರಭುಗಳು ಆಳುವ ಅಧಿಕಾರವನ್ನು ತ್ಯಜಿಸಿದ ಬಳಿಕವೂ 'ಮಹಾಪ್ರಭು'ಗಳಾಗಿಯೇ ಉಳಿದದ್ದರಿಂದ ಅವರು ಕಳೆದ ವರ್ಷದ ವರೆಗೂ ನಾಡಹಬ್ಬ–ದಸರಾಗಳಲ್ಲಿ ಪಾಲುಗೊಂಡಿದ್ದರು ತನ್ನ ಅರಮನೆಯಲ್ಲಿ ದರಬಾರು ನಡೆಸುತಿದ್ದರು. ಬೀದಿಯಲ್ಲಿ ಜಂಬೂಸವಾರಿ ಮಾಡುತಿದ್ದರು, ಚಿತ್ತಾಕರ್ಷಕವಾದ ಇವು ದೇಶ—ವಿದೇಶಗಳವರನ್ನು ಆಕರ್ಷಿಸುತಿತ್ತು. ದಸರಾ ವಸ್ತು ಪ್ರದರ್ಶನಾದಿಗಳಿಂದ ರಾಜ್ಯದ ಸಂಪನ್ಮೂಲಗಳು ಹೆಚ್ಚುತಿದ್ದುವು. ಆದರೆ, ಈ ಬಾರಿ ಶ್ರೀಮತಿ ಇಂದಿರಾ ಗಾಂಧಿಯವರು ಶ್ರೀ ಜಯಚಾಮರಾಜರಿಂದ 'ಮಹಾಪ್ರಭು'ತ್ವವನ್ನೂ ಕಿತ್ತುಕೊಂಡದ್ದರಿಂದ ಅವರು ದಸರೆಯಲ್ಲಿ ಭಾಗವಹಿಸುವುದಿಲ್ಲ. ಇದರಿಂದ ದಸರೆ ಆಕರ್ಷಣೆ ಕಳೆದುಕೊಂಡಿದೆ; ಕನ್ನಡಿಗರಲ್ಲಿ ಕೆಲವರಿಗೆ ಖೇದವೆನಿಸಿದೆ. ಶ್ರೀಮತಿ ಗಾಂಧಿಯವರು ಶ್ರೀ ಒಡೆಯರನ್ನು ದೆಹಲಿಗೆ ಕರೆಸಿಕೊಂಡು ಮಾತುಕತೆ ನಡೆಸಿದ್ದಾರೆಂದೂ ಅದರ ಪರಿಣಾಮವಾಗಿ ಒಡೆಯರು ಜಂಬೂಸವಾರಿ ಮಾಡಲೂ ಬಹುದೆಂದೂ ಹೇಳಲಾಗುತ್ತಿದೆ. ಆದರೆ, ಶ್ರೀ ಒಡೆಯರಿಗೆ ಜಂಬೂ ಸವಾರಿ ಮಾಡಬೇಕೆಂದಿದ್ದರೆ ಅವರು ರಾಜ್ಯಸರಕಾರದ ದಸರೆ ಸಮಾರಂಭದಲ್ಲಿ ಮಾಡಬೇಕಾಗಿಲ್ಲ; ಒಂದು ವೇಳೆ ಅವರು ಮಾಡಿದರೆ, ಅದು ಹಾಸ್ಯಾಸ್ಪದವಾಗುತ್ತದೆ. ಆಳುವ ಮಹಾಪ್ರಭುಗಳು ಏನು ಮಾಡಿದರೂ ಸರಿಯೇ. 'ಮಹಾಪ್ರಭುಗಳು' ಜಂಬೂಸವಾರಿ ಮಾಡುವಾಗ, ರಸವಾದರೂ ಇತ್ತು. ಇಂದು ಈ ಮಾಜಿ ಪ್ರಭುಗಳು ಶ್ರೀಸಾಮಾನ್ಯರೇ ಆದುದರಿಂದ ಅವರು ಜಂಬೂಸವಾರಿ ಮಾಡಲು ಒಪ್ಪದಿರುವುದು ಸಹಜವಾಗಿದೆ. ಕನ್ನಡಿಗರಿಗೆ ಇದು ಅಸಂತೋಷವಾದರೂ ಶ್ರೀ ಒಡೆಯರ ಘನತೆ ಇದರಿಂದ ಹೆಚ್ಚುತ್ತದೆ.

ರಾಜನ ಮಗನು ಮೂರ್ಖನಿದ್ದರೂ ಕೂಡ ವಾರಸದಾರನೇ ರಾಜನಾಗಬೇಕೆಂಬ ರೂಢಿ ಇತ್ತು. ಆದರೆ ಇಂದು ಜನರೆಂದೂ ಆದನ್ನು ಸಹಿಸರು.

೦ ೦ ೦

ಗೇಹರಾಜ್ಯದಲ್ಲಿ

ತಾಳುವಿಕೆಗಿಂತನ್ಯ ತಪವೆ ಇಲ್ಲ?

"ಅಲ್ರಿ, ಬೆಂಗಳೂರಲ್ಲಿ ವಿದ್ಯಾರ್ಥಿಗಳು ಚಳುವಳಿ ಮತ್ತೆ ಹೂಡಿದ್ರಂತೆ...."

'ಹೌದು....'

'ಒಮ್ಮೆ ನಿಲ್ಲಿಸಿದವ್ರು ಮತ್ತೇಕೆ ಆರಂಭ ಮಾಡಿದ್ರು?'

"ಯಾಕೆ ಅಂದ್ರೇನೆ? ಅದುವರೆಗೆ ನಡೆದದ್ದು ಶಾಂತ ರೀತಿಯ ಚಳುವಳಿ. ಅದೂ ಅಲ್ಲದೆ ಅದ್ರಲ್ಲಿ ನಿಲ್ಲಿಸಿದ್ರು? ತಾತ್ಕಾಲಿಕವಾಗಿ ನಿಲ್ಸಿದ್ರಪ್ಪ....'

'ಅಲ್ಲ, ಈ ಬಾರಿ ಚಳವಳಿ ಭಾರೀ ಹಿಂಸೆಗೆ ಕಾರಣವಾಯ್ತಂತೆ...."

"ಹಿಂಸೆ ಅಂದ್ರೇನು? ಯಾರ ಜೀವವನ್ನೂ ಅವ್ರು ಹಿಂಡ್ಲಿಲ್ಲ....'

'ಜೀವ ಹಿಂಡೋದು ಯಾಕೇಂತ? ಸಾರ್ವಜನಿಕರು ಪ್ರಯಾಣ ಬೆಳೆಸುತಿದ್ದ ಬಸ್ಸುಗಳ ಮೇಲೆ ಕಲ್ಲು ತೂರಿದ್ರಂತೆ..."

"ಹ್ಞಾಂ, ಬಸ್ಸಿಗೆ ಜಖಂ ಆಯ್ತು..."

"ಹೌದು; ಅದ್ರ ಮೇಲೆ ಪ್ರಯಾಣಿಕರಿಗೂ ಗಾಯವಾಯ್ತಂತೆ...."

'ಹ್ಞಾಂ, ಪಾಪ ದುರ್ದೈವಿ ಬಸ್ಸಿನ ಯಾತ್ರಿಕರಿಗೂ ದುರ್ದೈವ ಒಡಿಯಿತು....'

'ಅಲ್ಲ, ನೀವು ಎಲ್ಲವನ್ನೂ ಭಾರೀ ತಮಾಷೆಯಾಗಿ ಕಾಣ್ತೀರಲ್ಲಾ?"

"ಹಾಗಲ್ವೆ, ಮೊನ್ನೆಮೊನ್ನೆ ತಾನೇ ಹುಟ್ಟಿಕೊಂಡ ಬೆಂಗಳೂರು ವಿಶ್ವವಿದ್ಯಾಲಯದ ಅಪೂರ್ವ ಸಾಧನ-ಸಂಪತ್ತುಗಳೆಲ್ಲವೂ ಹಿಂಸಾಕಾಂಡದಲ್ಲಿ ಭಸ್ಮವಾದಾಗ ಯಾತ್ರಿಕರದ್ದೇನು ಮಹಾ?"

'ಪೋಲೀಸ ಅಧಿಕಾರಿಗಳು—ಕಾನ್‌ಸ್ಟೇಬಲ್‌ಗಳಿಗೂ ಗಾಯವಾಯ್ತಂತೆ...'

"ಹ್ಞಾಂ, ನೆರೆಯಲ್ಲಿ ಹೊಳೆ ದಾಟುವ ಕೆಚ್ಚು ಯಾಕವರಿಗೆ?"

"ಯಾಕೆ ಅಂದ್ರೆ, ಅವ್ರು ತಮ್ಮ ಕರ್ತವ್ಯ ಪಾಲಿಸೋದು ಬೇಡವೆ?"

'ಅದೇ ನೋಡೀಗ ಬಂದದ್ದು. ಈ ಕಪ್ಪು ಬಿಲ್ಲೆಗಳಿರುವವಷ್ಟು ಕರ್ತವ್ಯಪ್ರಜ್ಞೆ ಪದವೀಪ್ರಿಯ ವಿದ್ಯಾರ್ಥಿಗಳಿಗೆ ಇರುತಿದ್ದರೆ ಹೀಗೆಲ್ಲಾ ಆಗುತ್ತಿರಲಿಲ್ಲ...."

"ಅಲ್ರಿ, ನನಗೊಂದು ಸಂದೇಹ....'

"ಏನು? ಹಿಂದಿನ ದಿನ ಮುಖ್ಯಮಂತ್ರಿಗಳು ವಿಧಾನ ಸಭೆಯಲ್ಲಿ..."

'ಹೌದು, ವಿದ್ಯಾರ್ಥಿ ಚಳುವಳಿಯ ಹಿಂದೆ ರಾಜ್ಯಕೀಯ ಪಕ್ಷಗಳ ಕೈವಾಡವಿದೆಯೆಂದು ತಿಳಿಸಿದ್ದರು....'

'ಅಷ್ಟು ಮಾತ್ರ ಅಲ್ಲ. ಚಳುವಳಿಯ ಕಾರ್ಯಕ್ರಮಗಳೆಲ್ಲ ಶಾಸಕರ ಭವನದಲ್ಲೇ ರೂಪುಗೊಳ್ಳುತ್ತಿವೆಂದೂ ಅದರ ಯೋಜಕರು ಯಾರು ಯಾರೆಂದು ಗೊತ್ತಿದೆಯೆಂದೂ ಆದರೂ ಹೆಸರು ಬಹಿರಂಗಪಡಿಸಬಯಸುವುದಿಲ್ಲವೆಂದೂ ಘೋಷಿಸಿದರು."

'ಇದನ್ನು ವಿರೋಧಿ ಪಕ್ಷಗಳು ವಿರೋಧಿಸಿದವಲ್ಲ?'

'ಅವು ವಿರೋಧಿಸಲಿ, ಬಿಡಲಿ, ಆ ಮಾತು ಬೇರೆ; ಅದರ ಪ್ರಭಾವವೇ ಮರದಿವಸದ ಲಂಕಾದಹನವಿರಬಹುದೇಂತ....'

'ಇದ್ದರೂ ಇರಬಹುದೆನ್ನಿ. ಆದರೆ ನೋಡು ಈ ಬಾರಿಯ ಕಾಂಡದಲ್ಲಿ ಭಾಗವಹಿಸಿದವರು ಕೆಲವರು ಮಾತ್ರ....'

"ಅಂದ್ರೆ ನೋಡಿ, ಈ ಚಳುವಳಿ-ಹಿಂಸಾಕಾಂಡಗಳ ಹಿಂದೆ ರಾಜ್ಯಕೀಯ ಕೈವಾಡವಿದೆಯೆಂದು ಸ್ಪಷ್ಟವಾಯಿತಲ್ಲ?"

"ಆಗಲಿ ಬಿಡ, ಇದರಿಂದ ಏನಾಯ್ತು?"

"ಅಲ್ರಿ, ಇನ್ನು ಆಗ್ಬೇಕಾದ್ದಾದ್ರೂ ಏನ? ಬೆಂಗಳೂರು ವಿಶ್ವವಿದ್ಯಾಲಯ ಈಗ ಹಿಂಸೆಯ ಪರಿಣಾಮದಿಂದ ಚೇತರಿಕೆ ಬೇಕಾದ್ರೆ ಸನುಹುವೆಷ್ಟು ಬೇಕು?"

"ಅಂತಹ ಚಿಂತೆಯಿದ್ರೆ ಹೀಗೆಲ್ಲಾ ಆಗುತ್ತಿರಲಿಲ್ಲ ನೋಡಿ...."

"ಮತ್ತೆ ನೋಡಿ, ಈ ವಿದ್ಯಾರ್ಥಿ ಚಳುವಳಿ ಬೆಂಗಳೂರಿಗೆ ಮಾತ್ರ ಸೀಮಿತವಿರಲಿಲ್ಲ. ರಾಜ್ಯದ ಬೇರೆ ಬೇರೆಡೆಯಲ್ಲೂ ಬೀಸಿತ್ತು...."

"ಹ್ಞಾಂ...ಈ ರೀತಿಯಾಗಿ ವಿದ್ಯಾರ್ಥಿಗಳನ್ನು ಅಶಾಂತಿ-ಹಿಂಸೆಗಳಿಗೆ ಪ್ರೇರೇಪಿಸುವುದು ಎಲ್ಲೆಡೆಯೂ ಕಂಡು ಬರುತ್ತದೆ."

'ನೋಡಿ, ಅಂದೊಬ್ಬ ಪ್ರಿನ್ಸಿಪಾಲರ ತಲೆಯೊಡೆದಾಗ ಹಿಂಸೆಯನ್ನು ಖಂಡಿಸಿದವರು ಈಗ ಅದನ್ನೇ ಪ್ರೋತ್ಸಾಹಿಸ ಹತ್ತಿದ್ದಾರೆಂದರೆ....'

'ಅದು ಅಂದು, ಇದು ಇಂದು....'

'ಈ ಬಗೆಯ ಚಳುವಳಿಯನ್ನು ಬೆಳೆಸುತ್ತ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳನ್ನು ಶಿಕ್ಷಣ ಪರಾಙ್ಮುಖರಾಗಿಸುತ್ತ ಹೋದರೆ, ಮುಂದೆಲ್ಲಿಗೆ ಬಂದು ಮುಟ್ಟೀತೊ....'

"ಮುಟ್ಟುವುದೆಲ್ಲಿಗೆ? ಮಹಾತ್ಮಾಗಾಂಧಿಯವರು ದೇಶಕ್ಕೆ ಕರೆ ನೀಡಿದರು, ವಿದ್ಯಾರ್ಥಿಪಾಲಕರು ವಿದೇಶೀ ಶಿಕ್ಷಣಾಲಯಗಳನ್ನು ಬಹಿಷ್ಕರಿಸಲು ವಿದ್ಯಾರ್ಥಿಗಳನ್ನು ಉತ್ತೇಜಿಸಿದರು. ಅದರ ಮೂಲಕವೇ ನಮಗೆ ಸ್ವಾತಂತ್ರ್ಯ ದೊರೆಯಿತು......."

'ಏನಂತೀರಾ? ನಾಲ್ಕುದಿನ ಮಕ್ಕಳು ಶಾಲೆ-ಕಾಲೇಜುಗಳಿಗೆ ಹೋಗದೆ ಇದ್ದ ಮಾತ್ರಕ್ಕೆ ಸ್ವಾತಂತ್ರ್ಯ ದೊರೆಯಿತೆ?"

"ನೋಡು, ಮಹಾತ್ಮಾ ಗಾಂಧಿ ತೊಡಗಿದ ಒಂದೊಂದು ಚಳುವಳಿಯೂ ಅದಕ್ಕೆ ನೀರೆರೆಯಿತು...."

"ಅದು ಸರೀನ್ನಿ...."

'ಹಾಗೆ, ಈ ರಾಜ್ಯಕೀಯ ನೇತಾರರು ರಾಜ್ಯಕೀಯ ಕಾರಣಗಳಿಗಾಗಿ ಸರಕಾರವನ್ನು ಗೋಳು ಹೊಯ್ಸಲು ವಿದ್ಯಾರ್ಥಿಗಳನ್ನು ಹಿಂದಿನಿಂದಲೂ ಉತ್ತೇಜಿಸುತ್ತಲೇ ಬಂದಿದ್ದಾರೆ. ಈಗ ಅದರ ಮತ್ತೊಂದು ಅವತಾರ."

'ಹ್ಞಾಂ, ಅಂದು ಬ್ರಿಟಿಷರು ಪರಕೀಯರು; ಇಂದು ಆಳುವ ಪಕ್ಷದವರು ಪರಕೀಯರು."

"ಹಾಗೇ ಅನ್ನಬೇಕು ನೋಡು...."

"ಅಲ್ರಿ ಈಗೀಗ, ಈ ವಿದ್ಯಾರ್ಥಿಗಳ ಹಿಂಸೆ ವಿಪರೀತವಾಗುತ್ತ ಬರುತ್ತದೆ...'

"ಏನಾಯ್ತು? ಶ್ರೀಮತಿ ಗಾಂಧಿ ಅಧಿಕಾರದಲ್ಲಿ ಉಳಿಯಲು ಪ್ರಗತಿ ಲೇಬಲ್ಲು ಹಣೆಗೆ ಹಚ್ಚುತ್ತಾರೆ. ಹಿಂಸಾಪ್ರಿಯರು ವಿದ್ಯಾರ್ಥಿ ಲೇಬಲ್ ಹಚ್ಚಿಕೊಳ್ಳುತ್ತಾರೆ....'

"ಅದ್ರೂ ನೋಡಿ, ಇಂದು ಜಗತ್ತು ಹಿಂಸಾಪ್ರಿಯವಾಗುತ್ತಲೇ ಬರುತ್ತಿದೆ ಎನಿಸುತ್ತದೆ....'

'ಹ್ಞಾಂ, ಒಂದು ರೀತಿಯಿಂದ ಹಾಗೇ ಅನ್ನಬೇಕು. ಗೂಂಡಾಗಿರಿ—ಹಿಂಸಾಕಾಂಡ—ಲಂಕಾದಹನ...."

"ಹಿಂಸಾಚಾರವೇ ಈ ಕಾಲದ ಪರಮ ವೈಶಿಷ್ಟ್ಯ."

"ಆಳುವವರೂ ಅಷ್ಟೇ ಅನ್ನಿ. ನೇರ ಮಾತಿಗೆ ಬಗ್ಗದವರು ಒಂದು ಕಲ್ಲೆಸೆದ ಮಾತ್ರಕ್ಕೆ ನ್ಯಾಯದ ದಾರಿ ಹಿಡಿಯುತ್ತಾರೆ."

'ಅದೇ ನೋಡಿ, ಸಾಧಿಸಬೇಕಾದ ಸಾಧನೆಗಾಗಿ ಬಲಿಕೊಡುವ ಹುಚ್ಚು... ರಟ್ಟೆಯ ಬಲಕ್ಕೆ ಅಗ್ರಸ್ಥಾನ."

'ಅಲ್ಲ, ಹತ್ತಾರು ಗುಡಿಸಲುಗಳಿಗೆ ಬೆಂಕಿ ಹಚ್ಚಿ ಸಾಮೂಹಿಕ ನರಮೇಧ ನಡೆಸಿ ತಮಾಷೆ ನೋಡುವವರೂ ದ್ದಾರೆಂದ ಮೇಲೆ....'

"ನೋಡಿ, ಇದೀಗ ಆಧುನಿಕ ಕಾಲದಲ್ಲಿ ಹರಡಿದ ಹೊಸ ಸಾಂಕ್ರಾಮಿಕ ರೋಗ. ಇದಕ್ಕೆ ಔಷಧಿಯನ್ನೂ ಕಂಡುಹಿಡಿದಿಲ್ಲ."

"ಇದ್ದವರು ಇಲ್ಲದವರನ್ನು ಗೋಳು ಹೊಯ್ಸಿಕೊಳ್ಳಬಹುದು. ಬಂಗಾಳದಲ್ಲಿ ನಕ್ಸಲೀಯರು ಹತ್ತಾರು ಜನರ ತಲೆಯನ್ನು ನಡು ಬೀದಿಯಲ್ಲಿ ಹಾಡುಹಗಲೇ ಕಡಿಯುತ್ತಾರೆ. ವಿಯಟ್ನಾಮದಲ್ಲಿ ಅಮೆರಿಕನ್ನರು ದಿನದಿನವೂ ನೂರಾರು ಜನರ ಬಲಿ ತೆಗೆದುಕೊಳ್ಳುತ್ತಾರೆ. ದೊರೆ ಹುಸೇನರು ಕೆಲವೇ ದಿನಗಳಲ್ಲಿ ಸಾವಿರಾರು ನರಹತ್ಯೆಯನ್ನು ಕಂಡರು.'

'ಅಲ್ಲ, ಅಮೆರಿಕೆಯಲ್ಲಿ ನೀಗ್ರೋಗಳ ಅವಾಂತರ ಹೆಚ್ಚಾಗಿದೆ ನೋಡಿ. ಇತ್ತ ನಕ್ಸಲೀಯರ ಹಾವಳಿ ಹೆಚ್ಚು. ಸಾರ್ವಜನಿಕ ಎಡೆಗಳಲ್ಲಿ ಬಾಂಬು ಇಡುವುದು ಸಾಮಾನ್ಯ ಚಟ. ಕ್ಯಾಥೊಲಿಕ್—ಪ್ರೊಟೆಸ್ಟೆಂಟರ ಹೊಡೆದಾಟ ಮತ್ತೆ ಕೆಲವೆಡೆ ಆರಂಭವಾಗಿದೆ. ವಿದ್ಯಾರ್ಥಿಗಳ ಅಶಾಂತಿ ಒಂದು ದೇಶಕ್ಕೆ ಮಾತ್ರ ಸೀಮಿತವಾಗಿಲ್ಲ....ಹೀಗೆ....'

"ಅಲ್ಲವೆ, ಇಂದು ವಿದ್ಯಾರ್ಥಿಗಳ ಮನಸ್ಸು ಪಾಠಗಳಿಗಿಂತ ಹೆಚ್ಚಾಗಿ ಬೀದಿಯತ್ತ ಓಡುತ್ತದೆ....'

"ಇದ್ರಲ್ಲಿ ವಿಶೇಷವೇನ? ಶಿಸ್ತು—ಅಹಿಂಸೆ—ಸತ್ಯಗಳಿಗಿಂತ ಅಶಿಸ್ತು—ಹಿಂಸೆ—ಅಸತ್ಯಗಳಿಗೆ ಆಕರ್ಷಣೆ ಹೆಚ್ಚು ತಾನೆ?"

"ಹ್ಞಾಂ... ಈ ಆಕರ್ಷಣೆಯು ದೇಶದ ಅಪಕರ್ಷಕ್ಕೆ ಕಾರಣವಾಗದಿದ್ದರೆ ಸಾಕು....'

"ಅಲ್ಲ, ಹಿಂಸಾವಾದಿಗಳು ನಾಳೆ ದೇಶ ಆಳುವವರು....'

"ಆಗ ಸಧಾರಿಸ್ತಾರೆ...'

"ಏನು ಸಧಾರಿಸ್ತಾರೋ?'

'ಅಲ್ವೆ, ಈಗ್ಲೇ ನಿರಾಶೆಯಾದರೆ ಹೇಗೆ? ತಾಳಬೇಕು, ತಾಳಿಕೊಳ್ಳಬೇಕು...."

"ಏನೋ, ತಾಳುವಿಕೆಗೊಂದು ಮಿತಿಯಿಲ್ಲವೇನ?'

" ತಾಳುವಿಕೆಗಿಂತನ್ಯ ತಪವಿಲ್ಲವೆಂದು ದಾಸರು ಹಾಡಿಲ್ಲವೆ?"

"ಪ್ರಾಯಃ ಇಂದಿನ ಈ ವಾತಾವರಣವನ್ನು ಊಹಿಸಿಯೇ ಆ ಪಲ್ಲವಿ ಹಾಡಿರಬೇಕು..."

"ಅದು ಹೇಗೇ ಇರಲಿ; ಹಾಡಿದ್ದಂತೂ ನಿಜ ತಾನೆ?"

'ಹ್ಞಾಂ....'

'ಏನು, ಭಾರೀ?...'

"ಏನೂ ಇಲ್ಲ ಬಿಡಿ....'

"ಹೌದೇ, ಹಾಗಾ ಇದೆಯೇ...."

"ಹೇಗೆ?'

"ಮತ್ತೆ....ಹೀಗೆ....'

—ಗೋಪಾ

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

I. A. No. V in O. S. 307/68

ನಾರಾಯಣ ಭಂಡಾರಿ —ಅರ್ಜಿದಾರ,

Vs.

ಕಮಲ ನಾರಾ —ಎದ್ರಿರು,

1. ಕಮಲ. W/O. ಸಂಜೀವ ರೈ. 2. ಲಲಿತ. 3. ರಘುನಾಥ ರೈ. 4. ವಿಜಯ. 5. ರತ್ನ. 6. ಸದಾಶಿವ. ಮೈನರರು, ಗಾರ್ಡಿಯನ್ ತಾಯಿ ಕಮಲ, ಎಲ್ಲರೂ ಪುತ್ತೂರು ತಾಲ್ಲೂಕು ಪಳನೋಗ್ರು ಗ್ರಾಮದ ನಿವಾಸಿಗಳು.

ಇವರಿಗೆ—

ಮೇಲಿನ ದಾವೆಯ ಅರ್ಜಿಯಲ್ಲಿ ನಿಮ್ಮನ್ನು ಪಕ್ಷಿಯಲ್ಲಿ ಸೇರಿಸ ಬೇಕೆಂತ ಮಾಡಿದ ಸದ್ರಿ ಅರ್ಜಿಯು ನಿಮ್ಮ ಹಾಜರಾತಿ ಬಗ್ಗೆ ತಾ. 10-10-70ಕ್ಕೆ ಇಟ್ಟಿದೆ. ಸದ್ರಿ ದಿವಸ ನೀವು ಸ್ವತಃ ವ, ವಕೀಲರ ದ್ವಾರಾ ಹಾಜರಾಗಿ ಉದಾಹರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿವಾಯ ಮಾಡಿ ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಕೋರ್ಟು ಹುಕುಂ ಪ್ರಕಾರ

Sd/- K. Rama Bhat
Advocate for Petitioner.

ಪುತ್ತೂರು, 28-9-70.

ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಆಗಾಗ್ಗೆ ಹೊಸ ಹೊಸ ಸ್ಟೋಕಿನಿಂದ
ಕೊಲಿಟಿಯಲ್ಲಿ, ಸ್ಟಾಯಿಲಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂತಾ ಕರೆಟ ತೂಕದಲ್ಲಿ
ಬೇಕಾದವರು ಮುಂದಾಗಿ ಬಂದು ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ. ೧೦.

ಕೇರಳಿಗರು

ಹಾಲಿಗೆ ಹುಳಿ ಹಿಂಡಿದರು

ಕೇರಳದಲ್ಲಿ ಪ್ರಧಾನಿ ಪಕ್ಷಕ್ಕೆ ವಿಜಯೋತ್ಸವ. ಅವರೊಡನೆ ಚುನಾವಣಾ ಹೊಂದಾಣಿಕೆ ಮಾಡಿಕೊಂಡಿದ್ದ ಶ್ರೀ ಅಚ್ಯುತ ಮೆನನ್ನರ ಬಲ ಕಮ್ಯುನಿಸ್ಟರೂ ಶ್ರೀ ಮಹಮ್ಮದ ಕೋಯಾ ಅವರ ಮುಸ್ಲಿಂ ಲೀಗಿನವರೂ ತಮ್ಮ ಸ್ಥಾನಗಳನು ಕಳೆದುಕೊಂಡರು. ಮಾರ್ಕ್ಸಿಸ್ಟರು ಭಾರಿ ಹೊಡೆತ ತಿಂದರು. ನಿಜಲಿಂಗಪ್ಪನವರ ಸಿಂಡಿಕೇಟು ಠೇವಣಿ ಕಳೆದುಕೊಳ್ಳುವುದರಲ್ಲಿ ಪ್ರಸಿದ್ಧಿಯನು ಪಡೆಯಿತು. ಸಿ. ಪಿ. ಐ; ನಾಯಕತ್ವದ ಕಿರುಕಂಗಳೊಡನೆ ಇಂಡಿಕೇಟು ಕೈಮಿಲಾಯಿಸಿದ್ದನ್ನು ಖಂಡಿಸಿದವರು ಅಂದೂ ಇದ್ದಾರೆ; ಇಂದೂ ಇದ್ದಾರೆ. ಆದರೆ ಶ್ರೀಮತಿ ಗಾಂಧಿ ಹೇಳಿದರು. —"ನಾವು ಅವರ ತತ್ವಗಳನ್ನು ಒಪ್ಪಿಲ್ಲ. ಅವರೇ ನಮ್ಮದನ್ನು ಒಪ್ಪಿದ್ದಾರೆ. ಕೇರಳದ ಮುಸ್ಲಿಂಲೀಗು ಜಾತೀಯ ಪಕ್ಷವಾಗಿ ಉಳಿದಿಲ್ಲ. ಅದು ಉತ್ತರದ ಮುಸ್ಲಿಂ ಲೀಗಿನಂತಲ್ಲ..." ಇತ್ಯಾದಿ ಆದರೆ, ಅವರೊಡನೆ ಹೊಂದಾಣಿಕೆ ಮಾಡಿಕೊಂಡವರಿಗೆ ಅವರ ಈ ಮಾತು ಸಹಿಯಾಯಿತು. ಇದು "ಏಕಾಧಿಕಾರದ ಉದ್ಗಾರ"ವೆಂದರು ಅವರು. ಇಲ್ಲಿ ಶ್ರೀಮತಿ ಗಾಂಧಿಯವರ ಮಾತು ಎಷ್ಟು ಮಟ್ಟಿಗೆ ಸತ್ಯಕ್ಕೆ ನಿಕಟವೆಂಬುದು ಮನವರಿಕೆಯಾಗುತ್ತದೆ.

ಇಂಡಿಕೇಟು [illegible] ಸ್ಥಾನಗಳನ್ನು ಗೆದ್ದುಕೊಂಡದ್ದು ಅವರಿಗೇ ಆಶ್ಚರ್ಯವನ್ನು ತಂದಿದೆ. ವಿಧಾನಸಭಾ ಸದಸ್ಯರ ಸಂಖ್ಯೆಯ ಮುಂದೆ ಇದು ಅಗಣ್ಯವಾದರೂ ಉಳಿದ ರಾಜ್ಯಕೀಯ ಪಕ್ಷಗಳಿಗಿಂತ ಇದು ಅಧಿಕ ಸ್ಥಾನಗಳಿಸಿಕೊಂಡಿದೆ. ಆದುದರಿಂದ ಸರಕಾರ ರಚಿಸಲು ಮೊದಲಿಗೆ ಅದಕ್ಕೆ ಹೋಗಲೇ ಬೇಕು ಆದರೆ, ಇದು ಪ್ರಧಾನಿಯನ್ನು ಪೇಚಿಗೆ ತಳ್ಳಿತು. ಏಕೆಂದರೆ, ಚುನಾವಣೆಯಲ್ಲಿ ಇಂತಹ ಅದ್ಭುತ ವಿಜಯಗಳಿಸುತ್ತೇವೆಂಬುದನ್ನು ಅವರು ಕನಸಿನಲ್ಲಿಯೂ ನೆನೆಸಿರಲಿಲ್ಲ. ಅಭ್ಯರ್ಥಿಗಳನ್ನು ಆರಿಸುವಾಗಲೇ ಅವರು ಎಚ್ಚರಿಕೆ ವಹಿಸಿದ್ದರು. ಚುನಾವಣಾನಂತರ ತನ್ನ ಪಕ್ಷವು ಸರಕಾರ ರಚಿಸುವುದಿಲ್ಲವೆಂದೂ ಸಂಯುಕ್ತ ಸರಕಾರದಲ್ಲಿ ಪಾಲುಗೊಳ್ಳುವುದಿಲ್ಲವೆಂದೂ ಅವರು ಹುದ್ದರಿಗಳಿಗೆ ತಿಳಿಸಿದ್ದರು. ಆದುದರಿಂದ ಕೆಲವು ಹಳೆಯ ಹುಲಿಗಳು ಚುನಾವಣೆಯಿಂದ ದೂರನಿಂತರು; ಯುವಕರೇ ಹೆಚ್ಚಾಗಿ ಅಭ್ಯರ್ಥಿಗಳಾದರು. ಈ ಬಾರಿ ಮೊಟ್ಟಮೊದಲಿಗೆ ಚುನಾವಣಾ ಕಣಕ್ಕಿಳಿದ ಪ್ರಗತಿಬ್ರಾಂದಿನ ಈ ಪಕ್ಷವನ್ನು ಜನ ಬೆಂಬಲಿಸಿತು.

ಆದರೆ, ಈಗೇನು ಮಾಡಬೇಕು? ಇಂಡಿಕೇಟಿಗರು ಬಿಸಿತುಪ್ಪ ಬಾಯಿಗಿರಿಸಿಕೊಂಡಿದ್ದಾರೆ. ಇದನ್ನು ಅರಿಯುವ ಹೊತ್ತಿನಲ್ಲಿ ಕೇರಳ ಇಂಡಿಕೇಟಿಗರು ಎರಡು ಬಗೆಯಾಗಿ ಮಾತಾಡುತ್ತಾರೆ. ಅಧಿಕಾರದಾಹ ದೂರವಿಟ್ಟು ಚುನಾವಣೆಗಿಳಿದವರು ಈಗ ಅಧಿಕಾರದತ್ತ ಒಲಿಯುತ್ತಿದ್ದಾರೆ. ಅತ್ಯಂತ ದೊಡ್ಡ ರಾಜ್ಯಕೀಯ ಪಕ್ಷವಾಗಿದ್ದು ಸರಕಾರ ರಚಿಸುವ ಹೊಣೆಗಾರಿಕೆಯಿಂದ ಹಿಂಜರಿಯುವುದು ಧರ್ಮವಲ್ಲವೆಂದು ಆಶೆಗೊಂಡ ಕೆಲವರನ್ನುತ್ತಾರೆ, ಇನ್ನು ಕೆಲವರು ಮೊದಲಿನ ನೀತಿಗೇ ಕಟ್ಟು ಬಿದ್ದಿದ್ದಾರೆ.

ಶ್ರೀಮತಿ ಗಾಂಧಿಯವರು ಈ ಪರಿಸ್ಥಿತಿಯಿಂದ ನೊಂದಿದ್ದಾರೆ. ಆಕೆ ಸಿ. ಪಿ. ಐ. ಯೊಡನೆ ಕೂಡಿಕೊಳ್ಳಲು ಒಂದು ರೀತಿಯಿಂದ ಸಿದ್ಧರೇ. ಏಕೆಂದರೆ, ಅವರಿಬ್ಬರ ನೀತಿಯಲ್ಲಿ ಭೇದವಿಲ್ಲವೆನ್ನಬಹುದು. ಸೋವಿಯತ್ ರಷ್ಯಾದ ಆದೇಶದಂತೆ ಅಚ್ಯುತಮೆನನ್ ನಡೆಯುತ್ತಾರೆ; ಅಲ್ಲಿಂದಲೇ ಶ್ರೀಮತಿ ಗಾಂಧಿ ಸ್ಫೂರ್ತಿ ಪಡೆಯುತ್ತಾರೆ; ಅತ್ತಲೇ ಸರಿಯುತ್ತಾರೆ; ಆದರೆ, ಕೇರಳದ ಮುಸ್ಲಿಂಲೀಗಿನೊಂದಿಗೆ ಕೂಡಿಕೊಳ್ಳಲು ಅವರು ತುಸು ಹೆದರುತ್ತಾರೆ. "ಅದು ಜಾತೀಯತೆಯಿಂದ ಕೂಡಿಲ್ಲ; ಉಳಿದೆಡೆಯ ಮುಸ್ಲಿಂಲೀಗಿಗಿಂತ ಭಿನ್ನವಾಗಿದೆ"ಯೆಂದು ಪ್ರಚಾರ ಮಾಡಹೊರಟರೂ ಮುಸ್ಲಿಂಲೀಗಿನ ಇತಿಹಾಸವನ್ನು ಆಕೆ ಅರಿಯದವರಲ್ಲ. ಲೋಕಕ್ಕೂ ತಿಳಿಯದ್ದಲ್ಲ. ಆದುದರಿಂದ, ಮುಸ್ಲಿಂಲೀಗೂ ಕೂಡಿಕೊಂಡಿರುವ ಸರಕಾರದಲ್ಲಿ ಶಾಮೀಲಾಗುವುದರಿಂದ ತನ್ನ ಭವಿಷ್ಯದ ಮೇಲೆ ಬರೆ ಎಳೆದಂತಾದರೆ...ಎಂಬ ಚಿಂತೆ ಆಕೆಯನ್ನು ಕಾಡುತ್ತದೆ.

ಇದು ಒಂದು ಸಮಸ್ಯೆಯಾದರೆ, ಮುಂದಿನದು ಬೇರೆಯೇ ಇದೆ. ಶ್ರೀ ಮೆನನ್ನರಾಗಲೀ ಶ್ರೀ ಮಹಮ್ಮದ ಕೋಯಾರಾಗಲೀ ಇದಿರು ಹಾಕಿಕೊಳ್ಳುವುದರಿಂದ ಪ್ರಧಾನಿಗೆ ಸಿಂಹಾಸನ ತಪ್ಪಿ ಹೋಗುವ ಭಯ. ಅತ್ತ ಶ್ರೀ ಕರುಣಾನಿಧಿಯವರೂ ಪ್ರಧಾನಿಗೆ ನೀಡುತ್ತಿರುವ ಬೆಂಬಲವನ್ನು ಹಿಂತೆಗೆದುಕೊಳ್ಳಬೇಕಾದೀತೆಂದು ಹೇಳಿದ್ದಾರೆ. ಎಲ್ಲರನ್ನು ಎಲ್ಲಕಾಲದಲ್ಲೂ ವಂಚಿಸುವುದು ಅಸಾಧ್ಯವೆಂದು ಆಕೆಗೂ ಗೊತ್ತು. ಕೇರಳದ ಶಾಸಕ ಪಕ್ಷವು ಸರಕಾರದಲ್ಲಿ ಪಾಲುಗೊಂಡರೆ ಪ್ರತಿಷ್ಠೆಗೆ ಕುಂದು, ವಚನ ಭಂಗ. ಪಾಲುಗೊಳ್ಳದೆ ಹೋದರೆ, ಅದರಿಂದಲೂ ನೆಮ್ಮದಿಯಿಲ್ಲ. ಆದಕ್ಕೆಂದೇ ತನ್ನ ಆತ್ಮಸಾಕ್ಷಿಯನ್ನು ಬದಿಗಿಟ್ಟು ಕೆ. ಪಿ. ಸಿ. ಸಿ. ಮತ್ತು ಕೇರಳದ ಶಾಸಕ ಪಕ್ಷದ ತೀರ್ಮಾನ ತಿಳಿದು ಅಜ್ಞೆನೀಡುವುದಾಗಿ ಅವರು ಹೇಳುತ್ತಾರೆ.

ಇಂಡಿಕೇಟು ಸರಕಾರದಲ್ಲಿ ಸೇರುವುದಾದರೆ, ಯಾರು ಸರಕಾರ ರಚಿಸಬೇಕು? ಅಧಿಕ ಸಂಖ್ಯಾಬಲವಿರುವ ಇಂಡಿಕೇಟಿಗೆ ಆ ಹೊಣೆಗಾರಿಕೆಯನ್ನು ಶ್ರೀ ಅಚ್ಯುತ ಮೆನನ್ನರು ಬಿಟ್ಟುಕೊಡಲು ಸಿದ್ಧರಿದ್ದಾರೆಯೆ? ಆದುದರಿಂದ, ಪ್ರಧಾನಿಗಾಂಧಿಯವರು ಕೇರಳದಲ್ಲಿ ಮತ್ತೊಂದು ನಾಟಕ ಮಾಡುವ ತಯಾರಿ ನಡೆಸಿದ್ದಾರೆ. "ಶ್ರೀ ಮೆನನ್ನರು ತಮಗೆ ಬೇಕಾದವರನ್ನು ಕೂಡಿಕೊಂಡು ಸರಕಾರ ರಚಿಸಲಿ. ನಾವು ಅವರಿಗೆ ಬೆಂಬಲ ಕೊಡುತ್ತೇವೆ.' [illegible] ಅವರು ಶ್ರೀಮತಿ ಗಾಂಧಿಗೆ ಬೆಂಬಲ ನೀಡಿ, ವರೆಗೆ ಕೇರಳದಲ್ಲಿ ಅವರಿಗೆ ಇತರ ಬೆಂಬಲ. ಉತ್ತರ ಪ್ರದೇಶದಲ್ಲಿ ನಡೆದದ್ದು ಇದೇ ತಾನೆ? ಶ್ರೀ ಚರಣಸಿಂಗರ ಬಿ. ಕೆ. ಡಿ. ಯು ಪಾರ್ಲಿಮೆಂಟಿನಲ್ಲಿ ತನಗೆ ವಿರೋಧವಾಗಿ ಮತ ನೀಡಿದ ಮರುಗಳಿಗೆಯಂದಲೇ ಅವರು ಶ್ರೀ ಸಿಂಗರನ್ನು ಉರುಳಿಸುವ ಸಂಚು ಹೂಡಿದರು. ಇದೀಗ ಸಿಂಗ್—ಗಾಂಧಿ ಮಾತುಕತೆಯು ಕೊನೆಗೂ ಮುರಿದು ಬಿದ್ದುದರಿಂದ ಶ್ರೀ ಸಿಂಗರು ಕೆಳಗಿಳಿಯುವುದು ನಿಶ್ಚಿತ. ಇಂತಹುದೇ ಇನ್ನೊಂದು ದುರಂತ ನಾಟಕದ ನಾಯಕರನ್ನಾಗಿ ಶ್ರೀ ಮೆನನ್ನರನ್ನು ಆರಿಸಿದ್ದಾರೆ, ಶ್ರೀಮತಿ ಗಾಂಧಿ.

ಇನ್ನೀಗ, ಶ್ರೀ ಮೆನನ್ನರು ತನ್ನ ಧೀರತೆಯನ್ನು ತೋರಿಸಬೇಕಾಗಿದೆ. ಶ್ರೀ ಸಿಂಗರಂತೆಯೇ ಶ್ರೀಮತಿ ಗಾಂಧಿಯ ಸರ್ವಾಧಿಕಾರದ ಮುಂದೆ ತಲೆಬಾಗದೆ ತಲೆಯೆತ್ತಿ ನಿಲ್ಲುತ್ತಾರೆಯೆ? ತಾನೂ ಸರಕಾರ ರಚಿಸದೆ ಮತ್ತೊಂದು ಸಾರ್ವತ್ರಿಕ ಚುನಾವಣೆಗೆ ಈಗಲೇ ಅವಕಾಶ ಮಾಡಿಕೊಡುತ್ತಾರೆಯೆ? ಅಥವಾ ಇಂಡಿಕೇಟಿನ ತಲೆಯೇ ತನ್ನ ಮುಂದೆ ಬಾಗುವಂತೆ ಮಾಡುತ್ತಾರೆಯೆ? ಅದು ಏನೂ ಆಗಲಿ, ಸಿ. ಪಿ. ಐ. ಮತ್ತು ಇಂಡಿಕೇಟುಗಳ ಹಾಲಿನಂತಹ ಸಂಬಂಧಕ್ಕೆ ಇಂಡಿಕೇಟಿನ ಪ್ರಚಂಡ ವಿಜಯ ಹುಳಿ ಹಿಂಡಿದ್ದು ಮಾತ್ರ ನೂರಕ್ಕೆ ನೂರರಷ್ಟು ಸತ್ಯ.

ಗೋರೆಗಾಂವ್ ಕರ್ನಾಟಕ ಸಂಘ ಮುಂಬಯಿ.

ಈ ಸಂಘದ ವಾರ್ಷಿಕ ಮಹಾಸಭೆಯು ಇತ್ತೀಚಿಗೆ ಸಂಘದ [illegible] ಜರಗಿ ಈ ಕೆಳಗಿನ ಮಹನೀಯರು ನವ ವರ್ಷದ ಕಾರ್ಯಕಾರಿ ಸಮಿತಿಗೆ ಚುನಾಯಿಸಲ್ಪಟ್ಟರು.

ಸರ್ವಶ್ರೀ ಎಸ್. ಜೆ. ಶೆಟ್ಟಿ (ಅಧ್ಯಕ್ಷ) ಪಿ. ಎಚ್. ನಾಯ್ಕ (ಉಪಾಧ್ಯಕ್ಷ) ಎಂ. ಎಸ್. ಕಾರಂತ (ಗೌ. ಪ್ರ. ಕಾರ್ಯದರ್ಶಿ) ಎಮ್. ವಿ. ಭಟ್ ಮತ್ತು ಎಸ್. ಎಮ್. ಶೆಟ್ಟಿ (ಗೌ. ಜೊತೆಕಾರ್ಯದರ್ಶಿಗಳು) ಬಿ. ಟಿ. ಶೆಟ್ಟಿ ಮತ್ತು ಪಿ. ಕೆ. ಕೋಟಿಯನ್ (ಗೌ. ಜೊತೆ ಕೋಶಾಧಿಕಾರಿ) ಎಮ್. ಎಸ್. ಶೆಣೈ (ಗೌ. ಲೈಬ್ರೇರಿಯನ್) ಡಾ| ಪಿ. ಜಿ. ಆಳ್ವ, ಕೆ. ಪಿ. ಬಂಗೇರ, ಕೆ. ಬಿ. ಕೋಟಿಯನ್, ಬಿ. ಎಸ್. ಶೆಟ್ಟಿ, ನಾರಾಯಣ ಜಿ. ಅಮೀನ್, ಎ. ಎಸ್. ಸಾಮಗ, ಮತ್ತು ಆರ್. ಎಸ್. ದೇವಾಡಿಗ (ಸದಸ್ಯರು)

ಸರ್ವಶ್ರೀ ಎಮ್. ಎಸ್. ಶೆಟ್ಟಿ, ಕೆ. ವಿ. ಶೆಟ್ಟಿ, ಬಿ. ಎಸ್. ಕೃಷ್ಣಮೂರ್ತಿ ಮತ್ತು ಎಸ್. ನಾಗೇಶ ರಾವ್‌ರವರು ಸಲಹೆಗಾರ ಮಂಡಳಿಗೆ ನೇಮಿಸಲ್ಪಟ್ಟರು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ಸಂಖ್ಯೆ 155/1970.

B. ಗೋಪಾಲ ಶೆಟ್ಟಿ —ವಾದಿ

ಮತ್ತು

B.M. ಅಸನಬ್ ಬ್ಯಾರಿ — ಪ್ರತಿವಾದಿರು ಇವರೊಳಗೆ.

1ನೇ ಪ್ರತಿವಾದಿ. B. M. ಅಸನಬ್ 2ನೇ ಪ್ರತಿವಾದಿ, B. M. Saliah-B. ವಾಸಿಂ. ಸಾಹೇಬರ ಮಕ್ಕಳು

ಮಂಗಳೂರು ತಾಲೂಕಿನ ಪಡ್ಡೆಗೆ ಬಜಾರಿನಲ್ಲಿರುವವರು.

ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿಯು ನಿಮ್ಮ ಮೇಲೆ ಪ್ಲೈಂಟ್ ನಿವೃತ್ತಿ ಕೇಳಿ ಮಾಡಿದ ದಾವೆಯು ತಾರೀಖು 22-10-70ಕ್ಕೆ ನಿಮ್ಮ ಹಾಜರು ಬಗ್ಗೆ ಇಟ್ಟಿದೆ. ನಿಮ್ಮ ಆಕ್ಷೇಪ ಇದ್ದರೆ ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಬೇಕೆಂದು ಈ ಮೂಲಕ ತಿಳಿಸಲಾಗಿದೆ.

Y. C. S. Hegde
Advocate for Plaintiff

ಉಡುಪಿ, ತಾ. 26-9-70.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
124 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¼% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಸಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

P. & S.C. No. 5 1970.

1. ಬೇಬಿಯಾನೆ ಲೀಲಾ
2. ಪುಷ್ಪಾವತಿ
3. ಭಾಸ್ಕರ
} [illegible] ಮಕ್ಕಳು

ಉಡುಪಿ ತಾಲೂಕು 76ನೇ [illegible] ಗ್ರಾಮದ [illegible] ವಾಸವಾಗಿರುವವರು.

— ಅರ್ಜಿದಾರರು.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ:—

ಅರ್ಜಿದಾರರು ತಮ್ಮ ತಾಯಿ [illegible] ಮೃತ [illegible] ಮೇಲ್ಕಂಡ ಅರ್ಜಿಯ 'ಎ' ಶೆಡ್ಯೂಲ್ [illegible] ವಿವರಿಸಿದ ಸಾಲಗಳನ್ನು ವಸೂಲು ಮಾಡುವ ಬಗ್ಗೆ ಸಕ್ಸೆಶನ್ ಸರ್ಟಿಫಿಕೇಟು ಕೇಳಿ ಮಾಡಿದ ಮೇಲ್ಕಂಡ ಅರ್ಜಿಯು ತಾರೀಖು 19-10-70ಕ್ಕೆ ಇಟ್ಟಿದೆ. ಆಕ್ಷೇಪ ಉಳ್ಳವರು ಆ ದಿವಸ ಬೆಳಿಗ್ಗೆ 10 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ [illegible] ತಪ್ಪಿದ್ರೆ ನಿಂಮ ಗೈರ್ ಹಾಜರಿಯಲ್ಲಿ ಸದ್ರಿ ಅರ್ಜಿ ತೀರ್ಮಾನಿಸಲ್ಪಡುವುದು.

By order of Court

Sd/- V. G. Kedlaya
M. A., LL. B.
ಅರ್ಜಿದಾರರ ಕಡೆ ಅಡ್ವೊಕೇಟು.

ಉಡುಪಿ, ತಾ. 21-9-70

ಉಡುಪರ

"ಇತಿಹಾಸದ ಯಥಾರ್ಥತೆ"

—ಶ್ರೀ ಸುಬ್ರಹ್ಮಣ್ಯ ಕೆದ್ಲಾಯ, ಕುಂಜಿಬೆಟ್ಟು.

ಇತ್ತೀಚೆಗೆ ಶ್ರೀ ಗುರು ಸೀತಾರಾಮಾಚಾರ್ಯ ನಾರಾಯಣಾಚಾರ್ಯ ಉಡುಪ ಎಂಬವರು ಬರೆದ "ಇತಿಹಾಸದ ಯಥಾರ್ಥತೆ" ಎಂಬ ಪುಸ್ತಕವು ಬೆಳಕನ್ನು ಕಂಡಿತು. ಶ್ರೀಯುತರು ತಮ್ಮ ಪುಸ್ತಕದ ನೊಡಲ ಮಾತನ್ನು ಬರೆಯುತ್ತಾ "ಒಳ್ಳೆಯ ವಿಮರ್ಶಕರಿಗೆ, ಸಂಶೋಧಕರಿಗೆ ಶ್ರೇಷ್ಠ ಗ್ರಂಥ ರಚನೆಗೆ ಮಾರ್ಗದರ್ಶಕವಾಗಲಿ ಎಂಬ ಆಶೆಯೊಂದಿಗೆ ಈ ಪುಸ್ತಕ ಪ್ರಕಟನೆಯ ಸಾಹಸಕ್ಕೆ ಮನಹರಿಸಿದೆವು. ಓದುಗರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದಲ್ಲಿ ತಿದ್ದಿಕೊಳ್ಳಲು ಅನುಕೂಲವಾಗುತ್ತದೆ' ಎಂದಿದ್ದಾರೆ. ಆ ಪುಸ್ತಕವು ವಿಮರ್ಶಕರಿಗೆ ಮಾರ್ಗದರ್ಶಕವಾಗುತ್ತದೆ ಎಂಬ ಮಾತು ಸತ್ಯವೆಂದು ಅರಿವಾಗುತ್ತದೆ.

ಈ ಪುಸ್ತಕದಲ್ಲಿ ಡಾ| ಗುರುರಾಜ ಭಟ್ಟರು, ಡಾ| ಸಾಲೆತ್ತೂರರು ಹಾಗೂ ಡಾ| ಅಚ್ಯುತ ಶರ್ಮರು ತುಳುನಾಡಿನ ಸ್ಥಾನಿಕರ, ಶಿವಳ್ಳಿಯವರ ಬಗ್ಗೆ ಬರೆದ ವಿಚಾರಗಳು ಎಷ್ಟು ಅಸತ್ಯದಿಂದ ಕೂಡಿದೆ ಎಂಬ ವಿಚಾರವನ್ನು ಸಾಧಾರಪೂರ್ವಕವಾಗಿಯೂ, ಚರ್ಚೆಯಿಂದಲೂ ಪ್ರತಿಪಾದಿಸಿದ್ದಾರೆ.

ಸ್ಥಾನಿಕರು ಶೃಂಗೇರಿ ಮಠದ ಶಿಷ್ಯರಾಗಿದ್ದಾರೆಂಬ ಅಭಿಪ್ರಾಯವನ್ನು ಶ್ರೀ ಶ್ರೀನಿವಾಸರಾಯರ ಮಾತಿನ ಆಧಾರದಿಂದಲೇ ವಿರೋಧಿಸುತ್ತಾರೆ. ಶ್ರೀನಿವಾಸರಾಯರು ಹೇಳುವ 1, 2, 3, ನೇ ಉತಾರೆಗಳು ಊಹಾ ಪ್ರಪಂಚವೆಂದೂ, ನಾಲ್ಕನೆಯ ಉತಾರೆಯ ಅರ್ಥವೇ ಆಗುವುದಿಲ್ಲವೆಂದೂ ಹೇಳಿದ್ದಾರೆ. "ದ್ರಾವಿಡ ಬ್ರಾಹ್ಮಣಾಂತರ್ಗತ ಬ್ರಾಹ್ಮಣರೆಂದೇ ತೀರ್ಮಾನಿಸಿ ಪ್ರಸಿದ್ಧಿಸಿದ ರಾಯಸವೆಂದು 8ನೇ ಉತಾರೆಯಲ್ಲಿ ಬರೆದದ್ದನ್ನು ಹೇಗೆ ನಾವು ಒಪ್ಪಬೇಕು? ಒಟ್ಟಾರೆ ಶಿಷ್ಯರಾಗಲು ಹವಣಿಸಿ 7ನೇ ಉತಾರೆಯಲ್ಲಿ ಬರೆದಿರುವಂತೆ ಸ್ಥಾನಿಕರು ಮಾಡಿದ್ದರಿಂದ ಗುರುಮಠದವರು 6 ಮತ್ತು 7ನೇ ಉತಾರೆಯಂತೆ ನಡೆದುಕೊಂಡರು. ಇದಿಷ್ಟೇ ಸಾರಾಂಶ (7ನೇ ಉತಾರೆ: ಶಿಷ್ಯವರ್ಗದವರು ಗುರುಕಾಣಿಕೆಯನ್ನು ಹಲವು ವರ್ಷ ಸಲ್ಲಿಸದಿದ್ದುದರಿಂದ ನಿರ್ಗಂಟಿನಿಂದ ವಸೂಲು ಮಾಡಬೇಕಾಗಿ ಬಂತು. ಉತಾರೆ 6: ಆದುದರಿಂದ ತಿರುಗಿ ಶಿಷ್ಯರ ಗುರುಕಾಣಿಕೆ ಹಣದ ಪಕ್ಷದಕ್ಕೆ 63-20|19-12-1921 ಮತ್ತು 136 31-8-1922ರ ಅಪ್ಪಣೆ ಪ್ರಕಾರ ವಿಚಾರಣಾ ಸಮಿತಿಯನ್ನು ಏರ್ಪಡಿಸಿ ತಾರೀಖು 8-1-1924ರಲ್ಲಿ ರಾಯಸ ಹೊರಡಿಸಬೇಕಾಯಿತು. ಉತಾರೆ 8: ಮೊದಲಿನಿಂದಲೂ ಸ್ಥಾನಿಕರು ಶೃಂಗೇರಿ ಮಠದ ಶಿಷ್ಯರಾಗಿದ್ದರು ಎಂಬುದಕ್ಕೆ ಮಠದವರು ಸ್ಥಾನಿಕರನ್ನು ದ್ರಾವಿಡಾಂತರ್ಗತ ಬ್ರಾಹ್ಮಣರೆಂದು ತೀರ್ಮಾನಿಸಿ ಪ್ರಸಿದ್ಧಿಸಿದ ರಾಯಸವೇ ಪ್ರಬಲ ದೃಷ್ಟಾಂತ) ಅವರ ಈ ಪ್ರತಿಪಾದನೆಯಲ್ಲಿ ಈ ಲೇಖಕರ ಜಾಣ್ಮೆಯು ಅರಿವಾಗುತ್ತದಲ್ಲದೆ, ಸತ್ಯಾಂಶದಿಂದ ಕೂಡಿದೆ ಎಂಬ ವಿಷಯ ಅರಿವಾಗದೆ ಇರದು.

ಸ್ಥಾನಿಕ ಎಂಬ ಶಬ್ದವು ಅಧಿಕಾರಸ್ಥಾನಿಕ, ಜಾತಿಸ್ಥಾನಿಕ (ದೇವಕಾರಿ) ಎಂಬ ಅರ್ಥದಲ್ಲಿದೆ ಎಂದು ಹೇಳಿ ಈಗ ಶಿವಬ್ರಾಹ್ಮಣರೆಂದು ಹೇಳಿಕೊಳ್ಳುತ್ತಿರುವ ಸ್ಥಾನಿಕರೇ ಈ ದೇವಕಾರಿಗಳೇ ಆಗಿದ್ದರು ಎಂದು ವಾದಿಸಿ ಹಿಂದಿನ ಸಂಶೋಧಕರನ್ನು ಅಲ್ಲಗಳೆದಿದ್ದಾರೆ. ಡಾ| ಗುರುರಾಜ ಭಟ್ಟರ ತುಳುನಾಡು ಪುಸ್ತಕದ 157ನೇ ಪುಟದ "2,3, ಶತಮಾನಗಳಿಂದೀಚೆಗೆ ನಮ್ಮ ನಾಡಿಗೆ ಹೊರಗಿನ ಕೆಲವು ಬ್ರಾಹ್ಮಣವರ್ಗಗಳು ವಲಸೆಬಂದವು. (1) ಕೋಟೆಕರ (2) ಖರಾಡೆ (3) ಚಿತ್ಪಾವನ (4) ಗೌಡಸಾರಸ್ವತ ಬ್ರಾಹ್ಮಣರು. ಇವರು ಅಲ್ಪಸಂಖ್ಯಾತರಾದುದರಿಂದ ನಿಂದಾಸ್ಪದ ಉಲ್ಲೇಖಗಳಿಗೆ ಒಳಗಾಗಬೇಕಾಯಿತು" ಎಂಬ ಮಾತನ್ನು ಎತ್ತಿಕೊಂಡು 'ಅದರ ಕುರಿತು ಸತ್ಯಾಸತ್ಯತೆಯನ್ನು ವಿವೇಚಿ'ಸಿದ್ದಾರೆ. ಈ ವಿವೇಚನೆಯಲ್ಲಿ ಲೇಖಕರ ಅಗಾಧ ಪಾಂಡಿತ್ಯದ ಅರಿವಾಗುತ್ತದೆ. ಶಿವಳ್ಳಿಯವರು ಶೂದ್ರಸ್ತ್ರೀಯಲ್ಲಿ ಜನಿಸಿದವರೆಂದು, ಹೇಳುವ ವಾದವನ್ನು ಕಿತ್ತೆಸೆದಿದ್ದಾರೆ.

ಶಂಕರ ವಿಜಯದಲ್ಲಿ ಕಾಣಬರುವ ಅರ್ಥಸಂದಿಗ್ಧತೆ ಇರುವ ಶ್ಲೋಕದ ಅರ್ಥವನ್ನು ಊಹಿಸಿದ್ದಾರೆ ಡಾ| ಗುರುರಾಜ ಭಟ್ಟರು ಹೇಳುವ "ಕೋಟೀಶ್ವರದವರನ್ನು ಮಯೂರರಾಜನ ಕೋಪದಿಂದ ಪಾರು ಮಾಡಿದವರು ವಾದಿರಾಜರು" ಅಲ್ಲವೆಂದು ಚರ್ಚಿಸಿ ಅದು ಅಚ್ಯುತಪ್ರೇಕ್ಷಾಚಾರ್ಯರ ಪರಂಪರೆಯಲ್ಲಿದ್ದ ಪೂರ್ವಜರು ಎಂದು ತಿಳಿಸುತ್ತಾರೆ. ಅಲ್ಲಿರುವ 41, 42 43,ನೇ ಶ್ಲೋಕಗಳು ಪ್ರಕ್ಷಿಪ್ತಗಳು. ಗೂಢ ಮತಪ್ರಚಾರಕ್ಕಾಗಿ ಬರೆದು ಸೇರಿಸಿದ್ದು "ಏಕೆಂದರೆ ಆ ಮೂರು ಶ್ಲೋಕಗಳು ಇಲ್ಲದೇ 41ನೇ ಶ್ಲೋಕದ ಅನ್ವಯವಾಗುತ್ತದೆ. ಅಂದರೆ 41ನೇ ಶ್ಲೋಕದ ಪೂರ್ವಾರ್ಧದ ನಂತರ 3 ಶ್ಲೋಕಗಳು ಬೇರೆ ಛಂದಸ್ಸಿನವು ಇರುತ್ತಿದ್ದು ಪುನಃ 41ನೇ ಶ್ಲೋಕದ ಉತ್ತರಾರ್ಧವಿದೆ" ಎಂದು ಹೇಳಿ "ಅದನ್ನು ಅಕುಶಲನೊಬ್ಬ ಸೇರಿಸಿರಬೇಕೆಂದು ಧಾರಾಳವಾಗಿ ಹೇಳಬಹುದು" ಎಂದು ಸಿದ್ಧಾಂತಿಸಿದ್ದಾರೆ. ಈ ಮಾತಿನಿಂದ ಲೇಖಕರ ಪ್ರತಿಭೆ ಗ್ರಂಥ ಸಂಪಾದನ ಶಾಸ್ತ್ರದಲ್ಲೂ ಎಷ್ಟರ ಮಟ್ಟಿಗೆ ಹರಿದಿದೆ ಎಂದು ಸಹೃದಯ ಓದುಗರಿಗೆ ವೇದ್ಯವಾಗುತ್ತದೆ.

ಉಡುಪಿ ಮಠದಲ್ಲಿ ಇದೆ ಎಂದು ಹೇಳಲಾದ ವೇಣುಗೋಪಾಲ ಕೃಷ್ಣಮೂರ್ತಿಯ ಕುರಿತು ಜನರಲ್ಲಿ ಹಲವಾರು ಊಹಾಪೋಹಗಳು ನೆಲೆಸಿಹೋಗಿವೆ. ಅದು ಆ ಸ್ಥಳದಲ್ಲಿ ಮೊದಲಿದ್ದ ಮೂರ್ತಿ ಎಂದೂ ಮಧ್ವಾಚಾರ್ಯರು ಅದನ್ನು ಕಿತ್ತು ಕಡಗೋಲು ಕೃಷ್ಣನ ಮೂರ್ತಿಯನ್ನು ಪ್ರತಿಷ್ಠಿಸಿದರು ಎಂದೂ ಹೇಳುವ ಅಚ್ಯುತಶರ್ಮರ ಮಾತು ಸಂಪೂರ್ಣ ನಿರಾಧಾರವಾಗಿದೆ ಎಂದು ತಿಳಿಸಿ, ಆ ಮೂರ್ತಿಯನ್ನು ಮಧ್ವಾಚಾರ್ಯರು ಕಿತ್ತೆಸೆಯಲಿಲ್ಲವೆಂಬ ವಿಷಯವನ್ನು ತರ್ಕಮುಖೇನ ಸಿದ್ಧಪಡಿಸಿ, ಆ ಮೂರ್ತಿ ಶ್ರೀ ಕೃಷ್ಣಮಠದೊಳಗೆ ಬಂದಿರಬಹುದಾದ ವಿಧಾನವನ್ನು ಊಹಿಸಿದ್ದಾರೆ. ಶ್ರೀಕೃಷ್ಣ ಮಠವು ಮಠವಲ್ಲ ಗೃಹಸ್ಥಾಶ್ರಮಿಗಳಿಂದ ಪೂಜೆಯನ್ನು ಬಯಸುವ ದೇವಸ್ಥಾನವೆಂದು ವಾದಿಸಿ ಅದಕ್ಕೆ 1947ರಲ್ಲಿಯ ಮದ್ರಾಸ್ ಏಕ್ಟನ್ನು ಆಧಾರವಾಗಿ ಕೊಡುವ ಅಚ್ಯುತ ಶರ್ಮರ ಮಾತನ್ನು ಮೂಲಸಹಿತ ಕಿತ್ತೆಸೆಯುತ್ತಾರೆ. ಮದ್ರಾಸ್ ಆಕ್ಟಿನಲ್ಲಿ ಹರಿಜನರನ್ನು ದೇವಸ್ಥಾನದೊಳಗೆ ಬಿಡಬೇಕೆಂಬ ಉದ್ದೇಶದಿಂದ "ಈ ಸಂಸ್ಥೆ ಮಠವಲ್ಲ, ದೇವಸ್ಥಾನವೆಂದು ಪರಿಗಣಿಸಲ್ಪಡಬೇಕು" ಎಂದು ಇದೆ. ಆ ಕಾರಣ ಈ ಮೊದಲು ಈ ಸಂಸ್ಥೆ ದೇವಸ್ಥಾನವಾಗಿತ್ತು ಎಂದು ಆಕ್ಟಿನಲ್ಲಿ ಹೇಳಿಲ್ಲ. ಕೇವಲ 'ಪರಿಗಣಿಸಲ್ಪಡಬೇಕೆಂ'ಬುದಷ್ಟೇ ಕೋರ್ಟಿನ ಆಶಯವೆಂದೂ ತಿಳಿಸಿದ್ದಾರೆ. ಕೋರ್ಟಿನ ಆಶೆ ಬಲಿಗಲ್ಲನ್ನೂ, ಹಾಕಿ, ಧ್ವಜ ಇರಿಸಬೇಕೆಂಬಲ್ಲ ಎಂದಿದ್ದಾರೆ. ಅಚ್ಯುತ ಶರ್ಮರ ಲೇಖನಪುಸ್ತಕವನ್ನು ಕಾಡುವ ಅನೇಕ ವಿರೋಧಾಭಾಸಗಳನ್ನು ಎತ್ತಿಹಿಡಿದಿದ್ದಾರೆ. ಮಧ್ವಾಚಾರ್ಯರು ಅನಂತೇಶ್ವರದಲ್ಲಿ ಪಾಠಹೇಳುವಾಗ ಅದೃಶ್ಯರಾದರು ಎಂಬುದನ್ನು ಒಪ್ಪದೇ ಮಧ್ವವಿಜಯವನ್ನೇ ಆಧರಿಸಿ, ಮಧ್ವಾಚಾರ್ಯರು ಶಿಷ್ಯರೊಂದಿಗೆ ಯಾತ್ರೆಗೆ ಹೋದರೆಂದೂ, ತಾವು ಪಾಠಹೇಳುತ್ತಿದ್ದ ಜಾಗದಲ್ಲಿ ತಾವು ಅದೃಶ್ಯರಾಗಿ ಇದ್ದು ಜನರ ಇಷ್ಟಾರ್ಥಗಳನ್ನು ಪೂರೈಸುವವೆಂದೂ ಶಿಷ್ಯರಿಗೆ ಸಮಾಧಾನವಿತ್ತು ತೆರಳಿದರೆಂದೂ ಹೇಳಿ ಜನರೆದುರು ಸತ್ಯದ ಸ್ವರೂಪವನ್ನಿರಿಸುತ್ತಾರೆ. ಮಧ್ವಾಚಾರ್ಯರ ತಂದೆಯ ಹೆಸರೇ ತಿಳಿದು ಬರುವುದಿಲ್ಲವೆಂಬ ಅಚ್ಯುತ ಶರ್ಮರ ಕುಹಕ ನುಡಿಯನ್ನು ಅಲ್ಲಗಳೆಯುತ್ತಾರೆ. ಮಧು + ಆಚಾರ್ಯ = ಮಧ್ವಾಚಾರ್ಯ ಎಂಬ ಅಚ್ಯುತ ಶರ್ಮರವಾದವನ್ನು ವಿರೋಧಿಸಿ, ಮಧ್ವ + ಆಚಾರ್ಯ ಎಂಬುದೇ ನಿಜವಾದ ವ್ಯುತ್ಪತ್ತಿ ಎಂದಿದ್ದಾರೆ.

ಗೌಡಸಾರಸ್ವತರು ಬ್ರಾಹ್ಮಣರಲ್ಲವೆಂದು ಹಲವು ಬ್ರಾಹ್ಮಣರು ಭಾವಿಸಿದ್ದರು. ಈ ಸಮಸ್ಯೆಯನ್ನು ಉಡುಪರು ಸರಿಯಾಗಿ ಬಿಡಿಸಿದ್ದಾರೆ. ಗೌಡಸಾರಸ್ವತ, ಸಾರಸ್ವತ, ಕೊಂಕಣಿಗರು ಒಂದೇ ಎಂಬ ಡಾ| ಗುರುರಾಜ ಭಟ್ಟರ ವಾದವನ್ನು ಬಲವಾಗಿ ವಿರೋಧಿಸಿ "ಕೊಂಕಣಿ ಶಬ್ದ ವ್ಯಾಪಕ; ಗೌಡಸಾರಸ್ವತ, ಸಾರಸ್ವತ ಶಬ್ದ ಕೆಲವೊಂದು ಪಂಗಡಗಳನ್ನು ಮಾತ್ರ ತಿಳಿಸುತ್ತದೆ. ಆದುದರಿಂದ ಆ ಎರಡು ಶಬ್ದಗಳೂ ಪರ್ಯಾಯ ಪದಗಳು ಎಂದು ತಿಳಿಯಬಾರದು. ಗೌಡಸಾರಸ್ವತರು ಶೂದ್ರರಲ್ಲ. ಕೊಂಕಣರು ಶೂದ್ರರೂ ಇರಬಹುದು. ಈ ವಿವೇಚನೆ ನೋಡದೆ ಭಟ್ಟರು ಕೆಲವೊಂದು ತಪ್ಪುಮಾಡಿರುತ್ತಾರೆ....... ಅತಏವ ಗೌಡಸಾರಸ್ವತರನ್ನು ಕೊಂಕಣಿಗರೆಂದರೆ ಅವರಿಗೆ ಅವಮಾನವಾಗುತ್ತದೆ.... ಭಟ್ಟರಿಗೆ ಇದ ತಿಳಿಯದು."........"ಗೌಡ-ದ್ರಾವಿಡ ಭೇದದಿಂದ ಸಾಮ್ಯವೂ ಇರುವುದಿಲ್ಲ. ಇತ್ಯಾದಿ ಅಡಚಣೆಗಳನ್ನು ಪರ್ಯಾಲೋಚಿಸಿ, ಪ್ರತ್ಯೇಕ ಶಾಖಾ ಮಠ ಮಾಡುವುದು ಒಳ್ಳೆಯದೆಂದು ಭಾವಿಸಿ, ಈಗ ಗೋಕರ್ಣ ಪರ್ತಗಾಳೀ ಮಠವೆಂದು ಪ್ರಸಿದ್ಧವಾದ ಮಠವನ್ನು ಸ್ಥಾಪಿಸಿದರು ಎಂದು ತಿಳಿಯುತ್ತದೆ. ಸನ್ಯಾಸ ಕೊಡಲು ಅರ್ಹರೆಂದು ಸನ್ಯಾಸದೀಕ್ಷೆ ಕೊಟ್ಟ ಶಿವಳ್ಳಿಯವರು, ಗೌಡಸಾರಸ್ವತರು ಶೂದ್ರರೆಂದು ಹೇಗೆ ಭಾವಿಸುತ್ತಾರೆ? ಸಹಭೋಜನ, ಸಹವಿವಾಹಗಳು ಪರಸ್ಪರ ಇಲ್ಲದಿರಲು ಕಾರಣವೇನೆಂದರೆ—ಪಂಚದ್ರಾವಿಡರಿಗೂ ಪಂಚಗೌಡರಿಗೂ ಸಹಭೋಜನ, ಸಹವಿವಾಹಾದಿಗೂ ಕೆಲ ಆಚಾರ ಭೇದಗಳೂ ನಿಷಿದ್ಧವಾಗಿದೆ. ಆದುದರಿಂದ ಗೌಡಸಾರಸ್ವತರಿಗೂ, ಶಿವಳ್ಳಿಯವರಿಗೂ ಆ ಸಂಬಂಧ ಇಲ್ಲದಿರುವಿಕೆಯು ಜಾತಿವೈಷಮ್ಯ ಮೂಲಕವಲ್ಲ. ಶಾಸ್ತ್ರನಿಷೇಧಮೂಲಕ ಎಂಬುದನ್ನು ಸರಿಯಾಗಿ ತಿಳಿದುಕೊಳ್ಳಬೇಕು....... ಆಚಾರ, ಸಂಪ್ರದಾಯ, ಶಾಸ್ತ್ರ ಇವುಗಳೇ ಸಹಭೋಜನಕ್ಕೆ ನಿರ್ಣಾಯಕವಾಗುತ್ತವೆ. ಜಾತಿ ವೈಷಮ್ಯವೊಂದೇ ಅಲ್ಲ........'

ಹೀಗೆ ಹಲವರ ಸಂದೇಹಕ್ಕೆ ಕಾರಣವಾದ ಗೌಡಸಾರಸ್ವತರ ಬ್ರಾಹ್ಮಣ್ಯದ

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore — 27.**

Phone No.— 1 28337
2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಬಗೆಗಿನ ಸಂದೇಹವನ್ನು ಸಾಧಾರಣವಾಗಿ ಪರಿಹರಿಸಿದ್ದಾರೆ. ವಿವಾದದ ಕಾರಣವನ್ನು, ಪರಿಹಾರವನ್ನೂ ಮುಂದೆ ವಿವಾದಕ್ಕೆ ಎಡೆ ಉಳಿಯದಂತೆ, ಮೇಲು ಕೀಳಿನ ಭಾವನೆಗೆ ಎಡೆ ಬಾರದಂತೆ; ಜಾತಿವೈಷಮ್ಯವನ್ನು ವಿರೋಧಿಸಲು ಯತ್ನಿಸಿದ್ದಾರೆ. ಆ ಯತ್ನವು ಇವರ ಸ್ವಂತದ್ದಲ್ಲ, ಶಾಸ್ತ್ರ ಸಮ್ಮತವಾದುದೆಂದ ಮೇಲೆ ಸಕಲ ಜನಾದರಣೀಯವಾದೀತೆಂದು ಭಾವಿಸಬಹುದು.

ಶ್ರೀಯುತ ಅಚ್ಯುತ ಶರ್ಮ ಅವರು ತಮ್ಮ 'ಉಡುಪಿ ಕ್ಷೇತ್ರದ ನೈಜ ಹಿನ್ನೆಲೆ' ಎಂಬ ಪುಸ್ತಕದಲ್ಲಿ ಸ್ಥಾನಿಕರೇ ನಿಜವಾದ ಬ್ರಾಹ್ಮಣರೆಂದೂ ಶಿವಳ್ಳಿಯವರು ಶೂದ್ರ ಸ್ತ್ರೀಯಲ್ಲಿ ಜನಿಸಿದವರಾಗಿದ್ದು, ಈ ಸ್ಥಾನಿಕರನ್ನು ದೇವಾಲಯದ ಹೊರದೂಡಿದವರೆಂದೂ ಪ್ರತಿಪಾದಿಸಿದ್ದಾರೆ. 'ಸತ್ಯಶೋಧ ಪ್ರಕಾಶನ'ದಿಂದ ಬಿಡುಗಡೆಯಾದ ಈ ಪುಸ್ತಕದಲ್ಲಿ ಸತ್ಯಕ್ಕಿಂತ ಗಳ್ಳೇ ಹೆಚ್ಚಿದೆ. ವಾದಿರಾಜರಂಥ ಮಹಾ ಅನ್ಯಾಯ ಮಾಡಿದವರೆಂದೂ, ಅವರ ಬ್ರಹ್ಮಹತ್ಯಾಪಾಪವೇ ಬ್ರಹ್ಮರಾಕ್ಷಸನಾಗಿ ಅವರನ್ನು ಕಾಡಿತೆಂದೂ ಹೇಳಿದ್ದಾರೆ. ಪುಟ 19ರಲ್ಲಿ 'ಅಂತೂ ಇವರ ಕೃಷ್ಣ ಮಂದಿರವು ಆದರ ಸುತ್ತ ಮುತ್ತ ಇರುವ ಭೋಜನ ಮತ್ತು ಅಡಿಗೆ ಶಾಲೆಗಳಿಂದಲೂ, ಸನ್ಯಾಸಿಗಳ ಸ್ಮಶಾನದಿಂದಲೂ, ದನಗಳ ಹಟ್ಟಿ ಹತ್ತಿರವೇ ಇರುವುದರಿಂದಲೂ, ಸ್ನಾನದ ಕೆರೆಯು ಕೂಡಾ ಸಮೀಪವೇ ಇರುವುದರಿಂದಲೂ, ಧೂಪ, ಹರಿಕೆ ಇತ್ಯಾದಿಗಳಿಗಾಗಿಯೂ, ಶ್ರೀ ಕೃಷ್ಣ ದರ್ಶನಕ್ಕೆ ಬರುವ ಜನರಿಂದಲೂ ನಿಬಿಡವಾಗಿ ತುಂಬಿ ಆ ಸ್ಥಳವು ಆರೋಗ್ಯಕ್ಕೆ ಹೆಚ್ಚಿನ ಹಿತವಲ್ಲವೆಂತೆ ಕಾಣುತ್ತದೆ." (ಪ್ರಸ್ತುತ ಲೇಖಕರ ಪ್ರಕಾರ ದೇವಸ್ಥಾನವು ಯಾರೂ ಬಾರದ ಕೊಂಪೆಯಾಗಿರಬೇಕೆಂದು ಅಭಿಪ್ರಾಯವಿರಬಹುದು. ಅಥವಾ ವಿಹಾರಧಾಮವಾಗಬೇಕೆಂದಿದೆಯೋ. ನೈಜ ಹಿನ್ನೆಲೆಯಲ್ಲಿ ಈ ಮಾತು ಏಕೆ ಬೇಕೋ ಅಚ್ಯುತನೇ ಬಲ್ಲ.) ಮುಂದೆ ವಿದ್ಯಾಕ್ಷೇತ್ರದಲ್ಲಿ ಮಾಧವ ಪೈಗಳ ಸಾಧನೆಗಾಗಿ 'ಭೇಷ್' ಎಂದು, ಅವರೊಡನೆ ಇಲ್ಲಿಯ ಯತಿಗಳನ್ನು ಹೋಲಿಸಿ, ಯತಿಗಳನ್ನು ನಿಂದಿಸಿದ್ದಾರೆ. "ಮಣಿಪಾಲದಲ್ಲಿ ಶ್ರೀ ಟಿ. ಎಂ. ಎ. ಪೈಗಳವರು ಕಾಲೇಜುಗಳನ್ನು ತೆರೆದದ್ದು ನೋಡಿ ಮಠದ ಸ್ವಾಮಿಗಳು ಪೂರ್ಣಪ್ರಜ್ಞ ಎಂಬ ಹೆಸರಿನಿಂದ ಒಂದು ಕಾಲೇಜನ್ನು ತೆರೆದರು (ಪುಟ 57). ಅವರ ಸಂಶೋಧನೆಯಲ್ಲಿ ಮಾಧವ ಪೈಗಳಿಗೆ Y. M. C. A. College of Physical Educationನ್ನು ಸ್ಥಾಪಿಸಿದ ಮತ್ತೆ ಒಂದು ಅಸ್ತಿಮೂಲ್ಯ ಸಾಹಸವನ್ನು ಇತ್ತಿದ್ದಾರೆ. ಎಲ್ಲೆಲ್ಲಿ ಯಾವ್ಯಾವ ಕೆಲಸಗಳಲ್ಲಿ ಈ ಮಠದ ಯತಿಗಳು ಸೋತಿದ್ದಾರೋ ಅದೆಲ್ಲವನ್ನೂ ಬಹು ಸಂತೋಷದಿಂದ ಅಚ್ಚುಹಾಕಿಸಿದ್ದಾರೆ. ಮುಂದೆ ಉಪಸಂಹಾರ ಭಾಗದಲ್ಲಿ ದ್ವೈತಮತ ಖಂಡನೆಯನ್ನು ಹುಲುಸಾಗಿಯೇ ಮಾಡಿದ್ದಾರೆ. ಸಂಶೋಧನಾತ್ಮಕ ಪುಸ್ತಕಗಳಲ್ಲಿ ಈ ವಿಚಾರಗಳೆಲ್ಲಾ ಏಕೆ ಬರಬೇಕೆಂದೇ ತಿಳಿಯುವುದಿಲ್ಲ. ಈ ಪುಸ್ತಕವು ಹಲವು ಗೊಂದಲಗಳಿಗೆ ಕಾರಣವಾಯಿತು. ಅರಿಯದ ಜನರು ಅಪಾರ್ಥ ಕಲ್ಪಿಸುವಂತಾಯಿತು. ಗುರುರಾಜ ಭಟ್ಟರು ತಮ್ಮ ಪುಸ್ತಕದಲ್ಲಿ ಶಿವಳ್ಳಿಯವರನ್ನು ಅಲ್ಲಲ್ಲಿ ತಪ್ಪಿತಸ್ಥರು ಎಂದಿದ್ದಾರೆ. ಈ ಎಲ್ಲಾ ಹೇಳಿಕೆಗಳಿಂದ ರೊಚ್ಚಿಗೆದ್ದ ಶ್ರೀಯುತ ಸೀತಾರಾಮಾಚಾರ್ಯ ಬಾರಾಯ ನಾಚಾರ್ಯ ಉಡುಪ ಅವರು ಈ ಪುಸ್ತಕವನ್ನು ಬರೆದುದರಿಂದ ಇದರಲ್ಲಿ ಆವೇಶದ ಮಾತುಗಳಿವೆ. ಹಲವು ಕಡೆ ವೈಯಕ್ತಿಕ ನಿಂದೆ ಮಾಡುವವರಿಗೂ ಮುಂದುವರಿದುದು ಅತ್ಯಂತ ಬೇಸರದ ಸಂಗತಿ.

ಗುರುರಾಜ ಭಟ್ಟರ 'ತುಳುನಾಡು' ಪುಸ್ತಕದ ಕುರಿತಾಗಿ ಬರೆಯುತ್ತಾ "…. ಭಟ್ಟರ ಉದ್ದೇಶ ಶಿವಳ್ಳಿಯವರಿಗೆ ಸ್ಥಾನಿಕರಿಗಿಂತ ಹೆಚ್ಚಿನ ಪಾವಿತ್ರ್ಯ ನೀಡಿ, ಸ್ಥಾನಿಕರ ಸ್ಥಾನಮಾನ ವಿಸ್ತರಿಸುವುದಾಗಿದೆ- ಅನಿಸುತ್ತದೆ. ನಾಯಿ ಬಗಳುತ್ತದೆ, ಎಂಬಂತೆ ತಿಳಿದು ಉದಾಸೀನನಾಗುವುದು ಒಳಿತು." ತಮ್ಮ ಹಿರಿಯರ ಕುಲ ಗೋತ್ರಜಾತಿಗಳನ್ನು ನಿಂದಿಸಲಿಕ್ಕಾಗಿಯೇ ತುಳುನಾಡು ಪುಸ್ತಕ ಬರೆದುದಾಗಿದೆ' ಎನ್ನಲು ಅಡ್ಡಿಯಿಲ್ಲ." (ಪು.ಟ. 82.) ಎಂದು ಧೈರ್ಯವಾಗಿ ಹೇಳುತ್ತಾರೆ. ತುಳುನಾಡು ಪುಸ್ತಕ ಬರೆಯುವ ಮೊದಲು ಡಾ| ಗುರುರಾಜ ಭಟ್ಟರ ಸಾಧನೆ, ಸತತ ಪಾಂಡಿತ್ಯವನ್ನು ಕೇವಲ ಪಂಕ್ತಿನಾಲ್ಕರಲ್ಲಿ ತೆಗಳಿದ್ದಾರೆ ಅವರ ಸಾಧನೆಯನ್ನು ಅಲ್ಲಗಳೆದಿದ್ದಾರೆ. ಆದರೆ ಗುರುರಾಜ ಭಟ್ಟರ ಪುಸ್ತಕ ಓದಿದವರಿಗೆ ಅವರ ಕಾರ್ಯಕ್ಕಾಗಿ ಅಭಿನಂದಿಸುವ ಎನ್ನಿಸುತ್ತದೆ. ಗುರುರಾಜ ಭಟ್ಟರ ಉದ್ದೇಶ ಜಾತಿಗಳೊಳಗೆ ಜಗಳ ಹುಟ್ಟಿಸುವುದಲ್ಲ. ಆಧಾರಿತ ವಿಷಯಗಳಿಂದ ತತ್ವದ ಮೂಲಶೋಧನೆ. ತತ್ವದ ಮೂಲವನ್ನರಿಯಲು ಹೊರಟಿದ್ದಾರೆ. ಅವರು ತಪ್ಪಿರಬಹುದು, ಅವರ ಪುಸ್ತಕವೇ ಉಡುಪರು ಪುಸ್ತಕವನ್ನು ಬರೆಯಲು ಸಹಾಯ ಮಾಡಿತೆಂಬುದನ್ನು ಉಡುಪರು ಮರೆತಿದ್ದಾರೆ. ಗುರುರಾಜ ಭಟ್ಟರ ತಪ್ಪನ್ನು ತಿಳಿಸುವುದಷ್ಟೇ ಇವರ ಉದ್ದೇಶವಾಗಿದ್ದರೆ ಸರಿ. ಆದರೆ, ಬದಲಾಗಿ "ಓ ಗುರುರಾಜ ಭಟ್ಟರೇ! ಈಗಿನ ಖಂಡಿತವರ ಮಾರ್ಗಕರು ಮಾಡಿದ ಅನಾಚಾರಕ್ಕಾಗಿ ಅಕಾಲದ ಮಾಧ್ವರಾಗಲೀ, ಪುರಾಣದ ಋಷಿಗಳಾಗಲೀ, ಈಗಿನ ಸಂಶೋಧಕರಾಗಲೀ, ಯುರೋಪಿನ ಬಿಳೀ ಬಣ್ಣದವರಾಗಲೀ ಬರೆಯುತ್ತಾರೆ— ಬರೆದವರನ್ನು ತಿಳಿಯುವುದಕ್ಕಿಂತ ಮಾಡಿದವರನ್ನು ನಿಂದಿಸಲು ಕಲಿಯಿರಿ. ಶಿವಳ್ಳಿಯವರು ಸಾಧುಗಳೆಂದು ಲೇಖನಿಯ ಹರಿತಗಾರಿಕೆಗೆ ಅಪಚಾರವೆಸಗಬೇಡಿರಿ.' '12 ವರ್ಷ ಗದಾಯುದ್ಧ ಕಲಿತು ಮನೆ ಮಾದುಕಿ ಟೊಂಕ ಮುರಿದ' ಎಂಬ ಗಾದೆಯಂತೆ ಎಂ. ಎ. ಕಲಿತು ಸಂಶೋಧನಾಗಿ ಪ್ರಿನ್ಸಿಪಾಲನಿದ್ದೇನೆಂದು ತಮ್ಮ ಹಿರಿಯರಿಗೆ ಬೈಯುವ ಹೀನ ಪ್ರವೃತ್ತಿಗೆ ಇಳಿಯಬೇಡಿರಿ. ಇದೆ ನನ್ನ ಕೋರಿಕೆ. '(ಪು.ಟ 53)' ನಮ್ಮ ಬುದ್ಧಿಗೆ ಅರ್ಥ ಹೊಳೆದಿಲ್ಲ, ತಿಳಿಯಲಿಲ್ಲನೆಂದು ಶಾಸ್ತ್ರ ಪ್ರಮಾಣವಾಗಲಾರದು. ತಪ್ಪು ಆಗಲಾರದು, ನಮ್ಮ ಪೂರ್ವಜರು M. A. Phd., ಹಾಗೂ ಇತರ ಪದವೀಧರರು ಆಗಿರಲಿಕ್ಕಿಲ್ಲ. ಆದರೆ ನಮಗಿಂತ ಹೆಚ್ಚು ತಿಳುವಳಿಕೆ, ಹೆಚ್ಚು ಇತಿಹಾಸ ಬಲ್ಲವರಾಗಿದ್ದರು. ಎಂಬುದರಲ್ಲಿ ಸಂಶಯವಿಲ್ಲ. ಆದುದರಿಂದ ಬಹಳ ವಿಚಾರಮಾಡಿ ಅತಿ ಜಾಗ್ರತೆಯಿಂದ ನಿಂದಿಸಲು ಉಪಕ್ರಮಿಸಬೇಕು. ಇಲ್ಲವಿದ್ದರೆ ನಮಗೇನೇ ಅಪಮಾನ ಕಾದಿರುತ್ತದೆ." ಇಂಥನಿಂದೆ ಮಾತುಗಳು ಪುಸ್ತಕದುದ್ದಕ್ಕೂ ಕಂಡು ಬರುತ್ತವೆ. (ಪು.ಟ 70, 71, 73, 82, 102)

ಶ್ರೀಯುತರ ಮೇಲಿನ ಹೇಳಿಕೆಗಳನ್ನೆಲ್ಲಾ ನೋಡಿದರೆ ಡಾ| ಗುರುರಾಜ ಭಟ್ಟರ ಲೇಖನದ ಉದ್ದೇಶವನ್ನೇ ಇವರು ಅರಿತಿಲ್ಲ ಎನ್ನಬೇಕು. ಗುರುರಾಜ ಭಟ್ಟರ ಉದ್ದೇಶ ಅನ್ಯಾಯ ಮಾಡಿದವರೇ ಆಗಲಿ ಅವರನ್ನು ನಿಂದಿಸುವುದಲ್ಲ, ಸಮಾಜ ಸುಧಾರಣೆಗಾಗಲೀ, ಜಗಳಕ್ಕಾಗಲೀ ಅವರು ಹೊರಟಿಲ್ಲ. ಅವರದು ಶುದ್ಧ ಸಂಶೋಧನೆ. ನಿಂದಿಸುವುದರಿಂದ ಏನು ತಾನೇ ಸಾಧಿಸಿದಂತಾಯ್ತು? ಜಗಳದ ಬೀಜದಂತಾಯಿತು ಅಷ್ಟೇ! ಖಂಡೆಯವರಾಗಲೀ ಸ್ಥಾನಿಕರಾಗಲೀ, ಶ್ರೀಯುತರು ಹೇಳಿದಂತೆ ತಪ್ಪಿತಸ್ಥರೇ ಆಗಲೀ, ಅದಕ್ಕೆ ಇಂದಿನ ಎಂ. ಹಯವನ್ನು ಏಕೆ ನಿಂದಿಸಬೇಕು? ಇಂದಿನವರ ಕುಲವನ್ನೇ ನಿಂದಿಸುವುದು ಯಾವ ಘನತೆ ಸ್ಥಿತಿಗೆ? ನಮಗೆ ಬೇಡಾದರೆ ನಾವು ದೂರವಿರುವ. ನಿಂದನೆ ಏಕೆ? ಸಂಶೋಧನೆಯ ಉದ್ದೇಶ ತಪ್ಪಿತಸ್ಥರ ನಿಂದನೆಯಲ್ಲ. ವೈಯಕ್ತಿಕ ಟೀಕೆಯಂತೂ ಅಲ್ಲವೇ ಅಲ್ಲ. ಅದನ್ನು ಈ ಲೇಖಕರು ಮರೆತಿರಬೇಕು. 'ನಿಂದಿಸಲು ಕಲಿಯಿರಿ' ಎಂದಿದ್ದಾರೆ. ಗುರುರಾಜ ಭಟ್ಟರು ಈ ಲೇಖಕರ ಈ ಹೊಸ ಬುದ್ಧಿವಾದ ಸಿಗುವ ಮೊದಲೇ ತಮ್ಮ ಪುಸ್ತಕವನ್ನು ಬರೆದು ಅಚ್ಚು ಹಾಕಿಸಿಯೂ ಬಿಟ್ಟಿದ್ದಾರೆ. ಅದು ಸಂತೋಷದ ಸಂಗತಿ. ಮುಂದೆಯೂ ಈ ಲೇಖಕರಿಂದ ಈ ವಿಚಿತ್ರ ಬುದ್ಧಿವಾದವನ್ನು ಸ್ವೀಕರಿಸಲಾರರು ಎಂದು ಎಲ್ಲ ವಿಮರ್ಶಕರಿಗೆ ತಿಳಿದೇ ಇದೆ. ಇನ್ನು ತಾನು "ಪ್ರಿನ್ಸಿಪಾಲನಿದ್ದೇನೆಂದು ತಮ್ಮ ಹಿರಿಯರಿಗೆ ಬೈಯುವ ಹೀನ ಪ್ರವೃತ್ತಿಗೆ ಇಳಿಯಬೇಡಿರಿ" ಎಂದಿದ್ದಾರೆ ಉಡುಪರು. ಅರಿಯದೆಯೋ ಅರಿತೋ ಅವರು ಪ್ರಿನ್ಸಿಪಾಲನ ಕೆಲಸಕ್ಕೂ ಅವರ ಸಂಶೋಧನಾತ್ಮಕ ಗ್ರಂಥ 'ತುಳುನಾಡು'ಗೂ ಒಂದು ಸಂಬಂಧ ಕಲ್ಪಿಸಿದ್ದಾರೆ. ಅದರೊಂದಿಗೆ ಬೈಯುವ ಕೆಲಸವನ್ನೂ ಗಂಟುಹಾಕಿದ್ದಾರೆ. ಸಂತಸದಿಂದ ಆರೋಪಿಸಿದ್ದಾರೆ.

ಇಂತಹ ನಿಂದೆಯ ಮಾತುಗಳಿಂದಾಗಿ ಪುಸ್ತಕದ ಕ್ರಯ ಹೆಚ್ಚಬಹುದು, ಮಾರಾಟವೂ ಜಾಸ್ತಿ ಆದೀತು. ಜನಪ್ರಿಯವೂ ಆದೀತು. ಹಲವು ಸ್ವಜಾತೀಯರಿಂದ 'ಶಭಾಷ್' ಗಿರಿಯೂ ದೊರೆತೀತು. ಆದರೆ ಅದು ಸಂಶೋಧನೆ ಎಂಬ ಹೆಸರಿಗೆ ಅಪಚಾರವಾಗುತ್ತದೆ. ಪುಸ್ತಕದ ನಿಜವಾದ ಸಿದ್ಧಿ ಕಾಮನೆಗಳ ಪರಿಯಲ್ಲಿ ಮರೆಯಾದ ಭಾಸ ಎನಿಸಂತಾಗುತ್ತದೆ.

ಹಾಗೆಂದ ಮಾತ್ರಕ್ಕೆ ತಪ್ಪನ್ನು ಹೇಳಬಾರದೆಂದಲ್ಲ. ಹೇಳಲಿ. ಬೇಕಾದರೆ ಕಟುವಾಗಿ ಖಂಡಿಸಲಿ. ಆದ ವೈಯಕ್ತಿಕ ನಿಂದೆಯಲ್ಲ. ಪರ್ಯವಸಾನವಾಗ ಬಾರದು. ಗ್ರಂಥವೊಂದರ ಬಗ್ಗೆ ಹಲವು ರೀತಿಯ ಅಭಿಪ್ರಾಯಗಳಿರಲಿ. ಅವೆಲ್ಲವೂ ಅಪೇಕ್ಷಣೀಯವೇ. ಸಂಶೋಧನೆಗೆ ತೆರೆದ ಮನವಿರಬೇಕು. ಯಾರನ್ನೋ ಖಂಡಿಸಲೋಸುಗ ಬರೆದು ಅದಕ್ಕೆ ಸಂಶೋಧನೆ ಬಣ್ಣ ಹಚ್ಚುವುದು ಯುಕ್ತವಲ್ಲ. ತಪ್ಪನ್ನು ಸಾಧಾರವಾಗಿ ತೋರಿಸಲಿ. ತನ್ನದು ತಪ್ಪೆಂದು ಇನ್ನೊಬ್ಬ ಸಾಧಿಸಿದವರಿಗೆ ಸಂತಸಪಡಲಿ ಆದರೆ ತನ್ನದು ಸತ್ಯ ಎಂಬ ಭ್ರಾಂತಿಯಲ್ಲಿ ಇನ್ನೊಂದು ಅಂಬೆಗಾಲಿನ ನಡಿಗೆ ಸಂಶೋಧನೆಗೆ ಹಲವಾರು ಅಂಶಗಳಿವೆ. ಒಂದು ಧ್ವನಿಯಿಂದ ಬಿಂದುವನ್ನಷ್ಟೇ ಅರಿತಿದ್ದೇನೆ ಎಂಬ ವಿನಯಂಬೇಕು. 'ಇದು ನಿಶ್ಚಿತ! ಇದು ಖಂಡಿತ' 'ಸಂಶಯ ಬೇಡ' ಎಂದು ಉದ್ಗಾರವನ್ನು ತೆಗೆಯುತ್ತಾ ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುವುದು ಸಂಶೋಧಕನ ಧರ್ಮವಲ್ಲವೆಂದು ನನ್ನ ಅಭಿ... (ಈ ಲೇಖಕರ ಮೊದಲ ಮಾತಿನ ವಿನಯದ ಮಾತುಗಳು ಇಂದು ಬ... 'ನಾನೇನೂ ನುರಿತ ಲೇಖಕನಲ್ಲ, ಗ್ರಂಥಕಾರನೂ ಅಲ್ಲ. ಆದುದರಿಂದ ಸಹೃದಯರಾದ ದೇವವರನ್ನು ಓದುಗರು ಮನ್ನಿಸಬೇಕು ಹಾಗೂ ಅನಪೇಕ್ಷಿತ ಅಸಮಾಧಾನಕರ ಮಾತುಗಳು ಹಿಂತೆಗೆ... ಕ್ಷಮಾರ್ಹವು ಇದ್ದರೆ ಹಿಂತೆಗೆ... ಳ್ಳಲು ನಾವು ಬದ್ಧರಿದ್ದೇವೆ." ಇಂತಹ ವಿ



ನಡು ಪುಸ್ತಕದ ವ್ದಕ್ಕೂ ಇದ್ದಿದ್ದರೆ ಬಹು ಉಪಯುಕ್ತವಾಗುತ್ತಿತ್ತು.)

ಈ ಲೇಖಕರು ಇನ್ನೊಂದು ಕಡೆ ಎಡವಿದ್ದಾರೆ ಎಂದರೆ ತಪ್ಪಾಗಲಾರದು. “ಆದ್ದರಿಂದ ಶ್ರೀ ಗುರುರಾಜ ಭಟ್ಟರನ್ನು ಡಾ। ಸಾಲೆತೊರರಾವಿಗಳ ಸಾಲಿನ ಪ್ರತಿವಾದಿಗಳೆಂದೇ ಗ್ರಹಿಸಿ ‘ಪ್ರತಿವಾದಿಸ್ವಲಿಖಿತಂ ನೋಪೇಕ್ಷ್ಯಮರ್ಹತಿ’ಯೆಂತ ಬರೆಯಲಾಗಿದೆ” ಎಂದಿದ್ದಾರೆ ಉಡುಪರು. ಹೀಗೆ ತಾನು ವಾದಿ ಎಂದೂ ಇತರರು ಪ್ರತಿವಾದಿಗಳೆಂದೂ ಯಾವ ಸಂಶೋಧಕನೂ ಮುಂದೆ ಹೋಗಲಾರ. ‘ಅವರು ಸತ್ಯಶೋಧಕರ. ತಾನೂ ಅವರಂತೆಯೇ’ ಎಂದು ತಿಳಿಯುವುದು ಯುಕ್ತ. ಶ್ರೀಯುತ ಗುರುರಾಜ ಭಟ್ಟರು ತಮ್ಮ ಸಂಶೋಧನೆಯಲ್ಲೇ ಸಾಲೆತೊರ್ ಅವರ ಅಭಿಪ್ರಾಯವನ್ನು ವಿರೋಧಿಸಿದ್ದನ್ನು ಉಡುಪರು ಒಪ್ಪುತ್ತಾರೆ. ಗುರುರಾಜ ಭಟ್ಟರ ಉದ್ದೇಶ ಸತ್ಯಶೋಧನೆಯಾಗಿರದೆ, ಕೇವಲ ಸ್ಥಾನಿಕರ ಮೇಲಣ ಅಭಿಮಾನ ಜನ್ಯವಾಗಿದ್ದರೆ ಸಾಲೆತೊರ್ ಅವರ ಅಭಿಪ್ರಾಯವನ್ನು ಏಕೆ ವಿರೋಧಿಸುತ್ತಿದ್ದರು? ಉಡುಪರು “ಸದರಿಯವರು (ಗುರುರಾಜ ಭಟ್ಟರು) ತಾನು ಸ್ವತಃ ಶಿವಳ್ಳಿಯವರಾದರೂ ಆದರ ಪರಿವೆ ಇಲ್ಲದೆ ವಿಮರ್ಶಕರೆಂದು ಘೋಷಿಸಿಕೊಂಡು ಸ್ಥಾನಿಕರ ಪಕ್ಷ ವಹಿಸಿ ಅವರ ಕಾರ್ಯಕ್ಕೆ ಅನುಗುಣವಾಗುವಂತೆ ಶಿವಳ್ಳಿಯವರನ್ನೂ ಅತ್ಯಂತ ಮುಖಸಾರೆ ಹೀಯಾಳಿಸಿ ಶಿವಳ್ಳಿಯವರ ಕಡು ವೈರಿಗಳಂತೆ ವರ್ತಿಸಿದ್ದಾರೆಂದು ತಿಳಿಯಲು ಅವಕಾಶವುಂಟು.” (ಪುಟ 26) ಎಂದಿದ್ದಾರೆ. ಹೀಗೆ ತಾನು ಶಿವಳ್ಳಿಯವನಾದರೂ ಆದರ ಪರಿವೆಯೇ ಇಲ್ಲದೆ (ಎಂದರೆ ನಿರ್ಲಿಪ್ತರಾಗಿ ಪೂರ್ವಗ್ರಹ ಪೀಡಿತರಾಗಿರದೆ, ಜಾತಿಮತಾದಿ ಭಾವನೆಗಳನ್ನು ಬಿಟ್ಟು, ಶುದ್ಧ ಮನಸ್ಸಿನಿಂದ) ವಿಮರ್ಶಕನೆಂಬ ಅರಿವಿನಿಂದ ವರ್ತಿಸಿದ್ದಾರೆಂಬ ಅರಿವು ಮಾನ್ಯ ಉಡುಪರಿಗೆ ಇದ್ದೀತೆ. ಮತ್ತೇಕೆ ಈ ಎಲ್ಲ ಕೋಲಾಹಲದ ಮಾತುಗಳ ? ಎಂಬ ಪ್ರಶ್ನೆ ಬರುತ್ತದೆ.

ಇಂತಹ ಗ್ರಂಥಗಳು ಇಂದಿಗೇ ನಿಲ್ಲುವುದಿಲ್ಲ ಎಂದು ಕಾಣುತ್ತದೆ. ಇಂತಹ ಪುಸ್ತಕಗಳಲ್ಲಿ (ಸಂಶೋಧಕನಾದರೆ) ಲೇಖಕನಿಗೆ ಹಲವು ವಿಚಾರಗಳು ಮನದಲ್ಲಿರಬೇಕು. (1) ತಾನು ಬರೆಯುತ್ತಿರುವುದು ಜನರಲ್ಲಿ ಜಾತೀಯ ಭಾವನೆಯನ್ನು ಕೆರಳಿಸಿ, ಮತೀಯ ದ್ವೇಷವನ್ನು ಬಿತ್ತಿ ಅಂದನೋಡುವುದಕ್ಕಾಗಿಯಲ್ಲ. ಸತ್ಯಶೋಧನೆಯಷ್ಟೇ ತನ್ನ ಉದ್ದೇಶ ಎಂದು ಅರಿತಿರಬೇಕು. ಅಂದಿನ ಪುಂಡಿಯವರು ಅನ್ಯಾಯಗೈದಿದ್ದರೆ ಇಂದು ಅದಕ್ಕಾಗಿ ಗುಲ್ಲೆಬ್ಬಿಸುವಂತಾಗಬಾರದು. ಅಂದಿನ ಸ್ಥಾನಿಕರು ದಾಸಿ ಪುತ್ರರಾದರೆ ಇಂದಿನ ಸ್ಥಾನಿಕರನ್ನು ಗುರಿಯಿರಿಸಿ ಎಂದು ಬೊಬ್ಬೆ ಹೊಡೆಯಬೇಕಿಲ್ಲ. ಶಿವಳ್ಳಿಯವರ ಮೂಲ ಶೂದ್ರಸ್ತ್ರೀಯಲ್ಲ ಅಥವಾ ಎಂದ ಮಾತ್ರಕ್ಕೆ ಯಾವ ಬ್ರಾಹ್ಮಣೇತರನೂ ಆನಂದದಿಂದ ನಲಿದಾಡಬಾರದು. ಸತ್ಯವನ್ನು ಅರಿಯಬೇಕು. ಅದಷ್ಟೆ ಪುಸ್ತಕಗಳ ಉದ್ದೇಶ. (2) ಭಾರತವು ಜಾತ್ಯಾತೀತ ರಾಷ್ಟ್ರವೆಂದು ಇಂಥ ಗ್ರಂಥಗಳನ್ನು ಹೀನೈಸ ಬೇಕಾಗಿಲ್ಲ. ಇದು ಇತಿಹಾಸದ ಸಂಶೋಧನೆ. ಹಂಪೆಯನ್ನು ಮುಸ್ಲಿಮರು ಹಾಳುಗೆಡವಿದರೆಂದ ಮಾತ್ರಕ್ಕೆ ಯಾವ ಮುಸ್ಲಿಮರೂ ಹಾರಬೇಕಾಗಿಲ್ಲ. ಜಾತೀಯತೆಯನ್ನು ಪ್ರಚೋದಿಸುತ್ತಿದ್ದೆಯೆಂದು ಗುಲ್ಲೆಬ್ಬಿಸ ಬೇಕಾಗಿಲ್ಲ. ನಿರ್ಲಿಪ್ತ ಮನದ ಸಂಶೋಧಕರಿಂದ ರಚಿತವಾಗುವ ಪುಸ್ತಕಗಳು ಇನ್ನಷ್ಟು ಬರಲಿ. ನಗ್ನ ಸತ್ಯವು ನಮ್ಮೆದುರು ನಿಲ್ಲಲಿ. ಅದನ್ನೋದುವ ಸಹೃದಯರು ಮಾತ್ರ ತಮ್ಮ ಚಿತ್ತಸ್ವಾಸ್ಥ್ಯವನ್ನು ಉಳಿದುಕೊಳ್ಳದೇ ಇರಲಿ. (3) ಭಾರತವು ಜಾತ್ಯಾತೀತ ರಾಷ್ಟ್ರವೆಂಬುದನ್ನು ಮರೆಯಬಾರದು. ಹಿಂದಿದ್ದ ಮಟ್ಟ, ಪಂಚಗ್ರಾಮ, ಕೃಷ್ಣ, ಕೋಟ, ಶಿವಳ್ಳಿ ಮುಂತಾದ ಒಳ ಪಂಗಡಗಳು ನಾಶವಾಗುತ್ತಿವೆ. ಇದು ಸಂತಸದ ಸಂಗತಿ. ಇಂತಹ ಪರ್ವಕಾಲದಲ್ಲಿ ಶಾಸ್ತ್ರದ ಪ್ರತಿಬಂಧಗಳನ್ನು ಹೇಳಿ ಭಾರತದಲ್ಲಿ ಭುಗಿಲಾಡುತ್ತಿರುವ ಜಾತೀಯ ಕಲಹವನ್ನು ಹೆಚ್ಚಿಸಬಾರದು. ಉರಿವ ಬೆಂಕಿಗೆ ಆಜ್ಯವನ್ನು ಸುರಿಯುವ ಕಾರ್ಯ ಮಾಡಬಾರದು.

ಕೊನೆಯದಾಗಿ ‘ಇತಿಹಾಸದ ಯಥಾರ್ಥತೆ’ಯ ಬಗ್ಗೆ ಕೆಲವು ಮಾತನ್ನು ಹೇಳಬೇಕು. ಈ ಪುಸ್ತಕವು ಸಂಶೋಧಕರಿಗೆ ಸಹಾಯವಾಗದು; ಅದ ಸತ್ಯ. ಅಲ್ಲಲ್ಲಿ ಹಿಂದೆ ವಿಚಾರಗಳಿದ್ದರೂ, ಹೊಸ ವಿಚಾರಗಳೂ ಬೇಕಿತ್ತು. ಅಚ್ಯುತ ಶರ್ಮರ ಪುಸ್ತಕದಲ್ಲಿಯಂತೆ ಹಿಂದೆ ಮತ್ತು ಸಂಶೋಧನಾತ್ಮಕ ವಿಚಾರಗಳು ಅಭಿನ್ನವಾಗಿ ಹೆಣೆದುಕೊಂಡಿಲ್ಲ. ಮುಂದಿನ ಮುದ್ರಣದಲ್ಲಾದರೂ ಈ ಪುಸ್ತಕಕ್ಕೆ ಅಗತ್ಯವಿರದ ಕೆಲವು ನಿಂದಾತ್ಮಕ ಪದಗಳನ್ನು, ಅಗ್ಗಳಿಕೆಯ ಮಾತುಗಳನ್ನು ಕಿತ್ತುಹಾಕಿ ಇಸ್ಪಷ್ಟ ವಿಚಾರವನ್ನು ಸೇರಿಸಿ ಪುಸ್ತಕದ ಬೆಲೆಯನ್ನು ಹೆಚ್ಚಿಸಲಿ ಎಂಬುದಷ್ಟೇ ಸಹೃದಯ ವಿಮರ್ಶಕನ ಆಶಯವಾಗಿದೆ.

ಅಮೆರಿಕನ್ನನ ಪ್ರಾಮಾಣಿಕತೆ

ಬೆಂಜಮಿನ್ ಫ್ರಾಂಕ್ಲಿನ್ ತನ್ನ ಆರಂಭದ ದಿನಗಳಲ್ಲಿ ಸಮಾಚಾರ ಪತ್ರಿಕೆಯೊಂದನ್ನು ಮುದ್ರಿಸುತ್ತಿದ್ದನು. ಮುಂದೆ ಆ ಪತ್ರಿಕೆಯ ಸಂಪಾದಕನೂ ಪ್ರಕಾಶಕನೂ ಆದನು. ಅವನಲ್ಲಿ ಪ್ರಾರಂಭಿಕ ಬಡವೆ ವಸ್ತುಗಳೇನೂ ಹೆಚ್ಚಿರಲಿಲ್ಲ.

ಒಂದೊಮ್ಮೆ ಅವನಿಗೆ ಹಣದ ಅಗತ್ಯ ಹೆಚ್ಚಾಯಿತು. ಒಬ್ಬ ಶ್ರೀಮಂತನಲ್ಲಿ ಹೋಗಿ ಇಪ್ಪತ್ತು ಡಾಲರ್‌ಗಳನ್ನು ಬೇಡಿದನು. ಶ್ರೀಮಂತನಿಗೂ ಫ್ರಾಂಕ್ಲಿನನಿಗೂ ಪೂರ್ವಪರಿಚಯವಿರಲಿಲ್ಲ. ಆದರೂ ಅವನು ಇಪ್ಪತ್ತು ಡಾಲರ್‌ಗಳನ್ನು ಹಿಂದೆ ಮುಂದೆ ನೋಡದೆ ಕೊಟ್ಟುಬಿಟ್ಟನು. ಕೆಲ ಸಮಯದಲ್ಲಿ ಫ್ರಾಂಕ್ಲಿನ್ ಬಹಳ ಜತನದಿಂದ ಇಪ್ಪತ್ತು ಡಾಲರ್‌ಗಳನ್ನು ಕೂಡಿಸಿದನು. ಅದನ್ನು ತನ್ನ ಸಾಲಿಗನಿಗೆ ಮುಟ್ಟಿಸಲು ಹೋದನು.

ಡಾಲರ್‌ಗಳನ್ನು ಆ ಶ್ರೀಮಂತನ ಮೇಜಿನ ಮೇಲೆ ಫ್ರಾಂಕ್ಲಿನ್ ಇಟ್ಟನು. ತಾನೆಂದೂ ನಿನಗೆ ಸಾಲ ನೀಡಿದ್ದಿಲ್ಲವೆಂದು ಆತ ವಾದಿಸತೊಡಗಿದನು. ಆತ ಅತ್ಯಂತ ಚಕಿತನಾಗಿದ್ದನು. ಫ್ರಾಂಕ್ಲಿನ್ ತಾನು ಇಪ್ಪತ್ತು ಡಾಲರ್ ಸಾಲ ಪಡೆದುಕೊಂಡ ಘಟನೆಯನ್ನು ಎಳೆಎಳೆಯಾಗಿ ಬಿಡಿಸಿ ವಿವರಿಸಿ ಹೇಳಿದ

“ಹೌದು, ಕೊಟ್ಟಿದ್ದೇನೆ.”

‘ಅದಕ್ಕಾಗೇ ಅದನ್ನು ಮರಳಿಸಲು ಬಂದಿದ್ದೇನೆ.’

“ಮರಳಿಸುವ ಪ್ರಶ್ನೆಯೇ ಅಂದು ಬಂದಿರಲಿಲ್ಲ. ನೀನು ಮರಳಿಸಬೇಕೆಂದು ನಾನೂ ಹೇಳಿದ್ದಿಲ್ಲ; ಯೋಚಿಸಿದ್ದೂ ಇಲ್ಲ.’

ಅವನು ಮುಂದುವರಿಸಿ ಹೇಳಿದನು—

‘ಚಿಂತಿಲ್ಲ. ಈ ಇಪ್ಪತ್ತು ಡಾಲರ್‌ಗಳು ನಿನ್ನ ಬಳಿಯೇ ಇರಲಿ. ಅಂದು ನಿನಗೊದಗಿದ ಅಗತ್ಯದಂತೆಯೇ ಮತ್ತಾರಿಗಾದರೂ ಕಷ್ಟಕಾಲ ಬಂದೀತು. ಅವರು ನಿನ್ನ ಬಳಿಗೆ ಬಂದು ಬೇಡಿಯಾರು. ಆಗ ಅದನ್ನು ಅವರಿಗೆ ಕೊಟ್ಟುಬಿಡು. ಅವನೂ ನಿನ್ನಂತೆಯೇ ಪ್ರಾಮಾಣಿಕನಾಗಿದ್ದರೆ, ಒಂದಲ್ಲ ಒಂದು ದಿನ ಅದನ್ನು ಹಿಂದಿರುಗಿಸಲು ಬಂದಾನು. ಆಗ ನೀನೂ ಅವನೊಡನೆ ಹೇಳಬೇಕು—ಇದು ನಿನ್ನ ಬಳಿಯೇ ಇರಲಿ. ಅಗತ್ಯವುಳ್ಳವರು ಬಂದು ಕೇಳಿದಾಗ ಅವರಿಗೆ ಕೊಟ್ಟುಬಿಡು.’ ಬೆಂಜಮಿನ್ ಫ್ರಾಂಕ್ಲಿನ್ ಅದಕ್ಕೊಪ್ಪಿ ತನ್ನ ಮನೆಗೆ ಬಂದನು.

ಆ ಇಪ್ಪತ್ತು ಡಾಲರ್‌ಗಳು ಇಂದಿಗೂ ಅಮೆರಿಕೆಯ ಪ್ರಜಾಪ್ರಭುತ್ವದಲ್ಲಿ ಒಬ್ಬರಲ್ಲ ಒಬ್ಬನ ಅವಶ್ಯಕತೆಯನ್ನು ಪೂರೈಸುತ್ತ ಇಂದಿಗೂ ತಿರುಗಾಡಿಕೊಂಡಿವೆಯೆಂದು ಹೇಳುತ್ತಾರೆ.

ಅಮೆರಿಕೆಯ ಜನರ ಪ್ರಾಮಾಣಿಕತೆಗೆ ಇದಕ್ಕಿಂತ ಹೆಚ್ಚಿನ ಉದಾಹರಣೆ ಬೇಕೆ?

ಬಹುಸಂಖ್ಯಾತ ಜನರು ತಮ್ಮ ತಿಳುವಳಿಕೆಯ ಕೊರತೆಯ ಪೂರ್ತಿಯನ್ನು ಕ್ರೋಧದಿಂದ ಮಾಡಿಕೊಳ್ಳುತ್ತಾರೆ.

o o o

ಕ್ರೋಧ ಯಾವಾಗಲೂ ಮೂರ್ಖತನದಿಂದ ಶುರುವಾಗುತ್ತದೆ. ಹಾಗೂ ಪಶ್ಚಾತ್ತಾಪ (ಪ್ರಾಯಶ್ಚಿತ್ತ)ದಲ್ಲಿ ಮುಕ್ತಾಯಗೊಳ್ಳುತ್ತದೆ.

o o o

ತನ್ನ ಪ್ರತಿ ಮೂರ್ತಿ ಎಂದರೆಯೇ ವಿಶ್ವ.

o o o

ನಾವು ಅಂತರಿಕ ಮೌಲ್ಯಕ್ಕೆ ಮಹತ್ವ ಕೊಡದೆ ಬಾಹ್ಯ ಅಂಶಗಳಿಗಾಗಿಯಷ್ಟೇ ಬಡಬಡಿಸುವುದು ನಿಜಕ್ಕೂ ಸೋಜಿಗದ ವಿಷಯ.

o o o

ಒಬ್ಬನು ಬೀಡಿ ಸೇದಿ ಒಗೆದ ಬೆಂಕಿಯಿಂದ ಇಡೀ ಊರೇ ಸುಟ್ಟುಹೋಗಬಹುದು. ಒಬ್ಬನ ತಪ್ಪಿನ ಫಲವು ಇಡೀ ಊರೇ ಅನುಭವಿಸ ಬೇಕಾಗಿ ಬರುವ ಇದೊಂದು ಉದಾಹರಣೆ.

o o o

ಹಿಂದೆ ಕಳವು ಮಾಡಿದವರಿಗೆ ಕೈ ಕೊಯ್ಯುವುದೇ ಶಿಕ್ಷೆಯಾಗುತ್ತಿತ್ತು. ಆದರೆ ಈಗ ಯಾರೂ ಈ ಕ್ರಮವನ್ನೇ ಸಮರ್ಥಿಸರು. ಸಮಾಜದ ಮನಸ್ಸು ಕೂಡ ಪರಿವರ್ತನೆಯಾಗ ಬಹುದೆಂಬ ಬಗ್ಗೆ ಇದೊಂದೇ ಸಾಕ್ಷಿ.

o o o

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

Gram: VISHWA Tel: 29111
When at Bangalore
Stay at
HOTEL NATARAJA
Restaurant, Boarding & Lodging.
107 Police Road, City Market,
BANGALORE-2
Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ
ಮಿತ ಸಂತತಿ
ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0-75 ಪೈಸೆ ಮಾತ್ರ.
ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ.
ಪಾಲಿಕೋಟೆ, ಉಡುಪಿ, ದ. ಕ.

ವೇದಾಂತ ಬೋಧಾಂತವೆ?

ಬರೆದವರು : "ದೇವಕಿನಂದನ", ಭದ್ರಾವತಿ.

ವೇದಾಂತ ಅಂದರೇನು?

ಶಬ್ದವೇ ಸೂಚಿಸುವಂತೆ ಅದು ವೇದಗಳ ಅಂತ; ಕೊತ್ತಕೊನೆ. ಹಾಗಿದ್ದರೆ ವೇದವೆಂದರೇನೆಂಬ ಪ್ರಶ್ನೆ ಸಹಜವಾಗಿ ಹುಟ್ಟಿಕೊಳ್ಳುತ್ತದೆ. ಈ ವೇದ ಶಬ್ದವನ್ನು ನಮ್ಮ ಹಿರಿಯರು ಯಾವ ಅರ್ಥದಲ್ಲಿ ಬಳಸಿದರು?

ವೇದ ಎಂದರೆ ತಿಳುವಳಿಕೆ; ಜ್ಞಾನ. ಒಂದು ಕಾಲದಲ್ಲಿ ಜನ, ಸತ್ತಲಿನ ಬದುಕು, ಪ್ರಪಂಚದ ಕುರಿತು ಮಾಡಿಕೊಂಡ—ಅವರ ದೃಷ್ಟಿಯಿಂದ ಖಚಿತವಾದ—ತಿಳುವಳಿಕೆಯ ಸಂಗ್ರಹವೇ ವೇದ. ಆ ತಿಳುವಳಿಕೆಯಲ್ಲವೆಂದು ಅನಂತರ ಅನುಭವಕ್ಕೆ ಬಂದರೆ—?

ಹೀಗೆ ವಿಮರ್ಶಿಸ ಹೊರಟರೆ ವೇದಾಂತದಲ್ಲಿ, ವೇದಗಳಲ್ಲಿ ಕಂಡು ಬರುವ ವಿಚಾರಗಳ ವಿಕಾಸವನ್ನು, ಅದರ ಪರಾಕಾಷ್ಠೆಯನ್ನು ನಾವು ಕಾಣುವುದಿಲ್ಲ. ಆದರೆ ಅವೆರಡನ್ನು ತೂಗಿ ನೋಡಿದಾಗ, ಅವು ಪರಸ್ಪರ ಪೂರಕವಿರುವುದನ್ನು ನಾವು ಕಾಣುವುದಿಲ್ಲ. ತದ್ವಿರುದ್ಧವಾದ ಅಭಿಪ್ರಾಯಗಳು ಅವೆರಡರಲ್ಲಿ ಬಿಂಬಿತವಾಗಿವೆ. ವೇದಗಳಲ್ಲಿ ಬದುಕಿನ ಬಗ್ಗೆ ಅತ್ಯಾಸಕ್ತಿಯನ್ನು ಪ್ರದರ್ಶಿಸಲಾಗಿದೆ. ವೇದಗಳು ಬದುಕನ್ನು ತುಚ್ಛವೆಂದು ತಿಳಿದಂತೆ ಕಂಡು ಬರುವುದಿಲ್ಲ. ಜೀವನದ ಬಗ್ಗೆ ಅವು ಎಂದೂ ಜಿಗುಪ್ಸೆ ತಳೆದಿರಲಿಲ್ಲ. ವೇದ ಕಾಲದ ಋಷಿಗಳು, ಆಯುಷ್ಯದ ಹೆಚ್ಚಳಕ್ಕೆ, ಬದುಕು ಸುಖದಾಯಕವಾಗಿ ಸೌಕರ್ಯಗಳು ಹೆಚ್ಚಲಿ ಎಂದು ಬಯಸಿದ್ದನ್ನು ಪ್ರಾರ್ಥನೆ ಸಲ್ಲಿಸಿದ್ದನ್ನು ನಾವು ಕಾಣುತ್ತೇವೆ. ತಮ್ಮ ಆಹಾರ, ತಮ್ಮ ಸುಖ, ತಮ್ಮ ಮಕ್ಕಳು ಮರಿಗಳ ಅಭ್ಯುದಯವನ್ನು ಅವರು ಅಪೇಕ್ಷಿಸಿದ್ದರು. ವ್ಯಾಪಾರದಲ್ಲಿ ಉತ್ಕರ್ಷವನ್ನು ಯುದ್ಧದಲ್ಲಿ ಜಯವನ್ನು ಗೋಸಂಪದಭಿವೃದ್ಧಿಯನ್ನು ಅವರು ಬೇಡಿದ್ದರು. ಇವುಗಳೆಲ್ಲ ಇಹಕ್ಕೆ ಸಂಬಂಧಿಸಿದವು. ನಾವು ವೇದಗಳಲ್ಲಿ ಭೌತವಾದದ ಮೂಲವನ್ನು ಬೀಜ ರೂಪದಲ್ಲಿ ಇಲ್ಲಿ-ಅಲ್ಲಿ ಕಾಣುತ್ತೇವೆ.

ವೇದಾಂತ ಹಾಗಲ್ಲ. ಅದು, ನಮ್ಮನ್ನು ಕಾಣದ, ಅನುಭವಿಸಲು ಶಕ್ಯವಲ್ಲದ ಪ್ರಪಂಚಕ್ಕೆ ಕರೆದೊಯ್ಯುವ ಚಿತ್ತಸ ತ್ತದೆ. ವೇದಗಳಲ್ಲಿ ಜೀವನವಾದ, ವೇದಾಂತದಲ್ಲಿ ಬ್ರಹ್ಮವಾದ ಪ್ರತಿಪಾದಿಸಲ್ಪಟ್ಟಿದೆ ಎಂದು ಸಾಧಿಸುವವರಿಗೆ ಪ್ರಮಾಣ ಕೊರತೆಯಿಲ್ಲ. ಇದೂ ಬುಡವಿಲ್ಲದ ಪ್ರತಿಪಾದನೆ, "ಅಳಿಯ ಅಲ್ಲ, ಮಗಳ ಗಂಡ" ಅಂದಂತೆಯೇ!

ಪ್ರಕೃತಿಯ ಒಂದೊಂದು ಘಟನೆಯನ್ನು ನಮ್ಮ ಹಿರಿಯರು ವಿವರಿಸಲು ಯತ್ನಿಸಿದರು. ಆ ಒಂದೊಂದು ಘಟನೆಯ ಹಿಂದೆ-ಅದರ ಆಗುಹೋಗುವಿಕೆಗೆ-ನಿಂತು ಕೆಲಸ ಮಾಡುವ ಅಗೋಚರ ಶಕ್ತಿಯೊಂದಿದೆ ಎಂದು ಅನುಮಾನಿಸಿದರು. ಆ ಶಕ್ತಿಗಳು ಜೀವಂತವೆಂಬ ತೀರ್ಮಾನಕ್ಕೂ ಬಂದರು. ಈ ಕೋಟಿ ಕ್ರಮ ದೈವವಾದ ದೇವವಾದ ಉಗಮಕ್ಕೆ ಪ್ರಮುಖ ಕಾರಣ. ತಮ್ಮ ಈ ನಿಲುವನ್ನು ಅವರು ಮನುಷ್ಯ ಬದುಕಿಗೂ ಅನ್ವಯಿಸಿದರು.

ಮನುಷ್ಯ ಹುಟ್ಟುತ್ತಾನೆ, ಚಲಿಸುತ್ತಾನೆ, ಬೆಳೆಯುತ್ತಾನೆ, ಬಾಳುತ್ತಾನೆ. ಇದು ಎಲ್ಲರೂ ಕಾಣುವ ವಿಷಯ. ಆದರೆ ಏಕೆ ಆಗುತ್ತಿದೆ? ಈ ತೊಡಕನ್ನು ಅವರು ಬಿಡಿಸ ಹೊರಟರು, ಮಾನವ್ಯನ ಒಳಗೊಬ್ಬ ಬಾಹ್ಯಕ್ಕೆ ಕಾಣದಿರುವ ಸಣ್ಣ ಮನುಷ್ಯನಿರಬೇಕು, ಆ ಒಳಗಿರುವ ಸಣ್ಣ ಮನುಷ್ಯ ಚಾಲನೆ ಕೊಡುತ್ತಿರುವ ಕೇಂದ್ರವೆಂದು ಅವರು ತರ್ಕಿಸಿದರು. ಆ ಒಳಗಿರುವ ಮನುಷ್ಯನನ್ನು ಅವರು ಆತ್ಮ ಎಂದು ಕರೆದರು. ಈ ಆತ್ಮನ ತಾತ್ಕಾಲಿಕ ಗೈರುಹಾಜರಿ, ಎಂದರೆ ನಿದ್ರೆ; ಶಾಶ್ವತ ಗೈರುಹಾಜರಿಯೆಂದರೆ ಸಾವು.

ನಮಗೆ ನಿದ್ರೆಯಲ್ಲಿ ಕನಸುಗಳು ಬೀಳುವುದುಂಟು. ಆ ಸಮಯದಲ್ಲಿ ಆತ್ಮ ದೇಹದಿಂದ ದೂರ ಸರಿದು, ತನಗೆ ಉಚಿತವೆನಿಸಿದಲ್ಲಿ ಅಲೆಯುತ್ತಾನೆ, ಎಂದು ಅವರು ಸಿದ್ಧಾಂತಿಸಿದರು. ಆತ್ಮ ದೇಹಕ್ಕಿಂತ ಬೇರೆ, ವಿಭಿನ್ನ ಎನ್ನುವ ನಮ್ಮ ವೇದ ಕಾಲದ ಜನರ ಅತ್ಯಂತ ಪ್ರಾಥಮಿಕ ಕಲ್ಪನೆಯ ಚರಮ ಸೀಮೆ ವೇದಾಂತದ ಬ್ರಹ್ಮವಾದ. ಈ ಆಳವಾದ ನಂಬುಗೆ ಕರ್ಮ ಫಲದ ಸಿದ್ಧಾಂತಕ್ಕೂ, ಆತ್ಮ ಅವಿನಾಶಿ—ಈ ದೇಹ ಹಳತಾಗೊಡನೆ—ಇನ್ನೊಂದನ್ನು ಹಿಡಿಯುತ್ತಾನೆ ಎನ್ನುವ ವಿಚಾರದ ಪ್ರಚಾರಕ್ಕೂ ಎಡೆ ಮಾಡಿತು. ಆದ್ದರಿಂದ ವೇದಾಂತದ ಬ್ರಹ್ಮವಾದ ವಿಶಿಷ್ಟವಾದ ವಾದ ಸರಣಿ ಎನ್ನುವುದರಲ್ಲಿ ಅರ್ಥವಿಲ್ಲ. ಅದಕ್ಕೂ, ಅದರ ಹಿಂದಿದ್ದ ವಾದ ವೈಖರಿಗೂ ಸಂಬಂಧವಿಲ್ಲ ಎನ್ನುವುದರಲ್ಲಿ ಹುರುಳಿಲ್ಲ.

ವಿಶ್ವವನ್ನೂ, ಸುತ್ತಲಿನ ಬದುಕನ್ನೂ, ವೇದ, ವೇದಾಂತಗಳು ನೋಡುವ ದೃಷ್ಟಿಯಲ್ಲಿಯೂ ತುಂಬಾ ಅಂತರ. ಅವುಗಳೊಳಗೆ ಧ್ರುವಗಳ ಅಂತರ ಇದೆ. ಸಹಜವೂ, ಆರೋಗ್ಯಕರವೂ ಆದ ಭಾರತೀಯ ತತ್ವಶಾಸ್ತ್ರದ ಬೆಳವಣಿಗೆಯನ್ನು ವೇದಾಂತ ಬಹು ಮಟ್ಟಿಗೆ ಕುಂಠಿಸಿತು. ಮನುಷ್ಯ ತನ್ನ ಬಾಳಿನಲ್ಲಿ, ಅಷ್ಟೋ—ಇಷ್ಟೋ ಪ್ರಮಾಣದಲ್ಲಿ, ಕಷ್ಟ-ಸುಖ, ನೋವು-ನಲಿವು 'ಗಳನ್ನು ಅನುಭವಿಸುತ್ತಾನೆ—ಆದ್ದರಿಂದ ಬದುಕನ್ನೇ ಅಲ್ಲಗಳೆದು, ಅದನ್ನು ಬಂಧನವೆಂದು ಪರಿಗಣಿಸುವ ಅಭಿಪ್ರಾಯ ಸ್ಪಷ್ಟವಾಗಿ ಬೆಳೆದು ಬರುವುದಕ್ಕೆ ವೇದಾಂತ ಕಾರಣ ಎಂದರೆ ತಪ್ಪಾಗಲಾರದು. ಈ ಪ್ರಪಂಚ ಒಂದು ಮಿಥ್ಯ, ಬದುಕು ಒಂದು ಬಾಧೆ ಎನ್ನುವ ಮಾತು ವೇದಗಳಲ್ಲಿ ಹುಡುಕಿದರೂ ಸಿಗುವುದಿಲ್ಲ, ಆದರೆ ವೇದಾಂತದಲ್ಲಿ ಕೈಯಿಟ್ಟಲ್ಲಿ ಕಾಣಬಲ್ಲೆವು.

ವೇದಾಂತದಲ್ಲಿ ಸೂಚಿತವಾದ ಜೀವನ ದೃಷ್ಟಿ, ಬದುಕಿನಲ್ಲಿ, ಮೇಲ್ಮೆ ಪ್ರಗತಿಗಳನ್ನು ಸಾಧಿಸಲು ಸಹಾಯಕವಾಗುವುದಿಲ್ಲ. ಸತ್ಯವನ್ನು ಅದು ಮಿಥ್ಯವೆಂದೂ ಕನ್ನಡಿಯೊಳಗಿನ ಗಂಟನ್ನು ನಿಜವೆಂದು ನಂಬಲೂ ಅದು ನಮ್ಮನ್ನು ಒತ್ತಾಯಿಸುತ್ತದೆ— ನಮ್ಮ ಸುತ್ತು ನಾವು ಕಾಣುವ ಪ್ರಪಂಚ ಅವಾಸ್ತವ ಎಂದಾದರೆ, ಅದರ ಕುರಿತು ಖಚಿತವಾದ ತಿಳುವಳಿಕೆ ಸಾಧ್ಯವಿಲ್ಲ ಎನ್ನುವುದಾದರೆ ಅಭಿವೃದ್ಧಿ ಹೇಗೆ ಸಾಧ್ಯ? ಉತ್ಪಾದನಾಶಕ್ತಿಯ ಅಭಿವೃದ್ಧಿಗೆ ಭೌತಿಕ ಪ್ರಪಂಚದ ತಿಳುವಳಿಕೆ ಹೆಚ್ಚುತ್ತ ಹೋಗುವುದು ಅನಿವಾರ್ಯ. ಈ ನೆಲದಲ್ಲಿ ನಾವು ನಡೆಸುವ—ನಡೆಸಲೇ ಬೇಕಾಗಿರುವ— ಬದುಕನ್ನು ತ್ಯಜಿಸಿ, ಕಾಣದ ಇನ್ನೊಂದು ಪ್ರಪಂಚದಲ್ಲಿ ಶಾಂತಿಯನ್ನು ಹೊಂದುವುದು ಶ್ರೇಷ್ಠವೆಂದು ವೇದಾಂತ ಹೇಳ ಹೋಗುವುದರಿಂದ, ಭೌತ ಪ್ರಪಂಚದ ಅರಿವನ್ನು ಅತ್ಯೂನ್ಯ ಮಾಡಿದಂತಾಯಿತು. ಈ ಮಾನಸಿಕ ಗೊಂದಲದ ನಿರ್ಮಾಣದಿಂದ ಜ್ಞಾನದ ಬೆಳವಣಿಗೆ, ಸಂಚಯ, ಎರಡೂ ಅಸ್ಥಿರವಾಗುವುದು. ಈ ಆದರ್ಶ ವಿಚಾರಧಾರೆ ಭೌತಿಕ ಪ್ರಗತಿಗೆ ಉತ್ತೇಜನ ಕೊಡಲು ಅಸಮರ್ಥವಿದೆ.

ವೇದಾಂತದ ವಿಚಾರ ಪ್ರವಾಹ ಸುಸಂಬದ್ಧವಿಲ್ಲ. ಅನೇಕ ಕಡೆ ಅದು ತರ್ಕಶುದ್ಧವೂ ಅಲ್ಲ. ವಿವಿಧ ಕಾಲಗಳಲ್ಲಿ ವಾಸವಾಗಿದ್ದ ಋಷಿಗಳ ವಿಚಾರಗಳನ್ನು ಅದರಲ್ಲಿ ಅಳವಡಿಸಲಾಗಿದೆ. ಈ ಅಲೋಚನಾ ಕ್ರಮವನ್ನು ಅನಂತರದಲ್ಲಿ ಬಂದ ಭಾಷ್ಯಕಾರರು ತಮಗೆ ಸರಿ ಕಂಡಂತೆ ವಿವರಿಸಿದ್ದಾರೆ. ವಿಧವಿಧದ ವಿವರಣೆ ಕೊಡಲು ಪ್ರಯತ್ನಿಸಿದ್ದಾರೆ. ವೇದಾಂತ ಆದರ್ಶವಾದವನ್ನು ಎತ್ತಿ ಹಿಡಿದಿದೆ ಎಂದು ಹೇಳುವವರೂ ಇದ್ದಾರೆ. ಹೀಗೆ ಹೇಳುವುದನ್ನು ನಂಬುವವರೂ ಇದ್ದಾರೆ. ಆದಿ ಶಂಕರರು ವೇದಾಂತವೆಂದರೆ ಏಕೇಶ್ವರವಾದ ಎಂದೇ ತಿಳಿಯಪಡಿಸಿದರು. ಅವರ ಕೋಟಿ ಕ್ರಮದಂತೆ 'ಬ್ರಹ್ಮನ್' ಪರಮ ಸತ್ಯ—ದೃಶ್ಯ ಪ್ರಪಂಚ ಅವಾಸ್ತವ. ಅದು ನಿಜಕ್ಕೂ ಇಲ್ಲ; ಇದ್ದಂತೆ ಕಾಣುತ್ತಿದೆ ಅಷ್ಟೆ! ಇಲ್ಲದಿರುವುದು ಇದೆಯೆಂದು ಕಾಣುವುದಕ್ಕೆ ಮಾಯೆಯ ಮುಸುಕು ಕಾರಣ. ಆಚಾರ್ಯರ ಈ ಶುದ್ಧ ಏಕೇಶ್ವರ ವಾದವನ್ನು ಉಳಿದ ವೈಷ್ಣವ ಶಾಖೆಯ ಪುರಸ್ಕರ್ತರ ಆಕ್ಷೇಪಿಸಿದರು.

ಈ ಶಾಖೆಗಳವರು ಪ್ರಪಂಚದ ಸತ್ಯತೆಯನ್ನು ಅಲ್ಲಗಳೆಯಲಿಲ್ಲ. ಅವರಿಗೆ ಅದು ಮಾನ್ಯ. ಆದರೂ ಆಚಾರ್ಯರಂತೆ ಅವರಿಗೂ ಬ್ರಹ್ಮನ್ ದೃಶ್ಯ ಪ್ರಪಂಚದ ಮೂಲ ಹೇತು— ಆದ್ದರಿಂದ ಈ ವಿಚಾರ ಶಾಖೆಗಳನ್ನು ಶ ಖಾಂತರಗಳೆಂದೇ ಕರೆಯಬೇಕಾಗುತ್ತದೆ- ಇಷ್ಟೇ ವ್ಯತ್ಯಾಸ ಈ ಶಾಖೆಗಳ ಪುರಸ್ಕರ್ತರು ದೃಶ್ಯ ಪ್ರಪಂಚವನ್ನು ಸಾಪೇಕ್ಷಕ ಸತ್ಯ ಎಂದು ಮನಗಂಡರು.

ಕ್ರಿಸ್ತಪೂರ್ವ ಏಳನೆಯ ಶತಮಾನದಲ್ಲಿ ವೇದಾಂತ ಶಾಖೆ ಹೆಚ್ಚಿನ ಸ್ಪರ್ಧೆ ಮಾನಕ್ಕೆ ಬಂತು. ಈ ಅಭೂತಪೂರ್ವ ಬೆಳವಣಿಗೆಗೆ ಕಾರಣಗಳು ಇಲ್ಲದಿಲ್ಲ. ಮಹಾಭಾರತದಲ್ಲಿ ವರ್ಣಿತವಾದ ಸ್ಥಿರ ಕಾಲದ ಹಳೆಯ ಸಾಮಾಜಿಕ ಸಂಬಂಧಗಳನ್ನು ಹಾಳುಗೆಡವಿತು. ಆ ಸಾಮಾಜಿಕ ವ್ಯವಸ್ಥೆ ತನ್ನ ಉಪಯುಕ್ತತೆಯನ್ನು ಅಷ್ಟರಲ್ಲಿ ಕಳೆದುಕೊಂಡಿತು. ಮಹಾಭಾರತ ಯುದ್ಧದಿಂದಾಗಿ ದೇಶ ತುಂಬ ಕಷ್ಟ, ಕಾರ್ಪಣ್ಯ, ದುಃಖ-ದಾರಿದ್ರ್ಯ ತಲೆ ಹಾಕಿತು. ಈ ಜಂಜಾಟದಿಂದ ವ್ಯಕ್ತಿಗೆ ಆದ ಬಿಡುಗಡೆ ಬೇಕಾಗಿತ್ತು. ಅದನ್ನು ತಪ್ಪಿಸಿಕೊಳ್ಳುವ ಸಾಧನವಾಗಿ ವೇದಾಂತ ರೂಪ ಗೊಂಡಿತು. ಅಂದಿನ ಅಗತ್ಯತೆಯನ್ನು ಪೂರೈಸಲು ಅದು ಮುಂದು ಬಂತು. ದೃಶ್ಯ ಜಗತ್ತಿನ ಅಸ್ತಿತ್ವವನ್ನು ಅಲ್ಲಗಳೆದು, ಅದರಾಚೆಗಿರುವ ಪ್ರಪಂಚದಲ್ಲಿ ನೆಮ್ಮದಿಯನ್ನು ಕಂಡು ಕೊಳ್ಳುವುದೇ, ಅದಕ್ಕೆ ಪರಿಹಾರವೆಂದು ಅದು ಸೂಚಿಸಿತು. ಈ ಸಂದುಕಟ್ಟಿನ ದಿನಗಳಲ್ಲಿ ವೇದಾಂತಕ್ಕೆ ಪ್ರತಿಸ್ಪರ್ಧಿಯಾಗಿ ಇನ್ನೊಂದು ವಿಚಾರ ಶಾಖೆಯೂ ಬೆಳೆದು, ಬೇರು ಬಿಡಲು ಪ್ರಯತ್ನಿಸಿತು. ಈ ಶಾಖೆಯವರು ಅನುಭವ ಜನ್ಯ ಜ್ಞಾನವನ್ನೇ ಎಲ್ಲ ವಿದ್ಯಮಾನಗಳ ವಿವರಣೆಗೂ ಸಾಧನವನ್ನಾಗಿ ಬಳಸಿದರು. ಸ್ವರೂಪದಲ್ಲಿ ಇದು ಶುದ್ಧ ಭೌತ ವಾದವೇ ಇತ್ತು—ಈ ಶಾಖೆಯವರು ಬದುಕನ್ನು ಉತ್ತೇಜಿಸ ಬಲ್ಲ ಮೌಲ್ಯಗಳನ್ನು ಗುರುತಿಸಲು ಹೆಣಗಿದರು. ಮನುಷ್ಯನ ವಿಕಾಸಕ್ಕೆ, ಅವನು ಅಗತ್ಯವೆಂದು ಕಂಡುಕೊಂಡ ಸಮಾಜರಚನೆಗೆ, ಭೌತಿಕ ಪ್ರಪಂಚದ ಕುರಿತು ಮಾಡಿಕೊಂಡ ಖಚಿತ ಜ್ಞಾನವೇ ಸಹಾಯಕವಾಗುವುದೆಂದು ಸೂಚಿಸಿದರು. ಈ ವಿಚಾರದ ತುಂಬು ಹೊಳೆಯ ಪ್ರವಾಹದಲ್ಲಿ ಆತ್ಮ ವಿಶ್ವಾಸವನ್ನು ಕುದುರಿಸಿತು. ಬಿಡುಗಡೆಯ ಭರವಸೆಯನ್ನು ತಂದು ಕೊಟ್ಟಿತು. ಈ ಜೀವ ಸತ್ವ ವೇದಾಂತದಲ್ಲಿ ಹುಡುಕಿದರೂ ಸಿಗುವುದು ದುರ್ಲಭ. ಈ ವಿಚಾರ ಪಂಥದ ಬೇರುಗಳನ್ನು ನಾವು ವೇದಗಳಲ್ಲಿ ಗುರುತಿಸಬಹುದು.

ಭಾರತೀಯ ಭೌತವಾದಿಗಳ ವಿಚಾರ ಆರಂಭದಲ್ಲಿ ಶುದ್ಧವೂ, ಸುಸಂಬದ್ಧವೂ ಆಗಿರಲಿಲ್ಲ. ಇರುವುದು ಸಾಧ್ಯವೂ ಇಲ್ಲ. ಆದರೂ ರೂಢ ಮೂಲವಾದ ಧಾರ್ಮಿಕ ಅಭಿಪ್ರಾಯಗಳನ್ನು ಎದುರಿಸಿ, ಜೀವನ ಮೌಲ್ಯಗಳನ್ನು ಗುರುತಿಸಿ, ಸಾಮಾಜಿಕ ಪ್ರಗತಿಗೆ ಅದು ದಾರಿ ಮಾಡಿಕೊಟ್ಟಿತು. ಅವರ ಸಂತತವಾದ ಪ್ರಯತ್ನದಿಂದ ನಮ್ಮ ದೇಶ ವಿವಿಧ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸಿತು-ಆ ವಿಚಾರ ಶಾಖೆಗೆ ಬೆಳೆಯಲು ಅವಕಾಶ ಸಿಕ್ಕಿದ್ದರೆ —ಹೊಸ ಅನುಭವಗಳ ಬಲದಿಂದ-ಇದ್ದ ಲೋಪ—ದೋಷಗಳನ್ನು ತಿದ್ದಿಕೊಂಡು, ಆಧುನಿಕ ನಾಗರಿಕತೆಯ ಬೆಳವಣಿಗೆಗೆ ದಾರಿ ಮಾಡಿ ಕೊಡುತಿತ್ತು.

ಈ ಅವಕಾಶವನ್ನು ಈ ದೇಶದ ಜನತೆ ನಿರಾಕರಿಸಿತು. ವೇದಾಂತ ಶಾಖೆಯ ಪುರಸ್ಕರ್ತರು, ಭೌತವಾದದ ಬೆಳವಣಿಗೆಯಲ್ಲಿ ಅಪಾಯವನ್ನು ಗುರುತಿಸಿದರು— ಆದ್ದರಿಂದ ಭೌತವಾದಿಗಳ ಮೇಲೆ ಬಹಿರಂಗ ಯುದ್ಧ ಸಾರಿದರು. ಅವರು ರಚಿಸಿದ ಸೃಜಿಸಿದ ಸಾಹಿತ್ಯವನ್ನು ನಾಶಗೊಳಿಸಿದರು. ಭೌತವಾದಿಗಳ ವಿಚಾರಗಳನ್ನು ತಮ್ಮ ಆದರ್ಶವಾದಕ್ಕೆ ಹೊಂದಿಸಿ ಕೊಳ್ಳಲೂ ಹೆಣಗಿದರು. ಸಾಧ್ಯವಿಲ್ಲವೆಂದು ಕಂಡು ಬಂದಾಗ ಭೌತವಾದವನ್ನು ಹೀಯಾಳಿಸಿದರು. ಸಾಲ ಮಾಡಿ ತುಪ್ಪ ತಿನ್ನುವ ಭೋಗವಾದಿಗಳೆಂದು ಹೀಗಳೆದರು.

(ಅಪೂರ್ಣ)

ಹೊಡೆಯುದೇ ಶಿಕ್ಷಣ ಕೊಡುವುದು ಶಕ್ಯವಿಲ್ಲವೆಂದು ತಿಳಿಯಲಾಗುತ್ತಿತ್ತು. ಹಾಗಿದ್ದರೆ ವಿದ್ಯಾಖಾತೆಯೇ ಬೇಕಾಗಿರಲಿಲ್ಲ. ಪೋಲಿಸ ಖಾತೆಯಿಂದಲೇ ಶಿಕ್ಷಣ ನೀಗಿಸ ಬಹುದಿತ್ತು. ಆದರೆ ಈಗ ಹೊಡೆಯುವ ಶಿಕ್ಷಕರಿಗೆ ಶಿಕ್ಷಣ ಕಲೆಯ ಜ್ಞಾನವಿಲ್ಲ ಎಂದೇ ತಿಳಿಯಲಾಗುತ್ತದೆ.

೦ ೦ ೦

— ಜನಮತ —

ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ಪ್ರಚಲಿತ ರಾಜ್ಯಕೀಯದಿಂದ ದೂರವುಳಿದು ಕೊನೆಯ ದಿನವನ್ನು ನಿರೀಕ್ಷಿಸುತ್ತಿರುವ ಸ್ವಾತಂತ್ರ್ಯ ಯೋಧರನ್ನು ಕಡೆಗಣಿಸ ಬಾರದೆಂದೂ ಅಂತವರ ಪಟ್ಟಿಯನ್ನು ಮಾಡಿ ತನಗೆ ಕಳಿಸಿದರೆ, ಉಚಿತ ಕಾರ್ಯಕ್ರಮ ಕೈಕೊಳ್ಳಲು ರಾಜ್ಯ – ಕೇಂದ್ರ ಸರಕಾರಗಳಿಗೆ ಕಳಿಸ ಬಹುದೆಂದೂ ರಾಷ್ಟ್ರಪತಿ ಶ್ರೀ ಗಿರಿಯವರು ಹೇಳಿದ್ದಾರೆ. ಈ ಪಟ್ಟಿಯನ್ನು ಯಾರು ಮಾಡಬೇಕೆಂಬುದೇ ಪ್ರಶ್ನೆ. ಸ್ವಾತಂತ್ರ್ಯ ಸಮರದ ವೇಳೆ ಪ್ರತಿಫಲಾಪೇಕ್ಷೆ ಇಲ್ಲದೆ ಹೋರಾಡಿದ ಈ ಜನವರ್ಗ ತಮ್ಮ ಭಾವನೆಗಳನ್ನು ಹೇಳಿಕೊಳ್ಳಲು ಮುಂದೆ ಬರಬೇಕೆ? ಸ್ವಾತಂತ್ರ್ಯ ಹೋರಾಟದ ಇತಿಹಾಸ ಬರೆಯುವವರೇ ಇಂತಹ ಮರೆತು ಯೋಧರ ಹೆಸರನ್ನೂ ಮರೆತುಬಿಟ್ಟ ಉದಾಹರಣೆಗಳು ಬೇಕಷ್ಟಿರುವಾಗ ಅಧಿಕಾರಾರೂಢರೇ ಯುವಜನರೂ ಇಂತಹ ಪಟ್ಟಿ ಮಾಡುತ್ತಾರೆಂದು ಹೇಳಲಾಗದು. ಅಧಿಕಾರಕ್ಕೇ ಅಂಟಿಕೊಂಡಿರುವ ರಾಜ್ಯಕೀಯ ಪುಢಾರಿಗಳು "ತಮಗೆ ಬೇಕಾದ ಕೆಲವರಿಗೆ" ಸ್ವರ್ಗ ಸುಖ ನೀಡಿ ಸೃಷ್ಟಿ ಗೊಂಡ ಕ್ರಾಂತಿ. ಸ್ವಾತಂತ್ರ್ಯಾನಂತರ ಅದರ ಸುಖದ ಸಪ್ಪತ್ತಿಗೆಯಲ್ಲಿ ಮಲಗಿದ ಮಂತ್ರಿ–ಮಾಗಧರಿಗೆ ತಮ್ಮ ಸ್ಥಾನ–ಮಾನಗಳ ಉಳಿವೇ ಮಹತ್ವದ ಪ್ರಶ್ನೆಯಾಗಿರುವಾಗ, ಅವರು ಮರೆಯಲ್ಲಿನ ಈ ಬಡವರ ಬಗ್ಗೆ ಚಿಂತೆ ಮಾಡುವರೆಂಬುದೇ ನಂಬಲಾಗದ ಸಂಗತಿ.

'ಕೆಲಸಕ್ಕೆ ರಾಮ, ಊಟಕ್ಕೆ ಸೋಮ' ಎಂಬ ಜನರಾಡುವ ಮಾತು ಇಲ್ಲೂ ಸತ್ಯವಾಗಿ ಪರಿಣಮಿಸಿದೆಯೆಂಬ ದಕ್ಕೆ ರಾಷ್ಟ್ರಧ್ವಜದ ಮೂಲ ರೂಪಕನ ಪತ್ನಿ ಹೊಟ್ಟೆಗಿಲ್ಲದೆ ಸಾಯುತ್ತಿರುವುದೊಂದು ಉದಾಹರಣೆ.

—ಕೇಶವ ಕುಮಾರ್

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

Ex- Case 11/70 in O. S. 90/66

ಕೆ. ಸುಂದರ ಪೂಜಾರಿ ಸಹಾ

—ಅಮಲ್ಜಾರಿ ಅರ್ಜಿದಾರರು.

ಬೀಮಾಕುಮ್ಮ ಕೂಡಾ

—ಎದ್ರಿ/ಪ್ರತಿವಾದಿರು.

ಬೆಳ್ತಂಗಡಿ ತಾಲ್ಲೂಕು ಗರ್ಡಾಡಿ ಗ್ರಾಮದ ಹೊಸವಳ್ಳ ಎಂಬಲ್ಲಿರುವ ಕೋಟ್ಯಾಡಿ ಇಬ್ರಾಹಿಮ್ ಬ್ಯಾರಿಗಳ ವಿಧವೆ ಬೀಮಾಕುಮ್ಮ/, ಬೀಮಾಕುಮ್ಮಳ ಮಕ್ಕಳು ಇಸ್ಮಾಯಿಲ್/, ಮೊಹಮ್ಮದ್/, ಕೂಡಾ 8 ಜನರಿಗೆ ಕೋರ್ಟಿ ಮುಖಾಂತರ ತಿಳಿಯ ಪಡಿಸುವುದೇನೆಂದರೆ:—

ಮೇಲ್ಕಂಡ ವ್ಯವಹರಣೆಯಲ್ಲಿ ಜಪ್ತಾದ ಸ್ಥಿರಾಸ್ತಿಯ ಏಲಂ ಬಗ್ಗೆ, ಏಲಂನಲ್ಲಿ ದ ಆಸ್ತಿಗೆ ನಿಲ್ಲುವರೇ ತಮಗೂ ಪರ್ಮಿಶನ್ ಕೊಡ್ಸ ಬೇಕೆಂತ ಅಮಲ್ಜಾರಿ ಅರ್ಜಿದಾರರು ಮಾಡಿದ ಅರ್ಜಿಯಲ್ಲಿ ನಿಮ್ಮ ಹಾಜರಾತಿ ಬಗ್ಗೆ ತಾ. 16-10-1970ಕ್ಕೆ ಇಟ್ಟಿರುತ್ತದೆ. ಸದ್ರಿ ನ್ಯಾದಿ ದಿವಸ ನೀವು ಸ್ವತಃ ಯಾ ವಕೀಲರ ದ್ವಾರಾ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿವ್ವಾ ಮಾಡಿ ಸದ್ರಿ ವ್ಯವಹರಣೆಯನ್ನು ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

ನೇಮಿರಾಜ ಶೆಟ್ಟಿ

ಅಮಲ್ಜಾರಿ ಅರ್ಜಿದಾರರ ಕಡೆ ವಕೀಲರು

ಬೆಳ್ತಂಗಡಿ, ತಾ. 22-9-1970.

ಉಡುಪಿ ತಾಲೂಕಿನ ಕೋಟಿನ ಬಳಿ ಕಲ್ಯಾಣಪುರದ ಮಿಲಾಗ್ರಿಸ್ ಕಾಲೇಜಿನ ಪ್ರಿನ್ಸಿಪಲ್ ಡಾ| ಪಿ. ಗುರುರಾಜ ಭಟ್ಟರೂ ಅವರ ತಂಡದವರೂ, ಸಂಶೋಧನೆ ನಡೆಸಿದಾಗ ಹೊಯ್ಸಳ-ಚಾಲುಕ್ಯರ ಕಾಲದ ಹಲವಾರು ದೇವಾಲಯಗಳು ಕಂಡು ಬಂದುವೆಂದು ತಿಳಿಯಿತು. ನಮ್ಮ ಜಿಲ್ಲೆಯಲ್ಲಿ ಇತ್ತೀಚಿನ ಕಾಲದಲ್ಲಿ ಈ ಬಗೆಯ ಸಂಶೋಧನಾ ಕಾರ್ಯಗಳಿಗೆ ತೊಡಗಿದವರಲ್ಲಿ ಇವರೇ ಮೊತ್ತ ಮೊದಲಿಗರು. ಸಂಶೋಧನಾ ಗ್ರಂಥವನ್ನು ಬರೆದೇ ಡಾಕ್ಟರೇಟ್‌ಗಳಿಸಿದ ಪ್ರೊ| ಭಟ್ಟರ ಈ ಉಪಕ್ರಮ ನಿಜಕ್ಕೂ ಶ್ಲಾಘ್ಯ.

ಇತಿಹಾಸ ಕಾಲಕ್ಕೆ ಮೊದಲಿನಿಂದಲೂ ಪ್ರಸಿದ್ಧವಾದ ನಮ್ಮ ಜಿಲ್ಲೆಯಲ್ಲಿ ಸಂಶೋಧನೆಗೆ ಸಾಕಷ್ಟು ಅವಕಾಶವಿದೆಯೆಂಬುದನ್ನು ಇದು ತೋರಿಸುತ್ತದೆ. ಮಿಲಾಗ್ರಿಸ್ ಕಾಲೇಜಿನ ವಿದ್ಯಾರ್ಥಿ-ಪ್ರಾಧ್ಯಾಪಕರು ಸಂಶೋಧನೆಯನ್ನು ಪಾಠೇತರ ಚಟುವಟಿಕೆಯಾಗಿಟ್ಟು ಕೊಂಡಿರುವುದು ನಮ್ಮ ಸೌಭಾಗ್ಯ. ಈ ಯುವಕ ತಂಡದ ಸಾಹಸದಿಂದ ದಕ್ಷಿಣ ಕನ್ನಡದ ಇತಿಹಾಸದ ಮೇಲೆ ಸ್ಪಷ್ಟ ಬೆಳಕು ಬೀಳುವಂತಾಗಲಿ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಪ್ರೋತ್ಸಾಹ ಎಲ್ಲ ರೀತಿಯಲ್ಲೂ ಈ ತಂಡಕ್ಕೆ ಲಭ್ಯವಾಗಲಿ.

—ನಾರಾಯಣ ರಾವ್

ಪ್ರೊ|| ವಿ. ಸೀ. ಅಭಿನಂದನ

ಬೆಂಗಳೂರು, ಕನ್ನಡ ನಾಡಿನ ಖ್ಯಾತ ಕವಿಗಳು, ವಿಮರ್ಶಕರು ಹಾಗೂ ಹಿರಿಯ ಸಾಹಿತಿಗಳೂ ಆದ ಪ್ರೊ| ವಿ. ಸೀತಾರಾಮಯ್ಯನವರ 72ನೇ ಹುಟ್ಟುಹಬ್ಬದ ಶುಭಸಂದರ್ಭದಲ್ಲಿ ಅಭಿನಂದನ ಸಮಾರಂಭವೊಂದನ್ನು ಅಕ್ಟೋಬರ್ 8ರಂದು ಸಂಜೆ 6ಗಂಟೆಗೆ ನಗರದ ಪುಟ್ಟಣ ಚೆಟ್ಟಿ ಪುರಭವನದಲ್ಲಿ ಏರ್ಪಡಿಸಲಾಗಿದೆ. ಶ್ರೀ ಸರಸ್ವತಿ ಪ್ರಕಾಶನದ ಶ್ರೀ ಗುಂಡ್ಮಿ ರಾಮಕೃಷ್ಣ ಐತಾಳರು ಈ ಸಮಾರಂಭವನ್ನು ಏರ್ಪಡಿಸಿದ್ದಾರೆ.

ಈ ಸಂದರ್ಭದಲ್ಲಿ ಶ್ರೀ ವಿ. ಸೀ.ಯವರಿಂದಲೇ ವಿರಚಿತವಾದ "ಮಹನೀಯರು" ಗ್ರಂಥದ ಬಿಡುಗಡೆಯ ಕಾರ್ಯಕ್ರಮವನ್ನೂ ಏರ್ಪಡಿಸಲಾಗಿದೆ.

ನಾಡಿನ ಹಿರಿಯ ಸಾಹಿತಿಗಳಾದ ಡಾ| ಮಾಸ್ತಿ ವೆಂಕಟೇಶ ಅಯ್ಯಂಗಾರರು ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ| ದೇ. ಜವರೇ ಗೌಡ ಅವರು 'ಮಹನೀಯರು' ಗ್ರಂಥದ ಬಿಡುಗಡೆಯನ್ನು ನೆರವೇರಿಸಲಿರುವರು.

ಅಂದಿನ ಸಮಾರಂಭದಲ್ಲಿ ಪ್ರೊ. ವಿ.ಸೀ.ಯವರ ಹಿರಿಯರು, ಸ್ನೇಹಿತರು, ಸಹೋದ್ಯೋಗಿಗಳು ಮತ್ತು ಅಭಿಮಾನಿಗಳು ಪಾಲ್ಗೊಂಡು ಶುಭ ಹಾರೈಸಲಿರುವರು. ಅಭಿನಂದನ ಭಾಷಣವನ್ನು ಪ್ರೊ. ರಾಳ್ಳಪಳ್ಳಿ ಅನಂತಕೃಷ್ಣ ಶರ್ಮ, ಡಾ|ಕೆ. ಶಿವರಾಮ ಕಾರಂತ, ಪ್ರೊ. ಕೆ. ವಿ. ರಾಘವಾಚಾರ್ಯ, ಡಾ|| ಜಿ. ಎಸ್. ಶಿವರುದ್ರಪ್ಪ, ಪ್ರೊ. ಕು. ಶಿ. ಹರಿದಾಸ ಭಟ್ಟ, ಶ್ರೀ ಸಿದ್ಧಯ್ಯ ಪುರಾಣಿಕ ಮತ್ತು ಪ್ರೊ. ಜಿ. ಪಿ. ರಾಜರತ್ನಂ ಅವರುಗಳು ಮಾಡಲಿರುವರು.

ಶ್ರೀ ಪಿ. ಶಿವಾಜಿ ಶೆಟ್ಟರ ಸುಖಪ್ರದ ವಿದೇಶ ಪ್ರವಾಸ

ಉಡುಪಿಯ ಪ್ರಸಿದ್ಧ ವಕೀಲರೆನಿಸಿದ ಶ್ರೀ ಪಿ. ಶಿವಾಜಿ ಶೆಟ್ಟರು ಎರಡು ವಾರಗಳ ಜಪಾನು ಪ್ರವಾಸವನ್ನು ಮುಗಿಸಿ ಕಳೆದ ತಾ. 19ರಂದು ಸುಖಪ್ರದವಾಗಿ ಉಡುಪಿಗೆ ಮರಳಿರುತ್ತಾರೆ. ವಿದೇಶ ಪ್ರವಾಸ ಕಾಲದಲ್ಲಿ ಅವರು ಜಪಾನಿನ ಅಂತರಾಷ್ಟ್ರೀಯ ಖ್ಯಾತಿಯ ಮಹಾಪ್ರದರ್ಶನವಾದ ಎಕ್ಸ್‌ಪೋ—70ನ್ನು ಹಾಗೂ ಜಪಾನಿನ ಪರಿಸರದ ಪ್ರಮುಖ ಕೇಂದ್ರಗಳನ್ನೂ ಸಂದರ್ಶಿಸಿದರಲ್ಲದೆ, ಹಾಂಕಾಂಗ್, ಬ್ಯಾಂಕಾಂಗ್ ಸಿಂಗಪುರಗಳನ್ನು ಸಂದರ್ಶಿಸಿ ಅತ್ಯುಪಯುಕ್ತ ಅನುಭವಗಳಿಸಿ ಮರಳಿರುತ್ತಾರೆ.

ರಾಷ್ಟ್ರದ ರಾಜಧಾನಿಯಲ್ಲಿ ದಕ್ಷಿಣ ಕನ್ನಡ ಸಂಘ ಉದ್ಘಾಟನೆ

ತಾಳಕ್ಕೆ ತಕ್ಕಂತೆ ಮದ್ದಳೆಯ ಧಿಂಕಾರ. ಒಂದು, ಎರಡು, ಮೂರು, ಗೆಜ್ಜೆಯ ಗಲಗಲ ನಿನಾದ. ಹಾಡು, ದೇವರ ದೇವ ರಂಗಕ್ಕೆ ಬಂದ.

ಸ್ಥಳ: ಹೊಸದಿಲ್ಲಿಯ ವೈ. ಎಂ. ಸಿ. ಎ. ಸಭಾಂಗಣ. ಹೊತ್ತು: ಸಪ್ಟಂಬರ 20ನೇ ಭಾನುವಾರ ಸಂಜೆ. ಸಂದರ್ಭ: ದಕ್ಷಿಣ ಕನ್ನಡ ಸಂಘದ ಸಾಂಸ್ಕೃತಿಕ ಸಮಾರಂಭ. ನ್ಯಾಯಮೂರ್ತಿ ಶ್ರೀ ಕೆ. ಎಸ್. ಹೆಗ್ಡೆ ಅವರು ದಕ್ಷಿಣ ಕನ್ನಡ ಸಂಘವನ್ನು ಉದ್ಘಾಟನೆ ಮಾಡಿದರು. "ಸಾಂಸ್ಕೃತಿಕ ಚಟುವಟಿಕೆಗಳ ಪ್ರದರ್ಶನಕ್ಕೆ ಇಂತಹ ಸಂಘದ ಸ್ಥಾಪನೆ ಸ್ವಾಗತಾರ್ಹ. ಆದರೆ ಇದು ಪ್ರತ್ಯೇಕತಾ ಭಾವನೆಗೆ ಹಾಗೂ ಪ್ರಾದೇಶಿಕ ಪ್ರವೃತ್ತಿಗೆ ಎಡೆ ಕೊಡದಂತಿರಬೇಕು" ಎಂದು ಹಿತವಚನ ನುಡಿದರು. ದಕ್ಷಿಣ ಕನ್ನಡ ಚಾರಿತ್ರಿಕ ಆಕರ್ಷಣೆಗಳಿಂದ ತುಂಬಿದ ನಾಡು. ಆರ್ಥಿಕ ಚಟುವಟಿಕೆಗಳಿಂದ ತುಂಬಿ ತುಳುಕುತ್ತಿರುವ ನಾಡು. ಇಂತಹ ಜಿಲ್ಲೆಯ ಜನ ರಾಷ್ಟ್ರದ ರಾಜಧಾನಿಯಲ್ಲಿ ಸಾಂಸ್ಕೃತಿಕ ಉದ್ದೇಶವಿಟ್ಟುಕೊಂಡು ದಕ್ಷಿಣ ಕನ್ನಡ ಸಂಘ ಸ್ಥಾಪನೆ ಮಾಡಿರುವುದು ತಮಗೆ ಸಂತೋಷವುಂಟು ಮಾಡಿದೆ ಎಂಬುದಾಗಿ ಶ್ರೀ ಹೆಗ್ಡೆ ಹೇಳಿದರು.

ಮುಖ್ಯ ಅತಿಥಿ ಪ್ರೊಫೆಸರ್ ಕು. ಶಿ. ಹರಿದಾಸ ಭಟ್ಟರು, ದಕ್ಷಿಣ ಕನ್ನಡದ ಸಾಮಾಜಿಕ, ಆರ್ಥಿಕ ಸ್ವರೂಪದ ಚಿತ್ರಣ ಮಾಡಿದರು. ಜಿಲ್ಲೆಯ ಜನರ ಆದಮ್ಯ ಚೇತನವನ್ನು ಕೊಂಡಾಡಿದರು. ಬಡತನದಿಂದ ಕೂಡಿದ ಶ್ರೀಮಂತ ಜಿಲ್ಲೆಯದು, ಎಂದು ನುಡಿದರು. ಜಿಲ್ಲೆಯಿಂದ ಹೊರಗೆ ಹೋಗಿ ದೇಶ ವಿದೇಶಗಳಲ್ಲಿ ನೆಲಸಿದ ದಕ್ಷಿಣ ಕನ್ನಡಿಗರು ಯಾವ ಪರಿಹಾರಕ್ಕಾದರೂ ಯಾವಾಗಲಾದರೊಮ್ಮೆ ದಕ್ಷಿಣ ಕನ್ನಡಕ್ಕೆ ಮರಳಿ ಬಂದು ಸೇವೆ ಸಲ್ಲಿಸಬೇಕೆಂದೂ, ಅವರಿಗೆಲ್ಲ ಈಗ ಜಿಲ್ಲೆಯಲ್ಲಿ ಸಾಕಷ್ಟು ಅವಕಾಶಗಳು ತೆರೆದಿವೆಯೆಂದೂ ಹೇಳಿದರು.

ದಕ್ಷಿಣ ಕನ್ನಡ ಸಂಘದ ಮಹಾಕಾರ್ಯದರ್ಶಿ ಶ್ರೀ ಕೃಷ್ಣಾನಂದ ಹೆಗ್ಡೆಯವರು ಸ್ವಾಗತ ಭಾಷಣದಲ್ಲಿ ಸಂಘದ ಉದ್ದೇಶ ಹಾಗೂ ಯೋಜಿತ ಚಟುವಟಿಕೆಗಳನ್ನು ಪ್ರಸ್ತಾಪಿಸಿದರು. ಸಂಘದ ಅಧ್ಯಕ್ಷ ಶ್ರೀ ಎಂ. ಕೆ. ಧರ್ಮರಾಜ ಅವರು ಜಿಲ್ಲೆಗೆ ಪ್ರವಾಸಿಗರನ್ನು ಆಕರ್ಷಿಸಲು ಪ್ರಯತ್ನಿಸಬೇಕೆಂದು ಹೇಳಿದರು.

ಮನೋರಂಜನ ಕಾರ್ಯಕ್ರಮದಲ್ಲಿ ಶ್ರೀ ಬಾಲಕೃಷ್ಣ ಅವರ ಯಕ್ಷಗಾನ ನೃತ್ಯ; ಶ್ರೀ ದಿವಾಕರ ಶೆಟ್ಟಿ ಮತ್ತು ಸಂಗಡಿಗರಿಂದ ಭೂತ ದರ್ಶನ; ಶ್ರೀ ರಾಧಾಕೃಷ್ಣ ಮತ್ತು ಸಂಗಡಿಗರಿಂದ ಗ್ರಾಮ್ಯ ಭಜನೆ; ಹಾಗೂ ಶ್ರೀ ಬಿ. ಗೋಪಾಲಕೃಷ್ಣ ಅವರಿಂದ ಮೂಕಾಭಿನಯ ಜನಮೆಚ್ಚುಗೆ ಗಳಿಸಿತು.

ಆರಂಭದಲ್ಲಿ ಸಂಘದ ಪದಾಧಿಕಾರಿಗಳ ಆಯ್ಕೆ ನಡೆದು ಈ ಕೆಳಗಿನವರು ಆರಿಸಿಬಂದರು: ಶ್ರೀಗಳಾದ ಎಂ. ಕೆ. ಧರ್ಮರಾಜ, (ಅಧ್ಯಕ್ಷ.) ಎಸ್. ಎಂ. ರಾವ್, (ಉಪಾಧ್ಯಕ್ಷ.) ಕೃಷ್ಣಾನಂದ ಹೆಗ್ಡೆ, (ಮಹಾಕಾರ್ಯದರ್ಶಿ.) ಪಿ. ಎಸ್. ಕೆ. ಪ್ರಭು, (ಜೊತೆ ಕಾರ್ಯದರ್ಶಿ) ಪಿ. ವೆಂಕಟ ರಾವ್ (ಕಾರ್ಯಕ್ರಮಗಳ ಕಾರ್ಯದರ್ಶಿ) ಜೋಸೆಫ್ ರಾಜೀವ, (ಆಟಗಳ ಕಾರ್ಯದರ್ಶಿ.) ರಾಮಚಂದ್ರ ಕರ್ಕೇರ, ವಿ. ಗುಣಪಾಲ ಶೆಟ್ಟಿ ಮತ್ತು ಬಿ. ಗೋಪಾಲಕೃಷ್ಣ, (ಕಾರ್ಯನಿರ್ವಾಹಕ ಸಮಿತಿಯ ಸದಸ್ಯರು.)

ನಿಧನ

ಹಿರಿಯಡ್ಕದ ಶ್ರೀ ವೀರಭದ್ರ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಶ್ರೀ ಎ. ಜಗಂಜೀವ ಆಳ್ವರು ತಾ. 26-9-1970ರಂದು ಆಕಸ್ಮಿಕವಾಗಿ ನಿಧನ ಹೊಂದಿದರೆಂಬುದು ವಿಷಾದಕರವಿದೆ. ದಿವಂಗತರು ಸುಮಾರು 25 ವರ್ಷಗಳಿಂದ ಆಡಳಿತ ಮೊಕ್ತೇಸರರಾಗಿ ದೇವಸ್ಥಾನದ ಸರ್ವತೋಮುಖ ಅಭಿವೃದ್ಧಿಗಾಗಿ ದುಡಿದಿದ್ದರು.

ನವಯುಗದ ಹೊಸ ವರ್ಷ

ಚಂದಾದಾರರಲ್ಲಿ ವಿನಂತಿ

ಇದೇ ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 49ನೆಯ ವರ್ಷ ಮುಗಿದು ಈ ತಿಂಗಳಿಂದ 50ನೆಯ ಹೊಸ ವರ್ಷ ಆರಂಭವಾಗಿದೆ. ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯವಿಟ್ಟು ತಮ್ಮ ಬಾಕಿಯನ್ನು ಆದಷ್ಟು ತ್ವರಿತವಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ. ಚಂದಾ ಹಣವನ್ನು ಮನಿಯಾರ್ಡರು ಮೂಲಕ, ಯಾ ಇಂಡಿಯನ್ ಪೋಸ್ಟಲ್ ಆರ್ಡರು ಮೂಲಕ ಕಳಿಸಬಹುದು. ಇಲ್ಲವೆ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಗಳಲ್ಲಿ 'ನವಯುಗ'ದ ಖಾತೆಗೆ ಪಾವತಿ ಮಾಡಬಹುದು. ಹಾಗೆ ಪಾವತಿ ಮಾಡುವಾಗ ತಮ್ಮ ಚಂದಾನಂಬ್ರ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇವೆ.

ಚಂದಾಹಣಕ್ಕಾಗಿ ಪತ್ರಿಕೆಯನ್ನು ವಿ. ಪಿ. ಮೂಲಕ ಕಳಿಸಿದರೆ ಈಗಿನ ಹೆಚ್ಚಿಸಿದ ಅಂಚೆ ದರದಿಂದಾಗಿ ರೂ. 1-40 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ದಯಮಾಡಿ ಚಂದಾವನ್ನು ಮೇಲಿನಂತೆ ಕಳಿಸಬೇಕಾಗಿ ಬಿನ್ನವಿಸುತ್ತೇವೆ.

ಮೆನೇಜರ್.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. R. C. 713/69.

ಕೆ. ಸುಬ್ಬ ರಾವ್ —ವಾದಿ.

ಮತ್ತು

ವೆಂಕಮ್ಮ ಹೆಂಗ್ಸು ಮತ್ತು ಇತರರು

—ಪ್ರತಿವಾದಿ.

ಬೆಳ್ತಂಗಡಿ ತಾಲೂಕು ಕರಿಮಣೇಲು ಗ್ರಾಮದ ಹೊಸಮನೆ ಎಂಬಲ್ಲಿ ವಾಸವಾಗಿರುವ ಮೃದ ಶೆಟ್ಟಿಯ ಮಗಳು ದೇವಕಿ ಹೆಂಗಸಿಗೆ ಕೋರ್ಟು ಮುಖಾಂತರ ತಿಳಿಯಪಡಿಸುವುದೇನೆಂದರೆ:—

ಮೇಲಿನ ವ್ಯಾಜ್ಯಕ್ಕೆ ನಿಮ್ಮ ಹಾಜರಾತಿ ಬಗ್ಗೆ ತಾರೀಕು 21-10-70ರಂದು ಇಟ್ಟಿದೆ. ಆ ದಿವಸ ನೀವು ಬೆಳಿಗ್ಗೆ ಗಂಟೆ 11ಕ್ಕೆ ಸರಿಯಾಗಿ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿವ್ವಾ ಮಾಡಿ ವ್ಯಾಜ್ಯವನ್ನು ತೀರ್ಮಾನಿಸಲಾದೀತು. ತಿಳಿಸಿರಲಿ.

ಬಿ.ಕೆ.ಸೂರ್ಯನಾರಾಯಣ ರಾವ್

ವಾದಿ ಕಡೆ ಎಡ್ವೋಕೇಟ್.

ಬೆಳ್ತಂಗಡಿ, 22-9-70

ಕೇರಳ ಮಧ್ಯಾವಧಿ ಚುನಾವಣೆ

ಬಹುಮುಖೀ ಪ್ರತಿಕ್ರಿಯೆ

೧೩೩ ಸ್ಥಾನಗಳುಳ್ಳ ಕೇರಳ ವಿಧಾನ ಸಭೆಯಲ್ಲಿ ಮಧ್ಯಂತರ ಚುನಾವಣಾ ನಂತರದ ವಿವಿಧ ಪಕ್ಷೀಯ ಬಲಾಬಲ ಹೀಗಿದೆ:

ಇಂಡಿಕೇಟ್	೩೨
ಸಿ. ಪಿ. ಎಂ.	೨೮
ಎಸ್. ಎಸ್. ಪಿ.	೬
ಕೆ. ಟಿ. ಪಿ.	೨
ಕೆ. ಎಸ್. ಪಿ.	೨
ಸಿ. ಪಿ. ಐ.	೧೬
ಮುಸ್ಲಿಂ ಲೀಗ್	೧೧
ಆರ್. ಎಸ್. ಪಿ.	೬
ಪಿ. ಎಸ್. ಪಿ.	೩
ಕೇರಳ ಕಾಂಗ್ರೆಸ್	೧೨
ಐ. ಎಸ್. ಪಿ.	೩
ಪಕ್ಷೇತರರು	೧೨

ಚುನಾವಣಾ ಫಲಿತಾಂಶದ ಬಗ್ಗೆ ವಿವಿಧ ನಾಯಕರ ಪ್ರತಿಕ್ರಿಯೆ ವಿಚಿತ್ರ ರೀತಿಯದ್ದು.

ಶ್ರೀ ಜಗಜ್ಜೀವನರಾಮ್
(ಇಂಡಿಕೇಟ್ ಅಧ್ಯಕ್ಷ)

ಕೇರಳದ ಹಿಂದಿನ ಚುನಾವಣೆಗಳಲ್ಲಿ ಒಂದಾಗಿದ್ದ ಕಾಂಗ್ರೆಸ್ಸು ಕೇವಲ ಒಂಬತ್ತು ಸ್ಥಾನಗಳನ್ನು ಪಡೆದಿತ್ತು. ಆದರೆ, ಒಡಕಿನ ಬಳಿಕ ಈಗಿನ ಚಿತ್ರವು ಬದಲಾಗಿದೆ; ಈ ಬಾರಿಯ ಚುನಾವಣೆಯಲ್ಲಿ ಆಡಳಿತ ಕಾಂಗ್ರೆಸ್ಸು ಮೂವತ್ತೆರಡು ಸ್ಥಾನಗಳನ್ನು ಗೆದ್ದಿದೆ. ಇದರಿಂದ ಆಡಳಿತ ಕಾಂಗ್ರೆಸ್ಸು ಸಾಕಷ್ಟು ಬಲಗೊಂಡಿದೆ; ಜನಪ್ರಿಯವಾಗಿದೆ ಎಂಬುದು ಸಿದ್ಧವಾಗುತ್ತದೆ.

ಂ ಂ ಂ

ಪ್ರಜಾಸತ್ತಾತ್ಮಕ ಮತ್ತು ಅಹಿಂಸಾತ್ಮಕ ಪ್ರಯತ್ನಗಳಿಂದ ಪ್ರಗತಿ ಸಾಧ್ಯವೆಂಬ ನಂಬಿಕೆಯನ್ನು ಕೇರಳದ ಜನತೆ ತಳೆದಿದೆಯೆಂಬುದಕ್ಕೆ ಇದು ಸಾಕ್ಷಿ.

ಶ್ರೀ ಬಿಕ್ರಂಗುಣ
(ಇಂಡಿಕೇಟ್ ಪ್ರಧಾನ ಕಾರ್ಯದರ್ಶಿ)

ನಮ್ಮ ಆದರ್ಶಗಳ ವಿರುದ್ಧ ಪಿತೂರಿ ನಡೆಸುತ್ತಿದ್ದ ಹಿಂಸಾತ್ಮಕ ಶಕ್ತಿಗಳು ಮತ್ತು ಕೆಲ ಪಕ್ಷೀಯರ ಅಂಗ ಪರಾಜಿತಗೊಂಡಿರುವುದು ಸಂತೋಷ.

ಶ್ರೀ ಎಸ್. ನಿಜಲಿಂಗಪ್ಪ
(ಸಿಂಡಿಕೇಟ್ ಅಧ್ಯಕ್ಷ.)

ಅನಿರೀಕ್ಷಿತ. ವಿವರಣೆ ಸಾಧ್ಯವಿಲ್ಲ. ವಿಲಕ್ಷಣ. ಅದು ಅರ್ಥವೂ ಆಗಿಲ್ಲ. ವಿಶ್ಲೇಷಣೆಯೂ ಅಸಾಧ್ಯ. ವಂಕ್ಷ್ವೇಸ್ವರ ಮೇಲಿನ ಕೋಪ, ಅವರ ಜೊತೆಗೆ ನಾವೂ ಅವರೊಂದಿಗೆ ಸೇರಿದ್ದೇವೆನ್ನುವ ಅಪಪ್ರಚಾರ ಈ ಫಲಿತಾಂಶಕ್ಕೆ ಕಾರಣವಾಗಿರಲಿಕ್ಕೆ ಸಾಕು. ಮರಾವೈತ್ರಿಯ ಹುಯಿಲೆಬ್ಬಿಸಿದವರೇ ಕೇರಳದಲ್ಲಿ ಈ ಅಪಪ್ರಚಾರಕ್ಕೆ ಮುಂದಾದರು.

ಂ ಂ ಂ

ಕಮ್ಯೂನಿಸ್ಟ್ ಮತ್ತು ಜಾತೀಯವಾದಿಗಳ ಹಾಗೂ ಅವರ ಮಿತ್ರರ ಜಯ. ಆದಷ್ಟು ಆಗಿದೆ; ಮುಂದಿನದನ್ನು ಕಾದು ನೋಡಬೇಕಷ್ಟೆ. ಅರಾಜಕೀಯದ ಮುನ್ನ ಕಗ್ಗತ್ತಲೆ ಕವಿಯುವುದು ಸಹಜವೇ.

ಶ್ರೀಮತಿ ಇಂದಿರಾಗಾಂಧಿ

ಕೇರಳದ ಮಧ್ಯಾವಧಿ ಚುನಾವಣೆಗಳಲ್ಲಿ ನನ್ನ ಪಕ್ಷಗಳಿಸಿದ ಜಯ ನನಗೆ ಸಹಜವಾಗಿ ಹರ್ಷ ತಂದಿದೆ. ಅದಕ್ಕಾಗಿ ಕೇರಳದ ಮತದಾರರಿಗೆ ಅಭಿನಂದನೆಗಳು.

ಶ್ರೀ ಕೆ. ವಿಶ್ವನಾಥ್
(ಕೆ. ಪಿ. ಸಿ.ಸಿ. ಇಂ. ಅಧ್ಯಕ್ಷ)

ಅಪ್ಪಟ ಕಾಂಗ್ರೆಸ್ಸು ಆಡಳಿತ ಕಾಂಗ್ರೆಸ್ಸೇ ವಿನಾ ಸಿಂಡಿಕೇಟ್ ಅಲ್ಲವೆಂಬ ಮಾತನ್ನು ಮಧ್ಯಕಾಲೀನ ಚುನಾವಣೆ ಸಮರ್ಥಿಸಿದೆ. ಹಿಂಸಾತ್ಮಕ ಮತ್ತು ಪ್ರತಿಗಾಮಿ ಶಕ್ತಿಗಳ ವಿರುದ್ಧ ಸೆಣಸಲು ತಮ್ಮನ್ನು ಸಶಕ್ತಗೊಳಿಸಿದಂತೆ ಪ್ರಧಾನಿ ಇಂದಿರಾ ಅವರಿಗೆ ಕೇರಳ ಜನತೆ ಓಗೊಟ್ಟಿರುವರು.

ಶ್ರೀ ಸಾದಿಕ್ ಅಲಿ
(ಸಿಂಡಿಕೇಟ್ ಕಾರ್ಯದರ್ಶಿ)

ಚುನಾವಣಾ ಫಲಿತಾಂಶವು ನಮ್ಮನ್ನು ನಿರಾಶೆಯಲ್ಲಿ ದೂಡಿದೆ; ಬೆಚ್ಚಿಬೀಳಿಸಿದೆ.

ಶ್ರೀ ಕರುಣಾಕರನ್
(ಇಂಡಿಕೇಟ್ ನಾಯಕ)

ಕೇರಳದ ಮಧ್ಯಾವಧಿ ಚುನಾವಣಾ ಫಲಿತಾಂಶವು ಎಡಕಮ್ಯೂನಿಸ್ಟ್ ಆಡಳಿತದ ವಿರುದ್ಧ ಜನತೆಯ ಪ್ರತಿಕ್ರಿಯೆಯನ್ನು ಸ್ಪಷ್ಟವಾಗಿ ಸೂಚಿಸಿದೆ. ಶ್ರೀಮತಿ ಗಾಂಧಿಯವರ ಪ್ರಗತಿಪರ ನೀತಿಗಳಿಗೆ ಜನತೆ ಬೆಂಬಲ ವ್ಯಕ್ತಪಡಿಸಿದೆ.

ಶ್ರೀ ಚಂದ್ರರಾಜೇಶ್ವರ ರಾವ್
(ಸಿ. ಪಿ. ಐ. ಪ್ರಧಾನ ಕಾರ್ಯದರ್ಶಿ)

ಸಂಯುಕ್ತರಂಗ ಮತ್ತು ಆಡಳಿತ ಕಾಂಗ್ರೆಸ್ಸಿನ ಪ್ರಜಾಸತ್ತಾತ್ಮಕ ಶಕ್ತಿಗಳ ವಿಜಯದೊಂದಿಗೇ ಪ್ರತಿಗಾಮಿ ಶಕ್ತಿಗಳ ಹಾಗೂ ಮಾರ್ಕ್ಸ್‌ವಾದಿಗಳ ಅವಕಾಶವಾದಿ ನೀತಿಗಳ ತೇಜೋವಧೆಯನ್ನು ಸಾರಿಹೇಳಿವೆ. ಮಾರ್ಕ್ಸ್‌ವಾದಿ ನಾಯಕರು ಇನ್ನಾದರೂ ತಮ್ಮ ಆತ್ಮಘಾತಕ ನೀತಿಗಳನ್ನು ವಿಸರ್ಜಿಸಿ ಪ್ರಜಾಸತ್ತಾತ್ಮಕ ಪಕ್ಷಗಳ ಸಂಘಟನಾ ಹಾದಿಗೆ ಮರಳಿಯಾರು.

ಶ್ರೀ ಕೆ. ಪಿ. ಶಿವರಾಮ ಭಾರತಿ
(ಕೇರಳ ಎಸ್.ಎಸ್.ಪಿ. ಅಧ್ಯಕ್ಷ)

ಬಲ ಕಮ್ಯೂನಿಸ್ಟ್ ಪಕ್ಷದ ನಾಯಕತ್ವದ ಕಿರುರಂಗದ ಪಕ್ಷಗಳು ಫಲಿತಾಂಶಗಳಿಂದ ಸಂತೋಷಪಡಬೇಕಾಗಿಲ್ಲ. ೧೯೬೭ರ ಚುನಾವಣೆಗಳಿಗಿಂತ ಇವೆಲ್ಲವೂ ಕಡಿಮೆ ಸ್ಥಾನಗಳನ್ನು ಹೊಂದಿವೆ. ಕಿರುರಂಗದೊಂದಿಗೆ ಮೈತ್ರಿ ಮಾಡಿಕೊಂಡಿದ್ದರಿಂದ 'ಇಂದಿರಾ ಕಾಂಗ್ರೆಸ್'ಗೆ ಮಾತ್ರ ಬೇಕಷ್ಟು ಅನುಕೂಲವಾಗಿದೆ. ಕೇರಳದಲ್ಲಿ ಸುಭದ್ರ ಸರ್ಕಾರ ಸ್ಥಾಪನೆಯಾಗಬಹುದೆಂದು ಆಡಳಿತ ಕಾಂಗ್ರೆಸ್ ಮತ್ತು ಕಿರುರಂಗ ಹೇಳುವುದು ಸುಳ್ಳು.

ಶ್ರೀ ಬಿಜೂ ಪಟ್ನಾಯಕ್
(ಉತ್ಕಲ ಕಾಂಗ್ರೆಸ್)

ಕೇರಳದ ಚುನಾವಣಾ ಫಲಿತಾಂಶವು ರಾಷ್ಟ್ರದಲ್ಲಿ ಮುಂದೆ ನಡೆಯುವ ಚುನಾವಣೆಗಳ ಮೇಲೆ ಪ್ರಭಾವ ಬೀರುತ್ತದೆಂದು ಯಾರಾದರೂ ಭಾವಿಸಿದರೆ ಅವರು ಮೂರ್ಖರ ಸಂತೆಯಲ್ಲಿದ್ದಂತೆಯೇ ಸರಿ. ಚುನಾವಣೆಯ ಫಲಿತಾಂಶಗಳು ಆಯಾಯಾ ರಾಜ್ಯಗಳ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ.

ಶ್ರೀ ನಂಬೂದರಿ ಪಾದ್:
(ಸಿ.ಪಿ.ಎಂ.)

ಕೇರಳದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಬಗ್ಗೆ ಹೆಚ್ಚು ಹೆಚ್ಚು ಜನ ಆಸಕ್ತಿ ತಾಳುತ್ತಿದ್ದಾರೆ. ಆದೇ ರೀತಿ ಕಾಂಗ್ರೆಸ್ ಹಾಗೂ ಕಿರುರಂಗಗಳನ್ನು ವಿರೋಧಿಸುತ್ತಿದ್ದಾರೆಂಬುದಕ್ಕೆ ಈ ಮಧ್ಯಂತರ ಚುನಾವಣೆಗಳೇ ಸಾಕ್ಷಿ. ೧೯೬೭ರ ಚುನಾವಣೆಗೆ ಹೋಲಿಸಿ ನೋಡಿದರೆ, ಈ ಬಾರಿ ಮಾರ್ಕ್ಸ್‌ವಾದಿ ಪಕ್ಷವು ಸುಮಾರು ಏಳು ಲಕ್ಷದಷ್ಟು ಅಧಿಕ ಮತಗಳಿಸಿದೆ. ಹೊಸ ಕಾಂಗ್ರೆಸ್ ಕಿರುರಂಗ ಮೈತ್ರಿ ಕೂಟವು ಸುಮಾರು ಎರಡು ಲಕ್ಷದಷ್ಟು ಮತಗಳನ್ನು ಕಡಿಮೆ ಪಡೆದಿದೆ.

ಶ್ರೀ ಮುರಾರ್ಜಿ ದೇಸಾಯಿ

ಕೇರಳದ ಚುನಾವಣಾ ಫಲಿತಾಂಶಗಳ ಬೆಳಕಿನಲ್ಲಿ ಸಂಸತ್ತಿಗೆ ಮಧ್ಯಂತರ ಚುನಾವಣೆಗಳನ್ನು ಪ್ರಕಟಿಸಿದರೆ ಆಶ್ಚರ್ಯವಿಲ್ಲ. ಕೇರಳಾ ಚುನಾವಣಾ ಫಲಿತಾಂಶಗಳು ರಾಷ್ಟ್ರದ ಇನ್ನಾವುದೇ ಭಾಗದ ಜನರ ಮೇಲೆ ಯಾವ ಪರಿಣಾಮವನ್ನೂ ಬೀರದು. ಉತ್ತರ ಪ್ರದೇಶದಲ್ಲಿ ಮಧ್ಯಂತರ ಚುನಾವಣೆಗಳು ನಡೆದರೆ ಕೇರಳದ ಪರಿಣಾಮ ಅದರ ಮೇಲೆ ಏನೂ ಆಗದು. ಏಕೆಂದರೆ, ಉತ್ತರ ಪ್ರದೇಶ ಕೇರಳವಲ್ಲ.

ಶ್ರೀ ಮಹಾಬಲ ಭಂಡಾರಿ
(ಮಾಜಿ ಶಾಸಕ)

ಕಾಸರಗೋಡ – ಮಂಜೇಶ್ವರ ಕ್ಷೇತ್ರಗಳ ಫಲಿತಾಂಶವು ಆ ಭಾಗಗಳನ್ನು ಮೈಸೂರಿನಲ್ಲಿ ವಿಲೀನಗೊಳಿಸುವುದಕ್ಕೆ ಅಲ್ಲಿನ ಜನರ ವಿರೋಧವಿದೆಯೆಂಬುದನ್ನು ತೋರಿಸುತ್ತದೆಂಬುದು ಕುಚೇಷ್ಟೆಯದು. ಮಂಜೇಶ್ವರದಲ್ಲಿ ೧೯೫೭, ೬೦, ೬೫, ೬೭ರ ಚುನಾವಣೆಗಳಲ್ಲಿ ಕರ್ನಾಟಕ ಸಮಿತಿಯವರು ಗೆದ್ದಿದ್ದರು. ಕಾಸರಗೋಡಿನಲ್ಲಿ ೧೯೬೭ರಲ್ಲಿ ಗೆದ್ದಿದೆ. ಮಂಜೇಶ್ವರ ಕ್ಷೇತ್ರದಲ್ಲಿ ಗೆದ್ದ ಸಿ. ಪಿ. ಐ. ಅಭ್ಯರ್ಥಿ ಶ್ರೀ ಎಂ. ರಾಮಪ್ಪರು ಕಾಸರಗೋಡನ್ನು ಮೈಸೂರಿನಲ್ಲಿ ವಿಲೀನಗೊಳಿಸುವುದಕ್ಕೆ ಬದ್ಧರೆಂದು ಮತದಾರರ ಮುಂದೆ ಘೋಷಿಸಿದ್ದಾರೆ.

(ಈ ಬಾರಿ ಕರ್ನಾಟಕ ಸಮಿತಿಯು ಚುನಾವಣೆಗಳಲ್ಲಿ ಭಾಗವಹಿಸಬಾರದೆಂದು ತೀರ್ಮಾನಿಸಿತ್ತು. ಈ ಹಿಂದಿನ ಚುನಾವಣೆಗಳಲ್ಲಿ ಕರ್ನಾಟಕ ಪರ ನಿರ್ಣಯ ಜನ ನೀಡಿದ್ದರಿಂದ ಇನ್ನು ಸ್ಪರ್ಧೆ ಅನಗತ್ಯವೆಂದು ಭಾವಿಸಿತ್ತು.)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಸೇರುವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾನೀಯಗಳ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit — ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ನಗೆಗಡಲು

ಅಧ್ಯಾಪಕರು:—"ನಾನು ನಿನ್ನ ತಂದೆಗೆ ಶೇ. ೬ ಬಡ್ಡಿಯಂತೆ ನೂರು ರೂಪಾಯಿಗಳಂತೆ ಸಾಲ ಕೊಡುವ ಕರಾರಿನ ಮೇಲೆ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟರೆ ಐದು ತಿಂಗಳುಗಳ ನಂತರ ಅವರೆಷ್ಟು ಕೊಡುವುದು ಬಾಕಿಯಿರುತ್ತದೆ?"

ಮಾಧವ: ಒಂದು ಸಾವಿರ ರೂಪಾಯಿಗಳು.

ಅಧ್ಯಾಪಕ: ನಿನಗೆ ಅಂಕಗಣಿತವೇ ಬರುವುದಿಲ್ಲ.

ಮಾಧವ: ಹಾಗಲ್ಲ ಗುರುಗಳೇ, ನೀವು ನನ್ನ ತಂದೆಯನ್ನು ಅರ್ಥಮಾಡಿಕೊಂಡಿಲ್ಲ

ಂ ಂ ಂ

ಕೋಟ್ಯಧೀಶನೊಬ್ಬ ಅಳಿಯನಾಗುವ ಆಶಯದಿಂದ ಬಂದವನೊಬ್ಬನನ್ನು ವಿಚಾರಿಸಿದನು—ನಮ್ಮ ಪ್ರತಿಮಗಳು ಬಡವಳಾಗಿದ್ದರೂ ನೀನು ಪ್ರೀತಿಸುತ್ತಿದ್ದೆಯೆ?

"ಖಂಡಿತವಾಗಿ"— ಭಾವಿ ಅಳಿಯ ಶ್ರದ್ಧೆಯಿಂದಲೇ ಉತ್ತರಿಸಿದ.

"ಸರಿಯಾದದ್ದನ್ನೇ ಹೇಳಿದೆ. ನೀನು ಹೋಗಬಹುದು. ನಮ್ಮ ಕುಟುಂಬಕ್ಕೆ ಹುಚ್ಚನೊಬ್ಬನನ್ನು ನಾವೆಂದಿಗೂ ಸೇರಿಸಿಕೊಳ್ಳುವುದಿಲ್ಲ.

ಂ ಂ ಂ

ಹಳೆಯ ಒಬ್ಬಾಕೆಯ ಹದಿನೆಂಟರ ಹೆಂಡತಿಯನ್ನು ಪರೀಕ್ಷೆ ಮಾಡಿದ ಡಾಕ್ಟರು ವಿಷಾದದಿಂದಲೇ ಹೇಳಿದರು— ನಿಮ್ಮಾಕೆ ಗರ್ಭಿಣಿ

"ಇದರಲ್ಲೇನಿದೆ? ಆಕೆ ಗರ್ಭಿಣಿಯಾದ ಎಲ್ಲ ಅವಕಾಶಗಳೂ ಇವೆ" ... ಧಾನವಾಗೇ ಉದ್ಗರಿಸಿದ.

Registered with the Registrar
of News Papers for India
under No. R. N. 3646/'57

REGD. No. B. G. 176
LICENCE No. 33
Licensed to Post without Prepayment

ಕ್ಯಾನ್ಸರ್ ಹೇಗೆ ಹರಡುತ್ತದೆ?

ಹಾನಿಕರ ಕೋಶಗಳು, ತೀವ್ರ ಒತ್ತಡದ ಪರಿಸ್ಥಿತಿಯಲ್ಲಿ ಹೇಗೆ ಹರಡುತ್ತವೆ ಎಂಬುದು ಕ್ಯಾನ್ಸರ್ ಸಂಶೋಧನೆಯಲ್ಲಿ ಒಂದು ನಿಗೂಢ ವಿಷಯವಾಗಿದೆ.

ಇದಕ್ಕೆ ವಿವರಣೆಯನ್ನು ಕಂಡುಹಿಡಿಯಲೆತ್ನಿಸಿದ ಅಮೇರಿಕದ ವಿಜ್ಞಾನಿಯೊಬ್ಬರು, ಕ್ಯಾನ್ಸರ್ ಕೋಶಗಳಿಂದ ಒಂದು ರಾಸಾಯನಿಕವು ನೆರೆ ಸಹಜ ಕೋಶಗಳು ಕ್ಯಾನ್ಸರ್ ಪೀಡಿತ ಕೋಶಗಳಂತೆಯೇ ಸಂವರ್ಧಿಸುವುದನ್ನು ಕಂಡುಹಿಡಿದರು.

ಬರ್ಕ್ಲೀಯಲ್ಲಿರುವ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ಅಣು ಜೀವವಿಜ್ಞಾನಿ ಡಾ| ಹ್ಯಾರೀ ರೂಬಿನ್ ಅವರು ಕೋಳಿಮರಿಗಳ ಭ್ರೂಣ ಕೋಶಗಳಲ್ಲಿ, ಅವುಗಳಿಗೆ ಕ್ಯಾನ್ಸರ್ ವೈರಸಿನ ಸೋಂಕು ತಗಲಿಸಿ ನಾಲ್ಕು ಅಥವಾ ಐದು ದಿನಗಳ ನಂತರ ಈ ವಸ್ತುವನ್ನು ಪತ್ತೆಹಚ್ಚಿದರು.

ಈ ಕ್ಷೇತ್ರದಲ್ಲಿ ಸುಪ್ರಸಿದ್ಧರಾಗಿರುವ ಡಾ| ರೂಬಿನ್ ಅವರು ೧೫ ವರ್ಷಗಳಿಗೂ ಹೆಚ್ಚು ಸಮಯದಿಂದ ಪ್ರಾಣಿಗಳ ಕ್ಯಾನ್ಸರ್ ವೈರಸ್ ಅನ್ನು ಅಧ್ಯಯನ ಮಾಡುತ್ತಿದ್ದಾರೆ. ಅವರ ಪ್ರಸಕ್ತ ಸಂಶೋಧನೆಗೆ ಅಮೆರಿಕದ ನ್ಯಾಷನಲ್ ಇನ್ಸ್ಟಿಟ್ಯೂಟಿನ ಬೆಂಬಲ ದೊರೆತಿದೆ.

ಓವರ್‌ಗ್ರೋತ್ ಸ್ಟಿಮ್ಯುಲೇಟಿಂಗ್ ಫ್ಯಾಕ್ಟರ್ (ಓ ಎಸ್ ಎಫ್) ಎಂದು ಕರೆಯಲಾಗಿರುವ ಈ ವಸ್ತುವು, ಹಾನಿಕರ ಕೋಶಗಳು ಮನಸ್ವೀ ಹರಡುವುದಕ್ಕೆ ಸಹಾಯವಾಗುವಂತೆ ರಕ್ತನಾಳಗಳ ಹಾಗೂ ಅದಕ್ಕೆ ಸಂಬಂಧಿಸಿದ ಸ್ನಾಯುಗಳ ಬೆಳವಣಿಗೆ ಕಾರ್ಯಕ್ಕೆ ಉತ್ತೇಜನ ನೀಡುತ್ತದೆ ಎಂದವರು ನಂಬಿದ್ದಾರೆ.

ಕ್ಯಾನ್ಸರ್ ಕೋಶಗಳ ತೀವ್ರ ಬೆಳವಣಿಗೆಗೂ ಈ ವಸ್ತು ಕಾರಣವಿರಬಹುದಾದ ಸಾಧ್ಯತೆಯಿದೆ.

ಓ ಎಸ್. ಎಫ್. ನ ಕರಾರುವಾಕ್ಕಾದ ರಾಸಾಯನಿಕ ಸ್ವರೂಪ ಏನೆಂದು ಇದುವರೆಗೆ ತಿಳಿದುಬಂದಿಲ್ಲ. ಆದರೆ ಲಭ್ಯವಿರುವ ಆಧಾರಗಳ ಪ್ರಕಾರ ಇದು ಒಂದು ಪ್ರೊಟೀನ್ ಅಥವಾ ಪ್ರಾಯಶಃ ಎನ್‌ಜೈಮ್ ಇರಬಹುದು ಎಂದು ಡಾ| ರೂಬಿನ್ ಹೇಳುತ್ತಾರೆ.

ಓ ಎಸ್. ಎಫ್. ಅನ್ನು ಪತ್ತೆಹಚ್ಚಲು ಮತ್ತು ಅದರ ಜೀವವೈಜ್ಞಾನಿಕ ಕ್ರಿಯೆಗಳನ್ನು ಪರೀಕ್ಷಿಸುವ ಸಲುವಾಗಿ ಡಾ| ರೂಬಿನ್ ಅವರು ಕೋಳಿಮರಿಗಳ ಭ್ರೂಣ ಕೋಶಗಳನ್ನು ತಟ್ಟೆಗಳಲ್ಲಿ ಬೆಳೆಸಿ ಅವುಗಳ ಪೈಕಿ ಕೆಲವಕ್ಕೆ ರಾಸ್ ಸರ್ಕೋಮ ಎಂಬ ವೈರಸನ್ನು ಇನಾಕ್ಯುಲೇಟ್ ಮಾಡಿದರು. ಈ ವೈರಸ್ ಹಕ್ಕಿಗಳಲ್ಲಿ ಕ್ಯಾನ್ಸರ್ ಉಂಟುಮಾಡುವುದು ಎಂದು ನಂಬಲಾಗಿದೆ.

ಒಂದೆರಡು ದಿನಗಳಲ್ಲಿ ಸೋಂಕು ತಗಲಿದ ಕೋಶಗಳು ಹಾನಿಕರ ಕೋಶಗಳಾಗಿ ಪರಿವರ್ತನೆ ಹೊಂದಿ, ತೀವ್ರ ಬೆಳವಣಿಗೆಯನ್ನು ವ್ಯಕ್ತಪಡಿಸಿ, ಇದು ಸಂಭವಿಸಿದಂತೆಯೇ ಡಾ| ರೂಬಿನ್ ಅವರು, ಕೋಶಗಳ ಸುತ್ತ ಇದ್ದ ದ್ರವವನ್ನು ಸಂಗ್ರಹಿಸಿ, ಅವುಗಳಲ್ಲಿನ ವೈರಸ್ ಕಣಗಳನ್ನು ಎಚ್ಚರಿಕೆಯಿಂದ ತೆಗೆದುಹಾಕಿದರು.

ಅನಂತರ ಅವರು, ಬೇರೆ ಬೇರೆ ಸಮಯಗಳಲ್ಲಿ ಹಾನಿಕರ ಕೋಶಗಳಿಂದ ಸಂಗ್ರಹಿಸಲಾದ ವೈರಸ್-ವಿಮುಕ್ತ ದ್ರವವನ್ನು ಸಹಜ ಭ್ರೂಣ ಕೋಶಗಳಿಗೆ ಇನಾಕ್ಯುಲೇಟ್ ಮಾಡಿದರು.

ವಿರಳವಾಗಿದ್ದು, ತೀವ್ರವಾಗಿ ಬೆಳೆಯುತ್ತಿದ್ದ ಸಹಜ ಕೋಶಗಳಲ್ಲಿ ಈ ಇನಾಕ್ಯುಲೇಷನ್ ಯಾವುದೇ ಪರಿಣಾಮವನ್ನು ಉಂಟು ಮಾಡಲಿಲ್ಲ. ಆದರೆ ಗುಂಪಾಗಿದ್ದು ನಿಧಾನವಾಗಿ ಬೆಳೆಯುತ್ತಿದ್ದ ಸಹಜ ಕೋಶಗಳಲ್ಲಿ ಈ ಇನಾಕ್ಯುಲೇಷನ್ ಪರಿಣಾಮವಾಗಿ ಮೂರನೆಯ ದಿನ ಬೆಳವಣಿಗೆ ಅಸಾಧಾರಣವಾಗಿ ಹೆಚ್ಚಾಯಿತು. ಕೋಶಗಳ ಸಂಖ್ಯೆ ದ್ವಿಗುಣವಾಯಿತು ಮತ್ತು ಕ್ಯಾನ್ಸರ್ ಕೋಶಗಳಿಗೆ ಸದೃಶವಾಗಿ ಅಸಹಜ ಆಕಾರ ಹೊಂದಿದವು.

ಹೀಗೆ 100 ಗಂಟೆಗಳು ಕಳೆದನಂತರ ಕೋಶಗಳು ಸಹಜ ಸ್ಥಿತಿಗೆ ಹಾಗೂ ಸಹಜ ರೂಪಕ್ಕೆ ಹಿಂದಿರುಗಿದವು.

ಕುತೂಹಲದ ವಿಷಯವೆಂದರೆ ಓ. ಎಸ್. ಎಫ್. ರಾಸ್ ವೈರಸ್‌ಗಿಂತ ತೀವ್ರವಾದ ಮಿತಿಮೀರಿದ ಬೆಳವಣಿಗೆಯ ಪರಿಣಾಮ ಉಂಟುಮಾಡಿತು. ಕೋಶಗಳ ಮೇಲ್ಮೈ ಮೇಲೆ ಈ ವಸ್ತು ನೇರವಾಗಿ ಪರಿಣಾಮ ಬೀರಬಹುದಾದ್ದರಿಂದ ಇದು ಸಾಧ್ಯ. ಆದರೆ ವೈರಸ್‌ಗಳು ತಮ್ಮ ಪರಿಣಾಮವನ್ನು ಬೀರುವುದಕ್ಕೆ ಮುನ್ನ ಕೋಶಗಳೊಳಗೆ ಆಳವಾಗಿ ವ್ಯಾಪಿಸುವುದಗತ್ಯ.

ಡಾ| ರೂಬಿನ್ ಅವರೀಗ ಈ ವಸ್ತುವನ್ನು ಪ್ರತ್ಯೇಕಿಸಿ ಅದರ ರಾಸಾಯನಿಕ ರಚನೆಯನ್ನು ತಿಳಿಯಲು ಪ್ರಯತ್ನಿಸುತ್ತಿದ್ದಾರೆ. ಇದು ಕ್ಯಾನ್ಸರ್ ಪ್ರತಿಬಂಧಕಗಳನ್ನು ಸಿದ್ಧಗೊಳಿಸುವ ಗುರಿಯಲ್ಲಿ ಒಂದು ಮಹತ್ವದ ಹೆಜ್ಜೆಯಾಗುವುದು.

-ಶ್ರೀ ಡಬ್ಲ್ಯು. ಎ. ಸ್ಕಾಟ್‌ವರ್ತ್

ಕೈಗೆ ಬಂದ ತುತ್ತು ಉಗುಳಿದ

(ಒಂದನೇ ಪುಟದಿಂದ)

"ಮುನಿಶ್ರೇಷ್ಠರೆ, ನಾನು ದೋಷಿಯೋ ನಿರ್ದೋಷಿಯೋ ಎಂಬುದನ್ನು ನೀವು ತಪೋಬಲದಿಂದ ತಿಳಿದುಕೊಂಡಿದ್ದೀರಿ. ಶ್ರೀರಾಮನಿರುವಾಗ ರಾಜ್ಯಭೋಗಿಸುವ ಅಧಿಕಾರ ನನಗೆಲ್ಲಿದೆ? ನಾನು ಅವನ ಚರಣಕಮಲ ಮಧುಪ. ಆದುದರಿಂದ ನಾನೀಗ ಶ್ರೀರಾಮನಲ್ಲಿಗೆ ಹೋಗಿ ರಾಜ್ಯಾಭಿಷೇಕದ ಸಾಮಗ್ರಿಗಳನ್ನು ಸಮರ್ಪಿಸಿ, ವಶಿಷ್ಠಾದಿ ಋಷಿಗಳು, ನಗರವಾಸಿಗಳು, ಪರಿವಾರವನ್ನು ಕೂಡಿ ಪಟ್ಟಾಭಿಷೇಕ ಮಾಡುತ್ತೇನೆ. ಅವನನ್ನು ಅಯೋಧ್ಯೆಗೆ ಕರೆದುಕೊಂಡು ಹೋಗುತ್ತೇನೆ. ಅಲ್ಲಿ ಆತನ ಸೇವೆಯಲ್ಲಿ ಶೇಷಾಯುಷ್ಯ ಕಳೆಯುತ್ತೇನೆ." ಭರತವಾಕ್ಯವನ್ನು ಕೇಳಿದ ಭರದ್ವಾಜ ಅತ್ಯಂತ ಪ್ರಸನ್ನನಾದನು. ಅವನು ಭರತಾದಿಗಳಿಗೆ ಅತಿಥಿಸತ್ಕಾರಗೈದನು. ಆ ರಾತ್ರಿ ಅಲ್ಲೇ ಕಳೆಯಿತು.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ವಿವಿಧ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ,
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ| ವಿ. ಆರ್. ಕೊರಡ್ಕರ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ. ಹಿಂಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2-00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

ಬೆಂಜಾಮಿನ್ ಫ್ರ್ಯಾಂಕ್ಲಿನ್ ನಿರೂಪಿಸಿದ ಜೀವನದ ಸೂತ್ರಗಳು

ಮಿತಿ: ಜೊಂಪು ಬರುವಷ್ಟು ತಿನ್ನಬಾರದು, ಮತ್ತು ಬರುವಷ್ಟು ಕುಡಿಯಬಾರದು.

ಮೌನ: ನಿಮಗೆ ಹಾಗೂ ಇನ್ನೊಬ್ಬರಿಗೆ ಉಪಯೋಗವಾಗುವುದನ್ನೇ ಮಾತನಾಡಬೇಕು. ಹಾಳು ಹರಟೆಯನ್ನು ಬಿಡಬೇಕು.

ವ್ಯವಸ್ಥೆ: ನಿಮ್ಮ ಎಲ್ಲ ವಸ್ತುಗಳೂ ಅದರದರ ಸ್ಥಳದಲ್ಲಿ ಇರಲಿ. ನಿಮ್ಮ ಪ್ರತಿಯೊಂದು ಕೆಲಸಕ್ಕೂ ಅದರದೆನ್ನುವ ಸಮಯ ಇರಲಿ.

ನಿರ್ಧಾರ: ನೀವು ಏನು ಮಾಡಬೇಕಾಗಿದೆಯೋ ಅದನ್ನು ಮಾಡಲು ನಿರ್ಧರಿಸಿರಿ. ನೀವು ನಿರ್ಧರಿಸಿದುದನ್ನು ತಪ್ಪದೇ ನೆರವೇರಿಸಬೇಕು.

ಮಿತವ್ಯಯ: ನಿಮಗೆ ಹಾಗೂ ಇನ್ನೊಬ್ಬರಿಗೆ ಒಳ್ಳೆಯದನ್ನು ಮಾಡುವುದಕ್ಕಾಗಿ ಮಾತ್ರ ಖರ್ಚು ಮಾಡಿರಿ. ಯಾವುದನ್ನೂ ವಿನಾಕಾರಣ ಹಾಳು ಮಾಡಬೇಡಿ.

ಉದ್ಯೋಗ: ಸಮಯ ಕಳೆಯಬೇಡಿ. ಒಂದಲ್ಲ ಒಂದು ಉಪಯುಕ್ತ ಕಾರ್ಯದಲ್ಲಿ ತೊಡಗಿರಿ. ಅನವಶ್ಯಕ ಕಾರ್ಯವನ್ನೆಲ್ಲ ತೊರೆದುಹಾಕಿ.

ಶ್ರದ್ಧೆ: ಮೋಸಗಾರಿಕೆ ಬೇಡ. ಮುಗ್ಧತೆಯಿಂದ ಹಾಗೂ ನ್ಯಾಯವಾಗಿ ಆಲೋಚಿಸಿ ಮಾತನಾಡುವುದೇ ಇದ್ದರೆ ಅದರಂತೆಯೇ ಮಾತನಾಡಿ.

ನ್ಯಾಯ: ಯಾರಿಗೂ ಅನ್ಯಾಯ ಬಗೆಯಬೇಡಿ. ಇನ್ನೊಬ್ಬರಿಗೆ ಸಿಕ್ಕುವ ಫಲಗಳನ್ನು ತಪ್ಪಿಸಬೇಡಿ. ಇದು ನಿಮ್ಮ ಕರ್ತವ್ಯ.

ಪರಿಶುದ್ಧತೆ: ದೇಹ, ಬಟ್ಟೆ, ಪರಿಸರ ಎಲ್ಲಿಯೂ ಅಶುದ್ಧತೆಯನ್ನು ಸಹಿಸಬೇಡಿ.

ಶಾಂತಿ: ಕ್ಷುಲ್ಲಕ ಸಂಗತಿಗಳಿಂದ ತಲೆಕೆಡಿಸಿಕೊಳ್ಳಬೇಡಿ. ಸಹಜವಾದ, ತಪ್ಪಿಸಬಹುದಾದ ಅಪಘಾತಗಳ ಬಗೆಗೆ ಮನಸ್ಸಿನ ಸ್ಥಿಮಿತವನ್ನು ಕಳೆದುಕೊಳ್ಳಬೇಡಿ.

ಪಾವಿತ್ರ್ಯ: ಹೆಂಗಸಿನ ಪಾತಿವ್ರತ್ಯದಂತೆ ಅದನ್ನು ಕಾಯ್ದುಕೊಂಡು ಬನ್ನಿ.

ನಮ್ರತೆ: ನೀವು ಎಷ್ಟೇ ಮೇಲಕ್ಕೆ ಹೋಗಿ, ನಮ್ರತೆಯನ್ನು ಬಿಡಬೇಡಿ; ನೀವು ಅದನ್ನು ಬಿಟ್ಟರೋ ಕೆಳಗೆ ಇಳಿಯುವುದೇ ಖಂಡಿತ. —ಸ್ರ.

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 6

NAVAYUGA

8—10—1970

ಭರತನ ತ್ಯಾಗ ಕಿರಿದಾಯಿತೆ?

ಭರತನ ಪಾದಯಾತ್ರೆ ರಾಮಾಶ್ರಮದತ್ತ ಮುಂದುವರಿಯಿತು. ಕೆಲದೂರ ಸಾಗುವಾಗ ನೆಲದ ಮೇಲೆ ಅಂಕುಶ-ಕಮಲ-ಧ್ವಜಾದಿ ಚಿಹ್ನೆಗಳಿಂದ ಕೂಡಿದ ಹೆಜ್ಜೆಗಳನ್ನು ಭರತನು ಕಂಡನು. "ಇದುವೇ ನನ್ನ ಅಣ್ಣನ ಪಾದಚಿಹ್ನೆ" ಎಂದು ಅದರ ಧೂಳಿಯನ್ನು ಹಣೆಗೊತ್ತಿಕೊಂಡನು. ರಾಮನೀಗ ಸಿಕ್ಕುವನೆಂದು ಅವನ ಮುರುಟಿದ ಮುಖಕಮಲ ಅರಳಿತು. ಅವನು ಹಿಗ್ಗಿನಿಂದಲೇ ಮುಂದುವರಿದನು. ತನ್ನ ಮುಂದೆ ರಾಮ—ಲಕ್ಷ್ಮಣ—ಸೀತೆಯರನ್ನು ಕಂಡು ಅವನ ಆನಂದಕ್ಕೆ ಪಾರವೇ ಉಳಿಯಲಿಲ್ಲ. ರಾಮನ ಪಾದಪದ್ಮಗಳಿಗೆ ಹಣೆ ಚಾಚಿ, "ಅಣ್ಣಾ, ಇದೇನು, ಇದೇನು" ಎನ್ನುತ್ತ ಮಗುವಿನಂತೆ ಮರುಗಿಬಿಟ್ಟನು.

ರಾಮನು ತಮ್ಮನನ್ನು ಎತ್ತಿ ಎದೆಗೊತ್ತಿಕೊಂಡನು. ಅಷ್ಟರಲ್ಲಿ ಗುರುವರು ತಾಯಂದಿರೂ ಅಲ್ಲಿ ಸೇರಿದರು. ರಾಮ-ಲಕ್ಷ್ಮಣ-ಸೀತೆಯರು ಅವರ ಪಾದಗಳಿಗೆರಗಿದರು. ಮುನಿ ವಸಿಷ್ಠರು ಬರುವುದನ್ನು ಕಂಡು ಅವರಿಗೆ ಸಾಷ್ಟಾಂಗ ನಮಿಸಿದರು. ಭರತನಿಂದ ತಂದೆಯ ಮರಣ ವಾರ್ತೆಯನ್ನು ಕೇಳಿ ಅವರು ಮೂರ್ಛಿತರಾದರು. ಅವರು ಚೇತರಿಸಿದ ಬಳಿಕ ಎಲ್ಲರೂ ನದಿಗೆ ತೆರಳಿ ತಂದೆಗೆ ಜಲಾಂಜಲಿ ನೀಡಿದರು. ಶ್ರೀರಾಮನು ಪಿಂಡದಾನ ಮಾಡಿದನು. ಎಲ್ಲರೂ ಸ್ನಾನಗೈದು ಆಶ್ರಮಕ್ಕೆ ಮರಳಿ ಬಂದರು.

ಮರುದಿನ ಅವಕಾಶವರಿತು ಭರತನು ರಾಮನೊಡನೆ ಹೇಳಿದನು: "ಅಣ್ಣಾ, ನೀವೀಗ ಪಟ್ಟಾಭಿಷೇಕ ಮಾಡಿಸಿಕೊಳ್ಳಿ. ನೀವು ನಮಗೆಲ್ಲ ಹಿರಿಯಣ್ಣನಾದುದರಿಂದ ತಂದೆಗೆ ಸಮಾನರು. ಪಿತ್ರಾರ್ಜಿತ ರಾಜ್ಯವು ತಮಗೆ ಸೇರಬೇಕಾದದ್ದು, ಅದನ್ನು ಸ್ವೀಕರಿಸಿ ನಮ್ಮನ್ನೂ ಸಮಸ್ತ ಪ್ರಜಾಜನರನ್ನೂ ಪರಿಪಾಲಿಸಿ. ಕ್ಷಾತ್ರಧರ್ಮಾವಲಂಬಿಯಾಗಿ ಪಿತೃಋಣದಿಂದ ಮುಕ್ತರಾಗಿ ಪುತ್ರನಿಗೆ ರಾಜ್ಯಸಿಂಹಾಸನ ನೀಡಿ ಮತ್ತೆ ಸಂತೋಷದಿಂದ ವನದತ್ತ ಬನ್ನಿರಿ. ಇದೀಗ ನೀವು ವನವಾಸ ಮಾಡುವ ಸಮಯವಲ್ಲ. ನನ್ನ ಮೇಲೆ ಪ್ರಸನ್ನರಾಗಿ, ತಾಯಿಯು ಮಾಡಿದ ಅಪರಾಧವನ್ನು ಮರೆತುಬಿಡಿರಿ" ಹೀಗೆ ವಿನಂತಿಸಿದ ಭರತನು ಶ್ರೀರಾಮನ ಮುಂದೆ ದಂಡವತ್ ಪ್ರಣಾಮಗೈದನು.

ಶ್ರೀರಾಮನು ಭರತನನ್ನು ಎತ್ತಿದನು. ತನ್ನ ತೊಡೆಯ ಮೇಲೆ ಕುಳ್ಳಿರಿಸಿದನು. ಅವನ ಕಣ್ಣುಗಳಲ್ಲಿ ನೀರು ತುಂಬಿತು. ತಮ್ಮನೊಡನೆ ಹೇಳಿದನು:-"ಭರತ, ನನಗೂ ನಿನಗೂ ತಂದೆಯ ಆಜ್ಞೆಯನ್ನು ಪರಿಪಾಲಿಸುವುದು ಪರಮ ಕರ್ತವ್ಯ. ಪಿತೃವಾಕ್ಯ ಪರಿಪಾಲನೆ ಮಾಡದೆ ತನಗೆ ಕಂಡಂತೆ ಮಾರಾಬಟ್ಟೆ ಮಾಡುವಂತಹ ಮಗನು ಜೀವದಲ್ಲಿದ್ದರೂ ಒಂದೇ; ಸತ್ತರೂ ಒಂದೇ."

"ತಂದೆಯು ತನ್ನ ಹೆತ್ತ ತಾಯಿಯ ಮಾತಿನಂತೆ ಹಾಗೆ ಆಜ್ಞೆ ನೀಡಿದನೇ ಹೊರತು, ಸ್ವಂತ ಬುದ್ಧಿಯಿಂದಲ್ಲ."

"ಹಾಗೆ ಹೇಳಬೇಡ ತಮ್ಮಾ. ತಂದೆ ಅಂತವರಲ್ಲ. ಅವರು ಸತ್ಯವಾದಿಗಳು. ತನ್ನ ಹಿಂದಿನ ಮಾತನ್ನು ಉಳಿಸಿಕೊಳ್ಳುವುದಕ್ಕಾಗಿಯೇ ಹಾಗೆ ಮಾಡಿದರು. ಅವರು ಆ ರೀತಿಯೊಡನೆ ಹೋಗಿದ್ದರೆ, ವಚನಭ್ರಷ್ಟರಾಗುತ್ತಿದ್ದರು. ಮಹಾಪುರುಷರು ಮರಣಕ್ಕಾದರೂ ಹೆದರುವುದಿಲ್ಲ; ಅಸತ್ಯದ ಮುಂದೆ ಮಾತ್ರ ತಲೆ ಬಾಗಿಯೇ ಬಾಗುತ್ತಾರೆ. ನಾನು ಅವರ ಮಾತಿನಂತೆ ನಡೆಯುವ ಪ್ರತಿಜ್ಞೆಯನ್ನು ಗೈದಿದ್ದೇನೆ. ರಘುಕುಲೋತ್ಪನ್ನನಾಗಿ ನನ್ನ ಮಾತಿನಿಂದ ನಾನೆಂತು ದೂರವಿರಲಿ?"

'ಒಂದು ವೇಳೆ ಕಾಡಿನಲ್ಲಿರುವುದು ಅವಶ್ಯಕವೇ ಆದರೆ, ನಿಮ್ಮ ಬದಲಿಗೆ ಜಟಾವಲ್ಕಲಧಾರಿಯಾಗಿ ಕಂದಮೂಲಾದಿ ತಿನ್ನುತ್ತ ನಾನಿರುತ್ತೇನೆ. ನೀವು ಅಯೋಧ್ಯೆಗೆ ತೆರಳಿ ಸುಖವಾಗಿ ರಾಜ್ಯವಾಳಿಕೊಂಡಿರಿ.'

'ಭರತ, ನಾನು ವನವಾಸ ಮಾಡಬೇಕು; ನೀನು ರಾಜ್ಯವನುಭವಿಸಬೇಕೆಂಬುದು ಪೂಜ್ಯ ತಂದೆಯ ಅಪ್ಪಣೆಯಲ್ಲವೆ? ಇದಕ್ಕೆ ವಿಪರೀತ ನಡೆದರೆ, ಅದು ಹೇಗಾದೀತು? ಹೀಗೆ ಮಾಡು ಹೇಳುವುದು ಅಧರ್ಮ; ಅದು ರಾಜ್ಯನೀತಿಯಾಗಬಹುದು. ನನ್ನ ಬದಲು ನೀನಿದ್ದರುವುದರಿಂದಲೂ ಪಿತೃವಾಕ್ಯ ಉಲ್ಲಂಘನೆಯ ಪಾಪ ನನಗೂ ನಿನಗೂ ಅಂಟದಿರುವುದೆ?'

'ಹಾಗಾದರೆ, ನೀವು ಕಾಡಿನಿಂದ ನಾಡಿಗೆ ಮರಳಬೇಡಿರಿ. ನನಗೂ ಇಲ್ಲೇ ಇದ್ದುಕೊಂಡು ನಿಮ್ಮ ಸೇವೆ ಮಾಡುವ ಅವಕಾಶವನ್ನಾದರೂ ನೀಡಿರಿ."

ಶ್ರೀರಾಮನು ಇದಕ್ಕೂ ಒಡಂಬಡಲಿಲ್ಲ. ಆಗ ಭರತನು ದುಃಖಾವೇಗದಿಂದ "ಹಾಗಾದರೆ, ನಾನು ಅನ್ನ ಜಲಾದಿ ತ್ಯಜಿಸಿ ಶರೀರ ತ್ಯಾಗ ಮಾಡುತ್ತೇನೆ" ಎಂದು ಧೂಳಿನಲ್ಲಿ ದರ್ಭೆ ಹರಡಿಸಿ, ಪೂರ್ವ ದಿಕ್ಕಿಗೆ ಮುಖಮಾಡಿ, ಕುಳಿತುಬಿಟ್ಟನು.

ಭರತನ ಈ ಬಗೆಯ ಸತ್ಯಾಗ್ರಹವನ್ನು ಕಂಡು ರಾಮನು ವಿಸ್ಮಿತನಾದನು. ಗುರು ವಸಿಷ್ಠರಿಗೆ ಕಣ್ಣುಗಳಿಂದಲೇ ಸಂಕೇತ ಮಾಡಿದನು. ಇಂಗಿತಜ್ಞರಾದ ವಸಿಷ್ಠರು ಭರತನನ್ನು ಏಕಾಂತಕ್ಕೆ ಕರೆದೊಯ್ದರು. ಅವನ ಮುಂದೆ ಸತ್ಯಾಂಶವನ್ನು ಇಟ್ಟರು.—'ಶ್ರೀರಾಮನು ಕಾಡಿಗೆ ಬಂದದ್ದು ರಾವಣನ ವಧೆಗಾಗಿ. ಬ್ರಹ್ಮ ನಿರ್ಮಿತ ಯೋಜನೆಯು ಈಡೇರಬೇಕು. ರಾಮನು ಮರಳಲೇ ಬೇಕೆಂದು ಆಗ್ರಹ ತೊಡಬೇಡ; ತಾಯಂದಿರೊಂದಿಗೆ ಅಯೋಧ್ಯೆಗೆ ತೆರಳು. ಶ್ರೀರಾಮನು ರಾವಣಾದಿಗಳ ಸಂಹಾರಗೈದು ಬಂದೇ ಬರುತ್ತಾನೆ." ಇದನ್ನು ಕೇಳಿದ ಭರತ ಕಿಂಕರ್ತವ್ಯವಿಮೂಢನಾದನು. ರಾಮನಲ್ಲಿಗೆ ಬಂದನು, "ಅಣ್ಣಾ, ಗುರುಗಳು ಹೇಳಿದ ಮಾತು ನಿಜವಾದರೆ, ನೀವು ರಾಜ್ಯ ಶಾಸನಕ್ಕಾಗಿ ನಿಮ್ಮ ಚರಣ ಪಾದುಕೆಗಳನ್ನಾದರೂ ನೀಡಿರಿ. ನೀವು ಮರಳಿ ಬರುವವರೆಗೆ ನಾನು ಅದರ ಸೇವೆಯನ್ನಾದರೂ ಮಾಡುತ್ತಿರುತ್ತೇನೆ" ಹೀಗೆ ಹೇಳುತ್ತ ಭರತನು ಅಭಿಷೇಕದ ಸಾಮಗ್ರಿಗಳಿಂದ ರತ್ನ ಖಚಿತ ಪಾದುಕೆಗಳನ್ನು ಅವನಿಗೆ ತೊಡಿಸಿದನು, ಮತ್ತು ಆ ಪಾದುಕೆಗಳನ್ನು ಎತ್ತಿಕೊಂಡು ಶ್ರೀರಾಮನನ್ನು ಸುತ್ತುವರಿದು ಅವನಿಗೆ ಬಾರಿಬಾರಿಗೂ ನಮಸ್ಕಾರ ಮಾಡಿದನು. ತುಂಬಿದ ಸಭೆಯಿಂದ ಹೇಳಿದನು— "ಹದಿನಾಲ್ಕು ವರ್ಷ ಮುಗಿದ ಮರುದಿನವೇ ನೀವು ಅಯೋಧ್ಯೆಯನ್ನು ಮುಟ್ಟದಿದ್ದರೆ, ನಾನು ಅಗ್ನಿ ಪ್ರವೇಶಗೈಯುತ್ತೇನೆ."

ಶ್ರೀರಾಮನು ಅದಕ್ಕೆ ಒಪ್ಪಿಗೆಯಿತ್ತು ಭರತನನ್ನು ಬೀಳ್ಕೊಟ್ಟನು. ಪಾದುಕೆಗಳನ್ನು ತಲೆಯ ಮೇಲೆ ಹೊತ್ತುಕೊಂಡು ಎಲ್ಲರೊಂದಿಗೆ ಅಯೋಧ್ಯೆಗೆ ಮರಳಿದನು.

ಅಣ್ಣನು ಕಾಡಿನಲ್ಲಿರುವನೆಂಬುದನ್ನು ಅವನಿಂದ ಮರೆಯಲಾಗಲಿಲ್ಲ. ಅಯೋಧ್ಯೆಗೆ ಸಮೀಪದ ನಂದೀಗ್ರಾಮಕ್ಕೆ ಹೋದನು. ಅಲ್ಲಿನ ಕಾಡೊಂದರಲ್ಲಿ ಸಿಂಹಾಸನವಿಟ್ಟನು. ಅದರ ಮೇಲೆ ರಾಮಪಾದುಕೆಗಳನ್ನು ಸ್ಥಾಪಿಸಿ ಅವನ್ನು ಪೂಜಿಸತೊಡಗಿದನು. ವಲ್ಕಲವನ್ನು ಧರಿಸಿದನು; ಕಂದಮೂಲಗಳನ್ನು ತಿನ್ನಲಾರಂಭಿಸಿದನು. ಭೂಮಿಯ ಮೇಲೆ ಮಲಗತೊಡಗಿದನು. ಅವನ ಜಟೆಗಳು ಬೆಳೆಯುತ್ತ ಬಂದುವು. ಅಣ್ಣನ ವಿಯೋಗದುಃಖದಿಂದ ಸರ್ವಪ್ರಕಾರದ ಸಾಂಸಾರಿಕ ಸುಖಭೋಗಗಳನ್ನು ತ್ಯಜಿಸಿ ಇಂದ್ರಿಯನಿಗ್ರಹಿಯಾಗಿ ಬದುಕತೊಡಗಿದನು. ಬ್ರಹ್ಮಚರ್ಯವ್ರತಧಾರಿಯಾಗಿ ಅಲ್ಲೇ ಕಾಡಿನಲ್ಲಿ ನೆಲೆಸಿದನು. ರಾಜ್ಯಭಾರಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಗಳನ್ನು ಆ ಪಾದುಕೆಗಳ ಮುಂದೆ ಕುಳಿತು ನಿರ್ವಹಿಸತೊಡಗಿದನು. ಆದೇಶವೂ ಶ್ರೀರಾಮನ ಪಾದುಕೆಗಳ ಹೆಸರಿನಲ್ಲಿ ನಡೆಯತೊಡಗಿದವು. ರಾಜಾಜ್ಞೆಗಳು ಪಾದುಕೆಗಳ ಹೆಸರಿನಲ್ಲೇ ಹೊರಡತೊಡಗಿದುವು. ಹೀಗೆ ಹದಿನಾಲ್ಕು ವರ್ಷಗಳ ಕಾಲ ಭಾರತದ ಸಿಂಹಾಸನದ ಮೇಲೆ ಪಾದುಕೆಗಳು ವಿರಾಜಿಸಿದುವು.

ಹದಿನಾಲ್ಕು ವರ್ಷಗಳ ನಂತರ ರಾವಣನನ್ನು ಕೊಂದು ಶ್ರೀರಾಮನು ವಿಮಾನದ ಮೂಲಕ ಭಾರದ್ವಾಜರ ಆಶ್ರಮಕ್ಕೆ ಬಂದನು. ಹನುಮಂತನನ್ನು ಕರೆದು ಅಯೋಧ್ಯೆಯ ಸಮಾಚಾರ ಕೇಳಿದನು. ಭರದ್ವಾಜರು ಅದನ್ನು ತಿಳಿಸುತ್ತ ಹೇಳಿದರು—"ಎಲ್ಲವೂ ಸುಖವಾಗಿಯೇ ಇದೆ. ಆದರೆ ಭರತನನ್ನು ಬೇಗನೇ ನೋಡು. ಅವನು ಜಟಾವಲ್ಕಲ ತೊಟ್ಟುಕೊಂಡು ಕಂದಮೂಲ ತಿಂದುಕೊಂಡು ರಾಜ್ಯದ ಸಮಸ್ತ ಕಾರ್ಯಭಾರವನ್ನು ಪಾದುಕೆಗಳಿಗೆ ಒಪ್ಪಿಸಿ ನಿನ್ನ ದಾರಿಯನ್ನೇ ನೋಡುತ್ತಿದ್ದಾನೆ." ಇದನ್ನು ಕೇಳಿದ ರಾಮನು ತಾನು ಬರುವೆನೆಂಬ ಸೂಚನೆಯನ್ನು ಹನುಮಂತನ ಮೂಲಕ ಭರತನಿಗೆ ಕಳಿಸಿದನು.

ಅಯೋಧ್ಯೆಯತ್ತ ಹಾರಿ ಬರುತ್ತ ಹನುಮಂತನು ಅಲ್ಲಿಂದ ಒಂದು ಕೋಸು ದೂರದಲ್ಲಿ ಭರತನನ್ನು ಕಂಡನು. ಅವನು ಚೀರ ವಸ್ತ್ರಧಾರಿಯಾಗಿದ್ದನು. ಕೃಷ್ಣಮೃಗ ಚರ್ಮ ವಸನನಾಗಿದ್ದನು. ಜಡೆಗಳನ್ನು ಬೆಳೆಸಿದ್ದನು. ಸದೇವದೇ ರಾಮನಾಮ ಸ್ಮರಿಸುತ್ತಿದ್ದನು. ರಾಮನ ಪಾದುಕೆಗಳ ಮುಂದೆ ಕುಳಿತು ಪಾದುಕೆಗಳಿಂದ

(ಹನ್ನೊಂದನೇ ಪುಟ ನೋಡಿರಿ)

ಇಪ್ಪತ್ತನೇ ಶತಮಾನದ ಮಹಾ ಸಮಸ್ಯೆ—

ಜನಸಂಖ್ಯಾ ಆಸ್ಫೋಟನೆ

ಲೇ:— ಶ್ರೀ ಕೇ. ಕೆ. ಶಹಾ
ಕೇಂದ್ರ ಸರಕಾರದ ಆರೋಗ್ಯ, ಕುಟುಂಬಯೋಜನೆ, ಕಾಮಗಾರಿ, ಗೃಹ ನಿರ್ಮಾಣ ಯೋಜನೆ, ಹಾಗೂ ನಗರಾಭಿವೃದ್ಧಿ ಮಂತ್ರಿ ಶಾಖೆಯ ಸಚಿವರು.

ಕುಟುಂಬ ಕಲ್ಯಾಣ ಯೋಜನೆಯನ್ನು ಜನನ ನಿಯಂತ್ರಣ ಆಂದೋಲನವೆಂದು ಕರೆಯುವದು ತಪ್ಪಾದೀತು. ಕುಟುಂಬಯೋಜನೆಯು ಪ್ರಕೃತಿಯ ಔದಾರ್ಯವನ್ನು ಹೆಚ್ಚು ಸುಸಂಘಟಿತವಾಗಿ ಪ್ರಯೋಜನಕಾರಿಯಾಗಿ ಬಳಸಿಕೊಳ್ಳುವ ಯತ್ನವೇ ಆಗಿದೆ. ಕುಟುಂಬಯೋಜನೆ ಅಭಿವೃದ್ಧಿ ಹಾಗೂ ಪ್ರಗತಿಯ ಯೋಜನೆಯ ಒಂದು ಭಾಗವಷ್ಟೆ.

ದೇಶದ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಕುಟುಂಬಯೋಜನೆಗೆ ಮಹತ್ವದ ಸ್ಥಾನವಿದೆ. ವೈಯಕ್ತಿಕ ಸಂಸಾರದ ಗಾತ್ರ ಹೆಚ್ಚಿದಂತೆ ಅದು ದೇಶದ ಸಂಪನ್ಮೂಲಗಳ ಮೇಲೆ ಒತ್ತಡ ತರುವುದು. ಕಾರಣ ಕುಟುಂಬಯೋಜನೆ ಕಾರ್ಯಕ್ರಮ ರಾಷ್ಟ್ರೀಯ, ಅದೇಕೆ ಪ್ರಪಂಚದ ಸಮಸ್ಯೆಯಾಗಿದೆ. ಅದುದರಿಂದಲೇ ಪ್ರಪಂಚದ ಅನೇಕ ಸಮಾಜಗಳು, ಸರಕಾರಗಳು ಅಧಿಕೃತ ಕುಟುಂಬಯೋಜನೆ ಚಳುವಳಿಯನ್ನು ಪ್ರಾರಂಭಿಸಿವೆ. ರಾಷ್ಟ್ರೀಯ ಹಾಗೂ ಸರಕಾರಿ ಮಟ್ಟದಲ್ಲಿ ಕುಟುಂಬಯೋಜನೆಯನ್ನು ಪ್ರಾರಂಭಿಸಿದ ರಾಷ್ಟ್ರಗಳಲ್ಲಿ ಭಾರತವೇ ಪ್ರಪ್ರಥಮ ರಾಷ್ಟ್ರವಾಗಿದೆ. ಪ್ರತಿಯೊಂದು ಕುಟುಂಬವು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹೊರಬೇಕಾದ ಜವಾಬ್ದಾರಿಯನ್ನು ಪರಿಮಿತಿಗೊಳಿಸುವುದೇ ಕುಟುಂಬಯೋಜನಾ ಚಳುವಳಿಯ ಉದ್ದೇಶವಾಗಿದೆ. ಎಷ್ಟು ಮಕ್ಕಳನ್ನು ಉತ್ತಮವಾಗಿ ಪೋಷಿಸಲು ಸಾಧ್ಯವೋ ಅಷ್ಟು ಮಕ್ಕಳು ಸಾಕು. ಜಗತ್ತಿನಲ್ಲಿ ಅದೂ ಇತ್ತೀಚಿನ ವರುಷಗಳಲ್ಲಿ ಆಸ್ಫೋಟನೆಗೊಳ್ಳುತ್ತಿರುವ ಪ್ರಜಾಸಂಖ್ಯೆ ಆಪತ್ಕಾರಿಯೆನಿಸುವಷ್ಟು ಭಯಂಕರವಾಗಿ ಬೆಳೆದಿದೆ. ಆದರೆ ಜಗತ್ತಿನ ಸಂಪನ್ಮೂಲಗಳು ಜನಸಂಖ್ಯಾ ವೇಗದ ಅರ್ಧದಷ್ಟು ಕೂಡ ಬೆಳೆದಿಲ್ಲ. ಮುಂಬರುವ ಪೀಳಿಗೆಗೆ ಸೌಖ್ಯಜೀವನದ ಭರವಸೆ ಉಳಿದಿಲ್ಲ.

ಪ್ರಜೋತ್ಪತ್ತಿ

ನಮ್ಮ ಪೂರ್ವಜರು ಪಡೆದಷ್ಟು ಸಹಜವಾಗಿ ಈ ಶತಮಾನದ ಮಾನವನು ಮಕ್ಕಳನ್ನು ಪಡೆಯುವುದನ್ನು ತ್ಯಜಿಸಬೇಕು. ಪ್ರಜಾಸಂಖ್ಯೆ ತೀವ್ರವಾಗಿ ದ್ವಿಗುಣಗೊಳ್ಳುತ್ತಿದೆ. ಶೇಕಡ ಒಂದರಂತೆ ಬೆಳವಣಿಗೆ ವೇಗವಿದ್ದರೆ, ಜನಸಂಖ್ಯೆ 69 ವರ್ಷಗಳಲ್ಲಿ ದುಪ್ಪಟ್ಟಾಗುವದು; ಶೇಕಡ ಎರಡರಂತೆ ಬೆಳವಣಿಗೆ ವೇಗವಿದ್ದರೆ, 35 ವರ್ಷಗಳಲ್ಲಿ ಜನಸಂಖ್ಯೆ ದ್ವಿಗುಣಿತವಾಗುವುದು. ಬೆಳವಣಿಗೆ ವೇಗ ಶೇಕಡ 3.3ರಷ್ಟಿದ್ದರೆ ಕೇವಲ ಇಪ್ಪತ್ತು ವರುಷಗಳಲ್ಲಿ ಜನಸಂಖ್ಯೆ ದ್ವಿಗುಣಿತವಾಗುವುದು. ಈ ದ್ವಿಗುಣಿತ ಅರ್ಥವನ್ನು ಗಂಭೀರ ಬಿಕ್ಕಟ್ಟನ್ನು ಸೃಜಿಸದೆ ಮುಂದುವರಿಸಲು ಸಾಧ್ಯವೇಯಿಲ್ಲ. ಬೆಳೆಯುತ್ತಿರುವ ಜನಸಂಖ್ಯೆಗೆ ಬೇಕಾದ ಪ್ರಮಾಣದಲ್ಲಿ ಕೃಷಿ ಉತ್ಪತ್ತಿ ಬೆಳೆಯುವ ಸಾಧ್ಯತೆಯಿಲ್ಲ. 1980ರ ನಂತರ ಉದ್ಯೋಗ ಸಮಸ್ಯೆ ಬಹುಗಂಭೀರ ಸ್ವರೂಪದ್ದಾಗಲಿದೆ. ಶಿಕ್ಷಣ, ಆರೋಗ್ಯ, ಗೃಹ ನಿರ್ಮಾಣ, ಸಾರಿಗೆ ಮನರಂಜನೆ.... ಬೆಳೆಯುವ ಜನಸಂಖ್ಯೆಗೆ ಇವುಗಳನ್ನು ಯೋಗ್ಯ ಪ್ರಮಾಣದಲ್ಲಿ ಒದಗಿಸುವ ಮಾತು ಅತಿ ಸಾಹಸದ ಕಾರ್ಯವೆನಿಸುವುದು. ಜನಸಂಖ್ಯೆಯ ವೇಗವನ್ನು ತಡೆಹಿಡಿಯದಿದ್ದರೆ, ಪ್ರಜಾಸಂಖ್ಯೆ ಬೆಳೆದು, ಆರ್ಥಿಕ ಸಮಸ್ಯೆ ಉಲ್ಬಣಿಸಿ, ರಾಜಕೀಯ ಅಸ್ಥಿರತೆ ತಲೆದೋರುವದು. ದೇಶದ ಆಂತರಿಕ ಪರಿಸ್ಥಿತಿ ಅಂತರಾಷ್ಟ್ರೀಯ ಪರಿಸ್ಥಿತಿಯ ಮೇಲೂ ತನ್ನ ಪ್ರಭಾವ ಬೀರದಿರದು.

ಸರ್ವಪ್ರಯತ್ನ

ಜನಸಂಖ್ಯಾ ಏರಿಕೆ ಪ್ರಪಂಚದ ಭಾರೀ ಸಮಸ್ಯೆ, ಎಲ್ಲ ರಾಷ್ಟ್ರಗಳೂ ವಿಧವಿಧವಾಗಿ ಈ ಸಮಸ್ಯೆಯ ಪರಿಹಾರಕ್ಕೆ ಪ್ರಯತ್ನಿಸಬೇಕು. ಐದು ಖಂಡಗಳಲ್ಲಿ ವ್ಯಾಪಿಸಿರುವ 163 ರಾಷ್ಟ್ರಗಳ ಪೈಕಿ, 30 ರಾಷ್ಟ್ರಗಳಲ್ಲಿ ಸರಕಾರಿ ಪ್ರಣೀತ ಕುಟುಂಬಯೋಜನಾ ಕಾರ್ಯಕ್ರಮವಿಂದು ನಡೆಯುತ್ತಿದೆ; 24 ರಾಷ್ಟ್ರಗಳ ಸರಕಾರ ಸಕ್ರಿಯವಾಗಿ ಈ ಆಂದೋಳನಕ್ಕೆ ಬೆಂಬಲವಿತ್ತಿವೆ. ಪ್ರಪಂಚದ ಶೇಕಡ 30ರಷ್ಟು ಜನರು ಕುಟುಂಬಯೋಜನಾ ಕಾರ್ಯಕ್ರಮದ ಕಕ್ಷೆಯಲ್ಲಿ ಈಗ ಬಂದಿದ್ದಾರೆ.

ಭಾರತದಲ್ಲಿ ಕುಟುಂಬಯೋಜನೆ ಸರಕಾರ ಪ್ರಣೀತ ಕಾರ್ಯಕ್ರಮವಾಗಿದೆ. ಕುಟುಂಬಯೋಜನಾ ಚಳುವಳಿಯಲ್ಲಿ ಭಾರತಕ್ಕೆ ಅಗ್ರಸ್ಥಾನ. ಪ್ರಪಂಚದಲ್ಲಿ ಒಟ್ಟು ನಡೆದ ಸಂತಾನ ಹರಣ ಶಸ್ತ್ರಕ್ರಿಯೆಗಳಿಗಿಂತ ಹೆಚ್ಚು ಸಂಖ್ಯೆಯ ಶಸ್ತ್ರಕ್ರಿಯೆಗಳು ಭಾರತ ದೇಶವೊಂದರಲ್ಲೇ ನಡೆದಿವೆ. ಭಾರತದ ಸಮಸ್ಯೆಯೂ ಆತಂಕಕಾರಿಯಾಗಿದೆ. ಪ್ರಪಂಚದ ಶೇಕಡ 14ರಷ್ಟು ಜನ ಭಾರತದಲ್ಲಿ. ಪ್ರಪಂಚದ ಒಟ್ಟು ಭೂಮಿಯಲ್ಲಿ 2.4 ಭಾಗ ಭಾರತದ್ದು. ಪ್ರಪಂಚದ ಒಟ್ಟು ಆದಾಯದಲ್ಲಿ ಭಾರತದ ಪಾಲು ಶೇಕಡ 1.5 ಮಾತ್ರ. ಪ್ರತಿ ವರ್ಷಕ್ಕೆ ನಮ್ಮ ಜನಸಂಖ್ಯೆಗೆ ಕೂಡುವ ಹೊಸ ಮುಖಗಳ ಸಂಖ್ಯೆ ಒಂದು ಕೋಟಿ ಮೂವತ್ತು ಲಕ್ಷ.

ಆದ್ಯ ಪ್ರಶಸ್ತಿ:-

ಜನಸಂಖ್ಯಾ ಹತೋಟಿ ಕಾರ್ಯಕ್ರಮಕ್ಕೆ ಭಾರತವು ಆದ್ಯ ಪ್ರಾಶಸ್ತ್ಯವನ್ನು ನೀಡಿದೆ. ಗ್ರಾಮಾಂತರ ಪ್ರದೇಶದಲ್ಲಿ 41,000, ನಗರಪ್ರದೇಶದಲ್ಲಿ 18,000 ಕುಟುಂಬಯೋಜನಾ ಕೇಂದ್ರಗಳು ಕೆಲಸ ಮಾಡುತ್ತಿವೆ. ಇದಲ್ಲದೆ ಬೇರೆ 2,000 ಸಂಸ್ಥೆಗಳೂ ಈ ಕೆಲಸವನ್ನು ಮಾಡುತ್ತಿವೆ. ಸಂತಾನ ನಿರೋಧದ ಎಲ್ಲ ಆಧುನಿಕ ಮಾರ್ಗಗಳನ್ನು ಭಾರತದಲ್ಲಿ ಪ್ರಯೋಗಿಸಲಾಗುತ್ತಿದೆ. ಕುಟುಂಬಯೋಜನಾ ಚಳುವಳಿ ಭಾರತದಲ್ಲಿ 1956ರಲ್ಲಿ ಪ್ರಾರಂಭವಾಯಿತು. ಅಲ್ಲಿಂದ ಇಲ್ಲಿಯ ವರೆಗೆ ಸುಮಾರು 74 ಲಕ್ಷ ಜನರು ಶಸ್ತ್ರಕ್ರಿಯೆ ಮಾಡಿಸಿಕೊಂಡಿದ್ದಾರೆ. 1965ರಿಂದ ಮೇ 1970ರ ವರೆಗೆ 34 ಲಕ್ಷ ಮಹಿಳೆಯರು ವಂಕೀ ಜೋಡಣೆ ಮಾಡಿಸಿಕೊಂಡಿದ್ದಾರೆ. ನಿರೋಧದ ಹಂಚಿಕೆ ಬೃಹತ್ ಪ್ರಮಾಣದಲ್ಲಿ ನಡೆದಿದೆ. ನಿರೋಧಗಳನ್ನು ತಯಾರಿಸುವ ಹಿಂದೂಸ್ತಾನ್ ಲೇಟೆಕ್ಸ್ ಕಂಪೆನಿಯು ಪ್ರತಿ ವರ್ಷಕ್ಕೆ 283 ದಶಲಕ್ಷ ನಿರೋಧಗಳನ್ನು ತಯಾರಿಸುತ್ತಿದ್ದು, ಪ್ರತಿಯೊಂದು ನಿರೋಧವನ್ನು ವಿದ್ಯುತ್‌ಶಕ್ತಿಯಿಂದ ಪೂರ್ಣ ಪರೀಕ್ಷೆ ಮಾಡಿ ಪೇಟೆಗೆ ಬಿಡುಗಡೆ ಮಾಡಲಾಗುತ್ತಿದೆ. ಹಳ್ಳಿಹಳ್ಳಿಗಳಲ್ಲಿಯೂ ನಿರೋಧದ ಹಂಚಿಕೆ— ವ್ಯಾಪಾರದ ಬಗ್ಗೆ ಖಾಸಗೀ ಅಥವಾ ಸರಕಾರೀ ಸಂಸ್ಥೆಗಳು ಶ್ರಮಿಸುತ್ತಿವೆ.

ಭಾರತದಲ್ಲಿ ಕುಟುಂಬಯೋಜನಾ ಕಾರ್ಯಕ್ರಮವು ಪ್ರಾರಂಭವಾದಂದಿನಿಂದ ಇಂದಿನವರೆಗೆ ಸುಮಾರು ಎಂಭತ್ತು ಲಕ್ಷ ದಂಪತಿಗಳಿಗೆ ರಕ್ಷಣೆ ದೊರಕಿದೆ. 1968-69 ಸಾಲಿನೊಂದರಲ್ಲೇ 1,41,000 ಜನನಗಳನ್ನು ತಡೆಗಟ್ಟಲಾಯಿತು ಎಂದು ಅಂದಾಜು ಮಾಡಲಾಗಿದೆ. 1968-69 ರವರೆಗೆ ನಡೆದ ಕುಟುಂಬಯೋಜನೆಯ ಒಟ್ಟು ಪರಿಣಾಮದಿಂದಾಗಿ 1990-91 ಸಾಲಿಗೆ ಸುಮಾರು 17.7 ದಶಲಕ್ಷ ಜನನಗಳನ್ನು ತಡೆಗಟ್ಟಲು ಸಾಧ್ಯವಾಗುವುದು.

ಬೃಹತ್ ಚಳುವಳಿ

ಈ ಚಳುವಳಿಯನ್ನು ಅನುಷ್ಠಾನಕ್ಕೆ ತಂದು ನಡೆಸಿಕೊಂಡು ಬರುವದು ಬಹು ಕಠಿಣ ಕೆಲಸ. ದೇಶದ ಜನಸಂಖ್ಯೆ 540 ದಶಲಕ್ಷ. 3.2 ದಶಲಕ್ಷ ಚದರು ಕಿಲೋಮೀಟರ್ ವಿಸ್ತಾರದ ದೇಶದಲ್ಲಿ 340 ಜಿಲ್ಲೆಗಳು, 2690 ನಗರಗಳು, 567169 ಹಳ್ಳಿಗಳಲ್ಲಿ ವಾಸಿಸುವ ಜನರು ಮುಖ್ಯವಾಗಿ ಬಳಸುವ ಭಾಷೆಗಳ ಸಂಖ್ಯೆಯೇ 15. ವೃತ್ತಪತ್ರ, ಬಾನುಲಿ, ಹಸ್ತಪತ್ರ, ಭಿತ್ತಿಪತ್ರ, ಸಾಕ್ಷಿಚಿತ್ರ-ಬಹುಜನ ಸಮುದಾಯ ಸಂಪರ್ಕದ ಎಲ್ಲ ಆಧುನಿಕ ಮಾಧ್ಯಮಗಳನ್ನು ನಾವು ಬಳಸಿಕೊಂಡು ಈ ಕಾರ್ಯಕ್ರಮವು ದೂರದ ಹಳ್ಳಿಯ ತುದಿಯವರೆಗೂ ಹೋಗುವಂತೆ ನೋಡಿಕೊಂಡಿದ್ದೇವೆ. ಭಿನ್ನ ಭಿನ್ನ ಜಾತಿ ಮತ ಪಂಥ ಸಾಂಪ್ರದಾಯಗಳ ಪರಿಮಿತಿಯನ್ನು ಮೀರಿ ಕುಟುಂಬಯೋಜನೆಯ ಸಂದೇಶ ಇಂದು ದೇಶದಲ್ಲಿ ಸಾರ್ವತ್ರಿಕವಾಗಿದೆ.

ಅದೇ ತಾನೇ ಮದುವೆಯಾದವರಿಗೆ ಜನನಗಳ ನಡುವಿನ ಅಂತರ ಪ್ರಯೋಜನವನ್ನು ಹೇಳಿ ಕೊಡುತ್ತಿದ್ದೇವೆ. ಮದುವೆಯ ವಯಸ್ಸನ್ನು ಏರಿಸಲು ಯೋಜನೆಯಿದೆ. ಹೆರಿಗೆಗಾಗಿ ಬರುವ ತಾಯಂದಿರಿಗೆ ನಿಯತಸಂತಾನದ ಅವಶ್ಯಕತೆಯನ್ನು ತಿಳಿಸಲು ಆಸ್ಪತ್ರೆಯಲ್ಲಿ ವ್ಯವಸ್ಥೆ ಮಾಡಲಾಗಿದೆ.

ಕುಟುಂಬಯೋಜನೆ ಕಾರ್ಯಕ್ರಮವು ಭಾರತದಲ್ಲೂ, ಇತರ ದೇಶಗಳಲ್ಲೂ ಬಲಗೊಳ್ಳುತ್ತಿದೆ. ಪ್ರಪಂಚದ ಬುದ್ಧಿವಂತರೆಲ್ಲ ಜನಸಂಖ್ಯಾ ಆಸ್ಫೋಟನೆಯ ಈ ಸವಾಲನ್ನು ಸ್ವೀಕರಿಸಿದ್ದಾರೆ. ಜನಸಂಖ್ಯಾ ಏರಿಕೆ ಸಮಸ್ಯೆಗೆ ಅಭಿವೃದ್ಧಿ ಹೊಂದಿದ ಅಥವಾ ಹೊಂದುತ್ತಿರುವ ದೇಶಗಳಲ್ಲಿ ಅಂತರವಿಲ್ಲ. ದೇಶಗಳ ಗಡಿ ಮೀರಿ ಈ ಸಮಸ್ಯೆ ಹಬ್ಬಿದೆ; ಎಲ್ಲರನ್ನೂ ಸುತ್ತುವರಿದಿದೆ. ಜನಸಂಖ್ಯಾ ಏರಿಕೆಯನ್ನು ಪ್ರಪಂಚವು ತಡೆಗಟ್ಟುವಲ್ಲಿ ಯಶಸ್ವಿಯಾದರೆ, ಮುಂಬರುವ ಪೀಳಿಗೆಯು ಈ ತಲೆಮಾರಿನ ಜನರನ್ನು ಕೃತಜ್ಞತೆಯಿಂದ ನೆನೆಸುವುದು; ತನ್ನ ಬದುಕಿನ ಹಕ್ಕನ್ನು ಉಪಯೋಗಿಸುವುದು.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಆಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ನವಯುಗ

ವಾರಪತ್ರಿಕೆ
ಉಡುಪಿ, ದ. ಕ.

NAVAYUGA
UDIPI, S. K.

ಸಂಪುಟ : 50
ಸಂಚಿಕೆ : 6

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ವಾರ್ಷಿಕ ಚಂದಾ ರೂ. 10
ವಿಶೇಷ ಸಂಚಿಕೆಗಳು ಸಹಿತ
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ಮೂರು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಡೋಲಾಯಮಾನತೆ

ಪ್ರಧಾನಮಂತ್ರಿ ಶ್ರೀಮತಿ ಗಾಂಧಿಯವರ ಇತ್ತೀಚೆಗಿನ ವರ್ತನೆಗಳು ದೇಶವನ್ನು ಸರ್ವಾಧಿಕಾರದತ್ತ, ಕಮ್ಯೂನಿಜಂನತ್ತ ಒಯ್ಯುತ್ತಿವೆ. ತಾನೊಲ್ಲದವರನ್ನು ಅಣಗಿಸುವುದಕ್ಕೂ, ತಾನೊಪ್ಪುವವರನ್ನು ಎತ್ತಿಕಟ್ಟುವುದಕ್ಕೂ ಏನೇನು ಮಾಡಬೇಕೋ ಅವೆಲ್ಲವನ್ನೂ ಆಕೆ ಮಾಡುತ್ತಲೇ ಬಂದಿದ್ದಾರೆ; ಬರುತ್ತಾರೆ. ಕೇರಳದ ಮಧ್ಯಾವಧಿ ಚುನಾವಣೆಯಲ್ಲಿ ಆಕೆ ಗಳಿಸಿದ ಗೆಲವು ಅವರ ಕಿರೀಟಕ್ಕೆ ನವಿಲುಗರಿಯೇರಿಸಿದೆಯೆಂದರೂ ಸರಿಯೇ. ಇವೆಲ್ಲವುಗಳಿಂದ ಆಕೆ ಅಧಿಕಾರ ಬಲಪಡಿಸುವುದಕ್ಕಾಗಿ ಸಂವಿಧಾನವನ್ನೂ ಬದಿಗಿಡುವ ಸಾಹಸಕ್ಕೆ ಇಳಿಯತೊಡಗಿದ್ದಾರೆ. ಈ ವೇಳೆ ಇಂದಿರಾ ವಿರೋಧಿಗಳು ಇನ್ನೂ ವಯಕ್ತಿಕ ನೆಲೆಯಲ್ಲೇ ಆಕೆಯ ವಿರುದ್ಧ ಪ್ರಚಾರದಲ್ಲಿ ತೊಡಗಿದ್ದಾರೆ; ತಮ್ಮ ತಮ್ಮ ಪಕ್ಷದ ನೀತಿ-ನಡಾವಳಿಗಳ ಪ್ರಚಾರ ನಡೆಸಿ, ಅವಕ್ಕೆ ಜನಪ್ರಿಯತೆ ಗಳಿಸುವುದನ್ನು ಬಿಟ್ಟು ಶ್ರೀಮತಿ ಗಾಂಧಿ ಹಾಗೆ ಮಾಡಿದ್ದಾರೆ, ಹೀಗೆ ವರ್ತಿಸಿದ್ದಾರೆ; ಪ್ರಜಾಸತ್ತೆಗೆ ಕುಠಾರ ಇಟ್ಟಿದ್ದಾರೆ ಎಂದು ಮುಂತಾಗಿ 'ಆಡುವುದರಲ್ಲೇ' ನಿರತರಾಗಿದ್ದಾರೆ. ಇತರತ್ರ ಅಧಿಕಾರದಲ್ಲಿರುವ ಪಕ್ಷಗಳೂ ತಮ್ಮ ಆಡಳಿತವನ್ನು ಜನಪ್ರಿಯಗೊಳಿಸುವಲ್ಲಿ ವಿಫಲವಾಗಿವೆಯೆಂದೇ ಹೇಳಬೇಕಾಗುತ್ತದೆ. ಕೇರಳದಲ್ಲಿ ಗೆದ್ದ ಇಂಡಿಕೇಟು ಜನಪ್ರಿಯವಾಗಿದೆಯೆಂದರ್ಥವಲ್ಲ; ಅದ ಹೊರತಿಂಟ ದಷ್ಟೇ ಅರ್ಥ. 'ಇವರೇನು ಮಾಡುತ್ತಾರೆ ನೋಡೋಣ' ಎಂದು ಕೇರಳಿಗರು ಇಂಡಿಕೇಟನ್ನು ಎತ್ತಿದರು. ಆದರೆ, ಇಂಡಿಕೇಟು ಅಧಿಕಾರ ಸೂತ್ರ ಕೈಯಲ್ಲಿ ಹಿಡಿಯಲು ಮುಂದೆ ಬರಲಿಲ್ಲ; ಇದು ಅಧಿಕಾರ ಲಾಲಸೆಯಿಂದ ವಿಮುಖರಾದದ್ದಲ್ಲ; ತಿರಿನಾಲಗೆಯಲ್ಲಿ ನೀಗೂಂಡರೂ ಶ್ರೀ ಅಚ್ಯುತ ಮೆನನ್ನರ ಕಿರೀಟಂಗವನ್ನು ಐದು ವರ್ಷ ಕಾಲವೂ ಮುಂದುವರಿಯಗೊಡಲು ಇಂಡಿಕೇಟು ಸಿದ್ಧವಿಲ್ಲ. ಉತ್ತರ ಪ್ರದೇಶದಲ್ಲಿ ಚರಣಸಿಂಗರನ್ನು ಕಡೆಸಿ 'ವೇದಿ'ಯಿಂದ ಹೊರಗೆಳೆದಂತೆಯೇ ಮುಂದಿನ ಕೆಲವೇ ತಿಂಗಳುಗಳಲ್ಲಿ ಮೆನನ್ನರಿಂದ ಕೇರಳದ ರಾಜ್ಯಪಾಲರು ರಾಜಿನಾಮೆ ಬಯಸುವ ಪರಿಸ್ಥಿತಿಯನ್ನು ಶ್ರೀಮತಿ ಗಾಂಧಿ ತರುತ್ತಾರೆ; ಮೆನನ್ನರು ಒಪ್ಪದಿದ್ದರೆ, ರಾಷ್ಟ್ರಪತಿ ಆಜ್ಞೆ ಹೊರಡಿಸುತ್ತಾರೆ.

ಗೇಟಿನ ಸಾರ್ವತ್ರಿಕ ಚುನಾವಣೆಗಳು ನಿಜಕ್ಕೂ ಅತ್ಯಂತ ಮಹತ್ವದ್ದು; ಆಗ ಇಂಡಿಕೇಟು ಮೊತ್ತಮೊದಲ ಬಾರಿಗೆ ಚುನಾವಣಾರಂಗಕ್ಕಿಳಿಯುತ್ತದೆ. ಆದುದರಿಂದ ದೇಶದ ಚುನಾವಣಾ ರಂಗದಲ್ಲಿ ಇನ್ನೊಂದು ಪಕ್ಷ, ಪ್ರಬಲ ಪಕ್ಷ, ಹೆಚ್ಚಾದಂತಾಯ್ತು. ಇದುವರೆಗೆ ಅಧಿಕಾರದಲ್ಲಿದ್ದ ಪಕ್ಷಗಳು ಮೊಳಕೆನಷ್ಟು ವೇಗವಾಗಿ ಕೃತಿಗಿಳಿಸದ್ದನ್ನು ಕಂಡು ಕೊಂಡಿರುವ ವಿವಿಧ ರಾಜ್ಯಗಳ ಜನತೆ ಇಂಡಿಕೇಟಿನತ್ತ ಒಲವು ಹರಿಸಿದರೂ ಅದು ಸಹಜವೇ. ಆದುದರಿಂದ ಇಂಡಿಕೇಟು ಬೇರೂರದೆಡೆ ಅದು ಬೇರೂರುತ್ತದೆ; ಬೇರೂರಿದಲ್ಲಿ ಅದು ಸುಸ್ಥಿರವಾಗುತ್ತದೆ; ಸಾಕಷ್ಟು ದೃಢವಿರುವಲ್ಲಿ ಗೆದ್ದೂ ಬರುತ್ತದೆ. ಪಾರ್ಲಿಮೆಂಟಿನ ಚುನಾವಣೆಗಳು ವಿಧಾನಸಭಾ ಚುನಾವಣೆಗಳಿಂದ ಪ್ರಭಾವಿತವಾಗುತ್ತದೆ. ಶ್ರೀಮತಿ ಗಾಂಧಿಯವರೂ ಅವರ ಅಧ್ಯಕ್ಷರೂ ಗೇಟಿನಲ್ಲಿ ಇಡಿದೇಶದಲ್ಲೇ ಚುನಾವಣೆ ನಡೆಸಲು ಯತ್ನಿಸುತ್ತಿದ್ದಾರೆ. ಈ ವೇಳೆಯಲ್ಲಿ, ಇಂಡಿಕೇಟನ್ನು ವಿರೋಧಿಸುವ ಪಕ್ಷಗಳು ತೀವ್ರ ಎಚ್ಚರವಾಗಿರುವುದು ಅವಶ್ಯಕ. ತಾನು ಅಧಿಕಾರದಲ್ಲಿರುವಲ್ಲಿ ಉತ್ತಮ ಆಡಳಿತದ ಮೂಲಕ ಜನಪ್ರಿಯತೆಯನ್ನುಳಿಸಿ ಕೊಳ್ಳಬೇಕು; ಅಧಿಕಾರವಿಲ್ಲದೆಡೆಯಲ್ಲಿ ತಮ್ಮ ನೀತಿಯನ್ನು ಜನಪ್ರಿಯಗೊಳಿಸ ಬೇಕು, ಪರಸ್ಪರರನ್ನು ಆಪಾದಿಸುವ, ಆರೋಪಿಸುವ ಕೃತ್ಯವನ್ನು ನಿಲ್ಲಿಸಿ ತಮ್ಮ ಪಕ್ಷದ ಪ್ರಚಾರ ಕಾರ್ಯದಲ್ಲಿ, ಸಂಘಟನೆಯಲ್ಲಿ ನಿರತರಾಗಬೇಕು. ಬರಿಯ ಮಾತಿನಿಂದ ಏನನ್ನಾದರೂ ಸಾಧಿಸ ಬಹುದಾಗಿದ್ದರೆ, ನಾವೆಂದೋ ಪ್ರಗತಿಯ ಸುಪ್ಪತ್ತಿಗೆಯೇರ ಬೇಕಾಗಿತ್ತು. ಆದರೆ ನಾವು ರಾಜ್ಯಕೀಯವಾಗಿಯೂ, ನೈತಿಕವಾಗಿಯೂ ಅಧಃಪತಿತರಾಗುತ್ತಲೇ ಬರುತ್ತಿದ್ದೇವೆ. ನೈತಿಕತೆಯಲ್ಲಿಯೂ ರಾಜ್ಯಕೀಯ ತಲೆಹಾಕಿದೆ. ಆಡುವುದೊಂದು ಮಾಡುವುದೊಂದು ಎಂಬುದು ನಮ್ಮ ಜಾಯಮಾನವಾಗಿ ಪರಿಣಮಿಸಿದೆ. ಇದು ತಪ್ಪದೆ ಹೋದರೆ, ನಾವು ಉನ್ನತರಾಗುವುದೆಂತು ಸಾಧ್ಯ?

ಸಿಂಡಿಕೇಟಿನ ಭದ್ರಕೋಟೆ ಕರ್ನಾಟಕ. ಇದು ಅಧ್ಯಕ್ಷ ನಿಜಲಿಂಗಪ್ಪನವರ ಸ್ವರಾಜ್ಯ. ಮುಖ್ಯಮಂತ್ರಿ ವೀರೇಂದ್ರ ಪಾಟೀಲರೂ ಜನಪ್ರಿಯರೇ; ಎಲ್ಲರಿಗ ಬೇಕಾದವರೆ. ಆದರೂ ಇಲ್ಲಿ ಕಳ್ಳದಸ ಘಟನೆ ಆಸಿಯ ತೊಡದೆಯೆಂಬುದ ಪ್ರದ್ಯವಾಗುತ್ತಿದೆ. ಇತ್ತೀಚೆಗೆ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಇಂಡಿಕೇಟಿನ (ಮಾಜಿ ಮಂತ್ರಿ) ಶ್ರೀ ಕೆ. ಎಚ್. ವೀರಣ್ಣಗೌಡರನ್ನು ಸಿಂಡಿಕೇಟಿನ ಮತ್ತೊಬ್ಬ ಮಾಜಿ ಸಚಿವ ಶ್ರೀ ವೈ. ರಾಮಚಂದ್ರ ಅವರು ಸೋಲಿಸಿ ಪ್ರಚಂಡವಾಗಿ ಆಯ್ಕೆಗೊಂಡದ್ದು ಸಹಜವೇ. ಆದರೆ, ಹೆಬ್ಬಾಳದ ಕೃಷಿ ವಿಶ್ವವಿದ್ಯಾಲಯಕ್ಕೆ ವಿಧಾನಸಭೆಯಿಂದ ಆಯ್ಕೆಯಾಗ ಬೇಕಾದ ಜಂಟಿ ಮಂಡಳಿಯ ಸದಸ್ಯರ ಚುನಾವಣೆಯಲ್ಲಿ ಬಿಕ್ಕಟ್ಟು ಉಲ್ಬಣಿಸಿದ್ದು ಎದ್ದು ಕಾಣುತ್ತದೆ. ಇದರಲ್ಲಿ ಸಂಯುಕ್ತ ವಿಧಾಯಕ ದಳವು ಹೇಳಹೇಳಾಗಿ ಹೋದದ್ದೂ, ಸಿಂಡಿಕೇಟಿನಲ್ಲಿನ ಶಿಸ್ತುಗೇಡಿತನದಿಂದ ಇಂಡಿಕೇಟು ಪ್ರಬಲಗೊಂಡದ್ದೂ ವ್ಯಕ್ತವಾಗಿದೆ. ಇದು ಪಕ್ಷಾಂತರದ ಮೂಲ ಸೂಚನೆಯೂ ಆಗಿರಲೂ ಬಹುದು.

ಈ ಹಿಂದೆಯೂ ಒಂದೆರಡು ಬಾರಿ ಇಂತಹ ಘಟನೆ ನಡೆದದ್ದುಂಟು. ಮುಂದಿನ ವರ್ಷ ಈ ಹೊತ್ತಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಹುದ್ದರಿಗಳನ್ನು ಆರಿಸಿಕೊಳ್ಳಲಾಗುವುದು. ಆ ವೇಳೆಗೆ ಸಾಕಷ್ಟು ಪಕ್ಷಾಂತರ ನಡೆಯುವ ನಿರೀಕ್ಷೆಯಿದೆ. ಚುನಾವಣೆಗಳು ಕಳೆದ ತರುಣದಲ್ಲಿಯೂ ಇಂತಹ ಪಕ್ಷಾಂತರ ದೊಡ್ಡ ಪ್ರಮಾಣದಲ್ಲಿ ಆಗಬಹುದು. ಜಾತೀಯ ಬಹಿಷ್ಕಾರಕ್ಕೆ ಜೆಪಿಯ ಕಾಲವೊಂದಿತ್ತು; ಆದರೆ, ಇಂದು ಜಾತೀಯ, ... ಬಹಿಷ್ಕಾರಗಳಿಗೂ ಅಂಜುವವರು ಉಳಿದಿಲ್ಲ. ಜಾತೀಯತೆಯನ್ನು ನಾವು ವಿರೋಧಿಸ ಬೇಕು; ಇಂತಹ ಪಕ್ಷಾಂತರವನ್ನೂ ವಿರೋಧಿಸ ಬೇಕಾದ ಕಾಲ ಬಂದರೂ ಬರಬಹುದು. ಆಗ ನಮ್ಮ ಪ್ರಜಾಸತ್ತೆ ಡೋಲಾಯಮಾನತೆಯಿಂದ ಯಾವುದಾದರೊಂದು ರೀತಿಯ ದೃಢತೆಗೆ ಬಂದರೂ ಬರಬಹುದು.

ಗಂಡಾಂತರಕಾರಿ

ಉತ್ತರ ಪ್ರದೇಶದಲ್ಲಿ ಸಂವಿಧಾನ ಕುಸಿದಿದೆಯೆಂದು ಅಭಿಪ್ರಾಯಪಟ್ಟು ರಾಷ್ಟ್ರಪತಿ ಆಳಿಕೆ ಜಾರಿಗೆ ಬಂತು. ಶ್ರೀ ಚರಣಸಿಂಗರನ್ನು ಪದಚ್ಯುತಗೊಳಿಸಲಾಯ್ತು. ಇಂಡಿಕೇಟಿನ ಬೆಂಬಲವನ್ನು ಅವರು ಕಳೆದುಕೊಂಡದ್ದರಿಂದ ಶ್ರೀ ಸಿಂಗರಿಗೆ ಬಹುಮತವಿಲ್ಲವೆಂದು ರಾಜ್ಯಪಾಲರ ಸಿಫಾರಸು. ತನಗೆ ಬಹುಮತವಿದೆಯೆಂದೂ ಅದನ್ನು ತಾನು ಸಿದ್ಧಮಾಡಿ ತೋರಿಸುವೆನೆಂದೂ ಶ್ರೀ ಸಿಂಗರ ವಾದ. ಆದರೆ, ರಾಜ್ಯಪಾಲರು ಅದನ್ನೊಪ್ಪಲಿಲ್ಲ.

ಒಂದು ರಾಜ್ಯಕೀಯ ಪಕ್ಷವು ತನ್ನ ಬೆಂಬಲವನ್ನು ಹಿಂತೆಗೆದುಕೊಂಡ ಮಾತ್ರಕ್ಕೆ ಬಹುಮತವಿಲ್ಲವೆನ್ನುವುದು ನ್ಯಾಯವೆ? ಪಕ್ಷೀಯ ದೃಷ್ಟಿಯಿಂದ ನೋಡುವುದಾದರೂ ಸಿಂಡಿಕೇಟು, ಸ್ವತಂತ್ರ,

(ಹತ್ತನೇ ಪುಟ ನೋಡಿರಿ)

ವಿದೇಶ ಪ್ರವಾಸಕ್ಕೆ



ವಿಜಯಾ ಬ್ಯಾಂಕಿನ
ಚೆಯರ್‌ಮನ್‌ರಾದ
ಶ್ರೀ ಎಂ. ಸುಂದರರಾಮ ಶೆಟ್ಟರು

ಅಲ್ಪ ಕಾಲಾವಧಿಯ ವಿರಾಮ ಪ್ರವಾಸಕ್ಕಾಗಿ ಯುರೋಪ್ ದೇಶಗಳಿಗೆ ಮತ್ತು ಇಂಗ್ಲೆಂಡಿಗೆ ತೆರಳಿದ್ದಾರೆ. ಅವರ ಮೂರು ವಾರಗಳ ಈ ಪ್ರವಾಸಕ್ಕಾಗಿ ತನ್ನ ಸಹಧರ್ಮಿಣಿಯೊಂದಿಗೆ ಅಕ್ಟೋಬರ್ 5ರಂದು ಮುಂಬಯಿಯಿಂದ ಏರ್ ಇಂಡಿಯಾ ವಿಮಾನದಲ್ಲಿ ತೆರಳಿರುವರು.

ಗೇಹರಾಜ್ಯದಲ್ಲಿ

ನಾರಿ, ಮುನಿದರೆ ಮಾರಿ

"ಅಂತೂ ಚರಣಸಿಂಗರನ್ನು ಮನೆಗೆ ಕಳಿಸಿದರೂಂತಾಯ್ತು..."

"ಹೌದ್ದಾಂ, ಒಲಿದರೆ ನಾರಿ, ಮುನಿದರೆ ಮಾರಿ ಎಂದು ಹಿಂದಿನವರು ಗಾದೆ ಮಾಡಿದ್ದು ಸುಳ್ಳಲ್ಲನ್ನ...."

"ಅಲ್ರಿ, ಆಕೆಗೆ ಚರಣಸಿಂಗರ ಮೇಲೆ ಯಾಕೆ ಅಷ್ಟು ಸಿಟ್ಟೂಂತ...."

"ಯಾಕೆ ಅಂದ್ರಿ? ತನ್ನ ಪಕ್ಷದಲ್ಲಿ ಬಿ. ಕೆ. ಡಿ. ವಿಲೀನಗೊಳ್ಳಬೇಕು; ಉತ್ತರ ಪ್ರದೇಶದಲ್ಲಿ ತಾನು ಅಧಿಕಾರ ನಡೆಸಬೇಕೂಂತ ಶ್ರೀಮತಿ ಗಾಂಧಿಯವರ ಉದ್ದೇಶ್ಯವಿತ್ತು...."

'ಹೌದ್ದಾಂ...."

"ಆದರೆ, ಆಕೆಯ ಮನೋದ್ದೇಶ ಈಡೇರಲಿಲ್ಲ ನೋಡು. ಆದ್ದರಿಂದ ಆಕೆ ತನ್ನ ಬೆಂಬಲವನ್ನು ಹಿಂತೆಗೆದುಕೊಳ್ಳಬೇಕು; ಆಗ ಚರಣಸಿಂಗರು ರಾಜೀನಾಮೆ ಕೊಡಬೇಕು; ಕೆಲಕಾಲವಾದರೂ ಅಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿ ಹಾಲು-ಜೇನು ಒಂದು ಮಾಡಿ ಕೊಡದರೂ ತನ್ನ ಪಕ್ಷದ ಅಧಿಕಾರ ಸ್ಥಾಪಿಸಬೇಕು...."

'ಆದರೆ, ಅವರ ಆಲೋಚನೆ ಫಲಿಸಲಿಲ್ಲ ಅಲ್ವೇ...? "

'ಹೌದ್ದಾಂ, ಸಿಂಡಿಕೇಟ್, ಜನಸಂಘ, ಸ್ವತಂತ್ರ ಪಕ್ಷಗಳು ಚರಣಸಿಂಗರಿಗೆ ಬೆಂಬಲ ವ್ಯಕ್ತಪಡಿಸಿದ್ದರಿಂದ ಹಾಗಾಯ್ತು...."

"ಹ್ಞಾಂ...."

"ಆದಕ್ಕೆಂದೇ ನೋಡು, ರಾಜ್ಯಪಾಲರು ರಾಜೀನಾಮೆ ನೀಡುವಂತೆ ಅವರಿಗೆ ಸೂಚನೆ ನೀಡಿದರ; ತನ್ನ ಸಲಹೆಯನ್ನು ಅವರು ಕೇಳದ್ದರಿಂದ ರಾಷ್ಟ್ರಪತಿ ಆಳ್ವಿಕೆಗೆ ಶಿಫಾರಸು ಮಾಡಿದರು."

"ಅಲ್ರಿ, ಇದ್ರಲ್ಲಿ ಇಂದಿರಮ್ಮನ ಕೈವಾಡವಿದೆ....'

"ಇಲ್ಲದುಂಟೆ? ಆದ್ದರಿಂದಲೇ ಒಮ್ಮೆಗೆ ಶ್ರೀ ಸಿಂಗರ ಇಚ್ಛೆಯಂತೆ ಮಂತ್ರಿಗಳ ಖಾತೆಗಳನ್ನು ಹಿಂತೆಗೆದುಕೊಂಡ ಡಾ| ರೆಡ್ಡಿ ಮುಂದಿನ ಕೆಲಗಳಿಗೆಯಲ್ಲೇ ಮನಸ್ಸು ಬದಲಿಸಿ ರಾಜೀನಾಮೆ ಬಯಸಿದರು...."

'ಅಲ್ರಿ, ಇಲ್ಲಿ ಅಟರ್ನಿ ಜನರಲ್ಲ ಮತ್ತು ಅಡ್ವೊಕೇಟ್ ಜನರಲ್ಲರ ನಡುವೆ ಯೂ ಭಿನ್ನಮತವಿದೆಯಂತೆ....'

"ಹ್ಞಾಂ, ರಾಜ್ಯಪಾಲರು ಅಟರ್ನಿ ಜನರಲ್ಲರ ಸಲಹೆ ಕೇಳಿದರು; ರಾಜೀನಾಮೆ ಬಯಸಿದರು. ಮುಖ್ಯಮಂತ್ರಿಗಳು ಅಡ್ವೊಕೇಟ್ ಜನರಲ್ಲರ ಸಲಹೆ ಕೇಳಿದರು; ರಾಜೀನಾಮೆ ಬಯಸಿದ ರಾಜ್ಯಪಾಲರ ಅಧಿಕಾರವನ್ನೇ ಪ್ರಶ್ನಿಸಿದರ...."

"ಹೌದು ಸರಿ, ಆದರೆ, ಆದದೇನು? ರಾಜ್ಯಪಾಲರು ಇಕ್ಕಟ್ಟಿಗೆ ಸಿಕ್ಕಿದರು. ಕೇಂದ್ರದ ಕೈಗೊಂಬೆಯಾಗಿ ವರ್ತಿಸಿದರು.'

"ಅದಕ್ಕಿಂತಲೂ ನೋಡು, ಶ್ರೀಮತಿ ಗಾಂಧಿಯವರು ಸೋವಿಯತ್ತಿನ ಪ್ರವಾಸ ಮಾಡುತಿದ್ದ ರಾಷ್ಟ್ರಪತಿ ಗಿರಿಯವರಲ್ಲಿಗೆ ಜನ ಕಳಿಸಿ ರಾಷ್ಟ್ರಪತಿ ಆಳ್ವಿಕೆ ಘೋಷಿಸಲು ಅನುಮತಿ ಪಡೆದುಕೊಂಡರ. ಇದರಿಂದ ಏನು ತಿಳಿಯುತ್ತದೆ? ಶ್ರೀಮತಿ ಗಾಂಧಿ ಚರಣಸಿಂಗರು ಅಧಿಕಾರ ಮುಂದುವರಿಸುವುದನ್ನು ಬಯಸುವುದಿಲ್ಲ. ಅದ್ದರಿಂದ ಎಂತಾದರಾಗಲೀ ವಿಧಾನಸಭೆ ಸೇರುವುದಕ್ಕೆ ಮೊದಲೇ ಅವರಾಗಿ ಹೋಗದಿದ್ದರೆ, ಕುತ್ತಿಗೆ ದಬ್ಬಿ ಹೊರದೂಡಬೇಕು..."

"ಅದು ಸರಿನ್ನಿ. ಅಲ್ಲ, ಈಗೀಗ ಆಕೆಯ ವರ್ತನೆ ಏನೇನೋ ಆಗುತ್ತಿದೆ...."

"ಮತ್ತೇನೂ ಅಲ್ಲ, ಎಲ್ಲರಿಗಿಂತಲೂ ತಾನೇ ಉಚ್ಚ ಪದಸ್ಥಳೆಂದೂ ತನ್ನ ಬಯಕೆಯೇ, ದೇಶದ ಬಯಕೆಯೆಂದೂ ಆಕೆ ಮತ್ತೊಂದು ಬಾರಿ ಸಿದ್ಧಮಾಡಿ ತೋರಿಸಿದ್ದಾರೆ...."

'ಹೌದೂನ್ನಿ. ಅಂದ್ರೆ, ಆಕೆ ಸರ್ವಾಧಿಕಾರಿ ಮನೋವೃತ್ತಿ ತೋರುತ್ತಾರೆ."

"ಮನೋವೃತ್ತಿ ತೋರಿಸುತ್ತಾರೆ ಅಲ್ಲ, ಸರ್ವಾಧಿಕಾರಿಯಾಗಿಯೇ ವರ್ತಿಸುತ್ತಿದ್ದಾರೆ....'

'ಅಲ್ಲವಾದ್ರೆ, ಚರಣಸಿಂಗರು ತನ್ನ ಬಹುಮತವನ್ನು ತೋರಿಸಲು ಸಿದ್ಧರಾಗಿರುವಾಗ ಅದನ್ನು ತಡೆಗಟ್ಟುವ ಅವಸರವೇಕೆ?'

"ಹೌದೂನ್ನಿ. ಒಂದು ವೇಳೆ ವಿಧಾನಸಭೆ ಅವರಲ್ಲಿ ವಿಶ್ವಾಸ ವ್ಯಕ್ತಪಡಿಸಿದರೆ, ಇಂದಿರಮ್ಮನ ಮೂಗು ಮುರಿಯುತ್ತದೆ. ಅದಕ್ಕೆಂದು ವಿಧಾನಸಭೆಯೇ ಸೇರಗೊಡಲಿಲ್ಲ..."

'ಮುಂದೆ?'

"ಮತ್ತೇನು ಪಕ್ಷಾಂತರವನ್ನು ಪ್ರೋತ್ಸಾಹಿಸುವುದು; ನನ್ನ ಸರಕಾರದ ಆಸ್ತಿ, ಅವರ ತೋರಿಸುವುದು, ಬಿ. ಕೆ. ಡಿ. ಮತ್ತು ಸಿಂಡಿಕೇಟ್‌ಗಳ ಅಸ್ತಿತ್ವವನ್ನೇ ತೊಡೆದು ಹಾಕುವ ಮಹಾಯಜ್ಞದಲ್ಲಿ ದೀಕ್ಷಿತೆಯಾಗುವುದು. ಇಂಡಿಕೇಟ್ ಸರಕಾರ ರಚಿಸುವುದು ...."

"ಅಲ್ಲಾರಿ, ಚರಣಸಿಂಗರಿಗೆ ಈಗಲೇ ಹಲವು ರಾಜಕೀಯ ಪಕ್ಷಗಳು ಬೆಂಬಲ ಕೊಟ್ಟಿದ್ದಾರೆ..."

"ತನಗೆ ಬಹುಮತವಿದೆಯೆಂದ. ಹೇಳಿದರೂ ಸರಕಾರ ರಚಿಸಲು ಅವರಿಗೆ ರಾಜ್ಯಪಾಲರು ಅನುಮತಿ ಕೊಡಲಾರರ."

"ಇದ ಪ್ರಜಾಸತ್ತೆಯೇನ?"

"ನೋಡಮ್ಮ, ಭಾರತದ ಪ್ರಜೆಯೆಂದರೆ ಶ್ರೀಮತಿ ಗಾಂಧಿಯೊಬ್ಬರೇ. ಆಕೆಯ ಇಚ್ಛೆಯೇ ಜನತೆಯ ಇಚ್ಛೆಯಾಗಬೇಕ. ಅದನ್ನು ಜನ ತಾನಾಗಿ ಒಪ್ಪದೇ ಹೋದರೆ, ಬಲಾತ್ಕಾರದಿಂದಲಾದರೂ ಅದು ಒಪ್ಪುವಂತೆ ಮಾಡುತ್ತಾರೆ...."

'ಅಲ್ರಿ, ಇದು ಸರ್ವಾಧಿಕಾರವಲ್ಲದೆ ಮತ್ತೇನು?'

'ಅದ ಸರಿನ್ನ, ಆದರೆ, ರಾಷ್ಟ್ರಪತಿಯವರೂ ಇದಕ್ಕೆ ಬೆಂಬಲ ನೀಡುವಂತಿದೆ.'

'ಅಲ್ಲವೇ; ಘಟಾನಘಟಿಗಳನ್ನೆಲ್ಲಾ ಪ್ಲಾಸ್ಟಿಕ್ ಗೊಂಬೆಗಳನ್ನಾಗಿ ಮಾಡಿದ ಆಕೆ ಅವರನ್ನು ಅಂಗೈಯಲ್ಲಿ ಕುಣಿಸಲು ಸಮರ್ಥಳಾದರೆ, ತಪ್ಪೇನು? ಸತ್ಯ ಹೇಳಬೇಕಾದರೆ, ಶ್ರೀಮತಿಯ ಆತ್ಮಸಾಕ್ಷಿ ಜಾಗ್ರತವಾದದ್ದರಿಂದಲೆ ಶ್ರೀ ಗಿರಿಯವರು ರಾಷ್ಟ್ರಪತಿಯಾದದ್ದು..."

'ಅದು ಸರಿನ್ನಿ....ಅದಿರಲಿ...'

"ಆದರೂ ಇಲ್ಲ, ಹೋದರೂ ಇಲ್ಲ. ಕರದ ಹಿಡಿದದ್ದೇ ಬಡಿಗೆ; ಇಂದಿರಮ್ಮ ಬಯಸಿದ್ದೇ ಚಂದ...."

"ಹೌದ್ದಾಂ...."

"ಏನು?"

"ಹೌದೂನ್ನಿ, ಆದರೆ, ಚರಣ ಸಿಂಗರನ್ನು ಎಲ್ಲರೂ ಹಾಕಿಕೊಂಡವರು ಇದುವರೆಗೆ ಜೋರಾಗಿ ಉಳಿದಾಗಲಿಲ್ಲ..."

"ಅದಕ್ಕೆಂದೇ ಶ್ರೀಮತಿ ಗಾಂಧಿ ಭಾರೀ ವಿಮಾನವೇಗ ಮಾಡಿದರು...."

"ಮಾಡಲಿ ಬಿಡಿ, ನಮಗೇನಂತೆ?"

'ನಮಗೇನೂ ಇಲ್ಲ ಬಿಡು....'

'ಯಾಕೆ?'

"ಹಾಗಾದರೆ ಬೇಡವೇ...."

"ಹ್ಞಾಂ...."

—ಗೋರಾ.

ಸುಯೇಜ್ ಧೀರ– ನಾಸೇರ್

ಸಂಯುಕ್ತ ಅರಬ ಪ್ರಜಾರಾಜ್ಯದ ಪ್ರಸ್ತುತ ಅಧ್ಯಕ್ಷರಾಗಿ ಆಫ್ರೇಸ್ಯಾದ ಮಹಾಪುರುಷರಾಗಿ ಈ ಶತಮಾನದ ಕೆಲವೇ ಶಕ ಪುರುಷರಲ್ಲಿ ಗಣ್ಯರಾಗಿದ್ದ ನಾಸೇರರು ನಿಧನರಾದರ. ಅವರ ನಿಧನದಿಂದ ಸಂಯುಕ್ತ ಅರಬ ಪ್ರಜಾರಾಜ್ಯ ಮಾತ್ರವಲ್ಲ, ಅರಬ ಜಗತ್ತು ಆಫ್ರೇಸ್ಯವೂ ಬಡವಾದವು. ಶ್ರೀ ಅಬ್ದುಲ್ ಗಮಾಲ್ ನಾಸೇರರು ಕೊನೆಯುಸಿರೆಳೆದಾಗ ಅವರಿಗೆ ೫೨ ವರ್ಷ ಪ್ರಾಯವಾಯ್ತು.

ಶ್ರೀ ನಾಸೇರರು ಶ್ರೀ ಸಾಮಾನ್ಯರ ಕುಟುಂಬದಲ್ಲೇ ಜನ್ಮವೆತ್ತಿದವರು. ಅವರ ತಂದೆ ಅಂಚೆ ಗುಮಾಸ್ತರಾಗಿದ್ದರು. ಸ್ವಸಾಮರ್ಥ್ಯ ಮತ್ತು ಯೋಗ್ಯತೆಯ ಬಲದಿಂದಲೇ ದೇಶದ ಅಗ್ರಸ್ಥಾನವೇರಿದ ಮಹಾ ಉನ್ನತ ವ್ಯಕ್ತಿ ನಾಸೇರ್.

ಸೈನ್ಯದಲ್ಲಿ ದುಡಿದ ಯೋಧರಾದ ನಾಸೇರರು ೧೯೫೨ರಲ್ಲಿ ಈಗುಪ್ತದ ಕ್ಷಿಪ್ರ ಕ್ರಾಂತಿಯಲ್ಲಿ ನಾಯಕರಾಗಿದ್ದರು. ಇದರ ಪರಿಣಾಮವಾಗಿ ಈಗುಪ್ತದಲ್ಲಿ ಅರಸುಮನೆತನವು ಕೊನೆಗೊಂಡಿತು. ಇದು ಶ್ರೀ ನಾಸೇರರಿಗೆ ಅರಬ ಜಗತ್ತಿನ ನಾಯಕ ಪಟ್ಟವನ್ನು ತಂದಿತ್ತಿತು. ೧೯೫೪ರಲ್ಲಿ ಮುಸ್ಲಿಂ ಸೋದರರ ಚಳವಳಿಗೆ ಪ್ರೋತ್ಸಾಹ ಕೊಡುವರೆಂಬ ಕಾರಣದಿಂದ ಅಧ್ಯಕ್ಷ ಜನರಲ್ ನಾಗೂಬರನ್ನು ಪದಚ್ಯುತಗೊಳಿಸಿ, ತಾನೇ ಸರ್ವಾಧಿಕಾರ ಸೂತ್ರ ಹಿಡಿದರು. ೧೯೫೫ರಲ್ಲಿ ಬಾಡುಂಗದ ಅಲಿಪ್ತ ರಾಷ್ಟ್ರಗಳ ಪ್ರಥಮ ಸಮ್ಮೇಳನದಲ್ಲಿ ಭಾಗವಹಿಸಿದರು. ಇದು ಅವರ ಸ್ಥಾನಮಾನಗಳನ್ನು ಆಫ್ರೇಸ್ಯಾಗಳಲ್ಲಿ ಹೆಚ್ಚಿಸಿತು; ಭದ್ರಪಡಿಸಿತು. ಪ್ರಧಾನಿ ನೆಹರುರವರೂ ಅದರಿಂದ ಪ್ರಭಾವಿತರಾದದ್ದು ಇಲ್ಲೇ. ಇದೇ ವೇಳೆ ನಾಸೇರರು ಭಾರತ, ಬರ್ಮ, ಅಫಘಾನಿಸ್ತಾನ ಮತ್ತು ಪಾಕಿಸ್ತಾನಗಳ ಸಂಚಾರ ಕೈಕೊಂಡರು.

ಪಾಶ್ಚಾತ್ಯ ರಾಷ್ಟ್ರಗಳು ತಮಗೆ ನೀಡುವ ಶಸ್ತ್ರಾಸ್ತ್ರಗಳು ಸಾಲವೆಂದು ಕಮ್ಯುನಿಸ್ಟ ಲೋಕದತ್ತ ಇವರು ನೋಡಿದರು. ಜೆಕೋಸ್ಲಾವಾಕಿಯಾದಿಂದ ಶಸ್ತ್ರಾಸ್ತ್ರ ತರಿಸಲು ಆರಂಭ ಮಾಡಿದರು. ಅಸ್ವಾನ್ ಅಣೆಕಟ್ಟನ್ನು ಕಟ್ಟಲು ಪಾಶ್ಚಾತ್ಯರು ನೆರವು ನೀಡಲು ಹಿಂದ ಮುಂದ ನೋಡಿದಾಗ, ರಶ್ಯಾದ ಸಹಾಯವನ್ನು ಪಡೆಯುವುದಾಗಿ ಘೋಷಿಸಿದ ಅವರಿಗೆ ಅಮೇರಿಕೆ–ಬ್ರಿಟನ್ನುಗಳು ಹಾಕುವ ಮಳೆಗಾನ್ನೇ ಸ ರಿಸಿದುವು.

ಸ್ವತಂತ್ರ ಸ್ಥಾನವನ್ನು ಮನ್ನಿಸಿದ ನಾಸೇರ್ ಅಧ್ಯಕ್ಷರಿಗೆ ಹೆಚ್ಚು ಅಧಿಕಾರ ನೀಡುವಂತೆ ಈಗುಪ್ತಕ್ಕೆ ಹೊಸ ಸಂವಿಧಾನವನ್ನು ರಚಿಸಿಕೊಂಡರು. ತಾನು ಅಧ್ಯಕ್ಷರಾದರು. ಸುಯೇಜ್ ಕಾಲುವೆಯ ರಾಷ್ಟ್ರೀಕರಣವು ೧೯೫೬ರಲ್ಲಿ ಅವರ ಕೆಚ್ಚೆದೆಯ ಸಾಧನೆ. ಇದರಿಂದ ಈಗುಪ್ತವು ಪಾಶ್ಚಾತ್ಯರ ಕೈಯಿಂದ ಸಂಪೂರ್ಣ ವಿಮೋಚನೆಗೊಂಡಿತ; ರಶ್ಯದತ್ತ ಅದರ ಒಲವು ಹೆಚ್ಚಲಾರಂಭವಾಯ್ತು.

ಅರಬ ದೇಶಗಳನ್ನು ಒಂದುಗೂಡಿಸುವ ಆಶಯದ ಮೊದಲ ಹಂತವಾಗಿ ಈಗುಪ್ತ—ಸಿರಿಯಾಗಳ ಸಂಯುಕ್ತ ಅರಬ

(ಏಳನೇ ಪುಟ ನೋಡಿರಿ)

ನವಯುಗದ ಹೊಸ ವರ್ಷ

ಚಂದಾದಾರರಲ್ಲಿ ವಿನಂತಿ

ಇದೇ ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 49ನೆಯ ವರ್ಷ ಮುಗಿದು ಈ ತಿಂಗಳಿಂದ 50ನೆಯ ಹೊಸ ವರ್ಷಾರಂಭವಾಗಿದೆ. ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತವಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ. ಚಂದಾಹಣವನ್ನು ಮನಿಯಾರ್ಡರು ಮೂಲಕ, ಯೂನಿಯನ್ ಪೋಸ್ಟಲ್ ಆರ್ಡರು ಮೂಲಕ ಕಳಿಸಬಹುದು. ಇಲ್ಲವೆ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಪಾವತಿ ಮಾಡಬಹುದು. ಹಾಗೆ ಪಾವತಿ ಮಾಡುವಾಗ ತಮ್ಮ ಚಂದಾನಂಬ್ರ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇವೆ.

ಚಂದಾಹಣಕ್ಕಾಗಿ ಪತ್ರಿಕೆಯನ್ನು ವಿ. ಪಿ. ಮೂಲಕ ಕಳಿಸಿದರೆ ಈಗಿನ ಹೆಚ್ಚಿಸಿದ ಅಂಚೆ ದರದಿಂದಾಗಿ ರೂ. 1–40 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ದಯಮಾಡಿ ಚಂದಾವನ್ನು ಮೇಲಿನಂತೆ ಕಳಿಸಬೇಕಾಗಿ ಬಿನ್ನವಿಸುತ್ತೇವೆ.

ಮೆನೇಜರ್.

ಚರಣಸಿಂಗರ ಭವಿಷ್ಯ ಬರೆಯುವವರಾರು?

ಕೇಂದ್ರ ಸರಕಾರವು ರಾಜ್ಯಪಾಲರ ಮೇಲೆ ಹೇಗೆ ಸವಾರಿ ಮಾಡುತ್ತದೆಂಬುದಕ್ಕೆ ಉತ್ತರ ಪ್ರದೇಶದ ಹಗರಣವೊಂದು ಸುಸ್ಪಷ್ಟ ನಿದರ್ಶನ. ಕಾಂಗ್ರೆಸ್ ವಿಘಟನೆಯ ವೇಳೆ ಅಲ್ಲಿ ಶ್ರೀ ಚಂದ್ರಭಾನು ಗುಪ್ತರ ಸರಕಾರವಿತ್ತು. ಶ್ರೀ ಗುಪ್ತ ಶ್ರೀಮತಿ ಗಾಂಧಿಯವರ ಆತ್ಮಸಾಕ್ಷಿಯಂತೆ ರಾಷ್ಟ್ರಪತಿ ಪದ್ದರಿಗೆ ಮತದಾನ ನೀಡುವುದನ್ನೂ ನೀಡಿದ್ದನ್ನೂ ವಿರೋಧಿಸಿದ್ದರಿಂದ ಅವರು ಸಿಂಡಿಕೇಟ್ ಸದಸ್ಯರಲ್ಲೊಬ್ಬರಾದರು.

ತನ್ನ ವಿರೋಧಿಗಳ ಸರಕಾರಗಳನ್ನು ಉರುಳಿಸುವ ಹೆಗ್ಗುರಿಯಿಂದ ಇಂದಿರಾ ಗಾಂಧಿಯವರ ದೇಶಸಂಚಾರಕ್ಕಾರಂಭವಾಯ್ತು. ಒಂದನೆಯ ಸುತ್ತಿನಲ್ಲೇ ಅವರು ಯಶಗಳಿಸಿದ್ದು ಉತ್ತರ ಪ್ರದೇಶದಲ್ಲಿ. ಅದು ಅವರ 'ಸ್ವರಾಜ್ಯ'ವೂ ಹೌದು. ಅಧಿಕಾರ ಲಾಲಸಿಗಳಾದ ಅನೇಕರು ಶ್ರೀ ಸಿ. ಬಿ. ಗುಪ್ತರಿಗೆ ಬೆಂಬಲ ನೀಡುವುದನ್ನು ಬಿಟ್ಟು ಪಕ್ಷಾಂತರಗೊಂಡು ಇಂಡಿಕೇಟಿಗರಾದರು; ತತ್ಪರಿಣಾಮವಾಗಿ ಶ್ರೀ ಗುಪ್ತ ಬಹುಮತ ಕಳೆದುಕೊಂಡೆನೆಂದು ಮನವರಿಕೆಯಾದೊಡನೇ ರಾಜಿನಾಮೆ ನೀಡಿದರು.

ಶ್ರೀಮತಿ ಇಂದಿರಾಗಾಂಧಿಯವರು ತನ್ನ ತಂತ್ರ ಸಫಲವಾದದ್ದರಿಂದ ಹಿಗ್ಗಿ ಹೀರೇಕಾಯಿಯಾದರು. ಅಲ್ಲಿಂದ ಮೇಲೆ ಅವರು ಇನ್ನೂ ಕೆಲವೊಂದು ಸರಕಾರವುರುಳಿಸಲು ಭೀಷ್ಮ ಪ್ರತಿಜ್ಞೆ ಮಾಡಿದರು; ಪ್ರತಿಜ್ಞಾ ಪಾಲನೆಗೆಂದು ಭಗೀರಥ ಪ್ರಯತ್ನವನ್ನು ಮಾಡಿದರು. ಆದರೆ, ಅವರ ಆಶೆ ಈಡೇರದೇ ಹೋಯ್ತು; ಆ ಮಾತು ಬೇರೆ.

ಅತ್ತ ಉತ್ತರಪ್ರದೇಶದ ಹಳೆ ಹುಲಿ ಶ್ರೀ ಚರಣ ಸಿಂಗರಿಗೇ ಭಾರತೀಯ ಕ್ರಾಂತಿದಳವೆಂಬ ಇನ್ನೊಂದು ಹೆಸರು. ನಾಳೆ ಶ್ರೀ ಸಿಂಗರು ದಳ ತ್ಯಜಿಸಿದರೆ, ದಳವೇ ಪದದಲಿತವಾಗುತ್ತದೆ. ಇದನ್ನು ತಿಳಿದ ಶ್ರೀಮತಿ ಗಾಂಧಿಯವರು, ದಿಲ್ಲಿ–ಲಖನೊಗಳ ಅವರ ಚೇಲರು ಪ್ರಜಾಪ್ರೇಮಿಯ ಹೆಸರೆತ್ತಿ ಶ್ರೀ ಸಿಂಗರನ್ನು ಹೊಗಳಿ ಬಖ್ಯಾನ ಮಾಡಿದರು. ಶ್ರೀ ಸಿಂಗರೇನೂ ಅಡಮೆಯವರಲ್ಲ; ಮೊದಲಿಗೇ ಒಲ್ಲೆನೆನ್ನಲಿಲ್ಲ. ತನ್ನ ನೇತೃತ್ವವನ್ನು ಒಪ್ಪಿದ ಇಂಡಿಕೇಟಿಗರನ್ನು ಕೂಡಿಕೊಂಡು ಸರಕಾರ ರಚಿಸಿದರು. ಇಲ್ಲಿಯೂ ಶ್ರೀಮತಿ ಗಾಂಧಿ ಪಕ್ಷ ಪೂರ್ಣ ತಂತ್ರವುಪಯೋಗಿಸಿದರು.

ಮೊದಲಿಗೆ ಅವರು ಶ್ರೀ ಸಿಂಗರ ಸಚಿವ ಸಂಪುಟದಲ್ಲಿ ಸೇರದೇನೇ ಅವರಿಗೆ ಬೆಂಬಲ ನೀಡಿದರು. ತಮ್ಮ ಭಾವಿ ಸಂಗಾತಿಯ ಗುಣಾವಗುಣಗಳನ್ನು ಅರ್ಥ ಮಾಡಿಕೊಂಡರು. ಈ ಸಾಹಚರ್ಯದಿಂದ ತೃಪ್ತರಾದ ಅವರು ಒಂದು ಶುಭದಿನದಂದು ಶ್ರೀ ಸಿಂಗರ ಸಚಿವ ಸಂಪುಟದಲ್ಲಿ ಶಾಮೀಲಾದರು. ಇಂದು ಕೇರಳದಲ್ಲಿ ಇದೇ ನೀತಿಯ ಪುನರಾವರ್ತನೆಯಾಗುತ್ತಿದೆ. ಬಿಕೆಡಿ—ಇಂಡಿಕೇಟ್ ದಾಂಪತ್ಯ ಸಮರಸವಾಗಿದೆಯೆಂದು ಶ್ರೀಮತಿ ಗಾಂಧಿ ಬಹಿರಂಗವಾಗಿ ಘೋಷಿಸಿದರು. ಶ್ರೀ ಸಿಂಗರೂ ತೃಪ್ತಿಯ ನಗೆ ಸೂಸಿದರು.

ಆದರ ಹಿಂದೆಯೇ ಬಿಕೆಡಿ—ಇಂಡಿಕೇಟ್ ವಿಲೀನತೆಯ ಮಾತು ಬಂತು. ಪ್ರಧಾನಿಯ ಸ್ವರಾಜ್ಯದಲ್ಲೇ ಪ್ರಜಾ ಸತ್ತೆ ಆರಂಭವಾಗ ಬೇಕು. ಒಂದು ಸುತ್ತಿನಿಂದ ತೊಡಗಿದ ಮಾತುಕತೆ ಹಲವು ಸುತ್ತು ತಿರುಗಿತು. ಎಲ್ಲಿಂದ ಆರಂಭವಾಯಿತ್ತೋ ಅಲ್ಲಿಗೇ ಬಂದು ತಲುಪಿತು. ತನ್ನ ಗಂಡ ಒಲ್ಲದವನೆಂದು ಇಂಡಿಕೇಟಿಗೆ ಈಗ ಮನವರಿಕೆಯಾಯಿತು. ತಾನು ಹೇಳಿದ್ದನ್ನು ಕೇಳದವನೊಡನೆ ಹೊಂದಾಣಿಕೆ ಹೇಗೆ ಸಾಧ್ಯ? ಮಾಳ್ವಿನ ಮರವನ್ನು ಅಪ್ಪಿದಂತವರಿಗೆ ಭಾಸವಾಯ್ತು. ತೇಗದ ಮಣಿಕವೆಂದು ಹಿಡಿದರೆ ಭೂರಿಕೆಂಡವಿದಾಯ್ತು" ಎಂಬಂತಾಯ್ತು. ಹಗ್ಗವೆಂದು ನಂಬಿದ್ದೇ ಅವರಿಗೆ ಹಾವಾಯ್ತು. ಆಕೆಗೆ ಉಳಿದಿರ ವದಾರಿ—ವಿಚ್ಛೇದನವೊಂದೇ. ಕೇರಳದಲ್ಲಿ ಯೇನಕೇನ ಸ್ಥಾನ ಗಟ್ಟಿಸಿದ ಹೊಸ ಉತ್ಸಾಹದಲ್ಲಿ ಶ್ರೀ ಸಿಂಗರಿಗೆ ವಿಚ್ಛೇದನ ನೋಟಿಸು ನೀಡಿಯೇ ನೀಡಿದರು.

ಶ್ರೀ ಸಿಂಗರಿಗೆ ನೀಡುತ್ತಿದ್ದ ಬೆಂಬಲವನ್ನು ಹಿಂತೆಗೆದು ಕೊಂಡು ಅವರನ್ನು ಉರುಳಿಸುವುದು, ರಾಷ್ಟ್ರಪತಿ ಆಳಿಕೆಯನ್ನು ಘೋಷಿಸಿ ಮುಂದೊಂದು ದಿನ ಚುನಾವಣೆ ನಡೆಸುವುದು—ಈ ಚುನಾವಣೆಯಲ್ಲಿ ಬಹುಮತ ಗಳಿಸುವುದು ಶ್ರೀಮತಿ ಗಾಂಧಿಯವರ ಆಶಯ. ಆದರೆ, ಶ್ರೀ ಸಿಂಗರು ಇದಕ್ಕೆ ವಿರುದ್ಧವಾಗಿ ವರ್ತಿಸಿದರು. ಶ್ರೀಮತಿಯವರು ಬೆಂಬಲ ಹಿಂತೆಗೆದುಕೊಂಡದ್ದರಿಂದ ಅವರು ವಿಚಲಿತರಾಗಲಿಲ್ಲ. "ರಾಜಧನ ರದ್ದತಿ" ಸಂಬಂಧದಲ್ಲಿ ಸರಕಾರಕ್ಕೆ ವಿರುದ್ಧವಾಗಿ ಮತ ನೀಡಿದ್ದು ತನ್ನ ಪಕ್ಷದ ನಿರ್ಣಯದಂತೆ ಎಂದವರು ಹೇಳಿದರು. ನೆಪವರಸುತ್ತಿದ್ದ ಶ್ರೀಮತಿಯವರು ಯಾವ ಸಮಜಾಯಿಷಿಗೂ ಬೇಡ! ತನ್ನ ಇಚ್ಛೆಯನ್ನು ಮುಂದಿನ ಬಾಗಿಲಿಂದಾಗದಿದ್ದರೆ ಹಿಂದಿನ ಬಾಗಿಲಿಂದ ಕಾರ್ಯಗೊಳಕ್ಕೆ ತರುವುದು ಆಕೆಯ ಜಾಯಮಾನ. ರಾಜಧನಾದಿ ರದ್ದತಿ ಮಾಡುವ ಸಂವಿಧಾನ ತಿದ್ದುಪಡಿ ಮಸೂದೆಯನ್ನು ರಾಜಸಭೆಯು ತಿರಸ್ಕರಿಸಿದೊಡನೆಯೇ ರಾಷ್ಟ್ರಪತಿ ಆಜ್ಞೆಯ ಮೂಲಕ ಅಡಿಗೆ ಬಿದ್ದ ಮಾಗವನ್ನು ಮೇಲೆತ್ತಿದರಲ್ಲವೆ? ಆದದರಿಂದಲೇ ಅವರು ತಂತ್ರ ಮಗ್ನರಾದರು.

ಇಂಡಿಕೇಟ್ ಬೆಂಬಲ ಹಿಂತೆಗೆದುಕೊಂಡ ಬಳಿಕವೂ ಸಂಪುಟದ ಇಂಡಿಕೇಟಿಗರು ರಾಜಿನಾಮೆ ನೀಡಲಿಲ್ಲ. ಅದುದರಿಂದ ಅವರೆಲ್ಲರ ಖಾತೆಗಳನ್ನು ಕಿತ್ತು ಕೊಳ್ಳಬೇಕೆಂದು ಶ್ರೀ ಸಿಂಗ್ ರಾಜ್ಯಪಾಲ ಡಾ| ಬಿ. ಗೋಪಾಲ ರೆಡ್ಡಿಯವರನ್ನು ಕೇಳಿಕೊಂಡರು. ಅದನ್ನು ಸಮ್ಮತಿಸಿದ ಶ್ರೀ ರೆಡ್ಡಿ ಮರುಕ್ಷಣವೇ ತನ್ನ ಮನಸ್ಸು ಬೇರೆ ಮಾಡಿದರು. "ಶ್ರೀ ಸಿಂಗರಿಗೆ ಬಹುಮತವಿಲ್ಲವೆಂದು ತನಗೆ ಮನವರಿಕೆಯಾದದ್ದರಿಂದ ಅವರು ರಾಜಿನಾಮೆ ಕೊಡುವುದು ಉತ್ತಮ" ವೆಂಬ ಅವರ ವಕ್ರ ಆದೇಶವೂ ಹೌದು. ಇಂಡಿಕೇಟು ತನ್ನ ಬೆಂಬಲವನ್ನು ಹಿಂತೆಗೆದು ಕೊಂಡದ್ದು ನಿಜವಾದರೂ ವಿಧಾನಸಭೆಯಲ್ಲಿ ತನಗೆ ಬಹುಮತವಿದೆಯೆಂದೂ ಇದನ್ನು ಯಾವ ದಿನ ಬೇಕಾದರೂ ಸಿದ್ಧಪಡಿಸಲು ಸಿದ್ಧನೆಂದೂ ಅವರ ನಿಲುವು ತಳೆದರು. ಪಶ್ಚಿಮ ಬಂಗಾಳದಲ್ಲಿ ಶ್ರೀ ಅಜಯ ಮುಖರ್ಜಿಯವರನ್ನು ಆಗಿನ ರಾಜ್ಯಪಾಲ ಶ್ರೀ ಧರ್ಮವೀರರು ಮನೆಗೆ ಕಳಿಸಿದ ಪ್ರಸಂಗಕ್ಕೂ ಈಗಿನ ಪ್ರಸಂಗಕ್ಕೂ ಸಮಾನತೆಯಿಲ್ಲ. ಶ್ರೀ ಮುಖರ್ಜಿಯವರು ವಿಧಾನ ಸಭೆಯಲ್ಲಿ ವಿಶ್ವಾಸಮತ ಗಳಿಸಲು ಕೂಡಲೇ ಸಿದ್ಧರಾಗಲಿಲ್ಲ. ಆದರೆ, ತಾನು ಹಾಗಲ್ಲವೆಂದು ಉತ್ತರಿಸಿದರು ಶ್ರೀ ಸಿಂಗರು. ಶ್ರೀ ರೆಡ್ಡಿಯವರು ಅದಾವುದನ್ನೂ ಗಮನಕ್ಕೆ ತಂದುಕೊಳ್ಳದೆ ಉತ್ತರ ಪ್ರದೇಶದಲ್ಲಿ ರಾಷ್ಟ್ರಪತಿ ಆಳಿಕೆ ಘೋಷಿಸಬೇಕೆಂದು ಶಿಫಾರಸು ಮಾಡಿದರು.

ರಾಜ್ಯಪಾಲ ಡಾ| ರೆಡ್ಡಿಯವರು ತನ್ನ ಮೊದಲ ನಿಲುವಿನಿಂದ ಬಹಳಷ್ಟು ದೂರಕ್ಕೆ ಸರಿದದ್ದು ಸೋಜಿಗ. ನಾನು "ನೀವು ಬಯಸಿದಂದು ವಿಧಾನಸಭೆಯನ್ನು ಕರೆಯಲು ಸಿದ್ಧ" ನೆಂದು ಹೇಳಿದ ಮೇಲೆ ಪ್ರಜಾತಂತ್ರದಲ್ಲಿ ಅದಕ್ಕೆ ಅವಕಾಶ ಕೊಡುವುದು ಅಗತ್ಯ. ಮುಂದೆ ಸಿಂಡಿಕೇಟ್, ಸ್ವತಂತ್ರ, ಜನಸಂಘ, ಎಸ್ಸೆಸ್ಪಿಗಳು ಶ್ರೀ ಸಿಂಗರಿಗೆ ಬೆಂಬಲ ವ್ಯಕ್ತಪಡಿಸಿದುವು. ಈ ನಿಟ್ಟಿನಲ್ಲಿ ರಾಜ್ಯಪಾಲರು ಶ್ರೀಮತಿ ಗಾಂಧಿಯವರ ಸೂತ್ರದ ಗೊಂಬೆಯಂತೆ ವರ್ತಿಸುತ್ತಿದ್ದಾರೆಯೇ ಎಂಬ ಸಂದೇಹಕ್ಕೆ ಎಡೆ ಬರುತ್ತಿದೆ.

ಕೇಂದ್ರ ಸರಕಾರದ ಅಧಿಕಾರಾರೂಢ ಪಕ್ಷ ಇಂಡಿಕೇಟ್ ಸಂಖ್ಯಾ ಬಲದಲ್ಲಿ ಅಲ್ಪಮತೀಯ. ಅದಕ್ಕೆ ಯಾವ ಪಕ್ಷವೂ ಬೆಂಬಲನೀಡದ ವುದಾಗಿ ರಾಷ್ಟ್ರಪತಿಗೆ ತಿಳಿಸಿದ್ದಿಲ್ಲ. ಆದರೂ ಶ್ರೀಮತಿ ಗಾಂಧಿಯವರು ಸಂಸತ್ತಿನಲ್ಲಿ ವಿಶ್ವಾಸ ಮತಗಳಿಸುವಲ್ಲಿ ಸಶಕ್ತರಾಗಿದ್ದಾರೆ. ಇದೇ ರೀತಿಯಲ್ಲಿ ಶ್ರೀ ಸಿಂಗರೂ ವಿಧಾನ ಸಭೆಯಲ್ಲಿ ವಿಶ್ವಾಸ ಮತಗಳಿಸಲು ಸಮರ್ಥರಾಗಬಹುದೆಂದು ರಾಜ್ಯಪಾಲರಿಗೆ ಅನಿಸದ್ದು ಹೇಗೆ? ಅವರು ಶ್ರೀ ಸಿಂಗರನ್ನು ಪದಚ್ಯುತಗೊಳಿಸಲು ಮನದಂದದ್ದೇ ಸರಿ, ಅದು ಪ್ರಜಾಪ್ರಭುತ್ವಕ್ಕೆ ಹೊಂದಿಕೊಳ್ಳುವ ನೀತಿಯಲ್ಲ; ಅತಾಂತ್ರಿಕ ನಿಲುವಾಗಿದೆ; ಕೇಂದ್ರ ಸರಕಾರದ ಸೂತ್ರ [illegible] ಬೆಸೆದಿದ್ದಾರೆಂಬುದನ್ನು ಸಮರ್ಥಿಸುತ್ತದೆ.

ಇಷ್ಟರಲ್ಲಿ ರಾಜ್ಯಪಾಲರಲ್ಲ ವಿಧಾನ ಸಭೆಯೊಳಗೆ ಶ್ರೀ ಚರಣಸಿಂಗರ ಭವಿಷ್ಯವನ್ನು ಬರೆಯಬೇಕಾರೆ. ರಾಜ್ಯ ವಿಧಾನ ಸಭೆಯ ಮುಖ್ಯಮಂತ್ರಿಗೆ ಬಹುಮತವಿದೆಯೇ ಇಲ್ಲವೇ ಎಂಬುದನ್ನು ನಿರ್ಧರಿಸಬೇಕೆಂದು ಪ್ರಜಾತಂತ್ರವಾದಿಗಳು ನಿರ್ಣಯ ಮಾಡಿದ ಕೇಂದ್ರ ಸಮಯದಲ್ಲಿ ಈ ಕುತಂತ್ರ ಪ್ರಯೋಗಿಸಿ ಶ್ರೀ [illegible] ದೇಶಕ್ಕೆ ಹಾನಿ ತರುತ್ತಿದೆ. ಶ್ರೀಮತಿ ಗಾಂಧಿಯವರು ತನ್ನ ಸ್ವಾರ್ಥವನ್ನು ಹೇಗೆ ತೋರಿಸುತ್ತಿದ್ದಾರೆಂಬುದಕ್ಕೆ ಇದೊಂದು ಮತ್ತೊಂದು ಬಾರಿ ಕನ್ನಡಿ ಹಿಡಿಯುತ್ತದೆ.

Gram : VISHWA Tel: 20111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. R. C. No. 177/1970

H. ಅಜಿತ ಕುಮಾರ ಶೆಟ್ಟಿ —ಅರ್ಜಿದಾರ

ಮೋನು ಯಾನೆ ಉಸ್ಮಾನ್ ಬ್ಯಾರಿ, ಹಮ್ಮದೆ ಬ್ಯಾರಿ ಮಗ, ಸಕಲೇಶಪುರ ತಾಲೂಕು, ಆಬ್ಬಲಿ ಎಂಬಲ್ಲಿ, ಪೋಸ್ಟು ಅನೆಮಾರ್, ಚಿಕ್ಕಮಂಗಳೂರು ಡಿಸ್ಟ್ರಿಕ್ಟ್ —ಎದ್ರಿ

ಇವರಿಗೆ ಕೋರ್ಟಿನ ದ್ವಾರಾ ಪ್ರಕಾರ ತಿಳಿಸುವುದೇನೆಂದರೆ—

ಮೈಸೂರು ಲ್ಯಾಂಡ್ ರೆವೆನ್ಯೂ ಆಕ್ಟು ಸೆಕ್ಷನ್ 420ರ ಪ್ರಕಾರ 1968-69ನೇ ಇಸವಿಯ ಚಾಲಗೇಣಿ ಬಾಬ್ತು ಅರ್ಜಿದಾರನು ನಿಮ್ಮ ಮೇಲೆ ಮಾಡಿದ ಮೊಕದ್ದಮೆಯ ವಿಚಾರಣೆಯು ತಾ. 12-11-1970ಕ್ಕೆ ಇಟ್ಟಿರುವುದರಿಂದ ಅದಕ್ಕೆ ನಿಮ್ಮದೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉದರಿಸಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾಗುವುದು ಎಂತ ಈ ಮೂಲಕ ತಿಳಿಸಲಾಗಿದೆ.

(Sd) B. Ishwara Bh·t
Advocate for Petitioner

ಬೆಳ್ತಂಗಡಿ, ತಾ. 28-9-70.

ಗಾಂಧೀ ಶತಾಬ್ದಿಯ ಸಂಕಲ್ಪ

ಪ್ರೊ. ಸಿದ್ಧೇಶ್ವರ ಪ್ರಸಾದ್
(ಕೇಂದ್ರ ಸರಕಾರದ ನೀರಾವರಿ ಮತ್ತು ವಿದ್ಯುಚ್ಛಕ್ತಿ ಖಾತೆಯ ಉಪಮಂತ್ರಿಗಳು,

ಗಾಂಧೀಜಿಯವರ ಸ್ವರಾಜ್ಯ ಕಲ್ಪನೆ ಉದಾತ್ತ. ಆರ್ಥಿಕ ಅಭಿವೃದ್ಧಿಯ ಪ್ರಯೋಜನ ಎಲ್ಲರಿಗೂ ಲಭಿಸಬೇಕು. ಎಲ್ಲರೂ ಸಂಪೂರ್ಣ ಅವಕಾಶ ಪಡೆಯಬೇಕು. ಸಂಪದ್ವೃದ್ಧಿಯ ಫಲವನ್ನು ಸಮಾಜದ ಎಲ್ಲಾ ವರ್ಗಗಳವರೂ ಸಮನಾಗಿ ಹಂಚಬೇಕು. ಶೋಷಣೆ ಯಾವ ರೂಪದಲ್ಲೇ ಆಗಲಿ ಇರಕೂಡದು. ಇದು ಗಾಂಧೀಜಿ ಸ್ವರಾಜ್ಯದ ತಿರುಳು.

ಇದು ನೈಜವಾದ ಸಮಾಜವಾದಿ ಆದರ್ಶ. ನಮ್ಮ ಸಂವಿಧಾನದಲ್ಲಿ ಈ ತತ್ವಗಳನ್ನು ಅಳವಡಿಸಿಕೊಳ್ಳಲಾಗಿದೆ. ಈ ಆದರ್ಶ ಸಾಧನೆಗಾಗಿ ಆರ್ಥಿಕ ಅಭಿವೃದ್ಧಿಯ ಹಾಗೂ ಪ್ರಗತಿಯ ಕಾರ್ಯಯೋಜನೆಗಳು ದೇಶದ ಎಲ್ಲಾ ಪ್ರಜೆಗಳಿಗೂ—ಅವರು ದೊಡ್ಡ ನಗರದಲ್ಲೇ ಇರಲಿ ಅಥವಾ ಪುಟ್ಟ ಹಳ್ಳಿಯಲ್ಲೇ ಇರಲಿ ದೊರೆಯುತ್ತವೆ.

ವಿದ್ಯುಚ್ಛಕ್ತಿ, ಒಂದು ಮೂಲಭೂತವಾದ ಅವಶ್ಯಕತೆಯಾಗಿದೆ. ಇದು ಎಲ್ಲರೂ ಒಪ್ಪಿಕೊಂಡಿರುವ ಸಂಗತಿ. ಮಾನವನ ಸುಖಜೀವನಕ್ಕೆ ಮಾತ್ರವಲ್ಲ ಆರ್ಥಿಕ ಪ್ರಗತಿಗೂ ಅದು ಬೇಕು. ವಿದ್ಯುಚ್ಛಕ್ತಿಯು ಮಾನವನಿಗೆ ಬೇಕಾದ ಬೆಳಕನ್ನೂ ಶಾಖವನ್ನೂ ಪೂರೈಸುವುದರ ಜೊತೆಗೆ, ಹಳ್ಳಿ—ಹಳ್ಳಿಗಳಲ್ಲಿ ಮನೆಗಳನ್ನು ಬೆಳಗುತ್ತದೆ. ಇಷ್ಟೇ ಅಲ್ಲ ಬೇಸಾಯ ಉತ್ಪಾದನೆಯನ್ನು ಹೆಚ್ಚಿಸಲು ವಿದ್ಯುಚ್ಛಕ್ತಿ ಬೇಕು.

ಬೇಸಾಯವನ್ನೇ ಅವಲಂಬಿಸಿದ ಕೈಗಾರಿಕೆಗಳು ಸಣ್ಣ ಕೈಗಾರಿಕೆಗಳು, ಗುಡಿಕೈಗಾರಿಕೆಗಳ, ಹೈನುಗಾರಿಕೆ—ಅಭಿವೃದ್ಧಿ; ಕೋಳಿ ಸಾಕುವಿಕೆ; ಆಹಾರ ಸಂಸ್ಕರಣ ಮತ್ತು ದಾಸ್ತಾನ ಸೌಕರ್ಯಗಳು ಇತ್ಯಾದಿ ಎಲ್ಲಾ ಕೆಲಸಗಳಿಗೂ ವಿದ್ಯುಚ್ಛಕ್ತಿ ಅತ್ಯಂತ ಉಪಯುಕ್ತವಾಗಿದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ವಿದ್ಯುಚ್ಛಕ್ತಿಯಿಂದ ಉತ್ಕರ್ಷ ಹೆಚ್ಚುತ್ತದೆ. ಮಾನವನ ಸೌಕರ್ಯ ಮತ್ತು ಪ್ರಗತಿಯೂ ಹೆಚ್ಚುತ್ತದೆ. ನಾವೆಲ್ಲರೂ ಗಾಂಧೀಜಿಯವರ ಗುರಿಗಳ ಸಮೀಪಕ್ಕೆ ಬರುತ್ತೇವೆ.

ಗಾಂಧೀಜಿಯವರ ತತ್ವ

ಗಾಂಧೀಜಿಯವರು, ವಿದ್ಯುಚ್ಛಕ್ತಿ ಅದೂ ಸೇರಿದಂತೆ ಯಂತ್ರೀಕರಣ ಮತ್ತು ಆಧುನಿಕ ವಿಧಾನಗಳ ಬಳಕೆಯನ್ನು ವಿರೋಧಿಸುತ್ತಿದ್ದರೆಂದು ಕೆಲವರು ಭಾವಿಸುತ್ತಿರಬಹುದು. ಇದು ಸರಿಯಲ್ಲ.

ಯಂತ್ರೀಕರಣದಿಂದ, ಕೆಲವೇ ಜನರ ಕೈಯಲ್ಲಿ ಸಂಪತ್ತು ಹಾಗೂ ಅಧಿಕಾರ ಕೇಂದ್ರೀಕೃತವಾಗಿ ಜನಸಾಮಾನ್ಯರ ಶೋಷಣೆಗೆ ದಾರಿಯಾದಾಗ ಹಾಗೂ ಮಾನವ—ಮಾನವರ ನಡುವೆ ಆರ್ಥಿಕ ವೈಷಮ್ಯಕ್ಕೆ ಕಾರಣವಾಗಬಹುದಾದ ಸಂದರ್ಭಗಳಲ್ಲಿ ಗಾಂಧೀಜಿಯವರು ಯಂತ್ರೀಕರಣವನ್ನು ವಿರೋಧಿಸಿದ್ದಾರೆ. ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಕಾರ್ಮಿಕರಿಗೆ ಪ್ರಯೋಜನಕಾರಿಯಾದರೆ ಆಯಾಸಕರ ಕ್ರಮಗಳನ್ನು ಕಡಿಮೆ ಮಾಡಲು ಯಂತ್ರೀಕರಣ ಪ್ರಯೋಜನ ಮಾಡಿಕೊಳ್ಳಬೇಕೆಂದು ಗಾಂಧೀಜಿ ಹೇಳಿದ್ದಾರೆ.

ವಿದ್ಯುಚ್ಛಕ್ತಿಯ ಉಪಯೋಗದ ಬಗ್ಗೆ ಅವರು ಪ್ರಸ್ತಾಪಿಸುತ್ತ "ಗ್ರಾಮದ ಪ್ರತಿಯೊಂದು ಮನೆಗೂ ವಿದ್ಯುಚ್ಛಕ್ತಿ ಪೂರೈಕೆಯಾದರೆ ಗ್ರಾಮಸ್ಥರು ವಿದ್ಯುಚ್ಛಕ್ತಿಯಿಂದ ಚಲಿಸುವ ಬೇಸಾಯ ಉಪಕರಣಗಳಿಂದ ಕೃಷಿ ಮಾಡಬಹುದು. ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ" ಎಂದಿದ್ದಾರೆ.

ದೇಶವು ಸ್ವತಂತ್ರವಾಗುವುದಕ್ಕಿಂತ ಮುಂಚೆ ವಿದ್ಯುಚ್ಛಕ್ತಿ ಮೂಲಭೂತ ಆವಶ್ಯಕತೆಯೆಂದು ಭಾವಿಸಲಿಲ್ಲ. ಅದಕ್ಕೆ ಯುಕ್ತ ಸ್ಥಾನವನ್ನು ನೀಡಿರಲಿಲ್ಲ. ವಿದ್ಯುಚ್ಛಕ್ತಿಯನ್ನು ವಿಲಾಸದ ಸಾಧನವೆಂದು ಭಾವಿಸಲಾಗುತ್ತಿತ್ತು. ಅದು ಕೇವಲ ಶ್ರೀಮಂತರ ಸೊತ್ತು ಎಂದು ತಿಳಿಯಲಾಗುತ್ತಿತ್ತು. ಕಾರಣ ವಿದ್ಯುಚ್ಛಕ್ತಿಯ ಉತ್ಪಾದನೆ ಖಾಸಗಿ ಸಂಸ್ಥೆಗಳ ಕೈಯಲ್ಲಿದ್ದಿತು.

ಅನೇಕ ಕಾರಣಗಳಿಂದಾಗಿ ಈ ಖಾಸಗಿ ವ್ಯಕ್ತಿಗಳು ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸಲು ಮುಂದೆ ಬರುತ್ತಿರಲಿಲ್ಲ. ಈ ಕಾರ್ಯಕ್ರಮಕ್ಕೆ ಬಹಳಷ್ಟು ಬಂಡವಾಳವನ್ನು ತೊಡಗಿಸ ಬೇಕಾಗುತ್ತಿತ್ತು. ಜೊತೆಗೆ ಲಾಭ ಅನಿಶ್ಚಿತವಾಗಿತ್ತು. ಕಾರಣ ಅವರು ದೊಡ್ಡದೊಡ್ಡ ನಗರಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸುತ್ತಿದ್ದರು.

ಆಗಿನ ಮದ್ರಾಸ್, ಪಂಜಾಬ್ ಮತ್ತು ಉತ್ತರ ಪ್ರದೇಶಗಳ ರಾಜ್ಯಗಳ ಹಾಗೂ ತ್ರಾವಣಕೋರ್, ಕೊಚ್ಚಿನ್ ಮತ್ತು ಮೈಸೂರು ಸಂಸ್ಥಾನಗಳ ವಿದ್ಯುಚ್ಛಕ್ತಿ ಇಲಾಖೆಗಳ ಎಂಜಿನೀಯರರ ಉತ್ಸಾಹದಿಂದಾಗಿ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸುವ ಕಾರ್ಯಕ್ಕೆ ಮೊದಲಾಯಿತು.

ಯೋಜನಾ ಯುಗದ ಆರಂಭ

ನಮ್ಮ ದೇಶದಲ್ಲಿ ಯೋಜನಾ ಯುಗ 1951ರಿಂದ ಆರಂಭವಾಯಿತು. ಅಂದಿನಿಂದಲೂ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸುವ ಕಾರ್ಯಕ್ಕೆ ಆದ್ಯತೆಯನ್ನು ನೀಡಲಾಯಿತು. 1948ರ ವಿದ್ಯುಚ್ಛಕ್ತಿ ಪೂರೈಕೆ ಕಾನೂನಿನನ್ವಯ ರಾಜ್ಯಗಳಲ್ಲಿ ವಿದ್ಯುಚ್ಛಕ್ತಿ ಮಂಡಲಿಗಳ ಸ್ಥಾಪನೆಯಿಂದಾಗಿ ಈ ಕಾರ್ಯಕ್ರಮಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಸರ್ಕಾರದವರು ಸಾಲ ನೀಡುವ ಮೂಲಕ ಈ ದಿಶೆಯಲ್ಲಿ ಅಗತ್ಯವಾದ ಹಣಕಾಸಿನ ನೆರವನ್ನು ನೀಡುತ್ತಾರೆ. ವಿದ್ಯುಚ್ಛಕ್ತಿ ಮಂಡಲಿಗಳು ಗ್ರಾಮಾಂತರ ಪ್ರದೇಶಗಳಿಗೂ ರಿಯಾಯಿತಿ ದರದಲ್ಲಿ ವಿದ್ಯುಚ್ಛಕ್ತಿಯನ್ನು ಪೂರೈಸುತ್ತಿದ್ದಾರೆ.

ವಿದ್ಯುಚ್ಛಕ್ತಿ ಅಭಿವೃದ್ಧಿಗಾಗಿ 1951ರಲ್ಲಿ ಆರಂಭವಾದ ಮೊದಲನೆಯ ಯೋಜನೆಯಲ್ಲಿ 8·20 ಕೋಟಿ ರೂ.ಗಳನ್ನು ಒದಗಿಸಲಾಯಿತು, ನಾಲ್ಕನೆಯ ಯೋಜನೆಯಲ್ಲಿ, ಅಂದರೆ 1969ರಿಂದ 1974ರ ವರೆಗಿನ ಅವಧಿಯಲ್ಲಿ ಈ ಬಾಬ್ತಿಗಾಗಿ 444·65 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು. ಈ ಅಂಶದಿಂದಾಗಿ ವಿದ್ಯುಚ್ಛಕ್ತಿಯ ಅಭಿವೃದ್ಧಿಗೆ ನೀಡಿರುವ ಮಹತ್ವ ಸ್ಪಷ್ಟವಾಗುತ್ತದೆ. ಈ ಸಂದರ್ಭದಲ್ಲಿ ಗಾಂಧೀಜಿ ಜನ್ಮ ಶತಾಬ್ದಿ ಆಚರಣೆ ಉಲ್ಲೇಖನಾರ್ಹವಾಗಿದೆ. "ಹಳ್ಳಿಗಳು ಅಭಿವೃದ್ಧಿಯಾಗದ ವಿನಃ ದೇಶ ಅಭಿವೃದ್ಧಿ ಹೊಂದಲಾರದು" ಎಂದು ಗಾಂಧೀಜಿ ಹೇಳಿದ್ದಾರೆ. ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗೆ ನೀರಾವರಿ ಮತ್ತು ವಿದ್ಯುಚ್ಛಕ್ತಿಯ ಅಭಿವೃದ್ಧಿ ಅತ್ಯಗತ್ಯ.

ವಿದ್ಯುಚ್ಛಕ್ತಿ ಪೂರೈಕೆ ವಿಷಯದಲ್ಲಿ ಅನೇಕ ಅಡಚಣೆಗಳು ಬಂದಾಗಲೂ, ಅವೆಲ್ಲ ನಿವಾರಣೆಗೊಂಡು ಒಂದು ಲಕ್ಷ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಗಾಂಧೀ ಶತಾಬ್ದಿ ವರ್ಷದಲ್ಲಿ ಇಟ್ಟುಕೊಂಡ ಗುರಿಯನ್ನು ನಾವೀಗ ಮುಟ್ಟಿದ್ದೇವೆ. ಸ್ಥೂಲವಾಗಿ ಹೇಳಬೇಕಾದರೆ ಇಂದು ನಮ್ಮ ದೇಶದ ಗ್ರಾಮಾಂತರ ಜನಸಂಖ್ಯೆಯಲ್ಲಿ 12·76 ಕೋಟಿ ಜನರಿಗೆ ವಿದ್ಯುಚ್ಛಕ್ತಿ ದೊರೆತಿದೆ. 1961ರ ಜನಗಣತಿಯ ಪ್ರಕಾರ ದೇಶದ ಒಟ್ಟು ಜನಸಂಖ್ಯೆಯಲ್ಲಿ 20.65 ಕೋಟಿ ಜನರು ಈಗ ವಿದ್ಯುತ್ತಿನ ಸೌಲಭ್ಯವನ್ನು ಹೊಂದಿದ್ದಾರೆ. ವಿದ್ಯುಚ್ಛಕ್ತಿ ಪಡೆದ ಪಂಪ್‌ಸೆಟ್ಟುಗಳ ಸಂಖ್ಯೆಯು ಗಮನಾರ್ಹವಾಗಿ ಹೆಚ್ಚಿದೆ. ಮೊದಲ ಯೋಜನೆಯಲ್ಲಿ ಅವುಗಳ ಸಂಖ್ಯೆ 18709ರಷ್ಟಿದ್ದರೆ, ಇಂದು 1·4 ಕೋಟಿ ವಿದ್ಯುಚ್ಛಕ್ತಿ ಪಡೆದ ಪಂಪ್‌ಸೆಟ್ಟುಗಳು, ಕೊಳವೆಬಾವಿಗಳು ಇವೆ. ಇದು ಅದ್ಭುತ ಪ್ರಗತಿಯ ಸಂಕೇತ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
[illegible] ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit — ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಚಾರುಚಂಯನ

ಉಪ್ಪಿಲ್ಲದ ಊಟೋಪಚಾರ

ಮೈಸೂರಿನ ಹೆಸರಾಂತ ಒಂದು ಕಾಲದಲ್ಲಿ ರಾಜದರಬಾರು. ಇದಕ್ಕೆ ಐದಾರು ಶತಮಾನಗಳ ಭವ್ಯ ಇತಿಹಾಸ. ಕರ್ನಾಟಕ ಸಿಂಹಾಸನಾಧೀಶ್ವರರ ರಾಜ ವೈಭವ ಮೈಸೂರಿನಲ್ಲಿ ನೋಡಸಿಗುತ್ತಿತ್ತು. ದೇಶೀ—ವಿದೇಶೀ ಆಕರ್ಷಣೆಯಿಂದ ಕೂಡಿತ್ತು.

ದೇಶಕ್ಕೆ ಸ್ವಾತಂತ್ರ್ಯ ಬಂತು. ಬ್ರಿಟಿಷರು ತಮ್ಮ ವಶದಲ್ಲಿದ್ದ ಭೂಭಾಗವನ್ನು ಹಂಚಿದರು; ಎರಡು ತುಂಡುಗಳನ್ನು ಮಹಮ್ಮದಾಲಿ ಜಿನ್ನರ ಆ ಕೈ ಈ ಕೈಗೆ ನೀಡಿ ಅವರನ್ನು ತೃಪ್ತಿ ಪಡಿಸಿದರು. ಉಳಿದ ಬೃಹತ್ ನೆಲವನ್ನು 'ನೋಡಿಕೊಳ್ಳಿ' ಎಂದು ಭಾರತೀಯರಿಗೆ ಒಪ್ಪಿಸಿದರು. ಹಡಗು ಹತ್ತಿ ಬಂದವರು ವಿಮಾನವೇರಿ ಹೊರಟು ಹೋದರು.

ಹೋಗುವುದಕ್ಕೆ ಮೊದಲು ದೇಶೀಯ ಸಂಸ್ಥಾನಿಕರಿಗೆ ಸಂಪೂರ್ಣ ಸ್ವರಾಜ್ಯ ನೀಡಿದರು. ಅವರು ಭಾರತಕ್ಕೂ ಸೇರಬಹುದಿತ್ತು, ಪಾಕಿಸ್ತಾನದಲ್ಲೂ ವಿಲೀನಗೊಳ್ಳಬಹುದಿತ್ತು; ಅಥವಾ ಸ್ವತಂತ್ರ ದೇಶವಾಗೇ ಉಳಿಯ ಬಯಸಬಹುದಿತ್ತು.

ರಾಷ್ಟ್ರೀಯತೆಯ ಗಾಳಿ ದೇಶೀಯ ರಾಜ್ಯಗಳಿಗೂ ಬೀಸಿತು. ಅಲ್ಲಿನ ಪ್ರಜೆಗಳು ಪ್ರತ್ಯೇಕ ದೇಶೀಯರೆನಿಸಲು ಸಿದ್ಧರಿರಲಿಲ್ಲ. ರಾಜದರಬಾರು ಮುಗಿಯಬೇಕೆಂದೇ ಅವರ ಇಚ್ಛೆ. ಜವಾಬ್ದಾರಿ ಸರಕಾರ ಪಡೆದರೂ ತೃಪ್ತರಾಗಲಿಲ್ಲ. ಕೆಲವರು ಪಾಕಿಸ್ತಾನ ಸೇರಿದರು; ಹಲವರು ಭಾರತ ಒಕ್ಕೂಟದಲ್ಲಿ ಸೇರಿಕೊಂಡರು.

ಸರದಾರ ವಲ್ಲಭಭಾಯಿ ಪಟೇಲರು ದೇಶೀಯ ಸಂಸ್ಥಾನಗಳನ್ನು ಭಾರತೀಯ ಒಕ್ಕೂಟಕ್ಕೆ ಸೇರಿಸುವ ಮಹಾಯಜ್ಞಕ್ಕೆ ತೊಡಗಿದರು. ಎಲ್ಲ ಸಂಸ್ಥಾನಗಳು ಜನಮೋಜಿನ [illegible]. ಹೈದರಾಬಾದ ಮಾತ್ರ ಬಲಾತ್ಕಾರದ ನಂತರವೇ ತಲೆಬಾಗಿತು. [illegible]ವಾಯ್ತು. ಪಟೇಲರ [illegible]

ಬಿದರು; ತನ್ನ ಕೆಲಸವಾಯಿತೆಂದು ನೇರಾಗಿ ದಿವಕ್ಕೆ ಸಂದರು.

ಅಲ್ಲಿವರೆಗೆ ರಾಜ-ಮಹಾರಾಜರೆಂದು ಕಿರೀಟತೊಟ್ಟವರಲ್ಲಿ ಕೆಲವರು ರಾಜಪ್ರಮುಖರಾದರು; ಉಳಿದವರು ರಾಜಧನಭೋಗಿಗಳೆನಿಸಿದರು. ಸಂವಿಧಾನದಲ್ಲಿಯೂ 'ಬಿ' ವರ್ಗದ ರಾಜ್ಯಗಳಿಗೂ ಅವುಗಳ ರಾಜಪ್ರಮುಖರಿಗೂ ಮನ್ನಣೆ ದೊರೆಯಿತು.

ಭಾಷಾವಾರು ರಾಜ್ಯದ ನಿಟ್ಟಿನಲ್ಲಿ ದೇಶದ ರಾಜ್ಯಕೀಯ ಪಟ ಬದಲಾಯಿತು. ಬಿ ವರ್ಗದ ರಾಜ್ಯಗಳು ಹೇಳ ಹೆಸರಿಲ್ಲದಾದುವು; ರಾಜ್ಯವಿಲ್ಲದ ಮೇಲೆ ರಾಜ್ಯಪ್ರಮುಖರೇಕೆ?

ಮಹಾರಾಜರ ಮಾದರಿ ಮೈಸೂರು ದೇಶಕ್ಕೆ ಶ್ರೀ ಜಯಚಾಮರಾಜರು ರಾಜಪ್ರಮುಖರಿದ್ದರು. ಮುಂದೊಂದು ದಿನ ಅವರ 'ಪ್ರಮುಖ' ಗಿರಿ ಜಾರಿ ಹೋಯ್ತು. ಅವರು ಮಾಜಿ ರಾಜ ಮಾತ್ರರಾದರು.

ಮೈಸೂರಿನ ಮಹಾರಾಜರದ್ದು ವಿಶಿಷ್ಟ ರೀತಿ ನೀತಿ. ಎಂತಲೇ ಅವರು ಮೈಸೂರಿಗರಿಗೆ ಬೇಕೇ ಬೇಕಾಗಿತ್ತು. ಮೈಸೂರು ಮತ್ತು ಮಹಾರಾಜ ಎಂದೆರಡು ಶಬ್ದಗಳು "ಮೈಸೂರಿಗ"ರ ಎರಡು ಪ್ರಾಣಗಳು. ಅದರಿಂದಾಗೇ ಕರ್ನಾಟಕವು ಮೈಸೂರಾಗಿಯೇ ಉಳಿಯಿತು; ಮೈಸೂರಿನ ಮಹಾರಾಜರು ಅದರ ರಾಜ್ಯಪಾಲರಾಗಿ ನೇಮಕಗೊಂಡರು.

ಮಹಾರಾಜರಿಗೆ ಈ ಹುದ್ದೆ ಅವಮಾನಕರವಾಗಿ ಕಂಡಿತ್ತು. ಅದು ಬೇಡವಿತ್ತು. ಆದರೆ "ಮೈಸೂರಿಗ"ರ ತನ್ನ ಮಾಜಿ ಪ್ರಜೆಗಳ ಆಗ್ರಹದಿಂದ ಅವರು ರಾಜ್ಯಪಾಲರಾಗಿ ಉಳಿದರು.

ಬಹುಕಾಲ ಅವರು ಈ ಪದವಿಯಲ್ಲಿ ಉಳಿಯಲಿಲ್ಲ. ಮುಂದೆ ತಾನೊಲ್ಲದ ಹುದ್ದೆಯಲ್ಲಿ ಮುಂದುವರಿಯುವುದನ್ನು ನಿಲ್ಲಿಸಿದರು.

ಸ್ವಾತಂತ್ರ್ಯಪೂರ್ವದಲ್ಲಿ ಶ್ರೀ ಜಯಚಾಮರಾಜರು ನಾಡಹಬ್ಬವನ್ನು ಆಚರಿಸಿದ್ದಾರೆ; ದರಬಾರು ನಡೆಸಿದ್ದಾರೆ; ಜಂಬೂಸವಾರಿ ಮಾಡಿದ್ದಾರೆ. ರಾಜಪ್ರಮುಖರಾದಾಗಲೂ ಇದಕ್ಕೆ ವ್ಯತಿರಿಕ್ತವಾಗಲಿಲ್ಲ. ರಾಜ್ಯಪಾಲರಾದಾಗ ಅದರ ಧರ್ಮಾಧರ್ಮದ ಬಗ್ಗೆ ಚರ್ಚೆ ನಡೆಯಿತು. ಮೈಸೂರಿಗರಿಗೆ ತಮ್ಮ 'ಮಹಾರಾಜ'ರ ಜಂಬೂಸವಾರಿ ನೋಡಬೇಕೆಂದು! ತಕರಾರು ಹುಟ್ಟಿದ್ದಕ್ಕಾಗಿ ಅದು ನಡೆಯಲು ಅವಕಾಶ. ದಸರೆವನ್ನು ಸರಕಾರವು ನಾಡಹಬ್ಬವೆಂದು ಅದ್ದೂರಿಯಿಂದ ಆಚರಿಸಬೇಕು; ಶ್ರೀ ಜಯಚಾಮರಾಜರು ದರ್ಬಾರ-ಜಂಬೂಸವಾರಿ ಮಾಡಬೇಕು. ಈ ಆಕರ್ಷಣೆಯಿಂದ ವಸ್ತುಪ್ರದರ್ಶನಾದಿ ಯಶಗಳಿಸಬೇಕು; ಸರಕಾರಕ್ಕೂ ಮೈಸೂರಿನ ವ್ಯಾಪಾರಿಗಳಿಗೂ ಲಾಭವಾಗಬೇಕು.

ಶ್ರೀ ಜಯಚಾಮರಾಜರು ರಾಜ್ಯಪಾಲ ಪದವಿ ತ್ಯಜಿಸಿದ ಬಳಿಕ ಮತ್ತೊಮ್ಮೆ ಪ್ರಶ್ನೆ ಮುಂದೆ ಬಂತು. ಆ ನೆಲೆಯಲ್ಲೂ ಅವರು 'ಮಹಾರಾಜ'ರೇ! ಆಗ ಉಳಿದುದರಿಂದ ದರಬಾರ—ಜಂಬೂಸವಾರಿಗೆ ಚ್ಯುತಿ ಬರಬೇಕಾದ್ದಿರಲಿಲ್ಲ; ಬರಲಿಲ್ಲ.

ಈ ವರ್ಷ ಪರಿಸ್ಥಿತಿ ಪೂರ್ಣ ಬದಲೋ ಬದಲು. ಶ್ರೀಮತಿ ಗಾಂಧಿ ಪಾರ್ಲಿಮೆಂಟಿನಲ್ಲಿ ಸೋತು ರಾಷ್ಟ್ರಪತಿಯವರ ಮರೆಹೊಕ್ಕರು. ನಂಬಿದವಳಿಗೆ ತನ್ನ ಕೆಚ್ಚುಕೊಂಡ ಶ್ರೀಗಿರಿ ಆಜ್ಞೆ ಹೊರಡಿಸಿ, ಮಹಾರಾಜತ್ವವನ್ನು ರಾಜಧನಾದಿ ಸೌಲಭ್ಯಗಳನ್ನೂ ಕಿತ್ತುಕೊಂಡರು.

ಇಂದು ಮಹಾರಾಜಾಧಿರಾಜ ಜಯಚಾಮರಾಜ ಒಡೆಯರರು ಶ್ರೀ ಜಯಚಾಮರಾಜ ಒಡೆಯರರು. ಬೇಕಾಗಿದ್ದರೆ, ಮಾಜಿ ಮಹಾರಾಜಾಧಿರಾಜ, ಎಂದು ಮೊದಲಿಗೆ ಸೇರಿಸಿಕೊಳ್ಳಬಹುದು. ಅವರು ಜಂಬೂಸವಾರಿ ಮಾಡಲು ಒಪ್ಪಲಿಲ್ಲ, ಒಪ್ಪಿದರಲ್ಲಿ ಅರ್ಥವೂ ಇಲ್ಲ; ಪರಿಣಾಮ: ರಾಜ್ಯ ಸರಕಾರದ, ಮೈಸೂರಿನ ಸಂಪಾದನೆಯಲ್ಲಿ ಖಡಿತ.

ರಾಜ್ಯಸರಕಾರ ಮತ್ತೆರಡು ಲಾಟರಿ ಎತ್ತಿ ನಷ್ಟತುಂಬಿಕೊಳ್ಳಬಹುದು. ವ್ಯಾಪಾರಿ ಆದಿಗಳು ಎಂದೂ ನಷ್ಟಪರಾಗುವ ಹುಚ್ಚುತನ ತೋರಿಸವುದಿಲ್ಲ.

ಮೈಸೂರಿನಲ್ಲಿ ದಸರೆ ಈ ವರ್ಷವೂ ನಡೆಯುತ್ತದೆ; ಮುಂದಿನ ವರ್ಷಗಳಲ್ಲಿ ಇನ್ನೂ ಇನ್ನೂ ಅದ್ದೂರಿಯಿಂದ ನಡೆಯಬಹುದು. ಆದರೆ ಇತಿಹಾಸದಲ್ಲಿ ಹೊಸಪುಟ ತೆರೆಯಿತು—ಅದು ಖಾಲಿ ಪುಟ.

ದಸರೆ ಆಕರ್ಷಣೆ ಕಳೆದುಕೊಂಡಿತು. ಮನರಂಜನೆಯಿಲ್ಲದ ವಾರ್ಷಿಕೋತ್ಸವವಾಯ್ತು. ಇತ್ತ ಮೈಸೂರಿಗೆ ವಿದೇಶೀಯರು ಬರುವುದಿಲ್ಲ; ಸ್ವದೇಶೀಯರಿಗೆ ಬೆಂಗಳೂರೇ ಬಹಳವಾಗುತ್ತದೆ.

ರಾಜಧನ ದೊರೆಯದ್ದರಿಂದ ಅರಮನೆ ಮೊದಲಾದುವುಗಳ, ಅರಮನೆ ನೌಕರರ ಯೋಗಕ್ಷೇಮ ನೋಡಿಕೊಳ್ಳುವುದು ಅಸಾಧ್ಯ. ಮತ್ತೇನಿದೆ? ಮೈಸೂರು ಉಳಿದರೇನು, ಅಳಿದರೇನು?

ಮೈಸೂರಿನ ಮಹಾರಾಜರಾಗಿದ್ದವರು ಬಹಳಷ್ಟು ಸ್ಥಿತ್ಯಂತರಗಳನ್ನು ಕಂಡಿರಬಹುದು. ಆದರೆ ಈ ೨೨ ವರ್ಷಗಳಲ್ಲಿ ಅರಿವೆಯೇ ಇಲ್ಲದಂತಾದ ಹತ್ತಾರು ಅಂತರಗಳನ್ನು ಕಂಡವರು ಶ್ರೀ ಜಯಚಾಮರಾಜರು ಮಾತ್ರ. ಆಳುವ ಮಹಾಪ್ರಭುವಾಗಿ, ರಾಜಪ್ರಮುಖರಾಗಿ, ರಾಜ್ಯಪಾಲರಾಗಿ, ಅಳಿದ ಮಹಾರಾಜರಾಗಿ, ಮತ್ತೀಗ ಶ್ರೀ ಒಡೆಯರರಾಗಿ-ಹೀಗೆ ಪಂಚಪದವಿಯನ್ನು ಪಡೆದ "ಮಹಾರಾಜರು" ಯಾರೂ ಇಲ್ಲ.

ಶ್ರೀ ಒಡೆಯರರು ಬದಲಾದ ಪರಿಸ್ಥಿತಿಗೆ ಹೊಂದಿಕೊಂಡವರು; ಈ ಹೊಸ ಪರಿಸ್ಥಿತಿಯನ್ನೂ ಅವರು ಹೊಂದಿಸಿಕೊಂಡು ಹೋಗುತ್ತಾರೆ.

ಆದರೆ, ರಾಜ—ಮಹಾರಾಜರ ದರಬಾರ—ಜಂಬೂ ಸವಾರಿಗಳು ಮತ್ತು ಪುರಾಣದ ಕಥೆಗಳಾಗಿ ಉಳಿಯುತ್ತವೆ; ಇಲ್ಲವೇ ಚಿತ್ರ ಪಟಾಸಕ್ತರವಸ್ತುವಾಗುತ್ತವೆ.

ಇದಕ್ಕ್ಯಾಕೆ ಚಿಂತೆ ಮಾಡಬೇಕಿಲ್ಲವೆನ್ನುವವರೂ ಇದ್ದಾರೆ. ಪೌರಾಣಿಕ-ಐತಿಹಾಸಿಕ ನಾಟಕಗಳನ್ನು ಆಡುವುದಿಲ್ಲವೆ? ಡೊಂಬರಾಟ ನಡೆಸುವುದಿಲ್ಲವೆ? ಯಾರಾದರೊಬ್ಬರಿಂದ ದರಬಾರು, ಜಂಬೂಸವಾರಿ ಏಕೆ ಮಾಡಿಸಿಕೊಳ್ಳಬಾರದು?

ಮನರಂಜನೆಯ ತೆರಿಗೆ ಜೋಡಿಸಿ ಸರಕಾರವೂ ಏಕೆ ಸಂಪಾದನೆ ಮಾಡಬಾರದ?

ಅಂತಿಲ್ಲ ಮುಂದಿನ ವರ್ಷಗಳಲ್ಲಿ ನಮ್ಮ ದಸರಾ ನಾಟಕವಿಲ್ಲದ ವಾರ್ಷಿಕೋತ್ಸವ ಉಪ್ಪಿಲ್ಲದ ಭರ್ಜರಿ ಊಟೋಪಚಾರ.

ಕಮ್ಯುನಿಸ್ಟರ ಕರ ಇಂದಿರಾಜೀಗೆ ಇಷ್ಟ

ಅದೆಂತು ಕಮ್ಯೂನಿಸಮಿನ ಪ್ರಚಾರಕ್ಕಾಗಿ ಶ್ರೀಮತಿ ಇಂದಿರಾ ಗಾಂಧಿಯವರು ತಮ್ಮ ಅಧಿಕಾರ-ಯಂತ್ರವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆಂಬುದಕ್ಕೆ ಅವರ ವಿದ್ಯಾಮಂತ್ರಿಗಳವರು ಪ್ರಕಟಿಸಿರುವ ಪುಸ್ತಕ, ಚಲಚಿತ್ರ ವಿಭಾಗ ತಯಾರಿಸಿರುವ ಚಿತ್ರ, ಅವರ ಭಾಷಣ, ಅವರ ಚರ್ಚೆ, ಅವರ ಮಂತ್ರಿಗಳ ಭಾಷಣಗಳು ನಮ್ಮೆದುರಿರುವ ಸ್ಪಷ್ಟ ಉದಾಹರಣೆಗಳು. ಸೋಷಿಯಲಿಸಮೆಂದರೇನೆಂಬುದೇ ಕಾಂಗ್ರೆಸ್ಸಿಗರಿಗೆ ಗೊತ್ತಿಲ್ಲವೆಂದು ಇಂದಿರಾಜೀಯವರ ಮಂತ್ರಿಗಳೇ ಹೇಳುತ್ತಿದ್ದಾರೆ. ಕೇರಳದ ಚುನಾವಣೆಯ ಬಿಸಿಯಲ್ಲಂತೂ ಅವರ ಪಕ್ಷದವರು ಕಾಮರಾಜರೋ ಕೋಯಾರೋ? ನಿಜಲಿಂಗಪ್ಪನವರೋ ನಂಬೂದರಿಪಾದರೋ ಎಂಬ ಪ್ರಶ್ನೆಗಳಿಗೆ ಕೋಯಾ ಹಾಗೂ ನಂಬೂದರಿಪಾದರೆಂದುತ್ತರಿಸಿದ್ದಾರೆ. ಮೊನ್ನೆ ಮೊನ್ನೆಯವರೆಗೆ ಬೇಕಾದವರಾಗಿದ್ದ ಕಾಮರಾಜ ಹಾಗೂ ನಿಜಲಿಂಗಪ್ಪ ಇಂದು ಕೋಯಾ ಹಾಗೂ ನಂಬೂದರಿಪಾದರಿಗಿಂತಲೂ, ಅವರ ದೃಷ್ಟಿಯಲ್ಲಿ ಕೀಳ್ಮಟ್ಟದವರಾಗಿ ಬಿಟ್ಟರ! ಅವರ ದೃಷ್ಟಿಯಲ್ಲಿ ಮುಸ್ಲಿಂಲೀಗು ಹಾಗೂ ಕಮ್ಯುನಿಸ್ಟ್ ಪಾರ್ಟಿಯು ಕಾಂಗ್ರೆಸ್ಸಿನ ಒಂದು ಗುಂಪಿಗಿಂತಲೂ ಶ್ರೇಷ್ಠವಾಗಿ ಬಿಟ್ಟಿತ! ಕಾಮರಾಜ ಹಾಗೂ ನಿಜಲಿಂಗಪ್ಪನವರ ಸಹವಾಸ ಅವರಿಗೆ ಸಾಕಾಗಿ ಹೋಗಿರಬಹುದು; ಅವರ ಒಳಗಿನ ಗುಟ್ಟೆಲ್ಲವೂ ಇವರಿಗೆ ತಿಳಿದಿರಬಹುದು. ಅಂತ ಮಾತ್ರಕ್ಕೆ ಅವರು ಕೋಯಾ ಹಾಗೂ ನಂಬೂದರಿಪಾದರಿಗಿಂತ ನಿಮ್ನರಾಗಿ ಬಿಡುತ್ತಾರೇನು? ಈ ನಿರ್ಣಯಕ್ಕೆ ಬಂದಿರುವವರು ಇಲ್ಲಿಯ ದೇಶೀಯ ಶಕ್ತಿಗಳನ್ನೆದುರಿಸಬೇಕಾಗಿದೆ. ಹೀಗಾದಾಗ ಪಾಕಿಸ್ತಾನ ಹಾಗೂ ಚೈನದತ್ತ ಸ್ನೇಹ ಹಸ್ತಕ್ಕಾಗಿ ಕೈಚಾಚಿದಲ್ಲಿ ಆಶ್ಚರ್ಯವೇನಾದರೂ ಇದೆಯೇನ? ಅವರ ದೃಷ್ಟಿಯಲ್ಲಿ "ಜಾತೀಯ ಅಥವಾ ಕಮ್ಯೂನಲ್ ನೇಟಿವ್‌ಗಳಿಗಿಂತ ಫಾರೈನ್ ಇಸ್ಲಾಂ ಹಾಗೂ ಕಮ್ಯೂನಿಸಮಿನ ಆರಾಧಕರೇ ಶ್ರೇಷ್ಠರೆಂದಿದ್ದಾರೆ. ಇದರ ಪ್ರಚಾರಕ್ಕಾಗಿ ಇಂದು ಇಂದಿರಾಜೀಯವರು ತಮ್ಮೆಲ್ಲ ಯುಕ್ತಿ—ಶಕ್ತಿಯ ದುರುಪಯೋಗಗೊಳಿಸುತ್ತಿದ್ದಾರೆ. ಅದಕ್ಕಾಗಿ ಅಂತಹ ಅಮಾತ್ಯರುಗಳ ಪಡೆಯನ್ನೇ ಸಿದ್ಧಗೊಳಿಸಿದ್ದಾರೆ.

ತನ್ನ ಉಪಯೋಗಕ್ಕಾಗಿ ಅವರು ಉಪ-ಅರ್ಥಿಕ ಅಮಾತ್ಯರೊಬ್ಬರನ್ನು ನೇಮಿಸಿಕೊಂಡಿದ್ದಾರೆ. ಆಗಲೇ ಜನತೆ ಹುಬ್ಬು ಮೇಲೇರಿಸಿತ್ತು. ಅದಕ್ಕೆಲ್ಲಾ 'ಇಂದಿರಾ ದೇವಿ'ಯವರು ಭಯಪಡುವರೇನು? ಆ ಮಂತ್ರಿಯವರ ಹೆಸರು ಕೆ. ಆರ್. ಗಣೇಶ್. ಇವರ (ಹಿಂದೆ) ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರಾಗಿದ್ದರು. ಇವರ ಸಹಾಯದಿಂದ ತನಗಿಷ್ಟವಾದ ಕಮ್ಯೂನಿಸಮಿನ ಶ್ರೀಗಣೇಶ ಮಾಡಲು ಇಂದಿರಾಜೀ ಇಚ್ಛಿಸುತ್ತಿದ್ದಾರೆ ಇದು ಸಾಧ್ಯವೇನು?

ಕೇರಳ ಫಲಿತಾಂಶ ಹೊರಬಿತ್ತು. ಯಾರಿಗೂ ಬಹುಮತವಿಲ್ಲ. ಇಂದಿರಾ ಕಾಂಗ್ರೆಸ್ಸಿಗೆ ಬಲ ಬಾಗಿದೆ. ಕಮ್ಯುನಿಸ್ಟರ ಕಾಲು ಕಸಿಯಾದ್ದರೂ ಕುಂಟುವಂತಾಗಿದೆ. ಅದನ್ನು ಕಂಡ ಇಂದಿರಾಜೀಯವರ ಆರ್ಥಿಕ ಅಮಾತ್ಯ ಶ್ರೀಗಣೇಶರಿಗೆ ಹೊಟ್ಟೆಯೊಳಗೆ ಏನೇನೋ ಆಯಿತು. ಅದನ್ನವರು ಬಿಡಂಬಾನಾಗಿ ವಾಂತಿ ಮಾಡಿಯೇ ಬಿಟ್ಟರು. ಅದೆಷ್ಟು ಸಮಯ ಹೊಟ್ಟೆಯೊಳಗೇ ಇಟ್ಟುಕೊಳ್ಳುವುದ? ಹೊಟ್ಟೆ ಬಿಗಿಯಲು ಆದ್ಯಾವ ಹಾವನ್ನು ಅವರು ಹಿಡಿಯುವರು? ಕಮ್ಯುನಿಸ್ಟರ ಪ್ರಭಾವ ಕಮ್ಮಿಯಾಗುತ್ತಿರುವದನ್ನು ಕಂಡ ಗಣೇಶ ಗಡಬಡಿಸಿದ್ದಾರೆ, ಕೇರಳ ರಾಜಕೀಯದಿಂದ ಕಮ್ಯುನಿಸ್ಟರು ಕಾಲ್ತೆಗೆಯಲೇ ಬಾರದಂತೆ!— ಅದರಲ್ಲೂ ಚೈನಿವಾದಿ ಮಾರ್ಕ್ಸಿಸ್ಟರ! ಯಾಕೆ? ಆರ್ಥಿಕ ಅಮಾತ್ಯರ ಖಜಾನೆಯಲ್ಲಿ ತನ್ನ ಉದ್ಯೋಗಸ್ಥರಿಗೆ ಕೊಡಲು ಹಣವಿಲ್ಲದಿದ್ದರೂ ಕಮ್ಯೂನಿಸಮಿನ ಪ್ರಚಾರಕ್ಕೆ ಮಾತು ಬೇಕಾದಷ್ಟಿದೆ. ಅದಕ್ಕೇನೂ ಬರಗಾಲ ಬಂದಿಲ್ಲ. ಸೋಷಿಯಲಿಸಮಿಗೆ ಮಾರ್ಕ್ಸಿಸ್ಟರು ಭದ್ರವಾದ ತಳಹದಿಯಿದ್ದಾರೆ. ಇಂದಿರಾಜೀ ಈ ಮಾರ್ಕ್ಸಿಸ್ಟರಿಂದ ಕಮ್ಯೂನಿಸ್ಟರನ್ನು ಉಪಯೋಗಿಸಿಕೊಂಡು, ಅವರನ್ನು ಅಡಿಗಲ್ಲು ಹಾಕಿ ಬಾರೀ

(ಎಂಭತ್ತನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
124 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¼% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3¼% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.
ಆಡಳಿತ ಕಛೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು—1

ಜನಮತ

ತಮಿಳ್ನಾಡಿನ ರಾಜ್ಯ ಲಾಂಛನ

ದ್ರಾವಿಡ ಮುನ್ನೇತ್ರ ಕಳಗಂ ಆಡಳಿತದ ತಮಿಳ್ನಾಡಿನ ರಾಜ್ಯ ಸರಕಾರವು ತನ್ನ ಮಂತ್ರಿಗಳ ಕಾರು ಮತ್ತು ನಿವಾಸಗಳ ಮೇಲೆ ಹಾರಿಸಲು ಪ್ರತ್ಯೇಕ ಧ್ವಜ ಬೇಕು; ಇದಕ್ಕೆ ಕೇಂದ್ರ ಸರಕಾರ ಒಪ್ಪಿಗೆ ಕೊಡಬೇಕೆಂದು ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಗೆ ಒತ್ತಾಯಿಸಿ ಬರೆದುದು, ಈ ಬೇಡಿಕೆ ಬಗ್ಗೆ ಸಮಾಧಾನ ತೋರಿಸಲು ದ್ರಾವಿಡ ಮುಖ್ಯ ಮಂತ್ರಿ ಕರುಣಾನಿಧಿಯವರು ಹಲವು ಹಳ್ಳೊಂದು ಉದಾಹರಣೆ ಕೊಟ್ಟು ಮಾತಾಡಿರುವಂತಹ ವಿದ್ಯಮಾನವನ್ನೆಲ್ಲ ನಾವೆಲ್ಲ ಅರಿತಿದ್ದೇವಷ್ಟೆ? ಆದರೆ ಇಂದಿನ ದಿನಮಾನದಲ್ಲಿ ತಮಿಳ್ನಾಡಿನ ಈ ಬೇಡಿಕೆ ರಾಷ್ಟ್ರೀಯ ಹಿತಾಸಕ್ತಿಗೆ ಹೊರತಾದ ಪ್ರತ್ಯೇಕತೆಯ ಕೂಗು ಎಂದರೆ ತಪ್ಪಾಗಲಿಕ್ಕಿಲ್ಲ. ಕಾರಣವೆಂದರೆ ರಾಜ್ಯಗಳು ರಾಷ್ಟ್ರೀಯ ಚಕ್ರಾಂಕಿತವಾದ ತ್ರಿವರ್ಣ ಧ್ವಜಕ್ಕೆ ಹೊರತಾದ ಧ್ವಜವನ್ನು ಹೊಂದಿದರೆ ಜನರಲ್ಲಿ ರಾಷ್ಟ್ರೀಯತೆ ಒಡೆದು ಪ್ರಾಂತ್ಯ ರಾಜ್ಯಗಳಲ್ಲಿ ಪ್ರಾಂತ್ಯ ಸ್ವಾಯತ್ತತೆಯೇ ಉರಿಯಾಗಿ ನಿಲ್ಲುತ್ತದೆ. ಇದು ನನ್ನೊಬ್ಬನ ಅಭಿಪ್ರಾಯವಲ್ಲ ಬಹುಜನರ ಅಭಿಪ್ರಾಯ. ಇಂತಿರುವಾಗ ಇದನ್ನೆಲ್ಲ ಯೋಚಿಸದೆ ಕರುಣಾನಿಧಿ ರಾಜ್ಯಕ್ಕೆ ಪ್ರತ್ಯೇಕ ಧ್ವಜ ಬೇಕೆಂದು ಕೇಳುವುದು ಸಮಂಜಸವಲ್ಲ.

ದ್ರಾವಿಡರೆಂದರೆ ಪ್ರತ್ಯೇಕವಾದಿಗಳೆಂದು ಕೇಳಿಬರುತ್ತಿರುವುದನ್ನು ಇವರುಗಳು ಅರಿತಿರುವಾಗ ಇಂತಹ ತಮಿಳ್ನಾಡಿನವರಿಗೆ ಪ್ರತ್ಯೇಕ ಧ್ವಜ ಬೇಕೆಂದು ಕೇಳುವುದು ಯಾವುದಕ್ಕಾಗಿ?

ಡಿ. ಎಂ. ಕೆ. ಹೇಳುವ ಪ್ರಕಾರ ಜರ್ಮನಿಯೂ ಭಾರತಕ್ಕೂ ಅವುಗಳ ವಿಷಯದಲ್ಲಿ ರಾಷ್ಟ್ರೀಯ ಸಂಸ್ಕೃತಿ ವಿಷಯದಲ್ಲಿ ವ್ಯತ್ಯಾಸ ಉಂಟು. ಇಂತಿರುವಾಗ ಆ ನೆಲೆಯಲ್ಲಿ ಆ ರಾಷ್ಟ್ರ, ರಾಜ್ಯಗಳಲ್ಲಿ ಪ್ರತ್ಯೇಕ ಧ್ವಜ ಉಂಟೆಂದು ಹೇಳಿ ಈ ರಾಷ್ಟ್ರದಲ್ಲಿ ಪ್ರತ್ಯೇಕ ಧ್ವಜ ಕೇಳುವುದು ತರವಲ್ಲ.

ಇಲ್ಲಿ, ಈ ಡಿ. ಎಂ. ಕೆ. ಬೇಡಿಕೆ ಬಗ್ಗೆ ಕುಳಿತು ಆಲೋಚಿಸಿದರೆ ಪ್ರತ್ಯೇಕ ತಾವಾಗಿ ದ್ರಾವಿಡ ಅಂತರಾರ್ಥವಾದರೂ ತ್ರಿವರ್ಣ ಚಕ್ರಾಂಕಿತ ಧ್ವಜದ ಬದಲು ತಮ್ಮದೇ ಧ್ವಜ ಹಾರಿಸಿ ಸ್ವಾಯತ್ತತೆಯನ್ನು ಗಟ್ಟಿ ಮಾಡುವುದೆ ಎಂದು ಅರ್ಥವಾಗುತ್ತದೆ. ಇದಕ್ಕೆ ಸ್ಪಷ್ಟ ನಿದರ್ಶನಕ್ಕೆ ದ್ರಾವಿಡ ಮುನ್ನೇತ್ರ ಕಳಗಂ ಪಕ್ಷವು ಹಿಂದಿನಿಂದಲೂ ಮಾಡುತ್ತಾ ಬಂದ ತಮಿಳ್ನಾಡಿನ ಹೋರಾಟ ಪ್ರತ್ಯೇಕ ರಾಷ್ಟ್ರೀಯ ಆಂದೋಲನದ ಇತಿಹಾಸವೇ ಸಾಕ್ಷಿ. ಈ ಇತಿಹಾಸದಿಂದ ತಮಿಳರು ಇಂದು ಕೇಳುವುದು ಪ್ರತ್ಯೇಕ ಲಾಂಛನವನ್ನಲ್ಲ ಪ್ರತ್ಯೇಕ ಆಡಳಿತವನ್ನು ಎಂದು ಎಂಥವನಿಗೂ ಅರ್ಥವಾಗುತ್ತದೆ.

ಅದಕ್ಕಾಗಿ ಈ ಸಂಕುಚಿತತೆಯ ರಾಷ್ಟ್ರ ಮಾರಕ ಬೇಡಿಕೆಯ ಬಗ್ಗೆ ಇನ್ನಾದರೂ ಪ್ರಧಾನಿ ಇಂದಿರಾ ಗಾಂಧಿಯವರು ರಾಷ್ಟ್ರ ರಾಜ್ಯ ಬಾಂಧವ್ಯವೆಂದು ಉದಾರತೆಯನ್ನು ತೋರದೆ ಈ ಬೇಡಿಕೆಯನ್ನು ತಿರಸ್ಕರಿಸಿ ರಾಷ್ಟ್ರೀಯ ಭಾವೈಕ್ಯತೆಯನ್ನು ಕಾಪಾಡುವುದು ದೇಶ ಹಿತದೃಷ್ಟಿಯಿಂದ ಒಳ್ಳೆಯದು.

—ಶ್ರೀ ಬಿ. ಎಚ್. ಶಾಂತಾರಾಮ ಶೆಟ್ಟಿ,
ಬ್ರಹ್ಮಾವರ.

ಕರ್ತವ್ಯನಿಷ್ಠೆಯ ಸೋಪಾನಗಳು

ಮಾಡುವ ಕೆಲಸವನ್ನು ಉತ್ತಮ ರೀತಿಯಲ್ಲಿ ಮಾಡುವುದು ಅಗತ್ಯ. ಏನನ್ನು ಮಾಡಬೇಕೋ ಅದು ಕರ್ತವ್ಯ. ಒಬ್ಬನು ಒಂದು ಹುದ್ದೆಗೆ ನಿಯುಕ್ತನಾದನೆಂದಿಟ್ಟುಕೊಳ್ಳಿ. ಆ ಹುದ್ದೆದಾರನು ಕೆಲವೊಂದು ಕೆಲಸಗಳನ್ನು ಮಾಡಬೇಕೆಂದು ಮೊದಲೇ ನಿರ್ಧಾರವಾಗುತ್ತದೆ. ಈ ನಿರ್ಧಾರವು ಕಾನೂನು-ಕಾಯಿದೆ-ನಿಯಮಗಳಿಂದ ನಿರ್ದೇಶಿತವಾಗಿರಬಹುದು; ಅಥವಾ ಪರಸ್ಪರ ತಿಳುವಳಿಕೆಯಿಂದ ಒಪ್ಪಿಕೊಂಡದ್ದಿರಬಹುದು. ತನ್ನ ಕರ್ತವ್ಯಗಳನ್ನು ತತ್ಪರತೆಯಿಂದಲೂ ಉತ್ಸುಕತೆಯಿಂದಲೂ ಶುದ್ಧ ಮನಸ್ಸಿನಿಂದಲೂ ಮಾಡುವವನನ್ನು ಕರ್ತವ್ಯನಿಷ್ಠನೆನ್ನುತ್ತಾರೆ. ಕರ್ತವ್ಯನಿಷ್ಠನಾಗುವುದೊಂದು ದೊಡ್ಡ ಗುಣ. ಈ ಗುಣದಿಂದ ವ್ಯಕ್ತಿಯ ಆತ್ಮಬಲ ಬಲಿಯುತ್ತದೆ. ವ್ಯಕ್ತಿ ನಿರ್ಭಯನಾಗುತ್ತಾನೆ; ಇದರಿಂದಾಗಿ, ಬಹಳ ದೊಡ್ಡ ಕೆಲಸಗಳನ್ನೂ ಬಹಳ ಸರಳವಾಗಿ ಆತ ಮಾಡಲು ಶಕ್ತನಾಗುತ್ತಾನೆ. ಕರ್ತವ್ಯನಿಷ್ಠ ವ್ಯಕ್ತಿಯ ಚರಿತ್ರೆ ಪರಿಶುದ್ಧವಿರಬೇಕಾಗುತ್ತದೆ. ಅಂದರೆ, ಪರಿಶುದ್ಧ ಚಾರಿತ್ರ್ಯವಂತನಷ್ಟೇ ಕರ್ತವ್ಯನಿಷ್ಠನಾಗಬಲ್ಲನು.

ಸಚ್ಚಾರಿತ್ರ್ಯ ವ್ಯಕ್ತಿ ಮಾತ್ರ ಉನ್ನತಿಶೀಲನಾಗಬಲ್ಲನು. ಜೀವನದಲ್ಲಿ ಹೆಜ್ಜೆ ಹೆಜ್ಜೆಯಲ್ಲೂ ಸಚ್ಚಾರಿತ್ರ್ಯದ ಅಗತ್ಯವಿದೆ. ಸಚ್ಚಾರಿತ್ರ್ಯ ಮನುಷ್ಯನಷ್ಟೇ ಲಭ್ಯ ಪದಾರ್ಥಗಳನ್ನು ಉಚಿತ ರೀತಿಯಲ್ಲಿ ಉಪಯೋಗಿಸಬಲ್ಲನು; ಉಪಭೋಗಿಸಬಲ್ಲನು. ಚಾರಿತ್ರ್ಯವಿಲ್ಲದವನಿಗೆ ದೊರಕಿದ ವಸ್ತು-ಅವಕಾಶಗಳು ಕೈತಪ್ಪಿ ಹೋಗುವುವು. ಆತನ ಕಣ್ಣು ತೆರೆದಾಗ, ಪಶ್ಚಾತ್ತಾಪಪಡುವುದಷ್ಟೇ ಬಾಕಿ ಉಳಿಯುವುದು. ಆದುದರಿಂದ ಸಕಾಲದಲ್ಲಿ ಎಚ್ಚರವಾಗಬೇಕು.

ಸಜ್ಜನರ ಸಹವಾಸದಿಂದ, ಧಾರ್ಮಿಕ ಗ್ರಂಥಾವಲೋಕನದಿಂದ ಮಹಾಪುರುಷರ ಚರಿತ್ರ ಪಠನ–ಪಾಠನಗಳಿಂದ ಮನನ—ಚಿಂತನಗಳಿಂದ ಚಾರಿತ್ರ್ಯ ನಿರ್ಮಾಣ ಮಾಡಿಕೊಳ್ಳುವುದು ಅಗತ್ಯ. ಇಂದಿನ ದಿನಗಳಲ್ಲಿ ಸಚ್ಚಾರಿತ್ರ್ಯದ ಸ್ಥಾನ ಗೌಣವಾಗುತ್ತ ಬರುತ್ತಿದೆ; ಅದರ ಸ್ಥಾನವನ್ನು ಧನಸಂಪನ್ನತೆಯು ಆಕ್ರಮಿಸಿದೆ. ಧನಸಂಪನ್ನನಾಗುವುದೇನೂ ಕೆಟ್ಟ ಸಂಗತಿಯಲ್ಲ. ಸಂಪತ್ತಾದರೂ ಚಾರಿತ್ರ್ಯಸಂಪನ್ನನ ಕೈಯಲ್ಲಿದ್ದರೇನೇ ಅದರ ಸೌಂದರ್ಯ ಇಮ್ಮಡಿಸುತ್ತದೆ. ಇಲ್ಲವಾದರೆ, ಅದು ತನ್ನನ್ನೂ ತನ್ನನ್ನು ಹೊಂದಿದ ವ್ಯಕ್ತಿಯನ್ನೂ ಸರ್ವನಾಶ ಮಾಡುತ್ತದೆ. ಆದುದರಿಂದ ಶ್ರೀಮಂತನಾಗುವುದಕ್ಕಿಂತ ಹೆಚ್ಚಿನದು ಚಾರಿತ್ರ್ಯವಂತನಾಗುವುದು. ಇದು ಜೀವನದ ಮೊದಲ ಸೋಪಾನ.

ಕರ್ತವ್ಯನಿಷ್ಠ ಮತ್ತು ನಿರ್ಭಯನಾಗುವುದರ ಎರಡನೆಯ ಮೆಟ್ಟಿಲು—ಪರಮಾತ್ಮನಲ್ಲಿ ದೃಢ ಹಾಗೂ ಪರಿಪೂರ್ಣ ವಿಶ್ವಾಸವಿಡುವುದು. ದೇವರು ತ್ರಿಭುವನಗಳ ಸಂಚಾಲಕ; ಭಗವದನುಗ್ರಹವಿಲ್ಲದೆ ತೃಣಮಾತ್ರವೂ ಚಲಿಸದು. ಇದನ್ನೇ "ತೇನಬಿನಾ ತೃಣಮಪಿ ನಚಲತಿ" ಎಂದು ಪೂರ್ವಿಕರು ಉದ್ಘೋಷಿಸಿದ್ದಾರೆ. ಭಗವಂತನಲ್ಲಿ ಪೂರ್ಣ ವಿಶ್ವಾಸವಿಟ್ಟು ಆತನ ಸಾನ್ನಿಧ್ಯವನ್ನು ಅನುಭವಿಸಿದವನ ಕರ್ಮದ ಹೊಣೆಯನ್ನು ದೇವರು ಹೊತ್ತುಕೊಳ್ಳುತ್ತಾನೆ. 'ಈ ಸೌಭಾಗ್ಯವನ್ನು ಹೊಂದಿದವನಿಗೆ ಅಂಜಿಕೆಯಲ್ಲಿಯದು? ಅಂಜಿಕಿನ್ಯಾತಕಯ್ಯ?' ಎಂದು ದಾಸವರೇಣ್ಯರು ಕೇಳಿದ್ದು ಇಂತಹ ಸೀಮಾಪುರುಷರನ್ನೇ ತಾನೆ?

ಭಗವಾನ್ ಶ್ರೀ ಕೃಷ್ಣನು ಅರ್ಜುನನಿಗೆ ಉಪದೇಶಿಸುತ್ತ ಗೀತೆಯಲ್ಲಿ ಹೇಳಿದ್ದಾನೆ—ಮಯಿ ಸರ್ವಾಣಿ ಕರ್ಮಾಣಿ ಸಂನ್ಯಸ್ಯಾಧ್ಯಾತ್ಮ ಚೇತಸಾ। ನಿರಾಶೀರ್ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ॥ ಅಂದರೆ, "ಅರ್ಜುನ, ನಿನ್ನೆಲ್ಲ ಕರ್ಮಗಳನ್ನೂ ನನಗೆ ಸಮರ್ಪಣೆ ಮಾಡು; ಆಶಾರಹಿತ ಮಮತಾರಹಿತ ಮತ್ತು ಸಂತಾಪರಹಿತನಾಗಿ ಯುದ್ಧ ಮಾಡು" ಕೆಲಸ ಮಾಡುವಾಗ, ಭಗವಂತನಲ್ಲಿ ಪೂರ್ಣವಿಶ್ವಾಸವಿಡುವುದರಿಂದ ಕರ್ಮಶೀಲತೆಯು ದೃಢವಾಗುತ್ತದೆ. ಹನುಮಂತನು ಸಮುದ್ರ ಹಾರಿ ಲಂಕೆಗೆ ಹೋಗಿ ಅಪ್ರತಿಮ ಸಾಹಸ ತೋರಿಸಿದನು. ಆತನ ಹೃದಯದಲ್ಲಿ ಭಗವಂತನ ಬಗ್ಗೆ ಅಮಿತಾಸಕ್ತಿ—ಭಕ್ತಿ ಇದ್ದುದರಿಂದಲೇ ಇದು ಸಾಧ್ಯವಾಯಿತು; ಇದರ ಬಲದಿಂದಲೇ ಆತನು ಲಂಕೆಯಲ್ಲಿ ಹಲವಾರು ಕೌತುಕಗಳನ್ನು ನಡೆಸಿ ಸಕುಶಲನಾಗಿ ಮರಳಿ ಬಂದನು. ಭಗವದ್ಭಕ್ತ ಕರ್ತವ್ಯನಿಷ್ಠ ವ್ಯಕ್ತಿಯು ನಿರ್ಭಯನಾಗಿರುವನೆಂಬುದನ್ನಿದು ಸಮರ್ಥಿಸುತ್ತದೆ. ಮಾನಾಪಮಾನ ಅಥವಾ ಸ್ತುತಿ-ನಿಂದೆಗಳಿಂದ ಅಲಿಪ್ತನಾಗಿರುವುದರಿಂದಲೇ ಇದು ಸಾಧ್ಯವಾಗುತ್ತದೆ. ಕರ್ತವ್ಯನಿಷ್ಠನನ್ನು ಹೆಚ್ಚಿನವರು ಸದ್ಭಾವದಿಂದ ನೋಡುತ್ತಾರೆ; ಆತನನ್ನು ಪ್ರಶಂಸಿಸುತ್ತಾರೆ; ಅಂತೆಯೇ ಆತನನ್ನು ತಿರಸ್ಕಾರ ದೃಷ್ಟಿಯಿಂದ ನೋಡುವವರೂ ಆತನನ್ನು ತೆಗಳುವವರೂ ಇಲ್ಲದಿಲ್ಲ; ಕರ್ತವ್ಯನಿಷ್ಠನು ನಿಂದಾಸ್ತುತಿ ಅಥವಾ ಮಾನಾಪಮಾನಗಳನ್ನು ಗಮನಿಸುವುದಿಲ್ಲ. 'ಪ್ರತಿಷ್ಠಾ ಶೂಕರೀವಿಷ್ಠಾ ಗೌರವಂ ಕ್ಷುದ್ರ ರೌರವಂ। ಅಭಿಮಾನಂ ಸುರಾಪಾನಂ ತ್ರಯಮೇತತ್ ತ್ಯಜೇತ್' ಎಂಬ ಸೂಕ್ತಿಯಲ್ಲಿ ಪ್ರತಿಷ್ಠೆ ಗೌರವ ಮತ್ತು ಅಭಿಮಾನಗಳನ್ನು ಅತ್ಯಂತ ಹೀನವೆಂದು ಹೇಳಿದೆ; ಮತ್ತು ಅದನ್ನು ತ್ಯಜಿಸಬೇಕೆಂದು ಕರೆನೀಡಿದೆ.

ಮೂರನೆಯ ಸೋಪಾನ ಪ್ರಸನ್ನತೆ. ಕರ್ತವ್ಯ ಪಾಲನೆ ಮಾಡುವಾಗ, ಅನುಕೂಲ—ಪ್ರತಿಕೂಲ ಪರಿಸ್ಥಿತಿಗಳು ತಲೆದೋರುತ್ತವೆ. ಇವುಗಳಿಂದ ಕರ್ತವ್ಯನಿಷ್ಠನು ಸಂತೋಷಗೊಳ್ಳುವುದಿಲ್ಲ; ಚಿಂತಿತನಾಗುವುದೂ ಇಲ್ಲ. ಪರಿಸ್ಥಿತಿಗಳು ಸಹಜವಾಗೇ ಬದಲಾಗುತ್ತಿರುತ್ತವೆ. ಕರ್ತವ್ಯಪಾಲನೆಯು ಅವುಗಳಿಂದ ಅಬಾಧಿತವಾಗಿ ನಡೆಯುತ್ತಿರಬೇಕು. ಪ್ರತಿಕೂಲ ಪರಿಸ್ಥಿತಿಗಳಿಂದ ಕಂಗೆಟ್ಟು ಕರ್ತವ್ಯ ವಿಮುಖನಾಗಬಾರದು. ಕರ್ತವ್ಯನಿಷ್ಠನು ಪ್ರತಿಕೂಲ ಪರಿಸ್ಥಿತಿಗಳನ್ನು ಅನುಕೂಲವಾಗಿ ಪರಿವರ್ತಿಸಿಕೊಂಡು ಮುಂದುವರಿಯುತ್ತಾನೆ. ಇದು ಮಾನಸಿಕ ಪ್ರಸನ್ನತೆಯಿಂದಷ್ಟೇ ಸಾಧ್ಯ. ಚಾರಿತ್ರ್ಯವಂತರೆಲ್ಲರೂ ಪ್ರಸನ್ನಚಿತ್ತರಾಗಿದ್ದರು; ಸ್ಮಿತವದನರಾಗಿದ್ದರು. "ಎಲ್ಲ ರೋಗಗಳಿಗೂ ನಗುವೊಂದೇ ರಾಮಬಾಣ ಔಷಧ" ಎಂದು ಹೇಳುತ್ತಾರೆ.

ದೇಶದ ರಾಷ್ಟ್ರಪತಿ ಹುದ್ದೆಯಲ್ಲಿರಲಿ, ಅಥವಾ ಪ್ರಧಾನ ಮಂತ್ರಿಯೇ ಆಗಿರಲಿ, ಇಲ್ಲವೇ ಮಜೂರಿಯಿಂದ ದಿನದೂಡನೆ ಮಾಡುವವನೇ ಇರಲಿ ಇನ್ನಾರಾದರೂ ಇರಲಿ, ತಂತಮ್ಮ ಹುದ್ದೆ-ಪದವಿಗಳಿಗೆ ಸಮುಚಿತವಾದ ಕರ್ತವ್ಯ ನಿರ್ವಹಿಸಬೇಕು; ಚಾರಿತ್ರ್ಯವಂತನಾಗಬೇಕು; ತನ್ನ ಕೃತ್ಯಗಳ ನಿಂದಾಸ್ತುತಿಗಳಿಂದ ವಿಚಲಿತನಾಗದೆ ಪ್ರಸನ್ನಚಿತ್ತದಿಂದ ದೇವರ ಭಯದಿಂದ ನಿರ್ಭಯತೆಯಿಂದ ಕರ್ತವ್ಯ ನಿರತನಾಗಬೇಕು. ಕರ್ತವ್ಯ ನಿಷ್ಠೆಯಿಲ್ಲದವನ ಕೃತಿ ಅಹಂಕೃತಿ.

HOTEL SATKAR
Boarding, Lodging & Restaurant
Behind Corporation Office,
9 Mission Road — Bangalore—27.
Phone No.— 1 28337
2 29887
Grams: HOST SATKAR
Vegetarian Cuisine
Attached Bath Rooms and Phones.
Running H and C water.
Moderate Charges
Railway Station, Laundry, Post office and Entertainment Area Nearby.
Large airy Rooms; Roof garden
Quiet, Calm Atmosphere
Personalised Service.

READ & ADVERTISE IN NAVAYUGA WEEKLY

ಕಮ್ಯುನಿಸ್ಟರ ಕರ ಇಂದಿರಾಜೀಗೆ ಇಷ್ಟ

(ಏಳನೇ ಪುಟದಿಂದ)

ಸಹಕೂಟವಾದದ ಪ್ರಹಲನ್ನು (ಇಂದಿರಾ ಮಹಾಲ್) ಕಟ್ಟಬೇಕೆಂದಿದ್ದಾರೆ! ಉಪ ಮಂತ್ರಿಯವರ ಅಭಿಪ್ರಾಯದಂತೆ ಈ ಮಾರ್ಕ್ಸಿಸ್ಟರು ಸ್ವಲ್ಪ ಬದಲಾಯಿಸಿಕೊಳ್ಳಬೇಕಾಗಿದೆ! ಅದೇನು ಬದಲಾವಣೆ? ಸಮಯಕ್ಕೆ ಸರಿಯಾಗಿ ಬದಲಾಯಿಸಿಕೊಳ್ಳಬೇಕಂತೆ! ಕಾಲಕ್ಕೆ ತಕ್ಕ ಕೋಲ ಕಟ್ಟಲು ಕಮ್ಯುನಿಸ್ಟರಿಗೆ ಮಾಜಿ ಕಮ್ಯುನಿಸ್ಟರು ಮಂತ್ರಿಸ್ಥಾನದಿಂದ ಉಪದೇಶ ಮಾಡುತ್ತಿದ್ದಾರೆ!— ಇಂದಿರಾಜೀಯವರ ಕಿವಿಗೆ ಇನಿದಾಗಿ ಕೇಳಲೆಂದು! ಆಗ ತಾನೇ ಉಪ-ಮಂತ್ರಿ ಪೂರ್ಣ ಮಂತ್ರಿಯಾಗಲು ಸಾಧ್ಯ? ಇಲ್ಲವಿದ್ದಲ್ಲಿ ಗುರು ಪಾದ ಸ್ವಾಮಿ ಗುರುವಿನ ಪಾದ ಸೇರಿದಂತೆ ಶ್ರೀ ಗಣೇಶರ ಇತಿಶ್ರೀ ಆದೀತು, ನಿಜವಾಗಿಯೇ ಅವರು ಅಂದಿನ ಅಂಡಮಾನಿಗೆ ಅಟ್ಟಲ್ಪಡುತ್ತಾರು.

ಅಂತಾರಾಷ್ಟ್ರೀಯ ಮಾರ್ಕ್ಸಿಸ್ಟ್ ಕಮ್ಯೂನಿಸ್ಟ್ ಪಾರ್ಟಿ ಬಂಗಾಲ ಮತ್ತು ಕೇರಳಗಳಲ್ಲಿ ಮಾತ್ರ ಇರುವದನ್ನು ಕಂಡ ಗಣೇಶ್ ಕಮ್ಯೂನಿಷ್ಟರಿಗೆ ಬೋಧನೆ ಹಾಗೂ ಉತ್ತೇಜನೆ ಕೊಡಲು ಮುಂದಕ್ಕೆ ಬಂದಿದ್ದಾರೆ. ಕಮ್ಯೂನಿಸ್ಟರು ಇತರೆಡೆಗಳಲ್ಲೂ ತಮ್ಮ ಕಾರ್ಯರಂಗವನ್ನು ವಿಸ್ತರಿಸಬೇಕು! ಅದೇರೀತಿ, ಗೈತರ ಬಳಿ ಮಾತ್ರ ಸ್ಥಾನ ಪಡೆದಿರುವ ಕಮ್ಯೂನಿಸ್ಟರು ಇತರ ಜನರ ಬಳಿಯೂ ಭದ್ರ ಸ್ಥಾನ ಪಡೆಯಬೇಕಂತೆ! ಅಬ್ಬಾ! ಅದೆಂತಹ ಆತ್ಮಾಸೆ? ಇದು ಇನ್ನು ಮೇಲೆ ಸಾಧ್ಯವೇನು? ಕಮ್ಯೂನಿಸ್ಟರು ಇಂದಿರಾಜೀ ಇರುವವರೆಗೆ ಇಂತಹ ವೇಷ ಹಾಕಿಕೊಳ್ಳ ಬಹುದು. ಅವರು ಮಂತ್ರಿ ಸಭೆಯೊಳಗೆ ನುಸುಳಿಕೊಳ್ಳ ಬಹುದು, ಗವರ್ನರ್ ಆಗ ಬಹುದ, ಸಲಹಾಸಮಿತಿಗಳ ಒಳಗೆ ಹೋಗ ಬಹುದು,....ಇದೆಲ್ಲಾ ಎಷ್ಟು ದಿನ? ಗಾಳಿ ಯಾವಾಗಲೂ ಒಂದೇ ದಿಕ್ಕಿನಲ್ಲಿ ಬೀಸುತ್ತದೇನು? ಇಪ್ಪತ್ತನಾಲ್ಕು ಘಂಟೆ ಕಾಲವೂ ತಮಾಸು ಬೀಸಿದರೆ ಗತಿ ಏನಾದೀತು? ಚಕ್ರ ತಿರುಗುತ್ತ ಇರುತ್ತದೆ. ಇಂದು ಇಂದಿರಾಜೀಯವರಿರುವ ಚಕ್ರದ ಭಾಗ ಮೇಲಕ್ಕೆ ಬಂದಿದೆ. ನಾಳೆ ಕೆಳಗೆ ಹೋಗಲೇ ಬೇಕು. ಅವರು ಕಮ್ಯೂನಿಸ್ಟರನ್ನು ಆಧರಿಸಿಕೊಂಡಿರಲಿ, ಅಥವಾ, ಕಮ್ಯೂನಿಸ್ಟರು ಅವರನ್ನು ಆಧರಿಸಿಕೊಂಡಿರಲಿ ಕೊನೆಯಲ್ಲಿ ಫಲಿತಾಂಶ ಒಂದೇ. ಪವಿತ್ರವಾದ ಭಾರತದ ಮಣ್ಣಿನಲ್ಲಿ ಕೊಳಕು ಕಮ್ಯೂನಿಸಮ್ಮಿನ ವಿಷವೃಕ್ಷ ಬೆಳೆಯಲಾರದು. ಗಣೇಶರೇನೋ ಗಡಬಡಿಸ ಬಹುದು-ಇಪ್ಪತ್ತೈದು ವರ್ಷಗಳಿಂದ ಕೇರಳ (ಕಮ್ಯೂನಿಸ್ಟರ) ಎಡ ಶಾಲಿಗಳ ರಾಜ್ಯವಾಗಿದ್ದು ಇನ್ನೆಂದೂ ಬಲಶಾಲಿಗಳ ಕೈಗೆ ಹೋಗುವದಿಲ್ಲ! ಇಪ್ಪತ್ತೈದು ವರ್ಷಗಳಿಂದ ಕೇರಳ ರಾಜ್ಯವಾಗಿದೆ ಏನ? ಅದೊಂದು ರಾಜ್ಯವಾಗಿಯೇ ಇರಲಿಲ್ಲವೆಂದ ಮೇಲೆ ಇಪ್ಪತ್ತೈದು ವರ್ಷ ಕಾಲ ಕಮ್ಯೂನಿಸ್ಟರ ಆಳ್ವಿಕೆಗೆ ಆಸ್ಪದವಾದರೂ ಎಲ್ಲಿ? ಕಾಂಗ್ರೆಸ್ಸಿಗರ ಅಂತಃಕಲಹ, ಅಧಿಕಾರ ದಾಹ, ಪ್ರಜೆಗಳ ಸಲಿಗೆ...ಕಾರಣದಿಂದಾಗಿ ಕಮ್ಯೂನಿಸಮ್ ಅಲ್ಲಿ ಕಾಲೂರಿದೆ ವಿನಃ ಅಲ್ಲಿಯ ಭಾರತೀಯರು ಅದನ್ನು ಪ್ರೀತಿಯಿಂದ ಬರಮಾಡಿಕೊಂಡಿರುವದಿಲ್ಲ. ಕ್ರಮಶಃ ಕಮ್ಯೂನಿಸಂ ಅಲ್ಲಿ ತನ್ನ ಗೋರಿಯನ್ನು ಕಟ್ಟಿಕೊಳ್ಳುತ್ತಿದೆ. ಇದ್ದಕ್ಕಿದ್ದಂತೆ, ಕಾಂಗ್ರೆಸ್ ಕಾಲುಜಾರಿ ಬಿದ್ದಂತೆ, ಕಮ್ಯೂನಿಸ್ಟ್ ಪಾರ್ಟಿಗಳು ಬೀಳುವಂತಹವಲ್ಲ. ಅದನ್ನು ಸ್ವಲ್ಪ ಸ್ವಲ್ಪವಾಗಿ ಸಂಪೂರ್ಣ ತೆಗೆದು ಹಾಕಬೇಕು. ಎಲ್ಲೆಡೆಗಳಲ್ಲೂ ಅವರ ಶಕ್ತಿ ಕುಂಠಿತವಾಗಿರುವದನ್ನು ವಿವೇಕಶಾಲಿಗಳು ಕಂಡುಕೊಂಡಿರುವರು. ಕಮ್ಯೂನಿಸ್ಟ್ ಪಾರ್ಟಿಯು ಕೆಲಸಕ್ಕಾಗಿಯೇ ಬ್ರಿಟನ್ನಿನಿಂದ ಬಂದಿರುವ ಸ್ಟ್ರಾಟ್ ಆದಾಗಲೇ ಅದಕ್ಕೆ ತಿಲಾಂಜಲಿ ಇತ್ತು ಬಿಟ್ಟಿದ್ದಾರೆ. ಅದು ಇಲ್ಲಿಯ ಮಣ್ಣಿನ ಗುಣವಿನ, ನೀರಿನ, ಗಾಳಿಯ ಗುಣವಿದೆ. ಎಲ್ಲರೂ ಜಯಚಂದರಂಗಲು ಸಾಧ್ಯವಿರುವದಿಲ್ಲ. ಅದೇ ರೀತಿ, ಆಕ್ರಮಣಕ್ಕಾಗಿ ಬಂದವರು ಎಂದೆಂದೂ ಮಾನಃ ಪುನಃ ಬಾಳುತ್ತಿರಲೂ ಸಾಧ್ಯವಿಲ್ಲ. ಅವರು ಈ ದೇಶದ ರಾಷ್ಟ್ರೀಯ ಪ್ರವಾಹದೊಂದಿಗೆ ಒಂದಾಗಿ ಹೋಗ ಪರು ಇದು ಚಂತ್ರೆ. ಅದನ್ನು ತಿಳಿದೂ ಅಂತವೂ ನಿನ ಗಣೇಶ ಗಡಬಡಿಸಿದಲ್ಲಿ ಇಂದಿರಾಜೀ ತೃಪ್ತಿಯಾದರೂ ಜನತೆಯ ಆಸವೂ ಧಾನಕ್ಕೆ ಅವರು ಪಾತ್ರರಾಗಬೇಕಾಗುತ್ತದೆ. ಕಮ್ಯೂನಿಸ್ಟರ ಕರ ಇಂದಿರಾಜೀಗೆ ಇಷ್ಟವಿರ ಬಹುದು; ದೇಶಪ್ರೇಮಿಗಳಲ್ಲ.

—ಶ್ರೀ ಶಿವಶಂಕರ

ಸಂಗ್ರಾಹ್ಯ ಸಂಕಲನಗಳು

ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ಗಂಧ ಸುಮನ	1—20
ಹೆಂಗುಸರ ಕತೆಗಳು	2—00
ತುಡಿಮುತ್ತುಗಳು	1—50
ಶಂಕರಜ್ಞಾನ	2—00
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಏಕಾಂಕ ನಾಟಕಗಳು	1—00
ಭಾರತದ ನಾಲ್ವರು ಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಸರಸ್ವತಿ	1—50
ವಿಚಿತ್ರಕಳ್ಳಪೆಟ್ಟೀ	1—50
ಮಧುವನ	3—00

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಸುಯೇಜ್ ಧೀರ- ನಾಸೇರ್

(ನಾಲ್ಕನೇ ಪುಟದಿಂದ)

ಪ್ರಜಾರಾಜ್ಯವನ್ನು ೧೯೫೬ರಲ್ಲಿ ಸ್ಥಾಪಿಸುವಲ್ಲಿ ಯಶಗಳಿಸಿದರು. ಆದರೆ, ೬೧ರಲ್ಲಿ ಸಿರಿಯೂ ಪ್ರತ್ಯೇಕಗೊಂಡಿತು. ಸಂಯುಕ್ತ ಅರಬರಾಜ್ಯ ಕನಸಿನರಾಜ್ಯವಾತ್ರವಾಯ್ತು ೧೯೬೭ರ ಹೊತ್ತಿಗೆ ಅರಬ ರಾಷ್ಟ್ರಗಳ ಒಕ್ಕೂಟ ರಚನೆ ಅಸಾಧ್ಯವೆಂದು ಅವರಿಗೆ ಮನವರಿಕೆಯಾದಾಗ ಅವರು ಅರಬ ಶೃಂಗ ಸಮ್ಮೇಳನ ಬಹುಕಾಲದ ಯೋಜನೆಯೆಂದು ಸ್ಪಷ್ಟವಾಗಿ ಹೇಳಿದರು.

೧೯೬೭ ಅರಬ-ಇಸ್ರೇಲ್ ಯುದ್ಧ ಅವರ ಮನಸ್ಸನ್ನು ಬದಲಾಯಿಸಿತು. ಅವರು ಅಕಾಬಾ ಕೊಲ್ಲಿಯನ್ನು ಆಕ್ರಮಿಸಿದರು. ಆದರೂ ಈ ಯುದ್ಧದಲ್ಲಿ ಇಸ್ರೇಲಿನದೇ ಮೇಲುಗೈ ಆಗಿತ್ತು. ಸೋಲಿಂದ ನಾಸೇರರು ತನ್ನ ಅಧಿಕಾರಕ್ಕೆ ರಾಜಿನಾಮೆ ನೀಡಿದರು; ಆದರೆ, ಅದು ಸ್ವೀಕೃತವಾಗಲಿಲ್ಲ. ಜನೇಚ್ಛೆಯು ಮುಂದೆ ತನ್ನ ಪ್ರತಿಷ್ಠೆಯನ್ನು ಬಲಿಗೊಟ್ಟು ಅಧ್ಯಕ್ಷರಾಗೇ ಅವರು ಮುಂದುವರಿದರು.

ತಮ್ಮ ಸೈನಿಕ ಪಡೆಯನ್ನು ಪುನಾರಚಿಸುವತ್ತ ಅವರ ಗಮನ ಹರಿಯಿತು. ೧೯೬೭ರ ಮಧ್ಯಾವಧಿಯಿಂದ ಪ್ರಧಾನಿಯ ಅಧಿಕಾರವನ್ನೂ ವಹಿಸಿಕೊಂಡ ಅವರು ದೇಶದ ಏಕೈಕ ರಾಜಕೀಯ ಪಕ್ಷ ಅರಬ ಸಮಾಜವಾದಿ ಯೂನಿಯನ್ನಿನ ಅಧ್ಯಕ್ಷತೆಯನ್ನೂ ಹೊತ್ತುಕೊಂಡರು. ಹೊಸ ಸರಕಾರವನ್ನೂ ರಚಿಸಿದರು. ಆರೆಬಿಯೊಡನೆ ಸಂಧಾನ ನಡೆಸಿದರು.

ದೇಶದಲ್ಲಿ ಸಮಗ್ರ ಸುಧಾರಣಾ ಕಾರ್ಯಕ್ರಮ ಕೈಕೊಳ್ಳುವುದಾಗಿ ೧೯೬೮ರಲ್ಲಿ ಘೋಷಿಸಿದ ನಾಸೇರರು ರಶ್ಯದೊಡನೆ ನಿಕಟ ಸಂಪರ್ಕ ಹೊಂದಿದ್ದರು.

ಭಾರತದ ನೆಹರು, ಇಂಡೋನೇಶ್ಯದ ಸುಕರ್ಣ, ಈಜಿಪ್ತದ ನಾಸೇರ್— ಈ ತ್ರಿಮೂರ್ತಿಗಳು ಆಫ್ರೋ-ಏಸ್ಯಾದ ರಾಜ್ಯಕಾರಣದಲ್ಲಿ ಚಟುವಟಿಕೆಯಿಂದ ದುಡಿದಾಗ, ವಿಶ್ವ ಶಾಂತಿಯ ಬಗ್ಗೆ ಆಶೆ ಮೂಡಿತ್ತು. ಈ ಮೂವರೂ ಒಂದೇ ಒಂದು ಪರಿಸ್ಥಿತಿಯಲ್ಲಿ ಕೊನೆಯುಸಿರೆಳೆದರು. ಪಂ. ನೆಹರು ಚೀನೀಯರ ವಿಶ್ವಾಸ ದ್ರೋಹದಿಂದ ಮನನೊಂದರ . ಸುಕರ್ಣರು ಚೀನಾದ ಮೈತ್ರಿಯಿಂದ ಪದಚ್ಯುತರಾದರೆ. ನಾಸೇರರು ಇಸ್ರೇಲಿನ ಅವಮಾನಿತ ಸಮರದಿಂದ ಬೇಸರಗೊಂಡಿದ್ದರು.

ಪಂ. ನೆಹರು ಮತ್ತು ನಾಸೇರರು ತಮ್ಮ ಕೊನೆಯುಸಿರಿನವರೆಗೂ ದೇಶದ ಜನಪ್ರಿಯತೆ ಉಳಿಸಿಕೊಂಡಿದ್ದರು. ಶಾಂತಿಗಾಗಿಯೇ ಶ್ರಮಿಸಿ ಜೀವ ತೇದರು. ನಾಸೇರರ ನಿಧನದಿಂದ ವಿಭೂತಿ ಪುರುಷನೊಬ್ಬನನ್ನು ಲೋಕ ಕಳೆದುಕೊಂಡಿತು. ಏಸ್ಯಾದ ಶಿಖರಕ್ಕೆ ಬಡವಾಯ್ತು.

ಊರೊಳಗೆ ನಡೆಯುವ ಕೇಸುಗಳೆಲ್ಲ ಜ್ಞಾನಪೂರ್ವಕ ನಡೆಯಬೇಕು. ವಿಚಾರ ಪೂರ್ವಕ ನಡೆಯಬೇಕು, ಪರಸ್ಪರರ ಸಹಕಾರದಿಂದ ನಡೆಯಬೇಕು. ಗ್ರಾಮ ಪರಿವಾರದ ಭಾವನೆಯಿಂದ ನಡೆಸಬೇಕು ಅಂದರೆ ಮಾತ್ರ ಸ್ವಾವಲಂಬನವು ವ್ಯಕ್ತವಾಗುವುದು.

o o o

ಶಿಥಿಲತೆ ಸತತ ಮತ್ತು ಸಹಜ ನಿಷ್ಠೆ ಇವು ಮೂರರ ಅವಶ್ಯ.

o o o

ಆಧ್ಯಾತ್ಮಿಕ ರಾಜ ನೈತಿಕ ಮತ್ತು ಆರ್ಥಿಕ ಈ ಮೂರೂ ಕ್ಷೇತ್ರಗಳಲ್ಲಿ ಸಮತೋಲನವಿರಬೇಕು.

o o o

ಯಾವ ಬೀಜಕ್ಕೆ ಮೊಳೆಯಲು ಶಕ್ತ ವಾಗುತ್ತದೋ ಅದು ಚೆನ್ನಾಗಿ ಬೆಳೆಯುತ್ತದೆ.

ಕಾನೂನು ತಿಳಿದು ಪ್ರಯೋಜನ ಪಡೆಕೊಳ್ಳಿ

ಉಡುಪಿ ತಾಲೂಕು ಬೋರ್ಡ ಸದಸ್ಯ ಮತ್ತು ಎಡ್ವಕೇಟ್ ಶ್ರೀ ಶಿಕಾರಿ ವಿಲಿಯಂ ಪಿಂಟೋರವರು ಕಳೆದ ತಾ. ೨೭ರಲ್ಲಿ ಬೆಳ್ತಂಗಡಿ ತಾಲೂಕಿನ ಆಳದಂಗಡಿ ಅರ್ವ ಆಗಣೆಯ ವಠಾರದಲ್ಲಿ ರೈತರ ಸಭೆಯನ್ನು ಉದ್ದೇಶಿಸಿ "ಭೂ ಮಸೂದೆ ಕಾನೂನಿನಲ್ಲಿ ರೈತರ ಹಕ್ಕುಗಳೇನು? ಆ ಕಾನೂನಿನಿಂದ ಪ್ರಯೋಜನ ಹೇಗೆ ಪಡೆಯಬಹುದೆಂದು ವಿವರಿಸಿದರು

"ಶತಮಾನಗಳಿಂದ ನಮ್ಮ ರೈತ ಶೋಷಣೆಗೆ ಒಳಪಟ್ಟಿದ್ದಾನೆ. ರಾಷ್ಟ್ರದ ಬೆನ್ನೆಲುಬಾಗಿರುವ ರೈತನಿಗೆ ತಾನು ಗೈಯ್ಯುವ ಭೂಮಿಯಲ್ಲಿ ಭದ್ರತೆ ಒದಗಿಸಿಕೊಟ್ಟು ಆತ ಸ್ವತಂತ್ರ ಮಾನವನಾಗಿ ಬಾಳಬೇಕೆಂಬ ಉದ್ದೇಶದಿಂದ ಭೂಮಸೂದೆ ಕಾನೂನು ಜ್ಯಾರಿಗೆ ಬಂದಿದೆ. ಈಗ ಜ್ಯಾರಿಯಲ್ಲಿರುವ ಕಾನೂನಿನಲ್ಲಿ ತುಂಬಾ ನ್ಯೂನತೆಗಳಿದ್ದು ಯೋಚಿಸಿದ ಉದ್ದೇಶ ಸಫಲವಾಗುತ್ತದೋ— ಎಂಬ ಸಂಶಯಗಳು ಹುಟ್ಟಿವೆ. ಏನೇ ಇರಲಿ— ಈ ಮಂಜೂರಾಗಿರುವ ಕಾನೂನಿನ ಚೌಕಟ್ಟಿನಲ್ಲಿ ರೈತಾಪಿ ಜನರಿಗೆ ದೊರಕುವ ಸೌಲಭ್ಯಗಳನ್ನು ಅವರು ಪಡೆದು ಒಗ್ಗಟ್ಟಿನಿಂದ ನ್ಯಾಯ, ಧರ್ಮದ ತಳಹದಿಯಲ್ಲಿ ಮುನ್ನಡೆಯಬೇಕೆಂದು ಕರೆಯಿತ್ತರು."

ಬೆಳ್ತಂಗಡಿ ತಾಲೂಕು ಬೋರ್ಡ ಸದಸ್ಯ ಶ್ರೀ ನಾಗರಾಜರವರು ಅಧ್ಯಕ್ಷತೆ ವಹಿಸಿದ್ದರು. ರೈ. ಫಾ. ಬೆಂಜಮಿನ್ ಡಿ ಸೋಜಾರವರು ಸ್ವಾಗತಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ— ರೈತರಲ್ಲಿ ಒಗ್ಗಟ್ಟಿಲ್ಲದಿರುವುದರಿಂದ ಎಷ್ಟೊಂದು ಕಷ್ಟನಷ್ಟಗಳನ್ನೆದುರಿಸಬೇಕಾಗುತ್ತದೆ ಎಂಬುದನ್ನು ವಿವರಿಸಿ ರೈತರ ಹಕ್ಕುಗಳನ್ನು ಮುಂದಾಯಲು ಪ್ರಯತ್ನಿಸುವ ಪಟ್ಟಭದ್ರ ಶಕ್ತಿಗಳ ವಿರುದ್ಧ ರೈತಾಪಿ ಜನರ ಒಗ್ಗಟ್ಟೇ— ಅವರಿಗೆ ರಕ್ಷಣೆ ಒದಗಿಸಬಲ್ಲುದೆಂದು ಹೇಳಿದರು.

ಸಂದರ್ಶಿಸಿರಿ!— ಸಂತೃಪ್ತರಾಗಿರಿ!!

ಬಲ್ಲ ಜಾಗರಾ ಪತ್ರಗಳಿಗೆ, ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ

ಅಧಿಕೃತ ವ್ಯಾಪಾರಸ್ಥರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

ಸಂತಾನಶಕ್ತಿಯನ್ನು ಮರಳಿ ಪಡೆದರು!

ಲಕ್ಷ್ಮಣವಿಷ್ಣು ಕುಲಕರ್ಣಿ ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ವಾರ್ನಾನಗರದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಇಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಳೆದ ಬೇಸಿಗೆಯಲ್ಲೊಂದು ದಿನ ಅವರು ತಮ್ಮ ಪತ್ನಿಪುತ್ರರೊಡನೆ ವನವಿಹಾರಕ್ಕಾಗಿ ಸೊಗಸಾದ ತಂಪು ಪ್ರದೇಶವೊಂದಕ್ಕೆ ಹೋದರು. ಆದರೆ ಆ ದಿನ ಅವರ ಪಾಲಿಗೆ ಕರಾಳದಿನವಾಯಿತು. ತಂದೆಯ ಕಣ್ತಪ್ಪಿಸಿ ತನ್ನ ಮಿತ್ರರೊಡನೆ ಕೊಳವೊಂದರಲ್ಲಿ ಈಜಲು ಹೋದ ಕುಲಕರ್ಣಿಯವರ 12 ವಯಸ್ಸಿನ ಮಗ ಅದರಲ್ಲಿ ಮುಳುಗಿ ಮರಣ ಹೊಂದಿದ. ಎಳೆ ಚಿಗುರುವ ಮುನ್ನವೇ ಬಾಡಿ ಹೋಯಿತು.

ಲಕ್ಷ್ಮಣವಿಷ್ಣು ಕುಲಕರ್ಣಿ ಅಷ್ಟೇ ಅಲ್ಲದೆ ಇಡೀ ಕುಟುಂಬವೇ ಅವನಿಗಾಗಿ ಪರಿತಪಿಸಿತು. ಇದ್ದೊಬ್ಬ ಮಗನನ್ನು ಕಳೆದುಕೊಂಡ ಕುಲಕರ್ಣಿ ಅವರ ಮನಸ್ಸಿಗೆ ತುಂಬಾ ನೋವಾಯಿತು. ತಾವು ಆ ವೇಳೆಗಾಗಲೇ ತಮ್ಮ ಕುಟುಂಬ ನಿಯಂತ್ರಣದ ದೃಷ್ಟಿಯಿಂದ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡಿದ್ದರು. ಸಂತಾನಶಕ್ತಿಯನ್ನು ಪುನಃ ಪಡೆಯುವುದು ಸಾಧ್ಯವೆಂಬುದು ಅವರಿಗೆ ತಿಳಿದಿರಲಿಲ್ಲ. ಅವರ ಒಟ್ಟು ಆರು ಮಕ್ಕಳಲ್ಲಿ ಮೂವರು ಮಂದಿ ಮಾತ್ರ ಉಳಿದಿದ್ದರು. ಅವರಲ್ಲಿ ಎರಡು ಹೆಣ್ಣು ಒಂದು ಗಂಡು. ಅನೇಕ ತಜ್ಞರನ್ನು ಕಂಡು ಮಾತುಕತೆ ನಡೆಸಿ 1964ರಲ್ಲಿ ಅವರು ಚಿಕಿತ್ಸೆ ಮಾಡಿಸಿ ಕೊಂಡಿದ್ದರು. ತಮ್ಮ ಮಗನ ಮರಣದ ನಂತರ ತಾನು ಮಹಾಪರಾಧವನ್ನೇ ಮಾಡಿರುವಂತೆ ಅವರಿಗೆ ಗೋಚರವಾಯಿತು. ಕುಟುಂಬ ಯೋಜನೆಯಲ್ಲಿ ಅವರಿಗೆ ಇದ್ದ ವಿಶ್ವಾಸ ಇನ್ನು ಇಲ್ಲವಾಯಿತು.

ಕೆಲವು ತಿಂಗಳುಗಳ ನಂತರ ಕುಲಕರ್ಣಿಯವರು ರೇಡಿಯೋ ಕೇಳುತ್ತಿರುವಾಗ ಚಿಕಿತ್ಸೆ ಮಾಡಿಸಿಕೊಂಡಿರುವವರು ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ಪುನಃ ಚಿಕಿತ್ಸೆ ಮಾಡಿಸಿಕೊಂಡು ಸಂತಾನಶಕ್ತಿ ಮರಳಿ ಪಡೆಯುವುದು ಸಾಧ್ಯ ಎಂಬುದನ್ನು ಕೇಳಿದರು. ನೊಂದ ಮನಕ್ಕೆ ನೆಮ್ಮದಿ ದೊರೆಯಿತು. ತಮ್ಮ ಸಮೀಪದ ವೈದ್ಯರೊಬ್ಬರಲ್ಲಿ ಈ ಬಗ್ಗೆ ಖಚಿತಪಡಿಸಿಕೊಂಡರು. ಕುಟುಂಬಯೋಜನೆಯ ಅಧಿಕಾರಿಗಳಿಗೆ ತಮ್ಮ ವಿಷಯವಾಗಿ ಪತ್ರ ಬರೆದರು. ಸ್ವಲ್ಪಕಾಲದ ನಂತರ ಕುಲಕರ್ಣಿ ಅವರು ಪೂನಾದ ಸಸೂನ ಆಸ್ಪತ್ರೆಗೆ ಬರುವಂತೆ ಕರೆ ಬಂದಿತು.

ಕುಲಕರ್ಣಿ ಅವರ ಆನಂದ ಉತ್ಸಾಹ ಹೇಳತೀರದು. ಆದರೂ ಸಂತಾನ ಶಕ್ತಿ ಪುನಃ ಪಡೆಯುವುದು ಸಾಧ್ಯವೇ ಎಂಬ ಬಗ್ಗೆ ಅವರಲ್ಲಿ ಸಂದೇಹವೂ ಇತ್ತು. ಆಸ್ಪತ್ರೆಗೆ ಬಂದು ಚಿಕಿತ್ಸೆಗೆ ಒಪ್ಪಿಕೊಂಡರು. ಡಾ. ಸಲಾಖೆ ಅವರು ಕುಲಕರ್ಣಿ ಅವರಿಗೆ ಚಿಕಿತ್ಸೆ ಮಾಡಿದರು. ಚಿಕಿತ್ಸೆಯ ಎರಡು ವಾರಗಳ ನಂತರ ಅಂದರೆ 1969ರ ಡಿಸೆಂಬರ್ 16ರಂದು ಅವರನ್ನು ಆಸ್ಪತ್ರೆಯಿಂದ ವಾಪಸ್ಸು ಕಳುಹಿಸಲಾಯಿತು. ಚಿಕಿತ್ಸೆ ಅವರ ಜೀವನದಲ್ಲಿ ಹೆಚ್ಚು ಪರಿಣಾಮಕಾರಿಯಾಗಿದೆ. ಕುಲಕರ್ಣಿ ಸಂತಾನಶಕ್ತಿಯನ್ನು ಪುನಃ ಪಡೆದರು. ಕುಟುಂಬ ಯೋಜನೆಯಲ್ಲಿ ಅವರ ವಿಶ್ವಾಸ ಅಚಲವಾಯಿತು. ಸುಖೀ ರಾಷ್ಟ್ರದ ಸ್ಥಾಪನೆ ಕುಟುಂಬಯೋಜನೆಯಿಂದ ಮಾತ್ರ ಸಾಧ್ಯ ಎಂಬುದು ಅವರ ಇಂದಿನ ನಿರ್ಧಾರ.

(ಮೂರನೇ ಪುಟದಿಂದ)

ಎಸ್ಸೆಸ್ಪಿ ಮತ್ತು ಜನಸಂಘಗಳು ಶ್ರೀ ಸಿಂಗರಿಗೆ ಬೆಂಬಲ ನೀಡಿವೆ. ಅದೂ ಅಲ್ಲದೆ, ಸಂವಿಧಾನ ಪಕ್ಷೀಯ ತಳಹದಿಯಲ್ಲಿ ಚುನಾವಣೆಗಳು ನಡೆಯಬೇಕೆನ್ನುವುದಿಲ್ಲ; ಅಥವಾ ಪಕ್ಷೀಯ ಸರಕಾರಗಳಿರಬೇಕೆಂದೂ ನಿರ್ದೇಶಿಸುವುದಿಲ್ಲ. ಅಂದರೆ, ಶಾಸನಸಭೆಗಳು ತಮ್ಮ ನಾಯಕರನ್ನು ಆರಿಸಬೇಕು; ಅವರು ಮುಖ್ಯಮಂತ್ರಿಯಾಗಬೇಕು. ಹಾಗಿರುವಾಗ, ತಾನು ಎಂದು ಬೇಕಾದರೂ ಬಹುಮತವನ್ನು ಸಿದ್ಧಪಡಿಸಿ ತೋರಿಸಲು ಸಿದ್ಧನೆಂದು ಹೇಳಿದಾಗಲೂ ರಾಜ್ಯಪಾಲರು 'ಇಂಡಿಕೇಟನ ಬೆಂಬಲ ನಿಮಗಿಲ್ಲ'ವೆಂದು ಅವರನ್ನು ಪದಚ್ಯುತಗೊಳಿಸಲು ಬಯಸಿದ್ದು ಶ್ರೀಮತಿ ಗಾಂಧಿಯವರ ಇಚ್ಛೆಯನ್ನು ಅನುಸರಿಸಿಯೋ ಎಂಬುದಕ್ಕೆ ಬೇರೆ ಕನ್ನಡಿ ಹಿಡಿಯಬೇಕಾಗಿಲ್ಲ. ಪಕ್ಷೀಯ ಪದ್ಧತಿಯು ಸರಕಾರದಲ್ಲಿನ ಅಶಕ್ತ ಅಧಿನಾಯಕರಿಗೆ ಇಲ್ಲವೆಂದು 'ಆತ್ಮಸಾಕ್ಷಿ' ಪಂಥೀಯ ಸರಕಾರವೇ ಇರಬೇಕೆಂದೂ ಜನ ಬಯಸಬೇಕಾದೀತು. ಹೀಗಾದಲ್ಲಿ ರಾಜ್ಯಕೀಯ ಸಂಘಟನೆಗಳಲ್ಲಿನ ಜನಾಭಿಪ್ರಾಯದಲ್ಲಿ ಬದಲಾವಣೆಯಾಗಿ ವ್ಯಕ್ತಿನಿಷ್ಠೆಯೇ ಬೆಳೆಯುವ ಹೆದರಿಕೆಯಿದೆ. ಸಮಷ್ಟಿಯು ನಿರ್ವೀರ್ಯವಾಗಿ ವ್ಯಷ್ಟಿಯು ಪ್ರಧಾನವಾಗುತ್ತದೆ.

ಓದುಗರ ಪತ್ರ

ಲೇಖನ ಚೆನ್ನಾಗಿದೆ

ಕಳೆದ 'ನವಯುಗ'ದಲ್ಲಿ ಅಧ್ಯಾಪಕ ಶ್ರೀ ಸುಬ್ರಹ್ಮಣ್ಯ ಕೆದಿಲಾಯರು ಬರೆದ "ಇತಿಹಾಸದ ಯಥಾರ್ಥತೆ" ಎಂಬ ಪುಸ್ತಕದ (ಶ್ರೀ ಸೀ. ನಾ. ಉಡುಪರು ಬರೆದು ಪ್ರಕಟವಾದ ಮಹಾಗ್ರಂಥದ) ಪರಿಚಯವನ್ನು ಓದಿದರೆ ಬಹಳ ಸಂತೋಷವೆನ್ನಿಸುತ್ತದೆ. ಇತಿಹಾಸದ ಬಗೆಗೆ ಬರೆಯುವುದೆಂದು ಹೊರಟ ಕೆಲವರು ಕೇವಲ ದೂಷಣೆಗಳನ್ನು ಎಸೆದುದುಂಟು. ಪರಂತು, ವಿಷಯಗತ ಟೀಕೆಗೆಡೆಯಾಗದ ಬೇರಾವುದೇ, ವ್ಯಕ್ತಿಗತ ಟೀಕೆಗೆಡೆ ಕೆಲವರಿಗೆ ಹಿತವೆನಿಸುತ್ತದೆ. ಶ್ರೀ ಉಡುಪರಾಗಲಿ, ಪ್ರಕಟಣೆಗೆ ಪ್ರೇರಕರಾಗಲಿ, ಇತರ ವಾಚಕರಾಗಲಿ ಈ ಕೃತಿ ರಚನೆಯ ಬಗೆಗೆ ತಮ್ಮ ನಿಲುವನ್ನು ಪ್ರಕಟಗೊಳಿಸಬೇಕು. ಇತಿಹಾಸದ ಬಗೆಗೆ — ಉಡುಪಿಯ ಬಗೆಗೆ ಕೇವಲ ಆಗ್ರಹದಲ್ಲಿರುವುದು ಚೆನ್ನಲ್ಲ! ಗತಾನುಗತಿಕ ನ್ಯಾಯವೂ ಸರಿಯಲ್ಲ! ಶಿವಳ್ಳಿ, ಶಿವಬ್ರಾಹ್ಮಣ, ಕೃಷ್ಣ ವಗೈರೆ ವಿಚಾರಗಳ ಯಥಾರ್ಥತೆಗೆ ಇನ್ನಾದರೂ ಸಂಶೋಧನೆಗೆ ಪೀಠಾಧಿಪತಿಗಳೂ ಸರಕಾರವೂ ತಕ್ಕಂತೆ ಬೆಳಸಲೆಂದು ಹಾರೈಸುವೆನು.

ಸುರತ್ಕಲ್ಲು) ಕೆ. ವೆಂಕಟರಾಮಾಚಾರ್ಯ.

ಗಾಂಧಿ ಜಯಂತಿ ದಿನಾಚರಣೆ

ಶಿರ್ವ ಹಿಂದೂ ಜೂನಿಯರ್ ಸೆಕೆಂಡರಿ ಶಾಲೆಯಲ್ಲಿ ಗಾಂಧಿ ಜಯಂತಿ ದಿನಾಚರಿಸಲ್ಪಟ್ಟಿತಲ್ಲದೆ, ವಿದೇಶ ಸಂಚಾರದಿಂದ ಹಿಂತಿರುಗಿದ ಶ್ರೀ ಪಿ. ಶಿವಾಜಿ ಶೆಟ್ರನ್ನು ಸತ್ಕರಿಸಲಾಯ್ತು. ಡಾ| ಯು. ಕೆ. ಆಚಾರ್‌ರವರು ಅಧ್ಯಕ್ಷತೆ ವಹಿಸಿದ್ದರು. ಡಾ| ವೈ. ಆರ್. ಶೆಟ್ರು ಧ್ವಜಾರೋಹಣವನ್ನೂ ಶ್ರೀ ಬಿ. ಜಯರಾಮ ಶೆಟ್ರು ಸ್ವಾಗತ ಭಾಷಣವನ್ನೂ ಡಾ|| ವೈ. ಚಂದ್ರಶೇಖರ ರಾಯರು ಗಾಂಧೀಜಿಯ ಭಾವಚಿತ್ರದ ಅನಾವರಣವನ್ನೂ ಶ್ರೀ ಟಿ. ದಾಮೋದರ ಭಟ್ರು 'ವಿದ್ಯೋದಯ' ಹಸ್ತಪತ್ರಿಕೆಯ ಉದ್ಘಾಟನೆಯನ್ನೂ ಶ್ರೀ ಎಸ್. ಜಯರಾಮ ಶೆಟ್ರು ಅಭಿನಂದನಾ ಭಾಷಣವನ್ನೂ ಮಾಡಿದರು. ಶ್ರೀ ಪಿ. ಶಿವಾಜಿ ಶೆಟ್ರು ತಮ್ಮ ವಿದೇಶ ಪ್ರವಾಸಾನುಭವಗಳನ್ನು ತಿಳಿಸಿದರು. ಶ್ರೀ ಗೋಪಾಲಕೃಷ್ಣ ಆಚಾರ್‌ರವರು ವಂದನೆಗಳನ್ನರ್ಪಿಸಿದರು.

ಸತ್ಕಾರ ಸಮಾರಂಭ

ಪಾಂಡೇಶ್ವರ, ಸೆ.18 — ಒಬ್ಬ ವ್ಯಕ್ತಿ ದಕ್ಷ ಅಧ್ಯಾಪಕನಾಗಿ 37 ವರ್ಷಗಳ ಕಾಲ ಸೇವೆಯಲ್ಲಿ ಜನಪ್ರಿಯತೆಯನ್ನು ಗಳಿಸುವುದರೊಂದಿಗೆ ಯಕ್ಷಗಾನ ತರಬೇತಿ ಕೇಂದ್ರಗಳನ್ನು ತೆರೆದು ಸಾವಿರಾರು ಮಂದಿ ಶಿಷ್ಯರನ್ನು ಪಳಗಿಸಿ ವಿದ್ಯಾವಂತರೂ ಯಕ್ಷಗಾನ ಕ್ಷೇತ್ರವನ್ನು ಪ್ರವೇಶಿಸುವಂತೆ ಮಾಡಿ, ಮಯ್ಯರ ಶಿಕ್ಷಣವನ್ನೂ ಇದರೊಂದಿಗೆ ಕೈಗೊಂಡು ಜಯಶೀಲನಾದುದಕ್ಕೆ ಶ್ರೀ ಶಾಂತಪ್ಪ ಮಾಸ್ತರರಲ್ಲದೆ ಬೇರೆ ಉದಾಹರಣೆ ಸಿಕ್ಕಲಾರದು. ಶಿಕ್ಷಕನಿಗೆ ರಾಷ್ಟ್ರ ಮಟ್ಟದಲ್ಲಿ ಸಿಗಬಹುದಾದ ಅತ್ಯುನ್ನತ ಗೌರವವು ಈ ಕಾರಣದಿಂದಲೇ ಇವರಿಗೆ ಸಿಕ್ಕಿದುದು ತುಂಬಾ ಯೋಗ್ಯವೇ ಆಗಿದೆ, ಎಂದು ಶ್ರೀ ಎ. ಜಿ. ಅಲ್ಸೆಯವರು ಪಾಂಡೇಶ್ವರ ಶಾಲೆಯಲ್ಲಿ ಏರ್ಪಡಿಸಿದ ಸತ್ಕಾರ ಸಮಾರಂಭದ ಅಧ್ಯಕ್ಷತೆ ವಹಿಸಿ, ಮಾತನಾಡುತ್ತಾ ತಿಳಿಸಿದರು.

ರೆ. ಫಾ| ಆಲ್ಫ್ರೆಡ್‌ರವರು ಸ್ವಾಗತ ಭಾಷಣ ಮಾಡಿದರು. ಶ್ರೀ ಬಸವ ಪೂಜಾರಿರು ವಿದಾಯ ಸತ್ಕಾರದ ವರದಿಯನ್ನೂ ಶ್ರೀ ಎಂ. ಸಂಜೀವ ಶೆಟ್ರು ಸಂದೇಶಗಳನ್ನೂ ಓದಿದರು. ಉಡುಪಿಯ ಉಪ ವಿದ್ಯಾಧಿಕಾರಿ ಶ್ರೀ ಶ್ಯಾಮ ಭಟ್ಟರು ಶಾಂತಪ್ಪ ಮಾಸ್ತರರ ಹೆಸರಿನಲ್ಲಿ ಶಾಲೆಗೆ ನೀಡಿದ ವಿಜ್ಞಾನೋಪಕರಣಗಳ ಕೊಡುಗೆಯನ್ನೂ, ನಿವೃತ್ತ ಅಧ್ಯಾಪಕರುಗಳಾದ ಶ್ರೀ ಟಿ. ಶಾಂತಪ್ಪ ಮತ್ತು ವಿಕ್ಟರ್ ಲೂವಿಸರ ಭಾವಚಿತ್ರಗಳನ್ನು ಉದ್ಘಾಟಿಸಿ ಅವರಿಗೆ ಶಾಲು ಜೋಡಿಗಳ ಸಹಿತ ನಿಧಿ ಅರ್ಪಣೆ ಮಾಡಿದರು. ಶ್ರೀ ಎಂ. ಎಂ. ಹೆಗ್ಡೆಯವರು ತಮ್ಮ ನಿಯೋಜಿತ ಭಾಷಣದಲ್ಲಿ ನಿವೃತ್ತರ ಗುಣಗಾನ ಮಾಡಿದರು. ನಿವೃತ್ತ ಅಧ್ಯಾಪಕರು ಸಮಯೋಚಿತವಾಗಿ ಮರುತ್ತರವಿತ್ತರು. ರೆ| ಫಾ| ಟಿ ಡೇಸಾರವರು ಕೊಡುಗೆಯನ್ನು ಸ್ವೀಕರಿಸಿ ನಿವೃತ್ತರ ಗುಣಗಾನ ಗೈದರು.

ಅಧ್ಯಕ್ಷರ ಭಾಷಣದ ನಂತರ ಶ್ರೀ ಎ. ಸದಾನಂದ ಹೆಬ್ಬಾರರು ಧನ್ಯವಾದ ಸಮರ್ಪಿಸಿದರು. "ರಾತ್ರಿ ಕಲಾಭಿಲಾಷಿಗಳು ಮತ್ತು ಶಾಂತಪ್ಪ ಮಾಸ್ತರರ ಶಿಷ್ಯರಿಂದ ಕರ್ಣಾರ್ಜುನ ಜಾಂಬವತೀ ಕಲ್ಯಾಣ"ವೆಂಬ ಪ್ರಸಂಗಗಳನ್ನು ಯಕ್ಷಗಾನ ತಾಳಮದ್ದಳೆಯ ರೂಪದಲ್ಲಿ ಪ್ರದರ್ಶಿಸಲಾಯಿತು.

ಮನೆ ಸ್ವಾಧೀನತೆಗೆ ಕೋರ್ಟಿನ ಆಜ್ಞೆ

ಶ್ರೀ ಕಲ್ಮಂಜೆ ವಾದಿರಾಜ ಆಚಾರ್ಯರು ತನ್ನ ಖಾಯಂ ವಾಸಸ್ಥಾನವನ್ನು ಉಡುಪಿ ಅಜ್ಜರಕಾಡಿನ ಮನೆಯಲ್ಲಿ ಸ್ಥಿರಗೊಳಿಸಿ, ಎಷ್ಟು ಮಿಲ್ಲಿಗೆ ಬೇಕಾಗುವ ಕಟ್ಟಡವನ್ನು ಕಟ್ಟಿಸಿ ಎಷ್ಟು ಸಿಲ್ಲಸ್ಸು ನಡೆಸುವರೇ ಬೇಕೆಂದಿತ್ತು ದಿ ವಿಚಾರಗಳನ್ನು ಕಾಣಿಸಿ 1967ನೇ ಇಸವಿಯಲ್ಲಿ ಉಡುಪಿಯ ಮುನ್ಸೀಫ್ ಕೋರ್ಟಿನಲ್ಲಿ ಮೈಸೂರು ರೆಂಟ್ ಕಂಟ್ರೋಲ್ ಆಕ್ಟಿನ ಪ್ರಕರಣದ ಮೇರೆಗೆ ಒಕ್ಕಲುಗಳ ಮೇಲೆ ಸಲ್ಲಿಸಿದ ಅರ್ಜಿಯ ತನಿಖೆಯನ್ನು ಉಡುಪಿ ಮುನ್ಸೀಫ್ ಶ್ರೀ ಎನ್. ಗೋಪಾಲಕೃಷ್ಣನವರು ನಡೆಸಿ ಉಡುಪಿ ತೆಂಕಪೇಟೆಯಲ್ಲಿರುವ ಮನೆಯ ಒಕ್ಕಲುಗಳು ತಮ್ಮ ಸ್ವಾಧೀನತೆಯಲ್ಲಿರುವ ಮನೆಗಳನ್ನು ಧನಿ ಶ್ರೀ ಆಚಾರ್ಯರಿಗೆ ಬಿಟ್ಟು ಕೊಡಬೇಕೆಂದು ತೀರ್ಪಿತ್ತಿರುವರು. ಶ್ರೀ ಆಚಾರ್ಯರ ಪರವಾಗಿ ಶ್ರೀ ಪರೋಡಿ ವಿಠಲ ಶೆಟ್ಟರು ವಕಾಲತು ವಹಿಸಿದ್ದರು.

ವಾರ್ಷಿಕ ಮಹಾಸಭೆ

ಶಿರ್ವ ಸೇವಾ ಸಹಕಾರಿ ಸಂಘದ ವಾರ್ಷಿಕ ಮಹಾಸಭೆಯು ಇತ್ತೀಚೆಗೆ ಡಾ| ಎಮ್. ರಾಜಶೇಖರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನ, ಆಯವ್ಯಯ ಮಂಜೂರಾತಿ, ಶ್ರೀ ಸಿ. ವಿಠಲ ಶೆಟ್ಟಿ, ಕಾಲೋಚಿತ ಸಲಹೆಗಳಾದ ಮೇಲೆ ಈ ಕೆಳಗಿನ ಆಡಳಿತ ಮಂಡಳಿ ಚುನಾಯಿಸಲ್ಪಟ್ಟಿತು—

ಡಾ| ಎಮ್. ರಾಜಶೇಖರ ಹೆಗ್ಡೆ (ಅಧ್ಯಕ್ಷ), ಶ್ರೀ ಕೆ. ವಾಸುದೇವ ಶೆಟ್ಟಿ (ಉಪಾಧ್ಯಕ್ಷ), ಶ್ರೀ ಕೆ. ಕೃಷ್ಣ ಶೆಟ್ಟಿ (ಕಾರ್ಯದರ್ಶಿ), ಶ್ರೀಗಳಾದ ಕೆ. ಕುಮಾರ ಹೆಗ್ಡೆ, ಎನ್. ಎಮ್. ಎಲ್ಲಪ್ಪ ಶೆಟ್ಟಿ, ಎಸ್. ಸಚ್ಚಿದಾನಂದ ಆಚಾರ್, ಎಮ್. ಸದಾಶಿವ ಹೆಗ್ಡೆ, ಮತ್ತು ಎಮ್. ಮುಕುಂದ ಶಿಜ (ಡೈರೆಕ್ಟರರು).

ಮಲ್ಲವಿದ್ಯೆಯ ಮಹಿಮೆ!

ಶಿಂಗರಾಂಗ ಹೆಸರಿನ ವಿಶ್ವವಿಖ್ಯಾತ ಮಲ್ಲ (ಪೈಲ್ವಾನ)ನೊಬ್ಬ ಪಂಜಾಬಕ್ಕೆ ಬಂದಿದ್ದ. ಭೂತಾಕಾರದ ದೇಹ, ರಾಶಿಗಟ್ಟಲೆ ಆಹಾರ, ಹಾಗೂ ರಾಕ್ಷಸೀ ಶಕ್ತಿಯಿಂದಾಗಿ ಆತ ಸದಾಕಾಲವೂ ಕುಸ್ತಿಯಲ್ಲಿ ವಿಜಯಿಯಾಗುತ್ತಿದ್ದ.

ಅದೇ ಹೊತ್ತಿಗೆ ಅಲ್ಲಿ ಸ್ವಾಮಿ ಅಖಂಡಾನಂದರ ಪ್ರವಚನವೊಂದು ನಡೆದಿತ್ತು. ಅವರ ಮುಂದೆ ವ್ಯಾಯಾಮ ರಸಿಕನೊಬ್ಬ ಶಿಂಗರಾಂಗನ ವರ್ಣನೆ ಮಾಡುತ್ತ ಹೇಳಿದ— ಅವನು ದಿವಸದಲ್ಲಿ ಅರ್ಧ ಮಣಕ್ಕಿಂತ ಹೆಚ್ಚು ಆಹಾರ ತಿಂದು ಜೀರ್ಣಿಸಿಕೊಳ್ಳುತ್ತಾನೆ ಎಂದು.

"ಹಾಗಾದರೆ ಆತ ಹಗಲೆಲ್ಲ ಏನು ಕೆಲಸ ಮಾಡುತ್ತಾನೆ?" ಎಂದು ಸ್ವಾಮಿಗಳು ಕೇಳಿದರು.

"ಆತ ಸಂಜೆ ಮುಂಜಾನೆ ಕಸರತ್ತು ಮಾಡುತ್ತಾನೆ. ಯಾರು ಕುಸ್ತಿಗೆ ಬಂದರೂ ಕ್ಷಣಾರ್ಧದಲ್ಲಿ ಕೆಡವುತ್ತಾನೆ. ಇದೇ ಆತನ ಕೆಲಸ" ಎಂದು ಆತ ಉತ್ತರ ಕೊಟ್ಟ.

"ಇಷ್ಟೆಲ್ಲ ಉಂಡೂ ಕೂಡ ಆತ ಇತರರನ್ನು ಕೆಡವುವ ಕೆಲಸವನ್ನಷ್ಟೇ ಮಾಡುತ್ತಾನೆಯೇ? ಯಾರನ್ನೂ ಎತ್ತುವ, ಮೇಲಕ್ಕೆ ಎಬ್ಬಿಸುವ ಕೆಲಸ ಆತ ಕಲಿತೇ ಇಲ್ಲವೇ?" ಎಂಬುದಾಗಿ ಸ್ವಾಮಿಗಳು ಲಾಕ್ಷಣಿಕವಾಗಿ ಕೇಳಿಬಿಟ್ಟರು.

ಎಷ್ಟೊಂದು ಸತ್ಯವಾದ ಮಾತಿದು! ಎಷ್ಟೆಲ್ಲ ಉಂಡು, ರಾಕ್ಷಸೀ ಶಕ್ತಿ ಸಂಪಾದಿಸಿಕೊಂಡು, ಹಗಲು ರಾತ್ರಿ ತನ್ನ ಸ್ನಾಯುಗಳನ್ನೂ ಎಲುಬುಗಳನ್ನೂ ಬೆಳೆಸಿಕೊಂಡು ಸಾಧಿಸಿದ ಸಿದ್ಧಿ ಏನು? ಇತರರನ್ನು ಕೆಡವುದು ಮಾತ್ರವಷ್ಟೇ? ಇದರಲ್ಲಿಯೇ ಧನ್ಯತೆಯೇ?

ಇದು ಎಲ್ಲರೂ ವಿಚಾರ ಮಾಡತಕ್ಕ ಮಾತು.

ವಿಚಾರ ಬೀಜವು ದಿನ ಹೆಚ್ಚು ಕಡಿಮೆ ಮೊಳಕೆಯದೆ ಉಳಿಯುವುದೇ ಇಲ್ಲ. ಇದನ್ನರಿತು ವಿಚಾರ ಪ್ರಚಾರ ಮಾಡುವಾಗ ನಿರಾಶರಾಗಬಾರದು.

o o o

ನಾವು ವ್ಯಗಳ್ಳರಾದದ್ದು ಕೆಲಸವನ್ನೇ ಮಾಡದ್ದರಿಂದ. ಬೀಜಕ್ಕೆ ಮೊಳಕೆಯೊಡೆಯಲು ವೇಳೆ ಹಿಡಿಯುತ್ತಿದ್ದರೆ ಅದು ದುರ್ದೈವವೇ. ಬೀಜವನ್ನೇ ಬಿತ್ತದಿದ್ದರೆ ಮೊಳೆಯಬೇಕಾದರೂ ಹೇಗೆ?

o o o

ದೊಡ್ಡವರು ಸಾಯುವ ವರೆಗೆ ಸಣ್ಣವರು ಅಲಿಪ್ತರಾಗಿ ಉಳಿಯುವ ಕೆಟ್ಟ ಅಭ್ಯಾಸವು ನಮ್ಮ ಜನರಿಗೆ ಬಿದ್ದು ಹೋಗಿದೆ.

o o o

ಸ್ಥೂಲಕಾಯ ಮತ್ತು ಆರೋಗ್ಯ

ಅಡಕೆ ಮತ್ತು ಸ್ಥೂಲಕಾಯ ಹೃದಯ ಸಂಬಂಧವಾದ ರೋಗಗಳಿಗೆ ಮೂಲ ಎಂದು ಪ್ರತೀತಿ. ಆದರೆ ಮಾನವ ಶರೀರದ ರಚನೆ ಮತ್ತು ಅದರ ಪ್ರತ್ಯೇಕ ಭಾಗಗಳ ಪ್ರಮಾಣ, ಇವು ಆಧುನಿಕ ಮನುಷ್ಯ ಶಾಸ್ತ್ರದ ವಿಶೇಷ ಕ್ಷೇತ್ರದಲ್ಲಿ ಸಂಶೋಧನೆಯ ವಿಷಯವಾಗಿದೆ ಎನ್ನುವುದು ಬಹುಶಃ ಜನರಿಗೆ ತಿಳಿಯದು.

ಹಿಂದೆ ಅಂಗರಚನ ಶಾಸ್ತ್ರಜ್ಞರು ದೇಹದ ಒಟ್ಟು ತೂಕಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಅಂಗಗಳು ಮತ್ತು ಜೀವಸತ್ವಗಳ ಪ್ರಮಾಣವನ್ನು ನಿಗದಿ ಮಾಡಲು ಶವವನ್ನು ವಿಚ್ಛೇದನ ಮಾಡುತ್ತಿದ್ದರು. ಆದರೆ ಜೀವದಿಂದಿರುವ ಮನುಷ್ಯನಿಗೆ ಈ ಪ್ರಶ್ನೆ ಬಗೆಹರಿಯದೆ ಉಳಿದಿತ್ತು. ದೇಹದ ತೂಕಕ್ಕೆ ಸಂಬಂಧಿಸಿದಂತೆ ಭಾಗಗಳ ತೂಕವನ್ನು ಅಂದಾಜು ಮಾಡುವುದಕ್ಕೆ ಯಾವ ಬಗೆಯ ವಿಶ್ಲೇಷಣ ಪದ್ಧತಿಯೂ ಇರಲಿಲ್ಲ. ಅಂತರ ವಿಶ್ಲೇಷಣೆ ಮಾಡದೆ ಮೂಳೆ, ಕೊಬ್ಬು ಮತ್ತು ಸ್ನಾಯು ಜೀವಸತ್ವಗಳಲ್ಲಿನ ಪ್ರಮಾಣಗಳಲ್ಲಿ ಆಗುವ ಬದಲಾವಣೆಗಳು ಆಹಾರದಿಂದ ಆದುದೇ ಅಥವಾ ಬೇರಾವ ಬಗೆಯ ಖಾಯಿಲೆಗಳಿಂದಾದುದೇ ಎಂದು ನಿಗದಿ ಮಾಡಲು ಸಾಧ್ಯವಾಗುವುದಿಲ್ಲ. ಬೇರೆ ಬೇರೆ ವಯಸ್ಸಿನ ಮತ್ತು ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿರುವ ಗಂಡಸರ ಮತ್ತು ಹೆಂಗಸರ ತೂಕಗಳಲ್ಲಿನ ವ್ಯತ್ಯಾಸದ ಪರಮಾವಧಿ ಪ್ರಮಾಣದ ಸಂಬಂಧವನ್ನು ಈ ಪ್ರಶ್ನೆಯ ಪರಿಹಾರವು ತಿಳಿಸಬೇಕು.

ಮಾನವ ಶರೀರದ ಅಂಗಗಳ ಬದಲಾವಣೆಗಳಿಗೆ ಮೂಲವಾಗಿರುವ ನಿಯಮಗಳನ್ನು ಗಾಢವಾಗಿ ಅಧ್ಯಯನ ಮಾಡಲು ಮನುಷ್ಯ ಶಾಸ್ತ್ರಕ್ಕೆ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರದ ಸಾಧನೆಗಳ ನೆರವು ಇರುವುದರಿಂದ ಹೆಚ್ಚು ಅವಕಾಶ ಒದಗಿದೆ. ಎಕ್ಸ್‌ರೇಗಳು, ಅಲ್ಟ್ರಾ—ಸೌಂಡ್ ಮತ್ತು ಐಸೊಟೋಪ್‌ಗಳು ವಿಜ್ಞಾನಿಗಳ ನೆರವಿಗೆ ಬಂದಿವೆ. ಅವು ಶರೀರದಲ್ಲಿ ಬೇರೆ ವಿಧಾನಗಳಿಗೆ ಎಟುಕದೆ ಸಾಧ್ಯವಾಗದಿರುವಂಥ ಕಡೆಗಳಲ್ಲಿ ಕೊಬ್ಬಿನ ಪದರದ ದಪ್ಪ, ಸ್ನಾಯುಗಳು ಮತ್ತು ಮೂಳೆಯ ತೂಕವನ್ನು, ಸರಿಯಾಗಿ ಅಳತೆಮಾಡಲು ಸಾಧ್ಯವಾಗುವುದಕ್ಕೆ ಅವಕಾಶವನ್ನು ನೀಡಿವೆ. ಅದರಲ್ಲಿ ನಾನಾ ವಿಜ್ಞಾನಗಳನ್ನು ಕಂಡುಹಿಡಿಯಲಾಗಿದೆ. ಉದಾಹರಣೆಗೆ, ಅವುಗಳಲ್ಲಿ ಒಂದು, ದೇಹದ ಸಾಂದ್ರತೆಯನ್ನು ನಿಗದಿ ಮಾಡುವುದರ ಮೇಲೆ ಆಧಾರಿತವಾದುದಾಗಿದೆ.

"ದೇಹದ ಸಾಂದ್ರತೆಯು ಹೆಚ್ಚಾಗಿದ್ದಷ್ಟೂ, ವ್ಯಕ್ತಿಯು ದೇಹದಾರ್ಢ್ಯವು ಉತ್ತಮವಾಗಿರುತ್ತದೆ ಎಂದು ಪರಿಗಣಿಸಲಾಗಿದೆ. ಉನ್ನತ ಸಾಪೇಕ್ಷ ತೂಕವು ದಟ್ಟವಾದ ಜೀವಸತ್ವಗಳ ಉತ್ತಮ ಬೆಳವಣಿಗೆಯನ್ನು ಸೂಚಿಸುತ್ತದೆ" ಎಂದು ಪ್ರಮುಖ ಸೋವಿಯೆಟ್ ಮನುಷ್ಯ ಶಾಸ್ತ್ರಜ್ಞರಾದ ವ್ಲಾದಿಮಿರ್ ಚ್ಟೆಟ್ಸೋವ್, ಎಂ. ಎ. (ಜೀವಶಾಸ್ತ್ರ) ಅವರು ಹೇಳುತ್ತಾರೆ.

ಶರೀರದ ಒಂದು ಘನ ಸೆಂಟಿಮೀಟರಿನಲ್ಲಿ ಕೊಬ್ಬಿನ ಪಾಲು ಸುಮಾರು 0.9 ಗ್ರಾಂ, ಸ್ನಾಯುವಿನ ಪಾಲು 1.1 ಗ್ರಾಂ ಮತ್ತು ಮೂಳೆಯ ಪಾಲು 1.6 ಗ್ರಾಂ ಇರುತ್ತದೆ. ಈ ಜೀವಸತ್ವಗಳಲ್ಲಿನ ಪ್ರಮಾಣದ ಏರು ಪೇರುಗಳು ಸಾಪೇಕ್ಷ ತೂಕವನ್ನು ಬದಲಿಸುವುವು ಮತ್ತು ಅದರ ವ್ಯತ್ಯಾಸಗಳು ದೇಹದಲ್ಲಿರುವ ಜೀವಸತ್ವದ ರಚನೆಯಲ್ಲಿನ ಬದಲಾವಣೆಗಳನ್ನು ಕುರಿತು ನಿಗದಿ ಮಾಡಲು ಸಾಧ್ಯವಾಗಿಸುವುವು. ಸಾಧಾರಣ ಮನುಷ್ಯನಲ್ಲಿ, ಅಂದರೆ ಆರೋಗ್ಯವಂತನಾಗಿರುವ ಮನುಷ್ಯನಲ್ಲಿ ಸಾಪೇಕ್ಷ ತೂಕವು ಒಂದು ಘನ ಸೆಂಟಿಮೀಟರಿಗೆ 1,067 ಗ್ರಾಂ ಆಗಿರುವುದು ಎಂದು ಅಂಗೀಕರಿಸಲಾಗಿದೆ.

ವಿಜ್ಞಾನಿಗಳು ದೇಹದ ತೂಕವನ್ನು ಕೊಬ್ಬುರಹಿತವಾದ ಕ್ರಿಯಾಶೀಲವಾದ ತೂಕ ಮತ್ತು ಕೊಬ್ಬಿನಿಂದ ಕೂಡಿದ ನಿಷ್ಕ್ರಿಯವಾದ ತೂಕ ಎಂದು ವರ್ಗಿಕರಿಸುತ್ತಾರೆ. ಇವುಗಳ ಪ್ರಮಾಣವು ಶರೀರದ ಕ್ರಿಯೆಯನ್ನು ಅಂದಾಜು ಮಾಡಲು ಸಾಧ್ಯವಾಗಿಸುತ್ತದೆ.

ಚರ್ಮದ ಕೆಳಗಿರುವ ಕೊಬ್ಬಿನ ಬೆಳವಣಿಗೆಯ ಬಗ್ಗೆ ನಡೆಸಲಾಗಿರುವ ವ್ಯಾಪಕವಾದ ಸಂಶೋಧನೆಯು ಒಂದೇ ಕಡೆ ಕುಳಿತು ಕೆಲಸ ಮಾಡುವ ಜನರಲ್ಲಿ, ತಮ್ಮ ವೃತ್ತಿಯ ಅಗತ್ಯತೆಯಿಂದಾಗಿ ಹೆಚ್ಚಾಗಿ ಓಡಾಡಿ ಕೆಲಸ ಮಾಡುವ ಜನರಿಗಿಂತಲೂ ಕೊಬ್ಬು ಅಧಿಕವಾಗಿದ್ದು, ಬೊಜ್ಜು ಬಂದಿರುತ್ತದೆ. ಉಷ್ಣ ದೇಶಗಳಲ್ಲಿ ವಾಸಿಸುವ ಜನರಿಗಿಂತ ಹಿತಕರವಾದ ಹವೆ ಇರುವ ಪ್ರದೇಶದ ಜನರಲ್ಲಿ ಕೊಬ್ಬು ಹೆಚ್ಚು ಇರುತ್ತದೆ ಎನ್ನುವುದು ವ್ಯಕ್ತಪಟ್ಟಿದೆ. ವಯಸ್ಸಿನನುಸಾರವಾಗಿ ಸಾಧಾರಣವಾಗಿ ಕೊಬ್ಬಿನ ಪ್ರಮಾಣದಲ್ಲಿನ ವ್ಯತ್ಯಾಸಗಳನ್ನು ಈಗ ನಿಗದಿ ಮಾಡಲು ಸಾಧ್ಯವಾಗಿದೆ. ಸ್ತ್ರೀಯರಲ್ಲಿ ಪುರುಷರಿಗಿಂತಲೂ ಹೆಚ್ಚಾಗಿ ಚರ್ಮದ ಕೆಳಗಿನ ಕೊಬ್ಬು ಬೆಳೆಯುತ್ತದೆ ಎನ್ನುವುದು ಕಂಡುಬಂದಿದೆ. ಸ್ತ್ರೀಯರಲ್ಲಿ ಕೊಬ್ಬಿನ ಪ್ರಮಾಣವು 50ನೆಯ ವಯಸ್ಸಿನವರೆಗೆ ಬೆಳೆಯುತ್ತಾ ಹೋಗಿ, ಅನಂತರ ಕಡಿಮೆಯಾಗುತ್ತಾ ಹೋಗುತ್ತದೆ. ಪುರುಷರಲ್ಲಿ ಕೊಬ್ಬಿನ ಪ್ರಮಾಣವು 35ನೆಯ ವಯಸ್ಸಿನವರೆಗೆ ಹೆಚ್ಚಾಗುತ್ತಿದ್ದು, ಆ ಮೇಲೆ ಅದು ಸ್ಥಿರವಾಗಿರುತ್ತದೆ. ಸಂಶೋಧನೆಯು ಈ ರಂಗದಲ್ಲಿ ಇನ್ನೂ ಅನೇಕ ಕುತೂಹಲಕರವಾದ ಅಂಶಗಳು ಕಂಡುಬಂದಿವೆ. ಇವು ವೈದ್ಯರುಗಳಿಗೆ ಚಿಕಿತ್ಸೆ ನೀಡಲು ಸಹಾಯಕವಾಗಿರುತ್ತವೆ.

ಜೀವನದಾನದಲ್ಲಿ ಜೀವ ಕೊಡಲಿಕ್ಕೆ ಅವಕಾಶವಿಲ್ಲ. ತಾನ ಕೈಕೊಂಡ ಕೆಲಸವನ್ನು ಬಹಿರಂಗಗೊಳಿಸುತ್ತ ಹಾಗೂ ತನ್ನ ಸಾಮರ್ಥ್ಯವನ್ನು ತೋರ್ಪಡಿಸಿಕೊಳ್ಳುವ ಹೊಣೆ ಇರುತ್ತದೆ.

o o o

ಭರತನ ತ್ಯಾಗ ಕಿರಿದಾಯಿತೇ?

(ಒಂದನೇ ಪುಟದಿಂದ)

ಲೇ ಪ್ರಶಾಸನ ಕಾರ್ಯ ನೆರವೇರಿಸುತ್ತಿದ್ದನು. ಅವನ ಆಳ್ವಾಕೆಯಲ್ಲಿ ಕಾಷಾಯ ವಸ್ತ್ರ ತೊಟ್ಟ ಮಂತ್ರಿಗಳೂ ಇತರ ಪುರವಾಸಿಗಳೂ ಕುಳಿತಿದ್ದರು.

ಹನುಮಂತನು ಅಲ್ಲೇ ಇಳಿದನು. ಭರತನಿಗೆ ವಂದಿಸಿದನು ರಾಮ ಬರುವ ಶುಭ ಸುವಾರ್ತೆಯನ್ನು ನಿವೇದಿಸಿದನು. ಭರತನು ಹರ್ಷೋದ್ಗಾರ ಗೈದನು. "ನನ್ನ ಜೀವನದ ಒಳ್ಳೆಯ ದಿವಸಗಳು ಬಂದುವು. ಮನುಷ್ಯರು ಬದುಕುಳಿದರೆ ಒಳ್ಳೆಯ ದಿನಗಳು ಬಂದೇ ತೀರುತ್ತವೆ ಎಂಬುದು ಸತ್ಯ"ವೆಂದು ಉದ್ಗರಿಸಿದನು. ಹನುಮಂತನನ್ನು ಆಲಿಂಗಿಸಿದನು. "ತಮ್ಮಾ, ಈ ಪ್ರಿಯ ಸಮಾಚಾರ ತಂದುದಕ್ಕೆ ಪ್ರತಿಯಾಗಿ ನಾನು ಒಂದು ಲಕ್ಷ ಗೋವುಗಳನ್ನೂ ಒಂದು ನೂರು ಹಳ್ಳಿಗಳನ್ನೂ ನನ್ನ ಜನ್ಮದಿನದಿಂದ ಉಂಬಳಿಯಾಗಿ ಕೊಡುತ್ತೇನೆ" ಎಂದನು. ನಗರವನ್ನು ಶೃಂಗರಿಸುವಂತೆ ಅಯೋಧ್ಯೆಗೆ ರಾಜಾಜ್ಞೆ ಹೋಯಿತು.

ಮರುದಿನ ಮುಂಜಾನೆ ಲಕ್ಷಾಂತರ ಅಯೋಧ್ಯಾ ಪುರವಾಸಿಗಳು ಶ್ರೀ ರಾಮನ ಭವ್ಯ ಸ್ವಾಗತಕ್ಕಾಗಿ ಒಟ್ಟುಗೂಡಿದರು. ರಾಮನ ಪಾದುಕೆಗಳನ್ನು ತಲೆಯ ಮೇಲೆ ಹೊತ್ತುಕೊಂಡು ಅವನೂ ನಿರೀಕ್ಷಿಸ ಲಾರಂಭಿಸಿದನು. ಅಷ್ಟರಲ್ಲೇ ವಿಮಾನವು ಭೂಮಿಯ ಮೇಲಿಳಿಯಿತು "ಶ್ರೀ ರಾಮಚಂದ್ರನಿಗೆ, ಜಯವಾಗಲಿ" ಎಂಬ ಲಕ್ಷೋಪಲಕ್ಷ ಕಂಠಗಳು ಒಂದೊಮ್ಮೆಲೇ ಉದ್ಘೋಷಿಸಿದುವು. ಅದು ನಾಲ್ಕು ದಿಕ್ಕುಗಳಲ್ಲಿ ಪ್ರತಿಧ್ವನಿಸಿತು. ಭರತನು ರಾಮನನ್ನು ವಂದಿಸಿದನು. ಪಾದುಕೆಗಳನ್ನು ತಲೆಯಿಂದ ಇಳಿಸಿ ರಾಮನ ಪಾದಗಳಿಗೆ ತೊಡಿಸುತ್ತ ಹೇಳಿದನು "ಅಣ್ಣಾ, ಈಗ ನಿಮ್ಮ ರಾಜ್ಯವನ್ನು ನೀವೇ ಪರಿಪಾಲಿಸಿರಿ. ಹದಿನಾಲ್ಕು ವರ್ಷಗಳು ಕಳೆದು ಹೋದುವು."

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲಸ್ವಯಂಬೋಧಿನಿ
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ವಿವಿಧ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ। ವಿ. ಆರ್. ಕೊಠಡ್ಕರ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ. ಹೆಂಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2-00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕನ್ನಡದಲ್ಲಿ ಅಪರೂಪವಾದ ಪುಸ್ತಕ

ಸ್ವಪ್ನಲೋಕ

ಮನೋವಿಶ್ಲೇಷಣದ ಬೆಳಕಿನಲ್ಲಿ ಕನಸುಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ವಿವರಗಳನ್ನೊಳಗೊಂಡ 'ಶಾಂತೀಕಲ್ಪ' ಎಂಬ ಕಿರುಹೊತ್ತಗೆ ಬೆಲೆ 0—50

o o o

ದಿ। ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ ಪ್ರಸಂಗ ಪುಸ್ತಕಗಳು

ಸಾಹಸ ಭೀಮ ವಿಜಯ	0-50
ವಾಲಿ ಸುಗ್ರೀವ (ದುರಂತ ಯಕ್ಷಗಾನ ನಾಟಕ)	0-50
ಲಕ್ಷ್ಮ ಪಗಡೆ	0-40
ಭಾರತದ ಗುರುಕುಲ	0-4[illegible]
ಭರತೇಶ ದಿಗ್ವಿಜಯ	0-50

ಪ್ರತಿ ಪುಸ್ತಕಕ್ಕೂ ಬುಕ್ ಪೋಸ್ಟಿನ ದರ ಕಳಿಸಲು 0-30 ಪೈಸೆ ಅಂಚೆ ವೆಚ್ಚ

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ. ಕ.

NAVAYUGA 8—10—1970
Registered with the Registrar
of News Papers for India
under No. R. N. 3646/'57

REGD. No. B. G. 178
LICENCE No. 33.
Licensed to Post without Prepayment

ಪುನರ್ಜನ್ಮದ ಆಲೋಚನೆ

—ಶ್ರೀ "ನವಗಿರಿನಂದ"

ವಯಸ್ಸು ಅಪರಾಹ್ನ ಕಾಲಕ್ಕೆ ತಿರುಗುತ್ತಾ ಇರುವಾಗ ಪುನರ್ಜನ್ಮವನ್ನು ಕುರಿತು ಆಲೋಚನೆ ಮಾಡುವುದು ಸಹಜವೇ.

ವೃದ್ಧಾಪ್ಯ, ವಿಶ್ರಾಂತಿ, ಒಂದು ದಿನ ದೀರ್ಘ ನಿದ್ರೆ. ಆ ವೇಳೆ ಈ ದೇಹದೊಳಗಿನ ಜೀವಾತ್ಮಕ್ಕೆ ಹೊಸ ದೇಹವು ಪ್ರಾಪ್ತವಾಗಬೇಕು. ಅದೇ ಪುನರ್ಜನ್ಮ.

ಸಾಯುವಾಗ ಯಾವುದು ಮುಖ್ಯ ಆಲೋಚನೆಯಾಗಿರುತ್ತದೋ ಅದಕ್ಕೆ ತಕ್ಕ ಜನ್ಮವೇ ಮತ್ತೆ ಉಂಟಾಗುತ್ತದಂತೆ. ಇದಕ್ಕೆ ಶಾಸ್ತ್ರಗಳ ಆಧಾರವೂ ಇದೆ. ಗೀತೆಯನ್ನು ಕೂಡಾ ಓದಿ ಕಿಂಚಿತ್ ಅರ್ಥಮಾಡಿಕೊಂಡಿದ್ದೇನೆ. ಪುನರ್ಜನ್ಮದಲ್ಲಿ ನಂಬಿಗೆ ಸ್ವಲ್ಪ ನನಗೆ.

ಪುನರ್ಜನ್ಮವೇ ಬಾರದಿರಬೇಕಾದರೆ ಜೀವನ್ಮುಕ್ತನಾಗಬೇಕಿತ್ತು. ನಾನು ಅಂಥವನಲ್ಲ. ನನಗೆ ಜೀವನದಲ್ಲಿ ತುಂಬ ಆಶೆ ಉಂಟು. ಪ್ರೀತಿಯುಂಟು. ಈ ಸುಂದರವಾದ ಪ್ರಪಂಚದಲ್ಲಿ ಹುಟ್ಟಿ ಬರಬೇಕೆಂಬ ಇಚ್ಛೆಯುಂಟು. ಇಲ್ಲಿ ನೋಡಿ, ಕಲಿತ, ತಿಳಿದುಕೊಳ್ಳಬೇಕಾದುದು ತುಂಬ ಇವೆ; ಜನ್ಮಾಂತರಗಳಷ್ಟಿವೆ.

ನನ್ನ ವಿಷಯ ಗೊತ್ತೇ ಇದೆಯಲ್ಲ? ಮುಖ್ಯವಾದ ನನ್ನ ಗುರಿ ಸಾಹಿತ್ಯದ ಮೇಲೆಯೇ; ಕನ್ನಡ ಸಾಹಿತ್ಯದ ಮೇಲೆಯೇ. ಅಂತೆಯೇ ನಾನು ಸಾಹಿತಿ.

ಆದರೆ ಸಾಹಿತ್ಯಸೇವೆ ಸಿದ್ಧಿಗೆ ಮುಟ್ಟಬೇಕಾದರೆ ಜನ್ಮಾಂತರಗಳ ಸಾಧನೆ ಬೇಕಾಗುತ್ತದೆ. ಈ ಜನ್ಮದಲ್ಲಿ ನಾನು ಇಷ್ಟರ ಮಟ್ಟಿಗೆ ಬರಲಿಕ್ಕೂ ಪೂರ್ವಜನ್ಮದ ವಾಸನೆಯೇ ಕಾರಣವಾಗಿರಬೇಕು.

ಅಂತೆಯೇ ಈ ಜನ್ಮದಲ್ಲಿ ಸಾಹಿತಿಯಾಗಿ ಹುಟ್ಟಿದ್ದೇನೆ ಹೊಟ್ಟೆಯ ಪಾಡಿಗೆ, ಹೆಂಡತಿ ಮಕ್ಕಳನ್ನು ಪೋಷಿಸಲಿಕ್ಕೆ ಹೇಗೆ ಹೇಗೋ ಹೋರಾಡಿಕೊಂಡು ಇಲ್ಲಿಯವರೆಗೆ ಬಂದಿದ್ದೇನಾದರೂ, ಕನ್ನಡ ಲೇಖನ ವ್ಯವಸಾಯ ನನ್ನ ಹವ್ಯಾಸವಾಗಿತ್ತು; ಉಸಿರಿನಂತೆ ಬಿಡದೆ ಹಿಡಿದಿತ್ತು.

ಮೊದಮೊದಲು ಪತ್ರಿಕೆಗಳು ಆದರಿಸಿದವು. ಆ ಮೇಲೆ ಪುಸ್ತಕರೂಪಗಳು, ಪ್ರಕಾಶಕರ ದಯೆ, ಜನತೆಯ ಆದರ, ಅಸಾಗರಗಳು, ಪತ್ರಿಕೆಗಳ ಆದರ ಪ್ರೋತ್ಸಾಹಗಳಂತೂ ಯಾವಾಗಲೂ ಇದ್ದವೇ. ಹೀಗೆಯೇ ಬಂದಿದ್ದೇನೆ ಇದುವರೆಗೆ.

ಒಟ್ಟಿನ ಮೇರೆ ಈ ಜನ್ಮದಲ್ಲಿ ಸಾಹಿತ್ಯ ಸಫಲತೆ ಶಾಲೆಯ ಪ್ರವೇಶಿಕಾ ಪರೀಕ್ಷೆಯ ವರೆಗಷ್ಟೇ ಬರಲು ಸಾಧ್ಯವಾಗಿದೆ. ಈಗ ಶಕ್ತಿ ಕುಂದುವ ವಯಸ್ಸು ಬಂದಿದೆ ಹೆಚ್ಚಿನ ಸಾಧನೆಗೆ ಸ್ಫೂರ್ತಿ ಆಡವೆಯಾಗಿ; ಕಲ್ಪನಾ ಶಕ್ತಿ ತಗ್ಗಿದೆ. ಹೆಚ್ಚಿನ ಸಾಧನೆಯನ್ನು ಮುಂದಿನ ಜನ್ಮಕ್ಕೇ ಉಳಿಸಬೇಕಾಗಿದೆ.

ಸಾಯುವ ಪುನರ್ಜನ್ಮ ಬರಲು ಸಾಧ್ಯವಿಲ್ಲವಷ್ಟೆ? ಯಾವಾಗಲೋ ಒಂದು ದಿನ ಯಾವ ಕ್ಷಣದಲ್ಲಿ ಹೇಗೆ ಬಂದರೂ ಬಂದೀತು ಆ ಸಾವು.

ಮನೆಯೂ ಭದ್ರವಾದುದಲ್ಲ. ಸಾವೂ ನ್ನ ಕನ್ನಡ ಸಾಹಿತಿಯೊಬ್ಬನ ಮನೆ ಎಷ್ಟು ಭದ್ರವಾಗಿದ್ದೀತು? ಮನೆ ಬಿಟ್ಟು ಬೀದಿಗೆ ಕಾಲಿಟ್ಟರೆ, ಮೋಟಾರು ಯಮದೂತರುಗಳ ಓಡಾಟ. ಅವರ ಮಧ್ಯದಲ್ಲೇ ನಡೆದಾಡಬೇಕು ನಾವು. ಇಲ್ಲವೇ ಅವರ ಮೇಲೆ ಏರಿಕೊಳ್ಳಬೇಕು. ಅದೂ ಭಯವೇ. ಒಟ್ಟಿನ ಮೇಲೆ ನಮ್ಮ ಜೀವ ನಮ್ಮ ಸ್ವಾತಂತ್ರ್ಯದಲ್ಲಂತೂ ಇಲ್ಲ.

ಅಂತೂ ಒಂದು ದಿನ ಸಾಯುತ್ತೇನೆ. ಆಗ ಪುನರ್ಜನ್ಮದ ಪ್ರಶ್ನೆ ಬಂದೇ ಬರುತ್ತೆ. ಯಮನೋ ಅಥವಾ ಯಾವ ದೇವರೋ "ಎಂತಹ ಜನ್ಮ ಬೇಕಪ್ಪ ನಿನಗೆ?" ಎಂದು ಕೇಳುವರೇನೊ? ಅದಕ್ಕೇ ಸಾಯುವಾಗ ಒಂದು ಗಟ್ಟಿ ಆಲೋಚನೆ ಇಟ್ಟುಕೊಂಡೇ ಸಾಯಬೇಕೆನ್ನುವರೋ ಏನೋ? ಇರಲಿ. ಈಗಲೇ ನಿಶ್ಚಯ ಮಾಡಿಟ್ಟುಕೊಳ್ಳುವುದು ವಿಹಿತ.

ಮುಖ್ಯವಾಗಿ ಕನ್ನಡನಾಡಿನಲ್ಲಿ (ಈಗಿನ 'ಮೈಸೂರು' ಮುಂದೆ ವಿಶಾಲದೃಷ್ಟಿಯ ಕನ್ನಡ ನಾಡಾಗಿ ಬರುವ ಸಂಭವ ಇದೆ ಎಂಬುದೇ ನನ್ನ ನಂಬಿಗೆ) ಕನ್ನಡಿಗನಾಗಿ ಹುಟ್ಟಬೇಕು.

"ಏಕೆ? ಕನ್ನಡ ನಾಡಿಗಿಂತಲೂ ಸಿರಿವಂತ ನಾಡು ಮುಂದುವರಿದ ದೇಶಗಳು ಇವೆಯಲ್ಲ? ಅಲ್ಲಿಯ ಭಾರಿ ಸಂಪನ್ನ ಗೃಹದಲ್ಲಿ ಹುಟ್ಟಿ ಸರ್ವಾನುಕೂಲದಿಂದ ಬಾಳುವಂತಾಗಬೇಕೆಂದು ಬಯಸಬಾರದೆ?" ಎಂದು ಯಾರಾದರೂ ಕೇಳಬಹುದು.

ಆ ಆಶೆ ನನಗಿಲ್ಲ. ಏಕೆಂದರೆ ಹಾಗೆ ನಾನು ಬಯಸಿದರೂ ಹುಟ್ಟಲಾರೆ. ಕನ್ನಡ ನಾಡೇ ನನ್ನ ವೈಕುಂಠ ಹೋಯಿತು. ಇದರ ನಾಲ್ಕು ನೋಡದ ನಾಡುಗಳೆಲ್ಲಕ್ಕಿಂತಲೂ ಅನ್ಯೋನ್ಯತೆ ಗಳಿಸಿಕೊಂಡಿದ್ದೇನೆ. ಕನ್ನಡ ಸಾಹಿತ್ಯ ಸೇವೆಯೇ ನನ್ನ 'ಪೂರ್ವ ಜನ್ಮ ವಾಸನೆ'ಯಾಗಿಯೂ ಅಂಟಿದೆ. ಇದೂ ಕೂಡ ನೆಲಜಲ ಸಸ್ಯ ಶ್ಯಾಮಲಾ ಸ ಪುತ್ರಗಳಿಗೆ ದೇಶವಾವ? ಆದುದರಿಂದ ಇಲ್ಲಿಯೇ ಹುಟ್ಟಿ ಕನ್ನಡ ಸಾಹಿತ್ಯ ಸೇವೆಯಲ್ಲೇ ಸಿದ್ಧಿಗೆ ಮುಟ್ಟಿ ಕನ್ನಡವನ್ನು ಜಗತ್ಪ್ರಸಿದ್ಧ ಮಾಡಬೇಕೆಂಬುದು ನನ್ನ ಮಹದಭಿಲಾಷೆ. ಅದಕ್ಕೆ ಎಷ್ಟು ಜನ್ಮ ಬೇಕಾದರೂ ಇಲ್ಲಿಯೇ ಆಗಲಿ.

ಅಲ್ಲದೆ ಏನೋ ಭ್ರಮೆಯಿಂದ ಏನೇನೋ ಇಚ್ಛಿಸಿದರೆ, ಇಲ್ಲಿಯ ಸಂಸ್ಕಾರ ಇಲ್ಲಿಗೇ ಹೋಗುತ್ತೆ. ಅಲ್ಲಿಯ ಸಂಸ್ಕಾರ ಅರವಡಿಸುವುದರೊಳಗೆ ಜನ್ಮವೂ ತೀರುತ್ತೆ. ಇದೂ ಇಲ್ಲ ಅದೂ ಇಲ್ಲ; ತ್ರಿಶಂಕು ಸ್ವರ್ಗ. ಇಂತಹ ಅಸಾಧ್ಯ ಕೋರಿಕೆಗಳು ಫಲಿಸುವುದೆನ್ನಲು ಆಧಾರವೂ ಇಲ್ಲ.

ಇನ್ನೊಂದು ದೊಡ್ಡ ಪ್ರಶ್ನೆ ಏನೆಂದರೆ, ಮುಂದಿನ ಜನ್ಮದಲ್ಲಿ ಈ ಜನ್ಮದ ಸ್ಮರಣೆಗಳು ಎಂದರೆ ನೆನಪು ಇರಬೇಕೇ ಬೇಡವೇ?

ನನ್ನ ಲೇಖನಗಳು ಇಲ್ಲಿ ಉಳಿದಿರುತ್ತವೆ. ಅವುಗಳ ಗತಿ ಏನಾಗುವುದೆಂದು ತಿಳಿಯುವ ಕುತೂಹಲ ಸಹಜತಾನೆ! ಅನೇಕ ಪತ್ರಿಕೆಗಳಿಗೆ ಏನೇನೋ ಕಳುಹಿಸಿದ್ದೇನೆ. ಪ್ರಕಟವಾಗಲೂ ಬಹುದು, ಆದೇ ಹೋಗಲೂ ಬಹುದು. ಪತ್ರಿಕೆಗಳಿಗೆ ಕಳುಹಿಸಿದ ಮೇಲೆ, ಅನೇಕ ವರ್ಷಗಳ ನಂತರ ಪ್ರಕಟವಾಗುವುದೂ ಉಂಟು, ಆಗ ಕಳುಹಿಸಿದವರು ಜೀವಿಸಿಲ್ಲವೆಂಬ ಸಂಗತಿ ಅವರಿಗೆ ತಿಳಿದರೆ (ಲೇಖಕರು ದಿವಂಗತರಾಗುವುದಕ್ಕೆ ಮೊದಲು ಕಳುಹಿಸಿದುದು) ಎಂಬ ಸೂಚನೆಯೊಂದಿಗೆ ಪ್ರಕಟಿಸುತ್ತಾರೆ. ಅಕಸ್ಮಾತ್ತಾಗಿ ಕೆಲವು ಸಾಹಿತಿಗಳು ಸತ್ತ ಮೇಲೆ ಅವರ ಲೇಖನಗಳಿಗೆ ಖ್ಯಾತಿ ಬರುವುದೂ ಉಂಟಷ್ಟೆ? ಆಗ ನನಗೆ ಹಿಂದಿನ ಜನ್ಮದ ಜ್ಞಾಪಕವೇ ಇಲ್ಲದಿದ್ದರೆ ಹೇಗೆ? ಪಕ್ಕನೆ ಯಾರೋ ಒಬ್ಬರು ನನ್ನದೊಂದು ಕಾದಂಬರಿಯನ್ನು ಸಿನಿಮಾ ಚಿತ್ರ ಹಿಡಿದರೆ ಅದನ್ನು ನಾನು ನೋಡಬೇಡವೆ? ಅಲ್ಲದೆ ನನ್ನ ಹೆಂಡತಿ-ಮಕ್ಕಳು ಮುಂತಾದವರ ಗುರುತು ಹಿಡಿದು ಆನಂದಿಸಲಿಕ್ಕೂ ಹಿಂದಿನ ಸ್ಮರಣೆ ಇದ್ದರೆ ಒಳ್ಳೆಯದೇ ಅನ್ನಬಹುದು.

ಆದರೆ.... ಯೋಚಿಸಿ ನೋಡಿದಾಗ... ಅಯ್ಯಯ್ಯೊ! ಬೇಡವೇ ಬೇಡಪ್ಪ! ಈ ಜನ್ಮದಲ್ಲಿ ಅನುಭವಿಸಿದ ಇತರ ಕಷ್ಟನಷ್ಟ ಭ್ರಷ್ಟತೆಗಳನ್ನೂ, ಸಾಲಗಾರರ ತಗಾದೆಗಳನ್ನೂ, ಸಂಸಾರದ ತಾಪತ್ರಯಗಳನ್ನೂ ನೋಡಬೇಕಾಗುತ್ತದೆ- ವೈಜಯಂತಿ ಮಾಲಿಸ ಸಂತೆ ಆವೇನೂ ಒಂದೆರಡಲ್ಲ; ಹೇಮಾಗ ವಿಧವಲ್ಲ ಸಂಸಾರ ಕಷ್ಟ, ವ್ಯವಹಾರನಷ್ಟ, ಜೀವಿತ ಭ್ರಷ್ಟತೆಗಳನ್ನು ಅನುಭವಿಸಿದ್ದೇನೆ. ಎಷ್ಟೋ ಬಗೆಯ ಅವಮಾನಗಳು; ಅಸೂಯೆಗಳು- ಅಬ್ಬಬ್ಬ! ಸಿಹಿನೆನಪುಗಳಿಗಿಂತ ಕಹಿ ನೆನಪುಗಳೇ ಜಾಸ್ತಿ.

ದೇವರು ದೊಡ್ಡವ; ಬಹಳ ಮುಂದಾಲೋಚನೆಯುಳ್ಳವ. ಅದಕ್ಕೇ ಯಾರಿಗೂ ಪೂರ್ವಜನ್ಮದ ನೆನಪು ಕೊಡುವುದಿಲ್ಲ. ಕೇವಲ ಮುಖ್ಯವಾದ ಒಂದೆರಡು 'ಪೂರ್ವಜನ್ಮ ವಾಸನೆ'ಯೊಂದಿಗಷ್ಟೇ ಹುಟ್ಟಿಸಿ ಬಿಡುತ್ತಾನೆ.

ಇದು ಬಹಳ ಉತ್ತಮ ಏರ್ಪಾಡು. ಇಲ್ಲದಿದ್ದರೆ ಹಿಂದಿನ ಜನ್ಮದ ನೆನಪಿನಿಂದ, ಇದು ನನ್ನ ಮನೆ, ನನ್ನ ಹಣ, ನನ್ನ ಹೆಂಡತಿ, ನನ್ನ ಮಗ—ಎಂಬ ತಕರಾರುಗಳು ತುಂಬ ಏಳುತ್ತಿತ್ತು. (ಅಪರೂಪವಾಗಿ ಅಲ್ಲಿ ಇಲ್ಲಿ ಪೂರ್ವ ಜನ್ಮದ ನೆನಪಿನ ಮಕ್ಕಳು ಹುಟ್ಟಿದ ಸಂಗತಿ, ಆ ಮಗು ಹಿಂದಿನ ಜನ್ಮದ ಹೆಂಡತಿಯನ್ನು ಸಹಾ ಗುರುತು ಹಿಡಿದ ವಿಷಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆಯಷ್ಟೆ?) ನನಗೆ ಅಂಥಹ ನೆನಪುಗಳು ಬೇಡವೇ ಬೇಡ.

ಹೇಗಿದ್ದರೂ ಕನ್ನಡ ಸಾಹಿತಿಯಾಗಿಯೇ ಮುಂದಿನ ಜನ್ಮದಲ್ಲಿ ಮುಂದುವರಿಯುತ್ತೇನೆಂಬುದು ನಿಜ. ಆಗ ಈ ಜನ್ಮದ ಲೇಖನಗಳು ಹೇಗೆ ಹೋದರೆ ನನಗೇನು? ಮೇಲಿನ ತರಗತಿಗಳಿಂದ ಕ್ರಮವಾಗಿ ಕಾಲೇಜಿಗೆ ಸೇರಿದಂತೆ, ಹಿಂದಿನ ಪಠ್ಯ ಪುಸ್ತಕಗಳ ನೆನಪು ಏಕೆ ಬೇಕು? ಯಾರು ನೋಡುವರು? ಹಾಗೇ ಇದೂ ಸಹ.

ಒಂದು ವಿಷಯದಲ್ಲಿ ಮರೆವು ಬಹಳ ಒಳ್ಳೆಯದೇ. ಅದಕ್ಕೆ ಮುಂದಿನ ಜನ್ಮದವರೆಗೆ ಹೋಗುವುದೂ ಬೇಡ ಈ ಜನ್ಮದಲ್ಲೇ ನಡೆದ ಎಷ್ಟೋ ಸಂಗತಿಗಳನ್ನು ನಾವು ಮರೆತು ಬಿಡುತ್ತೇವೆ. ಅಥವಾ ಮರೆಯುವ ಪ್ರಯತ್ನ ಮಾಡುತ್ತೇವೆ. ಈ ಜನ್ಮದ ವಿಷಯಗಳ ನೆನಪುಗಳೇ ಇಷ್ಟು ಭಯಂಕರವಿರುವಾಗ, ಹಿಂದಿನ ಜನ್ಮದ ನೆನಪುಗಳೂ ಸೇರುತ್ತಿದ್ದರೆ ಏನಾಗುತ್ತಿತ್ತೋ?

ಬೇಡವೇ ಬೇಡ. ಮರೆವಿನ ಪದ್ಧತಿಯಲ್ಲಿಯೇ, ಕರ್ಮಗಳ ಫಲಕ್ಕೆ ತಕ್ಕ ರೀತಿಯಲ್ಲಿ ಬರಲಿ ಪುನರ್ಜನ್ಮ. ಅದು ಮಾತ್ರ ಕನ್ನಡ ನಾಡಿನಲ್ಲಿ ಕನ್ನಡ ಸಾಹಿತಿಯಾಗಿರುವಂತೆಯೇ ಬರಲಿ. ಕನ್ನಡ ದೇವಿಯನ್ನು ಆರಾಧಿಸಿ ಕೊಂಡಿರುವಂತೆಯೇ ಬರಲಿ.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ
ಮಿತ ಸಂತತಿ
ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0-75 ಪೈಸೆ ಮಾತ್ರ.
ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಲಾಗುವುದು.
ನವಭಾರತ ಪುಸ್ತಕ ಭಂಡಾರ.
ತಾಲುಕೋಟೆ, ಉಡುಪಿ, ದ. ಕ.

ಅಮೃತಾಂಜನ
● ತಲೆ ನಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು—4

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 7

NAVAYUGA

15—10—1970

'ಕಳ್ಳತನ— ಈ ಶಬ್ದ ಕೋಶದಲ್ಲಿ ಬೇಡ'

ಸಮಾಜವಾದ.

ಈ ಶಬ್ದ ಚೋರರನ್ನು ವಂಚಿಸಲು ಹುಟ್ಟಿತು.

ಈ ಶಬ್ದವನ್ನು ಮಂತ್ರದಂತೆ ಉಚ್ಚರಿಸುವವರು ಚೋರರನ್ನು ವಂಚಿಸ ಹೋಗಿದ್ದಾರೆ? ಅಥವಾ ತಮ್ಮನ್ನೇ ವಂಚಿಸಿಕೊಳ್ಳುತ್ತಿದ್ದಾರೆಯೇ?

ಸಮಾಜವಾದದಲ್ಲಿ — ಸ್ವಂತ ಎನ್ನುವುದು ಇಲ್ಲ.

ಉತ್ಪಾದನೆಯ ಸಾಧನಗಳು, ವಿತರಣೆಯ ಅಂಗಗಳು, ಅದಲು-ಬದಲಾವಣೆಯ ಮಾರ್ಗಗಳು—ಸರ್ಕಾರದ ವಶದಲ್ಲಿ.

ಆ ಸರಕಾರ ಜನರ ಕೈಯಲ್ಲಿ.

ಸರಕಾರದ್ದು ಎಂದರೂ ಒಂದೆ, ಜನರದ್ದು ಎಂದರೂ ಒಂದೇ!

ಅದನ್ನು ಸಾಧಿಸ ಹೋಗಿ ಇಂದಿನ ಸರಕಾರ ಒಂದನ್ನು ಇನ್ನೂ ಮಾಡದೆ ಬಿಟ್ಟಿದೆ.

ಬ್ಯಾಂಕುಗಳ ರಾಷ್ಟ್ರೀಕರಣಕ್ಕೂ ಮೊದಲು, ರಾಜಧನದ ರದ್ಧತಿಗೂ ಮೊದಲು ಅದನ್ನು ಕಾರ್ಯಗತಗೊಳಿಸಬೇಕಿತ್ತು.

ಅದನ್ನೇಕೆ ಇನ್ನೂ ಮಾಡಿಲ್ಲ?

ಜನ ಕೇಳಬೇಕು. ಇಂದಿರಾ ಹಿಂಬಾಲಕರು ಒತ್ತಾಯಿಸಬೇಕು.

ಎಲ್ಲ ರಾಷ್ಟ್ರಕ್ಕೆ ಸೇರಿದ್ದು.

ರಾಷ್ಟ್ರ ಜನತೆಗೆ ಸೇರಿದ್ದು.

ಆದ್ದರಿಂದ ರಾಷ್ಟ್ರದಲ್ಲಿರುವ ಎಲ್ಲವೂ ಜನತೆಗೆ ಸೇರಿದ್ದು.

ಅಲ್ಲವೆನ್ನುವ ಧೈರ್ಯ ಯಾರಿಗಿದೆ?

ಹೀಗಿರುವುದರಿಂದ ತನಗೆ ಇಷ್ಟ ಬಂದ ವಸ್ತುವನ್ನು, ಪ್ರಜೆಯಾದವನು ತಾನು ದುಡಿಯುವ ಸ್ಥಳದಿಂದ ಯಾರ ಅನುಮತಿಯೂ ಇಲ್ಲದೆ ಒಯ್ಯಬಹುದು.

ಅವನಿಗೆ ಸೇರಿದ್ದನ್ನು ಅವನು ಒಯ್ದರೆ ಕಳ್ಳತನವೆಲ್ಲಿ ಬಂತು?

ಈ ಕಾರಣ ಕಳ್ಳತನ ಎನ್ನುವ ಪದವನ್ನು ತೆಗೆದು ಹಾಕಬೇಕು.

ನಮ್ಮ ಪಿನಲ್ ಕೋಡಿನ ರಚನೆಯನ್ನು ರೂಪಿಸಿದ ಶಿಲ್ಪಿ ಪರದೇಶದವನು. ಹೇಳಿ ಕೇಳಿ ಇಂಗ್ಲಿಷು. ಆ ಮೆಕಾಲೆಗೆ ಇನ್ನೂ ಈ ದೇಶದಲ್ಲಿ ಮರ್ಯಾದೆ.

ಇದು ಸಲ್ಲದು. ಇದರಿಂದ ಭಾರತೀಯರಾದ ನಮಗೆ ಅವಮಾನ.

ನಮ್ಮದಾದ ಸಾಮಾನನ್ನು—ಅನ್ಯರಿಗೆ ತಿಳಿಯದಂತೆ—ನಾವು ಒಯ್ದರೆ ತಪ್ಪೆಂದು ಪರಿಗಣಿಸುವುದೇಕೆ?

ಇದರಲ್ಲಿ ಯಾವ ನ್ಯಾಯವೂ ಇಲ್ಲ.

ಖಾಸಗೀ ಸೊತ್ತಿನ ಉದಯದ ನಂತರ "ಕದಿಯಬೇಡ" ಎನ್ನುವ ಮಾತು ಹುಟ್ಟಿದ್ದು.

ಈ ಮಾತನ್ನು ಮೊದಲು ಸೃಷ್ಟಿಸಿದವರು ಸ್ವಾರ್ಥಿಗಳಾದ ಸನಾತನ ಶೋಷಕ ವರ್ಗ.

ಅವರೊಂದಿಗೆ ಈ ಶಬ್ದವೂ ಹೋಗಬೇಕು.

ಕಳ್ಳತನಕ್ಕೆ ಸಂಬಂಧಿಸಿದ ಕಲಮುಗಳನ್ನು ಪಿನಲ್ ಕೋಡಿನಿಂದ ಕಿತ್ತುಹಾಕಬೇಕು.

ಬರಿಯ ಕಲಮುಗಳನ್ನು ತೆಗೆದರೆ ಸಾಲದು. ಈ ಶಬ್ದವನ್ನು, ಅದರ ಪರ್ಯಾಯ ಪದಗಳನ್ನು ದೇಶದ ವಿವಿಧ ಭಾಷೆಗಳ ಕೋಶದಿಂದ ತೆಗೆಯಬೇಕು. ಆ ಶಬ್ದದ ಬಳಕೆಯನ್ನು ಶಾಸನದ ಮೂಲಕ ನಿರ್ಬಂಧಿಸಬೇಕು.

[illegible] ಆಗಿಲ್ಲ.

ರಾಷ್ಟ್ರಪತಿಗಳ ತುರ್ತು ಆಜ್ಞೆಯ ಮೂಲಕ ಜಾರಿಗೆ ತರಬೇಕು.

ಇದನ್ನು ವಿರೋಧಿಸುವವರು ಪ್ರತಿಗಾಮಿಗಳು.

ಬೆಂಬಲಿಸುವವರು ಪ್ರಗತಿಪರರು—ಸಮಾಜವಾದಿಗಳು.

ಜನ ಬೆಂಬಲವಿಲ್ಲದ ಜನರು ಕೋರ್ಟಿಗೆ ಹೋಗಬಹುದು.

ಅವರೇ ಇಂದಿನ ದಿನಗಳಲ್ಲಿ ಕೋರ್ಟಿಗೆ ಶರಣು ಹೋಗುವುದು.

ಅಲ್ಲಿಯೂ ನಮಗೆ ಅನುಕೂಲವಾದ ವ್ಯಾಖ್ಯೆ ಕೊಡುವ ವಕೀಲರಿಗೆ ಕೊರತೆಯೇ?

○ ○ ○ ○

ರಾಷ್ಟ್ರದ ಎಲ್ಲ ಸಂಪತ್ತು ಸರಕಾರದ ಕೈಯಲ್ಲಿರುವುದು ಅನುಕೂಲವೆಂಬುದು ಸಮಾಜವಾದಿಗಳ ಮತ. ಆದರಿಂದ ಭಂಡವಾಳದ ಮೇಲು ಹಿಡಿತ ತಪ್ಪಿಲ್ಲ ಎಂಬುದು ಅವರ ವಾದ. ಭಂಡವಾಳ ಹಲವರ ಕೈಗೆ ಸಿಕ್ಕಿ ಚೆಲ್ಲಾ-ಪಿಲ್ಲಿಯಾಗಿ ಹಾಳಾಗುವುದಿಲ್ಲ. ಇದು ಇವರು ಕೊಡುವ ಸಮಜಾಯಿಷಿ. ಹಲವರ ಕೈಯಲ್ಲಿ ಹಣ ಉಳಿದರೆ, … ಒಂದೇ ಉದ್ಯಮಕ್ಕೆ … ಭಂಡವಾಳವನ್ನು ಅವರು ಹಾಳುಮಾಡಬಹುದು. ಸಂಪತ್ತೆಲ್ಲಾ ಸರಕಾರದ ಕೈಯಲ್ಲಿದ್ದರೆ ಅದನ್ನು ತಪ್ಪಿಸಬಹುದು. ಸ್ಪರ್ಧೆಯನ್ನು ನಿಲ್ಲಿಸಿ, ಉತ್ಪನ್ನವನ್ನು ಬೇಕಾದ ಪ್ರಮಾಣಕ್ಕೆ ನಿಯಂತ್ರಿಸಬಹುದು. ಇದರಿಂದ ಶ್ರಮದ ಅಪವ್ಯಯವನ್ನು ನಿಲ್ಲಿಸಬಹುದು. ಅವಶ್ಯಬಿದ್ದಲ್ಲಿ ಒಂದು ಉದ್ಯಮದಿಂದ, ಇನ್ನೊಂದು ಉದ್ಯಮಕ್ಕೆ ಶ್ರಮವನ್ನು ವರ್ಗಾಯಿಸಬಹುದು.

ಹೀಗೆ ಮಾಡಿದರೆ ನಿರುದ್ಯೋಗದ ನಿವಾರಣೆ ಆಗುತ್ತದೆ.

ಎಲ್ಲರಿಗೂ ಕೆಲಸ ಸಿಗುತ್ತದೆ.

ಎಲ್ಲರೂ ಕೆಲಸದಲ್ಲಿ ನಿರತರಾಗುತ್ತಾರೆ.

ಇದರಿಂದ ಪ್ರಗತಿ ಸಾಧ್ಯವಾಗುತ್ತದೆ.

ತ್ರಿಕರಣಗಳು ಒಟ್ಟುಗೂಡಿದಾಗ—ಫಲಪ್ರಾಪ್ತಿ ಆಗದಿರುವುದೆಂತು?

ಶ್ರಮ-ಭಂಡವಾಳ-ತಾಂತ್ರಿಕತೆಗಳೇ ಆ ತ್ರಿಕರಣಗಳು.

ಅವು ಹಿತವಾಗಿ ಮಿತವಾಗಿ ಮಿಳಿತವಾದಾಗ ವಿಮೋಚನೆ ಕಟ್ಟಿಟ್ಟ ಬುತ್ತಿ!

ಈ ವ್ಯವಸ್ಥೆಯನ್ನು ಸರಕಾರ ನಿರ್ದೇಶಿಸ ಹೊರಟಾಗ, ನಿಯೋಜಿಸಲು ನಿಂತಾಗ—ಸುಭಿಕ್ಷ, ಶಾಂತಿ, ಸಮೃದ್ಧಿ.

ಇದು ಸಮಾಜವಾದಿಗಳು ಎತ್ತಿ ಹಿಡಿಯುವ ವಾದ.

ಇದರಲ್ಲಿ ಸತ್ಯ ಎಷ್ಟು?

ಸುಳ್ಳು ಎಷ್ಟು?

ಡೌಲು ಎಷ್ಟು?

ಠಾಕು ಎಷ್ಟು?

ಅದಕ್ಕೊಂದು ನಿದರ್ಶನ-ಕಳೆದ ಜುಲಾಯಿ ತಿಂಗಳಿನ ರಶಿಯಾದ ಮುಖಪತ್ರಿಕೆ ಪ್ರಾವ್ದಾದಲ್ಲಿ ಬಂದ ವದಂತಿ.

ಲೆನಿನ್‌ಗ್ರಾಡ್ ಸಮೀಪದ ಒಂದು ಪ್ರಮುಖ ಬಂದರು—ನಗರ.

ಅಲ್ಲಿಯ ಕಾರ್ಖಾನೆ. ಅದರ ಸಂಗ್ರಹಾಗಾರದ ಬಯಲಿನಲ್ಲಿ 575000 ರೂಬಲ್ಸ್ ಬೆಲೆಯ ಒಂದು ಪ್ರೆಸ್ ಮಿಲ್ಲು ಕೆಲವು ವರ್ಷಗಳಿಂದ ಹಾಗೆಯೇ ನಿಂತಿದೆ. ಒಂದು ನಿರ್ದಿಷ್ಟ ಕಾರಖಾನೆಯ ಉಪಯೋಗಕ್ಕೆಂದು ಆ ಮಿಲ್ಲಿನ ತರಿಸಿಕೊಂಡಿತು. ಆದರೆ ಆ ಕಾರಖಾನೆ ಹುಟ್ಟಲೇ ಇಲ್ಲ. ಅದರ ಕಟ್ಟಡ ಮೇಲೇಳಲೇ ಇಲ್ಲ. ಬೆಲೆ ಬಾಳುವ ಈ ಮಿಲ್ಲು ಈಗ ಉಪಯೋಗವಿಲ್ಲದ ಸ್ಥಿತಿಯಲ್ಲಿದೆ. … ಅದನ್ನೊಂದು … ಬೇರೆ ದಾರಿಯಿಲ್ಲ.

"ಟ್ರಿಬ್ಯೂನ್" ಎನ್ನುವ ಇನ್ನೊಂದು ಪತ್ರಿಕೆ ಫೆಬ್ರವರಿ ತಿಂಗಳ ತನ್ನ ಸಂಚಿಕೆಯಲ್ಲಿ ಹೀಗೆ ಬರೆಯಿತು.

'ಚರ್ಗೋನಿನ್ಸ್ಕ್ ಪ್ರದೇಶದ ಕಾರಖಾನೆಯೊಂದು 13000 ರೂಬಲ್ಸ್ ಬೆಲೆಯ ಯಂತ್ರದ ಸರಬರಾಜಿಗೆ 1954ರಲ್ಲಿ ಆರ್ಡರ ಕೊಟ್ಟಿತು. ಆರ್ಡರು ಕೊಟ್ಟು ವರ್ಷಗಳು ಕಳೆದುವು. ಕೊನೆಗೊಂದು ದಿನ ಅಪೇಕ್ಷಿಸಿದ ಯಂತ್ರ ಸ್ಥಳಕ್ಕೆ ಬಂತು. ಆದರೆ ಅಲ್ಲಿದ್ದ ಕೆಲಸಗಾರರಿಗೆ ಆ ಯಂತ್ರವನ್ನು ಏನು ಮಾಡಬೇಕೆಂಬುದು ತಿಳಿಯಲಿಲ್ಲ. ಏನೂ ಅರಿಯದ ಕೆಲಸಗಾರರು ಯಂತ್ರವನ್ನು ಕಾರಖಾನೆಯ ಹಿಂದಿನ ಬಯಲಲ್ಲಿ ಇಳಿಸಿಕೊಂಡರು. ಏನೂ ತೋಚದೆ, ಕೆಲಸಗಾರರು ಕ್ರಮೇಣ ಆ ಯಂತ್ರವನ್ನು ಕಳಚಿ ಬಿಡಿ ಬಿಡಿ ಮಾಡಿದರು. ಬಿಡಿ ಭಾಗಗಳನ್ನು ಅಲ್ಲಿಯೇ ಬಿಡಲು ಮನಸ್ಸು ಬಾರದೆ ತಮ್ಮ ತಮ್ಮ ಮನೆಗಳಿಗೆ ಒಯ್ದರು.'

ಇನ್ನೊಂದು ವರದಿ ಹೀಗಿದೆ. ರಶಿಯದಲ್ಲಿ ವರ್ಷಕ್ಕೆ ಹಲವು ಮಿಲಿಯ ಟನ್ನಿನಷ್ಟು ಸಿಮೆಂಟ ಹಾಳಾಗುತ್ತಿದೆಯಂತೆ. ಅದಕ್ಕಿರುವ ಪ್ರಮುಖ ಕಾರಣ-ಸಂಗ್ರಹಿಸಿಡುವುದರಲ್ಲಿನ ದೋಷ 2) ಸಾಗಾಣಿಕೆಯ ನ್ಯೂನತೆಗಳು 3) ಉಪಯೋಗಿಸುವ ವಿಧಾನ ಇವು. ಅವರಿಗಾಗಿ ನಾವೇಕೆ ಅಳಬೇಕು.

ರಶಿಯದ ಕಾರಖಾನೆಗಳಲ್ಲಿ ಆಗುವ ಕಳ್ಳತನಗಳು ಕಡಿಮೆಯವಲ್ಲ. ಗ್ರೀಸಿನ ಡಬ್ಬಗಳು, ಕಾರಿನ ಟಯರು-ಟ್ಯೂಬುಗಳು, ಹಿಡಿ ಉಪಕರಣಗಳು ದಿನ ಬೆಳಗಾದರೆ ಮಾಯವಾಗುತ್ತಿವೆ. ಮಾಂಸ ಕದಿಯುವುದು ಅಲ್ಲಿ ಈಗ ಒಂದು ಹವ್ಯಾಸ. ಇಲ್ಲಿಯೂ ಅದು ಈಗ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ.

ಅದನ್ನು ನೋಡಿಯಾದರೂ ನಾವು ಪಾಠ ಕಲಿಯಬಹುದಿತ್ತು.

ಆದರೆ ಅನ್ಯರ ಅನುಭವವನ್ನು ನಾವು ಒಪ್ಪಿಕೊಳ್ಳಲು ಬರುವುದಿಲ್ಲ.

ಪ್ರಪಂಚಕ್ಕೆ ಬುದ್ಧಿ ಹೇಳುವ ಅರ್ಹತೆಯುಳ್ಳ ನಾವು ಅನ್ಯರಿಂದ ಕಲಿತುಕೊಳ್ಳುವುದು ಏನಿದೆ?

ನಾವು ಸಿದ್ಧರಿಲ್ಲ; ನಮ್ಮ ಹಟ ಬಿಡುವುದಿಲ್ಲ.

ಮೂಗಿದ್ದರೆ ತಾನೆ ನೆಗಡಿ ಸೋರುವುದು, ಸೀನು ಬರುವುದು.

ಆ ಮೂಗನ್ನೇ ಕೊಯ್ದರೆ—?

ಅದನ್ನೇ ನಮ್ಮ ಕೇಂದ್ರ ಸರಕಾರ ಮಾಡಲು ಮುಂದಾಗಿದೆ.

—ದೇವಕೀನಂದನ

ಭೂಪಟ ಪ್ರಸಂಗ

ಸೋವಿಯತ್ತಿನ ಸ್ವಾರ್ಥಸಾಧನೆ

ಭಾರತದ ಪ್ರದೇಶಗಳಾದ ನೇಫಾ ಮತ್ತು ಲಡಕಗಳನ್ನು ಚೀನಾದವೆಂದು ತೋರಿಸಿ ಪ್ರಕಟಿಸಿದ ರಶ್ಯನ್ ಭೂಪಟ ಪ್ರಧಾನಿ ಶ್ರೀಮತಿ ಗಾಂಧಿಯನ್ನು ಪೇಚಿಗೆ ಸಿಕ್ಕಿಸಿದೆ. "ಇದಕ್ಕೆ ನೀವೇನು ಮಾಡಿದ್ದೀರಿ?" ಎಂದು ಸರಕಾರವನ್ನು ಕೇಳಿದರೆ, "ಒಂದಕ್ಕಿಂತ ಹೆಚ್ಚು ಬಾರಿ ಪ್ರತಿಭಟನೆ ವ್ಯಕ್ತಪಡಿಸಿದ್ದೇವೆ" ಎಂದು ಆಕೆ ತಲೆಯಡಿಗೆ ಹಾಕಬೇಕಾಗಿದೆ. ಶ್ರೀಮತಿ ಇಂದಿರಾ ಗಾಂಧಿಯವರ ಸಮಾಜವಾದ ಕಮ್ಯೂನಿಜಂಗೂ ಅಭೇದ ಸಂಬಂಧವಿದೆಯೆಂಬುದು ಜಗಜ್ಜಾಹೀರು. ಸಂಸತ್ತಿನಲ್ಲಿ ಮಾರ್ಕ್ಸಿಸ್ಟರೂ ಲೆನಿನಿಸ್ಟರೂ ಬೆಂಬಲಿಸಿದ್ದರಿಂದ ಆಕೆ ಇದುವರೆಗೆ ಅಲ್ಲಿ ಉಳಿದುಕೊಂಡಿದ್ದಾರೆ. ಅದಲ್ಲ, ಇತ್ತೀಚೆಗೆ ಕೇರಳದ ಮಧ್ಯಾವಧಿ ಚುನಾವಣೆಯ ವೇಳೆ ಆಕೆ ಮಾರ್ಕ್ಸಿಸ್ಟರನ್ನು ಅಸ್ಪೃಶ್ಯರನ್ನಾಗಿಟ್ಟು ಲೆನಿನಿಸ್ಟರನ್ನು ಅಪ್ಪಿಕೊಂಡದ್ದರಿಂದ ಶ್ರೀಮತಿಯವರ ಕಮ್ಯುನಿಜಂನ ಬಣ್ಣ ಯಾವುದೆಂಬುದು ವ್ಯಕ್ತವಾಯ್ತು. ಆಕೆಯ ಮತ್ತು ಆಕೆಯ ಸರಕಾರದ ಒಲವು ಸಂಪೂರ್ಣ ರಶ್ಯದತ್ತ ಇದೆಯೆಂಬುದರಿಂದಲೇ ಆಕೆ ರಶ್ಯ ಏನು ಮಾಡಿದರೂ ತೆಪ್ಪಗೆ ಸುಮ್ಮನುಳಿಯುತ್ತಾರೆ.

ಭಾರತೀಯ ಸಂಸತ್ತಿನಲ್ಲಿ ತಪ್ಪು ಭೂಪಟದ ಪ್ರಕಟಣೆಯ ಬಗ್ಗೆ ಎದ್ದಿರುವ ರೋಷಾವೇಶದಿಂದ ದೇಶದಲ್ಲಿ ಶ್ರೀಮತಿ ಗಾಂಧಿಯವರ ಬಗ್ಗೆ ಸದಭಿಪ್ರಾಯ ಮೂಡಲು ಬಾಧಕವಾಗುತ್ತದೆ. ಪ್ರಧಾನಿ ನೆಹರುರವರು ಕೆಂಪು ಚೀನಾದ ಪ್ರಧಾನಿ ಶ್ರೀ ಚೌ ಎನ್ ಲಾಯರ ಕೈಕುಲುಕಿ ಭೂಪಟ ತಿದ್ದಲು ಮಾಡಿಕೊಂಡ ಮನವಿಯನ್ನು ಕಿವಿಯಾರೆ ಕೇಳಿಕೊಂಡದ್ದು, ಒಂದು ಶುಭ ಮುಂಜಾನೆ ನೇಫಾ ಮತ್ತು ಲಡಕಗಳಲ್ಲಿ ಗುಂಡಿನ ಮಳೆಗರೆಯಲು ಆರಂಭ ಮಾಡಿದ್ದು ಭಾರತೀಯರ ಹೃದಯದಲ್ಲಿನ್ನೂ ಹಸುರಾಗಿಯೇ ಇದೆ. ಅದೇ ಧಾಟಿಯಲ್ಲಿ ಸೋವಿಯತ್ತಿನ ಈಗ ಹಲವು ಮುದ್ರಣ ಕಂಡ ನಕಾಶೆಯೂ ಇರುವುದರಿಂದ ಸೋವಿಯತ್ತು ನೇಫಾ ಮತ್ತು ಲಡಕಗಳ ಮೇಲೆ ಚೀನೀ ಪ್ರಭುತ್ವವನ್ನೇ ತಾತ್ವಿಕವಾಗಿ ಒಪ್ಪಿಕೊಂಡಿದೆಯೆಂದು ಹೇಳಬೇಕಾಗುತ್ತದೆ. ಇದು ನಮ್ಮ ಹೊಸ ಮಿತ್ರರು ಮಾಡುತ್ತಿರುವ ಉಪಕಾರ.

ರಾಷ್ಟ್ರಪತಿ ಶ್ರೀ ವಿ ವಿ. ಗಿರಿಯವರು ಸೋವಿಯತ್ತು ಸಂಚಾರವನ್ನು ಯಶಸ್ವಿಯಾಗಿ ಮುಗಿಸಿದರು. ಈ ಸಂಚಾರವು ಅತ್ಯಂತ ಯಶಸ್ವಿಯಾಯ್ತೆಂದು ಡಂಗುರ ಸಾರಲಾಯ್ತು. ಸಂಚಾರದ ಕೊನೆಯಲ್ಲಿ ಹೊರಟ ಜಂಟಿ ಹೇಳಿಕೆ ನೋಡುವಾಗ, ಶ್ರೀ ಗಿರಿಯವರ ಈ ಸಂಚಾರ ಬರಿಯ ಸಂಚಾರ ಮಾತ್ರವಾಯ್ತೆಂದು ಹೇಳಬೇಕಾಗುತ್ತದೆ. ಸಹಬಾಳ್ವೆಯ ಮಂತ್ರವನ್ನಷ್ಟೇ ಹೇಳಿಕೆ ನೂರಬಂದನೆಯ ಬಾರಿಗೆ ಜಪಿಸಿ ತೃಪ್ತಿಪಟ್ಟಿದೆ. ಅಂದರೆ, ಭೂಪಟದ ಬಗ್ಗೆ ಬೇಕಷ್ಟು ಚರ್ಚೆ ನಡೆದರೂ ಅದು ನಿರರ್ಥಕವಾಗಿದೆಯೆಂದೇ ಇದರ ಅರ್ಥ. ಭೂಪಟವನ್ನು ಪುನರ್ಪರಿಶೀಲಿಸುವ ಭರವಸೆಯನ್ನು ಸೋವಿಯತ್ ನಾಯಕರು ಬಾಯಲ್ಲಿ ಹಲವು ಬಾರಿ ನೀಡಿದ್ದಾರೆ. ಆದರೆ, ಈ ಭರವಸೆಯು ಪ್ರಾಮಾಣಿಕವೆ? ಹಿಂದೆ ಚೌ-ಎನ್-ಲಾಯ್ ದೆಹಲಿಗೆ ಬಂದು ನೆಹರೂಜಿಯವರ ಕೈಕುಲುಕಿ ಹಿಂದೀ-ಚೀನೀ ಭಾಯಿ ಭಾಯಿ ಎಂದು ನೂರಾರು ಸಲ ಉದ್ಘೋಷಿಸಿ ಭೂಪಟ ತಪ್ಪೆಂದೇ ಒಪ್ಪಿಕೊಂಡು ಹೋಗಿ, ಮತ್ತೆ ಅದೇ ಸರಿಯೆಂದು ಇಂದಿಗೂ ಪಟ್ಟು ಹಿಡಿದುಕೊಂಡಿದ್ದಾರೆ. ಅಂದು ಕೆಂಪು ಚೀನಾ ಮಾಡಿದ್ದರ ಪುನರಾವರ್ತನೆ ಈಗ ರಶ್ಯದಿಂದ ಆದೀತೆ? ಭಾರತದ ರಾಷ್ಟ್ರಪತಿಯವರು ಸರಿಪಡಿಸಲು ವಿಫಲರಾದದ್ದರಿಂದ ಸೋವಿಯತ್ತಿನ ವಿಶ್ವಾಸ-ಮಿತ್ರತನ, ಸಹಬಾಳ್ವೆಯ ಬಗ್ಗೆ ಸಂದೇಹ ಮೂಡಿಯೇ ಮೂಡುತ್ತದೆ.

ರಶ್ಯದ ನಾಯಕರು ಭಾರತೀಯ ನಾಯಕರನ್ನು ಕೀಳಾಗಿ ಕಾಣುತ್ತಾರೆ. "ನಕ್ಷೆಯನ್ನು ತಿದ್ದುವಲ್ಲಿ ನಮಗಿರುವ ತೊಂದರೆಗಳನ್ನು ನಮ್ಮ ಮಿತ್ರರು ಮನವರಿಕೆ ಮಾಡಿಕೊಳ್ಳಬೇಕು."—ಎಂಬ ಅವರ ಮಾತಿನ ಸತ್ಯಾಸತ್ಯತೆಗಳು ನಮಗೆ ಅನವಶ್ಯ. ರಶ್ಯಕ್ಕೆ ಚೀನಾದೊಡನೆ ಗಡಿವಿವಾದವಿದ್ದು ಅದನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಕೆಂಪು ಚೀನೀಯ ದೈತ್ಯನನ್ನು ತೃಪ್ತಿಗೊಳಿಸುವುದಕ್ಕಾಗಿ ನೇಫಾ-ಲಡಕಗಳನ್ನು "ಭೂಪಟದಲ್ಲಾದರೂ" ಚೀನಾದೆಂದು ತೋರಿಸಲು ಸೋವಿಯತ್ತು ತೊಡಗಿದಂತಿದೆ. ಭಾರತದ ಪರಮ ಮಿತ್ರ ಸೋವಿಯತ್ತಿನ ಈ ನಕ್ಷೆಯು ತನ್ನ ನಿಲುವಿಗೆ ಬಲವಾದ ಆಧಾರವೆಂದು ಕೆಂಪು ಚೀನಾ ತಿಳಿದುಕೊಂಡಿದೆ; ಒಂದು ವೇಳೆ ಸೋವಿಯತ್ತು ತನ್ನ ನಕ್ಷೆಯಲ್ಲಿ ತಿದ್ದುಪಡಿ ಮಾಡಿದರೆ, ಅದರಿಂದ ಕೆಂಪು ಚೀನಾ ಉರಿದೆದ್ದೀತು; ತತ್ಪರಿಣಾಮವಾಗಿ, ರಶ್ಯ—ಚೀನಿ ಗಡಿ ವಿವಾದ ಉಲ್ಬಣಗೊಂಡೀತು. ಸ್ವಲಾಭ, ಸ್ವಹಿತಕ್ಕೆಂದು ಅಸತ್ಯ ಭೂಪಟವನ್ನು ಸೋವಿಯತ್ತು ಪ್ರಕಟಿಸಿದೆಯೆಂಬುದೇ ಸತ್ಯ. ಇದು ನಮ್ಮ ಮಿತ್ರರು ನಮ್ಮೊಡನೆ ಮಾಡುತ್ತಿರುವ ಸದ್ವ್ಯವಹಾರ.

ಸೋವಿಯತ್ತು-ಭಾರತ ಬಾಂಧವ್ಯ ಎರಡು ದಶಕಗಳದ್ದು. ಅದುವರೆಗೆ ಎರಡೂ ದೇಶಗಳಲ್ಲಿ ಹಲವಾರು ರಾಜ್ಯಕೀಯ ದುರಂಧರರಾದರು. ಆದರೂ ಸಹಬಾಳ್ವೆಯ ಮಂತ್ರವನ್ನು ಎಲ್ಲರೂ ಜಪಿಸಿದರು. ಇತ್ತೀಚಿನ ದಿನಗಳಲ್ಲಿ ದೇಶದ ಆಡಳಿತದ ಮೇಲೆ, ರಾಜ್ಯಕೀಯದ ಮೇಲೆ ರಶ್ಯದ ಪ್ರಭಾವ ಮಿತಿಮೀರುತ್ತಲೇ ಸಾಗುತ್ತಿದೆ. ನಮ್ಮ ಮೇಲೆ ಸದೈವ ಉರಿಕಾರುತ್ತಿರುವ ಪಾಕಿಸ್ತಾನವನ್ನೂ ಹತ್ತಿರ ಎಳೆದುಕೊಂಡ ಸೋವಿಯತ್ ನಾಯಕರು ಅದಕ್ಕೆ ಬೇಕಷ್ಟು ಶಸ್ತ್ರಾಸ್ತ್ರ ನೀಡಲು ಮುಂದೆ ಹೋಗಿದ್ದಾರೆ. ನಾವು ಪ್ರತಿಭಟನೆ—ತೀವ್ರ ಕಳವಳ ವ್ಯಕ್ತಪಡಿಸುವುದರಲ್ಲೇ ತೃಪ್ತಿಯ ಉಸಿರು ಬಿಟ್ಟಿದ್ದೇವೆ; ಬಿಡುತ್ತೇವೆ.

ನಮ್ಮ ಮಿತ್ರರಾರು ಶತ್ರುಗಳಾರು ಎಂಬುದನ್ನು ನಾವು ಅರಿತುಕೊಂಡಿರಬಹುದು; ಆದರೆ, ಹಿತಶತ್ರುಗಳು ಶತ್ರುವಿಗಿಂತಲೂ ಅಪಕಾರಿಯೆಂಬುದನ್ನು ಮರೆತಿದ್ದೇವೆ. ಪಾಕಿಸ್ತಾನ- ರಶ್ಯದ ಪರಮ ಮೈತ್ರಿಯನ್ನು ನೋಡುತ್ತಿದ್ದೇವೆ; ಕೆಂಪು ಚೀನಾವನ್ನು ತೃಪ್ತಿಪಡಿಸಲು ಪಾಕಿಸ್ತಾನ ಕೆಲವೊಂದು ಭಾರತೀಯ ನೆಲವನ್ನು ಅದಕ್ಕೆ ದಾನ ನೀಡಿತ್ತು. ಸೋವಿಯತ್ತೂ ಅದೇ ಉದ್ದೇಶದಿಂದ ಭಾರತದ ಮತ್ತೆ ಕೆಲವು ಭಾಗಗಳನ್ನು ಕೆಂಪು ಚೀನಾಕ್ಕೆ ದಾನ ನೀಡಲು ಮುಂದಾದಂತಿದೆ. ನಂದರಾಯನ ಬದುಕು ನರಿನಾಯಿ ತಿಂದು ಹೋಯ್ತು ಎಂಬ ಗಾದೆಮಾತು ನಾವು ನಿಸ್ಸತ್ವರಾದ್ದರಿಂದಲೇ ನಮ್ಮ ಮಟ್ಟಿಗೆ ಸತ್ಯವಾಗುತ್ತಿದೆ.

ಬಿಬಿಸಿಯು ದೇಶದ ನೈಜ ಚಿತ್ರಣವನ್ನು ಪ್ರದರ್ಶಿಸಲಿಲ್ಲವೆಂಬ ಕಾರಣದಿಂದ ರಾತ್ರಿ ಬೆಳಗಾಗುವುದರೊಳಗೆ ಅದರ ಕಛೇರಿಯನ್ನೇ ಕೇಂದ್ರ ಸರಕಾರ ಬಂದು ಮಾಡಿಸಿ ತನ್ನ ಕೆಚ್ಚು ತೋರಿಸಿತು—ಪ್ರತೀಕಾರ ವ್ಯಕ್ತಪಡಿಸಿತು. ಇಷ್ಟೊಂದು ಸತ್ವಯುಕ್ತ ಶ್ರೀಮತಿ ಗಾಂಧಿಯವರೂ ಅವರ ರಬ್ಬರ್ ಸ್ಟಾಂಪ್ ರಾಷ್ಟ್ರಪತಿಗಳೂ ಸೋವಿಯತ್ ಭೂಪಟದ ಬಗ್ಗೆ ಇನ್ನೂ ಇನ್ನೂ ಪ್ರತಿಭಟನೆಯಷ್ಟರಿಂದಲೇ ಸಂತೃಪ್ತರಾಗುವುದು ಜನತೆಗೆ ದ್ರೋಹ ಬಗೆದಂತೆಯೇ ಸರಿ. ತನ್ನ ಸ್ವಾರ್ಥಕ್ಕಾಗಿ ಮಿತ್ರನೊಬ್ಬನಿಗೆ ಅಪಚಾರವೆಸಗುವುದು ಯಾವ ನ್ಯಾಯ? ನಿಜವಾದ ಮಿತ್ರನು ತಾನು ಗಂಧದಂತೆ ತೇದು ಪರರಿಗೆ ಸಹಾಯಕನಾಗುತ್ತಾನೆ. ಸೋವಿಯತ್ತಿನ ವರ್ತನೆ ಮಿತ್ರವರ್ತನೆಯಲ್ಲವೆಂದು ಎಲ್ಲರೂ ತಿಳಿದಿದ್ದಾರೆ.

ಭಾರತವಾದರೋ ಎಲ್ಲರ ಮಿತ್ರ—ಶತ್ರುವನ್ನೂ ಪ್ರೀತಿಸುವ ಮಿತ್ರ. ಅದರಿಂದಲೇ ಅದು ಪಾಕಿಸ್ತಾನದ ಮೇಲೂ ಏರಿ ಹೋಗಲಿಲ್ಲ; ರಶ್ಯದೊಡನೆಯೂ ಮಾತಿನ ಜಗಳ ಕೆರೆಯುವುದಿಲ್ಲ. ಭೂಪಟ ತಿದ್ದಿಯೆಂದು ಕೇಳುತ್ತೇವೆ; 'ಹ್ಞಂ' ಕಾರದಿಂದಲೇ ತೃಪ್ತರಾಗುತ್ತೇವೆ. ಯಾವುದನ್ನು ಹೆಚ್ಚಾಗಿ ಚಿಂತಿಸಬೇಕೋ ಅದನ್ನು ಗಾಳಿಯಲ್ಲಿ ತೇಲಿಸಿ ಬಿಡುತ್ತೇವೆ. ಯಾವುದನ್ನು ತೇಲಿಸಿ ಬಿಡಬೇಕೋ ಅದನ್ನು ಭದ್ರವಾಗಿ ಹಿಡಿಯುತ್ತೇವೆ. ನಮ್ಮ ರಾಜ್ಯಕಾರಣಕ್ಕೆ ಬಡಿದ ಈ ಪೆಡಂಭೂತ ಬಿಟ್ಟು ಹೋಗುವವರೆಗೆ ನಾವು ಹೀಗೇ ಉಳಿಯುತ್ತೇವೆ; ಅಲ್ಲ, ಇನ್ನೂ ಕೆಳಗಿಳಿಯುತ್ತಲೇ ಹೋಗುತ್ತೇವೆ.

ಗಾಂಧಿಯ ಪಟದ ಕೆಳಗೆ ಗಾಂಧಿತತ್ವದ ಮಹತ್ವವನ್ನು ನಾವು ಬಡಬಡಿಸುವಾಗ ಆ ನಿರ್ಜೀವ ಪಟವೂ ಬಚ್ಚಬಾಯಲ್ಲಿ ನಗುತ್ತದೆ. ನೆಹರು ಪಟದ ಕೆಳಗೆ ನಿರ್ಲಿಪ್ತತೆಯ ಬಗ್ಗೆ ಉದ್ದುದ್ದ ಮಾತು ಹೇಳುವಾಗ ಅದರ ಕಣ್ಣುಗಳಿಂದ ನೀರಿಳಿಯುತ್ತದೆ. "ನನಗೆ ಈ ಯಾವ ತಾಪತ್ರಯವೂ ಇಲ್ಲ; ನನ್ನ ಬದುಕಿದೆ" ಎಂದು ಲಾಲಬಹದೂರ್ ಶಾಸ್ತ್ರೀಯವರ ಆತ್ಮ ಸಂತೋಷದ ನಿಟ್ಟುಸಿರು ಬಿಡುತ್ತದೆ.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ನವಯುಗ

ಮೂರಾಬಟ್ಟೆಯ ಮಾತು

ವಾರಪತ್ರಿಕೆ
ಉಡುಪಿ, ದ. ಕ.

NAVAYUGA
UDIPI, S. K.

ಸಂಪುಟ : 50
ಸಂಚಿಕೆ : 7

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ವಾರ್ಷಿಕ ಚಂದಾ ರೂ. 10
ವಿಶೇಷ ಸಂಚಿಕೆಗಳು ಸಹಿತ
ಬಿಡಿ ಪ್ರತಿ : 0—20

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವುದೇ ಪ್ರಕಟಣೆಗಳು ಕನಿಷ್ಟ ಮೂರು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಮನೆಗೆ ಬೆಂಕಿ ಬಿದ್ದ ಮೇಲೆ ನೀರಿಗಾಗಿ ಪರದಾಡುವವರ ಪರಿಸ್ಥಿತಿಯಲ್ಲೀಗ ಪ್ರಧಾನಿ ಶ್ರೀಮತಿ ಗಾಂಧಿಯವರು ಎದುರಿಸುತ್ತಾರೆ. ತಾನು ಹಿಡಿದದ್ದೇ ದಾರಿ, ತನ್ನ ನೀತಿಯೇ ಪ್ರಗತಿಶೀಲವೆಂದು ಡಂಗುರ ಸಾರುವ ಈ ಚಾಣಾಕ್ಷ ರಾಜ್ಯಕಾರಣಿ ದೇಶದ ಒಳಗೂ ಹೊರಗೂ ತನ್ನ ಬಲವನ್ನು ಬಹಿರಂಗ ಮಾಡಿ ಬಿಟ್ಟಿದ್ದಾರೆ. ಕೋಳಿಯೊಂದನ್ನು ತಿನ್ನುವುದಕ್ಕಾಗಿ ನರಿಯೊಂದು ಅದನ್ನೂ ಅದರಪ್ಪನನ್ನೂ ನಾನಾ ಪ್ರಕಾರವಾಗಿ ಹೊಗಳಿದಾಗ, ಹಿಗ್ಗಿ ಹೀರೇಕಾಯಿಯಾಗಿ ನರಿಯ ಮಾತಿನಂತೆ ಕಣ್ಣು ಮುಚ್ಚಿ ಕುಣಿಯತೊಡಗಿತಂತೆ; ಆಗಲೇ ನರಿ ಅದರ ಕತ್ತು ದಬ್ಬಿಕೊಂಡು ನುಂಗಿತಂತೆ. ಶ್ರೀಮತಿ ಗಾಂಧಿಯವರ ಪರಿಸ್ಥಿತಿ ಈ ಕೋಳಿಗಿಂತ ಬೇರೆಯಲ್ಲ. ಅದುದರಿಂದಲೇ ಅವರ ಕೃತಿಗಳು ತೂತಪ್ಪಿವೆ; ಅವರ ಮಾತು ಮೂರಾಬಟ್ಟೆಯಾಗಿವೆ. ಆಸೆಗೂ ಆಸೆಯ ಸುತ್ತ ಹೆಣೆದುಕೊಂಡ ಅಧಿಕಾರಲೋಲುಪರ, ಪ್ರಗತಿಶೀಲ ಲೇಬಲ್ ಹಚ್ಚಿಕೊಂಡವರಿಗೂ ದೃಢನೀತಿ ನಿಲುಕಲಾರದೆಂದು ಈಗೀಗ ಸ್ಪಷ್ಟವಾಗಿ ಅರ್ಥವಾಗುತ್ತಿದೆ.

ಕೇರಳದ ಮಧ್ಯಾವಧಿ ಚುನಾವಣೆಯ ವೇಳೆ ಬಲ ಕಮ್ಯುನಿಸ್ಟರು ಮತ್ತು ಮುಸ್ಲಿಂ ಲೀಗುಗಳ ನೈಚ್ಯ ಸಂಬಂಧವನ್ನು ಇಂಡಿಕೇಟ್ ಹೊಂದಿತ್ತು. ಈ ಸಂಬಂಧ ವನ್ನು ವೈತ್ರಿಯೆಂದು ಆರಂಭದಲ್ಲಿ ಹೇಳಲಾಯಿತು. "ಇಂಡಿಕೇಟ್" ಎಂಬುದು ಸಿ. ಐ. ಗೆ ಮತ್ತೊಂದು ಹೆಸರು ಎಂದು ಲೋಕಕ್ಕೇ ಗೊತ್ತು. ಲೀಗ ಜಾತೀಯ ಪಕ್ಷವೆಂಬುದು ಹಗಲಿನಷ್ಟು ಸ್ವಚ್ಛ. ಈ ದೇಶದ್ರೋಹಿ ಪಕ್ಷಗಳ ನೀತಿಯನ್ನು ಒಪ್ಪಿಕೊಂಡು ಅವುಗಳೊಡನೆ ಸಂಬಂಧ ಹೊಂದುವುದು ಅನುಚಿತವೆಂಬ ಅಭಿಪ್ರಾಯ ರೂಪುಗೊಂಡಿತು. ಆಗ ಶ್ರೀಮತಿ ಗಾಂಧಿ ಹೇಳಿದರು-ನಾವು ಅವುಗಳ ನೀತಿಯನ್ನು ಒಪ್ಪಿಕೊಂಡಿಲ್ಲ; ಅವುಗಳೇ ನಮ್ಮ ನೀತಿಯನ್ನು ಒಪ್ಪಿಕೊಂಡಿವೆ. ಆದುದರಿಂದ ಇದು ಹೇಯವೇನೂ ಅಲ್ಲ.' ಆರೆ, ಇದಕ್ಕೆ ಸಿ. ಪಿ. ಐ. ಯ ಗೋವಿಂದನ್ ನಾಯರ್ ನಿರ್ಧಾರವಾಗಿ ಪ್ರತಿಕ್ರಿಯೆ ತೋರಿಸಿದರೆ 'ಶ್ರೀಮತಿ ಗಾಂಧಿಯವರ ಹೇಳಿಕೆ ಅಕ್ಷ ವಂಚನೆಯದ್ದು' ಯೂ ಯಾರ ಮೈತ್ರಿಗೆ ಮುಂದುವರಿದರು ಎಂಬುದಕ್ಕೆ ಇದಕ್ಕಿಂತ ದೊಡ್ಡ ಉದಾಹರಣೆ ಬೇಕೆ?

ಚುನಾವಣೆಯ ನಂತರ ಮುಸ್ಲಿಂಲೀಗಿನಂತಹ ಜಾತೀಯ ಪಕ್ಷದ ಸಂಬಂಧದಲ್ಲಿ ಹಲವು ಬಗೆಯ ಟೀಕೆಗಳು ಬಂದವು. ಆದ ಅವನ್ನು ಸಂಪೂರ್ಣವಾಗಿ ಅಲ್ಲಗಳೆಯಲು ಶ್ರೀಮತಿ ಗಾಂಧಿ ಮುಂದುವರಿಯಲಿಲ್ಲ. ಮುಸ್ಲಿಂ ಲೀಗಿನಿಂದಾಗಿಯೇ ದೇಶ ವಿಭಜನೆಯಾಯಿತು ಎಂಬುದನ್ನೂ ಅಂತಹ ಪಕ್ಷದ ಮೈತ್ರಿ ತೀರ ಅನುಚಿತವೆಂದೂ ಹೇಳಿದಾಗ, ಅವರು ಅಂದರು—ಮುಸ್ಲಿಂಲೀಗು ಜಾತೀಯ ಪಕ್ಷವಿರಬಹುದು. ಆದರೆ, ಕೇರಳದಲ್ಲಿ ಮಾತ್ರ ಅದು ಜಾತೀಯ ಪಕ್ಷವಾಗಿಲ್ಲ. ಅಲ್ಲಿನ ಲೀಗಿಗೂ ಇತರೆಡೆಯ ಲೀಗಿಗೂ ಅಜಗಜಾಂತರವಿದೆ." ಒಂದು ಹುತ್ತದ ನಾಗರ ಹಾವು ತನ್ನ ವಿಷವನ್ನು ಬಿಟ್ಟು ಕೊಡುತ್ತದೆಯೆಂಬ ಆಧುನಿಕ ಸಂಶೋಧನೆ ಮಾಡಿದ್ದಕ್ಕಾಗಿ ಶ್ರೀಮತೀಜಿಗೆ ಡಾಕ್ಟರೇಟ್ ಪದವಿ ನೀಡಲು ಯಾವ ವಿಶ್ವವಿದ್ಯಾಲಯವೂ ಮುಂದೆ ಬರಲಿಲ್ಲ. ತನ್ನ ನೆರಿಗೆಯಲ್ಲಿ ಅಡಗಿ ಕೊಂಡಿರುವ ನಾಗರಕ್ಕೆ ವಿಷವಿಲ್ಲವೆಂದು ಅಕೆ ನಂಬಿರುವುದಾದರೆ, ಅದು ಮೂರ್ಖತನದ ಪರಮಾವಧಿಯೆಂದು ಹೇಳಲೇಬೇಕು. ಮುಸ್ಲಿಂ ಲೀಗನ್ನು ಮತ್ತೊಮ್ಮೆ ರಾಷ್ಟ್ರೀಯ ಪಕ್ಷವಾಗಿ ಕಟ್ಟುವ ಪ್ರಯತ್ನ ಅಲ್ಲಲ್ಲಿ ನಡೆಯುತ್ತಿರುವಾಗ, ಶ್ರೀಮತಿ ಗಾಂಧಿಯವರ ಜಾತ್ಯತೀತತಾ ಪ್ರಶಸ್ತಿಪತ್ರ ಅದಕ್ಕೆ ಬೆಂಗಾವಲಾಗಿ ನಿಲ್ಲುವುದು ನಿಸ್ಸಂಶಯ. ತಾನು ಹೇಳಿದವರನ್ನು ಕಚ್ಚಿ ಸಾಯಿಸುತ್ತಿರುವವರಿಗೆ ಶ್ರೀಮತಿಯವರು ಲೀಗಿನ ಹಾವುಗಳನ್ನು ಸಾಕುತ್ತಾರೆ; ಅವು ಬಲಿತು ತನಗೇ ಕಚ್ಚ ಬಂದಾಗ ಕೊಂದೇ ಬಿಡುತ್ತಾರೆ.

ಮೊನ್ನೆ ಮೊನ್ನೆ ಅಜಮೀರದಲ್ಲಿ ಶ್ರೀಮತಿ ಗಾಂಧಿ ಸಿ. ಪಿ. ಐ.— ಲೀಗ್ ಸಖ್ಯಕ್ಕೆ ಹೊಸ ಕಾರಣವನ್ನೂ ಹೆಸರನ್ನೂ ಕೊಟ್ಟರು. ಅದು ಮೈತ್ರಿಯಲ್ಲ; ಸ್ಥಾನಗಳ ಹೊಂದಾಣಿಕೆ ಮಾತ್ರವೆಂದರು (ಇದನ್ನು ತಿಳಿದ ಅಚ್ಯುತ ಮೇನನ್ನರ ಪ್ರತಿಕ್ರಿಯೆಗಾಗಿ ಕಾದು ನೋಡಬೇಕು. ತನ್ನ ಸಚಿವ ಸಂಪುಟಕ್ಕೆ ಅಚಲ ಬೆಂಬಲ ನೀಡುವುದೆಂದು ನಂಬಿದ ಅವರಿಗೆ ಹೃದಯಾಘಾತವಾಗದಿದ್ದರೆ, ಅದು ಸಿ. ಪಿ. ಐ. ಯ ಪುಣ್ಯಬಲದಿಂದ!) "ಮಾರ್ಕ್ಸಿಸ್ಟರು ದೇಶದ ಮಹಾವೈರಿಗಳು; ಅವರನ್ನು ಸದೆಬಡೆಯುವುದಕ್ಕಾಗಿಯೇ ಸಿ. ಪಿ.ಐ; ಮತ್ತು ಮುಸ್ಲಿಂ ಲೀಗುಗಳೊಂದಿಗೆ ಚುನಾವಣಾ ಹೊಂದಾಣಿಕೆ ಮಾಡಿಕೊಂಡೆವು. ಅವರಿಗೆ ಬೀಳಬಹುದಾಗಿದ್ದ ಮತಗಳು ಹಂಚಿ ಹೋಗುವಂತೆ ನೋಡಿಕೊಂಡೆವು. ನಮ್ಮದು ಮೈತ್ರಿ ಅಲ್ಲ; ದೇಶದ ಹಿತದೃಷ್ಟಿಯಿಂದ ಮಾಡಿಕೊಂಡ ಚುನಾವಣಾ ಹೊಂದಾಣಿಕೆ ಮಾತ್ರ. ನಮಗೂ ಅವರಿಗೂ ಯಾವ ಮೈತ್ರಿಯೂ ಇಲ್ಲ. ದೇಶದ ಹಿತದೃಷ್ಟಿಯಿಂದ ಇದು ಅಗತ್ಯವಾಗಿತ್ತು. ಈಗ ಸಿ. ಪಿ. ಐ. ನೇತೃತ್ವದ ಕಿರುರಂಗದ ಸರಕಾರಕ್ಕೆ ಬೆಂಬಲ ನೀಡುವುದು ದೇಶದ ಹಿತದೃಷ್ಟಿಯಿಂದ ಮಾತ್ರ!

ಒಂದು ವಿಷಯಕ್ಕೆ ಸಂಬಂಧಿಸಿದ ಈ ಮೂರಾಬಟ್ಟೆ ವ್ಯಾಖ್ಯಾನ ಶ್ರೀಮತಿ ಗಾಂಧಿಯವರು ಕೈಕಾಲು ಬಿಡತೊಡಗಿದ್ದಾರೆಂಬುದರ ದ್ಯೋತಕವೆ? ಹಿಂತ ನೆಲಕ್ಕೆ ವಾತಾವರಣಕ್ಕೆ ಹೊಂದಿಕೆಯಾಗುವ ಮಾತಾಡುತ್ತ ಜನರನ್ನೂ ತನ್ನನ್ನೂ ವಂಚಿಸುವ ಗಾಂಧಿತಂತ್ರವೆ?

ಕಮ್ಯೂನಿಜಂ ಬೀಜ

ರಾಷ್ಟ್ರಪತಿ ಶ್ರೀ ವಿ. ವಿ. ಗಿರಿಯವರು ಸೋವಿಯತ್ತು ಸಂಚಾರ ಮಾಡಿಬಂದರು. ಅವರಿಗೆ ಅಲ್ಲಿ ಸಾಂಪ್ರದಾಯಿಕವಾದ (ಪೂರ್ವಕವಾದ ಅಲ್ಲ) ಅದ್ದೂರಿಯ ಸ್ವಾಗತ ಸಿಕ್ಕಿತು. ಆದರೆ, ರಷ್ಯ— ಭಾರತ ಸಂಬಂಧ-ಸ್ನೇಹ ಚಿರಾಯುವೆಂಬ 'ಉಭಯ ಕುಶಲೋಪರಿ' ಘೋಷಣೆಯನ್ನು ಬಿಟ್ಟು 'ಸಾಂಸ್ಕೃತ'ಕ್ಕೆ ಬರುವುದು ಸಾಧ್ಯವಾಗಲಿಲ್ಲ. ನೇಫಾ-ಲಡಕಗಳನ್ನು ಚೀನದ್ದೆಂದು ತೋರಿಸಿದ ನಕ್ಷೆಯನ್ನು ತಿದ್ದುವುದಕ್ಕಾಗಲೀ, ಪಾಕಿಸ್ತಾನಕ್ಕೆ ನೀಡುವ ಶಸ್ತ್ರಾಸ್ತ್ರಗಳನ್ನು ತಡೆಯುವುದಕ್ಕಾಗಲೀ, ಭಾರತಕ್ಕೆ ನೀಡ ಬೇಕಾಗಿ ಒಪ್ಪಿಕೊಂಡ ಶಸ್ತ್ರಾಸ್ತ್ರಗಳನ್ನು ಪೂರೈಸುವಲ್ಲಿ ಉದ್ದೇಶಪೂರ್ವಕ ತಳುವುದನ್ನು ನಿವಾರಿಸ ಲು ಅವರಿಗಾಗಲೀ ಅವರು ಶಕ್ತರಾಗಲಿಲ್ಲ. 'ಸಾಂವಿಧಾನಿಕ ಅಲಂಕಾರ ಮೂರ್ತಿ'ಯಾದ ರಾಷ್ಟ್ರಪತಿಗಳು ಇವೆಲ್ಲವುಗಳ ಬಗ್ಗೆ ಚರ್ಚೆ ನಡೆಸುವುದಿಲ್ಲವೆಂದು ಹೇಳುವುದಾದರೆ, ಹವಾಬದಲಾವಣೆಗೆಂದು ಹೋದರೆ ಎಂದು ಶ್ರೀ ಸಾಮಾನ್ಯ ಕೇಳಬೇಕಾಗುತ್ತದೆ. ಲಕ್ಷಾಂತರ ರೂಪಾಯಿಗಳನ್ನು ತಿನ್ನುವ ಈ ವ್ಯರ್ಥ ಸಂಚಾರಗಳ 'ಐಸೋಲಂಪು'ವೆಂದು ಆತ ತಿಳಿದರೆ ಆಶ್ಚರ್ಯವಿಲ್ಲ.

ನಮ್ಮ ಸಂರಕ್ಷಣಾ ಸಚಿವ ಹಾಗೂ ಇಂಡಿಕೇಟಧ್ಯಕ್ಷ ಹಾಗೂ ಮುರವಿಷ ಮೂರ್ತಿ ಶ್ರೀ ಜಗಜ್ಜೀವನರಾಮರು ಅಮೆರಿಕೆಯು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ನೆರವು ನೀಡಲು ಮಾಡಿದ ನಿರ್ಧಾರವನ್ನು ಬಲವಾಗಿ ಖಂಡಿಸಿದ್ದಾರೆ. ಇದು ಉಪಖಂಡದ ವಾತಾವರಣವನ್ನು ಕಲುಷಿತಗೊಳಿಸುವುದೆಂದು ಕಳವಳ ವ್ಯಕ್ತಪಡಿಸಿದ್ದಾರೆ. ಅದರ ಜತೆಗೇ ರಷ್ಯವು ಉದ್ದೇಶಪೂರ್ವಕವಾಗಿ ನಮ್ಮ ಪೂರೈಕೆಯನ್ನು ವಿಲಂಬಿಸುತ್ತಿದೆಯೆಂಬುದನ್ನು ಒಪ್ಪಲಿಲ್ಲ. 'ಯಾವ ಧಾಳಿ ನಡೆದರೂ ನಮ್ಮ ಸೈನಿಕರು ಎದುರಿಸಲು ಸಿದ್ಧರೆಂದು ಹೇಳುತ್ತಾರೆ' ಎಂದು ಶ್ರೀ ರಾಮ್ ಅನ್ನುತ್ತಾರೆ (ಅವರಿಗೆ ಗೊತ್ತಿಲ್ಲ?) ನಮ್ಮ ಕೇಂದ್ರ ಸರಕಾರದ ನೀತಿ ರಷ್ಯದತ್ತ ಒಲಿದಿದೆ; ಆದ ದರಿಂದಲೇ ಅದನ್ನು ಖಂಡಿಸಲು ನನಗೆ ಉಗ್ರ ಶಬ್ದಗಳೂ ದೊರೆಯುವುದಿಲ್ಲ; ಧೈರ್ಯವಂತೂ ಇಲ್ಲವೇ ಇಲ್ಲ. ಆದರೆ, ಅಮೆರಿಕೆಯ ಬಗ್ಗೆ ಹಾಗಲ್ಲ. ಇತ್ತೀಚೆಗಿನ ದಿನಗಳಲ್ಲಿ ಅಮೆರಿಕೆ-ರಷ್ಯಗಳಲ್ಲಿನ ಪೈಪೋಟಿ ಹೆಚ್ಚು ಮಾಗುತ್ತಿದೆ. ಅವೆರಡರ ನಡುವೆ ಮತ್ತೆ ಪರದೆ ಬೀಳುತ್ತಿರುವುದು ಗೋಚರವಾಗುತ್ತಿದೆ. ಶ್ರೀಮತಿ ಗಾಂಧಿಯವರ ರಷ್ಯನ್ ಪ್ರೀತಿಯಾಗಿಯೇ ದೇಶವನ್ನು ನಡೆಸುತ್ತಾರೆ. ಆದರೆ, ರಷ್ಯದ

(ಪಕ್ಕನೇ ಪುಟ ನೋಡಿ)

ಮುಂದಿನ ವಾರ ರಜೆ

ತಾ. 29—10—70ಕ್ಕೆ ಪ್ರಕಟವಾಗುವ ದೀಪಾವಳಿ ಸಂಚಿಕೆಯ ಕಾರ್ಯಬಾಹುಳ್ಯದ ದೆಸೆಯಿಂದ ಮುಂದಿನ ವಾರದ (ತಾ. 22—10—70ರ) ಸಂಚಿಕೆಯನ್ನು ನಿಲ್ಲಿಸಲಾಗಿದೆ. ವಾಚಕರು ದಯಮಾಡಿ ಗಮನಿಸಬೇಕಾಗಿ ವಿನಂತಿ.

—ಮ್ಯಾನೇಜರ್.

ಗೇಹರಾಜ್ಯದಲ್ಲಿ
ಕಪಿಮುಷ್ಟಿಯೊಳಗೆ ಹಕ್ಕಿ

'ಏ, ಪುಟು ಇತ್ತ ಬಾರೇ....'

"ಅಲ್ಲ, ಮನೇ ಪೆಟ್ಟಿಗೆ ಏನಂತ್ಲೊ ಏನಾಗುತ್ತೇಂತ ಹಿವ್ಗೆ...."

'ಹಾಗಲ್ವೆ, ನಿನ್ನ ಹಾಗೆ ಕೂಗಿದ್ರೆ ಅದ್ಕಾಕೆ ನಖಶಿಖಾಂತವೇರುತ್ತೇ ಸಿಂಗೆ'

"ಅಹ, ನನ್ಗೆ ಏರುತ್ತಂತೆ, ನನ್ಗೆ...."

"ಮತ್ಯಾರಿಗೆ?"

"ಮತ್ಯಾರಿಗೇಂದ್ರೆ,....ಮತ್ಯಾರಿಗೆ, ನಿನ್ಗೆ..."

"ಇದೊಳ್ಳೆ ಕತೆಯಾಯ್ತು. ಅಲ್ಲಾ, ಪುಟು ಇತ್ತ ಬಾರೇಂದ್ರೆ ಉಗು ಮುಖದು ಹಾಕಿಕೊಂಡು...."

"ನಾಳು ಬಿಡೀಂದ್ರೆ....ಅಜಿ ಈಜಿ ಮನೆಯ ವ್ರ ಯೂರಾಜ್ರೂ ಕೇಳಿದ್ರೆ...."

"ಕೇಳ್ಲಿಬಿಡೆ, ಅಕ್ಕನವ್ರು ಹೇಳಿದ್ದಾರೆ ಸಂತೆಯೊಳಗೊಂದು ಮನೆ ಮಾಡಿ ಜನ ಕಂಜಿದಡೆಂತಯ್ಯ...."

"ಅಕ್ಕನವ್ರು ಹೇಳಿದ್ದಾರೆ; ಅಣ್ಣನವ್ರು ಹೇಳಿದ್ದಾರೆ...."

"ಏನಂತ?'

'ವಿಜಯ ದಶಮಿಗೆ ಮನೆ ಬಾರಂತ'

'ಓ, ಮರ್ತೇ ಹೋಯ್ತು ಕಣೆ....'

'ಏನು?'

"ನಾಳೆ ವಿಜಯದಶಮಿ..."

'ಅಲ್ಲ, ಯಾರ ಮೇಲೆ ವಿಜಯ ಸಾಧಿಸಿದ ದಶಮಿ?'

'ರಾವಣನ ಮೇಲೆ ರಾಮ ವಿಜಯಗಳಿಸಿದ್ದು, ದುರ್ಯೋಧನನ ಮೇಲೆ ಅರ್ಜುನ ವಿಜಯಗಳಿಸಿದ್ದು....ಅಂದ್ರೆ ತಮೋಗುಣದ ಮೇಲೆ ರಜೋಗುಣದ ಸಹಾಯದಿಂದ ಸತ್ವಗುಣ ವಿಜಯ ಸಾಧಿಸಿದ್ದು....'

"ಹ್ಞಂ...ಅಲ್ಲರಿ, ಈಗ ಇದೆಲ್ಲ ಪುರಾಣದ ಕಟ್ಟುಕತೆ..."

"ಅದೂ ಹೌದನ್ನು. ನೋಡು, ಕಳೆದ ವಿಜಯದಶಮಿಯವರೆಗೂ ಜಂಬೂಸವಾರಿ ನಡೆಸುತ್ತಿತ್ತು. ಇದು ನಮ್ಮ ಪೀಳಿಗೆಗೆ ಸತ್ಯಕಥೆ ಆದರೆ, ನಮ್ಮ ಮುಂದಿನ ಪೀಳಿಗೆಗೆ ಇದು ಪುರಾಣ ಪೋಥಿ ಮಾತ್ರ...'

"ಹ್ಞಂ, ಮುಂದಿನ ಕಾಲದ ಅಜ್ಜಿಯರು ಈ ಕಥೆ ಹೇಳಬಹುದು....'

"ಅಲ್ಲವೇ ಮತ್ತೆ? ಮೈಸೂರು ಎಂಬುದೊಂದು ದೇಶವಿತ್ತಂತೆ. ಅಲ್ಲಿ ಮಹಾರಾಜಾಧಿರಾಜರು ಆಳುತ್ತಿದ್ದರಂತೆ. ಒಂದು ದಿನ ಬಿಳಿ ಬಣ್ಣದ ರಾಜರು ಅವರಿಗೂ ನೆರೆಕರೆಯವರಿಗೂ ಸ್ವಾತಂತ್ರ್ಯ ನೀಡಿದರಂತೆ. ಸರ್ದಾರ ಪಟೇಲರೆಂಬ ದೊಡ್ಡವರು ಎಲ್ಲ ರಾಜರನ್ನೂ ಒಪ್ಪಿಸಿ ಅವರ ರಾಜ್ಯವನ್ನು ಭಾರತ ದೇಶದಲ್ಲಿ ಸೇರಿಸಿದರಂತೆ. ಇದಕ್ಕೆ ಬದಲಾಗಿ ರಾಜರಿಗೆ ರಾಜ ಎಂಬ ಮನ್ನಣೆಯನ್ನೂ ಕಪ್ಪವನ್ನೂ ನೀಡುತ್ತಿದ್ದರಂತೆ....'

"ಮೈಸೂರಿನ ಒಡೆಯರೂ ರಾಜಧನ ಪಡೆಯುತ್ತಿದ್ದರಂತೆ. ವಿಜಯದಶಮಿಯಂದು ದರ್ಬಾರು ನಡೆಸುವುದು, ಜಂಬೂ ಸವಾರಿ ಮಾಡುವುದು ಅವರ ಸಂಪ್ರದಾಯವಿತ್ತಂತೆ...."

"ಕೆಲವು ವರ್ಷಗಳು ಕಳೆದವಂತೆ. ಇಂದಿರಾ ಎಂಬಾಕೆ ಭಾರತದ ಗದ್ದುಗೆಯೇರಿದಳಂತೆ. ಮೊದಲು ಇಲಿಯಂತಿದ್ದವಳು ಸಿಂಹಾಸನಾರೋಹಣ ಮಾಡುತ್ತಲೇ ಹುಲಿಯಂತಾದಳಂತೆ. ತನಗೆ ಗದ್ದುಗೆ ನೀಡಿದವರನ್ನು ದೇಶ ಭ್ರಷ್ಟಗೊಳಿಸಿದಳಂತೆ. ರಾಜ – ಮಹಾರಾಜರಿಗೆ ನೀಡುತ್ತಿದ್ದ ರಾಜಧನ–ಮಾನ್ಯತೆ ಮೊದಲಾದುವನ್ನು ನಿಲ್ಲಿಸಿದಳಂತೆ...."

"ಮೈಸೂರಿನ ರಾಜರ ರಾಜಪದವನ್ನೂ ಕಿತ್ತುಕೊಂಡಳಂತೆ. ಅಂದಿನಿಂದ ದರ್ಬಾರು-ಜಂಬೂಸವಾರಿ ನಿಂತುಹೋಯ್ತಂತೆ...."

'ಆಗ ಮೊಮ್ಮಗಳು ಕೇಳುತ್ತಾಳೆ'

"ಏನೂಂತ?"

'ಅಜ್ಜೀ, ಜಂಬೂ ಅಂದರೆ ಏನು?'

"ಅದಕ್ಕೆ ಅಜ್ಜಿ ಉತ್ತರಿಸುತ್ತಾಳೆ—ಜಂಬೂ ಅಂದರೆ, ಜಂಬು ನೇರಳೆ ಆಕಾರದ ನೋಟಾಗು ಆದು ಎಂದು...."

'ಇದು ಭಾರೀ ತಮಾಷೆಯಾಗಿರುತ್ತದೆ'

"ಅದು ಏನೇ ಆಗಲಿ, ಅಂತೂ ಮೈಸೂರಿನ ಇತಿಹಾಸ ಪ್ರಸಿದ್ಧ ಜಂಬೂ ಸವಾರಿಯಿಲ್ಲದೇನೇ ವಿಜಯದಶಮಿ ಬಂದು ಹೋಗುತ್ತದೆ..."

"ಅಲ್ಲವೇ ಮತ್ತೆ, ಕುರುಡನಿಗೆ ಅರಿವಿಲ್ಲವಾದರೂ ದಿನ ಕಳೆದೇ ಹೋಗುತ್ತದೆ. ಅದಿರ್ಲಿ, ನೋಡಿ, ನಮ್ಮ 'ಆತ್ಮ ಸಾಕ್ಷಿ'ಯ ರಾಷ್ಟ್ರಪತಿಗಳು ಕಮ್ಯುನಿಸ್ಟ ಜಗತ್ತನ್ನು ಸಂಚರಿಸಿ ಬಂದ್ರಲ್ಲಾ....?'

'ಬಾರದೇನ?'

'ಯಾಕೆ ಅಷ್ಟು ಉದಾಸೀನರಾಗಿದ್ದೀರಿ?'

"ಅಲ್ವೆ, ಕಮ್ಯುನಿಸ್ಟ್ ಗುರು ಸೋವಿಯತ್ತು ರಶ್ಯ...."

"ಹೂಂ, ನಮ್ಮ ಪರಮ ಮಿತ್ರ..."

'ಯಾರು ಅಲ್ಲಾಂತಾರೆ? ಅದ್ರೆ ಈ ಮಿತ್ರತ್ವ ಎಷ್ಟು ದಿನಾಂತ ಲೆಕ್ಕ ಮಾಡಲು ಶುರು ಮಾಡಬೇಕ..."

"ಅಲ್ಲಾರೀ, ನೀವ್ಯಾಕೆ ಹಾಗನ್ನುತ್ತೀರಿ? ನಮ್ಮ ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಎತ್ತಿಕೊಡಲು ಅಮೇರಿಕೆ ಬಯಸಿದಾಗ, ಅದನ್ನು ತಡೆದದ್ದು...."

"ಅದೆಲ್ಲ ಹೌದಪ್ಪ. ನೋಡು, ತಮ್ಮ ರಶ್ಯದ ಗೆಳೆತನ ಬಹಳದಿನ ಮುಂದುವರಿಯುವುದು ಕಷ್ಟ...."

'ಮತ್ತೆ ಶ್ರೀಮತಿ ಇಂದಿರಾ ಗಾಂಧಿಯವರು ರಶ್ಯದಿಂದ ರಶ್ಯಪರ ಕಮ್ಯುನಿಸ್ಟರಿಂದ ಸ್ಫೂರ್ತಿ ಪಡೆಯುತಿದ್ದಾರೆ.'

"ಎಲ್ಲಾ ಸರಿ, ಆದರೆ ನೋಡು, ಕಮ್ಯುನಿಸ್ಟರೂ ಎಲ್ಲಿ ಒಂದಾಗಿದ್ದಾರೆ? ಕೆಂಪು ಚೀನಾದ ಕಮ್ಯುನಿಜಂ ಸೋವಿಯತ್ತಿನದಕ್ಕಿಂತ ಬೇರೆ. ಹಾಗೆಯೇ...."

'ರೂಸೀ ಹಿಂದೀ ಬಾಯಿ ಭಾಯಿ ಅಂತ....'

"ಯಾರಲ್ಲಾಂತಾರೆ? ಒಂದು ಕಾಲದಲ್ಲಿ ಹಿಂದೀ ಚೀನೀ ಭಾಯಿ ಭಾಯಿ ಅಂತ ಕೈ ಕುಲುಕಲಿಲ್ಲವೆ?"

'ಅದು ಹೌದು; ಅಲ್ಲ, ಇದೇನು ಅಪಸ್ವರಾಂತ?'

"ಅಪಸ್ವರವಲ್ಲವಿದು ಸತ್ಯ ಸಂಗತಿ. ನೋಡು, ಭಾರತದ ನೆಲವನ್ನು ಚೈನಾಕ್ಕೆ ಕೊಟ್ಟ ಭೂಪಟವನ್ನು ತಿದ್ದಲು ರಶ್ಯದ ನಾಯಕರು ಇನ್ನೂ ಸಿದ್ಧರಿಲ್ಲ...."

'ಅಲ್ರಿ, ಅದನ್ನ ಪರಿಶೀಲಿಸುತ್ತೇವೆಂತ ಹೇಳಿದ್ದಾರಲ್ಲಾ?'

'ಹೇಳಿದ ಮೇಲೆ ಆ ಭೂಪಟ ಎಷ್ಟು ಮುದ್ರಣ ಕಂಡಿತು ಹೇಳು....'

"ಅದು ಹೌದು...."

"ಅದ್ರ ಮೇಲೆ ಪಾಕಿಸ್ತಾನಕ್ಕೆ ಬಹಳ ಮೊತ್ತದ ಶಸ್ತ್ರಾಸ್ತ್ರಗಳನ್ನು ಅದು ಕೊಡುತ್ತಿದೆ...'

'ಅಲ್ರಿ, ಅದು ಅವರವರ ವ್ಯವಹಾರ. ನಾವ್ಯಾರು ಅದನ್ನು ತಡೆಯಲಿಕ್ಕೆ?"

'ಅದು ಸರಿಯಪ್ಪ. ಆದ್ರೆ, ಮಿತ್ರತನದ ಪ್ರತೀಕವಿದಲ್ಲ...ಹೋಗಲಿ ಬಿಡು. ಮೊನ್ನೆ ಮೊನ್ನೆ ನಮ್ಮ ರಾಷ್ಟ್ರಪತಿಗಳು ರಶ್ಯ ಸಂಚಾರ ಮಾಡಿದಾಗ ಅವರಿಗೆ...."

"ಅದ್ದೂರಿಯ ಸ್ವಾಗತ ದೊರೆಯಿತು"

"ಹ್ಞಾ... ಈ ಅದ್ದೂರಿಯಲ್ಲಿ ಹೃದಯ ಪೂರ್ವಕತೆ ಇರಲಿಲ್ಲವಂತೆ. ಬರಿಯ ಸಾಂಪ್ರದಾಯಿಕ ಸ್ವಾಗತವಾಯ್ತಂತೆ"

'ಹ್ಞಾಂ....'

"ಕೊನೆಗೂ ಕೋಸಿಗಿನ್—ಗಿರಿ ಭೇಟಿ ನಡೆಯಲೇ ಇಲ್ಲವಂತೆ...."

"ಹೌದೇ?"

'ಅದೇ ನೋಡು, ಫ್ರೆಂಚ ಅಧ್ಯಕ್ಷ ಪಾಂಪಿಡೊರಿಗೆ ದೊರೆತದ್ದು ಹೃತ್ಪೂರ್ವಕ ಸ್ವಾಗತವಂತೆ....'

"ಅಲ್ಲಾರೀ, ಅದೇನು ಹಾಗೇಂತ?'

'ಏನು ಅಂದರೆ? ಯಾರನ್ನು ಯಾವ ಕಾಲದಲ್ಲಿ ಎತ್ತಿ ಇಡಬೇಕು ಅನ್ನೋದನ್ನ ಕಮ್ಯುನಿಷ್ಟರಿಂದ ಕಲಿತುಕೊಳ್ಳಬೇಕು ಕಣೇ, ಕಮ್ಯುನಿಸ್ಟರಿಂದ ಕಲೀಬೇಕು...'

"ಹ್ಞಂ...'

"ರಾಷ್ಟ್ರಪತಿ ಶ್ರೀ ವಿ. ವಿ. ಗಿರಿಯವರು ಪ್ರಧಾನಿ ಶ್ರೀಮತಿ ಗಾಂಧಿಯ ಕೈಗಳಲ್ಲಿ ಬಂಧಿಯಾಗಿದ್ದಾರೆ; ಶ್ರೀಮತಿ ಗಾಂಧಿಯವರು ಕಮ್ಯುನಿಸ್ಟರ ಕಪಿ ಮುಷ್ಟಿಯೊಳಗಿದ್ದಾರೆ'

'ಹ್ಞಂ...'

'ಹಕ್ಕಿ ಗೂಡಿನಿಂದ ಇನ್ನು ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲವೆಂದು ಸೋವಿಯತ್ತು ನಾಯಕರಿಗೂ ಗೊತ್ತು; ಕೆಂಪು ಚೀನೀ ಧುರೀಣರಿಗೂ ಗೊತ್ತು....'

"ಅಂದ್ರೆ, ಶ್ರೀಮತಿ ಗಾಂಧಿಯವರು ಗಾಂಧಿವಾದದಿಂದ ಮಾವೋವಾದವನ್ನು ಮೆಚ್ಚಿದರು....'

'ಅವರು ಮೆಚ್ಚಲಿ, ಬಿಡಲಿ, ಅದ ದೊಡ್ಡದಲ್ಲ. ಅಧಿಕಾರದ ಗದ್ದುಗೆಯನ್ನು ಉಳಿಸಿಕೊಳ್ಳಲು ಅವರು ಏನು ಬೇಕಾದರೂ ಮಾಡಲು ಸಿದ್ಧರು.'

"ಜಂಬೂ ಸವಾರಿಯೂ?"

"ಈಗ ಅವರು ಮಾಡುತ್ತಿರುವುದು ಜಂಬೂಸವಾರಿಯಲ್ಲ ಜಂಬೂಕ ಸವಾರಿಯನ್ನು. ದೇಶವನ್ನು ಕಮ್ಯುನಿಷ್ಟರಡೆಗೆ ಒಯ್ಯುತ್ತಾರೆ, ಸಮಾಜವಾದದ ಮುಂದೆ ಬೂದಿಯೆರಚುತ್ತಾರೆ. ಸೆಟ್ಟಿಸಿಂಗಾರ ಮಾಗುವಾಗ ಪಟ್ಟಣ ಸೂರೆಯಾಗಿ ಹೋಗುತ್ತದೆ.'

"ಊರಿಗೆ ಬಂದದ್ದು ಕೇರಿಗೆ ಬಾರದುಳಿಯುವುದಿಲ್ಲ"

"ಊರಿಗೆ ಬಂದ ಮಾರಿಯನ್ನು ದೂರ ಅಟ್ಟದೆ ಕುಳಿತರೆ ನಾನೂ ನೀನೂ ಎಲ್ಲರೂ ಅದಕ್ಕೆ ಸ್ವಾಹಾ...."

'ಹೌದು, ಇದ ಎಲ್ಲರಿಗೂ ಹೇಗೆ ಗೊತ್ತಾಗಬೇಕು?'

'ಸುಣ್ಣದ ನೀರೂ ಬೆಳ್ಳಗಿದೆಯೆಂದು ಹಾಲೆಂದು ಭ್ರಮಿಸಿ ಕುಡಿಯುವ ಮುಗ್ಧ ಪ್ರಜೆಗಳು ತೃಣಕ್ಕಿಂತ ಕೀಳಾಗಿದ್ದಾರೆ'

"ಇದು ಎಷ್ಟು ಬೇಗ ಜನತೆಗೆ ತಿಳಿಯುತ್ತೋ ಅಷ್ಟು ಬೇಗ ದೇಶ ಪಾತಾಳದಿಂದ ಮೇಲೇರುತ್ತದೆ....'

"ಹ್ಞಾಂ..."

"ಏನ?"

"ಏನೂ ಇಲ್ಲಾ..."

ಅಬ್ಬಾ....' — ಗೋರಾ

ನವಯುಗದ ಹೊಸ ವರ್ಷ

ಚಂದಾದಾರರಲ್ಲಿ ವಿನಂತಿ

ಇದೇ ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 49ನೆಯ ವರ್ಷ ಮುಗಿದು ಸಪ್ಟಂಬರದಿಂದ 50ನೆಯ ಹೊಸ ವರ್ಷಾರಂಭವಾಗಿದೆ. ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಅದಷ್ಟು ತ್ವರಿತವಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ. ಚಂದಾ ಹಣವನ್ನು ಮನಿಆರ್ಡರು ಮೂಲಕ, ಯಾ ಇಂಡಿಯನ್ ಪೋಸ್ಟಲ್ ಆರ್ಡರು ಮೂಲಕ ಕಳಿಸಬಹುದು. ಅಲ್ಲದೆ ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಪಾವತಿ ಮಾಡಬಹುದು. ಹಾಗೆ ಪಾವತಿ ಮಾಡುವಾಗ ತಮ್ಮ ಚಂದಾನಂಬ್ರ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇವೆ.

ಚಂದಾಹಣಕ್ಕಾಗಿ ಪತ್ರಿಕೆಯನ್ನು ವಿ. ಪಿ. ಮೂಲಕ ಕಳಿಸಿದರೆ ಈಗಿನ ಹೆಚ್ಚಿಸಿದ ಅಂಚೆ ದರದಿಂದಾಗಿ ರೂ. 1–40 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ದಯಮಾಡಿ ಚಂದಾವನ್ನು ಮೇಲಿನಂತೆ ಕಳಿಸಬೇಕಾಗಿ ಬಿನ್ನವಿಸುತ್ತೇವೆ.

ಮೆನೇಜರ್.

ಮಿತ ಕುಟುಂಬ ಯೋಜನೆಗೆ ಅತ್ಯುಪಯುಕ್ತ ಪುಸ್ತಕ

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ;

ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಪಾಲುಕೋಟೆ, ಉಡುಪಿ, ದ. ಕ.

ಹೇಳುವದು ಶಾಸ್ತ್ರ ಇಕ್ಕುತ್ತಿರುವದು ಗಾಳ

ಅಬ್ಬಾ! ಅದೆಂತಹ ಬಂಡೆ! ಆ ಬಂಡೆಯ ಸ್ಪರ್ಶಮಾತ್ರದಿಂದಾಗಿಯೇ ಹೃದಯವೂ ಬದಲಾಗುತ್ತದೆ. ಬರಿಸು ಹೃದಯ ಪಾಷಾಣದಲ್ಲಿ ವಾತ್ಸಲ್ಯಮಯಿ ಭಾರತಮಾತೆಯ ಸಜೀವ, ಚೈತನ್ಯಮಯ ಮೂರ್ತಿ ಕೆತ್ತಲ್ಪಡುತ್ತದೆ. ದೇಶವೆಂದರೆ ಕಲ್ಲು–ಮುಳ್ಳು–ಮಣ್ಣು–ನೀರು ವೆಂದೆಲ್ಲಾ ಹೇಳುವವರೂ ಆ ಸ್ಪರ್ಶದಿಂದಾಗಿ ಭಾರತಮಾತೆಯೆನ್ನುವದು ಇದೇ ಅವರು ಅರಿತುಕೊಂಡಿರುವ ದೇಶವನ್ನು. ಏನು ಮಾಡಬೇಕು?.... ಪರಿವ್ರಾಜಕ ವಿವೇಕಾನಂದರು ಯೋಚಿಸುತ್ತ ಕಡಲನ್ನು ಧುಮುಕಿ, ಈಜಾಡಿ ಹೋಗಿ ಬಂಡೆಯ ಮೇಲೆ ಧ್ಯಾನಾಸಕ್ತರಾದರು. ಆ ಖಂಡ ಭಾರತದ ಅಖಂಡ ಚಿತ್ರದ ದರ್ಶನ ಅವರಿಗಾಯಿತು. ಧಾರ್ಮಿಕ ಭಾರತದ ಬಾವುಟವನ್ನು ಭೂಲೋಕದಲ್ಲೆಡೆಗಳಿಗೂ ಒಯ್ದರು. ಆ ಬಂಡೆಯ ಮೇಲೆ ಅವರ ಶತಮಾನೋತ್ಸವದ ಸಮಯ ಸ್ಮಾರಕವನ್ನು ನಿರ್ಮಿಸಬೇಕೆಂದು ಆಲೋಚಿಸಿದ ವಿವೇಕಾನಂದ ಶತಮಾನೋತ್ಸವ ಸಮಿತಿಯವರು ಶಾಶ್ವತ ಸ್ಮಾರಕವನ್ನೇ ನಿರ್ಮಿಸಿದ್ದು, ಸ್ವಾಮೀಜೀಯವರು ಅಮೇರಿಕದ ಸರ್ವಮತ ಸಮ್ಮೇಳನದಲ್ಲಿ ವಿಜಯಭೇರಿಯನ್ನು ಬಾರಿಸಿದ ದಿನದಂದು. ಶ್ರದ್ಧೆಯ ರಾಷ್ಟ್ರಾಧ್ಯಕ್ಷ ಗಿರಿಯವರು ಅದನ್ನು ಉದ್ಘಾಟಿಸಿದರು. ಕೇರಳದ ಚುನಾವಣಾ ಚಂಡಮಾರುತದಿಂದ ತಪ್ಪಿಸಿಕೊಂಡ ಪ್ರಧಾನಿ ಇಂದಿರಾಜೀಯವರು ಸಪ್ಟಂಬರ ಹದಿನಾರರಂದು ಆ ಸ್ಮಾರಕವನ್ನು ಕಂಡರು. ಬಂಡೆಯನ್ನು ಸ್ಪರ್ಶಿಸಿದಾಗಲೇ ಅವರ ರಾಜಕೀಯ ರಾಢಿಯಿಂದ ಕೊಳಕಾಗಿದ್ದ ಮನೋಕೊಳದಲ್ಲಿ ಧಾರ್ಮಿಕ ಕಮಲ ಹುಟ್ಟಿತು. ಶ್ರೀಪಾದ ಹಾಗೂ ವಿವೇಕಾನಂದರ ವಿಗ್ರಹವನ್ನು ಕಂಡೊಡನೆ ಅದು ಬಿರಿದು ಅರಳಿತು. ವಿವೇಕಾನಂದರ ವಿಗ್ರಹದ ಪಾದಸ್ಪರ್ಶದಿಂದ ಅವರಲ್ಲಿ ಧಾರ್ಮಿಕ ಮನೋಭಾವನೆ ಉಂಟಾಯಿತು. ಸಂಪ್ರದಾಯ ವಿರೋಧಿ ಸಮಿತಿಯ ಶ್ರೀಮತಿ ಸುಭದ್ರಾ ಜೋಷಿಯವರ ಸಹವಾಸದ ದೋಷದಿಂದಾಗಿ ಇಂದಿರಾಜೀಯವರು ಧಾರ್ಮಿಕ ವಿಷಯಗಳ ಕುರಿತು ಉದಾಸೀನದಿಂದ ಆಡುತ್ತಿದ್ದುದು ಹಳೆಯ ಕಾಲದ ಮಾತಲ್ಲವಾದರೂ, ಅದೇ ಒಂದು ಇಂದು ಸಂಪ್ರದಾಯವಾಗಿ ಬಿಟ್ಟಿದೆ. ಇಂದಿರಾಜೀಯವರ ಕದಡಿರುವ ಮನೋಕೊಳ ಆಕ್ಷಣದಲ್ಲಿ ಸ್ವಚ್ಛವಾಗಿ ಬಿಟ್ಟಿತು.

ವಿವೇಕಾನಂದ ಶಿಲೆಯಿಂದ ವಿವೇಕಾನಂದಪುರಕ್ಕೆ ಇಂದಿರಾ ಗಾಂಧಿ ಹಿಂತಿರುಗಿ ಬಂದು ಸಾರ್ವಜನಿಕ ಸಭೆಯಲ್ಲಿ ಭಾಷಣವಿತ್ತರು. ಭೌತಿಕ ಪ್ರಗತಿ ಮಾತ್ರ ಒಂದು ರಾಷ್ಟ್ರವನ್ನು ಮುಂದಕ್ಕೆ ತರಲಾರದು. ಅದರೊಂದಿಗೆ ಆ ರಾಷ್ಟ್ರವು ತನ್ನ ಧಾರ್ಮಿಕ ಸಂಸ್ಕೃತಿಯನ್ನು ಸಂರಕ್ಷಿಸಿ ಸಂವರ್ಧಿಸಿದಲ್ಲಿ ಮಾತ್ರ ಮುಂದುವರಿಯಲು ಸಾಧ್ಯ. ಇಂದು ಧಾರ್ಮಿಕ ಕ್ರಾಂತಿಯ, ಪುನರುತ್ಥಾನದ ಅವಶ್ಯಕತೆ ಇದೆ. ಬಡತನವನ್ನು ತೊಲಗಿಸಲು ಹಾಗೂ ಧಾರ್ಮಿಕ ಮನೋಭಾವನೆಯ ಬೆಳವಣಿಗೆಗೆ ಸ್ವಾಮಿ ವಿವೇಕಾನಂದರ ಬೋಧನೆಗಳು ಅತ್ಯಾವಶ್ಯಕ. ಅವೇ ನಮಗೆ ದಾರಿದೀಪಗಳು......ರುದ್ರಾಕ್ಷಿಮಾಲಾಧಾರಿಣಿ ಶ್ರೀಮತಿ ಇಂದಿರಾ ಗಾಂಧಿಯವರು ವಿವೇಕಾನಂದರ ಗುಣಗಾನ ಮಾಡುತ್ತ, ಅವರ ಮಾತುಗಳನ್ನು ಉದಾಹರಿಸುತ್ತ ಧರ್ಮದ ಕುರಿತು ಸರಳವಾಗಿ...ಮಾತಾಡಿದರು.

ವಿವೇಕಾನಂದ ಕಾಂಗ್ರೆಸ್ಸಿಗೆ ಸೇರೆಂದಾಗ ಒಲ್ಲೆನೆಂದು ರಾಜಕೀಯ ರಾಢಿಯಿಂದ ದೂರ ಸರಿದು, ಧಾರ್ಮಿಕ ಧ್ವಜವನ್ನು ಪ್ರಪಂಚದಲ್ಲೆಲ್ಲಾ ಮೆರೆಯಿಸಿದ ಹಿಂದೂ ಸನ್ಯಾಸಿ! ಆ ಉದ್ದನೆಯ ಅಂಗಿ ಆ ದೊಡ್ಡ ಮುಂಡಾಸು, ಕೈಕಟ್ಟಿಕೊಂಡು ನಿಂತಿರುವ ಆ ಭಂಗಿ! ಹಿಂದೂತ್ವದ ಹಿರಿಮೆಯನ್ನು ಹಾಡಿ ಹೊಗಳಿದ ಮಹಾಪುರುಷನ ಭವ್ಯ ಮೂರ್ತಿ! ಅವರ ಪ್ರತಿಯೊಂದು ಮಾತು, ವಿವೇಕವಾಣಿ, ಅದುವೇ ಇಂದು ಅಮೃತವಾಣಿ. ಅದನ್ನು ಅರಿತುಕೊಳ್ಳಬೇಕು. ಅದರಂತೆ ನಡೆಯಬೇಕು. ಆಗ ಮಾತ್ರ ರಾಷ್ಟ್ರೋತ್ಥಾನ ಸಾಧ್ಯವೆಂಬುದನ್ನು ಇಂದಿರಾಜೀ ಇಂದು ತಿಳಿದು ಕೊಂಡರು. ಅದರಂತೆ ನಡೆಯಲು ಜನತೆಗೆ ಕರೆ ಇತ್ತಿರುವರು.

ಆ ಭವ್ಯ ಸ್ಮೃತಿಮಂದಿರದ ನಿರ್ಮಾಣ ಕಾರ್ಯದಲ್ಲಿ ಸಹಸ್ರಾರು ಬಾಂಧವರು ಒಂದಾಗಿರುವರು. ಪ್ರತಿಮೆಯನ್ನು ನಿರ್ಮಿಸಿದುವ ಹೆಗ್ಗಳಿಕೆ ಶ್ರೀ ಸೋನಾವಡೇಕರರಿಗೆ. ಅಂತೆಯೇ ಮಂದಿರವನ್ನು ನಿರ್ಮಿಸಿರುವ ಕೀರ್ತಿ ಶ್ರೀ ಎಸ್. ಕೆ. ಆಚಾರಿಯವರದ್ದು. ಅದಕ್ಕೆ ನೂರಾರು ಜನರ ಸ್ನೇಹಹಸ್ತ ಸೇರಿದೆ. ಇವೆಲ್ಲವುಗಳ ತೆರೆಯ ಮರೆಯಲ್ಲಿದ್ದು, ಎಲ್ಲರಿಂದಲೂ ಪ್ರೀತಿ ಸಂಪಾದಿಸಿರುವವರು ವಿವೇಕಾನಂದ ಶಿಲಾ ಸ್ಮಾರಕ ಸಮಿತಿಯ ಪ್ರಧಾನ ಕಾರ್ಯದರ್ಶಿ ಶ್ರೀಯುತ ಏಕನಾಥ ರಾನಡೆಯವರು. ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಅಧಿಕಾರಿಗಳಾಗಿದ್ದು. ಈ ಕಾರ್ಯಕ್ಕಾಗಿ ಕಳುಹಿಸಲ್ಪಟ್ಟವರಿದ್ದಾರೆ. ಅವರು ಸ್ವಾಮೀಜೀಯವರ ಶತಮಾನೋತ್ಸವ ಸಮಯ "ಏಳಿ ಎದ್ದೇಳಿ"ಯೆಂಬ ವಿವೇಕಾನಂದರ ಭಾಷಣ ಕೃತಿಗಳಿಂದ ಮುಖ್ಯಾಂಶಗಳನ್ನಾಯ್ದು ಅಮರ ಕೃತಿಯನ್ನು ಸಂಗ್ರಹಿಸಿರುವರು. ಆ ಕೃತಿಯಲ್ಲಿ......

ಒಮ್ಮೆ ಸ್ವಾಮೀಜೀ ತಮ್ಮ ಅಜ್ಜಿಗೆ, "ನನ್ನ ಆಯುಷ್ಯದಲ್ಲಿನ ಅತ್ಯಂತ ದೊಡ್ಡ ಪ್ರಲೋಭನೆಯನ್ನು ಅಮೇರಿಕೆಯಲ್ಲಿ ಕಂಡೆ" ಎಂದು ಹೇಳಿದರು. ನಮ್ಮ ಅಜ್ಜಿಯು ಚೇಷ್ಟೆಗೆಂದು ಅವರಿಗೆ, "ಅವಳು ಯಾರು ಸ್ವಾಮೀಜಿ?" ಎಂದು ಕೇಳಿದಳು. ಆಗ ಅವರು ಗೊಳ್ಳನೆ ನಗುತ್ತಾ, "ಛಿ, ಅದು ಸ್ತ್ರೀ ಅಲ್ಲ ಸಂಘಟನೆ" ಎಂದರು. [ಕು. ಠಾನೆರ್]......

ದೇಶವಿದೇಶಗಳಲ್ಲಿನ ನನ್ನ ಸಂಚಾರದ ನಂತರ, ಸಂಘಟನೆ ಇಲ್ಲದೆ ಯಾವದೇ ಹಿರಿದಾದ ಶಾಶ್ವತ ಕಾರ್ಯವನ್ನು ಮಾಡಲಾಗುತ್ತಿದಿಲ್ಲ ಎಂಬ ನಿಷ್ಕರ್ಷೆಗೆ ನಾನು ಬಂದಿದ್ದೇನೆ........

ಹಿಂದುಗಳಿಗೆ ಪರಸ್ಪರ ಸದ್ಭಾವ ಸಹಕಾರ್ಯಗಳನ್ನು ಕಲಿಸುವ ಸಂಘಟನೆಯ ನಿತಾಂತ ಆವಶ್ಯಕತೆ ಇದೆ........

ಭಾರತದಲ್ಲಿ ಮೂರು ಜನ ಒಟ್ಟುಗೂಡಿ ಬಂದಲ್ಲಿ, ಐದು ನಿಮಿಷ ಸಹ ಅವರ ಹೊಂದಾಣಿಕೆ ಉಳಿಯುವುದು ಕಷ್ಟ. ಪ್ರತಿಯೊಬ್ಬನೂ ಅಧಿಕಾರಕ್ಕಾಗಿ ಕಚ್ಚಾಡಿ ಇಡೀ ಸಂಘಟನೆ ಮಣ್ಣಾಗುತ್ತದೆ....

ನಾವು ಒಟ್ಟುಗೂಡಲಾರೆವು, ಪರಸ್ಪರ ಪ್ರೀತಿಸಲಾರೆವು. ನಾವು ಕಡು ಸ್ವಾರ್ಥಿಗಳಾಗಿದ್ದೇವೆ. ಪರಸ್ಪರ ದ್ವೇಷ ಅಸೂಯೆ ಬಿಟ್ಟು ಮೂರು ಮಂದಿ ಸಹ ಒಟ್ಟಿಗೆ ಬರಲಾರೆವು....

ಯುಗಯುಗಗಳಿಂದ ಘೋರ ಮಾತ್ಸರ್ಯಕ್ಕೆ ನಾವು ತುತ್ತಾಗಿದ್ದೇವೆ. ಒಬ್ಬರಿನ್ನೊಬ್ಬರನ್ನು ಕಂಡರೆ ಸಾಕು, ಅಸೂಯೆಯಿಂದ ಉರಿದೇಳುತ್ತೇವೆ.... ಆ ದ್ವೇಷ ಆ ಮಾತ್ಸರ್ಯ ಬಿಡಿ. ನಾಯಿಗಳಂತೆ ಪರಸ್ಪರ ನೋಡಿದೊಡನೆ ಗುರ್ ಗುರ್ ಎನ್ನುವ, ಬೊಗಳುವ ಚಟ ಬಿಡಿ. ಒಂದು ಸಮುದ್ದೇಶಕ್ಕಾಗಿ ಎದ್ದುನಿಲ್ಲಿ....

ಭಾರತದ ಭವ್ಯ ಭವಿತವ್ಯದ ನಿರ್ಮಿತಿಯ ರಹಸ್ಯವು ಸಂಘಟನೆ, ಶಕ್ತಿಸಂಚಯ ಹಾಗೂ ಮನಸ್ಸುಗಳ ಜೋಡನೆ — ಇವುಗಳಲ್ಲೇ ಇದೆ.

ಗಮನದಲ್ಲಿಡಿ, ಭಾರತದ ಭವಿತವ್ಯವು ಕೇವಲ ಶಕ್ತಿಸಂಚಯದ ಮೇಲೆಯೇ ನಿಂತಿದೆ. ಎಲ್ಲ ಇಚ್ಛಾಶಕ್ತಿಗಳನ್ನು ಪರಸ್ಪರ ಹೆಣೆದು, ಒಂದುಗೂಡಿಸಿ, ಒಂದೇ ಗುರಿಯತ್ತ ತಿರುಗಿಸುವದರಲ್ಲಿದೆ, ಆ ಶಕ್ತಿಸಂಚಯದ ರಹಸ್ಯ....

ಭಾರತದ ಭವಿತವ್ಯ ಕಟ್ಟಲು, ಮೊದಲಿಗೆ ಧಾರ್ಮಿಕ ಐಕ್ಯ ಅತ್ಯಗತ್ಯ...ಭಾರತದಲ್ಲಿ ಧರ್ಮವು ಸರ್ವೋಚ್ಚ ಆದರ್ಶವಷ್ಟೇ ಅಲ್ಲ, ಕಾರ್ಯ ಮಾಡಲು ಇರುವ ಒಂದೇ ವಿಧಾನವೂ ಅದೇ. ಮೊದಲು ಇದನ್ನು ಬಲಿಷ್ಠಗೊಳಿಸದೆ ಇನ್ನಾವುದೇ ವಿಧಾನದಲ್ಲಿ ಹೋದರೂ ವಿನಾಶ ತಪ್ಪಿದ್ದಲ್ಲ. ಆದ್ದರಿಂದ ಭಾರತದ ಉಜ್ವಲ ಭವಿಷ್ಯದ ಶಿಖರವನ್ನೇರಲು ಮೊದಲ ಮೆಟ್ಟಿಲೇ ಇದು—ಭಾರತದಲ್ಲಿನ ವಿವಿಧ ಸಂಪ್ರದಾಯಗಳಲ್ಲಿನ ಸಮನ್ವಯ. ಯುಗಯುಗಾಂತರಗಳ ನಮ್ಮ ರಾಷ್ಟ್ರಜೀವನರೂಪೀ ಮಹಾಶಿಲೆಯಲ್ಲಿ ನಾವು ನಡೆಯಬೇಕಾದ ಮೊದಲ ಮೆಟ್ಟಿಲೇ ಅದು — ಆ ಧಾರ್ಮಿಕ ಐಕ್ಯ......ನಮ್ಮ ಸಮಾಜದ ಕಲ್ಯಾಣಕ್ಕಾಗಿ ನಮ್ಮೆಲ್ಲ ಕ್ಷುದ್ರ ಭೇದಗಳನ್ನು ಜಗಳಗಳನ್ನು ಬದಿಗಿಟ್ಟು ಒಟ್ಟುಗೂಡಬೇಕಾದ ಕಾಲ ಈಗ ಬಂದಿದೆ......

ಭಾರತದಲ್ಲಿನ ರಾಷ್ಟ್ರೀಯ ಐಕ್ಯತೆ ಎಂದರೆ ಎಲ್ಲೆಡೆ ಚೆದುರಿಹೋಗಿರುವ ಆದರ ಆಧ್ಯಾತ್ಮಿಕ ಶಕ್ತಿಗಳನ್ನು ಒಂದೆಡೆ ಕೂಡಿಸುವದೇ ಆಗಿದೆ. ಭಾರತದಲ್ಲಿನ ರಾಷ್ಟ್ರವೆಂದರೆ ಒಂದೇ ಆಧ್ಯಾತ್ಮಿಕ ಶ್ರುತಿಗೆ ಮೇಳವಿಸಿ ಸ್ಪಂದಿಸುವ ಹೃದಯಗಳ ಮಾಲಿಕೆ........

ನಮಗಿಂದು ಬುದ್ಧಿಶಾಲಿ ತೇಜಸ್ವಿ ಯುವಕರು ಬೇಕಾಗಿದ್ದಾರೆ. ಮೃತ್ಯುವಿನ ದವಡೆಯಲ್ಲಿ ನುಗ್ಗಬಲ್ಲ ಸಾಹಸಿಗಳು, ಸಾಗರವನ್ನೇ ಈಜಿ ಬರಲು ಸಜ್ಜಾದಂತಹ ಶೂರರು ಬೇಕಾಗಿದ್ದಾರೆ. ಅಂತಹ ನೂರಾರು ಯುವಕರು, ಯುವತಿಯರು ಬೇಕಾಗಿದ್ದಾರೆ........

ಇಲ್ಲಿ ಪರಸ್ಪರ ಎಷ್ಟೇ ಮತಭಿನ್ನತೆಗಳಿದ್ದಾಗ್ಯೂ ಅವರ ಪ್ರೇಮ ಬಂಧನದಿಂದ ಒಂದಾದ ಜನರ ತಂಡವನ್ನು ನಿರ್ಮಿಸುವದು ಎಂತಹ ಭವ್ಯ ಉದಾತ್ತ ಕಾರ್ಯ! ಈ ತಂಡವು ಬೆಳೆಯಬೇಕು, ಚಿರಂತನ ಉತ್ಸಾಹ ಹಾಗೂ ಮುನ್ನಡೆಯಿಂದ ಕೂಡಿದ ಈ ಹೃದಯ ವೈಶಾಲ್ಯದ ಸುಂದರ ಭಾವನೆಯು ಇಡೀ ಭಾರತವನ್ನು ವ್ಯಾಪಿಸಬೇಕು....

ಹಿಂದುಗಳೇ! ಏಳಿ ಮೋಹನಿದ್ರೆಯಿಂದ ಎಚ್ಚರಗೊಳ್ಳಿ, ಗುರಿ ಮುಟ್ಟುವವರೆಗೆ ನಿಲ್ಲದಿರಿ...

ಇವು ವಿವೇಕಾನಂದ ಶಿಲಾ ಸ್ಮಾರಕ ಸಮಿತಿಯ ಅಖಿಲ ಭಾರತೀಯ ಪ್ರಧಾನ ಕಾರ್ಯದರ್ಶಿ ಶ್ರೀಯುತ ಏಕನಾಥ ರಾನಡೆಯವರು ಸಂಗ್ರಹಿಸಿರುವ ವಿವೇಕವಾಣಿ.

(ಎಂಟನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
124 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¼% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪೋ. ಬಾ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1

ಸಮಾಜವಾದದ ನಿಲುವಂಗಿ

ಅರ್ಥ ಸಚಿವ ಯಶವಂತರಾವ್ ಚವಣರು ಯಶಸ್ವಿ ಮಂತ್ರಿಗಳೆಂದು ಹೆಸರುಗಳಿಸಿದವರು; ಆದ್ದರಿಂದ ಅವರು ತಮ್ಮ ಈಗಿನ ವಿತ್ತ ಖಾತೆಯನ್ನೂ ಯಶಸ್ವಿಯಾಗಿ ನಿರ್ವಹಿಸುತ್ತಾರೆ ಎಂದು ಕೆಲವರು ಚವಣಿಗರು ತಿಳಿಸಿದ್ದರು; ಡಂಗುರ ಸಾರಿದ್ದರು.

ಆದರೆ, ಈಗೀಗ ಈ ಚವಣಿಗರ ಬಾಯಿಗೆ ಮುಗುಟು ತೊಡಗಿದೆ; ಅರ್ಥ ಖಾತೆ ಆಹಾರ ಖಾತೆಗಳ ಮಂತ್ರಿಗಳು ಯಾರೂ ಬಹುಕಾಲ ಅಧಿಕಾರದಲ್ಲಿ ಉಳಿಯಲಿಲ್ಲ; ಅಥವಾ ಆ ಖಾತೆಯಲ್ಲಿ ಉಳಿಯಲಿಲ್ಲ; ಶ್ರೀ ಚವಣರೂ ಉಳಿಯುವುದಿಲ್ಲ.

ಇತ್ತೀಚೆಗೆ ಪೂನಾದ ಬಳಿ ಕಾರಿನಲ್ಲಿ ಸಂಚಾರ ಮಾಡುತ್ತಿದ್ದಾಗ, ಅವರ ಮೇಲೆ ಕಲ್ಲೆಸೆದದ್ದು ಕೆಲವು ಪುಂಡರ ಗೂಂಡಾಗಿರಿ, ಪ್ರಜಾಸತ್ತೆಗೆ ಅಪಮಾನ; ಆದರೆ ಅದು ಶ್ರೀ ಚವಣರ ಗತಿ ಏನಾಗುತ್ತದೆ ಎಂಬುದರ ನಿದರ್ಶನ.

ಅಮೆರಿಕನ್ ಅಧ್ಯಕ್ಷ ನಿಕ್ಸನ್ನರ ಮುಖಕ್ಕೆ ಕೋಳಿಮೊಟ್ಟೆ ಎಸೆಯುವಾಗ, ಚವಣರ ಕಾರಿಗೆ ಕಲ್ಲೆಸೆಯುವುದೇನು ಮಹಾ? ಇಲ್ಲಿ ಕೋಳಿಮೊಟ್ಟೆ ಕೈಗೆ ಸಿಕ್ಕಿದರೆ, ಬಾಯಿಗೆ ಎಸೆದುಕೊಳ್ಳುತ್ತಾರೆಯೇ ಹೊರತು ಕಾರಿಗೆಸೆಯುವ ಹುಚ್ಚುತನ ತೋರಿಸುವುದಿಲ್ಲ.

ಇದರಿಂದ ಇಬ್ಬಗೆಯ ಲಾಭವೂ ಇದೆ. ಮೊಟ್ಟೆ ಬಾಯಿಗೆಸೆಯುವುದರಿಂದ ಹೊಟ್ಟೆ ತುಂಬುತ್ತದೆ; ದೇಹ ದಷ್ಟಪುಷ್ಟವಾಗುತ್ತದೆ, ಮತ್ತಷ್ಟು ಗೂಂಡಾಗಿರಿ ಮಾಡಲು ಶಕ್ತಿ ಬೆಳೆಯುತ್ತದೆ.

ಕಲ್ಲು ಕಾರಿಗೆ ತಾಗುವುದರಿಂದ ಏನಾಗುತ್ತದೆಂದು ಕೇಳಬಹುದು; ಕಾರಿಗೆ ಜಖಂ ಆಗುತ್ತದೆ; ಗ್ಯಾರೇಜಿಗೆ ಸಂಪಾದನೆ ದೊರೆಯುತ್ತದೆ; ನಿರುದ್ಯೋಗಿಗಳಿಗೆ ಉದ್ಯೋಗ ಸಿಗುತ್ತದೆ.

ಆದರೆ, ಕಾರು ಕೆಟ್ಟು ಹೋಗುವುದು ರಾಷ್ಟ್ರೀಯ ನಷ್ಟವೆನ್ನಬಹುದು ವಿತ್ತಪರರು. ಅದರೇನಂತೆ? ನೀರಿಲ್ಲದ ನದಿಗೆ ಅಣೆಕಟ್ಟು ಕಟ್ಟುವುದು, ಊರಿಲ್ಲದಲ್ಲಿ ಬಾವಿ ತೋಡುವುದು; ಉಪಯೋಗವಿಲ್ಲದಲ್ಲಿ ಶಾಲೆ ಕಟ್ಟಿಸುವುದು— ಇತ್ಯಾದಿ ಇತ್ಯಾದಿಗಳಿಗಿಂತ ಇದು ಉತ್ತಮವಲ್ಲವೆ? ಅದರ ಮೇಲೆ ನಮ್ಮ ಲಾಭ-ನಷ್ಟಗಳ ಲೆಕ್ಕಾಚಾರ ಮಾಡುವುದಕ್ಕೂ ಪುರಸೊತ್ತಿಲ್ಲದ ನಮಗೆ ರಾಷ್ಟ್ರದ ಲಾಭ-ಹಾನಿಗಳ ಚಿಂತೆಯೇಕೆ?

ಚವಣರು ನಡೆದೆಡೆ ಕೊಳಕರೆಡೆ ಹಾದಿ ಎಂದು ಸಮಾಧಾನಪಟ್ಟುಕೊಳ್ಳಬಹುದು. ಆದರೂ ದಿನಬಳಕೆಯ ಸಾಮಾನು— ಸರಂಜಾಮುಗಳ ಬೆಲೆ ಚಂದ್ರಲೋಕವನ್ನೂ ದಾಟಿ ಏರುತ್ತಿರುವುದರಿಂದ ಅವರೂ ತಂಗಾಲಾಗಿದ್ದಾರೆ. ಕೇಂದ್ರ ಸರಕಾರದ ನೌಕರರಿಗೆ ಮಧ್ಯಾವಧಿ ಪರಿಹಾರ ಕೊಟ್ಟದ್ದು ಸಾಕಾಗಲಿಲ್ಲವೆಂಬ ಪೇಚಾಟದಿಂದ ದಿಗಿಲೆದ್ದಿದ್ದಾರೆ.

ಏನಾದರೂ ಮಾಡಿ ಬೆಲೆಯಿಳಿಸಲು ಸರ್ವಪ್ರಯತ್ನವನ್ನು ಮಾಡುವುದಾಗಿ ಭರವಸೆ ನೀಡುತ್ತಾರೆ. ಆದರೆ, ಬರಿಯ ಭರವಸೆಗಳಿಂದ ಬೆಲೆಯಿಳಿಯುವುದಿಲ್ಲ. ದೇಶದಲ್ಲಿ ಹಸುರುಕ್ರಾಂತಿ ಯಶಸ್ವಿಯಾಯಿತೆಂದು ನಾವು ಬಂಬಡಿ ಬಾರಿಸುತ್ತೇವೆ; ಆದರೆ; ಮಾರುಕಟ್ಟೆಯಲ್ಲಿ ದುಬಾರಿ ಬೆಲೆ ತೆತ್ತುಕೊಂಡು ಕೊಳ್ಳುತ್ತೇವೆ.

ಬ್ಯಾಂಕುಗಳ ರಾಷ್ಟ್ರೀಕರಣವು ಇದಕ್ಕೆ ಕಾರಣವೆಂದು ವಿತ್ತಪರರು ಒಪ್ಪುವುದಿಲ್ಲ. ಹಸಿರು ಕ್ರಾಂತಿ ಯಶಸ್ವಿಯಾಗಲಿಲ್ಲವೆಂದರೂ ಅವರು ನಂಬುವುದಿಲ್ಲ.

ರಾಷ್ಟ್ರೀಕರಣ ಅವರ ನೀತಿ; ಯಶಸ್ಸು ಅವರ ಕೃತಿ. ತಾವಿಟ್ಟ ಹೆಜ್ಜೆ ತಪ್ಪು ಎಂದು ಒಪ್ಪಿಕೊಳ್ಳುವಷ್ಟು ವಿವೇಕ ಈ ಪ್ರಜಾಪತಿಗಳಿಗಿಲ್ಲ. "ಬೆಲೆಯೇರುತ್ತಿದೆ; ನಮಗೆ ಗೊತ್ತು; ಇಳಿಸುತ್ತೇವೆ" ಎಂದವರು ಆಶ್ವಾಸಿಸುತ್ತಿರುವಂತೆಯೇ ಬಳಕೆದಾರನ ಕೈಯಿಂದ ತಪ್ಪಿ ಬೆಲೆಯು ಗಾಳಿಪಟದ ದೂರಗಗನದಲ್ಲಿ ತೇಲುತ್ತ ನಲಿಯುತ್ತ ಆತನನ್ನು ಅಣಕಿಸುತ್ತದೆ!

ಸಮಾಜವಾದದ ನಿಲುವಂಗಿಯ ಮರೆಯಲ್ಲಿ ಹುದುಗಿರುವ ಬಂಡವಳಶಾಹಿಗಳು ಸ್ವಾರ್ಥಲೋಲುಪರು, ಅಧಿಕಾರ ಲಾಲಸಿಗರು, ಚಿನ್ನ ಕದರಿಗೆ ಮಾರೇ ಕಾಲೆಂದು ಪಟ್ಟು ಹಿಡಿಯುವವರು— ಇವರೆಲ್ಲರನ್ನೂ ಒಂದೊಮ್ಮೆ ತಂಗಾಲು ಮಾಡುತ್ತದೆ.

ಶ್ರೀಮತಿ ಗಾಂಧಿಯವರು ವಿತ್ತ ಖಾತೆಯನ್ನು ಚವಣರಿಗೆ ಕೊಟ್ಟು, ಅವರಿಂದ ಗೃಹಖಾತೆಯನ್ನು ಕಿತ್ತು ಎರಡು ಸಿದ್ಧಿ ಸಾಧಿಸಿದ್ದಾರೆ. ಮೊದಲನೆಯದು, ಚವಣರನ್ನು ಪ್ಲಾಸ್ಟಿಕ್ ಛತ್ರಪತಿಯನ್ನಾಗಿ ಮಾಡಿದ್ದು; ಎರಡನೆಯದು, ಚವಣಿಗರನ್ನು ಇಂದಿರಿಗರನ್ನಾಗಿ ಪರಿವರ್ತಿಸಿಕೊಂಡದ್ದು. ದಿನದಿನವೂ ಏರುತ್ತಿರುವ ಬೆಲೆಯಿಂದ ಚವಣರ ಬಗ್ಗೆ ಅಸಮಾಧಾನ ಬಲಿಯುತ್ತಲೇ ಹೋಗುತ್ತದೆ; ಅವರ [illegible] ವ್ಯಕ್ತಿತ್ವಕ್ಕೆ ಧಕ್ಕೆ ತಗಲುತ್ತದೆ. ಹೀಗಾದರೆ ಮಾತ್ರ ಶ್ರೀಮತಿ ಗಾಂಧಿ ತನ್ನ ಎದುರಾಳಿಯನ್ನು ಮಟ್ಟಸ ಮಾಡಿದಂತಾಗುತ್ತದೆ.

ಬೆಲೆಯೇರಿಕೆಗೆ ಹಣದುಬ್ಬರವೇ ಕಾರಣವೆಂಬುದು ಹಸಿರು ಕ್ರಾಂತಿಯ ನಂತರ ವ್ಯಕ್ತವಾಗಿದೆ. ನಮ್ಮ ಒಂದೊಂದು ಪಂಚವಾರ್ಷಿಕ ಯೋಜನೆಯೂ ಮುಂದುವರಿಯುತ್ತ ಹಣದುಬ್ಬರ ಕಲಿದೇರಿ ಬೆಲೆಯೇರಿಕೆಯಾಗುತ್ತ ಬಂದಿರುವುದು ಸರ್ವವೇದ್ಯ. ಕೊರತೆ ಧನ ವಿನಿಯೋಗದ ಕಾಮಧೇನುವಿನ ಮೊಲೆ ಹಿಂಡುವ ಚಟ ನಮ್ಮದಾದುದರಿಂದ ಬೇಕಷ್ಟು ಕಾಗದದ ನೋಟುಗಳು ಹುಟ್ಟಿಕೊಂಡುವು. ಗಾಳಿಪಟದಂತೆ ಆಕಾಶ ಕಂಬ ಅಷ್ಟು ಹಾರಾಡುತ್ತಿರೆ, ಆಗ ಬೆಲೆಯೆಂದರೆ ಕಲ ನಾಚಿಕೆಯಾದರೂ ಬೆಲೆಯಿಲ್ಲವೆಂದರೆ ಒಪ್ಪಲೇಬೇಕು.

ಮುರಾರ್ಜಿಭಾಯಿಯವರ ವಿತ್ತ ಖಾತೆಯಿದ್ದಾಗ, ಕೊರತೆ ಧನವನ್ನು ಬಳಸುವುದನ್ನು ಕಡಮೆ ಮಾಡಿದರು. ಈಗ ಮತ್ತೆ ಅದು ಆರಂಭವಾಗಿದೆ.

ಕೇಂದ್ರ ಸರಕಾರದ ನೌಕರರ ವೇತನ ಹೆಚ್ಚಿಸಲು ಸರಕಾರ ೧೫೦ ಕೋಟಿ ರೂಪಾಯಿ ಹೆಚ್ಚು ಪ್ರತೀವರ್ಷ ತರಬೇಕು; ರಾಜ್ಯ ಸರಕಾರಗಳು ಮತ್ತೆ ನೂರು ಕೋಟಿ ತರಬೇಕು. ಆದರೆ, ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ನೀಡಲು ಕಾರ್ಪೊರೇಶನ್ ಸ್ಥಾಪಿಸಲು ಒಂದು ಸಾವಿರ ಕೋಟಿ ಬಂಡವಾಳ ಹಾಕಲು ಸರಕಾರ ತಯಾರಿಲ್ಲ! ಇದರಿಂದ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುತ್ತದೆ; ಭೂಹೋರಾಟದ ಸಮಸ್ಯೆಯಿಲ್ಲವಾದರೆ ನಮ್ಮ ರಾಜಕೀಯ ರಥದ ಗಾಲಿಗಳೇ ಮುರಿಯುತ್ತವೆ!

ಶ್ರೀ ವೈ. ಬಿ. ಚವಣರು ಪ್ಲಾಸ್ಟಿಕ್ ಛತ್ರಪತಿಯಾಗಿದ್ದಾರೆ; ನಾವೆಲ್ಲರೂ ಪ್ಲಾಸ್ಟಿಕ್ ಗೊಂಬೆಗಳಾಗಿದ್ದೇವೆ. ಶ್ರೀಮತಿ ಇಂದಿರಾ ಗಾಂಧಿ ಮತ್ತೇನನ್ನೂ ಮಾಡದಿದ್ದರೂ ಇಷ್ಟನ್ನು ಅವಶ್ಯ ಸಾಧಿಸಿದ್ದಾರೆ.

ಶ್ರೀಮತಿ ಇಂದಿರಾ ಗಾಂಧೀಕೀ.... ಅವರೆನ್ನುತ್ತಾರೆ.

'ಜೈ'ಯೆನ್ನುತ್ತೇವೆ ನಾವೆಲ್ಲರೂ!

'ನಿರೋಧ್' ಮಾರಾಟ ಯೋಜನೆ

[ಲೇಖಕರು: ದೀಪಕ್ ಬಿ. ಆರ್. ಚೌದರಿ.

ಭಾರತದಲ್ಲಿ ಕುಟುಂಬ ಯೋಜನೆಯನ್ನು ಸರ್ಕಾರ ಯೋಜನೆಯನ್ನಾಗಿ ಕಾರ್ಯಗತಗೊಳಿಸುವುದಕ್ಕಿಂತ ಮುಂಚೆಯೇ ಹಲವಾರು ಖಾಸಗೀ ಸಂಸ್ಥೆಗಳು ಈ ದಿಶೆಯಲ್ಲಿ ಶ್ರಮಿಸಿವೆ. ಸ್ವಸಂತೋಷದಿಂದ ಮೇಲಾಗಿ ದೇಶದ ಹಿತದೃಷ್ಟಿಯಿಂದ ಕಾರ್ಯ ನಿರ್ವಹಿಸಿದ ಈ ವ್ಯಕ್ತಿಗಳ ಹಾಗೂ ಸಂಸ್ಥೆಗಳ ಪಾತ್ರ ಮೆಚ್ಚುವಂತಹದು. ಕುಟುಂಬಯೋಜನಾ ಇಲಾಖೆಯವರು ದೇಶದಲ್ಲಿ ಕುಟುಂಬ ಯೋಜನೆ ಅನುಸರಿಸಲು ಅಗತ್ಯವಾದ ಸಾಧನಗಳನ್ನು ಅಂದರೆ, ನಿರೋಧ್‌ಗಳ ಬಳಕೆಯನ್ನು ಜನಪ್ರಿಯಗೊಳಿಸಲು ಆರಂಭಿಸಿದಾಗ ರಾಷ್ಟ್ರದ ಅನೇಕ ದೊಡ್ಡ ದೊಡ್ಡ ಖಾಸಗಿ ಸಂಸ್ಥೆಗಳು, ವಾಣಿಜ್ಯ ಉದ್ಯಮಗಳು ಈ ಕಾರ್ಯದಲ್ಲಿ ನೆರವಾಗಿದ್ದಾರೆ.

ನಿರೋಧ್‌ಗಳ ಮಾರಾಟ ದೇಶದಲ್ಲಿ 1968ರ ಸೆಪ್ಟೆಂಬರದಲ್ಲಿ ಆರಂಭವಾಯಿತು. ನಿರೋಧ್‌ಗಳ ಮಾರಾಟ ದೇಶದ ನಾನಾ ಕಡೆಗಳಲ್ಲಿ ಆರಂಭವಾದ ಕೆಲವು ದಿನಗಳಲ್ಲಿಯೇ ಮೀರತಿನ ಬೃಹತ್ ಕೈಗಾರಿಕೋದ್ಯಮಿ ಒಬ್ಬರು ಯೋಜನೆಯ ಯಶಸ್ವಿಗಾಗಿ ಸಹಕಾರ ನೀಡಲು ಮುಂದೆ ಬಂದರು. 1965-66ರಲ್ಲಿ ದೆಹಲಿಗೆ ಅತಿ ಸಮೀಪದಲ್ಲಿರುವ ಮೀರತಿನಲ್ಲಿ ಕೇಂದ್ರ ಕುಟುಂಬ ಯೋಜನಾ ಸಂಸ್ಥೆಯವರು ಕುಟುಂಬ ಯೋಜನೆ ಬಗ್ಗೆ ಅಧ್ಯಯನ ನಡೆಸಲಾರಂಭಿಸಿದರು. ಆ ವೇಳೆಗಾಗಲೇ ಮೀರತ್ ಜಿಲ್ಲೆಯಲ್ಲಿ ತೀವ್ರ ಕುಟುಂಬ ಯೋಜನಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿತ್ತು. ಅದಕ್ಕೂ ಹಿಂದೆಯೇ ಆ ಜಿಲ್ಲೆಯಲ್ಲಿ ನಿರೋಧ್‌ಗಳನ್ನು ಉಚಿತವಾಗಿ ಹಂಚುವ ಕಾರ್ಯಕ್ರಮಗಳನ್ನು ವಿವಿಧ ಆರೋಗ್ಯ ಕೇಂದ್ರಗಳು, ಸಾಮಾಜಿಕ ಅಭಿವೃದ್ಧಿ ಕಛೇರಿಗಳು ಮತ್ತು ಕುಟುಂಬ ಯೋಜನಾ ಕೇಂದ್ರಗಳ ಮೂಲಕ ಕೈಗೊಳ್ಳಲಾಗಿತ್ತು. ಇಷ್ಟೇ ಅಲ್ಲದೆ ದೇಸೀ ಮತ್ತು ವಿದೇಶಿ ನಿರೋಧಗಳನ್ನು ವಾಣಿಜ್ಯ ಸಂಸ್ಥೆಯೊಂದರ ಮೂಲಕ ಮಾರಾಟ ಮಾಡಲಾಗುತ್ತಿತ್ತು. ಈ ಸಂಸ್ಥೆಯವರು ಸುಮಾರು 100 ಮಂದಿ ಚಿಲ್ಲರೆ ವ್ಯಾಪಾರಿಗಳ ಮೂಲಕ ಜನತೆಗೆ ನಿರೋಧಗಳ ಸೌಲಭ್ಯವನ್ನು ಒದಗಿಸಿಕೊಡುತ್ತಿದ್ದರು. ದಿನೇ ದಿನೇ ನಿರೋಧ ಬಳಕೆ ಹೆಚ್ಚಿದಂತೆ ಅವುಗಳಿಗಾಗಿ ಬೇಡಿಕೆಯೂ ಏರಿತು, ನಿರೋಧಗಳ ವ್ಯಾಪಾರದಲ್ಲಿ ತೊಡಗಿದ ಸಂಸ್ಥೆ ಮತ್ತು ಸರ್ಕಾರಿ ಅಧಿಕಾರಿಗಳ ನಡುವಣ ಮಾತುಕತೆಗಳಿಂದಾಗಿ ಸರ್ಕಾರ ಧನಸಹಾಯದಿಂದ ತಯಾರಿಸಿದ ನಿರೋಧಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಯಿತು. 15ಪೈಸೆಗೆ ಮೂರು ನಿರೋಧಗಳ ಮಾರಾಟಕ್ಕೆ ಉತ್ತೇಜನ ದೊರೆಯಿತು. ಜಿಲ್ಲೆಯ ಮೂಲೆ ಮೂಲೆಗಳಲ್ಲಿ ಈ ಕಡಿಮೆ ಬೆಲೆಯ ನಿರೋಧಗಳ ಬಳಕೆ ಏರಿತು, ಬೇಡಿಕೆ ಏರಿದಂತೆ ಅವುಗಳ ಪೂರೈಕೆಗಾಗಿಯೂ ಕ್ರಮಗಳನ್ನು ಕೈಗೊಳ್ಳಲಾಯಿತು. ಜಿಲ್ಲೆಯ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಅವುಗಳನ್ನು ಮಾರುವವರ ಸಂಖ್ಯೆಯೂ ಏರಿತು. ಈ ಯೋಜನೆಯನ್ನು ಕೈಗೊಂಡ ಸುಮಾರು ಮೂರು ತಿಂಗಳಲ್ಲಿ ಆ ಜಿಲ್ಲೆಯಲ್ಲಿ ವರ್ತಕರ ಸಂಖ್ಯೆ 562ಕ್ಕೆ ಏರಿದೆ.

ಮೀರತಿನ ಪ್ರಾಯೋಗಿಕ ಯೋಜನೆಯ ಯಶಸ್ವಿಯಿಂದಾಗಿ ಸರ್ಕಾರ ಈ ಯೋಜನೆಗೆ ಹೆಚ್ಚಿನ ಆದ್ಯತೆ ನೀಡಲಾರಂಭಿಸಿತು. 1968ರಿಂದ ಕೈಗೊಂಡ ಈ ಯೋಜನೆಯಲ್ಲಿ ವಾಣಿಜ್ಯ ಸಂಸ್ಥೆಗಳು ಪ್ರಮುಖಪಾತ್ರವನ್ನು ವಹಿಸಬಲ್ಲವು ಎಂಬುದು ವೇದ್ಯವಾಗಿದೆ. ದೇಶದ ಬೃಹತ್ ಕೈಗಾರಿಕಾ ಸಂಸ್ಥೆಗಳಾದ ಬ್ರೂಕ್ ಬಾಂಡ್ ಟೀ, ಲಿಪ್ಟನ್ ಟೀ, ತಾತಾ ಆಯಿಲ್, ಹಿಂದೂಸ್ಥಾನ್ ಲಿವರ್ ಅಂಡ್ ಫುಡ್ ಪ್ರಾಡಕ್ಟ್ಸ್, ಇಂಡಿಯಾ ಟೊಬ್ಯಾಕೊ ಮತ್ತು ಯೂನಿಯನ್ ಕಾರ್ಬೈಡ್ ಸಂಸ್ಥೆಗಳು ನಿರೋಧ್‌ಗಳನ್ನು ಜನಪ್ರಿಯಗೊಳಿ

ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಆಗಾಗ್ಗೆ ಹೊಸ ಹೊಸ ಸ್ಟೋಕಿನಿಂದ
ಕ್ವಾಲಿಟಿಯಲ್ಲಿ, ಸ್ಟೈಲಿನಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂಟಾ ಕೆರೆಟ ತೂಕದಲ್ಲಿ
ಬೇಕಾದವರು ಮುಂದಾಗಿ ಬಂದು ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

ಹೊಣೆಗಾರರು ಬೇಕಾಗಿದ್ದಾರೆ

ಉತ್ತರ ಪ್ರದೇಶದ ರಾಜ್ಯಪಾಲ ಡಾ॥ ಬಿ. ಗೋಪಾಲ ರೆಡ್ಡಿಯವರು ರಾಜ್ಯದಲ್ಲಿ ಸಂವಿಧಾನಾತ್ಮಕ ಆಡಳಿತೆಗೆ ಚ್ಯುತಿ ಬಂದಿತೆಂದು ರಾಷ್ಟ್ರಪತಿ ಆಡಳಿತೆಗೆ ಶಿಫಾರಸು ಮಾಡಿದರು; ಅದಕ್ಕೆ ರಾಷ್ಟ್ರಪತಿ ಶ್ರೀ ವಿ. ವಿ. ಗಿರಿಯವರು ಸೋವಿಯತ್ತಿಯೂನಿಯನ್ನಿನಲ್ಲೇ ಇದ್ದುಕೊಂಡು ಒಪ್ಪಿಗೆ ನೀಡಿದರು. ಇದು ನ್ಯಾಯ—ಸಂವಿಧಾನಬದ್ಧವೆಂಬುದು ಒಂದು ವರ್ಗದ, ಮುಖ್ಯವಾಗಿ ಇಂಡಿಕೇಟಿನ ಅಭಿಪ್ರಾಯವಾದರೆ, ಅನ್ಯಾಯ—ಅಸಂವಿಧಾನಿಕವೆಂಬುದು ಉಳಿದವರ ಅಭಿಮತ.

ಶ್ರೀ ಚರಣಸಿಂಗರ ಮಂತ್ರಿಮಂಡಳಿಯನ್ನು ಪದಚ್ಯುತಗೊಳಿಸಿದಾಗ ಅಲ್ಲಿನ ಪರಿಸ್ಥಿತಿ—ಸನ್ನಿವೇಶಗಳು ವಿಲಕ್ಷಣವಾಗಿತ್ತು. ತಾನು ಯಾವಾಗ ಬೇಕಾದರೂ ವಿಶ್ವಾಸಮತ ಗಳಿಸುವುದಕ್ಕೆ ಸಿದ್ಧನೆಂದು ಶ್ರೀ ಸಿಂಗರು ಹೇಳಿದರೂ ಸಂವಿಧಾನ ಕುಸಿದಿದೆಯೆಂಬ ಕಾರಣವನ್ನು ಮುಂದುಮಾಡಿ ರಾಜ್ಯಪಾಲರು ಮುಂದುವರಿದರು. ಅವರ ಈ ಕೃತಿಯೇ ಅವರನ್ನು ಶ್ರೀಮತಿ ಗಾಂಧಿಯವರ ಏಜಂಟರೆಂದು ಕರೆದಿದೆ. ಪ್ರಧಾನಿಯು ತನಗೆ ಬೇಕಾದವರ, ಅಥವಾ ತನ್ನವರ ಸರಕಾರಗಳನ್ನು ಮಾತ್ರ ಉಳಿಸುತ್ತಾರೆ; ಇತರವನ್ನು ಉರುಳಿಸುತ್ತಾರೆ. ಶ್ರೀ ಚರಣಸಿಂಗರು ಆಕೆಗೆ ಬೇಕಾದವರಾಗಿದ್ದಾಗ ಅವರನ್ನು ಎತ್ತಿದರು; ಈಗ ಬೇಡವಾದವರಾದ ಕೂಡಲೆ ಅವರನ್ನು ನೆಲಕ್ಕಪ್ಪಳಿಸಿದರು.

ರಾಜ್ಯಪಾಲ ಡಾ॥ ರೆಡ್ಡಿಯವರು ತಾನು ಸ್ವತಂತ್ರ ಬುದ್ಧಿಯಿಂದಲೇ ಈ ಕ್ರಮ ಕೈಕೊಂಡುದಾಗಿ ಈಗ ಹೇಳುತ್ತಾರೆ. ಇದ್ದರೂ ಇರಬಹುದು; ತಾವು ಯಾರಿಗೂ ಹೊಣೆಗಾರರಲ್ಲವೆಂದು ಹೇಳಿಕೊಂಡಿದ್ದಾರೆ. ರಾಷ್ಟ್ರಪತಿಯವರನ್ನಾದರೂ ಸಂಸತ್ತು ವಿಚಾರಣೆಗೆ ಗುರಿಪಡಿಸಿ ಅವರ ಮೇಲೆ ಮಹಾಭಿಯೋಗ ಹೊರಿಸಿ ಕಿತ್ತುಹಾಕಬಹುದು; ತನ್ನನ್ನು ಹಾಗೆ ಮಾಡಲಾಗದೆಂದು ಇಲ್ಲದ ವಿಶೇಷವನ್ನು ತಿರುವಿದ್ದಾರೆ. ಅದೇನಿದ್ದರೂ ಶ್ರೀ ಸಿಂಗರು ತಾನು ವಿಧಾನ ಸಭೆಯನ್ನು ಎದುರಿಸುತ್ತೇನೆ—ವಿಶ್ವಾಸಮತಗಳಿಸುತ್ತೇನೆ ಎಂದು ಹೇಳಿದಾಗಲೂ ಡಾ॥ ರೆಡ್ಡಿ ಅದಕ್ಕೆ ಒಪ್ಪದೆ ಹೋದುದು ಎಲ್ಲ ಬಗೆಯ ಸಂದೇಹಕ್ಕೆ ಕಾರಣವಾಯಿತು.

ಇಷ್ಟೇ ಆಗಿ ರಾಜ್ಯಪಾಲರ ಕ್ರಮದ ಯುಕ್ತಾಯುಕ್ತತೆಯನ್ನು ಚರ್ಚಿಸಿ ಪ್ರಯೋಜನವಿಲ್ಲ. ರಾಜ್ಯದ ರಾಜಕೀಯ ಪರಿಸ್ಥಿತಿಗೆ "ತನ್ನದೇ ಆದ" ಅರ್ಥವನ್ನು ಕಲ್ಪಿಸಿಕೊಂಡ ರಾಜ್ಯಪಾಲರು ತನ್ನ ವರದಿಯನ್ನು ಕಳಿಸಿದರು. ಇದನ್ನು ದುರ್ಬಳಕೆ ಮಾಡಿದ ಕೇಂದ್ರ ಸಚಿವ ಸಂಪುಟವು ತಾನು ಬಯಸಿದಂತಿರುವ ವರದಿಯನ್ನು ಒಪ್ಪಿಕೊಂಡು ರಾಷ್ಟ್ರಪತಿ ಆಳಿಕೆಯನ್ನು ಹೇರುವ ಸಲಹೆಯನ್ನು ಮಾಡಿತು. ವಿದೇಶಯಾತ್ರೆಯಿಂದ ರಾಷ್ಟ್ರಪತಿಗಳು ಮರಳಿ ಬರುವಷ್ಟರಲ್ಲಿ ಉತ್ತರಪ್ರದೇಶವು ತಲೆಕೆಳಗಾಗುವುದೆಂಬ ಭಯದಿಂದ ವಿಶೇಷ ಸಂದೇಶವಾಹಕನನ್ನು ಅಟ್ಟಿ ತುರ್ತಿನಿಂದ ಆಜ್ಞೆಗೆ ಸಹಿ ತೆಗೆದುಕೊಂಡಿತು.

ಸಂವಿಧಾನಕ್ಕೆ ಅನರ್ಥ ಆಟ್ಟವಲ್ಲಿ, ಅದಕ್ಕೆ ಅಪಚಾರವೆಸಗಿದಲ್ಲಿ ದೋಷಿಯಾರು? ರಾಷ್ಟ್ರಪತಿಯು ಕೇಂದ್ರ ಸಚಿವ ಸಂಪುಟದ ಸಲಹೆಯಂತೆ ವರ್ತಿಸುವುದೇ ಸರಿಯೇ; ಇಲ್ಲವಾದರೆ, ಆತನ ಮೇಲೆ ಸರಕಾರವೇ ಮಹಾಭಿಯೋಗ ಹೊರಿಸಿ ಸಂಸತ್ತಿನಲ್ಲಿ ವಿಚಾರಣೆಗೆ ಗುರಿ ಪಡಿಸಬಹುದು. ರಾಜ್ಯಪಾಲರನ್ನು ಪ್ರಶ್ನಿಸುವ ಅಧಿಕಾರ ಸಂಸತ್ತಿಗಾಗಲೀ, ಶಾಸನ ಸಭೆಗಳಿಗಾಗಲೀ ಇರುವುದಿಲ್ಲ. ಹೆಚ್ಚೆಂದರೆ, ಆತನನ್ನು ಹಿಂದಕ್ಕೆಗೆದುಕೊಳ್ಳಬೇಕೆಂದು ಒಂದಷ್ಟು ಕೋಲಾಹಲ ಮಾಡಬಹುದಷ್ಟೆ. ಉತ್ತರ ಪ್ರದೇಶದಲ್ಲಿ ಡಾ॥ ರೆಡ್ಡಿಯವರು ಪಕ್ಷಪಾತವನ್ನು ಇಲ್ಲವೆಂದರೂ ತೋರಿಸಿಯೇ ಇದ್ದಾರೆ. ಇದು ಪ್ರಧಾನಿಗೆ ಬೇಕಾದುದರಿಂದ ಆಕೆಗೆ ಅನುಕೂಲವಾಯಿತು. ಪ್ರಜಾಶಕ್ತಿಯನ್ನು ಉಳಿಸುವ ಪ್ರತಿಜ್ಞೆಗೈದ ಶ್ರೀಮತಿ ಗಾಂಧಿಯವರು ರಾಷ್ಟ್ರಪತಿ ಆಳಿಕೆಯನ್ನು ವಿಧಾನ ಸಭೆ ಸೇರುವುದಕ್ಕೆ ನಾಲ್ಕು ದಿನ ಮೊದಲೇ ಘೋಷಿಸುವ ದಿಟ್ಟತನ ಮೆರೆದು, ಇಲ್ಲಿಯೂ ರಾಜ್ಯ ಶಾಸನ ಸಭೆಯ ಮೇಲೂ ತನ್ನ ಸಾರ್ವಭೌಮತೆಯನ್ನು ತೋರಿಸಿದ್ದಾರೆ.

ಆದುದರಿಂದ ಉತ್ತರ ಪ್ರದೇಶದಲ್ಲಿ ರಾಷ್ಟ್ರಪತಿ ಆಳಿಕೆ ಬರುವುದಕ್ಕೆ ಶ್ರೀಮತಿ ಗಾಂಧಿಯವರೇ ಹೊಣೆ. ಇವರು ತಾವಲ್ಲವೆನ್ನಬಹುದಷ್ಟೆ. ಈ ಸಂಬಂಧದಲ್ಲಿ ಏನಾದರೂ ಕ್ರಮ ತೆಗೆದುಕೊಳ್ಳಬೇಕೆಂದಿದ್ದರೆ, ಆಕೆಯ ಮೇಲೆಯೇ ತೆಗೆದುಕೊಳ್ಳಬೇಕಷ್ಟೆ. ರಾಷ್ಟ್ರಪತಿಯವರು ಕೇಂದ್ರ ಸಚಿವ ಸಂಪುಟದ ಸಲಹೆಯಂತೆ ನಡೆದುದರಿಂದ ಅವರದು ತಪ್ಪೆಂದು ಹೇಳುವಂತಿಲ್ಲ. ಒಂದುವೇಳೆ ಅವರನ್ನು ವಿಚಾರಣೆಗೊಳಪಡಿಸಬೇಕೆಂದಿದ್ದರೆ, ಸಾಕಷ್ಟು ಮತ ದೊರೆಯಬಹುದು; ಆದರೆ ಮಹಾಭಿಯೋಗದ ನಿರ್ಣಯಕ್ಕೆ ಮೂರರಲ್ಲಿ ಎರಡು ಮತಗಳು ದೊರೆಯಬೇಕಾದ್ದರಿಂದ ಇದು ಸಾಧ್ಯವಿಲ್ಲ. ಶ್ರೀ ಮಧುಲಿಮಯೆ ಅವರು ಈ ಬಗ್ಗೆ ಉತ್ಸುಕರಿದ್ದಾರೆ. ಮಹಾಭಿಯೋಗದ ನಿರ್ಣಯ ಮಂಜೂರಾಗದೆ ಹೋದರೂ ಇಂತಹ ಕೃತ್ಯದಿಂದ "ರಾಷ್ಟ್ರಪತಿ"ಯವರ ಘನತೆ ಕುಂದುವುದೆಂದು ಅವರ ಅಭಿಪ್ರಾಯ.

ಆದರೆ, ಇದರಿಂದ ಸಾಧಿಸುವಂತಹದ್ದು ಏನೂ ಇಲ್ಲ. ಈ ಎಲ್ಲ ಪ್ರಸಂಗಗಳಿಗೆ ಮೂಲ ಪ್ರೇರಕಿ ಶ್ರೀಮತಿ ಗಾಂಧಿ. ಅಂದು ಶ್ರೀ ಚಂದ್ರಭಾನು ಗುಪ್ತರ ಸಿಂಡಿಕೇಟ್ ಸರಕಾರವನ್ನು ಉರುಳಿಸಿದ್ದು ಆ ನಂತರ ಈಗ ಶ್ರೀ ಚರಣ ಸಿಂಗರ ಸರಕಾರವು ಉರುಳುವಲ್ಲಿ ಒತ್ತಾಸೆ ನೀಡಿದ್ದು ಆಕೆಯೇ; ಆಕೆಯು ಸಚಿವ ಸಂಪುಟವೇ. ಆದುದರಿಂದ ಆಕೆಯ ಮೇಲೆಯೇ ಪ್ರತೀಕಾರ ತೋರ್ಪಡಿಸಬೇಕು ಎಂಬುದು ಇತರ ಕೆಲವು ಪಕ್ಷಗಳ ನಿಲುವು. ಇದಕ್ಕಾಗಿ ಹೊಸ ತಂತ್ರವೇನೂ ಹೂಡಬೇಕೆಂದಿಲ್ಲ. ರಾಷ್ಟ್ರಪತಿ ಆಜ್ಞೆಗೆ ಬದಲಾಗಿ ಮಂಜೂರಿಯನ್ನು ಲೋಕಸಭೆಯಲ್ಲಿ ಮಂಡಿಸುವಾಗ, ಅದನ್ನು ಸೋಲಿಸಿದರೆ ತೀರಿತು. ಬರಿಯ ಒಂದು ಬಹುಮತದಿಂದ ಪ್ರಧಾನಿ ಗಾಂಧಿಯವರನ್ನು ಸೋಲಿಸಬಹುದು; ನ್ಯಾಯವಾಗಿಯಾದರೆ, ಆಗ ಆಕೆ ರಾಜೀನಾಮೆ ಕೊಡಬೇಕಾಗುತ್ತದೆ. ಪರಾಪರ ಶಕ್ತಿಗಳ ತೂಕ ಮತ್ತೊಮ್ಮೆ ವ್ಯಕ್ತವಾಗುತ್ತದೆ.

ಸಿಂಡಿಕೇಟ್, ಜನಸಂಘ, ಸ್ವತಂತ್ರ, ಬಿ. ಕೆ. ಡಿ., ಎಸ್ಸೆಸ್ಪಿಗಳು ಇವಕ್ಕೆ ಜೊತೆಗೂಡಿ ತ್ರಿಮೇ ಮಾರ್ಕ್ಸಿಸ್ಟರು ಈಗೀಗ ಶ್ರೀಮತಿ ಗಾಂಧಿಯನ್ನು ಮೂಲಕಾಯಿಯಂತೆ ನೋಡುತಿದ್ದಾರೆ. ಡಾ॥ ರೆಡ್ಡಿಯವರ ಕ್ರಮ ಸಾಧ್ಯವಲ್ಲವೆಂದೂ ಹೇಳುತ್ತಾರೆ. ಹೀಗೆಂದ ಅವರು ಶ್ರೀಮತಿಯ ಸರಕಾರವನ್ನು ಉರುಳಿಸಲು ಮುಂದಾದರೂ ಆಗಬಹುದು; ತಮಿಳುನಾಡಿನ ದ್ರಾಮುಕರಿಗೂ ಶ್ರೀಮತಿಗೂ ತುಸು ತಾಗಿಬಿದ್ದಿದೆ; ಅವರೂ ಪ್ರಧಾನಿ ಕ್ರಮವನ್ನು ದೂರುತ್ತಾರೆ. ಇವರಷ್ಟರೂ ಇನ್ನೂ ಕೆಲವು ಚಿಕ್ಕಪುಟ್ಟವರೂ ಸಂಘಟಿತರಾದರೆ, ಶ್ರೀಮತಿ ಗಾಂಧಿ ಸೋಲಬೇಕಾಗುತ್ತದೆ.

ಆದರೆ, ನಮ್ಮ ವಿರೋಧಿ ಪಕ್ಷಗಳು ಈ ರೀತಿ ವರ್ತಿಸಲು ಸಿದ್ಧರಿದ್ದಾರೆಯೆ? ತಮಗೆ ಬೇಕಾದುದನ್ನು ಶ್ರೀಮತಿ ಗಾಂಧಿ ಮಾಡಿದಾಗ, ಹೇಳಿದಾಗ ಮಾತ್ರ ಆಕೆಯನ್ನು ಟೀಕಿಸುವಲ್ಲಿ ಒಂದಾಗುವ ಈ ಪಕ್ಷಗಳು ಸಂಸತ್ತಿನಲ್ಲಿ ಆಕೆಯ ಸಮಾಜವಾದ ಮತ್ತು ಪ್ರಗತಿವಾದದ ಬೋಗಿಗೆ ಮಾರುಹೋಗಿ ಆಕೆಯ ಪರವಾಗಿ ಕೈಯೆತ್ತುತ್ತವೆ! ಈ ಇಬ್ಬಗೆಯ ವರ್ತನೆಯಿಂದಾಗಿಯೇ ಆಕೆಯ ಸಿಂಹಾಸನ ಭದ್ರವಾಗುತ್ತ ಬರುತ್ತಿದೆ. ಇದು ಆಕೆಗೂ ಗೊತ್ತು. ಆದುದರಿಂದ ಸ್ವಲ್ಪವೂ ಲಕ್ಷ್ಯಕೊಡುತ್ತಲೇ ಆಕೆ ನಿಂತಿದ್ದಾಳೆ!

...ಸುವಲ್ಲಿ ಗಣನೀಯ ಪಾತ್ರವಹಿಸುತ್ತವೆ. ನಿರೋಧ್‌ಗಳ ಬಳಕೆ ಬಗ್ಗೆ ಮಾಡಲು ಪ್ರಚಾರೋಪಾಯ ಕೈಗೊಳ್ಳುವ ಹೊಸಯೋಜನೆಯನ್ನು ಈಗ ರೂಪಿಸಲಾಗುತ್ತಿದೆ. ಯು ಎಸ್ಸೇಡ್ ನೆರವಿನಿಂದ ಈ ಹೊಸ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು.

ಕುಟುಂಬ ಯೋಜನೆ ಇಲಾಖೆಯು ಆಡಳಿತದಲ್ಲಿಯೇ ನಿರೋಧಗಳಿಗಾಗಿ ಒಂದು ಸುವ್ಯವಸ್ಥಿತ ಮಾರುಕಟ್ಟೆಯನ್ನು ಬೆಳೆಸುವುದು ಮುಂದಿನ ಗುರಿ. ನಿರೋಧಗಳ ಮಾರಾಟ ಕಾರ್ಯಗೊಂಡಾಗಿನಿಂದ ಅಂದರೆ 1968ರ ಸೆಪ್ಟೆಂಬರ್‌ನಿಂದ 70ರ ಜುಲೈ ವರೆಗೆ ಸುಮಾರು 60 ದಶಲಕ್ಷ ನಿರೋಧ್‌ಗಳನ್ನು ಮಾರಾಟ ಮಾಡಲಾಗಿದೆ. ಮಾರಾಟ ಪ್ರಮಾಣವು ಹೆಚ್ಚುತ್ತಿರುವ ಸೂಚನೆಗಳು ಕಂಡು ಬಂದಿವೆ. ದೇಶದ ಬೇರೆ ಬೇರೆ ಕಡೆಗಳಲ್ಲಿ ಪ್ರಸ್ತುತ ಸುಮಾರು 15000 ಮಂದಿ ನಿರೋಧ್‌ಗಳ ಮಾರಾಟದಲ್ಲಿ ತೊಡಗಿದ್ದಾರೆ. ಮುಂದಿನ ವರ್ಷದ ಮಧ್ಯದಲ್ಲಿ ದೇಶದಲ್ಲಿ 6 ಲಕ್ಷ ಚಿಲ್ಲರೆ ವ್ಯಾಪಾರಿಗಳು ನಿರೋಧ್‌ಗಳನ್ನು ಮಾರಾಟ ಮಾಡುವರಲ್ಲದೆ, ದೇಶದ ಹಳ್ಳಿ ಹಳ್ಳಿಯಲ್ಲಿಯೂ ಇವು ದೊರೆಯುವಂತಾಗುವುದು.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 28337
2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಸತ್ಕಾರ ಯೋಜನೆ

ಸುರತ್ಕಲ್ಲಿನ ಕೆ. ಪ್ರಾ. ಶಾಂ. ಕನ್ನಡ ಶಾಲೆಯ ವಠಾರದಲ್ಲಿರುವ ಧಾರವಾಡದ ಪಂಡಿತ ಕವಲಿಯವರಿಗೆ 71ನೆಯ ವರ್ಷದ ಜಯಂತಿಯಲ್ಲಿ ಅವರ ಪಾಂಡಿತ್ಯ ಪ್ರತಿಭೆ ಮುಂತಾದ ಗುಣಗಳ ಗೌರವಾರ್ಥ ಸತ್ಕಾರ ಸಭೆಯನ್ನು ಏರ್ಪಡಿಸಬೇಕೆಂದು ಯೋಚಿಸಲಾಗಿದೆ. ಅಭಿನಂದನ ಭಾಷಣ, ಪುಸ್ತಕ ಪ್ರದರ್ಶನ, ಕವಿಸಮ್ಮೇಳನಾದಿಗಳು ಅತ್ಯಂತ ಜರಗಲಿವೆಯೆಂದೂ ಶ್ರೀ ಕೆ. ವೆಂಕಟರಾಮಾಚಾರ್ಯರು ತಿಳಿಸುತ್ತಾರೆ.

ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ನಿಧನ

ಮಂಗಳೂರಿನ ಪ್ರಸಿದ್ಧ ಮುತ್ಸದ್ದಿ, ಪ್ರಮುಖ ವಕೀಲರೂ, ಮಾಜಿ ಜಿಲ್ಲಾ ಬೋರ್ಡಿನ ಅಧ್ಯಕ್ಷರೂ ಹಿರಿಯ ಕಾಂಗ್ರೆಸಿಗರೂ ಸಮಾಜ ಸೇವಕರೂ ಆಗಿದ್ದ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ತಾ. 8ನೇ ರಾತ್ರಿ 67ನೇ ವಯಸ್ಸಿನಲ್ಲಿ ನಿಧನಗೊಂಡರೆಂದು ತಿಳಿಸಲು ವಿಷಾದವಾಗುತ್ತದೆ.

ಇವರು ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರಾಗಿದ್ದು ವಿಜಯಾ ಬ್ಯಾಂಕಿನ ಮಾಜಿ ಅಧ್ಯಕ್ಷರೂ, ಮೈಸೂರು ಏಜೆಂಟ್ ಬ್ಯಾಂಕಿನ ಉಪಾಧ್ಯಕ್ಷರೂ, ಜಿಲ್ಲಾ ಸಹಕಾರಿ ಬ್ಯಾಂಕಿನ ಡೈರೆಕ್ಟರರೂ ಆಗಿ ಜನಾದರಣೆ ಗಳಿಸಿದ್ದರು.

ದಯಮಾಡಿ

ನಿಮ್ಮ ಬಾಕಿ ಚಂದಾ

ಹಣವನ್ನು ಕಳುಹಿಸಿರಿ

ಹೇಳುವದು ಶಾಸ್ತ್ರ ಇಕ್ಕುತ್ತಿರುವದು ಗಾಳ

(ಐದನೇ ಪುಟದಿಂದ)

ಅಧಿಕಾರ ವ್ಯಾಮೋಹದಿಂದ ಪಕ್ಷವನ್ನು ಒಡೆದು ಸರ್ವಾಧಿಕಾರಿಣಿಯಂತೆ ವರ್ತಿಸುತ್ತಿರುವ ಪ್ರಧಾನಿ ಇಂದಿರಾಜೀಯವರು, ವಿವೇಕಾನಂದ ವಿಗ್ರಹದ ಬುಡದಲ್ಲಿ ನತಮಸ್ತಕರಾಗಿ ತಮ್ಮ ತಪ್ಪನ್ನೊಪ್ಪಿಕೊಂಡರೇ? ದಿಲ್ಲಿಯಲ್ಲಿ ಅಧಿಕಾರಾಂಧರಾಗಿ ವಿವೇಕಾನಂದರು ಹೇಳಿರುವ ರಾಷ್ಟ್ರೀಯ ಸಂಘಟನೆಯನ್ನು ಹತ್ತಿಕ್ಕಲು ಸೆರಗು ಕಟ್ಟಿಕೊಂಡ ಆ ಇಂದಿರಾ ಗಾಂಧಿ ನೆಹರೂ ಎಲ್ಲಿ? ವಿವೇಕಾನಂದ ವಿಗ್ರಹದ ಪಾದಸ್ಪರ್ಶಗೈದ ಧಾರ್ಮಿಕ ತಳಹದಿಯ ಮೇಲೆ ಸಂಘಟನೆಗೆ ಕರೆಕೊಡುತ್ತಿರುವ ಶ್ರೀಮತಿ ಇಂದಿರಾ ದೇವಿಯವರೆಲ್ಲಿ? ಎಂತಹ ವ್ಯತ್ಯಾಸ!

ಈ ಬದಲಾವಣೆ ಶಾಶ್ವತವಾಗಿ ಉಳಿದೀತೇ? ಇನ್ನು ಅವರು ದೇಶೀಯ ಶಕ್ತಿಯ ದಮನ—ಆಕ್ರಮಣಕ್ಕೆ ಆಹ್ವಾನಕ್ಕೆ ಮುಂದಾಗಲಾರರೇ? ಅಥವಾ ಕೊಳವೆಯಲ್ಲಿ ಹಾಕಿದ ನಾಯಿ ಬಾಲದಂತೆ—ಕನ್ಯಾಕುಮಾರಿಯಲ್ಲಿ ವಿವೇಕೋದಯವಾದಾಗ ಇದ್ದ ಇಂದಿರಾಜೀ ಬೇರೆ, ದಿಲ್ಲಿ ಗದ್ದುಗೆಯ ರಾಣಿ ಇಂದಿರಾ ಗಾಂಧಿ ಬೇರೆಯಾಗಿ ಬಿಡುವರೇ? ಅಂದಿಗೆ (ಕನ್ಯಾಕುಮಾರಿಯಲ್ಲಿ) ಅದೇ ಸುಖ, ಇಂದಿಗೆ [ದಿಲ್ಲಿಯಲ್ಲಿ] ಇದೇ ಸುಖವೆಂದು ಅವರು ಹೇಳಿಯಾರೇ?

ಸ್ವಾಮಿ ವಿವೇಕಾನಂದರ ವಿವೇಕವಾಣಿಗೆ ಕಿವಿಗೊಟ್ಟು, ಆ ಕಾರ್ಯಕ್ಕಾಗಿ ಕಂಕಣಬದ್ಧರಾಗಿ ತಮ್ಮ ಜೀವನವನ್ನು ಅರ್ಪಿಸಿದವರು ಪರಮ ಪೂಜನೀಯ ಡಾಕ್ಟರ್ ಕೇಶವ ಬಲಿರಾಂ ಹೆಡ್ಗೇವಾರ್. ಈ ರಾಷ್ಟ್ರಕ್ಕೆ ಬಂದಿರುವ, ತಗಲಿರುವ ಜಾಡ್ಯ ರೋಗಾವದೆಂಬುದನ್ನು ಅವರು ಕಂಡುಕೊಂಡರು ಮತ್ತು—ಸ್ವಾಮೀಜೀ ಮೂವರು ಹಿಂದೂಗಳನ್ನೇ ಏಕಕ್ಕೆ ಮೂರಾಬಟ್ಟೆಯಾಗಿರುವ ಈ ದೇಶದ ಹಿಂದೂಗಳೆಲ್ಲರನ್ನೂ, ಸಂಘಟನೆಯ ಸ್ನೇಹಸೂತ್ರದಲ್ಲಿ ಪೋಣಿಸಬೇಕೆಂದು ಅವರು ಕಾರ್ಯಮಗ್ನರಾದರು. ೧೯೨೫ರ ವಿಜಯದಶಮಿಯಂದು ಅವರು ನಾಗಪುರದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಸ್ಥಾಪಿಸಿದರು. ಅದಿಂದು ರಾಷ್ಟ್ರವ್ಯಾಪೀ ಬೃಹದ್‌ಶಕ್ತಿಯಾಗಿ ಬೆಳೆದಿದೆ. ವಿವೇಕಾನಂದರು ಬಯಸಿದ್ದ ಧೀರ ತರುಣರಲ್ಲಿ, ನೂರಾರು ತರುಣರು ಆ ಸಂಘದಲ್ಲಿದ್ದಾರೆ. ಇಲ್ಲಿಯ ಜನರನ್ನು ಕಂಡು, ಇವರೆಂದಿಗೂ ಬಿಟ್ಟುಕೊಡಲಾರರು, ಕಚ್ಚಾಡದಿರಲಾರರು... ವಿವೇಕಾನಂದರು ನಿರೀಕ್ಷೆಯ ನಿಟ್ಟುಸಿರು ಬಿಟ್ಟದ್ದರಾದಲ್ಲಿ, ಸಂಘ ಇಂದು ಆಕಾರಕರಣವನ್ನು ಬೀರುತ್ತದೆ. ಪರರಾಷ್ಟ್ರ ಪ್ರೇಮಿ ಜನಾಂಗದ ಸಂತಾನ, ರಾಜಕೀಯ ಪುಢಾರಿಗಳು, ಅರಾಷ್ಟ್ರೀಯ ದುಃಶಕ್ತಿಗಳು, ಅನ್ಯಾನ್ಯ ದೇಶಗಳ ಪ್ರಚಾರಕರು ಅದೇನೇನೋ ನೋಡಿ ಮಾಯ ಮಾಡಿದರೂ ಇನ್ನು ಇಲ್ಲಿಯ ಜನರನ್ನು ಮೋಸಗೊಳಿಸಲಾರರು, ಅವರು ಸಂಘಟನೆಯ ಸೂತ್ರದಲ್ಲಿ ಬಂಧಿಸಲ್ಪಟ್ಟಿದ್ದಾರೆ.......

ಸ್ವಾಮಿ ವಿವೇಕಾನಂದರ ಬಯಕೆಯನ್ನು ಸಾಕಾರಗೊಳಿಸಲಾಗಿರುತ್ತದೆ. ಅವರು ತಪಸ್ಸಿಗೆ ಕುಳಿತ ಬಂಡೆಯ ಮೇಲೆ ಅವರಿಗೆ ಸ್ಮಾರಕವನ್ನು ನಿರ್ಮಿಸಲಾಗಿದೆ. ಅಲ್ಲಿ ನತಮಸ್ತಕರಾಗಿ, ವಿವೇಕೋದಯವಾದವರಂತೆ ಇಂದಿರಾ ಗಾಂಧಿ ವರ್ತಿಸಿದ್ದಾರೆ. ಅವರು ಅಲ್ಲಿಗೆ ಕೇರಳದ ರಾಜಕೀಯ ರಾಡಿಯಲ್ಲಿ ಹೊರಳಾಡಿ ಬಂದಿದ್ದಾರೆ. ವಿವೇಕಾನಂದರ ಧಾರ್ಮಿಕ ಧ್ವಜವನ್ನು ದಾಳವಾಗಿ ಮಾಡಲು ಹವಣಿಸುತ್ತಿರುವ ರಷ್ಯಾದ ಅನುಸಾರಕ ಕಮ್ಯೂನಿಸ್ಟರೊಂದಿಗೂ ಅಳಿದುಳಿದಿರುವ ಖಂಡಿತ ಭಾರತವನ್ನು ಪಾಕಿಸ್ತಾನವನ್ನಾಗಿ ಮಾಡಲು ಹಂಚಿಕೆ ನಡೆಸುತ್ತಿರುವ ಮುಸ್ಲಿಂ ಲೀಗಿನೊಡನೆಯೂ ಅವರು ರಾಜಕೀಯ ಲಲ್ಲೆಯಾಡಿ, ರಾಜಕೀಯದಿಂದ ದೂರ ಸರಿದಿರುವ ವಿವೇಕಾನಂದರ ಕುರಿತು ಮಾತಾಡಲು ಬಂದಿದ್ದಾರೆ! ವಿವೇಕಾನಂದರ ರಾಷ್ಟ್ರೀಯ ಸಂಘಟನೆಯ ಬಯಕೆಯನ್ನು ಅಸಾಧ್ಯಗೊಳಿಸಲೆಂಬಂತೆ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೇಲೆ ನಿರ್ಬಂಧ ಹೇರುವ ಜನಕನನ್ನು ಕಾಣುತ್ತ ಅಲ್ಲಿಗೆ ಬಂದಿದ್ದಾರೆ! ವಿವೇಕಾನಂದರ ಗುರುವಿನಲ್ಲಿ ಶಾಸ್ತ್ರ ಹೇಳುತ್ತಿರುವಂತೆ ಅವರು ದೇಶದಾದ್ಯಂತ ಅಧಿಕಾರಕ್ಕಾಗಿ ಗಾಳ ಹಾಕುತ್ತಿದ್ದಾರೆ. ಅವರು ಹೇಳುತ್ತಿರುವದು ಸ್ವಾಮಿ ವಿವೇಕಾನಂದರ ಹೆಸರನ್ನು, ಅಂದರೆ ಸ್ವಾಮೀಜೀಯವರ ಹೆಸರನ್ನು ತಮ್ಮ ಗಾಳದಲ್ಲಿ ಆಹಾರದ ಗುಳಿಗೆಯನ್ನಾಗಿ ಮಾಡಲು ಇಚ್ಛಿಸಿದ್ದಾರೆ. ಇದು ಸಾಧ್ಯವೇ?

ನಾಟಕದಲ್ಲಿ ಮಹಾನ್ ಪತಿವ್ರತೆಯಂತೆ ವ್ಯಭಿಚಾರಿಣಿ ಮಾತಾಡುವದಿಲ್ಲವೇ? ರಾಜಕೀಯ ವೇದಿಕೆಯ ಮೇಲಿನಿಂದ ವಾನಪ್ರಸ್ಥಬಂಧದ ಕುರಿತು ಕಾಡಿಯುವ ಚಟ ಇರುವವರೂ ಗಂಟೆಗಂಟಲೆ ಭಾಷಣ ಬಿಗಿಯುವದಿಲ್ಲವೇ? ಪಿಕ್‌ಪೋಕೆಟ್ ಹೊಡೆಯುವವನೂ ಅದೆಷ್ಟು ಟಿಪ್‌ಟಾಪ್ ಆಗಿದ್ದು ಕಳ್ಳಕಾಕರನ್ನು ದೂರುತ್ತಿರುತ್ತಾನೆ....ಇಂದದೆಲ್ಲಾ ಸರ್ವಸಾಧಾರಣವಾಗಿ ಕಂಡು ಬರುವ ವಿಷಯಗಳಿವೆ. ಇದರಲ್ಲೇನು ಆಶ್ಚರ್ಯವಿಲ್ಲ. ಅಲ್ಲದೆ ಹುಟ್ಟುಗುಣ ಘಟ್ಟ ಹತ್ತಿದರೂ....ಸಟ್ಟರೂ ಹೋಗುವದಿಲ್ಲವಂತೆ....ಈ ಎರಡು ವಿಷಯಗಳನ್ನು ನೆನೆಸಿಕೊಂಡು ಇಂದಿರಾಜೀಯವರು ವಿವೇಕಾನಂದರ ಕುರಿತು ಮಾತಾಡಿರುವದನ್ನು ಜ್ಞಾಪಿಸಿಕೊಂಡರೆ ಭೂತವೂ ಭಗವದ್ಗೀತೆಯನ್ನು ಹೇಳುತ್ತದೆಂಬುದರ ಅರಿವಾಗದಿರದು. ಇದ್ದರೂ ಕ್ರೂರ ವ್ಯಾಘ್ರರು ವಿಷಸರ್ಪರೂ, ಜನಾಂಗ್ರೇಸರರೂ ಬದಲಾಗಿರುವದನ್ನು ಚರಿತ್ರೆ ಸೂಚಿಸುತ್ತಿರುವಾಗ ಆ ಸಾಲಿಗೇ ಶ್ರೀ ಇಂದಿರಾಜೀ ಸೇರಬಾರದೆಂಬ ಪ್ರಶ್ನೆಗೂ ಆಸ್ಪದ ಇದ್ದೇ ಇದೆ.

ಏನೇ ಇರಲಿ. ಇನ್ನಾದರೂ ಅವರು ಹೇಳುತ್ತಿರುವದು ಶಾಸ್ತ್ರ, ಇಕ್ಕುತ್ತಿರುವದು ಗಾಳವೆನ್ನುವಂತಾಗದಿರಲಿ.

—ಶ್ರೀ ಶಿವಶಂಕರ

ಕಡ್ಲೆಕಾಯಿ ಬೆಳೆಯಲ್ಲಿ ಚುಕ್ಕೆರೋಗದ ನಿಯಂತ್ರಣ

ಮೈಸೂರು ರಾಜ್ಯದಲ್ಲಿ ಕಡ್ಲೆಕಾಯಿಯು ಒಂದು ಮುಖ್ಯವಾದ ಎಣ್ಣೆಕಾಳಿನ ಬೆಳೆ. ಇದು ವಿದೇಶಿ ವಿನಿಮಯವನ್ನೂ ಗಳಿಸುತ್ತದೆ. ಕಡ್ಲೆಕಾಯಿ ಬೆಳೆಯನ್ನು ಮಿಶ್ರಬೆಳೆಯನ್ನಾಗಿ ಸಹ ಬೆಳೆಯುತ್ತಾರೆ. ಅದರ ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಾದ ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳುವುದು ಮುಖ್ಯವಾಗಿದೆ. ಮೈಸೂರು ರಾಜ್ಯದಲ್ಲಿ ಕಡ್ಲೆಕಾಯಿ ಬೆಳೆಯ ಕ್ಷೇತ್ರವು 10 ದಶಲಕ್ಷ ಹೆಕ್ಟೇರುಗಳಷ್ಟಿದೆ ಮತ್ತು ಅದನ್ನು ಬೆಳೆಯುವ ಮುಖ್ಯವಾದ ಜಿಲ್ಲೆಗಳು ಬೆಳಗಾಂ, ಬಳ್ಳಾರಿ, ಬಿಜಾಪುರ, ಧಾರವಾಡ, ಗುಲ್ಬರ್ಗ ಮತ್ತು ರಾಯಚೂರುಗಳಾಗಿವೆ.

ಕಡ್ಲೆಕಾಯಿ ಬೆಳೆಯು ಚುಕ್ಕೆರೋಗಕ್ಕೆ ತುತ್ತಾಗುತ್ತದೆ. ಇದು ಅದರ ಸಾಗುವಳಿಯಲ್ಲಿ ಒಂದು ಅಡಚಣೆ. ಈ ರೋಗದಿಂದ ಪ್ರತಿವರ್ಷ ಬೆಳೆಗೆ ಬಾಧೆ ಮತ್ತು ಪೂರ್ಣ ಮಾಗದ ಎಲೆಗಳನ್ನು ಒಣಗಿಸಿ ಉದುರಿಸಿಬಿಡುತ್ತದೆ ಮತ್ತು ಇದರಿಂದ ಇಳುವರಿ ಬಹಳ ಕಡಿಮೆಯಾಗುತ್ತದೆ. ಸಾಗುವಳಿಯಲ್ಲಿರುವ ಎಲ್ಲಾ ತಳಿಗಳು ಈ ರೋಗಕ್ಕೆ ತುತ್ತಾಗುತ್ತವೆ.

ಈ ರೋಗವನ್ನು ತಡೆಗಟ್ಟುವುದಕ್ಕೆ ಅನೇಕ ರಾಸಾಯನಿಕಗಳನ್ನು ಉಪಯೋಗಿಸಲಾಯಿತು. ಆದರೆ ಯಾವ ನಿರೀಕ್ಷ್ಯವಾದ ಪರಿಣಾಮಗಳೂ ಕಂಡುಬರಲಿಲ್ಲ. ಚುಕ್ಕೆ ರೋಗವನ್ನು ತಡೆಗಟ್ಟುವ ಸಲುವಾಗಿ ಯೋಗ್ಯವಾದ ರಾಸಾಯನಿಕವನ್ನು ಕಂಡು ಹಿಡಿಯಲು 1969-70ನೇ ಸಾಲಿನಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಧಾರವಾಡ ಸಂಶೋಧನಾ ಕೇಂದ್ರದಲ್ಲಿ ಈ ರೋಗಕ್ಕೆ ತುತ್ತಾಗುವ 'ಸುಧಾರಿಸಿದ ಸ್ಪ್ಯಾನಿಷ್' ಎಂಬ ತಳಿಯ ಮೇಲೆ ಪ್ರಯೋಗವನ್ನು ಮಾಡಲಾಯಿತು. ನಾಲ್ಕು ರಾಸಾಯನಿಕಗಳು ಅಂದರೆ ಜಿನೇಬ್ ಕೊಸೈಡ್ ಮಾನೇಬ್ ಮತ್ತು ಡ್ಯುಟಾರ್‌ಗಳನ್ನು ಮೂರು ಪ್ರಮಾಣಗಳಲ್ಲಿ ಅಂದರೆ ಅನುಕ್ರಮವಾಗಿ ಶೇಕಡಾ 0·15, 0·2 ಮತ್ತು 0·3 ಬೆಳೆಯು 25 ದಿನಗಳಾದ ನಂತರ 20 ದಿವಸಗಳಲ್ಲಿ ಅಂತರದಲ್ಲಿ ಸಿಂಪಡಿಸಲಾಯಿತು.

ಇವುಗಳಲ್ಲಿ ಡ್ಯುಟಾರ್ ಎಂಬ ರಾಸಾಯನಿಕವು ಬಹಳ ಉಪಯುಕ್ತವಾದುದೆಂದೂ ಮತ್ತು ಸಿಂಪಡಿಸದೇ ಇದ್ದ ತಾಕುಗಳಿಗಿಂತಲೂ ಶೇಕಡ 90ರಷ್ಟು ಹೆಚ್ಚು ಇಳುವರಿಯನ್ನು ಕೊಟ್ಟದ್ದು ಕಂಡು ಬಂದಿತು. ಅದರ ನಂತರ ಜಿನೇಬ್ ಎಂಬ ರಾಸಾಯನಿಕವು ಸಿಂಪಡಿಸದೇ ಇದ್ದ ತಾಕುಗಳಿಗಿಂತಲೂ ಶೇಕಡ 25ರಷ್ಟು ಹೆಚ್ಚು ಇಳುವರಿಯನ್ನು ಕೊಟ್ಟಿತು. ಈ ರಾಸಾಯನಿಕಗಳನ್ನು ಸಿಂಪಡಿಸಿದ ತಾಕುಗಳಲ್ಲಿ ರೋಗವು ಕಡಿಮೆ ಪ್ರಮಾಣದಲ್ಲಿ ಇದ್ದುದು ಕಂಡು ಬಂದಿತು. ರೋಗದ ಪರಿಣಾಮವಾಗಿ ರಾಸಾಯನಿಕವನ್ನು ಉಪಯೋಗಮಾಡದೇ ಇದ್ದ ತಾಕುಗಳಲ್ಲಿ ಎಲೆಗಳ ನಷ್ಟವು ಕಂಡು ಬಂದಿತು. ಡ್ಯುಟಾರ್ ರಾಸಾಯನಿಕವನ್ನು ಉಪಯೋಗಿಸಿದ ಸಸಿಗಳು, ಕೀಳುವ ವರೆಗೆ ಹಸಿರು ಇದ್ದುದು ಕಂಡು ಬಂದಿತು. ಆದರೆ ಸಿಂಪಡಿಸದೇ ಇದ್ದ ತಾಕುಗಳಲ್ಲಿ ಶೇಕಡ 100ರಷ್ಟು ಎಲೆಗಳು ಉದುರಿ ಹೋದದ್ದು ಕಂಡುಬಂದಿತು. ಇದೂ ಅಲ್ಲದೇ ಕಾಯಿಯಲ್ಲಿ ಕಾಳಿನ ತುಂಬುವಿಕೆಯೂ ರಾಸಾಯನಿಕ ಸಿಂಪರಣೆ ಮಾಡಿದ ತಾಕುಗಳಲ್ಲಿ ಚೆನ್ನಾಗಿದ್ದುದು ಕಂಡು ಬಂದಿತು. ಡ್ಯುಟಾರ್ ರಾಸಾಯನಿಕವನ್ನು ಶೇಕಡ 0.2 ಪ್ರಮಾಣದಲ್ಲಿ ಸಿಂಪರಣೆ ಮಾಡಿದಾಗ ಉತ್ತಮ ಪರಿಣಾಮ ಕಂಡು ಬಂದಿತು. ಆದರೆ ಅದರ ಪ್ರಮಾಣವನ್ನು 0.3 ಕ್ಕೆ ಹೆಚ್ಚಿಸಿದಾಗ ಎಲೆಗಳ ಮೇಲೆ ಅನಿಷ್ಟ ಪರಿಣಾಮ ಕಂಡುಬಂದಿತು.

ಮೇಲೆ ಹೇಳಿದ ಮೂರು ರಾಸಾಯನಿಕಗಳನ್ನು ಮತ್ತು ಹೊಸದಾಗಿ ಪೇಟೆಗೆ ಬರುವ ರಾಸಾಯನಿಕಗಳನ್ನೂ ಉಪಯೋಗಿಸಿ ಅವುಗಳಲ್ಲಿ ಯಾವುದು ಉತ್ತಮವಾದುದೆಂದು ಕಂಡು ಹಿಡಿಯಲು ಹೆಬ್ಬಾಳ, ಧಾರವಾಡ, ರಾಯಚೂರು ಸಂಶೋಧನಾ ಕ್ಷೇತ್ರಗಳಲ್ಲಿ ಪ್ರಯೋಗಗಳು ಮುಂದುವರಿದಿವೆ.

-ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನಾ ವಿಭಾಗದವರ ಕೃಪೆಯಿಂದ

ಸರಿಯಾಗಿ ತಿಳಿದುಕೊಳ್ಳಿರಿ. ಹಿಂದುತ್ವವಿಲ್ಲದೆ ಭಾರತಕ್ಕೆ ಭವಿಷ್ಯತ್ತಿಲ್ಲ. ಹಿಂದುತ್ವವು ಅಳಿಯಲಿ, ಆಗ ಅಲ್ಲಿ ಏನುಳಿಯಿತೆ? ಹಾಳಾದ ವೈಭವದ ಮಸಕು ನೆನಪು, ಗತಕಾಲದ ಒಂದು ಭೌಗೋಲಿಕ ಅಭಿವ್ಯಕ್ತಿ; ಭಾರತದ ಇತಿಹಾಸ, ಚರಿತ್ರೆ ಸಾಹಿತ್ಯಕಲೆ, ಐತಿಹಾಸಿಕ ಅವಶೇಷಗಳು ಇವೆಲ್ಲವುಗಳ ಮೇಲೆ ಹಿಂದುತ್ವದ ಸ್ಪಷ್ಟ ಮುದ್ರೆಯಿದೆ.

Gram : VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಉದ್ಯೋಗದಲ್ಲಿರುವವರ ದೃಷ್ಟಿ ನಿರುದ್ಯೋಗಿಗಳ ದೀನದರಿದ್ರರ ಮೇಲಿರಲಿ

—ಶ್ರೀ ಟಿ. ಎ. ಪೈ.

ತಾ. 6-10-70ರಂದು ಉಡುಪಿ ರೋಟರಿ ಕ್ಲಬ್ಬಿನ ವಾರ್ಷಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಎಲ್. ಐ. ಸಿ. ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಮಾತನಾಡುತ್ತಾ, ನಮ್ಮಲ್ಲಿ ಶಾಲೆಯುಗಟ್ಟಳೆ ಜನರು ವಿದ್ಯಾ ಸಂಸ್ಥೆಗಳಿಂದ ಹೊರಬರುತ್ತಿದ್ದು ಅನೇಕರು ವಿದ್ಯಾವಂತರಾಗಿರುವುದಕ್ಕೆ ಕಾರಣವೆಂದೂ ಅದೇ ರೀತಿ ಸುಮಾರು 33 ಲಕ್ಷ ವಿದ್ಯಾವಂತರು ನಿರುದ್ಯೋಗಿಗಳಾಗಿ ಉಳಿದಿರುವರೇ ಕೆಲವು ವಿದ್ಯಾವಂತರು ಉದ್ಯೋಗದಲ್ಲಿ ಜೀವನ ಭದ್ರತೆ ಪಡೆದಿರುವುದಕ್ಕೆ ಕಾರಣವೆಂದೂ ಹೇಳಿದರು. ಉದ್ಯೋಗದಲ್ಲಿರುವ ವಿದ್ಯಾವಂತರು ಅದೃಷ್ಟಶಾಲಿಗಳು ನಿಜ, ಆದರೆ ಇವರ ದೃಷ್ಟಿ ಕಷ್ಟ ಕಾರ್ಪಣ್ಯಗಳಲ್ಲಿ ತೊಳಲಾಡುತ್ತಿರುವ ವಿದ್ಯಾವಂತ ನಿರುದ್ಯೋಗಿಗಳು ಹಾಗೂ ಬೇಕಾರಿಯಾಗಿರುವ ದೀನದರಿದ್ರರನ್ನು ಬಿಟ್ಟಿರಕೂಡದು. ತಮಗೆ ದೊರೆತ ಸುಸ್ಥಿರ ಜೀವನಾವಕಾಶವನ್ನು ಇತರ ಕಷ್ಟ ಜೀವಿಗಳಿಗೂ ಒದಗಿಸಿ ಜೀವನಾವಕಾಶವನ್ನು ಒದಗಿಸಲು ಪ್ರಯತ್ನಿಸಬೇಕು. ಅದರಲ್ಲೂ ಸಾರ್ವಜನಿಕ ಕ್ಷೇತ್ರದಲ್ಲಿರುವ ನೌಕರರು ಮುಖ್ಯವಾಗಿ ಗಮನಿಸಬೇಕಾದ ವಿಷಯ. ಯಾಕೆಂದರೆ ನಿರುದ್ಯೋಗಿಗಳು, ಬಡವರು ಈ ಕ್ಷೇತ್ರದ ಕೊನೆಯ ಒಡೆಯರೆನಿಸಿಕೊಂಡವರು.

ಇಂದು ಬ್ಯಾಂಕು, ಇನ್ಶೂರೆನ್ಸ್, ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರದ ನೌಕರರ ವೇತನಗಳ ಹೆಚ್ಚಳದಿಂದ ವರ್ಷಕ್ಕೆ ಸುಮಾರು ರೂ. 600 ಕೋಟಿ ವೆಚ್ಚವಾಗುವುದು. ಈ ಹಣವಿಲ್ಲವೇ ಬೇಡಿಕೆಗಳು ಕೊನೆಗೊಳ್ಳುವಂತೆ ನೌಕರರ ಸ್ಥಿತಿ ಸುಧಾರಿಸುತ್ತಿರುವುದು. ನಿರುದ್ಯೋಗಿ ವಿದ್ಯಾವಂತರಿಗಾಗಿ ರೂ. 1000 ಕೋಟಿ ಯೋಜನೆಯನ್ನು ಕೈಗೊಳ್ಳಲು ಅಸಮರ್ಥರೆಂಬ ಭಾವನೆ ಇದ್ದು ನಾವು ವರ್ಷಕ್ಕೆ ರೂ. 250 ಕೋಟಿಯನ್ನು 4 ವರ್ಷಕ್ಕೆ ಅಷ್ಟೇ ಹಣವನ್ನು ಮುಂದಾಗಿ ಕೊಡಲು ಸಮರ್ಥರಾದೆವೆ ಎಂದು ಶ್ರೀ ಪೈಗಳು ಪ್ರಶ್ನಿಸಿದರು.

ಸಂಬಳ ಹೆಚ್ಚಳಕ್ಕೆ ನಾನು ವಿರೋಧಿಯಲ್ಲ. ಆದರೆ ಉದ್ಯೋಗದಲ್ಲಿರುವ ಅದೃಷ್ಟವಂತ ವಿದ್ಯಾವಂತರ ದೃಷ್ಟಿಯು ತನಗಿಂತ ಹೀನ ಸ್ಥಿತಿಯಲ್ಲಿರುವ ವರ್ಗದ ಮೇಲಿದ್ದು ಅವರ ಉದ್ಧಾರದ ಬಗ್ಗೆ ಕಳಕಳಿ ಇರಬೇಕೆಂದವರು ಸೂಚಿಸಿದರು. ಈ ಸತ್ಯವನ್ನು ಮರೆತರೆ ರಾಜಕಾರಣಿಗಳು ಸೌಲಭ್ಯಗಳಿಗೆ ತಿಲಾಂಜಲಿಯಿತ್ತು ಈ ದೇಶದಲ್ಲಿ ಕನ್ಯೆಯನ್ನು ಕಡೆಗಣಿಸುವ ಅಲ್ಪರ ನಮ್ಮ ಸ್ವಾರ್ಥವನ್ನು ದೃಷ್ಟಿಯಲ್ಲಿಟ್ಟುಕೊಂಡು 'ಘೇರಾವ್'ದಂಥ ಬಯಸುವ ಯಾವ ವರ್ಗವನ್ನೂ ಜನತೆ ಸಹಿಸದೆಂದರು.

ಅವರು ಮುಂದುವರಿಯುತ್ತಾ ಜನತೆಯಲ್ಲಿರುವ ಬಡತನ ನಿರುದ್ಯೋಗಗಳ ಸಮಸ್ಯೆಯನ್ನು ಬಿಡಿಸಲು ಎಲ್. ಐ. ಸಿ. ಯಲ್ಲಿ ಈಗಾಗಲೇ ಯೋಜನೆ ಕಾರ್ಯಗತವಾಗಿದೆ. ಇಲ್ಲಿಯ ಜನರು ಶ್ರೀಮಂತರಲ್ಲದಿದ್ದರೂ, ಉದ್ಯೋಗಿಗಳು; ಸಾರ್ವಜನಿಕ ಸೇವಾ ಸಂಸ್ಥೆಗಳು, ಬ್ಯಾಂಕಿಂಗ್ ವಿಭಾಗ ಮೊದಲಾದ ಯೋಜನೆಗಳ ಪ್ರಯೋಜನವನ್ನರಿತವರು. ಇಂಥ ಜನರಿಗೆ ಪ್ರೋತ್ಸಾಹ ಒದಗಿಸಿದರೆ ಸರಕಾರದ ಮೇಲೆ ಹೊಂದಿಕೊಂಡಿರದೆ ಜಿಲ್ಲೆಯ ಅಭಿವೃದ್ಧಿಯನ್ನು ಸಾಧಿಸಬಹುದಾಗಿದೆ. ಇಂಥ ಪ್ರೋತ್ಸಾಹವನ್ನು ರೋಟರಿ ಕ್ಲಬ್‌ಗಳು ಒದಗಿಸಲು ಶಕ್ಯವಾಗಿದೆ ಎಂದೂ ಶ್ರೀ ಪೈಗಳು ಹೇಳಿ ಶುಭ ಹಾರೈಸಿದರು.

ರೋಟರಿ ಡಿಸ್ಟ್ರಿಕ್ಟ್ ಗವರ್ನರ್ ಶ್ರೀ ರಮೇಶ ಪೈಗಳು ಸಮಾರಂಭಕ್ಕೆ ಅಧ್ಯಕ್ಷತೆ ವಹಿಸಿದ್ದರು. ಅವರು ಭಾಗವಹಿಸಿದ್ದರು. ಅವರು ತಮ್ಮ ಭಾಷಣದಲ್ಲಿ ದೇಶ ವಿದೇಶಗಳಲ್ಲಿ ಪ್ರಚಲಿತ ಸಮಸ್ಯೆಗಳ ಬಗ್ಗೆ ತನ್ನ ಕಳಕಳಿಯನ್ನು ವ್ಯಕ್ತಪಡಿಸಿ ಈ ಸಮಸ್ಯೆಗಳಿಗೆ ಪರಿಹಾರ ಪಡೆಯುವುದು ಅತೀ ಅಗತ್ಯದ ವಿಷಯವೆಂದು ತಿಳಿಸಿದರು. ಈ ದೃಷ್ಟಿಯಿಂದ ಸರ್ವಧರ್ಮ, ಸರ್ವಭಾಷೆ ಸರ್ವಜನರನ್ನು ಸಮಾನ ಭಾವನೆಯಿಂದ ಕಾಣುತ್ತಿರುವ ದಕ್ಷಿಣ ದೇಶ ದೇ-

ಕ್, ಬಡ ಜನರನ್ನು ನಿಭಾಯಿಸುತ್ತಿರುವ ಅನೇಕ ಕಾರ್ಯಯೋಜನೆಗಳು ಇಲ್ಲದಿರುವುದರಿಂದ ಆರ್ಥಿಕ ಹಾಗೂ ಸಾಮಾಜಿಕ ಅಂತರಗಳನ್ನು ಹೋಗಲಾಡಿಸುವ ಕಾರ್ಯಕ್ರಮಗಳಿಗೆ ಅತೀ ಹೆಚ್ಚಿನ ಬೆಂಬಲ ಸಿಗುವುದೆಂಬ ವಿಶ್ವಾಸವನ್ನು ಶ್ರೀ ಪೈ ವಿಶದೀಕರಿಸಿದರು. ಆಧುನಿಕ ಮೌಲ್ಯ ಗೌರವ ಕಳೆದುಕೊಳ್ಳುತ್ತಿದೆ, ನೈತಿಕ ಮೌಲ್ಯಗಳು ನಷ್ಟಗೊಂಡಿವೆ, ವಿಧ್ವಂಸಕಾರಿ ಪ್ರವೃತ್ತಿ ಹೆಚ್ಚುತ್ತಿದೆ ಎಂಬ ಆರೋಪವನ್ನು ಅಲ್ಲಗಳೆಯಲಾಗದ ಶ್ರೀ ಪೈಗಳು ನಮ್ಮ ಯುವಜನ ವಿದ್ಯಾರ್ಥಿಗಳನ್ನು ದಾರಿ ತಪ್ಪಿಸುವ ಅನಿಷ್ಟಗಳಿಂದ ಪಾರುಮಾಡಬೇಕಾಗಿದೆ. ಆದರಲ್ಲಿ ಮುಂದಿನ ಕರ್ತವ್ಯ ಅರ್ಥಯಿಸುವುದು ಬೇಕಾಗಿದೆ. ಆದರೆ ನಮ್ಮ ಇಂದಿನ ವಿದ್ಯೆಯಿಂದ ಈ ಕೆಲಸ ಅಸಾಧ್ಯ. ಆದ್ದರಿಂದ ಇದು ರೋಟರಿಯಂಥ ಸೇವಾ ಸಂಸ್ಥೆಗಳ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಮುಂದುವರಿಯುತ್ತಾ, ಎಲ್ಲಾ ವಿದ್ಯಾರ್ಥಿಗಳು ಹಾಳಲ್ಲ. ಅವರಲ್ಲಿ ಶೇಕಡಾ 10ರಷ್ಟು ಜನರು ಒಳ್ಳೆಯವರು, ಇನ್ನೊಂದ 10ರಷ್ಟು ಜನರು ಕೆಟ್ಟವರು, ಉಳಿದವರು ನಿರ್ಲಿಪ್ತ ವರ್ಗದವರು. ಇವುಗಳಲ್ಲಿ ಯಾವ ಬಣದ ಬಲ ಹೆಚ್ಚು ಆಪಕ್ಕೆ ನಿರ್ಲಿಪ್ತ ವರ್ಗದವರು ಸೇರಿಕೊಳ್ಳುತ್ತಾರೆ. ಆದ್ದರಿಂದ ಒಳ್ಳೆತನ ಇರುವ ಶೇಕಡಾ 10 ಜನರಿಗೆ ಪ್ರೋತ್ಸಾಹದ ಸದ್ಗುಣಗಳನ್ನು ಪಡೆಯುವ ಅವಕಾಶ ನೀಡಿ ಉತ್ತೇಜಿಸಿದರೆ, ಅವರ ಬಣ ಹೆಚ್ಚಿಸಿದರೆ ನಾವು ಎಲ್ಲಾ ವಿದ್ಯಾರ್ಥಿಗಳನ್ನೂ ಉದ್ಧರಿಸಿದಂತಾಗುವುದು ಎಂದು ನುಡಿದು ಶ್ರೀ ಪೈಗಳು ಉಡುಪಿ ರೋಟರಿ ಕ್ಲಬ್ ಸದಸ್ಯರಿಗೆ ಅಭಿನಂದನೆ ಸೂಚಿಸಿದರು.

ಆರಂಭದಲ್ಲಿ ಕ್ಲಬ್ಬಿನ ಅಧ್ಯಕ್ಷ ಶ್ರೀ ಹಿ. ಶ್ರೀಪತಿ ಆಚಾರ್ಯರು ಅತಿಥಿಗಳನ್ನು ಸ್ವಾಗತಿಸಿದರು. ಕಾರ್ಯದರ್ಶಿ ಎ. ಜಿ. ಆಳ್ವರವರು ವರದಿ ಒಪ್ಪಿಸಿದರು. 1970—71ರ ಕಾರ್ಯಕ್ರಮಗಳ ಪರಿಚಯ ಮಾಡಿಕೊಟ್ಟರು.

ರೋಟರಿ ಕ್ಲಬ್ಬಿನ ಸಮಾರಂಭದಲ್ಲಿ ನಡೆಯುತ್ತಿರುವ ಪುಸ್ತಕಾಲಯಕ್ಕೆ ಯೋಜನಾ ಕೇಂದ್ರ ಚಟುವಟಿಕೆಗಳ ಗ್ರಂಥವನ್ನು ರೋಟರಿ ಮಾಜಿ ಗವರ್ನರ್ ಡಾ|| ಮಾಧವ ಪೈಗಳು ಬಿಡುಗಡೆ ಮಾಡಬೇಕಾಗಿ ಡಾ|| ಎ. ಪದ್ಮನಾಭರಾಯರು ಕೇಳಿಕೊಂಡರು.

ರೋಟರ‍್ಯಾಕ್ಟ್ ಕ್ಲಬ್ಬಿನ ಸದಸ್ಯರು ಗಾಯನ ಒದಗಿಸಿದರು. ಅಂತ್ಯದಲ್ಲಿ ಪ್ರೊ. ಎಲ್. ಕೆ. ಶ್ರೀನಿವಾಸ ಭಟ್ಟರು ವಂದನೆಗಳನ್ನರ್ಪಿಸಿದರು.

ಅಭಿಪ್ರಾಯ

ವಿಧಾನಪರಿಷತ್ತು ರದ್ದಾಗಬಾರದು

ಸ್ವತಂತ್ರ ಭಾರತಕ್ಕೆ ಬೇಕು ಬೇಡಗಳ ಪಟ್ಟಿಯಲ್ಲಿ ಇಂದು ವಿಧಾನ ಪರಿಷತ್ತು ಬೇಕೆ? ಬೇಡವೇ ಎಂಬುದು ಒಂದು ವಿವಾದದಲ್ಲಿ ಹೆಚ್ಚಿನ ರಾಜ್ಯಗಳು ವಿಧಾನ ಪರಿಷತ್ತು ಬೇಡವೆಂದು ಸಂಕಲ್ಪಿಸಿ ಅದನ್ನು ವಿಸರ್ಜಿಸುವ ನಿರ್ಣಯವನ್ನು ಹೊಂದಿರುತ್ತವೆ.

ವಿಧಾನ ಪರಿಷತ್ತಿನ ಬೇಕು ಬೇಡಗಳ ಈ ಗಾಳಿ ಮೈಸೂರಿಗೂ ಬೀಸಿ ಈ ಸಲ ಜುಲೈ ತಿಂಗಳ ಬಜೆಟ್ ಅಧಿವೇಶನದ ವೇಳೆ ವಿಧಾನಸಭೆಯಲ್ಲಿ ಮುಖ್ಯವಾಗಿ ಪ್ರಸ್ತಾಪಕ್ಕೆ ಬಂತಷ್ಟೆ? ಆಗ ನಮ್ಮ ರಾಜ್ಯದ ವ್ಯವಹಾರ ಮಂತ್ರಿ ಶ್ರೀ ಪುಟ್ಟಸ್ವಾಮಿಯವರು ಇಬ್ಬಂದಿಯಲ್ಲಿ ಅಥವಾ ಆಗ್ರಹದಲ್ಲಿ ದೀರ್ಘ ಇಟ್ಟಂತೆ ಎತ್ತಿ ಒಂದು ಉತ್ತರದಲ್ಲಿ ಸಭೆಯ ಸಾಧಕಬಾಧಕಗಳ ಉತ್ತರಗೊಟ್ಟಿದ್ದಷ್ಟೆ. ಅಂದರೆ ಸರಕಾರ ಈ ವಿಷಯದಲ್ಲಿ ಮುಂದೆ ವಿಧಾನ ಪರಿಷತ್ತನ್ನು ರದ್ದುಗೊಳಿಸುವುದಿಲ್ಲ. ಆದರೆ ವಿಶ್ವಾಸದ ರಾಜ್ಯಗಳು ಅಂದರೆ ಇನ್ನುಳಿದ ನಾಲ್ಕೈದು ರಾಜ್ಯಗಳು ವಿಧಾನಪರಿಷತ್ತನ್ನು ರದ್ದುಗೊಳಿಸಲು ಸಂಕಲ್ಪ ತೊಟ್ಟರೆ ನಾವು ಸಹಾ ಈ ವಿಷಯದಲ್ಲಿ ಆಲೋಚಿಸುತ್ತೇವೆಂದು ಹೇಳಿದರಷ್ಟೆ?

ಶ್ರೀ ಪುಟ್ಟಸ್ವಾಮಿಯವರು ಹೀಗೆ ಹೇಳುವುದಕ್ಕಿಂತ ನಾವು ವಿಧಾನ ಪರಿಷತ್ತನ್ನು ರದ್ದುಗೊಳಿಸುವುದೇ ಇಲ್ಲವೆಂದು ಕಟ್ಟುನಿಟ್ಟಿನ ಉತ್ತರಕೊಟ್ಟಿದ್ದರೆ ನಮ್ಮ ರಾಜ್ಯ ಪರಿಸ್ಥಿತಿಯು ಸಮಾಧಾನ ಉತ್ತರವಾಗುತ್ತಿತ್ತು. ಇಂತು ಹೇಳಲು ಕಾರಣವೇನೆಂದರೆ ವಿಶ್ವಾಸದ ರಾಜ್ಯ ಪರಿಸ್ಥಿತಿಗಿಂತ ನಮ್ಮ ರಾಜ್ಯದ ಪರಿಸ್ಥಿತಿ ವಿಶಿಷ್ಟವಾದುದು.

ನಮ್ಮ ಕೆಳಮನೆಯು ಬಂಡು ಸದಸ್ಯರು ಎಲ್ಲರಲ್ಲೂ ದ ಕೂಡುಗಟ್ಟಿಕೊಳ್ಳುವವರು ಕೆಲವೊಂದು ಕಾರಣಗಳ ಧರ್ಮ ಕರ್ಮ ಸಂಯೋಗದಿಂದ ಇವರುಗಳು ಆರಿಸಿ ಬಂದು ದೇನೆಂಬ ಸರಿಯೆ. ಆದರೆ ಇವರಿಗೆ ಸಮಾಜ ಜೀವನದ ಸಂಪೂರ್ಣ ಅರಿವಿಲ್ಲ. ಶಾಸನದ ಪೂರ್ಣ ಜವಾಬ್ದಾರಿ ವಿಧಾನ ಸಭೆಗಷ್ಟೆ ಕೊಡುವುದು ಸರಿಯಲ್ಲ. ಇದರ ನಿದರ್ಶನಕ್ಕೆ ವಿಧಾನ ಸಭೆಯಲ್ಲಿ ಈ ಹೆಚ್ಚಿನ ಸದಸ್ಯರುಗಳು ಮಾತಾಡುವುದೇ ಸಾಕು. ಇಂಥ ಪರಿಸ್ಥಿತಿಯಲ್ಲಿ ವಿಧಾನಸಭೆಯ ಕಡಿವಾಣವೆನಿಸಿರುವ ವಿಧಾನ ಪರಿಷತ್ತನ್ನು ರದ್ದುಪಡಿಸಿದರೆ ಶಾಸನದ ಕಲಾಪದಲ್ಲಿ ಕೆಲವೊಂದು ನಾಸ್ತಿಕತೆಗೆ ಹೊರತಾಗ ಲೋಪದೋಷಗಳು ಉಳಿದುಕೊಳ್ಳುವುದು ಖಂಡಿತ.

ಈ ಮಾತನ್ನು ಕೆಲವರು ಒಪ್ಪದೆ ವಿಧಾನ ಪರಿಷತ್ತು ಅಲಂಕಾರದ ಸಭೆಯೊಂದು ಇದರಿಂದ ವಿಶೇಷ ಜನತಾ ಹಿತ ಕಾರ್ಯವಾಗದೆ ಇರುವುದರಿಂದ ಇದು ದುಬಾರಿಯಾದ ಸಭೆಯೆಂದು ಇದಕ್ಕೆ ಸ್ವತಂತ್ರತೆ ಇಲ್ಲದೆ ಇರುವುದರಿಂದ ಇದು ಬೇಡದ ರಾಜಕಾರಣಿಗಳನ್ನು ತೂರಿಸುವ ಸ್ಥಾನವಾಗಿದೆಯೆಂದು ಹೇಳಬಹುದು. ಈ ಮಾತುಗಳೆಲ್ಲವನ್ನು ಪೂರ್ತಿ ಅಲ್ಲಗಳೆಯುವಂತಿಲ್ಲವಾದರೂ ಶತಃಶಃ ಒಪ್ಪುವಂತಹ ಇಲ್ಲ. ಕಾರಣವೇನೆಂದರೆ ಅದೇ ಪಾರ್ಲಿಮೆಂಟಿನಲ್ಲಿ ಲೋಕಸಭೆ ರಾಜ್ಯಸಭೆ ಇಲ್ಲವೆ? ರಾಜ್ಯಸಭೆಯಿಂದ ವಿಶೇಷ ಕೆಲಸವಾಗುತ್ತಿಲ್ಲವೆಂದರೆ ಒಪ್ಪುವಂತಿದೆಯೆ? ಇದನ್ನು ಈ ಎರಡೂ ಸಭೆಗಳ ವಿರೋಧಿಗಳಿಂದಲೂ ಒಪ್ಪುವಂತಿಲ್ಲ. ವಿಧಾನ ಪರಿಷತ್ತಿನ ಸದಸ್ಯರು ಜವಾಬ್ದಾರಿ ಕೂಡಾ ವಿಧಾನ ಸಭಾ ಸದಸ್ಯರ ಜವಾಬ್ದಾರಿಗೆ ಕಡಿಮೆಯದಾಗಿಲ್ಲ. ಸಮಿತಿಯ ವರದಿಯನ್ನು ಓದಿದರೂ ವಿಧಾನ ಪರಿಷತ್ ಸದಸ್ಯರ ಸಮಿತಿಯ ವರದಿಯು ಸಮಂಜಸವಾಗಿ ವಿಧಾನ ಸಭಾ ಸದಸ್ಯರ ಜವಾಬ್ದಾರಿ ಇರುವುದಿಲ್ಲ. ಈ ವಿಷಯ ನಿಟ್ಟಿನಲ್ಲಿ ಹೊಂಗಿದ ವರಲ್ಲಿ, ಒಟ್ಟಾರೆ ನಮಗೆ ವಿಧಾನ ಸಭೆ ಪರಿಷತ್ತು ಬೇಕೇ ಬೇಕು.

ಸಂವಿಧಾನ ಕರ್ತರು ಸಹಾ ವಿಧಾನ ಪರಿಷತ್ತನ್ನು ಹಿರಿಯರ ಸಭೆ. ಎಲ್ಲಾ ಪ್ರತಿನಿಧಿಕ ಕ್ಷೇತ್ರಗಳ ಸಂಗಮ ಸಭೆಯೆಂದು ಭಾವಿಸಿ ವಿಧಿಸಿದವರಾಗಿ ಕೇವಲ ಹಣ ಉಳಿತಾಯದ ದೃಷ್ಟಿಯಿಂದ ಮೇಲ್ಮನೆಯನ್ನು ರದ್ದುಗೊಳಿಸುವುದು ಸಮಂಜಸವಲ್ಲ. ಅದಕ್ಕಾಗಿ ಹೇಳುವುದಾದರೆ ವಿಶ್ವಾಸದ ರಾಜ್ಯಗಳಿಗೆ ಕೆಲವೊಂದು ಕಾರಣಗಳಿಂದ ವಿಧಾನ ಪರಿಷತ್ತು ಬೇಡವೆಂದೊಡನೆ ನಾವು ಸಹಾ ಅದಕ್ಕಾಗಿ ಆಲೋಚಿಸುತ್ತೇವೆಂದು ಹೇಳುವುದು ಸರಿಯಲ್ಲ.

ಅವಶ್ಯವಿಲ್ಲದ ಖರ್ಚುಗಳಲ್ಲಿ ಹಣ ಖರ್ಚು ಮಾಡಲು ಹಿಂಜರಿಯದ ರಾಜ್ಯ ಸರಕಾರಗಳು ಜವಾಬ್ದಾರಿಯುಳ್ಳ ವಿಧಾನ ಪರಿಷತ್ತಿಗೆ ಖರ್ಚು ಮಾಡಲು ಹಿಂಜರಿಯುವುದು ಸರಿಯಲ್ಲವೆಂದು ಸೂಚಿಸುತ್ತೇನೆ.

—ಶ್ರೀ ಐ. ಎಚ್. ಶಾಂತಾರಾಮ ಶೆಟ್ಟಿ



ಸಾಧುಸಂತರ ಭಕ್ತಿ

(ಕೇದಾರಿನಾಥ)

ನಮ್ಮಲ್ಲಿ ಸಾಧು ಸಂತರ ಬಗ್ಗೆ ತುಂಬಾ ಶ್ರದ್ಧೆ ಇರುತ್ತದೆ. ಅವರ ಮೇಲೆ ಜನರ ವಿಶ್ವಾಸ ಬಹಳ. ಅವರ ಉಪದೇಶದಂತೆ ಎಷ್ಟುಮಟ್ಟಿಗೆ ನಡೆಯುತ್ತಾರೆ ಎಂಬ ಮಾತು ಬೇರೆ. ಆದರೆ ಪ್ರತಿಯೊಬ್ಬರ ಮನಸ್ಸಿನಲ್ಲಿ ಪೂಜ್ಯ ಭಾವನೆ ಇರುತ್ತದೆ. ಮತ್ತು ಆ ಪೂಜ್ಯ ಭಾವನೆಯೇ ಒಂದಿಲ್ಲೊಂದು ದಿನ ತಮ್ಮ ಉದ್ಧಾರ ಮಾಡೀತು ಎಂಬ ಶ್ರದ್ಧೆಯೂ ಅವರಲ್ಲಿರುತ್ತದೆ. ಆದರೆ ಪೂಜ್ಯ ಭಾವನೆ ಇದ್ದ ಮಾತ್ರಕ್ಕೆ ಉನ್ನತಿ ಆಗುವದಿಲ್ಲ. ಪೂಜ್ಯಭಾವನೆಯೊಂದಿಗೆ ಅವರು ತೋರಿಸಿದ ಧರ್ಮ ಮಾರ್ಗದಲ್ಲಿ ನಡೆದರೇನೇ ಮಾತ್ರ ಉನ್ನತಿಯಾಗುತ್ತದೆ. ವೈದ್ಯರ ಭಕ್ತಿ ಮಾಡಿದ ಮಾತ್ರಕ್ಕೆ ರೋಗ ಹೋಗುವದಿಲ್ಲ. ವೈದ್ಯ ಹೇಳಿದಂತೆ ಪಥ್ಯಪಾಲನೆ ಮಾಡಿದರೆ ಮಾತ್ರ ರೋಗ ಹೋಗುತ್ತದೆ. ವ್ಯಾಯಾಮ ವೀರನ ಮುಂದೆ ಸಾಷ್ಟಾಂಗ ನಮಸ್ಕಾರ ಹಾಕಿದ ಮಾತ್ರಕ್ಕೆ ನಮ್ಮಲ್ಲಿ ಶಕ್ತಿ ಬರುವದಿಲ್ಲ. ಆದರೆ ಅವರು ಶಕ್ತಿಸಂಪಾದಿಸಿದ ಕ್ರಮದಂತೆ ನಾವೂ ನಡೆದರೆ ಮಾತ್ರ ಶಕ್ತಿ ಬರುತ್ತದೆ. ಅದೇ ಪ್ರಕಾರ ಸಾಧುಸಂತರು ತೋರಿಸಿದ ಮಾರ್ಗದಲ್ಲಿ ನಡೆದರೆ ಮಾತ್ರ ಕಲ್ಯಾಣವಾಗುತ್ತದೆ. ಅವರವರು ತೋರಿಸುವ ಮಾರ್ಗದಲ್ಲಿ ನಡೆಯುವದರಲ್ಲಿಯೇ ಶ್ರದ್ಧೆಯ ನಿಜವಾದ ಸಾರ್ಥಕವಾಗುತ್ತದೆ. ಸಂತಸಜ್ಜನರ ಕೇವಲ ನಾಮಜಪ ಮಾಡಿದ ಮಾತ್ರಕ್ಕೆ ಇಲ್ಲವೆ ಅವರನ್ನು ಪೂಜಿಸಿದ ಮಾತ್ರಕ್ಕೆ ಕಲ್ಯಾಣವಾಗುವದಿಲ್ಲ.

ಗುರುಗಳ ಚರಣಸ್ಪರ್ಶದಿಂದಲೇ ಕಲ್ಯಾಣವಾಗುತ್ತದೆ ಎಂಬುದಾಗಿ ನಮ್ಮಲ್ಲಿ ಒಂದು ಶ್ರದ್ಧೆ ಇದೆ. ಆದರೆ ಅದು ಕೇವಲ ಭ್ರಮೆ. ಗುರುಗಳು ತಪಸ್ಸು ಮಾಡಿರುತ್ತಾರೆ. ಕಷ್ಟ ಸಹಿಸಿರುತ್ತಾರೆ, ಜ್ಞಾನಸಂಪಾದಿಸಲು ಪುರುಷಾರ್ಥ ಮಾಡಿರುತ್ತಾರೆ. ತಮ್ಮ ಹೃದಯಶುದ್ಧಿ ಮಾಡಿರುತ್ತಾರೆ. ಇವನ್ನೆಲ್ಲ ನಾವೂ ಮಾಡದೆ ಕೇವಲ ಅವರ ಚರಣಸ್ಪರ್ಶ ಮಾಡಿದ ಮಾತ್ರಕ್ಕೆ ನಮಗೆ ಅವರ ಸಾಧನೆಯ ಫಲ ಹೇಗೆ ದೊರೆತೀತು? ಅವರು ತೋರಿಸುವ ಮಾರ್ಗದಲ್ಲಿ ನಡೆಯುವೆಯೇ, ಬರೇ ಅವರ ನಾಮ ಘೋಷ ಮಾಡಿ ಮತ್ತು ಅವರ ಚರಣಸ್ಪರ್ಶ ಮಾಡಿ ನಾವು ಆತ್ಮೋನ್ನತಿ ಮಾಡಿಕೊಳ್ಳಬಯಸುತ್ತೇವೆ. ಆದರೆ 'ಮಾತಿನದೇ ಅನ್ನ ಮತ್ತು ಮಾತಿನದೇ ಸಾರು ಉಂಡರೆ ಹೊಟ್ಟೆ ತುಂಬುವದಿಲ್ಲ' ಎಂದು ಸಂತರೇ ಹೇಳಿದ್ದಾರೆ. ಹಸಿವೆಗೆ ತಕ್ಕಂಥ ಅನ್ನ ದೊರೆತಾಗಲೇ ಹಸಿವೆ ಹಿಂಗುತ್ತದೆ. ಕೇವಲ ನಾಮಸ್ಮರಣದಿಂದ ಉನ್ನತಿ ಆಗುವದಿಲ್ಲ. ಧರ್ಮ ಮಾರ್ಗದಲ್ಲಿ ನಡೆದರೆ ಮಾತ್ರ ಉನ್ನತಿ ಆಗುತ್ತದೆ. ಭಾರತದಲ್ಲಿಯೂ ಇತರ ದೇಶಗಳಲ್ಲಿಯೂ ಎಷ್ಟೋ ಮಹಾಪುರುಷರು ಆಗಿದ್ದಾರೆ. ಆದರೆ ಅವರೆಲ್ಲರೂ ಉಚ್ಚಾರ, ವಿಚಾರ, ಮತ್ತು ಆಚಾರಗಳಲ್ಲೂ ಧರ್ಮಪರಾಯಣರೇ ಆಗಿದ್ದರು. ನಾವು ಕಣ್ಣಿನಿಂದ ನೋಡದ, ಸಾವಿರಾರು ವರ್ಷಗಳ ಹಿಂದೆ ಆಗಿ ಹೋದವರ ಬಗ್ಗೆಯೂ ಸಹ ನಮ್ಮ ಮನಸ್ಸಿನಲ್ಲಿ ಆದರಭಾವವಿದೆ. ಅವರ ಮಾತಿನ ಮೇಲೆ ವಿಶ್ವಾಸವಿದೆ. ಕಠೋರವಾದ ಕಾಯಿದೆಗಳನ್ನು ಮಾಡಿ ಕ್ರೂರತೆಯಿಂದ ರಾಜ್ಯ ನಡಿಸುತ್ತಿದ್ದ ರಾಜ ಮಹಾರಾಜರನ್ನು ಯಾರೂ ನೆನಸುವದಿಲ್ಲ. ಸಾಧುಸಂತರನ್ನೇ ನೆನಸುತ್ತಾರೆ. ಇದರ ಮೇಲಿಂದಲೇ ಕಂಡು ಬರುತ್ತದೆ.—ಇಂದಿನ ಜೀವನವು ಧರ್ಮವಿಮುಖವಾಗಿದ್ದರೂ ಕೂಡ ಸಾಧುಸಜ್ಜನರ, ಧರ್ಮ ಹಾಗೂ ವಚನಗಳ ಮೇಲೆ ನಮ್ಮ ಶ್ರದ್ಧೆ ಇದೆ ಎಂಬುದು.

ಧರ್ಮವು ನಮಗೆ ಸತ್ಯ ಮಾತಾಡಲು ಹೇಳುತ್ತದೆ. ಪ್ರಾಮಾಣಿಕತನದಿಂದ ವರ್ತಿಸಲು ಸೂಚಿಸುತ್ತದೆ. ನಮ್ಮಿಂದ ಅದರಂತೆ ಮಾಡಲಿಕ್ಕೆ ಆಗದಿದ್ದರೂ ಸಹ ಎಲ್ಲರಿಗೂ ಸತ್ಯವೇ ಪ್ರಿಯವಾಗಿರುತ್ತದೆ. ನಿಮಗೆ ಸತ್ಯವೇ ಬೇಕೋ ಅಸತ್ಯ ಬೇಕೋ ಎಂದು ಕೇಳಿದರೆ ಯಾರೂ ಅಸತ್ಯ ಬೇಕೆಂದು ಹೇಳಲಿಕ್ಕಿಲ್ಲ. ಕಳ್ಳರು ಕಳವು ಮಾಡಿಯೇ ಜೀವನ ನಡೆಸುತ್ತಾರೆ. ಕದಿಯುವದು ಒಳ್ಳೆಯದೋ ಪ್ರಾಮಾಣಿಕತನ ಒಳ್ಳೆಯದೋ ಎಂದು ಕೇಳಿದರೆ ಅವರೂ ಸಹ ಕಳವು ಒಳ್ಳೆಯದಲ್ಲ ಎಂದೇ ಉತ್ತರ ಕೊಟ್ಟಾರು. ನಮ್ಮ ದೌರ್ಬಲ್ಯದಿಂದಾಗಿ ನಾವು ತಪ್ಪು ದಾರಿ ತುಳಿಯುತ್ತಿದ್ದರೂ ಕೂಡ ನಾವು ಮನಸಾಸತ್ಯ ಮತ್ತು ಪ್ರಾಮಾಣಿಕತನವನ್ನೇ ಬಯಸುತ್ತೇವೆ. ಸಮಾಜದ ಬಗ್ಗೆ ನಿಯಮ ತಯಾರಿಸಲು ನಮಗೆ ಹೇಳಿದರೆ ಯಾರೂ ಸುಳ್ಳಿನ ನಿಯಮ ತಯಾರಿಸಲಿಕ್ಕಿಲ್ಲ. ಇದರ ಮೇಲಿಂದ ಪ್ರತಿಯೊಬ್ಬನ ಹೃದಯದಲ್ಲಿ ಎಲ್ಲಿಯೋ ಧರ್ಮಭಾವನೆ ಇದ್ದೇ ಇರುತ್ತದೆ. ಎಂಬುದು ವ್ಯಕ್ತವಾಗುತ್ತದೆ. ಈ ಧರ್ಮಭಾವನೆಯನ್ನು ಹೆಚ್ಚು ಜಾಗೃತಗೊಳಿಸಲಿಕ್ಕೆ, ಹೆಚ್ಚು ದೃಢಪಡಿಸಲಿಕ್ಕೆ ಸಾಧುಸಂತರ ಜೀವನ ಚರಿತ್ರೆಗಳನ್ನು ಓದಬೇಕು. ಅವರ ಸಹವಾಸ ಸಾಧಿಸಬೇಕು. ನಮ್ಮಲ್ಲಿ ಧರ್ಮಭಾವನೆಯು ಹೆಚ್ಚಿದಂತೆ ನಾವು ಅದರಂತೆ ಕೆಲಸ ಮಾಡಲಿಕ್ಕೂ ಹತ್ತಿಯೇವು.

(ಅನುವಾದ: ವಾ. ಅ. ಹೊದಿಕೆ)

(ಮೂರನೇ ಪುಟದಿಂದ)

ಇತ್ತೀಚೆಗಿನ ವರ್ತನೆಯು ಭಾರತ-ರಶ್ಯ ಸ್ನೇಹವನ್ನು ಬಹುಕಾಲ ಮುಂದುವರಿಯಗೊಡುವುದಿಲ್ಲವೆಂದು ತೋರಿಸುತ್ತದೆ. ದೇಶದಲ್ಲಿ ಕಮ್ಯುನಿಸ್ಟ್ ಬೀಜ ಬಿತ್ತುವುದರಲ್ಲಿ ಯಶಗಳಿಸಿದ ರಶ್ಯ ಆ ಬೀಜ ತನಗೆ ತಾನೇ ಬೆಳೆದು ಬಲಿಯುತ್ತದೆಯೆಂದು ನಂಬಿದೆ. ಆದರೆ ನಂಬಿಕೆಯನ್ನು ಸುಳ್ಳುಮಾಡಿ ತೋರಿಸಿ ನಮ್ಮ ಅಲಿಪ್ತತೆಯನ್ನು ಎತ್ತಿಹಿಡಿಯುವುದು ಪ್ರಜಾಸತ್ತಪ್ರಿಯರ ಕರ್ತವ್ಯ. ಪವಿತ್ರ ಭಾರತದಲ್ಲಿ ಕಮ್ಯುನಿಸ್ಟ್ ಬೀಜ ಮೊಳಕೆಬರುವುದಿಲ್ಲವೆಂಬುದನ್ನು ನಾವಿಂದು ತೋರಿಸಿಕೊಡಬೇಕಾಗಿದೆ.

ನಗೆಗಡಲು

ವಿಮಾನ ಯಾತ್ರಾ ಸಂಸ್ಥೆಯೊಂದರ ಗುಮಾಸ್ತೆ ವಿಮಾನ ಪ್ರಯಾಣವು ನಿರಪಾಯವೆಂಬುದನ್ನು ಹೇಗೆ ಹೇಗೆ ವಿವರಿಸಿದರೂ ಒಬ್ಬಾಕೆಗೆ ಸಮಾಧಾನವಾಗಲಿಲ್ಲ. ಕೊನೆಗೆ ಗುಮಾಸ್ತೆಗೇನೋ ಹೊಳೆದು ಹೇಳಿದಳು:— ಇಲ್ಲಿ ನೋಡಿ, ವಿಮಾನ ಯಾತ್ರೆಯು ಅಪಾಯಕಾರಿ ಆದರೆ ನಾವು ಫ್ಲೈ ನೌ-ಪೇ ಲೇಟರ್ (ಈಗ ಯಾತ್ರೆ ಮಾಡಿ, ಆ ಮೇಲೆ ಹಣ ಪಾವತಿ ಮಾಡಿ) ಯೋಜನೆಯನ್ನೇಕೆ ಇಂಟ್ರೊಡ್ಯೂಸ್ ಮಾಡುತ್ತಿದ್ದೆವು?

ಆಕೆ ಕೂಡಲೇ ಟಿಕೇಟು ಕೊಂಡುಕೊಂಡಳು.

o o o

ಇಪ್ಪತ್ತು ವರ್ಷದ ನಟನೊಬ್ಬ ಹದಿನೆಂಟರ ಯುವತಿಯ ಪ್ರೇಮಬಂಧಿಯಾದ. ಆತ ತನ್ನ ಮಿತ್ರನೊಡನೆ ಹೇಳಿದ– ಮಿತ್ರ, ನನ್ನ ಪ್ರಾಯವನ್ನು ಐವತ್ತು ಎಂದರೆ, ಆಕೆಯು ನನ್ನನ್ನು ಮದುವೆಯಾದಾಳೆ?"

ಮಿತ್ರನೆಂದ– ನಿನ್ನ ಪ್ರಾಯ ಎಂಬತ್ತು ಅಂದರೆ ನಿಜಕ್ಕೂ ಆಕೆಯ ಹೃತ್ಕ್ರಿಯೆ ನಿಂತೀತು.

o o o

"ನೀನು ನನ್ನನ್ನು ಪ್ರೀತಿಸುವೆಯಾ?"
"ನಿಜಕ್ಕೂ"
"ನೀನು ನನಗಾಗಿ ಸಾಯುವಿಯಾ?"
"ಇಲ್ಲ ನನ್ನದು ಸಾಯಲಾರದ ಪ್ರೀತಿ"

o o o

ಅಧ್ಯಾಪಕ— ಎರಡು ಸರ್ವನಾಮ ಪದಗಳನ್ನು ಹೆಸರಿಸಿರಿ.

ವಿದ್ಯಾರ್ಥಿ— ಯಾರು? ನಾನು?

o o o

ಪ್ರೊಫೆಸರ್—ನಾನು ಇಂದು ಕೊಡೆಯನ್ನು ಮರೆತುಬಿಟ್ಟೆ.

ಹೆಂಡತಿ—ಎಲ್ಲಿ?

ಪ್ರೊಫೆಸರ್—ಮಳೆ ಬಿಟ್ಟಾಗ ಮಡಚಲೆಂದು ನೋಡಿದರೆ, ಕೈಯಲ್ಲಿ ಕೊಡೆಯೇ ಇರಲಿಲ್ಲ.

ಒಂದು ರಾಷ್ಟ್ರದ ಪ್ರಗತಿಯು ಅದು ಹೊಂದಿರುವ ಚಿನ್ನ, ಬೆಳ್ಳಿ, ವಜ್ರ, ಮುತ್ತು ಇತ್ಯಾದಿಗಳಿಂದ ಅಳೆಯಲ್ಪಡುವುದಿಲ್ಲ. ಅದರ ಪ್ರಜೆಗಳು ಮತ್ತು ನಾಯಕರು ಎಂಥ ಸಚ್ಚಾರಿತ್ರ್ಯ ಸಂಪನ್ನರು ಎಂಬುದರಿಂದ ಅಳೆಯಲ್ಪಡುವುದು.

ಸರಸ್ವತಿ ಕ್ಲಿನಿಕ್ ಪ್ರಾರಂಭೋತ್ಸವ

ಡಾ| ಎ. ರವೀಂದ್ರನಾಥ ಶೆಟ್ಟಿ, ಎಂ.ಬಿ.ಬಿ.ಎಸ್. ಇವರ ಸರಸ್ವತಿ ಕ್ಲಿನಿಕ್‌ನ ಆರಂಭೋತ್ಸವವು ಕಟಪಾಡಿಯಲ್ಲಿ ಇದೇ ತಾ. 10ನೇ ಸಂಜೆ ಉಡುಪಿ ಸರಕಾರಿ ಆಸ್ಪತ್ರೆಯ ಡಿಸ್ಟ್ರಿಕ್ಟ್ ಸರ್ಜನ್ ಡಾ| ವೈ. ನರಸಿಂಹ ಶೆಟ್ಟರಿಂದ ನೆರವೇರಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ಶಂಕರಪುರ ಚರ್ಚಿನ ಗುರುಗಳಾದ ರೆ. ಫಾ. ವಿಕ್ಟರ್ ಸಲ್ಡಾನ ಅವರು ವಹಿಸಿದ್ದರು. ಎಸ್. ವಿ. ಎಸ್. ಶಾಲಾ ಕಟ್ಟಡದಲ್ಲಿ ಜರಗಿದ ಸಭಾರಂಭದಲ್ಲಿ ಶ್ರೀ ಕೆ. ಗೋಪಾಲ ಶೆಟ್ಟರು ಸ್ವಾಗತಿಸಿ ನೂತನ ಡಾಕ್ಟರರ, ಅಧ್ಯಕ್ಷರ ಹಾಗೂ ಉದ್ಘಾಟಕರ ಪರಿಚಯ ಮಾಡಿಕೊಟ್ಟರು. ಡಾ| ವೈ. ನರಸಿಂಹ ಶೆಟ್ಟರು ತಮ್ಮ ಉದ್ಘಾಟನಾ ಭಾಷಣದಲ್ಲಿ ಪದವೀಧರ ಡಾಕ್ಟರರು ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಕೀಯ ವೃತ್ತಿ ಕೈಕೊಳ್ಳುವ ಆವಶ್ಯಕತೆಯನ್ನು ಹೇಳಿ ನೂತನ ದವಾಖಾನೆಗೆ ಮತ್ತು ಡಾಕ್ಟರರಿಗೆ ಶುಭಕೋರಿದರು. ಅಧ್ಯಕ್ಷರು ವೈದ್ಯರಲ್ಲಿ ಇರಬೇಕಾದ ಮಾನವತಾ ದೃಷ್ಟಿ, ದಕ್ಷತೆ, ಚಾರಿತ್ರ್ಯವನ್ನು ವಿವರಿಸಿ ಶುಭ ಹಾರೈಸಿದರು. ಡಾ| ಎ. ರವೀಂದ್ರನಾಥ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು. ಕೊನೆಗೆ ಬಸ್‌ಸ್ಟ್ಯಾಂಡಿನ ಎದುರುಗಡೆಯ ಸರಸ್ವತಿ ಕ್ಲಿನಿಕ್‌ನ ಸಾಂಪ್ರದಾಯಿಕ ಉದ್ಘಾಟನೆಯನ್ನು ನೆರವೇರಿಸಿದರು. ಪ್ರಾರಂಭದಲ್ಲಿ ಉಪಾಹಾರ ಸತ್ಕಾರವಿತ್ತು.

ಸಂದರ್ಶಿಸಿರಿ—ಸಂತೃಪ್ತರಾಗಿರಿ!!

ಬ್ಲೂಜಾಗರ್ ವಜ್ರಗಳಿಗೆ, ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ವ್ಯಾಪಾರಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res; 3272

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

Ex. C. 1/70 O. S. No. 120/66

ರುಕ್ಮಿಣಿ ಶೆಟ್ತಿ ಸಹಾ —ಅರ್ಜಿದಾರರು

ಮತ್ತು

ಪೊನ್ನಯ್ಯ ಶೆಟ್ಟಿ ವಗೈರಾ —ಎದುರು

ಇವರೊಳಗೆ

ಈ ಮೊಕದ್ದಮೆ ಮೇಲಿನ ಎದುರು: 1 ಪೊನ್ನಯ್ಯ ಶೆಟ್ಟಿ, ಪುಟ್ಟು ಶೆಟ್ಟಿ ಮಗ. 2 ಭೋಜ ಶೆಟ್ಟಿ, ಪದ್ದು ಶೆಟ್ಟಿ ಮಗ. 4 ಮುತ್ತಕ್ಕ ಶೆಟ್ತಿ, ನರ್ಸಿ ಶೆಟ್ಟಿ ಮಗಳು. 6 ರಾಜು ಶೆಟ್ಟಿ, ನಾಗಿ ಶೆಟ್ತಿ ಮಗ —ಉಡುಪಿ ತಾಲ್ಲೂಕ ಪಡುಕೂದು ಗ್ರಾಮದ ಅಡ್ಡಕಂಕಣಗುತ್ತು ಇವರಿಗೆ ತಿಳಿಸುವದೇನಂದ್ರೆ—

ಅರ್ಜಿದಾರರು ತಮ್ಮ ವಗೈರೆರ ಮೇಲೆ ಹಾಕ್ಲು ಮಾಡಿದ ಮೇಲಿನ ಅಮಲ್ದಾರಿ ನಿಮ್ಮ ಹಾಜರಿ ಬಗ್ಗೆ 12-11-70ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10.30 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಸಿವಾಯಿ ಮಾಡಿ ಮೇಲಿನ ವ್ಯವಹಾರ ಏಕಪಕ್ಷವಾಗಿ ತೀರ್ಮಾನಿಸಲಾದೀತು.

By order of the Court

N. M. Adyanthaya
Advocate for petitioners

Karkala, 8-10-70.

ಜನಹಿತ ಸಾಧನೆಯ ನೂತನ ಮಾರ್ಗ

ಲೇಖಕರು: ಶ್ರೀ ಎಸ್. ಗೋವಿಂದ್

ಭಾರತದ ಕುಟುಂಬ ಯೋಜನಾ ಕಾರ್ಯಕ್ರಮ ಇಡೀ ವಿಶ್ವದಲ್ಲೇ ಏಕಮೇವ ಬೃಹತ್ ಕಾರ್ಯಕ್ರಮವಾಗಿದೆ. ಆಕಾರಮಾನ, ಗೊತ್ತು-ಗುರಿಗಳು ಹಾಗೂ ಬೃಹತ್ತತೆ ಇವೆಲ್ಲಾ ದೃಷ್ಟಿಯಿಂದಲೂ ಈ ಕಾರ್ಯಕ್ರಮ ವೈದ್ಯಕೀಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣದ ಇತಿಹಾಸದಲ್ಲೇ ಒಂದು ಅಭೂತಪೂರ್ವ ಕಾರ್ಯಕ್ರಮವೆನಿಸಿದೆ. ಈ ಕಾರ್ಯಕ್ರಮಕ್ಕೆ ದೇಶದಲ್ಲಿ ಸರ್ವತ್ರ ಸ್ವಾಗತ ದೊರೆತಿರುವುದು ಇನ್ನೊಂದು ಗಮನಾರ್ಹವಾದ ಸಂಗತಿ.

ಕುಟುಂಬ ಯೋಜನಾ ಕಾರ್ಯಕ್ರಮದ ಈವರೆಗಿನ ಸಾಧನೆಯನ್ನು ನೋಡಿದಾಗ ಪ್ರಗತಿಯು ಸ್ಪಷ್ಟ ಕಲ್ಪನೆಯಾಗುತ್ತದೆ. ಈ ಕಾರ್ಯಕ್ರಮದ ಅಂಗವಾಗಿ 73 ಲಕ್ಷ ಮಂದಿ ಸಂತಾನಶಕ್ತಿಹರಣ ಶಸ್ತ್ರಕ್ರಿಯೆ ಮಾಡಿಸಿಕೊಂಡಿದ್ದಾರೆ. 34 ಲಕ್ಷ ಮಂದಿ ಮಹಿಳೆಯರು ವಂಕಿ ಧರಿಸಿದ್ದಾರೆ ಎಂಬುದು ಸಾಮಾನ್ಯ ಸಾಧನೆಯೇನೂ ಅಲ್ಲ. 1969ರಲ್ಲಿ 15 ಲಕ್ಷ ಜನರು ಜನನ ನಿಯಂತ್ರಣಕ್ಕಾಗಿ ಸಾಂಪ್ರದಾಯಿಕವಾದ ವಿಧಾನಗಳನ್ನು ಅನುಸರಿಸುತ್ತಿದ್ದರು. ತೀರ ಇತ್ತೀಚಿನ ಅಂದಾಜಿನ ಪ್ರಕಾರ ಹೇಳುವುದಾದರೆ ದೇಶದಲ್ಲಿ ಜನನ ಪ್ರಮಾಣ ಪ್ರತಿ ಸಾವಿರಕ್ಕೆ 39ಕ್ಕೆ ಇಳಿದಿದೆ. ಪ್ರತಿ ಸಾವಿರಕ್ಕೆ ಜನನ ಪ್ರಮಾಣ 25 ಇರಬೇಕೆಂಬುದು ನಮ್ಮ ಗುರಿ. ಇದನ್ನು ಗಮನಿಸಿದಾಗ ಜನನ ಪ್ರಮಾಣ ಇನ್ನೂ ತ್ವರಿತವಾಗಿ ಇಳಿಯಬೇಕೆಂಬುದು ಮನದಟ್ಟಾಗುತ್ತದೆ.

ಕುಟುಂಬ ಯೋಜನೆಯ ಪ್ರಗತಿಯನ್ನು ತೀವ್ರಗೊಳಿಸಲು ಹಾಗೂ ಈವರೆಗೂ ಅನ್ವಯಿಸದಿರುವ ಪ್ರದೇಶಗಳಿಗೆ ಅದನ್ನು ಅನ್ವಯಿಸಲು ಇತ್ತೀಚೆಗೆ ಅನೇಕ ಹೊಸ ಕ್ರಮಗಳನ್ನು ರೂಪಿಸಲಾಗಿದೆ.

ಕುಟುಂಬ ಯೋಜನಾ ಕಾರ್ಯಕ್ರಮ ಮತ್ತು ಪ್ರಸೂತಿಪೂರ್ವದ ಹಾಗೂ ಅನಂತರದ ಸೇವಾ ಸೌಕರ್ಯಗಳ ನಡುವೆ ಸಮನ್ವಯ ಕಲ್ಪಿಸಿರುವುದು ಇಂತಹ ಕ್ರಮಗಳಲ್ಲಿ ಒಂದಾಗಿದೆ. ಈ ಕ್ರಮವು ಪ್ರಸ್ತುತ ವರ್ಷದ ಫೆಬ್ರವರಿ ತಿಂಗಳಿನಿಂದ ದೇಶದ 40 ಆಸ್ಪತ್ರೆಗಳಲ್ಲಿ ಜಾರಿಗೆ ಬಂದಿದೆ. ಈ ಆಸ್ಪತ್ರೆಗಳನ್ನು ಮೆಡಿಕಲ್ ಕಾಲೇಜುಗಳಿಗೆ ಲಗತ್ತಿಸಲಾಗಿದೆ. ಇಲ್ಲವೇ ಈ ಆಸ್ಪತ್ರೆಗಳಲ್ಲಿ ವರ್ಷಕ್ಕೆ 3000 ಮಹಿಳೆಯರು ಪ್ರಸೂತಿ ಸೌಕರ್ಯ ಪಡೆಯುತ್ತಾರೆ.

ಕೇಂದ್ರ ಸರಕಾರದವರು ಈ ಕಾರ್ಯಯೋಜನೆಗೆ ಐದು ವರುಷಗಳ ಅವಧಿಗಾಗಿ ಸಂಪೂರ್ಣ ನೆರವನ್ನು ನೀಡುತ್ತಾರೆ. ಈ ಆಸ್ಪತ್ರೆಗಳಿಗೆ ಪ್ರಸೂತಿಗೆಂದೇ ಬರುವ ಮಹಿಳೆಯರಿಗೆ ಕುಟುಂಬ ಯೋಜನೆಯ ಮಹತ್ವದ ಮನವರಿಕೆ ಮಾಡಿಕೊಡುವುದು ಹಾಗೂ ಅವರ ಮನವೊಲಿಸುವುದು ಮತ್ತು ತನ್ಮೂಲಕ ಯೋಜನೆಯನ್ನು ಬಲಗೊಳಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ದೆಹಲಿಯ ಸಫ್ದರ್‌ಗಂಜ್ ಆಸ್ಪತ್ರೆಯಲ್ಲಿ ಮತ್ತು ತಿರುವನಂತಪುರದ ಎಸ್. ಎ. ಟಿ. ಆಸ್ಪತ್ರೆಯಲ್ಲಿ ಸಾಕಷ್ಟು ಪ್ರಯೋಗ ಪರೀಕ್ಷೆ ನಡೆಸಿದ ಬಳಿಕ ಈ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಅವನ್ನು 59 ಆಸ್ಪತ್ರೆಗಳಿಗೆ ವಿಸ್ತರಿಸುವ ಗುರಿಯಿದೆ.

ಇದೇ ರೀತಿ ಕುಟುಂಬ ಯೋಜನೆಯ ಅಂಗವಾಗಿ ಜಿಲ್ಲಾ ಮಟ್ಟದಲ್ಲಿ ಕೈಗೊಳ್ಳಲಾಗಿರುವ ಜಿಲ್ಲೆಯ ತೀವ್ರತಮ ಯೋಜನೆ ಇಂದು 17 ಜಿಲ್ಲೆಗಳಲ್ಲಿ ಜಾರಿಯಲ್ಲಿದ್ದು ಅದನ್ನು ಮತ್ತೆ 14 ಜಿಲ್ಲೆಗಳಿಗೆ ಅನ್ವಯಿಸುವ ಉದ್ದೇಶವಿದೆ.

ಕುಟುಂಬ ಯೋಜನಾ ದೃಷ್ಟಿಯಿಂದ ಕೆಲವೊಂದು ಅಡಚಣೆಗಳಿರುವ ಪ್ರದೇಶಗಳಲ್ಲಿ ಸಹ ಉತ್ತಮ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ಕಾರ್ಯಕ್ರಮವೊಂದನ್ನು ಈಗ ಅಭ್ಯಾಸಕ್ಕಾಗಿ ಸಿದ್ಧಪಡಿಸಲಾಗುತ್ತಿದೆ. ಅದು ಇಷ್ಟರಲ್ಲೇ ಅನುಷ್ಠಾನಕ್ಕೆ ಬಂದಿದೆ.

ನಿರೋಧದ ಜನಪ್ರಿಯತೆ

ನಿರೋಧ ಸಂತಾನ ನಿರೋಧದ ಒಂದು ಸರಳ ಸಾಧನವಾಗಿದ್ದು ವೈದ್ಯಕೀಯ ದೃಷ್ಟಿಯಿಂದ ಒಂದು ಉತ್ತಮ ಸಾಧನವೆಂದು ಪರಿಗಣಿಸಲ್ಪಟ್ಟಿದೆ. ನವದಂಪತಿಗಳು ಶಿಶು ಜನನದ ನಡುವೆ ಸೂಕ್ತವಾದ ಅಂತರವನ್ನು ಪಾಲಿಸಿಕೊಂಡು ಬರಲು ಈ ಸಾಧನ ಅತ್ಯಂತ ಉಪಯುಕ್ತವಾಗಿದೆ. "ನಿರೋಧ"ವನ್ನು ಉಚಿತವಾಗಿ ಪೂರೈಸುವ ಮೂಲಕ ಸಾಕಷ್ಟು ಪ್ರಚುರಪಡಿಸಲಾಗಿದ್ದು ಅದರ ಮಾರಾಟಕ್ಕೆ ಸಬ್ಸಿಡಿಯನ್ನು ನೀಡಲಾಗುತ್ತಿದೆ. ನಿರೋಧ ಈಗ ಸುಲಭವಾಗಿ ದೊರೆಯುತ್ತಿದೆ. ದೇಶದ ಆರು ಪ್ರಮುಖ ಖಾಸಗಿ ವಾಣಿಜ್ಯ ಸಂಸ್ಥೆಗಳಾದ ಬ್ರೂಕ್ ಬಾಂಡ್ಸ್, ಹಿಂದುಸ್ಥಾನ್ ಲಿವರ್ಸ್; ಇಂಡಿಯಾ ಟುಬ್ಯಾಕೋ; ಲಿಪ್ಟನ್ಸ್, ಟಾಟಾ ಆಯಿಲ್ ಮಿಲ್ಸ್ ಮತ್ತು ಯೂನಿಯನ್ ಕಾರ್ಬೈಡ್ ಸಂಸ್ಥೆಗಳು "ನಿರೋಧ" ಸಾಧನವನ್ನು ಮಾರುವ ಮೂಲಕ ಸರಕಾರದ ಕಾರ್ಯದಲ್ಲಿ ನೆರವಾಗುತ್ತಿವೆ. ಹೀಗೆ ನಿರೋಧ ದಿನ—ದಿನವೂ ಹೆಚ್ಚಿನ ಜನಪ್ರಿಯತೆಯನ್ನು ಗಳಿಸುತ್ತಿದೆ. 1969ರ ಜೂನಿನಿಂದ 1970ರ ಜನವರಿ ವರೆಗಿನ ಅವಧಿಯಲ್ಲಿ "ನಿರೋಧ್" ಮಾರಾಟ ನೂರಕ್ಕೆ 50ರಷ್ಟು ಹೆಚ್ಚಿದೆ ಎಂದು ಸಮೀಕ್ಷೆಯಿಂದ ಕಂಡು ಬಂದಿದೆ. ಇದು ಅಲ್ಲದೆ ಸಣ್ಣ ಕುಟುಂಬದ ಸಂದೇಶದ ಪ್ರಚಾರಕ್ಕಾಗಿ ವಿಶಿಷ್ಟ ಕ್ರಮಗಳನ್ನು ಕೈಗೊಳ್ಳಲಾಗಿದೆ. ಫಲಸ್ವರೂಪವಾಗಿ ಕುಟುಂಬ ಯೋಜನಾ ಸಂಕೇತ ಇಂದು ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಪಕವಾಗಿ ಹಬ್ಬಿದೆ. ಈ ಕಾರ್ಯಕ್ರಮಕ್ಕಾಗಿ ಯೋಜನೆಯಲ್ಲಿ 315ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಹೀಗೆ ಈ ಯೋಜನೆಗೆ ಸಾಕಷ್ಟು ಹಣವೂ ದೊರೆತಿದ್ದು ಯೋಜನೆಯ ಜನಪ್ರಿಯತೆಯು ಅಧಿಕವಾಗಿದೆ. ದೇಶದ ಉದ್ದಗಲಕ್ಕೂ ಇಂದು ಕುಟುಂಬ ಯೋಜನೆಯ ಮಹತ್ವದ ಬಗ್ಗೆ ಅಪೂರ್ವ ಜನಜಾಗೃತಿಯಾಗಿದೆ. ದೇಶದ ಭವಿತವ್ಯ ಭವ್ಯವಾಗಿದೆ.

ಕನ್ನಡದಲ್ಲಿ ಅಪರೂಪವಾದ ಪುಸ್ತಕ

ಸ್ವಪ್ನಲೋಕ

ಮನೋವಿಶ್ಲೇಷಣದ ಬೆಳಕಿನಲ್ಲಿ ಕನಸುಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ವಿವರಗಳನ್ನೊಳಗೊಂಡ 'ಕಾರ್ತಿಕೇಯ' ವಿರಚಿತ ಕಿರುಹೊತ್ತಗೆ ಬೆಲೆ 0—50

o o o

ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ ಪ್ರಸಂಗ ಪುಸ್ತಕಗಳು

ಸಾಹಸ ಭೀಮ ವಿಜಯ	0-50
ವಾಲಿ ಸುಗ್ರೀವ (ದುರಂತ ಯಕ್ಷಗಾನ ನಾಟಕ)	0-50
ಲಕ್ಷ ಪಗಡೆ	0-40
ಭಾರತದ ಗುರುಕುಲ	0-40
ಭಗದತ್ತ ದಿಗ್ವಿಜಯ	0-50

ಪ್ರತಿ ಪುಸ್ತಕಕ್ಕೂ ಬುಕ್ ಪೋಸ್ಟಿನಿಂದ ಕಳಿಸಲು 0-30 ಪೈಸೆ ಅಂಚೆ ವೆಚ್ಚ.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್) ಉಡುಪಿ, ದ. ಕ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ

ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ

ಪ್ರೇಕ್ಷಣೀಯ ಸ್ಥಳಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾಕೀಜುಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

ಫೋನ್: 77

Please Visit

HOTEL SHIVAPRASAD

High Class Boarding, Lodging & Restaurant

COONDAPUR, S. K.

ಸ್ವಮೂತ್ರ ಚಿಕಿತ್ಸೆಯ ಅದ್ಭುತ ಘಟನೆ

(ಆರ್. ಪಿ. ಖಾರೇಕರ್, ಮಾಜೀ ದಿವಾನ ಮಿರಜ ಸಂಸ್ಥಾನ)

ನಾನು ಪೂಣೆಯಿಂದ ತಿರುಗಿಬರುತ್ತಿರುವಾಗ ನನ್ನ ರೇಲ್ವೆ ಡಬ್ಬಿಯಲ್ಲಿಯೇ ಒಂದು ಚಮತ್ಕಾರಿಕ ಘಟನೆ ನಡೆದು ಹೋಯಿತು. ಹರಿಯಾಣಾ ಪ್ರಾಂತದ ತರುಣನೊಬ್ಬ ನನ್ನ ಹತ್ತಿರ ಕುಳಿತಿದ್ದ. ಯೂನಿಯನ್ ಪಬ್ಲಿಕ್ ಸರ್ವೀಸ್ ಕಮಿಶನ್ನದ ಇಂಟರವ್ಯೂ ಸಲುವಾಗಿ ಆತ ಕೊಲ್ಹಾಪುರಕ್ಕೆ ನಡೆದಿದ್ದ. ಅವನ ಗಂಟಲು ಬಿಗಿದುಹೋಗಿತ್ತು. ಒಂದು ಶಬ್ದ ಕೂಡ ಹೊರಡುತ್ತಿರಲಿಲ್ಲ. ಅವನಿಗೆ ತಿಳಿಯುವಂತೆ ಅವನಿಗೊಂದು ಚೀಟಿ ಕೊಟ್ಟೆ. ಅದರ ಮೇಲೆ "ಸ್ವಮೂತ್ರಪಾನ ಮಾಡು ಮತ್ತು ಅರ್ಧ ತಾಸಿಗೊಮ್ಮೆ ಸ್ವಮೂತ್ರ ಬಾಯಿಯಲ್ಲಿ ಮುಕ್ಕಳಿಸುತ್ತ ಹೋಗು" ಎಂದು ಬರೆದಿದ್ದೆ. ಅದರಂತೆ ಆತ ವಿಕಸಿಷ್ಠೆಯಿಂದ ಮಾಡಿಯೇ ಬಿಟ್ಟ. ಮತ್ತು ಆಗಿನಿಂದ ಅವನ ಗಂಟಲು ಸ್ವಚ್ಛವಾಗಿ ಆತ ಸರಾಗವಾಗಿ ಮಾತಾಡಹತ್ತಿದ. ಇದನ್ನು ಕಂಡು ನನ್ನ ಡಬ್ಬಿಯಲ್ಲಿಯ ಪ್ರವಾಸಿಕರೆಲ್ಲ ಚಕಿತರಾಗಿಬಿಟ್ಟರು. ಹಲವರು ನನ್ನ ವಿಳಾಸವನ್ನೂ ಕೇಳಿ ಬರೆದುಕೊಂಡರು. ಒಟ್ಟಿಗೆ ಯಾವ ಡಿಗ್ರಿಯ ರಾಜ್ಯಸ್ಥರ ಬೇಲೆಯೇ ನಡೆಸಿದ ಜಾದೂ ಆಟದಂತೆ ಇದೊಂದು ಜಾದೂ ಪ್ರಯೋಗವೇ ಅನಿಸಿಹೋಯಿತು.

ಯಾವ ಚಳುವಳಿಯಲ್ಲಿ ಹೊಸ ಕಾರ್ಯಕರ್ತರು ತಯಾರಾಗುವದಿಲ್ಲವೋ ಆ ಚಳುವಳಿಯ ಶಕ್ತಿ ಬೆಳೆಯಲಾರದು.

o o o

ಯಾರಿಂದ ಯಾವದೇ ತರದ ಅಪೇಕ್ಷೆ ಮಾಡುವುದು ಸಾಧ್ಯವಿಲ್ಲವೋ ಅಂತಹ ಸಾಮಾನ್ಯ ಜನರು ಸಹ ದೊಡ್ಡ ಕೆಲಸಗಳನ್ನು ಮಾಡಲು ತಯಾರಾಗುವುದೇ ಕ್ರಾಂತಿಯದೊಂದು ದೊಡ್ಡ ಲಕ್ಷಣ. ವಿರಸನೆಯದಾಗಿ ಕ್ರಾಂತಿಯ ಯಾವದೊಂದು ವಿಷಯವನು ಅನ್ವಯಿಸಿ ಆರಂಭವಾದರೂ ಮುಂದೆ ವ್ಯಾಪಕವಾಗಿ ಇತರ ಸಂಗತಿಗಳನ್ನೆಲ್ಲ ವ್ಯಾಪಿಸಿ ಬಿಡುತ್ತದೆ.

o o o

ನಾವು ಆಂತರಿಕ ಮೌಲ್ಯಕ್ಕೆ ಮಹತ್ವ ಕೊಡದೆ ಬಾಹ್ಯ ಅಂಶಗಳಿಗಾಗಿಯಷ್ಟೇ ಬಡಬಡಿಸುವುದು ನಿಜಕ್ಕೂ ಸೋಜಿಗದ ವಿಷಯ.

o o o

ಬಹುಸಂಖ್ಯಾತ ಜನರು ತಮ್ಮ ತಿಳುವಳಿಕೆಯ ಕೊರತೆಯ ಪೂರ್ತಿಯನ್ನು ಕ್ರೋಧದಿಂದ ಮಾಡಿಕೊಳ್ಳುತ್ತಾರೆ

o o o

ಕ್ರೋಧ ಯಾವಾಗಲೂ ಮೂರ್ಖತನದಿಂದ ಸುರುವಾಗುತ್ತದೆ. ಹಾಗೂ ಪಶ್ಚಾತ್ತಾಪ (ಪ್ರಾಯಶ್ಚಿತ್ತ)ದಲ್ಲಿ ಮುಕ್ತಾಯಗೊಳ್ಳುತ್ತದೆ.

o o o

ಶಿಕ್ಷೆ ಪ್ರತಿಮೂರ್ತಿ ಎಂದರೆಯೇ ಮಿತ್ರ.

o o o

NAVAYUGA 15—10—1970
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಸಾಹಿತ್ಯದ ಕಾರ್ಯ ಮತ್ತು ಉದ್ದೇಶ

"ನನಗೆ ನಾನೇ ಯಾವಾಗಲೂ ಒಮ್ಮೊಮ್ಮೆ ಕೇಳಿಕೊಳ್ಳುತ್ತಿದ್ದ ಭಿನ್ನ ಭಿನ್ನ ಪ್ರಶ್ನೆಗಳಿಗೆ ಉತ್ತರವಾಗಿ ಈ ಟಿಪ್ಪಣಿಗಳನ್ನು ಬರೆದಿಟ್ಟಿದ್ದೇನೆ" ಎನ್ನುವ ಗಣ್ಯ ಉಕ್ರೇನಿಯನ್ ಕವಿ ಮತ್ತು ಗದ್ಯಲೇಖಕ ಲಿಯೊನಿದ್ ಪೆರ್ವೊಮಾಯಿಸ್ಕಿಯವರು ಹೇಳುತ್ತಾರೆ. "ನನ್ನ ಆಸಕ್ತಿಯನ್ನು ಕೆರಳಿಸಿದ್ದ ಕೆಲವು ಮೊದಲಿನ ವಿಷಯಗಳನ್ನು ಬಿಟ್ಟುಬಿಟ್ಟಿದ್ದೇನೆ. ಆದರೆ ಇನ್ನು ಕೆಲವುಗಳಲ್ಲಿ (ಉದಾಹರಣೆಗೆ, ಭಾಷೆ, ಲೇಖನ ಕಲೆ, ಪದ್ಯ ಮುಂತಾದುವು) ಇಂದಿಗೂ ಅಷ್ಟೇ ಆಸಕ್ತಿ ಉಳಿದಿದೆ. ಯಾವುದನ್ನೂ ಇಲ್ಲಿ ಸಿದ್ಧಾಂತವಾಗಿ ನಾನು ಹೇಳುತ್ತಿಲ್ಲ. ಹಾಗಿದ್ದರೂ ಕೆಲವೊಂದು ಟಿಪ್ಪಣಿಗಳಿಗೆ ಆಧಾರ ಸ್ವಭಾವವು ಪ್ರಸ್ತುತವಾಗುತ್ತಿದ್ದರೆ ಸ್ವಂತ ಅನುಭವಗಳನ್ನು ಸಾಮಾನ್ಯೀಕರಿಸುವ ಒಂದು ಸಹಜ ಒತ್ತಡದಿಂದ ಹಾಗಾಗಿರಬೇಕು ಅಷ್ಟೆ" ಎಂದು ತಮ್ಮ ಟಿಪ್ಪಣಿಗಳ ಬಗ್ಗೆ ಅವರು ಹೇಳುತ್ತಾರೆ.

ಕೆಳಗಡೆಗೆ ಕೊಟ್ಟಿರುವ ಕೆಲವು ಟಿಪ್ಪಣಿಗಳು ವಾಚಕರಿಗೆ ಈ ಲೇಖಕರ ವಿಚಾರಗಳ ಬಗ್ಗೆ ಸಾಹಿತ್ಯದ ಕಾರ್ಯ ಮತ್ತು ಉದ್ದೇಶಗಳ ಬಗ್ಗೆ ಒಂದಿಷ್ಟು ಕಲ್ಪನೆಯನ್ನು ನೀಡುತ್ತವೆ.

ಪದ್ಯಗಳನ್ನು ಬರೆಯುವ ರೀತಿಗಳು ಎರಡು: ಒಂದು ಕಠಿಣ, ಇನ್ನೊಂದು ಸುಲಭ. ಬೇರೆಯವರ ವಿಚಾರಗಳನ್ನೂ, ಅನಿಸಿಕೆಗಳನ್ನೂ ಬೇರೆಯವರ ಭಾಷೆಯಲ್ಲೇ ಬರೆಯುವುದು ಸುಲಭವಾದ ಮಾರ್ಗ. ನಿಮ್ಮ ಸ್ವಂತ ವಿಚಾರಗಳನ್ನೂ ಅನಿಸಿಕೆಗಳನ್ನೂ ನಿಮ್ಮದೇ ಆದ ಪದಗಳಲ್ಲಿ ಬರೆಯುವುದು ಕಠಿಣವಾದ ದಾರಿ.

ೊ ೊ ೊ

ಉಕ್ರೇನಿಯದ ಕವಿ ಸೊಸ್ಯೂರಾರನ್ನು ಒಮ್ಮೆ ಯಾರೋ ಕೇಳಿದರು.

"ವೊಲೋದ್ಯಾ, ಸಾವೆಂದರೆ ನಿಮಗೆ ಭಯವೆ?"

"ಇಲ್ಲ, ನನಗೆ ಒಂದಿಷ್ಟೂ ಭಯವಿಲ್ಲ." ತಕ್ಷಣವೆ ಅವರು ಉತ್ತರಿಸಿದರು. ಕ್ಷಣ ಕಾಲ ಯೋಚಿಸಿ ಮತ್ತೆ ವಿಷಾದದ ಧ್ವನಿಯಲ್ಲಿ, ಆದರೆ ಸಹಜವಾದ ಕವಿಯಂತೆ ಹೇಳಿದರು: "ಆದರೆ ಕವಿತೆಗಳ ಬಗ್ಗೆ ನನಗೆ ತುಂಬಾ ದುಃಖವಾಗುತ್ತದೆ."

ೊ ೊ ೊ

ಕವಿಯಾಗಿ ರೂಪುಗೊಳ್ಳುವುದು ಏನೇನೂ ಸುಲಭವಾಗಿಲ್ಲ. ಅತ್ಯಂತ ದುಸ್ತರವಾದ ಕೆಲಸ. ಅಂದರೆ ಸಹಜವಾದ ಶಕ್ತಿಗಳನ್ನೆಲ್ಲ ಕಲಾಸೃಷ್ಟಿಗೆ ಪ್ರಜ್ಞಾಪೂರ್ವಕ ಸಂಕಲ್ಪವಾಗಿ ಅಧೀನಗೊಳಿಸುವುದಾಗಿದೆ. ಒಮ್ಮೊಮ್ಮೆ, ತಮ್ಮನ್ನು ತಾವು ಕಂಡುಕೊಳ್ಳುವುದರಲ್ಲಿ ಯಶಸ್ವಿಯಾಗುವ ಜನರು ತೀರಾ ವಿರಳ. ನಮ್ಮಂಥ ಹೆಚ್ಚಿನವರು ಬಹು ದೀರ್ಘಕಾಲ ಅಲೆಯುತ್ತಲೇ ಹೋಗಬೇಕಾಗುತ್ತದೆ. ಇದಂತೂ ಭಯಂಕರ ಯಾತನೆಯನ್ನುಂಟು ಮಾಡುತ್ತದೆ. ಸೋಲು, ನಿರಾಶೆಗಳೇ ಹೆಚ್ಚಾಗಿ ಸಂಭವಿಸುತ್ತವೆ.

ಅಂತಿಮ ವಿಶ್ಲೇಷಣೆಯಲ್ಲಿ ಕಂಡುಬರುವುದೇನೆಂದರೆ ಲೇಖಕನೊಬ್ಬನು ಚಿತ್ರಿಸುವುದು ಅವನ ಪ್ರಜ್ಞೆಯ ಒಂದು ಸೂಕ್ಷ್ಮ ಕಣ ಮಾತ್ರ. ಪಾತ್ರಗಳನ್ನು ಚಿತ್ರಿಸುವ ಲೇಖಕನ ಸಾಮರ್ಥ್ಯವು ಅವನ ವಿವಿಧ ಭಾವಸ್ತರಗಳಲ್ಲಿ, ಜಗತ್ತಿನ ಅನುಭವಗಳನ್ನು ಹಂಚಿಕೊಳ್ಳುವ ಅಂತರಂಗದಲ್ಲಿ ಅಡಗಿರುತ್ತದೆ. ಪಾತ್ರಗಳು.... ಕೇವಲ ಪ್ರತಿಷ್ಠಿತ ಪಾತ್ರಗಳು ಮಾತ್ರವೆ ಅಲ್ಲ, ಅತ್ಯಂತ ಕೆಟ್ಟ ಪಾತ್ರಗಳು ಕೂಡ.... ಇದರಿಂದ ಪಲಾಯನ ಸಾಧ್ಯವೇ ಇಲ್ಲ. ವೈವಿಧ್ಯಮಯವಾದ ಮಾನವ ನಡವಳಿಕೆ—ಭಾವನೆಗಳೆಲ್ಲವೂ ಲೇಖಕನ ಒಂದೇ ಹೃದಯದಲ್ಲಿ ಇದ್ದಂತೆ ಇದು....

ಒಂದು ಮರ, ತಾನು ಯಾವ ನೆಲದ ಮೇಲೆ ಬೆಳೆಯುತ್ತಿದೆಯೋ ಅದರ ಬಗ್ಗೆ ಒಂದಿಷ್ಟೂ ಯೋಚಿಸುವುದಿಲ್ಲ. ಬೆಳೆಯುವುದು, ಫಲ ನೀಡುವುದು ಇಷ್ಟೇ ಅದರ ಕೆಲಸ. ತಾನು ಯಾವ ನೆಲದ ಮೇಲೆ ಬೆಳೆದಿದ್ದೇನೆಯೋ ಅದೇ ನೆಲಕ್ಕೆ ಈ ಹಣ್ಣು ಸೇರಿದ್ದು ಎಂಬ ಪರಿವೆಯೂ ಅದಕ್ಕಿಲ್ಲ, ಅಥವಾ ಸ್ವತಃ ತನಗೇ ಸೇರಿದ್ದೇ ಎಂಬ ಅರಿವೂ ಅದಕ್ಕಿಲ್ಲ. ಆದರೆ ನಿಸರ್ಗದಲ್ಲಿಯ ಇಂಥ ಅನಾಸಕ್ತಿಯ ದೃಷ್ಟಾಂತವನ್ನು ಕಂಡು ಮನುಷ್ಯನಾದವನು ಸಮಾಧಾನಪಟ್ಟುಕೊಳ್ಳುವಂತಿಲ್ಲ. ನಿಸರ್ಗವು ನಮಗೆ ಇನ್ನೂ ಅನೇಕ ಸಂವೇದನೆಗಳನ್ನು ನೀಡಿದೆ. ಅವುಗಳಲ್ಲಿ ತನ್ನ ನೆಲ ಮತ್ತು ತಾನು ಬೆಳೆಸುವ ಹಣ್ಣು ಇವೆರಡರ ಬಗ್ಗೆಯೂ ತನಗಿರುವ ಜವಾಬ್ದಾರಿಯ ಪ್ರಜ್ಞೆ ಎಂಬುದೂ ಒಂದಾಗಿದೆ.

ಒಂದು ಅಪೂರ್ಣ ಸಣ್ಣ ಕತೆ...ಕೊನೆಯವರೆಗೂ ಪ್ರತಿಯೊಂದನ್ನೂ ಚೆನ್ನಾಗಿ ಯೋಚಿಸಲಾಗಿದೆ. ಪ್ರತಿಯೊಂದು ಸಣ್ಣ ವಿವರಣೆಯೂ ನಿಚ್ಚಳ ಕಣ್ಣ ಮುಂದಿದೆ. ಆದರೆ ಒಂದೇ ಒಂದು ಸಾಲು ಮುಂದೆ ಓಡುತ್ತಿಲ್ಲ. ಇದಕ್ಕೆ ನಿಷ್ಕರ್ಷವಾದ ಕಾರಣವೆಂದರೆ....ನನಗನಿಸುತ್ತದೆ.... ಪ್ರತಿಯೊಂದನ್ನೂ ಬಹಳವಾಗಿ ಆಲೋಚಿಸಿರುವುದೇ. ಸ್ವಯಂಸ್ಫೂರ್ತ ನಿರ್ಮಾಣಕ್ಕೆ ಒಂದು ಚೂರು ಅವಕಾಶವೂ ಉಳಿದಿಲ್ಲ. ಖಾಲಿ ಕಾಗದದ ಮೇಲೆ ಅವಕಾಶವೆ ಇಲ್ಲ.

....ಸೃಷ್ಟ್ಯಾತ್ಮಕ ಕಾರ್ಯದಲ್ಲಿ ಇಂಥ ಒಂದು ಅವಕಾಶವನ್ನು ಉಳಿಸಿಕೊಳ್ಳುವುದು ಅಗತ್ಯ....

ಒಮ್ಮೊಮ್ಮೆ ಹೀಗಾಗುತ್ತದೆ: ನಿಮ್ಮ ಬರಹ ನಿಮ್ಮನ್ನು ಯಾವ ದಿಕ್ಕಿಗೆ ಕೊಂಡೊಯ್ಯುತ್ತಿರುತ್ತದೆಯೆಂಬುದು ನಿಮಗೇ ಗೊತ್ತಿರುವುದಿಲ್ಲ, ನಿಮ್ಮ ಪಾತ್ರಗಳು ಏನು ಮಾಡುತ್ತವೆ, ಏನು ಹೇಳುತ್ತವೆ ಎಂಬುದು ನಿಮಗೆ ತಿಳಿದಿರುವುದಿಲ್ಲ, ಆದರೆ ನೀವು ಮೇಜಿನ ಮುಂದೆ ಕೂರುತ್ತೀರಿ, ಕಾಗದ ಹರಡಿಕೊಳ್ಳುತ್ತೀರಿ, ಲೇಖನಿಯನ್ನೆತ್ತಿ ಕೊಳ್ಳುತ್ತೀರಿ ಪ್ರತಿಯೊಂದೂ ತನ್ನಷ್ಟಕ್ಕೆ ತಾನೆ ಪರಿಹಾರವನ್ನು ಕಂಡುಕೊಂಡು ಓಡಲಾರಂಭಿಸುತ್ತದೆ. ಆಗ ನೀವು ಅದನ್ನು ಬರೆಯಲು ಅವಸರ ಮಾಡಲೇಬೇಕು, ಶಬ್ದಗಳಿಗೆ ಲಕ್ಷ್ಯಕೊಡಲೇಬಾರದು, ಒಂದು ಪದದ ಮೇಲೆ ಇನ್ನೊಂದು ಪದ ಬರುತ್ತದೆ, ವಾಕ್ಯರಚನೆ ಒಮ್ಮೊಮ್ಮೆ ಅವ್ಯವಸ್ಥಿತಗೊಳ್ಳುತ್ತದೆ, ಆದರೆ ಮುಂದೆ ಎಲ್ಲವೂ ಒಂದೊಂದೂ ತನ್ನ ಸ್ಥಳದಲ್ಲೇ ಇರುತ್ತವೆ, ಆದರೆ ಇಲ್ಲಿ ಮುಖ್ಯವಾದ ಸಂಗತಿಯೆಂದರೆ, ಈ ಸ್ವಯಂಸ್ಫೂರ್ತ ಸೃಷ್ಟ್ಯಾತ್ಮಕ ಘಳಿಗೆಯನ್ನು ನೀವು ಎಂದೂ ತಪ್ಪಿಸಿಕೊಳ್ಳಬಾರದೆಂಬುದೇ. ಇನ್ನಿಷ್ಟು ನಿಷ್ಕರ್ಷವಾಗಿ ಹೇಳುವುದಾದರೆ ಅದೆಷ್ಟೇ ಪ್ರಯತ್ನ ಪರಿಶ್ರಮಗಳಿಂದ ನವೀಕರಿಸಲಿಕ್ಕಾಗದ, ಅಥವಾ ಪುನರುದ್ಧರಿಸಲಿಕ್ಕಾಗದ ಈ ಪ್ರಥಮ ಅನ್ವೇಷಣೆಯನ್ನು ನೀವು ತಪ್ಪಿಸಿಕೊಳ್ಳಲೇಬಾರದು.

ೊ ೊ ೊ

ವಾಚಕನ ಮೇಲೆ ಪ್ರಭಾವ ಬೀರಲು ಎರಡು ಮಾರ್ಗಗಳಿವೆ: ಒಂದು ಅವನಿಗೆ ಅವನನ್ನೇ ತೋರಿಸಿಕೊಡುವುದು ಇನ್ನೊಂದು ಮತ್ತೊಬ್ಬನನ್ನು ಅವನಲ್ಲಿಯ ಅವನನ್ನೇ ಪರಿಚಯಮಾಡಿಕೊಡುವುದು. ಇದರಲ್ಲಿ ಯಾವುದು ಉತ್ತಮ ಮಾರ್ಗವೆಂಬುದು ನನಗೆ ಗೊತ್ತಿಲ್ಲ. ಈ ಎರಡು ಮಾರ್ಗಗಳನ್ನೂ ನಾನು ಭಿನ್ನ ಭಿನ್ನ ಲೇಖಕರಲ್ಲಿ ಮಾತ್ರವೆ ಅಲ್ಲ, ಒಬ್ಬನೇ ಲೇಖಕನಲ್ಲಿ ಕೂಡ ಕಂಡಿದ್ದೇನೆ ಮತ್ತು ಈ ಎರಡು ಮಾರ್ಗಗಳೂ ಆಕಸ್ಮಿಕವೇನಲ್ಲವೆಂದು ನನಗನಿಸುತ್ತದೆ.

ಇಂದು ಮನಸ್ಸು ನಿಜವಾಗಿಯೂ ಇರುವಂತೆಯೆ, ಗತಕಾಲದ ಬಹುತೇಕ ಹಿರಿಯ ಲೇಖಕರು ಚಿಂತಿಸುತ್ತ ಬಂದಿದ್ದಾರೆ. ತಾವು ಕನಸು ಕಾಣುವಂತೆ ಚಿತ್ರಿಸಿದ್ದಾರೆ. ಇದೆಲ್ಲ ಒಟ್ಟಿನಲ್ಲಿ ಹೊಸ ಮಾನವನನ್ನು ವಿಕಾಸಗೊಳಿಸಲು, ಇಳೆಯ ಮೇಲೆ ಅವರ ಜವಾಬ್ದಾರಿಯನ್ನು ಮತ್ತು ಸ್ಥಾನಗಳನ್ನು ಹೊಸ ನೋಟದಲ್ಲಿ ನೋಡಲು ಸಹಾಯಕವಾಗಿದೆ.

ಏನಿದ್ದರೂ ಕನಸಿನಿಂದ ಬೆಳಗದಿರುವ ಯಾವ ಸೃಷ್ಟ್ಯಾತ್ಮಕ ಕಾರ್ಯವೂ ನನಗೆ ನಿಷ್ಫಲವಾಗಿ ಕಾಣಿಸುತ್ತದೆ.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy
ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮರ್ಪಕ ಭಾಷಾಂತರ
ಡೊಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಿಗೆ. ಬೆಲೆ: ರೂ. 1—50

ಮನೆ-ಮದ್ದು Home Remedies
ಡಾ। ವಿ. ಆರ್. ಕೊರಡ್ಕರ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ.
ಹೇಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳು ಸಿಗುವ ಸ್ಥಳ —
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ದೀಪಾವಳಿ ಸಂಚಿಕೆ ೧೯೭೦



DEEPAVALI SPECIAL 1970

೫೦
ಪೈಸೆ

For your Ready & Future Requirements of:

MAIZE, L. S. F. STARCH & DEXTRINES

of Laxmi Starch Factory Ltd.

SODIUM SULPHATE ANHYDROUS

SULPHATE OF ALUMINA

(Ferric & Non-ferric grade)

SOAPSTONE POWDER

and all types of Chemical & Auxiliaries for Paper, Textiles and other Industries

PLEASE CONTACT:

INDIAN CHEMICAL AGENCY,

GENERAL TRADING COMPANY,

CHEMICAL SUPPLY AGENCY,

5, KALA BHAVAN, 3, MATHEW ROAD,

BOMBAY-4.

Gram: "INDIGO", Bombay.

Phone: Office: 360355
Res: 291430

WITH BEST COMPLIMENTS OF

JAYALAXMI TALKIES

ARKESWARA NAGARA

MANDYA

ದೀಪಾವಳಿಯ



ಶುಭಾಶಯಗಳು

ಜಯಲಕ್ಷ್ಮಿ ಟಾಕೀಸ್

ಅರ್ಕೇಶ್ವರ ನಗರ --- ಮಂಡ್ಯ

When at Mandya:-

Please visit our Theatre

Wishing all our Patrons a Happy Deevali

DODDA SIDDE GOWDA

Managing Partner

WITH BEST COMPLIMENTS OF:-

K.V. VEERAPPA & BROTHERS

CALTEX DEALERS

MANDYA

ಆರೋಗ್ಯಲಾಭದಿಂದ
ಆಯುಷ್ಯದ ಉಳಿತಾಯವಾಗಲಿ.

ನಿಮ್ಮ ಮನೆ, ಮನ
ಸುಖಸಮೃದ್ಧಿಯಿಂದ ತುಂಬಿ ತುಳುಕಲಿ.

ದೀಪಾವಳಿಯು ಸರ್ವರಿಗೂ
ಶಾಂತಿದಾಯಕವಾಗಲಿ.

ದೇವ ಧನ್ವಂತರಿಯು
ಕೃಪೆ ಇರಲಿ.

ನಾಯಕ ಆಯುರ್ವೇದಾಶ್ರಮ.

ಕಟಪಾಡಿ, ದ. ಕ.

ಸ್ಥಾಪಕ: ಪಾಂಗಾಳ ಲಕ್ಷ್ಮೀನಾರಾಯಣ ನಾಯಕ.

PLEASE STAY AT

TAJ MAHAL GROUP OF HOTELS

HYDERABAD & SECUNDERABAD

FOR

COMFORTABLE ACCOMMODATION, WHOLESOME VEGETARIAN FOOD
CLEAN & COURTEOUS SERVICE

TAJ MAHAL HOTEL

88, Sarojinidevi Road,
SECUNDERABAD-3.

Phone: 73171 Office
70105 5 Lines

Grams: "COURTESY"

BRANCHES:

TAJ MAHAL HOTEL

King Kothi Road, HYDERABAD-1
Phone: 53491 Office 40181 9 lines
Grams: "COURTESY"

NEW TAJ MAHAL HOTEL

Sultan Bazar, HYDERABAD-1
Phone: 44164 Boarding 41311 Lodging
Grams: "NEWTAJ"

TAJ MAHAL CAFE

University Road, HYDERABAD-29
Phone: 33466 Office 32136 3 Lines
Grams: "TAJCAFE"

ನವಯುಗ

ವಾರಪತ್ರಿಕೆ
ಉಡುಪಿ, ದ. ಕ.

NAVAYUGA
UDIPI, S. K.

ಸಂಪುಟ : 50
ಸಂಚಿಕೆ : 8

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್:526

ವಾರ್ಷಿಕ ಚಂದಾ ರೂ. 10
ವಿಶೇಷ ಸಂಚಿಕೆಗಳು ಸಹಿತ
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ಮೂರು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಆತ್ಮಜ್ಯೋತಿ ಹಚ್ಚಿ ಬೆಳಗೋಣ

ಸಾಧಾರಣ ಸಂವತ್ಸರದ ದೀಪಾವಳಿ ಬಂದಿದೆ. ಭಾರತೀಯರಿಗೆ ಅಸಾಧಾರಣ ಗಂಡಾಂತರವನ್ನೇ ನೆನಪಿಸಿಕೊಡುತ್ತಿದೆ. ಹಿಂದೊಮ್ಮೆ ಪಾಕಿಸ್ತಾನಿಗಳ ಅಕ್ರಮ ಅನ್ಯಾಯದ ಆಕ್ರಮಣಕ್ಕೆ ನಾವು ತುತ್ತಾದದ್ದೂ ಚೀನೀಯ ದೈತ್ಯರು ತಮ್ಮ ರಾಕ್ಷಸೀ ತೃಷೆಯನ್ನು ತೀರಿಸಲು ನಮ್ಮ ರಕ್ತ ಕುಡಿದದ್ದೂ ಇದೇ ದೀಪಾವಳಿಯ ಹಿಂದು ಮುಂದು. ಅಂದಿನ ದಿನಗಳನ್ನು ನೆನೆದರೆ ಮೈ ಜುಮ್ಮೆನ್ನುತ್ತದೆ. ಇಂದಿನ ದಿನಗಳೂ ನೆಮ್ಮದಿಕಾರಕವಿಲ್ಲ. ಅಂದು ಬಡಿದ ಆ ಕರಾಳ ಛಾಯೆ ಇನ್ನೂ ತನ್ನ ನೆರಳನ್ನು ನಮ್ಮ ಮೇಲೆ ಚೆಲ್ಲುತ್ತಿದೆ.

ಭಾರತದ ನಿರ್ಲಿಪ್ತ ನೀತಿಗೆ ಮನಸೋತ ಲೋಕದ ಎರಡೂ ಶಕ್ತಿಗಳು ನಮ್ಮನ್ನು ಹೊಗಳಿದುವು; ಎತ್ತಿ ಹಿಡಿದುವು. ಅವುಗಳ ಹೊಗಳಿಕೆಯ ಹಿಂದೆ ಅಡಗಿದ್ದ ದುರುದ್ದೇಶವನ್ನು ಅರಿತುಕೊಳ್ಳುವಷ್ಟು ನಾವು ಬುದ್ಧಿವಂತರಾಗಲಿಲ್ಲ. ಅಮೆರಿಕೆಯು ಪಾಕಿಸ್ತಾನಕ್ಕೆ ನೂರಾರು ಬಗೆಯ ಶಸ್ತ್ರಾಸ್ತ್ರಗಳನ್ನು ಕೊಟ್ಟಿತು; ಅದನ್ನು ಸೈನಿಕವಾಗಿ ಬಲಪಡಿಸಿತು. ಪರಿಣಾಮ ಸ್ಪಷ್ಟ-ನಮ್ಮ ಮೇಲೆ ಅದರ ಆಕ್ರಮಣ. ಪಾಕಿಸ್ತಾನವು ಎಲ್ಲಿ ಸಿಗುತ್ತದೋ ಅಲ್ಲಿಂದ ಶಸ್ತ್ರಾಸ್ತ್ರಗಳನ್ನು ಗಳಿಸುತ್ತದೆ: ಇದು ಅದರ ನೀತಿ. ಕೆಂಪು ಚೀನಾದಿಂದಲೂ ಅದು ಸೈನಿಕ ಸಹಾಯವನ್ನು ಬಹು ವಿಧದಿಂದ ಪಡೆದಿದೆ; ಇತ್ತೀಚೆಗೆ ರಶ್ಯವೂ ಅದಕ್ಕೆ ವಿಮಾನಾದಿಗಳನ್ನು ನೀಡಲು ಮುಂದೆ ಬಂದಿದೆ; ನಾವು ಯಾರನ್ನು ನಂಬಿದ್ದೇವೋ ಅವರು ನಂಬಿಕೆಯನ್ನು ಉಳಿಸಿಕೊಳ್ಳಲಿಲ್ಲ. ಸೋವಿಯತ್ತು ನಮ್ಮ ಪರಮಾಪ್ತ ಗೆಳೆಯ. ಅದು ನಮಗೆ ಹಲವು ಬಗೆಯಲ್ಲಿ ಸಹಾಯ ನೀಡಿದೆ; ನಿಜ. ಭಾರತ ಉಪಖಂಡದಲ್ಲಿ ಶಾಂತಿ ನೆಲಸಬೇಕೆಂಬ ಅದರ ಉದ್ದೇಶವನ್ನು ಹೃದಯಾಂತರಾಳದ ಇಂಗಿತವೆಂದು ತಿಳಿದೇ ವೀರ ಲಾಲ ಬಹದೂರರು ತಾಷ್ಕೆಂಟಿಗೆ ಹೋದರು; ಅಲ್ಲಿಂದಲೇ ವೀರಸ್ವರ್ಗವೇರಿದರು. ಉಭಯ ದೇಶಗಳಲ್ಲಿ ಸೌಹಾರ್ದ ಬಯಸುವ ಸೋವಿಯತ್ತು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ನೀಡುವುದೆಂದರೆ, ನರಕಾಸುರನಿಗೆ ಸಹಾಯ ಮಾಡಿದಂತೆಯೇ ಸರಿ. ನಮ್ಮ ಪ್ರಧಾನಿಯವರು ಪ್ರಗತಿಯ ಹೆಸರಿನಲ್ಲಿ ರಾಜ್ಯ ನೀತಿಯನ್ನು ಸೋವಿಯತ್ತಿಗೆ ಹತ್ತಿರಾತಿಹತ್ತಿರ ಒಯ್ಯುತ್ತಿದ್ದಾರೆ; ಹಾಗಿದ್ದರೂ ಅದು ಭಾರತದ ನೆಲವನ್ನು ಕೆಂಪು ಚೀನಾದ್ದೆಂದು ತೋರಿಸಿ ಭೂಪಟ ಪ್ರಕಟಿಸಿದೆ; ಅದನ್ನು ತಿದ್ದಿಕೊಳ್ಳುವ ಸೌಜನ್ಯವನ್ನು ಇನ್ನೂ ತೋರಿಸಿಲ್ಲ. ಅಮೆರಿಕೆಯು ನಮ್ಮ ಬಲವು ಎತ್ತವೆಂಬುದನ್ನು ಅರಿತುಕೊಂಡಿದೆ; ಆದ್ದರಿಂದ ಅದೀಗ ಪಾಕಿಸ್ತಾನವನ್ನು ತನ್ನ ಬುಟ್ಟಿಯಲ್ಲೇ ಉಳಿದುಕೊಳ್ಳುವಂತೆ ಮಾಡುವ ಹವಣಿಕೆಯಲ್ಲಿದೆ. ನಿಕ್ಸನ್ ಸರಕಾರವು ಅದಕ್ಕೆ ಮತ್ತೂ ಮತ್ತೂ ಶಸ್ತ್ರಾಸ್ತ್ರ ನೀಡಲು ನಿರ್ಧರಿಸಿದೆ. ಅಂದರೆ, ಅಮೆರಿಕೆ, ರಶ್ಯ ಹಾಗೂ ಕೆಂಪು ಚೀನಾಗಳು ಪಾಕಿಸ್ತಾನಕ್ಕೆ ಧಾರಾಳ ಸೈನಿಕ ನೆರವು ನೀಡಲು ತುದಿಗಾಲಲ್ಲಿ ನಿಂತಿವೆ; ಭಾರತದ ಪ್ರತಿಭಟನೆಗಳು ಕಾಸಿನ ಬೆಲೆಯಿಲ್ಲದಂತಾಗಿವೆ. ನಮ್ಮ ಮಿತ್ರರು ಯಾರು ಎಂಬುದನ್ನು ಚೆನ್ನಾಗಿ ಅರಿತುಕೊಳ್ಳುವ ಪ್ರಮೇಯವೀಗ ಬಂದಿದೆ. ಭಗವಾನ್ ಶ್ರೀಕೃಷ್ಣನು ನರಕಾಸುರನನ್ನು ದಮನ ಮಾಡಿದಂತೆ ನಾವು ಈ ಸೈನಿಕ ಶಕ್ತಿಗಳನ್ನು ಸೋಲಿಸುವಷ್ಟು ನೈತಿಕ ಶಕ್ತಿಸಂಪನ್ನರಾಗಿದ್ದೇವೆಯೆ?

ಪ್ರಾಯಃ ಇಲ್ಲವೆಂದೇ ಹೇಳಬೇಕು. ಅಧಿಕಾರವು ತೃಣಸಮಾನವೆಂದು ಹೇಳುವವರು ಅದಕ್ಕಾಗಿ ಏನೇನೆಲ್ಲಾ ಮಾಡುತ್ತಿದ್ದಾರೆಂದು ಈ ಒಂದು ವರ್ಷ ತೋರಿಸಿಕೊಟ್ಟಿದೆ. ಪ್ರಧಾನಿ ಶ್ರೀಮತಿ ಗಾಂಧಿಯವರು ಕೇರಳದ ಮಧ್ಯಾವಧಿ ಚುನಾವಣೆಯಲ್ಲಿ ಮುಸ್ಲಿಂಲೀಗ್ ಜಾತೀಯ ಪಕ್ಷವನ್ನು ಎದೆಗಪ್ಪಿಕೊಂಡರು. ಬಲಕಮ್ಯುನಿಸ್ಟರ ನೇತೃತ್ವದ ಸರಕಾರವನ್ನು ಅವರು ಬೆಂಬಲಿಸಿದರಾದರೂ ಸಂದರ್ಭ ನೋಡಿ ಅದನ್ನು ಉರುಳಿಸಲೂ ಅವರು ಸಿದ್ಧರು. ಉತ್ತರ ಪ್ರದೇಶದಲ್ಲಿ ಚರಣಸಿಂಗರ ಸರಕಾರವನ್ನು ಅವರು ಉರುಳಿಸಲಿಲ್ಲವೆ, ಹಾಗೆ. ಪಶ್ಚಿಮ ಬಂಗಾಳದ ಅಜಯಮುಖರ್ಜಿಯನ್ನು ತನ್ನ ಸೆರಗಿನಲ್ಲಿ ಅದುಮಿ ಹಿಡಿಯುವ ಅವರ ಪ್ರಯತ್ನ ನಡೆದಿದೆ. ವಿರೋಧ ಪಕ್ಷಗಳನ್ನು ಒಡೆದು ಪಕ್ಷಾಂತರಕ್ಕೆ ಸೂಕ್ತ ಆಮಿಷ ತೋರಿಸಿ ಮಾರ್ಗದರ್ಶನ ನೀಡುವ ಆಕೆ ದೀಪಾವಳಿಯಾಚರಿಸುವುದು ಬರಿಯ ಸಂಪ್ರದಾಯತನ-ಪ್ರತಿಗಾಮಿತನವೆನ್ನುವಷ್ಟೂ ಮುಂದುವರಿದಾರು. ತನ್ನ ವಾದವನ್ನು ಬೆಂಬಲಿಸಲು ಆತ್ಮಸಾಕ್ಷಿಯನ್ನು ಎತ್ತಿ ಹಿಡಿಯುವ ಈ ನಾರೀಮಣಿ ಎಲ್ಲಾ ವೇಳೆಯೂ ಈ ಆತ್ಮ ಜ್ಯೋತಿ ಉರಿಯಲು ಅವಕಾಶ ಕೊಡುವುದಿಲ್ಲ, ಇತರರ ಆತ್ಮವನ್ನು ತಾನೇ ಕ್ರಯಕ್ಕೆ ಕೊಂಡುಕೊಂಡ ಅಧಿಕಾರಿಣಿಯಂತೆ ಆಕೆಯ ವರ್ತನೆ ಸರ್ವಾಧಿಕಾರಕ್ಕೆ ಇನ್ನೊಂದು ಹೆಸರು. ಪ್ರತಿಗಾಮಿತನವನ್ನೇ ಪ್ರಗತಿಗಾಮಿತನವೆಂದೂ ಆಮೆ ನಡಿಗೆಯನ್ನೇ ಮೊಲದ ಓಟವೆಂದೂ ಹೇಳುತ್ತ ಎಲ್ಲರ ಕಣ್ಣಿಗೂ ಮಂಕುಬೂದಿ ಎರಚುವ ಈ ಮಂತ್ರವಾದಿ ಗಾಂಧಿಯೆದುರು ಭಾರತೀಯರು ತಮ್ಮ ಆತ್ಮಜ್ಯೋತಿಯನ್ನು ಗಗನದೆತ್ತರಕ್ಕೆ ಏರಿಸಿ ದೀಪಾವಳಿಯಾಚರಿಸುವ ಅಗತ್ಯವಿಂದಿದೆ; ಇಲ್ಲವಾದರೆ, ಭಾರತೀಯರೆಲ್ಲರ ಆತ್ಮವೂ ನಿರ್ವೀರ್ಯವಾಗಿ ನಂದಿ ಹೋಗುವುದು, ಭಾರತೀಯತೆಯೇ ಇಲ್ಲವಾಗುವುದು.

ಗೋಪೂಜೆಯನ್ನು ಮಾಡುವ ದೇಶದಲ್ಲಿ ದನಗಳ ಬವಣೆ ಹೇಳತೀರದು, ಜನಗಳ ಬವಣೆಯನ್ನೇ ನಿವಾರಿಸಲು ಅಶಕ್ತರಾದ ಅಧಿನಾಯಕರು ದನಗಳನ್ನು ರಕ್ಷಿಸುತ್ತಾರೆಂದು ನಂಬುವುದು ಅಸಾಧ್ಯ. ಜನರನ್ನು ಆಳುವವರು ತಾವು ಆಳುವವರು ಎಂಬ ಭಾವನೆಯಿಂದ ಅವರ ಮೇಲೆ ಸವಾರಿ ಮಾಡುತ್ತಾರೆ; ದನಗಳನ್ನು ಹೇಗೆ ನಡೆಸಿಕೊಂಡಾರು? "ತುರುಕರು ಕರೆದರೆ ಉಣಬಹುದಣ್ಣಾ" ಎಂದು ಹಿಂದೆ ದಾಸರು ಹಾಡಿದ್ದುಂಟು. ಆದರೆ, ಇಂದು ತುರುಕರು ಕರೆಯುವುದೇ ಬಹಳ ಅಪರೂಪ! ಗೋಮಾಳಗಳು ಹೇಳ ಹೆಸರಿಲ್ಲದಂತಾಗಿವೆ. ಗೋಸಂಮೃದ್ಧಿ ಇಲ್ಲವಾಗಿದೆ. ಅಮೆರಿಕದ ಏತೇತರದೋ ಹಾಲು-ಕುಡಿದು, ಗೋದಿ ತಿಂದು ನಮ್ಮ ಮಕ್ಕಳು ಮರಿಗಳು ಬೆಳೆಯ ಬೇಕಾಗಿದೆ ಎಂದರೆ ಮತ್ತಿನ್ನೇನು ಹೇಳ ಬೇಕು? ಭಾರತೀಯರು ಸ್ವಭಾವತಃ ಗೋವುಗಳೇ. ಅವುಗಳಿಗೆ ಒದಗಿದ ದುರವಸ್ಥೆಯೇ ಜನಕ್ಕೇ ಬಂದಿದೆ. ಅಧಿಕಾರ ಶಾಹಿಗಳು ಈ ದನಗಳ ಮೇಲೆ ಬಗೆ ಬಗೆಯ ಸವಾರಿ ಮಾಡುತ್ತಿವೆ; ಸುಲಿಯುತ್ತಿವೆ. ಇದು ತಪ್ಪದೆ ಹೋದರೆ, ದನ ತಿನ್ನುವಂತೆಯೇ ಜನರನ್ನೂ ಸಜೀವ ತಿಂದು ಮುಗಿಸಿಯಾರು. ಅದುದರಿಂದ ಜನ ಜಾಗೃತಿಯಾಗ ಬೇಕು; ಜನರಲ್ಲಿ ಆತ್ಮವಿಶ್ವಾಸ ಮೂಡಬೇಕು; ನಾವು ಅಸಹಾಯಕರಲ್ಲವೆಂಬ ಭಾವನೆ ಬರಬೇಕು; ಅಧಿಕಾರಿ ವರ್ಗದ ಶೋಷಣೆಯ ವಿರುದ್ಧ ಹೋರಾಡಬೇಕು.

ಜಾತೀಯ-ಭಾಷೀಯ ಅಲ್ಪಸಂಖ್ಯಾತರು ನರಕಾಸುರರಾಗಿ ಬಹುಸಂಖ್ಯಾತರ ಸ್ವಾತಂತ್ರ್ಯ ಹರಣದಲ್ಲಿ ಉದ್ಯುಕ್ತರಾಗಿದ್ದಾರೆ. ವಿದೇಶೀ ವಾಮನರು ಭಾರತದ ಭೂಮಿಯಳೆಯಲು ಮುಂದಡಿಯಿಟ್ಟಿದ್ದಾರೆ. ಸ್ವದೇಶೀ ಅಧಿಕಾರ ಲಾಲಸಿ ಹುಲಿಗಳು ಭಾರತೀಯ ಪುಣ್ಯಕೋಟಿಗಳನ್ನು ಕಬಳಿಸಿ ತಮ್ಮ ಹೊಟ್ಟೆ ತುಂಬಿಸಲು ಮುಂದಾಗಿದ್ದಾರೆ. ಈ ತ್ರಿವಿಧ ಸಂಕಷ್ಟಗಳು ಭಾರತೀಯರನ್ನು ಸತಾಯಿಸುತ್ತಿದ್ದರೂ ಅವರು ದೀಪಾವಳಿ ಮಾಡುತ್ತಾರೆ; ಇದು ಪ್ರತಿಗಾಮಿತನವಲ್ಲದೆ ಮತ್ತೇನು? ಸಂಕಷ್ಟ ವಿದೂರರಾಗಿ ಆಚರಣೆ ಮಾಡಿದರೆ ಮಾತ್ರ ಅದು ಪ್ರಗತಿಯಾಗುತ್ತದೆ. ಆದರೆ ನಮ್ಮ ಪ್ರಧಾನಿ ಮತ್ತವರ ಚೇಲಾರು ಪ್ರತಿಗಾಮಿತನವನ್ನೇ ಪ್ರಗತಿಯೆಂದು ಕರೆದು ಜನತೆಯನ್ನು ವಂಚಿಸಿ ತಮ್ಮ ಕೊರಳಿಗೆ ಹೂಮಾಲೆ ಹಾಕಿಸಿಕೊಳ್ಳುತ್ತಿದ್ದಾರೆ!

ತುಂಬಿ ತುಳುಕಲಿ

ರಾಷ್ಟ್ರೀಯ ಪರ್ವದಿನ ದೀಪಾವಳಿ. ಜನಮನವು ಆಕಾಶವನ್ನು ಹಿಗ್ಗುವ ದಿನವಿದು. "ನವಯುಗ"ದ ವಾಚಕರ ದೀಪಾವಳಿಯ ಆನಂದದ ದಿನಗಳನ್ನು ರಸಮಯವಾಗಿ ಮಾಡುವ ಸದುದ್ದೇಶದಿಂದ ಈ ವಿಶೇಷ ಸಂಚಿಕೆಯನ್ನು ಈ ಬಾರಿಯೂ ಪ್ರಕಟಿಸಿದ್ದೇವೆ. ಸಂಚಿಕೆಯ ಸಂಪಾದನೆಯಲ್ಲಿ ವಿಚಾರಕ್ಕೊಂದು ಪ್ರಚೋದನೆಯೇ ನಮ್ಮ ಉದ್ದೇಶ್ಯ; ಇದು ಎಷ್ಟರ ಮಟ್ಟಿಗೆ ಸಫಲವಾಗಿದೆಯೆಂದು ನೀವು ಹೇಳಬೇಕು.

ಈ ಸಂಚಿಕೆಯು ಹೊರಬರುವಲ್ಲಿ ಅನೇಕ ಅಭಿಮಾನಿಗಳು ಸಹಕಾರ ನೀಡಿದ್ದಾರೆ. ಲೇಖಕ ವರ್ಗವು ತಮ್ಮ ಅಮೂಲ್ಯ ಲೇಖನಗಳನ್ನು ನೀಡಿ ಮಾಡಿದ ಉಪಕಾರ ಸ್ಮರಣೀಯ. ಜಾಹಿರಾತುದಾರರ ನೆರವು ಚಿರಪ್ರಶಂಸನೀಯ. ದೀಪಾವಳಿಯು ಸುಖ ಸಂತೋಷಗಳಿಗೆ ನಾಂದಿ ಹಾಡಲಿ; ನಾವು-ನೀವು—ದೇಶ—ಕೋಶ ತುಂಬಿ ತುಳುಕಲಿ.

ಮುಖಚಿತ್ರ

ಸೀತಾ ಚಿತ್ರದ ಒಂದು ದೃಶ್ಯ—
ಕಲ್ಪನಾ ಮತ್ತು ಗಂಗಾಧರ್

Grams:
'CORONET' Malpe
'CORONET' Karwar

Phones:
583, 584, 595 Malpe
179 Karwar

With Best Compliments From

M. MADHVARAJ, B. A.

Coronet Canning Company, Malpe
Coronet Quick Freezing Plant, Malpe
Coronet Fishmeal and Oil Company, Malpe
Coronet Ice & Cold Storage Company, Malpe
Coronet Ice & Cold Storage Company, Karwar

Exporters of Canned & Frozen Seafoods
and
Fishmeal & Fish Oil

Distributors in the State of Mysore
FOR WORLD RENOWNED
"KELVIN"
MARINE DIESEL ENGINES

ಉಡುಪಿಗೆ ಸಂಬಂಧಿಸಿದ

ನಾಲ್ಕು ಐತಿಹಾಸಿಕ ಪ್ರಶ್ನೆಗಳು

ಭಾರತ ಪ್ರಸಿದ್ಧ ಉಡುಪಿಯ ಇತಿಹಾಸದ ಮೇಲೆ ಬೆಳಕು ಕಡಿಮೆ. ಸತ್ಯೇತಿಹಾಸವನ್ನು ಬರೆಯುವುದರ ಬದಲಿಗೆ ಅದರ ಮೇಲೆ ಮುಚ್ಚಿಡುವ ಪ್ರಯತ್ನವೇ ನಡೆಯುತ್ತ ಬಂದಿದೆ. ಡಾ| ಭಟ್ಟರು ಈ ಮುಚ್ಚುಗೆ ತೆರೆದು ಉತ್ತರ ಹೇಳುವ ಒಂದು ಸಾಹಸ ತೋರಿಸಿದ್ದಾರೆ.

ಲೇಖಕರು:

ಡಾ| ಪಿ. ಗುರುರಾಜ ಭಟ್ಟ,

ಎಂ. ಎ., ಪಿ.ಎಚ್‌ಡಿ.

ಲೇಖಕರು

ಉಡುಪಿಯು ಭಾರತದಲ್ಲೇ ಸಾಕಷ್ಟು ಪ್ರಸಿದ್ಧಿಯನ್ನು ಹೊಂದಿದ ಕೇಂದ್ರವಾದರೂ ಅದರ ನೈಜ ಇತಿಹಾಸವು ಇಂದಿನವರೆಗೂ ಅಧಿಕೃತವಾಗಿ ಬರೆಯಲ್ಪಡದಿದ್ದುದು ಒಂದು ಕೊರತೆಯಾಗಿದೆ.

ಉಡುಪಿಯ ಚರಿತ್ರೆಯನ್ನು ಅಧ್ಯಯನ ಮಾಡುವಾಗ ನಾಲ್ಕು ಪ್ರಶ್ನೆಗಳು ಸಮಸ್ಯಾತ್ಮಕವಾಗಿ ನಮ್ಮ ಮುಂದೆ ಕಾಣಿಸಿಕೊಳ್ಳುತ್ತದೆ. ಮೊದಲನೆ ಪ್ರಶ್ನೆ ಉಡುಪಿಗೆ ಈ ಹೆಸರು ಹೇಗೆ ಬಂತೆಂಬುದು. ಇದು ಪ್ರಾಚೀನ ಹೆಸರೋ ಅರ್ವಾಚೀನ ಹೆಸರೋ ಇದಕ್ಕೆ ಸಂಸ್ಕೃತ ಮೂಲವೋ ಅಥವಾ ಇದು ದ್ರಾವಿಡ ಶಬ್ದದಿಂದ ಹೊರಟ ಹೆಸರೋ ಎಂಬೀ ಬಗೆಗೆ ಇನ್ನೂ ಸಮರ್ಪಕವಾದ ಉತ್ತರ ದೊರಕಿಲ್ಲ. ಪೂರ್ವಗ್ರಹ ದೋಷವಿಲ್ಲದೆ ಈ ಪ್ರಶ್ನೆಗೆ ಉತ್ತರವನ್ನು ಕಂಡುಹುಡುಕಲು ಸಾಕಷ್ಟು ಪ್ರಯತ್ನವೂ ನಡೆಯಲಿಲ್ಲ. ಉಡುಪಿ ಎಂಬೀ ಹೆಸರು 'ಉಡುಪ' ಎಂಬ ಸಂಸ್ಕೃತ ಪದದಿಂದ ಹೊರಟುದೆಂದೂ ನಕ್ಷತ್ರಗಳ ಒಡೆಯನಾದ ಚಂದ್ರನು ಶಾಪದಿಂದ ವಿಮೋಚನೆ ಹೊಂದುವುದಕ್ಕೋಸ್ಕರ ಈಶ್ವರನನ್ನು ಕುರಿತು ತಪಸ್ಸು ಮಾಡಿ ಆತನು ಪ್ರತ್ಯಕ್ಷವಾದ ಪ್ರದೇಶವು ಉಡುಪಿ ಎಂದೂ ಸಾಮಾನ್ಯವಾಗಿ ಜನರಿಗೆ ತಿಳಿದ ಕತೆಯಾಗಿದೆ. ಇದೊಂದು ಸ್ಥಳೀಯ ಪುರಾಣ ಕತೆ. ಈ ಕತೆ ಎಂದು ಹೊರಟಿತೆಂದು ತಿಳಿದು ಬರುವುದಿಲ್ಲ. ಪ್ರಾಚೀನ ಸಾಹಿತ್ಯಗಳಲ್ಲಿ ಉಡುಪಿಯ ಉಲ್ಲೇಖ ಕಂಡು ಬರುವುದಿಲ್ಲ. ಶಾಸನಾದಿಗಳಲ್ಲಿ ಮೊದಲು ಈ ಹೆಸರಿನ ಉಲ್ಲೇಖ ಕ್ರಿ. ಶ. 1366ರ ಕಲ್ಬರಹದಲ್ಲಿ ಈ ಹೆಸರು ಸಂಸ್ಕೃತ ಮೂಲದಿಂದ ಹೊರಟಿರಲಾರದೆನ್ನುವುದಕ್ಕೆ ಒಂದು ದೃಷ್ಟಾಂತ ವನ್ನೀಯಬಹುದು. ಶ್ರೀ ನಾರಾಯಣ ಪಂಡಿತಾಚಾರ್ಯರು ತಮ್ಮ ಸುಮಧ್ವವಿಜಯ ಭಾವ ಪ್ರಕಾಶಿಕೆಯಲ್ಲಿ ರಜತಪೀಠಪುರಕ್ಕೆ ಅಪಭ್ರಂಷ ಭಾಷೆಯಲ್ಲಿ 'ಒಡ್ಪು' ಎಂದು ಕರೆಯುತ್ತಾರೆ ಎಂದಿದ್ದಾರೆ. ಉಡುಪಿ–ಈ ಹೆಸರು ಸಂಸ್ಕೃತ ಜನ್ಯವಾಗಿದ್ದರೆ ಅಪಭ್ರಷ್ಟ ಭಾಷೆಯಲ್ಲಿ 'ಒಡ್ಪು' ಎಂದು ಕರೆಯುತ್ತಾರೆ ಎನ್ನಬೇಕಾಗಿರಲಿಲ್ಲ. ಇಲ್ಲಿ, ವಿಚಾರಕ್ಕೆ ತುಂಬಾ ಇಂಬಿದೆ.

ಉಡುಪ ಎಂದರೆ, ದೋಣಿ ಎಂಬ ಅರ್ಥವಿದೆಯೂದುದರಿಂದ ಉಡುಪಿ ಎಂಬ ಹೆಸರು ಚಂದ್ರನಿಂದಾಗಿ ಬಂದಂತೆಯೇ ನಾವೆಯಲ್ಲಿ, ಬಂದ ಕೃಷ್ಣನಿಂದಾಗಿಯೂ ಬಂದಿರಬಹುದೆಂದೂ ಅಥವಾ ಸಂಸಾರ ಸಾಗರವನ್ನು ದಾಟಿಸುವ ನಾವೆಯಂತಿರುವ ಶ್ರೀಕೃಷ್ಣನಿಂದಾಗಿ ಬಂದಿರಬಹುದೆಂದೂ ಅಥವಾ ಚಂದ್ರನನ್ನು ಧರಿಸಿದ ಈಶ್ವರ ಚಂದ್ರಶೇಖರನಿಂದ ಬಂದಿರಬಹುದೆಂದೂ ರಜತಪೀಠಪುರ ಮಹಾತ್ಮೆಯ ಪೀಠಿಕೆಯಲ್ಲಿ ಹೇಳಲಾಗಿದೆ. ಈ ವಿವರಣೆಯಲ್ಲಿ ರೂಪಕವೇ ಕಂಡು ಬರುತ್ತದೆ, ವಿನಾ ನಿಜತ್ವದ ನಿರೂಪಣೆ ಇದ್ದಂತೆ ಭಾಸವಾಗುವುದಿಲ್ಲ.

ಹಾಗಾದರೆ ಈ ಹೆಸರು ಹೇಗೆ ಬಂದಿರಬಹುದು? ದ್ರಾವಿಡ ಪದವಾಗಿ 'ಉಡುಪ' ಎಂಬೀ ಶಬ್ದವು "ನಾಗ"ನನ್ನೂ ನಿರ್ದೇಶಿಸುತ್ತದೆ. ನಾಗಾರಾಧನೆಗೆ ಖ್ಯಾತಿವೆತ್ತ ಪ್ರದೇಶ ಉಡುಪಿಯಾಗಿದ್ದಿರಬಹುದು. ಬಹಳ ಪ್ರಾಚೀನ ಕಾಲದಿಂದಲೂ ಉಡುಪಿ ನಾಗಾರಾಧನೆಗೆ ಪ್ರಖ್ಯಾತಿಯನ್ನು ಪಡೆದಿದೆ.

ಅನಂತೇಶ್ವರನಿಗೆ ಈ ಹೆಸರು ಎಂದಿನಿಂದ ರೂಢಿಗೆ ಬಂತು ಎಂಬುದು ಇಂದಿಗೂ ಸಂದೇಹಾಸ್ಪದವಾಗಿಯೇ ಉಳಿದಿದೆ. ಈ ಬಗೆಗೆ ದಾಖಲೆಗಳು ನಮಗೆ ದೊರಕುವುದು ವಿರಳ. ಈ ಹೆಸರಿನ ಕುರಿತಾಗಿ ಅನೇಕ ಊಹಾಪೋಹೆಗಳು ಕಂಡು ಬರುತ್ತವೆ. ಅದರೆ ಪರಿಣಾಮವಾಗಿ ನಿಜಸ್ಥಿತಿಯು ಮಾಸಿಹೋದಂತೆ ಭಾಸವಾಗುತ್ತದೆ. ಶ್ರೀಮಾನ್ ಗೋವಿಂದ ಪೈಗಳು ಅನಂತೇಶ್ವರವೆಂಬ ಹೆಸರು 'ಅನಂತ ಜಿನೇಶ್ವರ'ನೆಂಬ ಜೈನ ತೀರ್ಥಂಕರರ ಹೆಸರಿನಿಂದ ಬಂದಿರಬೇಕೆಂದೂ, ಯಾವುದೋ ಒಂದು ಕಾಲದಲ್ಲಿ ಅನಂತೇಶ್ವರ ದೇಗುಲವು ಬಸ್ತಿಯಾಗಿದ್ದಿರಬೇಕೆಂದೂ ಶೈವ ಧರ್ಮದ ಪ್ರಾದುರ್ಭಾವದಿಂದ ಹಿಂದೂ ದೇವಾಲಯವಾಗಿ ಮಾರ್ಪಾಟು ಹೊಂದಿರಬೇಕೆಂದೂ ವಾದಿಸಿದ್ದಾರೆ. ಇದಕ್ಕೆ ದೇವಲದ ಎದುರಿರುವ ಕಲ್ಲಿನ ಸ್ತಂಭವನ್ನು ಮಾನಸ್ತಂಭವೆಂಬುದಾಗಿ ಕರೆದಿದ್ದಾರೆ. ಇತರರೂ ಇದೇ ರೀತಿಯಲ್ಲಿ ಅಭಿಪ್ರಾಯಪಟ್ಟುದುಂಟು. ಆದರೆ ಇದು ಸರಿಯಲ್ಲವೆಂಬುದಾಗಿ ನಾನು ನನ್ನ ಕೆಲವು ಲೇಖನಗಳಲ್ಲಿ ಪ್ರತಿಪಾದಿಸಿದ್ದೇನೆ. ಜೈನ ಆಗಮದಲ್ಲಿ, ಬಸದಿಯ ಆಕಾರವು ಗಜಪೃಷ್ಠಾಕಾರವಾಗಿರಲು ಆಸ್ಪದವಿಲ್ಲ. ಮಾತ್ರವಲ್ಲದೆ ದೇವಲದ ಎದುರಿರುವ ಪ್ರಧಾನ ಬಲಿಪೀಠವು ಹಿಂದೂ ದೇವಾಲಯಕ್ಕೆ ಸಂಬಂಧಿಸಿದುದಾಗಿದೆ. ಕಲ್ಲಿನಕಂಬವು ಮಾನಸ್ತಂಭವೂ ಅಲ್ಲ. ಕಾರಣ ಅದರಲ್ಲಿ ಸೂರ್ಯ, ನಂದಿಕೇಶ್ವರರ ಉಬ್ಬು ಚಿತ್ರಗಳಿವೆ.

ಕ್ರಿ. ಶ. 1366ರ ಶಾಸನದ ಪ್ರಕಾರ ಅನಂತೇಶ್ವರವು "ಪಡುಪದೇವ"ವೆಂದು ಕರೆಯಲ್ಪಟ್ಟಿದೆ. ಚಂದ್ರೇಶ್ವರವು "ಮೂಡದೇವ"ವೆಂದೂ ಕರೆಯಲ್ಪಟ್ಟಿದೆ. ಇತರ ಶಾಸನಗಳು. (ಕ್ರಿ. ಶ. 15ನೇ ಶತಕ) ಉಡುಪಿನ ಶ್ರೀ ಮಹಾದೇವನೆಂಬುದಾಗಿ ಈ ದೇವತೆಯನ್ನು ಕರೆದಿವೆ. ಮಹಾದೇವನೆಂದರೆ ಈಶ್ವರ, ಎಂದರೆ ಅನಂತೇಶ್ವರ ದೇಗುಲವು ಶುದ್ಧ ಶಿವಸ್ಥಾನವಾಗಿದೆ.

ನನ್ನ ಕೆಲವು ಲೇಖನಗಳಲ್ಲಿ, ಅನಂತೇಶ್ವರನೆಂಬ ಹೆಸರು ಹದಿನಾರನೇ ಶತಮಾನದ ಅನಂತರದ ಹೆಸರೆಂದೂ ಈ ಹೆಸರು ಸ್ಕಂದ (ಅನಂತ) ಮತ್ತು ಶಿವ ಎಂಬ ಅರ್ಥವನ್ನೀಯುತ್ತದೆಂದೂ ಉಡುಪಿಯು ಸ್ಕಂದಾರಾಧನೆಗೂ ಶಿವಾರಾಧನೆಗೂ ಪ್ರಸಿದ್ಧವಾಗಿತ್ತೆಂದೂ ತಿಳಿಯಪಡಿಸಿದ್ದೇನೆ. ಪುತ್ತೂರು ತಾಲೂಕಿನಲ್ಲಿ ಬಳ್ಳಮಂಜ ಎಂಬಲ್ಲಿಯೂ ಒಂದು ಅನಂತೇಶ್ವರ ದೇವಾಲಯವಿದೆ. ಸ್ಕಂದನ ಹಾಗೂ ಶಿವ ದೇವಸ್ಥಾನಗಳು ಒತ್ತೊತ್ತಾಗಿವೆ. ಕಾಸರಗೋಡಿನ ಮಧೂರಿನಲ್ಲಿ ಸುಪ್ರಸಿದ್ಧ ಶ್ರೀಮದನಂತೇಶ್ವರ ದೇವಾಲಯವಿದೆ. ಇಲ್ಲಿಯೂ ಸ್ಕಂದ ಮತ್ತು ಶಿವಾರಾಧನೆ ಮುಖ್ಯ. ಉಪಸ್ಥಾನ ದೇವತೆಯಾದ ಗಣಪತಿಯೂ ಬಹಳ ಪ್ರಭಾವಿತವಾಗಿರುವ ಸಂಗತಿ ಎಲ್ಲರಿಗೂ ತಿಳಿದುದಾಗಿದೆ. ಇಲ್ಲಿ ಸ್ಕಂದಾರಾಧನೆಯೇ ಪ್ರಾಮುಖ್ಯ. ಹೀಗಾಗಿ ಅನಂತೇಶ್ವರನನ್ನು ಅನಂತಪದ್ಮನಾಭನನ್ನಾಗಿ ನಾಮಕರಣ ಮಾಡುವುದು ಸಮಂಜಸವಾಗದು.

ಒಂದು ಶಿಲಾಶಾಸನವೂ ಈ ರೀತಿಯ ನಿರ್ಧಾರವನ್ನು ಪುಷ್ಟೀಕರಿಸುತ್ತದೆ. ಕ್ರಿ.ಶ. 1614ರ ಶ್ರೀ ಕೃಷ್ಣ ಮಠದಲ್ಲಿ ದೊರಕಿದ ಈ ಶಾಸನವು ಶ್ರೀ ಮದ್ವೇದ ವೇದ ಶ್ರೀಪಾದಂಗಳ ಪೂಜಾ ಪರ್ಯಾಯ ಕಾಲದಲ್ಲಿ ಉಡುಪಿನ ಶ್ರೀ ಕೃಷ್ಣ ದೇವರಿಗೆ ವಿಜಯನಗರದ ಸಾಮ್ರಾಟನಾದ ವೆಂಕಟಪತಿ ಆಜ್ಞಾನುಸಾರವಾಗಿ ಬಾರಕೂರಿನ ರಾಜ್ಯಪಾಲರಾದ ರಾಮಕೃಷ್ಣ ಒಡೆಯರು ನಾಲ್ವತ್ತ ನಾಡೊಳಗಣ ಹೂವಿನ ಕೆರೆಗ್ರಾಮವನ್ನು ಮುರುಗೇಶ್ವರನ ಸನ್ನಿಧಿಯಲ್ಲಿ ಧಾರೆಯೆರೆದ ವಿಷಯ ತಿಳಿಸುತ್ತದೆ. ಮುರುಗೇಶ್ವರನೆಂದರೆ ಅನಂತೇಶ್ವರ. ಮುರುಗನೆಂದರೆ ಸ್ಕಂದ. ಅಂತೆಯೇ ಅನಂತನೆಂದರೆ ಸ್ಕಂದ. ಹದಿನೇಳನೇ ಶತಮಾನದ ಆದಿ

(ಇಪ್ಪತ್ತನೇ ಪುಟ ನೋಡಿರಿ)

Estd : 1965 Phone : 172

SREE MAHADEV COMMERCIAL CHIT-FUND COMPANY (P) LTD.,

GUTHALU COLONY,
MANDYA (Mysore State)

(Regd. No. 1566)

ಸ್ಥಾಪನೆ : 1965 ರಿ.ನಂ. 1566

ಶ್ರೀ ಮಹದೇವ್ ಕಮರ್ಷಿಯಲ್ ಚಿಟ್-ಫಂಡ್ ಕಂಪೆನಿ (ಪ್ರೈ) ಲಿ.,

ಗುತ್ತಲು ಕಾಲೋನಿ, ಮಂಡ್ಯ.

(ಫೋನ್ ನಂ. 172)

ನಮ್ಮಲ್ಲಿ ದಿನ ಚೀಟಿಗಳು ಮತ್ತು ತಿಂಗಳ ಚೀಟಿಗಳು ನಡೆಯುತ್ತವೆ. ಅಲ್ಲದೆ ಹೆಚ್ಚಿನ ಲಾಭವೂ ಸಿಗುತ್ತೆ. ನಾವು ಬಡ್ಡಿ ಚೀಟಿಯನ್ನೂ ಸಹ ಹರಾಜು ಮಾಡುತ್ತೇವೆ.

ಪ್ರಾಮಾಣಿಕ ವ್ಯವಹಾರ! ಆಕರ್ಷಕ ಡಿವಿಡೆಂಡ್ !!

ಹೆಚ್ಚಿನ ವಿವರಗಳಿಗೆ—

ಕಂಪೆನಿಯ ಆಫೀಸಿಗೆ ಖುದ್ದು ಯಾ ಫೋನ್ ಮೂಲ್ಕ ವಿಚಾರಿಸಬೇಕಾಗಿ ವಿನಂತಿ.

BRANCH OFFICE—
JAIN STREET, MANDYA.

ಬಿ. ದೇವಯ್ಯ,
ಮ್ಯಾನೇಜಿಂಗ್ ಡೈರೆಕ್ಟರ್.

ಅಸುಖವೇ! ಬಾ ಬಳಿಗೆ

[ಕಯ್ಯಾರ ಕಿಞ್ಞಣ್ಣ ರೈ, ಎಂ.ಎ.]

ಮಲೆಯಾಳ ಭಾಷೆಯ ಮಹಾಕವಿಯೆನಿಸಿದ ಕುಮಾರನ್ ಆಶಾನ್ ಸೀತಾ ಎಂಬೊಂದು ಖಂಡಕಾವ್ಯವನ್ನು ರಚಿಸಿರುವನು. ಅದರ ಪ್ರಾರಂಭದ ಪದ್ಯಭಾಗದ ಭಾಷಾಂತರವಿದು. ವಾಲ್ಮೀಕಿ ಮುನಿಯೊಡನೆ ಲವಕುಶರು ರಾಮಾಯಣವನ್ನು ಹಾಡಿ ಹೇಳಲು ಅಯೋಧ್ಯೆಗೆ ಹೋಗಿದ್ದರು; ಏಕಾಂಗಿಯಾಗಿದ್ದ ಸೀತೆ ಆಶ್ರಮದ ಬಳಿಯ ಒಂದು ವನದಲ್ಲಿ ಮರದ ಬುಡದಲ್ಲಿ ಕುಳಿತು ಇಂತು ಚಿಂತಿಸುತ್ತಾಳೆ:

೧

ಮುನಿವರ್ಯನೊಡನೆ ಮಕ್ಕಳಯೋಧ್ಯೆಗೈದಿರಲು
ಒಂದು ಸಂಜೆಯ ವೇಳೆವೊಬ್ಬಳಾಗಿ,
ಅತಿ ಚಿಂತೆ ವಹಿಸುತ್ತೆ ಸೀತೆ ತಾ ಕುಳಿತಿಹಳು
ಪರ್ಣಶಾಲೆಯ ಬಳಿಯ ಬನಕೆ ಪೋಗಿ

೨

ಮೇಗೆ ಹಬ್ಬಿರುವ ಬಾಗೆಯ ಮರದ ಗೆಲ್ಲುಗಳೆ
ಆ ಸತಿಗೆ ಚೆಲುವ ಚಪ್ಪರವೆನಿಸಿತು;
ನೆಲದಿ ಹರಡಿರುವ ಹಚ್ಚನೆ ಹಸಿರು ಹುಲ್ಲುಗಳೆ
ಶೋಭಿಸುವ ರೇಶ್ಮೆ ಹಾಸುಗೆಯೊಯಿತು.

೩

ರವಿಯು ಮರೆಯಾಗಿ ಹೋದುದು ಮತ್ತೆ ಬುವಿಯೆಲ್ಲ
ಬೆಳುದಿಂಗಳಿಂ ತುಂಬಿ ತುಳುಕಿರುವುದು;
ಅವನೀಶ್ವರಿಗೆ ಯಿವುಗಳೆಲ್ಲಗೋಚರವಿಲ್ಲ
ಅಲ್ಲಿಯೊರ್ವಳೆ ತಾನು ಕುಳಿತಿರುವುದು.

೪

ಕುವಲಯದಿ ಕೊಳದಲ್ಲಿ ಪುಲಕವನು ನಿರ್ಮಿಸುತ
ಬೀಸಿ ಬಹ ತಮಸಾನದಿಯಗಾಳಿಗೆ—
ಅಲುಗುತಿಹ ವನರಾಜಿ ಬೆಳ್ಳಿಯಿಂ ರಚಿಸಿದೋಲ್
ಕಾಣಬಂದಿತು ಚಂದ್ರಿಕೆಯ ಬೆಳಕಿಗೆ

೫

ಕಾಡುಮಲ್ಲಿಗೆಯ ಗಿಡದಿಂದ ಬೀಸುವ ವಾಯು–
ಗತಿಗೆ ಹಾರುತ ಬರುವ ಹೂಗಳಂತೆ,
ಘನವೇಣಿ ತನ್ನಸಿರಿ ಮುಡಿಯ ಕರಿ ಕೂದಲಲಿ
ಮಿಂಚು ಹುಳಗಳ ಸಾಲು ಹೊತ್ತಳಂತೆ!

೬

ಚೆಲ್ಲುವ ಚೆಲ್ಲುತಲಿರುವ ಸತಿಯ ಕುಂತಳರಾಜಿ
ಪರಿಶೋಭೆಯನ್ನಂದು ಪಡೆದು ಮಿನುಗೆ,
ತರುವಾಟಿಯೆಡೆಯಿಂದ ತೋರಿ ಬಹ ನಕ್ಷತ್ರ—
ಸಘದ ಭಾಗದ ತೆರದಿ ರಾತ್ರಿಯಾಗೆ.

೭

ಒಡಲನ್ನು ಮುಚ್ಚಿಕೊಂಡಿತ್ತು, ದೇವಿಯ ಚೆಲುವಿ—
ನುಡುಗೆಯೆನ್ನುವ ತಳಿರು-ಚಂದದಿಂದ;
ಕೊಂಬೆ ಕೈಗಳನು ಸುಂದರಿ ತನ್ನ ತೊಡೆಮೇಗೆ
ಇಂಬಿನಿಂದಿರಿಸಿರ್ದಳೊಪ್ಪದಿಂದ.

೮

ಆವ ನೋಟವನು ನೋಡದೆ, ಚಲಿಸದೆಯು ಮತ್ತೆ
ತುಸು ತೆರೆದವಳ ಕಣ್ಗಳೆಸೆದಿರ್ದುವು;
ದೊರಗು ದೊರಗಾದ ಮುಂಗುರುಳ ಪಂಕ್ತಿಗೆ ಗಾಳಿ
ತಿಕ್ಕಿ ತೀಡಿದರಲುಗದೆಯೆ ನಿಂದುವು

೯

ಅಲಸಾಂಗಿ ಕುಳಿತುಕೊಂಡಳು ನಿಮಿರಿ ಮೆಯ್ಯನ್ನು
ಇನಿತಲುಗಿಸದೆ, ನೀಳ್ದ ದೇಹವಿರಲು;
ಸುಲಭದಿಂ ಯೆಡೆಯೆಡೆಗೆ ಶ್ವಾಸವಿಟ್ಟಳು–ಆಹ!
ತೆಂಗಾಳಿ ಕ್ರಮ ಮೀರಿ ಬೀಸಿತೆನಲು.

೧೦

ನೆಲೆಯರಿಯದಿಹ ಚಿಂತೆ ಕಡಲ ತೆರೆಯಂತೆ, ಹಲ–
ಭಾವಗಳುಯೆದೆಯ ಕಲ್ಲೋಲಿಸುದುವು;
ನುಣ್ಣನೆಯ ನಿರ್ಮಲದ ದೇವಿಯ ಕಪೋಲದಲಿ
ಮೆಲ್ಲನೆಯ ನೆರಳನ್ನು ನಿಲ್ಲಿಸಿದುವು.

೧೧

ಮನದ ಹಿರಿದಾದ ಪುಮ್ಮಳವ ಮರೆಮಾಚಿಸಲು
ದಾರಿ ತೋರದೆಯಿರಲು ಮಾ ತಪಸ್ವಿನಿಯು,
ತನ್ನೊಳೇ ತಾನಿಂತು ಪೊಂದೊಂದೆ ನುಡಿಯುವಳು;
ಚಿಂತೆ ಭಾಷೆಯನಾಂತು ದೇವಿ ದುಃಖಿನಿಯು.

೧೨

ಜಗದೊಳಾವುದಕುಸ್ಥಿರತೆಯು ಸಲ್ಲದೆಂದಿಂಗು
ಬಂದ ದೆಸೆ ಬಂದಂತೆ ಮರಳಿ ಪೋಗುವುದು;
ತವಕ ಪಡುತಿಹನಲ್ತೆ! ಮಾನವನದಿಂದಿಂಗು
ಅರಿಯದೆಯೆ ಲೋಕದ ರಹಸ್ಯ ಸಾಗುವುದು.

೧೩

ತಿರಿತಿರಿಯುತಿಹ ಪಾದರಸದ ಬಿಂದುವಿನಂತೆ,
ಉರಿವುರಿದು ಹೊದಳುತಿಹ ನೆಲ್ಮಣಿಯ ತೆರದೆ;
ಅಸ್ಥಿರಂ ಮನವಿಂತು ಗುರುವಾಗಿ ಲಘುವಾಗಿ
ಆರ್ತಿಯಿಂ ಚಲಿಸುವುದು ನಿಂತಲ್ಲಿ ನಿಲದೆ.

೧೪

ಭುವನಕ್ಕೆ ಮೋಡಿ ಮೆರುಗನ್ನಿತ್ತು ಮರೆಯಾದ
ಸೊಗದ ದಿನಗಳನೆಲ್ಲ ನೆನೆವೆ ನಾನು,
ದುರ್ವಿಧಿಯ ವಂಚನೆಯ ಮುಖದ ಹಾಸಗಳಂತೆ
ಮಾಯವಾದವುಗಳನು ಮರೆಯದಿಹೆನು.

೧೫

ಬೇಗೆಯಿಂ ಬಳಲಿ ಬೆಂಡಾದ ಬೇಸಗೆ ಹೋಗೆ
ಪ್ರತಿವರ್ಷವೂ ವರ್ಷ ನೆಲವ ತಣಿಸುವುದು;
ಮಾಗಿಯಲಿ ಮರದ ಯೆಲೆಯೆಲ್ಲ ಪುದುರಿದ ಹಾಗೆ
ತಳಿರೆದ್ದು ಹೂ ಬಿಡುತ ಮಧುವು ಕುಣಿಸುವುದು

೧೬

ಅಳಲು ಮೃಗಕೀಟಾದಿ ಜಂತುಗಳಿಗತ್ಯಧಿಕ
ಬಾಧಿಸಿದರೂ ಬೇಗ ತೊಲಗಿ ಹೋಗುವುದು;
ಮಾನಧನನಾದ ಮಾನವನ ಜೀವನ ದುಃಖ–
ಭಾರವೆಂದೆಂದಿಗೂ ಯಿಳಿಯದಿಹುದು.

೧೭

ಹುಳುವಿನಂತೆನ್ನ ಯೆಡತೋಳೇಗಳೂ ಬರಿದೆ
ಚಲಿಸುತಿದೆಯಲ! ಬರುವ ಭಾಗ್ಯವೇನು?
ನೆಳಲ ಹಿಂಬಾಲಿಸುವ ಮಗುವಿನಂ ತಾಂ ಮುಂದೆ
ಸುಖಭೋಗವಂ ಬಯಸುತಲೆಯೆನಿನ್ನು.

೧೮

ಮುನಿರಚಿತಮಾದೀ ಮನೋಜ್ಞ ಕಾವ್ಯವ ಕೇಳಿ
ಅನುತಾಪ ಪಡುವನ್ಕೆ ಮನುವಂಶ ಕೇತು;
ತನಯರಿವರಾರೆಂದು ತಿಳಿಯದಿರದಾ ವೇಳೆ
ಇನಿಯ ನೀನೆನಹೆನಗೆ ದುಃಖಸೇತು.

೧೯

ತೊಗಲದಿದ್ದರುಯೆನ್ನ ಬಗೆಯೊಳಗೆ ಪ್ರಿಯರಾಗ–
ಜನಿತಪ್ರಿಯ ಭಾವಗಳು ಸ್ವಯಮಾಗಿಯೆ;

ಕವಿ

ಶ್ರವಣದಲಿ ಮಾರ್ದನಿಯ ತೆರ ಕೇಳುತಿಹ ರಾಗ
ಮುಂತೆ ಚಿಂತನೆಯಲ್ಲಿ ನಿಲದಾಗಿಯೆ.

೨೦

ಕ್ಷಣಮಾತ್ರದೊಂದು ವಿರಹವು ಬಂದು ಹೋದರೂ
ವ್ರಣದಂತೆ ಹೃದಯವನು ನೋಯಿಸಿದರು,
ಪ್ರಣಯವೋ ತಲೆಯನೆತ್ತದೆ ಸುಪ್ತವಾಗಿಹುದು
ಅಣಲಿ ಹಾವಿನ ತೆರದಿ ನಿದ್ರಿಸುವುದು.

೨೧

ಸ್ವಯಮಿಂದ್ರಿಯಂಗಳಿಗೆ ಮೋದ ಹೇತುಗಳಾದ
ಕೆಲಭಾವಗಳು ತಾವೆ ತೊಲಗಿ ಹೋಗಿರಲು;
ಪಾರಿವಾಳಗಳು ಹೊರಟಿರುವ ಗೂಡಿನ ತೆರದಿ
ಮಮಮಾನಸಂ ಶೋಚನೀಯವೆಲ್ಲು!

೨೨

ಉದಯಾಸ್ತಮಾನಗಳ ಪರಿಮೆಯಿಲ್ಲದೆ ಯೆನ್ನ
ಹೃದಯದಾಕಾಶದಲಿ ನಿತ್ಯ ಬೆಳಗಿ,
ಹೊಳೆಯುತ್ತಿದ್ದಾ ಧವಳ ಚಂದ್ರಮಂ ತಾನೀಗ
ನೆನಹು ಕನ್ನಡಿಯೊಳೇಯಿರ್ಪನಡಗಿ!

೨೩

ಪಳಗಿದುವು ವ್ರತ ಚರ್ಯೆಗಳುಯೆನಗೆ, ಶಾಂತಳಿಹೆ
ಆತ್ಮವಿದ್ಯಾಬಲದಿ ಕಾಲವಂ ಕಳೆವೆ;
ಅಳಲು ನೀಗಿತು-ವಿವೇಕದ ಶಕ್ತಿಯಿಂದಾಗಿ
ಅವಮಾನ ಶಲ್ಯ ಮಾತ್ರದೆ ನೋಯುವೆ.

೨೪

ತಾನಂದು ಪೊಡಲ ಬಿಡದೆಯೆ ಮರುಕವಂತೋರ್ದು
ಗರ್ಭ ಭಾರವನು ಧರಿಸಿದ್ದೆನೆಂದೆ,
ಪ್ರಿಯವಾದ ಬಾಲಲೀಲೆಗಳಿಂದ ಸುತರಿಂದು
ಸೊಗವುಣಿಸುತಿಹರೆನಗೆ ಫಲವ ಪಡೆದೆ!

೨೫

ಎದೆಯ ಕತ್ತಲೆಯನ್ನು ತೊಳಗಿಸುತ್ತಿಹರವರು
ಒಳಗೆ ಬೆಳಗಿಪ ಮುಗುಳುನಗೆಯ ಬೀರಿ;
ಮಾನವನ ಜೀವಿತದ ನೋವಿಂಗೆ ಸಂತಾನ–
ಸುಖವೆ ಮದ್ದಾಗಿಹುದು ತಂಪುತೋರಿ!

೨೬

ಕಾರಿರುಳಿನಲ್ಲಿಯೂ ತಾರೆಗಳು ಮಿನುಗುತಿವೆ
ಕಡಲಿನೆಡೆಯಲ್ಲಿಯೂ ದ್ವೀಪವಿಹುದು;
ಬಂದೊದಗಿದಾಪತ್ತಿನೊಳು ಕಷ್ಟವಂ ಕಳೆಯೆ
ಒಂದು ಕಾರಣ ನಮಗೆ ಪೊದಗಬಹುದು.

(ಹತ್ತೊಂಭತ್ತನೇ ಪುಟ ನೋಡಿರಿ)

ಹೊಸಕೆರೆ ಚಿದಂಬರಯ್ಯನವರ
450 ಪುಟಗಳ
ಗೀತೆಯ ಕೈಗನ್ನಡಿ
ಭಗವದ್ಗೀತೆಯ
ಸಮೂಲ ಕನ್ನಡ ಭಾಷಾಂತರ
ಪಾಕೆಟ್ ಎಡಿಶನ್!
ಬೆಲೆ: ರೂ. 1–50
ಪುಸ್ತಕ ವ್ಯಾಪಾರಿಗಳಲ್ಲೆಲ್ಲಾ ಸಿಗುತ್ತದೆ.

ತುಳು ನೆಲ, ಕನ್ನಡಕ್ಕೆ ಕೊಟ್ಟ ಕಾಣಿಕೆ

ಶ್ರೀ ಬಡೆಕ್ಕಿಲ ವೆಂಕಟರಮಣ ಭಟ್ಟರು

ರತ್ನಾಕರವರ್ಣಿ, ಮುದ್ದಣರಂತಹ ವಿಶ್ವಮಾನ್ಯ ಕವಿಸಾಮ್ರಾಟರ ಸಾಲಿನಲ್ಲಿ ನಿಲ್ಲುವ ವರ್ತಮಾನ ಕಾಲೀನ ಕವಿ ಶ್ರೀ ಬಡೆಕ್ಕಿಲ ವೆಂಕಟರಮಣ ಭಟ್ಟರು, ೮೫ ವರ್ಷದ ಈ ಕಾವ್ಯಋಷಿಯನ್ನು ನಾವೆಂತು ನೋಡುತಿದ್ದೇವೆ? ಅವರ ಬಗ್ಗೆ ಎಷ್ಟು ಜನರಿಗೆ ಗೊತ್ತಿದೆ?

ಲೇಖಕರು:
ಶ್ರೀ ದೇವಕಿನಂದನ, ಭದ್ರಾವತಿ.

ತನ್ನ ಕರ್ತವ್ಯವನು ತಿಳಿಯದೆ-
ಖಿನ್ನನಾದರ್ಜುನಗೆ ಕೃಪೆಯಿಂ-
ಸನ್ನಗಾರಿ ವರೂಥನುಸಿರಿದ ಕರ್ಮ
ಯೋಗವನು||
ಕನ್ನಡದಿ ಕನ್ನಡಿಸಬೇಕೆಂ-
ಬೆನ್ನ ಮನದೆಣಿಕೆಯನು ಸಕಲಾ-
ಪನ್ನಿವಾರಣ, ವಾರಣಾನನ ಬೆನಕ
ಕೆಯೊಳಿಸು||

ಇದು ಗತಕಾಲದ ಕವಿಗಳ ಕೃತಿಯಿಂದ ಆಯ್ದ ಪದ್ಯವಲ್ಲ. ಇದನ್ನು ಹಳೆಯ ಪರಂಪರೆಯಲ್ಲಿ ಬೆಳೆದು ಬಂದ ಈ ಶತಮಾನದ ಕವಿಗಳಲ್ಲೊಬ್ಬರಾದ ಶ್ರೀಬಡೆಕ್ಕಿಲ ವೆಂಕಟರಮಣ ಭಟ್ಟರ 'ಗೀತಾಸಾರ' ಎನ್ನುವ ಷಟ್ಪದೀ ಕಾವ್ಯದಿಂದ ಆಯ್ದುದು. ಇದು ಅವರ ಕವಿತಾ ಸಾಮರ್ಥ್ಯಕ್ಕೆ ಸಾಕ್ಷಿಯಾಗಿನಿಲ್ಲುವ ಕೃತಿ.ಗೀತೆಯ ಹದಿನೆಂಟು ಅಧ್ಯಾಯಗಳನ್ನು, ಹದಿನೆಂಟು ಸಂಧಿಗಳಾಗಿ ವಿಂಗಡಿಸಿ-ಅದರ ಮೂಲಾರ್ಥಕ್ಕೆ ಎಲ್ಲಿಯೂ ಭಂಗಬಾರದಂತೆ ಜಾಗ್ರತೆ ವಹಿಸಿ-ಸೊಗಸಾದ ತಿಳಿಗನ್ನಡದಲ್ಲಿ ಇಂದಿಗೆ ಕಾಲು ಶತಮಾನದ ಕೆಳಗೆ ಅವರದನ್ನು ಬರೆದು ಪ್ರಕಟಿಸಿದರು. ಭಾಷಾಂತರವಾದರೂ ಯೋಗ್ಯತೆಯಲ್ಲಿ ಇತರ ಷಟ್ಪದೀ ಕಾವ್ಯಗಳಿಗೆ ಕಡಿಮೆಯದಲ್ಲ. ಈ ಕಾವ್ಯ, ಅವರ ಸಂಗ್ರಹ ಶಕ್ತಿ, ಅಪಾರ ಶಬ್ದ ಸಂಪತ್ತು ಲಕ್ಷಣ ಗ್ರಂಥಗಳ ಕುರಿತು ಅವರು ಮೈಗೂಡಿಸಿಕೊಂಡ ವಿದ್ವತ್ತು ಇವುಗಳಿಗೆ ಕೈದೀವಿಗೆಯಾಗಬಲ್ಲುದು. ಈ ಗ್ರಂಥವನ್ನು ಮದರಾಸು ಸರಕಾರ ಪುರಸ್ಕರಿಸಿ ಗೌರವಿಸಿತು. ಗೀತೆಯ ಕಾವ್ಯರೂಪದ ಅನುವಾದಗಳು ಹಲವಿದೆಯಾದರೂ, ಭಾಷಾಂತರಗಳಲ್ಲೇ ಉತ್ಕೃಷ್ಟವಾದ್ದು "ಗೀತಾಸಾರ." ಅವರ ಈ ಕೃತಿಯನ್ನು ಗದುಗಿನ ಭಾರತದಲ್ಲಿ ಅಳವಡಿಸಿ ಪ್ರಕಟಿಸಿದರೆ ನಾರಣಪ್ಪನೇ ಅದನ್ನು ಬರೆದಿರಬೇಕೆಂದು ಭ್ರಮಿಸುವುದರಲ್ಲಿ ಅನುಮಾನವಿಲ್ಲ.

ಇದೊಂದೇ ಅವರು ರಚಿಸಿದ ಕೃತಿಯಲ್ಲ. ಅವರು ಎರಡು ಯಕ್ಷಗಾನ ಕೃತಿಗಳನ್ನು ರಚಿಸಿದ್ದಾರೆ. ಒಂದು 'ವಾಜಿಗ್ರಹಣ' ಇನ್ನೊಂದು "ಭೀಮವಿಜಯ.' ವಾಜಿಗ್ರಹಣದ ರಚನೆಯಾಗಿ ಇಂದಿಗೆ ಏಳು ದಶಕಗಳೇ ಸಂದುವು- ಅದು ಮಂಗಳೂರಿನ ಪ್ರಪಂಚ ಪ್ರಕಾಶನದ ಮೂಲಕ ಬೆಳಕು ಕಂಡಿದೆ. ಕವಿ ಲಕ್ಷ್ಮೀಶನ ಕಾವ್ಯ ಮೊದಲ ಕೃತಿಗೆ ಆಸರೆಯಾದರೆ, ಭೀಮ ವಿಜಯಕ್ಕೆ ಕವಿ ರನ್ನನ ಸಾಹಸ ಭೀಮ ವಿಜಯ ಆಧಾರ. ಪಂಡಿತ ಮಂಡಲಿ ಯಕ್ಷಗಾನ ಕಾವ್ಯಗಳನ್ನು ಕ್ಷುದ್ರ, ಕಾವ್ಯಗಳೆಂದೇ ಕರೆದುದುಂಟು. ಅವರ ಆಪಾದನೆಗೆ ಈ ಎರಡು ಕೃತಿಗಳು ಅಪವಾದವಾಗಿ ನಿಂತಿವೆ. ಸ್ವತಃ ಸಂಗೀತ ಬಲ್ಲ ಕವಿಗಳು ಅವುಗಳಲ್ಲಿನ ಎಲ್ಲ ಪದ್ಯಗಳಿಗೂ ರಾಗ ಸಂಯೋಜನೆ ಮಾಡಿದ್ದಾರೆ. ಈ ಕೃತಿಗಳ ಅವಲೋಕನದಿಂದ ಅವರ ಕವಿತಾಶಕ್ತಿಯ ಪರಿಚಯದ ಜೊತೆ ಜೊತೆಗೆ ಸಂಗೀತದಲ್ಲಿ ಅವರಿಗಿರುವ ಪರಿಶ್ರಮದ ಪರಿಚಯವೂ ಆಗುತ್ತದೆ. ಅವೆರಡಕ್ಕೂ ಸಾಹಿತ್ಯ ಕ್ಷೇತ್ರದಲ್ಲಿ—ಕ್ಷುದ್ರ ಕಾವ್ಯಗಳಾದರೂ—ವಿರಾಜಮಾನವಾಗುವ ಅರ್ಹತೆಯಿದೆ. ಭೀಮ ವಿಜಯ ಅಚ್ಚಿನ ಮನೆಯಿಂದ ಹೊರಬಂದು ವರ್ಷವಾಯಿತು. ಯಕ್ಷಗಾನ ಕವಿಗಳಲ್ಲಿ ಆಗ, ಪಂಕ್ತಿಗೆ ಸೇರಿದವರು ಇಬ್ಬರು. ಒಂದು ಪಾರ್ತಿಸುಬ್ಬ; ಇನ್ನೊಂದು ನಂದಳಿಕೆಯವರು. ಅವರಿಬ್ಬರನ್ನೂ ಮೀರಿಸುವ ಕಲಾ ಪ್ರತಿಭೆಯನ್ನು ಈ ಎರಡು ಪ್ರಬಂಧಗಳಲ್ಲಿ ಶ್ರೀ ಬಡೆಕ್ಕಿಲದವರು ಮೆರೆಸಿದ್ದಾರೆ. ಇದು ಅವರು ಯಕ್ಷಗಾನ ಕ್ಷೇತ್ರಕ್ಕೆ ಕೊಟ್ಟ ಮೌಲಿಕ ಕೊಡುಗೆಗಳು. ಅವೆರಡರಲ್ಲಿ ಬರುವ ಕಂದ, ವೃತ್ತಗಳು, ಭಾಮಿನಿ, ವಾರ್ಧಿಕ ಷಟ್ಪದಿಗಳು, ಉಪಮೆ, ಉತ್ಪ್ರೇಕ್ಷೆ, ರೂಪಕ, ಅರ್ಥಾಂತರನ್ಯಾಸಾದಿ ಅಲಂಕಾರಗಳು, ಕವಿಗಳ ಸಿದ್ಧಹಸ್ತಕ್ಕೆ ಕನ್ನಡಿ ಹಿಡಿಯುತ್ತವೆ.

ಇಲ್ಲಿಗೇ ಮುಗಿಯಲಿಲ್ಲ ಅವರ ಕಾವ್ಯ ಕೃಷಿ. ಅದರ ಬೆಳಸು ಬಹು ದೊಡ್ಡದು. ನಲುವತ್ತು ವರ್ಷಗಳ ಕೆಳಗೆ ವಾರ್ಧಿಕ ಷಟ್ಪದಿಯಲ್ಲಿ ರಚಿತವಾದ ಅವರ ಇನ್ನೊಂದು ಕೃಷಿ "ಕರ್ಣಾಟಕ ಪರಿಸ್ಥಿತಿ" ಪ್ರಕಟವಾಯಿತು. ಅದರಲ್ಲಿನ ಒಂದೊಂದು ಪದ್ಯವೂ ಲಕ್ಷ್ಮೀಶನನ್ನು ನೆನಪಿಗೆ ತಂದುಕೊಡುತ್ತವೆ. ಅವರ ಅಭಿಪ್ರಾಯಗಳು ಅನ್ಯರಿಗೆ ಮಾನ್ಯವಾಗಬೇಕೆಂಬ ನಿಯಮವಿಲ್ಲವಾದರೂ, ಓದಲೇ ಬಾರದೆಂಬ ಹಟ ಮಾತ್ರ ಸಲ್ಲದು. ಅದರ ಯೋಗ್ಯತೆಯನ್ನು ಎದೆಗಾರಿಕೆ ಇದ್ದವರು ಅಳೆಯಲಿ ಎಂದು ಒಂದನ್ನು ಕೆಳಗೆ ಕೊಟ್ಟಿದ್ದೇನೆ.

ಶ್ರೀ ಮದಚಲಾನಂದ ಬೋಧಪ್ರ
ದಂ, ಸತ್ಯ—
ಭಾಮಾವರಂ, ಗೋಕುಲೋದ್ಧಾರ
ಕಾರ್ಯ ಶ್ರ-
ಮಾ ಮೋದಚಿತ್ತಂ, ಮಹಾರಾಷ್ಟ್ರ, ರಾಷ್ಟ್ರ, ಸಂಭಾವಿತಂ ಲೋಕ
ಮಾನ್ಯಂ||
ಕೋಮಲ ತರಾಂತರಂಗಂ, ರಿಪು
ನೃಪ ಸ್ತೋಮ-
ಭೀಮನಾರ್ಜಿತ ಸತ್ವಗುಣ
ಯುಕ್ತನಾತ್ಮಾಭಿ-
ರಾಮನಪ್ಪಪು ತಿಲಕನಕಳಂಕ
ಚರಿತ ನಮಗೀಗೆ ನಿತ್ಯಾನಂದಮಂ||

ಅವರ ಇನ್ನೊಂದು ಕೃತಿ ಸೂಕ್ತಿವಾದ. ಅದು ಅಚ್ಚಾಗಿ ವರ್ಷ ಹತ್ತಾಯಿತು. ಕಾಂಬೋಧಿ ರಾಗ, ಝಂಪೆ ತಾಳದಲ್ಲಿ ಸುಖವಾಗಿ ಹಾಡಲು ಬರುವ ಈ ಕಾವ್ಯ ಖಂಡದಲ್ಲಿ ಅವರು ಆಧುನಿಕ ವಿದ್ಯಮಾನಗಳ ವಿಡಂಬನೆ ನಡೆಸಿದ್ದಾರೆ—ಗುಣದಲ್ಲಿ, ಲಾಲಿತ್ಯದಲ್ಲಿ, ಪದಬಂಧದಲ್ಲಿ ಮಂಕುತಿಮ್ಮನ ಕಗ್ಗಕ್ಕೆ ಹೆಗಲೆಣೆಯಾಗಿ ನಿಲ್ಲುವ ಯೋಗ್ಯತೆ ಈ ಖಂಡ ಕಾವ್ಯಕ್ಕಿದೆ. ಅದರಿಂದ ಎರಡನ್ನು ಆಯ್ದು ಕೆಳಗೆ ಕೊಟ್ಟಿದ್ದೇನೆ—ಕೃತಿಯ ಮಹತ್ವನ್ನು ಗುರುತಿಸಲಿ ಎಂದು.

ಇದ್ದ ಜನರಿಂ ಕಿತ್ತು, ಬುದ್ಧಿಹೀನ
ರಿಗಿತ್ತು!
ಗದ್ದೆ ಹೊಲ ತೋಂಟಾದಿಗಳ
ಮುಳುಗಗೊಟ್ಟು||
ಸುದ್ದಿಯೆತ್ತದೆ ಪಾಳು ಬಿದ್ದೆಡೆಯು
ಬಿಟ್ಟೊಡಿವು|
ವೃದ್ಧಿ ಕಾರ್ಯದೊಳಾವ ಸಿದ್ಧಿ
ಯೆಲೊ ತಮ್ಮ||
ಅತ್ತಣಿಂ ಪಕ್ಷಾಧಿ ನಾಯಕರ
ನಿರ್ಬಂಧ|
ವಿತ್ತಣಿಂದಧಿಕಾರ ಲಾಲನಾ
ಪ್ರೇಮ||
ಹೊತ್ತ ಕೆಲಸವನು ಹೊರಲಾರ
ದಾತನ ಚಿಂತೆ|
ಹೆತ್ತು ಮಲಗಿದ ಸೂಳೆಯಂತೆ
ಲವೊ ತಮ್ಮ||

ಪಟ್ಟಿ ಇಲ್ಲಿಗೆ ಮುಗಿಯಲಿಲ್ಲ. ಅವರ ಇತ್ತೀಚಿನ ಕೃತಿ "ರಾಜ್ಯಭಾರ" ನಮ್ಮ ದೇಶದ ಇಂದಿನ ರಾಜಕೀಯದ ಕಟು ವಿಮರ್ಶೆ ಕಾವ್ಯದ ತಡಿಕೆ. ಅವರ ನಿರೂಪಣೆಗೆ ಅವರು ಬಳಸಿದ ಛಂದಸ್ಸು ಕಂದ. ಕಂದ ಪದ್ಯಗಳ ರಚನೆಯಲ್ಲಿ ಅವರದು ಎತ್ತಿದ ಕೈ. ಇಲ್ಲಿ ಅವರ ಕಾವ್ಯಗಂಗೆ ಅಡೆತಡೆಯಿಲ್ಲದೆ ಹರಿಯುತ್ತಿದೆ. ಅವರ ವಾಜಿಗ್ರಹಣ,

(ಹದಿನೈದನೇ ಪುಟ ನೋಡಿರಿ)

ಸಣ್ಣ ಉಳಿತಾಯದ ಮಹತ್ತರ ಯೋಜನೆ

ಜನಪ್ರಿಯ ಠೇವಣಿ

ಎಲ್ಲಾ ವರ್ಗದವರಿಗೂ ಅತಿ ಸುಲಭ ಹಾಗೂ
ಅನುಕೂಲವಾದ ಯೋಜನೆ

ಇಂದು ಉಳಿಸಿದ ರೂ. 10 ಎರಡು ವರ್ಷಗಳಲ್ಲಿ
ರೂ. 11-20 ಆಗುವುದು. ವರ್ಷಕ್ಕೆ ಶೇಕಡಾ
5¾ ರಂತೆ ಚಕ್ರಬಡ್ಡಿ ದೊರಕುವುದು.

ರೂ. 10, 50, 100 — ಈ ಮೂರು ಶ್ರೇಣಿಗಳಲ್ಲಿ
ಉಳಿಸುವುದಕ್ಕಾಗಿ ಅತಿ ಜನಪ್ರಿಯ ಠೇವಣಿಯನ್ನು
ಕೆನರಾ ಬ್ಯಾಂಕಿನ ಶಾಖೆಯಲ್ಲಿ ಇಂದೇ ಕೊಳ್ಳಿರಿ.

ಕೆನರಾ ಬ್ಯಾಂಕ್

ಪ್ರಧಾನ ಕಛೇರಿ: ಬೆಂಗಳೂರು.

ಭಾರತದಾದ್ಯಂತ 435ಕ್ಕೂ ಹೆಚ್ಚು ಶಾಖೆಗಳಿವೆ.

ದೀಪಾವಳಿಯ ಈ ಶುಭಮುಹೂರ್ತದಿಂದ

ರಾಜಕೀಯ ನರಕಾಸುರರ ದಮನವಾಗಲಿ!

ದೇಶ ಸ್ವಾತಂತ್ರ್ಯದ ಈ ಇಪ್ಪತ್ತು ಮೂರು ವರ್ಷಗಳಲ್ಲಿ ರಾಜಕೀಯ ನರಕಾಸುರರ ಪ್ರಜಾಪೀಡನೆ ಗೌರೀಶಂಕರಕ್ಕೇರಿದೆ. ಇವರನ್ನು ದಮನಿಸಲು ಜನರೂಪೀ ಕೃಷ್ಣ ಚಕ್ರಪಾಣಿಯಾಗಿ ಎದ್ದು ನಿಲ್ಲಬೇಕು.

ಲೇಖಕರು
ಶ್ರೀ ಕೆ. ಜಿ. ಹೆಗಡೆ

ಈ ಲೇಖನ ಬರೆಯುತ್ತಿದ್ದಂತೆ ದೇಶದೆಲ್ಲೆಲ್ಲ ಅಂಧಕಾರ ಕವಿದಂತೆ ಭಾಸವಾಗುತ್ತದೆ. ನಿರಾಶೆ ಮನಸ್ಸಿನಲ್ಲಿ ಮೂಡಿ ಬಂದಿದೆ. ಚಿಂತನ ಮಂಥನಗಳೆಲ್ಲ ವಿವೇಚನೆಯನ್ನೇ ಕೆಡಿಸುತ್ತದೆ. ನಿಶ್ಚಿಂತನಾಗಬಯಸಿದರೆ ವೈ ಕ್ಯೆ ಮನ ಬೇಗುದಿಗೊಳ್ಳುತ್ತದೆ. ಸಂದಿಗ್ಧ ಪರಿಸ್ಥಿತಿ ವಸ್ತು–ವಿಚಾರಗಳನ್ನು ವಿಶ್ಲೇಸಿದಾಗ ನಮ್ಮ ರಾಜ್ಯಕೀಯ ಮುಂದಾಳುಗಳು ನಮ್ಮ ದೇಶಕ್ಕೆ ಅಥವಾ ಜನರಿಗೆ ಸದ್ಯ ಮಾಡಿದ ಹಾನಿಯಷ್ಟು ಹಿಂದೆ ಯಾರೂ ಮಾಡಿಲ್ಲ; ಮುಂದೆಂದೂ ಮಾಡಲಿಕ್ಕಿಲ್ಲ ಎಂಬೊಂದು ಸತ್ಯ ಸಂಗತಿ ಸ್ಪಷ್ಟವಾಗಿ ತೋರುತ್ತದೆ. ಇಂತಹ ವಿದ್ರಾವಕ ಪರಿಸ್ಥಿತಿಯಲ್ಲಿ "ಅಯ್ಯೋ ದೇವರೇ, ನಮಗಿನ್ನು ಬೇರೆ ದಾರಿಯೇ ಇಲ್ಲವೇ?" ಎಂದು ಕಣ್ಣೀರುಮಿಡಿದು ಮರುಗಬೇಕಾಗುತ್ತದೆ.

ಮಾನವನಿಂದಾಗದ ಮಹಾಕಾರ್ಯ ಮಹಾದೇವನಿಗೆ ಮಾತ್ರ ಸಾಧ್ಯ. ನಮ್ಮ ಇತಿ, ಮಿತಿಗಳಿಗೆ ನಿಲುಕದ ವಿಷಯ ವಿಚಾರಗಳನ್ನು ದೇವರೇ ಸಮಯ ಬಂದಾಗ ಒದವಿಸಿ ಕೊಡುತ್ತಾನೆ. ಪ್ರಕೃತಿ ಎಂದೂ ಸೋಲುವದೆಂದಿಲ್ಲ. ನಮ್ಮ ಜೀವನಪಥದಲ್ಲಿ, ದೇಶದಲ್ಲಿ ಈಗ ಸಂಧ್ಯಾಕಾಲ ಅಥವಾ ರಾತ್ರೆ ಆಗಿದೆಯೆಂದು ಬಗೆದಲ್ಲಿ ನಾಳೆ ಖಂಡಿತವಾಗಿಯೂ ಬೆಳಗಾದೀತು. ನವಯುಗದ ಉದಯವಾದೀತು. ನವೀನ ಬಾಳಿನ ನಾಂದಿಯಾದೀತು. ನಮ್ಮ ರಾಜಕೀಯ ಧುರೀಣರ, ಮಂತ್ರಿ ಮಾಗಧರ ಪಕ್ಷ ಪಂಗಡಗಳ, ಜನ ಶಾಸಕ ಮತ್ತು ಶೋಷಕ ನೇತಾರರಿಂದ ನೆಮ್ಮದಿ ಸಿಕ್ಕೀತು. ಅವರ ಸ್ವಾರ್ಥ ಸಂಚಯಗಳಿಂದ, ಮೋಸ ವಂಚನೆಗಳಿಂದ, ಸುಳ್ಳು–ಸೋಗುಗಳಿಂದ ಬಿಡುಗಡೆಯಾದೀತು. ಇದೆಲ್ಲ ಆಗಬೇಕಾದರೆ ನಮ್ಮ ರಾಜಕೀಯ ಜನ ಜೀವನದಲ್ಲಿ ಸ್ವೇಚ್ಛೆಯಿಂದ, ಸ್ವಾರ್ಥದಿಂದ, ನಿರಂಕುಶ ಪ್ರಭುತ್ವದಿಂದ, ದಾನವ ರೀತಿಯಿಂದ ವರ್ತಿಸುವ ನರಕಾಸುರರ ದಮನವಾಗಬೇಕು. ಇನ್ನೊಂದೇ ಆಶಾಕಿರಣ.

ಹಿಂದೊಮ್ಮೆ ಈ ಪವಿತ್ರ ದೇಶದಲ್ಲಿ ರಾಮರಾಜ್ಯವಿತ್ತು. ರಾಮರಾಜ್ಯದಲ್ಲಿ ಬೀದಿ ನಾಯಿಗೂ ಸಮ್ಮತವಾದ ನ್ಯಾಯ ದೊರಕಿದ ಸಂಗತಿ ಜಗಜ್ಜನಿತವಾಗಿದೆ. ಸ್ವಾತಂತ್ರ್ಯ ಪೂರ್ವ ಸ್ವರಾಜ್ಯಕ್ಕಾಗಿ ಹೋರಾಡಿದ ರಾಷ್ಟ್ರಪಿತ ಬಾಪೂಜಿಯವರ ಕನಸೂ ರಾಮರಾಜ್ಯದ ಪುನರ್ನಿರ್ಮಾಣವಾಗಬೇಕೆಂದಿತ್ತು. ಸ್ವಾತಂತ್ರ್ಯ ದಕ್ಕಿದ ಬಳಿಕ ಎಲ್ಲರೂ ರಾಮರಾಜ್ಯದ ತಳಹದಿ ಅಥವಾ ಚೌಕಟ್ಟಿನಲ್ಲಿ ರಾಜ್ಯಾಡಳಿತ ನಡೆಯಬೇಕೆಂದು ಪಣತೊಟ್ಟರು; ಆಸೆಯಿಟ್ಟಿದ್ದರು! ಆ ಪಥದಲ್ಲಿ ಹೆಜ್ಜೆ ಇಟ್ಟರು! ಪರಿಣಾಮ; ರಾಮರಾಜ್ಯದ ಬದಲು ಈಗ ರಾವಣ ರಾಜ್ಯವಾಯಿತು! ಧರ್ಮರಾಜ್ಯದ ಬದಲು ಧರ್ಮಾತೀತ ಅಥವಾ ಅಧರ್ಮಪೂರಕ ರಾಜ ಅಥವಾ ರಾಜಕೀಯವಾಯಿತು. ಗಣರಾಜ್ಯದ ಹೆಸರಿನಲ್ಲಿ ಗೋಮುಖ ವ್ಯಾಘ್ರಗಳು ತಲೆಯೆತ್ತಿ ತಮ್ಮ ಕೈವಾಡವೇ ಭಗವಂತನ ಆಶಯವೆಂದರು. ಕುರಿಗಳ ಮೇಲೆ ತೋಳನ ರಾಜ್ಯವೆಂದ ಬಳಿಕ ಚಾರಿತ್ರಶೀಲ ಬದುಕೇ ಕಲುಷಿತವಾಯಿತು. ನೀರಿದ್ದಲ್ಲಿ ಕೆಸರಿದೆಯೆನ್ನುತ್ತಾರೆ ಹಿರಿಯರು. ಆದರೆ ನಮಗೀಗ ಉಳಿದುದು ಬರೇ ಕೆಸರು ಮಾತ್ರ.

ಪ್ರಜಾಸತ್ತಾತ್ಮಕ ರಾಜ್ಯದಲ್ಲಿ ಪ್ರಜೆಗಳೇ ರಾಜಕೀಯ ಪ್ರಭೃತಿಗಳು. ಜನರಿಗೆ ಬೇಕಾದ ಹಿತಾಹಿತ ಕಾರ್ಯಗಳನ್ನು ಜನರೇ ರೂಪಿಸಿಕೊಳ್ಳಬೇಕು. ಆದರೆ ಸ್ವಾತಂತ್ರ್ಯ ಪಡೆದು ಇಪ್ಪತ್ತೈದು ವರ್ಷಕಾಲದ ವರೆಗೂ ಮುಕ್ಕಾಲು ಪಾಲು ಜನ ನಿರಕ್ಷರ ಕುಕ್ಷಿಗಳಾದ ಈ ದುರ್ದೈವೀ ದೇಶದಲ್ಲಿ ಎಂತಹ ರಾಜಕೀಯ ಚಿಂತನವಾದೀತು! ಆಳಿದೂರಿಗೆ ಉಳಿದವನೇ ಗೌಡ ಎಂಬಂತೆ ಎಲ್ಲರೂ ಜನ ಸೇವಕರಾದರು–ಧುರೀಣರಾದರು. ಸೇವೆ ಬಯಸುವವರಿಗಿಂತಲೂ ಹೆಚ್ಚು ಮಂದಿ ಸೇವೆ ಮಾಡಲು ಮುಂದಾದ ಬೆಕ್ಕು ಸನ್ಯಾಸಿಗಳ ತಂಡ, ಪಂಗಡ, ಪಕ್ಷ ಮತ್ತು ಕಾರ್ಯ ಸ್ಥಾನವೇ ಹೆಚ್ಚಾಯಿತು. ಇಂತಹ ಜನರಿಂದ ಯಾವ ಕಾರ್ಯ ಕಲಾಪ ನಡೆದೀತು! ಏನು ದೊಡ್ಡ ಕಲ್ಯಾಣವಾದೀತು?

ಹೆಸರಿಗೇನೂ ಸಂವಿಧಾನ ಅಥವಾ ರಾಜಘಟನೆಯಿದೆ. ಇದು ಆದರ್ಶ ಪೂರ್ಣವೆಂದು ಜಗತ್ತಿನಲ್ಲೇ ಹೆಸರು ವಾಸಿಯಾಗಿದೆ! ಸರ್ವರಿಗೂ ಸಮಾನಾಧಿಕಾರ, ಹಕ್ಕು ಬಾಧ್ಯತೆಗಳು, ವಾಕ್ ಸ್ವಾತಂತ್ರ್ಯ ಸವಲತ್ತುಗಳು—ಎಲ್ಲಾ ಕಾಗದದ ಹೋಳಿಗೆ!

ಬೀದಿಯ ನಾಯಿ ಕಛಡಾಡಬ್ಬಿಯಿಂದ ಉಚ್ಛಿಷ್ಟ ತಿನ್ನುವಾಗ ಬಡ ಮಕ್ಕಳು ಮತ್ತು ಮನುಷ್ಯರೂ ತಿಂಡಿ ಕೊಂಪೆಯನ್ನು ಹೆಕ್ಕಿ ತಿನ್ನುವಂತಾಗಿದೆ. ಇದು ವರೆಗೆ ಈ ಹಕ್ಕು ಬರೇ ನಾಯಿಗೆ ಮಾತ್ರವಿತ್ತು. ಈಗ ನಮ್ಮ ಸಂವಿಧಾನ ಈ ಕೊಂಪೆಯಿಂದ ಎಲ್ಲರೂ "ಕೊಳಚು ಕೊಂಪೆಯ ಅನ್ನವನ್ನು ತಿನ್ನುವ ಅಧಿಕಾರವನ್ನು ಕೊಟ್ಟಿರುತ್ತದೆ. ಸಂವಿಧಾನ ಸಿಕ್ಕಿದರಾಯಿತೇ! ಜೀವನದಲ್ಲಿ ಸುಖಃ ಚಿಂತನಸ್ವಾವಲಂಬನ ಕ... ಡಿಯೊಳಗಿನ ಗಂಟಾಗಿಯೇ ಉಳಿದಿ... ನಮ್ಮ ರಾಜ್ಯ ಘಟನೆಯ ಉದಾತ್ತ ಧ್ಯೇಯಗಳೇನು. ಅದು ಅಮರ ನೆಹರೂ... ವರ ಆದರ್ಶ ಮತ್ತು ದೂರ ದೃಷ್ಟಿಯನ್ನು ಒಳಗೊಂಡಿತ್ತು. ಈಗ ನೆಹರೂರವ... ಅಂದರೆ ಅವರ ಐತಿಹಾಸಿಕ ಜನ ಕಲ್ಯಾಣ ಕ್ರಮ ಧೋರಣೆಗಳನ್ನು ಕಸದ ಬುಟ್ಟಿ... ತೂರಲಾಗಿದೆ. ಇಲ್ಲವೆ ನಮ್ಮ ನವ ಧುರೀಣರು ತೂರುತ್ತ ಬರುತಿದ್ದಾರೆ. ಮಹಾತ್ಮ ಗಾಂಧಿಯವರನ್ನೂ ಮತ್ತು ಗಾಂಧೀವಾದವನ್ನೂ ನಾವು ದಹನಮಾಡಿ ಆಗಿ ಹೋಯಿತು. ಈಗ ಪ್ರತಿಯೊಂದಕ್ಕೂ ವಿದೇಶಿ ನಕ್ಷತ್ರವೇ ಆದರ್ಶ.

ರಚನಾಕಾರರ ಉದಾತ್ತ ಧ್ಯೇಯ, ಉನ್ನತ ಆದರ್ಶ, ನಿಸ್ವಾರ್ಥ ಸೇವೆ, ನೈತಿಕ ನಿಲುವು, ಧಾರ್ಮಿಕ ಮತ್ತು ಸತ್ಯ ಅನುಷ್ಠಾನದ ಅಡಿಗಲ್ಲು. ಇವೆಲ್ಲ ಹಾಸ್ಯಾಸ್ಪದ ವಸ್ತು ಮತ್ತು ವಿಷಯಗಳಾಗಿವೆ. ಶ್ರೇಷ್ಠ ವಿದ್ವಾಂಸರ, ಪಂಡಿತರ, ಮೇಧಾವಿಗಳ, ದೇಶ ರಕ್ಷಕರ, ಜನ ಪ್ರಿಯರ ಪರಿಶ್ರಮವೆಲ್ಲ ವ್ಯರ್ಥವಾಗಿದೆ. ಸಂವಿಧಾನದಲ್ಲಿನ ಶಕ್ತಿ ಯುಕ್ತಿಗಳೆಲ್ಲ ಶಿಥಿಲವಾಗಿವೆ. ಪ್ರಜೆಗಳಿಂದ—ಪ್ರಜೆಗಳಿಗಾಗಿ ಲೋಕರಾಜ್ಯವೆನ್ನಿ, ರಾಮರಾಜ್ಯವೆನ್ನಿ ಜನ ಕಲ್ಯಾಣವೆನ್ನಿ–ಎಲ್ಲರಿಗೂ ಶುಭವಾಗಲಿ ಸುಖ ಸಮೃದ್ಧಿ ಮತ್ತು ಶಾಂತಿ ನೆಲಸಲಿಯೆಂಬ ಸಹಜ ಕಾಮನೆ ಅದೃಶ್ಯವಾಗಿದೆ

ಸರ್ವರಿಗೂ ಸಾಮಾಜಿಕ ನ್ಯಾಯ ರಾಜಕೀಯ ನ್ಯಾಯ ಸಮಾನಾಧಿಕಾರ, ಸಮಾವಕಾಶ, ವಿಚಾರ ಸ್ವಾತಂತ್ರ್ಯ—ವಾಕ್ ಸ್ವಾತಂತ್ರ್ಯ–ಧರ್ಮ ಸ್ವಾತಂತ್ರ್ಯ ಕೆಲಸ ಅಥವಾ ಉದ್ಯೋಗದ ಹಕ್ಕು–ವಿಚಾರಿಸಿ ಮಯ–ಸಭೆ ಸೇರೋಣ–ಇವೆಲ್ಲ ಅಧಿಕಾರಗಳು ನಿರಂತರ ರೂಪಿಸಿದ್ದರೂ ನಮ್ಮ ರಾಜಕಾರಣಿಗಳು ನಮ್ಮನ್ನು ಯಾವ ದಡಕ್ಕೆ ಮುಟ್ಟಿಸಿದರು!

ನಮ್ಮ ದೇಶಜಗತ್ಪ್ರಖ್ಯಾತವಾಗಿತ್ತು. ಪರದೇಶ ರಾಜ್ಯಾಡಳಿತದಿಂದ ಹಾಳಾಗಿ ಹೋಯಿತು. ಕೆಟ್ಟು ಹೋಯಿತು. ಜಾಗತಿಕ ಶಾಂತಿ ಮಾನವೀಯ ಕಲ್ಯಾಣ–ಸೋದರತೆ ಅಥವಾ ವಿಶ್ವ ಬಂಧುತ್ವ ಇವೆಲ್ಲಕ್ಕೆ ಕಂಕಣಬದ್ಧರಾದವರು ನಾವು, ಎಂದೇ ಉನ್ನತ ಸಂವಿಧಾನದ ನಿರ್ಮಾಣವಾಯಿತು. ಈ ರಾಜ್ಯ ಘಟನೆಯ ವೈಶಿಷ್ಟ್ಯ ಮತ್ತು ವಿಶೇಷತೆಗಳಿಗೆ ಸಂವಿಧಾನದ ಪೀಠಿಕೆಯನ್ನು ಮಾತ್ರ ಓದಿದರೆ ಸಾಕು, ಅತ್ಯುತ್ತಮವಾದುದು ಎಂದು ಬೇರೆ ಹೇಳಬೇಕಾಗಿಲ್ಲ. ಆ ಪೀಠವನ್ನೇ ನಾವು ಮುರಿದುಬಿಟ್ಟದ್ದೇವೆ. ಇದನ್ನು ನಮ್ಮ ರಾಜಕಾರಣಿಗಳು ಕಸದ ಬುಟ್ಟಿಗೆ ಬಿಸುಡವೇನೇ ವಿಕ್ರಮ ಸಾಧಿಸುತ್ತಿದ್ದಾರೆ. ಇವೆಲ್ಲ ಸಂಗತಿ ನಮ್ಮ ಜನರು ಬಲ್ಲವರೇನು? ಇದನ್ನೆಲ್ಲ ತಿಳಿಸುವವರಾರು. ಜನ ಜಾಗ್ರತಿಯನ್ನುಂಟು ಮಾಡುವವರ್‍ಯಾರು? ಜನರನ್ನು ನಡೆಸುವವರ್‍ಯಾರು? ಈ ರಾಜಕೀಯ ಮುಂದಾಳುಗಳು ನಮ್ಮನ್ನೆಲ್ಲ ಕಡೆಗಣಿಸಿ ತಮ್ಮ ಸಾಮ್ರಾಜ್ಯವನ್ನೇ ಕಟ್ಟುತ್ತಿದ್ದಾರೆ. ಜನರೆಲ್ಲ ದೈನಂದಿನದ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಿ, ಅವರ ಆಸಕ್ತಿ ಅಭಿರುಚಿಗಳನ್ನು ಕೆರಳಿಸಿ ಅವರನ್ನೆಲ್ಲ ಸುಶಿಕ್ಷಿತರೂ, ಸಚ್ಚರಿತ್ರರೂ, ಕಾರ್ಯ ಸಂಪನ್ನ

(ಹದಿನೆಂಟನೇ ಪುಟ ನೋಡಿರಿ)

ಒಂದು ಉತ್ತಮ ಬ್ಯಾಂಕಿನಿಂದ ನೀವೇನು ಬಯಸುವಿರಿ ?

ಭದ್ರತೆ

ಆಕರ್ಷಕ ಬಡ್ಡಿ

ಆರ್ಥಿಕ ಸೌಲಭ್ಯ

ಉತ್ತಮ ಸೇವೆ

ಅರವತ್ತು ನಾಲ್ಕು ವರ್ಷಗಳ ಅನುಭವ ಮತ್ತು ಸ್ಥಿರತೆ, ಖಾಯಂ ಠೇವಣಿಗಳ ಮೇಲೆ ಸೇಕಡಾ 7½ರ ವರೆಗೂ ಬಡ್ಡಿ; ಕೃಷಿ, ಕೈಗಾರಿಕೆ, ವ್ಯಾಪಾರ ಮತ್ತು ಇತರ ಪ್ರಾಮುಖ್ಯ ರಂಗಗಳಿಗೆ ಆರ್ಥಿಕ ನೆರವು; ಮತ್ತು ಸವಿನಯ ವೈಯುಕ್ತಿಕ ಸೇವೆ— ಇವೆಲ್ಲವನ್ನೂ ನೀವು ಕೆನರಾ ಬ್ಯಾಂಕಿಂಗ್ ಕೊಪೊರೇಶನ್ನಿನಲ್ಲಿ ಪಡೆಯಬಲ್ಲಿರಿ. ಧಾರ್ಮಿಕ ಹಾಗೂ ಲೋಕೋಪಯೋಗಿ ಸಂಸ್ಥೆಗಳ ಠೇವಣಿಗಳ ಮೇಲೆ ಸೇಕಡಾ ½ ಬಡ್ಡಿ ಜಾಸ್ತಿ ದೊರೆಯುವುದು. ಸುವ್ಯವಸ್ಥಿತ ಬ್ಯಾಂಕಿಂಗ್ ಸೇವೆ ಮತ್ತು ಸವಲತ್ತುಗಳು ಬ್ಯಾಂಕಿನ ಎಲ್ಲಾ ಶಾಖೆಗಳಲ್ಲಿಯೂ ದೊರೆಯುತ್ತವೆ.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪಿತ : 1906)

ರಿಜಿಸ್ಟರ್ಡ್ ಆಫೀಸು : ಉಡುಪಿ

ಆಡಳಿತ ಆಫೀಸು : ಮಂಗಳೂರು

ಪ್ರಿನ್ಸಿಪಲ್ ಬಿ. ಎಚ್. ಶ್ರೀಧರ

ನಾಳಿನ ಪ್ರಜಾಪ್ರಭುತ್ವ

"ಪ್ರಜಾಪ್ರಭುತ್ವ"ವೆಂಬುದಕ್ಕೆ ನಡೆಯುತ್ತಿರುವ ವ್ಯಾಖ್ಯಾನ ಅದರ ಹೆಸರಲ್ಲಿನ ಆಚರಣೆಗಳು ನಮ್ಮ ಪ್ರಜಾಸಕ್ತಿಯನ್ನು ಗಂಡಾಂತರಕ್ಕೆ ಒಯ್ದಿವೆ. ನಮ್ಮಲ್ಲಿನ ರಾಜ್ಯಕೀಯ ಪಕ್ಷಗಳು 'ಪ್ರಜಾಪ್ರಭುತ್ವ'ವನ್ನು ಪೂರ್ಣ ಅಪಹಾಸ್ಯಕ್ಕೆ ಗುರಿಮಾಡಿವೆ. "ಎಲ್ಲ ಪಾಪಗಳನ್ನು ಗುಪ್ತವಾಗಿಯೇ ಅವು ಮಾಡುತ್ತಿವೆ" ಎಂದು ಜನಕ್ಕೆ ಸಂಪೂರ್ಣ ಮನವರಿಕೆಯಾದಾಗ ಅದು ಒಂದಾಗುತ್ತದೆ; ಹೊಸ ಪ್ರಜಾಪ್ರಭುತ್ವವನ್ನು ಸಂಸ್ಥಾಪಿಸಬಲ್ಲದೆ.

ಪ್ರಜಾಪ್ರಭುತ್ವವೆಂಬುದು ದೇವರು, ಎಲ್ಲರೂ ಈಗ ಅದರ ಹೆಸರಿನಲ್ಲಿಯೇ ವರ್ಗಹಿತ-ವ್ಯಕ್ತಿಹಿತಗಳನ್ನು ಇತರರ ಅಸ್ತಿತ್ವಕ್ಕೆ ಬೆಲೆಕೊಡದೆ ಸಾಧಿಸಿಕೊಂಡರೂ ಬಹಳ ತಪ್ಪಾಗುತ್ತಿದ್ದಿಲ್ಲ. ಯಾವಾಗ? ಎಲ್ಲರೂ ಸಮಶಕ್ತಿಯುಳ್ಳವರಾಗಿದ್ದರೆ ಅವರ ಆರ್ಥಾದಿ ಶಕ್ತಿಗಳು ಅತಿ ವಿಷಮತೆಗಳಿದಿರುವಾಗ ದೊಣ್ಣೆ ಬೀಸಿದವನೇ ಎಮ್ಮೆಯ ಮಾಲೀಕನೆಂದು ಇತರರ ಮೇಲೆ ಒತ್ತಾಯ ತರುತ್ತಾನೆ. ಚುನಾವಣೆಯಲ್ಲಿಯೂ ಒತ್ತಾಯ, ಬೆದರಿಕೆ, ಭೋಗದಾನಗಳೇ ಪ್ರಧಾನವಾಗುತ್ತ ಬಂದಿರುವಾಗ, ಒತ್ತಾಯದ ಚುನಾವಣೆಯ ಫಲವಾಗಿ ಒತ್ತಾಯದ ಪ್ರಜಾಪ್ರಭುತ್ವ ಬರುತ್ತದೆ. ಅವರ ಬಲಾತ್ಕಾರವನ್ನು ಇವರು ಬಯ್ಯುವರು, ಇವರದನ್ನು ಅವರು ಬಯ್ಯುವರು; ವಿವಿಧ ಪಕ್ಷಗಳು ಯಥಾಶಕ್ತಿ ಬಲಾತ್ಕಾರದ ಚುನಾವಣೆಗೇ ಬಂದು ಮುಟ್ಟಿವೆ. ಈ ಅವಸ್ಥೆಗೆ ಹಿರಿಯರ ಪಕ್ಷವು ಮೂಲತಃ ಕಾರಣವಾಗುತ್ತ ಹೋದದ್ದು ಸ್ಪಷ್ಟ.

ಪಾರ್ಲಿಮೆಂಟು: ಗುಪ್ತ ಒತ್ತಾಯ, ಪ್ರಕಟ ಒತ್ತಾಯಗಳಲ್ಲಿ ಬ್ಯಾಲಟ್ ನೀತಿಯ ಪ್ರಕಾರ ಮೊದಲಿನದು ಪ್ರಜಾಪ್ರಭುತ್ವೀನ ಎಂದು ಬಹಳ ಜನ ನರೆಗೂದಲಿನ ಮುಖಂಡರಿಂದು ಘಂಟಾಘೋಷವಾಗಿ ಸಾರುತ್ತಾರೆ. ಕಾಮಿನೀ ಕಾಂಚನಾದಿಗಳ ದಾನವೂ ಗುಪ್ತವಾಗಿದ್ದರೆ ಅಷ್ಟೇ ಸಭ್ಯ. ಮುಚ್ಚಿ ಮಾಡಿದ್ದು ಪಾಪವಲ್ಲ ಎಂಬುದು ಭಾರತೀಯ ಸಂಸ್ಕೃತಿಗೆ ಸಂಮತವಾದುದೆ? ಮತದಾರರ ಮನೋದೌರ್ಬಲ್ಯಗಳನ್ನದುರುಪಯೋಗ ಮಾಡಿಕೊಳ್ಳುವುದು ಪ್ರಜಾಪ್ರಭುತ್ವದ ಚುನಾವಣೆ ಹಾಗೂ ಆಡಳಿತಗಳಿಗೆ ಸಹಜವೆಂದು ಸಮರ್ಥಿಸಿಕೊಂಡು, ಅಂತೆಯೇ ನಡೆದುಕೊಳ್ಳುವ ಸರಕಾರ ಮತ್ತು ಪ್ರತಿನಿಧಿಗಳ ಪ್ರಭುತ್ವ ಇರುವುದು ಬಹು ಸಂಖ್ಯಾತ ದೀನದಲಿತರಿಗೆ ಅಸಮ್ಮತವಾದೀತೆ? ಅವರ ಪ್ರಾಮಾಣಿಕ ಹಿತರಕ್ಷಕರಿಗೆ ಅಸ್ತಿತ್ವವೇ ಇಲ್ಲವೆಂಬಂತೆ ನಡೆದು ಬಂದ ಆಳುವ ಭಾರತೀಯ ಪ್ರಜಾಪ್ರತಿನಿಧಿಗಳ ಆಳಿಕೆಯೀಗ ಜುಗುಪ್ಸಾಜನಕವಾದುವರಿಂದಲೇ ಕಾಯಿದೆ-ಸುವ್ಯವಸ್ಥೆಗಳು ಅಳಿಯುವಂಥ ಸಂದರ್ಭ ಉಂಟಾಗಿದೆ ಎಂಬುದನ್ನು ಒಪ್ಪದವರು ಆಮೂಲಾಗ್ರ ಹಿಂಸಾವಾದಿಗಳು.

"ರಸ್ತೆಯಲ್ಲಿ ಕಲ್ಲುತೂರುವ ಭಾಷೆಯೊಂದೇ ನಮ್ಮ ಸರಕಾರಕ್ಕೆ ಅರ್ಥವಾಗುತ್ತದೆ" ಎಂದು ಹಿಂದೊಮ್ಮೆ ಉದ್ಗರಿಸಿದ್ದು ಕೇಂದ್ರದ ಈಗಿನ ಕಾಯಿದೆ ಮಂತ್ರಿಗಳು. ಅವರಿಗೆ ಅಷ್ಟು ನಿರಾಶೆಯುಂಟಾಗುವಂಥ ಸಂದರ್ಭ ಉಂಟಾದುದನ್ನು ಇಂದು ರಾಷ್ಟ್ರಪತಿ ಗಿರಿಯವರು ತಮ್ಮ ಭಾಷಣವೊಂದರಲ್ಲಿ ಸಮರ್ಥಿಸಿದ್ದಾರೆ. ರಾಷ್ಟ್ರಪತಿಗೆ ಬುದ್ಧಿ ಹೇಳುವ ಅನೌಚಿತ್ಯವನ್ನು ಗಣಿಸದ ಹಿರಿಯರೂ ಪತ್ರಿಕೆಗಳೂ ಪಾರ್ಲಿಮೆಂಟಿನ ನಿಷ್ಠಾವಂತ ಭಕ್ತರೆಂದುಕೊಳ್ಳುವುದು ಬಹಳ ಸ್ವಾರಸ್ಯವಾಗಿದೆ! ಮುಖ್ಯವಾಗಿ ಎಂ.ಪಿ.ಗಳೇ ರಾಷ್ಟ್ರಪತಿಯನ್ನು ಆರಿಸಿರುವುದು ಇವರಿಗೆ ಹೇಗೆ ಮರೆತು ಹೋಯಿತು? ದೇಶದ ಜನರ ದುರವಸ್ಥೆಯನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿರುವ ರಾಷ್ಟ್ರಪತಿಗೆ ಗೌರವ ತೋರದ ವಾಕ್‌ಪಟುತ್ವವೂ ಪ್ರಜಾಪ್ರಭುತ್ವೀನ! ರಾಜ್ಯಘಟನೆ (ಸಂವಿಧಾನ)ಯನ್ನು ಅರ್ಥ ಮಾಡಿಕೊಳ್ಳಲಾರನೆಂದು ರಾಷ್ಟ್ರಪತಿಗೆ ಹೇಳುವುದು ಕೋರ್ಟಿಗೆ ಕೂಡ ಉಚಿತವೆಂದು ಹೇಳುವುದು ಕಷ್ಟ. ಹುದ್ದೆಯ ಬಲದಿಂದ ಏನನ್ನಾದರೂ ಹೇಳಲು ರಾಷ್ಟ್ರಪತೀತರರಿಗೆ ಸಾಂವಿಧಾನಿಕವೆನ್ನಿಸದು. ಈ ಕ್ರಮವನ್ನು ಹಿಡಿದರೆ ದೇಶದ ಕ್ಷೇಮವನ್ನು ಬಲ್ಲಸಮರ್ಥ ರಾಷ್ಟ್ರಪತಿ ತನ್ನ ಏಕಾಧಿಸತ್ಯವನ್ನು ೬ತಿಂಗಳ ಕಾಲ ನಡೆಸುವ ಆಪದ್ಧರ್ಮವನ್ನು ಆಚರಿಸುವುದು ಕ್ರಮಪ್ರಾಪ್ತವಾದೀತು. ಮತದಾರರ ಮನೋದೌರ್ಬಲ್ಯಗಳಿಷ್ಟೇ ಇದ್ದರೂ ಅವರಲ್ಲಿಯ ಬಹುಸಂಖ್ಯಾತರಿಗಿಂದು 'ಯಾರು ಹಿತವರು ನಿಮಗೆ ಈ ಮೂವರೊಳಗೆ ಪಕ್ಷವೋ ಸಂಸತ್ತೊ ರಾಷ್ಟ್ರಪತಿಯೋ?' ಎಂದು ಕೇಳಿದರೆ ಸರಿಯಾದ ಉತ್ತರವನ್ನು ಕೊಡುವ ಶಕ್ತಿ ಬಂದಿರುವುದನ್ನು ಮುಂದಿನ ಚುನಾವಣೆ ತೋರಿಸಿ ಕೊಡದೆ ಇರಲಾರದು.

ಸರ್ವಾಧಿಕಾರ: ಗಾಂಧಿಯವರೊಬ್ಬರೇ ಡಿಕ್ಟೇಟರರಂತೆ ಸತ್ಯಾಗ್ರಹ ಚಳವಳವನ್ನು ನಡೆಸಿಕೊಂಡು ಹೋದದ್ದು ಅದರ ಯಶಸ್ಸಿಗೆ ಕಾರಣವಾದರೆ, ಸಂಕಟದ ಸಂದರ್ಭದಲ್ಲಿ ಈಗಲೂ ರಾಷ್ಟ್ರದ ಪ್ರಾಧಿಕಾರಿ ವರಿಷ್ಠರು ಸ್ವನಿರ್ಧಾರದಂತೆ ರಾಜ್ಯಭಾರ ನಡೆಸಿದರೆ ಅದು ತಮ್ಮ ಪುಣ್ಯವೆಂದು ಜನ ತಿಳಿದೀತು. ಪ್ರತಿನಿಧಿಗಳನೇಕರ ಚಾರಿತ್ರ್ಯಹೀನತೆಯು ಎಲ್ಲರಿಗೂ ತಿಳಿಯುವಂತಾಗಿರುವಾಗ ಅವರು ಪಾರ್ಲಿಮೆಂಟಿನಲ್ಲಿ ಕುಳಿತರೇನು? ದೇವರ ಪೀಠದ ಮೇಲೆ ಕುಳಿತರೇನು? ಅವರ ಪ್ರಾತಿನಿಧ್ಯವೇ ಬಹಳ ಕಡೆ ನೈತಿಕವಾಗಿ ಸಮರ್ಥನೀಯವಾಗಿಲ್ಲ. ಬಂಗಾಳವೊಂದು ಚಿಕ್ಕ ಉದಾಹರಣೆ; ಅದರಂತೆಯೇ ಭಾರತವೂ. ಚುನಾವಣೆಯು ವಿವಿಧ ಭ್ರಷ್ಟಾಚಾರಗಳ ಹಿಮಾಲಯೋಕರವಾಗಿರುವವರೆಗೆ, ಈ ಮಾತಿಗೆ ಎದುರಾಡಲು ಸಾಧ್ಯವಿಲ್ಲ. ಚುನಾವಣೆಯ ಶುದ್ಧೀಕರಣವು ಅನುರೋಧಿಗಳಿಗೂ ಈಗ ಅಷ್ಟು ಗಣ್ಯವೆನ್ನಿಸಿರುವಂತೆ ತೋರದು; ಗಣ್ಯರಾದ ಕೆಲ ವಿರೋಧಿಗಳಿಗಂತೂ ಅದು ಮೊದಲಿನ ಹಾಗೇ ಹೊಲಸಾಗಿರುವುದೇ ರುಚಿಕರ! ಹೀಗಿರುವಾಗ-ಪ್ರಜಾಪ್ರಭುತ್ವ, ಪಾರ್ಲಿಮೆಂಟು, ಸಂವಿಧಾನಗಳ ಹೆಸರೆತ್ತಿ, ಸರ್ವೋದಯ ಸಾಧಕವಾದ ಧೋರಣೆಯನ್ನೂ ಕಾರ್ಯಕ್ರಮವನ್ನೂ ಜಾರಿಮಾಡ ಹೊರಟ ಪ್ರಾಧಿಕಾರಿಗಳನ್ನು ನಿಂದೆ ಮಾಡುವುದು ಅತ್ಯಂತ ತುಚ್ಛವಾದುದು, ಪುಣ್ಯವಂತರ ಹೆಸರಿನಲ್ಲಿ ಪಾಪ ಮಾಡಿದರೆ ಅದನ್ನು ಪುಣ್ಯವೆಂದು ಗ್ರಹಿಸಲು ಸಾಧ್ಯವೇ?

ನೆಹರು ಮತ: ಬಹುಸಂಖ್ಯಾತರ ಸಂಕಟಗಳ ತೀಕ್ಷ್ಣತೆಯನ್ನು ಅರಿಯಲಾರದ ಹುರಿಯಾಳುಗಳೂ ಚುನಾಯಿತರೂ ... ಧಿಕಾರ ಹಿಡಿದವರೂ ಯಾವ ಜನರ ಪ್ರತಿನಿಧಿಗಳೆಂದು ಹೇಳಬೇಕು? ಅವರು ಅ... ಹೊಂದಿದ ಮಾಯೆ-ಮೋಡಿಗಳಿಗೆ ಪ್ರ... ಪ್ರಭುತ್ವ ನಿಷ್ಠವಾದ ಜೀವನ ವ್ಯವ... ಎಂದು ಯಾವ ಬಾಯಿಯಿಂದ ಹೇಳ... ಸಾಧ್ಯ? ಹೇಳಬೇಕು ಎಂದು ಆಗ್ರಹಿ... ನವರ ಗುಂಡತನವು ರಸ್ತೆಯ ಮೇಲೆ ... ಪಂಥಿಗಳನ್ನು ಹೊಡೆಯಲು ಬ... ಪುಂಡತನಕ್ಕಿಂತ ಹಾನಿ ದೃಷ್ಟಿಯಿ... ಲೂ ಹೆಚ್ಚಿನದೆನ್ನಿಸದು. ಎಲ್ಲ ದೇಶಗಳ... ಹೀಗೇ ನಡೆಯುತ್ತದೆ ಎಂಬ ಸಮರ್ಥ... ಭಾರತೀಯ ಶ್ರೀಸಾಮಾನ್ಯನನ್ನು ಸಮಾ... ಧಾನ ಪಡಿಸದು. ಆವನ ಹೃದಯದ ... ಗಿತವನ್ನು ಗಾಂಧಿಯವರು ಎಂದೋ ... ಳಿ ಬಿಟ್ಟಿದ್ದಾರೆ. ಅನೀತಿವಂತರನ್ನು ... ಖಂಡಲೆಂದು ಪ್ರತ್ಯಪೂರ್ವಕವಾಗಿ ಭಾ... ತೀಯನು ಯಾವಾಗಲೂ ಪುರಸ್ಕ... ಲಾರ ಎಂಬುದೇ ಆ ... ಗಾಂಧಿ... ವರು ಹೇಳಿದ ಜೀವನ ನೀತಿಯನ್ನು ಕೇ... ವಲ ತಾಪಸಯೋಗ್ಯವೆಂದು ಧಿಕ್ಕರಿಸಿ ರಾ... ಜ್ಯಭಾರ ಮಾಡ ಹೊರಟ ದಿವಂಗತ ನೆಹರುಗಳ ಮೇಲ್ಪಂಕ್ತಿಯೇ ಇಂದಿನ ದುರಾ... ಡಳಿತಗಳಿಗೆ ಕಾರಣ.

ಜನಹೃದಯಜ್ಞತೆ ಗಾಂಧಿಯವ... ಗಿದ್ದಷ್ಟು ನೆಹರುಗಳಿಗಿರಲಿಲ್ಲ. ಅವರ ಮ... ಗಳೀಗ ಅವರಿಗಿಂತ ಭಿನ್ನವಾದ ಜೀವನ ನೀತಿಯನ್ನು ಜನಕ್ಕಾಗಿ ಘೋಷಿಸಲಿ... ಈಕೆ ಅವರಿಗಿಂತ ಕಡಿಮೆ ಪ್ರಜಾಪ್ರಭುತ್ವ ವರ್ತನ ಉಳ್ಳವಳಲ್ಲ. ಅವರೆದುರು ಬಾಯಿ ಬಿಗಿದುಕೊಂಡು ಕುಳಿತವರು ಈಕೆಯೆದುರು ಬಾಯಿ ಮಾಡುತ್ತಿದ್ದಾರೆ-ಅಷ್ಟೇ. ಅವರೇ ಬದುಕಿ ಉಳಿದಿದ್ದರೆ ಈಕೆ ಮಾಡುತ್ತಿರುವುದನ್ನೇ ಮಾಡುತ್ತಿದ್ದರು.

ಭಾರತದ ಪ್ರಜಾಪ್ರಭುತ್ವ ಮತ್ತು ಸಮಾಜವಾದಗಳ ಸ್ವರೂಪವನ್ನು ಗಾಂಧಿಯವರು ಸ್ಪಷ್ಟಪಡಿಸಿದ್ದರು. ಅದನ್ನು ಜಾರಿಗೆ ತರಲು ಸರಕಾರಗಳು ಕಾಯಿದೆಗಳನ್ನು ಮಾಡಿ, ಸಮರ್ಥ ನೌಕರರನ್ನು ... ಮಲಿನಲ್ಲಿ ತರಲು ನಿಯಮಿಸಿದ್ದರೆ ಸಾ... ಗಿತ್ತು. ನೆಹರುಗಳ ಭಾಷಣ ಪ್ರಾಧಾನ್ಯದ ದೆಸೆಯಿಂದಲೇ ಭಾರತದಲ್ಲಿ ಏಕಮೇವಾದ್ವಿತೀಯವಾಗಿದ್ದ ಕಾಂಗ್ರೆಸ್ಸಿನಿಂದ ವಿವಿಧ ಪಕ್ಷಗಳು ಹುಟ್ಟಿಕೊಂಡು ಪ್ರತ್ಯೇಕತೆಯನ್ನು ಸಾಧಿಸಲಾರಂಭಿಸಿ ಅದರಲ್ಲಿ ಗೆದ್ದವು; ಕೃತಿ ಪ್ರಧಾನವಾದ ಆಡಳಿತವು ನೂರು ಹೆಜ್ಜೆ ಹಿಂದಕ್ಕುಳಿಯಿತು. ಅವರ ಸಮಾಜವಾದದ ಸ್ವರೂಪವು ಅವರಿಗೇ ವಿ

(ಹದಿನಾರನೇ ಪುಟ ನೋಡಿರಿ)

With All Best Wishes
From

NORTON & CO.,
(Spartan Type Foundry)

CHOOLAI — MADRAS-7

ಶ್ರೀ "ನವಗಿರಿನಂದ"

ದಶಾವತಾರ ಚಕ್ರ

ಭಗವಂತನ ದಶಾವತಾರಗಳು ಜಗಜ್ಜನಕ. ಸೃಷ್ಟಿ ಸ್ಥಿತಿ ಲಯಗಳು ಈ ದಶಾವತಾರ ಚಕ್ರದಲ್ಲೇ ತಿರುಗುತ್ತಲೇ ಇವೆ. ಮಾನವರಿಗೂ ದಶಾವಸ್ಥೆಗಳಿದ್ದು ಪರಮಾತ್ಮನ ದಶಾವತಾರಗಳು ಅವನ್ನೇ ಸೂಚ್ಯವಾಗಿ ನಿರೂಪಿಸುತ್ತವೆ.

ಸೃಷ್ಟಿ ಕರ್ತನಾದ ಭಗವಂತನು ಹತ್ತು ಅವತಾರಗಳಿಂದ ಲೋಕೋದ್ಧಾರ ಮಾಡುತನೆಂಬುದು ಸುಪ್ರಸಿದ್ಧವಾದ ಪೌರಾಣಿಕ ಕಥೆಗಳಿಂದ ಗೊತ್ತಾಗುತ್ತದೆ. ಮತ್ಸ್ಯ, ಕೂರ್ಮ ಮೊದಲಾದ ಹತ್ತು ಅವತಾರಗಳಿಗೂ ಹತ್ತು ಕಥೆಗಳಿವೆ. ಇಷ್ಟರ ವರೆಗೆ ಒಂಬತ್ತು ಅವತಾರಗಳು ಸಂದುವೆಂದೂ, ಕಲ್ಕ್ಯವತಾರವು ಭವಿಷ್ಯತ್ತಿನಲ್ಲಿ ಆಗಲಿದೆ ಎಂದೂ ಪುರಾಣವು ಹೇಳುತ್ತದೆ. ಕಲ್ಕ್ಯವತಾರವು ಸಂಹಾರಕ್ಕಾಗಿಯೇ ನಡೆಯುವಂತಹುದು. ಅದರಿಂದ ಸಂಹಾರ ಕಾರ್ಯ ಕೂಡ ಒಂದು ಉದ್ಧಾರ ಕಾರ್ಯವೆಂದೇ ಬಲ್ಲವರು ಹೇಳುವರು. ಆಲೋಚಿಸಿದರೇ ನಮಗೂ ತಿಳಿಯುತ್ತದೆ.

ಹೀಗೆ ಆಲೋಚನೆ ಮಾಡಿ ಹೇಳಿದವರು "ಪರಮಾತ್ಮನು ಆ ಹತ್ತು ಅವತಾರಗಳನ್ನು ಮಾತ್ರ ಎತ್ತಿದನೆಂದು ತಿಳಿಯಬಾರದು. ಗೀತೋಕ್ತಿಯಂತೆ ಧರ್ಮಗ್ಲಾನಿಯಾದಾಗಲೆಲ್ಲಾ ಅವತಾರವೆತ್ತುತ್ತಲೇ ಇರುತ್ತಾನೆ. ವಿಭೂತಿ ವ್ಯಕ್ತಿಗಳೆಲ್ಲಾ ಅವನ ಅಂಶಾವತಾರಿಗಳೇ" ಎನ್ನುತ್ತಾರೆ.

ಆದರೆ ಮತ್ಸ್ಯ ಕೂರ್ಮಾದಿ ಕಲ್ಕಿಯ ವರೆಗಿನ ಹತ್ತು ಅವತಾರಗಳಿಗೆ ಮಾತ್ರ ಬಹಳ ಪ್ರಾಮುಖ್ಯತೆಯುಂಟು ಅವುಗಳಲ್ಲಿ ಪ್ರಪಂಚದ ಸೃಷ್ಟಿ ಸ್ಥಿತಿ ಲಯಗಳೇ ಅಡಗಿವೆ. ಸಕಲ ಪ್ರಪಂಚಕ್ಕೂ ಪ್ರಪಂಚದೊಳಗಿನ ಪ್ರತಿ ವಸ್ತುವಿಗೂ ಸೃಷ್ಟಿ ಸ್ಥಿತಿ ಲಯಗಳುಂಟೇ ಉಂಟು. ಈ ಮೂರು ಅವಸ್ಥೆಗಳು ಸ್ಥಾವರ ಜಂಗಮ ಸಮೇತ ಪ್ರತಿ ವಸ್ತುವಿಗೂ ಪ್ರತಿ ಪ್ರಾಣಿಗೂ ಇರುವ ಹಾಗೆ ಪ್ರತಿ ಜಗತ್ತಿಗೂ, ಪ್ರತಿಸೌರ ಜಗತ್ತಿಗೂ ಉಂಟು. ನಿತ್ಯ ಸಾಯುವ ಇರುವೆಯಿಂದ ಹಿಡಿದು ಬೃಹದ್ವಿಶ್ವದವರೆಗೂ, ಆಯಾ ವಸ್ತುಗಳ ಪರಿಮಾಣ, ಪ್ರಮಾಣಕ್ಕನುಸಾರವಾದ ಸಂಖ್ಯಾ ಪರಿಮಿತಿಯಲ್ಲಿ ಈ ಸೃಷ್ಟಿ ಲಯಗಳಾಗುತ್ತವೆಯೆಂದು ಪ್ರಪಂಚ ತತ್ವವೇತ್ತರು ಹೇಳುತ್ತಾರೆ.

ದಶಾವತಾರಗಳು ಬ್ರಹ್ಮಾಂಡದ ದಶವಿಧ ಅವಸ್ಥೆಗಳನ್ನು ಸೂಚಿಸುತ್ತವೆಂದು ಅವರು ಹೇಳುವರು. ನಮಗೆ ದಶವಿಧ ಅವಸ್ಥೆಗಳಿರುವುದರಿಂದಲೇ ನವಗ್ರಹಗಳಿಗೆ ಸಂಬಂಧಿಸಿದ ದಶೆಗಳುಂಟಾದುವಂತೆ. ಕಲ್ಕ್ಯಾವತಾರನ ದಶೆ ಲಯಕ್ಕೆ ಸೇರುವುದರಿಂದ ಹರನಾದ ಶಿವನೇ ಅದಕ್ಕೆ ಅಧಿಪತಿಯಾಗುವನಂತೆ.

ವಿಶ್ವಾತ್ಮನೂ ಅನಂತನೂ ಅನಂತಶಾಯಿಯೂ ಆದ ಭಗವಂತನ ಕಾರ್ಯಗಳಿಗೆ ಸೃಷ್ಟಿ, ಸ್ಥಿತಿ, ಲಯಗಳೆಂದು ಹೇಳುತ್ತಾರೆ.

ಅವನು ತನ್ನ ಸಂಕಲ್ಪದಿಂದಲೇ ನಾಭಿಕಮಲದಿಂದ ಬ್ರಹ್ಮನನ್ನು ಹುಟ್ಟಿಸಿದನೆಂದರೆ ಅವನೇ ಬ್ರಹ್ಮನೆಂದೂ ಹೇಳಬಹುದು. ವಿಶ್ವವೆಲ್ಲಾ ಅಣುಕಣಗಳಿಂದ ಹೆಪ್ಪುಗಟ್ಟುವ ಧೂಮರೂಪವನ್ನು ತಾಳುವುದೇ ಬ್ರಹ್ಮಾಂಡದ ಮೂಲವೆಂದು ವಿಜ್ಞಾನವೂ ಹೇಳುತ್ತದೆ. ಇಂತಹ ಅಣು ಧೂಮವು ಮೊದಲು ಹುಟ್ಟಿತೆನ್ನುವುದಕ್ಕಿಂತಲೂ, ಅನಂತ ಕಾಲದಿಂದ ಅನಂತಕಾಲದವರೆಗೆ ಈ ಕಾರ್ಯ ನಡೆಯುತ್ತಾ ಇದೆ ಎಂಬುದನ್ನು ನೆನೆಯುವಾಗ ಪರಮಾತ್ಮನ ಪ್ರಕೃತಿ ಸ್ವರೂಪವು ಸ್ವಲ್ಪ ಮಟ್ಟಿಗೆ ಗೋಚರವಾಗುತ್ತನೆ. ಹೆಪ್ಪುಗಟ್ಟಿದ್ದು ಕರಗಿ ನೀರಾದಾಗ ಅವನು ಜಲೋದರನಾಗುವನು. ಅದರಿಂದ ಕಮಲವೂ, ಬ್ರಹ್ಮನೂ ಬ್ರಹ್ಮಸೃಷ್ಟಿಯೂ ದಶವಿಧ ಅವಸ್ಥೆಗಳೂ ಉಂಟಾಗುತ್ತಾ ಅನಂತ ಕಾಲದವರೆಗೆ ಸಾಗುತ್ತಿದೆ.

ಎಷ್ಟೋ ಸೌರಜಗತ್ತುಗಳಿಂದ ಕೂಡಿದ ಈ ಬ್ರಹ್ಮಾಂಡದಲ್ಲಿ ಭೂಮಿ ಕೂಡಾ ಒಂದು ಸೌರಜಗತ್ತಿಗೆ ಸೇರಿದ್ದು ತಾನೆ? ಅಂತೆಯೇ ನಮ್ಮ ಸೂರ್ಯನ ಗುಣಗಳ ಯಾವುದೋ ಒಂದು ಪಾಲು ಭೂಮಿಗೂ ಇದೆ. ಭೂಮಿಯ ಗುಣಗಳ ಯಾವುದೊ ಒಂದು ಪಾಲು ಭೂಮಿಯಲ್ಲಿ ಹುಟ್ಟುವ ಚರಾಚರ ವಸ್ತುಗಳಿಗೂ ಪ್ರಾಣಿಗಳಿಗೂ ಬರುತ್ತವೆ. ಎಲ್ಲವೂ ಸೃಷ್ಟಿ-ಸ್ಥಿತಿ-ಲಯಗಳೆಂಬ ದಶಾವತಾರ ಚಕ್ರದೊಳಗೇ ತಿರುಗುತ್ತಿರುತ್ತವೆ.

ನಮ್ಮನ್ನೇ ನಾವು ನೋಡಿಕೊಳ್ಳುವುದಾದರೆ, ಗರ್ಭವಾಸವನ್ನು ಮತ್ಸ್ಯಾವತಾರವೆನ್ನಬಹುದು. ಅನಂತರ ಶಿಶುವಾಗಿ ಹರಿದಾಡುವಾಗ ಕೂರ್ಮಾವತಾರಿಗಳಾಗುತ್ತೇವೆ. ಕೂರ್ಮಕ್ಕೆ ಚಿಪ್ಪಿನರಕ್ಷೆ ಇರುವಂತೆ ಮಗುವಿಗೆ ತಾಯಿರಕ್ಷೆಯಿರುತ್ತದೆ. ಆ ಮೇಲೆ ಬೆರಳುಗಳಿಂದ ಮಣ್ಣು ಅಗೆಯುತ್ತಾ ಕೆರೆಯುತ್ತಾ ಬಾಯಿಗೆ ಹಾಕುತ್ತಾ ವರಾಹಾವತಾರಿಗಳಾಗುತ್ತೇವೆ. ಅದಾದ ಮೇಲೆ ಹಿರಿಯರಂತೆ ಮಾಡಲೆತ್ನಿಸುತ್ತ, ನಿಲ್ಲಲಾರದೆ ಮೃಗದಂತೆ ಅಂಬೆಗಾಲಿಕ್ಕುತ್ತ ಸ್ವಲ್ಪಕಾಲ ನರಮೃಗಗಳಾಗುತ್ತೇವೆ. ಸಿಂಹವು ಮೃಗರಾಜನಾಗಿರುವಂತೆ ಮಗುವೂ ಯಾರಿಗೂ ಹೆದರದ ರಾಜನಂತೆಯೇ. ಅಲ್ಲಿಂದ ಕಿರುಬಾಲನಾಗಿ ಪುಟ್ಟಡಿಯಿಟ್ಟು ಮನೆ ಪೂರಾ ಅಲ್ಲಕಲ್ಲೋಲ ಗೊಳಿಸುವುದು ವಾಮನಾವತಾರ. ಮಕ್ಕಳು ಬೇಡಿದ್ದನ್ನು ದೊಡ್ಡವರು ಕೊಡುತ್ತಾರೆ. ಬಲಿಯೂ ವಾಮನನೂ ಅಚ್ಚು ಮೆಚ್ಚಾಗಿರುವಂತೆ ಮಕ್ಕಳೂ ಹೆತ್ತವರೂ ಇರುವರು. ಬಲಿಯ ಬಾಗಿಲನ್ನು ವಾಮನನು ಕಾಯ್ದಂತೆ ಹಿರಿಯರನ್ನು ವೃದ್ಧಾಪ್ಯದಲ್ಲಿ ಮಕ್ಕಳು ಕಾಪಾಡಬೇಕಲ್ಲವೆ? ಇವರ ಪ್ರೀತಿಗೆ

(ಹದಿನೈದನೇ ಪುಟ ನೋಡಿರಿ)



ಶ್ರೀಕೃಷ್ಣನಿಳಿದ ರಥ

ಪಂ. ನೆಹರೂರವರ ಕಾಲದಲ್ಲಿ ಬೇರೆ ಬೇರೆ ಕಾರಣಗಳಿಂದ ಅಡಗಿದ್ದ ದುಃಶಕ್ತಿಗಳು ಅವರು ನಿಧನರಾದ ಬಳಿಕ ಭುಗಿಲೆಂದು ಉರಿಯುತ್ತಿವೆ. ಶ್ರೀಕೃಷ್ಣನಿಳಿದೊಡನೆಯೇ ರಥವು ಸುಟ್ಟು ಬೂದಿಯಾದಂತೆ ದೇಶವೇ ಸುಟ್ಟು ಹೋಗುತ್ತಿರುವಂತೆ ಭಾಸವಾಗುತ್ತದೆ. ಇದರ ನೈತಿಕ ಹೊಣೆಗಾರಿಕೆ ಪಂ. ನೆಹರು ಅವರ ಹೆಗಲಿಗೇ ಅಂಟುತ್ತದೆ!

ಲೇಖಕರು :
ಶ್ರೀ ಗೌರೀಶ ಕಾಯ್ಕಿಣಿ.

ಮಹಾಭಾರತದ ಯುದ್ಧ ಮುಗಿಯಿತು. ಕುರುಕ್ಷೇತ್ರದಲ್ಲಿ ಅರ್ಜುನನ ರಥವು ಪಾಂಡವರ ಶಿಬಿರಕ್ಕೆ ಮರಳಿತು. ಶಿಬಿರದ ಮುಂದೆ ರಥ ನಿಂತಿತು. ಆಗ ಸಾರಥಿ ಶ್ರೀ ಕೃಷ್ಣ ಅರ್ಜುನನಿಗೆ ಮೊದಲು ರಥದಿಂದ ಕೆಳಗಿಳಿಯಲು ಹೇಳಿದನು. ಭಗವದ್ಭಕ್ತ ಅರ್ಜುನ ಅದಕ್ಕೆ ಒಮ್ಮೆಲೆ ಒಪ್ಪಲಿಲ್ಲ. ಶ್ರೀ ಕೃಷ್ಣನೇ ಇಳಿಯಬೇಕೆಂದ. ಆದರೆ ಶ್ರೀ ಕೃಷ್ಣ ಒಪ್ಪಲಿಲ್ಲ. ಅರ್ಜುನನೇ ಇಳಿಯಬೇಕೆಂದು ಕಟ್ಟುನಿಟ್ಟಾಗಿ ಆಜ್ಞೆ ಮಾಡಿದನು. ನಿರುಪಾಯನಾಗಿ ಅರ್ಜುನನು ಇಳಿದನು. ಆ ಮೇಲೆ ಶ್ರೀ ಕೃಷ್ಣನು ನೆಲಕ್ಕೆ ಕಾಲಿಟ್ಟನು.

ಆಗ ಒಂದು ಅದ್ಭುತವು ಘಟಿಸಿತು. ಶ್ರೀ ಕೃಷ್ಣನು ಕೆಳಗಿಳಿದು ನಿಂತೊಡನೆ ಆ ರಥವು ಬೆಂಕಿ ಭುಗಿಲೆದ್ದು ಸುಟ್ಟು ಭಸ್ಮವಾಗಿ ಹೋಯಿತು! ಯುದ್ಧದಲ್ಲಿ ಅನೇಕ ಪ್ರಚಂಡ ಅಸ್ತ್ರಗಳಿಗೆ ಆ ರಥ ಗುರಿಯಾಗಿತ್ತು. ಬ್ರಹ್ಮಾಸ್ತ್ರದ ಪ್ರಯೋಗವೂ ಅದರ ಮೇಲೆ ಆಗಿತ್ತು. ಆದರೆ ಅದೆಲ್ಲವೂ ಕೇವಲ ಶ್ರೀ ಕೃಷ್ಣನ ವಿಭೂತಿ ಮಾತ್ರದಿಂದ ತಡೆಹಿಡಿದಂತೆ ಇತ್ತು. ಶ್ರೀ ಕೃಷ್ಣನೇ ಮೊದಲು ಇಳಿದಿದ್ದರೆ ಅರ್ಜುನನೂ ಆ ರಥದೊಂದಿಗೆ ಸುಟ್ಟು ಬೂದಿಯಾಗುತ್ತಿದ್ದನು. ಶ್ರೀ ಕೃಷ್ಣನು ಹಾಗೆ ಆಗಲಿಕ್ಕೆ ಬಿಡಲಿಲ್ಲ.

ನೆಹರೂಜಿಯ ನಿಧನದ ನೆನಪಾದಾಗೆಲ್ಲ ನನಗೆ ಈ ಭಾರತ ಕಥೆಯ ಚಿತ್ರ ಕಣ್ಣಿಗೆ ಕಟ್ಟುತ್ತದೆ. ನೆಹರೂಜೀ ನಮ್ಮ ರಾಷ್ಟ್ರದ ರಥದಿಂದ ಇಳಿದು ಹೋದರು. (ಇಲ್ಲಿ ಅರ್ಜುನನಿಗೆ ಇಳಿಯಲು ಆಸ್ಪದವೇ ಇದ್ದಿಲ್ಲ. ಏಕೆಂದರೆ ಕುರುಕ್ಷೇತ್ರದ ಯುದ್ಧ ಇನ್ನೂ ಮುಗಿದೇ ಇಲ್ಲ!) ಅವರು ಇಳಿದದ್ದೇ ಆ ರಥಕ್ಕೆ ಬೆಂಕಿ ಬಿತ್ತು. ಆ ವರೆಗೆ ಅವರು ಕೇವಲ ಅವರ ವ್ಯಕ್ತಿ–ಮಾತ್ರದಿಂದ ತಡೆದು ನಿಂತ ದುಷ್ಟ ಶಕ್ತಿಗಳೆಲ್ಲಾ ಉಗ್ರಾಕಾರನಾಗಿ ಎದ್ದು ದಿವಾಳಿ ಎಬ್ಬಿಸ ಹತ್ತಿದವು. ಹಿಂಸೆ, ಸ್ವಾರ್ಥ, ದ್ವೇಷ, ಜಾತೀಯತೆ, ಪಕ್ಷಲೀಯ ಉಪಟಳ, ಶಿಸ್ತುಗೇಡು, ಅತ್ಯಾಚಾರ, ಹತ್ಯಾಕಾಂಡ-ಎಲ್ಲವೂ ಒಮ್ಮೆಲೆ ಬೆಂಕಿಯ ನೂರು ನಾಲಿಗೆಗಳಾಗಿ ರಾಷ್ಟ್ರವನ್ನು ಸುತ್ತ ಮುತ್ತ ಸುಟ್ಟು ನೆಕ್ಕಹತ್ತಿದವು.

ಒಬ್ಬ ಮಹಾಪುರುಷ–ಆತ ಎಂಥ ಮೊಹರಿಯ ಸರ್ವಾಧಿಕಾರಿಯೇ ಆಗಿರಲಿ, ರಕ್ಷಕನಿರಲಿ, ರಾಕ್ಷಸನಿರಲಿ ಸತ್ತೆಯ ದರ್ಪದಲ್ಲಿ ಊರ್ಜಿತವಾಗಿರುವ ತನಕ ದೇಶದಲ್ಲಿಯ ಅನೇಕ ಸಮಸ್ಯೆಗಳು ಬಗೆಹರಿಯದಿದ್ದರೂ ಸ್ಥಗಿತವಾಗಿರುತ್ತದೆ. ಆತ ಕಣ್ಮರೆಯಾದೊಡನೆ ಅವು ತಾನೇ ತಾನಾಗಿ ತಲೆಯೆತ್ತಿ ತಾಂಡವವಾಡುತ್ತವೆ. ಇದು ಮಿಕ್ಕ ದೇಶಗಳಲ್ಲಿಗಿಂತ ಹೆಚ್ಚಾಗಿ ನಮ್ಮ ಭಾರತದಲ್ಲಿ ಇಂದು ಕಂಡು ಬರುತ್ತದೆ.

ನೆಹರೂ ಪರ್ವದ ಸ್ವರೂಪವೇನಿತ್ತು? ಅದು ಮುಗಿದಂದಿನಿಂದ ನಮ್ಮ ರಾಜಕೀಯ ಪದ್ಧತಿಯ ರಾಜಕಾರಣದ ಪರಿಸ್ಥಿತಿಯ ಸ್ವರೂಪವೇನಾಗಿದೆ? ಇದೇ ಈ ಲೇಖನದ ವಿಷಯವು.

ನೆಹರೂ ಪರ್ವದ ಯಶಸ್ಸಿಗೆ ಕೆಳಗಿನ ಘಟಕಗಳು ಕಾರಣವಾಗಿದ್ದವು: 1) ದೇಶದಲ್ಲಿ ರಾಜಕೀಯ ಪ್ರಜ್ಞೆ, ಜನತೆಯ ರಾಜಕೀಯೊಕರಣ (Politicisation) ತೀರ ಕೆಳಪಾತಳಿಯದಿತ್ತು. (ಇಂದಿಗೂ ಅದು ವಿಶೇಷ ಮೇಲಕ್ಕೆ ಏರಿಲ್ಲ!) ಆದರಿಂದಲೇ ಕಾಂಗ್ರೆಸ್ ಪಕ್ಷ ಅಖಂಡವಾಗಿ ೧೯೪೭ ರಿಂದ ೧೯೬೭ರ ತನಕ ರಾಷ್ಟ್ರದ ಮೇಲೆ ಒಂದು ರೀತಿ ಏಕಛತ್ರಾಧಿಪತ್ಯವನ್ನು ಮೆರೆಯಿಸುವಂತಾಯಿತು. 2) ನೆಹರೂಜಿಯ ವಿಶಿಷ್ಟ; ವಿಭೂತಿ ಮಾತ್ರ. ಇನ್ನೊಬ್ಬ ಜಗದ್ವಂದ್ಯ ವಿಭೂತಿಯ ಮಾನಸ ಪುತ್ರನಾಗಿ ಭಾರತದ ಭಾಗ್ಯವಿಧಾತನೆಂದು ಪಡೆದ ಉತ್ತರಾಧಿಕಾರದ ನಿರಂಕುಶ ಪ್ರಭುತ್ವ; ಅದರಿಂದ ಆಳುವ ಮಹಾಪಕ್ಷದೊಳಗಿನ ಅನೇಕ ಸ್ಪೈಪೋಟಿಗಳ ಒಳತೋಟಿಯನ್ನು ತಗ್ಗಿಸಿ ಹಿಡಿತದಲ್ಲಿಟ್ಟುಕೊಳ್ಳಬಲ್ಲ ಅವರ ಸ್ವತಃ ಸಿದ್ಧ ಹತೋಟಿ. 3) ಪ್ರತಿ ಚುನಾವಣೆಯಲ್ಲಿಯೂ ಯಥೇಷ್ಟ 'ಗಿಟ್ಟಿಸಿ'ಕೊಳ್ಳಬಹುದಾದ 'ಓಟುಗಳ ಬ್ಯಾಂಕು'ಗಳ, ದೇಶದಾದ್ಯಂತ ಕೃತಜ್ಞ ರಾಷ್ಟ್ರಪ್ರೇಮಿ ಮತದಾರ ಸಂಘಗಳಲ್ಲಿ ಕಾಂಗ್ರೆಸ್ಸಿನ ಪತ್ತಿನ (goodwill) ಅಕ್ಷಯಪಾತ್ರ. 4) ಈ ಬ್ಯಾಂಕಿನ ಬಲದಿಂದ ಹೆಚ್ಚು ಹೆಚ್ಚು ಅಧಿಕಾರ, ರಾಜಕಾರಣದ ನೀಚ ವ್ಯವಹಾರವನ್ನು ನಾಗಿಸಲು ಅನುಕೂಲವಾಗುವಂತೆ ಸರಕಾರೀ ಉದಾರಾಶ್ರಯ ಉತ್ತೇಜನಗಳ ಹಂಚಾಣಿಕೆ, ಸಾರ್ವಜನಿಕ ರಂಗದ ವಿಸ್ತರಣೆ-ಹೆಚ್ಚು ಹೆಚ್ಚು ವಿದೇಶಿ ಧನ ಸಹಾಯ-(ಅಂದರೆ ಸಾಲ!)ದಿಂದ. 5) ದೇಶದ ಹಿರಿಯ ಉದ್ದಿಮೆ ಹಾಗೂ ಬಂಡವಾಳಗಾರ ಸಂಸ್ಥೆಗಳಿಗೆ ಇನ್ನೂ ಹೆಚ್ಚು ಹಿರಿಮೆ ಹೆಗ್ಗಳಿಕೆ ಗಳಿಸಲು ಅನುವು, ಆದರಿಂದ ಜನತೆಯಲ್ಲಿ ಬಡವ ಬಲ್ಲಿದರ ನಡುವಿನ ಅಂತರ – ವೈಷಮ್ಯಗಳ ಆಳ ಅಗಲ ಹೆಚ್ಚುತ್ತಾ ಹೋದರೂ ಸಾರ್ವಜನಿಕ ರಂಗದ ಸ್ಥಾಪನೆ ಮತ್ತು ಯೋಜನಾಭಿವೃದ್ಧಿಯ ಕಾರ್ಯಕ್ರಮದ ಭಾಷೆಯಿಂದ ಸರಕಾರ ಬಲಬದಿಗೇ ಒಲಿದಂತೆ ಇದ್ದುದನ್ನು ಮರೆಯಿಸುವ ಮಿಶ್ರ ಆರ್ಥಿಕ ಧೋರಣೆಯ ಯಶಸ್ಸು. 6) ನೆಹರೂಜಿಯ ಅಂತಾರಾಷ್ಟ್ರೀಯ ಪ್ರತಿಷ್ಠೆ–ಮೂಲಕ ದೇಶದ ಬುದ್ಧಿಜೀವಿಗಳು ಅಸಹಾಯತೆಗೆ ಒಂದು ಬಗೆಯ ಸಾಂತ್ವನೆ. 7) ರಾಷ್ಟ್ರದ ರಕ್ಷಣೆಯ ಮೇಲೆ ಅನಿವಾರ್ಯವಾಗಿ ಕಡಿಮೆ ವೆಚ್ಚ. ಇದರಿಂದ ರಾಷ್ಟ್ರಕ್ಕೆ ವೈರಿಗಳಿಲ್ಲವೆಂಬ ಅಗ್ಗದ ಭದ್ರತೆಯ ಭಾವನೆ. 8) ಸುಶಿಕ್ಷಿತ ನಿರುದ್ಯೋಗದ ನಿವಾರಣೆಗೆ ಕೆಲಮಟ್ಟಿಗೆ ಕಾರಣವಾದ ಆಡಳಿತಗಾರ ಸಿಬ್ಬಂದಿಗಳ ಬಹುಮುಖವಾದ ವಿಸ್ತರಣೆ.

ಈ ಅಷ್ಟ ಸಿದ್ಧಿಗಳು ನೆಹರೂ ಯುಗದ ಸಲ್ಲಕ್ಷಣಗಳು. ಆದರೆ ನೆಹರೂಜೀ ತನ್ನ ಕಾಂಗ್ರೆಸ್ ಪಕ್ಷವನ್ನೂ ಪ್ರಜಾಪ್ರಭುತ್ವದಲ್ಲಿ ಅಭಿವೃದ್ಧಿ ವಿಕಾಸದಲ್ಲಿ ಜನತೆಯು ಹೃತ್ಪೂರ್ವಕವಾಗಿ ಹುರುಪಿನಿಂದ ಭಾಗವಹಿಸಲು ಪ್ರೇರಕವಾಗುವಂತೆ ಅದಕ್ಕೆ ಸಾಧಕವಾಗುವಂತೆ ಸಂಘಟಿಸುವ ಗೊಡವೆಗೇ ಹೋಗಲಿಲ್ಲ. ಒಮ್ಮೆ 'ಕಾಮರಾಜ ಯೋಜನೆ'ಯನ್ನೊಡ್ಡಿ ಕೆಲವು ಕಾಂಗ್ರೆಸ್ ಶ್ರೇಷ್ಠಿಗಳನ್ನೂ ತನ್ನ ಸರಕಾರದಿಂದ ಹೊರಗಿಟ್ಟರೂ ಅವರ ಶಕ್ತಿ ಯುಕ್ತಿಗಳು ಕಾಂಗ್ರೆಸ್ ಸಂಘಟನೆಯ ಸಮೀಕರಣಕ್ಕೆ ಹೂಡುವಂತೆ ಏನೂ ಗಮನ ಕೊಡಲಿಲ್ಲ. ದೇಶದಲ್ಲಿ ವಿಶಾಲವಾಗಿ ಒದಗುತ್ತಿದ್ದ ಪಂಚವಾರ್ಷಿಕ ಯೋಜನೆಗಳ ಯಶಸ್ಸಿನ ಸದ್ವಿನಿಯೋಗವಾಗಿ ಸಾಮಾಜಿಕ ಸುಧಾರಣೆ ಅಥವಾ ಬದಲಾವಣೆ ಸಮಾನ ನ್ಯಾಯ ಮತ್ತು ಆಧುನಿಕತೆಯ ವೃಷ್ಟಿಯಿಂದ ಫಲಪ್ರದವಾಗುವಂತೆ ಅವರು ನೋಡಿಕೊಳ್ಳಲಿಲ್ಲ-ನೋಡಿಕೊಳ್ಳಲು ಅವರಿಗೆ ಶಕ್ಯವಾಗಲಿಲ್ಲವೆನ್ನಬಹುದು.

ಈ ಸಾಮಾಜಿಕ ಕ್ರಾಂತಿಗೆ ದೇಶದ ಪರಿಸ್ಥಿತಿ ಇನ್ನೂ ಪಕ್ವವಾಗಲಿಲ್ಲವೆಂದು ಅವರು ತಿಳಿದರೋ? ದೇಶ ಇಂಥ ಸ್ಥಿತ್ಯಂತರಕ್ಕೆ ಬೇಕಾಗುವ ಸಮೃದ್ಧಿಯ ಮಟ್ಟಕ್ಕೆ ತನ್ನ ಅಭಿವೃದ್ಧಿಯನ್ನು ಸಾಧಿಸಿಕೊಂಡಿಲ್ಲವೆಂದು ಭಾವಿಸಿದರೋ? ಅಥವಾ ಇಂಥ ಬದಲಾವಣೆ ಕೇವಲ ಆಡಳಿತಗಾರರ ಚಾಲನೆಯಿಂದಲೇ ತರಲು ಶಕ್ಯವೆಂದು ಲೆಕ್ಕ ಹಾಕಿದರೋ? ಸದ್ಯ ತಾನು ವಹಿಸಿಕೊಂಡ ಯೋಜನಾಭಿವೃದ್ಧಿಯ ಕಾರ್ಯಕ್ರಮವನ್ನು ಆಡಳಿತಗಾರಿಕೆಯ ಪ್ರಚಂಡ ಯಂತ್ರವೇ ನಿರ್ವಹಿಸಿದರೆ ಈ ಹಂತದಲ್ಲಿ ಸಾಕು. ಜನತೆಯ ಸಹಕಾರ-ಭಾಗವಹಿಸುವಿಕೆ ಆ ಮೇಲೆ ಬರಲಿ ಎಂದು ಲೆಕ್ಕ ಹಾಕಿದರೋ? ಯೋಜನಾಬದ್ಧ ಅಭಿವೃದ್ಧಿಯನ್ನು ಹಂತ ಹಂತವಾಗಿ ಸಾಧಿಸಿದ ರಶಿಯಾ ಚೀನಗಳಲ್ಲಿ ಸರಕಾರೀ ಯಂತ್ರಣೆಯ ಜತೆಗೆ ದೇಶದಲ್ಲಿಯ ಸಾರ್ವಭೌಮ ಸರಕಾರೀ ಪಕ್ಷದ ಸಂಘಟನೆಯೂ ಅಷ್ಟೇ ತೀವ್ರವಾಗಿ ವೇಗದಿಂದ ಮನಸ್ಸುಗೊಟ್ಟು ಯೋಜನಾ ಕಾರ್ಯದ ಪ್ರಚಾರಕ್ಕೆ, ಪ್ರಯತ್ನಕ್ಕೆ ಮತ್ತು ಯಶಸ್ಸಿಗೆ ದುಡಿದದ್ದು ನಾವು ನೋಡುತ್ತೇವೆ. ಆದರೆ ನಮ್ಮ ದೇಶದಲ್ಲಿ ಅಂಥ ಒಂದು ವಿರಾಟ್ ಸಾಧನೆ ಬೃಹತ್ ಕಾರ್ಯ ಸಂಘಟನೆ ನೆಹರೂ ಯುಗದಲ್ಲಿ ನಡೆಯಲೇ ಇಲ್ಲ. ನಡೆದಿದ್ದರೆ ಅದು ಪ್ರಚಾರ ರಂಗದಲ್ಲಿಯೇ ಹೊರತು ಪ್ರಯತ್ನ ರಂಗದಲ್ಲಿ ಅಲ್ಲ.

ಆದ್ದರಿಂದ ಈ ಸ್ವಾತಂತ್ರ್ಯೋತ್ತರಯುಗದಲ್ಲಿ ಕಾಂಗ್ರೆಸ್ ಪಕ್ಷ ಕ್ರಮೇಣ ತನ್ನ ಪೂರ್ವದ ಧ್ಯೇಯವಾದವನ್ನು ಚೈತನ್ಯವನ್ನು ಕಾರ್ಯ ಶಕ್ತಿಯನ್ನು ಕಳೆದುಕೊಂಡಿತು. ಅದು ಮತದಾರ ಜನತೆಯಲ್ಲಿ ತನ್ನ ವರ್ಚಸ್ಸನ್ನು, ನಾಯಕತ್ವವನ್ನು ಆಳವಾಗಿ ವಿಶಾಲವಾಗಿ ಬೆಳೆಯಿಸಿಕೊಳ್ಳುವ ಗೋಜಿಗೇ ಹೋಗಲಿಲ್ಲ; ಲಾಟರಿಯಲ್ಲಿ-ಬಂದ ಆಕಸ್ಮಿಕ ಧನಲಾಭವನ್ನು ಮುಂದು ಗಾರಿಕೆಯಲ್ಲಿ ಕಳೆದುಕೊಳ್ಳಲು ಹೊರಟ ಹಳ್ಳಿಯ ಹುಂಬನಂತೆ ಕಾಂಗ್ರೆಸ್ ಪಕ್ಷವು ಆಕಸ್ಮಿಕವಾಗಿ ಅಕಲ್ಪಿತವಾಗಿ ಬಂದ ಸ್ವಾತಂತ್ರ್ಯ ಸತ್ತೆಯ ಭೋಗಕ್ಕೆ ಬಾಯ್ಬಿಟ್ಟಿತು, ಶಿಥಿಲವಾಯಿತು.

ಕಾಂಗ್ರೆಸ್ಸಿನ ಶ್ರೇಷ್ಠಿಗಳು ಕೇಂದ್ರದಲ್ಲಿಯೂ, ರಾಜ್ಯಗಳಲ್ಲಿಯೂ ಸರಕಾರದಲ್ಲಿ ಸೇರಿದರು. ಪಕ್ಷ ಸಂಘಟನೆಯ ಹೊಣೆಯನ್ನು ಎರಡನೆಯ ತರಗತಿಯ ಮುಂದಾಳುಗಳಿಗೆ ಒಪ್ಪಿಸಿದರು. ಅಂಥವರು ತಮ್ಮ "ಯಜಮಾನರ" ಬಾಲಬಡಕರಾಗಿ ಕೋಟಿನ ಗೊಂಡೆಗಳಾಗಿ ಕೊರಳ ಗಂಟೆಗಳಾಗಿಯೇ ಮೆರೆದಾಡಿದರು. ಮಹಾಚುನಾವಣೆಗಳಲ್ಲಿ ಎಲ್ಲಾ ಮತದಾರ ಕ್ಷೇತ್ರಗಳಲ್ಲಿ ಎಲ್ಲ ವಿರೋಧಿ ಪಕ್ಷಗಳೊಂದಿಗೆ ಹೋರಾಡುವವರು ಕೊನೆಗೂ ನೆಹರೂಜಿಯೊಬ್ಬರೇ ಆದಂತಿತ್ತು!

ನೆಹರೂಜಿಗೆ ಈ ಅನಿವಾರ್ಯ ಕೇಂದ್ರೀಕರಣ ಕಾಂಗ್ರೆಸ್ಸಿನ ಬಧಿರೀಕರಣ ಸಂಘಟನೆಯ ಶಿಥಿಲೀಕರಣ ಕೇವಲ ಆಡಳಿತಗಾರಿಕೆಯ ಬಹುಲೀಕರಣ ಗೊತ್ತಿತ್ತು.

(ಹದಿನಾಲ್ಕನೇ ಪುಟ ನೋಡಿ)

If you are a Book Lover
and
Kannada Books are your special interest, then
PLEASE ENQUIRE AT
NAVABHARAT BOOK DEPOT, UDIPI
(Regd. Publishers & Book Sellers)
For your requirements.
We have always in stock the latest books published all over Karnatak

ದೀಪಾವಳಿಯಂದು ದೀಪವನ್ನುರಿಸಲು...

ಸಾಂಪ್ರದಾಯಿಕವಾಗಿ ದೀಪಾವಳಿಯಾಚರಿಸಲು ಅವಶ್ಯಕ ಪದಾರ್ಥಗಳು ಚಂದ್ರಲೋಕ ದಾಟಿವೆ; ಭೂಮಿಪೂಜೆ ಮಾಡಲು ಶತ್ರುಗಳ ಕಾಟವು ಹೆಚ್ಚಿದೆ; ಗೋಪೂಜೆ ಮಾಡೋಣವೆಂದರೆ, ಅವು ಕಸಾಯಿಖಾನೆಯ ದಾರಿಯಲ್ಲಿವೆ; ಧನಲಕ್ಷ್ಮೀಪೂಜೆಗೆ ಮಾಸಾಂತ್ಯವಾಯ್ತು. ಹಾಗಾದರೆ, ಈ ಬಾರಿ ದೀಪಾವಳಿಯನ್ನು ಹೇಗೆ ಆಚರಿಸಬೇಕು?...

ಲೇಖಕರು:
ಶ್ರೀ ಶಿವಶಂಕರ

ಹಿಂದಿನಂತೆ ಈ ವರ್ಷವೂ ದೀಪಾವಳಿ ಬಂದಿದೆ. ಆದರೆ ಈ ಸಲ ಅದು ಆಂಗ್ಲ ಮಾಸದ ಕೊನೆಯಲ್ಲಿ ಬಂದಿರುತ್ತದೆ. ಇನ್ನೂ ಕೆಲ ಸರಕಾರದ ಪತ್ರಗಳಲ್ಲಿಯೇನಾದರೂ, ಆಂಗ್ಲ ಭಾಷೆ ಬಲ್ಲವರ ಬಳಿ ಬಳಕೆಯಲ್ಲಿರುವದು ಅದೇ ವಿಧಾನವಿದೆ. ಈ ದೃಷ್ಟಿಯಿಂದ ನೋಡುವಾಗ ದೀಪಾವಳಿಗೂ ಕೊನೆ ಬರುತ್ತಿದೆಯೋ ಅನ್ನುವ ಸಂದೇಹಕ್ಕೆ ಆಸ್ಪದ ಬರುತ್ತದೆ. ಪ್ರಚಲಿತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಸಂಪ್ರದಾಯ ವಿರೋಧಿ ಸಮಿತಿಯ ಶ್ರೀಮತಿ ಸುಭದ್ರಾ ಜೋಷಿಯವರೊಂದಿಗೆ ಸೇರಿ ಹಳೆಯ ಸಂಪ್ರದಾಯಗಳನ್ನು ದೂರ ಸರಿಸಿ ಹೊಸ ಸಂಪ್ರದಾಯಗಳನ್ನು ಬಳಕೆಗೆ ತರಲು ಶ್ರಮಿಸುತ್ತಿದ್ದಾರೆ. ದೀಪಾವಳಿ ಆಚರಿಸುವದೊಂದು ಸಂಪ್ರದಾಯವಾಗಿ ಬಿಟ್ಟಿದೆ ಎಣ್ಣೆ ಹಚ್ಚಿಕೊಳ್ಳಬೇಕು. ಅದೂ ಸೂರ್ಯೋದಯಕ್ಕಿಂತ ಮುಂಚೆಯೇ, ಹೊಸ ಬಟ್ಟೆಗಳನ್ನುಟ್ಟುಕೊಳ್ಳಬೇಕು, ಸಿಹಿ ತಿನ್ನಬೇಕು....ಇವೆಲ್ಲಾ ಇಂದು ಸಾಧ್ಯವೇ? ಅಸಾಧ್ಯತೆಯನ್ನು ಅರಿತುಕೊಂಡ ಇಂದಿರಾ ದೇವಿಯವರು ಕ್ರಾಂತಿಕಾರಕ ಬದಲಾವಣೆಯನ್ನುಂಟು ಮಾಡಿದರೆ ಅದೆಷ್ಟು ಒಳ್ಳೆಯದು, ಅನುಕೂಲ! ಆದೇಕೋ, ಅವರು ಆ ರೀತಿ ಮಾಡದೆ ಸುಮ್ಮ ಸಮಾಜವಾದೀ ಸಮಾಜದ ಕುರಿತು ಭಾಷಣ ಮಾಡುತ್ತಿದ್ದಾರೆ. ಬ್ಯಾಂಕುಗಳಲ್ಲಿ ಕೆಲವನ್ನು ರಾಷ್ಟ್ರೀಕರಿಸಿ, ಸಾಲ (?) ತೆಗೆದು ಕೊಂಡಾದರೂ ದೀಪಾವಳಿ ಆಚರಿಸಲು ಅವರು ಏರ್ಪಾಡು (?) ಮಾಡಿ ಕೊಟ್ಟಿದ್ದಾರೆ. ಇನ್ನೊಂದೆಡೆ ಸಂಪ್ರದಾಯವನ್ನು ವಿರೋಧಿಸುವವರಿಗೆ ಸುಭದ್ರವಾಗಿ ಜೋತು ಕೊಂಡಿದ್ದಾರೆ. ಶ್ರೀಮತಿ ಜೋಷಿಯವರು ಜ್ಯೋತಿಷ್ಯ ನೋಡಿ ಹೇಳುವ ವರೆಗೆ ಇದೇ ಪರಿಸ್ಥಿತಿ ಮುಂದರಿಯ ಬಹುದು. ಸುಭದ್ರಾ ಜೋಷಿ ಒನ್ಮ್ಸ ಸು.... ಆರಂಭಿಸಿದಲ್ಲಿ ಅದನ್ನೆಳೆದುಕೊಂಡು ಇಂದಿರಾಜೀ ಗಮಿಸಿ ಮುಗಿಸಿ ಬಿಡಬಹುದು. ಅನಂತರ ದೀಪಾವಳಿಯನ್ನು ಆಚರಿಸುವ ಸಂಪ್ರಾದಾಯಕ್ಕೆ ಪೂರ್ಣ ವಿರಾಮ ಬಂದೀತು. ಈಗ ಅದು ಕೇವಲ ಸಂಪ್ರದಾಯವಾಗಿ ಉಳಿದಿದೆ ವಿನಾ ಅದರ ನೈಜ ಅರ್ಥ, ಆದರಂತೆ ಆಚರಣೆ ಅಪರೂಪ.ದುಬಾರಿ ಬೆಲೆಯ ಈದಿನಗಳಲ್ಲಿ ಅದರಲ್ಲೂ ಮಾಸಾಂತ್ಯದಲ್ಲಿ, ಅದು ಸಂಪ್ರದಾಯವಲ್ಲದೆ ಇನ್ನೇನು? ಯಾವಾಗ ಜನತೆಯಿಂದ ಅದನ್ನು ಸರಿಯಾಗಿ ನಡೆಸಲು ಸಾಧ್ಯವಾಗುತ್ತಿಲ್ಲವೋ, ಅದನ್ನೇತಕ್ಕೆ ಜನತೆಗಾಗಿ ಸರಕಾರವೇ ಆಚರಿಸ ಬಾರದು? ಅದನ್ನು ರಾಷ್ಟ್ರೀಕರಣ, ಸರಕಾರೀಕರಣ.... ಅದೇನು ಬೇಕಾದರೂ ಅಡಿಕೊಳ್ಳಲಿ. ಮಂತ್ರಿಪಡೆಗೆ ಪಟಾಕಿ ಹೊಡೆಯಲು ಗೊತ್ತಿಲ್ಲವೇನು? ರಾಜಕೀಯಸ್ಥರಂತೂ ಅದರಲ್ಲಿ ಪರಿಣಿತರಾಗಿ ಬಿಟ್ಟಿದ್ದಾರೆ. ಅಧಿಕಾರದಲ್ಲಿರುವವರಿಗೆ ಇನ್ನೂ ಕೆಲವರ ಪಕ್ಕಬಲ ಬೇಕೇದಾದಲ್ಲಿ ಸರ್ವಪಕ್ಷ ದೀಪಾವಳಿ ಆಚರಣೆ ನಡೆಸಿದರೆ ಆಯಿತು. ಇಂದಿರಾವೆಂಬ ದೀಪಕ್ಕೆ ರಾಜಕೀಯ ಪಕ್ಷಗಳೆಂಬ ಹಾತೆಗಳು ಹಾರಿ ಬಂದು ಬೀಳುತ್ತಿಲ್ಲವೇನು? ಹಾಗಿರುವಾಗ ಇಂದಿರಾಜೀ ಕರೆದಲ್ಲಿ ಇತರ ರಾಜಕೀಯ ಪಕ್ಷಗಳು ಬರದುಳಿಯುವದುಂಟೇನು? ಸರಕಾರವು ತನ್ನ ನೌಕರರಿಗೆ ಅಂದು ರಜೆಕೊಡುತ್ತಿರುವದರಿಂದ ಇಂದಿರಾ ಸರಕಾರವು ದೀಪಾವಳಿಯನ್ನಾಚರಿಸುವ ಸಂಪ್ರದಾಯಕ್ಕೆ ವಿರೋಧವಿಲ್ಲವೆಂದಾಯಿತು. ಅದು ತನ್ನ ಉದ್ಯೋಗಸ್ಥರಿಗೆಹಬ್ಬವನ್ನಾಚರಿಸಲುಸಾಲಕೊಡುತ್ತಿರುವದರಿಂದ ಅದನ್ನು ಈ ವಿಷಯದಲ್ಲಿ ಸಂಪ್ರದಾಯ ವಿರೋಧಿ ಅನ್ನುವದು ಸರಿಯೇ ಅಲ್ಲ. ಸಂಪ್ರದಾಯ ವಿರೋಧಿಯಲ್ಲವಾದುದರಿಂದ, ಬೆಲೆ ಏರುತ್ತಿರುವ ಈ ದಿನಗಳಲ್ಲಿ, ರಾಷ್ಟ್ರೀಕರಣ (ಸರಕಾರೀಕರಣ)ದ ಈ ಪ್ರಗತಿಯ ದಿನಗಳಲ್ಲಿ ಇಂದಿರಾಜೀಯವರು ಪ್ರತಿಯೊಂದು ರಾಜ್ಯಕ್ಕೂ ತನ್ನ ಸಚಿವರನ್ನು ಕಳುಹಿಸಿ, ಆ ರಾಜ್ಯದ ಮಂತ್ರಿಗಳೊಂದಿಗೆ ಸೇರಿ, ಅಥವಾ ಅವರು ಸೇರದಿರುವಲ್ಲಿ ಇವರೇ ಮುಂದೆ ನಿಂತು, ಸರ್ವಪಕ್ಷಗಳ (ಅಥವಾ ತಮ್ಮೊಂದಿಗೆ ತಾಳ ಹಾಕುತ್ತಿರುವ ಪಕ್ಷಗಳ) ಸಹಾಯದಿಂದ (ಹಾಗೆನ್ನ ಬಾರದಲ್ಲವೇ?–ಸೇರಿಕೊಂಡು ಅನ್ನಬೇಕು) ದೊಡ್ಡ ದೀಪ ಉರಿಸಿ, ಪಟಾಕಿ ಹೊಡೆದು ಜನತಾ ದೀಪವಾಳಿ ಆಚರಿಸುವದು ಈಗಿನ ಕಾಲಕ್ಕೆ ಹೇಳಿಸಿದ್ದೇ. ತಮಿಳುನಾಡಿನ ಡಾ. ಮು. ಕ. ದ ಕರುಣಾನಿಧಿಯವರು "ಗಾಂಧಿ ಉತ್ಸವ"ವನ್ನು ಆಚರಿಸಿದಂತೆ, ಇತರರು ಇದಕ್ಕೆ ಮುಂದೆ ದೀಪಾವಳಿಯನ್ನಾಚರಿಸದರೆ ಅಬ್ಬಾ, ಅದೆಷ್ಟು ಸ್ವಾಗತಾರ್ಹ! ಈ ಉತ್ಸವಕ್ಕೆ ಕೇಂದ್ರವೂ ಸಹಾಯ ಮಾಡೀತು. ಸಂಪ್ರದಾಯಕ್ಕೆ ವಿರೋಧ ಇಲ್ಲದಿರುವದರಿಂದ ಇಂದಿರಾಜೀ ಇದಕ್ಕೇನೂ ಮೀನಮೇಷ ಮಾಡಲಾರರು. ಅವರೊಂದಿಗಿರುವ ಕಮ್ಯೂನಿಷ್ಟರಿಗಂತೂ ಅದರಿಂದ (ರಾಷ್ಟ್ರೀಕರಣಗೊಳಿಸಿದ ಜನತಾ ದೀಪಾವಳಿಯಿಂದ) ಬಹಳ ಸಂತೋಷವಾಗ ಬಹುದು. ಆದರೆ ಅದನು ವ್ಯಕ್ತಪಡಿಸಲು ಅವರಿಗೆ ಅವಕಾಶಬೇಕು, ಅಷ್ಟೇ. ರಷ್ಯಾ ಅದನ್ನು ಭಲೇ, ಅಂದಲ್ಲಿ ಮಾತ್ರ ಇಲ್ಲಿಯ ಕಮ್ಯೂನಿಸ್ಟರು ಅದನ್ನು ಚೆನ್ನಾಗಿ ನಡೆಯಿತೆನ್ನ ಬಹುದು. ಅದೇ ರೀತಿ ಚೈನೀ ಚೇಲಾಗಳು ಅವರು ಭಾಗವಹಿಸುವ ಮುಂಚೆಯೇ ತಮ್ಮ "ಒಡೆಯರಿ"ಂದ ಒಪ್ಪಿಗೆಯನ್ನು ಪಡೆದುಕೊಂಡೇ ಸೇರಿಯಾರು. ಅಂತರ್ಲಾಗ ಹೊಡೆಯಲು ಅವರಿಗದ್ಯಾರು ಕಲಿಸಿಕೊಡಬೇಕಾಗಿಲ್ಲವೆಂಬುದೂ ನಿಜವಿದೆ.ಇವರಲ್ಲಿ ಬಹಳ ಸಂತೋಷವಾಗುವದು ಇಂದಿರಾಜೀಯವರ"ಭಾರೀ ಸಾಹಸಿ" ನಕ್ಸಲಬ್ಯಾರಿಗಳಿಗೆ. ಬಾಲಕ್ಕೆ ಬೆಂಕಿ ತಗಲಿದಾಗ ಮಂಗವೊಂದು ಲಂಕೆಯನ್ನು ಸುಟ್ಟಿತೆಂದರೆ, ಇನ್ನು ಕೈಯ್ಯಲ್ಲಿಕೊಟ್ಟರೆ ಕೇಳಬೇಕೇ? ಉಪಾಧ್ಯಾಯರು ನಿಂತುಕೊಂಡು ಮೂತ್ರಮಾಡಿದಲ್ಲಿ, ಅವರ ಮಗ ಓಡಿ ಹೋಗುತ್ತಿರುವಂತೆಯೇ ಹುಚ್ಚೆ ಹೊಯ್ಯುತ್ತಾನಂತೆ! ಇದು ಉಪಾಧ್ಯಾಯ ವೃತ್ತಿ "ಗುತ್ತಿಗೆ" (ಕೊಂಟ್ರೇಕ್ಟ್) ಕೆಲವರು ಪಡೆದುಕೊಂಡಿದ್ದಾಗ. ಇನ್ನು ಈ ಇಪ್ಪತ್ತನೇ ಶತಮಾನದಲ್ಲಿ ಕೇಳಬೇಕೇನು? ಇಂದಿರಾದೇವಿಯವರ ಕಣ್ಸನ್ನೆಯಾದರೆ ಸಾಕು, ಭಾರತದಾದ್ಯಂತ 'ಜನತಾ ದೀಪಾವಳಿ', ಭಾರತ ಪೂರಾ ಒಮ್ಮೆಗೆಲೇ ಕೆಂಪಾದೀತು. ಅನಂತರ....ಅದನ್ನು ಬಿಟ್ಟು ಬಿಡಬೇಕು. ಹೀಗೆ ಇಂದಿರಾಜೀ ದೀಪಾವಳಿಯನ್ನು ಪ್ರಗತಿಮಯ ರೀತಿಯಲ್ಲಿ ಆಚರಿಸಲು ಅದೆಂದು ಮುಂದಕ್ಕೆ ಬರುತ್ತಾರೋ! ಅದ್ಯಾವ ಕರುಣೆಯನ್ನು, ನಿಧಿಯನ್ನು ಅವರು ಎದುರು ನೋಡುತ್ತಿದ್ದಾರೋ, ಏನೋ.

ಸಂಪ್ರದಾಯಸ್ಥರಿಗೂ ಸಿಟ್ಟು ಬರದ ರೀತಿಯಲ್ಲಿ, ಶ್ರೀ ಸಾಮಾನ್ಯನೂ ಕಂಡು ಆನಂದದಲ್ಲಿ ಭಾಗವಹಿಸುವಂತಾಗುವ ರೀತಿಯಲ್ಲಿ, ಪ್ರಗತಿ ಪಥದಲ್ಲಿ ಸಾಗುವ ರೀತಿಯಲ್ಲಿ ಇದನ್ನು ಇಂದಿರಾ ರಾಣಿಯವರು ಆಚರಿಸಿದರೂ ಮುಸ್ಲಿಂ ಲೀಗಿಗಳು ಅವರ ಮೂಗು ಹಿಡಿದೆಳೆಯದೆ ಬಿಡಲಾರರು. ಇಂದು ಇಂದಿರಮ್ಮಯವರ (ತಮಿಳಿನ ಸಂಪರ್ಕ) ಮೂಗಿನ ದಾರ ಇರುವದು ಮುಸ್ಲಿಂ ಲೀಗಿಗಳ ಕೈಯಲ್ಲಿ ತಾನೇ? ಹಾಗಿರುವಾಗ ಅವರ ಮಾತಿಗೆ ಕಿವಿಗೊಡದಿದ್ದಲ್ಲಿ ಹೇಗೆ? 'ಅಲ್ಪ ಸಂಖ್ಯಾಕರಿ'ಗೆ ಕಿವಿಗೊಡದೆ ಸುಮ್ಮಗಿರುವದುನ್ಯಾಯವೇನು? ಅವರ ಪಾಲಿಗೆ ಇದು ಹಬ್ಬ ಇರುವದಿಲ್ಲ. ಅದು ಕಾಫೀರರಿಗೆ ಏನು ಬೇಕಾದರೂ ಇರಬಹುದು. ಅವರಿಗೆ ದೀಪಾವಳಿ ಆಚರಿಸಲು ಖುರಾನು ಆದೇಶವಿತ್ತಿಲ್ಲ, ಮೌಲ್ವಿ ಉಪದೇಶಿಸಿಲ್ಲ; ಖಾನ್ ಆಜ್ಞೆ ಕೊಟ್ಟಿಲ್ಲ. ಝಾಕೀರ ಹುಸೇನರು ರಾಷ್ಟ್ರಾಧ್ಯಕ್ಷರಾಗಿದ್ದಾಗ ರಾಷ್ಟ್ರಪತಿಭವನವನ್ನು ಅಂದು ದೀಪಗಳಿಂದ ಅಲಂಕರಿಸುತ್ತಿದ್ದಿಲ್ಲವೆನ್ನಲಾಗಿರುತ್ತದೆ. ರೈಲ್ವೇ ನಿಲ್ದಾಣಗಳನ್ನು ಕೂಡಾ ಅಂದು ಅಲಂಕರಿಸಲಾಗುತ್ತದೆ, ಆದರೆ ರಾಷ್ಟ್ರಪತಿ ಭವನವನ್ನಲ್ಲ! ಯಾಕೆ? ಡಾ। ಝಾಕೀರ ಹುಸೇನರು ಮುಸ್ಲಿಂ ಎನ್ನುವ ಏಕಮೇವ ಕಾರಣಕ್ಕಾಗಿ! ಡಾ। ಜಿಲಾನಿ, ಹಮೀದ್ ದಲ್ವಾಯಿ, ಅಬ್ದುಲ್ ರೆಹಮಾನ್....ಅದೆಷ್ಟು ಸ್ವರ ತೆಗೆಯಲು ಸಾಧ್ಯ? ಅವರದೆಷ್ಟು ಅಂದರೂ ಮತೀಯ ಮುಖಂಡರೂ, ರಾಜಕೀಯ ಮುಖಂಡರೂ

ದೀಪಾವಳಿಯ ಶುಭಾಶಯಗಳು !

ಹೋಟೇಲ್ ಶಿವಪ್ರಸಾದ

ಮೇಲ್ದರಗೆಯ ಪ್ರಮುಖ ಬೋರ್ಡಿಂಗ್-ಲಾಡ್ಜಿಂಗ್

ಕುಂದಾಪುರ, ದ. ಕ.

ಟೂರಿಸ್ಟ್ ಪಾರ್ಟಿಗಳಿಗೆ ವಿಶೇಷ ವ್ಯವಸ್ಥೆ!
ದೊಡ್ಡ ದೊಡ್ಡ ನಗರಗಳಲ್ಲಿಯೂ ಅಪರೂಪವಾದ ವಿಶಾಲ ಸುಸಜ್ಜಿತ
ಸಿಂಗಲ್ ಮತ್ತು ಡಬ್ಬಲ್ ರೂಮುಗಳು!
ಕಾರ್ ಪಾರ್ಕಿಂಗ್ ಸೌಕರ್ಯ!

With best compliments from :

HOTEL SHIVAPRASAD
High Class Boarding, Lodging & Restaurant
COONDAPUR, S. K.

Phone: 77

ಮುಹಮ್ಮದೀಯರನ್ನು ಈ ಹಬ್ಬದಲ್ಲಿ ಭಾಗಿಯಾಗಲು ಬಿಡಲಾರರು. ಇದರಲ್ಲಿ ಎಲ್ಲರಿಗೂ ಧೃಡನಂಬಿಕೆ. ಅದನ್ನು ಮೀರಿ ಇಂದಿರಾರಾಣಿಯವರು ಅದನ್ನು ರಾಷ್ಟ್ರೀಕರಣಗೊಳಿಸಿದ ಜನತಾ ದೀಪಾವಳಿಯನ್ನಾಗಿ ಆಚರಿಸಲು ಸಾಧ್ಯವೇ ಇರುವದಿಲ್ಲ. ತೈಮೂರನ, ಘಜ್ನಿಮುಹಮ್ಮದನ, ಘೋರಿಮುಹಮ್ಮದನ...ಅವರಂಗಜೇಬನ ಗೋರಿಗಳು! ಆಗ ಸುಮ್ಮಗುಳಿದಾವೇನು? ಅವರ ಅನುಸಾರಕರು ಒಡನೆ–ಇಂದಿರಾ, ಇನ್ನು ಮೇಲೆ ನಮ್ಮ ಓಟು ನಿನಗಿಲ್ಲವೆಂದಾರು, ತಲಾಖ್! ಅವರು ಇಂದಿರಜ್ಜಿಯಾಡಿರುವ ಮಾತುಗಳನ್ನು ಹಿಂತಿರುಗಿಸುವರು. ಇದು ಜಾತೀಯವಲ್ಲವೇನು? ಸೆಕ್ಯೂಲರ್ ವಿರೋಧಿ ಅಲ್ಲವೇನು? ಇದುವರೆಗೆ "ಹಿಂದೂ"ಗಳ ಕುರಿತು ಹೀನಾಯವಾಗಿ ಆಡಿರುವ ಇಂದಿರಜ್ಜಿ ಅದ್ಯಾವ ಮುಖವನ್ನು ಅವರಿಗೆ ತೋರಿಸಿಯಾರು, ಅದೆಷ್ಟು ನಾಲಗೆಗಳಿಂದ ಮಾತಾಡಿಯಾರು? ಇಷ್ಟರವರೆಗೆ ಕ್ರಿಶ್ಚಿಯನ್, ಇಸ್ಲಾಂ..., ಇಂತಹ ಮತಗಳ ಮಟ್ಟಕ್ಕಿಂತಲೂ ತುಚ್ಛ ರೀತಿಯಲ್ಲಿ "ಹಿಂದೂ"ಗಳ ಕುರಿತು ಅವರಾಡಿರುವದು ಅದೆಲ್ಲಿಗೆ ಹೋಗುತ್ತದೆ? ಹಿಂದೂ–ಇದು ಇಲ್ಲಿಯ ರಾಷ್ಟ್ರವಾಚಕ ಪದ, ಹಿಂದೂಗಳ ಹಬ್ಬ ಇಲ್ಲಿಯ ರಾಷ್ಟ್ರೀಯ ಹಬ್ಬ; ಅದನ್ನು ಆಚರಿಸುವದಕ್ಕೆ ಅದ್ಯಾರ ಅಡ್ಡಿಯೆನ್ನಲು ಇಂದಿರಾಜೀಯವರಿಗೆ ಇನ್ನು ಸಾಧ್ಯವಾಗಲಾರದು.

ಈ ಎರಡು ತಡೆಗಳನ್ನೂ ಮೀರಿ ಅವರು ಧೈರ್ಯದಿಂದ ತೈಲಾಭ್ಯಂಜನ ಮಾಡಿಕೊಂಡಲ್ಲಿ ಮೂರನೆಯ ಯಕ್ಷಪ್ರಶ್ನೆ ಅವರಿಗಾಗಿ ಕಾದಿದೆ. ಅದುವೇ ಅವರು ಸ್ವಸಂತೋಷದಿಂದ ನಿರ್ಮಿಸಿರುವ ನವೀನ ನರಕಾಸುರ. ಇಂದಿರಾಜೀಯವರ ಇಷ್ಟದಂತೆ ಯಶವಂತ ರಾವ್ ಛವಾನ ಖಾತೆಯನ್ನು ಬದಲಾಯಿಸುತ್ತಿರಬಹುದು. ಆದರೆ ನರಕಾಸುರರನ್ನು ಬದಲಾಯಿಸಲು ಅವರಿಬ್ಬರಿಗೂ ಸಾಧ್ಯವೇ ಇಲ್ಲ. ಅದ್ಯಾವ ಶ್ರೀಕೃಷ್ಣ ಬಂದು ಇವರನ್ನು ಬಿಡಿಸಿಯಾರು? ವರ್ಷಗಳುರುಳಿದರೂ ಸಚಿವರ ಖಾತೆಗಳು ಬದಲಾದರೂ 'ನವಯುಗ' ವಾಚಕರ ನೆನಪಿನ ಶಕ್ತಿ ಬದಲಾಗದು. "ನವೀನ ನರಕಾಸುರ" ನೆನಪು ಇದ್ದೇ ಇದೆ. ಒಂದು ತಲೆಗೂದಲು ಕಾಣೆಯಾಯ್ತೆಂಬ ಸುದ್ದಿ ಹಬ್ಬಿ ಕಾಶ್ಮೀರ ಮಾತ್ರವಲ್ಲ ಭಾರತವೇ ತಲ್ಲಣಿಸಿ ಹೋಯಿತು. ತಲೆಗೂದಲು ಇರುವ ಜೀವಂತ ಹುಡುಗಿ ಕಾಣೆಯಾದಾಗ ಅದ್ಯಾರಿಗೇನೂ ಆಗಿಲ್ಲ! ಕೊನೆಯಲ್ಲಿ ಹಂಡೂವಿನ ಪತ್ತೆಯಾಯಿತು. ವಿಚಾರಣೆ ನಡೆಸಿ ನ್ಯಾಯದಂತೆ ನಡೆಯುವದಾಗಿ ಹೇಳಿದ ಇಂದಿರಾಗಾಂಧಿ, ಯಶವಂತ ಛವಾನ ಇಂದೆಲ್ಲಿ ಇದ್ದಾರೇನೋ ನಿಜ. ಅದೆಷ್ಟು ವರ್ಷಗಳುರುಳಿದರೂ ಇನ್ನೂ ನ್ಯಾಯ ಸಿಕ್ಕಿಲ್ಲ, ನರಕಾಸುರನಿಂದ ಹಂಡೂವಿಗೆ ಬಿಡುಗಡೆ ಸಿಕ್ಕಿಲ್ಲ. ಪುನಃ ದೀಪಾವಳಿ ಬಂದಿದೆ. ನಾವು ದೀಪಾವಳಿ ಆಚರಿಸುತ್ತೇವೆ! ಆದರೆ ಪರಮೇಶ್ವರಿ ಹಂಡೂವಿನ ಪಾಲಿಗೆ ಕಗ್ಗತ್ತಲೆಯೇ ಸರಿ.

ಕಾಶ್ಮೀರದಲ್ಲಿ ನಡೆದ ಕರುಣಾಜನಕ ಘಟನೆ ಇದೊಂದೇ ಅಲ್ಲ. ಅಲ್ಲಿ ಇಂದೂ, ಭಾರತದಲ್ಲಿ ಸ್ತ್ರೀಪ್ರಧಾನಿ ಇರುವಾಗಲೇ, ಭಾರತೀಯ ರಮಣೀಮಣಿಗಳನ್ನು ಕದ್ದು ಪಾಕಿಸ್ಥಾನಕ್ಕೊಯ್ಯಲಾಗುತ್ತಿದೆ. ಇದು ಕಾಶ್ಮೀರದಿಂದ ಮಾತ್ರವಲ್ಲ. ರಾಜಸ್ಥಾನ, ಗುಜರಾಥ, ಬಂಗಾಲ, ಅಸ್ಸಾಂ-ಗಡಿ ಪ್ರದೇಶದಲ್ಲಿ ಸಹಜವಾಗಿ ಸಾಗುತ್ತಿದೆ. ಪಾಕಿಸ್ಥಾನೀ ಪಿಶಾಚಿಗಳ ಕೈಯ್ಯಲ್ಲಿಕ್ಕಲ್ಲಿರುವ ನಮ್ಮ ಭಗಿನಿಯರು ನರಕದಲ್ಲಿದ್ದಾರೆ. ನರಕಾಸುರರು ಮಹಾಭಾರತದ ನರಕಾಸುರನಿಗಿಂತಲೂ ಭಯಂಕರರಿದ್ದಾರೆ. ನರಕಾಸುರ ಸ್ತ್ರೀಸಮೂಹವನ್ನು ಸೆರೆಯಲ್ಲಿಟ್ಟು 'ಸುಖ' ಪಡೆಯಲು ಪ್ರಯತ್ನಿಸಿದ್ದಲ್ಲಿ ಇವರು ಎಲ್ಲಾ ವಿಧದಲ್ಲೂ ಅವನನ್ನು ಮೀರಿಸಿದ್ದಾರೆ. ಇವರು 'ಸುಖ' ಪಡೆಯುತ್ತಾರೆ. ಅನಂತರ ಅವರನ್ನು ಅರೇಬಿಯಾ ದೇಶಗಳಲ್ಲಿ ಗುಲಾಮಸ್ತ್ರೀಯರನ್ನಾಗಿ ಮಾರಿಬಿಡುತ್ತಾರೆ. ಅಷ್ಟೇ ಅಲ್ಲ. ಇಲ್ಲೂ ಅವರ ಆಟ ಆಡೆತಡೆ ಇಲ್ಲದೆ ನಡೆಯುತ್ತಿದೆ. ಅರೇಬಿಯಾ ದೇಶಗಳೊಂದಿಗೆ ಸಂಬಂಧವನ್ನಿಟ್ಟು ಕೊಂಡು ಬೊಂಬಾಯಿಯಲ್ಲಿ ಭಾರೀ ವ್ಯಾಪಾರ ನಡೆಯುತ್ತಿದೆ. ಪಾಕಿಸ್ಥಾನದಲ್ಲಿ ಮಾತ್ರವಲ್ಲ ಗಡಿ ಪ್ರದೇಶಗಳಲ್ಲಿ ಮಾತ್ರವಲ್ಲ, ನಗರದ ಹೃದಯದಲ್ಲೇ ನವ್ಯ ನರಕಾಸುರರ ನವೀನ ನಾನಾ ಆಟಗಳ ನಗ್ನ ಪ್ರದರ್ಶನ ನಡೆಯುತ್ತಿದೆ. ದೇಶದ ತಲೆಯಲ್ಲಿ ಮಾತ್ರ ಈ ವಿಷಕ್ರಿಮಿಗಳಿರುವದು. ಕಾಲಿನಲ್ಲೂ ಕಜ್ಜಿ ಇದೆ.

ಎರಡು ವರ್ಷಗಳ ನಂತರ ಪುನಃ ಪತ್ರಿಕೆಗಳಲ್ಲಿ ದಪ್ಪಕ್ಷರಗಳಲ್ಲಿ ಸುದ್ದಿ ಪ್ರಕಟವಾಯಿತು. ಈ ಸಲ ಕಳೆದ ಸಲಕ್ಕಿಂತಲೂ ವಿವರವಾಗಿ ಮತ್ತು ಹೆಚ್ಚಿನ ಪತ್ರಿಕೆಗಳು ಅದನ್ನು ಪ್ರಕಟಿಸಿದುವು. ಸಂಸದಿನಲ್ಲೂ ಪ್ರಶ್ನೋತ್ತರಗಳು ನಡೆದುವು. ೧೯೬೮ ಎಪ್ರಿಲ್ ತಿಂಗಳಿನಲ್ಲಿ ಭಾರತೀಯ ಜನಸಂಘದ ಕಾರ್ಯದರ್ಶಿ, ಕರ್ನಾಟಕ ಕೇಸರಿಯೆನ್ನುವ ಬಿರುದಿರುವ ಶ್ರೀ ಜಗನ್ನಾಥರಾವ್ ಜೋಷಿಯವರು ಲೋಕಸಭೆಯಲ್ಲಿ ವನಿತಾವ್ಯಾಪಾರದ ಕುರಿತು ಪ್ರಶ್ನೆ ಕೇಳಿದಾಗ ಆಗ ಉಪಮಂತ್ರಿ ಮೂರ್ತಿಯವರು ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆಯೆಂದಿರುವರು. ಎರಡೂವರೆ ವರ್ಷಗಳ ನಂತರ ಅದೇ ಪ್ರಶ್ನೆಯನ್ನು ಅದೇ ಭಾರತೀಯ ಜನ ಸಂಘದ ಶ್ರೀ ಕನ್ವರಲಾಲ್ ಗುಪ್ತರವರು ಕೇಳಿದಾಗ, ಇದು ಜಾತೀಯತೆಯನ್ನು ಪ್ರಚೋದಿಸುವ ಪ್ರಶ್ನೆಯೆಂದು "ಸೆಕ್ಯೂಲರ್‌ವಾದಿಗಳು" ಬೊಬ್ಬೆಹಾಕಿದರು. ಈ 'ವನಿತಾ ವಿಕ್ರಯ' ವ್ಯವಹಾರದ ಕುರಿತು ಚರ್ಚಿಸುವದರಿಂದ ಅಲ್ಪಸಂಖ್ಯಾತ ಕ್ರೈಸ್ತರಿಗೆ ನೋವಾಗಬಹುದೆಂದು ವಿದೇಶಾಂಗ ಸಚಿವ ಸ್ವರಣಸಿಂಗರೇ ಸ್ವತಃ ಸೂಚಿಸಿದರು. ಅಬ್ಬಾ! ಅಲ್ಪಸಂಖ್ಯಾತರ ಮನಸ್ಸಿನ (ಮತದ?) ಮೇಲೆ ಅದೆಷ್ಟು ಅಮಾತ್ಯಪಡೆಗೆ ಅಕ್ಕರೆ! ಅವರಿಲ್ಲಿ ಅದೇನು ಬೇಕಾದರೂ ಮಾಡಬಹುದು: ಜನತೆ ಚಕಾರವೆತ್ತಕೂಡದು. ಆದರೆ ಅಮೇರಿಕಾ ಹಾಗೂ ಬ್ರಿಟನಿನವರಿಗೆ ಅದರ ಭಯವಿಲ್ಲ. ಅಲ್ಲಿಯ ಪತ್ರಿಕೆಗಳು ಈ ವನಿತಾವ್ಯಾಪಾರವನ್ನು ಕಟುವಾಗಿ ಟೀಕಿಸಿವೆ. ಅನಂತರ ಇಲ್ಲಿಯ ಪತ್ರಿಕೆಗಳು ಅದನ್ನು ಬಹಿರಂಗ ಪಡಿಸಿರುವದು. ಆ ಮೇಲೆ ಸಂಸದಿನಲ್ಲಿ ಚರ್ಚೆ. ಹಾಗಿದ್ದೂ ಸಚಿವಸಂಪುಟವೇತಕ್ಕೆ ಅದನ್ನು ಮುಚ್ಚಿಡಲು ಪ್ರಯತ್ನಿಸುತ್ತದೆ? ಎರಡೂವರೆ ವರ್ಷ ಕಾಲ ವಿಚಾರಣೆ ನಡೆಸಿ ಈಗ ಈ ನಿರ್ಧಾರಕ್ಕೆ ಅವರು ಬಂದಿದ್ದಾರೆ. ಅದಕ್ಕೆ ಬೊಂಬಾಯಿಯ ಕ್ರೈಸ್ತರ ಪ್ರಮುಖ ಮತೀಯ ಮುಂದಾಳು ಹೇಳಿರುವ ಮಾತೇ ಕಾರಣವಿದೆ. ಇದುವರೆಗೆ ಪಾಶ್ಚಿಮಾತ್ಯ ರಾಷ್ಟ್ರಗಳು (ಕ್ರಿಸ್ತೀಯ ಸಮುದಾಯ) ಇಂಡಿಯಾಕ್ಕೆ ಮಾಡಿರುವ ಸಹಾಯಕ್ಕೆ ಪ್ರತಿಯಾಗಿ ಇಷ್ಟನ್ನಾದರೂ ಇಂಡಿಯಾ ಮಾಡಕೂಡದೇನು? ಕ್ರಿಸ್ತೀಯ ಮತದ ಮುಖಂಡ ಹೀಗಾಗಿಯೇ ಕೇಳಿದ್ದಾರೆ! ಬ್ರಿಟನ್ ನಮ್ಮನ್ನು ಗುಲಾಮರನ್ನಾಗಿ ಮಾಡಿದ್ದಕ್ಕೆ, ಭಾರತವನ್ನು ವಿಭಜಿಸಿರುವದಕ್ಕೆ ನಾಗಾ-ಮಿಜೋ ಸಮಸ್ಯೆಗಳನ್ನುಂಟು ಮಾಡಿ ಹಾಕಿರುವದಕ್ಕೆ, ಇಲ್ಲಿಯ ಜನರನ್ನು ಆರ್ಯ–ದ್ರಾವಿಡ, ಬ್ರಾಹ್ಮಣ–ಅಬ್ರಾಹ್ಮಣವೆಂದೆಲ್ಲಾ ವಿಂಗಡಿಸಿ ವಿದೇಶದ ವಿಷ ಬೀಜ ಬಿತ್ತಿರುವದಕ್ಕೆ ನಾವು ಅವರಿಗೆ ಹೆಂಗಸರನ್ನು ಉಡುಗೊರೆಯಾಗಿ ಕೊಡಬೇಕು! ಭಾರತ ದೊಡ್ಡ ಮಹಾರಾಷ್ಟ್ರ. ಕಿರಿಯಕುಡು ದೇಶವಾಗಬೇಕು! ಒಳ್ಳೆ ದಲ್ಲಾಳಿಯ ದೇಶ! ಅಕ್ಬರನಿಗೆ ಅಂದು ಅಂಗನೆಯರನ್ನು ಕೊಡಲು ನಾಮುಂದು, ನಾಮುಂದೆಂದು ಬಂದವರು ಈಗ ಬರುವವರಲ್ಲೇನು ಅಕ್ಷಯ್ಯ'ಋಣ ಸಂದಾಯಕ್ಕೆ ಕ್ರಿಸ್ತೀಯರಿಗೆ ಅತ್ಯಂತ ಸುಲಭೋಪಾಯವಿದೆಂದು ಕ್ರಿಸ್ತಮತ ಗುರು ಮಾರ್ಗದರ್ಶನಮಾಡಿದ್ದಾರೆ. ಅದರಂತೆ ಇಂದಿರಕ್ಕ ನಡೆದುಕೊಂಡರಾಯಿತು—ಹಿರಿಯಕ್ಕನ ಚಾಳಿ ಮನೆಮಕ್ಕಳಿಗೆಲ್ಲರಿಗೂ ಬರುತ್ತದೆ.

ಸಂಪ್ರದಾಯ ವಿರೋಧಿಗಳ, ಸೆಕ್ಯೂಲರ್‌ವಾದಿಗಳ ಸಂಕೋಲೆಯಿಂದ ತಪ್ಪಿಸಿಕೊಂಡು ದೀಪಾವಳಿಯನ್ನಾಚರಿಸುವ ಅಂದರೆ ಎಣ್ಣೆ–ಸೀಗೆ, ಬಟ್ಟೆಬರೆ, ಸಿಹಿಮದ್ದುಗಳ ಬೆಲೆ ಬಾನೆತ್ತರಕ್ಕೆ ನಿಂತಿರುತ್ತದೆ. ಅದನ್ನು ಬಿಟ್ಟು ಬರೀ ಭೂಮಿಪೂಜೆ ಮಾಡೋಣವೆಂದರೆ ಚೈನೀ ಕಮ್ಯುನಿಸ್ಟರ ಕಪಿಮುಷ್ಟಿಯಲ್ಲಿದೆ ನಮ್ಮ ದೇಶದ ಅಂಗ; ಮುಸ್ಲಿಂಲೀಗ್–ಕಾಂಗ್ರೆಸ್ಸಿಗರಿಂದಾಗಿ ಅಪವಿತ್ರವಾಗಿ ಪಾಕಿಸ್ಥಾನ ಹೆಸರುಪಡೆದು ಇಷ್ಟಷ್ಟು ಭೂಪ್ರದೇಶವನ್ನು ಪಾಕ್ ಪಿಶಾಚಿಗಳು ವಶಪಡಿಸಿಕೊಂಡಿವೆ. ಭೂಮಿಪೂಜೆ ಬೇಡ, ಗೋಪೂಜೆಯನ್ನಾದರೂ ಮಾಡೋಣವೆಂದರೆ ಅವು ಆಧುನಿಕ ಕಸಾಯಿ ಕಾರ್ಖಾನೆಗಳ ದಾರಿ ಹಿಡಿಯುತ್ತಿವೆ. ಧನಲಕ್ಷ್ಮೀ ಪೂಜೆಗೆ ಇದು ತಿಂಗಳಾಂತ್ಯವಿದೆ. ಹಾಗಿದ್ದರೂ ದೀಪಾವಳಿ ಹಬ್ಬವನ್ನಾಚರಿಸುವ ಅಂದರೆ ಅಂದು ದೀಪವನ್ನುರಿಸಲು ..

ನಿಮ್ಮ ವಿಕಾಸದ ಕಾರಣದಿಂದ ಯಾರಿಗೂ [illegible]. ಆದರೆ [illegible]. ಹಬ್ಬಗಳಲ್ಲಿ, [illegible] ನಿಷ್ಠೆಯಲ್ಲಿ ಶ್ರದ್ಧೆಯಲ್ಲಿ.

ಂ ಂ ಂ

ಪರಮಾತ್ಮನ ಪ್ರಕೃತಿಕಾರ್ಯ ಎಷ್ಟು ಇದೆ? ಇದರ ವಿಚಾರವನ್ನು ನಾನೇಕೆ ಮಾಡಲಿ? ಅದಕ್ಕಾಗಿ ನನ್ನನ್ನೊಂದು ಸಲ ಕೈ ಬಾಳಿಸಿ ಒಗೆಯಲಿಕ್ಕೆ ಸಹ ನಾನು ಯೋಗ್ಯನಿಲ್ಲ.

ಂ ಂ ಂ

ಕ್ಷಯರೋಗದ ವಿರುದ್ಧ ಹೋರಾಟ

ಇಂದು, ಕ್ಷಯರೋಗಿಯೊಬ್ಬನು ಆಸ್ಪತ್ರೆಗೆ ಹೋಗದೆಯೂ ಮತ್ತು ಅವನ ಯಥಾವತ್ತಾದ ಜೀವನ ಮತ್ತು ನಿತ್ಯಕರ್ಮಗಳಿಗೆ ತೊಂದರೆಯಿಲ್ಲದೆಯೇ ಅವನ ಸ್ವಂತ ಮನೆಯಲ್ಲಿಯೇ ಗುಣಹೊಂದುವ ಪ್ರಭಾವಶಾಲಿ ಔಷಧಗಳಿವೆ. ಡಾಕ್ಟರರ ಸಲಹೆಯಂತೆ ಕ್ರಮಬದ್ಧ ಔಷಧಿ ಸೇವನೆಯು ಅತ್ಯಾವಶ್ಯಕ. ನಿಮ್ಮ ರಾಷ್ಟ್ರದ ಟಿ. ಬಿ. ಸಂಸ್ಥೆಯು ನಿಮಗೆ ಸಹಾಯಮಾಡಲು ಸದಾ ಸಿದ್ಧವಿದೆ. ಅದನ್ನು ವಿಚಾರಿಸಿರಿ. ನೀವು ಕೂಡಾ ನಿಮ್ಮ ರಾಷ್ಟ್ರದ ಟಿ. ಬಿ. ಸಂಸ್ಥೆಗೆ ನೆರವಾಗಬೇಕು. ಬಡ ಕ್ಷಯರೋಗಿಗಳಿಗೆ ಮತ್ತು ಅವರ ಕುಟುಂಬಕ್ಕೆ ಸಹಾಯಮಾಡಲು ಅವರಿಗೆ ನಿಧಿ ಅಗತ್ಯವಾಗಿದೆ. ಟಿ. ಬಿ. ಮೊಹರುಗಳನ್ನು ಖರೀದಿಸಿ ಅವನ್ನು ನಿಮ್ಮ ಟಪ್ಪಾಲು ಪತ್ರಗಳಿಗೆ ಅಂಟಿಸಿ. ಇದು ನಿಧಿ ಅವರಿಗೆ ನೇರ ಸಹಾಯವಾಗಿದೆ.

ನೀವು ತಿಳಿದಿರುವಂತೆ, ಬಡ ಕ್ಷಯರೋಗಿಗಳು ದೀಪಾವಳಿಯಂತಹ ಹಬ್ಬಗಳಲ್ಲಿ ಸಹಭಾಗಿಗಳಾಗಲಾರರು. ಆದ್ದರಿಂದ ಟಿ. ಬಿ. ಮುದ್ರೆಗಳನ್ನು ಪಡೆದುಕೊಂಡು ಅವನ್ನು ನಿಮ್ಮ ಗ್ರೀಟಿಂಗ್ ಕಾರ್ಡುಗಳು, [illegible] ಟಿಕೇಟುಗಳು ಮತ್ತು ನಿಮ್ಮ ಸ್ನೇಹಿತರಿಗೆ ಹಾಗೂ ಪ್ರಿಯಜನರಿಗೆ ಬರೆಯುವ ಪತ್ರಗಳಿಗೆ ಅಂಟಿಸುವುದೇ ಅವರನ್ನು ನೆನೆಸುವ ಯೋಗ್ಯ ಕಾರ್ಯವಾಗಿದೆ.

ಒಂದು ಮೊಹರಿನ ಬೆಲೆ ಬರೇ 10 ಪೈಸೆ.

ಮೊಹರುಗಳು ಸಿಗುವ ಸ್ಥಳಗಳು:— ದಕ್ಷಿಣ ಕನ್ನಡ ಜಿಲ್ಲಾ ಟಿ. ಬಿ. ಎಸೋಸಿಯೇಶನ್ ಮಂಗಳೂರು. ಆಸ್ಪತ್ರೆಗಳು. ಸೆನಟೋರಿಯಾ, ಟಿ. ಬಿ. ಕ್ಲಿನಿಕ್‌ಗಳು, ಸಿನೆಮಾ ಮಂದಿರಗಳು. ಬ್ಯಾಂಕುಗಳು. ಇತ್ಯಾದಿ.

21ನೇ ಟಿ.ಬಿ. ಮೊಹರು ಮಾರಾಟ ಚಳವಳಿ

(ಏರ್ಪಡಿಸಿದವರು: ಟಿ. ಬಿ. ಎಸೋಸಿಯೇಶನ್ ಆಫ್ ಇಂಡಿಯಾ, ನವದೆಹಲಿ–1)

ಈ ಸ್ಥಳದ ದಾತೃಗಳು

Lucas Electrical Tractor Service Limited,
Madras.

ಶ್ರೀಕೃಷ್ಣನಿಳಿದ ರಥ

(ಹನ್ನೊಂದನೇ ಪುಟದಿಂದ)

ಇದರ ವಿರುದ್ಧ ಕಾಲಕಾಲಕ್ಕೆ ಅವರು ಧೀರ ಗಂಭೀರವಾಗಿ ದನಿಯನ್ನು ಎತ್ತುತ್ತಿದ್ದರು. ಆದರೆ ಅವರು ಅದಕ್ಕೂ ಮುಂದೆ ಏನೂ ಮಾಡದಾದರು. ಆರಂಭದಲ್ಲಿಯೇ ಪ್ರಮಾದವಾಗಿ ಹೋಗಿತ್ತು. ಸಂಘಟನೆಯ ಬಲಿಷ್ಠತೆಯ ಹಾಗೂ ಸಂವರ್ಧನೆಯ ದೃಷ್ಟಿಯಿಂದ ಸರದಾರ ಪಟೇಲರು ಕೇಂದ್ರ ಸರಕಾರದಲ್ಲಿ ಸೇರಬಾರದಾಗಿತ್ತು. ಕಾಂಗ್ರೆಸ್ಸಿನ ಭಾಗ್ಯವಿಧಾತರಾಗಿ ಹೊರಗೆ ನಿಲ್ಲಬೇಕಿತ್ತು. ಸಿಂಹಾಸನದ ಹಿಂದಿನ ಶಕ್ತಿಯಾಗಿ, ನೆಹರೂಜಿ ಹಾಗೆ ಹೊರಗೆ ನಿಂತರೆ ಅಷ್ಟು ಪ್ರಯೋಜನವಿದ್ದಿಲ್ಲ. ಅವರು ಯಾವಾಗಲೂ ಉತ್ಸವ ಮೂರ್ತಿ—ಕೇವಲ ಉತ್ಸಾಹ ಸ್ಫೂರ್ತಿ ಕೊಡಬಲ್ಲವರು ಪಟ್ಟು ಹಿಡಿದ ಸಂಘಟನಾ ಕಾರ್ಯಕ್ಕೆ ಅವರು ಎಂದಿಗೂ ಅಳಿಗಿದ್ದಿಲ್ಲ. ಸರದಾರ ಪಟೇಲರು ಹಾಗಲ್ಲ. ಸಂಘಟನೆಯೇ ಅವರ ಅವತಾರ ಕಾರ್ಯವಾಗಿತ್ತು. ಆದರೆ ಅವರು ಕೇಂದ್ರ ಸರಕಾರದಲ್ಲಿ ಗೃಹಮಂತ್ರಿ ಪದವಿಯೇರಿ ಕೂತರು.

ನೆಹರೂಜಿ ತುಸು ತರುಣರಾಗಿದ್ದಿದ್ದರೆ ಅವರ ಆರೋಗ್ಯ ಹೆಚ್ಚು ಯೋಗ್ಯವಾಗಿದ್ದಿದ್ದರೆ ಕಾಂಗ್ರೆಸ್ಸಿನ ಸಮಕಾಲೀನ ಇತಿಹಾಸ ಬೇರೆ ಬಗೆ ಬರೆಯಬಹುದಿತ್ತು.

ಈ ರಾಜಕೀಯ ಪರಿಸ್ಥಿತಿ ಎರಡನೆಯ ಪಂಚವಾರ್ಷಿಕದ ಕಾಲದಿಂದಲೇ ಕೆಡಹತ್ತಿತ್ತು. ಆಗಲೇ ನೆಹರೂಜಿಯು ಮಾನಸಿಕವಾಗಿಯೂ ಮುದುಕರಾಗಿ ಬಿಟ್ಟಿದ್ದರು. 50ರ ದಶಕದ ಕೊನೆಗೆ. ಒಮ್ಮೆಲೇ ಚೀನಿ ಆಕ್ರಮಣ ೧೯೬೨ರಲ್ಲಿ ಘಟಿಸಿತು. ಅಂದಿನಿಂದ ನೆಹರೂಜಿ ಒಮ್ಮೆಲೇ ಮುದುಕರಾಗಿ ಬಿಟ್ಟರು. ಅವರ ಅಂದಾಜು ತಪ್ಪಿತ್ತು. ಪ್ರತಿಷ್ಠೆಗೆ ಬಲವಾದ ಪೆಟ್ಟು ಬಿದ್ದಿತು. ಆಗಲೂ ಅವರು ಸಂಸತ್ತಿನಲ್ಲಿಯ ಹಲವು ದುಷ್ಟ ಒತ್ತಾಯಗಳಿಗೆ ಮಣಿದು ಇಷ್ಟವಿಲ್ಲದ ಹಲವು ಹೆಜ್ಜೆಗಳನ್ನು ಇಡಬೇಕಾಯಿತು. ಅವರ ಸಾಮರ್ಥ್ಯ ಮತ್ತು ಪ್ರತಿಷ್ಠೆ ಇಳಿಮುಖವಾಯಿತು.

ನೆಹರೂಜಿ ಸಂಸದೀಯ ಒತ್ತಾಯಕ್ಕೆ ಮಣಿದರು. ಇದಕ್ಕೆ ಕಾರಣ ಆ ಆಕ್ರಮಣ ಆಕಸ್ಮಿಕನಾಗಿದ್ದರೂ ಅದನ್ನು ಇದುರಿಸಲಿಕ್ಕೆ ನಮ್ಮ ಸೈನ್ಯ ಪಡೆಗಳ ಸಜ್ಜಿಕೆ ಸಾಕಷ್ಟು ಇಲ್ಲದಿದ್ದುದು; ನಮ್ಮ ಸಂರಕ್ಷಣಾ ಮಂತ್ರಿಯ ಅಥವಾ ವಿಭಾಗದ ಬುದ್ಧಿಪೂರ್ವಕ ಪ್ರಮಾದವಿತ್ತೆ? ಅಚಾತುರ್ಯದ ಅಸಾಮರ್ಥ್ಯವಾಗಿತ್ತೆ? ಅಥವ ನಮ್ಮ ರಾಷ್ಟ್ರರಕ್ಷಣೆಯ ಸ್ವಾವಲಂಬನದ ಧೋರಣೆಯ ದೀರ್ಘಾವಧಿ ಕಾರ್ಯಯೋಜನೆಗಳ ತಾತ್ಕಾಲಿಕ ತೊಡಕಾಗಿತ್ತೆ? ಕೊನೆಗೂ ಚೀನಿ ಪಡೆಗಳು ತಮ್ಮ ಉದ್ದಿಷ್ಟ ಈಡೇರಿತೆಂದು ಹಿಂದೆ ಸರಿದು ಹೋದದ್ದೂ ನಮ್ಮ ವೀರಾಟೋಪಕ್ಕೆ ಹೆದರಿಯೋ. ಅಮೇರಿಕೆಯ ಏಳನೇ ನೌಕಾದಳದ ಭೀತಿಯಿಂದಲೋ ಅಥವಾ ತಮ್ಮದೇ ಆದ ಪೂರ್ವ ನಿಶ್ಚಿತ ಯೋಜನೆಗೆ ಅನುಸಾರವಾಗಿಯೋ? ಇವೆಲ್ಲ ಪ್ರಶ್ನೆಗಳಿಗೆ ಕೊನೆಯ ಉತ್ತರಗಳು ಇನ್ನೂ ದೊರೆತಿಲ್ಲ. ಅದು ಈ ಬರಹದ ಗುರಿಯೂ ಅಲ್ಲ.

ನೆಹರೂ ಪರ್ವದ ಅವಧಿಯಲ್ಲಿ ಭಾರತವು ಇದುರಿಸುತ್ತಿದ್ದ ಸಮಸ್ಯೆ ಏಶಿಯಾದ ಆಫ್ರಿಕೆಯ ಇತರ ರಾಷ್ಟ್ರಗಳೂ ತಮ್ಮ ವಿಮೋಚನೆಯ ನಂತರ ಇದುರಿಸಬೇಕಾಗಿ ಬಂದ ಸಮಸ್ಯೆಯೇ ಸರಿ. ಒಂದು ಪ್ರಾಚೀನ ವಿಶಾಲ ದೇಶದಲ್ಲಿಯ ಜರ್ಜರ ಸಮಾಜ ರಚನೆಯನ್ನು ಚಿಕ್ಕ ಚೂರಾದ ಪಕ್ಷ, ಪಂಗಡ, ಪಂಥ, ಕೋಮುಗಳ ಛಿನ್ನವಿಚ್ಛಿನ್ನ ಸಮಾಜವನ್ನು ಒಮ್ಮೆಲೆ ಆಧುನಿಕ ಮಟ್ಟಕ್ಕೆ ತಂದು ಮುಟ್ಟಿಸುವ ಶತಮಾನಗಳ ಕೊರಕಲನ್ನು ಒಂದೇ ದಾಪಿಗೆ ನೆಗೆದು ದಾಟುವ ಮಹತ್ ಸಾಹಸದ ಸಮಸ್ಯೆ ಅದು.

ಕೆಂಪು ಚೀನವು ೧೯೫೮–೫೯ರಲ್ಲಿ ಈ ದೊಡ್ಡ ದಾಪಿನ ನೆಗೆತ (Big leap forward) ಮಾಡಿತು. ಆದರೂ ಕ್ರಾಂತಿ ಸಾರ್ಥಕವಾಗಲಿಲ್ಲ. ಆ ಮೇಲೆ ೧೯೬೬–೬೭ರಲ್ಲಿ ಹಳೆಯ ಸಾಂಸ್ಕೃತಿಕ ಸಂಪ್ರದಾಯದ ನಾಗಪಾಶಗಳಿಂದ ಜನತೆಯನ್ನು ಬಿಡುಗಡೆ ಮಾಡಲು ಮತ್ತು ಸಾಂಸ್ಕೃತಿಕ ಕ್ರಾಂತಿಯೆಂಬ ಉಗ್ರ ಹಿಂಸ್ರ ಆಂದೋಲನವನ್ನು ಕೈಗೊಂಡಿತು. ಆದಾಗ್ಯೂ ಚೀನವು ತನ್ನ ಸಂಕಲ್ಪಿತ ಸಿದ್ಧಿಯನ್ನು ಸಾಧಿಸಿಲ್ಲ. ಅಲ್ಲಿಯ ಸಮಾಜ ನಮ್ಮಲ್ಲಿಗಿಂತ ಅಖಂಡವಾದದ್ದು. ಇಂಥ ಹೊಸ ಸಂಘಟನೆಗೆ ಅನುಕೂಲವಾದದ್ದು. ಅನೇಕ ದಶಕಗಳಿಂದಲೂ ಸಮರಗ್ರಾಸ್ತವಾಗಿ ಬಂದ ಒಂದು ಉದ್ರಿಕ್ತ ಅಸ್ಥಿರತೆಯಲ್ಲಿ ಮರಳುತ್ತ ಬಂದಿದ್ದು, ಆದಾಗ್ಯೂ ಅಲ್ಲಿಯ ಕಮ್ಯುನಿಸ್ಟ್ ಕ್ರಾಂತಿ ಇಂದಿಗೂ ಅಪೂರ್ಣವಾಗಿಯೇ ಇದೆ. ಅಂದಾಗ ಆಗ್ನೇಯ ಏಶಿಯಾದ ಇತರ ದೇಶಗಳ ಅನವಸ್ಥೆಯ ಉದಾಹರಣೆ ಬೇರೆ ಬೇಡ.

ಈ ಹಿನ್ನೆಲೆಯಲ್ಲಿ ಭಾರತದ ಸಮಾಜವಾದೀ ಸಮಾಜ ರಚನೆಯತ್ತ ಆರಂಭವಾದ ಈ ಮಹಾಯಾತ್ರೆಯು ರಥವನ್ನು ನಡುವೆಯೇ ಬಿಟ್ಟು ನಮ್ಮ ಸಾರಥಿ ಥಕ್ಕನೆ ಇಳಿದು ಹೋಗಿ ಬಿಟ್ಟಾಗ ದೇಶದ ಅವಸ್ಥೆ ಏನಾಗಿರಬಹುದು? ಅವರ ಅಸ್ತಿತ್ವದಿಂದ ವ್ಯಕ್ತಿತ್ವದಿಂದ ಸ್ಥಗಿತವಾಗಿ ಉಳಿದ, ಗುಪ್ತವಾಗಿ ಹೋದ ಅನೇಕ ಪ್ರತಿಕೂಲತೆಗಳೂ, ಪ್ರತಿಕ್ರಿಯೆಗಳೂ ಪರಸ್ಪರ ವಿರುದ್ಧ ವಿಚಾರ ಪ್ರವಾಹಗಳು. ಕಾಂಗ್ರೆಸ್ಸಿನ ಒಳಗೂ ಹೊರಗೂ ಹೊಂಚು ಸಾಧಿಸಿ, ಕಳೆದುಕೊಂಡ ಕಾಲ ದೋಷವನ್ನು ತುಂಬಿಕೊಳ್ಳಲೋ ಎಂಬಂತೆ ನಗ್ನ ನೃತ್ಯಕ್ಕೆ ನಾಚಿಕೆ ಬಿಟ್ಟು ನುಗ್ಗಿ ಬರಲು ಅನುವಾಯಿತು. ಆ ನುಗ್ಗಾಟವೇ ಇಂದಿನ ಎಲ್ಲಾ ಪಕ್ಷಗಳ ಎಡ ಬಲಗಳ ಕೋಲಾಹಲ. ಇದರ ನೈತಿಕ ಹೊಣೆ ಕೊನೆಗೂ ನೆಹರೂಜಿಯ ಹಣೆಗೇ ಬಡಿಯುತ್ತದೆ!

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

O. S. ನಂಬ್ರ 269/1970.

ಕೆ. ಭವಾನಿ ಅಮ್ಮ —ವಾದಿ

Vs.

ಕೆ. ಸಂಜೀವ ನಾಯಕ್ ಮತ್ತಿತರರು —ಪ್ರತಿವಾದಿಗಳು.

ನೋಟೀಸು.

ಸುಳ್ಯ ತಾಲೂಕು, ಸುಳ್ಯ ಕಸಬಾ ಗ್ರಾಮದ [illegible] ಎಂಬಲ್ಲಿರುವ ಕೃಷ್ಣ ನಾಯಕ್ ಎಂಬವರ ಮಗ ಕೆ. ಸಂಜೀವ ನಾಯಕರಿಗೆ ಈ ಮೂಲಕ ತಿಳಿಸುವುದೇನೆಂದರೆ—

ವಾದಿಯು ನಿಮ್ಮ ಮತ್ತು ನಿಮ್ಮ ಮಕ್ಕಳ ಮೇಲೆ O. S. 269/1970 ಎಂಬ ದಾವೆಯನ್ನು ದಾಖಲು ಮಾಡಿರುತ್ತಾರೆ. ಆ ದಾವೆಯು ತಾ. 7-11-1970ರಂದು ಇದೆ. ನಿಮ್ಮ ಮಕ್ಕಳು, 2 ಮತ್ತು 3ನೇ ಪ್ರತಿವಾದಿಗಳು, [illegible] ಮತ್ತು [illegible], ಗಾರ್ಡಿಯನ್ ಆಗಿ ನಿಮ್ಮನ್ನು ನೇಮಕ ಮಾಡಬೇಕೆಂದು ವಾದಿಯು ಅರ್ಜಿ ಕೊಟ್ಟಿರುತ್ತಾರೆ. ನೀವು ಅವರ ಗಾರ್ಡಿಯನ್ ಆಗಲು ಸಮ್ಮತಿಸುವಿರಾದರೆ ತಾ. 7-11-1970ರಂದು ಸದ್ರಿ ಕೋರ್ಟಿನಲ್ಲಿ ಬೆಳಿಗ್ಗೆ ಗಂಟೆ 11ಕ್ಕೆ ಹಾಜರಾಗಿ ಸಮ್ಮತಿಯನ್ನು ಸೂಚಿಸಬೇಕು. ನೀವು ಇದಕ್ಕೆ ತಪ್ಪಿ ಸಮ್ಮತಿಯನ್ನು ಸೂಚಿಸದಿದ್ದಲ್ಲಿ Order XXXII Rule 3ರ ಪ್ರಕಾರ ಇವರನ್ನು 2 ಮತ್ತು 3ನೇಯ ಪ್ರತಿವಾದಿಗಳ ಗಾರ್ಡಿಯನ್ ಆಗಿ ನೇಮಕ ಮಾಡಲಾಗುವುದು, ತಿಳಿದಿರಲಿ.

(By. order of Court)

A. P. Gowrishankar
Advocate for Patitioner

ಪುತ್ತೂರು, ದ. ಕ., ತಾ. 13.10.1970.

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ

O. S. No. 326/1969

ಬಿ. ಕುಟ್ಟಿ ಸೆಟ್ಟಿ —ವಾದಿ

ಮತ್ತು

ಭವಾನಿ ಸೆಡ್ತಿ ಕೂಡಾ —ಪ್ರತಿವಾದಿಗಳು

ಇವರೊಳಗೆ

ಮೇಲ್ಕಂಡ ವ್ಯಾಜ್ಯದ ಪ್ರತಿವಾದಿಗಳು—

5) ಚಂದ್ರಶೇಖರ ಸೆಟ್ಟಿ, ಭವಾನಿ ಸೆಡ್ತಿ ಮಗ; 6) ರಘುವೀರ ಸೆಟ್ಟಿ, ಭವಾನಿ ಸೆಡ್ತಿ ಮೊಮ್ಮಗ—ಉಡುಪಿ ತಾಲ್ಲೂಕು ಉಳಿಯಾರಗೋಳಿ ಗ್ರಾಮ.

ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ—

ವಾದಿಯು ಪ್ರತಿವಾದಿರ ಮೇಲೆ ಪರ್ಮನೆಂಟ್ ಇಂಜಂಕ್ಷನ್ ವಗೈರೆ ನಿವೃತ್ತಿ ಕೇಳಿ ದಾಖಲ್ಲು ಮಾಡಿರುವ ಮೇಲ್ಕಂಡ ವ್ಯಾಜ್ಯವನ್ನು ತಾ. 16-11.1670ಕ್ಕೆ ನಿಮ್ಮ ನೋಟಿಸು ಬಗ್ಗೆ ಇಟ್ಟಿರುವುದರಿಂದ ನಿಮಗೆ ಸದ್ರಿ ವ್ಯಾಜ್ಯದಲ್ಲಿ ಉತ್ತರಿಸುವುದಿದ್ದಲ್ಲಿ ಸದ್ರಿ ತಾ. 16-11-70ನೇ ದಿನ್ನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಜವಾಬು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು [illegible] ಸದ್ರಿ ವ್ಯಾಜ್ಯವು ಫೈಸಲು ಮಾಡಲ್ಪಡುವುದು.

P. V. Acharya
Vakil for Plaintiff

ಉಡುಪಿ, ತಾ. 16-10-70.

ದೀಪಾವಳಿಯ ಶುಭಾಶಯಗಳು!

ಕಾಮತ್ ಹೋಟೆಲ್

ಜನಪ್ರಿಯವೂ ಆಕರ್ಷಣೀಯವೂ ಆದ ಅಚ್ಚುಮೆಚ್ಚಿನ ಫಲಾಹಾರ ಮತ್ತು ಭೋಜನ ಮಂದಿರವೆಂದರೆ—

ಕಾಮತ್ ಹೋಟೆಲ್
ಶೇಷಾದ್ರಿಪುರಂ, ಬೆಂಗಳೂರು-20

ಶುಚಿ ರುಚಿಕರ ತಿಂಡಿ ತಿನಸುಗಳು! ಆಹ್ಲಾದಕರ ಪಾನೀಯಗಳು!
ವಿನಯಶೀಲ ಉತ್ಸಾಹಿ ಮೆನೇಜರರ ಮೇಲ್ವಿಚಾರಣೆ!
ದಕ್ಷ ಸೇವಾಸೌಕರ್ಯ!
ವೈಶಿಷ್ಟ್ಯಕ್ಕೆ ಹೆಸರಾದುದು

Please Visit

KAMAT HOTEL

Restaurant & Boarding
SHESHADRIPURAM
BANGALORE-20

Prop : R. B. KAMATH

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ

ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಶ್ರೀ ಬಡೆಕ್ಕಿಲ ವೆಂಕಟರಮಣ ಭಟ್ಟರು

(ಏಳನೇ ಪುಟದಿಂದ)

ಭೀಮವಿಜಯಗಳಲ್ಲಿ ಅವರಲ್ಲಿ ಹುದುಗಿದ್ದ ಪ್ರತಿಭೆಯನ್ನು ಗುರುತಿಸುವುದು ಸುಲಭವಾದರೂ, ಅವರ ಕಂದಪದ್ಯ ರಚನಾ ಸಾಮರ್ಥ್ಯದ ಪೂರ್ಣ ಪರಿಚಯವಾಗುವುದು ಇಲ್ಲಿಯೇ. ಗುಣಗ್ರಾಹಿಗಳು, ಈ ಕಂಧ ಪದ್ಯಗಳಲ್ಲಿ ರನ್ನ ಜನ್ನ ಪೊನ್ನರ ಯೋಗ್ಯತೆಯನ್ನು ಮನಗಾಣಬಹುದು. ಇದನ್ನು ಕಂಡೇ "ಅವರಂತೆ ಇಂದು ಕಂದ ಪದ್ಯಗಳನ್ನು ಬರೆಯುವವರು ಕನ್ನಡದಲ್ಲಿ ಇಲ್ಲ" ಎಂದು ಗೋವಿಂದ ಪೈಗಳು ಉದ್ಗರಿಸಿದ್ದು.

ಅವರ ಹೊಟ್ಟೆಯೂ-ಅವಯವಗಳೂ ಎಂಬ ಚಂಪೂ ಕಾವ್ಯ ಈಗ ಉಪಲಬ್ದವಿಲ್ಲ. ಅದನ್ನು ಸವಿಯಲು ಅವರಿಗೇ ನೀವು ಶರಣಾಗಬೇಕು. ಅವರು ಕನ್ನಡ ಕೋಗಿಲೆಗೆ ಬರೆದ ಕವಿತೆಗಳೂ ಕೈಗೆ ಸಿಗುವುದಿಲ್ಲ. ಅವರು ಮೊನ್ನೆ ಮೊನ್ನೆ ಬರೆದು ಮುಗಿಸಿದ ಇನ್ನೊಂದು ಕೃತಿ "ಸಮಾಜ ಸಂಗೀತ." ಅದು ಸಾಂ। ತ್ಯದಲ್ಲಿದೆ. ಅದು ನಮ್ಮ ಮಠಗಳಿಗೆ ಸಂಬಂಧಿಸಿದ್ದು. ಸೊಗಸಾದ ನಿರೂಪಣೆ. ರತ್ನಾಕರ ವರ್ಣಿಯೊಡನೆ ನಮ್ಮ ನಾಡಿನ ಸೃಷ್ಟಿ ಶಕ್ತಿ ಬತ್ತಲಿಲ್ಲವೆನ್ನುವುದಕ್ಕೆ ಈ ಕಾವ್ಯ ಸಾಕ್ಷಿಯಾಗಿ ನಾಳೆಗೂ ಉಳಿಯುತ್ತದೆ.

ಅವರು ಕನ್ನಡ ನೆಲದಲ್ಲಿ ಹುಟ್ಟುವ ಬದಲು ಇನ್ನೆಲ್ಲಿ ಹುಟ್ಟಿದ್ದರೂ ಲೋಕ ಮನ್ನಣೆ ಪಡೆಯುತ್ತಿದ್ದರು. ಅವರಿಗೆ ಅನ್ಯ ಭಾಷೆಗಳ ಪರಿಚಯವಿಲ್ಲ. ಅದೇ ಅವರಿಗಿರುವ ಕೊರತೆಯೇನೋ?

ಶ್ರೀ ವೆಂಕಟರಮಣ ಭಟ್ಟರು ಇನ್ನೂ ಬದುಕಿದ್ದಾರೆ. ಅವರಿಗೆ ಈಗ ಎಂಬತ್ತೈದು ವರ್ಷ. ತಾರುಣ್ಯದಲ್ಲಿ ಅವರು ಜಿಲ್ಲೆಯ ಪ್ರಸಿದ್ಧ ಅರ್ಥಧಾರಿಗಳು. ಅವರ ಅರ್ಥಗಾರಿಕೆಯನ್ನು ಈಗಲೂ ಜನ ಸ್ಮರಿಸಿಕೊಳ್ಳುತ್ತಾರೆ. ಯಕ್ಷಗಾನ ಪ್ರಬಂಧಗಳ ರಚನೆಯಲ್ಲಿ ಮಾತ್ರವಲ್ಲ, ಅದರ ಹಿಮ್ಮೇಳ, ಹಾಡುಗಾರಿಕೆಯಲ್ಲೂ ಅವರಿಗಿರುವ ಜ್ಞಾನ ಅಪಾರ.

ಒಂದು ಕಾಲದಲ್ಲಿ ಅವರು ಮಂಗಳೂರಿನ ಪ್ರಸಿದ್ಧ ವರ್ತಕರು—ದೊಡ್ಡ ಪ್ರಮಾಣದಲ್ಲಿ ಅಡಿಕೆ ಯಾಲಕ್ಕಿಯ ವ್ಯಾಪಾರ ನಡೆಸಿ ಸಾಹುಕಾರರೆನಿಸಿಕೊಂಡವರು. ಕರ್ಣಾಟಕ ಬ್ಯಾಂಕಿನ ಸ್ಥಾಪಕ ಡೈರೆಕ್ಟರುಗಳಲ್ಲಿ ಒಬ್ಬರು — ಅದರ ಅಭಿವೃದ್ಧಿಗೆ ಪ್ರಾರಂಭದ ದಿನಗಳಲ್ಲಿ ದುಡಿದವರು.

ಈ ಮಹೋನ್ನತ ಕವಿಚೇತನವನ್ನು ಗುರುತಿಸಿ ಗೌರವಿಸದಿದ್ದುದು ಕನ್ನಡಿಗರು ತಮಗೆ ತಾವೇ ಮಾಡಿಕೊಂಡ ಅಪಚಾರ. ಮಾತ್ಸರ್ಯ ಬಿಡಲಿಲ್ಲವೋ, ಮನಗಾಣುವ ಶಕ್ತಿಯು ಕ್ಷಯವಾಯಿತೋ? ಬಲ್ಲವರು ಅವರ ಕೃತಿಗಳನ್ನು ಓದಿ ತೀರ್ಮಾನಿಸಬೇಕಾದ ವಿಷಯ.

ಆಶ್ಚರ್ಯದ ಸಂಗತಿ ಎಂದರೆ ಈ ಉದ್ದಾಮ ಕವಿ, ಕನ್ನಡ ನಾಲ್ಕನೆಯ ತರಗತಿಯನ್ನು ಮುಗಿಸಿದ ನಂತರ ಶಾಲೆಯ ಮೆಟ್ಟಲು ತುಳಿಯಲಿಲ್ಲ. ಕವಿಗಳಿಗೆ ತಂದೆ ಶಂಕರನಾರಾಯಣ ಭಟ್ಟರು ತೀರಿ ಕೊಂಡಾಗ ಬರಿಯ ಆರು ವರ್ಷ. ಹದಿನಾರನೆಯ ವಯಸ್ಸಿನಲ್ಲಿ ಅವರ ಮದುವೆಯಾಯಿತು. ಕೈ ಹಿಡಿದ ಸರಸ್ವತಿ; ಮನೆಯೊಡತಿಯಾಗಿ ಬಂದ ತರುಣದಲ್ಲಿ ಅವರ ತಾಯಿ ಲಕ್ಷ್ಮಿ ಅಮ್ಮ ಸ್ವರ್ಗಸ್ಥರಾದರು. ಅವರ ಜೊತೆ ಹೆಚ್ಚು-ಕಡಿಮೆ ಎಪ್ಪತ್ತು ವರ್ಷಗಳ ದಾಂಪತ್ಯ ಜೀವನ ನಡೆಸಿದ ಅವರ ಹೆಂಡತಿ ಮೊನ್ನೆ ತೀರಿಕೊಂಡರು.

ಅವರ ಜ್ಞಾನಸಂಪತ್ತು ಸ್ವಯಾರ್ಜಿತ. ಅವರಿಗೆ ಅವರೇ ಗುರುಗಳು. ಕವಿಗಳ ಅಜ್ಜ ಶ್ರೀ ವೆಂಕಟೇಶ್ವರ ಭಟ್ಟರು 1837—39ರ ಸುಮಾರಿನಲ್ಲಿ ಬ್ರಿಟಿಷ್ ಸರಕಾರದ ವಿರುದ್ಧ ಬಂಡಾಯ ಎದ್ದವರು. ಅವರು ಆಳರಸರ ಬಂಧಿಯಾಗಿಯೇ ಸೆರೆಮನೆಯಲ್ಲಿ ಸಾವನ್ನು ಕಂಡರು. ಆ ಚರಿತ್ರಾರ್ಹ ಅಜ್ಜ ಕಟ್ಟಿಸಿದ ಮನೆಯಲ್ಲಿ ಈಗ ವೆಂಕಟರಮಣ ಭಟ್ಟರು ಇರುವುದು. ಬಂಟ್ವಾಳ ತಾಲೂಕಿಗೆ ಸೇರಿದ ಕೆದಿಲ ಗ್ರಾಮದ ಒಂದು ಹರಹಿನ ಹೆಸರು ಬಡೆಕಿಲ. ಅದು ಪುತ್ತೂರಿಗೆ ನಾಲ್ಕು ಮೈಲುಗಳ ಅಂತರದಲ್ಲಿದೆ.

ಅವರ, ಅವರ ಹಿರಿಯರ, ಸಿದ್ಧಿ ಸಾಧನೆಗಳಿಗೆ ಕನ್ನಡ ಜನ, ಆ ಜನರನ್ನಾಳುವ ಸರಕಾರ ಕೊಟ್ಟದ್ದೇನು?

> ಸಮ್ಮೇಳನದ ಅಧ್ಯಕ್ಷಪದವಿಯೇ?
> ಸಾಹಿತ್ಯ ಅಕಡಮಿಯ ಸಮ್ಮಾನವೇ?
> ವಿಶ್ವವಿದ್ಯಾಲಯದ ಗೌರವ ಪದವಿ ಪ್ರದಾನವೇ?
> ರಾಜ್ಯ-ರಾಷ್ಟ್ರಗಳ ಪ್ರಶಸ್ತಿ ವಿತರಣೆಯೇ?

ದಶಾವತಾರ ಚಕ್ರ

(ಹತ್ತನೇ ಪುಟದಿಂದ)

ಅಡ್ಡ ಬಂದವರು ಶುಕ್ರಾಚಾರ್ಯರಂತೆ ಒಕ್ಕಣ್ಣರಾಗ ಬೇಕಾದೀತು. ಅನಂತರ ಪರಶುರಾಮಾವತಾರದಲ್ಲಿ ದುಡುಕುಗಾರನಾಗುವುದು,ಸಾಹಸ ಕಾರ್ಯಗಳಿಗೆ ಧುಮುಕುವುದು ಮೊದಲಾದ ತಾರುಣ್ಯದ ಪ್ರತಾಪ ಕಾರ್ಯಗಳು. ಮುಂದೆ ವಿವಾಹಿತರಾಗಿ ನ್ಯಾಯ ನೀತಿಗಳಿಂದ ಗೃಹಸ್ಥ ಧರ್ಮವನ್ನು ಪಾಲಿಸುವ ರಾಮಾವತಾರವನ್ನು ಪ್ರವೇಶಿಸುತ್ತೇವೆ. ಆ ಮೇಲೆ ಮಕ್ಕಳು ಮರಿಗಳೊಂದಿಗೆ ಕೌಟುಂಬಿಕರಾಗಿ ಬಗೆಬಗೆಯ ಉಪಾಯಗಳಿಂದ ಕರ್ಮ ಮಾಡಿ ನಿರ್ವಹಣೆ ಸಾಗಿಸುವ ಕೃಷ್ಣಾವತಾರ. ಹಾಗಿರಲು ಜೀವಿತದ ಅಪರಾಹ್ನ ಕಾಲವು ಪ್ರಾಪ್ತವಾಗಿ ವೃದ್ಧಾಪ್ಯವು ತಲೆಹಾಕಿ ಮಕ್ಕಳಿಗೆ ಅಧಿಕಾರ ಭಾರವನ್ನು ಬಿಟ್ಟುಕೊಟ್ಟು ತಾನು ವಿಶ್ರಾಂತಿಯಿಂದ ಕಿರಿಯರಿಗೆ ಬುದ್ಧಿ ಹೇಳುತ್ತ, ಜ್ಞಾನ ಹೆಚ್ಚಿಸಿಕೊಳ್ಳುತ್ತ ಬುದ್ಧಾವತಾರದಲ್ಲಿರುತ್ತೇವೆ. ಕೊನೆಯ ಕಲ್ಕ್ಯಾವತಾರವು ಮರಣರೂಪದಲ್ಲಿ ಭವಿಷ್ಯದಲ್ಲಿ ಬರುವಂತಾದ್ದು. ಅದು ಎಂದಾದರೂ ಒಂದುದಿನ ಬರುವುದು ನಿಶ್ಚಯವೆಂದು ತಿಳಿದು, ಆ ಕಲ್ಕಿರೂಪೀ ಪರಮಾತ್ಮನನ್ನು ಸಂತೋಷದಿಂದ ಸ್ವಾಗತಿಸಲು ಸಿದ್ಧರಾಗಿ ಶಾಂತಿ ಮಾರ್ಗದಲ್ಲಿ ನಾವಿದ್ದರೆ ಒಳ್ಳೆಯದು. "ಪುನರಪಿ ಜನನಂ ಪುನರಪಿಮರಣಂ" ಎಂಬಂತೆ ಸೃಷ್ಟಿಸ್ಥಿತಿ ಲಯ ಕಾರ್ಯಗಳು ದಶವತಾರದ ಚಕ್ರದೊಳಗೆ, ಭಾಗವತ ಭಾರತ ರಾಮಾಯಣ ಮೊದಲಾದ ಮನೋಜ್ಞ ಕಥೆಗಳಿಂದ ಅಜರಾಮರವಾಗಿ ತಿರುಗುತ್ತಾ ಇದೆ.

With the Best Compliments of,

SRI RAM PHARMACY

Wholesale & Retail Chemists & Druggists

MANGALORE-1

H. O.

KARANGALPADY

PHONE: 3156

Branch:

HAMPANKATTA

PHONE: 3148

ಗಾಂಧೀಯ ಪ್ರಜಾಪ್ರಭುತ್ವ

([illegible])

[illegible] ... ಗಾಂಧಿಯವರ ... [illegible] ... ಕಾಂಗ್ರೆಸ್ ... [illegible] ... ಕಾಂಗ್ರೆಸ್! ... [illegible] ... (ಸ್ವಲ್ಪ ಕೆಟ್ಟ ಪದವೇ) ಗದ್ದು!

[illegible] ... ಕಾಂಗ್ರೆಸ್ಸು ... [illegible]

[illegible]

ಸಾಹಿತ ಯೋಜನೆಗಳ ಫಲಿತಾಂಶವಿಗ ಹುಟ್ಟಿ ಜೀವನದಿಂದ ಅತಿ ಸಂಕಟಕ್ಕೆ ಸಿಲು ಕಿದ ವೇತನ-ಕೂಲಿಕಾರರ ವರ್ಗಗಳಲ್ಲಿ ಎ ಷ್ಟು ಕಾಣುವಂತಾಗಿದೆ. ಔಷಧ, ವಸ್ತ್ರ, ವಾ ಸ್ತು ವಸತಿ, ಮನೆ ಮಠಗಳಿಲ್ಲವೂ ಸಾಮಾ ನ್ಯನ ಕೈಗೆಟುಕದ ವಸ್ತುಗಳಾದುವಾಗ ಶ್ರಮ ವೊಂದು ಮುಗಿಸಲಿಲ್ಲವೆತ್ತನೆ ದೀನವರ್ಗ ಕ್ಕೆ. ಈ ಅಂತರವನ್ನು ಬಲಪಂಥೀಯರು (ಯಾವ ಪಕ್ಷದವರಾದರೂ) ಚೆನ್ನಾಗಿ ಅರಿ ತಿದ್ದು ಅಥವಾ ಅರಿತೂ ನಿರ್ದಯರಾಗಿ, ಇನ್ನ ಅನ್ಯಾಯವನ್ನು ಅಭಿವೃದ್ಧಿಗೊಳಿಸ ಲು ನೆರವು ಕೊಟ್ಟಂತೆ ತೋರುತ್ತವೆ. ಹಾಯ್ ಹಾಯ್, ರಾಮ ರಾಮ! ಗಾಂ ಧಿಯುವರಿಂದು ಬದುಕಿದ್ದರೆ ಎಷ್ಟು ನರಕ ಸಂತಾಪತಪ್ತರಾಗುತ್ತಿದ್ದರು! ಅಪರೀಕ್ಷಣ ಅವನೀತಿ, ಅವ್ಯವಸ್ಥಾನ, ಅಪವರ್ತನೆಗ ಳ ನೆಲೆಯಿಂದ ಯೋಜನೆಗಳೇ ಇಂದು ಲೂಟಿಗಳಾಗಿ ಹೋದವಷ್ಟು ಎಂಥ ವಿಡಂಬ ನೆ! ಒಂದು ಎಸ್ಟೇಟ್ ಟ್ರಿಪ್ಪಿನಲ್ಲಿ ಕೂಡ ಪಕ್ಷಪಾತ ಪ್ರವೇಶಿಸಿದ್ದು ಯಾವ ಪ್ರಭುತ್ವ ಕ್ಕೆ ಭೂಷಣ!— ಅದು ಎಷ್ಟೇ ಅಲ್ಪವಾಗಿ ದ್ದರೂ ಸರಿಯೆ

"For me politics bereft of religion is absolute dirt, ever to be shunned - ನನಗೆ ಧ ರ್ಮರಹಿತ ರಾಜಕಾರಣವು ತೀರ ಹೊಲ ಸು, ಅದು ಯಾವಾಗಲೂ ತ್ಯಾಜ್ಯ" ಎಂದ ಗಾಂಧಿಯವರ **ಧರ್ಮದ ಅರ್ಥವು** ಅ ರ್ಥ ಧರ್ಮ ಪ್ರಧಾನರಿಗೆಂದೂ ಅಗದು. ಅರ್ಥಾರ್ಥಿಗನಾದ ಧರ್ಮವು ಗೋಮುಖ ವ್ಯಾಘ್ರ, ಸ್ವರೂಪಿಯಾಗದಿರದು; ಅದು ಸ ರ್ವವನ್ನೂ ಅವನ್ಯಾಸ್ಯಿಗೊಳ ಪಡಿಸದಿರ ದು. ಮಹೀಯ ಧರ್ಮದಂತೆಯೇ ರಾಜ ಕೀಯ ಧರ್ಮವೂ! 'ಕಾಂಚನಾತ್ ಕಾ ರ್ಯಸಿದ್ಧಿಃ' ಎಂಬ ವ್ಯವಹಾರಶ್ರೇಣಿಯಲು ಬಿಟ್ಟ ಪುಢಾರಿ, ಪ್ರಾಧಿಕಾರಿ, ಅಧಿಕಾರಿಗ ಳೆಲ್ಲರೂ ಜನವಂಚಕರೇ ಸರಿ. ಅವರಿಂದ ಅನೇಕ ಸಂಘ, ಸಂಸ್ಥೆ, ಮಂಡಲ, ಶಾಖೆ ಸಮಿತಿಗಳೆಲ್ಲವೂ ಅವಿಶ್ವಾಸ್ಯತೆಯ ರಾಹು ವಿಗೆ ತುತ್ತಾಗುತ್ತ ಹೋದವು. ಅವಿಶ್ವಾ ಸ್ಯದೊಡನೆ ವಿಶ್ವಾಸದಿಂದ ತ್ಯಾಗ, ಸೇವೆಗ ಳಲ್ಲಿ ನಿರತರಾಗಲು ಸಾರ್ವಜನಿಕರು ಮುಂದೆ ಬರಬೇಕೆಂಬುದು ಎಷ್ಟು ಸಫಲ ವಾದೀತು? 'Love and exclusive possession cannot go together—ಪ್ರೀತಿಯೂ ಪ್ರತ್ಯೇಕವಾಗಿ ತಮಗೇ ಬೇಕೆಂದು ತೆಗೆದಿಟ್ಟುಕೊಳ್ಳುವ ಆಸ್ತಿ-ಹಕ್ಕು ಮುಂತಾದುವುಗಳ ಸಂಗ್ರ ಹವೂ ಏಕತ್ರ ಇರಲಾರವು' ಎಂಬುದು ಸ ತ್ಯಸ್ಯ ಸತ್ಯ. ಆದರೀಗ ರಾಜರಿಂದ ಹಿಡಿದು- ಕಾರಖಾನೆ – ಜಮೀನು – ಮನೆದಾರರ ವರೆಗೆ **ವಿಶೇಷ ಸುಖ ಸೌಕರ್ಯಾಪೇಕ್ಷಿ** ಯುಳ್ಳವರೇ ಪ್ರಜಾಪ್ರಭುತ್ವ ಪಾಲಾಯಿ ತೆಂದು ಬೊಬ್ಬೆ ಹೊಡೆಯುತ್ತಿರುವುದು ಬ ಹಳ ನೊತ್ತ ತಮಾಷೆ. ಭ್ರಾತೃತ್ವವಾತ್ಸಲ್ಯ ವಿಲ್ಲದಲ್ಲಿ ಸಮಾನತೆಯಿಲ್ಲ, ಸಮಾನತೆಯಿ ಲ್ಲದಲ್ಲಿ ಸ್ವಾತಂತ್ರ್ಯವಿಲ್ಲ. ಸ್ವಯಂಪ್ರೇಕ್ಷೆ ಇಲ್ಲದವನು ಯಾವ ಶಾಸ್ತ್ರವನ್ನೋದಿ ಏ ನು ಮಾಡಿಯಾನು? ಪ್ರಜ್ಞಾಹೀನರ ಸ್ವಾ ರ್ಥಲೋಭವಲ್ಲಿ ಯಾವ ಶಾಸ್ತ್ರದ ಯಾವ ಸೂತ್ರ ವಿರೂಪ ಹೊಂದದೆ ಉಳಿದೀತು?

"A man cannot practice ahimsa and be a coward at the same time—ಅಹಿಂಸಾಚಾರವೂ ಹೇಡಿತನವೂ ಏಕತ್ರ ಇರಲಾರವು" ಎಂಬ ಗಾಂಧೀಯ ಕಟು ಸತ್ಯವು ಅಪ್ರತಿಹತ ವಾದುದು. ಹೇಡಿತನವೇ ಎಲ್ಲ ವಂಚನೆ ಗಳ ಮೂಲ ಆಕರ. ವಂಚನಾ ವ್ಯವಹಾರ ವನ್ನು ರಾಜಕೀಯ, ಅರ್ಥಾರ್ಜನ ತಂತ್ರ ಎಂದು ಗಣಿಸುವ ನಿರ್ಲಜ್ಜರನ್ನು ಉತ್ತಾ ದಿಸಿದ ಪ್ರಜಾಪ್ರಭುತ್ವವನ್ನು ಅಪ್ಪಿಕೊ ಳ್ಳುವುದೂ ಒಂದೇ. ಬ್ರಹ್ಮರಾಕ್ಷಸನನ್ನು ಅಪ್ಪಿಕೊಳ್ಳುವುದೂ ಒಂದೇ. ಪ್ರಭು ತ್ವ ಪರಿವರ್ತನವೀಗ ಆಗುವುದಗತ್ಯ. ಅದಕ್ಕೆ ಅನುಕೂಲ ಮಾಡಿಕೊಡುವುದೀಗ ಪ್ರಜಾಧರ್ಮ. ಇಲ್ಲಿಯವರೆಗಿದ್ದದ್ದು ಆ ಭಾಸಿಕ ಪ್ರಜಾಪ್ರಭುತ್ವವೆಂಬುದು ಪರಿಕಾ ಮತಃ ಸ್ಪಷ್ಟವಾಗಿರುವಾಗ, ಇದನ್ನು ಕಿ ತ್ತೊಗೆಯ ಬಲ್ಲ ಪ್ರಭುತ್ವವೇ ನಿಜವಾದ ಪ್ರಜಾಪ್ರಭುತ್ವ. ರಾವಣಾದಿಗಳ ಸಂಹಾ ರವಾದ ಮೇಲಲ್ಲವೇ ರಾಮ ರಾಜ್ಯವು ಸ್ಥಾಪಿತವಾದದ್ದು? ವಂಚನೆಯು ಹಿಂಸೆ ಯ ಒಂದು ರೂಪವಾದುದರಿಂದ ವಂಚ ನಾಪ್ರರಾಜ್ಯವು ಹಿಂಸಾ ಪ್ರರಾಜ್ಯ. ಹಿಂಸಾ ಪ್ರವೃತ್ತಿಗೆ ಅತಿ ವೇಗ ಪ್ರಯಾಣ, ಭೋ ಗದ ಹಸಿವೆಯ ಉದ್ರೇಚನ ಮತ್ತು ಪ ರಾಪೇಕ್ಷಿಯಾಗಿ ಧ್ರುವದಿಂದ ಧ್ರುವದವ ರೆಗೆ ತಿರುಗುವ ಚಟಗಳು ಕಾರಣಗಳೆಂ ದದ್ದು ಆಧುನಿಕ ಯಜ್ಞವಲ್ಕರಾದ ಗಾಂಧಿ ಯವರು. ಅವರೆಂದ ಪರಮಾರ್ಥಗಳೇ ಧಾರಣೀಯ ಸಾಮಾನ್ಯನ ಅವಿಜ್ಞಾತ ಸ್ವ ಪ್ಯಾಸ್ತರದಲ್ಲಿ ಅಡಗಿರುವ ಅದಮ್ಯ ಅದ ರ್ಶಗಳು. ಅವುಗಳನ್ನು ಕಾಲ ಕಸಕ್ಕಿಂತ ಕಡೆಯೆಂದು ವ್ಯವಹರಿಸುವ ಮುಖಂಡ ರಿಗೆ ಭಾರತದ **ದೀನದಲಿತರೆಲ್ಲರೂ ಕಾಲಿಕಸಕ್ಕೆ ಸಮಾನರಾಗುವುದು** ಸ್ವಾಭಾವಿಕ. "ಬಾಯಲ್ಲಿ ಬೆಣ್ಣೆ, ಬಗಲಲ್ಲಿ ದೊಣ್ಣೆ" ಎಂಬ ಗಾಂಧಿ ವಿನಾಶಕರಣಿಗಳಿಂ ದ ದೀನದಲಿತರಿನ್ನು ಮರುಳಾಗಲಾರರು. ಸರಕಾರಿ ನಕ್ಯರ್ಗಳಿಂದ ಢಾಂಕ್ಷನ್ನುಗ ಳನ್ನು ಸಾರ್ವಜನಿಕರು ಹಣಚೆಲ್ಲಿಸಿ ನಡೆಸಿ ಆಚರಣೆ ಮಾಡಬೇಕೆಂಬ ಹಾಸ್ಯಾಸ್ಪದ ರೀತಿಯ ವಿನಾಶಕರಣೆಗಳು ರಾಷ್ಟ್ರೀಯ ರನ್ನು ತಲೆತಗ್ಗಿಸುವಂತೆ ಮಾಡಿವೆ. ಇದು ರಾಷ್ಟ್ರೀಯತೆಗೆ ಅವಮಾನಕರ. ಇಂಥ ಅವ ಮಾನಕರ ಪ್ರಭುತ್ವವೆಂದೂ ಪ್ರಜಾಪ್ರಭು ತ್ವವಲ್ಲ.

ತಂತಿ ವಿಳಾಸ: ಮೈಲ್ಯಾಂಡ್ ಬ್ಯಾಂಕ್ — ದೂರವಾಣಿ: 22510 / 22809 — ಅಂಚೆ ಪೆಟ್ಟಿಗೆ ಅಂಕಿ: 1511

ಮೈಸೂರು ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್ ಲಿ.,
ಬೆಂಗಳೂರು - 18.

ಸ್ಥಾಪನೆ: 1929.

ಮೈಸೂರು ರಾಜ್ಯದ ರೈತರ ಭೂ ಅಭಿವೃದ್ಧಿಗಾಗಿ ಕಳೆದ 40 ವರ್ಷಗ ಳಿಂದ ದೀರ್ಘಾವಧಿ ಸಾಲವನ್ನು ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕುಗಳ ಮೂ ಲಕ ಒದಗಿಸಿಕೊಡುತ್ತಿದೆ. ಈ ವರೆಗೆ ಸುಮಾರು 45 ಕೋಟಿ ರೂಪಾಯಿಗಳ ದೀರ್ಘಾವಧಿ ಸಾಲದ ನೆರವನ್ನು ರೈತರಿಗೆ ಒದಗಿಸಿ ಕೊಟ್ಟಿದೆ.

ಸರ್ಕಾರದವರು ರೂಪಿಸಿರುವ ಬಾವಿ ಯೋಜನೆಯಂತೆ ರೈತರಿಗೆ ಕೇವಲ ಶೇ 6½ ಬಡ್ಡಿ ದರದಂತೆ ಈ ವರೆಗೆ ಸುಮಾರು 50,000 ಬಾವಿಗಳ ನಿರ್ಮಾಣ ಕ್ಕಾಗಿ 19ಕೋಟಿ ರೂಪಾಯಿಗಳಿಗೂ ಮಿಕ್ಕಿ ಸಾಲವನ್ನು ಮಂಜೂರು ಮಾ ಡಿದೆ. 2 ಕೋಟಿ ರೂ ಗಳಿಗೂ ಮಿಕ್ಕಿ ವಿದ್ಯುಚ್ಛಾಲಿತ ಮತ್ತು ಡೀಸೆಲ್ ನೀರೆ ತ್ತುವ ಯಂತ್ರೋಪಕರಣಗಳನ್ನು ಕೊಳ್ಳಲು ರೈತರಿಗೆ ಸಾಲವನ್ನು ಒದಗಿಸಿ ಕೊಟ್ಟಿದೆ.

ಸಾಮಾನ್ಯ ಅಭಿವೃದ್ಧಿ ಕಾರ್ಯಗಳಿಗಾಗಿ ಈ ವರೆಗೆ ಸುಮಾರು 22 ಕೋಟಿ ರೂ.ಗಳ ಸಾಲದ ನೆರವನ್ನು ರೈತರಿಗೆ ನೀಡಲಾಗಿದೆ. ಇವಲ್ಲದೆ ಟ್ರಾಕ್ಟರ್, ಪವರ್ ಟಿಲ್ಲರ್, ಸ್ಪ್ರಿಂಕ್ಲರ್ಸ್ ಮುಂತಾದ ವ್ಯವಸಾಯ ಯಂತ್ರೋಪಕರಣಗ ಳನ್ನು ಕೊಳ್ಳಲು ಸಾಲದ ನೆರವನ್ನು ಒದಗಿಸುತ್ತಿದೆ.

ಅಗ್ರಿಕಲ್ಚರಲ್ ರಿ ಫೈನಾನ್ಸ್ ಕಾರ್ಪೊರೇಷನ್ ಇವರ ನೆರವಿನಿಂದ ಸು ಮಾರು 25 ಕೋಟಿ ರೂ.ಗಳ ಸಾಲದ ನೆರವಿನ 23 ವಿಶೇಷ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಜಲಾಶಯಗಳ ಅಡಿ ಕಟ್ಟಿನ ಪ್ರದೇಶದ ಜಮೀನುಗ ಳನ್ನು ಅಭಿವೃದ್ಧಿಗೊಳಿಸುವ ಯೋಜನೆಗಳು. ಸಂಯುಕ್ತ ಕ್ಷೇತ್ರಾಭಿವೃದ್ಧಿ ಯೋಜನೆಗಳು. ಅಡಿಕೆ, ತೆಂಗು, ದ್ರಾಕ್ಷಿ, ಕಿತ್ತಳೆ, ಮುಂತಾದ ತೋಟಗಾರಿಕೆಗೆ ಸಂಬಂಧಪಟ್ಟ ಯೋಜನೆಗಳಿಗೂ ಈ ವಿಶೇಷ ಯೋಜನೆಯಿಂದ ನೆರವನ್ನು ಒದ ಗಿಸಲಾಗುತ್ತಿದೆ. ರೈತರು ಈ ಯೋಜನೆಗಳ ಸದುಪಯೋಗವನ್ನು ಮಾಡಿಕೊಳ್ಳ ಬೇಕು.

ರೈತರು ಈ ಅಭಿವೃದ್ಧಿ ಕಾರ್ಯಗಳಿಂದ ಬೆಳೆ-ಬೆಳೆಸಿ ಉಳಿಸಿರುವ ಹಣವನ್ನು ಈ ಬ್ಯಾಂಕಿನ ಗ್ರಾಮಾಂತರ ಡಿಬೆಂಚರುಗಳಲ್ಲಿ ತೊಡಗಿಸ ಬೇಕಾಗಿ ಕೋರಿಕೆ.

ಜಯಕುಮಾರ್ ಅನಗೋಳ್, ಐ.ಎ.ಎಸ್., ಮ್ಯಾನೇಜಿಂಗ್ ಡೈರೆಕ್ಟರ್. — ಬಿ. ಎಸ್. ವಿಶ್ವನಾಥನ್, ಎಂ. ಎಲ್. ಸಿ., ಅಧ್ಯಕ್ಷರು.

ಸುಧಾರಣೆ ಮತ್ತು ಗಾಂಧಿ ವಾದ— "To a people Famishing and idle, the only acceptable form in which God can dare appear is work and promise of food as wages— ಕ್ಷೀಣರೂ ಆಲಸರೂ ಆದ ಜನರಿದುರು ದೇವರೇನಾದರೂ ಪ್ರತ್ಯಕ್ಷನಾಗುವ ಧೈರ್ಯವನ್ನು ಮಾಡಿದರೆ, ಅದು ಕೆಲಸ (ಉದ್ಯೋಗ) ಮತ್ತು ಆಹಾರರೂಪದ ಕೂಲಿ ಎಂಬೆರಡು ಆಕೃತಿಗಳಿಂದ ಮಾತ್ರ" ಎಂದು ಜನಾಂತರಂಗವನ್ನು ಒಳಹೊಕ್ಕು ಕಂಡು ಹೇಳಿದ ಮಾತಿಗೆ ಅಂಥ ಮಾತಾಡಿದವರಿಂದ ಸ್ವರಾಜ್ಯವನ್ನು ಪಡೆದ ಜನದ ರಾಜಕಾರಣ ಇಂದು ಬೆಲೆಕೊಟ್ಟಿದೆಯೆ? ರಾವಣನ ಹೊಟ್ಟೆಗೆ ಕಾಸಿನ ಕಡಲೆ. ಅಂಥ ಸುಧಾರಣೆಗಳನ್ನು ೨೩ ವರ್ಷ ... ಮಾಡಿದ ಮಹಾವೀರ ಚಕ್ರವಿಜೇತರು ಜನರಿಂದ ಕೃತಜ್ಞತೆಯನ್ನು ಬಯಸುತ್ತಾರೆ; ನೊಮ್ಮಕ್ಕಳಿಗೆಲ್ಲ ಕೋಟಿ ಸ್ವತ್ತನ್ನು ವಂಚನೆಯಿಂದ ಗಳಿಸಿಟ್ಟು!

ಸತ್ಯ ಶೋಧಕನು ಧೂಳಿಗಿಂತ ಹೆಚ್ಚಿನ ನಿಗರ್ವಿಯಾಗಿರಬೇಕೆಂಬ ಗಾಂಧಿಸೂತ್ರವೊಂದೇ ನಮ್ಮ ೨೩ ವರ್ಷಗಳ ನಡತೆಯಲ್ಲಡಗಿದ ಸತ್ಯಾಂಶವನ್ನು ಸ್ಪಷ್ಟವಾಗಿ ಬೆಳಕಿಗೆ ತಂದೀತು. ಅಗ್ರಹ—ಪೂರ್ವಗ್ರಹಗಳಿಗೆ ದಾಸರಾದವರಿಗೆ ಆಯಾ ಬಣ್ಣದ ಸತ್ಯಗಳಷ್ಟೇ ಪ್ರತಿಮೆಗಳಾಗಿಮುನ್ನಿನೆದುರು ನಿಲ್ಲುವುವು. 'To refuse to have what millions cannot—ಲಕ್ಷಾಂ [illegible]

[illegible]

[illegible] "All sins are committed in secre- [illegible]

Vaidyaratnam P. S. Varier's

ARYA VAIDYA SALA

KOTTAKKAL (Kerala State).

Head Office Telephones — Kottakkal Exchange.

Office with Extension to Managing Trustee & Manager	Phone No. 31.
Nursing Home	Phone No. 34.
Chief Physician ...	Phone No. 35.
Managing Trustee (Residence) ...	Phone No. 37.
Manager (Residence)	Phone No. 30.

MADRAS BRANCH

No. 1, Krishnamachari Road NUNGAMBAKKAM — MADRAS-34.
(Phone No. [illegible])

Other Branches

1. Kozhikode (Phone: [illegible])
2. Palghat (Phone: [illegible])
3. —do— Sales Depot (Phone: [illegible])
4. Alwaye.
5. Erode (Phone [illegible])
6. Trichur (Phone [illegible])
7. Ernakulam (Phone [illegible])
8. Trivandrum (Phone: [illegible])

and

Above 100 Authorised Agencies and Depots.

Genuine Standard Ayurvedic Medicines and expert medical advice available at our Head Office at Kottakkal and all Branches. Medical advice through correspondence given by our Chief Physician at Kottakkal. Special Treatments like Pizhichil, Navarakkizhi, etc., are conducted under the supervision of our Chief Physician at our GOLDEN JUBILEE NURSING HOME, KOTTAKKAL.

MANAGING TRUSTEE.

ರಾಜಕೀಯ ನರಕಾಸುರರ ದಮನವಾಗಲಿ!

(ಎಂಟನೇ ಪುಟದಿಂದ)

ಮತ್ತು ಕುಶಲರೂ ನೂತನ ಬಗೆಯ ಎಲ್ಲರನ್ನೂ ವಂಚಿಸುತ್ತಿದ್ದಾರೆ.

ಶ್ರೀ ಸಾಮಾನ್ಯನಿಗೆ ಅನ್ನ ದೊರಕದಾಗ ಏನು ಮಾಡಬೇಕೆಂಬ ಅರಿವು ಇನ್ನೂ ಇಲ್ಲ. ವಸತಿಗೆ ಮನೆ ಇಲ್ಲವೆಂದಾದರೆ ಆತ ಬೊಬ್ಬಿಡುವದಿಲ್ಲ. ಬಟ್ಟೆ ಬರೆಗಳಿಗೆ ಕೊರತೆಯಾದರೆ ಆತ ಕೌಪೀನದಲ್ಲೇ ಅರೆಬತ್ತಲೆ ಚಳಿಯಲ್ಲೇ ತೃಪ್ತನಾಗಿ ದಿನ ದೂಡುತ್ತಾನೆ. ಕೆಲಸ ಅಥವಾ ಉದ್ಯೋಗವಿಲ್ಲದಾದರೆ ಆತ ಮರುಗುವದಿಲ್ಲ. ಅವನಿಗೆ ಏನು ಮಾಡಬೇಕೆಂಬುದೇ ತಿಳಿಯುವದಿಲ್ಲ ಉಳುವ ಎಂದರೆ ಭೂಮಿಯಿಲ್ಲ. ಕೆಲಸ ಮಾಡುವ ಎಂದರೆ ನೌಕರಿ ಅಥವಾ ಉದ್ಯೋಗವಿಲ್ಲ. ನಾವೆಷ್ಟು ಪಂಚವಾರ್ಷಿಕ ಯೋಜನೆಗಳನ್ನು ರೂಪಿಸುತ್ತ ಹೋದೆವೋ ಅಂದಿನಿಂದ ಈ ಎಲ್ಲಾ ಪ್ರಶ್ನೆ ಹದಗೆಡುತ್ತಲೇ ಹೋಗಿದೆ. ಪೇಪರಿಗೇನೂ ಹಸುರು ಕ್ರಾಂತಿಯಾಗಿದೆಯಂತೆ. ನಮಗೆ ಮುಂಬಯಿಯಲ್ಲಿ ಮಾತ್ರ ಅಮೇರಿಕನ್ ಅಕ್ಕಿ ಮತ್ತು ಗೋಧಿಯನ್ನೇ ತಿನ್ನಿಸುತ್ತಾರೆ. ಶ್ರೀ ಸಾಮಾನ್ಯ ತನ್ನ ವಿಧಿಗಾಗಿ ಮರುಗುತ್ತಾನೆ. ಊಟಕ್ಕೆ ಕೊಡದ ದೇವರಿಗೂ ಕೈ ಮುಗಿಯುತ್ತಾನೆ. ಇದು ನಾವು ನಡೆದು ಬಂದ ದಾರಿ. ಇದರ ಸದವಕಾಶವನ್ನೂ ರಾಜಕಾರಣಿಗಳು ಬಲ್ಲರು. ಅಂದ ಮೇಲೆ ದೇಶದ ಆಗು ಹೋಗುಗಳನ್ನೆಲ್ಲ ಯಾರು ನೋಡುತ್ತಾರೆ! ಯಾರು ಮಾಡುತ್ತಾರೆ!

ಈ ದೌರ್ಭಾಗ್ಯ ದೇಶದಲ್ಲಿ ಚಿನ್ನದಿಂದ ಅನ್ನಕ್ಕೆ ದಾರಿದ್ರ್ಯವಿದ್ದರೂ ರಾಜಕೀಯ ಮುಂದಾಳುಗಳಿಗೆ, ಪುಂಡಾರಿಗಳಿಗೆ, ನರಕಾಸುರರಿಗೆ ಸುತರಾಂ ದಾರಿದ್ರ್ಯವಿಲ್ಲ. ಅಹೋರಾತ್ರಿ ಇವರದೇ ಕೇಕೆ; ಕೋಲಾಹಲ, ಭಾಷಣ, ಭೋಜನ ಮತ್ತು ಬಾಂಧವ. ಸಣ್ಣ ಹಳ್ಳಿ ಅಥವಾ ಊರಿನಲ್ಲಿ ಸಣ್ಣ ಮಟ್ಟದ ಠಕ್ಕರು. ದೊಡ್ಡ ಊರಿನಲ್ಲಿ ಅಥವಾ ಶಹರುಗಳಲ್ಲಿ ಅಥವಾ ದೇಶದಲ್ಲಿ ದೊಡ್ಡ ದೊಡ್ಡ ಮೀನುಗಳು ಸಿಕ್ಕಿದ್ದನ್ನು ಕಬಳಿಸುವ ತಿಮಿಂಗಿಲಗಳು. ಜನಸೇವೆ, ದೇಶಸೇವೆಯ ಸೋಗಿನಲ್ಲಿ ಜನರನ್ನು ಎಲ್ಲಾ ವಿಧದಿಂದಲೂ ವಂಚಿಸುವದೊಂದೇ ಕಾರ್ಯಕ್ರಮ. ಸದ್ಯ ದೇವರ ಕೃಪೆಯಿಂದ ಯಾರೊಬ್ಬ ರಾಜಕೀಯ ಮುಂದಾಳಾದರೂ 'ದೇವರೇ ನಮ್ಮನ್ನು ಈ ಕೆಲಸಕ್ಕೆ ನಿಯಮಿಸಿರುವನು' ಎಂದು ಹೇಳಿಲ್ಲ. ನಮ್ಮ ರಾಜಕೀಯ ದುರ್ಗಂಧದಿಂದ ಕೊಳೆಯುತ್ತಿದೆ. ಸಿಕ್ಕಿದ್ದೇ ಅವಕಾಶವೆಂದು ಈ ನರಕಾಸುರರು ಸಿಕ್ಕಿದ್ದನ್ನೆಲ್ಲ ನುಂಗಲು ಹವಣಿಸುತ್ತಿದ್ದಾರೆ; ನುಂಗುತ್ತಿದ್ದಾರೆ. ಈ ಕಪಟ ರಾಜಕೀಯ ದುರಂಧರರಿಂದ, ಕಳ್ಳ-ಕಾಕರಿಂದ, ನೀಚರಿಂದ, ಅನೈತಿಕ ವ್ಯವಹಾರಗಳಿಂದ ಪಾರಾಗ ಬೇಕಾದರೆ ಮಾನವನಿಂದ ಸಾಧ್ಯವಿಲ್ಲ. ದೇವರೇ ಮನಸ್ಸು ಮಾಡಬೇಕು. ಇವನ್ನು ಮನಗಂಡೇ ಶ್ರೀ ಜಯಪ್ರಕಾಶ ನಾರಾಯಣರು ರಾಜಕೀಯದಿಂದ ನಿವೃತ್ತನಾಗಲು ಕಾರಣವಿರಬೇಕು. ಆದ್ದರಿಂದ ಈ ಪರಾಕ್ರಮ ನರಕಾಸುರರನ್ನು ದೇವರೇ ದಮನಿಸಬೇಕು. ಆ ಸಮಯ ಬರಲಿದೆ. ಕಾಲ ಬಾಗ ದೇವರೇ ಅವನ್ನು ಕ್ಷಣಮಾತ್ರದೊಳಗೆ ನಿರ್ವಹಿಸಿಯಾನು.

ರಾಮ ರಾಜ್ಯಕ್ಕಿಂತಲೂ ಹಿಂದೆ ರಾಜಾ ದಶರಥನ ರಾಜ್ಯವಿತ್ತು. ಮಹಾರಾಜ ದಶರಥ ಸಿಂಹಾಸನದಲ್ಲಿ ಮಂಡಿತನಾಗಿದ್ದರೂ, ಅರಮನೆಯ ಪ್ರಾಂಗಣದಲ್ಲಿ ಮಹಾಮುನಿ ವಿಶ್ವಾಮಿತ್ರನನ್ನು ನೋಡಿದಾಕ್ಷಣ ಗದ್ದಿಗೆಯಿಂದೆದ್ದು ಧಾವಿಸಿ ಮುನಿಗೆ ಕೈ ಮುಗಿಯುತ್ತಿದ್ದ ಸಂಪ್ರದಾಯವಿತ್ತು. ರಾಜಾತಿಥ್ಯವನ್ನು ಸ್ವೀಕರಿಸಬೇಕೆಂದು ಬೇಡಿಕೊಳ್ಳುವ ಪರಿಪಾಠವಿತ್ತು. ವಿಶ್ವಾಮಿತ್ರನೋ ರಾಜ ಋಷಿ! ಅರಮನೆಯ ಆಡಂಬರ ಅವನಿಗೇಕೆ. ಆತಿಥ್ಯ ಸುಖಲೋಲುಪತೆಗಳು ಅವನಿಗೆ ಬೇಕೇ? ಅವನ್ನೂ ನಿರಾಕರಿಸುವ ಯೋಗಿ ರಾಜನಾದ ಆತನಿಗೆ ಸಿಂಹಾಸನದ ಸುಪ್ಪತ್ತಿಗೆಯೆಂದರೆ ತೃಣ ಸಮಾನ.

'ಮಹಾರಾಜಾ, ನಿನ್ನ ರಾಜ್ಯ ಹೇಗಿದೆ. ಪ್ರಜೆಗಳು ಕ್ಷೇಮದಿಂದಿರುವರೇ? ಎಲ್ಲೂ ನೆಮ್ಮದಿ ತಾನೆ?'—ಇಷ್ಟೇ ಬೇಕು.

"ಮಹರ್ಷಿ—ರಾಜ್ಯ ವ್ಯವಹಾರ ಕಲ್ಯಾಣಕಾರಿಯಾಗಿದೆ. ಪ್ರಜೆಗಳೆಲ್ಲ ಸುಖಸಮೃದ್ಧಿ ಮತ್ತು ಶಾಂತಿಗಳಿಂದ ಸಂತೃಪ್ತರಾಗಿದ್ದಾರೆ."—ಉತ್ತರ.

ಮುನಿ ವಿಶ್ವಾಮಿತ್ರ ಪ್ರಾಂಗಣದಿಂದಲೇ ರಾಜನಿಗೆ ಆಶೀರ್ವದಿಸಿ ಶುಭಕೋರಿ ಹೋಗಿ ಬಿಡುತ್ತಾನೆ. ಇದು ಅಂದಿನ ರಾಜಕೀಯ ಸೇವೆಯ ಮಾದರಿ. ಈಗಲೋ ಸರಕಾರದ ಕಂಭಗಳಿಗೆ ಸಲಾಮು ಹೊಡೆಯಬೇಕು. ಲಂಚ ರುಷುವತ್ತುಗಳನ್ನು ಕೊಡಬೇಕು. ಮಾಮೂಲು ಕೊಟ್ಟರೂ ಕೆಲಸ ಮಾಡದ ನಿದರ್ಶನಗಳಿವೆ. ರಾಜಕಾರಣಿಗಳ ಕೈವಾಡವಿಲ್ಲದೆ ಏನು ಜರಗುತ್ತಿಲ್ಲ. ಮೂರು ಪೈಸೆಯ ಕೆಲಸಕ್ಕೆ ನೂರು ರೂಪಾಯಿಯ ಬೇಡಿಕೆ. ಈ ಆವರಣದಲ್ಲಿ ನಮ್ಮ ರಾಜಕೀಯ ಮತ್ತು ರಾಜ್ಯಾಡಳಿತಗಳು ಸಾಗುತ್ತವೆ.

ರಾಜಕೀಯ ಚದುರಂಗದಾಟದಲ್ಲಿ ಮಿತ್ರರು ಮತ್ತು ಶತ್ರುಗಳು ಎಂದಿಲ್ಲ. ಯಾರು ಧ್ಯೇಯ, ಧೋರಣೆ ಮತ್ತು ಮೂಲ ತತ್ವಗಳೆಂದು ಭಾಷಣ ಬಿಗಿಯುತ್ತಾರೋ ಅಂತಹರೇ ಅಕ್ಷಮ್ಯ ಅಪರಾಧಗಳನ್ನು ಮಾಡುತ್ತಾರೆ. 'ಅನುಕೂಲ ಶಾಸ್ತ್ರದ ಮದುವೆ' [Marriage of convenience] ಈಗ ಸೀದಾ ಮತ್ತು ಸಮ್ಮತವಾದುದು ಎಂದು ಈ ಪಿಂಡಾರಿಗಳು ತತ್ವ ಬೋಧನೆ ಮಾಡುತ್ತಾರೆ. ತಮ್ಮ ಸ್ವಾರ್ಥ ಸಾಧನೆ, ಲೋಲುಪತೆಗಾಗಿ ಎಂತಹ ಹೀನ ಕಾರ್ಯವಾದರೂ ಮಾಡುತ್ತಾರೆ. ತಮಗೆ ಗಂಟು ಸಿಗಬೇಕು. ಇಲ್ಲವೆ ಗದ್ದುಗೆ ಸಿಗಬೇಕು. ಇವೆರಡರಲ್ಲಿ ಒಂದಾದರೂ ಸಿಗದಾಗ ರಂಪಾಟ ಮಾಡುತ್ತಾರೆ. ದೇಶವನ್ನು ಹಾಳುಮಾಡಿ, ದೇಶ ಹಾಳಾಯಿತೆಂದು ಬೊಗಳುತ್ತಾರೆ. ನ್ಯಾಯವಿಲ್ಲ, ನೀತಿಯಿಲ್ಲ, ಧರ್ಮ ಇಲ್ಲ, ಸದಾಚಾರವಿಲ್ಲ, ಸತ್ಯವಿಲ್ಲ. ಅವರ ಅಮರ ಕೋಶದಲ್ಲಿ ಅವ್ಯೊಂದಕ್ಕೂ ಅರ್ಥವಿಲ್ಲ. ರಾಜ್ಯ ಅಥವಾ ರಾಜ್ಯಾಧಿಪತಿಗಳನ್ನು ಉರುಳಿಸುವುದೊಂದೇ ಅವರ ಧ್ಯೇಯ ಮತ್ತು ಕಾರ್ಯಭಾರ. ಎಷ್ಟೊಂದು ರಾಜಕೀಯ ಪಕ್ಷಗಳು, ಪಂಗಡಗಳು, ಧುರೀಣರು—ನರಕಾಸುರರು ನನ್ನ ಮತ್ತು ನಿಮ್ಮ ಉದ್ಧಾರ-ದೇಶೋದ್ಧಾರವೆಂದು ತಮ್ಮ ಗುಡಿಸಲು ಮನೆ ಕಳಚಿ ಸೌಧಗಳನ್ನು ಕಟ್ಟಿಸುತ್ತಾರೆ. ಇವರು ಪ್ರಜೆಗಳ ಉದ್ಧಾರ ಮಾಡಿಯಾರೇ? ಹಿಂದಿನ ರಾಜಕೀಯ ರಾಜ್ಯ ಕಾರುಬಾರು ಸಜ್ಜನರಿಂದ ಸಚ್ಚಾರಿತ್ರರಿಂದ ನಡೆಯುತಿತ್ತು. ಇಂದು ಲಫಂಗರು, ಪುಂಡರು, ಶಂಡರು, ಬಂಧರು, ಕೊಲೆಗಡುಕರು, ಕಳ್ಳರು ಇತ್ಯಾದಿ ರಾಜಕೀಯ ಮುಖವಾಡವನ್ನು ಹಾಕಿ ದೇಶವನ್ನು ಈ ದುಸ್ಥಿತಿಗೆ ಇಳಿಸಿ ಬಿಟ್ಟಿದ್ದಾರೆ.

ಇಂತಹರಿಂದ ಜನರು ಜಾಗ್ರತರಾಗಬೇಕು. ಈ ಪಿಂಡಾರಿಗಳ ಪೀಡೆಯಿಂದ ತಪ್ಪಿಸಿಕೊಳ್ಳಬೇಕು. ಅಂತಹರಿಗೆ ಮನ್ನಣೆ ಕೊಡಬಾರದು. ಆಶ್ರಯ ನೀಡಬಾರದು. ಪುರಸ್ಕಾರ ನೀಡಬಾರದು. ಅವರಿದ್ದೆಡೆಯಿಂದ ಬಹುದೂರ ಓಡಿ ಹೋಗ ಬೇಕು. ಅವರ ನೆರಳನ್ನು ನೋಡಕೂಡದು.

ದುರ್ದೈವೀ ಭಾರತೀಯರ ಉದ್ಧಾರವಾಗಬೇಕಾದರೆ ಈ ದುರಾತ್ಮ ರಾಜಕೀಯ ಪಟುಗಳ ದಮನವಾಗಬೇಕು. "ದಮನವಾಗಲಿ"—ಎಂದು ಎಲ್ಲಾ ಜನರು ದೇವರೊಡನೆ ಬೇಡ ಬೇಕು. ಆಗ ತಾನೆ ಒಬ್ಬ ಶ್ರೀ ಕೃಷ್ಣನಲ್ಲಿ ನೂರಾರು ಕೃಷ್ಣರ ಅವತಾರವಾದೀತು.

ತಾತ್ಪರ್ಯ: ಸ್ವಾತಂತ್ರ್ಯ ನಂತರ ಅಂದರೆ ಇಪ್ಪತ್ತು ಮೂರೂ ವರ್ಷಗಳಿಂದ ಜನತಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡಿ ಸರಕಾರದ ರಾಜ್ಯಾಡಳಿತದಲ್ಲಿದ್ದ ಅತಿರಥ, ಮಹಾರಥ ಧುರೀಣರೆಲ್ಲ ಇನ್ನು ಹದಿಮೂರು ವರ್ಷ ಕಾಲ ರಾಜ್ಯಾಡಳಿತದ ಗದ್ದುಗೆಯನ್ನು ಏರಲು ಅವಕಾಶ ಕೊಡಬಾರದು. ಹದಿಮೂರು ವರ್ಷ ಸಂದ ಬಳಿಕ ಹದಿನಾಲ್ಕನೆಯ ವರ್ಷ ಈ ರಾಜ್ಯಪಟುಗಳಲ್ಲಿ ಏನಾದರೂ ಬದಲಾವಣೆ ಆದಲ್ಲಿ ಅದು ದೇಶಕ್ಕೆ ನೆಮ್ಮದಿತರುವುದೆಂದಾದಲ್ಲಿ ಅಂತಹರನ್ನು ಮಾತ್ರ ಆರಿಸಿ ಕಳುಹಿಸಿಕೊಡಬೇಕು. ಅವರಿಗೆ ಸರಕಾರದ, ಅಥವಾ ಸರಕಾರಕ್ಕೆ ಸಂಬಂಧಿಸಿದ ಅಂದರೆ ಜನ ಸೇವೆಯ ಕೆಲಸವನ್ನೂ ಕೊಡಲೇ ಬಾರದು. ಈ ಬೆಕ್ಕು ಸನ್ಯಾಸಿಗಳಿಂದ ಸ್ವಾರ್ಥ ಸಂಚಯ ಮತ್ತು ಕಾಂಚನ ಸಂಗ್ರಹವಾದೀತೇವಿನಃದೇಶವಲ್ಲ. ಕ್ರೈಸ್ತರು ಕ್ರಿಸ್ತನನ್ನು ಬೇಡಲಿ, ಮುಸಲ್ಮಾನರು ಅಲ್ಲಾನೊಡನೆ ಬೇಡಲಿ. ಹಿಂದುಗಳು ಪರಮಾತ್ಮನಿಗೆ ಮೊರೆಯಿಡಲಿ. ದೇಶದಲ್ಲಿನ ಕೋಟ್ಯಾಂತರ ಜನರ ಮೊರೆ ದೇವರಿಗೆ ಕೇಳುವಂತಾಗಬೇಕು. ಅಂದಾಗ ನಮ್ಮನ್ನೆಲ್ಲ ದೇವರೇ ಕಾಪಾಡಬೇಕೆಂದಾಯಿತು.

ಅಭಯವಚನ: ನಿರ್ಗತಿಕರನ್ನು, ಕಂಗಾಲಾದವರನ್ನು, ಶರಣಾಗತರನ್ನು ಶೋಷಿತರನ್ನು, ದೇವರೇ ಕಾಪಾಡುತ್ತಾನೆ ರಾಜಕೀಯದ ಕಪಟ ಸನ್ಯಾಸಿಗಳಲ್ಲ. ಜಯ ಹಿಂದ.

ಎಲೋ ಪರಮಾತ್ಮನೇ! ನಿನಗೆ ಯಾವದು ಒಳ್ಳೆಯದು ಅನಿಸುವದೊ ಅದೇ ಉತ್ತಮ ಕಾರ್ಯ, ಸತ್ಕರ್ಮವಾಗಿದೆ. ನೀನು ನಿರಾಕಾರ ನಿರ್ಗುಣ ಮತ್ತು ಯಾವಾಗಲೂ ಇರುವಂತವನಾಗಿರುವಿ.

० ० ०

With best compliments from

HOTEL TOURIST

(Regd.)

Race Course Road, Ananda Rao Circle,

BANGALORE-9.

High Class Vegetarian Boarding

Lodging & Restaurant

Phone—72381 (5 lines) Grams—HOTELTOUR

ದೀಪಾವಳಿಯ ಶುಭಾಶಯಗಳು!

ಹೋಟೆಲ್ ಟೂರಿಸ್ಟ್

(ರಿಜಿಸ್ಟರ್ಡ್)

ರೇಸ್ ಕೋರ್ಸ್ ರೋಡು, ಆನಂದರಾವ್ ಸರ್ಕಲ್

ಬೆಂಗಳೂರು-9.

ಕಣ್ಮನ ತಣಿಸುವ ಬೆಂಗಳೂರು ಮಹಾನಗರದ ಅತ್ಯಂತ ಕೇಂದ್ರಸ್ಥಾನದಲ್ಲಿರುವ ಮಹೋನ್ನತ ಹೋಟೆಲ್.
ಪ್ರತಿ ಕೋಣೆಗೂ ಸ್ನಾನಾಗಾರದ ವ್ಯವಸ್ಥೆ ಇರುವ 150 ಕೊಠಡಿಗಳ ಅತ್ಯಾಧುನಿಕ ವಸತಿ, ಭೋಜನ ಮತ್ತು ಉಪಾಹಾರ ಮಂದಿರ

ಶಾಪ!

ನೂರೆಂಟು ಜನರಲ್ಲಿ ನಮ್ಮ ನಾವೇ ಕಂಡು
ಗುರುತು ಹಿಡಿಯದ ಹಾಗೆ ಅಪರಿಚಿತರು,
ನಮ್ಮ ನಡೆನುಡಿಯಲ್ಲಿ ರೀತಿ-ನೀತಿಗಳಲ್ಲಿ
ನಮ್ಮನೇ ಕಳಕೊಂಡ ಸಂಪನ್ನರು.

ಕೆಲರುಚ್ಚ ಕುಲದವರು ಕೆಲರಧಮ ಕುಲವೆಂದು
ಮೇಲು ಕೀಳಿನ ತೂಕವೇಕೊ ಜಗದಿ,
ಅಸ್ಪೃಶ್ಯರೆಷ್ಟೋ ಜನ ಮುಟ್ಟಕೂಡದು ಅವರ
ಉತ್ತಮರ ಮಾತೇನು ಕೇಳಿನೋಡಿ.

ನಮ್ಮ ಸುತ್ತಲು ಕಟ್ಟಿ ಸಂಪ್ರದಾಯದ ಬೇಲಿ
ಹೊಸಗಾಳಿ ಸೇವಿಸದೆ ಮೂಢರಾಗಿ
ಅಸ್ಪೃಶ್ಯರವರೆಂದು ಇರಿಸಿ ಗಾವುದ ದೂರ
ಧರ್ಮ ಗ್ರಂಥವ ಮತ್ತೆ ಮತ್ತೆ ಓದಿ;

ನಾವೆ ಮಾಡಿದ ಜಾತಿ, ನಾವೆ ರಚಿಸಿದ ರೀತಿ
ನಾವೆ ಅವರನು ಹೀನ ಕುಲಕೆ ಕಳಿಸಿ,
ಉತ್ತಮರ ಪಾಪಗಳ ಹೊರೆಯ ಹೊರಲೇನವರು?
ಶಾಪ ತಟ್ಟದೆ ನಮಗೆ ಅವರ ದಣಿಸಿ?

ಕುಡಿದ ಜಲ ನೆಲ ಗಾಳಿ ಬೆಳಕು ನೀಲಾಕಾಶ
ಒಂದಿರಲು ಮತ್ತಲ್ಲಿ ಜಾತಿಯೇಕೆ?
ಮುಗಿದು ಹೋಗಲಿ ರಾತ್ರಿ ನಮ್ಮನರಿಯುವ ಬೆಳಗು
ಬರಲಿ ನಮ್ಮೆದೆಯೆಡೆಗೆ ಕಾಯಬೇಕೆ?

ಅಂತ್ಯಜರು ಹರಿಜನರು ದೇವಪ್ರಿಯರಾದವರು
ಮನುಜರಲ್ಲೇನವರು ಬೇರೆ ಹೆಸರೆ?

ಅವರು ನಮ್ಮವರೆಂದು ನಮ್ಮ ನೆರೆಹೊರೆಯೆಂದು
ಕರೆಯಲಾರೆವೆ ನಾವು ನಮ್ಮ ಬಳಿಗೆ!

ದೂರ! ನಿಂದಿಸಲವರು ಗೈದರೇನಪರಾಧ?
ನಮ್ಮ ತಪ್ಪಿಗೆ ನಾವೆ ಕ್ಷಮೆ ಕೇಳುವ,
ನಮ್ಮದೊಂದೇ ಮನೆಯು ನಾವೆಲ್ಲ ಸೋದರರು
ಶಾಪವನು ತೊಡೆದೊಗೆದು ವರ ಕೇಳುವ.

—ಗೋಪಾಲಕೃಷ್ಣ ಹೆಗಡೆ
ಕೇರೀಮನೆ
(ಆಕಾಶವಾಣಿ ಕೃಪೆಯಿಂದ)

ಅಸುಖವೇ! ಬಾ ಬಳಿಗೆ

(ಆರನೇ ಪುಟದಿಂದ)

೨೭

ಯೋಚಿಸಲು ವಿಧಿಗೆ ಸ್ಥಿರಸ್ಥಿರ ಜೀವಿಯು ನೋಳ್ಪೆ
ಎಂದಿಂಗುಯಿಲ್ಲವೆಂದೆನಗೆ ತೋರುವುದು;
ಒಂದು ಕೈ ಹೊಡೆಯುತಿರಲಿನ್ನೊಂದು ಕೈಯಿಂದೆ
ಬೆನ್ನನೊರಸುವ ತಾಯಿ ನಿಯತಿ ಬಿಡದೆ.

೨೮

ಜೀವಿ ಹೋಗುವ ಹಾದಿಯಲ್ಲೆಲ್ಲ ಹಿಂಬಳಿಯು
ಕಷ್ಟಗಳು ಬೆನ್ನಟ್ಟಿ ಬರುತಿರುವುವು;
ಅಳಲು ಸೊಗವೆನ್ನುವುದು ನೆಳಲು ಬೆಳಕುಗಳಂತೆ
ಅದುವೆ ಕಾರಣವಲ್ತೆ ಪೊದಗುತಿಹವು

೨೯

ಅದುವುಮಲ್ಲದೆ ಸುಖಾಸುಖಗಳೆನೆ ಮೂರ್ಖನ
ಸ್ಥಿತಿಯೊಂದೆಯೆಂಬುದನು ತಿಳಿವೆನಿಂದು;
ಅದರಿಂದಲಲ್ತೆ ಸುಖದುಃಖವೆಂಬೆರಡರೊಳು
ಚಲಿಸನು ಮಹಾಮತಿಯು ಧೈರ್ಯ ತಂದು

೩೦

ಆಳಲಸಾಧಿಸುವ ಸುಖವನೆಂದಿಗೂ ನಾ ಬಯಸೆ,
ಅಸುಖವೇ! ಬಾ ಬಳಿಗೆ! ನಿನ್ನನೊಲಿದಿಹೆನು;
ಎನ್ನ ಹೃದಯವು ದುಃಖವನೆ ಹುಡುಕಿ ಹೋಗುತಿದೆ
ಕಷ್ಟಗಳನು ದುರ್ದಿನಗಳು ಬಯಸುವೆನು

೩೧

ಹೆಜ್ಜೆ ಹೆಜ್ಜೆಯಂತೆ ಕಾರಿರುಳ ಕತ್ತಲೆಯು
ಒಮ್ಮೆ [illegible] ಬೆಳಕಿನ ಬರುವುದು;
ಕಳೆಕಳೆಗಳನ್ನು ಹರಿದ ಬಳಿಕ ಬಾಳುವೆಯು
ಒಂದು ನವ [illegible] ತೋರುವುದು.

೩೨

ತೊಳಗಿದ ಮಂಗಳಾಂಗಗಳ ಕೂಡಿರುವ
[illegible] ಜೀವಿತವು;
ತರುಗಳಿಗೆ ನಿದ್ರೆಯಿತ್ತ [illegible] ಭಾವದಲಿ
ಪಕ್ಷಿಗಳ [illegible].

೩೩

ನೆಲೆಯರದ [illegible]
[illegible]
ಹಲವು ದಿನ [illegible]
[illegible]

೩೪

ಅದರಿಂದೆ ಸುಖದುಃಗಳನ್ನು [illegible]
ಕಾಣದಿಹ [illegible]—
ವ್ಯಥೆಯು ಪಥದಲಿ [illegible]
ಬೇಗ ಬೇಗನೆ [illegible]

೩೫

ಮನವೇನೊ—[illegible]!
ಆಪತ್ತು ಬಂದಿರಲು [illegible]
ಪೋಷಿಸಲೆಂದೆ [illegible]
ಪಕ್ಷಿ [illegible]!

With best compliments from

THE CANARA NURSERY RESEARCH GARDENS

(Well known orchard in South Kanara)

POST: ULIARGOLI,
KAUP, S. Kanara.
(Mysore State)

Founder:
LATE KAUP MUDDANNA SHETTY

Varieties of grafted fruit and flower plants are available for sale.

Phone: 42 Kaup

HOTEL SATKAR

Boarding, Lodging & Restaurant

Behind Corporation Office.
9 MISSION ROAD

BANGALORE-27

Phone No.—
1 28537
2 29887

Grams:
HOSTSATKAR

Vegetarian Cuisine

Attached Bath Rooms & Phones

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden
Quiet, Calm Atmosphere
Personalised service.

Props: T. S. SHETTY & SONS

ನಾಲ್ಕು ಐತಿಹಾಸಿಕ ಪ್ರಶ್ನೆಗಳು

(ಐದನೇ ಪುಟದಿಂದ)

ಯಿಂದ ಅನಂತೇಶ್ವರನೆಂಬ ಹೆಸರು ರೂಢಿಗೆ ಬಂದಿರಬೇಕು. ದಾಖಲೆಯಲ್ಲಿ ಈ ಹೆಸರಿಗೆ ಕ್ರಿ. ಶ. 1614ರ ಉಲ್ಲೇಖವು ಪ್ರಥಮವಾದುದು.

ಮಾಧ್ವ ಸಂಪ್ರದಾಯ ಪ್ರಕಾರ ಈಶ್ವರ ಲಿಂಗಾಂತರ್ಗತವಾಗಿ ಶ್ರೀ ವಿಷ್ಣು ಇರುವನೆನ್ನುವುದು ಸಹಜವೇ. ಎಲ್ಲಾ ದೇವತೆಗಳಿಗೆ ಅಧಿದೇವನು ಶ್ರೀ ವಿಷ್ಣುವೇ. ಆದರೆ ಅನಂತೇಶ್ವರವು ಮಾತ್ರ ಆಗಮ ಶಾಸ್ತ್ರ ಪ್ರಕಾರ ನಿರ್ಮಿಸಿದ ಪ್ರಾಚೀನ ಶಿವಾಲಯ. ಉಡುಪಿಯಲ್ಲಿ ಸ್ಕಂದನ ಮತ್ತು ಶಿವನ ಆರಾಧನೆಗಳ ಪ್ರಾಮುಖ್ಯತೆಯನ್ನು ಈ ಹೆಸರು ತಿಳಿಸುತ್ತದೆ. ಶ್ರೀ ವಾದಿರಾಜ ಸ್ವಾಮಿಗಳಾದರೂ 'ಶಿವಾಂತರ್ಯಾಮಿತಾಂ ಪ್ರಿಯಾನ್ ಪ್ರತಿ ಪ್ರಬೋಧಯನ್| ದಯೋವಾರಿ ನಿಧಿ ಶೈವೀಂ ಶಿಲಾ ಮಾಹಾತ್ಮ್ಯ ಕೋಭಕೇ' -ರುದ್ರಾಂ ತರ್ಯಾಮಿತ್ವವನ್ನು ತನ್ನ ಭಕ್ತರನ್ನು ಕುರಿತು ತಿಳಿಸುತ್ತಾ "ಈಶ್ವರ ಸಂಬಂಧಿಯಾದ ಲಿಂಗಾಕಾರವನ್ನು ಆಶ್ರಯಿಸಿ ವಿಷ್ಣುವು ವಿರಾಜಮಾನನಾಗಿದ್ದಾನೆ" ಎಂದೇ ಹೇಳಿದ್ದಾರೆ ಹೊರತು ಲಿಂಗವು ವಿಷ್ಣು ಲಿಂಗವೆಂದು ಹೇಳಿಲ್ಲ. ಶೈವ ಸಂಬಂಧವಾದ ದೇವತೆಯನ್ನೇ ಲಿಂಗಾಕಾರದಲ್ಲಿ ಆರಾಧನೆ ಮಾಡುವುದು ಆಗಮ ಶಾಸ್ತ್ರಕ್ಕೆ ಸ್ವೀಕೃತವಾದುದು. ಹೀಗಾಗಿ ಈ ದೇವತೆಯನ್ನು ಅನಂತಪದ್ಮನಾಭ ನೊಡನೆ ಹೊಂದಿಸುವ ಸಂಪ್ರದಾಯವು ಅರ್ವಾಚೀನವಾಗಿದೆ.

ಅನಂತೇಶ್ವರ ದೇವಾಲಯವು ಸುಮಾರು 8ನೇ ಶತಮಾನಕ್ಕೆ ಅಸ್ತಿತ್ವದಲ್ಲಿದ್ದಿರಬೇಕೆನ್ನುವುದಕ್ಕೆ ಒಂದು ಶಾಸನಾಧಾರವೂ ಕಂಡುಬರುತ್ತದೆ. ಈಗ ಚಂದ್ರೇಶ್ವರವಿರುವ ಸ್ಥಳವು ಆ ಸಮಯದಲ್ಲಿ ಎಂದರೆ ಕ್ರಿ.ಶ. 8–9ನೇ ಶತಕದಲ್ಲಿ ಕೆರೆಯಾಗಿದ್ದಿರಬೇಕೆಂದೂ ಈ ಕೆರೆಯನ್ನು ವಿಮಲಾದಿತ್ಯನೆಂಬ ಅರಸನು ಯಾವುದೋ ಒಂದು ತಪ್ಪಿಗೋಸ್ಕರ ಪ್ರಾಯಶ್ಚಿತ್ತವಾಗಿ ತೋಡಿಸಿದ್ದಿರಬೇಕೆಂಬುದನ್ನು ಈ ಶಾಸನವು ತಿಳಿಸುತ್ತದೆ.

ಉಡುಪಿಯ ಇತಿಹಾಸದಲ್ಲಿ ಮೂರನೇ ಪ್ರಶ್ನೆಯೆಂದರೆ ಉಡುಪಿ ಶ್ರೀಕೃಷ್ಣ ವಿಗ್ರಹವು ಕನಕದಾಸನ ಭಕ್ತಿಗೆ ಮೆಚ್ಚಿ ಮೂಡುದಿಕ್ಕಿನಿಂದ ಪಡುದಿಕ್ಕಿಗೆ ತಿರುಗಿದುದು ಸಹಜವೇ ಎಂಬುದು. ಸಾಂಪ್ರದಾಯಿಕವಾಗಿ ಈ ಪ್ರಮೇಯದ ಕುರಿತಾಗಿ ಜನ ತಿಳಿದುಕೊಂಡ ವಿಚಾರ ಸರ್ವರಿಗೂ ಅರಿವಿದೆ. ಆದರೆ ಇದರಲ್ಲಿ ಯಾವ ಸತ್ಯಾಂಶವೂ ಇಲ್ಲವೆಂಬುದರ ಬಗೆಗೆ ಒಂದೇ ಒಂದು ಕಲ್ಬರಹದ ಸಾಕ್ಷಿ ಸಾಕು. ಕ್ರಿ. ಶ. 15ನೇ ಶತಕದ ಬಾರಕೂರಿನ ಮಲ್ಲಪ್ಪ ಒಡೆಯರ ಕಾಲದ ಶಿಲಾಶಾಸನವೊಂದು (ಇದು ಉಡುಪಿ ಮಠದ ತುಳಸಿ ವೃಂದಾವನದ ಬದಿಯಲ್ಲಿ ಕಂಡುಬರುತ್ತದೆ.) ಶ್ರೀ ಕೃಷ್ಣದೇವರ ಮುಂಭಾಗದಲ್ಲಿ ಮಲ್ಲಪ್ಪ ಒಡೆಯರು ಮಂಟಪವನ್ನು ಕಟ್ಟಿಸಿದ್ದೆಂಬ ಉಲ್ಲೇಖವಿದೆ. ದೇವರ ಮುಂಭಾಗವೆಂದರೆ ಪಡುದಿಕ್ಕೇ ಹೊರತು ಇತರತ್ರವಲ್ಲ. ಕನಕದಾಸರ ಕಾಲ ಕ್ರಿ.ಶ. 16 ನೇ ಶತಕ. ಆದುದರಿಂದ ಸಾಂಪ್ರದಾಯಿಕವಾಗಿ ಬಂದ ಈ ಕತೆಯು ಐತಿಹಾಸಿಕವಾಗಿ ಸ್ವೀಕೃತವಾಗಲಾರದು.

ಯಾವುದೋ ಒಂದು ಸಂದರ್ಭದಲ್ಲಿ ಯಾರಿಂದಲೋ ಕೃತಕವಾಗಿ ನಿರ್ಮಿತವಾದ ಕಟ್ಟುಕತೆ ಇದಾಗಿದೆ. ಇತಿಹಾಸ ಪ್ರಜ್ಞೆ ಎಷ್ಟು ಆಗತ್ಯ ಎಂಬುದಾಗಿ ಇದರಿಂದ ವಿದಿತವಾಗುತ್ತದೆ.

ಉಡುಪಿಗೆ ಸಮೀಪವಿರುವ ಒಡಭಾಂಡೇಶ್ವರವೆಂಬಲ್ಲಿರುವ ದೇವಾಲಯದ ಪ್ರಧಾನ ಮೂರ್ತಿಯು ಬಲರಾಮ ವಿಗ್ರಹವೋ ಎಂಬುದು ನಾಲ್ಕನೇ ಪ್ರಶ್ನೆ. ಹಡಗಿನಲ್ಲಿ ಮೂರು ಗೋಪೀಚಂದನದ ಉಂಡೆಗಳು ಬಂದುವೆಂದೂ ಬಿರುಗಾಳಿಗೆ ಸಿಲುಕಿದ ಈ ಹಡಗನ್ನು ಮಲ್ಪೆಯ ಸಮೀಪ ಶ್ರೀಮದಾಚಾರ್ಯರು ತನ್ನ ಚಮತ್ಕಾರದಿಂದ ಉಳಿಸಿದರೆಂದೂ ಈ ಹಡಗಿನಲ್ಲಿದ್ದ ಮೂರು ಗೋಪೀಚಂದನದ ಉಂಡೆಗಳನ್ನು ಪಡೆದರೆಂದೂ ಅವುಗಳಲ್ಲಿ ಒಂದು ಒಡಭಾಂಡೇಶ್ವರದಲ್ಲಿ ಒಡೆದುದರಿಂದ ಅದರೊಳಗಿದ್ದ ಬಲರಾಮ ಮೂರ್ತಿಯನ್ನು ಅಲ್ಲೇ ಪ್ರತಿಷ್ಠಿಸಲಾಯಿತೆಂದೂ ಇನ್ನೊಂದು ಉಂಡೆಯಲ್ಲಿದ್ದ ಶ್ರೀಕೃಷ್ಣ ವಿಗ್ರಹವು ಉಡುಪಿಯಲ್ಲಿ ಪ್ರತಿಷ್ಠಾಪಿಸಲ್ಪಟ್ಟಿತೆಂದೂ ಇನ್ನೊಂದರಲ್ಲಿದ್ದ ಶ್ರೀ ಜನಾರ್ದನ ವಿಗ್ರಹವು ಉಡುಪಿ ತಾಲೂಕಿನ ಎರ್ಮಾಳೆಂಬಲ್ಲಿ ಸ್ಥಾಪಿಸಲ್ಪಟ್ಟಿತೆಂದೂ ಜನ ತಿಳಿದುಕೊಂಡ ವಿಷಯವಾಗಿದೆ. ಇದಕ್ಕೆ ಏನು ಆಧಾರವೋ ತಿಳಿದು ಬರುವುದಿಲ್ಲ. ಒಡಭಾಂಡೇಶ್ವರದ ದೇವಾಲಯದಲ್ಲಿರುವ ಮೂರ್ತಿಯು ಬಲರಾಮ ವಿಗ್ರಹವಾಗಿರದೆ ಸ್ಕಂದ(ಕುಮಾರ) ವಿಗ್ರಹವಾಗಿದೆ. ಈ ದೇವಾಲಯವು ಸುಬ್ರಹ್ಮಣ್ಯ ದೇವಾಲಯವಾಗಿದೆ. ದೇವರ ಬಲಿವಿಗ್ರಹವೂ ಸುಬ್ರಹ್ಮಣ್ಯನದ್ದಾಗಿದೆ. ಇದು ಬಲರಾಮ ವಿಗ್ರಹವೆನ್ನುವುದು ಎಷ್ಟು ಸಮಂಜಸವೋ ತಿಳಿದು ಬರುವುದಿಲ್ಲ. ಸಮುದ್ರ ಕಿನಾರೆಯಲ್ಲಿರುವ ಸುಬ್ರಹ್ಮಣ್ಯ ದೇವಾಲಯವಿದಾದುದರಿಂದ ಪಿತೃಗಳ ಸದ್ಗತಿಗೆ ಪಿಂಡಪ್ರಧಾನಕ್ಕೆ ಪವಿತ್ರ ಸ್ಥಳವಾಗಿದೆ; ಒಡಭಾಂಡೇಶ್ವರ ಮೂಲವಿಗ್ರಹದ ಬಲಕೈಯಲ್ಲಿ ನಾಗಾಂಡವೂ ಎಡಕೈಯು ಕಟಿಸ್ಥಾನದಲ್ಲಿಯೂ ಕಂಡು ಬರುತ್ತವೆ. ಬಲರಾಮ ವಿಗ್ರಹಕ್ಕೆ ಹಲಾಯುಧ ಆಗತ್ಯವಾಗಿದೆ. ಈ ವಿಗ್ರಹವನ್ನು ಪರಿಶೀಲಿಸದೆ ಹೇಳಿಕೆಯನ್ನು ಆಧರಿಸಿಕೊಂಡು ವಿದ್ವಾಂಸರು ಈ ವಿಗ್ರಹವು ಹಲಾಯುಧಧಾರಿಯಾದ ಬಲರಾಮನ ವಿಶೇಷ ಮೂರ್ತಿಯಾಗಿವೆ ಎಂದು ಬರೆದುದುಂಟು.

ಸಹಬಾಳ್ವೆ

ಆಡು, ಹುಲಿ, ಜೊತೆಜೊತೆಗೆ ಬಾಳುವದು ಸಾಧ್ಯ
ಸರ್ಕಸ್ಸು, ಆಶ್ರಮದಿ ಎನ್ನುವದು ವೇದ್ಯ!
ಇತ್ತೀಚೆ ಹಣವಿರಲು ಸಹಬಾಳ್ವೆ ಉಂಟು
ಕಳ್ಳ ಕಾವಲುಗಾರರೊಳಗೊಳಗೆ ನಂಟು!

ಒಂದು ಸಲಹೆ

ಬೆಂಕಿ ಜೊತೆ ಬೆಣ್ಣೆಯೂ ಆಡಿದರೆ ಸರಸ,
ನೀರ ಜೊತೆ ಹಾಲೆಲ್ಲ ಕೂಡಿದರೆ ವಿರಸ,
ಅಸ್ತಿತ್ವ ಕಳೆಗಾಲವೆನ್ನುವದು ಖಚಿತ.
ತಮ್ಮ ಪಾತ್ರವನರಿತು ವರ್ತಿಸುವದುಚಿತ!

—ಜಿ. ಎಸ್. ಅನ್ನದಾನಿ

ಧೈರ್ಯದಿಂದ ಮತ್ತು ಪ್ರಾರ್ಥನೆಯೊಂದಿಗೆ ಈಶ್ವರನ ಸಹಾಯ ಬೇಡು. ನಿಸ್ಸಂದೇಹವಾಗಿ ಈಶ್ವರನು ಧೈರ್ಯವಂತರ ಜೊತೆಗಿರುವನು.

o o o

ಪ್ರಯತ್ನ ಯಾವುದರ ಸಲುವಾಗಿ? ತನ್ನ ಸ್ವರೂಪದಲ್ಲಿ ಸ್ಥಿರವಾಗುವುದರ ಸಲುವಾಗಿ

o o o

ಪ್ರಾರ್ಥನೆ ಏತರ ಸಲುವಾಗಿ? ಕನ್ನಡಿಯಾಗುವ ಸಲುವಾಗಿ, ಆದರಿಂದ ತನ್ನ ಚಿತ್ತಶುದ್ಧಿಯ ಮಾತ್ರಾನುಸಾರವಾಗಿ ಜೀವನದ ಮಹತ್ತು ಪ್ರತಿಬಿಂಬಿತ ವಾಗುವುದರ ಸಲುವಾಗಿ.



ಬರೇ 5 ಪೈಸೆಯಲ್ಲಿ ನಿಮಗೆ ಸಂತಾನ ನಿರೋಧ ಶಕ್ತಿ

ನಿರೋಧ್ ಉಪಯೋಗಿಸಿರಿ

ಕುಟುಂಬ ಯೋಜನೆಗೆ ಅತ್ಯುತ್ತಮ ರಬ್ಬರ್ ಸಾಧನ

15 ಪೈಸೆಗೆ 3

ಸರ್ಕಾರದ ಸಹಾಯಧನದಿಂದಾಗಿ ಕಡಿಮೆ ಬೆಲೆ

ಬಯಸಿದಾಗ ಮಾತ್ರ ಮಕ್ಕಳು

ನಿರೋಧ್ ಉಪಯೋಗಿಸುವುದರಿಂದ ನಿಮಗೆ ಇಷ್ಟಸಂತಾನ ಪ್ರಾಪ್ತಿ. ಅಂದರೆ, ಬೇಕಾದಾಗ ಮಾತ್ರ ಮಕ್ಕಳನ್ನು ಪಡೆಯುವ ಸೌಭಾಗ್ಯ.

ತಾಯಿ ಮತ್ತು ಮಗುವಿನ ಆರೋಗ್ಯ

ಪ್ರತಿ ಮಗುವಿಗೆ ಮೊದಲಿನ ಮೂರು ನಾಲ್ಕು ವರ್ಷ ವಿಶೇಷ ಆರೈಕೆಯು ಆಗತ್ಯವಿದೆ ಎಂದು ಡಾಕ್ಟರುಗಳು ಹೇಳುತ್ತಾರೆ. ಹೆರಿಗೆಯಾದ ಮೇಲೆ ಸ್ವಲ್ಪ ಸಮಯ ತಾಯಿಗೂ ವಿಶ್ರಾಂತಿ ಬೇಕು. ಆದಕ್ಕಾಗಿ ಎರಡು ಮಕ್ಕಳ ಜನನದ ನಡುವೆ ಸಾಕಷ್ಟು ಅಂತರವಿರುವಂತೆ ಮಾಡಬೇಕು.

ನಿರೋಧ್—ಗಂಡಸರು ಉಪಯೋಗಿಸುವ ಅತ್ಯುತ್ತಮ ಗುಣಮಟ್ಟದ ಗರ್ಭನಿರೋಧಕ ರಬ್ಬರು ಚೀಲ. ಇದನ್ನು ಪ್ರಪಂಚದ್ಯಾಂತ ಉಪಯೋಗಿಸುತ್ತಿದ್ದಾರೆ. ಸರಳ, ಸುಲಭ ಹಾಗೂ ಸುರಕ್ಷಿತ ಸಾಧನವಿದು. ನಿರೋಧ್ ಉಪಯೋಗಿಸುವುದರಿಂದ ಪತಿ ಪತ್ನಿಯರ ಆರೋಗ್ಯಕ್ಕೆ ಏನೂ ಹಾನಿಯಾಗುವುದಿಲ್ಲ.

ನಿರೋಧ್ ದಿನಬಳಕೆ ವಸ್ತುಗಳನ್ನು ಮಾರುವ ಅಂಗಡಿಗಳಲ್ಲಿ, ಔಷಧಿ ವ್ಯಾಪಾರಿಗಳಲ್ಲಿ, ಕ್ರೀಡಾ ಅಂಗಡಿಗಳಲ್ಲಿ ಮತ್ತು ಇತರ ಸಾಮಾನುಗಳ ಮಾರಾಟಗಾರರಲ್ಲಿ ಮಾರಾಟವಾಗುತ್ತಿದೆ.

70/61

ನಗಬೇಕೊ ಅಳಬೇಕೊ ತಿಳಿಯದಾಗಿದೆ ಜನಕೆ!

ನಗಬೇಕೊ ಅಳಬೇಕೊ ತಿಳಿಯದಾಗಿದೆ ಜನಕೆ
ರಾಜಕಾರಣಿ ಜನರ ಹಗರಣವ ಕಂಡು!
ಒಂದು ಪಕ್ಷದ ಟಿಕಿಟು ಕೊಂಡು ಘೋಷಿಸಿ ತತ್ವ
ಎದುರಾಳಿಗಳನೆಲ್ಲ ಸಿಕ್ಕಂತೆಬೈಯ್ದು;
ಆರಿಸಿ ಬಂದ ಮೇಲೆ ಆಮಿಷಕೆ ಬಲಿಬಿದ್ದು
ತಮ್ಮ ಪಕ್ಷದ ಕೊರಳ ಸುಲಭದಲಿ ಕುಯ್ದು
ರಾಜಕಾರಣಿ ಜನರ ಹೊಲೆತನವ ಕಂಡು
ನಗಬೇಕೊ ಅಳಬೇಕೊ ತಿಳಿಯದಾಗಿದೆ ಜನಕೆ!
ಚುನಾವಣೆಗೂ ಮುನ್ನ ಸಣ್ಣ ಹಿಡುವಳಿದಾರ
ಭೂಮಿ ಬೆಳೆದರೆ ಊಟ ಮೈತುಂಬ ಬಟ್ಟೆ
ಚುನಾವಣೆ ಗೆದ್ದೊಡನೆ ಏನೆಂಥ ಅಭ್ರಾಟ
ಕಾರು ಬಂಗಲೆ ಜೊತೆಗೆ ಬಂದಿಹುದು ಹೊಟ್ಟೆ
ರಾಜಕಾರಣಿಗಳೀ ವೈಭವವ ಕಂಡು
ನಗಬೇಕೊ ಅಳಬೇಕೊ ತಿಳಿಯದಾಗಿದೆ ಜನಕೆ!
ಜಾತಿ ಬಣ್ಣವು ವರ್ಗ ಎಲ್ಲದರ ಆಚೆಗಿನ
ರಾಜ್ಯ ಘಟನೆಯ ಬಗೆಗೆ ಜಂಭವನು ಕೊಚ್ಚಿ
ಸೆಗಣಿ ಹುಳುವಿನ ಹಾಗೆ ಅಥವ ಡೊಂಬರ ಹಾಗೆ
ಆಟ ಆಡುತಲಿಹರುಜಾತಿಯನು ನೆಚ್ಚಿ!
ಈ ಕೂಪ ಮಂಡೂಕ ವೃತ್ತಿಯನು ಕಂಡು
ನಗಬೇಕೊ ಅಳಬೇಕೊ ತಿಳಿಯದಾಗಿದೆ ಜನಕೆ!
ಸೀಳಿ ಎದೆ ನೋಡಿದರೆ ಇಲ್ಲ ಎರಡಕ್ಷರವು
ಸಾಹಿತ್ಯ ಸಭೆಗಳಿಗೆ ಅಧ್ಯಕ್ಷರಿವರು!
ನೀತಿ ನಿಯತ್ತು ತತ್ವ ಹೊಲೆಗೆಡಿಸುತಿಹ ಇವರೆ
ಧರ್ಮ ಸಮ್ಮೇಳನವನುದ್ಘಾಟಿಸುವರು!
ರಾಜಕಾರಣಿಗಳೀ ವೈಚಿತ್ರ್ಯ ಕಂಡು
ನಗಬೇಕೊ ಅಳಬೇಕೊ ತಿಳಿಯದಾಗಿದೆ ಜನಕೆ!
ಹಣವ ತೊಡಗಿಸಿ ತಾವೆ ನಡಿಸಿರುವ ಪತ್ರಿಕೆಯು
ಒಳ ಹೊರಗೆ ತಮ್ಮದೇ ಪ್ರಚಾರ ಬರೆಸಿ,
ದುಡಿವ ನೌಕರ ಬರೆದ ಅಪ್ರತಿಮ ಭಾಷಣವ
ಎಬೆಸೆಟೆಸಿ ಮಾಡುತ್ತ ತಮ್ಮತನ ಮೆರೆಸಿ,
ಎಲ್ಲ ಬಲ್ಲವರಂತೆ ಮೆರೆಯುವದ ಕಂಡು
ನಗಬೇಕೊ ಅಳಬೇಕೊ ತಿಳಿಯದಾಗಿದೆ ಜನಕೆ!

—ಜಿ. ಎಸ್. ಅನ್ನದಾನಿ

Phone: 25838

Parabazar, RAJKOT (GUJARAT)

ಬಿಂದು

ಸೌರಾಷ್ಟ್ರದಲ್ಲೇ ಅತ್ಯಂತ ನಾವೀನ್ಯಪೂರ್ಣವೆನಿಸಿರುವ
ದಕ್ಷಿಣ ಭಾರತೀಯ ಪದ್ಧತಿಯ
ಫಲಾಹಾರ ಮಂದಿರ

SHETTY WAFERS
Dr. Yagnik Road,
RAJKOT

Only One of Its Kind In Rajkot.

M/s. SHETTY & CO.,
Mahatma Gandhi Road
RAJKOT

OUTDOOR CATERERS,
CANTEEN CONTRACTORS,
COMMISSION AGENTS.

Prop: Kodu Bhoja Shetty. ಪ್ರೊ: ಕೋಡು ಭೋಜ ಶೆಟ್ಟಿ

ಒಮ್ಮತದ ಆಯ್ಕೆ

ಕೆಮ್ಮೂರು ಸದಾಶಿವ ಜಿ. ಶೆಟ್ಟಿ

ಶ್ರೀಯುತರು ಕರ್ನಾಟಕ ಸಂಘ, ಗೊರೆಗಾಂ, ಬೊಂಬಾಯಿ ಇದರ 1970–71 ನೇ ವರ್ಷದ ಅಧ್ಯಕ್ಷರಾಗಿ ಇತ್ತೀಚೆಗೆ ಒಮ್ಮತದಿಂದ ಆರಿಸಲ್ಪಟ್ಟಿದ್ದಾರೆ. ಉತ್ಸಾಹಿ, ಸಹೃದಯಿ, ಸೇವಾಭಾವದ ಶ್ರೀ ಶೆಟ್ಟರು ಸಂಘದ ಸ್ಥಾಪಕ ಸದಸ್ಯರಲ್ಲೊಬ್ಬರಾಗಿದ್ದು, ಇದರ ಲೆಕ್ಕ ಪರಿಶೋಧಕ, ಉಪಾಧ್ಯಕ್ಷ ಮೊದಲಾದಗಣ್ಯ ಸ್ಥಾನದಲ್ಲಿದ್ದು ಸಂಘದ ಅಭಿವೃದ್ಧಿಗಾಗಿ ತುಂಬ ಶ್ರಮಿಸಿದ್ದಾರೆ. ಇವರು ಇಂಡಸ್ಟ್ರಿಯಲ್ ಕೊಲೊನಿ ಕನ್ಸ್ಯೂಮರ್ಸ್ ಸೊಸೈಟಿಯ ಸ್ಥಾಪಕ ಅಧ್ಯಕ್ಷರಾಗಿಯೂ ದಿ| ಪಟೇಲ್ ಜಗನ್ನಾಥ ಎಜ್ಯುಕೇಶನ್ ಸೊಸೈಟಿಯ ಸಂಸ್ಥಾಪಕ–ಅಧ್ಯಕ್ಷರಾಗಿಯೂ ಗೊರೆಗಾಂ ಬ್ಲಾಕ್ ಕಾಂಗ್ರೆಸ್ ಸಮಿತಿಯ ಆಡಳಿತ ಸದಸ್ಯರಾಗಿಯೂ ಇದ್ದು ನಿಷ್ಠಾಪೂರ್ವಕ ಜನತಾ ಸೇವೆ ಸಲ್ಲಿಸುತ್ತಿದ್ದಾರೆ.

ಗೊರೆಗಾಂವದಲ್ಲಿ ನಾಡಹಬ್ಬ

ವಿಜಯದಶಮಿಯ ಶುಭದಿನದಂದು ಗೋರೆಗಾಂ ಕರ್ನಾಟಕ ಸಂಘ, ಮುಂಬಯಿ, ಇದರ ಆಶ್ರಯದಲ್ಲಿ ಕನ್ನಡಿಗರು ನಾಡಹಬ್ಬವನ್ನು ವಿಮಾ ಕಾರ್ಪೊರೇಶನ್ನಿನ ಅಧ್ಯಕ್ಷ ಶ್ರೀ ಟಿ.ಎ. ಪೈಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಆಚರಿಸಿದರು. ವಿವಿಧ ವಿನೋದಾವಳಿ, ಶಾಲಾ ಮಕ್ಕಳ ಕಸರತ್ತು, ವಿಚಾರಪೂರಿತ ಭಾಷಣಗಳಾದುವು. ಡಾ| ವಸಂತ ದೇಸಾಯಿ ಅವರು ಕರ್ನಾಟಕದ ಸೇವೆ ನಿರಂತರ ಸಾಗಬೇಕು. ಕನ್ನಡಿಗರು, ಅದರಲ್ಲಿಯೂ ಹೊರನಾಡ ಕನ್ನಡಿಗರು ಆರ್ಥಿಕ ಬೆಳವಣಿಗೆಗೆ ಬುನಾದಿಯಾಗುವಂತೆ ಕನ್ನಡ ಸಂಸ್ಕೃತಿಯ ಬೆಳವಣಿಗೆಗೆ ಕನ್ನಡ ಮನಸ್ಸಿನಿಂದ ಸಹಕರಿಸಿ ಮುಂದುವರಿಯಬೇಕೆಂದರು. ಶ್ರೀ ಪೈಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಕರ್ನಾಟಕದಲ್ಲಿರುವ ಆರ್ಥಿಕ ಸಂಪತ್ತಿನ ಬೆಳವಣಿಗೆ ತೀರಾ ಅವಶ್ಯವಿದೆ. ಅದಕ್ಕೆ ಅವಶ್ಯವಾದ ಬಂಡವಾಳವನ್ನು ಕನ್ನಡಿಗರಿಗೆ ದೊರಕಿಸಿಕೊಡಲು ತಾವು ಎಲ್ಲಾ ರೀತಿಯಿಂದಲೂ ಸಹಕರಿಸುವ ಭರವಸೆಯಿತ್ತರು. ಅಲ್ಲದೆ ಕರ್ನಾಟಕ ಸಂಘಗಳು ಇಂದು ಆರ್ಥಿಕ ಬೆಳವಣಿಗೆ, ಉದ್ಯಮ ಬೆಳವಣಿಗೆಗಳಿಗೆ ಉತ್ತೇಜನ ನೀಡಬೇಕೆಂದೂ ಕನ್ನಡಿಗರಿಗೆ ಮುಂಬರಿಯಲು ಸಹಕರಿಸಬೇಕೆಂದೂ ಆಹ್ವಾನವಿತ್ತರು. ಡಾ| ವಸಂತ ದೇಸಾಯಿ ಅವರು ಬರೆದ "ಕರ್ನಾಟಕದ ಸೇವೆ" ಎಂಬ ಕಿರು ಹೊತ್ತಗೆಯ ಬಿಡುಗಡೆ ಮಾಡಲಾಯಿತು. ಸಭಿಕರನ್ನೆಲ್ಲಾ ಸಂಘದ ಅಧ್ಯಕ್ಷ ಶ್ರೀ ಸದಾಶಿವ ಜಿ. ಶೆಟ್ಟರು ಸ್ವಾಗತಿಸಿದರು. ಮತ್ತು ಸಂಘದ ಕಾರ್ಯದರ್ಶಿಗಳಾದ ಶ್ರೀ ಉ. ಸೋಮನಾಥ ಕಾರಂತರು ವಂದನಾರ್ಪಣೆ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಕೆಮ್ಮೂರು ಶ್ರೀ ಸದಾಶಿವ ಶೆಟ್ಟಿಯವರಿಂದ ಗೋರೆಗಾಂ — ಪಹಡಿ ಮುನಿಸಿಪಲ್ ಹೈಸ್ಕೂಲಿನಿಂದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗೆ ಪ್ರತಿ ವರ್ಷ ಕೊಡುತ್ತಾ ಬರುವ ದಿ| ಕೆ. ಜಗನ್ನಾಥ ಶೆಟ್ಟಿ ಸ್ಮಾರಕ ಪಾರಿತೋಷಕವನ್ನು ಈ ವರ್ಷ ಕುಮಾರಿ ವನಜಾಕ್ಷಿ ರಾಂ ಪಾತ್ರನ್‌ರಿಗೆ ಕೊಡಲಾಯಿತೆಂದು ತಿಳಿದು ಬಂದಿದೆ.

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 285/62

ಕೊಟ್ಟಿ ಅಬ್ದುಲ್ ಖಾದ್ರಿ ಬ್ಯಾರಿ — ವಾದಿ
ಮತ್ತು
ಮಹಮ್ಮದ್ ಬ್ಯಾರಿ ಮತ್ತು ಇತರರು — ಪ್ರತಿವಾದಿಗಳು.

16ನೇ ಪ್ರತಿವಾದಿ ಮಹಮ್ಮದ್ ಬ್ಯಾರಿ, ಅಬ್ದುಲ್ಲ ಬ್ಯಾರಿಗಳ ಮಗ ಮತ್ತು 17ನೇ ಪ್ರತಿವಾದಿ ಅಮೀನ, ಅಹಮದ್ ಬ್ಯಾರಿಗಳ ಹೆಂಡತಿ, ಇಬ್ಬರೂ ಕಾಸರಗೋಡು ತಾಲೂಕು ಕಾಸರಗೋಡು ಟೌನಿನಲ್ಲಿ ಮುಳ್ಳಿಬಾಗಿಲು ಎಂಬಲ್ಲಿರುವವರು.

ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲಿನ ವ್ಯಾಜ್ಯವು ನಿಮ್ಮ ಹಾಜರಾತಿ ಬಗ್ಗೆ ತಾರೀಕು 4—11—1970ಕ್ಕೆ ಇಟ್ಟಿರುತ್ತದೆ. ಆ ದಿನ ಬೆಳಗ್ಗೆ 11 ಗಂಟೆಗೆ ನೀವು ಸ್ವತಃವಾಗಲೀ ವಕೀಲ ಮುಖಾಂತರವಾಗಲೀ ಮೇಲಿನ ಕೋರ್ಟಿನಲ್ಲಿ ಹಾಜರಾಗಲು ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷ ಎಂದು ಪರಿಗಣಿಸಿ ಮುಂದುವರಿಸಲಾಗುವುದು.

(ಕೋರ್ಟಿನ ಹುಕುಂ ಮೇರೆಗೆ)

A. Kunhipalli
ವಾದಿ ಕಡೆ ಎಡ್ವಕೇಟ್

Puttur, Date 23—10—70

With the Best Compliments from:

NEW ANANDA BHAVAN
(High-Class Vegi. Restaurant)
VASCO-DA-GAMA (GOA).

BRANCH

WELCOME
(Boarding & Restaurant)
VASCO-DA-GAMA (GOA)

ಭೂತಾರಾಧನೆಯ ವಿಚಾರ

ಭೂತಾರಾಧನೆ ತುಳುನಾಡಿಗೆ ಹೊರಗಣಿಂದ ಬಂದುದಲ್ಲ; ಪ್ರತಿಯೆಡೆಯೂ ಕಾಲಾಂತರದಲ್ಲಿ ವಿವಿಧ ನಾಮ-ರೂಪಗಳಿಂದ ಹೆಸರಿಸಲ್ಪಟ್ಟ ದೈವದೇವರುಗಳು, ಭಕ್ತಿಯ ಸಂಕೇತಗಳಲ್ಲಿ ಭೂತಗಳ ಆರಾಧನೆಯೂ ಒಂದು.

ಲೇಖಕರು
ಶ್ರೀ ಕೆ. ವೆಂಕಟ್ರಾಯಾಚಾರ್ಯ, ವಿದ್ವಾನ್

"ಯಾಂತಿ ದೇವವ್ರತಾ ದೇವಾನ್|
ಪಿತೃನ್ ಯಾಂತಿ ಪಿತೃವ್ರತಾಃ|
ಭೂತಾನಿ ಯಾಂತಿ ಭೂತೇಜ್ಯಾ|
ಯಾಂತಿ ಮದ್ಯಾಜಿನೋಽಪಿ ಮಾಂ||"
(ಭಗವದ್ಗೀತಾ. 9–25)

ದೇವರು, ಪಿತೃಗಳು, ಭೂತಗಳು ಮತ್ತು ತಾನು–ಕೃಷ್ಣ ಆರಾಧ್ಯರಾದರೆ ಆಯಾ ಭಕ್ತರು ಆಯಾ ಸ್ಥಾನಗಳನ್ನು ಹೊಂದುವರೆಂದು ಇಲ್ಲಿಯ ತಾತ್ಪರ್ಯ. ಇಲ್ಲಿ ಕೊನೆಗಿರುವ ತಾನು–ಕೃಷ್ಣ–ಎಂದರೆ ಪರಮಾತ್ಮನೆಂದೇ ಮುಖ್ಯಾರ್ಥ. ಅಂದ ಮೇಲೆ, ಆ ಮೊದಲ ದೇವರೆಂದರೇನು?"ಅಗ್ನಿ,ಯಮ, ಮಾತರಿಶ್ವಾ" ಮೊದಲಾದ ದೇವತೆಗಳೆಂದು ತಾನೆ ಅರ್ಥ. ಪಿತೃಗಳೆಂದರೆ ಯಾರು? ವ್ಯಾಸ ಭಾರತದ ಒಂದು ಭಾಗವಾದ ಹರಿವಂಶದಲ್ಲಿ ಹಾಗೂ ಮತ್ಸ್ಯ ಪುರಾಣದಲ್ಲಿ ಹೇಳಿದ, ಪುರೋಹಿತರು ನಾಂದೀ–ಶ್ರಾದ್ಧಾದಿಗಳಲ್ಲಿ ಹೇಳುವ ಅಗ್ನಿಷ್ವಾತ್ತ ಮೊದಲಾದ ಪಿತೃಗಣಗಳು ಇಲ್ಲಿ ಹೇಳಿರಬೇಕು (ಪುರಾಣ ನಾಮ ಚೂಡಾಮಣಿ-ನೋಡಿ)

ಇನ್ನುಳಿದ ಭೂತಗಳೆಂದರೇನು? ಯಕ್ಷ ಮೊದಲಾದ ಭೂತಗಳೆಂದು (ಉಡುಪಿಯ ಹಿಂ. ಪ. ಕಂ. ಯ) ಒಂದು ಚಿಕ್ಕ ಪುಸ್ತಿಕೆಯಲ್ಲಿದೆ. ಇದೆಂತೂ ಸರಿಯಾಗಲಾರದು. ಯಕ್ಷ ಮೊದಲಾದವರು ದೇವಯೋನಿಗಳು–ದೇವಗಣಗಳು ಎನ್ನಲಾಗಿದೆ. (ಅಮರಕೋಶ ನೋಡಿ) ಇದೀಗ ಎಲ್ಲೆಡೆ ಕೇಳುವ ದೈವ-ಭೂತಗಳು ಇಲ್ಲಿ ಹೇಳಿರಬಹುದೇ? ದೇವನೆಂಬುದೆ ದೈವ–ದೆವ್ವವೆಂದು ರೂಪಾಂತರ ಶಬ್ದವಾದರೂ ಇಲ್ಲಿ ಅವೆಲ್ಲಾ ಭೂತ–ದೈವಗಳು ಹೇಳಿರಬಹುದೆ ಎಂದು ಸಂಶಯವೊಮ್ಮೆ ಉಂಟಾಗುತ್ತದೆ.

ಆದ್ಯ ಶ್ರೀ ಶಂಕರಾಚಾರ್ಯರು ಬರೆದ ಇದರ ಅರ್ಥ ಬೇರೆ ಇದೆ: "ವಿನಾಯಕ, ಚತುರ್ಭಗಿನ್ಯಾದೀನಿ". ಈ ವಿನಾಯಕನೆಂದರೆ ಗಣಪತಿಯೆಂದು ನಮಗೆಲ್ಲಾ ತಿಳಿದಿದೆ. ದೇವಗಣಗಳಿಗೆ- ಶಿವಗಣಗಳಿಗೆ ಆತ ಅಧಿಪನೆಂದು ಕೂಡ ತಿಳಿದಿದೆ. ಮಾತೃಗಣಗಳೆಂದರೆ, ಪಾರ್ವತಿಯಿಂದ ಹುಟ್ಟಿರುವ ಸ್ತ್ರೀದೇವತಾಗಣಗಳೆಂದು ಅರ್ಥವಾಗುತ್ತದೆ. 'ಸಿರಿಗಳು' ಎಂಬವು ಇಲ್ಲಿ ಹೆಸರಿಸಿರಬೇಕೋ? ಬೇರೆ ಸ್ತ್ರೀವಾಚಕ ಶಕ್ತಿಗಳೊ? ಈ ಬಗೆಗೆ ಬಲ್ಲವರು ಬರೆಯಬೇಕಾಗಿದೆ.

ರಾಜದೈವಗಳಲ್ಲಿ ಜಾರಂದಾಯ, ಕೊಡಮಂತಾಯ ಮೊದಲಾದವು ಸೇರಿವೆ. ಕಲ್ಲುರ್ಟಿ ಮೊದಲಾದ ಭೂತಗಳು ಇದಕ್ಕಿಂತ ವಿಭಿನ್ನವಾಗಿವೆ. ಈ ರಾಜದೈವಗಳಲ್ಲಿ 'ಜಾರಂದಾಯ'ನು ಇತರರಂತೆ ಮೊಗವೀರ ಜನಾಂಗದ ಪ್ರಮುಖಾಧ್ಯನು. (ಇದೊಂದು ಭೂತದ-ದೈವದ ಅಣೆಗಟ್ಟಿನ ಸಾದಾ ಚಿತ್ರವಾಗಿದೆ).

ಭೂತಾರಾಧನೆಯಲ್ಲಿರುವ ವೈಶಿಷ್ಟ್ಯ

ಅತಿಮಾನವ ಶಕ್ತಿಗಳನ್ನು ವಿವಿಧ ನಾಮರೂಪಗಳಲ್ಲಿ ಜನತೆ ದೇಶ ವಿದೇಶಗಳಲ್ಲಿಯೂ ಆರಾಧಿಸುವ ಕ್ರಮವಿದೆ. ಆ ಮೇರೆಗೆ, ಈ ಮೊದಲಾದ 'ಅಗ್ನಿ,ಯಮ,ಮಾತಾರಿಶ್ವಾ'ದಿ ದೇವತೆಗಳನ್ನೂ ಅಗ್ನಿಷ್ವಾತ್ತಾದಿ ಪಿತೃ ಗಣಗಳನ್ನೂ, ವಿನಾಯಕಾದಿ ಭೂತಗಣಗಳನ್ನೂ ಆರಾಧಿಸುವುದು ಭಕ್ತಿಯ ಸಂಕೇತವಾಗಿದೆ. ತುಳುನಾಡಿನಲ್ಲಿ ದೈವ–ಭೂತಗಳ ಸಂಖ್ಯೆ ಹೆಚ್ಚಿದೆ. ಇವು ಬೇರೆಡೆಯಿಂದ ಬಂದವೆಂಬುದು ನಂಬತಕ್ಕುದಲ್ಲ. ಪ್ರತಿಯೆಡೆಯೂ ಕಾಲಾಂತರದಲ್ಲಿ ವಿವಿಧ ರೂಪ ನಾಮಗಳಿಂದ ಹೆಸರಿಸಲ್ಪಟ್ಟ ದೈವ–ದೇವರು ಅನೇಕಶಃ ಇವೆ. ಕೆಲವು ಜನಾಂಗ ಸ್ಥಳಾಂತರಗೊಂಡಾಗ ಅವರೊಂದಿಗೆ ಕೆಲವು ದೈವ-ದೇವರೂ ವ್ಯಾಪಿಸಿರಬಹುದು. (ವ್ಯಾಘ್ರವಾಹನೆ ಪಿಲಿಚಾಮುಂಡಿಯೆನಿಸಿದೆ.) ಕೆಲವೊಮ್ಮೆ ಅತಿಮಾನವ ಶಕ್ತಿಗಳನ್ನೆ ದೇವ-ದೈವಗಳೆಂದು ಹೇಳುವುದು: ಶ್ರೀರಾಮ-ಶ್ರೀಕೃಷ್ಣರು ಕ್ಷತ್ರಿಯರಾದರೂ ದೇವೋತ್ತಮರಾಗಿದ್ದಾರೆ. ಕೋಟಿ ಚೆನ್ನಯ ಗುಡಿಗಳು ಆಧುನಿಕವಾಗಿವೆ. ಒಟ್ಟಾರೆ ಪ್ರಾಚೀನ ಜನಾಂಗದ ಹಿರಿಮೆಯನ್ನು ಸಾರುವ ಅನೇಕ ರೂಪಗಳು ವ್ಯಾಪಿಸಿವೆ. ಭೂತಾರಾಧನೆಯಲ್ಲಿ ಹಲವಾರು ಜನಾಂಗದ ಸಮಾವೇಶವಿದೆ.

ಶ್ರೀ ಎಸ್. ಮೋಹನದಾಸ್ ಶೆಟ್ಟಿ.

ಶ್ರೀಯುತರು, ಶ್ರೀ ಹೆರ್ಗ ವಿಟ್ಠಲ ಶೆಟ್ರ ಪುತ್ರರಾಗಿದ್ದು, ಉಡುಪಿ ಎಮ್. ಜಿ. ಎಮ್. ಕಾಲೇಜಿನಲ್ಲಿ ವ್ಯಾಸಂಗಮಾಡಿ ಅನಂತರ ವಾರಂಗಲ್ ರೀಜಿನಲ್ ಇಂಜಿನಿಯರಿಂಗ್ ಕಾಲೇಜಿನಲ್ಲಿ 1964ರಲ್ಲಿ B.E. ಪದವೀಧರರಾದರು. ಪ್ರಕೃತ ಅಹಮ್ಮದಾ ಬಾದಿನ ಟಿ. ಮಾಣಿಕಲಾಲ್ ಮೆನ್ಯುಫೇಕ್ಚರಿಂಗ್ ಕಂಪೆನಿಯಲ್ಲಿ ಚೀಫ್ ಇಂಜಿನಿಯರರಾಗಿ ಕೆಲಸ ನಿರ್ವಹಿಸುತ್ತಿದ್ದು ಹೆಚ್ಚಿನ ವ್ಯಾಸಂಗಕ್ಕಾಗಿ ಇದೇ ತಾ. 22–10–70ರಂದು ಬೊಂಬ್ಬಾಯಿಂದ ಹೊರಟಿದ್ದು ಇಂಗ್ಲೆಂಡ್, ಜರ್ಮನಿ, ಸ್ವಿಜರ್ಲೇಂಡ್‌ಗಳಿಗೆ ಪ್ರಯಾಣ ಮಾಡಲಿರುವರು.

Grams : TULUCON. Phone : 7166.

TULUCON (PRIVATE) LIMITED

Management Consultants

(Incorporated under Companies Act, 1956)

Registered Office: POPULAR BUILDING, K. S. RAO ROAD, **MANGALORE-1.**

PRESIDENT : **PREMNATH N. SHETTY,** *P.G.D.M. (IIMC), GRAD. I.E., A.I.C.E, A.M.I.I.P.M.*



Dear Friend,

Are you WORRIED? But what is your PROBLEM?

Is it Economic, Social, Technological or Political?

OR

Could it be Finance, Personnel, Labour Relations, Production, Marketting, Administration?

OR

Something very PERSONAL such as a misunderstanding / conflict in the family or among friends / partners ?

Well, let it be anything; just tell us what it is. We will do the rest.

For anything in Management please remember TULUCON– the firm that solves your Management Problem!

Very sincerely yours,
TULUCON (PRIVATE) LIMITED

P. N. SHETTY.
PRESIDENT

REF: HAP/S.

ಪ್ರಾಚೀನ ಕರ್ನಾಟಕ--ಕಾಶ್ಮೀರ

ದಕ್ಷಿಣ ಭಾರತದ ಕರ್ನಾಟಕವು ಭಾರತದ ಶಿರೋಮಣಿ ಕಾಶ್ಮೀರದೊಡನೆ ಬಹುಮಟ್ಟಿಗೆ ಸಂಬಂಧವನ್ನು ಇಟ್ಟು ಕೊಂಡಿತ್ತು. ಈ ಸಂಬಂಧವನ್ನು ಈ ಪುಟ್ಟ ಲೇಖನದಲ್ಲಿ ಲೇಖಕರು ವಿವರಿಸಿದ್ದಾರೆ.

· ಲೇಖಕರು
ಶ್ರೀ ಕೆ. ಜಿ. ವಸಂತ ಮಾಧವ, ಎಂ. ಎ.

ಪೀಠಿಕೆ:—

ಪ್ರಾಚೀನ ಕರ್ನಾಟಕವು ತನ್ನ ನೆರೆ ರಾಜ್ಯಗಳಾದ ಆಂಧ್ರ, ಕೇರಳ ಮತ್ತು ತಮಿಳುನಾಡಿನೊಂದಿಗಲ್ಲದೆ, ಭಾರತದಲ್ಲಿನ ದೂರಪ್ರದೇಶಗಳಾದ ಒರಿಸ್ಸ, ಬಂಗಾಳ, ನೇಪಾಳ ಮತ್ತು ಕಾಶ್ಮೀರದೊಂದಿಗೂ, ಸಂಪರ್ಕವನ್ನಿಟ್ಟು ಕೊಂಡಿತ್ತು. ಈ ಲೇಖನದಲ್ಲಿ ಪ್ರಾಚೀನ ಕರ್ನಾಟಕ–ಕಾಶ್ಮೀರ ಸಂಬಂಧ ಹೇಗಿತ್ತು ಎಂದು ತಿಳಿಸಲಾಗುವುದು.

ರಾಜಕೀಯ:-

ಕರ್ನಾಟಕ–ಕಾಶ್ಮೀರದ ಸಂಬಂಧ ರಾಜಕೀಯವಾಗಿ ಕ್ರಿ. ಶ. 8ನೇ ಶತಮಾನದಿಂದ ಆರಂಭವಾಯಿತೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಹನ್ನೊಂದನೇ ಶತಮಾನದ ನಂತರ ಕಾಶ್ಮೀರ ಮತ್ತು ಕರ್ನಾಟಕ ಸಂಬಂಧ ಬಲಗೊಂಡಿದೆ ಎಂಬುದಕ್ಕೆ ಕಲ್ಹಣನ ರಾಜತರಂಗಿಣಿ ಮತ್ತು ಕಲ್ಯಾಣ ಚಾಲುಕ್ಯರ ಶಾಸನಗಳು ಸಮರ್ಥಿಸುತ್ತವೆ. ಕಾಶ್ಮೀರದ ಶ್ರೇಷ್ಠರಾದ ಲಲಿತಾದಿತ್ಯ ಮತ್ತು ಪಾದನು ಸಪ್ತ ಕೊಂಕಣದ ವರೆಗೆ ದಿಗ್ವಿಜಯ ಮಾಡಿದ್ದನೆಂದು ಕಲ್ಹಣನ ರಾಜತರಂಗಿಣಿ ತಿಳಿಸುತ್ತದೆ. ಆದರೆ ಇದಕ್ಕೆ ಆಧಾರವಾಗಿ ಕರ್ನಾಟಕದ ಶಾಸನಗಳಾಗಲಿ ಮತ್ತು ಇನ್ನಿತರ ಬರಹಗಳಾಗಲಿ ಸಮರ್ಥಿಸದೆ ಇರುವುದರಿಂದ ಇದು ಕಲ್ಹಣನು ಮಾಡಿದ ರಾಜನ ಪರಾಕ್ರಮದ ಅತಿಶಯೋಕ್ತಿ ಎಂದು ತಿಳಿಯಬಹುದು. ಆದರೂ ಕಲ್ಹಣನಿಗೆ ಕರ್ನಾಟಕದ ಅರಿವಿದೆಯೆಂದೂ, ಇಲ್ಲಿ ಸಮರ್ಥ ರಾಜರಿದ್ದರೆಂದೂ ತಿಳಿಯಬಹುದು. ಕಾಶ್ಮೀರದ ಇನ್ನೊಬ್ಬ ಅರಸ ಹರ್ಷನು ಕರ್ನಾಟಕದ ಅರಸುಕುವರಿಯ ಸೌಂದರ್ಯಕ್ಕೆ ಮರುಳು ಹೋಗಿದ್ದನು. ಕಾಶ್ಮೀರದ ಅರಸು ಕರ್ನಾಟಕದ ಅರಸುಕುವರಿಯನ್ನು ಮದುವೆಯಾದ ವಿಚಾರವನ್ನು ಕಲ್ಹಣನು ತಿಳಿಸುತ್ತಾನೆ. ಈ ಅರಸುಕುವರಿ ಚಂದಲಾದೇವಿ. ಇವಳು ಕರ್ನಾಟಕ ರಾಜ ಶಿಲಾಹಾರ ವಂಶಕ್ಕೆ ಸೇರಿದವಳು. ಕಾಶ್ಮೀರದ ಮಿಹಿರಕುಲ ರಾಜನು ಸಿಂಹಳದಿಂದ ದಿಗ್ವಿಜಯ ಗೈದು ಹಿಂದಿರುಗುವಲ್ಲಿ ಚೋಳ, ಕರ್ನಾಟಕದ ರಾಜನನ್ನು ಸೋಲಿಸಿದನೆಂದು ಕಲ್ಹಣ ತನ್ನ ಬರಹದಲ್ಲಿ ತಿಳಿಸಿದ್ದಾನೆ. 'ಕಲಸ'ನೆಂಬ ಕಾಶ್ಮೀರದ ರಾಜನ ಆಸ್ಥಾನದಲ್ಲಿ ಕರ್ನಾಟಕದ ಕೇಶಿನ್ ದಳಾಧಿಪತಿಯಾಗಿದ್ದನು.

ಕಲ್ಯಾಣ ಚಾಲುಕ್ಯರು—ಕಾಶ್ಮೀರ:-

ಕರ್ನಾಟಕ–ಕಾಶ್ಮೀರ ಸಂಬಂಧ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಬಲಗೊಂಡಿತು. ಸೊರಬದಲ್ಲಿ ಸಿಕ್ಕಿದ ಒಂದು ಶಾಸನವು. ಕುಂತಳರಸ ಜಗದೇಕ ಮಲ್ಲನು ಕಾಶ್ಮೀರ ಮುಖಕಮಲವೆಂದು ವರ್ಣಿಸಿದೆ. ತ್ರಿಭುವನ ಮಲ್ಲದೇವ, ಪರಮಾನಂದಿ ದೇವನ ಕಾಶ್ಮೀರದ ದಿಗ್ವಿಜಯವನ್ನು ಒಂದು ಶಾಸನ ತಿಳಿಸುತ್ತದೆ. ಕಲ್ಯಾಣ ಚಾಲುಕ್ಯ ವಿಕ್ರಮಾದಿತ್ಯ ದೇವನು, ಗುಜರಾಥ, ಕಾಶ್ಮೀರ ಮತ್ತು ಇನ್ನಿತರ ಪ್ರದೇಶಗಳ ಚಕ್ರವರ್ತಿಯೆಂದು ಎಫಿಗ್ರಾಫಿ ಕರ್ನಾಟಕದ ಒಂದು ಶಾಸನ ತಿಳಿಸುತ್ತದೆ. ಈ ಶಾಸನಗಳಲ್ಲಿದ್ದ ವಿಷಯ ಅತಿಶಯೋಕ್ತಿಯಾಗಿದ್ದರೂ, ಕಲ್ಯಾಣ ಚಾಲುಕ್ಯರು ಕಾಶ್ಮೀರದ ವಿಷಯ ತಿಳಿದಿದ್ದರೆಂಬುದು ನಿರ್ವಿವಾದ.

ಸಾಂಸ್ಕೃತಿಕ ಸಂಬಂಧ:–

ಕಾಶ್ಮೀರ–ಕರ್ನಾಟಕಗಳ ನಡುವೆ ರಾಜಕೀಯ ಸಂಬಂಧವಲ್ಲದೆ ಸಾಂಸ್ಕೃತಿಕ ಸಂಬಂಧಗಳಿದ್ದವು. ಕರ್ನಾಟಕದಲ್ಲಿ ಕಾಶ್ಮೀರ ವಿದ್ವಾಂಸರಿಗೂ, ಕಾಶ್ಮೀರದಲ್ಲಿ ಕರ್ನಾಟಕ ವಿದ್ವಾಂಸರಿಗೂ ರಾಜರು ಆಶ್ರಯವನ್ನು ನೀಡಿದ್ದರು. ಹರ್ಷನೆಂಬ ಕಾಶ್ಮೀರ ರಾಜನು ಕರ್ನಾಟಕ ಸಂಸ್ಕೃತಿಗೆ ಎಷ್ಟು ಮರುಳಾಗಿದ್ದನೆಂದರೆ ತನ್ನ ರಾಜ್ಯದಲ್ಲಿ ದಕ್ಷಿಣಾತ್ಯ ಕಲೆಯ ಪದ್ಧತಿಯ ಕಲೆಗಳನ್ನು ಜ್ಯಾರಿಗೊಳಿಸಿದ್ದನು. ಕರ್ನಾಟಕ ಪದ್ಧತಿಯ ಟಂಕ ನಾಣ್ಯವನ್ನು ಇವನು ಜ್ಯಾರಿಗೆ ತಂದನು. ಕರ್ನಾಟಕದ ಗೋಕರ್ಣ ಮಹಿಮೆಯನ್ನು ತಿಳಿದು ಕಾಶ್ಮೀರದ ಒಬ್ಬ ರಾಜ 'ಗೋಕರ್ಣ'ನೆಂದು ಹೆಸರು ಬದಲಿಸಿದುದನ್ನು ವೀಕ್ಷಿಸಿದಾಗ ಕರ್ನಾಟಕವು ಕಾಶ್ಮೀರದ ಮೇಲೆ ಎಷ್ಟು ಪ್ರಭಾವ ಬೀರಿದೆ ಎಂದು ತಿಳಿದು ಬರುತ್ತದೆ. ಈ ರಾಜನು ಕಾಶ್ಮೀರದಲ್ಲಿ "ಶಿವ-ಗೋಕರ್ಣೇಶ್ವರ" ಎಂಬ ಕ್ಷೇತ್ರವನ್ನು ಸ್ಥಾಪಿಸಿದ್ದನೆಂದು ಕಲ್ಹಣನ ರಾಜ ತರಂಗಿಣಿ ತಿಳಿಸುತ್ತದೆ.

ಇದೇ ರೀತಿಯಲ್ಲಿ ಕಲ್ಯಾಣ ಚಾಲುಕ್ಯರ ಆಸ್ಥಾನದಲ್ಲಿ ಅನೇಕ ಕಾಶ್ಮೀರಿ ಪಂಡಿತರಿದ್ದರು. ಚಾಲುಕ್ಯ ವಿಕ್ರಮಾಂಕನ ಆಸ್ಥಾನದಲ್ಲಿದ್ದ ಬಿಲ್ಹಣನೆಂಬ ಶ್ರೇಷ್ಠ ವಿದ್ವಾಂಸ ಕಾಶ್ಮೀರದವನು. ಅವನನ್ನು ಚಾಲುಕ್ಯ ವಿಕ್ರಮಾಂಕನು "ವಿದ್ಯಾಪತಿ" ಎಂದು ಬಿರುದನ್ನಿತ್ತಿದ್ದನು. ಓಲ್ಲಣನೆಂಬ ಇನ್ನೊಬ್ಬ ಕಾಶ್ಮೀರಿ ಕರ್ನಾಟಕದಲ್ಲಿ ಸೇನಾಧಿಪತಿಯಲ್ಲದೆ ವಿದ್ವಾಂಸನಾಗಿದ್ದನು. ಇವನು 'ಸೂಕ್ತಿ ಮುಕ್ತಾವಳಿ' ಎಂಬ ಗ್ರಂಥವನ್ನು ರಚಿಸಿದನು. ಕರ್ನಾಟಕದ ಸೇವುಣ ಅರಸರು ಕಾಶ್ಮೀರದ ಪ್ರಜೆಗಳಿಗೆ ಆಸ್ಥಾನದಲ್ಲಿ ಉನ್ನತ ಸ್ಥಾನವನ್ನು ಕೊಟ್ಟಿದ್ದರು. ಜೆಟ್ಟಿಗೆ ಐದನೆಯ ಬಿಲ್ಲಮನ ಆಸ್ಥಾನದಲ್ಲಿ ಕಾಶ್ಮೀರದ ಶೋಢಲನೆಂಬವನು "ಖಜಾನಜಿ"ಯಾಗಿದ್ದನು.

ಕಾಶ್ಮೀರ ಜನತೆಗೆ ಕರ್ನಾಟಕದಲ್ಲಿ ವಸತಿ:-

ಕರ್ನಾಟಕದ ಅರಸರು ಕಾಶ್ಮೀರದಲ್ಲಿ ಆರ್ಥಿಕ, ರಾಜಕೀಯ ಅಸ್ಥಿರತೆಯನ್ನು ಸಹಿಸದೆ ಬಂದ ಕಾಶ್ಮೀರಿ ಪ್ರಜೆಗಳಿಗೆ ಆಶ್ರಯವನ್ನಿತ್ತಿದ್ದರು. ಅವರಲ್ಲಿ ಕಾಲಮುಖ ಮತ್ತು ಸಾರಸ್ವತರು ಪ್ರಮುಖರಾಗಿದ್ದಾರೆ. ಶಿಕಾರಿಪುರದಲ್ಲಿ ಸಿಕ್ಕಿದ ಶಾಸನವು ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ಇಕ್ವಾಕು ಪಂಡಿತನೆಂಬ ಕಾಲಮುಖ ಮತದ ವಿದ್ವಾಂಸನ ವಿಚಾರ ತಿಳಿಸಿ, ಅವನು ಕಾಶ್ಮೀರ ಶಾರದಾದೇವಿಯ ಆರಾಧಕನೆಂದು ತಿಳಿಸಿದೆ. ಕಾಲಮುಖರು ದ್ವಾರಸಮುದ್ರ, ಬೇಲೂರು, ವಿಷ್ಣುಸಮುದ್ರ ನಗರಗಳಲ್ಲಿ ವಾಸವಾಗಿದ್ದರೆಂದು ತಿಳಿಸುತ್ತದೆ. ಸಾರಸ್ವತರು 11ನೇ ಶತಮಾನದಿಂದ ಕರ್ನಾಟಕಕ್ಕೆ ವಲಸೆ ಬರಲು ಆರಂಭಿಸಿದರೆಂದು ಡಾಕ್ಟರ್ ಆರ್. ಎನ್. ಸಾಲೆತ್ತೂರರವರು ಶಾಸನಾಧಾರವಾಗಿ ತಿಳಿಸುತ್ತಾರೆ. ಕ್ರಿ. ಶ. 1155ರ ಬಾರಕೂರಿನ ಪಂಚಲಿಂಗೇಶ್ವರ ದೇವಸ್ಥಾನದ ಶಾಸನದಂತೆ ಆಳುಪ ಅರಸ ಭುಜಬಲ ಆಲುಪೇಂದ್ರನು ಬಾರಕೂರಿನ ಕೋಟಿಕೇರಿ ಪ್ರದೇಶಗಳನ್ನು ಕಾಶ್ಮೀರದ ಬ್ರಾಹ್ಮಣರಿಗೆ ದತ್ತಿ ಬಿಟ್ಟುದನ್ನು ತಿಳಿಸುತ್ತದೆ. ವಿಜಯನಗರ ಅರಸರ ಕಾಲದಲ್ಲೂ ಕಾಶ್ಮೀರದಿಂದ ಸಾರಸ್ವತ ಬ್ರಾಹ್ಮಣರು ವಲಸೆ ಬಂದಿದ್ದರು. ಇದರಿಂದ ಕಾಶ್ಮೀರದ ಪ್ರಭಾವ ಕೆನರಾ ಜಿಲ್ಲೆಯ ಮೇಲೂ ಬೀರಿದೆ ಎಂದರೆ ತಪ್ಪಾಗಲಾರದು.

ಉಪಸಂಹಾರ:–

ಪ್ರಾಚೀನ ಕರ್ನಾಟಕವು ಕೂಪಮಂಡೂಕದಂತೆ ಇರದೆ ಭಾರತದ ಇನ್ನಿತರ ಭಾಗಗಳನ್ನು ಅರಿತು ಕಲೆ ಸಾಹಿತ್ಯವಂತ ಭಾರತೀಯ ವಿದ್ವಾಂಸರಿಗೆ ಆಶ್ರಯವನ್ನು ನೀಡಿತ್ತು. ಕಾಶ್ಮೀರದ ವಿದ್ವಾಂಸರಿಗೆ ತಮ್ಮ ರಾಜ್ಯದಲ್ಲಿ ಪ್ರೋತ್ಸಾಹವಿಲ್ಲದೆ ಅವರು ಅಲೆದಾಡುವ ಕಾಲದಲ್ಲಿ ಅವರಿಗೆ ಆಶ್ರಯವಿತ್ತು ಅವರ ವಿದ್ವತ್ತಿಗೆ ಬೆಳಕನ್ನು ನೀಡಿದ ಕೀರ್ತಿ ಕರ್ನಾಟಕಕ್ಕೆ ಸಲ್ಲುತ್ತದೆ.

ಲೇಖಕರು ಈ ಕೆಳಗಿನ ಲೇಖಕ ಮತ್ತು ಗ್ರಂಥಕರ್ತರಿಗೆ ಋಣಿಯಾಗಿದ್ದಾರೆ.

1) History of Sarasvath Community, Dr. R. N. Saletore.
2) Epigraphic Carnatic VI VII B. C. Rice
3) Annual Report of South Indian Epigraphic – 1001

ದೀಪಾವಳಿಯ ಶುಭಾಶಯಗಳು !

Tele: GOLDKING [Estd: 1947] Phone: 3242 Res: 3272

— ಸಂದರ್ಶಿಸಿರಿ —

ಬ್ಲೂ ಜಾಗರಾ ವಜ್ರಗಳಿಗೆ, ಆಧುನಿಕ ಫ್ಯಾಶನಿನ ವೈವಿಧ್ಯಪೂರ್ಣ ಚಿನ್ನಾಭರಣಗಳಿಗೆ ಸುವಿಖ್ಯಾತವಾದ



ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಉಡುಗೊರೆ ವಸ್ತುಗಳಿಗೂ ಸುಪ್ರಸಿದ್ಧವಾದ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ ಜನಪ್ರಿಯವಾದ

ಐಡಿಯಲ್ ಫೊಟೋ ಹೌಸ್

Phone: 3131

ಅಗ್ಫಾ, ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು

ಕೆ. ಎಸ್. ರಾವ್ ರೋಡ್

ಹಂಪನಕಟ್ಟೆ, ಮಂಗಳೂರು–1

ಮಿತ ಕುಟುಂಬ ಯೋಜನೆಗೆ

ಅತ್ಯುಪಯುಕ್ತ ಪುಸ್ತಕ

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ.

ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ

ಸಾಲುಕೋಟೆ, ಉಡುಪಿ, ದ. ಕ.

ಬತ್ತದ ಐದು ಕಾಳುಗಳು

ಇದು ಒಂದು ಆಗಮ ಕತೆ. ಆಗಮ ಜೈನ ಸಾಹಿತ್ಯದ ಪ್ರಾಚೀನತಮ ಅಂಶ. ಇವುಗಳ ರಚನಾ ಕಾಲವನ್ನು ಸುಮಾರು ಕ್ರಿ. ಪೂ. ಐನೂರು ವರ್ಷಗಳು ಎನ್ನಲಾಗುತ್ತಿದೆ. ಈ ಕತೆಗಳಿಂದ ಬರೀ ಭಾರತೀಯ ಲೇಖಕರು ಮಾತ್ರವಲ್ಲ, ಗ್ರೀಕ್, ರೋಮನ್, ಅರಬೀ ಮತ್ತು ಫಾರಸೀ ಬರಹಗಾರರು ಕೂಡ ಪ್ರಭಾವಿತರಾಗಿದ್ದರು. ಆಗಮ ಕತೆಗಳು ವಿಶೇಷತಃ ದೃಷ್ಟಾಂತ ಕತೆಗಳೇ, ಧರ್ಮೋಪದೇಶವೇ ಇದಕ್ಕೆ ಮೂಲ ಆಧಾರ—ಅನು.

ಅನುವಾದ: ಶ್ರೀ ಶಿವಮುಂಜೆ ಪರಾರಿ.

ರಾಜಗೃಹದಲ್ಲಿ ಧನ್ಯನೆಂಬೊಬ್ಬ ಕುಶಲ ಶ್ರೀಮಂತ ವ್ಯಾಪಾರಿಯಿದ್ದನು. ಅವನಿಕೆ ಉಜ್ಝಿಕಾ, ಭೋಗವತಿ, ರಕ್ಷಿಕಾ ಮತ್ತು ರೋಹಿಣಿಯರೆಂಬ ನಾಲ್ವರು ಸೊಸೆಯಂದಿರಿದ್ದರು.

ಒಂದು ದಿನ ಧನ್ಯನ ಮನದಲ್ಲಿ ಒಂದು ವಿಚಾರ ಮೂಡಿತು. "ನನ್ನ ಪರಿವಾರದ ಹಿರಿಯ ನಾನು. ಮನೆಯ ಜನರೆಲ್ಲರೂ ನನ್ನ ಆದೇಶದಂತೆ ನಡೆದು ಕೊಳ್ಳುತ್ತಾರೆ. ಒಂದು ವೇಳೆ ನಾನೆಲ್ಲಿಯಾದರೂ ಹೊರಟುಹೋದರೆ, ಅನಾರೋಗ್ಯವಂತನಾದರೆ, ಯಾವುದೋ ಕಾರಣದಿಂದ ಮನೆಯನ್ನು ನಡೆಸಲು ಅಸಮರ್ಥನಾದರೆ ವ್ಯಾಪಾರಕ್ಕಾಗಿ ಪರದೇಶಕ್ಕೆ ಹೋದರೆ ಅಥವಾ ಸತ್ತು ಹೋದರೆ, ನನ್ನ ಈ ಪರಿವಾರವನ್ನು ನಡೆಸುವವರು ಯಾರು? ಉಚಿತ ಸಲಹೆ ಸೂಚನೆಯಿತ್ತು, ಈ ಮನೆಯನ್ನು ಸುಯೋಗ್ಯವಾಗಿ ನಡೆಸುವವರು ಯಾರು?'

ಈ ಯೋಚನೆ ಬಂದ ಕೂಡಲೇ ಧನ್ಯನು ತನ್ನ ಮನೆಯಲ್ಲಿ ಒಂದು ಬಹುದೊಡ್ಡ ಔತಣವನ್ನು ಏರ್ಪಡಿಸಿದನು. ಊಟಕ್ಕೆ ತನ್ನ ಬಂಧು ಮಿತ್ರರನ್ನೆಲ್ಲ ಆಹ್ವಾನಿಸಿದನು ಎಲ್ಲರೂ ಊಟ ಮುಗಿಸಿ ವಿಶ್ರಮಿಸುತ್ತಿದ್ದಾಗ ಧನ್ಯನು ತನ್ನ ನಾಲ್ವರೂ ಸೊಸೆಯಂದಿರನ್ನು ಕರೆದು—"ಮಕ್ಕಳೇ, ನಾನು ನಿಮಗೆ ಇವತ್ತು ಬತ್ತದ ಐದೈದು ಕಾಳುಗಳನ್ನು ಕೊಡುತ್ತೇನೆ. ಅದನ್ನು ಜಾಗ್ರತೆಯಾಗಿ ತೆಗೆದಿರಿಸಿ ನಾನು ಕೇಳಿದ ದಿನ ಅವನ್ನು ನನಗೆ ಹಿಂತಿರುಗಿಸಬೇಕು" ಎಂದನು.

"ಅಪ್ಪಾಜೀ, ನಿಮ್ಮ ಇಚ್ಛೆಯಂತೆಯೇ ಆಗಲಿ" ಎಂದು ನುಡಿದು ನಾಲ್ವರೂ ಸೊಸೆಯಂದಿರು ಕಾಳನ್ನು ಸ್ವೀಕರಿಸಿ ಹೊರಟು ಹೋದರು.

"ಮಾವಂದಿರ ಉಗ್ರಾಣದಲ್ಲಿ ಹೇರಳವಾಗಿ ಕಾಳು ಸಂಗ್ರಹಿಸಿಡಲ್ಪಟ್ಟಿದೆ. ಅವರು ಕೇಳಿದಾಗ ಅಲ್ಲಿಂದಲೇ ಐದು ಕಾಳು ತಂದು ಕೊಟ್ಟರಾಯಿತು" ಎಂದು ಕೊಂಡ ಹಿರಿಯ ಸೊಸೆ ಉಜ್ಝಿಕಾ ಮಾವ ಕೊಟ್ಟ ಕಾಳನ್ನು ಬಿಸಾಡಿ ತನ್ನ ನಿತ್ಯ ಕೆಲಸದಲ್ಲಿ ಮಗ್ನಳಾದಳು.

"ಮಾವನ ಉಗ್ರಾಣದಲ್ಲಿ ಕಾಳಿಗೊಂದು ಕೊರತೆಯೇ? ಕೇಳಿದಾಗ ನೋಡಿಕೊಂಡರೆ ಸೈ" ಎಂದು ಕೊಂಡ ದ್ವಿತೀಯ ಸೊಸೆ ಭೋಗವತಿ ಕಾಳಿನ ಸಿಪ್ಪೆ ಸುಲಿದು ಬಾಯಿಗೆ ಹಾಕಿಕೊಂಡಳು.

ತೃತೀಯ ಸೊಸೆ ರಕ್ಷಿಕಾ—"ಮಾವಂದಿರು ಸಂಬಂಧಿಕರನ್ನೆಲ್ಲಾ ಕರೆಸಿ, ಅವರೆದುರಿಗೇ ಈ ಐದು ಕಾಳನ್ನು ಕೊಟ್ಟಿದ್ದಾರೆ. ಆದುದರಿಂದ ಇದರಲ್ಲೇನೋ ರಹಸ್ಯವಿರಬೇಕು" ಎಂದು ಕೊಂಡು ಶುದ್ಧವಾದ ಬಿಳಿಯ ಬಟ್ಟೆಯಲ್ಲಿ ಕಾಳನ್ನು ಕಟ್ಟಿ ತನ್ನ ಚಿನ್ನದ ಕರಡಿಗೆಯಲ್ಲಿ ಸುರಕ್ಷಿತವಾಗಿರಿಸಿ, ಹಗಲು ರಾತ್ರಿ ಜಾಗ್ರತೆಯಿಂದ ಆ ಕಾಳನ್ನು ಸಂರಕ್ಷಿಸಿದಳು.

ನಾಲ್ಕನೆಯ ಸೊಸೆ ರೋಹಿಣಿ "ಮಾವಂದಿರು ಏನೋ ಯೋಚಿಸಿಯೇ ನಾವು ನಾಲ್ವರಿಗೂ ಐದೈದು ಕಾಳುಗಳನ್ನು ಕೊಟ್ಟಿರುವರು" ಎಂದು ನಿರ್ಧರಿಸಿದಳು. ಅವಳು ಆಳುಗಳನ್ನು ಕರೆದು ಜೋರಾಗಿ ಮಳೆ ಬಿದ್ದನಂತರ," ಗದ್ದೆಯ ಒಂದು ಮೂಲೆಯಲ್ಲಿ ಪ್ರತ್ಯೇಕವಾಗಿ ಪಾತಿ ಮಾಡಿ ಈ ಐದು ಕಾಳುಗಳನ್ನು ಬಿತ್ತಿರಿ, ಸಸಿ ಬಲಿತಾಗ ನಾಲ್ಕೈದು ಬಾರಿ ಸ್ಥಳ ಬದಲಾಯಿಸಿ ನಡಿರಿ, ಹಾಗೂ ಸುತ್ತಲೂ ಬೇಲಿ ಹಾಕಿ ಬಹು ಎಚ್ಚರಿಕೆಯಿಂದ ಈ ಸಸಿಗಳನ್ನು ಕಾಯುತ್ತಿರಿ" ಎಂದು ಆಜ್ಞಾಪಿಸಿದಳು.

ನೌಕರರು ರೋಹಿಣಿಯ ಅಪ್ಪಣೆಯಂತೆಯೇ ನಡೆದುಕೊಂಡರು. ಹಸಿರು ಧಾನ್ಯಗಳು ಬಲಿತು ಚಿನ್ನದ ಬಣ್ಣ ತಳೆದ ಮೇಲೆ, ತೆನೆಯನ್ನು ಕೊಯ್ದು ಕಾಳುಗಳನ್ನು ಬೇರ್ಪಡಿಸಿ, ಮಣ್ಣಿನ ದೊಡ್ಡ ಗಡಿಗೆಯಲ್ಲಿ ತುಂಬಿ, ಸೆಗಣಿಯಿಂದ ಗಡಿಗೆಯ ಬಾಯಿ ಮುಚ್ಚಿ ರೋಹಿಣಿ ಭದ್ರವಾಗಿ ತನ್ನ ಕೊಠಡಿಯಲ್ಲಿರಿಸಿಕೊಂಡಳು.

ಮರುವರ್ಷ ಪುನಃ ವರ್ಷಋತು ಆರಂಭವಾದಾಗ ಗಡಿಗೆಯಿಂದ ಆ ಕಾಳುಗಳನ್ನು ತೆಗೆದು ಮತ್ತೆ ಹಾಗೆಯೇ ಜಾಗ್ರತೆಯಿಂದ ಬೆಳೆಸಲಾಯಿತು. ಬೆಳೆದ ಕಾಳುಗಳನ್ನು ಮತ್ತೆ ಆರಿಸಿ ದೊಡ್ಡ ಗಡಿಗೆಗಳಲ್ಲಿ ತುಂಬಿಸಲಾಯಿತು.

ಹೀಗೆಯೇ ಮೂರು ನಾಲ್ಕು ವರ್ಷಗಳು ಕಳೆದುವು. ಐದು ಧಾನ್ಯಗಳಿಂದ ಆರಂಭವಾದ ಬೆಳೆ ನೂರಾರು ಮಣ್ಣ ಮಡಿಕೆಗಳಲ್ಲಿ ತುಂಬಿಕೊಂಡುವು. ಅವೆಲ್ಲವನ್ನೂ ಕೊಠಡಿಯಲ್ಲಿರಿಸಿ ರೋಹಿಣಿ ನಿಶ್ಚಿಂತಳಾದಳು.

ನಾಲ್ಕನೆಯ ವರುಷ ಕಳೆದ ಬಳಿಕ ಧನ್ಯ, ತನ್ನ ಸೊಸೆಯಂದಿರು ಆ ಧಾನ್ಯವನ್ನು ಏನು ಮಾಡಿರುವರೆಂದು ತಿಳಿಯ ಬಯಸಿದನು.

ಮರುದಿನ ಅವನು ಪುನಃ ತನ್ನ ಬಂಧು ಮಿತ್ರರನ್ನು ಔತಣಕ್ಕೆ ಆಮಂತ್ರಿಸಿದನು. ಅವರೆಲ್ಲರೆದುರಿನಲ್ಲೇ ಸೊಸೆಯಂದಿರನ್ನು ಕರೆದು ನಾಲ್ಕು ವರ್ಷಗಳ ಹಿಂದೆ ತಾನು ಕೊಟ್ಟಿದ್ದ ಬತ್ತದ ಕಾಳನ್ನು ಹಿಂದಿರುಗಿಸುವಂತೆ ಕೇಳಿದನು.

ಮೊತ್ತ ಮೊದಲು ಹಿರಿಯ ಸೊಸೆ ಉಜ್ಝಿಕಾ ಬಂದು ಉಗ್ರಾಣದಿಂದ ತಾನು ತಂದಿದ್ದ ಐದು ಕಾಳುಗಳನ್ನು ಮಾವನ ಮುಂದಿರಿಸಿದಳು.

"ಇದು ಅಂದು ತಾನು ಕೊಟ್ಟಿದ್ದ ಧಾನ್ಯವೇ—ಬೇರೆಯೇ? ಎಂದು ಧನ್ಯ ವಿಚಾರಿಸಿದಾಗ," 'ಆ ಧಾನ್ಯಗಳನ್ನು ನಾನಂದೇ ಬಿಸಾಡಿದೆ—ಇದು ನಿಮ್ಮ ಉಗ್ರಾಣದಿಂದ ತಂದುದು' ಎಂದು ಉಜ್ಝಿಕಾ ಉತ್ತರಿಸಿದಳು. ಕೋಪಗೊಂಡ ಧನ್ಯನು ಮನೆಯನ್ನು ಗುಡಿಸಿ—ಸಾರಿಸಿ ಒಪ್ಪವಾಗಿಡುವ ಕೆಲಸವನ್ನು ಆಕೆಗೊಪ್ಪಿಸಿದನು.

ಭೋಗವತಿಯಿಂದ ಸತ್ಯ ಸಂಗತಿ ತಿಳಿದಾಗ ಅವನು ಅವಳಿಗೆ ಕುಟ್ಟುವ, ಬೀಸುವ ಹಾಗೂ ಅನ್ನ ಬೇಯಿಸುವ ಕೆಲಸವನ್ನೊಪ್ಪಿಸಿದನು, ಅನಂತರ ಬಂದ ರಕ್ಷಿಕಾ ತಾನು ಚಿನ್ನದ ಕರಡಿಗೆಯಲ್ಲಿರಿಸಿದ್ದ ಕಾಳುಗಳನ್ನು ಮಾವನಿಗೊಪ್ಪಿಸಿದಳು. ಸಂತಸಗೊಂಡ ಧನ್ಯ ತನ್ನ ಧನ ಕನಕಗಳ ರಕ್ಷಣೆಯ ಭಾರವನ್ನು ಆಕೆಗಿತ್ತನು.

ಕೊನೆಗೆ ರೋಹಿಣಿಬಂದಳು.'ಅಪ್ಪಾಜೀ ನೀವು ಕೊಟ್ಟ ಧಾನ್ಯವನ್ನು ನಾನು ಉಗ್ರಾಣದಲ್ಲಿ ಗಡಿಗೆಗಳಲ್ಲಿ ತುಂಬಿಟ್ಟಿದ್ದೇನೆ. ಅವನ್ನು ತರಲು ಗಾಡಿ ಬೇಕು' ಎಂದಳು.

ಧಾನ್ಯದಿಂದ ತುಂಬಿದ ಗಡಿಗೆಗಳನ್ನು ಗಾಡಿಯಲ್ಲಿ ತರಿಸಲಾಯಿತು. ಧನ್ಯನು ಅತ್ಯಂತ ಪ್ರಸನ್ನನಾದನು.

ಅವನು ರೋಹಿಣಿಯನ್ನು ಗೃಹಸ್ವಾಮಿನಿಯೆಂದು ಘೋಷಿಸಿದನು.

(ಶ್ರೀ ಜಗದೀಶಚಂದ್ರ ಜೈನ್ ಅವರ ಸಂಗ್ರಹದಿಂದ)

Gram: VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

FOR GLAMOUR & EMBELLISHMENT,

Sole Agents For:

MAFATLAL GROUP OF MILLS
TATA MILLS, MODI AND VINAR TERYLENES AND GUARANTEED PURE SILK SAREES IN
DHARMAVARAM, KANCHEEPURAM, ARNI AND BANGALORE SILKS.

Dealers In:

Well Known Calico netting, Readymade nets, Coats stitching and Anchor embroidery threads.

Please remember that we are at your Service.

SRI LAKSHMI VILAS

TEXTILE SHOW ROOM
MANDYA
(MYSORE STATE)

Telephone—
Shop— 207
Residence— 287

Proprietors:
A. Sheenappa & Sons

55 ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈ) ಲಿಮಿಟೆಡ್

ನಂಜನಗೂಡು (ಮೈಸೂರ್ ಸ್ಟೇಟ್)

ಶಾಖೆಗಳು: ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಆಹ್ಲಾದಕರ ಸುವಾಸನೆ

ಮೈಸೂರು ಗಂಧದ ಎಣ್ಣೆಯು ತನ್ನ ಶ್ರೇಷ್ಠತೆಯಿಂದ ಜಗದ್ವಿಖ್ಯಾತಿಯನ್ನು ಪಡೆದಿದೆ.

ಪರಿಶುದ್ಧವಾದ ಗಂಧದ ಎಣ್ಣೆಯು ಮೈಸೂರು ಸರ್ಕಾರದ
ಸೀಲು ಮತ್ತು ಲೇಬಲ್‌ಗಳುಳ್ಳ ಸೀಸೆಗಳಲ್ಲಿ ಮಾತ್ರ ದೊರೆಯುತ್ತವೆ.

ಮೈಸೂರು ಸರ್ಕಾರದ ಗಂಧದ ಎಣ್ಣೆ
ಕಾರ್ಖಾನೆ,
ಮೈಸೂರು ಮತ್ತು ಶಿವಮೊಗ್ಗ.

REGD. No. 170
LICENCE No. 33
Licensed to Post without Prepayment

ಕೃಷಿಯ ಅಭಿವೃದ್ಧಿಗೆ

ನಿಮ್ಮ ಯೋಜನೆ ನಮ್ಮ ನೆರವು

ನಾವು ರೈತರಿಗೆ ಬೇಕಾದ ಬೀಜ ಗೊಬ್ಬರ, ಪಂಪ್‌ಸೆಟ್ ಪವರ್‌ಟಿಲ್ಲರ್ ಟ್ರೇಕ್ಟರ್ ಇತ್ಯಾದಿಗಳನ್ನು ಕೊಂಡುಕೊಳ್ಳಲು ಸುಲಭ ಕಂತುಗಳಲ್ಲಿ ಸಾಲಕೊಡುತ್ತೇವೆ. ಅಲ್ಲದೆ ನೀರಾವರಿ ಹಾಗೂ ಭೂಮಿಯ ಅಭಿವೃದ್ಧಿ, ಪಶುಸಂಗೋಪನೆ, ಕೋಳಿಸಾಕಣೆ, ಮೀನುಗಾರಿಕೆ ಮತ್ತು ಇತರ ವ್ಯವಸಾಯ ಅಭಿವೃದ್ಧಿ ಕಾರ್ಯಗಳಿಗೆ ಸಾಲದ ರೂಪದಲ್ಲಿ

ಆರ್ಥಿಕ ನೆರವು ನೀಡುತ್ತೇವೆ.

ನಮ್ಮ ಒಟ್ಟು ಶಾಖೆಗಳು:-

ಮೈಸೂರು ರಾಜ್ಯದಲ್ಲಿ	87
ಕೇರಳ ರಾಜ್ಯದಲ್ಲಿ	26
ತಮಿಳುನಾಡು ರಾಜ್ಯದಲ್ಲಿ	5
ಆಂಧ್ರ ಪ್ರದೇಶದಲ್ಲಿ	1
ಮಹಾರಾಷ್ಟ್ರ ರಾಜ್ಯದಲ್ಲಿ	4
ಡಿಲ್ಲಿಯಲ್ಲಿ	1

ದಿ. ವಿಜಯ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ:-
ಭಾರತೀಯ ವಿದ್ಯಾಭವನ ಬಿಲ್ಡಿಂಗ್
ರೇಸ್ ಕೋರ್ಸ್ ರೋಡು
ಬೆಂಗಳೂರು - 1
ಫೋನ್ ನಂ. 24101—5 ಲೈನುಗಳು

ರಿಜಿಸ್ಟರ್ಡ್ ಆಫೀಸ್:-
ಲೈಟ್ ಹೌಸ್ ಹಿಲ್ ರೋಡ್
ಮಂಗಳೂರು - 3
ಫೋನ್ ನಂ: 5711

ಎಮ್. ಸುಂದರ್‌ರಾವ್ ಶೆಟ್ಟಿ
ಚೆಯರ್‌ಮೇನ್

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ 50
ಸಂಚಿಕೆ 9

NAVAYUGA

5—11—1970

ಲೀಗ್ ಜಾತೀಯವಲ್ಲ-ಸಂಘ ಜಾತೀಯ!

೧

ಪರದೇಶ ಪ್ರಯಾಣದ ಪ್ರಯಾಸವನ್ನೂ ಪರಿಹರಿಸಿಕೊಳ್ಳದೆನೇ ಇಂದಿರಾ ಗಾಂಧಿಯವರು ಕೇರಳದಲ್ಲಿ ಚುನಾವಣಾ ಪ್ರಚಾರಕ್ಕಾಗಿ ಧಾವಿಸಿದರು. ರಸ್ತೆಯ ಬದಿಯಲ್ಲಿ ನಿಂತು ಪ್ರಚಾರ ಮಾಡಿದರು, ಎತ್ತರದ ವೇದಿಕೆಯ ಮೇಲಿನಿಂದ ಪ್ರಚಾರ ಮಾಡಿದರು. ಕಾಂಗ್ರೆಸ್ ವೇದಿಕೆಯ ಮೇಲಿನಿಂದ ಪ್ರಚಾರ ಮಾಡಿದರು. ಮುಸ್ಲಿಂಲೀಗಿನ ಕಮ್ಯೂನಿಸ್ಟ್ ಪಾರ್ಟಿಗಳ ಅನ್ಯಾನ್ಯ ಸೋಷ್ಯಲಿಸ್ಟ್ ಪಾರ್ಟಿಗಳ ವೇದಿಕೆಯ ಮೇಲಿಂದ ಬಿರುಸಿನ ಪ್ರಚಾರ ಮಾಡಿದರು. ತಮ್ಮ ಕಾಂಗ್ರೆಸ್ಸಿನ ಅಭ್ಯರ್ಥಿಗಾಗಿ ಪ್ರಚಾರ ಮಾಡಿದರು; ಇತರ ಪಕ್ಷಗಳ ಅಭ್ಯರ್ಥಿಗಳಿಗಾಗಿ ಭಾಷಣ ಮಾಡಿದರು. ಕಾಂಗ್ರೆಸ್ಸಿನ, ಕಮ್ಯೂನಿಸ್ಟ್ ಪಾರ್ಟಿಯ ಮುಸ್ಲಿಂಲೀಗಿನ ಪತಾಕೆಗಳು ಒಂದೇ ಮರದ ಮೇಲೆ ಒಟ್ಟಿಗೆ ಹಾರಾಡಿದವು. ಕೊನೆಯಲ್ಲಿ ಕೇರಳದ ಭಾರತೀಯರಿಗೆ ಮೂರು ನಾಮ ಹಾಕಲಾಯಿತು.

ಕೇರಳದ ಚುನಾವಣೆಯ ಪ್ರಸ್ತಾಪ ಬಂದೊಡನೆ ಸ. ಕಾಂಗ್ರೆಸ್ಸಿನ ಅಧ್ಯಕ್ಷ ನಿಜಲಿಂಗಪ್ಪನವರು, ಮುಸ್ಲಿಂಲೀಗು ಜಾತೀಯ ಪಕ್ಷವಲ್ಲ, ಅದು ಕಾಂಗ್ರೆಸ್ಸಿನೊಡನೆ ಚುನಾವಣಾ ಮೈತ್ರಿ ನಡೆಸಬೇಕೆಂದು ಕೇಳಿಕೊಂಡಿದ್ದರು. ಅಲ್ಲಿಯ ಬಾಫಾನವರೂ ಸಹಕಾರಕ್ಕಾಗಿ ಸ್ನೇಹಹಸ್ತ ಚಾಚಿದ್ದರು. ಅದೇ ರೀತಿ ಆ. ಕಾಂಗ್ರೆಸ್ಸಿನ ಇಂದಿರಾ ಗಾಂಧಿಯವರೂ ಜಗಜೀವನರಾಮಾದಿಗಳೂ ಮುಸ್ಲಿಂಲೀಗಿನ ಮುಂದೆ ಮಂಡಿಯೂರಿ ಕೈಮುಂದಕ್ಕೆ ಮಾಡಿದ್ದರು. ಮುಸ್ಲಿಂ ಲೀಗು ಇಂದಿರಾ ಗಾಂಧಿಯವರಿಗೊಲಿಯಿತು. ದೇಶವಿಭಜನೆಯ ಘೋರ ಪಾತಕದ ನಂತರ ಅದ್ಯಾರೂ ಲೀಗಿನತ್ತ ದೃಷ್ಟಿಹಾಯಿಸದಿದ್ದಾಗ, ಅತ್ತ ದೃಷ್ಟಿಹಾಯಿಸುವದು ಮಹಾಪಾಪವೆಂದು ತಿಳಿದುಕೊಂಡಿದ್ದಾಗ ಇದೇ ಇಂದಿರಾಜೀಯವರು ಆಗ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದು ಅದೇ ಮುಸ್ಲಿಂ ಲೀಗನ್ನು ಹಿಡಿದೆತ್ತಿ, ಆಲಿಂಗಿಸಿಕೊಂಡು, ಮುತ್ತಿಟ್ಟು ಬೆನ್ನು ತಟ್ಟಿಬಿಟ್ಟಿದ್ದರು. ಮುಸ್ಲಿಂ ಲೀಗು ತನಗಾರು ಹಿತವರೆಂಬುದನ್ನು ಕಂಡುಕೊಂಡಿತು. ಇಂದಿರಜ್ಜಿಯವರ ಮಡಿಲಲ್ಲಿದ್ದು ಭಾರೀ ಕೆಲಸಗಳನ್ನು ಮಾಡಲು ಸಾಧ್ಯವೆಂಬುದನ್ನು [ಅದು ಅರಿತುಕೊಂಡಿತು. ಅಂತೆಯೇ ಇಂದಿರಾ ಕಾಂಗ್ರೆಸ್ಸಿಗೆ ಅವರು ಬೆಂಬಲವಿತ್ತರು. ಇಂದಿರಾ ಕಾಂಗ್ರೆಸ್ಸಿನವರಿಗೆ ಬೆಂಬಲವೀಯಿತು. ....

ದ್ರಾಕ್ಷಾತೋಟದಲ್ಲಿ ಹಣ್ಣಿನ ಗೊಂಚಲಿನಾಸೆಯೇ ಕಂಡಾಗ ಹಸಿದಿದ್ದ ನರಿ ಮೇಲೆ ಮೇಲೆ ಹಾರಿತು. ಅದು ಸಿಗದಿದ್ದಾಗ ಹಣ್ಣು ಹುಳಿ, ಹುಳಿಯೆಂದು ಹೀಯಾಳಿಸಿ ಹೋಯಿತಂತೆ. ಹಾಗೆಯೇ ಮುಸ್ಲಿಂ ಲೀಗಿನ ಬೆಂಬಲ ಸಿಗದೆ ಹೋದಾಗ ಸಂ. ಕಾಂಗ್ರೆಸ್ಸು ಅದನ್ನು ಜಾತೀಯವೆಂದು ಜರೆಯಲಾರಂಭಿಸಿತು. ಉಪಾಯಗಾರ ಆ. ಕಾಂಗ್ರೆಸ್ಸಿನ ನರಿ ಅದನ್ನು ಗಟ್ಟಿಸಿಕೊಂಡಿತು. ಅದನ್ನು ನುಂಗಲು ಸಾಧ್ಯವೆ? ಬೀಜ ಗಂಟಲಲ್ಲಿ ಸಿಕ್ಕಿಕೊಳ್ಳದೆ ಇದ್ದೀತೇ?

ಆ. ಕಾಂಗ್ರೆಸ್ಸ್ ನರಿಯ ಈ ಆಟದ ಕುರಿತು ಚುನಾವಣೆ ಮುಗಿದ ಮೇಲೆ ಪತ್ರಿಕೋದ್ಯೋಗಿಗಳು ಗುಜರಾತಿನಲ್ಲಿ ಇಂದಿರಾ ಗಾಂಧಿಯವರಿಗೆ, ಮುಸ್ಲಿಂ ಲೀಗು ಜಾತೀಯ ಪಕ್ಷವಲ್ಲವೇನೆಂದು ಕೇಳಿದರು. ಅದಕ್ಕೆ ಅವರು ಕೇರಳದ ಮುಸ್ಲಿಂ ಲೀಗು ಜಾತೀಯ ಪಕ್ಷವಲ್ಲ, ಆದರೆ ಬೇರೆಡೆಗಳಲ್ಲಿರುವ ಮುಸ್ಲಿಂ ಲೀಗು ಜಾತೀಯವೆಂದು ತಿಳಿಸಿದರು. ಪತ್ರಿಕೋದ್ಯೋಗಿಗಳು ಪಕಪಕನೆ ನಕ್ಕರು. ರಾಜಕೀಯೋದ್ಯೋಗಿಗಳು ರಾಗಾಲಾಪ ಮಾಡಿದರು. ಅಬ್ಬಾ! ಇಂದಿರಾಜೀಯವರ ಜ್ಞಾನಶಕ್ತಿಯೆ! ಅವರ ಮೆದುಳೇ ಮೆದುಳು! ಕೇರಳದ ಮೊಸಳೆ ಮನುಷ್ಯನನ್ನು ತಿನ್ನುವದಿಲ್ಲ. ಅದು ಸಮ್ಮನೆ ಬಂದು ಬಾಲಕರ ಕಾಲನ್ನು ಹಿಡಿಯುತ್ತದೆ. ಕೊನೆಗೆ ಬಿಟ್ಟುಬಿಡುತ್ತದೆ. ಅದೇನೂ ಅಪಾಯಕಾರಿಯಲ್ಲ. ಆದಿ ಶಂಕರಾಚಾರ್ಯರನ್ನು ಸ್ಮರಿಸಿಕೊಂಡು, ರುದ್ರಾಕ್ಷಿಮಾಲೆಯನ್ನು ತಿರಗಿಸುತ್ತ ಇಂದಿರಾಜೀ ಆ ರೀತಿ ಹೇಳಿರುವರು; ಅರ್ಥವತ್ತಾಗಿ ಆಡಿರುವರು. ಅರ್ಥಮಾಡಿಕೊಳ್ಳದೆ ಅಯ್ಯಯ್ಯೋ! ಅನ್ನುವವರಿಗೇನನ್ನಬೇಕು. ಆ ಮೊಸಳೆ ಅಂದು ಬಾಲಕನು ದೇಶದಲ್ಲೆಲ್ಲಾ ಕೀರ್ತಿ ಪಡೆಯುವಂತಾಗುವಂತೆ ಮಾಡಿದ್ದಲ್ಲಿ, ಇಂದು ಈ ರಾಜಕೀಯ ಮೊಸಳೆಯು ಆ. ಕಾಂಗ್ರೆಸ್ಸ್ ಕೇರಳದಲ್ಲಿ ಅಧಿಕಾರದಾಸನದಲ್ಲಿ ಪಾಲ್ಗಾರರಾಗುವಂತೆ ಮಾಡಿರುತ್ತದೆ. ಅಲ್ಲದೆ ದಿಲ್ಲಿಯಲ್ಲಿ ಇಂದಿರಾಜೀ ಸರಕಾರ ಬೀಳದಂತೆ ಸಹಾಯ ಮಾಡುತ್ತಿದೆ. ಆದುದರಿಂದ ಅವರ ಪಾಲಿಗೆ ಕೇರಳದ ಮುಸ್ಲಿಂ ಲೀಗು ಜಾತೀಯ ಪಕ್ಷ ಇರುವದಿಲ್ಲ. ಇತರೆಡೆಗಳಲ್ಲಿ [ಉದಾ: ಅಲಹಾಬಾದಿನ ನಗರಸಭೆ] ಅದು ಇಂದಿರಾ ಕಾಂಗ್ರೆಸ್ಸಿಗೆ ಎದುರಾಗಿ ನಿಂತು, ಅದಕ್ಕಿಂತ ಅಧಿಕ ಸ್ಥಾನಗಳನ್ನು ಪಡೆದುಕೊಂಡಿರುವದರಿಂದ ಅದು ಜಾತೀಯ! ಈ ನರಿಯ ಬಾಯಿಗೆ ಬಿದ್ದಿರುವ ಹಣ್ಣು ಮಾತ್ರ ಸಿಹಿ, ಉಳಿದುದೆಲ್ಲವೂ ಹುಳಿ— [ಬೀಳುವ ವರೆಗೆ]! ಭೋಗಾಸಕ್ತ ಕಾಮುಕನಿಗೆ ವಶಳಾದ ಹೀನ ವೇಶ್ಯೆ ಕೂಡಾ, ಅವನೊಡನಿರುವ ವರೆಗೆ, ಅವನ ಆಸಕ್ತಿ ಇರುವ ತನಕ, ವರವೀಯುವ ದೇವತೆಯಾಗಿ ಕಂಡು ಬರಬಹುದು. ತನ್ನ ತೀಟೆ ಮುಗಿದ ಮೇಲೆ ಅದೇ ಜೀವ ಜಾಢ್ಯ ಪ್ರಸಾರಕಳು, ಸಮಾಜ ಕಂಟಕಿ, ಸಮಾಜದ್ರೋಹಿ... ವಗೈರೆಯಾಗಿ ಬಿಡುತ್ತಾಳೆ. ಅದೇ ರೀತಿ ಅವನಿಗೆ ವಶಳಾಗದ ವೇಶ್ಯೆಯ ಅವಸ್ಥೆಯೂ ಇದೆ. ರಾಜಕೀಯ ವ್ಯಭಿಚಾರ ಅದಕ್ಕೊಂದು ಅಪವಾದವಲ್ಲ. ಅಧಿಕಾರಾಸಕ್ತ ಇಂದಿರಾ ಕಾಂಗ್ರೆಸ್ಸಿಗೆ ಕೇರಳದ ಮುಸ್ಲಿಂ ಲೀಗು ಸಹಾಯ ಮಾಡುತ್ತಿರುವ ವರೆಗೆ ಜಾತೀಯವಲ್ಲ. ಅನಂತರ? ಅದೇ ಇದ್ದದ್ದೇ. ನಾಲಗೆಯಲ್ಲಿ ಎಲುಬಿದೆ ಏನ? ಇಲ್ಲದಿದ್ದಲ್ಲಿ ಕೇರಳದ ಮುಸ್ಲಿಂ ಲೀಗು ಮಾತ್ರ ಜಾತೀಯವಾಗದಿರಲು ಕಾರಣವೇನು?

ಆದಕ್ಕೂ ಅವರ ಬತ್ತಳಿಕೆಯಲ್ಲಿ ಉತ್ತರದ ಬಾಣ ಸಿದ್ಧವಾಗಿದೆ. ಕೇರಳದ ಕೆಲವೆಡೆಗಳಲ್ಲಿ (ಮಲ್ಲಪುರಂ) ಮುಸ್ಲಿಮರು ಅಲ್ಪಸಂಖ್ಯಾಕರಿರುವದಿಲ್ಲ. ಅವರು ಅಲ್ಪಸಂಖ್ಯಾಕರಾಗಿರುವಲ್ಲಿ ಅವರ ಲೀಗು ಜಾತೀಯವಾಗುತ್ತದೆ! ಈ ಬಾಣ ಅವರಿದ್ದಲ್ಲಿಗೇನೇ ತಿರುಗಿ ಹೋಗದಿರಲಾರದು. ಮುಸ್ಲಿಂಲೀಗು ಜಾತೀಯವಲ್ಲ, ಅದಕ್ಕೆ ಜಯವಾಗಬೇಕೆಂದು ಅವಸರ ಅವಸರವಾಗಿ ಓಡೋಡಿ ಬಂದು ಭಾಷಣ ಬಿಗಿದ ಇಂದಿರಾಜೀ ಅದೇ ಬಾಯಲ್ಲಿ ಸಂಘ ಜಾತೀಯ, ಅದನ್ನು ನಾಶ ಮಾಡಬೇಕೆಂದು ಪ್ರಚಾರ ಮಾಡಿರುವರು. ಸಾಧಾರಣವಾಗಿ ಸಂಘವೆಂದರೆ ರಾಷ್ಟ್ರೀಯ ಸ್ವಯಂಸೇವಕ ಸಂಘ. ಆದರೆ ಕೆಲ ಪತ್ರಿಕೆಗಳೂ ಇಂದಿರಾಜೀಯವರೂ ಭಾರತೀಯ ಜನಸಂಘವನ್ನು ಸಂಘನೆಂದೇ ಸಂಬೋಧಿಸುತ್ತಾರೆ. ಭಾರತೀಯ ಜನಸಂಘ ಕೇವಲ ಹಿಂದೂಗಳ (ಅವರ ಅರ್ಥದಲ್ಲಿ) ಪಕ್ಷ ಇರುವದಿಲ್ಲ. ಅದನ್ನು ತಮಿಳುನಾಡಿನಲ್ಲಿ ಆರಂಭಿಸಿದವರು ಜಾನ್. ದಿಲ್ಲಿ ನಗರ ಪರಿಷತ್ತಿನಲ್ಲಿ ಭಾರತೀಯ ಜನಸಂಘದ ಪರವಾಗಿ [illegible] ಆರಿಸಿ ಬಂದಿದ್ದಾರೆ. ಕಾಶ್ಮೀರದಲ್ಲಿ ಕಾರ್ಯದರ್ಶಿಗಳಾಗಿರುವವರೂ ಮುಸ್ಲಿಂ. ಉತ್ತರ ಪ್ರದೇಶದಲ್ಲಿ ಅದೇ ರೀತಿ ಇದೆ. ಹೀಗಿದ್ದರೂ ಭಾರತೀಯ ಜನಸಂಘವನ್ನು ಇಂದಿರಾ ಗಾಂಧಿ ಜಾತೀಯವೆನ್ನುವದು ಆಶ್ಚರ್ಯವೇ ಸ[illegible]. ಅದನ್ನು ನಂಬುವವರೂ ಇದ್ದಾರೆಂ[illegible]ದು ಮಹದಾಶ್ಚರ್ಯವೇ ಇದೆ. ಗೋಬೆಲ್ಸ ಆರಂಭಿಸಿರ ಬಹುದು; ಇಂದಿರಾಜೀ ಅದನ್ನು ಮುಂದರಿಸಲು ಸಾಧ್ಯವೇನು? ಇಂದಿರಾಜೀಯವರ ತಂದೆ ಜವಾಹರಲಾಲಜೀಯವರು ಭಾರತೀಯ ಜನಸಂಘವನ್ನು ಜಾತೀಯವೆನ್ನುತ್ತಿದ್ದುದರಿಂದ ಮಗಳಿಗೂ ಅದೇ ಜಾಢ್ಯ ಬಂದಿರ ಬಹುದು. ಅದೂ ಪರಂಪರಾನುಗತವಾಗಿ ಬರುತ್ತದೋ ಏನೋ! ರಾಜಕೀಯದಲ್ಲಿ ಯಾರನ್ನು ಯಾವ ಹೆಸರಿನಿಂದ ಬೇಕಾದರೂ ಕೂಗಬಹುದೆಂದು ಕಾಣುತ್ತದೆ! ಕತ್ತೆಯ ಕಾಲನ್ನು ಹಿಡಿಯುತ್ತಾರಂತಲ್ಲವೇ?- ಅದೇ ರೀತಿ.

ರಾಷ್ಟ್ರೀಯ ಸ್ವಯಂಸೇವಕ ಸಂಘವು ಚುನಾವಣಾ ಚದುರಂಗದಾಟದಲ್ಲಿಲ್ಲವೆಂದ ಅದು ಚಂದಕ್ಕೆ ಚೆನ್ನಾಗಿಲ್ಲವೆಂದು ಇಂದಿರಾಜೀ ಭಾವಿಸಿಕೊಂಡಿದ್ದರೂ, ಅದನ್ನೇತಕ್ಕೆ ಜಾತೀಯವೆಂದು ಜರೆಯಬೇಕು? ಸಂಘವು ಹಿಂದೂ ಸಂಘಟನೆ ಇರುವದರಿಂದ ಅವರ ದೃಷ್ಟಿಯಲ್ಲಿ ಅದು ಜಾತೀಯ ಪಕ್ಷ ಇದೆಯೆನ್ನುವದುಚಿತವೇ? ಅದಕ್ಕಿಂತಲೂ ಇನ್ನೊಂದು ವಿಷಯವಿದೆ. ಪುನಃ ಅದೇ ನರಿಯ ಕಥೆ. ಸಂಘ ಸ್ಥಾಪನೆಯಾಗಿ ಕೇವಲ ಎರಡು ವರ್ಷಗಳಾಗಿದ್ದುವು. ಕಾಂಗ್ರೆಸ್ಸಿಗೆ ಕೀರ್ತಿಕಾಲ. ಆದ. ನೇತಾ ಜಮನಾಲಾಲ ಬಜಾಜರು, ಸಂಘ ಸಂಸ್ಥಾಪಕ ಡಾ| ಹೆಡ್ಗೆವಾರರನ್ನು ಕಂಡು, ಸಂಘವು ಕಾಂಗ್ರೆಸ್ಸಿನ ಸೇವಕದಳವಾಗಿರಬೇಕೆಂದು ಕೇಳಿಕೊಂಡರು. ಇಬ್ಬರೂ ಆಗ ಕಾಂಗ್ರೆ.

(ಹನ್ನೆರಡನೇ ಪುಟ ನೋಡಿರಿ)

ಕ್ರಾಂತಿವೀರರೊಡನೆ ಮಹಾತ್ಮಾ ಗಾಂಧಿ

ಲೇಖಕರು: ಪಂ. ಲಕ್ಷ್ಮಣದೇವ ವಿದ್ಯಾರ್ಥಿ.

ಶ್ರೀರಾಮಚಂದ್ರನು ಅರಣ್ಯದಲ್ಲಿ ಸಂಚರಿಸುತ್ತಿರುವ ಕಾಲ ಶಸ್ತ್ರಪಾಣಿಯಾಗಿದ್ದನು. ಋಷಿ, ಮುನಿಗಳು ಅಹಿಂಸಾವಾದಿಗಳಾಗಿದ್ದರೂ ಕೂಡ ಶ್ರೀರಾಮನ ಶಸ್ತ್ರಧಾರಣೆಯನ್ನು ಎಂದಿಗೂ ವಿರೋಧಿಸಲಿಲ್ಲ. ಮಹಾತ್ಮಾ ವಿದುರನು ಮಹಾ ನೀತಿಜ್ಞ, ಮಹಾನ್ ಶಾಂತಿಪ್ರಿಯ ಮತ್ತು ಪ್ರತಾಪಿಯೂಗಿದ್ದನು. ಅವನ ಬಳಿಯಲ್ಲಿಯೂ ಅದ್ಭುತವಾದ ಆಯುಧವಿತ್ತು. ಆದರೆ ಅವನದನ್ನು ಎಂದಿಗೂ ಉಪಯೋಗಿಸಿದ್ದಿಲ್ಲ. ಪರಂತು ಆತನು ಶ್ರೀಕೃಷ್ಣನು ಸುದರ್ಶನ ಮೊದಲಾದ ಶಸ್ತ್ರಗಳನ್ನು ಉಪಯೋಗಿಸಿದುದನ್ನು ಆಕ್ಷೇಪಿಸಿದಲಿಲ್ಲ. ಆ ಕಾಲದಲ್ಲಿ ಸಮಾಜಘಾತುಕರ ತಂಡ ತಂಡಗಳನ್ನು ಕೊಂದಲ್ಲದೆ ಅರ್ಜುನನಂತಹ ಮಹಾವೀರರಿಂದ ಕೊಲ್ಲಿಸಿದ್ದನು. ಆದರೆ ವರ್ತಮಾನ ಯುಗದ ಶಾಂತಿ ಸಂದೇಶಕ ಮಹಾತ್ಮಾ ಗಾಂಧಿಯವರ ಅಹಿಂಸಾತತ್ವದ ವಿಧಾನ ಒಂದು ನವೀನ ರೀತಿಯಾಗಿತ್ತು. ಅವರ ಜೀವನದ ಆಳವನ್ನು ಅಧ್ಯಯನ ಮಾಡಿದವರಲ್ಲಿ, ಭಾರತದ ಬಂಧ ವಿಮೋಚನೆಗಾಗಿ ಸಶಸ್ತ್ರ ಹೋರಾಟ ನಡೆಸಿದ ಕ್ರಾಂತಿಕಾರರ ಕುರಿತು ಗಾಂಧೀಜೀಯ ಮನೋವೃತ್ತಿ ಹೇಗಿತ್ತೆಂಬುದನ್ನು ತಿಳಿದುಕೊಂಡವರು ಬಹಳ ಅಲ್ಪವುಂದಿ.

ಸಶಸ್ತ್ರ ಹೋರಾಟದ ಪರಂಪರೆ

ಸಾಮಾಜಿಕ ಸ್ಥಿತಿಗತಿಯಲ್ಲಿ ಕ್ರಾಂತಿಕಾರಕ ಸುಧಾರಣೆ ಮಾಡುವ ಪ್ರಯತ್ನದಲ್ಲಿ ಗೌತಮ ಬುದ್ಧನಂತಹ ಕೆಲವೇ ವ್ಯಕ್ತಿಗಳನ್ನು ಬಿಟ್ಟರೆ ತ್ರೇತಾಯುಗದಲ್ಲಿ ಶ್ರೀರಾಮನು, ದ್ವಾಪರದಲ್ಲಿ ಶ್ರೀಕೃಷ್ಣ ಇವರ ನಂತರ ಪ್ರಚಲಿತ ಯುಗದಲ್ಲಿ ರಾಣಾಪ್ರತಾಪ, ಛತ್ರಪತಿ ಶಿವಾಜಿ, ಶ್ರೀ ವಿದ್ಯಾರಣ್ಯ, ಲೋಕಮಾನ್ಯ ತಿಲಕರ ವರೆಗೆ ಸಶಸ್ತ್ರ ಹೋರಾಟವೇ ಪರದಾಸ್ಯ ವಿಮೋಚನೆಗೆ ಸಾಧನವೆಂಬುದಾಗಿ ಪರಿಗಣಿಸಲ್ಪಟ್ಟಿತ್ತು. ಆದುದರಿಂದಲೇ ಅವರ ಸಮಕಾಲೀನ ಮುಖಂಡರು ಯಾರೂ ಇದನ್ನು ನಿಂದಿಸಲಿಲ್ಲ. ಸಶಸ್ತ್ರ ಕ್ರಾಂತಿಯ ಈ ಪರಂಪರೆ ದೇಶದಲ್ಲಿ ಕಾಂಗ್ರೆಸಿನ ಹೋರಾಟದ ಕಾಲದ ವರೆಗೂ ನಿರಂತರ ಸಾಗುತ್ತಾ ಬಂತು; ಮತ್ತು ಇದು ಪ್ರತ್ಯಕ್ಷ ರೂಪದಲ್ಲಿಯೇ ಇತ್ತು. ಕಾಂಗ್ರೆಸು ಜನ್ಮತಾಳುವ ಕೆಲವು ವರ್ಷಗಳ ಹಿಂದೆ ಸುಮಾರು ಅರ್ಧ ಶತಮಾನದ ಅವಧಿಯಿಂದಲೇ ದೇಶದ ಸ್ವಾತಂತ್ರ್ಯಕ್ಕಾಗಿ ಸಶಸ್ತ್ರ ಹೋರಾಟ ಈ ದೇಶದಲ್ಲಿ ಸಾಗುತ್ತಾ ಬಂದಿರುತ್ತದೆ. "ಸನ್ಯಾಸಿ ವಿದ್ರೋಹ" 'ಕೂಕಾ ವಿದ್ರೋಹ' ಮತ್ತು '1857ರ ಮಹಾಕ್ರಾಂತಿ'ಗಳೆಲ್ಲವೂ ಈ ಪರಂಪರೆಯ ದ್ಯೋತಕವಾಗಿರುತ್ತವೆ.

ಸನ್ಯಾಸ ಮತ್ತು ಕ್ರಾಂತಿ ಮಾರ್ಗ

ವೈದಿಕ ಯುಗದಲ್ಲಿ ಅಗಸ್ತ್ಯ, ವಿಶ್ವಾಮಿತ್ರ, ವಶಿಷ್ಠ, ಪರಶುರಾಮ ಮೊದಲಾದ ಋಷಿಗಳು ಸನ್ಯಾಸ ಮಾರ್ಗದಲ್ಲಿದ್ದು ಆಯುಧ ಮುಖೇನ ಕ್ರಾಂತಿ ಎಸಗಿದ್ದರು. ಬ್ರಿಟಿಷರ ಕಾಲದಲ್ಲಿ ಸನ್ಯಾಸಿಗಳು, ಫಕೀರರು, ಸಶಸ್ತ್ರ ಹೋರಾಟ ನಡೆಸಿದರು. ಆ ಮೇಲೆ ಪ್ರಸಿದ್ಧಿಗೆ ಬಂದವರೆಲ್ಲರಿಗೂ ಸನ್ಯಾಸಿಗಳೇ ಕ್ರಾಂತಿ ದೀಕ್ಷೆ ಕೊಟ್ಟಿದ್ದರು. ಬಂಗಾಲದಲ್ಲಿ 'ಅಗಮ್ಯ ಗುರು' ಮತ್ತು 'ನಿರಾಲಂಬಸ್ವಾಮಿ' ಮಹಾರಾಷ್ಟ್ರದ 'ಸ್ವಾಮಿ ಸಮರ್ಥರು' ಪಂಜಾಬಿನ 'ಸಮರ್ಥರಾಮದಾಸ' ಮೊದಲಾದವರ ವಿಷಯ ಅನೇಕರ ಅನುಭವಕ್ಕೆ ಬಂದಿರಲಿಕ್ಕಿಲ್ಲ. ಆದರೆ ಈ ಮಹಾಪುರುಷರ ಮೂಲಕ ಕ್ರಾಂತಿಕಾರಿಗಳಾದವರೆಲ್ಲರೂ ಭಾರತೀಯ ಸ್ವಾತಂತ್ರ್ಯ ಸಮರದ ಚರಿತ್ರೆಯಲ್ಲಿ ಪ್ರಖ್ಯಾತರಾಗಿದ್ದಾರೆ. ಮಹಾರಾಷ್ಟ್ರದ "ಚಾಪೇಕರ್ ಸಹೋದರರು" ಬಂಗಾಲದ "ವಾರೀಂದ್ರ ಕುಮಾರಘೋಷ್" (ಅರವಿಂದ ಘೋಷರ ಅಣ್ಣ) ಅರವಿಂದ ಘೋಷ್, ಇವರ 'ಯುಗಾಂತರದಲ' ಪಂಜಾಬಿನ ಕೂಕಾ ಕ್ರಾಂತಿ ಮುಖಂಡ "ಗುರು ರಾಮ ಸಿಂಹ" ಇವರೆಲ್ಲರೂ ಕೆಲವು ಅಜ್ಞಾತ ವಾಸಿ ಸಾಧು ಸನ್ಯಾಸಿಗಳಿಂದ ಪ್ರೇರಿತರಾಗಿ ಕ್ರಾಂತಿಯಲ್ಲಿ ಹೂಡಿದ್ದರು. "ನಿರಾಲಂಬ ಸ್ವಾಮಿ"ಯವರನ್ನು "ಸರ್ದಾರ್ ಭಗತ್ ಸಿಂಗ್" ಮತ್ತು ಅವರ ತಂದೆ 'ಸರ್ದಾರ್ ಕಿಶನ್ ಸಿಂಗ್'ರವರು ಸಂದರ್ಶಿಸಿ ಕ್ರಾಂತಿಗೆ ಸಲಹೆ ಪಡೆದಿದ್ದರು.

ಬರೋಡಾ ರಾಜ್ಯದಲ್ಲಿ ಪರಿಷ್ಠ ಅಧಿಕಾರದಲ್ಲಿದ್ದ ಅರವಿಂದ ಘೋಷರು ತನ್ನ ಪದವಿಗೆ ತ್ಯಾಗ ಪತ್ರಕೊಟ್ಟು ಬಂಗಾಲಕ್ಕೆ ಹೋಗಿ ಕ್ರಾಂತಿಯ ಕಹಳೆ ಊದಲಿಕ್ಕೆ ಪ್ರೇರೇಪಣೆ ಪಡೆದದ್ದು ಸ್ವಾಮಿ ವಿವೇಕಾನಂದರ ಶಿಷ್ಯೆ 'ಭಗಿನಿ ನಿವೇದಿತಾ' ರವರು; ಈಕೆ ಸಹ ಒಬ್ಬ ಸನ್ಯಾಸಿನಿಯೂ ಗಿದ್ದರು. ಸ್ವಾಮಿ ವಿವೇಕಾನಂದರು ಸ್ವತಃ ಆಯುಧಧಾರಣೆ ಮಾಡದಿದ್ದರೂ ಅವರ ಪ್ರತಿಯೊಂದು ಸಂದೇಶದಲ್ಲಿ ರಾಜಕೀಯ ಕ್ರಾಂತಿಯ ಜ್ವಾಲೆ ಪ್ರಜ್ವಲಿಸುತಿತ್ತು. ಬಂಗಾಲದ ಅಸಂಖ್ಯಾತ ಕ್ರಾಂತಿವೀರರಿಗೆ ಸ್ವಾಮಿ ವಿವೇಕಾನಂದರೇ ಮಾರ್ಗದರ್ಶಕರಾಗಿದ್ದರು. ಪ್ರಖ್ಯಾತ ಕ್ರಾಂತಿವೀರ 'ಶಾಮ್ ಜೀ ಕೃಷ್ಣವರ್ಮ' 'ಲಾಲಾಹರ ದಯಾಳ'ರವರಿಗೆ ಸ್ವಾಮಿ ದಯಾನಂದ ಸರಸ್ವತಿಯವರ ರಾಜನೈತಿಕ ವಿಪ್ಲವದ ಆದೇಶಕರಾಗಿದ್ದರು ನಿಸ್ಪೃಹರೂ ಸರ್ವ ತ್ಯಾಗಿಗಳೂ ದೇಶದ ಯುವಕರಿಗೆ ಬಲಿದಾನದ ಪಥದಲ್ಲಿ ಅಗ್ರೇಸರರಾಗಲಿಕ್ಕೆ ಪ್ರೇರಣೆ ಕೊಡಬಲ್ಲರು. "ಸೂಫೀ ಅಂಬಾಪ್ರಸಾದ್" "ಲಾಲಾ ಹರ್ ದಯಾಲ್" "ಅರವಿಂದ ಘೋಷ್" "ಲೋಕಮಾನ್ಯ ತಿಲಕ್" ಮತ್ತು "ನೇತಾಜಿ ಸುಭಾಷ್ಚಂದ್ರ ಬೋಸ್" ಇವರೆಲ್ಲರೂ ಇದರ ಮರ್ಮವನ್ನು ಚೆನ್ನಾಗಿ ಮನದಟ್ಟು ಮಾಡಿಕೊಂಡಿದ್ದರು.

ಗಾಂಧೀಜಿಯ ನವೀನ ಮಾರ್ಗ

ದೇಶದ ಸ್ವತಂತ್ರತೆಗಾಗಿ ತ್ಯಾಗ ಮಾಡಬೇಕೆಂದು ಮಹಾತ್ಮಾಜಿ ಬೋಧಿಸಿದರು. ಆದರೆ ಬಲಿದಾನ ಮತ್ತು ವಿಜಯದ ಪಥದಲ್ಲಿ ಶಸ್ತ್ರ ಪ್ರಯೋಗ ನಿಂದನೀಯವೆಂದು ಪ್ರತಿಪಾದಿಸಿದರು. ಭಾರತ ಸ್ವಾತಂತ್ರ್ಯ ಸಮರದ ಚರಿತ್ರೆಯಲ್ಲಿ ಇದೊಂದು ಹೊಸವಾದ. ಈ ವಾದದ ಕಡೆಗೆ ಹೆಚ್ಚಿನವರು ಆಕರ್ಷಿತರಾದರು. ಈ ರೀತಿ ಜನ ಬೆಂಬಲದಿಂದ ಉತ್ಸಾಹಿತರಾಗಿ ಗಾಂಧೀಜಿ "ಅಹಿಂಸೆ"ಯನ್ನು ತನ್ನ ಚಳವಳಿಕ್ಕೆ ಮುಖ್ಯ ಸಾಧನವನ್ನಾಗಿ ಆಯ್ದುಕೊಂಡರು. ಇದರಿಂದ ಜನಜಾಗೃತಿ ಕ್ಷೇತ್ರದಲ್ಲಿ ಕೆಲವು ಪ್ರಯೋಜನ ಆಗಿದ್ದರೆ ಹಲವು ವಿಧಗಳಲ್ಲಿ ಹಾನಿಯೂ ಸಂಭವಿಸಿತು. ಭಾರತ ವಿಭಜನೆಯೇ ಇದಕ್ಕೆ ದೊಡ್ಡ ನಿದರ್ಶನ. ಮಹಾತ್ಮರು ಆ ಸಂದರ್ಭದಲ್ಲಿ ತನ್ನ ದೃಢನಿಲುವಿನಿಂದ ಪ್ರತಿಭಟಿಸುತಿದ್ದರೆ ಈ ಮಹಾಸುರಂತ ಸಂಭವಿಸುತ್ತಿರಲಿಲ್ಲ. ಹಿಂದೂಸ್ಥಾನ ಬಲಾಢ್ಯವಾದ ಒಂದು ಸೈನಿಕ ಶಕ್ತಿಯುತ ವಿಜೇತ ರಾಷ್ಟ್ರದ ಪಂಕ್ತಿಯಲ್ಲಿ ಇಂದು ಜಗತ್ತಿನ ಮಾನ್ಯತೆಗೆ ಒಳಗಾಗಿಲ್ಲ; ಇದಕ್ಕೆ ಗಾಂಧಿವಾದದ ರಾಜನೈತಿಕ ಅಹಿಂಸಾ ನೀತಿಯೇ ಮುಖ್ಯ ಕಾರಣ. ಮಹಾತ್ಮ ಗಾಂಧೀಜೀ ಕ್ರಾಂತಿಕಾರಿಗಳ ಕುರಿತು ತಾಳಿದ ಧೋರಣೆ ಮತ್ತು ಪ್ರಕಟಿಸಿದ ಅಭಿಪ್ರಾಯಗಳಿಂದ ಕ್ರಾಂತಿಗಳ ಓಜಸ್ವೀ ಚರಿತ್ರೆಯು ಕೊಳೆಸಾಗುತ್ತಾ ಬಂದುದರಿಂದ ಭಾರತೀಯ ಸ್ವಾತಂತ್ರ್ಯ ಸಮರದ ಪ್ರಗತಿಯಲ್ಲಿ ಸರ್ವಾಧಿಕ ಕ್ಷತಿಯುಂಟಾಯಿತು. ಮಹಾತ್ಮಾ ಗಾಂಧಿಯವರ ಕುರಿತ, ಅತ್ಯಂತ ಸದ್ಭಾವನೆ ಇದ್ದರೂ, ಅನೇಕ ಅಪ್ರಿಯ ಘಟನೆಗಳ ವಿಷಯವನ್ನು ವಿವರಿಸದೆ ಗತ್ಯಂತರವಿಲ್ಲ. "ಗಾಂಧೀ ಜನ್ಮ ಶತಾಬ್ದಿ"ಯನ್ನು "ಪ್ರಾರ್ಥನಾತ್ಮಕ"ವಾಗಿ ಆಚರಿಸಿದ ಅನೇಕರಿಗೆ ನಮ್ಮ ವಿವರಣೆಗಳು "ಕಹಿಗುಳಿಗೆ"ಯಂತೆ ಪರಿಣಮಿಸಲೂ ಬಹುದು; ಪರಂತು ಇತಿಹಾಸದ ವಾಸ್ತವಿಕ ನಿದರ್ಶನಗಳು ಯಾವಾಗಲೂ ನಗ್ನಸತ್ಯಗಳಾಗಿರುತ್ತವೆ; ಶಬ್ದಜಾಲ, ರಾಜಕೀಯ ಪಕ್ಷಗಳ ಗತ್ತುಗಾರಿಕೆಯ ತರ್ಕಗಳಿಂದ ಅದನ್ನು ಬಚ್ಚಿಡಲಿಕ್ಕೆ ಅಥವಾ ಅಳಿಸಿ ಬಿಡಲಿಕ್ಕೆ ಸರ್ವಥಾ ಸಾಧ್ಯವಿಲ್ಲ.

ತ್ರಿಮೂರ್ತಿಗಳು ಹೇಗಿದ್ದರು?

ದೇಶದ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಗೆ ಯಾವ ಮಾರ್ಗದಲ್ಲಿ ವಿಶ್ವಾಸವಿತ್ತೋ ಅದರಲ್ಲಿ ಮುಂದುವರಿಯಲಿಕ್ಕೆ ಅವರು ಪೂರ್ಣ ಸ್ವತಂತ್ರರಿದ್ದರು. ಆದರೆ ಇದೇ ರೀತಿಯ ವ್ಯಕ್ತಿ ಸ್ವಾತಂತ್ರ್ಯ ಕ್ರಾಂತಿಕಾರರಿಗೂ ಇರಬೇಕೆಂಬುದನ್ನವರು ಸಹಿಸುತ್ತಿದ್ದಿಲ್ಲ. ಆ ಸಂದರ್ಭ ಬಂದಾಗ ಅವರು ಮುಖರರಾಗುತಿದ್ದರು; ಅವರನ್ನು ಬಹಿರಂಗವಾಗಿ ಕಠಿಣ ಶಬ್ದಗಳಿಂದ ಖಂಡಿಸುತ್ತಿದ್ದರು. ಲೋಕಮಾನ್ಯ ತಿಲಕರು ಸಹ ಕಾಂಗ್ರೆಸಿನಲ್ಲಿದ್ದರು; ಅವರು ಉಗ್ರವಾದಿಗಳಾಗಿದ್ದರು. ಬಾಂಬು, ಪಿಸ್ತೂಲು ಮೊದಲಾದ ಆಯುಧಗಳಿಗೆ ಕೈ ಹಾಕಿದವರಲ್ಲ; ಆದರೆ 17 ವರ್ಷ ಪ್ರಾಯದ ಕ್ರಾಂತಿವೀರ 'ಖುದೀರಾಮ್ ಬೋಸ್' ಮುಜಫರ್‌ಪುರದಲ್ಲಿ ಬಾಂಬು ಬಿಸಾಡಿದಾಗ ತಿಲಕರು ತನ್ನ ಪತ್ರಿಕೆ 'ಕೇಸರಿ'ಯಲ್ಲಿ ಸಂಪಾದಕೀಯ ಲೇಖನ ಬರೆದು ಪ್ರಶಂಸಿದರು. ಆ ಲೇಖನಕ್ಕೇ ತಿಲಕರಿಗೆ "ಮಾಂಡಲೆ"ಯ ಜೈಲಿನಲ್ಲಿ 6 ವರ್ಷ ಕಠಿಣ ಶಿಕ್ಷೆಯಾಯಿತು. ಅದಲ್ಲದೆ ಶಿಕ್ಷೆಯು ಕುರಿತು ಅ

(ಹನ್ನೊಂದನೇ ಪುಟ ನೋಡಿರಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ವಾರಪತ್ರಿಕೆ
ಉಡುಪಿ, ದ. ಕ.

NAVAYUGA
UDIPI, S. K.

ಸಂಪುಟ : 50
ಸಂಚಿಕೆ : 9

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
ವಿಶೇಷ ಸಂಚಿಕೆಗಳು ಸಹಿತ
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ಮೂರು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ಹಣ ಸಾಕುತ್ತಾರೆಯೋ?

ಕಾವೇರೀ ನದೀ ನೀರಿನ ಅಂತಾರಾಜ್ಯ ವ್ಯಾಜ್ಯ ಹಲವು ಸುತ್ತಿನ ಮಾತುಕತೆ ನಡೆದರೂ ಇನ್ನೂ ಇತ್ಯರ್ಥವಾಗಲಿಲ್ಲ. ಸಂಧಾನದ ಮಾತುಕತೆ ಮುರಿಯಿತು ಎಂದು ತಮಿಳುನಾಡಿನ ಮುಖ್ಯಮಂತ್ರಿ ಶ್ರೀ ಕರುಣಾನಿಧಿಯವರು ನಿಷ್ಠುರತೆಯಿಂದ ಉಗ್ಗಡಿಸಿದ್ದಾರೆ. ಇದಕ್ಕೆ ಕೇರಳದ ಸಚಿವೋತ್ತಮರು ಕೇಂದ್ರದ ನೀರಾವರಿ ಸಚಿವ ಡಾ| ಕೆ. ಎಲ್. ರಾವ್ ಅವರೂ ದನಿಗೂಡಿಸುತ್ತಾರೆ. ಈ ದಿಸೆಯಲ್ಲಿ ನಡೆದ ಕೊನೆಯ ಸುತ್ತಿನ ಮಾತುಕತೆಯನ್ನು ಕರ್ನಾಟಕದ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು "ನಾಟಕ" ವೆಂದು ವರ್ಣಿಸಿದ್ದಾರೆ. "ಕಾವೇರೀ ನದೀ ನೀರಿನ ವಿವಾದ ಚರ್ಚೆಗೇ ಬರಲಿಲ್ಲ; ರಾಜ್ಯವು ಕೈಕೊಂಡಿರುವ ಹೇಮಾವತಿ ಯೋಜನೆಯ ಬಗ್ಗೆ ಮಾತ್ರ ಪ್ರಸ್ತಾಪ ನಡೆದಿತ್ತು; ಉಳಿದುವು ಹಾಗೆಯೇ ಉಳಿದಿವೆ" ಎನ್ನುತ್ತಾರೆ ಶ್ರೀ ಪಾಟೀಲರ; ತಮ್ಮ ಪೂರ್ವ ನಿರ್ಧಾರಿತ ನಿರ್ಧಾರಕ್ಕೆ ಶ್ರೀ ಪಾಟೀಲರನ್ನು ಒಪ್ಪಿಸುವಲ್ಲಿ ಅಸಮರ್ಥರಾದ ಇತರರು ಮಾತುಕತೆ ವಿಫಲವೆಂಬ ಏಕಪಕ್ಷೀಯ ನಿರ್ಧಾರಕ್ಕೆ ಬಂದಿರುವುದು ಸರ್ವವೇದ್ಯ. ಇದು ದುರದೃಷ್ಟದ ಸಂಗತಿ.

ಕಾವೇರೀ ನದೀನೀರಿನ ವಿವಾದದ ಮಾತುಕತೆ ಸಫಲವಾಗಲು ಕರ್ನಾಟಕವು ಬೃಹತ್ತರ ತ್ಯಾಗ ಮಾಡಬೇಕೆಂದು ತಮಿಳುನಾಡಿನ ಇಚ್ಛೆ. ಇದಕ್ಕೆ ಕೇಂದ್ರ ಸರಕಾರದ ಒತ್ತಾಸೆ. ಪಾರ್ಲಿಮೆಂಟಿನಲ್ಲಿ ದ್ರಾವಿಡರು ಇಂಡಿಕೇಟನ್ನು ಬೆಂಬಲಿಸುವುದಕ್ಕೆ ಪ್ರತಿಯಾಗಿ ದ್ರಾವಿಡ ಸರಕಾರದ ನಿಲುಮೆಯನ್ನು ಒಪ್ಪುವುದು ಶ್ರೀಮತಿ ಗಾಂಧಿ ಸರಕಾರದ ನೀತಿಯಿರಬಹುದು. ಬೆಳಗಾಂವಿಯ ಆಸೆ ತೋರಿಸಿ ಮರಾಠಿಗರ ಬೆಂಬಲವನ್ನು ಉಳಿಸಿಕೊಳ್ಳುವ ಈ ರಾಜಕೀಯ ಕನ್ನಡಿಗರಿಗೆ ಹೊಸತಲ್ಲ. ಆದರೆ, ತನ್ನ ಅಧಿಕಾರವುಳಿಸಲು ನ್ಯಾಯ—ಧರ್ಮ ನೀತಿಗಳನ್ನು ತಿಪ್ಪೆಗೆಸೆಯಲು ಆಕೆ ಸಿದ್ಧರಾಗುತ್ತಿರುವುದು ಆಕ್ಷೇಪಣೀಯ. ಈ ಬಗೆಯಾಗಿ ಕನ್ನಡಿಗರಿಗೆ ದ್ರೋಹ ಬಗೆಯುವುದು ಶೋಭನೀಯವಲ್ಲ. ಕರ್ನಾಟಕವು ಆರಂಭಿಸಿರುವ ಹೇಮಾವತಿ, ಕಬಿನಿ ಮತ್ತು ಹಾರಂಗಿ ಯೋಜನೆಗಳನ್ನು ನಿಲ್ಲಿಸಬೇಕೆಂದು ಪ್ರತಿಪಕ್ಷಿಗಳ ವಾದ. ಹಾಗೆಯೇ ೧೯೨೪ರಲ್ಲಿ ಅಂದಿನ ಮೈಸೂರು ಮತ್ತು ಮದ್ರಾಸು ಸರಕಾರಗಳ ನಡುವೆ ಆಗಿದ್ದ ಆ ಒಪ್ಪಂದದ ಅವಧಿ ಮುಗಿದ ಬಳಿಕವೂ ಆ ಒಪ್ಪಂದದ ಶರ್ತಗಳಿಗೆ ಮತ್ತೆ ಜೀವದಾನ ಮಾಡಬೇಕೆಂಬುದು ತಮಿಳುನಾಡಿನ ಮಹತ್ವಾಕಾಂಕ್ಷೆ. ಆದರೆ, ಈ ಐದು ದಶಕಗಳಷ್ಟು ಹಿಂದಿನ ಶರ್ತಗಳನ್ನು ಇಂದೂ ಸ್ವೀಕರಿಸುವುದಾಗಲೀ ಅವನ್ನು ಒಪ್ಪಬೇಕೆಂದು ಕೇಳಿಕೊಳ್ಳುವುದಾಗಲೀ ಪ್ರಕೃತಿಯು ಪ್ರಶ್ನೆಯಲ್ಲ; ಅದು ವ್ಯಾವಹಾರಿಕವಾಗುವುದಿಲ್ಲ. ದೇಶವು ಈ ನಡುವೆ ಸ್ವತಂತ್ರವಾಗಿದೆ; ರಾಜ್ಯಗಳ ಸ್ವರೂಪ ಸಂಪೂರ್ಣ ಬದಲಾಗಿದೆ. ಕರ್ನಾಟಕವು ತನ್ನ ರಾಜ್ಯದಲ್ಲಿ ಹರಿಯುವ ನದಿಗಳ ನೀರನ್ನು ತನ್ನ ಭೂಮಿಗೆ ಉಣಿಸುವುದನ್ನು ಬಿಟ್ಟು ತಮಿಳುನಾಡಿಗೋ ಮಹಾರಾಷ್ಟ್ರಕ್ಕೋ ದಾನ ನೀಡಿ ತಾನು ಒಣಗುವಷ್ಟು ತ್ಯಾಗಶೀಲವಾಗುವುದು ಇಂದಿನ ದಿನಗಳಿಗೆ ಒಪ್ಪದ ಮಾತು. ಕಾವೇರಿ ಕಣಿವೆಯಲ್ಲಿ ಬೀಳುವ ಮಳೆಯೂ ಕಡಿಮೆಯಾಗುತ್ತಲೇ ಇದೆ. ಲಭ್ಯವಾದ ನೀರನ್ನು ಆದಷ್ಟು ಹೆಚ್ಚು ಭೂಮಿಗೆ ಹರಿಸುವಂತೆ ಮಾಡಲು ಕರ್ನಾಟಕ ಉತ್ಸುಕವಾಗಿದೆ; ಆ ದಿಸೆಯಲ್ಲಿ ಕೇಂದ್ರದ ಸಹಾಯ ದೊರೆಯದೆ ಹೋದರೂ ತನ್ನ ಯೋಜನೆಗಳನ್ನು ಮುಂದುವರಿಸುವ ದೃಢ ನಿರ್ಧಾರ ಮಾಡಿ ಮುಂದಡಿಯಿಟ್ಟಿದೆ. ಇದಕ್ಕೆ ಕೇಂದ್ರವು ಮನ್ನಣೆ ನೀಡಬೇಕು ಎಂಬುದೇ ಕರ್ನಾಟಕದ ಅಚಲ ನಿಲುಮೆ. ಇದು ಶ್ರೀ ಪಾಟೀಲರೊಬ್ಬರ ಅಥವಾ ಅವರ ಸರಕಾರದ ಬಯಕೆಯಲ್ಲ; ರಾಜ್ಯದ ಜನಮನದ ಮಹಿಮೆ.

ಕೇಂದ್ರ ಸರಕಾರದ ನಿರ್ಧಾರವು ಇಷ್ಟರಲ್ಲೇ ಹೊರಬೀಳಲಿದೆಯೆಂದು ಶ್ರೀ ಕರುಣಾನಿಧಿ ಹೇಳುತ್ತಾರೆ. ಪಂಚಾಯತಿಗೆ ಒಪ್ಪಿಸುವುದಲ್ಲದೆ ಅನ್ಯ ಉಪಾಯ ವಿವಾದ ಪರಿಹಾರಕ್ಕೆ ಇಲ್ಲವೆಂಬುದು ಅವರ ಅಭಿಪ್ರಾಯ. ಆದರೆ, ತಮಿಳುನಾಡಿನ ಒತ್ತಡಕ್ಕೆ ಮಣಿದೋ ದ್ರಾವಿಡ ಸರಕಾರವನ್ನು ತೃಪ್ತಿಪಡಿಸುವುದಕ್ಕಾಗಿಯೋ ಕೇಂದ್ರವು ಪಂಚಾಯತಿಯನ್ನು ನೇಮಿಸುವುದಕ್ಕೆ ಮೊದಲು ಕರ್ನಾಟಕದ ಯೋಜನೆಗಳಿಗೆ ಅನುಮತಿಕೊಡಬೇಕು; ಇಲ್ಲವಾದರೆ, ಅನ್ಯಾಯವಾಗುತ್ತದೆ. ಇದನ್ನು ಮೀರಿ ಏಕಪಕ್ಷೀಯವಾಗಿ ಕೇಂದ್ರ ಸರಕಾರವು ಪಂಚಾಯತಿ ನೇಮಿಸಿದರೆ, ಅದು ಮತ್ತೊಂದು ಜಗಳವನ್ನು ಆರಂಭಿಸಿದಂತಾಗುತ್ತದೆ. ಕಳೆದ ಸಾರ್ವತ್ರಿಕ ಚುನಾವಣೆಗಳ ಪೂರ್ವ ಸಂಧ್ಯೆಯಲ್ಲಿ ಶ್ರೀಮತಿ ಗಾಂಧಿ ಪ್ರಭೃತಿಗಳು ಮಹಾಜನ ಆಯೋಗವನ್ನು ಕರ್ನಾಟಕದ ಮೇಲೆ ಹೊರಿಸೀಗ ಆದರೊಡನೆ ದೇಶದ ಲಾಗಹಾಕುತ್ತಿರುವಂತೆ ಈಗ ೧೯೭೨ರ ಚುನಾವಣೆಗಳಿಗೆ ಮೊದಲು ನೀರಿನ ಪಂಚಾಯತಿಯನ್ನು ನೇಮಿಸಲು ಇಚ್ಛಿಸುವುದಾದರೆ, ಅದರಿಂದ ಯಾವ ಪ್ರಯೋಜನವೂ ಇಲ್ಲ. ಎಲ್ಲರನ್ನೂ ಎಲ್ಲಾ ಕಾಲವೂ ವಂಚಿಸಬಹುದೆಂದು ಶ್ರೀಮತಿ ಗಾಂಧಿಯವರ ತಿಳಿದಿದ್ದರೆ, ಅದು ಆಶ್ಚರ್ಯ. ತನಗಾಗದ ಸರಕಾರವನ್ನು ಹಣ್ಣುಗಾಯಿ ನೀರುಗಾಯಿ ಮಾಡಲು ಆಕೆ ಎರಡೂವರೆ ಕೋಟಿ ಕನ್ನಡಿಗರನ್ನು ಒಣಗಿಸಲು ಮುಂದುವರಿಯುವುದರಿಂದ ಆಕೆಯು ಗಂಭೀರ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ರಾಜ್ಯಕ್ಕೀಯುವ ದರೆ, ಸಂಪೂರ್ಣ ಅನ್ಯಾಯ—ಅನೀತಿ—ಅಧರ್ಮಗಳೆಂದು ಕನ್ನಡಿಗರು ಒಪ್ಪುವುದಿಲ್ಲ. ಆದ್ದರಿಂದ ಕಾವೇರಿ ನೀರಿನಲ್ಲಿ ತಮಗೆ ನ್ಯಾಯವಾದ ಪಾಲು ದೊರೆಯಬೇಕೆಂಬುದಷ್ಟೇ ಅವರ ಆಶಯ. ನಾವು ಒಣಗಿ ಕರಟಿ ಇತರರನ್ನು ಹಸುರು ಮಾಡುವಷ್ಟು ಅದ್ಭುತ ತ್ಯಾಗ ಮಾಡಲು ಅವರು ಸಿದ್ಧರಿಲ್ಲ. ಇಂತಹ ತ್ಯಾಗ ಪ್ರಜಾತಂತ್ರಾತ್ಮಕವೂ ಅಲ್ಲ. ಮಹಾರಾಷ್ಟ್ರ—ಕರ್ನಾಟಕ ವಿವಾದವನ್ನು ಇನ್ನೂ ಜೀವಂತ ಹೆಣವಾಗಿರಿಸಿಕೊಂಡಂತೆಯೇ ಶ್ರೀಮತಿ ಗಾಂಧಿ ಮತ್ತೊಂದು ಹೆಣವನ್ನು ಸಾಕುತ್ತಾರೆಯೇ? ಕಾದು ನೋಡಬೇಕಷ್ಟೆ. ಆಕೆ ಹೆಣ ಕಾಯುತ್ತಿರಲಿ, ಬಿಡಲಿ, ಕರ್ನಾಟಕ ಸರಕಾರವು ಮಾತ್ರ ತನ್ನ ಯೋಜನೆಗಳಿಗೆ ಸತ್ವಶಾಲಿ ಸಂಜೀವಿನಿಯನ್ನು ಚುಚ್ಚಿ ತ್ವರಿತಗೊಳಿಸುವುದು ಮಾತ್ರ ಅವಶ್ಯ; ಇದರಿಂದಲೇ ರಾಜ್ಯದ ಪ್ರಗತಿ ಸಾಧ್ಯ.

ನಿಘಂಟು ಭವಿಷ್ಯ

ವೈಕುಂಠ ಸಾಲ ಮಾಡಿಕೊಂಡವನೊಬ್ಬ ೧೦ ಲಕ್ಷ ರೂಪಾಯಿ ಪ್ರಥಮ ಬಹುಮಾನವುಳ್ಳ ಲಾಟರಿ ಟಿಕೇಟನ್ನು ಕೊಂಡನಂತೆ. ತನಗೆ ಸ್ವಪ್ನದಲ್ಲಿ ದೇವರು ಕಾಣಿಸಿಕೊಂಡಿದ್ದಾನೆ; ಆ ಬಹುಮಾನ ತನಗೇ ಸಿಗುವುದೆಂದು ಹೇಳಿದ್ದಾನೆ. ಅದು ಸಿಕ್ಕೊಡನೆಯೇ ನಿಮಗೆ ಒಂದಕ್ಕೆರಡು ಕೊಡುತ್ತೇನೆಂದು ವಿಶ್ವಾಸ ನೀಡಿದನಂತೆ, ಸಾಲಗಾರರೆಲ್ಲರೂ ನಂಬಿ ಹಾಗೇ ಆಗಲೆಂದು (ತಮಗೆ ಸಾಲ ಸಂದಾಯವಾಗಲೆಂದು) ನಿತ್ಯ ದೇವರಲ್ಲಿ ಮೊರೆಯಿಡುತಿದ್ದರಂತೆ. ಆದರೆ, ಆ ಬಂಪರ್ ಬಹುಮಾನ ಮಾತ್ರ ಯಾರೋ ಒಬ್ಬರಿಗೇ ಹೋಯ್ತೆಂದು ತಿಳಿದಾಗ ಆತನ ಸಾಲಿಗರ ಸ್ಥಿತಿ ಏನಾಗಿರಬಹುದು!

ಕರ್ನಾಟಕದ ಇಂಡಿಕೇಟ್ ಅಧ್ಯಕ್ಷ, ಮೈಸೂರಿನ ಮಾಜಿ ಮುಖ್ಯಮಂತ್ರಿ ಹಾಲಿ ಕೇಂದ್ರದ ಕ್ಯಾಬಿನೆಟ್ ಸಚಿವ ಶ್ರೀ ಕೆಂಗಲ್ ಹನುಮಂತಯ್ಯನವರು ಈಗ ರಾಜ್ಯಸಂಚಾರದಲ್ಲಿ ತಲ್ಲೀನರಾಗಿದ್ದಾರೆ. ಹಿಂದೊಮ್ಮೆ ಅವರು ಶ್ರೀಮತಿ ಇಂದಿರಾ ಗಾಂಧಿಯವರಲ್ಲಿ ವಿಶ್ವಾಸವಿಡಬೇಕೆಂದೂ ಆಕೆಯ ಕೈಯಿಂದಲ್ಲಿ ಕರ್ನಾಟಕಕ್ಕೆ ಎಂದೂ ಅನ್ಯಾಯವಾಗುವುದಿಲ್ಲವೆಂದೂ ಕನ್ನಡಿಗರ ಪಾತಃಕಿವ್ವರು ಈಗ ತಮ್ಮ ಭವಿಷ್ಯ ನುಡಿಯುತ್ತ ಹೊರಟಿದ್ದಾರೆ. ೧೯೭೨ರ ಸಾರ್ವತ್ರಿಕ ಚುನಾವಣೆಗಳಲ್ಲಿ ಇಂಡಿಕೇಟೇ ಪ್ರಚಂಡ ವಿಜಯ ಗಳಿಸುವುದು ಎಂದು ಉಗ್ಗಡಿಸ ಹತ್ತಿದ್ದಾರೆ. ಚುನಾವಣೆಯ ಭವಿಷ್ಯವನ್ನು ಭವಿಷ್ಯದರ್ಶಿಗಳೇ ಕಟ್ಟುನಿಟ್ಟಾಗಿ ಹೇಳಲು ಹಿಂದೆ ಮುಂದೆ ನೋಡುವಾಗ, ಈ ರಾಜ್ಯಕೀಯ ಪಥಾರಿಗಳು ಅಂಜದೆ ಅಳುಕದೆ ಅವರವರ 'ನಿಘಂಟು ಭವಿಷ್ಯ' ಹೇಳತೊಡಗುವುದು ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಇರಬೇಕು. ಶ್ರೀ ಕೆಂಗಲ್ಲರು ನುಡಿದ ಭವಿಷ್ಯ ಸತ್ಯವಾದುದಾದರೆ, ಚುನಾವಣೆಗಳೇ ಬೇಕಾಗಿಲ್ಲ; ಯಾವಯಾವ ಚುನಾವಣಾ ಕ್ಷೇತ್ರದಲ್ಲಿ ಅವರ ಪಕ್ಷಗೆದ್ದು ಬರುವುದೆಂದು ಅವರು ಹೇಳಲಿ, ಅವರು ನುಡಿಯುವ ಭವಿಷ್ಯವನ್ನು ಜನ ನಂಬಲು ಸಿದ್ಧವಿದೆಯೇ ಎಂಬ ಭವಿಷ್ಯ ನುಡಿಯಲು ಅವರು ಮುಂದಾಗಬಹುದಾದರೂ ಅದನ್ನು ಜನ ಒಪ್ಪುತ್ತಾರೆಯೇ ಎಂಬುದು ಪ್ರಶ್ನಾರ್ಥಕ.

ಗೇಹರಾಜ್ಯದಲ್ಲಿ

ಆತ್ಮಸಾಕ್ಷಿ ಅಂದ್ರೆ ಯೆಂಡ್ಕುಡ್ಕತನವೆ?

"ಹಿಯ್, ಹೊಸ ಇಲ್ಲಿ ಬನ್ನೀಂದ್ರೆ...."

"ಏನಿದೊಂತ, ಭಾರೀ ಉಮ್ಮೇದು...."

"ಉಮ್ಮೇದೇನು ಬಂತೊಂತೀನೆ? ಅಲ್ಲ, ಕೊನ್ಗೆ ದೀಪಾವಳೀ ಕಳೀತು...."

'ಕಳೀತು...'

"ಆಗ ತಿಂಗಳ ಕೊನೇ ದಿವ್ಸ ಅಂದ್ರಿ ......'

"ಅಲ್ಲವೇ ಮತ್ತೆ, ಈ ಬಾರಿ ತಿಂಗ್ಳ ಕೊನೆಗೆ ಸರಿಯಾಗೇ ದೀಪಾವಳೀ ಬಂದಿರೋದೇನು ಸುಳ್ಳೆ?'

"ಹಾರೀಗ ಸುಳ್ಳೊಂದ್ರಿ?"

'ಮತ್ತೆ...'

"ಈಗ ಕೊನೇ ಕಳ್ದು ಬುಡಾ ಬಂದಿದೆ ......'

"ಗೊತ್ತೊನ್ನು...."

'ಅದನ್ನೇ ಹೊಸ ಜ್ಞಾಪಕ ಮಾಡೋದು ನಾಂತ........'

ಯಾವುದನ್ನ?"

"ಅದನ್ನ, ತಿಂಗಳ ಮೊದಲೊಂತ....'

"ಓ, ಅದನ್ನೇ, ಅಲ್ಲ, ಹಂಗೊತ್ತಿಲ್ವೇ ಪೂರಾ ಪಗಾರ ಕೈಗೆ ಬಿದ್ದದ್ದು, ಬಿದ್ದಲ್ಲಿಂದ್ಲೇ ಪಂಪ್ತಾ ಜಾರಿ ಹೋದದ್ದು....'

"ನಿಮ್ಮದು ಯಾವಾಗ್ಲೂ ಹೀಗೇನೆ.'

"ಅಲ್ವೆ, ನನ್ನದೊಂತೇನು, ಈ ದುಬಾರಿ ಕಾಲದಲ್ಲಿ ಎಲ್ಲರದ್ದೂ ಹೀಗೇನೇ' ಬೇಳೆ-ಕಾಳು ಚಂದ್ರಲೋಕದಲ್ಲಿ, ಕಾಯಿ ಎಣ್ಣೆ ಸೂರ್ಯಲೋಕದಲ್ಲಿ...."

"ಸಾಕು ಬಿಡೀಂದ್ರೆ.... ಇದೆಲ್ಲಾ ಇದ್ದದ್ದೇ....'

"ಹೌದು, ನಾವೆಲ್ಲ ಕಚ್ಚಟ್ಟು ಬಿಟ್ಟು ಸಿಕ್ಕವರ ಮುಂದೆ ಹಲ್ಕಿರಿದದ್ದೇ...."

"ಹಲ್ಕಿರಿಯೋರೇನು ನಾವೇ...."

"ಹಾವು ನಾವೇ ಅನ್ನಿ. ಆದ್ರೂ ಏನು ಮಾಡೋದು, ಈ ಸುಡುಗಾಡು-ಸರ್ಕಾರದ ಸುಡುಗಾಡ ನೀತಿಯಲ್ಲಿ ಬೆಳೆದದ್ದೆಲ್ಲ ಸುಟ್ಟು ಹೋಗುತ್ತದೆಂತ ತೋರುತ್ತೆ....!

"ಹಾಗೇನೇ ಏನೋ ಇರಬೇಕು. ಇಲ್ಲಾದ್ರೆ ಅಕ್ಷಯ ಪಾತ್ರಾಂತ ಸೋದಲ್ಲಿ ಬಂದಲ್ಲಿ ಅಹಾರ ಮಂತ್ರಿಗಳು ಕೊಟ್ಟಿದ್ದೆಲ್ಲ ಬಂಜ್ಕಾಳಿಲ್ಲದ ಬಡಾಯಿ ಇರಬೇಕು....'

"ಏನು ಇಷ್ಟೆ ಏನಾಯ್ತು: ನಾವಂತೂ ಜಾಬಾರಿ-ತಿಬಾರಿ ಬೆಲೆಕೊಟ್ಟು ದಿನಾ ದೂಡ್ತೇವು....'

'ಅಲ್ರಿ, ಮತ್ತೆ ಸಾಯೋತನ್ಕಾದ್ರೂ ಬದುಕ್ಬೇಡವೇನ?"

'ಅದೀಗ ಸರಿಯಾಗೇ ಹೇಳಿದಿ.'

"ಏನು?'

'ಅಲ್ಲ, ಸಂದೇಹದಲ್ಲೊಂದು ಕಾಲಾಯಿತ್ತು. ಆಗೆಲ್ಲ ಸತ್ತನಂತ್ರಾನೂ ಬದುಕ್ತಿದ್ರು....'

"ಹ್ಞಾಂ, ಈಗ?'

"ಬದುಕಿರುವಾಗ್ಲೇ ಸಾಯುತಿದ್ದಾರೆ...."

'ಬಂದ್ರೀತಿಯಲ್ಲಿ ಇದೂನೂ ಸರಿನ್ನಿ. ಅಂತೂ ಸಾಯೋದಿಲ್ಲ; ಆದ್ರಿಂದ ಬದುಕ್ಬೇಕಷ್ಟೆ....'

"ಹೋಹಮ್ಮ, ಅಂದು ಹರಿಶ್ಚಂದ್ರ ನೃಪನ ಮಡದಿ ಮಗನು ಸತ್ತು ಹುಟ್ಟಿದ್ದರಂತೆ....'

'ಹ್ಞಾಂ.... ಅದೇ ಸ್ಥಿತಿ ಇಂದು ನಮಗೆಲ್ಲ ಬಂದಿದೆ ಅಲ್ಲವೇನು?'

'ಬಂದಿದೇಂತ ನಾವೇ ಅಂದ್ಕೊಳ್ಳಬೇಕಷ್ಟೆ...."

'ಯಾಕೆ?'

"ಅಲ್ಲ, ಹರಿಶ್ಚಂದ್ರನಿಗೆ ತನ್ನ ಸತ್ಯವುಳಿಸುವುದೊಂದೇ ಛಲ. ಆತಗೆ ತನ್ನ ಮಕ್ಕಳು—ಮರಿಗಳ ಗೊಡವೆಯಿಲ್ಲ'

"ಹೌದು..."

"ನಮ್ಮ ಆಳುವ ನಾಯಕರಿಗೆ ತಮ್ಮ ಸ್ಥಾನ ಉಳಿಸುವದೊಂದೇ ಹಂಬಲ...."

"ಹ್ಞಾಂ....ನೋಡಿ ಒಂದ್ಕಾಲದಲ್ಲಿ ಸ್ಥಾನ ಹೋದ್ರೂ ಮಾನ ಹೋಗಗೊಡೇಂತ ಇದ್ದವ್ರು ನಾವು ಆದರೆ ಇಂದು"

"ಮಾನ ಹೋದರೆ ಹೋಗಲಿ; ಸ್ಥಾನ ಮಾತ್ರ ಉಳಿದಿರಲೀಂತ...."

'ಅಥವಾ...'

"ಏನು?'

"ಮಾನಗೆಟ್ಟವರೆಲ್ಲ ಸ್ಥಾನಾಪನ್ನರಾಗಿದ್ದಾರೆ ಎಂದರೇನಂತೆ?"

'ಎನ್ನಬಹುದೊಕ್ಕು. ಇದು ನಿನ್ನ ಆತ್ಮಸಾಕ್ಷಿ ಅದ್ರೆ; ಇಂದಿರಾ ಗಾಂಧಿ ಸಮಾಜವಾದದಲ್ಲಿ ಎಲ್ಲರ ಆತ್ಮಗಳೂ ಇಂದಿರಾ ಗಾಂಧಿಯವರ ಆಶ್ಯಕ್ಕೆ ಸಾಕ್ಷಿ ನುಡಿಯಬೇಕು..."

'ಅದ್ರೆ ನೋಡಿ, ಆ ಇಂದಿರಾಗಾಂಧಿಯವರ ಆತ್ಮಸಾಕ್ಷಿಯೀಗ ನಡುನೀರಲ್ಲಿ ಕೈಕೊಡ ಹೊರಟಂತಿದೆ....'

'ಹೇಗೆ ಹಾಗಂತೀಯು?'

'ಆಕೇ ಫೀತಿ-ನಡವಳಿಕೆ ನೋಡಿದ್ರೆ'

"ಹ್ಞಾಂ, ಏನು"

"ನೋಡಿ, ಉತ್ತರ ಪ್ರದೇಶದಲ್ಲಿ ಆಕೆಗೆ ಭಾರೀ ಸೋಲಾಗುತ್ತು..."

'ಸೋಲಾದ್ರೇನಾಯ್ತು, ಸೋಲು ಗೆಲವಿನ ಮೂಲ ತಾನೆ?'

"ಅದ್ರೆ ನೋಡಿ, ಶ್ರೀಮತಿ ಗಾಂಧಿ ಕಾಂಗ್ರೆಸನ್ನು ಒಡೆದು ಮೇಲೆ ರಾಜ್ಯಕೀಯ ಬಹಿರಂಗ ಹೋರಾಟದಲ್ಲಿ ಸೋತದ್ದು ಇದೇ ಮೊದಲು."

"ಹ್ಞಾಂ....ಹಾಗೇ...."

ಇದುವರೆಗೆ ಒಂದೋ ಆಕೆ ಗೆದ್ದಿದ್ದಾರೆ; ಇಲ್ಲ; ಅಡಿಗೆ ಬಿದ್ದರೂ ಮೂಗು ಮೇಲೆ ಅಂದಿದ್ದಾರೆ. ಮುಂಬಾಗಿಲು ಮುಚ್ಚಿದರೆ, ಹಿಂಬಾಗಿಲನ್ನು ನಗ್ಗಿ ಬಂದಿದ್ದಾರೆ...;

"ಹ್ಞಾಂ...ಅದೊಂದು ಹೌದು..."

"ನೋಡಿ, ಉತ್ತರ ಪ್ರದೇಶಕ್ಕೂ ಪ್ರಧಾನಿ ಪದವಿಗೂ ಬಾರಿ ಹೊಂದಿಕೆ ಇರುತ್ತದೆ ಈ ರಾಜ್ಯದವ್ರು ಯಾರಿಗೆ ಬೆಂಬಲ ನೀಡುತ್ತಾರೋ ಅವ್ರು ದಿಲ್ಲಿ ಗದ್ದುಗೆಯಲ್ಲಿ ವಿರಾಜಮಾನರಾಗುತ್ತಾರೆ...."

"ಈ ಅಂಧಶ್ರದ್ಧೆಯನ್ನ ಶ್ರೀಮತೀಜಿ ತಮ್ಮೊಂತ ಸಾಧಿಸಿ ತೋರಿಸ್ಲಿಕೆ ಬದ್ಧ ಕಟಿತರಾಗಿದ್ದಾರೆ....'

"ಅಲ್ರಿ, ದೇವತಾ ಮನುಷ್ಯ ತ್ರಿಭುವನ ನಾರಾಯಣ ಸಿಂಗರ ಕೈಯಲ್ಲೀಗ ಡಾಳವಿದೆ...."

'ಅದು ಹೌದೊನ್ನಿ, ಆದ್ರೂ ಅವರು ಸಂಯುಕ್ತ ವಿಧಾಯಕ ದಳದ ಗೊಂಬೆ.'

"ಒಂದು ಮಾತು ನೋಡಿ. ಉತ್ತರ ಪ್ರದೇಶದಲ್ಲಿ ಈ ದಳ ಯಶಗಳಿಸಿತೆಂದರೆ, ಗಾಂಧಿ ಮಣ್ಣುಮುಕ್ಕಿದಂತೆಯೇ....'

"ಏ, ಏನಂತೀಯೂ?"

"ಹ್ಞಾಂ.... ಏನು ತಪ್ಪು?"

'ಅಲ್ವ, ಗಾಂಧಿ ಮಣ್ಣು ಮುಕ್ಕುತ್ತಾರೇಂತ........"

"ಓ ತಪ್ಪಿದೆ ನೋಡಿ, ಇಂದಿರಾ ಗಾಂಧಿ ಅಂತ ತಿದ್ದಿಕೊಳ್ಳಿ...'

"ನೋಡ, ನಿನ್ನ ಹಾಗೆಯೇ ಅವೇಶ ಸಂವಿದಳಕ್ಕೂ ಬಂದುಬಿಟ್ರೆ. ಮುಗೀತು ಅದರ ಸಮಾಧಿ!"

'ಶ್ರೀಮತಿ ಗಾಂಧಿಯದ್ದೂ ಅದೇ ವಿಚಾರ. ಹೇಗಾದ್ರೂ ಮಾಡಿ ಅದರ ಸಮಾಧಿ ಮಾಡಬೇಕೊಂತ...'

'ಅದ್ಕೆ ಒಂದು ಆಸೆ ನೋಡು. ಉ.ಪ್ರ.ದ ಮಹತ್ವವನ್ನು, ಶ್ರೀಮತೀಜಿಯವರ ಶ್ರೀಮಂತ ವಿಚಾರವನ್ನು ಅರಿತ ಕೊಂಡ ಸಂವಿದಳ ಬಹಳ ಜಾಗರೂಕವಾಗಿದ್ರೆ... ಕುಡಿಸುತ್ತದೆ ಕಷಾಯ..."

"ಮತ್ತೆ ಬಿಹಾರದಲ್ಲಿ...."

'ಅಲ್ಲೇನು? ಆಕೆಯ ಪಕ್ಷದಲ್ಲೇ ಬಿರುಕು..."

"ಅದು ಎಚ್ಚಲಾಗದಷ್ಟು ದೊಡ್ಡದು...."

"ಸರಕಾರವುರುಳಿ ಸುಪ್ರದಕ್ಕೊಂದು ಹೋಗಬೇಡೀಂತ ಕೈಮುಗಿತ..."

"ನೋಡಿ, ಅಲ್ಲಿ ಹಾಗಾಗಿ ದಾರೋಗಾ ಪ್ರಸಾದ ರಾಯ್ ಮುಳುಗೇಳುತ್ತಿರುವಾಗ ಬೆಂಗಳೂರಲ್ಲಿ ಜೋಡ ಮೇಳ....'

"ಜಂಪರೆ?"

'ಅಂದ್ರೇನು, ನೋಡಿ. ಒಂದೆಡೆ ತೆಂಗೆ ತೆರಲು ಪರಿಶ್ರಮ ಹಾಲಿ ಸಂಪರ್ಕ ಮಂತ್ರಿ ಆಡಳಿತ ಕಾಂಗ್ರೆಸ್ಸಿನ ಅಧ್ಯಕ್ಷ ಪಟ್ಟಾಗ್ರಹ ಜಗಜ್ಜೀವನರಾಮರು....ಮತ್ತೊಂದು ಕಡೆಯಲ್ಲಿ ಭಾರತ ಪ್ರಧಾನಮಂತ್ರಿ ಡಾ|| ರಾಮಸುಭಗ ಸಿಂಗರು...."

"ಓ...ಹಾಗೆ...ಅದು ಸರಿಯೇ ಅನ್ನಿ. ಆದ್ರೆ, ಜಗಜ್ಜೀವನರಾಮರು ತನ್ನ ಬಿಹಾರವನ್ನು ಬಿಟ್ಟು...."

"ಅಲ್ರಿ, ಅವರ ಇಂದಿರಾ ಗಾಂಧಿ ದಿಲ್ಲಿಯಲ್ಲಿರಲಿಲ್ಲ ನೋಡಿ.'

"ಅಂದ್ರೇನು, ಅವರು ತಮ್ಮ ಆತ್ಮವನ್ನ ಆಕೆಗೆ ಮಾರಿಬಿಟ್ಟಿದ್ದಾರೇನು?

"ಅವರೊಂತೇನು, ಅವರೆಲ್ರೂ ಹಾಗೇನೇ. ಶ್ರೀಮತಿ ಗಾಂಧಿ ಬಾಯಿಂದ ಬಂದದ್ದು ವೇದ; ಆಕೆ ಮಾಡಿದ್ದು ನೀತಿ....'

'ಹ್ಞಾಂ....ಇದೂ ಒಂದು ಅಂಧ ಶ್ರದ್ಧೆ—ಪ್ರತಿಗಾಮಿತನ...'

'ಅದ್ದರಿಂದ್ಲೇ ಬಿಹಾರದಲ್ಲಿ ಗೊಂದಲ ....ಅಲ್ಲೂ ಆಕೆ ಸೋತು ಹೋದ್ರೆ....'

'ಮತ್ತೆ ಗೆಲ್ಲುತ್ತಾರೆ....'

"ನೋಡಿ, ದಿನಗಳೆದಂತೆ ಆಕೆಯ ಸಮಾಜವಾದದ ಬಂಗಾರ ಹತ್ತು ಕ್ಯಾರೆಟ್ಟಿನದ್ದೊಂತ ಗೊತ್ತಾಗುತ್ತಿದೆ. ಜನ ಆಕೆ ತಿಳಿದುಕೊಂಡಷ್ಟು ಹೆಡ್ಡರಲ್ಲ ನೋಡಿ..."

"ಇರಬಹುದು....'

"ಇರಬಹುದು ಏನು, ಇದ್ದೇ ಇದೆ."

"ಅಲ್ಲವೆ, ನಿನಗೆ ಆಕೆಯ ಮೇಲೆ ಅಷ್ಟು ಸಿಟ್ಟೇನೊಂತ...."

'ಸಿಟ್ಟು ಇಲ್ಲಾನ್ನಿ. ಆದ್ರೆ ನೋಡಿ, ಸಂಸತ್ತು ತಿರಸ್ಕರಿಸಿದ್ದನ್ನು ಆಕೆ ಆಜ್ಞೆ ಹೊರಡಿಸಿ ಜ್ಯಾರಿಮಾಡಿದರು; ವಿದೇಶೀ ನೆಲದಲ್ಲಿ ದಸ್ತಕತ್ತು ಹಾಕಿಸಿ ಉ. ಪ್ರ.ದಲ್ಲಿ ಪ್ರ. ಸ ವನ್ನು ಕೊಂದು ಹಾಕಿದರು. ರಷ್ಯ—ಅಮೇರಿಕಗಳೆರಡರಿಂದಲೂ ದೂರ ದೂರ ಹೋಗಿ ಕೆಂಪು ಚೀನಾದ ಕುತ್ತಿಗೆಗೆ ನೇತು ಬೀಳತೊಡಗಿದ್ದಾರೆ...ನಮ್ಮ ನಿರ್ಲಿಪ್ತ ನೀತಿಯನ್ನು ಗಾಳಿಗೆ ತೂರಿ ಬಿಟ್ಟಿದ್ದಾರೆ. ಸಮಾಜವಾದ ಸ್ಲೋಗನ್ನಿನಿಂದ ಸರ್ವಜನವೇ ಕಂಗಾಲಾಗಿದೆ....'

'ನಾಳೆ ಮಾಡೇ ನಿನ್ನ ಪಟ್ಟೆಯನ್ನ ನ್ಯಾಯ ನಿಂ. ಕಾ. ಲ ನಿನ್ನನ್ನು ಬಟ್ಟೆಗೆ ಹಾಕಿಕೊಂಡಿದ್ದಾರೋ ಏನೋಂತ...'

"ಅಲ್ರಿ, ನನಗೂ ಆತ್ಮ ಇಲ್ಲವೇನು?"

"ಇದೆ ಮಹಾರಾಯತಿ, ಇದ್ದೇ ಇದೆ.'

"ಮತ್ತೆ?"

"ನೋಡು, ಮಹಾತ್ಮರು ಅಂದಿದ್ದರು—ಸ್ವಾತಂತ್ರ್ಯ ಅಂದ್ರೆ ಸ್ವೈರ ಅಲ್ಲ ಅಂತ.'

'ಯಾರು ಹಾಗೊಂತಾರೆ?'

'ಹಾಗೇನೇ ಆತ್ಮಸಾಕ್ಷಿ ಅಂದ್ರೆ ಯೆಂಡ್ಕುಡ್ಕತನಾಂತ ಅಡಹೋದ್ರೆ....'

"ಸಾಕ. ಬಿಡೀಂದ್ರೆ...ನಮ್ಮ ನಿಮ್ಮ ಮಾತನ್ನ ಬಿರುಕು....'

'ಆದ್ರಿಂದ ಈ ಸಂಗ್ತೀನ ಇಲ್ಲೇ ಬಿಟ್ಟುಬಿಡೋದು ಒಳ್ಳೆ...'

"ಹ್ಞಾಂ....'

"ಹಾಗಾದ್ರೆ....'

"ಹೀಗ್ಬನ್ನಿ....'

"ಖಾರದೇ ಉಂಟೆ?"

"ಬಂದೇ ಬರ್ಬೇಕು....'

"ಓಹೋ....'

—ಗೋರಾ

ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಆಗಾಗ್ಗೆ ಹೊಸ ಹೊಸ ಸ್ಟೋಕಿನಿಂದ
ಕೊಲಿಟಿಯಲ್ಲಿ, ಸ್ಯಾಜಿನಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂತಾ ಕೆರೆಟ ತೂಕದಲ್ಲಿ
ಬೇಕಾದವರು ಮುಂದಾಗಿ ಬಂದು ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

ದಯಮಾಡಿ
ನಿಮ್ಮ ಬಾಕಿ ಚಂದಾ
ಹಣವನ್ನು ಕಳುಹಿಸಿರಿ

ಪಾಶ್ಚಾತ್ಯರ ಅಂಧಾನುಕರಣೆ ಭೂಷಣವಲ್ಲ

ಲೇಖಕರು: ಶ್ರೀ ಎಚ್. ಎಂ. ನಾರಾಯಣ ಭಟ್ಟ.

ಪಾಶ್ಚಾತ್ಯರನ್ನು ಅನುಕರಿಸುವುದು ಪರಿಷ್ಕಾರವೆಂಬಲ್ಲಿ ವರೆಗೂ ಅಂಧವಿಶ್ವಾಸಗಳು ನಮ್ಮ ದೇಶದ ನಾಗರೀಕರಲ್ಲಿ ಬೆಳೆದು ಬರುತ್ತಿವೆ. ಆ ದೇಶಗಳ್ಲಿನ ಜನರ ನೈತಿಕ ಹಾಗೂ ಮಾನಸಿಕ ಗೊಂದಲಗಳ ಬಗ್ಗೆ ಈ ವಿಶ್ವಾಸಗಳು ಅನ್ವಯಿಸದಿರಲಿ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಜನರ ನೈತಿಕ ಮಟ್ಟ ಎಷ್ಟು ಅಧಃಪತನಗೊಂಡಿದೆಯೆಂದು ಅಲ್ಲಾಗುತ್ತಿರುವ "ವಿವಾಹ ವಿಚ್ಛೇದನ"ಗಳ ಸಂಖ್ಯೆ ಕರೆದು ಹೇಳುತ್ತಿದೆ.

ಅಮೇರಿಕಾದಲ್ಲಿ ಪ್ರತಿ 50 ಸೆಕೆಂಡಿಗೆ ಒಂದರಂತೆ ವಿವಾಹ ವಿಚ್ಛೇದನವಾಗುತ್ತಿದೆ. ಎಂದರೆ ಸುಮಾರು 2500! ವರ್ಷಂಪ್ರತಿ ಸಂಭವಿಸುತ್ತಿರುವ ವಿವಾಹಗಳು 18 ಲಕ್ಷ; ಸುಮಾರು ಮೂರರಲ್ಲಿ ಒಂದರಷ್ಟು ವಿಚ್ಛೇದನಗಳು!

ಲಾಸ್ ಏಂಜಲಸ್ ಕೌಂಟಿಯಲ್ಲಿ 1966ರಲ್ಲಿ 40,000ಕ್ಕೂ ಮಿಕ್ಕಿ ಕುಟುಂಬ ಸಂಬಂಧವಾದ ವ್ಯವಹರಣೆಗಳು ಸ್ಥಾಪಿಸಿದವು—ಪತಿ ಪತ್ನಿಯ ಮತ್ತು ಪತ್ನಿ ಪತಿಯ ವಿಮೋಚನೆಯನ್ನಪೇಕ್ಷಿಸಿ. ಆ ವರ್ಷ ಒಟ್ಟು 53,000 ವಿವಾಹಗಳಾಗಿದ್ದವು; ಈ ಪೈಕಿ ಸೇ. 77ರಷ್ಟು ವಿವಾಹ ವಿಚ್ಛೇದನಗಳು!

ಅವರೇ ಮುಂದೆ

ಕೆನಡಾ, ನೋರ್ವೆ, ಬೆಲ್ಜಿಯಂ, ನೆದರ್ಲೇಂಡ್ ಎಂಬೀ ರಾಷ್ಟ್ರಗಳಲ್ಲಿಯದಕ್ಕಿಂತ ಅಮೇರಿಕಾದಲ್ಲಿ ವಿವಾಹ ವಿಚ್ಛೇದನಗಳು ಸರಾಸರಿ ಆರು ಪಾಲೆಂದು ಲೆಕ್ಕ ಹಾಕಲಾಗಿದೆ.

ಫ್ರಾನ್ಸಿನಲ್ಲಿ ಅಮೇರಿಕಾದ ಅರ್ಧಾಂಶ. ಆಸ್ಟ್ರೇಲಿಯಾದಲ್ಲಿ ಇದಕ್ಕಿಂತ ಕಡಿಮೆ.

ಬ್ರಿಟನ್‌ನಲ್ಲಿ 1965ರಲ್ಲಿ 40,000 ವಿವಾಹಗಳು ಪರಾಜಯಗೊಂಡವು. ವಿವಾಹ ವಿಚ್ಛೇದನ ಕಾರ್ಯದಲ್ಲಿ ಬ್ರಿಟನ್ನರು ದ್ವಿತೀಯ ಜಾಗತಿಕ ಮಹಾಯುದ್ಧದ ಬಳಿಕ ಮೊದಲಿಗಿಂತ ನಾಲ್ಕು ಪಾಲು ಹೆಚ್ಚಾರ!

ಕಳೆದ ಹತ್ತು ವರ್ಷಗಳಲ್ಲಿ ಅಮೇರಿಕದಲ್ಲಿ ಸುಮಾರು ಒಂದು ಕೋಟಿ ವಿವಾಹ ವಿಚ್ಛೇದನಗಳಾದವು. 18 ವರ್ಷದೊಳಗಿನ 65 ಲಕ್ಷ ಮಕ್ಕಳು ಇದರಿಂದಾಗಿ ತಬ್ಬಲಿಗಳಾಗಿರ ಪರಿಣಮಿಸಲಾಗಿದೆ. ಇವರ ನಿತ್ಯ ದುಃಖ ಹೇಳುವುದಕ್ಕಿಂತಲೂ ಊಹಿಸ ಬಹುದೇ ಉಚಿತ. ಸಂಪತ್ತೂ ಪ್ರತಾಪವೂ ಅಲ್ಲ; ಮನುಷ್ಯತ್ವವೂ ಮನಃಶಾಂತಿಯೂ ಮಾತ್ರವೇ ಮಾನವ ಜೀವನದ ಮಾನದಂಡ.

ಸತಿಯರ ಅಸಂತೃಪ್ತಿ

ವಿವಾಹ ವಿಚ್ಛೇದನಗಳ ಈ ಕಾಗಾಲೋಟದಲ್ಲಿ ಅಸಂತೃಪ್ತ ಅಂಗನೆಯರ ಪಾತ್ರ ಪ್ರಧಾನವೆನ್ನಲಾಗಿದೆ. ಅಮೇರಿಕದ ಒಂದು ಪ್ರಸಿದ್ಧ ಪತ್ರಿಕೆ ಒಂದು ರಾಷ್ಟ್ರೀಯ ಪ್ರಶ್ನೆ ಎತ್ತಿತು:—"ಅಮೇರಿಕಾದಲ್ಲಿನ ಅಂಗನೆಯರು ಸಂತೃಪ್ತರೇ?—ಎಂದು.

ಕೇವಲ ಕೆಲವರು ಮಾತ್ರವೇ ಹೌದೆಂದು ಉತ್ತರವಿತ್ತರು. ಅಲ್ಲವೆಂಬುದಕ್ಕೇ ಉಜ್ವಲ ಬಹುಮತವಾಗಿತ್ತು.

ಇದೇ ಪತ್ರಿಕೆಯ ಪ್ರತಿನಿಧಿಗಳು ಜಗತ್ತಿನ ವಿವಿಧ ಭಾಗಗಳಲ್ಲಿ ಕೈಗೊಂಡ ಸಮೀಕ್ಷಾ ಪರದೆ ಓದುಗರ ಕುತೂಹಲವನ್ನು ಕೆರಳಿಸಿತ್ತು; ಅದೇ ಸಮಯ ಕೆಲವು ನಿಗೂಢ ವಿಚಾರಗಳೂ ಬೆಳಕಿಗೆ ಬಂದವು.

ಬ್ರಿಟನಿನಲ್ಲಿ ಸುಖದಾಂಪತ್ಯ ಜೀವನ ನಡೆಸುತ್ತಿರುವವರೆಂದು ಪರಿಗಣಿಸಲ್ಪಟ್ಟ ಅನೇಕ ಪುರುಷರೂ ತಂತಮ್ಮ ಪತ್ನಿಯರನ್ನು ದೂರುತ್ತಿದ್ದಾರೆ. ಅಷ್ಟೇ ಅಲ್ಲ—ತಾವು ಕೈಬಿಟ್ಟ ಸಂಗಾತಿಯನ್ನು ಮುಂದೆಂದೂ ದಾಂಪತ್ಯ ಜೀವನದಲ್ಲಿ ಪರಿಗ್ರಹಿಸಲಿಚ್ಛಿಸುವುದಿಲ್ಲವಾಗಿಯೂ ಸಾರಿ ಹೇಳಿದ್ದಾರೆ.

ಅಮೇರಿಕಾದಲ್ಲಿ ವಿವಾಹ ಸಂಬಂಧಗಳನ್ನೇರ್ಪಡಿಸುವ ಒಂದು ಸಂಸ್ಥೆಯ ಮುಖ್ಯಾಧಿಕಾರಿ ಹೀಗೆ ಹೇಳಿದ್ದಾಗಿ ವರದಿಯಾಗಿದೆ:—

"ಅಮೇರಿಕಾದಲ್ಲಿ ನವದಂಪತಿ ಪರಸ್ಪರ ಸಂಭಾಷಣೆಯಲ್ಲೇರ್ಪಡುವುದೇ ವಿರಳ.... ಇದೇ ನಮ್ಮ ವೈವಾಹಿಕ ಜೀವನದ ಪ್ರಥಮವೂ ಪ್ರಧಾನವೂ ಆದ ಸಮಸ್ಯೆ...."

ಪರಸ್ಪರ ಭೋಗ ಸಂತೃಪ್ತಿ ಹೊಂದಲು ಪತಿ-ಪತ್ನಿಯರಿಗೆ ಸಾಧ್ಯವಾಗದ ವ್ಯಾಧಿಯೆ ಹಲವರನ್ನೂ ಬಾಧಿಸುತ್ತಿರುವುದಾಗಿ ಲೋಸ್‌ಏಂಜಲ್ಸ್‌ನ ಒಂದು ವಿವಾಹ ವ್ಯವಸ್ಥಾ ಸಂಸ್ಥೆಯ ಮುಖ್ಯಾಧಿಕಾರಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ವಂಚಿತ ಪತ್ನಿಯರು

ಇತ್ತೀಚೆಗೆ "ಯುನೆಸ್ಕೊ"(UNESCO) ಕೈಗೊಂಡಿದ್ದ ಒಂದು ಲೆಕ್ಕದನ್ವಯ ಅಮೇರಿಕಾ ಮತ್ತು ಯೂರೋಪಿನ ವಿವಾಹಿತರಾದ ಸ್ತ್ರೀಯರಲ್ಲಿ ಸೇ. 60 ರಷ್ಟು ವಂಚಿತರೂ ಅಸಂತೃಪ್ತರೂ ಆಗಿದ್ದರು. ಪುರುಷರು ಎಳೆ ವಯಸ್ಸಿನಲ್ಲಿ ಆರೋಗ್ಯರಕ್ಷಣೆಯ ಕಡೆಗೆ ಸಾಕಷ್ಟು ಗಮನ ಕೊಡದಿದ್ದುದರಿಂದಾಗಿ ತಮ್ಮನ್ನು ಸಂತೃಪ್ತಿಗೊಳಿಸಲು ಅಸಮರ್ಥರಾಗಿದ್ದಾರೆಂದು ಅವರ ಅಭಿಪ್ರಾಯ. ಚಿಕ್ಕಂದಿನಲ್ಲಿಯೇ ಲೈಂಗಿಕ ಚಾಳಿಗಳಲ್ಲೇರ್ಪಟ್ಟ ಜನಾಂಗದ ದುಸ್ಥಿತಿಗಳ ಬಗ್ಗೆ ಸಹತಾಪ ಹೊಂದುವುದು ಮಾತ್ರವೇ ಮತ್ತೆ ಉಳಿದದ್ದು!

ಬಾಲ್ಯ ವಿವಾಹವೂ ವಿವಾಹ ವಿಚ್ಛೇದನಗಳಿಗೆ ಒಂದು ಕಾರಣ. 20 ವಯಸ್ಸು ಮೀರಿದ ದಂಪತಿಗಳಲ್ಲಾಗುವ ವಿವಾಹ ವಿಚ್ಛೇದನಗಳಿಗಿಂತಲೂ ಕಡಿಮೆ ವಯಸ್ಸಿನ ದಂಪತಿಯರಲ್ಲಿನ ವಿಚ್ಛೇದನದ ಅನುಪಾತ ಕಡಿಮೆ.

ವಿವಾಹಕ್ಕೂ ಮುಂಚಿತವಾಗಿಯೇ ಗರ್ಭಧಾರಣೆ ಮಾಗಿ ಮತ್ತೆ ದಾಂಪತ್ಯ ಜೀವನ ಸಾಗಿಸುವ ಪ್ರಸಂಗಗಳಲ್ಲಂತೂ ವಿವಾಹ ವಿಚ್ಛೇದನದ ಅನುಪಾತ ಬಹಳ ಹೆಚ್ಚು. ಕೆಲವು ಸಂದರ್ಭಗಳಲ್ಲಿ ಪರಸ್ಪರ ವಿವಾಹಿತರಾಗಲು ನಿರ್ಬಂಧಿತರಾಗಿ ಅಸಹಾಯಕ ಪರಿಸ್ಥಿತಿಯಲ್ಲಿ ದಂಪತಿಗಳಾದಾಗ ಆ ಸಂಬಂಧ ತಾತ್ಕಾಲಿಕವಾಗಿರುವುದರಲ್ಲಿ ಆಶ್ಚರ್ಯವಿರದು.

ಅಮೇರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ವಿವಾಹಿತರಾಗುವ ವಧೂವರರಲ್ಲಿ ಸೇ. 40ರಷ್ಟು 15ರಿಂದ 18ರೊಳಗಿನ ಪ್ರಾಯ ಪರಿಧಿಯ ಯುವತಿಯರು! ಇವರಿಗೆ ವಿವಾಹದ ಮುನ್ನ ಕೇವಲ ಒಂದು ವರ್ಷದ ಪರಸ್ಪರ ಪ್ರೇಮ ಪರಿಚಯ ಮಾತ್ರವಂತೆ! ಇಷ್ಟು ಅಲ್ಪಾವಧಿಯ ಪರಸ್ಪರ ಪರಿಚಯವೇ ಇವರ ವಿಚ್ಛೇದನಗಳಿಗೆ ಕಾರಣವೆನ್ನುವವರೂ ಆ ದೇಶದಲ್ಲಿದ್ದಾರೆ.

ವಿವಾಹ ಮಂಟಪದಲ್ಲಿ ಮಾತ್ರವೇ ಹೊಸದಾಗಿ ಕಾಣುವ ವಧೂವರರು ನಮ್ಮ ದೇಶದಲ್ಲಿ ಜೀವನವಿಡೀ ದಂಪತಿಗಳಾಗಿ ರಮ್ಯ ಜೀವನ ನಡೆಸುತ್ತಿರುವ ವಿಚಾರ ಪಾಶ್ಚಾತ್ಯರಿಗೆ ಆದ್ಭುತಕರವಾಗಿದೆ.

ಮಿಕ್ಕವರ ಪಾಡು

ಈ ಸೇ. 40 ಮಂದಿಯನ್ನು ಬಿಟ್ಟರೆ ಮಿಕ್ಕವರ ಪಾಡೂ ಉಜ್ವಲ್ಸದ! ವಿವಾಹ ಪೂರ್ವ ಗರ್ಭಧಾರಣೆಯ ಪರಿಣಾಮವಾಗಿಯೇ ವಿವಾಹಗಳಲ್ಲಿ ಹೆಚ್ಚಿನವೂ! ಮದುವೆಯಾಗಿ ಐದು ವರ್ಷಗಳೊಳಗೆ ಸೇ. 50 ವಿಚ್ಛೇದನವಾಗಿರುವುದು. ಉಳಿದ ದಂಪತಿಗಳು ನಿತ್ಯ ದುಃಖದಿಂದ ಕಣ್ಣೀರ ಹೊಳೆ ಹರಿಸುವವರೂ!

ಓವರ್ "ಡೊಮೆಸ್ಟಿಕ್ ರಿಲೇಶನ್ಸ್" ನ್ಯಾಯಾಧೀಶರ ಅಭಿಪ್ರಾಯ ಹೀಗೆ:—

"ಬಾಲ್ಯ ವಿವಾಹಗಳಿಗೆ ಯಾವ ವಿಧದಲ್ಲೂ ವಿಜಯ ಸಾಧ್ಯತೆಯಿಲ್ಲ.... ಸೇ. 90ರಷ್ಟು ಇವು ಪರಾಭವಗೊಳ್ಳುವವು....ಪ್ರಾಯಪೂರ್ತರಾಗದವರೂ ಮಾನಸಿಕ ದೃಢತೆಯಿಲ್ಲದವರೂ ಆದ ಎರಡು ವಿಭಾಗಗಳು....ಒಂದು ಗಂಡು-ಒಂದು ಹೆಣ್ಣು...ಅವರು ಪರಸ್ಪರ ಸಂಧಿಸುತ್ತಾರೆ.... ಸಮೀಪಿಸುತ್ತಾರೆ.... ಸ್ನೇಹಿಸುತ್ತಾರೆ.... ಕೆಲವೊಮ್ಮೆ ಯುವತಿ ಗರ್ಭಿತೆಯಾಗುತ್ತಾಳೆ....ಇಬ್ಬರೂ ಸಮಾಜಕ್ಕೆ ನಿರ್ಬಂಧವಾಗಿ ತಳ್ಳಲ್ಪಡುತ್ತಾರೆ....ಸಮಾಜದಲ್ಲಿ ರಕ್ಷಕರಿಗಿಂತಲೂ ಕಠಿಣವಾಗಿ ಹೇರಲ್ಪಡುವ ಶಿಕ್ಷೆ ಮತ್ತು ಸಂಪ್ರದಾಯ.... ಪರಿಣಾಮವಾಗಿ ನಿರ್ಬಂಧಿತ ವಿವಾಹ.... ಈ ಬಗೆಯ ವಿವಾಹ ಪರಾಭವಗೊಂಡರೆ ಅದ್ಭುತಗೊಳ್ಳಲೇನಿದೆ?"

ಮೇಲೆ ಹೇಳಿದಂತೆ ಪರಸ್ಪರ ಪ್ರೀತಿಸಿ ಸಮೀಪಿಸಿದ ಯುವಕ ಯುವತಿಯರೆಲ್ಲರೂ ವಿವಾಹಿತರಾಗುವುದೂ ಇಲ್ಲ. ಯುವ ಜನಾಂಗದ ಈ ಚಾಳಿ ಅನಿಯಂತ್ರಿತವಾಗಿ ಸಾಗುತ್ತಲೇ ಇರುತ್ತದೆ.

ಹೇಗಿದೆ?—ಪಾಶ್ಚಾತ್ಯ ನೈತಿಕಮಟ್ಟ!

ಅವಿವಾಹಿತೆಯರ ಪ್ರಸವ

1943ರ ನಂತರ ಅವಿವಾಹಿತೆಯರ ಪ್ರಸವಗಳ ಅನುಪಾತ ಹೆಚ್ಚಿದೆ.

ಅಮೇರಿಕಾದಲ್ಲಿ ಸಾಧಾರಣವಾಗಿ ವರ್ಷಕ್ಕೆ ಮೂರು ಲಕ್ಷ "ತಂದೆಯಿಲ್ಲದ ಮಕ್ಕಳು" ಜನಿಸುತ್ತಾರೆ. ಅಥವಾ ಅಲ್ಲಿ ಆಗುವ ಒಟ್ಟು ಜನನಗಳ ಸೇ. 10ರಷ್ಟು ಈ ಬಗೆಯ ಪ್ರಸವಗಳು! ಈ ಸಂಖ್ಯೆಯ ಪೈಕಿ ಅರ್ಧದಷ್ಟು 20ವಯಸ್ಸಿಗೂ ಕಡಿಮೆ ಪ್ರಾಯದ ಯುವತಿಯರ ಪ್ರೇಮಫಲ!

ಆ ದೇಶದಲ್ಲಿ ಯುವಕರಿಗೊಬ್ಬೊಬ್ಬ "ಗರ್ಲ್ ಫ್ರೆಂಡ್"ಗಳ ಅವಾಂತರವಿದೆ!

ಗುಹ್ಯ ರೋಗಗಳೂ!

ಎಲ್ಲದಕ್ಕಿಂತಲೂ ಲಜ್ಜಾಸ್ಪದ-ಆದದ್ದು ... ದಲ್ಲಿ ತಾಂಡವನೃತ್ಯದಲ್ಲೇರ್ಪಟ್ಟು ವ್ಯಾಪಿಸುವ ಗುಹ್ಯರೋಗಗಳು.

ಅಮೇರಿಕದ ಮೆಡಿಕಲ್ ಅಸೋಸಿಯೇಶನ್‌ನ ಅಭಿಪ್ರಾಯದಂತೆ ದಿನಕ್ಕೆ ಸರಾಸರಿ 1500ಕ್ಕೂ ಮಿಕ್ಕಿ ಗುಹ್ಯರೋಗ ಬಾಧಿತ ಯುವಕ ಯುವತಿಯರಂತೆ ಹೆಚ್ಚುತ್ತಿದ್ದಾರೆ. ಯು. ಎಸ್. ಎ. ಯಲ್ಲಿ 6 ಲಕ್ಷಕ್ಕೂ ಬ್ರಿಟನ್ನಲ್ಲಿ 2 ಲಕ್ಷಕ್ಕೂ ಮಿಕ್ಕಿ ಗುಹ್ಯ ರೋಗಿಗಳು ಯುವಕ ಯುವತಿಯರಿರುವರೆನ್ನಲಾಗಿದೆ.

—ಸಂಗ

(ದೀಪಾವಳಿ ಸಂಚಿಕೆಗೆ ಬಂದುದು)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
126 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¼% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸ್:– ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ. ೧೧.

ದಯಾಸಾಗರ ಶ್ರೀ ವಿದ್ಯಾಸಾಗರ

ಹತ್ತೊಂಬತ್ತನೆಯ ಶತಮಾನದ ಭಾರತ ವಿಭೂತಿಗಳಲ್ಲಿ ಶ್ರೀ ಈಶ್ವರಚಂದ್ರ ವಿದ್ಯಾಸಾಗರರೂ ಒಬ್ಬರು. ಬಂಗಾಳದ [illegible]ಗಿದ್ದ ಶ್ರೀ ವಿದ್ಯಾಸಾಗರರು ದಯಾಸಾಗರರೂ ಹೌದು. ಭಾರತೀಯ ಸಂಸ್ಕೃತಿಯ ದೀಪವನ್ನು ಎತ್ತಿಹಿಡಿದು, ಸಮಾಜದ ತಪ್ಪು ಕಲ್ಪನೆಗಳನ್ನು ದೂರ ಮಾಡಿ ಅದಕ್ಕೆ ಸರಿದಾರಿಯನ್ನು ತೋರಿಸಲು ಅವರು ತಮ್ಮ ಜೀವನವನ್ನೇ ಮುಡುಪಿಟ್ಟರು. ಸಾಹಿತ್ಯ-ಸಮಾಜಗಳಿಗೆ ಅವರು ಸಲ್ಲಿಸಿದ ಸೇವೆ ಅವಿಸ್ಮರಣೀಯ.

ಸಾಹಿತ್ಯಕ್ಕೆ ಹೊಸ ತಿರುವು

ಈಶ್ವರಚಂದ್ರ ವಿದ್ಯಾಸಾಗರ—ಆಧುನಿಕ ಬಂಗಾಳಿ ಭಾಷೆಯ ಸರ್ವಪ್ರಥಮ ಶಿಲ್ಪಿ. ಇವರಿಗೆ ಮೊದಲೇ ಬಂಗಾಳಿ ಭಾಷೆಯಲ್ಲಿ ಗದ್ಯರಚನೆಗೆ ಆರಂಭವಾಗಿತ್ತು; ಆದರೆ ಶ್ರೀ ವಿದ್ಯಾಸಾಗರರು ಆ ಗದ್ಯವನ್ನು ಕಲಾತ್ಮಕಗೊಳಿಸಿ ಪರಿಪುಷ್ಟವನ್ನಾಗಿ ಮಾಡಿದರು. ಭಾಷೆಯ ಉದ್ದೇಶ್ಯ ಅಭಿಪ್ರಾಯ ವಿನಿಮಯವಾದರೂ ಅದುವೇ ಭಾಷೆಯ ಏಕಮೇವ ಉದ್ದೇಶ್ಯವಲ್ಲ. ಭಾವಸ್ಫುಟತೆಯು ಒಂದು. ಆಧಾರ ಭಾಷೆ [illegible] ಚರಮವಲ್ಲ. ಹೀಗೆ ಈಗಿನ ಮಣಿ ಹಲವಾರು ವಿಷಯಗಳನ್ನು ತುಂಬಿಸಿ ಬಿಡುವುದರಿಂದಲೇ ಭಾಷೆಯ ಉಪಯೋಗ ಪೂರ್ತಿಯಾಗಲಿಲ್ಲ. ಅಭಿವ್ಯಕ್ತವಾಗುವ ಭಾವನೆಗಳನ್ನು ಸರಳ, ಸುಂದರ ಮತ್ತು ಸುಸಂಬದ್ಧವಾಗಿ ನಿರೂಪಿಸುವ ಆಗತ್ಯವನ್ನು ಶ್ರೀ ವಿದ್ಯಾಸಾಗರರು ಎತ್ತಿತೋರಿಸಿದರು. ಭಾವಪುಷ್ಟಿಯೊಡನೆಯೇ ಕಲಾಪಕ್ಷವೂ ಸಾಹಿತ್ಯಾಂಗದಲ್ಲಿ ಮೆರೆವ ಅಂಗವೆಂದು ಅವರ ಅಭಿಪ್ರಾಯ. ಮಾನವತೆಯ ವಿಕಾಸಕ್ಕೆ ಸಾಮಾಜಿಕ ಬಂಧನವಿರುವಂತೆಯೇ ಭಾಷೆಗೆ ಕಲಾಬಂಧನವಿರಬೇಕು; ಇದರಿಂದಲೇ ಭಾಷೆಯು ಸುಂದರ ರೂಪದಿಂದ ನಿಯಂತ್ರಿತವಾಗಿ ಮುಂದುವರಿಯುವುದು. ಇಲ್ಲವಾದರೆ, ಭಾಷೆಯು ಪ್ರಕೃತಿ ಸಹಜ ಸಾಹಿತ್ಯ ಕೃತಿಗಳನ್ನು ನಿರ್ಮಿಸುವಲ್ಲಿ ಅಶಕ್ತವೆನಿಸುವುದು ಎಂದು ಶ್ರೀ ವಿದ್ಯಾಸಾಗರರು ಹೇಳಿದ್ದಾರೆ. ಆದರೆ, ಇಂದಿನ ದಿನಗಳಲ್ಲಿ ಇದರ ಬೆಲೆ ಕಡಿಮೆಯಾಗುತ್ತಿದೆ.

ಒಂದು ಕಾಲದಲ್ಲಿ ಬಂಗಾಳಿ ಸಾಹಿತ್ಯದ ಭಾಷೆಯು ದೊಡ್ಡ ದೊಡ್ಡ ಸಮಾಸ ಶಬ್ದಗಳ ಭಾರದಿಂದ ಬಗ್ಗಿ ಹೋಗಿತ್ತು. ಈ ಭಾರ ಅಸ್ವಾಭಾವಿಕವೂ ಆಡಂಬರಯುಕ್ತವೂ ಅನಗತ್ಯವೂ ಆಗಿತ್ತು. ಶ್ರೀ ವಿದ್ಯಾಸಾಗರರು ಅನವಶ್ಯ ಭಾರವನ್ನು ಇಳಿಸಿದರು; ಭಾಷೆಯನ್ನು ಮುಕ್ತಗೊಳಿಸಿದರು; ಅದನ್ನು ವ್ಯವಹಾರ ಯೋಗ್ಯವಾಗಿ ನಿರೂಪಿಸಿದರು. ಗದ್ಯ ಪದಗಳಲ್ಲಿ ಧ್ವನಿ ಸಾಮಂಜಸ್ಯವನ್ನು ಸ್ಥಾಪಿಸಿದರು; [illegible]ಗಳಲ್ಲಿ [illegible] ರಕ್ಷಿಸಿದರು; ಸೌಮ್ಯ ಮತ್ತು ಸರಳ ಶಬ್ದ ಸಂಚಯ [illegible] ಬಂಗಾಳಿ ಗದ್ಯಕ್ಕೆ ಅನುಪಮ ಸೌಂದರ್ಯವನ್ನು ತುಂಬಿಕೊಟ್ಟರು; ಅದನ್ನು [illegible] ಪರಿಮಾರ್ಜಿತಗೊಳಿಸಿದರು. ಗ್ರಾಮ್ಯಪಾಂಡಿತ್ಯ ಮತ್ತು ಗ್ರಾಮ್ಯ ಬರ್ಬರತೆಗಳ ಹಾವಳಿಯಿಂದ ಬಂಗಾಳಿ ಸಾಹಿತ್ಯವನ್ನು ಎತ್ತಿ ಅದನ್ನು ಪ್ರಪಂಚದ ಭದ್ರಸಮಾಜೋಪಯೋಗಿ ಆರ್ಯಭಾಷೆಯನ್ನಾಗಿ ರೂಪಿಸಿದರು ಶ್ರೀ ವಿದ್ಯಾಸಾಗರರಿಗೆ ಮೊದಲಿನ ಬಂಗಾಳಿ ಗದ್ಯವನ್ನು ನೋಡುವಾಗ, ಅವರು ಭಾಷೆಗೆ ನವೀನ ರೂಪ ನೀಡುವಲ್ಲಿ ಎಷ್ಟು ಶ್ರಮಿಸಿದರೆಂಬುದನ್ನು ಊಹಿಸಬಹುದು.

ಬಿಡುವಿಲ್ಲದ ಪರಿಶ್ರಮ

ಶ್ರೀ ಠಾಕೂರದಾಸ ವಂದ್ಯೋಪಾಧ್ಯಾಯರು ಶ್ರೀ ವಿದ್ಯಾಸಾಗರರ ಪರಮಪೂಜ್ಯ ತಂದೆಯವರು. ಅವರ ಹದಿನಾಲ್ಕು-ಹದಿನೈದನೆಯ ವಯಸ್ಸಿನಲ್ಲಿ ತಾಯಿ ದುರ್ಗಾದೇವಿಯವರು ಚರಖಾದಲ್ಲಿ ನೂತು, ಹನ್ನೆರಡು ಗಂಡು ಹುಡುಗರು ಮತ್ತು ನಾಲ್ಕು ಹೆಣ್ಣು ಹುಡುಗಿಯರನ್ನು ಸಾಕುತ್ತಿದ್ದರು. ಇದನ್ನು ಕಂಡ ಠಾಕೂರದಾಸರು ಉದ್ಯೋಗವರಸಿಕೊಂಡು ಕಲಕತ್ತೆಗೆ ಹೊರಟು ಹೋದರು. ಅವರಲ್ಲಿ ಅರೆಹೊಟ್ಟೆಯಲ್ಲಿದ್ದುಕೊಂಡು ಕೊಂಚ ಇಂಗ್ಲಿ ಭಾಷೆಯನ್ನು ಕಲಿತರು. ಇದರ ಬಲದಿಂದ ಅವರು ಮೊದಲುಮೊದಲಿಗೆ ತಿಂಗಳಿಗೆ ಎರಡು ರೂಪಾಯಿಗಳನ್ನೂ ಕೆಲಕಾಲಾನಂತರ ಐದು ರೂಪಾಯಿಗಳನ್ನೂ ಗಳಿಸತೊಡಗಿದರು. ೨೩—೨೪ರ ವಯಸ್ಸಿನಲ್ಲಿ ಶ್ರೀ ಠಾಕೂರದಾಸರು ಭಗವತೀ ದೇವಿಯನ್ನು ವಿವಾಹವಾದರು. ಈಕೆಯೇ ಶ್ರೀ ವಿದ್ಯಾಸಾಗರರ ಪೂಜ್ಯ ಮಾತೆ. ಶ್ರೀ ವಿದ್ಯಾಸಾಗರರು ಎಳೆತನದಲ್ಲಿ ತಂದೆಯ ಮಾತನ್ನು ಮೀರಿ ನಡೆಯುತ್ತಿದ್ದರು; ಆದರೆ, ತನ್ನ ಓದುಬರಹದಲ್ಲಿ ಅವರೆಂದೂ ಉದಾಸೀನತೆಯನ್ನು ತೋರಿಸಲಿಲ್ಲ.

ಶ್ರೀ ವಿದ್ಯಾಸಾಗರರು ರಾತ್ರಿ ಹತ್ತು ಗಂಟೆಗೆ ಮಲಗುತ್ತಿದ್ದರು. ಎರಡು ಗಂಟೆಯ ಬಳಿಕ ಅವರನ್ನು ತಂದೆ ಎಬ್ಬಿಸುತ್ತಿದ್ದರು. ಆ ಮೇಲೆ ಕುಳಿತು ಓದುವುದೇ ಶ್ರೀ ವಿದ್ಯಾಸಾಗರರ ಕೆಲಸ. ಮನೆಗೆಲಸವೂ ಬೇಕಾದಷ್ಟಿತ್ತು. ಮನೆಯಲ್ಲಿ ತಂದೆ ಮತ್ತು (ಚಿಕ್ಕಪ್ಪನ ಮಕ್ಕಳು) ತಮ್ಮಂದಿರಿಬ್ಬರಿದ್ದರು. ಆಳು-ಕಾಳುಗಳಿರಲಿಲ್ಲ. ಎರಡು ಹೊತ್ತು ಅಡುಗೆಯ ಎಲ್ಲ ಕೆಲಸವು ಶ್ರೀ ವಿದ್ಯಾಸಾಗರರ ತಲೆಯ ಮೇಲಿತ್ತು. ಅವರು ಮುಂಜಾನೆ ಗಂಗಾನದಿಯಲ್ಲಿ ಸ್ನಾನ ಮಾಡುತ್ತಿದ್ದರು. ಅಲ್ಲಿಂದ ಕಾಶೀನಾಥ ಬಾಬುಗಳ ಅಂಗಡಿಗೆ ಹೋಗುತ್ತಿದ್ದರು. ಕಾಳು-ಕಡಿ ಕೊಂಡು ತರುತ್ತಿದ್ದರು. ಒಲೆಗೆ ಬೆಂಕಿ ಹಾಕಿ, ಮಸಾಲೆ ಅರೆದು ಊಟದ ಸಕಲ [illegible] ಮಾಡುತ್ತಿದ್ದರು. ಅದು ಮುಗಿದ ಬಳಿಕ ಪಾತ್ರೆಪರಡಿ ತೊಳೆದಿಟ್ಟ ವೇಳೆಯೇ ಓದಲು ಬಿಡುವು. ಅಡುಗೆ ಮಾಡುವಾಗಲೂ, ಶಾಲೆಯ ದಾರಿ ಮೆಟ್ಟುತ್ತಿರುವಾಗಲೂ ಅವರು ಪುಸ್ತಕವೋದುವ ಚಟವಿಟ್ಟುಕೊಂಡಿದ್ದರು.

ದಯಾಸಾಗರ

ಮನುಷ್ಯನು ಎಳವೆಯಲ್ಲಿ ಬೇರೆಯವರ ದಯೆಗೆ ಪಾತ್ರನಾಗುವುದು ಸಹಜ. ಆದರೆ, ವಿದ್ಯಾಸಾಗರರು ಈ ಪ್ರಾಯದಲ್ಲೇ ಬೇರೆಯವರ ಮೇಲೆ ದಯೆದೋರುತ್ತಿದ್ದರು. ಈ ಗ್ರಾಮೀಣ ಬಾಲಕನು ತನ್ನ ಕೃಶ ಶರೀರ ಮತ್ತು ಮೇಧಾವಿ ಮೆದುಳಿನೊಡನೆ 'ವಿದ್ಯಾಸಾಗರ'ನೆಂಬ ಪದವಿಯನ್ನು ಗಳಿಸಿದರು. ಮುಂದೆ ಈ ಪದವಿಯೇ ಶ್ರೀ ಈಶ್ವರಚಂದ್ರರ ಹೆಸರಿನ ಒಂದು ಅವಿಭಾಜ್ಯ ಅಂಗವೆನಿಸಿತು; ಶ್ರೀ ಈಶ್ವರಚಂದ್ರರು ಬಡವರು; ನಿರ್ಧನರು. ಅವರು ಬೇರೆಯವರ ಮೇಲೆ ದಯೆದೋರಲು ದಾನಮಾಡುವುದಾಗಲೀ ಸುಲಭದ ಕೆಲಸವಿರಲಿಲ್ಲ. ಅವರು ಜೀವನದ ದ್ವಂದ್ವ ನಾನಾಕರದ ಪರಿಸ್ಥಿತಿಗಳನ್ನು [illegible]; ಆದರೂ ಈ ವೇಳೆಯಲ್ಲಿ ತನ್ನ ಕಷ್ಟ—ಕಾರ್ಪಣ್ಯಗಳ ಕಡೆಗೆ ಅವರು ಬಹುವಾಗಿ ಚಿಂತಿಸದೆ, ಪರೋಪಕಾರನಿರತರಾಗೇ ಇದ್ದರು. ಶ್ರೀಮಂತರಲ್ಲಿ ಶ್ರೀಮಂತರಾದವರಿದ್ದಾರೆ; ಸಾಗರದ [illegible] ದಾನ-ಧರ್ಮಗಳನ್ನು ಮಾಡಿದವರೂ ಇದ್ದಾರೆ. ಆದರೆ, ಅವರಿಗೂ ಮಿಗಿಲಾಗಿ ದಾನ-ದಯೆಗಳಲ್ಲಿ ಶ್ರೀ ವಿದ್ಯಾಸಾಗರರು ತೊಡಗಿದ್ದಾರೆ; ಈ ಬಡ ತಂದೆಯ ಬಡಮಗನು ಬಂಗಾಳದಲ್ಲಿ 'ದಯಾಸಾಗರ'ನೆಂದು ಹೆಸರುಗಳಿಸಿದ್ದಾನೆ! ಇದಕ್ಕಿಂತ ದೊಡ್ಡ ಸೋಜಿಗ ಬೇರೇನು ಬೇಕು?

ಗೌರವ ರಕ್ಷೆ

ಕಾಲೇಜಿನಿಂದ ಪದವಿಗಳಿಸಿದ ಶ್ರೀ ಈಶ್ವರ ಚಂದ್ರರು ಮೊದಲಿಗೆ ಫೋರ್ಟ್ ವಿಲಿಯಂ ಕಾಲೇಜಿನಲ್ಲಿ ಪ್ರಧಾನಾಚಾರ್ಯರಾದರು; ಮುಂದೆ ಸಂಸ್ಕೃತ ಕಾಲೇಜಿನಲ್ಲಿ ಸಹಾಯಕ ಕಾರ್ಯದರ್ಶಿಯ ಪದ ಅವರನ್ನು ಸ್ವಾಗತಿಸಿತು. ಆ ಕಾಲ ಬಹಳ ವಿಲಕ್ಷಣವಾಗಿತ್ತು. ನಮ್ಮ ಜನರು ದೇಶದ ಗೌರವ— ಪ್ರತಿಷ್ಠೆ—ಮರ್ಯಾದೆಗಳ ಕಡೆಗೆ ಕಡಿಮೆ ಗಮನ ಹರಿಸುತ್ತಿದ್ದರು; ಬಿಳಿಯರ ಎಳ್ಳಿನಷ್ಟು ಅನುಗ್ರಹಕ್ಕಾಗಿ ದೇಶದ ಹಿಮಾಲಯದಷ್ಟು ಗೌರವವನ್ನು ಬಲಿ ನೀಡಲು ಹಿಂದೆ ಮುಂದೆ ನೋಡುತ್ತಿರಲಿಲ್ಲ. ಈ ಹೀನ ಮನೋವೃತ್ತಿಯ ಮುಂದೆ ತಲೆ ಬಾಗದೆ ದೇಶದ ಗೌರವ—ಪ್ರತಿಷ್ಠೆಗಾಗಿ ಹೋರಾಡಿದ ವ್ಯಕ್ತಿ ಶ್ರೀ ದಯಾಸಾಗರರು. ಬಿಳಿಯರಿಂದ ಬಹುಮಾನಿತರಾಗಲು ಅವರು ಎಂದೂ ತನ್ನ ತಲೆ ಬಾಗಿಸಿದವರಲ್ಲ.

ವಿಧವಾ ವಿವಾಹ

ಒಂದು ದಿನ ಈಶ್ವರ ಚಂದ್ರ ವಿದ್ಯಾಸಾಗರರ ತಾಯಿ ಅಳುತ್ತಳುತ್ತ ಅವರಲ್ಲಿಗೆ ಬಂದರು. ಒಬ್ಬಾಕೆ ಬಾಲಿಕೆಯ ವೈಧವ್ಯದ ಬಗ್ಗೆ ಮಾತಾಡುತ್ತ, ಆಕೆಯೆಂದರು—"ಇಷ್ಟು ದಿನಗಳಿಂದ ನೀನು ಶಾಸ್ತ್ರವನ್ನೋದುತ್ತಿದ್ದೀಯಾ. ವಿಧವೆಯರ ದುಃಖ [illegible] ದಿವ್ಯಪಥ ನಿನ್ನ ಶಾಸ್ತ್ರಗಳು ನಿರೂಪಿಸಿಲ್ಲವೆ?" ತಾಯಿಯ ಈ ಪ್ರಶ್ನೆಯಿಂದ ವಿದ್ಯಾಸಾಗರರು ವಿಹ್ವಲರಾದರು; ಅವರ ಮುಖ ಗಂಭೀರವಾಯಿತು. ಅಂದಿನಿಂದಲೇ ಅವರು ವಿಧವಾ ವಿವಾಹದ ಪ್ರಬಲ ಸಮರ್ಥಕರಾದರು; ಅದರ ಪ್ರಚಾರಕ್ಕೆ ತೊಡಗಿದರು.

ಇದರಿಂದ ದೇಶದ ಸಂಪ್ರದಾಯ ಶರಣರು ರೊಚ್ಚಿಗೆದ್ದರು; ಕೋಲಾಹಲವೆದ್ದಿತು. ಸಂಸ್ಕೃತದ ಶ್ಲೋಕ—ಬಂಗಾಲದ ನಿಂದೆಗಳಿಂದ ದಿಕ್ಕುದಿಕ್ಕುಗಳೂ ಪ್ರತಿಧ್ವನಿಸತೊಡಗಿದುವು. ವಿಧವಾ ವಿವಾಹವೂ ಶಾಸ್ತ್ರಸಮ್ಮತವೆಂದು ಸ್ಥಿರಪಟ್ಟಿತು. ಹಾಗೇ ನಿಂತುಕೊಂಡು ಶ್ರೀ ವಿದ್ಯಾಸಾಗರರೂ ಒಂದೆರಡು ವಿಧವಾ ವಿವಾಹಗಳನ್ನು ಮಾಡಿಸಿದರು. ಸಮಾಜದ ಪ್ರಬಲ ವಿರೋಧದ ಹಿನ್ನೆಲೆಯಲ್ಲಿ ಒದಗಬಹುದಾದ ಗಂಡಾಂತರಗಳನ್ನೆದುರಿಸಲು ಸರಕಾರದ ನೆರವು ಕೋರಿದ್ದೂ ಉಂಟು. ಇದು ಇಂದು ನಿನ್ನೆಯ ಕತೆಯಲ್ಲ; ಶತಮಾನದಷ್ಟು ಹಿಂದಿನದ್ದು. ಅಂದಿನಿಂದ ಇಂದಿಗೆ ಹಲವಾರು ಪರಿವರ್ತನೆಗಳನ್ನು ಸಮಾಜ ಕಂಡಿದೆ. ವಿಧವಾ ವಿವಾಹಗಳೂ ಆ[illegible]ರೂಪಕ್ಕೆ ಬರುತ್ತಿವೆ; ಆದರೆ ಇವರನ್ನು ಮನ್ನಿಸುವಷ್ಟು ಉದಾರತೆಯನ್ನು ಸಮಾಜ ಪೂರ್ಣ ಮನಸ್ಸಿನಿಂದ ತೋರಿಸುತ್ತಿಲ್ಲ.

ವಿಧವಾ ವಿವಾಹದ 'ಗೊಂದಲ'ದ ವೇಳೆಯಲ್ಲೇ ಶ್ರೀ ವಿದ್ಯಾಸಾಗರರು ಮತ್ತೊಂದು ಹೋರಾಟದಲ್ಲಿ ಸಫಲರಾದರು. ಅಂದಿನ ದಿನಗಳಲ್ಲಿ ಸಂಸ್ಕೃತ ಕಾಲೇಜಿನ ಬಾಗಿಲುಗಳು ಬ್ರಾಹ್ಮಣರಿಗೆ ಮಾತ್ರ ತೆರೆಯುತ್ತಿದ್ದುವು; ಬ್ರಾಹ್ಮಣೇತರರಿಗೆ ಸದಾ ಮುಚ್ಚುತ್ತಿದ್ದುವು. ಶ್ರೀ ವಿದ್ಯಾಸಾಗರರ ಪ್ರಯತ್ನದಿಂದ ಈ ಬಾಗಿಲುಗಳು ಎಲ್ಲ ಜ್ಞಾನ ಪಿಪಾಸುಗಳಿಗೂ ತೆರೆ

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 28337
2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಬೆಂಕಿ ಬಿದ್ದಿದೆ ಮನೆಗೆ

'ದೇವಕಿನಂದನ', ಭದ್ರಾವತಿ

ಲುಸಾಕದಲ್ಲಿ ಅಲಿಪ್ತ ರಾಷ್ಟ್ರಗಳು ತಮ್ಮ ಅಲಿಪ್ತ ನೀತಿಗೆ ತಿಲಾಂಜಲಿಯನ್ನಿತ್ತುವು. ಅಮೆರಿಕೆಯನ್ನು ನಿಂದಿಸಿ, ತಾವು ರಶಿಯದ ಪರ ಎಂಬುದನ್ನು ತೋರಿಸಿದವು. ತಮ್ಮ ನಿಜ ರೂಪವನ್ನು ಲೋಕಕ್ಕೆ ಸಾರಿದುವು.

ಅಲಿಪ್ತ ರಾಷ್ಟ್ರಗಳ ಮೊದಲ ಸಭೆ 1961ರಲ್ಲಿ ಬೆಲ್ಗ್ರೇಡಿನಲ್ಲಿ ನಡೆಯಿತು. ಅದರ ದ್ವಿತೀಯ ಅಧಿವೇಶನ 1964ರಲ್ಲಿ ಕೈರೋದಲ್ಲಿ ನಡೆಯಿತು. ಕಳೆದ ಆರು ವರ್ಷಗಳಲ್ಲಿ ಪ್ರಪಂಚದ ಸ್ಥಿತಿ-ಗತಿಗಳಲ್ಲಿ ಕೊಂಚ ಬದಲಾವಣೆ ಆಗಿದೆ. ಶೀತಲ ಯುದ್ಧದ ಭಯ ಕಡಿಮೆಯಾಗಲಾರಂಭಿಸಿದೆ. ಎರಡು ಬಲಿಷ್ಠ ರಾಷ್ಟ್ರಗಳು—ಅಮೆರಿಕ—ರಶಿಯ—ಹತ್ತಿರ ಹತ್ತಿರ ಬರಲಾರಂಭಿಸಿವೆ. ಪರಸ್ಪರ ವಿಚಾರ ವಿನಿಮಯಕ್ಕೆ ಅವೆರಡು ಸಿದ್ಧವಾಗಿವೆ. ಪರಿಸ್ಥಿತಿ ಹದ್ದು ಮೀರಿ ಹೋಗದಂತೆ ನೋಡಿಕೊಳ್ಳಲು ಅವು ಇಂದು ಸನ್ನದ್ಧವಾಗಿವೆ. ವಸಾಹತುಶಾಹಿ ಪುನಃ ತಲೆಯೆತ್ತುವ ಭೀತಿಯೂ ಈಗ ಇರುವುದಿಲ್ಲ. ಆದ್ದರಿಂದ ಅಲಿಪ್ತ ನೀತಿಯ ಪ್ರತಿಪಾದನೆಗೆ ಹೆಚ್ಚಿನ ಮಹತ್ವವಿಲ್ಲ. ಅದರಲ್ಲಿ ಆಕರ್ಷಣೆಯೂ ಇಲ್ಲ.

ಆದರೂ ತಮ್ಮ ಅಸ್ತಿತ್ವವನ್ನು ವಿಶ್ವಕ್ಕೆ ಹಬ್ಬಿಸ ಹೊರಟ ಆಸಕ್ತ ಹಿತಗಳು ಅಂತಹ ಸಭೆಯೊಂದನ್ನು ಕರೆಯುವ ಲೆಕ್ಕ ಹಾಕಿದವು. ಅವುಗಳ ಒತ್ತಾಯದ ಮೇರೆ ಅಲಿಪ್ತತೆಗೆ ಅಂಟಿಕೊಂಡ 63 ರಾಷ್ಟ್ರಗಳ ಪ್ರತಿನಿಧಿಗಳು ಲುಸಾಕದಲ್ಲಿ ಸಭೆ ಸೇರುವ ಯೋಜನೆ ಕಾರ್ಯರೂಪಕ್ಕೆ ಬಂತು. ಈ ಸಭೆ ಸೆಪ್ಟೆಂಬರ್ ತಿಂಗಳಲ್ಲಿ ಲುಸಾಕದಲ್ಲಿ ನಡೆಯಿತು—ಭಾರತದ ಪ್ರಧಾನಿಗಳೂ ಈ ಸಭೆಯಲ್ಲಿ ಭಾಗವಹಿಸಿದ್ದರು.

ಈ ಸಭೆ ತನ್ನ ಮೂಲ ಉದ್ದೇಶವನ್ನು ಮರೆಯಿತು. ಅಲಿಪ್ತ ರಾಷ್ಟ್ರಗಳು ನಿರೂಪಿಸುವ ನೀತಿಗೂ, ಅಲ್ಲಿ ಆದ ನಿರ್ಣಯಗಳಿಗೂ ಸಂಬಂಧವೇ ಇರಲಿಲ್ಲ. ಆ ತೀರ್ಮಾನಗಳೆಲ್ಲ ಏಕಪಕ್ಷೀಯ. ಕಮ್ಯೂನಿಸ್ಟ್ ಜಗ ಬಯಸಿದ ತೀರ್ಮಾನಗಳಿಗೇ ಸಭೆ ತನ್ನ ಅಂಕಿತ ಹಾಕಿತು-ದಕ್ಷಿಣ ವಿಯೆಟ್ನಾಂ—ಕಾಂಬೋಡಿಯಗಳಿಂದ ಅಮೆರಿಕೆಯು ಸೈನ್ಯ ವಾಪಸ್ಸಿಗೆಯು ಬೇಕೆಂದು ಅಲ್ಲಿ ಡಂಗುರ ಸಾರಲಾಯಿತು—ಆದರೆ ಅಮೆರಿಕೆಯು ಪ್ರವೇಶಕ್ಕೂ ಮೊದಲು ಅಲ್ಲಿ ಕಾಲಿಟ್ಟು, ಆಕ್ರಮಣ—ಇಷ್ಟೇ ಪ್ರದೇಶವನ್ನು ಆಕ್ರಮಿಸಿದ ಉತ್ತರ ವಿಯೆಟ್ನಾಂನ ನ್ಯಾಯಬಾಹಿರ ನಡತೆಯನ್ನು ಯಾರೂ ಪ್ರಶ್ನಿಸಲಿಲ್ಲ. ಆ ಎದೆಗಾರಿಕೆ ಯಾರಲ್ಲಿಯೂ ಬರಲಿಲ್ಲ.

ಮಧ್ಯಪ್ರಾಚ್ಯದ ಎಲ್ಲ ಸಮಸ್ಯೆಗಳಿಗೆ ಇಸ್ರೇಲನ್ನು ಹಳಿಯಲಾಯಿತು. ಮಧ್ಯಸ್ಥಗಾರ ಡಾಕ್ಟರ್ ಜಾರಿಂಗರ ಸಂಧಾನ ಸೂತ್ರಗಳು ವಿಫಲವಾಗಲು ಇಸ್ರೇಲಿನ ತೊಡರುಗಾಲು ಕಾರಣವೆಂದು ತಿಳಿಸಲಾಯಿತು. 1967ರ ಅರಬ್—ಇಸ್ರೇಲ್ ಯುದ್ಧದಲ್ಲಿ, ಇಸ್ರೇಲ್ ತನ್ನ ವಶಕ್ಕೆ ತೆಗೆದುಕೊಂಡ ಪ್ರದೇಶದಿಂದ ಅದು ಕೂಡಲೇ ಕಾಲ್ದೆಗೆಯಬೇಕೆಂದು ನಿರ್ಧರಿಸಲಾಯಿತು. ಅಂಗೈಯಗಲದ ಇಸ್ರೇಲಿನ ಮೇಲೆ ದಿಗ್ಬಂಧನ ಹಾಕಬೇಕೆನ್ನುವ ಸೂಚನೆಯೂ ಬಂತು. ಆದರೆ ಯುಕ್ತ ಅರಬ್ ಗಣರಾಜ್ಯ ಯುದ್ಧಸ್ಥಂಬನದ ಒಪ್ಪಂದಕ್ಕೆ ವಿರೋಧವಾಗಿ, ರಶಿಯದ ಬೆಂಬಲದಿಂದ ಸ್ಥಾಪಿಸಿದ ಅಪಾಯಕಾರಿ ಮಿಸಲ್ಸ್ ನೆಲೆಯ ಕುರಿತು ಚಕಾರ ಶಬ್ದವೆತ್ತಲಿಲ್ಲ. ಅರಬ್ ಕಮಾಂಡೋಗಳು ಬಲವಂತದಿಂದ ಹಿಡಿದಿಳಿಸಿ ಭಸ್ಮಗೊಳಿಸಿದ ವಿಮಾನಗಳ ಕುರಿತಾಗಲೀ, ಅವುಗಳಲ್ಲಿದ್ದ ನಿರಪರಾಧಿ ಪ್ರಯಾಣಿಕರಿಗೆ ಕೊಟ್ಟ ಹಿಂಸೆಯ ಕುರಿತಾಗಲೀ ಯಾರೂ ತುಟಿ ಪಿಟಕ್ಕೆನ್ನಲಿಲ್ಲ. ಈ ಹೇಯ ಕಾರ್ಯವನ್ನು ಹಳಿಯಲು ನಮ್ಮ ಪ್ರಧಾನಿಗಳ ನಾಲಿಗೆ ಏಳಲಿಲ್ಲ. ವಿನಾ ಕಾರಣ ನಮ್ಮ ಮೇಲೆ ಕಾಲು ಕೆದರಿ ಯುದ್ಧಕ್ಕೆ ಬಂದ ಪಾಕಿಸ್ತಾನವನ್ನು ಅರಬ್ ರಾಷ್ಟ್ರಗಳು ಬಂದು ನಿಂದಿಸಲಿಲ್ಲ. ತಮ್ಮ ವಿಷಯದಲ್ಲಿ ಅನಾಸಕ್ತನಾಗಿದ್ದ ಅರಬ್ ರಾಷ್ಟ್ರಗಳ ಬಗ್ಗೆ ಪ್ರಧಾನಿಗಳೇಕೆ ಒಲವು ತೋರಿಸಬೇಕೋ ಅರ್ಥವಾಗುವುದಿಲ್ಲ.

ಆಶ್ಚರ್ಯದ ಸಂಗತಿಯೆಂದರೆ ಈ ಸಭೆಯಲ್ಲಿ ಮೇಡಂ ಬಿನ್ ವೀಕ್ಷಕಳಾಗಿ ಭಾಗವಹಿಸಿದ್ದು. ಅವಳ ಸರಕಾರಕ್ಕೆ ತನ್ನದೆಂದು ಹೇಳಿಕೊಳ್ಳುವ ಒಂದಂಗುಲ ನೆಲವೂ ಇಲ್ಲ. ಅವಳ ಸರಕಾರದ ಪ್ರಧಾನ ಕಛೇರಿ ಇರುವುದು ಹನಾಯಿಯಲ್ಲಿ. ಉತ್ತರ ವಿಯೆಟ್ನಾಂ ಸರಕಾರದ ಕೃಪೆಯಲ್ಲಿ ಅವಳ ಸರಕಾರ ಬಾಳುತ್ತಿದೆ. ಅವಳಿಗೆ ಯಾರನ್ನು ಪ್ರತಿನಿಧಿಸುವ ಅರ್ಹತೆಯಿಲ್ಲ. ಅವಳು ಪ್ರತಿನಿಧಿಸುವ ಸರಕಾರವನ್ನು ಬಂಡುಗಾರರ ದಂಡು ಎಂದು ಕರೆಯಬಹುದು—ದಕ್ಷಿಣ ವಿಯೆಟ್ನಾಂ ಸರಕಾರದೊಡನೆ ರಾಜತಾಂತ್ರಿಕ ಸಂಬಂಧ ಇಟ್ಟುಕೊಂಡ ನಮ್ಮ ದೇಶದ ಪ್ರಧಾನಿಗಳು ಇದಕ್ಕೆ ಸಮ್ಮತಿಸಿದ್ದು ಬಹು ದೊಡ್ಡ ಅಪರಾಧ. ಯಾವ ನಿಯಮಗಳ ಆಧಾರದಲ್ಲಿ ಮೇಡಂ ಬಿನ್ ಈ ಸಭೆಯಲ್ಲಿ ಪಾಲ್ಗೊಂಡರು?

ಆದರೆ ಕಾಂಬೋಡಿಯಾ ಸರಕಾರಕ್ಕೆ ಈ ಸಭೆಯಲ್ಲಿ ಭಾಗವಹಿಸುವ ಅವಕಾಶವನ್ನು ನಿರಾಕರಿಸಲಾಯಿತು. ಕಾಂಬೋಡಿಯಾ ಸರಕಾರಕ್ಕೆ ಸಭೆಯಲ್ಲಿ ಪಾಲ್ಗೊಳ್ಳಲು ಬಿಡಬಾರದೆಂದು—ಕೆಂಪು ಚೀನದ ನೆರಳಲ್ಲಿ, ಅದರ ಕೈಗೊಂಬೆಯಾಗಿ ಬಾಳುವ ರಾಜಕುಮಾರ ಸಿಹಾನೂಕ—ಒತ್ತಾಯಿಸಿದರು. ಆದ್ದರಿಂದ ಕಾಂಬೋಡಿಯಕ್ಕೆ ಮಾನ್ಯತೆಯನ್ನು ನಿರಾಕರಿಸಲಾಯಿತು?

ಕಾಂಬೋಡಿಯವನ್ನೇಕೆ ನಿರಾಕರಿಸಿದ್ದು?

ಮೇಡಂ ಬಿನ್ನರನ್ನೇಕೆ ಪುರಸ್ಕರಿಸಿದ್ದು?

1964ರಲ್ಲಿ ಕೈರೋದಲ್ಲಿ ನಡೆದ ಎರಡನೆಯ ಸಭೆಯ ನಂತರ ಆಗಿ ಹೋದ ಅನೇಕ ವಿದ್ಯಮಾನಗಳನ್ನು ಸಭೆ ಗಮನಕ್ಕೆ ತೆಗೆದುಕೊಳ್ಳಬೇಕಿತ್ತು. 1968ರಲ್ಲಿ ರಶಿಯ ನಡೆಸಿದ ಬಹು ದೊಡ್ಡ ನಿಯಮೋಲ್ಲಂಘನೆ ವಿಮರ್ಶೆಗೆ ಗುರಿಯಾಗಬೇಕಿತ್ತು. 1968ರಲ್ಲಿ ಝೆಕೊಸ್ಲೊವೇಕಿಯಾದಲ್ಲಿ ಒಂದು ಪ್ರಗತಿಪರ ಸರಕಾರ ಅಧಿಕಾರದಲ್ಲಿತ್ತು. ಅದರ ನೇತೃತ್ವವನ್ನು ಡುಬ್ಚೆಕರು ವಹಿಸಿದ್ದರು. ರಶಿಯನ್ ಸೈನ್ಯ ಝೆಕೊಸ್ಲೊವೇಕಿಯಾವನ್ನು ಪ್ರವೇಶಿಸಿ, ಡುಬ್ಚೆಕರನ್ನು ಪದಚ್ಯುತಗೊಳಿಸಿ, ಅವರ ಅನುಯಾಯಿಗಳನ್ನು ಕೊಲ್ಲಿಸಿ, ತನ್ನ ಹಿಂಬಾಲಕರನ್ನು ಅಧಿಕಾರದಲ್ಲಿ ಕುಳ್ಳಿರಿಸಿತ. ತಿಳಿದೋ—ತಿಳಿಯದೆಯೋ ರಶಿಯವನ್ನು ಹಿಂಬಾಲಿಸುವ ನಮ್ಮ ಪ್ರಧಾನಿಯವರು ರಶಿಯದ ಈ ಆಕ್ರಮಣ ನೀತಿಯನ್ನು ಹೇಗೆ ಟೀಕಿಸಿಯಾರು? ರಶಿಯದ ಹೊಸ ವಸಾಹತುಶಾಹಿಗೆ ಒಂದಾದ ಮೇಲೆ ಒಂದರಂತೆ ಬಲಿಗೊಡುವುದೇ ಅಲಿಪ್ತತೆಯೇ? ಅತ್ತ ರಶಿಯ—ಇತ್ತ ಚೀನ ತಮ್ಮ ಆಕ್ರಮಣ ಮುಂದುವರಿಯುತ್ತಲೇ ಬಂದಿವೆ. ಈ ಕುಟಿಲ ನೀತಿಯನ್ನು ಅಲಿಪ್ತ ರಾಷ್ಟ್ರಗಳು ಟೀಕಿಸಬೇಕಿತ್ತು.

ನಮ್ಮ ಪ್ರಧಾನಿಗಳನ್ನೂ ಅಲ್ಲಿ ಸೇರಿದ್ದ ಉಳಿದವರನ್ನೂ ಇಂಡೋನೇಶಿಯಾದ ಸುಹಾರ್ತೋ, ಲಾವೋಸಿನ ರಾಜಕುಮಾರ ಸಿಂಗನನ್ನೊ ಎಚ್ಚರಿಸಿದರು. ಅವರ ವಿವೇಕದ ಮಾತಿಗೆ ನಮ್ಮ ಪ್ರಧಾನಿಗಳಾಗಲಿ, ಆ ದಾರಿ ತುಳಿಯುವ ಇತರರಾಗಲಿ ಕಿವಿಗೊಡಲಿಲ್ಲ. ಸಿಡಿಲು ಗುಡುಗುಗಳ ಅರ್ಭಟದಲ್ಲಿ ಅವರಿಬ್ಬರ ಒಂಟಿದನಿಗೆ ಯಾರೂ ಬೆಲೆ ಕೊಡಲಿಲ್ಲ.

ಕೆಡುವ ಕಾಲ ಬಂದಾಗ ಯಾವುದೂ ಹಿಡಿಸುವುದಿಲ್ಲ.

ಶ್ರೀರಾಮಚಂದ್ರ, ಸ್ವರ್ಣ ಹರಿಣದ—ಇರುವುದು ಸಾಧ್ಯವಿಲ್ಲವೆಂದರಿತೂ—ಬೆನ್ನಟ್ಟಿದ.

ನಮ್ಮ ಮನೆಗೆ ಬೆಂಕಿ ಹತ್ತಿದೆ. ಆದರೆ ಅದರ ಅರಿವು ನಮಗೆ ಇನ್ನೂ ಆಗಿಲ್ಲ. ಕಾರ್ಯ ಮಿಂಚಿ ಹೋಗುವ ಮೊದಲು ನಮ್ಮ ಪ್ರಧಾನಿಗಳನ್ನು ಸಂದುರಿಗೆ ತರಬೇಕು.

ಇಲ್ಲ, ಅವರನ್ನು ಆದಷ್ಟು ಬೇಗ ಅಧಿಕಾರದಿಂದ ಇಳಿಸಬೇಕು.

ಪೂರ್ಣಾಹುತಿ ಕೊಡಲು ನಮ್ಮ ಪ್ರಧಾನಿಗಳು ಎದ್ದು ನಿಂತಿದ್ದಾರೆ.

ರಶಿಯದ ಪುರೋಹಿತರು ಮಂತ್ರೋಚ್ಚಾರ ಮಾಡುವುದೊಂದೇ ಈಗ ಬಾಕಿ ನಿಂತಿರುವುದು.

...ಯನ್ನಂತೆ ನೋಡುವಲ್ಲಿ ಸಂಪೂರ್ಣ ಯಶಗಳಿಸಿದರು.

ಬೆಕ್ಕಿನ ಬಿಡಾರದಲ್ಲಿ

ಬಂಗಾಳದಲ್ಲಿ ಶ್ರೀ ವಿದ್ಯಾಸಾಗರರು ಏಕಾಕಿಗಳೇ ಆಗಿದ್ದರು. ಅವರಿಂದ ಉಪಕಾರ ಪಡೆದವರು ಎಲ್ಲರೂ. ಆದರೆ, ಅವರ "ಸಾಮಾಜಿಕ ಸುಧಾರಣೆ"ಗಳನ್ನು ಯಾರೂ ಮೆಚ್ಚುತ್ತಿರಲಿಲ್ಲ. ಆದುದರಿಂದ ಶ್ರೀ ವಿದ್ಯಾಸಾಗರರು 'ಬೆಕ್ಕಿನ ಬಿಡಾರ'ದಲ್ಲೇ ಇರುವಂತಾಯಿತು. ಇದೇ ಪರಿಸ್ಥಿತಿ ಆ ಕಾಲದಲ್ಲಿ ಭಾರತದ ಬೇರೆ ಬೇರೆಡೆಯಲ್ಲಿದ್ದ ಒಬ್ಬೊಬ್ಬ ಸಮಾಜ ಸುಧಾರಕರದ್ದೂ ಆಗಿತ್ತು. ಅಂದು ಸುಧಾರಣೆಗಳಿಗಿಂತ ಸಂಪ್ರದಾಯ ಶರಣತೆಯೇ ಮೇಲೆಂದು ನಂಬಿದ್ದ ಜನ ಇಂದಿನೂ ಬಹಳ ಬದಲಾಯಿಸಿದೆಯೆ? ವೇಷ-ಭೂಷಣ-ಆಹಾರ-ವಿಹಾರಗಳ ತೋರ್ಪಡಿಕೆಯ ಪರಿವರ್ತನೆಗಳನ್ನು ಬಿಟ್ಟರೆ, ಮಾನಸಿಕವಾಗಿ ನಾವು ಅಜ್ಞ ನೆಟ್ಟ ಗೋಳೀ ಮರಕ್ಕೇ ನೇಣು ಹಾಕಿಕೊಳ್ಳುತ್ತಿದ್ದೇವೆ!

ಸಂದರ್ಶಿಸಿರಿ!—ಸಂತೃಪ್ತರಾಗಿರಿ!!

ಬಣ್ಣ ಬಾಗರಾ ವಸ್ತ್ರಗಳಿಗೆ, ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೊಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res; 3272

ನವರಾತ್ರಿ ಉತ್ಸವ

ಮಂಗಳೂರು, ಸ್ಥಳೀಯ ಪೋಲೀಸ್ ಲೈನಿನ ಸಮೀಪ ಇರುವ ಶ್ರೀದೇವಿ ದೇವಸ್ಥಾನದಲ್ಲಿ ವರ್ಷಂಪ್ರತಿ ನಡೆಯುವ ನವರಾತ್ರಿ ಉತ್ಸವವು ತಾ. 1.10.70ರಿಂದ ತಾ. 9.10.70ರ ವರೆಗೆ ದೇವಸ್ಥಾನದ ಆಡಳಿತ ಮೊಕ್ತೇಸರ ಶ್ರೀ ಸಿ. ನಾರ್ಣಪ್ಪನವರ ನೇತೃತ್ವದಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಉತ್ಸವದಲ್ಲಿ ಭಾಗವಹಿಸಿ, ಸಹಕರಿಸಿದ ಭಕ್ತ ಮಹಾಶಯರಿಗೂ ಭಕ್ತೆಯರಿಗೂ ದೇವಸ್ಥಾನದ ಆಡಳಿತ ವತಿಯಿಂದ ಹಣ್ಣು ಕಾಯಿ, ಸುಗಂಧ ಪ್ರಸಾದಗಳನ್ನಿತ್ತು, ಸಹಕರಿಸುವಂತೆ ಶ್ರೀ ದೇವಿಯು ಅನುಗ್ರಹಿಸಲಿ ಎಂದು ಪ್ರಾರ್ಥಿಸಲಾಯಿತು.

ವಿದ್ಯಾರ್ಥಿವೇತನ ಕೊಡುಗೆ

ತಾ. 11.10.70ರಂದು ದ. ಕ. ಜಿಲ್ಲಾ ಮೂಲ್ಯ ಯಾನೆ ಕುಲಾಲರ ಸಂಘದ ವತಿಯಿಂದ ಕುಲಾಲ ಸಮಾಜದ ಶಾಲಾ ಕಾಲೇಜು ಮತ್ತು ಕೈಗಾರಿಕಾ ಸಂಸ್ಥೆಗಳಲ್ಲಿ ಕಲಿಯುತ್ತಿರುವ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಸಂಘದ ಅಧ್ಯಕ್ಷ ಶ್ರೀ ಸಿ. ನಾರ್ಣಪ್ಪನವರ ಅಧ್ಯಕ್ಷತೆಯಲ್ಲಿ ವಿತರಣೆ ಮಾಡಲಾಯಿತು. ಗೌ|ಪ್ರ| ಕಾರ್ಯದರ್ಶಿ ಶ್ರೀ ಬಿ. ಗೋಪಾಲರು ಸ್ವಾಗತಿಸಿದ ಬಳಿಕ ಅಧ್ಯಕ್ಷರು ವಿದ್ಯಾರ್ಥಿವೇತನ ಕೊಡುಗೆಯನ್ನು ಹಂಚಿದರು.

ಮುಖ್ಯ ಅತಿಥಿಗಳಲ್ಲೊಬ್ಬರಾದ ಡಾ| ಅಮ್ಮೆಂಬಳ ದಾಸಪ್ಪ ಇವರು ವಿದ್ಯಾರ್ಥಿಗಳು ವಿದ್ಯೆಯೊಂದಿಗೆ ಬುದ್ಧಿಯನ್ನು ಬೆಳೆಸಬೇಕೆಂದೂ ಆದರ್ಶ ನಾಗರಿಕರಾಗಬೇಕೆಂದೂ ಹೇಳಿದರು. ಶ್ರೀಗಳಾದ ಡಿ. ಬಾಲಕೃಷ್ಣ, ಬಿ. ಲಕ್ಷ್ಮಿ, ರಾಮಚಂದ್ರ ಮೊದಲಾದವರು ಮಾತಾಡಿದರು.

ಸಂಘದ ಕೋಶಾಧಿಕಾರಿ ಶ್ರೀ ಬಾಲಕೃಷ್ಣರವರು ಧನ್ಯವಾದಗಳನ್ನರ್ಪಿಸಿದರು.

ರಾಮರಾಜ್ಯದಲ್ಲಿ ಸಮಾಜವಾದ

ಶ್ರೀ ರಾಮನು ಅಯೋಧ್ಯೆಯನ್ನು ವೈಭವದಿಂದ ಆಳುತ್ತಿದ್ದನು. ಒಂದು ದಿನ ಸೀತೆಯು ಆತನೊಡನೆ ಹೇಳಿದಳು: "ಸ್ವಾಮಿ, ತಾವು ಮಹಡಿಯ ಮೇಲಿನಿಂದ ನಗರಾವಲೋಕನವನ್ನು ಮಾಡೋಣ". ಶ್ರೀರಾಮನು ಮಡದಿಯ ಆಶಯದಂತೆ ಆಕೆಯನ್ನು ಉತ್ತರದ ಮಹಡಿಗೆ ಕರೆದೊಯ್ದನು. ಅಲ್ಲಿ ಕಿಟಕಿಯ ಬಳಿ ಕುಳಿತುಕೊಂಡು ರಾಣಿಗೆ ನಗರದ ಸೌಂದರ್ಯ ಸ್ಥಾನಗಳನ್ನು ಬೊಟ್ಟು ಮಾಡಿ ತೋರಿಸತೊಡಗಿದನು. ಅಯೋಧ್ಯಾನಗರದಲ್ಲಿ ದೊಡ್ಡ ಉತ್ಸಾಹವೇ ಮನೆಮಾಡಿತ್ತು. ಜನರು ನಗುನಗುತ್ತಲೂ ಕುಣಿಕುಣಿದಾಡುತ್ತಲೂ ಇತ್ತಿಂದತ್ತ ನಲಿದಾಡುತ್ತಿದ್ದರು. ಎಲ್ಲರ ಮೈಯೂ ರತ್ನಾಭರಣ ಸುವಸ್ತ್ರಗಳಿಂದ ಶೋಭಾಯಮಾನವಾಗಿತ್ತು. ಅವರ ಮುಖದಲ್ಲಿ ಕಳೆದುಂಬಿತ್ತು; ಉತ್ಸಾಹ ನಲಿಯುತ್ತಿತ್ತು. ಸಂತೋಷ ಮನೆ ಮಾಡಿತ್ತು. ಅವರು ಪ್ರಸನ್ನರಾಗಿದ್ದರು. ಇದು ಅವರ ಸುಖೀ ಜೀವನಕ್ಕೆ ಕನ್ನಡಿ ಹಿಡಿಯುತ್ತಿತ್ತು.

ತನ್ನ ಪ್ರಜೆಗಳು ಈ ರೀತಿ ಸಂತುಷ್ಟ ಮಾನಸರೂ ಪ್ರಸನ್ನ ಚಿತ್ತರೂ ಆಗಿರುವುದನ್ನು ನೋಡಿ ಶ್ರೀ ರಾಮನು ಹೆಮ್ಮೆತಾಳಿದನು. ಸೀತೆಯ ಮುಖಕಮಲವೂ ಸಂತೋಷದಿಂದ ಅರಳಿತು. ಅಷ್ಟರಲ್ಲಿ ಸೀತೆಯ ದೃಷ್ಟಿಗೆ ಒಬ್ಬಾಕೆ ಬಿದ್ದಳು. ಆಕೆಯ ಕುತ್ತಿಗೆ—ಕಿವಿ—ಮೂಗುಗಳಲ್ಲಿ ಆಭರಣಗಳಿರಲಿಲ್ಲ. ಕೈಗಳಲ್ಲಿ ಬಳೆಗಳಿರಲಿಲ್ಲ. ಹೆಚ್ಚೇಕೆ, ಮೈತುಂಬ ಬಟ್ಟೆಯನ್ನೂ ಆಕೆ ಉಟ್ಟುಕೊಂಡಿರಲಿಲ್ಲ. ಆಕೆಯ ಪುಟ್ಟ ಕೂಸೊಂದು ಮಡಿಲಲ್ಲಿತ್ತು. ಆಕೆಯು ಅತ್ಯಂತ ನಿರ್ಬಲಳಾಗಿದ್ದಳು. ನಗರದಲ್ಲಿ ಭಿಕ್ಷೆ ಬೇಡಿ ಹೊಟ್ಟೆ ಹೊರೆವುದೇ ಆಕೆಗಿದ್ದ ಒಂದೇ ಒಂದು ಉಪಾಯವಾಗಿತ್ತು.

ವಸ್ತ್ರಾಲಂಕಾರಹೀನಳೂ ಭಿಕ್ಷಾವೃತ್ತಿನಿರತಳೂ ಆದ ಆಕೆಯನ್ನು ಕಂಡ ಸೀತಾದೇವಿಯ ಹೃದಯ ಕರಗಿ ನೀರಾಯಿತು. ಆಕೆ ತನ್ನ ದಾಸಿಯನ್ನು ಕರೆದು ಆಕೆಯನ್ನು ಅರಮನೆಗೆ ಕರೆತರುವಂತೆ ಆಜ್ಞಾಪಿಸಿದಳು. ದಾಸಿ ಹೊರಟುಹೋದಳು. ತನ್ನೊಡನೆ ಆ ಭಿಕ್ಷುಕಿಯನ್ನು ಕರೆತಂದಳು. ಸೀತೆಯ ಮುಂದೆ ನಿಲ್ಲಿಸಿದಳು. ಸೀತೆಯು ಭಿಕ್ಷುಕಿಯನ್ನು ಕೇಳಿದಳು— "ನಿನ್ನೊಡನೆ ಬಟ್ಟೆ ಬರೆಗಳೂ ಯಾಕೆ ಇಲ್ಲ?"

ರಾಣಿಯ ಪ್ರಶ್ನೆಯನ್ನು ಕೇಳಿದ ಆಕೆ ವಿನಯದಿಂದ ನಿವೇದಿಸಿದಳು. "ಮಹಾರಾಣಿ, ನನ್ನನ್ನು ತವರು ಮನೆಯಲ್ಲಿ ತೊರೆದು ನನ್ನ ಪತಿದೇವರು ತೀರ್ಥಯಾತ್ರೆಗೆ ಹೊರಟು ಹೋಗಿದ್ದಾರೆ. ತಂದೆಯು ನನ್ನನ್ನು ಸಾಕುತ್ತಿದ್ದರು. ಅವರು ಮುದುಕರಾಗಿದ್ದರು; ಕೆಲವು ದಿನಗಳಿಗೆ ಮೊದಲು ಅವರು ಸತ್ತು ಹೋದರು. ಅವಂತಿ ನಗರದ ಗುರುಕುಲದಲ್ಲಿ ನನ್ನಿಬ್ಬರು ತಮ್ಮಂದಿರಿದ್ದಾರೆ, ಆದರೆ, ಅವರಿನ್ನೂ ಬಹಳ ಎಳೆಯರು. ಹಾಗಾಗಿ ಇಂದು ನನ್ನನ್ನು ಪಾಲಿಸುವವರು ಯಾರೂ ಇಲ್ಲ. ಆದುದರಿಂದ ಹೊಟ್ಟೆಯ ಪಾಡಿಗಾಗಿ ಭಿಕ್ಷೆ ಬೇಡುತ್ತೇನೆ; ನನ್ನಲ್ಲಿ ಒಳ್ಳೆಯ ಬಟ್ಟೆಬರೆಗಳಾಗಲೀ, ಬೆಳ್ಳಿ ಬಂಗಾರಗಳಾಗಲೀ ಇಲ್ಲ."

ಸೀತೆಯು ಶ್ರೀರಾಮನತ್ತ ಒಮ್ಮೆ ನೋಡಿದಳು. ತನ್ನ ಪೆಟ್ಟಿಗೆಯಿಂದ ಉತ್ತಮೋತ್ತಮ ವಸ್ತ್ರಾಭರಣ ತರಿಸಿದಳು. ಆ ಭಿಖಾರಿಗೆ ಕೊಟ್ಟಳು. ಮತ್ತೆ ಹೇಳಿದಳು— "ನೀನು ಲಕ್ಷ್ಮಣನ ಬಳಿಗೆ ಹೋಗು. ನಾನು ಒಂದು ಲಕ್ಷ ಸುವರ್ಣ ಮುದ್ರೆಗಳನ್ನು ಕೊಡುವಂತೆ ಹೇಳಿದ್ದೇನೆಂದು ಹೇಳು."

ಆ ಭಿಖಾರಿ ಬ್ರಾಹ್ಮಣಿತಿ 'ಯಥಾಜ್ಞೆ' ಎಂದು ಹೊರಟಳು. ಲಕ್ಷ್ಮಣನ ಬಳಿಗೆ ನಡೆದಳು. ಆತನಿಗೆ ರಾಣಿಯ ಆಜ್ಞೆಯನ್ನು ತಿಳಿಸಿದಳು. ಲಕ್ಷ್ಮಣನು ಸೀತೆಯು ಹೇಳಿಕಳಿಸಿದಂತೆ ಒಂದು ಲಕ್ಷ ಸುವರ್ಣ ಮುದ್ರೆಗಳನ್ನು ಆಕೆಗೆ ಕೊಟ್ಟನು. ಶ್ರೀರಾಮನ ರಾಜ್ಯದಲ್ಲಿ ಯಾರೊಬ್ಬರೂ ಸುಳ್ಳು ಹೇಳುವ ದುಸ್ಸಾಹಸ ಮಾಡುತ್ತಿರಲಿಲ್ಲ. ಆದುದರಿಂದ ಆತನಿಗೆ ಆಕೆಯ ಮಾತಿನಲ್ಲಿ ಅವಿಶ್ವಾಸ ಹುಟ್ಟಲಿಲ್ಲ.

ಕೆಲಹೊತ್ತಿನ ನಂತರ ಸೀತೆಯ ದಾಸಿಯೊಬ್ಬಳು ಲಕ್ಷ್ಮಣನಲ್ಲಿಗೆ ಬಂದಳು. "ನನ್ನ ರಾಜ್ಯದಲ್ಲಿ ಎಲ್ಲರೂ ಒಳ್ಳೆಯ ರೀತಿಯಲ್ಲಿ ಬಟ್ಟೆಬರೆ ಉಟ್ಟುಕೊಳ್ಳಬೇಕು; ರತ್ನಾಭರಣಗಳನ್ನು ತೊಟ್ಟುಕೊಳ್ಳಬೇಕು ಎಂದು ಅಯೋಧ್ಯಾನಗರದಲ್ಲಿಯೂ ಸಪ್ತದ್ವೀಪಗಳಲ್ಲಿಯೂ ಡಂಗುರ ಸಾರಿಸು. ನಮ್ಮ ಗುಪ್ತಚಾರರು ತಿರುಗುತ್ತಿರುತ್ತಾರೆ. ಎಲ್ಲಿಯ ಪ್ರಜೆಗಳು ಈ ಆಜ್ಞೆಯಂತೆ ನಡೆಯುವುದಿಲ್ಲವೋ ಅಲ್ಲಿಯ ಅಧಿಕಾರಿಗೆ ರಾಜನ ಕಡೆಯಿಂದ ಕಠಿಣ ದಂಡನೆ ದೊರೆಯುವುದು. ಆದುದರಿಂದ ನಗರ-ರಾಜ್ಯಗಳ ಅಧಿಕಾರಿಗಳು ತಂತಮ್ಮ ಭಂಡಾರದಿಂದ ವಸ್ತ್ರಾಭರಣಗಳನ್ನು ಇಲ್ಲದವರಿಗೆ ಹಂಚಿಕೊಡಬೇಕು." ಎಂಬ ಆಜ್ಞೆಯನ್ನು ಡಂಗುರ ಹೊಡೆವಂತೆ ಸೀತೆಯು [illegible]ನ್ನು ತಿಳಿಸಿದಳು.

ಲಕ್ಷ್ಮಣನು ಸೀತಾದೇವಿಯ ಆಜ್ಞೆಯನ್ನು ಗಜದುಂದುಭಿಯಿಂದ ಡಂಗುರ ಸಾರಿದನು. ಸಾಮಂತರಾಜರೂ ಅಧಿಕಾರಿಗಳೂ ಅದರಂತೆ ವಸ್ತ್ರಾಭರಣಗಳನ್ನು ಹಂಚಿದರು. ಇದ್ದವರು ಇಲ್ಲದವರಿಗೆ ಸಹಾಯ ಮಾಡುತ್ತಿದ್ದರು. ಹೀಗೆ ರಾಮರಾಜ್ಯದಲ್ಲಿ ಹಸಿದವರೂ ಬತ್ತಲೆಯವರೂ ಹೇಳ ಹೆಸರಿಲ್ಲದಂತಾದರು. ಸಮಾನತೆಯ ಭಾವನೆ ರಾಮರಾಜ್ಯದ ಪ್ರಜೆಗಳಲ್ಲಿ ತಾನಾಗಿಯೇ ರಕ್ತಗತವಾಯಿತು.

ದಿ| ಮಂಜಯ್ಯ ಹೆಗ್ಗಡೆಯವರಿಗೆ ಶ್ರದ್ಧಾಂಜಲಿ

ಮಂಗಳೂರು, ತಾ. 12-10-70ರಂದು ಬಂಟರ ಯಾನೆ ನಾಡವರ ಸಂಘದ ಆಶ್ರಯದಲ್ಲಿ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಮಾಜಿ ವಿಧಾನ ಪರಿಷತ್ ಅಧ್ಯಕ್ಷ ಕೆ.ಕೆ. ಶೆಟ್ಟರ ಅಧ್ಯಕ್ಷತೆಯಲ್ಲಿ ಬೃಹತ್ ಸಭೆಯೊಂದು ಜರಗಿ ದಿ| ಡಿ. ಮಂಜಯ್ಯ ಹೆಗ್ಗಡೆಯವರ ನಿಧನದ ಬಗ್ಗೆ ತನ್ನ ಶ್ರದ್ಧಾಂಜಲಿಯನ್ನರ್ಪಿಸಿತು. ಪ್ರಾರಂಭದಲ್ಲಿ ಸಂಘದ ಕಾರ್ಯದರ್ಶಿ ಶ್ರೀ ಬಿ. ಶ್ರೀನಾಥ ಹೆಗ್ಡೆಯವರು ಸಭೆಗೆ ಬಂದ ಸಂತಾಪ ಸೂಚಕ ಸಂದೇಶಗಳನ್ನು ಓದಿ ಹೇಳಿದರು.

ಎಡ್ವೊಕೇಟ್ ಶ್ರೀ ಕೆ. ಸುಂದರರಾಮ ಶೆಟ್ಟಿ, ಎಡ್ವೊಕೇಟ್ ಮತ್ತು ಮಾಜಿ ಎಂ.ಪಿ. ಶ್ರೀ ಕೆ. ಶಂಕರ ಆಳ್ವ, ಡಾ| ಕೆ.ಬಿ. ಶೆಟ್ಟಿ, ಶ್ರೀ ಕೆ. ಭುಜಂಗ ಶೆಟ್ಟಿ, ಶ್ರೀ ಕೂಡಾಲು ಸುಬ್ಬಣ್ಣ ಶೆಟ್ಟಿ, ಶ್ರೀ ಕೆ. ಕೃಷ್ಣ ಶೆಟ್ಟಿ, ಡಾ| ರಾಮಣ್ಣ ಹೆಗ್ಡೆ ಮೊದಲಾದವರು ದಿ| ಮಂಜಯ್ಯ ಹೆಗ್ಗಡೆಯವರ ನಿಸ್ಪೃಹ ಮತ್ತು ಸರಳ ನಡೆ ನುಡಿಗಳನ್ನೂ ಸ್ವಾರ್ಥವಿಲ್ಲದ ಸಾಧನೆಯ ಉದಾತ್ತತೆ ಹಾಗೂ ವಿಶಾಲ ಹೃದಯವನ್ನೂ ವಿವರಿಸಿದರು.

ಅಧ್ಯಕ್ಷ ಶ್ರೀ ಶೆಟ್ಟರು ಮಾತನಾಡುತ್ತಾ "ಶ್ರೀ ಹೆಗ್ಗಡೆಯವರು ಬಾಲ್ಯದಿಂದಲೂ ಶುದ್ಧ ಚಾರಿತ್ರ್ಯವನ್ನು ಬೆಳೆಯಿಸಿಕೊಂಡವರು. ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿ, ಸಹಕಾರಿ ಧುರಂಧರರಾಗಿ, ವಿಜಯಾ ಬ್ಯಾಂಕಿನ ಸ್ಥಾಪಕ-ಡೈರೆಕ್ಟರರಾಗಿ, ಬಂಟರ ಯಾನೆ ನಾಡವರ ಸಂಘದ ಅಧ್ಯಕ್ಷರಾಗಿ ಬಹುಮುಖದಿಂದ ಜಿಲ್ಲೆಯ ಸಾರ್ವಜನಿಕ ಕ್ಷೇತ್ರದಲ್ಲಿ ದಕ್ಷತೆಯಿಂದ ಕಾರ್ಯನಿರ್ವಹಿಸಿ ಕೀರ್ತಿಗಳಿಸಿರುವರು. ಪದವಿಯ ಮೋಹಕ್ಕೆ ಒಳಗಾಗದೆ ಕೊನೆಯವರೆಗೂ ಕರ್ತವ್ಯನಿಷ್ಠರಾಗಿ ಬಾಳಿ ಆದರ್ಶ ಪುರುಷರೆನಿಸಿದರು" ಎಂದು ಹೇಳಿದರು.

ಸಂಘದ ಉಪಾಧ್ಯಕ್ಷ ಶ್ರೀ ಎಮ್. ಲಕ್ಷ್ಮೀನಾರಾಯಣ ಆಳ್ವರು ಸಂತಾಪ ಸೂಚಕ ಗೊತ್ತುವಳಿಯನ್ನು ಮಂಡಿಸಿದಾಗ ಸಭೆ ಮೌನ ಪ್ರಾರ್ಥನೆಯೊಂದಿಗೆ ಗೊತ್ತುವಳಿಯನ್ನು ಅಂಗೀಕರಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿತು. ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ ಶ್ರೀನಾಥ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

ಕುಂದಾಪುರದಲ್ಲಿ

ಸ್ಥಳೀಯ ರಾಮಕೃಷ್ಣ ವಿದ್ಯಾರ್ಥಿಭವನದಲ್ಲಿ ವಕೀಲ್ ಶ್ರೀ ಕೆ. ವೆಂಕಪ್ಪ ಶೆಟ್ಟಿ ಅಧ್ಯಕ್ಷತೆಯಲ್ಲಿ ತಾ. 14.10.70ರಂದು ಸಭೆ ಜರಗಿ ಶ್ರೀ ಡಿ. ಮಂಜಯ್ಯ ಹೆಗ್ಗಡೆಯವರ ನಿಧನದ ಬಗ್ಗೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು.

ಭವನದ ಗೌ. ವಾರ್ಡನ್ ಶ್ರೀ ಜಿ. ಕುಶಲ ಹೆಗ್ಡೆಯವರು ಪ್ರಾಸ್ತಾವಿಕ ಮಾತನಾಡಿದ ಬಳಿಕ ಸಭಿಕರಲ್ಲಿ ಸರ್ವಶ್ರೀ ವೈ. ಮಂಜಯ್ಯ ಶೆಟ್ಟಿ, ಪಿ. ಆನಂದಕುಂದ ಹೆಗ್ಡೆ, ಎಂ.ಎಂ. ಹೆಗ್ಡೆ ಇವರುಗಳು ದಿವಂಗತ ಹೆಗ್ಗಡೆಯವರು ಅಧ್ಯಕ್ಷರಾಗಿ, ದ.ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ, ದ.ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಅಧ್ಯಕ್ಷರಾಗಿ, ವಿಜಯಾ ಬ್ಯಾಂಕಿನ ಸ್ಥಾಪಕ ಡೈರೆಕ್ಟರ್, ಹಾಗೂ ಚೆಯರ್‌ಮೆನ್‌ರಾಗಿ, ಹಲವಾರು ಸಹಕಾರಿ ಸಂಘ ಸಂಸ್ಥೆಗಳ ಉನ್ನತಾಧಿಕಾರಿಯಾಗಿ, ಪ್ರಸಿದ್ಧ ವಕೀಲರಾಗಿ, ನಿಷ್ಕಳಂಕ ರಾಜಕೀಯ ಮುಖಂಡನಾಗಿ ಹಲವಾರು ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆಯನ್ನು ಸ್ಮರಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ದಿವಂಗತರ ಕಾರ್ಯದಕ್ಷತೆಯನ್ನು ಕೊಂಡಾಡಿದರು. ಜಿ. ಕುಶಲ ಹೆಗ್ಡೆಯವರು ಮಂಡಿಸಿದ ಸಂತಾಪ ಸೂಚಕದ ಗೊತ್ತುವಳಿಯನ್ನು ಸಭೆಯವರೆಲ್ಲ ಗೌರವಪೂರ್ವಕ ಎದ್ದುನಿಂತು ಮೌನ ಆಚರಿಸಿ ಮಂಜೂರು ಮಾಡಿದರು.

ಗೃಹಪ್ರವೇಶ—ಸತ್ಕಾರ ಸಮಾರಂಭ

ಡಾ| ಆನಂದ ವಿ. ಶೆಟ್ಟಿ, MD.,MRCP., ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನ ಮಂಗಳೂರು ವಿಭಾಗದ ಎಸೋಸಿಯೇಟ್ ಪ್ರೊಫೆಸರ್ ಆಫ್ ಮೆಡಿಸಿನ್, ಇವರು ಕದ್ರಿ ಕಂಬ್ಳ ರಸ್ತೆಯಲ್ಲಿ ನೂತನವಾಗಿ ಕಟ್ಟಿಸಿದ "ದಿ ಪೆಸಿಫಿಕ್" ಎಂಬ ಗೃಹಪ್ರವೇಶ ಸಮಾರಂಭದ ಸಲುವಾಗಿ ತಾ. 18.10.70ರಂದು ಸಂಜೆ ಉಪಾಹಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು. ನಗರದ ಮತ್ತು ಆಸುಪಾಸಿನ ಡಾಕ್ಟರುಗಳೂ ಅನೇಕ ಗಣ್ಯವ್ಯಕ್ತಿಗಳೂ ಆಗಮಿಸಿದ್ದರು.

ವಿವಾಹ—ಸತ್ಕಾರ ಸಮಾರಂಭ

ಉಡುಪಿಯ ಹಿರಿಯ ಮತ್ತು ಜನಪ್ರಿಯ ಡಾ| ಪಿ. ರಾಘವೇಂದ್ರ ನಾಯಕರು ತಾ.19 ರಂದು ಮಂಗಳೂರು ಸುಜೀರ್ ಸಿ.ವಿ. ನಾಯಕ್ ಹಾಲ್‌ನಲ್ಲಿ ತಮ್ಮ ಪುತ್ರ ಟಿ. ರಮೇಶ ನಾಯಕರ ವಿವಾಹವು ಶ್ರೀ ಪನಾರಿ ಗೋವಿಂದ ಪ್ರಭುಗಳ ಪುತ್ರಿ ಕು. ವಿಮಲಾರೊಡನೆ ಜರಗಿದ ವಿವಾಹದ ಸಂಬಂಧ ತಾ. 20ನೇ ಸಂಜೆ ಉಡುಪಿ ಕಾನ್ವೆಂಟ್ ರಸ್ತೆಯ ತಮ್ಮ ನಿವಾಸದಲ್ಲಿ ಸತ್ಕಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಇದಕ್ಕೆ ನಗರದ ಹಾಗೂ ಸುತ್ತಮುತ್ತಲಿನ ಪ್ರತಿಷ್ಠಿತರನೇಕರು ಆಗಮಿಸಿದ್ದರು.



ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಜಲ-ವಿದ್ಯುತ್ ಯೋಜನೆಗಳಿಗೆ ವಿಶ್ವಸಂಸ್ಥೆಯ ಸಹಕಾರ

ಲೇಖಕರು: ಶ್ರೀ ಕುರಿಯನ್ ಮ್ಯಾಥ್ಯೂ
ಕೇಂದ್ರ ಜಲವಿದ್ಯುತ್ ಆಯೋಗ.

ಭಾರತವು ವಿಶಾಲವಾದ ಸ್ಥಳದಿಂದ ಬಹಳ ಪ್ರಮಾಣದ ಅಪಾರ ಜಲಶಕ್ತಿ ಸಂಪನ್ಮೂಲ ಪಡೆದಿದೆ. ಇದುವರೆಗೆ ಈ ಅಪಾರ ಸಂಪನ್ಮೂಲದ ಅತ್ಯಲ್ಪಾಂಶವನ್ನು ಬಳಸಿಕೊಳ್ಳಲಾಗುತ್ತಿದೆ. ಈ ಸಂಪನ್ಮೂಲಗಳ ಅಭಿವೃದ್ಧಿಯ ತಡೆಗೆ ಆರ್ಥಿಕ—ತಾಂತ್ರಿಕ ಸಾಧ್ಯತೆಗಳ ಸಂಬಂಧಿಸಿದ ಸಮಗ್ರ ಮಾಹಿತಿಯ ಅಭಾವವೇ ಕಾರಣವಾಗಿದೆ. ಆದರೆ ಸಮೃದ್ಧ ಜಲಶಕ್ತಿ ಸಂಪನ್ಮೂಲ ಹಾಗೂ ಅದರ ಅಭಿವೃದ್ಧಿಯು ಮಿತವ್ಯಯ ದೇಶದ ವಿದ್ಯುದಭಿವೃದ್ಧಿ ಕಾರ್ಯಕ್ರಮದಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಕೇಂದ್ರ ಜಲ—ವಿದ್ಯುತ್ ಆಯೋಗವು 1953-58ರ ಅವಧಿಯಲ್ಲಿ ಮಾಡಿದ ಭಾರತದ ಜಲಶಕ್ತಿ ಸಂಪನ್ಮೂಲದ ಪ್ರಾರಂಭಿಕ ಸಮೀಕ್ಷೆಯಿಂದ ಆರ್ಥಿಕಾಭಿವೃದ್ಧಿಗೆ ಅನುಕೂಲವಾಗುವಂತೆ ದೇಶದಾದ್ಯಂತ 40 ಸಹಸ್ರ ಮೆಗಾವಾಟ್ ವಿದ್ಯುತ್ ಬಳಸಿಕೊಳ್ಳಬಹುದೆಂಬುದು ಗೋಚರವಾಯಿತು. ಮೂರನೇ ಯೋಜನೆಯ ಆರಂಭದ ವರೆಗೆ ಈ ಸಮೀಕ್ಷಾ ಅಧ್ಯಯನದ ಫಲಿತಾಂಶಗಳನ್ನು ವೈಜ್ಞಾನಿಕ ತಳಹದಿಯ ಮೇಲೆ ನಿಶ್ಚಯಿಸುವ ಪ್ರಯತ್ನ ನಡೆದಿರಲಿಲ್ಲ.

ತ್ವರಿತವಾಗಿ ವ್ಯಾಪಕಮಟ್ಟದಲ್ಲಿ ವಿವರವಾಗಿ ಕ್ಷೇತ್ರ ತನಿಖೆ ಕಾರ್ಯ ಕೈಗೊಳ್ಳುವ ಅಗತ್ಯ ಕಂಡು ಬಂದಿತು. ಆದರೆ ಒಮ್ಮೆಯೇ ಅಸಂಖ್ಯ ಯೋಜನೆಗಳ ತನಿಖೆ ಕಾರ್ಯ ಕೈಗೊಳ್ಳುವುದು ಜಟಿಲವಾಯಿತು. ಏಕೆಂದರೆ ವಿಶೇಷ ವಿನಿಮಯ ವಿಚಕ್ಷಣ ಸಿಬ್ಬಂದಿ ಹಾಗೂ ಆಂತರಿಕ ಸಂಪನ್ಮೂಲ ಸಜ್ಜುಗೊಳಿಸುವುದರ ಅಗತ್ಯ ಕಂಡುಬಂದಿತು. ಈ ಕಾರ್ಯಕ್ಕೆ ಅಗತ್ಯವಾದ ಅಸಂಖ್ಯ ಸಾಧನೋಪಕರಣಗಳ ಸರಬರಾಜು, ತನಿಖೆ ಕಾರ್ಯದ ವಿವಿಧ ರಂಗಗಳಲ್ಲಿ ತರಬೇತಿ ವ್ಯವಸ್ಥೆ ಏರ್ಪಡಿಸುವಿಕೆಗೆ ವಿದೇಶೀ ನೆರವಿಲ್ಲದೆ ಕಾರ್ಯಕ್ರಮ ಕಾರ್ಯಗತ ಮಾಡುವುದು ಕಷ್ಟಕರವಾಯಿತು.

ವಿಶೇಷ ನಿಧಿಯ ನೆರವು

ಅಭಿವೃದ್ಧಿಶೀಲ ದೇಶಗಳ ಸಂಘಟಿತ ತಾಂತ್ರಿಕ, ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ವಿಶ್ವಸಂಸ್ಥೆಯು 1958ನೇ ಇಸವಿಯಲ್ಲಿ ವಿಶೇಷ ನಿಧಿ ಆರಂಭಿಸಿತು. ಈ ವಿಶೇಷ ನಿಧಿಯಿಂದ ಜಲವಿದ್ಯುತ್ ಯೋಜನೆಗಳ ತನಿಖೆ ಕಾರ್ಯಕ್ಕೆ ಧನಸಹಾಯ ನೀಡಲು ನಿರ್ಧರಿಸಲಾಯಿತು.

ಭಾರತ ಸರ್ಕಾರವು ದೇಶದಾದ್ಯಂತ 12 ಸಹಸ್ರ ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಯೋಜನೆಯನ್ನು ಸಿದ್ಧಪಡಿಸಿ ವಿಶ್ವಸಂಸ್ಥೆಯ ಸಹಾಯ ಕೋರಿತು. ಈ ಜಂಟಿ ಯೋಜನೆಯನ್ನು ಕಾರ್ಯಗತಗೊಳಿಸಲು 1962ನೇ ಇಸವಿಯಲ್ಲಿ ಅಂಕಿತ ಹಾಕಲಾಯಿತು. ಅದರ ಪ್ರಕಾರ ತನಿಖೆ ಕಾರ್ಯಕ್ಕೆ ಸಾಧನೋಪಕರಣಕೊಳ್ಳಲು ಹಾಗೂ ತಾಂತ್ರಿಕ ತಜ್ಞರ ನೆರವು ನೀಡಲು 2,351,900 ಡಾಲರ್ ಸಹಾಯ ಧನ ನೀಡಿತು. 1963ನೇ ಇಸವಿ ಎಪ್ರಿಲ್ ಮಾಸದಿಂದ ಆರಂಭವಾದ ಈ ಯೋಜನೆಯ ಸಮೀಕ್ಷಾ ಕಾರ್ಯದ ಹೊಣೆಯನ್ನು ಕೇಂದ್ರ ಜಲ-ವಿದ್ಯುತ್ ಆಯೋಗ ವಹಿಸಿಕೊಂಡಿತು.

62 ಜಲ—ವಿದ್ಯುತ್ ಯೋಜನೆಗಳ ತಾಂತ್ರಿಕ—ಆರ್ಥಿಕ ಸಾಧ್ಯಾಸಾಧ್ಯತೆ ಕುರಿತು ವಿಸ್ತೃತ ತನಿಖೆ ಕಾರ್ಯ ಆರಂಭವಾಯಿತು. ಇದಕ್ಕಾಗಿ ಕೇಂದ್ರ ಮಣ್ಣಿನ ಗುಣ ಸಂಶೋಧನಾ ಕೇಂದ್ರ ಸ್ಥಾಪಿಸಲಾಯಿತು. ಭಾರತ ಸಮೀಕ್ಷಾ ಸಂಸ್ಥೆಯನ್ನು ಬಲಪಡಿಸಲಾಯಿತು. ತನಿಖೆ ಕಾರ್ಯಕ್ಕೆ ಬೇಕಾಗುವ ಸಿಬ್ಬಂದಿಯ ತರಬೇತಿಗೆ ವ್ಯವಸ್ಥೆ ಮಾಡಲಾಯಿತು. ತೀವ್ರವೇಗದಲ್ಲಿ ಪ್ರಗತಿಸಾಧಿಸಿದ ಈ ಕಾರ್ಯದಿಂದ ನದಿ ಕಣಿವೆ ಯೋಜನೆಗಳಿಗೆ ಅಗತ್ಯ ಪ್ರೋತ್ಸಾಹ ದೊರಕಿತು.

ಈ ಯೋಜನೆಯ ಆಶ್ರಯದಲ್ಲಿ ಸಾಧನೋಪಕರಣಗಳ ಸರಬರಾಜಿಗೆ ಆದ್ಯತೆ ನೀಡಲಾಯಿತು. ವಿಶ್ವಸಂಸ್ಥೆಯ ಕಾರ್ಯ ಸಮನ್ವಯದಿಂದ ಇದನ್ನು ಸಾಧಿಸಲಾಯಿತು. ತನಿಖೆ ಕಾರ್ಯಕ್ಕೆ ಅಡಚಣೆಯಾಗದಂತೆ ನೋಡಿಕೊಳ್ಳಲಾಯಿತು. ನದಿ ಕಣಿವೆಯೋಜನೆಯ ಯಥಾರ್ಥತೆ ನಿರ್ಧರಿಸಲು ಅಗತ್ಯವಾದ ಭೂಗರ್ಭ ಕೊರೆತಕ್ಕೆ ಮೂರು ತರಬೇತಿ ಕಾರ್ಯಕ್ರಮ ಏರ್ಪಡಿಸಿ 89ವರಿಗೆ ತರಬೇತಿ ನೀಡಲಾಯಿತು. ಈ ಕಾರ್ಯಕ್ಕೆ ವಿಶ್ವಸಂಸ್ಥೆಯು ಇಬ್ಬರು ತಜ್ಞರ ಸೇವೆಯನ್ನು ಎರವಲು ನೀಡಿತು. ಕೇಂದ್ರ ಮಣ್ಣಿನ ಗುಣ ಸಂಶೋಧನಾ ಕೇಂದ್ರಕ್ಕೆ 3.5ಲಕ್ಷ ಡಾಲರ್ ಬೆಲೆಯ ಉಪಕರಣ ನೀಡಿತು.

ಜ್ವಲಂತ ನಿದರ್ಶನ

ವಿಶ್ವಸಂಸ್ಥೆಯ ಸಹಾಯ ಯೋಜನೆಯ ಆಶ್ರಯದಲ್ಲಿ ಕೈಗೊಂಡ 62ಯೋಜನೆಗಳ ತನಿಖಾ ಕಾರ್ಯ ಮುಕ್ತಾಯವಾಗಿದೆ. 27ಯೋಜನೆಗಳ ಬಗ್ಗೆ ವರದಿ ತಯಾರಿಸಲಾಗಿದೆ. ಐದು ಯೋಜನೆಗಳಿಗೆ ತಾಂತ್ರಿಕ ಅನುಮತಿ ದೊರಕಿ ಅವು ಅನುಷ್ಠಾನಕ್ಕೆ ಬರುವ ಹಂತದಲ್ಲಿವೆ. ಈಗಾಗಲೇ ತಮಿಳುನಾಡಿನ ಪಂಡಿಯಾರ್ ಪನ್ನಪುಳ ಜಲವಿದ್ಯುತ್ ಯೋಜನೆ ಆರಂಭಿಸಲಾಗಿದೆ.

ಈ ತನಿಖಾ ಕಾರ್ಯದ ಆಶ್ರಯದಲ್ಲಿ ಮೈಸೂರು ರಾಜ್ಯದ ಕಾಳಿನದಿ, ವರಾಹಿ, ಬೇಡ್ತಿ, ಕಾವೇರಿ, ಅಘನಾಶಿನಿ, ಬಾರಪೊಳೆ ಮಹಾದಯಿ ಯೋಜನೆಗಳು ಸೇರಿವೆ. ಈ ಕಾರ್ಯದ ಸಾಧನೆ ಅದ್ಭುತವಾಗಿದೆ. ತನಿಖೆ ಮುಕ್ತಾಯವಾಗಿರುವ ಯೋಜನೆಗಳನ್ನು ಕಾರ್ಯಗತಮಾಡಿ ಅದರಿಂದ ವಿಪುಲ ಸೌಲಭ್ಯಗಳು ದೊರಕಿದಾಗ ಇದರ ಪ್ರಭಾವದ ಅರಿವಾಗುತ್ತದೆ. ಇದಕ್ಕೆ ವಿಶ್ವಸಂಸ್ಥೆಯ ಸಕ್ರಿಯ ಸಹಕಾರ, ಸಹಾಯಗಳೇ ಮುಖ್ಯ ಕಾರಣವಾಗಿವೆ. ಈ ಜಂಟಿಯೋಜನೆ ಸಹಕಾರ ಸಾಧನೆಯ ಜ್ವಲಂತ ನಿದರ್ಶನವಾಗಿದೆ.

ಭಾರತದ ಕ್ಷಯರೋಗ ಸಮಿತಿ

(21ನೆಯ ಟಿ. ಬಿ. ಮುದ್ರೆ ಮಾರಾಟ ಚಳವಳಿ)

ಕ್ಷಯರೋಗದ ಕುರಿತು ನೀವು ತಿಳಿಯಬೇಕಾದುದೇನು ?

1. ಕ್ಷಯರೋಗದ ಹರಡುವಿಕೆಗೆ ಒಂದೇ ಒಂದು ಕಾರಣವೆಂದರೆ ಕ್ಷಯ ರೋಗಾಣುಗಳ ಸೋಂಕಣೆಯಾಗಿದೆ; ಮೊದಲೇ ಕ್ಷಯರೋಗದಿಂದ ನರಳುವವನೇ ಈ ಸೋಂಕಣೆಗೆ ಹೇತುವಾಗಿದ್ದಾನೆ.
2. ಕ್ಷಯರೋಗಕ್ಕೆ ಒಳಗಾದವನನ್ನು ತ್ವರಿತವಾಗಿ ಶೋಧಿಸಿ ಚಿಕಿತ್ಸೆ ನಡೆಸಿದರೆ ಗುಣವಾಗುವ ಸಂದರ್ಭ ಉತ್ತಮವಾಗಿದೆ.
3. ಟಿ. ಬಿ. ರೋಗಾಣುಗಳು ದೇಹದ ಯಾವದೇ ಭಾಗವನ್ನಾದರೂ ಆಕ್ರಮಿಸಬಹುದು. ಆದರೆ ಶ್ವಾಸಕೋಶದ ರೋಗವು ಅತ್ಯಂತ ಅಪಾಯಕಾರಿ.
4. ಆರಂಭದಲ್ಲಿ ಕ್ಷಯವು ಮುನ್ಸೂಚನೆ ಕೊಡುವುದಿಲ್ಲ. ರೋಗದ ಯಾವದೇ ಚಿಹ್ನೆಯನ್ನು ಕಾಣಲು ದೀರ್ಘ ಸಮಯ ಕಳೆಯಬಹುದು.
5. ಸಾಮಾನ್ಯವಾಗಿ ಆರಂಭದ ಚಿಹ್ನೆಗಳೆಂದರೆ ಆಯಾಸ, ಹಸಿವು ಮತ್ತು ಭಾರ ಕುಂದುವಿಕೆ, ಕಫ, ಜ್ವರ ಮತ್ತು ಅನೇಕ ಸಂದರ್ಭಗಳಲ್ಲಿ ರೋಗವು ಬಹಳ ಮುಂದುವರಿದಾಗ ರಕ್ತವನ್ನು ಉಗುಳುವ ಸಂಭವ ಬರಬಹುದು.
6. ಉಗುಳು ಪರೀಕ್ಷೆ ಮತ್ತು ಎದೆಯ ಎಕ್ಸ್‌ರೇ ಕ್ಷಯವನ್ನು ಕಂಡುಹಿಡಿಯಲು ಸಹಕಾರಿ.
7. ಕ್ಷಿಪ್ರ ರೋಗ ಪರೀಕ್ಷೆ, ಕ್ರಮಬದ್ಧವಾದ ಚಿಕಿತ್ಸೆ ಇವುಗಳಿಂದ ನಿಶ್ಚಿತ ಗುಣ.
8. ನೆನಪಿಡತಕ್ಕ ಪ್ರಾಮುಖ್ಯ ವಿಷಯವೆಂದರೆ ಕ್ಷಯರೋಗವು ಗುಣಪಡಿಸತಕ್ಕ ರೋಗವೆಂಬುದು. ಏಕೆಂದರೆ ವಿಶಿಷ್ಟ ಪ್ರಕಾರದ ಔಷಧಗಳು ದೊರೆಯುತ್ತವೆ.

ಕ್ಷಯರೋಗವನ್ನು ಪರೀಕ್ಷೆ ಮಾಡಲಿಕ್ಕೂ ರೋಗಿಗಳನ್ನು ಅವರ ಮನೆಗಳಿಂದ ಚಿಕಿತ್ಸೆ ನಡೆಸಲಿಕ್ಕೂ ಸುಸಜ್ಜಿತವಾದ ಮತ್ತು ಸಾಕಷ್ಟು ಸಿಬ್ಬಂದಿಯುಳ್ಳ ಟಿ. ಬಿ. ಕ್ಲಿನಿಕ್‌ಗಳು ಅತ್ಯಗತ್ಯ. ಚಿಕಿತ್ಸೆಯನ್ನು ಮೇಲ್ವಿಚಾರ ಮಾಡಲಿಕ್ಕೂ ಮತ್ತು ರೋಗಿಗಳು ತಪ್ಪದೆ ಸಲಹೆಯಂತೆ ಔಷಧಿ ಸೇವಿಸುವಂತೆ ನೋಡುವುದಕ್ಕೂ ಈ ಕ್ಲಿನಿಕ್‌ಗಳಿಗೆ ಆರೋಗ್ಯ ಸಂದರ್ಶಕರು ಇರುತ್ತಾರೆ.



ದಯಮಾಡಿ ಟಿ. ಬಿ. ಮುದ್ರೆಗಳನ್ನು ಖರೀದಿಸಿರಿ ಮತ್ತು ನಿಮಗೆ ಸಹಾಯ ಮಾಡುವಂತೆ ನಿಮ್ಮ ರಾಜ್ಯದ ಟಿ. ಬಿ. ಸಮಿತಿಗೆ ಸಹಾಯ ಮಾಡಿರಿ.

ಒಂದು ಟಿ. ಬಿ. ಮೊಹರಿನ ಬೆಲೆ ಬರೇ 10 ಪೈಸೆ

ಮುದ್ರೆಗಳು ಮಾರಾಟಕ್ಕೆ ಸಿಗುವ ಸ್ಥಳಗಳು: ದ. ಕ. ಜಿಲ್ಲಾ ಟಿ. ಬಿ. ಅಸೋಸಿಯೇಷನ್, ಮಂಗಳೂರು; ಆಸ್ಪತ್ರೆಗಳು, ಟಿ.ಬಿ.ಕ್ಲಿನಿಕ್‌ಗಳು, ಬೆಂಕುಗಳು ಇತ್ಯಾದಿ.

Space donated By
Tea Estates India Private Limited, Coonoor,

ಜನಮತ

ಕಿಲ್ಲೂರು ಹಳ್ಳಕ್ಕೆ ಮುಳುಗು ಸೇತುವೆ

ಬೆಳ್ತಂಗಡಿ ತಾಲೂಕು ಅಭಿವೃದ್ಧಿ ಮಂಡಳಿಯು ಕಿಲ್ಲೂರು ಹಳ್ಳಕ್ಕೆ ಶಾಶ್ವತ ಕಾಲು ಸಂಕ ಹಾಕಿಸಲು ಈ ಬಾರಿ ಯೋಚಿಸಿದೆ ಎಂತಲೂ ಈ ಬಗ್ಗೆ ಪಂಚಾಯತಿ ಖರ್ಚಿಯ ಅವಶ್ಯವುಂಟೆಂತಲೂ ಕೇಳಿದ್ದೇವಾಗಿ ವರದಿ.

ಕಳೆದ 1962ರಲ್ಲಿ ಇದೇ ಹಳ್ಳಕ್ಕೆ ಮುಳುಗು ಸೇತುವೆ ರಚನೆಯು ಆಗಿನ ಶಾಸನ ಸಭೆ ರಚಿಸಲು ಆಗಿನ ಶಾಸನ ಸಭಾ ಸದಸ್ಯರೂ ಸ್ಥಾಪಕರುಗಳೂ ಆಗಿದ್ದವರುಗಳು ಸಂಚಿಸಿ ಆ ಪ್ರಕಾರ ಪಂಚ್ಯಾತು ಕಾರ್ಯ ಮತ್ತು ಅಗತ್ಯವುಳ್ಳ ದಾಖಲೆಗಳೊಂದಿಗೆ ಮಾಡಿಕೊಂಡ ಪತ್ರ ವ್ಯವಹಾರಗಳು ಮತ್ತು ಸಾರ್ವಜನಿಕ ಕಾಮಗಾರಿ ಇಲಾಖೆಯವರು ತಯಾರಿಸಿದ ಎಸ್ಟಿಮೇಟು ಇವುಗಳೆಲ್ಲಾ ಸಿದ್ಧಪಡಿಸಲಾಗಿತ್ತು. ಸರ್ಕಾರಿ ಹಣದ ಕೊರತೆಗಾಗಿ ಈ ಕೆಲಸ ಬಾಕಿ ಉಳಿಸಿತ್ತೆಂತ ಊರವರು ಭಾವಿಸಿದ್ದರು. ಈಗ ತಾಲೂಕು ಅಭಿವೃದ್ಧಿ ಮಂಡಳಿಯವರು ಆ ಹಳ್ಳಕ್ಕೆ ಕಾಲುಸಂಕ ನಿರ್ಮಾಣದ ಯೋಜನೆ ಮಾಡುವುದನ್ನು ಕೇಳುವಾಗ, ಈ ಹಿಂದೆ ಮುಳುಗು ಸೇತುವೆಗಾಗಿ ಕೈಕೊಂಡ ಕಾರ್ಯಗಳು ವ್ಯರ್ಥ ಮತ್ತು ಆ ಕೆಲಸವನ್ನು ಸರಕಾರ ಕೈಬಿಟ್ಟಿತು ಎಂತ ಭಾವಿಸಬೇಕಾಗುತ್ತದೆ. ದಿನವಹಿ ಈ ಊರಿನಿಂದ ಬ್ಯಾದು ಬಸ್ ಸರ್ವೀಸುಗಳು ಓಡಾಡುತ್ತಿದ್ದು ಹತ್ತಾರು ಕಾರುಗಳು ಬಾರಾಗುವ ಈ ಊರಿನ ಹಳ್ಳಕ್ಕೆ ಅವಶ್ಯವೆಂತ ತೀರ್ಮಾನಿಸಲ್ಪಟ್ಟು ಇಲಾಖೆಯಿಂದ ಪ್ಲೇನ್ ಎಸ್ಟಿಮೇಟ್ ತಯಾರಿಸಿದ್ದರೂ ಕಾಮಗಾರಿಯನ್ನು ಕೈಬಿಡುವುದೆಂದರೆ ಸರಕಾರ ಗ್ರಾಮಾಂತರ ಪ್ರದೇಶದ ಜನರಿಗೆ ಸಹಕಾರ ಮಾಡುವ ಬದಲು ದ್ರೋಹ ಬಗೆಯುತ್ತಿದೆ ಎಂತಲೇ ಭಾವಿಸಬೇಕಾಗುತ್ತದೆ. ಈ ಹಳ್ಳಕ್ಕೆ ಮುಳುಗು ಸೇತುವೆಯೇ ಅಗತ್ಯವಾದ ಪಯುಕ್ತ ಬೆಳ್ತಂಗಡಿ ಅಭಿವೃದ್ಧಿ ಸಮಿತಿಯವರು, ಕಾಲುಸಂಕದ ಕೆಲಸವನ್ನು ಬದಿಗಿಟ್ಟು ಈ ಹಿಂದೆ ನೀಡಲಾದ ಪ್ರಸ್ತಾವನೆ ಕೈಗೂಡುವಂತೆ ಪ್ರಯತ್ನಿಸಿ ಗ್ರಾಮಗಳ ಏಳಿಗೆಯನ್ನು ಸಾಧ್ಯವಾಗಿಸಬೇಕಾಗಿ ವಿನಂತಿ.

ಗ್ರಾಮಸ್ಥರ ಪರವಾಗಿ,
ಬಿ. ಕೆ. ವೆಂಕಟಸುಬ್ಬರಾವ

ಸಂಗ್ರಾಹ್ಯ ಸಂಕಲನಗಳು

ಶಿಲ್ಪಿ	5
ಪ್ರತಿಜ್ಞಾ ಪೂರ್ತಿ	0
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನ ಕಲೆ	1—00
ಅನುವಾದಿತ ಕತೆಗಳು	1—20

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಾಮೂಹಿಕಾಭಿವೃದ್ಧಿಯ ನಿರಂತರ ಯೋಜನೆ

ಗ್ರಾಮಾಂತರ ಪ್ರದೇಶಗಳ ಸಂಘಟಿತ ಅಭಿವೃದ್ಧಿಗಾಗಿ ರೂಪಿಸಿರುವ ಸಾಮೂಹಿಕಾಭಿವೃದ್ಧಿ ಯೋಜನೆ ಮತ್ತು ಪಂಚಾಯಿತಿ ರಾಜ್ಯ ಕಾರ್ಯಕ್ರಮಗಳಲ್ಲಿ ನಂಬಿಕೆ ವ್ಯಕ್ತಪಡಿಸುವಾಗ, ಈ ಕಾರ್ಯಕ್ರಮಗಳು ಗ್ರಾಮೀಣ ಸಮಾಜದ ವಿವಿಧ ವರ್ಗದ ಜನತೆಯಲ್ಲಿ ರೂಢಿಸಿರುವ ಸಾಮಾಜಿಕ, ಸೌಹಾರ್ದತೆಯ ಅಪೇಕ್ಷಾ ಪಾತ್ರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಬೇಕಾಗುತ್ತದೆ.

ಸಾಮೂಹಿಕಾಭಿವೃದ್ಧಿ ಕಾರ್ಯಕ್ರಮವನ್ನು ಮುಂದುವರೆಸಲು ಸೂಕ್ತ ಸಂಪನ್ಮೂಲಗಳನ್ನು ನೀಡುವಂತೆ ರಾಜ್ಯ ಸರ್ಕಾರಗಳಿಗೆ ತಿಳಿಸಲಾಗಿದೆ. ವಿವಿಧ ಶಾಖೆಗಳ ಅಭಿವೃದ್ಧಿ ನಿಧಿಯನ್ನು ಸಾಮೂಹಿಕಾಭಿವೃದ್ಧಿ ಘಟಕಗಳ ಮೂಲಕ ಹೋಗುವಂತೆ ಮಾಡಲು ಪರಿಣಾಮಕಾರಿಯಾಗಿ ಅಂತರ—ಶಾಖಾ ಕಾರ್ಯ ಸಮನ್ವಯವನ್ನು ರಾಜ್ಯ ಸರ್ಕಾರಗಳು ಸಾಧಿಸಬೇಕಾಗುತ್ತದೆ.

ಯೋಜನಾ ಕಾರ್ಯಕ್ರಮ ಅನುಷ್ಠಾನದ ಬಗ್ಗೆ ರಚಿಸಿದ್ದ ಬಲವಂತರಾಯ್ ಮೆಹ್ತಾ ಸಮಿತಿಯ ಶಿಫಾರಸುಗಳ ಪ್ರಕಾರ ಘಟಕಗಳ ಆರ್ಥಿಕ ವ್ಯವಸ್ಥೆಗಾಗಿ ಹತ್ತು ವರ್ಷದ ಯೋಜನೆ ರೂಪಿಸಲಾಗಿದೆ.

ಸತತ ಸಹಾಯಧನ

1968ನೇ ಇಸವಿ ಜೂನ್ ಮಾಸದಲ್ಲಿ ನಡೆದ ರಾಜ್ಯ ಮುಖ್ಯಮಂತ್ರಿಗಳು ಮತ್ತು ಸಾಮೂಹಿಕಾಭಿವೃದ್ಧಿ ಶಾಖೆ ಸಚಿವರುಗಳ ಸಮ್ಮೇಳನದ ಶಿಫಾರಸಿನಂತೆ ಪ್ರಾಥಮಿಕ ಹಾಗೂ ಮುಂದುವರಿದ ಹಂತಗಳಲ್ಲಿರುವ ಅಭಿವೃದ್ಧಿ ಘಟಕಗಳಿಗೆ ಸತತವಾಗಿ ಸಹಾಯಧನ ನೀಡಬೇಕಾಗುತ್ತದೆ. ಎರಡನೇ ಹಂತವನ್ನು ಮೀರಿರುವ ಘಟಕಗಳಿಗೆ ವಾರ್ಷಿಕ 40 ಸಹಸ್ರ ರೂಪಾಯಿ ನೀಡಲು ಅಂತಿಮವಾಗಿ ನಿರ್ಧರಿಸಲಾಗಿದೆ.

ಘಟಕಗಳ ಮೂಲಕ ರವಾನೆಯಾದ ಶಾಖಾ ನಿಧಿಯು 1960—61ನೇ ಸಾಲಿನಲ್ಲಿ 32·97 ಕೋಟಿ ರೂಪಾಯಿಯಿದ್ದಿತು. ಈ ಮೊತ್ತ 1966—67ನೇ ಸಾಲಿನಲ್ಲಿ 206·33 ಕೋಟಿ ರೂಪಾಯಿಗೇರಿತು. ಈಚಿನ ವರ್ಷಗಳಲ್ಲಿ ಈ ಮೊತ್ತದ ಮಟ್ಟವನ್ನು ಕಾಪಾಡಿಕೊಂಡು ಬರಲಾಗಿದೆ.

ಇಡೀ ಗ್ರಾಮೀಣ ಭಾರತವನ್ನು 5268 ಸಾಮೂಹಿಕಾಭಿವೃದ್ಧಿ ಘಟಕಗಳಾಗಿ ವಿಂಗಡಿಸಲಾಗಿದೆ. ಕಳೆದ ವರ್ಷ ಸೆಪ್ಟಂಬರ್ ಮಾಸಾಂತ್ಯದಲ್ಲಿ 674 ಘಟಕಗಳು ಪ್ರಥಮ ಹಂತದಲ್ಲೂ 2275 ಘಟಕಗಳು ದ್ವಿತೀಯ ಹಂತದಲ್ಲೂ ಮಿಕ್ಕ 2319 ಘಟಕಗಳು ಎರಡನೇ ಹಂತಕ್ಕಿಂತ ಹೆಚ್ಚಿನ ಮಟ್ಟದಲ್ಲೂ ಇದ್ದುವು.

ಎರಡು ಮತ್ತು ಮೂರನೆಯ ಯೋಜನಾವಧಿಯಲ್ಲಿ 43 ವಿಶೇಷ ವಿವಿಧೋದ್ದೇಶ ಬುಡಕಟ್ಟು ಘಟಕಗಳೂ, 415 ಬುಡಕಟ್ಟು ಅಭಿವೃದ್ಧಿ ಘಟಕಗಳೂ ಅಸ್ತಿತ್ವಕ್ಕೆ ಬಂದುವು. 1966-67ನೇ ಸಾಲಿನಲ್ಲಿ ವಿವಿಧ ರಾಜ್ಯಗಳಲ್ಲಿ 31 ಬುಡಕಟ್ಟು ಅಭಿವೃದ್ಧಿ ಘಟಕಗಳನ್ನು ಸ್ಥಾಪಿಸಲಾಯಿತು.

ಸಾಮೂಹಿಕಾಭಿವೃದ್ಧಿ ಶಾಖೆಯು ಕೃಷಿ, ಮತ್ತಿತರ ಕಾರ್ಯಕ್ರಮಗಳಿಗೆ ಅಗ್ರಮಾನ್ಯತೆ ನೀಡಿದೆ. ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮುಂತಾದ ಕ್ಷೇತ್ರ ಕಾರ್ಯಕ್ರಮದ ಅನುಷ್ಠಾನ; ಬೀಜ, ಗೊಬ್ಬರ ಮತ್ತು ಕೀಟನಾಶಕಗಳ ಹಂಚಿಕೆ; ಸಣ್ಣ ನೀರಾವರಿ ಕಾರ್ಯಗಳ ರಚನೆ ಹಾಗೂ ವ್ಯವಸ್ಥೆ, ಪರಿಷ್ಕೃತ ಕೃಷಿ ವಿಧಾನಗಳು ಮತ್ತು ಸಾಧನೋಪಕರಣಗಳನ್ನು ಜನಪ್ರಿಯಗೊಳಿಸುವಿಕೆ; ಪ್ರದರ್ಶನ ಕ್ಷೇತ್ರಗಳು ಮತ್ತು ಕೃಷಿ ಪ್ರದರ್ಶನಗಳ ವ್ಯವಸ್ಥೆ; ಉತ್ತಮ ಉತ್ಪಾದನೆ ಸಾಧಿಸುವಂತೆ ಬೇಸಾಯಗಾರರನ್ನು ಸಜ್ಜುಗೊಳಿಸಿ ಹುರಿದುಂಬಿಸುವಿಕೆ—ಈ ಕಾರ್ಯಗಳು ಸಾಮೂಹಿಕಾಭಿವೃದ್ಧಿಯ ಶಾಖೆಯ ಹೊಣೆಗಾರಿಕೆಯಾಗಿದೆ.

ವಿವಿಧ ಕಾರ್ಯಕ್ರಮ

1969ನೇ ಇಸವಿ ಸಪ್ಟೆಂಬರ್ ಮಾಸಾಂತ್ಯಕ್ಕೆ ಮುಕ್ತಾಯವಾದ ವಾರ್ಷಿಕ ಸಾಲಿನಲ್ಲಿ 49 ಲಕ್ಷ ಟನ್ ರಾಸಾಯನಿಕ ಗೊಬ್ಬರಗಳನ್ನು 39,382 ಟನ್ ಕೀಟನಾಶಕಗಳನ್ನು ದೇಶದ ವಿವಿಧ ಅಭಿವೃದ್ಧಿ ಘಟಕಗಳಲ್ಲಿ ಹಂಚಲಾಗಿತ್ತು. 5 ಲಕ್ಷ ಟನ್‌ಗಳಿಗಿಂತಲೂ ಹೆಚ್ಚು ಪರಿಷ್ಕೃತ ಬೀಜಗಳನ್ನೂ 6·25 ಲಕ್ಷಕ್ಕಿಂತಲೂ ಹೆಚ್ಚು ಸುಧಾರಿತ ಸಾಧನೋಪಕರಣಗಳನ್ನು ವಿತರಣೆ ಮಾಡಲಾಗಿತ್ತು. 15 ಲಕ್ಷ ಹೆಕ್ಟೇರ್ ಕೃಷಿ ಪ್ರದೇಶವನ್ನು ಉತ್ತಮಪಡಿಸಿ, 38 ಲಕ್ಷ ಹೆಕ್ಟೇರ್ ಕೃಷಿ ಪ್ರದೇಶದಲ್ಲಿ ಹಸಿರು ಗೊಬ್ಬರವನ್ನು ಬಳಸಿ, 12 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತರಕಾರಿ ಬೆಳೆಯನ್ನು ತೆಗೆಯಲಾಯಿತು.

ಎರಡನೇ ಯೋಜನೆಯ ಅವಧಿಯಲ್ಲಿ ಅಭಿವೃದ್ಧಿ ಘಟಕಗಳ ಆಯವ್ಯಯದಲ್ಲಿ ಗ್ರಾಮೀಣ ಕೈಗಾರಿಕಾ ವೆಚ್ಚವು ಶೇಕಡ 5.4 ರಷ್ಟಿತ್ತು. ಇದು 1968-69ರಲ್ಲಿ ಶೇಕಡ 6.6ಕ್ಕೇರಿತು. ಪ್ರಥಮ, ದ್ವಿತೀಯ ಹಾಗೂ ತೃತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಘಟಕಗಳ ಅಭಿವೃದ್ಧಿ ಆಯವ್ಯಯದಲ್ಲಿ ಆರೋಗ್ಯ, ಗ್ರಾಮೀಣ ನಿರ್ಮಲೀಕರಣ, ಶಿಕ್ಷಣ ಮತ್ತು ಸಾಮಾಜಿಕ ಶಿಕ್ಷಣಕ್ಕೆ ಶೇಕಡ 28, ಶೇಕಡ 30 ಹಾಗೂ ಶೇಕಡ 28ರಷ್ಟು ವೆಚ್ಚ ಮಾಡಲಾಯಿತು. ಸಂಪರ್ಕ ಮತ್ತು ವಸತಿ ಕಾರ್ಯಕ್ರಮಕ್ಕೆ ಮೂರು ಯೋಜನೆಗಳ ಅವಧಿಯಲ್ಲಿ ತಲಾ ಶೇಕಡ 21 ಶೇಕಡ 18 ಮತ್ತು ಶೇಕಡ 16ರಷ್ಟು ವೆಚ್ಚ ಮಾಡಲಾಯಿತು.

ಶ್ರೀ ಶಿವರಾಯರ ನಿಧನ

ಉಡುಪಿಯ ಶಿಕ್ಷಣ ಕ್ಷೇತ್ರದಲ್ಲಿ ಖ್ಯಾತನಾಮರಾದ ಶ್ರೀ ಯು. ಶಿವರಾಯರು ತಾ. 26-10-70ರಂದು ತನ್ನ 62ನೆಯ ವಯಸ್ಸಿನಲ್ಲಿ ದೈವಾಧೀನರಾದರು. ಶಿರ್ವ ಹಿಂದೂ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿಯೂ ಅನಂತರ ಸೈಂಟ್ ಸಿಸಿಲೀಸ್ ಕಾನ್ವೆಂಟಿನ ವಿಜ್ಞಾನ ಅಧ್ಯಾಪಕರಾಗಿಯೂ ದುಡಿದು ಎರಡು ವರ್ಷಗಳ ಕೆಳಗೆ ನಿವೃತ್ತರಾದ ಶ್ರೀಯುತರು ಮುಂಬಯಿಯ ಕನ್ನಡಿಗರ ಕರೆಯ ಮೇರೆಗೆ ಕಳೆದ ವರ್ಷವಷ್ಟೇ ಮುಂಬಾಯಿಯ ಚೆಂಬೂರು ಕರ್ನಾಟಕ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ಅಧಿಕಾರ ಸ್ವೀಕರಿಸಿದ್ದರು. ದಿವಂಗತರು ತಮ್ಮ ವೃದ್ಧ ತಾಯಿ, ಧರ್ಮಪತ್ನಿ ಮತ್ತು ಮಕ್ಕಳನ್ನು ಅಗಲಿ ಹೋಗಿರುವರು.

ಉಚಿತ ಕಾನೂನು ಸಲಹೆ ಕೊಡಲು 'ತೆರಿಗೆ ವಿರೋಧಿ ಕ್ರಿಯಾ ಸಮಿತಿ'ಯ ನಿರ್ಧಾರ

ಉಡುಪಿ: 'ತೆರಿಗೆ ಹೆಚ್ಚಳ'ದ ವಿರುದ್ಧ ಉಡುಪಿ ನಾಗರಿಕರು ಅಸಿಸ್ಟೆಂಟ್ ಕಮಿಷನರಲ್ಲಿ ದಾಖಲು ಮಾಡಿದ ರಿವಿಜನ್ ಅರ್ಜಿಗಳು ಕೂಡಲೆ ತನಿಖೆಗೆ ಬರಲಿವೆ. ಆ ಸಂದರ್ಭದಲ್ಲಿ — ನಾಗರಿಕರು ವಿನಂತಿಸಿದಲ್ಲಿ "ತೆರಿಗೆ ವಿರೋಧಿ" ಕ್ರಿಯಾ ಸಮಿತಿಯು ಕಡೆಯಿಂದ ಉಚಿತವಾಗಿ ಕಾನೂನು ಸಹಾಯ ಕೊಡಿಸಬೇಕೆಂದು ತಾ. 22ರಂದು ಜೋನ್ ಬೋಸ್ಕೊ ಕ್ಲಬ್ಬಿನಲ್ಲಿ ಶ್ರೀ ಎ. ಜಿ. ಅಲ್ಸೆಯವರ ಅಧ್ಯಕ್ಷತೆಯಲ್ಲಿ ಸೇರಿದ ತೆರಿಗೆ ವಿರೋಧಿ ಕ್ರಿಯಾ ಸಮಿತಿಯ ಸಭೆಯಲ್ಲಿ ನಿರ್ಧರಿಸಲಾಯಿತು. ರಿವಿಜನ್ ಅರ್ಜಿಗಳನ್ನು ಕ್ರಿಯಾ ಸಮಿತಿಯ ಪರವಾಗಿ ವಾದಿಸಲು ಎಡ್ವೋಕೇಟರುಗಳಾದ ಶ್ರೀ ಬೈಲೂರು ವಾಸುದೇವ ರಾವ್, ಶ್ರೀ ವರದರಾಯ ಪೈ ಮತ್ತು ಶಿರ್ವದ ಶ್ರೀ ವಿಲಿಯಂ ಪಿಂಟೋ ಇವರನ್ನು ನೇಮಿಸಲಾಯಿತು.

ಪ್ರಧಾನ ಕಾರ್ಯದರ್ಶಿ ಶ್ರೀ ವಿಲಿಯಂ ಪಿಂಟೋರವರು ತಮ್ಮ ವರದಿಯನ್ನೊಪ್ಪಿಸಿ ನೆರವಾದವರ ಉಪಕಾರ ಸ್ಮರಿಸಿದರು. ಅಭಿಪ್ರಾಯ ವಿನಿಮಯವಾದ ಬಳಿಕ ಅಧ್ಯಕ್ಷ ಶ್ರೀ ಎ. ಜಿ. ಅಲ್ಸೆಯವರು "ಕ್ರಿಯಾ ಸಮಿತಿಯವರು ಉಡುಪಿ ಮುನಿಸಿಪಾಲಿಟಿ ತೆರಿಗೆ ಪುನರ್ವಿಮರ್ಶೆ ವಿರುದ್ಧ ಜನಜಾಗೃತಿ ಉಂಟಾಗುವಂತೆ ಮಾಡಿರುವುದು ಶ್ಲಾಘನೀಯ. ಅನ್ಯಾಯ ಬಹಳವಾಗಿದ್ದರೂ ಪ್ರಜ್ಞ ನಾಗರಿಕರು ತಾಳ್ಮೆ ತಪ್ಪಿಲ್ಲ. ತಾಳ್ಮೆ ತಪ್ಪುವ ಪರಿಸ್ಥಿತಿ ಬಾರದಂತೆ ಉಡುಪಿ ನಗರ ಸಭೆಯ ಬಹುಮತ ಪಕ್ಷಕ್ಕೆ ಸೇರಿದವರು ಪ್ರಯತ್ನಿಸುತ್ತಿದ್ದರೆ ಒಳ್ಳೆಯದಿತ್ತು. ತೆರಿಗೆ ವಿರೋಧಿ ಕ್ರಿಯಾ ಸಮಿತಿಯ ಉದ್ದೇಶದಂತೆ ನಗರ ಸಭಾ ಸದಸ್ಯರು ಪ್ರಯತ್ನಿಸದಿದ್ದಲ್ಲಿ ನಾಗರಿಕರಿಗೆ ಚಳವಳಿ ಅಲ್ಲದೆ ಇನ್ನೊಂದು ದಾರಿ ಇಲ್ಲ. ಈ ದಿಸೆಯಲ್ಲಿ ಕ್ರಿಯಾ ಸಮಿತಿ ನಿರ್ಧರಿಸುವ ಕಾರ್ಯಕ್ರಮಗಳಿಗೆ ತನ್ನ ಸಂಪೂರ್ಣ ಬೆಂಬಲವಿದೆ" ಎಂದರು. ಪ್ರಧಾನ ಕಾರ್ಯದರ್ಶಿ ಶ್ರೀ ಶಿರ್ವದ ವಿಲಿಯಂ ಪಿಂಟೋ ವಂದಿಸಿದರು.

ಜಪಾನು ಪ್ರಾಮಾಣಿಕ ದೇಶ

ಇತ್ತೀಚೆಗೆ ಕುಂದಾಪುರ ರೋಟರಿ ಕ್ಲಬ್ಬಿನಲ್ಲಿ ತಮ್ಮ ಜಪಾನು ಪ್ರವಾಸಾನುಭವವನ್ನು ವಿವರಿಸುತ್ತ ಜಪಾನು ಅತ್ಯಂತ ಪ್ರಾಮಾಣಿಕ ದೇಶವೆಂದೂ ಅಲ್ಲಿ ಕೊಲೆ, ದರೋಡೆ ವಂಚನೆಗಳು ಅಪರೂಪವಾಗಿದ್ದು ವಕೀಲಿ ವೃತ್ತಿಯವರಿಗೆ ಆಕರ್ಷಕವಿರದೆಂದೂ ಶ್ರೀ ಟಿ. ಶಿವಾಜಿ ಶೆಟ್ಟರು ಕ್ಲಬ್ ಅಧ್ಯಕ್ಷ ಡಾ| ಬಿ. ಭುಜಂಗ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ವಿವರಿಸಿದರು.

ತಾ. 9-10-70ರಂದು ಪೆರ್ಡೂರಿನಲ್ಲಿ ಶ್ರೀ ಅನಂತ ಪದ್ಮನಾಭ ಅಡಿಗರು ತಮ್ಮ ಮನೆಯಲ್ಲಿ ಏರ್ಪಡಿಸಿದ ಸತ್ಕಾರ ಕೂಟದಲ್ಲಿಯೂ ಶ್ರೀ ಶೆಟ್ಟರು ಜಪಾನು ಪ್ರವಾಸದ ಅನುಭವ ಹೇಳಿದರು.

ಅಂತಾರಾಷ್ಟ್ರೀಯ ಶಿಕ್ಷಣ ವರ್ಷ

ಎಕಾಡೆಮಿ ಆಫ್ ಜನರಲ್ ಎಜ್ಯುಕೇಶನ್, ಮಣಿಪಾಲ ಇದರ ಆಶ್ರಯದಲ್ಲಿ ಉಡುಪಿಯ ಎಂ. ಜಿ. ಎಂ. ಕಾಲೇಜಿನ ರವೀಂದ್ರ ಮಂಟಪದಲ್ಲಿ ಇದೇ ತಾ. ೧೦ರಿಂದ ೧೩ರ ವರೆಗೆ ಅಂತಾರಾಷ್ಟ್ರೀಯ ಶಿಕ್ಷಣ ವರ್ಷ ಹಾಗೂ ಎಕಾಡೆಮಿಯ ವಾರ್ಷಿಕ ಸಮ್ಮೇಳನಗಳು ವಿಜೃಂಭಣೆಯಿಂದ ನಡೆಯುತ್ತಿದೆ. ವಿವರವನ್ನು ಮುಂದಿನ ವಾರ ಕೊಡಲಾಗುವುದು.

Gram : VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ನವಯುಗದ ಹೊಸ ವರ್ಷ

ಚಂದಾದಾರರಲ್ಲಿ ವಿನಂತಿ

ಇದೇ ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 49ನೆಯ ವರ್ಷ ಮುಗಿದು ಸಪ್ಟಂಬರದಿಂದ 50ನೆಯ ಹೊಸ ವರ್ಷಾರಂಭವಾಗಿದೆ. ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತವಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ. ಚಂದಾಹಣವನ್ನು ಮನಿಯಾರ್ಡರು ಮೂಲಕ, ಯಾ ಇಂಡಿಯನ್ ಪೋಸ್ಟಲ್ ಆರ್ಡರು ಮೂಲಕ ಕಳಿಸಬಹುದು. ಇಲ್ಲವೆ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಜಮಾ ಮಾಡಬಹುದು. ಹಾಗೆ ಪಾವತಿ ಮಾಡುವಾಗ ತಮ್ಮ ಚಂದಾಸಂಖ್ಯೆ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇವೆ.

ಚಂದಾಹಣಕ್ಕಾಗಿ ಪತ್ರಿಕೆಯನ್ನು ವಿ. ಪಿ. ಮೂಲಕ ಕಳಿಸಿದರೆ ಈಗಿನ ಹೆಚ್ಚಿಸಿದ ಅಂಚೆ ದರದಿಂದಾಗಿ ರೂ. 1-40 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ದಯಮಾಡಿ ಚಂದಾವನ್ನು ಮೇಲಿನಂತೆ ಕಳಿಸಬೇಕಾಗಿ ಬಿನ್ನವಿಸುತ್ತೇವೆ.

ಮೆನೇಜರ್.

ಕ್ರಾಂತಿವೀರರೊಡನೆ ಮಹಾತ್ಮಾ ಗಾಂಧಿ

(ಎರಡನೇ ಪುಟದಿಂದ)

ವರು ಬಹಳ ಅಭಿಮಾನ ತಾಳಿದರು. ಇದೇ ನೀತಿ ಬಂಗಾಲದ ಸಿಂಹವೆಂದು ಪ್ರಖ್ಯಾತಿ ಪಡೆದ ದೇಶಬಂಧು ಚಿತ್ತರಂಜನದಾಸರಲ್ಲಿಯೂ ನೆಲೆಸಿತ್ತು. ಅವರು ಕಾಂಗ್ರೆಸಿನ ಪ್ರತಿಷ್ಠಿತ ಮುಖಂಡರಾಗಿದ್ದರು. ಕಾಂಗ್ರೆಸಿನ ಅಧ್ಯಕ್ಷ ಪದವಿಯಲ್ಲಿಯೂ ಇದ್ದರು. ಆದರೆ ಸುಪ್ರಸಿದ್ಧ ಕ್ರಾಂತಿವೀರ "ಗೋಪೀನಾಥ ಸಾಹಾ ಡೇ" (Day) ಎಂಬ ಒಬ್ಬ ಆಂಗ್ಲ ಅಧಿಕಾರಿಯನ್ನು ವಧಿಸಿದಾಗ ದೇಶಬಂಧು ದಾಸರು ಆ ವಿಪ್ಲವಿ ಯುವಕನ ಸನ್ಮಾನ ಮತ್ತು ಸಹಾನುಭೂತಿಯ ಠರಾವನ್ನು ಮಂಜೂರು ಮಾಡಲಿಕ್ಕೆ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಉಳಿತರು. ಗಾಂಧೀಜಿ ಆಗ ಬಹಳ ಕುಪಿತರಾದರು. ಒಬ್ಬ ದೇಶಸೇವಕ ಕ್ರಾಂತಿಕಾರಿ ಯುವಕನಿಗೆ ಈ ರೀತಿ ಸನ್ಮಾನವನ್ನೀಯುವುದು ಅವರಿಂದ ಸಹಿಸಲಾಗಲಿಲ್ಲ. ಇದಕ್ಕೆ ವಿರುದ್ಧವಾಗಿ ಮಹಾತ್ಮಾ ಗಾಂಧಿಯವರು ತಾನೇ ಬೇರೊಂದು ಠರಾವನ್ನು ಮಂಡಿಸಿದರು. ಈ ಠರಾವು ಅವರ ವ್ಯಕ್ತಿಗತ ಪ್ರಭಾವದ ಬಲದಿಂದ ಸ್ವೀಕೃತವಾಯ್ತು.

ದೇಶ ಬಂಧು ಗಾಂಧಿ ಸಮರ

ತನ್ನ ಠರಾವನ್ನು ವಿರೋಧಿಸಿ ಗಾಂಧೀಜಿ ಠರಾವು ಮಂಡಿಸಿದಾಗ ದೇಶ ಬಂಧು ದಾಸರು ಸ್ವಲ್ಪವೂ ಅಳುಕಲಿಲ್ಲ; ಕ್ರಾಂತಿವೀರ ಬಲಿದಾನಿ "ಗೋಪೀನಾಥ ಸಾಹಾ"ರ ಓಜಸ್ವೀ ವ್ಯಕ್ತಿತ್ವ ಅವರ ದೃಷ್ಟಿಯಿಂದ ಅಳಿಸಿ ಹೋಗಲಿಲ್ಲ. ಅವರು ಅಹಿಂಸಾ ಮಾರ್ಗದ ಪಥಿಕರಾಗಿದ್ದರೂ ಕ್ರಾಂತಿಕಾರಿಗಳ ಮೇಲೆ ಅವರಿಗಿದ್ದ ಸದ್ಭಾವನೆ ಭಾರತೀಯ ರಾಜನೀತಿಯ ಘನತೆಗೆ ತಕ್ಕುದಾಗಿತ್ತು. ಆದರೆ ಮಹಾತ್ಮಾಜಿ ಕ್ರಾಂತಿಕಾರರ ವಿರುದ್ಧವಾಗಿ ಸದಾ ಬ್ರಿಟಿಷರ ಕ್ಷೇಮ ಚಿಂತನೆಯನ್ನು ಪ್ರದರ್ಶಿಸುತ್ತಿದ್ದರು. ಈ ಪರಿಸ್ಥಿತಿಯಲ್ಲಿ ರಾಷ್ಟ್ರ ಏನನ್ನು ಇಚ್ಛಿಸುತ್ತಿದೆ? ಎಂಬ ಪ್ರಶ್ನೆಗೆ ಮಹಾತ್ಮರ ಈ ಕೆಳಗಿನ ವಾಕ್ಯವೇ ಸಮರ್ಪಕ ಉತ್ತರವಾಗಿರುತ್ತದೆ. "ದೇಶಬಂಧುರವರ ಠರಾವಿಗೆ ದೊರೆತ ಮತಗಳ ಸಂಖ್ಯೆಯನ್ನು ಗಮನಿಸಿದರೆ ಅಹಿಂಸೆಯ ಪಕ್ಷ ಇನ್ನೂ ಪ್ರಬಲವಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ" ಎಂದು ಅವರು ಹೇಳಿದ್ದರು.

ವೈಸ್ರಾಯರಲ್ಲಿ ಅನುಕಂಪನೆ

ಇನ್ನೊಂದು ಉದಾಹರಣೆ: 1930 ಫೆಬ್ರವರಿ 1 ರಂದು ಉಪ್ಪಿನ ಸತ್ಯಾಗ್ರಹ ನಡೆಯಿತು. ಮಹಾತ್ಮರು ಬಂಧನದಲ್ಲಿರುವಾಗಲೇ ಬ್ರಿಟಿಷರೊಡನೆ ಸಂಧಿಯ ಮಾತು ಪ್ರಾರಂಭವಾಯಿತು. 1931 ಮಾರ್ಚ ತಿಂಗಳಲ್ಲಿ ಇಂಗ್ಲಿಷರೊಡನೆ ಸಂಧಾನ ನಡೆಸಿಯೇ ಬಿಟ್ಟರು. ಇದೇ ಸುಪ್ರಸಿದ್ಧ ಗಾಂಧಿ—ಇರ್ವಿನ್ ಒಪ್ಪಂದ—ಅದೇ ಮಾರ್ಚ ತಿಂಗಳಲ್ಲಿ ಸರ್ದಾರ್ ಭಗತ್‌ಸಿಂಗ್, ಸುಖದೇವ, ರಾಜಗುರು— ಈ ಮೂವರು ಕ್ರಾಂತಿವೀರರು ಫಾಶಿಗೆ ಕೊರಳಪ್ಪಿಟ್ಟು ಭಗತ್ ಸಿಂಗರ ಮೃತದೇಹವನ್ನು ಅಧಿಕಾರಿಗಳು ತುಂಡುತುಂಡುಮಾಡಿ ಜೈಲಿನ ಕೊಳೆ ನೀರು ಹೋಗುವ ತೋಡಿನ ಮೂಲಕ ಹೊರಗೆ ಹಾಕಿದರು. ಈ ಮೂವರು ಮರಣದಂಡನೆಯ ನಿರೀಕ್ಷಣೆಯಲ್ಲಿ ಜೈಲಿನಲ್ಲಿರುವಾಗಲೇ ಗಾಂಧೀಜಿ 'ಲಾರ್ಡ್ ಇರ್ವಿನ್'ರ ಜೊತೆ ಸಂಧಾನದ ಮಾತುಕತೆ ನಡೆಸುತ್ತಿದ್ದರು. ಕ್ರಾಂತಿಕಾರಿಗಳು ದೇಶಕ್ಕೆ ಅಪಮಾನಕಾರಕರೆಂಬ ಭಾವನೆ ಗಾಂಧೀಜಿಯವರಲ್ಲಿತ್ತು. ವೈಸ್ರಾಯರು ಸಂಧಾನದ ಮಾತುಕತೆಗೆ ಹೊರಟಾಗ ಅವರು ಕುಳಿತಿದ್ದ ರೈಲನ್ನು ಬಾಂಬಿನಿಂದ ಧ್ವಂಸಗೊಳಿಸಲು ಯತ್ನಿಸಲಾಯಿತು; ಬಾಂಬು ಸಿಡಿಯಿತು, ಆದರೆ ಇರ್ವಿನ್ ಬದುಕಿಕೊಂಡರು. ಆ ಸಮಯದಲ್ಲಿಯೇ ಲಾಹೋರಿನಲ್ಲಿ ಕಾಂಗ್ರೆಸ್ ಮಹಾಧಿವೇಶನ ನಡೆಯುತ್ತಿತ್ತು. ಅದರ ಪ್ರಾರಂಭದಲ್ಲಿ ಮಹಾತ್ಮಾಜಿ ಉಪರೋಕ್ತ ಕ್ರಾಂತಿವೀರರ ವಿರುದ್ಧ ಒಂದು ಠರಾವನ್ನು ಮಂಡಿಸಿ ವೈಸ್ರಾಯರ ಪ್ರತಿ ತನ್ನ ಅತ್ಯಂತ ಮಮಕಾರವನ್ನು ಪ್ರದರ್ಶಿಸಿದರು. ಈ ಮಮಕಾರ—ಅನುಕಂಪನದ ಸಾವಿರದಲ್ಲೊಂದಂಶದಷ್ಟಾದರೂ ಸಹಾನುಭೂತಿಯನ್ನು ಲಾಹೋರು ಜೈಲಲ್ಲಿ ಫಾಶೀಕಂಬಕ್ಕೇರಲಿದ್ದ ಆ ಮೂವರ ಸತ್ಪುತ್ರರ ಮೇಲೆ ಗಾಂಧೀಜಿ ತೋರಿಸಿದರೇ?

ಮೂವತ್ತೊಂದರ ಗೆಲುವು.

ಭಗತ್‌ಸಿಂಗರವರ ಸಾಹಸವನ್ನು ಖಂಡಿಸಿದ ಗಾಂಧೀಜಿ ವೈಸ್ರಾಯರ ಪ್ರಾಣ ಉಳಿದುದಕ್ಕಾಗಿ ಪರಮಾತ್ಮನಿಗೆ ಧನ್ಯವಾದ ಅರ್ಪಿಸಿ ವೈಸ್ರಾಯರಿಗೆ ತನ್ನ ಕೃತಜ್ಞತೆಯನ್ನು ಲಿಖಿತದಲ್ಲಿ ಸಲ್ಲಿಸಿದರು. ಇದರೊಂದಿಗೆ ಕ್ರಾಂತಿಕಾರಿಗಳನ್ನು ತುಂಬಾ ಅವಹೇಳನ ಮಾಡಿದ್ದಲ್ಲದೆ ಅವರನ್ನು 'ಪಥಭ್ರಷ್ಟ'ರೆಂದೂ, ಅವರ ಕಾರ್ಯವನ್ನು 'ಜಘನ್ಯ ಅಪರಾಧ'ವೆಂದೂ ಬಣ್ಣಿಸಿದರು. ತನ್ನ ಠರಾವಿನ ಮೇಲೆ ಒಬ್ಬರಿಗೂ ಚರ್ಚೆಗೆ ಅವಕಾಶ ಕೊಡದೆ ಸರ್ವಸಮ್ಮತಿಯಿಂದ ಸ್ವೀಕರಿಸಬೇಕೆಂದು ಮನ ಕರಗುವ ಮಾತುಗಳಿಂದ ಬಹಳವಾಗಿ ಕೇಳಿಕೊಂಡರು.

ಬೈಗಳ ಸುರಿಮಳೆ

ಮಹಾತ್ಮಾಜಿ 'ಕಲ್ಟ್ ಆಫ್ ಬಾಂಬ್' ಎಂಬ ಲೇಖನದಲ್ಲಿ ಕ್ರಾಂತಿಕಾರಿಗಳನ್ನು "ನಿರ್ವೀರ್ಯರು ಅಂಜುಬುರುಕರು" ಎಂದು ಬರೆದರು. ಇದು ಕ್ರಾಂತಿಕಾರಿಗಳಿಗೆ ಅಸಹನೀಯವಾಯಿತು. ಅವರ ದಳದ ಅಂದಿನ ಮುಖಂಡ "ಚಂದ್ರಶೇಖರ ಆಝಾದ್"ರವರು ಈ ಲೇಖನದಿಂದ ತುಂಬಾ ರೇಗಿ ಹೋದರು. ಇವರು ತನ್ನ ಮಿತ್ರ ವಕೀಲ್ ಶಿವಶರ್ಮರ ಬಳಿ ಮಾತಾಡುತ್ತಾ ಕುಳಿತಿದ್ದಾಗ ಅಲ್ಲಿಯೇ ಇದ್ದವರೊಬ್ಬರ ಕಾಲು ಅಲ್ಲಿದ್ದ ಪತ್ರಿಕೆಯಲ್ಲಿದ್ದ ಭಗತ್‌ಸಿಂಗರ ಭಾವ ಚಿತ್ರದ ಮೇಲೆ ತಗಲಿತ; ಇದನ್ನು ಕಂಡ ಆಜಾದರು ಸಿಟ್ಟಿಗೆದ್ದು ಆ ವ್ಯಕ್ತಿಯನ್ನು ಚೆನ್ನಾಗಿ ಗದರಿಸಿ "ಈ ನರರತ್ನಗಳು ಭರತಖಂಡದ ಅಮೂಲ್ಯ ಸಂಪತ್ತು; ನಮ್ಮೆಲ್ಲರಿಗಿಂತ ಅತಿಶ್ರೇಷ್ಠರು! ಮಹಾತ್ಮರು! ಇವರ ಭಾವ ಚಿತ್ರದ ಮೇಲೆ ಕಾಲಿಡುವುದು ದೇಶದ ಆತ್ಮವನ್ನೇ ತುಳಿದಂತೆ' ಎಂದು ಗದ್ಗದಿತವಾಗಿ ನುಡಿದರು.

ಮಹಾತ್ಮರಿಗೆ ಪ್ರತ್ಯುತ್ತರ

ಮಹಾತ್ಮರ ಲೇಖನಕ್ಕೆ ಆಝಾದರು "ಫಿಲಾಸಫಿ ಆಫ್ ಬಾಂಬ್" ಎಂಬ ಹೆಸರಲ್ಲಿ ಪ್ರತ್ಯುತ್ತರ ಬರೆಸಿ ತಾನೇ ಪ್ರಕಟಿಸಿದರು. ಅದರಲ್ಲಿ ಮೊದಲು ಕ್ರಾಂತಿಕಾರಿಗಳ ಉದ್ದೇಶ—ಅವರು ಅನುಸರಿಸಿದ ಮಾರ್ಗ ಇತ್ಯಾದಿಗಳ ವಿವೇಚನೆ ಮಾಡಿ ತುಂಬ ದಕ್ಷರೀತಿ ವಿವರಿಸಲಾಗಿತ್ತು: "ಈ ಸಂದರ್ಭದಲ್ಲಿ ಕಾಂಗ್ರೆಸು ಏನು ಮಾಡುತ್ತಿತ್ತು? ಅದು ತನ್ನ ಮೂಲ ಧ್ಯೇಯ 'ಸ್ವರಾಜ್ಯ'ದಿಂದ ಬದಲಾಯಿಸಿ 'ಪೂರ್ಣ ಸ್ವಾತಂತ್ರ್ಯ'ವನ್ನು ಘೋಷಿಸಿತು. ಈ ಘೋಷಣೆ ಮೂಲತಃ ಕ್ರಾಂತಿಕಾರಿಗಳದ್ದಾಗಿತ್ತು......" ಬಾಂಬು ಪ್ರಯೋಗದ ವಿರುದ್ಧ ಗಾಂಧೀಜಿ ಮಂಡಿಸಿದ ಠರಾವಿನ ಕುರಿತು ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿ ಸದಸ್ಯೆ ಶ್ರೀಮತಿ ಸರಳಾದೇವಿ ಚೌಧರಾಣಿಯವರು ತನ್ನ ಲೇಖನದಲ್ಲಿ "ನಾನು ಈ ಕುರಿತು ಮಹಾತ್ಮರ ಅನುಯಾಯಿಗಳೊಡನೆ ವಿಚಾರ ವಿನಿಮಯ ಮಾಡಿದಾಗ ಅವರು ಠರಾವಿನ ಕುರಿತು ತಮ್ಮ ಸ್ವತಂತ್ರ ಅಭಿಪ್ರಾಯ ಪ್ರಕಟಿಸಲಿಕ್ಕೆ ಗಾಂಧೀಜಿಯಿಂದಾಗಿ ಅಸಮರ್ಥರಾಗಿದ್ದಾರೆಂದು ನನಗೆ ಖಚಿತವಾಯಿತು.... ...." ಎಂದು ಬರೆದಿದ್ದರು. ತಮ್ಮ ವಿಚಾರ ಮತ್ತು ವಾಕ್ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದವರು ಮಾತ್ರ ಕ್ರಾಂತಿಕಾರಿಗಳ ವಿರುದ್ಧ ತಮ್ಮ ಮತ ಪ್ರದರ್ಶಿಸಿದರೆಂಬುದು ಸ್ಪಷ್ಟವಾಗುತ್ತದೆ. ಕಾಂಗ್ರೆಸಿನಲ್ಲಿದ್ದ ಅಹಿಂಸಾ ತತ್ವ ಗಾಂಧೀಜಿಯ ಮುಖಂಡತ್ವಕ್ಕೆ ಮಾತ್ರ ಸೀಮಿತವಾಗಿತ್ತಲ್ಲದೆ ಅದರ ಅಧಿಕಾಂಶ ಸದಸ್ಯರ ಅಂತರಾತ್ಮ ಕ್ರಾಂತಿಕಾರಿಗಳ ಕಡೆಗಿತ್ತೆಂಬುದನ್ನು ಜಗತ್ತಿಗೆ ತೋರಿಸಿಕೊಟ್ಟುದಕ್ಕಾಗಿ ಮಹಾತ್ಮರನ್ನು ಅಭಿನಂದಿಸಿದರೆ ತಪ್ಪಾಗದು ಶ್ರೀಮತಿ ಸರಳಾದೇವಿ ಚೌಧರಾಣಿ ಹೀಗೆ ಹೇಳಿದರು.

ಸಾಯುತ್ತಿದ್ದರೆ ಒಳ್ಳೆಯದಿತ್ತು.

ವೈಸ್ರಾಯರ ಗಾಡಿಗೆ ಬಾಂಬು ನಿಕ್ಷೇಪಗಳಿಗೆ ಸಿಡಿಯುತ್ತಿದ್ದರೆ ಒಂದೋ ಅವರು ಸತ್ತೋ ಹೋಗುತ್ತಿದ್ದರು; ಇಲ್ಲವೆ ಗಾಯ ಹೊಂದುತ್ತಿದ್ದರು. ಹೀಗಾಗುತ್ತಿದ್ದರೆ ರಾಜಕೀಯ ಪಕ್ಷಗಳ ಮುಖಂಡರು ವೈಸ್ರಾಯರೊಡನೆ ನಡೆಸುತ್ತಿದ್ದ ಸಂಧಾನ ಸಮಸ್ಯೆ ಅಲ್ಲಿಗೇ ಅವಸಾನ ಹೊಂದುತ್ತಿತ್ತು. ಇದರಿಂದ ರಾಷ್ಟ್ರಕ್ಕೆ ಎಷ್ಟೋ ಹಿತವಿತ್ತು. ಕಲ್ಕತ್ತಾ ಕಾಂಗ್ರೆಸಿನ ಘೋಷಣೆಯಂತೆ ಸರಕಾರವೂ "ಸ್ವಯಂಶಾಸನಾಧಿಕಾರ"ದ ಭಿಕ್ಷೆ ನೀಡುವ ಘೃಣಾಸ್ಪದ ಪ್ರಯತ್ನ ನಿಷ್ಫಲವಾಗುತ್ತಿತ್ತು. ಸೈಮನ್ ಕಮಿಷನಿನ ಸಾಮೂಹಿಕ ಬಹಿಷ್ಕಾರದಿಂದ ದೇಶದಲ್ಲಿ ನೆಲೆಯೂರಿದ್ದ ಪ್ರಬಲವಾದ ಐಕ್ಯತೆ ಗಾಂಧೀಜಿ ಮತ್ತು ನೆಹ್ರೂರವರ ರಾಜನೈತಿಕ ಬುದ್ಧಿಮತ್ತೆಯ ಸಹಕಾರದಿಂದ ಲಾರ್ಡ್ ಇರ್ವಿನ್ನರ ಮೂಲಕ ನುಚ್ಚುನೂರಾಗಿ ಹೋಯಿತು. "ಕ್ರಾಂತಿಕಾರಿಗಳ ಹೋರಾಟ ನಡೆದಂತೆಲ್ಲಾ ಸೈನಿಕ ಶಕ್ತಿ ಹೆಚ್ಚುತ್ತಾ ಹೋಯಿತೆಂಬುದಾಗಿ ಮಹಾತ್ಮಾಜಿ ಪ್ರತಿಪಾದಿಸುತ್ತಾರೆ, ಆದರೆ ಇದು ಸರ್ವಥಾ ಅಸಂಗತ. ಕಳೆದ 25 ವರ್ಷಗಳ ಕ್ರಾಂತಿಕಾರರ ಗತಿವಿಧಿಗಳನ್ನು ಪರಿಶೀಲನೆ ಮಾಡಿ ಈ ಕುರಿತು ಅಂಕೆ-ಸಂಖ್ಯೆಗಳ ಮೂಲಕ ಉದಾಹರಣೆ ಕೊಟ್ಟು ತಮ್ಮ ಹೇಳಿಕೆಯನ್ನು ಸಮರ್ಥಿಸಬೇಕೆಂದು ನಾವು ಮಹಾತ್ಮರನ್ನು ಬಹಿರಂಗವಾಗಿ ಆಹ್ವಾನಿಸುತ್ತೇವೆ" ಎಂಬುದಾಗಿ ಚಂದ್ರಶೇಖರ ಆಝಾದರು ತನ್ನ ಪ್ರತ್ಯುತ್ತರದಲ್ಲಿ ಘೋಷಿಸಿದರು.

(ಮುಂದುವರಿಯುವುದು)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೋಟೆಲ್

ಫೋನ್: 77

Please Visit

HOTEL SHIVAPRASAD

High Class Boarding, Lodging & Restaurant

COONDAPUR, S. K.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ

ಮಿತ ಸಂತ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಗ್ರಂಥ
ಬೆಲೆ 0-75 ಪೈಸೆ ಮಾತ್ರ
ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್‌ಪೋಸ್ಟಿನಿಂದ ಕಳುಹುವ
ನವಭಾರತ ಪುಸ್ತಕ ಭಂಡಾರ
ಸಾಲಿಕೋಟೆ, ಉಡುಪಿ, ದ. ಕ.

NAVAYUGA 5—11—1970
Registered with the Registrar
of News Papers for India
under No. R. N. 3546/'57

REGD: No: B. Gr 176
LICENCE No. 33
Licensed to Post without Prepayment

ಲೀಗ್ ಜಾತೀಯವಲ್ಲ—ಸಂಘ ಜಾತೀಯ!

(ಒಂದನೇ ಪುಟದಿಂದ)

ಖಾಯಂದರಾಗಿದ್ದರು. ಅದಕ್ಕೆ ಡಾಕ್ಟರ್‌ಜೀ ಒಪ್ಪಲಿಲ್ಲ. ಅದೇ ಜವಾಹರಲಾಲಜೀಯವರು, ಗಾಂಧೀಜೀಯವರು ವಾರ್ಧಾ ಆಶ್ರಮದಲ್ಲಿ ತಂಗಿದ್ದಾಗ, ಅದೇ ಸಮಯದಲ್ಲಿ ಪಕ್ಕದಲ್ಲೇ ಸಂಘದ ಶಿಬಿರ ನಡೆಯುತ್ತಿದ್ದು ಅದಕ್ಕೆ ಡಾಕ್ಟರ್‌ಜೀಯವರು ಅಂದಾಗ ಭೇಟಿಗೆ ಏರ್ಪಾಡು ಮಾಡಿದರು. ಗಾಂಧೀಯವರು ಡಾಕ್ಟರ್‌ಜೀಯವರ ಬಳಿ ಸಂಘವು ಕಾಂಗ್ರೆಸ್ಸಿನ ಅಂಗವಾಗಿರಬೇಕೆಂದು ಕೇಳಿಕೊಂಡರು. (ಹಿಂದಿನ ದಿನ ಸ್ವತಃ ಗಾಂಧೀಜೀಯವರು ಸಂಘದ ಶಿಬಿರಕ್ಕೆ ಹೋಗಿ ಬಂದಿದ್ದರು.) ಅದಕ್ಕೂ ಡಾಕ್ಟರ್‌ಜೀ ಒಪ್ಪದೆ, ರಾಜಕೀಯ ರಾಢಿಯಿಂದ ಸಂಘ ದೂರದಲ್ಲಿರಬೇಕೆನ್ನುವ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ತಿಳಿಸಿದರು. ಅದನ್ನು ಮೆಚ್ಚಿದ ಗಾಂಧೀಜೀಯವರು ಸಂಘನೇ ಸರಿಯಾದುದೆಂದೂ, ಅದಕ್ಕೆ ಜಯ ನಿಶ್ಚಿತವೆಂದೂ ತಮ್ಮ ಹೃದಯಾಂತರಾಳದಿಂದ ಹೇಳಿದರು. ಅನಂತರ ಸರದಾರ ಪಟೇಲರು ಹಾಗೂ ಪೂಜನೀಯ ಶ್ರೀ ಮಾಧವ ಸದಾಶಿವರಾವ್ ಗೋಳವಲ್ಕರ್‌ರವರ ಬಳಿ ಅದೇ ವಿಷಯವನ್ನು ಪ್ರಸ್ತಾಪಿಸಿದಾಗ ಅವರೂ ಪ. ಪೂ. ಶ್ರೀ ಡಾಕ್ಟರ್‌ಜೀಯವರ ಅಭಿಪ್ರಾಯವನ್ನೇ ತಿಳಿಸಿದರು. ಅದೆಷ್ಟು ಬಾರಿ ನರಿ ಹಾರಿದರೂ ದ್ರಾಕ್ಷಿ ಸಿಗಲಿಲ್ಲ. ಇನ್ನುಳಿದಿರುವದು ಅದನ್ನು ಹುಳಿಯೆನ್ನುವದು, ಅಷ್ಟೇ. ಹಾಗೆನೇ ಇಂದಿರಾ ನರಿ ಸಂಘವನ್ನು ಜಾತೀಯವೆಂದು ಜರೆಯುತ್ತಿದ್ದಾರೆ. ಆ ಕಾಡಿನ ನರಿಗಿಂತ ಈ ದಿಲ್ಲಿಯ ನರಿಗೆ ಯೋಚನಾ ಶಕ್ತಿ ಹೆಚ್ಚು ಇದೆ. ತನಗೆ ದಕ್ಕದ ದ್ರಾಕ್ಷಿ ಬಳ್ಳಿಯ ಬುಡವನ್ನು ಕಚ್ಚಲು, ಬುಡದ ಮಣ್ಣನ್ನು ತೆಗೆಯಲು ಆ ನರಿಗೆ ತೋಚಲಿಲ್ಲವೋ, ತನಗೆ ದಕ್ಕದಿದ್ದರೂ ಇತರರಿಗಾದರೂ ದೊರಕಲೆಂದೋ ಅದು ಬಿಟ್ಟು ಹೋಗಿರಬಹುದು. ಈ ನರಿ ಹಾಗಲ್ಲ. ಅದರ ಬುಡವನ್ನು ಕಡಿಯಲು, ಮಣ್ಣನ್ನು ಅಗೆಯಲು ಪ್ರಯತ್ನಿಸುತ್ತಿದೆ. ಈ ಬಳ್ಳಿಯ ಬೇರು ರಾಷ್ಟ್ರೀಯರ ಹೃದಯಾಂತರಾಳದಲ್ಲಿದೆಂಬುದು ಇಂದಿರಾಜೀಯವರಿಗೆ ಗೊತ್ತಿಲ್ಲದಿರುವದು ಆಶ್ಚರ್ಯದ ಅಂಶವಿದೆ. ಆದುದರಿಂದ ಅವರ ದುಡುಕು ನಿಷ್ಪ್ರಯೋಜಕವಾಗಿ ಬಿಟ್ಟಿದೆ. ಹಾಗಿದ್ದರೂ ಅವರಿಗೆ ಈ ಕೆಲಸದಲ್ಲಿ ಆಯಾಸವಾಗಿರುವದಿಲ್ಲ; ಬೇಸರ ಬಂದಿರುವದಿಲ್ಲ, ನಾಚಿಕೆಯಾಗಿರುವದಿಲ್ಲ. ಅವರು ಮತ್ತೂ ಮತ್ತೂ ಸಂಘವನ್ನು ದೂಷಿಸುತ್ತಿದ್ದಾರೆ. ಗಜರಾಜ ಹೋಗುವಾಗ ಬೀದಿ ನಾಯಿ ಬೊಗಳುವದಿಲ್ಲವೇ? ಈ ಮೂರು ಸಂಭವಗಳಿಂದ ಅವರು ಪಾಠ ಕಲಿಯಬೇಕಾಗಿತ್ತು. ಕಲಿತುಕೊಳ್ಳಲು ಮನಸ್ಸಿದ್ದಲ್ಲಿ ತಾನೇ? ಅದರ ಬದಲು, ನಡುಮಧ್ಯಾಹ್ನವನ್ನೇ ಹುಣ್ಣಿಮೆಯ ಬೆಳದಿಂಗಳೆಂದು ಹಾಡುತ್ತಿರುವವರು ತಮ್ಮ ಸುತ್ತಮುತ್ತ ಇರುವಾಗ ಪಾಪ, ಆ ಅತೃಪ್ತ ನಾರಿ ಅದೇನು ಮಾಡದಿರಲು ಸಾಧ್ಯ?

ಹಾಗಾದರೆ ಜಾತೀಯವೆಂದರೇನು? ಜಾತೀಯವೆಂದರೆ ಜಾತಿಗೆ ಸಂಬಂಧಪಟ್ಟದ್ದಿದೆ. ಜಾತಿಯೆಂದಲ್ಲಿ ಬ್ರಾಹ್ಮಣ, ಬಂಟ, ಕೊಂಕಣಿ, ಕೊರಗ.... ಇತ್ಯಾದಿ. ಹಿಂದೂ ಶಬ್ದ ಹೀಗೆ ಏನು? ಕಮ್ಯೂನಲ್ ಕೂಡಾ ಕಮ್ಯೂನಿಟಿಗೆ ಸಂಬಂಧಪಟ್ಟದ್ದು. ಅದ ಒಡನೆ ಬದಲಾಯಿಸಿ ಮತೀಯವೆನ್ನಬಹುದು. ಮತೀಯವೆಂದರೆ ಮತಕ್ಕೆ ಸಂಬಂಧಪಟ್ಟದ್ದು. ಹಿಂದೂ—ಮುಸ್ಲಿಂ—ಕ್ರಿಶ್ಚಿಯನ್....ಎಂದೇ ತ್ರಾಸಿನ ತಕ್ಕಡಿಗಳಲ್ಲಿಡಲು ಹೀಗೆ ಪ್ರಯತ್ನಿಸಲಾಗುತ್ತಿದೆ. ಕ್ರಿಸ್ತರಿಂದ ಕ್ರಿಸ್ತೀಯ ಮತ, ಮಹಮ್ಮದರಿಂದ ಮಹಮ್ಮದೀಯ, ಬುದ್ಧರಿಂದ ಬೌದ್ಧ....ಹೀಗೆ ಮತಗಳು ಬಂದಿವೆ. "ಹಿಂದೂ"ವನ್ನು ಇಲ್ಲಿ ಹೋಲಿಸಲು ಸಾಧ್ಯವೇನು? ಈ ದೃಷ್ಟಿಯಲ್ಲಿ ಮುಸ್ಲಿಂಲೀಗ್ ಮತೀಯವೇ ಸರಿ. ಅಖಾಲಿದಳ ಇನ್ನೇನು? ಇಲ್ಲಿ ಜಾತೀಯ ಪಕ್ಷಗಳೂ ಇವೆ; ಮತೀಯ ಪಕ್ಷಗಳೂ ಇವೆ. ಅವುಗಳೊಂದಿಗೆ ಇಂದಿರಾಜೀ ಸಂಬಂಧವನ್ನಿಟ್ಟುಕೊಂಡಿದ್ದಾರೆ. ಆ ಪಕ್ಷಗಳು ಇಂದಿರಾಜೀಯವರೊಂದಿಗೆ ಸಂಬಂಧವನ್ನಿಟ್ಟುಕೊಂಡಿವೆ. ಸಂಘ ಹಾಗೇನು? ಅದು ರಾಷ್ಟ್ರೀಯ ಸ್ವಯಂಸೇವಕ ಸಂಘ. ರಾಷ್ಟ್ರೀಯ ಪದವು ಜಾತೀಯ ಅಥವಾ ಮತೀಯವಾಗಲು ಸಾಧ್ಯವೇನು? ಸಂಘವು ರಾಷ್ಟ್ರೀಯರ ಒಕ್ಕಟ್ಟಿಗಾಗಿ ಇದೆ. ಇಲ್ಲಿನ ರಾಷ್ಟ್ರೀಯರು ಹಿಂದೂಗಳಿದ್ದಾರೆ. ಇದು ಹಿಂದೂ ರಾಷ್ಟ್ರವಿದೆ. ಅದು ಜಾತೀಯ ಸಂಘಟನೆಯಾಗಲು ಸಾಧ್ಯವೇನು? ರಾಷ್ಟ್ರೀಯರಾಗಲು ಕೆಲ ಗುಣ ವಿಶೇಷಗಳಿರುತ್ತವೆ. ಅವು ಹಿಂದೂಗಳಿಗೆ ಸಂಬಂಧಪಟ್ಟದ್ದೇ ಇವೆ. ಈ ಹಿಂದೂಗಳೆಲ್ಲರೂ ಒಗ್ಗಟ್ಟಿನಿಂದಿರಬೇಕೆಂದು ಹೇಳಿದಲ್ಲಿ ಅದು ಜಾತೀಯವಾಗುತ್ತದೇನು?

ಇಲ್ಲಿರುವ ಮುಸ್ಲಿಮರು, ಕ್ರಿಶ್ಚಿಯನರು.... ಅನ್ಯ ರಾಷ್ಟ್ರಗಳಿಂದ ಬಂದವರಿರುವದಿಲ್ಲ. ಆಕ್ರಮಣಗಾರರ ಬೆದರಿಕೆಗೆ ಹೆದರಿಯೋ, ಆಸೆಗಳಿಗೆ ಬಲಿಯಾಗಿಯೋ ಕುತಂತ್ರದ ಮೋಸಕ್ಕೊಳಗಾಗಿಯೇ ಪತಿತರಾಗಿರುವರು ಹಾಗೂ ಅವರಿಗೆ ಗುಲಾಮರಾದವರು ಸ್ವಾತಂತ್ರ್ಯ ಸಿಕ್ಕಿದೊಡನೆ ಮತೀಯ ಸ್ವಾತಂತ್ರ್ಯವನ್ನು ಪಡೆದುಕೊಳ್ಳಬಹುದಾಗಿತ್ತು. ಅದೂ ಇಷ್ಟವಿಲ್ಲವಾದಲ್ಲಿ ಆಯಾ ಮತಕ್ಕೆ ಸೇರಿದವರಾದರೂ ಸರಿ ಹಿಂದೂವಾಗಿರಲು ಸಾಧ್ಯವಿಲ್ಲವೇನು? ಅಮೇರಿಕದಲ್ಲಿ ಹೇಗಿದೆ? ರಷ್ಯಾದಲ್ಲಿ ಹೇಗಿದೆ? ಬ್ರಿಟನಿನಲ್ಲಿ ಹೇಗಿದೆ? ನಾವು ಮಾತ್ರ ಅಪವಾದವೇನು? ಹಿಂದೂ ಶಬ್ದದಡಿಯಲ್ಲಿ ಇವರೆಲ್ಲರೂ ಏಕೆ ಬರಬಾರದು. ಬಾಲ ಕಳಕೊಂಡ ನರಿ ಇತರ ನರಿಗೂ ಬಾಲ ಕಳೆದುಕೊಳ್ಳಲು ಪ್ರೋತ್ಸಾಹಿಸುತ್ತದಂತೆ. ಹಾಗೆ ಇದೆ ಈ ಪತಿತರ ಪರಿಸ್ಥಿತಿ.

ಈ ರೀತಿ ರಾಷ್ಟ್ರೀಯ ಜಾಗೃತಿ, ಐಕ್ಯ, ಪುನರುತ್ಥಾನಕ್ಕಾಗಿ ಶ್ರಮಿಸಿದಲ್ಲಿ ಸಂಪ್ರದಾಯ ವಿರೋಧಿ ಇಂದಿರಾಜೀಯವರ ದೃಷ್ಟಿಯಲ್ಲಿ ಜಾತೀಯವಾಗಿ ಬಿಡುತ್ತದೆ! ಏನು ಆಶ್ಚರ್ಯ! ಪ್ರಧಾನಿಯವರೇ ಹೀಗೆಂದಲ್ಲಿ, ಹಿಂದುತ್ವದ ನಾಶಕ್ಕಾಗಿ ಸಂಚು ಹೂಡುತ್ತಿರುವ ವಿದೇಶಿಯರು, ಕಮ್ಯೂನಿಸ್ಟರು ಸುಮ್ಮನೆ ಉಳಿಯಲು ಸಾಧ್ಯವೇನ? ಇದನ್ನೇ ನಾವಿಂದು ಕಾಣುತ್ತಿರುವದು—ಕೇರಳದಲ್ಲಿ ಮಾತ್ರ, ಭಾರತದಾದ್ಯಂತ. ಅವರೆಲ್ಲರೂ ಇಂದಿರಾರಾಣಿಯವರ ಮಡಿಲಲ್ಲಿ ಆಶ್ರಯ ಪಡೆದುಕೊಂಡಿದ್ದು ರಾಷ್ಟ್ರೀಯತೆಯನ್ನೇ ನಾಶಮಾಡಲು ಪ್ರಯತ್ನಿಸುತ್ತಾರೆ. ಅಧಿಕಾರದಾಹದಿಂದ ಇಂದಿರಾ ಗಾಂಧಿಯವರು, ಅವರ ತಾಳಕ್ಕೆ ತಕ್ಕಂತೆ ಹೆಜ್ಜೆ ಇಡುತ್ತಿದ್ದಾರೆ. ಇನೆಷ್ಟು ದಿನ?

ಬುದ್ಧನಿಗೆ ಜ್ಞಾನೋದಯವಾದಂತೆ ಇಂದಿರಾಜೀಯವರಿಗೆ ಜ್ಞಾನೋದಯವಾಗಲಾರದೇನು? ರಾಷ್ಟ್ರೀಯತೆಯ ಜ್ಞಾನೋದಯವಾಗದೆ ಇರುವ ವರೆಗೆ ಅವರು ಸಂಘದ್ವೇಷಿಗಳಾಗಿ ಇರುತ್ತಾರೆ.

—ಶ್ರೀ ಶಿವಶಂಕರ

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ। ವಿ. ಆರ್. ಕೊರಡ್ಕರ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ. ಹಾಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2-00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

In the Court of the Munsiff, Udipi.

Execution Case No. 437 of 1969
in Original Suit No. 179 of 1964

Between:-

Bhagirathi-amma—
Decree-holder

and

Vittalacharya and others—
Judgement-debtors

To

the 6th J. D.— Ramadasa Rao, son of Kalanna alias Laxminarayana Rao, Gajanana Restaurant, Alnavar, Dharwar district.

Whereas in the above execution the decree-holder has applied for the sale of the immoveable property shown in the sale proclamation and you are hereby informed that the 5th day of November, 1970 has been fixed for settling the terms of the proclamation of sale.

By order of Court,

K. Balachandra Rao,
Adv. for D. H.

Udipi, 26—10—1970.

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 10

NAVAYUGA

12—11—1970

ಪಶ್ಚಿಮ ಬಂಗಾಳಕ್ಕೆ ಕಾಯಾಕಲ್ಪ ಡಿಸ್ಪೆನ್ಸರಿ

ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿ ಆಳಿಕೆಯನ್ನು ಹೇರಿ ಏಳು ತಿಂಗಳುಗಳು ಸಂದವು. ಈ ವಡುವೆ ರಾಷ್ಟ್ರಪತಿ ಆಳಿಕೆಯನ್ನು ಕೊನೆಗಾಣಿಸಬೇಕೆಂದು ಮಾರ್ಕ್ಸಿಸ್ಟ್ ಕಮ್ಯುನಿಸ್ಟರೂ ಅವರ ಹಿಂಬಾಲಕರೂ ಚಳುವಳಿ ಹೂಡಿದ್ದೂ ಉಂಟು. ಸಾಮಾನ್ಯವಾಗಿ ರಾಷ್ಟ್ರಪತಿ ಆಳಿಕೆಯನ್ನು ಕೊನೆಗೊಳಿಸಿ ಜನಪ್ರಿಯ ಸರಕಾರ ಸ್ಥಾಪಿಸಲು ಉತ್ಸುಕರಾಗಿದ್ದರೂ ಶ್ರೀಮತಿ ಗಾಂಧಿಯವರು ಈಗ ಭಾರಿ ಚಿಂತೆಗೆ ಗುರಿಯಾಗಿದ್ದಾರೆ.

ಬಂಗಾಳದಲ್ಲಿ ಚುನಾವಣೆ ನಡೆಯುದಿರುವುದಕ್ಕೆ ಅಲ್ಲಿನ ಕಾನೂನು ಮತ್ತು ಸುವ್ಯವಸ್ಥೆಗಳು ಹದಗೆಟ್ಟಿರುವುದೇ ಮುಖ್ಯ ಕಾರಣವೆಂಬ ದರಿಂದ ಅದು ಮತ್ತಷ್ಟು ಚಿಂತೆಯ ವಸ್ತುವೆನಿಸಿತು. ಮಾಜಿ ಮುಖ್ಯಮಂತ್ರಿ ಶ್ರೀ ಅಜಯ ಕುಮಾರ ಮುಖರ್ಜಿಯವರ ಅಧಿಕಾರ ಲಾಲಸೆ ಮತ್ತು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಸಮಯಸಾಧಕತನಗಳೇ ಬಂಗಾಳವು ನಷ್ಟ ಕೈಬಿಡುತ್ತ ಬಂದಿರುವುದಕ್ಕೆ ಹೇತುಗಳು. ರಾಜಕಾರಣಿಗಳು ರಾಜ್ಯವನ್ನು ಎಷ್ಟರ ಮಟ್ಟಿಗೆ ಹಾಳುಮಾಡಬಹುದು ಎಂಬುದನ್ನು ಪಶ್ಚಿಮ ಬಂಗಾಳದ ರಾಜಕಾರಣಿಗಳು ತೋರಿಸಿಕೊಟ್ಟಿದ್ದಾರೆ.

ಅಲ್ಲಿ ಕಮ್ಯುನಿಸ್ಟರ ಹಾವಳಿ ಉತ್ತುಂಗ ಶಿಖರ ಮುಟ್ಟಿದೆ. ನಕ್ಸಲೀಯರು ದಿನದ ಇಪ್ಪತ್ತನಾಲ್ಕು ಗಂಟೆಯೂ ಹಿಂಸಾಚರಣೆಯಲ್ಲೇ ತೊಡಗಿದ್ದಾರೆ. ಯಾರೊಬ್ಬನ ಪ್ರಾಣವೂ ಅಲ್ಲಿ ಸುರಕ್ಷಿತವಾಗಿಲ್ಲ. ವಿತ್ತ-ಜೀವಿತಗಳಿಗೆ ರಕ್ಷಣೆಯೆಂಬುದಿಲ್ಲ. ಹಾಡುಹಗಲಿನಲ್ಲೇ ನಾಲ್ಕು ರಸ್ತೆ ಕೂಡುವಲ್ಲೇ ಜೋಡು ದೀಪಸ್ತಂಭವಿರುವಲ್ಲಿಯೇ ನಾಗರಿಕರ ಮಾನಾಪಹರಣವಾಗಬಹುದು; ವಿತ್ತಾಪಹರಣವಾಗಬಹುದು; ಪ್ರಾಣಾಪಹರಣವಾಗಬಹುದು. ಇಂಥದ್ದು ಆಗಬಹುದು ಎನ್ನುವುದಕ್ಕಿಂತ ಏನೇನು ಆಗಲಾರದು ಎನ್ನುವುದೇ ಕ್ಷೇಮ. ಶಾಂತಿ-ಸುವ್ಯವಸ್ಥಾಪಕ ಪೋಲೀಸರು ತುಸು ಉತ್ಸಾಹ ತೋರಿಸಿದರೆಂದರೆ, ವಾರಗಳೊಳಗೆಯಲ್ಲೇ ಅವರ ಜೀವಕ್ಕೆ ಸಂಚಕಾರ! ರಾಷ್ಟ್ರಪತಿ ಆಳಿಕೆಯ ಅವಧಿಯಲ್ಲಿಯೂ ನಕ್ಸಲೀಯರಿಂದಲೂ ರಾಗೆಂದು ಕರೆದುಕೊಳ್ಳುವ ಗೂಂಡಾಗಳಿಂದಲೂ ಹಿಮಾಲಯದಷ್ಟು ವಿತ್ತ-ಪ್ರಾಣಗಳು ಅಪಹೃತವಾಗಿವೆ.

ಪಶ್ಚಿಮ ಬಂಗಾಳಕ್ಕೆ ಶ್ರೀಮತಿ ಗಾಂಧಿಯವರು ಹಲವು ಬಾರಿ ಭೆಟ್ಟಿ ನೀಡಿದರು. ಪ್ರತಿ ಸಲವೂ ಅವರ ಹೇಳಿಕೆಯೊಂದೇ: ಕಾನೂನು ವ್ಯವಸ್ಥೆ ಸುಧಾರಿಸಿದೆ; ಆದರೆ, ಚುನಾವಣೆ ನಡೆಸಲು ವಾತಾವರಣ ತಿಳಿಯಾಗಿಲ್ಲ. ಕೇಂದ್ರ ಸರಕಾರವು ಆರಂಭದಲ್ಲೇ ನಕ್ಸಲೀಯರ ಚಟುವಟಿಕೆಗಳನ್ನು ಬಹಿಷ್ಕರಿಸಲು ಬಯಸಲಿಲ್ಲ. ಪ್ರಜಾಪ್ರಭುತ್ವದಲ್ಲಿ ಅದೂ ಒಂದು ಅಭಿಪ್ರಾಯ. ಅಭಿಪ್ರಾಯ ಪ್ರಕಟಣಾ ಸ್ವಾತಂತ್ರ್ಯವನ್ನು ಅಪಹಾರ ಮಾಡಬಾರದು ನಿಜ. ಆದರೆ, ಸದಾ ಹಿಂಸಾಚಾರದಲ್ಲೇ ತೊಡಗಿ ಶಾಂತಿಯನ್ನು ಕದಡುವವರನ್ನು ದಮನಿಸಲು ಕೇಂದ್ರ ಸರಕಾರ ಹಿಂದೆ ಮುಂದೆ ನೋಡಿದ್ದುಂಟು. ಇದಕ್ಕೆ ರಾಜಕೀಯವೇ ಮುಖ್ಯ ಕಾರಣವೆಂದನ್ನುಂಟು. ಅದರ ಫಲವೀಗ ಪಶ್ಚಿಮ ಬಂಗಾಳವೂ ಅದರೊಡನೆ ದೇಶಕ್ಕೆ ದೇಶವೂ ಅನುಭವಿಸುತ್ತಿದೆ.

ನಕ್ಸಲೀಯರ ಉಪಟಲವೆಲ್ಲಿಯ ತನಕ ಮುಂದುವರಿದಿದೆಯೆಂಬುದಕ್ಕೆ ಅಲ್ಲಿನ ರಾಜಕೀಯದೊಂದಿಗೆ ಅರ್ಥವ್ಯವಸ್ಥೆಗಳೂ ಕುಸಿದು ಹೋಗಿವೆಯೆಂದರೆ ಸಾಕು. ಕಾರಖಾನೆಗಳಲ್ಲಿ ಮುಷ್ಕರ—ಹಿಂಸಾಚಾರ ಲಾಕ್ ಔಟ್. ಪರಿಣಾಮ? ಉತ್ಪಾದನೆಯಲ್ಲಿ ಕಡಿತ; ಆರ್ಥಿಕ ಕ್ರಾಂತಿ ಅಧೋಪತಿತ. ಕೇಂದ್ರ ಸರಕಾರವು ರಾಜ್ಯದ ಶಾಂತಿ-ಸುವ್ಯವಸ್ಥೆಗಳನ್ನು ಸಂರಕ್ಷಿಸುವಲ್ಲಿ ವಿಫಲವಾಗಿದೆಯೆಂಬುದನ್ನು ಪ್ರಧಾನಿಯವರು ಒಪ್ಪಿಕೊಂಡರೆಂದು ಈಗಿನ ವರದಿಯಾಗಿದೆ. ಮತ್ತು ಅದಕ್ಕೆ ಕಾಯಾಕಲ್ಪ ಚಿಕಿತ್ಸೆ ನಡೆಸುವುದಕ್ಕೆ ಅವರು ತಯಾರಿ ನಡೆಸಿದ್ದಾರೆಂದೂ ಗೊತ್ತಾಗಿದೆ. ಇಷ್ಟು ತಡವಾಗಿಯಾದರೂ ಆಕೆಯು ಎಚ್ಚೆತ್ತುದು ದೇಶದ ಸುದೈವ.

ರಾಜ್ಯಪಾಲ ಧಾವನ್ನರ ನೇಮಕಕ್ಕೆ ಮೊದಲು ಕೇಂದ್ರವು ರಾಜ್ಯಸರಕಾರದೊಡನೆ ಸಮಾಲೋಚಿಸಿತು. ಆಗ ರಾಜ್ಯ ಗೃಹಸಚಿವರಾಗಿದ್ದ ಶ್ರೀ ಜ್ಯೋತಿಬಸರವರು ಪಕ್ಷದ ಹಿರಿಯರನ್ನು ಕೇಳಿ ಹಾಗೆಯೇ ಶ್ರೀ ಧಾವನ್ನರ ಹೆಸರಿಗೆ ಒಪ್ಪಿಗೆ ನೀಡಿದ್ದರು. ರಾಜ್ಯಪಾಲರಾಗಿ ಬಂದ ಧಾವನ್ನರು ಶಾಂತಿಗಿಂತ ಹೆಚ್ಚಾಗಿ ಕ್ರಾಂತಿಯ ಮಾತುಗಳನ್ನೇ ಆಡತ್ತಾರೆ; ಶಾಂತಿ-ಸುವ್ಯವಸ್ಥೆಗಳನ್ನು ಸ್ಥಾಪಿಸುವಲ್ಲಿ ರಾಜ್ಯಪಾಲರೂ—ಕಾರ್ಯಾಂಗವೂ ತುಂಬ ಮತಭೇದವಿದೆ ಎಂಬ ಚಿದಂಬರ ರಹಸ್ಯ ಸ್ಫೋಟವಾಗಿದೆ. ಶ್ರೀ ಧಾವನ್ನರು ಕಮ್ಯುನಿಸ್ಟ್ ಪರರು; ಚೀನೀಯರ ಪ್ರಶಂಸಕರು ಎಂಬ ಆರೋಪವೂ ಕೇಳಿಬರುತ್ತಿದೆ. ಶ್ರೀಮತಿ ಗಾಂಧಿಯವರಿಗೆ ಈಯೆಲ್ಲ ದೂರುಗಳಲ್ಲಿನ ಯಥಾರ್ಥತೆಯು ಈಗ ಮನವರಿಕೆಯಾಗತೊಡಗಿದ್ದರಿಂದ ಶ್ರೀ ಧಾವನ್ನರ ನಿರ್ಗಮನದಿಂದಲೇ ಆಕೆಯ ಕಾಯಾಕಲ್ಪ ಡಿಸ್ಪೆನ್ಸರಿ ಉದ್ಘಾಟನೆಯಾಗಬಹುದು.

೧೯೬೭ರ ಸಾರ್ವತ್ರಿಕ ಚುನಾವಣೆಯನಂತರ ಅಲ್ಲಿ ಎರಡು ಬಾರಿ "ಕಮ್ಯುನಿಸ್ಟ" ಸರಕಾರಗಳೇ ಆಡಳಿತ ನಡೆಸಿದುವು. ಕ್ರಾಂತಿಪ್ರಿಯರಾದ ಶ್ರೀ ಜ್ಯೋತಿಬಸುರವರೇ ಗೃಹಖಾತೆಯನ್ನು ಇಟ್ಟುಕೊಂಡರು. ಅವರು ಪೋಲೀಸ್ ವಿಭಾಗವನ್ನು ಎಷ್ಟು ನಿರ್ಬಲಗೊಳಿಸಿಬಿಟ್ಟರೆಂದರೆ, ಇಂದಿಗೂ ಅದು ಬಲಪಡೆದಿಲ್ಲ. ಗೃಹಖಾತೆಯನ್ನೆಲ್ಲ ಮಾವೋ ತತ್ವಗಳಿಂದಲೇ ತುಂಬಿಬಿಟ್ಟಿರುವುದರಿಂದ ಪ್ರಜಾಸತ್ತೆ ಅದಕ್ಕೆ ಹಿಡಿಸುವುದಿಲ್ಲ. ಅಲ್ಲೀಗ ರಾಷ್ಟ್ರಪತಿ ಆಳಿಕೆಯಿರುವುದರಿಂದ ಶಾಸನ ವ್ಯವಸ್ಥೆಯ ಹೊಣೆಗಾರಿಕೆ ಕೇಂದ್ರ ಸರಕಾರದ್ದು. ಆದುದರಿಂದ ಅಲ್ಲಿನ ಕಾರ್ಯಾಂಗವು ಸದ್ಯ ಭಿನ್ನ ಮಾರ್ಗಗಳಿಂದ ಹೋಗುತ್ತಿರುವುದು ಸರ್ವವಿದಿತವಾಗಿರುವುದರಿಂದ ೧೯೭೧ರ ಚುನಾವಣೆಯ ಮೊದಲಾದರೂ ಚುನಾವಣೆ ನಡೆಸಲೆಂಬ ಆಶಯದಿಂದ ಸಂಜೀವಿನಿ ಚಿಕಿತ್ಸೆಗೆ ಶ್ರೀಮತಿ ಗಾಂಧಿ ಮನದಂದಿದ್ದಾರೆ.

ಇದರ ಪರಿಣಾಮವೇನಾಗಬಹುದು? ಶ್ರೀ ಧಾವನ್ನರ ಬದಲಿಗೆ ಮತ್ತೊಬ್ಬ ರಾಜ್ಯಪಾಲರಾಗಿ ಬರಬಹುದು; ಉನ್ನತ ಕಾರ್ಯದರ್ಶಿಗಳಲ್ಲಿ ಕೆಲವರು ಅತ್ತಿತ್ತ ಸಂಚಾರ ಬಹುದು. ಸ್ಥಾನಬದ್ಧತಾ ಶಾಸನಕ್ಕೆ ಮತ್ತೆ ಜೀವದಾನ ಮಾಡಬಹುದು. ಹಲವರ ದೇಹವನ್ನು ಬಂಧಿಸಿ ಜೇಲಿನಲ್ಲಿಡಬಹುದು. ಆದರೆ, ಇಷ್ಟರಿಂದಲೇ ಶಾಂತಿ ನೆಲೆಗೊಳ್ಳುವುದೆ? ಕಮ್ಯುನಿಜಂಗೂ ಹೆತ್ತ ಹಾಲು ವಿಷಪೂರಿತ 'ನಕ್ಸಲೀಯತೆ'ಯು ದೂರವಾಗುವುದು ಸಾಧ್ಯವೇ? ಏಕೆಂದರೆ ಅದು ತನ್ನ ಬೇರು ಬಲವಾಗಿ ಭದ್ರಪಡಿಸಿದೆ.

ರಾಜಕಾರಣಿಗಳು ಪ್ರಜಾಪ್ರಭುತ್ವದ ಜಪತಪ ಹಿಡಿದು ರಾಜ್ಯವನ್ನು ಎಷ್ಟಿಗೆ ಒಯ್ಯಬಲ್ಲರೆಂಬುದನ್ನು ಪಶ್ಚಿಮ ಬಂಗಾಳ ತೋರಿಸಿಕೊಟ್ಟಿದೆ. ಪಶ್ಚಿಮ ಬಂಗಾಳದೊಡನೆ ಇಡಿಯ ಭಾರತದೇಶಕ್ಕೂ ಈ ಕಾಯಾಕಲ್ಪ ಚಿಕಿತ್ಸೆ ಈಗಿಂದೀಗಲೇ ನಡೆದರೆ ಮಾತ್ರ ಕಮ್ಯುನಿಸ್ಟರ ಹಾವಳಿಯನ್ನು ದೂರ ಮಾಡಬಹುದು; ಹಾಗೆ ಮಾಡದೆ ಹೋದರೆ, ರಾಜಕೀಯ ದುರಂತಗಳು ಬೀದಿ ಬೀದಿಗಳಲ್ಲಿ ನಡೆದು ಪ್ರಜಾಶಕ್ತಿ ಎತ್ತ ಪ್ರಜೆಗಳು ಸತ್ತೇ ಹೋಗಬಹುದು. ಈ ಅನಾಹುತದಿಂದ ನಮ್ಮನ್ನು ನಾವೇ ಪಾರುಮಾಡಿಕೊಳ್ಳಬೇಕು.

ಇಂದಿನ ಶಿಕ್ಷಣ ಏಕೆ ಬೇಡ?

೧ ಜೀವನಕ್ಕೂ ಸಮಾಜದ ಅವಶ್ಯಕತೆಗಳಿಗೂ ಇಂದಿನ ಶಿಕ್ಷಣದ ಸಂಬಂಧವೇ ಉಳಿದಿಲ್ಲ.
೨ ಇದು ವಿದ್ಯಾರ್ಥಿಗಳೆಲ್ಲ ನೌಕರಿ ಹುಡುಕುವಂತೆ ಮಾಡುತ್ತದೆ.
೩ ಇದು ನಿರುದ್ಯೋಗವನ್ನು ಬೆಳೆಸುತ್ತದೆ.
೪ ವಿದ್ಯಾರ್ಥಿಗಳನ್ನು ಶ್ರಮ ವಿಮುಖರನ್ನಾಗಿ ಮಾಡುತ್ತದೆ.
೫ ವಿದ್ಯಾರ್ಥಿಗಳನ್ನು ಪರಾವಲಂಬಿಗಳನ್ನಾಗಿ ಮಾಡುತ್ತದೆ.
೬ ಶಿಕ್ಷಣವು ಸಂಪೂರ್ಣವಾಗಿ ಪರೀಕ್ಷಾಕೇಂದ್ರಿತವಾಗಿದೆ.
೭ ಶಿಕ್ಷಣವು ಸದ್ಗುಣಗಳನ್ನು ಬೆಳೆಸುವುದು ಬಿಟ್ಟು ದುರ್ಗುಣಗಳನ್ನೂ ಭ್ರಷ್ಟಾಚಾರಗಳನ್ನೂ ಬೆಳೆಸುತ್ತದೆ.

ಆದ್ದರಿಂದ ತರುಣರು ಏನು ಬಯಸುತ್ತಾರೆ?

೧. ಶಿಕ್ಷಣಕ್ಕೂ ಪ್ರತ್ಯಕ್ಷ ಜೀವನಕ್ಕೂ ಸಂಬಂಧವಿರಬೇಕು. ೨. ಸಮಾಜದ ಅವಶ್ಯಕತೆಗಳಿಗೆ ತಕ್ಕಂತೆ ಶಿಕ್ಷಣಯೋಜನೆ ಇರಬೇಕು. ೩. ಕೇವಲ ಬೌದ್ಧಿಕ ಶಿಕ್ಷಣ ಕೂಡದು; ಕೈಕಾಲುಗಳ ಉಪಯೋಗವನ್ನೂ ಕಲಿಸಬೇಕು. ೪. ವಿದ್ಯಾರ್ಥಿಗಳು ಸ್ವಾವಲಂಬಿಗಳಾಗುವಂತೆ ಮಾಡಬೇಕು. ೫. ವಿದ್ಯಾರ್ಥಿಗಳು ಸ್ವತಃ ಉದ್ಯೋಗಧಂದೆ ನಡೆಸುವಂತೆ ತರಬೇತಿ ದೊರೆಯಬೇಕು. ೬. ಶಿಕ್ಷಣ ಸಂಚಾಲನೆಯು ಸರಕಾರ ಮುಕ್ತವಾಗಬೇಕು. ೭. ನೈತಿಕ ಶಿಕ್ಷಣವನ್ನೂ ಕೊಡಬೇಕು.

ಕ್ರಾಂತಿವೀರರೊಡನೆ ಮಹಾತ್ಮಾ ಗಾಂಧಿ

ಲೇಖಕರು: ಪಂ| ಲಕ್ಷ್ಮಣದೇವ ವಿದ್ಯಾರ್ಥಿ.

(ಕಳೆದ ಸಂಚಿಕೆಯಿಂದ)

ಕಾಂಗ್ರೆಸಿಗೆ ಲಂಚ ಕೊಡಲಾಯಿತೇ?

"ಬ್ರಿಟಿಷ ಸರಕಾರಕ್ಕೆ ಕೊಂಡ ರಾಜಕೀಯ ಸುಧಾರಣೆಗಳೆಲ್ಲದರ ಸಂಬಂಧವನ್ನು ಕ್ರಾಂತಿಕಾರರೊಂದಿಗೆ ಗಾಂಧೀಜಿ ಏಕೆ ಸೇರಿಸುತ್ತಾರೆ? ಕ್ರಾಂತಿಕಾರಿಗಳ, ಸರಕಾರದ ಯಾವ ಸುಧಾರಣೆಯನ್ನೂ ಕಣ್ಣೆತ್ತಿ ಸಹ ನೋಡಿದವರಲ್ಲ; ಮೋರ್ಲೆ, ಮಿಂಟೋ, ಚೆಮ್ಸ್ ಫೋರ್ಡ್ ಮೊದಲಾದವರ ಅನೇಕ ಸುಧಾರಣೆಗಳು ಕಾಂಗ್ರೆಸಿನ ಬಾಯಿ ಮುಚ್ಚಿಸುವುದಕ್ಕೋಸ್ಕರ ಬ್ರಿಟಿಷರು ಹೂಡಿದ ಕುಟಿಲ ಕಾರಸ್ಥಾನವಾಗಿತ್ತು. ಕ್ರಾಂತಿಕಾರಿಗಳ ಸಮೂಲ ನಾಶಕ್ಕಾಗಿ ಕಾಂಗ್ರೆಸು ಸಹಕರಿಸಬೇಕೆಂಬ ಅಂತರಿಕ ಸಂಬಲದಿಂದ ಬ್ರಿ. ಸರಕಾರ ಉಪರೋಕ್ತ ಸುಧಾರಣೆಗಳನ್ನು ಲಂಚದ ರೂಪದಲ್ಲಿ ಕಾಂಗ್ರೆಸಿಗೆ ಆಗಾಗ ಕೊಡುತ್ತಾ ಬಂದದಾಗಿರುತ್ತದೆ. ಕ್ರಾಂತಿವೀರರ ಚಾರಿತ್ರಿಕ ಅಧೋಗತಿ ಮಾಡಿ ಬಿಡಬೇಕೆಂದು ಮಹಾತ್ಮಾಜಿ ಹಗಲಿರುಳು ಯತ್ನಿಸುತ್ತಿದ್ದರು" ಎಂದು ಚಂದ್ರಶೇಖರ ಆಜಾದರ ನಂತರ ಸಂಗಡಿಗರ ನಾಶಿಗೆ ಮಹಾತ್ಮಾಜಿ ಮೌನಧಾರಣೆ ಮಾಡಿದರು. ಪಂಜಾಬ ಕೇಸರಿ ಲಾಲಾಲಜಪತರಾಯರನ್ನು ಲಾಠಿಯಲ್ಲಿ ಹೊಡೆದು ಕೊಂದ "ಸಾರ್ಜೆಂಟ್ ಸ್ಕಾಟ್" ಮತ್ತು "ಸಾರ್ಜೆಂಟ್ ಸಾಂಡರ್ಸ್" ಇವರನ್ನು ಕ್ರಾಂತಿಕಾರಿಗಳು ಕೊಂದು ಹಾಕಿದರು. ಲಾಲಾಜಿಯವರ ನಿಧನದ ಬಗ್ಗೆ ಲಾಹೋರಿನಲ್ಲಿ ಸಮಾವೇಶಗೊಂಡಿದ್ದ ಶೋಕ ಸಭೆಯಲ್ಲಿ ದೇಶಬಂಧು ದಾಸರ ಪತ್ನಿ 'ಶ್ರೀಮತಿ ವಾಸಂತಿ ದೇವಿ'ಯವರು 'ಲಾಲಾಜಿಯವರ ಚಿತಾ ಭಸ್ಮ ತಣ್ಣಗಾಗುವ ಮೊದಲೇ ಯಾರಾದರೊಬ್ಬ ವೀರ ಯುವಕನು ಅವರ ಕೊಲೆಯ ಸೇಡು ತೀರಿಸಲಿ" ಎಂದು ಬಹಿರಂಗವಾಗಿ ಹೇಳಿ ಬಿಟ್ಟಿದ್ದರು; ಅದರಂತೆ ಆ ಇಬ್ಬರು ಧೂರ್ತರು ವಧಿಸಲ್ಪಟ್ಟರು. ಇದರಿಂದಾಗಿ ಸರ್ದಾರ್ ಭಗತ್‌ಸಿಂಗ್, ಸುಖ್‌ದೇವ್, ರಾಜಗುರು ಈ ಮೂವರಿಗೆ ಮರಣದಂಡನೆಯಾಯಿತು. ಈ ಶಿಕ್ಷೆಯನ್ನು ಆಮರಣ ಕಾರಾಗೃಹವಾಸಕ್ಕೆ ಪರಿವರ್ತಿಸಲೆಂಬ ಉದ್ದೇಶದಿಂದ ಚಂದ್ರಶೇಖರ ಆಜಾದರು ಕಾಂಗ್ರೆಸ್ ವರಿಷ್ಠರನ್ನು ಭೇಟಿ ಮಾಡಿದರು. ಪಂ. ನೆಹ್ರೂರವರಲ್ಲಿ ವಿನಂತಿ ಮಾಡಿಕೊಂಡರು. ನೆಹರೂರವರು "ನಾನು ಈ ಸಮಸ್ಯೆಯನ್ನು ಗಾಂಧೀಜಿ ಬಳಿಗೆ ಕಳುಹಿಸಿದ್ದೇನೆ" ಎಂದು ಹೇಳಿ ಸುಮ್ಮನಾದರು. ಈ ಕುರಿತು ಇವರಿಬ್ಬರೊಳಗೆ ನಡೆದ ದೀರ್ಘ ಸಂಭಾಷಣೆ ಕುರಿತು ನೆಹರೂರವರ ಆತ್ಮಕಥೆಯಲ್ಲಿ ಚಾರ ದೃಷ್ಟ ನಶಾತ್ ತಪ್ಪಾಗಿ ಪ್ರಕಟಿಸಲ್ಪಟ್ಟಿದೆ. ಅದರಲ್ಲಿ ನೆಹ್ರೂರವರು "ಚಂದ್ರಶೇಖರ ಆಜಾದರ ಅಭಿಪ್ರಾಯ ಕ್ರಾಂತಿಕಾರರ ಆಂದೋಲನ ಇವರಿಂದಾದ ಒಂದು ಪ್ರಮಾದ ಮತ್ತು ಹಿಂಸಾ ಮಾರ್ಗದಲ್ಲಿ ನನಗಿದ್ದ ವಿಶ್ವಾಸ ಸಂಪೂರ್ಣ ತೊಲಗಿ ಹೋಗಿದೆ' ಎಂದು ಬರೆದುದಲ್ಲದೆ ಕ್ರಾಂತಿಕಾರಿಗಳು "ಫ್ಯಾಸಿಸ್ಟ್"ರೆಂಬುದಾಗಿ ಬಣ್ಣಿಸಿ ಆ ವೀರಯೋಧರ ತೇಜೋವಧೆ ಮಾಡಿರುತ್ತಾರೆ. ಭಗತ್ ಸಿಂಗ್ ಮೊದಲಾದವರ ಮರಣದಂಡನೆಯನ್ನು ತಪ್ಪಿಸುವುದಕ್ಕೋಸ್ಕರ ಗಾಂಧೀಜಿ ಲಾರ್ಡ್ ಇರ್ವಿನ್ನರೊಡನೆ ಸಮರ್ಥಕವಾಗಿ ಪ್ರತಿಪಾದಿಸದೆ ಕೇವಲ ತೋರಿಕೆಗಾಗಿ ಮಾತುಕತೆ ನಡೆಸಿದ್ದರೆಂಬುದು ಆಜಾದರಿಗೆ ಮನವರಿಕೆಯಾಯಿತು. ಇರ್ವಿನ್ನರನ್ನು ಒಪ್ಪಿಸುವ ವಿಧಾನ ಬೇರೆಯೇ ಇತ್ತು. ಗಾಂಧೀಜಿಗೆ ಭಗತ್‌ಸಿಂಗರಲ್ಲಿ ಎಂತಹ ಭಾವನೆ ಇತ್ತೆಂಬುದನ್ನು ಪ್ರಖ್ಯಾತ ಕ್ರಾಂತಿಕಾರಿ ಮಹಿಳೆ 'ಶ್ರೀಮತಿ ದುರ್ಗಾಭಾಬಿ'ಯವರಿಂದಲೇ ತಿಳಿದುಕೊಳ್ಳಬಹುದು. "......ನನಗೆ ಈಗಲೂ ಚೆನ್ನಾಗಿ ನೆನಪಿದೆ. ಗಾಂಧೀಜಿ ಹಿಂಸೆ-ಅಹಿಂಸೆಯ ಹೆಸರಲ್ಲಿ ಕ್ರಾಂತಿಕಾರಿಗಳ ಹುಟ್ಟಡಗಿಸಲಿಕ್ಕೆ ಇಚ್ಛಿಸಿದರು. 1931ರ ಕರಾಚಿ ಕಾಂಗ್ರೆಸ್ ಅಧಿವೇಶನದ ಮೊದಲು ಭಗತ್ ಸಿಂಗ್ ಮೊದಲಾದವರನ್ನು ಬಿಡಿಸುವುದಕ್ಕೋಸ್ಕರ ಮಹಾತ್ಮರ ಭೇಟಿ ಮಾಡಿದ್ದೆನು. ಆಗ ಗಾಂಧೀಜಿ, ಮರಣದಂಡನೆಯನ್ನು ರದ್ದುಗೊಳಿಸುವ ಶರ್ತವನ್ನು ವೈಸ್ರಾಯರ ಮುಂದಿಡಲಿಕ್ಕೆ ಸ್ಪಷ್ಟವಾಗಿ ನಿರಾಕರಿಸಿದ್ದರು. "ಹಿಂಸೆಯಲ್ಲಿ ವಿಶ್ವಾಸವಿರುವವರ ಸಮುಕ್ತಿಗೆ ನಾನೆಂದೂ ಹಸ್ತ ಕೊಡಲಾರೆ" ಎಂದು ಅವರು ನನ್ನಲ್ಲಿ ಸ್ಪಷ್ಟವಾಗಿ ಹೇಳಿದರು. ಇದು ಹೋಗಲಿ ಅವರು ಕ್ರಾಂತಿಕಾರಿಗಳ ಕುರಿತು ಬೊಂಬಾಯಿಯಲ್ಲಿ ಒಂದು ಸಾರ್ವಜನಿಕ ಸಭೆಯ ಭಾಷಣದಲ್ಲಿ "ಕ್ರಾಂತಿಕಾರಿಗಳಿಗೆ ತಿನ್ನಲಿಕ್ಕೆ ಕಡಲೆಕಾಳು ಸಹ ಕೊಡಕೂಡದು. ಇವರು ಉಪವಾಸ ಸಾಯಲಿ" ಎಂದು ಹೇಳಿದ್ದರು. ಕ್ರಾಂತಿಕಾರರ ಕುರಿತು ಮಹಾತ್ಮರ ಮನೋವೃತ್ತಿ ಏನಿತ್ತೆಂಬುದು ಇದರಿಂದ ನನಗೆ ಸ್ಪಷ್ಟವಾಗಿ ತಿಳಿಯಿತು" ಎಂದು ಬರೆದಿರುತ್ತಾರೆ. ಭಾಗ್ಯವಶಾತ್ ದುರ್ಗಾಭಾಬಿ ಈಗಲೂ ಜೀವಂತವಿದ್ದಾರೆ. ಉಪರೋಕ್ತ ಮಾತುಗಳ ಕುರಿತು ಸವಿಸ್ತಾರ ಪುರಾವೆಗಳು ಅವರಲ್ಲಿವೆ. ದೇಶದ ಸ್ವತಂತ್ರತೆಗಾಗಿ ಸರ್ವಸ್ವ ಹೋಮಿಸಿಬಿಟ್ಟ ಬಲಿದಾನಗೈದ ಕ್ರಾಂತಿವೀರರ ಮೇಲೆ ಮಾನವತೆಯ ದೃಷ್ಟಿಯಿಂದಲಾದರೂ ಮಹಾತ್ಮಾಜಿ ಅನುಕಂಪನ ವ್ಯಕ್ತಪಡಿಸಬಹುದಿತ್ತು. ಅವರು ಮನಸಾ ಇಚ್ಛಿಸುತ್ತಿದ್ದರೆ ಭಗತ್‌ಸಿಂಗ್ ಇತ್ಯಾದಿಯವರ ಮರಣದಂಡನೆ ರದ್ದಾಗುತ್ತಿತ್ತು. ಈ ಕುರಿತು ಅವರಲ್ಲಿದ್ದ ಉಪೇಕ್ಷಾ ಭಾವನೆಯನ್ನು ಲಾರ್ಡ್ ಇರ್ವಿನ್ನರು ಸೂಕ್ಷ್ಮವಾಗಿ ಅನುಭವಕ್ಕೆ ತಂದುಕೊಂಡ ಗೊತ್ತುಪಡಿಸಿದುದಕ್ಕಿಂತಲೂ ಒಂದು ದಿನ ಮುಂಚಿತವಾಗಿಯೇ ಆ ಮೂವರು ವೀರರ ಪ್ರಾಣವನ್ನು ತೆಗೆದುಕೊಂಡರು. ನೇತಾಜಿ ಸುಭಾಷ್‌ಚಂದ್ರ ಬೋಸರು ತನ್ನ 'ಇಂಡಿಯನ್ ಸ್ಟ್ರಗಲ್' ಎಂಬ ಗ್ರಂಥದ 286ನೆ ಪುಟದಲ್ಲಿ 'ಈ ಸಂದರ್ಭದಲ್ಲಿ ನಾನು ಪ್ರಯತ್ನ ವಹಿಸಿ, ಭಗತ್ ಸಿಂಗರ ಪ್ರಾಣರಕ್ಷಣೆಯ ಶರ್ತ ಮುಂದಿರಿಸಿ ಸಂಧಿಯನ್ನು ತ್ಯಜಿಸಿರೆಂದು ಸಲಹೆ ಮಾಡಿದೆನು; ಏಕೆಂದರೆ ಅವರನ್ನು ಫಾಶಿಗೆ ಕೊಡುವುದು ಸಂಧಾನದ ಮಾತುಕತೆಗೆ ವಿರುದ್ಧವಾಗಿತ್ತು. ಆದರೆ ಮಹಾತ್ಮಾಜೀಗೆ ಕ್ರಾಂತಿಕಾರರ ಜೊತೆ ತಾದಾತ್ಮ್ಯವನ್ನು ಸ್ಥಾಪಿಸಿಕೊಳ್ಳುವ ಇಚ್ಛೆ ಇರಲಿಲ್ಲ; ಆದ್ದರಿಂದ ಅವರದನ್ನು ನಿರ್ಲಕ್ಷಿಸಿದರು. ಮಹಾತ್ಮಾಜಿ ಸಂಧಿಯ ಮಾತುಗಳನ್ನು ಬಹಿಷ್ಕರಿಸುವುದಿಲ್ಲವೆಂಬುದು ವೈಸ್ರಾಯರಿಗೆ ಖಚಿತವಾದಾಗ ಪರಿಸ್ಥಿತಿ ಅನುಕೂಲಾಗ್ರ ಭಯಂಕರವಾಗಿ ಪರಿಣಮಿಸಿತು' ಎಂದು ವಿವರವಾಗಿ ಬರೆದಿರುತ್ತಾರೆ. ಮಹಾತ್ಮಾಜಿ ಭಗತ್ ಸಿಂಗ್ ಆದಿಗಳ ಮೇಲೆ ಸಹಾನುಭೂತಿ ತೋರಿಸುತ್ತಿದ್ದ ಅಂತಿಮ! ಅವರು ವೈಸ್ರಾಯರೊಡನೆ ಮಾತುಕತೆ ಮಾಡುವಾಗ "ಒಂದು ವೇಳೆ ಈ ಯುವಕರನ್ನು ಫಾಶಿಗೆ ಕೊಡಲೇ ಬೇಕೆಂದಿದ್ದರೆ ಕಾಂಗ್ರೆಸ್ ಅಧಿವೇಶನ ಜರಗುವುದಕ್ಕೆ ಮೊದಲೇ ಆ ಕಾರ್ಯವನ್ನು ಮುಗಿಸುವುದು ಒಳಿತು" ಎಂದು ಸಲಹೆಕೊಟ್ಟರು. ಇರ್ವಿನರೊಡನೆ ಆದ ಒಪ್ಪಂದ ಕಾಂಗ್ರೆಸಿನಲ್ಲಿ ತನ್ನ ವ್ಯಕ್ತಿಗತ ಗುಣವಿಶೇಷಣದಿಂದಲೇ ಸ್ವೀಕರಿಸಲ್ಪಡುವುದು ಅಥವಾ ತಿರಸ್ಕರಿಸಲ್ಪಡುವುದು ಎಂಬುದನ್ನು ತಿಳಿದೇ ಆ ಮೂವರನ್ನೂ ಫಾಶಿಗೆ ಕೊಡಲಾಯಿತು." ಎಂಬ ಗಾಂಧೀಜಿಯ ಹೇಳಿಕೆಯನ್ನು "ಡಾ| ಪಟ್ಟಾಭಿ ಸೀತಾರಾಮಯ್ಯ"ನವರು ತನ್ನ ಗ್ರಂಥದಲ್ಲಿ ವಿಸ್ತಾರವಾಗಿ ವಿವರಿಸುತ್ತಾರೆ. ಭಗತ್ ಸಿಂಗರ ಪ್ರಕರಣದಿಂದ ದೇಶದಾದ್ಯಂತ ಎಂತಹ ಭಯಾನಕ ಪ್ರತಿಕ್ರಿಯೆ ಉಂಟಾಯಿತೆಂಬುದನ್ನು ಸುಭಾಷ್ ಬಾಬುಗಳು "ಮಾರ್ಚ್ ತಾ. 24ರಂದು ನಾವು ಕರಾಚಿಗೆ ಹೋಗುವ ಮಧ್ಯದಾರಿಯಲ್ಲಿದ್ದಾಗ ಭಗತ್ ಸಿಂಗ್ ಮತ್ತವರ ಸಂಗಡಿಗರನ್ನು ಮುಂಚಿನ ರಾತ್ರಿಯೇ ಫಾಶಿಗೆ ಕೊಟ್ಟ ಸಮಾಚಾರ ನಮಗೆ ದೊರಕಿತು...ಯಾರು ಸಮಗ್ರ ರಾಷ್ಟ್ರವನ್ನು ಆಸೇತು ಹಿಮಾಚಲ ಪರ್ಯಂತ ನಡುಗಿಸಿ ಬಿಟ್ಟಿದ್ದರೋ ಅವರ ಕುರಿತು ಇಷ್ಟು ದೂರ ಕಳಿತು ಆ ಅಸಹನೀಯ ಶೋಕದ ಕುರಿತು ಸಹಾನುಭೂತಿ ತೋರಿಸುವುದು ಕಷ್ಟವಿತ್ತು...ಭಗತ್ ಸಿಂಗರು ಯುವಕರಲ್ಲಿ ನವಜಾಗೃತಿಯ ಪ್ರತೀಕರಾಗಿದ್ದರು" ಎಂದು ಉದ್ಗಾರವೆತ್ತಿದರು.

(ಮುಂದಿನ ಪುಟ ನೋಡಿರಿ)

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ನವಯುಗ

ವಾರಪತ್ರಿಕೆ
ಉಡುಪಿ, ದ. ಕ.

NAVAYUGA
UDIPI, S. K.

ಸಂಪುಟ : 50
ಸಂಚಿಕೆ : 10

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
ವಿಶೇಷ ಸಂಚಿಕೆಗಳು ಸಹಿತ
ಬಿಡಿ ಪ್ರತಿ : 0–20

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ಮೂರು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಭೂ ಅಭಿವೃದ್ಧಿ

"ಭಾರತವು ಕೃಷಿ ಪ್ರಧಾನ ದೇಶವಾದದ್ದರಿಂದ ನಮ್ಮೆಲ್ಲ ಸಮಸ್ಯೆಗಳೂ ಕೃಷಿಕ ರಂಗದ ಪರಿಸ್ಥಿತಿ-ಪರಿಸ್ಥಿತಿಗಳನ್ನೇ ಹೊಂದಿಕೊಂಡಿವೆ. ಕೃಷಿ ಪದ್ಧತಿಯಿಂದ ತೊಡಗಿ ವಿತರಣೆ-ಬಳಕೆಯವರೆಗೂ ಕ್ರಾಂತಿಕಾರಿ ಬದಲಾವಣೆಯಾದರೆ ಮಾತ್ರ ಸಮಸ್ಯೆಗಳಿಗೆ ಉತ್ತರ ದೊರೆಯುವುದು. ದೇಶದ ಪ್ರಗತಿ ಯಾವುದರಿಂದಾದರೂ ಸಾಧ್ಯವಾಗುವದಿದ್ದರೆ, ಕೃಷಿಕರಂಗದಿಂದ ಮಾತ್ರ. ಆದುದರಿಂದ ಕೃಷಿಕರಂಗಕ್ಕೆ ಬೇಕಾದ ಸಕಲ ಸವಲತ್ತುಗಳನ್ನು ಒದಗಿಸಬೇಕು" ಎಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಮಂಗಳೂರಿನ ಕೇಂದ್ರ ಸಹಕಾರಿ ಬ್ಯಾಂಕಿನ ಆವಾರದಲ್ಲಿ ನಡೆದ ಮೈಸೂರು ವಿಭಾಗದ ಭೂ ಅಭಿವೃದ್ಧಿ ಬ್ಯಾಂಕುಗಳ ವಿಚಾರ ಗೋಷ್ಠಿಯನ್ನು ಉದ್ಘಾಟಿಸುತ್ತ ಹೇಳಿದರು.

ಮೈಸೂರು ವಿಭಾಗದಲ್ಲಿ ಮಳೆಯ ನೀರನ್ನೇ ನಂಬಿರುವ ದಕ್ಷಿಣ ಕನ್ನಡ ಜಿಲ್ಲೆ, ತೋಟಗಳಿಗೆ ಹೆಸರಾದ ಕೊಡಗು, ಮತ್ತು ಹಾಸನ ಹಾಗೂ ನೀರಾವರಿಯ ಮೈಸೂರು ಜಿಲ್ಲೆಗಳಿವೆ. ಈ ಜಿಲ್ಲೆಗಳೆಲ್ಲವೂ ಕೃಷಿಗೇನೇ ಹೆಸರಾದವು. ಕೆಲವೊಂದು ಉದ್ದಿಮೆಗಳು ಇರುವುದಾದರೂ ಅವು ಅಲ್ಪ. ದಕ್ಷಿಣ ಕನ್ನಡವು ಸಂಪದ್ಭರಿತವಾದ ಜಿಲ್ಲೆಯಾದರೂ ನೀರಾವರಿ ಸೌಕರ್ಯದಿಂದ ವಂಚಿತವಾಗಿದೆಯೆಂಬುದನ್ನು ಮರೆಯುವಂತಿಲ್ಲ. ಇತ್ತೀಚೆಗೆ ಕಾವೇರಿ ನೀರಿನ ವಿವಾದದ ಬಗ್ಗೆ ಸಮಾಲೋಚಿಸಲು ರಾಜ್ಯದ ಎಂ. ಪಿ. ಗಳನ್ನು ಮುಖ್ಯ ಮಂತ್ರಿಗಳು ಆಹ್ವಾನಿಸಿದಾಗ ಜಿಲ್ಲೆಯ ಒಬ್ಬ ಸಂಸತ್ಸದಸ್ಯ ಶ್ರೀ ಲೋಬೋ ಪ್ರಭುಗಳು ಇದೇ ಕಾರಣವನ್ನು ಮುಂದೊಡ್ಡಿ ಅದನ್ನು ನಿರಾಕರಿಸಿದ್ದು ಈ ವಂಚನೆಯನ್ನೇ ಎತ್ತಿ ತೋರುತ್ತದೆ. ಹಾಸನ ಜಿಲ್ಲೆಯಲ್ಲಿಯೂ ನೀರಿನ ಸೌಕರ್ಯ ಕಡಮೆ; ಈ ವರ್ಷ ಮಳೆಯ ಕಡಮೆಯಾದುದರಿಂದ ಅಲ್ಲಿ ಹಾಹಾಕಾರವೆದ್ದುದನ್ನು ಗಮನಿಸಬೇಕು.

ನಮ್ಮ ದೇಶದ ಹೆಚ್ಚಿನ ಪಕ್ಷಗಳ ಸಮಾಜವಾದದ ಉರುಳಿಗೆ ತಮ್ಮ ಶಕ್ತಿಗಳನ್ನು ಸಿಕ್ಕಿಸಿಕೊಂಡಿವೆ. ಈ ಸಮಾಜವಾದವನ್ನು ಶಾಂತ ರೀತಿಯಿಂದ ಜಾರಿಗೆ ತರುವುದೇ ಹೆಚ್ಚಿನ ರಾಜಕೀಯ ಪಕ್ಷಗಳ ಘೋಷಿತ ಉದ್ದೇಶ. ಕೃಷಿರಂಗದಲ್ಲಿ ಭೂ ಬಲವತ್ತರ ಕ್ರಾಂತಿಯಾಗಬೇಕು; ಆದರೆ ಇದು ಅಹಿಂಸಾತ್ಮಕವಾಗಿ ಶಾಂತವಾಗಿ ನಡೆಯಬೇಕು — ಹಸಿರು ಕ್ರಾಂತಿಯು ರಕ್ತದಲ್ಲಾಗಬೇಕು ಎಂಬುದು ನಮ್ಮ ರಾಜ್ಯ-ಕೇಂದ್ರ ಸರಕಾರಗಳ ಉದ್ದೇಶ. ಕೃಷಿಯನ್ನೂ ಉದ್ದಿಮೆಯೆಂದೇ ಪರಿಗಣಿಸಬೇಕು; ಆ ರಂಗದಲ್ಲಿ ವೈಜ್ಞಾನಿಕ ಸಾಧನೋಪಕರಣಗಳಿಗೆ ಅವಕಾಶ ದೊರೆಯಬೇಕು; ಆರ್ಥಿಕಾದಿ ನೆರವು ನೀಡಬೇಕು. ಇದಕ್ಕಾಗಿ 'ಸಹಕಾರಿ ವ್ಯವಸ್ಥೆ'ಯು ಹಿಂದಿನಿಂದಲೂ ದಡಿಯೋಟ್ಟ ಬಂದಿದೆ. ವಾಣಿಜ್ಯ ಬ್ಯಾಂಕುಗಳು ರೈತಾಪಿ ಜನರಿಗೆ ತಮ್ಮ ಬಾಗಿಲುಗಳನ್ನು ಮುಚ್ಚಿದ್ದಾಗ ಈ ಸಹಕಾರಿ ಸಂಘಗಳು, ಸಹಕಾರಿ ಬ್ಯಾಂಕುಗಳು ಅವರಿಗೆ ಮುಕ್ತಹೃದಯದ ಸ್ವಾಗತ ನೀಡಿದ್ದವು. ಇಂದಾದರೂ ವಾಣಿಜ್ಯ ಬ್ಯಾಂಕುಗಳು ಕೃಷಿಕರಂಗಕ್ಕೆ ನೀಡಿರುವ ಸೌಲಭ್ಯ ಸಂಪೂರ್ಣ ಅತೃಪ್ತಿಕರ. ದೇಶದ ರಾಷ್ಟ್ರೀಯ ಆದಾಯಕ್ಕೆ ಸಿಂಹದ ಪಾಲು ನೀಡುವ ಈ ರಂಗಕ್ಕೆ ಅವುಗಳ ಉತ್ತೇಜನ ಮಾತ್ರ ಇರುವೆಯಷ್ಟು. ನಮ್ಮ ಇಂದಿನ ಅವಶ್ಯಕತೆ ಪ್ರಗತಿ. ಪ್ರಗತಿಯು ಸಮಾಜವಾದದ ಜಪದಿಂದ ಬರುವುದಿಲ್ಲ; ಕೃಷಿಯ ವಿಭಾಗದಲ್ಲಿ ಬೃಹತ್ತರ ಕ್ರಾಂತಿಯಾದರೆ, ಉತ್ಪನ್ನ ಬೆಳೆದರೆ ಮಾತ್ರ ಸಾಧ್ಯವಾಗುತ್ತದೆ. ಔದ್ಯಮಿಕ ರಂಗದಲ್ಲಿ ಬಂಪೆ, ಸುಟ್ಟ ಇತ್ಯಾದಿಗಳು ನಡೆದು ಉತ್ಪನ್ನಗಳು ಕುಂಠಿತವಾಗುತ್ತವೆ. ದೇಶದ ಸುದೈವದಿಂದ ಇಂತಹ ತಲೆಗೇಡಿತನಗಳು ಕೃಷಿಕರಿಂದ ಕಾಣಸಿಗುವುದು ದೂರವಿವೆ. ಅವರು ಹಸಿರು ಕ್ರಾಂತಿಗಾಗಿ ದುಡಿದ್ದಾರೆ; ಲಭ್ಯವೆಂದು ತಿಳಿದ ಸೌಲಭ್ಯಗಳನ್ನು ಹೊಂದಿದ್ದಾರೆ. ಅವರೂ ಎಲ್ಲ ರೈತರಿಗೂ ತಮಗೆ ಏನೇನು ಸೌಕರ್ಯಗಳು ದೊರೆಯುತ್ತವೆಂಬುದರ ಅರಿವೆಯುಳ್ಳ, ನೀರಿನ ಆಶ್ರಯವಿರುವಲ್ಲೆಲ್ಲ ಹಸಿರು ಕ್ರಾಂತಿ ನಡೆದಿದೆ; ಹಾಗಿದ್ದರೂ ಅದು ಅತೃಪ್ತ. ಏಕೆಂದರೆ, ಭೂಮಿಯ ಅಭಿವೃದ್ಧಿಯು ನೀರಿನ ಸೌಲಭ್ಯವನ್ನು ಹೊಂದಿಕೊಂಡಿದೆ. ಭೂ ಅಭಿವೃದ್ಧಿ ಬ್ಯಾಂಕುಗಳು ಈ ದಿಶೆಯಲ್ಲಿ ಹೆಚ್ಚಿನ ಸೇವೆಸಲ್ಲಿಸವುದು ಅಗತ್ಯವಾಗಿದೆ.

ಸಹಕಾರಿ ಚಳುವಳಿಯು ಆರಂಭದಲ್ಲಿ ನಿಜಕ್ಕೂ ಯಶಗಳಿಸುತ್ತದೆ. ತಾವು ಪಡೆದ ಸಾಲವನ್ನು ಕ್ರಮವಾಗಿ ಮರಳಿಸದೆ ಹೋದರೆ, ಇದು ಕುಂಠಿತವಾಗುತ್ತದೆ. ಸಾಲ ಮರುಪಾವತಿಯಾಗಲಿಲ್ಲವೆಂದರೆ, ಸಾಲದ ಹಣವು ದುರುಪಯೋಗಗೊಂಡಿದೆಯೆಂದೇ ಅರ್ಥ. ಏಕೆಂದರೆ, ಯಾವ ಉದ್ದೇಶಕ್ಕೆಂದು ಸಾಲ ಪಡೆಯಲಾಗಿದೆಯೋ ಅದನ್ನು ಅದೇ ಉದ್ದೇಶಕ್ಕೆ ಬಳಸಿದ್ದಾಗ್ಗೆ, ಉತ್ಪಾದನೆ ಹೆಚ್ಚುತ್ತದೆ; ಸಾಲ ಮರುಪಾವತಿಗೆ ತೊಂದರೆಯಾಗುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ನಾಲ್ಕೈದು ಸಂದರ್ಭಗಳಿಂದ ಪರಿಸ್ಥಿತಿಯು ಬಹಳ ಉತ್ತಮವಾಗಿದೆ; ಆದ್ದರಿಂದಲೇ ಇಲ್ಲಿ ಸಹಕಾರ ಚಳುವಳಿಯು ಸಂಪೂರ್ಣ ಯಶಸ್ಸು ಪಡೆದಿದೆ. ರೈತ ಜನರ ನಿರುದ್ಯೋಗ ನಿವಾರಣೆ, ಲಭ್ಯ ಭೂಮಿಯ ಅಭಿವೃದ್ಧಿ, ನೀರಿನ ಆಶ್ರಯಗಳ ಶೋಧನೆ; ರೈತರಿಗೆ ಅಗತ್ಯ ಆರ್ಥಿಕ ನೆರವು ವೈಜ್ಞಾನಿಕ ತಿಳುವಳಿಕೆ ಮೊದಲಾದವುಗಳನ್ನು ಪೂರೈಸುವುದರಿಂದಲೇ ಭೂಮಿ ಅಭಿವೃದ್ಧಿಯಾಗುವುದು. ಇದರಿಂದಲೇ ರಾಜ್ಯದ, ದೇಶದ ಉತ್ಪನ್ನ ಹೆಚ್ಚುವುದು; ನಮ್ಮ ಆರ್ಥಿಕ ರಂಗದಲ್ಲಿ ಇದರ ಮೂಲಕವೇ ಕ್ರಾಂತಿ ಸಾಧ್ಯವಾಗುವುದು. ಮಂಗಳೂರಿನ ವಿಚಾರ ಗೋಷ್ಠಿ ಈ ನಿಟ್ಟಿನಲ್ಲಿ ವಿಚಾರವಿನಿಮಯ ನಡೆಸಿ ಸ್ವೀಕರಿಸಿದ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಉತ್ಸಾಹ ತೋರಿಸುವುದು ಅಗತ್ಯ.

ಅಡ್ಡದಾರಿಗೆ

ಸಿಂಡಿಕೇಟ್ ಸರಕಾರದ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಮಂಗಳೂರಿನ ಒಂದು ಸಭೆಯಲ್ಲಿ ಭಾಗವಹಿಸುತ್ತಿರುವಾಗಲೇ ಇಂಡಿಕೇಟಿನ ರಾಜ್ಯ ಘಟಕದ ಅಧ್ಯಕ್ಷರಾದ ಶ್ರೀ ದೇವರಾಜ ಅರಸರೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರು ದಿನಗಳ ಸಂಘಟನಾ ಸಂಚಾರದಲ್ಲಿ ನಿರತರಾದರು. ಅವರು ಮಂಗಳೂರಿನಲ್ಲಿ ಮಾತನಾಡುತ್ತ 'ರಾಜ್ಯ ಸರಕಾರವು ಬೆಳಗಾಂವಿಯ ಬಗ್ಗೆ ಮಾತ್ರ ಸಚೇತವಾಗಿದೆ; ಕಾಸರಗೋಡನ್ನು ಮರೆತುಬಿಟ್ಟಿದೆ' ಎಂಬಂತೆ ಮಾತನಾಡಿದರು. ಇದು ಮಂಗಳೂರಿನಲ್ಲಿನ ಜನರನ್ನು ಕನ್ನಡಿಗೆ ಆಕರ್ಷಿಸುವುದಕ್ಕಾಗಿಯೇ ಎಂದು ಎಲ್ಲರಿಗೂ ಗೊತ್ತು. ತಮ್ಮ ಪಕ್ಷವು ಮಹಾಜನ ಆಯೋಗದ ವರದಿಗೆ ಬದ್ಧವಾಗಿದೆಯೆಂದು ಶ್ರೀ ಅರಸರು ಭರವಸೆ ನೀಡಿದ್ದಾರೆ. ಇದು ಸಂತೋಷಕರ. ಆದರೂ ಸಿಂಡಿಕೇಟ್ ಸರಕಾರವೂ ಪಕ್ಷವೂ ಆಯೋಗ ನೇಮಕವಾದಾಗಲೇ ಅದಕ್ಕೆ ಬದ್ಧವಾಗಿತ್ತು. ಕೇಂದ್ರದೊಡನೆ ಇಂದಿಗೂ ಆಯೋಗದ ವರದಿಯನ್ನು ಇದ್ದಕ್ಕಿದ್ದಂತೆ ಜಾರಿಗೆ ತರಬೇಕೆಂದು ಒತ್ತಾಯ ಹೇರುತ್ತಿದೆ. ಕೇಂದ್ರ ಸರಕಾರವು ಕಾಸರಗೋಡಿನ ಬಗ್ಗೆ ಮೌನವಾಗಿದ್ದು ಬೇರೆ ಗಾಂಧಿಯ ಬಗ್ಗೆ ಬೇರೆ ಬೇರೆ ಆಲೋಚನೆ ಮಾಡುತ್ತಿರುವುದರಿಂದ ಆಗ ಬಗ್ಗೆ ಹೆಚ್ಚು ಚಿಂತಿಸಬೇಕಾಗಿದೆಯೇ ಹೊರತು ಕಾಸರಗೋಡನ್ನು ಮರೆಯುವ ಪ್ರಶ್ನೆಯೇ ಇಲ್ಲ. ಮಹಾಜನ ಆಯೋಗದ ವರದಿಗೆ ಶ್ರೀ ಅರಸ ಪ್ರಭೃತಿಗಳು ಒಪ್ಪಿಗೆ ನೀಡಬೇಕಾದ್ದು, ಬಹುಶಃ ವಿಶೇಷವೇನೂ ಇದ್ದಷ್ಟು ದಕ್ಷಿಣಕನ್ನಡಿಗರು ಮರೆಯಲಾರರು. ಶ್ರೀ ದೇವರಾಜ ಅರಸರು ಇಂತಹ ಗೋಡೆಯ ಮಾತುಗಳನ್ನು ಆಡುವುದು ಎಂದರೆ, ಅವರ ನಾಯಕಿ ಶ್ರೀಮತಿ ಗಾಂಧಿಯವರು ಕೇರಳ ಮುಸ್ಲಿಂ ಲೀಗು ಜಾತೀಯ ಪಕ್ಷವಲ್ಲವೆಂದು ಹೇಳಿದಂತೆಯೇ ಅಪಹಾಸ್ಯದ, ಜನರನ್ನು ಅಡ್ಡದಾರಿಗೆಳೆಯುವ ತಂತ್ರ ಮಾತ್ರ.

ಸುಬ್ರಹ್ಮಣ್ಯ ಜಾತ್ರೆ

ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕು ಸುಬ್ರಹ್ಮಣ್ಯ ಗ್ರಾಮದಲ್ಲಿರುವ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಪರಂಪರಾಗತ ಸಂಪ್ರದಾಯ ಪ್ರಕಾರ ಇದೇ ಸಾಧಾರಣ ಸಂವತ್ಸರದ ಕಾರ್ತಿಕ ಬಹುಳ ತ್ರಯೋದಶಿ ಬುಧವಾರ ತಾರೀಕು 25—11—70ರಿಂದ ಉತ್ಸವವು ಪ್ರಾರಂಭವಾಗಿ ತಾ. 28—11—70ರಲ್ಲಿ ಲಕ್ಷದೀಪೋತ್ಸವ, ತಾ. 2—12—70ರಲ್ಲಿ ಶೇಷವಾಹನ ತೇರು ಉತ್ಸವ, ತಾ. 3—12—70ರಲ್ಲಿ ಪಂಚಮಿ ರಥೋತ್ಸವ, ತಾ. 4—12—70ರಲ್ಲಿ ಚಂಪಾಷಷ್ಠಿ ಮಹಾರಥೋತ್ಸವ, ತಾ. 5—12—70ರಲ್ಲಿ ಅವಭೃತೋತ್ಸವ ಮೊದಲಾದ ಮಹೋತ್ಸವಗಳು ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ಜರಗಲ್ಪಡುತ್ತವೆ.

ಪಾಠಕರು

ಗೇಹರಾಜ್ಯದಲ್ಲಿ

ರಾಜ್ಯಕೀಯ ತಂದುಕೊಳ್ಳಬೇಡಿ

'ಏ, ಕೇಳಿದ್ಯೇನೆ?'

'ಹ್ಞಾಂ....'

"ಏನು?"

'ಮತ್ತಿನ್ನೇನು, ನಿಮ್ಮ ಪಡಿಗಂಟಲು.'

"ಹಾಗಲ್ಲವೆ...."

"ಮತ್ತೆ?"

'ನಮ್ಮ ಎಂ. ಪಿ. ಗಳ ವಿಚಾರವನ್ನ.'

"ಏನಂತೆ?"

"ಮತ್ತಿನ್ನೇನು, ಪೆಟ್ಟಿಗೆ ನಮ್ಮದೇ ನಿಜ; ಆದರೆ ಅದರ ಚಾವಿ ಮಾತ್ರ ಅಲ್ಲಿ ಕೊಡಿ ಅಂತ..."

"ಅಂದ್ರೆ?"

"ಅಲ್ಲವೇ, ಕಾವೇರೀ ನೀರಿನ ಬಾಬತ್ತಿನ ಪ್ರಶ್ನೆ...."

'ಹ್ಞಾಂ....'

"ಮುಖ್ಯಮಂತ್ರಿ ಪಾಟೀಲರು ರಾಜ್ಯದ ಎಂ. ಪಿ. ಗಳೊಡನೆ ಸಮಾಲೋಚನೆ ಮಾಡಿದ್ರು...."

"ಹೌದು, ಆಮ್ಲೆ ನೋಡಿ, ಇನ್ನು ಸಮಾಲೋಚನೆಗೆ ಉಳಿದದ್ದಾದ್ರೂ ಏನು?"

"ಏನು ಅಂದ್ರೆ, ಶ್ರೀಮತಿ ಗಾಂಧಿ ಮನಸ್ಸು ಮಾಡಿದ್ರೆ..."

"ಹ್ಞಾಂ...."

'ಅದಕ್ಕೇ ಸಮಾಲೋಚನೆ....'

"ಆಮೇಲೆ, ಏನಾಯ್ತು?"

"ಸಮಾಲೋಚನೆಯಲ್ಲಿ ಬಂದ ಮಾತು:—ಕಾವೇರಿ ನೀರು ನಮ್ಮದು ನಿಜ; ಆದ್ರೆ ಕೇಂದ್ರ ಸರಕಾರದೊಂದಿಗೆ ಸಂಘರ್ಷ ಬೇಕಾಗಿಲ್ಲ; ಕೂಡದೂಂತ....'

'ಅಲ್ಲಾರೀ, ಕೇಂದ್ರದೊಡನೆ ಯಾರು ತೊಡೆದಾಡ ಬಯಸುತ್ತಾರೆ?"

'ವೀರೇಂದ್ರ ಪಾಟೀಲರು...'

"ಎಲ್ಲೀಂದ್ರೆ...'

"ಅದೇ ನೋಡು, ಮದ್ರಾಸಿನಿಂದ ಮರಳಿ ಬಂದಮ್ಲೇ ಕಾವೇರಿ ಮಾತುಕತೆಯ ವಿವರ ತಿಳಿಸಿ ಅದನ್ನ ನಾಟಕ ಅಂದು ಬಿಟ್ಟಿಲ್ಲ...."

"ಅದಕ್ಕೆ...."

"ಅದಕ್ಕೇ ಹಾಗೆಲ್ಲ ಹೇಳಬೇಡೀಂತ ......'

'ಮತ್ತಿನ್ನೇನು ಹೇಳಬೇಕು?"

"ಹೇಳೋದೇನು ಬಂತು, ಶ್ರೀಮತಿ ಗಾಂಧಿಯನ್ನ ಎದುರು ಹಾಕಿಕೊಳ್ಳ ಬೇಡಿ; ಹಾಕಿಕೊಂಡರೆ ರಾಜ್ಯಕ್ಕೆ ಅಪಾರ ಹಾನಿ. ಅದ್ದರಿಂದ..."

'ಅದ್ದರಿಂದ ಏನ?'

"ಅವರನ್ನ ಹೇಗಾದರೂ ಒಲಿಸಿಕೊಳ್ಳಿ...."

"ಹೇಗೇಂತ...'

"ಪಾಟೀಲರು ಸಿಂ. ಕಾ. ತ್ಯಾಗ ಮಾಡಿದರೆ ಸರಿಹೋಯ್ತು..."

'ಓಹೋ ನೋಡಿ ನನಗಿದು ತಿಳಿಯಲೇ ಇಲ್ಲ. ನೀರಿನಲ್ಲಿ ರಾಜ್ಯಕೀಯ ತರಬೇಡೀಂತ ಕೆಲವರು ಅಂದ್ರಂತೆ. ಇದು ಇದಕ್ಕೆ ಇರಬೇಕ ...."

'ನೀರಿನಲ್ಲಿ ರಾಜ್ಯಕೀಯ ತರಬೇಡಿ ಅಲ್ಲ; ತಂದ ಕೊಳ್ಳಬೇಡಿ ಅಂತ.'

'ಅದೇನ ಸರಿಹೋದದ್ದು; ಶ್ರೀಮತಿ ಗಾಂಧಿ ಜೊತೆಗೆ ರಾಗಕ್ಕೆ ಸರಿಯಾಗಿ ತಾಳ ಬಜಾಯಿಸಿದರೆ ಎಲ್ಲವೂ ಸಾಧ್ಯ ......'

"ಶಿವಶಿವಾ. ತಮಿಳುನಾಡಿಗೆ ಕಾವೇರಿಯ ನೀರಿನಲ್ಲಿ ಸಿಂಹಪಾಲು ಕೊಡ ಬೇಕೆನ್ನುತ್ತಾರಲ್ಲ, ಅವರು...'

'ಅದ್ರ ಮೇಲೆ ಶ್ರೀ ಕೆಂಗಲ್ಲರು ಹೇಳುತ್ತಾರಲ್ಲಾ, ರಾಜ್ಯಕ್ಕೆ ಅಂಥ ಅನ್ಯಾಯ ಮಾಡುವುದಿಲ್ಲ ಅಂತ....'

"ಇನ್ನೂ ಪೂರ್ಣವಿರಾಮ ಬೀಳಲಿಲ್ಲ ನೋಡು;"

"ಮತ್ತೆ?"

"ಬರಿಯ ಅರ್ಧವಿರಾಮ..."

'ಮುಂದೆ?'

'ಅನ್ಯಾಯವಾದರೆ, ಅದಕ್ಕೆ ಅವರು ಜವಾಬುದಾರರಲ್ಲ."

"ಮತ್ತೆ ಯಾರು?"

"ರಾಜ್ಯದ ಸಿಂ. ಕಾ. ಸರಕಾರ..."

"ಹೇಗೆ?"

ಅದು ಇಂ. ಗಾಂ. ರನ್ನು ಎದುರು ಹಾಕಿ ಕೊಳ್ಳ ಬಾರದಿತ್ತು."

"ಹಾಗೆ ಬನ್ನಿ ಮತ್ತೆ. ರಾಜ್ಯಸರಕಾರದ ನಿಲುವು ಗೆದ್ದರೆ; ಇಂದಿರಾಜಿ ನ್ಯಾಯ ತೀರ್ಮಾನ ಸೋತರೆ ಅದು ರಾಜ್ಯ ಸರಕಾರದ ಅಪರಾಧ...."

"ಮತ್ತೇನು, ಅದ್ದರಿಂದಲೇ ಇಡಬೇಕಿಂದಿರಮ್ಮನಲ್ಲಿ ವಿಶ್ವಾಸವನ್ನ"

'ಹ್ಞಾಂ, ಅವರ ಮಾತು ಕೇಳಿದರೆ ನಗೆಯು ಬರತಿದೆ...'

'ಏಕೆ?'

'ಅಲ್ಲಾರಿ, ಸೇಲಂನಲ್ಲಿ ಉಕ್ಕು ತಯಾರಾಗತೊಡಗಿದರೂ ಹೊಸಪೇಟೆಯಲ್ಲಿ ಸರ್ವೆಗೆ ಆರಂಭವಾಗೋದಿಲ್ಲ...'

'ಅಂಥ ಮಾಡಿಸೋ ತಾಕತ್ತು ಪಾಟೀಲರಿಗಿಲ್ಲ....'

'ಅವ್ರೇನು ಮಾಡಿಯಾರು? ಇಂದಿರಮ್ಮ ಒಲಿಯ ಬೇಕಲ್ಲ?'

"ಒಲಿಸಿಕೊಳ್ಳ ಬೇಕು....'

'ಹೇಗೆ?'

"ಆಕೆ ನುಡಿದಂತೆ ನಡೆದರೆ ಎಲ್ಲಾ ಸರಿಹೋಯ್ತು..."

'ಮತ್ತೂ ಅಲ್ಲೇ ಬಂತು.... ಹ್ಞಾಂ, ಬೆಳಗಾಂವಿ ಪ್ರಶ್ನೆ...."

"ಅದೂ ಹಾಗೇನೇ ಆಕೆಗೆ ನಡೆದು ಕೊಂಡರೆ ಅದೂ ಮೈಸೂರಿಗೇ...."

"ಮತ್ತೆ ಕಾವೇರಿ ನೀರು?'

'ಅದೇನು ಹೊರಗಿನವರ್ದೆ? ಇಂ. ಕಾಂ. ಗೆ ಸರಿಯಾಗಿ ನಡೆದುಕೊಂಡರೆ ೧೯೨೪ರ ಒಡಂಬಡಿಕೆ ಡಿಥೀರೆಂದು ಪ್ರತಿಗಾಮಿಯಾಗಿ ಬಿಡುತ್ತದೆ!"

"ಹ್ಞಾಂ.... ಅಂದ್ರೆ ಸಂಘರ್ಷದ ಮೂಲ ಇದೇ....'

'ನೋಡಮ್ಮ, ನಾವು ತ್ಯಾಗಶೀಲ ಸಂಸ್ಕೃತಿಯವರು. ಶ್ರೀಗಂಧದ ನಾಡಿನವರು....'

'ಹ್ಞಾಂ, ಅದಕ್ಕೆ?'

"ಗಂಧವೇನು ಮಾಡುತ್ತದೆ? ತಾನು ತೇದು ಇತರರಿಗೆ ತಂಪು ನೀಡುತ್ತದೆ...!

"ಹೌದು...'

'ಗಂಧಕ್ಕಿರುವಷ್ಟು ಸಾಧಾರಣ ತಿಳುವಳಿಕೆ ಗಂಧದ ನಾಡಿನವರಿಗಿರಬೇಡವೆ?"

"ಓಹೋ, ಅಂದರೆ, ನಾವು ಒಣಗಿ ಕರ್ನಾಟಕ ತಮಿಳುನಾಡನ್ನ ಹಸುರು ಮಾಡಬೇಕು...'

"ಅದು ಗಂಧದ ನಾಡಿನವರಿಗೆ ಸಮುಚಿತವಾದದ್ದು....'

"ಬೆಳಗಾಂವಿಯನ್ನ ಬೆಳ್ಳಿಯ ತಟ್ಟೆಯಲ್ಲಿ ಆಕೆ ಮರಾಠಿಗರಿಗೆ ಎತ್ತಿ ಕೊಡುವಾಗ; ಬಾರಹೊರಲು ಶ್ರೀ ಪಾಟೀಲರು ಸಹಾಯ ಮಾಡಬೇಕು."

"ಅದು ತ್ಯಾಗ ಶೀಲತೆ..."

'ಇನ್ನು ಮತ್ತಿನ್ನೇನಿದ್ದರೂ ಕಾರಖಾನೆಯನ್ನ ಕೇರಳಕ್ಕೆ, ಎಲ್ಯುಮಿನಿಯಂ ಕಾರಖಾನೆ ಗೋವೆಗೆ, ಹಡಗು ಕಟ್ಟುವ ಕಾರಖಾನೆಯನ್ನ ಪಾಂಡಿಚೆರಿಗೆ....ಹೀಗೆ ಯಾರು ಯಾರಿಗೆ ಏನೇನನ್ನ ಕೊಟ್ಟರೂ ಅದಕ್ಕೆ ಶ್ರೀ ಪಾಟೀಲರು ತುಟಿ ಪಿಟಕೆನ್ನ ಬಾರದು....'

'ಮಾಡಿದರೆಂದರೆ, ಕೇಂದ್ರದೊಡನೆ ಸಂಘರ್ಷವಾಗುತ್ತದೆಯಲ್ಲ'

'ಅದೇ ಅಂದೆ. ಮತ್ತೆ ಇದೆಲ್ಲಕ್ಕೂ ಇರುವ ಏಕಮಾತ್ರ ಪರಿಹಾರವೆಂದರೆ, ಪಕ್ಷಾಂತರ ಮಾತ್ರ,...'

'ಹ್ಞಾಂ...ಆದ್ರೆ ನೋಡು, ಶ್ರೀ ಪಾಟೀಲರು ಹಾಗೆಲ್ಲ ಮಾಡೋ ಜನರಲ್ಲ....'

'ಅದ್ದರಿಂದ್ಲೇ ಈಯೆಲ್ಲ ಸಂಘರ್ಷ ಅಲ್ರಿ, ಈ ಎಂ. ಪಿ. ಗಳಿಗೆಲ್ಲ ರಾಜ್ಯದ ಹಿತ ಬೇಡವೇನು?'

"ಬೇಕು; ಅದ್ದರಿಂದ್ಲೇ ಸಂಘರ್ಷ ಬೇಡ ಅನ್ನೋದು....'

"ಮಗು ಅಳದೆ ಇದ್ದರೆ ತಾಯಿ ಮೊಲೆ ಊಡುವುದಿಲ್ಲ...."

'ಅದನ್ನ ತಾಯಿಯೊಡನೇ ಹೇಳಬೇಕು'

'ಹ್ಞಾಂ....ಆಗಲೀ....'

"ಓಹೋ...."

"......................"

—ಗೋರಾ.

ನವಯುಗದ ಹೊಸ ವರ್ಷ

ಚಂದಾದಾರರಲ್ಲಿ ವಿನಂತಿ

ಇದೇ ಕಳೆದ ಅಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 49ನೆಯ ವರ್ಷ ಮುಗಿದು ಸಪ್ಟಂಬರದಿಂದ 50ನೆಯ ಹೊಸ ವರ್ಷಾರಂಭವಾಗಿದೆ. ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಅದಷ್ಟು ತ್ವರಿತವಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ. ಚಂದಾಹಣವನ್ನು ಮನಿಯಾರ್ಡರು ಮೂಲಕ, ಯಾ ಇಂಡಿಯನ್ ಪೋಸ್ಟಲ್ ಆರ್ಡರು ಮೂಲಕ ಕಳಿಸಬಹುದು. ಇಲ್ಲವೆ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಪಾವತಿ ಮಾಡಬಹುದು. ಹಾಗೆ ಪಾವತಿ ಮಾಡುವಾಗ ತಮ್ಮ ಚಂದಾನಂಬ್ರ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇವೆ.

ಚಂದಾಹಣಕ್ಕಾಗಿ ಪತ್ರಿಕೆಯನ್ನು ವಿ. ಪಿ. ಮೂಲಕ ಕಳಿಸಿದರೆ ಈಗಿನ ಹೆಚ್ಚಿಸಿದ ಅಂಚೆ ದರದಿಂದಾಗಿ ರೂ. 1-40 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ದಯ ಮಾಡಿ ಚಂದಾವನ್ನು ಮೇಲಿನಂತೆ ಕಳಿಸಬೇಕಾಗಿ ಬಿನ್ನವಿಸುತ್ತೇವೆ.

ಮೆನೇಜರ್.

ಸತ್ಯಾಗ್ರಹದ ಮಾದರಿ

ಇಂಗ್ಲಂಡದಲ್ಲಿ ಲಾರ್ಡ್ ಗ್ಲಾಡಸ್ಟನ್ ಪ್ರಧಾನ ಮಂತ್ರಿಯಾಗಿದ್ದಾಗ ಚಾರ್ಲಸ ಬ್ರಾಡಲಾ ಕಸಿನ ಲೋಕಪ್ರಿಯ ಸಭಾಸದಸ್ಯರಿದ್ದರು. ಬ್ರಾಡಲಾ ಇವರು ನಾಸ್ತಿಕರಿದ್ದ ಕಾರಣ ಪಾರ್ಲಿಮೆಂಟಿನಲ್ಲಿ ಬೈಬಲ್ ಹಿಡಿದು ಪ್ರತಿಜ್ಞೆ ಮಾಡಲು ಒಪ್ಪಲಿಲ್ಲ. ಅದ್ದರಿಂದ ಅವರ ಸದಸ್ಯತ್ವ ರದ್ದುಪಡಿಸಲಾಯಿತು. ಆದರೆ ಮರು ಚುನಾವಣೆಯಲ್ಲಿಯೂ ಅವರೇ ಆರಿಸಿ ಬಂದರು. ಮತ್ತು ಬೈಬಲ್ ಹಿಡಿದು ಪ್ರತಿಜ್ಞೆ ಮಾಡದ್ದರಿಂದ ಮರುಸಲವೂ ಅವರ ಸದಸ್ಯತ್ವ ರದ್ದಾಯಿತು. ಆದರೆ ಮೂರನೆಯ ಸಲವೂ ಅವರೇ ಆರಿಸಿಬಂದರು. ಆಗ ಅವರು ತಮ್ಮನ್ನು ಆರಿಸಿದ ಮತದಾರರ ಮೇಲೆ ವಿಶ್ವಾಸ ಇರಿಸಿ, ಬಲಾತ್ಕಾರಪೂರ್ವಕ ಪಾರ್ಲಿಮೆಂಟಿನಲ್ಲಿ ಕುಳಿತೇಬಿಟ್ಟರು. ಸಶಸ್ತ್ರ ಪೋಲಿಸ್ ಅಧಿಕಾರಿಗಳ ಬಲದಿಂದ ಅವರನ್ನು ಹೊರಗೆ ಹಾಕಲಾಯಿತು. ಮತ್ತು ನಾಲ್ಕನೆಯ ಸಲವೂ ಅವರೇ ಆರಿಸಿಬಂದರು. ಆಗ ಗ್ಲಾಡಸ್ಟನ್ನರು ಹೊಸ ಬಿಲ್ಲೊಂದು ತಂದು ಬೈಬಲ್ ಹಿಡಿದು ಆಣೆ ಮಾಡಬೇಕೆಂಬುದನ್ನು ಬದಲಿಸಿಕೊಂಡರು. ಅದರಿಂದ ಬ್ರಾಡಲಾರ ಸ್ವಾಸ್ಥ್ಯಕ್ಕೆ ಯಾವುದೇ ಚ್ಯುತಿ ಬರಲಿಲ್ಲ! ಮತ್ತು ಅವರ ಲೋಕಪ್ರಿಯತೆ ಇನ್ನಷ್ಟು ಬೆಳೆಯಿತು. ಒಬ್ಬಂಟಿಗನ ಸತ್ಯಾಗ್ರಹದಿಂದಾಗಿ ಅಲ್ಪಾವಧಿಯಲ್ಲಿ ಕಾಯದೆಯನ್ನೇ ಬದಲಾಯಿಸಬೇಕಾಗಿ ಬಂದ ಅಪೂರ್ವ ಉದಾಹರಣೆ ಇದು. ಇದು ಇತಿಹಾಸದಲ್ಲಿ ಚಿರಸ್ಮರಣೀಯವಾದ ಸತ್ಯಾಗ್ರಹದ ದಾಖಲೆಯಾಗಿದೆ!

—ಗಾಂಧೀ.

ತಿಲ್ಲೂರು ಲಕ್ಷ್ಮೀನಾರಾಯಣರಾವ್ ನಿಧನ

ತಿಲ್ಲೂರು ಕುಟುಂಬದ ಹಿರಿಯರೂ, ಕೃಷಿಕ ವರ್ಗದವರೂ, ಧರ್ಮಾಭಿಮಾನಿಗಳೂ ಆದ ತಿಲ್ಲೂರು ಲಕ್ಷ್ಮೀನಾರಾಯಣ ರಾವ್‌ರು ಕಳೆದ ತಾ. 30-10-70 ನೇ ಶುಕ್ರವಾರ ಕೈಲಾಸವಾಸಿಗಳಾದರು. ಅವರಿಗೆ 83 ವರ್ಷ ಪ್ರಾಯವಾಗಿದ್ದು ಕಳೆದ ವರ್ಷ ಕೊಲ್ಲಿ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನಕ್ಕೆ ನೂತನ ಧ್ವಜಸ್ತಂಭ(ತಾಮ್ರ ಮುಚ್ಚಿಸಿ)ದ ಕೊಡುಗೆಯನ್ನಿತ್ತು ಬ್ರಹ್ಮಕಲಶ ಸಂತರ್ಪಣೆ ಮೊದಲಾದ ದಾನಗಳನ್ನಿತ್ತ ದಾತೃಗಳಾಗಿದ್ದರು.

ಮುಸ್ಲಿಂ ಲೀಗಿನ ಮುತ್ತಿಗೆ ಗಲ್ಲ ಮುರಿಯಿತು

ಅಲ್ಪ ಸಂಖ್ಯಾತರ ಏಕಮೇವ ಅಧಿನೇತೆ ತಾನೆಂದು ಇಂದಿರಾ ದೇವಿಯವರು ಎಡೆಬಿಡದೆ ಪ್ರಚಾರ ನಡೆಸುತ್ತ, ಮುಸ್ಲಿಂಲೀಗ್ ಮತೀಯ ಪಕ್ಷವಲ್ಲವೆಂದು ಪ್ರಶಂಸೆಯ ಮಾತುಗಳನ್ನಾಡಿ, ತಮ್ಮ ಪಕ್ಷದ ಭದ್ರತೆಗಾಗಿ ಕಷ್ಟಪಡುತ್ತಿದ್ದಾರೆ. ಕೇರಳದಲ್ಲಿ ನಡೆದ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ಸು ಮುಸ್ಲಿಂಲೀಗಿಗೆ ಈ ರೀತಿ ಹಸ್ತಲಾಘವನ್ನಿತ್ತಿತು. ಇಂದ ಅದು ಇಂದಿರಾಜೀಯವರಿಗೆನೇ ಸವಾಲ್ ಹಾಕುತ್ತಿದೆ. ಇಂದಿರಕ್ಕನವರು ಕೇರಳದ ಮುಸ್ಲಿಂಲೀಗು ಮತೀಯ ಪಕ್ಷವಲ್ಲವೆಂದ ಚಾಳಿ ಅವರ ಕಾಂಗ್ರೆಸ್ಸ್ ಮನೆಮಕ್ಕಳಿಗೆಲ್ಲಾ ಬಂದಿರುತ್ತದೆ. ಈ ರಾಜಕೀಯದಿಂದ ಕುರುಡರಾಗಿರುವವರ ಕಣ್ಣುಗಳನ್ನು ತೆರೆಯಲು ಮುಸ್ಲಿಂಲೀಗಿನ ಅಖಿಲ ಭಾರತೀಯ ಕಾರ್ಯದರ್ಶಿ ಮಹಮ್ಮದ್ ಸುಲೇಮಾನ್ ಸೇಟ್ ಬಹಳ ಶ್ರಮಿಸಿರುವರು. ಕೇರಳ ಮುಸ್ಲಿಂಲೀಗೆಂಬ ಪ್ರತ್ಯೇಕ ರಾಜಕೀಯ ಪಕ್ಷ ಒಂದು ಇರುವದಿಲ್ಲ. ಅದು ಇಂಡಿಯನ್ ಯೂನಿಯನ್ ಮುಸ್ಲಿಂಲೀಗಿನ ಕೇರಳದ ಶಾಖೆ ಇದೆ....ಹೀಗೆ ಮುಸ್ಲಿಂಲೀಗಿನ ಸ್ಪಷ್ಟ ಪರಿಚಯವನ್ನು ಅವರು ಮಾಡಿಕೊಟ್ಟು ಮುಂದೆ ಒಂದು ಪ್ರಶ್ನಾರ್ಥಕ ಚಿನ್ಹೆ ನಿಲ್ಲಿಸಿ ಬಿಟ್ಟಿರುವರು. ಕೇರಳದ ಮುಸ್ಲಿಂಲೀಗು ಮತೀಯ ಅಥವಾ ಜಾತೀಯವಲ್ಲವಾದಲ್ಲಿ ಇತರೆಡೆಗಳಲ್ಲಿರುವ ಮುಸ್ಲಿಂಲೀಗು ಜಾತೀಯವಾಗಿರಲು ಸಾಧ್ಯವೇನ? ಅವರ ಮನಸ್ಸಿಗೇನೇ ಇಂದಿರಾಜೀಯವರ ಮಾತು ಚುಚ್ಚುತ್ತದೆ. ಕಳ್ಳನ ಮನಸ್ಸು ಹುಳ್ಳ ಹುಳ್ಳಗೆ ತಾನೇ! ಅವರ ಪ್ರಶ್ನೆಗೆ ಉತ್ತರ ಕೊಡಬೇಕಾದವರು ಇಂದಿರಾಜೀ ಮತ್ತು ಜಗಜೀವನರಾಮರ ಕಾಂಗ್ರೆಸ್ಸ್ ಯಾಕೆಂದರೆ ಇತರರ ಪಾಲಿಗೆ ಅದು ಎಲ್ಲೆಲ್ಲೂ ಮತೀಯ ಪಕ್ಷವೇ ಇದೆ. ಆಗು ಅಧಿಕ್ಕಾರ ಮಾತ್ರ ಉರುಟಾಗಿದ್ದು, ಇತರ ದಿನಗಳಲ್ಲಿ ಚಪ್ಪಟೆಯಾಗಿರುವಂತದ್ದಲ್ಲ. ಇಂದಿರಾಜಿಯವರಾದರೂ ಇತರೆಡೆಗಳಲ್ಲಿರುವ ಮುಸ್ಲಿಂಲೀಗು ಕಮ್ಯೂನಲೆಂದು ಹೇಳಿರುವದಿಲ್ಲವಾದರೂ ಸೇಟ್ ಆ ರೀತಿ ಅರ್ಥಮಾಡಿಕೊಂಡು, ಇಂದಿರಾಜೀ ತಮ್ಮ ಮಾತನ್ನು ತಿದ್ದಿಕೊಳ್ಳಬೇಕೆಂದು ಅವರು ಕರೆ ಕೊಟ್ಟಿರುವರು. ಕೇರಳದ ಮುಸ್ಲಿಂಲೀಗು ಕಮ್ಯೂನಲ್ ಅಲ್ಲವಾದಲ್ಲಿ ಇತರೆಡೆಗಳಲ್ಲಿರುವ ಮುಸ್ಲಿಂಲೀಗು ಕಮ್ಯೂನಲ್ ಹೇಗಾಗುತ್ತದೆಂಬುದು ಅವರ ಪ್ರಶ್ನೆ. ಮಹಮ್ಮದ್ ಸುಲೇಮಾನ್ ಲೋಕಸಭೆಯ ಸದಸ್ಯರಿದ್ದಾರೆ. ಲೋಕಸಭೆಯು ಪ್ರಾರಂಭವಾಗುವ ಮುನ್ನ ಇಂದಿರಾಜೀ ಇದನ್ನು ಸ್ಪಷ್ಟಪಡಿಸದಿದ್ದಲ್ಲಿ, ಸಂಸದ ಸಮಯದಲ್ಲಿ, ಲೋಕಸಭೆಯಲ್ಲಿ ಸುಲೇಮಾನ್ ಈ ಪ್ರಶ್ನೆಯನ್ನೆತ್ತದೆ ಬಿಡಲಾರರು. ಅಸನದ ಆಶೆಯಿಂದ ಆಗ ಇಂದಿರಾಜೀ ಇನ್ನೇನಾದರೂ ಆಡಲೇಬೇಕಾಗುತ್ತದೆ. ಮುಸ್ಲಿಂಲೀಗು ಲೋಕಸಭೆಯಲ್ಲೂ ರಾಜ್ಯಸಭೆಯಲ್ಲೂ ಅವರಿಗೆ ಆಧಾರವಾಗಿರುವುದರಿಂದ ದಿಲ್ಲಿಯಲ್ಲಿ (ಸಂಸದಿನೊಳಗೆ!) ಮುಸ್ಲಿಂಲೀಗು ಕಮ್ಯೂನಲ್ ಅಲ್ಲವೆಂದು ಅವರು ಹೇಳಬಹುದು. ಅಷ್ಟಕ್ಕೆ ಅವರನ್ನು ಬಿಡುವವರ್ಯಾರು? ಮುಸ್ಲಿಂಲೀಗಿನ ಅಧ್ಯಕ್ಷ ಮುಹಮ್ಮದ್ ಇಸ್ಮಾಯಿಲ್ ಕೂಡಾ ಲೋಕಸಭಾ ಸದಸ್ಯರಿರುವ ಕಾರಣ ಸುಲೇಮಾನ್ ಸುಮ್ಮಗುಳಿದರೂ, ಇಸ್ಮಾಯಿಲ್ ಇಂದಿರಾರನ್ನು ಇನ್ನು ಸುಮ್ಮನೆ ಬಿಡುವಂತಿಲ್ಲ. ಅವರು ಬಾಯಿ ತೆರೆದಾಗಲೇ ಬೇಕು; ತುಟಿ ಎರಡು ಮಾಡಲೇ ಬೇಕಾಗುತ್ತದೆ.

ಇಂದಿರಾಜೀಯವರಿಗೆ ಇಷ್ಟವಾಗಿರುವ ಮಾತನ್ನಾಡಲು ಮುಹಮ್ಮದ್ ಸುಲೇಮಾನ್ ಹಿಂದಕ್ಕೆ ಬಿದ್ದಿರುವದಿಲ್ಲ. ಅವರ ದೃಷ್ಟಿಯಲ್ಲಿ ಮುಸ್ಲಿಂ ಲೀಗ್ ಕಮ್ಯೂನಲ್ ಅಲ್ಲ; ಭಾರತೀಯ ಜನಸಂಘ ಕಮ್ಯೂನಲ್. ಅದಕ್ಕೆ ಕಾರಣವೇನ? ಅದು ಹೇಗೆ? ಹೇಗೆಂದರೆ ಮುಸ್ಲಿಂಲೀಗ್ ಅಲ್ಪಸಂಖ್ಯಾತರನ್ನ ಪ್ರತಿನಿಧಿಸುತ್ತದೆ, ಜನಸಂಘವು ಬಹುಸಂಖ್ಯಾತರ (ಮೆಜೊರಿಟಿ) ಕೋರಿಕೆ ಮಾಡುತ್ತದೆ! ಬಹುಸಂಖ್ಯಾತರನ್ನು ಕಾಪಾಡುವ ಅಗತ್ಯವೇ ಇರುವದಿಲ್ಲ. ಅಲ್ಪ ಸಂಖ್ಯಾತರ ಕುರಿತು ಕೇಳಲು ಒಂದು ಪಕ್ಷ ಬೇಕು. ಅದುವೇ ಮುಸ್ಲಿಂ ಲೀಗ! ಬಹು ಸಂಖ್ಯಾತರಿಗೆ ಅಗತ್ಯ ಇಲ್ಲದ ಕಾರಣ ಭಾರತೀಯ ಜನಸಂಘ (ಭಾರತದಲ್ಲಿ!) ಕಮ್ಯೂನಲ್ ಪಕ್ಷ! ಇದು ಇಂದಿರಾಜೀಯವರ ವಾದವೂ ಇದೆ, ಸುಲೇಮಾನ್ ಸಮ್ಮಗೆ ಅದನ್ನು ಗಿಳಿಯಂತೆ ಉಚ್ಚರಿಸಿರುವರು. ಇದು ಹಲವು ರಾಷ್ಟ್ರವಾದವೆಂಬುದನ್ನು ರಾಷ್ಟ್ರೀಯ ಶಕ್ತಿಗಳು ಕಂಡುಕೊಳ್ಳಬಹುದು. ಭಾರತದಲ್ಲಿ ಹಲವಾರು ರಾಷ್ಟ್ರೀಯ ಗುಂಪುಗಳಿಲ್ಲ. ಇರುವದು ಒಂದೇ ರಾಷ್ಟ್ರ-ಅದುವೇ ಭಾರತೀಯ ರಾಷ್ಟ್ರ, ಅದವೇ ಹಿಂದೂ ರಾಷ್ಟ್ರ. ಇಲ್ಲಿ ಬಹುಸಂಖ್ಯಾತರು ಅಲ್ಪ ಸಂಖ್ಯಾತರೆಂಬ ಭಿನ್ನ ಭಾವನೆಯೇ ಇಲ್ಲ. ಇದನ್ನು ಅವರಿಂದ ತಿಳಿಯುವವರ್ಯಾರು? ಇಂದಿರಾಜೀ ಅವರನ್ನು ಹೊಗಳುತ್ತಿರುವಾಗ ಇತರರಿಗೆ ಆ ಧೈರ್ಯ ಬರಲಾರದು. ಹಾಗಿದ್ದರೂ ಸುಲೇಮಾನರು ತನ್ನ ಜಿಂಗಲಕ್ಕೆ ಅಲ್ಪಸಂಖ್ಯಾತರೆಂಬ ಹೆಸರಿನಲ್ಲಿ ಇತರರನ್ನೂ ಆಕರ್ಷಿಸಲು ವ್ಯರ್ಥ ಪ್ರಯತ್ನಿಸಿದ್ದಾರೆ. ಪರಿಶಿಷ್ಟ ಜಾತಿ (ಶೆಡ್ಯೂಲ್ಡ್ ಕಾಸ್ಟ್)ಯವರು ಹಿಂದೂ ರಾಷ್ಟ್ರಕ್ಕೆ ಸೇರಿದವರಲ್ಲ, ಅವರೂ ಅಲ್ಪಸಂಖ್ಯಾತರು, ಅವರೊಂದಿಗೆ ಅದ್ಯಾವ ಒಪ್ಪಂದಕ್ಕೂ ಸಿದ್ಧವೆಂದು ಅವರನ್ನು ಪುಸಲಾಯಿಸಲು ಸುಲೇಮಾನ್ ಪ್ರಯತ್ನಿಸಿರುವರು

ತನ್ನ "ಪರಂಪರೆ"ಯನ್ನು ಮರೆಯಲು ಮುಸ್ಲಿಂಲೀಗಿಗಳು ಸಿದ್ಧರಿಲ್ಲ. ಇಂದಿರಾಜೀ ಕೇರಳದ ಮುಸ್ಲಿಂಲೀಗು ಕಮ್ಯೂನಲ್ ಅಲ್ಲವೆಂದೊಡನೆ, ಇತರೆಡೆಗಳಲ್ಲಿ ಮುಸ್ಲಿಂಲೀಗು ಕೂಡಾ ಕಮ್ಯೂನಲ್ ಅಲ್ಲವೆನ್ನಬೇಕೆಂದು ಸುಲೇಮಾನ್ ಇದೇ ದೃಷ್ಟಿಯಲ್ಲಿ ಹೇಳುತ್ತಿದ್ದಾರೆ. ಅವರ ಪಾಲಿಗೆ ಅದೇ ಮುಸ್ಲಿಂಲೀಗ-ಭಾರತದ ವಿಭಜನೆಗಾಗಿ ಹೋರಾಡಿದ ಹಿಂದಿನ ಮುಸ್ಲಿಂಲೀಗೇ ಇದೆ. ಅದೇ ದಾರಿಯಲ್ಲಿ ಲೀಗು ಹೋಗುತ್ತಿದೆ. ಆದರೂ ವಿದೇಶಿ ನಿಷ್ಠೆಹೊಂದಿದವರೆಂದೊಡನೆ ಅವರಿಗೆ ಸಿಟ್ಟನೆ ಕೋಪ ಬರುತ್ತದೆ. ಚುನಾವಣಾ ಚಾಣಾಕ್ಷತೆಗಳಿಗಾಗಿ ಇದ್ದ ಮುರಾರ್ಜಿ ದೇಸಾಯಿಯವರು ಹಾಗೆಂದ ಬಿಟ್ಟರಂತೆ. ಅದನ್ನು ಸಹಿಸಿಕೊಳ್ಳಲು ಮುಸ್ಲಿಂಲೀಗಿಗಳಿಗೆ ಸಾಧ್ಯವಾಗಿಲ್ಲ. ಆದರಿಂದ ಮುಸ್ಲಿಂಲೀಗಿಗಳ ಮನಸ್ಸಿಗೆ ನೋವಾಗಿಯೆಂದೂ, ಅದನ್ನು ಪ್ರಮಾಣಪೂರ್ವಕ ಸಿದ್ಧಗೊಳಿಸಬೇಕೆಂದೂ ಸುಲೇಮಾನ್ ಕರೆ ಇತ್ತಿರುವರು. ರಾಜಕೀಯರಂಗದಿಂದ ದೂರ ಇರುವವರು ಇದಕ್ಕೆ ಬೆದರಲಾರರು. ಒಡನೆ ಅವರು ಕೇಳುತ್ತಾರೆ—ದೇಶ ವಿಭಜನೆಗೆ ಹೋರಾಡಿದ ಲೀಗ ಯಾವದು? ಇದ ಬೇರೆಯಾದ ದಲ್ಲಿ ಅದೇ ಧ್ವಜ ಇರಲು ಹೇಗೆ ಸಾಧ್ಯ? ಪಾಕಿಸ್ತಾನದ ಪತಾಕೆಯೂ ಇದಕ್ಕೂ ಇರುವ ವ್ಯತ್ಯಾಸವೇನು? ಅನ್ಯ ದೇಶದ ಧ್ವಜಕ್ಕೆ ತಲೆಬಾಗುವವರನ್ನು ವಿದೇಶಿ ನಿಷ್ಠೆಯುಳ್ಳವರೆಂದು ಮಾತ್ರ ಹೇಳದೆ ದೇಶದ್ರೋಹಿಗಳೆಂದು ಹೇಳಲೇಬೇಕೇನು? (ಇದು ಕಮ್ಯೂನಿಸ್ಟರಿಗೂ ಅನ್ವಯಿಸುತ್ತದೆ.) ಇಲ್ಲ ಪಾಕಿಸ್ತಾನ ಜಿಂದಾಬಾದೆಂದು ಬೊಬ್ಬೆ ಹೊಡೆಯುತ್ತಿರುವವರ್ಯಾರು? ಅಲ್‌ಅಕ್ಸಾದಲ್ಲಿ ನಡೆದ ದುರ್ಘಟನೆಯನ್ನು ಖಂಡಿಸುವಾಗಲೂ ಇಲ್ಲಿಯ ಲೀಗಿಗಳ "ಪಾಕ್ ಜಿ" ಅನ್ನ ಬೇಕೇನ? ಮುಸ್ಲಿಂಲೀಗಿನವರು ಯಾವದಾದರೂ ಚುನಾವಣೆಯಲ್ಲಿ ಗೆದ್ದಾಗ ಅವರ ಮೆರವಣಿಗೆಯಲ್ಲಿ ಕೇಳಬರುತ್ತಿರುವ ಘೋಷಣೆಗಳ್ಯಾವವು? ಪಾಕಿಸ್ತಾನ ಆಕ್ರಮಣ ನಡೆಸಿದಾಗ ಇವರಿಗೇತಕ್ಕೆ ಹಿಡಿಸಲಾರದಷ್ಟು ಆನಂದವಾದದ್ದು? ಅದರಲ್ಲೂ ಪಾಕಿಸ್ತಾನ್ ರೇಡಿಯೋ ಕೇಳುತ್ತ, ಪಾಕಿಸ್ತಾನ ಗೆದ್ದಾಗಲೆಲ್ಲಾ ಬೊಬ್ಬೆ ಹೊಡೆಯುತ್ತಿದ್ದವರ್ಯಾರ? ಮುಸ್ಲಿಂ ಪಕ್ಷೀಕರಣದ ಹೊಣೆ ಹೊತ್ತಿರುವ ಸರಕಾರ ಸಹಾ ಆ ಸಮಯದಲ್ಲಿ, ರಾಷ್ಟ್ರ ವಿರೋಧಿ ಕೃತ್ಯಗಳಲ್ಲಿ ಭಾಗವಹಿಸಿರುವ ಮುಸ್ಲಿಂಲೀಗಿಗಳನ್ನು ಬಂಧಿಸಿತ್ತೆಂದಲ್ಲಿ ಇನ್ನು ಯಾವ ಉದಾಹರಣೆ ಬೇಕು? ಇಲ್ಲಿಯ ಪುಣ್ಯಕ್ಷೇತ್ರಗಳು, ಇಲ್ಲಿಯ ಶಿವಲಿಂಗ ಇವರಿಗೆ ಪೂಜನೀಯವಲ್ಲ. ಜಗನ್ನಾಥ ದೇವಾಲಯವನ್ನು ಸೂರೆಮಾಡಲು ಅಪ್ಪಿತನೇ ಶತಮಾನದ ಈ ದಿನಗಳಲ್ಲೂ ಇವರು ನುಗ್ಗುತ್ತಿದ್ದಾರೆ. ಅದರ ಬಾಬರಿಯಲ್ಲಿರುವ ಶಿವಲಿಂಗಕ್ಕೆ ಮುಸ್ಲಿಮರು ಅನ್ನ—ನೀರು—ನಿಡ್ರೆ ಬಿಟ್ಟು ಹೋಗುತ್ತಿದ್ದಾರೆ! ಖಾಬಾ ನಮ್ಮ ದೇಶದಲ್ಲಿದೆ ಏನು? ಇದ ವಿದೇಶೀ ನಿಷ್ಠೆಯಲ್ಲದೆ ಬೇರೇನೇನ? ದೇಶ ವಿಭಜನೆಯ ಪೂರ್ವ ಪಾಕಿಸ್ತಾನ ಬೇಕೆಂದು ಇದೇ ಮುಸ್ಲಿಂಲೀಗಿನವರು ಮತದಾನ ಮಾಡಿಲ್ಲವೇನ? ಅಂದಿನವರು ಅಂದಿಗೆಂತ, ಅನ್ನುವದಾದರೂ ಇಂದು ಕಾಶ್ಮೀರ ಪಾಕಿಸ್ತಾನಕ್ಕೆ ಹೋಗಬೇಕೇ ಇಲ್ಲೇ ಇರಬೇಕೇನೆಂದ ಅಭಿಪ್ರಾಯ ವ್ಯಕ್ತಪಡಿಸಲು ತಿಳಿಸಿದರೆ ಈ ಲೀಗು ಏನೆಂದು ಅಭಿಪ್ರಾಯ ಕೊಟ್ಟೀತು? ಅಷ್ಟೆಲ್ಲಾ ಯಾಕೆ? ಪ್ರತ್ಯೇಕ ಮಲ್ಲಪುರಂ ಏನನ್ನು ಸೂಚಿಸುತ್ತದೆ? ಸಿದ್ಧಪಡಿಸಿ ತೋರಿಸಬೇಕೆಂದು ಸವಾಲ್ ಹಾಕುತ್ತಿರುವ ಇದೇ ಸುಲೇಮಾನ್ ಸೇಟ್, ಸಮಾನ ರೀತಿಯ ಕಾನೂನನ್ನು ತರಬೇಕೆನ್ನುವ ಮಾತು ಲೋಕಸಭೆಯಲ್ಲಿ ಕೇಳಿಬಂದಾಗ ಹೇಳಿದ್ದೇನು?— ಈ ದೇಶದ ಲೋಕಸಭೆಗೆ ಮುಸ್ಲಿಮರ ಮೇಲೆ ಕಾನೂನನ್ನು ಹೇರುವ ಅಧಿಕಾರ ಇಲ್ಲ. ಈ ಮಾತಿನ ಅರ್ಥವೇನ?

ಮುರಾರ್ಜಿ ದೇಸಾಯಿಯವರ ಇಷ್ಟು ಹೇಳಿದ್ದೇ ತಡ, ಸುಲೇಮಾನ್ ಸೇಟ್‌ರ ಸಂಶಯನೆ ಮೂಗಿನ ಮೇಲೆಯೇ ಸಿಟ್ಟು

(ಎಂಟನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
126 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ,

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ನೈತಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಪುಸ್ತಕ
ಬೆಲೆ 0-75 ಪೈಸೆ ಮಾತ್ರ.
ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ.
ಬಾಲುಗೋಟೆ, ಉಡುಪಿ, ದ. ಕ.

ರಾಜಕೀಯದಿಂದ ನಿವೃತ್ತಿ ಬೇಡ

ಶ್ರೀ ನಿಜಲಿಂಗಪ್ಪನವರು ತನ್ನ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಮಾಡಬಹುದಾದ ಭಾಷಣ ಹೀಗಿರಬಹುದೆ? [ಇವರ ಭಾಷಣ ಇದನ್ನು ಬರೆಯುವ ಹೊತ್ತಿನಲ್ಲಿ ಬಹಿರಂಗವಾಗಿಲ್ಲ.]

ಸನ್ಮಾನ್ಯ ಮಿತ್ರರೇ,

ಇಂದಿನ ಸಭೆಯು ಅತ್ಯಂತ ಮಹತ್ವದ್ದು. ನಮ್ಮ ಎ. ಐ. ಸಿ. ಸಿ. ಮುನ್ನಡೆಯಲಿರುವ ಪೂರ್ವಸಂಧ್ಯೆಯಲ್ಲಿ ನಾವಿಲ್ಲಿ ಸೇರಿದ್ದೇವೆ. ಸರ್ವೇಸಾಮಾನ್ಯವಾಗಿ ನಾವಿಲ್ಲಿ ಸ್ವೀಕರಿಸುವ ಗೊತ್ತುವಳಿಗಳಷ್ಟೇ ಎ.ಐ.ಸಿ.ಸಿ.ಗೆ ಹೋಗಿ ಅಲ್ಲಿ ಒಪ್ಪಿಗೆಯ ಮುದ್ರೆ ಪಡೆಯುವ ಪಕ್ಷಸಂಪ್ರದಾಯವಿರುವುದರಿಂದ ನಮ್ಮ ಕರ್ತವ್ಯ ಗುರುತರವಾಗಿದೆ. ೧೯೭೨ರಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯಬೇಕಾದುದು ಧರ್ಮ. ಇದಕ್ಕೆ ಈಗಿಂದೀಗಲೇ ಸಿದ್ಧತೆ ನಡೆಯಬೇಕಾಗಿರುವುದರಿಂದ ಈ ಸಭೆಯೂ ಚುನಾವಣೆಗಳಲ್ಲಿ ಮಹತ್ವದ ಪಾತ್ರ ವಹಿಸುತ್ತವೆ.

ನಾನು ಚುನಾವಣೆ ನಡೆಯುವುದು ಧರ್ಮವೆಂದು ಹೇಳಿದೆ. ಏಕೆಂದರೆ, ಶ್ರೀಮತಿ ಗಾಂಧಿಯು ಕೇವಲ ಸರ್ವಾಧಿಕಾರಿಯಾಗಲು ಹವಣಿಸಿ ಆ ದಿಸೆಯಲ್ಲೇ ಮುಂದಡಿಯಿಡುವುದನ್ನು ನಾವೂ ನೀವೂ ಮಿತ್ರರೂ ನೋಡುತ್ತಿದ್ದೇವೆ. ಈಗ ಮೂಕಪ್ರೇಕ್ಷಕರಾಗಿಯೇ ಕಾಯಬಹುದು; ಆದರೆ ಮುಂದೆಯೂ ಹಾಗೆಯೇ ಇರುವುದು ಸಾಧ್ಯವಿಲ್ಲ. ಐವತ್ತೈದು ಕೋಟಿ ಭಾರತೀಯರ ಯೋಗಕ್ಷೇಮವನ್ನು ನಾವು ನೋಡಬೇಕಾಗಿದೆ. ನಾನು ಹೀಗೇಕೆ ಹೇಳುತ್ತೇನೆಂದು ಗಾಬರಿಯಾಗಬೇಡಿ. ಸತ್ಯ ಹೇಳಿದ್ದಾದರೆ, ಆಕೆಗೆ ಅಲ್ಲಿ ಬಹುಮತವಿಲ್ಲ. ಆದರೂ ಕಮ್ಯುನಿಸ್ಟರ ಮತ್ತು ಜಾತೀ ಬಂಧುಗಳ ಬೆಂಬಲದಿಂದ ಎದೆಯುಬ್ಬಿಸಿ ನಡೆಯುತ್ತಾರೆ. ಸಂಸತ್ತನ್ನು ವಿಸರ್ಜಿಸುವ ಯೋಚನೆಯನ್ನು ಆಕೆ ಮಾಡಿದ್ದುಂಟು. ಆದರೆ, ನಾವೂ ನಮ್ಮ ಸ್ನೇಹಿತರೂ ಆಕೆಯ ಚಿದಂಬರ ರಹಸ್ಯವನ್ನು ಮುಂದಾಗಿಯೇ ಭೇದಿಸಿದೆವು. ನಾವಂದದ್ದನ್ನು ಅಲ್ಲವಾಗಿಸುವುದು ಆಕೆಯ ನೀತಿ. ಪುರಾಣದಲ್ಲಿ ಚಂಡಿಯು ಕಥೆ ಕೇಳಿಲ್ಲವೇ ನಾವು, ಹಾಗೆ. ಆದುದರಿಂದ ದ್ರಾಮುಕ, ಬಲ ಕಮ್ಯುನಿಸ್ಟರು, ಮುಸ್ಲಿಂ ಲೀಗ್ ಮೊದಲಾದ ರಾಷ್ಟ್ರದ್ರೋಹಿಶಕ್ತಿಗಳ ಬಲದಿಂದ ಸದ್ಯ ಮುಂದುವರಿಯುವುದೇ ಬೇಡವೆಂದು ಆಕೆ ನಿರ್ಧರಿಸಿದರು. ಏಕೆಂದರೆ, ಮಧ್ಯಾವಧಿ ಚುನಾವಣೆಗಳು ನಡೆದರೆ, ತನ್ನ ಬೆಂಬಲವೆಲ್ಲ ನೀರಾಗಿ ಹೋಗುವುದೆಂದು ಆಕೆಗೆ ಗೊತ್ತಾಯಿತು. ಒಂದು ವೇಳೆ ನಾವು ರಹಸ್ಯ ಭೇದ ಮಾಡದಿರುತ್ತಿದ್ದರೆ, ಖಂಡಿತವಾಗ್ಯೂ ಆಕೆಯಿಂದು ಪ್ರಧಾನಿಯಾಗಿ ಉಳಿಯುತ್ತಿರಲಿಲ್ಲ. ನಮ್ಮ ಉದ್ದೇಶವನ್ನು ಜನರೇ ಈಡೇರಿಸುತ್ತಿದ್ದರು. ಕಳೆದ ವರ್ಷ ಮೈತ್ರಿಯ ಒಡಂಬಡಿಕೆ ಮಾಡಿಕೊಂಡು ನಾವು ಕೈಸುಟ್ಟುಕೊಂಡೆವು; ಈ ವರ್ಷ ಚಿದಂಬರ ರಹಸ್ಯ ಭೇದಿಸಿ ಮುಖಕ್ಕೆ ಮಸಿ ಹಚ್ಚಿಕೊಂಡೆವು. ಆದರೆ ಒಂದು ಮಾತು, ಇದುವರೆಗೆ ಆದದ್ದೆಲ್ಲ ಆಗಿಹೋಯಿತು. ಇನ್ನು ಮುಂದಾದರೂ ನಾವು ಇಂತಹ ತಪ್ಪುಗಳನ್ನು ಮಾಡುತ್ತ ಹೋಗಬಾರದೆಂದು ಮಿತ್ರರನ್ನು ಕೈಜೋಡಿಸಿ ಕೇಳಿಕೊಳ್ಳುತ್ತೇನೆ.

ನಾವು ೭೨ರಲ್ಲಿ ಚುನಾವಣೆ ನಡೆಯುತ್ತದೆ ಎಂದರೆ, ಆಕೆ ಚುನಾವಣೆಗಳನ್ನು ಮುಂದೂಡಲೂ ಬಹುದು. ತನ್ನ ಪಕ್ಷವು ಪಕ್ಕಾ ಮಾಡಿ ಗಂಗೆದರ ನಿಂತಿದೆಯೆಂದಾಕೆಗೆ ಖಾತ್ರಿಯಾಗುವ ವರೆಗೆ ಆಕೆ ಹೀಗೆಯೇ ರಾಷ್ಟ್ರವಿರೋಧಿ ಶಕ್ತಿಗಳ ಬಲದಲ್ಲಿ ನಿಲ್ಲಬಹುದು. ಆದುದರಿಂದ ನಾವೀಗ ಹೊಸ ರೀತಿಯ ಪ್ರಚಾರವನ್ನು ಆರಂಭಿಸಿದರೆ ಹೇಗೆಂಬುದನ್ನು ಪರ್ಯಾಲೋಚಿಸಬೇಕು. ಆಕೆ ೭೨ರ ಚುನಾವಣೆಗಳನ್ನು ಮುಂದೂಡುವ ಹವಣಿಕೆಯಲ್ಲಿದ್ದಾರೆಂದು ಪ್ರಚಾರಕ್ಕೆ ತೊಡಗಿದರೆ, ಆಗ ೭೨ಕ್ಕೆ ಖಂಡಿತ ಚುನಾವಣೆ ನಡೆಯುತ್ತದೆ. ಏಕೆಂದರೆ, ನಾವು ಅಂದದ್ದನ್ನು ಅಲ್ಲವೆಂದು ಸಾಧಿಸಿ ತೋರಿಸುವುದೇ ಆಕೆಯ ರಾಜಕೀಯ ಬಂಡವಳ.

ಬ್ಯಾಂಕುಗಳ ರಾಷ್ಟ್ರೀಕರಣದಿಂದ ದೇಶಕ್ಕೇನೂ ಲಾಭವಾಗಲಿಲ್ಲ ಎಂಬುದನ್ನು ನೀವೆಲ್ಲರೂ ತಿಳಿದಿದ್ದೀರಿ. ಆಕೆಯ ಪಕ್ಷದವರು ಈ ಅಭಿಪ್ರಾಯವನ್ನೇ ತಳೆದದ್ದುಂಟು. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಠೇವಣಾತಿ ಕಡಿಮೆಯಾಗಲಿಲ್ಲವೆಂದು ಆಕೆ ಹೆಮ್ಮೆಪಟ್ಟುಕೊಳ್ಳುತ್ತಾರೆ. ಇದು ಒಣ ಹೆಮ್ಮೆ. ಏಕೆಂದರೆ, ಈ ಒಂದು ವರ್ಷದಲ್ಲಿ ಠೇವಣಾತಿ ನಿಜಕ್ಕೂ ಏರಬೇಕಿತ್ತು. ಹಿಂದಿನ ವರ್ಷಗಳಲ್ಲಿ ಪ್ರತಿಯೊಂದು ಬ್ಯಾಂಕೂ ಶೇ. ೧೦ರಿಂದ ೩೦ ರಷ್ಟು ಠೇವಣಿ ಹೆಚ್ಚಿಸಿದ್ದುಂಟು. ಹಾಗಿರುವಾಗ ಇಷ್ಟರ ಮಟ್ಟಿಗೆ ಠೇವಣಿ ಕಳೆಯಿತೆಂದರೆ ಅರ್ಥವಲ್ಲವೆ? ರಾಷ್ಟ್ರೀಕರಣವನ್ನು ಜನ ಬೆಂಬಲಿಸಲಿಲ್ಲವೆಂದು ಇದಕ್ಕೆ ಅರ್ಥ ಕಟ್ಟಬಾರದೇಕೆ? ಇನ್ನೊಂದು ಮಾತು. ರಾಷ್ಟ್ರೀಕೃತ ಬ್ಯಾಂಕುಗಳು ಕೃಷಿರಂಗಕ್ಕೆ ನೀಡಿದ್ದ ಮುಂಗಡಗಳು ಕ್ರಮವಾಗಿ ವಸೂಲಾಗುತ್ತಿಲ್ಲವೆಂದು ಅವರೇ ಹೇಳುತ್ತಾರೆ. ಇಂಥ ಸಾಲ ಆ ಕಡೆಯಿಂದಲೇ ಬರಬೇಕಾದರೆ, ಏನೇನೂ ವಸೂಲಾಗುತ್ತಿಲ್ಲವೆಂದೇ ಅರ್ಥ. ಗೇಣಿ ಸರಿಯಾಗಿ ಕೊಡಲಾಗದ ರೈತರು ಸಾಲ ತೀರಿಸುತ್ತಾರೆಂದು ನಂಬುವುದು ಮೂರ್ಖತನ. ವಿಶಿಷ್ಟ ವರಾಯಿದ್ದಲ್ಲೆಲ್ಲಾ ಗಾಳ ಹಾಕುವ ನಮ್ಮ ಹಿಂದಿನ ಬ್ಯಾಂಕರು ಕೃಷಿಕರನ್ನು ದೂರವಿಟ್ಟಿದ್ದು ಯಾಕೆ ಎಂಬುದು ಈಗಲಾದರೂ ಅರ್ಥವಾಯಿತು. ಸರಿಯಾಗಿ ಸಾಲ ಸಂದಾಯ ಮಾಡುವ ರೈತರಿಗೆಲ್ಲ ಸಾಲ ನೀಡುವುದನ್ನು ನಮ್ಮ ನೀತಿಯನ್ನಾಗಿ ಮಾಡಿದರೆ ಮಾತ್ರ ನಾವು ಎಲ್ಲರ ವಿಶ್ವಾಸ ಗಳಿಸಬಹುದು; ಠೇವಣಿ ಹೆಚ್ಚಿಸಬಹುದು.

ರಾಜ-ಮಹಾರಾಜರ ಮನ್ನಣೆಯನ್ನು ಮನ್ನಾ ಮಾಡಿದ ಸಂಗತಿ ಕೋರ್ಟಿನ ಮುಂದೆ ಇರುವುದರಿಂದ ಹೆಚ್ಚು ಹೇಳಬಾರದು. ಮನ್ನಣೆಗೆ ನಾವೂ ವಿರುದ್ಧವೆ. ಆದರೆ; ಅದನ್ನು ಸಾಧಿಸಿದ ರೀತಿ ಸರಿಯಲ್ಲವೆಂಬುದಷ್ಟೆ ನಮ್ಮ ನೀತಿ.

ಇನ್ನೊಂದು ಮಹತ್ವದ ಪ್ರಶ್ನೆ. ನಾವು ನಮ್ಮ ಈ ಅಧಿಕಾರಾವಧಿ ಮುಗಿದೊಡನೆಯೇ ರಾಜಕೀಯದಿಂದ ನಿವೃತ್ತನಾಗುವೆನೆಂದು ಹೇಳಿದ್ದೆ. ಆದರೆ, ಇಂದು ನಮ್ಮ ದೇಶದಲ್ಲಿ ಆಕೆಯ ಸರ್ವಾಧಿಕಾರಿ ಕಮ್ಯುನಿಸ್ಟ್ ನೀತಿಯಿಂದಾಗಿ ಪ್ರಜಾಪ್ರಭುತ್ವದ ಗೋಣು ಮುರಿಯುತ್ತಿದೆ. ಈ ಪ್ರಜಾಸತ್ತೆಯ ಸಂರಕ್ಷಕರು ಯಾರು? ದೇಶ ಸ್ವತಂತ್ರವಾಗುವಾಗ ಶ್ರೀಮತಿ ಗಾಂಧಿಗೆ ಮೂವತ್ತರ ಹರೆಯ. ಯುವ ಪುರುಷರೆಲ್ಲ ಕಾಡಿಸಿದ ನಯ ತರುಣರು. ಇಂದಿನ ಯುವಕರು ಹಳ್ಳಿ-ಗುಲ್ಲುಗಳಲ್ಲೇ ಮನಸೋಲುತ್ತಾರೆ. ಅಥವಾ ನಮ್ಮ ಪಕ್ಷದಿಂದ ಅವರು ಕಡಿಮೆ ಆಕರ್ಷಿತರಾಗಿದ್ದಾರೆ. ಆದುದರಿಂದ ಈ ಪ್ರಜಾಸತ್ತೆಯನ್ನು ಸ್ಥಾಪಿಸಲು ರಕ್ತ ಬೆವರು ಹರಿಸಿದ ನಾವು ಕರ್ತವ್ಯ ಬಾಹಿರರಾಗುವುದು ಅಸಾಧ್ಯ. ನಾವೆಲ್ಲರೂ ನಿವೃತ್ತರಾಗುವುದನ್ನು ಬಿಟ್ಟು ಇದಕ್ಕಾಗಿ ಪ್ರಾಣಪಣವಿಡಬೇಕು ಎಂದು ಹಲವರ ಅಭಿಪ್ರಾಯ. ಜನಾಭಿಪ್ರಾಯವನ್ನು ಮನ್ನಿಸದೆ ಹೋದರೆ ನಾವು ಜನದ್ರೋಹಿಗಳಾಗುತ್ತೇವೆ. ಆದುದರಿಂದ ನಾವು ಆ ಯೋಚನೆಯನ್ನು ಬಿಟ್ಟುಬಿಡೋಣ; ಯುವ ಜನರನ್ನು ಆಕರ್ಷಿಸೋಣ. ಒಂದು ವೇಳೆ ಅವರು ನಮ್ಮ ಜತೆ ಸೇರದಿದ್ದರೂ ದೇಶರಕ್ಷಣೆಯಿಂದ ಹಿಂದೆ ಸರಿಯದಿರೋಣ.

ನಮ್ಮ ಪಕ್ಷಕ್ಕೆ ಉಜ್ವಲ ಭವಿಷ್ಯವಿದೆಯೆಂದು ನನ್ನ ಭಾವನೆ. ಉತ್ತರ ಪ್ರದೇಶದಲ್ಲಿ ಆಕೆಯ ಮುಖಭಂಗವಾದದ್ದು ಮಹತ್ವದ ಸಂಗತಿ. ಬೊಂಬಾಯಿಯ ಪರೇಲ್‌ನಲ್ಲಿ ಆಕೆಯ ಅಭ್ಯರ್ಥಿ ಸೋತದ್ದು ಕಡಿಮೆ ಮಹತ್ವದ್ದಲ್ಲ. ಜನ ನಮ್ಮ ನೀತಿಯನ್ನು ಮೆಚ್ಚಿದೆಯೆಂಬುದಕ್ಕೆ ಬಿಹಾರವೇ ಸಾಕ್ಷಿ. ಅಲ್ಲಿ ಆಕೆಯ ಪಕ್ಷಕ್ಕೆ ನೀಡುತ್ತಿದ್ದ ಬೆಂಬಲವನ್ನು ಐದು ಪಕ್ಷಗಳು ಹಿಂದೆಗೆದುಕೊಂಡವು. ಆಕೆಯ ಪಕ್ಷದ ಬಿಗುವು ಸ್ವಲ್ಪ ಸಣ್ಣದಾಗಿರಬಹುದು. ಅದನ್ನು ಉಚಿತ ಪದವಿ ನೀಡುವುದರಿಂದ ಸಂಪೂರ್ಣ ಮುಚ್ಚಲಾಗದು. ಸಂಪುಟ ವಿಸ್ತರಿಸಿದ ಮೇಲೆ ಮತ್ತೆ ಭಿನ್ನಮತೀಯರು ಹುಟ್ಟುವುದು ಸಹಜ, ಅದುವರೆಗೆ ಕಾದು ನೋಡೋಣ. ಉತ್ತರ ಪ್ರದೇಶದಲ್ಲಿ ಶ್ರೀ ಸಿಂಗರು ಧರ್ಮರಾಯ; ದೇವತಾ ಮನುಷ್ಯ. ಅವರು ರಾಜನೀತಿಯನ್ನು ಅರ್ಥಮಾಡಿಕೊಂಡು ಜನಹಿತ ಸಾಧನೆಯಲ್ಲಿ ತೊಡಗಿದರೆ, ಅವರ ಸರಕಾರ ಭದ್ರವೆಂಬುದು ನಿಸ್ಸಂದೇಹ. ಆಗ ಒಬ್ಬ ಇಂದಿರಾ ಗಾಂಧಿಯಲ್ಲ; ನೂರು ನೂರು ಗಾಂಧಿಗಳು ಬಂದರೂ ಸಿಂಗರನ್ನು ನುಂಗುವುದು ಸಾಧ್ಯವಿಲ್ಲ.

ಪಶ್ಚಿಮ ಬಂಗಾಳದ ಕಾನೂನು-ಸುವ್ಯವಸ್ಥೆ, ಮೈಸೂರು—ಮಹಾರಾಷ್ಟ್ರ ಗಡಿ ವಿವಾದ, ಕಾವೇರಿ ನೀರಿನ ಬಗ್ಗೆ ತಮಿಳುನಾಡಿನ ತಕರಾರು-ಇತ್ಯಾದಿ ಜ್ವಲಂತ ಪ್ರಶ್ನೆಗಳು. ಸಮಸ್ಯೆಗಳನ್ನು ಸೃಷ್ಟಿಸುವುದೇ ಆಕೆಯ ಕೆಲಸವಲ್ಲದೆ ಅವನ್ನು ಪರಿಹಾರ ಮಾಡುವುದಕ್ಕೆ ಆಕೆ ಗಮನ ಹರಿಸುವುದೇ ಇಲ್ಲ. ಎಲ್ಲರನ್ನೂ ಕತ್ತಿಯಿಂದ ತಿವಿದ ಕುದುರೆಯಂತೆ ತಾನೊಬ್ಬಳೇ ಚಾಣಕ್ಯಳೆಂದು ಆಕೆ ತಿಳಿದುಕೊಂಡಿದ್ದಾರೆ. ಅದನ್ನು ಸುಳ್ಳು ಮಾಡುವುದು ಮುಖ್ಯ. ಇನ್ನು ಹೆಚ್ಚು ಮಾತಾಡುವುದಿಲ್ಲ. ಮುಂದಿನ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಎ.ಐ.ಸಿ.ಸಿ. ನಡೆಯಬೇಕಾದ್ದರಿಂದ ಆವಶ್ಯಕ ವಿವೇಚನೆಯನ್ನು ನಾವೆಲ್ಲರೂ ಇಲ್ಲಿ ಬಳಸಬೇಕು. ಗುರಿಮುಟ್ಟುವ ನೀತಿ-ರೀತಿಗಳನ್ನು ಚರ್ಚಿಸಬೇಕು.

ಜೈಹಿಂದ್.

'ಅರ್ಥಶಾಸ್ತ್ರಿ' ಎಂದರೆ ಯಾರು? ಹಣವನ್ನು ಹೊಂದಿದವನಿಗಿಂತಲೂ ಹಣದ ಬಗ್ಗೆ ಹೆಚ್ಚು ತಿಳಿದುಕೊಂಡವನೇ ಅರ್ಥಶಾಸ್ತ್ರಿ.

೦ ೦ ೦

ಒಬ್ಬಾತ ಬ್ರಿಟಿಷ ಸಿನೆಮಾನಟ ತನ್ನ ಅಮೆರಿಕನ್ ಮಿತ್ರನೊಡನೆ ಹೇಳಿದ-'ನಾನು ಆಕ್ಸ್‌ಫರ್ಡ್ ಮತ್ತು ಕ್ಯಾಂಬ್ರಿಜ್‌ಗಳ ಮೆಟ್ಟಲು ಮೆಟ್ಟಿದವನು.'

"ಹಾಗಾದರೆ, ನೀನ ಆಕ್ಸ್‌ಫರ್ಡನ್ನು ಬಿಟ್ಟಿದ್ದಾದರೂ ಏಕೆ?"

"ನಿಮೋನಿಯಾ"

"ಅಂದರೆ, ಅದು ನಿನಗಂಟಿಕೊಂಡಿತೇನು?"

'ಛೆ, ಇಲ್ಲವೇ ಇಲ್ಲ. ಅದರ ಸ್ಪೆಲ್ಲಿಂಗೇ ನನಗೆ ಬರಲಿಲ್ಲ.'

೦ ೦ ೦

Gram: VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ. ೧೧.

ಪೂರ್ವ ಸಂಧ್ಯೆಯಲ್ಲಿ ಕೋಡಂಗಿ ಕುಣಿತ

ಕರಾಚಿಯ ವಿಮಾನ ನಿಲ್ದಾಣದಲ್ಲಿ ಪೋಲೆಂಡಿನ ಅಧ್ಯಕ್ಷರೂ ಉಪವಿದೇಶಮಂತ್ರಿಯೂ ಲಾರಿ ಅಪಘಾತಕ್ಕೆ ಗುರಿಯಾದರು.

ಮೊದಲನೆಯವರ ಪಾರಾದರು; ಎರಡನೆಯವರು ಬಲಿಯಾದರು. ವಿದೇಶೀಯ ಅತಿಥಿ ರಾಜ್ಯತಂತ್ರಜ್ಞರನ್ನು ಕೊಲೆ ಮಾಡಲೆತ್ನಿಸಿದವನು ಶ್ರೀ ಮಹಮ್ಮದ್ ಫಿರೋಜ್ ಅಬ್ದುಲ್ಲಾ.

ಈ ಲಾರೀ ಚಾಲಕನನ್ನು ಪೋಲೀಸರು ಬಂಧಿಸಿದ್ದಾರೆ; ಆತನ ಮೇಲೆ ಕೊಲೆಯ ಹಾಗೂ ಕೊಲೆಯ ಪ್ರಯತ್ನದ ಆರೋಪ ಹೊರಿಸಿದ್ದಾರೆ; ಅದು ಸಿದ್ಧವಾಯಿತೆಂದರೆ ಶಿಕ್ಷೆಯೂ ದೊರೆಯುತ್ತದೆ.

ಆದರೆ, ಮುಖ್ಯಸಂಗತಿಯೆಂದರೆ. ಈ ಆರೋಪಿ ಫಿರೋಜ್ ಜಮಾತೇ ಇಸ್ಲಾಮಿಯೆಂಬ ಸಕ್ರಿಯ ಉಗ್ರಸಂಘದ ಸದಸ್ಯ. ಇಸ್ಲಾಮಿನ ಹೆಸರಿನಲ್ಲಿ ಈ ಪರರನ್ನು ಹೊಡೆಬಡಿಯುವುದೇ ಆತನ ಘನೋದ್ದೇಶವಿರಬೇಕು.

ಅವರು ಏನಾದರೂ ಸತ್ತುಕೊಳ್ಳಲೆಂದು ಸುಮ್ಮನೆ ಬಿಡುವ ಸಂಗತಿಯೂ ಇದಲ್ಲ. ಪಾಕಿಸ್ತಾನದಲ್ಲಿ ವಿದೇಶೀ ರಾಜ್ಯಕಾರಣಿಗಳು ಇನ್ನು ಮುಂದೆ ಸಂಚರಿಸುವುದಕ್ಕೆ ಮೊದಲು ನೂರು ಬಾರಿ ಯೋಚಿಸಬೇಕಾಗುತ್ತದೆ.

ತಮಗೊಲ್ಲದವರ ಕಥೆ ಮುಗಿಸಲು ಪಾಕಿಸ್ತಾನಿಗಳು ಹೊಸ ಹೊಸ ತಂತ್ರಗಳನ್ನು ಬಳಸಿಕೊಳ್ಳುತ್ತಾರೆ. ಆ ತಂತ್ರಗಳಲ್ಲಿ ಇದೂ ಒಂದಾಗಿರಬಹುದೆ?

ಭಾರತದಲ್ಲಿಯೂ ಇದೇ ಇಸ್ಲಾಮಿಯೆಂಬಂಥ ಸಂಸ್ಥೆಯಿದೆ. ಇದೇನು ಮಾಡುತ್ತದೆ, ಇದರ ಕಾರ್ಯ ಚಟುವಟಿಕೆಗಳ ಗುರಿಯೇನು? ಇಸ್ಲಾಂನ ಪವಿತ್ರ ಹೆಸರಿಗೆ ಕಳಂಕ ಹಚ್ಚುವುದಕ್ಕೂ ಇವು ಹಿಂಜರಿಯುವುದಿಲ್ಲ.

ಇಲ್ಲಿ ಇನ್ನೊಂದು ಘಟನೆ ನೆನಪಿಗೆ ಬರುತ್ತದೆ. ನಾಲ್ಕು ವರ್ಷಗಳಿಗೆ ಮೊದಲು ಪ್ರಧಾನಿ ಲಾಲ ಬಹದೂರ್ ಮತ್ತು ಪಾಕಿಸ್ತಾನದ ಅಧ್ಯಕ್ಷ ಆಯೂಬಖಾನರು ರಷ್ಯದ ಅತಿಥಿಗಳಾಗಿ ತಾಷ್ಕೆಂಟಿಗೆ ತೆರಳಿದರು.

ಖಾನ್-ಶಾಸ್ತ್ರಿಗಳ ಮುಖಾಮುಖಿ ಮಾತುಕತೆಯೂ ನಡೆಯಿತು. ಮಾನಾ-ಒಪ್ಪಂದಗಳೂ ನಡೆದಿರಬಹುದು; ಆದರೆ, ಶಯನಕ್ಕೆ ಹೋದ ಶಾಸ್ತ್ರಿ ಮತ್ತೆ ಏಳಲಿಲ್ಲ.

ಅವರ ಮರಣ ಸಂಶಯಾಸ್ಪದ ರೀತಿಯದ್ದೆಂದು ದಿವಂಗತರ ಪತ್ನಿಯೇ ಹೇಳುತ್ತಾರೆ; ನಿಕಟರೂ ಅನ್ನುತ್ತಾರೆ.

ವಿಷಪ್ರಾಶನ ಮಾಡಿಸಿಯೇ ಶಾಸ್ತ್ರಿಯವರನ್ನು ಕೊಂದಿರಬೇಕು; ಅವರ ದೇಹವೆಲ್ಲ ನೀಲಿಯಾಗಿತ್ತು ಎಂಬ ಸಂದೇಹವೂ ಇದೆ.

ಯಾರಿಗೂ ತಗ್ಗದ ಲಾಲಬಹದೂರರಂಥಹ ಅಜಾತಶತ್ರುವನ್ನು, ವೀರ ಬಹದೂರರನ್ನು ಈ ರೀತಿ ಉದ್ದೇಶಪೂರ್ವಕವಾಗೇ ಕೊಂದಿರಲೂ ಸಾಕು ಎಂಬ ಸಂದೇಹ ಬಲವಾಗ ಹತ್ತಿದೆ.

ಪಾಕಿಸ್ತಾನದ ಕೈವಾಡವೆಷ್ಟು, ಸೋವಿಯತ್ ಮಿತ್ರರ ಕೈವಾಡವೆಷ್ಟು ಎಂಬುದು ಮಾತ್ರ ಅಗೋಚರ.

ಆದುದರಿಂದಲೇ ನಾಲ್ಕು ವರ್ಷಗಳ ನಂತರ ನ್ಯಾಯಾಂಗ ವಿಚಾರಣೆ ನಡೆಸಬೇಕು ಎಂಬ ಬೇಡಿಕೆ ಮುಂದೆ ಬಂದಿದೆ. ಪ್ರಧಾನಿ ಇಂದಿರಾ ಗಾಂಧಿಯವರು ಈ ಬೇಡಿಕೆಯನ್ನು ಚುನಾವಣೆಯ ಅಬ್ಬರಲಾಗವೆಂದು ಕಡೆಗಣಿಸಲಾಗದು.

ಮುಸ್ಲಿಂ ಲೀಗಿನ ಜತೆಗೆ ಜೋತು ಬೀಳುವ ಶ್ರೀಮತಿ ಇಂದಿರಾ ಗಾಂಧಿ ಪೋಲಿಷ್ ರಾಜ್ಯಕಾರಣಿಯ ಕೊಲೆಯಿಂದ ಪಾಠ ಕಲಿತುಕೊಳ್ಳಬೇಕು.

ತನ್ನನ್ನು ಕೊಲೆಮಾಡಿದವರಿಗೆ ನಾಲ್ಕು ಲಕ್ಷ ರೂಪಾಯಿಯ ಬಹುಮಾನ ಜನಸಂಘವು ಘೋಷಿಸಿದೆಯೆಂಬುದರಲ್ಲಿ ಸತ್ಯಾಂಶವಿದೆಯೋ ಇಲ್ಲವೋ ವಿಚಾರಣೀಯ ಎನ್ನುತ್ತಾರೆ ಆಕೆ.

ಆದರೂ ತನ್ನ ಪ್ರಾಣಕ್ಕೆ ಅಪಾಯವಿದೆ ಎಂದು ದಿಟ್ಟತನದಿಂದಲೇ ಹೇಳುತ್ತಾರೆ ಆಕೆ.

ದೇಶದ್ರೋಹಿ ಸಂಪೂರ್ಣ ಜಾತೀಯ ಮುಸ್ಲಿಂ ಲೀಗನ್ನು ಸೆರಗಿಗೆ ಆಕೆ ಗಂಟುಹಾಕಿಕೊಳ್ಳ ಹೊರಟಿದ್ದಾರೆ. ಕೇರಳದಲ್ಲಿ ಇದು ಜಾರಿಗೆ ಬಂದಿದೆ.

ಕೇರಳದ ಲೀಗು ಜಾತೀಯವಲ್ಲವೆಂದವರು ನಾಳೆ ಲೀಗು, ಜಮಾತೇ ಇಸ್ಲಾಮಿಯೂ ಜಾತೀಯವಲ್ಲವೆನ್ನಬಹುದು. ಮಸೀದಿಗಳೂ ಜಾತೀಯ ಪ್ರಾರ್ಥನಾ ಮಂದಿರವಲ್ಲವೆಂದು ಸರ್ಟಿಫಿಕೇಟ್ ಕೊಡಬಹುದು.

ಆಕೆಯ ಎಡಗೈ ಬಂಟ ಶ್ರೀ ಜಗಜ್ಜೀವನ ರಾಮರು ಈ ಗಾಢಾಲಿಂಗನವನ್ನು 'ಮೈತ್ರಿಯಲ್ಲ; ಹೊಂದಾಣಿಕೆ ಮಾತ್ರ'ವೆಂದು ವರ್ಣಿಸ ಹೊರಟಿದ್ದಾರೆ – ಮದುವೆಯ ಗಂಡನಲ್ಲ; ಇಟ್ಟುಕೊಂಡವ ಮಾತ್ರ ಎಂಬಂತೆ!

ಶ್ರೀಮತಿ ಗಾಂಧಿಯವರ ಪ್ರಾಣಕ್ಕೆ ಅಪಾಯವಿರುವುದರಲ್ಲಿ ಎಷ್ಟಂಶ ಸತ್ಯವೆಂದು ಹೇಳಬರುವುದಿಲ್ಲ; ಆದರೆ, ಅಂತಹ ಅಪಾಯ ದೇಶೀಯರಿಗಿಂತ ಹೆಚ್ಚಾಗಿ ವಿದೇಶೀಯರಿಂದಲೇ ಇರಬಹುದು.

ಪಾಕಿಸ್ತಾನ ಪರ ಮುಸ್ಲಿಮರಿಂದ ಇರಬಹುದು; ರಷ್ಯಪರ ಬಲಕಮ್ಯುನಿಸ್ಟರಿಂದ ಇರಬಹುದು; ಅಥವಾ ಚೀನೀ ಪರ ಎಡಪಂಥೀಯರಿಂದಲೋ ನಕ್ಸಲೀಯರಿಂದಲೋ ಇರಬಹುದು.

ಇವರೆಲ್ಲರೂ ತನ್ನ ಮಿತ್ರರು; ಮಿತ್ರದ್ರೋಹ ಮಾಡುವುದಿಲ್ಲ ಎಂದು ಹೊಗಳಿ ಅಟ್ಟಕ್ಕೇರಿಸುವ ಆಕೆಯ ಗದ್ದುಗೆಯನ್ನು ಅವರು ಹೊತ್ತಿದ್ದಾರೆ.

ಒಂದು ಒಳ್ಳೆಯ ದಿನ ಹೊತ್ತುಹಾಕುತ್ತಾರೆ. ಆಗ ತನ್ನವರು ಯಾರು ಅಲ್ಲದವರು ಯಾರು ಎಂದಾಕೆಗೆ ಗೊತ್ತಾಗುತ್ತದೆ.

ಈ ತಿಳುವಳಿಕೆ ಮೂಡುವಾಗ ಬೆಳಗಾಗದೇ ಹೋದರೆ ಆಕೆಗೂ, ಹೆಚ್ಚಾಗಿ ದೇಶಕ್ಕೆ, ಪರಮ ಪುಣ್ಯ.

ಮದುವೆ ಚಪ್ಪರದಲ್ಲಿ ಏನೂ ಕೆಲಸ ಮಾಡದವರು ತುಂಬ ಕೆಲಸಮಾಡುವವರಂತೆ ಓಡಾಡುತ್ತ, ಎಲ್ಲವೂ ತನ್ನ ತಲೆಮೇಲೆಂದು ಹೇಳಿಕೊಳ್ಳುವುದುಂಟು.

ಪ್ರಾಣಕ್ಕೆ ಅಪಾಯವಿದೆಯೆಂದು ಹೇಳಿಕೊಳ್ಳುತ್ತ ತಿರುಗಾಡುವುದನ್ನು, ಜನಾಭಿಪ್ರಾಯ ಮೂಡಿಸುವ ತಂತ್ರವಾಗಿ ಬಳಸಿಕೊಳ್ಳಬಹುದು.

ಚುನಾವಣೆಗಳ ಪೂರ್ವಸಂಧ್ಯೆಯಲ್ಲಿ ಕೋಡಂಗಿ ನೋಡಲು ಸಿಕ್ಕೇ ಸಿಗುತ್ತದೆ.

ರಾಜಕೀಯದಲ್ಲಿ ಆಗುವವರೂ ಇದ್ದಾರೆ; ಆಗದವರೂ ಇದ್ದಾರೆ. ಆಗುವವರಂತೆ ಸೋಗು ಹಾಕುವ ಆಗದವರೂ ಇದ್ದಾರೆ.

ಶ್ರೀಮತಿ ಗಾಂಧಿಯವರ ಸುತ್ತಲಲ್ಲಿರುವವರಲ್ಲಿ ಮೂರನೆಯ ಬಗೆಯವರೇ ಹೆಚ್ಚು. ಅಲ್ಪಸಂಖ್ಯಾತರು, ಪ್ರಗತಿಗಾಮಿಗಳು ಎಂದು ಮುಂತಾದ ಲೇಬಲ್ಲು ಹಚ್ಚಿಕೊಂಡಿರುವವರು ಆಕೆಗೆ ಪರಮ ಮಿತ್ರರು; ಕರಟಕ—ದಮನಕರು.

ಇವರಿಂದಲೇ ಆಕೆಗೇನಾದರೂ ಅಪಾಯ ಸಂಭವಿಸಿದರೆ ಅದಕ್ಕೆ ದೂರದವರನ್ನೇಕೆ ಬೊಟ್ಟುಮಾಡಬೇಕು? ಮರಕ್ಕೆ ಕಾವೇ ಮೃತ್ಯು.

ಕೆಂಪು ಚೀನಾವು ಭಾರತದೊಂದಿಗಿನ ಸಂಬಂಧವನ್ನು ಸುಧಾರಿಸ ಬಯಸುತ್ತಿದೆಯೆಂಬ ವರದಿಯೋದಿದಾಗ ಇವೆಲ್ಲ ನೆನಪಾಗುತ್ತದೆ.

ತಂದೆಯನ್ನು ಮಿತ್ರದ್ರೋಹದ ಚೂರಿಯಿಂದ ಕೊಂದ ಕೆಂಪು ಚೀನಾದ ಹತ್ತಿರ ಹೋಗುವುದಕ್ಕೆ ಮೊದಲು ಆಕೆ ಅತ್ಯಂತ ಜಾಗ್ರತಳಾಗಬೇಕು; ಸಾಕ್ಷಿಗಿಲ್ಲ.

ಮನೋಲ್ಲಾಸಕ್ಕೆ ಮತ್ತು ರುಚಿಗೆ

ಸಿಸಿಸಿ ಕಾಫಿ

ಪರಿಮಳವನ್ನು ಕಾಪಾಡುವಂತೆ ವಿಶಿಷ್ಟ ರೀತಿಯಲ್ಲಿ ಪ್ಯಾಕ್ ಮಾಡಲ್ಪಡುವ ಸಿಸಿಸಿ ಕಾಫಿ ವಿವಿಧ ಮಿಶ್ರಣದಲ್ಲಿ ದೊರೆಯುತ್ತದೆ.

For flavour that taste and taste that lingers

CCC COFFEE.

Manufacturers: Carnatic Coffee Company
Sree Sreenivasa Krupa
Post Box No. 40 Davangere City



ರನ್ನ ರೋಹಿಣಿ

ಚಂದ್ರ ವಿರಹಿಯೆ, ಶಶಿಯು ಮುಡಿದಿಯೆ
ಇಂದು ನಿನ್ನನ್ನು ಹಾಡುವೆ—
ಭಿನ್ನ ಕಾಣದ ಕನಸು ಕಂಡೆನು
ಎನ್ನ ಮನ ಕಲೆ ನೊಂದಿದೆ—

ಪ್ರೇಮ ಗೇಹದಿ ಒಲುಮೆ ನಲಮೆಲಿ
ಚಂದ್ರನೊಡನೇ ಬೆರತಿಹೆ—
ಹೂಗಳು ತೆಗಳಿಕೆ ನಿನ್ನ ಬಯಲಲಿ
ಗೀತ ಕಟ್ಟಿದ ಮಾಯೆನಾ.

ಎನ್ನ ಆತ್ಮವು ನಿನ್ನ ಕಾಣ್ವುದು
ಚಂದ್ರ ನೆನಗದೃಶ್ಯವು—
ಎನ್ನ ಕಾವ್ಯದ ಗಂಗೆ ಹರಿವುದು
ನಿನ್ನ ನೆಲಪಿನ ಭಾವದಿ.

ಕೆಲಸ ಬಾಳಿಗೆ ಚಂದ್ರನೋ ನಸು
ಎನಗೆ ರೋಹಿಣಿ ಉದಯವು—
ಭಗ್ನ ಭಾವದ ಶಕ್ತದಾಲಯು
ತಡಿತ ನಿಡಿತವೆ ಕಾವ್ಯವು—

ಎನ್ನ ಕಾವ್ಯದ ಜೀವ ಜೀವಿಕ
ನಿನಗೆ ಅರ್ಪಿತ ಸತ್ಯವು—
ನಿತ್ಯ ನೂತನ ಸ್ನೇಹಪಾಲ್ವಿಕ
ಗಗನ ರೋಹಿಣಿ ನಿತ್ಯವು

—ಗುಂಡ್ಮಿ ಭಾಸ್ಕರ ಮಯ್ಯ

ವಿಚಾರವಾಹಿನಿ

ಪರಮಾತ್ಮನು ಸಜ್ಜನರಿಂದಲೇ ಹೆಚ್ಚಿನ ಕೆಲಸ ಮಾಡಿಸುತ್ತಾನೆ. ರಾಮನ ಕೆಲಸವನ್ನು ಮಾಡಿಕೊಟ್ಟವರು ಮಂಗಗಳು. ಯಾಕೆಂದರೆ ಅವುಗಳ ಅಂತಃಕರಣಗಳು ಶುದ್ಧವಿದ್ದವು.

o o o

ವಿದ್ಯೆ ಇದ್ದರೆ ವಾದ ಮಾಡುವುದು, ದುಡ್ಡು ಇದ್ದರೆ ಅಹಂಕಾರ ಪಡುವುದು, ಮತ್ತು ಶಕ್ತಿ ಇದ್ದರೆ ಅನ್ಯರನ್ನು ಪೀಡಿಸುವುದು ಇವು ದುಷ್ಟಜನರ ಲಕ್ಷಣಗಳು. ವಿದ್ಯೆಯಿಂದ ಜ್ಞಾನಪ್ರಚಾರ ಮಾಡುವುದು, ದುಡ್ಡಿನಿಂದ ಪರೋಪಕಾರ ಮಾಡುವುದು, ಮತ್ತು ಶಕ್ತಿಯನ್ನು ಅಬಲರ ರಕ್ಷಣೆಗೆ ಉಪಯೋಗಿಸುವುದು ಇವು ಸಜ್ಜನರ ಲಕ್ಷಣಗಳು.

o o o

ಆಸಕ್ತಿಯಿದ್ದಲ್ಲಿ ಸಕ್ತಿ ಮಾಡುವ ಅವಶ್ಯಕತೆ ಬೀಳುವದಿಲ್ಲ.

o o o

ವಾತಾವರಣವು ತಯಾರಾಯಿತೆಂದರೆ ಕೆಟ್ಟ ಜನರು ಸಹ ಒಳ್ಳೇ ಕೆಲಸ ಮಾಡುತ್ತಾರೆ. ಜೋರಿನಿಂದ ಗಾಳಿ ಬೀಸಹತ್ತಿತೆಂದರೆ ಹಕ್ಕಿಗಳು ಅಷ್ಟೇ ಅಲ್ಲ ಎಲೆಗಳು ಸಹ ಹಾರಹತ್ತುತ್ತವೆ.

o o o

"ನೀವು ನಿಮ್ಮ ಊರು ಹೊಲಸು ಮಾಡುತ್ತಿದ್ದರೆ, ಕಂಡ ಕಂಡಲ್ಲಿ ಮಲಮೂತ್ರ ಮಾಡುತ್ತಿದ್ದರೆ ಆರೋಗ್ಯ ಮಂತ್ರಿಗಳು ಬಂದು ಸ್ವಚ್ಛ ಮಾಡುವರೇ? ನೀವೇ ಸ್ವಚ್ಛ ಮಾಡಿಕೊಳ್ಳಬೇಕು. ಆದ್ದರಿಂದಲೇ ಹೇಳುತ್ತಾರೆ. ಸ್ವರ್ಗದಲ್ಲಿರುವುದು ಇಲ್ಲವೆ ನರಕದಲ್ಲಿರುವುದು ಎರಡೂ ನಮ್ಮ ಕೈಯಲ್ಲಿಯೇ ಇದೆ.

o o o

ಮುಸ್ಲಿಂ ಲೀಗಿನ ಮುತ್ತಿಗೆ ಗಲ್ಲ ಮುರಿಯಿತು

(ಐದನೇ ಪುಟದಿಂದ)

ಬಂದ, ಅವರು ಸಂಸ್ಥಾ ಕಾಂಗ್ರೆಸನ್ನು ದೂರಲಾರಂಭಿಸಿದರು. ತಕ್ಕಡಿಯ ಎರಡು ತ್ರಾಸಗಳಲ್ಲಿ ಎರಡು ಕಾಂಗ್ರೆಸ್ಸುಗಳನ್ನಿಟ್ಟು ಅವರು ತೂಕ ಮಾಡಿದರು. ಆದರಲ್ಲಿ ಆಡಳಿತ ಕಾಂಗ್ರೆಸ್ ಕಮ್ಯುನಲ್ ಮತ್ತು ಜಾಸ್ತಿ ಪ್ರಗತಿಶೀಲವಿದೆ. ಆದರೆ ಹಳೆಯ ಕಾಂಗ್ರೆಸ್ಸು ಪ್ರತಿಗಾಮಿ ಹಾಗೂ ಫ್ಯಾಸಿಸ್ಟ್ ಇದೆ! ಅದಕ್ಕಿಂತ ಶಿಕ್ಷೆ ಸಾಕ್ಷಿಯುಂಟೆ. ಭಾರತೀಯ ಜನಸಂಘವು ಭಾರತೀಯಕರಣದ ಘೋಷಣೆ ಮಾಡುತ್ತಿರುವುದೂ ಮುಸ್ಲಿಂಲೀಗಿನವರಿಗೆ ಮುಳ್ಳು ಚುಚ್ಚಿದ ಹಾಗೆ ಆಗುತ್ತದೆ. ಹಾಗೆ ಹೇಳುತ್ತಿರುವ ಜನಸಂಘ ಅವರ ಪಾಲಿಗೆ ಜಾತೀಯ! ಆ ಘೋಷಣೆಯನ್ನು ಬಿಟ್ಟಲ್ಲಿ ಮುಸ್ಲಿಂಲೀಗು ಜನಸಂಘದೊಂದಿಗೆ ಮೈತ್ರಿಗೆ ಮುಂದಾಗುತ್ತದಂತೆ! ಸ್ವಾತಂತ್ರ್ಯ ಚಳುವಳಿಯ ಸಮಯ ಇದೇ ಮುಸ್ಲಿಂಲೀಗು ಸ್ವದೇಶೀಕರಣವನ್ನು ವಿರೋಧಿಸುತ್ತಿರಲಿಲ್ಲವೇ? ಸ್ವದೇಶೀಕರಣವೇ ಭಾರತೀಯಕರಣವಿದೆ. ಇಂದು ಅದನ್ನು ಮುಸ್ಲಿಂಲೀಗು ವಿರೋಧಿಸುತ್ತಿದೆ. ಆದರಲ್ಲೇನೂ ಆಶ್ಚರ್ಯವಿರುವದಿಲ್ಲ.

ಮುಸ್ಲಿಂ ಲೀಗಿಗೆ ಇಲ್ಲಿಯ ರಾಷ್ಟ್ರೀಯ ಗಂಗಾ ಪ್ರವಾಹದಲ್ಲಿ ಒಂದಾಗಲು ಇಷ್ಟ ಇರುವುದಿಲ್ಲ. ಇಂದಿರಾಜೀಯೊಡನೆಯೋ ಅದನ್ನು ಪ್ರತ್ಯೇಕವಾಗಿಟ್ಟು ತನ್ನ ಉದ್ದೇಶ ಪೂರ್ತಿ ಮಾಡಿಕೊಳ್ಳಬೇಕೆಂದು ಯೋಚಿಸುತ್ತಿದ್ದಾರೆ. ಇಂದಿರಾಜೀಯವರನ್ನುಪಯೋಗಿಸಿಕೊಂಡು ಕೆಂಪು ಕೋಟೆಯ ಮೇಲೆ ಪಚ್ಚೆ ಪತಾಕೆ ಹಾರಿಸಬೇಕೆಂದು ಮುಸ್ಲಿಂ ಲೀಗು ಪ್ರಯತ್ನಿಸುತ್ತಿದೆ. ಕೆಂಪುಕೋಟೆಯ ಮೇಲೆ ಪಚ್ಚೆ ಪತಾಕೆ ಹಾರುವ ದಿನ ದೂರವಿಲ್ಲವೆಂದು ಇಸ್ಮಾಯಿಲ್ ಹಾಗೂ ಇತರರು ಕೇರಳ ಚುನಾವಣೆಯ ಸಮಯ ಪ್ರಚಾರಮಾಡುತ್ತಿದ್ದರು. ಸ್ವಾತಂತ್ರ್ಯ ಸಿಗುವ ಮುಂಚೆ ಬ್ರಿಟಿಷರ ಬಳಿ ಕೇಳುತ್ತಿದ್ದಂತೆಯೇ ಈಗ ಅವರು ಕಾಂಗ್ರೆಸ್ಸಿನ ಬಳಿ ಕೇಳುತ್ತಿದ್ದಾರೆ. ಅದಕ್ಕೆ ಪ್ರಮಾಣಾನುಸಾರ ಪ್ರಾತಿನಿಧ್ಯ ಇರಬೇಕಂತೆ. ಬಸ್ಸಿನಲ್ಲಿ ಹೆಂಗಸರಿಗಾಗಿ ಪ್ರತ್ಯೇಕ ಸ್ಥಳವಿದೆ. ಅಲ್ಲಿ ಅವರು ಕೂತುಕೊಳ್ಳುತ್ತಾರೆ, ಇತರ ಸ್ಥಳದಲ್ಲೂ ಅವರು ಕೂತುಕೊಳ್ಳಬಹುದು. ಹಾಗೆ ಮುಸ್ಲಿಮರ ಜನಸಂಖ್ಯಾನುಸಾರವಾಗಿ ಎಲ್ಲೆಡೆಯೂ ಸ್ಥಾನ ಸಿಗಬೇಕು— ಅದಕ್ಕೆ ಅರ್ಹತೆ ಇರಲಿ, ಇಲ್ಲದಿರಲಿ, ಜಾಗ ಭರ್ತಿ ಮಾಡಿದರಾಯಿತು. ಅದರ ಮೇಲೆ ಇತರ ಸ್ಥಾನದಲ್ಲೂ ಅವರು ಸಂದ್ಯಾಟ ನಡೆಸಬಹುದು. ಹೇಗಿದೆ ಬೇಡಿಕೆ? ಅದರಲ್ಲೂ ಪೋಲೀಸ್, ಸಶಸ್ತ್ರ ಪೋಲಿಸ್ ಸೇನೆಗಳಲ್ಲಿ ಒಡನೆ ಆ ರೀತಿ ಆಗಬೇಕಂತೆ! ಪಾಕಿಸ್ತಾನ ಆಕ್ರಮಣ ನಡೆಸಿದಾಗ ಸಂಭವಿಸಿರುವ ಕಹಿ ನೆನಪು ಇಷ್ಟು ಬೇಗನೆ ಮರೆತಿರಲಾರದು. ಹಿಂದೆ ಕಾಂಗ್ರೆಸು ಇದೇ ತಪ್ಪನ್ನು ಮಾಡಿತ್ತು. ಅದಕ್ಕೆ ಆಗ ಸ್ವಾತಂತ್ರ್ಯದ ಅರ್ಥ ಗೊತ್ತಿರಲಿಲ್ಲ, ಕಲ್ಪನೆಯೂ ಇರಲಿಲ್ಲ. ಆಗ ಅದು ಮುಸ್ಲಿಮರಿಗೆ ಇಷ್ಟು, ಹರಿಜನರಿಗೆ ಇಷ್ಟು, ಮಹಿಳೆಯರಿಗೆ ಮತ್ತಿಷ್ಟು....ಈ ರೀತಿ ಸ್ಥಾನಗಳನ್ನು ಕೇಳುತ್ತಿತ್ತು. ಅದನ್ನು ಮುಸ್ಲಿಂಲೀಗು ಮುಂದರಿಸಿತು. ಮತ್ತು ವಿಭಜನೆಗೆ ಕಾರಣವಾಯಿತು. ಅದರ ಪಾಲಿಗೆ ವಿಭಜನೆ ಪೂರ್ಣ ವಿರಾಮ ಇರುವದಿಲ್ಲ, ಕೇವಲ ಅಲ್ಪವಿರಾಮ. ಅವರ ದೃಷ್ಟಿಯಲ್ಲಿ ಭಾರತ ಯಾವ ಗುಂಪಿಗೆ ಸೇರಿದೆ—ಇದು ದಾರ್-ಉಲ್-ಇಸ್ಲಾಂ ಅಂದರೆ ಇಸ್ಲಾಮಿಗೆ ಸೇರಿದ ರಾಜ್ಯವೇ? ದಾರ್-ಉಲ್-ಉಲೇಮಾನ್ ಅದರೆ ಇಸ್ಲಾಮನ್ನು ತೊಂದರೆ ಇಲ್ಲದೆ ಅಭ್ಯಾಸಮಾಡಬಹುದಾದ ರಾಜ್ಯವೇ? ಅಥವಾ, ದಾರ್-ಉಲ್-ಹರಬ್ ಅಂದರೆ ಶತ್ರುಗಳ ರಾಜ್ಯವೇ? ಅವರ ದೃಷ್ಟಿಯಲ್ಲಿ ಹಾಗೂ ನಿಜವಾಗಿ ಇದು ದಾರ್-ಉಲ್-ಇಸ್ಲಾಂ ಅಲ್ಲ. ಇ. ಕಾಂಗ್ರೆಸ್ಸ್ ಕೂಡಾ ಸಮಾನ ಕಾನೂನಿನ ಕೂಗನ್ನೆಬ್ಬಿಸುತ್ತಿರುವದರಿಂದ ದಾರ್-ಉಲ್-ಉಲೇಮಾನ್ ಆಗಿರಲೂ ಸಾಧ್ಯವಿರುವದಿಲ್ಲ, ಅವರ ದೃಷ್ಟಿಯಲ್ಲಿ ಖಂಡಿತವಾಗಿ ಇದು ದಾರ್-ಉಲ್-ಹರಬ್ ಅಂದರೆ ಶತ್ರುಗಳ ರಾಜ್ಯವೇ ಇದೆ. ಹಾಗಿರುವಾಗ ಅದನ್ನು ಧ್ವಂಸಗೈದು ಇಸ್ಲಾಂಮಯ ಆಗಿಸುವದನ್ನು ಅದರ "ಪವಿತ್ರ ನೀತಿಯ ಮಹಾಕಾರ್ಯವಿದೆ. ಅದಕ್ಕಾಗಿ ಅದು ಶ್ರಮಿಸುತ್ತಿದೆ.

ಆದರ ಈ ಕೆಲಸದಲ್ಲಿ ಬೇರಾರೂ ಪಂಥಕ್ಕೆ ಬರಕೂಡದೆಂಬುದು ಅವರ ಇಚ್ಛೆ. ಅಲ್ಪಸಂಖ್ಯಾತರನ್ನು ಅಂದರೆ ಮುಸ್ಲಿಮರನ್ನು ಪ್ರತಿನಿಧಿಸಲು ಒಂದೇ ಒಂದು ಲೀಗು ಇರಬೇಕು ಅದುವೇ ಮುಸ್ಲಿಂಲೀಗು. ಇದನ್ನು ಸುಲೇಮಾನ್ ಸೇಟ್ ಸ್ಪಷ್ಟವಾಗಿ ಸೂಚಿಸಿದ್ದಾರೆ. ಲೀಗು ಇಲ್ಲದೆ ಇರುತ್ತಿದ್ದಲ್ಲಿ ಘೋಡಿಯಂತಹವರು ಫಜೀತಿ ಮಾಡುವ ರಾಜಕೀಯಕ್ಕೆ ಇಳಿಯಬಹುದಿತ್ತಂತೆ. ಈಗ ಘೋಡಿಯಂತಹ ಬೆಂಕಿ ಉಗುಳುವವರು ಕೂಡಾ ಲೀಗಿನ ಮೂಲಕವೇ ಹೋರಾಡಬೇಕೆನ್ನುವದು ಸುಲೇಮಾನರ ವಾದ. ಭಯಂಕರ ಮುಸ್ಲಿಂ ವಾದಿಗಳ ಅವಸ್ಥೆಯೇ ಹೀಗಾದಲ್ಲಿ ರಾಷ್ಟ್ರಭಕ್ತಿಯುಳ್ಳ ಹಮೀದ್ ದಲ್ವಾಯಿಯಂತಹವರ ಸ್ಥಿತಿ ಹೇಳಬೇಕಾಗಿಯೇ ಇಲ್ಲ. ಕೇರಳದಲ್ಲಿ ಪ್ರಗತಿಶೀಲ ಮುಸ್ಲಿಮರ ಪಕ್ಷ ಕೇಳಿ ಬಂದಾಗ ತಾನೇ ಪ್ರಗತಿ ಶೀಲನೆನ್ನುವ ಮುಸ್ಲಿಂ ಲೀಗು ಅವರ ಮೇಲೆ ಅತ್ಯಾಚಾರ ನಡೆಸುತ್ತಿದೆ. ತರ್ಕ, ಪಾಕಿಸ್ತಾನಗಳಲ್ಲಿ ಆಗಿರುವ ಪ್ರಗತಿಗೆ ಮುಸ್ಲಿಂ ಲೀಗು ವಿರುದ್ಧವಿದೆಯಾದರೂ ಪ್ರಗತಿಯ ಸ್ವರವನ್ನೆತ್ತಿ ಪ್ರಗತಿಗೆ ಪರಿಹಾಸ್ಯ ಮಾಡುತ್ತಿದೆ, ಇದು ಸತ್ಯ ಶೋಧಕ ಮಂಡಳಿಗೆ ಏನು ಮಾಡೀತೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಅದು ಸರಕಾರಕ್ಕೆನೇ ಎಚ್ಚರಿಕೆಯನಿತ್ತಿರುವುದೆ—ಮುಸ್ಲಿಮರ ವೈಯಕ್ತಿಕ ಕಾನೂನು ಅಂದರೆ ಮತೀಯ ವಿಷಯಗಳಲ್ಲಿ ಸರಕಾರ ತಲೆಹಾಕಬಾರದು. ಹಾಕಿದಲ್ಲಿ ಏನಾದೀತು? ಅದನ್ನು ಅಹಮ್ಮದಾಬಾದಿನಲ್ಲಿ ಅಂಧರುವರು—ಇಸ್ಲಾಮನ್ನೆದುರಿಸಿದವರನ್ನು ನಾಶಮಾಡಲಾಗುತ್ತದೆ.

ವಾಸ್ತವ ಪರಿಸ್ಥಿತಿ ಹೀಗಿದೆಯಾದರೂ ಶ್ರೀಮತಿ ಇಂದಿರಾ ಗಾಂಧಿಯವರು ಮುಸ್ಲಿಂಲೀಗಿನ ರಾಜಕೀಯ ಮುತ್ಸದ್ದಿಯಲು ಮುಂದಾಗಿದ್ದಾರೆ. ಅವರು ಕಾಂಗ್ರೆಸ್ಸಿನ ಅಧ್ಯಕ್ಷರಾದಂದಿನಿಂದ ಈ ರಾಜಕೀಯ ಲಲ್ಲೆಗೆ ಆರಂಭಿಸಿದ್ದಾರೆ. ಇದೀಗ ಅದು ಸ್ಪಷ್ಟವಾಗಿ ತೋರಿಬಂದಿದೆ. ಈ ಎಚ್ಚರಿಕೆಗೆ ಕಿವಿಗೊಡದೆ ಇಂದಿರಾಜೀ ಇನಿತಾದರೂ ಮುಂದುವರಿದಲ್ಲಿ ಅವರು ಪ್ರಧಾನಿ ಪದವಿಯಿಂದ ಕೆಳಗುರುಳುವರಂತೆ! ಶ್ರೀಮತಿ ಇಂದಿರಾ ಫಿರೋಜ್ ಗಾಂಧಿಯನ್ನು ಮುಸ್ಲಿಂಲೀಗು ಇಂದು ಭಾರತದ ಪ್ರಧಾನಿಯೆಂದು ಗೌರವಿಸದೆ, ತಮ್ಮನ್ನು ಅಲ್ಲಾವುದ್ದೀನೆಂದೂ ಇಂದಿರಾಜೀಯವರನ್ನು ವಿಚಿತ್ರದೀಪವೆಂದೂ ಭಾವಿಸಿಕೊಂಡು ಹಾಗೆ ವರ್ತಿಸುತ್ತಿದ್ದಾರೆ. ಅವರಿಂದ ತಮಗೆ ಬೇಕಾದ ಅದ್ಭುತ ಕಾರ್ಯವನ್ನು ಮಾಡಿಸಿಕೊಳ್ಳಬಹುದೆಂಬ ಧೈರ್ಯ, ನಂಬಿಕೆ ಮುಸ್ಲಿಂಲೀಗಿಗೆ ಇದೆ. ತಮ್ಮನ್ನು ಬಿಟ್ಟಲ್ಲಿ ಕಾಂಗ್ರೆಸ್ಸ್ ಕೇರಳದಲ್ಲಿ ಕಾಲಿಡುವಂತಿಲ್ಲ, ಸಂಸತ್ತಿನಲ್ಲಿ ಇಂದಿರಾಜೀ ಉಳಿಯುವಂತಿಲ್ಲ. ಇದೇ ಅವರ ನಂಬಿಕೆ ಇಂದಿರಾಜೀಯವರು ಅವರ ಪಾಲಿಗೆ ವಿಚಿತ್ರದೀಪ ಇರಬಹುದು, ಭಾರತೀಯ ರಾಷ್ಟ್ರೀಯ ಶಕ್ತಿಗಳಿಗೆ ಅವರೆಂದೂ ಅತ್ಯಂತ ವಿಚಿತ್ರ ನಾರಿಯೇ ಸರಿ. ಮುನಿದಲ್ಲಿ? ಮುಸ್ಲಿಂಲೀಗಿಗೆ ಆ ಹೆದರಿಕೆ ಇರುವದಿಲ್ಲ. ಆದುದರಿಂದಲೇ ಅದು ಹೊಸ ಕಾಂಗ್ರೆಸ್ಸಿನೊಂದಿಗೆ ರಾಜಕೀಯ ಲಲ್ಲೆಯನ್ನಾಡುತ್ತದೆ. ಆ ಮುಸ್ಲಿಂಲೀಗಿನ ಮುತ್ತಿಗೆ ಗಲ್ಲ ಮುರಿಯಿತು.

—ಶಿವಶಂಕರ

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No.— 1 28337 2 22887 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

70 ರ ಪಂಥಾಹ್ವಾನ

ಶಿಕ್ಷಣ ರಂಗದಲ್ಲಿ ಪರಿವರ್ತನೆ ಅವಶ್ಯ

ಮಣಿಪಾಲದ ಎಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ ಆಶ್ರಯದಲ್ಲಿ ಎಂ.ಜಿ.ಎಂ. ಕಾಲೇಜಿನ ರವೀಂದ್ರ ಮಂಟಪದಲ್ಲಿ ತಾ. ೩ರಂದು ನಡೆದ ಅಂತರ ರಾಷ್ಟ್ರೀಯ ಶಿಕ್ಷಣ ವರ್ಷ ಮತ್ತು ಎಕಾಡೆಮಿ ವಾರ್ಷಿಕ ಸಮ್ಮೇಳನದಲ್ಲಿ ಅಮೇರಿಕದ ಫೋರ್ಡ್ ಫೌಂಡೇಶನಿನ ದಿಲ್ಲಿಯ ಶೈಕ್ಷಣಿಕ ಸಲಹೆಗಾರ ಡಾ। ಫ್ರೆಡರಿಕ್ ಸೀವರ್ ಅವರು ಮುಖ್ಯ ಅತಿಥಿಗಳಾಗಿ 70ನೇ ದಶಕದ ಶಿಕ್ಷಣ ರಂಗದ ಪಂಥಾಹ್ವಾನಗಳ ಕುರಿತು ಮಾತನಾಡಿದರು.

ಉದ್ಯೋಗಕ್ಕಾಗಿ ಮಾತ್ರ ಶಿಕ್ಷಣ ಎನ್ನುವ ಭಾವನೆ ತೊಲಗಿ ಅಜ್ಞಾನ ಬಡತನ ಮತ್ತು ಯುದ್ಧವನ್ನು ಜಗತ್ತಿನಿಂದ ದೂರಿಯಾಗಿಸುವ ಗುರಿಯನ್ನಿರಿಸಿಕೊಂಡ ಹೊಸ ದೃಷ್ಟಿಕೋನವನ್ನು ಶಿಕ್ಷಣಕ್ಕೆ ನೀಡಬೇಕಾಗಿದೆ, ವಿಶ್ವಸಂಸ್ಥೆ ಮತ್ತು ಯುನೆಸ್ಕೊಗಳು ಸೇರಿ ನಡೆಸುತ್ತಿರುವ ಈ ಅಂತರ ರಾಷ್ಟ್ರೀಯ ಶಿಕ್ಷಣ ವರ್ಷದ ಉದ್ದೇಶವು ಇದೇ ಆಗಿದೆ, ದಂಗೆ, ಮುಷ್ಕರ ಪ್ರದರ್ಶನಗಳ ರೂಪದಲ್ಲಿ ಜಗತ್ತಿನಾದ್ಯಂತ ಹುಟ್ಟಿಕೊಂಡಿರುವ ವಿದ್ಯಾರ್ಥಿ ಸಮಸ್ಯೆಗಳ ನಿವಾರಣೆಗೆ ಶಿಕ್ಷಣಕ್ಕೆ ಹೊಸ ದೃಷ್ಟಿಕೋನ ನೀಡಬೇಕು, ಸಾಂಸ್ಕೃತಿಕ ಶಿಕ್ಷಣದಿಂದ ಇದು ಸಾಧ್ಯವಾದೀತು. ಮುಂದಿನ ಪೀಳಿಗೆಯ ಶಿಕ್ಷಣ ವಿಧಾನದಲ್ಲಿ ಪರಿವರ್ತನೆಗಳು ಆಗಲೇಬೇಕಾಗಿವೆ ಎಂದು ಡಾ। ಸೀವರ್ ನುಡಿದರು.

ಎಕಾಡೆಮಿ ಅಧ್ಯಕ್ಷ ಡಾ। ಟಿ.ಎಂ.ಎ. ಪೈ ಅವರು ಸ್ವಾಗತಿಸಿದರು.

ಕೆ.ಎಂ.ಸಿ. ಡೀನ್ ಡಾ॥ ಎ. ಕೃಷ್ಣ ರಾವ್ ಮಾತನಾಡುತ್ತಾ ಸಾಂಸ್ಕೃತಿಕ ವಿದ್ಯಾಭ್ಯಾಸದ ಅವಶ್ಯಕತೆಯನ್ನು ಹೇಳಿ ಅಂಥ ವಿದ್ಯಾಭ್ಯಾಸ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಪ್ರಸಾದ ಪ್ರಜ್ಞೆಯನು ಬೆಳೆಸುವುದಕ್ಕೆ ಶಕ್ತವಾಗಬೇಕೆಂದರು. ಪ್ರೊ। ಜಾಲೀಹಾಳ್ ಮತ್ತು ಶ್ರೀಶ ಬಲ್ಲಾಳರೂ ಸಮಸ್ಯೆಯ ಕುರಿತು ಭಾಷಣವಿತ್ತರು.

ಎಕಾಡೆಮಿ ಕಾರ್ಯದರ್ಶಿ ಶ್ರೀ ಟಿ. ರಮೇಶ ಪೈ ಅವರು ಎಕಾಡೆಮಿಯ ಶಿಕ್ಷಣ ಸಂಸ್ಥೆಗಳು ಪಾಲಕರ ಸಂಘಗಳನ್ನು ರಚಿಸಬೇಕು ಎಂದು ಕರೆ ನೀಡಿದರು. ಪಾಲಕರು ತಾವು ವಹಿಸಬೇಕಾದ ಪಾತ್ರವನ್ನು ವಹಿಸುದರಿಂದ ಬದಲಾವಣೆಗಳುವಲ್ಲಿ ಎಕಾಡೆಮಿ ಹೆಚ್ಚು ಸಹಾಯಕವಾಗಿರುವುದೆಂದರು.

ಶ್ರೀ ಕೆ.ವಿ. ಕಾಮತ್, ಪ್ರೊ। ಬಿ.ವಿ. ಕೃಷ್ಣಮೂರ್ತಿ ಮತ್ತು ಎ.ಜೆ. ಅಲ್ಸೆ ಅವರು ಈ ಸಂಘಗಳಲ್ಲಿ ನೈಜ ಆಸಕ್ತಿಯ ಪಾಲಕರು ಇರಬೇಕು, ಪಾಲಕರು ಮತ್ತು ಶಿಕ್ಷಣ ಸಂಸ್ಥೆಗಳ ನಡುವೆ ನಿಕಟ ಸಂಪರ್ಕವಿರಬೇಕು, ರಾಜ್ಯಮಟ್ಟದಲ್ಲಿ ಸಂಘಗಳ ಫೆಡರೇಶನ್ ಇರಬೇಕು, ಎಂದು ಹೇಳಿದರು.

ಡಾ। ಸೀವರ್ ಅವರು ಈ ವರುಷದ ಎಕಾಡೆಮಿ ಫೆಲೋಶಿಪ್‌ಗಳನ್ನು ವಿತರಣೆ ಮಾಡಿದರು. ಪ್ರೊ. ಕು.ಶಿ. ಹರಿದಾಸ ಭಟ್ಟರು ಧನ್ಯವಾದ ಅರ್ಪಿಸಿದರು.

ಸಂಗ್ರಾಹ್ಯ ಸಂಕಲನಗಳು

ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—50
ಪಂಚಗಜ್ಜಾಯ	2—00

ನವಭಾರತ ಪುಸ್ತಕ ಭಂಡಾರ,

ಉಡುಪಿ.

ಜ್ಞಾನ-ವಿಜ್ಞಾನಗಳ ಪ್ರಗತಿಗೆ

ಯುನೆಸ್ಕೊ ನೆರವು

ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಹಾಗು ಸಾಂಸ್ಕೃತಿಕ ಸಂಸ್ಥೆಗೆ ಇರುವ ಸಂಕ್ಷಿಪ್ತ ಹೆಸರೇ ಯುನೆಸ್ಕೊ. 1946ರಲ್ಲಿ ಪ್ರಾರಂಭವಾದ ಈ ಸಂಸ್ಥೆಯು ಈಗ 125 ಸದಸ್ಯ—ರಾಷ್ಟ್ರಗಳ ಸರಕಾರದ ಸಹಯೋಗದಿಂದ ಕಾರ್ಯಾಕಾರ್ಯವಾಗಿದೆ.

ಸದಸ್ಯ —ರಾಷ್ಟ್ರಗಳ ಪ್ರತಿನಿಧಿಗಳ ಸಾಮಾನ್ಯ ಪರಿಷತ್ತು (ಈ ಪರಿಷತ್ತು, ಪ್ರತಿ ಎರಡು ವರ್ಷಕ್ಕೆ ಒಂದು ಸಲ ಕೂಡುವದ) ಕಾರ್ಯಕಾರೀ ಮಂಡಳಿ ಸಾಮಾನ್ಯ ಪರಿಷತ್ತಿನ ಪರವಾಗಿ ಜವಾಬ್ದಾರಿ ಕೈಕೊಳ್ಳುವದ) ಮತ್ತು ಸಚಿವಾಲಯ (ಡೈರೆಕ್ಟರ್—ಜನರಲ್ ಅವರ ನೇತೃತ್ವದಲ್ಲಿ ಕೆಲಸ ಮಾಡುವದ) ಇವು ಮೂರು ವಿಭಾಗಗಳು ಯುನೇಸ್ಕೋ ವಿನ ಅಂಗಗಳು. ಶಾಶ್ವತವಾದ ನ್ಯಾಯಕ್ಕೆ ವಿಶ್ವ ಮಾನ್ಯತೆ ದೊರಕಿಸಿ ವಿಶ್ವಸಂಸ್ಥೆಯ ಪ್ರಣಾಲಿಕೆಯ ಮೂಲಕ ಜಾತಿ, ಮತ, ಭಾಷೆಗಳ ತಾರತಮ್ಯವಿರದೆ ಪ್ರಪಂಚದ ಎಲ್ಲ ಜನರೂ ಮೂಲಭೂತ ಸ್ವಾತಂತ್ರ್ಯ ಹಾಗೂ ಮಾನವೀಯ ಹಕ್ಕುಗಳನ್ನು ಪಡೆಯಲು ಅನುಕೂಲವಾಗುವಂತೆ ಶಿಕ್ಷಣ, ವಿಜ್ಞಾನ ಹಾಗು ಸಂಸ್ಕೃತಿಗಳ ಮೂಲಕ ರಾಷ್ಟ್ರ ರಾಷ್ಟ್ರಗಳಲ್ಲಿ ಸಹಯೋಗವನ್ನು ಅಭಿವೃದ್ಧಿ ಪಡಿಸಿ ಪ್ರಪಂಚದ ಶಾಂತಿ ಹಾಗು ರಕ್ಷಣೆಗೆ ನೆರವಾಗುವದು ಯುನೆಸ್ಕೋದ ಘನ ಉದ್ದೇಶವಾಗಿದೆ. ಪ್ರಾರಂಭದಿಂದಲೂ ಶಿಕ್ಷಣ, ವಿಜ್ಞಾನ, ಸಂಸ್ಕೃತಿ ಹಾಗು ಸಂಪರ್ಕ ಕ್ಷೇತ್ರಗಳಲ್ಲಿ ಅಂತರರಾಷ್ಟ್ರೀಯ ಬದ್ಧ ಜೀವಿಗಳ ಸಹಕಾರ ಕುದುರಿಸುವಲ್ಲಿ ಯುನೆಸ್ಕೋ ಶ್ರಮಿಸಿದೆ. ವಿಶೇಷ ವಿಷಯಗಳ ಬಗ್ಗೆ ವಿಚಾರಗೋಷ್ಠಿಯನ್ನು ಸಂಘಟಿಸಿ ಸರಕಾರೇತರ ಸಂಘಸಂಸ್ಥೆಗಳಿಗೆ ನೆರವು ನೀಡಿ, ಅನೇಕಾನೇಕ ಮಹತ್ವದ ಪುಸ್ತಕಗಳನ್ನು ಪ್ರಕಟಿಸಿ ಯುನೆಸ್ಕೋ ತನ್ನ ಗುರಿ ಸಾಧನೆಗೆ ಕೆಲಸ ಮಾಡಿದೆ. ಯುನೆಸ್ಕೋದ ಆಯವ್ಯಯ ಪತ್ರಿಕೆಯಲ್ಲಿ ಬಹಳಷ್ಟು ಹಣವು ಸದಸ್ಯ ರಾಷ್ಟ್ರಗಳು ವಿನಂತಿಸಿಕೊಂಡಾಗ ಅವುಗಳಿಗೆ ನೇರವಾದ ನೆರವನ್ನು ಕೊಡುವುದರಲ್ಲಿ ವಿನಿಯೋಗವಾಗಿದೆ.

ಯುನೆಸ್ಕೋ ಮತ್ತು ಭಾರತ

ಉಳಿದೆಡೆಗಳಂತೆ ಭಾರತದಲ್ಲಿಯೂ ಯುನೆಸ್ಕೊ ಸರಕಾರ ಸೂಚಿಸಿದ ಸಂಘ ಸಂಸ್ಥೆಗಳಿಗೆ ವಿದೇಶಿ ತಜ್ಞರ ತಾತ್ಕಾಲಿಕ ನೆರವು, ವಿದೇಶಗಳಲ್ಲಿ ತರಬೇತಿಗೆ ಶಿಷ್ಯವೇತನ, ಸಲಕರಣೆಗಳ ಸರಬರಾಜು ಮೊದಲಾದ ವಿಧಾನಗಳಿಂದ ಸಹಾಯ ಕಲ್ಪಿಸಿದೆ. ದುರ್ಗಾಪುರ, ಅಲಹಾಬಾದ್, ವರಂಗಲ್, ಭೋಪಾಲ್, ನಾಗಪೂರ್, ಜಮಶೇದಪುರ ಹಾಗು ಮಂಗಳೂರು ನಗರಗಳಲ್ಲಿನ ಪ್ರಾದೇಶಿಕ ಇಂಜನಿಯರಿಂಗ್ ಕಾಲೇಜುಗಳಿಗೆ ಒಟ್ಟು 30 ವಿದೇಶಿ ತಜ್ಞರ ಸೇವೆಯನ್ನು, ಸಲಕರಣೆಗಳನ್ನು ಯುನೆಸ್ಕೊ ಒದಗಿಸಿದೆ. ತಾಂತ್ರಿಕ ಸಂಶೋಧನೆ ಹಾಗು ತರಬೇತಿ ವಿಷಯಕ್ಕೂ ಯುನೆಸ್ಕೊ ವಿಶೇಷ ಪ್ರಾಧಾನ್ಯವನ್ನು ನೀಡಿದೆ. ಚಂಡೀಗಡದಲ್ಲಿನ "ಸೆಂಟ್ರಲ್ ಸೈಂಟಿಫಿಕ್ ಇನ್‌ಸ್ಟ್ರುಮೆಂಟ್ಸ್ ಆರ್ಗನೈಝೇಶನ್", ಭೋಪಾಲ/ಬೆಂಗಳೂರ ನಗರದಲ್ಲಿನ ಪಾವರ್ ಇಂಜನಿಯರಿಂಗ್ ರಿಸರ್ಚ್ ಆರ್ಗನೈಝೇಶನ್", ದುರ್ಗಾಪುರ/ಲುಧಿಯಾನಾ/ಪುಣೆ/ಮದ್ರಾಸ್ ನಗರಗಳಲ್ಲಿನ ಮೆಕ್ಯಾನಿಕಲ ಇಂಜನಿಯರಿಂಗ್ ರಿಸರ್ಚ್ ಆ್ಯಂಡ್ ಡೆವಲಪ್‌ಮೆಂಟ್ ಆರ್ಗನೈಝೇಶನ್ ಮತ್ತು ಡೆಹ್ರಾಡೂನಿನ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಲಿಯಂ ಸಂಸ್ಥೆಗಳಿಗೂ ಪಿಲಾನಿ ಮತ್ತು ಹೈದರಾಬಾದ ಸಂಶೋಧನಾಲಯಗಳಿಗೂ ತಾಂತ್ರಿಕ ಸಂಶೋಧನೆಗೆಂದು ಯುನೆಸ್ಕೊ ಕಾರ್ಯಯೋಜನೆಗಳನ್ನು ರಚಿಸಿ ಎಲ್ಲ ನೆರವು ನೀಡಿದೆ. ಇದಲ್ಲದೆ ಮುಂಬೈ, ಕಲ್ಕತ್ತ, ದೆಹಲಿ, ಜಾಧವಪುರ, ಹೈದರಾಬಾದ್ ಹಾಗು ಮದ್ರಾಸ್ ವಿಶ್ವವಿದ್ಯಾನಿಲಯಗಳಿಗೆ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಮೂಲಕ ನಿಕೃಷ್ಟ ವಿಜ್ಞಾನ ಅಭ್ಯಾಸಕ್ಕೆ ಯುನೆಸ್ಕೊ ಸಹಾಯ ಮಾಡಿದೆ.

ಶಾಲಾ ಶಿಕ್ಷಣದ ವಿಷಯದಲ್ಲೂ ಯುನೆಸ್ಕೋದ ನೆರವು ಲಭ್ಯವಾಗಿದೆ. ಪ್ರಾಥಮಿಕ ಶಾಲೆಗಳಲ್ಲಿ ವಿಜ್ಞಾನ ಬೋಧೆಗೆ ತಕ್ಕ ಪಠ್ಯ ಪುಸ್ತಕಗಳ ರಚನೆಗೆ ಸಹಾಯ ಮಾಡಿ, ಶಿಕ್ಷಕರಿಗೆ ತರಬೇತಿ ವ್ಯವಸ್ಥೆ ಮಾಡಿ, ವಿಜ್ಞಾನ ಬೋಧೆಗೆ ಸಲಕರಣೆ ಒದಗಿಸಿ ಯುನೆಸ್ಕೊ ಮಹತ್ವದ ಪಾತ್ರ ವಹಿಸಿದೆ. ವಿಶ್ವ ಆಹಾರ ಸಂಸ್ಥೆಯ ಸಹಕಾರದೊಂದಿಗೆ ಯುನೆಸ್ಕೋ ಭಾರತದಲ್ಲಿ ಸ್ನಾತಕೋತ್ತರ ಕೃಷಿ, ಶಿಕ್ಷಣ ಹಾಗೂ ಸಂಶೋಧನೆಯ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಪುಣೆಯಲ್ಲಿ ಟೆಲಿವಿಜನ್ ಕೇಂದ್ರವು ಯುನೆಸ್ಕೋದ ನೆರವಿನಿಂದ ಪ್ರಾರಂಭವಾಗಿದೆ. ದೆಹಲಿಯ ಏಶಿಯನ್ ಇನ್‌ಸ್ಟಿಟ್ಯೂಟ್ ಫಾರ್ ಎಜ್ಯುಕೇಶನಲ್ ಪ್ಲ್ಯಾನಿಂಗ್ ಆ್ಯಂಡ್ ಅಡ್ಮಿನಿಸ್ಟ್ರೇಶನ್ ಎನಾಕುಲಂದಲ್ಲಿನ ಏ ಇಂಡಿಯನ್ ಓಶನ್ ಬಾಯಾಲಜಿ ಸೆಂಟರ್ ಮುಂತಾದ ಸಂಸ್ಥೆಗಳೂ ಯುನೆಸ್ಕೋದ ಸಹಾಯವನ್ನು ಪಡೆದಿವೆ. ಭಾರತದ ಕುಟುಂಬ ಯೋಜನೆ ಕಾರ್ಯಕ್ರಮಕ್ಕೆ ಯುನೆಸ್ಕೋದ ಸಹಾಯ ದೊರೆತಿದೆ.

ಉಡುಪಿಯಲ್ಲಿ ದೇವರಾಜ್ ಅರಸ್

ಉಡುಪಿ ಆಳುವ ಕಾಂಗ್ರೆಸಿನ ಆಶ್ರಯದಲ್ಲಿ ಜರಗಿದ ಕಾರ್ಯಕರ್ತರ ದ್ದೇಶಿಸಿ ಮೈಸೂರು ಪ್ರದೇಶ ಆಳುವ ಕಾಂಗ್ರೆಸಿನ ಕನ್ವೀನರ್ ಶ್ರೀ ದೇವರಾಜ್ ಅರಸ್ ಅವರು ಮಾತನಾಡುತ್ತಾ ರಾಜಕೀಯವನ್ನು ಹಾಬ್ಬಿಯಾಗಿ ಸ್ವೀಕರಿಸಿದವರು ನಮ್ಮ ಪಕ್ಷಕ್ಕೆ ಬೇಡ, ಅದನ್ನು ಕಾಯಾ ವಾಚಾ ಮನಸಾ ಸ್ವೀಕರಿಸಿ ಜನತಾ ಕಲ್ಯಾಣವನ್ನು ಏಕಮೇವ ಗುರಿಯನ್ನಾಗಿರಿಸಿಕೊಂಡವರು ಬೇಕಾಗಿದೆ. ಕಾಂಗ್ರೆಸಿನಲ್ಲಾಗಿರುವ ಸ್ಫೋಟಕದಿಂದ ಜನರಲ್ಲಿಯೂ ರಾಜಕೀಯ ಪಕ್ಷಗಳಲ್ಲಿಯೂ ಜಾಗೃತ ಭಾವನೆ ಉಂಟಾಗಿದೆಯೆಂದರು. 2-8 ತಿಂಗಳಲ್ಲಿ ಮೈಸೂರಲ್ಲಿ ಧ್ರುವೀಕರಣ ನಡೆಯಲಿದೆ. 1972ರ ಚುನಾವಣೆಯಲ್ಲಿ ಆಡಳಿತ ಕಾಂಗ್ರೆಸ್ ಬರದೆ ಹೋದರೆ ಈ ದೇಶದಲ್ಲಿ ಪ್ರಜಾಪ್ರಭುತ್ವದ ಅಂತ್ಯವಾಗಿ ದಂಡೋಣಯ ಹಿಂಸಾ ಪ್ರವೃತ್ತಿಯೆಂದೇ ಜನತೆಗೆ ಉಳಿದಿರುವ ದಾರಿಯಾಗಬಹುದೆಂದರು.

ಆರಂಭದಲ್ಲಿ ಉಡುಪಿ ಆಡಳಿತ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಪಿ. ರಂಗನಾಥ ಶೆಣೈಯವರು ಸ್ವಾಗತಿಸಿದರು. ಅವರು ರೈತರ ಸಮಸ್ಯೆಗಳ ಬಗ್ಗೆ ಮಾತನಾಡಿ, ಎನ್. ಜಿ. ಒ.ಗಳಿಗೆ ಕೇಂದ್ರ ಸರಕಾರದ ನೌಕರರ ವೇತನ ಮಟ್ಟದಲ್ಲಿ ವೇತನ ಕೊಡಬೇಕೆಂದು, ಆರ್. ಟಿ. ಓ. ಆಫೀಸನ್ನು ವಿಸ್ತಾರಗೊಳಿಸಬೇಕು, ಉಡುಪಿ ಶರಂಡಿ ಯೋಜನೆಗೆ ಸರಕಾರ ಧನಸಹಾಯ ನೀಡದೇ ಕೆಂಪಿನ್ಯಾದಿ ವಿಚಾರಗಳನ್ನು ತಿಳಿಸಿ ಈ ವಿಚಾರದಲ್ಲಿ ಸರಕಾರದ ಪರ್ಶನ್ನು ಬೀರಬೇಕೆಂದು ಶ್ರೀ ಅರಸ್‌ರವರನ್ನು ಕೇಳಿಕೊಂಡರು.

ಕೊನೆಯಲ್ಲಿ ಉಡುಪಿ ಆಡಳಿತ ಕಾಂಗ್ರೆಸಿನ ಕಾರ್ಯದರ್ಶಿಯಾದ ಶ್ರೀ ಬಿ. ಯೋಗೀಶ್ವರ ಹೊಳ್ಳ ಅವರು ಧನ್ಯವಾದಗಳನ್ನರ್ಪಿಸಿದರು.

ವಿದ್ಯಾರ್ಥಿ ಸಮಸ್ಯೆ—ಚರ್ಚಾಗೋಷ್ಠಿ

ಎಂ. ಜಿ. ಎಂ. ಆಫ್ ಜನರಲ್ ಎಜುಕೇಶನ್ ಆಶ್ರಯದಲ್ಲಿ ನಡೆದ ಅಂತಾರಾಷ್ಟ್ರೀಯ ಶಿಕ್ಷಣ ವರ್ಷ ಆಚರಣೆ ಸಮ್ಮೇಳನದ 3ನೇ ದಿನದಂದು 70ರ ದಶಕಕ್ಕೆ ಪಂಥಾಹ್ವಾನ ನೀಡಿದ ವಿದ್ಯಾರ್ಥಿ ಯೂ ಯುವಜನ ಸಮಸ್ಯೆಯ ಬಗ್ಗೆ ಚರ್ಚೆ ನಡೆಯಿತು. ಈ ಚರ್ಚಾಗೋಷ್ಠಿಯ ಅಧ್ಯಕ್ಷತೆಯನ್ನು ಕೆ.ಎಂ.ಸಿ. ಡೀನ್ ಡಾ| ಎ. ಕೃಷ್ಣರಾವ್ ವಹಿಸಿದ್ದರು. ಪ್ರೊ| ಪಿ. ಚಂದ್ರಶೇಖರ್ ಸ್ವಾಗತಿಸಿದರು.

ಮುಖ್ಯ ಭಾಷಣಕಾರ ಡಾ| ಕೆ. ಪಿ. ಗಣೇಶನ್ ಅವರು ಸಮಸ್ಯೆಯ ಬಗ್ಗೆ ಮಾತನಾಡುತ್ತಾ, ಪಾಲಕ-ಮಕ್ಕಳ ನಡುವೆ ಮತ್ತು ಇಂದಿನ ಯುವಜನರ ನಡುವೆ ಸಂಪರ್ಕದ ಕೊರತೆಯಿಂದ ಸಮಸ್ಯೆಗಳ ನಿರ್ಮಾಣವಾಗಿದೆ ಎಂದರು. ಹಿರಿಯರು ಮತ್ತು ಕಿರಿಯರೊಳಗೆ ಸಂಪರ್ಕವೇರ್ಪಟ್ಟರೆ ಈ ಸಮಸ್ಯೆಗೆ ಪರಿಹಾರ ಸಾಧ್ಯ ಎಂದರು.

ಶ್ರೀ ಶ್ರೀಶ ಬಲ್ಲಾಳರು ಪ್ರಬಂಧವೊಂದನ್ನು ಓದಿ ಬದುಕಿನ ಸಾಂಪ್ರದಾಯಿಕತೆ ಮತ್ತು ಶಿಕ್ಷಣ ವಿಧಾನದ ಅಪೌರ್ಣತೆಗೆ ಇಂದಿನ ತರುಣ ಸಮಾಲು ಹಾಕುತ್ತಿದ್ದಾನೆ. ಯುನೆಸ್ಕೋ ಸಂಸ್ಥೆಯಿಂದ ಶಿಕ್ಷಣದ ಗುರಿಯ ಕುರಿತು ವಿದ್ಯಾರ್ಥಿಗಳು ಅಸಂತೃಪ್ತರಾಗಿದ್ದಾರೆ. ಇದಕ್ಕೆ ವಿವಿಧ ಪ್ರಾಯೋಗಿಕ ಶಿಕ್ಷಣ ಒದಗಿಸಬೇಕಾಗಿದೆಯೆಂದರು. ಮಣಿಪಾಲ ಫಾರ್ಮಸಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಗುಂಡೂರಾವ್ ಸಮಸ್ಯೆಗಳ ಪ್ರಾಮಾಣಿಕ ವಿಚಾರಣೆ ನಡೆಯುತ್ತಿಲ್ಲ ಎಂದರು. ಕೆ. ಎಂ. ಸಿ. ವಿದ್ಯಾರ್ಥಿ ಶ್ರೀ ಜಿ ಎನ್. ಮಿಶ್ರಾ ಯುವಜನ ಸಮಸ್ಯೆಗೆ ಸಂಪರ್ಕರಾಹಿತ್ಯ ಕಾರಣ ಎಂದರು.

ಲಾ ಕಾಲೇಜ್ ಪ್ರಿನ್ಸಿಪಾಲ್ ಶ್ರೀ ವೀರ ಪಾಂಡೆ, ಇಂಜಿನಿಯರಿಂಗ್ ವಿದ್ಯಾರ್ಥಿ ಶ್ರೀ ಮಿಚರ್, ಅಶ್ವರಲಾಲ್, ಪೀಟರ್ ಫೆನಾಂಡಿಸ್, ಚಂದ್ರಪಾಲ್ ಇವರೆಲ್ಲ ಸಂಪರ್ಕರಾಹಿತ್ಯದ ಮೇಲೆಯೇ ತಮ್ಮ ಗಮನ ಕೇಂದ್ರೀಕರಿಸಿದರು.

ಕಾಲೇಜು, ಬೀದಿಗಳಲ್ಲಿ ಹಿಂಸಾತ್ಮಕ ಕೃತ್ಯದ ವಿದ್ಯಾರ್ಥಿಗಳನ್ನು ಶ್ರೀ ಕೋ. ಮು. ಕಾರಂತರು ಉಗ್ರವಾಗಿ ಟೀಕಿಸಿದರು. ಶ್ರೀ ರಮೇಶ ಪೈ ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾ ಹಿರಿಗಿರಿ ಅಂತರವಿಲ್ಲ ಭ್ರಮೆ. [illegible] ಅತಿಶಯವಾಗಿದೆ ಎಂದರು.

ಅಂತ್ಯದಲ್ಲಿ ಪ್ರೊ. ಪಿ. ಚಂದ್ರಶೇಖರ್ ಧನ್ಯವಾದಗಳನ್ನರ್ಪಿಸಿದರು.

ಯಕ್ಷಗಾನ

ಬೆಳಂದೂರಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ "ಶ್ರೀ ಕಾಮಾಕ್ಷಿ—ವಾಲಿವಧೆ" ಎಂಬ ಕಥಾಭಾಗದ ಯಕ್ಷಗಾನ ತಾಳಮದ್ದಳೆಯು ದಿನಾಂಕ 31ರಂದು ಶ್ರೀ ಎಲ್ಲಣ್ಣ ಗೌಡ ಮತ್ತು ಹೊಡೆರಂಗಳ ವ್ಯವಸ್ಥಾಪಕತ್ವದಲ್ಲಿ ನಡೆಯಿತು. ಈ ವಿಶೇಷ ಕಾರ್ಯಕ್ರಮದಲ್ಲಿ ಶ್ರೀ ಗಣೇಶ, ಗೋಪಾಲಕೃಷ್ಣ ಭಟ್, ಡಾ| ವಿಶ್ವನಾಥ ಬನಾರಿ, ಅಣ್ಣಯ್ಯ ಗೌಡ (ಹಿಮ್ಮೇಳ) ಮೇಘಾಲ ಗುಡ್ಡಪ್ಪಗೌಡ, ನಾರಾಯಣ ರೈ, ಸಾಂತಪ್ಪ ರೈ, ಶೀನಪ್ಪ ಗೌಡ, ನಾರಾಯಣ ನಾಯಕ್, ಸಾಂತಪ್ಪ ಗೌಡ, ಕೆ. ಎ ಭಂಡಾರಿ, ರಾಧಾಕೃಷ್ಣ ರೈ, ಶ್ರೀಧರ ಗೌಡ, ಬಿ. ತಿಮ್ಮಪ್ಪ ರೈ, (ಅರ್ಥವಿವರಣೆ)—ಇವರು ಭಾಗವಹಿಸಿದರು.

ಆರಂಭದಲ್ಲಿ ಡಾ|| ವಿ.ವಿ. ಬನಾರಿಯವರು ಸ್ವಾಗತಿಸಿದರು. ಅಂತ್ಯದಲ್ಲಿ ಶ್ರೀ ಯುವನ್ ಯನ್. ನಾಯಕರು ಧನ್ಯವಾದವಿತ್ತರು.

ಕಾರ್ಕಳ ಮುನ್ಸೀಫ್ ಕೋರ್ಟಿನಲ್ಲಿ

O. S. No. 70/1968

ಅಂತೋನಿ ಮಥಾಯಸ್ — ವಾದಿ

ಸಿಲ್ವೆಸ್ಟರ್ ಮಥಾಯಸ್ ಕೂಡಾ—

ಪ್ರತಿವಾದಿಗಳು

13 ಲೂಸಿ ಮಥಾಯಸ್, ಜೋಸೆಫ್ ಮಥಾಯಸರ ವಿಧವೆ.

14 ಮೆರ್ಸಿನಾ ಮಥಾಯಸ್ 16 ಮಿಲಿಯನ ಮಥಾಯಸ್ 15 ಶಾಧಿ ಮಥಾಯಸ್ 17 ಲಿಗೋರಿ ಮಥಾಯಸ್ 18 ಸಾಕು ಮಥಾಯಸ್ 19 ಪೌಲಿನ್ ಮಥಾಯಸ್ 20 ಫೆಲಿಕ್ಸ್ ಮಥಾಯಸ್ —ಜೋಸೆಫ್ ಮಥಾಯಸರ ಮಕ್ಕಳು.

ಸದ್ರಿ 13ರಿಂದ 20ನೇ ವರೆಗಿನ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ವಾದಿಯು ನಿಮ್ಮ ವಗೈರೆರ ಮೇಲೆ ದಾಖಲು ಮಾಡಿದ ಪ್ಲೈಂಟಿನಲ್ಲಿ ವಿವರಿಸಿದ ಸ್ಥಿರಾಸ್ತಿಯ ಹಿಸೆ ದಾವೆಯು ನಿಮ್ಮ ಹಾಜ್ರಾತಿ ಬಗ್ಗೆ ತಾ. 26-11-1970ಕ್ಕೆ ಇಟ್ಟಿದೆ. ಆ ಕುರಿತು ನಿಮಗೆ ಆಕ್ಷೇಪಣೆಗಳಿದ್ದರೆ ನೀವು ತಾ. 26-11-1970ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಪೂರ್ವಾಹ್ನ ಘಂಟೆ 10ಕ್ಕೆ ನೀವು ಖುದ್ದಾಗಲೀ ವಕೀಲರ ಮೂಲಕವಾಗಲೀ ಹಾಜರಾಗಿ ಉಜರ್ ಹೇಳತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು. ಕೋರ್ಟ್ ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯದೆ.

D. Venkatesh Bhat

Pleader for Plaintiff

Karkala, 5-11-1970

ಸಂದರ್ಶಿಸಿರಿ!—ಸಂತೃಪ್ತರಾಗಿ!!

ಬಿಲ್ಲಿಗಾರಾ ವಜ್ರಗಳಿಗೆ, ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ, ಕೊಡಾಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ

ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

ಮುಸ್ಲಿಂ ಲೀಗಿನ ಮುತ್ತಿಗೆ ಗಲ್ಲ ಮುರಿಯಿತು

(ಐದನೇ ಪುಟದಿಂದ)

ಬಂದು, ಅವರು ಸಂಸ್ಥಾ ಕಾಂಗ್ರೆಸನ್ನು ದೂರಲಾರಂಭಿಸಿದರು. ಕಕ್ಕಡಿಯ ಎರಡು ಕ್ಷೇತ್ರಗಳಲ್ಲಿ ಎರಡು ಕಾಂಗ್ರೆಸ್ಸುಗಳನ್ನಿಟ್ಟು ಅವರು ಕೂಟ ಮಾಡಿದರು. ಅದರಲ್ಲಿ ಆಡಳಿತ ಕಾಂಗ್ರೆಸ್ ಕಮ್ಯೂನಿಸ್ಟ್ ಮತ್ತು ಜಾಸ್ತಿ ಪ್ರಗತಿಶೀಲವಿದೆ. ಅದರ ಹಳೆಯ ಕಾಂಗ್ರೆಸ್ಸು ಪ್ರತಿಗಾಮಿ ಹಾಗೂ ಪಾಕಿಸ್ತಾನ ಇದೆ! ಶಕ್ತಿಗೆ ಶಿಕ್ಷೆ ಸಾಕ್ಷಿ ಯುಂಟೆ. ಭಾರತೀಯ ಜನಸಂಘ ಭಾರತೀಯೀಕರಣದ ಘೋಷಣೆ ಮಾಡುತ್ತಿರುವದೂ ಮುಸ್ಲಿಂಲೀಗಿನವರಿಗೆ ಮುಳ್ಳು ಚುಚ್ಚಿದ ಹಾಗೆ ಆಗುತ್ತದೆ. ಹಾಗೆ ಹೇಳುತ್ತಿರುವ ಜನಸಂಘ ಅವರ ಪಾಲಿಗೆ ಜಾತೀಯ! ಆ ಘೋಷಣೆಯನ್ನು ಬಿಟ್ಟಲ್ಲಿ ಮುಸ್ಲಿಂಲೀಗು ಜನಸಂಘನೊಂದಿಗೆ ಮೈತ್ರಿಗೆ ಮುಂದಾಗುತ್ತದಂತೆ! ಸ್ವಾತಂತ್ರ್ಯ ಚಳುವಳಿಯ ಸಮಯ, ಇದೇ ಮುಸ್ಲಿಂಲೀಗು ಸ್ವದೇಶೀಕರಣವನ್ನು ವಿರೋಧಿಸುತ್ತಿರಲಿಲ್ಲವೇ? ಸ್ವದೇಶೀಕರಣವೇ ಭಾರತೀಯಕರಣವಿದೆ. ಇಂದು ಅದನ್ನು ಮುಸ್ಲಿಂಲೀಗು ವಿರೋಧಿಸುತ್ತಿದೆ. ಅದರಲ್ಲೇನೂ ಆಶ್ಚರ್ಯವಿರುವದಿಲ್ಲ.

ಮುಸ್ಲಿಂ ಲೀಗಿಗೆ ಇಲ್ಲಿಯ ರಾಷ್ಟ್ರೀಯ ಗಂಗಾ ಪ್ರವಾಹದಲ್ಲಿ ಒಂದಾಗಲು ಇಷ್ಟ ಇರುವುದಿಲ್ಲ. ಇಂದಿರಾಜೀಯೂ ದರೋ ಅದನ್ನು ಪ್ರತ್ಯೇಕವಾಗಿಟ್ಟು ತನ್ನ ಉದ್ದೇಶ ಪೂರ್ತಿ ಮಾಡಿಕೊಳ್ಳಬೇಕೆಂದು ಯೋಚಿಸುತ್ತಿದ್ದಾರೆ. ಇಂದಿರಾಜೀಯವರನ್ನು ಉಪಯೋಗಿಸಿಕೊಂಡು ಕೆಂಪು ಕೋಟೆಯ ಮೇಲೆ ಹಚ್ಚೆ ಪತಾಕೆ ಹಾರಿಸಬೇಕೆಂದು ಮುಸ್ಲಿಂಲೀಗು ಪ್ರಯತ್ನಿಸುತ್ತಿದೆ. ಕೆಂಪುಕೋಟೆಯ ಮೇಲೆ ಹಚ್ಚೆ ಪತಾಕೆ ಹಾರುವ ದಿನ ದೂರವಿಲ್ಲವೆಂದು ಇಸ್ಮಾಯಿಲ್ ಹಾಗೂ ಇತರರು ಕೇರಳ ಚುನಾವಣೆಯ ಸಮಯ ಪ್ರಚಾರಮಾಡುತ್ತಿದ್ದರು. ಸ್ವಾತಂತ್ರ್ಯ ಸಿಗುವ ಮುಂಚೆ ಬ್ರಿಟಿಷರ ಬಳಿ ಕೇಳುತ್ತಿದ್ದಂತೆಯೇ ಈಗ ಅವರು ಕಾಂಗ್ರೆಸ್ಸಿನ ಬಳಿ ಕೇಳುತ್ತಿದ್ದಾರೆ. ಅದಕ್ಕೆ ಪ್ರಮಾಣಾನುಸಾರ ಪ್ರಾತಿನಿಧ್ಯ ಇರಬೇಕಂತೆ. ಬಸ್ಸಿನಲ್ಲಿ ಹೆಂಗಸರಿಗಾಗಿ ಪ್ರತ್ಯೇಕ ಸ್ಥಳವಿದೆ. ಅಲ್ಲಿ ಅವರು ಕೂತುಕೊಳ್ಳುತ್ತಾರೆ, ಇತರ ಸ್ಥಳದಲ್ಲೂ ಅವರು ಕೂತುಕೊಳ್ಳಬಹುದು. ಹಾಗೆ ಮುಸ್ಲಿಮರ ಜನಸಂಖ್ಯೆಗನುಸಾರವಾಗಿ ಎಲ್ಲೆಡೆಯೂ ಸ್ಥಾನ ಸಿಗಬೇಕು— ಅದಕ್ಕೆ ಅರ್ಹತೆ ಇರಲಿ, ಇಲ್ಲದಿರಲಿ, ಜಾಗ ಭರ್ತಿ ಮಾಡಿದರಾಯಿತು. ಅದರ ಮೇಲೆ ಇತರ ಸ್ಥಾನದಲ್ಲೂ ಅವರು ಸಂದ್ಯಾಟ ನಡೆಸಬಹುದು. ಹೇಗಿದೆ ಬೇಡಿಕೆ? ಆದರಲ್ಲೂ ಪೋಲೀಸ್, ಸಶಸ್ತ್ರ ಪೋಲೀಸ್ ಸೇನೆಗಳಲ್ಲಿ ಒಡನೆ ಆರಂಭ ಆಗಬೇಕಂತೆ! ಪಾಕಿಸ್ತಾನ ಆಕ್ರಮಣ ನಡೆಸಿದಾಗ ಸಂಭವಿಸಿರುವ ಕಹಿ ನೆನಪು ಇನ್ನೂ ಬೇಗನೆ ಮರೆತಿರಲಾರದು. ಹಿಂದೆ ಕಾಂಗ್ರೆಸ್ಸು ಇದೇ ತಪ್ಪನ್ನು ಮಾಡಿತ್ತು. ಅದಕ್ಕೆ ಆಗ ಸ್ವಾತಂತ್ರ್ಯದ ಅರ್ಥ ಗೊತ್ತಿರಲಿಲ್ಲ, ಕಲ್ಪನೆಯೂ ಇರಲಿಲ್ಲ. ಆಗ ಅದು ಮುಸ್ಲಿಮರಿಗೆ ಇಷ್ಟು, ಹರಿಜನರಿಗೆ ಇಷ್ಟು, ಮಹಿಳೆಯರಿಗೆ ಇಷ್ಟಿಷ್ಟು....ಈ ರೀತಿ ಸ್ಥಾನಗಳನ್ನು ಕೇಳುತ್ತಿತ್ತು. ಅದನ್ನು ಮುಸ್ಲಿಂಲೀಗು ಮುಂದರಿಸಿತು. ಮುಸ್ಲಿಂ ವಿಭಜನೆಗೆ ಕಾರಣವಾಯಿತು. ಅದರ ಪಾಲಿಗೆ ವಿಭಜನೆ ಪೂರ್ಣ ವಿರಾಮ ಆಗಿರುವದಿಲ್ಲ, ಕೇವಲ ಅಲ್ಪವಿರಾಮ. ಅವರ ದೃಷ್ಟಿಯಲ್ಲಿ ಭಾರತ ಯಾವ ಗುಂಪಿಗೆ ಸೇರಿದೆ—ಇದು ದಾರ್-ಉಲ್-ಇಸ್ಲಾಂ ಅಂದರೆ ಇಸ್ಲಾಮಿಗೆ ಸೇರಿದ ರಾಜ್ಯವೇ? ದಾರ್-ಉಲ್-ಉಲೇಮಾನ್ ಅದರೆ ಇಸ್ಲಾಮನ್ನು ತಿಳಿಯುವರಿಗೆ ಇಲ್ಲಿದೆ ಅಭ್ಯಾಸಮಾಡಬಹುದಾದ ರಾಜ್ಯವೇ? ಅಥವಾ, ದಾರ್-ಉಲ್-ಹರಬ್ ಅಂದರೆ ಶತ್ರುಗಳ ರಾಜ್ಯವೇ? ಅವರ ದೃಷ್ಟಿಯಲ್ಲಿ ಹಾಗೂ ವಿಭಜನಾಗಿ ಇದು ದಾರ್-ಉಲ್-ಇಸ್ಲಾಂ ಅಲ್ಲ. ಇ. ಕಾಂಗ್ರೆಸ್ಸು ಕೂಡಾ ಸಮಾನ ಕಾನೂನಿನ ಕೂಗನ್ನೆಬ್ಬಿಸುತ್ತಿರುವದರಿಂದ ದಾರ್-ಉಲ್-ಉಲೇಮಾನ್ ಆಗಿರಲೂ ಸಾಧ್ಯ ಇರುವದಿಲ್ಲ, ಅವರ ದೃಷ್ಟಿಯಲ್ಲಿ ಖಂಡಿತವಾಗಿ ಇದು ದಾರ್-ಉಲ್-ಹರಬ್ ಅಂದರೆ ಶತ್ರುಗಳ ರಾಜ್ಯವೇ ಇದೆ. ಹಾಗಿರುವಾಗ ಅದನ್ನು ಧ್ವಂಸಗೈದು ಇಸ್ಲಾಂಮಯ ಆಗಿಸುವದನ್ನು ಅದರ "ಪವಿತ್ರ ಧಾರ್ಮಿಕ ಮಹಾಕಾರ್ಯವಿದೆ. ಅದಕ್ಕಾಗಿ ಅದು ಶ್ರಮಿಸುತ್ತಿದೆ.

ಅದರ ಈ ಕೆಲಸದಲ್ಲಿ ಬೇರಾರೂ ಹಂದ್ಯಕ್ಕೆ ಬರಕೂಡದೆಂಬುದು ಅವರ ಇಚ್ಛೆ. ಅಲ್ಪಸಂಖ್ಯಾತರನ್ನು ಅಂದರೆ ಮುಸ್ಲಿಮರನ್ನು ಪ್ರತಿನಿಧಿಸುವ ಒಂದೇ ಒಂದು ಲೀಗು ಇರಬೇಕು ಅದುವೇ ಮುಸ್ಲಿಂಲೀಗು. ಇದನ್ನು ಸಲೇಮಾನ್ ಸೇಟ್ ಸ್ಪಷ್ಟವಾಗಿ ಸೂಚಿಸಿದ್ದಾರೆ. ಲೀಗು ಇಲ್ಲದೆ ಇರುತ್ತಿದ್ದಲ್ಲಿ ಘೋದಿಯಂತವರು ಹಜೀತಿ ಮಾಡುವ ರಾಜಕೀಯಕ್ಕೆ ಇಳಿಯಬಹುದಿತ್ತಂತೆ. ಈಗ ಘೋದಿಯಂತಹ ಬೆಂಕಿ ಉಗುಳುವವರ ಕಂಡಾ ಲೀಗಿನ ಮೂಲಕವೇ ಹೋರಾಡ ಬೇಕೆನ್ನುವದು ಸಲೇಮಾನರ ವಾದ. ಭಯಂಕರ ಮುಸ್ಲಿಂ ವಾದಿಗಳ ಅವಸ್ಥೆಯೇ ಹೀಗಾದಲ್ಲಿ ರಾಷ್ಟ್ರಭಕ್ತಿಯುಳ್ಳ ಹಮೀದ್ ದಲ್ವಾಯಿಯಂತಹವರ ಸ್ಥಿತಿ ಹೇಳ ಬೇಕಾಗಿಯೇ ಇಲ್ಲ. ಕೇರಳದಲ್ಲಿ ಪ್ರಗತಿಶೀಲ ಮುಸ್ಲಿಮರ ಪತ್ರಕ ಕೇಳಿ ಬಂದಾಗ ಕಾನೇ ಪ್ರಗತಿ ಶೀಲನೆನ್ನುವ ಮುಸ್ಲಿಂ ಲೀಗು ಅವರ ಮೇಲೆ ಅತ್ಯಾಚಾರ ನಡೆಸುತ್ತಿದೆ. ತಕರ್, ಪಾಕಿಸ್ತಾನಗಳಲ್ಲಿ ಆಗಿರುವ ಪ್ರಗತಿಗೆ ಮುಸ್ಲಿಂ ಲೀಗು ವಿರುದ್ಧವಿದೆಯಾದರೂ ಪ್ರಗತಿಪರ ಸ್ವರವನ್ನೆತ್ತಿ ಪ್ರಗತಿಗೆ ಪರಿಹಾಸ್ಯ ಮಾಡುತ್ತಿದೆ. ಇದು ಸತ್ಯ ಶೋಧಕ ಮಂಡಳಿಗೆ ಏನು ಮಾಡಿತೆಂದು ಪ್ರತ್ಯೇಕ ಹೇಳ ಬೇಕಾಗಿಲ್ಲ. ಅದು ಸರಕಾರಕ್ಕೇನೇ ಎಚ್ಚರಿಕೆಯನ್ನಿತ್ತಿರುವುದೆ—ವಸ್ತಿ ಮುರ ವೈಯಕ್ತಿಕ ಕಾನೂನು ಅಂದರೆ ಮತೀಯ ವಿಷಯಗಳಲ್ಲಿ ಸರಕಾರ ತಲೆಹಾಕ ಬಾರದು. ಹಾಕಿದಲ್ಲಿ ಏನಾದೀತು? ಅದನ್ನು ಆಹ್ವಾದಾಬಾದಿನಲ್ಲಿ ಅಂದಿರುವರು—ಇಸ್ಲಾಮನ್ನೆದುರಿಸಿದವನ್ನು ನಾಶಮಾಡಲಾಗುತ್ತದೆ.

ವಾಸ್ತವ್ಯ ಪರಿಸ್ಥಿತಿ ಹೀಗಿದೆಯಾದರೂ ಶ್ರೀಮತಿ ಇಂದಿರಾ ಗಾಂಧಿಯವರು ಮುಸ್ಲಿಂಲೀಗಿಗೆ ರಾಜಕೀಯ ಮುಕ್ತಿನೀಡಲು ಮುಂದಾಗಿದ್ದಾರೆ. ಅವರು ಕಾಂಗ್ರೆಸ್ಸಿನ ಅಧ್ಯಕ್ಷರಾದಂದಿನಿಂದ ಈ ರಾಜಕೀಯ ಲಲ್ಲೆಗೆ ಆರಂಭಿಸಿದ್ದಾರೆ. ಇದೀಗ ಅದು ಸ್ಪಷ್ಟವಾಗಿ ತೋರಿಬಂದಿದೆ. ಈ ಎಚ್ಚರಿಕೆಗೆ ಕಿವಿಗೊಡದೆ ಇಂದಿರಾಜೀ ಇಷ್ಟಾದರೂ ಮುಂದುವರಿದಲ್ಲಿ ಅವರು ಪ್ರಧಾನಿ ಪದವಿಯಿಂದ ಕೆಳಗುರುಳುವರು! ಶ್ರೀಮತಿ ಇಂದಿರಾ ಫಿರೋಜ್ ಗಾಂಧಿಯನ್ನು ಮುಸ್ಲಿಂಲೀಗು ಇಂದು ಭಾರತದ ಪ್ರಧಾನಿಯೆಂದು ಗೌರವಿಸದೆ, ತಮ್ಮನ್ನು ಅಲ್ಲಾವುದ್ದೀನೆಂದೂ ಇಂದಿರಾಜೀಯವರನ್ನು ವಿಚಿತ್ರದೀಪವೆಂದೂ ಭಾವಿಸಿಕೊಂಡು ಹಾಗೆ ವರ್ತಿಸುತ್ತಿದ್ದಾರೆ. ಅವರಿಂದ ತಮಗೆ ಬೇಕಾದ ಅದ್ಭುತ ಕಾರ್ಯವನ್ನೂ ಮಾಡಿಸಿಕೊಳ್ಳ ಬಹುದೆಂಬ ಧೈರ್ಯ, ನಂಬಿಕೆ ಮುಸ್ಲಿಂಲೀಗಿಗೆ ಇದೆ. ತಮ್ಮನ್ನು ಬಿಟ್ಟಲ್ಲಿ ಕಾಂಗ್ರೆಸ್ಸು ಕೇರಳದಲ್ಲಿ ಬಾಳಿದು ಮಂತಿಲ್ಲ, ಸಂಸತ್ತಿನಲ್ಲಿ ಇಂದಿರಾಜೀ ಉಳಿಯುವಂತಿಲ್ಲ. ಇದೇ ಅವರ ನಂಬಿಕೆ ಇಂದಿರಾಜೀಯವರು ಅವರ ಪಾಲಿಗೆ ವಿಚಿತ್ರದೀಪ ಇರಬಹುದು, ಭಾರತೀಯ ರಾಷ್ಟ್ರೀಯ ಶಕ್ತಿಗಳಿಗೆ ಅವರೆಂದೂ ಅತ್ಯಂತ ಬಿಚ್ಚು ನಾರಿಯೇ ಸರಿ. ಮರೆಯದಿರಿ? ಮುಸ್ಲಿಂಲೀಗಿಗೆ ಆ ಹೆದರಿಕೆ ಇರುವದಿಲ್ಲ. ಆದುದರಿಂದಲೇ ಅದು ಹೊಸ ಕಾಂಗ್ರೆಸ್ಸಿನೊಂದಿಗೆ ರಾಜಕೀಯ ಲಲ್ಲೆಯನ್ನಾಡುತ್ತದೆ. ಆ ಮುಸ್ಲಿಂಲೀಗಿನ ಮುತ್ತಿಗೆ ಗಲ್ಲ ಮುರಿಯಿತು.

—ಶಿವಶಂಕರ

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No.— 1 28337, 2 29887 — Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

70 ರ ಸಂಘಾಹ್ವಾನ

ಶಿಕ್ಷಣ ರಂಗದಲ್ಲಿ ಪರಿವರ್ತನೆ ಅವಶ್ಯ

ಮಣಿಪಾಲದ ಎಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ ಆಶ್ರಯದಲ್ಲಿ ಎಂ.ಜಿ.ಎಂ. ಕಾಲೇಜಿನ ರವೀಂದ್ರ ಮಂಟಪದಲ್ಲಿ ತಾ. ೨೦ರಂದು ನಡೆದ ಅಂತರ ರಾಷ್ಟ್ರೀಯ ಶಿಕ್ಷಣ ವರ್ಷ ಮತ್ತು ಎಕಾಡೆಮಿ ವಾರ್ಷಿಕ ಸಮ್ಮೇಳನದಲ್ಲಿ ಅಮೇರಿಕದ ಫೋರ್ಡ್ ಫೌಂಡೇಶನ ದಿಲ್ಲಿಯ ಶೈಕ್ಷಣಿಕ ಸಲಹೆಗಾರ ಡಾ| ಫ್ರೆಡರಿಕ್ ಪೀವರ್ ಅವರು ಮುಖ್ಯ ಅತಿಥಿಗಳಾಗಿ 70ನೇ ದಶಕದ ಶಿಕ್ಷಣ ರಂಗದ ಸಂಘಾಹ್ವಾನಗಳ ಕುರಿತು ಮಾತನಾಡಿದರು.

ಉದ್ಯೋಗಕ್ಕಾಗಿ ಮಾತ್ರ ಶಿಕ್ಷಣ ಎನ್ನುವ ಭಾವನೆ ತೊಲಗಿ ಅಜ್ಞಾನ ಬಡತನ ಮತ್ತು ಯುದ್ಧವನ್ನು ಜಗತ್ತಿನಿಂದ ದೂರ ಮಾಡುವ ಗುರಿಯನ್ನಿರಿಸಿಕೊಂಡು ಹೊಸ ದೃಷ್ಟಿಕೋನವನ್ನು ಶಿಕ್ಷಣಕ್ಕೆ ನೀಡಬೇಕಾಗಿದೆ, ವಿಶ್ವಸಂಸ್ಥೆ ಮತ್ತು ಯುನೆಸ್ಕೋಗಳು ಸೇರಿ ನಡೆಸುತ್ತಿರುವ ಈ ಅಂತರ ರಾಷ್ಟ್ರೀಯ ಶಿಕ್ಷಣ ವರ್ಷದ ಉದ್ದೇಶವು ಇದೇ ಆಗಿದೆ, ದಂಗೆ, ಮುಷ್ಕರ ಪ್ರದರ್ಶನಗಳ ರೂಪದಲ್ಲಿ ಜಗತ್ತಿನಾದ್ಯಂತ ಹುಟ್ಟಿಕೊಂಡಿರುವ ವಿದ್ಯಾರ್ಥಿ ಸಮಸ್ಯೆಗಳ ನಿವಾರಣೆಗೆ ಶಿಕ್ಷಣಕ್ಕೆ ಹೊಸ ದೃಷ್ಟಿಕೋನ ನೀಡಬೇಕು, ಸಾಂಸ್ಕೃತಿಕ ಶಿಕ್ಷಣದಿಂದ ಇದು ಸಾಧ್ಯವಾದೀತು. ಮುಂದಿನ ಪೀಳಿಗೆಯ ಶಿಕ್ಷಣ ವಿಧಾನದಲ್ಲಿ ಪರಿವರ್ತನೆಗಳು ಆಗಲೇಬೇಕಾಗಿವೆ ಎಂದು ಡಾ| ಪೀವರ್ ನುಡಿದರು.

ಎಕಾಡೆಮಿ ಅಧ್ಯಕ್ಷ ಡಾ| ಟಿ.ಎಂ.ಎ. ಪೈ ಅವರು ಸ್ವಾಗತಿಸಿದರು.

ಕೆ.ಎಂ.ಸಿ. ಡೀನ್ ಡಾ|| ಎ. ಕೃಷ್ಣರಾವ್ ಮಾತನಾಡುತ್ತಾ ಸಾಂಸ್ಕೃತಿಕ ವ್ಯಾಖ್ಯಾನದ ಅವಶ್ಯಕತೆಯನ್ನು ಹೇಳಿ ಅಂಥ ವ್ಯಾಖ್ಯಾನ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸುವುದಕ್ಕೆ ಸಹಕಾರವಾಗಬೇಕೆಂದರು. ಪ್ರೊ| ವಾಲೀಕಾರ್ ಮತ್ತು ಶ್ರೀಧರ ಬಲ್ಲಾಳ್ ಸಮಸ್ಯೆಯ ಕುರಿತು ಭಾಷಣವಿತ್ತರು.

ಎಕಾಡೆಮಿ ಕಾರ್ಯದರ್ಶಿ ಶ್ರೀ ಟಿ. ರಮೇಶ ಪೈ ಅವರು ಎಕಾಡೆಮಿಯ ಶಿಕ್ಷಣ ಸಂಸ್ಥೆಗಳು ಪಾಲಕರ ಸಂಘಗಳನ್ನು ರಚಿಸಬೇಕು ಎಂದು ಕರೆ ನೀಡಿದರು. ಪಾಲಕರು ತಾವು ವಹಿಸಬೇಕಾದ ಪಾತ್ರವನ್ನು ವಹಿಸದರಿಂದ ಬದಲಾವಣೆ ತರುವಲ್ಲಿ ಎಕಾಡೆಮಿ ಅಸ್ಸಹಾಯಕವಾಗಿರುವುದೆಂದರು.

ಶ್ರೀ ಕೆ.ಪಿ. ಶಾಸ್ತ್ರಿ, ಪ್ರೊ| ಬಿ.ವಿ. ಕೃಷ್ಣಮೂರ್ತಿ ಮತ್ತು ಎ.ಜೆ. ಆಳ್ವ ಅವರು ಈ ಸಂಘಗಳಲ್ಲಿ ನೈಜ ಆಸಕ್ತಿಯ ಪಾಲಕರು ಇರಬೇಕು, ಪಾಲಕರು ಮತ್ತು ಶಿಕ್ಷಣ ಸಂಸ್ಥೆಗಳ ನಡುವೆ ನಿಕಟ ಸಂಪರ್ಕವಿರಬೇಕು, ರಾಜ್ಯಮಟ್ಟದಲ್ಲಿ ಸಂಘಗಳ ಫೆಡರೇಶನ್ ಆಗಬೇಕು, ಎಂದು ಹೇಳಿದರು.

ಡಾ| ಪೀವರ್ ಅವರು ಈ ವರುಷದ ಎಕಾಡೆಮಿ ಫೆಲೋಶಿಪ್‌ಗಳನ್ನು ವಿತರಣೆ ಮಾಡಿದರು. ಪ್ರೊ. ಕು.ಶಿ. ಹರಿದಾಸ ಭಟ್ಟರು ಧನ್ಯವಾದ ಅರ್ಪಿಸಿದರು.

ಸಂಗ್ರಾಹ್ಯ ಸಂಕಲನಗಳು

ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ಕಂಠ ಸುಮನ	1—20
ಹೆಂಗುಸರ ಕತೆಗಳು	2—00
ಹುಡಿಮುಷ್ಟಿಗಳು	1—50
ಕಂಠಗಡ್ಡಾಯ	2—00

ನವಭಾರತ ಪುಸ್ತಕ ಭಂಡಾರ,

ಉಡುಪಿ.

ಜ್ಞಾನ-ವಿಜ್ಞಾನಗಳ ಪ್ರಗತಿಗೆ
ಯುನೆಸ್ಕೊ ನೆರವು

ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಹಾಗು ಸಾಂಸ್ಕೃತಿಕ ಸಂಸ್ಥೆಗೆ ಇರುವ ಸಂಕ್ಷಿಪ್ತ ಹೆಸರೇ ಯುನೆಸ್ಕೊ. 1946ರಲ್ಲಿ ಪ್ರಾರಂಭವಾದ ಈ ಸಂಸ್ಥೆಯು ಈಗ 125 ಸದಸ್ಯ—ರಾಷ್ಟ್ರಗಳ ಸರಕಾರದ ಸಹಯೋಗದಿಂದ ಕಾರ್ಯಾಚರಣವಾಗಿದೆ.

ಸದಸ್ಯ —ರಾಷ್ಟ್ರಗಳ ಪ್ರತಿನಿಧಿಗಳ ಸಾಮಾನ್ಯ ಪರಿಷತ್ತು (ಈ ಪರಿಷತ್ತು ಪ್ರತಿ ಎರಡು ವರ್ಷಕ್ಕೆ ಒಂದು ಸಲ ಕೂಡುವದ) ಕಾರ್ಯಕಾರೀ ಮಂಡಳಿ ಸಾಮಾನ್ಯ ಪರಿಷತ್ತಿನ ಪರವಾಗಿ ಮೇಲ್ವಿಚಾರಣೆ ಕೈಕೊಳ್ಳುವದ) ಮತ್ತು ಸಚಿವಾಲಯ (ಡೈರೆಕ್ಟರ್—ಜನರಲ್ ಅವರ ನೇತೃತ್ವದಲ್ಲಿ ಕೆಲಸ ಮಾಡುವದ) ಇವು ಮೂರು ವಿಭಾಗಗಳು ಯುನೆಸ್ಕೊದ ಅಂಗಗಳು. ಕಾನೂನಿಗೆ, ನ್ಯಾಯಕ್ಕೆ ವಿಶ್ವ ಮನ್ನಣೆ ದೊರಕಿಸಿ ವಿಶ್ವಸಂಸ್ಥೆಯ ಪ್ರಣಾಲಿಕೆಯ ಮೂಲಕ ಜಾತಿ, ಮತ, ಭಾಷೆಗಳ ತಾರತಮ್ಯವಿರದೆ ಪ್ರಪಂಚದ ಎಲ್ಲ ಜನರೂ ಮೂಲಭೂತ ಸ್ವಾತಂತ್ರ್ಯ ಹಾಗೂ ಮಾನವೀಯ ಹಕ್ಕುಗಳನ್ನು ಪಡೆಯಲು ಅನುಕೂಲವಾಗುವಂತೆ ಶಿಕ್ಷಣ, ವಿಜ್ಞಾನ ಹಾಗು ಸಂಸ್ಕೃತಿಯ ಮೂಲಕ ರಾಷ್ಟ್ರ ರಾಷ್ಟ್ರಗಳಲ್ಲಿ ಸಹಯೋಗವನ್ನು ಅಭಿವೃದ್ಧಿ ಪಡಿಸಿ ಪ್ರಪಂಚದ ಶಾಂತಿ ಹಾಗು ರಕ್ಷಣೆಗೆ ನೆರವಾಗ ಬೇಕು ಯುನೆಸ್ಕೊದ ಘನ ಉದ್ದೇಶವಾಗಿದೆ. ಪ್ರಾರಂಭದಿಂದಲೂ ಶಿಕ್ಷಣ, ವಿಜ್ಞಾನ, ಸಂಸ್ಕೃತಿ ಹಾಗು ಸಂಪರ್ಕ ಕ್ಷೇತ್ರಗಳಲ್ಲಿ ಅಂತರರಾಷ್ಟ್ರೀಯ ಬದ್ಧಿ ... ಜೀವಿಗಳ ಸಹಕಾರ ಕುರಿತು ದಿಶೆಯಲ್ಲಿ ಯುನೆಸ್ಕೊ ಶ್ರಮಿಸಿದೆ. ವಿಶೇಷ ವಿಷಯಗಳ ಬಗ್ಗೆ ವಿಚಾರಗೋಷ್ಠಿಯನ್ನು ಸಂಘಟಿಸಿ ಸರಕಾರೇತರ ಸಂಘಸಂಸ್ಥೆಗಳಿಗೆ ನೆರವು ನೀಡಿ, ಅನೇಕಾನೇಕ ಮಹತ್ವದ ಪುಸ್ತಕಗಳನ್ನು ಪ್ರಕಟಿಸಿ ಯುನೆಸ್ಕೊ ತನ್ನ ಗುರಿ ಸಾಧನೆಗೆ ಕೆಲಸ ಮಾಡಿದೆ. ಯುನೆಸ್ಕೊದ ಆಯವ್ಯಯ ಪತ್ರಿಕೆಯಲ್ಲಿ ಬಹಳಷ್ಟು ಹಣವು ಸದಸ್ಯ ರಾಷ್ಟ್ರಗಳು ವಿನಂತಿಸಿಕೊಂಡಾಗ ಅವುಗಳಿಗೆ ನೇರವಾದ ನೆರವನ್ನು ಕೊಡುವುದರಲ್ಲಿ ವಿನಿಯೋಗವಾಗಿದೆ.

ಯುನೆಸ್ಕೋ ಮತ್ತು ಭಾರತ

ಉಳಿದೆಡೆಗಳಂತೆ ಭಾರತದಲ್ಲಿಯೂ ಯುನೆಸ್ಕೊ ಸರಕಾರ ಸೂಚಿಸಿದ ಸಂಘ ಸಂಸ್ಥೆಗಳಿಗೆ ವಿದೇಶಿ ತಜ್ಞರ ತಾತ್ಕಾಲಿಕ ನೆರವು, ವಿದೇಶಗಳಲ್ಲಿ ತರಬೇತಿಗೆ ಶಿಷ್ಯವೇತನ, ಸಲಕರಣೆಗಳ ಸರಬರಾಜು ಮೊದಲಾದ ವಿಧಾನಗಳಿಂದ ಸಹಾಯ ಕಲ್ಪಿಸಿದೆ. ದುರ್ಗಾಪುರ, ಅಲಹಾಬಾದ್, ವರಂಗಲ್, ಭೋಪಾಳ್, ನಾಗಪುರ್, ಜಮಶೇದಪುರ ಹಾಗು ಮಂಗಳೂರು ನಗರಗಳಲ್ಲಿನ ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜುಗಳಿಗೆ ಒಟ್ಟು 30 ವಿದೇಶಿ ತಜ್ಞರ ಸೇವೆಯನ್ನು, ಸಲಕರಣೆಗಳನ್ನು ಯುನೆಸ್ಕೊ ಒದಗಿಸಿದೆ. ತಾಂತ್ರಿಕ ಸಂಶೋಧನೆ ಹಾಗು ತರಬೇತಿ ವಿಷಯಕ್ಕೆ ಯುನೆಸ್ಕೊ ವಿಶೇಷ ಪ್ರಾಧಾನ್ಯವನ್ನು ನೀಡಿದೆ. ಚಂಡೀಗಢದಲ್ಲಿನ "ಸೆಂಟ್ರಲ್ ಸೈಂಟಿಫಿಕ್ ಇನ್‌ಸ್ಟ್ರುಮೆಂಟ್ಸ್ ಆರ್ಗನೈಝೇಶನ್", ಭೋಪಾಲ/ಬೆಂಗಳೂರ ನಗರದಲ್ಲಿನ ಪಾವರ್ ಇಂಜಿನಿಯರಿಂಗ್ ರಿಸರ್ಚ್ ಆರ್ಗನೈಝೇಶನ್', ದುರ್ಗಾಪುರ/ಲುಧಿಯಾನಾ/ಪುಣೆ/ಮದ್ರಾಸ್ ನಗರಗಳಲ್ಲಿನ ಮೆಕ್ಯಾನಿಕಲ ಇಂಜಿನಿಯರಿಂಗ್ ರಿಸರ್ಚ್ ಆ್ಯಂಡ್ ಡೆವಲಪ್‌ಮೆಂಟ್ ಆರ್ಗನೈಝೇಶನ್ ಮತ್ತು ಡೆಹ್ರಾಡೂನಿನ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಲಿಯಂ ಸಂಸ್ಥೆಗಳಿಗೂ ಪಿಲಾನಿ ಮತ್ತು ಜಮಶೇದಪುರ ಸಂಶೋಧನಾಲಯಗಳಿಗೂ ತಾಂತ್ರಿಕ ಸಲಹೆ ನೀಡಲೆಂದು ಯುನೆಸ್ಕೊ ಕಾರ್ಯಯೋಜನೆಗಳನ್ನು ರಚಿಸಿ ಎಲ್ಲ ನೆರವು ನೀಡಿದೆ. ಇದಲ್ಲದೆ ಮುಂಬೈ, ಕಲ್ಕತ್ತ, ದೆಹಲಿ, ಜಾಧವಪುರ, ಹೈದರಾಬಾದ್ ಹಾಗು ಮದ್ರಾಸ್ ವಿಶ್ವವಿದ್ಯಾನಿಲಯಗಳಿಗೆ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಮೂಲಕ ನಿಶ್ಚಿಷ್ಟ ವಿಜ್ಞಾನ ಅಧ್ಯಯನಕ್ಕೆ ಯುನೆಸ್ಕೊ ಸಹಾಯ ಮಾಡಿದೆ.

ಶಾಲಾ ಶಿಕ್ಷಣದ ವಿಷಯದಲ್ಲೂ ಯುನೆಸ್ಕೊದ ನೆರವು ಲಭ್ಯವಾಗಿದೆ. ಪ್ರಾಥಮಿಕ ಶಾಲೆಗಳಲ್ಲಿ ವಿಜ್ಞಾನ ಬೋಧೆಗೆ ಪಠ್ಯ ಪುಸ್ತಕಗಳ ರಚನೆಗೆ ಸಹಾಯ ಮಾಡಿ, ಶಿಕ್ಷಕರಿಗೆ ತರಬೇತಿ ವ್ಯವಸ್ಥೆ ಮಾಡಿ, ವಿಜ್ಞಾನ ಬೋಧೆಗೆ ಸಲಕರಣೆ ಒದಗಿಸಿ ಯುನೆಸ್ಕೊ ಮಹತ್ವದ ಪಾತ್ರ ವಹಿಸಿದೆ. ವಿಶ್ವ ಆಹಾರ ಸಂಸ್ಥೆಯ ಸಹಕಾರದೊಂದಿಗೆ ಯುನೆಸ್ಕೊ ಭಾರತದಲ್ಲಿ ಸ್ನಾತಕೋತ್ತರ ಕೃಷಿ, ಶಿಕ್ಷಣ ಹಾಗೂ ಸಂಶೋಧನೆಯ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಹೊಸದಿಲ್ಲಿ ಟೆಲಿವಿಜನ್ ಕೇಂದ್ರವು ಯುನೆಸ್ಕೊದ ನೆರವಿನಿಂದ ಪ್ರಾರಂಭವಾಗಿದೆ. ಏಶಿಯನ್ ಇನ್‌ಸ್ಟಿಟ್ಯೂಟ್ ಫಾರ್ ಎಜ್ಯುಕೇಶನಲ್ ಪ್ಲ್ಯಾನಿಂಗ್ ಆ್ಯಂಡ್ ಅಡ್ಮಿನಿಸ್ಟ್ರೇಶನ್ ಎನಾರ್ಕುಲಂದಲ್ಲಿನ ದಿ ಇಂಡಿಯನ್ ಓಶನ್ ಬಯಾಲಜಿ ಲಸೆಂಟರ್ ಮುಂತಾದ ಸಂಸ್ಥೆಗಳೂ ಯುನೆಸ್ಕೊದ ಸಹಾಯವನ್ನು ಪಡೆದಿವೆ. ಭಾರತದ ಕುಟುಂಬ ಯೋಜನೆ ಕಾರ್ಯಕ್ರಮಕ್ಕೆ ಯುನೆಸ್ಕೊದ ಸಹಾಯ ದೊರೆತಿದೆ.

ಉಡುಪಿಯಲ್ಲಿ ದೇವರಾಜ್ ಅರಸ್

ಉಡುಪಿ ಆಳುವ ಕಾಂಗ್ರೆಸಿನ ಆಶ್ರಯದಲ್ಲಿ ಜರಗಿದ ಕಾರ್ಯಕರ್ತರ ದ್ದೇಶಿಸಿ ವ್ಯಾಸತರು ಪ್ರದೇಶ ಆಳುವ ಕಾಂಗ್ರೆಸಿನ ಕಾರ್ಯಕರ್ತರು ಶ್ರೀ ದೇವರಾಜ್ ಅರಸ್ ಅವರು ಬೋಧನೆಯತ್ತ ರಾಜಕೀಯವನ್ನು ಹಾಸ್ಯವಾಗಿ ಸ್ವೀಕರಿಸಿದವರು ನಮ್ಮ ಪಕ್ಷಕ್ಕೆ ಬೇಡ, ಆದರ್ಶ ಕಾರ್ಯ ಮಾಡಿ ಜನತಾ ಸ್ವೀಕರಿಸಿ ಜನತಾ ಕಲ್ಯಾಣವನ್ನು ಏಕಮೇವ ಗುರಿಯನ್ನಾಗಿರಿಸಿಕೊಂಡವರು ಬೇಕಾಗಿದೆ. ಕಾಂಗ್ರೆಸಿನಲ್ಲಾಗಿರುವ ಸ್ಫೋಟದಿಂದ ಜನರಲ್ಲಿಯೂ ರಾಜಕೀಯ ಪಕ್ಷಗಳಲ್ಲಿಯೂ ಜಾಗೃತ ಭಾವನೆ ಉಂಟಾಗಿದೆಯೆಂದರು. 2-3 ತಿಂಗಳಲ್ಲಿ ಮೈಸೂರಲ್ಲಿ ಧ್ರುವೀಕರಣ ನಡೆಯಲಿದೆ. 1972ರ ಚುನಾವಣೆಯಲ್ಲಿ ಆಡಳಿತ ಕಾಂಗ್ರೆಸ್ ಬರದೆ ಹೋದರೆ ಈ ದೇಶದಲ್ಲಿ ಪ್ರಜಾಪ್ರಭುತ್ವದ ಅಂತ್ಯವಾಗಿ ದಂಗೆಕೋರರ ಹಿಂಸಾ ಪ್ರವೃತ್ತಿಯೆಂದೇ ಜನತೆಗೆ ಉಳಿದಿರುವ ದಾರಿಯಾಗಬಹುದೆಂದರು.

ಆರಂಭದಲ್ಲಿ ಉಡುಪಿ ಆಡಳಿತ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಪಿ. ರಂಗನಾಥ ಶೆಣೈಯವರು ಸ್ವಾಗತಿಸಿದರು. ಅವರು ರೈತರ ಸಮಸ್ಯೆಗಳ ಬಗ್ಗೆ ಮಾತನಾಡಿ, ಎನ್. ಜಿ. ಒ.ಗಳಿಗೆ ಕೇಂದ್ರ ಸರಕಾರದ ನೌಕರರ ವೇತನ ಮಟ್ಟದಲ್ಲಿ ವೇತನ ಕೊಡಬೇಕೆಂದು, ಆರ್ಥಿಕ ಸ್ಥಿತಿಯನ್ನು ವಿಸ್ತಾರಗೊಳಿಸಬೇಕು. ಉಡುಪಿ ಜಿಲ್ಲೆಯ ಯೋಜನೆಗೆ ಸರಕಾರ ಧನಸಹಾಯ ನೀಡಬೇಕೆಂದಿತ್ಯಾದಿ ವಿಚಾರಗಳನ್ನು ತಿಳಿಸಿ ಈ ವಿಚಾರದಲ್ಲಿ ಸರಕಾರದ ಗಮನವನ್ನು ಸೆಳೆಯಬೇಕೆಂದು ಶ್ರೀ ಅರಸರವರನ್ನು ಕೇಳಿಕೊಂಡರು.

ಕೊನೆಯಲ್ಲಿ ಉಡುಪಿ ಆಡಳಿತ ಕಾಂಗ್ರೆಸಿನ ಕಾರ್ಯದರ್ಶಿ ಶ್ರೀ ಬಿ. ಯೋಗೀಶ್ವರ ಹೊಳ್ಳ ಅವರು ಧನ್ಯವಾದಗಳನ್ನರ್ಪಿಸಿದರು.

ವಿದ್ಯಾರ್ಥಿ ಸಮಸ್ಯೆ—ಚರ್ಚಾಗೋಷ್ಠಿ

ಎಂ. ಜಿ. ಎಮ್. ಅಫ್ ಜನರಲ್ ಎಜುಕೇಶನ್ ಆಶ್ರಯದಲ್ಲಿ ನಡೆದ ಅಂತಾರಾಷ್ಟ್ರೀಯ ಶಿಕ್ಷಣ ವರ್ಷ ಆಚರಣೆ ಸಪ್ತಾಹದ 3ನೇ ದಿನದಂದು 70ರ ದಶಕಕ್ಕೆ ಸಂಘಟನಾ ನೀಡಿದ ವಿದ್ಯಾರ್ಥಿ ಯೂ ಯುವಜನ ಸಮಸ್ಯೆಯ ಬಗ್ಗೆ ಚರ್ಚೆ ನಡೆಯಿತು. ಈ ಚರ್ಚಾಗೋಷ್ಠಿಯ ಅಧ್ಯಕ್ಷತೆಯನ್ನು ಕೆ. ಎಂ. ಸಿ. ಡೀನ್ ಡಾ| ಎ. ಕೃಷ್ಣರಾವ್ ವಹಿಸಿದ್ದರು. ಪ್ರೊ. ಪಿ. ಚಂದ್ರಶೇಖರ್ ಸ್ವಾಗತಿಸಿದರು.

ಮುಖ್ಯ ಭಾಷಣಕಾರ ಡಾ| ಕೆ. ಪಿ. ಗಣೇಶನ್ ಅವರು ಸಮಸ್ಯೆಯ ಬಗ್ಗೆ ಮಾತನಾಡುತ್ತ, ಹಿರಿಯರ ನಡುವೆ ಮತ್ತು ಇಂದಿನ ಯುವಕರ ನಡುವೆ ಸಂಪರ್ಕರಾಹಿತ್ಯದಿಂದ ಸಮಸ್ಯೆಗಳ ನಿರ್ಮಾಣವಾಗಿದೆ ಎಂದರು. ಹಿರಿಯರು ಮತ್ತು ಕಿರಿಯರೊಳಗೆ ಸಂಪರ್ಕವೇರ್ಪಟ್ಟರೆ ಈ ಸಮಸ್ಯೆಗೆ ಪರಿಹಾರ ಸಾಧ್ಯ ಎಂದರು.

ಶ್ರೀ ಶ್ರೀಶ ಬಲ್ಲಾಳರು ಪ್ರಬಂಧವೊಂದನ್ನು ಓದಿ ಬದುಕಿನ ಸಾಂಪ್ರದಾಯಿಕತೆ ಮತ್ತು ಶಿಕ್ಷಣ ವಿಧಾನದ ಪರಿಣಾಮವಾಗಿ ಇಂದಿನ ಕಠಿಣ ಸವಾಲು ಹಾಕುತ್ತಿದ್ದಾನೆ. ನಿರುದ್ಯೋಗ ಸಮಸ್ಯೆಯಿಂದ ಶಿಕ್ಷಣದ ಗುರಿಯ ಬಗ್ಗೆ ವಿದ್ಯಾರ್ಥಿಗಳು ನಿರಾಸಕ್ತರಾಗಿದ್ದಾರೆ. ಇದಕ್ಕೆ ವಿವಿಧ ಪ್ರಯೋಗಿಕ ಶಿಕ್ಷಣ ಒದಗಿಸಬೇಕಾಗಿದೆಯೆಂದರು. ಮಣಿಪಾಲ ಫಾರ್ಮಸಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಗುಂಡೂರಾವ್ ಸಮಸ್ಯೆಗಳ ನ್ಯಾಯಯುತ ವಿಚಾರಣೆ ನಡೆಯುತ್ತಿಲ್ಲ ಎಂದರು. ಕೆ. ಎಂ. ಸಿ. ವಿದ್ಯಾರ್ಥಿ ಶ್ರೀ ಜೆ. ಎಸ್. ಮುನಾಸಿ ಯುವಜನ ಸಮಸ್ಯೆಗೆ ಸಂಪರ್ಕರಾಹಿತ್ಯ ಕಾರಣ ಎಂದರು.

ಲಾ ಕಾಲೇಜ್ ಪ್ರಿನ್ಸಿಪಾಲ್ ಶ್ರೀ ದೇಶಪಾಂಡೆ, ಇಂಜಿನಿಯರಿಂಗ್ ವಿದ್ಯಾರ್ಥಿ ಶ್ರೀ ಮಿಚಾರ್, ಜಸ್ವಂತ್‌ಲಾಲ್, ಪೀಟರ್ ಫೆರ್ನಾಂಡಿಸ್, ಚಂದ್ರಪಾಲ್ ಇವರೆಲ್ಲ ಸಂವಾದದ ಹಿತದ ಮೇಲೆಯೇ ತಮ್ಮ ಗಮನ ಕೇಂದ್ರೀಕರಿಸಿದರು.

ಕಾಲೇಜು, ಬೀದಿಗಳಲ್ಲಿ ಹಿಂಸಾಚಾರಕ್ಕೆ ಗೈವ ವಿದ್ಯಾರ್ಥಿಗಳನ್ನು ಶ್ರೀ ಕೋ. ಮಾ. ಕಾರಂತರು ಉಗ್ರವಾಗಿ ಟೀಕಿಸಿದರು. ಶ್ರೀ ದಮೋದರ ಪೈ ತನ್ನ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾ ಹೀಗೆ ಅಂತಃಚಲ್ಲಿ ಭ್ರಮೆ. ಸಂ[illegible] ರಾಹಿತ್ಯ ಸ್ಥಿತಿಯನ್ನು ಅತಿರಂಜಿಸಲಾಗಿದೆ ಎಂದರು.

ಅಂತ್ಯದಲ್ಲಿ ಪ್ರೊ. ಪಿ. ಚಂದ್ರಶೇಖರ್ ಧನ್ಯವಾದಗಳನ್ನರ್ಪಿಸಿದರು.

ಯಕ್ಷಗಾನ

ಪೇಟೆಂಬಾರಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ "ಕೃಷ್ಣಾರ್ಜುನ—ವಾಲಿವಧೆ' ಎಂಬ ಕಥಾಭಾಗದ ಯಕ್ಷಗಾನ ತಾಳಮದ್ದಳೆಯು ದಿನಾಂಕ 24ರಂದು ಶ್ರೀ ಎಲ್ಲಣ್ಣ ಗೌಡ ಮತ್ತು ಅ[illegible] ಹೋದರರುಗಳ ವ್ಯವಸ್ಥಾಪಕತ್ವದಲ್ಲಿ ನಡೆಯಲ್ಪಟ್ಟಿತು. ಈ ವಿಶೇಷ ಕಾರ್ಯಕ್ರಮದಲ್ಲಿ ಶ್ರೀಯುತ ಕೀ ವ ಕೇಶ, [illegible] ಕೃಷ್ಣ ಭಟ್, ಡಾ| ಶಿವನಿ [illegible] ಅಣ್ಣಯ್ಯ ಗೌಡ (ಹಿಮ್ಮೇಳ) ಮೇಳಥಾಗಂದ ಗೌಡ, ನಾರಾಯಣ ರೈ, ಸಾಂತಪ್ಪ ಕೈ, ಶೀನಪ್ಪ ಗೌಡ, ನಾರಾಯಣ ನಾಯಕ್, ಸಾಂತಪ್ಪ ಗೌಡ, ಕೆ. ಎ. ಭಂಡಾರಿ, ರಾಧಾಕೃಷ್ಣ ರೈ, ಶ್ರೀಧರ ಗೌಡ, ವಿ. ತಿಮ್ಮಪ್ಪ ರೈ (ಅರ್ಥವಿವರಣೆ)—ಇವರು ಭಾಗವಹಿಸಿದ್ದರು.

ಆರಂಭದಲ್ಲಿ ಡಾ|| ವಿ.ವಿ. ಬನಾರಿಯವರು ಸ್ವಾಗತಿಸಿದರು. ಅಂತ್ಯದಲ್ಲಿ ಶ್ರೀ ಯಾಸ್ಮಿನ್, ನಾಯಕರು ಧನ್ಯವಾದವಿತ್ತರು.

ಕಾರ್ಕಳ ಮುನ್ಸೀಫ್ ಕೋರ್ಟಿನಲ್ಲಿ

O. S. No. 70/1968

ಅಂತೋನಿ ಮಥಾಯಸ್ —ವಾದಿ

ಸಿಲ್ವೆಸ್ಟರ್ ಮಥಾಯಸ್ ಕೂಡಾ—

ಪ್ರತಿವಾದಿಗಳು

13 ಲೂಸಿ ಮಥಾಯಸ್, ಜೋಸೆಫ್ ಮಥಾಯಸರ ವಿಧವೆ.

14 ಮೆರ್ಸಿನಾ ಮಥಾಯಸ್ 15 ಜುಲಿಯಾನ ಮಥಾಯಸ್ 15 ರಾಬಿ ಮಥಾಯಸ್ 17 ಲಿಗೋರಿ ಮಥಾಯಸ್ 18 ಸಾಲು ಮಥಾಯಸ್ 19 ಪೌಲಿನ್ ಮಥಾಯಸ್ 20 ಫೆಲಿಕ್ಸ್ ಮಥಾಯಸ್ —ಜೋಸೆಫ್ ಮಥಾಯಸರ ಮಕ್ಕಳು.

ಸದ್ರಿ 13ರಿಂದ 20ನೇ ವರೆಗಿನ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ವಾದಿಯು ನಿಮ್ಮ ವಗೈರೆ ಮೇಲೆ ದಾಖಲು ಮಾಡಿದ ಪ್ಲೈಂಟನಲ್ಲಿ ವಿವರಿಸಿದ ಸ್ಥಿರಾಸ್ತಿಯ ಹಿತ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾ. 20-11-1970ಕ್ಕೆ ಇಟ್ಟಿದೆ. ಆ ಕಾರಣ ನಿಮಗೆ ಆಕ್ಷೇಪಣೆಗಳಿದ್ದರೆ ನೀವು ತಾ. 26-11-1970ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಪೂರ್ವಾಹ್ನ ಘಂಟೆ 10ಕ್ಕೆ ನೀವು ಖುದ್ದಾಗಲೀ ವಕೀಲರ ಮೂಲಕವಾಗಲೀ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತಕಂಡಂತೆ ತೀರ್ಮಾನಿಸಬಹುದು. ಕೋರ್ಟಿನ ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯದೆ.

D. Venkatesh Bhat

Pleader for Plaintiff

Karkala, 5-11-1970

ಸಂದರ್ಶಿಸಿರಿ!--ಸುಸ್ವಾಗತ!!

ಬಹು ಜಾಗರೂಕ ವಜ್ರಗಳಿಗೆ, ಆಧುನಿಕ ಫ್ಯಾಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ, ಕೊಡಕ್, ಇಲ್‌ಫೋರ್ಡ್, ಗೆವರ್ಟ್ ಮತ್ತು ಹಿಂದು ಫಿಲ್ಮುಗಳ

ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res; 3272

ರಾಷ್ಟ್ರದ ಸಮಗ್ರತೆಗೆ ಚಿತ್ತರಂಜನದಾಸರ ಕಾಣಿಕೆ

ಚಿತ್ತರಂಜನ್ ದಾಸರು ಬಂಗಾಳದವರು. ಅವರು ಸ್ವರಾಜ್ಯ ಪಕ್ಷದ ಅಧ್ಯಕ್ಷರಾಗಿದ್ದರು. ಇಪ್ಪತ್ತನೇ ಶತಮಾನದ ಆದಿಯಲ್ಲಿ ಅವರು ದೇಶದ ರಾಜಕೀಯ ರಂಗದಲ್ಲಿ ನವ ಜಾಗೃತಿಯನ್ನು ಮೂಡಿಸಿದವರಲ್ಲಿ ಒಬ್ಬರು. ಅಂದಿನ ದಿನಗಳಲ್ಲಿ ಕೆಲವು ಮಂದಿ ವಿದ್ಯಾವಂತರು ಹಾಗೂ ಅಧಿಕಾರಿಗಳು ಹಿಂದೂ ಮತ್ತು ಪಶ್ಚಿಮ ರಾಷ್ಟ್ರಗಳ ಒಕ್ಕೂಟ, ಭಾರತ ಮತ್ತು ಇಂಗ್ಲೆಂಡಿನ ನಡುವಣ ಸಂಬಂಧಗಳ ಬಗ್ಗೆಯೇ ಸದಾ ಚಿಂತಿಸುತ್ತಿದ್ದರು. ರಾಷ್ಟ್ರೀಯ ಭಾವನೆಯನ್ನು ಅವರು ಟೀಕಿಸುತ್ತಿದ್ದರು. ಇಂಥ ರಾಷ್ಟ್ರ ವಿರೋಧಿ ಅಭಿಪ್ರಾಯವನ್ನು ಶ್ರೀ ಸಿ. ಆರ್. ದಾಸ್ ಅವರು ಖಂಡಿಸಿ, ಪ್ರತಿಯೊಂದು ರಾಷ್ಟ್ರವೂ ತನ್ನದೇ ಆದ ಒಂದು ಸ್ವರೂಪವನ್ನು, ಸ್ವರೂಪತ್ವವನ್ನು ಬೆಳೆಸಿಕೊಳ್ಳಬೇಕು, ದೇಶದೊಳಗಿನ ಜನರಲ್ಲಿ ಮೈತ್ರಿ ಹಾಗೂ ಸೋದರಭಾವನೆ ಬೆಳೆಯಬೇಕು. ಅದು ಇಲ್ಲದೆ ಹೋದರೆ ವಿಶ್ವಬಾಂಧವ್ಯ ಬೆಳೆಯಲಾಗದು. ವಿಶ್ವ ಬಾಂಧವ್ಯಕ್ಕೆ ರಾಷ್ಟ್ರೀಯ ಮನೋಭಾವ ಅಗತ್ಯ ಎಂಬುದಾಗಿ ದಾಸ್ ಅವರು ಹೇಳಿದ್ದಾರೆ.

ದೇಶದ ಜನತೆಯಲ್ಲಿ ರಾಷ್ಟ್ರೀಯ ಮನೋಭಾವನೆಯನ್ನು ಬೆಳೆಸುವುದಕ್ಕಾಗಿ ಚಿತ್ತರಂಜನದಾಸ ಅವರು ಶ್ರಮಿಸಿದರು. 1917ರ ಬಂಗಾಳ ಪ್ರಾದೇಶಿಕ ಸಮ್ಮೇಳನದ ಅಧ್ಯಕ್ಷರಾಗಿದ್ದಾಗ ಅವರು ಈ ಬಗ್ಗೆ ತಿಳಿಸಿದರು. ಇದಾದ ಆರು ವರ್ಷಗಳ ನಂತರ ಅಂದರೆ ಅವರು ಮಹಾತ್ಮ ಗಾಂಧಿಯವರೊಡನೆ ಕಾರ್ಯದಲ್ಲಿ ನೆರವಾಗ ತೊಡಗಿ ಪ್ರಾರಂಭಿಸಿದಾಗಲೂ ರಾಷ್ಟ್ರೀಯ ಭಾವೈಕ್ಯತೆ ಬಗ್ಗೆಯೇ ಒತ್ತಿ ಹೇಳಿದರು. ತಮ್ಮ ಈ ಕಾರ್ಯದಿಂದಾಗಿ ದೇಶದ ಬೇರೆ ಬೇರೆ ಕಡೆಗಳ ಜನರ ಸಂಪರ್ಕ ಸೌಭಾಗ್ಯ ಅವರಿಗೆ ದೊರಕಿತು. ರಾಷ್ಟ್ರೀಯ ಭಾವ ಬೆಳೆಯಲು ಹಾಗು ಬಲಗೊಳ್ಳಲು

ಸಾಮಾಜಿಕ ಜೀವನದಲ್ಲಿನ ಆರ್ಥಿಕ, ಸಾಂಸ್ಕೃತಿಕ ಹಾಗು ಭಾವೈಕ್ಯ ವಿಷಯಗಳು ಬಲಗೊಳ್ಳಬೇಕೆಂಬುದಾಗಿ ಅವರು ನುಡಿದಿದ್ದಾರೆ.

ಚಿತ್ತರಂಜನದಾಸರ ಪಕ್ಷ ಬಂಗಾಳದಲ್ಲಿ ಅಧಿಕಾರಕ್ಕೆ ಬಂದಾಗ ಇಬ್ಬಗೆ ಆಡಳಿತ ಕ್ರಮ ಕೊನೆಗಾಣಿಸಿದರು. ಅವರ ನಾಯಕತ್ವದಲ್ಲಿ ಕಲ್ಕತ್ತ ಕಾರ್ಪೊರೇಷನ್ "ರಾಷ್ಟ್ರೀಯತೆಯ ಸಂಕೇತ"ವಾಯಿತು.

ವಿಜ್ಞಾನ ಪತ್ರದ ಕುರಿತು ಚರ್ಚಾಗೋಷ್ಠಿ

ಅಖಿಲ ಕ್ಷೇತ್ರ ಶಿಕ್ಷಣ ವರ್ಷದ ಸಂಬಂಧ ನಡೆದ ಎರಡನೆಯ ಸಮ್ಮೇಳನದ 4ನೇ ದಿನದಂದು ಹೈಸ್ಕೂಲು ವಿಜ್ಞಾನ ಪತ್ರದ ಕುರಿತು ಡಾ| ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಚರ್ಚಾಗೋಷ್ಠಿ ನಡೆಯಿತು. ಪತ್ರ ಪುಸ್ತಕಗಳನ್ನು ಮಕ್ಕಳ ಮೇಲೆ ಹೇರುವ ಮೊದಲ ಅವು ಯಾವ ಮಟ್ಟದ್ದು ಎಂದು ಪರಿಶೀಲಿಸುವ ತಾಳ್ಮೆ ಮತ್ತು ಹೊಣೆ ಅದರ ರಚಯಿತರಿಗೆ ಇರಬೇಕು ಎಂದರು. ರಾಜ್ಯದಾದ್ಯಂತ ಒಂದೇ ರೀತಿಯ ವೈಜ್ಞಾನಿಕ ಪಾರಿಭಾಷಿಕ ಪದಗಳನ್ನು ರೂಪಿಸಬೇಕು. ಇಂದಿನ ಪತ್ರಗಳ ಭಾಷೆ, ನಿದರ್ಶನ ಮತ್ತು ವಿವರಣೆ ಎಲ್ಲವೂ ವಿದ್ಯಾರ್ಥಿಗಳ ವಿಜ್ಞಾನದಿಂದ ದೂರ ಓಡುವಂತೆ ಮಾಡುತ್ತಿವೆ ಎಂದು ಹೇಳಿದರು.

ಶ್ರೀ ರಾಮಕೃಷ್ಣ ಹಂದೆ, ಶ್ರೀ ವಿ. ನಾಗಪ್ಪಯ್ಯ ಮತ್ತು ಶ್ರೀ ಕೆ. ಸೂರ್ಯನಾರಾಯಣ ರಾವ್ ತಮ್ಮ ಪ್ರಬಂಧಗಳನ್ನೋದಿ ವಿಜ್ಞಾನ ಪತ್ರಗಳಲ್ಲಿರುವ ಕೆಲವು ದೋಷಗಳನ್ನು ಬೆಳಕಿಗೆ ತಂದು ಸುಧಾರಣೆಗೆ ಕೆಲವು ಕ್ರಮಗಳನ್ನು ಸೂಚಿಸಿದರು.

ಅಕಾಡೆಮಿ ಸ್ಥಳಾಂತರ, ಪೂರ್ಣಪ್ರಜ್ಞ ಕಾಲೇಜಿನ ಶ್ರೀ ಎಂ. ರಾಜಗೋಪಾಲಾಚಾರ್ಯರು ಬರೆದ "ಕನ್ನಡ ನಾಗ್ಗಡಿಗಳು" ಹೊತ್ತಗೆಯನ್ನು ಮಂಗಳ ಶಂಗೋತ್ರಿಯ ಪ್ರೊ|| ಎಸ್. ವಿ. ಪರಮೇಶ್ವರ ಭಟ್ಟರು ಬಿಡುಗಡೆಗೊಳಿಸಿದರು. ಶ್ರೀ ಆಚಾರ್ಯರ ಪ್ರಯತ್ನ ಸ್ತುತ್ಯಾರ್ಹ ಎಂದು ಪ್ರೊ|| ಭಟ್ ನುಡಿದರು.

ಎಂ. ಜಿ. ಎಂ. ಕಾಲೇಜಿನ ರವೀಂದ್ರ ಮಂಟಪದಲ್ಲಿ ನಡೆದ ಈ ಸಮಾರಂಭದಲ್ಲಿ ಪ್ರೊ|| ಹರಿದಾಸ ಭಟ್ ಅವರು ಸ್ವಾಗತಿಸಿದರು. ಅಂತ್ಯದಲ್ಲಿ ಶ್ರೀ ಟಿ. ವಿಶ್ವನಾಥ ಅವರು ಧನ್ಯವಾದ ಅರ್ಪಿಸಿದರು.

ಉಚ್ಚಿಲ ಮುದ್ದು ಶೆಟ್ಟರ ನಿಧನ

ಉಚ್ಚಿಲದ ಪ್ರಸಿದ್ಧ ಹಿರಿಯ ವ್ಯಾಪಾರಿಗಳೂ ಜಮೀನ್ದಾರರೂ ಆದ ಶ್ರೀ ಮುದ್ದು ಶೆಟ್ಟರು ಇದೇ ತಾ. 3ರಂದು 61ನೇ ವರ್ಷದಲ್ಲಿ ನಿಧನರಾದರು. ಬಡಾ ಪಂಚಾಯತಿ ಮತ್ತು ಸೇವಾ ಸಹಕಾರಿ ಸಂಘಗಳ ಅಧ್ಯಕ್ಷರಾಗಿಯೂ ಉಚ್ಚಿಲ ದೇವಸ್ಥಾನ ಜೀರ್ಣೋದ್ಧಾರ ಮೊದಲಾದ ಕಾರ್ಯಗಳಲ್ಲಿ, ಪಣಿಯೂರು ಗರಡಿ ಇನ್ನಿತರ ಧಾರ್ಮಿಕ, ಶೈಕ್ಷಣಿಕ ಸಂಸ್ಥೆಗಳಲ್ಲಿ ದುಡಿದು ಸೇವೆ ಸಲ್ಲಿಸಿದ ಅವರು ಜನಪ್ರಿಯತೆಗಳಿಸಿದ್ದರು.

ಕವಿತಾ ಸ್ಪರ್ಧೆ

ಕಾಸರಗೋಡು ಕನ್ನಡ ಲೇಖಕರ ಸಂಘವು "ದೇಶಭಕ್ತಿ" ಗೀತೆಗಳ ಸ್ಪರ್ಧೆಯೊಂದನ್ನು ಜರಗಿಸಲು ನಿರ್ಣಯಿಸಿದೆ. ಕವಿತೆಯು ಗಾತ್ರ 20 ಸಾಲಿಗೆ ಮೀರಬಾರದು. ಉತ್ತಮ ಕವಿತೆಗಳಿಗೆ ಪ್ರಥಮ, ದ್ವಿತೀಯ, ತೃತೀಯ, ಬಹುಮಾನಗಳನ್ನು ನೀಡಲಾಗುವುದು. ಭಾಗವಹಿಸುವವರು ತಮ್ಮ ಹೆಸರು ವಿಳಾಸಗಳನ್ನು ಪ್ರತ್ಯೇಕ ಚೀಟಿಯಲ್ಲಿ ಬರೆದು ಜೊತೆಗಿರಿಸಿ ಪ್ರವೇಶ ಧನ ರೂ. 1-00ನ್ನು ಕೂಡ— ಕನ್ನಡ ಲೇಖಕರ ಸಂಘ, ಎಡನೀರು (ಅಂಚೆ) ಕಾಸರಗೋಡು ತಾಲೂಕು ಎಂಬ ವಿಳಾಸಕ್ಕೆ ನವಂಬರ 30ರ ಒಳಗಾಗಿ ತಲುಪುವಂತೆ ಕಳುಹಿಸಿಕೊಡಬೇಕಾಗಿ ವಿನಂತಿಸಲಾಗಿದೆ.

ಕಲಾವಿದರಿಗೆ ಸನ್ಮಾನ

ಉಡುಪಿ, ಬನ್ನಂಜೆಯ ಮಹಾಲಿಂಗೇಶ್ವರ ಯಕ್ಷಗಾನ ಮಂಡಳಿಯ ಕಲಾಭ್ಯಾಸಿಗಳಿಗೆ ಕಲಾಶಿಕ್ಷಣ ಒದಗಿಸಿದ ಗುರುತ್ರಯರಲ್ಲಿ ಪ್ರಸಿದ್ಧ ಯಕ್ಷಗಾನ ಕಲಾವಿದ ಮಾಗೋಳಿ ಗೋವಿಂದ ಸೇರಿಗಾರರನ್ನೂ ಮೃದಂಗವಾದಕ ಬೈಂದೂರ ಸುಬ್ಬಯ್ಯಾಚಾರ್ಯರನ್ನೂ, ಭಾಗವತ ಕೆ. ನಾರಾಯಣ ಶೆಟ್ಟರನ್ನೂ ಗೌರವಿಸುವ ಸಮಾರಂಭವು ಡಾ| ಪಿ. ವಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಪಾ. ಲ. ನಾ. ಉಪಾಧ್ಯಾಯರು ಸ್ವಾಗತಿಸಿ ಪೀಠಿಕಾ ಭಾಷಣ ನಿರ್ವಹಿಸಿದರು. ಕೆ. ನಾರಾಯಣ ಶೇರಿಗಾರರು ವರದಿವಾಚನ ಮಾಡಿದರು. ಮಂಡಳಿಯ ಅಧ್ಯಕ್ಷ ಅನ್ನುಂಜೆ ನಾಗೇಶ್ ಪಾಯಕರು ಮಂಡಳಿಯ ಕಲಾಶಿಕ್ಷಕರಾದ ಮೂವರಿಗೂ ಉಡುಗೊರೆ, ಮತ್ತು ಗುರುಕಾಣಿಕೆ ಸಮರ್ಪಿಸಿ ಶ್ರೀ ಮಗೋಳಿ ಗೋವಿಂದ ಸೇರಿಗಾರರಿಗೆ ಸನ್ಮಾನ ಪತ್ರ ನೀಡಿದರು.

ಮಾನ್ಯ ಅತಿಥಿಗಳು ಕೃತಜ್ಞತಾ ಪೂರ್ವಕ ಉತ್ತರಿಸಿದ ಬಳಿಕ ಎಂ.ಜಿ.ಎಂ. ಕಾಲೇಜಿನ ಪ್ರೊ. ಬಿ. ವಿ. ಆಚಾರ್ಯರೂ, ಪೊಳ್ಯ ದೇಜಪ್ಪ ಶೆಟ್ಟರೂ ಮಲ್ಪೆ ಹರಿದಾಸ ಶಂಕರನಾರಾಯಣ ಸಾಮಗರೂ ಕಲೆಯ ಮಹತ್ವದ ಕುರಿತು ವಿವರಿಸಿ ಶುಭ ಹಾರೈಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಮಂಡಳಿಯ ಸರ್ವತೋಮುಖ ಅಭಿವೃದ್ಧಿಯನ್ನು ಹೊಂದುವುದರಲ್ಲಿ ಅತಿ ಕುತೂಹಲ ವ್ಯಕ್ತಪಡಿಸಿದರು. ಮಂಡಳಿಯ ವಿದ್ಯಾರ್ಥಿಗಳಿಂದ ನೃತ್ಯ ಪ್ರದರ್ಶನ ನೆರವೇರಿದ ಬಳಿಕ ಶ್ರೀ ಪಾ. ಲ. ನಾ. ಉಪಾಧ್ಯಾಯರು ಧನ್ಯವಾದಾರ್ಪಣ ಮಾಡಿದರು.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್ ಬ್ರಹ್ಮಾವರ, ದ.ಕ.

ರಿಜಿಸ್ಟರ್ಡ್ ಆಫೀಸು: ಲೈಟ್ ಹೌಸ್ ಹಿಲ್ ರೋಡು, ಮಂಗಳೂರು–3

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ವಾಯಿದೆಗೆ ಸರಿಯಾಗಿ ಮರುಪಾವತಿ ಮಾಡದೇ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಿದ್ದಕ್ಕೆ, ಕೆಲವರಿಗೆ ಬಿಟ್ಟ ನೋಟೀಸುಗಳು ಕಾರಣಾಂತರಗಳಿಂದ ನಮಗೇನೆ ವಾಪಾಸು ಬಂದುದರಿಂದಲೂ, ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೇ ಇದ್ದುದರಿಂದಲೂ, ಸದ್ರಿಯವರಿಗೆ ಮ, ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸಾಲದ ಬಾಬ್ತು ಬ್ಯಾಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಾರೀಖು 25.11.1970ರ ಒಳಗಾಗಿ ಮರುಪಾವತಿ ಮಾಡಲು ತಪ್ಪಿದಲ್ಲಿ ಸದ್ರಿಯವರು ಸಮ್ಮುಖದಲ್ಲಿ ಅಡವಿಟ್ಟ ನಗಗಳನ್ನು ತಾರೀಖು 28.11.70ರಂದು ಅಪರಾಹ್ನ ಘಂಟೆ 12-30ಕ್ಕೆ ಸರಿಯಾಗಿ ಬ್ಯಾಂಕಿನ ವಠಾರದಲ್ಲಿ ಬಹಿರಂಗ ಹರಾಜು ಮಾಡಲಾಗುವುದು, ಯಾ ಬ್ಯಾಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗ ಯಾ ಖಾಸಗಿಯಾಗಿ ಹರಾಜು ಮಾಡಲಾಗುವುದು. ಈ ಸಂಬಂಧ ಬ್ಯಾಂಕಿಗೆ ಉಂಟಾಗಬಹುದಾದ ಸಕಲ ಖರ್ಚು ವ ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬ್ದಾರರಾಗಿರುತ್ತಾರೆ. ತಿಳಿದಿರಲಿ.

ಸಾಲದ ನಂಬ್ರ	ಸಾಲಗಾರನ ಹೆಸರು ಮತ್ತು ವಿಳಾಸ	ಮೊಬಲಗು 30-9-1970 ವರೆಗಿನ ಬಡ್ಡಿ ಸಮೇತ ರೂ.	ಪೈಸೆ
104/68	ಎಮ್. ನಾರಾಯಣ ಸಟ್ಟಿ, ಪೋನಪ್ಪ ಸಟ್ಟಿ ಅಳಿಯ, ಹಳುವಳ್ಳಿ ಗ್ರಾಮ, ಪೋಸ್ಟು ಕರ್ಜೆ.	67	40
334/68	ಕೃಷ್ಣಯ್ಯ ಸಟ್ಟಿ, ತಾರ ಸಟ್ಟಿ ಮಗ, ತಲುಂಜೆ, ಆರೂರು ಗ್ರಾಮ, ಪೋಸ್ಟು ಆರೂರು.	188	85
708/68	ಮಹಾಬಲ ಸಟ್ಟಿ, ಗೋವಿಂದ ಹೆಗ್ಡೆಯ ಮಗ, ಹಂದಾಡಿ ಗ್ರಾಮ, ಪೋಸ್ಟು ಬ್ರಹ್ಮಾವರ.	164	20

ಬ್ರಹ್ಮಾವರ)
7.11.70.)

ಕೆ. ಭೋಜರಾಜ ಹೆಗ್ಡೆ
ಮೆನೇಜರ್

ಕಾರ್ಕಳ IInd ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. R. C. 881/1970

ಸುಮನಾಜಿ ಅಮ್ಮ — ಅರ್ಜಿದಾರಳು
ನಕ್ರ ಪೂಜಾರಿ — ಎದ್ರಿ

ನಕ್ರ ಪೂಜಾರಿ, ತಿಮ್ಮ ಪೂಜಾರಿ ಮಗ, ಮಂಗಳೂರು ತಾಲೂಕು ತೆಂಕ ಎಡಪದವು ಗ್ರಾಮ— ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ನಿಂಬಂದ ಕಳೆದ 1967-68ನೇ ವರ್ಷಗಳ ಬಾಬ್ತು ತಾ. 31-3-68ಕ್ಕೆ ಬರತಕ್ಕ ಬಾಲಗೇಣಿ ಗೇಣಿ ವಗೈರೆ ಕೇಳಿ ನಿಮ್ಮ ಮೇಲೆ ದಾಖಲು ಮಾಡಿದ ಮೇಲ್ಕಂಡ ಗೇಣಿ ಅರ್ಜಿ ತಾ. 11-12-70ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಡೋಣಾಗಿಯದೆ. ಆ ಕುರಿತು ನಿಮಗೆ ಆಕ್ಷೇಪಣೆ ಇದ್ದರೆ ಸದ್ರಿ ತಾ. 11-12-70ಕ್ಕೆ ಪೂರ್ವಾಹ್ನ ಘಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಖುದ್ದಾಗಲೀ ವ ವಕೀಲರ ಮೂಲಕವಾಗಲೀ ಹಾಜರಾಗಿ ಉಜರಿಸತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡ ರೀತಿ ತೀರ್ಮಾನಿಸಲಾದೀತು. ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿದೆ

M. N. PANDI
Advocate for Applicant

Karkala. 5-11-70.

ಕೇರಳ ಕನ್ಯೆಯರ ಮಾರಾಟದ ಅವಾಂತರ

ಕ್ರೈಸ್ತಮತ ಪ್ರಚಾರಕರು ಕೇರಳ ತರುಣಿಯರನ್ನು ಯುರೋಪ್ ರಾಷ್ಟ್ರಗಳಿಗೆ ಮಾರಾಟ ಮಾಡುತ್ತಿರುವರೆಂದು ಹೇಳಿ ರಾಷ್ಟ್ರದಾದ್ಯಂತ ಎದ್ದಿರುವ ಸತ್ಯ ಸುಳ್ಳಿನ ಅವಾಂತರವನ್ನು ನೋಡಿ ನಗಬೇಕೋ ಅಳಬೇಕೋ? ಎಂದು ಶ್ರೀಸಾಮಾನ್ಯರಾದಂತವರಿಗೆ ಅರ್ಥವಾಗುವುದಿಲ್ಲ.

ಕೇರಳ ತರುಣಿಯರ ಮಾರಾಟದ ಅವಾಂತರದ ಮಾತಿನಲ್ಲಿ ಕೇವಲ ಕೆಲವು ಅಂಶ ಸತ್ಯವಿದ್ದರೂ ಇನ್ನುಳಿದ ಬಹುವಂಶ ಮಾತು ಬಳ್ಳಿ ಸುಳ್ಳಿನ ಅವಾಂತರದ ಮಾತೇ ಆಗಿರುತ್ತದೆಯೆಂದರೆ ತಪ್ಪಾಗಲಿಕ್ಕಿಲ್ಲ. ಅಲ್ಲದೆ ಈ ಗೊಂದಲದ ಮಾತು ಒಂದೆರಡು ರೀತಿಯ ತಪ್ಪಿದ ಮಾತಲ್ಲ. ಒಂದನೆಯದು ಕ್ರೈಸ್ತಪಾದ್ರಿಗಳ ಮುಖಾಂತರ ಕನ್ಯೆಯರು ಯುರೋಪ್ ರಾಷ್ಟ್ರಗಳಿಗೆ ಹೋಗಿ ಕಾನ್ವೆಂಟಿಗೆ ಸೇರಿದೊಡನೆಯೋ ಅಥವಾ ಯುರೋಪಿನಲ್ಲಿ ದಾದಿಯರಾಗಿಯೋ ಕೆಲಸ ಮಾಡಿದೊಡನೆಯೋ ಅಂಥ ಯುವತಿಯರ ಸ್ಥಿತಿ ಮತ್ತೆ ಕೆಟ್ಟು ಅವರು ಆ ರಾಷ್ಟ್ರ ಪ್ರಜೆಗಳ ಆಮಿಷಕ್ಕೆ ಒಳಗಾಗಿ ಆ ರಾಷ್ಟ್ರ ಪುರುಷರ ಭೋಗ ವಸ್ತುವಾಗುತ್ತಾರೆಂಬ ಮಾತು ಹುರುಳಿಲ್ಲದ್ದು. ವಿದೇಶಕ್ಕೆ ಹೋದ ಯುವತಿಯರ ಸ್ಥಿತಿ ಮತ್ತೆ ಕೆಡುವಂತದ್ದೆ ಇದ್ದರೆ ಅಂಥವರು ಈ ರಾಷ್ಟ್ರದೊಳಗೆ ಇದ್ದರೂ ಕೆಲವೊಂದು ರೀತಿಯ ಆಮಿಷದಲ್ಲಿ ಸ್ಥಿತಿ ನಡತೆಯನ್ನು ಕೆಡಿಸಿ ಕೊಳ್ಳ ಕೊಳ್ಳುತ್ತಾರೆ.

ಇನ್ನು ತಂದೆ ತಾಯಿಯಾದರೂ ತಾವು ಹೆತ್ತ ಕನ್ಯೆಯನ್ನು ಹಣದ ಪ್ರಲೋಭನೆಗಾಗಿ ಮಾರುತ್ತಾರೆಂಬ ಮಾತನ್ನು ಒಪ್ಪತಕ್ಕದ್ದಲ್ಲ; ಯಾವ ತಂದೆ ತಾಯಿಗಾದರೂ ಹೆತ್ತೊಡಲ ಪ್ರೇಮಕ್ಕಿಂತ ಹಣ ಹೆಚ್ಚಲ್ಲ.

ಇವರುಗಳು ಅಂದರೆ ಈ ತಂದೆ ತಾಯಿಗಳೇ ತಮ್ಮ ಈ ಕನ್ಯೆಯರನ್ನು ವಿದೇಶಿ ಕಾನ್ವೆಂಟಿಗೆ ಕಳುಹಿಸುವ ದೃಷ್ಟಿಯಾದರೂ ತಮ್ಮ ಹೆಣ್ಣು ಮಕ್ಕಳು ಒಂದು ನೆಲೆಗಟ್ಟಿನಲ್ಲಿ ನಿಂತು ತಮ್ಮ ಜೀವಿತವನ್ನು ತಾವೇ ಸುಖವಾಗಿ ರೂಪಿಸಿಕೊಳ್ಳಲಿ ಎಂದು.

ಅಲ್ಲದೆ ಇನ್ನು ಒಂದು ಕಾರಣವೆಂದರೆ ಕೇರಳದ ತಂದೆ ತಾಯಿಗಳಿಗೆ ಇಂದಿನ ಅವರ ಸಮಾಜ ಸ್ಥಿತಿಯಲ್ಲಿ ನಾಲ್ಕೈದು ಹುಡುಗಿಯರಿದ್ದರೆ ವಿವಾಹ ಮಾಡಿಕೊಡುವುದು ಸುಲಭಸಾಧ್ಯವಲ್ಲ.

ಈ ಎಲ್ಲಾ ಸ್ಥಿತಿಯಿಂದ ಬಹುವಂಶ ವಿದ್ಯಾವಂತ ಜನತೆಯಾದ ಕೇರಳದ ಮಾತೃ-ಪಿತೃಗಳು ತಮ್ಮ ಹೆಣ್ಣು ಮಕ್ಕಳ ಭವಿಷ್ಯ ಹಿತದೃಷ್ಟಿಯಿಂದ ಹೊರದೇಶಕ್ಕೆ ಯುವತಿಯರನ್ನು ಕಳುಹಿಸಿದೊಡನೆ ಅರ್ಥವಿಲ್ಲದ ರೀತಿಯಲ್ಲಿ ಹೆಣ್ಣು ಮಾರಾಟವಾಗುತ್ತಿದೆಯೆಂದು ದೇಶವಿದೇಶದ ಜನತೆ ಕಿವಿಮುಚ್ಚಿಕೊಳ್ಳುವಂತೆ ಬೊಬ್ಬೆ ಹಾಕುವುದು ಯಾವ ಮರ್ಯಾದೆಯೊ ಘನತೆಯೊ ಅರ್ಥವಾಗುವುದಿಲ್ಲ— ಅಲ್ಲದೆ ಇನ್ನೂ ಒಂದು ನಗೆಗೇಡಿನ ವಿಷಯವೆಂದರೆ ಈ ಸುದ್ದಿಯಾದರೂ ಅಧಿಕೃತ ಸುದ್ದಿಯಲ್ಲ. ಲಂಡನ್ನಿನ ಸಂಡೆ ಟೈಮ್ಸ್ ಕೆಲವೊಂದು ಮೂಲಗಳಿಂದ ಬಂದ ಸುದ್ದಿ, ಆಧಾರದ ಮೇಲಿಂದ ಪ್ರಕಟಿಸಿದಂತದ್ದು. ಅಂತಿರುವಾಗ ನಮ್ಮ ರಾಷ್ಟ್ರಬಾಂಧವರು ಅದನ್ನೆ ನಂಬಿ ಸತ್ಯಸ್ಥಿತಿಯನ್ನು ತಿಳಿಯುವ ವರೆಗೆ ಸಹನೆಯಿಂದ ಇರದೆ ಆಕಾಶ—ಪಾತಾಳವನ್ನು ಒಂದು ಮಾಡುವಂತಹ ಅವಾಂತರ ಮಾಡಿದ್ದು ನಾಚಿಕೆಗೇಡಿನ ಪರಿಸ್ಥಿತಿಯೆ ಸರಿ.

ಅದರಲ್ಲೂ ಲೋಕಸಭೆಯಲ್ಲಿ ಎಂ. ಪಿ.ಗಳಾದವರು ಕೇರಳದ ಕನ್ಯೆಯರನ್ನು ಪಾದ್ರಿಗಳು ಭೋಗಕ್ಕಾಗಿಯೆ ಕಳುಹಿಕೊಡುವರೆಂಬ ರೀತಿಯಲ್ಲಿ ಲೈಂಗಿಕವಾಗಿ ಮಾತಾಡಿದ್ದು ನೋಡಿದರೆ ಒಟ್ಟಾರೆ ಈ ಜನತಾ ಪ್ರತಿನಿಧಿಗಳಿಗೆ ಬೇರಾವುದು ಗೊಂದಲ ಗಲಾಟೆ ಇಷ್ಟೆಯೆ? ಎಂದು ಆಲೋಚಿಸುವಂತಾಗುತ್ತದೆ.

ಅದೇನೆ ಇರಲಿ. ಇನ್ನಾದರೂ ನಮ್ಮ ರಾಷ್ಟ್ರಬಾಂಧವರು ಯುರೋಪಿನ ಕಾನ್ವೆಂಟುಗಳಿಗೆ ಕೇರಳ ತರುಣಿಯರ ಮಾರಾಟದ ಬಗ್ಗೆ ಸತ್ಯಸ್ಥಿತಿಯನ್ನು ತಿಳಿಸುವ ಕೇಂದ್ರ ತನಿಖಾ ಸಮಿತಿಯ ವರದಿ ಬರುವವರೆಗೆ ಈ ಸಂಗತಿಯನ್ನು ಎತ್ತಿ ನಮ್ಮ ಅವಮಾನವನ್ನು ನಾವೇ ಮಾಡಿಕೊಳ್ಳಬಾರದಾಗಿ ಈ ಬಗ್ಗೆ ಮಾತಾಡುವ ಎಲ್ಲ ಬಾಂಧವರೊಡನೆ ವಿನಮ್ರನಾಗಿ ವಿನಂತಿಸುತ್ತೇನೆ.

—ಬಿ. ಎಚ್. ಶಾಂತಾರಾಮ ಶೆಟ್ಟಿ
ಬ್ರಹ್ಮಾವರ.

ಕ್ರಾಂತಿವೀರರೊಡನೆ ಮಹಾತ್ಮಾ ಗಾಂಧಿ

(ಎರಡನೆ ಪುಟದಿಂದ)

ಕಟ್ಟ ಕಡೆಗೆ?

ಆ ಮೂವರು ಮಹಾವೀರರ ಶೋಕದ ದಿನದಲ್ಲಿ ಕಾಂಗ್ರೆಸ್ ಅಧಿವೇಶನ ಸಮಾವೇಶ ಆಗುತ್ತಿದೆ ಎಂದು ಪ್ರತಿಯೊಬ್ಬರೂ ತಿಳಿದಿದ್ದರು. ಭಗತ್ ಸಿಂಗ್ ಮೊದಲಾದವರನ್ನು ಫಾಸಿಗೆ ಕೊಡಲಾಯಿತೆಂಬುದನ್ನು ತಿಳಿದಕೂಡಲೇ ನಿಯೋಜಿತ ಅಧ್ಯಕ್ಷ ಸರ್ದಾರ್ ಪಟೇಲರು ಅಧಿವೇಶನದ ಸಮಸ್ತ ಸಡಗರ ಸಂಭ್ರಮಗಳನ್ನು ಕೂಡಲೇ ತ್ಯಜಿಸುವಂತೆ ಆದೇಶವಿತ್ತರು. ಗಾಂಧೀಜಿ ಕರಾಚಿಯಲ್ಲಿ ಬಂದಿಳಿದಾಗ ಅವರ ವಿರುದ್ಧ ಅತ್ಯುಗ್ರವಾದ ಪ್ರತಿಭಟನಾ ಪ್ರದರ್ಶನ ಜರಗಿತು. ಅಸಂಖ್ಯಾತ ಯುವಕರ ಕಪ್ಪು ಹೂಮಾಲೆ ಮತ್ತು ಕರಿ ಪತಾಕೆಗಳಿಂದ ಅವರನ್ನು ಸ್ವಾಗತಿಸಿದರು. ಗಾಂಧೀಜಿ ಆ ಮೂವರು ಮಹಾತ್ಮರೊಂದಿಗೆ ವಿಶ್ವಾಸ ಘಾತ ಮಾಡಿದರೆಂಬುದಾಗಿ ಯುವಕ ವರ್ಗಕ್ಕೆ ಖಚಿತವಾಗಿತ್ತು.

ಗಾಂಧೀಜಿ ಹೀಗೆ ಮಾಡುವರೆಂಬ ಅನುಮಾನ ಕೂಡ ಚಂದ್ರಶೇಖರ ಆಜಾದರಿಗಿಲ್ಲ. ಅವರು ಸಹ ಮಹಾತ್ಮಾಜಿಯ ಈ ಸ್ವರೂಪವನ್ನು ನೋಡಿ ವಿಚಲಿತರಾದರು. ಕೂಡಲೇ ಅವರು ಸಮಗ್ರ ಕ್ರಾಂತಿಕಾರಿಗಳ ಒಂದು ವಿಶೇಷ ಅಧಿವೇಶನವನ್ನು ಫೆಬ್ರವರಿ ತಾ. 22ರಂದು ಅಲಹಾಬಾದಿನಲ್ಲಿ ಜರಗಿಸುವ ಏರ್ಪಾಡು ಮಾಡಿದರು. ದುರ್ದೈವ ವಶಾತ್ ಲಾರ್ಡ್ ಇರ್ವಿನ್ನರ ಕುಮ್ಮಕ್ಕು ವಶಾತ್ ಫೆಬ್ರವರಿ ತಾ. 21ರಂದು ವೀರ ಶ್ರೇಷ್ಠ ಚಂದ್ರಶೇಖರ ಆಜಾದರು "ನಾಟ್ ಬವ್ಯಾರ್"ನ ಪೋಲೀಸ್ ಪಡೆಯೊಂದಿಗೆ ಏಕಾಕಿಯಾಗಿ ಭಯಾನಕ ಹೋರಾಟ ಕೊಟ್ಟು ಅಲ್ಲಿಯೇ ಬಲಿದಾನ ವೇದಿಯಲ್ಲಿ ಆಹುತಿಯಾದರು.

ಮಹಾತ್ಮಾಜಿ ಕೊಲ್ಲಲ್ಪಟ್ಟರು! ಚಂದ್ರಶೇಖರ ಆಜಾದ್, ಭಗತ್ ಸಿಂಗ್ ಮೊದಲಾದ ಸಹಸ್ರಾರು ವೀರರು ಬಲಿದಾನವಾದರು! ಆದರೆ? ಕ್ರಾಂತಿಕಾರಿಗಳ ಕುರಿತಾಗಿ ಕಾಂಗ್ರೆಸಿನ ಮನೋಭಾವನೆ ಇಂದಿಗೂ ಅಂದಿನಂತೆಯೇ ಸ್ಥಿರವಾಗಿ ನೆಲೆನಿಂತಿದೆ.

ಆಜಾದರ ಸುಪ್ರಸಿದ್ಧ "ಬಾಮಜೀ" ಎಂಬ ಪಿಸ್ತೂಲು ರಾಷ್ಟ್ರೀಯ ವೀರೋಚಿತ ಗೌರವದೊಂದಿಗೆ ಪ್ರದರ್ಶನಾಲಯದಲ್ಲಿರುವುದರ ಬದಲಾಗಿ ಅಲಹಾಬಾದಿನ ಸರ್ಕಾರಿ ಉಗ್ರಾಣದ ಕತ್ತಲೆಯ ಕೋಣೆಯೊಂದರಲ್ಲಿ ಕಳ್ಳಕಾಕರ, ದರೋಡೆಕೋರರ ಆಯುಧಗಳ ರಾಶಿಯಲ್ಲಿ ಬಿದ್ದುಕೊಂಡಿದೆ; ಅವರು ಜೀವನ್ಮುಕ್ತರಾದರು. ಆದರ ಬಂಧನವು ಮುಕ್ತವಾಗಲಿಲ್ಲ. ಅವರ ಸ್ಮೃತಿಗಾಗಿ ಆಯೋಜಿತ "ಆಲ್ಫ್ರೆಡ್ ಪಾರ್ಕ್" ಸಹ ಸರಕಾರದ ಕಾಗದದಲ್ಲಿ "ಪಂಡಿತ್ ಮೋತಿಲಾಲ್ ನೆಹ್ರು ಪಾರ್ಕ್' ಎಂಬುದಾಗಿ ನಾಮಾಂಕಿತಗೊಂಡಿತು. ಇದು ಮಹಾತ್ಮಾ ಗಾಂಧೀಜಿ ಮತ್ತವರ ಅನುಯಾಯಿಗಳು ಭಾರತದ ಕ್ರಾಂತಿವೀರರಿಗೆ ಸಲ್ಲಿಸಿದ ಆತ್ಮಗೌರವದ ಅಪೂರ್ವ ನಿದರ್ಶನ!

ನಗೆಗಡಲು

"ಪ್ರಿಯತಮೆ, ನಿನ್ನನ್ನು ಮುತ್ತಿಟ್ಟಾಗ ಪ್ರೇಮಾಂಕುರವಾಯ್ತು...."

'ವೆರಿ ಫೈನ್ ಡಿಯರ್, ಆ ಪ್ರೇಮಾಂಕುರವನ್ನೀಗ ಬೆಳೆಸಿಬಿಡು.'

o o o

ಪ್ರೊಫೆಸರ್ ಸಾಹೇಬರೊಬ್ಬರನ್ನು ಕೇಳಿದರು: 'ಹಾಗಾದರೆ, ನೀವು ಮೂರು ಜೊತೆ ಕನ್ನಡಕಗಳನ್ನು ಉಪಯೋಗಿಸುತ್ತೀರಿ'

"ಹೌದು, ಒಂದು ಜೊತೆ ದೂರ ದೃಷ್ಟಿಗೆ, ಇನ್ನೊಂದು ಸಮೀಪ ದೃಷ್ಟಿಗೆ; ಉಳಿದೊಂದು ಅವೆರಡು ಜೊತೆಗಳನ್ನು ನೋಡುವುದಕ್ಕೆ.'

o o o

ಹೋಟೇಲು ಮಾಲಿಕನನ್ನು ಗಿರಾಕಿ ಕೇಳಿದ—"ಸ್ವಾಮಿ, ನೀವು ಕೆಳಗಿನ ಪಕ್ಕದ ರೂಮುಗಳಿಗೇಕೆ ಬಾಡಿಗೆ ಕಡಿಮೆ ಹೇಳುತ್ತೀರಿ?"

"ಅಲ್ಲಿ ಮುಸಿಗಳು ತುಂಬಿವೆ.'

"ಅಂದರೆ, ಅದರಿಂದ ರೂಮುವಾಸಿಗಳಿಗೆ ತೊಂದರೆಯಾಗುವುದಿಲ್ಲವೆ?'

"ಛೆ, ಎಂದಿಗೂ ಇಲ್ಲ. ನೋಡಿ, ಮೊದಲರ್ಧರಾತ್ರಿಯಲ್ಲಿ ರೂಮುವಾಸಿಗಳು ಕಂಠಪೂರ್ತಿ ಕುಡಿದು ಬಿದ್ದಿರುವುದರಿಂದ ಮುಸಿಗಳತ್ತ ಗಮನಹರಿಸುವುದಿಲ್ಲ. ಅನಂತರದ ಅರ್ಧರಾತ್ರಿ ಮುಸಿಗಳು ಕಂಠಪೂರ್ತಿ ಕುಡಿದಿರುವುದರಿಂದ ಅವು ಅವರನ್ನು ಗಮನಿಸುವುದಿಲ್ಲ.'

o o o

ಕನ್ನೊಂದು

ಕನ್ನಡದಲ್ಲಿ ಅಪರೂಪವಾದ ಪುಸ್ತಕ

ಸ್ವಪ್ನಲೋಕ

ಮನೋವಿಶ್ಲೇಷಣದ ಬೆಳಕಿನಲ್ಲಿ ಕನಸುಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ವಿವರಗಳನ್ನೊಳಗೊಂಡ 'ಕಾರ್ತಿಕೇಯ.' ಸಚಿತ್ರ ಕಿರುಹೊತ್ತಗೆ ಬೆಲೆ 0—50

o o o

ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ ಪ್ರಸಂಗ ಪುಸ್ತಕಗಳು

ಸಾಹಸ ಭೀಮ ವಿಜಯ	0-50
ವಾಲಿ ಸುಗ್ರೀವ (ದುರಂತ ಯಕ್ಷಗಾನ ನಾಟಕ)	0-50
ಲತ್ರ ಪಗಡೆ	0-40
ಭಾರತದ ಗುರುಕುಲ	0-40
ಭರತೇಶ ದಿಗ್ವಿಜಯ	0-50

ಪ್ರತಿ ಪುಸ್ತಕಕ್ಕೂ ಬುಕ್ ಪೋಸ್ಟಿನಿಂದ ಕಳಿಸಲು 0-30 ಪೈಸೆ ಅಂಚೆ ವೆಚ್ಚ.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ. ಕ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪ್ರವಾಸಿಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

ಫೋನ್: 77

Please Visit

HOTEL SHIVAPRASAD

High Class Boarding, Lodging & Restaurant

COONDAPUR, S. K.

Registered with the Registrar
of News Papers for India
under No. R. N. 3646/'57

REGD. No. S. Q/ 176
LICENCE No. 33.
Licensed to Post without Prepayment

ವಿದೇಶೀ ಹಸ್ತಕ್ಷೇಪ ಬೇಡ

— ಲ್ಯಾ

ಪ್ರಜಾಪತಿ ಬ್ರಹ್ಮದೇವನು ರಾಜರ್ಷಿ ರಾಜಾ ರಿಪುಂಜಯನಿಗೆ ಪ್ರತ್ಯಕ್ಷನಾದನು. "ರಿಪುಂಜಯ, ನೀನು ಸಮುದ್ರ ಪರ್ಯಂತ ಭೂಮಿಯ ಶಾಸಕನಾಗು; ಆಡಳಿತ ಪರಿಪಾಲಿಸು. ನಾಗರಾಜ ವಾಸುಕಿಯು ತನ್ನ ಮಗಳು ಅನಂಗಮೋಹಿನಿಯನ್ನು ನಿನಗಿತ್ತು ವಿವಾಹಗೆಯ್ಯುವನು. ದೇವ—ದೇವತೆಗಳೂ ನಿನ್ನ ಪ್ರಜಾ ಪರಿಪಾಲನೆಯಿಂದ ಪ್ರಸನ್ನರಾಗುವರು. ನನ್ನ ಆಣತಿಯಂತೆ ಅವರು ನಿನಗೆ ಸ್ವರ್ಗೀಯ ರತ್ನ ಕೊಡುತ್ತಲಿರುವರು. "ದಿವೋದಾಸ್ಯಂತಿ" ಎಂಬಂತೆ ನಿನ್ನ ಹೆಸರು "ದಿವೋದಾಸ" ಎಂದಾಗುವುದು. ಪಾತಾಳದ ರಾಜರ ಸಂಬಂಧ, ದೇವತೆಗಳ ಅನುಗ್ರಹ ಮತ್ತು ನನ್ನ ಪ್ರಭಾವದಿಂದ ನಿನಗೆ ದಿವ್ಯ ಸಾಮರ್ಥ್ಯವೂ ಒದಗುವುದು' ಎಂದು ಬ್ರಹ್ಮನು ಆಶೀರ್ವದಿಸಿದನು.

ಬ್ರಹ್ಮನ ಆಶೀರ್ವಚನವನ್ನು ಕೇಳಿದ ರಾಜಾ ರಿಪುಂಜಯನು ಅತೀವ ನಮ್ರನಾಗಿ ಹೇಳಿದನು—"ಪಿತಾಮಹ, ಮನುಷ್ಯರಿಂದ ತುಂಬಿರುವ ಈ ಭೂತಲದಲ್ಲಿ ಬೇರೆ ರಾಜರಾರೂ ಇಲ್ಲವೆ? ಹಾಗಿರುವಾಗ ನನ್ನ ಮೇಲೆ ಮಾತ್ರ ಅಂತಹ ಅನುಗ್ರಹವೇಕೆ ತೋರಬೇಕು?"

ಬ್ರಹ್ಮನು ಉತ್ತರಿಸಿದನು- "ರಾಜನ್, ನೀನು ರಾಜ್ಯಪಾಲನೆ ಮಾಡುವಾಗ ಇಂದ್ರದೇವನು ಸಮಯಕ್ಕೆ ಸರಿಯಾಗಿ ಮಳೆ ಸುರಿಸುವನು"

ರಾಜನೆಂದನು— "ಬ್ರಹ್ಮದೇವ, ನೀನೊಬ್ಬನೇ ತ್ರಿಭುವನ ಪರಿಪಾಲನಾಸಮರ್ಥನಾಗಿದ್ದೀಯಾ? ಹಾಗಿರುವಾಗ ಇಂತಹ ಗೌರವವನ್ನು ನನಗೊಪ್ಪಿಸುವುದು ನಿಮ್ಮ ಘನತೆಗೆ ತಕ್ಕುದೇ? ನನ್ನ ಅಹೋಭಾಗ್ಯ ... ಇಲ್ಲವೆಂದು ತಿಳಿಯುತ್ತೇನೆ. ನಿನ್ನ ಆಜ್ಞೆಯನ್ನು ಶಿರಸಾವಹಿಸುತ್ತೇನೆ. ಆದರೂ ನನ್ನದೊಂದು ನಿವೇದನೆಯಿದೆ. ನನ್ನ ಪ್ರಾರ್ಥನೆಯನ್ನು ನೀನು ಸ್ವೀಕರಿಸಿದೆಯೆಂದರೆ, ನಾನು ಈ ಭೂತಲದಲ್ಲಿ ನಿಷ್ಕಂಟಕವಾಗಿ ರಾಜ್ಯ ಪಾಲಿಸಬಲ್ಲೆ.'

'ನಿನ್ನ ಮನೋಗತವೇನೆಂಬುದನ್ನು ಶೀಘ್ರವಾಗಿ ತಿಳಿಸು"—ಬ್ರಹ್ಮದೇವನ ಅಪ್ಪಣೆಯಾಯಿತು.

ರಾಜನು ಹೇಳಿದನು- 'ಪಿತಾಮಹ, ನಾನು ಭೂಲೋಕದ ಅಧಿಪತಿಯಾದರೆ, ದೇವಲೋಕದಲ್ಲಿ ವಾಸಿಸುವ ದೇವ-ದೇವತೆಗಳು ತಮ್ಮ ಲೋಕದಲ್ಲೇ ನೆಲಸಿರಲಿ; ಈ ಭೂಲೋಕಕ್ಕೆ ಇಳಿದು ಬಾರದಿರಲಿ. ದೇವತೆಗಳು ದೇವಲೋಕದಲ್ಲಿಯೇ ಉಳಿದುಕೊಂಡು ನಾನು ಈ ಲೋಕದಲ್ಲಿ ರಾಜ್ಯಭಾರ ಮಾಡುವಾಗ, ನನ್ನ ರಾಜ್ಯವು ನಿಷ್ಕಂಟಕವಾಗುವುದು."

"ತಥಾಸ್ತು" ಎಂದು ಬ್ರಹ್ಮನು ರಾಜನ ಅಭಿಲಾಷೆಯನ್ನು ಈಡೇರಿಸಿದನು.

ರಾಜಾ ದಿವೋದಾಸನು ತನ್ನ ರಾಜ್ಯದಲ್ಲಿ ಡಂಗುರ ಹೊಯ್ಸಿದನು-'ದೇವತೆಗಳು ಸ್ವರ್ಗಲೋಕಕ್ಕೆ ಮರಳಿ ಹೋಗಲಿ. ನಾಗಗಣಗಳು ಭೂಲೋಕಕ್ಕೆ ಬಾರದಿರಲಿ. ಇದರಿಂದ ಮನುಷ್ಯರು ಸುಖಿಗಳಾಗಿ ಬಾಳಲಿ. ಭೂಲೋಕದಲ್ಲಿ ನಾನು ಶಾಸಕನಾಗಿರುವಾಗ ದೇವತೆಗಳು ಸ್ವರ್ಗಲೋಕದಲ್ಲೂ ಮನುಷ್ಯರು ಭೂಲೋಕದಲ್ಲೂ ಸುಖಿಗಳಾಗಿ ನೆಲಸಲಿ. ಇದು ನನ್ನ ಇಚ್ಛೆ".

ಬ್ರಹ್ಮನ ಮಾತುಗಳಿಗೆ ಗೌರವ ನೀಡುವುದಕ್ಕಾಗಿ ಶಿವನು ಮಂದರಾಚಲಕ್ಕೆ ಹೊರಟು ಹೋದನು. ಉಳಿದ ದೇವ-ದೇವತೆಗಳೂ ಸ್ವರ್ಗಲೋಕಕ್ಕೆ ನಡೆದರು. ಭೂಲೋಕದಿಂದ ದೇವತೆಗಳೆಲ್ಲ ತಮ್ಮ ಲೋಕಕ್ಕೆ ಗಮನಿಸಿದ ಮೇಲೆ ಮಹಾರಾಜ ದಿವೋದಾಸನು ನಿರ್ದ್ವಂದ್ವನಾಗಿ ರಾಜ್ಯಪಾಲನೆಗೈದನು. ಅವನು ಕಾಶೀಪುರಿಯಲ್ಲಿ ಸುದೃಢವಾದ ರಾಜಧಾನಿ ಕಟ್ಟಿಸಿದನು. ಧರ್ಮಪೂರ್ವಕ ರಾಜ್ಯ ಪರಿಪಾಲನೆ ಮಾಡಿದನು. ಪ್ರಜೆಗಳೆಲ್ಲರ ಉನ್ನತಿ ಪಥಶೀಲರಾಗುವಂತೆ ಉತ್ತೇಜಿಸಿದನು. ಶಕ್ತಿಶಾಲಿ ದಿವೋದಾಸನ ಮೇಲೆ ನಾಗರು ಎಂದೂ ಅಪಚಾರವೆಸಗುತ್ತಿರಲಿಲ್ಲ. ದಾನವರೂ ಮಾನವಾಕೃತಿಯಲ್ಲಿ ಮಹಾರಾಜನ ಸೇವೆಯಲ್ಲಿ ನಿರತರಾಗುತ್ತಿದ್ದರು. ಗುಹ್ಯಕರು ಎಲ್ಲೆಡೆಯೂ ರಾಜನ ಗುಪ್ತಚಾರರಾಗಿ ಕೆಲಸಮಾಡುತ್ತಿದ್ದರು. ರಾಜನ ವಿದ್ವಾಂಸರು ಎಲ್ಲ ಸಭೆಗಳಲ್ಲಿಯೂ ಜಯಭೇರಿ ಬಾರಿಸುತ್ತಿದ್ದರು. ಯುದ್ಧದಲ್ಲಿ ತೊಡಗಿದ ದಿವೋದಾಸನ ಸೈನಿಕರನ್ನು ಅಸ್ತ್ರ—ಶಸ್ತ್ರಗಳ ಸಹಾಯದಿಂದ ಸೋಲಿಸಲು ಯಾರೂ ಸಮರ್ಥರಾಗುತ್ತಿರಲಿಲ್ಲ. ಪರದೇಶೀಯರೂ ದ್ವೇಷಭಾಜನರೂ ಅವನ ದೇಶದಲ್ಲಿ ಹೆಸರಿಸುವುದಕ್ಕೂ ಇರಲಿಲ್ಲ. ಪ್ರಜೆಗಳೆಲ್ಲರೂ ತಂತಮ್ಮ ಪದಗಳಲ್ಲಿ ಪ್ರತಿಷ್ಠಿತರಾಗಿ ಸುಖದಿಂದಿರುತ್ತಿದ್ದರು. ರಾಜ್ಯವು ಈತಿ-ಭೀತಿಗಳಿಂದ ದೂರವಾಗಿತ್ತು. ದೇಶ ರಕ್ಷಕ ದಳವು ಹಳ್ಳಿ ಹಳ್ಳಿಯ ರಕ್ಷಣೆಯಲ್ಲಿ ಉತ್ಸುಕವಾಗಿತ್ತು. ಮನೆ ಮನೆಯೂ ಕುಬೇರನ ಭಂಡಾರವಾಗಿತ್ತು; ದಾನದಾಗರವಿತ್ತು.

ಹೀಗೆ ದಿವೋದಾಸನು ಬಹುಕಾಲ ರಾಜ್ಯಭಾರ ಮಾಡಿದನು. ಆತನು ಪ್ರಜೆಗಳನ್ನು ತನ್ನ ಮಕ್ಕಳಂತೆ ನೋಡುತ್ತಿದ್ದನು. ಆದುದರಿಂದ ಅವನ ರಾಜ್ಯದಲ್ಲಿ ಅನ್ಯಾಯ ಅಥವಾ ಅಧರ್ಮಗಳು ಎಳ್ಳಷ್ಟು ಇರಲಿಲ್ಲ. ರಾಜನು ರಾಜನೀತಿಯ ತತ್ವಗಳನ್ನು ಚೆನ್ನಾಗಿ ಅರಿತಿದ್ದನು. ಆದುದರಿಂದ ದೇವತೆಗಳಿಗೆ ಎಷ್ಟು ಅರಸಿದರೂ ಆತನಲ್ಲಿ ಒಂದು ಛಿದ್ರವೂ ಗೋಚರವಾಗಲಿಲ್ಲ.

ದಿವೋದಾಸನ ರಾಜ್ಯ ಮಂಡಲದಲ್ಲಿ ಎಲ್ಲ ಪರಪುರುಷರೂ ಏಕಪತ್ನೀ ವ್ರತಸ್ಥರಾಗಿದ್ದರು. ಸ್ತ್ರೀಯರೆಲ್ಲರೂ ಪತಿವ್ರತೆಯರಿದ್ದರು. ಬ್ರಾಹ್ಮಣರೆಲ್ಲರೂ ವೇದ—ಶಾಸ್ತ್ರಾಧ್ಯಯನನಿರತರಾಗಿದ್ದರು. ಕ್ಷತ್ರಿಯರು ಶೂರವೀರರಾಗಿದ್ದರು. ವೈಶ್ಯರು ಧನಾರ್ಜನೆಯಲ್ಲಿ ಕುಶಲರಾಗಿದ್ದರು; ಶೂದ್ರರು ನಾನಾ ಶಿಲ್ಪಗಳಿಂದ ದೇಶ ಸೇವಾ ತತ್ಪರರಾಗಿದ್ದರು. ರಾಜಾ ದಿವೋದಾಸನ ರಾಜ್ಯದಲ್ಲಿ ಸಂತಾನ ಹೀನರಿರಲಿಲ್ಲ; ನಿರ್ಧನರಿರಲಿಲ್ಲ; ವೃದ್ಧರ ಸೇವೆಮಾಡದವರಿರಲಿಲ್ಲ. ಅಕಾಲಮೃತ್ಯುವಿನಿಂದ ಸಾಯುವವರಿರಲಿಲ್ಲ. ಚಂಚಲ, ವಾಚಾಲ, ವಂಚಕ, ಹಿಂಸಕ, ಮಿಥ್ಯಾವಾದಿ, ವಿಧುರ ಅಥವಾ ಹೆಂಡಮಾರುವವರು ಇರಲಿಲ್ಲ. ರಾಜ್ಯದ ಮೂಲೆ ಮೂಲೆಯಲ್ಲೂ ಆನಂದ-ಮಂಗಲಗೀತೆಗಳು ಸದೈವ ಪ್ರತಿಧ್ವನಿಸುತ್ತಿದ್ದುವು.

ಮಾಂಸಾಹಾರಿಗಳು ಮತ್ತು ಸಾಲಕೊಳ್ಳುವವರು ಅವನ ರಾಜ್ಯದಲ್ಲಿ ಹುಡುಕಿದರೂ ದೊರೆಯುತ್ತಿರಲಿಲ್ಲ. ಪ್ರಜೆಗಳೆಲ್ಲರೂ ಹೃಷ್ಟ—ಪುಷ್ಟರಾಗಿದ್ದರು. ಅವರು ದೇವೋಪಾಸನೆಯನ್ನು ತಮ್ಮ ಪರಮ ಧರ್ಮವೆಂದು ತಿಳಿದು ಅದರಂತೆ ನಡೆಯುತ್ತಿದ್ದರು.

ನೃಪಾಲ ದಿವೋದಾಸನಲ್ಲಿ ಏನಾದರೊಂದು ದೋಷವನ್ನು ಹುಡುಕಲು ದೇವತೆಗಳು ಬೇಕಷ್ಟು ಪ್ರಯತ್ನಿಸಿದರು. ಆದರೆ, ದುರ್ದೈವಕ್ಕೆ ಅವರು ಅಯಶರಾದರು. ತೋರಿಕೆಗೆ ದಿವೋದಾಸನ ರಾಜ್ಯಪಾಲನೆಯನ್ನು ಇಂದ್ರಾದಿಗಳು ಹೊಗಳುತ್ತಿದ್ದರು. ಆದರೆ, ಅವರ ಅಂತರಂಗ ದ್ವೇಷಾಸೂಯೆಗಳಿಂದ ತುಂಬಿ ತುಳುಕಾಡುತ್ತಿತ್ತು. ಹಾಗಾಗಿ ದಿವೋದಾಸನ ರಾಜ್ಯವ್ಯವಸ್ಥೆಯನ್ನು ಛಿದ್ರ—ವಿಚ್ಛಿದ್ರಗೊಳಿಸಲು ಅವರು ಹಲವಾರು ಉಪಾಯ ರಚಿಸಿದರು. ಆದರೆ, ಅವರ ಹವಣಿಕೆಗಳೆಲ್ಲವೂ ರಾಜನ ತಪೋಬಲದಿಂದ ತಲೆಕೆಳಗಾದುವು.

ತನ್ನ ರಾಜ್ಯದಲ್ಲಿ ವಿದೇಶೀ ಹಸ್ತಕ್ಷೇಪ ನಡೆಯದಿರಲಿ-ಎಂಬ ರಾಜಾ ರಿಪುಂಜಯನ ರಾಜನೀತಿ ಯುಕ್ತಿ ಫಲಿಸಿತು. ಇದರಿಂದಲೇ ಪ್ರಜೆಗಳು ಅತ್ಯಂತ ಸುಖಿಗಳಾದರು.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಅಂಗ್ಲ ಸ್ವಯಂಬೋಧಿನಿ
ಬೆಲೆ: ರೂ. 2—00

•

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ಮಾದರಿ ಪತ್ರ ಸಂಕಲನ. ಬೆಲೆ: ರೂ. 1—50

•

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

•

ಮನೆ-ಮದ್ದು Home Remedies

ಡಾ। ವಿ. ಆರ್. ಕೊರಡ್ಕರ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ರೋಗಿಗಳಿಗೂ ಮನೆಯಲ್ಲಿ ಮದ್ದು ಮಾಡುವ ವಿಧಾನಗಳಿವೆ. ಹಂಗಿ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

READ &
ADVERTISE IN
NAVAYUGA WEEKLY

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 11

NAVAYUGA

19—11—1970

'ರಾಜಧನ ರದ್ಧತಿ— ರಾಜಕೀಯ ಡೊಂಬರಾಟ'

ಬರೆದವರು: 'ದೇವಕಿನಂದನ', ಭದ್ರಾವತಿ.

ರಾಜಧನ ರದ್ದತಿ ಆಗಬೇಕು. ಅವರಿಗೆ ಕೊಟ್ಟಿರುವ ಹೆಚ್ಚಿನ ಸೌಲಭ್ಯಗಳು ಹೋಗಬೇಕು. ಅವುಗಳನ್ನು ಮುಂದುವರಿಸಬೇಕೆಂದು ನಾವು ಹೇಳುವುದಿಲ್ಲ. ಆದರೆ ಅಧಿಕಾರದಲ್ಲಿರುವ ಜನ ತಾಳಿದ ನಿಲುವು, ಅದನ್ನು ರದ್ದು ಪಡಿಸಿದ ಕ್ರಮ ಯಾರಿಗೂ ಮರ್ಯಾದೆ ತರುವುದಿಲ್ಲ. ಈ ಸಂಬಂಧದಲ್ಲಿ ರಾಷ್ಟ್ರಪತಿಗಳು ಹೊರಡಿಸಿದ ಆಜ್ಞೆಯ ಔಚಿತ್ಯವನ್ನು ಪ್ರಶ್ನಿಸಿ ರಾಜರುಗಳು ಸಲ್ಲಿಸಿದ ಅರ್ಜಿಯೆಂದು ವರಿಷ್ಠ ನ್ಯಾಯಾಲಯದ ಮುಂದೆ ವಿಚಾರಣೆಗೆ ಬಂದಿದೆ. ಹೀಗಿರುವುದರಿಂದ ಚರ್ಚೆಯನ್ನು ಸೀಮಿತಗೊಳಿಸಬೇಕಾಗಿದೆ. ಕೋರ್ಟಿನ ವ್ಯಾಪ್ತಿಗೆ ಸೇರಿದ್ದನ್ನು ಅದಕ್ಕೆ ಬಿಡುವುದು ಉಚಿತ.

ಆದರೂ ಅದರ ಹಿಂದಿರುವ ನೈತಿಕ ಪ್ರಶ್ನೆ ಬಹು ದೊಡ್ಡದು; ಮಹತ್ವದ್ದು. ಎರಡನೆಯದು: ರಾಜಧನ ಮುಂದುವರಿಯುವುದರಿಂದ ಜನರಿಗಾದ ಕಷ್ಟವೇನು? ಆಗಿದ್ದರೆ ಯಾವ ಪ್ರಮಾಣದ್ದು. ರಾಜ್ಯಾಂಗ ತಿದ್ದುಪಡಿ ಮಸೂದೆ ರಾಜ್ಯಸಭೆಯಲ್ಲಿ ಬಿದ್ದು ಹೋದ ಮೇಲೂ ರಾಷ್ಟ್ರಪತಿಗಳ ಆಜ್ಞೆಯ ಮೂಲಕ ಅದನ್ನು ಕಾರ್ಯಗತಗೊಳಿಸುವ ದುರ್ಗತಿ ಬಂದಿತ್ತೇ? ಇವುಗಳೇ ಆ ಮೂಲಭೂತ ಪ್ರಶ್ನೆಗಳು.

ಮೊದಲನೆಯದು ರಾಜಧನದ ರದ್ದತಿ ಯಾಗಬೇಕೆಂದು ಈ ದೇಶದ ಜನ ಸಾಮಾನ್ಯರು ಬಯಸಿರಲಿಲ್ಲ. ಸರಕಾರದ ಮೇಲೆ ತಮ್ಮ ಒತ್ತಾಸೆಯನ್ನು ತಂದಿರಲಿಲ್ಲ. ರಾಜಧನದ ರದ್ದತಿ ಜನಾಭಿಪ್ರಾಯಕ್ಕೆ ಮಣಿದು ಮಾಡಿದ ಕೆಲಸ ಖಂಡಿತ ಅಲ್ಲ. ಈ ರದ್ದತಿಯಿಂದ ಜನರಿಗೆ ಬರುವ ಭಾಗ್ಯ ಅಷ್ಟರಲ್ಲಿಯೇ ಇದೆ. ಇರುವುದರಿಂದ ಆಗಿರುವ ಕಷ್ಟ ಬರಿಯ ಕಾಲ್ಪನಿಕ. ಜನರ ಹಿತ ಸಂವರ್ಧನೆಗೆ ರಾಜಧನವಿರುವುದು ಇಲ್ಲಿಯ ತನಕ ಅಡಚಣೆ ಯಾಗಿ ಪರಿಣಮಿಸಲಿಲ್ಲ. ಅಥವಾ ರಾಜಧನವಾಗಿ ಕೊಡುತ್ತ ಬಂದ ಮೊತ್ತ ನಮ್ಮ ಸರಕಾರದ ಆರ್ಥಿಕ ಸ್ಥಿತಿಯ ಮೇಲೆ ಯಾವ ಪರಿಣಾಮವನ್ನೂ ಬೀರುವಂತಿರಲಿಲ್ಲ. ನಮ್ಮ ಕೇಂದ್ರ ಸರಕಾರದ ವರ್ಷ ಒಂದರ ಆದಾಯ 3200 ಕೋಟಿ ರೂಪಾಯಿಗಳಷ್ಟಿದೆ. ಇಷ್ಟು ದೊಡ್ಡ ಆದಾಯ ಇರುವ ಯಾವ ಸರಕಾರಕ್ಕೂ, ವರ್ಷ ಒಂದರ ನಾಲ್ಕೂವರೆ ಕೋಟಿಯ ಖರ್ಚು ಅನಗತ್ಯ ಇರುವ ಕಚ್ಚಿದಂತೆಯೇ?

ಈ ಮೊತ್ತ ಕಡಿಮೆಯಾಗುತ್ತಲೇ ಹೋಗುತ್ತಿದೆ. ಅದನ್ನು ಶಾಶ್ವತವಾಗಿ ಕೊಡುವ ಒಪ್ಪಂದವೂ ಇಲ್ಲ. ವಿಲೀನೀಕರಣದ ಒಪ್ಪಂದಕ್ಕೆ ಸಹಿ ಹಾಕಿದ ರಾಜರುಗಳಿಗೆ ಅವರ ಜೀವನ ಪರ್ಯಂತ ಮಾತ್ರ ಈ ಹಣ ಪಾವತಿ ಮಾಡುವ ಹೊಣೆ ನಮ್ಮದು. ಅವರ ಉತ್ತರಾಧಿಕಾರಿಗಳಿಗೂ ಅದನ್ನು ಪಾವತಿ ಮಾಡುವ ಆಶ್ವಾಸನೆಯನ್ನು ನಮ್ಮ ಸರಕಾರ ಕೊಟ್ಟಿಲ್ಲ. ವರ್ಷಕ್ಕೆ ಹತ್ತು ಲಕ್ಷಕ್ಕಿಂತಲೂ ಹೆಚ್ಚಿನ ರಾಜಧನ ಸ್ವೀಕರಿಸುವ ರಾಜರಿಗಂತೂ ಈ ಭರವಸೆಯನ್ನು ಆರಂಭದಲ್ಲೇ ನಿರಾಕರಿಸಲಾಯಿತು. ಅದಕ್ಕಿಂತ ಕಡಿಮೆ ತೆಗೆದುಕೊಳ್ಳುವ ರಾಜರ ಉತ್ತರಾಧಿಕಾರಿಗಳಿಗೆ ಅದನ್ನು ಕೊಡುತ್ತ ಬರಬೇಕೇ-ಇಲ್ಲವೇ ಎಂಬುದು ಸರಕಾರದ ತೀರ್ಮಾನಕ್ಕೆ ಬಿಟ್ಟಿದ್ದು. ಹೀಗಿರುವುದರಿಂದ ರಾಜಧನದ ರದ್ದತಿ ಕಾಲಕ್ರಮದಲ್ಲಿ, ಯಾರು ಬೇಡವೆಂದರೂ ಆಗಿಯೇ ಆಗುತಿತ್ತು. ಆದ್ದರಿಂದ ಈ ತರಾತುರಿ ಆಜ್ಞೆ ಬೇಕಿರಲಿಲ್ಲ.

ಈ ಆಜ್ಞೆಯ ಹಿಂದೆ ಯಾವ ಸಮಾಜ ಕಲ್ಯಾಣ ಸಾಧನೆಯ ಉದ್ದೇಶವಿರುವಂತೆ ಕಾಣುವುದಿಲ್ಲ. ಇದರಲ್ಲಿರುವುದು ಬರಿಯ ರಾಜಕಾರಣ; ಸ್ವಪ್ರತಿಷ್ಠೆ. ಈಗ ಅಧಿಕಾರದಲ್ಲಿರುವ ಒಂದು ಗುಂಪಿಗೆ ತನ್ನ ಬಲ ಸಂವರ್ಧನೆಗೆ ಈ ಕ್ರಮ ಬೇಕಾಗಿತ್ತು. ತನ್ನ ಮೂಲಕ ತಾನು ಸಮಾಜವಾದಿ ಎಂದು ತೋರಿಸಿಕೊಳ್ಳುವ ಆತುರ ಇತ್ತು. ಆದ್ದರಿಂದಲೇ ರಾಜ್ಯಾಂಗದ ತಿದ್ದುಪಡಿ ಮಸೂದೆಯನ್ನು ಲೋಕಸಭೆಯಲ್ಲಿ ತರಲಾಯಿತು. ಅದು ರಾಜ್ಯಸಭೆಯಲ್ಲಿ ಅಗತ್ಯ ಬೇಕಾದ ಬಹುಮತ ದೊರಕಿಸಿಕೊಳ್ಳಲು ಅಯಶಸ್ವಿಯಾದಾಗ ರಾಷ್ಟ್ರಪತಿಗಳ ಆಜ್ಞೆಯ ಆಶ್ರಯಕ್ಕೆ ಕೈಹಾಕಿತು. ಇದು ಸುಲಭದಲ್ಲಿ ಜನಪ್ರಿಯತೆಯನ್ನು ಸಂಪಾದಿಸಲು ಆಡಿದ ನಾಟಕ. ಕೆಲವರ ಖರ್ಚಿನಲ್ಲಿ, ಹಲವರ ಬೆಂಬಲ ದೊರಕಿಸುವ ತಂತ್ರಕ್ಕೆ ರಾಜಧನ ರದ್ದತಿ ಒಂದು ನಿದರ್ಶನ.

ರಾಜರಿಗೆ ಕೊಡಲೊಪ್ಪಿದ ಪರಿಹಾರ ಹಾಗೂ ಸೌಲಭ್ಯಗಳು ಇಂದಿನ ಸಾಮಾಜಿಕ ಸಂಬಂಧಗಳಿಗೆ ಹೊಂದಿಕೊಳ್ಳುವುದಿಲ್ಲ ಎಂಬ ಇನ್ನೊಂದು ವಾದವಿದೆ. ಈ ವಾದದಲ್ಲಿ ಹುರುಳಿಲ್ಲ. ವಿಲೀನೀಕರಣ ಆದಾಗಲೂ ನಾವು ಸೃಜಿಸ ಹೊರಟ ಸಮಾಜಕ್ಕೆ ಈ ಕೊಡುಗೆಗಳು ಹೊಂದಿಕೊಂಡಿರಲಿಲ್ಲ. ಬಹುದೊಡ್ಡ ಮನಸ್ಸಿನಿಂದ, ತ್ಯಾಗಬುದ್ಧಿಯಿಂದ ರಾಜರುಗಳು ತಮ್ಮ ಆಳುವ ಹಕ್ಕನ್ನು ಬಿಟ್ಟುಕೊಟ್ಟದ್ದಕ್ಕೆ—ರಕ್ತರಹಿತ ಕ್ರಾಂತಿಗೆ ಎಡೆಮಾಡಿಕೊಟ್ಟುದಕ್ಕೆ—ಕೃತಜ್ಞತೆಯಿಂದ ರಾಷ್ಟ್ರ ಈ ಕೊಡುಗೆಗಳನ್ನು ಕೊಡಲೊಪ್ಪಿತು. ಅದಕ್ಕಾಗಿಯೇ ನಮ್ಮ ರಾಜ್ಯಾಂಗದಲ್ಲಿ 291 ಮತ್ತು 362ನೇ ಕಲಮುಗಳನ್ನು ಅಳವಡಿಸಲಾಯಿತು. ಈ ನಂಬಿಗೆಯನ್ನು ನಾವಿಂದು ಕಡಿದು ತುಂಡು ತುಂಡು ಮಾಡಿದೆವು.

1947ರಲ್ಲಿ-ಇಂಗ್ಲಿಷರು ಇಲ್ಲಿಂದ ಕಾಲ್ತೆಗೆದಾಗ-ದೇಶೀಯ ರಾಜರಿಗೆ ಸ್ವತಂತ್ರವಾಗಿ ಉಳಿಯುವ, ಆಳುವ ಅಧಿಕಾರವನ್ನು ಕೊಟ್ಟರು. ಹಾಗೆ ಅವರು ಉಳಿಯಬಯಸಿದ್ದರೆ ದೇಶೀಯ ರಾಜರು ಶಾಶ್ವತ ತಲೆನೋವಾಗಿ ಉಳಿಯುತ್ತಿದ್ದರು_ಆಗ ಅವರ ಆಳ್ವಿಕೆಗೆ ಒಳಪಟ್ಟ ಪ್ರಜೆಗಳನ್ನು ಇತರರ ಹಂತಕ್ಕೆ ಏರಿಸುವುದು ಒಂದು ಸಮಸ್ಯೆಯಾಗುತ್ತಿತ್ತು. ಈ ಸಮಸ್ಯೆಯನ್ನು ಸರದಾರ ಪಟೇಲರು ಸುಲಭವಾಗಿ ಬಿಡಿಸಿದರು. ಆ ಕಾಲದಲ್ಲಿ ರಾಜರುಗಳಿಗೆ ಸರದಾರರು ಕೊಟ್ಟ ಆಶ್ವಾಸನೆಯನ್ನು ಇಷ್ಟು ಸುಲಭವಾಗಿ ಅಲ್ಲಗಳೆಯುವುದರಲ್ಲಿ ಔಚಿತ್ಯ, ಔದಾರ್ಯ ಎರಡೂ ಇಲ್ಲ. ಈ ಮಾತು ಕಡಿಯುವ ಪ್ರವೃತ್ತಿ ಅನಾಗರಿಕತೆಯಂಥಾದ್ದು ನಮ್ಮಲ್ಲಿ ಬೆಳೆಯಬಾರದು—ಕೊಟ್ಟ ಮಾತನ್ನೇ ಅಲ್ಲಗಳೆಯುವ ನಮ್ಮನ್ನೂ, ನಮ್ಮ ಸರಕಾರವನ್ನೂ ನಾಳೆ ನಂಬಿ ಯಾರು ನಡೆದುಕೊಂಡಾರು? ಇದು ಬಹು ದೂರಕ್ಕೆ ಹೋಗಬಹುದು.

ಸ್ವಾತಂತ್ರ್ಯ ಬಂದಾಗ ಈ ದೇಶದ ಬಹು ದೊಡ್ಡ ಭೂಭಾಗ ಆಶ್ರಿತ ರಾಜರ ಅಧೀನದಲ್ಲಿತ್ತು. ಒಟ್ಟು ದೇಶದ ವಿಸ್ತೀರ್ಣದಲ್ಲಿ ಶೇಕಡಾ 47ರಷ್ಟು ಭಾಗ ಅವರ ಅಂಕೆಯಲ್ಲಿತ್ತು. ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 28 ರಷ್ಟು ಜನರು ರಾಜರ ಪ್ರಜೆಗಳಾಗಿದ್ದರು. ರಾಷ್ಟ್ರದ ಒಟ್ಟು ಆದಾಯದ ಬಹು ದೊಡ್ಡ ಪಾಲು ಈ ವಿಲೀನೀಕರಣದಿಂದ ಕೂಡಿ ಬಂತು. ಐಕ್ಯತೆ, ಭದ್ರತೆ, ಸಮಾನತೆ ನಿರೀಕ್ಷೆಗೂ ಮೀರಿ ಸಾಧ್ಯವಾಯಿತು. ರಾಜರು ತಮ್ಮ ಭಾಗದ ಹೊಣೆಯನ್ನು ನಿರ್ವಹಿಸಿದ ನಂತರ, ಸರಕಾರ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಪ್ರಯತ್ನ ಮಾಡಬಾರದಾಗಿತ್ತು.

ಆತ್ತ ಮಾತನ್ನು ಉಳಿಸಿಕೊಂಡು, ಇತ್ತ ಹಿತವನ್ನು ಸಾಧಿಸುವ ತನ್ನ ಉದ್ದೇಶಸಿದ್ಧಿಯನ್ನು ಸಮರ್ಪಕವಾಗಿ ಮಾಡುವುದಕ್ಕೆ ಸರಕಾರಕ್ಕೆ ಯಾವ ತೊಂದರೆಯೂ ಆಗಿಲ್ಲ. ಇವುಗಳಲ್ಲಿ ಯಾವುದಾದರೊಂದನ್ನು ಕೈ ಬಿಡದೆ ಇನ್ನೊಂದನ್ನು ಮಾಡಲು ಸಾಧ್ಯವಿಲ್ಲವೆಂಬ ವಿಧವಾದ ಸಂಕಟ ಬಂದದ್ದಕ್ಕೆ ಬಂದಿಲ್ಲ. ರಾಜಧನವನ್ನು ರದ್ದುಗೊಳಿಸದೆ, ಜನತೆಯನ್ನು ಪ್ರಗತಿಯತ್ತ ಒಯ್ಯುವುದು ಸರಕಾರಕ್ಕೆ ಸಾಧ್ಯವಾಗದಿರುವ ವಿಷಯವಲ್ಲ. ಆದರೆ ಈ ಸರಕಾರಕ್ಕೆ ಆ ಮನಸ್ಸು ಇಲ್ಲ.

ರಾಜ್ಯಾಂಗದ ತಿದ್ದುಪಡಿ ಮಸೂದೆಯನ್ನು ಲೋಕಸಭೆಯಲ್ಲಿ ತಂದಾಗ ಬದಲಿ ವ್ಯವಸ್ಥೆಯನ್ನು ನಮೂದಿಸಬೇಕಾಗಿತ್ತು. ರಾಜರುಗಳಿಗೆ ಕೊಡುವ ಪರಿಹಾರವೆಷ್ಟೆಂಬುದನ್ನು ತಿಳಿಸುವುದರಿಂದ ಲೋಕಸಭೆಯನ್ನು ತನ್ನ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಿತ್ತು. ಈ ತಿದ್ದುಪಡಿಗೆ ರಾಜ್ಯಸಭೆಯಲ್ಲಿ ಅಗತ್ಯ ಬೇಕಾದ ಬೆಂಬಲ ಬಾರದೆಹೋದಾಗ, ವಾಯಿದೆ ಮುಗಿಯುವ ವರೆಗೂ ಕಾದು, ಇನ್ನೊಮ್ಮೆ ಆ ಮಸೂದೆಯನ್ನು ಸಭೆಯ ಮುಂದೆ ತರುವ ಒಳ್ಳೆಯ ಸಂಪ್ರದಾಯವನ್ನು ಪಾಲಿಸಬೇಕಿತ್ತು. ಅದಕ್ಕೆ ವಿರುದ್ಧವಾಗಿ, ಅದು ತಿರಸ್ಕೃತವಾದ ಕೆಲವೇ ಗಂಟೆಗಳಲ್ಲಿ—ಅನೇಕ ಮಂತ್ರಿಗಳಿಗೂ ತಿಳಿಸದೆ — ಮಂತ್ರಿಗಳ ಸಭೆ ಸೇರಿಸಿ ರಾಜಧನದ ರದ್ದತಿಗೆ ರಾಷ್ಟ್ರಪತಿಗಳಿಗೆ ಶಿಫಾರಸು ಮಾಡುವ ಕ್ರಮ, ಅತ್ಯಂತ ನಿಂದನೀಯವಾದ ವಿಚಾರ. ನಾಚಿಕೆಯಿಂದ ತಲೆತಗ್ಗಿಸಬೇಕಾದ ವಿಚಾರ. ಇದು ಪ್ರಜಾಸತ್ತೆಯಲ್ಲ; ನಿರಂಕುಶಾಧಿಕಾರ. ಇದು ರಾಜನೀತಿಯಲ್ಲ. ನೈತಿಕ ಪತನಕ್ಕೊಂದು ಉದಾಹರಣೆ.

(ಹನ್ನೆರಡನೇ ಪುಟ ನೋಡಿರಿ)

ಸಂಧಾನದಿಂದಲೇ ವಿವಾದ ಪರಿಹಾರ

ಭಾರತದಲ್ಲಿ ಒಂದು ಭೂಭಾಗವಿತ್ತು. ಪಶ್ಚಿಮದಲ್ಲಿ ಸಮುದ್ರ, ಪೂರ್ವದಲ್ಲಿ ಮಲಯಾಚಲ, ದಕ್ಷಿಣದಲ್ಲಿ ಶ್ರೀಶೈಲ ಮತ್ತು ಉತ್ತರದಲ್ಲಿ ಗಂಧಮಾದನ ಗಿರಿಯು ಅದರ ಸೀಮೆಗಳಾಗಿದ್ದುವು. ಒಂದಾನೊಂದು ಕಾಲದಲ್ಲಿ ಈ ರಾಜ್ಯವು ತನ್ನ ಕುಲದ ಬಲಿ ಮಹಾರಾಜನ ಚಕ್ರಾಧಿಪತ್ಯಕ್ಕೆ ಸೇರಿತ್ತು ಎಂಬ ಕಾರಣವನ್ನು ಮುಂದಿಟ್ಟು ದಾನವ ರಾಜ ಶಂಖಚೂಡನು ಏಕಾಏಕಿಯಾಗಿ ಅದರ ಮೇಲೆ ದಂಡೆತ್ತಿ ಬಂದನು. "ಬಲಿಮಹಾರಾಜನನ್ನೇ ಪದಚ್ಯುತಗೊಳಿಸಿ, ಆತನನ್ನು ಪಾತಾಳಕ್ಕೆ ಗಡೀಪಾರು ಮಾಡಿ ಸಾವಿರಾರು ವರ್ಷಗಳೇ ಉರುಳಿವೆ. ಆದ ಬಳಿಕ ಈಗ ಈ ಭೂಭಾಗದ ಮೇಲೆ ಶಂಖಚೂಡನು ತನ್ನ ಅಧಿಕಾರ ಸ್ಥಾಪಿಸ ಹವಣಿಸುವುದು ಅನ್ಯಾಯ-ಅಧರ್ಮವಲ್ಲದೆ ಮತ್ತೇನು? ಸತ್ಯ ಹೇಳುವುದಾದರೆ, ಈ ಬಗೆಯ ರಾಕ್ಷಸೀ ಸ್ಪೃಹೆಗೆ ಶಂಖಚೂಡನಿಗಿಂತಲೂ ಆತನ ಸೈನಿಕ ಬಲವೇ ಪ್ರೇರಕ ಶಕ್ತಿ, ಆತನ ಸೇನೆ ಪ್ರಬಲ; ಶಸ್ತ್ರಾಸ್ತ್ರಗಳು ವಿಪುಲ. ಆದರೂ ನಾವೇನೂ ಕಡಿಮೆಯವರಲ್ಲವೆಂದಾತ ತಿಳಿಯಬೇಕು; ಶಂಖಚೂಡನು ಸತ್ತ ಮೇಲೆ ಬೇಕಾಗಿದ್ದರೆ ಭಾರತದಲ್ಲಿ ಉಳಿಯಲಿ; ಸಜೀವವಾಗಿ ಆತ ಇಲ್ಲಿರುವುದೆಂದಿಗೂ ಸಾಧ್ಯವಿಲ್ಲ"—ಇದು ದೇವತೆಗಳ ಹೇಳಿಕೆಯಿತ್ತು.

ವಿವಾದ ಪರಿಹಾರಕ್ಕೆಂದು ದೇವತೆಗಳು ರುದ್ರನನ್ನು ನೇಮಿಸಿದರು. ರುದ್ರನು ಭಾರತಕ್ಕೆ ಆಗಮಿಸಿದನು; ಪುಷ್ಪಭದ್ರಾ ನದೀ ತಟದಲ್ಲಿ ಬೀಡು ಬಿಟ್ಟನು. ಪುಷ್ಪದಂತನನ್ನು ದೂತನಾಗಿಸಿ ಶಂಖಚೂಡನಲ್ಲಿಗೆ ಅಟ್ಟಿದನು. ದೂತನು ದಾನವೇಂದ್ರನ ಆಸ್ಥಾನಕ್ಕೆ ಬಂದನು. ಅವನೆಂದನು- "ರಾಜೇಂದ್ರ, ನಾನು ರುದ್ರನ ಸೇವಕ. ನನ್ನ ಹೆಸರು ಪುಷ್ಪದಂತ. ಆತನೊಂದು ಸಂದೇಶವನ್ನು ನಿನಗೆ ಕಳಿಸಿದ್ದಾನೆ; ಅದನ್ನು ಚಿತ್ತಯಿಸಿ ಕೇಳು—ಈ ರಾಜ್ಯವನ್ನೂ ಇಲ್ಲಿನ ಅಧಿಕಾರವನ್ನೂ ನೀನು ದೇವತೆಗಳಿಗೆ ಬಿಟ್ಟುಕೊಡು. ಇದು ಅವರ ದೇಶ. ಇದು ನಿನಗೆ ಒಪ್ಪಿಗೆಯಾಗುವುದಿಲ್ಲವಾದರೆ, ಯುದ್ಧ ಸನ್ನದ್ಧನಾಗು. ಅವನು ಪುಷ್ಪಭದ್ರಾ ನದೀ ದಂಡೆಯ ಬಿಡಾರದಲ್ಲಿದ್ದಾನೆ. ನಾನು ಅವನಿಗೆ ನಿಮ್ಮ ಸಂದೇಶವನ್ನು ಏನೆಂದು ತಿಳಿಸಲಿ?"

ದೂತನ ಮಾತು ಕೇಳಿದ ಶಂಖಚೂಡನು ಗೊಳ್ಳನೆ ನಕ್ಕು ಬಿಟ್ಟನು. 'ನಾಳೆ ಬೆಳಿಗ್ಗೆ ನಾನೇ ಅಲ್ಲಿ ಬಂದು ನೋಡುತ್ತೇನೆಂದು ತಿಳಿಸು' ಎಂದನು. ದೂತನು ಹೊರಟು ಹೋದನು.

ಶಂಖಚೂಡನು ರುದ್ರನನ್ನು ಕಾಣಲೇನೋ ನಿಶ್ಚಯಿಸಿದನು. ಆದರೆ ಪರಿಹಾರ ಸೂಚನೆಗಳೇನೂ ತೋಚಲಿಲ್ಲ. ಆದುದರಿಂದ ಸೂರ್ಯೋದಯವಾಗುತ್ತಲೇ ತನ್ನ ಸೇನಾಪತಿಯನ್ನು ಕರೆದು ಯುದ್ಧ ಸಿದ್ಧತೆ ನಡೆಸಲು ಆಜ್ಞಾಪಿಸಿ ತನ್ನ ಮಗನನ್ನು ಸಿಂಹಾಸನದ ಮೇಲೆ ಕೂರಿಸಿ, ಉಚಿತ ಸಲಹೆಗಾರರನ್ನೂ ಪರಿವಾರವನ್ನೂ ಕೂಡಿಕೊಂಡು ವಿಮಾನವೇರಿ, ರುದ್ರನ ಬಳಿಗೆ ಬಂದನು.

ಶಂಖಚೂಡನ ಈ ತಂತ್ರವನ್ನು ದೇವತೆಗಳ ಗುಪ್ತಚರರು ಭೇದಿಸಿ ಸೇನಾಪತಿ ಸ್ಕಂದನಿಗೆ ಅರುಹಿದರು. ಅವನು ರುದ್ರನಲ್ಲಿ ಅರಿಕೆ ಮಾಡಿದನು. ಅಷ್ಟರಲ್ಲಿ ಭದ್ರಕಾಳಿಯೂ ಅಲ್ಲಿಗೆ ಬಂದಳು. ಶಂಖಚೂಡನು ವಿಮಾನವಿಳಿಯುವಲ್ಲಿ ಸ್ಕಂದನನ್ನೂ ರುದ್ರ—ಭದ್ರಕಾಳಿಯನ್ನೂ ಎದುರುಗೊಂಡನು. ರಾಜ ಪರಿವಾರವು ಆ ಮೂವರ ಮುಂದೆಯೂ ತಲೆಬಾಗಿತು. ಆಶೀರ್ವಾದ ಪಡೆಯಿತು. ಶಂಖಚೂಡಾಗಮನವನ್ನು ಕಂಡು, ನಂದೀಶ್ವರಾದಿಗಳು ಎದ್ದು ನಿಂತರು. ಇಕ್ಕಡೆಯ ರಾಜಕೀಯ ಸಂಸ್ಕೃತ ಶಾಲಿಗಳು ಶಿಷ್ಟಾಚಾರದ ಮಾತುಕತೆಗಳಿಗೆ ತೊಡಗಿದರು. ರಾಜನು ಎಲ್ಲರೊಡನೆ ಔಪಚಾರಿಕವಾಗಿ ಒಂದೊಂದಾಡಿ ಕೊನೆಗೆ ರುದ್ರನ ಬಳಿಗೆ ಹೋಗಿ ಕುಳಿತನು.

ರುದ್ರನೆಂದನು— "ಮಹಾರಾಜ, ನಿನ್ನ ವಂಶವು ಅನಾದಿಯಿಂದಲೂ ಬಹಳ ಧಾರ್ಮಿಕವಾದದ್ದು. ನಿನ್ನ ತಂದೆ ದಂಭನು ವಿಷ್ಣುವಿನ ಪರಮ ಭಕ್ತ. ವೈಷ್ಣವರು ಯಾರಿಗೂ ಉಪದ್ರವ ಕೊಡುವುದಿಲ್ಲ. ಅವರಲ್ಲಿ ಎಳ್ಳಷ್ಟು ಸ್ವಾರ್ಥಭಾವನೆ ಮನೆಮಾಡಿರುವುದಿಲ್ಲ. ಬ್ರಹ್ಮನಿಂದ ತೃಣದ ವರೆಗಿನ ಎಲ್ಲ ಚರಾಚರ ವಸ್ತುಗಳನ್ನು ಅವರು ಸಮದೃಷ್ಟಿಯಿಂದ ನೋಡುತ್ತಾರೆ. ಪರತತ್ವದ ಲಾಭವನ್ನು ಹೀನವೆಂದು ಬಗೆಯುತ್ತಾರೆ. ಅವರು ಯಾರನ್ನೂ ಅಪಹರಿಸುವುದಿಲ್ಲ; ಬೆದರಿಸುವುದಿಲ್ಲ. ಲೋಕಸೇವಾನಿರತರಾಗಿರುತ್ತಾರೆ. ಮುಕ್ತಿಯೂ ಅವರಿಗೆ ಸೇವೆಯ ಮುಂದೆ ತುಚ್ಛವಾದದ್ದು. ಬ್ರಹ್ಮಪದವಾಗಲೀ ಇಂದ್ರಾಸನವಾಗಲೀ ಅವರಿಗೆ ಅಗಣ್ಯ. ಅವರು ಉತ್ತಮರು, ಅತಿ ಉದಾರರು. ಪರಮ ವೈಷ್ಣವನಾದ ನೀನು ದೇವಸ್ವದ ಮೇಲೆ ಕೈಮಾಡ ಬಯಸುವುದು ಯಾವ ಧರ್ಮ? ಆದದ್ದು ಆಗಿ ಹೋಯಿತು. ಈಗಲಾದರೂ ನೀನು ನನ್ನ ಮಾತನ್ನು ಕೇಳು. ದೇವತೆಗಳ ರಾಜ್ಯವನ್ನು ಅವರಿಗೆ ಬಿಟ್ಟುಕೊಡು. ಅವರ ನೆಲದಲ್ಲಿ ಅವರೂ ನಿನ್ನ ರಾಜ್ಯದಲ್ಲಿ ನೀನೂ ಸುಖ-ಸಂತೋಷಗಳಿಂದ ಬಾಳಿ ಕೊಂಡಿರಿ. ಯಾರೊಡನಾದರೂ ವಿರೋಧ ಕಟ್ಟಿಕೊಳ್ಳುವುದು ಸಮಂಜಸವಲ್ಲ. ಅದರಲ್ಲೂ ನೀವಿಬ್ಬರೂ ಕಶ್ಯಪನ ವಂಶಜರು, ಸಹೋದರರು. ಬಂಧುದ್ರೋಹಕ್ಕೆ ಮಿಗಿಲಾದ ದುರಂತ ಇನ್ನಾವುದೂ ಇಲ್ಲ. ಅದಕ್ಕೆ ಅವಕಾಶ ನೀಡಬೇಡ. ರಾಜ್ಯದ ಮೇಲೆ ನೀನು ನಿನ್ನ ಅಧಿಕಾರವಿದೆಯೆಂದು ನಂಬಿದ್ದರೂ ಎಲ್ಲಾ ಕಾಲಗಳಲ್ಲಿಯೂ ಒಂದೇ ಪರಿಸ್ಥಿತಿ ಉಳಿಯುವುದಿಲ್ಲವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳು. ಆದುದರಿಂದ ಅದು ನಿನ್ನ ಬಳಿಯೂ ಬಹುಕಾಲ ಉಳಿಯುವುದಿಲ್ಲವೆಂದು ಜ್ಞಾಪಕದಲ್ಲಿಡು.'

ರುದ್ರನು ಮೌನನಾದನು. ರಾಜಾ ಶಂಖಚೂಡನೆಂದನು - "ನೀನೆಂದದೆಲ್ಲ ಸರಿಯೇ. ಆದರೂ ಈ ವಿಷಯ ನನಗೂ ಸ್ವಲ್ಪ ಹೇಳಲಿದೆ. ನೀನು ಈಗ ಬಂಧು—ದ್ರೋಹದ ಮಾತಾಡಿದ್ದೀಯೆ. ಅದನ್ನೇ ವಿಚಾರಿಸು. ದೇವತೆಗಳು ನಮ್ಮ ಸಹೋದರರು ಅಂದಿದ್ದೀಯೋ. ಈ ಸಹೋದರರು ನಮಗೆ ಮಾಡಿದ ಉಪಕಾರವೇನು? ಬಲಿಯ ಸರ್ವಸ್ವಾಪಹರಣಗೈಯ್ದು ಎಲ್ಲಿಗಟ್ಟಿದರು? ನಾನು ಅದೇ ಸಂಪತ್ತನ್ನು ದೇವತೆಗಳಿಂದ ಮರಳಿ ಪಡೆಯ ಬಯಸುತ್ತೇನೆ. ಅವರದೆಂಬುದು ನನಗೆ ಬೇಡ. ಕಶ್ಯಪನ ವಂಶದವರು, ಸೋದರರಾಗುತ್ತಿರಾದರೆ, ದೇವತೆಗಳು ನಮ್ಮ ಹಿರಣ್ಯಾಕ್ಷನನ್ನೇಕೆ ಕೊಂದರು? ಈ ವಿಶ್ವ ಪರಮಾತ್ಮನ ಪ್ರಕೃತಿಯ ಆಟ. ಅವನು ಯಾರಿಗೆ ಐಶ್ವರ್ಯ ಕೊಡುತ್ತಾನೋ ಅದು ಅವನಿಗೇ ಸೇರುತ್ತದೆ. ನನ್ನಲ್ಲಿ ಬಲವಿರುವಾಗ ನಾನು ಅದರ ಪ್ರಯೋಜನ ಪಡೆಯುವುದು ಅಧರ್ಮವೆಂತು?'

ರುದ್ರನೆಂದನು— 'ನೀನು ವಿವಾದಗ್ರಸ್ತ ಭೂಭಾಗವನ್ನು ಆಕ್ರಮಣದಿಂದ ಮುಕ್ತಗೊಳಿಸುವುದಿಲ್ಲ ಆ ಆಕ್ರಮಣಕಾರಿ ಬಲಿಯನ್ನೇ ಅದರ ಸ್ವಾಮಿಯೆಂದು ತಿಳಿಯುವುದಾದರೆ, ಹೆಚ್ಚು ಮಾತೇಕೆ? ನೀನು ಯುದ್ಧಕ್ಕೆ ತಯಾರಾಗಬಹುದು.'

ಶಂಖಚೂಡನೆದ್ದು ರುದ್ರನಿಗೆ ನಮಸ್ಕರಿಸಿದನು. ಅಮಾತ್ಯ—ಪರಿವಾರದೊಡನೆ ವಿಮಾನವೇರಿ ರಾಜಧಾನಿಗೆ ಮರಳಿದನು. ದೇವ-ದಾನವರು ಮೊದಲಿಂದಲೇ ಯುದ್ಧಸಿದ್ಧರಿದ್ದರು. ಸಂಧಾನದ ಮಾತುಕತೆಗಳು ವಿಫಲವಾಯಿತೆಂಬೊಡನೇ ಇಬ್ಬಣಗಳೂ ರಣರಂಗದಲ್ಲಿ ಒಂದಾದವು. ದಾನವರ ಬಳಿ ದಿವ್ಯಾಸ್ತ್ರಗಳಿದ್ದುದು ದೇವತೆಗಳಿಗೂ ಅರಿಯದ ಸಂಗತಿಯಲ್ಲ. ಅವನ್ನು ದಿವ್ಯಾಸ್ತ್ರಗಳಿಂದಲೇ ಎದುರಿಸಬೇಕೆಂಬುದೂ ಅವರಿಗೆ ಗೊತ್ತು. ಆದುದರಿಂದ ಅವರು ವೈಷ್ಣವ, ವಾರುಣ, ವಾಹ್ನಿ, ನಾಗಪಾಶ, ನಾರಾಯಣ, ಗಾಂಧರ್ವ, ಬ್ರಾಹ್ಮ, ಗರುಡ, ಪಾರ್ಜನ್ಯ, ಪಾಶುಪತ, ಜೃಂಭಣ, ಪಾರ್ವತ, ಮಾಹೇಶ್ವರ, ವಾಯವ್ಯ, ದಂಡ, ಸಂಮೋಹನ, ಅವ್ಯರ್ಥ ಮೊದಲಾದ ದಿವ್ಯಾಸ್ತ್ರಗಳನ್ನು ಬಹುಸಂಖ್ಯೆಯಲ್ಲಿ ತಂದರು. ದಿವ್ಯಾಸ್ತ್ರಗಳು ಒಂದೇ ಪಕ್ಷದಲ್ಲಿದ್ದರೆ, ಅವು ಪ್ರಳಯಂಕರವೆನಿಸುತ್ತವೆ. ಎರಡೂ ಕಡೆಯವರಲ್ಲಿ ಇದ್ದರೆ, ಆಗ ಅವು ಪರಸ್ಪರ ತಾಗಿ, ವಿಶ್ವವನ್ನು ಪ್ರಳಯದಿಂದ ಸಂರಕ್ಷಿಸುತ್ತವೆ. ಭದ್ರಕಾಳಿಯು ತನ್ನ ವಾಹನವನ್ನೇರಿ ರಣರಂಗಕ್ಕೆ ಬಂದಳು. ಯುದ್ಧ ಆರಂಭಿಸಿತು.

ಆರಂಭದಲ್ಲಿ ದಾನವರು ದೇವತೆಗಳನ್ನು ಸೋಲಿಸಿದರು. ಅವರು ಓಡತೊಡಗಿದಾಗ, ಸೇನಾಪತಿ ಸ್ಕಂದನು ಬಂದು ತಡೆದನು. ಯುದ್ಧರಂಗದ ಪರಿಸ್ಥಿತಿ ಬದಲಾಯಿತು, ದಾನವರು ಸೋತೋಡತೊಡಗಿದರು. ಅದನ್ನು ಕಂಡು ಶಂಖಚೂಡನೇ ಅಲ್ಲಿ ಬಂದನು. ವಿಮಾನಾರೂಢನಾಗಿ ದೇವಸೇನೆಯ ಮೇಲೆ ಕಲ್ಲು, ಹಾವು ಮತ್ತು ಮರಗಳ ಮಳೆಯನ್ನೇ ಸುರಿಸಿದನು. ಸ್ಕಂದನು ದಿವ್ಯಾಸ್ತ್ರಗಳಿಂದ ಅವನ್ನು ತುಂಡರಿಸಿದನು. ಶಂಖಚೂಡನು ಇದನ್ನು ಸಹಿಸಲಾಗದೆ ಸ್ಕಂದನ ವಾಹನವನ್ನು ನಿಷ್ಪ್ರಯೋಜಕಗೊಳಿಸಿದನು. ಆಗ್ನ್ಯಾಸ್ತ್ರ ಹರಿಸಿ ಯುದ್ಧರಂಗಕ್ಕೆ ಬೆಂಕಿಯಿಟ್ಟನು. ತತ್‌ಕ್ಷಣವೇ ಸ್ಕಂದನು ವಾಯುಯಾನವೇರಿ ಪರ್ಜನ್ಯಾಸ್ತ್ರದ ಮೂಲಕ ಅದನ್ನು ಆರಿಸಿದನು.

ಅತ್ತ ಭದ್ರಕಾಳಿಯೂ ದಾನವ ಸೇನೆಯ ಮೇಲೆ ಭಯಂಕರವಾದ ಆಗ್ನೇಯಾಸ್ತ್ರ ಬಿಟ್ಟಳು. ಶಂಖಚೂಡನು ಅದನ್ನು ಪಾರ್ಜನ್ಯಾಸ್ತ್ರದಿಂದ ತಣ್ಣಗಾಗಿಸಿದನು. ಕಾಳಿಯು ವಾರುಣಾಸ್ತ್ರ ಬಿಟ್ಟಳು, ದಾನವನು ಗಾಂಧರ್ವಾಸ್ತ್ರದಿಂದದನ್ನು ಅಸಫಲಗೊಳಿಸಿದನು. ಕಾಳಿಯು ಮಾಹೇಶ್ವರಾಸ್ತ್ರ ಪಡೆಸಿದಳು. ರಾಜನು ವೈಷ್ಣವಾಸ್ತ್ರದಿಂದ ಅದನ್ನು ತುಂಡರಿಸಿದನು. ಆಗ ಕಾಳಿಯು ನಾರಾಯಣಾಸ್ತ್ರವನ್ನು ಬಿಟ್ಟಳು; ರಾಜನು ರಥದಿಂದ ಕೆಳಗಿಳಿದನು; ತಲೆಬಾಗಿದನು; ನೆಲದ ಮೇಲೆ ಮಲಗಿ ಬಿಟ್ಟನು. ಅಸ್ತ್ರವು ಆತನ ಮೇ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

126 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ

ಸಂಪರ್ಕ ಬೆಳಸಿರಿ.

ಠೇವಣಾತಿಗಳ ಮೇಲೆ 7¼% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ

"ಜೀವನ-ನಿಧಿ"ಯಲ್ಲಿ

ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—1.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,

ರೇಸ್ ಕೋರ್ಸ್ ರೋಡ್, ಬೆಂಗಳೂರು—1

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,

ಮದ್ರಾಸು—4

ನವಯುಗ

ವಾರಪತ್ರಿಕೆ
ಉಡುಪಿ, ದ. ಕ.

NAVAYUGA
UDIPI, S. K.

ಸಂಪುಟ : 50
ಸಂಚಿಕೆ : 11

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
ವಿಶೇಷ ಸಂಚಿಕೆಗಳು ಸಹಿತ
ಬಿಡಿ ಪ್ರತಿ : ೦–೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ಮೂರು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಏಕತಾನವಾದಬೇಕು

ಕರ್ನಾಟಕದಲ್ಲಿ ಶ್ರೀ ಕೆಂಗಲ್ಲರು ಸಂಚಾರ ಮಾಡಿದರು; ಶ್ರೀಮತಿ ಗಾಂಧಿಯವರಿಂದ ರಾಜ್ಯಕ್ಕೆ ಅನ್ಯಾಯವಾಗುತ್ತದೆ ಎಂದು ಹಾಡಿದರು. ಇಂಡಿಕೇಟಿನ ರಾಜ್ಯ ಸಂಚಾಲಕ ಶ್ರೀ ಅರಸು ದಿಲ್ಲಿಗೆ ಹೋಗಿಬಂದರು, ಮಹಾಜನ ಆಯೋಗವನ್ನು ಅಂತಿಮವೆಂದು ತಿಳಿದು ಅದರ ವರದಿಯನ್ನು ಇದ್ದಕ್ಕಿದ್ದಂತೆ ಸ್ವೀಕರಿಸಬೇಕು ಎಂದು ಪ್ರಧಾನಿಯವರನ್ನು ಕೇಳಿಕೊಂಡರು. ನಾಯಕಮಣಿಗಳು ಬೆಂಗಳೂರು ನಗರ ಕಾರ್ಪೊರೇಶನ್ನಿನ ಭಾವಿ ಚುನಾವಣೆಗಳನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದಾರೆ; ಮುಂದಿನ ಸಾರ್ವತ್ರಿಕ ಚುನಾವಣೆಗಳನ್ನು ಬಹಳವಾಗಿ ಕಣ್ಣಿನಲ್ಲಿಟ್ಟುಕೊಂಡಿದ್ದಾರೆಂಬುದು ನಮಗೆಲ್ಲ ನೂರಕ್ಕೆ ನೂರು ಪಾಲು ಸತ್ಯ. ಶ್ರೀಮತಿ ಗಾಂಧಿಯವರಿಂದ ರಾಜ್ಯಕ್ಕೆ ಅನ್ಯಾಯವಾಗುವುದಿಲ್ಲವೆಂದೆಲ್ಲ ಇವರು ಹೇಳುತ್ತ ತಿರುಗಬೇಕಾದರೆ, ಯಾವ ಭರವಸೆಯನ್ನು ಆಕೆಯಿಂದ ಪಡೆದಿದ್ದಾರೆ ಎಂಬುದು ಮುಂದೆ ಬರುತ್ತದೆ. ಯಾರಿಗೂ ಯಾವ ರೀತಿಯ ಭರವಸೆಯನ್ನು ಕೊಡುವುದಕ್ಕೆ ಹೋಗದೆ ತನಗೆ ತೋಚಿದನ್ನು ತೋಚಿದಂತೆ ಮಾಡುವ ಶ್ರೀಮತಿಯವರು ಮಾಡಿದ್ದೆಲ್ಲ ನ್ಯಾಯವೇ ಎಂದು ಇವರು ಕಣ್ಣುಮುಚ್ಚಿ ಒಪ್ಪಿಕೊಳ್ಳುತ್ತಾರೆಂದೇ ಇದರ ಅರ್ಥವಿದ್ದರೂ ಇರಬಹುದು.

ಮಹಾಜನ ವರದಿಯು ಪ್ರಕಟವಾದಾಗ ಪ್ರಧಾನಿ ಶಾಸ್ತ್ರಿಯವರು ಪ್ರಯತ್ನಿಸಿದರು; ಅವರ ನಂತರ ಗದ್ದುಗೆಯೇರಿದ ಶ್ರೀಮತಿ ಗಾಂಧಿಯವರು ಪ್ರಯತ್ನ ಮಾಡುತ್ತಿದ್ದಾರೆ. ಶ್ರೀಮತಿ ಗಾಂಧಿಯು ಪ್ರಧಾನಿಯೂ ಹೌದು; ಈಗ ಗೃಹಮಂತ್ರಿಯೂ ಹೌದು. ಆದ ದರಿಂದ ಆಕೆಗಿರುವ ಪರಿಹಾರ ಶಕ್ತಿ ದ್ವಿಗುಣಿತವೆನ್ನಬೇಕು. ಕೇಂದ್ರದ ಹಿಂದಿನ ಗೃಹಸಚಿವ, ಸದ್ಯದ ವಿತ್ತಸಚಿವ ಶ್ರೀ ವೈ. ಬಿ. ಚವನರು ಈಗ ಮಹಾರಾಷ್ಟ್ರ ಸಂಚಾರ ನಿರತರಾಗಿದ್ದಾರೆ. ಹಿಂದಿನಿಂದಲೂ ಶ್ರೀ ಚವನರು ಮಹಾರಾಷ್ಟ್ರದ ಪಕ್ಷಪಾತಿಗಳೆಂದು ಕೆಸರಾದವರು. ಮಹಾಜನ ಆಯೋಗದ ರಚನೆಗೂ ಪ್ರಮುಖ ಹಿನ್ನೆಲೆಯೇ ಶ್ರೀ ಚವನರೆಂದು ಧಾರಾಳವಾಗಿ ಹೇಳಬಹುದು. ಅವರು ಮೊನ್ನೆಮೊನ್ನೆ "ಚಳವಳಿಗಳಿಂದ ಸಮಸ್ಯೆ ಪರಿಹಾರ ಕಾಣುವುದಿಲ್ಲ; ಬದಲಿಗೆ ಅದು ಜಟಿಲವಾಗುತ್ತಲೇ ಹೋಗುತ್ತದೆ" ಎಂದು ಮಹಾರಾಷ್ಟ್ರ ಪ್ರಾದೇಶಿಕ ಕಾಂಗ್ರೆಸ್ಸಿನಲ್ಲಿ ಹೇಳಿದರೆಂದು ವರದಿಯಾಗಿದೆ. ಸಂಸತ್ತಿಗೆ ಮಧ್ಯಾವಧಿ ಚುನಾವಣೆಗಳು ನಡೆಯುತ್ತವೆ ಎಂಬುದರ ಹಿನ್ನೆಲೆಯಲ್ಲೇ ಅವರ ಉಪದೇಶದ ಧಾಟಿಯಿದ್ದುದನ್ನು ಮರೆಯುವಂತಿಲ್ಲ. "ಈ ಗಡಿವಿವಾದವನ್ನು ಚಳವಳಿಗಳಿಂದ ಬಿಡಿಸಲು ಹೋಗಬಾರದು. ಅದಕ್ಕೆ ಸಂಸದೀಯ ವಿಧಾನಗಳಿವೆ. ಇತರ ರಾಜ್ಯಗಳ ಸಂಸತ್ಸದಸ್ಯರ ಸಹಕಾರ ಪಡೆದುಕೊಂಡು ಇದನ್ನು ಪರಿಹರಿಸಬೇಕು" ಎಂಬ ಅಮೂಲ್ಯ ಸಲಹೆಯನ್ನು ಅವರು ಮುಂದಿಟ್ಟಿದ್ದಾರೆ. ಅಂದರೆ, ಶ್ರೀ ಚವನರು ತಮ್ಮ ಕಿರೀಟರಹಿತ ಸಿಂಹಾಸನವನ್ನು ಭದ್ರಪಡಿಸಲು ಈ ಬಗೆಯಲ್ಲಿ ಮಾತಾಡಿದ್ದಲ್ಲವಾದರೆ, ಮಹಾಜನ ಆಯೋಗವನ್ನು ಕೇಂದ್ರ ಸರಕಾರ ತಿಪ್ಪೆಗೆಸೆಯಿತು. ಎಂಬುದರ ಸ್ಪಷ್ಟ ಸೂಚನೆಯಿದು. ಶ್ರೀ ಚವನರು ಮತ್ತೂ ಒಂದು ಹೆಜ್ಜೆ ಮುಂದಿಟ್ಟು '(ಸಂಸತ್ತಿನಲ್ಲಿ) ಸ್ವತಂತ್ರ ಪಕ್ಷ, ಜನಸಂಘ ಮತ್ತು ಸಂಸ್ಥಾ ಕಾಂಗ್ರೆಸ್ಸುಗಳು ಮಾತ್ರ ಮಹಾಜನ್ ವರದಿಯನ್ನು ಬೆಂಬಲಿಸುತ್ತಿವೆ; ಈ ಬೆಂಬಲವಾದರೂ ಬರಿಯ ರಾಜ್ಯಕೀಯ ದುರುದ್ದೇಶಗಳಿಗಾಗಿ" ಎಂದರು. ಆದರೆ, ಉಳಿದ ರಾಜ್ಯಕೀಯ ಪಕ್ಷಗಳು ಮಹಾಜನ ವರದಿಯನ್ನು ಒಪ್ಪದಿರುವುದೂ ಅಂಥಹುದೇ ರಾಜ್ಯಕೀಯ ದುರುದ್ದೇಶಗಳಿಗಾಗಿ ಎಂಬುದೂ ಅಷ್ಟೇ ಸಿದ್ಧವಾದಂತಾಯ್ತು.

ಶ್ರೀ ಚವನರ ಹೇಳಿಕೆಯಂತೆ ಈ ಗಡಿವಿವಾದದಲ್ಲಿ ಕೇಂದ್ರಸರಕಾರ ತಾನಾಗಿ ಏನೂ ಮಾಡುವುದಿಲ್ಲ. ಅದು ಸಂಸತ್ತಿನ ಸಹಾಯವನ್ನು ಪಡೆಯುತ್ತದೆ ಎಂಬುದು ಪ್ರಕಟವಾಯ್ತು; ಈ ಸಹಾಯವು ಯಾವರೀತಿಯಿರಬಹುದೆಂಬುದು ಮಾತ್ರ ಮುಂದಿನ ಪ್ರಶ್ನೆ. ಮಹಾಜನ ವರದಿಯನ್ನೇ ಅದು ಸಂಸತ್ತಿನ ಮುಂದೆ ಮಂಡಿಸಬಯಸುವುದು ಕಷ್ಟ. ಸಾಂಸದಿಕ ಸಮಿತಿಯೊಂದರ ಮೂಲಕ ಮತ್ತೆ ಪರಿಹಾರಸೂತ್ರ ಹುಡುಕುವ ಮಾತೂ ಕೇಳಿಬರುತ್ತಿದೆ. ಪ್ರಜಾಸತ್ತೆಯಲ್ಲಿ ಪಾರ್ಲಿಮೆಂಟಿನ ಅಧಿಕಾರವನ್ನು ಯಾರೂ ಪ್ರಶ್ನಿಸುವುದಿಲ್ಲ; ಆದರೆ, ಅದು ಅಧಿಕಾರವನ್ನು ಬಳಸುವಾಗ "ಉನ್ನತ ಮಟ್ಟದ ಆಯೋಗ"ವು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಗಾಳಿಗೆ ತೂರುವುದು ಸಮಂಜಸವಾಗದು; ಒಂದುವೇಳೆ ಅದು ಹಾಗೆ ಮಾಡಿದರೆ, ಅದು ಅಧಿಕಾರದ ದುರುಪಯೋಗವಾಗುತ್ತದೆ. ತನ್ನ ರಾಜ್ಯಕೀಯ ಬೆಂಬಲಿಗರ ತಸ್ಟೀಕರಣಕ್ಕಾಗಿ ಶ್ರೀಮತಿ ಗಾಂಧಿಯವರು ಏನನ್ನೂ ಮಾಡಬಹುದು; ಆದರೆ, ಅದು ಪ್ರಧಾನಿ ಪದವಿಗೆ ಹೇಳಿಸಿದಂತಹುದೂ ಆಗಬೇಕು. ಕರ್ನಾಟಕದ ಸರ್ವ ಹಿತಾಸಕ್ತಿಗಳನ್ನೂ ಕಡೆಗಣಿಸಿ, ಅದಕ್ಕೆ ಅನ್ಯಾಯ—ಅಪಚಾರವನ್ನು—ಅದು ಕಾಯಿದೆಬದ್ಧವಾಗೇ ಇರಲಿ—ಮಾಡುವುದ ಎಂದರೆ, ಒಂದು ದೇಶದ ಪ್ರಜೆಗಳಲ್ಲಿ ಕೆಲವರನ್ನು ಅಡ್ಡಪಲ್ಲಕ್ಕಿ ಮೆರವಣಿಗೆ ಮಾಡಿಸಿ, ಮತ್ತೆ ಕೆಲವರನ್ನು ತಿಪ್ಪೆಗೆಳೆದ ಹಾಗೆಯೇ. ಕರ್ನಾಟಕದ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಹಿಂದಿನಿಂದಲೂ ಇದನ್ನೇ ಹೇಳುತ್ತ ಬಂದಿದ್ದಾರೆ—ಮಹಾಜನ ವರದಿಯೇ ಅಂತಿಮ; ಅದನ್ನು ನೇಮಿಸಿದ್ದು ಬರಿಯ ಅಪಹಾಸ್ಯಕ್ಕಲ್ಲ. ಆಯೋಗದ ವರದಿ ಒಂದು ಪಕ್ಷಕ್ಕೆ ಅನುಕೂಲವಿಲ್ಲವೆಂದು ತಿರಸ್ಕರಿಸಲ್ಪಟ್ಟ ಹೋಗುವುದಾದರೆ, ಆಯೋಗ ರಚನೆ ಮಾಡದರೂ ಏತಕ್ಕೆ? ಅಂದರೆ ಕರ್ನಾಟಕಕ್ಕೆ ಈ ಘಟ್ಟದಲ್ಲಿ ನ್ಯಾಯ ಸಿಗುವ ದಿನಗಳು ದೂರವಿಳಿದುವು. ಸಂಸತ್ತಿನಲ್ಲಿ ಕರ್ನಾಟಕದ ಇಂಡಿಕೇಟಿಗರಿಗೆ ಶ್ರೀಮತಿ ಗಾಂಧಿ ಮತಸ್ವಾತಂತ್ರ್ಯ ನೀಡಲಿ, ಬಿಡಲಿ, ಅದರಿಂದ ಕರ್ನಾಟಕಕ್ಕೆ ಲಾಭವಾಗುವುದಿಲ್ಲ. ಮರಾಠಿ ಎಂ.ಪಿ.ಗಳಗಿಂತ ಕನ್ನಡ ಎಂ.ಪಿ.ಗಳ ಸಂಖ್ಯೆ ಕಡಿಮೆ. ಉಳಿದವರಿಗೆ ಬೆಳಗಾಂವಿ ಮರಾಠರು ಪಡೆದರೇನು, ಕನ್ನಡಿಗರು ಇಟ್ಟುಕೊಂಡರೇನ ? ಆದುದರಿಂದ ಮಹಾಜನ ಆಯೋಗದ ವರದಿಯನ್ನೇ ಕಾರ್ಯಗತ ಮಾಡಬೇಕೆಂಬ ಮಾತಿನ ನಡುವೆ ಅಪಸ್ವರವೆಬ್ಬಿಸುವುದು ರಾಜ್ಯದ ಹಿತಕ್ಕೆ ದ್ರೋಹ ಬಗೆದಂತೆಯೇ ಸರಿ. ಕನ್ನಡಿಗರು ಯಾರು ಯಾರಲ್ಲಿ ವಿಶ್ವಾಸವಿಡುವುದಕ್ಕಿಂತ ತಂತಮ್ಮಲ್ಲೇ ವಿಶ್ವಾಸವಿಟ್ಟು ಮುಂದಾತರಿಯುವ ಸಂಧಿ ಸಮುಚಿತವಿದು.

ಅಸ್ಸಾಮಿಗೆ ಹೊಸ ಮಂತ್ರಿ

ಅಸ್ಸಾಮದ ಮುಖ್ಯಮಂತ್ರಿಯಾಗಿ ಬಹಳ ಕಾಲದಿಂದಲೂ ಇಂದಿರುವ ಶ್ರೀ ಚಾಲಿಹಾ ಕೊನೆಗೂ ಗದ್ದುಗೆಯಿಳಿದರು. ಅನಾರೋಗ್ಯವೇ ಇದಕ್ಕೆ ಕಾರಣವೆನ್ನಲಾಗುತ್ತಿರುವುದಾದರೂ ರಾಜ್ಯಕೀಯ ಕಾರಣಗಳೂ ಇಲ್ಲದಿಲ್ಲ. ಅವರ ಉತ್ತರಾಧಿಕಾರಿಯಾಗಿ ಬಂದಿರುವ ಶ್ರೀ ಮಹೇಂದ್ರ ಮೋಹನ್ ಚೌಧರಿಯವರು ತಮ್ಮ ಸಂಪುಟವನ್ನು ಕೊನೆಗೂ ಘೋಷಿಸಿದರು. ಮಂತ್ರಿಗಳನ್ನು ಆರಿಸುವಲ್ಲಿ ಶಾಸಕೀಯ ಪಕ್ಷದ ನಾಯಕರಿಗೆ ಸ್ವಾತಂತ್ರ್ಯವಿರಬೇಕೆಂಬುದೂ ಇದರಲ್ಲಿ ಇತರರು ಕೈಹಾಕಬಾರದೆಂಬುವೂ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯ ಅಭಿಪ್ರಾಯವಿತ್ತು. ಆಕೆ ಮಂತ್ರಿಗಳನ್ನು ಆರಿಸುವಾಗಲೂ, ಖಾತೆಗಳನ್ನು ಹಂಚುವಾಗಲೂ, ಮಂತ್ರಿಗಳ ರಾಜೀನಾಮೆಗೆ ಆದೇಶ ನೀಡುವಾಗಲೂ ಖಾತೆ ಬದಲಿಸುವಾಗಲೂ ಯಾರ ಸಲಹೆಯನ್ನೂ ಕೇಳಲಿಲ್ಲ. ಸ್ವತಂತ್ರವಾಗಿ ಆತ್ಮಸಾಕ್ಷಿಯಂತೆ ನಡೆದುಕೊಂಡರು. ಆದರೆ, ಈಗ ಅಂಥದೇ ಸ್ವಾತಂತ್ರ್ಯವನ್ನು ಅಸ್ಸಾಮದ ಹೊಸ ಮುಖ್ಯಮಂತ್ರಿ ಶ್ರೀ ಚೌಧರಿಯವರಿಗೆ ನಿರಾಕರಿಸಿದರು. ಇಂತಿಂಥವರನ್ನು ಸಂಪುಟದಲ್ಲಿ ಸೇರಿಸಲೇಬೇಕು ಎಂದು ಶ್ರೀಮತಿ ಗಾಂಧಿ ಆಗ್ರಹತೊಟ್ಟು ಕುಳಿತರು. ಹೀಗೆಯೇ ಬೇರೆ ಬೇರೆಯಿಂದ ರಾಜ್ಯಕೀಯ ಒತ್ತಡ ಶ್ರೀ ಚೌಧರಿಯವರ ಮೇಲೆ ಬಿತ್ತೆಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಇದರ ಪರಿಣಾಮವೇನು? ಪಾಕಿಸ್ತಾನದ ಪೌರನೊಬ್ಬನು ಅವರ ಸಂಪುಟದಲ್ಲಿ ಸಚಿವ ಸ್ಥಾನ ಹೊಂದಿದ್ದಾನೆ! ಶ್ರೀಮತಿ ಗಾಂಧಿಯವರ ತಲೆ ಯಾವ ದಿಸೆಯಲ್ಲಿ ಓಡುತ್ತಿದೆ ಎಂಬುದೇ ಯಾರಿಗೂ ಅರ್ಥವಾಗುವುದಿಲ್ಲ; ಅದು ಅರ್ಥವಾಗುವಷ್ಟರಲ್ಲಿ ದೇಶಕ್ಕೆ ದೇಶವೇ ಬಂಗಾಳವಾಗಿ ಬಿಡುತ್ತದೆಂಬ ಭಯ ಮನೆ ಮಾಡುತ್ತದೆ.

ಧರ್ಮಸ್ಥಳ ಲಕ್ಷದೀಪೋತ್ಸವ

ಧರ್ಮಸ್ಥಳದ ಲಕ್ಷದೀಪೋತ್ಸವ ಉತ್ಸವಗಳು ಇದೇ ತಾ. ೨೪ರಿಂದ ೨೮ರ ವರೆಗೆ ಜರಗಲಿವೆ ಎಂದು ತಿಳಿದುಬರುತ್ತದೆ.

ತಾ. 27 ಮತ್ತು 28ರಂದು ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳು ನಡೆಯಲಿರುವುವು.

ಗೇಹರಾಜ್ಯದಲ್ಲಿ

ಡಿ'ಗಾಲೆ ಮೃತ್ಯುಪತ್ರ

"ಏನು, ಇಂದೇಕೆ ತಡ?'

"ತಡವೇನು ಬಂತೆ? ಏನೋ ವಿಷ್ಯ ಬಂತು; ಮಾತಿಗೆ ಮಾತು ಬಂತು..."

"ಗೇಣಿ ಶಾಸ್ತ್ರಿಗೆ ವಿನಾಶ ಬಂತು..."

"ಯಾಕೆ? ಏನಾಯ್ತು?"

"ಇಷ್ಟು ಆಗೋಕೆ ಬಾಯಿಬಿಟ್ಟರೇ ಸಾಕು ಹೊರಗೆ ಏನೋಂತ...."

"ಅಂದ್ರೆ?"

"ಬಂದಿಷ್ಟು ಒಕ್ಕಲಿನವ ಕೋರ್ಟಿಗೆ ಹೋಗಿ ಅಂಥ ಕೊಟ್ಟು ಬಿಟ್ಟ...."

"ಹೋಗ್ಲಿ ಬಿಡು; ಅವನ ಋಣ ಇದೆಯೋ ಏನೋ..."

"ನೀವು ಹೀಗೇ ಹೇಳಿ...."

"ಅಲ್ವೆ, ಮತ್ತೆ ಬರೋ ಎರಡು ಮೂರು ಸಲ ಕೋರ್ಟು ಬಾಗಿಲು ಹತ್ತಿದರೆ, ಈ ಜನ್ಮದಲ್ಲಾದರೂ ಸಿಗೋದುಂಟೆ? ಬರೋಲ್ಲ; ನಿದ್ದೆಗೇಡು ಮಾತ್ರ...."

"ಹ್ಞಾನ್ನಿ. ನೋಡಿ ಹಿಂದೆ ಹೇಳುತ್ತಿದ್ರು, ಈ ಜನ್ಮದಲ್ಲಿ ಋಣ ಇಟ್ಕೊಂಡ್ರೆ ಮುಂದಿನ ಜನ್ಮದಲ್ಲಿ ಅವನ ಹೋರಿಯಾಗಿ ಹುಟ್ಟಬೇಕೂಂತ...."

"ಅದು ಅಂದಿನ ಮಾತು; ಇಂದು ಹಾಗಲ್ಲ. ಧನಿಯಾಗಿ ಹುಟ್ಟುತ್ತಾನೆ...."

"ಇರ್ಲಿ ಬಿಡಿ. ಈಗ ಯಾವ ವಿಷ್ಯನಿನ್ನನ್ನು ಇಷ್ಟು ಹೊತ್ತು ಎಳೆದಾಡಿತೂಂತ...."

'ಅದೇ, ಫ್ರಾನ್ಸಿನ ಮಾಜಿ ಅಧ್ಯಕ್ಷ..'

"ಹ್ಞಾಂ, ಯಾರೂಂತೀನಿ?"

"ಚಾರ್ಲ್ಸ್ ಡಿಗಾಲೆಯವ್ರು...."

"ಏನಾಯ್ತಂತೀನಿ..."

"ಆಗೋದೇನು, ನಿಧನರಾದರು..."

'ಅಯ್ಯೋ ವರ್ಷ ಎಂಬತ್ತಕ್ಕೆ ಹತ್ತಿರ ಹತ್ತಿರವಾದ್ರೂ ಅವರೇನೂ ಅಂಥ ಮುದಿಯಾಗಿ ತೋರುತ್ತಿರಲಿಲ್ಲ...'

'ಅಲ್ಲವೇ ಮತ್ತೆ? ನೋಡು, ಅವರದ್ದು ರಾಜವೃಕ್ಷ....'

"ಯಾಕೆ?'

"ಅದೇ ಆಗ ಅವರದ್ದು ಟೆಲಿವಿಷನ್ ಕಾರ್ಯಕ್ರಮ ನಡೆಯುತ್ತಿತ್ತು. ಪೂರ್ವ ಬಿಡುವಿನಲ್ಲಿ ಅವರು ಪೇಷನ್ಸ್ ಆಡುತ್ತಿದ್ದರಂತೆ."

"ಹ್ಞಾಂ...."

"ಅಕಸ್ಮಾತ್ ಅವರಿಗೆ ಹೃದಯಾಘಾತವಾಯ್ತು; ವೈದ್ಯರು ಬರುವುದಕ್ಕೆ ಮೊದಲೇ ಅಸು ನೀಗಿದರು....'

"ಪಾಪ...'

'ಇಲ್ಲಿ ಪಾಪವೇನು ಬಂತು? ಈ ರೀತಿಯ ಸುಖದ ಸಾವು ಸಿಗೋದು ಪುಣ್ಯಬಲದಿಂದಲೇ ಅಲ್ಲವೆ?'

"ಅದ ಹೌದು. ಅದರೂ ಫ್ರಾನ್ಸ್ ವಿಧವೆಯಾಯ್ತು....'

'ಅದು ಆಲಂಕಾರಿಕ ಮಾತು ಅಷ್ಟೆ. ಪಾಶ್ಚಾತ್ಯ ದೇಶಗಳಲ್ಲಿ ವಿಧವೆಯರು ಮತ್ತೆ ಸಧವೆಯರಾಗುತ್ತಾರೆ...'

"ಅದು ಹೌದೂನ್ನಿ. ಅಮೇರಿಕೆಯ ಪ್ರಥಮ ಮಹಿಳೆ ಶ್ರೀಮತಿ ಕೆನ್ನೆಡಿಯೇ ಮತ್ತೆ ಸಧವೆಯಾದಳೆಂದ ಮೇಲೆ....'

'ಅದು ಪಾಶ್ಚಾತ್ಯ ದೇಶಗಳಿಗೂ ಅನ್ವಯಿಸುವುದು....'

"ಇರಬಹುದು. ಆದರೂ...'

"ಆಗೇ ಅಂದೆನಲ್ಲಾ, ಆಲಂಕಾರಿಕವೆಂತ...."

"ಆಲಂಕಾರಿಕವಿರಲಿ, ವ್ಯಾವಹಾರಿಕವಿರಲಿ; ಹಾಗನ್ನುವುದು ತಪ್ಪಲ್ಲ ತಾನೆ?"

"ಛೆ ಛೆ, ಯಾರು ಹಾಗಂತಾರೆ?"

"ಶ್ರೀ ಡಿಗಾಲೆಯವ್ರು ಭಾರೀ ಕಾರುಬಾರಿ ಜನ...'

"ನಿಜಕ್ಕೂ ಈ ಶತಮಾನದ ಬೆರಳೆಣಿಕೆಯ ಪ್ರಸಿದ್ಧ ಮತ್ತು ವಿಲಕ್ಷಣ ವ್ಯಕ್ತಿಗಳಲ್ಲಿ ಇವರೊಬ್ಬರು...."

'ಸೇನೆಯಲ್ಲಿಯೂ ರಾಜ್ಯಕೀಯದಲ್ಲಿಯೂ ಇವರು ಫ್ರಾನ್ಸಿಗೆ ಸಲ್ಲಿಸಿದ ಸೇವೆ ಅಪಾರ, ಅನುಪಮ.."

'ತನ್ನ ಸಾಧನೆಯಲ್ಲಿ ದೊಡ್ಡ ಸಿದ್ಧಿ ಪಡೆದದ್ದು ಅಸಮಾನವೇ."

'ದ್ವಿತೀಯ ಲೋಕ ಸಮರದ ವೇಳೆ ಜರ್ಮನಿಯ ಸರ್ವಾಧಿಕಾರಿ ಹಿಟ್ಲರನು ಫ್ರಾನ್ಸನ್ನು ಆಕ್ರಮಿಸಿದನು.'

"ಆಗ, ದೇಶದ ಹೊರಗೇ ಸೈನ್ಯ ಸಂಘಟಿಸಿ ಜರ್ಮನಿಯನ್ನು ಹಿಮ್ಮೆಟ್ಟಿಸಿದ ಕೆಚ್ಚೆದೆ ತೋರಿದವರು ಡಿ'ಗಾಲೆ...'

'ಐರೋಪ್ಯ ಸಾಮಾನ್ಯ ಮಾರುಕಟ್ಟೆಯನ್ನು ಬ್ರಿಟನ್ನು ಸೇರದಂತೆ ದೂರವಿಟ್ಟ ಎಂಟೆದೆ ತೋರಿಸಿದರು.'

'ಅಷ್ಟು ಮಾತ್ರವಲ್ಲ, ಬ್ರಿಟನ್ನನ್ನು ಅಮೇರಿಕೆಯ ಸೇಲ್ಸ್‌ಮ್ಯಾನ್ ಎಂದು ಕರೆಯುವಷ್ಟು ಎದೆಗಾರಿಕೆ ಅವರದ್ದು....'

'ಆದರೂ ನೋಡಿ, ಅವರಿಗೆ ಅಧಿಕಾರದ ಮೇಲೆ ಆಸೆಯಿರಲಿಲ್ಲ...."

'ಹೌದು. ದ್ವಿತೀಯ ಲೋಕ ಸಮರಾನಂತರ ಅವರು ರಾಜ್ಯಕೀಯದಿಂದ ಸಂಪೂರ್ಣ ನಿವೃತ್ತರಾದರು....'

'ಅವರು ದೇಶವನ್ನು ಬಹಳಷ್ಟು ಪ್ರೀತಿಸುತ್ತಿದ್ದರು..."

"ಆದುದರಿಂದಲೇ ರಾಜ್ಯಕೀಯ ಅಸ್ಥಿರತೆಯಿಂದ ಡೋಲಾಯಮಾನವಾಗಿದ್ದ ಫ್ರಾನ್ಸನ್ನು ಜನರ ಒತ್ತಾಯದಿಂದ ಬದಕಿಸಲು ೧೯೫೮ರಲ್ಲಿ ದೇಶದ ಅಧ್ಯಕ್ಷರಾದರು.'

'ಈ ವೇಳೆಯಲ್ಲಿ ಅವರು ಫ್ರಾನ್ಸಿನ ಸರ್ವತೋಮುಖ ಅಭಿವೃದ್ಧಿಗಾಗಿ ಹೋರಾಡಿದರು...."

'ಶಿಥಿಲವಾಗಿದ್ದ ದೇಶದ ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸಿದರು'

"ಅವ್ಯವಸ್ಥವಾಗಿದ್ದ ರಾಜ್ಯಕೀಯ ಪರಿಸ್ಥಿತಿಯನ್ನು ಮತ್ತೆ ಸುವ್ಯವಸ್ಥೆಗೊಳಿಸಿದರು...."

"ಆದರೆ, ೧೯೬೯ರಲ್ಲಿ ಅವರು ನಡೆಸಿದ ಪಾರ್ಲಿಮೆಂಟರಿ ಸಾಧಾರಣ ಚುನಾವಣೆಯಲ್ಲಿ ಜನಬೆಂಬಲ ದೊರೆಯದಾಯ್ತು....'

"ತತ್‌ಕ್ಷಣವೇ ಅವರು ಅಧಿಕಾರ ತ್ಯಜಿಸಿ ಬಿಟ್ಟರು...."

'ಅಂದಿನಿಂದ ರಾಜ್ಯಕೀಯ ರಂಗದಿಂದ ಅವರು ಸಂಪೂರ್ಣ ಮುಕ್ತರಾದರು....'

"ಮತ್ತೀಗ ಜೀವನ್ಮುಕ್ತರೂ ಆದರು."

"ನೋಡು, ಅಲ್ಜೀರಿಯಾಕ್ಕೆ ಸ್ವಾತಂತ್ರ್ಯ ನೀಡುವ ಮಹತ್ವ ಪೂರ್ಣ ಕ್ರಮ ಕೈಗೊಂಡದ್ದನ್ನು ಯಾರೂ ಮರೆಯಲಾರರು..."

"ಯಾರು ಮರೆತರೂ ಅಲ್ಜೀರಿಯನ್ನರು ಅಂತಹ ತಪ್ಪು ಮಾಡಲಾರರು...."

'ಆದರೂ ನೋಡು, ಡಿ'ಗಾಲೆಯವರು ಕೆಲವೊಮ್ಮೆ ಯಾರ ಮಾತನ್ನೂ ಕೇಳುತ್ತಿರಲಿಲ್ಲ; ನಿರಂಕುಶ ಪ್ರಭು ತಾನೆಂದೆ ನಡೆದುಕೊಂಡದ್ದುಂಟು ....'

'ಅದ ಹಾಗೆಯೇ ಅನ್ನಿ. ನಮ್ಮ ನೆಹರೂ ಕೂಡಾ ಹಾಗೇ ನಡೆದದ್ದುಂಟು. ಕೆಲವೊಮ್ಮೆ ಅಂತಹ ನಡತೆ ಅಗತ್ಯವಾಗುತ್ತದೆ. ಮುಖ್ಯ, ಅವರ ನಿರಂಕುಶ ನಡತೆ ದೇಶಕ್ಕೆ ಹಿತಕರವಾಗಿದ್ದರೆ ಸರಿ.'

'ನಮ್ಮ ಶ್ರೀಮತಿ ಗಾಂಧಿಯ ಹಾಗೆ"

"ಹ್ಞಾಂ...ಈಗ ಕೆಲವರು ಹಾಗನ್ನುತ್ತಾರೆ; ಆದರೂ ಹಾಗೆ ಕಾದು ಹೇಳುವುದು ಒಳ್ಳೆಯದು...."

'ಶ್ರೀ ನೆಹರೂ ಅಂದರೆ ಭಾರತ; ಭಾರತವೆಂದರೆ ನೆಹರೂ ಎಂದು ಜನ ತಿಳಿದುಕೊಂಡಿತ್ತು....'

"ಅದರೆ, ಫ್ರಾನ್ಸ್ ಅಂದರೆ ತಾನೆ; ತಾನು ಅಂದರೆ ಫ್ರಾನ್ಸ್ ಎಂದು ಶ್ರೀ ಡಿ'ಗಾಲೆಯೇ ಹೇಳಿಕೊಳ್ಳ ಬೇಕಾಯ್ತು."

"ಅದಕ್ಕೇನು ಮಾಡೋದ, ನೆಹರು ಭಾರತೀಯರ ಜನ-ಮನದಲ್ಲಿ ಅಡೆಂದೋ ಸಮಾವೇಶಗೊಂಡಿದ್ದರು. ಅವರ ತ್ಯಾಗ—ಸೇವೆಗಳ ಹಿನ್ನೆಲೆ ಡಿ'ಗಾಲೆಗೆ ಹೇಗೆ ಬಂದೀತು?'

'ಹ್ಞಾಂ....'

"ಆದ್ರೂ ನೋಡು, ಡಿಗಾಲೆ ತನ್ನ ಅಂತ್ಯ ಸಂಸ್ಕಾರದ ಬಗೆಗೆ ಬರೆದಿರುವ ಮಾತುಗಳು...."

'ಏನು?'

"ಅದರಲ್ಲಿ ಗಣರಾಜ್ಯದ ಅಧ್ಯಕ್ಷರು, ಮತ್ತಿತರ ವರಿಷ್ಠ ಅಧಿಕಾರಿಗಳು ಭಾಗವಹಿಸಬಾರದು. ರಾಷ್ಟ್ರೀಯ ಅಂತ್ಯಸಂಸ್ಕಾರವೂ ಕೂಡದು....'

"ಮತ್ತೆ...'

"ಆವಸರ ಪಡಬೇಡ, ಮುಂದೆ ಕೇಳ; ಬಾದ ವೇಳೆ ಅವರೆಲ್ಲಗೂ ಇಷ್ಟಪಡುವವರೂ ಇರಲಿ; ಅದೆಲ್ಲ ಬೇಕಾಗಿದ್ದರೆ ಮಾಡಲಿ; ಅಂತ್ಯ ಸಂಸ್ಕಾರ ಮಾತ್ರ ಅತ್ಯಂತ ಸರಳವಾಗಿರಬೇಕು.....'

"ಇಲ್ಲಿಗೆ ಸರಿಹೋಯ್ತು...."

'ಏನು,'

"ಏನಂತನ್ನೋದು, ಏನು ಬೇಕಾದರೂ ಮಾಡಿ ಅನ್ನೋದು...."

"ಹ್ಞಾಂ..."

'ಏನು?'

'ಏನೂ ಇಲ್ಲ ಬಿಡು....'

'ಯಾಕೆ?'

'ಹಾಗಾದ್ರೆ ಬೇಡ...'

—ಗೋರಾ.

ಪುತ್ತೂರು IIIrd ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. R. C. 468/70

ಬಾಕ್ರಬೈಲು ಶಂಭಟ್ಟ— ಅರ್ಜಿದಾರ

ಕೊಂಚಾಡಿ ಅಮ್ಮಸರಾ— ಎದುರು 4ನೇ ಎದುರು— ಅವುದ್ಯಾಮ್ಮ, ಶಳ್ಳಿ ಕಂಚಾರಿ ಬ್ಯಾರಿಯ ಮಗ, ಬಗ್ಗು ಮೂಲೆ, ಕಬಕ ಗ್ರಾಮ.

ಸದ್ರಿ 4ನೇ ಎದುರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

68-69ನೇ ವರ್ಷದ ಗೇಣಿ ಬಾಕಿಗೆ ನಿಮ್ಮ ಮೇಲೆ ಕೂಡಾ ಅರ್ಜಿದಾರನು ಮಾಡಿದ ಅರ್ಜಿಯನ್ನು ತಾರೀಗು 30-11-70ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಕ್ಷ್ಯ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

Sd/- M. Rammohan Rao

Advocate for petitioner

ತಾ. 11-11-70

ಸಂದರ್ಶಿಸಿರಿ!—ಸಂತೃಪ್ತರಾಗಿರಿ!!

ಬಿನ್ನಾಣದ ವಜ್ರಗಳಿಗೆ, ಆಧುನಿಕ ಫ್ಯಾಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೋಟೋಗ್ರಫಿಕ್ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ವ್ಯಾಪಾರಿಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res; 3272

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 121/70

ದೇರಪ್ಪ ಗೌಡ —ವಾದಿ

ಮತ್ತು

ಸಂಕಪ್ಪ ಗೌಡ ಕೂಡಾ —ಪ್ರತಿವಾದಿಯು 2 ಮತ್ತು 7ನೇ ಪ್ರತಿವಾದಿಗಳಿಗೆ—

2ನೇ ಪ್ರತಿವಾದಿ ಬಾಲಕೃಷ್ಣ ಗೌಡ, 7ನೇ ಪ್ರತಿವಾದಿ ಶಿವರಾಮ ಗೌಡ (ಮೈನರ್) ಬಗ್ಗೆ ಗಾರ್ಡಿಯನ್ 2ನೇ ಪ್ರತಿವಾದಿ—ಮಡಿಕೇರಿ ಜಿಲ್ಲೆಯ ಹಾಕತ್ತೂರು ಗ್ರಾಮದಲ್ಲಿ—

ಮೇಲಿನ ವಾದಿಗೆ ನಿಮ್ಮಿಂದ ಬರಬೇಕಾದ ಆಡವಿನ ಅಸಲು ಬಡ್ಡಿ ಹಣದ ವಸೂಲಾತಿಗಾಗಿ ಆತನು ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿ ಮತ್ತು ಆಕ್ಷೇಪಗಳಿದ್ದಲ್ಲಿ ತಿಳಿಸುವರೆ ತಾ. 27-11-1970ರಂದು ವಾದೆ ಆಗುತ್ತದೆ. ಆದುದರಿಂದ ನೀವು ಆ ದಿವಸ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷೀಯ ಮಾಡಿ ದಾವೆಯನ್ನು ತೀರ್ಮಾನಿಸಲಾದೀತು ಎಂತ ಕೋರ್ಟು ಹುಕ್ಕುಂ ಮೇರೆಗೆ ನಿಮಗೆ ಈ ಮೂಲಕ ತಿಳಿಯಪಡಿಸಲಾಗಿಯದೆ.

Sd/- N. Subramanyam

Adv. for Plff

Puttur, 8-11-70.

ಪ್ರಜ್ಞಾಶೂನ್ಯ ಪ್ರಚಾರಪೂರ್ಣ ಪ್ರತಿಜ್ಞೆಯ ಪರಿಹಾಸ್ಯ

ಅಕ್ಟೋಬರ ದಿನಾಂಕ ಎರಡರಿಂದ ಎಂಟರ ವರೆಗೆ ರಾಷ್ಟ್ರೀಯ ಭಾವೈಕ್ಯತಾ ಸಪ್ತಾಹವೆಂದು ಅಕ್ಟೋಬರ್ ದಿನಾಂಕ 9ರ ನಂತರ ಹಲವಾರು ಪತ್ರಿಕೆಗಳು ತಮ್ಮ ತಮ್ಮ ವಾಚಕವೃಂದಕ್ಕೆ ತಿಳಿಸಿವೆ. ಆ ಪತ್ರಿಕೆಗಳಿಗೆ ಸರಕಾರವು ಪ್ರತಿಜ್ಞೆಯ ಪ್ರಚಾರದ ಜಾಹೀರಾತನ್ನಿತ್ತಿತ್ತು. ದಿನಾಂಕ ಎಂಟರಂದು ಮುಗಿಯುವ ಪ್ರತಿಜ್ಞೆಯ ಪ್ರಕಟಣೆ ಅದರ ನಂತರ ಪತ್ರಿಕೆಗಳಲ್ಲಿ ಬರುವಂತೆ ಸರಕಾರವು ಬಹಳ ಜಾಣರೀತಿಯನ್ನು ವಹಿಸಿರುತ್ತದೆ. ಪತ್ರಿಕೆಗಳಿಗೆ ಜಾಹೀರಾತನ್ನಿತ್ತಿರುವವರಿಗೆ ಪ್ರತಿಜ್ಞೆಯು ಪೋಲಿರುವ ಪ್ರಜ್ಞೆ, ಪ್ರೀತಿಗಳಿಗೆ ಇದು ಜಾಹೀರಾತಿದೆ. ರಾಷ್ಟ್ರ ರಕ್ಷಣೆಯ ಹೆಸರಿನಲ್ಲಿ ಬೋರೀಗೌತನ ಬೊಕ್ಕಸ ಹೇಗೆ ಬರಿದಾಗುತ್ತಿದೆಯೆಂಬುದಕ್ಕೊಂದ ಸ್ಪಷ್ಟ ಉದಾಹರಣೆ ಇದು. ಇರಲಿ.

ಆ ಪ್ರತಿಜ್ಞೆಯಾದರೂ ಏನಿದೆ? 'ನನ್ನ ರಾಷ್ಟ್ರದ ಸ್ವಾತಂತ್ರ್ಯ ಮತ್ತು ಸಮಗ್ರತೆಯನ್ನು ರಕ್ಷಿಸಲು ನಾನು ಶ್ರದ್ಧೆಯಿಂದ ದುಡಿಯುತ್ತೇನೆಂದು ಪ್ರತಿಜ್ಞೆ ಮಾಡುತ್ತೇನೆ.'

ಇಲ್ಲಿ ಪ್ರತಿಜ್ಞೆ ಮಾಡುತ್ತಿರುವ ಶ್ರೀಮಾನ್ ನಾನು ಯಾರು? ವಾಚಕ ಮಹಾಶಯರು ಮಾತ್ರ —ಜಾಹೀರಾತನ್ನಿತ್ತವರಲ್ಲ! ಅವರು ಶ್ರದ್ಧೆಯಿಂದಲೋ, ಶ್ರದ್ಧೆಯಿಲ್ಲದೆಯೋ ದುಡಿಯಬೇಕಾಗಿಲ್ಲ. ಪಾನ ಪ್ರತಿಬಂಧಕ್ಕಾಗಿ ಪ್ರಚಾರ ನಡೆಯುತ್ತಿದ್ದ ಕಾಲದಲ್ಲಿ ಮೋತಿಲಾಲ್ ನೆಹ್ರೂಜಿ ಯವರನ್ನು ಪಂಜಾಬಿಗೆ ಪ್ರಚಾರಕ್ಕಾಗಿ ಕಳುಹಿಸಲಾಗಿತ್ತು. ಅವರು ಪ್ರಭಾವೀ ಪ್ರಚಾರ ನಡೆಸಿದರು. ಭಾಷಣ ಮುಗಿದು ವಿಶ್ರಾಂತಿ ನಿಲಯಕ್ಕೆ ಬಂದ ವೇಳೆ ಅವರು ಸ್ವಯಂಸೇವಕನ ಬಳಿ ತನ್ನ ಪಾನಕ್ಕಾಗಿ ಏರ್ಪಾಡು ಮಾಡಿಕೊಡಲು ತಿಳಿಸಿದರಂತೆ. ಅವನು ಅವಾಕ್ಕಾದನು! ಪ್ರಚಾರ ನಡೆಸಿದವರು ತನ್ನ ಪರಿಹಾಸ್ಯ ಮಾಡುತ್ತಿದ್ದಾರೆ, ಪರೀಕ್ಷೆ ಮಾಡುತ್ತಿದ್ದಾರೆಂದ ಆತ ಅವರು ಪುನಃ ಪುನಃ ಕೇಳಿದಾಗ ಅರ್ಥ ಮಾಡಿಕೊಂಡನು. ಅವರು ಗದರಿಸಿ ಆಜ್ಞೆ ಇತ್ತಾಗಲೇ ಅವನ ಇಕ್ಕಟ್ಟಿನಲ್ಲಿ ತಾನು ಸಿಲುಕಿಕೊಂಡಿದ್ದೇನೆಂಬುದನ್ನು ಅರಿತುಕೊಂಡನು. ಆಗ ಮೆಲ್ಲನೆ ಅವನು 'ಸ್ವಾಮಿ, ಇಷ್ಟೆಲ್ಲಾ ಪ್ರಚಾರ ಮಾಡಿದ ನೀವೇ...' ಉಗುಳು ನುಂಗಲಾರಂಭಿಸಿದ. 'ಭೋದನೆಯೆಲ್ಲಾ ನಿಮಗೆ, ನನಗದರ ಆವಶ್ಯಕತೆ ಇಲ್ಲ. ಈಗ ಏರ್ಪಾಡು ಮಾಡೆಂದು ಅವರು ಬಲವಾಗಿ ಹೇಳಿದ ಮೇಲೆ ಸ್ವಯಂಸೇವಕನು ಹಾಗೆ ಮಾಡಿಕೊಡಬೇಕಾಯಿತು. ಹೇಳಿದೆಡೆಗಳೆಲ್ಲಾ ಇಂದಿರಾ ಗಾಂಧಿ ನೆಹರೂಜೀಯವರು ತನ್ನ ಕುಟುಂಬದ ವಿಷಯ ಪ್ರಚಾರ ಮಾಡುತ್ತಿದ್ದು, ಇಂತಹ ಕುಟುಂಬ ಭಾರತದಲ್ಲಿ ಇದೆಯೇನೆಂದು ಪ್ರಶ್ನೆ ಹಾಕುತ್ತಿದ್ದಾರೆ. ಅವರ ಮಾತಿಗೆ ಇದು ಪುಷ್ಟಿಯನ್ನೀಯುತ್ತದೆ. ರಾಷ್ಟ್ರದ ಮೇಲೆ ಆಕ್ರಮಣ ನಡೆದ ವೇಳೆ ಪ್ರತಿಜ್ಞೆಯ ಪ್ರಜ್ಞೆ ನಮ್ಮ ನೇತಾರರಿಗೆ ಬಂದಷ್ಟು.

ಈ ಸಲದ ಆಗೋಸ್ಟ್ ಹದಿನೈದರಂದ, ರಾಷ್ಟ್ರದ ಸ್ವಾತಂತ್ರ್ಯ ಸಮಗ್ರತೆ ವಗೈರೆ ಕಾಪಾಡುತ್ತೇನೆಂದು ಪ್ರತಿಜ್ಞೆಯ ಪ್ರಚಾರ ಮಾಡುತ್ತಿರುವ, ಪ್ರಧಾನಿಯವರು ಕೆಂಪು ಕೋಟೆಯ ಮೇಲೆ ತ್ರಿರಂಗಿಯನ್ನು ಹಾರಿಸಿರುವದಿಲ್ಲ- ತಮ್ಮ ಭಾಷಣದಲ್ಲಿ ಆಕ್ರಮಣಕ್ಕೊಳಗಾಗಿರುವ ಭೂಪ್ರದೇಶದ ಬಿಡುಗಡೆಯ ಕುರಿತು ಚಕಾರವನ್ನೆತ್ತಿರುವದಿಲ್ಲ, ರಾಷ್ಟ್ರಾಧ್ಯಕ್ಷರ ಭಾಷಣದಲ್ಲೂ ಬರಲು ಬಿಟ್ಟಿರುವದಿಲ್ಲ. ಅಷ್ಟೇ ಅಲ್ಲ, ಚೈನಾ-ಪಾಕಿಸ್ಥಾನಗಳ ಬಳಿ ಒಪ್ಪಂದದ ಮಾತುಕತೆಯಾಡಲು ತಾನು ಸಿದ್ಧವೆಂದು ಘೋಷಿಸಿರುವವರೇ ಇದ್ದಾರೆ! ಎಂತಹ ಪರಿಹಾಸ್ಯ! ರಾಷ್ಟ್ರದ ಸ್ವಾತಂತ್ರ್ಯವೆಂಬುದಾದರೂ ಏನಿದೆ? ಕೇವಲ ಅವರ ಆಳ್ವಿಕೆ ಮಾತ್ರ ಸ್ವಾತಂತ್ರ್ಯವೇ? ಇತರ ಪಕ್ಷಗಳ ಆಳ್ವಿಕೆ ಅಥವಾ ಆಡಳಿತವೆಂದರೆ ಗುಲಾಮಿ ಜೀವನವೇ? ದಿ 'ಇಂಡಿಯನ್ ಎಕ್ಸ್‌ಪ್ರೆಸ್'- ಹಿಂದೆ ಕಾಂಗ್ರೆಸ್ಸಿನ ಮುಖಪತ್ರಿಕೆಯಾಗಿದ್ದ ಆಂಗ್ಲ ದೈನಿಕವು ಭಾರತದ ಆಡಳಿತ ಡೆಲ್ಲಿಯಿಂದ ನಡೆಯದೆ ಮೋಸ್ಕೋದಿಂದ ನಡೆಯುತ್ತಿದೆಯೆಂದು ಎಡೆಬಿಡದೆ ಪ್ರಚಾರ ನಡೆಸುತ್ತಿದೆ. ಇಲ್ಲಿಯ ಅಧ್ಯಕ್ಷರಿಗೆ, ಪ್ರಧಾನಿಗಳಿಗೆ, ಸೇನಾಪ್ರಮುಖರಿಗೆ...ಗೆ ಸ್ವಾಗತವಿದೆ! ಅತ್ತ ಪಾಲನೆಗೆ ಹೋಗುವಂತೆ ಅವರು ಆಗಾಗ ಹೇಳುತ್ತಿದ್ದಾರೆ. ಇಂದಿರಾಜೀಯವರ ರಾಜಕೀಯ ಸಂಬಂಧಿಗಳು, ನೆಂಟರಾದರೂ ಯಾರು? ಸ್ನೇಹಿತರು ಯಾರೆಂಬುದನ್ನು ತಿಳಿಸಿದಲ್ಲಿ ಅವರ ಗುಣನಡತೆಯನ್ನು ಹೇಳಲು ಸಾಧ್ಯವಂತೆ. ಇಂದಿರಾಜೀಯವರ ಇಷ್ಟಮಿತ್ರರು ಯಾರು? ಕಮ್ಯೂನಿಸ್ಟರು, ಮುಸ್ಲಿಂ ಲೀಗಿಗಳು, ಅಕಾಲಿಗಳು, ದ್ರಾವಿಡ ಮುನ್ನೇತ್ರ ಕಳಗದವರು....... ಇದರಿಂದ ಅವರು ರಾಷ್ಟ್ರದ ಸ್ವಾತಂತ್ರ್ಯ ಹಾಗೂ ಸಮಗ್ರತೆಯನ್ನು ಹೇಗೆ ಸಂರಕ್ಷಿಸುತ್ತಿದ್ದಾರೆಂಬುದನ್ನು ಹೇಳಬಹುದು. ಕಮ್ಯೂನಿಸ್ಟರ ಯೋಚನೆ ಕೆಂಪು ಕೋಟೆಯ ಮೇಲೆ ಕೆಂಪ ಕೇತುವನ್ನು ಹಾರಿಸುವದಿದೆ ರಷ್ಯಾದ ರಾಜ್ಯವನ್ನಾಗಿ ಭಾರತವನ್ನು ಬದಲಾಯಿಸುವದದೇ ಅವರ ಗುರಿ ಇದೆ. ಕೆಂಪು ಕೋಟೆಯ ಮೇಲೆ ಹಚ್ಚೆ ಪತಾಕೆಯನ್ನು ಹಾರಿಸುವ ಕನಸನ್ನು ಮುಸ್ಲಿಂ ಲೀಗಿಗಳು ಕಾಣುತ್ತಿದ್ದಾರೆ. ನಗುನಗುತ್ತ ಪಾಕಿಸ್ತಾನವನ್ನುಂಟು ಮಾಡಿದೆವು, ಕಾಲುಕೆದರುತ್ತ ಪಾಕಿಸ್ಥಾನವನ್ನು ಪಡೆಯುತ್ತೇವೆಂದವರು ಹಲ್ಲು ಕಿರಿಯುತ್ತಿದ್ದಾರೆ. ಪಾಕಿಸ್ತಾನ ಹಾಗೂ ಚೈನಾ ನಮ್ಮ ಮೇಲೆ ನೇರ ಆಕ್ರಮಣ ಮಾಡಿರುವದನ್ನು, ಹೆಚ್ಚಿನ ಮುಸ್ಲಿಂ ರಾಷ್ಟ್ರಗಳು ಪಾಕಿಸ್ತಾನಕ್ಕೆ ಸಹಾಯ ಸೂಚಿಸಿರುವದನ್ನು ಭಾರತದ ಹತ್ತಿರದ ಗೆಳೆಯನೆಂದು ಕೊಗಿಕೊಳ್ಳುತ್ತಿರುವ ರಷ್ಯಾ ಭಾರತದ ಭೂಭಾಗವನ್ನು ಚೈನಾದ ಭಾಗವೆಂದು ಪ್ರಚಾರ ನಡೆಸುವ ಭೂಪಟಗಳನ್ನು ಹಲವಾರು ವರ್ಷಗಳಿಂದ ಎಡೆಬಿಡದೆ ಪ್ರಕಟಿಸುತ್ತಿರುವದನ್ನು ಮರೆತು ಬಿಡಲು ಸಾಧ್ಯವೇನು? ಇದು ರಾಷ್ಟ್ರದ ಸ್ವಾತಂತ್ರ್ಯವನ್ನು ಕಾಪಾಡುವ ವಿಧಾನ! ಇನ್ನು ಸಮಗ್ರತೆ— ಪಾಕಿಸ್ತಾನಿಗಳ ಸಹಾಯದಿಂದ ಪ್ರತ್ಯೇಕ ಪಂಜಾಬನ್ನು ಪಡೆಯುವೆವೆಂದು ಅಕಾಲಿಗಳು ಅನ್ನುತ್ತಿದ್ದಾರೆ. ಪ್ರತ್ಯೇಕ ತಮಿಳ್ನಾಡನ್ನು ಅದಿಂ

(ಎಂಟನೇ ಪುಟ ನೋಡಿ)

ದಾರಿಯುದ್ದಕ್ಕೂ ದೀಪದ ಸಾಲು



ಸಹಸ್ರಾರು ದೀಪಗಳು ದಾರಿಯುದ್ದಕ್ಕೂ ಬೆಳಗಿವೆ. ಮಿಣುಕು ದೀಪ, ಹಣತೆ ದೀಪ, ಗೂಡು ದೀಪ, ಕಾಲು ದೀಪ— ನಾನಾ ತೆರನ ದೀಪ ರಾಜಿಗಳು ಆವರಿಸಿದ ಕತ್ತಲನ್ನು ಹಿಂತಳ್ಳಿ ಬೆಳಕಿನ ಪ್ರಭೆಯನ್ನು ದಾರಿಯುದ್ದಕ್ಕೆ ಪಸರಿಸುತ್ತಿವೆ.

ಪ್ರಗತಿಯ ದಾರಿಯ ಮೊದಲ ಹಂತಗಳಲ್ಲಿ ಮುಳ್ಳು, ಕಲ್ಲುಗಳು, ಏರು ಪೇರುಗಳು ಎದುರಾಗುತ್ತವೆ. ಸಿಂಡಿಕೇಟ್ ಬ್ಯಾಂಕು ಆರಂಭದ ವರ್ಷಗಳಲ್ಲಿ ನಡೆದು ಬಂದ ದಾರಿ ಆ ತೆರನಾದುದು. ಬ್ಯಾಂಕು ತನ್ನ ಹಾದಿಗುಂಟ ಇದಿರಾದ ತೊಡಮೊಗಳನ್ನು, ಮುಳ್ಳಿನ ಬೇಲಿಗಳನ್ನು, ಕತ್ತಲು ತುಂಬಿದ ದುರ್ಗಮ ಪ್ರದೇಶಗಳನ್ನು ಸರಿದು ಇಂದು ಸುಗಮವಾದ, ಸುರಕ್ಷಿತವಾದ, ಬೆಳಕು ತುಂಬಿದ ಆವರಣವನ್ನು ಸೇರಿದೆ.

ಬ್ಯಾಂಕು ದೀರ್ಘಾವಧಿಯಲ್ಲಿ ಗಳಿಸಿದ ಪಕ್ವ ಅನುಭವದಿಂದ, ತನ್ನ ಪ್ರಗತಿಪರ ಧೋರಣೆಯಿಂದ, ಬೆಳೆಯುತ್ತಿರುವ ವ್ಯವಹಾರದಿಂದ, ಪ್ರಾಮಾಣಿಕ ಸೇವೆಯಿಂದ ಇಂದು ದೇಶದ ಪ್ರಮುಖ ಬ್ಯಾಂಕುಗಳಲ್ಲಿ ಒಂದಾಗಿ ಪರಿಗಣಿಸಲ್ಪಟ್ಟಿದೆ. ಠೇವಣಿಯಲ್ಲೂ, ಬಂಡವಲದಲ್ಲೂ, ಸಾಧನ ಸಂಪತ್ತಿನಲ್ಲೂ.

ಬ್ಯಾಂಕು ಇಂದು ಬಹಳಷ್ಟು ಹಿಗ್ಗಿದ್ದು, ದೇಶದ ಉದ್ದಗಲ ಪಸರಿಸಿದ ತನ್ನ 450ಕ್ಕೂ ಮಿಕ್ಕಿದ ಶಾಖಾ ಸಮುದಾಯದಿಂದ ಜನಸಾಮಾನ್ಯರ ಬ್ಯಾಂಕಿಂಗ್ ಆವಶ್ಯಕತೆಯನ್ನು ಪೂರೈಸುತ್ತಾ ತನ್ನ ಅನುಭವದ ತಿಳಿವಿನ ಬೆಳಕಿನಲ್ಲಿ ಮುನ್ನಡೆಯುತ್ತಿದೆ.

ಇಂದು ದಾರಿಯ ಇಕ್ಕೆಲಗಳಲ್ಲಿ ದೀಪಗಳು ಉರಿಯುತ್ತಿವೆ. ದಾರಿಯ ಚಲನೆ ಸುಗಮವೆನಿಸಿದೆ. ಪ್ರಗತಿಯ ತುದಿಯ ಸೋಪಾನವನ್ನು ಮುಟ್ಟಿ, ವ್ಯಕ್ತಿಯ ಸಂತೃಪ್ತ ಬದುಕಿನ ಮೂಲಾಧಾರವೆನಿಸಿದ ಆರ್ಥಿಕ ನೆಲೆಯನ್ನು ಸುಭದ್ರವೂ, ಸುರಕ್ಷಿತವೂ ಮಾಡಲು ಹವಣಿಸುತ್ತದೆ.

FAITHFUL

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಚೇರಿ :
ಮಣಿಪಾಲ (ಮೈಸೂರು ರಾಜ್ಯ)

ಕಸ್ಟೋಡಿಯನ್
ಕೆ. ಕೆ. ಪೈ

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S.C 242/1958

Exc. Case 160/1970

ತುಕ ಸಿಬಾಯಿ — ಅರ್ಜಿದಾರಳು

ಮತ್ತು

ಕೊರಗ ಸೇರಿಗಾರ, ದಾಸಪ್ಪ ಸೇರಿಗಾರ, ಮಗ, ಶಿರೂರ ಗ್ರಾಮ — ವಾದಿಯವರೊಳಗೆ

ಸದರಿ ಎದ್ರಿಗೆ —

1958ನೇ ಇಸ್ವಿಯ S. C. 242ನೇ ವ್ಯಾಜ್ಯದ ಡಿಕ್ರಿಯ ಅಮಲ್ದಾರಿಯ ಬಗ್ಗೆ ಸದರಿ ಅರ್ಜಿದಾರಳು ಈ ಕೋರ್ಟಿಗೆ ಅರ್ಜಿ ಮಾಡಿಕೊಂಡಿದ್ದಾಳೆ. ಆದುದರಿಂದ ಅಮಲ್ದಾರಿ ಯಾಕೆ ನಡಿಸಕೂಡದು ಮತ್ತು ನಿಮ್ಮನ್ನು ಸಿವಿಲ್ ಬಂದಿಖಾನೆಗೆ ಯಾಕೆ ರವಾನಿಸಕೂಡದು ಎಂಬುದಕ್ಕೆ ಸಬಬು ತೋರಿಸಲಿಕ್ಕೆ 1970ನೇ ಇಸ್ವಿ ದಶಂಬರ ತಿಂಗಳು 4ನೇ ತಾರೀಕಿನಲ್ಲಿ ಸದರಿ ಕೋರ್ಟಿನ ಮುಂದೆ ಹಾಜರಾಗಬೇಕೆಂತ ಇದರಿಂದಾ ನಿಮಗೆ ನೋಟೀಸು ಕೊಡಲಾಗುತ್ತದೆ.

By order of the Court

H. Ramanath Pai
Advocate for Petitioner

ಉಡುಪಿ, ತಾ. 8-11-1970

ಲೇಖನಾಂಕ—೧

ಕಾಂಗ್ರೆಸ್ ಒಳಜಗಳದ ಪ್ರಾಚೀನ ಇತಿಹಾಸ

ಲೇ: ಪಂ. ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಯ ಚರಿತ್ರೆಯನ್ನು ಚೆನ್ನಾಗಿ ಪರಿಶೀಲಿಸಿದರೆ ಮಹತ್ವವಾದ ಒಂದು ರಹಸ್ಯ ಕಂಡು ಬರುತ್ತದೆ. ಈ ಸಂಸ್ಥೆ ಜನಿಸುವಾಗಲೇ ಇದು ಒಳಗಿನ ಮತ್ತು ಹೊರಗಿನ ವಿರೋಧಗಳಿಗೆ ಸಿಲುಕಿಕೊಂಡಿತ್ತು. ಇದು ಜನನಕ್ಕೆ ಬಂದ ಕಾಲದಲ್ಲಿ 'ಯುನೈಟೆಡ್ ಪೇಟ್ರಿಯೂಟಿಕ್ ಅಸೋಸಿಯೇಷನ್' ಎಂಬ ಸಂಸ್ಥೆ ಇದಕ್ಕೆ ದೊಡ್ಡ ವೈರಿಯಾಗಿ ನಿಂತಿತ್ತು. "ಪಾಯೋನಿಯರ್" ನಂತಹ ಪ್ರಭಾವಶಾಲಿ ಪತ್ರಿಕೆ 'ಕಾಂಗ್ರೆಸ್ ನಡೆಸುತ್ತಿರುವ ಚಳವಳವನ್ನು ಸದೆಬಡಿಯಬೇಕು; ಇದಕ್ಕೆ ಕೇವಲ 12 ಮಂದಿ ಪೋಲೀಸರೇ ಸಾಕು' ಎಂಬ ಒಂದು ಅಗ್ರಲೇಖನದ ಮೂಲಕ ಬ್ರಿಟಿಷ ಸರಕಾರವನ್ನು ಎಚ್ಚರಪಡಿಸಿತು.

ಆದರೆ ಆ ಸಮಯದಲ್ಲಿ ಅಂತಹ ಅಗತ್ಯ ಬೀಳಲಿಲ್ಲ. ಇದಕ್ಕೆ ಒಂದು ಮುಖ್ಯ ಕಾರಣವಿತ್ತು; ಈ ಸಂಸ್ಥೆಯನ್ನು ಸ್ಥಾಪಿಸಿದವರಲ್ಲಿ ಇಬ್ಬರು 'ಲೋರ್ಡ್ ಹ್ಯೂಮ್' ಮತ್ತು "ಲಾರ್ಡ್ ವೆಂಡರ್ಬರ್ನ್" ಎಂಬವರು ಶುದ್ಧ ಬ್ರಿಟಿಷರು. ಸರಕಾರದ ಮೇಲೆ ಇವರಿಬ್ಬರ ಪ್ರಭಾವ ಬಲವಾಗಿತ್ತು. ಕಾಂಗ್ರೆಸ್ಸನ್ನು ಸ್ಥಾಪಿಸುವ ಉದ್ದೇಶವೇನೆಂಬುದರ ಕುರಿತು ಇವರು ತಮ್ಮ ಪ್ರಥಮ ಘೋಷಣೆಯಲ್ಲಿ "ಹಿಂದೂ ದೇಶದ ಶಿಕ್ಷಿತ ಜನರಲ್ಲಿ ಬ್ರಿಟಿಷ್ ಸರಕಾರದ ಕುರಿತು ಹೆಚ್ಚುತ್ತಿರುವ ಅಸಂತೋಷವನ್ನು ಅನಾಯಾಸವಾಗಿ ಮಾಡಿ ಒಂದು ಕೊಳವೆಯ ಮೂಲಕ ಹಾರಿಸಿ ಬಿಡುವ ಉದ್ದೇಶದಿಂದಲೇ ಈ ಸಂಸ್ಥೆಯ ಅಸ್ತಿವಾರವನ್ನು ನಾವು ಹಾಕುತ್ತಿದ್ದೇವೆ" ಎಂದು ಸ್ಪಷ್ಟವಾಗಿ ಹೇಳಿದ್ದರು. ಕಾಂಗ್ರೆಸ್ ತನ್ನ ಬಾಲ್ಯ ಕಾಲದಲ್ಲಿ ಅತಿಜಾಗರೂಕ ನೀತಿಯನ್ನು ಅನುಸರಿಸದೆ ಇರುತ್ತಿದ್ದರೆ ಇಂದಿಗೆ ಇದು ಚರಿತ್ರೆಯಲ್ಲಿ ನಾಮಾವಶೇಷವಾಗುತ್ತಿತ್ತೇನೋ! ಅಂದು ತಾನು ಅನುಸರಿಸಿದ ನೀತಿಯ ಸೂತ್ರವನ್ನು ಉಳಿಸಿಕೊಳ್ಳಲಿಕ್ಕೆ ಇದು ತನ್ನ ಪ್ರತಿಯೊಂದು ಹೆಜ್ಜೆಯನ್ನು ಮುಂದಿಡುತ್ತಾ ಬರಬೇಕಾಯ್ತಲ್ಲದೆ ತನ್ನ ಪ್ರತಿಯೊಂದು ಚಳವಳದಲ್ಲಿ ಆಗಾಗ ಬಿದ್ದು-ಎದ್ದು-ತಡವರಿಸಿಕೊಂಡೇ ಸಾಗಬೇಕಾಗಿತ್ತು; ಆದರೂ ಈ ಕಾಲಮಾನಕ್ಕೆ ತಕ್ಕಂತೆ ಹೋರಾಟದಲ್ಲಿ ಇದು ಹಿಂದೆ ಬೀಳಲಿಲ್ಲವೆಂಬುದು ಇದು ಹುಟ್ಟಿದಾರಭ್ಯದಿಂದ ಇಂದಿನ ವರೆಗಿನ ಇದರ ಇತಿಹಾಸದಿಂದ ಕಂಡುಬರುತ್ತದೆ. ಕಾಂಗ್ರೆಸಿನ ಪ್ರತಿಯೊಂದು ಘೋಷಣೆಗಳೂ ಮೊದಲಿನಿಂದಲೂ ಘರ್ಷಣೆಯಿಂದಲೇ ಹೊರಡುತ್ತಾ ಬಂದಿವೆ. ಇದರ ಶಕ್ತಿಯ ಬೆಳವಣಿಗೆಗೆ ಕೆಲವು ಘರ್ಷಣೆಗಳೇ ಕಾರಣಗಳಾದವು. ಆ ಕಾಲದ ಪ್ರತಿಯೊಂದು ತಿಕ್ಕಾಟವೂ ಕಾಂಗ್ರೆಸಿನ ಉದ್ದೇಶಗಳ ಸ್ವರೂಪದ ನಿರ್ಣಯಕ್ಕಾಗಿಯೇ ಆಗುತಿತ್ತು. ಒಂದು ಕಡೆಯಿಂದ ಇದು "ದೇಶದ ಸ್ವಾತಂತ್ರ್ಯಕ್ಕೋಸ್ಕರ" ಮತ್ತೊಂದು ಕಡೆಯಿಂದ "ತನ್ನ ಮೂಲಭೂತ ಉದ್ದೇಶ ಮತ್ತು ಕಾರ್ಯಕ್ರಮಗಳಲ್ಲಿ ಸುಧಾರಣೆ ಮತ್ತು ಪರಿವರ್ತನೆ"ಯ ಸಲುವಾಗಿ ಪ್ರತಿನಿತ್ಯ ಶ್ರಮಿಸುತಿತ್ತು; ಇದರಿಂದಾಗಿಯೇ ಇದು ಪದೇಪದೇ ಚರಿತ್ರಾರ್ಹವಾದ ಪರಿವರ್ತನೆಯನ್ನು ಹೊಂದುತ್ತಾ ಬಂತು.

೨

ಕಾಂಗ್ರೆಸಿನ ಸಂವಿಧಾನ ಮತ್ತು ಉದ್ದೇಶಗಳ ಸ್ವರೂಪವನ್ನು ನಿರ್ಣಯಿಸುವುದಕ್ಕೋಸ್ಕರ ಸರ್ವಪ್ರಥಮ ಪ್ರಯತ್ನ 1899ರ ಲಖನೌ ಮಹಾಧಿವೇಶನದಲ್ಲಿ ಕೈಕೊಳ್ಳಲಾಯಿತು. ಅಂದಿನ ಅಧಿವೇಶನದಲ್ಲಿ ಕಾಂಗ್ರೆಸಿನ ಧ್ಯೇಯ "ಸಾಮ್ರಾಜ್ಯ ಅಂತರ್ಗತ ಭಾರತೀಯರ ಹಿತಸಾಧನೆಗೋಸ್ಕರ ವಿಧಾಯಕ ಉಪಾಯಗಳಿಂದ ಪ್ರಯತ್ನಿಸುವುದು ಕಾಂಗ್ರೆಸಿನ ಲಕ್ಷ್ಯವಾಗಿರುತ್ತದೆ" ಎಂಬ ಕೆಲವೇ ಶಬ್ದಗಳ ಮೂಲಕ ಸ್ಪಷ್ಟಗೊಳಿಸಲ್ಪಟ್ಟಿತ್ತು. ನಂತರದ ಹತ್ತು ಹನ್ನೆರಡು ವರ್ಷಗಳ ವರೆಗೆ ಮೇಲಿನ ಧ್ಯೇಯದಲ್ಲಿ ಬದಲಾವಣೆ ಮಾಡುವ ಸಂದರ್ಭ ಉದ್ಭವಿಸಲಿಲ್ಲ. ಆದರೆ 1902ರಲ್ಲಿ ಜರಗಿದ ಸೂರತ್ ಅಧಿವೇಶನಕ್ಕೆ ಮೊದಲೇ ಉಗ್ರ ಮತ್ತು ಶಾಂತ ಪಕ್ಷಗಳೆಂಬ ಎರಡು ಪಂಗಡಗಳು ಕಾಂಗ್ರೆಸಿನೊಡನೆ ಲೋಕಮಾನ್ಯ ತಿಲಕ ಮತ್ತು ಗೋಪಾಲಕೃಷ್ಣ ಗೋಖಲೆ ಇವರಿಬ್ಬರ ಮುಂದಾಳುತ್ವದಲ್ಲಿ ಅಸ್ತಿತ್ವಕ್ಕೆ ಬಂದಿತ್ತು. ಈಗ ಶ್ರೀಮತಿ ಇಂದಿರಾ ಗಾಂಧಿ ಮತ್ತು ಶ್ರೀ ಎಸ್. ನಿಜಲಿಂಗಪ್ಪ ಇವರಿಬ್ಬರ ಅನುಯಾಯಿಗಳಲ್ಲಿ ಬೆಳೆದು ಬಂದಿರುವ ಜಗಳದ ಹಾಗೆ ಸತ್ಯ! ಇದೇ ರೀತಿಯ ಪರಸ್ಪರ ಕಚ್ಚಾಟ ಅಂದು ಸಹ ಇಬ್ಬರು ಮಹಾಮುಖಂಡರ ಹಿಂಬಾಲಕರೊಳಗೆ ಭಯಂಕರವಾಗಿ ಬೆಳೆದಿತು. ಸಂಪೂರ್ಣ ಸ್ವರಾಜ್ಯಕ್ಕಿಂತ ಕೆಳಮಟ್ಟ ವಿಚಾರವನ್ನು ಕಾಂಗ್ರೆಸಿನೊಳಗೆ ತರಲಿಕ್ಕೆ ತಿಲಕರು ಸರ್ವಥಾ ಒಪ್ಪುತ್ತಿರಲಿಲ್ಲ; ಗೋಖಲೆಯವರ ಪಂಗಡ ಸುಧಾರವಾದಿ ತತ್ವಕ್ಕೆ ಅಂಟಿಕೊಂಡಿತ್ತು. ಈ ಎರಡು ಮತಭೇದಗಳಿಂದಾಗಿ ಗೋಖಲೆ ಪಂಗಡ ಸೂರತಿನಲ್ಲಿ ತನ್ನ ಪ್ರತ್ಯೇಕ ಅಧಿವೇಶನವನ್ನು (ಮೊನ್ನೆ ಶ್ರೀಮತಿ ಇಂದಿರಾಗಾಂಧಿಯವರು ಮಾಡಿದಂತೆ) ನಡೆಸಲಿಕ್ಕೆ ಆಯೋಜನೆ ಕೈಕೊಂಡಿತು.

ಗೋಖಲೆ ಮತ್ತು ತಿಲಕರೊಳಗೆ ಇದ್ದ ಒಂದು ವಿಲಕ್ಷಣವಾದ ಸಾಮ್ಯವನ್ನು ಕಂಡ ಪ್ರತಿಯೊಬ್ಬರೂ ಆಶ್ಚರ್ಯ ಪಡುತ್ತಿದ್ದರು. ಗೋಖಲೆಯವರು ಏರ್ಪಡಿಸಿದ ಅಧಿವೇಶನಗಳಲ್ಲಿ ಭಾಗವಹಿಸುವವರು "ಈ ಮಹಾಧಿವೇಶನದಲ್ಲಿ ಸಹಕರಿಸುವವರಿಗೆ ಇದರ ಪ್ರತಿಯೊಂದು ಉದ್ದೇಶಗಳಲ್ಲಿ ಸಂಪೂರ್ಣ ಸಮ್ಮತಿ ಇರುತ್ತದೆ" ಎಂಬ ಶರ್ತಕ್ಕೆ ಅಂಕಿತ ಹಾಕಲಿಕ್ಕೆ ಬದ್ಧರಾಗಬೇಕಿತ್ತು.

ಶ್ರೀ ನಿಜಲಿಂಗಪ್ಪನವರ ಸಮರ್ಥಕ ಮತ್ತು ಸಂಸದೀಯ ದಳದ ಉಪಮುಖಂಡರಲ್ಲಿ ಒಬ್ಬರಾದ ಶ್ರೀ ಎಸ್. ಎನ್. ಮಿಶ್ರರವರು ಸಹ ಕಾಂಗ್ರೆಸ್ ಸಂಸದೀಯ ಪಕ್ಷದೊಳಗಿನ ಇಂದಿರಾಗಾಂಧಿ ವಿರೋಧ ಗುಂಪಿನ ಅಧಿವೇಶನವನ್ನು ಬೆಳಗ್ಗೆ 11 ಘಂಟೆಗೆ ಬದಲು ಸಾಯಂಕಾಲ ಜರಗುವಂತೆ ಏರ್ಪಾಡು ಮಾಡಿದರು. ಏಕೆಂದರೆ ಇಂದಿರಾಗಾಂಧಿ ವಿರೋಧಿ ಕಾಂಗ್ರೆಸಿಗರು ತಮ್ಮ ಕಾರ್ಯಕಲಾಪಗಳಲ್ಲಿ ನಿರತರಾಗಿದ್ದು ತನ್ನ ವಿರೋಧಿ ಗುಂಪಿನ ಅಧಿವೇಶನದಲ್ಲಿ ಏನಾದರೂ ಆತಂಕವನ್ನೊಡ್ಡದಂತೆ ಈ ಕ್ರಮದ ಒಳರಹಸ್ಯವಾಗಿತ್ತು; ಇನ್ನೊಂದು ಉದ್ದೇಶವೇನೆಂದರೆ ಶ್ರೀ ನಿಜಲಿಂಗಪ್ಪನವರ ಗುಂಪಿನವರೇ ಇದರಲ್ಲಿ ಭಾಗವಹಿಸುತ್ತಾರೆಂಬುದನ್ನು ಜನತೆಗೆ ತೋರಿಸಿಕೊಡುವುದಾಗಿತ್ತು; ಇದು ಹೊರತು ಈ ಅಧಿವೇಶನದಲ್ಲಿ ಭಾಗವಹಿಸುವವರು "ಕಾಂಗ್ರೆಸಿನ ಸದಸ್ಯತ್ವದಿಂದ ಮತ್ತು ಸಂಸದೀಯ ಪಕ್ಷದಿಂದ ಇಂದಿರಾ ಗಾಂಧಿಯವರನ್ನು ಉಚ್ಚಾಟನೆಗೊಳಿಸಿರುವ ಠರಾವನ್ನು ಸಮರ್ಥಿಸಿ ಅಂಗೀಕರಿಸಲಿಕ್ಕೆ ಸಿದ್ಧರು" ಎಂಬುದನ್ನು ಸ್ಪಷ್ಟಗೊಳಿಸುವ ಶರ್ತವನ್ನು ಶ್ರೀ ಎಸ್. ಎನ್. ಮಿಶ್ರರು ಸಿದ್ಧಗೊಳಿಸಿದ್ದರು.

ಲೋಕಮಾನ್ಯರ ಸಮರ್ಥಕರನ್ನು ತನ್ನ ಅಧಿವೇಶನದಿಂದ ದೂರ ತಳ್ಳಲಿಕ್ಕಾಗಿ ಗೋಖಲೆ ಗುಂಪು ಕೈಕೊಂಡ ರೀತಿ ಮತ್ತು ನಿಜಲಿಂಗಪ್ಪನವರ ಪಂಗಡ ಅನುಸರಿಸಿದ ವಿಧಾನದಲ್ಲಿ ಏನು ವ್ಯತ್ಯಾಸವಿದೆ? ಸೂರತ್ ಅಧಿವೇಶನದ ಕಾಲದಲ್ಲಿನ ಕಾಂಗ್ರೆಸಿನ ಪರಿಸ್ಥಿತಿ ಮತ್ತು ಕಳೆದ ಬಾರಿ

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

I.A. 4 in OS 125/66

ಗುಲಾಬಿ ಮತ್ತು ಇತರರು —ಅರ್ಜಿದಾರರು

ಮತ್ತು

ಚೆನಮು ಮತ್ತು ಇತರರು —ಎದ್ರಿರು

ಮೇಲಿನ ಅರ್ಜಿಯ ೬ನೇ ಎದ್ರಿ ಬೆಳ್ತಂಗಡಿ ತಾಲೂಕು ಮರೋಡಿ ಗ್ರಾಮದ ಕಲ್ಲಟ್ಟ ಮನೆಯಲ್ಲಿರುವ ಶ್ರೀ ದೊಂಬಯ್ಯನವರ ಮಗ ಶ್ರೀ ಶಿವಣ್ಣ ಮತ್ತು ಬೆಳ್ತಂಗಡಿ ತಾಲೂಕು ಬಜಿರೆ ಗ್ರಾಮದ ಬಾಡಾರುಮನೆ ಎಂಬಲ್ಲಿರುವ ಶ್ರೀಮತಿ ದರ್ಣಮ್ಮನವರ ಮಕ್ಕಳು ಶ್ರೀ ಸೇಮಣ್ಣ ಹಾಗೂ ಶ್ರೀ ದೂಜ (7) ಮತ್ತು ೮ನೇ ಎದ್ರಿರುರವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ—

ಫೈನಲ್ ಡಿಕ್ರಿ ಬಗ್ಗೆ ಅರ್ಜಿದಾರರು ಸಲ್ಲಿಸಿರುವ ಅರ್ಜಿ ನಿಮ್ಮ ಹಾಜರಾತಿ ಬಗ್ಗೆ ತಾರೀಕು 24-11-70ಕ್ಕೆ ಇಟ್ಟಿರುತ್ತದೆ. ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ದಿನ ನೀವು ಬೆಳಗ್ಗೆ ಗಂಟೆ 11ಕ್ಕೆ ಕೋರ್ಟು ಮುಂದೆ ಹಾಜರಾಗಿ ಉಧರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಅರ್ಜಿಯನ್ನು ತೀರ್ಮಾನಿಸಲಾದೀತು. ತಿಳಿದಿರಲಿ.

ಬಿ. ಕೆ. ಸೂರ್ಯನಾರಾಯಣ ರಾವ್

ಅರ್ಜಿದಾರರ ಕಡೆ ಎಡ್ವೋಕೇಟ್

ಬೆಳ್ತಂಗಡಿ, 6-11-70

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

I.A. 3 in OS 86/68

ದೋಟ ರಾಮಪ್ಪಯ್ಯ —ಅರ್ಜಿದಾರ

ಮತ್ತು

ನರಸಪ್ಪಯ್ಯ ಮತ್ತು ಇತರರು —ಎದ್ರಿರು

ಮೇಲಿನ ಅರ್ಜಿಯ 1, 2, ಮತ್ತು ೬ನೇ ಎದ್ರಿರಾದ ಬೆಳ್ತಂಗಡಿ ತಾಲೂಕು ಗುಂಡೂರಿ ಗ್ರಾಮದ ಕಂಬಟಿ ಎಂಬಲ್ಲಿರುವ ಶ್ರೀ ಪಕೀರ ರಾಮಭಟ್ಟರ ಮಕ್ಕಳು ನರಸಪ್ಪಯ್ಯ ಯಾನೆ ನರಸಿಂಹ ಭಟ್ಟ, ವೆಂಕಟಪ್ಪಯ್ಯ ಮತ್ತು ಲಕ್ಷ್ಮೀರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ:—

ಫೈನಲ್ ಡಿಕ್ರಿ ಬಗ್ಗೆ ಅರ್ಜಿದಾರನು ಹಾಜರುಪಡಿಸಿರುವ ಅರ್ಜಿಯು ನಿಮ್ಮ ಹಾಜರಾತಿ ಬಗ್ಗೆ ತಾರೀಕು 30-11-70ರಂದು ಇಟ್ಟಿದೆ. ಸದ್ರಿ ವ್ಯಾದಿ ದಿವಸ ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ನೀವು ಸ್ವತಹಾ ಯಾ ವಕೀಲರ ದ್ವಾರಾ ಹಾಜರಾಗಿ ಉಜ್ಜರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಅರ್ಜಿಯು ತೀರ್ಮಾನಿಸಲ್ಪಡುವುದು. ತಿಳಿದಿರಲಿ.

ಬಿ. ಕೆ. ಸೂರ್ಯನಾರಾಯಣ ರಾವ್

ಅರ್ಜಿದಾರನ ಕಡೆ ವಕೀಲರು

ಬೆಳ್ತಂಗಡಿ, 6-11-70

ಬೆಂಗಳೂರಲ್ಲಿ ಜರಗಿದ ಎ. ಐ. ಸಿ. ಸಿ. ಅಧಿವೇಶನವನ್ನು ತುಲನೆ ಮಾಡಿದರೆ ಇವೆರಡರಲ್ಲಿಯೂ ವಿಚಿತ್ರವಾದ ಒಂದು ಸಮಾನತೆ ಕಂಡು ಬರುತ್ತದೆ. ಬೆಂಗಳೂರ ಅಧಿವೇಶನದ ನಂತರ ಕೂಡಲೇ ಇಂದಿರಾ ಗಾಂಧಿಯವರ ಶಿಷ್ಯರು ದೆಹಲಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನವನ್ನು ಜರಗಿಸುವ ಪ್ರಸ್ತಾಪ ಮುಂದಿಟ್ಟರು; ಅವರ ವಿರೋಧಿ ಪಂಗಡ ಅಧಿವೇಶನವನ್ನು ಗುಜರಾಥದಲ್ಲಿ ಜರಗಿಸಬೇಕೆಂದು ಹಟಹಿಡಿದರು. ಸೂರತ್ ಅಧಿವೇಶನದ ಘರ್ಷಣೆಯ ಮೊದಲು ಇದೇ ತರಹದ ವಾತಾವರಣವಿತ್ತು. ಉಗ್ರವಾದಿಗಳನ್ನು ದೂರ ತಳ್ಳುವ ಸಿದ್ಧತೆಯನ್ನು ಅಧಿವೇಶನಕ್ಕೆ ಬಹಳ ಮುಂಚಿತವಾಗಿಯೇ ಕೈಕೊಳ್ಳಲಾಗಿತ್ತು. ಕಾಂಗ್ರೆಸಿನ ಮುಂದಿನ ಅಧಿವೇಶನವನ್ನು ಲಾಲಾಲಜಪತ್ ರೈಯವರು ಆಮಂತ್ರಿಸಿದ್ದನ್ನು ತಿರಸ್ಕರಿಸಿ ಅದನ್ನು ನಾಗಪುರದಲ್ಲಿ ಜರಗಿಸಲು ತೀರ್ಮಾನಿಸಲಾಯಿತು. ಏಕೆಂದರೆ ನಾಗಪುರದಲ್ಲಿ ಶಾಂತ ಪಕ್ಷದ ಮುಂದಾಳು "ಸರ್ ಫಿರೋಜ್‌ಷಹಾ ಮೆಹೆಥಾ"ರವರ ಪ್ರಭಾವ ಮತ್ತವರ ಅನುಯಾಯಿಗಳ ಸಂಖ್ಯೆ ಅತ್ಯಧಿಕವಾಗಿತ್ತು. ಇಂದಿನ ಕಾಂಗ್ರೆಸಿನ 'ಸಮಾಜವಾದ ಮಾದರಿಯ ಸಮಾಜರಚನೆ' ಮತ್ತು ಬೇರೆ ಇನ್ನಿತರ ಔದ್ಯೋಗಿಕ ರಾಷ್ಟ್ರೀಕರಣದ ಘೋಷಣೆಗಳಂತೆಯೇ ಆ ಕಾಲದಲ್ಲಿ ಸಹ ಕಾಂಗ್ರೆಸಿನೊಳಗಿನ ಉಗ್ರವಾದಿ ಗುಂಪು ವಿದೇಶಿ ವಸ್ತು ಬಹಿಷ್ಕಾರ, ಸ್ವದೇಶಿ ವಸ್ತು ಪ್ರಚಾರ, ರಾಷ್ಟ್ರೀಯ ಶಿಕ್ಷಣ ಮೊದಲಾದವುಗಳ ಕುರಿತು ಬಲವಾಗಿ ಪ್ರತಿಪಾದಿಸುತಿತ್ತು. ಆದರೆ, ಈ ಕುರಿತಾಗಿ ಕಲ್ಕತ್ತಾ ಅಧಿವೇಶನದಲ್ಲಿ ಅಂಗೀಕಾರವಾದ ಠರಾವುಗಳನ್ನು ನಾಗಪುರ ಅಧಿವೇಶನದಲ್ಲಿ ಪಾತಾಳಕ್ಕೆ ತಳ್ಳಬಿಡಲಿಕ್ಕೆ ಶಾಂತ ಪಕ್ಷವು ಚೆನ್ನಾಗಿ ಸೊಂಟ ಕಟ್ಟಿತು. ಬೊಂಬಾಯಿ ಅಧಿವೇಶನದಲ್ಲಿ "ಸರ್ ಫಿರೋಜ್ ಷಹಾ ಮೆಹಥಾ"ರವರು ತನ್ನ ಬಲವಾದ ಶಕ್ತಿಯಿಂದ ವಿದೇಶೀ ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣದ ಠರಾವುಗಳನ್ನು ರದ್ದುಗೊಳಿಸಿಯೇ ಬಿಟ್ಟರು. ಸ್ವದೇಶಿ ವಸ್ತುಗಳ ಉಪಯೋಗದ ಕುರಿತು ಅಂದಿನ ಕಾಂಗ್ರೆಸ್ ಅಧ್ಯಕ್ಷ "ಡಾ| ಭಾಟ್ಯಡೇಕರ್"ರವರು ಈ ಎರಡು ಠರಾವುಗಳನ್ನು ಯಾವುದಾದರೂ ಬೇರೆ ಬಂದ ಅಧಿವೇಶನದಲ್ಲಿ ಚರ್ಚಿಸಿದರೆ ಒಳ್ಳೆಯದಿತ್ತು ಎಂಬಭಿಪ್ರಾಯ ವ್ಯಕ್ತಪಡಿಸಿದರು. ಅಂದಿನ ಬಂಗಾಲ ಸರಕಾರದ ಪ್ರತಿಬಂಧಕ ಆಜ್ಞೆಗೆ ಹೆದರಿ ಮಧ್ಯಪ್ರಾಂತ್ಯ ಮತ್ತು ಬೇರಾರು ಪ್ರಾಂತೀಯ ಸಮ್ಮೇಳನಗಳಲ್ಲಿ "ವಂದೇ ಮಾತರಂ" ರಾಷ್ಟ್ರಗೀತೆ ಹಾಡುವುದನ್ನು ಸಹ ಕೈಬಿಡಲಾಯಿತು. ಅಲಹಾಬಾದಿನಲ್ಲಿ ಜರಗಿದ ಸಂಯುಕ್ತ ಪ್ರಾಂತ್ಯದ ಪ್ರಾದೇಶಿಕ ಸಮ್ಮೇಳನದಲ್ಲಿ 20 ಪ್ರತಿನಿಧಿಗಳಿಗೆ ಭಾಗವಹಿಸದಂತೆ (ಇವರುಗಳು ವಿದೇಶಿ ವಸ್ತು ಬಹಿಷ್ಕಾರ ಚಳವಳಿಯ ಸಮರ್ಥಕರೆಂಬ ಒಂದೇ ಕಾರಣದಿಂದ) ಬಹಿಷ್ಕರಿಸಲಾಯಿತು.

ಇದನ್ನು ಉಗ್ರಪಕ್ಷದವರು ಅತ್ಯಂತ ಬಲವಾಗಿ ಪ್ರತಿಭಟಿಸಿದರು. ನಾಗಪುರ ಅಧಿವೇಶನದ ಸ್ವಾಗತ ಸಮಿತಿಯಲ್ಲಿ ಅತ್ಯಧಿಕ ಬಹುಮತವನ್ನು ದಕ್ಕಿಸಿಕೊಳ್ಳುವದಕ್ಕೋಸ್ಕರ ಬಲವಾಗಿ ಪ್ರಯತ್ನಿಸಿದರು. ಈ ಸಮಿತಿಯೇ ಅಧಿವೇಶನದ ಅಧ್ಯಕ್ಷರನ್ನು ಆರಿಸುತ್ತಿತ್ತು. ಮಂದ ಪಕ್ಷದ ಗುಂಪಿಗೆ 800 ಸದಸ್ಯರು ದೊರಕಿದರು; ಉಗ್ರಪಕ್ಷದವರಿಗೆ 1800 ಸದಸ್ಯರ ಅತ್ಯಧಿಕ ಬಹುಮತ ದೊರಕಿತು. ನಾಗಪುರದಲ್ಲಿ ತಮ್ಮ ಬೇಳೆ ಬೇಯಲಾರದೆಂದು ತಿಳಿದ ಉಗ್ರವಾದಿಗಳ, ಅಧಿವೇಶನಕ್ಕಾಗಿ ಸೂರತ್ತಿನಿಂದ ಬಂದ ಆಮಂತ್ರಣವನ್ನು ಬಹಳ ಆತುರತೆಯಿಂದ ಸ್ವೀಕರಿಸಿದರು. ಸರ್ ಫಿರೋಜ್‌ಷಹಾ ಮೆಹಥಾ ಗುಂಪಿನ ಪ್ರಬಲ ಪ್ರಭಾವದಿಂದ ಅಧಿವೇಶನ ನಾಗಪುರದಿಂದ ಬದಲಾಯಿಸಲ್ಪಟ್ಟದ್ದಕ್ಕಾಗಿ ಲೋಕಮಾನ್ಯ ತಿಲಕರು ಸ್ವಲ್ಪವೂ ಚಿಂತಾಕರರಾಗಲಿಲ್ಲ. ಈ ಘಟನೆಯ ಕಡೆಗೆ ಅವರು ಲಕ್ಷ್ಯವನ್ನೇ ಕೊಡಲಿಲ್ಲ "ಶ್ರೀ ಪಿ. ಮೆಹಥಾರವರು ಅಧಿವೇಶನವನ್ನು ಎಲ್ಲಿ ಬೇಕಾದರೂ ಜರಗಿಸಲಿ! ನಮ್ಮ ನ್ಯಾಷನಲಿಸ್ಟ್ ಪಾರ್ಟಿ ಅಲ್ಲಿಗೆ ತಪ್ಪದೆ ತಲ್ಪುವುದು. ಏಕೆಂದರೆ ಕಾಂಗ್ರೆಸನ್ನು ಮುರಿಯುವುದು ಅಥವಾ ಆದರ ಅಧಿವೇಶನವನ್ನು ಭಂಗಗೊಳಿಸುವುದು ನಮ್ಮ ಪಕ್ಷದ ಉದ್ದೇಶವಲ್ಲ; ಆದರೆ ಪರಸ್ಪರ ಎದ್ದಿರುವ ವಿವಾದವು ಬೇಗನೆ ಬಗೆಹರಿಯಲಾರದೆಂಬುದರ ಅರಿವು ಶ್ರೀ ಮೆಹಥಾರವರಿಗೆ ಇರಬೇಕಿತ್ತು; ಹೊಸ ಮತ್ತು ಹಳೆಯ ಗುಂಪುಗಳ ಒಳಗಿನ ಪರಸ್ಪರ ಘರ್ಷಣೆ ಹೊಸ ಗುಂಪು ಗೆಲ್ಲುವವರೆಗೆ ಇದ್ದೇ ಇರತಕ್ಕದ್ದೆಂಬುದನ್ನು ಮೆಹಥಾರವರು ಮನಗಾಣಲಿಲ್ಲ. ಸೂರತಿನಂತಹ ಸುರಕ್ಷಿತ ಸ್ಥಳ ಪ್ರತಿವರ್ಷವೂ ದೊರಕಲಾರದೆಂಬುದನ್ನೂ ಮೆಹಥಾ ಮತ್ತವರ ಬೆಂಬಲಿಗರು ಅರಿತಿರಲಿ! ಸೂರತ ಸಹ ಅವರಿಗೆ ಭದ್ರವಾದ ಸ್ಥಳವೆಂಬುದಾಗಿ ಯಾರು ದೃಢವಾಗಿ ಹೇಳಬಲ್ಲರು?" ಎಂಬುದಾಗಿ ತಿಲಕರು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದರು. ಸೂರತ್ ಅಧಿವೇಶನದಲ್ಲಿ ತಿಲಕರಿಗೆ ಮತ್ತು ಅವರ ಅನುಯಾಯಿಗಳಿಗೆ ಬಾಗಿಲು ಮುಚ್ಚಲ್ಪಟ್ಟಾಗ ತಿಲಕರು ಪ್ರಕಟಿಸಿದ ಹೇಳಿಕೆ ಮತ್ತು ಇತ್ತೀಚೆಗೆ ಶ್ರೀಮತಿ ಇಂದಿರಾ ಗಾಂಧಿಯವರನ್ನು ಕಾಂಗ್ರೆಸ್ ಸಂಸ್ಥೆಯಿಂದ ಕಿತ್ತೊಗೆದಾಗ ಇಂದಿರಮ್ಮನವರು ಕೊಟ್ಟ ಹೇಳಿಕೆ ಎರಡೂ ಪರಸ್ಪರ ಸಾಕಷ್ಟು ಹೊಂದಾಣಿಕೆಯುಳ್ಳವೆಯೆಂಬುದನ್ನು ಇಂದಿನ ರಾಜಕೀಯ ಬುದ್ಧಿಜೀವಿಗಳು ಚೆನ್ನಾಗಿ ಮನವರಿಕೆ ಮಾಡಿಕೊಂಡರೆ, ಕಾಂಗ್ರೆಸ್ ಸಂಸ್ಥೆಯು ಅಳಿದುಳಿದ ಪವಿತ್ರತೆಯನ್ನು ಇನ್ನಾದರೂ ಉಳಿಸಿಕೊಳ್ಳಬಹುದು.

ಪುತ್ತೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ

H. R. C. 9/70

ಸುಶೀಲಮ್ಮ — ಅರ್ಜಿದಾರ
ಗೌರಿ ಸಹಾ — ಎದುರು

ಎದುರು —

3. ಕಮಲಾ — ಶಾಂತಪ್ಪ ಸಪಲ್ಯರ ಹೆಂಡತಿ—ಇದರ್ಕಟ್ಟೂರು ಗ್ರಾಮ

4. ಗಣಪತಿ — ಕಿಟ್ಟಣ್ಣ ಮಾಸ್ಟರರ ಮಗ—Madras Hotel Connanghat circus, New Delhi.

ಸದ್ರಿ 3, 4ನೇ ಎದುರಿಗೆ ಕೋರ್ಟು ಮುಖಾಂತರ ಈ ನೋಟೀಸು ತಿಳಿಯಪಡಿಸುವುದೇನೆಂದರೆ—

ಮೇಲಿನ ಅರ್ಜಿಯಲ್ಲಿ ಕಾಣಿಸಿದ A. ಶೆಡ್ಯೂಲು ಆಸ್ತಿಯನ್ನು ನಿಮ್ಮ ಸ್ವಾಧೀನತೆಯಿಂದ ತಪ್ಪಿಸಿ ಅರ್ಜಿದಾರರಿಗೆ ಬಿಟ್ಟುಕೊಡಬೇಕೆಂತ ನಿಮ್ಮ ಮೇಲೆ ಕೊಡಮಾಡಿದ ಈ ಅರ್ಜಿಯನ್ನು ತಾ. 9-12-70ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಎಕ್ಸ್‌ಪಾರ್ಟಿ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/ M. Rammohan Rao
Advocate for petitioner

Puttur. 10-11-70

ಆಧ್ಯಾತ್ಮಿಕ ಸಂಸ್ಕೃತಿಯಲ್ಲಿ ಭಕ್ತಿ

(ಕಾಕಾ ಕಾಲೇಲಕರ)

'ನಿಮ್ಮಲ್ಲಿ ಬುದ್ಧಿಯೋಗವೇ ಪ್ರಾಧಾನ್ಯವಾಗಿ ಇದೆ. ನಿಮ್ಮ ವಿವೇಚನೆಗಳೂ ಸಂಭಾಷಣೆಗಳೂ ಸಹ ಹೆಚ್ಚಾಗಿ ಜ್ಞಾನ ಪ್ರಧಾನವಾಗಿಯೇ ಇರುತ್ತವೆ. ನಿಮ್ಮಲ್ಲಿ ಭಕ್ತಿಯ ಅಂಶ ಇದ್ದಂತೆಯೇ ಕಾಣುವುದಿಲ್ಲ' ಎಂದು ಕೆಲವು ಮಿತ್ರರು ನನಗೆ ಹೇಳುತ್ತಾರೆ! ಆದರೆ ನನ್ನ ಹೇಳಿಕೆ ಇಷ್ಟೇ— ಶಿಕ್ಷಕ ನಾತೆಯಿಂದ ಪ್ರತಿಯೊಂದು ವಿಷಯದ ವಿವರಣೆ ಮಾಡುವುದು ನನ್ನ ಕರ್ತವ್ಯ! ಅದು ನನ್ನ ಸ್ವಭಾವವೇ ಆಗಿಬಿಟ್ಟಿದೆ! ಆದರೆ ಜನರೊಡನೆ ಪ್ರೇಮವೃತ್ತಿಯಿಂದಲೇ ನಡೆದುಕೊಳ್ಳುತ್ತೇನೆ! ಪ್ರೇಮವೃತ್ತಿ ಪ್ರಾಧಾನ್ಯವಾಗಿ ಇರುವದರಿಂದಲೇ ಎಲ್ಲ ತರಹದ ಸೇವೆಯೂ ನನ್ನಿಂದ ಆಗುತ್ತಲಿದೆ. ಪ್ರಾಮುಖ್ಯವಾಗಿಯೇ ನಾನೊಬ್ಬ ಪ್ರೇಮಿ. ಪ್ರೇಮದ ಉತ್ಕರ್ಷದಿಂದ ಭಕ್ತಿ ಮತ್ತು ಪರಿಣತಿಯಾಗಿ ಸೇವೆ ಎಂಬುದೇ ನನ್ನ ಜೀವನ ಸ್ವರೂಪವಾಗಿದೆ!

ಬಾಲ್ಯದಲ್ಲಿ ನನ್ನಲ್ಲಿ ಭಕ್ತಿಯು ಉದ್ರೇಕವಿತ್ತು. ತಂದೆ ತಾಯಿಯರಿಂದ ನಾನು ಭಗವದ್ ಭಕ್ತಿ ಮತ್ತು ಪೂಜೆ ಅರ್ಚನೆಗಳನ್ನು ಕಲಿತುಕೊಂಡಿದ್ದೆ. ಸಂತ ಸಾಹಿತ್ಯ ಓದಿ ಭಕ್ತಿ ಮಾಡಿದೆ. ತೀರ್ಥಯಾತ್ರೆ ಮಾಡಿದೆ. ಉಪಾಸ್ಯ ನಾಮ ಮಂತ್ರದ ಜಪ ನಡೆಸಿದೆ! ತಾಸುಗಟ್ಟಲೆ ಭಗವನ್ನಾಮ ಘೋಷ ಮಾಡುತ್ತಲಿದ್ದೆ. ಚಿಕ್ಕಂದಿನಲ್ಲಿಯೇ ನನ್ನಲ್ಲಿ ಇಷ್ಟೊಂದು ಭಕ್ತಿಯ ಆವಿಷ್ಕಾರವನ್ನು ಕಂಡ ಜನರು ನನ್ನನ್ನು ತುಂಬಾ ಹೊಗಳುತ್ತಿದ್ದರು ಮತ್ತು ಆದರದಿಂದ ಕಾಣುತ್ತಿದ್ದರು. ಹೀಗಾಗಿ ನಾನು ಅಭಿಮಾನದಿಂದ ಉಬ್ಬಿದೆ ಮತ್ತು ನನ್ನ ಭಕ್ತಿಭಾವನೆಯ ಪ್ರದರ್ಶನ ಮಾಡಹತ್ತಿದೆ.

ಇದರ ಅತಿರೇಕ ಕಂಡು ನನಗೇ ನಾಚಿಕೆ ಆಯಿತು. ದೇವರ ಭಕ್ತಿಯು ಪತಿಪತ್ನಿಯರಲ್ಲಿಯ ಪ್ರೇಮದಂತೆ ಗುಪ್ತವಾಗಿಯೇ ಇರಬೇಕು. ಅದರ ಪ್ರದರ್ಶನ ಮಾಡಿದರೆ ಅದರಲ್ಲಿಯ ಗಾಂಭೀರ್ಯ ನಷ್ಟವಾಗುತ್ತದೆ. ಅದರಲ್ಲಿಯ ಪಾವಿತ್ರ್ಯ ಭ್ರಷ್ಟವಾಗುತ್ತದೆ. ಅಭಿಮಾನ ಮತ್ತು ಡಂಭಾಚಾರ ಮಾತ್ರ ಉಳಿಯುತ್ತವೆ. ಇದರ ಅರಿವಾಗುತ್ತಲೇ ಪರಿಶ್ರಮಪೂರ್ವಕ ನನ್ನಲ್ಲಿಯ ಭಕ್ತಿಯನ್ನು ಅಡಗಿಸುತ್ತ ಬಂದಿದ್ದೇನೆ!

ಜ್ಞಾನಕರ್ಮಗಳ ಉಪೇಕ್ಷೆ ಮಾಡಿ ಜನರು ಕೇವಲ ಭಕ್ತಿಯೊಂದನ್ನೇ ಪೋಷಿಸಹತ್ತಿದರೆ ಅದೊಂದು "ಅಮಲು" ಮಾತ್ರ ಆಗಿಬಿಡುತ್ತದೆ. ಅದರಲ್ಲಿ ಮಸ್ತಿ-ತನ್ಮಯತೆಯೇ ಮಾತ್ರ ಕಾಣುತ್ತದೆ. ಇಂಥ ಭಕ್ತಿಯು ಜೀವನ ವಿಮುಖವಾಯಿತೆಂದರೆ, ಜೀವನವನ್ನು ಗೌಣವೆಂದು ತಿಳಿಯಹತ್ತಿತೆಂದರೆ ಅದರಲ್ಲಿ ಡಂಭಾಚಾರ ಮತ್ತು ಅಹಂಕಾರ ಹುಟ್ಟುವ ಸಂಭವವಿರುತ್ತದೆ. ಅದ್ದರಿಂದ ಭಕ್ತಿಯ ಪ್ರದರ್ಶನ ಮಾಡಬಾರದು.

ಭಕ್ತಿ ಇಲ್ಲದ ಜ್ಞಾನಕರ್ಮಗಳೆರಡೂ ರುಕ್ಷವಾಗುತ್ತವೆಂಬುದೂ ನಿಜ. ಭಕ್ತಿಯೇ ತಾರಕವಾಗಿದೆ! ಅದೇ ಭಕ್ತಿಯನ್ನು ಶುದ್ಧರೂಪದಲ್ಲಿ ತಿಳಿದುಕೊಂಡು ಅದರ ಸಹಾಯದಿಂದ ನಾವು ಭಕ್ತಿಯ ಸಾಧನ ಮಾಡಿ ಜೀವನಯೋಗವನ್ನು ಸಾಧಿಸಬಹುದ.

(ಮಂಗಲ ಪ್ರಭಾತದಿಂದ)

HOTEL SATKAR

Boarding, Lodging & Restaurant
Behind Corporation Office,
9 Mission Road — Bangalore — 27.

Phone No.— 1 28337 / 2 29887   Grams: HOST SATKAR

Vegetarian Cuisine
Attached Bath Rooms and Phones.
Running H and C water.
Moderate Charges
Railway Station, Laundry, Post office and Entertainment Area Nearby.
Large airy Rooms; Roof garden
Quiet, Calm Atmosphere
Personalised Service.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ. ೧೦.

ಪ್ರಜ್ಞಾಶೂನ್ಯ ಪ್ರಚಾರಪೂರ್ಣ ಪ್ರತಿಜ್ಞೆಯ ಪರಿಹಾಸ್ಯ

(ಐದನೇ ಪುಟದಿಂದ)

ಕಾದರೂ ಪಡೆಯುವೆವೆಂದು ದ್ರಾವಿಡ ಮುನ್ನೇಟ್ರ ಕಳಗವಿನವರು ದಡಬಡ ಮಾಡುತ್ತಿದ್ದಾರೆ. ನಾಗಾಲೇಂಡು, ಮಿಝೋಲೇಂಡು, ಝಾರ್ಖಂಡ... ಇಂತಹ ಚಿಕ್ಕಪುಟ್ಟ ಪ್ರತ್ಯೇಕ ಕ್ರಿಸ್ತೀಯ ರಾಜ್ಯಗಳಿಗಾಗಿ ಹೋರಾಟ ನಡೆಯುತ್ತಿದೆ. ಇವರೆಲ್ಲರಿಗೂ ಮೂರ್ತಸ್ವರೂಪಿಣಿಯಂತಿರುವುದು ಇಂದಿರಾ ಗಾಂಧಿ. ಇವರೆಲ್ಲರ ಆಧಾರದಿಂದಲೇ ಅವರಿಂದು ನಿಂತಿರುವುದು. ಇವರು ರಾಷ್ಟ್ರದ ಸ್ವಾತಂತ್ರ್ಯ ಮತ್ತು ಸಮಗ್ರತೆಯನ್ನು ರಕ್ಷಿಸುತ್ತಾರಂತೆ! ಅವರ ಮನಸ್ಸಿನ ಅಂಬೋಣವೇನೆಂಬುದಿದೆಯೋ-ಬುದಕ್ಕೆ ಪ್ರಕಟಣೆಯ ಸಮಯವೇ ಸಾಕ್ಷಿ.

ಈ ಪ್ರತಿಜ್ಞೆಯ ಪ್ರಕಟಣೆ ಅಷ್ಟಕ್ಕೇನೇ ಅಂತ್ಯವಾಗಿರುವದಿಲ್ಲ. ಅದು ಮುಂದಕ್ಕೆ ಈ ರೀತಿ ತಿಳಿಸುತ್ತದೆ:—ನಾನೆಂದೂ ಹಿಂಸಾಚಾರಕ್ಕೆ ಇಳಿಯುವದಿಲ್ಲ. ಮತ, ಭಾಷೆ, ಪ್ರದೇಶಕ್ಕೆ ಸಂಬಂಧಿಸಿದ ಭಿನ್ನಾಭಿಪ್ರಾಯ ಮತ್ತು ವಿವಾದಗಳು ಹಾಗೂ ಯಾವುದೇ ರಾಜಕೀಯ ಅಥವಾ ಆರ್ಥಿಕ ಕೊರತೆಗಳು ಶಾಂತಿಯುತವಾಗಿ ಹಾಗೂ ಸಂವಿಧಾನಾತ್ಮಕ ರೀತಿಗಳಿಂದ ಪರಿಹಾರವಾಗಬೇಕೆಂದು ನಾನು ದೃಢವಾಗಿ ನಂಬಿದ್ದೇನೆ.

ಉಂಟೇ? ನಂಬಿಕೆಗೂ ಕೃತ್ಯಕ್ಕೂ ಸಂಬಂಧ ಉಂಟೆಂದು, ಇರಬೇಕೆಂದು ಸಂವಿಧಾನದಲ್ಲಿ ಅದೆಲ್ಲಾದರೂ ಉಂಟೇನು? ಫಂಡಮೆಂಟಲ್ ರೈಟ್ಸಲ್ಲಿ ಅದು ಬರುವದಿಲ್ಲ. ಅಂಧ ಶ್ರದ್ಧೆ, ಕುರುಡು ನಂಬಿಕೆಗಳ, ಪ್ರಗತಿ ಶೀಲರೆನಿಸುವ ಮಾಪಕೋ ರಿಸಲು ಸಾಧ್ಯವೇನು? ನಿನ್ನೆಯ ಶ್ರದ್ಧೆ, ಇಂದು ಅಂಧ ಶ್ರದ್ಧೆ, ನಿನ್ನೆಯ ನಂಬಿಕೆ ಇಂದು ಕುರುಡು ನಂಬಿಕೆಯಾಗದಿದ್ದಲ್ಲಿ ಪ್ರತಿಗಾಮಿಗಳಿಗೆ ಪ್ರೋತ್ಸಾಹ ಸಿಗುವದಿಲ್ಲವೇನ? ಹಾಗಾದಲ್ಲಿ ಮಾತ್ರ ಪ್ರಗತಿ ಸಾಧ್ಯ!

ಊರಿಗೆ ಉಪದೇಶ, ಹೇಳುವವನಿಗಲ್ಲ. ಹಾಗೆಯೇ ಇದೆ ಪ್ರಚಾರದಪ್ರತಿಜ್ಞೆ. ಇಂದಿರಾಜೀಯವರ ಕುಟುಂಬಕ್ಕೇನೇ ಹಿಂಸಾಚಾರವೇನೆಂಬುದು ಗೊತ್ತಿಲ್ಲ! ಮಹಾತ್ಮಾಜೀ, ನೇತಾಜೀ ಸುಭಾಸ್ ಭಾಯಿ, ಶ್ಯಾಮ ಪ್ರಸಾದ ಮುಖರ್ಜೀ, ಫಿರೋಜ್ ಗಾಂಧಿ, ರಘು ವೀರ, ದೀನದಯಾಳು ಉಪಾಧ್ಯಾಯ.... ಇವರೆಲ್ಲಾ ಇಂದಿರಾಜೀ ಹಾಗೂ ಕುಟುಂಬದವರ ಹಿಂಸಾಚಾರಕ್ಕೊ, ತ್ಯಾಗಕ್ಕೋ ಬಲಿಯಾದವರೆಂಬುದನ್ನು ವಿಚಾರ ಶಕ್ತಿಯುಳ್ಳ ಜನತೆ ಮಾತ್ರ ಹೇಳೀತು. ಇದೆಲ್ಲಾ ಹಳೆಯ ಕಥೆಗಳು. ಇಂದು ಬೇಡ. ಇಂದಿನ ವಿಷಯಗಳನ್ನೇ ತೆಗೆದುಕೊಂಡರೂ ಸಾಕು ಹಿಂಸಾಚಾರದ ಹಿಂದೆ ಕಮ್ಯೂನಿಸಂ ಇರುವದೋ ಕಮ್ಯೂನಿಸಮಿನ ಹಿಂದೆ ಹಿಂಸಾಚಾರ ಇರುವದೋ— ಇದ ಮಿತ್ರಂ ಅನ್ನುವದು ಸಂಭವ ಸಾಧ್ಯವಲ್ಲ ಅವನ್ನು ಬೇರ್ಪಡಿಸುವದಂತೂ ನಿರರ್ಥಕವಾಗದ ವ್ಯರ್ಥ ಪರಿಶ್ರಮವೇ ಸರಿ. ಹಿಂಸಾಚಾರಿಗಳು ತಾವಲ್ಲವೆನ್ನುವ ಅಂಜುಬುರುಕ ಕಮ್ಯೂನಿಸ್ಟರು ಅದ್ಯಾವ ಗುಂಪಿನಲ್ಲೂ ಇರುವದಿಲ್ಲ—ನಕ್ಸಲ್‌ಬ್ಯಾರಿಗಳಿರಲಿ, ರಷ್ಯನ್ ವಾದಿಗಳಿರಲಿ. ಕೆಂಪು ಕೇತುವನ್ನು ಬಿಳಿ ಬಾವುಟವನ್ನಾಗಿ ಬಣ್ಣಕೆಡಿಸಲು ಅವರೇನು ಕಲಿತಿಟ್ಟವರಿರುವದಿಲ್ಲ. ಕಮ್ಯೂನಿಸ್ಟರ ಕರಗಳಲ್ಲಿ ನಿಷ್ಠೆ ಇರುವ ಇಂದಿರಾಜೀ ಹಿಂಸಾಚಾರಕ್ಕೆ ಇನ್ನು ಇಳಿಯಬೇಕಾಗಿರುವದಿಲ್ಲ. ಹಿಂಸಾಚಾರದಲ್ಲೇ ಇರುವವರು ಇನ್ನು ಇಳಿಯುವದೆಲ್ಲಿಗೆ? ಕಮ್ಯೂನಿಸ್ಟರ ಕಪಿಮುಷ್ಟಿಯಿಂದ ಕಳಚಿಕೊಳ್ಳಲು ಇಂದಿರಾಜೀಯವರಿಂದ ಸಾಧ್ಯವೇನು?

ಎಷ್ಟು ದಿನದಿಂದ, ಎಷ್ಟು ದಿವಸದವರೆಗೆ ಈ ನಂಬಿಕೆ? ಅಕ್ಟೋಬರ್ ಎರಡರಿಂದ ಎಂಟರವರೆಗೆ ನಂಬಿ! ಇತ್ತೆಂದು ದಿನಾಂಕ ಹತ್ತರಂದು ಹೇಳಿದಾಯಿತೇ? ಸಪ್ತಾಹ ಸಮಾಪ್ತಿಯಾದ ಮೇಲೆ ಸಮಾಧಿ ಸೇರಲೇ ಬೇಕಲ್ಲವೇ? ಗಂಡ—ಹೆಂಡ್ತಿರ ಜಗಳ ಉಂಡು ಮಲಗುವವರೆಗಂತೆ-ಇದು ಹಿಂದಿನ ಕಾಲದ ಮಾತು. ಇಂದು ಎಂದಿನವರೆಗೆ ನಂಬಿಕೆ? ಇಂದಿರಾಜೀಗೆ ಗೊತ್ತಿರುವ ಮತ, ಭಾಷೆ, ಪ್ರದೇಶ, ಸಂವಿಧಾನ, ಪರಿಹಾರದಳ್ಯಾವವು? ಮತವೆಂದರೆ ಅವರ ಪಾಲಿಗೆ ವೋಟು.

ಏನೇ ಇರಲಿ. ನಾನು ಇಳಿಯುವದಿಲ್ಲವೆಂಬುದಕ್ಕೆ ಇತರರನ್ನು ಇಳಿಸುವದಿಲ್ಲವೆಂಬುದು ಅದರ ಅರ್ಥವಲ್ಲ. ಇದರಲ್ಲಿ ಇಂದಿರಾಜೀಗೆ ದೃಢವಾದ ನಂಬಿಕೆ ಇದೆ. ನಕ್ಸಲ್ ಬ್ಯಾರಿಗಳ ಮುಸ್ಲಿಂಲೀಗಿಗಳ ಕುರಿತು ಅವರೀಯುತ್ತಿರುವ ಪ್ರಶಂಸೆಯ ಭಾಷಣಗಳೇ ಸಾಕು. ಅದೂ ಸಾಲದೆಂಬುದಕ್ಕೆ ಅವರು ಮುಗ್ಧ 'ಹರಿಜನರನ್ನು' ಹುರಿದುಂಬಿಸುತ್ತಿದ್ದಾರೆ. ಬಿಹಾರ್ ಡಿಪ್ರೆಸ್ಸಡ್ ಕ್ಲಾಸಸ್ ಲೀಗ್ ಏರ್ಪಡಿಸಿದ್ದ ಸಭೆಯಲ್ಲಿ ಮಾತಾಡುತ್ತ ಇಂದಿರಾ ಗಾಂಧಿಯವರು, ಹರಿಜನರು ತಾವೇ ಸಂಘಟಿತರಾಗಬೇಕು ಮತ್ತು ಅನ್ಯಾಯವನ್ನು ಪ್ರತಿಭಟಿಸಬೇಕೆಂದು ಕರೆ ಇತ್ತರು. ಅಲ್ಲೇ ಇದ್ದ ಅವರ ಕಾಂಗ್ರೆಸ್ಸಿನ ಅಧ್ಯಕ್ಷ ಜಗಜೀವನ ರಾಮರು ಇನ್ನೂ ಮುಂದರಿದು, ಸಮಾಜದ ಕೆಡುಕುಗಳ (ಅಸ್ಪೃಶ್ಯತೆ) ವಿರುದ್ಧ ಬಂಡೇಳಬೇಕೆಂದು ತಿಳಿಸಲು ಮರೆಯಲಿಲ್ಲ.

ಅಕ್ಟೋಬರ್ ಎರಡರಿಂದ ಎಂಟರ ಒಳಗೆ ಅವರೇನೂ ಆ ರೀತಿ ಆಡಿರುವದಿಲ್ಲ. ಅದನ್ನು ಅವರು ಆಡಿದ್ದು ಅಕ್ಟೋಬರ ಹದಿನೈದರಂದು. ಪ್ರತಿಜ್ಞಾ ಸಪ್ತಾಹ ಸಮಾಪ್ತಿಯು ಸಮಾಧಿ ಸೇರಿ ಸಪ್ತಾಹ ಸಂದ ಮೇಲೆ! ಪ್ರತಿಭಟನೆ, ಬಂಡು, ದಂಗೆ ಇವೆಲ್ಲಾ ಶಾಂತಿಪ್ರಿಯ ರಶಾಂತಿಯುತ ದೃಢ ನಂಬಿಕೆಯ, ಶ್ರದ್ಧಾಪೂರ್ಣ ನಂಬಿಕೆಯ ನುಡಿಗಳು. ಅರ್ಥಪೂರ್ಣವಾಗಿಯೋ ಏನೋ ಸಮಾಜ ಶಬ್ದವನ್ನು ಜಗಜೀವನ ರಾಮರಾಯರು ಜಾಗ್ರತೆಯಾಗಿ ಉಪಯೋಗಿಸಿದ್ದಾರೆ. ಪ್ರತಿಜ್ಞೆಯಲ್ಲಿ ಈ ಪದ ಇರುವದಿಲ್ಲ. ಅವರ ದೃಷ್ಟಿಯಲ್ಲಿ ಅದು ರಾಜಕೀಯಕ್ಕಾಗಲೀ ಆರ್ಥಿಕಕ್ಕಾಗಲೀ ಸಂಬಂಧಪಟ್ಟದ್ದಾಗಿಲ್ಲ. ಅದು ಸಮಾಜಕ್ಕೆ ಸಂಬಂಧಪಟ್ಟದ್ದಿರಬೇಕು. ಆದುದರಿಂದ ಶಾಂತಿಯುತವಾಗಿ ಹಾಗೂ ಸಂವಿಧಾನಾತ್ಮಕ ರೀತಿಗಳಿಂದ ಪರಿಹಾರವಾಗಬೇಕೆಂದು ದೃಢವಾಗಿ ನಂಬಬೇಕಾಗಿರುವದಿಲ್ಲ. ಇದಕ್ಕೆನೇ ಹೇಳುವದು ಇಂದಿರಾ ಗಾಂಧಿ ಬಲು ಜಾಣೆಯೆಂದು. ಅದನ್ನು ಅರ್ಥಮಾಡಿಕೊಂಡ ಜಗಜೀವನರಾಮರು ಅವರನ್ನು ಬಿಡದೆ ಇದ್ದಾರೆ. ಪಾಪ! ನಿಜಲಿಂಗಪ್ಪನವರಿಗೆ ನಿಜವಾಗಿ ಅದು ಅರ್ಥವಾಗದ ಕಾರಣ ದೂರ ಓಡಬೇಕಾಗಿ ಬಂತು. ಇದು ಮತ, ಭಾಷೆ ಹಾಗೂ ಪ್ರದೇಶಕ್ಕೆ ಸಂಬಂಧಿಸಿರುವ ಭಿನ್ನಾಭಿಪ್ರಾಯವೂ ಅಲ್ಲ. ಇಂದಿರಾ ಗಾಂಧಿ ಹಾಗೂ ಜಗಜೀವನರಾಮರಾಯರ ಏಕಾಭಿಪ್ರಾಯ. ಆದುದರಿಂದಲೇ ಬಂಡಾಯದ ಬಂಡಿ ಜಾರಿಯಾಗಿರುತ್ತದೆ. [ನಿಜವಾಗಿ ಇವರಿಗೆ 'ಹರಿಜನ'ರ ಮೇಲೆ ಪ್ರೀತಿ ಇದೆಯೇ? ಬಂಡಾಯವೇಳದೆ ಈ ಸಮಸ್ಯೆ ಪರಿಹಾರ ಕಾಣಲಾರದೇನೆನ್ನುವದನ್ನು ಮುಂದಿನ ವಾರ ಯೋಚಿಸುವ.]

ಈ ರೀತಿ ಪ್ರತಿಜ್ಞೆಯನ್ನು ಮರಿದಿಲ್ಲವೆಂಬಂತೆಯೇ ಪರಿಹಾಸ್ಯ ಮಾಡಿದ್ದಾರೆ ಇಂದಿರಾ ಗಾಂಧಿಯವರು ತನ್ನ ಪರಂಪರೆಯೇ ಹೀಗೆ ಅನ್ನುತ್ತಿದ್ದಾರೆ ಅವರು. ಅವರ ಹಿಂಬಾಲಕರು ಈ ಮಾತುಗಳಿಗೂ ಧರಾಕೆನ್ನುತ್ತಿದ್ದಾರೆ. ಅವರು ಆದ್ದರಿಂದ ಕ್ಯೂ ಕೈಚಪ್ಪಾಳೆ ತಟ್ಟುವವರೇ ಇದ್ದಾರೆ. ಪ್ರಜ್ಞಾಶೂನ್ಯ ಪ್ರಚಾರಪೂರ್ಣ ಪ್ರತಿಜ್ಞೆಯ ಪರಿಹಾಸ್ಯಕ್ಕೂ ಭಲೇ ಅನ್ನುವವರೇ ಇಂದಿರಾಜೀಯವರ ಹಿಂದಿಕ್ಕಿದ್ದಾರೆಂದು.

— ಶಿವಶಂಕರ

ರಾಜ್ಯೋತ್ಸವ ದಿನಾಚರಣೆ

ಉಡುಪಿಯ ಬೋರ್ಡ್ ಹಯರ್ ಸೆಕೆಂಡರಿ ಶಾಲೆಯಲ್ಲಿ ಶ್ರೀ ಟಿ. ಶಿವಾಜಿ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಆಚರಿಸಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ. ಎನ್. ಆಚಾರರು ಸ್ವಾಗತ ಭಾಷಣ ಮಾಡಿದರು. ಶ್ರೀ ಎ. ಜಿ. ಅಲ್ಸೆ, ಶಾಲಾ ಕನ್ನಡ ಪಂಡಿತ ಶ್ರೀಪತಿ ಆಚಾರ್, ಕುಮಾರಿ ಸಂಜೀವ, ಕಿಣಿ ಇತ್ಯಾದಿಯವರು ರಾಜ್ಯೋತ್ಸವ ಆಚರಣೆ ಬಗ್ಗೆ ಮಾತನಾಡಿದರು. ಜನಾಬ್ ಕೆ. ರಫಿಯುದ್ದೀನ್ ಅಸ್ಸಾದಿಗವರು ಯು. ಎನ್. ಓ.ದ ವಿಚಾರವಾಗಿ ಮಾತನಾಡಿದರು.

ಪುತ್ತೂರು ಪ್ರಿನ್ಸಿಪಾಲ್
ಮುನ್ಸಿಫ್ ಕೋರ್ಟಿನಲ್ಲಿ

I. A. III & IV in O. S. 267/1958

ಸುಮನಾಜ ಅಧಿಕಾರಿ —ಅರ್ಜಿದಾರಳು
ಶ್ರೀನಿವಾಸ ಪೈ ಕೊಡಾ —ಎದ್ರಿರು

ಮೇಲಿನ ಅರ್ಜಿಗಳ 6 ಮತ್ತು 8ನೇ ಎದ್ರಿರು (ದಾವೆಯ 20 ಮತ್ತು 24ನೇ ಪ್ರತಿವಾದಿರು.)

ವೀರಪ್ಪ ಗೌಡ, ಕುಕ್ಕ ಗೌಡರ ಮಗ, ಅಂಬು ಗೌಡ, ಮೋಂಟ ಗೌಡರ ಮಗ—ಬೆಳ್ತಂಗಡಿ ತಾಲ್ಲೂಕು ನಡಗ್ರಾಮದ ಪುತ್ಯ ಎಂಬಲ್ಲಿ.

ಈ ಎರಡು ಜನರಿಗೆ ತಿಳಿಯಪಡಿಸುವುದೇನೆಂದ್ರೆ

ಅರ್ಜಿದಾರಳು (ದಾವೆಯ 1ನೇ ವಾದಿಳು) ಮೇಲಿನ ದಾವೆಯ ಡಿಕ್ರೀಯನ್ನು ದುರಸ್ತು ಪಡಿಸಬೇಕಾಗಿ ದಾಖಲು ಮಾಡಿದ ಸದ್ರಿ ಅರ್ಜಿಗಳು ತಾ. 27-11-70ಕ್ಕೆ ವಿಂದು ಹಾಜ್ರಾತಿ ಬಗ್ಗೆ ಇಟ್ಟಿರುವುದ್ರಿಂದ, ಸದ್ರಿ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಮೇಲಿನ ಕೋರ್ಟಿನಲ್ಲಿ ಹಾಜ್ರಾಗಿ ತಂದು ಉಪಾಹರಣೆಯನ್ನು ದಾಖಲು ಮಾಡತಕ್ಕದ್ದೆಂತ ಈ ಮೂಲಕ ನಿಮಗೆ ತಿಳಿಸೋಣಾಗುತ್ತದೆ.

||ಕೋರ್ಟು ಹುಕುಂ ಪ್ರಕಾರ||

P. A. ARIGA
Advocate for Petitioner (Plf)
Puttur, S.K., 24-10-1970.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೇಕ್ಷಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೇಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿ ಕೂಡಿದ ಭೋಜನ, ಸಕಲ ವಿಧದ ತಿಂಡಿತಿನಸು
ಪಾಕೀಯುಳ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೊಟೇಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಪುತ್ತೂರು IInd Additional
ಮುನ್ಸಿಫ್ ಕೋರ್ಟಿನಲ್ಲಿ

Exc. 81/1970.

ಸಂಕಪ್ಪ ಶೆಟ್ಟಿ— ಅರ್ಜಿದಾರ
ಇನಾಸ್ತ್ರಿ ಕೊಡಾ— ಎದ್ರಿರು

2ನೇ ಎದ್ರಿ: ಹಸನಾರೆ ಬ್ಯಾರಿ, ಇಸ್ಮಾಲಿ ಬ್ಯಾರಿಯ ಮಗ, ಪೆರಿಯಡ್ಕ—ಬಜತ್ತೂರು ಗ್ರಾಮ.

ಸದ್ರಿ 2ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಬಜತ್ತೂರು ಗ್ರಾಮದ ಸ. ನಂಬ್ರ 805/2 ರಲ್ಲಿ ಹೊಸತಾಗಿ ಕಟ್ಟಿಸಿದ ಅಂಗಡಿ ಕಟ್ಟೋಣವನ್ನು ಕೋರ್ಟು ಮುಖಾಂತ್ರ ಖುಲ್ಲೆ ಪಡ್ಸಿಕೊಡ್ಬೇಕೆಂತ ಅರ್ಜಿದಾರ ದಾಖಲು ಮಾಡಿದ ಈ ಅಮಲ್ದಾರಿಯನ್ನು ತಾರೀಕು 21-11-70ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿವಸ ಕೋರ್ಟು ಮುಂದೆ ಹಾಜರಾಗಿ ಉದಪರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಗೈರ್ಹಾಜರು ಮಾಡಿ ಯುಕ್ತ ಕಂಡರೆ ತೀರ್ಮಾನಿಸಲಾದೀತು.

Sd/- M. Rammohan Rao
Advocate for petitioner
ತಾ. 10-11-70.

ಸಿಂಹದ ಚಿದಂಬರ ರಹಸ್ಯ

೧೯೭೦ರ ಡಿಸೆಂಬರದಲ್ಲಿ ಬೆಂಗಳೂರು ಕಾರ್ಪೊರೇಶನ್ನಿಗೆ ಚುನಾವಣೆ ನಡೆಯುತ್ತದೆ ಎಂದ ಸರಕಾರಿ ವಚನ ಪಾಲನೆ ಪಥದಲ್ಲಿದೆ. ಚುನಾವಣೆಗಳ ದೃಷ್ಟಿಯಿಂದ ರಾಜ್ಯಕೀಯ ಪಕ್ಷಗಳು ಕಾರ್ಯಗತವಾಗಿವೆ.

ರಾಜಧಾನಿ ಬೆಂಗಳೂರಿನಲ್ಲಿ ನಡೆಯುವ ಈ ಚುನಾವಣೆಗಳು ಮುಂದಿನ ಮಹಾಚುನಾವಣೆಗಳ ಮುನ್ನೋಟವನ್ನು ತೋರಿಸುವ ದಿಕ್ಸೂಚಿಯೆಂದರೆ ಆಶ್ಚರ್ಯವಿಲ್ಲ.

ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಸಿಂಡಿಕೇಟ್ ಸರಕಾರ ಉರುಳಿ ಹೋಗುತ್ತದೆ. ಎಂದು ಹೇಳುವ ಇಂಡಿಕೇಟಿಗರು ಇನ್ನೂ ಒಂದು ಹೆಜ್ಜೆ ಮುಂದುವರಿಯುತ್ತಾರೆ. "ನಾವು ಪ್ರಚಂಡ ಬಹುಮತಗಳಿಸಿ ಸರಕಾರ ರಚಿಸುತ್ತೇವೆ" ಎನ್ನುತ್ತಾರೆ.

ಬೆಂಗಳೂರು ನಗರ ಸಂಚಾರದ ವೇಳೆ ಇಂಡಿಕೇಟ್ ಅಧ್ಯಕ್ಷ ಕೇಂದ್ರ ಸಚಿವ ಶ್ರೀ ಕೆಂಗಲ್ಲರೂ ಸಿಂಡಿಕೇಟಿನ ನಾಯಕ ಶ್ರೀ ವೈ. ರಾಮಚಂದ್ರ ಅವರೂ ಈ ವಿಷಯದಲ್ಲಿ ಪರಸ್ಪರ ಭಿನ್ನ ಮತ ಹೊಂದಿದ್ದಾರೆ. ಇಬ್ಬರೂ ಬೆಂಗಳೂರಿನ ಜನತೆ ಇನ್ನೊಬ್ಬರಿಗೆ ಚೆನ್ನಾಗಿಯೇ ಬುದ್ಧಿ ಕಲಿಸುತ್ತಾರೆಂದು ಸತ್ಯ ನುಡಿದಿದ್ದಾರೆ.

ಕೇರಳದಲ್ಲಿ ಇಂಡಿಕೇಟ್ ದೇಶದ್ರೋಹಿ ಕಮ್ಯೂನಿಸ್ಟರು ಮತ್ತು ಜಾತೀಯವಾದಿ ಮುಸ್ಲಿಂಲೀಗಿನವರೊಂದಿಗೆ ಮೈತ್ರಿ ಸಾಧಿಸಿ ಅವರಿಬ್ಬರನ್ನೂ ಮೆಟ್ಟಿ ನಿಂತಿತು. ಇದರಿಂದ ಇಂಡಿಕೇಟ್ ಕಾಂಗ್ರೆಸ್ ಹೆಚ್ಚಿನ ಗರಿ ಮೂಡಿದ್ದು ನಿಜ. ಈಗ ಇಂಡಿಕೇಟಧ್ಯಕ್ಷ ಶ್ರೀ ಜಗಜ್ಜೀವನ ರಾಮರು ಅದು ಮೈತ್ರಿ ಅಲ್ಲ; ಹೊಂದಾಣಿಕೆ ಮಾತ್ರವೆಂದು ಪ್ರಚಾರ ಮಾಡತೊಡಗಿದ್ದಾರೆ.

ಆ ಪವಿತ್ರ ಮೈತ್ರಿ ಸಾಧಿಸಿದುದರಿಂದ ಇಂಡಿಕೇಟ್ ಜನಪ್ರಿಯತೆಗೆ ಮಾರಕವಾಗುತ್ತಿದೆ; ಆದ್ದರಿಂದಲೇ ಈ ಹೊಂದಾಣಿಕೆಯ ಮಾತು.

ಸ್ಥಾನಗಳನ್ನು ಮಾತ್ರ ಹಂಚಿಕೊಂಡದ್ದಾದರೆ, ಪ್ರಧಾನಿಯು ಕಮ್ಯುನಿಸ್ಟ್-ಮುಸ್ಲಿಂಲೀಗ್ ಅಭ್ಯರ್ಥಿಗಳ ಚುನಾವಣಾ ಪ್ರಚಾರದಲ್ಲಿ ಏಕೆ ಭಾಗವಹಿಸಬೇಕಿತ್ತು? ಅವರಿಗೇ ಓಟುಕೊಡಿರೆಂದೇಕೆ ಕೈ ಮುಗಿದು ಬಾಯ್ಬಿಟ್ಟು ಬೇಡಬೇಕಿತ್ತು?

ಅದು ಹೊಂದಾಣಿಕೆ ಮಾತ್ರವಾದರೆ ಮತ್ತೆ 'ಮೈತ್ರಿ' ಪದಕ್ಕೆ ಇಂಡಿಕೇಟ್ ನಿಘಂಟು ಯಾವ ಅರ್ಥ ಬರೆಯುತ್ತದೆ?

ಬೆಂಗಳೂರು ಚುನಾವಣೆಗಳಲ್ಲಿ ಇಂಡಿಕೇಟು ದ್ರಾವಿಡ ಮುನ್ನೇತ್ರ ಕಳಗಂದೊಡನೆ ಕೂಡಿಕೊಂಡು ಸ್ಪರ್ಧಿಸಲಿದೆಯೆಂದು ಅದರ ರಾಜ್ಯ ಘಟಕದ ಅಧ್ಯಕ್ಷ ಶ್ರೀ ದೇವರಾಜ ಅರಸರೇ ಹೇಳುತ್ತಾರೆ....

ದ್ರಾವಿಡ ಮುನ್ನೇತ್ರ ಕಳಗಂ ಪ್ರತ್ಯೇಕತಾವಾದಿ ಪಕ್ಷ. ರಾಜ್ಯಕ್ಕೆ ಪ್ರತ್ಯೇಕ ಧ್ವಜ-ಲಾಂಛನ ಬೇಕೆಂದು ಪಟ್ಟುಹಿಡಿದ ಪ್ರಾದೇಶಿಕ ಪಕ್ಷ.

ಅದು ಹುಟ್ಟಿದ್ದು ಪ್ರತ್ಯೇಕತಾಭಾವದಿಂದ; ಬೆಳೆದದ್ದೂ ಅದರಿಂದಲೇ; ಮಂತ್ರಿ ಅಧಿಕಾರದಲ್ಲಿ ಉಳಿದಿರುವುದೂ ಅದರ ಬಲದಿಂದಲೇ.

ಅಂತಹ ಪ್ರತ್ಯೇಕವಾದಿಗಳೊಂದಿಗೆ ರಾಷ್ಟ್ರೀಯ ಭಾವನೆಯನ್ನು ಮೆಟ್ಟಿ ನಿಂತು, ಪ್ರಾದೇಶಿಕ ಭಾವದ ಮೆರವಣಿಗೆ ಹೊರಡುವವರೊಡನೆ ಇಂಡಿಕೇಟ್ ಬೆಂಗಳೂರು ಚುನಾವಣೆಗಳಲ್ಲಿ ಮೈತ್ರಿ ಸಾಧಿಸುತ್ತದೆ; ಅಲ್ಲ, ಹೊಂದಾಣಿಕೆ ಮಾಡಿಕೊಳ್ಳುತ್ತದೆ (?)

ಕಾವೇರಿ ನದೀ ನೀರಿನ ಬಗ್ಗೆ ಗುಲಾಮಿತನದ ನೊಗ, ೧೯೨೪ರ ಒಪ್ಪಂದವನ್ನು ಕರ್ನಾಟಕದ ಮೇಲೆ ಸದಾಕಾಲ ಹೇರುವ ಇರಾದೆಯುಳ್ಳ ಡಿಎಂಕೆ—

ಕಾವೇರಿ ನದೀ ನೀರಿನಲ್ಲಿ ಕರ್ನಾಟಕಕ್ಕೆ ನ್ಯಾಯವಾದ ಪಾಲು ನೀಡಬಾರದೆಂದು ಕೇಂದ್ರ ಸರಕಾರದ ಮೇಲೆ ತನ್ನ ಎಂಪಿ ಬಲದಿಂದ ಒತ್ತಾಯ ಹೇರುವ ಡಿಎಂಕೆ—

ಕನ್ನಡದ ರಾಜಧಾನಿಯಲ್ಲೇ ಕನ್ನಡವನ್ನು ಧೂಳೀಪಟ ಮಾಡಲು ಉದ್ದೇಶಿಸಿರುವ ಡಿಎಂಕೆಯೊಡನೆ—

ಇಂಡಿಕೇಟ್ ಮೈತ್ರಿ ಸಾಧಿಸಿದರೆ, ಹೊಂದಾಣಿಕೆ ಮಾಡಿಕೊಂಡರೆ,

ಅದು ಜಯಗಳಿಸಿದರೆ,

ಕನ್ನಡದ ನೆಲ, ಜಲವೆಲ್ಲವೂ ಮುಳುಗಿ ಮುಳ್ಳುವುದಕ್ಕೆ ನಾಂದಿ.

ಶ್ರೀ ದೇವರಾಜ ಅರಸು ಪ್ರಭೃತಿಗಳು ನವದೆಹಲಿ ಯಾತ್ರೆ ಕೈಕೊಂಡರು.

ಕಾವೇರಿ ನೀರಿನ ಬಗ್ಗೆ ಮತ್ತೊಂದು ಸುತ್ತಿನ ಮಾತುಕತೆ ನಡೆಯಬೇಕೆಂದರು. ಮಹಾಜನ ಆಯೋಗದ ವರದಿಯನ್ನು ಜಾರಿಗೆ ತರಬೇಕೆಂದು ಕೇಳಿಕೊಂಡರು.

ಇವರ ಕೇಳಿಕೆಯನ್ನು ಶ್ರೀಮತಿ ಗಾಂಧಿ ಸಮಾಧಾನಚಿತ್ತದಿಂದ ಆಲಿಸಿದರು; ಪರಿಶೀಲಿಸುವ ಭರವಸೆ ನೀಡಿದರು.

ಶ್ರೀಮತಿ ಗಾಂಧಿಯವರಲ್ಲಿ ವಿಶ್ವಾಸವಿಡಿ; ಆಕೆಯ ಅಮೃತ ಹಸ್ತಗಳಿಂದ ರಾಜ್ಯಕ್ಕೆ ಅನ್ಯಾಯವಾಗುವುದಿಲ್ಲ; ಎಂದು ಭರವಸೆ ನೀಡುತ್ತ ಬಂದ ಇಂಡಿಕೇಟ್ ಅಧ್ಯಕ್ಷರುಗಳು ಈಗೇಕೆ ದಿಲ್ಲಿ ಯಾತ್ರೆ ಮಾಡಿ ಬಂದರು?

ತಮ್ಮ ಆರಾಧ್ಯ ದೇವಿಯಲ್ಲಿ ಅನುಮಾನ ಬಂತೇ ಮೂಡಿತ್ತೇ? ಈ ಅಪನಂಬಿಕೆ ಒಮ್ಮಿಂದೊಮ್ಮೆಲೇ ಎಂತು ಉದ್ಭವಿಸಿತು?

ಕರ್ನಾಟಕದ ಜನರನ್ನು, ಬೆಂಗಳೂರಿನ ನಾಗರಿಕರನ್ನು ವಂಚಿಸುವ ಹೊಸ ತಂತ್ರವೇ ಇದು?

ಶ್ರೀಮತಿ ಗಾಂಧಿಯವರಿಗೆ ಪಕ್ಷ ಬೇಡ, ನೀತಿ ಬೇಡ; ಧರ್ಮ ಬೇಡ; ದೇಶವೂ ಬೇಕೆಂದಿಲ್ಲ.

ಆಕೆಗೆ ಬೇಕು ಅಧಿಕಾರ ಮಾತ್ರ.

ತನಗೆ ಬೆಂಬಲ ನೀಡುವವರಿಗೆ ಆಕೆ ಏನನ್ನೂ ಕೊಡುತ್ತಾರೆ.

ತಮಿಳುನಾಡಿನ ಉಕ್ಕಿನ ಕಾರಖಾನೆಗೆ ಮಂಜೂರಾತಿ ಬಂತು, ಕರ್ನಾಟಕದ ಕಾರಖಾನೆ ಕಾಗದ ಪತ್ರಗಳಲ್ಲೇ ಉಳಿದಿದೆ.

ಅಸ್ಸಾಮಿಗೆ ಎರಡನೆಯ ತೈಲ ಶುದ್ಧೀಕರಣ ಕಾರಖಾನೆ ಇಲ್ಲ ಇಲ್ಲವೆಂದವರು ಈಗ ಚಿನ್ನದಬಟ್ಟಲಲ್ಲಿ ಎತ್ತಿ ನೀಡಿದರು.

ಆದರೆ, ಒರಿಸ್ಸಾಕ್ಕೆ ಉಕ್ಕಿನ ಕಾರಖಾನೆ ಬೇಕು ಅಂದವರಿಗೆ ಸ್ಪಷ್ಟವಾಗಿ ನಿರಾಕರಿಸಿದರು.

ಮೇಘಾಲಯಕ್ಕೆ ಪ್ರತ್ಯೇಕ ರಾಜ್ಯದ ಸ್ಥಾನಮಾನಗಳನ್ನು ನೀಡಲು ಅವರು ಒಪ್ಪಿದರು; ಗೋವೆಗೆ ಅದನ್ನು ನಿರಾಕರಿಸಿದ್ದಾರೆ.

ರಾಜಧನಾದಿ ಸಂಬಂಧಿ ಸಂವಿಧಾನ ತಿದ್ದುಪಡಿ ಮಸೂದೆ ಬಿದ್ದು ಹೋದರೂ ತನ್ನ ಉದ್ದೇಶವನ್ನು ಬೇರೆ ರೀತಿಯಿಂದ ಸಾಧಿಸಿದರು.

ಉತ್ತರ ಪ್ರದೇಶದಲ್ಲಿ ರಾಷ್ಟ್ರಪತಿ ಆಳಿಕೆ ಘೋಷಿಸಿದರು. ಬಿಹಾರದಲ್ಲಿ ತೇಪೆ ಹಾಕಿದರು.

ಕೇರಳದಲ್ಲಿನ ಎಂ. ಪಿ. ಸ್ಥಾನವನ್ನು ತನ್ನ ಪಕ್ಷೀಯರ ಅಭಿಪ್ರಾಯಕ್ಕೆ ವಿರುದ್ಧವಾಗಿ ಬಳಕವ್ಯಕ್ತಿಸ್ಟರಿಗೆ ಬಂಗಾರದ ತಟ್ಟೆಯಲ್ಲಿ ನೀಡಿದರು.

ಉತ್ತರ ಪ್ರದೇಶ ತನಗೆ ಸಂಪೂರ್ಣ ಎದುರಾಗುತ್ತದೆ ಎಂದಾಗ, ಒಲ್ಲದ ಮನಸ್ಸಿನಿಂದ ರಾಷ್ಟ್ರಪತಿ ಆಳಿಕೆಯನ್ನು ಹಿಂತೆಗೆಯಲು ಶಿಫಾರಸು ಮಾಡಿದರು.

ಇದೆಲ್ಲ ಏಕೆ? ಅಧಿಕಾರದಲ್ಲಿ ಉಳಿಯಲು ಏನೂ ಬಗೆಯ ತಪ್ಪರಲಾಗ.

ಆಕೆಗೆ ತನ್ನಲ್ಲೇ, ತನ್ನ ನೀತಿಯಲ್ಲೇ ನಂಬುಗೆಯಿಲ್ಲ; ಬೇರೆಯವರಲ್ಲಿ ಹೇಗಿದ್ದೀತು?

ಅಂತಹ ಶ್ರೀಮತಿ ಇಂದಿರಾಗಾಂಧಿಯ ಸುತ್ತ ನಿಂತಿರುವ ಇಂಡಿಕೇಟಿಗರಿಗೂ ಅದೇ ದೇವಿಯ ಗಾಳಿಸೋಂಕಿದರೆ ಆಶ್ಚರ್ಯವಿಲ್ಲ.

ಹಿರಿಯಕ್ಕನ ಚಾಳಿ ಮನೆ ಮಂದಿಗೆ; ಇಂದಿರಜ್ಜಿಯ ಬುದ್ಧಿ ಇಂಡಿಕೇಟಿಗರಿಗೆ.

ಆಕೆ ಪಕ್ಷ ಒಡೆದರು; ದೇಶದ್ರೋಹಿಗಳೊಡನೆ ಕೂಡಿಕೊಂಡರು.

ಇವರು ಜನಜನವನ್ನೂ ಒಡೆಯುತ್ತಾರೆ, ಹಿತಶತ್ರುಗಳನ್ನೂ ಬಗೆಸಿಳೆಯುತ್ತಾರೆ.

ಚುನಾವಣೆಗಳಲ್ಲಿ ಏನಕೇನ ಪ್ರಕಾರೇಣ ಗೆದ್ದು ಬರಲು ಕಂದರೆ ಕಾಲೂ ಹಿಡಿಯುತ್ತಾರೆ; ಕತ್ತೆಯ ಕಾಲೂ ಹಿಡಿಯುತ್ತಾರೆ.

ಜನರನ್ನು ಎಲ್ಲ ಕಾಲಕ್ಕೂ ವಂಚಿಸಿ ಮೆಟ್ಟಿ ನಿಲ್ಲಬಹುದೆಂದು ಅವರು ಭಾವಿಸಿದ್ದಾರೆ. ಸಿಂಹ ಚರ್ಮ ಹೊದ್ದ ಕತ್ತೆ ಹುಲ್ಲು ಮೇಯುವುದನ್ನು ಬಿಟ್ಟರೆ, ಉಪವಾಸ ಬಿದ್ದು ಸಾಯಬೇಕಾಗುತ್ತದೆ ಎಂಬುದನ್ನು ಮರೆತು ಬಿಟ್ಟಿದ್ದಾರೆ.

ನವಯುಗದ ಹೊಸ ವರ್ಷ

ಚಂದಾದಾರರಲ್ಲಿ ವಿನಂತಿ

ಇದೇ ಕಳೆದ ಆಗೋಸ್ತು ತಿಂಗಳಂತ್ಯಕ್ಕೆ 'ನವಯುಗ'ದ 49ನೆಯ ವರ್ಷ ಮುಗಿದು ಸಪ್ಟಂಬರದಿಂದ 50ನೆಯ ಹೊಸ ವರ್ಷಾರಂಭವಾಗಿದೆ. ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತವಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ. ಚಂದಾಹಣವನ್ನು ಮನಿಆರ್ಡರು ಮೂಲಕ, ಯಾ ಇಂಡಿಯನ್ ಪೋಸ್ಟಲ್ ಆರ್ಡರು ಮೂಲಕ ಕಳಿಸಬಹುದು. ಇಲ್ಲವೆ ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಪಾವತಿ ಮಾಡಬಹುದು. ಹಾಗೆ ಪಾವತಿ ಮಾಡುವಾಗ ತಮ್ಮ ಚಂದಾನಂಬ್ರ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇವೆ.

ಚಂದಾಹಣಕ್ಕಾಗಿ ಪತ್ರಿಕೆಯನ್ನು ವಿ. ಪಿ. ಮೂಲಕ ಕಳಿಸಿದರೆ ಈಗಿನ ಹೆಚ್ಚಿಸಿದ ಅಂಚೆ ದರದಿಂದಾಗಿ ರೂ. 1–40 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ದಯಮಾಡಿ ಚಂದಾವನ್ನು ಮೇಲಿನಂತೆ ಕಳಿಸಬೇಕಾಗಿ ಬಿನ್ನವಿಸುತ್ತೇವೆ.

ಮೆನೇಜರ್.

ಗುಂಡುಮಿ

ವೃಂದ ಬೃಂದಾವನದ
ಮಂದ ಚಂದ್ರಾನನದ
ಜಗದ ಜಗಜಗದ

ನಿಂದಂದ ಚಂದ ರಾಶಿ
ಇದೆನ್ನ ಕನಸ ಕಾಶಿ

ಉದು ಉಲಿದ ಅರಳು
ಸರಕೊನ್ನೆ ಹರಳು
ಬಂಧಿಸಿದ ಕೊರಳು

ಹೊರಿಸಂಸಿ ನಕ್ಕು ಉಲಿದು
ಅರಳರಳಿ ಹೊರಳಿ ಬಂದು

ಮೌನ ಶಾಂತಿಯು ಕಾಂತಿ
ಜ್ಯೋತಿ ನಂದಾದೀಪ
ಎತ್ತಿ—ಮೊಗವೆತ್ತಿ
ಬೆಳಕಿತ್ತು ಬೆಳಗಿತ್ತು

ನಾ ಬಂದ ದಣಿ ಒಲುಮೆ
ಅರಳದಳಿ ಕಂದ ಗುಂಡ್ಮಿ

—ಗುಂಡ್ಮಿ ಭಾಸ್ಕರಮಯ್ಯ

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0–75 ಪೈಸೆ ಮಾತ್ರ.
ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಲಾಗುವುದು.
ನವಭಾರತ ಪುಸ್ತಕ ಭಂಡಾರ.
ಬಾಲುಕೋಟೆ, ಉಡುಪಿ, ದ, ಕ.

ನೆಹರೂ ಕಂಡ ಜಾತ್ಯತೀತ ರಾಷ್ಟ್ರ

ಲೇಖಕರು: ಶ್ರೀ ಫಕ್ರುದ್ದೀನ್ ಅಲಿ ಅಹಮದ್.

ನೆಹರೂಜಿ ಜಾತ್ಯತೀತ ಆದರ್ಶದಲ್ಲಿ ಬಲವಾದ ನಂಬುಗೆಯುಳ್ಳವರಾಗಿದ್ದರು. ಸದಾ ಭಾರತದ ಶ್ರೇಯಸ್ಸು ಚಿಂತನೆಯೊಡನಿದ್ದ ಅವರು ಜಾತ್ಯತೀತ ಆದರ್ಶವೇ ರಾಷ್ಟ್ರ ಕಲ್ಯಾಣದ ಮಾರ್ಗವೆಂದು ಹೇಳುತ್ತಿದ್ದರು. 1948ರಲ್ಲಿ ಅವರು ಅಲೀಗಢದಲ್ಲಿ ಈ ಬಗ್ಗೆ ತಮ್ಮ ವಿಚಾರಗಳನ್ನು ಸ್ಪಷ್ಟಪಡಿಸಿ ಜಾತ್ಯತೀತ ರಾಷ್ಟ್ರದಲ್ಲಿ ಸರ್ವಧರ್ಮಗಳ ಅನುಯಾಯಿಗಳಿಗೂ ಸಮಾನಗೌರವ, ಧರ್ಮ ಅಥವಾ ತತ್ತ್ವಾಧಾರದ ಮೇಲೆಯೇ ರೂಪುಗೊಂಡ ರಾಷ್ಟ್ರದಲ್ಲಿ ಇತರ ಧರ್ಮದ ಅನುಯಾಯಿಗಳು ಪರಕೀಯರಾಗುತ್ತಾರೆ. ಈ ಎರಡು ಆದರ್ಶಗಳಲ್ಲಿ ನಾವು ಯಾವುದನ್ನು ನಂಬಬೇಕು? ಎಂದು ಅವರು ಪ್ರಶ್ನಿಸಿದರು. ಈ ಪ್ರಶ್ನೆಗೆ ಅವರೇ ಉತ್ತರಕೊಡುತ್ತ "ಧರ್ಮ ಅಥವಾ ತತ್ತ್ವಾಧಾರದ ಮೇಲೆ ರಾಷ್ಟ್ರವನ್ನು ಕಟ್ಟುವ ವಿಚಾರ — ವಿಲಕ್ಷಣವಾಗಿದ್ದರಿಂದ ವಿಶ್ವದ ರಾಷ್ಟ್ರಗಳು ಅದನ್ನು ಅನೇಕ ಶತಮಾನಗಳ ಹಿಂದೆಯೇ ಕೈಬಿಟ್ಟಿವೆ. ನಾನಾ ಧರ್ಮಗಳ ಜನರಿರುವ ಭಾರತದಂತಹ ರಾಷ್ಟ್ರ ಜಾತ್ಯತೀತ ಆದರ್ಶದ ಅನುಸರಣೆಯೇ ಶ್ರೇಷ್ಠವೆಂದು ನೆಹರೂ ಅವರು ಅಭಿಪ್ರಾಯಪಟ್ಟಿದ್ದಾರೆ. 1931ರಲ್ಲಿ ಕರಾಚಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಮೂಲಭೂತ ಹಕ್ಕುಗಳ ಸಂಬಂಧವಾದ ನಿರ್ಣಯವನ್ನು ಸ್ವಯಂ ನೆಹರೂ ಅವರೇ ಸಿದ್ಧಪಡಿಸಿದರು. ಈ ನಿರ್ಣಯದ ಒಂದು ನಿಯಮದಲ್ಲಿ ಸರಕಾರವು ಸರ್ವಧರ್ಮಗಳ ವಿಷಯದಲ್ಲೂ ತಾಟಸ್ಥ್ಯವನ್ನು ಅನುಸರಿಸಬೇಕೆಂದು ಸ್ಪಷ್ಟಪಡಿಸಿದ್ದಾರೆ.

ಧರ್ಮ ಮತ್ತು ಸರಕಾರ

1951ರಲ್ಲಿ ಜವಾಹರಲಾಲ್ ನೆಹರೂ ಅವರು "ಜಾತ್ಯತೀತ ರಾಷ್ಟ್ರ"ದ ಬಗ್ಗೆ ವ್ಯಾಖ್ಯೆ ನೀಡಿದರು. ಜಾತ್ಯತೀತ ರಾಷ್ಟ್ರವು ಎಲ್ಲಾ ಧರ್ಮಗಳಿಗೂ ರಕ್ಷಣೆ ನೀಡುತ್ತದೆ. ಒಂದು ಧರ್ಮ ಮೇಲು ಎಂದೂ ಇನ್ನೊಂದು ಧರ್ಮ ಕೀಳು ಎಂದೂ ಭಾವಿಸುವುದಿಲ್ಲ. ಇಷ್ಟೇ ಅಲ್ಲ ಯಾವುದೇ ಧರ್ಮವನ್ನೇ ಆಗಲಿ ಅಧಿಕೃತ ಧರ್ಮವೆಂದು ಪರಿಗಣಿಸುವುದಿಲ್ಲ' ಎಂದಿದ್ದಾರೆ.

"ಜಾತ್ಯತೀತ ರಾಷ್ಟ್ರವೆಂದರೆ ವ್ಯಕ್ತಿಯು ಖಾಸಗಿ ಜೀವನದಲ್ಲಿ ಧರ್ಮದ ಮಹತ್ವವೇ ಇರಬಾರದೆಂದೂ ಅರ್ಥವಲ್ಲ. ಜಾತ್ಯತೀತ ರಾಷ್ಟ್ರದಲ್ಲಿ ಸರಕಾರ ಮತ್ತು ಧರ್ಮ ಎರಡೂ ಪ್ರತ್ಯೇಕವಾಗಿರಬೇಕು. ಇಂತಹ ಆಧುನಿಕ ಪ್ರಜಾಪ್ರಭುತ್ವದ ಶ್ರೇಷ್ಠ ವಿಧಾನವನ್ನು ಎತ್ತಿಹಿಡಿಯುವುದೇ ನನ್ನ ಗುರಿ" ಎಂದು ನೆಹರೂಜಿ ಹೇಳಿದರು.

ನೆಹರೂ ಅವರು ಜಾತ್ಯತೀತತೆಯ ಬಗ್ಗೆ ಒಂದು ಕಡೆ ಹೀಗೆ ಬರೆದಿದ್ದಾರೆ: 'ಜಾತ್ಯತೀತ' ಶಬ್ದದ ಅರ್ಥ ಶಬ್ದಕೋಶದಲ್ಲಿ ದೊರೆಯುವ ಅರ್ಥಕ್ಕಿಂತಲೂ ವಿಶಾಲವಾಗಿದೆ, ದೇಶದ ಪ್ರಸ್ತುತ ಸಾಮಾಜಿಕ ಪರಿಸ್ಥಿತಿಯಲ್ಲಿ ಈ ಅರ್ಥಗಳು ಇನ್ನೂ ಹೆಚ್ಚಿನ ಮಹತ್ವ ದೊರೆತಿವೆ. ಜಾತಿಪ್ರಧಾನವಾದ ರಾಷ್ಟ್ರವೆಂದೂ ಜಾತ್ಯತೀತವೆನಿಸಲಾರದು. ಯಾರೊಬ್ಬರ ಖಾಸಗಿ ವಿಚಾರಗಳಲ್ಲಿ ಪ್ರವೇಶಿಸುವ ಇಚ್ಛೆ ನನಗಿಲ್ಲ. ಆದರೆ ಈ ಖಾಸಗಿ ನಂಬುಗೆಗಳೇ ಪ್ರಬಲವಾಗಿ ಜಾತಿ-ಉಪಜಾತಿಗಳ ವಿಭಜನೆಗೊಂಡಾಗ ಸಮಾಜಕ್ಕೆ ಕೇಡಾಗುತ್ತದೆ.''

ನೆಹರೂ ಕಲ್ಪನೆಯು ಜಾತ್ಯತೀತ ರಾಷ್ಟ್ರದಲ್ಲಿ ವ್ಯಕ್ತಿಯನ್ನು ಧಾರ್ಮಿಕ ಕಟ್ಟಳೆಗಳಿಂದ ಉದ್ಭವಿಸುವ ಅಸಮಾನತೆಯ ಬಂಧನದಿಂದ ವಿಮುಕ್ತ. ಇಂತಹ ಒಂದು ರಾಜಕೀಯ ವ್ಯವಸ್ಥೆಯುಳ್ಳ ರಾಷ್ಟ್ರವೇ ಜಾತ್ಯತೀತ ರಾಷ್ಟ್ರ.

ಧಾರ್ಮಿಕ ಸ್ವಾತಂತ್ರ್ಯ

ಧಾರ್ಮಿಕ ಸ್ವಾತಂತ್ರ್ಯದ ಬಗ್ಗೆ ನೆಹರೂ ಅವರ ಅಭಿಪ್ರಾಯ ಸ್ಪಷ್ಟವಾಗಿತ್ತು. 1951ರ ಕಾಂಗ್ರೆಸ್ ಚುನಾವಣೆ ಪ್ರಣಾಳಿಕೆಯಲ್ಲಿರುವ ಅವರ ಹೇಳಿಕೆ ಇಲ್ಲಿ ಉಲ್ಲೇಖನೀಯವಾಗಿದೆ.

"ಭಾರತ ಜಾತ್ಯತೀತ ರಾಷ್ಟ್ರ. ಕಾರಣ ಈ ದೇಶದ ಪ್ರತಿಯೊಬ್ಬ ಪ್ರಜೆಗೂ ಇತರರಿಗಿರುವ ಕರ್ತವ್ಯಗಳಿವೆ, ಹಕ್ಕುಗಳಿವೆ. ತನ್ನ ಧರ್ಮದ ಆಚರಣೆಗೆ ಸಂಪೂರ್ಣ ಸ್ವಾತಂತ್ರ್ಯವಿದೆ".

ಧಾರ್ಮಿಕ ವೈವಿಧ್ಯತೆಯುಳ್ಳ ರಾಷ್ಟ್ರದಲ್ಲಿ ಸಾಮಾಜಿಕ ಸ್ಥಿರತೆ ಹಾಗೂ ಸಾಮರಸ್ಯವನ್ನು ಸಾಧಿಸಲು ಜಾತ್ಯತೀತ ಆದರ್ಶದ ಅನುಸರಣೆಯೇ ಒಂದು ಸೂಕ್ತವಾದ ಮಾರ್ಗ. ರಾಷ್ಟ್ರವು ಒಂದು ವೇಳೆ ಯಾವುದೇ ಒಂದು ಧರ್ಮಕ್ಕೆ ಪ್ರಾಧಾನ್ಯ ನೀಡಿದ್ದೇ ಆದರೆ ಇದರಿಂದ ಇತರ ಧರ್ಮದ ಅನುಯಾಯಿಗಳ ಮನಸ್ಸಿನಲ್ಲಿ ಸಂದೇಹ ಹಾಗೂ ಭೀತಿ ಉಂಟಾಗುತ್ತದೆ. ಇಂತಹ ಒಂದು ವಿಧಾನವು ದೋಷಪೂರ್ಣಮಾತ್ರವಲ್ಲ, ಪರಸ್ಪರ ಘರ್ಷಣೆಗೆ ಹಾಗೂ ತೊಂದರೆಗೂ ಅದು ಕಾರಣವಾಗುತ್ತದೆ, ಎಂದು ನೆಹರೂ ಅವರು ಹೇಳಿದ್ದಾರೆ.

ಭಾರತದ ಸಂವಿಧಾನದ ಬಗ್ಗೆ ಪ್ರಸ್ತಾಪಿಸುತ್ತ ನೆಹರೂ ಅವರು ಸಂವಿಧಾನ ಜಾತ್ಯತೀತ ಗೊಳಿಸಿದ್ದು ಸರ್ವ ಧರ್ಮಾನುಯಾಯಿಗಳಿಗೆ ಸ್ವಾತಂತ್ರ್ಯವನ್ನು ಕೊಟ್ಟಿದೆ. ಜಾತ್ಯತೀತ ಆದರ್ಶದ ರಾಷ್ಟ್ರಕ್ಕೂ ಭದ್ರ ಬುನಾದಿ ಹಾಕಿದೆ.

ಇಂಡೋನೇಷ್ಯಾ ಮತ್ತು ಪಾಕಿಸ್ತಾನ ಈ ಎರಡು ದೇಶಗಳನ್ನು ಬಿಟ್ಟರೆ, ಭಾರತದಲ್ಲಿ ಇತರ ಯಾವುದೇ ಮುಸ್ಲಿಂ ರಾಷ್ಟ್ರದಲ್ಲಿರುವಷ್ಟು ಮಂದಿ ಮುಸ್ಲಿಮರಿದ್ದಾರೆಂದು ನೆಹರೂ ಅವರು ಅಭಿಮಾನದಿಂದ ಹೇಳಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದ ದಿನದಿಂದಲೂ, ಮುಸ್ಲಿಮರು, ಕ್ರೈಸ್ತರು ಮತ್ತು ಇತರ ಅಲ್ಪಸಂಖ್ಯಾತ ವರ್ಗಗಳ ಜನರು ರಾಷ್ಟ್ರದ ಸರ್ವೋಚ್ಚ ಸ್ಥಾನಗಳಿಗೂ ಸೇರಿದಂತೆ ಅನೇಕ ಮಹತ್ವದ ಹುದ್ದೆಗಳಲ್ಲಿ ಸೇವೆಸಲ್ಲಿಸಿದ್ದಾರೆ— ಈಗಲೂ ಸಲ್ಲಿಸುತ್ತಿದ್ದಾರೆ.

ಇಪ್ಪತ್ತನೆಯ ಶತಮಾನದ ಮಧ್ಯಭಾಗದಲ್ಲಿ ಜಾತ್ಯತೀತ ರಾಷ್ಟ್ರವಾಗಿ ಭಾರತದ ಉದಯವಾಗಿರುವುದು ಆಧುನಿಕ ಇತಿಹಾಸದಲ್ಲೇ ಒಂದು ಮಹತ್ವಪೂರ್ಣ ಬೆಳವಣಿಗೆಯೆಂದು ಹೇಳಬಹುದು. ಈ ಚಿಂತನಾರ್ಹ ಬದಲಾವಣೆಯನ್ನು ತಂದ ಶ್ರೇಯಸ್ಸು ನೆಹರೂ ಅವರಿಗೇ ಸಲ್ಲುತ್ತದೆ.

ನಗರಗಳ ವಿಸ್ತಾರ, ಬೆಳೆಗಳ ವಿಪುಲತೆ, ಜನಸಂಖ್ಯೆಯ ಬೆಳವಣಿಗೆ ಇವು ಯಾವುದೊಂದು ದೇಶದ ನಾಗರಿಕತೆಯ ನಿದರ್ಶನಗಳಲ್ಲ, ಆದರೆ ಆ ದೇಶವು ಎಂತಹ ಮಾನವನನ್ನು ರೂಪಿಸುತ್ತದೆಂಬುದೇ ನಾಗರಿಕತೆಯ ನಿಜವಾದ ಒರೆಗಲ್ಲು.

—ಎಮರ್ಸನ್

ಚಿತ್ತರಂಜನದಾಸರ ದಿನಾಚರಣೆ

ಶಿರ್ವ ಹಿಂದೂ ಹಾಯರ್ ಸೆಕೆಂಡರಿ ಶಾಲೆಯಲ್ಲಿ ದೇಶಬಂಧು ಚಿತ್ತರಂಜನದಾಸರ ನೂರನೇ ಜನ್ಮದಿನ ಮತ್ತು ಮಹಿಳಾದಿನವನ್ನಾಚರಿಸಲಾಯಿತು. ಸಭಾಧ್ಯಕ್ಷತೆಯನ್ನು ಶ್ರೀ ಕೆ. ವಾಸುದೇವ ಶೆಟ್ರು ವಹಿಸಿದ್ದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ಜಯರಾಮ ಶೆಟ್ರು ಮಹಿಳಾ ದಿನಾಚರಣೆಯ ಔಚಿತ್ಯವನ್ನು ತಿಳಿಸಿದರು. ಶ್ರೀ ಕೆ. ಎಲ್ ಶರ್ಮರು ಚಿತ್ತರಂಜನದಾಸರ ಭಾವಚಿತ್ರವನ್ನು ಅನಾವರಣ ಮಾಡಿ, ಸ್ವಾತಂತ್ರ್ಯ ಹೋರಾಟದಲ್ಲಿ ಅವರು ಸಲ್ಲಿಸಿದ ಅಪಾರ ಸೇವೆಯನ್ನು ತಿಳಿಸಿದರು. ಅಧ್ಯಕ್ಷರ ಕಾಲೋಚಿತ ಭಾಷಣ ನಂತರ ವಿದ್ಯಾರ್ಥಿನಾಯಕರಾದ ಶ್ರೀ ಗೋಪಾಲಕೃಷ್ಣ ಆಚಾರ್ಯರವರು ವಂದನೆಗಳನ್ನಿತ್ತರು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

Exc. 41/1970 O.S. 8/1969 I.A. 2

ಬೊನವೆಂಚರ ಸಿಕ್ವೇರ ಸಹಾ— ಅರ್ಜಿದಾರರು

T.S. ಕೃಷ್ಣರಾಜ ಭಟ್ಟ ಸಹಾ— ಎದ್ರಿರು

2. ಗುರುರಾಜ ಭಟ್ಟ, T.S. ಕೃಷ್ಣರಾಜ ಭಟ್ರ ಮಗ, ಮಂಗಳೂರು ತಾಲೂಕು ಕಾಕೆಪಾಡಿ ಗ್ರಾಮದ ದಡ್ಡು ಎಂಬಲ್ಲಿರುವವರು.

ಸದ್ರಿ 2ನೇ ಎದ್ರಿ ಆದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

ಸದ್ರಿ ಡಿಕ್ರಿಯಲ್ಲಿ ನ್ಯಾಯಾಲಯಕ್ಕೆ ವಿಧಿಯಿರುವ ಸ್ಥಿರಾಸ್ತಿಗಳನ್ನು ಏಲಂಗೆ ಅಪೇಕ್ಷಿಸಿ ಅರ್ಜಿದಾರರು ಬಾಕಿ ಮಾಡಿದ ಏಲಂ ಯಿಸ್ತಿಹಾರಿನ ಶರ್ತು ನಿರ್ಣಯಿಸುವ ಬಗ್ಗೆ ಸದ್ರಿ ಅಮಲ್ಜಾರಿಯು ತಾ. 20.11.1970 ಕ್ಕೆ ಮುಂದೂಡಲಾಗಿಯದೆ. ಆ ಕುರಿತು ನಿಮಗೆ ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ಅಮಲ್ಜಾರಿ ತೀರ್ಮಾನಿಸಲಾಗುವದು ಎಂತ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಸಿಯದೆ.

K. V. KAMATH
Advocate for D. Hs,

Karkala, 13-11-70.



7 ವರ್ಷದ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟು
(ನಾಲ್ಕನೇ ಸಂಚಿಕೆ)

ಈ ಸರ್ಟಿಫಿಕೇಟುಗಳಲ್ಲಿ ಹಾಗೂ ಇತರ ತೆರಿಗೆಗರ್ಹವಾದ ಸೆಕ್ಯೂರಿಟಿಗಳಲ್ಲಿ ತೊಡಗಿಸಿದ ಹಣ ಮೇಲಿನ ಬಡ್ಡಿಯು ರೂ. 3000 ವರೆಗೆ ವರಮಾನ ತೆರಿಗೆ ವಿನಾಯಿತಿ ಪಡೆಯುತ್ತದೆ.

ವಿವರಗಳನ್ನು ಸಮೀಪದಲ್ಲಿರುವ ಪೋಸ್ಟ್ ಆಫೀಸಿನಿಂದ ಪಡೆಯಿರಿ.

ರಾಷ್ಟ್ರೀಯ ಉಳಿತಾಯ ಸಂಸ್ಥೆ

ಡಿಎವಿಪಿ 70/371

ಚಾರುಚಯನ

ವಿರೋಧಿ ಪಕ್ಷಗಳ ಮೇಲೆ ಚೀನೀ ಆಕ್ರಮಣ

"ಸಂಸತ್ತಿಗೆ ಮಧ್ಯಾವಧಿ ಚುನಾವಣೆಗಳು ನಡೆಯುವುದಿಲ್ಲ. ನಡೆಯುತ್ತದೆ ಎಂಬುದು ವಿರೋಧಿ ಪಕ್ಷಗಳ ಪ್ರಚಾರ ಮಾತ್ರ. ಇದರಲ್ಲಿ ಎಳ್ಳಿನಷ್ಟು ಹುರುಳೇ ಇಲ್ಲ."—ಇದು ಶ್ರೀಮತಿ ಗಾಂಧಿಯವರು ತನ್ನ ಪಕ್ಷದಲ್ಲಿಯೂ ಸಾಂಸತ್ತಿಕ ಸಲಹಾ ಸಮಿತಿಯ ಸಭೆಯಲ್ಲೂ ಹೃದಯ ಬಿಚ್ಚಿ ಆಡಿದ ಮಾತು; ಅಥವಾ ನೀಡಿದ ಹೇಳಿಕೆ.

ಶ್ರೀಮತಿ ಗಾಂಧಿಯವರನ್ನು ಬಲ್ಲವರು ಅವರ ಮಾತಿನಲ್ಲಿ ಎಂದಿಗೂ ವಿಶ್ವಾಸ ಇಡುವುದಿಲ್ಲ.

ವಿರೋಧಿ ಪಕ್ಷಗಳು ಸ್ವ "ಮೊಸಳೆ ಬಂತೋ ಮೊಸಳೆ" ಎಂಬಂತೆ ವರ್ತಿಸಿವೆಯೆಂಬುದು ಆಕೆಯ ಅಭಿಪ್ರಾಯ. ಆದರೆ ಮೊಸಳೆಗೂ ಇಲೆಕ್ಷನ್ನಿಗೂ ಇರುವ ಸಾಮ್ಯಕ್ಕಿಂತ ನಮ್ಮ ರೇಲುಗಳಿಗೂ ಇಲೆಕ್ಷನ್ನಿಗೂ ಹೆಚ್ಚಿನದೆಯೆಂದರೆ ಪ್ರಮಾದವಾಗಲಿಕ್ಕಿಲ್ಲ.

ರೇಲು ಸ್ಟೇಶನನ್ನು ತಲುಪುವುದಕ್ಕೆ ನಿಶ್ಚಿತ ಸಮಯ ಗೈಡಿನಲ್ಲಿದೆ. ಆದರೆ, ಒಂದು ದಿವಸವಾದರೂ ಆ ಗೊತ್ತಾದ ಹೊತ್ತಿಗೆ ಸರಿಯಾಗಿ ಅದು ಬಂದದ್ದಿದೆಯೆ?

ರೇಲು ಮಂತ್ರಿ ನಂದಾರವರು 'ನೋಟೀಸ್' ಎಂದು ಜಾರಬಹುದು. ಶ್ರೀ ಸಾಮಾನ್ಯನ ಪ್ರತ್ಯಕ್ಷ ಅನುಭವಕ್ಕೆ ನೋಟೀಸ್ ಬೇಕಾಗಿಲ್ಲ.

"ರೇಲು....ನಿಮಿಷ ತಡವಾಗಿ ಬರುತ್ತದೆ"—ಸೂಚನಾ ಫಲಕ. ಅಷ್ಟು ಹೊತ್ತು ಕಳೆದರೂ ರೇಲು ಬರುವುದಿಲ್ಲ ಹಲವು ಬಾರಿ.

ನೀವು 'ಓ ಬಹಳ ತಡವಿದೆ'ಯೆಂದು ಸ್ಟೇಶನನ್ನು ಬಿಟ್ಟರೆ, ಬೇಗನೇ ಬಂದು ಬಿಡುವುದೂ ನಿಮ್ಮನ್ನು ಬಿಟ್ಟು ರೈಲು ಮುಂದುವರಿಯುವುದೂ ಉಂಟು.

ರೇಲು ಕಂಬಿಯ ಮೇಲೆ ನಡೆಯುತ್ತದೆ; ಇಲೆಕ್ಷನ್ನು ಕಂಬಿಯಿಲ್ಲದೇನೇ ನಡೆಯುತ್ತದೆ ಎಂದು ಆಕ್ಷೇಪಿಸಬಹುದು.

ಆದರೂ ಸತ್ಯ ಹೇಳಬೇಕಾದರೆ, ಇಲೆಕ್ಷನ್ನೂ ಕಂಬಿಯ ಮೇಲೆಯೇ ನಡೆಯುತ್ತದೆ. ನೇತಾ ಮುಂದಾಳುಗಳು ಹಳ್ಳಿ ಹಳ್ಳಿಗಳಿಗೆ ತಾತ್ಕಾಲಿಕ ಸೇತುವೆಗಳನ್ನು ರಚಿಸುತ್ತಾರೆ; ತಮ್ಮ ಕೆಲಸವಾದ ಮೇಲೆ ಅದನ್ನು ಕಿತ್ತು ಹಾಕುತ್ತಾರೆ.

ಇಲೆಕ್ಷನ್ನು ಇವೆ ಎಂದಾಗ ಪುಢಾರಿಗಳಿಗೂ ಶ್ರೀಸಾಮಾನ್ಯನಿಗೂ ನಡುವೆ ಭಾಷಣ—ಘೋಷಣೆ—ಕಪ್ಪುಹಣ—ಗಳಿಂದ ತಾತ್ಕಾಲಿಕ ಕಂಬಿ ಹಾಕುತ್ತಾರೆ; ಅದು ಮುಗಿದೊಡನೆಯೇ ಕಿತ್ತುಹಾಕಿಕೊಳ್ಳುತ್ತಾರೆ.

ರೈಲು ಗೊತ್ತಾದ ಸಮಯಕ್ಕಿಂತ ಹೆಚ್ಚಾಗಿ ತಡವಾಗೇ ಬರುತ್ತದೆ; ಇಲೆಕ್ಷನ್ನು ಮುಂದಾಗಿ ಬರುತ್ತದೆ ಎಂದು ಈ ಸಾಮ್ಯ ಚಲೋದಿಲ್ಲ ಎನ್ನಬಹುದು.

ಇದೊಂದು ಒಪ್ಪತಕ್ಕದ್ದೇ. ಆದರೂ ಈ ಆಕ್ಷೇಪವನ್ನು ನಿವಾರಿಸಲು ಸದ್ಯ ಪಾಕಿಸ್ತಾನದ ಉದಾಹರಣೆಯೊಂದು ಸಾಕು.

ಅಲ್ಲಿ ಶ್ರೀ ಯಾಹ್ಯಾಖಾನರು ಚುನಾವಣೆಗಳಿಗೆ ಉಮೇದ್ವಾರರ ನಾಮಪತ್ರ ಕರೆದಿದ್ದಾರೆ; ಆದರೆ, ಚುನಾವಣೆ ನಡೆಸಬೇಕೇ, ಬೇಡವೇ ಎಂದು ನಿಶ್ಚಯವಾಗಿ ನಿಶ್ಚಯ ಮಾಡಲಿಲ್ಲ.

ಸತ್ಯಸಂಗತಿಯೆಂದರೆ, ಅವರು ಇಲೆಕ್ಷನ್ನು ಮುಂದೂಡಲೊಂದು ನೆವನ ಹುಡುಕುತ್ತಿದ್ದಾರೆ.

ಭಾರತದ ಮಾದರಿ ಇದಕ್ಕೆ ಸಂಪೂರ್ಣ ವ್ಯತಿರಿಕ್ತ. ನಮ್ಮ ನಾಯಕರು ಏನು ಮಾಡುತ್ತಾರೋ ಅದನ್ನು ಮಾಡುವುದಿಲ್ಲ; ಮಾಡುವುದೇ ಇಲ್ಲ; ಅಂತಹ ಸಿದ್ಧ ಶುದ್ಧಾಂಗ ಸುಳ್ಳು ಎಂದು ಹೇಳುತ್ತಾರೆ. ಈ ಶುದ್ಧಾಂಗ ಸುಳ್ಳನ್ನು ಜನ ನಂಬಿತೆಂದು ನೆನೆವರಿಕೆಯಾದ ಮರುಕ್ಷಣವೇ ಮಾಡಿಬಿಡುತ್ತಾರೆ.

ಶ್ರೀಸಾಮಾನ್ಯನು ಕಣ್ಣನ್ನು ಬಿಟ್ಟು ನೋಡುತ್ತ ಕೂರಬೇಕಾಗುತ್ತದೆ.

ಶ್ರೀಮತಿ ಗಾಂಧಿಯವರೂ ಅವರ ಮಂತ್ರಿಗಳೂ ರೂಪಾಯಿಯ ಅಪಮೌಲ್ಯವಿಲ್ಲವೆಂದು ಉಗ್ಗಡಿಸಿದರು. ಅದರ ಹಿಂದೆಯೇ ಅಪಮೌಲ್ಯವನ್ನು ಉದ್ಘೋಷಿಸಿದರು.

ಶ್ರೀ ನೀಲಂ ಸಂಜೀವ ರೆಡ್ಡಿಯವರು ರಾಷ್ಟ್ರಪತಿ ಸ್ಥಾನಕ್ಕೆ ಪಕ್ಷದ ಉಮೇದ್ವಾರಿಯೆಂಬುದನ್ನು ಒಪ್ಪಿದರು; ಕೊನೆಯಲ್ಲೇ ಆತ್ಮಸಾಕ್ಷಿ ಇದನ್ನು ಒಪ್ಪುವುದಿಲ್ಲವೆಂದು ತಿರುಗಾಡಿದರು.

ಬ್ಯಾಂಕುಗಳ ರಾಷ್ಟ್ರೀಕರಣದ ವಿಚಾರವೇ ನಮ್ಮ ತಲೆಗೆ ಹೊಳೆದಿಲ್ಲವೆಂದು ದಿನಂಪ್ರತಿ ನಾಲ್ಕಾರು ಹೇಳಿಕೆ ನೀಡಿದರು; ಪ್ರಕಟಣೆ ಹೊರಡಿಸಿದರು; ಮೂರು ದಿವಸಗಳಲ್ಲೇ ರಾಷ್ಟ್ರೀಕರಣದ ಸುಗ್ರೀವಾಜ್ಞೆ ಹೊರಡಿಸಿದರು.

ಇವು ಕೆಲವು ನಮೂನೆಗಳು.

ಶ್ರೀಮತಿ ಗಾಂಧಿ ಈಗ ಮಧ್ಯಾವಧಿ ಚುನಾವಣೆಗಳಿಲ್ಲವೆನ್ನುವುದೂ ಇದೇ ಮಾಲೆಯ ಮತ್ತೊಂದು ಮುತ್ತು ಏಕಾಗಬಾರದು?

ಕೇರಳದ ಚುನಾವಣೆಗೆ ಮೊದಲು ಮಾರ್ಕ್ಸಿಸ್ಟರು ಆಕೆಗೆ ಬೆಂಬಲ ನೀಡುತ್ತಿದ್ದರು. ಉತ್ತರ ಪ್ರದೇಶದ ಹಗರಣಕ್ಕೆ ಮೊದಲು ಬಿಕೆಡಿಯ ಸಹಾಯವಿತ್ತು.

ಇನ್ನು ಆಕೆಯನ್ನು ಇವರಿಬ್ಬರೂ ಬೆಂಬಲಿಸುವ ನಿರೀಕ್ಷೆಯಿಲ್ಲ. ಆದರೂ ಬಹುಮತಕ್ಕೆ ಚ್ಯುತಿ ಬಾರದು.

ವಿರೋಧ ಪಕ್ಷಗಳು ಅವಿಶ್ವಾಸ ನಿರ್ಣಯ ಮಂಡಿಸಿದರೆ, ಅದರಲ್ಲಿ ಗೆದ್ದು ಬರಬಹುದು; ಮುಂದೆ ಸಂಸತ್ತನ್ನು ವಿಸರ್ಜಿಸಿ ಮಧ್ಯಾವಧಿ ಚುನಾವಣೆ ನಡೆಸಬಹುದು—ಇದು ಆಕೆಯ ನಿರೀಕ್ಷೆಯಿತ್ತು.

ರಾಷ್ಟ್ರಪತಿ ಶ್ರೀ ಗಿರಿಯವರು ತನ್ನ ಸಲಹೆಯನ್ನು ಸ್ವೀಕರಿಸುತ್ತಾರೆ ಎಂದಾಕೆಗೆ ದೃಢ ವಿಶ್ವಾಸ.

ಆದರೆ, ಆ ಗುಟ್ಟು ವಿರೋಧಿ ಪಕ್ಷಗಳಿಗೆ ಸಿಕ್ಕಿತು; ಅವಿಶ್ವಾಸ ನಿರ್ಣಯ ಹಿಂದೆ ಹೋಯಿತು.

ಈ ಚಳಿಗಾಲದ ಅಧಿವೇಶನದ ಆಗುಹೋಗುಗಳು ಹೇಗೆಂಬುದನ್ನು ಅವಲಂಬಿಸಿಯೇ ಆಕೆಯ ಮುಂದಿನ ಕ್ರಮ.

ಉತ್ತರ ಪ್ರದೇಶದ ಸಂವಿದ ಸರಕಾರವನ್ನು ಕೆಡಿಸುವಲ್ಲಿ, ಬಿಹಾರದ ಸಂವಿದ ಸರಕಾರದ ಬಿರುಕುಗಳನ್ನು ಮುಚ್ಚುವಲ್ಲಿ ಆಕೆ ಎಷ್ಟು ಸಫಲರಾಗುತ್ತಾರೆಂಬುದೇ ಇಲ್ಲಿ ಮುಖ್ಯಾಂಶ.

ಈಯೆರಡು ರಾಜ್ಯಗಳ ರಾಜ್ಯಕೀಯ ಸಂಸತ್ತಿನ ಮೇಲೆ ಪ್ರಭಾವ ಬೀರುತ್ತವೆ. ಇದು ಆಕೆಗೆ ಉಚಿತವಾಗಿ ಪರಿಣಮಿಸುವುದಕ್ಕಿಂತ ಅನುಚಿತವಾಗೇ ತೀರುವ ಸಂಭವ ಹೆಚ್ಚು; ಆಗ, ಸಂಸತ್ತಿನ ವಿಸರ್ಜನೆ ಅನಿವಾರ್ಯವಾಗುತ್ತದೆ.

ಸೋತು ಗದ್ದುಗೆ ಇಳಿಯುವುದರಿಂದ ಚುನಾವಣೆಗಳಲ್ಲಿ ಭೀಕರ ಪರಿಣಾಮವೆದುರಿಸಬೇಕಾಗುತ್ತದೆ.

ಕೇರಳದ ಅಚ್ಯುತ ಮೆನನ್ನರು ತೋರಿಸಿಕೊಟ್ಟ ಉಜ್ವಾದರ್ಶವನ್ನು ಶ್ರೀಮತಿ ಗಾಂಧಿಯವರೂ ಅನುಸರಿಸುವುದರಲ್ಲಿ ತಪ್ಪೇನು?

ಅವರನ್ನು ಅಪ್ಪಿಕೊಂಡದ್ದಕ್ಕೆ ಅಷ್ಟಾದರೂ ಮಾಡಬೇಕು; ತಾನು ಚೀನು ಬೇಕಾದಂತೆ ಹಠಾತ್ತಾಗಿ ಆಕ್ರಮಣ ಮಾಡಬೇಕು; ವಿರೋಧಿ ಪಕ್ಷಗಳು ಆದಿನ ಭಾರತದಂತೆ ಕೈಕಾಲು ಬಿಟ್ಟು ಹಿಂಜರಿಯಬೇಕು.

ಇದು ಚಾಣಾಕ್ಷ ನೀತಿ....ಆಕೆಗೂ ಮೀರಿದ ಚಾಣಾಕ್ಷರು ಭಾರತದಲ್ಲಿ ಇಲ್ಲವೆ ಎಂಬುದೀಗ ಪ್ರಶ್ನೆ.

ಆಕೆಯಿಲ್ಲವೆಂದು ತಿಳಿದಿದ್ದಾರೆ. ಆದರೆ, ಇದು ಎಲ್ಲ ಕಾಲಕ್ಕೂ ಸತ್ಯವಾಗುವುದಿಲ್ಲವೆಂಬುದನ್ನು ಮರೆತುಬಿಟ್ಟಿದ್ದಾರೆ.

ಸಂಧಾನದಿಂದಲೇ ವಿವಾದ ಪರಿಹಾರ

(ಎರಡನೇ ಪುಟದಿಂದ)

ಲಿಂದ ಹಾದುಹೋಯ್ತು, ಮತ್ತೆ ಬ್ರಹ್ಮಾಸ್ತ್ರ—ಬ್ರಹ್ಮಾಸ್ತ್ರಗಳು ತಾಗಿ ವ್ಯರ್ಥವಾದವು. ದಿವ್ಯಾಸ್ತ್ರಗಳಿಂದ ಯಾವ ಲಾಭವೂ ದೊರೆಯದ್ದರಿಂದ ಇಬ್ಬರೂ ಸಾಧಾರಣಾಸ್ತ್ರಗಳಿಗೆ ಕೈಹಾಕಿದರು. ಅನೇಕ ದಾನವರು ಮಡಿದು ಬಿದ್ದರು. ದಾನವರು ಆಕಾಶವೇರಿ, ಅಲ್ಲಿಂದ ಹೋರಾಡತೊಡಗಿದರು. ದೇವಿಯೂ ಆಕಾಶವೇರಿ, ಪಶುಪತಾಸ್ತ್ರ ಪ್ರಯೋಗಿಸಿ ಸಾವಿರಾರು ದಾನವರನ್ನು ನಿರ್ನಾಮ ಮಾಡಿದಳು. ಅಷ್ಟರಲ್ಲಿ ರುದ್ರನೂ ಅಲ್ಲಿಗೆ ಬಂದು ಶಂಖಚೂಡನೊಡನೆ ಯುದ್ಧಕ್ಕೆ ತೊಡಗಿದನು. ರುದ್ರ ಶಂಖಚೂಡರು ಭೂಮಿಗಿಳಿದು ಹೋರಾಡಿದರು. ರುದ್ರನು ತ್ರಿಶೂಲದಿಂದ ಶಂಖಚೂಡನನ್ನು ಇರಿದನು. ಇದನ್ನು ಕಂಡ ದಾನವ ಸೇನೆ ಪಲಾಯನಕ್ಕೆ ತೊಡಗಿತು; ದೇವಸೇನೆ ಅದನ್ನು ಸೆರೆಹಿಡಿಯಿತು. ಶಕ್ತಿಮದದಿಂದ ಕೊಬ್ಬಿದ್ದ ದಾನವರು ಮಿಂದ ಬೆಕ್ಕಿನಂತೆ ತಲೆತಗ್ಗಿಸಿ ಸಂಧಿಗಾಗಿ ಪ್ರಾರ್ಥಿಸತೊಡಗಿದರು. "ಯುದ್ಧವು ಬಹಳ ಕೆಟ್ಟದೆಂದು ನಮ್ಮ ಅನುಭವದಿಂದ ತಿಳಿಯಿತು. ಲಾಲಸಿಗಳು ತಂತಮ್ಮ ಲಾಭಕ್ಕೆ ಹೋರಾಡುತ್ತಾರೇನೋ ನಿಜ. ಆದರೆ, ಶಾಂತಿಯು ಯುದ್ಧದಿಂದ ಅಸಾಧ್ಯ; ಸಂಧಾನದಿಂದಲೇ ಅದು ಸಾಧ್ಯ."

ದೇವಿಯೆಂದಳು—"ನಿಜಕ್ಕೂ ಯುದ್ಧವು ದುಃಖದ ವಸ್ತು. ಬುದ್ಧಿವಂತರೆಂದೂ ಯುದ್ಧ ಮಾಡುವುದಿಲ್ಲ. ಹೂಗಳಿಂದಲಾದರೂ ಹೊಡೆದಾಡುವುದೂ ಅನುಚಿತ. ಪಾರಸ್ಪರಿಕ ವಿವಾದಗಳನ್ನು ಸಂಧಾನದ ಮೂಲಕ ತೀರ್ಮಾನಿಸುವುದೇ ಸೂಕ್ತವಾದುದು."

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

NAVAYUGA 19—11—1970
Registered with the Registrar of News Papers for India under No. K. N. 3646/'57

REGD. No. B. G. 176
LICENCE No. 33
Licensed to Post without Prepayment

ರೆಡ್‌ಕ್ರಾಸ್ ಇಂದಿನ ಮನೆಮಾತು

ಲೇ: ಕೆ. ಕೆ. ಷಾ
ಕೇಂದ್ರ ಸರ್ಕಾರದ ಆರೋಗ್ಯ, ಕುಟುಂಬಯೋಜನಾ ಖಾತೆಯ ಮಂತ್ರಿಗಳು.

ಭಾರತದ ರೆಡ್‌ಕ್ರಾಸ್ ಈವರೆಗೆ ಐವತ್ತು ವರ್ಷಗಳ ನಿರಂತರ ಸೇವೆಯನ್ನು ಸಲ್ಲಿಸಿದೆ. ಇದೊಂದು ಇತಿಹಾಸ ಪ್ರಸಿದ್ಧ ಘಟನೆ. ಕೆಲವು ಕಾಲದ ಹಿಂದೆ ರೆಡ್‌ಕ್ರಾಸ್ ಸಂಸ್ಥೆ ಬಗ್ಗೆ ಜನಕೆಗೆ ಹೆಚ್ಚು ತಿಳಿದಿರಲಿಲ್ಲ. ಈಗ ರೆಡ್‌ಕ್ರಾಸ್ ಮನೆಮಾತಾಗಿದೆ; ಸಮಾಜಕ್ಕೆ ಅದು ಸಲ್ಲಿಸಬಹುದಾದ ಸೇವೆಯನ್ನು ಅದರ ಹೆಸರೇ ಸೂಚಿಸುತ್ತದೆ.

1920ರಲ್ಲಿ ಶಾಸನವೊಂದರ ಮೂಲಕ ರೆಡ್‌ಕ್ರಾಸ್ ಸಂಸ್ಥೆಗೆ ಒಂದು ಹೊಸ ಸ್ವರೂಪವನ್ನು ನೀಡಲಾಯಿತು. ಅಲ್ಲಿಂದೀಚೆಗೆ ಈ ಸಂಸ್ಥೆ ದೇಶದ ವಿವಿಧ ರಂಗಗಳಲ್ಲಿ ವಿಸ್ತರಿಸಿ ಬೃಹದಾಕಾರವಾಗಿ ಬೆಳೆದಿದೆ. ಬ್ರಿಟಿಷರ ಆಳ್ವಿಕೆಯಲ್ಲಿ ರೆಡ್‌ಕ್ರಾಸ್ ಅಸ್ತಿತ್ವದಲ್ಲಿದ್ದರೂ ಸ್ವಾತಂತ್ರ್ಯಾನಂತರ ಭಾರತದಲ್ಲಿ ಈ ಸಂಸ್ಥೆಗೆ ಹೊಸ ಚೇತನವನ್ನು ನೀಡಲಾಗಿದೆ. ಕಳೆದ 23 ವರ್ಷಗಳಲ್ಲಿ ಅದು ಹೆಚ್ಚು ಅಭಿವೃದ್ಧಿ ಹೊಂದಿದೆ. ಕೇವಲ ಯೋಧರ ಕಲ್ಯಾಣಕ್ಕಾಗಿ ಮಾತ್ರವೇ ಶ್ರಮಿಸುತ್ತಿಲ್ಲ. ಕಾರ್ಯಕ್ಷೇತ್ರದೊಂದಿಗೆ ಕಾರ್ಯ ಚಟುವಟಿಕೆಗಳೂ ದ್ವಿಗುಣ ಹೊಂದಿವೆ. ಪ್ರಸೂತಿ ಸೌಕರ್ಯಗಳು, ಶಿಶು—ಆರೋಗ್ಯ, ಕುಟುಂಬಯೋಜನೆ, ಗೃಹಕಲ್ಯಾಣ ಆಸ್ಪತ್ರೆಗಳಿಗಾಗಿ ರಕ್ತ ಸಂಗ್ರಹಣೆ ನಿವೃತ್ತ ರಕ್ಷಣಾ ಅಧಿಕಾರಿಗಳ ಹಾಗೂ ಯೋಧರ ಕಲ್ಯಾಣ ಇವೇ ಮೊದಲಾದವುಗಳಿಗಾಗಿ ಈ ಸಂಸ್ಥೆ ತನ್ನದೇ ಆದ ಅಪೂರ್ವ ಸೇವೆಯನ್ನು ಸಲ್ಲಿಸಿದೆ. ಪ್ರಥಮ ಚಿಕಿತ್ಸೆ ಸೌಲಭ್ಯಗಳನ್ನು ಕುರಿತು ಅಧ್ಯಯನ ತರಬೇತಿಯನ್ನು ಸಹಸ್ರಾರು ಮಂದಿ ಈ ಸಂಸ್ಥೆಯಿಂದ ಪಡೆದಿದ್ದಾರೆ.

ರೆಡ್‌ಕ್ರಾಸ್ ಸಂಸ್ಥೆಯ ಆರಂಭದಲ್ಲಿ ಅದರ ಸದಸ್ಯ ಸಂಖ್ಯೆ 2000ದಷ್ಟಿದ್ದು ಈಗ ಅದು 2 ಲಕ್ಷಗಳಿಗೆ ಏರಿದೆ. ಇದಷ್ಟೇ ಅಲ್ಲದೆ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ 50 ಲಕ್ಷ ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಸಂಸ್ಥೆಯ ಸದಸ್ಯರಾಗಿದ್ದಾರೆ. ದೇಶದಲ್ಲಿ ಈ ಸಂಸ್ಥೆ ಸೇವೆ ಸಲ್ಲಿಸದ ಕ್ಷೇತ್ರವೇ ಇದ್ದಂತಿಲ್ಲ. ರೆಡ್‌ಕ್ರಾಸ್ ಸಂಸ್ಥೆಯ ಅಂಬುಲೆನ್ಸ್ ವಿಭಾಗದ ಸೆಂಟ್ ಜಾನ್ಸ್ ಅಂಬುಲೆನ್ಸ್ ಅಸೋಸಿಯೇಷನ್ ಹಾಗೂ ಸೆಂಟ್ ಜಾನ್ಸ್ ಅಂಬುಲೆನ್ಸ್ ಬ್ರಿಗೇಡ್ ಅಪೂರ್ವ ರೀತಿಯ ಉಪಯುಕ್ತ ಸೇವೆ ಸಲ್ಲಿಸುತ್ತಿವೆ.

ರೆಡ್‌ಕ್ರಾಸ್ ಸಂಸ್ಥೆ ಕೇವಲ ಸರ್ಕಾರದ ನೆರವಿನಲ್ಲೇ ಬೆಳೆಯುತ್ತಿಲ್ಲ. ಸರ್ಕಾರದಷ್ಟೇ ಖಾಸಗಿ-ವ್ಯಕ್ತಿಗಳಿಗೂ ಈ ಸಂಸ್ಥೆಗೆ ಸಹಕಾರ ನೀಡಿ ಅದರ ಕಾರ್ಯಯಶಸ್ಸಿಗೆ ಕಾರಣರಾಗುತ್ತಿದ್ದಾರೆ. ಬಿಹಾರದಲ್ಲಿ 1934ರಲ್ಲಿ ಭೂಕಂಪವೊಂದು ಸಂಭವಿಸಿದಾಗ ರೆಡ್‌ಕ್ರಾಸ್ ಸಂಸ್ಥೆ ಮೊದಲ ಬಾರಿಗೆ ತನ್ನ ಕಾರ್ಯವನ್ನು ಭಾರಿ ಪ್ರಮಾಣದಲ್ಲಿ ಆರಂಭಿಸಿತು. ಅದರ ಮುಂದಿನ ವರ್ಷ ಇಂತಹುದೇ ಸಂದರ್ಭದಲ್ಲಿ ಕ್ವೆಟ್ಟಾದಲ್ಲೂ ಅದ ಸೇವೆ ಸಲ್ಲಿಸಿದೆ. 1942ರಲ್ಲಿ ಬಂಗಾಳ ಎದುರಿಸಿದ ಕ್ಷಾಮ ಪರಿಸ್ಥಿತಿಯಲ್ಲಿ ಹಾಗೂ ಮುಂಬೈನ ಹಡಗುಕಟ್ಟೆ ಸ್ಫೋಟನೆ ಸಂಬಂಧಿಸಿದ ಸಂದರ್ಭಗಳಲ್ಲೂ ಸೇವೆ ಸಲ್ಲಿಸಿದೆ. 1953ರಲ್ಲಿ ಈ ಸಂಸ್ಥೆಗೆ ಅಂತರಾಷ್ಟ್ರೀಯ ಮನ್ನಣೆ ದೊರೆಯಿತು. ಅಷ್ಟೇ ಅಲ್ಲದೆ ಕೊರಿಯಾ ಯುದ್ಧಖೈದಿಗಳ ಕಲ್ಯಾಣ ಕಾರ್ಯಗಳಿಗೆ ನೆರವಾಗಲು ಈ ಸಂಸ್ಥೆಯ ತಂಡವೊಂದನ್ನು ಕಳುಹಿಸಲು ಬೇಡಿಕೆ ಬಂತು. ಇದಾದ ಕೆಲವು ವರ್ಷಗಳ ನಂತರ ಕಾಂಗೋವಿನಲ್ಲಿ ಪರಿಹಾರ ಕಾರ್ಯಗಳಿಗೆ ನೆರವಾಗಲು ಸಂಸ್ಥೆಯ ತಂಡವೊಂದನ್ನು ಕಳುಹಿಸಲಾಗಿದೆ. ಅಂತರಾಷ್ಟ್ರೀಯ ರೆಡ್‌ಕ್ರಾಸ್‌ನ ಆದೇಶಗಳಿಗೆ ಅನುಸಾರವಾಗಿ ಈ ಎಲ್ಲ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. ಬಂಗಾಳ ಮತ್ತು ಬಿಹಾರ ರಾಜ್ಯಗಳಲ್ಲಿನ ಪ್ರವಾಹ, ಚಂಡಮಾರುತ ಆಹಾರ ಅಭಾವ ಪರಿಸ್ಥಿತಿಗಳ ಸುಧಾರಣೆಗಾಗಿಯೂ ಭಾರತದ ರೆಡ್‌ಕ್ರಾಸ್ ಸಂಸ್ಥೆ 1955ರಿಂದ 57ರ ವರೆಗೆ ಸೇವೆ ಸಲ್ಲಿಸಿತು. ಚೀಣಾ ಮತ್ತು ಪಾಕಿಸ್ಥಾನಗಳು ಭಾರತದ ಮೇಲೆ ದುರಾಕ್ರಮಣ ನಡೆಸಿದಾಗಲೂ ಈ ಸಂಸ್ಥೆ ತನ್ನದೇ ಆದ ಪಾತ್ರ ವಹಿಸಿತು. ಚೀಣಾದಿಂದ ಭಾರತದ ಯುದ್ಧ ಖೈದಿಗಳನ್ನು ವಾಪಸ್ಸು ತರಲು ಈ ಸಂಸ್ಥೆ ನೆರವಾಯಿತು. ಯೋಧರಿಗಾಗಿ ಸುಮಾರು 2000 ಸೀಸೆಗಳಷ್ಟು ರಕ್ತವನ್ನು ಈ ಸಂಸ್ಥೆ ಸಂಗ್ರಹಿಸಿದೆ. ಇದು ಅಷ್ಟೊಂದು ಸುಲಭದ ಕೆಲಸವಲ್ಲ.

1965—66ರಲ್ಲಿ ರೆಡ್‌ಕ್ರಾಸ್ ಸಂಸ್ಥೆ ಮತ್ತೊಂದು ಸಮಸ್ಯೆಯನ್ನು ಎದುರಿಸಬೇಕಾಗಿ ಬಂತು. ಆಗ ದೇಶದ 14 ರಾಜ್ಯಗಳಲ್ಲಿ ಆಹಾರ ಅಭಾವ ಸಮಸ್ಯೆ ತಲೆದೋರಿತ್ತು. ಆಗ ರೆಡ್‌ಕ್ರಾಸ್ ಸಂಸ್ಥೆಯವರು ಆಹಾರ ಧಾನ್ಯಗಳ ವಿತರಣೆಗಾಗಿ ದೇಶದಾದ್ಯಂತ 10,000 ಪರಿಹಾರ ಕೇಂದ್ರಗಳನ್ನು ಪ್ರಾರಂಭಿಸಿದರು. 1968ರ ಕೊಯ್ನಾದ ಭೂಕಂಪ ಸಂತ್ರಸ್ತರಿಗೂ ನೆರವು ನೀಡಿದೆ. ರೆಡ್‌ಕ್ರಾಸ್ ಸಂಸ್ಥೆ ಸದ್ಯದಲ್ಲಿ ಲಕ್ಷಾಂತರ ರೂ.ಗಳ ನೆರವು ನೀಡುತ್ತಿದೆ. ಎಂತಹದೇ ತಾತ್ಕಾಲಿಕ ಸಮಸ್ಯೆಯನ್ನು ಎದುರಿಸಲು ಈ ಸಂಸ್ಥೆ ಈಗ ಸಿದ್ಧವಿದೆ. ಸದ್ಯದಲ್ಲಿ ನಡೆಯುತ್ತಿರುವ ತನ್ನ ಸುವರ್ಣ ಮಹೋತ್ಸವಕ್ಕೆ ರೆಡ್‌ಕ್ರಾಸ್ ಸಂಸ್ಥೆ ರೆಡ್‌ಕ್ರಾಸ್ ಸಂಸ್ಥೆಗಳ ಸಂಘ, ವಿದೇಶಿ ರೆಡ್‌ಕ್ರಾಸ್, ಲಯನ್ ಅಂಡ್ ಸನ್ ಸೊಸೈಟಿ, ಅಂತರಾಷ್ಟ್ರೀಯ ಜ್ಯೂನಿಯರ್ ರೆಡ್‌ಕ್ರಾಸ್ ಅಧ್ಯಯನ ಕೇಂದ್ರಗಳು ಇತ್ಯಾದಿಗಳನ್ನು ಆಮಂತ್ರಿಸಿದೆ. ಈ ಸ್ವರ್ಣ ಮಹೋತ್ಸವ ಸಂಸ್ಥೆಯ ಚರಿತ್ರೆಯಲ್ಲಿ ಮಹತ್ವದ ಮೈಲಿಗಲ್ಲಾಗುವುದು.

"ರಾಜಧನ ರದ್ಧತಿ— ರಾಜಕೀಯ ಡೊಂಬರಾಟ'

(ಒಂದನೇ ಪುಟದಿಂದ)

ಇದರಿಂದ ಸಮಾಜವಾದ ಎಷ್ಟು ಹತ್ತಿರಕ್ಕೆ ಬಂತು? ಈ ಅಸ್ತ್ರದಿಂದ ಜನಸಾಮಾನ್ಯರಿಗೆ ಏನು ದಕ್ಕಿತು. ಅವರ ಹಿತ ಎಷ್ಟು ಸಾಧಿತವಾಯಿತು.

ಯಾರೂ ಯೋಚಿಸುತ್ತಿಲ್ಲ.

ಯೋಚಿಸುವವರೇ ಇಲ್ಲ ಇಲ್ಲ ಎಂಬ ನಿರ್ಧಾರಕ್ಕೆ ಇಂದಿರಾ ಸರಕಾರ ಬಂದಂತೆ ಕಾಣುತ್ತಿದೆ-ಅವಳ ಮಂತ್ರಿಗಳಂತೆ ಎಲ್ಲರಿಗೂ ಮರಳುಮಾಡಿಬಿಡುವಂತೆ ಆಕೆ ಭ್ರಮಿಸಿರುವಂತೆ ಕಾಣುತ್ತಿದೆ. ನಿಸ್ಸೆಯ ನೆಲವಿಲ್ಲದ ಜನ ಏನೋ ಜಾಸ್ತಿ ದೂರಗುತ್ತಿದ್ದಾರೆ. ಅದರಿಂದ ಈ ಸ್ಥಿತಿಯೊದಗಿದೆ.

ನಂಬಿ ಕೆಟ್ಟವರಿಲ್ಲವೋ ಎಂದರು ದಾಸರು.

ಆದರೆ 'ಇಂದಿರೆ'ಯನ್ನು ನಂಬಿ ರಾಷ್ಟ್ರ-ಜನತೆ ಅನತಿ ದೂರದಲ್ಲಿ ಖಂಡಿತ ಕೆಡುತ್ತಾರೆ. ಇದರಲ್ಲಿ ಅನುಮಾನವಿಲ್ಲ.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy
ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲಸ್ವಯಂಬೋಧಿನಿ
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿವ್ಯ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ
ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ,
450 ಪುಟಗಳ ಸುಂದರ ಕೈಹೊತ್ತಿಗೆ. ಬೆಲೆ: ರೂ. 1—50

ಮನೆ-ಮದ್ದು Home Remedies
ಡಾ। ವಿ. ಆರ್. ಕೊರಡ್ಕರ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಸ್ವಹಸ್ತವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲಿ ಮದ್ದು ಮಾಡುವ ವಿಧಾನಗಳಿವೆ. ಹಣಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ಬೆಲೆ: ರೂ. 2—00

— ಪ್ರತಿಗಳು ಸಿಗುವ ಸ್ಥಳ —
ನವಭಾರತ ಪುಸ್ತಕ ಭಂಡಾರ, ಉಡುಪಿ.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O. S. 203/70

N. ವಿಷ್ಣು ಭಟ್— ವಾದಿ
ಮತ್ತು
B. ಸುಂದರ ಗೌಡ— ಪ್ರತಿವಾದಿ

ಪ್ರತಿವಾದಿಗೆ

B. ಸುಂದರ ಗೌಡ, ಸುಬ್ರಾಯ ಗೌಡರ ಮಗ, ಪುತ್ತೂರು ಕಸಬಾ.

ನೀವು ವಾದಿಗೆ ಬರೆಕೊಟ್ಟ ಡಿ. ಪ್ರೋ. ನೋಟಿನ ಅಸಲು ಬಡ್ಡಿ ಹಣಗಳ ವಸೂಲಾತಿಗೆ ವಾದಿಯು ನಿಮ್ಮ ಮೇಲೆ ಮಾಡಿದ ಮೇಲಿನ ನಂಬ್ರದ ವ್ಯಾಜ್ಯವು ತಾರೀಕು 19-11-1970ರಂದು ವಿಚಾರಣೆಗೆ ಇರುತ್ತದೆ. ಆದುದರಿಂದ ನೀವು ಆ ದಿವಸ ಬೆಳಗ್ಗೆ 11 ಗಂಟೆಗೆ ಹಾಜರಾಗಿ ಮೇಲ್ಕಂಡ ಕೋರ್ಟಿನ ಮುಂದೆ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರ್ವಾಜರು ಮಾಡಿ ದಾವೆಯನ್ನು ತೀರ್ಮಾನಿಸಲಾದೀತು ಎಂತ ಕೋರ್ಟು ಹುಕುಂ ಮೇರೆಗೆ ನಿಮಗೆ ಈ ಮೂಲಕ ತಿಳಿಯಪಡಿಸಲಾಗಿದೆ.

Sd/- N. Subramanyam
Adv. for Pltf.
Puttur, S.K. 28-10-1970.

READ & ADVERTISE IN **NAVAYUGA WEEKLY**

Edited, Printed & Published by K. H. Shetty at the Navayuga Press, Udipi, S. India.

ನವಯುಗ

ದಿಗಂತವಿಶ್ರಾಂತ ನಿಗ್ರಹಾನುಗ್ರಹಶಕ್ತ

ಶ್ರೀ ಮಂಜುನಾಥ ಸ್ವಾಮಿಯ ಯಶೋಭೂಮಿ

"ಮಾತು ಬಿಡ ಮಂಜುನಾಥ" ಎಂಬ ಮಾತನ್ನು ತ್ರಿಕಾಲಾಬಾಧಿತ ಸತ್ಯಮಾಡಿ ತೋರಿಸುತ್ತಿರುವ ಶ್ರೀ ಮಂಜುನಾಥನ ಮಂಗಳ ತಾಣ ಶ್ರೀ ಧರ್ಮಸ್ಥಳ. ದಕ್ಷಿಣ ಕನ್ನಡ ಜಿಲ್ಲೆಯ ಬೆಟ್ಟದೋರೆಯಲ್ಲಿ ರಾರಾಜಿಸುವ ಈ ಕ್ಷೇತ್ರ ಕರ್ನಾಟಕದಲ್ಲೇ ಪ್ರಖ್ಯಾತ, ಭಾರತವಿಖ್ಯಾತ; ಪ್ರಕೃತಿಯ ಮಡಿಲಲ್ಲಿ ಹರಡಿರುವ ಶ್ರೀಕ್ಷೇತ್ರ ಧರ್ಮಸ್ಥಳದ ಹೆಸರು ಜಗಜ್ಜನಜನಿತ; ಶ್ರೀ ಸ್ವಾಮಿ ಮಂಜುನಾಥನ ನಿಗ್ರಹಾನುಗ್ರಹ ಶಕ್ತಿಯು ಲೋಕ ಸುಪರಿಚಿತ.

ಪಶ್ಚಿಮ ಘಟ್ಟಗಳ ಶಿಖಿಯೊಂದರ ಮೇಲೆ ತಲೆಯೆತ್ತಿ ನಿಂತಿರುವ ಶ್ರೀಕ್ಷೇತ್ರ ಧರ್ಮಸ್ಥಳ, ಧರ್ಮಕ್ಕೆ ಮತ್ತೊಂದು ಹೆಸರು. "ಧರ್ಮ" ಶಬ್ದಕ್ಕಿರುವ ವ್ಯಾಪ್ತಿಗೆ ಅನುಸಾರವಾಗಿ ಇಲ್ಲಿಯೂ "ಧರ್ಮ" ವ್ಯಾಪಕವಾಗೇ ನಡೆಯುತ್ತದೆ. ಇದು ಒಂದು ಧರ್ಮಾಗಾರ, ಒಂದು ಮತೀಯರ ಅಥವಾ ಒಂದು ಸಂಪ್ರದಾಯಸ್ಥರ ಆಸರೆಯಲ್ಲ; ಜಾತಿ—ಮತ—ನೀತಿ—ನಿಲುವುಗಳ ಭೇದಭಾವವಿಲ್ಲದ, ಸರ್ವಸಮತಾ ಭಾವದ ಪ್ರತಿಮೂರ್ತಿಯಾಗಿ ನಿಂತಿರುವ ಜಾತ್ಯತೀತ ರಾಷ್ಟ್ರದ ಜಾತ್ಯತೀತ ಕ್ಷೇತ್ರ.

ಪ್ರಕೃತಿರಮಣೀಯ ಸನ್ನಿವೇಶ, ಸ್ವಾಭಾವಿಕ ದೃಶ್ಯಾವಳಿಗಳಿಗೆ ಆಗರವಾದ ಶ್ರೀಕ್ಷೇತ್ರದ ಉತ್ತರದಲ್ಲಿ ನೇತ್ರಾವತಿಯು ಕಳಕಲ ರಾಗದೊಡನೆ ಶ್ರೀ ಸ್ವಾಮಿಯ ಘನತೆ-ಮಹಿಮೆಗಳನ್ನು ಹಾಡುತ್ತ ಹರಿಯುತ್ತಾಳೆ. ಜಲಚರ-ವನಚರಗಳು ಅದರೊಡನೆ ದನಿಗೂಡಿಸುತ್ತವೆ. ಮರ-ಗಿಡ-ಬಳ್ಳಿಗಳು ತಾಳಬದ್ಧವಾಗಿ ನರ್ತಿಸುತ್ತವೆ. ಇದನ್ನು ಕೇಳಿದ ನೋಡಿದ ಭಕ್ತರು ತಮ್ಮ ತಾಪತ್ರಯಗಳನ್ನೂ ಮರೆತು, ಶ್ರೀ ಸ್ವಾಮಿಯ ಮಹಿಮಾತಿಶಯದಿಂದ ರೋಮಾಂಚಿತರಾಗುತ್ತಾರೆ.

ಶ್ರೀ ಕ್ಷೇತ್ರದಲ್ಲಿ ಭಕ್ತರು ಶ್ರೀ ಸ್ವಾಮಿಯ ಅನುಗ್ರಹಕ್ಕೆ ಪಾತ್ರರಾಗೇ ಆಗುತ್ತಾರೆ. ಶ್ರೀ ಸ್ವಾಮಿಯ ನಾಮೋಚ್ಚಾರಣೆಯಿಂದಲೇ ಸಕಲದುರಿತಗಳು ದಲಿತವಾಗುತ್ತವೆಂಬಾಗ, ಅವನ ದರ್ಶನ—ಅನುಗ್ರಹದಿಂದ ಅಸಾಧ್ಯವಾದುದೇನಿದೆ? ಭಕ್ತವತ್ಸಲನಾದ ಶ್ರೀ ಸ್ವಾಮಿ, ತನ್ನನ್ನು ನಂಬಿ ಬಂದವರಿಗೆ ಬೇಡಿದ್ದನ್ನು ನೀಡುತ್ತಲೇ ಬಂದಿದ್ದಾನೆ. ಶ್ರೀ ಸ್ವಾಮಿಯ ಸಾನ್ನಿಧ್ಯ ಸಾಂಸಾರಿಕ ಜಂಜಾಟಗಳಿಂದ ಕಂಗೆಟ್ಟವರಿಗೆ ಚಂದನದಂತೆ ಶೀತಲ; ತಾಪತ್ರಸ್ತರಿಗೆ ಮಂಜಿನಂತೆ ಮಂದಾರ; ಹೂವಿನಂತೆ ಸುಕೋಮಲ.

ಶ್ರೀ ಸ್ವಾಮಿಯ ಸನ್ನಿಧಿಗೆ ಆಗಮಿಸುವವರು ಎಂತಹರು? ಬಡವರೊಡನೆ ಬಲ್ಲಿದರೂ ಇದ್ದಾರೆ; ಸುಖದ ಸುಪ್ಪತ್ತಿಗೆಯಲ್ಲಿ ಮಲಗುವವರೂ ದುಃಖದಾಂಧತೆಗಳಿಂದ ಕೀಟಲೆಗೊಳಗಾದವರೂ ಇದ್ದಾರೆ. ಹಿಂದು, ಮುಸ್ಲಿಮ್, ಕ್ರೈಸ್ತ, ಜೈನ...ಹೀಗೆ ಒಂದಲ್ಲ ನೂರು ಬಗೆಯ ವಿಚಾರಧಾರೆಯವರೂ ಇಲ್ಲಿ ಒಂದಾಗುತ್ತಾರೆ. ಶ್ರೀ ಸ್ವಾಮಿ ಎಲ್ಲರಿಗೂ ಅನುಗ್ರಹ ಮಾಡುತ್ತಾನೆ. ಅತ ಸಮದೃಷ್ಟಿಯುವನೆ; ಸಮತಾವಾದಿಯು. ನಂಬಿದವರಿಗೆ ತನ್ನನ್ನು ತೆತ್ತುಕೊಂಡವನಲ್ಲವೆ?

ಧರ್ಮಸ್ಥಳದ ಧರ್ಮದರ್ಶಿ ಶ್ರೀ ಡಿ. ವೀರೇಂದ್ರ ಹೆಗ್ಗಡೆ

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಯಾತ್ರಾರ್ಥಿಗಳಿಗೆ ಸರ್ವ ಪ್ರಕಾರದ ಅನುಕೂಲತೆಗಳು ದೊರೆಯುತ್ತವೆ. ಮೂರು ದಿನಗಳವರೆಗೆ ಉಚಿತ ವಸತಿ—ಉಚಿತ ಅಶನಗಳು ಇಲ್ಲಿ ಎಲ್ಲರಿಗೂ ನ್ಯಾಯಾತಿರೇಕಗಳಿಲ್ಲದೆ ಲಭಿಸುತ್ತವೆ. ಶ್ರೀ ಸ್ವಾಮಿಯ ಪ್ರಾಸಾದ-ಪ್ರಸಾದ ದರ್ಶನಭಾಗ್ಯದಿಂದ ಜೀವನದ ದುಃಖಗಳನ್ನು ಮರೆತು ಆತನಿಂದ ಅನುಗ್ರಹೀತರಾಗಿ ಮರಳುವಾಗ ಅವರು ನಿಜಕ್ಕೂ ಹೊಸ ಮನುಷ್ಯರೇ ಆಗಿರುತ್ತಾರೆ. ಶ್ರೀ ಮಂಜುನಾಥನ ಕೃಪಾತರಂಗಗಳು ಅವರ ಹೃದಯಸಾಗರದಲ್ಲಿ ತುಂಬಿ ತುಳುಕಾಡುತ್ತವೆ. ಆದುದರಿಂದಲೇ ಎಲ್ಲೆಲ್ಲಿಂದಲೋ ಶ್ರೀ ಮಂಜುನಾಥನ ಬಳಿಗೆ ಭಕ್ತರು ಸಾವಿರಾರು ಸಂಖ್ಯೆಯಲ್ಲಿ ಬರುತ್ತಾರೆ; ಆತನ ಮುಂದೆ ಶಿರಬಾಗಿ ಶರಣಾಗುತ್ತಾರೆ. ದಾನ-ಧರ್ಮ-ನಿಗ್ರಹ ಅನುಗ್ರಹಗಳೆಲ್ಲವುಗಳಿಗೂ ಹೆಸರಾದ ಮತ್ತೊಂದು ಕ್ಷೇತ್ರ ಬೇಕೆಂದರೆ, ಸಿಗಲಾರದು.

ಶ್ರೀ ಧರ್ಮಸ್ಥಳದ ಇತಿಹಾಸ ಅತ್ಯಂತ ಪ್ರಾಚೀನವೂ ಅಲ್ಲ; ಹಾಗೇ ತೀರಾ ನವೀನವೂ ಅಲ್ಲ. ಇದಕ್ಕೆ ಇರುವ ಚರಿತ್ರೆ ಸುಮಾರು ಏಳು—ಎಂಟು-ಶತಮಾನಗಳದ್ದು. ಆಗ ಈ ಸ್ಥಳದ ಹೆಸರ "ಕುಡುಮ" ಎಂದಿತ್ತು. ಕುಡುಮ ಅಂದರೆ, ಕೊಡುವ ಸ್ಥಳ ಎಂದು ಅರ್ಥ. ಆ ವೇಳೆಗೇ ಇದು ದಾನ-ಧರ್ಮಗಳಿಗೆ ಹೆಸರಾಗಿತ್ತು ಎಂದು ಹೇಳಬಹುದು. ದೀನದುಃಖಿತರಿಗೆ ಅಭಯ ನೀಡುವ ಅನ್ನ ನೀಡುವ ಧರ್ಮ ನಡೆಯುವ ಸ್ಥಳವಿದಾಗಿತ್ತು; ಭಕ್ತಜನರು ಕೂಡುವ ಸ್ಥಳವಾಗಿತ್ತು; ಜನರಿದ್ದಲ್ಲಿ ಜನಾರ್ದನ ಎಂಬಂತೆ ದೇವಾದಿದೇವತೆಗಳು ಕೂಡುವ ತಾಣವಾಗಿತ್ತು. ಅದು ಪ್ರಕೃತಿ ಸೌಂದರ್ಯದ ಆಗರವಾಗಿತ್ತು; ಮಲೆ-ಕರೆ ನಾಡುಗಳನ್ನು ಕೂಡಿಸುವ ಬೆಟ್ಟದೂರಾಗಿತ್ತು.

(ಕೊನೆಯ ಪುಟ ನೋಡಿರಿ)

ಲೇಖಾಂಕ ೨

ಕಾಂಗ್ರೆಸ್ ಒಳಜಗಳದ ಪ್ರಾಚೀನ ಇತಿಹಾಸ

ಲೇಖಕರು: ಶ್ರೀ ಪಂ. ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

— 2 —

ಇದೇ ಕಳೆದು ಹೋದ ನವಂಬ್ರ ತಿಂಗಳ ತಾ. 13ರಂದು ದೆಹಲಿಯಲ್ಲಿ ಸೇರಿದ ಕಾಂಗ್ರೆಸ್ ಸಂಸದೀಯ ದಳದ ಸಭೆಯಲ್ಲಿ "ಕಾಂಗ್ರೆಸ್ಸಿನ ಸಿದ್ಧಾಂತ ಮತ್ತು ದರ ಸಮಾಜವಾದ ನೀತಿಗಳನ್ನು ಜೀವನದ ಪರ್ಯಂತ ಪರಿಪಾಲಿಸುವೆವು" ಎಂಬ ಪ್ರತಿಜ್ಞೆ ಘೋಷಿಸಲ್ಪಟ್ಟಿತ; ಆ ಸಂದರ್ಭದಲ್ಲಿ ಶ್ರೀಮತಿ ಇಂದಿರಾಜಿ ಪ್ರಕಟಿಸಿದ ಒಂದು ಹೇಳಿಕೆಯಲ್ಲಿ "ಇದು (ತಮ್ಮನ್ನು ಕಾಂಗ್ರೆಸಿನಿಂದ ತೆಗೆದುಹಾಕಿದ್ದು) ಆಶ್ಚರ್ಯಕರವಾಗಿ ತೋರಬಹುದು! ಆದರೆ ವ್ಯಕ್ತಿಗತವಾಗಿ ನನಗಿದರಿಂದ ಯಾವ ಬೇಸರವೂ ಆಗಿರುವುದಿಲ್ಲ.... ಯಾವನಾದರೊಬ್ಬ ವ್ಯಕ್ತಿಯ ಜೊತೆಯಲ್ಲಿ ಏನು ಸಂಭವಿಸುತ್ತದೆ ಎಂಬುದರಲ್ಲಿ ಮಹತ್ವವಿಲ್ಲ.... ಆದರೆ ಕಾಂಗ್ರೆಸ್ ಪಕ್ಷ ಮತ್ತು ದೇಶದ ಮೇಲೆ ಏನು ಪರಿಣಾಮವುಂಟಾಗುವುದೆಂಬುದನ್ನು ನಾನು ಈಗಾಗಲೇ ಸ್ಪಷ್ಟವಾಗಿ ಹೇಳಲಾರೆನ; ಕಳೆದುಹೋದ ಕೆಲವು ವರ್ಷಗಳಿಂದ ಇಂತಹ ಪರಿಸ್ಥಿತಿ ನಿರ್ಮಾಣವಾಗುತ್ತಾ ಬಂದಿದೆ.... ವಿಚಾರ ವಿಮರ್ಶೆಯನ್ನು ಕಾಂಗ್ರೆಸ್ ಪಕ್ಷದೊಳಗೆ ತಡೆಗಟ್ಟಲಾಗುತ್ತಿತ್ತು; ಆದರೆ ಬಿಚ್ಚು ಮನಸ್ಸಿನ ವಿಚಾರ ವಿನಿಮಯದಿಂದಲೇ ನಿಜವಾದ ಪ್ರಜಾತಂತ್ರದ ರಕ್ಷಣೆ ಆಗುವುದು" ಎಂದು ಪ್ರಕಟಿಸಿದರು. ಅದೇ ನವಂಬ್ರ ತಾ.15ರಂದು ತನ್ನ ಇನ್ನೊಂದು ಹೇಳಿಕೆಯಲ್ಲಿ ಅವರು "ನಾನು ಮತ್ತು ನನ್ನ ಪಂಗಡಿಗರು ಎರಡನೆಯ ಪಂಗಡದವರನ್ನು ನನ್ನೊಂದಿಗೆ ಹೊಂದಿಸಿಕೊಳ್ಳಲಿಕ್ಕೆ ಮತ್ತು ಅವರ ಆಶೋತ್ತರಗಳನ್ನು ಗೌರವಿಸಲಿಕ್ಕೆ ಬಹಳ ಸಮಯದ ವರೆಗೆ ಪ್ರಯತ್ನಿಸಿದ್ದಾಯಿತು. ಆದರೆ ನನ್ನ ವಿರೋಧಿ ಪಂಗಡದವರ ಇಚ್ಛೆಗಳನ್ನು ಪರಿಪೂರ್ಣವಾಗಿ ನೆರವೇರಿಸುವುದೆಂದರೆ ಕಾಂಗ್ರೆಸ್ ಸಂಸ್ಥೆಯನ್ನೇ ಪರಿತ್ಯಜಿಸಬೇಕಾಗುತ್ತಿತ್ತು.... ವಾಸ್ತವಿಕವಾಗಿ ಆಶ್ಚರ್ಯದ ಸಂಗತಿ ಎಂದರೆ, ಪಕ್ಷದೊಳಗಿನ ಕೆಲವೇ ಮಂದಿ ಅಲ್ಪಸಂಖ್ಯಾತರು ಬಹುಸಂಖ್ಯಾತರ ಮೇಲೆ ತಮ್ಮ ಅಭಿಪ್ರಾಯಗಳ ಒತ್ತಡವನ್ನು ಹೇರುತ್ತಾ ಬಂದರು. ಮುಖಂಡರು ಜನತೆಯ ಆಕಾಂಕ್ಷೆ ಮತ್ತು ವಿಶ್ವಾಸಗಳನ್ನು ಸಮಾನ ದೃಷ್ಟಿಯಿಂದ ನೋಡಬೇಕು. ಯಾವ ದೊಡ್ಡ ಮುಖಂಡನೇ ಆಗಲಿ ಜನತೆಯ ಆಕಾಂಕ್ಷೆಗಳನ್ನು ಚೆನ್ನಾಗಿ ತಿಳಿದುಕೊಳ್ಳುವುದಿಲ್ಲವೋ ಅಂತಹವನು ವ್ಯಕ್ತಿಶಃ ಎಷ್ಟು ಉನ್ನತನಾಗಿದ್ದರೂ ಅವನ ಮುಖಂಡತ್ವ ಉಳಿಯಲಾರದು" ಎಂಬುದಾಗಿ ಪ್ರಕಟಿಸಿದರು.

ಸೂರತ್ ಅಧಿವೇಶನದ ಕಾಲದ ಮತ್ತು ಇಂದಿನ ಪ್ರಗತಿಪರ ವಿಚಾರವಾದಿ ಕಾಂಗ್ರೆಸಿಗರ ಕಾಲದ ಇನ್ನೊಂದು ಸಾಮ್ಯವೂ ಪ್ರತಿಯೊಬ್ಬರೂ ತಿಳಿದುಕೊಳ್ಳಲಿಕ್ಕೆ ತಕ್ಕುದಾಗಿದೆ. ಅದಾವುದೆಂದರೆ, ಪ್ರಸ್ತುತ ಜನತೆ ದೇಶದಾದ್ಯಂತ ಆರ್ಥಿಕ ಕ್ಷೇತ್ರದಲ್ಲಿ ಕ್ರಾಂತಿಕಾರಕ ಸುಧಾರಣೆಯ ಬೇಡಿಕೆಗಳನ್ನು ಮುಂದಿರಿಸಿ ಯಾವ ರೀತಿಯ ಆಂದೋಲನವನ್ನು ನಡೆಸುತ್ತಿದೆಯೋ ಮತ್ತು ಈ ಕೇಳಿಕೆಗಳನ್ನು ಪುರಸ್ಕರಿಸಿ ತಮ್ಮ ಗುಂಪಿನಲ್ಲಿ ನವಚೇತನ ತುಂಬಿಸುವುದಕ್ಕೋಸ್ಕರ ಕಾಂಗ್ರೆಸಿನೊಳಗಿರುವ ಪ್ರಗತಿಶೀಲ ವಿಚಾರವಾದಿಗಳ ಗುಂಪು ವ್ಯಗ್ರವಾಗಿದೆಯೋ ಅದೇ ಪ್ರಕಾರ 1907-೫ರ ಮಧ್ಯಕಾಲದಲ್ಲಿ ಜರಗಿದ ಸೂರತ್ ಅಧಿವೇಶನದ ಮೊದಲು ಬ್ರಿಟಿಷರು ಕೈಕೊಂಡ ವಂಗ-ಭಂಗ ನೀತಿಯ ಪರಿಣಾಮವಾಗಿ ದೇಶದಲ್ಲಿ ಹರಡಿದ ಅಸಂತೋಷದ ಪ್ರವಾಹಕ್ಕೆ ಬೆಂಬಲ ಕೊಟ್ಟು ಕಾಂಗ್ರೆಸನ್ನು ಮುನ್ನಡೆಸಿಕೊಂಡು ಹೋಗುವುದಕ್ಕೋಸ್ಕರ ತಿಲಕರು ಮತ್ತವರ ಬೆಂಬಲಿಗರು ಆಮೂಲಾಗ್ರ ಕೈಕೊಳ್ಳಲು ಇಚ್ಛಿಸುತ್ತಿದ್ದರು. ಸೂರತ್ ಕಾಂಗ್ರೆಸ್ ಅಧಿವೇಶನ (1908)ದಲ್ಲಿ "ಸ್ವಾಯತ್ತ ಶಾಸನಾಧಿಕಾರ"ದ ಬೇಡಿಕೆಯನ್ನು ಮಂಡಿಸಿದ ನಂತರ "ಸಂಪೂರ್ಣ ಸ್ವರಾಜ್ಯ"ದ ಕೇಳಿಕೆ ಮಂಡಿಸಲಿಕ್ಕೆ 12 ವರ್ಷಗಳ ವರೆಗೆ ಕಾಯಬೇಕಾಯಿತು. 1908ರಲ್ಲಿ ಮಂದ ಪಕ್ಷ ಮತ್ತು ಉಗ್ರ ಪಕ್ಷದವರೊಳಗೆ "ಸ್ವಾಯತ್ತ ಶಾಸನಾಧಿಕಾರ" ಅಥವಾ "ಸಂಪೂರ್ಣ ಸ್ವರಾಜ್ಯ" ಈ ಕುರಿತು ಭಯಂಕರ ಮತಭೇದವಿತ್ತು. 1920ರ ನಾಗಪುರ ಅಧಿವೇಶನದಲ್ಲಿ ಗಾಂಧೀಜಿ ಮಂಡಿಸಿದ "ಸ್ವರಾಜ್ಯ"ದ ಠರಾವಿನ ಕುರಿತು ಕೇವಲ ಎರಡೇ ಮತಗಳು ವಿರುದ್ಧವಾಗಿ ಬಿದ್ದವು. ಗಾಂಧೀಜಿ ತನ್ನ ಕಡೆಗೆ ಎಷ್ಟು ಶಕ್ತಿ ಸಂಗ್ರಹಿಸಿಕೊಂಡಿದ್ದರೆಂಬುದು ಆಗ ಜನತೆಗೆ ಗೊತ್ತಾಯಿತು. ಆದರೆ ಇದಕ್ಕೆ ಮೊದಲು ಮಹಾತ್ಮಾಜಿ ಕಲ್ಕತ್ತೆಯಲ್ಲಿ "ಅಸಹಕಾರ" ಚಳವಳಿಯ ತನ್ನ ಕಾರ್ಯಕ್ರಮವನ್ನು ಪ್ರಕಟಿಸಿದಾಗ ಹಳೆಯ ಹಳೆಯ ಕಾಂಗ್ರೆಸಿಗರು ಲೋಕಮಾನ್ಯ ತಿಲಕರ ಪಕ್ಷದವರ ಸಹಿತ ಕೈಕೊಂಡ ಪ್ರಯತ್ನ ಕಡಿಮೆ ಇರಲಿಲ್ಲ; ಆದರೆ ಅಂದಿಗೆ ಅದು ತಾತ್ಕಾಲಿಕ ಸೋಲಿಗೆ ಒಳಗಾಗಿತ್ತು. ಈ ರೀತಿ ಕಾಲಮಾನಕ್ಕೆ ತಕ್ಕುದಾದ ಕೇಳಿಕೆಗಳನ್ನು ಈಡೇರಿಸಿಕೊಳ್ಳುವುದಕ್ಕೋಸ್ಕರ ಹೊಸ ಹೊಸ ನೇತೃತ್ವ ದೊರೆಯುತ್ತಿದ್ದುದರಿಂದಲೇ ಕಾಂಗ್ರೆಸು ಈ ವರೆಗೆ ಬದುಕಿ ಉಳಿಯುವಂತಾಗಿದೆ. "ಸಾಮ್ರಾಜ್ಯಾಂತರ್ಗತ ಸ್ವಾಯತ್ತ ಶಾಸನಾಧಿಕಾರ"ದ ಕೇಳಿಕೆಯಿಂದ ಮೊದಲ್ಗೊಂಡು "ಸ್ವರಾಜ್ಯ"ದ ಘೋಷಣೆಯ ವರೆಗಿನ ಅವಧಿಯನ್ನು ದಾಟಲಿಕ್ಕೆ 12 ವರ್ಷಗಳು ತಗಲಿದವು; ಮತ್ತು "ಸ್ವರಾಜ್ಯ" ಶಬ್ದಕ್ಕೆ "ಪೂರ್ಣ" ಎಂಬ ಒಂದು ಶಬ್ದವನ್ನು ಸೇರಿಸಲಿಕ್ಕೆ ಮತ್ತೆ 10 ವರ್ಷಗಳ ವರೆಗೆ ನಿರೀಕ್ಷಣೆ ಮಾಡಬೇಕಾಯಿತು. 1930ರಿಂದ 47ರ ವರೆಗಿನ ಕಾಂಗ್ರೆಸಿನ ಚರಿತ್ರೆ ಸ್ವಾತಂತ್ರ್ಯ ಸಮರದ ಘಟನೆಗಳಿಂದಲೇ ತುಂಬಿಕೊಂಡಿರುತ್ತದೆ.

ಕಾಂಗ್ರೆಸಿನ ಆದರ್ಶಗಳ ಸಂಘಟನೆಯ ಕುರಿತು ಇಂದಿರಾಗಾಂಧಿಯವರಿಗೆ ತನ್ನ ಜೊತೆಗಾರರೊಂದಿಗೆ ಒದಗಿಬಂದ ಕಲಹ ಇಂದಿಗೆ 40 ವರ್ಷಗಳ ಹಿಂದಿನ ಸನ್ನಿವೇಶಗಳನ್ನು ನೆನಪಿಗೆ ತರುತ್ತದೆ. ಅಂದು ಇದೇ ಪ್ರಕಾರ ಮಹಾತ್ಮಾಜಿ ಮತ್ತು ಪಂ. ನೆಹರೂರವರೊಳಗೆ ತೀವ್ರವಾದ ಮತಭೇದ ತಲೆದೋರಿತ್ತು. ಅದು 20 ವರ್ಷಗಳ ವರೆಗೆ ದೂರವಾಗಲಿಲ್ಲ. 1927ರ ಡಿಸೆಂಬರದಲ್ಲಿ ಜರಗಿದ ಮದ್ರಾಸಿನ ಅಧಿವೇಶನದಲ್ಲಿ ಪಂ. ನೆಹರೂರವರು "ಭಾರತೀಯ ಜನತೆಯ ಲಕ್ಷ್ಯದ ಪ್ರತೀಕವಾಗಿ "ಸಂಪೂರ್ಣ ಸ್ವರಾಜ್ಯ"ದ ಕೇಳಿಕೆಯನ್ನು ಮುಂದಿಡುತ್ತದೆ" ಎಂಬ ಠರಾವನ್ನು ಮಂಡಿಸಿದರು. ಅದು ಸ್ವೀಕೃತವಾಗಿಯೂ ಹೋಯಿತು. ಆಗ ಗಾಂಧೀಜಿ ಇರಲಿಲ್ಲ. ಇದು ಅವರಿಗೆ ತಿಳಿದಾಗ ಅವರು "ಇಂತಹ ಠರಾವನ್ನು ಸ್ವೀಕರಿಸಿ ನಾವು ನಮ್ಮ ನಿರ್ಬಲತೆಯನ್ನು ಮಾತ್ರ ತೋರಿಸಿದ್ದೇವೆ.... ನಾವು ಹೆಚ್ಚು ಕಡಿಮೆ ಶಾಲೆಯ ಮಕ್ಕಳು ಪಡೆಸುವ ಚರ್ಚಾಕೂಟದಷ್ಟು ಕೆಳಮಟ್ಟಕ್ಕೆ ಇಳಿದಿರುತ್ತೇವೆ" ಎಂದು ಹೇಳಿದರು. ಇಂತಹ ಕ್ರಾಂತಿಕಾರಕ ಹೆಜ್ಜೆ ನೆಹ್ರೂರವರು ಇಟ್ಟದ್ದು ಗಾಂಧೀಜಿಗೆ ಸರ್ವಥಾ ಸಮ್ಮತವಾಗಲಿಲ್ಲ. "ತನ್ನ ಮಗನಿಂದಲೇ ತನ್ನ ಮುಖಭಂಗವಾದಂತೆ ಅವರಿಗೆ ಕಂಡುಬಂತು. ಮಹಾತ್ಮರು ನೆಹ್ರೂರವರಿಗೆ ಒಂದು ಪತ್ರ ಬರೆದು ಅದರಲ್ಲಿ "ನೀನು ನನ್ನನ್ನು ಎಷ್ಟು ಪ್ರೀತಿಸುತ್ತೀ ಎಂದರೆ ನಾನು ಬರೆದುದರ ವಿರುದ್ಧ ಪ್ರತಿಪಾದನೆ ಮಾಡಲಾರೆ ಎಂಬುದು ನನ್ನ ದೃಢ ವಿಶ್ವಾಸ; ಹೇಗೆ ಬೇಕಾದರೂ ತಿಳಿದುಕೊ! ನಾನು ನಿನ್ನನ್ನು ಎಷ್ಟು ಪ್ರೀತಿಸುತ್ತೇನೆಂದರೆ ಕೆಲವು ವಿಷಯಗಳನ್ನು ನಿನಗೆ ತಿಳಿಸಲಿಕ್ಕೆ ನನ್ನನ್ನು ನಾನು ತಡೆಹಿಡಿಯಲಾರೆನು. ಮತ್ತು ನಿನಗೆ ಬರೆಯುವುದು ನನ್ನ ಕರ್ತವ್ಯವೆಂದು ತಿಳಿಯುತ್ತೇನೆ. ನೀನು ಸ್ವಲ್ಪ ವೇಗವಾಗಿ ಮುಂದೆ ಹೋಗುತ್ತಿರುವಿ. ನಿನಗೆ ಆಲೋಚನೆ ಮಾಡಲು ಒಂದು ಹೊಸ ವಿಷಯವನ್ನು ಚೆನ್ನಾಗಿ ಅನುಭವ ಮಾಡಿಕೊಳ್ಳಲಿಕ್ಕೆ ಸ್ವಲ್ಪ ಹೆಚ್ಚು ಸಮಯವನ್ನು ಉಪಯೋಗಿಸಿಕೊಳ್ಳಬೇಕಿತ್ತು. ಅನೇಕ ಠರಾವುಗಳನ್ನು ರೂಪಿಸುವುದರಲ್ಲಿ ಮತ್ತು ಅವುಗಳನ್ನು ಅಂಗೀಕೃತಗೊಳಿಸುವುದರಲ್ಲಿ ನಿನ್ನಕ್ಕೆ ಇತ್ತು. ಮುಂದಿನ ಒಂದು ವರ್ಷದ ವರೆಗೆ ತಡೆದು ಬಹುದಿತ್ತು. "ರಿಪಬ್ಲಿಕ್ ಸೇನೆ"ಯಲ್ಲಿ ನೀನು ದುಡುಕಿರುವುದು ನಿನ್ನಲ್ಲಿನ ದುಡುಕು ತನವನ್ನು ತೋರಿಸುತ್ತದೆ; (ಮದ್ರಾಸ್ ಅಧಿವೇಶನದೊಂದಿಗೆ ಆಯೋಜಿಸಲ್ಪಟ್ಟಿದ್ದ "ರಿಪಬ್ಲಿಕ್ ಕಾಂಗ್ರೆಸ್"ನ ಒಂದು ದಿವಸದ ಅಧಿವೇಶನದ ಅಧ್ಯಕ್ಷತೆಯನ್ನು ಪಂ. ನೆಹ್ರೂರವರೇ ವಹಿಸಿದ್ದರು. ನೆಹರು ಈ ರೀತಿ ತನಗಿಂತ ಮುಂದೆ ಹೋಗುವುದು ಗಾಂಧೀಜಿಗೆ ಇಷ್ಟವಿರಲಿಲ್ಲ. ಈ ಹಿನ್ನೆಲೆಯಲ್ಲಿಯೇ ಅವರು ಉಪರೋಕ್ತ ಪತ್ರ ಬರೆದದ್ದು.) ಇದಾದ ಕೆಲವೇ ವಾರಗಳ ನಂತರ ಮಹಾತ್ಮಾಜಿ ನೆಹರೂರವರಿಗೆ ಬರೆದ ಎರಡನೆಯ ಪತ್ರದಲ್ಲಿ "ನೀನು ನನ್ನ ಮತ್ತು ನನ್ನ ವಿಚಾರಗಳ ವಿರುದ್ಧ ಸಹ ಬಹಿರಂಗ ಹೋರಾಟಕ್ಕೆ ಇಳಿದಿರುವಿ ಎಂಬುದು ನನಗೆ ಚೆನ್ನಾಗಿ ಮನವರಿಕೆಯಾಗುತ್ತದೆ. ನಿನ್ನ ಮತ್ತು ನನ್ನ ನಡುವೆ ಎಂತಹ ಆಳವಾದ ಕಣಿವೆ ನಿರ್ಮಾಣವಾಗಿದೆಯೆಂದರೆ ಅದನ್ನು ಮುಚ್ಚಲಿಕ್ಕೆ ಯಾವ ಆಧಾರವೂ ಕಂಡು ಬರುವುದಿಲ್ಲ...." ಎಂದು ಸ್ಪಷ್ಟಗೊಳಿಸಿದ್ದರು. ಈ ರೀತಿಯಲ್ಲಿ ಕಠಿಣವಾದ ಮತಭೇದಗಳು ಬೆಳೆದು ಹೋದರೂ ಕೂಡ ಇವರಿಬ್ಬರೊಳಗಿನ ಪರಸ್ಪರ ಸಂಬಂಧ ಕಡಿದು ಹೋಗುವಂತಹ ಸ್ಥಿತಿ ಮಾತ್ರ ಒದಗಿ ಬರಲಿಲ್ಲ. ಪಂ. ನೆಹ್ರುರವರ ಕ್ರಾಂತಿಕಾರಕ ಸಭಾರಣೆಯ ನಿಜಸ್ವರೂಪ ಸುಪ್ರಸಿದ್ಧ "ನೆಹರು ರಿಪೋರ್ಟ್" ಪ್ರಕಟವಾದ ನಂತರವೇ ತಿಳಿದು ಬಂತು. ಈ ವರದಿಯ ಒಂದಂಶವನ್ನು ತೆಗೆದುಕೊಂಡು ಕಾಂಗ್ರೆಸಿನ ಹಳೆಯ ಮತ್ತು ಹೊಸ ಮುಖಂಡರೊಳಗೆ ಪ್ರಬಲವಾದ ಭಿನ್ನಾಭಿಪ್ರಾಯ ಉದ್ಭವಿಸಿತು. ಮೋತಿಲಾಲ್ ನೆಹರು, ಗಾಂಧೀಜಿ ಮತ್ತಿತರ ಹಳೆಯ ಕಾಂಗ್ರೆಸಿಗರು "ಡೊಮಿನಿಯನ್ ಸ್ಟೇಟಸ್"ನಲ್ಲಿಯೇ ಸಂತುಷ್ಟರಾಗಲಿಕ್ಕೆ ಸಿದ್ಧರಿದ್ದರು; ಆದರೆ ಜವಾಹರಲಾಲರು ಮತ್ತು ಸುಭಾಷ್‌ಚಂದ್ರ ಬೋಸರು ಒಂದಾಗಿ "ಸಂಪೂರ್ಣ ಸ್ವರಾಜ್ಯ"ದ ತಮ್ಮ ಲಕ್ಷ್ಯ ಮತ್ತು ಘೋಷಣೆಯನ್ನು ಕಾಂಗ್ರೆಸಿನೊಳಗೆ ಮೊಟ್ಟ ಮೊದಲು ಘೋಷಿಸಿದ್ದರು. ಇಷ್ಟು ಮಾತ್ರವಲ್ಲ ಈ ಯುವಕರು "Independent for India Leagu" ಎಂಬ ಒಂದು ಹೊಸ ಸಂಸ್ಥೆಯ ಅಸ್ತಿವಾರವನ್ನು ಹಾಕಿ ಬಿಟ್ಟರು. ಜವಾಹರಲಾಲರ ವಿಚಾರವನ್ನು ಅನುಸರಿಸುವವರ ಸಂಖ್ಯೆ ಹೆಚ್ಚುತ್ತಿರುವುದನ್ನು ಮತ್ತು ಅವರು "ಟ್ರೇಡ್ ಯೂನ್ಯನ್" ಅಧ್ಯಕ್ಷರಾಗಿ ಚುನಾಯಿತರಾದುದು ಗಾಂಧೀಜಿಗೆ ಗೊತ್ತಾಯಿತು. ಈ ರೀತಿ ತನ್ನಿಂದ ಮುಖಂಡತ್ವ ದೂರವಾಗುವುದು ಗಾಂಧೀಜಿ ಅಂತರಂಗದಲ್ಲಿ ಸಹಿಸುತ್ತಿರಲಿಲ್ಲ. ಮಜೂರ ವರ್ಗದೊಡನೆ ಸಂಪರ್ಕವಿರಿಸಿಕೊಂಡ ಕಮ್ಯುನಿಸ್ಟ್ ಕಾರ್ಯಕರ್ತರು "ಮೀರತ್ ಪಿತೂರಿ ಮೊಕದ್ದಮೆ"ಯಲ್ಲಿ ಸಿಕ್ಕಿ ಬಿದ್ದಾಗ ನೆಹರುರವರು ಅವರಲ್ಲಿ ವಿಶೇಷ ಸಹಾನುಭೂತಿ ಇರಿಸಿದ್ದರು.

(ಮುಂದುವರಿಯುವುದು.)

ಸಂಗ್ರಾಹ್ಯ ಸಂಕಲನಗಳು

ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ಕಂಚ ಸುಮನ	1—20
ಹೆಂಗುಸರ ಕತೆಗಳು	2—00
ಪುಡಿಮುತ್ತುಗಳು	1—50
ಪಂಚಗವ್ಯಾಯ	2—00
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00

ನವಭಾರತ ಪುಸ್ತಕ ಭಂಡಾರ,
ಉಡುಪಿ.

ನವಯುಗ

ದುರಂತನಾಟಕದ ಖಳನಾಯಿಕೆ

ವಾರಪತ್ರಿಕೆ
ಉಡುಪಿ, ದ. ಕ.

NAVAYUGA
UDIPI, S. K.

ಸಂಪುಟ : 50
ಸಂಚಿಕೆ : 12

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
ವಿಶೇಷ ಸಂಚಿಕೆಗಳು ಸಹಿತ
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವುದೇ ಪ್ರಕಟಣೆಗಳು ಕನಿಷ್ಟ ಮೂರು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿ ಆಳಿಕೆ ಘೋಷಿಸಿ ಬಹುಕಾಲ ಸಂದಾಯವಾಯ್ತು. ಅಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯಲಾರದಷ್ಟು ಪರಿಸ್ಥಿತಿ ಬಿಗಡಾಯಿಸಿದೆಯೆಂದೂ ಅದು ಹತೋಟಿಗೆ ಬಂದ ಕೂಡಲೇ ಚುನಾವಣೆಗಳು ನಡೆಯುವವೆಂದೂ ಪ್ರಧಾನಿ ಹಾಗೂ ಗೃಹಮಂತ್ರಿಗಳು ಒಂದಕ್ಕಿಂತ ಹೆಚ್ಚು ಬಾರಿ ಉಗ್ಗಡಿಸಿದ್ದುಂಟು. ಕಮ್ಯುನಿಸ್ಟ್ ಪಕ್ಷಗಳು ಒಂದಾಗಿ ಚುನಾವಣೆ ನಡೆಸಿರೆಂದು ಕೇಳಿಕೊಂಡರೆ, ಕಾನೂನು-ವ್ಯವಸ್ಥೆ ಸುಧಾರಿಸಲಿಲ್ಲವೆಂದೂ ಕಮ್ಯುನಿಷ್ಟೇತರರು ಪಶ್ಚಿಮ ಬಂಗಾಳದ ಕಾನೂನು ಸುವ್ಯವಸ್ಥೆಗಳನ್ನು ಸಂರಕ್ಷಿಸುವುದರಲ್ಲಿ ಕೇಂದ್ರ ವಿಫಲವಾಗಿದೆ ಎಂದು ದೂರಿದಾಗ ಕಮ್ಯುನಿಷ್ಟರೊಡನೆ ಕೂಡಿಕೊಂಡು ಆಳಿಕೆ ಪಕ್ಷವು ಅದನ್ನು ಖಂಡತುಂಡವಾಗಿ ನಿರಾಕರಿಸುವುದೂ ಇದುವರೆಗೂ ನಡೆದು ಬಂದ ಇಂದಿರಾ ಸಂಪ್ರದಾಯ. (ಅಡಳಿತ) ಇಂಡಿಕೇಟಿಗೆ ತನ್ನ ಹೇಳಿಕೆಯಲ್ಲೇ ವಿಶ್ವಾಸವಿಲ್ಲವೆಂಬುದು ಅವರ ಅಸ್ಥಿರಾಕ್ಷಿಗೆ ಹೊರತಾದ ವಿಷಯವಲ್ಲ. ಅದರಿಂದಲೇ ಅಧಿಕಾರಿಗಳು "ಪರಿಸ್ಥಿತಿ ಸುಧಾರಿಸುತ್ತ ಬರುತ್ತಲಿದೆ" ಎಂದು ಮಾತ್ರ ಆಗಾಗ್ಗೆ ಹೇಳಿಕೆ ನೀಡಿ ತೆಪ್ಪಗಾಗುತ್ತಾರೆಯೇ ಹೊರತು ಅದಕ್ಕಿಂತ ಎಳ್ಳಷ್ಟೂ ಮುಂದುವರಿಯುವುದು ಅವರಿಗೆ ಸಾಧ್ಯವಾಗಲಿಲ್ಲ.

ಪಶ್ಚಿಮ ಬಂಗಾಳದಲ್ಲಿನ ರಾಜ್ಯಪಾಲ ಶ್ರೀ ಧರ್ಮವೀರರೂ ಸರಕಾರದ ಕೆಲವು ಉನ್ನತಾಧಿಕಾರಿಗಳೂ ಈ ಸಂಬಂಧದಲ್ಲಿ ವಿವಾದಗ್ರಸ್ತ ವ್ಯಕ್ತಿಗಳಾಗಿ ಪರಿಣಮಿಸಿದ್ದಾರೆ. ಶ್ರೀ ಧರ್ಮವೀರರು ರಾಜ್ಯಪಾಲರಾಗಿ ನೇಮಕವಾಗುವುದಕ್ಕೆ ಕೆಲವು ಸಮಸ್ಯೆಗಳು ಎದ್ದಿದ್ದುವೆ. ಅಂದಿನ ರಾಜ್ಯದ ರಾಜ್ಯಕೀಯ ಪುಢಾರಿಗಳನ್ನು ತೃಪ್ತಿಪಡಿಸುವುದಕ್ಕಾಗಿಯೇ ಶ್ರೀ ಧರ್ಮವೀರರನ್ನು ಲಂಡನ್ನಿನಿಂದ ತಂದು ಕಲಕತ್ತೆಯಲ್ಲಿ ಕುಳಿಸಲಾಯ್ತು. ಆದರೆ, ಅಂತಹುದೇ ತೃಪ್ತಿ ತಮಗೂ ಬೇಕೆಂದು ಬಿಹಾರದ ಪುಢಾರಿಗಳು ಕೇಳಿದಾಗ, ಅದನ್ನು ನಿರಾಕರಿಸಿ ಶ್ರೀ ನಿತ್ಯಾನಂದ ಕಾನೂಂಗೋರನ್ನು ಅವರ ಮೇಲೆ ಹೇರಲಾಯ್ತು. ಅಂದರೆ, ಆದಾಗಲೇ ಶ್ರೀಮತಿ ಗಾಂಧಿಯವರ ನಿಲುವು ಕಮ್ಯುನಿಸ್ಟ್ ಧ್ರುವೀಕರಣದತ್ತ ವಾಲುತ್ತೆಂಬುದು ಸ್ಪಷ್ಟವಾಗಿತ್ತು. ಇಂದಿಗೆ ಆ ಅಪವಿತ್ರ ಧ್ರುವೀಕರಣದ ಘೋರ ಪರಿಣಾಮವನ್ನು ಆಕೆಯು ಇತರರಿಗೂ ಉಣಿಸಹೊರಟಿದ್ದಾರೆ. ಕಮ್ಯುನಿಷ್ಟರ ಬಲವನ್ನು ಗಳಿಸಿಕೊಳ್ಳುವುದಕ್ಕಾಗಿಯೇ ಪ್ರತಿಬಂಧಕ ನಿಸ್ಥಾನಬದ್ಧತಾ ಕಾಯಿದೆಯನ್ನು ಕಿತ್ತು ಹಾಕಲಾಯ್ತು. ಇದೀಗ ಶ್ರೀಮತಿ ಗಾಂಧಿಯವರು ಅಂತಹುದೇ ಶಾಸನದ ಬಲ ತಮಗೆ ದೊರೆತರೆ ಮಾತ್ರ ಪಶ್ಚಿಮ ಬಂಗಾಳದ ಕಾನೂನು-ವ್ಯವಸ್ಥೆ ಸುಧಾರಿಸೀತೆಂದು ಮನವರಿಕೆ ಮಾಡಿಕೊಂಡಿದ್ದಾರೆ. ಆದರೆ, ಅದನ್ನು ಪಶ್ಚಿಮ ಬಂಗಾಳದ ಮಟ್ಟಿಗಾದರೂ ಮತ್ತೆ ಜ್ಯಾರಿಗೆ ತರಲು ಆಕೆ ಅಶಕ್ತರಾಗಿದ್ದಾರೆ. ಸಂಸತ್ತಿನಲ್ಲಿ ಶ್ರೀಮತಿ ಗಾಂಧಿಯವರನ್ನು ಬೆಂಬಲಿಸುತ್ತಿರುವ, ಆಕೆಯ ಸರಕಾರವನ್ನು ಉರುಳಿಸಲು ಬಯಸದಿರುವ ದ್ರಾವಿಡರೂ ಕಮ್ಯುನಿಷ್ಟರೂ ಇಂತಹ ಅಧಿಕಾರ ಆಕೆಗೆ ನೀಡಲು ಒಪ್ಪುವುದಿಲ್ಲ. ಅದರ ಮೇಲೆ ಕಮ್ಯುನಿಸ್ಟ್ ಮನೋಭಾವದ ಅಧಿಕಾರಿಗಳೂ ಬಂಗಾಳದಲ್ಲಿ ತುಂಬಿ ಹೋಗಿದ್ದಾರೆ. ಅದುದರಿಂದಲೇ ಅಲ್ಲಿ ಏನೇನು ಅತ್ಯಾಚಾರ ಅನಾಚಾರಗಳೂ ಹಿಂಸೆ — ದರೋಡೆಗಳೂ ಹಾಡುಹಗಲಲ್ಲೇ ನಡೆಯುತ್ತಿರುತ್ತವೆ. ಉಗ್ರರಲ್ಲಿ ಉಗ್ರರಾದ ಕಮ್ಯುನಿಷ್ಟರು ನಕ್ಸಲೀಯರೆನಿಸಿಕೊಂಡು ರಾಜ್ಯವನ್ನು ಗೂಂಡಾಗಿರಿಯತ್ತ ಕೊಂಡೊಯ್ಯುತ್ತಿದ್ದಾರೆ. "ಜನತೆಯ ಆತ್ಮಪ್ರೇರಣೆಯ ಚಳುವಳಿ" ಎಂದು ಅದಕ್ಕೆ ಪ್ರಧಾನಿಯವರು ಮನ್ನಣೆ ನೀಡುತ್ತಲೇ ಬಂದರು; ಅವರನ್ನು ತಲೆಯ ಮೇಲೆ ಎತ್ತಿಕೊಂಡರು. ಕನಕನ ಬೀಳ್ವಿಯ ಕಥಕನನ್ನೇ ನುಂಗ ಬಂದಂತೆ ಈಗ ಅದು ಶ್ರೀಮತಿ ಗಾಂಧಿಯವರ ಗಂಟಲಲ್ಲಿ ಸಿಕ್ಕಿಕೊಂಡಿದೆ. ಅವರು ತಾನೇ ನೇದ ಬಲೆಯಲ್ಲಿ ತಾನೇ ಸಿಕ್ಕು ಹಾಕಿಕೊಂಡಿದ್ದಾರೆ. ಇದರಿಂದ ಅವರೆಂತು ಪಾರಾಗುತ್ತಾರೆ ಎಂಬ ದೇಶದ ದೊಡ್ಡ ಪ್ರಶ್ನೆ.

ಪಶ್ಚಿಮ ಬಂಗಾಳದಲ್ಲಿ ದಿನದಿನವೂ ನೂರಾರು ದುರಂತಗಳು ನಡೆಯುತ್ತಿರುತ್ತವೆ. ಇದರಿಂದ ಬುದ್ಧಿಜೀವಿ ಶ್ರೀ ಸಾಮಾನ್ಯ ಜನರು ಬದುಕುವುದೇ ಕಷ್ಟವಾಗಿದೆ. ಆದುದರಿಂದ ರಾಜ್ಯದ ಆಡಳಿತವನ್ನು ಸೇನೆಗೆ ವಹಿಸಿಕೊಡಬೇಕು ಎಂಬ ಕೂಗು ಆಗಾಗ ಅಲ್ಲಲ್ಲಿ ಕೇಳಿ ಬರುತ್ತಿದೆ. ಕೇಂದ್ರ ಸರಕಾರವು ಪರಿಸ್ಥಿತಿ ಸುಧಾರಿಸುತ್ತಿದೆಯೆಂದು ಹೇಳಿಕೆ ನೀಡುತ್ತ ಬಂದರೂ ಅಲ್ಲಿನ ಕಥೆ ಬೇರೆಯೇ ಆಗುತ್ತ ನಡೆಯುತ್ತಿದೆ ಎಂಬುದೂ ಅದಕ್ಕೆ ತಿಳಿಯದ ಸಂಗತಿಯಲ್ಲ. ಆದರೂ ತನ್ನ ಗೌರವ — ಪ್ರತಿಷ್ಠೆಯ ಪ್ರಶ್ನೆಯೆಂಬಂತೆ ಅದು ಸಳ್ಳು ಹೇಳಿಕೆಗಳನ್ನು ನೀಡುತ್ತ ಜನತೆಯನ್ನು ತಪ್ಪುದಾರಿಗೆಳೆಯುತ್ತಿದೆ. ರಾಜ್ಯಕೀಯ ಧುರೀಣರು, ರಾಜ್ಯಕೀಯ ಕಾರಣಗಳಿಗಾಗಿ ಆಡಳಿತೆಯ ಯಂತ್ರವನ್ನು ಎಷ್ಟು ಆಳದಲ್ಲಿ ಹೂಳಬಹುದೋ ಅಷ್ಟು ಆಳದಲ್ಲಿ ಹೂತು ಬಿಟ್ಟಿದ್ದಾರೆ. ಅದನ್ನು ಮೇಲೆತ್ತುವ, ಹೂಳೆ ತೆಗೆಯುವ ಶಕ್ತಿ ಈಗ ರಾಜ್ಯದ ರಾಜ್ಯಕೀಯ ಪುಢಾರಿಗಳಿಗಾಗಲೀ ಕೇಂದ್ರ ಸರಕಾರಕ್ಕಾಗಲೀ ಇರುವಂತೆ ಗೋಚರಿಸುತ್ತಿಲ್ಲ. ಬಂಗಾಳ ಕಾಂಗ್ರೆಸ್ಸು ಎಂತಹ ಕಟ್ಟುಗ್ರವಾದ ಶಾಸನವನ್ನಾದರೂ ವ್ಯವಹಾರಕ್ಕೆ ತರಬೇಕೆಂದು ಹೇಳುತ್ತಿದೆ. ಆದರೆ, ಹಿಂಸಾಚಾರವನ್ನು ಹತ್ತಿಕ್ಕಲು ಕೇಂದ್ರ ಸರಕಾರ ವಿಫಲವಾಗಿದೆಯೆಂದೂ ಅದರಿಂದದು ರಾಜಿನಾಮೆ ನೀಡಬೇಕೆಂದೂ ಕೂಗುವ ಕಮ್ಯುನಿಸ್ಟ್ ಪಕ್ಷಗಳು ಮಾತ್ರ ಅದನ್ನು ಒಪ್ಪುವುದಿಲ್ಲ. ಅಂದರೆ, ಕಲಕತ್ತೆಯ ರಂಗಮಂಟಪದಲ್ಲಿ ಎಲ್ಲ ರಾಜ್ಯಕೀಯ ಪಕ್ಷಗಳೂ ರಾಜ್ಯಕಾರಣಿಗಳೂ ಡೊಂಬರಾಟ ನಡೆಸಹತ್ತಿದ್ದಾರೆ; ಹಿರೀಹ ಜನತೆಯ ಎದೆಯ ಮೇಲೆಯೇ ತಂತಮ್ಮ ದಾಳ ಉರುಳಿಸ ಹತ್ತಿದ್ದಾರೆ. ರಾಜಕೀಯ ಧ್ರುವೀಕರಣ ನೀತಿಯನ್ನು ಕೂಡಲೇ ಬದಿಗಿಟ್ಟು ಕಟ್ಟುಗ್ರ ಶಾಸನದ ರಕ್ಷಾ ಪರಿಸ್ಥಿತಿಯನ್ನು ಹತೋಟಿಗೆ ತಾರದೆಹೋದರೆ, ಮುಂದೆ ಸೇನೆಗೇ ಶರಣಾಗುವ ಅಸಹಾಯಕ ಪರಿಸ್ಥಿತಿ ತಲೆದೋರುತ್ತದೆ. ಈ ಬಗೆಯಾಗಿ ಪ್ರಜಾಸತ್ತೆಯ ಸಂಪೂರ್ಣ ಕವಂಧಿಸ್ವೈದ್ದು ಸರ್ವಾಧಿಕಾರಿಯಾಗಿ ಮೆರೆದಾಡುವುದೇ ಶ್ರೀಮತಿ ಗಾಂಧಿಯ ಮನೀಷೆಯೋ? ಹಾಗೆಂದಾದರೆ, ಆಕೆ ದುರಂತನಾಟಕದ ಖಳನಾಯಿಕೆನಿಸುತ್ತಾರೆ.

ಜಾರಿಕೊಳ್ಳುವ ನೀತಿ

ಮಹಾರಾಷ್ಟ್ರ — ಕರ್ನಾಟಕ ಗಡಿ ವಿವಾದದ ಸಂಬಂಧದಲ್ಲಿ ಉನ್ನತ ಮಟ್ಟದ ಸರ್ವಪಕ್ಷೀಯ ನಿಯೋಗವೊಂದು ದೆಹಲಿಗೆ ಹೋಗಲಿದೆ; ಇದರ ನಾಯಕತ್ವವನ್ನು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರೇ ವಹಿಸಿದ್ದಾರೆ ಈ ವರದಿಗಳೇನು ಸೂಚಿಸುತ್ತಿವೆ? ದೆಹಲಿಯಲ್ಲಿ ಈ ಸಂಬಂಧದಲ್ಲಿ ತೀವ್ರ ಚಟುವಟಿಕೆಗಳು ಆರಂಭವಾಗಿವೆಯೆಂಬುದೇ? ಶ್ರೀಮತಿ ಗಾಂಧಿಯವರು ಸ್ವಪಕ್ಷದ ಪರಿಧಿಯಲ್ಲಿರುವ ಈ "ಕಲಹ"ವನ್ನು ಸಂಸತ್ತಿನ ಮುಂದೆ ಅನಗತ್ಯವಾಗಿ ಮಂಡಿಸಿ ತನ್ನ ವ್ಯಕ್ತಿಗತ ಹೊಣೆಗಾರಿಕೆಯಿಂದ ಪಾರಾಗಬಯಸಿದ್ದಾರೆ. ಅಲ್ಲಿ ತನ್ನ ಮನೀಷೆಯಂತೆ ಮರಾಠಿಗರನ್ನು ತೃಪ್ತಿಗೊಳಿಸುವುದು ಹೆಚ್ಚು ಕಠಿಣವಾಗಲಾರದೆಂದೇ ಆಕೆಯ ಇಂಗಿತ. ಕೇಂದ್ರ ವಿತ್ತ ಸಚಿವ ಶ್ರೀ ವೈ. ಬಿ. ಚವನರು ಇತ್ತೀಚೆಗೆ ಮಹಾರಾಷ್ಟ್ರದ ಸಂಚಾರಾವಧಿಯಲ್ಲಿ ಮಾಡಿದ ಭಾಷಣ, ನೀಡಿದ ಉಪದೇಶ ಮೊದಲಾದುವು ಇದರ ಸೂಚನೆಯನ್ನೇ ನೀಡುತ್ತವೆ. ಶ್ರೀಮತಿ ಗಾಂಧಿಯವರು "ವಿವಾದ"ವನ್ನು ತೀರ್ಮಾನಿಸುವಲ್ಲಿ ಮಾಡಿದ ವಿಳಂಬವೇ ಊಹಾಪೋಹ-ಗೊಂದಲಗಳಿಗೆ ಕಾರಣವಾಗಿದೆ. ರಾಜ್ಯಗಳ ಒಲವನ್ನೂ ಕಳೆದುಕೊಳ್ಳಬಯಸದ ಆಕೆ ಎರಡೂ ರಾಜ್ಯಗಳಲ್ಲಿ ಕಹಿ ವಾತಾವರಣ ಮಾಡಿಸುತಿದ್ದಾರೆ. ಇದು ಅಧಿಕಾರ ಉಳಿಸಿಕೊಳ್ಳುವ ನೀತಿ ಮಾತ್ರ. ಇದರಿಂದ "ವಿವಾದ"ಗಳು ಮತ್ತೂ ಮತ್ತೂ ಜಟಿಲವಾಗುತ್ತಲೇ ಹೋಗುತ್ತವೆ. ಸಂಶಯಾಸ್ಪದ ವರ್ತನೆ ಯಾರಿಗೂ ಶೋಭೆ ತರುವುದಿಲ್ಲ.

ಶ್ರೀ ಉಮ್ಮಣ್ಣ ಸೋಮಿತರ ನಿಧನ

ಮದ್ರಾಸು ಸರಕಾರದ ನಿವೃತ್ತ ಡಿವಿಜನಲ್ ಇಂಜಿನಿಯರ್ ಶ್ರೀ ಎಸ್. ಉಮ್ಮಣ್ಣ ಸೋಮಿತರು 71ನೇ ವರ್ಷದಲ್ಲಿ ದಿವಂಗತರಾದರು. ಶ್ರೀಯುತರು ಮದ್ರಾಸು ಪಿ.ಡಬ್ಲ್ಯು.ಡಿ.ಯಲ್ಲಿ ಬೇರೆ ಬೇರೆ ಹುದ್ದೆಗಳಲ್ಲಿ ವಿವಿಧ ಕಡೆಗಳಲ್ಲಿ ದಕ್ಷಸೇವೆ ಸಲ್ಲಿಸಿ ಜನಾದರಣೀಯರಾಗಿದ್ದರು. ಸಮಾಜದ ಮುಖಂಡರಲ್ಲೊಬ್ಬರಾಗಿ ಬಂಟರ ಯಾನೆ ನಾಡವರ ಸಂಘದ ಏಳಿಗೆಗಾಗಿ ದುಡಿದು ಜನಮನ್ನಣೆಗಳಿಸಿದ್ದರು.

ಧರ್ಮ ಮತ್ತು ಸಾಹಿತ್ಯ ಸಮ್ಮೇಳನ

ಧಾರ್ಮಿಕ ಸಾಮಂಜಸ್ಯ ಮತ್ತು ಸಾಹಿತ್ಯಸುಧಾ ರಸಪಾನ ಮಾಡಿಸುವ ಆದರ್ಶ ಯೋಜನೆ.

ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಕಾರ್ತಿಕ ಮಾಸದ ಬಹುಳ ದಶಮಿಯಿಂದ ಲಕ್ಷದೀಪೋತ್ಸವ ಆರಂಭವಾಗುವುದು. ಇದು ಅಮಾವಾಸ್ಯೆಯ ತನಕ ಜರಗುವುದು. ಉತ್ಸವದವೇಳೆ ಊರ-ಪರವೂರುಗಳಿಂದ ಹತ್ತುಸಾವಿರಗಟ್ಟಲೆ ಭಾವುಕ ಭಕ್ತರು ಇಲ್ಲಿ ನೆರೆಯುತ್ತಾರೆ. ಈ ಸದವಸರದಲ್ಲೇ ಧರ್ಮ ಸಮ್ಮೇಳನ ಮತ್ತು ಸಾಹಿತ್ಯ ಸಮ್ಮೇಳನಗಳು ೧೯೩೩ರಿಂದ ನಡೆಸುತ್ತಲೇ ಬಂದಿವೆ.

ಮೊದಲಿನ ಧರ್ಮ ಸಮ್ಮೇಳನದ ಉದ್ಘಾಟನೆಯ ವೇಳೆ ಅಂದಿನ ಧರ್ಮಾಧಿಕಾರಿಗಳಾಗಿದ್ದ ಶ್ರೀ ಮಂಜಯ್ಯ ಹೆಗ್ಗಡೆಯವರು ತಮ್ಮ ಸ್ವಾಗತಭಾಷಣದಲ್ಲಿ ಹೀಗೆ ಅಂದಿದ್ದರು:—

"ಇಂತಹ ಧರ್ಮಸಮ್ಮೇಳನಗಳು ನಡೆಯುವುದರಿಂದ, ಪರಸ್ಪರ ಮತಗಳ ಪರಿಚಯವುಂಟಾಗಿ ಪ್ರತಿಯೊಂದು ಮತದ ವಿದ್ವಾಂಸರು ಬಂದು ತಮ್ಮ ಮತದ ಮುಖ್ಯ ತತ್ತ್ವಗಳನ್ನು ಜನರಲ್ಲಿ ವಿವರಿಸಿ ಹರಡಲಿಕ್ಕೂ ಅದನ್ನು ಅರಿತುಕೊಂಡು ಹಲವು ಮತಧರ್ಮಗಳಲ್ಲಿ ಐಕ್ಯವು ಬೆಳೆಯಲಿಕ್ಕೂ ಅನುಕೂಲವಾಗುವುದು. ಸ್ವಮತ ಪ್ರಚಾರವನ್ನಿಚ್ಛಿಸುವ ಗಣ್ಯ ಪೂಜ್ಯ ವಿದ್ವಾಂಸರು ಸಮ್ಮೇಳನಕ್ಕೆ ಮುಂಚಿತವಾಗಿಯೇ ತಂತಮ್ಮ ಮಂತವ್ಯಗಳನ್ನು ಸಂಗ್ರಹಿಸಿ ತಯಾರಿಸಿಡಬೇಕಾಗಿರುವುದರಿಂದ, ಸಾಧಾರಣವಾಗಿ ಈ ಸಂದರ್ಭದಲ್ಲಿ ಎಲ್ಲರ ಭಾಷಣಗಳೂ ಸಾರಯುಕ್ತವೂ ವಿದ್ವತ್ಪೂರ್ಣವೂ ಆಗಿದ್ದು ಕೇಳುವವರಿಗೆ ಹೆಚ್ಚಿನ ಪ್ರಯೋಜನವನ್ನುಂಟುಮಾಡುತ್ತದೆ."

೧೯೫೭ರ ಸಮ್ಮೇಳನ (ರಜತೋತ್ಸವ)ದ ಉದ್ಘಾಟಕರಾದ ಕರ್ನಾಟಕದ ಅಂದಿನ ರಾಜ್ಯಪಾಲ ಶ್ರೀ ಜಯಚಾಮರಾಜ ಒಡೆಯರ್ ಅವರು ತಮ್ಮ ಭಾಷಣದಲ್ಲಿ ಹೀಗೆಂದಿದ್ದಾರೆ:

"ವಿವಿಧ ಧರ್ಮ ಸಮ್ಮೇಳನವು ಪಂಡಿತಪಾಮರರೆಲ್ಲರ ಆಧ್ಯಾತ್ಮಿಕ ಬೆಳವಣಿಗೆಯ ಪರಮಸಾಧನ. ತಂತಮ್ಮ ಅಧ್ಯಯನ ವಿಷಯವಾದ ಧರ್ಮದಲ್ಲಿ ಪಾಂಡಿತ್ಯ ಮತ್ತು ಪ್ರತಿಭೆಯನ್ನು ಹೊಂದಿದ ಪ್ರಾಜ್ಞರು ಈ ಸಮ್ಮೇಳನದಲ್ಲಿ ಭಾಗವಹಿಸುತ್ತಿರುವುದು ಶುಭಸೂಚನೆಯಾಗಿದೆ. ಈ ಶುಭ ಸನ್ನಿವೇಶದಲ್ಲಿ ಪಂಡಿತರಲ್ಲಿ ಮತ್ತು ಪಾಮರರಲ್ಲಿ ಉದ್ಭವಿಸುವ ಸಮರಸವೇ ಇದರ ಅತ್ಯುತ್ತಮ ಫಲಿತಾಂಶ. ಜಗತ್ತಿನ ಧರ್ಮಗಳೆಲ್ಲದರ ಮುಖ್ಯ ಉದ್ದೇಶ ಮಮ್ಮನ್ನು ಸಾರಾಸಾರ ವಿವೇಕಜ್ಞರನ್ನಾಗಿ ಮಾಡುವುದು. ಇದರಿಂದಲೇ ಮಾನವ ಜೀವನದ ಸಾರ್ಥಕ್ಯ ಸಾಧ್ಯ."

೧೯೫೭ರಲ್ಲಿ ನಡೆದ ಧರ್ಮ ಸಮ್ಮೇಳನದಲ್ಲಿ ಸ್ವಾಗತ ಭಾಷಣ ಮಾಡುತ್ತ ಅಂದಿನ ಧರ್ಮಾಧಿಕಾರಿ ಶ್ರೀ ರತ್ನವರ್ಮ ಹೆಗ್ಗಡೆಯವರು ಹೀಗೆಂದಿದ್ದರು:-

"ವಿವಿಧ ಮತ ಬೇಧಗಳಿರುವ ಜನರ ಹೃದಯದಲ್ಲಿ ಪರಸ್ಪರ ಸೌಹಾರ್ದವನ್ನು ಹೆಚ್ಚಿಸಿ ಐಕ್ಯವನ್ನುಂಟುಮಾಡುವ ಧರ್ಮಸಮ್ಮೇಳನದ ಆವಶ್ಯಕತೆಯಿದೆ. ತಮ್ಮ ಧರ್ಮದ ರಹಸ್ಯವನ್ನು ತಾವರಿಯದೆ, ಬಳಕೆಯಲ್ಲಿರುವ ಕಟ್ಟು ಆಚರಣೆಗಳ ಯಥಾರ್ಥತೆಯನ್ನೂ ಹಿನ್ನೆಲೆಯನ್ನೂ ತಿಳಿದುಕೊಳ್ಳಲು "ವಿವಿಧ ಧರ್ಮ"ಗಳ ವಿಷಯದಲ್ಲಿ ಜನರಲ್ಲಿರುವ ಅಜ್ಞಾನವನ್ನು ಹೋಗಲಾಡಿಸಿಕೊಳ್ಳಲೂ ಎಲ್ಲ ಧರ್ಮೀಯರೂ ಸ್ನೇಹ ಭಾವದಿಂದ ಒಂದು ವೇದಿಕೆಯ ಮೇಲೆ ಸೇರಿ ತಂತಮ್ಮ ಮತಧರ್ಮಗಳಲ್ಲಿ ಅಂತರ್ಗತವಾಗುವ ವಿಶ್ವಬಾಂಧವ್ಯ ಲೋಕಕಲ್ಯಾಣ ತತ್ತ್ವಗಳನ್ನು ಬೆಳಕಿಗೆ ತರಲು ಧರ್ಮ ಸಮ್ಮೇಳನದಂತಹ ವಿದ್ಯಾಶಾಲೆಯು ಮತ್ತೊಂದಿಲ್ಲ."

ಇದೇವೇಳೆ ಅಧ್ಯಕ್ಷಸ್ಥಾನದಿಂದ ಶ್ರೀ ರಂ. ರಾ. ದಿವಾಕರರು ಮಾತಾಡುತ್ತ ಅಂದಿದ್ದರು:—

"ಈ ಸ್ಥಳದ ದೇವರು, ಧರ್ಮ ದೇವತೆಗಳ, ಅರ್ಚಕರು, ಆಡಳಿತ ನಡೆಸುವ ಹೆಗ್ಗಡೆಯವರು—ಇವನ್ನೆಲ್ಲ ಒಂದು ಸಂಶೋಧನೆಯ ದೃಷ್ಟಿಯಿಂದ ಅಧ್ಯಯನ ಮಾಡುವಂತಿದೆ. ಆಗ ಸರ್ವಧರ್ಮ ಸಮನ್ವಯವು ಈ ಪವಿತ್ರ ಸ್ಥಳದಲ್ಲಿ ಅಚ್ಚುಕಟ್ಟಾಗಿ ಬೆಳೆದು ಬಂದುದು ತಿಳಿಯುತ್ತದೆ. ಆ ದೃಷ್ಟಿಯಿಂದ ಶ್ರೀ ಧರ್ಮಸ್ಥಳದಲ್ಲಿ ಈ ಸರ್ವ ಧರ್ಮ ಸಮ್ಮೇಳನವು ಜರಗುತ್ತಿರುವುದು ಸಮುಚಿತವಾಗಿದೆ."

ಶ್ರೀ ಕ್ಷೇತ್ರದಲ್ಲಿನ ಧರ್ಮ ಸಮ್ಮೇಳನವು ತನ್ನ ಧ್ಯೇಯೋದ್ದೇಶಗಳಲ್ಲಿ ಯಶಗಳಿಸುತ್ತ ಬಂದಿದೆ. ಇದೇ ರೀತಿಯಾಗಿ ಸಾಹಿತ್ಯ ಸಮ್ಮೇಳನವೂ ಶ್ರೀ ಸಾಮಾನ್ಯರಿಗೆ ಸಾಹಿತ್ಯದ ಸುಧಾ ರಸವುಣಿಸುವಲ್ಲಿ ಸಮರ್ಥವಾಗಿದೆ.

ಕನ್ನಡನಾಡಿನ ಹೆಸರಾಂತ ಸಾಹಿತ್ಯ ಋಷಿಗಳು ಈ ಸಮ್ಮೇಳನದಲ್ಲಿ ಭಾಗವಹಿಸುತ್ತ ಬಂದಿದ್ದಾರೆ. ಅವರು ಸರಳ ಭಾಷೆಯಲ್ಲಿ ಜನಸಾಮಾನ್ಯರಿಗೆ, ತಮ್ಮ ಜ್ಞಾನದ ರಸವನ್ನು ಉಣಿಸುತ್ತ ಬಂದಿದ್ದಾರೆ. ಜನತೆಯಲ್ಲಿ ಸಾಹಿತ್ಯ ಪ್ರಜ್ಞೆಯನ್ನು ಮೂಡಿಸುತ್ತಲೇ ಬಂದಿದ್ದಾರೆ.

ಶ್ರೀ ಧರ್ಮಸ್ಥಳದ ಪೂಜೆ—ಉತ್ಸವಾದಿಗಳು

ಶ್ರೀ ಧರ್ಮಸ್ಥಳದಲ್ಲಿ ಧಾರ್ಮಿಕ ಪಾವಿತ್ರ್ಯಕ್ಕೆ ಹೆಚ್ಚಿನ ಪ್ರಾಮುಖ್ಯವಿದೆ. ದೇವಾಲಯದ ಒಳ ಅಂಗಣಕ್ಕೆ ಹೋಗಬೇಕಾದರೆ, ಸ್ನಾನಮಾಡಿ ಶುಚಿರ್ಭೂತರಾಗಬೇಕು. ಸಮೀಪದ ನೇತ್ರಾವತಿ ನದಿಯಲ್ಲಾಗಲೀ, ಹೂ ತೋಟದಲ್ಲಾಗಲೀ ಸ್ನಾನ ಮಾಡುವ ಅನುಕೂಲವಿದೆ. ಸೋಂಕು ರೋಗ ಪೀಡಿತರು, ಚರ್ಮರೋಗಿಗಳು ಅಂಗಿಧಾರಿಗಳು ಎಳೆಯ ಮಕ್ಕಳು ಮೊದಲಾದವರು ಒಳಪ್ರಾಂಗಣಕ್ಕೆ ಹೋಗುವಂತಿಲ್ಲ.

ಶ್ರೀ ಕ್ಷೇತ್ರದ ಮತ್ತೊಂದು ವಿಶೇಷವೆಂದರೆ, ಇಲ್ಲಿ ಯಾರೂ "ದೇವರಿಗೆ ಸೇವೆ ಮಾಡಿಸಿ" ಎಂದು ಕೇಳಿಕೊಳ್ಳುವವರಿಲ್ಲ. ಭಕ್ತ ಭಾವುಕರು ಇಚ್ಛೆಪಟ್ಟಷ್ಟು ಮಾತ್ರ ಸೇವೆ ಸಲ್ಲಿಸುವ ಅವಕಾಶವಿದೆ. ಹಾಗಿದ್ದರೂ ಶ್ರೀಕ್ಷೇತ್ರಕ್ಕೆ ಬರುವ ಹರಕೆ—ಕಾಣಿಕೆ—ಸೇವಾದಿಗಳಿಗೆ ಮಿತಿಯಿಲ್ಲ. ಇವುಗಳಿಂದಲೇ ಶ್ರೀ ಕ್ಷೇತ್ರದಲ್ಲಿ ದಾನ-ಧರ್ಮಗಳು ನಡೆಯುತ್ತವೆ; ಯಾತ್ರಿಗಳಿಗೆ ನಾನಾ ವಿಧದ ಸೌಕರ್ಯಗಳು ದೊರೆಯುತ್ತವೆ. ಧರ್ಮ— ಶಿಕ್ಷಣ — ಸಂಸ್ಕೃತಿಗಳು ಮುಪ್ಪುರಿಗೊಂಡು ಮುನ್ನಡೆಯುತ್ತವೆ.

ಶ್ರೀ ಮಂಜುನಾಥ ದೇವರ ಸನ್ನಿಧಿಯಲ್ಲಿ, ಬೆಳಕ್ಕೆ ಪವಮಾನ ದಿ ಪೂಜೆ, ಪಂಚಾಮೃತಾಭಿಷೇಕ, ಏಕಾದಶರುದ್ರಾಭಿಷೇಕ, ಚತುರ್ವೇದ ಪಾರಾಯಣ, ಸಹಸ್ರನಾಮ ಪೂರ್ವಕ ಬಿಲ್ವಾರ್ಚನೆ, ಕಲಶ, ಗಂಧ ಜಪ, ಅಂಗಪ್ರದಕ್ಷಿಣೆ ಮೊದಲಾದ ವಿಧಿಗಳು ವಿಧ್ಯುಕ್ತವಾಗಿನಡೆಯುತ್ತವೆ. ಇದೇ ರೀತಿಯಾಗಿ ಶ್ರೀಕ್ಷೇತ್ರದ ಇತರ ದೇವ—ದೈವತಗಳಿಗೂ ಪೂಜಾದಿಗಳು ನೆರವೇರುತ್ತವೆ. ಅಣ್ಣಪ್ಪನ ಗುಡಿಯು ಹತ್ತಿರದ ಚಿಕ್ಕಬೆಟ್ಟದ ಮೇಲಿದ್ದು, ಮೆಟ್ಟಲುಗಳನ್ನು ಏರಿ ಹೋಗಬೇಕು. ಆದರೆ, ಇದು ಪರಿಸರವು ಅತ್ಯಂತ ಪವಿತ್ರವಾಗಿರಬೇಕಾಗಿರುವುದರಿಂದ ಮಹಿಳೆಯರೂ, ಎಳೆಯ ಮಕ್ಕಳೂ ಮೇಲೇರಬಾರದೆಂಬ ನಿಯಮವಿದೆ. ಈ ಅಣ್ಣಪ್ಪನಿಗೂ ಕ್ರಮವಾದ ಪೂಜಾವಿಧಿಗಳು ನಡೆಯುತ್ತವೆ.

ಶ್ರೀ ಕ್ಷೇತ್ರದ ವಿವಿಧ ದೇವ ದೈವತಗಳಿಗೆ ಉತ್ಸವಾದಿಗಳು ಜರಗುತ್ತವೆ. ಕಾರ್ತಿಕಬಹುಳ ೧೦ರಿಂದ ೧೫ರ ವರೆಗೆ ಲಕ್ಷದೀಪೋತ್ಸವವು ನಡೆಯುತ್ತದೆ. ಇಲ್ಲಿನ ದೀಪೋತ್ಸವ ಮುಗಿದ ಬಳಿಕವೇ ಕದ್ರಿಯ ದೀಪೋತ್ಸವ ನಡೆಯುವುದು ಸಂಪ್ರದಾಯವಾಗಿ ಬಂದಿದೆ.

ಮೇಷ ಸಂಕ್ರಮಣದ ದಿನ ಧ್ವಜಾರೋಹಣವಾಗಿ ಧರ್ಮದೇವತೆಗಳಿಗೆ ನೇಮೋತ್ಸವ, ಶ್ರೀ ಮಂಜುನಾಥ ಸ್ವಾಮಿಗೆ ರಥೋತ್ಸವವೂ, ಇತರ ದೇವತಾ ವಿನಿಯೋಗಗಳೂ ಒಂಭತ್ತು ದಿವಸಗಳ ವರೆಗೆ ನಡೆಯುವುದು.

ಶಿವರಾತ್ರಿಯ ದಿನ ಶ್ರೀಸ್ವಾಮಿಗೆ ರಥೋತ್ಸವವೂ, ಶಿವರಾತ್ರಿ ಬೆಟ್ಟದಲ್ಲಿ ಶ್ರೀಸ್ವಾಮಿಯ ಉತ್ಸವಮೂರ್ತಿ ಪೂಜೆಯೂ ನಡೆಯುತ್ತವೆ.

ನವರಾತ್ರಿಗಳಲ್ಲಿ ಅಮ್ಮನವರಿಗೆ ಉತ್ಸವ ಮತ್ತು ಬ್ರಾಹ್ಮಣ ಸಂತರ್ಪಣೆಗಳು ನಡೆಯುತ್ತವೆ. ಕೊನೆಯ ದಿನ ಬ್ರಾಹ್ಮಣ ಮುತ್ತೈದೆಯರಿಗೆ ಸೀರೆಗಳನ್ನು ದಾನ ನೀಡುವ ಸಂಪ್ರದಾಯ ನಡೆದುಬಂದಿದೆ.

ವೃಷಭಮಾಸದ ಹತ್ತನೆಯ ದಿನ ಧ್ವಜ ಇಳಿಸುತ್ತಾರೆ. ಅಂದು ಶ್ರೀ ಸ್ವಾಮಿಗೆ ವಿಶೇಷ ಪೂಜೆ, ಉತ್ಸವ ಮತ್ತು ಆಂಧನೆಗಳು ನಡೆಯುತ್ತವೆ.

ವರ್ಷದಲ್ಲಿ ಎರಡು ಬಾರಿ ಶ್ರೀ ಕ್ಷೇತ್ರದ ದೈವತಗಳಿಗೆ ನಡಾವಳಿಗಳು ಸಲ್ಲಿಕೆಯಾಗುತ್ತವೆ.

ಶ್ರೀ ಚಂದ್ರನಾಥ ಸ್ವಾಮಿಗೂ ವಿಧ್ಯುಕ್ತವಾಗಿ ಪೂಜೆ—ಪುನಸ್ಕಾರಗಳೂ ಉತ್ಸವಾದಿಗಳೂ ನಡೆಯುತ್ತಿರುತ್ತವೆ.

THE PRESS

for NEAT CLEAR ARTISTIC PRINTING

NAVAYUGA PRESS

UDIPI

Printers for—

NAVAYUGA Weekly

We undertake all kinds of Bookwork, job work etc.

Proprietors:

NAVAYUGA ENTERPRISE LTD.

Regd. Office : PALUKOTE, UDIPI, S. K.

ಕನ್ನಡದಲ್ಲಿ ಅಪರೂಪವಾದ ಪುಸ್ತಕ

ಸ್ವಪ್ನಲೋಕ

ಮನೋವಿಶ್ಲೇಷಣದ ಬೆಳಕಿನಲ್ಲಿ ಕನಸುಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ವಿವರಗಳನ್ನೊಳಗೊಂಡ 'ಕಾರ್ತಿಕೇಯ.'

ಮುಂಚಿತ ಕಿರುಹೊತ್ತಿಗೆ ಬೆಲೆ 0—50

○ ○ ○

ದಿ। ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ ಪ್ರಸಂಗ ಪುಸ್ತಕಗಳು

ಸಾಹಸ ಭೀಮ ವಿಜಯ	0-50
ವಾಲಿ ಸುಗ್ರೀವ (ದುರಂತ ಯಕ್ಷಗಾನ ನಾಟಕ)	0-50
ಲತ್ತ ಪಗಡೆ	0-40
ಭಾರತದ ಗುರುಕುಲ	0-40
ಭರತೇಶ ದಿಗ್ವಿಜಯ	0-50

ಪ್ರತಿ ಪುಸ್ತಕಕ್ಕೂ ಬುಕ್ ಪೋಸ್ಟಿನಿಂದ ಕಳಿಸಲು 0-30 ಪೈಸೆ ಅಂಚೆ ವೆಚ್ಚ.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್) ಉಡುಪಿ, ದ. ಕ.

ಕೃಷಿರಂಗ

ಭಾಗ್ಯದ ಬೆಳೆ ಅನಾನಸು

ಹಾರೂಗಾರ ಶಿವರಾಮ ಹೆಗಡೆಯವರೊಡನೆ ಸಂದರ್ಶನ

"ನಮಸ್ಕಾರ ಶ್ರೀ ಶಿವರಾಮ ಹೆಗ್ಗಡೆಯವರಿಗೆ"

"ನಮಸ್ಕಾರ"

"ಅನಾನಸ ಬೇಸಾಯದ ವಿಚಾರವಾಗಿ ತಮ್ಮಿಂದ ಕೆಲವೊಂದು ಮಾಹಿತಿ ಪಡೆದುಕೊಂಡು ಅದನ್ನು ನಮ್ಮ ಓದುಗರಿಗೂ ತಿಳಿಸಿಕೊಡಬೇಕೆಂದಿದ್ದೇನೆ. ನಮ್ಮಲ್ಲಿ ಇತ್ತೀಚಿನ ಕೆಲ ವರ್ಷಗಳಲ್ಲಂತೂ ಅನಾನಸ ಬೇಸಾಯದ ಬಗೆಗೆ ವಿಶೇಷವಾದ ಆಸಕ್ತಿ, ಉತ್ಸಾಹ ಕಂಡುಬರುತ್ತಿರುವದು ಸಮಾಧಾನದ ಸಂಗತಿ. ಅದರಲ್ಲಿಯೂ ನೀವಂತೂ ನಿಮ್ಮ ಅಡಿಕೆ ಭತ್ತದ ಬೇಸಾಯದ ಜತೆಯಲ್ಲಿಯೇ ಅನಾನಸಿನ ಬೆಳೆಯನ್ನೂ ಯಶಸ್ವಿಯಾಗಿ ಬೆಳೆಯಿಸಿ ಪವಾಡವನ್ನೇ ಮಾಡಿ ತೋರಿಸಿದ್ದೀರಿ. ಅದಕ್ಕಾಗಿ ನಾನು ನಿಮ್ಮನ್ನು ಅಭಿನಂದಿಸದೆ ಇರಲಾರೆ. ನಿಮಗೆ ಮೊಟ್ಟಮೊದಲಿಗೆ ಅನಾನಸು ಬೆಳೆ ಬೆಳೆಯಿಸಬೇಕೆಂಬ ವಿಚಾರ ಬಂದುದು ಹೇಗೆ?"

"ಅನಾನಸು ಬೆಳೆಯಿಸಬೇಕೆಂಬ ವಿಚಾರವನ್ನು ನನ್ನಲ್ಲಿ ಮೂಡಿಸಿದವರು ಶಿರಸಿಯ ಕಾಮಧೇನು ಡೇರಿ ಮತ್ತು ಫ್ರುಟ್ ಪ್ರೊಸೆಸಿಂಗ್ ಸೊಸೈಟಿಯ ಸ್ನೇಹಿತರು. ಈ ದಿಸೆಯಲ್ಲಿ ನಾನು ಕಾರ್ಯರಂಗಕ್ಕಿಳಿಯಲು ಕಾರಣಗಳು ಮುಖ್ಯವಾಗಿ ಎರಡು. ಅನಾನಸ ಬೇಸಾಯದ ವಿಷಯವಾಗಿ ವಿಶೇಷ ಅಧ್ಯಯನ ಮಾಡಿದವರೂ ನನ್ನ ಆತ್ಮೀಯರೂ ಆದ ಶ್ರೀಮಾನ್ ಎಸ್. ಜಿ. ಹೂಕಪ್ ಹೆಗಡೆಯವರ ಪ್ರೋತ್ಸಾಹ ಮೊದಲನೆಯ ಕಾರಣ. ಎರಡನೆಯದ ನನ್ನ ಪ್ರಾಯೋಗಿಕ ಪ್ರವೃತ್ತಿಶೀಲ ಮನಸ್ಸು. ಈ ಬೇಸಾಯವನ್ನು ನಾನು ಮಾದರಿಯಾಗಿ ಮಾಡಿತೋರಿಸಬೇಕು ಎಂಬ ನೈತಿಕವಾದ ಛಲ!"

"ನಿಜ; ಬೇಸಾಯವನ್ನೇ ಆಗಲಿ, ಬದುಕನ್ನೇ ಆಗಲಿ—ಆಹ್ವಾನವೆಂದು ಸ್ವೀಕರಿಸಬೇಕೇ ಹೊರತು ಅಸಹಾಯಕರಾಗಿ ಅಲ್ಲ. ನೀವು ಹೊಸದಾಗಿ ಈ ಕೃಷಿ ಪ್ರಾರಂಭಿಸಿದಾಗ ಎದುರಾದ ಎಡರುತೊಡರುಗಳ ಕುರಿತು ಸ್ವಲ್ಪ ವಿವರಣೆ ನೀಡುವಿರಾ?"

"ಯಾವದೇ ಕೆಲಸವನ್ನೇ ಆಗಲಿ ಹೊಸದಾಗಿ ಪ್ರಾರಂಭಿಸಿದಾಗ ಅನೇಕ ತೊಂದರೆಗಳನ್ನನುಭವಿಸಬೇಕಾಗುತ್ತದೆಂಬುದು ನನಗೆ ಗೊತ್ತಿತ್ತು. ನನ್ನ ಮನಃಪ್ರವೃತ್ತಿ ಅಂತಹ ಹೋರಾಟಕ್ಕೆ ಸಿದ್ಧವಾಗಿಯೇ ಇತ್ತು. ಹಾಗಾಗಿಯೇ ತೊಂದರೆಗ ನನ್ನನ್ನು ಅಧೀರನನ್ನಾಗಿ ಮಾಡ ...ಸ ಬೇಸಾಯ ಎಂದೊಡನೆಯೆ ...ರು ಬೇರೆ ಬೇರೆ ರೀತಿಯ ...ರಲಾರಂಭಿಸಿತು. ತೀವ್ರ ನಷ್ಟ ...ಸಬೇಕಾಗುತ್ತದೆ ಎಂದವರಿದ್ದರು. ಹಣ ಕಳೆದುಕೊಂಡು ಕೈಸುಟ್ಟು ...ಕಾಗುತ್ತದೆ ಎಂದವರಿದ್ದರು. ...ನು ಸೊಸೈಟಿಯನ್ನು ಮೊದಲುಗೊಂಡು ನನ್ನ ಬೇಸಾಯಕ್ರಮವನ್ನೇ ಟೀಕಿಸುವವರೆಗೂ ವಿಷಯ ಮುಂದುವರಿಯಿತು. ಆಗ ನನಗೆ ಶ್ರೀರಕ್ಷೆಯಾಗಿ ಉಳಿದುದು ನನ್ನ ಮನೋನಿರ್ಧಾರವೊಂದೇ. ನಷ್ಟವಾದರೆ ಹೇಗಾಗುತ್ತದೆ. ಎಷ್ಟಾಗುತ್ತದೆ—ನೋಡಿಯೇ ಬಿಡೋಣ ಎಂದು ಅವರ ಟೀಕೆಗಳೆಲ್ಲವನ್ನೂ ಆಹ್ವಾನವೆಂದೇ ಸ್ವೀಕರಿಸಿ ಈ ಪ್ರಯೋಗಕ್ಕೆ ಮನಸ್ಸು ಹಾಕಿದೆ."

'ನೀವು ನಿಮ್ಮ ಈ ಪ್ರಯೋಗದಲ್ಲಿ ಯಶಸ್ಸುಗಳಿಸಿದ್ದೀರಿ ಎಂದು ನನ್ನ ಅಭಿಪ್ರಾಯ. ನೀವೇನೆನ್ನುವಿರಿ?'

'ಈ ಪ್ರಶ್ನೆಗೆ ನಾನು ಉತ್ತರಿಸುವದು ಕಷ್ಟ. ನೀವು ಈಗ ತಾನೇ ನಮ್ಮ ಅನಾನಸ ತೋಟ ನೋಡಿ ಬಂದಿದೀರಿ. ನಿಮಗೇನೆನಿಸುತ್ತದೆ? ನಾನ ಸಂಪೂರ್ಣ ಯಶಸ್ವಿಯಾಗಿದ್ದೇನೆ ಎಂದು ಹೇಳಲಾರೆ. ಆದರೆ ಶ್ರದ್ಧೆಯಿಟ್ಟು ಸಾಕಷ್ಟು ಪ್ರಯತ್ನ ಮಾಡಿದ್ದೇನೆ. ನನ್ನ ಪ್ರಯತ್ನವೇ ನನಗೆ ಯಶಸ್ಸು ತಂದು ಕೊಡುತ್ತದೆ ಎಂದು ನಂಬಿದವ ನಾನ. ಆದರಿಷ್ಟು ಮಾತ್ರ ಖರೆ—ನನ್ನನ್ನು, ನನ್ನ ಬೇಸಾಯವನ್ನು ಅಂದು ಟೀಕಿಸುತ್ತಿದ್ದ ಜನ ಇಂದು ಬಾಯಿ ಮುಚ್ಚಿ ಕುಳಿತಿದ್ದಾರೆ.'

'ನೀವು ಅನುಸರಿಸಿದ ಬೇಸಾಯ ಕ್ರಮದ ಕುರಿತು ಅಷ್ಟು ಮಾಹಿತಿ ತಿಳಿಸುವಿರಾ?'

'ಬೇಸಾಯಕ್ಕೆ ಸಂಬಂಧಿಸಿದ ಎಲ್ಲ ಮಾಹಿತಿಯನ್ನು ನಾನು ಕಾಮಧೇನು ಸೊಸೈಟಿಯಿಂದ ಪಡೆದುಕೊಂಡಿದ್ದೇನೆ. ಬೆಳೆಯ ರಕ್ಷಣೆಯ ಕುರಿತು ಹಾರ್ಟಿಕಲ್ಚರ ಸೊಸೈಟಿ ಅಧಿಕಾರಿಗಳ ನೆರವು ನನಗೆ ಸಿಕ್ಕಿದೆ. ನಮ್ಮಲ್ಲಿಯ ಮಣ್ಣು ಮತ್ತು ಹವಾಗುಣ ಈ ಕೃಷಿಗೆ ಅನುಕೂಲವಾಗಿದೆ. ಸೊಸೈಟಿಯಿಂದ ಪೂರೈಸಲಾಗುವ ಸಸಿಗಳ ಕುರಿತು ನಾನು ಅತ್ಯಂತ ಸಮಾಧಾನ ಪಟ್ಟಿದ್ದೇನೆ. ಕೆಲವೊಂದು ತೊಂದರೆಗಳ ದೆಸೆಯಿಂದ ಸಪ್ಟಂಬರ್ ಕೊನೆಯಲ್ಲಿ ನೆಟ್ಟಿದ್ದರೂ, ನೆಟ್ಟ ಮೇಲೆ ಮಳೆಯಾಗದೆ ಇದ್ದರೂ ಸಹಿತ ಒಂದೇ ಒಂದು ಸಸಿಯು ಸಾಯದೆ ಇದ್ದುದನ್ನು ಕಂಡು ನನಗೇ ಆಶ್ಚರ್ಯವಾಗಿದೆ. ನೆಡುವಾಗ ದಡ್ಡಿಗೊಬ್ಬರವನ್ನೂ ಆ ಮೇಲೆ ಎರಡು ಕಂತುಗಳಲ್ಲಿ ರಾಸಾಯನಿಕ ಗೊಬ್ಬರವನ್ನೂ ಕೊಟ್ಟಿದ್ದೇನೆ. ಎಪ್ರಿಲ್ ಮೇ ತಿಂಗಳಿನಲ್ಲಿ ಎರಡು ವಾರಕ್ಕೊಂದಾವರ್ತಿ ನೀರು ಹಾಕಿದ್ದೇನೆ.'

'ಈಗ ನಿಮ್ಮ ತೋಟದಲ್ಲಿ ಪೂರ್ತಿ ಫಸಲು ಬಂದಿದೆಯೇ?'

'ಇಲ್ಲ. ಶೇಕಡಾ ಅರವತ್ತು ಕುಂಡಿಗೆ ಬಂದಿದೆ. ಬರುವ ಡಿಸೆಂಬರ್ ಅಂತ್ಯದೊಳಗೆ ಪೂರ್ತಿ ಒಂದು ಸಲ ಬೆಳೆಕೊಯ್ಲು ಆಗಬಹುದು.'

'ಮತ್ತೆ ಯಾವ ಯಾವ ಬೆಳೆಯನ್ನು ಅನಾನಸಿನೊಂದಿಗೆ ಬೆಳೆಸಬಹುದೆಂದು ನಿಮ್ಮ ಅಭಿಪ್ರಾಯ?'

"ಅದು ಬೇಸಾಯಗಾರನ ಕುಶಲತೆಯನ್ನವಲಂಬಿಸಿ ಇದೆ. ಅನಾನಸಿಗೆ ತೊಂದರೆಯಾಗದ ಹಾಗೆ ಜೋಳ, ಮೆಣಸುಗಳನ್ನು ಬೆಳೆಸಬಹುದು."

"ಇನ್ನೊಂದು ಮಾತ ಶ್ರೀ ಹೆಗಡೆಯವರೆ, ಈ ತೋಟಕ್ಕಾಗಿ ನೀವು ಮಾಡಿದ ಖರ್ಚು ಹಾಗೂ ಅದರಿಂದ ನಿಮಗೆ ಬಂದ ಉತ್ಪನ್ನ ಇವುಗಳ ಬಗ್ಗೆ ಏನೆನ್ನುವಿರಿ?"

"ಸರಿಯಾದ ಪ್ರಶ್ನೆ ಕೇಳಿದಿರಿ. ನಾನ ಪ್ರಾರಂಭದಲ್ಲಿ ಆಯ್ದುಕೊಂಡ ಮುಕ್ಕಾಲು ಎಕರೆ ಕ್ಷೇತ್ರದಲ್ಲಿ ನೆಟ್ಟ ಸಸಿಗಳ ಆರುಸಾವಿರದಾರುನೂರಾ ಅರವತ್ತೆರಡು. ಈ ಬೇಸಾಯಕ್ಕೆ ನಾನು ಖರ್ಚುಮಾಡಿದ್ದು ಒಟ್ಟು ಎರಡುಸಾವಿರದ ಆರನೂರು ರೂಪಾಯಿಗಳು. ಈಗಾಗಲೇ ನಾನು ಪಡೆದ ಉತ್ಪನ್ನ ಮೂರೂವರೆ ಸಾವಿರ ರೂಪಾಯಿ. ಡಿಸೆಂಬರ ಅಂತ್ಯದೊಳಗೆ ಮುಗಿಯುವ ಮೊದಲಕೊಯ್ಲಿಗೆ ಇನ್ನೂ ಎರಡು ಸಾವಿರದ ಮುನ್ನೂರ ರೂಪಾಯಿ ಉತ್ಪನ್ನ ಬರುವ ನಿರೀಕ್ಷೆಯಿದೆ. ಸಸಿಗಳಿಂದ ಬರುವ ಆದಾಯ ಈ ಲೆಕ್ಕಕ್ಕೆ ಸೇರಿಸಿಲ್ಲ."

"ಸಾಮಾನ್ಯವಾಗಿ ಅನಾನಸು ಇಷ್ಟೊಂದು ಲಾಭದಾಯಕ ಉದ್ಯಮ ಎಂಬ ಕಲ್ಪನೆಯೇ ಬರುವದಿಲ್ಲ ಅಲ್ಲವೇ? ನೀವು ಸ್ವತಃ ಮಾಡಿ ನಮ್ಮ ಕೃಷಿಕರಿಗೆ ಮೇಲ್ಪಂಕ್ತಿ ಹಾಕಿಕೊಟ್ಟಿದ್ದೀರಿ. ಹೊಸದಾಗಿ ಈ ಬೇಸಾಯ ಮಾಡಬಯಸುವವರಿಗೆ ನಿಮ್ಮ ಸಲಹೆ ಏನು? ಅವರಿಗೇನಾದರೂ ನೀವು ಸಂದೇಶ ಕೊಡಬಯಸುತ್ತೀರಾ?"

"ಸಂದೇಶ ನೀಡುವಷ್ಟು ನಾನಿನ್ನೂ ದೊಡ್ಡವನಾಗಿಲ್ಲ. ನಾನಿನ್ನೂ ಕೃಷಿರಂಗದಲ್ಲಿ ವಿದ್ಯಾರ್ಥಿ ಮಾತ್ರ. ಕಲಿತುಕೊಳ್ಳಬೇಕಾದುದು ಇನ್ನೂ ಬಹಳವಿದೆ. ಆದರಿಷ್ಟು ಮಾತ್ರ ನಿಜ. ನಮ್ಮಲ್ಲಿ ಇದನ್ನು ಸಾರ್ವತ್ರಿಕವಾಗಿ ಬೆಳೆಸಬಹುದು. ಇದರಿಂದ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಆದಾಯ ಪಡೆಯುವದು ಸಾಧ್ಯವಿದೆ. ನಮ್ಮ ಬೇಸಾಯಗಾರರೆಲ್ಲರೂ ಈ ಕೃಷಿ ಆರಂಭಿಸಿದರೆಂದರೆ ನಮ್ಮ ಆರ್ಥಿಕ ಜೀವನದಲ್ಲಿ ಒಂದು ಮಹತ್ತರ ಕ್ರಾಂತಿಯೇ ಆದೀತೆನ್ನಿಸುತ್ತದೆ. ಹೊಸ ಹೊಸ ವಿಧಾನದಲ್ಲಿ ಬೇರೆ ಬೇರೆ ಹಣ್ಣುಹಂಪಲುಗಳನ್ನು ಬೆಳೆಸುವ ಪ್ರವೃತ್ತಿ ನಮ್ಮಲ್ಲಿ ಬರಬೇಕು. ಇಲ್ಲದಿದ್ದರೆ ನಮ್ಮ ಆರ್ಥಿಕ ಪ್ರಗತಿ ಅಸಾಧ್ಯ. ಯಾವ ಕೃಷಿಯನ್ನೇ ಆಗಲಿ, ಆರ್ಥಿಕ ದೃಷ್ಟಿಯಿಂದ ಲಾಭದಾಯಕವಾಗಿ ಮಾಡಬಲ್ಲೆ ಎಂಬ ಆತ್ಮವಿಶ್ವಾಸ ಬೇಕು. ಅದು ಹೆಚ್ಚಿದಷ್ಟೂ ನಮ್ಮ ರೈತರಿಗೆ ಕ್ಷೇಮ."

"ತುಂಬಾ ಸಂತೋಷ ಶ್ರೀ ಹೆಗಡೆಯವರೇ, ಅನಾನಸಿನ ಕುರಿತು ಉಪಯುಕ್ತವಾದ ನಿಮ್ಮ ಅಭಿಪ್ರಾಯ ತಿಳಿಸಿದಿರಿ. ತುಂಬಾ ಉಪಕಾರವಾಯಿತು ನಿಮ್ಮಿಂದ. ನಮಸ್ಕಾರ."

"ನಮಸ್ಕಾರ"

ಸಂದರ್ಶನ: ಗೋಪಾಲಕೃಷ್ಣ ಹೆಗಡೆ
ಕೇರೀಮನೆ.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಭಾರತೀಯ ಸ್ವಾತಂತ್ರ್ಯ ಶಿಲ್ಪಿಗಳು

ಲೇ:— ಕೆ. ಪಿ. ಎಸ್. ಮೆನನ್,
ಭಾರತ-ಸೋವಿಯತ್ ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷರು.

ಮದರಾಸಿನ ಕ್ರಿಶ್ಚಿಯನ್ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ನನಗೆ ಮೊಟ್ಟ ಮೊದಲನೆಯ ಸಲ ಲೆನಿನ್ನರ ಹೆಸರನ್ನು ಕೇಳುವ ಸಂದರ್ಭ ಒದಗಿತ್ತು. ರಶಿಯದಲ್ಲೊಂದು ಕ್ರಾಂತಿಯು ಸಂಭವಿಸಿತೆಂದೂ, ಅದಕ್ಕೆ ಲೆನಿನ್ ಎಂಬಾತನು ಧುರೀಣರೆಂದೂ ನಮಗೆ ತಿಳಿಯಿತು. ಅದೇ ರೀತಿಯಾಗಿ, ಇನ್ನೂ ಕೆಲವು ವರ್ಷಗಳ ಮೊದಲು ಚೀಣಾದಲ್ಲೂ ಕ್ರಾಂತಿಯುಂಟಾಯಿತೆಂದೂ, ಅದಕ್ಕೆ ಸನ್ ಯಾತ್-ಸೆನ್ ಎಂಬಾತನು ನೇತೃತ್ವ ವಹಿಸಿದ್ದರೆಂದೂ ನಮಗೆ ಗೊತ್ತಾಯಿತು. ಆ ಸಮಯದಲ್ಲಿ ರಶಿಯವು ನಮಗೆ ಅತ್ಯಂತ ದೂರವಾದ ನಾಡೆನಿಸಿತ್ತು. ಅಕ್ಟೋಬರು ಮಹಾ ಕ್ರಾಂತಿಯ ಮಹತ್ವವನ್ನು ನಾವು ಆಗ ಮನಗಂಡಿರಲಿಲ್ಲ.

ಈ ಶತಮಾನದ ಆದಿಭಾಗದಲ್ಲಿ ಭಾರತೀಯ ಪತ್ರಿಕೆಗಳ ಸದ್ದಿಗಾರರು ಯಾರೂ ಹೊರದೇಶಗಳಲ್ಲಿ ಇರಲಿಲ್ಲ. ಭಾರತದ ಪತ್ರಿಕೆಗಳಿಗೆ ಪಾಶ್ಚಾತ್ಯ ವಾರ್ತಾ ಸಂಸ್ಥೆಗಳಿಂದಲೇ— ಬಹು ಮಟ್ಟಿಗೆ ಬ್ರಿಟಿಷ್ ವಾರ್ತಾಸಂಸ್ಥೆಗಳಿಂದಲೇ— ಅಗತ್ಯ ಸಮಾಚಾರಗಳು ದೊರೆಯುತ್ತಿದ್ದುವು. ಕ್ರಾಂತಿಯ ಬಗೆಗೆ ಅವುಗಳ ಧೋರಣೆಯಲ್ಲಿ ಎಷ್ಟು ಮಾತ್ರವೂ ಸ್ನೇಹಭಾವವಿರಲಿಲ್ಲ. ಆದರೂ ರಶಿಯದಲ್ಲಿ ಪ್ರಚಂಡ ಕ್ರಾಂತಿ ಸ್ಫೋಟನೆಯಾಯಿತೆಂಬುದನ್ನೂ, ಅದರ ಪರಿಣಾಮಗಳು ರಶಿಯಕ್ಕೆ ಮಾತ್ರವಷ್ಟೇ ಸೀಮಿತವೆಂಬುದನ್ನೂ, ಈ ವಾರ್ತಾಸಂಸ್ಥೆಗಳ ವರದಿಗಳನ್ನು ಓದಿಯೇ ನಾವು ಗ್ರಹಿಸಿಕೊಂಡೆವು. ಕ್ರಾಂತಿಯು ಸಾಮ್ರಾಜ್ಯವಾದಕ್ಕೆ ವಿರುದ್ಧವಾಗಿ ಇದ್ದುದರಿಂದ, ಅದು ಹೇಗಾದರೂ ಭಾರತದ ಸ್ವಾತಂತ್ರ್ಯ ಚಳವಳಿಗೂ ಕೂಡ ಸಹಾಯಕವಾಗಬಹುದೆಂದೂ ಕೂಡ ನಾವು ಭಾವಿಸಿಕೊಂಡೆವು. ಆ ವೇಳೆಗಾಗಲೇ ಮಹಾತ್ಮ ಗಾಂಧಿಯವರು ಭಾರತದ ರಾಜಕೀಯ ರಂಗದಲ್ಲಿ ಕಾಣಿಸಿಕೊಂಡಿದ್ದು, ನಾಡಿನ ರಾಜಕೀಯ ಭವಿಷ್ಯಕ್ಕೆ ಹೊಸ ತಿರುವು ಉಂಟಾಗುತ್ತಿತ್ತು.

ಲೋಕಮಾನ್ಯ ಟಿಳಕರು

ಭಾರತದಲ್ಲಿ ಆಗ ಮಹಾನಾಯಕರೆನಿಸಿದ್ದ ಲೋಕಮಾನ್ಯ ಬಾಲ ಗಂಗಾಧರ ಟಿಳಕರು ಪುಣೆಯಲ್ಲಿ "ಕೇಸರಿ" ಪತ್ರಿಕೆಯನ್ನು ನಡೆಸುತ್ತಿದ್ದರು. ಈ ದೇಶಭಕ್ತ ಪತ್ರಿಕೆಯು 1918ರ ಜನವರಿ ತಿಂಗಳಲ್ಲಿ "ರಶಿಯದ ನಾಯಕ ಮಹಾ ಲೆನಿನ್" ಎಂಬ ಶೀರ್ಷಿಕೆಯ ಒಂದು ಲೇಖನವನ್ನು ಬರೆಯಿತು. ಲೆನಿನ್ನರು 'ಶಾಂತಿ ಪ್ರತಿಪಾದಕರು' ಎಂಬ ವಾಸ್ತವಾಂಶಕ್ಕೆ ಟಿಳಕರು ವಿಶಿಷ್ಟ ಮಹತ್ವವನ್ನು ನೀಡಿದ್ದರು. 1920ರಲ್ಲಿ ಅವರು "ಕೇಸರಿ" ಪತ್ರಿಕೆಯಲ್ಲಿ ಬರೆದ ಇನ್ನೊಂದು ಲೇಖನದಲ್ಲಿ "ಸ್ವಯಂ ನಿರ್ಣಯಾಧಿಕಾರ ಸೂತ್ರದ ಬಗೆಗೆ ನಿಜವಾದ ನಿಷ್ಠೆಯುಳ್ಳ ಜನರು ಬೋಲ್ಶೆವಿಕರು ಮಾತ್ರವೇ" ಎಂದು ಸೂಚಿಸಿದ್ದರು.

ಲೋಕಮಾನ್ಯ ಟಿಳಕರ ಹೆಸರು ಲೆನಿನ್ನರಿಗೆ ಅಪರಿಚಿತವಾಗಿರಲಿಲ್ಲವೆಂಬ ಅಂಶವು ಈ ಸಂದರ್ಭದಲ್ಲಿ ಗಮನಾರ್ಹವಾದ ಸ್ವಾರಸ್ಯಕರ ವಿಷಯವಾಗಿದೆ. ಲೆನಿನ್ನರಿಗೆ ಭಾರತದ ವಿಷಯದಲ್ಲಿ ಸದಾ ಆಸಕ್ತಿ ಇದ್ದಿತು. 1905ರಲ್ಲಿ ಬ್ರಿಟಿಷರು ಬಂಗಾಳ ಪ್ರಾಂತವನ್ನು ಬಹುಮಟ್ಟಿಗೆ ಹಿಂದೂ ಮತ್ತು ಮುಸ್ಲಿಂ ಜನಸಂಖ್ಯೆಯುಳ್ಳ ಎರಡು ಪ್ರತ್ಯೇಕ ಪ್ರಾಂತಗಳಾಗಿ ವಿಭಜಿಸಿದರು. ಬ್ರಿಟಿಷರು ತಮ್ಮ "ವಿಭಜಿಸಿ ಆಳುವ" ನೀತಿಯ ಮೂಲಕ ಭಾರತದ ಮೇಲೆ ತಮ್ಮ ಪ್ರಾಬಲ್ಯ ನಡೆಸುತ್ತಿದ್ದರೆಂದು ಲೆನಿನ್ನರು ಆಗ ಬರೆದಿದ್ದರು.

1906ರಲ್ಲಿ ಬ್ರಿಟಿಷರ ಆತಳಕೆಯ್ಕೊಳಪಟ್ಟಿದ್ದ ಭಾರತದ ನ್ಯಾಯಾಲಯವು ಟಿಳಕರ ಮೇಲೆ ರಾಜದ್ರೋಹದ ಅಪಾದನೆಯನ್ನು ಹೇರಿ, ಅವರನ್ನು ಅನಾಗರಿಕ ಕಾರಾಗೃಹ ಶಿಕ್ಷೆಗೆ ಗುರಿಪಡಿಸಿತು. ಆ ನ್ಯಾಯಾಲಯದಲ್ಲಿ ಬ್ರಿಟಿಷ್ ನ್ಯಾಯದರ್ಶಿಗಳು (ಜ್ಯೂರರ್) ಟಿಳಕರನ್ನು ತಪ್ಪಿತಸ್ಥರೆಂದು ನಿರ್ಧರಿಸಿದರಾದರೂ, ಭಾರತೀಯ ನ್ಯಾಯದರ್ಶಿಗಳು ಅವರನ್ನು ನಿರಪರಾಧಿಯೆಂದೇ ತೀರ್ಮಾನಿಸಿದ್ದರು. ಟಿಳಕರ ಮೇಲೆ ವಿಧಿಸಲಾದ ಕ್ರೂರ ಶಿಕ್ಷೆಯ ವಿರುದ್ಧವಾಗಿ ಪ್ರತಿಭಟಿಸುತ್ತ, ಮುಂಬಯಿಯ ಗಿರಣಿ ಕೆಲಸಗಾರರು ಭಾರಿ ಮುಷ್ಕರವನ್ನು ನಡೆಸಿದರು. ಆ ಸಂದರ್ಭವಾಗಿ ಲೆನಿನ್ನರು ಹೀಗೆ ಬರೆದಿದ್ದರು: "ಭಾರತದ ಸಾಮಾನ್ಯ ಜನತೆಯು ತಮ್ಮ ಲೇಖಕರನ್ನೂ, ರಾಜಕೀಯ ಧುರೀಣರನ್ನೂ ರಕ್ಷಿಸುವುದಕ್ಕಾಗಿ ದಿಟ್ಟತನದಿಂದ ಪ್ರತಿಭಟಿಸಿ ಎದ್ದುನಿಲ್ಲತೊಡಗಿದ್ದಾರೆ.......... ರಶಿಯನ್ ಶೈಲಿಯ ಬ್ರಿಟಿಷ್ ಆಳಿಕೆಯು ಭಾರತದಲ್ಲಿ ಖಂಡಿತವಾಗಿಯೂ ಕೊನೆಗಾಣಲೇಬೇಕಾಗುವುದು."

ಲೆನಿನ್ನರು ಶಾಂತಿ ಮತ್ತು ಸ್ವಯಂ ನಿರ್ಣಯಾಧಿಕಾರ ಸೂತ್ರಗಳ ಪ್ರತಿಪಾದಕರಾಗಿದ್ದುದು, ಟಿಳಕರ ಮೇಲೆ ವಿಶೇಷ ಪ್ರಭಾವವನ್ನು ಬೀರಿತು. ಲೆನಿನ್ನರು ಹೊರಡಿಸಿದ ಮೊಟ್ಟಮೊದಲನೆಯ ಶಾಸನವು, ಯುದ್ಧವನ್ನು ಕೊನೆಗಾಣಿಸಬೇಕೆಂದು ಎಲ್ಲ ಯುದ್ಧಾಸಕ್ತ ಸರಕಾರಗಳಿಗೂ ಮತ್ತು ಜನತೆಗಳಿಗೂ ಕರೆಕೊಟ್ಟಿತು. ಲೆನಿನ್ನರ ದೃಷ್ಟಿಯಲ್ಲಿ ಆಗ ನಡೆಯುತ್ತಿದ್ದ ಯುದ್ಧವು ಕೇವಲ ಸಾಮ್ರಾಜ್ಯವಾದಿ ಯುದ್ಧವಾಗಿತ್ತು.

ಲೆನಿನ್ನರು ಹೊರಡಿಸಿದ ಇನ್ನೊಂದು ಶಾಸನವು ಎಲ್ಲ ಜನಾಂಗಗಳ ಸ್ವಯಂ ನಿರ್ಣಯಾಧಿಕಾರದ ಹಕ್ಕನ್ನು ಘೋಷಿಸಿತು. ಇದೇ ಸಮಯದಲ್ಲಿ ಅಮೆರಿಕಾಧ್ಯಕ್ಷ ವಿಲ್ಸನರೂ ಸ್ವಯಂ ನಿರ್ಣಯಾಧಿಕಾರ ಸಿದ್ಧಾಂತವನ್ನು ಘೋಷಿಸಿದರಾದರೂ, ಏಶಿಯ ಮತ್ತು ಆಫ್ರಿಕ ಖಂಡಗಳ ವಸಾಹತುವಾದದಡಿಯಲ್ಲಿ ಪರಿತಪಿಸುತ್ತಿದ್ದ ಜನಾಂಗಗಳಿಗೆ ಅದನ್ನು ಅನ್ವಯಿಸಲಿಚ್ಛೆಯನ್ನು ಈ ಸಿದ್ಧಾಂತದಿಂದ ದೂರವಿಡಲಾಯಿತು. ಸೋವಿಯತ್ ಒಕ್ಕೂಟವು ಮಾತ್ರವಷ್ಟೇ ಚೀಣದ ಮೇಲೆ ತನಗಿದ್ದ ಪ್ರದೇಶಾತೀತ ಅಧಿಕಾರಗಳನ್ನು ತ್ಯಜಿಸಿತು. ಆದುದರಿಂದ "ಸ್ವಯಂ ನಿರ್ಣಯಾಧಿಕಾರ ಸೂತ್ರದ ಬಗೆಗೆ ನಿಜವಾದ ನಿಷ್ಠೆಯುಳ್ಳ ಜನರು ಬೋಲ್ಶೆವಿಕರು ಮಾತ್ರವೇ" ಎಂದು ಟಿಳಕರು ಹೇಳಿದ್ದುದರಲ್ಲಿ ಆಶ್ಚರ್ಯವೇನೂ ಇಲ್ಲ.

ಲೆನಿನ್ನರು ಹೊರಡಿಸಿದ ಮೂರನೆಯ ಶಾಸನವು ಭೂಮಿಯ ಮೇಲೆ ಉಳುವವರಿಗಿರುವ ಹಕ್ಕನ್ನು ಸಮರ್ಥಿಸಿತು. ಈ ನಿರ್ಣಯದ ಪ್ರತಿಧ್ವನಿಗಳು ಏಶಿಯ ಮತ್ತು ಆಫ್ರಿಕ ಖಂಡಗಳ ಅತ್ಯಂತ ದೂರ ದೂರದ ಮೂಲೆಗಳಿಗೂ ಸಹ ವ್ಯಾಪಿಸಿ, ಮಿಲಿಯಗಟ್ಟಲೆ ಜನ ಶೋಷಿತ ಕಾರ್ಮಿಕರ ಮತ್ತು ರೈತರ ಮನಗಳಲ್ಲಿ ವಿಮೋಚನೆಯ ಆಶಾಕಿರಣವನ್ನು ಮೂಡಿಸಿದವು.

ಭಾರತ ದೇಶದಲ್ಲಿ ಬ್ರಿಟಿಷ್ ಸರಕಾರವು ಕೆಲವು ಸಂವಿಧಾನಾತ್ಮಕ ಸುಧಾರಣೆಗಳನ್ನು ಜಾರಿಗೆ ತರುವುದಕ್ಕೆ 1919ರಲ್ಲಿ ಮಾರ್ಗವನ್ನು ಉಂಟುಮಾಡಿದ ಪ್ರಮುಖ ಅಂಶಗಳಲ್ಲಿ ರಶಿಯನ್ ಕ್ರಾಂತಿಯೂ ಸಹ ಒಂದಾಗಿದ್ದಿತ್ತು.

ಆದು ಭಾರತದ ರಾಜಕೀಯ ಸಂಘರ್ಷಕ್ಕೆ ಸಾಮಾಜಿಕ—ಆರ್ಥಿಕ ಅಂತರಂಗವನ್ನು ಸಹ ನೀಡಿತು. ಒಂದು ಅರ್ಥದಲ್ಲಿ ಆರ್ಥಿಕ ಅಂಶವು ಅದರಲ್ಲಿ ಸದಾ ಇದ್ದೇ ಇತ್ತು. ಏಕೆಂದರೆ ಕಾಂಗ್ರೆಸ್ ಧುರೀಣರೆಲ್ಲರೂ, ವಿಶಿಷ್ಟವಾಗಿ ಮಹಾತ್ಮಾ ಗಾಂಧೀಜಿಯವರೂ, ಸ್ವಾತಂತ್ರ್ಯವು ಲಕ್ಷ್ಯಸಾಧನೆಗೆ ಒಂದು ಮಾರ್ಗವೆಂಬುದನ್ನೂ ಮತ್ತು ಬಡತನ, ರೋಗ, ಮೌಢ್ಯ, ನಿವಾರಿಸುವುದೇ ಲಕ್ಷ್ಯವೆಂಬುದನ್ನು ಮನಗಂಡಿದ್ದರು. ಆದರೆ, ಈ ಲಕ್ಷ್ಯವನ್ನು ಸುವ್ಯವಸ್ಥಿತವಾದ ಯೋಜನೆಯ ಮೂಲಕವೂ ಮತ್ತು ಸಮಾಜದ ಪುನಸ್ಸಂಘಟನೆಯ ಮೂಲಕವೂ ಮಾತ್ರವಷ್ಟೆ ಸಾಧಿಸಬಹುದೆಂಬ ಅಂಶವನ್ನು ಎಲ್ಲರಿಗಿಂತಲೂ ಹೆಚ್ಚಾಗಿ ಮನಗಂಡವರು ಜವಾಹರಲಾಲ ನೆಹರೂ ಅವರೇ.

ಗಾಂಧೀಜೀ

ಕ್ರಾಂತಿಯ ವಿಚಾರದ ಕಡೆಗೆ ಮಹಾತ್ಮ ಗಾಂಧೀಜೀಯವರ ಧೋರಣೆಯು ಹೆಚ್ಚು ಜಟಿಲವಾಗಿದ್ದಿತು. ಅವರು ಅತ್ಯಂತ ಮಹಾನ್ ಅಹಿಂಸಾ ಪ್ರವರ್ತಕರಾಗಿದ್ದರೆಂಬುದು ಇಡೀ ಜಗತ್ತಿಗೆ ತಿಳಿದಿದೆ. ರಶಿಯದಲ್ಲಿ ವ್ಯಾಪಕವಾಗಿ ಹಬ್ಬಿದ್ದ ಹಿಂಸಾಚರಣೆಗಳ ದೃಶ್ಯವು ಅವರಲ್ಲಿ ವಿಶೇಷ ಗಾಬರಿಯನ್ನು ಉಂಟುಮಾಡಿತು. ವಾಸ್ತವಿಕವಾಗಿ ಹೇಳುವುದಾದರೆ, ಕ್ರಾಂತಿಯ ಪ್ರಾರಂಭ ದೆಶೆಯಲ್ಲಿ ಅಲ್ಲಿ ರಕ್ತಪಾತವೇನೂ ಸಂಭವಿಸಲಿಲ್ಲ. ವಿದೇಶೀ ರಾಜ್ಯಶಕ್ತಿಗಳ ಸಹಾಯದಿಂದ, ಬೆಂಬಲದಿಂದ ಪ್ರತಿಕ್ರಾಂತಿಯು ತಲೆಯೆತ್ತಿದ ತರುವಾಯ ಮಾತ್ರವೇ; ಎಳೆಯ ರಾಜ್ಯದ ರಕ್ಷಣೆಗಾಗಿ, ಲೆನಿನ್ನರೂ ಅವರ ಅನುಯಾಯಿಗಳೂ ಹಿಂಸಾಚರಣೆಗೆ ಕೈಹಾಕಬೇಕಾಯಿತು. ಏಕೆಂದರೆ, 1918ರಲ್ಲಿ ರಶಿಯನ್ ಭೂಮಿಯ ಮೇಲೆ 14 ವಿದೇಶೀ ಸೇನೆಗಳು—ಅಮೆರಿಕೆಯೂ ಸೇರಿ—ಹೋರಾಟವನ್ನು ನಡೆಸುತ್ತಿದ್ದವು. ಕ್ರಾಂತಿಯಲ್ಲಿ ಹಿಂಸಾಚರಣೆ ಸಲ್ಲದೆಂದು ಮಹಾತ್ಮಾ ಗಾಂಧೀಜಿಯವರು ವಾದಿಸಿದರಾದರೂ, ಲೆನಿನ್ನರಂತಹ ಧೀರ ಮಹಾಶೀಲರನ್ನು ಒಳಗೊಂಡು ಅಸಂಖ್ಯ ಮಂದಿ ಸ್ತ್ರೀಪುರುಷರ ಬಲಿದಾನಗಳಿಂದ ಪವಿತ್ರಗೊಂಡ ಕ್ರಾಂತಿಯು ನಿರರ್ಥಕವಾಗಲಾರದೆಂದು ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಈ ಅದಮ್ಯ ಸ್ಫೂರ್ತಿಯು ನೇತೃತ್ವದಲ್ಲಿ ಇಡೀ ಪೀಳಿಗೆಯ ಜನರು ಅಂತಃಯುದ್ಧದಿಂದ ಉಂಟಾದ, ಪ್ರತಿಕ್ರಾಂತಿಯಿಂದ, ವಿದೇಶೀ ಹಸ್ತಕ್ಷೇಪದಿಂದ ಮತ್ತು ಎರಡು ಜಾಗತಿಕ ಯುದ್ಧಗಳಿಂದ ಉಂಟಾದ ನಂಬಲಸಾಧ್ಯವಾದ ತೊಂದರೆಗಳನ್ನು ಅನುಭವಿಸಿದರು.

ಜವಾಹರಲಾಲ್ ನೆಹರೂ

ಲೆನಿನ್ನರ ಕುರಿತು ನನಗೆ ಸ್ವತಃ ಪ್ರಥಮ ಪರಿಚಯ ದೊರೆತುದು ಜವಾಹರಲಾಲ್ ನೆಹರೂ ಅವರ ಕೃತಿಗಳ ಮೂಲಕವೇ. ಮಾರ್ಕ್ಸ್ ಮತ್ತು ಲೆನಿನ್ ಅವರುಗಳ ಕೃತಿಗಳಿಂದ ಅವರ ಮೇಲೆ ಗಾಢ ಪರಿಣಾಮ ಉಂಟಾಗಿದ್ದಿತು. 1927ರಲ್ಲಿ ನೆಹರೂರವರು ಮಾಸ್ಕೋಗೆ ಭೇಟಿಕೊಟ್ಟು, ಕ್ರಾಂತಿಯ ಹತ್ತನೆಯ ವಾರ್ಷಿಕೋತ್ಸವಾಚರಣೆಗೆ ಹಾಜರಾಗಿದ್ದರು. ಆ ವೇಳೆಗಾಗಲೇ ಲೆನಿನ್ನರು ದಿವಂಗತರಾಗಿ

(ಹನ್ನೊಂದನೇ ಪುಟ ನೋಡಿರಿ)

HOTEL SATKAR

Boarding, Lodging & Restaurant
Behind Corporation Office,
9 Mission Road — Bangalore—27.
Phone No.— 1 28337, 2 29887
Grams: HOST SATKAR
Vegetarian Cuisine
Attached Bath Rooms and Phones.
Running H and C water.
Moderate Charges
Railway Station, Laundry, Post office and Entertainment Area Nearby.
Large airy Rooms; Roof garden
Quiet, Calm Atmosphere
Personalised Service.

ಉಡುಪರ

"ಇತಿಹಾಸದ ಯಥಾರ್ಥತೆ"

(ಒಂದು ವಿವೇಚನೆ)

ಲೇಖಕರು: ಶ್ರೀ ಕುಂಜಿಬೆಟ್ಟು ಸುಬ್ರಹ್ಮಣ್ಯ ಕೆದ್ಲಾಯ.

ಯಾವುದೇ ಮುಂದುವರಿದ ದೇಶವೂ ಅದು ಇದ್ದಕ್ಕಿದ್ದಂತೆಯೇ ಆ ಸ್ಥಿತಿಯನ್ನು ತಲ್ಪಲಿಲ್ಲ. ಪ್ರತಿಯೊಂದು ದೇಶದ ನಾಗರಿಕತೆಗೂ ಒಂದು ಚಾರಿತ್ರಿಕ ಹಿನ್ನೆಲೆ ಇದ್ದೇ ಇರುತ್ತದೆ. ಆ ಹಿನ್ನೆಲೆಯನ್ನು ಅರಿಯಲು ನಮಗೆ ಬರೆದಿಟ್ಟ ಚರಿತ್ರೆಯಿಂದ ಸಹಾಯವಾಗುತ್ತದೆ. ಆದರೆ ದುರದೃಷ್ಟವಶಾತ್ ನಮ್ಮ ತುಳುನಾಡಿನ ಬಗೆಗೆ ಅಂತಹ ಶುದ್ಧವೂ ನಂಬಲರ್ಹವೂ ಆದ ಚರಿತ್ರೆ ಸಿಗದೇ ಇರುವುದರಿಂದ ನಾವು ಗತಕಾಲದ ವೈಭವವನ್ನಾಗಲೀ ಈ ನಾಡನ್ನು ಕಟ್ಟಿದ, ಆಳಿದ, ರಾಜರ ವಿಚಾರವನ್ನಾಗಲೀ ಇಲ್ಲಿಯ ಜಾತಿ ಮತಗಳ ಮೂಲದ ವಿಚಾರವನ್ನಾಗಲೀ ತಿಳಿಯಲು ಸಿಕ್ಕ ಅಲ್ಪಸ್ವಲ್ಪ ಆಧಾರಗಳಿಂದಲೇ ಸ್ವತಃ ಸಂಶೋಧನೆ ಮಾಡಬೇಕಾಗಿದೆ. ಈ ದಿಸೆಯಲ್ಲಿ ಕಾರ್ಯಮಾಡಿ ಅಂಶವನ್ನು ಶೋಧಿಸಲು ಯತ್ನಿಸಿ ಕನ್ನಡದಲ್ಲಿ ಪುಸ್ತಕವನ್ನೂ ಬರೆದವರಲ್ಲಿ ಮಾನ್ಯ ಡಾ. ಗುರುರಾಜಭಟ್ ಮತ್ತು ಡಾ. ಕೆ. ವಿ. ರಮೇಶ ಇವರು ಮುಖ್ಯರು. ಡಾ. ಗುರುರಾಜ ಭಟ್ಟರ 'ತುಳುನಾಡು' ಎಂಬ 1963ರಲ್ಲಿ ಪ್ರಕಟವಾದ ತುಳುನಾಡಿನ ಸಾಮಾಜಿಕ ಇತಿಹಾಸದಲ್ಲಿ ಒಂದು ಸಂಶೋಧನಾತ್ಮಕ ವಿವೇಚನೆ ಎಂಬ ಗ್ರಂಥದ ಮೇಲೆ ಈಗ ಶ್ರೀ ಸೀತಾರಾಮಾಚಾರ್ಯ ನಾರಾಯಣಾಚಾರ್ಯ ಉಡುಪರೆಂಬ ವಿದ್ವಾಂಸರು ವಿಮರ್ಶೆ ಬರೆದುದು ಸಂತೋಷದ ಸಂಗತಿಯಾಗಿದೆ. ಈ ಗ್ರಂಥದಲ್ಲಿ ಉಡುಪರು ಬರೆದ ('ಇತಿಹಾಸದ ಯಥಾರ್ಥತೆ') ಹಲವು ಸಂಶಯ ಹುಟ್ಟಿಸುವ ವಿಚಾರಗಳನ್ನು ವಿವೇಚಿಸಲು ಯತ್ನಿಸಲಾಗಿದೆ.

ಶ್ರೀಯುತ ಉಡುಪರು ತಮ್ಮ ಪುಸ್ತಕದ ಪುಟ 12ರಲ್ಲಿ ಹೀಗೆ ಹೇಳುತ್ತಾರೆ. "ನಕ್ಸಲಬಾರಿ ಟೈಪಿನ ಗುಂಡಾ ಜನರಿಗೆ ಪೋಲೀಸ್ ಖಾತೆ, ಮೆಜಿಸ್ಟ್ರೇಟ್ ಕೋರ್ಟು, ಜೈಲು, ಇಂಡಿಯನ್ ಪಿನಲ್‌ಕೋಡು ಇತ್ಯಾದಿ ಇರಬಾರದೆಂದು ಅಪೇಕ್ಷೆ... ಈ ತರದ ತಾಮಸೀ ಪ್ರವೃತ್ತಿ ಮೊದಲಿಂದಲೂ ಇರುತ್ತಿದ್ದು ಇಂಥವರಿಗೆ ಇಂಗ್ಲೀಷರು ಬಂದ ಮೇಲೆ ಸ್ವರ್ಗ ಸಿಗವಾಯಿತು... ಇಂಗ್ಲೀಷರು ಈ ನಮ್ಮ ನಾಡಿಗೆ ಬಂದು ರಾಜ್ಯಭಾರ ನಡೆಸುವಾಗ ಸ್ವತಃ ಅವರು ಸ್ವಮತ ಪ್ರಚಾರ ದೃಷ್ಟಿಯಿಂದಲೂ, ರಾಜಕಾರಣದ ದೃಷ್ಟಿಯಿಂದಲೂ ಭಾರತದ ಬ್ರಾಹ್ಮಣ ಮುಖಂಡತ್ವವನ್ನು ಅಳಿಸಬೇಕೆಂದು ಇತಿಹಾಸ ಭೂಗೋಲ ಸಂಶೋಧನೆಯ ನೆವಮಾಡಿ ನಮ್ಮ ಶಾಸ್ತ್ರಗಳನ್ನೂ ಹೊಕ್ಕು ಅದರಲ್ಲಿರುವ ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳದೇ ಅಸಂಬದ್ಧ ಅರ್ಥಗಳನ್ನು ಕಲ್ಪಿಸಿ ಧರ್ಮ ಮತ್ತು ಧಾರ್ಮಿಕರನ್ನು ಮನಸಾರೆ ತೆಗಳಿ ಗ್ರಂಥಗಳನ್ನು ಬರೆದರು. ಅದನ್ನು ಅಭ್ಯಾಸ ಮಾಡಲು ಶಾಲೆಕಾಲೇಜುಗಳನ್ನು ತೆರೆದರು, ಭಾರತೀಯ ಸಂಸ್ಕೃತಿ, ಭಾರತೀಯ ಶಾಸ್ತ್ರ, ಭಾರತೀಯ ಧರ್ಮ ಇವುಗಳನ್ನು ನಿಂದಿಸುವ ಹಾಗೂ ಅನಾದರ ಹುಟ್ಟಿಸುವ ಶಿಕ್ಷಣವನ್ನು ಕೊಟ್ಟು ಸುಶಿಕ್ಷಿತ ಸುಧಾರಕ ವರ್ಗವನ್ನು ತಯಾರಿಸಿದರು. ಕೈತುಂಬ ಹಣಕೊಟ್ಟು ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳನ್ನಾಗಿ ಮಾಡಿದರು. ಆಗ ಮೇಲೆ ಕೇಳುವುದೇನು? ಮರ್ಕಟಸ್ಯ ಸುರಾಪಾನಂ ಮಧ್ಯೇ ವೃಶ್ಚಿಕ ದಂಶನಂ "ತನ್ಮಧ್ಯೇ ಭೂತಸಂಚಾರಃ ಯದ್ವಾ ತದ್ವಾ ಭವಿಷ್ಯತಿ."

ಉಡುಪರಂಥ ಸಮರ್ಥ ವಿದ್ವಾಂಸರ ಈ ಹೇಳಿಕೆಯನ್ನು ಕೇಳಿ ಆಶ್ಚರ್ಯವಾಗುತ್ತದೆ. ಇಂಗ್ಲಿಷರು ತೆರೆದ ಕಾಲೇಜುಗಳಲ್ಲಿ, ಅಥವಾ ಈಗ ಹೊಸತಾಗಿ ತೆರೆಯಲ್ಪಟ್ಟ ಯಾವ ಕಾಲೇಜುಗಳಲ್ಲಾಗಲೀ ಯಾವುದೇ ಪಠ್ಯ ಪುಸ್ತಕದಲ್ಲಿಯಾದರೂ ಹಿಂದೂ ಧರ್ಮವನ್ನು ನಿಂದಿಸಿ ಬರೆದುದು ನನಗೆ ತಿಳಿದಿಲ್ಲ. ಕಾಲೇಜುಗಳ ಉದ್ದೇಶವೇ ಭಾರತೀಯ ಸಂಸ್ಕೃತಿಗಳ ಬಗ್ಗೆ ಅನಾದರಣೆಯನ್ನು ಹುಟ್ಟಿಸುವಂಥದು ಎಂಬುದರಲ್ಲಿ ಹುರುಳೇನಿದೆ! ಈಗ ತಮ್ಮ ತಮ್ಮ ಮಕ್ಕಳನ್ನು ಕಾಲೇಜಿಗೆ ಕಳುಹಿಸುತ್ತಿರುವ ಲಕ್ಷೋಪಲಕ್ಷ ಜನ ತಂದೆ ತಾಯಿಯರಿಗೆ ತಮ್ಮ ಸಂಸ್ಕೃತಿಯ ಮೇಲೆ ಅಭಿಮಾನವಿಲ್ಲ ಎಂದಂತಾಯ್ತು. ಅದೃಷ್ಟವಶಾತ್ ಈ ನಕ್ಸಲಬಾರಿ ಟೈಪಿನ ಜನರನ್ನು ಇಂಗ್ಲೀಷರೇ ಭಾರತಕ್ಕೆ ತಂದು ತುಂಬಲಿಲ್ಲ, ಮೊದಲಿನಿಂದಲೂ ಅಂತಹವರು ಭಾರತದಲ್ಲಿ ಇದ್ದರು ಎಂದು ಉಡುಪರು ಒಪ್ಪುತ್ತಾರೆ. ಇಂಗ್ಲೀಷರಿಂದ ನಮಗೆ ಹಲಕೆಲವು ಅನ್ಯಾಯವಾಗಿದೆ ನಿಜ. ಆದರೆ ಅದಂತಹ ಉಪಕಾರವನ್ನು ಏಕೆ ಉಪದ್ರವವೆಂದು ಸಾರಬೇಕು? ಗುಣಕ್ಕೇಕೆ ಮತ್ಸರ?

ತಮ್ಮ ವಾದಕ್ಕೆ ಪೂರಕವೋ ಏನೋ ಎಂಬಂತೆ ಶ್ರೀಯುತ ಉಡುಪರು "ಶ್ರೀ ಬಾಳಶಾಸ್ತ್ರಿ ಹರಿದಾಸ ನಾಗಪೂರ" ಎಂಬವರು "ಭಗವಾನ್ ಶ್ರೀಕೃಷ್ಣ" ಎಂಬ ಪುಸ್ತಕದ 16ನೇ ಪುಟದಲ್ಲಿ ಬರೆದ ವಿಚಾರವನ್ನು ಉದ್ಧರಿಸುತ್ತಾರೆ "ಭಾರತ ರಾಷ್ಟ್ರವು ಋಗ್ವೇದ ಕಾಲದಿಂದಲೂ ಪೂರ್ಣಾವಸ್ಥೆಯನ್ನು ಮುಟ್ಟಿರುವ ಸಂಸ್ಕೃತಿಯ ರಾಷ್ಟ್ರವಾದ್ದರಿಂದ ಅದರ ಇತಿಹಾಸವನ್ನು ನಿರೂಪಿಸುವಾಗ ಕ್ರಮಕ್ರಮವಾಗಿ ವಿಕಸಿತವಾಗುವ ಮಾನವ ಸಂಘದ ಇತಿಹಾಸದ ಕಲ್ಪನೆಯನ್ನು (ಡಾರ್ವಿನ್ ಥಿಯರಿಯನ್ನೂ) ಬಿಟ್ಟು ಬಿಡಬೇಕಾಗುತ್ತದೆ. ನಮ್ಮ ದುರ್ದೈವದಿಂದ ನಮ್ಮ ದೇಶದ ಇತಿಹಾಸವನ್ನು ಪ್ರತಿಪಾದಿಸಲಿಕ್ಕೆ ಪಾಶ್ಚಾತ್ಯ ಸಂಶೋಧಕರು ಮುಂದೆ ಬಂದರು. ಮತ್ತು ಅವರು ನಮ್ಮ ದೇಶದ ಅಭಿಮಾನವನ್ನು ನಷ್ಟಮಾಡುವ ಹೇತುವನ್ನು ಮನಸ್ಸಿನಲ್ಲಿಟ್ಟುಕೊಂಡೇ ಮುಂದುವರಿದರು.

ಈ ಬಾಳಶಾಸ್ತ್ರಿ ಹರಿದಾಸ ನಾಗಪೂರ ಅವರು ಬಹಳಷ್ಟು ಪ್ರಯಾಸಪಟ್ಟು "ಡಾರ್ವಿನ್ ಥಿಯರಿ"ಯನ್ನು ಋಗ್ವೇದವನ್ನೂ ಗಂಟುಹಾಕಲು ಯತ್ನಿಸಿದ್ದಾರೆ. ಡಾರ್ವಿನನ ಥಿಯರಿ ಎಲ್ಲಿ! ಋಗ್ವೇದವೆಲ್ಲಿ! ಋಗ್ವೇದಕಾಲದಲ್ಲಿ ಸಂಸ್ಕೃತಿ ಪೂರ್ಣಾವಸ್ಥೆಯಲ್ಲಿತ್ತು, ಒಪ್ಪೋಣ. ಅದರ ಹಿಂದೆ ಸಂಸ್ಕೃತಿ ಹೇಗಿತ್ತು? ಅದರ ನಂತರ ಹಾಗೆಯೇ ಇದೆಯೇ? ಋಗ್ವೇದದ ಮೊದಲೂ ನಂತರವೂ ನಮ್ಮ ಭಾರತೀಯ ಋಗ್ವೇದ ಕಾಲದ ಸಂಸ್ಕೃತಿ ಇದ್ದದ್ದೇ ಆದಲ್ಲಿ ಡಾರ್ವಿನ್ನನ ಥಿಯರಿ ವ್ಯರ್ಥವಾಯಿತು. ಆದರೆ ಹಾಗೆ ಆಗಲಿಲ್ಲವಲ್ಲ! ಆ ಕಾರಣ ಡಾರ್ವಿನನ ಥಿಯರಿಯಲ್ಲಿ ಏನು ಹೇಳುತ್ತದೆ ಎಂಬುದನ್ನು ಅದರ ಮೂಲದಿಂದ ಕೊನೆವರೆಗೆ ಸರಿಯಾಗಿ ಇಂಗ್ಲೀಷಿನಲ್ಲೇ ಓದಿ ಅರ್ಥಮಾಡಿಕೊಂಡಿದ್ದರೆ ಇಂಥ ಅವೈಜ್ಞಾನಿಕ ಮಾತುಗಳು ಬರುತ್ತಿರಲಿಲ್ಲ.

ಇಂಗ್ಲಿಷರು ಸಂಸ್ಕೃತ, ಹಾಗೂ ದ್ರಾವಿಡ ಭಾಷೆಗಳಲ್ಲಿ ಮಾಡಿದ ಸೇವೆಯನ್ನು ಯಾವ ಭಾರತೀಯನೂ ಮರೆಯಲಾರನು ಮರೆಯಬಾರದ. ಕನ್ನಡಿಗರಿಗೆ ಸೊಗಸಾದ ನಿಘಂಟನ್ನು ಕೊಟ್ಟವರು ಇಂಗ್ಲಿಷರು. Linguistics survey of India ಪುಸ್ತಕವನ್ನು ಭಾರತೀಯರ ಕೈಯಲ್ಲಿ ಇತ್ತವರು ಇಂಗ್ಲಿಷರು. ಕನ್ನಡದ ಶ್ರೇಷ್ಠ ವ್ಯಾಕರಣ, ಛಂದಸ್ಸಿನ ಪುಸ್ತಕಗಳನ್ನೂ ಸಂಸ್ಕೃತದ ಹಲವು ಶಾಸ್ತ್ರ, ನಾಟಕಗಳನ್ನು ಶೋಧಿಸಿ ಅಚ್ಚುಹಾಕಿದವರು ಇಂಗ್ಲಿಷರು. ಅದೆಲ್ಲವನ್ನು ಬಿಟ್ಟು ಅವರು ನಮ್ಮ ಸಂಸ್ಕೃತಿ ಹಾಳುಗೈಯಲಿಕ್ಕಾಗಿಯೇ ಕಾಲೇಜುಗಳನ್ನು ತೆರೆದರು ಎಂದು ಉದ್ಗರಿಸುವುದು ಯಾವನ್ಯಾಯ?

ಗೌಡಸಾರಸ್ವತರ ವಿಚಾರವಾಗಿ ತಮ್ಮ ತುಳುನಾಡು ಪುಸ್ತಕದಲ್ಲಿ ಗುರುರಾಜ ಭಟ್ಟರು ಈ ಗೌಡಸಾರಸ್ವತರು ಸರಸ್ವತೀ ನದೀತೀರದಲ್ಲಿದ್ದ ಪ್ರಯುಕ್ತ ಸಾರಸ್ವತರೆಂದೂ ಗೌಡದೇಶದಲ್ಲಿ ನೆಲಸಿ ನಂತರ ಗೋಮಾಂಚಲಕ್ಕೆ ಬಂದಿರುವುದರಿಂದ ಗೌಡಸಾರಸ್ವತರೆಂದೂ ಕರೆಯಲ್ಪಟ್ಟರು." ಎಂದು ಹೇಳುತ್ತಾರೆ. ಈ ಹೇಳಿಕೆ ನಮ್ಮ ಉಡುಪರೂ ಸಮ್ಮತಿಸುತ್ತಾರೆ. "ಅವರ ಮೂಲಕ್ಕೂ ಪರಶುರಾಮನಿಗೂ ಏನೇನೂ ಸಂಬಂಧ ಇರುವುದಿಲ್ಲ" ಎಂಬ ಭಟ್ಟರ ಅಭಿಪ್ರಾಯವನ್ನು ಉಡುಪರು ಒಪ್ಪುವುದಿಲ್ಲ. ಬದಲಾಗಿ ಪರಶುರಾಮನು ಕೇಳಿದ ಆಕಾಶವಾಣಿಯ ವಿಚಾರವನ್ನು ಉದ್ಧರಿಸುತ್ತಾರೆ. ಅದನ್ನೇ ಪ್ರತಿಪಾದಿಸುತ್ತಾರೆ. "ಇದು ಸುಳ್ಳು ಆಸೀ

(ಹತ್ತನೇ ಪುಟ ನೋಡಿರಿ)

ಭಾರತದ ಕ್ಷಯರೋಗ ಸಮಿತಿ

21ನೆಯ ಟಿಬಿ ಮುದ್ರೆ ಮಾರಾಟ ಚಳುವಳಿ

ಕ್ಷಯ ರೋಗ

'ಟ್ಯುಬರ್‌ಕ್ಲೆ ಬೆಸಿಲ್ಲಸ್' ಎಂಬ ಒಂದು ರೋಗಾಣುವೇ ಇದಕ್ಕೆ ಕಾರಣವಾಗಿದೆ.

ಇದು ವಾಡಿಕೆಯಾಗಿ ಅನುಮಾನಿಸಲ್ಪಡದ ರೋಗಿಯಿಂದ ಆರೋಗ್ಯವಂತನಿಗೆ ಹರಡುತ್ತದೆ.

ಇದು ಕ್ಷಯರೋಗ ಇರುವ ಯಾರೊಬ್ಬನಿಂದ ಬದಲಾಯಿಸಲ್ಪಡುತ್ತದೆ.

ಇದು ವಿಶೇಷವಾಗಿ ಶ್ವಾಸಕೋಶಗಳಲ್ಲಿ ಕಾಣಬರುತ್ತದೆ; ಆದರೂ ದೇಹದ ಯಾವುದೇ ಭಾಗದಲ್ಲಾದರೂ ಕಂಡುಬರಬಹುದು.

ಆರಂಭದಲ್ಲಿ ಅಪರೂಪವಾಗಿ ಕ್ಷಯರೋಗ ಚಿಹ್ನೆಗಳು ಎದ್ದು ಕಾಣಿಸಬಹುದು. ಪ್ರಾರಂಭಿಕ ಹಂತಗಳಲ್ಲಿ ಅದರ ಹಾನಿಯು ತೋರಿಕೆಗೆ ಅಲ್ಪವೆಂದು ಕಾಣಬರುವುದರಿಂದ ಶ್ವಾಸಕೋಶವು ವಾಡಿಕೆಯಂತೆ ಕೆಲಸ ಮಾಡುತ್ತಿರುತ್ತದೆ. ಅದು ಆ ರೀತಿಯಾಗಿ ಕೆಲವು ದಿವಸಗಳ ಅಥವ ತಿಂಗಳುಗಳ ವರೆಗೆ ಹಾಗೇ ಮುಂದುವರಿಯಬಹುದು. ಅದರ ಇನ್ನೂ ನಿರ್ದಿಷ್ಟ ಚಿಹ್ನೆಗಳೆಂದರೆ:—

(ಎ) ಎಡೆಬಿಡದ ಕೆಮ್ಮು; (ಬಿ) ರಕ್ತ ಅಥವ ರಕ್ತ ಆವೃತ ಕಫ ಉಗುಳುವಿಕೆ; (ಸಿ) ಎದೆಯಲ್ಲಿ ನೋವು; (ಡಿ) ಜ್ವರ ಮತ್ತು ದೇಹದಲ್ಲಿ ಆಯಾಸದ ಭಾವನೆ.



ರೋಗ ಪರೀಕ್ಷೆಗೆ ಸಮೀಪದ ಕ್ಷಯ ಆಸ್ಪತ್ರೆಯನ್ನು ಸಂದರ್ಶಿಸಿರಿ.

ಟಿ ಬಿ ಮೊಹರುಗಳನ್ನು ಖರೀದಿಸಿ ನಿಮ್ಮ ರಾಜ್ಯದ ಟಿ ಬಿ ಎಸೋಸಿಯೇಶನಿಗೆ ಸಹಾಯ ಮಾಡಿರಿ.

ಒಂದು ಮೊಹರಿನ ಬೆಲೆ ಬರೇ ಹತ್ತು ಪೈಸೆ ಮಾತ್ರ.

ಮೊಹರುಗಳು ಸಿಗುವ ಸ್ಥಳಗಳು: ದ. ಕ. ಜಿಲ್ಲಾ ಟಿ ಬಿ ಎಸೋಸಿಯೇಶನ್, ಮಂಗಳೂರು; ಆಸ್ಪತ್ರೆಗಳು, ಸೆನೆಟೋರಿಯಂಗಳು, ಟಿ ಬಿ ಕ್ಲಿನಿಕ್ಸ್, ಬೇಂಕುಗಳು, ಸಿನೆಮಾ ಮಂದಿರಗಳು ಇತ್ಯಾದಿ.

Space kindly donated by
India Tube Mills & Metal Industries (Private) Ltd.,
Bombay.

ಉಜ್ವಲ ಸಾತ್ವಿಕ ಧಾರ್ಮಿಕ ಪ್ರಜ್ಞಾಸಂಪನ್ನ

ಧರ್ಮಸ್ಥಳದ ಹೆಗ್ಗಡೆ ಪೀಳಿಗೆ

ಇವರಿಂದ ಶ್ರೀ ಸ್ವಾಮಿ ತನ್ನ ಆಶಯಗಳನ್ನು ಕಾರ್ಯರೂಪಕ್ಕೆ ತರುತ್ತಾನೆ.

ಧರ್ಮದೇವತೆಗಳಿಂದ ವರದರಾದ ಶ್ರೀ ಬರ್ಮಣ್ಣ ಹೆಗ್ಗಡೆಯವರು ನ್ಯಾಯತೀರ್ಮಾನಗಳಿಗೆಡೆ ನೀಡದೆ ಶ್ರೀ ಮಂಜುನಾಥ ಸ್ವಾಮಿಯ ಸೇವೆಯನ್ನೂ ನೀತಿ-ಧರ್ಮ-ಸತ್ಯ ವ್ರತವನ್ನು ಕೈಕೊಂಡು ಕುಡುಮದ ಕೀರ್ತಿಪತಾಕೆಯನ್ನು ಹಾರಿಸ ತೊಡಗಿ ಸಿದ್ಧರಾದರು. ಇವರ ನಂತರ ಪಟ್ಟಕ್ಕೆ ಬಂದವರು ಪದ್ಮಯ್ಯ ಹೆಗ್ಗಡೆಯವರು.

ಪದ್ಮಯ್ಯ ಹೆಗ್ಗಡೆ

ಶ್ರೀ ಪದ್ಮಯ್ಯ ಹೆಗ್ಗಡೆಯವರು ಸಜ್ಜನಪ್ರಿಯರು. ಇವರಿಗೆ ಸಮಾಜದ ಮೇಲೆ ಅಕ್ಕರೆ, ಕುಲದೈವದಲ್ಲಿ ಭಕ್ತಿ, ವಿಶ್ವಾಸ. ನಿಯಮ ನಿಷ್ಠೆಗಳಲ್ಲಿ ಆಸಕ್ತಿ. ಕಲ್ಲೇರಿ ಅಣ್ಣಪ್ಪ ದೈವವನ್ನು ಶ್ರೀ ಮಂಜುನಾಥ ದೇವಾಲಯದ ಬಳಿಯಲ್ಲೇ ಸ್ಥಾಪನೆ ಮಾಡಿದ್ದು ಇವರ ಕಾಲದಲ್ಲೇ. ಈ ದೈವವು ಜನರ ಸುಖಕಷ್ಟಗಳಿಗೆ ಕಾರಣವಾಗಿ, ಅಣ್ಣಪ್ಪ ದೈವಕ್ಕೆ ಬಲಗೈ ಬಂಟನಾಗಿ ನಡೆದು ಬರುತ್ತಿದೆ.

೧ನೆ ಚಂದಯ್ಯ ಹೆಗ್ಗಡೆ

ಪದ್ಮಯ್ಯ ಹೆಗ್ಗಡೆಯವರು ಅಪುತ್ರರಾದುದರಿಂದ ಅವರ ಸೋದರಳಿಯ ಶ್ರೀ ಚಂದಯ್ಯ ಹೆಗ್ಗಡೆಯವರು ಪಟ್ಟವೇರಿದರು. ಸಂಯಮಿಯಾಗಿದ್ದ ಇವರಿಗೆ ಶ್ರೀ ಸ್ವಾಮಿಯ ಮೇಲೆ ಎಲ್ಲಿಲ್ಲದ ನಂಬಿಕೆ. ಭಕ್ತನನ್ನು ಪರೀಕ್ಷಿಸಲು ಪರಮಾತ್ಮ ಹೊರಡುವುದುಂಟು. ಶ್ರೀ ಹೆಗ್ಗಡೆಯವರನ್ನು ಶ್ರೀ ಸ್ವಾಮಿಯು ಅಗ್ನಿಪರೀಕ್ಷೆಗೆ ಗುರಿಪಡಿಸಿದರು. ಶ್ರೀ ಹೆಗ್ಗಡೆಯವರು ದೈಹಿಕವಾಗಿ ಅಸೌಖ್ಯಕ್ಕೆ ಬಲಿಯಾದರು. ಬಹುಕಾಲದ ವರೆಗೂ ಅವರು ಮುಕ್ತರಾಗಲಿಲ್ಲ. ನಾನಾ ಪ್ರಕಾರದ ಔಷಧಿ ಪ್ರಯೋಗಗಳು ನಡೆದರೂ ಅವು ನಿಷ್ಫಲವಾದುವು. ಹಾಗಿದ್ದರೂ ಶ್ರೀ ಹೆಗ್ಗಡೆಯವರು ತನ್ನ ನಿಯಮ-ನಿಷ್ಠೆ, ಆಚಾರ-ಶ್ರದ್ಧೆಗಳಿಂದ ಎಳ್ಳಷ್ಟೂ ವಿಚಲಿತರಾಗಲಿಲ್ಲ. ಶ್ರೀ ಸ್ವಾಮಿಯಲ್ಲೇ ವಿಶ್ವಾಸವಿಟ್ಟು ಅವರು ದೇವತಾಕಾರ್ಯದಲ್ಲೇ ನಿರತರಾಗಿದ್ದರು. ಭಗವದ್ಭಕ್ತರಿಗೆ ಬವಣೆ ನಿಲ್ಲದು. ಕೊನೆಗೂ ಶ್ರೀ ಸ್ವಾಮಿಯ ಅನುಗ್ರಹ ಹೆಗ್ಗಡೆಯವರ ಮೇಲಾಯ್ತು. ಅಸಾಧ್ಯರೋಗವು ಹೇಳ ಹೆಸರಿಲ್ಲದಂತೆ ಹರಿದು ಹೋಯ್ತು. ಶ್ರೀ ಸ್ವಾಮಿಯ ಅನುಗ್ರಹ ಶಕ್ತಿಗೆ ಇದಕ್ಕಿಂತ ಬೇರೆ ನಿದರ್ಶನ ಬೇಕೆ? ಶ್ರೀ ಸ್ವಾಮಿಯು ಧರಿಸುವ ಹೊನ್ನಿನ ನಾಗಾಭರಣವು ಶ್ರೀ ಚಂದಯ್ಯ ಹೆಗ್ಗಡೆಯವರು ಸಮರ್ಪಿಸಿದ್ದು.

ದೇವರಾಜ ಹೆಗ್ಗಡೆ

೧ನೆ ಚಂದಯ್ಯ ಹೆಗ್ಗಡೆಯವರಿಗೂ ಮಕ್ಕಳಿರಲಿಲ್ಲ. ಹಾಗಾಗಿ ಸೋದರಳಿಯ ದೇವರಾಜರನ್ನು ಅವರು ದತ್ತು ತೆಗೆದುಕೊಂಡರು. ಶ್ರೀ ದೇವರಾಜ ಹೆಗ್ಗಡೆಯವರ ಕಾಲದಲ್ಲಿ ಕುಡುಮದ ಹೆಸರು ಕೀರ್ತಿ ನಾಡನ್ನು ಹರಡಿತ್ತು. ದಿನಂಪ್ರತಿ ನೂರಾರು ಯಾತ್ರಿಕರನ್ನೂ ಭಕ್ತರನ್ನೂ ಶ್ರೀ ಕ್ಷೇತ್ರ ಸ್ವಾಗತಿಸುತ್ತಿತ್ತು. ಶ್ರೀ ಹೆಗ್ಗಡೆಯವರಾದರೂ ತನ್ನ ಕರ್ತವ್ಯದಿಂದ ವಿಚಲಿತರಾಗದೆ ದೇವತಾ ಸೇವೆಯಲ್ಲಿ ನಿರತರಾಗಿದ್ದರು.

ಉಡುಪಿಯ ಅಷ್ಟ ಮಠಗಳಲ್ಲಿ ಒಂದಾದ ಶ್ರೀ ಸೋದೆ ಮಠದಲ್ಲಿ ಆಗ ಶ್ರೀ ವಾದಿರಾಜ ಯತಿಗಳಿದ್ದರು. ಶ್ರೀ ವಾದಿರಾಜರು ಸ್ವಾತ್ರಯೋಚಿತ ರೀತಿ ನೀತಿಗಳಲ್ಲಿ ಹೆಸರಾಂತವರು. ಶ್ರೀ ದೇವರಾಜ ಹೆಗ್ಗಡೆಯವರ ಆಮಂತ್ರಣದ ಮೇರೆಗೆ ಶ್ರೀ ವಾದಿರಾಜರು ಶ್ರೀ ಕ್ಷೇತ್ರ ಧರ್ಮಸ್ಥಳವನ್ನು ಸಂದರ್ಶಿಸಿದರು. ಕುಡುಮದಲ್ಲಿ ನಡೆಯುತ್ತಿದ್ದ ಧಾರ್ಮಿಕ ಕಾರ್ಯವನ್ನು ಕಂಡು ಅದನ್ನು ಧರ್ಮಸ್ಥಳವೆಂದು ಕರೆದರು. ಮುಂದೆ ಇದೇ ಹೆಸರು ಮುಂದುವರಿಯಿತು. ಶ್ರೀ ವಾದಿರಾಜರು ಈ ಕ್ಷೇತ್ರವನ್ನು ಮನಸಾರೆ ಹಾಡಿ ಹೊಗಳಿದರು. ಶ್ರೀ ಮಂಜುನಾಥನ ಕೃಪಾತಿಶಯದಿಂದ ಆನಂದ ತುಂದಿಲರಾದರು. ಇದು ಹದಿನಾರನೇ ಶತಮಾನದ ಆದಿಯಲ್ಲಿ.

ಕುಮಾರಯ್ಯ ಹೆಗ್ಗಡೆ

ಹದಿನೆಂಟನೆ ಶತಮಾನದ ಕೊನೆಯಲ್ಲಿ ಶ್ರೀ ಕುಮಾರಯ್ಯ ಹೆಗ್ಗಡೆಯವರು ಶ್ರೀ ಕ್ಷೇತ್ರದ ಧರ್ಮಾಧಿಕಾರಿಗಳಾಗಿ ಅಧಿಕಾರ ಸ್ವೀಕರಿಸಿದರು. ಶ್ರೀ ಹೆಗ್ಗಡೆಯವರು ಬಹುಸ್ವಭಾವಿಗಳು; ಸಾಹಸಿಗಳು; ಶ್ರೀ ಕ್ಷೇತ್ರದ ಸಂದೇಶವನ್ನು ನಾಡಿಗೆ ವ್ಯವಸ್ಥೆಗಳು ಏನೂ ಇಲ್ಲದ ಅಂದಿನ ದಿನಗಳಲ್ಲೂ ಕರ್ನಾಟಕದ ತುಂಬ ಹರಡಿದವರು. ಇವರ ಬಳಿ ಅನೇಕರು ಗರುಡಿಯೂಟ ಕಲಿಯುತ್ತಿದ್ದರು.

ಸಮಾಜ ಕಲ್ಯಾಣದಲ್ಲಿ ಮನರಂಜನೆಗೂ ಮಹತ್ವದ ಸ್ಥಾನವಿದೆಯೆಂಬುದನ್ನು ಆ ದಿನಗಳಲ್ಲೇ ಶ್ರೀ ಹೆಗ್ಗಡೆಯವರು ಅರಿತುಕೊಂಡಿದ್ದರು. ಆದುದರಿಂದ ಮನರಂಜನೆಯೊಡನೆ ಸಂಸ್ಕೃತಿ ಪ್ರಚಾರವನ್ನೂ ಮಾಡುವ ಬಯಲಾಟದ "ಮೇಳ"ವೊಂದನ್ನು ಅವರು ಆರಂಭಿಸಿದರು. ಅಗತ್ಯ ಬಿದ್ದಾಗ ತಾನೇ ಹಲವೆಡೆ ಸೂತ್ರ ನಿರ್ದೇಶನ ನೀಡುತ್ತಿದ್ದರು. ಯಕ್ಷಗಾನ ಬಯಲಾಟಗಳ ಉದ್ಧಾರ ಕಾರ್ಯದಲ್ಲಿ ಶ್ರಮಿಸಿ ಈ ಕಲೆಗೆ ಪುನರುಜ್ಜೀವನ ಗೊಳಿಸಿದ ಕೀರ್ತಿ ಶ್ರೀ ಹೆಗ್ಗಡೆಯವರಿಗೆ ಸೇರಿದ್ದು.

ಶ್ರೀ ಕುಮಾರಯ್ಯ ಹೆಗ್ಗಡೆಯವರು ಮೈಸೂರಿನ ಮಹಾರಾಜ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಆಮಂತ್ರಿತರಾಗಿ ಅವರಿಂದ ಬಹುಪರಿಯಾಗಿ ಸತ್ಕೃತರಾಗಿದ್ದರು. ದಾರಿಯಲ್ಲಿ ಕೊಡಗಿನ ವೀರರಾಜೇಂದ್ರನಿಂದಲೂ ಸಮ್ಮಾನಿತರಾದರು. ಹೀಗೆ ಶ್ರೀ ಧರ್ಮಸ್ಥಳದ ಹೆಸರು ಕೊಡಗು— ಮೈಸೂರುಗಳಲ್ಲಿಯೂ ಕರ್ನಾಟಕದಲ್ಲಿಯೂ ತಾನೇತಾನಾಗಿ ಹರಡತೊಡಗಿತು.

ಸಮಾಜ ಸುಧಾರಕರಾದ ಶ್ರೀ ಹೆಗ್ಗಡೆಯವರು ದೈವಭಕ್ತರು; ಸರ್ವಜನ ಹಿತಚಿಂತಕರು. ನಿಯಮ—ವ್ರತಾನುಷ್ಠಾನ ಪ್ರಿಯರು. ಶ್ರೀ ಕುಮಾರಯ್ಯ ಹೆಗ್ಗಡೆಯವರೇ ಆಧುನಿಕತೆಗುತ್ತ ಮನಸ್ಸು ಹರಿಸಿದ ಮೊದಲ ಹೆಗ್ಗಡೆಯೆಂದರೆ ಅತಿಶಯವಾಗದು. ಸುಧಾರಣೆ ಮತ್ತು ಸುವ್ಯವಸ್ಥೆಗಳಿಗೆ ಇವರದು ಎತ್ತಿದ ಕೈಯೆಂದು ಧಾರಾಳವಾಗಿ ಹೇಳಬಹುದು.

೨ನೆ ಮಂಜಯ್ಯ ಹೆಗ್ಗಡೆ

ಶ್ರೀ ಕುಮಾರಯ್ಯ ಹೆಗ್ಗಡೆಯವರ ನಂತರ ಅಧಿಕಾರಕ್ಕೆ ಬಂದವರು ನಾಲ್ಮಡಿ ಚಂದಯ್ಯ ಹೆಗ್ಗಡೆ. ಅವರ ನಂತರ ಇಮ್ಮಡಿ ಮಂಜಯ್ಯ ಹೆಗ್ಗಡೆಯವರು. ಇವರು ತಮ್ಮ ಆಡಳಿತವರ್ಷಗಳ ಸುದೀರ್ಘ ಆಡಳಿತಾವಧಿಯಲ್ಲಿ ಶ್ರೀ ಸ್ವಾಮಿಯ ದೇವಾಲಯಾದಿಗಳನ್ನೂ ಶ್ರೀ ಚಂದ್ರನಾಥನ ಬಸದಿಯನ್ನೂ ಜೀರ್ಣೋದ್ಧಾರ ಮಾಡಿಸಿದರು. ದೇವಾಲಯದ ಹೊರ ಪ್ರಾಕಾ



ಶ್ರೀ ಮಂಜುನಾಥ ಸ್ವಾಮಿ



ಶ್ರೀ ಕುಮಾರ ಸ್ವಾಮಿಯ ಗುಡಿ

ರವನ್ನೂ ಮುಂಭಾಗದ ಗೋಪುರವನ್ನೂ ಕಟ್ಟಿಸಿದರು. ರಥ, ಚಿನ್ನಾಭರಣಗಳೂ ಇವರ ಆಡಳಿತಾವಧಿಯಲ್ಲೇ ನಿರ್ಮಾಣವಾದುವು.

ಮೈಸೂರು ಅರಮನೆಯೊಡನೆಯೂ ಇವರ ಸಂಬಂಧವಿತ್ತು. ಇಲ್ಲಿನ ಕೆಲ ಯಕ್ಷಗಾನ ಕಲಾವಿದರು ಸಪರಿವಾರರಾಗಿ ಮೈಸೂರಿನಲ್ಲೇ ತಂಗುವಂತೆ ಇವರು ಮಾಡಿದರು. ದೇವಳದ ಮೇಳವು ಈ ವೇಳೆಗಾಗಲೇ ಸಾಕಷ್ಟು ಪ್ರಸಿದ್ಧಿಯನ್ನೂ ಖ್ಯಾತಿಯನ್ನೂ ಹೊಂದಿ ಜನಪ್ರಿಯವಾಗಿತ್ತು.

ಜಿನೇ ಚಂದಯ್ಯ ಹೆಗ್ಗಡೆ

ಈ ಶತಮಾನ ಆರಂಭದಲ್ಲೇ ಶ್ರೀ ಜಿನೇ ಚಂದಯ್ಯ ಹೆಗ್ಗಡೆಯವರು ಪಟ್ಟವೇರಿದರು. ಅವರ ಆಡಳಿತ ಕಾಲವು ಆಧುನಿಕ ವೈಜ್ಞಾನಿಕ ಸಾಧನೆಗಳ ಪಕ್ವ ಫಲ. ಶ್ರೀ ಸಾಮೂಹಿಕ(?) ಸಿಗಲು ಆರಂಭವಾದ ಸಮಯ. ಶ್ರೀ ಹೆಗ್ಗಡೆಯವರು ಶ್ರೀ ಕ್ಷೇತ್ರಕ್ಕೆ ಆಗಮಿಸುವ ಯಾತ್ರಾರ್ಥಿಗಳಿಗೆ ಸರ್ವ ಪ್ರಕಾರದ ಅನುಕೂಲತೆಗಳನ್ನು ಒದಗಿಸಲು ಶ್ರಮಿಸಿದರು. ಧರ್ಮಛತ್ರಗಳ ವಿಸ್ತರಣೆ, ನಳ್ಳಿನೀರಿನ ಏರ್ಪಾಟು, ದೈವಗುಡಿಗಳ ಜೀರ್ಣೋದ್ಧಾರ ಮೊದಲಾದ ಇವರ ಸೇವೆ ಉಲ್ಲೇಖನೀಯವಾಗಿದೆ. ಸಂಭೀರರೂ ಮಿತಭಾಷಿಗಳೂ ಆಗಿದ್ದ ಶ್ರೀ ಹೆಗ್ಗಡೆಯವರು ಕರ್ತವ್ಯ ದಕ್ಷರೂ ಜನಪ್ರಿಯರೂ ಆಗಿದ್ದು ಶ್ರೀಕ್ಷೇತ್ರದ ಆಕರ್ಷಣೆಯನ್ನು ಹೆಚ್ಚಿಸಿದರು.

ಜಿನೆ ಮಂಜಯ್ಯ ಹೆಗ್ಗಡೆ

ಬಹುಕಾಲ ಅಧಿಕಾರ ಸ್ಥಾನದಲ್ಲಿದ್ದು ಬಹುಮುಖ ಪ್ರತಿಭೆಗೂ ಕ್ಷೇತ್ರದ ಬಹುವಿಧ ಪ್ರಗತಿಗೂ ಕಾರಣರಾದವರಲ್ಲಿ ಶ್ರೀ ಮಂಜಯ್ಯ ಹೆಗ್ಗಡೆಯವರು ಒಬ್ಬರು. ಸಾಮಯಿಕ ಆವಶ್ಯಕತೆಗಳನ್ನು ಮನಗಂಡು, ಶ್ರೀ ಕ್ಷೇತ್ರದ, ಯಾತ್ರಾರ್ಥಿಗಳ ಆವಶ್ಯಕತೆಗಳನ್ನು ಇವರು ಪೂರಯಿಸುವಲ್ಲಿ ಬದ್ಧಕಟಿಯಾದರು. ಸರಳ ಹೃದಯರೂ ಉದಾತ್ತ ಮನೋಭಾವದವರೂ ಆದ ಶ್ರೀ ಹೆಗ್ಗಡೆಯವರು ಜನಸಾಮಾನ್ಯರ ಆಸ್ತಿಕ ಭಾವನೆಗೆ ಸ್ಪಂದಿಸಿದ್ದರು.

ಯಾತ್ರಾರ್ಥಿಗಳಲ್ಲಿ ಇಚ್ಛಿಸುವವರಿಗೆ ಭೋಜನದ ವ್ಯವಸ್ಥೆಯಾದುದು ಇವರ ಕಾಲದಲ್ಲೇ. ನೀಚದೇವತೆಗಳಿಗೆ ರಕ್ತಾಹುತಿಯನ್ನು ನಿಷೇಧಿಸಿದ್ದು, ದೇವದಾಸಿ ಪದ್ಧತಿಯನ್ನು ಕಿತ್ತು ಹಾಕಿದ್ದು ಇವು ಕಡಿಮೆ ಮಹತ್ವದವಲ್ಲ. ನೇತ್ರಾವತಿ ನದಿಗೆ ಸೇತುವೆ ಹಾಕಿದ್ದೂ ಇವರೇ. ಧರ್ಮ, ಕಲೆ ಮತ್ತು ಶಿಕ್ಷಣಗಳಿಗಾಗಿ ಸಂಪತ್ತನ್ನು ಬಳಸುವ ಪರಿಪಾಠವನ್ನಿಟ್ಟುಕೊಂಡ ಇವರು ಆ ಸಂಬಂಧದ ಹತ್ತಾರು ಕಾರ್ಯಕ್ರಮಗಳನ್ನು ಏರ್ಪಡಿಸಿದರು.

ಆಯುರ್ವೇದ ಪರಿಷತ್ತು, ಅಖಿಲ ಕರ್ನಾಟಕ ವಸ್ತು ಪ್ರದರ್ಶನ, ಕಲಾಪ್ರದರ್ಶನಗಳನ್ನು ಇವರು ಏರ್ಪಡಿಸಿದರು. ೧೯೩೩ರಲ್ಲಿ ದೀಪೋತ್ಸವದ ವೇಳೆ ಸಾಹಿತ್ಯ ಮತ್ತು ಧರ್ಮ ಸಮ್ಮೇಳನಗಳನ್ನು ನಡೆಸುವ ಸಂಪ್ರದಾಯಕ್ಕೆ ತಳಹದಿ ಹಾಕಿದರು. ಈ ಸಮ್ಮೇಳನಗಳು ಅಂದಿನಿಂದ ಇಂದಿನವರೆಗೂ ನಡೆದು ಬರುತ್ತಿವೆ. ಇವುಗಳಲ್ಲಿ ನಾಡಿನ ಮೂಲೆ ಮೂಲೆಯ ವಿದ್ವಾಂಸರೂ ಮತಾಚಾರ್ಯರೂ ಭಾಗವಹಿಸುತ್ತ ಬರುತ್ತಿದ್ದಾರೆ.

ಉಜಿರೆಯಲ್ಲಿನ ಸಿದ್ಧವನ, ಅಲ್ಲಿನ ಪಾಠಶಾಲೆಗಳು ಶ್ರೀ ಹೆಗ್ಗಡೆಯವರ ಕಾಣಿಕೆಗಳು. ೧೯೪೭ರಲ್ಲೇ ಇಲ್ಲಿ ಪ್ರೌಢ ಶಾಲೆಯೂ ಆರಂಭವಾಯಿತು. ಮಲೆನಾಡಿನ ಪ್ರೌಢ ಶಾಲೆಗಳಲ್ಲಿ ಇದು ಅಗ್ರಗಣ್ಯವಾಗಿದೆ. ಈ ಆರಂಭ ಶುಭ ಮುಹೂರ್ತದಲ್ಲೇ ನಡೆದಿರಬೇಕು; ಆದುದರಿಂದಲೇ ಇಂದು ಧರ್ಮಸ್ಥಳದಲ್ಲಿ ಉನ್ನತ ಮಟ್ಟದ ಕಾಲೇಜು ಸ್ಥಾಪನೆಯಾಗಿದೆ. ಶ್ರೀ ಸ್ವಾಮಿಗೆ ರಜತ ರಥದ ಕಾರ್ಯ, ವಸಂತ ಮಹಲಿನ ರಚನೆಗಳನ್ನು ಆರಂಭ ಮಾಡಿದವರು ಶ್ರೀ ಮಂಜಯ್ಯ ಹೆಗ್ಗಡೆಯವರು. ತಾವೇ ಸ್ವತಃ ಕಲಾವಿದರಾದ ಇವರಿಂದ ಕಲೆಯ ಗೌರವ ಹೆಚ್ಚಿತು. ಜನಸೇವಾಕಾಂಕ್ಷಿಗಳಾದ ಇವರು ಆರೋಗ್ಯ, ಕೃಷಿ, ಸುಧಾರಣೆಗಳಿಗಾಗಿಯೂ ಅವಿಶ್ರಾಂತವಾಗಿ ದುಡಿದರು.

ಶ್ರೀ ರತ್ನವರ್ಮ ಹೆಗ್ಗಡೆ

ಶ್ರೀ ರತ್ನವರ್ಮ ಹೆಗ್ಗಡೆಯವರು ೧೯೫೫ರಲ್ಲಿ ಶ್ರೀಕ್ಷೇತ್ರದ ಧರ್ಮಾಧಿಕಾರಿಗಳಾಗಿ ಅಧಿಕಾರಗ್ರಹಣ ಮಾಡಿದರು. ತಮ್ಮ ಪೂರ್ವಜರು ಮೆಟ್ಟಿದ ದಾರಿಯಲ್ಲಿ ಇವರು ಬಹುದೂರ ನಡೆದು ಶ್ರೀ ಧರ್ಮಸ್ಥಳವನ್ನು ಆಧುನಿಕ ಲೋಕಕ್ಕೆ ತಿರುಗಿಸಿದರು. ಆದು ಮಾಟ್ಟದ ಸೇವೆಯಲ್ಲ; ಹೆಗ್ಗಡೆ ಕೈಕೊಳ್ಳದ ಕೆಲಸವಿಲ್ಲ. ಇಂದು ಶ್ರೀಕ್ಷೇತ್ರದಲ್ಲಿ ನಾವು ಕಾಣುವ ಸ್ವರೂಪದ ಮೂಲ ಶಿಲ್ಪಿ ಶ್ರೀ ರತ್ನವರ್ಮ ಹೆಗ್ಗಡೆಯವರು. ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ರಂಗಗಳಿಗೆ ಇವರು ಮಾಡಿದ ಸೇವೆ ಅನುಪಮ; ಕಲೆ–ಸಂಸ್ಕೃತಿಗಳಿಗೆ ನೀಡಿದ ಪ್ರೋತ್ಸಾಹ ಅಗಣಿತ. ಜನತಾಜನಾರ್ದನದಲ್ಲೇ ಜನಾರ್ದನನನ್ನು ಗುರುತಿಸಿದ ಶ್ರೀ ರತ್ನವರ್ಮ ಹೆಗ್ಗಡೆಯವರು ಧರ್ಮಸ್ಥಳದ ರತ್ನವೇ ಆಗಿದ್ದರು.

ಆಧುನಿಕ ಸೌಕರ್ಯಗಳಿಂದ ಕೂಡಿರುವ ಅಟ್ಟಾಲಿಕೆಗಳಂತಹ ಛತ್ರಗಳು, ಧರ್ಮಸ್ಥಳದ ಮುಖದ್ವಾರ, ಅಂಗಡಿಗಳ ನಿರ್ಮಾಣಕಾರ್ಯ ಪ್ರಶಂಸನೀಯ. ವಸಂತ ಮಹಲಿನ ಕಾರ್ಯ ಸಂಪೂರ್ಣವಾದದ್ದು, ನೆಲ್ಯಾಡಿ ಬೀಡಿನ ಕಲಾಪೂರ್ಣ ಪುನಾರಚನೆಯಾದದ್ದು ಇವರಿಂದಲೇ. ರಜತ ರಥದ ಕಾರ್ಯವು ಸಂಪೂರ್ಣಗೊಂಡು ಅದು ಶ್ರೀ ಸ್ವಾಮಿಯ ಸೇವೆಗೆ ಅರ್ಪಣೆಯಾದದ್ದು ಶ್ರೀ ರತ್ನವರ್ಮ ಹೆಗ್ಗಡೆಯವರಿಂದಲೇ. ದೇವಾಲಯದ ಆಸುಪಾಸು ಪರಿಶುದ್ಧತೆಯ ವಾತಾವರಣ ಕಂಡದ್ದು ಶ್ರೀಯುತರ ಮುಂದಾಳುತನದಲ್ಲೇ. ಸಾರಿಗೆ ಸಂಪರ್ಕಗಳು ಉತ್ತಮಗೊಂಡದ್ದು, ಯಾತ್ರಾರ್ಥಿಗಳಿಗೆ ಎಲ್ಲ ಬಗೆಯ ಏರ್ಪಾಟು ಲಭ್ಯವಾದದ್ದು ಶ್ರೀಯುತರ ಮಾರ್ಗದರ್ಶನದಲ್ಲೇ.

ಶ್ರೀ ಮಂಜಯ್ಯ ಹೆಗ್ಗಡೆಯವರು ಆರಂಭಿಸಿದ ಎಲ್ಲ ಕಾರ್ಯಕಲಾಪಗಳನ್ನು ಇವರು ಮುಂದುವರಿಸಿಕೊಂಡು ಬಂದರು. ಧರ್ಮಸ್ಥಳದ ಬಳಿಯಲ್ಲೇ ಕಾಲೇಜನ್ನು ಸ್ಥಾಪಿಸಿ ಅದನ್ನು ಕಟ್ಟುವಲ್ಲಿ ಪರಿಶ್ರಮಿಸಿದರು. ಇಂದು ನಾಡಿನ ಮೂಲೆ ಮೂಲೆಗಳಿಂದಲೂ ಶಿಕ್ಷಣಾರ್ಥಿಗಳು ಇಲ್ಲಿ ಜ್ಞಾನಯಜ್ಞ ನಿರತರಾಗಿದ್ದಾರೆ.

ಶ್ರೀ ಕ್ಷೇತ್ರದ ಸರ್ವಾಂಗೀಣ ಪ್ರಗತಿಗಾಗಿ, ಏಳ್ಗೆಗಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟ ಶ್ರೀ ರತ್ನವರ್ಮ ಹೆಗ್ಗಡೆಯವರು ಶ್ರೀ ಬಾಹುಬಲಿ ಮೂರ್ತಿಯನ್ನು ಸ್ಥಾಪಿಸುವ ವಿಚಾರವನ್ನು ಮಾಡಿದರು. ಅದಕ್ಕಾಗಿ ಮೂರ್ತಿ ರಚನೆಗೂ ಆಜ್ಞೆ ಮಾಡಿದ್ದರು. ಇನ್ನೂ ಬಹುಮುಖೀ ಸೇವೆ ದೊರೆಯುವುದಕ್ಕೆ ಮೊದಲೇ ಈ ಕಲ್ಪವೃಕ್ಷವನ್ನು ವಿಧಾತನು ತನ್ನಲ್ಲಿ ಕರೆದುಕೊಂಡನು.

ಶ್ರೀ ವೀರೇಂದ್ರ ಹೆಗ್ಗಡೆ

ಶ್ರೀ ರತ್ನವರ್ಮ ಹೆಗ್ಗಡೆಯವರ ಸಂತತಿ ಅವರ ಹಿರಿಯ ಪುತ್ರ ಶ್ರೀ ವೀರೇಂದ್ರ ಹೆಗ್ಗಡೆಯವರು ಪಟ್ಟವೇರಿದರು. ಶ್ರೀ ವೀರೇಂದ್ರರೂ ತನ್ನ ಪರಂಪರೆಯಂತೆಯೇ ಸದ್ಗುಣ ಸಂಪನ್ನರು, ಗಂಭೀರ ವ್ಯಕ್ತಿತ್ವವುಳ್ಳವರು; ತುಂಬು ಸಾತ್ವಿಕರು. ಧರ್ಮ, ಸಂಸ್ಕೃತಿ, ಕಲೆ, ಸಮಾಜ, ಶಿಕ್ಷಣ—ಮೊದಲಾದ ಜನಜೀವನದ ಅವಿಭಾಜ್ಯ ಅಂಗಗಳಲ್ಲಿ ಅತ್ಯಂತ ಆಸಕ್ತಿಯುಳ್ಳವರು; ತನ್ನ ಹಿರಿಯರ ಹೆಜ್ಜೆಯಲ್ಲೇ ಮುಂದುವರಿಯುವ ಇರಾದೆಯುಳ್ಳವರು.

ಶ್ರೀ ವೀರೇಂದ್ರ ಹೆಗ್ಗಡೆಯವರ ಅತಿ ತರುಣ ಪ್ರಾಯದಲ್ಲೇ ಅವರು

ಶ್ರೀ ಧರ್ಮಸ್ಥಳದ ಹಿಂದಿನ
ಧರ್ಮಾಧಿಕಾರಿ
ದಿ| ಡಿ. ರತ್ನವರ್ಮ ಹೆಗ್ಗಡೆ

ಶ್ರೀ ಮಂಜುನಾಥೇಶ್ವರ ಕಾಲೇಜನ್ನು ಕಟ್ಟುವ ಹೊಣೆ ಹೊರಬೇಕಾಯಿತು. ಈ ಜವಾಬ್ದಾರಿಯನ್ನು ಶ್ರೀಯುತರು ಅತ್ಯಂತ ಯಶಸ್ವಿಯಾಗಿ ನೆರವೇರಿಸಿಕೊಂಡರು. ಒಂದು ಉತ್ತಮ ಆದರ್ಶ ಕಾಲೇಜಿಗೆ ಬೇಕಾಗುವ ಸರ್ವ ಸವಲತ್ತುಗಳನ್ನೂ ಪೂರಯಿಸುವಲ್ಲಿ ನಿರತರಾದ ಅವರು ಅದರಲ್ಲಿ ಬಹುಪಾಲು ಯಶ ಗಳಿಸಿದ್ದಾರೆ.

ನಿರ್ಮಾಣವಾಗುತ್ತಿರುವ ಶ್ರೀ ಬಾಹುಬಲಿಯ ಮೂರ್ತಿಯನ್ನು ವಿಧ್ಯುಕ್ತವಾಗಿ ಪ್ರತಿಷ್ಠಾಪಿಸುವ ಮಹತ್ತರ ಹೊಣೆಗಾರಿಕೆ ಶ್ರೀ ವೀರೇಂದ್ರರ ಮೇಲಿದೆ. ಕಾರ್ಕಳದಿಂದ ಅದನ್ನು ಶ್ರೀಕ್ಷೇತ್ರಕ್ಕೆ ತರುವುದೂ ಅದನ್ನಲ್ಲಿ ಪ್ರತಿಷ್ಠಿಸುವುದೂ ತುಂಬ ಕಠಿಣವಾದ ಸಮಸ್ಯೆಯಾಗಿದೆ. ಶ್ರೀ ಸ್ವಾಮಿಯ ಅನುಗ್ರಹದಿಂದ ಈ ಸಮಸ್ಯೆಗಳು ಹಾಲಿನಂತೆ ತಿಳಿಯಾಗುವುದು ಖಂಡಿತವೇ.

ಶ್ರೀ ವೀರೇಂದ್ರರು ತರುಣರೂ ಪರಂಪರಾ ಪ್ರಾಪ್ತ ಸದ್ಗುಣಿಗಳು. ಶ್ರೀ ಕ್ಷೇತ್ರದ ಧಾರ್ಮಿಕ-ಸಾಂಸ್ಕೃತಿಕ ಕಾರ್ಯಕಲಾಪಗಳಿಗೆ ಎಳ್ಳಿನಷ್ಟಾದರೂ ಲೋಪದೋಷಗಳಿಗೆ ಅವಕಾಶ ನೀಡರು. ಸುದರ್ಶನ, ಧರ್ಮ, ಶ್ರೀ ಬಾಹುಬಲಿ ಕಲ್ಯಾಣಗಳಿಗೆ ಗಳಿಗೆಯೂ ಚಿಂತಿಸುತ್ತಿರುವ ಶ್ರೀ ಹೆಗ್ಗಡೆಯವರಿಂದ ಶ್ರೀ ಸ್ವಾಮಿಯ ಬಹುಕಾಲ ಬಹುವಿಧ ಸೇವೆ ನಡೆಯಿಸಿಕೊಳ್ಳಲು ಇಚ್ಛಿಸುವುದು ಸಹಜ.



ಶ್ರೀಕ್ಷೇತ್ರ ಧರ್ಮಸ್ಥಳ



ಶ್ರೀ ಚಂದ್ರನಾಥ ಸ್ವಾಮಿಯ ಬಸದಿ

“ಇತಿಹಾಸದ ಯಥಾರ್ಥತೆ”

(ಏಳನೇ ಪುಟದಿಂದ)

ತೇ? ಭಟ್ಟರು ಸ್ವತಃ ತಾನು ಆ ಕಾಲದಲ್ಲಿ ಇರಲಿಲ್ಲ. ಮತ್ತು ನೋಡಲಿಲ್ಲ. ಹಾಗೆ ನೋಡಿ ಯಾರಾದರೂ ಬರೆದಿದ್ದರೆ ಅದನ್ನು ಉದಾಹರಿಸಿಲ್ಲ. ಬೇರೆ ಯಾವ ಕಾರಣವನ್ನೂ ತೋರಿಸಲಿಲ್ಲ. ತಾನು ಬೇಡವೆಂದರೆ ಮತ್ತು ಹಾಗೆ ಬಯಸಿದರೆ ವಸ್ತುಸ್ಥಿತಿ ಬದಲಾದೀತೇ? ಪ್ರಾಚೀನ ಕಾಲದಲ್ಲಿ ನೋಡಿ ತಿಳಿದು ಬರೆದ ವಸ್ತುಸ್ಥಿತಿಯನ್ನು ಇದೀಗ ನಿಷ್ಕಾರಣ ಅಲ್ಲಗಳೆಯಲು ತಮಗೆ ಹಕ್ಕಿದೆಯೆಂಬಂತೆ ಇಂಥಾ ಇತಿಹಾಸಕಾರರು ವರ್ತಿಸುತ್ತಾರೆ. ಇದನ್ನು ನಾವು ಮನ್ನಿಸಲಾರೆವು. ಸರಿಯಾದ ಕಾರಣಕೊಟ್ಟು ಅಲ್ಲಗಳೆಯಬೇಕು. ಆದ್ದರಿಂದ ಹಿಂದಿನ ದಾಖಲೆಯಂತೆ ಗೌಡ ಸಾರಸ್ವತರಿಗೂ ಪರಶುರಾಮನಿಗೂ ಎಲ್ಲಾ ತರದ ಸಂಬಂಧವಿದೆ. ಅದನ್ನು ಅಲ್ಲಗಳೆಯಲು ಭಟ್ಟರಿಗೆ ಅಧಿಕಾರವಿಲ್ಲ” ಎನ್ನುತ್ತಾರೆ ಉಡುಪರು. (ಪು. 57)

ಉಡುಪರ ಈ ಹೇಳಿಕೆಯನ್ನು ಗಮನಿಸಿದಾಗ ಹಲವಾರು ಹೊಸ ಪ್ರಶ್ನೆಗಳು ಏಳುತ್ತವೆ. ಶ್ರೀಯುತ ಉಡುಪರು ಆಕಾಶವಾಣಿಯ ವಿಚಾರವನ್ನು ನಂಬುತ್ತಾರೆಯೇ? ಪರಶುರಾಮನೆಂಬವನೊಬ್ಬನು ಇದ್ದನೇ? ಅವನಿಗೂ ಈ ನೆಲಕ್ಕೂ ಇದೆ ಎಂದು ಹೇಳುವ ಸಂಬಂಧವನ್ನು ಉಡುಪರು ಒಪ್ಪುತ್ತಾರೆಯೇ? ಅವನಿಗೂ ಗೌಡಸಾರಸ್ವತರಿಗೂ ಎಲ್ಲ ತರದ ಸಂಬಂಧ ಇದೆ ಎಂದು ಧೈರ್ಯವಾಗಿ ಹೇಳುತ್ತಿರುವ ಉಡುಪರು ಪರಶುರಾಮನ ಕಾಲವನ್ನು ನಿರ್ಣಯಿಸಬೇಕು. ಗುರುರಾಜ ಭಟ್ಟರು ಸ್ವತಃ ಆ ಕಾಲದಲ್ಲಿ ಇರಲಿಲ್ಲ, ನೋಡಲೂ ಇಲ್ಲ. ಉಡುಪರೂ ನೋಡಲಿಲ್ಲ. ಇದು ಸತ್ಯ! ಸರಿಯಾಗಿ ಆಧಾರ ಕೊಡದೆ ಉಡುಪರ ಮಾತನ್ನು ಹೇಗೆ ನಂಬುವುದು? ಸರಿಯಾಗಿ ಕಾರಣ ಕೊಟ್ಟು ಗುರುರಾಜ ಭಟ್ಟರ ವಾದವನ್ನು ಅಲ್ಲಗಳೆಯಬೇಕು. ಆ ವಾದಕ್ಕೆ ಮುಖ್ಯವಾಗಿ ಬೇಕೇ ಬೇಕಾದುದು ಪರಶುರಾಮನ ಕಾಲ. ಆ ಕಾರಣ ಸಹ್ಯಾದ್ರಿ ಖಂಡದಲ್ಲಿ ಹೇಳಿದೆ ಅಥವಾ ಬೇರಾವುದೋ ಪುರಾಣವೋ ಶಾಸ್ತ್ರವೋ ಹೇಳಿವೆ ಎಂದಾಗ ಅದರಲ್ಲಿ ಚರಿತ್ರೆಯೊಂದಿಗೆ ಬೇರೆ ತರ ವಿಚಾರಗಳು ಸೇರಲ್ಪಡುತ್ತವೆ ಎಂಬುದನ್ನೂ ನಾವು ಮರೆಯುವಂತಿಲ್ಲ. ಏಕೆಂದರೆ ಚರಿತ್ರೆ ಮತ್ತು ಪುರಾಣಗಳ, ಶಾಸ್ತ್ರಗಳ ಉದ್ದೇಶ, ದೃಷ್ಟಿ ಬೇರೆ ಬೇರೆ.

ಮುಂದೆ ಪುಟ 59ರಲ್ಲಿ “ಆದುದರಿಂದ ಮೊದಲಿನಿಂದಲೂ ಗೌಡ ಸಾರಸ್ವತರಲ್ಲಿ (ಮಧ್ವಾಚಾರ್ಯರ ಮೊದಲಿನಿಂದಲೂ) ಶೈವ-ವೈಷ್ಣವ ಭೇದಗಳಿತ್ತು. ಅನಂತರದ್ದಲ್ಲ” ಎನ್ನುತ್ತಾರೆ ಉಡುಪರು. ಮೊದಲಿನಿಂದಲೂ “ಎಂಬ ಮಾತಿನ ಅರ್ಥವೇನು? ಎಷ್ಟು ಮೊದಲಿನಿಂದಲೂ ಸೃಷ್ಟಿಯ ಆದಿಯಿಂದಲೂ ಎಂಬರ್ಥವೇ ಅದಕ್ಕೆ?” ಸಂಶೋಧನೆಯಲ್ಲಿ “ಮೊದಲಿನಿಂದಲೂ” “ಅನಾದಿಯಿಂದ” “ಪ್ರಾಚೀನ ಕಾಲದಿಂದ” “ಬಹು ಹಿಂದೆ” ಇಂಥ ಮಾತುಗಳು ಬಂದರೆ ಏನೂ ಪ್ರಯೋಜನವಿಲ್ಲ. ಸಾಧ್ಯವಾದರೆ ಸರಿಯಾಗಿ, ಇಲ್ಲವಾದರೆ ಅನುಮಾನಿತ ಸತ್ಯದಿಂದ “ಸುಮಾರು ಕಾಲ ಇಷ್ಟು” ಎಂದು ಹೇಳಿದರೇನೇ ಉಪಯೋಗ.

ಮುಂದೆ “ಕೊಂಕಣಿ ಶಬ್ದ ವ್ಯಾಪಕ ಗೌಡ ಸಾರಸ್ವತ, ಸಾರಸ್ವತ ಶಬ್ದ ಕೆಲವೊಂದು ಪಂಗಡಗಳನ್ನು ಮಾತ್ರ ತಿಳಿಯುತ್ತದೆ. ಆದುದರಿಂದ ಆವೆರಡೂ ಶಬ್ದಗಳೂ ಪರ್ಯಾಯ ಪದಗಳು ಎಂದು ತಿಳಿಯಬಾರದು. ಗೌಡ ಸಾರಸ್ವತರು ಶೂದ್ರರಲ್ಲ ಕೊಂಕಣರು. ಶೂದ್ರರೂ ಇರಬಹುದು. ಈ ವಿವೇಚನೆ ಮಾಡದೆ ಭಟ್ಟರು ಕೆಲವೊಂದು ತಪ್ಪು ಮಾಡಿರುತ್ತಾರೆ” (ಪುಟ 59) ಇದೇ ಅಭಿಪ್ರಾಯವನ್ನು ಪುಟ 92ರಲ್ಲೂ ಕೊಡುತ್ತಾರೆ.

ಆದರೆ ಗುರುರಾಜ ಭಟ್ಟರ “ತುಳುನಾಡು” ಪುಸ್ತಕವನ್ನೋದಿದರೆ ಗುರುರಾಜ ಭಟ್ಟರು ಭ್ರಮಿಸಿಲ್ಲ. ಉಡುಪರು ತಪ್ಪಾಗಿ ಗ್ರಹಿಸಿದ್ದಾರೆ ಎಂದು ತಿಳಿಯುತ್ತದೆ. ಗುರುರಾಜ ಭಟ್ಟರ ತುಳುನಾಡು ಪುಸ್ತಕದ ಗೌಡ ಸಾರಸ್ವತ ಬ್ರಾಹ್ಮಣರು ಎಂಬ ಶಿರೋನಾಮೆಯಿಂದ ಆರಂಭವಾಗುವ ಲೇಖನದ (ಪುಟ 159) ಮೊದಲಿನ ವಾಕ್ಯ ಹೀಗಿದೆ. “ಇವರನ್ನು ಕೊಂಕಣರೆಂದು ಸಾಮಾನ್ಯವಾಗಿ ಕರೆಯುವುದು ವಾಡಿಕೆ.” ಈ ಮಾತಿನ ಅರ್ಥ ಗೌಡ ಸಾರಸ್ವತರೂ ಕೊಂಕಣರೂ ಒಂದೇ ಎಂದಲ್ಲ. ಹಾಗೆ ಕರೆಯುತ್ತಿರುವುದು ವಾಡಿಕೆ. ಹಾಗೆ ವಾಡಿಕೆ ಇರುವುದು ಎಲ್ಲರಿಗೂ ತಿಳಿದ ವಿಚಾರವೇ.

ಈ ವಾಡಿಕೆಯಂತೆಯೇ ಕೊಂಕಣೋತ್ಪತ್ತಿ ಅಧ್ಯಾಯದಲ್ಲಿರುವ ಕೊಂಕಣದ ವಿಚಾರ ಗೌಡಸಾರಸ್ವತರೇ ಇರಬೇಕು ಎನ್ನುವುದು. ಆದರೆ ಅಲ್ಲಿ ಉಕ್ತವಾದ ಕೊಂಕಣರು ಗೌಡಸಾರಸ್ವತರಲ್ಲವೆಂದೂ ಅದು ಶೂದ್ರ ಬ್ರಾಹ್ಮಣರೆಂದೂ ಉಡುಪರು ವಾದಿಸುತ್ತಾರೆ. ‘ಆ ಶೂದ್ರಬ್ರಾಹ್ಮಣರೆ, ಗೌಡಸಾರಸ್ವತರೆಂಬುದಾಗಿ ಭಟ್ಟರು ಭ್ರಮಿಸಿದ್ದಾರೆ” ಎನ್ನುತ್ತಾರೆ ಉಡುಪರು. ತುಳುನಾಡು ಪುಟ 160ರಲ್ಲಿ ಶ್ರೀಭಟ್ಟರು ಕಮತ್ತಿ, ನಾಯಕ, ಶೇಣ, ಶೆಣೈ, ಮಲ್ಯ, ಕುಡ್ವ, ಭೋವ, ಭಕ್ತ, ಪರ್ಬು, ಹೆಗಡೆ, ಬಾಳಿಗ, ಪೈ, ಪಡಿಯಾ, ಭಂಡಾರಿ ಎಂಬುದಾಗಿ ಕೊಂಕಣರಲ್ಲಿ ಹದಿನಾಲ್ಕು ಪ್ರಬೇಧಗಳುಂಟು. ಉಡುಪರ ವಾದದ ಪ್ರಕಾರ ಈ ಹದಿನಾಲ್ಕು ಕುಟುಂಬಗಳೂ ಶೂದ್ರ ಬ್ರಾಹ್ಮಣ ಕುಲ ಎಂದಂತಾಗುವುದಿಲ್ಲವೇ? ಆದರೆ ಈ ಹದಿನಾಲ್ಕು ಕುಟುಂಬಗಳೂ ಈಗ ನಾವು ಕಾಣುತ್ತಿರುವ ಗೌಡಸಾರಸ್ವತರಲ್ಲದೆ. ಆ ಕಾರಣ ಆವೆರಡು ಕುಲಗಳೂ ಒಂದೇ ಎಂದು ಬಗೆದೇ ಉತ್ತರ ಸಹ್ಯಾದ್ರಿ ಖಂಡದಲ್ಲಿ ಉಕ್ತವಾಗಿದ್ದಿರಬೇಕು. ಆ ಕಾರಣವೇ ಗುರುರಾಜ ಭಟ್ಟರು “ತುಳುವಕ್ಕೆ ಆಗಮಿಸಿದುದರಿಂದ ಅವರನ್ನು ಕೊಂಕಣರೆಂದು ಕರೆಯುವುದು ನಿಜವಾಗಿಯೂ ದರೂ ತಪ್ಪು ಇಲ್ಲ. ಇದರಲ್ಲಿ ಅಪಹಾಸ್ಯ ಇಲ್ಲ.” (ಪುಟ 156) ಎಂದಿರುವುದು.

ಶ್ರೀ ಗುರುರಾಜ ಭಟ್ಟರು ಸಾರಸ್ವತ ಗೌಡಸಾರಸ್ವತರು ಒಂದೇ ಎಂದು ಭ್ರಮಿಸಿದ್ದೇ ಆದರೆ ಗೌಡಸಾರಸ್ವತರು ಮತ್ತು ಸಾರಸ್ವತರು ಎಂಬ ಎರಡು ಶಿರೋನಾಮೆಯನ್ನೇಕೆ ಕೊಡುತ್ತಿದ್ದರು? (ಪುಟ 156, 169) ಎರಡೂ ಜಾತಿಗಳ ಕುಲನಾಮಪಟ್ಟಿಯನ್ನೇಕೆ ಬೇರೆ ಬೇರೆಯಾಗಿ ಕೊಟ್ಟರು? (ಪುಟ 184) ಆ ಕಾರಣ ಈ ವಿಚಾರದಲ್ಲಿ ತುಳುನಾಡು ಪುಸ್ತಕದ ಬಗೆಗೆ ಉಡುಪರ ಹೇಳಿಕೆ ಅಸಾಧು ಎಂದು ಸಿದ್ಧವಾಗುತ್ತದೆ.

ಉಡುಪರು, ಥರ್ಸ್ಟನ್ ದೊರೆಕೊಟ್ಟ ಇಂಡೆಕ್ಸಿನ ಕುರಿತಾಗಿ ಗುರುರಾಜ ಭಟ್ಟರ ಹೇಳಿಕೆಯನ್ನು ವಿಮರ್ಶಿಸುತ್ತಾರೆ. ‘ಆತನ ಹೇಳಿಕೆಯನ್ನು ನಂಬುವುದು ಕಷ್ಟ. ಕಿತ್ತೊಗೆಯುವುದೂ ಅಸಾಧ್ಯ” ಎಂಬರ್ಥದ ಗುರುರಾಜ ಭಟ್ಟರ ಮಾತಿನ ಮೇಲಿನ ಟೀಕೆ ಹೀಗಿದೆ (ಪುಟ 67) “ಅಂದರೆ ವ್ಯಾಪ್ತಿ ನಿಶ್ಚಯವಿಲ್ಲದುದರಿಂದ ಅನುಮಾನ ಅಸಾಧ್ಯವೆಂದು ಸಾಧಿಸಿದರೂ ಪ್ರತಿಜ್ಞಾತಾರ್ಥ ಬಿಡಲು ಸಾಧ್ಯವಿಲ್ಲವೆನ್ನುತ್ತಾರಲ್ಲಾ! ಇದು ಎಂಥಾ ವಿವೇಚನಾಶಕ್ತಿ ಭಟ್ಟರದ್ದು?....ಅವರ ಗ್ರಂಥ ಓದಿದವರಿಗೆ ಇಂಗ್ಲೀಷು ಬುಕ್ಕಿನಲ್ಲಿ ಬರೆದಿದ್ದರೆ ಚಾರಿತ್ರಿಕ, ಬರೆದಿಲ್ಲವಾದರೆ ಐತಿಹಾಸಿಕವಲ್ಲ ಎಂಬ ಕಲ್ಪನೆ ಸಹಜವಾಗಿ ಮೂಡುತ್ತದೆ. ಏನೇ ಇರಲಿ, ಥರ್ಸ್ಟನ್ ದೊರೆ ಬರೆದುದರಿಂದ ಒಂದು ವೇಳೆ ಚಾರಿತ್ರಿಕವೆಂದು ಭಟ್ಟರು ಹೇಳಬಹುದಾದರೂ ಶಿವಳ್ಳಿಯವರು ಉತ್ತಮ ವರ್ಗಕ್ಕೆ ಸೇರಿದವರೆಂಬ ಸಂಗತಿ ಸಂಶಯಾಸ್ಪದವೆಂದು ಒಪ್ಪಿದಂತಾಯಿತು.”

ಇಲ್ಲಿ ಶ್ರೀಯುತ ಗುರುರಾಜ ಭಟ್ಟರು “ನಂಬುವುದು ಕಷ್ಟ ಏಕೆಂದರೆ ಅವರ ಪ್ರಯೋಗಗಳನ್ನು ಮತ್ತೂ ಮುಂದುವರಿಸಿ, ಅನೇಕಾನೇಕ ದೃಷ್ಟಾಂತಗಳಿಂದ ದೃಢೀಕರಿಸುವುದು ಅಗತ್ಯ” ಎಂದು ಹೇಳುವ ಮಾತನ್ನು ಲಕ್ಷಿಸಬೇಕು ಎಂದರೆ ಸರಿಯಾಗಿ ಇನ್ನೂ ಶೋಧನೆ ಆಗಬೇಕು ಹಾಗೆಂದು ಅದರಲ್ಲಿ ಸತ್ಯಾಂಶವೇ ಇಲ್ಲವೆಂದು ತ್ಯಜಿಸುವಂತೆಯೂ ಇಲ್ಲ. ಇನ್ನೂ ಪ್ರಮಾಣಗಳು ಬೇಕು. ಸಿಕ್ಕ ಪ್ರಮಾಣಗಳು ಬಲವಾಗಿಲ್ಲ ಎಂಬುದಷ್ಟೇ ಅರ್ಥ. ಆ ಕಾರಣ ಭಟ್ಟರ ವಿವೇಚನಾ ಶಕ್ತಿ ಇಲ್ಲಿ ಸರಿಯಾಗಿಯೇ ಕೆಲಸ ಮಾಡಿದೆ ಎಂದು ತಿಳಿದು ಕೊಳ್ಳಲು ಮರೆಯಬಾರದು. ಗುರುರಾಜ ಭಟ್ಟರ ಅಭಿಪ್ರಾಯದಲ್ಲಿ ಇಂಗ್ಲೀಷು ಪುಸ್ತಕದಲ್ಲಿದ್ದರೆ ಮಾತ್ರ ಚಾರಿತ್ರಿಕವೆಂದಿದ್ದರೆ ಥರ್ಸ್ಟನ್ ದೊರೆಯ ಅಭಿಪ್ರಾಯವನ್ನು ನಂಬುವುದು ಕಷ್ಟ ಎಂದು ಏಕೆ ಹೇಳುತ್ತಿದ್ದರು? ವಿವೇಚಿಸಬೇಕು. ಅಲ್ಲಿ “ಒಂದು ವೇಳೆ”ಯ ಪ್ರಶ್ನೆಯೇ ಇಲ್ಲ.

ಉಡುಪರು ಪುಟ 71ರಲ್ಲಿ “ಭಟ್ಟರ ಪ್ರಕಾರ 1ನೇ ವಲಸೆಗಾರರು ಸ್ಥಾನಿಕರು ಸಕುಟುಂಬ ಬಂದಿರುತ್ತಾರೆ ಅದರಲ್ಲಿ ಸಂಶಯವಿಲ್ಲ ಸಾಧ್ಯವಿಲ್ಲ. ಅವರು ಶೂದ್ರ ಸ್ತ್ರೀಯರನ್ನು ಮದುವೆಯಾಗಬಾರದು. ಅವರನ್ನು ಎತ್ತಿ ಹಿಡಿಯುವುದೇ ಈ ಗ್ರಂಥದ ಉದ್ದೇಶವಾಗಿದೆ. 2ನೇ ವಲಸೆಗಾರರು ಹವೀಕರು ಸಕುಟುಂಬ ಬಂದಿರುತ್ತಾರೆ (ಅವರು ಶೂದ್ರ ಸ್ತ್ರೀಯರನ್ನು ಮದುವೆಯಾಗಲು ಗಂಡಸರು ಮಾತ್ರ ಬರಲಿಲ್ಲ. ಅವರನ್ನು ತೆಗಳುವ ಉದ್ದೇಶವೂ ಈ ಗ್ರಂಥಕ್ಕಿಲ್ಲ) 3ನೇ ವಲಸೆಗಾರರು ಶಿವಳ್ಳಿಯವರು; ಇವರು ಮಾತ್ರ ಕೇವಲ ಗಂಡಸರೇ ಬಂದಿರುತ್ತಾರೆ. (ಇವರ ಶೂದ್ರ ಸ್ತ್ರೀಯರನ್ನು ಮದುವೆಮಾಡಿಕೊಳ್ಳಲಿಕ್ಕೇ ಬೇಕು. ಅವರನ್ನು ಕೀಳು ತರವಾಗಿ ತೋರಿಸುವುದೇ ಈ ಗ್ರಂಥದ ಉದ್ದೇಶವಾಗಿದೆ.)” ಎಂದು ಬರೆದಿದ್ದಾರೆ.

ಭಟ್ಟರು ಯಾವೊಂದು ಜಾತಿಯ ಮೇಲೆ ದ್ವೇಷ ಕಾರಲಿಕ್ಕೆ ಪುಸ್ತಕವನ್ನು ಬರೆದಿಲ್ಲ ಎನ್ನಲು ಹಲವು ಆಧಾರಗಳು ಅವರ ಪುಸ್ತಕದಲ್ಲಿಯೇ ಸಿಗುತ್ತವೆ. ಇಲ್ಲಿ ನಾವು ತಿಳಿಯಲೇ ಬೇಕಾದ ಅಂಶವೇನೆಂದರೆ ಗುರುರಾಜ ಭಟ್ಟರು ಎಲ್ಲಿಯೂ “ಶಿವಳ್ಳಿಯವರು ಮಾತ್ರ ಬಂಟ ಸ್ತ್ರೀಯರಲ್ಲಿ ಜನಿಸಿದವರು” ಎಂದು ಹೇಳಲಿಲ್ಲ. ಅದಕ್ಕಾಗಿಯೇ ಪುಟ 230ರಲ್ಲಿ “ತುಳುವದಲ್ಲಿ ಬ್ರಾಹ್ಮಣರಲ್ಲಿ ಜಾತಿ ಸಂಕೀರ್ಣ (Racial intermixture) ಆಗಿರಬೇಕು ಎಂಬುದಕ್ಕೆ ಇದೊಂದು ನಿದರ್ಶನ. ಆದುದರಿಂದ ಯಾವ ವರ್ಗದವರೂ ಜಾತಿ ಪರಿಶುದ್ಧತೆಯ (Racial purity) ಕುರಿತ ವಾದಿಸುವಂತಿಲ್ಲ” ಎಂಬುದನ್ನು ನಾವು ಮರೆಯುವಂತಿಲ್ಲ. ಮುಂದುವರಿಸುತ್ತಾ ಭಟ್ಟರು “ದಕ್ಷಿಣ ಭಾರತದ ದ್ರಾವಿಡ ಬ್ರಾಹ್ಮಣರ ಮೂಲದ ಕುರಿತಾಗಿಯೇ ಈ ವಿಷಯಗಳು ಹೇಳಲಾಗಿವೆ. ಅವುಗಳು ಸತ್ಯವಾದುವುಗಳೂ ಆಗಿವೆ. “ಈಗ ಸಾಮಾನ್ಯವಾಗಿ ತಿಳಿದು ಅಂಗೀಕರಿಸಲ್ಪಟ್ಟಂತೆ, ದಕ್ಷಿಣದ ಬ್ರಾಹ್ಮಣರು ಪರಿಶುದ್ಧ ಆರ್ಯರಲ್ಲ. ಇವರು ಆರ್ಯ ಮತ್ತು ದ್ರಾವಿಡ ಜನಾಂಗಗಳ ಸೇರ್ಪಡೆಯಿಂದಾದ ವರ್ಗ. ಹಳೆಗಾಲದಲ್ಲಿ, ಈಗ ಕಂಡು ಬರುವಂತೆ ಜಾತೀಯತೆಯು ಅಷ್ಟು ಕಠಿಣವಾಗಿರಲಿಲ್ಲ” ಎಂದು ಹೇಳುತ್ತಾರೆ. ಪುಟ 231ರಲ್ಲಿ ಜಾತಿ ಸಂಕರದ ವಿಚಾರದಲ್ಲಿ ಸಮಾಧಾನಿಯುತ್ತಾರೆ. ಯಾವುದಕ್ಕೂ ಸರಿಯಾದ ಆಧಾರವಿಲ್ಲದೇ ಇದ್ದುದರಿಂದ ಮುಂದಿನ ಬಲ್ಲವರ “ದ್ವೈತಮತ ಖಂ

(ಹದಿಮೂರನೇ ಪುಟ ನೋಡಿರಿ)

ಸಂದರ್ಶಿಸಿರಿ—ಸಂತೃಪ್ತರಾಗಿರಿ!!
ಬಿಳ್ಳಿ ಬಂಗಾರ ವಜ್ರಗಳಿಗೆ, ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೇಟ್ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್
—ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ—
ಐಡಿಯಲ್ ಫೋಟೋ ಹೌಸ್ PHONE: 3131
ಆಗ್ಫಾ ಕೊಡಕ್, ಇಲ್‌ಫೋರ್ಡ್ ಗಿವರ್ಟ್ ಮತ್ತು ಹಿಂದು ಫಿಲ್ಮುಗಳ
ಅಧಿಕೃತ ವ್ಯಾಪಾರಿಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1
Telc: GOLDKING Estd: 1947 Phone: 3242 Res:3272

ಭಾರತೀಯ ಸ್ವಾತಂತ್ರ್ಯ ಶಿಲ್ಪಿಗಳು

(ಆರನೇ ಪುಟದಿಂದ)

ದ್ದರು. ಆದರೂ ಪ್ರಗತಿಯೊಂದು ಕಡೆಯೂ ಆವರಿದ್ದರಿಂದು ತಮಗೆನಿಸಿತೆಂದು ನೆಹರೂರವರು ಹೇಳಿದರು. ತಮ್ಮ ಸೋವಿಯೆತ್ ಭೇಟಿಯ ಪರಿಣಾಮಗಳನ್ನು ನೆಹರೂರವರು ಹೀಗೆ ವಿವರಿಸಿದ್ದರು: "ನನ್ನ ದೃಷ್ಟಿ ವ್ಯಾಪಕತರವಾಯಿತು. ರಾಷ್ಟ್ರೀಯವಾದವು, ಸ್ವತಃ ಸಂಕುಚಿತವಾದ ಮತ್ತು ಪರಿಪೂರ್ಣವಲ್ಲದ ನಂಬಿಕೆಯೆಂದು ನನಗೆನಿಸಿತು. ರಾಜಕೀಯ ವಿಮುಕ್ತಿ, ಸ್ವಾತಂತ್ರ್ಯ ಇವು ನಿಸ್ಸಂದೇಹವಾಗಿಯೂ ಅವಶ್ಯಕವಾಗಿದ್ದುವು. ಆದರೆ ಅವು ಸರಿಯಾದ ದಿಶೆಯಲ್ಲಿನ ಹೆಜ್ಜೆಗಳು ಮಾತ್ರವಷ್ಟೇ ಆಗಿದ್ದುವು. ಸಾಮಾಜಿಕ ಸ್ವಾತಂತ್ರ್ಯವಿಲ್ಲದೆ, ಸಮಾಜದ ಮತ್ತು ರಾಜ್ಯದ ಸಮಾಜವಾದೀ ಸಂರಚನೆಯಿಲ್ಲದೆ, ದೇಶವಾಗಲೀ ವ್ಯಕ್ತಿಯಾಗಲೀ ತುಂಬಾ ವಿಕಾಸಗೊಳ್ಳುವುದು ಅಸಾಧ್ಯ."

ಆ ಸೋವಿಯತ್ ಸಂದರ್ಶನದ ತರುವಾಯ, ಸಮಾಜವಾದೀ ನಮೂನೆಯ ಸಮಾಜದ ಸಲುವಾಗಿ ಕೆಲಸಮಾಡಬೇಕಾದ ಅವಶ್ಯಕತೆಯನ್ನು ಕಾಂಗ್ರೆಸ್ ಸಂಸ್ಥೆಗೂ ನಾಡಿನ ಜನತೆಗೂ ಮನದಟ್ಟು ಮಾಡಲು ನೆಹರೂ ಅವರು ಶ್ರಮವಹಿಸಿ ಸರ್ವಪ್ರಯತ್ನವನ್ನೂ ಮಾಡಿದರು. "ಭಾರತೀಯರ ಬಡತನವನ್ನೂ, ವ್ಯಾಪಕವಾದ ನಿರುದ್ಯೋಗವನ್ನೂ, ಹೀನ ಸ್ಥಿತಿಯನ್ನೂ ಅಧೀನತೆಯನ್ನೂ ಕೊನೆಗಾಣಿಸುವುದಕ್ಕೆ ಸಮಾಜವಾದ ಮಾರ್ಗದ ಹೊರತು ಬೇರೆ ಯಾವ ಮಾರ್ಗವೂ ಇಲ್ಲವೆಂದು ನನಗೆ ಕಂಡುಬರುತ್ತದೆ. ಅದಕ್ಕಾಗಿ ನಮ್ಮ ರಾಜಕೀಯ, ಸಾಮಾಜಿಕ ಸಂರಚನೆಯಲ್ಲಿ ವ್ಯಾಪಕವಾದ, ಕ್ರಾಂತಿಕಾರೀ ಪರಿವರ್ತನೆಗಳಾಗಬೇಕಾಗುತ್ತದೆ, ಭೂಮಿಯಲ್ಲಿಯೂ ಕೈಗಾರಿಕೆಗಳಲ್ಲಿಯೂ ಪಟ್ಟಭದ್ರ ಹಿತಾಸಕ್ತಿಗಳನ್ನೂ, ಹಾಗೂ ಸಾಮಂತ, ನಿರಂಕುಶ ಅಧಿಕಾರ ಚಲಾಯಿಸುತ್ತಿರುವ ಭಾರತೀಯ ಸಂಸ್ಥಾನಗಳ ವ್ಯವಸ್ಥೆಯನ್ನೂ ಕೊನೆಗಾಣಿಸಬೇಕಾಗುತ್ತದೆ. ಹಾಗೆಂದರೆ, ಖಾಸಗೀ ಆಸ್ತಿಯ ಕೊನೆಗಾಣಿಕೆ— ಒಂದು ಸೀಮಿತ ಅರ್ಥದ ಹೊರತು,—ಮತ್ತು ಈಗಿನ ಲಾಭ ವ್ಯವಸ್ಥೆಗೆ ಬದಲಾಗಿ, ಸಹಕಾರೀ ಸೇವೆಯ ಉನ್ನತತರ ಧ್ಯೇಯ. ಬಳಕೆಗೆ ಬರಬೇಕೆಂದು ಅರ್ಥವಾಗುತ್ತದೆ. ಎಂದರೆ, ಕಟ್ಟಕಡೆಗೆ, ನಮ್ಮ ಸಹಜ ಪ್ರವೃತ್ತಿಗಳು ರೂಢಿಗಳು ಮತ್ತು ಇಚ್ಛೆಗಳು ಬದಲಾಯಿಸಬೇಕೆಂದು ಅರ್ಥವಾಗುತ್ತದೆ. ಸಂಕ್ಷೇಪದಲ್ಲಿಯೇ ಹೇಳುವುದಾದರೆ, ಅದೊಂದು ಹೊಸ ನಾಗರಿಕತೆಯೆಂದೂ, ಅದು ಇಂದಿನ ಬಂಡವಾಳವಾದಿ ವ್ಯವಸ್ಥೆಯಿಂದ ಮೂಲತಃ ಬೇರೆಯಾದುದೆಂದೂ ಅವರು 1936 ರಲ್ಲಿ ಲಖನೌ ನಗರದಲ್ಲಿ ನಡೆದ ಕಾಂಗ್ರೆಸ್ ಮಹಾಧಿವೇಶನದ ಅಧ್ಯಕ್ಷಪೀಠದಿಂದ ಘಂಟಾಘೋಷವಾಗಿ ಸಾರಿಹೇಳಿದರು.

ಈ ಶತಮಾನದ ಪ್ರಥಮಾರ್ಧದಲ್ಲಿ ನೆಹರೂ ಅವರು ಬೇರಾವ ಭಾರತೀಯ ವ್ಯಕ್ತಿಗಿಂತಲೂ ಹೆಚ್ಚಾಗಿ ವಿಕಾಸೋನ್ಮುಖ ಭಾರತ ದೇಶದ ಚಿತ್ತವೃತ್ತಿಯನ್ನು ಪ್ರತಿನಿಧೀಕರಿಸಿದರು. ರಿಕ್ಷಾಗಾಡಿಗಳ ಮತ್ತು ಎತ್ತಿನ ಗಾಡಿಗಳ ಯುಗದಿಂದ ವಿಜ್ಞಾನದ ಮತ್ತು ತಂತ್ರಜ್ಞಾನದ ಯುಗಕ್ಕೆ ಒಮ್ಮೆಗೇ ಸಾಗಿಬರಲು ವಿಭಿನ್ನ ಕಾಲದ ಮಾರ್ಗಗಳ ಸೆಳೆತದ ಮಧ್ಯೆ ಹೋರಾಡುತ್ತಿದ್ದ ಪುರಾತನ ಜನತೆಯ ಆಸೆ—ನಿರಾಸೆಗಳಿಗೂ, ಕನಸು—ಭ್ರಾಂತಿಗಳಿಗೂ; ಸಿಟ್ಟು—ತಾಳ್ಮೆಗಳಿಗೂ ನೆಹರೂರವರು ಮೂರ್ತಸ್ವರೂಪರಾಗಿದ್ದರು. ಈ ಅರ್ಥದಲ್ಲಿ 20ನೆಯ ಶತಮಾನದಲ್ಲಿ ನೆಹರೂ ಅವರೇ ಭಾರತವಾಗಿದ್ದರೆನ್ನಬಹುದು.

ಭಾರತವು "ಬರ್ಬರತೆಯ ಅವ್ಯವಸ್ಥೆಗೆ" ಪುನಃ ಜಾರುವುದನ್ನು ತಪ್ಪಿಸುವುದಕ್ಕಾಗಿ ಕೆಲವು ಸೂತ್ರಗಳನ್ನು ಜವಾಹರಲಾಲ್ ನೆಹರೂ ಅವರು ವಿಕಾಸಗೊಳಿಸಿದರು ಮತ್ತು ಕೆಲವು ಕಾರ್ಯನೀತಿಗಳನ್ನು ಗೊತ್ತುಪಡಿಸಿದರು.

ಮಹಾಕವಿ
ರವೀಂದ್ರನಾಥ ಠಾಕೂರರು

ಈ ಶತಮಾನದ ಪ್ರಥಮಾರ್ಧದಲ್ಲಿ ಭಾರತದ ಸಾರ್ವಜನಿಕ ರಂಗದ ಮೇಲೆ ಕಂಡುಬಂದ ಅಗ್ರಗಣ್ಯ ವ್ಯಕ್ತಿಗಳು ಮೂವರು—ದೂರದರ್ಶಿ ಮಹಾತ್ಮ ಗಾಂಧಿಯವರು, ರಾಜ್ಯನೀತಿಜ್ಞ ನೆಹರೂ ಅವರು, ಮತ್ತು ಮಹಾಕವಿ ರವೀಂದ್ರನಾಥ ಠಾಕೂರರು. ರಶಿಯನ್ ಕ್ರಾಂತಿ ಮತ್ತು ಲೆನಿನ್ ವಿಚಾರಗಳ ಬಗೆಗೆ ಈ ವ್ಯಕ್ತಿ ಮೊದಲು ಹೆಸರಿಸಲಾದ ಇಬ್ಬರು ಮಹಾಪುರುಷರ ಧೋರಣೆಯನ್ನು ನಾನಿಲ್ಲಿ ಸ್ವಲ್ಪ ದೀರ್ಘವಾಗಿಯೇ ವಿವರಿಸಿದ್ದೇನೆ. ಈಗ ನಾನು ಮಹಾಕವಿ ರವೀಂದ್ರನಾಥ ಠಾಕೂರರ ಕುರಿತು ಕೆಲವು ಶಬ್ದಗಳನ್ನು ಬರೆಯಬಯಸುತ್ತೇನೆ. 1930ರಲ್ಲಿ ಕವಿ ರವೀಂದ್ರರು ಸೋವಿಯೆತ್ ಒಕ್ಕೂಟಕ್ಕೆ ಭೇಟಿಕೊಟ್ಟರು. ಅಲ್ಲಿಯ ಪ್ರಗತಿಯನ್ನು ಕಂಡು ಅವರು ವಿಶೇಷ ಪ್ರಭಾವಿತರಾದರು. ಮುಖ್ಯವಾಗಿ ಶಿಕ್ಷಣ ಕ್ಷೇತ್ರದ ಪ್ರಗತಿಯು ಅವರಿಗೆ ಮೆಚ್ಚಿಕೆಯಾಯಿತು. ಕ್ರಾಂತಿಯ ಪ್ರಾರಂಭ ದೆಶೆಯಿಂದಲೂ ಲೆನಿನ್ನರು ಶಿಕ್ಷಣಕ್ಕೆ ವಿಶೇಷ ಮಹತ್ವವನ್ನು ನೀಡಿದರು. ಠಾಕೂರರು ನಾಗರಿಕ ಸಮಾಜ ಸ್ಥಿತಿಯನ್ನು ದೀಪಕ್ಕೆ ಹೋಲಿಸಿದರು. ಅಕ್ಟೋಬರ ಕ್ರಾಂತಿಯು ಸಂಭವಿಸುವವರೆಗೆ ನಾಗರಿಕ ಸಮಾಜಸ್ಥಿತಿಯು ತನ್ನ ಬೆಳಕನ್ನು ಮೇಲ್ಗಡೆಗೆ ಪ್ರಸರಿಸುವ ಎಣ್ಣೆ ದೀಪದಂತೆ ಇದ್ದಿತು. ಆಗ ಆ ದೀಪದ ಹತ್ತರಲ್ಲೊಂದು ಪಾಲಿನಷ್ಟು ಭಾಗ ಮಾತ್ರವೇ ಪ್ರಕಾಶ ಪಡೆಯುತ್ತದೆ. ಮಿಕ್ಕ ಹತ್ತರಲ್ಲೊಂಬತ್ತು ಪಾಲು ಕತ್ತಲೆಯಲ್ಲಿ ಉಳಿಯುತ್ತದೆ. ಇದರ ಜತೆಗೆ ಆ ದೀಪದ ಕೆಳಗಡೆಯಲ್ಲಿ ಹೊಗೆ ಮಸಿಯೂ ಎಣ್ಣೆಯೂ ಇರುತ್ತದೆ. ಮಾನವನ ಇತಿಹಾಸದಲ್ಲಿ ಮೊಟ್ಟಮೊದಲನೆಯ ಸಲ ರಶಿಯದಲ್ಲಿ ಸಮಾಜದ ಇಡೀ ದೀಪಕ್ಕೆ ಪ್ರಕಾಶ ದೊರೆಯಲಾರಂಭಿಸಿತೆಂದು ಕವಿ ರವೀಂದ್ರರು ಹೇಳಿದರು.

ಪ್ಲಾಸ್ಟಿಕ್ ಪಾರದರ್ಶಕ ಪಟಲದಿಂದ
ಅಂಧರಿಗೆ ದೃಷ್ಟಿದಾನ

ಗಾಯ ಅಥವಾ ರೋಗಗಳಿಂದಾಗಿ ಅಂಧರಾದ ನಲವತ್ತು ಮಂದಿ, ಅಮೆರಿಕದ ಆಸ್ಪತ್ರೆಯೊಂದರಲ್ಲಿ ಅಭಿವೃದ್ಧಿಗೊಳಿಸಲಾದ ಕೃತಕ ಪಟಲದ ಸಹಾಯದಿಂದ ಮತ್ತೆ ದೃಷ್ಟಿ ಪಡೆದಿದ್ದಾರೆ.

ನ್ಯೂಯಾರ್ಕ ನಗರದಲ್ಲಿರುವ ಕೊಲಂಬಿಯ ಪ್ರೆಸ್ಬೈಟೇರಿಯನ್ ಮೆಡಿಕಲ್ ಸೆಂಟರಿನ ಕಣ್ಣಿನ ಇನ್ಸ್ಟಿಟ್ಯೂಟಿನ ನೇತ್ರ ಚಿಕಿತ್ಸಾ ವಿಜ್ಞಾನದ ಪ್ರಾಧ್ಯಾಪಕ ಡಾ| ಹೆರ್ನಾಂಡೋ ಕಾರ್ಡೋನಾ ಅವರು ಹತ್ತು ವರ್ಷಗಳ ಸಂಶೋಧನೆಯ ನಂತರ ಈ ಕೃತಕ ಪಟಲದ ತಯಾರಿಕೆ ಮತ್ತು ಅದನ್ನು ಕಣ್ಣಿನಲ್ಲಿ ಅಳವಡಿಸುವ ವಿಧಾನವನ್ನು ಅಭಿವೃದ್ಧಿಗೊಳಿಸಿದ್ದಾರೆ. ಪ್ರಯೋಗಾಲಯ ಟೆಕ್ನೀಷಿಯನ್ನರಾದ ತಮ್ಮ ಪತ್ನಿಯ ಸಹಾಯದಿಂದ ಡಾ| ಕಾರ್ಡೋನಾ ಅವರು, ಹೀಟ್ ಇಂಪ್ರೆಶನ್ ಮತ್ತು ಅಲ್ಟ್ರಾವಯೊಲೆಟ್ ಪ್ರೋಸೆಸಿಂಗ್ ಮೂಲಕ, ಕಣ್ಣಿನ ನೈಸರ್ಗಿಕ ಅಕ್ಷಿಪಟಲದ ಕಾರ್ಯವನ್ನು ನಿರ್ವಹಿಸಬಲ್ಲಂಥ ಶುದ್ಧವಾದ, ಸ್ಪಷ್ಟವಾದ ಪ್ಲಾಸ್ಟಿಕ್ ಗುಂಡಿ—ಆಕಾರದ ಬಿಲ್ಲೆಯನ್ನು ತಯಾರಿಸುವ ತಂತ್ರವನ್ನು ಅಭಿವೃದ್ಧಿಗೊಳಿಸಿದರು.

ಈ ಪ್ಲಾಸ್ಟಿಕ್ ಪಟಲದ ಬೃಹತ್ ಪ್ರಮಾಣದ ಉತ್ಪಾದನೆ ಸಾಧ್ಯವಿಲ್ಲ. ಇದರ ತಯಾರಿಕೆಗೆ ಗಂಟೆಗಟ್ಟಲೆ ಸೂಕ್ಷ್ಮ ಪಾಕವು ಅವಶ್ಯ. ಆದರೆ ಇದನ್ನು ಅಳವಡಿಸುವ ಶಸ್ತ್ರ ಚಿಕಿತ್ಸೆಗೆ ಕೇವಲ 15 ನಿಮಿಷಗಳು ಸಾಕು.

ಕ್ಯಾಮರದಲ್ಲಿ ಲೆನ್ಸ್ (ಮಸೂರ) ವಹಿಸುವ ಪಾತ್ರವನ್ನು ಕಣ್ಣಿನಲ್ಲಿ ಅಕ್ಷಿಪಟಲ ನಿರ್ವಹಿಸುತ್ತಿದೆ. ಗಾಯ ಅಥವಾ ವ್ಯಾಧಿಗಳ ಪರಿಣಾಮವಾಗಿ ಈ ಪಟಲ ಮಸುಕಾದಾಗ ಪ್ರತಿಬಿಂಬ ಇದರ ಮೂಲಕ ಹಾದು ಹೋಗಲು ಸಾಧ್ಯವಾಗುವುದಿಲ್ಲ.

ಅನೇಕ ಸಂದರ್ಭಗಳಲ್ಲಿ ದಾನಿಗಳು ಸತ್ತ ಸ್ವಲ್ಪ ಹೊತ್ತಿನಲ್ಲಿ ಅವರ ಕಣ್ಣುಗಳಿಂದ ಅಕ್ಷಿಪಟಲವನ್ನು ತೆಗೆದು ಅದನ್ನು ಅಂಧರ ಕಣ್ಣಿನಲ್ಲಿ ಅಳವಡಿಸಲಾಗುತ್ತದೆ.

ಆದರೆ ಮೂಲ ಅಕ್ಷಿಪಟಲದ ಅನುಪಯುಕ್ತತೆಗೆ ಕಾರಣವಾದ ದೋಷಗಳು ಹೊಸದಾಗಿ ಅಳವಡಿಸಲಾದ ಪಟಲಗಳ ಮೇಲೂ ಪರಿಣಾಮ ಮಾಡಬಹುದು. ಅಕ್ಷಿಪಟಲಕ್ಕೆ ತಗಲುವ ಸೋಂಕು ಅಥವಾ ಗಾಯ ಸುತ್ತಮುತ್ತಲ ರಕ್ತನಾಳಗಳನ್ನು ಘಾಸಿಸಬಹುದು, ಅಕ್ಷಿಪಟಲವು ತನ್ನ ಪೋಷಣೆಗೆ ಈ ರಕ್ತನಾಳಗಳನ್ನು ಅವಲಂಬಿಸಿರುತ್ತದೆ. ಪೋಷಣೆಯ ಕೊರತೆಯಿಂದಾಗಿ ಹೊಸ ಪಟಲಕ್ಕೂ ಹಾನಿಯಾಗುವುದು.

ಈ ಕೃತಕ ಅಕ್ಷಿಪಟಲದ ಬಗೆಗೆ ಈ ತೊಂದರೆಗಳಿರುವುದಿಲ್ಲ. ಇತರ ಮನುಷ್ಯರ ಅಂಗಗಳನ್ನು ಅಳವಡಿಸಿದಾಗ ಸಾಮಾನ್ಯವಾಗಿ ರೋಗಿಯ ದೇಹವು ಅಂಥ ಹೊಸ ಅಂಗಗಳನ್ನು ನಿರಾಕರಿಸುತ್ತದೆ, ಈ ಕೃತಕ ವಿಧಾನದಲ್ಲಿ ಆ ಭಯವಿಲ್ಲ.

ತಮ್ಮ ಈ ಹೊಸ ಪ್ರಯತ್ನವು ಸಂಪೂರ್ಣ ಯಶಸ್ವಿಯೇ ಎಂಬುದನ್ನು ನಿರ್ಧರಿಸುವುದಕ್ಕೆ ಮುನ್ನ ಕನಿಷ್ಠ ನೂರು ಮಂದಿ ರೋಗಿಗಳನ್ನು, ಶಸ್ತ್ರ ಚಿಕಿತ್ಸೆಯ ನಂತರ ದೀರ್ಘಕಾಲದ ವರೆಗೆ ಅಧ್ಯಯನ ಮಾಡುವುದು ಅವಶ್ಯ ಎಂದು ಡಾ| ಕಾರ್ಡೋನಾ ಹೇಳಿದರು. ತಮ್ಮ ಹೊಸ ಪಟಲದ ದೃಷ್ಟಿಯಲ್ಲಿನ ಸಣ್ಣಪುಟ್ಟ ದೋಷಗಳನ್ನು ಸರಿಪಡಿಸಲು, ರೋಗಿಗಳಲ್ಲನೇಕರು ಕನ್ನಡಕಗಳನ್ನು ಬಳಸುತ್ತಿರುವರಾದರೂ, ಅವರುಗಳ ಸಮೀಪದ ಹಾಗೂ ದೂರದ ದೃಷ್ಟಿ ಶಕ್ತಿ ಅತ್ಯುತ್ತಮವಾಗಿದೆ ಎಂದು ಪರೀಕ್ಷೆಗಳಿಂದ ತಿಳಿದುಬಂದಿದೆ. ಕೃತಕಪಟಲವು ಕಣ್ಣಿನ ಕೇಂದ್ರಭಾಗವನ್ನು ಮಾತ್ರ ವ್ಯಾಪಿಸುವುದರಿಂದ ರೋಗಿಗಳು ಪಾರ್ಶ್ವಗಳಲ್ಲಿ ನೋಡಬೇಕಾದರೆ ತಲೆಯನ್ನು ತಿರುಗಿಸುವುದು ಅವಶ್ಯ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
126 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನ್ನು
ಸಂಪರ್ಕ ಬೆಳೆಸಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು– ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೧.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-೧

ಊರ ಜಗಳಗಳನ್ನು ಊರಲ್ಲೇ ಬಗೆಹರಿಸಿಕೊಂಡರೆ ಗ್ರಾಮರಾಜ್ಯವೆನ್ನುತ್ತಾರೆ. ಊರಲ್ಲಿ ಜಗಳಗಳೇ ಆಗದಿದ್ದರೆ ರಾಮರಾಜ್ಯವೆನ್ನುತ್ತಾರೆ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ. ೧೦.

ನೆನಪುಮಾಡಿಕೊಳ್ಳಬೇಡಿ, ಮರೆತುಬಿಡಿ

ನೀವು ವಿಷಯಗಳನ್ನು ಮರೆಯುತ್ತೀರಾ? ಅದು ವಯೋಗುಣದಿಂದ ಆದುದೆಂದೂ, ರಕ್ತನಾಳಗಳು ಕಠಿಣವಾದುದರಿಂದ ಹಾಗಾಯಿತೆಂದೂ ನೀವಾಗಿಯೇ ನಿರ್ಧರಿಸಿಕೊಳ್ಳಬೇಡಿ, ಪ್ರತಿದಿನವೂ ಜನರು ತಾವು ಯಾಂತ್ರಿಕವಾಗಿ ಕಲಿತುದರಲ್ಲಿ ಸುಮಾರು ಕಾಲು ಪಾಲಿನಷ್ಟನ್ನು ಮರೆಯುತ್ತಾರೆ.

ಹೊಸ ವಿಷಯಕ್ಕೆ "ಸ್ಥಳವನ್ನು ಮಾಡಿಕೊಡುವುದಕ್ಕಾಗಿ" ಮಸ್ತಿಷ್ಕವು ಸ್ವಲ್ಪ ಸಮಾಚಾರವನ್ನು ಹೊರದೂಡುವುದು ಸ್ವಾಭಾವಿಕವೆಂದೆನಿಸುತ್ತದೆ.

ಯೋಜನೆಯ ಪ್ರಕ್ರಿಯೆಗಳಲ್ಲಿಯೂ, ಮತ್ತು ಅವುಗಳ ಅತ್ಯುನ್ನತ ಪ್ರಕಟರೂಪವಾದ ರಚನಾತ್ಮಕ ಚಟುವಟಿಕೆಯಲ್ಲಿಯೂ ಸ್ಮರಣಶಕ್ತಿಯು ಖಂಡಿತವಾಗಿಯೂ ದೊಡ್ಡ ಪಾತ್ರವನ್ನು ವಹಿಸುತ್ತದೆ. ಜನತೆಯು ಈ ವಿಷಯವನ್ನು ಬಹುಕಾಲದ ಹಿಂದೆಯೇ ಮನಗಂಡಿತು. ಗ್ರೀಕರ ಪುರಾಣಗಳಲ್ಲಿ ಒಂಬತ್ತು ಕಾವ್ಯಾಧಿದೇವತೆಗಳ ಮಾತೆಯೂ, ವಿಭಿನ್ನ ಕಲಾವಿಜ್ಞಾನಗಳ ಆಶ್ರಯದಾತೆಯೂ ಆದ "ನ್ನೆಮೋಸಿಯ್ನೆ" (ಸ್ಮರಣಶಕ್ತಿ) ಎಂಬ ದೇವತೆಯ ಉಲ್ಲೇಖವಿದೆ.

ಕೆಲವು ಮಂದಿ ವಿದ್ವಾಂಸರಿಗೂ, ಕಲಾಕಾರರಿಗೂ ಅತ್ಯಂತ ಗಮನಾರ್ಹವಾದ ಸ್ಮರಣಶಕ್ತಿ ಇರುತ್ತದೆ.

ಉದಾಹರಣೆಗೆ ಹೇಳುವುದಾದರೆ, ರಶಿಯನ್ ಚಿತ್ರ ಕಲಾವಿದರಾದ ನಿಕೋಲಾಯ್ ಘೇ ಅವರು ಇಂದಿನ ಲೆನಿನ್‌ಗ್ರಾಡ್ ಬಳಿಯ ಪೆತ್ರೊದ್ವೊರೆತ್ಸ್ ಪ್ರಾಸಾದದ ಚಿತ್ರಶಾಲೆಗಳ ಕೋಣೆಯೊಂದರ ಚಿತ್ರವನ್ನು ದಸ್ತೈವಜು-ಕರಾರುವಾಕ್ಕತನದಿಂದ ಹೇಗೆ ಚಿತ್ರಿಸಿದರೆಂಬುದನ್ನು ಹೀಗೆ ವಿವರಿಸಿದ್ದಾರೆ: "ಪೆತ್ರೊದ್ವೊರೆತ್ಸ್ ಅರಮನೆಯಲ್ಲಿನ ಪ್ರಥಮ ಪ್ಯೋತ್ರ ದೊರೆಯು ತ್ಸಾರೆವಿಚ್ ಅಲೆಕ್ಸೆಯನ್ನು ಪ್ರಶ್ನಿಸುತ್ತಿರುವುದು" ಎಂಬ ಚಿತ್ರಕ್ಕಾಗಿ ಅದರ ಇಡಿ ಹಿನ್ನೆಲೆಯನ್ನು, ಅದರ ಕಾವುಗೂಡು, ಛಾವಣಿಯ ಅಂಚು, ಅದರಕೆಳಗಿನ ನಾಲ್ಕು ಡಚ್ ಶೈಲಿಯ ಚಿತ್ರಗಳು, ಕುರ್ಚಿಗಳು, ನೆಲಹಾಸು, ಅಲ್ಲಿನ ಬೆಳಕು...ಇವೆಲ್ಲವನ್ನೂ ಸ್ಮರಿಸಿಕೊಂಡರು. ಆ ಕೋಣೆಯಲ್ಲಿ ನಾನು ಇದ್ದುದು ಒಂದೇ ಸಲ. ಅದೂ ಉದ್ದೇಶಪೂರ್ವಕವಾಗಿ ಕೊಟ್ಟ ಭೇಟಿಯೇನೂ ಅಲ್ಲ."

ಹತ್ತೊಂಬತ್ತನೆಯ ಶತಮಾನದಲ್ಲಿ ರಶಿಯನ್ ವಾಗ್ಗೇಯಕಾರ ಮಿಲಿ ಬಲಾಕಿರೆವ್ ಅವರು ಚೈಕೋವ್‌ಸ್ಕಿ ಅವರ ಕೃತಿಯನ್ನೊಮ್ಮೆ ಮಾತ್ರವೇ ಕೇಳಿದ ಎರಡು ವರ್ಷಗಳ ತರುವಾಯ, ಅದನ್ನು ತದ್ರೂಪವಾಗಿ ಹಾಗೆಯೇ ನುಡಿಸಿದ್ದುಂಟು.

ಸುಪ್ರಸಿದ್ಧ ರಶಿಯನ್ ಪಿಯಾನೊ ಸಂಗೀತಜ್ಞರಾದ ಸೆರ್ಗೇಯ್ ರಚ್ಮಾನಿನೊವ್ ಅವರೂ ಸಹ ಇದೇ ವರ್ಗದವರು. ವಾಗ್ಗೇಯಕಾರ ಸೆರ್ಗೇಯ್ ತನೇಯೆವ್‌ರ ಹತ್ತಿರ ರಚ್ಮಾನಿನೊವ್ ಅವರೂ ಸಂಗೀತಾಭ್ಯಾಸ ಮಾಡುತ್ತಿದ್ದರು. ತಮ್ಮ ನೂತನ ಕೃತಿಯನ್ನು ನುಡಿಸಲು ಬಂದಿದ್ದ ಮತ್ತೊಬ್ಬ ವಾಗ್ಗೇಯಕಾರ ಅಲೆಕ್ಸಾಂಡರ್ ಗ್ಲಜೂನೊವ್ ಅವರನ್ನು ತಮಾಷೆ ಮಾಡಲು, ಪಕ್ಕದ ಕೋಣೆಯಲ್ಲೇ ರಚ್ಮಾನಿನೊವ್ ಅವರನ್ನು ತನೇಯೆವ್ ಅಡಗಿಸಿಟ್ಟರು. ಗ್ಲಜೂನೊವ್ ಅವರ ಸಂಗೀತ ನುಡಿಸಿದ ತರುವಾಯ, ತನೇಯೆವ್ ಅವರು ಎಳೆಯ ಸಂಗೀತಗಾರರನ್ನು ಕೋಣೆಯೊಳಕ್ಕೆ ಕರೆದು ಅದೇ ಸಂಗೀತವನ್ನು ನುಡಿಸಬೇಕೆಂದು ಸೂಚಿಸಿದರು. ಒಂದಾದರೂ ತಪ್ಪಿಲ್ಲದಂತೆ ಆ ಇಡೀ ಸಂಗೀತವನ್ನು ರಚ್ಮಾನಿನೊವ್ ನುಡಿಸಿದುದನ್ನು ಕಂಡು ಗ್ಲಜೂನೊವ್ ಅವರಿಗೆ ಅತ್ಯಾಶ್ಚರ್ಯವಾಯಿತು. ಏಕೆಂದರೆ ಆ ಸಂಗೀತವನ್ನು ಬೇರೆ ಯಾರೂ ಕೇಳಿಯೇ ಇರಲಿಲ್ಲ.

ಹದಿನೆಂಟನೆ ಶತಮಾನದಲ್ಲಿ ಮಹಾನ್ ಗಣಿತ ಶಾಸ್ತ್ರಜ್ಞ ಲಿಯೊನಾರ್ಡ್ ಎಯ್ಲರ್ ಅವರು ಸಂತ ಪೀಟರ್ಸ್‌ಬರ್ಗ್‌ನಲ್ಲಿ ವಾಸಿಸುತ್ತಿದ್ದಾಗ ಅವರ ಎರಡರಿಂದ 100 ವರೆಗೆ ಎಲ್ಲ ಅಂಕಿಗಳ ವರ್ಗ; ಘನ ರೂಪಗಳನ್ನೂ ಮತ್ತು ಆರರ ವರೆಗಿನ ಎಲ್ಲ ಘಾತಗಳನ್ನೂ (ಪವರ್ಸ್) ಬಾಯಿಪಾಠ ಮಾಡಿದ್ದರು.

ಇಂತಹ ಅಸಾಧಾರಣ ಸ್ಮರಣಶಕ್ತಿಯ ಉದಾಹರಣೆಗಳು ವಿಜ್ಞಾನಿಗಳಲ್ಲಿ ಸಾಮಾನ್ಯವೇ. ಆದರೂ ಕೂಡ; ಅವರಲ್ಲಿ ಅನೇಕರು ಈ ವಿಷಯದಲ್ಲಿ ಸಾಧಾರಣರಾಗಿಯೇ ಇರುತ್ತಾರೆ. ಉದಾಹರಣೆಗೆ ಐನ್‌ಸ್ಟೀನರ ಕುರಿತಾದ ಈ ಕತೆಯನ್ನು ಇಲ್ಲಿ ಹೇಳಬಹುದು —

ಸುಪ್ರಸಿದ್ಧ ಅಮೆರಿಕನ್ ಸಂಶೋಧಕರಾದ ಎಡಿಸನ್ನರು ತಮ್ಮ ಸಂಗಾತಿ ಕಾರ್ಯಕರ್ತರನ್ನು ಆರಿಸಿಕೊಳ್ಳಲು ಸಹಾಯಕವಾಗಿ ಒಂದು ಪ್ರಶ್ನಾವಳಿಯನ್ನು ತಯಾರಿಸಿದ್ದರು. ಅವು ವಿಜ್ಞಾನಗಳ, ರಂ ಪ್ರಶಿಪ್ಪದ ವ್ಯಾಪಕ ಶ್ರೇಣಿಯವಾಗಿದ್ದುವು. ಅವುಗಳಲ್ಲಿ ನ್ಯೂಯಾರ್ಕಿನಿಂದ ಚಿಕಾಗೊ ವರೆಗಿನ ದೂರದ ಕುರಿತಾದ, ರಾಮಶರ್- ಪುಸ್ತಕದ ನಮೂನೆಯ ಸಮಾಚಾರಕ್ಕೆ ಸಂಬಂಧಪಟ್ಟ ಪ್ರಶ್ನೆಗಳೂ ಇದ್ದುವು. ಸಾಪೇಕ್ಷ ಸಿದ್ಧಾಂತದ ಮೂಲ ಪ್ರತಿಪಾದಕರೂ, 20ನೆಯ ಶತಮಾನದ ಮಹೋನ್ನತ ಭೌತ ವಿಜ್ಞಾನಿಯೂ ಆದ ಐನ್‌ಸ್ಟೀನ್ ಅವರು ಈ ಪ್ರಶ್ನಾವಳಿಯ ಒಂದು ಪ್ರಶ್ನೆಗಾದರೂ ಸರಿಯಾದ ಉತ್ತರವನ್ನು ನೀಡಲಾಗದಾದರು. "ಈ ಪ್ರಶ್ನೆಗಳ ಉತ್ತರಗಳೆಲ್ಲವೂ ವಿಶ್ವಕೋಶಗಳಲ್ಲೂ, ಪರಾಮರ್ಶ ಗ್ರಂಥಗಳಲ್ಲೂ ದೊರೆಯುತ್ತವೆ!" ಎಂದು ಅವರು ಕಿರಿಕಿರಿಯಿಂದ ಹೇಳಿದ್ದರು.

ಆದುದರಿಂದ ರಚನಾತ್ಮಕ ಸಾಮರ್ಥ್ಯಗಳನ್ನು ಪ್ರದರ್ಶಿಸ ಬೇಕಾದರೆ, ವಿಶಿಷ್ಟತ ಒಳ್ಳೆಯ ಜ್ಞಾಪಕ ಶಕ್ತಿಯು ಇರಬೇಕಾದುದು ಅತ್ಯಾವಶ್ಯಕವೇನೂ ಅಲ್ಲ. ಅಸಾಧಾರಣ ಜ್ಞಾಪಕ ಶಕ್ತಿಯು ಬಾಧಕವಾಗುವ ಸಂದರ್ಭಗಳ ಉದಾಹರಣೆಗಳೂ ಇವೆ. ಓರ್ವ "ಏನೂ ಮರೆಯದ ವ್ಯಕ್ತಿಯ" ಸ್ಥಿತಿ ಇಂತಹುದಾಗಿತ್ತೆಂದು ಡಾ. ಪ್ಲತೋನೊವ್ ಹೇಳುತ್ತಾರೆ: 'ಸರ್ವ ವಿವರಗಳ ಅಸಾಧಾರಣ ಜ್ಞಾಪಕ ಶಕ್ತಿ ಇರುವ ಕಾರಣ ಆತನು ಒಂದಾದರೂ ಮೌಲಿಕ ವಿಚಾರವನ್ನು ವ್ಯಕ್ತಪಡಿಸಲಾರದಾದನು. ಎಷ್ಟೋ ದಿನಗಳ ಹಿಂದೆ ಆತನ ಮುಂದೆ ಓದಲಾಗಿದ್ದ ವಾರ್ತಾ ಪತ್ರಿಕಾ ಲೇಖನಗಳನ್ನು ಆತನು ಶಬ್ದಶಃ ಪುನರಾವರ್ತನೆ ಮಾಡುತ್ತಿದ್ದನಾದರೂ, ಆ ವಿಷಯಗಳನ್ನು ಅರ್ಥಮಾಡಿಕೊಳ್ಳುತ್ತಿರಲಿಲ್ಲ, ಸರಳವಾದ ವ್ಯಾಖ್ಯೆಯೊಂದನ್ನು ತನ್ನ ಸ್ವಂತ ಮಾತುಗಳಲ್ಲಿ ಆತನು ಎಂದೂ ಹೇಳಲಾರದವನಾಗಿದ್ದನು." ಈ ಬಡಪಾಯಿಯು ಸ್ಮರಣಶಕ್ತಿಯ ಅತ್ಯಾಧಾರ ವರದಾನ ಪಡೆದಿದ್ದುದರಿಂದ ತನ್ನ ಕೊನೆಯ ದಿನಗಳನ್ನು ಹುಚ್ಚಾಸ್ಪತ್ರೆಯಲ್ಲಿ ಕಳೆಯಬೇಕಾಯಿತು.

ಆದರೆ, ನಮ್ಮಲ್ಲನೇಕರಿಗೆ ವಿರುದ್ಧ ಮಾದರಿಯ ತೊಂದರೆ ಉಂಟಾಗುತ್ತದೆ. ಪೆಡಸು ರೋಗವು (ಸ್ಕ್ಲೆರೊಸಿಸ್) ನಿಸ್ಸಂದೇಹವಾಗಿಯೂ ಸ್ಮರಣ ಶಕ್ತಿಯನ್ನು ಕುಂದಿಸುತ್ತದೆ. ಆದರೆ ಇದರ ಚಿಕಿತ್ಸೆಯೂ ಸಾಧ್ಯ. "ಪುನರಾವರ್ತನೆಯು ವಿದ್ಯೆಯ ತಾಯಿ" ಎಂಬ ನಾಣ್ಣುಡಿಯೂ ಇದೆ. ಆದರೆ ಇಷ್ಟು ಮಾತ್ರ ಗಮನಿಸಬೇಕು. ಪರಿಪೂರ್ಣವಾಗಿ ಆಲೋಚಿಸಿ ತಿಳಿದುಕೊಂಡು ಮನಸ್ಸಿನಲ್ಲಿ ಉಳಿಸಿಕೊಳ್ಳಲಾದ ಸಮಾಚಾರವು ಕೇವಲ ಯಾಂತ್ರಿಕವಾಗಿ ಪುನರಾವರ್ತನೆಯ ಮೂಲಕ ಮಾತ್ರವೇ ದಾಖಲೆಯಾದುದಕ್ಕಿಂತಲೂ ಸುಮಾರು 25ರಷ್ಟು ಹೆಚ್ಚು ಪರಿಣಾಮಕಾರಿಯಾದುದು.

ದೇವರಾಗಲಿ, ರಾಕ್ಷಸರಾಗಲಿ ನಮ್ಮ ಹೊರಗೆ ಇಲ್ಲ. ರಾವಣ, ಕುಂಭಕರ್ಣ ವಿಭೀಷಣ, ಇವರು ಮೂವರೂ ನಮ್ಮ ಒಳಗೇ ಇದ್ದಾರೆ. ರಾವಣನೆಂದರೆ ರಜೋಗುಣ. ಆವನು ಪರರ ದುಡ್ಡು, ಸಂಪತ್ತು ಭೂಮಿ, ಸರ್ವಸ್ವವನ್ನೂ ಅಪಹರಿಸಿ ತನ್ನ ಸಂಪತ್ತು ಬೆಳೆಯಿಸಿಕೊಳ್ಳುತ್ತಾನೆ. ಕುಂಭಕರ್ಣನೆಂದರೆ ತಮೋಗುಣ. ತಮೋಗುಣಿಯು ಹೆಂಡಕುಡಿಯುತ್ತಾನೆ, ಹಗಲಿರುಳು ಮಲಗಿ ಬಿಟ್ಟಿರುತ್ತಾನೆ. ವ್ಯಸನ ಮಾಡುತ್ತಾನೆ, ವ್ಯಭಿಚಾರ ಮಾಡುತ್ತಾನೆ. ವಿಭೀಷಣನೆಂದರೆ ಸತ್ವಗುಣ. ಸತ್ವಗುಣಿಯು ಮಿತ್ರತ್ವ ಬೆಳೆಸುತ್ತಾನೆ, ಪ್ರೀತಿ ಮಾಡುತ್ತಾನೆ, ಸಹಾಯ ಮಾಡುತ್ತಾನೆ. ಜನರ ಹಿತ ಮಾಡುತ್ತಾನೆ. ರಾಮಪಕ್ಷವ ವಹಿಸುತ್ತಾನೆ.

o o o

ಆಚಾರಹೀನ ವಿಚಾರ, ವಿಚಾರಹೀನ ಆಚಾರ ಇವೆರಡೂ ನಿರರ್ಥಕ.

o o o

ಪಂಚ ಪಾಂಡವರಂತೆ ನಾವು ಒಂದಾಗಿ ಉಳಿದರೆಯೇ ಮಿತ್ರಪರಮಾತ್ಮನು ಬೆಂಬಲಕ್ಕೆ ಬರುವನು.

o o o

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

P. and S. C. 8/1970

1. ಗಂಗ 2. ಕಮಲ 3. ಚೀಂಕ— ತುಂಗು ಮಕ್ಕಳು. 4. ಸುಶೀಲ 5. ರಾಜು — ಗಿರಿಜನ ಮಕ್ಕಳು. 1 ಮತ್ತು ಕುಂದರನೆಯವರು ಉಡುಪಿ ತಾಲೂಕು ಪೆರ್ಡೂರು ಗ್ರಾಮದಲ್ಲಿರುವವರು, 2ನೆಯವಳು ಉಡುಪಿ ತಾಲ್ಲೂಕು ನಂಬ್ರ 76ನೆ ಬಡಗಬೆಟ್ಟು ಗ್ರಾಮದಲ್ಲಿರುವವಳು, 4 ಮತ್ತು 5ನೆಯವರು ಉಡುಪಿ ಶ್ರೀಕೃಷ್ಣ ಮಠದ ಬೈಲಿನಲ್ಲಿರುವವರು — ಅರ್ಜಿದಾರರು

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ —

ಮೇಲ್ಕಂಡ 1ರಿಂದ 3ನೆ ಅರ್ಜಿದಾರರ ಸೋದರಿ ಮ. 4, 5ನೆ ಅರ್ಜಿದಾರರ ತಾಯಿಯ ಸೋದರಿ ಮೃತ ಬಾಬಿ ಬಾಯಿಯ ಬಾಬ್ತು ಅರ್ಜಿಯ A ಶೆಡ್ಯೂಲಿನಲ್ಲಿ ಕಾಣಿಸಿರುವ ಅನೇಜುಗಳನ್ನು ವಸೂಲು ಪಡೆಯುವರೆ ತಾವು ಹಕ್ಕುದಾರರು ವಾರೀಸುದಾರರೆಂತಲೂ ಆ ಬಗ್ಗೆ ತಮಗೆ ವಾರೀಸು ಸರ್ಟಿಫಿಕೇಟು ಕೊಡಿಸುವಂತೆ ಸಹಾ ಅರ್ಜಿದಾರರು ಅರ್ಜಿ ಮಾಡಿಕೊಂಡಿರುವುದರಿಂದ ಆ ಕುರಿತು ಯಾರಿಗಾದರೂ ಆಕ್ಷೇಪ ಇರುವಲ್ಲಿ ಅದನ್ನು ತಾರೀಕು 10.12.1970ಕ್ಕೆ ಮೇಲ್ಕಂಡ ಕೋರ್ಟು ಮುಂದುಹಾಜರಾಗಿ ಜಾಹೀರು ಮಾಡಿಕೊಳ್ಳಲಿಕ್ಕೆ ತಪ್ಪಿದರೆ ಸದ್ರಿ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Varadaraya Pai
Advocate for Petitioners

ಉಡುಪಿ, 16-11-70.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿ ಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಕಾಫೀಯುಳ್ಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಗೇಹರಾಜ್ಯದಲ್ಲಿ

ಪ್ರೊ. ಪಾ. ದಲ್ಲಿ ಸುಂ. ಗಾ.

"ಪೂರ್ವ ಪಾಕಿಸ್ತಾನದಲ್ಲಿ ಪ್ರಚಂಡ ಬಿರುಗಾಳಿ, ತೆರೆಗಳ, ಅಬ್ಬರ ...."

"ಸಮುದ್ರ ಕೊರೆತ, ಜನ-ಮೃಗಗಳ ಮುಗಿತ..."

"ಒಂದು ಲಕ್ಷಕ್ಕೂ ಮಿಕ್ಕಿದ ಪ್ರಾಣ ಹಾನಿ, ಸಾರ್ವತ್ರಿಕ ಸಮಾಧಿ...."

"ಅದರ ಮೇಲೆ ಕಾಲೆರಾ ಪೀಡೆ..."

"ಅಲ್ರಿ, ಇದೆಲ್ಲಾ ಏನೂಂತ?"

"ಏನೂಂತಂದ್ರೇನು? ರಾಜಸ್ಯ ಕುಟಿ ಲಾಗತಿ: ಅಂತಾರಲ್ಲ? ಈ ಬಾರಿ ವಾಯುವ್ಯ ಮೋಸೂನುಗಳಿಗೆ ಪಾಕಿಸ್ತಾನದ ಮೇಲೆ ನಾಖುಶಿಯಾಗಿದೆ ಅಷ್ಟೆ...."

"ಅಲ್ಲಾರೀ, ಸುಮಾರು ೪೦—೫೦ ಕೋಟಿ ರೂಪಾಯಿಗಳಷ್ಟು ಸಂಪತ್ತು ನಷ್ಟವಾಗಿದೆಯಂತೆ...."

"ಸಂಪತ್ತಿಗೇನು? ಇಂದು ಹೋದರೆ, ನಾಳೆ ಗಳಿಸ ಬಹುದು...."

"ಹಾಗಾದರೆ ಚಿಂತೆ ಯಾವುದಕ್ಕೆ?"

"ಚಿಂತೆ ಜನ ದುರಂತಕ್ಕೆ...."

"ಜನ ಹೋದರೇನಂತೆ, ಮತ್ತೂ ಮತ್ತಷ್ಟು ಜನನವಾಗುತ್ತ ಇರೋದಿಲ್ವೆ?"

"ಇರುತ್ತೇನ್ನು ಅದ್ರಲ್ಲೂ ಪಾಕಿಸ್ತಾನದಲ್ಲಿ ಜನನ ಪ್ರಮಾಣ ಮುಗಿಲು ಮುಟ್ಟಿದೆ..."

"ಅದಕ್ಕೇ ನೋಡಿ, ಅವರನ್ನೆಷದು, ಜಗಳವಾದು ಪಾಕಿಸ್ತಾನ ಪಡೆದೆವು; ಇನ್ನು ನಗೆಯಾಡಿ ಬಾಕಿ ಸ್ಥಾನವನ್ನು ಪಡೆಯುತ್ತೇವೆ."

"ಇರಬಹುದು."

"ಇರಬಹುದು ಏಕೆ? ನೋಡಿ, ಅದು ಮತ್ತೂ ಮತ್ತೂ ಶಸ್ತ್ರಾಸ್ತ್ರಗಳನ್ನು ಕೂಡಿಸ ಪತ್ತಲೇ ತನ್ನ ದೃಷ್ಟಿಯನ್ನು ಕೇಂದ್ರೀಕರಿಸಿದೆ...."

"ಹ್ಞಾಂ,...."

"ದೇಶದಲ್ಲಿ ತೂಫಾನಿನಿಂದ ಜನ ಕಂಗಾಲಾದಾಗ, ಅವರ ಅಧ್ಯಕ್ಷ ಯಾಹ್ಯಾಖಾನರು ಕೆಂಪುಚೀನಾದಲ್ಲಿ ಮಾವನ ಮುಂದೆ ಶಸ್ತ್ರಾಸ್ತ್ರ ಬೇಡುತ್ತಿದ್ದರು..."

"ಅದು ಸರಿ. ಎಲ್ಲಿ ಸಿಗುತ್ತದೋ ಅಲ್ಲಿ ಕೈಚಾಚುತ್ತಾರೆ ನಿಜ; ಆದರೆ, ಮಾವ ಆಪ್ಪುಸ ಲಭದಲ್ಲಿ ಅಳಿಯನಿಗೆ ಅಳಿಸುವಷ್ಟು ನೀಡುವುದಿಲ್ಲ...."

"ಯಾಕೆ?"

"ನೋಡು, ರಶ್ಯ—ಚೀನ ಮತ್ತು ಅಮೆರಿಕೆಗಳಲ್ಲಿ ಒಂದು ಬಗೆಯ ಪಾರಸ್ಪರಿಕ ಹೋರಾಟ ನಡೆಯುತ್ತಿದೆ. ಪಾಕಿಸ್ತಾನವನ್ನು ತಮ್ಮ ಬುಟ್ಟಿಯಲ್ಲಿ ಉಳಿಸಿಕೊಳ್ಳಬೇಕೆಂದು...."

"ಓಹೋ, ಅದಕ್ಕಾಗಿ ಶಸ್ತ್ರಾಸ್ತ್ರದ ಆಮಿಷ ತೋರಿಸುತ್ತಾರೆ...."

"ಅದೇ ನೋಡು, ಅದನ್ನು ರಶ್ಯ-ಚೀನೀ ಕೂಟದಿಂದ ಪ್ರತ್ಯೇಕಿಸುವುದೇ ತನ್ನ ರಾಷ್ಟ್ರ ನೀತಿಯ ಘನೋದ್ದೇಶವೆಂದು ಅಮೆರಿಕೆ ವರ್ಣಿಸಿದೆಯಲ್ಲ?"

"ಇದೇ ವರ್ಣನೆಯನ್ನು ಸೋವಿಯತ್ ಬಂಧುಗಳೂ ಮಾಡಿದ್ದಾರೆ"

"ಅದು ಸರೀನ್ನು. ಆದರೆ, ಯಾಹ್ಯಾಖಾನರು ತನ್ನ ಡೊಂಬರಾಟವನ್ನು ಎಷ್ಟು ಸಮಯ ಮುಂದುವರಿಸಿಯಾರು?"

"ಯಾಕೆ ಹಾಗಂತೀರಿ? ಅವರಿಗೆ ಪ್ರಕೃತಿಯು ಒಲಿದಿದ್ದಾಳೆ."

"ಯಾಕೆ ಹಾಗಂತೀಯ?"

"ಅಯ್ಯೋ, ನೋಡಿ, ಇದೇ ವರ್ಷದ ಕೊನೆಯಲ್ಲಾದರೂ ಪಾಕಿ ಚುನಾವಣೆ ನಡೆಯಬೇಕಿತ್ತು."

"ಹ್ಞಾಂ..."

"ಆದರೆ, ಇನ್ನು ಅದು ನಡೆಯಬೇಕಾಗಿಲ್ಲ."

"ಯಾಕೆ?"

"ದೇಶದಲ್ಲಿ ಪ್ರಾಣ—ವಿತ್ತಗಳಿಗೆ ಪ್ರಚಂಡ ಪ್ರಭಂಜನದಿಂದ ಪ್ರಕಾಂಡ ಅಪೇಕ್ಷ ನಡೆದಮೇಲೆ ಚುನಾವಣೆಯನ್ನು ಮುಂದೂಡಬಹುದಲ್ಲಾ?"

"ಹ್ಞಾಂ, ನಿನ್ನ ವ್ಯಾಖ್ಯ ಸರಿಯಾದದ್ದೇ. ಪರಿಹಾರ ಕಾರ್ಯ ತುರ್ತಿನ ಸಂಗತಿಯಾದ್ದರಿಂದ ಚುನಾವಣೆ ಮುಂದಕ್ಕೆ ಹಾಕಿದರೂ ಹಾಕಬಹುದು."

"ಹಾಕಬಹುದು ಅಲ್ಲ; ಅವರು ಹಾಗೇ ಹಾಳುತ್ತಾರೆ. ಪೂರ್ವ ಪಾಕಿಸ್ತಾನದ ಈ ಪ್ರಖರ ಮಾರುತಗಳು ಪ್ರಪಂಚದ ಇತ್ತೀಚಿನ ಇತಿಹಾಸದಲ್ಲಿ ಇದೇ ಮೊದಲು...."

"ಅದು ಸರೀನ್ನು. ಆದ್ದರಿಂದಲೇ ಎಲ್ಲ ದೇಶಗಳೂ ವಿಶ್ವಸಂಸ್ಥೆಯೂ ಉದಾರನೆರವಿಗಾಗಿ ಧಾವಿಸಿವೆ."

"ಹಾಗಿರುವಾಗ ಅವರು ಚುನಾವಣೆ ನಡೆಸುವುದು ಹೇಗೆ?"

"ಅಲ್ಲ, ಸಾಮಾನ್ಯವಾಗಿ ಯಾಹ್ಯಾಖಾನರು ಒಲ್ಲದ ಮನಸ್ಸಿನಲ್ಲೇ ಚುನಾವಣೆ ನಡೆಸುವ ಘೋಷಣೆ ಮಾಡಿದ್ದರು. ಇದೀಗ ರೋಗಿ ಬಯಸಿದ್ದೂ ಹಾಲು-ಅನ್ನ, ವೈದ್ಯ ಹೇಳಿದ್ದೂ ಹಾಲು-ಅನ್ನ ಎಂಬಂತಾಯ್ತು."

"ಅದು ಹಾಗೆಯೇ ನೋಡಿ; ಮನಸ್ಸಿದ್ದಲ್ಲಿ ಮಹಾದೇವ ಎಂದು ಹಿಂದಿನವರು ಹೇಳಿದ್ದಾರೆ...."

"ನೋಡು, ಈಗ, ತೂಫಾನಿನ ಪ್ರಭಾವವು ತಮಿಳುನಾಡಿನತ್ತ ಹರಿದಂತಿದೆ."

"ಯಾಕೆ?"

"ಬಂಗಾಳಕೊಲ್ಲಿಯ ಘನವಾಯು ಮಾನದಿಂದಾಗಿ ತಮಿಳುನಾಡಿನಲ್ಲಿ ವಿಪರೀತ ಮಳೆ ಬೀಳ ಹತ್ತಿದೆಯಂತೆ. ತಗ್ಗು ಪ್ರದೇಶಗಳಲ್ಲಿ ತುಂಬ ನೀರು ನಿಂತಿದೆಯಂತೆ..."

"ಹ್ಞಾಂ.... ಇಷ್ಟೇ ಆದರೆ ಚಿಂತಿಲ್ಲ. ಆದರೆ, ಇದೇ ಇನ್ನೂ ಮುಂದುವರಿದರೆ ಮಾತ್ರ...."

"ಅಶುಭವನ್ನು ಚಿಂತಿಸಬಾರದು."

"ಅಲ್ಲಾರೀ, ಅಶುಭವನ್ನು ಚಿಂತಿಸದೇ ಹೋದರೆ, ಅದನ್ನು ಎದುರಿಸುವುದು ಹೇಗೆ?"

"ಹಾಗಾದರೆ, ಸದಾ ಅಶುಭವನ್ನೇ ಚಿಂತಿಸ ತ್ತ ಕುಳಿತರೆ ಹೇಗೆಂತ?"

"ಹಾಗಲ್ಲರೀ. ಶುಭವನ್ನು ಬಯಸುವವರು ಅಶುಭವನ್ನು ಎದುರಿಸಲು ಸಿದ್ಧರಿರಲೇ ಬೇಕು...."

"ಅದು ಸರಿ."

"ಮತ್ತೆ ಯಾವುದು ಸರಿಯಲ್ಲ?"

"ಅಶುಭವನ್ನೇ ಚಿಂತಿಸಿ ಶುಭದ ಬಗ್ಗೆ ಯೋಚಿಸುವುದನ್ನೂ ಬಿಟ್ಟು ಬಿಡಬಾರದು...."

"ಹ್ಞಾಂ...."

"ಕ್ರಾಂತಿಯಾದ ಬಳಿಕ ಶಾಂತಿ ತಾನೇ ಸ್ಥಾಪನೆಯಾಗುತ್ತದೆ."

"ಹೌದು...."

—ಗೋರಾ.

"ಇತಿಹಾಸದ ಯಥಾರ್ಥತೆ"

(ಹತ್ತನೇ ಪುಟದಿಂದ)

ದನೆ" ಎಂಬ ಪುಸ್ತಕದಲ್ಲಿ ಉಕ್ತವಾದ 'ಮಯೂರವರ್ಮನು ಅಹಿಚ್ಛತ್ರದಿಂದ ಕರೆಸಿದ ಬ್ರಾಹ್ಮಣರಿಗೆ ಅವನು ಇಲ್ಲಿ ಇರುವಂತೆ ಮಾರಲು ನಾಡವ, ಮೊಗವೀರ, ಬಿಲ್ಲವ ಮೊದಲಾದ ಜಾತಿಯ ಶೂದ್ರ ಸ್ತ್ರೀಯರನ್ನು ಕೊಟ್ಟು ಮದುವೆ ಮಾಡಿ ಆ ಶೂದ್ರ ಸ್ತ್ರೀ ಗರ್ಭದಲ್ಲಿ ಹುಟ್ಟಿದವರನ್ನು ಬ್ರಾಹ್ಮಣರೆಂದೇ ಗಣಿಸತಕ್ಕದ್ದೆಂದ ವಿಧಾನ ಮಾಡಿದನೆಂತಲೂ ಆಖ್ಯಾಯಿಕೆ ಇದೆ" ಎಂಬ ಮಾತನ್ನು ಒಪ್ಪದೆ ಹೋದರೂ ಶಿವಳ್ಳಿಯವರನ್ನು ಕೀಳಾಗಿ ನೋಡಬೇಕೆಂಬ ಭಾವನೆ ಭಟ್ಟರಲ್ಲಿದ್ದರೆ ಮುದ್ದಣ ಬಲ್ಲಾಳರ ಹೇಳಿಕೆಯನ್ನು ಇದ್ದಕ್ಕಿದ್ದಂತೆ ಒಪ್ಪಬಹುದಾಗಿತ್ತಲ್ಲಾ?

ಹೀಗೆ ಉಡುಪರ ಲೇಖನದಲ್ಲಿ ಹಲವು ಅಸಂದಿಗ್ಧತೆ, ಅವೈಜ್ಞಾನಿಕ ಅಭಿಪ್ರಾಯಗಳು ತಲೆದೋರಿವೆ. ಅವೆಲ್ಲವನ್ನೂ ಇಲ್ಲಿ ಉದಾಹರಿಸಿದರೆ ಲೇಖನವು ವ್ಯಾಪ್ತಿಯನ್ನು ಮೀರಿ ಪುಸ್ತಕವಾದೀತು! ಶ್ರೀಯುತ ಉಡುಪರು ಭಟ್ಟರ ವಿರುದ್ಧವಾಗಿ ಹೇಳಿದ ಮತ್ತು ಭಟ್ಟರ ತುಳುನಾಡನ್ನು ಸರಿಯಾಗಿ ಅಭ್ಯಾಸ ಮಾಡದೆ ಬರೆದನೆಯ 'ಮಂಜುವರ್ಜಿ'ಯಂತೆ ಬರೆದ ಹಲವು ಉಕ್ತಿಗಳನ್ನು ಕಿತ್ತುಹಾಕಿದ್ದರೆ, ವೈಜ್ಞಾನಿಕ ದೋಟಕ್ಕೆ ವಿಮರ್ಶ ಗ್ರಂಥವಾಗಿ ಬೆಳೆ ಬರುತ್ತಿತ್ತು.

ಸಮುದ್ರತಳದಿಂದ ಸಿಹಿನೀರು

ಪೆಲೊಪೊನೆಸಸ್ಸಿನ ಈಶಾನ್ಯದಲ್ಲಿ ಫಲವತ್ತಾದ ಆರ್ಗೋಲಿಸ್ ಎಂಬ ಬಯಲಲ್ಲಿ 19,000ದ ರೈತರು ಸೇಬು ಜಾತಿಯ ಹಣ್ಣುಗಳನ್ನು ಬೆಳೆಯುತ್ತಾ ಇರುವ ಕಾರಣ ಅಲ್ಲಿಯ ನೀರಿಗೆ ಕೊರತೆ ಇದೆ. ನೆಲದಡಿಯ ಸಿಹಿ ನೀರಿನ ಮಟ್ಟವು ಕೆಳಕ್ಕೆ ಇಳಿಯುತ್ತಾ ಸಮುದ್ರ ಮಟ್ಟಕ್ಕಿಂತ ಕೆಳಗೆ ಹೋಗಿದೆ ಮಾತ್ರವಲ್ಲ ಸಮುದ್ರದ ನೀರು ಆರು ಮೈಲು ನೆಲಪ್ರದೇಶದೊಳಗೆ ಬಂದಿದೆ.

ಈ ದೇಶದಲ್ಲಿ ಅನೇಕ ವರ್ಷಗಳ ಮುಂದೆ ಪೆಲೊಪೊನೆಸಿಯನ್ನರು ಜನರು ಸಿಹಿನೀರು ಸಿಗಬೇಕೆಂದು ಅಶ್ವಗಳನ್ನು ಸಮುದ್ರಕ್ಕೆ ಆಹುತಿ ಕೊಡುತ್ತಿದ್ದರು. ಆದರೆ ಈಗ ವೊಲ್ಫ್‌ಗೆಂಗ್ ಸ್ಟಂಡರ್ ಎಂಬ ಜರ್ಮನ್ ಶೋಧಕನು (ಪಿ.ಎಚ್.ಡಿ ಪಡೆದು, ವಿಶ್ವವಿದ್ಯಾಲಯದಲ್ಲಿ ಎಂಜಿನಿಯರಿಂಗ್ ಶಿಕ್ಷಕನಾಗಿದ್ದಾನೆ) ಕಾರ್ಲ್‌ಸ್ರುಹೆ ಎಂಬಲ್ಲಿ ತನ್ನ ಸ್ವಂತದ ಪರಿಶೋಧನಾಲಯವನ್ನು ಸ್ಥಾಪಿಸಿದ್ದಾನೆ. ಇವನು ಪೆಲೊಪೊನೆಸಿಯನ್ ಜನರ ಜ್ಞಾನಾನುಭವಗಳ ಆಧಾರದಿಂದಲೂ ಈಗಿನ ಮೀನುಗಾರರ ಅನುಭವದ ಆಧಾರದಿಂದಲೂ ಸಮುದ್ರದ ತಳದಲ್ಲಿ ಸಿಹಿನೀರಿನ ಬುಗ್ಗೆಗಳಿವೆಯೆಂದು ನಿರ್ಧರಿಸಿದ್ದಾನೆ.

ಈ ಬುಗ್ಗೆಗಳ ಉತ್ಪನ್ನ ಸ್ಥಾನ ಕಾರ್ಸ್ಟ್ ಪರ್ವತಗಳಲ್ಲಿ ಮಳೆನೀರಿನಿಂದಾಗಿ ಇದೆ. ಆದರೆ ಈ ಬುಗ್ಗೆಗಳ ನೀರನ್ನು ಶೇಖರಿಸುವುದು ಹೇಗೆ? ಸಮುದ್ರ ನೀರಿನ ಅಡಿಯಿಂದ ಬರುವ ಈ ನೀರು ಸಮುದ್ರದ ಉಪ್ಪು ನೀರಿನೊಡನೆ ಸೇರಿ ಹೋಗುವುದಲ್ಲವೆ?

ಆದರೆ ಸ್ಟಂಡರನು ತನ್ನ ಛಲವನ್ನು ಬಿಡದೆ ಪ್ರಬಲವಾಗಿ ಪರಿಣಾಮಕಾರಿಯಾಗುವ ಒಂದು ಯೋಜನೆಯನ್ನು ಕಂಡು ಹಿಡಿದಿದ್ದಾನೆ.

ಬುಗ್ಗೆಗಳ ನೀರು ಸಮುದ್ರದ ನೀರೊಂದಿಗೆ ಸೇರದಂತೆ ಸಿಮೆಂಟಿನ ದಿಣ್ಣೆಗಳು ಕಟ್ಟಲ್ಪಟ್ಟಿವೆ. ಇವುಗಳೊಳಗೆ ನೀರಿನ ಮಟ್ಟ ಸಮುದ್ರದ ಮಟ್ಟಕಿಂತ ಎತ್ತರವಿದೆ. ಇವರೊಳಗಿನ ಒತ್ತಡವೂ ಸುತ್ತಲಿನ ಒತ್ತಡಕ್ಕಿಂತ ಹೆಚ್ಚಾಗಿದೆ. ಸಮುದ್ರದ ನೀರು ಇದರೊಳಗೆ ಹರಿಯಲು ಉಪಾಯವಿಲ್ಲ. ಇದರೊಳಗಿನ ನೀರು ಕ್ಷೇಣ ಕುಡಿಯಲು ಮತ್ತು ನೀರಾವರಿಗೆ ಉಪಯೋಗಿಸಲಾಗುತ್ತಿದೆ. ಇವತ್ತು ಸುತ್ತಮುತ್ತಲಿನ ಸ್ಥಳಗಳಿಗೆ ಸಿಹಿ ನೀರನ್ನೊದಗಿಸಿ ಕೊಡುವುದೂ ಹತ್ತಿರದ ಅರಮರುಭೂಮಿ ಸ್ಥಳದ ಉಪ್ಪು ಮಣ್ಣನ್ನು ಸಿಹಿ ಮಾಡುವುದೂ ಈ ಬುಗ್ಗೆಗಳ ನೀರಿನಿಂದಲೆ.

ಸ್ಟಂಡರನು ಈ ಪರಿಶೋಧನೆ ಮಾತ್ರವಲ್ಲದೆ ಗಿಡಗಳಿಗೆ ಯಾವಾಗ ಎಷ್ಟು ನೀರು ಬೇಕೆಂಬುದನ್ನು ಕಂಡು ಹಿಡಿಯಲು ವಿದ್ಯುತ್ ಶಕ್ತಿಯಿಂದ ನಡೆಯುವ ಯಂತ್ರಗಳನ್ನು ಗಿಡಗಳಿಗೆ ತಗುಲಿಸಿಟ್ಟು ಕೊಂಪ್ಯೂಟರುಗಳ ಮೂಲಕ ನೀರನ್ನು ಒದಗಿಸಿ ಕೊಡುವ ಪರ್ಯಾಯವನ್ನೂ ಕಂಡುಹಿಡಿದಿದ್ದಾನೆ. ಅವನ ಹೇಳಿಕೆಯ ಪ್ರಕಾರ ಆರ್ಗೋಲಿಸಿನ ರೈತರಿಗೆ ವರ್ಷಂಪ್ರತಿ 160,000ಟನ್ ಹಣ್ಣುಗಳು ಸಿಗುವ ಬದಲು 770,000ಟನ್ನು ಗಳಷ್ಟು ಹಣ್ಣುಗಳ ಇಳುವರಿಯಾಗುವುದು. ಆರ್ಗೋಲಿಸಿನ ರೈತರು ಭಾಗ್ಯವಂತರಲ್ಲವೆ?

ಸಿಹಿ ನೀರಿನ ಬುಗ್ಗೆಗಳು ಮೆಡಿಟರೇನಿಯನ್ ಪ್ರದೇಶದಲ್ಲಿ ಇನ್ನೆಷ್ಟೋ ಕಡೆಗಳಲ್ಲಿವೆ. ಇವುಗಳ ನೀರನ್ನು ಸ್ಟಂಡರನ ವಿಧಾನದಲ್ಲಿ ಉಪಯೋಗಿಸಲಾಗುವುದಾದರೆ ಸಮುದ್ರ ಕಿನಾರೆಯ ಪ್ರದೇಶಗಳೆಲ್ಲಾ ಬಯಲಾಗಿ ಹಣ್ಣು ಹಂಪಲುಗಳ ತೋಟಗಳಾಗಿ ಮಾರ್ಪಾಡು ಹೊಂದುವುವು.

— ಐ. ಪಿ. ಎಸ್.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O.S. 231/1968

ಪಿಯೊದ ಡಿ'ಸೋಜ — ವಾದಿ

ಜಾಕಿ ಸೋಜ ಸಹಾ — ಪ್ರತಿವಾದಿರು

15 ಪಿಯೊದ ಡಿ ಸೋಜ, ಜಾಕಿ ಸೋಜರ ಮಗ, ಕಾರ್ಕಳ ತಾಲ್ಲೂಕು ಕುಕ್ಕುಂದೂರು ಗ್ರಾಮದ ಕೊಡಿಕೆ ಎಂಬಲ್ಲಿರುವವ.

15ನೆ ಪ್ರತಿವಾದಿ ಆದ ನಿಮಗೆ ಈ ಮೂಲಕ ತಿಳಿಸುವುದೇನಂದ್ರೆ

ಲೂವಿಸ ಡಿ'ಸೋಜ ಎಂಬವರು ಅಡವಿನ ಹಣ ವಸೂಲಿ ಬಗ್ಗೆ ನಿಮ್ಮ ವಗೈರೆರ ಮೇಲೆ ಪಡದ ಕಾರ್ಕಳ ಮುನ್ಸಿಫ್ ಕೋರ್ಟ O.S. 80/1963ನೇ ಡಿಕ್ರಿ ಮೇಲೆ ನಡಸಿದ R.E.P. 665/1964ಲ್ಲಿ ಆದ ಲಿಲಾಂವನ್ನು ರದ್ದುಪಡಿಸುವ ಬಗ್ಗೆ ವಾದಿಯು ಸದ್ರಿ ಡಿಕ್ರಿಯ ಹಣ ಸಲ್ಲಿಸಿ ಲಿಲಾಂ ರದ್ದುಪಡಿಸಿ, ಆ ಪ್ರಕಾರ ವಾದಿಯು ಸಲಾಯಿಸಿದ ಅನಾಮತು ಬಡ್ಡಿ ವಗೈರೆ ರೂ. 869-06ನ್ನು ಬರಮಾಡಿಕೊಳ್ಳುವರೆ ವಾದಿಯು ದಾಖಲು ಮಾಡಿದ ಸದ್ರಿ ದಾವೆಯು ತಾ. 28-11-70 ಕ್ಕೆ ನಿಮ್ಮ ಹಾಜ್ರಿ ಬಗ್ಗೆ ಇಟ್ಟಿದೆ. ಆಕ್ಷೇಪವಿದ್ದರೆ ಸದ್ರಿ ದಿನ ಬೆಳಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉಜಾಯರಹ ಕೊಡತಕ್ಕದ್ದು. ತಪ್ಪಿದ್ದ ನಿಮ್ಮ ಗೈರ ಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. V. Kamath,
Advocate for Plaintiff

Katkala, 20-11-70.

ಅಂಚೆ ಮತ್ತು ತಂತಿ ಸಪ್ತಾಹ:—

ಭಾರತದಲ್ಲಿ ಮೈಕ್ರೋವೇವ್ ಉಪಕರಣಗಳ ತಯಾರಿಕೆ

ಲೇಖಕರು: ಸಿ. ಎ. ಕಾರ್ನೇಲಿಯಸ್,
ಚೇರ್‌ಮನ್ ಮತ್ತು ಮೆನೇಜಿಂಗ್ ಡೈರೆಕ್ಟರ್, ಭಾರತ ಟೆಲಿಫೋನ್ ಕಾರ್ಖಾನೆ.

ಟೆಲಿಫೋನ್ ಉಪಕರಣಗಳಲ್ಲಿ ಎರಡು ವಿಧ. ಮೊದಲನೆಯದು ಸ್ವಿಚಿಂಗ್ ಉಪಕರಣಗಳು. ಎರಡನೆಯದು ದೂರ ಸಂಪರ್ಕ ಸಾಧನಗಳು ಅಥವಾ ಟ್ರಾನ್ಸ್‌ಮಿಶನ್ ಉಪಕರಣಗಳು. ಮೊದಲನೆಯ ಉಪಕರಣಗಳನ್ನು ಸ್ಥಾನಿಕ ಎಕ್ಸ್‌ಚೇಂಜ್‌ಗಳಲ್ಲಿ ಟೆಲಿಫೋನ್ ಚಂದಾದಾರರ ನಡುವೆ ಪರಸ್ಪರ ಸಂಪರ್ಕವನ್ನು ಕಲ್ಪಿಸಲು ಬಳಸುತ್ತಾರೆ. ಎರಡನೆಯ ನಮೂನೆಯ ಉಪಕರಣಗಳನ್ನು ದೂರ ಸಂಪರ್ಕ ಟ್ರಂಕ್ ಛಾನಲಗಳ ಮೂಲಕ ಸಂದೇಶಗಳನ್ನು ರವಾನಿಸಲು ಉಪಯೋಗಿಸುತ್ತಾರೆ. ಟ್ರಾನ್ಸ್‌ಮಿಶನ್ ಉಪಕರಣಗಳಲ್ಲಿ ಮೈಕ್ರೋವೇವ್ ತಂತ್ರಗಳ ಬಳಕೆಯನ್ನು ಕಾಣಬಹುದಾಗಿದೆ.

ಮೊದಲು ಪ್ರಚಾರದಲ್ಲಿದ್ದ ಟ್ರಾನ್ಸ್‌ಮಿಶನ್ ತಂತ್ರವೇ ಬೇರೆ. ಆಗ ಧ್ವನಿತರಂಗಗಳ ಮೂಲಕ ಸಂದೇಶಗಳ ರವಾನಿಸಲು ಭೂಮಿಯ ಮೇಲ್ಭಾಗದಲ್ಲಿ ಹಾಕಲಾದ ತಂತಿಗಳಲ್ಲಿ (ಲೈನ್ಸ್) ಲೋಹದ ಕಂಡಕ್ಟರುಗಳನ್ನು ಬಳಸಲಾಗುತ್ತಿತ್ತು. ದೂರ ಸಂಪರ್ಕದ ಸಂದರ್ಭಗಳಲ್ಲಿ ಧ್ವನಿ ತರಂಗಗಳನ್ನು ಆಗಾಗ್ಗೆ ಪುನರಾವೃತ್ತಿ ಮಾಡುವ ಸಾಧನಗಳನ್ನು ಬಳಸಬೇಕಾಗುತ್ತಿತ್ತು. ಇದರಿಂದ ಕೆಲವೊಂದು ವಿಶಿಷ್ಟ ಸಮಸ್ಯೆಗಳು ಉದ್ಭವಿಸಿದವು. ದುಬಾರಿ ವೆಚ್ಚ, ಸಂಪರ್ಕಜಾಲಗಳ ಸಮತೋಲನ ಇತ್ಯಾದಿ ಸಮಸ್ಯೆಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

ಭೂಮಿಯ ಮೇಲ್ಭಾಗದಲ್ಲಿ ಹಾಕಲಾದ ಲೈನ್‌ಗಳಲ್ಲಿ ಕ್ಯಾರಿಯರ್ ವ್ಯವಸ್ಥೆ ಮತ್ತು ಮಲ್ಟಿಛಾನಲ್ ಆಪರೇಟರ್ ಸಾಧನಗಳ ಬಳಕೆಯೊಂದಿಗೆ ಟ್ರಾನ್ಸ್‌ಮಿಶನ್ ತಂತ್ರದಲ್ಲಿ ಪ್ರಗತಿ ಮೊದಲಾಯಿತು. ಈಗ ಆರಂಭವಾದ ವಿಕಾಸ ಕ್ರಮ ಮುಂದುವರಿದು ಕೋ ಆಕ್ಸಿಯಲ್ ಕೇಬಲ್ ವ್ಯವಸ್ಥೆ ಜಾರಿಯಲ್ಲಿ ಬಂದಿತು.

ರೇಡಿಯೋ-ತಂತಿ ಸಂಪರ್ಕ

ಕ್ರಿಸ್ತಶಕ 19ನೆಯ ಶತಮಾನದ ಉತ್ತರಾರ್ಧದಲ್ಲಿ ರೇಡಿಯೋ-ಟೆಲಕಮ್ಯೂನಿಕೇಶನ್ ವ್ಯವಸ್ಥೆಯ ಅಭಿವೃದ್ಧಿ ಆರಂಭವಾಯಿತು. ರೇಡಿಯೋ ತರಂಗಗಳ ಶೋಧವಾದದ್ದು ಅದೇ ಕಾಲದಲ್ಲಿ. ಈ ಒಂದು ಹೊಸ ವಿಧಾನದಿಂದಾಗಿ ತಂತಿಯ ಮೂಲವಾಗಿದ್ದ ದೀರ್ಘ ಲೋಹದ ಕಂಡಕ್ಟರಗಳ ನಿವಾರಣೆಯಾಯಿತು. ಸಾಂಪ್ರದಾಯಿಕವಾದ ರೇಡಿಯೋ ಟೆಲಿಕಾಮ್ ವ್ಯವಸ್ಥೆಯಲ್ಲಿ ಅನೇಕ ಲೋಪದೋಷಗಳಿದ್ದವು. ವಾತಾವರಣದಲ್ಲಾಗುತ್ತಿದ್ದ ಸದ್ದುಗಳು ಮತ್ತು ದುರ್ಬಲವಾಗುತ್ತ ಹೋಗುವ ಸಂಕೇತಗಳು ಮುಖ್ಯವಾದ ಲೋಪದೋಷಗಳು, ಮೈಕ್ರೋವೇವ್ ಸಾಧನಗಳನ್ನು ಬಳಸಿಕೊಂಡ "ದೃಷ್ಟಿ ಪಥದ ತಂತ್ರ"ದ ಶೋಧದಿಂದಾಗಿ ಈ ನ್ಯೂನತೆಗಳು ನಿವಾರಣೆಗೊಂಡು ದೂರ ಸಂಪರ್ಕ ರೇಡಿಯೋ ಟೆಲಿಕಮ್ಯುನಿಕೇಶನ್ ಉಪಕರಣಗಳ ಕಾರ್ಯವಿಧಾನ ಹೆಚ್ಚು ಸುಗಮವಾಯಿತು.

ಮೈಕ್ರೋವೇವ್ ಎಂದರೆ ಸಹಸ್ರಾರು ಮೆಗಾಸೈಕಲ್ ಕಂಪನಗಳುಳ್ಳ (ಫ್ರಿಕ್ವೆನ್ಸಿ) ರೇಡಿಯೋ ತರಂಗಗಳು. ಸಾಮಾನ್ಯವಾಗಿ ಉಪಯೋಗದಲ್ಲಿರುವ ಇಂತಹ ಫ್ರಿಕ್ವೆನ್ಸಿಗಳ ವಿಸ್ತಾರ 2000 ರಿಂದ 13000 ಎಂ.ಎಚ್. ರ್ಝಡ್. ಇವು ಆದರಿಂದ 1800 ಟೆಲಿಫೋನ್ ಸಂಪರ್ಕ ಛಾಲನಗಳ ವ್ಯವಸ್ಥೆಗಳನ್ನು ಕಲ್ಪಿಸುತ್ತದೆ.

ಐಟಿಐ ಕಾರ್ಖಾನೆಯ ಸಾಧನೆ

ಭಾರತ ಟೆಲಿಫೋನ್ ಕಾರ್ಖಾನೆ ವಿದೇಶ ಸಹಯೋಗದಿಂದ ಪಡೆದ ತಾಂತ್ರಿಕ ನೈಪುಣ್ಯದಿಂದ ಪ್ರಾರಂಭದಲ್ಲಿ ಸ್ವಿಚಿಂಗ್ ಉಪಕರಣಗಳ ಮತ್ತು ಟೆಲಿಫೋನ್ ಉಪಕರಣಗಳ ಕ್ಷೇತ್ರವನ್ನು ಪ್ರವೇಶಿಸಿತು. ಮುಂದೆ ಕೆಲವೇ ವರ್ಷಗಳಲ್ಲಿ ಈ ಕಾರ್ಖಾನೆಯ ಎಂಜನೀಯರರು ಮತ್ತು ವಿನ್ಯಾಸಕಾರರ ಆತ್ಮವಿಶ್ವಾಸದಿಂದಾಗಿ ಕಾರ್ಖಾನೆಯು 1958ರಲ್ಲಿ ಸ್ವಯಂ ಟ್ರಾನ್ಸ್‌ಮಿಶನ್ ಉಪಕರಣಗಳ ವಿನ್ಯಾಸವನ್ನು ಸಿದ್ಧಪಡಿಸುವ ಹಾಗೂ ಅವುಗಳನ್ನು ತಯಾರಿಸುವ ಕಾರ್ಯ ಆರಂಭಿಸಿತು. ಮೊದಮೊದಲು ಭೂಮಿಯ ಮೇಲ್ಭಾಗದ ತಂತಿ ಸಂಪರ್ಕ ಲೈನ್‌ಗಳಿಗೆ ಬೇಕಾಗುವ ಮೂರು ಛಾನಲ್ ವ್ಯವಸ್ಥೆಗಳನ್ನು ತಯಾರಿಸಿತು. ಅದು ಬಳಿಕ 8 ಛಾನಲ್ ಮತ್ತು 12 ಛಾನಲ್ ವ್ಯವಸ್ಥೆಯ ಉಪಕರಣಗಳನ್ನು ತಯಾರಿಸಿ ಕೋ ಆಕ್ಸಿಯಲ್ ಉಪಕರಣಗಳ ಉತ್ಪಾದನೆಗೆ ಆರಂಭಿಸಿತು. ಮೈಕ್ರೋವೇವ್ ತಂತ್ರದಲ್ಲಿ ಐಟಿಐ ಅದ್ಭುತ ಪ್ರಗತಿಯನ್ನು ಸಾಧಿಸಿ 1967ರಲ್ಲಿ ಮೈಕ್ರೋವೇವ್ ವ್ಯವಸ್ಥೆಗಳ ತಯಾರಿಕಾ ಕ್ಷೇತ್ರವನ್ನು ಪ್ರವೇಶಿಸಿತು. ಐಟಿಐ ದೇಶದಲ್ಲೇ ದೊರೆಯುವ ಸಾಧನ ಸಾಮಗ್ರಿಗಳನ್ನು ಬಳಸಿಕೊಂಡು ತಯಾರಿಸಿದ ಮೊತ್ತ ಮೊದಲನೆಯ ಮೈಕ್ರೋವೇವ್ ವ್ಯವಸ್ಥೆಯನ್ನು ಅಂಚೆ-ತಂತಿ ಇಲಾಖೆಯವರಿಗಾಗಿ ಆಸನ್‌ಸೋಲ್—ರಾಂಚಿಗಳ ನಡುವೆ ಸ್ಥಾಪಿಸಲಾಗಿದೆ. ಈಗ ಐಟಿಐ ನ್ಯಾರೋಬ್ಯಾಂಡ್ ಮತ್ತು ಬ್ರಾಡ್ ಬ್ಯಾಂಡ್ ಮೈಕ್ರೋವೇವ್ ವ್ಯವಸ್ಥೆಯನ್ನು ತಯಾರಿಸುತ್ತಿದೆ. ಇವು 300ರಿಂದ 1800 ಛಾನಲ್‌ಗಳನ್ನು ಒದಗಿಸುತ್ತವೆ.

ತ್ವರಿತ ಪ್ರಗತಿ

ಟ್ರಾನ್ಸ್‌ಮಿಶನ್ ಉಪಕರಣಗಳ ತಯಾರಿಕೆಯಲ್ಲಿ ತ್ವರಿತಗತಿಯಿಂದ ಪ್ರಗತಿಯಾಗುತ್ತ ನಡೆದಿರುವುದರಿಂದ ಈ ವ್ಯವಸ್ಥೆಗಳ ಪ್ರಾರಂಭಿಕ ಕಾರ್ಯವಿಧಾನದಲ್ಲಿ ಕೆಲವೊಂದು ಅಡಚಣೆಗಳನ್ನು ಎದುರಿಸಬೇಕಾಯಿತು. ಅಲ್ಪಕಾಲದಲ್ಲೇ ಈ ಎಲ್ಲಾ ಅಡಚಣೆಗಳು ನಿವಾರಣೆಗೊಂಡವು. ಐಟಿಐ ತಯಾರಿಸಿರುವ ಕ್ಯಾರಿಯರ್ ಉಪಕರಣಗಳು ಈಗ ರಫ್ತು ಪೇಟೆಯನ್ನು ಪ್ರವೇಶಿಸಿವೆ. ಈ ಉಪಕರಣಗಳು ಗುಣಾಂಶದಲ್ಲಿ ಶ್ರೇಷ್ಠವಾಗಿವೆ.

ವಿದೇಶಗಳ ಸಹಯೋಗವಿಲ್ಲದೆಯೇ ಹದಿನಾಲ್ಕು ವರ್ಷಗಳಷ್ಟು ಅಲ್ಪಾವಧಿಯಲ್ಲಿ ಟ್ರಾನ್ಸ್‌ಮಿಶನ ಉಪಕರಣಗಳ ತಯಾರಿಕೆಯಲ್ಲಿ ಅಪೂರ್ವ ಪ್ರಗತಿ ಸಾಧಿಸಿದ ಶ್ರೇಯಸ್ಸು ಐಟಿಐ ಕಾರ್ಖಾನೆಯ ವಿನ್ಯಾಸಕಾರರು ಎಂಜನೀಯರುಗಳು ಮತ್ತು ತಂತ್ರಜ್ಞರಿಗೆ ಸಲ್ಲುತ್ತದೆ.

ನಮ್ಮ ದೇಶದಲ್ಲೇ ತಯಾರಾದ ಮೈಕ್ರೋವೇವ್ ಸಾಧನಗಳನ್ನು ಆಸನ್‌ಸೋಲ್—ರಾಂಚಿ ವಿಭಾಗದಲ್ಲಿ ಸ್ಥಾಪಿಸಿರುವುದು ನಮ್ಮ ಎಂಜನೀಯರರು ಏನೆಲ್ಲ ಸಾಧಿಸಬಲ್ಲರು ಎಂಬುದನ್ನು ತೋರಿಸಿಕೊಟ್ಟಿದೆ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

P & S. C. No. 7/70

ವೆಂಕಟ್ರಮಣಾಚಾರ್ಯ ಕೊಡಾ

—ಅರ್ಜಿದಾರರು

ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ:—

ನಾದಿರಾಜಾಚಾರ್ಯರ ವಿಧವೆ ಕಮಲಮ್ಮನು ತಾ 10-7-70ರಲ್ಲಿ ಮರಣಪಟ್ಟಿರುವುದರಿಂದ ಅರ್ಜಿಯಲ್ಲಿ ವಿವರಿಸಿದ ಆಸ್ತಿವಸೂಲಿಗೆ ಎಲ್ಲಾ ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರನ ಹೆಸರಿಗೆ ವಾರಿಸು ಸರ್ಟಿಫಿಕೇಟು ಕೇಳಿ ಅರ್ಜಿದಾರರು ದಾಖಲು ಮಾಡಿದ ಮೇಲಿನ ಅರ್ಜಿಯು ತಾರೀಕು 9-12-70ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪಿಸುವವರಿದ್ದರೆ ಮೇಲಿನ ತಾರೀಕು ಹಗಲು ಗಂಟೆ 11ಕ್ಕೆ ಕೋರ್ಟು ಮುಂದೆ ಹಾಜರಾಗಿ ದಾಖಲು ಮಾಡಿಕೊಳ್ಳತಕ್ಕದ್ದು.

Y. C. S. HEGDE
Advocate for Petnrs.

ತಾ. 20-11-70)
Udipi)

ಸಂಪಾದಿಸಿರಿ
5%
ತೆರಿಗೆರಹಿತ ಬಡ್ಡಿ

7 ವರ್ಷದ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟುಗಳು
(ಎರಡನೇ ಮತ್ತು ಮೂರನೇ ಹಂಚಿಕೆ)
ಉಳಿತಾಯಕ್ಕೆ ಅತ್ಯುತ್ತಮವಾದ ಸರ್ಟಿಫಿಕೇಟುಗಳು. ಇವುಗಳಲ್ಲಿ ತೊಡಗಿಸಿದ ಹಣಕ್ಕೆ ತೆರಿಗೆರಹಿತ ಶೇಕಡಾ 5 ಬಡ್ಡಿ ದೊರೆಯುತ್ತದೆ. ನೀವು ಅಧಿಕ ವರಮಾನವುಳ್ಳವರಾಗಿದ್ದರೆ ನಿಮಗೆ ಲಭಿಸುವ ನಿಜ ಬಡ್ಡಿಯ ದರ ಹೀಗಿದೆ:

ವರಮಾನ	ಬಡ್ಡಿ
ರೂ. 20,000	6.37%
ರೂ. 30,000	7.99%
ರೂ. 40,000	9.39%
ರೂ. 50,000	14.71%

ವಿವರಗಳನ್ನು ಸಮೀಪವಿರುವ ಪೋಸ್ಟ್ ಆಫೀಸಿನಿಂದ ಪಡೆಯಿರಿ
ರಾಷ್ಟ್ರೀಯ ಉಳಿತಾಯ ಸಂಸ್ಥೆ

davp 70/365

ನಾಟಕ ಪ್ರದರ್ಶನ

ಬಳ್ಕುಂಜೆಯ ಯುವಕರು ತಾ. 11ರಂದು ಸ್ಥಳೀಯ ಇಗರ್ಜಿಯ ವಠಾರದಲ್ಲಿ ಮೂಡುಬೆಳ್ಳೆ ಸದಾನಂದ ರಾವ್ ವಿರಚಿತ ಕಲಿಯುಗದ ಹುಲಿ ಎಂಬ ನಾಟಕವನ್ನು ಸ್ಥಳೀಯ ಶಾಲೆಯ ಕಟ್ಟಡದ ಸಹಾಯಾರ್ಥವಾಗಿ ಶ್ರೀ ಶಿಕ್ಷಕ ವಿಲಿಯಂ ಪಿಂಟೋರವರ ಅಧ್ಯಕ್ಷತೆಯಲ್ಲಿ ಅಭಿನಯಿಸಿದರು. ರೆ. ಫಾ. ಲೋರೆನ್ಸ್ ಮೊಂತೇರೊರವರು ಸ್ವಾಗತ ಭಾಷಣ ಮಾಡಿದರು.

ಮಕ್ಕಳ ದಿನಾಚರಣೆ

ಕಲ್ಯಾಣಪುರ ಮಿಲಾಗ್ರಿಸ್ ಹಾಯರ್ ಸೆಕೆಂಡರಿ ಶಾಲೆಯಲ್ಲಿ ಮಕ್ಕಳ ದಿನಾಚರಣೆ ತಾ. 14ರಂದು ಶ್ರೀ ಶ್ರೀನಿವಾಸ ರಾವ್ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಮುಖ್ಯೋಪಾಧ್ಯಾಯ ರೆ. ಫಾ. ವಿಲಿಯಂ ಗೊನ್ಸಾಲ್ವಿಸ್‌ರವರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಯು. ಬಿ. ಮಧ್ಯಸ್ಥ ಮತ್ತು ವಿದ್ಯಾರ್ಥಿ ಸಭಿಕರು ಸಂದರ್ಭೋಚಿತ ಭಾಷಣವಿತ್ತರು.

ಮುಖ್ಯ ಅತಿಥಿ ಶ್ರೀ ವಿಲಿಯಂ ಪಿಂಟೊರವರು ನೆಹರೂರವರ ಗುಣಗಾನ ಮಾಡಿ—ಸಮಾಜವಾದಿ ತತ್ವ ಅನುಷ್ಠಾನಕ್ಕೆ ತರಲು ಅವರು ಸರ್ವಪ್ರಯತ್ನ ಮಾಡಿದ್ದರು. ಯುವಕರು ಅವರ ಆದರ್ಶಗಳನ್ನು ಜಾರಿಗೆ ತರುವರೆ ಪ್ರಯತ್ನಿಸಬೇಕೆಂದು ಬಿನ್ನವಿಸಿಕೊಂಡರು.

ಮಾರಿ ಜಾತ್ರೆ

ನಮ್ಮೂರಲ್ಲೊಂದು ಮಾರಿ ಜಾತ್ರೆ
ಅಂತಿಂಥ ಜಾತ್ರೆಯೇನಲ್ಲ—ಭಾರಿ
ಮಾರಿ ಜಾತ್ರೆ
ಕುರಿ, ಕೋಣ, ಕೋಳಿಗಳ
ಬಲಿಗೊಡಲು ಸೇರಲಿಹ ಜನರ ಜಾತ್ರೆ
ಮಾರಿಗೌತಣವಿಕ್ಕಿ,
ಮತ್ತೆ ತೃಪ್ತಿಯಿಂದುಕ್ಕಿ
ನೆತ್ತರನೆ ನೆತ್ತಿಗೇರುವ ಶರಾಬ ಕುಡಿದೂ
ಹಸಿ ಮಾಂಸ ಕಸಿದು ತಿಂದೂ
ಮತಿಗೆಟ್ಟು, ಗತಿಗೆಟ್ಟು ಕುಣಿವ ಜನರ
ಜಾತ್ರೆ
ಅದಕ್ಕೆ ಹಿರಿಯರಿಂದಿದುವರೆಗು ನಡೆದು
ಬಂದಿಹ ಜಾತ್ರೆ.

ದುಡಿವ ಜನರನೆ ಮಣಿಸಿ
—ಅವರ ಗೋಣನೆ ತಂದು ತಿನ್ನುವ
ಹಸಿವೆ—
ಕೆರಳಿ ನಿಂತಿಹಳಲ್ಲಿ ಕಾಳಿ
ಮುನಿದ ಚಂಡಿಯನೊಲಿಸೆ
ನರ ಬಲಿಯ ಸಲಿಸಬೇಕು
—ಕನಲಿದಿಂದಿರೆ ಮುಕ್ಕಾಲು ಜೀವಗಳ
ಬಲಿಗೊಳ್ಳುವಂತೆ—
ಕೊಡದಿರಲು— ?
ಕೊಡದಿದ್ದರೆ ಉಳಿವಿದೆ?
ಭಕ್ತಿಯರ್ಪಿಸಬೇಕು, ಭಕ್ತಿ ನಿಜವೆಂದೆನಿಸೆ
ಗೋಣವೊಂದನೆ ಏಕೆ?
ಎಲ್ಲವನು— ಮಡದಿ, ಮನೆ-ಮಠ
ಮಕ್ಕಳನು—
ಎಲ್ಲ ಕೊಡಲಿಲ್ಲ; ನಿಮಗುಳಿಗಾಲವಿಲ್ಲ.

ಜನರೇಳ್ಗೆ ಇನ್ನಿಲ್ಲ.
ನುಡಿವಳಂತೆ ಚಂಡಿ.

ಕೇಳಿ ಜನ ಥಂಡಿ. ಥಂಡೀ.
'ಭಳಿ ಕೊಡಬೆ, ಪೈ ಕೊಡಬೆ
ಮಲಗಿದ್ದ ಭಕ್ತರೆಲ ಏಳಿ!
ಏಳದಿರೆ ನಿಮ್ಮ ನೆಲ ಹೋಳು, ಹೋಳೂ.
ನಿಮ್ಮ ಕುಲ ಹಾಳು, ಹಾಳೂ.'
ನಿಜ ಕೊಡದಲಿ ನಿಂದಿಹಳು, ನಿಜ-
ಲಿಂಗಕ್ಕೆ ಪೂಜೆಯೇಕೇ!
ನಂಬಿ ನಡೆಯೋಣ ಬನ್ನಿ.
ನಿಮ್ಮ ಹರಕೆಗಾಣಿಕೆ ತನ್ನಿ.
ನಿಮ್ಮುದ್ಧಾರ ನಮಗಿರಲಿ ಇನ್ನು
ದುಡಿವವರ ಮೇಲೆತ್ತಿ, ಧನಿಕರನು ತುಳಿ
ದೊತ್ತಿ
ಜೀವರ ಬಾವುಟ ಎತ್ತಿ
ಜಾತಿ-ಮತ-ಪಂಥಗಳ ಪಾತಾಳಕೊತ್ತೀ
ತರುವೆ ಸಮತೆಯ ಸತ್ತೆ
(ಕಂದರಾರಿಗು ತೊಂದರೆಯು ಇಲ್ಲ)
ನಮಗಿರುವುದೊಂದೇ ಧ್ಯೇಯ
ಜನರಭ್ಯುದಯ.
ಎಲ್ಲಿ, ಯಾವ ಗುಡಿಯೊಳಡಗಿದ್ದಳೀ ದೇವಿ
ಶಿಲೆಯಾಗಿ ಉಳಿದಿದ್ದಳೊ
ಆಗಿದ್ದಳೇನು ಇದುವರೆಗು
ಕಿವುಡಿ—ಮೂಕಿ—ಕುರುಡಿ?
ಅಥವ ಬಂದಿತ್ತೆ ನುಡಿ-ನಡೆಗೆ ಬಾಲ್ಯ?
ತೀರಿಸುತ್ತಿಹಳೇನು ಬಾಯ ಚಾಪಲ್ಯ?
ಕೈಲಾಗದಿಳುಹಿದರು ಗಾಂಡೀವ ಗಾಂಧಿ
ನೆಹರು
ಆ ದೇವರಿಂದಾಗದುದ
ಈ ದೇವಿ ಮಾಳ್ವಳೆ?
ಇದವೆ ಸಂದೇಹ; ಬರಿ ಗುಲ್ಲು.
ನಂಬಿದಿರೊ, ಹಾಕಿ ಕೊಂಡಿರಿ ನಿಮಗೆ
ನೀವೇ ಉರುಳು.

—ಮಾರಿಗುಣಿಸಲು ತಂದ ಕೋಣ
ತನ್ನ ಗೋಣನು ತಾನೆ ಚಾಚುವಂತೆ—
ಹಿಂದೆಯೂ ನಡೆದಿತ್ತು ಇಂಥ ಮಾರಿ
ಜಾತ್ರೆ
ನಂಬಿ ಸೇರಿತು ಸಂತೆ
ಅಂದು ಕುಣಿದಿಹಳಂತೆ ಹೆಮ್ಮಾರಿ ಇಂತೆ
(ಇದು ಅಂತೆ—ಕಂತೆ)
ಕಲಿಮಾರಿ ಹಿಡಿದಿದ್ದ ಜನಕಿಲ್ಲ ಕಲೆ?
ನೋಡಿ ನಕ್ಕ ಶಿವಗಿರ ಪುಷ್ಟಿ ಕಲೆ?

— "ದೇವಕಿನಂದನ"

ಜೀವನ

"ಜೀವನದ ವಿನಾ ಬೇರೆ ಸಂಪತ್ತೇ ಇಲ್ಲ"

o o o

"ಜೀವನವು ಅತ್ಯಲ್ಪ ಕಾಲದ್ದೇ ಆದರೂ ಸತ್ಯವು ಮಾತ್ರ ದೀರ್ಘಕಾಲದವರೆಗೆ ಬಾಳುತ್ತದೆ. ಎಂತಲೇ ನಾವು ಜೀವನದಲ್ಲಿ ಸತ್ಯವನ್ನೇ ಆಡೋಣ."

o o o

"ಜೀವನದ ಬಗೆಗೆ ಗೌರವ ಭಾವನೆಯನ್ನು ರೂಢಿ ಮಾಡಿಕೊಳ್ಳುತ್ತ ಹೋದರೆ ನಾವು ಒಳ್ಳೆಯವರಾಗುತ್ತೇವೆ. ಭಾಗ್ಯವಂತರಾಗುತ್ತೇವೆ. ಸಜೀವವಾಗಿ ಉಳಿಯುತ್ತೇವೆ"

o o o

"ಒಳ್ಳೆಯದನ್ನು ಯಾರು ಮಾಡುತ್ತಾರೆಯೋ ಅವರೇ ನಿಜವಾಗಿಯೂ ಬದುಕಿರುತ್ತಾರೆ."

o o o

"ಅಜ್ಞಾನದಿಂದ ನಮ್ಮ ಜೀವನವು ಮೋಟಾಗುತ್ತದೆ."

o o o

"ಜೀವನವನ್ನು ಬದುಕಬೇಕು ಎಂಬುದನ್ನು ನಾವು ಮೊದಲು ಒಪ್ಪಬೇಕು. ಅದನ್ನು ಒಪ್ಪದಿದ್ದರೆ ಬದುಕುವುದಕ್ಕೇ ಆಗುವುದಿಲ್ಲ"

o o o

"ಪ್ರತಿಯೊಂದು ದಿನವನ್ನು ನಮ್ಮ ಬದುಕಿನ ಕೊನೆಯ ದಿನವೆಂಬಂತೆ ಜೀವಿಸಬೇಕು."

o o o

"ಜೀವನವು ಅರ್ಥವಿಲ್ಲದ್ದೆಂದು ಯಾವನು ಭಾವಿಸುವನೋ ಅವನು ದುರ್ದೈವಿ ಇಷ್ಟೇ ಅಲ್ಲ, ಜೀವಿಸಿ ಇರುವುದಕ್ಕೇ ಅನರ್ಹನೆನಿಸುತ್ತಾನ"

—"ಪ್ರಪಂಚ"

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

I. A. No. I
in R. I. A. No. 491/1964
(O. S. 19/1962 on the file of the Civil Judge's Court, Udipi)

ಇಂದಿರಾ ಬಾಯಿ R. ಕಾಮತ್ — ಅರ್ಜಿದಾರಳು

ಮತ್ತು

ಲಕ್ಷ್ಮೀನಾರಾಯಣ ಕಾಮತ್ ಕೂಡಾ — ಎದುರಿರು

2. ಮಾಧವ ಕಾಮತ್, 3. ನರಸಿಂಹ ಕಾಮತ್, 4. ನರಹರಿ ಕಾಮತ್ — ವಾಮನ ಸುಬ್ರಾಯ ಕಾಮತರ ಮಕ್ಕಳು. 7 ಗೋವಿಂದ ಕಾಮತ್, 8. ಶೇಷಗಿರಿ ಕಾಮತ್ — ಕೇಶವ ಕಾಮತರ ಮಕ್ಕಳು.

ಉಡುಪಿ ತಾಲ್ಲೂಕು ಮೂಡುತೋನ್ಸೆ ಗ್ರಾಮದ ಕಲ್ಯಾಣಪುರ.

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ O.S. No. 19/1962 ನೆ ಡಿಕ್ರಿಯಲ್ಲಾದ R. I. A. No. 491/1964ನೇ ಫೈನಲ್ ಡಿಕ್ರಿಯಲ್ಲಿ ತನಗೆ ಜೀವನಾಂಶ ಕೊಡಿಸಬೇಕಾಗಿ ಅರ್ಜಿದಾರಳು I. A. No. I ದಾಖಲು ಮಾಡಿದ್ದು ಆ ಕುರಿತು 2, 3, 4, 7 ಮತ್ತು 8ನೆ ಎದುರಿಗೆ ಆಕ್ಷೇಪಣೆಯಿದ್ದ ಸಂಗತಿಯಲ್ಲಿ ಅದನ್ನು ತಾರೀಖು 11-12-1970ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹಿರು ಮಾಡಿಕೊಳ್ಳತಕ್ಕದ್ದೆಂತ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗಿದೆ.

K. Varadaraya Pai
Advocate for Petitioner
in I.A. No. I

ಉಡುಪಿ, 16-11-1970.

In the Court of the
Principal Munsiff at Puttur
S. Kanara.

O. S. 397 of 1970.

Between:-
Thyampanna Gowda —Plaintiff
and
Narna Gowda —Defendant.

1. Narna Gowda
S/o Ishwara Gowda,
Bakila of Charvaka village,
Puttur Taluk. (S. K.)

Please take notice that the above suit stands posted to 30-11-70 for your appearance, and you are hereby directed to appear before the Court on the said day at 10—30 am in person or through an Advocate, failing which the suit will be proceeded in your absence.

(By order of the Court)

U. P. Shivarama,
Advocate for Plaintiff.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

O.S. No. 22/60

ಕೆ. ಸೀತಾರಾಮ ರಾವ್ — ವಾದಿ

ಮತ್ತು

1. ಟಿ. ಜಿ. ಶ್ರೀನಿವಾಸನ್ ಯಾನೆ ಟಿ. ಜಿ. ಶ್ರೀನಿವಾಸ ರಾವ್ 2. ಟಿ. ಜಿ. ವ್ಯಾಸರಾವ್ 3. ಟಿ. ಜಿ. ಪ್ರಾಣೇಶರಾವ್ 4. ಟಿ. ಜಿ. ನಾರಾಯಣ — ಪ್ರತಿವಾದಿಗಳು

ಇವರೊಳಗೆ

ಪ್ರಕಟಣೆ

ವಾದಿಯು 100ದ 4ನೆ ಪ್ರತಿವಾದಿಯ ಮೇಲೆ ಗಾಲಿನ ಬಗ್ಗೆ ಮಾಡಿದ ದಾವೆಯಲ್ಲಿ 3, 4ನೆ ಪ್ರತಿವಾದಿಗೆ ನೋಟೀಸಾಗಿ ಅವರು ಎಕ್ಸ್ ಪಾರ್ಟಿ ಆಗಿದ್ದಾರೆ. 1, 2ನೇ ಪ್ರತಿವಾದಿಯು T. N. ಗೋಪಾಲಾಚಾರ್ಯ ಮಕ್ಕಳು. ಮಂಗಳೂರು ತಾಲ್ಲೂಕು ಕೋಟೆಕಾರು ಗ್ರಾಮದಲ್ಲಿರುವವರು. ನಾಲ್ಕನೆಯದು ಸಾರಿಯೂ ನೋಟೀಸಿಗೆ ತಪ್ಪಿಸಿದ್ದರಿಂದ ಈಗ ಸದ್ರಿ ದಾವೆ ತಾರೀಖು 14-12-70ಕ್ಕೆ ಅವರ ನೋಟೀಸಿಗೆ ಇಟ್ಟಿದೆ. ಏನಾದರೂ ಆಕ್ಷೇಪಯಿದ್ದರೆ ಆ ದಿವಸ ಬೆಳಿಗ್ಗೆ 11 ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳಬೇಕು. ಇಲ್ಲವಾದ್ದರಿಂದ ಏಕ ಪಕ್ಷನಾಗಿ ನಂಬ್ರ ತೀರ್ಪು ಮಾಡಲಾಗುವದು.

(ಕೋರ್ಟಿನ ಹುಕುಂ ಪ್ರಕಾರ)

B. Yogishwara Holla
Advocate for plaintiff

Udipi, 18—11—70

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅಕ್ಷರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲಸ್ವಯಂಬೋಧಿನಿ
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ದಿನವಹಿ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಪೊಳಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಿಗೆ ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ। ಪಿ. ಆರ್. ಕೊರಡ್ಕರ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ. ಪಥ್ಯ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA 26—11—1970

Registered with the Registrar
of News Papers for India
under No. R. N. 3646/'57

REGD. No. B. G. 176
LICENCE No. 33,
Licensed to Post without Prepayment

ಧರ್ಮ ನೀತಿ ನ್ಯಾಯಗಳು ಮುಪ್ಪುರಿಗೊಂಡ

ಸದಾಚಾರಸಂಪನ್ನ ಹೆಗ್ಗಡೆ ಪರಂಪರೆ

ಶ್ರೀ ಮಂಜುನಾಥ ಸ್ವಾಮಿ ದೇವಾಲಯವು ಖಾಸಗಿ ದೇವಾಲಯ. ಆದರೂ ಸಾರ್ವಜನಿಕ ದೇವಾಲಯಗಳಿಗಿಂತಲೂ ಪ್ರಸಿದ್ಧವಾದದ್ದು. ಈ ಪ್ರಸಿದ್ಧಿಗೆ ಶ್ರೀ ಸ್ವಾಮಿಯ ಮಹಿಮಾತಿಶಯವೇ ಕಾರಣ. ಇಲ್ಲಿ ಕೊಡುವಷ್ಟು ಸೇವೆಗಳು ಬೇರೆಲ್ಲಿಯೂ ಕೊಡುವುದು ಅಪರೂಪ; ಹಾಗೆಯೇ ಇಲ್ಲಿನ ದಾನ—ಧರ್ಮಗಳು ಬೇರೆಲ್ಲಿಯಾದರೂ ನಡೆಯುವುದೂ ಅಪರೂಪ; ದಿವಂಪ್ರತಿ ಸಾವಿರಾರು ಯಾತ್ರಾರ್ಥಿಗಳಿಗೆ ಉಚಿತ ವಸತಿ ಅಶನಗಳನ್ನು ಕೊಡುವ ಕ್ಷೇತ್ರವೊಂದೇವೊಂದು-ಅದು ಶ್ರೀ ಧರ್ಮಸ್ಥಳ.

ಶ್ರೀ ಮಂಜುನಾಥ ಸ್ವಾಮಿ ದೇವಾಲಯವು ಹೆಗ್ಗಡೆ ಮನೆತನಕ್ಕೆ ಸೇರಿದ್ದು. ಇದರ ಸಕಲ ಆಡಳಿತವು ಪಟ್ಟಾಭಿಷಿಕ್ತ ಹೆಗ್ಗಡೆಯವರ ನೇತೃತ್ವದಲ್ಲೇ ನಡೆಯುತ್ತದೆ. ಧರ್ಮದೇವತೆಗಳ ಅಣತಿಯಂತೆ ಇಲ್ಲಿ ಮಕ್ಕಳಕಟ್ಟು ಬಳಕೆಯಲ್ಲಿದೆ. ದೇವಾಲಯದ ಮೂಲಕ ಶ್ರೀ ಕ್ಷೇತ್ರದ ಆಗುಹೋಗುಗಳಿಗೆಲ್ಲ ಶ್ರೀ ಹೆಗ್ಗಡೆಯವರೇ ಹೊಣೆಗಾರರು. ಇವರನ್ನು ಧರ್ಮಾಧಿಕಾರಿಗಳೆಂದು ಕರೆಯುವ ಸಂಪ್ರದಾಯವಿದೆ.

ಶ್ರೀ ಕ್ಷೇತ್ರದಲ್ಲಿ ಧರ್ಮದೇವತೆಗಳನ್ನು ಶ್ರೀ ಮಂಜುನಾಥ ಸ್ವಾಮಿಯನ್ನೂ ನೆಲೆಗೊಳಿಸಿದ ಶ್ರೀ ಬರ್ಮಣ್ಣ ಹೆಗ್ಗಡೆಯವರು ಮೊತ್ತಮೊದಲಿನ ಧರ್ಮಾಧಿಕಾರಿಗಳೆನಿಸಿದರು. ಮುಂದೆ ಅವರ ಪರಂಪರೆಯಲ್ಲೇ ಬೇರೆ ಬೇರೆಯವರು ಧರ್ಮಾಧಿಕಾರಿಗಳಾಗಿ ಶ್ರೀ ಕ್ಷೇತ್ರದ ಸರ್ವಾಂಗೀಣ ಪ್ರಗತಿಗಾಗಿ ದುಡಿದು ಯಶಸ್ವಿಯಾಗುತ್ತ ಬಂದಿದ್ದಾರೆ. ಶ್ರೀ ಕ್ಷೇತ್ರದ ಧರ್ಮಾಧಿಕಾರಿಗಳ ಪರಂಪರೆ ಹೀಗಿದೆ.

೧. ಬರ್ಮಣ್ಣ ಹೆಗ್ಗಡೆ.
೨. ಪದ್ಮಯ್ಯ ಹೆಗ್ಗಡೆ.
೩. (ಬಂದನೆ) ಚಂದಣ್ಣ ಹೆಗ್ಗಡೆ.
೪. ದೇವರಾಜ ಹೆಗ್ಗಡೆ (1503)
೫. (ಬಂದನೆ) ಮಂಜಯ್ಯ ಹೆಗ್ಗಡೆ.
೬. ಜಿನ್ನಪ್ಪ ಹೆಗ್ಗಡೆ.
೭. (ಇಮ್ಮಡಿ) ಚಂದಯ್ಯ ಹೆಗ್ಗಡೆ.
೮. ದೇವಪ್ಪರಾಜ ಹೆಗ್ಗಡೆ.
೯. ಅನಂತಯ್ಯ ಹೆಗ್ಗಡೆ.
೧೦. ವೃಷಭಯ್ಯ ಹೆಗ್ಗಡೆ.
೧೧. ಗುಂಮಣ್ಣ ಹೆಗ್ಗಡೆ.
೧೨. ವರ್ಧಯ್ಯ ಹೆಗ್ಗಡೆ.
೧೩. (ಮುಮ್ಮಡಿ) ಚಂದಯ್ಯ ಹೆಗ್ಗಡೆ.
೧೪. ಕುಮಾರಯ್ಯ ಹೆಗ್ಗಡೆ.
೧೫. (ನಾಲ್ವಡಿ) ಚಂದಯ್ಯ ಹೆಗ್ಗಡೆ.
೧೬. (ಇಮ್ಮಡಿ) ಮಂಜಯ್ಯ ಹೆಗ್ಗಡೆ.
೧೭. ಧರ್ಮಪಾಲ ಹೆಗ್ಗಡೆ.
೧೮. (ಐದನೆಯ) ಚಂದಯ್ಯ ಹೆಗ್ಗಡೆ. (1897…1915)
೧೯. (ಮುಮ್ಮಡಿ) ಮಂಜಯ್ಯ ಹೆಗ್ಗಡೆ. (1918-1955)
೨೦. ರತ್ನವರ್ಮ ಹೆಗ್ಗಡೆ. (1955-1968)
೨೧. ವೀರೇಂದ್ರ ಹೆಗ್ಗಡೆ. (1968—)

ಶ್ರೀ ಹೆಗ್ಗಡೆ ಪೀಳಿಗೆಯು ಮಕ್ಕಳ ಸಂತಾನಕಟ್ಟಿನ ಪ್ರಕಾರವಾಗಿ ಬೆಳೆಯುತ್ತ ಬಂದುದು. ಕೆಲವರಿಗೆ ಮಕ್ಕಳ ಸಂತಾನವಿಲ್ಲವಾದಾಗ ದತ್ತು ಸ್ವೀಕಾರ ಮಾಡಿದ್ದ ಉದಾಹರಣೆಗಳೂ ಉಂಟು.

ಧರ್ಮಸ್ಥಳದ ನೆಲ್ಯಾಡಿ ಬೀಡಿನ ಈ ಪಟ್ಟಾಭಿಷಿಕ್ತ "ಹೆಗ್ಗಡೆ"ಯವರು ನೀತಿ-ಧರ್ಮ-ನ್ಯಾಯಗಳು ಮುಪ್ಪುರಿಗೊಂಡಂತೆ ನಡೆದು ಬರುತ್ತಿರುವುದು ದಿಗಂತಗೋಚರ. ಈ ಪರಂಪರೆಯು ಕಳೆದ ಆರೇಳು ಶತಮಾನಗಳಿಂದಲೂ ಅವಿಚ್ಛಿನ್ನವಾಗಿ ಬೆಳೆದು ಹೆಮ್ಮರವಾಗಿ ನಿಂತಿದೆ. ದೇವಾಲಯದ, ಕ್ಷೇತ್ರದ ಮತ್ತು ಯಾತ್ರಾರ್ಥಿಗಳ ಸರ್ವತೋಮುಖ ಉನ್ನತಿಗಾಗಿ ಇವರು ಅಹರ್ನಿಶಿ ದುಡಿಯುತ್ತಲೇ ಬಂದಿದ್ದಾರೆ. ಸಾಮಾಜಿಕ ಮತ್ತು ಸಾಮಯಿಕ ಪರಿಸ್ಥಿತಿಗಳನ್ನು ಧಾರ್ಮಿಕತೆಯೊಂದಿಗೆ ಸಮಂಜಸವಾಗಿ ಜೋಡಿಸಿಕೊಂಡು, ಧರ್ಮಕ್ಕೆ ಚ್ಯುತಿ ಬಾರದಂತೆ, ಸಂಪ್ರದಾಯಕ್ಕೆ ಭಂಗ ಬಾರದಂತೆ ಇವರು ನಡೆದುಕೊಂಡು ಬಂದಿದ್ದಾರೆ. ಈ ಪರಂಪರೆಯ ಅನನ್ಯ ಸೇವಾ ಭಾವನೆಯಿಂದಲೇ ಶ್ರೀ ಮಂಜುನಾಥ ಸ್ವಾಮಿ ಪ್ರಸನ್ನನಾಗಿದ್ದಾನೆ; ಭಕ್ತ ಜನರಿಗೆ ಅಭಯ ನೀಡುತ್ತಿದ್ದಾನೆ.

"ಧರ್ಮ-ನ್ಯಾಯಗಳಿಗೆ ಚ್ಯುತಿಬಾರದಂತೆ ನಡೆದುಕೊಂಡರೆ ನಿಮ್ಮನ್ನು ಎತ್ತಿ ಹಿಡಿಯುವೆವು. ನಿಮ್ಮ ಪೋಷಣೆಯನ್ನು ಮಾಡುವೆವು." ಎಂದು ಧರ್ಮ ದೇವತೆಗಳು ಶ್ರೀ ಬರ್ಮಣ್ಣ ಹೆಗ್ಗಡೆಯವರಿಗೆ ಅಭಯ ನೀಡಿದ್ದರು. ಹೆಗ್ಗಡೆ ಮನೆತನವು ಹಾಗೆ ನಡೆದುಕೊಳ್ಳುತ್ತಲೇ ಬಂದಿದೆ. ಧರ್ಮದೇವತೆಗಳ ಅಭಯ ಸತ್ಯವಾಗುತ್ತಲೇ ಬಂದಿದೆ. ಮುಂದೆಯೂ ಈ ಸತ್ಸಂಪ್ರದಾಯ ಬೆಳೆದು ಬರುತ್ತದೆ.

ಶ್ರೀ ಮಂಜುನಾಥ ಸ್ವಾಮಿಯ ಯಶೋಭೂಮಿ

(ಮೊದಲನೇ ಪುಟದಿಂದ)

ಅಂತು ಇಲ್ಲಿ ಇದ್ದುದು ನೆಲ್ಯಾಡಿ ಬೀಡು ಮತ್ತು ಚಂದ್ರನಾಥನ ಬಸದಿ ಮಾತ್ರ. ಶ್ರೀ ಬರ್ಮಣ್ಣ ಹೆಗ್ಗಡೆಯವರು ಬೀಡಿನ ಒಡೆಯರು. ಅವರು ಜಾತಿಯಲ್ಲಿ ಜೈನರು; ಧರ್ಮ ಭೀರು, ಸಜ್ಜನ ಸೇವಾ ನಿರತರು. ಅಮ್ಮು ದೇವಿ ಬಲ್ಲಾಳ್ತಿಯವರು ಪತಿಗೆ ತಕ್ಕ ಸತಿ. ಸರ್ವಗುಣ ಸಂಪನ್ನೆ ಸುಶೀಲೆ. ಈ ದಂಪತಿಗಳು ಭಗವದ್ಭಕ್ತರು; ಭಗವನ್ನಾಮ ಪರಾಯಣರು; ನೀತಿ ನಿಯಮ ಸಂಪನ್ನರು.

ಇವರ ಸೇವೆ—ವ್ರತಾದಿಗಳಿಂದ ಪ್ರಸನ್ನರಾದ ಧರ್ಮದೇವತೆಗಳು ಒಂದು ದಿನ ಇವರ ಮುಂದೆ ನಾನಾ ವಾಹನವೇರಿ ಬಂದರು. ಇವರ ಹೃದಯದಾಳದ ಆದರಾತಿಥ್ಯವನ್ನು ಸ್ವೀಕರಿಸಿದರು. ಪ್ರೀತಿ—ಗೌರವ—ಭಕ್ತಿಗಳನ್ನು ಮನದಣಿಯೆ ಮೆಚ್ಚಿದರು; ಸುಪ್ರೀತ ಸುಪ್ರಸನ್ನರಾದರು; ತಮ್ಮ ಪರಿಚಯ ನೀಡಿದರು; 'ನಿಮ್ಮ ಬೀಡನ್ನು ನಮಗೆ ಬಿಟ್ಟುಕೊಡಿ; ನಾವು ಇಲ್ಲಿ ನಿಂತು ನಿಮ್ಮನ್ನೂ ನಿಮ್ಮವರನ್ನೂ ಹರಸುತ್ತೇವೆ' ಎಂದು ಕೇಳಿಕೊಂಡರು.

ಹೆಗ್ಗಡೆ ದಂಪತಿಗಳಿಗೆ ದೈವದರ್ಶನವಾಯ್ತು; ದಿವ್ಯಜ್ಞಾನೋದಯವಾಯ್ತು. ಧರ್ಮದೇವತೆಗಳನ್ನು ತೂಗುಯ್ಯಾಲೆ, ಸುಗಂಧ ದೀಪಧೂಪಗಳಿಂದ ಪೂಜಿಸುತ್ತ ಬಂದರು. ಈ ದೇವತೆಗಳ ಅನುಗ್ರಹದಿಂದ ಆಗುವುದಕ್ಕೂ ಇಲ್ಲವಾಗಲಿಲ್ಲ. ದಿನೇದಿನೇ ಧರ್ಮಾಚರಣೆ, ವ್ರತನಿಯಮಗಳ ಪಾಲನೆಯಿಂದ ಕುಡುಮ ತಪೋಭೂಮಿಯಂತೆ ತೇಜಸ್ಸು ಹೊಂದುತ್ತ ಬಂತು; ಅದರ ಕಳೆ ಹೆಚ್ಚುತ್ತ ಬಂತು. ಧರ್ಮ-ಸದ್ಭಾವನೆಗಳು ಅಲ್ಲಿನ ಕಣಕಣದಲ್ಲೂ ಸಮಾವೇಶ ಹೊಂದುತ್ತ ಬಂತು. ಉತ್ತಮರಿದ್ದೆಡೆ ತೀರ್ಥವಾಗುವಂತೆ ಕುಡುಮವು ಪುಣ್ಯಕ್ಷೇತ್ರವಾಗುತ್ತ ಬಂತು.

ಕೆಲಕಾಲದಲ್ಲೇ ಹೆಗ್ಗಡೆ ದಂಪತಿಗಳು ಅರೆನಿದ್ದೆಯ ಜೊಂಪಿನಲ್ಲಿ ಮತ್ತೆ ಧರ್ಮದೇವತೆಗಳನ್ನು ಕಂಡರು. ಈ ದೇವತೆಗಳು ತಮಗಾಗಿ ಪ್ರತ್ಯೇಕ ಗುಡಿಗಳನ್ನು ಕಟ್ಟುವಂತೆ ಆಜ್ಞಾಪಿಸಿದರು. ಪಾತ್ರಿಗಳನ್ನು ನೇಮಿಸುವಂತೆ ಹೇಳಿ ಅವರ ಮೂಲಕ ತಮ್ಮ ಅಭಿಪ್ರಾಯಗಳನ್ನು ತಿಳಿಸುವುದಾಗಿ ಸೂಚಿಸಿದರು. ತಮ್ಮ ದೂತನಾಗಿ "ಅಣ್ಣಪ್ಪ"ನು ಎಲ್ಲ ಕಾರ್ಯಗಳನ್ನೂ ನಿರ್ವಹಿಸುವನೆಂದು ಹೇಳಿದರು." ನಿರಂತರವಾಗಿ ಧರ್ಮಕಾರ್ಯಗಳು ನಡೆಯುತ್ತಿರಲಿ; ನಿಮ್ಮ ಬೆನ್ನ ಹಿಂದೆ ನಾವಿದ್ದು, ನಿಮ್ಮ ಮಾತನ್ನು ಸತ್ಯವಾಗಿಸಿಕೊಡುತ್ತೇವೆ. ನೀವೂ ನಿಮ್ಮ ಸಂತಾನವೂ ಪರಂಪರೆಯಿಂದ ನಮ್ಮ ಆದೇಶಗಳನ್ನು ಪಾಲಿಸಿಕೊಂಡು ಬಂದಿರಾದರೆ, ಧರ್ಮಕ್ಕೆ ಚ್ಯುತಿಯಿಲ್ಲದಂತೆ ನಡೆಯುತ್ತ ಬಂದಿರಾದರೆ, ನಿಮ್ಮನ್ನೂ ನಿಮ್ಮ ಪರಂಪರೆಯನ್ನೂ ಹೆತ್ತ ತಾಯಂತೆ ಸಂರಕ್ಷಿಸುವೆವು" ಎಂದು ಅನುಗ್ರಹಿಸಿ ಅದೃಶ್ಯರಾದರು.

ಶ್ರೀ ಹೆಗ್ಗಡೆಯವರ ಅಂತಃಚಕ್ಷು ಸಂಪೂರ್ಣ ತೆರೆಯಿತು. ಅವರು ದಿವ್ಯ ದರ್ಶನ ಪಡೆದರು. ಧರ್ಮದೇವತೆಗಳ ಆಜ್ಞೆಯನ್ನು ಶಿರಸಾವಹಿಸಿದರು. ದೇವತೆಗಳಿಗೆ ಗುಡಿಕಟ್ಟಿದರು. ಬ್ರಾಹ್ಮಣಾರಾಧನೆಗಾಗಿ ಬ್ರಾಹ್ಮಣರಿಗೆ ಆಮಂತ್ರಣ ನೀಡಿದರು. ಅವರ ಬಯಕೆಯಂತೆ, ಧರ್ಮದೇವತೆಗಳ ಆದೇಶದಂತೆ, ಅಣ್ಣಪ್ಪನ ಮೂಲಕ ತರಿಸಿ ಮಂಜುನಾಥನ ಲಿಂಗವನ್ನು ಸ್ಥಾಪಿಸಿದರು. ಅದಕ್ಕೆ ಗುಡಿಕಟ್ಟಿಸಿದರು. ಪೂಜೆ-ಪುನಸ್ಕಾರಗಳಿಗೆ ಏರ್ಪಾಟು ಮಾಡಿದರು. ಈ ಲಿಂಗವು ಮೊದಲು ಕಾಶಿಯಲ್ಲಿದ್ದು, ಮುಂದೆ ಕದಿರೆಗೆ ಬಂದಿತ್ತು. ಮಹಾಮಹಿಮಾನ್ವಿತ ಈ ಶಿವಲಿಂಗದ ಪ್ರತಿಷ್ಠೆಯಿಂದ ಶ್ರೀಕ್ಷೇತ್ರದ ಮಹಿಮೆ ಮತ್ತಷ್ಟು ಹೆಚ್ಚಾಯಿತು.

ಶ್ರೀ ಮಂಜುನಾಥ, ಧರ್ಮದೇವತೆಗಳು, ಶ್ರೀ ಚಂದ್ರನಾಥ, ಅಣ್ಣಪ್ಪ ಪಂಜುರ್ಲಿ— ಹೀಗೆ ವಿಭಿನ್ನ ಸಂಪ್ರದಾಯಗಳ ದೇವ-ದೇವತೆಗಳ ಆವಾಸಭೂಮಿಯಾದ ಧರ್ಮಸ್ಥಳದ ಮಹಿಮೆ ಅನಂತ ನಾಮಾಂಕಿತನಾದ ಮಂಜುನಾಥನಂತೆ ಅನಂತ ಮುಖಿಯಾಗಿ ಬೆಳೆದು ಬಂದಿತು. ದಿನೇದಿನೇ ಧರ್ಮಕಾರ್ಯಗಳು ಹೆಚ್ಚಿದುವು; ಸ್ಥಳದ ಧಾರ್ಮಿಕತೆಯೂ ಬೆಳೆಯುತ್ತ ಬಂತು, ಕ್ಷೇತ್ರದ ಕೀರ್ತಿ ದಿಗ್ದೇಶಗಳಲ್ಲಿ ಹರಡಿತು. ಶ್ರೀಧರ್ಮಸ್ಥಳ ತನ್ನ ಹೆಸರಿಗೆ ತಕ್ಕಂತೆ ಧರ್ಮದ ಆವಾಸ ಭೂಮಿಯಾಗಿ ಮೆರೆದಾಡತೊಡಗಿತು. ದಿನವೊಂದು ರಾತ್ರಿಯೊಂದು ಎಂಬಂತೆ ಶ್ರೀ ಕ್ಷೇತ್ರದ ಮಹಿಮೆಯು ಇತೋಪ್ಯತಿಶಯವಾಗುತ್ತಿದೆ.

Gram : VISHWA   Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water,
Telephone attached rooms.

Edited,Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 13

NAVAYUGA

3-12-1970

ಇಂದಿರಾಜೀಯವರ ಇಷ್ಟದ ಹರಿಜನ ಹಗರಣ

ಅನ್ಯಾಯವನ್ನು ಪ್ರತಿಭಟಿಸಲು ಹರಿಜನರು ಸಂಘಟಿತರಾಗಬೇಕೆಂದು ಪಾಟ್ನಾದಲ್ಲಿ ಇಂದಿರಾಗಾಂಧಿಯವರೂ ಅಸ್ಪೃಶ್ಯತೆಯ ಸಮಾಜದ ಕೆಡುಕಿನ ವಿರುದ್ಧ ಬಂಡೇಳಬೇಕೆಂದು ಜಗಜೀವನ ರಾಮರೂ ಕರೆ ಇತ್ತಿರುವರು. ಇದು ರಾಷ್ಟ್ರೀಯ ಭಾವೈಕ್ಯತಾ ಸಪ್ತಾಹದ ಪ್ರತಿಜ್ಞೆಗೆ ವಿರುದ್ಧವಿದೆ. ಹಾಗಿದ್ದಲ್ಲಿ ಪ್ರಧಾನಿಯವರೂ ಅವರ ಕಾಂಗ್ರೆಸ್ಸಿನ ಅಧ್ಯಕ್ಷರೂ ಆ ದೇಶಕ್ಕೆ ಆ ರೀತಿ ಆಡಿರುವರು? ಅದಕ್ಕೆ ಕಾರಣ ಇಷ್ಟೇ ಇದೆ. ಅದರ ಹಿಂದಿನ ದಿನ ಯುವಕ ಕಾಂಗ್ರೆಸ್ಸಿನ ಸಭೆಯಲ್ಲಿ ಇಂದಿರಾಜೀ ನುಡಿದಿರುವ ಮಾತುಗಳಿಂದ ಅದನ್ನು ಅರಿತುಕೊಳ್ಳಬಹುದು. ಯುವಕ ಕಾಂಗ್ರೆಸ್ಸಿನ ಸಭೆಯನ್ನು ಉದ್ಘಾಟಿಸುತ್ತ ಇಂದಿರಾಜೀಯವರು, ಸಂವಿಧಾನದಲ್ಲಿ ಸಾಕಷ್ಟು ಅವಕಾಶವಿದೆ, ಸಮಾಜದಲ್ಲಿ ಆಧುನಿಕೀಕರಣ ನಡೆಯುತ್ತಿದೆ. ಹಾಗಿದ್ದರೂ ಹರಿಜನರಿಂದೂ ಅಸ್ಪೃಶ್ಯರೇ ಇದ್ದಾರೆ. ಸ್ವಾತಂತ್ರ್ಯ ಸಿಕ್ಕಿ ಇಪ್ಪತ್ತೆರಡು ವರ್ಷಗಳುರುಳಿದರೂ ಅವರ ಸ್ಥಿತಿ ಬದಲಾಗಿರುವದಿಲ್ಲವೆಂದು ಹೇಳಿ ತಮ್ಮ ಅನುಭವವನ್ನು ವರ್ಣಿಸಿದರು. ಅವರು ಕಾರಿನಲ್ಲಿ ಹೋಗುತ್ತಿರುವಾಗಲೇ ಕಂಡ ದೃಶ್ಯ— ಇತರ ಜನರಿಗಿಂತ ಹರಿಜನರು ಬೇರ್ಪಟ್ಟು ನಿಂತಿರುವದನ್ನು ಕಂಡರು. ಅಂದರೆ ವೇಗದಲ್ಲಿ ಧಾವಿಸುತ್ತಿರುವಾಗಲೇ ಅಂತಹ ದೃಶ್ಯ ಕಣ್ಣಿಗೆ ಬಿದ್ದಿದೆಯೆಂದಲ್ಲಿ, ಇನ್ನು ನಡೆದು ಹೋಗುವಾಗ ಗೌತಮನು ಕಂಡ ದೃಶ್ಯವನ್ನೇ ಕಾಣಬಹುದು. ಅಷ್ಟು ವೇಗದಲ್ಲಿ ಹೋಗುತ್ತಿರುವಾಗ ಅವರು ಹರಿಜನ ಮಕ್ಕಳತ್ತ ಹೂಮಾಲೆಗಳನ್ನು ಎಸೆದರು, ಅವನ್ನು ಬೇರೆಯವರು ಬಂದು ಕಸಿದುಕೊಂಡು ಹೋದರು....

ಆದುದರಿಂದಲೇ ಆ ರೀತಿ ಅವರು ಮರುದಿನ ಮಾತಾಡಿರುವದು. ಒಲಿದರೆ ನಾರಿ, ಮುನಿದರೆ ಮಾರಿಯಲ್ಲವೇ? ಸಿಟ್ಟು ಸಂತಾಪ ತುದಿಯಲ್ಲೇ ಆಶ್ರಯಿಸುವಾಗ ಕೇಳಬೇಕೇನು? ಹೀಗಿದ್ದಲ್ಲಿ ಯಾರಿಗೆ ತಾನೇ ಸಿಟ್ಟು ಬರಲಿಕ್ಕಿಲ್ಲ? ರೋಷವನಾರ್ ಅಲ್ಲವಾದರೂ ರೋಷ ವಾರಿಗೆ ಬರಕೂಡದೆಂದೇನಿದೆ? ಒಂದು ವಸ್ತುವನ್ನು ಒಬ್ಬರಿಗೆಂದು ಕೊಟ್ಟಾಗ ಇನ್ನೊಬ್ಬರು ಕಸಿದುಕೊಂಡು ಹೋದಲ್ಲಿ ಅದನ್ನೆಂತು ಮೌನವಾಗಿ ಸಹಿಸಿಕೊಳ್ಳುವದು? (ಇಂದಿರಾಜೀ ಕಾಂಗ್ರೆಸ್ಸಿಗೆ ಹರಿಜನರು ಮತದಾನ ಮಾಡದೆ ರಿಪಬ್ಲಿಕನ್ ಪಾರ್ಟಿಗೆ ಮತ ಹಾಕುವ ವಿಷಯದ ಕುರಿತು ಈ ಮಾತು ಅಲ್ಲ.) ಸಂವಿಧಾನದಂತೆ ಸಾಗದಿದ್ದಲ್ಲಿ ಆ ಸಂವಿಧಾನ ಇದ್ದೇನು ಪ್ರಯೋಜನವೆಂಬುದೇ ಇಂದಿರಾಜೀಯವರ ಅಭಿಪ್ರಾಯ. ಊಟಕ್ಕಾಗದ ಉಪ್ಪಿನ ಕಾಯಿ ಯಾರ ಬಾಯಿಗೆ, ಯಾವ ಬಾವಿಗೆ? ಅಂದು ಅಕ್ಟೋಬರ ದಿನಾಂಕ ಎರಡರಿಂದ ಎಂಟರ ವರೆಗೆ ಅವರು ಸಂವಿಧಾನಾತ್ಮಕ ರೀತಿಯ ಕುರಿತು ಸಂರಾಗವಾಗಿ ಜಾಹಿರಾತುಗಳನ್ನಿತ್ತಿರುವರಾದರೂ, ಎಂಟರ ನಂಟು ಮುಗಿದು ಹಾಯಾಗಿ ಹದಿನಾಲ್ಕು ಮುಟ್ಟಿದ ವೇಳೆ ಟೀಕೆ ಕೇಳಬೇಕೇ?

ಇಲ್ಲಿ ಎದುರು ಪ್ರಶ್ನೆಗಳಿಗೆ ಅವಕಾಶ ಇಲ್ಲ. ಪ್ರಶ್ನೆ ಕೇಳಲಿಚ್ಛಿಸುವವರು ನಿಜಲಿಂಗಪ್ಪನವರನ್ನು ಹಿಂಬಾಲಿಸಬೇಕು. ಇದಕ್ಕೊಪ್ಪುವವರೇ ಇಂದಿರಾ ಕಾಂಗ್ರೆಸ್ಸಿನಲ್ಲಿರಬೇಕು. ಅದನ್ನು ಬಿಟ್ಟು "ಅಧಿಕ ಪ್ರಸಂಗಿಗಳ"ಂತೆ ಹರಿಜನರು ಅಸ್ಪೃಶ್ಯರಿರದೆ ಅಸ್ಪೃಶ್ಯರೆಲ್ಲಾ ಹರಿಜನರಾಗುತ್ತಾರೇನು? ಎಡಬಿಡದೆ ಇಪ್ಪತ್ತೆರಡು ವರ್ಷ ಕಾಲ ದಿಲ್ಲಿ ದರ್ಬಾರು ನಡೆಸಿದವರು ಯಾರು? ಅಸ್ಪೃಶ್ಯತಾ ನಿವಾರಣೆ ಇನಿತೂ ಬದಲಾಯಿಸಲು ಇಪ್ಪತ್ತೆರಡು ವರ್ಷಗಳಲ್ಲಿ ಸಾಧ್ಯವಾಗಿಲ್ಲವಾದಲ್ಲಿ ಇನ್ನು ಆ ಆಸನಕ್ಕಂಟಿಕೊಂಡು ಕುಳಿತುಕೊಳ್ಳಲು ಹೋರಾಡುವದೇತಕ್ಕೆ? ರಾಜೀನಾಮೆಕೊಟ್ಟು ಬಂದು ಸಮಾಜ ಸೇವೆ ಮಾಡಬಹುದಲ್ಲವೇ? ಬೇರ್ಪಟ್ಟು ನಿಂತಿದ್ದ ಗುಂಪನ್ನು ಹರಿಜನರೆಂದು ಕಾರಿನಲ್ಲಿ ಹೋಗುತ್ತಿದ್ದಂತೆಯೇ ಹೇಗೆ ಗುರುತಿಸಿದಿರಿ? ನೀವು ಹರಿಜನ ಪರಿಣಿತ ಶೋಧಕರೇ? ಅಲ್ಲಿ ನಾಮ ಫಲಕ ಇತ್ತೇ? ಅದೇತಕ್ಕೆ ಅಲ್ಲೇ ಕೆಳಗಿಳಿದು ಹೋಗಿ ಅವರನ್ನು ಇತರರೊಂದಿಗೆ ಸೇರಿಸಲಿಲ್ಲ? ಕೆಳಗಿಳಿದು ಹೋಗಿ ಮಕ್ಕಳಿಗೆ ಮಮತೆಯಿಂದ ಹೂಮಾಲೆ ಕೊಡಲಿಲ್ಲ? ಒಮ್ಮೆ ಅಂತಹ ಅನುಭವ ಆದ ಮೇಲಾದರೂ ನೇರಕೊಡಬಹುದಿತ್ತಲ್ಲವೇ? ಕನಿಷ್ಟ ಪಕ್ಷ ಕಾರ್ಯದರ್ಶಿಯ ಮೂಲಕವಾದರೂ ಕೊಡಿಸಬಹುದಿತ್ತಲ್ಲವೇ? ಇವೆಲ್ಲಾ ವೇದಿಕೆಗಾಗಿ ಕಾದಿರಿಸಿದ ಆಯ್ದ ಮಾತುಗಳೇ?

ಈ ರೀತಿಯ ಪ್ರಶ್ನೆಗಳಿಗೇನೂ ಕೊರತೆ ಇಲ್ಲ. ಎಡೆಬಿಡದೆ ಕಾಂಗ್ರೆಸ್ಸು ಇಪ್ಪತ್ತೆರಡು ವರ್ಷ ಸ್ವತಂತ್ರ ಭಾರತವನ್ನಾಳಿದರೂ ಅಸ್ಪೃಶ್ಯತೆಯನ್ನು ಅಂತ್ಯಗೊಳಿಸಲು ಸಾಧ್ಯವಾಗಿಲ್ಲವೆಂಬುದನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು. ಕಾನೂನು, ಅಧಿಕಾರ, ಪಕ್ಷಬಲ, ಧನಬಲ....ಎಷ್ಟೇ ಇರಲಿ ಹರಿಜನರು ಹಾಗೆನೇ ಇದ್ದಾರೆ. ಅದಕ್ಕಾಗಿ ಕಾಂಗ್ರೆಸ್ಸು ಅದೇನೇನೋ ಮಾಡಿದೆ. ಸಹಭೋಜನ ಆಯಿತು, ಮಿಶ್ರ ವಿವಾಹಕ್ಕೆ ಬಹುಮಾನವೆಂದಾಯಿತು.... ಏನೇನೋ ಆಶೆ, ಆಮಿಷ, ಮತಾಂತರ ಮುಜ್ಜು ಮನ್ನಣೆ ಎಲ್ಲಾ ಆದ ಮೇಲೂ ಪಾಟ್ನಾದಲ್ಲಿ ಇಂದಿರಾಜೀ ಪಶ್ಚಾತ್ತಾಪ ಪಡುತ್ತಿದ್ದಾರೆ!

ಉಂಟೇ, ಹರಿಜನವೆಂದೊಡನೆ ಮಹಾತ್ಮಾ ಗಾಂಧಿಯವರ ಹೆಸರು ಜ್ಞಾಪಕಕ್ಕೆ ಬಾರದಿರುವದುಂಟೇ? ಆ ಹೆಸರನ್ನಿತ್ತವರೇ ಅವರು ತಾನೇ? ಇತ್ತೀಚೆಗೆ ಜಮನಾಲಾಲ ಬಜಾಜರ ಜನ್ಮಶತಾಬ್ಧ ಅಂಚೆ ಚೀಟಿಯನ್ನು ಪ್ರಕಟಿಸಲಾಗಿರುತ್ತದೆ. ಜಮನಾಲಾಲಜೀಯವರು ಗಾಂಧೀಜೀಯವರ ವಾರ್ಧಾ ಆಶ್ರಮಕ್ಕೆ ಏರ್ಪಾಡು ಮಾಡಿಕೊಟ್ಟವರು. ಒಮ್ಮೆ ಗಾಂಧೀಜೀಯವರು ವಾರ್ಧಾ ಆಶ್ರಮದಲ್ಲಿ ತಂಗಿದ್ದಾಗ, ಜಮನಾಲಾಲಜೀಯವರೂ ಅಲ್ಲೇ ಇದ್ದು ಏರ್ಪಾಡುಗಳನ್ನು ನೋಡಿಕೊಳ್ಳುತ್ತಿದ್ದರು. ಆಗ ಪಕ್ಕದಲ್ಲೇ ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಿಬಿರ ನಡೆಯುತ್ತಿತ್ತು. ಅದರಿಂದ ಆಕರ್ಷಿತರಾದ ಗಾಂಧೀಜಿಯವರು ಶಿಬಿರಕ್ಕೆ ಭೇಟಿಕೊಟ್ಟರು. ಅವರು ಅಲ್ಲಿದ್ದ ಸ್ವಯಂಸೇವಕರ ಬಳಿ ಹರಿಜನ ಯಾರಿದ್ದಾರೆಂದು ಕೇಳಿದರು. ಅಲ್ಲಿದ್ದವರೆಲ್ಲರೂ ತಾವು ಹಿಂದೂ ಅಂದರಲ್ಲದೆ ಯಾರೂ ಜಾತಿಯನ್ನು ಸೂಚಿಸಲಿಲ್ಲ. ಗಾಂಧೀಜೀಯವರಿಗೆ ಬಹಳ ಆಶ್ಚರ್ಯವಾಯಿತು. ಇದು ಹೇಗೆ ಸಾಧ್ಯ? ಎಲ್ಲರೂ ಒಂದೆಡೆ ಊಟಮಾಡುವದು, ಮಲಗುವದು, ಆಡುವದು, ರಾಷ್ಟ್ರಧ್ಯಾನ ಮಾಡುವದು ಹೇಗೆ ಸಾಧ್ಯವೆಂದು ವಿಚಾರಿಸಿ ತಿಳಿದುಕೊಂಡರು. ಮರುದಿನ ಅಲ್ಲಿಗೆ ಸಂಘ ಸಂಸ್ಥಾಪಕ ಡಾ। ಕೇಶವ ಬಲಿರಾಮ ಹೆಡ್ಗೇವಾರರವರು ಬಂದಾಗ ವಿಷಯ ತಿಳಿದು ಅವರು ಗಾಂಧೀಜೀಯವರನ್ನು ಭೇಟಿಯಾದರು. ತಮಗಾದ ಆನಂದವನ್ನು ವ್ಯಕ್ತಪಡಿಸಿದ ಗಾಂಧೀಜೀ, ನಾನು ಏನೇನು ಕಂಡಿರುವದು ಇಲ್ಲಿ ಕಾರ್ಯರೂಪದಲ್ಲಿದೆಯೆಂದು ತಿಳಿಸಿ ಸಂಘಕ್ಕೆ ಜಯ ಕಟ್ಟಿಟ್ಟ ಗಂಟೆನ್ನುವ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದರು. ಆವೇಳೆ, ದಿಲ್ಲಿಯಲ್ಲಿ ಗಾಂಧೀಜೀಯವರ ಜೀವಕ್ಕೆ ಅಪಾಯವಿದೆಯೆಂದು ತಿಳಿದು ಬಂದಾಗ ಅವರನ್ನು ಪೋಲೀಸರ ರಕ್ಷಣೆಗೆ ಬಿಡದೆ, ಸಂಘ ಶಾಖೆ ಚೆನ್ನಾಗಿದ್ದ ಭಂಗಿ ಕಾಲೋನಿಯಲ್ಲಿ ಇರಲು ಏರ್ಪಾಡು ಮಾಡಲಾಗಿತ್ತು. ಅದನ್ನು ಬಿಟ್ಟು ಬಿರ್ಲಾ ಭವನಕ್ಕೆ ಹೋದಾಗ ಕೊಲೆಗಡುಕರಿಗೆ ಅವರು ಆಹುತಿಯಾಗಿರುವದು ಇಲ್ಲಿ ನೆನಪಿಗೆ ಬರುತ್ತದೆ.

ಊರೆಲ್ಲಾ ಹಬ್ಬಿರುವ ಹರಿಜನ ಶಬ್ದ ಕುರಿತು ಮಹಾತ್ಮಾ ಗಾಂಧೀಜೀಯವರ ಬಳಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಪರಮ ಪೂಜನೀಯ ಶ್ರೀ ಗುರೂಜೀಯವರು ಮಾತಾಡಿ, ಅಂತಹ ಭಿನ್ನತಾ ಸೂಚಕ ಶಬ್ದವನ್ನು ಪ್ರಯೋಗಿಸಬಾರದೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಗಾಂಧೀಜೀಯವರು ಏನೇನೋ ಕಾರಣ ಕೊಟ್ಟರೂ ವಿನಃ ನೇರ ವಿಷಯಕ್ಕೆ ಬರಲಿಲ್ಲ. ಗಾಂಧೀಜೀಯವರು ಹೋದರೂ, ಹರಿಜನ ಪತ್ರಿಕೆ ಹೋದರೂ ಹರಿಜನರೂ ಉಳಿದುಕೊಂಡರು. ಯಾವ ಹೆಸರಾದರೇನಂತೆ? ಹೊಲೆಯನೆಂದರೆ ಶಿಕ್ಷೆ, ಹರಿಜನ ಅಂದರೆ ಹಾರ! ಏನು ನ್ಯಾಯ? ಇದ್ದರೂ ಹಿಂದಿನ ಸ್ಥಿತಿಯಲ್ಲೇ ಅವರಿದ್ದಾರೆಂಬ ಇಂದಿರಾಜೀಯವರ ಮಾತು ರಾಜಕೀಯಕ್ಕೆ ಮೀಸಲು, ಅಷ್ಟೇ. ಇಪ್ಪತ್ತೆರಡು ವರ್ಷ ದರ್ಬಾರು ನಡೆಸಿದರೂ ಬದಲಾವಣೆ ಅವರ ಕನ್ನಡಿ ಕಣ್ಣಿಗೆ ಕಂಡು ಬಂದಿರುವದಿಲ್ಲ. ಅವರು ಧರಿಸಿಕೊಂಡಿರುವ ಕನ್ನಡಕ ಆ ರೀತಿಯದ್ದು. ಅವರಿಗೆ ಎಲ್ಲವೂ ತಪ್ಪಾಗಿ ಕಂಡುಬರುತ್ತದೆ. ಕಪ್ಪಾಗಿರ ವನವೆಲ್ಲ

(ಹನ್ನೆರಡನೇ ಪುಟ ನೋಡಿರಿ)

NAVAYUGA 26—11—1970
Registered with the Registrar
of News Papers for India
under No. R. N. 3646/'57

REGD: No: B. Gr 176
LICENCE No. 33
Licensed to Post without Prepayment

ಧರ್ಮ ನೀತಿ ನ್ಯಾಯಗಳು ಮುಪ್ಪುರಿಗೊಂಡ

ಸದಾಚಾರಸಂಪನ್ನ ಹೆಗ್ಗಡೆ ಪರಂಪರೆ

ಶ್ರೀ ಮಂಜುನಾಥ ಸ್ವಾಮಿ ದೇವಾಲಯವು ಖಾಸಗಿ ದೇವಾಲಯ. ಆದರೂ ಸಾರ್ವಜನಿಕ ದೇವಾಲಯಗಳಿಗಿಂತಲೂ ಪ್ರಸಿದ್ಧವಾದದ್ದು. ಈ ಪ್ರಸಿದ್ಧಿಗೆ ಶ್ರೀ ಸ್ವಾಮಿಯ ಮಹಿಮಾತಿಶಯವೇ ಕಾರಣ. ಇಲ್ಲಿ ಕಾಣುವಷ್ಟು ಸೇವೆಗಳು ಬೇರೆಲ್ಲಿಯೂ ಕಾಣುವುದು ಅಪರೂಪ; ಹಾಗೆಯೇ ಇಲ್ಲಿನ ದಾನ—ಧರ್ಮಗಳು ಬೇರೆಲ್ಲಿಯಾದರೂ ನಡೆಯುವುದೂ ಅಪರೂಪ; ದಿನಂಪ್ರತಿ ಸಾವಿರಾರು ಯಾತ್ರಾರ್ಥಿಗಳಿಗೆ ಉಚಿತ ವಸತಿ ಅಶನಗಳನ್ನು ಕೊಡುವ ಕ್ಷೇತ್ರವೊಂದೇವೊಂದು-ಅದು ಶ್ರೀ ಧರ್ಮಸ್ಥಳ.

ಶ್ರೀ ಮಂಜುನಾಥ ಸ್ವಾಮಿ ದೇವಾಲಯವು ಹೆಗ್ಗಡೆ ಮನೆತನಕ್ಕೆ ಸೇರಿದ್ದು ಇದರ ಸಕಲ ಆಡಳಿತವು ಪಟ್ಟಾಭಿಷಿಕ್ತ ಹೆಗ್ಗಡೆಯವರ ನೇತೃತ್ವದಲ್ಲೇ ನಡೆಯುತ್ತದೆ. ಧರ್ಮದೇವತೆಗಳ ಅಣತಿಯಂತೆ ಇಲ್ಲಿ ಮಕ್ಕಳಕಟ್ಟು ಬಳಕೆಯಲ್ಲಿದೆ. ದೇವಾಲಯದ ತನ್ಮೂಲಕ ಶ್ರೀ ಕ್ಷೇತ್ರದ ಆಗುಹೋಗುಗಳಿಗೆಲ್ಲ ಶ್ರೀ ಹೆಗ್ಗಡೆಯವರೇ ಹೊಣೆಗಾರರು. ಇವರನ್ನು ಧರ್ಮಾಧಿಕಾರಿಗಳೆಂದು ಕರೆಯುವ ಸಂಪ್ರದಾಯವಿದೆ.

ಶ್ರೀ ಕ್ಷೇತ್ರದಲ್ಲಿ ಧರ್ಮದೇವತೆಗಳನ್ನೂ ಶ್ರೀ ಮಂಜುನಾಥ ಸ್ವಾಮಿಯನ್ನೂ ನೆಲೆಗೊಳಿಸಿದ ಶ್ರೀ ಬಿರ್ಮಣ್ಣ ಹೆಗ್ಗಡೆಯವರು ಮೊತ್ತಮೊದಲಿನ ಧರ್ಮಾಧಿಕಾರಿಗಳೆನಿಸಿದರು. ಮುಂದೆ ಅವರ ಪರಂಪರೆಯಲ್ಲೇ ಬೇರೆ ಬೇರೆಯವರು ಧರ್ಮಾಧಿಕಾರಿಗಳಾಗಿ ಶ್ರೀ ಕ್ಷೇತ್ರದ ಸರ್ವಾಂಗೀಣ ಪ್ರಗತಿಗಾಗಿ ದುಡಿದು ಯಶಃಕಾಯರಾಗುತ್ತ ಬಂದಿದ್ದಾರೆ. ಶ್ರೀ ಕ್ಷೇತ್ರದ ಧರ್ಮಾಧಿಕಾರಿಗಳ ಪರಂಪರೆ ಹೀಗಿದೆ.

೧. ಬಿರ್ಮಣ್ಣ ಹೆಗ್ಗಡೆ.
೨. ಪದ್ಮಯ್ಯ ಹೆಗ್ಗಡೆ.
೩. (ಒಂದನೆ) ಚಂದಯ್ಯ ಹೆಗ್ಗಡೆ.
೪. ದೇವರಾಜ ಹೆಗ್ಗಡೆ (1503)
೫. (ಒಂದನೆ) ಮಂಜಯ್ಯ ಹೆಗ್ಗಡೆ.
೬. ಜಿನ್ನಪ್ಪ ಹೆಗ್ಗಡೆ.
೭. (ಇಮ್ಮಡಿ) ಚಂದಯ್ಯ ಹೆಗ್ಗಡೆ.
೮. ದೇವಪ್ಪರಾಜ ಹೆಗ್ಗಡೆ.
೯. ಅನಂತಯ್ಯ ಹೆಗ್ಗಡೆ.
೧೦. ವೃಷಭಯ್ಯ ಹೆಗ್ಗಡೆ.
೧೧. ಗುಮ್ಮಣ್ಣ ಹೆಗ್ಗಡೆ.
೧೨. ವರ್ಧಯ್ಯ ಹೆಗ್ಗಡೆ.
೧೩. (ಮುಮ್ಮಡಿ) ಚಂದಯ್ಯ ಹೆಗ್ಗಡೆ.
೧೪. ಕುಮಾರಯ್ಯ ಹೆಗ್ಗಡೆ.
೧೫. (ನಾಲ್ಮಡಿ) ಚಂದಯ್ಯ ಹೆಗ್ಗಡೆ.
೧೬. (ಇಮ್ಮಡಿ) ಮಂಜಯ್ಯ ಹೆಗ್ಗಡೆ.
೧೭. ಧರ್ಮಪಾಲ ಹೆಗ್ಗಡೆ.
೧೮. (ಐದನೆಯ) ಚಂದಯ್ಯ ಹೆಗ್ಗಡೆ. (1897—191[illegible])
೧೯. (ಮುಮ್ಮಡಿ) ಮಂಜಯ್ಯ ಹೆಗ್ಗಡೆ. (1918-1955)
೨೦. ರತ್ನವರ್ಮ ಹೆಗ್ಗಡೆ. (1955-1968)
೨೧. ವೀರೇಂದ್ರ ಹೆಗ್ಗಡೆ. (1968—)

ಶ್ರೀ ಹೆಗ್ಗಡೆ ಪೀಳಿಗೆಯು ಮಕ್ಕಳ ಸಂತಾನಕಟ್ಟಿಗನುಸಾರವಾಗಿ ಬೆಳೆದುಬಂದದು. ಕೆಲವರಿಗೆ ಮಕ್ಕಳ ಸಂತಾನವಿಲ್ಲವಾದಾಗ ದತ್ತು ಸ್ವೀಕಾರ ಮಾಡಿದ್ದ ಉದಾಹರಣೆಗಳೂ ಉಂಟು.

ಧರ್ಮಸ್ಥಳದ ನೆಲ್ಯಾಡಿ ಬೀಡಿನ ಈ ಪಟ್ಟಾಭಿಷಿಕ್ತ "ಹೆಗ್ಗಡೆ"ಯವರು ನೀತಿ-ಧರ್ಮ—ನ್ಯಾಯಗಳು ಮುಪ್ಪುರಿಗೊಂಡಂತೆ ನಡೆದು ಬರುತ್ತಿರುವುದು ದಿಗಂತಗೋಚರ. ಈ ಪರಂಪರೆಯು ಕಳೆದ ಆರೇಳು ಶತಮಾನಗಳಿಂದಲೂ ಅವಿಚ್ಛಿನ್ನವಾಗಿ ಬೆಳೆದು ಹೆಮ್ಮರವಾಗಿ ನಿಂತಿದೆ. ದೇವಾಲಯದ, ಕ್ಷೇತ್ರದ ಮತ್ತು ಯಾತ್ರಾರ್ಥಿಗಳ ಸರ್ವತೋಮುಖ ಉನ್ನತಿಗಾಗಿ ಇವರು ಅಹರ್ನಿಶಿ ದುಡಿಯುತ್ತಲೇ ಬಂದಿದ್ದಾರೆ. ಸಾಮಾಜಿಕ ಮತ್ತು ಸಾಮಯಿಕ ಪರಿಸ್ಥಿತಿಗಳನ್ನು ಧಾರ್ಮಿಕತೆಯೊಂದಿಗೆ ಸಮಂಜಸವಾಗಿ ಜೋಡಿಸಿಕೊಂಡು, ಧರ್ಮಕ್ಕೆ ಚ್ಯುತಿ ಬಾರದಂತೆ, ಸಂಪ್ರದಾಯಕ್ಕೆ ಭಂಗ ಬರದಂತೆ ಇವರು ನಡೆದುಕೊಂಡು ಬಂದಿದ್ದಾರೆ. ಈ ಪರಂಪರೆಯ ಅನನ್ಯ ಸೇವಾ ಭಾವನೆಯಿಂದಲೇ ಶ್ರೀ ಮಂಜುನಾಥ ಸ್ವಾಮಿ ಪ್ರಸನ್ನನಾಗಿದ್ದಾನೆ; ಭಕ್ತ ಜನರಿಗೆ ಅಭಯ ನೀಡುತ್ತಿದ್ದಾನೆ.

"ಧರ್ಮ-ನ್ಯಾಯಗಳಿಗೆ ಚ್ಯುತಿಬಾರದಂತೆ ನಡೆದುಕೊಂಡರೆ ನಿಮ್ಮನ್ನು ಎತ್ತಿ ಹಿಡಿಯುವೆವು. ನಿಮ್ಮ ಮಾತನ್ನು ಸತ್ಯ ಮಾಡುವೆವು." ಎಂದು ಧರ್ಮ ದೇವತೆಗಳು ಶ್ರೀ ಬಿರ್ಮಣ್ಣ ಹೆಗ್ಗಡೆಯವರಿಗೆ ಅಭಯ ನೀಡಿದ್ದರು. ಹೆಗ್ಗಡೆ ಮನೆತನವು ಹಾಗೆ ನಡೆದುಕೊಳ್ಳುತ್ತಲೇ ಬಂದಿದೆ. ಧರ್ಮದೇವತೆಗಳ ಅಭಯ ಸತ್ಯವಾಗುತ್ತಲೇ ಬಂದಿದೆ. ಮುಂದೆಯೂ ಈ ಸತ್ಸಂಪ್ರದಾಯ ಬೆಳೆದುಬರುತ್ತದೆ.

ಶ್ರೀ ಮಂಜುನಾಥ ಸ್ವಾಮಿಯ ಯಶೋಭೂಮಿ

(ಮೊದಲನೇ ಪುಟದಿಂದ)

ಅಂತು ಇಲ್ಲಿ ಇದ್ದುದು ನೆಲ್ಯಾಡಿ ಬೀಡು ಮತ್ತು ಚಂದ್ರನಾಥನ ಬಸದಿ ಮಾತ್ರ. ಶ್ರೀ ಬಿರ್ಮಣ್ಣ ಹೆಗ್ಗಡೆಯವರು ಬೀಡಿನ ಒಡೆಯರು. ಇವರು ಜಾತಿಯಲ್ಲಿ ಜೈನರು; ಧರ್ಮಭೀರು, ಸಜ್ಜನ ಸೇವಾನಿರತರು. ಅಮ್ಮು ದೇವಿ ಬಲ್ಲಾಳ್ತಿಯವರು ಪತಿಗೆ ತಕ್ಕ ಪತ್ನಿ. ಸರ್ವಗುಣ ಸಂಪನ್ನೆ ಸುಶೀಲೆ. ಈ ದಂಪತಿಗಳು ಭಗವದ್ಭಕ್ತರು; ಭಗವನ್ನಾಮ ಪರಾಯಣರು; ನೀತಿ ನಿಯಮ ಸಂಪನ್ನರು.

ಇವರ ಸೇವೆ—ವ್ರತಾದಿಗಳಿಂದ ಪ್ರಸನ್ನರಾದ ಧರ್ಮದೇವತೆಗಳು ಒಂದು ದಿನ ಇವರ ಮುಂದೆ ನಾನಾ ವಾಹನವೇರಿ ಬಂದರು. ಇವರ ಹೃದಯದಾಳದ ಆದರಾತಿಥ್ಯವನ್ನು ಸ್ವೀಕರಿಸಿದರು. ಪ್ರೀತಿ—ಗೌರವ—ಭಕ್ತಿಗಳನ್ನು ಮನದಣಿಯೆ ಮೆಚ್ಚಿದರು; ಸುಪ್ರೀತ ಸುಪ್ರಸನ್ನರಾದರು; ತಮ್ಮ ಪರಿಚಯ ನೀಡಿದರು; 'ನಿಮ್ಮ ಬೀಡನ್ನು ನಮಗೆ ಬಿಟ್ಟುಕೊಡಿ; ನಾವು ಇಲ್ಲಿ ನಿಂತು ನಿಮ್ಮನ್ನೂ ನಿಮ್ಮವರನ್ನೂ ಹರಸುತ್ತೇವೆ' ಎಂದು ಕೇಳಿಕೊಂಡರು.

ಹೆಗ್ಗಡೆ ದಂಪತಿಗಳಿಗೆ ದೈವದರ್ಶನ ಭಾಗ್ಯ; ದಿವ್ಯಜ್ಞಾನೋದಯವಾಯ್ತು. ಧರ್ಮದೇವತೆಗಳನ್ನು ತೂಗುಯ್ಯಾಲೆ, ಸುಗಂಧ ಧೂಪಗಳಿಂದ ಪೂಜಿಸುತ್ತ ಬಂದರು. ಈ ದೇವತೆಗಳ ಅನುಗ್ರಹದಿಂದ ಯಾವುದಕ್ಕೂ ಇಲ್ಲವಾಗಲಿಲ್ಲ. ದಿನೇದಿನೇ ಧರ್ಮಾಚರಣೆ, ವ್ರತನಿಯಮಗಳ ಪಾಲನೆಯಿಂದ ಕೂಡುವ ತಪೋಭೂಮಿಯಂತೆ ತೇಜಸ್ಸು ಹೊಂದುತ್ತ ಬಂತು; ಅದರ ಕಳೆ ಹೆಚ್ಚುತ್ತ ಬಂತು. ಧರ್ಮ—ಸದ್ಭಾವನೆಗಳು ಅಲ್ಲಿನ ಕಣಕಣದಲ್ಲೂ ಸಮಾವೇಶ ಹೊಂದುತ್ತ ಬಂತು. ಉತ್ತಮರಿದ್ದೆಡೆ ತೀರ್ಥವಾಗುವಂತೆ ಕುಡುಮವು ಪುಣ್ಯಕ್ಷೇತ್ರವಾಗುತ್ತ ಬಂತು.

ಕೆಲಕಾಲದಲ್ಲೇ ಹೆಗ್ಗಡೆ ದಂಪತಿಗಳು ಅರೆನಿದ್ದೆಯ ಜೊಂಪಿನಲ್ಲಿ ಮತ್ತೆ ಧರ್ಮದೇವತೆಗಳನ್ನು ಕಂಡರು. ಈ ದೇವತೆಗಳು ತಮಗಾಗಿ ಪ್ರತ್ಯೇಕ ಗುಡಿಗಳನ್ನು ಕಟ್ಟುವಂತೆ ಆಜ್ಞಾಪಿಸಿದರು. ಪಾತ್ರಿಗಳನ್ನು ನೇಮಿಸುವಂತೆ ಹೇಳಿ ಅವರ ಮೂಲಕ ತಮ್ಮ ಅಭಿಪ್ರಾಯಗಳನ್ನು ತಿಳಿಸುವುದಾಗಿ ಸೂಚಿಸಿದರು. ತಮ್ಮ ದೂತನಾಗಿ "ಅಣ್ಣಪ್ಪ"ನು ಎಲ್ಲ ಕಾರ್ಯಗಳನ್ನೂ ನಿರ್ವಹಿಸುವನೆಂದು ಹೇಳಿದರು." ನಿರಂತರವಾಗಿ ಧರ್ಮಕಾರ್ಯಗಳು ನಡೆಯುತ್ತಿರಲಿ; ನಿಮ್ಮ ಬೆನ್ನ ಹಿಂದೆ ನಾವಿದ್ದು, ನಿಮ್ಮ ಮಾತನ್ನು ಸತ್ಯವಾಗಿಸಿಕೊಡುತ್ತೇವೆ. ನೀವೂ ನಿಮ್ಮ ಸಂತಾನವೂ ಪರಂಪರೆಯಿಂದ ನಮ್ಮ ಆದೇಶಗಳನ್ನು ಪಾಲಿಸಿಕೊಂಡು ಬಂದಿರಾದರೆ, ಧರ್ಮಕ್ಕೆ ಚ್ಯುತಿಯಿಲ್ಲದಂತೆ ನಡೆಯುತ್ತ ಬಂದಿರಾದರೆ, ನಿಮ್ಮನ್ನೂ ನಿಮ್ಮ ಪರಂಪರೆಯನ್ನೂ ಹತ್ತು ಕಾಯಂತೆ ಸಂರಕ್ಷಿಸುವೆವು" ಎಂದು ಅನುಗ್ರಹಿಸಿ ಅದೃಶ್ಯರಾದರು.

ಶ್ರೀ ಹೆಗ್ಗಡೆಯವರ ಅಂತಃಚಕ್ಷು ಸಂಪೂರ್ಣ ತೆರೆಯಿತು. ಅವರು ದಿವ್ಯ ದರ್ಶನ ಪಡೆದರು. ಧರ್ಮದೇವತೆಗಳ ಆಜ್ಞೆಯನ್ನು ಶಿರಸಾವಹಿಸಿದರು. ದೇವತೆಗಳಿಗೆ ಗುಡಿಕಟ್ಟಿದರು. ಬ್ರಾಹ್ಮಣರ ಧನೆಗಾಗಿ ಬ್ರಾಹ್ಮಣರಿಗೆ ಆಮಂತ್ರಣ ನೀಡಿದರು. ಅವರ ಬಯಕೆಯಂತೆ, ಧರ್ಮ ದೇವತೆಗಳ ಆದೇಶದಂತೆ, ಅಣ್ಣಪ್ಪನ ಮೂಲಕ ತರಿಸಿ ಮಂಜುನಾಥನ ಲಿಂಗವನ್ನು ಸ್ಥಾಪಿಸಿದರು ಅದಕ್ಕೆ ಗುಡಿಕಟ್ಟಿಸಿದರು. ಪೂಜೆ-ಪುರಸ್ಕಾರಗಳಿಗೆ ಏರ್ಪಾಟು ಮಾಡಿದರು. ಈ ಲಿಂಗವು ಮೊದಲು ಕಾಶಿಯಲ್ಲಿದ್ದು, ಮುಂದೆ ಕದಿರೆಗೆ ಬಂದಿತ್ತು. ಮಹಾಮಹಿತವಾದ ಈ ಶಿವಲಿಂಗದ ಪ್ರತಿಷ್ಠೆಯಿಂದ ಶ್ರೀಕ್ಷೇತ್ರದ ಮಹಿಮೆ ಮತ್ತಷ್ಟು ಹೆಚ್ಚಾಯಿತು.

ಶ್ರೀ ಮಂಜುನಾಥ, ಧರ್ಮದೇವತೆಗಳು, ಶ್ರೀ ಚಂದ್ರನಾಥ, ಅಣ್ಣಪ್ಪ ಪಂಜುರ್ಲಿ— ಹೀಗೆ ವಿಭಿನ್ನ ಸಂಪ್ರದಾಯಗಳ ದೇವ-ದೇವತೆಗಳ ಆವಾಸಭೂಮಿಯಾದ ಧರ್ಮಸ್ಥಳದ ಮಹಿಮೆ ಅನಂತ. ನಾಮಾಂಕಿತನಾದ ಮಂಜುನಾಥನಂತೆ ಅನಂತ ನಾಮಿಯಾಗಿ ಬೆಳೆದು ಬಂದಿತು. ದಿನೇದಿನೇ ಧರ್ಮಕಾರ್ಯಗಳು ಹೆಚ್ಚಿದುವು; ಸ್ಥಳದ ಧಾರ್ಮಿಕತೆಯೂ ಬೆಳೆಯುತ್ತ ಬಂತು, ಕ್ಷೇತ್ರದ ಕೀರ್ತಿ ದಿಗ್ದೇಶಗಳಲ್ಲಿ ಹರಡಿತು. ಶ್ರೀಧರ್ಮಸ್ಥಳ ತನ್ನ ಹೆಸರಿಗೆ ತಕ್ಕಂತೆ ಧರ್ಮದ ಆವಾಸ ಭೂಮಿಯಾಗಿ ಮೆರೆಯತೊಡಗಿತು. ದಿನವೊಂದು ರಾತ್ರಿಯೆರಡು ಎಂಬಂತೆ ಶ್ರೀ ಕ್ಷೇತ್ರದ ಮಹಿಮೆಯು ಇತೋಪ್ಯತಿಶಯವಾಗುತ್ತಿದೆ.

Gram : VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ 50
ಸಂಚಿಕೆ 13

NAVAYUGA

3—12—1970

ಇಂದಿರಾಜೀಯವರ ಇಷ್ಟದ ಹರಿಜನ ಹಗರಣ

ಅನ್ಯಾಯವನ್ನು ಪ್ರತಿಭಟಿಸಲು ಹರಿಜನರು ಸಂಘಟಿತರಾಗಬೇಕೆಂದು ಪಾಟ್ನಾದಲ್ಲಿ ಇಂದಿರಾಗಾಂಧಿಯವರೂ ಅಸ್ಪೃಶ್ಯತೆಯ ಸಮೂಹದ ಕೆಡುಕಿನ ವಿರುದ್ಧ ಬಂಡೇಳಬೇಕೆಂದು ಜಗಜೀವನ ರಾಮರೂ ಕರೆ ಇತ್ತಿರುವರು. ಇದು ರಾಷ್ಟ್ರೀಯ ಭಾವೈಕ್ಯತಾ ಸಮ್ಮೇಳನದ ಪ್ರತಿಜ್ಞೆಗೆ ವಿರುದ್ಧವಿದೆ. ಹಾಗಿದ್ದಲ್ಲಿ ಪ್ರಧಾನಿಯವರೂ ಅವರ ಕಾಂಗ್ರೆಸ್ಸಿನ ಅಧ್ಯಕ್ಷರೂ ಆ ದೇಶಕ್ಕೆ ಆ ರೀತಿ ಆಡಿರುವರು? ಅದಕ್ಕೆ ಕಾರಣ ಇದ್ದೇ ಇದೆ. ಅದರ ಹಿಂದಿನ ದಿನ ಯುವಕ ಕಾಂಗ್ರೆಸ್ಸಿನ ಸಭೆಯಲ್ಲಿ ಇಂದಿರಾಜೀ ಮಾಡಿದಿರುವ ಮಾತುಗಳಿಂದ ಅದನ್ನು ಅರಿತುಕೊಳ್ಳಬಹುದು. ಯುವಕ ಕಾಂಗ್ರೆಸ್ಸಿನ ಸಭೆಯನ್ನು ಉದ್ಘಾಟಿಸುತ್ತ ಇಂದಿರಾಜೀಯವರು, ಸಂವಿಧಾನದಲ್ಲಿ ಸಾಕಷ್ಟು ಅವಕಾಶವಿದೆ, ಸಮಾಜದಲ್ಲಿ ಆಧುನೀಕರಣ ನಡೆಯುತ್ತಿದೆ. ಹಾಗಿದ್ದರೂ ಹರಿಜನರಿಂದೂ ಅಸ್ಪೃಶ್ಯರೇ ಇದ್ದಾರೆ. ಸ್ವಾತಂತ್ರ್ಯ ಸಿಕ್ಕಿ ಇಪ್ಪತ್ತೆರಡು ವರ್ಷಗಳುರುಳಿದರೂ ಅವರ ಸ್ಥಿತಿ ಬದಲಾಗಿರುವದಿಲ್ಲವೆಂದು ಹೇಳಿ ತಮ್ಮ ಅನುಭವವನ್ನು ವರ್ಣಿಸಿದರು. ಅವರು ಕಾರಿನಲ್ಲಿ ಹೋಗುತ್ತಿರುವಾಗಲೇ ಕಂಡ ದೃಶ್ಯ— ಇತರ ಜನರಿಗಿಂತ ಹರಿಜನರು ಬೇರ್ಪಟ್ಟು ನಿಂತಿರುವದನ್ನು ಕಂಡರು. ಅಂದರೆ ವೇಗದಲ್ಲಿ ಧಾವಿಸುತ್ತಿರುವಾಗಲೇ ಅಂತಹ ದೃಶ್ಯ ಕಣ್ಣಿಗೆ ಬಿದ್ದಿದೆಯೆಂದಲ್ಲಿ, ಇನ್ನು ನಡೆದು ಹೋಗುವಾಗ ಗೌತಮನು ಕಂಡ ದೃಶ್ಯವನ್ನೇ ಕಾಣಬಹುದು. ಅಷ್ಟು ವೇಗದಲ್ಲಿ ಹೋಗುತ್ತಿರುವಾಗ ಅವರು ಹರಿಜನ ಮಕ್ಕಳತ್ತ ಹೂಮಾಲೆಗಳನ್ನು ಎಸೆದರು, ಅವನ್ನು ಬೇರೆಯವರು ಬಂದು ಕಸಿದುಕೊಂಡು ಹೋದರು....

ಆವುದರಿಂದಲೇ ಆ ರೀತಿ ಅವರು ಮರುದಿನ ಮಾತಾಡಿರುವರು. ಒಲಿದರೆ ನಾರಿ, ಮುನಿದರೆ ಮಾರಿಯಲ್ಲವೇ? ಸಿಟ್ಟು ಮೂಗಿನ ತುದಿಯಲ್ಲೇ ಆಶ್ರಯ ಸಿಗುವಾದ ಕೇಳಬೇಕೇನು? ಹೀಗಿದ್ದಲ್ಲಿ ಯಾರಿಗೆ ತಾನೇ ಸಿಟ್ಟು ಬರಲಿಕ್ಕಿಲ್ಲ? ಗೋಪನಾರ್ ಅಲ್ಲವಾದರೂ ರೋಷ ನಾರಿಗೆ ಬರಕೂಡದೆಂದೇನಿದೆ? ಒಂದು ವಸ್ತುವನ್ನು ಒಬ್ಬರಿಗೆಂದು ಕೊಟ್ಟಾಗ ಇನ್ನೊಬ್ಬರು ಅಪಹರಿಸಿಕೊಂಡು ಹೋದಲ್ಲಿ ಅದನ್ನೆಂತು ಮೌನವಾಗಿ ಸಹಿಸಿಕೊಳ್ಳುವದು? (ಇಂದಿರಾಜೀ ಕಾಂಗ್ರೆಸ್ಸಿಗೆ ಹರಿಜನರು ಮತದಾನ ಮಾಡದೆ ರಿಪಬ್ಲಿಕನ್ ಪಾರ್ಟಿಗೆ ಮತ ಹಾಕುವ ವಿಷಯದ ಕುರಿತು ಈ ಮಾತು ಅಲ್ಲ.) ಸಂವಿಧಾನದಂತೆ ಸಾರದಿದ್ದಲ್ಲಿ ಆ ಸಂವಿಧಾನ ಇದ್ದೇನು ಪ್ರಯೋಜನವೆಂಬುದೇ ಇಂದಿರಾಜೀಯವರ ಅಭಿಪ್ರಾಯ. ಊಟಕ್ಕಾಗದ ಉಪ್ಪಿನ ಕಾಯಿ ಯಾರ ಬಾಯಿಗೆ, ಯಾವ ಬಾವಿಗೆ? ಅಂದು ಅಕ್ಟೋಬರ ದಿನಾಂಕ ಎರಡರಿಂದ ಎಂಟರ ವರೆಗೆ ಅವರು ಸಂವಿಧಾನಾತ್ಮಕ ರೀತಿಯ ಕುರಿತು ಸರಾಗವಾಗಿ ಜಾಹಿರಾತುಗಳನ್ನಿತ್ತಿರುವರಾದರೂ, ಎಂಟರ ನೆಂಟು ಮುಗಿದು ಹಾಯಾಗಿ ಹದಿನಾಲ್ಕು ಮುಟ್ಟಿದ ವೇಳೆ ಟೀನ್ ಕೇಳಬೇಕೇ?

ಇಲ್ಲಿ ಎದುರು ಪ್ರಶ್ನೆಗಳಿಗೆ ಅವಕಾಶ ಇಲ್ಲ. ಪ್ರಶ್ನೆ ಕೇಳಲಿಚ್ಛಿಸುವವರು ನಿಜಲಿಂಗಪ್ಪನವರನ್ನು ಹಿಂಬಾಲಿಸಬೇಕು. ಇದಕ್ಕೊಪ್ಪುವವರೇ ಇಂದಿರಾ ಕಾಂಗ್ರೆಸ್ಸಿನಲ್ಲಿರಬೇಕು. ಅದನ್ನು ಬಿಟ್ಟು "ಛಿಕ ಪ್ರಸಂಗಿಗಳ"ಂತೆ ಹರಿಜನರು ಅಸ್ಪೃಶ್ಯರಿರದೆ ಅಸ್ಪೃಶ್ಯರೆಲ್ಲಾ ಹರಿಜನರಾಗುತ್ತಾರೇನು? ಎಡಬಿಡದೆ ಇಪ್ಪತ್ತೆರಡು ವರ್ಷ ಕಾಲ ದಿಲ್ಲಿ ದರ್ಬಾರು ನಡೆಸಿದವರು ಯಾರು? ಅಸ್ಪೃಶ್ಯತಾ ನಿವಾರಣೆ ಇನಿತೂ ಬದಲಾಯಿಸಲು ಇಪ್ಪತ್ತೆರಡು ವರ್ಷಗಳಲ್ಲಿ ಸಾಧ್ಯವಾಗಿಲ್ಲವಾದಲ್ಲಿ ಇನ್ನೂ ಆ ಆಸನಕ್ಕಂಟಿಕೊಂಡು ಕುಳಿತುಕೊಳ್ಳಲು ಹೋರಾಡುವದೇತಕ್ಕೆ? ರಾಜೀನಾಮೆಕೊಟ್ಟು ಬಂದು ಸಮಾಜ ಸೇವೆ ಮಾಡಬಹುದಲ್ಲವೇ? ಬೇರ್ಪಟ್ಟು ನಿಂತಿದ್ದ ಗುಂಪನ್ನು ಹರಿಜನರೆಂದು ಕಾರಿನಲ್ಲಿ ಹೋಗುತ್ತಿದ್ದಂತೆಯೇ ಹೇಗೆ ಗುರುತಿಸಿದಿರಿ? ನೀವು ಹರಿಜನ ಪರಿಶೋಧಕರೇ? ಅಲ್ಲಿ ನಾಮ ಫಲಕ ಇತ್ತೇ? ಅದೇತಕ್ಕೆ ಅಲ್ಲೇ ಕೆಳಗಿಳಿದು ಹೋಗಿ ಅವರನ್ನು ಇತರರೊಂದಿಗೆ ಸೇರಿಸಲಿಲ್ಲ? ಕೆಳಗಿಳಿದು ಹೋಗಿ ಮಕ್ಕಳಿಗೆ ಮಮತೆಯಿಂದ ಹೂಮಾಲೆ ಕೊಡಲಿಲ್ಲ? ಒಮ್ಮೆ ಅಂತಹ ಅನುಭವ ಆದ ಮೇಲಾದರೂ ನೇರಕೊಡಬಹುದಿತ್ತಲ್ಲವೇ? ಕನಿಷ್ಠ ಪಕ್ಷ ಕಾರ್ಯದರ್ಶಿಯ ಮೂಲಕವಾದರೂ ಕೊಡಿಸಬಹುದಿತ್ತಲ್ಲವೇ? ಇವೆಲ್ಲಾ ವೇದಿಕೆಗಾಗಿ ಕಾದಿರಿಸಿದ ಆಯ್ದ ಮಾತುಗಳೇ?

ಈ ರೀತಿಯ ಪ್ರಶ್ನೆಗಳಿಗೇನೂ ಕೊರತೆ ಇಲ್ಲ. ಎಡೆಬಿಡದೆ ಕಾಂಗ್ರೆಸ್ಸು ಇಪ್ಪತ್ತೆರಡು ವರ್ಷ ಸ್ವತಂತ್ರ ಭಾರತವನ್ನಾಳಿದರೂ ಅಸ್ಪೃಶ್ಯತೆಯನ್ನು ಅಂತ್ಯಗೊಳಿಸಲು ಸಾಧ್ಯವಾಗಿಲ್ಲವೆಂಬುದನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು. ಕಾನೂನು, ಅಧಿಕಾರ, ಪಕ್ಷಬಲ, ಧನಬಲ....ಏನೇ ಇರಲಿ ಹರಿಜನರು ಹಾಗೆನೇ ಇದ್ದಾರೆ. ಅದಕ್ಕಾಗಿ ಕಾಂಗ್ರೆಸ್ಸು ಅದೇನೇನೋ ಮಾಡಿದೆ. ಸಹಭೋಜನ ಆಯಿತು, ಮಿಶ್ರ ವಿವಾಹಕ್ಕೆ ಬಹುಮಾನವೆಂದಾಯಿತು.... ಏನೇನೋ ಆಶೆ, ಆಮಿಷ, ಮತಾಂತರ ಮಣ್ಣು ಮಸಣ ಎಲ್ಲಾ ಆದ ಮೇಲೂ ಪಾಟ್ನಾದಲ್ಲಿ ಇಂದಿರಾಜೀ ಪಶ್ಚಾತ್ತಾಪ ಪಡುತ್ತಿದ್ದಾರೆ!

ಉಂಟೇ, ಹರಿಜನವೆಂದೊಡನೆ ಮಹಾತ್ಮ ಗಾಂಧಿಯವರ ಹೆಸರು ಜ್ಞಾಪಕಕ್ಕೆ ಬಾರದಿರುವದುಂಟೇ? ಆ ಹೆಸರನ್ನಿತ್ತವರೇ ಅವರು ತಾನೇ? ಇತ್ತೀಚೆಗೆ ಜಮುನಾಲಾಲ ಬಜಾಜರ ಜ್ಞಾಪಕಾರ್ಥ ಅಂಚೆ ಚೀಟಿಯನ್ನು ಪ್ರಕಟಿಸಲಾಗಿರುತ್ತದೆ. ಜಮುನಾಲಾಲಜೀಯವರು ಗಾಂಧೀಜೀಯವರ ವಾರ್ಧಾ ಆಶ್ರಮಕ್ಕೆ ಏರ್ಪಾಡು ಮಾಡಿಕೊಟ್ಟವರು. ಒಮ್ಮೆ ಗಾಂಧೀಜೀಯವರು ವಾರ್ಧಾ ಆಶ್ರಮದಲ್ಲಿ ತಂಗಿದ್ದಾಗ, ಜಮುನಾಲಾಲಜೀಯವರೂ ಅಲ್ಲೇ ಇದ್ದು ಏರ್ಪಾಡುಗಳನ್ನು ನೋಡಿಕೊಳ್ಳುತ್ತಿದ್ದರು. ಆಗ ಪಕ್ಕದಲ್ಲೇ ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಿಬಿರ ನಡೆಯುತ್ತಿತ್ತು. ಅದರಿಂದ ಆಕರ್ಷಿತರಾದ ಗಾಂಧೀಜಿಯವರು ಶಿಬಿರಕ್ಕೆ ಭೇಟಿಕೊಟ್ಟರು. ಅವರು ಅಲ್ಲಿದ್ದ ಸ್ವಯಂಸೇವಕರ ಬಳಿ ಹರಿಜನ ಯಾರಿದ್ದಾರೆಂದು ಕೇಳಿದರು. ಅಲ್ಲಿದ್ದವರೆಲ್ಲರೂ ತಾವು ಹಿಂದೂ ಅಂತಲ್ಲದೆ ಆದ್ಯಾರೂ ಜಾತಿಯನ್ನು ಸೂಚಿಸಲಿಲ್ಲ. ಗಾಂಧೀಜೀಯವರಿಗೆ ಬಹಳ ಆಶ್ಚರ್ಯವಾಯಿತು. ಅದು ಹೇಗೆ ಸಾಧ್ಯ? ಎಲ್ಲರೂ ಒಂದೆಡೆ ಊಟಮಾಡುವದು, ಮಲಗುವದು, ಆಡುವದು, ರಾಷ್ಟ್ರಧ್ಯಾನ ಮಾಡುವದು ಹೇಗೆ ಸಾಧ್ಯವೆಂದು ವಿಚಾರಿಸಿ ತಿಳಿದುಕೊಂಡರು. ಮರುದಿನ ಅಲ್ಲಿಗೆ ಸಂಘ ಸಂಸ್ಥಾಪಕ ಡಾ| ಕೇಶವ ಬಲಿರಾಮ ಹೆಡ್ಗೇವಾರರವರು ಬಂದಾಗ ವಿಷಯ ತಿಳಿದು ಅವರು ಗಾಂಧೀಜೀಯವರನ್ನು ಭೇಟಿಯಾದರು. ತಮಗಾದ ಆನಂದವನ್ನು ವ್ಯಕ್ತಪಡಿಸಿದ ಗಾಂಧೀಜೀ, ನಾನು ಬಯಸಿ ಕೊಂಡಿರುವದು ಇಲ್ಲಿ ಕಾರ್ಯರೂಪದಲ್ಲಿದೆಯೆಂದು ತಿಳಿಸಿ ಸಂಘಕ್ಕೆ ಜಯ ಕಟ್ಟಿಟ್ಟ ಗಂಟೆನ್ನುವ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದರು. ಆ ವೇಳೆ, ದಿಲ್ಲಿಯಲ್ಲಿ ಗಾಂಧೀಜೀಯವರ ಜೀವಕ್ಕೆ ಅಪಾಯವಿದೆಯೆಂದು ತಿಳಿದು ಬಂದಾಗ ಅವರನ್ನು ಪೋಲೀಸರ ರಕ್ಷಣೆಗೆ ಬಿಡದೆ, ಸಂಘ ಶಾಖೆ ಚೆನ್ನಾಗಿದ್ದ ಭಂಗಿ ಕಾಲೋನಿಯಲ್ಲಿ ಇರಲು ಏರ್ಪಾಡು ಮಾಡಲಾಗಿತ್ತು. ಅದನ್ನು ಬಿಟ್ಟು ಬಿರ್ಲಾ ಭವನಕ್ಕೆ ಹೋದಾಗ ಕೊಲೆಗಡುಕರಿಗೆ ಅವರು ಆಹುತಿಯಾಗಿರುವದು ಇಲ್ಲಿ ನೆನಪಿಗೆ ಬರುತ್ತದೆ.

ಊರಿಲ್ಲಾ ಹಬ್ಬಿರುವ ಹರಿಜನ ಶಬ್ದ ಕುರಿತು, ಮಹಾತ್ಮಾ ಗಾಂಧೀಜೀಯವರ ಬಳಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘ ಚಾಲಕ ಪರಮ ಪೂಜನೀಯ ಶ್ರೀ ಗುರೂಜೀಯವರು ಮಾತಾಡಿ, ಅಂತಹ ಭಿನ್ನತಾ ಸೂಚಕ ಶಬ್ದವನ್ನು ಪ್ರಯೋಗಿಸಬಾರದೆಂದ, ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಗಾಂಧೀಜೀ ಅವರು ಏನೇನೋ ಕಾರಣ ಕೊಟ್ಟರೂ ಏನೂ ನೇರ ವಿಷಯಕ್ಕೆ ಬರಲಿಲ್ಲ. ಗಾಂಧೀಜೀಯವರು ಹೋದರೂ, ಹರಿಜನ ಪತ್ರಿಕೆ ಹೋದರೂ ಹರಿಜನರೂ ಉಳಿದುಕೊಂಡರು. ಯಾವ ಹೆಸರಾದರೇನಂತೆ? ಹೊಲೆಯನೆಂದರೆ ಶಿಕ್ಷೆ, ಹರಿಜನ ಅಂದರೆ ಹಾರ! ಏನು ನ್ಯಾಯ? ಇದ್ದರೂ ಹಿಂದಿನ ಸ್ಥಿತಿಯಲ್ಲೇ ಅವರಿದ್ದಾರೆಂಬ ಇಂದಿರಾಜೀಯವರ ಮಾತು ರಾಜಕೀಯಕ್ಕೆ ಮೀಸಲು, ಅಷ್ಟೇ. ಇಪ್ಪತ್ತೆರಡು ವರ್ಷ ದರ್ಬಾರು ನಡೆಸಿದರೂ ಬದಲಾವಣೆ ಅವರ ಕನ್ನಡಿ ಕಣ್ಣಿಗೆ ಕಂಡು ಬಂದಿರುವದಿಲ್ಲ. ಅವರು ಧರಿಸಿಕೊಂಡಿರುವ ಕನ್ನಡಕ ಆ ರೀತಿಯದ್ದು. ಅವರಿಗೆ ಎಲ್ಲವೂ ಕಪ್ಪಾಗಿ ಕಂಡುಬರುತ್ತದೆ. ಕಪ್ಪಾಗಿರುವವರೆಲ್ಲ

(ಹನ್ನೆರಡನೇ ಪುಟ ನೋಡಿರಿ)

ಲೇಖನಾಂಕ ೩

ಕಾಂಗ್ರೆಸ್ ಒಳಜಗಳದ ಪ್ರಾಚೀನ ಇತಿಹಾಸ

ಲೇಖಕರು: ಶ್ರೀ ಪಂ. ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಈ ಪ್ರಕಾರ ಜವಾಹರಲಾಲ್ ನೆಹರೂರವರು ಅತ್ಯಂತ ಉಗ್ರತರವಾದ ಮತದಲ್ಲಿ ಮುಂದುವರಿಯುತ್ತಿರುವುದನ್ನು ಬಲಾತ್ಕಾರದಿಂದ ತಡೆಗಟ್ಟುವುದಕ್ಕಿಂತ ತಾನು ಸೋಲನ್ನು ಒಪ್ಪಿಕೊಳ್ಳುವುದರಲ್ಲಿಯೇ ಕಾಂಗ್ರೆಸಿಗೆ ಒಳಿತಿದೆಯೆಂದು ಮಹಾತ್ಮಾಜಿ ತೀರ್ಮಾನಿಸಿಕೊಂಡರು. ಇದರಿಂದಾಗಿ ಲಾಹೋರು ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ಗಾಂಧೀಜಿಯ ಸಲಹೆಯಂತೆ ಪಂ. ನೆಹರೂರವರಿಗೇನೇ ಕೊಡಲ್ಪಟ್ಟಿತು. ಈ ಅಧಿವೇಶನದ ಅಧ್ಯಕ್ಷಸ್ಥಾನದಿಂದ ನೆಹರೂರವರು ಮಾಡಿದ ಭಾಷಣದ ಬಹುಭಾಗ ಇಂದಿಗೂ ಅನೇಕರ ಕಿವಿಗಳಲ್ಲಿ ಪ್ರತಿಧ್ವನಿತವಾಗುತ್ತಿರಬಹುದು. ಅವರು ತನ್ನ ಭಾಷಣದಲ್ಲಿ "ನಾನು ಸೋಶ್ಯಲಿಸ್ಟ್ ಮತ್ತು ರಿಪಬ್ಲಿಕನ್ ಆಗಿರುತ್ತೇನೆಂಬುದನ್ನು ನಾನು ಸ್ಪಷ್ಟವಾಗಿ ಒಪ್ಪಿಕೊಳ್ಳಬೇಕಾಗಿದೆ; ರಾಜ–ಮಹಾರಾಜರುಗಳ ಅಧಿಕಾರ ದರ್ಪದ ದಿನಗಳು ಕಳೆದು ಹೋದವು" ಎಂದು ಹೇಳಿದರಲ್ಲದೆ ರೈತರ ಮತ್ತು ಮಜೂರರ ಪರಿಯಿಂದ ಪ್ರಮುಖ ವಕ್ತಾರರ ರೂಪದಲ್ಲಿ ಮಾತಾಡುತ್ತಾ ಅವರು ಮಹಾತ್ಮಾ ಗಾಂಧಿಯವರ "ಟ್ರಸ್ಟಿಶಿಪ್" (ವಿಶ್ವಸ್ಥ ಮಂಡಲಿ) ಎಂಬುದನ್ನು ಸಮೂಲವಾಗಿ ಖಂಡಿಸಿ "ಬಂಡವಾಳಶಾಹಿ"ಗಳಿಂದ ಕೂಡಿರುವ "ಟ್ರಸ್ಟಿಶಿಪ್"ನಿಂದ ರೈತರ ಮತ್ತು ಮಜೂರರ ಉನ್ನತಿ ಎಂದಿಗೂ ಆಗಲಾರದು; ಇದಕ್ಕೆ ಬದಲಾಗಿ "ರಾಷ್ಟ್ರೀಯ ವಿಶ್ವಸ್ಥ ಮಂಡಲಿ" (ನೇಶನಲ್ ಟ್ರಸ್ಟಿಶಿಪ್)ಯೇ ರೈತಾಪಿ ಜನರನ್ನೂ ಶ್ರಮಜೀವಿಗಳನ್ನೂ ರಕ್ಷಿಸಬಲ್ಲುದು" ಎಂಬು ತನ್ನ ಭಾಷಣದಲ್ಲಿ ಪರಿಣಾಮಕರವಾಗಿ ಪ್ರತಿಪಾದಿಸಿದರು. ಗಾಂಧೀಜಿಯ ಅಹಿಂಸಾ ಸಿದ್ಧಾಂತವನ್ನು ವ್ಯಂಗ್ಯವಾದ ಶಬ್ದಗಳಿಂದ ಖಂಡಿಸುತ್ತಾ "ಯಾರು ಅತ್ಯಂತ ಸಾಹಸದಿಂದ ಮುಂದಡಿಯಿಡುತ್ತಾರೋ, ಪರಿಣಾಮಕಾರಕ ಕಾರ್ಯಗೈಯುತ್ತಾರೋ ಅಂತಹವರ ಕಾಲಬುಡದಲ್ಲಿ ಸಫಲತೆ ಬಂದು ಮಣಿಯುತ್ತದೆ; ಕೇವಲ ದುರ್ಬಲ ಮನೋವೃತ್ತಿ ಮತ್ತು ಪರಿಣಾಮದ ಕುರಿತು ಸಂಶಯ ಚಿತ್ತವೃತ್ತಿಯ ವ್ಯಕ್ತಿಗೆ ಎಂದಿಗೂ ಸಫಲತೆ ದೊರಕಲಾರದು" ಎಂದು ವಿವರಿಸಿದರು.

ಕಾಂಗ್ರೆಸಿನೊಳಗೆ ಎರಡು ವಿಧದ ದೃಷ್ಟಿ ಮತ್ತು ಬೇರೆ ಬೇರೆ ಎರಡು ಆದರ್ಶಗಳ ಪರಸ್ಪರ ತಿಕ್ಕಾಟ ಎಂದಿಗೂ ಕೊನೆಗೊಳ್ಳಲಿಲ್ಲ. ಚೆನ್ನಾಗಿ ಪರಿಶೀಲಿಸಿದರೆ 1930ರಿಂದ ಮೊದಲ್ಗೊಂಡು ನಾಸಿಕ ಅಧಿವೇಶನದಲ್ಲಿ "ರಾಜರ್ಷಿ ಪುರುಷೋತ್ತಮದಾಸ್ ಟಂಡನ್"ರವರ ಗುಂಪಿನೊಡನೆ ಘರ್ಷಣೆ ಸಂಭವಿಸುವವರೆಗೆ ಕಾಂಗ್ರೆಸಿನಲ್ಲಿ ಎರಡು ರೀತಿಯ ಆದರ್ಶ (ಒಂದು ಗಾಂಧಿವಾದ ಮತ್ತೊಂದು ನೆಹರೂವಾದ)ಗಳು ಪರಸ್ಪರ ಹೋರಾಡುತ್ತಾ ತಮ್ಮ ಶಕ್ತಿಯನ್ನು ಕುಂಠಿತಗೊಳಿಸುತ್ತಾ ಇದ್ದವು. ಆದರೆ ಗಾಂಧೀಜಿಯ ನಿಂದಾರಹಿತವಾದ ವ್ಯಕ್ತಿತ್ವದ ಪರಿಣಾಮ ಮತ್ತು ಆ ವ್ಯಕ್ತಿತ್ವದಲ್ಲಿ ನೆಹರೂರವರಿಗಿದ್ದ ಅಚಲ ಶ್ರದ್ಧೆಯಿಂದಾಗಿ (ಭಯಂಕರ ಒತ್ತಡಗಳು ಒಂದರ ಮೇಲೊಂದು ಬೀಳುತ್ತಿದ್ದರೂ) ಕಾಂಗ್ರೆಸ್ ವಿಭಾಗವಾಗುವಂತಹ ಬಿರುಕು ಉಂಟಾಗಲಿಲ್ಲ. ಆದರೆ ಕೇವಲ ವೈಯುಕ್ತಿಕ ಪ್ರತಿಷ್ಠೆ ಅಧಿಕಾರದ ಹಿಡಿತದಂತಹ ಅತಿ ಕ್ಷುಲ್ಲಕ ಕಾರಣಗಳಿಂದಾಗಿ ಹಿರಿಯ ಸಂಸ್ಥೆ ಕಾಂಗ್ರೆಸ್ಸನ್ನು ಒಡೆದು ಹಾಕಿದ ಶ್ರೀಯುತರನ್ನು ಶ್ರೀ ನಿಜಲಿಂಗಪ್ಪನವರೂ ಶ್ರೀಮತಿ ಇಂದಿರಾಗಾಂಧಿಯವರೂ ಕಟ್ಟಿಕೊಂಡರು. ಸ್ವಾತಂತ್ರ್ಯ ದೊರೆತ ನಂತರ ಕಾಂಗ್ರೆಸ್ ಸಂಸ್ಥೆಯಲ್ಲಿ "ಶಾಸನ" ಮತ್ತು "ಸಂಘಟನೆ" ಎಂಬ ಎರಡು ಕವಲುಗಳುಂಟಾದವು. ಇದರಿಂದ ಕಾಂಗ್ರೆಸ್ ಪಕ್ಷ ತನ್ನ ಮೂಲಭೂತ ಲಕ್ಷ್ಯವನ್ನು ಎಷ್ಟರ ಮಟ್ಟಿಗೆ ರಕ್ಷಿಸಿಕೊಂಡಿದೆ ಎಂಬುದರ ವಿಸ್ತೃತ ವಿವೇಚನೆಯನ್ನು ಪ್ರತ್ಯೇಕವಾಗಿಯೇ ವಿವರಿಸಬೇಕಾಗುವುದು. ಪಂ. ನೆಹರೂರವರು ಪ್ರಧಾನಮಂತ್ರಿಯಾಗುವುದರೊಂದಿಗೆ ಕಾಂಗ್ರೆಸಿನ ಸಂಘಟನೆಯ ಜವಾಬ್ದಾರಿಯನ್ನು ಸಹ ವಹಿಸಿಕೊಂಡದ್ದರಿಂದ ಸಂಸ್ಥೆಯನ್ನು ಒಂದು ಸ್ಪಷ್ಟ ಮತ್ತು ಭದ್ರವಾದ ತಳಹದಿಯಲ್ಲಿ ಪುನರ್ಘಟಿಸಲಿಕ್ಕೆ ಮತ್ತು ಅದರ ಜೊತೆಯಲ್ಲಿಯೇ ಶಾಸನವನ್ನು ಸಹ ಒಂದು ದೃಢ ಆದರ್ಶತೆಗೆ ಅನುರೂಪವಾಗಿ ಭದ್ರಗೊಳಿಸುವ ಸಂಪೂರ್ಣ ಅವಕಾಶ ಪಂ. ನೆಹರೂರವರಿಗೆ ದೊರಕಿತು. ಆದರೆ ಅವರು ಮಾತ್ರ ಈ ಅವಕಾಶವನ್ನು ಪರ್ಯಾಪ್ತವಾಗಿ ಕಾರ್ಯಗತಗೊಳಿಸದೆ ತನ್ನ ಅಧಿಕಾರಾವಧಿಯನ್ನು ಬಲಗೊಳಿಸುವ ಸ್ಥಿತಿಗತಿಯಲ್ಲಿಯೇ ಕಾಂಗ್ರೆಸ್ ಸಂಸ್ಥೆ ಮತ್ತು ಶಾಸನವನ್ನು ನೋಡಿಕೊಂಡರು. ಇದರ ಪರಿಣಾಮವೇ ಇಂದಿಗೆ ಭಾರತದ ರಾಜಕೀಯ ರಂಗಮಂಚದಲ್ಲಿ ಕಾಂಗ್ರೆಸ್ ಮತ್ತದರ ಘನ ಆದರ್ಶಗಳು "ಇಂಡಿಕೇಟ್" ಮತ್ತು "ಸಿಂಡಿಕೇಟ್" ಗಳೆಂಬ ರೂಪ ತಾಳಿ ಯಾದವೀ ಕಲಹಕ್ಕೆ ಬಲಿಬಿದ್ದಿವೆ.

ನೆಹರೂರವರ ನಿಧನಾನಂತರ ಕಾಂಗ್ರೆಸಿನ ಸಂಘಟನಾ ಶಕ್ತಿ ಅವಿಭಜಿತ ನೇತೃತ್ವದಿಂದ ವಂಚಿತವಾಯಿತು. ಇಷ್ಟು ಮಾತ್ರವಲ್ಲ ಪ್ರಭಾವಶಾಲಿ ಕಾರ್ಯಕುಶಲತೆಯಿಂದ ಕಾಂಗ್ರೆಸಿನೊಳಗೆ ನವಜೀವನ ಶಕ್ತಿಸಂಚಾರಗೊಳಿಸುವ ಪ್ರಮುಖ ಮುಂದಾಳುತನ ದೇಶಕ್ಕೆ ಮತ್ತೆ ಲಭಿಸಲಿಲ್ಲ. ಇಂತಹ ಬಲವಾದ ಶಕ್ತಿಯುತ ನೇತೃತ್ವವು ತನ್ನ ಮನೆತನದ ಆವರಣದೊಳಗೇನೇ ಸೀಮಿತವಾಗಿರಬೇಕೆಂಬ ನಿರರ್ಥಕ ಮಹತ್ವಾಕಾಂಕ್ಷೆಯಿಂದಿದ್ದಿರಬೇಕೆಂಬುದು ಕಾಂಗ್ರೆಸ್ ಸಂಸ್ಥೆ ಮತ್ತು ಶಾಸಕ ಮಂಡಳಿಗಳೊಳಗೆ ಇಂದು ಹೊಯ್ದಾಡುತ್ತಿರುವ ರಾಷ್ಟ್ರವಿನಾಶಕಾರಕ ಘರ್ಷಣೆಗಳಿಂದ ಕಂಡುಬರುತ್ತದೆ ಎಂದರೆ ತಪ್ಪಾಗದು. ಇಂತಹ ದುರ್ಗತಿ ಒದಗದಂತೆ ಮಾಡಲು ನೆಹ್ರೂರವರಿಗೆ ಸಾಧ್ಯವಿದ್ದೂ ಅವರದನ್ನು ಮಾಡದೆ ಹೋದರು.

ಕೊನೆಯದಾಗಿ ನಾವು ಇಲ್ಲಿ ಒಂದು ವಿಷಯವನ್ನು ಗಮನಿಸಿದರೆ ಅನುಚಿತವಾಗಲಾರದು. ಅದಾವುದೆಂದರೆ, ಕಾಂಗ್ರೆಸಿನೊಳಗೆ ದುರ್ಬಲತೆ ಹೆಚ್ಚುತ್ತಿರುವುದನ್ನು ಕಂಡೊಡನೆಯೇ ಪಂ. ನೆಹರೂರವರು "ಆವಡಿ ಅಧಿವೇಶನ"ದಲ್ಲಿ "ಸಮಾಜವಾದ ಮಾದರಿಯ ಸಮಾಜರಚನೆ"ಯ ಘೋಷಣೆಯೊಂದನ್ನು ಪ್ರಕಟಿಸಿ ಸಂಸ್ಥೆಯಲ್ಲಿ ನವಚೇತನ ಶಕ್ತಿಯನ್ನುಂಟು ಮಾಡಲಿಕ್ಕೆ ಯತ್ನಿಸಿದ್ದರು. ಆದರೆ ಅದು ಘೋಷಣೆಯಲ್ಲಿಯೇ ಸೀಮಿತಗೊಂಡ ಕಾರಣ ಕಾಂಗ್ರೆಸಿನೊಳಗೇನೇ ಕೆಲವು ಪ್ರಮುಖ ವ್ಯಕ್ತಿಗಳು ಆವಡಿ ಅಧಿವೇಶನದ ಠರಾವಿನಿಂದ ಸಂಸ್ಥೆಯೊಳಗೆ ಹೊಸ ಶಕ್ತಿಯನ್ನುಂಟು ಮಾಡಲು ಅಸಮರ್ಥರಾದರು. ಇದು ಕಾಂಗ್ರೆಸಿನಲ್ಲಿ ಇಂದಿನ ಒಡಕಿಗೆ ಮತ್ತೊಂದು ಕಾರಣವಾಗಿ ಪರಿಣಮಿಸಿತು. ಅಸಂಖ್ಯಾತ ಮಹಾನ್ ವ್ಯಕ್ತಿಗಳು ತಮ್ಮ ರಕ್ತ—ಮಾಂಸ—ಜೀವ ತೆತ್ತು ಕಟ್ಟಿದ ಮಹಾನ್ ಸಂಸ್ಥೆ ಕಾಂಗ್ರೆಸನ್ನು ಇಂದಿಗೆ ತಮ್ಮ ಅಧಿಕಾರದ ಮೋಹಕ್ಕೊಳಗಾಗಿ ಇಬ್ಭಾಗ ಮಾಡಿದ ಇಂದಿನ ದಾರುಣಮಯ ವಾತಾವರಣದಲ್ಲಿ ದೇಶ ಮತ್ತು ಜನತೆಯ ಭವಿಷ್ಯವು ಯಾವುದೋ ಒಂದು ಮೂರನೆಯ ದುಷ್ಟ ಶಕ್ತಿಯ ಕೈಸೇರುತ್ತದೋ ಎಂಬ ಭಯವು ದೇಶದಲ್ಲಿ ಸರ್ವತ್ರ ಆವರಿಸಿಕೊಂಡಿದೆಯೆಂದರೆ ತಪ್ಪಾಗದು.

(ಮುಗಿಯಿತು.)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತ್ಯಕ್ಷವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಜೋಗ ಜಲಪಾತ

ಸುತ್ತ ಸೊಕ್ಕಿದ ಕಾಡ
ಮಧ್ಯದಲಿ ಹರಿದಾಡಿ–
ಇಲ್ಲಿ ನರ್ತನ ಗೈದ
ಚೆಲುವು, ರೂಪಸಿ ಪ್ರಕೃತಿ;
ಕೋಗಿಲೆಯ ಇನಿದನಿಯೆ,
ಪಕ್ಷಿಗಳ ಇಂಚರವೆ,
ಕಲ್ಲು ಬಂಡೆಯ ಮೇಲೆ
ಕಾಳಿತ ಬೆಳ್ಳಕ್ಕಿಗಳೆ,
ಕಾಡು ಮಲ್ಲಿಗೆಯರಳ
ಪರಿಮಳವೆ, ಸೊಬಗೆ
ಇಂದ್ರಚಾಪದ ಸಪ್ತ
ವರ್ಣಗಳ ವೈಭವವೆ
ಶಿಲೆಗೆ ಧರೆ ಚುಂಬಿಸುವ
ಸವಿಜಲದ ಮುತ್ತುಗಳೆ
ಕವಿಯ ಕಲ್ಪನೆ ಸಾಕ್ಷಿ
ಈ ಕುಣಿತದುತ್ಸವಕೆ!

ರಾಜ ಅಬ್ಬರ ಬಾಣ
ಗೌರವನಿತೆಯ ರೂಪ—
ಧಾರೆಯಲಿ ಕೆಳಗಿಳಿವ
ನೀರಿನನುಪಮ ಕಾಂತಿ,
ಸಿರಿಯಾಗಿ, ಸಿಡಿಲಾಗಿ
ತೀವ್ರತೆಯ ಜತೆಗೂಡಿ
ಶ್ರೀವನಿತೆ ಸಿಂಗರಿಸಿ
ಲಾಸ್ಯದಲಿ ಮಣಿದಾಡಿ
ನೆಲ ಸೇರುವುದೆ ಚಂದ!
ಸೌಂದರ್ಯ ವೀಕ್ಷಿಸುವ
ಹೊಳವು ಕಂಗಳ ಬೆಳಕು
ಈ ಜೋಗ ಜಲಪಾತ

—ಗೋಪಾಲಕೃಷ್ಣ ಹೆಗಡೆ.

(ಆಕಾಶವಾಣಿಯ ಕೃಪೆಯಿಂದ)

ವಾರಪತ್ರಿಕೆ
ಉಡುಪಿ, ದ. ಕ.

NAVAYUGA
UDIPI, S. K.

ಸಂಪುಟ : 50
ಸಂಚಿಕೆ : 13

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
ವಿಶೇಷ ಸಂಚಿಕೆಗಳು ಸಹಿತ
ಬಿಡಿ ಪ್ರತಿ : ೦—೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವುದೇ ಪ್ರಕಟಣೆಗಳು ಕನಿಷ್ಟ ಮೂರು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಇಬ್ಬರು ಮಹಾನುಭಾವರು

ಕರ್ನಾಟಕದ ಮಹಾನ್ ವ್ಯಕ್ತಿಗಳಲ್ಲಿ ಇಬ್ಬರು ಇತ್ತೀಚೆಗೆ ನಿಧನರಾದರು. ವಿಶ್ವವಂದ್ಯ ವಿಜ್ಞಾನಿ ಡಾ| ಚಂದ್ರಶೇಖರ್ ವೆಂಕಟಗಿರಿ ರಾಮನ್ ತನ್ನ ೮೩ನೆಯ ಹುಟ್ಟುಹಬ್ಬವನ್ನು ಆಚರಿಸಿ ಕೆಲವು ದಿನಗಳಲ್ಲಿ ಕೊನೆಯುಸಿರೆಳೆದರು; ಉತ್ತಮ ಹಾಗೂ ಆದರ್ಶ ರಾಜಕೀಯ ನಾಯಕ ಶ್ರೀ ರಾಮಕೃಷ್ಣ ಬೀಜಣ್ಣ ನಾಯಕರು 66ನೆಯ ವರ್ಧಂತಿಯನ್ನಾಚರಿಸಿದ ವಾರವೆರಡರೊಳಗೆ ಹೃದಯಾಘಾತಕ್ಕೊಳಗಾಗಿ ಮೃತ್ಯುವಶರಾದರು. ಈ ಯೆರಡು ಮಹಾಜೀವಗಳು ನಡೆದ ಹಾದಿ ದಾರಿ ಬೇರೆಬೇರೆಯಾದರೂ ಅವರವರು ಹಿಡಿದ ದಾರಿಯಲ್ಲಿ ಬಹುದೂರ ಮುಂದುವರಿದಿದ್ದಾರೆ; ಗುರಿ ಸೇರಿದ್ದಾರೆ.

ಆಂಧ್ರಪ್ರದೇಶದಲ್ಲಿ ಜನಿಸಿದ ಶ್ರೀ ಸಿ. ವಿ. ರಾಮನ್ ಐ. ಸಿ. ಎಸ್.ನಲ್ಲೂ ತನ್ನ ಬಿಚಿತವಾದ ಪ್ರಥಮ ಸ್ಥಾನವನ್ನೇಗಳಿಸಿ ಕೇಂದ್ರ ಸರಕಾರದ ಅರ್ಥಶಾಖೆಯಲ್ಲಿ ಅಧಿಕಾರಿಗಳಾಗಿ ಸೇರಿದರು. ಅವರ, ಭಾರತ—ಬರ್ಮಾಗಳ ವಿವಿಧೆಡೆಗಳಲ್ಲಿ ದುಡಿದರು. ವಿಜ್ಞಾನದಲ್ಲಿ ಮಿತಿಮೀರಿದ ಆಸಕ್ತಿಯಿದ್ದ ಶ್ರೀ ರಾಮನ್ನರು ಭೌತಶಾಸ್ತ್ರದಲ್ಲಿನ ತನ್ನ ಅಭಿರುಚಿಯನ್ನು ಅದುಮಿ ಡಲು ಅಶಕ್ತರಾದರು. ಸರಕಾರದ ಸೇವೆಯಲ್ಲಿರುವಾಗಲೇ ಬಿಡುವಾದಾಗ ತನ್ನ ಪ್ರಯೋಗಗಳನ್ನು ಮುಂದುವರಿಸಿದರು. ಇದು ಕಲಕತ್ತೆ ವಿಶ್ವವಿದ್ಯಾಲಯದ ಶ್ರೀ ಅಶುತೋಷ ಮುಖರ್ಜಿಯವರಿಗೆ ತಿಳಿಯಿತು. ಅವರು ರಾಮನ್‌ರನ್ನು ತಮ್ಮ ವಿಶ್ವವಿದ್ಯಾಲಯದ ಭೌತ ವಿಜ್ಞಾನ ವಿಭಾಗಕ್ಕೆ ಎಳೆದುತಂದರು. ತಮ್ಮ ಸಹಜ ಪ್ರತಿಭೆಯನ್ನು ಬೆಳೆಸಿಕೊಳ್ಳಲು ಶ್ರೀ ರಾಮನ್ನರು ಪ್ರಾಧ್ಯಾಪಕರಾದರು. "ಅಧಿಕಾರ" ಸ್ಥಾನವನ್ನು ಆದರೊಂದಿಗೆ ಸಖಿ—ಸಾಧನಗಳನ್ನು ನೂರಾರು ರೂಪಾಯಿಗಳ ವೇತನವನ್ನು ತ್ಯಜಿಸಿ ಅವರು ಹಣಕಿರು ದೀಪವನ್ನು ಎತ್ತಿಕೊಂಡರು. ಅವರು ಮಾಡಿದ ತ್ಯಾಗ ವ್ಯರ್ಥವಾಗಲಿಲ್ಲ. ಇದು ಅವರಿಗೆ ಜಗತ್ತಿನ ವಿಜ್ಞಾನಿಗಳ ಮಾಲೆಯಲ್ಲಿ ಗಣ್ಯಸ್ಥಾನವನ್ನು ಗಳಿಸಿಕೊಟ್ಟಿತು; ಬೇರೆ ಬೇರೆ ವೈಜ್ಞಾನಿಕ ಸಂಘ—ಸಂಸ್ಥೆಗಳ ಗೌರವವನ್ನು ಎಳೆದು ತಂದಿತು. ವಿಶ್ವವಿದ್ಯಾಲಯಗಳ "ಡಾಕ್ಟರ್" ಮಹಾಪದವಿ ಇವರ ಕೊರಳಿಗೆ ಬೀಳತು ಬಿದ್ದುವು. ಕೊನೆಗೆ, ನೋಬಲ್ ಪಾರಿತೋಷಕವೂ ಡಾ| ರಾಮನ್ನರನ್ನರಸಿಕೊಂಡು ಬಂತು. ಬೆಂಗಳೂರಿನ ತಾತಾ ವಿಜ್ಞಾನ ಮಂದಿರದ ಅಧ್ಯಕ್ಷರಾಗಿದ್ದು ಅರ್ಹನಿಶಿ ದುಡಿಯುತ್ತಲೇ ಇದ್ದು ರಾಷ್ಟ್ರಕ್ಕು ದೇಶಕ್ಕು ಜಗತ್ತಿಗೂ ಉಪಯುಕ್ತ ಸೇವೆ ಸಲ್ಲಿಸುತ್ತಲೇ ಬಹುಕಾಲ ಬದುಕಿ ಬದುಕನ್ನು ಅಮರಗೊಳಿಸಿದ ಡಾ| ರಾಮನ್ ಭಾರತೀಯ ವಿಜ್ಞಾನಿಗಳಲ್ಲೇ ಅಗ್ರಗಣ್ಯರು. ಅವಕಾಶ ಆರ್ಥಿಕ ನೆರವು ದೊರೆತರೆ ಭಾರತೀಯರ ಪ್ರತಿಭೆ ಎಲ್ಲಾ ಕ್ಷೇತ್ರದಲ್ಲೂ ಕಟ್ಟುಪತ್ತದೆ ಎಂಬುದನ್ನು ತೋರಿಸಿಕೊಟ್ಟ ಎಂಟೆದೆಯವರು ಡಾ| ರಾಮನ್.

ಶ್ರೀ ಆರ್. ಬಿ. ನಾಯಕರು ಉತ್ತರ ಕನ್ನಡ ಜಿಲ್ಲೆಯಲ್ಲೇ ಹುಟ್ಟಿ ಬೆಳೆದವರು. ಅವರು ವೃತ್ತಿಯಲ್ಲಿ ವಕೀಲರು; ಕಾಂಗ್ರೆಸ್‌ಕೇಸರಿಗಾರರು. ಅವಿಭಾಜ್ಯ ಮುಂಬಯಿ ರಾಜ್ಯದ ವಿಧಾನ ಸಭೆಯಲ್ಲಿ ಸದಸ್ಯರಾಗಿ ಆಯ್ಕೆಯಾಗಿದ್ದರು. (೧೯೩೭) ಮಹಾತ್ಮಾ ಗಾಂಧಿಯವರ ಅನನ್ಯ ಭಕ್ತರಾಗಿದ್ದ ಅವರು ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಮಹಾತ್ಮರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಶ್ರೀ ನಾಯಕರಿಗೆ ವಿಶ್ವಾಸವಿತ್ತು. ಹರಿಜನೋದ್ಧಾರ, ಪಾನ ಪ್ರತಿಬಂಧಗಳೊಡನೆ ಸಮಾಜ ಸುಧಾರಣೆಯಾಗ ಬಂತೆ ಇವರು ಪರಿಶ್ರಮಿಯಾಗಿ ದುಡಿದಿದ್ದರು. ಶಿಕ್ಷಣ ಪ್ರಸಾರ ಕಾರ್ಯದಲ್ಲೂ ಇವರ ತೋರಿಸಿದ್ದ ಆಸಕ್ತಿ ಕಡಮೆಯಲ್ಲ. ೧೯೬೨ರಲ್ಲಿ ವಿಧಾನ ಪರಿಷತ್ತಿಗೆ ಆಯ್ಕೆಗೊಂಡ ಶ್ರೀ ನಾಯಕರು ಇದೇ ಸತ್ರಂಬಾದಲ್ಲಿ ಅದರ ಅಧ್ಯಕ್ಷರಾಗಿ ಅವಿರೋಧವಾಗಿ ಚುನಾಯಿತರಾದರು. ಸರಳ ಹೃದಯ—ವ್ಯಕ್ತಿತ್ವದ ಶ್ರೀ ನಾಯಕರು "ಅಜಾತ ಶತ್ರು" ಎಂದು ಹೆಸರಾದವರು. ರಾಜ್ಯದ ಪಾನ ನಿರೋಧ ಮಂಡಲಿ, ಕೇಂದ್ರದ ಅಡಿಕೆ ಸಮಿತಿ, ಜಿಲ್ಲಾ ಸ್ಥಳೀಯ ಮಂಡಳಿ, ಎಐಸಿಸಿ, ಎಂಪಿಸಿಸಿ ಮತ್ತು ಡಿಸಿಸಿಯ ಸದಸ್ಯರಾಗಿ ದುಡಿದಿದ್ದರು. ವಿಧಾನ ಪರಿಷತ್ತಿನ ಸಭಾಪತಿಯಾಗುವುದಕ್ಕೆ ಮೊದಲು ಅದರ ಹಕ್ಕು ಭಾದ್ಯತಾ ಸಮಿತಿಯ ಅಧ್ಯಕ್ಷರಾಗಿ ಪ್ರಶಂಸನೀಯ ಸೇವೆಗೆ ಮತ್ತು ನಿಷ್ಪಕ್ಷಪಾತ ವ್ಯವಹಾರಗಳಿಗೆ ಹೆಸರಾಗಿದ್ದರು.

ಡಾ| ರಾಮನ್ನರು "ವಿದ್ವಾನ್ ಸರ್ವತ್ರ ಪೂಜ್ಯತೇ" ಎಂಬ ಋಷಿ ವಾಕ್ಯವನ್ನು ಸತ್ಯಮಾಡಿ ತೋರಿಸಿದರು. ಅವರ ಹೆಸರು ದಿಗಂತ ವಿಶ್ರಾಂತ; ಅವರ ಸಾಧನೆ—ಸೇವೆಗಳು ಆಚಂದ್ರಾರ್ಕ; ಅವರ ಕೀರ್ತಿ ಅಜರಾಮರ. ಶ್ರೀ ನಾಯಕರ ವ್ಯಾಪ್ತಿ ಇಷ್ಟು ಇಲ್ಲ. "ಸ್ವದೇಶೇ ಪೂಜ್ಯತೇ ರಾಜಾ" ಎಂಬಂತೆ ಕರ್ನಾಟಕದ ಜನ ಅವರನ್ನು ಪೂಜಿಸಿದರು; ಗೌರವಿಸಿದರು. ಅವರ ಕ್ಷೇತ್ರವೂ ಪ್ರಧಾನವಾಗಿ ಕರ್ನಾಟಕ ಮಾತ್ರವೇ ಇತ್ತು. ಈ ಇಬ್ಬರ ಮಹಾಶಯರು ಇನ್ನೂ ಕೆಲಕಾಲ ಬದುಕಿದ್ದು ಇನ್ನೂ ಹೆಚ್ಚಿನ ಸೇವೆಯನ್ನು ನಾಡಿಗಾಗಿ ಸಲ್ಲಿಸಬಹುದಿತ್ತು. ಆದರೆ, ಹಾಗಾಗಲಿಲ್ಲ. ಅವರಿಬ್ಬರಿಗಳು ನಮಗೆ ಸಲ್ಲಿಸಿದ್ದ ಸೇವೆಗಳನ್ನು ಮೆಲುಕಾಡಿ ಅವರ್ಗೆ ಚಿರಶಾಂತಿ ಲಭ್ಯವಾಗಲೆಂದು ಈ ಸಂದರ್ಭದಲ್ಲಿ ಹಾರೈಸುವುದು ಕನ್ನಡಿಗನ ಪರಮ ಕರ್ತವ್ಯ.

ಒದೆತದೊಡನೆ ಎಚ್ಚರಿಕೆ

ಪ್ರಚಂಡ ಪರಾಭಂಜನದಿಂದ ಕಂಗೆಟ್ಟ ಪೂರ್ವ ಪಾಕಿಸ್ತಾನವನ್ನು ಅಧ್ಯಕ್ಷ ಅಯ್ಯೂಬರೂ ಮುಲತಾಯಿ ಮಗುವಿನಂತೆ ನೋಡುತ್ತಾರೆಂದು ಕಾಣುತ್ತದೆ. ಎರಡು ಲಕ್ಷ ಪಾಕ್ ಪ್ರಜೆಗಳು ಸಾಮೂಹಿಕ ಸಮಾಧಿ ಹೊಂದಿದರೆಂದ ಅಧಿಕೃತ ವರದಿಯೇ ಘೋಷಿಸಿದೆ. ಬಿರುಗಾಳಿಯಿಂದ, ನಿರ್ಗತಿಕರಾಗಿ ಕಾಲೆರಾಕ್ಕೆ ಗುರಿಯಾದವರು ಬೇರೆ, ಪರಿಹಾರ ಕಾರ್ಯವನ್ನು ತೀವ್ರಗೊಳಿಸದೆ ಹೋದರೆ, ಕಾಲೆರಾ ಇನ್ನೂ ಪ್ರಖರವಾಗಿ ಹರಡುವುದ ಎಂದು ಹೇಳಲಾಗಿದೆ. ತನ್ನ ನೆರೆಯ ರಾಜ್ಯವೊಂದು ಈ ರೀತಿ ಕಷ್ಟಕ್ಕೆ ಗುರಿಯಾದುದರಿಂದ ಮನಕರಗಿದ ಭಾರತವು ನಗದಿ ಸಹಾಯ ನೀಡಿತು; ಎರಡು ಸಂಚಾರಿ ಆಸ್ಪತ್ರೆಗಳನ್ನು ನೀಡಲು ಮುಂದೆ ಬಂತು. ತನ್ನ ಪ್ರದೇಶದ ಮೇಲೆ ಮಾತ್ರ ವಿಮಾನ ಹಾರಾಟಕ್ಕೆ ಪರವಾನಿಗೆ ನೀಡಿತು. ಆದರೆ, ಪಾಕಿಸ್ತಾನವು ಭಾರತವು ನೀಡಬಯಸಿದ್ದ ಆಸ್ಪತ್ರೆಗಳನ್ನು ಸ್ಪಷ್ಟವಾಗಿ ನಿರಾಕರಿಸಿತು. ಅಧ್ಯಕ್ಷ ಯಾಹ್ಯಾಖಾನರು ಅಮೆರಿಕೆ, ಬ್ರಿಟನ್‌ಗಳ ತಂಡಗಳಿಂದ ಪರಿಹಾರ ಕಾರ್ಯವನ್ನು ಮಾಡಿಸಲು ಒಪ್ಪಿಗೆ ನೀಡಿದರೇ ಭಾರತೀಯರಿಗೆ ತಮ್ಮ (ನೆರೆ) ದೇಶದವರ ಸೇವೆ ಮಾಡುವ ಅವಕಾಶ ಕೊಡಲು ಹಿಂಜರಿದದ್ದು ಲೋಕವನ್ನೇ ಬೆರಗುಗೊಳಿಸಿದೆ. ಈ ಮೂಲಕ ಭಾರತವನ್ನು ಅಪಮಾನ ಮಾಡಲು ಅವರು ಮುಂದುವರಿದುದು. ಅವರ ಅಂತ್ಯವನ್ನು ತೊರಗೆಡಹುತ್ತವೆ. ಭಾರತ ದೊಡನೆ ಪರ ಸಂಬಂಧವನ್ನು ಸಾಧಿಸಬಯಸುತ್ತೇವೆಂದು ಹೇಳುತ್ತಲೇ ಅದನ್ನು ಕೆಡಿಸುವುದು ಪಾಕ್ ನಾಯಕರ ಹುಟ್ಟುಗುಣ. ಯಾಹ್ಯಾಖಾನರ ಕೃತಿ ಈ ಮಾಲೆಗೆ ಸೇರಿದ ಮತ್ತೊಂದು ಗಂಟು ಮಾತ್ರ. ಆದರೆ, ಪೂರ್ವ ಪಾಕಿಸ್ತಾನದ ನಾಯಕರು ತಮ್ಮ ಅಧ್ಯಕ್ಷರ ಈ ಕೃತಿಯನ್ನು ಬಹಿರಂಗವಾಗಿಯೇ ಖಂಡಿಸಿದ್ದಾರೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಆರಂಭದಿಂದಲೂ ಪೂರ್ವ ಪಾಕಿಸ್ತಾನವು ಭಾರತ ದ್ವೇಷ ನೀತಿಯನ್ನು ಮೆಚ್ಚುತ್ತಲೇ ಇರಲಿಲ್ಲ; ಪಶ್ಚಿಮ ಪಾಕಿಸ್ತಾನವೇ ಭಾರತ ವಿರೋಧಿ ನೀತಿಯ ಜನಕ ಮತ್ತು ಅದನ್ನು ಪೂರ್ವಭಾಗಕ್ಕೂ ಹರಡಿ ಜನಪ್ರಿಯ ಮಾಡಬಯಸಿತು. ಅದರ ಗುರಿಯೇನೂ ಮುಟ್ಟಲಿಲ್ಲವೆಂಬುದಕ್ಕೆ ಈ ಘಟನೆ ಸಾಕ್ಷಿ ಹೇಳುತ್ತದೆ. ಶ್ರೀ ಯಾಹ್ಯಾಖಾನರು ಭಾರತದ ನೈತಿಕೀಯ ನೆರವನ್ನು ತಿರಸ್ಕರಿಸಿದ್ದು ಪುಟ್ಟ ಘಟನೆಯಿರಬಹುದು. ಆದರೆ, ಅದು ಪಾಕಿಸ್ತಾನವು ಭಾರತವನ್ನು ಭಾರತೀಯರನ್ನೂ ಎಂದೂ ಮೆಚ್ಚುತ್ತಿಲ್ಲ; ಮೆಚ್ಚುವವರನ್ನು ಹಾಗೆ ಮಾಡಲು ಬಿಡುವುದಿಲ್ಲವೆಂಬುದನ್ನು ಲೋಕಕ್ಕೆ ಜಾಹೀರು ಮಾಡಿತು. ಇಂದು ನಮಗೊಂದು ಒದೆತ ನೀಡಿ ಕೊಟ್ಟ ಎಚ್ಚರಿಕೆ ಪಾಕ್ ಭಾರತ ನೀತಿಗೆ ಸ್ಪಷ್ಟ ವ್ಯಾಖ್ಯಾನ. ●

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಗೇಹರಾಜ್ಯದಲ್ಲಿ

ಪ್ರತಿಭಾಸಂಪನ್ನರು ಹತಪ್ರಭರು

"ನಮ್ಮಲ್ಲಿ ಬುದ್ಧಿವಂತರಿಗೆ, ಪ್ರತಿಭಾವಂತರಿಗೆ ಬೆಲೆಯಿಲ್ಲ. ಅದಕ್ಕೆಂದೇ ದೇಶದ ಪ್ರತಿಭೆ ಹೊರಗೆ ಹರಿಯುತ್ತಿದೆ."

"ಯಾಕೆ ಹಾಗೆಂತೀರಿ?"

"ನೋಡು, ಯಾರೋ ಒಬ್ಬ ರಾಜ್ಯಕೀಯ ಪುಢಾರಿ ಸತ್ತಾನಂತ್ರೆ...."

"ಹ್ಞಾಂ...."

"ಎರಡೋ ಮೂರೋ ದಿನಗಳ ಸೂತಕ ಆಚರಿಸುತ್ತೇವೆ; ಸರಕಾರಿ ಕಛೇರಿಗಳನ್ನು ಶಿಕ್ಷಣ ಸಂಸ್ಥೆ ಮೊದಲಾದುವನ್ನು ಮುಚ್ಚುತ್ತೇವೆ. ಕಾರ್ಮಿಕರಿಗೆ ವೇತನ ಸಮೇತ ರಜೆ ಘೋಷಿಸುತ್ತೇವೆ...."

"ಕೆಲವೊಮ್ಮೆ ವಿದೇಶೀ ರಾಜ್ಯಕಾರಣಿಗಳು ಸತ್ತಾಗಲೂ..."

"ಅವರ ಅಂತ್ಯ ಸಂಸ್ಕಾರದಲ್ಲಿ ದೇಶದ ರಾಜ್ಯಕೀಯ ಅಗ್ರ ಧುರೀಣರು ಭಾಗವಹಿಸುತ್ತಾರೆ...."

"ಹೌದೂರ್ರಿ..."

"ಆದರೆ, ಪ್ರತಿಭಾವಂತರಿಗೆ ಜೀವದಲ್ಲಿದ್ದಾಗಲೂ ಆದರ ನೀಡುವುದಿಲ್ಲ; ಸತ್ತ ಮೇಲೂ ಕೇಳುವವರಿಲ್ಲ..."

"ಅಲ್ಲಾರಿ, ಯಾಕೆ ಈ ಪ್ರಶ್ನೆ ಬಂತೂಂತ?'

"ನೋಡು, ಮೊನ್ನೆ ಡಾ| ಸಿ. ವಿ. ರಾಮನ್ ದಿವಂಗತರಾದರು..."

"ಓ, ಹಾಗೆ. ಅದು ಸರೀನ್ರಿ. ಪ್ರತಿಭಾವಂತರಿಗೆ ಮಾತಿನಲ್ಲೇ ದುಃಖ ವ್ಯಕ್ತಪಡಿಸಿದರು. ಮುಗೀತು...."

"ಡಾ| ರಾಮನ್ನರಂಥ ವಿಶ್ವಖ್ಯಾತಿಯ ವಿಜ್ಞಾನಿಗೆ ನಾವು ಸಲ್ಲಿಸಿದ ಗೌರವ ಸಾಕೆ?'

"ಅಲ್ಲಾರಿ, ಅವರಿಗೆ ಗೌರವ ಸಲ್ಲಿಸಿದ್ದರಿಂದ ಪುಢಾರಿಗಳಿಗೇನು ಲಾಭ?'

"ಲಾಭದ ಪ್ರಶ್ನೆ ಬಿಡು. ಭಾರತಾಂಬೆಯು ಈ ಶತಕದ ಬೆಳೆಸಿದ ಸತ್ಪುತ್ರನೊಬ್ಬನಿಗೆ ಎರಡು ನಿಮಿಷಗಳ ಮೌನ ಮಾತ್ರದಿಂದಲೇ ಅಂತ್ಯಗೌರವ ನೀಡಿದರೆ ಸಾಕೇನು..."

'ದುಃಖಕ್ಕೆ ಅಷ್ಟಾದರೂ ಮಾಡಿದ್ದರಿಂದ ತೃಪ್ತಿ ಪಡಬೇಕು"

"ಮತ್ತೆ ಮಾಡುವುದೇನು? ಏನೂ ಇಲ್ಲವೆನ್ನುವುದಕ್ಕಿಂತ ಇಷ್ಟಾದರೂ ಇದೆಯೆಂದು....'

'ಅದು ಸರೀನ್ರಿ. ಆದರೆ, ಒಂದು ನೀವು ಹೇಳಿದ್ದು ನಿಜ ಅನ್ನಿಸುತ್ತೆ. ಪ್ರತಿಭಾವಂತರು ನಮ್ಮ ದೇಶದಲ್ಲೇ ನಿಲ್ಲಬೇಕು; ಅವರ ಪ್ರತಿಭೆ ಇಲ್ಲೇ ಬೆಳಗಬೇಕು ಎನ್ನುವವರು ಬೆಳಗಲು ಅವಕಾಶವನ್ನೇ ನೀಡುವುದಿಲ್ಲ."

"ಗಿಡ ಸೂರ್ಯಕಿರಣಗಳನ್ನು ಅದರತ್ತ ಹೋಗುವಂತೆ ಬೇರು ನೀರನ್ನು ಹುಡುಕುತ್ತ ಹರಡುವಂತೆ ನಮ್ಮ ಪ್ರತಿಭಾಸಂಪನ್ನರು ಆಶ್ರಯ—ಅವಕಾಶವರಸುತ್ತ ಹೋಗುತ್ತಾರೆ."

"ಬೀಜ ಮೊಳಕೆ ಬರಬೇಕಾದರೆ, ನೀರು, ಗಾಳಿ, ಬೆಳಕುಗಳ ಅನುಕೂಲ ಆವಶ್ಯಕತೆಯಿದೆ. ಅವುಗಳಲ್ಲಿ ಒಂದಾದರೂ ಕಡಿಮೆಯಾದರೆ ಅವು ಮೊಳೆಯುವುದಿಲ್ಲ."

"ಮೊಳಕೆಯೂ ಸುದೃಢವಾಗುವುದಿಲ್ಲ."

"ಅದು ಸರೀನ್ರಿ...."

"ನೋಡು, ನನಗೊಂದು ಅನಿಸುತ್ತದೆ...."

"ಏನ್ರಿ?"

"ನಮ್ಮ ರಾಜ್ಯಕೀಯ ಪುಢಾರಿಗಳು ಉದ್ದೇಶಪೂರ್ವಕವಾಗೇ ಪ್ರತಿಭಾಸಂಪನ್ನರ ಪ್ರತಿಭೆಯನ್ನು ಅದುಮಿಡುತ್ತಾರೆ...."

"ಯಾಕೆ?"

"ಬೆಂಕಿಯಲ್ಲಿದ್ದರೂ ತನ್ನ ಸುಡುವ ಗುಣವನ್ನು ಬಿಡುವುದಿಲ್ಲ. ಅದು ವ್ಯಕ್ತವಾಯಿತೆಂದರೆ, ಸೂರ್ಯನ ಮುಂದೆ ನಕ್ಷತ್ರಗಳಂತೆ ಈ ಪುಢಾರಿಗಳ ಸ್ಥಾನಮಾನ ಇಳಿಕೆಯಾಗೇ ಬಿಡುತ್ತದೆ."

"ಆದಕ್ಕೆಂದೇ ಪ್ರತಿಭೆ ಹೊರ ಪಡದಂತೆ ಅವರಿಗೆ ಅವಕಾಶ ಉತ್ತೇಜನ ನಿರಾಕರಿಸುತ್ತಾರೆಂದು ಹೇಳುತ್ತೀರಾ?"

"ಅಲ್ಲವೇ ಮತ್ತೆ, ಶ್ರೀಸಾಮಾನ್ಯ ಪ್ರತಿಭಾಸಂಪನ್ನರು ಹಣೆ ಹಣೆ ಬಡಿದುಕೊಂಡು ಮರುಗುತ್ತ ಇಲ್ಲೇ ಕೊಳೆಯುತ್ತಾರೆ. ಸಂಪನ್ನ ಪ್ರತಿಭಾಸಂಪನ್ನರು ವಿದೇಶಗಮನಕ್ಕೆ ಹೊರಡುತ್ತಾರೆ."

"ಹಾಗೆ ಹೋದವರು ಹಿಂದೆ ಬರುವುದಕ್ಕೂ ಹಿಂಜರಿಯುತ್ತಾರೆ."

"ಹಾಗಿದ್ದರೂ ಪ್ರತಿಭೆ ಹರಿದು ಹೋಗುವುದರ ಬಗ್ಗೆ ರಾಜ್ಯಕೀಯ ಪುಢಾರಿಗಳು ಮೊಸಳೆ ಕಣ್ಣೀರು ಸುರಿಸುತ್ತಾರೆ."

"ಪ್ರತಿಭೆಗಳನ್ನು ಗುರುತಿಸುವುದೂ ಒಂದು ಪ್ರತಿಭೆ..."

'ಅದ್ದರಿಂದಲೇ ಐ.ಸಿ.ಎಸ್. ಅಧಿಕಾರಿಯಾಗಿದ್ದ ಶ್ರೀ ಚಂದ್ರಶೇಖರ ವೆಂಕಟ ರಾಮನ್ನರನ್ನು ಕಲ್ಕತ್ತ ವಿಶ್ವವಿದ್ಯಾಲಯದ ಸ್ಥಾನಪತಿ ಶ್ರೀ ಅಶುತೋಷ ಮುಖರ್ಜಿಯವರು ತಮ್ಮಲ್ಲಿಗೆ ಎಳೆದು ತಂದರು.'

'ಅವರಿಗೆ ಸೂಕ್ತ ಅವಕಾಶ ನೀಡಿದರು. ಆದರಿಂದ ಪ್ರತಿಭೆ ವ್ಯಕ್ತವಾಯಿತು; ಸೂರ್ಯನಂತೆ ದಿಙ್ಮಂಡಲಗಳನ್ನು ಬೆಳಗಿತು.'

(ಒಂಭತ್ತನೇ ಪುಟ ನೋಡಿರಿ)

ಸಂಸತ್ತಿನ ವಿಸರ್ಜನೆಗೆ ಕಾಲ ಅಪಕ್ವ

ಸಂಸತ್ತಿನ ಚಳಿಗಾಲದ ಅಧಿವೇಶನ ಮುಗಿಯುವಷ್ಟರಲ್ಲೇ ಪ್ರಧಾನಿ ಶ್ರೀಮತಿ ಗಾಂಧಿಯವರು ದೊಡ್ಡದೊಂದು ಪ್ರಶ್ನೆಯನ್ನು ಉತ್ತರಿಸಬೇಕು— ಸಾರ್ವತ್ರಿಕ ಚುನಾವಣೆಯನ್ನು ಅವರು ಎದುರಿಸಲು ಈಗಲೇ ಸಿದ್ಧರಿದ್ದಾರೆಯೋ, ಇಲ್ಲವೇ ಎಂದು.

ಪ್ರಧಾನಿಯವರೂ ಅವರ ಪಕ್ಷದ ಉನ್ನತ ನಾಯಕರೂ 'ಇಲ್ಲ'ವೆಂದು ಹೇಳುತ್ತಾರೆ. "ಸಂಸತ್ತನ್ನು ವಿಸರ್ಜಿಸುವ, ಸಾರ್ವತ್ರಿಕ ಚುನಾವಣೆಗಳನ್ನು ನಡೆಸುವ ಇಚ್ಛೆ ಸರಕಾರಕ್ಕೆ ಇಲ್ಲ" ಎಂದವರು ಹಲವು ಬಾರಿ ಸ್ಪಷ್ಟಗೊಳಿಸಿದ್ದಾರೆ. ಆದುದರಿಂದಲೇ ಚುನಾವಣೆ ನಡೆಯಲಿದೆ ಎಂಬ ಊಹಾಪೋಹಗಳಿಗೆ ಬೆಂಬಲ ಬರುತ್ತಿದೆ.

ಆಡಿದಂತೆ ನಡೆಯುವ ಚಟ ಭಾರತೀಯ ರಾಜ್ಯಕಾರಣಿಗಳಿಗೆ ದೂರದ ಮಾತು. ಮಹಾತ್ಮ ಗಾಂಧಿಯವರು ನಡೆದಂತೆ ಆಡಿದರು; ಆಡಿದಂತೆ ನಡೆದು ತೋರಿಸಿದರು. ಆದುದರಿಂದಲೇ ಅವರು ರಾಜ್ಯಕಾರಣಿಯೆಂಬ ಹೆಸರಿಗೆ ಅನರ್ಹರು; ಎಲ್ಲವನ್ನೂ ಎಲ್ಲರನ್ನೂ ಮೆಟ್ಟಿ ನಿಂತು ಹುತಾತ್ಮರಾದರು ಅವರು. ಅವರ ಚಿತೆಯು ಉರಿಯಾರುವುದಕ್ಕೆ ಮೊದಲೇ ಅವರ ತತ್ತ್ವಗಳು ಸುಟ್ಟು ಬೂದಿಯಾದುವು.

ಗಾಂಧೀವಾದ ನಿಶ್ಶಕ್ತರ ಹೋರಾಟಕ್ಕೆ ಮಾತ್ರ ಉಪಯುಕ್ತ. ಆಡಳಿತಕ್ಕೆ ಅವು ನಿರುಪಯುಕ್ತವೆಂದು ಸ್ವಾತಂತ್ರ್ಯೋತ್ತರ ಭಾರತದ ರಾಜ್ಯಕಾರಣಿಗಳು ತೋರಿಸಿಕೊಟ್ಟರು.

ಶ್ರೀಮತಿ ಗಾಂಧಿಯವರಾದರೂ ನೆಹರು ತತ್ತ್ವವನ್ನು ಹಿಡಿಯುತ್ತೇನೆಂದು ಉಗ್ಗಡಿಸುತ್ತಾರೆ; ನೆಹರು ಗಾಂಧಿ ತತ್ತ್ವವಾದಿಯೆಂದು ಹೇಳಿಕೊಂಡಿದ್ದಾರೆ. ಶ್ರೀಮತಿಯವರು ಗಾಂಧಿ ತತ್ತ್ವಗಳನ್ನು ಧೂಳೀಪಟ ಮಾಡಿ ಅದರ ನೆರಳನ್ನು ಆಶ್ರಯಿಸ ಹೊರಟಿದ್ದಾರೆ.

ಸಾರ್ವತ್ರಿಕ ಚುನಾವಣೆ ನಿಕಟ ಭವಿಷ್ಯದಲ್ಲೇ ನಡೆಯುತ್ತದೆ ಎನ್ನುತ್ತಾರೆ ಕೆಲವರು; ಇಲ್ಲವೆನ್ನುತ್ತಾರೆ ಮತ್ತೆ ಕೆಲವರು. ಶ್ರೀಮತಿ ಗಾಂಧಿಗೇ ಈ ಬಗ್ಗೆ ಖಚಿತ ಅಭಿಪ್ರಾಯವಿನ್ನೂ ಇಲ್ಲ. ತನಗೆ ಅನುಕೂಲ ಪರಿಸ್ಥಿತಿ ತಲೆದೋರಿದರೆ ಆಕೆ ಕೂಡಲೇ ಸಂಸತ್ತನ್ನು ವಿಸರ್ಜಿಸುವ ಸಲಹೆ ನೀಡುತ್ತಾರೆ; ರಾಷ್ಟ್ರಪತಿಯವರು ಕೊಟ್ಟಕ್ಷಣದಲ್ಲೇ ಆಸ್ಪತ್ರೆಯಲ್ಲೋ ಮತ್ತೆಲ್ಲೋ ಇದ್ದು ಸಹಿ ಹಾಕುತ್ತಾರೆ.

ಆದರೆ, ಶ್ರೀಮತಿ ಗಾಂಧಿಯವರು ತಳೆಯುವ ನಿಲುವೆಯು ರಾಜ್ಯಗಳ ರಾಜ್ಯಕೀಯವನ್ನು ಹೆಚ್ಚಾಗಿ ಹೊಂದಿಕೊಂಡಿದೆ. ರಾಜ್ಯ ರಾಜ್ಯಕೀಯದಲ್ಲಿ ತನ್ನ [illegible] ಅತಿ ಮುಂದಿದರೆ, ಆಕೆ ಉರುಳಿಸಿಯೇ ಬಿಡಬಹುದು. ದುರ್ದೈವದಿಂದ (ಆಕೆಗೆ) ಅಂತಹ ಅನುಕೂಲ ಪರಿಸ್ಥಿತಿ ಆಕೆಗೆ ಎಲ್ಲಿಯೂ ಕಂಡು ಬಂದಿಲ್ಲ. ಬರುವುದೂ ಸದ್ಯ ಸಾಧ್ಯವಿಲ್ಲ.

ಉತ್ತರ ಪ್ರದೇಶದಲ್ಲಿ [illegible] ಗಳಿಸಿಕೊಂಡ ಆ 'ಸಂಯುಕ್ತ' ದಳವನ್ನು ಮುರಿಯುವ ತಂತ್ರ ಹೂಡಿದ್ದಾರೆ. ಅದು ಸಫಲವಾಗುವ ಲಕ್ಷಣಗಳು ಇನ್ನೂ ಅಗೋಚರವೇ. ಅಜಾತಶತ್ರು ಶ್ರೀ ತ್ರಿಭುವನ ನಾರಾಯಣ ಸಿಂಗರು ತಮ್ಮ [illegible] ತೆರೆಗಳ ಮೇಲೂ ಕಟ್ಟಿದೆಯೆಂದ [illegible] ಸಮರ್ಥರಾದರೆ ಶ್ರೀಮತಿಯವರು ಕನಸಿನಲ್ಲೇ ಮಾಡಿಗೆಯುಂಡು ಅಜೀರ್ಣಕ್ಕೆ ಗುರಿಯಾಗಬೇಕು.

ಬಿಹಾರದಲ್ಲಿಯೂ (ಕಾ) ಸರಕಾರವೂ ಅಲುಗಾಡತೊಡಗಿದೆ. ಅನ್ಯ ಪಕ್ಷೀಯರಿಗಿಂತಲೂ ಸ್ವಪಕ್ಷೀಯರೇ ಆಕೆಗೆ ಎದುರು ನಿಂತಿದ್ದಾರೆ. ಚಿಂದಿಯನ್ನು ಆಕೆ ದಾರದಿಂದ ಹೊಲಿಯುವ ಹಲವು ಸಾಹಸ ತೋರಿಸಿದರೂ ಅವು ವಿಫಲವಾಗಿವೆ. ಆದುದರಿಂದ ಬಿಹಾರದ ರಾಜ್ಯಕೀಯವು ಆಕೆಗೆ ಎದುರಾಗಿ ಎದ್ದು ನಿಲ್ಲುವ ದಿನಗಳು ಬಹಳ ದೂರವಿಲ್ಲ. ಅಂದರೆ, ಉಳಿದವರು ಒಂದಾಗುತ್ತಾರೆಂದು ಅರ್ಥವಲ್ಲ. ಇದೊಂದೇ ಆಕೆಗಿರುವ ಬರಡ ಕಾಮಧೇನು.

ಪಶ್ಚಿಮ ಬಂಗಾಳದಲ್ಲಿ ರಾಜ್ಯಕೀಯವು ಪ್ರಜಾಸತ್ತೆಯ ಕತ್ತು ಹಿಸುಕಿಬಿಟ್ಟಿದೆ. ಶ್ರೀಮತಿ ಗಾಂಧಿಯವರ ರಾಜ್ಯಕೀಯ ದುರುದ್ದೇಶದ ಶಿಥಿಲತೆಯಿಂದಲೇ ಅದು ಹಿಂಸಾಸಾಗರವಾಗಿದೆ. ಆದುದರಿಂದಲೇ ಆಕೆಗೆ ಕೆಟ್ಟ ಹೆಸರು ಬಂದಿದೆ. ಇದನ್ನು ದೂರಮಾಡಲೆಂದೇ ಕಾನೂನಿನ ರಕ್ಷಾ ಪಡೆಯ ಬಲ ಆಕೆ ಮುಂದೆ ಬಂದು [illegible] ಅಧಿಕಾರ ಪಡೆದುಕೊಂಡಿದ್ದಾರೆ. ಇದನ್ನು ನೀಡಲು ಆಗಿಯೂ ಬೆಂಬಲಿಗರೇ ಹಿಂಜರಿದುದರಿಂದ ಪರಿಣಾಮ ಆಕೆಗೆ ನೆಟ್ಟಗಾಗದು.

ಅಸ್ಸಾಮದಲ್ಲಿ ಚಲಿಹಾರ ಉತ್ತರಾಧಿಕಾರಿಯಾಗಿ ಬಂದ ಚೌಧರಿಯವರ ಸಂಪುಟ ರಚನೆಯಲ್ಲಿ ಶ್ರೀಮತಿ ಹಸ್ತಕ್ಷೇಪ ಮಾಡಿದ್ದರು. ಇದು ಆಕೆಯ ಪಕ್ಷೀಯ

(ಹತ್ತನೇ ಪುಟ ನೋಡಿರಿ)

Gram : VISHWA | Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಚಾರುಚಯನ

ಪಾಕ್ ಚುನಾವಣೆಗೆ ಲಾಖೋ ಷಾಕೇಂ

ಪೂರ್ವ ಪಾಕಿಸ್ತಾನದಲ್ಲಿ ಭೀಕರ ಸುಂಟರಗಾಳಿ; ಬಂಗಾಳ ಉಪಸಾಗರದ ಕರಾವಳಿಯಲ್ಲಿ ತೆಂಗಿನೆತ್ತರದ ಅಲೆಗಳ ಧಾಳಿ.

ಲಕ್ಷಾಂತರ ಜನಗಳ ಮನೆಮಾರು ಮುಳುಗಿತು; ಪ್ರಾಣಕ್ಷಯವಾಯಿತು.

ಎಷ್ಟು ಜನ ನಿರಾಶ್ರಿತರಾದರು? ಇದು ಎಲ್ಲರೂ ಆಸಕ್ತಿ ತೋರಿಸಿ ಕೇಳುವ ಪ್ರಶ್ನೆ.

ಸುಮಾರು ಒಂದೂವರೆ ಲಕ್ಷ ಜನರು ಸುಂಟರಗಾಳಿ—ಅಲೆಗಳ ಧಾಳಿಗೆ ಬಲಿಯಾದರು— ಇದು ಅಧಿಕಾರಿ ವಲಯದ ಉತ್ತರ.

ಐದು ಲಕ್ಷಕ್ಕೂ ಮಿಕ್ಕಿದ್ದಾರೆ ಸತ್ತವರು— ಇದು ರಾಜತಾಂತ್ರಿಕರ ಅಂದಾಜು.

ಅಧಿಕಾರಿಗಳು ಅಲ್ಪಸಂಖ್ಯಾತರು; ರಾಜ್ಯತಾಂತ್ರಿಕರೇ ಉಳಿದವರು. ಆದ್ದರಿಂದ ಎರಡನೆಯ ಅಭಿಪ್ರಾಯವೇ ಸರಿಯೆನ್ನಬೇಕು. ಇದನ್ನು ಅಧಿಕಾರಾರೂಢರೂ ಅಧಿಕಾರೇತರರೂ ಏಕಸಮವಾಗಿ ತಮ್ಮ ಸ್ವಾರ್ಥಸಾಧನೆಗೆ ಬಳಸಿಕೊಳ್ಳಲು ತುಂಬ ಅನುಕೂಲ.

ದಂಡನಾಯಕ (ಅಧ್ಯಕ್ಷ) ಯಾಹ್ಯಾಖಾನರು ಪಾಕಿಗಳಿಗೆ ಷಾಕು ಬಡಿದಾಗ ಮಾವನ ಮನೆಯಲ್ಲಿ ಹಸ್ತಲಾಘವ ನೀಡಿ ಆದರಾತಿಥ್ಯ ಪಡೆಯುತ್ತಿದ್ದರು. ರೋಮ್ ನಗರ ಉರಿಯುತ್ತಿದ್ದಾಗ ಅಲ್ಲಿನ ರಾಜ ಪಿಟೀಲನ್ನು ಬಾರಿಸುತ್ತಿದ್ದನಂತೆ. ಅಲ್ಲಿ ಏನು ತನಗೆ ಯಾಕೆ ಹೋಗಬೇಕ? ಸೆಟ್ಟಿ ಸಿಂಗಾರವಾಗುವಾಗ ಶತ್ರುಗಳದ್ದೇ ಮೇಲುಗೈಯಾಗಲಿಲ್ಲವೆ?

ಯಾಹ್ಯಾಖಾನರು ಸ್ವದೇಶಕ್ಕೆ ಮರಳಿದ್ದರೆ, ಬಿರುಗಾಳಿ ತಡೆಯುತ್ತಿತ್ತೆ? ಅಲೆಗಳ ಹೊಡೆತ ತಪ್ಪುತ್ತಿತ್ತೆ? ಯಾಹ್ಯಾಖಾನರೇನು ಮಧ್ವಾಚಾರ್ಯರಲ್ಲವಲ್ಲ? ಮತ್ತವರು ಎಲ್ಲಿದ್ದರೇನು?

ಬಿರುಗಾಳಿ—ಕಡಲಲೆಗಳ ಮೇಲೆ ತಮ್ಮ ಪ್ರಭುತ್ವವಿಲ್ಲವೆಂಬುದು ಯಾಹ್ಯಾಖಾನರಿಗೆ ತಿಳಿದಿದೆ; ಇಲ್ಲವಾದರೆ, ಅವನ್ನು ಸ್ಥಗಿತಗೊಳಿಸಲು ಸುಗ್ರೀವಾಜ್ಞೆ ನೀಡುತ್ತಿದ್ದರೋ ಏನೋ!

ಆದದ್ದು ಆಗಿ ಹೋಯ್ತು. ಮುಂದೆ ಪರಿಹಾರದ ಕಾರ್ಯ.

ಒಂದೂವರೆಯೋ ಐದೋ ಲಕ್ಷ ನಿರ್ಗತಿಕರ ಪುನರ್ವಸತಿ ಸಾಮಾನ್ಯ ಪ್ರಶ್ನೆಯಲ್ಲ.

ಪಾಕಿಸ್ತಾನದ ಹತ್ತಿರದ ಮಿತ್ರ ದೇಶ ಭಾರತವೇ ಒಂದು ಕೋಟಿ ರೂಪಾಯಿಗಳನ್ನು ಪರಿಹಾರ ಕಾರ್ಯಕ್ಕೆಂದು ನೀಡಿತು. ಎಲ್ಲಿಂದ ಏನು ದೊರೆತರೂ ಎರಡೂ ಕೈಯೊಡ್ಡಿ ಸ್ವೀಕರಿಸುವ ಯಾಹ್ಯಾಖಾನರಿಗೆ ತಿರುಪತಿ ದೇವರ ಗಂಟು ದಕ್ಕಿತು.

ಪರಿಹಾರ ಕಾರ್ಯದಲ್ಲಿ ನಿಧಾನವಾಗುತ್ತಿದೆ — ಇದು ರಾಜ್ಯತಾಂತ್ರಿಕರ ದೂರು.

ಸರಕಾರಿ ಅಧಿಕಾರಿಗಳು ಪರಿಹಾರ ಕಾರ್ಯದಲ್ಲಿ ಸಹಕಾರ ನೀಡುತ್ತಿಲ್ಲ—ಇದು ಆಡಳಿತಾಧಿಕಾರಿಗಳ ಮೇಲೆ ಎಸೆದ ಚುನಾವಣಾ ಬಾಂಬು. ಯಾಹ್ಯಾಖಾನರು ತನ್ನ ಸಮರ್ಥತೆಯ ಮೇಲೆ ಬಿದ್ದ ಈ ಬಾಂಬನ್ನು ಸಿಡಿಯುವುದಕ್ಕೆ ಮೊದಲೇ ವಿರೋಧಿಗಳ ಮೇಲೆಯೇ ಎಸೆಯುತ್ತಿರುವುದರಿಂದ ಈ ಬಾಂಬು ಹೈಡ್ರೋಜನ್—ನ್ಯೂಟ್ರಾನ್ ಬಾಂಬುಗಳಿಗೆ ಮಿಗಿಲಾದರೂ ಸ್ಫೋಟಗೊಳ್ಳುವುದಿಲ್ಲ. ಆದ್ದರಿಂದ ಇದರ ಪ್ರಯೋಜನವನ್ನು ತಾನೇ ಪಡೆಯಲು ಕಾದಿಗಾಲಲ್ಲಿ ನಿಂತಿದ್ದಾರೆ.

ಸತ್ತವರ ಸಂಖ್ಯೆಯಲ್ಲೇ ರಾಜ್ಯಕೀಯ ಇಣಿಕಿನೋಡಿದೆ — ಒಂದೂವರೆಯೆಷ್ಟ? ಐದು ಎಷ್ಟ? ನಿರ್ಗತಿಕರ ಸಂಖ್ಯೆಯಲ್ಲಿ ಇದು ದ್ವೈತವಾಗಿ ಬೆಳೆದು ಬಂದಿದೆ; ಪರಿಹಾರ ಕಾರ್ಯದಲ್ಲಿ ಅಜೇಯವಾಗಿ ನಿಂತಿದೆ.

ರಾಜ್ಯತಾಂತ್ರಿಕರಲ್ಲಿ ವಿರೋಧಿಗಳು ಇದಕ್ಕೆಲ್ಲಾ ಯಾಹ್ಯಾಖಾನರ ಅಸಮರ್ಥತೆಯೇ ಕಾರಣವೆಂದು ದೊಟ್ಟು ಮಾಡುತ್ತಾರೆ. ಅವರ ಬೂಟಾಟಿಕೆಯು ಕೂಡ ಪಶ್ಚಿಮ ಪಾಕಿಸ್ತಾನವನ್ನು ನುಂಗಲು ಬಂದಿತು ಎನ್ನುತ್ತಾರೆ. ಪಾಪ ಆಗ ಲಕ್ಷ್ಯ ಈ ದೀರ್ಘ ನಿದ್ರೆ ಮಾಡುತ್ತಿದ್ದ!

ಪರಿಹಾರ ಕಾರ್ಯದಲ್ಲೂ ಯಾಹ್ಯಾಖಾನರು ರಾಜ್ಯಕೀಯ ತೋರಿಸುತ್ತಾರೆ. ತನ್ನವರಿಗೆ ಮಾತ್ರ ತುರ್ತು ನೆರವು ನೀಡುತ್ತಾರೆಂದು ದೂರುತ್ತಾರೆ.

ಇದು ಅವರ ನೀತಿ-ವಿರೋಧಿ ಧರ್ಮ.

ಯಾಹ್ಯಾಖಾನರನ್ನುತ್ತಾರೆ—ಪ್ರಕೃತಿಯ ವಿರೋಧ ಮಾನವಶಕ್ತಿ ಬಾಹಿರ. ಅಸಂಖ್ಯಾತ ನಿರ್ಗತಿಕರ ಪರಿಹಾರ ಕಾರ್ಯ ಚಿಟಿಕೆ ಹೊಡೆದಂತಲ್ಲ. ಎಲ್ಲವೂ ಸಾಂಗವಾಗೇ ನಡೆಯುತ್ತಿದೆ.

ನಿರ್ಗತಿಕ ಪಾಕಿಗಳ ಪರಿಹಾರ ಕಾರ್ಯದಲ್ಲಿ ಅಮೇರಿಕೆ ಮತ್ತು ಬ್ರಿಟನ್ನುಗಳು ತುಂಬ ಕಾಳಜಿ ವಹಿಸಿವೆ— ಅಲ್ಲಿಂದ ಪರಿಹಾರತಂಡಗಳು ಬಂದಿಳಿದಿವೆ; ತಮ್ಮ ಕಾರ್ಯತತ್ಪರರಾಗಿವೆ.

ಕ್ರಮೇಣ ರಶ್ಯ—ಚೀನಾಗಳು ಬಂದರೂ ಬರಬಹುದು. ಅವಕಾಶ ನೀಡಿದರೆ, ಕೆಂಪು ಚೀನ ಬಂದೇ ಬರುತ್ತದೆ.

ಪಶ್ಚಿಮ ಬಂಗಾಳದಲ್ಲಿ ತಾನು ಬಿತ್ತಿದ್ದ ವಿಷಬೀಜ ಮೊಳಕೆ ಬಂದು ಗಿಡವಾಗಿರುವಾಗ ಅದಕ್ಕೆ ನೀರು-ಗೊಬ್ಬರ ಸುರಿಯಲು ಇದಕ್ಕಿಂತ ಉತ್ತಮ ಅವಕಾಶ ಪಕ್ಕನೆ ಬೇರೊಂದು ಸಿಗಲಾರದು.

ಯಾಹ್ಯಾಖಾನರು ಈ ವರ್ಷ ಚುನಾವಣೆ ನಡೆಸಲು ನಿರ್ಧರಿಸಿದ್ದರು. ನಾಮಪತ್ರಗಳನ್ನೂ ಕರೆದಿದ್ದರು. ಆದರೆ, ಪಾಕಿಸ್ತಾನದ ಪ್ರಾಕೃತಿಕ ದುರಂತದಿಂದ ಚುನಾವಣೆಯನ್ನು ಮುಂದೂಡದೆ ಉಪಾಯವಿದೆಯೇ? ಸಾವಿನ ಮನೆಯಲ್ಲಿ ಮೀಸೆ ಸೂಡುವರೆ?

ಪಾಪಿ ಹೋದಲ್ಲಿ ಮೊಣಕಾಲು ನೀರು ಎಂಬುದು ಹಳೆಯ ಗಾದೆ. ಮುದುಕನ ಮದುವೆಗೆ ಮುನ್ನೂರು ವಿಘ್ನ—ಇದು ಗತಶತಮಾನದ ಹೇಳಿಕೆ.

"ಪಾಕ್ ಚುನಾವಣೆಗೆ ಲಾಖೋ ಷಾಕೇ" ಎಂದು ಗತದ್ವಿಶತಕದ ಅನುಭವ.

ಸ್ವತಂತ್ರವಾದ ಇಷ್ಟು ವರ್ಷಗಳಲ್ಲಿ ಒಂದಾದರೂ ಸಾರ್ವತ್ರಿಕ ಚುನಾವಣೆ ಅಲ್ಲಿ ನಡೆಯಲಿಲ್ಲ. ನಡೆಯಬೇಕು—ನಡೆಯಲಿದೆ — ನಡೆಯುತ್ತದೆ ಎಂದಾಗಲೇ ಏನಾದರೂ ತಕರಾರು ತಾನೇತಾನಾಗಿ ಎದ್ದು ಬಿಡುತ್ತದೆ.

"ಭಾರತೀಯರು ಸ್ವಾತಂತ್ರ್ಯಕ್ಕೆ ಅನರ್ಹರು" ಎಂಬ ಬಿಳಿಯರಾಡಿದ ಮಾತನ್ನು ಪಾಕಿಸ್ತಾನಿಗಳು ಯಥಾರ್ಥ ಮಾಡಿ ತೋರಿಸ ಹೊರಟಿದ್ದಾರೆಯೇ ಎಂಬ ಸಂದೇಹ ಬರುತ್ತದೆ.

ಅಂತೂ ಸದ್ಯಕ್ಕೆ ಚುನಾವಣೆ ಅಲ್ಲಿ ನಡೆಯುವುದಿಲ್ಲ. ಯಾಹ್ಯಾಖಾನರು ತನ್ನ ಸರ್ವಾಧಿಕಾರದ ದಿನಗಳನ್ನು ಮುಂದುವರಿಸುವ ಬಗ್ಗೆ ಆಜ್ಞೆ ಹೊರಡಿಸುತ್ತಾರೆ.

ವಿರೋಧಿಗಳು ಅವರನ್ನೂ ಅವರ ಆಡಳಿತವನ್ನೂ ಪರಿಹಾರ ಕಾರ್ಯವನ್ನೂ ನಿಂದಿಸುತ್ತಲೇ ಇನ್ನಷ್ಟು ಬಹುಕಾಲ ಅಸ್ಪೃಶ್ಯರಾಗೇ ಉಳಿಯುತ್ತಾರೆ.

Phone: 526 **NAVAYUGA** P. B. No. 22

ILLUSTRATED KANNADA WEEKLY,

UDIPI-1, S. K.

We are in an era in which the right sort of publicity is required for all our efforts towards building and strengthening our nation; and we believe, and rightly too, that the newspapers of the land must play a dominant role in such an endeavour to ensure the progress of the nation.

Your popular weekly, 'Navayuga' founded as far back as 1921, by the late Hon'ble Sri A. B. Shetty, a leader of no mean reputation, has played its part for fifty years now in instilling in its reader's minds a broad and generous attitude, as well as, the right sense of the values of Life, accademic or cultural. It has carried and shall carry on this message of the founder of the nation and his worthy followers to all the corners of 'Karnataka'—'Mysore'.

As usual, the Republic Day Issue is going to be published on 26th Jan. 1971, and we propose to publish a large number of articles on the various aspects of our political life and cultural heritage from noted writers, so that, we can inculcate in our reading public a right approach to our problems. Side by side, we cannot ignore our responsibility to publicize the wares of different industries, which have to be the backbone of our life, and hence, shall we request you to send your valuable advertisements as early as possible. Your message shall reach the nook and corner of all Mysore and cover the other states too; and we are sure, you will give the paper the opportunity of serving you and others too through its columns with added zeal and fervour of serving one and all.

Kindly send in your advertisement matter so as to reach us by the 10th January 1971 at the latest.

ADVERTISE IN NAVAYUGA

REPUBLIC DAY SPECIAL

1971

AN INVESTMENT WHICH PAYS

ನಗೆಗಡಲು

ಒಬ್ಬಳು ಇಪ್ಪತ್ತರ ಹುಡುಗಿ ಅರುವತ್ತು ವರ್ಷದ ಮುದುಕನನ್ನು ಮದುವೆಯಾದಳು. ಈ ಮದುವೆಯ ನಂತರ ಆಕೆಯ ಸ್ನೇಹಿತೆಯರಲ್ಲಿ ಇಬ್ಬರ ನಡುವೆ ಈ ರೀತಿ ಮಾತುಕತೆ ನಡೆಯಿತು:

ಒಬ್ಬಾಕೆ: ಪಾಪ, ಅತನನ್ನು ಮದುವೆಯಾಗಿ ಆಕೆ ಭಾರೀ ಮೋಸಹೋದಳು.

ಇನ್ನೊಬ್ಬಾಕೆ:— ಯಾಕೆ, ಆ ಮುದುಕನೊಡನೆ ಬೇಕಾದಷ್ಟು ಹಣವಿರಲಿಲ್ಲವೇನು?

ಮೊದಲಿನವಳು:- ಅದನ್ನೇನು ಹೇಳುವುದು? ಹಣವೇನೋ ಕಾಲ ಕಸದಂತೆ ಬಿದ್ದುಕೊಂಡಿದೆ. ಆದರೆ…,

ಎರಡನೆಯವಳು—ಆದರೇನು?

ಮೊದಲನೆಯವಳು—ಅತ ಹೇಳಿದ್ದಕ್ಕಿಂತ ಇಪ್ಪತ್ತು ವರ್ಷದಷ್ಟು ಚಿಕ್ಕವ!

o o o

ಒಬ್ಬ—ಮದುವೆಯಾಗದವನಿಗೆ ತನ್ನ ಚಿಂತೆಗಳಲ್ಲಿ ಪಾಲುಗೊಳ್ಳುವವರು ಯಾರೂ ಇಲ್ಲ.

ವಿವಾಹಿತ— ಮದುವೆಯಾಗದವನಿಗೆ ಚಿಂತೆಯಾದರೂ ಎಲ್ಲಿಂದ ಬರಬೇಕು?

o o o

ಪ್ರೊಫೆಸರ—ನೀನ ನನ್ನ ಕ್ಲಾಸಿನಲ್ಲಿ ನಿದ್ರೆ ಮಾಡುತ್ತೀಯೇನು?

ವಿದ್ಯಾರ್ಥಿ—ನಿಮ್ಮ ಸ್ವರ ಸ್ವಲ್ಪ ಮೆತ್ತಗಿರುತ್ತಿದ್ದರೆ ಖಂಡಿತಕ್ಕೂ ಹಾಗೇ ಮಾಡುತ್ತಿದ್ದೆ, ಸರ್.

o o o

ಕರ್ತಾರನ ಕಮ್ಮಟದಲ್ಲಿ ಕಳಪೆಯೆಂಬುದಿಲ್ಲ

ಪ್ರಪಂಚವೆಂಬುದು ಕರ್ತಾರನ ಕಮ್ಮಟ. ವಿಚಿತ್ರಾತಿವಿಚಿತ್ರಗಳ ಗುಮ್ಮಟ. ಇಲ್ಲಿನ ವ್ಯಕ್ತಿವ್ಯಕ್ತಿಯಲ್ಲಿ, ಪ್ರಾಣಿಪ್ರಾಣಿಯಲ್ಲಿ ನೆಲನೆಲದಲ್ಲಿ ವಸ್ತುವಸ್ತುವಿನಲ್ಲಿ ರೂಪ-ಬಣ್ಣ-ಆಕೃತಿ-ಸ್ವರ-ರುಚಿ ಮೊದಲಾದ ಭಿನ್ನತೆಯಿದೆ. ಈ ಬಗೆಯ ಭಿನ್ನತೆ ಮೌಲಿಕವಾಗಿದ್ದು, ಇದರಿಂದಲೇ "ವಸ್ತು"ವನ್ನು ಗುರುತಿಸುವುದು ಸಾಧ್ಯವಾಗುತ್ತದೆ.

ಮಾನವ ರುಚಿ—ಮಾನ್ಯತೆಗಳ ಆಧಾರದಿಂದ ಕಾಲಕಾಲದಲ್ಲಿ ಒಳಿತು ಕೆಡುಕುಗಳು ತಲೆದೋರುತ್ತವೆ. ದೇಶ—ಕಾಲ—ಪರಿಸ್ಥಿತಿಗಳಿಂದ ಅಪ್ರಭಾವಿತ "ವಸ್ತು"ಗಳೂ ಇಲ್ಲದಿಲ್ಲ. ಕೆಡುಕುಗಳಲ್ಲಿ ಕೆಲವು ಎಲ್ಲ ಕಾಲದಲ್ಲೂ ಕೆಡುಕೆಂದೇ ಪರಿಗಣಿಸಲ್ಪಡುತ್ತವೆ; ಹಾಗೆಯೇ ಚಿರಕಾಲವೂ ಒಳಿತೆಂದು ಕೆಲವನ್ನು ಕರೆಯುತ್ತೇವೆ. ಒಳಿತು—ಕೆಡುಕುಗಳ ಸಂಬಂಧ ಜೋಡಣೆಯಂತಿದೆ. ಒಬ್ಬನೇ ವ್ಯಕ್ತಿಯಲ್ಲಿ ಕೆಲವು ಒಳಿತುಗಳೂ ಇನ್ನು ಕೆಲವು ಕೆಡುಕುಗಳೂ ಇದ್ದೇ ಇವೆ. ನೀರಿದ್ದಲ್ಲಿ ಕೆಸರು, ಊರಿದ್ದಲ್ಲಿ ಹೊಲಗೇರಿ ಎಂದು ಮುಂತಾದ ಗಾದೆಯ ಮಾತುಗಳು ಇದನ್ನೇ ಅಭಿವ್ಯಕ್ತಗೊಳಿಸುತ್ತವೆ. ಇದರಿಂದಾಗಿ ಒಳ್ಳೆಯವನು ಕೆಡುಕನಾಗುವುದೂ ಕೆಡುಕನು ಒಳ್ಳೆಯವನಾಗುವುದೂ ಅಸಾಧ್ಯವೇನಲ್ಲ. "ಕಪ್ಪು ನಾಯಿಯನ್ನು ಬಿಳಿ ಮಾಡಲಾಗದು" ಎಂದವರೇ "ಸಾಧಿಸಿದರೆ ಸಬಳ ನುಂಗಬಹುದು." ಎಂದಿದ್ದಾರೆ. ಒಳಿತು ಕೆಡುಕುಗಳ ಸಂಮಿಶ್ರಣದಿಂದ ವ್ಯಕ್ತಿ ಸರ್ವಕಾಲಕ್ಕೂ ಒಳ್ಳೆಯವನಾಗಿಯೇ ಉಳಿಯುತ್ತಾನೆ ಎಂದಾಗಲೀ ಕೆಟ್ಟವನಾಗೇ ಇರುತ್ತಾನೆಂದಾಗಲೀ ಅನ್ನುವುದು ಸತ್ಯಕ್ಕೆ ದೂರವಾದ ಮಾತು.

ಭಾರತೀಯ ಮಹರ್ಷಿಗಳು ಮಾನವ ವೃತ್ತಿ ಮತ್ತು ಪ್ರವೃತ್ತಿಗಳನ್ನು ಎರಡು ವಿಧಗಳಲ್ಲಿ ವಿಂಗಡಿಸಿದರು. ಮೊದಲನೆಯದು ದೈವೀ, ಎರಡನೆಯದು ಅಸುರೀ. ದೈವೀ ಮತ್ತು ಅಸುರಿಗಳ ನಡುವಿನ (ಸಂಘರ್ಷ)ವೇ ಕಾದ್ದರಿಂದ ಎರಡಿದ್ದ ವಿಭಜನೆ ಮಾಡಿ—ಸತ್ವ, ರಜ ಮತ್ತು ತಮವೆಂದಿದನ್ನವರು ಕರೆದರು. ಪ್ರಕೃತಿಯಲ್ಲೇ ಒಳಿತು ಕೆಡುಕುಗಳ ಚಕ್ರ ತಿರುಗುತ್ತಲೇ ಇದೆ. "ದೇವಾಸುರ ಯುದ್ಧ"ವೆನ್ನುವ ನಮ್ಮ ಹಿರಿಯರ ಕಲ್ಪನೆ ಇದಕ್ಕಿಂತ ಭಿನ್ನವಾದುದಲ್ಲ.

ದುಷ್ಟ ಮನುಷ್ಯರೆಂದು ನಾವು ಕೆಲವರನ್ನು ಕರೆಯುತ್ತೇವೆ. ಅವರಲ್ಲಿಯೂ ಕೆಲವಾದರೂ ಸದ್ಗುಣಗಳು—ದೈವೀಪ್ರವೃತ್ತಿ—ಇದ್ದೇ ಇವೆ. ಆದುದರಿಂದಲೇ ಸರ್ವಜ್ಞ ಅಂದಿದ್ದಾನೆ — "ಒಳ್ಳೆದರ ಒಡನಿರ್ದ ಕಳ್ಳನೊಳ್ಳೆದನಕ್ಕು" ಎಂದು. ಸಜ್ಜನರ ಸಹವಾಸ, ಸತ್ಸಂಗಗಳಿಂದ ದುಷ್ಟನೂ ಶಿಷ್ಟನಾಗುವುದುಂಟು. ಗೌತಮ ಬುದ್ಧನ ಸಂಗತಿಯಿಂದ ಅಂಗುಲಿಮಾಲನಂತಹ ಅನೇಕರು ಶಿಷ್ಟರಾದರೆಂದು ಕೇಳಿದ್ದೇವೆ. ಅಂದರೆ ದುಷ್ಟರಲ್ಲೂ ಸತ್ವಭಾವವಿದ್ದು, ಅದು ಅಜ್ಞಾನದಿಂದ ಆಚ್ಛಾದಿತವಾಗಿದ್ದು, ನಿಮಿತ್ತಾಂತರದಿಂದ ಅಜ್ಞಾನ ಪರದೆಯು ಕಳಚಿಕೊಂಡಾಗ, ಸತ್ವಭಾವವು ಪ್ರಜ್ವಲಿಸುತ್ತದೆ ಎಂದು ತಿಳಿಯಬಹುದು. ಆದುದರಿಂದಲೇ ಮಹಾತ್ಮರು ಪಾಪಿಗಳನ್ನು ತಿರಸ್ಕರಿಸುವುದಿಲ್ಲ. ಮಧ್ಯಪ್ರದೇಶದ ದರೋಡೆಕೋರರನ್ನೂ ಆಚಾರ್ಯ ವಿನೋಬಾ ಮಾನವರೆಂದೇ ತಿಳಿದಿದ್ದಾರೆ. "ಇವನಾರವ, ಇವನಾರವ ಇವನಾರವನೆನ್ನದಿರಯ್ಯ" ಎಂದು ಉಪದೇಶ ನೀಡಿದ್ದಾರೆ, ಶ್ರೀ ಬಸವಣ್ಣನವರು. ಜನತೆಯಲ್ಲಿ ಸುಪ್ತವಾಗಿರುವ ಸತ್ಪ್ರವೃತ್ತಿಗಳನ್ನು ಜಾಗ್ರತಗೊಳಿಸ ವಲ್ಲ ಮಹಾಪುರುಷರು ತಮ್ಮ ಆದರ್ಶ ನಿಡಿದ್ದಾರೆ; ಸಾಧನಾಪಥಗಾಮಿಯಾಗಿದ್ದಾರೆ.

ಸಾಧಕನ ಮೌನವು ಅಸಾಧಕನ ವಾಚಾಲತನಕ್ಕಿಂತ ಪ್ರಭಾವಶಾಲಿ. ಆತನ ಪವಿತ್ರ ಜೀವನದಿಂದ ಇತರರ ಹೃದಯದಲ್ಲಿ ಪವಿತ್ರ—ಆದರ್ಶ ಭಾವ ಮೂಡುತ್ತದೆ. ನಂಬಿದವರಿಗೆ ಮಸಣವೂ ಸಗ್ಗ. ಅಂತಹ ಭಾವವೊಮ್ಮೆ ಮೂಡಿದ ಮೇಲೆ, ಅವರ ಮಾತು ಮಾತು ಇಂದ್ರಜಾಲದಂತೆ ಪ್ರಭಾವ ಬೀರುತ್ತದೆ. ಹಿಂದೆ ಹೇಳಿದ ಅಂಗುಲಿಮಾಲ, ಅವನಂತಹ ನೂರಾರು ಆಸುರ ಪ್ರವೃತ್ತಿಯವರು ಸಜ್ಜನರಾದ ಉದಾಹರಣೆಗಳುಂಟು, ಮಹಾತ್ಮರ ದರ್ಶನ—ಉಪದೇಶಗಳಿಂದ ಅವರ ಜೀವನದ ಘಟನಾವಳಿಗಳಿಂದ ಇತರರ ಹೃದಯದಲ್ಲಿ ಪರಿವರ್ತನೆ ಆಗೇ ಆಗುತ್ತದೆ.

ಈ ಶತಮಾನದಲ್ಲಿ ಮಹಾತ್ಮಾಗಾಂಧಿಯವರಂತಹ ಅವತಾರ ಪುರುಷರು ಇದ್ದರು. ಅಹಿಂಸೆ, ಸತ್ಯ ಸೇವೆಗಳ ಮೂಲಕ ಕೋಟ್ಯಂತರ ಅನುಯಾಯಿಗಳನ್ನು ಅವರು ಹೊಂದಿದರು. ಅವರು ಸಂಕೇತ ಮಾಡುವುದೇ ತಡ, ಸ್ವರಾಜ್ಯ ಪಡೆಯುವ ಘನೋದ್ದೇಶಕ್ಕಾಗಿ ಪ್ರಾಣ ತ್ಯಜಿಸಲು ಲಕ್ಷಾಂತರ ವ್ಯಕ್ತಿಗಳು ತುದಿಗಾಲಲ್ಲಿ ನಿಲ್ಲುತ್ತಿದ್ದರು. ಇಂದಿಗೂ ವಿನೋಬಾ ಭಾವೆಯವರು ಮಾನವನಲ್ಲಿ ಸತ್-ಪ್ರವೃತ್ತಿ ಇದೆಯೆಂದು ನಂಬಿದ್ದಾರೆ. ಲಕ್ಷಾಂತರ ವ್ಯಕ್ತಿಗಳ ಪ್ರೇರಣಾಬಿಂದುವಾಗಿದ್ದಾರೆ. ಅಧಿಕಾರ— ಪ್ರಭುತ್ವಗಳಿರುವ ಸರಕಾರ ಮಾಡಲಾಗದ ಕಾರ್ಯಗಳನ್ನು ವಿನೋಬಾ ಸಾಧಿಸಿ ಪವಾಡಗಳನ್ನು ನಿರ್ಮಿಸಿದ್ದಾರೆ; ಮಾನವ ಹೃದಯಗಳನ್ನು ಜಾಗೃತಗೊಳಿಸಿದ್ದಾರೆ. ಭೂದಾನ, ಗ್ರಾಮದಾನಗಳನ್ನು ಅವರು ಪಡೆದಿದ್ದಾರೆ— ಭೂಮಾಲಿಕರ, ಗ್ರಾಮದೊಡೆಯರ ಹೃದಯವನ್ನು ಪರಿವರ್ತಿಸಿದ್ದಾರೆ. ಸ್ತ್ರೀ ಸಮಾಜದಲ್ಲಿನ ಸುಪ್ತಶಕ್ತಿಯನ್ನು ಜಾಗ್ರತಗೊಳಿಸಲು ಪ್ರಯತ್ನಿಸಿದ್ದಾರೆ. ದೊಡ್ಡ ದೊಡ್ಡ ದರೋಡೆಕೋರರನ್ನೂ ತಮ್ಮ ಮುಂದೆ ಶರಣ ಬರುವಂತೆ ಮಾಡಿದ್ದಾರೆ. ಇದು ದೊಡ್ಡ ಚಮತ್ಕಾರವೇನೋ ನಿಜ. ಮಾನವನ ಹೃದಯದಲ್ಲಿರುವ ಸತ್ಪ್ರವೃತ್ತಿಗಳಿಗೆ ಇದೊಂದು ಉತ್ತಮ ನಿದರ್ಶನ. ಕರ್ತಾರನ ಕಮ್ಮಟದಲ್ಲಿ ಕಳಪೆ ಎಂಬುದಿಲ್ಲವೆಂದು ಈ ಸಾಧನೆ ಸಿದ್ಧಿಗಳು ಸಾರಿ ಹೇಳುತ್ತವೆ.

ಜನ್ಮದಿಂದ ಯಾರೂ ದುಷ್ಟರಾಗುವುದಿಲ್ಲ. ಹುಟ್ಟುವಾಗ ಎಲ್ಲ ಮಕ್ಕಳೂ ಒಂದೇ ರೀತಿಯಾಗುತ್ತವೆ. ಕಾಲಕ್ರಮೇಣ ಪರಿಸರದ ವಾತಾವರಣಗಳಿಂದ ಪ್ರಭಾವಿತವಾಗೇ ಅದು ದುಷ್ಟವಾಗಬಹುದು. ಶಿಷ್ಟವಾಗಬಹುದು. ಕುಸಂಸ್ಕಾರ—ಸುಸಂಸ್ಕಾರಗಳು ಅದರ ಮೇಲಾಗುತ್ತವೆ. ದುರಭ್ಯಾಸ-ಸದಭ್ಯಾಸಗಳು ಬೆಳೆಯುತ್ತವೆ. ಸಂಗದ ಪ್ರಭಾವ (ಕ-ದ.ದ)ಕ್ಕೆ ಅದು ಒಳಗಾಗುತ್ತದೆ. ಅದು ಒಳ್ಳೆಯದೋ ಕೆಟ್ಟದ್ದೋ ಆಗುತ್ತದೆ. ಆದರೆ "ಸತ್"ನ ಮೂಲವಸ್ತು ಸಂಪೂರ್ಣ ಲುಪ್ತವಾಗುವುದಕ್ಕೆ ಮೊದಲೇ ಅದು ಜಾಗ್ರತವಾದರೆ, ಶಿಷ್ಟವಾಗೇ ಆಗುವುದು.

ಆತ್ಮದಲ್ಲಿ ಅನಂತ ಶಕ್ತಿಗಳಿವೆ. ಇವುಗಳ ಪರ್ಯಾಪ್ತ ಪರಿಚಯ ಮಾತ್ರ ನಮಗಿಲ್ಲ; ಅವನ್ನು ಅರಿತವರೂ ಇಲ್ಲ. ಅಭ್ಯಾಸಬಲದಿಂದ ಈ ಶಕ್ತಿಗಳು ವಿಕಾಸಶೀಲವಾಗುತ್ತವೆ. ನಾರಿಯನ್ನು ಅಬಲೆಯೆಂದು ಹೇಳಿ ಆಕೆಯನ್ನು ಪುರುಷಾರ್ಥಹೀನಗೊಳಿಸಿದ್ದೇವೆ ಅಷ್ಟೆ. ಆಕೆಯೂ ಶಕ್ತಿವಂತಳೇ. ವ್ಯಕ್ತಿ ವ್ಯಕ್ತಿಯಲ್ಲೂ ಇರುವ ಸುಪ್ತ ಶಕ್ತಿಗಳನ್ನು ಜಾಗ್ರತಗೊಳಿಸಿ ಅವನನ್ನು ಸನ್ಮಾರ್ಗಕ್ಕೆ ತರುವ ಅಗತ್ಯವಿದೆ. ವಿಜ್ಞಾನವು ಅನೇಕಾನೇಕ ಆವಿಷ್ಕಾರ ನಡೆಸಿತು. ಪರಮಾಣುವಿನಲ್ಲಿರುವ ಅನಂತ ಅಪಾರ ಅಗಾಧ ಶಕ್ತಿಯನ್ನು ಪ್ರಕಟ ತೋರಿಸಿಕೊಟ್ಟಿತು. ಭೌತಿಕ ಜಡ ಪದಾರ್ಥಗಳಲ್ಲಿ ಇಂತಹ ಶಕ್ತಿಯಿರುವಾಗ, ಇನ್ನೂ ಮಿಗಿಲಾದ ಶಕ್ತಿಯಿರಬೇಕೆಂಬ ನಂಬಿಕೆ ಮನೆ ಮಾಡುವಾಗ, ಚೈತನ್ಯ ಸ್ವರೂಪ ಆತ್ಮನ ಶಕ್ತಿಯೆಷ್ಟಿರಲಾರದು? "ಆತ್ಮಶಕ್ತಿ" ಎಂದು ನಾವು ಹೇಳುತ್ತ ಬಂದಿದ್ದೇವೆಯೇ ಹೊರತು, ಅದನ್ನು ಕೂಗವಲ್ಲಿ ಸಫಲರಾಗಿಲ್ಲ.

ಆತ್ಮಶಕ್ತಿಯ ಬಗ್ಗೆ ನಮ್ಮ ಋಷಿ-ಮುನಿಗಳು ವಿವರಣೆ ನೀಡಿದ್ದುಂಟು. ಅವುಗಳಂತೆ ವಿಜ್ಞಾನವು ಇನ್ನೂ ಶೈಶವದಲ್ಲೇ ಉಳಿದಿದೆ. ದೇವತೆ—ವಿದ್ಯಾಧರರಲ್ಲಿ ಅಚಿಂತ್ಯ ಶಕ್ತಿಯಿತ್ತು. ಮನುಷ್ಯರಲ್ಲಿಯೂ ಇಂತಹ ಶಕ್ತಿಯಿತ್ತು. ಯಾನಾದಿಗಳಿಲ್ಲದೆಯೇ ಅವರು ಮಂತ್ರ ಬಲದಿಂದಲೇ ಆಕಾಶಗಮನ ಮಾಡುತ್ತಿದ್ದರು. ಅವಧಿಜ್ಞಾನ, ಮನಃಪರ್ಯಾಯಜ್ಞಾನ ಮತ್ತು ಕೇವಲ ಜ್ಞಾನ ಶಕ್ತಿಗಳನ್ನು ನೋಡಿದಾಗ, ವೈಜ್ಞಾನಿಕ ಶಕ್ತಿ ತೃಣ ಸಮಾನ. ಆತ್ಮಶಕ್ತಿಯ ಬಗೆಗೆ ಹಿಂದಿನವರು ಹೇಳಿರುವುದೆಲ್ಲ ಬರಿಯ ಕಲ್ಪನೆಯೆಂದು ವೈಜ್ಞಾನಿಕರು ಹೇಳಬಹುದು. ತಾವರಿಯದ, ಅನುಭವಾತೀತವಾದ ಸಂಗತಿಗಳನ್ನು ಬರಿಯ ಕಲ್ಪನೆಯೆಂದು ಹೀನೈಸುವುದು ಹೊಸತಲ್ಲ. ಯೇಸು ಕ್ರಿಸ್ತನಂತಹ ಮಹೋಪದೇಶಕನನ್ನು, ಗೆಲಿಲಿಯೋನಂತಹ ವಿಜ್ಞಾನಿಯನ್ನೂ ವಿಚಾರಣೆಗೊಳಪಡಿಸಿ ದಂಡನೆ ನೀಡಿದಂತಹ ಸಮಾಜ ಎಲ್ಲ ಕಾಲದಲ್ಲೂ ಇರುತ್ತದೆ.

ಆತ್ಮದಲ್ಲಿ ಅಚಿಂತ್ಯ ಶಕ್ತಿಯಿದೆ; ಅದನ್ನು ಜಾಗ್ರತಗೊಳಿಸುವುದೂ ಅಭಿವ್ಯಕ್ತಗೊಳ್ಳುವಂತೆ ಮಾಡುವುದೂ ಅಗತ್ಯ: ಸದ್ಗುಣ, ಸದ್ವೃತ್ತಿಗಳು ಸವಿಕಸಿತಗೊಳ್ಳುವುದು ಅನಿವಾರ್ಯ. ಹೃದಯ ಪರಿವರ್ತನೆ ಅಸಾಧ್ಯವಾದುದೇನಲ್ಲ; ಆದರೆ, ಅದೂ ಒಂದು ಕಲೆ. ಅದನ್ನು ಕರಗತಮಾಡಿಕೊಳ್ಳಬೇಕು.

ದಂಡನೆ, ಬಲಾತ್ಕಾರ ಅಥವಾ ಒತ್ತಡ ಹೇರುವುದರಿಂದ ಮಾನವ ವೃತ್ತಿಗಳು ಸುಧಾರಣೆ ಹೊಂದುವುದಿಲ್ಲ; ಅವು ತುಸು ಕುಸಿಯಬಹುದು; ಅವುಗಳ ಒತ್ತಡ ಇಲ್ಲವಾಯಿತೆಂದರೆ, ಮತ್ತೆ ಪೂರ್ವಸ್ಥಿತಿಗೆ ಬರುತ್ತವೆ. ಆದರೆ ಹೃದಯ ಪರಿವರ್ತನೆಯಿಂದ ರೂಪವೇ ಬದಲಾಗುತ್ತದೆ. ಇದಕ್ಕಾಗಿ ಹೃದಯಸ್ಥಿತ ಸದ್ವೃತ್ತಿಗಳನ್ನು ವಿಕಸಗೊಳಿಸಬೇಕು. ಅಭ್ಯಾಸದಿಂದ ಶಕ್ತಿ ವಿಕಾಸವಾಗುತ್ತದೆ: ಆದುದರಿಂದ ಅಭ್ಯಾಸದತ್ತ ಆದರ ತೋರಿಸಬೇಕು.

ನಮ್ಮ ಭಾರತ ಅಹಿಂಸಾಪ್ರಧಾನ ದೇಶ. ಅಪರಾಧಿಗಳ ಸುಧಾರಣೆಯಲ್ಲೂ ಅಹಿಂಸೆ ಬಂದು. ಅಂದರೆ ಉಪದೇಶ ನೀಡಿ, ಅವರ ಹೃದಯ ಪರಿವರ್ತನೆ ಸಾಧಿಸಿ, ಅವರ ಸುಪ್ತ ಸದ್ಭಾವನೆಗಳನ್ನು ಜಾಗ್ರತಗೊಳಿಸಬೇಕು, ನಮ್ಮ ಸರಕಾರಗಳೂ ಕೆಲವು ಜೈಲುಗಳಲ್ಲಿ ಇಂಥ ಕ್ರಮ ಕೈಕೊಂಡಿವೆ. ರೋಗ ಬಂದ ಮೇಲೆ ಚಿಕಿತ್ಸೆ ಮಾಡುವುದಕ್ಕಿಂತ ರೋಗದ ಮೂಲ

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

126 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ

ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¼% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ

"ಜೀವನ-ನಿಧಿ"ಯಲ್ಲಿ

ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು— ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—೧.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,

ರೇಸ್ ಕೋರ್ಸ್ ರೋಡ್, ಬೆಂಗಳೂರು—1

ವಲಸೆಹೋಗುವ ಹಕ್ಕಿಗಳ ರಹಸ್ಯ

ಪ್ರಖ್ಯಾತ ಬೇಟೆಗಾರನಾದ ಎಂ. ಐ. ಪೆವ್ರೊಖಿನ್ ಅವರು ಒಂದು ದಿನ ಸೋವಿಯತ್ ವಿಜ್ಞಾನಿಗಳ ಅಕಾಡೆಮಿಯ ಸೈಬೀರಿಯನ್ ಶಾಖೆಯ ಜೀವಶಾಸ್ತ್ರ ಪೀಠಕ್ಕೆ ತಾವು ನೊವೊಸಿಬಿರಸ್ಕ್ ಪ್ರದೇಶದ ಚಾನಿ ಸರೋವರದ ಬಳಿ ಹಿಡಿದಿದ್ದ ಕಾಡುಬಾತುಕೋಳಿಯ ಒಂದು ಉಂಗುರವನ್ನು ಕಾಣಿಕೆಯಾಗಿ ನೀಡಿದರು. ಉಂಗುರದ ಮೇಲಿದ್ದ ಗುರುತುಗಳಿಂದ ಅದು ಭಾರತದಿಂದ ಬಂದುದೆಂದೂ, ಮುಂಬೈಯಲ್ಲಿರುವ ನಿಸರ್ಗ ಚರಿತ್ರೆ ಸಂಘದವರು ಉಂಗುರವನ್ನು ಹಾಕಿದ್ದರೆಂದೂ ತಿಳಿದು ಬಂದಿತು. ಜೀವಶಾಸ್ತ್ರ ಪೀಠದಲ್ಲಿಯ ಪ್ರಯೋಗಶಾಲೆಯೊಂದರ ಮುಖ್ಯಾಧಿಕಾರಿಗಳಾದ ಅನಶೋಲಿ ಮಕ್ಸಿಮೋವ್ ಅವರು ಈ ಬಗ್ಗೆ ಹೀಗೆ ನುಡಿದಿದ್ದಾರೆ.

ವಲಸೆ ಹೋಗುವ ಹಕ್ಕಿಗಳ ರಕ್ತದಲ್ಲಿ ಆರ್ಬೋವೈರಸ್‌ಗಳ ಪತ್ತೆಯಾದಂದಿನಿಂದ ಇತ್ತೀಚಿನ ವರ್ಷಗಳಲ್ಲಿ ವಲಸೆಹಕ್ಕಿಗಳಲ್ಲಿ ವಿಶೇಷ ಆಸಕ್ತಿ ಉಂಟಾಗಿದೆ. ಈ ವೈರಸ್ಸುಗಳಿಂದ ಹಲವು ರೋಗಗಳು ಉಂಟಾಗುತ್ತಿದ್ದು ಅವುಗಳಲ್ಲಿ ಹಕ್ಕಿ ಮತ್ತು ಪ್ರಾಣಿಗಳಲ್ಲಿ ಕಂಡುಬರುವ ಓಮ್ಸ್ಕ ರಕ್ತಸ್ರಾವ ರೋಗವೂ ಒಂದಾಗಿದೆ.

ಹಕ್ಕಿಗಳು ನಾನಾಬಗೆಯ ರೋಗಾಣು ಜೀವಿಗಳನ್ನು ಕೊಂಡೊಯ್ಯುತ್ತವೆಯೆಂದು ದೃಢವಾಗಿ ನಂಬಲಾಗಿದೆ. ಖಂಡಾಂತರಗಳ ವ್ಯಾಪ್ತಿಯಲ್ಲಿ ಅನೇಕಾನೇಕ ಆರ್ಬೋವೈರಸ್ ರೋಗಗಳು ಇಂದು ಕಾಣಿಸಿಕೊಂಡಿರುವುದಕ್ಕೆ ಇದೇ ಕಾರಣ. ಅನೇಕ ದೇಶಗಳ ಜ್ಞ ನಿಪುಣರು ಈಗ ಈ ಸಮಸ್ಯೆಯ ಅಧ್ಯಯನದಲ್ಲಿ ತೊಡಗಿದ್ದಾರೆ. ಸೈಬೀರಿಯಾದ ವಿಜ್ಞಾನಿಗಳಂತೂ ಭಾರತದಲ್ಲಿ ವಿಶೇಷ ಆಸಕ್ತಿಯನ್ನು ತಳೆದಿದ್ದಾರೆ. ಯಾಕೆಂದರೆ ಪಶ್ಚಿಮ ಸೈಬೀರಿಯಾದಿಂದ ಬಹಳಷ್ಟು ಹಕ್ಕಿ ಹಿಂಡುಗಳು ಚಳಿಗಾಲದಲ್ಲಿ ಅಲ್ಲಿಗೆ ವಲಸೆ ಹೋಗುತ್ತವೆ. ಭಾರತ ಮತ್ತು ಸೈಬೀರಿಯಾಗಳಲ್ಲಿ ಕೆಲವು ಒಂದೇ ನಮೂನೆಯ ಹಕ್ಕಿರೋಗಗಳ ಸ್ಥಳಗಳಿವೆಯೆಂದೂ ಇತ್ತೀಚಿಗೆ ವ್ಯಕ್ತಪಟ್ಟಿದೆ.

ಸೋವಿಯೆತ್ ವಿಜ್ಞಾನಿಗಳ ಒಂದು ತಂಡವು, ಚಳಿಗಾಲದಲ್ಲಿ ಹೋಗಿ ಜಮಾಯಿಸುವ ಭಾರತದ ಸ್ಥಳಗಳನ್ನು ಅನ್ವೇಷಿಸಲು ಭಾರತಕ್ಕೆ ಭೇಟಿಕೊಟ್ಟಿತು. ಆರ್ಬೋವೈರಸ್‌ಗಳನ್ನು ಇವು ಎಷ್ಟರಮಟ್ಟಿಗೆ ಹರಡುತ್ತವೆಯೆಂಬುದನ್ನೂ ಅವರು ಅರಿಯಬಯಸಿದ್ದರು. ಗಣ್ಯ ಪಕ್ಷಿಜೀವಿಶಾಸ್ತ್ರಜ್ಞರೂ ಮುಂಬೈಯ ನಿಸರ್ಗ ಚರಿತ್ರೆ ಸಂಘದ ಉಪಾಧ್ಯಕ್ಷರೂ ಆಗಿರುವ ಡಾ. ಸಲೀಂ ಅಲಿ ಅವರು ಕೂಡ ಈ ಸಮಸ್ಯೆಗಳನ್ನು ಪರಿಶೀಲಿಸುತ್ತಿದ್ದಾರೆ. ಅವರು ಪಕ್ಷಿಜೀವಿಶಾಸ್ತ್ರದ ಮೇಲೆ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಅಷ್ಟೇ ಅಲ್ಲ, ಭಾರತದಲ್ಲಿ ಪಕ್ಷಿಜೀವಿಶಾಸ್ತ್ರದೊಂದಿಗೆ ಅವರ ಹೆಸರು ಅವಿಚ್ಛಿನ್ನವಾಗಿ ಹೊಂದಿಕೊಂಡಿದೆ.

ಮುಂಬೈ ಬಳಿಯಲ್ಲಿಯ ಕರ್ನಾಳ ರಕ್ಷಿತ ಪ್ರದೇಶದಲ್ಲಿ ತಜ್ಞರು 1967—68ರಲ್ಲಿ ಸುಮಾರು 21,000 ಬಗೆಯ ಭಿನ್ನಭಿನ್ನ ಪಕ್ಷಿಗಳಿಗೆ ಉಂಗುರಗಳನ್ನು ಹಾಕಿದರು. ಇವುಗಳಲ್ಲಿ ಅನೇಕವು ಬೇಸಿಗೆ ಕಾಲದಲ್ಲಿ ಸೈಬೀರಿಯಕ್ಕೆ ವಲಸೆ ಹೋಗುವ ಅಭ್ಯಾಸವನ್ನಿಟ್ಟುಕೊಂಡಿವೆ. ಪಶ್ಚಿಮ ಸೈಬೀರಿಯದಲ್ಲಿ ವಲಸೆ ಹೋಗುವ ಬಾತು ಮತ್ತು ಕಾಡುಕೋಳಿಗಳನ್ನು ಕೂಡ ಕಾಣಬಹುದು. ದೃಷ್ಟಾಂತಕ್ಕೆ 1965ರ ಅಕ್ಟೋಬರ್ 19ರಂದು ಭಾರತದ ದಕ್ಷಿಣ ಪ್ರದೇಶದಲ್ಲಿ ಉಂಗುರ ಹಾಕಲ್ಪಟ್ಟಿದ್ದ ಬಾತು ಒಂದು 1967ರ ಮೇ 27ರಂದು ತೋಮ್ಸ್ಕ ಪ್ರದೇಶದಲ್ಲಿ ಕಾಣಿಸಿಕೊಂಡಿತು. 1968ರ ಫೆಬ್ರವರಿ 19ರಂದು ಉಂಗುರ ಹಾಕಲ್ಪಟ್ಟಿದ್ದ ಇನ್ನೊಂದು ಬಾತುಪಕ್ಷಿಯು ಮೂರು ತಿಂಗಳ ಬಳಿಕ ಸೈಬೀರಿಯದಲ್ಲಿ ಕಾಣಿಸಿಕೊಂಡಿತು. ಇನ್ನೂ ಅನೇಕ ಇಂಥ ಉದಾಹರಣೆಗಳು ಇವೆ.

ಬಾತು, ಕಾಡುಕೋಳಿ ಇಂಥವೇ 'ಕ್ರೀಡಾ' ಪ್ರಾಣಿಗಳು ಮಾತ್ರವೇ ವಲಸೆ ಹೋಗವುದಿಲ್ಲ. ಹಳ್ಳಿ ಪಟ್ಟಣಗಳಲ್ಲಿ ವಾಸಿಸುವ ಗುಬ್ಬಚ್ಚಿಗಳು ಕೂಡ ಸಾಕಷ್ಟು ದೂರ ವಲಸೆ ಹೋಗುತ್ತವೆ. ಉದಾಹರಣೆಗೆ ಮೇಲ್ಕಾಣಿಸಿದ ಭಾರತದ ದಕ್ಷಿಣ ಪ್ರದೇಶದಲ್ಲಿ ಉಂಗುರ ಹಾಕಲ್ಪಟ್ಟಿದ್ದ ಗುಬ್ಬಚ್ಚಿಯೊಂದು ಅಲ್ಮಾ-ಅತಾದಲ್ಲಿ ಹಿಡಿಯಲ್ಪಟ್ಟಿತು.

ಹಕ್ಕಿಗಳ ಈ ವಲಸೆ ಅಭ್ಯಾಸದಲ್ಲಿ ಅನೇಕ ರಹಸ್ಯಗಳು ಅಡಗಿವೆ. ಯಾವ ದಿಕ್ಕಿನಲ್ಲಿ ಈ ಹಕ್ಕಿಗಳು ವಲಸೆ ಹೋಗುತ್ತವೆ, ಯಾವಾಗಲೂ ಒಂದೇ ದಾರಿಯಲ್ಲಿಯೇ ಸಾಗುತ್ತವೆಯೋ ಹೇಗೆ, ಚಳಿಗಾಲದಲ್ಲಿ ಅವು ಎಲ್ಲಿ ಉಳಿದುಕೊಳ್ಳುತ್ತವೆ ಮತ್ತು ಅವು ತರುವ ವೈರಸ್ ರೋಗಾಣುಗಳು ಮಾನವ ಶರೀರಕ್ಕೆ ಅಪಾಯಕಾರಿಯಾಗಿವೆ ಎಂಬುದನ್ನೆಲ್ಲ ವಿಜ್ಞಾನಿಗಳು ಈಗ ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಸೋವಿಯೆತ್ ವಿಜ್ಞಾನಿಗಳ ಅಕಾಡೆಮಿಯ ಸೈಬೀರಿಯನ್ ಶಾಖೆಯ ಜೀವಶಾಸ್ತ್ರಜ್ಞರು ಏರ್ಪಡಿಸಿದ್ದ ಒಂದು ವಿಚಾರಗೋಷ್ಠಿಗೆ ಫ್ರಾನ್ಸ್, ಇರಾಕ್, ಭಾರತ, ಸಂಯುಕ್ತ ರಾಜ್ಯ ಅಮೆರಿಕ ಮೊದಲಾದ ಅನೇಕ ದೇಶಗಳಿಂದ ಬಂದಿದ್ದ ಗಣ್ಯ ಪಕ್ಷಿಜೀವಿ ಶಾಸ್ತ್ರಜ್ಞರು ತಾವು ನಡೆಸಿದ ಸಂಶೋಧನೆಗಳ ಫಲಿತಾಂಶಗಳನ್ನು ಚರ್ಚಿಸಿದರು. ಅದಲ್ಲದೆ ವಿಶೇಷವಾಗಿ ಆರ್ಬೋವೈರಸ್ ಬಾಧೆಗೀಡಾದ ಹಕ್ಕಿಗಳ ವಲಸೆ ಮಾನವ ಜೀವಿಗೆ ಎಷ್ಟೊಂದು ಗಂಡಾಂತಕಾರಿಯಾಗಿದೆಯೆಂಬುದನ್ನು ಪರಿಶೀಲಿಸಿದರು.

ಸೋವಿಯೆತ್ ವಿಜ್ಞಾನಿಗಳ ಅಕಾಡೆಮಿಯ ಆಮಂತ್ರಣದ ಮೇರೆಗೆ ಡಾ. ಸಲೀಂ ಅಲಿ ಅವರು ನೊವೊಸಿಬಿರಸ್ಕ್‌ಕ್ಕೆ ಇತ್ತೀಚೆಗೆ ಭೇಟಿ ನೀಡಿದರು. ಚಳಿಗಾಲದಲ್ಲಿ ಭಾರತಕ್ಕೆ ವಲಸೆ ಹೋಗುವ ಹಕ್ಕಿಗಳ ನೆಲೆ ಹಾಗೂ ಸ್ಥಳಗಳಲ್ಲಿ ಅವರು ವಿಶೇಷ ಆಸಕ್ತಿ ತೋರಿಸಿದರು. ಜೀವಶಾಸ್ತ್ರ ಪೀಠದ ವಿಜ್ಞಾನಿಗಳೊಡನೆ ಭಾರತದ ಈ ವಿಜ್ಞಾನಿಯು ಸೈಬೀರಿಯ-ಹಜಾನಿ ಎಂಬ ಅತ್ಯಂತ ದೊಡ್ಡ ಹಾಗೂ ಸುಂದರವಾದ ಸರೋವರದ ಬಳಿಯಲ್ಲಿ ಅನೇಕ ದಿವಸಗಳನ್ನು ಕಳೆದರು. ಅವರು ಇಲ್ಲಿದ್ದಾಗ ವಲಸೆ ಹೋಗುವ ಹಕ್ಕಿಗಳ ಕುರಿತು ತಮ್ಮ ಅಧ್ಯಯನಕ್ಕೆಂದು ಬಹಳಷ್ಟು ಮಾಹಿತಿಯನ್ನು ಸಂಗ್ರಹಿಸಿದರು.

ತಮ್ಮ ಭೇಟಿಯನ್ನು ಮುಕ್ತಾಯಗೊಳಿಸುತ್ತ ಡಾ. ಅಲೀ ಅವರು ಸೋವಿಯತ್ ವಿಜ್ಞಾನಿಗಳ ಆತಿಥ್ಯಕ್ಕೆ ಕೃತಜ್ಞತೆಗಳನ್ನು ಸಲ್ಲಿಸಿ ಎರಡೂ ದೇಶಗಳ ವಿಜ್ಞಾನಿಗಳ ಮಧ್ಯೆ ಸ್ನೇಹವು ಬಲಗೊಳ್ಳುತ್ತದೆಯೆಂಬ ತಮ್ಮ ಆತ್ಮವಿಶ್ವಾಸವನ್ನು ವ್ಯಕ್ತಪಡಿಸಿದರು.

ಈ ರಂಗದಲ್ಲಿ ತಮ್ಮ ಅಭ್ಯಾಸವನ್ನು ಮುಂದುವರಿಸುವುದಕ್ಕಾಗಿ ಸೋವಿಯೆತ್ ವಿಜ್ಞಾನಿಗಳ ತಂಡವೊಂದು ಇನ್ನೊಂದು ಭೇಟಿಗೆ ಯೋಚಿಸುತ್ತಿದೆ. ಇಂಥ ಭೇಟಿಗಳು ವಲಸೆ ಹಕ್ಕಿಗಳ ರಹಸ್ಯವನ್ನು ಹೆಚ್ಚು ವಿವರವಾಗಿ ಪರೀಕ್ಷಿಸಲು, ಒಟ್ಟಾರೆ ಪ್ರಾಣಿ ಜಗತ್ತಿನ ಕುರಿತು ಹೆಚ್ಚಿನ ತಿಳುವಳಿಕೆ ಪಡೆಯಲು ಹಾಗೂ ಒಂದು ಖಂಡದಿಂದ ಇನ್ನೊಂದು ಖಂಡಕ್ಕೆ ಕಾಹಿಲೆಗಳು ಸಾಗದಂತೆ ತಡೆಗಟ್ಟಲು ಸಹಾಯಕವಾಗುತ್ತವೆ.

ರೊಕ್ಕ—ದುಃಖ

ರೊಕ್ಕ ಎರಡಕ್ಕು ದುಃಖ ಕಾಣಕ್ಕ||ಪಲ್ಲ||

೧

ಮಕ್ಕಳ ಮರಿಗಳ ಮಾಡೋದು ರೊಕ್ಕ
ಸಕ್ಕರೆ ತುಪ್ಪದ ಸವಿಸೋದು ರೊಕ್ಕ
ಠಕ್ಕುಲಹೆಯನ್ನು ಬಿಡಿಸೋದು ರೊಕ್ಕ
ಫಕ್ಕನೆ ಹೋದರೆ ಫಾಸಿ ಕಾಣಕ್ಕ

೨

ನೆಂಟರ ಇಷ್ಟರ ಮರೆಸೋದು ರೊಕ್ಕ
ಕಂಟಕಗಳ ಪರಿಹರಿಸೋದು ರೊಕ್ಕ
ಗಂಟು ಕಟ್ಟಲಿಕ್ಕೆ ಕಲಿಸೋದು ರೊಕ್ಕ
ತುಂಟತನಗಳನು ಬಲಿಸೋದು ರೊಕ್ಕ

೩

ಇಲ್ಲದ ಗುಣಗಳ ತರಿಸೋದು ರೊಕ್ಕ
ಸಲ್ಲದ ನಾಣ್ಯವ ನಡಿಸೋದು ರೊಕ್ಕ
ಬೆಕ್ಕಿಕ್ಕಿಂತಲು ಬಹು ಸವಿಯಾದ ರೊಕ್ಕ
ಇಲ್ಲದಿರಲು ಬಹುದುಃಖ ಕಾಣಕ್ಕ

೪

ಉಂಟಾದ ಗುಣಗಳ ಮರೆಸೋದು ರೊಕ್ಕ
ಬಂಟರನೆಲ್ಲರ ಬೀಸೋದು ರೊಕ್ಕ
ಕಂಠಿಸರಿಗೆಯನು ಗಳಿಸೋದು ರೊಕ್ಕ
ಒಂಟಿ ಕುದುರೆ ಆಸೆ ತರಿಸೋದು ರೊಕ್ಕ

೫

ವಿದ್ಯದ ಮನುಜರ ಕಲಿಸೋದು ರೊಕ್ಕ
ಬುದ್ಧಿದ ಜನರನು ಬಿಡಿಸೋದು ರೊಕ್ಕ
ಮಾಡಿದ್ದು ಪುರಂದರ ವಿಠಲನ ಮರೆಸುವ
ಬಿಸ್ಕೋಗಿರೋ ರೊಕ್ಕದ ಸುದ್ದಿ ನೀನಕ್ಕ

ವನ್ನೇ ಅಣಗಿಸುವುದು ಉತ್ತಮ ಉಪಾಯ. ಮನುಷ್ಯನು ಅನೇಕ ವೇಳೆ ಆವೇಶಭರಿತನಾಗಿ ಅವಿಚಾರಿತ ಅಪರಾಧ ಅಥವಾ ಪಾಪ ಮಾಡುತ್ತಾನೆ. ತನ್ನ ಕೃತ್ಯಗಳಿಗಾಗಿ ತಾನೇ ಪಶ್ಚಾತ್ತಾಪಪಡುವ ಹಲವು ಸನ್ನಿವೇಶಗಳು ಆತನಿಗೆ ಬರುತ್ತವೆ. ಆದುದರಿಂದ ತಪ್ಪು ಮಾಡಿದವನಿಗೆ ಉಗ್ರ ದಂಡನೆ ನೀಡುವುದರ ಬದಲು ಸತ್ಪ್ರೇರಣೆ ನೀಡಿದರೆ, ಮುಂದೆ ಅಪರಾಧಗಳು ಕಡಿಮೆಯಾಗುವುದು ಅಸಂಭವವಲ್ಲ. ಅಪರಾಧಿಗಳ ಜೀವನ ಸುಧಾರಣೆಯಾಗುವುದು ಅಸಾಧ್ಯವಲ್ಲ. ಆದುದರಿಂದ ಮಾನವನಲ್ಲಿಯ ಸತ್ ಪ್ರವೃತ್ತಿಗಳನ್ನು ಜಾಗ್ರತಗೊಳಿಸುವ ಪ್ರಯತ್ನಗಳು ಹೆಚ್ಚು ನಡೆಯಬೇಕು. ಪ್ರಾಣದಂಡನೆಯ ಶಿಕ್ಷೆಯಿಂದ ಅಂಜಿಕೆ ಹುಟ್ಟುವುದು ಸಹಜ ಆದರೆ, ಇದರಿಂದ ಜೀವನ ಉನ್ನತವಾಗುವುದೆಂದೂ ಸಾಧ್ಯವಿಲ್ಲ. ಹತ್ಯೆ ಸೃಷ್ಟಿಯನ್ನು ನಾಶ ಮಾಡುತ್ತದೆ.

ಭಾರತದಲ್ಲಿ ಇಂದೂ ಹಲವಾರು ಸಾಧು—ಸಂತರಿದ್ದಾರೆ. ಅವರಿಂದ ಸಾವಿರಾರು "ದುಷ್ಟ"ರು "ಶಿಷ್ಟ"ರಾಗುತ್ತಿದ್ದಾರೆ ಅಜ್ಞಾನ—ಅನಾಚಾರ-ಅವಿವೇಕ ಮತ್ತು ಅಸಂಗತಿಗಳಿಂದ ಲಕ್ಷಾಂತರ ಪ್ರಜೆಗಳ ಜೀವನ ಕೆಟ್ಟು ಹೋಗುವ ಈ ದೇಶದಲ್ಲಿ ಇಂತಹ ಸತ್ಯ ಸಾಧುಗಳು ಹೆಚ್ಚಬೇಕು. ಅಡಗಿರುವ ಸದ್‌ವೃತ್ತಿಗಳನ್ನು ಜಾಗ್ರತ ಮಾಡುವ ಕಾರ್ಯ ಸರ್ವತೋಮುಖವಾಗಿ ನಡೆಯಬೇಕು. ಸದುಪದೇಶ-ಸತ್ ಸಾಹಿತ್ಯ—ಸತ್ ಕ್ರಿಯೆಗಳಿಂದ ಜನತೆಗೆ ಸತ್ ಮಾರ್ಗದರ್ಶನ ನೀಡಬೇಕು. ಇಂದು ಪಾಪಿಯೆನಿಸಿದವನು ನಾಳೆ ಧರ್ಮಾತ್ಮನಾದಾನು. ಇದಕ್ಕಾಗಿ ಬುದ್ಧಿ ಜೀವಿಗಳು ಸಂಯುಕ್ತ ಪ್ರಯತ್ನ ನಡೆಸಬೇಕು. ಉದ್ದೇಶ ಶುಭವಾದುದರಿಂದ ಇದರ ಪರಿಣಾಮವೂ ಶುಭವಾಗೇ ಆಗುತ್ತದೆ.

ಇಂದಿನ ಜನಜೀವನ ಸಂಕೀರ್ಣವಾಗುತ್ತ ಬಂದಿದೆ; ಆ ದಾರಿಯಲ್ಲೇ ಅದು ಮುಂದಡಿಯಿಡುತ್ತಲಿದೆ. ಇದವೇ ನಮ್ಮ ಹತ್ತು ಹಲವು ಸಮಸ್ಯೆಗಳ ಮೂಲ. ಜನಜೀವನ ಸರಳವಾದಂತೆ ಆತ್ಮಶಕ್ತಿಯ ವಿಕಾಸಕ್ಕೆ ಹೆಚ್ಚಿನ ಅವಕಾಶಗಳು ಲಭ್ಯವಾಗುತ್ತವೆ. ಇದು ಕಠಿಣ ಕಾರ್ಯವೆಂದು ಅನಿಸಬಹುದು; ಆದರೂ ಗುಂಡಿಗೆದೆ ನೀಡುವವನಿಗೆ ಇದು ಅಸಾಧ್ಯವಾದುದಲ್ಲ. ಗೋವರ್ಧನಗಿರಿಯನ್ನು ಕಿರಿಬೆರಳಲ್ಲಿ ಎತ್ತಿದ ಗೋರಕ್ಷಕ ಶ್ರೀಕೃಷ್ಣನ ನಾಡಿಗರಿಗೆ, ಅಸಾಧ್ಯವಾದುದೊಂದಿದೆಯೆನ್ನುವುದು ಲಜ್ಜಾಸ್ಪದ.

ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಆಗಾಗ್ಗೆ ಹೊಸ ಹೊಸ ಸ್ಟೋಕಿನಿಂದ
ಕೊಲಿಟಿಯಲ್ಲಿ, ಸ್ಯಾಜಿನಲ್ಲಿ, ಕ್ರಯದಲ್ಲಿ ಸರಿಯೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂಟಾ ಕೆರೆಟ ತೂಕದಲ್ಲಿ
ಬೇಕಾದವರು ಮುಂದಾಗಿ ಬಂದು ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

ಸತ್ಯ ಘಟನೆ

ಆವರು ಮುದಿಕೋಣಗಳಿಂದ ಪಾರಾಗಲಿತರು

ಅವರ ಬಳಿಯೆರಡು ಮುದಿ ಕೋಣ ಗಳಿದ್ದುವು. ಯೌವನದಲ್ಲಿ ಅವು ಗಾಡಿ ಯೆಳೆದಿದ್ದುವು; ನೇಗಿಲು ಎಳೆದಿದ್ದುವು. ಅವೀಗ ಅಶಕ್ತವಾಗಿದ್ದುವು.

ಮುದಿಕೋಣಗಳು ಅನ್ನದಂಡಕ್ಕೆ; ಅವನ್ನು ಮಾರಿಬಿಟ್ಟರೆ, ಸ್ವಲ್ಪ ಹಣವಾದರೂ ದಕ್ಕುತ್ತದೆ. ಅವರು ಪಶುವಿಕ್ರಯ ಕೇಂದ್ರಕ್ಕೆ ಅವನ್ನು ಒಯ್ದರು. ಆದರೆ ಅವಕ್ಕೆ ಬಂದ ಧಾರಣೆ ಅತೃಪ್ತವಾದ್ದರಿಂದ, ಮಾರದೆ ಮರಳಿ ಮನೆಗೆ ಹೊಡಕೊಂಡು ಬಂದರು.

ಅಂದಿನಿಂದವು ಹುಲ್ಲು ಮೇಯುವುದನ್ನು ಬಿಟ್ಟುವು; ನೀರು ಕುಡಿಯುವುದನ್ನು ಬಿಟ್ಟುವು; ಆಹಾರ ಸೇವನೆಯನ್ನೇ ಬಿಟ್ಟುಬಿಟ್ಟುವು. ಕಾಯಿಲೆ ಅಂಟಿರಬಹುದೆಂಬ ಸಂದೇಹ ಬಂತು. ಪಶು ವೈದ್ಯರನ್ನು ಕರೆದು ತಂದರು. ಅವು ನಿರೋಗಿಗಳಾಗೇ ಇವೆಯೆಂಬುದು ದೀರ್ಘ ಪರಿಶೀಲನಾನಂತರ ವ್ಯಕ್ತವಾಯಿತು.

ಅವರು ಮೂರು ದಿನಗಳ ಮಟ್ಟಿಗೆ ಬೇರೆಡೆ ಹೋಗಬೇಕಾಯಿತು. ಕೋಣಗಳಿಗೆ ಹುಲ್ಲು, ನೀರು, ಆಹಾರಾದಿ ನೀಡಲು, ಅವನ್ನು ದಿನವೂ ಸ್ನಾನಮಾಡಿಸಲು ತನ್ನ ನೌಕರನಿಗೆ ತಿಳಿಸಿ ಅವರು ಹೊರಟು ಹೋದರು. ನಾಲ್ಕನೆಯ ದಿನ ಮರಳಿದಾಗ ನೌಕರನ ವರದಿಯೊಯಿತು— "ಅವು ನೀರು ಕುಡಿಯಲಿಲ್ಲ; ಹಸುರು ಹುಲ್ಲನ್ನೂ ಮೇಯಲಿಲ್ಲ. ಮುಂದಿಟ್ಟ ಹಿಂಡಿ ಮೊದಲಾದುವನ್ನು ಮೂಸಿಯೂ ನೋಡುವುದಿಲ್ಲ."

ಅವರಿಗೆ ಭಾರಿ ಚಿಂತೆಯಾಯಿತು. ನಾಲ್ಕು ದಿನಗಳಿಂದ ಈ ಮುದಿ ಕೋಣಗಳು ಅನ್ನಾಹಾರ ಸ್ವೀಕರಿಸಲಿಲ್ಲ. ಹೀಗೆ ಉಪವಾಸ ಬಿದ್ದು ಎಷ್ಟು ದಿನ ದೂಡಿಯಾವು? ಊಟದ ವೇಳೆ ಅವರು ತಮ್ಮ ಪತ್ನಿಗೆ ಈ ಸಂಗತಿ ತಿಳಿಸಿದರು. "ನೀವು ಅವನ್ನು ನಿಷ್ಪ್ರಯೋಜಕವೆಂದು ತಿಳಿದು ಮಾರಲು ಬಯಸಿದಿರಿ. ದುಡಿಯದೆ ತಿನ್ನಬಾರದು ಎಂದು ತಿಳಿದು ಅವು ಉಪವಾಸ ಬಿದ್ದು ಮೃತ್ಯುವಿನ ಪ್ರತೀಕ್ಷೆ ಮಾಡತೊಡಗಿವೆ." ಪತ್ನಿಯ ಮಾತು ಕೇಳಿ ಅವರು ವಿಸ್ಮಿತರಾದರು.

ಅವರಿಗನಿಸಿತು—"ನಿಜಕ್ಕೂ ನಾನು ಅಪರಾಧಿ. ನಾನು ಹಾಗೆ ಮಾಡಬಾರದಿತ್ತು. ಹನ್ನೆರಡು ವರ್ಷಗಳಿಂದ ರಕ್ತ-ಬೆವರು ಒಂದು ಮಾಡಿ ನನ್ನ ಸೇವೆ ಮಾಡಿದ ಇವನ್ನು ಕೆಲವು ರೂಪಾಯಿಗಳ ಲೋಭದಿಂದ ಈಗ ಮಾರುವುದು ಬರಿಯ ಸ್ವಾರ್ಥ."

ಮಾಡಿದ ಅಪರಾಧಕ್ಕೆ ಪ್ರಾಯಶ್ಚಿತ್ತ ಅನಿವಾರ್ಯವೆನಿಸಿತು. ಪತಿ-ಪತ್ನಿಯರು ಆ ಮುದಿ ಕೋಣಗಳನ್ನು ಕಟ್ಟಿದ್ದ ಹಟ್ಟಿಗೆ ಹೋದರು. ಅಲ್ಲಿ ಎರಡೂ ಕೈಜೋಡಿಸಿ ನಿವೇದಿಸಿಕೊಂಡರು—"ನಮ್ಮ ಅಪರಾಧವನ್ನು ಕ್ಷಮಿಸಬೇಕು. ನಿಮ್ಮನ್ನು ಎಂದೂ ಮಾರುವುದಿಲ್ಲ. ನೀವು ಅನ್ನಾಹಾರಾದಿಗಳನ್ನು ಸೇವಿಸಿ ನಮ್ಮ ಚಿಂತೆಯನ್ನು ದೂರಮಾಡಿರಿ."

ಪ್ರಾರ್ಥನೆಯನ್ನವು ಕಿವಿಗೊಟ್ಟು ಕೇಳಿದಂತೆನಿಸಿತು. ಮುಂದೆ ಒಂದು ಜನ್ಮೋದವನ್ನು ನೋಡತೊಡಗಿತು. ಅವೊಂದು ಒಡಂಬಡಿಕೆಗೆ ಬಂದಂತೆನಿಸಿತು. ತಮ್ಮ ಮುಂದಿದ್ದ ಹುಲ್ಲಿನ ಮೆದೆಗೆ ಬಾಯಿಹಾಕತೊಡಗಿದುವು. ತನ್ಮೂಲಕ "ನಿಮ್ಮ ಪ್ರಾರ್ಥನೆಯನ್ನು ಮನ್ನಿಸಿದೆ"ವೆಂದು ಸೂಚಿಸಿದುವು. ಮುದಿಪ್ರಾಣಿಗಳನ್ನು ಅವು ಅಶಕ್ತವಾಗಿರುವಾಗ ಮಾರಬಾರದೆಂದವರು ತೀರ್ಮಾನಿಸಿಕೊಂಡರು.

ಅವರು ತಮ್ಮ ಮುದಿಯೊಡನೆ ಎರಡು ಬಟ್ಟಲಲ್ಲಿ ಅನ್ನಾಹಾರ ಬಡಿಸುವಂತೆ ಹೇಳಿದರು. ಅವನ್ನು ಮುದಿಕೋಣಗಳ ಮುಂದಿಟ್ಟು ಸ್ವೀಕರಿಸಬೇಕೆಂದು ಕೇಳಿಕೊಂಡರು. ಅವರ ಮುಖವನ್ನು ನೋಡಿ ಭಾವವನ್ನರಿದು, ಅವು ಕೃತಜ್ಞತಾ ಬಟ್ಟಲಿಗೆ ಬಾಯಿಹಾಕಿದುವು. ಇದನ್ನು ನೋಡುತ್ತಿದ್ದಂತೆ ಅವರ ನಯನಗಳು ಸಜಲವಾದುವು.

ಅಂದಿನಿಂದ ಕೋಣಗಳು ಆಹಾರ ಸ್ವೀಕರಿಸತೊಡಗಿದುವು; ನೀರು ಕುಡಿಯಲಾರಂಭಿಸಿದುವು. ಹುಲ್ಲು ಮೇಯಲುದ್ಯುಕ್ತವಾದುವು. ಅವುಗಳ ಆಮರಣ ಅನಶನ ವ್ರತ ಮುಕ್ತಾಯಗೊಂಡಿತು. ಅವರ ಅಪರಾಧಕ್ಕೆ ಪ್ರಾಯಶ್ಚಿತ್ತವಾಯಿತು. ಅವು ಮುಂದೆಯೂ ಕೆಲವರ್ಷ ಸಂತೋಷದಿಂದಲೇ ಬದುಕಿದುವು; ಅವುಗಳಿಗೆ ಆರಾಮವಾಗಿರಲು ಸೂಕ್ತ ವ್ಯವಸ್ಥೆಯನ್ನು ಅವರು ಮಾಡಿಕೊಟ್ಟಿದ್ದರು.

ಪಶುಗಳ ಬಗ್ಗೆ ಭಾರತೀಯ ದೃಷ್ಟಿಕೋಣ ಅತ್ಯಂತ ಉದಾರವಾದದ್ದು. ಭಾರತೀಯರಿಗೆ ಅವು ಸಾಕುವ ಪಶುಗಳು ತಮ್ಮ ಕುಟುಂಬದ ಸದಸ್ಯರಿಗೂ ಹೆಚ್ಚಿನವು. ಅವೂ ತಮ್ಮ ಪಾಲಕರ ಮನಸ್ಸನ್ನು ಮೂಕವಾಗೇ ಅರಿತುಕೊಳ್ಳುತ್ತವೆ; ಅವರ ಇಚ್ಛೆಯಂತೆ ನಡೆಯುತ್ತವೆ. ಅಭಿವ್ಯಕ್ತಿ ಶಕ್ತಿಯಿಂದ ವಂಚಿತವಾದ ಈ ಪಶುಗಳು ಮಾನವರೊಡನೆ ಒಂದಾಗಿ ಬದುಕಿ ಬಂದಿವೆ.

ಪಾಶ್ಚಾತ್ಯ ಸಂಸ್ಕೃತಿ ಇದಕ್ಕೆ ವ್ಯತಿರಿಕ್ತ. ತನ್ನನ್ನೇ ತಾನು ಅರಿತುಕೊಳ್ಳದವನು ಪರರನ್ನು ಎಂತು ಅರಿತಾನು? ಪಶುಗಳ ಮನೋಭಾವ ಸಂವೇದನೆ ಅವರಿಗೆಂತ ಮನವರಿಕೆಯಾದೀತು?

ಅಭಿಪ್ರಾಯ:

ಹಿಪ್ನಾಟಿಸಂನಿಂದ ಜನ್ಮಾಂತರ ಸ್ಮರಣೆ ಸಾಧ್ಯವೆ?

ಇದೊಂದು ವಿಚಿತ್ರ ಪ್ರಶ್ನೆಯೆಂದು ಕೆಲವರು ಭಾವಿಸಬಹುದು, ಆದರೆ ಇದು ಸಾಧ್ಯವಾಗಬಹುದು.

"ಹಿಪ್ನಾಟಿಸಂ" ಅಂದರೆ ಒಬ್ಬ ವ್ಯಕ್ತಿಯು (ಚಿಕಿತ್ಸಕ) ಇನ್ನೊಬ್ಬನ ಮನಸ್ಸು, ದೇಹಗಳೆರಡನ್ನೂ ತನ್ನ ನಿಯಂತ್ರಣದಲ್ಲಿಟ್ಟುಕೊಂಡು ಆಜ್ಞೆಗಳನ್ನು ಪಾಲಿಸುವಂತೆ ಮಾಡುವುದು. ಅದೇ ರೀತಿ ಆ ವ್ಯಕ್ತಿಯನ್ನು ಸಂಪೂರ್ಣವಾಗಿ ಸಂಮೋಹಿತಗೊಳಿಸಿ ಒಂದೊಂದೇ ಹಂತವಾಗಿ ಬಾಲ್ಯ, ಗರ್ಭಕಾಲದವರೆಗೂ ತಂದು ಆತನ ಪೂರ್ವಜನ್ಮವನ್ನು ನೆನೆಸಿಕೊಳ್ಳುವಂತೆ ಮಾಡಬಹುದು.

ನಂತರ ಅದೇ ರೀತಿ, ಹಂತಹಂತವಾಗಿ, ಆತನನ್ನು ವಾಸ್ತವ (ಈಗಿನ) ಪ್ರಪಂಚಕ್ಕೆ ಬರುವಂತೆ ಮಾಡಬೇಕು. ಇದನ್ನು ಒಂದು ಸಿದ್ಧಾಂತವೆಂದು ಹಿಗಳೇಹೇರಲು ಸಾಧ್ಯವಿಲ್ಲವಾದರೂ, "ಹಿಪ್ನಾಟಿಸ್ಟ"ರು ಈ ಕುರಿತು ಪ್ರಯತ್ನಿಸಿ ಒಂದು ಹೊಸ ಸಿದ್ಧಾಂತವನ್ನು ಸ್ಥಾಪಿಸಬಹುದಾಗಿದೆ.

ಅಲ್ಲದೆ ವೈದ್ಯರು ಹೇಳುವಂತೆ "ಆನುವಂಶಿಕ" ರೋಗಗಳ ಬಗ್ಗೆಯೂ ಹೊಸ ವಿಷಯಗಳು ತಿಳಿಯುತ್ತವೆ.

—ಸಿ. ಚಂದ್ರಶೇಖರ

ದಿ। ಜಗನ್ನಾಥ ಎಜ್ಯುಕೇಶನ್ ಸೊಸೈಟಿ (ರಿಜಿಸ್ಟರ್ಡ್) ಮುಂಬೈ

ಈ ಸಂಸ್ಥೆಯು ಮುಖಾಂತರ ಪ್ರತಿವರ್ಷ ಕೊಡಲ್ಪಡುವ 'ಕೊರಂಗ್ರಪಾಡಿ ಪಟೇಲ್ ಕೆ. ಜಗನ್ನಾಥ ಶೆಟ್ಟಿ ಮೆಮೋರಿಯಲ್ ಪ್ರೈಜ್' 1970ನೇ ಮಾರ್ಚ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದ ಈ ಕೆಳಗಿನ ವಿದ್ಯಾರ್ಥಿಗಳು ಪಡೆದಿರುವರು.

1. ಅಲೆವೂರು ಎ. ಹರಿಕೃಷ್ಣ ಭಟ್ಟ ರೂ. 51, ಎಸ್. ಎಸ್. ಎಲ್. ಸಿ. ತರಗತಿ, ನೆಹರೂ ಹೈಸ್ಕೂಲ್, ಅಲೆವೂರು. 2. ಕೆಮ್ಮಣ್ಣು ಕುಮಾರಿ ಕೋಮಾ ಆರ್. ಶೆಟ್ಟಿ, ರೂ. 81. VIIನೇ ತರಗತಿ, ಸುಭೋದಿನಿ ಹೈಯರ್ ಎಲಿಮೆಂಟರಿ ಶಾಲೆ, ಅಲೆವೂರು. 3. ಮೂಡುಬೆಳ್ಳೆ ಕುಮಾರ ರೇಖಾ ಶೆಟ್ಟಿ ರೂ. 81. VIIನೇ ತರಗತಿ ಮಣಿಪುರ ಹೈಯರ್ ಎಲಿಮೆಂಟರಿ ಶಾಲೆ, ಮಣಿಪುರ. 4. ಕೊರಂಗ್ರಪಾಡಿ ಕುಮಾರಿ ಶ. ಭಾಸಿನಿ ಶೆಟ್ಟಿ ರೂ. 21. Vನೇ ತರಗತಿ ಕೊರಂಗ್ರಪಾಡಿ ಬೋರ್ಡ್ ಎಲಿಮೆಂಟರಿ ಶಾಲೆ ಕೊರಂಗ್ರಪಾಡಿ. 5. ಮಣಿಪುರ ಕೃಷ್ಣ ಮಾರಾಲ ರೂ. 21. IVನೇ ತರಗತಿ, ಮಣಿಪುರ ಬೋರ್ಡ್ ಎಲಿಮೆಂಟರಿ ಶಾಲೆ.

ಇದಲ್ಲದೆ, ಈ ಸೊಸೈಟಿಯು ಕಳೆದ ಎರಡು ಶಾಲಾ ವರ್ಷದಲ್ಲಿ ಕೊರಂಗ್ರಪಾಡಿ ಬೋರ್ಡ್ ಎಲಿಮೆಂಟರಿ ಶಾಲೆಯ 84 ವಿದ್ಯಾರ್ಥಿಯರಿಗೆ ಸ್ಕಾಲರ್‌ಶಿಪ್ಪನ್ನು ಕೊಟ್ಟಿರುತ್ತದೆ.

ಸೊಸೈಟಿಯು 1970-71ನೇ ಶಾಲಾ ವರ್ಷದಿಂದ ದಕ್ಷಿಣ ಕನ್ನಡ ಜಿಲ್ಲಾ ಹೈಸ್ಕೂಲುಗಳಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಮೊದಲನೇ ಸ್ಥಾನಪಡೆಯುವ ವಿದ್ಯಾರ್ಥಿಗಳಿಗೆ ರೂ. 101 'ಕೊರಂಗ್ರಪಾಡಿ ಪಟೇಲ ಶ್ರೀ ಕೆ. ಜಗನ್ನಾಥ ಶೆಟ್ಟಿ ಮೆಮೋರಿಯಲ್ ಪ್ರೈಜ್' ಎಂಬ ಬಹುಮಾನ ಮೊಬಲಗನ್ನು ಕೊಡಲು ನಿಶ್ಚಯಿಸಿರುತ್ತದೆ.

ಮೊದಲನೇ ಸ್ಥಾನ ಪಡೆದ ವಿದ್ಯಾರ್ಥಿಗಳು ತಮ್ಮ ಶಾಲಾ ಮುಖ್ಯೋಪಾಧ್ಯಾಯರಿಂದ ಸರ್ಟಿಫಿಕೇಟು ಪಡೆದು, ತಕ್ಕ ಸಮಯದಲ್ಲಿ ಕಳುಹಿಸತಕ್ಕದ್ದು.

The Hon. Gen. Secretary,
The Jagannath Education Society,
7, Ruxmini Sadan,
49, Lokamanya Tilak Nagar,
Goregoan (West),
BOMBAY—62.

ಕುಂದಾಪುರ ಮುನ್ಸೀಫ್ ಕೋರ್ಟಿನಲ್ಲಿ

E. xc. 2/1970. S. C. 490/59

ಕೃಷ್ಣಪ್ಪ ಶೆಟ್ಟಿ —ಅರ್ಜಿದಾರ
ಬಾಗಿ ಶೆಡ್ತಿ ಸಹಾ —ಎದುರು

ಅರ್ಜಿದಾರನ ಕಡೆಯಿಂದ ಈ ಮೂಲಕ ಜಾಹೀರ ಮಾಡಿಕೊಳ್ಳುವದೇನೆಂದರೆ

1 ಬಾಗಿ ಶೆಡ್ತಿ—ರುಕ್ಮಿಣಿ ಶೆಡ್ತಿ ಮಗಳು. 2 ಮುತ್ತಕ್ಕ ಶೆಡಿ—ಪುಟ್ಟಮ್ಮ ಶೆಡ್ತಿ ಮಗಳು. 3. ಮಹಾಬಲ ಶೆಟ್ಟಿ—ಪುಟ್ಟಮ್ಮ ಶೆಡ್ತಿ ಮಗ. 4. ಶೀಶೆಡಿ—ಮಂಜಮ್ಮ ಶೆಡ್ತಿ ಮಗಳು. 5 ತೇಜಪ್ಪ ಶೆಟ್ಟಿ—ನರಸಮ್ಮ ಶೆಡ್ತಿ ಮಗ. 7 ಮಂಜಮ್ಮ ಶೆಡ್ತಿ, 8 ಪುಟ್ಟಮ್ಮ ಶೆಡ್ತಿ, 9 ಕೂಸ ಶೆಡ್ತಿ—ಬಾಳಕುದ್ರು ಮುತ್ತಯ್ಯ ಶೆಟ್ರ ಮಕ್ಕಳು. 10 ಆನಂದ ಶೆಟ್ಟಿ ಹಿರಿಯೂರು ದೊಡ್ಡಮನೆ ಚಂದಯ್ಯ ಶೆಟ್ರ ಮಗ.

1ರಿಂದ 5ನೇ ವರೇಗಿನ ಪ್ರತಿವಾದಿರು ಉಡುಪಿ ತಾಲ್ಲೂಕು ಹೊಸಾಳ ಗ್ರಾಮ. 7, 8, 9ನೇ ಪ್ರತಿವಾದಿರು ಉಡುಪಿ ತಾಲ್ಲೂಕು ಬಾಳಕುದ್ರು ಗ್ರಾಮ.

ಮೇಲ್ಕಂಡ ಅಮಲ್ಜಾರಿಯಲ್ಲಿ ಎದುರಿಗೆ ಬಾಬ್ತು ಸ್ಥಿರಾಸ್ತಿ ಯೇಲಂ ಮಾಡಿಸುವ ಗೋಸ್ಕರ ವಾದಿ ಹಾಜರು ಪಡಿಸಿದ ಯೇಲಂ ಮಿನ ಯಾಸ್ತಿಹಾರಿನ ಶರ್ತ ನಿರ್ಣಯಿಸುವ ಗೋಸ್ಕರ ತಾ. 29-12-70ಕ್ಕೆ ಅಮ್ಲೆರಿಕ್ಕಿಗೆ ಮುಂದೋಡಾಗಿಯದೆ. ಆ ಕುರಿತು ಪ್ರತಿವಾದಿಗಳು ಆಕ್ಷೇಪವಿದ್ದರೆ ಸದ್ರಿ ದಿವಸ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲರ ದ್ವಾರಾ ಹಾಜರಾಗಿ ಜಾಹೀರು ಪಡಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಅರ್ಜಿದಾರನ ಕಡೆಯಿಂದ ಈ ಮೂಲಕ ತಿಳಿಯಪಡಿಸಿದೆ.

U. Vittal Shetty
Advocate for Petitioner
Kundapur, date 24-11-70.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿ ಯಾದ ಭೋಜನ, ಸಕಲ ವಿಧದ ತಿಂಡಿತಿಫಸು
ಪಾಕೀಯಿಷಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಲೌಕಿಕ ರಾಷ್ಟ್ರಪ್ರವರ್ತಕ - ನೆಹರು

ಲೇಖಕರು:
ಪ್ರೊ: ಸಿದ್ಧೇಶ್ವರ ಪ್ರಸಾದ್,
ಕೇಂದ್ರ ನೀರಾವರಿ ಹಾಗು ವಿದ್ಯುಚ್ಛಕ್ತಿ ಮಂತ್ರಿಶಾಖೆಯ ಉಪಸಚಿವರು.

ನೆಹರೂರವರು ಮಾನವತಾವಾದಿ, ಸಮಾಜವಾದಿ, ಪ್ರಜಾಪ್ರಭುತ್ವವಾದಿ ಲೌಕಿಕ ರಾಷ್ಟ್ರವಾದಿಯಾಗಿದ್ದಂತೆ ಒಂದೇ ವಿಶ್ವ, ವಿಶ್ವಶಾಂತಿ ವಿಷಯಗಳ ಬಗೆಗೂ ನಿತಾಂತವಾಗಿ ಪ್ರತಿಪಾದಿಸಿದ ಧೀರರು ಜವಾಹರಲಾಲ ನೆಹರೂರವರು ತಾವು ರಾಜಕೀಯ ಪ್ರವೇಶ ಮಾಡಿದ ದಿನದಿಂದ ತಮ್ಮ ಕೊನೆಯುಸಿರಿನವರೆಗೂ ರಾಜಕಾರಣಿ, ದಾರ್ಶನಿಕ ಅಥವಾ ಮಹಾಪ್ರಧಾನಿ ಎಂಬ ಯಾವುದೇ ರೂಪದಲ್ಲಿ ಇರಲಿ, ತಮ್ಮ ಜೀವನ ತತ್ವಶಾಸ್ತ್ರಕ್ಕೆ ಅನುಗುಣವಾಗಿಯೇ ಸದಾ ವರ್ತಿಸಿದರು.

ಅನಿರೀಕ್ಷಿತವಾಗಿ ಹಾಗು ಶೀಘ್ರವಾಗಿ ಬೆಳೆದ "ತಲೆಮಾರಿನ ಅಂತರ"ವು ಇಂದು ನಾವು ಎದುರಿಸುತ್ತಿರುವ "ನಂಬುಗೆಯ ಬಿಕ್ಕಟ್ಟಿಗೆ" ಕೆಲಮಟ್ಟಿಗೆ ಕಾರಣವಾಗಿದೆ. ಇದಲ್ಲದೆ ತಾಂತ್ರಿಕ ಮುನ್ನಡೆಯು ನವತರುಣರ ಮನದಂತೆ ನಾಗಾಲೋಟದಲ್ಲಿ ಸಾಗುತ್ತದೆ. ತನ್ನ ಕಾಲಕ್ಕಿಂತಲೂ ಮುಂದೋಡಿದ ವಿಚಾರಶೀಲ ಸಂಪನ್ನರಾಗಿದ್ದ ಜವಾಹರಲಾಲರಿಂದ ನಾವೀ ಸಮಯದಲ್ಲಿ ಸ್ಫೂರ್ತಿ ಪಡೆಯುವುದು ಸ್ವಾಭಾವಿಕವಾಗಿದೆ.

1936ರಲ್ಲಿ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷಸ್ಥಾನದಿಂದ ಮಾತನಾಡುತ್ತ ಜವಾಹರಲಾಲ ನೆಹರೂರವರು ಭಾರತವು ಸಾಮ್ರಾಜ್ಯಶಾಹೀ ಅಥವಾ ಜಾತೀಯವಾದೀ ದೇಶವಾಗಲಾರದು ಎಂದು ಸಾರಿದ್ದರು. ಹದಿಮೂರು ವರ್ಷಗಳ ನಂತರ ಅವರು ದೇಶದ ಪ್ರಧಾನಿಗಳಾದಾಗ ತಾವು ಘೋಷಿಸಿದ ಧೋರಣೆಯನ್ನು ಅನುಸರಿಸುವುದು ಸಾಧ್ಯವೆಂದು ತೋರಿಸಿದರು. "ಪ್ರಪಂಚದ ಇತರ ಭಾಗಗಳಂತೆ ಭಾರತವೂ ಕಠಿಣ ಸಮಸ್ಯೆಗಳನ್ನು ಎದುರಿಸುತ್ತಿದೆ. ಆದರೆ ಭಾರತದ ಬಗ್ಗೆ ನನಗೆ ವಿಶ್ವಾಸವಿದೆ. ಭಾರತವೂ ಈ ಎಲ್ಲ ಕಠಿಣ ಪ್ರಸಂಗಗಳನ್ನು ಜಯಪ್ರದವಾಗಿ ಎದುರಿಸಬಲ್ಲುದಷ್ಟೇ ಅಲ್ಲ. ಇನ್ನೂ ಹೆಚ್ಚಿನ ಕಾರ್ಯವನ್ನು ಮಾಡಿತೋರಿಸಬಲ್ಲುದು" ಎಂದು ಜವಾಹರಲಾಲರು ಘೋಷಿಸಿದರು. ಗತಕಾಲದ ಬಗ್ಗೆ ಭರವಸೆ ಭಾರತವು ನಿತಾಂತವಾಗಿ ಪ್ರಗತಿಸಬೇಕೆಂಬುದು ಜವಾಹರಲಾಲರಿಗೆ ಎಡೆಬಿಡದೆ ಹಿಂಬತ್ತಿದ ವಿಚಾರವಾಗಿತ್ತು. ಭಾರತ ಸಂಶೋಧನೆ ಎಂಬ ತಮ್ಮ ಬೃಹತ್‌ಗ್ರಂಥದಲ್ಲಿ "ನಮಗಿರುವ ವೇಳೆ ಅಲ್ಪ; ಪ್ರಪಂಚವು ಶರವೇಗದಲ್ಲಿ ಬೆಳೆಯುತ್ತಿದೆ. ನಾವು ಕ್ರಮಿಸಬೇಕಾದ ಮಾರ್ಗ ಸುದೀರ್ಘ. ನಾವು ತ್ವರಿತಗತಿಯಲ್ಲಿ ಸಾಗಲೇಬೇಕು" ಎಂದು ಛವಿಸಾಡಿದ್ದರು.

ಆರಾಮ್ ಹರಾಮ್ ಹೈ

ಸರಕಾರದ ಅಗ್ರ ಅಧಿಪತಿಯಾಗಿ ಜವಾಹರಲಾಲರು "ಆರಾಮ್ ಹರಾಮ್ ಹೈ" ಎಂದು ಘೋಷಣೆಯನ್ನು ನೀಡಿದರು. "ನಾವು ಒಂದು ಸ್ಥಿತಿಗೆ ಮುಟ್ಟಬೇಕಾದರೆ ನಾವು ಓಡಲೇಬೇಕು. ಸಂಕ ದಭರಿತ ಭಾರತವನ್ನು ಕಟ್ಟಲು "ಅನೇಕ ಮೈಲು"ಗಳ ದಾರಿಯನ್ನು ಕ್ರಮಿಸಬೇಕು — ಎಂದು ತಮ್ಮ ಜೀವನದ ಕೊನೆಯುವರೆಗೂ ಹೇಳಿದರು. ನೆಹರೂರವರ ಕಲ್ಪನೆಯ ಭಾರತ ಪೂರ್ಣವಾಗದಂತಹ ಕಲ್ಪನೆಯು ಆಗಿರಲಿಲ್ಲ. ಪ್ರಮಾಣಿಕವಾಗಿ ನಾವೆಲ್ಲ ದುಡಿದರೆ ಇಂತಹ ಸಮೃದ್ಧಿ ಭಾರತವನ್ನು ಕಟ್ಟಲು ಸಾಧ್ಯ.

ನಮ್ಮ ಪುರಾತನ ನಾಗರಿಕತೆಗುನ್ನು ಕ್ಷಜಿಸಿಯ ಮೇಲಿನ ಗುರಿಯನ್ನು ಮುಟ್ಟಲು ನೆಹರೂರವರು ಬಯಸಿದರು. ವಿದೇಶದಲ್ಲಿ ಅವರು ಶಿಕ್ಷಣ ಪಡೆದಿದ್ದರೂ ಆಧುನಿಕ ದೃಷ್ಟಿಕೋನವನ್ನು ಬೆಳೆಸಿ ಕೊಂಡಿದ್ದರೂ ನೆಹರೂರವರು ನಮ್ಮ ಆಧ್ಯಾತ್ಮ ಪರಂಪರೆಯ ಮುಂಭಾಗವಾಗಿ ಪ್ರಗತಿಶೀಲ ತಾಂತ್ರಿಕ ಶಕ್ತಿ ಬೆಳೆದು ಬರಬೇಕು ಎಂದು ಬಯಸಿದರು. ನಾವು ಬೇರೆ ಬೇರೆ ಮತಧರ್ಮಗಳಿಗೆ ಅಂಟಿಕೊಂಡಿದ್ದರೂ, ಆದರಿಂದ ನಮ್ಮೆಲ್ಲರ ಸ್ವತಂತ್ರದ ದೇಶದ ಸಾಂಸ್ಕೃತಿಕ ಬೆಳವಣಿಗೆ ವ್ಯತ್ಯಯವಾಗಲಾರದು, ಎಂಬುದು ಅವರ ದೃಢವಾದ ನಂಬಿಕೆ.

ಇಪ್ಪತ್ತು ವರ್ಷಗಳ ಹಿಂದೆ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ನೆಹರೂರವರು ಹೇಳಿದ್ದರು. "ಧರ್ಮದ ಗುಂಪುಗಾರಿಕೆಯ ಆಧಾರದ ಮೇಲೆ ರಾಜಕೀಯ ಅಥವಾ ಆರ್ಥಿಕ ಹಕ್ಕುಗಳು ಏಕೆ ಅವಲಂಬಿಸಬೇಕೆಂಬುದು ನನಗೆ ಹಿಡಿಸದ ವಿಷಯ. ಧಾರ್ಮಿಕ ಸ್ವಾತಂತ್ರ್ಯವಿರಬೇಕೆಂಬುದನ್ನು ನಾನು ಒಪ್ಪುತ್ತೇನೆ. ಭಾರತದಲ್ಲಿ ಈ ಹಕ್ಕು ಅನೂಚಾನವಾಗಿ ಬಂದದ್ದೂ ಇದೆ. ಧರ್ಮ ಸಂಸ್ಕೃತಿಗಳ ಸ್ವಾತಂತ್ರ್ಯಗಳು ಮುಂದುವರಿಯಲು ಯಾವ ತೊಂದರೆಗಳೂ ಇರಬಾರದು.

ಜಾತ್ಯಾತೀತವಾದ ಅಥವಾ ಲೌಕಿಕವಾದ ನೆಹರೂರವರಿಗೆ ಕೇವಲ ರಾಜಕೀಯ ಆವಶ್ಯಕತೆಯಾಗಿರದೆ ಅದು ಅವರ ಧಾರ್ಮಿಕ ಶ್ರದ್ಧೆಯ ಕುರುಹೂ ಆಗಿತ್ತು. ಅವರು ಘೋಷಿಸಿದರು — "ಭಾರತದ ಬಗ್ಗೆ ಹೇಳುವುದಾದರೆ ನಾನು ನಿಶ್ಚಯವಾಗಿ ಹೇಳಬಲ್ಲೆ. ಅಂತರರಾಷ್ಟ್ರೀಯತ್ವವನ್ನು ಬಲವಾಗಿ ಬೆಂಬಲಿಸುವ ಜಾತ್ಯಾತೀತ ಹಾಗೂ ರಾಷ್ಟ್ರೀಯ ಮಾರ್ಗದಲ್ಲಿ ನಾವು ಮುಂದುವರಿಯುವೆವು. ಸದ್ಯ ಗೊಂದಲ ಪರಿಸ್ಥಿತಿ ಏನೇ ಇರಲಿ; ಹಿಂದಿನಂತೆ ಮುಂದೆಯೂ ಭಾರತದಲ್ಲಿ ಅನೇಕ ಧರ್ಮಗಳು ಗೌರವ ಪಡೆಯುವವು. ಹಾಗೆಯೇ ಸನ್ಮಾನಗೊಳ್ಳುವವು. ಸಹಿಷ್ಣು ರಾಷ್ಟ್ರೀಯತೆ ಆಗ ಮಾತ್ರ ಸಾಧ್ಯ ಎಂದು ನಾನು ಹಾರೈಸುವೆ. ನಮ್ಮ ಜನರ ಬದ್ಧತೆಯಲ್ಲಿ ನನಗೆ ವಿಶ್ವಾಸವಿದೆ. ಅಂತರಾಷ್ಟ್ರೀಯ ಮಾದರಿಯ "ಒಂದು ಜಗತ್ತು" ಕಲ್ಪನೆ ಗುರಿಯತ್ತ ನಡೆಯಲು ನಾವು ಪ್ರಯತ್ನಿಸಬೇಕು."

ಕಟ್ಟುಪಾಡಿನಿಂದ ಸಮಾಜವಾದವಿಲ್ಲ

ಸಮಾಜವಾದದ ಬಗ್ಗೆ ಪಂಡಿತಜೀಯ ಮನೋಭಾವ ಸಂಕುಚಿತವಾಗಿರಲಿಲ್ಲ. ಆದರೆ ಉಳಿದ ರಾಷ್ಟ್ರಗಳ ಪ್ರಗತಿಯಿಂದ ನಾವು ನೋಡಿ ಕಲಿತು ಅಳವಡಿಸಿಕೊಳ್ಳಬಹುದು ಎಂಬುದು ಅವರ ವಿಚಾರ. ಅದೇ ಕಾಲಕ್ಕೆ ಪರರ ಅಂಧಾನುಕರಣೆಯೂ ಬೇಡ ಎಂದು ಅವರು ಎಚ್ಚರಿಸಿದ್ದುಂಟು. "ಭಾರತದಲ್ಲಿ ಸಮಾಜವಾದವು ಬೆಳೆದು ಬರಬೇಕಾದರೆ ಅದು ಭಾರತೀಯ ಪರಿಸ್ಥಿತಿಗೆ ಅನುಗುಣವಾಗಿ ಬೆಳೆಯಬೇಕು; ಮತ್ತು ಭಾರತದಲ್ಲಿನ ಪರಿಸ್ಥಿತಿಯ ಬಗ್ಗೆ ಸೂಕ್ಷ್ಮ ಅಭ್ಯಾಸ ನಡೆಸಬೇಕು.... ಸಮಾಜವಾದವನ್ನುಳಿದು ದೇಶದ ಜನತೆಯ ದಾರುಣ ದಾರಿದ್ರ್ಯ, ನಿರುದ್ಯೋಗ ಅಧೋಮುಖ ಹಾಗು ಕಠಿಣ ಪರಿಸ್ಥಿತಿಗಳ ನಿವಾರಣೆಗೆ ಬೇರೆ ಮಾರ್ಗ ನನಗಂತೂ ತೋರದು" ಎಂದು ಪಂಡಿತಜೀ ಹೇಳಿದರು. ಪಂಡಿತಜೀಯವರ ದೂರದೃಷ್ಟಿಯ ಫಲವಾಗಿ ನಮಗೆ ಅನುಭವವಾಗಿದೆ. ಆದ್ದರಿಂದಾಗಿ ನಾವು ಪಂಡಿತಜೀಯವರಿಗೆ ಕೃತಜ್ಞರಾಗಿರಬೇಕು. ಯೋಜನಾಬದ್ಧ ಆರ್ಥಿಕ ಬೆಳವಣಿಗೆ, ಸರಕಾರೀ ರಂಗದ ಸಂವರ್ಧನೆ, ಜೀವವಿಮೆಯ ರಾಷ್ಟ್ರೀಕರಣ, ಸರಕಾರೀ ವ್ಯಾಪಾರ ವಿಸ್ತರಣೆ, ಜಮೀನ್ದಾರಿ ನಿರ್ಮೂಲನೆ, ಆಧುನಿಕ ದೇವಾಲಯಗಳೆಂದು ಖ್ಯಾತಿಪಡೆದಿರುವ ಬೃಹದ್ ನೀರಾವರಿಯೋಜನೆಗಳು, ಗ್ರಾಮಾಂತರ ವಿದ್ಯುತ್‌ಕರಣ, ವಿದ್ಯುತ್‌ಚಾಲಿತ ಕೊಳವೆಬಾವಿಗಳು, ಗ್ರಾಮಾಂತರ ವಿಭಾಗಕ್ಕೆ ಸಾಲಸೌಲಭ್ಯ ಇವೆಲ್ಲ ಜವಾಹರಲಾಲರ ದೂರದೃಷ್ಟಿಯ ಶ್ರೇಷ್ಠ ದಿಗ್ದರ್ಶನದ ಫಲಗಳೇ ಆಗಿವೆ.

ಇಂತಹ ಮಹಾಪುರುಷನಿಗೆ ಭಾರತೀಯರು ತಮ್ಮ ಪ್ರೇಮಾದರಗಳನ್ನು ಸೂರೆ ಮಾಡಿದ್ದರೆ ಅದರಲ್ಲಿ ಆಶ್ಚರ್ಯವೇನ?

ಪ್ರತಿಭಾಸಂಪನ್ನರು ಹತಪ್ರಭರು

(ನಾಲ್ಕನೇ ಪುಟದಿಂದ)

"ರಾಮನ್ ರಂತಹ ವಿಜ್ಞಾನ ಶಾಸ್ತ್ರದ ಮೇಲೆಯೇ ಪರಿಣಾಮ ಬೀರಿತು. ಅವರಿಗೆ ಜನಪ್ರಿಯತೆಯನ್ನು ಗಳಿಸಿಕೊಟ್ಟಿತು"

"ನೋಬಲ್ ಪಾರಿತೋಷಕವನ್ನೂ ಡಾ| ರಾಮನ್ ಪಡೆದರು..."

"ಇಂತಹ ವಿಶ್ವಮಾನ್ಯ ವಿಶ್ವ ವಂದ್ಯನನ್ನು ನಾವು ನೋಡಿಕೊಂಡದ್ದು ಹೇಗೆ? ಆತನಿಗೆ ಗೌರವ ತೋರಿಸಿದ್ದು ಹೇಗೆ?"

"ನಮ್ಮ ರಾಜಕೀಯ ಮುಖಂಡರಗಳ ದೃಷ್ಟಿಕೋಣ ಸಂಪೂರ್ಣ ಬದಲಾಗುವವರೆಗೆ ನಮ್ಮವರ ಪ್ರತಿಭೆಯ ಲಾಭ ನಮಗೆ ದಕ್ಕುವುದಿಲ್ಲ."

"ಹೊಟ್ಟೆಯಿಟ್ಟು, ಮರಿಮಾಡಿ, ಅನ್ನಾಹಾರ ನೀಡಿದ ತಾಯನ್ನು ಮುಕ್ತ ಮಾಡಿದೊಡನೆಯೇ ಹಾರಿಹೋಗುವ ಪಕ್ಷಿ ಸಂಕುಲದಂತೆ, ಇಲ್ಲಿ ಹುಟ್ಟಿ, ಬೆಳೆದು ಶಿಕ್ಷಣ ಪಡೆದ ವಿದೇಶಗಳಿಗೆ ಪ್ರತಿಭಾ ಸಂಪನ್ನರು ಉಚ್ಚ ಶಿಕ್ಷಣದ ನೆಪದಲ್ಲಿ ಹೋಗುತ್ತಾರೆ."

"ರಾಜಕೀಯ ಮುಖಂಡರುಗಳು ಮಾತ್ರ ಒಂದಲ್ಲ ಒಂದು ರೀತಿಯಿಂದ ಸರಕಾರಿ ಬೊಕ್ಕಸದಿಂದ ಸಂಚಾರ ಮಾಡಿ ಮರಳಿ ಬರುತ್ತಾರೆ"

"ಇಲ್ಲಿ ಅವಕಾಶವಿಲ್ಲದೆ ದೂರಹೋದವರೂ ಇದೆಯಿದಾದಾಗ ಓಡಿ ಓಡಿ ಬರುತ್ತಾರೆ"

"ಶ್ರೀ ವಿ. ಕೆ. ಕೃಷ್ಣ ಮೆನನ್...."

"ಹ್ಞಾಂ, ಅವರೂ ಒಬ್ಬರು ...."

"ಅಲ್ಲರಿ, ಇಂಥ ದೇಶ ಉನ್ನತಿ ಹೊಂದುವುದು ಹೇಗೆಂ. ?"

"ದೇಶದ ಪ್ರತಿಭಾವಂತರು ದೇಶವನ್ನು ಕಡೆಗಣಿಸಬೇಕಾಗುತ್ತದೆ; ದೇಶದ ರಾಜಕಾರಣಿಗಳು ದೇಶಹಿತಕ್ಕೆ ಮಾರಕರಾಗುತ್ತಲೇ ಹೋಗುತ್ತಾರೆ. ಮತ್ತೆ ದೇಶದ ಗತಿ ಏನಾಗಬೇಕು. ?"

"ಆಗೋದೇನ ? ದೇವರು ಕೈಬಿಟ್ಟ ದೇಶವನ್ನು ದೇವರೇ ಎತ್ತಿ ಹಿಡಿಯಬೇಕು...."

"ಹ್ಞಾಂ...."

"ಹ್ಞಾಂ..."

"ಏನಾ ಆಕೆ ಬರುತ್ತಿದೆ?"

"ಮತ್ತೇನು, ತುಂಬಾ ಹೊತ್ತಾಯ್ತು...."

"ಹ್ಞಾಂ...."

— ಗೋರಾ

ಸಂಸತ್ತಿನ ವಿಸರ್ಜನೆಗೆ ಕಾಲ ಅಪಕ್ವ

(ನಾಲ್ಕನೇ ಪುಟದಿಂದ)

ರಲ್ಲೇ ಕೆಲವರಿಗೆ ಅಸಮಾಧಾನ ತಂದಿದೆ. ಈ ಅಸಮಾಧಾನ ಸ್ಫೋಟಕ ಘಟ್ಟವನ್ನು ಮುಟ್ಟಿಲ್ಲವೇನೋ ನಿಜ. ಬಚ್ಚೆಯಲ್ಲಿ ಕಟ್ಟಿಟ್ಟ ಬೆಂಕಿ ಎದ್ದು ಕಾಣಲು ಬಹು ಸಮಯ ಅವಶ್ಯ.

ಒರಿಸ್ಸಾವು ಆಕೆಯ ಕೈಗಳಿಂದ ಎಂದೋ ಜಾರಿಹೋಗಿದೆ. ಬಿಜೂಪಟ್ನಾಯಕರ ಮೇಲೆ ಶಿಸ್ತಿನ ಕ್ರಮ ಕೈಗೊಂಡ ಮೇಲಂತೂ ಆಕೆಯ ಪಕ್ಷ ಸತ್ತುಹೋಗಿದೆ. ಅದು ಮತ್ತೆ ಜೀವ ಹಿಡಿಯಬೇಕಾದರೆ, ಕಾಯಕಲ್ಪ ಚಿಕಿತ್ಸೆಯಾಗಬೇಕು. ಅಂತಹ ವೈದ್ಯರು ಯಾರೂ ಸದ್ಯ ಆಕೆಯ ಬಳಿ ಇಲ್ಲ.

ತಮಿಳುನಾಡು ಆಕೆಗೆ ಪರವಾಗಿಯೇನೋ ಇದೆ. ದ್ರಾ. ಮು. ಕ. ವು ಆಕೆಯ ಸಹಕಾರವನ್ನು ಉಪೇಕ್ಷಿಸಬಯಸುವುದಿಲ್ಲ. ಆದ್ದರಿಂದಲೇ ಉತ್ತರಪ್ರದೇಶದಲ್ಲಿ ರಾಜ್ಯಪಾಲರ ಕ್ರಮ ಅಸಮರ್ಥನೀಯವೆಂದು ಘೋಷಿಸಿದರೂ ಮತದಾನದ ವೇಳೆ ಆಕೆಗೇ ಕೈಯೆತ್ತಿತು. ಹಾಗಿದ್ದರೂ "ದ್ರಾ ಮು.ಕ"ದ ರಾಜಕೀಯದಲ್ಲೂ ಬಿರುಕು ಎದ್ದಿದೆ. ಯಾವ ಕಾರಣದಿಂದ ಅದು ತಮಿಳುನಾಡಿನಲ್ಲಿ ಗೆದ್ದು ಬಂದಿತ್ತೋ ಅದೇ ಕಾರಣದಿಂದದು ಕುಸಿಯತೊಡಗಿದೆ. ಕಾಮರಾಜರು ಸುಬ್ರಮಣ್ಯಂರನ್ನೂ ಕರುಣಾನಿಧಿಯವರನ್ನೂ ಮೆಟ್ಟಿನಿಲ್ಲುವ ಸಾಹಸಕ್ಕಿಳಿದಿದ್ದಾರೆ. ಸದ್ಯ ನಡೆಯಲಿರುವ ನಗರಸಭಾ ಚುನಾವಣೆಗಳು ಅಲ್ಲಿನ ಬಲಾಬಲಕ್ಕೆ ಕನ್ನಡಿ ಹಿಡಿಯಬಹುದು.

ಕೇರಳದಲ್ಲಿ ಬಲಕಮ್ಯೂನಿಸ್ಟರ ನೇತೃತ್ವದ ಸಂಯುಕ್ತ ರಂಗ ಪ್ರಧಾನಿಯನ್ನು ಬೆಂಬಲಿಸುತ್ತದೆ; ಏಕೆಂದರೆ, ಅದರ ಉಳಿವಿಗೆ ಆಕೆಯ ಆಶೀರ್ವಾದ ಅಗತ್ಯ.

ಕರ್ನಾಟಕವು ಇಂದೂ ಮುಂದೂ ಆಕೆಯ ಕೈಗಳಿಗೆ ದಕ್ಕುವುದಿಲ್ಲ. ಆದರೂ ಆಕೆಯಿನ್ನೂ ಆಶೆ ಕಟ್ಟಿಕೊಂಡಿದ್ದಾರೆ. ಅದಕ್ಕೆಂದೇ ಮಹಾರಾಷ್ಟ್ರ—ಕರ್ನಾಟಕ ಗಡಿವಿವಾದದಲ್ಲಿ ಕೈಹಾಕುವುದಿಲ್ಲ. ಕಾವೇರೀ ನೀರಿನ ವಿವಾದವನ್ನೂ ತೀರ್ಮಾನಿಸುವುದಿಲ್ಲ. ಮಹಾಜನ ವರದಿಯನ್ನು ಅವರು ಸ್ವೀಕರಿಸಿದರೆ, ಮರಾಠಿಗರನ್ನು ಪೂರ್ಣ ಕಳೆದುಕೊಳ್ಳುತ್ತಾರೆ. ಆಗ ಅವರೂ ಚವಾನರೂ ನಾಯಕರೂ ಇಲ್ಲವಾಗುತ್ತಾರೆ. ಅಂತಹ ಮೂರ್ಖತನವನ್ನು ಮಾಡದೆ ಅವರು ಮೊಣಕೈಗಂಟಿಗೆ ಬೆಳಗಾವಿ ಆಸೆ ಹಚ್ಚಿಯೇ ಮುಂದಿನ ಚುನಾವಣೆಯನ್ನು ಅದು ಎಂದು ಬೇಕಾದರೂ ನಡೆಯಲಿ— ಎದುರಿಸುತ್ತಾರೆ.

ಆಂಧ್ರ ಪ್ರದೇಶದಲ್ಲಿ ಮೂವರು ರೆಡ್ಡಿಗಳು ಮೂರಾಬಟ್ಟೆಯಾಗಿದ್ದಾರೆ. ಸಂಜೀವ ರೆಡ್ಡಿ ಸಿಂಡಿಕೇಟ್, ಚೆನ್ನಾರೆಡ್ಡಿ ತೆಲಂಗಾಣವಾದಿ ಮತ್ತು ಬ್ರಹ್ಮಾನಂದ ರೆಡ್ಡಿ ಇಂಡಿಕೇಟ್. ಇತ್ತೀಚೆಗಿನ ಮಧ್ಯಾವಧಿ ಚುನಾವಣೆಗಳು ಇಂಡಿಕೇಟಿಗೆ ಆಶಾದಾಯಕವಾಗಲಿಲ್ಲ. ಮೇಘಾಲಯವನ್ನು ಮೊದಲು ಅಂತರಾಜ್ಯವೆಂದು ಘೋಷಿಸಿ ಮತ್ತೀಗ ಅದಕ್ಕೆ ಪೂರ್ಣ ರಾಜ್ಯದ ಸ್ಥಾನಮಾನ ನೀಡಲು ಮುಂಬಂದ ಶ್ರೀಮತಿ ಗಾಂಧಿ ತೆಲಂಗಾಣ ರಾಜ್ಯವನ್ನು ಒಪ್ಪುವುದಿಲ್ಲ. ಒಪ್ಪಿದರೆ, ಬ್ರಹ್ಮಾನಂದರ ತಲೆ ಬಾಗುವ ಜತೆಗೆ ಆಕೆಯ ಭವಿಷ್ಯ ಮಸುಕಾಗುತ್ತವೆ.

ಮಧ್ಯಪ್ರದೇಶದ ಕತೆಯೂ ವಿಲಕ್ಷಣ. ಅಲ್ಲಿ ರಾಜಮಾತೆ ಸಿಂಧಿಯಾ ಇನ್ನೂ ಪ್ರಭಾವಶಾಲಿಯಾಗಿದ್ದಾರೆ. ಮಾಜಿ ರಾಜಕೀಯ ನಾಟಕದ ಮಹಾನಾಯಕ ಗೋವಿಂದ ನಾರಾಯಣಸಿಂಗರೂ ಇದ್ದಾರೆ. ಶ್ರೀ ಶುಕ್ಲರ ಮೇಲೆ ಅವರ ಪಕ್ಷೀಯರ ವಿಶ್ವಾಸ ಹಾರಿಹೋಗುತ್ತಿದೆ. ಅವರ ಸರಕಾರವೂ ಪತನದ ದಾರಿ ಹಿಡಿಯಬಹುದು. ಶ್ರೀ ಡಿ. ಪಿ. ಮಿಶ್ರರೂ ತಮ್ಮ ಹಿಂದಿನ ಹಿಡಿತವನ್ನು ಹಿಡಿದುಕೊಂಡಿಲ್ಲ.

ಗುಜರಾತದಲ್ಲಿ ಇಂಡಿಕೇಟ್ ಗಂಗೆ ಹಿತೇಂದ್ರರ ಟೋಪ್ಪೀ ಮೇಲೆ ಕುಳಿತುಕೊಳ್ಳುವ ಸಾಹಸಕ್ಕೆ ಮತ್ತೆ ತೊಡಗಿದೆ. ಆದರೆ, ಅದು ತನ್ನ ಕಾರ್ಯದಲ್ಲಿ ಯೇನಕೇನ ಸೋಲುಂಡು ಕೊರಗುವುದು ಸಹಜ.

ರಾಜಸ್ಥಾನವು ಇದುವರೆಗೆ ಅಬಾಧಿತವಾಗಿದ್ದರೂ ಇದೀಗ ಅಲ್ಲಿಯೂ ಇಂಡಿಕೇಟ್ ಕೋಳಿ ಪಕ್ಕ ಮುರಿದುಕೊಳ್ಳುವಂತಾಗಿದೆ. ಇಬ್ಬರು ಪ್ರಭಾವಶಾಲಿಗಳಾದ ಮಾಜಿ ರಾಜ—ಮಹಾರಾಜರು ಈಗ ಆಕೆಗೆ ಸಂಪೂರ್ಣ ಎದುರು ನಿಂತಿದ್ದಾರೆ. ಪಂಜಾಬು ಚಂಡೀಗಢ ನಗರ ದಾನಕ್ಕಾಗಿ ಪ್ರಧಾನಿ ಗಾಂಧಿಯನ್ನು ಬೆಂಬಲಿಸಿದರೂ ಫಾಜಿಲ್ಕಾವನ್ನು ಹರ್‍ಯಾನಕ್ಕೆ ಕೊಡಲು ಒಲ್ಲದಾಗಿದೆ. ಆದರೆ, ಅದನ್ನು ಕೊಡದೆ ಹೋದರೆ, ಹರ್‍ಯಾನದ ಅಪಸ್ವರಕ್ಕೆ ಪ್ರಧಾನಿ ಗುರಿಯಾಗುತ್ತಾರೆ. ಜಮ್ಮು—ಕಾಶ್ಮೀರವೂ ಹಿಂದಿನಂತೆ ಇಂದು ಇಲ್ಲ. ಅಲ್ಲಿಯೂ ಆಕೆಯ ಪ್ರಭಾವ ಇಳಿಮುಖವಾಗಿದೆ.

ಶ್ರೀಮತಿ ಗಾಂಧಿ ತನ್ನ ಹೃದಯ ತೆರೆದಿದೆಯೆಂದೂ, ಜನಾಪೇಕ್ಷೆಯನ್ನು ಪೂರೈಸುವುದೇ ತನ್ನ ಗುರಿಯೆಂದೂ ತೋರಿಸಿಕೊಳ್ಳುವ ಹೊಸ ಪ್ರಯತ್ನ ಮಾಡುತ್ತಿದ್ದಾರೆ. ಮೇಘಾಲಯ ಮತ್ತು ಹಿಮಾಚಲ ಪ್ರದೇಶಗಳಿಗೆ ಪೂರ್ಣರಾಜ್ಯದ ಸ್ಥಾನಮಾನ ನೀಡಲು ಮುಂದಾಗಿದ್ದಾರೆ. ಇದೇ ಸೌಲಭ್ಯ ಮಣಿಪುರಕ್ಕೂ ದೊರೆಯಬಹುದು. ಹೀಗೆ ಹಳೆಯ ಸ್ನೇಹಿತರನ್ನು ಕಳೆದುಕೊಂಡರೂ ಹೊಸ ಸ್ನೇಹಿತರನ್ನು ಪಡೆಯುವ ಪ್ರಯತ್ನದಲ್ಲಿದ್ದಾರೆ. ಆದರೆ, ಅವರು ಪಡೆದದ್ದಕ್ಕಿಂತ ಕಳೆದುಕೊಂಡದ್ದೇ ಹೆಚ್ಚು ಎಂಬುದು ನಿರ್ವಿವಾದ.

ಇಂದು ಶ್ರೀಮತಿ ಗಾಂಧಿಗಿರುವ ಅನುಕೂಲವೆಂದರೆ, ಆಕೆಯನ್ನು ವಿರೋಧಿಸುವವರು ತಂತಮ್ಮಲ್ಲೇ ಹೊಡೆದಾಡುತ್ತಿರುವುದು. "ಮಹಾಮೈತ್ರಿ"ಯ ಪ್ರಶ್ನೆ ಬಂದಾಗ ಇದು ಭುಗಿಲೆದ್ದಿತು. ಹೊಂದಾಣಿಕೆಯು ಪ್ರಶ್ನೆಯುಳಿಯಿತು ಅಷ್ಟೆ. ಇದಕ್ಕೆ ಕಾರಣವೆಂದರೆ ಒಂದೊಮ್ಮೆ ಜಾತೀಯವೆಂದೋ ಪ್ರತಿಗಾಮಿಗಳೆಂದೋ ಕರೆದು ಹೀಗಳೆದವರೊಡನೆಯೇ ಸಖ್ಯ—ಹೊಂದಾಣಿಕೆ ಸಿಂಡಿಕೇಟ್ ಮಾಡಿಕೊಳ್ಳಬೇಕಾಗಿ ಬಂದುದು.

ಪ್ರಧಾನಿಯವರು ಸಾರ್ವತ್ರಿಕ ಚುನಾವಣೆಯನ್ನು ೧೯೭೨ರಲ್ಲಿ ಎದುರಿಸುವ ಸಿದ್ಧತೆ ನಡೆಸಿದರೂ ಸಾಧ್ಯತೆ ಬಹಳ ಕಡಿಮೆ. ಇಂದಿನ ಪರಿಸ್ಥಿತಿಯನ್ನು ವೀಕ್ಷಿಸುವಾಗ ಒಂದು ಮಾತು ನಿಜ—ತಮಗೆ ಕಾಲ ಪರಿಪಕ್ವವಾಗಿದೆಯೆಂದು ಶ್ರೀಮತಿ ಗಾಂಧಿಯವರ ಆತ್ಮಸಾಕ್ಷಿಗೆ ಮನವರಿಕೆಯಾದೊಡನೆಯೇ ಅದು ನಡೆಯುತ್ತದೆ. ಇಂದಿಗೂ ಚುನಾವಣೆಗೂ ನಡುವೆ ಮೂರು—ಆರು—ಒಂಬತ್ತು— ಹನ್ನೆರಡು—ಹದಿನೈದು ತಿಂಗಳುಗಳ ಅಂತರವಿರಬಹುದು. ರಾಜ್ಯನೀತಿಯ ಅನಿಶ್ಚಿತತೆಯ ಗಾಳಿ ಇಲ್ಲಿಯೂ ಅನಿಶ್ಚಿತತೆಗೆಡೆ ಕೊಟ್ಟಿದೆ. ಸೋವಿಯತ್ತು ನೀಡಿದ ಸಲಹೆಯೇನು ಎಂಬ ಅನುಮಾನ ಸತ್ಯ ವ್ಯಕ್ತವಾಗಲಿದೆ.

ಕಲಿಯಲು ಬಂದಿದ್ದೇನೆ; ಸಲಹೆ ನೀಡಲು ಬಂದಿಲ್ಲ

ಮಣಿಪಾಲದಲ್ಲಿ ಶ್ರೀ ಜಿ. ಡಿ. ಬಿರ್ಲಾ

ಮಣಿಪಾಲದಲ್ಲಿ ಡೆಂಟಲ್ ಕಾಲೇಜಿನ ಹೊಸ ಕಟ್ಟಡದ ಉದ್ಘಾಟನೆಯನ್ನು ತಾರೀಕು 28-11-70ರಂದು ವಿಖ್ಯಾತ ಕೈಗಾರಿಕೋದ್ಯಮಿಗಳೂ ಉದಾರ ದಾನಿಗಳೂ ಆದ ಶ್ರೀ ಜಿ. ಡಿ. ಬಿರ್ಲಾ ಅವರು ನೆರವೇರಿಸುತ್ತಾ, ಮನುಷ್ಯನು ತನ್ನ ಕರ್ತವ್ಯವನ್ನು ನಿರ್ವಹಿಸಿ ತನ್ನ ಶ್ರಮದ ಫಲವನ್ನು ಇತರರು ಅನುಭವಿಸುವಂತೆ ಮಾಡುವುದರಲ್ಲಿ ಆನಂದವು ಅಡಗಿದೆ ಎಂದರು.

ಮಣಿಪಾಲದಲ್ಲಿ ಪವಾಡದಂತೆ ನಡೆಯುತ್ತಿರುವ ವಿದ್ಯಾ ಪ್ರಯೋಗಗಳನ್ನೂ ಕಣ್ಣಾರೆ ಕಂಡ ಶ್ರೀ ಬಿರ್ಲಾರವರು ಡಾ| ಟಿ. ಎಂ. ಎ. ಪೈಯವರ ವ್ಯಯಕ್ತಿಕ ತ್ಯಾಗ ಮನೋಭಾವದ ಸೇವೆಯ ಫಲವೇ ಈ ಅಸಾಮಾನ್ಯ ಪ್ರಗತಿಗೆ ಕಾರಣ ಎಂದು ಶ್ಲಾಘಿಸಿದರು.

ಇಂದು ರಾಷ್ಟ್ರವನ್ನು ಕಾಡುತ್ತಿರುವ ಮಹಾ ಸಮಸ್ಯೆ ಎಂದರೆ ಅಜ್ಞಾನ, ಇದರಿಂದಲೇ ಇನ್ನೆಲ್ಲ ಅನಾನುಕೂಲತೆಗಳು ಹುಟ್ಟಿಕೊಳ್ಳುತ್ತವೆ ಎಂದು ನುಡಿದ ಬಿರ್ಲಾ ಅವರು ಸನ್ಮಾರ್ಗದ ಶಿಕ್ಷಣವು ಅಜ್ಞಾನವನ್ನು ನಿವಾರಿಸುವುದಲ್ಲದೆ ಮಾನವ ಬುದ್ಧಿಶಕ್ತಿಯ ಬೆಳೆಗೆ ಸಹಾಯವಾಗುತ್ತದೆ ಎಂದರು.

ಮಣಿಪಾಲದಲ್ಲಿ ನಡೆಯುತ್ತಿರುವ ಶೈಕ್ಷಣಿಕ ಪ್ರಯೋಗಗಳ ಕುರಿತು ಇದುವರೆಗೆ ಕೇಳಿದ್ದು ಮಾತ್ರವೆಂದೂ ಇಂದು ಕಣ್ಣಾರೆ ಕಂಡು ಅದನ್ನು ಮನಸಾರೆ ಮೆಚ್ಚಿಕೊಂಡಿರುವೆನೆಂದೂ ಸಂತೋಷ ಸೂಚಿಸಿ ಇಲ್ಲಿಗೆ ಕಲಿಯಲು ಬಂದಿದ್ದೇನೆಯೇ ಹೊರತು ಸಲಹೆ ನೀಡಲು ಬಂದಿಲ್ಲ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಡಾ| ಟಿ. ಎಂ. ಎ. ಪೈ ಅವರು ಸ್ವಾಗತಿಸುತ್ತಾ ಮಣಿಪಾಲದಲ್ಲಿನ ಸಾಧನೆಗಳ ವಿವರಗಳನ್ನಿತ್ತು ಈ ಪ್ರಯೋಗಗಳು ಸಾಮೂಹಿಕ ನಾಯಕತ್ವದ ಹಾಗೂ ಸಹಕಾರಿ ಮನೋಭಾವನೆಯ ಶಿಕ್ಷಣ ತಜ್ಞರ ಪೋಷಕರ ಮತ್ತು ಉಪಾಧ್ಯಾಯರ ಸಹಕಾರದ ಫಲವೆಂದು ತಿಳಿಸಿದರು.

ಧನ್ವಂತರೀ ಜಯಂತಿ

ನಂಜನಗೂಡಿನ ಸದ್ವೈದ್ಯ ಶಾಲೆಯವರು ವರ್ಷಂಪ್ರತಿ ಜರಗಿಸಿಕೊಂಡು ಬರುವ ಧನ್ವಂತರೀ ಜಯಂತಿಯು ತಾ. 26-11-70 ರಂದು ವಿವಿಧ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ನೆರವೇರಿತು. ಪಂಡಿತರತ್ನ ಶ್ರೀ ಇ. ಎಸ್. ವರದಾಚಾರ್ಯರು ಧನ್ವಂತರೀ ವೈಭವದ ಕುರಿತು ಉಪನ್ಯಾಸ ಗೈದರು. ಅಲ್ಲದೆ ಪ್ರಸಿದ್ಧ ವಿದ್ವಾನ್ ಆರ್. ಕೆ. ಶ್ರೀಕಂಠನ್ ಮತ್ತು ಪಾರ್ಟಿಯವರಿಂದ ಸಂಗೀತ ಕಚೇರಿ ಜರಗಿತು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C. No. 108/1970

ಸಂಜೀವ ಶೆಟ್ಟಿ —ವಾದಿ

ಮತ್ತು

1 ಶೀನ ನಾಯ್ಕ, ಯೆಲ್ಲ ನಾಯ್ಕರ ಮಗ.
2 ಮುದ್ದು ನಾಯ್ಕ, ಶೀನ ನಾಯ್ಕರ ಮಗ, ಉಡುಪಿ ತಾಲೂಕು ನೀಲಾವರ ಗ್ರಾಮದ "ಮಾಸ್ಕಸ್ತರ ಬೆಟ್ಟು" ಎಂಬಲ್ಲಿರುವವರು —ಪ್ರತಿವಾದಿಗಳು

ಇವರಿಗೆ

ನಿಮ್ಮ ಮೇಲೆ ವಾದಿಯು ದಾವಾ ನಿವೃತ್ತಿ ಕೇಳಿ ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾ. 11-12-70ಕ್ಕೆ ಇಟ್ಟಿದೆ. ನಿಮ್ಮದೇನಾದರೂ ಆಕ್ಷೇಪಣೆಯಿದ್ದರೆ ಆ ದಿವಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕೋರ್ಟಿನ ಹುಕುಂ ಪ್ರಕಾರ

ಕುಂಜೂರು ಬಾಲಚಂದ್ರ ರಾವ್

ವಾದಿಯ ಕಡೆ ಎಡ್ವಕೇಟ್

ಉಡುಪಿ, 27-11-70.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 258/1970

H. ಕೃಷ್ಣಮೂರ್ತಿ —ವಾದಿ

ಮತ್ತು

H. ರಾಮಚಂದ್ರ ರಾವ್ ಕೂಡಾ —ಪ್ರತಿವಾದಿಗಳು

4ನೇ ಪ್ರತಿವಾದಿ —
ಶೇಷಗಿರಿ ನಾಯಕ್, S/o ಗೋವಿಂದ ನಾಯಕ್, ಮಹಾರಾಷ್ಟ್ರ ಸ್ಟೇಟಿನ ಕರ್ಜಾತ್ —ಇವರಿಗೆ

ನೀವು ಕೂಡಾ ಇತರರ ಮೇಲೆ ವಾದಿಯು ದಾವಾ ನಿವೃತ್ತಿ ಕೇಳಿ ದಾಖಲುಮಾಡಿದ ಮೇಲ್ಕಂಡ ದಾವೆಯನ್ನು ನಿಮ್ಮ ಹಾಜರಾತಿಯ ಬಗ್ಗೆ 24-12-70ಕ್ಕೆ ಇಟ್ಟಿದೆ. ನಿಮ್ಮದೇನಾದರೂ ಆಕ್ಷೇಪಣೆಯಿದ್ದರೆ ಆ ದಿನ ಪೂರ್ವಾಹ್ನ 11 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರುಮಾಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲಾಗುವುದು.

ಕೋರ್ಟಿನ ಹುಕುಂ ಪ್ರಕಾರ

ಕೆ. ಬಾಲಚಂದ್ರ ರಾವ್

ವಾದಿಯ ಕಡೆ ಎಡ್ವಕೇಟ್

ಉಡುಪಿ, ೨೭-೧೧-೭೦.

ಸಂದರ್ಶಿಸಿರಿ|—ಸಂತೃಪ್ತರಾಗಿರಿ||

ಬಿಳ್ಳಿ ಬಂಗಾರದ ವಜ್ರಗಳಿಗೆ, ಆಧುನಿಕ ಫ್ಯಾಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res;3272

ಕರೆಗಳಲ್ಲಿಯೂ ಪ್ರಗತಿವಾದದ ಗಾಳಿ

ನಾಲ್ಕೈದು ದಶಕಗಳಿಗೆ ಮೊದಲು ಮಹಾತ್ಮಾ ಗಾಂಧಿಯವರು ದಕ್ಷಿಣ ಆಫ್ರಿಕೆಯಿಂದ ಭಾರತಕ್ಕೆ ಮರಳಿ ಬಂದರು. ಅಲ್ಲಿನ ಬಿಳಿಯ—ಕರಿಯ ಸಂಬಂಧವನ್ನು ಕಣ್ಣಾರೆ ಕಂಡು ಮೈಯ್ಯಾರೆ ಅನುಭವಿಸಿ ಮನಸಾರೆ ನೊಂದು ಬಂದಿದ್ದರು ಅವರು.

ಭಾರತದಲ್ಲಿಯೂ ಬಿಳಿಯರ ವರ್ತನೆ ಅಲ್ಲಿನದಕ್ಕಿಂತ ಬೇರೆಯಾಗಲಿಲ್ಲ. ಆ ಬಿಳಿಯರನ್ನು ದೇಶದಿಂದ ಓಡಿಸಬೇಕು; ದೇಶಕ್ಕೆ ಸ್ವಾತಂತ್ರ್ಯಗಳಿಸಬೇಕು—ಇದು ಅಂದಿನ ಉದ್ದೇಶವಾಯ್ತು. ಅಸಹಕಾರ ಚಳುವಳಿಯು ಆರಂಭವಾಯ್ತು. ಜನತೆಗೆ ಕರೆಹೋಯ್ತು.

"ವಕೀಲರು ವಕಾಲತ್ತು ಬಿಡಬೇಕು; ವಿದ್ಯಾರ್ಥಿಗಳು ಶಾಲೆ ಕಾಲೇಜುಗಳನ್ನು ಬಹಿಷ್ಕರಿಸಬೇಕು. ಬಿಳಿಯರ ನ್ಯಾಯಾಲಯಗಳಿಗೆ ದೂರುಗಳನ್ನು ಒಯ್ಯಬಾರದು'

...ಇನ್ನೂ ಏನೇನೋ...

"ಅಂದು ಜನತೆ ಮಹಾತ್ಮರ ಕರೆಗೆ ಓಗೊಟ್ಟಿತು. ಅಸಹಕಾರ ಚಳುವಳಿಯು ಶಿದತ್ತ ಸಾಗಿತು. ದೇಶ ಮುಂದೊಂದು ದಿನ ಸ್ವತಂತ್ರವಾಯ್ತು. ಇದು ರಕ್ತರಹಿತ ಅಹಿಂಸಾ ಕ್ರಾಂತಿಯಿಂದ ಎಂದು ಪ್ರಚಾರಮಾಡಲಾಯ್ತು.

ಇಂದು ಬಿಳಿಯರ ಅಧಿಕಾರ ದೇಶದಲ್ಲಿಲ್ಲ ಬಿಳಿಯರೇ ಇಲ್ಲವೆಂದರೂ ಸಮವೇ ನಾವು ಸ್ವತಂತ್ರರು; ಸಮಾಜವಾದಿ ಸ್ವರೂಪದ ಕಲ್ಯಾಣರಾಜ್ಯ ಕಟ್ಟಬಯಸುವವರು.

ಇಂ. ಜಸಿಂಡೇ ಉಬಂ ಇತ್ಯಾದಿ ಕಾಂಗ್ರೆಸ್ಸುಗಳು ಜನಸಂಘ, ಪಿಎಸ್ಪಿ, ಎಸ್ಸೆಸ್ಪಿ ದ್ರಾವಿಡ ಮುಕ, ಬಿ.ಕೆ., ಎ.ಕೆ, ನಾ.ಕ. ಗಳು, ಮು. ಲೀ., ಇನ್ನು ಸ್ವತಂತ್ರ ಪಕ್ಷದೊಡನೆ ಪಕ್ಷೇತರರೂ "ಇದೇ ನಮ್ಮ ಗುರಿ" ಎಂದು ಡಂಗುರ ಸಾರುತ್ತಲೇ ಬಂದಿದ್ದಾರೆ.

ಆದರೆ, ಒಬ್ಬೊಬ್ಬರ "ಸಮಾಜವಾದ"ದ ಪರಿಭಾಷೆ ಅವರವರ "ಸಮಾಜ"ಕ್ಕಷ್ಟೇ ಸೀಮಿತವಾಗಿದೆ.

ಶ್ರೀಮತಿ ಪ್ರಧಾನಿ ಇಂದಿರಾಗಾಂಧಿಯವರ ನಾಯಕತ್ವದಲ್ಲಿ ಎಡದಲ್ಲಿ ಬಲ ಮತ್ತು ಬಲದಲ್ಲಿ ಎಡ ಪಕ್ಷಗಳು "ಎಡ"ವೆಂದು ಕರೆದುಕೊಂಡು ತಮ್ಮದೇ ಸಮಾಜವಾದವೆಂದು ತಂಟೆಮಾಡುತ್ತಾರೆ.

ಬಲದಲ್ಲಿ ಬಲ ಮತ್ತು ಬಲಪಂಥೀಯರು ಒಂದಾಗ ಶ್ರೀವೆ ಸರಿ ಎಂದು ದೂರ ದೂರ ಸರಿಯುತ್ತಲೇ ಇದ್ದು ತಾವೇ ಸಮಾಜವಾದಿಗಳೆಂದು ಬೊಬ್ಬಿಡುತ್ತಾರೆ.

ಸಂ. ಕಾಂ. ದ ಅಗ್ರನಾಯಕರಲ್ಲಿ ಒಬ್ಬರಾದ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರು ಇಂದು ಕರೆ ನೀಡಿದ್ದಾರೆ—

"ಬ್ರಹ್ಮಚಾರಿಗಳು ವಿವಾಹಿತರಾಗಬಾರದು; ವಿವಾಹಿತರು ಬ್ರಹ್ಮಚಾರಿಗಳಾಗೇ ಉಳಿಯಬೇಕು. ಇತರರು ಒಪ್ಪೊತ್ತಿನ ಊಟ ಬಿಡಬೇಕು."

ಎಲ್ಲಿಯ ತನಕ?

ಶ್ರೀಮತಿ ಇಂದಿರಾ ಗಾಂಧಿಯವರ ನೇತೃತ್ವದ ಕೇಂದ್ರ ಸರಕಾರವನ್ನು ಉರುಳಿಸುವತನಕ.

ಇದರಿಂದೇನು ಲಾಭ?

ಸಿಂಕಾಂಗೆ ಲಾಭವಿದೆಯೆಂದು ಗ್ಯಾರಂಟಿಯಿಲ್ಲ; ಆದರೂ ದೇಶಕ್ಕೆ ಭಾರೀ ಲಾಭ.

ಬ್ರಹ್ಮಚಾರಿಗಳು ಮದುವೆಯಾಗದೆ ಹೋದರೆ, ವಿವಾಹಿತರು ಬ್ರಹ್ಮಚಾರಿಗಳಾಗಿ ಉಳಿದರೆ, ಧರ್ಮ ಭೀರು ದೇಶದಲ್ಲಿ ಜನನ ಸಂಖ್ಯೆ ವಿಚಿತ್ರ್ಯ ಇಳಿಮುಖವಾಗುತ್ತದೆ. ಪ್ರತಿವರ್ಷ ಐವತ್ತು ಲಕ್ಷಗಳ್ಕ್ಕೂ ಮಿಕ್ಕಿದ ಹೊಸಮುಖಗಳು ಗೋಚರವಾಗುವ ನಮ್ಮ ದೇಶದಲ್ಲಿ ಕುಟುಂಬ ಯೋಜನೆಗೆ ಇದಕ್ಕಿಂತ ಉತ್ತಮ ಕರೆ ಬೇರೊಂದಿದೆಯೆ?

ಕುಟುಂಬ ಯೋಜನಾ ವಿಭಾಗದವರು ಶ್ರೀ ಸ್ವಾಮಿಯವರ ನೂತನ ಕರೆಯು "ಕಾಪಿರೈಟ್" ಹಕ್ಕು ತೆಗೆದುಕೊಂಡು ತಮ್ಮಕೆಂದು ಎಂದು ಬರೆಗು ತೋರಿಸುವ ಕಪ್ಪು ತ್ರಿಕೋಣದೊಡನೆ ಅಚ್ಚು ಮಾಡಿಸಿದರೆ, ಅವರ ಕಾರ್ಯ ನಿಜಕ್ಕೂ ಸಫಲವಾಗುತ್ತದೆ.

ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲೇ ಶ್ರೀಮತಿ ಗಾಂಧಿ ಗದ್ದುಗೆಯಿಳಿಯುತ್ತಾರೆಂದು ನಂಬಿದರೂ ಒಂದು ಕೋಟಿ ಮಕ್ಕಳು ಅಜ್ಞಾತವಾಗುವುದು ಖಂಡಿತ.

ಒಂದು ಹೊತ್ತು ಊಟ ಬಿಡಬೇಕೆಂಬ ಕರೆಯಿಂದಲೂ ಶ್ರೀಮತಿ ಗಾಂಧಿಯ ಎಡಗೈಬಂಟ ಆಹಾರ ಸಚಿವ ಶ್ರೀ ಫಕ್ರುದ್ದೀನಾಲಿ ಅಹಮ್ಮದರು ಪ್ರಯೋಜನ ಪಡೆಯಬಹುದು.

ಹಿಂದೆ ಆಹಾರಾಭಾವದಿಂದ ನಾವೆಲ್ಲ ರೋಗಿಗಳಾಗಿದ್ದಾಗ ಹಾಗೂ ಗೋಣ ಗೋಧಿ ಹೊತ್ತು ಜಾನ್ಸನ್ನರು ಸವುಭಾರತ್ವದ ಪ್ರತ್ಯಕ್ಷ ಪ್ರದರ್ಶನ ಮಾಡುತಿದ್ದಾಗ, ಪಾಕಿಸ್ತಾನಿಗಳು ಆಕ್ರಮಣ ಮಾಡಿದಾಗ ಅಂದಿನ ಪ್ರಧಾನಿ ಶ್ರೀ ಲಾಲ ಬಹದ್ದೂರ ಶಾಸ್ತ್ರಿಯವರು ವಾರಕ್ಕೆ ಒಪ್ಪೊತ್ತಿನ ಊಟ ಬಿಡಲು ಕರೆ ನೀಡಿದ್ದರು.

ಶ್ರೀ ಸ್ವಾಮಿಯವರು ಪ್ರತಿನಿತ್ಯವೂ ಒಪ್ಪೊತ್ತಿನ ಊಟ ಬಿಡಲು ಕರೆ ನೀಡಿದ್ದರಿಂದ ಅವರಿಗಿಂತ ಇವರು ಪ್ರಗತಿಗಾಮಿಗಳು ಎಂಬುದು ವ್ಯಕ್ತವಾಗುವುದಿಲ್ಲವೆ?

ಆದರೆ, ಬಡತನ ರೇಖೆಯ ಕೆಳಗಿನವರು ಈ ಕಾಲದಲ್ಲಿ ಶ್ರೀಸಾಮಾನ್ಯ ಒಪ್ಪೊತ್ತಾದರೂ ಊಟಮಾಡುತ್ತಾನೆಯೆ? ಎಂಬುದು ಮುಖ್ಯಪ್ರಶ್ನೆ.

ರೂಪಾಯಿಯ ಅಪಮೌಲ್ಯವನ್ನು ಅರ್ಥ ಸಚಿವರು ನಿರಾಕರಿಸಿದರೂ ಬೆಲೆಯೇರಿಕೆಯನ್ನು ಬಾಯ್ಬಿಟ್ಟು ಒಪ್ಪಿಕೊಂಡಿದ್ದಾರೆ.

ಮುಂದಿನ ಐದು ವರ್ಷಕಾಲದೊಳಗೆ ಶ್ರೀ ಸಾಮಾನ್ಯನ ಮೂಲ ಭೂತ ಅವಶ್ಯಕತೆ ಪೂರಯಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಪ್ರಧಾನಿ ಗಾಂಧಿಯೇ ಒಪ್ಪಿದ್ದಾರೆ.

ಶ್ರೀ ಗುರುಪಾದ ಸ್ವಾಮಿಯವರು ಇದನ್ನೇ ಪರ್ಯಾಯ ರೂಪದಲ್ಲಿ ಜನತೆಗೆ ತಿಳಿಸಿದ್ದಾರೆಂದು ತೃಪ್ತಿಪಡಬಾರದೇಕೆ?

ಶ್ರೀಮತಿ ಗಾಂಧಿಯವರಿಗೆ ಶ್ರೀ ಸ್ವಾಮಿಯವರ ಮೊದಲೆರಡು ಕರೆ ಅನುಕೂಲವಾಗಬಹುದು; ಮೂರನೆಯದು ಪ್ರತಿಕೂಲವಾದರೂ "ಮೂರರಲ್ಲಿ ಎರಡು." ತತ್ವದಂತೆ ಒಟ್ಟು ಸಲಹೆ ಗ್ರಾಹ್ಯವಾಗಲೇಬೇಕು.

ಜನ ಈ ಕರೆಗೆ ಓಗೊಟ್ಟು ಅದನ್ನು ಕಾರ್ಯರೂಪಕ್ಕೆ ತರತೊಡಗಿದರೆ, ಆಕೆಯ ಗದ್ದುಗೆಯು ಕಂಪನ ಪ್ರಮೇಯ ನಿಧಾನವಾಗುತ್ತದೆ; ಗದ್ದುವ ಹಲ್ಲು ಕೀಳದಿದ್ದರೆ ಗಟ್ಟಿಯೂರುವಂತೆ ಆಕೆಯೂ ಪೀಠಕ್ಕೆ ದೃಢವಾಗಿ ಅಂಟಿಕೊಳ್ಳುವುದು ಸಾಧ್ಯವಾಗುತ್ತದೆ.

ಆದ್ದರಿಂದ ಸಿಂಕಾಂದ ಈ ಕರೆ ಇಂಕಾಂಗೆ ಅತ್ಯಂತ ಪ್ರಿಯವಾಗಬಹುದು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 124/70

ಉಡುಪಿ ಶೀರೂರು ಮಠದ ಶ್ರೀ ಲಕ್ಷ್ಮೀಮನೋಜ್ಞತೀರ್ಥ ಸ್ವಾಮಿಯವರು — ವಾದಿರು

ಮತ್ತು

ಅಪ್ಪು ಯೂನೆ ಸಂತಾನ ಸೋಜ ಕೂಡಾ

— ಪ್ರತಿವಾದಿರು

ಇವರೊಳಗೆ

5ನೆ ಪ್ರತಿವಾದಿ— ಮೋತಿ ಸೋಜ, 6ನೇ ಪ್ರತಿವಾದಿ— ಸಾಲ್ಡದೋರ ಸೋಜ — ಮತ್ತು ಯೂನೆ ಜುವಾಂ ಸೋಜರ ಮಕ್ಕಳು,

14ನೆ ಪ್ರತಿವಾದಿಳು— ಜುಲೇಂವ ಸೋಜಾ ಬಾಯಿ, ಗಾಬ್ರಿಯಲ್ ಸೋಜನ ಮಗಳು, ಉಡುಪಿ ತಾಲ್ಲೂ ಉಪ್ಪೂರು ಗ್ರಾಮ,

ಸದ್ರಿ 5, 6, 14ನೆ ಪ್ರತಿವಾದಿಗೆ ತಿಳಿಸುವದೇನೆಂದರೆ—

ವಾದಿಗೆ ಪ್ರತಿವಾದಿರಿಂದ ಬರತಕ್ಕ ಸಾಲಗೇಣಿ ಬಾಕಿ ಅಸಲು ಬಡ್ಡಿಗೆ ಮಾಡಿದ ಮೇಲ್ಕಂಡ ದಾವೆಯು ತಾ. 8-12-70ಕ್ಕೆ ಸ್ಯಾಗೆ ಯಾದೆಮಾಡಾಗಿಯದೆ. ಆ ಕಾರಣ ಸದ್ರಿ 5, 6, 14ನೆ ಪ್ರತಿವಾದಿಗೆ ಆಕ್ಷೇಪ ಹೇಳತಕ್ಕದ್ದು ಯಿದ್ರ ಸದ್ರಿ ದಿವ್ಸ ಪೂರ್ವಾಹ್ನ 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಯಿದೇ ಮೂಲ್ಕ ತಿಳಿಸಲಾಗಿಯದೆ.

V. R. Kidiyur

Advocate for plaintiff

ಉಡುಪಿ, 16-11-70.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 28337 2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಸ್ವಮೂತ್ರ ಚಿಕಿತ್ಸೆಯಿಂದ ಅರ್ಧಾಂಗವಾತ ನಿವಾರಣೆ

ನಾನೊಬ್ಬ ನಿವೃತ್ತ ಶಿಕ್ಷಕ. ವಯಸ್ಸು ೬೮ ವರ್ಷ. ನನಗೆ ೫ ವರ್ಷಗಳ ಹಿಂದೆ ಅರ್ಧಾಂಗವಾಯು ಹತ್ತಿತು. ವರ್ಷ ಪರಿಪರಿ ಔಷಧ ಒಂದಿಷ್ಟೂ ಗುಣವಾಗಲಿಲ್ಲ. ಕೊನೆಗೆ ನಿವೃತ್ತ ಡಿ. ಹೆಚ್. ಎಸ್. ಪಿ. ಬಿ. ಎಂ. ಪಾಟೀಲರು ನನಗೆ ಸ್ವಮೂತ್ರ ಚಿಕಿತ್ಸೆ ನಡಿಸಲು ಸೂಚಿಸಿದರು. ಅದರಂತೆ ನಾನು ದಿನದಲ್ಲಿ ೩ ಸೊಳ್ಳು ಸ್ವಮೂತ್ರ ಪಾನ ಹಾಗೂ ಸ್ವಮೂತ್ರ ಮಾಲಿಶ ನಡಿಸಿದೆ. ಇದರಿಂದ ನನ್ನ ರೋಗ ಪೂರ್ಣ ಗುಣವಾಗಿದೆ. ಮೇಲಾಗಿ ನನಗೆ ರಕ್ತದ ಒತ್ತಡ ಹಾಗೂ ಅಸ್ಥಿಜ್ವರ ಇದ್ದವು. ಅವೂ ಹೋಗಿವೆ. ಕಿವಿ ಬೇನೆ, ಕಣ್ಣು ಬೇನೆ ಬಂದರೂ ನಾನು ಇದೇ ಪ್ರಯೋಗ ನಡಿಸುತ್ತೇನೆ. ಮತ್ತು ಅದರಿಂದ ನಿಶ್ಚಿತವಾಗಿಯೂ ಗುಣ ಬರುತ್ತದೆ. ಜನರಿಗೆ ಇದರಲ್ಲಿ ಶ್ರದ್ಧೆ ಇಲ್ಲದ್ದರಿಂದ ನಾನು ಮೊದಲು ಗುಪ್ತವಾಗಿಯೇ ಈ ಚಿಕಿತ್ಸೆ ಮಾಡಿಕೊಳ್ಳುತ್ತಿದ್ದೆ. ಆದರೆ ನಾನು ಗುಣಪಟ್ಟವೇಳೆ ಎಲ್ಲರೂ ಆಶ್ಚರ್ಯಪಟ್ಟು "ನಿಮ್ಮ ಅರ್ಧಾಂಗವಾತ ಹೇಗೆ ದೂರಾಯಿತು? ಅದಕ್ಕೆ ಯಾವ ಚಿಕಿತ್ಸೆ ಮಾಡಿದಿರಿ?" ಎಂದು ಕೇಳಹತ್ತಿದರು. ಆಗ ಅವರಿಗೆ ನಿಜ ಸಂಗತಿ ಹೇಳಿದೆ. ಈಗ ಅನೇಕರು ನನ್ನ ಹತ್ತಿರ ಬಂದು ಈ ಚಿಕಿತ್ಸೆಯ ಕ್ರಮ ತಿಳಿದುಕೊಂಡು ಹೋಗಿ ಗುಣಹೊಂದುತ್ತಲಿದ್ದಾರೆ. ಸ್ವಮೂತ್ರ ಚಿಕಿತ್ಸೆಯಿಂದ ಪ್ರತಿಯೊಂದು ರೋಗವೂ ಗುಣವಾಗುತ್ತದೆ ಎಂತಲೂ ಸ್ವಮೂತ್ರವು ಪ್ರತ್ಯಕ್ಷ ಅಮೃತವೇ ಆಗಿದೆ ಎಂತಲೂ ನಾನು ಮನಗಂಡಿದ್ದೇನೆ. ವಿವಿಧ ಬೇನೆಗಳಿಂದ ಬಳಲಿ ಬೆಂಡಾಗುತ್ತಿರುವ ರೋಗಿಗಳನ್ನು ಕಂಡಾಗಲೆಲ್ಲ "ಅಯ್ಯೋ, ಸ್ವಮೂತ್ರ ಚಿಕಿತ್ಸೆ ತಿಳಿಯದ ಇಲ್ಲವೆ ನಡಿಸದ ಇವರು ಪೇಚಾಡುತ್ತಿದ್ದಾರಲ್ಲ! ಜನಕೋಟಿಗೆಲ್ಲ ಸ್ವಮೂತ್ರ ಚಿಕಿತ್ಸೆಯ ಮಾಹಿತಿ ಮಾಡಿಕೊಡಲಿಕ್ಕೆ ಏನು ಉಪಾಯ ಮಾಡಲಿ?" ಎಂಬುದಾಗಿ ನನಗೆ ತಳಮಳವಾಗುತ್ತದೆ. ಮತ್ತು ಅದೇ ದಿಶೆಯಲ್ಲಿ ನನ್ನ ಚಿಂತನೆ ನಡೆಯುತ್ತಿರುತ್ತದೆ.

(ಸಣ್ಣವೀರನಾಯಕ ಬಸನಾಯಕ ಪಿಣ್ಣನಾಯಕರ, ನಾಗನೂರ ಬೈಲಹೊಂಗಲ.)

NAVAYUGA 3—12—1970
Registered with the Registrar of News Papers for India under No. R. N. 3546/'57

REGD. No. B. Gr 176
LICENCE No. 33,
Licensed to Post without Prepayment

ಇಂದಿರಾಜೀಯವರ ಇಷ್ಟದ ಹರಿಜನ ಹಗರಣ

(ಒಂದನೇ ಪುಟದಿಂದ)

ರೂ ಹರಿಜನರೆನ್ನುವುದು ಹೇಗಾಗಲೀ ಹರಿಜನರಾಗಲೀ ಇಷ್ಟವೇನು? ಕಾಮರಾಜರಿದ್ದರು ಅವರು ಹಾಗೆ ಅಂದುಬಿಟ್ಟರೆ! ಎಲ್ಲಾದರೂ ನಾಲ್ಕು ಜನ ನಿಂತುಕೊಂಡಿದ್ದಾರೆಂದೊಡನೆ ಅವರು ಹರಿಜನರಾಗಿ ಹೋಗುತ್ತಾರೇನು?

ಎಲ್ಲೋ ದೂರದಲ್ಲಿ ಇಂದಿರಾ ನೋಡಿ ಅವರನ್ನು ಅಯ್ಯೋ ಹರಿಜನರೆಂದು ಹೇಳಿದಲ್ಲಿ ಸಮಸ್ಯೆ ಪರಿಹಾರ ಕಂಡಿತೇ? ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕರ್ನಾಟಕ ಪ್ರಕಾಶನ ವಿಭಾಗದವರು ಇತ್ತೀಚೆಗೆ ಜನತೆಗೆ ಪರಿಚಯ ಮಾಡಿಸಿಕೊಟ್ಟಿರುವ ಜೀವನ ರಶ್ಮಿಯ ಒಂಭತ್ತನೇ ರಶ್ಮಿ:- ಮಂಗಳೂರಲ್ಲಿ ಸಂಘ ಶಾಖೆ ಆರಂಭವಾಗಿ ಸ್ವಲ್ಪ ಸಮಯವಾಗಿತ್ತು— ಶ್ರೀ ಗುರೂಜೀಯವರು ಪ್ರಥಮ ಬಾರಿ ಅಲ್ಲಿಗೆ ಬಂದಾಗ. ಸಮುದ್ರ ತೀರದಲ್ಲಿ ವಾಸಿಸುವ ಬೆಸ್ತರಲ್ಲೂ ಅನೇಕರು ಸ್ವಯಂಸೇವಕರಾಗಿದ್ದರು. ಅವರ ಬಸ್ತಿಯಲ್ಲೂ ಒಂದು ಶಾಖೆ ಇತ್ತು. ಪೂಜನೀಯ ಶ್ರೀ ಗುರೂಜೀಯವರು ಅಲ್ಲಿಗೆ ಹೋಗಿದ್ದರು. ಅಲ್ಲಿನವರೆಲ್ಲ ಅವರ ಸುತ್ತ ನೆರೆದರು. ಎಲ್ಲರೂ ಅಲ್ಲೇ ಬೆಸ್ತರ ಹಟ್ಟಿಯ ಪಕ್ಕದ ಮರಳಿನ ಮೇಲೆ ಕುಳಿತರು. ಬೆಸ್ತಳೆಯ ಮಗುವೊಂದು ಅವರ ತೊಡೆಯ ಮೇಲೆ ಅಕ್ಕರೆಯಿಂದ ಬಂದು ಕುಳಿತಿತು. ಸಮುದ್ರದ ಉಪ್ಪು ಹವೆಯೊಂದಿಗೆ ಬೆರೆತವರ ಸರಳತೆ, ಪ್ರೀತಿ ಬೆರೆತು ಮೋಹಕ ವಾತಾವರಣ ಆಯಿತು. ಮೂಕತೆ, ಹರಟೆಯಲ್ಲಿ ಅರ್ಧ ಘಂಟೆಯೂ ಒಂದು ಕ್ಷಣದಂತೆ ತೇಲಿಹೋಯಿತು....

ಏನಿದು? ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಪರಮ ಪೂಜನೀಯ ಶ್ರೀ ಗುರೂಜೀಯವರ ತೊಡೆಯ ಮೇಲೆ ಬೆಸ್ತರ ಬಸ್ತಿಯ ಮಗು ಕುಳಿತುಕೊಳ್ಳುವುದು! ಅದವರಿಗೆ ಆಶ್ಚರ್ಯವಲ್ಲ. ಅವರಿಗೆ ಅದಿಷ್ಟೂ ಅಶಕ್ಯ ಇಷ್ಟವಾಗದ. ತನ್ನ ಸಮಾಜದ ಶಿಶು ಅದು. ಇದಕ್ಕೊಂದು ಹೆಸರಿನ ಚೀಟಿಯನ್ನು ಕಾಗಿಸಿ ತನಗೆ ಬೇಕಾದಂತೆ ಉಪಯೋಗಿಸಿಕೊಳ್ಳುವ ಗುಣ ಅವರದ್ದಲ್ಲ. ಆದುದರಿಂದಲೇ ಇಂತಹ ವಿಷಯಗಳನ್ನು ಸಮಸ್ಯೆಯಾಗಿಸಿಕೊಳ್ಳದೆ ಸಂಘ ಸುಲಭವಾಗಿ ಪರಿಹರಿಸುತ್ತಿದೆ.

ಐವತ್ತು ಜನರಿಂದ ಆರಂಭವಾಗಿರುವ ಸಂಘ ಇಂದು ದೇಶದಲ್ಲೆಲ್ಲೂ ಹಿಂದೂಗಳ ಹೃದಯದಲ್ಲಿ ಸ್ಥಾನ ಪಡೆಯಲು ಅವರ ಚಟುವಟಿಕೆಗಳೇ ಕಾರಣ. ಅಲ್ಲಿ ಭಿನ್ನತೆಗೆ ಅವಕಾಶ ಇರುವುದಿಲ್ಲ. ಏಕತೆಗೆ ಸ್ಥಾನ ಇದೆ. ಅದನ್ನರಿಯದೆ, ತಮ್ಮ ಅಧಿಕಾರಕ್ಕೆ ಅಪಾಯವೆಂಬ ಏಕಮೇವ ಕಾರಣದಿಂದ ಅದರ ಮೇಲೆ ವಿಷಕಾರುವುದು ಯಾವ ನ್ಯಾಯ? ವಿಷಕಾರುತ್ತ, ಹರಿಜನ ಹರಿಜನರೆಂದು ಹಾಹಾಕಾರವೆತ್ತುತ್ತ ಇಂದಿರಾಜೀಯವರು ಕಾರಿನಲ್ಲಿ ಸಾಗುತ್ತಿದ್ದಂತೆ ಮಕ್ಕಳತ್ತ ಹೂವಮಾಲೆಗಳನ್ನೆಸೆದರಂತೆ ಅದನ್ನಾರೋ ತೆಗೆದುಕೊಂಡರಂತೆ! ಅವನ್ನೆಲ್ಲಾ ಹಾಗೆನೇ ಶೇಖರಿಸಿ ಇಡಲಾಗುತ್ತಿತ್ತೇ? ಯಾರಿಗೆ ಈ ಮೋಸ? ಅವನ್ನು ಪುನಃ ಪುನಃ ಉಪಯೋಗಿಸಿ ಇಂದಿರಾಜೀಯವರ ಇಷ್ಟಕ್ಕೆ ಪಾತ್ರರಾಗಬೇಕೇನು?

ಒಪ್ಪುವವರು ಅದಕ್ಕೂ ಬೇಕಲ್ಲವೇ? ಛೀಮಾರಿ ಹಾಕದೆ ಅವರ ಬೆನ್ನು ತಟ್ಟುವವರೂ ಇದ್ದಾರಲ್ಲವೇ?

ಓ, ಇಲ್ಲಿ ಅವರ ಕಣ್ಣು ತೆರೆಸಬಲ್ಲಂತಹ ದೃಶ್ಯ—ಶ್ರೀ ಗುರೂಜೀಯವರ ಗುಜರಾತ ಪ್ರವಾಸ. ಸ್ಥಾನ ಸ್ಥಾನದಲ್ಲೂ ಜನಸಾಗರವೇ ಉಲ್ಲಾಸದಿಂದ ಉಕ್ಕಿ ಬಂದಂತಿದ್ದ ಸ್ವಾಗತ ಸಮಾರಂಭಗಳು. ಭುಸಾವಳ್ ರೈಲು ನಿಲ್ದಾಣದಲ್ಲೂ ಅಂತಹದೇ ಒಂದು ದೃಶ್ಯ. ಜನತೆಯ ಪುಲಕಿತ ಅಂತಃಕರಣದ ಅಲೆ ಅಲೆಯಾಗಿ ಎಲ್ಲೆಡೆ ಪುಷ್ಪಗಳ ಪರಿಮಳ ಹರಡಿತ್ತು. ಆ ಗದ್ದಲದ ಮಧ್ಯೆ ಓರ್ವ ಭಂಗಿ, ಆ ನಿಲ್ದಾಣದ ಕಸಗುಡಿಸುವವ, ನೆಲದ ಮೇಲೆ ಬಿದ್ದ ಹೂಗಳನ್ನೆಲ್ಲಾ ಆರಿಸಿ ಎತ್ತುತ್ತಿದ್ದ. ಏಕೆಂದು ಒಬ್ಬರು ಕೇಳಿದರು, "ಸ್ವಾಮೀ, ಅಂತಹ ದೇವತಾ ಪುರುಷರಿಗೆ ಅರ್ಪಿಸಿದ ಹೂಗಳು ಇವು. ಎಷ್ಟು ಪವಿತ್ರ! ಅವನ್ನು ಜನ ಕಾಲಲ್ಲಿ ತುಳಿಯುವುದನ್ನು ನಾನು ಹೇಗೆ ನೋಡಲಿ?" ಎಂದು ಅವನು ಸರಳವಾಗಿ ನುಡಿದನು. ಸಮಾಜದ ಕಣ್ಣಲ್ಲಿ ಅವನೊಬ್ಬ ಕನಿಷ್ಠ. ಆದರೆ ಹೃದಯದ ಭಾವನಾ ಸಂಪತ್ತಿನಲ್ಲಿ ಅವನೆಷ್ಟು ಉಚ್ಚ!

ಪ್ರತಿಷ್ಠೆಯ ಪರಿಹಾಸ್ಯ ಗೈಯುತ್ತಾ ಹಗರಣ ನಡೆಸುತ್ತಿರುವ ಇಂದಿರಾಗಾಂಧಿಯವರು ತಾನೇ ಭಾರತದ ಇಂದಿರ-ಚಂದಿರನೆಂದು ಪ್ರಶಂಸಿಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲ, ನೈಜ ರವಿಯನ್ನು ಕಂಡು ಕಾಮಂಟು ಮಾಡುವವನೇ, ಥೂ ಎಂದು ಮುಖ ಮೇಲೆ ಉಗುಳುತ್ತಿದ್ದಾರೆ. ಎಂಜಲು ಬೀಳುವುದಾದರೂ ಎಲ್ಲಿ? ಅವರ ಮುಖದ ಮೇಲೆಯೇ ಇದೆ. ಅವರು ಹರಿಜನರು ಪ್ರತ್ಯೇಕ ಸಂಘಟನೆಯನ್ನು (ಆದಾಗಲೇ ಹಲವಾರು ಇವೆ) ಕಟ್ಟಿಕೊಳ್ಳಬೇಕೆಂದು ಪ್ರಚೋದಿಸುತ್ತಿದ್ದಾರೆ. ಮುಸ್ಲಿಂಲೀಗು ಜಾತೀಯವಲ್ಲವೆಂದು ಪ್ರಶಂಸಿಸುತ್ತ ಹಬ್ಬುವಿಕೆಗೆ ಪ್ರೋತ್ಸಾಹಿಸುತ್ತಿದ್ದಾರೆ. ಇಪ್ಪತ್ತನೇ ಶತಮಾನದ ದೈತ್ಯರೆನಿಸಿಕೊಂಡಿರುವ ನಕ್ಸಲಬ್ಯಾರಿಗಳನ್ನು ಸಾಹಸಿಗರೆಂದು ಸಲಹುತಿದ್ದಾರೆ. ಇನ್ನೊಂದು ಬದಿಯಲ್ಲಿ ಹರಿಜನ ಹಗರಣದ ಹುಟ್ಟನ್ನು ಹಗೆಸುತ್ತಿರುವ, ಹಿಂದೂ ಧರ್ಮದಿಂದ ಪತಿತರಾದ ಮುಸ್ಲಿಂ, ಕ್ರಿಶ್ಚಿಯನ್....ರಿಗೆ ಮತೀಯ ಪ್ರಜ್ಞೆ, ಮತ ಸ್ವಾತಂತ್ರ್ಯ, ದೇಶಭಕ್ತಿಯ ಪರಿಚಯ ಮಾಡಿಸಿಕೊಡುತ್ತಿರುವ, ರಾಷ್ಟ್ರೀಯರು ಅನ್ಯರಾಷ್ಟ್ರೀಯರ ವಿಧ್ವಂಸಕ ಕೃತ್ಯಗಳಿಗೆ ಬಲಿಯಾಗದಂತೆ ರಾಷ್ಟ್ರೀಯತೆ ಅವರ ಉಸಿರಾಗಿರುವಂತೆ ಪ್ರಯತ್ನಿಸುತ್ತಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಅವರು ಅಹೋರಾತ್ರಿ ಜರೆಯುತ್ತಿದ್ದಾರೆ, ಹೀಗಳೆಯುತ್ತಿದ್ದಾರೆ. ಅದನ್ನು ನಾಶಮಾಡಿಬಿಡುವೆನೆಂದು ಹಲ್ಲು ಕಡಿದುಕೊಳ್ಳುತ್ತಿದ್ದಾರೆ.

ಬ್ರಿಟಿಷರು ಇದ್ದಿರುವ ಪ್ರಜೆಗಳನ್ನು ಪ್ರತ್ಯೇಕಿಸಿದ್ದರು. ಕಾಂಗ್ರೆಸಿಗರು ಪ್ರಗತಿಶೀಲರೇ ಸರಿ. ಅವರು ದೇಶವನ್ನು ವಿಭಜಿಸಿದರು. ಇಂದಿರಾಗಾಂಧಿ ಇನ್ನೂ ಮುಂದಕ್ಕೆ ಹೋಗಿ ತನ್ನ ಪಕ್ಷವನ್ನೇ ಒಡೆದುಬಿಟ್ಟರು. ಈಗ ಇವೆಲ್ಲವುಗಳ ಕಲುಷಿತ ಪ್ರಯೋಗದ ನಡೆಯುತ್ತಿದೆ. ಪ್ರಜೆಗಳನ್ನು ಹರಿಜನ, ಮುಸ್ಲಿಂ....ಮತ-ಭಾಷೆ ವರ್ಗಗಳ ಹೆಸರಿನಲ್ಲಿ ಪ್ರತ್ಯೇಕಿಸಲಾಗುತ್ತಿದೆ. ಇದ್ದ ರಾಜಕೀಯ ಪಕ್ಷಗಳನ್ನು ಒಡೆಯಲಾಗುತ್ತಿದೆ. ದ್ರಾ.ಮು.ಕ., ಅಕಾಲಿ, ನಾಗಾ... ಮುಂತಾದವರಿಗೆ ಸಹಾಯ ಮಾಡುತ್ತ, ಭಾಷೆ, ಅಲ್ಪ ಸಂಖ್ಯಾತ... ಅನೇಕಾನೇಕ ಹೆಸರಿನಲ್ಲಿ ದೇಶವನ್ನೊಡೆಯಲು ಪ್ರಯತ್ನ ಭರದಿಂದ ಸಾಗುತ್ತಿದೆ.

—ಶ್ರೀ ಶಿವಶಂಕರ

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ. 450 ಪುಟಗಳ ಸುಂದರ ಕೈಹೊತ್ತಿಗೆ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ। ಪಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ವಿಧಾನಗಳನ್ನೆ, ಹೇಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕನ್ನಡದಲ್ಲಿ ಅಪರೂಪವಾದ ಪುಸ್ತಕ

ಸ್ವಪ್ನಲೋಕ

ಮನೋವಿಶ್ಲೇಷಣದ ಬೆಳಕಿನಲ್ಲಿ ಕನಸುಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ವಿವರಗಳನ್ನೊಳಗೊಂಡ 'ಕಾರ್ತಿಕೇಯ' ಪ್ರಕಟಿತ ಕಿರುಹೊತ್ತಗೆ ಬೆಲೆ 0—50

o o o

ದಿ। ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ ಪ್ರಸಂಗ ಪುಸ್ತಕಗಳು

ಸಾಹಸ ಭೀಮ ವಿಜಯ	0-50
ವಾಲಿ ಸುಗ್ರೀವ (ದುರಂತ ಯಕ್ಷಗಾನ ನಾಟಕ)	0-50
ಲಕ್ಷ ಪಗಡೆ	0-40
ಭಾರತದ ಮದುಕುಲ	0-40
ಭದ್ರಕೇಶ ದಿಗ್ವಿಜಯ	0-50

ಪ್ರತಿ ಪುಸ್ತಕಕ್ಕೂ ಬುಕ್ ಪೋಸ್ಟಿನಿಂದ ಕಳಿಸಲು 0-30 ಪೈಸೆ ಅಂಚೆ ವೆಚ್ಚ.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ. ಕ.

Edited, Printed & Published by K. H. Shetty at the Navayuga Press, Udipi. S. India.

ನವಯುಗ

ಸಂಪುಟ 50
ಸಂಚಿಕೆ 14

NAVAYUGA

10—12—1970

ಹುತಾತ್ಮಾ ಯತೀಂದ್ರನಾಥ್ ದಾಸ್

1929 ದಶಂಬ್ರ 13ನೇ ತಾರೀಕು ಬಹಳ ದುಃಖಕರವಾದ ದಿನ. ಆ ದಿವಸ ಭಾರತದ ಸರ್ವಶ್ರೇಷ್ಠ ಸಿಭೀಕ ವರಕೇಸರಿ ಮಹಾನ್ ಕ್ರಾಂತಿವೀರ ಯತೀಂದ್ರನಾಥದಾಸ ಮಧ್ಯಾಹ್ನ ಒಂದು ಗಂಟೆ ಐದು ನಿಮಿಟಿಗೆ ಸರಿಯಾಗಿ ಬೋಸ್ಟಲ್ ಜೈಲಿನಲ್ಲಿ ಭಾರತಮಾತೆಯ ಚರಣ ಸನ್ನಿಧಿಯಲ್ಲಿ ಕೊನೆಯುಸಿರೆಳೆದರು. ದೇಶದಲ್ಲೆಲ್ಲಾ ಗಂಜ ಕೋಡಿದಿತಾಯಿತು. ನಾಲ್ಕು ದಿಕ್ಕಿನಲ್ಲಿಯೂ ವಾತಾವರಣ ಅಗ್ನಿಮಯ ವಿಕೋಪಕ್ಕೇರಿತು.

ಲಾಹೋರು ಜೈಲಿನಲ್ಲಿದ್ದ ಎಲ್ಲಾ ಕ್ರಾಂತಿಕಾರಿ ಕೈದಿಗಳ ಅನ್ನಸತ್ಯಾಗ್ರಹದಲ್ಲಿ ನಿರತರಾಗಿದ್ದರು ಅವರೊಂದಿಗೆ ಬ್ರಿಟಿಷ್ ಸರಕಾರ ಅವರ್ಣನೀಯವಾದ ಪಾಶವಿಕ ಅತ್ಯಾಚಾರವನ್ನೆಸಗುತ್ತಿತ್ತು. ಈ ಅನ್ಯಾಯವನ್ನು ದೂರ ಮಾಡುವುದಕ್ಕೋಸ್ಕರ ಸರ್ದಾರ್ ಭಗತ್ ಸಿಂಗ್ ಮತ್ತು ವಟುಕೇಶ್ವರ ದತ್ತರ ಆಮರಣ ಉಪವಾಸ ಕೈಕೊಂಡರು. ಈ ಚಳವಳವು ದಾವಾನಲದಂತೆ ದೇಶದಾದ್ಯಂತ ಹರಡಿತು. ಬಂಗಾಲದ ನೂರಾರು ಕ್ರಾಂತಿಕಾರಿಗಳು ಸಹ ಬ್ರಿಟಿಷರ ಅತ್ಯಾಚಾರದ ವಿರುದ್ಧ ಉಪವಾಸ ಪ್ರಾರಂಭಿಸಿದರು. ಜೂನ್ 30ರಂದು ಪಂಜಾಬ್ ಮತ್ತು ಬಂಗಾಲದಲ್ಲಿ "ಭಗತ್ ಸಿಂಗ್-ದತ್ತ" ದಿನವನ್ನಾಚರಿಸಲಾಯಿತು. ಯತೀಂದ್ರನಾಥ ಮತ್ತು ಇತರ ಕ್ರಾಂತಿಕಾರಿ ಮುಖಂಡರು "ಜುಲೈ 13ರೊಳಗೆ ಸರಕಾರ ನಮ್ಮ ಕೋರಿಕೆಗಳನ್ನು ಒಪ್ಪದೆ ಇದ್ದರೆ ಅದೇ ದಿನದಂದು ನಾವು ಸಹ ಉಪವಾಸ ಸತ್ಯಾಗ್ರಹ ಪ್ರಾರಂಭಿಸುವೆವು" ಎಂಬ ದಾಖಲೆ ಘೋಷಣೆ ಹೊರಡಿಸಿದರು. ಆ ಪ್ರಕಾರ 13ನೇ ತಾರೀಕಿನಂದು ಎಲ್ಲಾ ಕ್ರಾಂತಿಕಾರಿಗಳು ಉಪವಾಸ ವ್ರತ ಕೈಕೊಂಡರು. ಉಪವಾಸವನ್ನು ನಿಲ್ಲಿಸುವುದಕ್ಕೋಸ್ಕರ ಅನೇಕ ತರದ ಯೋಜನೆಗಳು ಕೊಡಲ್ಪಟ್ಟವು. ಉಪವಾಸದಲ್ಲಿ ವಿಷಮ ಪರಿಸ್ಥಿತಿಗೊಳಗಾದವರಿಗೆ ಬಲಾತ್ಕಾರದಿಂದ ಆಹಾರ ಕೊಡತೊಡಗಿದರು. ಜೈಲಧಿಕಾರಿ ಒಬ್ಬ ಉಪವಾಸಿ ಕೈದಿಯ ಮೇಲೆ ಎಂಟು ಜನರನ್ನು ಆಕ್ರಮಣ ಮಾಡಲಿಕ್ಕೆ ಬಿಡುತ್ತಿದ್ದನು. ಒಬ್ಬನನ್ನು ಕೈದಿಗಳು ಕಚ್ಚೆಯ ವೇಳೆ, ಇಬ್ಬರನ್ನು ಎದೆಯ ಮೇಲೆ ಐದು ಮಂದಿಯನ್ನು ದೇಹದ ಇತರ ಭಾಗಗಳನ್ನು ಆಮುಕಿ ಹಿಡಿಯುವಂತೆ ವಿಧಿಸುತ್ತಿದ್ದರು. ಹೀಗೆ ಸಹಿಸಲಾರದೆ ಕೈದಿ ಕೈಕಾಲುಗಳನ್ನು ಬಡಿದು ಚಡಪಡಿಸಲಿಕ್ಕೂ ಬಿಡುತ್ತಿದ್ದಿಲ್ಲ.

ರಬ್ಬರಿನ ಕೊಳವೆಯನ್ನು ಮೂಗಿನೊಳಗೆ ಮತ್ತು ಗಂಟಲಲ್ಲಿ ತುರುಕಿ ಅದರ ಮೂಲಕ ಬಲಾತ್ಕಾರವಾಗಿ ಆಹಾರವನ್ನು ಕೊಡುವಾಗ ಮೂಗಿನೊಳಗಿಂದ ಧಾರಾಕಾರವಾಗಿ ರಕ್ತ ಸುರಿಯುತ್ತಿತ್ತು; ಗಂಟಲೊಡೆದು ರಕ್ತದ ಕೋಡಿ ಹರಿಯುತ್ತಿತ್ತು; ಸಾಲದುದಕ್ಕೆ ನಗ್ನಗೊಳಿಸಿ ಹಿಮಗಡ್ಡೆ ಹಲಗೆಯ ಮೇಲೆ ಮಲಗಿಸುವುದು, ಚಳಿ ಕಾಲಗೆ ಮಾಡಿ ನೇತಾಡಿಸುವುದು ಮೊದಲಾದ ಭಯಾನಕ ಅತ್ಯಾಚಾರಗಳು ಯತೀಂದ್ರನಾಥರ ಮೇಲೆ ಪ್ರತಿ ನಿತ್ಯ ಎಸಗಲಾಗುತ್ತಿತ್ತು.

1925 ದಶಂಬ್ರ 26ರಂದು ಕಾಕೋರಿ ವಿಪ್ಲವದ ಮೊಕದ್ದಮೆಯ ವಿಚಾರಣೆ ಪ್ರಾರಂಭವಾಗಿತ್ತು. ಆಗಲೇ ದಕ್ಷಿಣೇಶ್ವರದ ಒಂದು ಮನೆಯಲ್ಲಿ ಬಾಂಬು ತಯಾರಿಸುವ ಒಂದು ಕಾರ್ಖಾನೆಯು ಪತ್ತೆಯಾಯಿತು. ಇದರಲ್ಲಿ ಕ್ರಾಂತಿವೀರ ರಾಜೇಂದ್ರ ಲಾಹಿರಿ ತನ್ನ ಇತರ ಸಂಗಡಿಗರ ಸಹಿತ ಬಂಧಿಸಲ್ಪಟ್ಟರು; ಅವರೆಲ್ಲರಿಗೂ ಹತ್ತು ವರ್ಷ ಕಾರಾಗೃಹ ವಿಧಿಸಲ್ಪಟ್ಟು ಲಖನೌ ಜೈಲಿನಲ್ಲಿಡಲ್ಪಟ್ಟರು. ಅವರೆಲ್ಲರ ಮೇಲೂ ಕಾಕೋರಿ ಷಡ್ಯಂತ್ರದ ಆರೋಪವನ್ನು ಹೊರಿಸಲಾಯಿತು. ಪೋಲೀಸ್ ಅಧಿಕಾರಿ "ರಾಯ್ ಭೂಪೇಂದ್ರ ರಾಯ್" ಎಂಬವನು ಅಲಿಪುರ ಜೈಲಿನಲ್ಲಿ ಬಂಧಿತರಾಗಿದ್ದ ಕ್ರಾಂತಿಕಾರರೊಳಗೆ ಒಡಕು ತರುವ ಕುಟಿಲ ಕಾರಸ್ಥಾನವನ್ನು ಕೈಕೊಂಡಿದ್ದನು. ಈ ಸಮಾಚಾರದಿಂದ ದಕ್ಷಿಣೇಶ್ವರದಲ್ಲಿ ಬಂಧಿತರಾದವರು ಆಕ್ರೋಶಭರಿತರಾದರು. ಒಂದು ದಿನ ಆ ಅಧಿಕಾರಿ ದಕ್ಷಿಣೇಶ್ವರದಿಂದ ಬಂದಿದ್ದ ಕೈದಿಗಳ ಬಳಿಯಿಂದ ಹಾದು ಹೋಗುತ್ತಿದ್ದಾಗ ಅವರೆಲ್ಲರೂ ಥಟ್ಟನೆ ಅವನ ಮೇಲೆ ಬಿದ್ದು ಯಾವ ಆಯುಧವನ್ನು ಉಪಯೋಗಿಸದೆ ಗುದ್ದಿನಿಂದಲೇ ಅವನನ್ನು ಕೊಂದೇ ಬಿಟ್ಟರು. ಅಲೀಪುರ ಜೈಲಿನೊಳಗೆ ಈ ಘಟನೆ ನಡೆಯಿತು; ಇದರ ಪ್ರತಿಕಾರವಾಗಿ ಇಬ್ಬರು ಕ್ರಾಂತಿಕಾರರು ಮರಣದಂಡನೆಗೊಳಗಾದರು.

ರಾಮ ಪ್ರಸಾದ ಬಿಸ್ಮಿಲ್, ರಾಜೇಂದ್ರ ಲಾಹಿರಿ ಮೊದಲಾದ ಪ್ರಮುಖ ಕ್ರಾಂತಿಕಾರಿಗಳಿಗೆ ಮರಣದಂಡನೆಯೇ ನಿಶ್ಚಿತವೆಂದು ತಿಳಿದು ಬಂದಿತು; ಇವರೆಲ್ಲರನ್ನು ಜೈಲಿನಿಂದ ರಹಸ್ಯವಾಗಿ ತಪ್ಪಿಸಲಿಕ್ಕೆ ಒಂದು ಗುಪ್ತ ಯೋಜನೆ ಸಿದ್ಧವಾಯಿತು. ಅದಕ್ಕಾಗಿ ಚಂದ್ರಶೇಖರ ಅಜಾದ್, ಸರ್ದಾರ್ ಭಗತ್ ಸಿಂಗ್ ಮೊದಲಾದವರು ಲಖನೌಗೆ ತೆರಳಿದರು; ಆದರೆ ಅವರ ಉಪರೋಕ್ತ ಯೋಜನೆ ಫಲಿಸಲಿಲ್ಲ. ಯತೀಂದ್ರನಾಥ ದಾಸರ ಅನ್ನ ಸತ್ಯಾಗ್ರಹವನ್ನು ಬಿಡಿಸಲಿಕ್ಕಾಗಿ ಬ್ರಿಟಿಷ ಸರಕಾರ ಕೈಕೊಂಡ ಎಲ್ಲಾ ಪ್ರಯತ್ನ ವ್ಯರ್ಥವಾಯಿತು ಮತ್ತು ಅವರ ಸ್ಥಿತಿ ಕ್ಷಣ ಕ್ಷಣಕ್ಕೂ ಕೆಡುತ್ತಾ ಬರುತ್ತಿತ್ತು. ಆಗೋಸ್ತು ತಿಂಗಳಲ್ಲಿ ಲಾಲಾ ದುನೀ ಚಂದರ ನೇತೃತ್ವದಲ್ಲಿ ಒಂದು ಜೈಲು ಸಮಿತಿ ರಚಿಸಲ್ಪಟ್ಟಿತು. ಆ ಸಮಿತಿಯ ಪ್ರಯತ್ನದಿಂದ ಸಪ್ಟಂಬರ 2ರಂದು ಸಾಮೂಹಿಕವಾಗಿ ಯತೀಂದ್ರನಾಥರ ಹೊರತು ಉಳಿದ ಎಲ್ಲರೂ ಉಪವಾಸವನ್ನು ನಿಲ್ಲಿಸಿದರು. ಆ ಸಮಿತಿ ಯತೀಂದ್ರರನ್ನು ಬಂಧವಿಮುಕ್ತಗೊಳಿಸುವಂತೆ ಸರಕಾರವನ್ನು ಒತ್ತಾಯಪಡಿಸಿತು. ಅವರು ಇನ್ನು ಬದುಕುವ ಸ್ಥಿತಿಯಲ್ಲಿಲ್ಲವೆಂಬುದಾಗಿ ಸಪ್ಟಂಬರ ತಿಂಗಳ ಪ್ರಾರಂಭದಲ್ಲೇ ಡಾಕ್ಟರಗಳ ತಪಾಸಣೆಯ ನಿರ್ಣಯವನ್ನು ಸರಕಾರಕ್ಕೆ ತಿಳಿಸಿದ್ದರು.

ಉಪವಾಸದ 115 ದಿನಗಳು ಸಂಪೂರ್ಣ ಸಂದುಹೋದವು; ಆಗ ಸರಕಾರವು ಅವರ ಕೋರಿಕೆಗಳನ್ನು ಮಂಜೂರುಗೊಳಿಸುವ ಬಗ್ಗೆ ಒಂದು ಆಜ್ಞೆಯನ್ನು ಹೊರಡಿಸಲೇ ಬೇಕಾಯಿತು. ಆದರೆ ಈ ಆಜ್ಞೆ ಹೊರಡುವ ಒಂದು ದಿನ ಮೊದಲೇ ಆ ಮಹಾನ್ ಪುರುಷ ಶ್ರೇಷ್ಠ ಯತೀಂದ್ರನಾಥದಾಸರು ಭಾರತೀಯ ಬಲಿದಾನವೇದಿಯಲ್ಲಿ ತನ್ನನ್ನು ಅರ್ಪಿಸಿ ಅಮರರಾದರು. ಬ್ರಿಟಿಷ್ ಸರಕಾರ ಅಸಂಖ್ಯಾತ ಸ್ವಾತಂತ್ರ್ಯ ಯೋಧರ ಪ್ರಾಣವನ್ನು ಅಪಹರಿಸಿದ್ದರೂ ಯತೀಂದ್ರನಾಥದಾಸರ ಪ್ರಾಣ ಹರಣ ಅತ್ಯಧಿಕ ಲಜ್ಜಾಸ್ಪದವಾದ ನಿಷ್ಠುರ ಅನ್ಯಾಯವಾಗಿತ್ತು.

ಯತೀಂದ್ರನಾಥ ದಾಸರು 1904ರಲ್ಲಿ ಕಲ್ಕತ್ತೆಯಲ್ಲಿ ಶ್ರೀ ಬಂಕಿಮ ಬಿಹಾರಿ ದಾಸರ ಮಧ್ಯಮ ವರ್ಗದ ಪರಿವಾರದಲ್ಲಿ ಜನಿಸಿದರು. 1920 ಎಂಟ್ರೆನ್ಸ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ನಂತರ ಅಸಹಕಾರ ಆಂದೋಲನದಲ್ಲಿ ಧುಮುಕಿದರು 1921ರಲ್ಲಿ ಬಂಧಿತರಾಗಿ ಒಂದು ವರ್ಷ ಶಿಕ್ಷೆ ಶಿಕ್ಷೆಗೊಳಗಾದರು. ಈ ಶಿಕ್ಷೆಯ ಅವಧಿ ಮುಗಿಸಿ ಬಿಡುಗಡೆಯಾಗುತ್ತಲೇ ವಿದ್ಯಾರ್ಥಿ ಕಾಲೇಜು ಭಂಗ ಚಳವಳಿಗೆ ಸೇರಿ ಮೂರು ತಿಂಗಳ ಶಿಕ್ಷೆಗೊಳಗಾದರು. ಈ ಸಂದರ್ಭದಲ್ಲಿ ಅವರ ಆರೋಗ್ಯ ಸಂಪೂರ್ಣ ಕೆಟ್ಟುಹೋಯಿತು. ಆ ವೇಳೆ ಅವರು ಕಾಂಗ್ರೆಸ್ಸನ್ನು ತೊರೆದು ಕ್ರಾಂತಿಕಾರಿ ಮಾರ್ಗವನ್ನು ಅವಲಂಬಿಸಿದರು. ಕ್ರಾಂತಿಕಾರಿ ಗುಪ್ತ ಕಾರಸ್ಥಾನಕ್ಕಾಗಿ ಇವರು ಬಂಧಿಸಲ್ಪಟ್ಟರು; ಆದರೆ ಇವರ ಮೇಲೆ ಯಾವ ಅಪರಾಧವೂ ಸಿದ್ಧವಾಗಲಿಲ್ಲ; ಆಗ ಸರಕಾರ "ನೀನು ದೈವತ್ಯದಿದ್ದರೆ ನಿನ್ನನ್ನು ಬೈದಿರಬೇಕು" ಎಂಬ ಗಾದೆಯಂತೆ ಇವರನ್ನು "ಬಂಗಾಲ ಆರ್ಡಿನೆನ್ಸ್" ಕಾನೂನಿನಂತೆ ಪುನಃ ಬಂಧನಕ್ಕೊಳಪಡಿಸಿ ಜೈಲಿನಲ್ಲಿ ಅಸಂಖ್ಯಾತ ಅತ್ಯಾಚಾರ ಎಸಗಿತು. ಅವರ ಬೆನ್ನೆಲುಬನ್ನು ಮುರಿಯುವ ಪ್ರಯತ್ನ ಮಾಡಲಾಯಿತು. ಡಾಕಾಜೈಲ್ ಸುಪರಿಂಟೆಂಡೆಂಟರೊಡನೆ ಇವರು ತೀವ್ರವಾಗಿ ಹೋರಾಡಿದರು. ಇದಕ್ಕಾಗಿ ಇವರು ಅತ್ಯಂತ ನಿರ್ದಯತೆಯಿಂದ ಹೊಡೆಯಲ್ಪಟ್ಟರು. ಈ ಅಮಾನುಷಿಕ ಅತ್ಯಾಚಾರದ ಪ್ರತಿಭಟನೆಗಾಗಿ ಅವರು ಆಮರಣ ಉಪವಾಸ ಕೈಕೊಂಡರು ಆದರೆ ಜೈಲು ಸುಪರಿಂಟೆಂಡೆಂಟರು ಕ್ಷಮೆ ಕೇಳಿದುದರಿಂದ ಯತೀಂದ್ರನಾಥರು ಆಗಿನ ಉಪವಾಸವನ್ನು 23 ದಿನದ ನಂತರ ನಿಲ್ಲಿಸಿದರು. 1926ರ ನವಂಬರ 27ರಂದು ಅವರನ್ನು "ಮಿಯಾನ್‌ವಾಲಿ ಜೈಲಿ"ನಿಂದ ಬಿಡುಗಡೆ ಮಾಡಲಾಯಿತು. 1927 ಸಪ್ಟಂಬ್ರ 19ರಂದು ಕಾಕೋರಿ ಕಾಂಡದಲ್ಲಿ ರಾಮ ಪ್ರಸಾದ ಬಿಸ್ಮಿಲ್, ರೋಷನ್ ಸಿಂಹ, ರಾಜೇಂದ್ರ ಲಾಹಿರಿ, ಅಶ್ಫಾಕ್ ಉಲ್ಲಾಖಾನ್, ಇವರಿಗೆ ಫಾಶಿ ಶಿಕ್ಷೆ ವಿಧಿಸಲಾಯಿತು. ಇದರ ಪ್ರತೀಕಾರವಾಗಿ ಯತೀಂದ್ರನಾಥರು ಬನಾರಸಿನಲ್ಲಿ ಪೋಲೀಸ್ ಸುಪರಿಂಟೆಂಡೆಂಟರನ್ನು ನಡುಮಧ್ಯಾಹ್ನ ಗುಂಡಿಕ್ಕಿ ಕೊಂದು ಹಾಕಿದ್ದರು.

—ಪಂ. ಬಿ. ಲಕ್ಷ್ಮಣದೇವ ವಿದ್ಯಾರ್ಥಿ

ತಿರುಳ್ಗನ್ನಡದ ನಾಡು- ಧಾರವಾಡ

ಕನ್ನಡನಾಡಿನಲ್ಲಿ ತಿರುಳ್ಗನ್ನಡನಾಡಾಗಿ ಹೆಸರು ಪಡೆದ ಜಿಲ್ಲೆ ಧಾರವಾಡ. ಕದಂಬ, ಚಾಲುಕ್ಯ, ರಾಷ್ಟ್ರಕೂಟ, ರಟ್ಟ ಹಾಗೂ ದೇವಗಿರಿ ಯಾದವರ ಆಳ್ವಿಕೆಯ ಬಳಿಕ ಈ ಜಿಲ್ಲೆ ವಿಜಯನಗರದ ಅರಸರ ಅಧೀನದಲ್ಲಿತ್ತು. ಬಳಿಕ ಔರಂಗಜೇಬನ ಮಗ ಮುಅಜ್ಜಂನೂ ಈ ಪ್ರದೇಶವನ್ನು ವಶಪಡಿಸಿಕೊಂಡನು. ಸುಮಾರು ಹದಿನೆಂಟನೇ ಶತಮಾನದಲ್ಲಿ ಮೊಗಲರಿಂದ ಪೇಶ್ವೆಯರ ಕೈಸೇರಿದ ಈ ಪ್ರದೇಶ ಶತಮಾನದ ಏಳನೂರ ಎಪ್ಪತ್ತೆಂಟರಲ್ಲಿ ಮೈಸೂರಿನ ಹೈದರನ ಕೈಸೇರಿತು. 1818ರಲ್ಲಿ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟ ಈ ಜಿಲ್ಲೆ ಮುಂಬೈ ಪ್ರಾಂತ್ಯದಲ್ಲಿ ಸೇರಿತ್ತು. 1956ರಲ್ಲಿ ವಿಶಾಲ ಮೈಸೂರು ನಿರ್ಮಾಣವಾದಾಗ ಮೈಸೂರು ರಾಜ್ಯದ ಒಂದು ಜಿಲ್ಲೆಯಾಯಿತು ಧಾರವಾಡ.

ಇದು ಇತಿಹಾಸದ ಮಾತಾದರೆ ಪೌರಾಣಿಕ ಕಾಲದಲ್ಲಿಯೂ ಧಾರವಾಡ ಜಿಲ್ಲೆಯ ಕೀರ್ತಿ ಜನಜನಿತವಾಗಿತ್ತು. ಶೌರ್ಯ ತ್ಯಾಗಗಳ ಪ್ರತೀಕವೆನಿಸಿದ ವೀರಕಲ್ಲು, ಮಹಾಸತಿ ಕಲ್ಲು, ದಾನದತ್ತಿಗಳನ್ನು ಸಾರುವ ಶಾಸನಗಳು, ಧರ್ಮ, ಶಿಲ್ಪಕಲೆ, ಸಾಂಸ್ಕೃತಿಗಳ ಸಂಗಮವೆನಿಸಿದ ದೇವಾಲಯಗಳು ಈ ಜಿಲ್ಲೆಯ ಹಿರಿಮೆಯನ್ನು ಇಂದಿಗೂ ಬಿಡದೆ ಸಾಕ್ಷಿಸಿವೆ.

ತುಂಗಭದ್ರಾ, ಮಲಪ್ರಭಾ ನದಿಗಳ ಮಧ್ಯೆ ತಿರುಳ್ಗನ್ನಡ ನಾಡಾಗಿ ಕನ್ನಡನಾಡು-ನುಡಿಗಳ ಏಳಿಗೆಗೆ ದುಡಿದ ಜನತೆಗೆ ನೆಲವೀಡು ಈ ಜಿಲ್ಲೆ.

ಸೃಷ್ಟಿ ಸೌಂದರ್ಯದ ಮಡಿಲಲ್ಲಿ ಬೆಳೆದು ಬಂದ ಧಾರವಾಡ ಜಿಲ್ಲೆಯ ಜನತೆಗೆ ಶೌರ್ಯ-ಶಾಂತಿಗಳಿಗೆ ಮಾರುಹೋದವರು. ಹೊಸ ವಿಚಾರದತ್ತ ಉತ್ಸುಕತೆ, ಕಾರ್ಯದಕ್ಷತೆ, ದೇಶಪ್ರೇಮ ಇಲ್ಲಿ ಎದ್ದು ಕಾಣುತ್ತವೆ. ಉಪ್ಪಿನ ಸತ್ಯಾಗ್ರಹ, ಖಾದಿ ಪ್ರಚಾರ, ಅಸ್ಪೃಶ್ಯತಾ ನಿವಾರಣೆ ಇವಕ್ಕೆಲ್ಲ ಬದ್ಧಕಂಕಣರಾದ ಇಲ್ಲಿನ ವೀರಕನ್ನಡಿಗರು ಮಹಾತ್ಮಾಜಿಯವರ ಪ್ರೀತಿಗೆ ಪಾತ್ರರಾಗಿದ್ದರು. ಗತಕಾಲದ ಕನ್ನಡನಾಡಿನ ವೈಭವವನ್ನು ಇಂದಿನ ಜನತೆಗೆ ಮುಂದಿಟ್ಟುಕೊಡಲು ವಿಜಯನಗರ ಸ್ಮಾರಕೋತ್ಸವ ಸಮಾರಂಭ ನಡೆದುದು ಧಾರವಾಡದಲ್ಲಿ. ಕನ್ನಡನಾಡು ನುಡಿಗಳ ಏಳಿಗೆಗೆ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಯಾದುದು ಧಾರವಾಡದಲ್ಲಿ. ಕರ್ನಾಟಕ ಇತಿಹಾಸ ಸಂಶೋಧನ ಮಂಡಲ—ಕನ್ನಡ ನಾಡಿನ ಇತಿಹಾಸವನ್ನು ಬೆಳಕಿಗೆ ತರಲು ದುಡಿಯುತ್ತಿರುವ ಘನ ಸಂಸ್ಥೆ ಇರುವುದು ಧಾರವಾಡದಲ್ಲಿ. ಕನ್ನಡನಾಡಿನ ಯುವಕರು ಪರಪ್ರಾಂತಗಳಿಗೆ ಹೋಗಿ ಅನ್ಯ ಭಾಷಾ ಸಂಸ್ಕೃತಿಗಳಿಗೆ ತಲೆಬಾಗುವುದನ್ನು ತಪ್ಪಿಸಲು ಹಾಗೂ ಜನಸಾಮಾನ್ಯರಿಗೆ ಉಚ್ಚ ಶಿಕ್ಷಣದ ಅನುಕೂಲತೆಗಳನ್ನು ಒದಗಿಸಲು ಕರ್ನಾಟಕ ಕಾಲೇಜು 1915ರಲ್ಲಿ ಸ್ಥಾಪಿತವಾದುದು ಧಾರವಾಡದಲ್ಲಿ. ಇದೇ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಅಸ್ತಿವಾರವಾದಂತಾಯಿತು. 1950ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ರೂಪುಗೊಂಡಿತು. ಹೀಗೆ ಒಕ್ಕಲುತನ ಕಾಲೇಜು, ತಾಂತ್ರಿಕ ಶಾಲೆ-ಕಾಲೇಜುಗಳು, ಮೆಡಿಕಲ್ ಕಾಲೇಜುಗಳು, ಈ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಸ್ಥಾಪಿತವಾಗಿ ವಿದ್ಯಾದಾನ ಮಾಡುತ್ತಿವೆ.

ಅಲ್ಲದೆ ಕರ್ನಾಟಕ ಲಿಬರಲ್ ಎಜ್ಯುಕೇಶನ್ ಸೊಸೈಟಿ, ಸ್ಕೂಲ್ ಆಫ್ ಆರ್ಟ್ಸ್, ಆಕಾಶವಾಣಿ ಕೇಂದ್ರ, ನಾಟಕ ತರಬೇತಿ ಶಾಲೆ ಇತ್ಯಾದಿಗಳು ಧಾರವಾಡ ಜಿಲ್ಲೆಯ ಕಲಾ--ಶಿಕ್ಷಣಗಳಿಗೆ ಪ್ರೋತ್ಸಾಹ ನೀಡುತ್ತಿವೆ.

ಭತ್ತ, ಜೋಳ, ಗೋಧಿ, ಹತ್ತಿ ಹಾಗೂ ದ್ವಿದಳ ಧಾನ್ಯ ಇವುಗಳು ಸಾಕಷ್ಟು ಪ್ರಮಾಣದಲ್ಲಿ ಈ ಜಿಲ್ಲೆಯಲ್ಲಿ ಬೆಳೆಯುತ್ತವೆ. ಜಿಲ್ಲೆಯ ಪಶ್ಚಿಮ ಭಾಗ ಮಲೆನಾಡು. ಪೂರ್ವಕ್ಕೆ ಬೇವಿನನಾಡು ಅಥವಾ ಬೈಲುಸೀಮೆ. ವರದಾ, ಧರ್ಮಾ, ಕುಮುದ್ವತಿ ನದಿಗಳು ಈ ಜಿಲ್ಲೆಯ ಭೂಮಿಯನ್ನು ಫಲವತ್ತಾಗಿ ಮಾಡಿವೆ. ಪೂರ್ವಕಾಲದಿಂದಲೂ ಈ ಜಿಲ್ಲೆಯಲ್ಲಿ ಬಂಗಾರ ದೊರೆಯುತ್ತಿತ್ತೆಂಬ ಪ್ರತೀತಿ ಇದೆ. ಈಗಲೂ ಕಪ್ಪತ ಗುಡ್ಡದಲ್ಲಿ ಬಂಗಾರ ತೆಗೆಯಲು ಪ್ರಯತ್ನ ನಡೆದಿದೆ. ಅಲ್ಲದೆ ಮ್ಯಾಂಗನೀಸ್, ಕಬ್ಬಿಣ, ಸ್ಫಟಿಕಕಲ್ಲು, ಬೆಣಚುಕಲ್ಲು, ನೀಲಶಿಲೆ, ಇವೆಲ್ಲ ಈ ಜಿಲ್ಲೆಯಲ್ಲಿ ದೊರೆಯುತ್ತವೆ.

ಸುಮಾರು 411 ಚದುರ ಮೈಲ ವಿಸ್ತೀರ್ಣದಲ್ಲಿ ಅರಣ್ಯ ತುಂಬಿದ್ದರೂ ಈ ಜಿಲ್ಲೆಯ ಹೆಚ್ಚಿನ ಭಾಗವು ವೃಕ್ಷರಹಿತವಾಗಿದೆ. ಇಲ್ಲಿನ ಅರಣ್ಯದಲ್ಲಿ ಗಂಧ, ತೇಗ, ಹೊನ್ನೆ ಇತ್ಯಾದಿ ಮರಗಳು ಬೆಳೆಯುತ್ತವೆ.

ಈ ಜಿಲ್ಲೆ ಮೈಸೂರು ರಾಜ್ಯದಲ್ಲಿ ಅತಿ ದೊಡ್ಡದು. ಇದರ ವಿಸ್ತೀರ್ಣ 1377660 ಹೆಕ್ಟೇರುಗಳು. ಸುಮಾರು 116 ಮೈಲು ದಕ್ಷಿಣೋತ್ತರವಾಗಿ ಹಬ್ಬಿದ ಈ ಜಿಲ್ಲೆಯ ಅಗಲ 86 ಚದರ ಮೈಲು. 16 ತಾಲ್ಲೂಕುಗಳು, 17 ಪಟ್ಟಣಗಳು, 1356 ಹಳ್ಳಿಗಳುಳ್ಳ ಈ ಜಿಲ್ಲೆಯ ಜನಸಂಖ್ಯೆ 1950362.

ಮೈಸೂರು ರಾಜ್ಯದಲ್ಲಿ ಧಾರವಾಡ ಜಿಲ್ಲೆಯೂ ಅನೇಕ ಪ್ರೇಕ್ಷಣೀಯ ಸ್ಥಳಗಳಿಂದ ಪ್ರಸಿದ್ಧವಾಗಿದೆ. ಮುರಘಾಮಠ ಸಂಸ್ಕೃತ ಪಾಠಶಾಲೆ, ಜನತಾ ಶಿಕ್ಷಣ ಸಮಿತಿಯ ಸಂಸ್ಥೆಗಳು, ಕರ್ನಾಟಕ ವಿಶ್ವವಿದ್ಯಾಲಯ, ಮೂಲಶಿಕ್ಷಣ ಕಾಲೇಜು, ಇತ್ಯಾದಿ ಧಾರ್ಮಿಕ ಹಾಗು ಶಿಕ್ಷಣಸಂಸ್ಥೆಗಳನ್ನು ಧಾರವಾಡಕ್ಕೆ ಬಂದವರು ನೋಡದೆ ಇರಬಾರದು.

ಧಾರವಾಡ ಶಿಕ್ಷಣ ಕ್ಷೇತ್ರದಲ್ಲಿ ಮಾತ್ರವಲ್ಲ ಔದ್ಯೋಗಿಕ ಕ್ಷೇತ್ರದಲ್ಲಿಯೂ ಮುಂದುವರಿಯುತ್ತಿದೆ. ಪ್ಲೈವುಡ್ ಫ್ಯಾಕ್ಟರಿ, ಜೆಂಮಾಯರ್-ಟಿವಾಳ್ ಮೊದಲಾದ ಕಾರ್ಖಾನೆಗಳೇ ಇದಕ್ಕೆ ನಿದರ್ಶನ.

ಧಾರವಾಡ ಜಿಲ್ಲೆಯಲ್ಲಿ ವಾಣಿಜ್ಯೋದ್ಯಮ ನಗರವೆಂದು ಪ್ರಖ್ಯಾತವಾದ ನಗರ ಹುಬ್ಬಳ್ಳಿ. ಹುಬ್ಬಳ್ಳಿಯಿಂದ ಗೋವೆ ಇತ್ಯಾದಿ ಕಡೆಗಳಿಗೆ ದಂತ, ಗಂಧದಕಟ್ಟಿಗೆ, ತಾಮ್ರ, ಹಿತ್ತಾಳೆ ಪಾತ್ರೆಗಳು, ಸೀರೆ ಇತ್ಯಾದಿ ರಫ್ತಾಗುತ್ತವೆ. ಹತ್ತಿ ವ್ಯಾಪಾರಕ್ಕೆ ಹುಬ್ಬಳ್ಳಿ ಅತಿ ಪ್ರಸಿದ್ಧವಾಗಿದೆ.

ಹುಬ್ಬಳ್ಳಿಯು ರೈಲ್ವೆ ಕಾರ್ಯಾಗಾರ ದಕ್ಷಿಣ ಭಾರತದಲ್ಲಿ ಪ್ರಖ್ಯಾತವಾಗಿದೆ. ಇತ್ತೀಚೆಗೆ ಚಿತ್ತರಂಜನ್ ಇಂಜಿನ್ ಕಾರ್ಖಾನೆಯಲ್ಲಿ ತಯಾರಾದ ಒಂದು ಇಂಜಿನ್ ಮಾದರಿಗೆ "ಹುಬ್ಬಳ್ಳಿ" ಎಂದೇ ಹೆಸರಿಡಲಾಗಿದೆ. ಗದಗು, ಲಕ್ಕುಂಡಿ, ಕೋಳಿವಾಡ, ಕಾಗಿನೆಲೆ, ಲಕ್ಷ್ಮೇಶ್ವರ, ದೇವಗಿರಿ ಇವೆಲ್ಲ ಜಿಲ್ಲೆಯಲ್ಲಿ ಐತಿಹಾಸಿಕ ಪ್ರಸಿದ್ಧ ಸ್ಥಳಗಳು.

ಮೈಸೂರು ರಾಜ್ಯದ ಇತರ ಜಿಲ್ಲೆಗಳಂತೆ ಇಲ್ಲಿಯೂ ಜನಸಂಖ್ಯೆ ಸಮಸ್ಯೆ ಅತ್ಯಂತ ಜಟಿಲವಾಗಿದೆ. 1921ರ ಜನಗಣತಿಯಂತೆ 116200ಇದ್ದ ಜನಸಂಖ್ಯೆ 1961ರ ಜನಗಣತಿಯಂತೆ 195000ಕ್ಕೆ ಏರಿದೆ. ಹೀಗೆ ಜನಸಂಖ್ಯೆ ಎಡೆಬಿಡದೆ ಬೆಳೆಯುತ್ತಿರುವುದರಿಂದ ಆರ್ಥಿಕ ಪರಿಸ್ಥಿತಿಯನ್ನು ಹತೋಟಿಯಲ್ಲಿಡಲು ಸಾಧ್ಯವಾಗದು. ಆದುದರಿಂದ ಇಲ್ಲಿರುವ ಭಾರತಸರಕಾರದ ಮಾದರಿಯ ಆರೋಗ್ಯ ಕೇಂದ್ರಗಳು 22 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 11 ಡಿಸ್ಪೆನ್ಸರಿಗಳು, 12 ಆರೋಗ್ಯ ಕೇಂದ್ರದ ಮಾದರಿಯ ಡಿಸ್ಪೆನ್ಸರಿಗಳು, 15 ಗ್ರಾಮಾಂತರ ಪ್ರದೇಶದಲ್ಲಿರುವ ಆರೋಗ್ಯ ಕೇಂದ್ರಗಳು ಕುಟುಂಬ ಯೋಜನೆ ಬಗ್ಗೆ ಜನರಿಗೆ ಸಲಹೆ ನೀಡುತ್ತಿವೆ. ಶಸ್ತ್ರ ಕ್ರಿಯೆ ಮಾಡುತ್ತಿವೆ. ಇತರ ನಿರೋಧಕ ಸಾಧನಗಳನ್ನು ಒದಗಿಸುತ್ತಿವೆ. 1966-67ರ ಸಾಲ್ಕು ವರ್ಷದ ಅವಧಿಯಲ್ಲಿ ಈ ಜಿಲ್ಲೆಯಲ್ಲಿ 32,421 ಸ್ತ್ರೀ ಪುರುಷರಿಗೆ ಸಂತತಿನಿರೋಧಕ ಶಸ್ತ್ರಚಿಕಿತ್ಸೆಯನ್ನು ಮಾಡಿ 9 644 ಮಹಿಳೆಯರಿಗೆ ವಂಕಿ ತೊಡಿಸಲಾಯಿತು. ಕುಟುಂಬ ಯೋಜನೆಯ ತೀವ್ರ ಅನುಷ್ಠಾನಕ್ಕೆ ಈ ಜಿಲ್ಲೆಯನ್ನು ಆಯ್ಕೆ ಮಾಡಲಾಗಿದೆ. 1968-69ರ ಎರಡು ವರ್ಷದ ಅವಧಿಯಲ್ಲಿ 4.68 ಲಕ್ಷಕ್ಕಿಂತಲೂ ಹೆಚ್ಚು ನಿರೋಧಗಳನ್ನು ಜಿಲ್ಲೆಯಾದ್ಯಂತ ಹಂಚಲಾಯಿತು.

ಮಕ್ಕಳ ಶಿಕ್ಷಣ

ಮಕ್ಕಳ ಹಾಗೂ ಮನುಷ್ಯರ ದೇಹ, ಬುದ್ಧಿ ಹಾಗೂ ಆತ್ಮಗಳಲ್ಲಿಯ ಯಾವತ್ತೂ ಉತ್ತಮ ಗುಣಗಳನ್ನು ಪ್ರಕಟಪಡಿಸುವದೇ ನಿಜವಾದ ಶಿಕ್ಷಣ ಎಂದು ನನ್ನ ಅಭಿಪ್ರಾಯ! ಓದ ಬರಹವೇ ಶಿಕ್ಷಣದ ಸರ್ವಸ್ವವಲ್ಲ. ಇಷ್ಟೇ ಅಲ್ಲ! ಓದುಬರಹವೇ ಶಿಕ್ಷಣದ ಆರಂಭವೂ ಅಲ್ಲ. ಸ್ತ್ರೀ ಪುರುಷರಿಗೆ ಶಿಕ್ಷಣ ಕೊಡುವ ಸಾಧನಗಳಲ್ಲಿ ಓದು ಬರಹವೂ ಒಂದು ಸಾಧನ ಮಾತ್ರ. ಸಾಕ್ಷರತೆಯೇ ಶಿಕ್ಷಣವಲ್ಲ! ಆದ್ದರಿಂದ ಮಕ್ಕಳಿಗೆ ಯಾವದೊಂದು ಉಪಯುಕ್ತ ಕೈಗಾರಿಕೆ ಕಲಿಸಬೇಕು. ಮತ್ತು ಅವರು ತಮ್ಮ ಶಿಕ್ಷಣದ ಪ್ರಾರಂಭದ ದಿನದಿಂದಲೇ ಉತ್ಪಾದಕ ಕೆಲಸ ಮಾಡಲು ಸಮರ್ಥರಾಗಬೇಕು. ಇದೇ ಮಕ್ಕಳ ಶಿಕ್ಷಣದ ಆರಂಭ ಎಂದು ನಾನು ತಿಳಿಯುತ್ತೇನೆ.

—ಗಾಂಧೀ

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಆಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್.
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ವಾರಪತ್ರಿಕೆ
ಉಡುಪಿ, ದ. ಕ.

NAVAYUGA
UDIPI, S. K.

ಸಂಪುಟ : 50
ಸಂಚಿಕೆ : 14

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
ವಿಶೇಷ ಸಂಚಿಕೆಗಳು ಸಹಿತ
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವನದೇ ಪ್ರಕಟಣೆಗಳು ಕನಿಷ್ಟ ಮೂರು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಕಳೆಯಿಲ್ಲದ ಸನ್ನಿಧಾನಗಳು

ಕೇರಳದ ಸುಪ್ರಖ್ಯಾತ ದೇವಾಲಯಗಳಲ್ಲಿ ಒಂದು ಗುರುವಾಯೂರಿನ ಶ್ರೀಕೃಷ್ಣ ಮಂದಿರ. ಈ ಬೃಹತ್ ಮಂದಿರಕ್ಕೆ ಆಕಸ್ಮಿಕವಾಗಿ ಬೆಂಕಿಬಿದ್ದು ಮುಕ್ಕಾಲು ಮೂರು ವೀಸ ಪಾಲು ಸುಟ್ಟು ಬೂದಿಯಾಗಿ ಹೋಯಿತು. ಲಕ್ಷೋಪಲಕ್ಷ ರೂಪಾಯಿಗಳಿಗೆ ನಷ್ಟ ತಂದಿತು; ದೇವಾಲಯದ ಘನತೆ-ಪ್ರತಿಷ್ಠೆಗಳಿಗೂ ಹಾನಿ ತಟ್ಟಿತು. ಕೇರಳ ಸರಕಾರದ ದೇವಸ್ವಂ ಮಂತ್ರಿಗಳು ಮುಖ್ಯಮಂತ್ರಿಯ ಒಪ್ಪಿಗೆ ಪಡೆದು ಬೆಂಕಿ ಆಕಸ್ಮಿಕದ ಬಗ್ಗೆ ತನಿಖೆ ನಡೆಸಲೂ ನಿರ್ಧರಿಸಿದರು. ಅರ್ಚಕರೊಬ್ಬರ ಕೆಚ್ಚಿನ ಪ್ರತೀಕವಾಗಿ ಉಳಿದ ಶ್ರೀಕೃಷ್ಣ ವಿಗ್ರಹವನ್ನು ಮತ್ತೆ ಅಷ್ಟಬಂಧ ನಡೆಸಿ ಪ್ರತಿಷ್ಠೆ ಮಾಡಲಾಯಿತು. ಇನ್ನು ಉಳಿದುದು ಭಸ್ಮೋದ್ಧಾರ. ದೇಶದಾದ್ಯಂತ ಗುರುವಾಯೂರ ಶ್ರೀಕೃಷ್ಣನ ಭಕ್ತರು ಇರುವುದರಿಂದ ಅದೂ ಅಲ್ಪಾವಧಿಯಲ್ಲೇ ಮುಗಿಯಬಹುದು.

ಇಲ್ಲಿ ವಿಚಾರಕ್ಕೆ ಪ್ರಚೋದಕವೆನಿಸುವ ಒಂದು ಸಂಗತಿಯಿದೆ. ಬೆಂಕಿಯ ಆಕಸ್ಮಿಕದ ಬಗ್ಗೆ ತನಿಖೆ ನಡೆಯಲಿರುವುದಕ್ಕೆ ಮೊದಲೇ ಕೆಲವು ಪ್ರಖ್ಯಾತ ಜ್ಯೋತಿಷ್ಯರು ತಮ್ಮ ಜ್ಯೋತಿಷ್ಯ ವಿದ್ಯೆಯ ಬಲದಿಂದ ಬೆಂಕಿಯು ಉದ್ದೇಶಪೂರ್ವಕವಾಗಿ ಯಾರಾದರೂ ಇಟ್ಟದ್ದಲ್ಲ; ಅದು ತನಗೆ ತಾನಾಗಿಯೇ ಕಾಣಿಸಿಕೊಂಡದ್ದು, ಸ್ವಯಂಭೂ. ಅದು ಕೃಷ್ಣಲೀಲೆ ಎಂದಿದ್ದಾರೆ. ಇದಕ್ಕೆ ಅವರನ್ನುವ ಕಾರಣ—"ಸನ್ನಿಧಾನದಲ್ಲಿ ನಡೆಯುತ್ತಿರುವ ಅತ್ಯಾಚಾರ—ಅನಾಚಾರಗಳಿಂದಾಗಿ ಸ್ಥಳದ ಕಳೆಗುಂದಿದೆ; ಆದ್ದರಿಂದ ಬೆಂಕಿ ಬಿತ್ತು". ರಾಮಾಯಣದಲ್ಲಿ ಸೀತೆಯು ಪಾತಿವ್ರತ್ಯವನ್ನು ಜಗಜ್ಜಾಹೀರು ಮಾಡಲು ಅಗ್ನಿಪ್ರವೇಶ ಮಾಡಿದ್ದನ್ನು ಓದಿದ್ದೇವೆ. ಸತ್ಯ ಹರಿಶ್ಚಂದ್ರನು ಪತ್ನೀ ಪುತ್ರರೊಡನೆ ಕಾಶಿಗೆ ಹೋಗುವಾಗ, ವಿಶ್ವಾಮಿತ್ರ ಜನಿತ ಕೃತಕಾಗ್ನಿ ತನ್ನ ಬಂದಾಗ, 'ಶಾಪ ಭಯ ಕಳೆ ಪರಿಶುದ್ಧಿಯಾದೆನೆಂದೆನ್ನಿಂದು ಬಿಡಲಿ' ಎಂದು ಮನಂತಾಗಿ ತನ್ನ ಶೀಲವನ್ನೇ ಬೆಂಕಿಯ ಮುಂದೆ ಪಣವಿಟ್ಟ ಮುಂದ ಮಡದಿ ಘಟನೆಯನ್ನು ಓದಿದ್ದೇವೆ. ಸೀತೆ ಅಪ್ಪಟ ಬಂಗಾರವೆಂದು ರಾಮನಿಗೆ ವೇದ್ಯವಾಯ್ತು; ಚಂದ್ರಮತಿ ತನ್ನ ಸತ್ ಶೀಲ—ಸತ್ ಚಾರಿತ್ರ್ಯಗಳಿಂದ ಪತಿ—ಪುತ್ರರು ಮುಂದುವರಿಯುವಂತೆ ಮಾಡಿದಳು. ಇಂದಿಗೂ ಬೆಂಕಿಯ ಮೇಲೆ ನಡೆಯುವವರಿದ್ದಾರೆ—ನೂರಿ ದರ್ಶನದ ವೇಳೆ. ಹೀಗೆ ನಡೆಯುವುದಕ್ಕೆ ಮೊದಲು ಕೆಲವು ದಿನ ಅವರು ನೇಮದಿಂದಿರಬೇಕೆಂದೂ ಇಲ್ಲವಾದರೆ ಬೆಂಕಿ ಸುಡುವುದೆಂದೂ ಹೇಳುತ್ತಾರೆ. ಗುರುವಾಯೂರಿನ ಬೆಂಕಿ ಆಕಸ್ಮಿಕದ ಬಗ್ಗೆ ಜ್ಯೋತಿಷ್ಯರ ಅಂಬೋಣ ಕೇಳುವಾಗ, ರಾಮಾಯಣಾದಿ ಪ್ರಾಚೀನ ಗ್ರಂಥಗಳ ಮಾತಿನಲ್ಲಿ ಸತ್ಯವಿದೆಯೆನಿಸುತ್ತದೆ.

ದೇವಾಲಯಗಳು ದೇವರಂತೆಯೇ ಪವಿತ್ರವಾಗಿರಬೇಕಾದದ್ದು ಅಗತ್ಯ. ಮನೆಯನ್ನು ನೋಡಿ, ಒಳಗಿನವರ ಹೃದಯ ಹೇಳಬಹುದೆಂಬ ಮಾತಿದೆ. ದೇಗುಲಗಳು ಅಂತರಂಗ-ಬಹಿರಂಗ ಶುದ್ಧವಾಗಿರಬೇಕು. ಅದಕ್ಕೆ ಸಂಬಂಧಪಟ್ಟ ವ್ಯವಹಾರಗಳು ಅನುಮಾನಕ್ಕೆಡೆಕೊಡಬಾರದು. ನಿರ್ಮಲತೆ-ಪವಿತ್ರತೆ-ಧಾರ್ಮಿಕತೆಗಳು ಅಲ್ಲಿ ಮುಪ್ಪುರಿಗೊಂಡಿರಬೇಕು. ವ್ಯಕ್ತಿಯಲ್ಲಿ ಇವು ಲೋಪವಾದಂತೆ ಆತನ ಅಧಃಪತನವಾಗುತ್ತ ಬರುತ್ತದೆ; ದೇವಾಲಯಗಳ ಬಗೆಗೂ ಜ್ಯೋತಿಷಿಗಳು ಅಂದದ್ದು ಇದೇ ಮಾತನ್ನು. ಇದನ್ನು ನಾವೂ ನಂಬಬಹುದು; ಆದರೆ, ಬೆಂಕಿಯ ದುರಂತಕ್ಕೆ ಜ್ಯೋತಿಷಿಗಳು ಹೇಳಿದ್ದ ಕಾರಣವನ್ನು ಅಲ್ಲಗಳೆಯಲಾಗುವುದಿಲ್ಲ. ಬಂದ ಕಾಲದಲ್ಲಿ ಧರ್ಮದ ಆಗರವೆನಿಸಿದ್ದ ಮಂದಿರಗಳು ಇಂದು ಏನಾಗಿವೆ? ಪೂಜಾ ವಿಧಿ-ಮಂತ್ರ ತಂತ್ರಗಳ ಅಪಕ್ವ ಜ್ಞಾನವುಳ್ಳವರು ಸಾಮಾನ್ಯರಾಗಿ ಅರ್ಚಕರಾಗಿದ್ದಾರೆ. ಅಲ್ಲಿ ನಡೆಯಬೇಕಾಗಿದ್ದ ಪೂಜೆ—ವಿನಿಯೋಗಗಳಿಗೆ ಕತ್ತರಿ ಬಂದಿದೆ. ಭಕ್ತರಿಗೂ ಭಗವಂತನಿಗೂ ನಡುವೆ ಪೂಜಾರಿಗಳೋ ದೇವಸ್ವದಿಂದ ನಿಯುಕ್ತರಾದ ಸರಕಾರಿ ಪ್ರತಿನಿಧಿಗಳೋ, ಆಡಳಿತ ಮುಕ್ತೇಸರರೋ ಅಡ್ಡಗೋಡೆಯಾಗಿ ನಿಂತಿದ್ದಾರೆ. ಹದಿನೆಂಟು ದಿವಸಗಳ ಕಾಲ ಲಕ್ಷೋಪಲಕ್ಷ ಹತ್ಯೆಗಳು ನಡೆದಿದ್ದ ಕುರುಕ್ಷೇತ್ರವೂ ಧರ್ಮಕ್ಷೇತ್ರವಾಗಿತ್ತು. ಆದರೆ, ಇಂದು ಧರ್ಮಕ್ಷೇತ್ರಗಳೆಲ್ಲವೂ ಕುರುಕ್ಷೇತ್ರಗಳಾಗಿ ಬರತೊಡಗಿವೆ.

ಸಮಾಜದಲ್ಲಿ ಹಣದ—ಆಡಂಬರದ ಸ್ಥಾನಮಾನ ಹೆಚ್ಚಿದಂತೆಯೇ ದೇವಕುಲಗಳಲ್ಲೂ ಹಣಕ್ಕೆ—ಉಡುಗೆ ತೊಡಿಗೆಗೆ ಗೌರವ ಬಂದಿದೆ; ಹಣವುಳ್ಳವರಿಗೆ ಮಾತ್ರ ದೇವರ ಕಾಣಿಕೆಕೊಳ್ಳುತ್ತಾನೆಂಬಂತೆ ಅಲ್ಲಿನ ನಿಯಮಗಳು! ಹೀಗೆ ಕಾಶಿಯಿಂದ ಕನ್ಯಾಕುಮಾರಿಯ ವರೆಗೆ, ಉಡುಪಿಯಿಂದ ಕಂಚಿಯ ವರೆಗೆ ಧರ್ಮಕ್ಷೇತ್ರಗಳು ಅನ್ಯಾಯ, ಅತ್ಯಾಚಾರ, ಅನಾಚಾರ, ದುರ್ವ್ಯವಹಾರ, ಅವ್ಯವಹಾರ ಇತ್ಯಾದಿಗಳ ಮನೆಯಾಗಿ ಪರಿಣಮಿಸುತ್ತ ಬರುತ್ತಿರುವುದರಿಂದ ದೇವತ್ವ ಕಳೆ ಲುಪ್ತವಾಗುತ್ತಲೇ ಬರುತ್ತಿದೆಯೆನ್ನಬೇಕು. ಕಳೆ ಲೋಪವಾದ ಬಳಿಕ ಸನ್ನಿಧಾನದ ಶಕ್ತಿ ಕುಂದಿ ವಿಪತ್ತುಗಳಿಗೆ ನಾಂದಿಯಾಗುವುದೂ ಅಸ್ವಾಭಾವಿಕವಲ್ಲವೆಂದು ಗುರುವಾಯೂರಿನ ಜ್ಯೋತಿಷಿಗಳು ಹೇಳುತ್ತಾರೆ. ತೀರ್ಥ—ಪುಣ್ಯ—ಧರ್ಮಕ್ಷೇತ್ರಗಳ ದರ್ಶನದಿಂದ ಇಷ್ಟಾರ್ಥ ಸಿದ್ಧಿಸದಾಗ "ಭಕ್ತ" ತನ್ನ ಅಶುದ್ಧಿಯನ್ನು ಮುಚ್ಚಿಟ್ಟು ಸನ್ನಿಧಾನದ ಅಶುದ್ಧಿಯನ್ನು ಎತ್ತಿತೋರಿಸುವ ಹವ್ಯಾಸವೂ ಇಂದು ಬೆಳೆಯುತ್ತಿದ್ದು ಇದಕ್ಕೆ ಕಳೆಗುಂದಿಕೆಯೇ ಕಾರಣವಿರಬಹುದು. ಜ್ಯೋತಿಷಿಗಳ ಅಭಿಪ್ರಾಯವೇ ಸರಿಯೆಂದಾದರೆ, ಭಾರತದ ಎಲ್ಲ ಮಂದಿರಗಳೂ ಕ್ಷೇತ್ರದ ಈಗಿನ ಸ್ಥಿತಿಗಳಿಂದ ಅನಾಹುತಕ್ಕೆ ಗುರಿಯಾಗುವ ದಿನ ಬಹಳ ನಿಕಟದಲ್ಲಿದೆಯೆಂದು ಖೇದದಿಂದಲೇ ಹೇಳಬೇಕಾಗುತ್ತದೆ. ಇದನ್ನು ತಡೆಯುವುದು ಸಮಾಜದ, ಸರಕಾರದ ಮತ್ತು ಭಕ್ತರ ಕೆಲಸ.

ಮಹಾಪರಾಧವಲ್ಲ

ಇಂಡಿಕೇಟ್ ಗೂಗೆ ಗುಜರಾತದಲ್ಲಿ ಸ್ವತಂತ್ರ ಪಕ್ಷದ ಸಖ್ಯದಿಂದ ಸಿಂಡಿಕೇಟ್ ಸರಕಾರವನ್ನು ಉರುಳಿಸಲು ಅಶಕ್ತವಾದುದಕ್ಕೆ ಒರಿಸ್ಸಾದಲ್ಲಿನ ಸ್ವತಂತ್ರ ಪಕ್ಷದ ನೇತೃತ್ವದ ಸರಕಾರವನ್ನೂ ಅದು ಉರುಳಿಸ ಬಯಸಿದ್ದು ಕಾರಣ. ಅನಂತರ ಸಿಂಡಿಕೇಟ್ ಪ್ರಜಾತಂತ್ರವಾದಿ ಪಕ್ಷಗಳ ರಂಗರಚನೆಯ ಬಗ್ಗೆ ಹೇಳುತ್ತಲೇ ಬಂದಿದೆ; ಉತ್ತರ ಪ್ರದೇಶದಲ್ಲಿ ಅದು ತುಸು ಮಟ್ಟಿಗೆ ಕಾರ್ಯರೂಪಕ್ಕೆ ಬಂದಿದೆ". ಸಿಂಡಿಕೇಟ್ ಎಐಸಿಸಿಯ ಲಖ್ನೋ ಅಧಿವೇಶನದಲ್ಲಿ ಈ ಬಗ್ಗೆ ಮುಂದುವರಿಯಲು ಶ್ರೀ ಎಸ್ಸೆನ್ನರಿಗೆ ಅಧಿಕಾರವನ್ನು ಬಹುಮತದಿಂದ ಕೊಡಲಾಯ್ತು. ಗುಜರಾತದ ಹಿಂದಿಬ್ಬರು ತಮ್ಮ ಪಕ್ಷವು ಜನಸಂಘ ಮತ್ತು ಸ್ವತಂತ್ರ ಪಕ್ಷಗಳೊಡನೆ ಸಖ್ಯ ಸಾಧಿಸಬಾರದೆಂದು ನುಡಿದರು. ಶ್ರೀಮತಿ ಇಂದಿರಾ ಗಾಂಧಿಯವರು ದೇಶದ್ರೋಹಿ ಕಮ್ಯುನಿಸ್ಟರ, ನೂರಕ್ಕೆ ನೂರು ಜಾತೀಯ ಮುಸ್ಲಿಂ ಲೀಗಿಗಳೊಡನೆಯೂ ಸಖ್ಯ ಸಾಧಿಸಿದಾಗ, ಸಿಂಡಿಕೇಟ್ ಜನಸಂಘ-ಸ್ವತಂತ್ರ ಪಕ್ಷಗಳೊಡನೆ ಗೆಳೆತನ ಮಾಡುವುದು ಮಹಾ ಅಪರಾಧವಾಗದು. ಶ್ರೀಮತಿ ಗಾಂಧಿ ಬಾಯಿಬಿಟ್ಟೊಡನೆಯೇ ಪ್ರಾಯಃ ಹೊಸ ವರ್ಷದ ಪ್ರಥಮಾರ್ಧದಲ್ಲೇ ಸಾರ್ವತ್ರಿಕ ಚುನಾವಣೆಗಳು ನಡೆಯಲಿರುವಾಗ, ಪ್ರಜಾಪ್ರಭುತ್ವದ ಉಳಿವಿಗಾಗಿ ಪ್ರಜಾಸತ್ತೆಯಲ್ಲಿ ವಿಶ್ವಾಸವುಳ್ಳ ಎಲ್ಲ ಪಕ್ಷಗಳೊಡನೆ ಕನಿಷ್ಠ ಕಾರ್ಯಕ್ರಮಗಳ ಮಟ್ಟಿಗಾದರೂ ಹೊಂದಾಣಿಕೆ ಸಾಧಿಸಲು ಸಿಂಡಿಕೇಟ್ ಹೊರಡದಿದ್ದರೆ, ದೇಶದಲ್ಲಿ ಶ್ರೀಮತಿ ಗಾಂಧಿ ಸರ್ವಾಧಿಕಾರಿಯಾಗಿ "ಸಮಾಜವಾದ"ದ ಬಲದಲ್ಲಿ ದೇಶವನ್ನೇ ಪಶ್ಚಿಮ ಬಂಗಾಳ ಮಾಡಿಡುತ್ತಾರೆ; ಪ್ರಜಾಪ್ರಭುತ್ವವನ್ನು ಅಪಾಯಕ್ಕೆ ತಂದು ನಿಲ್ಲಿಸುತ್ತಾರೆ.

ಪುತ್ತೂರು III ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. R. C. 995/70

ಶಂಭು ಉಪಾಧ್ಯಾಯ ಕೂಡಾ—ಅರ್ಜಿದಾರರು
ಮತ್ತು
ಸಾಂತ ಗೌಡ ಕೂಡಾ —ಎದುರು

6ನೇ ಎದುರುಗಾರ ರಾಮಕ್ಕ, ಸಾಂತಗೌಡರ ಮಗಳು ಆಲಂಕಾರು ಗ್ರಾಮ ಪುತ್ತೂರು ತಾಲೂಕು.

ಮೇಲಿನ ನಂಬ್ರದ ಗೇಣಿ ಬಾಕಿ ಬಗ್ಗೆ ಅರ್ಜಿದಾರರು ಅರ್ಜಿ ಮಾಡಿದ್ದಾಗಿರುತ್ತದೆ. ತಾರೀಕು 6-1-71ಕ್ಕೆ ವ್ಯಾಜ್ಯ ಇಟ್ಟಿರುತ್ತದೆ. ಆ ದಿವಸ ಬೆಳಗ್ಗೆ 11ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು [illegible] ದಾವೆಯನ್ನು ತೀರ್ಮಾನಿಸಲಾದೀತು ಎಂತ ಕೋರ್ಟು ಹುಕ್ಕುಂ ಮೇರೆಗೆ ನಿಮಗೆ ಈ ಮೂಲಕ ತಿಳಿಯಪಡಿಸಲಾಗಿದೆ.

Sd/- K. T. Bhat
Advocate for Petitioner
Puttur, S. K. Date 4-12-70

ಗೇಹರಾಜ್ಯದಲ್ಲಿ

ಹೊಸ್ತು ಸಿನಿಮಾ - ಭಾರೀ ಕ್ರೊ

"ಅಲ್ಲ, ಸೂರ್ಯ ಮುಳುಗುತ್ಲೂ ಚಳಿಗೆ ಆರಂಭವಾಗಿ ಬಿಡುವಾಗ ನೀವು ಮಧ್ಯರಾತ್ರಿ ಮಾಡ್ಕೊಂಡು..."

"ಬರೋದು ತಪ್ಪಂತ ತಾನೇ ನೀನ ನ್ನೋದು?"

"ನೀವು ಮಧ್ಯರಾತ್ರಿಗ್ಬನ್ನಿ, ಬೆಳಗಾದ ಮೇಲೇ ಬನ್ನಿ. ಆದ್ರೆ ಈ ಇಬ್ಬರ ತಲೇ ಮೇಲೆ ಬಿದ್ದ ಮತ್ತೆ ಶೀತ ಜ್ವರ-ಗೀತಗಿ ರಾಂತ ಅಂಟಿಸ್ಕೊಂಡು...."

"ಏನೇ ಅದು ಹಾಗನ್ನೋದು? ಯಾವ ಗೀತಾ ಅದು ಅಂಥ ಗಿರ ಬಡಿಸೋದಕ್ಕೆ?"

"ಯಾರೂಂತ ನಾನೇನ್ ಹೇಳ್ಲಿ? ಬಿಡ್ಸಿಕೊಂಡೋರ್‍ಗೇ ಗೊತ್ತು...."

"ಹಳ್ಳಿ ಕಾಡ್ನಲ್ಲಿ ಗೀತಾ ಪಾರಾಯಣಾಂತಂದ್ರೆ ಇಷ್ಟೇಟು ಆಡೋದಕ್ಕೆ ಪರ್‍ಯಾಯ ನಾವು..."

"ಹ್ಞೂಂ..."

"ಆದ್ರೆ ನೋಡು, ನಾನು ಹೀನ, ಬೇಡ ನನ್ನ ಎದೆಮುಟ್ಟಿ ಪ್ರಮಾಣ ಮಾಡ್ತೀನೆ—ಅಂತಹ ಎಲೆಯನ್ನ ಇದುವರೆಗೆ ಮುಟ್ಟಿಲ್ಲಾಂತ...."

"ಅಲ್ರಿ, ಎಂಡ್ಮಕ್ಕ ಯೆಂಡ್ತಿ ತಾಳಿಮುಟ್ಟಿ ಪ್ರಮಾಣ ಮಾಡೋದಿಲ್ವೆ ನಾಯಿ ಮ್ಯಂದೆಯಿಂದ ಮುಟ್ಟ್ಕೋಲ್ಲಾಂತ?"

"ಅಂದ್ರೆ ನನ್ನ ಪರಿಶಿಜನ ಮುಂಡ್ಮಕ್ಕನ ಪರಮಾಣವಾಯ್ತೇನ?"

"ಓ, ಶಿವ.ಗೂ ಮುಖ ಸಣ್ಣದಾಗುತ್ತೆ...."

"ಅಲ್ಲವೇ ಮತ್ತೆ? ಮುಖ ಇದೇಂತಾದ್ದೇಲಿ ಅದು ಸಣ್ಣದೂ ಆಗುತ್ತೆ, ದೊಡ್ಡದೂ ಆಗುತ್ತೆ...."

"ಹಾಗಲ್ಲಾರೀ, ಹೀಗೇ ತಮಾಷೆಗೆ ಅಂದೆ...."

"ಅದು ನಂಗೆ ಗೊತ್ತಿಲ್ವೆ? ನಾನೂ ತಮಾಷೆಗೆಂದೇ ಮುಖ ಸಣ್ಣದು ಮಾಡ್ದೆ..."

"ಅದು ಹಾಗಿರಲಿ..."

"ಇರಲಿ.."

'ಈ ದಿವ ಏನು ತಡಾಂತ?'

'ಅಲ್ವೇ, ಹಿರಿಯ ರಾಜ್ಯಕೀಯ ನಾಯಕರೊಬ್ಬರ ಹೊಸ ಕಲಹ ಮೇಲೆ ಮಾತು ಮಾತು ಪ್ರಸಂಗವಾಯ್ತು.'

"ಏನಪ್ಪಾ ಗೇಣಿ ಅಕ್ಕಿಗೆ ವಿನಾಶ ತಂದ ಕ್ರಾಂತಿ?"

"ಅಂಥ ದೊಡ್ಡದಲ್ಲ. ಆದ್ರೂನೂ ವೇ ಅದನ್ನ ದೊಡ್ಡದೂಂತ ತಿಳ್ಕೊಂಡ್ರೆ ಭಾರೀ ದೊಡ್ಡದಾಗುತ್ತೆ; ಚಿಕ್ಕದೂಂತ ತಿಳ್ಕೊಂಡ್ರೆ ಭಾರೀ ಚಿಕ್ಕದಾಗುತ್ತೆ."

"ಅಂದ್ರೆ, ಅಣು ಗಳಲ್ಲಿ ಪರಮಾಣು, ಗುರುಗಳಲ್ಲಿ ಬೃಹದ್ಗುರು...."

"ಹ್ಞೂಂ, ಹಾಗೇ ಅಂದ್ಕೋಬಹುದು...."

"ಅಂತಾದ್ದು ಏನೂಂತ?"

"ನೋಡು, ನಮ್ಮ ದೇಶದಲ್ಲಿ ಇನ್ನೊಂದು ಹೊಸ ರಾಜ್ಯಕೀಯ ಪಕ್ಷ ಬೇಕೂಂತ..."

"ಇದೊಳ್ಳೇ ಕಥೆಯಾಯ್ತು...."

'ಯಾಕೆ?'

"ಅಲ್ಲಾರಿ, ಅವಿಭಜಿತ ಕಾಂಗ್ರೆಸ್ಸ್ ನಂತೆ ನಮ್ಮ ರಾಜ್ಯಕೀಯ ಪಕ್ಷೋತ್ಪತ್ತಿ ಯಾಗುತ್ತ ಬಂದಿರುವಾಗ ಮತ್ತೊಂದು ಬೇಕು ಅನ್ನೋದು ಅಂದ್ರೆ..."

"ಅದು ಖರೇನ್ನ ನಾರಾಯಣ್ಣನೋ ಅ ನಂತಹ ಮುಕ್ಕಾರೋ ಇರುತ್ತಿದ್ರೆ, ಹಾಡುತಿದ್ರು—ತಿಣುಕಿದನು ಫಣಿರಾಯ ರಾಜ್ಯಕ ಪಾರ್ಟಿಗಳ ಬೋಝ ನಲಿ ."

"ಹ್ಞೂಂ, ಅಲ್ಲ, ಈ ಹೊಸ ಸಂಶಯದ ಅಗ್ರಮುಖಿ ಯಾರು ಮುಖಂಡರು?"

"ಅದೇ, ಆಚಾರ್ಯ ಜೆ. ಬಿ. ಕೃಪಲಾನಿ ಅವರಿಂದ...."

"ಕೃಪಲಾನಿ ಅಂದ್ರೆ, ಅಂದು ಪ್ರಜಾ ಪಕ್ಷವನು ಕಟ್ಟಿದವರ ..."

"ಹ್ಞೂಂ ..ಮುಂದೆ ಅದೇ ಪಕ್ಷ ಆಗಿ ಸದ್ಯಕ್ಕೆ ಇಂಡಿಕೇಟ್ ಪಕ್ಷ ಸೇರುತ್ತೆ...."

"ಅದು ಸರೀನ್ನಿ. ಆದ್ರೆ ನಮ್ಮ ದೇಶದಲ್ಲಿ ಕಾಂಗ್ರೆಸ್ಸಿನಿಂದ ಹೊರಬಂದವ್ರೆಲ್ಲ ಇದೇ ಕೆಲ್ಸ ಮಾಡಿದ್ದಾರೆ.... ಅವರಿಗೆಲ್ಲ ಗುರು ಆಚಾರ್ಯರು ಈ ಆಚಾರ್ಯರೊಬ್ಬರು."

"ಹಾಗೇ ಯಾಕನ್ನಬೇಕು? ಅವರಿಗೆ ಮೊದಲೂ ಹಲವು ಪಕ್ಷಗಳು ಇರಲಿಲ್ಲವೆ?"

"ಇದ್ದಿರಬಹುದು. ಆದ್ರೂ ಕೃಪಲಾನಿಯವರು ಪಕ್ಷದಿಂದ ಹೊರಗೆ ಬಂದ ಹೊಸತಕ್ಕೆ ಜನ್ಮ ನೀಡಿದರು. ಆದ್ರೆ ಅವರಿಗೆ ಆಯುಷ್ಯವೂ ಸುಖವೂ ಇರಲಿಲ್ಲ. ಪಕ್ಷೋಕ್ತ ರಣಾಂಗಣೇ ಅವರ ಉಳಿದರು..."

"ನೋಡಪ್ಪ, ಅಲ್ಲ ಹಿಂದಿನ ಮಾತು. ಬದಲಾವಣೆ ಪ್ರಕೃತಿ ಸಹಜ. ಅದನ್ನ ತಡೆಹಿಡಿಯೋದು ಯಾರಿಂದಲೂ ಸಾಧ್ಯವಿಲ್ಲ. ಒಂದು ನೂರವಿದೇಂತ ಇಟ್ಕೊ."

"ಇಟ್ಕೊಂಡೆ...."

"ಚಿಗುರುವುದು, ಬೆಳೆಯುವುದು ಅದರ ಸಹಜ ಗುಣ...."

"ಹ್ಞೂಂ...."

"ನಾವು ಚಿಗುರು ಚಿವುಟಿ ತೆಗೆಯಬಹುದು; ಕಡಿಯಬಹುದು, ಆದರೆ, ಅದು ತನ್ನ ಗುಣವನ್ನು ಬಿಡುವುದಿಲ್ಲ. ಅದರ ಗತಿ ಪರಿಸ್ಥಿತಿಗನುಸಾರ ಕುಂಠಿತವಾಗಬಹುದು; ಅಥವಾ ವೇಗವಾಗಬಹುದು ಅಷ್ಟೇ...."

"ಒಂದೊಮ್ಮೆ ಅನುಕೂಲ ಪರಿಸ್ಥಿತಿಯಿಲ್ಲದಿದ್ದರೂ ಮುರುಟಿಹೋಗುತ್ತದೆ...."

'ಅದೂ ಪ್ರಕೃತಿ ಸಹಜವೇ. ಸೃಷ್ಟಿಯಾದದ್ದು ವ್ಯಕ್ತ್ಯಾಗೊಳಗಾಗಲೇಬೇಕು. ಪ್ರಕೃತಿಯನ್ನು, ಅದರ ಪರಿವರ್ತನೆಯನ್ನು ಒಪ್ಪಲಾರದವರು ಹಠಿತರಾಗುತ್ತಾರೆ..."

"ಹ್ಞೂಂ....ಅದು ಸರೀನ್ನಿ. ಅಲ್ಲ, ಆಚಾರ್ಯರು ಇಂತಹ ಸಲಹೆ ಯಾರಿಗೆ ಮಾಡಿದರು?"

"ಯಾರಿಗೆಂದೇನು, ಕಮ್ಯುನಿಸ್ಟೇತರ ಪ್ರಜಾತಂತ್ರವಾದದಲ್ಲಿ ವಿಶ್ವಾಸವಿರುವ ಎಲ್ಲ ರಾಜ್ಯಕೀಯ ಪಕ್ಷಗಳ ನಾಯಕರಿಗೆ ಮಾಡಿದರು ...."

"ಇದರ ಉದ್ದೇಶ್ಯ?"

'ಉದ್ದೇಶ್ಯ ಅತ್ಯಂತ ಘನವಾದದ್ದು. ದೇಶ ತೀವ್ರಗತಿಯಿಂದ ಕಮ್ಯುನಿಜಂನ ಗ್ರಾಸವಾಗುತ್ತ ನಡೆದಿದೆ. ಅದರಿಂದ ದೇಶವನ್ನು ಉಳಿಸುವುದೇ ಉದ್ದೇಶ."

"ಇದರ ರೂಪರೇಷೆ ಹೇಗಿರಬೇಕು?"

"ನೋಡು, ಇಂದಿನ ರಾಜ್ಯಕೀಯ ಪಕ್ಷಗಳು ಕೆಲವು ಎಡದಲ್ಲಿ ಎಡವಾಗಿವೆ; ಕೆಲವು ಎಡವಾಗಿವೆ; ಕೆಲವು ಬಲನಲ್ಲಿ ಬಲವೂ ಇನ್ನು ಕೆಲವು ಬಲವೂ ಆಗಿವೆ. ಆದುದರಿಂದ ಜನತೆಯೂ ಎಡ-ಬಲ ಗಳ ಹೊಯ್ದಾಟದಲ್ಲಿ ಎಡವಾವುದು, ಬಲವಾವುದೆಂದು ಅರಿಯದೆ ಗಂಗಾಲಾಗಿದ್ದಾರೆ. ಅದರ ಮೇಲೆ ಕೆಲವೊಂದು ಆದರ್ಶಗಳನ್ನು ಕನ್ನಡಿಯ ಕವಾಟುಗಳಲ್ಲಿಟ್ಟು ಜನತೆಯನ್ನು ವಂಚಿಸುತ್ತಿವೆ. ಹಾಗಾಗಿ ಜನರ ಕಣ್ಣು ಮಂಕಾಗಿದೆ...."

"ಅದು ಸರಿ...."

"ಅದ್ದರಿಂದ ಎಲ್ಲ ಆದರ್ಶಗಳಿಗೂ ಹೊರತಾದ ಜನತೆಯ ಮೂಲಭೂತ ಸಮಸ್ಯೆಗಳನ್ನಷ್ಟೆ ಎದುರಿಸುವುದನ್ನೇ ಉದ್ದೇಶ್ಯವಾಗಿರುವ ರಾಜ್ಯಕೀಯ ಪಕ್ಷವೊಂದು ಜನ್ಮತಾಳಿದರೆ..."

"ಹೊಸ ಪಿಕ್ಚರ್-ಕ್ಕೆ ಜನ ಕ್ಯೂ ನಿಲ್ಲುವುದು ಖಂಡಿತ."

"ಏನೇ ಭಾರೀ ತಮಾಷೆ ಮಾಡ್ತಿ?"

"ತಮಾಷೆಯೇನು ಬಂತು? ಇದ್ದದ್ದನ್ನು ಇದ್ದಂತೆ ಅಂದ್ರೆ...."

"ನೋಡು, ಅದಕ್ಕೇ ಉಗಿಯೋದಿಲ್ಲ. ಪಕ್ಷಾಂತರ, ಪಕ್ಷಭೇದ, ಪಕ್ಷಛಾಯೆಗಳೇ ಈ ಮಹಾ ಪಿಡುಗಿಗೆ ಈ ಹೊಸ ಪಕ್ಷ ರಾಮಬಾಣವಾಗಬಲ್ಲುದು."

"ಸರೀನ್ನಿ. ನೋಡಿ, ನೀವು ಹೇಳಿದ ದೋಷಗಳಿಗೆ ಅಧಿಕಾರ ದಾಹ, ಸ್ವಜನ ಪಕ್ಷಪಾತ, ಸ್ವಾರ್ಥಲಾಲಸೆಗಳಿಂದ ತುಂಬಿರುವ ರಾಜಕಾರಣಿಗಳೇ ಕಾರಣ."

"ಆದರೂ ಪ್ರಾಮಾಣಿಕರು ಎಲ್ಲ ಪಕ್ಷಗಳಲ್ಲೂ ಇಲ್ಲವೇನು? ಅಂಥವರ ಹೊಸಪಕ್ಷ ಬೇಡವೇ...."

"ಅಲ್ರಿ, ನೋಡಿ, ಒಂದು ಮಾತು ಹೇಳ್ತೀನಿ. ಅಧಿಕಾರಿಗಳು ಪ್ರಾಮಾಣಿಕರಾಗಿಯೂ ಅಧಿಕಾರಿಗಳು ಅಪ್ರಾಮಾಣಿಕರಾಗಿಯೂ ಇರುವ ನಮ್ಮ ದೇಶದಲ್ಲಿ ಪ್ರಾಮಾಣಿಕರೆಂಬುದು ಪ್ರಮಾಣಕ್ಕಿಂತ ದರವಿದೆಯೇ ಏಂತ...."

"ಅದನ್ನು ನಿರಾಕರಿಸೋಣ?"

"ನೋಡಿ ಒಂದು ಕಾಲದಲ್ಲಿ ಅಧಿಕಾರ ಲಿಪ್ಸೆಯಿಲ್ಲವೆಂದು ರಾಜಕಾರಣ ನೀಡಿದ ಜಗಜೀವನರಾಮರು ಈಗ ಎರಡೆರಡು ಅಧಿಕಾರಗಳನ್ನೆ ಅಪ್ಪಿಕೊಂಡಿದ್ದಾರೆ. ಹೀಗೆ ಕೆಲವು ಮತ್ತೆ ಬಟ್ಟಿದ್ದರೆ ಬಿಹಾರ ಬಿಟ್ಟು ... ಇಷ್ಟು ಬಟ್ಟೆಕೊಂಡಿದರೆ.."

(ಒಂಭತ್ತನೇ ಪುಟ ನೋಡಿರಿ)

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 181/70

ವಾದಿ: ಬಿ. ಅನಂದ್ರಾಮ ಭಟ್ಟ

ಪ್ರತಿವಾದಿ: ಮರೋತ್ತಮ ನ್ಯಾಕ ಕೂಡಾ

ಹಂಗಾರಕಟ್ಟೆ ರಾಮಚಂದ್ರ ನ್ಯಾಕರ ಮಗ, ಹಾಲಿ ಬೊಂಬಾಯಿ ಶಹರಿನ ವಿಕ್ಟೋರಿಯಲ್ಲಿರುವ ಸರ್ವೋತ್ತಮ ನ್ಯಾಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿರಿಂದ ವಾದಿಗೆ ಸ್ಥಿರಾಸ್ತಿ ಜಪ್ತಾರಿಯಿಂದ ಬರಾ ಮೂಲಗೇಣಿ ಗೇಣಿ ಬಾಕಿ ಕುರಿತು ವಾದಿ ಮಾಡಿದ ಮೇಲಣ ದಾವೆ ತಾ. 18-1-1971ಕ್ಕೆ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಆ ಬಾಬಿನಲ್ಲಿ ನಿಮ್ಮ ಆಕ್ಷೇಪವಿರು ವಲ್ಲಿ ಸದ್ರಿ ತಾರೀಕಿನಲ್ಲು ಕೋರ್ಟಿನಲ್ಲಿ ಹಾಜರಾಗಿ ಉದಾಹರಣೆ ಹಾಕಲಿಕ್ಕೆ ತಪ್ಪಿದಲ್ಲಿ ನಿಮ್ಮ ಉಜುರ್ ಶಿವಾಯ್ ಮೇಲಣ ದಾವೆ ತೀರ್ಮಾನವಾಗುತ್ತದೆಂಬ ಸಂಗತಿ ಈ ಮೂಲಕ ತಿಳಿಯಪಡಿಸಿಯದೆ.

(By order of the Court)

ಎ. ನಾರಾಯಣ ರಾವ್

ಅಡ್ವಕೇಟ್

ಕುಂದಾಪುರ, 2.12.70.

ಸಂದರ್ಶಿಸಿರಿ!—ಸಂತೃಪ್ತರಾಗಿರಿ!!

ಬಲ್ಲ ಜಾಗರಾ ವಜ್ರಗಳಿಗೆ, ಆಧುನಿಕ ಶೈಲಿಯ ಚಿನ್ನಾಭರಣಗಳಿಗೆ ಬೇಕಾದಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮ್‌ಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res;3272

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 79/68

Ex. C. No. 5/'70

ಡಿಕಲ ಸಟ್ಟಿ ಕೂಡಾ ಡಿಕ್ರಿದಾರರು

ಮತ್ತು

ಸೂರಪ್ಪ ಸೆಟ್ಟಿ ಕೂಡಾ—ಜಜ್ಮೆಂಟ್‌ಡೆಟ್ಟರ್ಸ್ ಇವರಿಗಳಿಗೆ

ರತ್ನಾಕರ ಸೆಟ್ಟಿ ... ಉಡುಪಿ ತಾಲ್ಲೂಕು ಬೆಳ್ಳಂಪಳ್ಳಿ ಗ್ರಾಮದ ಮಣೆ ಯಾದ.

8ನೇ ಎದ್ದಿಗೆ ತಿಳಿಯಪಡಿಸುವುದೇನೆಂದರೆ: ಮೇಲಿನ ಅಮಲ್ಜಾರಿಯಲ್ಲಿ ವಾಕ್ಯದ ಸ್ಥಿರಾಸ್ತಿ ಯಸ್ತಿವಾರಿನ ಶರ್ತುಗಳ ನಿರ್ಣಯದ ಬಗ್ಗೆ ಸದ್ರಿ ಅಮಲ್ಜಾರಿಯನ್ನು ತಾರೀಕು 8-1-71ಕ್ಕೆ ಮುಂದೂಡಲಾಗಿದೆ.

Y. C. S. Hegde

Advocate for D. H.

Udipi

ತಾ. 4-12-70.

ಮೋಸಗಾರ ಮಲ್ಲ

(ಕಳ್ಳ ಬೇರೆ, ಮೋಸಗಾರ ಬೇರೆ. ಎರಡಕ್ಕೂ ಬುದ್ಧಿವಂತಿಕೆ ಬೇಕು. ಫಲ, ಮೊದಲು ಸಿಹಿ, ಕಡೆಗೆ ಕಹಿ. ಯಾರಿಗಿಂತ ಯಾರು ಹೆಚ್ಚು ಹೀನರು? ಓದಿದ ಮೇಲೆ ತಿಳಿಯುತ್ತೆ.)

ನವಗಿರಿನಂದ

ಮೋಸಗಾರ ಮಲ್ಲ ಅವನ ಅಪ್ಪನಿಗೆ ನಾಲ್ಕನೇ ಮಗ. ಅವನು ಚಿಕ್ಕಂದಿನಿಂದಲೇ ಮೋಸಗಾರ. ಊರವರೇ ಅವನಿಗೆ ಮೋಸಗಾರ ಮಲ್ಲ ಅಂತ ಹೆಸರಿಟ್ಟಿದ್ದು. ತಂದೆಗೆ ಬಹಳ ಅವಮಾನವಾಗಿ ಅವನನ್ನು ಮನೆಯಿಂದ ಹೊರಗೆಹಾಕಿಬಿಟ್ಟರು. ಊರು ಬಿಟ್ಟು ಇನ್ನೊಂದು ಊರಿಗೆ ಹೋದ.

ಪರ ಊರು. ತಿಳಿದವರಾರಿಲ್ಲ. ಕೈಯಲ್ಲಿ ಕಾಸಿಲ್ಲ. ಊರಿಗೆ ಮೋಸಮಾಡುವುದು ಎಂತ ಆಲೋಚಿಸುತ್ತಾ ಒಂದು ದೇವಸ್ಥಾನದ ಹತ್ತಿರ ನಿಂತಿದ್ದ. ಆಗ ಒಬ್ಬರು ಮುದುಕರು ಗಾಡಿಯಲ್ಲಿ ಬಂದು ದೇವಸ್ಥಾನದ ಹತ್ತಿರ ಇಳಿದರು. ದೇವಸ್ಥಾನದಲ್ಲಿ ಅರಳು ಪಂಚಕಜ್ಜಾಯ ಮಾಡಿಸಲು ಅರಳು, ಬೆಲ್ಲ, ತೆಂಗಿನಕಾಯಿ ಬಾಳೇಹಣ್ಣುಗಳ ಮೂಟೆಯನ್ನು ಹೊತ್ತುಕೊಳ್ಳಲಿಕ್ಕಾಗದೆ ಅವರು ಕಷ್ಟಪಡುತ್ತಿದ್ದರು. ಮಲ್ಲ ಅವರ ಹತ್ತಿರ ಹೋಗಿ, "ಮೂಟೆ, ನನ್ನ ಕೈಲಿ ಕೊಡಿ ತಾತಾ. ನಿಮ್ಮ ಹಿಂದೆಯೇ ಬರ್ತೀನಿ" ಎಂದು ಕೈಚಾಚಿದ. ಮುದುಕರು ಅವನ ಹತ್ತಿರ ಆ ಮೂಟೆ ಕೊಟ್ಟರು. ಮಲ್ಲ ದೇವಸ್ಥಾನದ ಕಡೆಗೆ ಸ್ವಲ್ಪ ದೂರ ಹೋದ ಹಾಗೆ ಮಾಡಿ ಬೇರೆ ಕಡೆಗೆ ತಿರುಗಿ, ಸಂದುಗೊಂದಿನೊಳಗೆ ತಿರುಗಿ, ಮೂಟೆಯಲ್ಲಿದ್ದುದನ್ನು ಫಲಾಹಾರ ಮಾಡುತ್ತಾ ಮತ್ತೊಂದು ಊರಿಗೆ ಹೋಗಿಬಿಟ್ಟ. ಆ ಮೂಟೆಯಲ್ಲಿ ದೇವರ ಖರ್ಚಿಗಾಗಿ ಮುದುಕರು ವಸ್ತ್ರದ ಕೊನೆಯಲ್ಲಿ ಕಟ್ಟಿದ ಎರಡು ರೂಪಾಯಿಯೂ ಅವನಿಗೆ ಸಿಕ್ಕಿತು.

ಆ ಊರಿನಲ್ಲಿ ಒಬ್ಬಳು ಅಡುಗೂಲಜ್ಜಿ ಇರುವ ಸಂಗತಿ ಅವನಿಗೆ ತಿಳಿಯಿತು. ಅವಳು ಅಕ್ಕಿಯೂ ಸ್ವಲ್ಪ ಮೇಲೆ ಕೂಲಿಯೂ ಕೊಟ್ಟರೆ ಊಟ ಹಾಕುತ್ತಾಳಂತೆ. ಮಲ್ಲ ಒಂದು ಹೊಸ ಗಡಿಗೆಯನ್ನೂ ಒಂದು ಸೇರು ಅಕ್ಕಿಯನ್ನೂ ಕೊಂಡುಕೊಂಡ. ಅಕ್ಕಿಯನ್ನು ತನ್ನ ಸೊಂಟದಲ್ಲಿ ಗೊತ್ತಾಗದ ಹಾಗೆ ಕಟ್ಟಿಕೊಂಡ. ಗಡಿಗೆ ಹಿಡಿದುಕೊಂಡು ಅಡುಗೂಲಜ್ಜಿ ಮನೆಗೆ ಹೋಗಿ—"ಅಮ್ಮಾ ನನ್ನದು ಪರಸ್ಥಳ. ಕೆಲವು ದಿನ ಈ ಊರಲ್ಲಿರ್ತೀನೆ. ಈ ಮಂತ್ರದ ಗಡಿಗೆಯಿಂದ ದಿನಾ ಒಂದು ಸೇರು ಅಕ್ಕಿ ಕೊಡ್ತೀನೆ. ಪಾವಕ್ಕಿ ಅನ್ನ ನನಗೆ ಸಾಕು. ಮುಕ್ಕಾಲು ಸೇರಕ್ಕಿ ನಿನಗೇ. ಊಟ ಹಾಕುವೆಯಾ?" ಎಂದ. ಅವಳು ಸರಿ ಎಂದಳು.

"ಹಾಗಾದರೆ ಒಂದು ಮುಟ್ಟಿನ ಕೋಣೆ ತೋರಿಸು"

ಅಜ್ಜಿ ತೋರಿಸಿದ ಕೋಣೆಯೊಳಗೆ ಮಲ್ಲ ಹೊಕ್ಕ. ಅಲ್ಲಿ ರಂಗವಲ್ಲಿ ಹಾಕಿ ಖಾಲೀ ಗಡಿಗೆಯನ್ನು ಅದರ ನಡುವೆ ಇಟ್ಟು, ಅಜ್ಜಿಯ ಹತ್ತಿರ ಬಾವಿಯಿಂದ ಒಂದು ತಂಬಿಗೆ ನೀರು ತರಲು ಹೇಳಿದ. ಅವಳು ನೀರು ತರುವುದರೊಳಗೆ ನಡುವಿನಲ್ಲಿ ಸುತ್ತಿಕೊಂಡಿದ್ದ ಅಕ್ಕಿಯನ್ನು ಗಡಿಗೆಯೊಳಗೆ ಹಾಕಿ ಮುಚ್ಚಿಟ್ಟಿದ್ದ. ಆ ಮೇಲೆ "ಅನ್ನಪೂರ್ಣಾ! ಅಕ್ಕಿ ಅಕ್ಕಿ! ದೇಹಿ ದೇಹಿ!" ಎಂಬ ಮಂತ್ರವನ್ನು ಮಣಮಣಿಸಿಕೊಂಡು, ಗಡಿಗೆಗೆ ನೀರನ್ನು ಪ್ರೋಕ್ಷಿಸಿ, "ಹಿಡಿ ಅಜ್ಜಿ, ಒಂದು ಸೇರು ಅಕ್ಕಿ" ಎಂದು ಮುದುಕಿಯ ಮುಂದೆ ಗಡಿಗೆಯನ್ನು ಕವುಚಿ ಹಾಕಿದ. ಒಂದು ಸೇರು ಅಕ್ಕಿ!

ಅದು ಅಕ್ಷಯ ಗಡಿಗೆಯೆಂದೂ, ಎರಡು ಸೇರಿನ ಅಕ್ಷಯ ಗಡಿಗೆ ತನ್ನ ಮನೆಯಲ್ಲಿದೆಯೆಂದೂ ಸಂಚಾರ ಕಾಲದಲ್ಲಿ ಒಂದು ಸೇರಿನ ಗಡಿಗೆಯೇ ಸಾಕೆಂದು, ಇದನ್ನು ತಂದೆನೆಂದೂ ಹೇಳಿದ. ಮರುದಿನವೂ ಅದೇ ಉಪಾಯದಿಂದ ಗಡಿಗೆಯನ್ನು ಕವುಚಿ ಹಾಕಿದಾಗ ಒಂದು ಸೇರು ಅಕ್ಕಿ ಬಂತು. ಅದನ್ನು ನೋಡಿ ಅಡುಗೂಲಜ್ಜಿಗೆ ಬಾಯಿಯಲ್ಲಿ ಜೊಲ್ಲೂರಿತು. ಇಂಥಾ ಗಡಿಗೆ ತನಗೂ ಇದ್ದರೆ ದಿನಾ ಕಷ್ಟಪಡುವ ಅಗತ್ಯವಿಲ್ಲವಷ್ಟೇ ಎಂದು ತನಗೆ ತಾನೇ ರಾಗ ಎಳೆದುಕೊಂಡಳು.

"ಬೇಕಾದರೆ ಈ ಗಡಿಗೆಯನ್ನು ನಿನಗೇ ಕೊಡುತ್ತೀನೆ ಅಜ್ಜೀ. ಮಂತ್ರವನ್ನೂ ಉಪದೇಶ ಮಾಡುತ್ತೀನೆ. ಇದು ಇರುವಾಗ ನಿನ್ನದೂ ಅಂತ ದುಡ್ಡು ಇದ್ದುದೂ ಇಟ್ಟುಕೊಳ್ಳಬಾರದು. ದಿನಾ ಖರ್ಚು ಮಾಡುತ್ತಾ ಇರಬೇಕು. ಏನಾದರೂ ಇದ್ದರೆ ಇದರ ಬೆಲೆ ಅಂತ ನನಗೆ ಕೊಟ್ಟುಬಿಡು. ಆ ಮೇಲೆ ಈ ಗಡಿಗೆ ಕೊಡುವ ಅಕ್ಕೀನೆ ಮಾರಿ ಎಷ್ಟಾದರೂ ಸಂಪಾದಿಸಬಹುದಲ್ಲಾ?" ಎಂದ ಮಲ್ಲ.

ಅಡುಗೂಲಜ್ಜಿ ತನ್ನ ಹತ್ತಿರ ಇದ್ದ ದುಡ್ಡನ್ನೆಲ್ಲಾ ತಂದು ಲೆಕ್ಕಮಾಡಿ ಎಂಬತ್ತು ರೂಪಾಯಿ ಮಲ್ಲನಿಗೆ ಕೊಟ್ಟು ಗಡಿಗೆಯನ್ನು ತನ್ನದಾಗಿ ಮಾಡಿಕೊಂಡಳು. ಮಾರನ್ನೆಯ ದಿನ ಇರುತ್ತೇನೆಂದು ಹೇಳಿ ಊರೊಳಗೆ ಹೋದ ಮಲ್ಲ ಅಲ್ಲಿಂದ ಇನ್ನೊಂದು ಊರಿಗೆ ಪರಾರಿಯಾದ.

ಅಲ್ಲಿ ಒಬ್ಬ ಧನಿಕನು ಮಕ್ಕಳಿಲ್ಲದೆ ಬಹಳ ಸಂಕಟಪಡುತ್ತಿದ್ದಾನೆಂದು ಅವನಿಗೆ ತಿಳಿಯಿತು. ಮಲ್ಲ ಒಬ್ಬ ಸನ್ಯಾಸೀ ವೇಷ ಹಾಕಿಕೊಂಡು ಆ ಧನಿಕನ ಮನೆಗೆ ಹೋಗಿ ಅವನ ಸಂಕಟವನ್ನು ಅರಿತು ಒಂದು ನೂರು ಚಿನ್ನದ ನಾಣ್ಯ ತುಂಬಿದ ಕಲಶವನ್ನು ಮೂರು ದಿನ ಪೂಜೆ ಮಾಡಿದರೆ ಖಂಡಿತಾ ಮಗುವಾಗುವದೆಂದನು. ಆ ಮೇಲೆ ಪೂಜಿಸಿದ ನಾಣ್ಯಗಳನ್ನು ಆ ಮಗುವಿನ ಶ್ರೇಯಸ್ಸಿಗೇ ಖರ್ಚು ಮಾಡಬೇಕೆಂದೂ ಹೇಳಿದ. ಫಲಾಪೇಕ್ಷೆ ಇಲ್ಲದೆ ತಾನೇ ಪೂಜೆ ಮಾಡುವುದಾಗಿ ಹೇಳಿ, ಹಾಗೆ ಪೂಜೆ ಮಾಡುತ್ತ, ಎರಡನೇ ದಿನ ರಾತ್ರಿ ಕಲಶದೊಳಗಿನ ನಾಣ್ಯಗಳನ್ನೆಲ್ಲಾ ಬಟ್ಟೆಗೆ ಸುರಿದು, ಕಟ್ಟಿಕೊಂಡು ಅಲ್ಲಿಂದ

(ಎಂಟನೇ ಪುಟ ನೋಡಿ)

ಭಾರತದ ಕ್ಷಯರೋಗ ಸಮಿತಿ

ವ್ಯವಸ್ಥಿತ ಗೃಹಚಿಕಿತ್ಸಾ ಸೇವೆಗೆ ಈ ಕೆಳಗಿನವು ಅತೀ ಅಗತ್ಯವಾಗಿವೆ:— ಸುಸಜ್ಜಿತವಾದ ಮತ್ತು ಯೋಗ್ಯ ಶಿಬಂದಿಯುಳ್ಳ ಟಿ ಬಿ ಕ್ಲಿನಿಕ್‌ಗಳ ಸೇವೆಗಳು; ಕ್ಲಿನಿಕ್ ಮತ್ತು ಖಾಸಗಿ ವೈದ್ಯರ ನಡುವಣ ನಿಕಟ ಸಹಕಾರ; ಆರಂಭದ ಮತ್ತು ಅನಂತರದ ಆರೈಕೆ ನೋಡತಕ್ಕ ಸಮಿತಿಗಳ ಸೇವೆಗಳು. ನಿಮ್ಮ ಸಮೀಪದಲ್ಲಿ ಟಿ ಬಿ ಕ್ಲಿನಿಕ್‌ಗಳು ಇಲ್ಲವಾದರೆ ನೀವು ನಿಮ್ಮ ರಾಜ್ಯದ ಟಿ ಬಿ ಎಸೋಶಿಯೇಷನ್ನಿನ ಸಂಪರ್ಕ ಬೆಳೆಸಿರಿ, ಅವರು ನಿಮ್ಮ ಚಿಕಿತ್ಸಾನುಕೂಲತೆಗಳಿಗಾಗಿ ಮಾರ್ಗದರ್ಶನ ಮಾಡುವರು.

ರಾಜ್ಯದ ಟಿ ಬಿ ಎಸೋಶಿಯೇಷನ್ನಿನಲ್ಲಿ ತಕ್ಕ ಹಣಸಂಗ್ರಹ ಇದ್ದರೆ ಅವರು ಗೃಹಚಿಕಿತ್ಸೆಯ ಸೇವೆಯನ್ನು ವ್ಯವಸ್ಥೆಗೊಳಿಸುತ್ತಾರೆ. ನಿಧಿಗಾಗಿ ಅವರು ಸಾರ್ವಜನಿಕ ಸಹಾಯವನ್ನು ಅವಲಂಬಿಸಿರುತ್ತಾರೆ. ನೀವು ಅವರಿಗೆ ಸಹಾಯಮಾಡಲು ಹೇಗೆ ಶಕ್ತರಾಗುವಿರಿ? ಟಿ ಬಿ ಮೊಹರುಗಳನ್ನು ಪಡೆದುಕೊಂಡು ನೀವು ಅವರಿಗೆ ಅತ್ಯುತ್ತಮ ಸಹಾಯ ನೀಡಬಹುದು.

ಇಂದೇ ಹತ್ತು ಪೈಸೆಯ ಟಿ ಬಿ ಮೊಹರುಗಳನ್ನು ಖರೀದಿಸಿರಿ.

ಮೊಹರುಗಳು ಸಿಗುವ ಸ್ಥಳ:

ದ. ಕ. ಜಿಲ್ಲಾ ಟಿ ಬಿ ಎಸೋಶಿಯೇಷನ್, ಮಂಗಳೂರು ಮತ್ತು ಅದರ ವಿವಿಧ ಏಜನ್ಸಿಗಳು.

21ನೆಯ ಟಿ ಬಿ ಮೊಹರು ಮಾರಾಟ ಚಳವಳಿ

(ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯಿಂದ ವ್ಯವಸ್ಥಾಪಿಸಲ್ಪಟ್ಟುದು)

ಸ್ಥಳದಾನ

"ನವಯುಗ"

ರಾಜಾಜಿಯವರ ರಾಜಕೀಯೋದ್ಯಮ

ಭಾರತದ ರಾಜಕೀಯ ಬಾನಲ್ಲಿ ಇಂದೂ ಮಿನುಗುತ್ತಿರುವ ತಾರೆ ರಾಜಾಜಿಯವರಿದ್ದಾರೆ. ಅವರಿಗೆ ಪ್ರಾಯ ತೊಂಭತ್ತೆರಡಾದರೂ ಅವರು ರಾಜಕೀಯದಿಂದ ಎರಡಾಗುವದಿಲ್ಲ. ಅವರ ಎದುರಾಳಿಗಳಿಗೆ ಎಡರಾಗಿದ್ದಾರೆ. ಅವರ ರಾಜಕೀಯ ಆಕಾಂಕ್ಷೆಯು ಕೊಡ ತುಂಬುವದಿಲ್ಲ. ತನ್ನ ರಾಜಕೀಯ ಉತ್ಸವವನ್ನು ಅವರು ಒತ್ತೆ ಇಟ್ಟಿರವಿಲ್ಲ. ಅವರ ರಾಜಕೀಯ ಆಲೋಚನೆಯು ಕೊಳಬತ್ತಿಹೋಗಿರುವದಿಲ್ಲ. ಯಾರ ಸಹಾಯವೂ ಇಲ್ಲದೆ ಈ ವಯಸ್ಸಿನಲ್ಲಿ ನಡೆಯುತ್ತಾರೆ. ಆದರೆ ರಾಜಕೀಯ ಉದ್ಯಮ ಇತರರ ಆಧಾರಕ್ಕೆ ಆಹ್ವಾನವೀಯುತ್ತಿದೆ. ಅವರಿಗೆ ಕಾಣುತ್ತದೆ, ಸರಿಯಾಗಿ ಕೇಳುತ್ತದೆ. ಆದರೆ ಅವರ ರಾಜಕೀಯದಲ್ಲಿ? ಅದು ಅವರ ಆಕಾರದಂತೆ ಪ್ರಶ್ನಾರ್ಥಕ ಚಿಹ್ನೆ ಇದೆ.

ಚಕ್ರವರ್ತಿ ರಾಜಗೋಪಾಲಾಚಾರಿಯವರನ್ನು ದಕ್ಷಿಣದ ರಾಜಕೀಯ ನರಿಯೆನ್ನುತ್ತಿದ್ದರು ಹಿಂದೆ. ಇಂದು ದ್ರೋಣಾಚಾರ್ಯ; ಭೀಷ್ಮಾಚಾರ್ಯ...... ಆಚಾರ್ಯರೆಂದು ಹೇಳುತ್ತಾರೆ. ಅವರು ಹಿರಿಯ ರಾಜಕಾರಣಿ, ಮಹಾಮೇಧಾವಿ ಇದ್ದಾರೆ. ಅವರು ರಾಜಕೀಯ ಬಾನಲ್ಲಿ ಅತ್ಯುಚ್ಚ ಸ್ಥಾನವಾಗಿದ್ದ ಗವರ್ನರ್ ಜನರಲ್ ಗದ್ದುಗೆಯನ್ನು ಕಂಡವರಿದ್ದಾರೆ. ಅಲ್ಲಿಂದ ಕೇಂದ್ರ ಮಂತ್ರಿಮಂಡಲ ಸಭೆಗಿಳಿದವರು ಗವರ್ನರ್ ಗದ್ದುಗೆಯನ್ನೇರಿ ಮತ್ತೆ ಮದ್ರಾಸಿನ ಮುಖ್ಯಮಂತ್ರಿಯೂ ಆದರು. ಆಗ ಮದ್ರಾಸಿನ ಸ್ಥಿತಿ ಆ ರೀತಿ ಇತ್ತು. ಅಂದು ಕಾಂಗ್ರೆಸ್ಸು ನಾಮಾವಶೇಷವಾಗುವ ಸ್ಥಿತಿ ಮಾತ್ರವಲ್ಲ, ಕಮ್ಯುನಿಸ್ಟರಂತಹ ಅಂತಾರಾಷ್ಟ್ರೀಯ ಶಕ್ತಿಗಳ ಕೈಯಲ್ಲಿ ತಮಿಳ್ನಾಡು ತತ್ತರಿಸಬೇಕಾಗುತ್ತಿತ್ತು. ರಾಜಾಜಿಯವರ. ಹಿಂದಿನ ಬಾಗಿಲಿನಿಂದ ಬಂದರೋ, ಮುಂದಿನ ಬಾಗಿಲಿನಿಂದ ಹೋದರೋ....ಏನೇ ಇರಲಿ, ಮದ್ರಾಸನ್ನು ಉಳಿಸಿದರು. ಆದರೂ ಅವರ ರಾಜಕೀಯ ಅನೇಕರಿಗೆ ಹಿಡಿಸುವದಿಲ್ಲ. ಅದು ಹಿಂದಿನಿಂದಲೂ ಹಾಗೇನೇ. ಅವರು ಕಾಂಗ್ರೆಸ್ಸಿನೊಳಗೆ ಇರುವಾಗಲೂ ಅಷ್ಟೇ. ಪಾಕಿಸ್ತಾನ ನಿರ್ಮಾಣದ ಆಚಾರ್ಯ ಆ ಸ್ಥಾನವನ್ನು ಆಕ್ರಮಿಸಿಕೊಂಡಾಗಲೂ ಹಾಗೇನೇ. ಹೀಗೆ ಹಿಂದಿನಿಂದಲೂ ಅಂತಾರಾಷ್ಟ್ರೀಯ ದುಶ್ಶಕ್ತಿಗಳಲ್ಲಿ ಇವರಿಗೆ ಕಮ್ಯುನಿಸಮನ್ನು ಕಂಡರಾಗದು. ಆದರೆ ಕಿಸ್ತೀಯ ಮತಪ್ರಸಾರಕರನ್ನು ಕಂಡರೆ ಮಮತೆ. ಮುಸ್ಲಿಂ ಮತಾಂಧರನ್ನು ಕಂಡರೆ ಎಲ್ಲಿಲ್ಲದ ಮುದ್ದು. ಇದರಿಂದಾಗಿ ಹಿಂದಿ ವಿರುದ್ಧ ದ್ರಾವಿಡ ಮುನ್ನೇತ್ರ ಕಳಗಂ ಬಂದಿಂದಾಗ ಬ್ರಿಟಿಷ್ ಕೌನ್ಸಿಲಿನೊಡನೆ ಸಂಸರ್ಗವಿಟ್ಟುಕೊಂಡು ರಾಜಾಜಿಯವರು ದ್ರಾ. ಮು. ಕ. ದವರಿಗೆ ಆಚಾರ್ಯರಾದರು. ಅಂದಿನಿಂದ ದ್ರಾ. ಮು. ಕ. ದವರು ಅವರನ್ನು ಆಚಾರ್ಯರೆಂದು ಕರೆಯುತ್ತಿದ್ದಾರೆ. ಇತ್ತೀಚೆಗೆ ಕರುಣಾನಿಧಿಯವರು ಅವರನ್ನು ದ್ರೋಣಾಚಾರ್ಯರೆಂದಿದ್ದಾರೆ, ಮುಸ್ಲಿಂ ಮತಾಂಧರ ಮೇಲಿನ ಮುದ್ದಿನಿಂದಾಗಿ ಅವರು ಪಾಕಿಸ್ತಾನದ ತೆರೆಮರೆಯ ಪಿತಾಮಹರಾದರು. ಅಲ್ಲದೆ ಮುಸ್ಲಿಂ ಲೀಗಿನೊಡನೆ ರಾಜಕೀಯ ಮುದ್ದಾಡುತ್ತಿದ್ದಾರೆ ಇಂದೂ ಅವರ.

ದಿಲ್ಲಿ ರಾಜಕೀಯದಿಂದ ಅವರನ್ನು ಮದ್ರಾಸು ರಾಜಕೀಯಕ್ಕೆ ಜವಾಹರಲಾಲ ನೆಹರೂಜೀ ತಳ್ಳಿಬಿಟ್ಟರು. ಅವರ ಗ್ರಹಚಾರ ಅಲ್ಲಿಗೇನೇ ಬಿಡಲಿಲ್ಲ. ಕಾಮರಾಜರು ಅವರನ್ನು ಮುಖ್ಯಮಂತ್ರಿ ಪದವಿಯಿಂದ ಮನೆಗೆ ಕಳಿಸಿಬಿಟ್ಟರು. ಇನ್ನು ಕಾಂಗ್ರೆಸ್ಸಿನೊಂದಿಗೆ ಸಂಬಂಧ—ಸಂಪರ್ಕವನ್ನಿಟ್ಟುಕೊಳ್ಳಲು ಅವರಿಂದ ಸಾಧ್ಯವಾಗಲಿಲ್ಲ. ಆದರೆ ಕಾಂಗ್ರೆಸ್ಸಿನಲ್ಲಿ ಅರ್ಧಚಂದ್ರ ಪ್ರಯೋಗಕ್ಕೊಳಗಾಗಿದ್ದ ಆಚಾರ್ಯ ಕೃಪಲಾನಿಯವರು ರಾಜಕೀಯ ಪಕ್ಷವನ್ನು ಕಟ್ಟಲು ಪರಿಶ್ರಮಿಸಿ ಪರಿಹಾಸ್ಯಕ್ಕೊಳಗಾಗಿರುವದನ್ನು ಅವರು ಕಂಡಿರುವರು. ಇತ್ತ ಭಾರತೀಯ ಜನಸಂಘ ಮೆಲ್ಲ ಮೆಲ್ಲನೆ ದೇಶಭಕ್ತರನ್ನು ಆಕರ್ಷಿಸಿಕೊಳ್ಳುತ್ತಿರುವುದನ್ನು ಕಾಣುವ ಅವರಿಂದ ಸಹಿಸಲಾಗಲಿಲ್ಲ. ಭಾರತೀಯ ಜನಸಂಘದ ಸಂಸ್ಥಾಪಕ ಡಾ| ಶ್ಯಾಮಪ್ರಸಾದ ಮುಖರ್ಜಿ ಹಾಗೂ ರಾಜಾಜಿಯವರು ರಾಜಕೀಯದಲ್ಲಿ ಎಣ್ಣೆ ಸೀಗೇಕಾಯಿಯಾಗಿದ್ದರು, ಪಾಕಿಸ್ತಾನದ ವಿಷಯ ಬಂದರಂತೂ ತೀರಿತು. ಅಂದೇನೋ ರಾಜಾಜಿಯವರು ಶ್ಯಾಮಪ್ರಸಾದ ಮುಖರ್ಜೀ ಹೇಳುತ್ತಿದ್ದುದನ್ನೆಲ್ಲಾ ಖಂಡಿಸುತ್ತಿದ್ದರಾದರೂ ಇಂದು ಅವನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸುತ್ತಿದ್ದಾರೆ. ಪರಿತಪಿಸುತ್ತಿದ್ದಾರೆ. ಮೂರು ದಿನ ಕೇಂದ್ರದಲ್ಲಿ ಮಂತ್ರಿಯಾಗಿದ್ದವರ ಪಕ್ಷ ದೇಶದಾದ್ಯಂತ ಪ್ರಬಲ ಪಕ್ಷವಾಗುತ್ತ ಬರುತ್ತಿರುವಾಗ, ಗವರ್ನರ್ ಜನರಲ್ ಗದ್ದುಗೆಯಲ್ಲಿದ್ದವರು ಪಕ್ಷ ಸ್ಥಾಪಿಸಿದಲ್ಲಿ ಅದು ಅದಕ್ಕಿಂತಲೂ ಪ್ರಬಲವಾಗಲಾರದೇ? ಹೀಗೆ ಯಾಕಾದರೆ ಆಚಾರ್ಯ ಕೃಪಲಾನಿ ಅವರು ಯೋಚನಾಮಗ್ನರಾದರು. ಹೇಗೂ ಡಾ. ಶ್ಯಾಮಪ್ರಸಾದ ಮುಖರ್ಜಿಯವರಿಲ್ಲ. ಜವಹರಲಾಲನೆಹರೂ ಹಾಗೂ ಶೇಕ್ ಅಬ್ದುಲ್ಲಾ "ಆ ಋಣವನ್ನು ಕಟಿಕೊಂಡಿದ್ದಾರೆ". ಕೃಪಾಲಾನಿಯವರೂ ಕಂಡಕಂಡಲ್ಲಿ ಕಾಲೆಳೆಯುತ್ತಿದ್ದಾರೆ. ಇವರೆಲ್ಲರಿಗೂ ತಾನೇಕೆ ಆಚಾರ್ಯನಾಗಬಾರದು? ಪ್ರಶ್ನೆ ಅವರ ಮುಂದಕ್ಕೆ ಬಂದು ಮುಸಿಮುಸಿ ನಕ್ಕಿತು.

ಮದರಾಸಿನ ವುಡ್‌ಲೇಂಡ್ಸ್ ಹೋಟೆಲಿನಲ್ಲಿ ತಮಿಳ್ನಾಡು ಮತ್ತು ಕರ್ನಾಟಕ ಭಾರತೀಯ ಜನಸಂಘದ ಮುಖಂಡರು ಜಿನರಾಜ ಹೆಗ್ಡೆ ಹಾಗೂ ರಾಜಾಜಿ ಮುಂತಾದವರು ಸೇರಿದ್ದರು. ಹಾಗೆ ಇದ್ದಕ್ಕಿದ್ದಂತೆ ರಾಜಾಜಿಯವರು ಅಲ್ಲೇ ಸ್ವತಂತ್ರ ಪಾರ್ಟಿ ಹುಟ್ಟಿತೆಂದು ಹೇಳಿದರು. ಭಾರತೀಯ ಜನಸಂಘದ ಮುಖಂಡರು ಇಕ್ಕಟ್ಟಿನಲ್ಲಿ ಸಿಲುಕಿಕೊಂಡರು. ರಾಜಾಜಿಯವರನ್ನು ಎದುರಿಸುವುದೇ? ಅವರು ಹೇಳಿದುದಕ್ಕೆ ಸೈಯೆನ್ನುವದೇ? ಅವರು ಮಧ್ಯಮ ಮಾರ್ಗವನ್ನು ಅನುಸರಿಸಿದರು. ಆಗ ತಮಿಳ್ನಾಡಿನ ಜನಸಂಘದ ಅಧ್ಯಕ್ಷರಾಗಿದ್ದ ಖ್ಯಾತ ಅಡ್ವೋಕೇಟ್ ವಿ. ರಾಜಗೋಪಾಲಾಚಾರಿಯವರು ಸಿ. ರಾಜಗೋಪಾಲಾಚಾರಿಯವರ ಬಳಿ ಸ್ವತಂತ್ರವೆಂಬ ಹೊಸ ಪಕ್ಷದ ಅಗತ್ಯವೇ ಇರುವುದಿಲ್ಲ. ಎಲ್ಲರೂ ಜನಸಂಘವನ್ನೇ ಸೇರಿ ಅದರ ಶಕ್ತಿಯನ್ನು ಬೆಳೆಸುವುದು ಸೂಕ್ತವಾಗಿಲ್ಲವೇನೆಂದು ಕೇಳಿದರು. ಅದಕ್ಕೆ ರಾಜಾಜಿಯವರು, "ಜನಸಂಘಕ್ಕಿಂತ ಹೆಚ್ಚು ವಿಶಾಲ ಅಡಿಗಲ್ಲುಳ್ಳ ಹೊಸ ಪಕ್ಷವು ತನ್ನ ದೃಷ್ಟಿ ಧ್ಯೇಯವೆಂದಲ್ಲದೆ, ಜನಸಂಘವು ಮುಸ್ಲಿಮರ ವಿರೋಧಿಯೆಂಬ ಪ್ರಚಾರ ನಡೆದಿರುವದರಿಂದ ಹೊಸ ಪಕ್ಷ ಅತ್ಯಾವಶ್ಯವೆಂದು ತಿಳಿಸಿದರು. ಆದರೂ ಅವರಿಂದ ಅವರಿಬ್ಬರಿಗೂ ಟೊಪ್ಪಿ ಹಾಕಲು ಸಾಧ್ಯವಾಗಲಿಲ್ಲ. ಇದು ನಡೆದದ್ದು ೧೯೫೯ ಜೂನ್ ನಾಲ್ಕರಂದು. ಹೀಗೆ ರಾಜಕೀಯ ಬಾನಲ್ಲಿ ಹೊಸ ಪಕ್ಷದ ಪತಾಕೆಯೊಂದು ಗೋಚರಿಸಿತು. ಆದರೆ ಅದು ಮುನಾಳಿ ಪಕ್ಷ ಅಥವಾ ಟೀಪಾರ್ಟಿಯಾಗಿ ಉಳಿಯದೆ ಸ್ವತಂತ್ರ ಪಾರ್ಟಿಯಾಯಿತು.

ಹೀಗೆ ಆಚಾರ್ಯರು ಹೊಸ ಪಾರ್ಟಿಗೆ ಜನ್ಮವಿತ್ತರು. ಅವರು ಭಾರತವನ್ನು ವಿಭಜಿಸಿದಂತೆ ರಾಜಕೀಯ ರಂಗವನ್ನೂ ವಿಶಾಲತೆಯ ಹೆಸರಿನಲ್ಲಿ ವಿಭಜಿಸಿಬಿಟ್ಟರು. ಆಗ ಅವರು ಕಮ್ಯುನಿಸ್ಟ್ ಪಾರ್ಟಿಯನ್ನು ತನ್ನ ಶತ್ರು ಕ್ರಮಾಂಕ ಒಂದೆಂದು ಹೇಳುತ್ತಿದ್ದರು. ಇದರಿಂದಾಗಿ ನೆಹರೂಜೀಯವರ ಸಮಾಜವಾದಿ ನೀತಿ ದೃಷ್ಟಿ ಹಿಡಿಸದವರು, ಹಾಗೂ ಅರ್ಧಚಂದ್ರ ಪ್ರಯೋಗಕ್ಕೊಳಗಾದವರು, ಹೊಸ ರಾಜಕೀಯ ನೆಲೆಗಟ್ಟಿಗಾಗಿ ಅಲೆಯುತ್ತಿದ್ದವರು......ಸ್ವತಂತ್ರ ಪಕ್ಷಕ್ಕೆ ಸೇರಿಬಿಟ್ಟರು. ಕಮ್ಯುನಿಸ್ಟರೂ ಹಾಗೂ ಕಾಂಗ್ರೆಸಿಗರೂ ಅದನ್ನು ಬಂಡವಾಳಶಾಹಿಗಳ ಪಕ್ಷ, ಅಮೇರಿಕದ ಆಟದ ಬೊಂಬೆಯೆಂದು ಬಂಬಡ ಬಾರಿಸಿದರು. ಅದು ಬಂಡವಾಳಶಾಹಿಗಳ ಪಕ್ಷ ಹೌದೋ ಅಲ್ಲವೋ ಅಂತೂ ರಾಜಾಜಿಯವರು ಉತ್ತಮ ಬಂಡವಾಳವನ್ನು ಹಾಕಿ, ಉದ್ಯಮವನ್ನು ಆರಂಭಿಸಿದರು. ಅವರ ಪಕ್ಷದ ತಾರೆ ರಾಜಕೀಯ ಬಾನಲ್ಲಿ ಮಿನುಗಲಾರಂಭಿಸಿತು. ಆದರೆ ಅದೆಷ್ಟು ದಿನ?

ರಾಜಾಜಿಯವರ ಕೈಗೋಲಿನಾಸರೆ ಬೇಕೆನಿಸುವಂತೆ ಅವರ ಪಕ್ಷಕ್ಕೂ ಆಸರೆ ಬೇಕೆನಿಸಿತು. ಅದರಲ್ಲೂ ತಮಿಳ್ನಾಡಿನ

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಮಾನ್ಯರೆ,

ಇಂದಿನ ಸನ್ನಿವೇಶದಲ್ಲಿ ನಮ್ಮ ಜನರಲ್ಲಿ ತಕ್ಕ ರಾಜಕೀಯ ಜಾಗೃತಿ ಹಾಗೂ ದೇಶದ ಸಾಂಸ್ಕೃತಿಕ ಜೀವನದ ಪರಿಚಯವನ್ನು ಮೂಡಿಸುವುದು ತಿಳಿದವರೆಲ್ಲರ ಕರ್ತವ್ಯವಾಗಿದ್ದು, ಈ ದಿಸೆಯಲ್ಲಿ ದೇಶದ ಪತ್ರಿಕೆಗಳು ಅವಶ್ಯವಾಗಿಯೂ ದುಡಿಯಲೇಬೇಕು ಎಂಬ ಧ್ಯೇಯ ಧೋರಣೆಗಳನ್ನು ತಳೆದು, ಕೀ. ಶೇ. ಮಾನ್ಯ ಎ. ಬಿ. ಶೆಟ್ಟರು ತಮ್ಮೆಲ್ಲರ ಮೆಚ್ಚುಗೆಯ 'ನವಯುಗ' ಪತ್ರಿಕೆಯನ್ನು ಸ್ಥಾಪಿಸಿ ಇದೀಗ ಐವತ್ತು ವರ್ಷಗಳಾದುವು. ಜನರನ್ನು ಎಚ್ಚರಿಸುವಲ್ಲಿ, ಅವರಲ್ಲಿ ತಕ್ಕ ಕರ್ತವ್ಯಪ್ರಜ್ಞೆಯನ್ನು ಮೂಡಿಸುವಲ್ಲಿ, ಈ ಪತ್ರಿಕೆ ತನ್ನ ಅಳಿಲಸೇವೆಯನ್ನು ಈಗಲೂ ಸಲ್ಲಿಸುತ್ತಲಿದೆ.

ಎಂದಿನಂತೆ ಬರುವ ಜನವರಿ 26, 1971ರಲ್ಲಿ ಪ್ರಕಟವಾಗುವ 'ಗಣರಾಜ್ಯ ಸ್ಥಾಪನೆ'ಯ ಸ್ಮಾರಕ ಸಂಚಿಕೆಯಲ್ಲಿ ನಾಮಾಂಕಿತ ಬರಹಗಾರರ ಲೇಖನಗಳನ್ನು ಪ್ರಕಟಿಸಿ ತನ್ನ ಸೇವೆ ಮಾಡುವುದರೊಡನೆ, ರಾಜ್ಯದ—ದೇಶದ—ಸರ್ವಾಂಗೀನ ಪ್ರಗತಿಗೆ ಕಾರಣವಾದ ನಮ್ಮ ಉದ್ದಿಮೆಗಳು ಏನನ್ನು ತಯಾರಿಸುತ್ತಲಿವೆ? ಏನನ್ನು ಒದಗಿಸುತ್ತಲಿವೆ? ಎಂಬುದನ್ನೂ ಪ್ರಕಟಿಸುವುದು ನಮ್ಮ ಘನ ಉದ್ದೇಶವಾಗಿದ್ದು, ಈ ಬಗ್ಗೆ ತಕ್ಕ ಜಾಹಿರಾತುಗಳನ್ನು ತಾವು ಒದಗಿಸುವಂತೆ ಈ ಮೂಲಕ ಕೇಳಿಕೊಳ್ಳುತ್ತೇವೆ. ಸಿದ್ಧ ವಸ್ತುಗಳ ಬಗ್ಗೆ ತಕ್ಕಷ್ಟು ಪ್ರಚಾರ ಕೈಕೊಂಡರೇನೇ ಇವುಗಳ ವಿತರಣೆ ಹಾಗೂ ಮುಂದೆ ಇವುಗಳ ಸುಧಾರಣೆಗೂ ಅವಕಾಶವಿದೆ ಎಂಬುದನ್ನು ಬೇರೆ ಹೇಳಬೇಕೆ?

ಎಂತಲೇ, ಆದಷ್ಟು ತ್ವರಿತವಾಗಿ 10—1—1971ರೊಳಗೆ ಜಾಹೀರಾತುಗಳು ನಮಗೆ ಮುಟ್ಟುವಂತೆ ಕಳುಹಿಸಿರಿ, ಹಾಗೂ ನಮ್ಮೊಡನೆ ಸಹಕರಿಸಿರಿ ಎಂದು ಪ್ರಾರ್ಥನೆ.

ನವಯುಗದ 1971ರ ಪ್ರಜಾರಾಜ್ಯ ಸಂಚಿಕೆ—

ನಿಮ್ಮ ಸಂಸ್ಥೆಯ ಜಾಹೀರಾತಿಗೆ ಉತ್ತಮ ಸಾಧನವಾಗಿದೆ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

P & S.C. No. 9/70

ಶೇಷಿ ಶೆಡ್ತಿ —ಅರ್ಜಿದಾರರು

ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ:-

ತಾ 28-10-69ರಲ್ಲಿ ಮುಲ್ಕಿ ಗ್ರಾಮದ ಶೇಷಿ ಶೆಡ್ತಿಯ ಮಗ ಬಾಬ ಶೆಟ್ಟಿ ಮರಣ ಹೊಂದಿರುವುದರಿಂದ ಅವರ ಬಾಬ್ತು ಅರ್ಜಿಯಲ್ಲಿ ವಿವರಿಸಿದ ಐವೇಜು ಸಾಲಗಳಿಗೆ ಅರ್ಜಿದಾರಳು ತನ್ನ ಹೆಸರಿಗೆ ವಾರೀಸು ಸರ್ಟಿಫಿಕೇಟು ಕೇಳಿ ಅರ್ಜಿ ಕೊಟ್ಟಿರುವುದರಿಂದ ಆ ಕುರಿತು ತಕರಾರು ಹೇಳುವವರು ತಾ. 2-1-71ಕ್ಕೆ ಹಗಲು ಗಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

Y. C. S. Hegde

Advocate for Petnr.

ಉಡುಪಿ, ತಾ. 9-12-70.

ಚಾರುಚರ್ಯನ

ಕುರಿ ಕಾಯಲು ತೋಳ ನೆರವು

ಎರಡಾದ ಕಾಂಗ್ರೆಸ್ಸು ಒಂದಾಗಬೇಕು ಎಂಬವರು ಇನ್ನೂ ಕೆಲವರಿದ್ದಾರೆ. ಅವರೇಕೆ ಹೀಗೆ ಅಭಿಪ್ರಾಯ ಪಡುತ್ತಾರೆ, ಅದು ಅವರಿಗೇ ಗೊತ್ತು. ಅವರ ಆಶಯ ಎಂದಾದರೂ ಕಾರ್ಯರೂಪಕ್ಕೆ ಬರುವುದು ಸಾಧ್ಯವೇ ಎಂಬುದು ಅವರಿಗೂ ಗೊತ್ತಿಲ್ಲ.

ಒಡೆದ ಪಕ್ಷ ಒಂದಾಗಬೇಕೆನ್ನುವ ಇಂಡಿಕೇಟಿಗರು ಒಂದು ಶರ್ತ ಮುಂದೆ ಹಾಕಿದ್ದಾರೆ. ತಮ್ಮ ನೆಚ್ಚಿನ ಅಧಿಷ್ಠಾತ್ರಿದೇವಿ ಶ್ರೀಮತಿ ಇಂದಿರಾ ಗಾಂಧಿಯವರು "ಕಾಂಗ್ರೆಸ್ಸಿನ" ಪ್ರಶ್ನಾತೀತ ನಾಯಕಿಯೆಂದು ಎಲ್ಲರೂ (ಸಿಂಡಿಕೇಟಿಗರೂ) ಕಣ್ಣುಮುಚ್ಚಿ ಒಪ್ಪಿಕೊಳ್ಳಬೇಕು. ಇದಕ್ಕೆ ಸಿಂಡಿಕೇಟಿಗರು ತಯಾರಿದ್ದಾರೆಯೆ ?

ಪಕ್ಷ ವಿಘಟನೆ ನಡೆದುದು ಧ್ಯೇಯ-ಉದ್ದೇಶ ಮತ್ತು ಕಾರ್ಯನೀತಿಗಳಿಂದ ಎಂದು ಡಂಗುರ ಸಾರುವ ಇಂಡಿಕೇಟಿಗರು ತಮ್ಮ ಮೇಲಿನ ಶರ್ತದಿಂದ ಪಕ್ಷ ಸಂಗತಿಯನ್ನು ಬಯಲು ಮಾಡಿದ್ದಾರೆ. ಶ್ರೀಮತಿ ಗಾಂಧಿ ಮಾಡಿದ್ದೆಲ್ಲ ಪ್ರಶ್ನಾತೀತವೆಂದು ಒಪ್ಪಿಕೊಳ್ಳುವ ಇವರು ವ್ಯಕ್ತಿ ಪೂಜೆಗೇ ಪ್ರಾಶಸ್ತ್ಯ ನೀಡುತ್ತಾರೆ.

ಇವರಿಗೆ ಶ್ರೀಮತಿ ಗಾಂಧಿಯೇ ದೇವರು; ಆಕೆಯ ಆಶೀರ್ವಾದವೇ ಪರಮಾನುಗ್ರಹ. ಆದ್ದರಿಂದ ಆಕೆಯೇ ಸರ್ವನಾಯಕಿಯಾಗಿ ಉಳಿಯಬೇಕು. ಉಳಿದವರು ತಮ್ಮ ಆತ್ಮವನ್ನು ಆಕೆಯ ಅಗ್ನಿ ಸಾಕ್ಷಿಗೆ ಮಾರಿ ಬಿಡಬೇಕು.

ಕಾಂಗ್ರೆಸ್ಸಿನ ಸಮಾಜವಾದಿ ನೀತಿಯಲ್ಲಿ ಅಚಲ ವಿಶ್ವಾಸವಿರುವ ಯುವಕನ್ನಾದರೂ ನಾಯಕರೆಂದು ಆರಿಸಲು ಇಂಡಿಕೇಟ್ ಪ್ರಗತಿಶೀಲರು ಒಪ್ಪುವುದಿಲ್ಲ. ಆದುದರಿಂದ ಪಕ್ಷ ಒಡೆದುದು ನೀತಿಯ ಕಾರಣದಿಂದಲ್ಲ. ಶ್ರೀಮತಿ ಗಾಂಧಿಯವರ ಮಹತ್ವಾಕಾಂಕ್ಷೆಯ ಚೇಲಾಗಳ ಅಧಿಕಾರ ದಾಹದಿಂದ ಕಮ್ಯೂನಿಸ್ಟರ ಉತ್ತೇಜನದಿಂದ ಎಂಬುದು ಬಯಲಾಗಿಬಿಟ್ಟಿತು.

ಶ್ರೀಮತಿ ಗಾಂಧಿ ಕೇಂದ್ರದಲ್ಲಿ ಶಿಲ್ಲಿಂಗ್ ಕಾದಂತೆ ಇತರರ ಬಲಬೇಕು. ಕಮ್ಯೂನಿಸ್ಟರು, ದಾ.ಮು.ಕ.ರು ಪ್ರಸಾದಿಗಳು ಆಕೆಯನ್ನು ಎತ್ತಿ ಹಿಡಿದರು. ಬಂಗಾಳವು ನಾಗರಿಕ ರಕ್ಷಣೆಯಿಂದ, ಕಾನೂನ ವ್ಯವಸ್ಥೆಯಿಂದ ಸಂಪೂರ್ಣ ವಂಚಿತವಾಗಿ

ದ್ದಿ ತನ್ನನ ರಾಜಕೀಯ ನಿರಾಶ್ರಿತನಾಗಿಸಿದ ಶಾಪ ರಾಜಗ ರಾಜಕೀಯ ಕಾಲುಮುರಿಯಲು ಆವರು ದ್ರಾವಿಡ ಮುನ್ನೇಟ್ರ ಕಳಗವಿನ ಮುಂದೆ ಕೈಕಟ್ಟಿ ನಿಂತರು. ದ್ರಾ. ಮು. ಕ. ಕ್ಕೆ ಬುದ್ಧಿಜೀವಿಗಳ, ಅಂತಾರಾಷ್ಟ್ರೀಯ ಖ್ಯಾತಿಯುಳ್ಳ ರಾಜಾಜಿಯವರ ಆಧಾರ ಬೇಕಾಗಿತ್ತು. ತಕ್ಕನಿಗೆ ತಕ್ಕ ದೊರೆತಂತಾಯಿತು. ಉದಯ ಸೂರ್ಯನೂ ನಕ್ಷತ್ರವೂ ಒಂದೆಡೆ ಇರಲು ಸಾಧ್ಯವೇನ ? ಆಗ ಅದರ ಆವಶ್ಯಕತೆ ಇತ್ತು. ಅದರಂತೆ ನಡೆಯಿತು.

—ಶ್ರೀ ಶಿವಶಂಕರ

ರುವುದಕ್ಕೆ ಇದೇ ಕಾರಣ. ದೇಶದ್ರೋಹಿಗಳು, ವಿಶೇಷ ನಿಷ್ಠರು, ಜಾತೀಯವಾದಿಗಳು, ಪ್ರಾದೇಶಿಕ ವಾದಿಗಳು ಹೀಗೆ ಹಲವು ಮನೋವೃತ್ತಿಯವರು ಶ್ರೀಮತಿಯವರ ತಲೆ ಮೇಲೆ ಶ್ವೇತಚ್ಛತ್ರ ಎತ್ತಿ ಹಿಡಿದಿದ್ದಾರೆ.

ಕೇರಳದಲ್ಲಿನ ಬಲಕಮ್ಯೂನಿಸ್ಟರ ಸಂಯುಕ್ತರಂಗದ ಸರಕಾರದಲ್ಲಿ ಇಂಡಿಕೇಟಿನವು ಸೇರಿಸಿಕೊಳ್ಳುವುದರ ಬಗ್ಗೆ ಆಲೋಚನೆ ನಡೆದಿದೆ. ಮುಂದೆ ಕೇಂದ್ರದಲ್ಲಿ ಮಂತ್ರಿಪದ ಗಟ್ಟಿಸಿಕೊಳ್ಳಲು ಇದು ಅವರ ಒಳಸಂಚು.

ಈಗಾಗಲೇ ಶ್ರೀಮತಿ ಗಾಂಧಿಯವರ ಸಂಪುಟದಲ್ಲಿ ಮಾಜಿ ಕಮ್ಯೂನಿಸ್ಟರು ಇದ್ದಾರೆ. ಮುಂದೆ ಆಚಿತರು ಸಹ ಸೇರಿಕೊಂಡರೆ ಅದು ಹೊಸತಲ್ಲ.

ಆದುದರಿಂದ ಕಮ್ಯೂನಿಸ್ಟರ ವಿರುದ್ಧ ಅಥವಾ ನಕ್ಸಲೀಯರ ವಿರುದ್ಧ ತೀವ್ರ ಕ್ರಮ ಕೈಕೊಳ್ಳುವ ಎದೆಗಾರಿಕೆ ಆಕೆಗೆ ಉಳಿದಿಲ್ಲ. ಜಾತೀಯ ಪಕ್ಷವನ್ನು ಜಾತೀಯವೆಂದು ಕರೆಯುವ ಧೈರ್ಯ ಆಕೆಗೆ ಇಲ್ಲ. ದೇಶದ್ರೋಹಿಗಳನ್ನು ಕಂಡೂಕಂಡೂ ಕೈಕಟ್ಟಿ ಕಣ್ಣುಮುಚ್ಚಿ ಕೂತುಕೊಳ್ಳುವ ಆಕೆ ದೇಶದ ಬಗ್ಗೆ ಏನು ಚಿಂತಿಸಬಲ್ಲರು ? ದೇಶ ಹೇಗಾದರೂ ಇರಲಿ, ಅಧಿಕಾರ ಉಳಿದರೆ ಸಾಕು.

ಇತ್ತೀಚಿಗಿನ ದಿನಗಳಲ್ಲಿ "ಭಾರತವೊಂದು ದೇಶ"ವೆನ್ನುವ ಭಾವನೆ ಅಳಿಯುತ್ತಿದೆ. ರಾಜಕೀಯ ಪಕ್ಷಗಳೆಲ್ಲಾ ರಾಷ್ಟ್ರೀಯ ಪಕ್ಷವೆಂದು ಕರೆದು ಕೊಳ್ಳುವ ಯೋಗ್ಯತೆ ಯಾವ ಪಕ್ಷಕ್ಕೆ ಉಳಿದಿದೆ ? ಒಂದು ಕಾಲದಲ್ಲಿ ಕಾಂಗ್ರೆಸ್ಸ್ ಶಿಥಿಲವಾಗುತ್ತ ಬಂದು ಹಲವಾರು ಬೇರೆ ಬೇರೆ ಪಕ್ಷಗಳಾದುವು. ಆದರೆ, ಅವುಗಳ ವ್ಯಾಪ್ತಿಯೆಷ್ಟು ? ನೀತಿ ಯಾವ ?

ಒಬ್ಬೊಬ್ಬ ವ್ಯಕ್ತಿಯ ಸುತ್ತ ಕೇಂದ್ರೀಕೃತವಾದ ಹತ್ತಾರು ಪಕ್ಷಗಳ ಫಲವೇನು ? ಪ್ರಾದೇಶಿಕ ರಾಜ್ಯಕಾರಣವೇ ಅವುಗಳ ದೊಡ್ಡ ಗುರಿ.

ಅಖಿಲ ಭಾರತ ವ್ಯಾಪ್ತಿಯ ವಾದಗಳೂ ಏನಾಗುತ್ತಿವೆ ? ಈ ಪ್ರಾದೇಶಿಕ ಪಕ್ಷಗಳ ಆಟೋಪದಲ್ಲಿ ಪ್ರಾದೇಶಿಕ ಹಿತವನ್ನಷ್ಟೇ ಅವು ಗಮನಿಸಬೇಕಾಗಿ ಬಂದಿದೆ. ಆದುದರಿಂದಲೇ ಕೇಂದ್ರಕ್ಕೂ ರಾಜ್ಯ ಘಟಕಕ್ಕೂ ಆಕಾಶ—ಪಾತಾಳ.

ದ್ರಾವಿಡ ಮುನ್ನೇತ್ರ ಕಳಗಂ, ಜನ ಕಾಂಗ್ರೆಸ್, ಕೇರಳ ಕಾಂಗ್ರೆಸ್ಸು, ಉತ್ಕಲ ಕಾಂಗ್ರೆಸ್, ಬಂಗ್ಲಾ ಕಾಂಗ್ರೆಸ್, ಭಾರತೀಯ ಕ್ರಾಂತಿದಳ, ಅಕಾಲಿ ಜಾರ್ಖಂಡ ಇತ್ಯಾದಿ ಇತ್ಯಾದಿ ಹತ್ತಾರು ಪಕ್ಷಗಳು ತಂತಮ್ಮ ರಾಜ್ಯಗಳಲ್ಲಿ ಏನೋ ಸ್ವಲ್ಪ ಸ್ವಲ್ಪ ಪ್ರಭಾವ ಉಳಿಸಿಕೊಂಡಿವೆ.

ಸಿಂಡಿಕೇಟ್, ಇಂಡಿಕೇಟ್, ಕಮ್ಯೂನಿಸ್ಟ್, ಜನಸಂಘ—ಇತ್ಯಾದಿಗಳಾದರೂ ರಾಷ್ಟ್ರೀಯ ಹಿತದೃಷ್ಟಿಯಿಂದಲೇ ನೀತಿ ರೂಪಿಸಿವೆಯೆಂದು ಹೇಳಲಾಗದು.

ಕರ್ನಾಟಕವನ್ನೇ ಎತ್ತಿಕೊಳ್ಳೋಣ. ಮಹಾಜನ ವರದಿಯು ಬೆಳಗಾಂವಿಯನ್ನು ಕಾಸರಗೋಡಿನ ಭಾಗವನ್ನೂ ಕನ್ನಡಿಗರಿಗೆ ಅದು ಮಾನ್ಯಮಾಡುವುದರಿಂದ ಅವರ ಆ ವರದಿಯನ್ನು ಎತ್ತಿ ಹಿಡಿದರು ಸಿಂಡಿಕೇಟ್ ಸರಕಾರ ಜನವಾಣಿಗೆ ಮಣಿದೆ ತಲೆ ಬಾಗಿತು.

ಮಹಾರಾಷ್ಟ್ರದ ಇಂಡಿಕೇಟಿಗರು ಮಹಾಜನ ವರದಿಯನ್ನು ತಿರಸ್ಕರಿಸಬೇಕೆಂದು ಪ್ರಧಾನಿಯನ್ನು ಒತ್ತಾಯ ಪಡಿಸಿದರೆ, ಕರ್ನಾಟಕದ ಇಂಡಿಕೇಟ್ ಅದನ್ನು ಪುರಸ್ಕರಿಸಲೇಬೇಕೆನ್ನುತ್ತಿದೆ.

ಅಂದರೆ, ಅವರ ಆ ರಾಷ್ಟ್ರೀಯ ಪ್ರಶ್ನೆ ನ ಸಾರುತ್ತಿದೆ ? ರಾಷ್ಟ್ರೀಯ ಹಿತಗಳ ಗೊಡವೆ ಬೇಡ, "ನೆಲಕ್ಕೋಡಿ ಬೀಜಬಿತ್ತುವಂತೆ ಜನನೋಡಿ ಮಾತನಾಡು." ಈ ಗಾದೆಯಂತೆ ನೀತಿಯನ್ನದು ಅನುಸರಿಸಿ ಹೋದರೆ, ಒಂದೇ ಅಲ್ಲಿ ಇಲ್ಲ, ಇಲ್ಲಿ ಇಂಡಿಕೇಟು ನೆಲಹಿಡಿಯುತ್ತದೆ.

ಕಾವೇರಿ ನೀರಿನ ಸೂತ್ರ ಇಷ್ಟೆ. ದ್ರಾ. ಮು. ಕ. ದ ಬೇಡಿಕೆಯನ್ನು ಶ್ರೀಮತಿ ಗಾಂಧಿ ತಿರಸ್ಕರಿಸಿದರೆ, ಅದು ಆಕೆಗೆ ನೀಡುತ್ತಿರುವ ಬೆಂಬಲವನ್ನು ಹಿಂದೆಗೆದುಕೊಳ್ಳುವುದು

ಆದ ಪರಿಂದ ಶ್ರೀಮತಿ ಗಾಂಧಿಗೆ ಭಾರೀ ಸಮಸ್ಯೆ. ರಾಷ್ಟ್ರೀಯ ಹಿತವನ್ನು ಸಾಧಿಸುವುದಕ್ಕೆ ಆಕೆ ಅಪ್ಪಿಕೊಂಡ ಸಂಕುಚಿತ ಮನೋಭಾವದ ಪಕ್ಷಗಳು ಆಕೆಯ ಕೈ ತಡೆಯುತ್ತವೆ. ಹಾಗಾಗಿ ಆಕೆಯ ಅಧಿಕಾರವೇನೋ ಮುಂದುವರಿಯುತ್ತದೆ, ದೇಶ ಮಾತ್ರ ಪತನದ ದಾರಿಯಲ್ಲಿ ಮುನ್ನಡೆಯುತ್ತಿದೆ.

ಆದರೆ, ಶ್ರೀಮತಿ ಗಾಂಧಿ ತನ್ನವರೇತನಗೆ ಪ್ರತಿಕೂಲರೆಂದು ಎಂದಿಗೂ ಹೇಳಬಾರದು. ಆದುದರಿಂದ ಸಿಂಡಿಕೇಟ್, ಜನಸಂಘ, ಸ್ವತಂತ್ರ ಪಕ್ಷಗಳನ್ನು ಆವರು ದೂರುತ್ತಾರೆ.

ಭಾರತೀಯ ಜನಸಂಘವನ್ನು ಜಾತೀಯವೆಂದು ದೂರುವ ಆಕೆ ಮುಸ್ಲಿಂಲೀಗನ್ನು ಕುತ್ತಿಗೆಗೆ ಕಟ್ಟಿಕೊಂಡು ಆದರಿಸಿದ್ದಾರೆ.

ತನ್ನದು ಜಾತ್ಯತೀತ ನೀತಿಯೆಂದೂ ಸಮಾಜವಾದವೆಂದೂ ಜನತೆಯನ್ನು ವಂಚಿಸುತ್ತ ಬಂದಿದ್ದಾರೆ. ಏಕತೆಯನ್ನು ಒಡೆದು ಪ್ರತ್ಯೇಕತೆಯನ್ನು ಪ್ರತಿಪಾದಿಸುವ ಆಕೆಯ ನುಡಿಗೂ ನಡೆಗೂ ದೇವ—ದಾನವರ ಅಂತರವಿದೆ!

ಕಾಂಗ್ರೆಸ್ ಪಕ್ಷವನ್ನು ಒಡೆದ ಶ್ರೀಮತಿಗಾಂಧಿಯವರು ಎರಡು ಮಹತ್ಸಾಧನೆ ಸಾಧಿಸಿ ಸಿದ್ಧಿ ಪಡೆದರು—

ಅಧಿಕಾರದಾಹದಿಂದ ಅಧಿಕಾರದಾಹಿಗಳನ್ನು ಕೂಡಿ ಕುರಿಗಳನ ಕಾಯಲು ತೋಳಗಳ ಸಹಾಯ ಪಡೆದದ್ದು ಮತ್ತು

ಪ್ರತ್ಯೇಕತೆ, ಸಂಕುಚಿತತೆ, ಜಾತೀಯತೆ, ವಿದೇಶೀಯತೆಗಳಿಗೆ ಉತ್ತೇಜನ ಕೊಟ್ಟದ್ದು.

ಇದು ದೇಶಕ್ಕಂತ ಮಾರಕ.

ವಿವಾಹ—ಸತ್ಕಾರ ಸಮಾರಂಭ

ಮದ್ರಾಸಿನ ಡಾ| ಕೆ. ಎಸ್. ಗೈ ಇವರ ಪುತ್ರ ಚಿ| ರವೀಂದ್ರನಾಥ್ ರೈ ಯವರ ವಿವಾಹವು ಶ್ರೀ ಪಿ. ಅನಂತರಾಮ ಶೆಟ್ಟರ ಪುತ್ರಿ ಕುಮಾರಿ ಮಲ್ಲಿಕಾ ಅವರೊಡನೆ ತಾ. 26—11—70ರಂದು ಗುರುವಾಯೂರು ದೇವಸ್ಥಾನದಲ್ಲಿ ನೆರವೇರಿದ ಸಂಬಂಧ ತಾ. 28-11-70ರಂದು ಮದ್ರಾಸಿನಲ್ಲಿ ಅಬೋಟ್ಸ್ ಬರಿಯಲ್ಲಿ ಸತ್ಕಾರ ಸಮಾರಂಭವೊಂದು ವಿಜೃಂಭಣೆಯಿಂದ ನೆರವೇರಿತು. ಅಲ್ಲದೆ ಭಾರತ ಕಲಾಂಜಲಿ ನಾಟ್ಯಸಂಘದವರಿಂದ ನಾಟ್ಯ ಪ್ರದರ್ಶನವನ್ನು ಕೂಡಾ ಏರ್ಪಡಿಸಲಾಗಿತ್ತು. ಈ ಸಮಾರಂಭಕ್ಕೆ ನಗರದ ಮತ್ತು ದಕ್ಷಿಣ ಕನ್ನಡದ ಗಣ್ಯ ಮಹನೀಯರು ಬಹುಸಂಖ್ಯೆಯಲ್ಲಿ ಆಗಮಿಸಿ ವಧೂವರರನ್ನು ಆಶೀರ್ವದಿಸಿದರು.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಕನ್ನಡದಲ್ಲಿ ಅಪರೂಪವಾದ

ಪುಸ್ತಕ

ಸ್ವಪ್ನಲೋಕ

ಮನೋವಿಶ್ಲೇಷಣದ ಬೆಳಕಿನಲ್ಲಿ ಕನಸುಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ವಿವರಗಳನ್ನೊಳಗೊಂಡ 'ಶಾಸ್ತ್ರೀಯ' ವಿವರ ಕಿರುಹೊತ್ತಗೆ ಬೆಲೆ 0—50

o o o

ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ ಪ್ರಸಂಗ ಪುಸ್ತಕಗಳು

ಸಾಹಸ ಭೀಮ ವಿಜಯ	0-50
ವಾಲಿ ಸುಗ್ರೀವ (ದುರಂತ ಯಕ್ಷಗಾನ ನಾಟಕ)	0-50
ಲವ ಪಗಡೆ	0-40
ಭಾರತದ ಗುರುಕುಲ	0-40
ಭರತೇಶ ದಿಗ್ವಿಜಯ	0-50

ಪ್ರತಿ ಪುಸ್ತಕಕ್ಕೂ ಬುಕ್ ಪೋಸ್ಟಿನಿಂದ ಕಳಿಸಲು 0-30 ಪೈಸೆ ಅಂಚೆ ವೆಚ್ಚ.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್) ಉಡುಪಿ, ದ. ಕ.

ಮೋಸಗಾರ ಮಲ್ಲ

೮

(ಐದನೇ ಪುಟದಿಂದ)

ಪೂರ್ಣವಾಗಿ ಮತ್ತೊಂದು ಊರಿಗೆ ಹೋದ.

ಅಲ್ಲಿ ಒಬ್ಬ ಸಾಹುಕಾರನ ಹಾಗೆ ವೇಷ ಹಾಕಿಕೊಂಡು, ಎರಡು ದಿನಗಳವರೆಗೆ ಒಂದ ಕುದುರೆಯನ್ನು ಬಾಡಿಗೆಗೆ ಪಡೆದುಕೊಂಡ. ಅದಕ್ಕಾಗಿ ಒಂದು ಚಿನ್ನದ ನಾಣ್ಯವನ್ನು ಮುಂಗಡವಾಗಿ ಕೊಟ್ಟ. ಹೀಗೆ ಅವನು ಕುದುರೆಯ ಮೇಲೇರಿಕೊಂಡು ರಾತ್ರಿಯಾಗುವಾಗ ಒಬ್ಬ ಧನಿಕನ ಮನೆಗೆ ಹೋಗಿ, ತನ್ನ ಕುದುರೆಗೊಂದು ಒಳ್ಳೆಯ ಕೊಟ್ಟಿಗೆ ಬೇಕೆಂದೂ, ತಾನೂ ಅಲ್ಲಿಯೇ ಮಲಗುವೆನೆಂದೂ ಹೇಳಿದ. ಧನಿಕನು ಅವನಿಗೆ ಸ್ಥಳಕೊಟ್ಟ. ರಾತ್ರಿ ಭರ್ಜರಿ ಊಟವನ್ನು ಹಾಕಿದ. ರಾತ್ರಿಯ ಹೊತ್ತಿನಲ್ಲಿ ಕುದುರೆಯು ಲದ್ದಿಯಲ್ಲಿ ನಾಲ್ಕು ಚಿನ್ನದ ನಾಣ್ಯಗಳನ್ನು ತುರುಕಿಸಿಟ್ಟ. ಬೆಳಗಾದ ವೇಳೆ ಮನೆಯ ಧನಿಕ ಎದ್ದು ಬರುವಾಗ ಮಲ್ಲ ಲದ್ದಿಯನ್ನು ಕೆದಕುತ್ತಾ ಚಿನ್ನದನಾಣ್ಯಗಳನ್ನು ತೆಗೆದ. "ಏನಿದು?" ಎಂದು ಆ ಧನಿಕ ಕೇಳಿದುದಕ್ಕೆ, "ಇದಕ್ಕೇ ನಾನು ಕುದುರೆಯ ಹತ್ತಿರವೇ ಮಲಗುವೆನೆಂದಿದ್ದು. ಈ ಕುದುರೆ ಪ್ರತಿ ತಿಂಗಳೂ ಹದಿನೈದು ದಿನಗಳ ವರೆಗೆ ರಾತ್ರಿಯ ಹೊತ್ತು ಲದ್ದಿ ಹಾಕುವಾಗ ಚಿನ್ನದ ನಾಣ್ಯಗಳನ್ನು ಹಾಕುತ್ತದೆ. ಒಂದು ಸಾರಿ ನಾಲ್ಕು ಎಂಟು ಹೀಗೆ. ಮೂರು ಸಾವಿರ ಕೊಟ್ಟು ಇದನ್ನು ಕೊಂಡುಕೊಂಡಿದ್ದೇನೆ, ಆದರೆ ಇದಕ್ಕೆ ಹುರುಳಿ ಬೇಸಿ ಹಾಕಬೇಕಾದ ಕೆಲಸ ಪ್ರಯಾಣದಲ್ಲಿರುವ ನನಗೆ ಬಹಳ ಕಷ್ಟವಾಗಿದೆ. ಯಾರಾದರೂ ಮೂರ ಸಾವಿರ ರೂಪಾಯಿ ಭದ್ರತೆಯಾಗಿ ಕೊಟ್ಟರೆ, ಮೂರು ನಾಲ್ಕು ತಿಂಗಳ ವರೆಗೆ ಇದನ್ನು ಬಿಟ್ಟುಹೋಗಬೇಕೆಂದಿದ್ದೇನೆ. ಅಷ್ಟರವರೆಗೆ ಇದು ಹಾಕಿದ ಚಿನ್ನದ ನಾಣ್ಯ ಅವರಿಗೇ ಬಿಡುವೆ. ಹಿಂದಿರುಗಿ ಹೋಗುವಾಗ ಭದ್ರತೆಯ ಹಣವನ್ನು ವಾಪಸು ಕೊಟ್ಟು ಕುದುರೆಯನ್ನು ತೆಗೆದುಕೊಂಡು ಹೋಗುತ್ತೇನೆ. ನಿಮಗೆ ತಿಳಿದ ನಂಬಿಗಸ್ಥರು ಯಾರಾದರಿದ್ದಾರೆಯೇ?" ಎಂದು ಕೇಳಿದ.

"ಯಾರಾದರೂ ಏಕೆ? ನಾನೇ ಇಟ್ಟುಕೊಳ್ಳುತ್ತೇನೆ ಕುದುರೆಯನ್ನ." ಎಂದು ಹೇಳಿ ಆ ಧನಿಕ ಮೂರು ಸಾವಿರ ರೂಪಾಯಿ ಮಲ್ಲನಿಗೆ ಕೊಟ್ಟ.

ಮಲ್ಲ ತನ್ನಲ್ಲಿರುವ ಹಣವನ್ನೆಲ್ಲ ನಡುವಿನಲ್ಲಿ ಸುತ್ತಿಕೊಂಡು ಆ ಊರು ಬಿಟ್ಟು ಒಂದು ಕಾಡಿನದಾರಿಯಲ್ಲಿ ಹೋಗುತ್ತಿರುವಾಗ ಕರಡಿಯೊಂದು ಅವನನ್ನು ಓಡಿಸ ತೊಡಗಿತು. ಅವನು ಒಂದು ಮರದ ಮರೆಯಲ್ಲಿ ನಿಂತ. ಕರಡಿಯೂ ಆ ಮರದ ಹತ್ತಿರ ಬಂದು ಅವನ ಮೇಲೆ ಎರಗುವಾಗ ಮಲ್ಲ ಅದರ ಎರಡು ಮುಂಗಾಲುಗಳನ್ನು ಹಿಡಿದುಕೊಂಡು ಸುತ್ತತೊಡಗಿದ. ನಡುವೆ ಮರ, ಹಾಗೆ ಬಿಡದೆ ತಿರುಗುತ್ತಾ ಇರುವಾಗ ಅವನ ಸೊಂಟದ ಗಂಟು ಮರದ ಕೊಂಬೆಗೆ ತಾಗಿ ಹರಿದು; ಸ್ವಲ್ಪ ನಾಣ್ಯಗಳು ಕೆಳಗೆ ಚೆಲ್ಲಿದುವು.

ಹಾಗೆ ಅವನು ಕರಡಿಯ ಕೈಗೆ ಸಿಕ್ಕಿ ವೃಕ್ಷ ಪ್ರದಕ್ಷಿಣೆ ಮಾಡುತ್ತಿರುವಾಗ ಆ ದಾರಿಯಾಗಿ ಕುದುರೆಯ ಮೇಲೆ ಒಂ ಮೂಟೆಯೊಂದಿಗೆ ಟೊಣಪ ಬಂಟನ ಹಾಗೊಬ್ಬ ಬಂದ. ಅವನು ಕುದುರೆಯಿಂದಿಳಿದು ಕರಡಿಯನ್ನು ಹೊಡೆಯಲು ಕತ್ತಿ ಎತ್ತುವಾಗ, ಮಲ್ಲ— "ಬೇಡ! ಬೇಡ! ಈ ಕರಡಿಗೇನೂ ಮಾಡದಿರಯ್ಯ. ಇದು ನಾಣ್ಯಗಳನ್ನು ಹಕ್ಕುವ ಕರಡಿ, ನಿನ್ನ ಪಾಡಿಗೆ ಹೋಗಯ್ಯ" ಎಂದ.

ಟೊಣಪ ಬಂಟ ಏನು ಸಂಗತಿ ಹೇಳು ಹೇಳು ಎಂದು ಒತ್ತಾಯಿಸಲು, "ಹೇಳಿದರೆ ನನಗೆ ನಷ್ಟ, ನಿನಗೇ ಲಾಭ. ಸರಿ ಕೇಳು. ನಾನು ಗುರೂಪದೇಶದಿಂದ ಪಡೆದ ಒಂದು ಮಂತ್ರವನ್ನು ಈ ಮರಕ್ಕೆ ಪ್ರಯೋಗಿಸಿದ್ದೇನೆ. ಮರದ ಮೇಲಿರುವ ಜೇನಿಗಾಗಿ ಕರಡಿ ಬಂದಾಗ ಅದನ್ನು ಹಿಡಿದುಕೊಂಡು ಹೀಗೆ ಪ್ರದಕ್ಷಿಣೆ ಮಾಡಿದರೆ, ಅದರ ಬಾಯಿಯಿಂದ ನಾಣ್ಯಗಳು ಉದುರುತ್ತವೆ. ಈ ರಹಸ್ಯವನ್ನು ನಾನು ನಿನಗೆ ಹೇಳಿದ್ದರಿಂದ, ಇನ್ನು ಮುಂದಿನ ಫಲ ನಿನಗೇ ಆಯಿತು. ಸರಿ, ಕರಡೀನ ಹಿಡಿದುಕೋ" ಎಂದ.

ಆ ಟೊಣಪನಿಗೂ ಕೆಳಗೆ ಕಾಣುವ ನಾಣ್ಯಗಳನ್ನು ನೋಡಿ ಆಶೆಯಾಗಿ ಮಲ್ಲನ ಕೈಗಳಿಂದ ಕರಡಿಯ ಕೈಗಳನ್ನು ತಾನು ಹಿಡಿದುಕೊಂಡ. ಮಲ್ಲ ಟೊಣಪನ ಕುದುರೆಯ ಮೇಲೆ ಏರಿಕೊಂಡು ಅದನ್ನು ದೌಡಾಯಿಸಿದ ಕೂಡಲೇ ಟೊಣಪನಿಗೆ ತಾನು ಮೋಸ ಹೋದ ಸಂಗತಿ ತಿಳಿಯಿತು.

ಆ ಟೊಣಪ ಒಬ್ಬ ದೊಡ್ಡ ಕಳ್ಳರ ಗುರು. ಅವನು ಆ ದಿನ ಕದ್ದ ರಾಜಭಂಡಾರದ ಗಂಟು ಮಲ್ಲ ಏರಿದ್ದ ಕುದುರೆಯ ಮೇಲಿತ್ತು. ಅಷ್ಟು ದೊಡ್ಡ ಧನದ ಮೂಟೆ ಒಮ್ಮೆಗೇ ತನಗೆ ಸಿಕ್ಕಿದ ಸಂತೋಷದಲ್ಲಿ ಮೋಸಗಾರ ಮಲ್ಲ ಕುದುರೆಯನ್ನು ದೌಡಾಯಿಸಿಕೊಂಡು ಓಡುವಾಗ, ರಾಜಭಟರು ಅವನನ್ನು ಅಡ್ಡಗಟ್ಟಿ ಹಿಡಿದರು.

"ನಾನು ಕಳ್ಳನಲ್ಲ. ಕಾಡಿನಲ್ಲಿ ನಾನು ಕಳ್ಳನನ್ನು ಕೊಂದು ಅವನು ಕದ್ದ ಗಂಟನ್ನು ಮಹಾರಾಜರಿಗೊಪ್ಪಿಸೋಣವೆಂತಲೆ ಹೋಗುತ್ತಿದ್ದೇನೆ" ಎಂದ ಮಲ್ಲ. ಇಷ್ಟರೊಳಗೆ ಕಳ್ಳ ಕರಡಿಯ ಕೈಯಿಂದ ಸತ್ತಿರಬಹುದೆಂದು ನಂಬಿ ಕಳ್ಳನ ಹೆಣವನ್ನು ತೋರಿಸುವೆನೆಂದು ರಾಜಭಟರನ್ನು ಕಾಡಿಗೆ ಕರೆದುಕೊಂಡು ಹೋದ. ಅಲ್ಲಿ ಕಳ್ಳನೂ ಇಲ್ಲ. ಕರಡಿಯೂ ಇಲ್ಲ.

ಕಳ್ಳ ತಾನು ಮೋಸಹೋದುದನ್ನು ಗ್ರಹಿಸಿಕೊಂಡ ಕೂಡಲೇ, ಕರಡಿಯ ಕೈಗಳನ್ನು ಬಿಟ್ಟು ಅದರ ಹತ್ತಿರ ಖಾಡಾಖಾಡೀಗೇ ನಿಂತ. ಅಷ್ಟರ ವರೆಗೂ ಸುತ್ತು ಸುತ್ತು ತಲೆತಿರುಗಿ ಹೈರಾಣಾದ ಕರಡಿ ಅವನ ಕೈಯಿಂದ ತಪ್ಪಿಸಿಕೊಂಡು ಕಾಡಿನೊಳಗೆ ಓಡಿಹೋಯಿತು. ಕಳ್ಳನೂ ತನ್ನ ಪಾಡಿಗೆ ಹೊರಟು ಹೋಗಿದ್ದ.

ಹೀಗಾಗಿ ಮಲ್ಲನೇ ರಾಜಭಂಡಾರ ಕದ್ದ ಕಳ್ಳನೆಂದಾಯಿತು. ಸುಮ್ಮಸುಮ್ಮನೆ ಕಾಡು ಮೇಡು ತಿರುಗಿಸಿದುದಕ್ಕಾಗಿ ರಾಜಭಟರು ನಾಲ್ಕೇಟು ಹೆಚ್ಚಾಗಿ ಕೊಟ್ಟು ಅವನನ್ನು ಎಳೆದುಕೊಂಡು ರಾಜನ ಮುಂದೆ ನಿಲ್ಲಿಸಿದರು. ವಿಚಾರಣೆಯಲ್ಲಿ ದಂಡನೆಗೆ ಹೆದರಿ ಮಲ್ಲ ತನ್ನ ಸತ್ಯಸಂಗತಿಯನ್ನೇ ಹೇಳಿದ. ಅದನ್ನು ರುಜುಪಡಿಸಿಕೊಳ್ಳಲು ಸಾಕ್ಷಿಗಳಿಗಾಗಿ ಅವನಿಂದ ಮೋಸಹೋದವರೆಲ್ಲಾ ರಾಜನ ಬಳಿಗೆ ಬರಬೇಕೆಂದ ರಾಜ ಡಂಗುರ ಹಾಕಿಸಿದ. ಆದರೆ ಕೊಂಡುಕೊಂಡವನೂ, ಕುದುರೆಯನ್ನು ಬಾಡಿಗೆಗೆ ಕೊಟ್ಟವನೂ, ಕಲಶಕಂಚಿ ಮಾಡಿಸಿದವನೂ, ಗಡಿಗೆ ಕೊಂಡುಕೊಂಡ ಅಡಗೂಲಜ್ಜಿಯೂ, ದೇವಾಲಯಕ್ಕೆ ಪಂಚಕಜ್ಜಾಯ ಮಾಡಿಸಲು ಬಂದ ಮುದುಕನೂ ಬಂದು ಅವನನ್ನು ನೋಡಿ ಬಯ್ಯುತ್ತಾ ಸಾಕ್ಷಿ ಹೇಳಿದರು. ಕಳ್ಳ ಮಾತ್ರ ಸಾಕ್ಷಿ ಹೇಳಲು ಬರಲಿಲ್ಲ. ಮಲ್ಲ ಸಿಕ್ಕಿಬಿದ್ದ ಸಂಗತಿ ತಿಳಿದು ಆ ಕಳ್ಳ ತನ್ನಲ್ಲಿ; "ದೊಡ್ಡ ಕಳ್ಳನಾದ ನನ್ನನ್ನೇ ಮೋಸಮಾಡಿದವನು ನನಗಿಂತಲೂ ಹೆಚ್ಚು ಅಂದುಕೊಂಡೆ. ಈಗ ನೋಡಿದರೆ ಅವನೇ ನನಗಿಂತಲೂ ಹೀನನಾಗಿದ್ದಾನೆ" ಎಂದುಕೊಂಡ.

ಅವನಿಂದ ನಷ್ಟಹೊಂದಿದವರಿಗೆಲ್ಲ ರಾಜನು ಪರಿಹಾರ ಕೊಡಿಸಿ, ಮಲ್ಲನ ಬಲಗೈಯ ಮೇಲೆ "ಮೋಸಗಾರ ಮಲ್ಲ" ಎಂಬ ಹೆಸರನ್ನು ಹಚ್ಚೆಹಾಕಿಸಿ, ಅದೇ ಶಿಕ್ಷೆ ಎಂದು ಹೇಳಿ ಕಳುಹಿಸಿಬಿಟ್ಟ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 126 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ಅನ್ನು ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ "ಜೀವನ-ನಿಧಿ"ಯಲ್ಲಿ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು—1.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, ರೇಸ್ ಕೋರ್ಸ್ ರೋಡ್, ಬೆಂಗಳೂರು—1

ಕುರುಡರಿಗೂ ಕಣ್ಣಿದೆ

ಕುರುಡರಿಗೂ ಬೇರೆ ಜನರಂತೆ ಕೌಶಲ್ಯಗುಣಗಳಿವೆ. ಆದರೆ ಅವುಗಳ ಪ್ರಯೋಗವಾಗಬೇಕಾದರೆ ತಕ್ಕ ಶಿಕ್ಷಣ ಬೇಕು. ಶಿಕ್ಷಣ ದೊರೆತಲ್ಲಿ ಕುರುಡರೂ ಕಣ್ಣಿದ್ದವರಂತಾಗುವರು. ಪೂರ್ವಕಾಲದಲ್ಲಿ ಕುರುಡರಿಗೆ ಶಿಕ್ಷಣಕೊಡುವ ಏರ್ಪಾಡುಗಳಿರಲಿಲ್ಲ. ಆದುದರಿಂದ ಹೆಚ್ಚಾದ ಕುರುಡರು ಭಿಕ್ಷೆ ಬೇಡಿ ತಮ್ಮ ಹೊಟ್ಟೆ ತುಂಬಿಸುತ್ತಿದ್ದರು. ಆದರೆ ಆಧುನಿಕ ಕಾಲದಲ್ಲಿ ಅವರ ಶಿಕ್ಷಣಗಳಿಗೆ ತಕ್ಕ ಏರ್ಪಾಡುಗಳಿವೆ.

ಇದಲ್ಲದೆ ಖಾಸಗಿ ಮತ್ತು ಸಾರ್ವಜನಿಕ ಸಂಸ್ಥೆಗಳೂ ಕುರುಡರ ಸಂಸ್ಥೆಗಳೂ ಜನ್ಮ ಕುರುಡರಿಗಾಗಿಯೂ ಯುದ್ಧದಲ್ಲಾದ ಕುರುಡರಿಗಾಗಿಯೂ ಅನೇಕ ಏರ್ಪಾಡುಗಳನ್ನು ಮಾಡುತ್ತವೆ. ಈ ಸಂಸ್ಥೆಗಳ ಮುಖ್ಯ ಕೆಲಸವೆಂದರೆ ಸಲಹೆಗಳನ್ನು ಕೊಡುವುದು. ಈ ಸಂಸ್ಥೆಗಳು ಕುರುಡರಿಗಾಗಿ ರಜಾಕೇಂದ್ರಗಳನ್ನು ತೆರೆದಿವೆ.

ಬಾಲ್ಯದಲ್ಲಿಯೇ ಕುರುಡರಾಗಿದ್ದರೆ ಇಲ್ಲವೆ ಹುಟ್ಟು ಕುರುಡರಿಗೆ ಚಿಕ್ಕಂದಿನಿಂದಲೂ ಇತರ ಮಕ್ಕಳಂತೆ ವಿದ್ಯಾಭ್ಯಾಸ ದೊರಕಿಸಿಕೊಡುವ ಏರ್ಪಾಡುಗಳಿವೆ. ವಯಸ್ಕರೆಲ್ಲಾದರೂ ನಡುಪ್ರಾಯದಲ್ಲಿ ಕುರುಡರಾದರೆ ಅವರಿಗೆ ತಕ್ಕುದಾದ ಉದ್ಯೋಗದಲ್ಲಿ ತರಬೇತು ಸಿಗುವಂತೆ ಏರ್ಪಾಡಿದೆ. ಹೀಗಾಗಿ ಈಗ ಜರ್ಮನಿಯ ಫೆಡರಲ್ ರಿಪಬ್ಲಿಕಿನಲ್ಲಿ ಕುರುಡ ಮಕ್ಕಳಿಗಾಗಿ 18 ಶಾಲೆಗಳಿವೆ. ಈ ಮಕ್ಕಳು ಕಣ್ಣುಗಳಿದ್ದ ಮಕ್ಕಳಂತೆ ಯಾವ ಉದ್ಯೋಗವನ್ನಾದರೂ ಕಲಿಯಬಹುದು. ಅದೇ ತರ ವಯಸ್ಕರಾಗಿ ಕುರುಡರಾದವರಿಗೂ ಶಾಲೆಗಳಿವೆ. ಪಶ್ಚಿಮ ಜರ್ಮನಿಯಲ್ಲಿ 1900 ಕುರುಡರಾದ ವಯಸ್ಕರು ಈ ಶಾಲೆಗಳಿಗೆ ಸೇರುತ್ತಾರೆಂದು ಖಾನೇಷುಮಾರಿಯಿಂದ ತಿಳಿದು ಬರುತ್ತದೆ. ಪಶ್ಚಿಮ ಜರ್ಮನಿಯ ಡ್ಯೂರೆನ್ ಎಂಬಲ್ಲಿ ವಯಸ್ಕ ಕುರುಡರಿಗೆ ಅನೇಕ ಉದ್ಯೋಗಗಳಲ್ಲಿ ತರಬೇತು ಕೊಡಲು ದೊಡ್ಡ ಶಿಕ್ಷಣಸಂಸ್ಥೆ ಇದೆ.

ಈಗ ಜರ್ಮನಿಯಲ್ಲಿರುವ 60,000 ಕುರುಡರ ಸಹಕಾರವಿಲ್ಲದೆ ದೇಶದ ಯಾವ ಕೆಲಸಗಳೂ ಸಾಂಗೋಪವಾಗಿ ನಡೆಯಲಾರವು ಎಂದು ಅನುಭವದಿಂದ ತಿಳಿದುಬಂದಿದೆ. ಇತರ ನಾಗರಿಕರಂತೆ ಕುರುಡರೂ ಪ್ರಾಮುಖ್ಯ ನಾಗರಿಕರು. ಡ್ಯೂಕೆ ಬ್ಲಾಂಡರ್ಸ್ ಸ್ಟುಡಿಯೆನಾನ್ ಸ್ಟಾಲ್ಟ್ ಮೊರ್ಬರ್ಗ್‌ಲಾನ್ ಎಂಬ ಜರ್ಮನಿಯ ಶಿಕ್ಷಣಸಂಸ್ಥೆ ಇತರ ಸ್ವಾಭಾವಿಕ ಜನರಿಗೆ ಯಾವುದೆಲ್ಲಾ ಶಿಕ್ಷಣಗಳು ದೊರಕುತ್ತವೆಯೋ ಅವುಗಳನ್ನೆಲ್ಲಾ ವಿಶಿಷ್ಟ ವಿಧದಲ್ಲಿ ಕುರುಡರಿಗೂ ಬ್ರೈಲಿ ಲಿಪಿಯಲ್ಲಿ ದೊರಕಿಸಿಕೊಡುತ್ತದೆ. ಬ್ರೈಲಿ ಅಕ್ಷರದಲ್ಲಿ ಬರೆದ ಪುಸ್ತಕಗಳ ದೊಡ್ಡ ಪುಸ್ತಕಾಲಯವಿದೆ. ಈ ವಿಶ್ವವಿದ್ಯಾಲಯದಲ್ಲಿ ಬ್ರೈಲಿಯಲ್ಲಿ ಬರೆದ 60,000 ಪುಸ್ತಕಗಳಿವೆ.

ಶಿಕ್ಷಣ ಪಡೆದ ಕುರುಡರು ಇತರರಂತೆ ತಮ್ಮ ತಮ್ಮ ಹುದ್ದೆಗಳನ್ನು ಸಾಮರ್ಥ್ಯದಿಂದ ಮಾಡುವರು. ಕಾನೂನು ಅಧ್ಯಾಪಕರು, ಜಡ್ಜರು, ಅಧಿಕಾರಿಗಳು, ಗಣಿತ ಮತ್ತು ಇತರ ಶಾಸ್ತ್ರಜ್ಞರು ಸಾಧಾರಣ ಜನರಂತೆಯೇ ಜೀವನವನ್ನು ಸಾಗಿಸುವರು.

ಕುರುಡರ ಜಗತ್ತೇ ಎಂದು ಬೇರೆಯಾಗಿದ್ದು ರಬಾರದು. ಅವರು ಇತರರೊಡನೆ ಬೆರೆತಿರಬೇಕೆಂದು ಕುರುಡರಿಗೆ ಇತರ ಸಾಮಾನ್ಯ ಜನರೊಡನೆ ಪರಿಚಯ ಮಾಡಿಕೊಡುವರು. ಪರಿಚಯಗಳು ಹೆಚ್ಚಿದಂತೆ ಕುರುಡನು ಇತರರಂತೆಯೇ ಜೀವಿಸಲು ಕಲಿಯುವನು. ಒಂದು ಜನರ ಗುಂಪಿನಲ್ಲಿ ಕುರುಡನಾರು, ಕಣ್ಣಿದ್ದವನಾರು ಎಂದು ಹೇಳಲು ಅಸಾಧ್ಯವಾಗುವುದು.

—ಬಿ. ಪಿ. ಎಫ್.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ಶ್ರೀಮತಿ ಸೀಮಂತಿ ತೋರಿಸಿದ ದಾರಿ

ಕಳಕುಟ್ಟಂ ರಾಷ್ಟ್ರೀಯ ವಿಸ್ತರಣಾ ಸೇವಾ ಘಟಕದ ಗ್ರಾಮಸೇವಿಕೆ ಶ್ರೀಮತಿ ಕೆ. ಸೀಮಂತಿಯನ್ನು ಕಳೆದ ವಾರ್ಷಿಕ ಸಾಲಿನಲ್ಲಿ ಕೇರಳದ ಅತ್ಯುತ್ತಮ ಗ್ರಾಮ ಸೇವಿಕೆಯೆಂದು ರಾಜ್ಯ ಸರಕಾರದ ಆಯ್ಕೆ ಮಾಡಿ 750 ರೂಪಾಯಿ ನಗದು ಬಹುಮಾನವನ್ನೂ, ಪ್ರಶಸ್ತಿ ಪತ್ರವನ್ನೂ ನೀಡಿತು.

ಶ್ರೀಮತಿ ಸೀಮಂತಿ ಮಹಿಳಾ ಸಮಾಜಗಳ ಚಟುವಟಿಕೆಯಿಂದ ಕಾರ್ಯವೆಸಗುವಂತೆ ಮಾಡುವುದರ ಮೂಲಕ ಮನೆಯಲ್ಲಿ ತರಕಾರಿ ತೋಟ ರಚಿಸಲು, ಶಿಶು—ವಿಹಾರಗಳನ್ನು ನಡೆಸಲು, ಕಾಂಪೋಸ್ಟ್ ಗುಂಡಿಗಳನ್ನು ತೋಡಲು, ಕೋಳಿ ಸಾಕಣೆ ಕೈಗೊಳ್ಳಲು ನೆರವಾದರು. ಈಕೆಯ ಸತತ ಪ್ರಯತ್ನ ಮತ್ತು ನಾಯಕತ್ವದಿಂದ ಸುಮಾರು 300 ಕುಟುಂಬಗಳು ಕೋಳಿ ಸಾಕಣೆ ಕಾರ್ಯ ಆರಂಭಿಸಿದುವು. ಪ್ರತಿ ಕುಟುಂಬವೂ ಐದು—ಹತ್ತು ಕೋಳಿಗಳನ್ನು ಸಾಕಲಾರಂಭಿಸಿದುವು.

ಸುಮಾರು 250 ಮನೆಗಳಲ್ಲಿ ತರಕಾರಿ ತೋಟ ಸಿದ್ಧಪಡಿಸಲಾಯಿತು. 200 ಕಾಂಪೋಸ್ಟ್ ಗೊಬ್ಬರ ಗುಂಡಿಗಳನ್ನು ತೋಡಲಾಯಿತು. ಸುಮಾರು 373 ಅಡಿಗೆ ಒಲೆಗಳನ್ನು ಆರಂಭಿಸಲಾಯಿತು. 138 ಸ್ತ್ರೀಯರು ... ಕಾಲ ಲೇವಣಿ ... ಆರಂಭಿಸಿದರು. 46 ಕಟ್ಟಂಲಿ ... ಚರ್ಚಾ ತರಗತಿಗಳನ್ನು ನಡೆಸಲಾಯಿತು. ಸ್ಥಳೀಯವಾಗಿ ದೊರಕುವ ವಸ್ತುಗಳಿಂದ ಪೋಷಕ ಆಹಾರ ತಯಾರಿಸುವ 33 ಪ್ರದರ್ಶನ ನಡೆಸಲಾಯಿತು. 400 ಮನೆಗಳಲ್ಲಿ ಸುಧಾರಿತ ಮಾದರಿಯ ಕಕ್ಕಸುಗಳನ್ನು ನಿರ್ಮಿಸಲಾಯಿತು. ಸುಮಾರು 250 ಕುಟುಂಬಗಳು ಮನೆಗಳಲ್ಲಿ ಸುಧಾರಣೆಗಳನ್ನು ತಂದುವು. ಈ ರೀತಿಯಲ್ಲಿ ಶ್ರೀಮತಿ ಸೀಮಂತಿ ಕಲಕುಟ್ಟಂ ಘಟಕದ ಸುಮಾರು 500 ಕುಟುಂಬಗಳು ಸಾಮೂಹಿಕಾಭಿವೃದ್ಧಿ ಕಾರ್ಯದಲ್ಲಿ ಭಾಗವಹಿಸಲು ಕಾರಣಕರ್ತರಾದರು.

ಒಲುಮೆಯ ಹಿರಿಯಕ್ಕ

ಶ್ರೀಮತಿ ಸೀಮಂತಿ ಒಂಭತ್ತು ವರ್ಷಗಳಿಂದ ಈ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಸುಶಿಕ್ಷಿತ ಜನರು ಈಕೆಯನ್ನು "ಒಲವಿನ ಹಿರಿಯಕ್ಕ" ಎಂದು ಪ್ರೀತಿಯಿಂದ ಕರೆಯುತ್ತಾರೆ. ಈಕೆ ಅಲ್ಪ ವರಮಾನದ ಬೇಸಾಯಗಾರರ ಕುಟುಂಬದವರು; ಈಗ ಬೇಸಾಯಗಾರನ ಪತ್ನಿ. 38 ವಯಸ್ಸಿನ ಶ್ರೀಮತಿ ಸೀಮಂತಿ ವಿಜ್ಞಾನ ಪದವೀಧರೆ.

ಸಮುದ್ರ ತೀರದಲ್ಲಿರುವ ಕಳಕುಟ್ಟಂ ಘಟಕವು ತಿರುವನಂತಪುರದಿಂದ 18 ಕಿಲೋಮೀಟರು ದೂರದಲ್ಲಿದೆ. ಇಲ್ಲಿನ ಜನಸಂಖ್ಯೆ 1.25 ಲಕ್ಷ. ಇದರ ವಿಸ್ತೀರ್ಣ 50 ಚದರ ಮೈಲಿ. ಈ ಘಟಕದಲ್ಲಿ ಏಳು ಪಂಚಾಯತಿಗಳಿವೆ.

ಈ ಸಾಮೂಹಿಕಾಭಿವೃದ್ಧಿ ಘಟಕವು 1956ನೇ ಇಸವಿ ಅಕ್ಟೋಬರ್ 2ನೇ ದಿನಾಂಕದಂದು ಅಸ್ತಿತ್ವಕ್ಕೆ ಬಂದಿತು.

ಈ ಘಟಕವು 1967ನೇ ಇಸವಿಯಲ್ಲಿ ಎರಡನೇ ಹಂತವನ್ನೂ ಮೀರಿ ಮುನ್ನಡೆಯಿತು. ಶ್ರೀಮತಿ ಸೀಮಂತಿಯನ್ನು ಈ ಘಟಕದಲ್ಲಿರುವ ಮಂಗಳಪುರಂ, ಕಳಕುಟ್ಟಂ ಅತ್ತಿಪರಂ ಮತ್ತು ಪೋತನಕೊಡೆ ಪಂಚಾಯಿತಿಗಳ ವಿಸ್ತರಣಾಧಿಕಾರಿಯಾಗಿ ನೇಮಿಸಲಾಯಿತು.

ಪ್ರತಿ ಪಂಚಾಯಿತಿಯಲ್ಲೂ ಸರಾಸರಿ ಎರಡು ಮಹಿಳಾ ಸಮಾಜಗಳಿದ್ದುವು. ಶ್ರೀಮತಿ ಸೀಮಂತಿ ಅವುಗಳನ್ನು ಸಚೇತನಗೊಳಿಸಿದರು. 1969ನೇ ಇಸವಿಯಲ್ಲಿ ಕಳಕುಟ್ಟಂ ಮತ್ತು ಅತ್ತಿಪುರಂ ಮಹಿಳಾ ಸಮಾಜಗಳು ಕೇಂದ್ರ ಸರ್ಕಾರದ 400 ರೂಪಾಯಿಗಳ ಪ್ರೋತ್ಸಾಹಕಾರಿ ನಗದು ಬಹುಮಾನವನ್ನು ಗಳಿಸಲು ಈಕೆಯೇ ಕಾರಣ.

ಹೊಸ್ತು ಸಿನಿಮಾ-ಭಾರೀ ಕಷ್ಟ

(ನಾಲ್ಕನೇ ಪುಟದಿಂದ)

"ಹ್ಞಾಂ...."

"ಇದೊಂದು ಉದಾಹರಣೆ ಮಾತ್ರ. ಇಂದಿರಾ ಗಾಂಧಿಯೂ ಅಷ್ಟೆ...." ಅನ್ನುತ್ತಿರುವಾಗ ಪ್ರಾಮಾಣಿಕರು....?"

"ಅದೂ ಹೌದನ್ನು. ಜನ ಹೊಟ್ಟೆ ಬಿದೆ ಕೊಂದು ಗೆದ್ದ ಎತ್ತಿನ ಬಾಲ ಹಿಡಿಯಲು ಅಪ್ರಾಮಾಣಿಕರು ನುಗ್ಗುತ್ತಾರೆ"

"ಇಂಡಿಕೇಟ್ ... ಕಮ್ಯುನಿಸ್ಟರು ನುಗ್ಗಿದಂತೆ...."

"ಇಂದಿರಾಗಾಂಧಿ ... ತಮ್ಮ ನನ್ನನ್ನೂ ಮ... ದ ... ಕೊಂಡಂತೆ...."

"ಅದೇ ಅನ್ನೋದು...."

"ಅವನು ... ಇಂದಿನ ಈ ಹೊಲಸು ರಾಜಕೀಯದ ನಡುವೆ ಇದೊಂದು ಹೊಸ ಸಲಹೆ ಸಹ ಧ್ಯದಲ್ಲಿ ಮರುಳು ಗುಮಾನಿಗೊಂಡ ... ಇದೂ ಹೆಚ್ಚು ರವಾಗಬಾರದೆಂದಿದೆಯೇ?"

'ಸತ್ಯಮೇವ ಸಮಾಧಾನ. ಆಗಲಿ ಅದೂ ಆಗಲಿ ನೋಡೋಣ ಏನಾಗುತ್ತಂತ...."

'ಆಗುವುದೇ ಆಗುತ್ತೆ ....'

"ಅದನ್ನ ಮತ್ತೊಂದ ಬಾರಿ ಹೇಳು"

—ಗೋರಾ.

ಇದು ನಮ್ಮ ಭಾರತ—
ಪ್ರೇತವು ಆದೇಶ ನೀಡಿತು

ಇದು ೧೯೬೬ರಲ್ಲಿ ನಡೆದ ಸತ್ಯ ಘಟನೆ ಮಧ್ಯಪ್ರದೇಶದ ಬಿಲಾಸಪುರ ಜಿಲ್ಲೆಯಲ್ಲಿ ಭಿರಹುಟಿ ಎಂಬ ಹಳ್ಳಿ. ಸಾಹುಕಾರನೆಂಬ ಸಜ್ಜನ ತನ್ನ ಸಂಗಡಿಗರೊಂದಿಗೆ ಬದರಿ ಕ್ಷೇತ್ರವು ದರ್ಶನಕ್ಕೆಂದು ಹೊರಟಿದ್ದನು. ಯಾತ್ರಾ ಮಧ್ಯೆ ಅವರು ಮಂಜಲಿನಲ್ಲಿ ರಾತ್ರಿಯಾದುದರಿಂದ ತಂಗಿದ್ದರು. ವಿಚಿತ್ರ ಘಟನೆಯೊಂದು ಅವರನ್ನು ಬೆಚ್ಚಿಬೀಳುವಂತೆ ಮಾಡಿತು. ಒಂದು ನೆರಳು ಗೋಚರಿಸಿತು. ಅದು ಹೇಳಿತು 'ಸಾಹುಕಾರ, ನಾವು ತಿಮುದದಲ್ಲಿರುವ, ನಿನ್ನ ಭಾವ. ಬದರಿಯಾತ್ರೆ ನೀನು ಹೊರಡುವ ವೇಳೆ ನಾನು ಜೀವಂತವಿದ್ದೆ; ಆದರೆ ಇದೀಗ ಸತ್ತು ಮೂರು ದಿನವಾಯ್ತು. ನಾನು ಪ್ರೇತವಾಗಿ ತಿರುಗುತ್ತಿದ್ದೇನೆ. ನೀನು ಇಲ್ಲಿಂದ ಮರಳುವಾಗ ಗಯೆಯಲ್ಲಿ ನನ್ನ ಪ್ರೇತಪಿಂಡವನ್ನು ನೀಡಿ ... ಪ್ರೇತಕರ್ಮವನ್ನು ... ಮಾಡು. ಇದರಿಂದ ... ಗಲಿವ ವೆಷ್ಟನ ... ನೆ ... ದ ತೆಗೆದುಕೊ"

ಇದನ್ನು ಕೇಳಿದ ಸಾಹುಕಾರನೂ ಅವನ ಜತೆಗಾರರೂ ... ದಲಿ ಹೆದರಿದರು ಭಾವ ... ಯಾವಾಗ ತೀರಿ ... ರಿಯೆಂದಿಚಿಸಿದರ.

—'ಅಸ್ಕೃಪ ಪೇಕಯೋನಿ ಸೇ ... ದ :ಖಿ

ನಡೆದುದಾದರೆ, ಪ್ರೇತಕರ್ಮ ಮಾಡಿ ಅದನ್ನು ಮುಕ್ತಿಗೊಳಿಸುವುದು ನಿಜಕ್ಕೂ ಪುಣ್ಯಕಾರ್ಯ. ತಿರುಗದ ಭಾವನು ತನ್ನನ್ನು ಬೀಳ್ಕೊಡಲು ಬಂದಾಗ ಸಂಪೂರ್ಣ ಆರೋಗ್ಯದಿಂದಿದ್ದನು. ಆತನ ಮೃತ್ಯು ಸಾಹುಕಾರನಿಗೊಂದು ಒಗಟೇ ಆಯ್ತು.

ಅವರೂ ಊರಿಂದ ಬಹಳ ದೂರವಿರುವಾಗ ಸತ್ಯವನ್ನು ಅರಿಯುವುದು ಸಾಧ್ಯವಿಲ್ಲ. ಆದುದರಿಂದ ಗಯೆಗೆ ಹೋಗಿ ಪ್ರೇತಕರ್ಮ ಮಾಡಿಸುವುದೇ ಸೂಕ್ತವೆಂಬ ನಿರ್ಧಾರಕ್ಕೆ ಬಂದನು. ಅದರಂತೆ ಬದರಿಕ್ಷೇತ್ರವು ದರ್ಶನಾನಂತರ, ಅವರೆಲ್ಲರೂ ಗಯೆಗೆ ಹೋದರು. ಸಾಹುಕಾರನು ತನ್ನ ಭಾವನ ಹೆಸರಲ್ಲಿ ಪ್ರೇತಯೋನಿ ಮುಕ್ತಿಗಾಗಿ ಸಂಪೂರ್ಣ ಕರ್ಮವನ್ನು ವಿಧ್ಯುಕ್ತವಾಗಿ ಮಾಡಿಸಿದನು.

ಎಲ್ಲರೂ ತಮ್ಮ ಹಳ್ಳಿಗೆ ಮರಳಿ ಬಂದರು. ಸಾಹುಕಾರನ ಭಾವ ಸತ್ತು ... ಸಂ... ತಿಳಿಯಿತು. ಗಾ... ಸ್ತೂ ... ಕೌಟುಂಬಿಕರೂ ಪ್ರೇತದ ಮಾತಿನಿಂದ ಚಕಿತರಾದರು.

ನುಡಿದಂತೆ ನಡೆ

ಸುಂಕಳೆಯರು ಮತ್ತು ಶಾಲಾ ಪೂರ್ವ ವಯಸ್ಸಿನ ಮಕ್ಕಳ ಕೇಂದ್ರದ ಸಂಘಟಿತ ಕಾರ್ಯಕ್ರಮದ ಆಶ್ರಯದಲ್ಲಿ ಗರ್ಭಿಣಿಯರ ಮತ್ತು ಶಾಲಾ—ಪೂರ್ವ ವಯಸ್ಸಿನ ಮಕ್ಕಳ ಪೋಷಕ ಆಹಾರ ಕೇಂದ್ರವಾಗಿ ಕಳಕುಟ್ಟಂ ಮಹಿಳಾಸಮಾಜವನ್ನು ಆಯ್ಕೆ ಮಾಡಲಾಯಿತು. ಈ ವರ್ಷದ ಆರಂಭದಿಂದ ಈ ಸಮಾಜದಲ್ಲಿ 30 ಮಹಿಳೆಯರು ಮತ್ತು 50 ಮಕ್ಕಳಿಗೆ ಪೋಷಕ ಆಹಾರ ನೀಡಲಾಗುತ್ತಿದೆ.

"ಒಲುಮೆಯ ಹಿರಿಯಕ್ಕ"ನಾದ ಶ್ರೀಮತಿ ಸೀಮಂತಿಯು ಇತರರಿಗೆ ಉಪದೇಶಿಸುವುದನ್ನು ಸ್ವತಃ ಅನುಷ್ಠಾನಕ್ಕೆ ತರುತ್ತಿದ್ದಾರೆ. ಈಕೆ ತಮ್ಮ ಗೃಹದಲ್ಲಿ ತರಕಾರಿ ತೋಟ ನಿರ್ಮಿಸಿ, ಕೋಳಿ ಸಾಕಣೆ ಆರಂಭಿಸಿ, ಇಬ್ಬರು ಮಕ್ಕಳ ಕುಟುಂಬವನ್ನು ಪೋಷಿಸುತ್ತಿದ್ದಾರೆ. ●

ಧರ್ಮಸ್ಥಳದಲ್ಲಿ
ಸಾಹಿತ್ಯ ಸಮ್ಮೇಳನ

ಧರ್ಮಸ್ಥಳ ಕ್ಷೇತ್ರದ ... ಸಾಹಿತ್ಯ ಸಮ್ಮೇಳನವು 29ರಂದು ಜರಗಿತು. ಪ್ರಸಿದ್ಧ ಕವಿ ಶ್ರೀ ಪು. ತಿ. ನರಸಿಂಹಾಚಾರ್ ಅಧ್ಯಕ್ಷತೆ ವಹಿಸಿದ್ದರು. ಉಡುಪಿ. ಅನಂತೇಶ್ವರ ... ಶ್ರೀ ಶ್ರೀ ವಿಭುದೇಶತೀರ್ಥ ಶ್ರೀಪಾದಂಗಳು ಸಮ್ಮೇಳನವನ್ನು ಉದ್ಘಾಟಿಸಿದರು.

ಕ್ಷೇತ್ರದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ಸರ್ವ ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ಸುರೇಂದ್ರ ಕುಮಾರರು ಸಂದೇಶಗಳನ್ನು ಓದಿದರು. ಪ್ರಧಾನ ಅತಿಥಿಗಳಿಗೆ ಸನ್ಮಾನ ಪತ್ರವನ್ನು ಓದಿ ಅರ್ಪಿಸಲಾಯ್ತು. ಉದ್ಘಾಟಕ ಶ್ರೀಪಾದಂಗಳವರು ಮಾತಾಡುತ್ತ, ಉಪನಿಷತ್ತು ... ಗಿರುವಂತೆ ಶಬ್ದಾರ್ಥಗಳು ಒಂದಾಗಿರುತ್ತವೆ. ಧರ್ಮಾರ್ಥ ಮರ್ಮಗಳನ್ನು ಬೇರ್ಪಡಿಸದೆ, ಅವನ್ನು ತಿಳಿಯುವ ಶಕ್ತಿಯನ್ನು ಸಾಹಿತ್ಯ ನಮಗೆ ನೀಡುತ್ತದೆ. ಸುಸಂಸ್ಕೃತ ವ್ಯಕ್ತಿಗಳ ಸಂಪರ್ಕದಿಂದ ಸಾಹಿತ್ಯ ಶ್ರೀಮಂತವಾಗುತ್ತದೆ ಎಂದು ಹೇಳಿ ಜ್ಯೋತಿಸ್ವರೂಪದ ಪರಮಾತ್ಮನ ದರ್ಶನಕ್ಕೆ ಧರ್ಮಮಾರ್ಗವೇ ಸಾಧನ, ಧರ್ಮದ ದರ್ಶನವಾಗಲು ಶಬ್ದ ಪುಷ್ಪಕಾರ; ಶಬ್ದವನ್ನು ಅಲಂಕರಿಸಿದಾಗ ಸಾಹಿತ್ಯವಾಗುವುದು ಎಂದರು.

ಅಧ್ಯಕ್ಷರು ಭಾಷಣ ಮಾಡುತ್ತ ... ಕನ್ನಡ ನುಡಿಯಿಂದ ಎಲ್ಲವನ್ನೂ ಸಾಧಿಸಬಹುದು; ಕನ್ನಡವನ್ನು ಕಡೆಗಣಿಸಿ ಬೇರೆ ಭಾಷೆಯ ಮೋಹಕ್ಕೆ ಒಳಗಾಗಬಾರದು. ... ನಾವು ಉದ್ಧಾರವಾಗವು. ನಮ್ಮ ಜನಪದ ಸಾಹಿತ್ಯದ ಸೊಗಸು ... ದಲ್ಲಿ ಅದ್ಭುತವಾಯ ... ದೇಶಗಳ ... ಕನ್ನಡಕ್ಕೆ ಸ್ಥಾನಮಾನ ... ಗಳನ್ನು ನಾವು ಕನ್ನಡದಲ್ಲಿ ... ಸ್ಥಾನ ... ದು ನಾವು ಕನ್ನಡ ... ದವೂ ಬೆಳೆಯುತ್ತ ... ನವವೂ ಹಿಗ್ಗುತ್ತದೆ ಎಂದರು. ... ಸಾಹಿತ್ಯದಲ್ಲಿ ಕನ್ನಡದ ಸ್ಥಾನ ಎಂಬ ವಿಷಯ ... ಪ್ರವರ್ತಿ ಶ್ರೀ ತ.ಸು. ಶ್ಯಾಮರಾವ್, ಟಿ. ವಿ. ವೆಂಕಟಾಚಲ ಶಾಸ್ತ್ರಿ, ಕೆ. ಎಲ್. ... ಪ್ರಿಯ, ಜಿ. ಟಿ. ನಾರಾಯಣರಾವ್, ಸಿ. ಪಿ. ಕೃಷ್ಣಕುಮಾರ್, ಎಂ. ಆರ್. ... ಕೆ. ವೆಂಕಟರಾಮಪ್ಪ, ನಾರಾಯಣ ಶೆಟ್ಟಿ, ಕೆ. ಆರ್. ಲಿಂಗಪ್ಪ ಮತ್ತು ಶ್ರೀಮತಿ ... ಕಡಗದ ಇವರು ತಂತಮ್ಮ ವಿಚಾರಗಳನ್ನು ಮಂಡಿಸಿದರು. ಕೊನೆಗೆ ಶ್ರೀ ಎನ್. ಪ್ರಭಾಕರ್ ಧನ್ಯವಾದವಿತ್ತರು. ●

THE PRESS

for NEAT CLEAR ARTISTIC PRINTING

NAVAYUGA PRESS

UDIPI

Printers for— NAVAYUGA Weekly

We undertake all kinds of Bookwork, job work etc.

Proprietors:

NAVAYUGA ENTERPRISE LTD.

Regd. Office: PALUKOTE, UDIPI, S. K.

ಸುಗಮ ರೈಲು ಪ್ರಯಾಣ

— ಲೇಖಕರು —

ಶ್ರೀ ಎನ್. ಎಸ್. ಸ್ವಾಮಿನಾಥನ್,

ರೈಲ್ವೆ ಮಂಡಳಿಯ ಸದಸ್ಯರು.

ಇತ್ತೀಚೆಗೆ ನಮ್ಮ ದೇಶದಲ್ಲಿ ರೈಲ್ವೆ ಅಪಘಾತಗಳು ಆಗಾಗ್ಗೆ ಸಂಭವಿಸುತ್ತಿರುವುದು ನಿಜಕ್ಕೂ ಕಳವಳಕಾರಿಯಾಗಿದೆ. ಕಳೆದ ಅಕ್ಟೋಬರ್ ತಿಂಗಳಲ್ಲಿ ಒಂದಾದ ಮೇಲೆ ಒಂದರಂತೆ ಮೂರು ಅಪಘಾತಗಳು ಸಂಭವಿಸಿ 25 ಮಂದಿ ಮೃತಪಟ್ಟಿದ್ದಾರೆ. 173 ಮಂದಿ ಗಾಯಗೊಂಡಿದ್ದಾರೆ. ಈ ದುರಂತಗಳ ಬಗ್ಗೆ ದೇಶದ ಜನತೆ ತುಂಬ ವ್ಯಥೆಯನ್ನು ವ್ಯಕ್ತಪಡಿಸಿದ್ದಾರೆ. ಸಾರ್ವಜನಿಕರಷ್ಟೇ ರೈಲ್ವೆ ಇಲಾಖೆಯವರೂ ಸಹಾ ಕಾತರರು. ರೈಲ್ವೆ ಪ್ರಯಾಣಿಕರಿಗೆ ಸುರಕ್ಷಿತ ಪ್ರಯಾಣ ಸೌಲಭ್ಯಗಳನ್ನು ಒದಗಿಸುವುದು ರೈಲ್ವೆ ಇಲಾಖೆಯವರ ಮುಖ್ಯ ಹೊಣೆಗಾರಿಕೆಯಾಗಿದೆ. ರೈಲ್ವೆ ಪ್ರಯಾಣವನ್ನು ಸುರಕ್ಷಿತಗೊಳಿಸಲು ರೈಲ್ವೆ ಇಲಾಖೆಯವರು ಅನೇಕಾನೇಕ ಕ್ರಮಗಳನ್ನು ಕೈಗೊಂಡಿದ್ದಾರೆ. ಇದರಿಂದಾಗಿ ರೈಲ್ವೆ ಪ್ರಯಾಣಿಕರ ಸಂಖ್ಯೆ ಈ ದಿನಗಳಲ್ಲಿ ಏರುತ್ತಿದೆಯಾದರೂ ಅಪಘಾತಗಳು ಕಡಿಮೆಯಾಗುತ್ತಿವೆ. 1951—52ರಲ್ಲಿ ಸಂಭವಿಸುತ್ತಿದ್ದ ರೈಲ್ವೆ ಅಪಘಾತಗಳಲ್ಲಿ 1939 ಮಂದಿ ಸಾವುನೋವುಗಳಿಗೆ ಈಡಾಗುತ್ತಿದ್ದರು. ಈ ಸಂಖ್ಯೆ 1969—70ರಲ್ಲಿ 964ಕ್ಕೆ ಇಳಿದಿದೆ. ಅಂದರೆ 1951—52ರಲ್ಲಿ ಇದ್ದ ಸಂಖ್ಯೆಗಿಂತ 1969—70ರಲ್ಲಿ ಇದು ಶೇಕಡಾ 50.3ಕ್ಕೆ ಇಳಿದಿದೆ. ಈ ಅವಧಿಯಲ್ಲಿ ರೈಲ್ವೆಗಳ ಒಟ್ಟು ಶೇಕಡಾ 68.5 ಕಿಲೋಮೀಟರುಗಳಷ್ಟು ಏರಿದೆ. ರೈಲ್ವೆ ಸುರಕ್ಷಿತ ಪ್ರಯಾಣದ ವಿಷಯದಲ್ಲಿ ಹೇಳುವುದಾದರೆ ಇಡೀ ಜಗತ್ತಿನಲ್ಲಿಯೇ ಐದು ಪ್ರಥಮ ರಾಷ್ಟ್ರಗಳಲ್ಲಿ ಭಾರತ ಒಂದಾಗಿದೆ. ಅಂತಾರಾಷ್ಟ್ರೀಯ ರೈಲ್ವೆ ಸಂಸ್ಥೆಯು ಹೊರಡಿಸಿರುವ ಅಂಕಿ ಅಂಶಗಳತ್ತ ಒಮ್ಮೆ ನೋಡಿದರೆ ಹತ್ತು ಲಕ್ಷ ಕಿಲೋಮೀಟರುಗಳಷ್ಟು ರೈಲ್ವೆ ಓಟದಲ್ಲಿ ರೈಲ್ವೆ ಡಿಕ್ಕಿ ಮತ್ತು ಹಳಿ ತಪ್ಪುವುದು ಭಾರತೀಯ ರೈಲ್ವೆಯಲ್ಲಿ ಕೇವಲ 1.82ರಷ್ಟು ಮಾತ್ರ. ಇತರ ಅನೇಕ ದೇಶಗಳಲ್ಲಿ ಇವುಗಳ ಪ್ರಮಾಣ ಸುಧಾರಿಸಿಲ್ಲ. ದಿನಗಳುರುಳಿದಂತೆ ಭಾರತ ರೈಲ್ವೆಯಲ್ಲಿ ನಿರಂತರ ಸುಧಾರಣೆ ಕಂಡು ಬರುತ್ತಿದೆ. ಈ ವಿಷಯವನ್ನು ಕುರಿತು ಭಾರತದ ನಿವೃತ್ತ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಕೆ. ಎನ್. ವಾಂಚೂ ಅವರ ನೇತೃತ್ವದಲ್ಲಿ ನೇಮಕವಾಗಿರುವ ಎರಡನೇ ರೈಲ್ವೆ ಅಪಘಾತಗಳ ತನಿಖಾ ಕಮಿಟಿಯು ಹೇಳಿದೆ.

ಕಳೆದ ಆರು ವರ್ಷಗಳಲ್ಲಿ ನಮ್ಮ ರೈಲ್ವೆಯಲ್ಲಿ ರೈಲುಗಳು ಡಿಕ್ಕಿ ಹೊಡೆಯುವುದು, ಹಳಿ ತಪ್ಪುವುದು, ಲೆವಲ್ ಕ್ರಾಸಿಂಗ್ ಅಪಘಾತಗಳು ಹಾಗೂ ಬೆಂಕಿ ಅನಾಹುತಗಳು ಇವುಗಳ ಸಂಖ್ಯೆ ಇಳಿಮುಖವಾಗುತ್ತಾ ಬಂದಿದೆ. 1969ರ ಏಪ್ರಿಲ್—ಸೆಪ್ಟೆಂಬರ್‌ನಲ್ಲಿ 529 ಅಪಘಾತಗಳು ಸಂಭವಿಸಿದ್ದವು. ಅವುಗಳ ಸಂಖ್ಯೆ ಏಪ್ರಿಲ್—ಸೆಪ್ಟೆಂಬರ್‌ಗಳಲ್ಲಿ 437ಕ್ಕೆ ಇಳಿದಿದೆ. ಸಾವು-ನೋವುಗಳ ಸಂಖ್ಯೆಯೂ ಅಷ್ಟೇ ಕಳೆದ ವರ್ಷ ರೈಲ್ವೆ ಅಪಘಾತಗಳಲ್ಲಿ 238ರಷ್ಟಿದ್ದು ಅದು ಈ ವರ್ಷ 76ಕ್ಕೆ ಇಳಿದಿದೆ. ಅಪಘಾತಗಳಲ್ಲಿ ಗಾಯಗೊಂಡವರ ಸಂಖ್ಯೆಯೂ ಸಹಾ ಕಡಿಮೆಯಾಗಿವೆ. 1969ರಲ್ಲಿ ಅದರ ಸಂಖ್ಯೆ 606ರಷ್ಟಿದ್ದು ಅದು ಈ ವರ್ಷ 266ಕ್ಕೆ ಇಳಿದಿದೆ. ಅಂದರೆ 1969ರಲ್ಲಿ ಇದ್ದ ಅಪಘಾತಗಳ ಸಂಖ್ಯೆ 1970ರಲ್ಲಿ ಸಾಕಷ್ಟು ಪ್ರಮಾಣದಲ್ಲಿ ಇಳಿದಿದೆ ಅಪಘಾತಗಳಲ್ಲಿನ ಸಾವು ನೋವುಗಳನ್ನು ತಪ್ಪಿಸುವುದು ಅಸಾಧ್ಯವಾದರೂ ಸುಧಾರಣೆ ಕಂಡುಬಂದಿರುವುದು ಹಿತಕರ ಸಂಗತಿ. ರೈಲ್ವೆ ಅಪಘಾತಗಳು ಉಂಟಾಗುತ್ತಿರುವುದರ ಬಗ್ಗೆ ರೈಲ್ವೆ ಇಲಾಖೆ ತುಂಬಾ ಕಳವಳಗೊಂಡಿದೆ. ಆದಷ್ಟು ಈ ಅಪಘಾತಗಳನ್ನು ತಡೆಗಟ್ಟಲು ರೈಲ್ವೆ ಮಂಡಳಿ ಪ್ರಾದೇಶಿಕ ರೈಲ್ವೆ ವಿಭಾಗಗಳಿಗೆ ಸಲಹೆಗಳನ್ನು ನೀಡಿದೆ.

ರೈಲ್ವೆ ಅಪಘಾತಗಳಲ್ಲಿ ಒಂದಾದ ರೈಲ್ವೆ ಡಿಕ್ಕಿಯನ್ನು ತಡೆಯುವ ಸಲುವಾಗಿ ಎಲ್ಲಾ ಡಿಸೆಲ್ ಮತ್ತು ಎಲೆಕ್ಟ್ರಿಕ್ ಲೋಕೋಮೋಟಿವ್‌ಗಳಲ್ಲಿ ಡ್ರೈವರ್‌ನ ಜಾಗೃತ ನಿಯಂತ್ರಣ ದಂಡವನ್ನು ಅಳವಡಿಸಲಾಗುವುದು. ಈ ದಿಶೆಯಲ್ಲಿ ಇನ್ನೊಂದು ಸಲಹೆಯನ್ನು ಮಾಡಲಾಗಿದೆ. ರೈಲು ಪರೀಕ್ಷಾ ಸಿಬ್ಬಂದಿಗಳನ್ನ "ರೈಲು ಸೇಫ್ಟಿ ಸ್ಟಾಫ್" ಮತ್ತು "ರೈಲ್ವೆ ಅಮೆನಿಟಿ ಸ್ಟಾಫ್" ಎಂದು ಎರಡು ಗುಂಪುಗಳಾಗಿ ವಿಂಗಡಿಸುವುದು. ಇದು ಈ ಇನ್ನೊಂದು ಸಲಹೆ. ರೈಲ್ವೆ ಡ್ರೈವರ್ ಮತ್ತಿತರ ಸಿಬ್ಬಂದಿಗೆ ಹೆಚ್ಚಿನ ವಿಶ್ರಾಂತಿ ದೊರಿಯುವಂತಾಗಲು ವಿಶ್ರಾಂತಿಗೃಹಗಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮಕೈಗೊಳ್ಳಲಾಗಿದೆ. ರೈಲ್ವೆಯಲ್ಲಿ ಸುರಕ್ಷಿತ ಪ್ರಯಾಣವನ್ನು ಕಲ್ಪಿಸುವ ಸಲುವಾಗಿ ಕೈಗೊಂಡಿರುವ ಇನ್ನೊಂದು ಮುಖ್ಯವಾದ ಹೆಜ್ಜೆಯೆಂದರೆ ರೈಲ್ವೆ ಕಂಬಿಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸುವುದು, ವರ್ಷಕ್ಕೆ ಸುಮಾರು 200 ರೈಲ್ವೆ ನಿಲ್ದಾಣಗಳ ಕಂಬಿಗಳನ್ನು ಪರೀಕ್ಷಿಸುವ ಕಾರ್ಯವನ್ನು ರೈಲ್ವೆ ಇಲಾಖೆ ಈಗ ರೂಪಿಸಿದೆ. ಈಗ ಈ ಯೋಜನೆ ಇನ್ನೂ ಕಾರ್ಯರೂಪಕ್ಕೆ ತರಲಾಗಿದೆ. ಸ್ವಯಂಚಾಲಿತ ರೈಲ್ವೆ ನಿಯಂತ್ರಣ ಕ್ರಮ ಈ ದಿಶೆಯಲ್ಲಿ ಕೈಗೊಂಡಿರುವ ಇನ್ನೊಂದು ಕ್ರಮವಾಗಿದೆ. ಗ್ರ್ಯಾಂಡ್ ಟ್ರಂಕ್ ರೂಟ್‌ನಲ್ಲಿ ಈ ಯೋಜನೆಯನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ.

ರೈಲು ಪ್ರಯಾಣದ ಸುರಕ್ಷತೆ ಬಗ್ಗೆ ರೈಲ್ವೆ ಚಾಲಕರಲ್ಲಿ ಜಾಗೃತಿಯನ್ನು ಮೂಡಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ರೈಲ್ವೆ ವೇಗದ ಸಹೋಟ, ಸಿಗ್ನಲ್‌ಗಳ ಸೂಚನೆಗಳಂತೆ ರೈಲು ಬಿಡುವುದು ಮುಂತಾದ ವಿಷಯಗಳಲ್ಲಿ ಹೆಚ್ಚು ಗಮನಕೊಡುವಂತೆ ಚಾಲಕರಿಗೆ ತಿಳಿಸಲಾಗುತ್ತಿದೆ.

ಪುತ್ತೂರು IIIrd Addl. ಮುನ್ಸಿಫ್ ಕೋರ್ಟಿನಲ್ಲಿ

R. R. C. No. 2325/1970

ಉಮಾ ಯಾನೆ ಕೃಷ್ಣ ಬ್ಯಾ—ಅರ್ಜಿದಾರಳು.

ರಾಮಣ್ಣ ಗೌಡ — ಬಸ್ತಿಗೆ ದಿ. ಹಾಲಿಂಗ ಗೌಡರ ಮಗ ಪುತ್ತೂರು ತಾಲ್ಲೂಕು ಮುತ್ತೂರು ಗ್ರಾಮದ ಬೆಯಲ್ಲಿರುವವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ — ಎದುರು

ಮೇಲ್ಕಂಡ ವ್ಯವಹಾರದಲ್ಲಿ ಮೈಸೂರು ಲ್ಯಾಂಡ್ ರಿಫೋರ್ಮ್ಸ್ ಆಕ್ಟಿನ ಸೆಕ್ಷನ್ 41 (1) ಮತ್ತು ಮೈಸೂರು ಲ್ಯಾಂಡ್ ರಿಫೋರ್ಮ್ಸ್ ರೂಲ್ಸಿನ ರೂಲ್ 180 ಪ್ರಕಾರ ಗೇಣಿ ವಸೂಲಿ ಬಗ್ಗೆ ಸದ್ರಿ ಅರ್ಜಿದಾರಳು ಅರ್ಜಿ ಕೊಟ್ಟಿರುವುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಣೆ ಇದ್ದ ಪಕ್ಷದಲ್ಲಿ ಮೇಲಿನ ಕೋರ್ಟಿನಲ್ಲಿ ತಾರೀಕು 6—1—1971ರಲ್ಲಿ ನೀವು ಸ್ವತಹಾ ವಕೀಲರ ಮುಖಾಂತರ ಅಗಲೀ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡ ರೀತಿಯಲ್ಲಿ ತೀರ್ಮಾನಿಸಲ್ಪಡುವುದೆಂದು ಈ ಮೂಲಕ ತಿಳಿಸಲಾಗಿಯದೆ.

(By court order)

K. Subramanya Gowda

Advocate for Petr.

Puttur, S. K. Date 24-11-70

ಅಂಚೆ ಇಲಾಖೆಯ ಹಣಕಾಸಿನ ಸ್ಥಿತಿ— ಕೆಲವು ಚಿತ್ರಗಳು

ಲೇಖಕ: ಶ್ರೀ. ಎಲ್. ಕೆ. ನಾರಾಯಣ ಸ್ವಾಮಿ,

ಅಂಚೆ-ತಂತಿ ಮಂಡಳಿಯ ಹಿರಿಯ ಸದಸ್ಯ.

ಭಾರತ ಅಂಚೆ ಮತ್ತು ತಂತಿ ಇಲಾಖೆಯ ವಾರ್ಷಿಕ ಬಜೆಟ್ 250 ಕೋಟಿ ರೂ.ಗಳು. ಇದು ಅನೇಕ ರಾಜ್ಯಸರಕಾರಗಳ ಬಜೆಟ್‌ಗಳಿಗಿಂತ ಹೆಚ್ಚಾಗುತ್ತದೆ. ನಮ್ಮ ದೇಶದಲ್ಲಿ ರೈಲ್ವೆ ಇಲಾಖೆಯನ್ನು ಬಿಟ್ಟರೆ ಅಂಚೆ—ತಂತಿ ಇಲಾಖೆಯೇ ಅತಿ ದೊಡ್ಡದು. ಈ ಇಲಾಖೆಯು ಅಂಚೆ ಕಚೇರಿಗಳಲ್ಲಿಯೇ ಹೆಚ್ಚು ಮಂದಿ ಕಾರ್ಮಿಕರು ಸೇವೆ ಸಲ್ಲಿಸುತ್ತಿದ್ದಾರೆ. ಯಂತ್ರಗಳ ಬಳಕೆ ವಾಸ್ತವವಾಗಿ ಇರಲಿಲ್ಲ. ಎಲ್ಲವೂ ಕೈದುಡಿಮೆಯೇ ಆಗಿದೆ. ಅಂಚೆ ಇಲಾಖೆಯ ಒಟ್ಟು ವೆಚ್ಚದಲ್ಲಿ ಶೇಕಡಾ 80 ಭಾಗದಷ್ಟು ಹಣ ಅಲ್ಲಿನ ಸಿಬ್ಬಂದಿಗೆ ವೆಚ್ಚವಾಗುತ್ತಿದೆ ಎಂದಾಗಿ ವರದಿಗಳು ತಿಳಿಸಿವೆ.

ಅಂಚೆ ಇಲಾಖೆ ಪ್ರಧಾನವಾಗಿ ಸಾರ್ವಜನಿಕರಿಗೆ ಸಂಪರ್ಕ ಸೌಲಭ್ಯಗಳನ್ನು ಕಲ್ಪಿಸುವ ಇಲಾಖೆ. ವಾಣಿಜ್ಯ ಉದ್ದೇಶದಿಂದ ಈ ಇಲಾಖೆ ಕಾರ್ಯನಿರ್ವಹಿಸುತ್ತಿಲ್ಲ. ಕಳೆದ ಹಲವಾರು ವರುಷಗಳಿಂದ ಅಂಚೆ ಇಲಾಖೆ ನಷ್ಟವನ್ನು ಎದುರಿಸುತ್ತಿದೆ. 1965—66ರಲ್ಲಿ ಅಂಚೆ ಇಲಾಖೆಯಲ್ಲಿ 3.28 ಕೋಟಿ ರೂ.ಗಳಷ್ಟು ನಷ್ಟ ಸಂಭವಿಸಿತು. ಇದು 1966-67ರಲ್ಲಿ 8.31 ಕೋಟಿ ರೂ.ಗಳಿಗೆ, 1967-68ರಲ್ಲಿ 14.12 ಕೋಟಿ ರೂ.ಗಳಿಗೆ, 1968-69ರಲ್ಲಿ 6.16 ಕೋಟಿ ರೂ.ಗಳಿಗೆ 1969—70ರಲ್ಲಿ 7.06 ಕೋಟಿ ರೂ.ಗಳಿಗೆ ಏರಿತು. ಪ್ರಚಲಿತ ವರ್ಷದಲ್ಲಿ ಅಂಚೆ ಇಲಾಖೆಯಲ್ಲಿ 2.28 ಕೋಟಿ ರೂ.ಗಳಷ್ಟು ಕೊರತೆ ಬರುವುದೆಂದು ಅಂದಾಜು ಮಾಡಲಾಗಿದೆ.

ಸ್ವಾತಂತ್ರ್ಯಾನಂತರ ದೇಶದಲ್ಲಿ ಅಂಚೆಕಚೇರಿಗಳ ಸಂಖ್ಯೆ ನಿರೀಕ್ಷಿಸಿದುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಏರಿರುವುದು ಇನ್ನೊಂದು ವೈಶಿಷ್ಟ್ಯ. ಅಂಚೆ ಕಚೇರಿಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಅಂಚೆ-ತಂತಿ ಸೌಲಭ್ಯಗಳೂ ಪ್ರಮಾಣದಲ್ಲಿ ವಿಸ್ತರಿಸಿದೆ. 1947ರ ಆಗಸ್ಟ್‌ನಲ್ಲಿ ದೇಶದಲ್ಲಿ 22,116 ಅಂಚೆ ಕಚೇರಿಗಳಿದ್ದುವು. ಅವುಗಳ ಸಂಖ್ಯೆ ಈಗ 1,05433ಕ್ಕೆ ಏರಿದೆ. ಗ್ರಾಮಾಂತರ ಪ್ರದೇಶದಲ್ಲಿ ಅಂಚೆ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಪ್ರತಿ ಎರಡು—ಮೂರು ಮೈಲಿಗಳ ಅಂತರಕ್ಕೆ ಒಂದು ಅಂಚೆ ಕಚೇರಿ ಇರಬೇಕಾಗಿದೆ. ಸದ್ಯದಲ್ಲಿ ನಮ್ಮ ದೇಶದಲ್ಲಿ ಪ್ರತಿ 11 ಚದರ ಮೈಲಿಗಳಿಗೆ ಒಂದರಂತೆ ಅಂಚೆ ಕಚೇರಿಗಳಿವೆ. ಅಂದರೆ ಪ್ರತಿ 4000 ಜನಸಂಖ್ಯೆಗೆ ಒಂದು ಅಂಚೆ ಕಚೇರಿ ಇದೆ. ಬಹುಶಃ ಇಡೀ ಜಗತ್ತಿನಲ್ಲಿ ಇದೊಂದು ಸಂಧಾರಿಸಿದ ಪ್ರಮಾಣವಾಗಿದೆ.

ಸದ್ಯದಲ್ಲಿ ಪತ್ರಗಳಿಂದ (ಕಾರ್ಡುಗಳನ್ನು ಬಿಟ್ಟು) 7 ಕೋಟಿ ರೂ. ಪಾರ್ಸಲ್‌ಗಳಿಂದ 1.5 ಕೋಟಿ ರೂ., ವಿಮಾ ಸೌಲಭ್ಯಗಳಿಂದ 10 ಲಕ್ಷ ರೂ.ಗಳು ಲಾಭ ಬರುತ್ತಿದೆ. ಆದರೆ ಪೋಸ್ಟ್ ಕಾರ್ಡುಗಳಿಂದ 8.6 ಕೋಟಿ ರೂ., ಲೆಟರ್ ಕಾರ್ಡುಗಳಿಂದ 1.6 ಕೋಟಿ, ನ್ಯೂಸ್ ಪೇಪರುಗಳಿಂದ 3.7 ಕೋಟಿ, ರಿಜಿಸ್ಟರ್ಡ್ ಪಾರ್ಸಲುಗಳಿಂದ 1.54 ಕೋಟಿ, ವಿ. ಪಿ. ಪಿ. ಗಳಿಂದಾಗಿ 0.55 ಕೋಟಿ, ಮನಿ ಆರ್ಡರುಗಳಿಂದಾಗಿ 1.53 ಕೋಟಿ ರೂ.ಗಳಷ್ಟು ನಷ್ಟವಾಗುತ್ತಿದೆ.

ಅಂಚೆ ಇಲಾಖೆಯ ನಷ್ಟವನ್ನು ಸರಿಪಡಿಸುವುದಕ್ಕೆ ಸಂಬಂಧಿಸಿದಂತೆ ತಂಗೆ ವಿಚಾರಣಾ ಸಮಿತಿಯವರು ಕೇಂದ್ರ ಶಿಫಾರಸುಗಳನ್ನು ಮಾಡಿದ್ದಾರೆ. ಆಡಳಿತ ಸುಧಾರಣಾ ಆಯೋಗದವರು ಈ ಸಮಿತಿಯ ಶಿಫಾರಸುಗಳನ್ನು ಪರಿಶೀಲಿಸಿದ್ದಾರೆ.

೦೦ ೦೦೦ ೦೦

In the Court of the Munsif of Karkala

O. S. No. 25/1970

Between:-

1) Ignatius Aranha,
2) Sovarina Aranha—Plaintiffs,

and

1) Inas D'Souza,
2) Lawrence D'Souza—Defendants.

To

The 2nd defendant

Lawrence D'Souza, Son of 1st defendant Inas D'Souza, residing at Guddabettu of Kadandale Village of Karkala Taluk.

Please take notice that the plaintiff's have filed the above suit claiming injunction reliefs mentioned in the plaint and the same stands posted to 17-12-1970 and you are at liberty to appear before the said Court at 11 A. M. on the said date and state your defence if any— failing which the suit will be decided in your absence.

M. Veerappa Moily,

Advocate for Plaintiffs.

Karkala, Dated 7-12-1970.

ಉಪಗ್ರಹ ಸಂಪರ್ಕ ಮತ್ತು ಶ್ರೀಸಾಮಾನ್ಯ

ಲೇಖಕರು :
ಬಿ. ವೈ. ನೇರೂರಕರ್,
ಭಾರತ ಸರ್ಕಾರದ ವೈರ್‌ಲೆಸ್ ಸಲಹೆಗಾರರು.

ಸಂಪರ್ಕ ಉಪಗ್ರಹವೆಂದರೆ ವಿದ್ಯುಚ್ಛಕ್ತಿ ಉಪಕರಣಗಳಿಂದ ಸುಸಜ್ಜಿತವಾದ ಆಕಾಶ ನೌಕೆ. ಈ ಉಪಗ್ರಹ ಭೂಮಿಯ ಮೇಲಿನ ಒಂದು ಸ್ಥಳದಿಂದ ಸಂಕೇತಗಳನ್ನು ಸ್ವೀಕರಿಸುತ್ತದೆ. ಬಳಿಕ ಅವುಗಳನ್ನು ಪುನಃ ಭೂಮಿಯ ವ್ಯಾಪಕವಾದ ಪ್ರದೇಶಗಳಿಗೆ ಬಿತ್ತರಿಸುವುದು. ಸಾವಿರಾರು ಕಿಲೋಮೀಟರುಗಳ ಅಂತರದಲ್ಲಿರುವ ಪ್ರದೇಶಗಳಿಗೂ ಅದು ಸಂಕೇತಗಳನ್ನು ತಲುಪಿಸುತ್ತದೆ. ಸಂಕೇತಗಳನ್ನು ಪಡೆಯುವ ಹಾಗೂ ಅವನ್ನು ರವಾನಿಸುವ ವ್ಯವಸ್ಥೆ ಈ ಆಕಾಶನೌಕೆಯಲ್ಲಿರುತ್ತದೆ.

ಈ ಮುಂಚೆಯೂ, ಭೂಮಿಯ ಸುತ್ತಲೂ ಉಪಗ್ರಹಗಳನ್ನು ಹಾರಿಸಲಾಗುತ್ತಿತ್ತು. ಹೀಗೆ ಹಾರಿಸಲಾದ ಉಪಗ್ರಹಗಳು ಭೂಮಿಯ ಸುತ್ತ ವಿವಿಧ ಕಕ್ಷೆಗಳಲ್ಲಿ ಪ್ರದಕ್ಷಿಣೆ ಹಾಕುತ್ತಿದ್ದವು. ಕಾಲಕ್ರಮದಲ್ಲಿ ಈ ಸಂಪರ್ಕ ಉಪಗ್ರಹಗಳು, ಭೂಮಿಯಿಂದ 35,870 ಕಿಲೋಮೀಟರುಗಳಷ್ಟು ಎತ್ತರದಲ್ಲಿ ಅಥವಾ ಭೂಮಧ್ಯ ರೇಖೆಯಿಂದ 22,300 ಮೈಲುಗಳ ಎತ್ತರದಲ್ಲಿ ಹಾರುತ್ತಿದ್ದರೆ ಹೆಚ್ಚು ಪ್ರಯೋಜನಕಾರಿಯಾಗುವುವೆಂಬುದು ತಿಳಿದು ಬಂದಿತು. ಈ ಒಂದು ಎತ್ತರದಲ್ಲಿ, ಪ್ರದಕ್ಷಿಣೆ ಹಾಕುವ ಸಂಪರ್ಕ ಉಪಗ್ರಹದ ಚಲನೆ ಹಾಗೂ ಭೂಮಿಯು ತನ್ನ ಅಕ್ಷದ ಮೇಲೆ ಪರಿಭ್ರಮಣ ಮಾಡುವುದಕ್ಕೂ ಹೊಂದಾಣಿಕೆ ಸಾಧ್ಯವಾಗುತ್ತದೆ.

ಭೂಮಿಯ ಮೇಲ್ಭಾಗದಲ್ಲಿನ ಯಾವುದೇ ಒಂದು ಭಾಗವನ್ನು ಉದಾಹರಣೆಗೆ ತೆಗೆದುಕೊಳ್ಳೋಣ. ನಮ್ಮಲ್ಲೇ ಆ ಸಂಪರ್ಕ ಉಪಗ್ರಹದಿಂದ ಟೆಲಿವಿಷನ್ ಸಂಕೇತಗಳನ್ನು ಪಡೆಯುವ ಕಾರ್ಯಕ್ರಮ 1974ರಲ್ಲಿ ಪೂರ್ಣಗೊಳ್ಳುವುದು.

ಟೆಲಿವಿಷನ್ ಪ್ರಸಾರ

ದೇಶ—ವಿದೇಶಗಳೂ ಭಾರತದ ಈ ಪ್ರಯೋಗದ ಬಗ್ಗೆ ವಿಶೇಷ ಆಸಕ್ತಿಯನ್ನು ತಳೆದಿವೆ. ಈ ಸಂಪರ್ಕ ಉಪಗ್ರಹದಿಂದ ನಮ್ಮ ದೇಶದ ಎಲ್ಲಾ ಕಡೆಗಳಲ್ಲಿ, ಸಂಕೇತ ಗ್ರಹಣಯಂತ್ರಗಳು ಉಪಗ್ರಹದಿಂದ ಸಂಕೇತಗಳನ್ನು ಪಡೆಯುವುವು. ಸಂಕೇತಗಳನ್ನು ಗ್ರಹಿಸುವ ಉಪಕರಣಗಳಿಗೇನೂ ಹೆಚ್ಚು ವೆಚ್ಚ ತಗಲುವುದಿಲ್ಲ. ನಮ್ಮ ಗ್ರಾಮಗಳ ಸಮುದಾಯ ಕೇಂದ್ರಗಳಲ್ಲೂ ಈ ಯಂತ್ರಗಳನ್ನು ಉಪಯೋಗಿಸಬಹುದಾಗಿದೆ.

ಉಪಗ್ರಹ ಸಂಪರ್ಕ ಟೆಲಿವಿಷನ್‌ಗೆ ಮಾತ್ರ ಸೀಮಿತ ಎಂದು ಭಾವಿಸಬಾರದು. ಸಂಪರ್ಕ ಉಪಗ್ರಹವನ್ನು ಅನೇಕ ಕಾರ್ಯಗಳಿಗೆ ಬಳಸಬಹುದಾಗಿದೆ. ಟೆಲಿಫೋನ್ ಟೆಲಿಗ್ರಾಫ್, ಸಂಪರ್ಕ ಹಡಗುಗಳು ಮತ್ತು ವಿಮಾನಗಳಿಗೆ ಅಗತ್ಯವಾದ ಹವಾಮಾನ ಮಾಹಿತಿ ರವಾನೆ ಇತ್ಯಾದಿ ಸಂಪರ್ಕ ಉದ್ದೇಶಗಳಿಗಾಗಿ ಇದು ಅತ್ಯುಪಯುಕ್ತವಾಗಿದೆ.

ಉಪಗ್ರಹದ ಮೂಲಕ ಸಂಪರ್ಕವನ್ನು ಸ್ಥಾಪಿಸಲು ರೇಡಿಯೋ ಫ್ರೀಕ್ವೆನ್ಸಿ ಸ್ಪೆಕ್ಟ್ರಮ್ ಬಳಕೆ ಅನಿವಾರ್ಯವಾಗಿದೆ. ಕಾರಣ ಈ ದಿಸೆಯಲ್ಲಿ ಅಂತಾರಾಷ್ಟ್ರೀಯ ಸಹಕಾರ ಪಡೆಯಬೇಕಾಗುತ್ತದೆ. ಹೀಗೆ ಕಾರ್ಯ ನಿರ್ವಹಿಸುವಾಗ ಕೆಲವೊಂದು ವಿಶಿಷ್ಟ ಸಮಸ್ಯೆಗಳು ಎದುರಾಗುತ್ತವೆ. ರೇಡಿಯೋ ತರಂಗಗಳ ಸಮಸ್ಯೆ ಇಂತಹ ಅನೇಕ ಸಮಸ್ಯೆಗಳಲ್ಲಿ ಒಂದು. ಬಾಹ್ಯಾಕಾಶದಲ್ಲಿ ಪ್ರದಕ್ಷಿಣೆ ಹಾಕುವ ಉಪಗ್ರಹವನ್ನು ಯಾವ ಸ್ಥಳದಲ್ಲಿ ನಿಲ್ಲಿಸಬೇಕೆಂಬುದೇ ಒಂದು ಸಮಸ್ಯೆ. ಈ ಸಮಸ್ಯೆ ನಮ್ಮ ನಗರಗಳಲ್ಲಿನ ನಿಲ್ದಾಣಗಳ ಸಮಸ್ಯೆಯನ್ನೇ ಹೋಲುತ್ತದೆ.

ಸಂಪರ್ಕ ಉಪಗ್ರಹ ಅನೇಕ ಆಸಕ್ತಿಯುತ ಅಂಶಗಳಿಂದ ಕೂಡಿದೆ. ಈ ಉಪಗ್ರಹದಲ್ಲಿನ ಟ್ರಾನ್ಸ್‌ಮಿಟರ್ ಮತ್ತು ರಿಸೀವರುಗಳ ಕಾರ್ಯ ನಿರ್ವಹಣೆಗೆ ಬೇಕಾಗುವ ವಿದ್ಯುಚ್ಛಕ್ತಿಯನ್ನು ಸೌರ ಶಕ್ತಿಯಂತ್ರಗಳಿಂದ ಅಥವಾ ಸ್ಟೋರೇಜ್ ಬ್ಯಾಟರಿಗಳಿಂದ ಪಡೆಯುತ್ತಾರೆ. ಸೌರಶಕ್ತಿಯಂತ್ರಗಳ ಶಕ್ತಿಯನ್ನು ವಿದ್ಯುಚ್ಛಕ್ತಿಯಾಗಿ ಪರಿವರ್ತಿಸುತ್ತವೆ. ಇನ್ನೊಂದು ಆಸಕ್ತಿಯ ಅಂಶವೆಂದರೆ ಸಂಪರ್ಕ ಉಪಗ್ರಹದಿಂದ ರವಾನೆಯಾಗುವ ಸಂದೇಶಗಳು ವಿನೋದ್ ಸ್ಟೋರ್ ದೋಷಗಳಿಂದ ಮುಕ್ತವಾಗಿರುತ್ತವೆ.

ಸುಶಿಕ್ಷಿತ ಮನುಷ್ಯ

ಸುಶಿಕ್ಷಿತ ಮನುಷ್ಯನು ತೆರೆದ ಮನಸ್ಸನ್ನು ಬೆಳೆಸಿಕೊಂಡು ಬಂದಿರುತ್ತಾನೆ.

ಅವನೆಂದೂ ಹೊಸ ವಿಚಾರಗಳನ್ನು ಕೇಳಿ ನಗುವುದಿಲ್ಲ.

ಇನ್ನೊಬ್ಬರೊಂದಿಗೆ ಹೇಗೆ ಕೂಡಿ ಹೋಗ ಬೇಕೆಂಬುದನ್ನು ಅವನು ಬಲ್ಲನು.

ಯಶಸ್ಸು ಸಂಪಾದಿಸುವ ಗುಣಧರ್ಮವನ್ನು ಅವನು ಪೋಷಣೆ ಮಾಡಿಕೊಂಡು ಬಂದಿರುತ್ತಾನೆ.

ಅವನು ಯಾವ ರೀತಿ ವಿಚಾರ ಮಾಡುತ್ತಾನೆಯೋ ಅದೇ ರೀತಿ ಇರುತ್ತಾನೆ.

ಜನಪ್ರಿಯ ಭಾವನೆಗಳು ಬಹುಶೀಘ್ರ ತಪ್ಪಿರುತ್ತವೆ ಎಂಬುದನ್ನು ಅವನ ತಿಳಿದಿರುತ್ತಾನೆ.

ತಿಳಿದ ಮನುಷ್ಯನು ಹೇಳುವುದಕ್ಕೆ ಅವನು ಯಾವಾಗಲೂ ಕಿವಿಗೊಡುತ್ತಾನೆ.

ದೊಡ್ಡ ಗುರಿಯೊಂದಿಗೆ ಅವನು ತನ್ನ ಸಂಬಂಧ ಹಚ್ಚಿಕೊಂಡಿರುತ್ತಾನೆ.

ತನ್ನ ಯೋಗ್ಯತೆಗೆ ಸರಿಹೋಲುವಂಥ ಆಕಾಂಕ್ಷೆಯನ್ನು ಅವನು ಇಟ್ಟುಕೊಂಡಿರುತ್ತಾನೆ.

ಅವನು ತನ್ನ ಮಟ್ಟದಲ್ಲಿ ಯಾವಾಗಲೂ ಕಾರ್ಯಪ್ರವೃತ್ತನಾಗಿರುತ್ತಾನೆ.

ಕಲಿಯುವುದಕ್ಕೆ ಎಂದೂ ತಡವಲ್ಲ ಎಂದು ಅವನು ಭಾವಿಸಿಕೊಂಡಿರುತ್ತಾನೆ.

ತನ್ನ ಬಗೆಗೆ ಅವನು ಎಂದಿಗೂ ಶ್ರದ್ಧೆಯನ್ನು ಕಳೆದುಕೊಳ್ಳುವುದಿಲ್ಲ.

ತಾನು ಪ್ರಪಂಚದ ನಾಗರಿಕನಾಗುವುದಕ್ಕೆ ಬೇಕಾದ ಅರ್ಹತೆಯನ್ನು ಅವನು ಸಂಪಾದಿಸಿಕೊಳ್ಳುತ್ತಾನೆ.

ಎಲ್ಲಕ್ಕಿಂತ ಮೇಲಾಗಿ ಪರಿಪೋಷಕ ಧಾರ್ಮಿಕ ಜೀವನವನ್ನು ನಡೆಸುತ್ತಾನೆ.

—ಆಲ್ಬರ್ಟ್ ಎಡ್ವರ್ಡ್ ವಿಗ್ಯಾಮ್

ಪುಸ್ತಕ ಪರಿಚಯ

ಸಂಸ್ಕೃತ:

ಲೇಖಕ—ಪ್ರಕಾಶಕ: ಡಾ| ಪಿ. ಕೆ. ಪಿ. ಕಮತ್, ಮಂಗಳೂರು-6

ಪುಟಗಳು: ೧೬೩ ಬೆಲೆ: ರೂ. ೧.೨೫

ದೇವ ಭಾಷೆ, ಸಂಸ್ಕೃತದ ಹಿರಿಮೆ, ಅದಕ್ಕೂ ಉಳಿದ ಭಾಷೆಗಳಿಗೂ ಇರುವ ನಿಕಟ ಸಂಬಂಧವನ್ನು ಸಾಕಷ್ಟು ಆಧಾರ—ಅಭಿಪ್ರಾಯಗಳೊಡನೆ ವಿವರವಾಗಿ ವಿವರಿಸುವ ಪುಸ್ತಕವಿದು. ಲೇಖಕರು ಸಂಸ್ಕೃತದ ಮಹತ್ವವನ್ನು ತಿಳಿಸಲು ದೇಶೀಯ-ವಿದೇಶೀಯರ ಬರವಣಿಗೆಗಳ ಉದ್ಧರಣೆಯನ್ನೂ ಕೊಟ್ಟಿದ್ದಾರೆ.

ಭಾರತೀಯ ಸಂಸ್ಕೃತಿಯ ಮೂಲ ಭಂಡಾರ ಸಂಸ್ಕೃತ ಭಾಷೆಯನ್ನು ಕಡೆಗಣಿಸಿದ ದಿನವೇ ನಾವು ನಮ್ಮ ಸಂಸ್ಕೃತಿಯ ಸಮಾಧಿಯನ್ನು ಕಟ್ಟತೊಡಗಿದ್ದೇವೆ. ಎಳೆಯ ವಿದ್ಯಾರ್ಥಿಗಳಿಂದ ತೊಡಗಿ ಹಿರಿಯ ನಾಯಕರ ವರೆಗೂ ಕಂಡುಬರುವ ಅಶಾಂತಿ, ಅತೃಪ್ತಿ, ಅಸಂತೋಷಗಳಿಗೂ ಅವುಗಳ ಭೀಕರ ಸಮಾಜಘಾತುಕ ಪರಿಣಾಮಗಳಿಗೂ ನಮ್ಮ ಸಂಸ್ಕೃತಿಯ-ಸಂಸ್ಕೃತದ ಪರಿಚಯದಿಂದ ನಾವೆಲ್ಲರೂ ವಂಚಿತರಾದುದೇ ಕಾರಣ.

"ಸಂಸ್ಕೃತ" ಪುಸ್ತಕವು ಸಂಸ್ಕೃತಾಭ್ಯಾಸ ಮಾಡಲು ಕೆಲವರಿಗಾದರೂ ಪ್ರೇರಕ ಶಕ್ತಿಯಾದೀತು. ಈ ದೃಷ್ಟಿಯಿಂದಲೇ ಕೇಂದ್ರ ಸರಕಾರವು ಇದರ ಸಂವರ್ಧಿತ ಮೂರನೆಯ ಆವೃತ್ತಿ ಪ್ರಕಾಶನಕ್ಕೆ ಆರ್ಥಿಕ ನೆರವು ನೀಡಿದೆಯೆನ್ನಬಹುದು.

ಅರ್ಪಣೆ:

ಪ್ರಕಾಶಕರು: ಸತ್ಕಾರ ಸಮಿತಿ, ವಿದ್ಯಾದಾಯಿನಿ ಹಯರ್ ಸೆಕೆಂಡರಿ ಶಾಲೆ, ಸುರತ್ಕಲ್ ದ. ಕ.

ಸುರತ್ಕಲ್ಲಿನ ವಿದ್ಯಾದಾಯಿನೀ ಹಯರ್ ಸೆಕೆಂಡರಿ ಶಾಲೆಯಲ್ಲಿ ಹಲವು ವರ್ಷ ಮುಖ್ಯೋಪಾಧ್ಯಾಯರಾಗಿದ್ದು ನಿವೃತ್ತಿಗೆ ಮೊದಲೇ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಕೇಂದ್ರ ಸರಕಾರದಿಂದ ಗಳಿಸಿದ ಶ್ರೀ ಎಂ. ವಾಸುದೇವ ರಾಯರಿಗೆ ಅರ್ಪಿಸಿದ ಸಂಪಾದಿತ ಗ್ರಂಥವಿದು. ಶಿಕ್ಷಣ ಕ್ಷೇತ್ರದಲ್ಲಿ ಶ್ರೀ ವಾಸುದೇವರಾಯರೊಂದು ಬೆಳಗುವ ಸೊಡರು. ಇವರ ಜೀವನ-ವ್ಯಕ್ತಿತ್ವ, ಅಭಿನಂದನೆಗಳೊಂದಿಗೆ ಅನೇಕ ಸಾಹಿತ್ಯಕ ವಿಚಾರ ಪ್ರಚೋದಕ ಲೇಖನಗಳೂ ಸೇರಿ ಈ ಗ್ರಂಥವು ಸಂಗ್ರಾಹ್ಯವಾಗಿದೆ; ಅದರ ಘನತೆ ಹೆಚ್ಚಿದಂತಾಗಿದೆ. ಇದೆ, ಶ್ರೀ ರಾಯರೇ ʻಶಿಕ್ಷಕʼ ಕಾವ್ಯನಾಮದಲ್ಲಿ ಬರೆದಿದ್ದ ಹಲವು ಕವನಗಳೂ ಇದರಲ್ಲಿ ಪುನರ್ಮುದ್ರಣಗೊಂಡಿವೆ. ಸಂಪಾದಕ ವರ್ಗದ ಶ್ರಮ ಸ್ತುತ್ಯ; ಸಾಧನೆ ಪ್ರಶಂಸನೀಯ.

—ಗೋವಿಂದ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೋತ್ಸಾಹದಾರರಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಸಾಂಪ್ರದಾಯಿಕ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಪುಸ್ತಕ

ಬೆಲೆ 0-75 ಪೈಸೆ ಮಾತ್ರ.

ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ.
ಕಾಲುಕೋಟೆ, ಉಡುಪಿ, ದ. ಕ.

ಸಂಗ್ರಾಹ್ಯ ಸಂಕಲನಗಳು

ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಹೆಂಗುಸರ ಕತೆಗಳು	2—00
ಮುಡಿಮುತ್ತುಗಳು	1—50
ಪಂಚಗಜ್ಜಾಯ	2—00
ಮುತ್ತಿನ ಮಾಲೆ	1—30
ಹೂ ಗೊಂಚಲು	1—70
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00

ನವಭಾರತ ಪುಸ್ತಕ ಭಂಡಾರ,
ಉಡುಪಿ.

NAVAYUGA 10—12—1970

Registered with the Registrar of News Papers for India under No. R. N. 3546/'57

REGD. No. B. G. 178
LICENCE No. 33,
Licensed to Post without Prepayment

ಧರ್ಮಸ್ಥಳದಲ್ಲಿ ಸರ್ವ ಧರ್ಮ ಸಮ್ಮೇಳನ

ತಾ. 27-11-70 ರಂದು ಧರ್ಮಸ್ಥಳದಲ್ಲಿ ಜರಗಿದ 38ನೇ ಸರ್ವಧರ್ಮ ಸಮ್ಮೇಳನವನ್ನು ಮೈಸೂರು ವಿಧಾನ ಸಭಾಪತಿ ಶ್ರೀ ಎಸ್. ಡಿ. ಕೊಟ್ಟವಾಳೆ ಅವರು ಉದ್ಘಾಟಿಸುತ್ತಾ ಧರ್ಮದಲ್ಲಿ ಬದಲಾವಣೆ ಏನನ್ನಾದರೂ ಮಾಡುವುದು ಅಗತ್ಯವೇ ಎಂಬುದನ್ನು ನಾವು ಮುಂದಾಗಿ ಯೋಚಿಸಬೇಕು. ಇಂದಿನ ತರುಣ ಜನಾಂಗದಲ್ಲಿ ಮೂಡಿರುವ ಅಶಾಂತಿಗೆ ದಾರಿದ್ರ್ಯವೇ ಕಾರಣ. ವಿದೇಶಗಳಲ್ಲಿ ಶ್ರೀಮಂತಿಕೆಯಿಂದಲೇ ಈ ತರದ ಅಶಾಂತಿ ತಲೆದೋರುತ್ತದೆ. ಇಂದಿನ ಜಾಗತಿಕ ಜೀವನದಲ್ಲಿ ಮಾನವ ಬಹು ಬೇಸರಗೊಂಡಿದ್ದಾನೆ. ಅವನಲ್ಲಿ ದೇಹವಷ್ಟೇ ಅಲ್ಲದೆ ಆತ್ಮವೂ ಇರುತ್ತದೆ. ಈ ಆತ್ಮವನ್ನು ಶ್ರದ್ಧೆ, ಭಕ್ತಿಗಳಿಂದ ಅಭಿವೃದ್ಧಿಗೊಳಿಸಿಕೊಂಡರೇನೇ ಅವನಿಗೆ ಮೋಕ್ಷ ಲಭ್ಯವಾಗುತ್ತದೆ. ಧರ್ಮದಲ್ಲಿ ಮುಖ್ಯವಾಗಿರುವುದೆಂದರೆ ನೀತಿ, ಧರ್ಮ, ಪೂಜೆ, ಸಂಸ್ಕಾರ, ತತ್ವಜ್ಞಾನಗಳು. ಪೂಜೆ ಸಂಸ್ಕಾರ ಕೆಲವುಗಳಲ್ಲಿ ವಿಭಿನ್ನತೆ ಇರುವುದನ್ನು ಕಾಲಕ್ರಮೇಣ ಪರಿವರ್ತಿಸಿಕೊಳ್ಳಬಹುದು. ಆದುದರಿಂದ ಧರ್ಮದಲ್ಲಿ ಯಾವುದೇ ತರದ ಬದಲಾವಣೆ ಅನಗತ್ಯ. ಧರ್ಮಗಳೆಲ್ಲ ಒಂದೇ ಆಗಿದ್ದು ದೇಶ ಕಾಲಕ್ಕೆ ಅನುಗುಣವಾಗಿ ಸಾಮಾಜಿಕ ರೀತಿ ನೀತಿ ಮಾತ್ರ ಭಿನ್ನಭಿನ್ನವಾಗಬಹುದು. ಪರಂತು ಒಂದೇ ವಿಶ್ವನೀತಿ ಅನುಸರಿಸಬೇಕು. ನಾವೆಲ್ಲರೂ ಒಬ್ಬನೇ ದೇವರಿಂದ ಬಂದವರೆಂಬ ವಿಶ್ವಪ್ರೇಮವನ್ನು ಬೆಳೆಸಿಕೊಂಡು ಐಕ್ಯತೆಯಿಂದ ನಡೆದು ಧರ್ಮದ ನೀತಿಯನ್ನು ಅನುಸರಿಸಿದರೆ ಸರ್ವವೂ ಸಫಲವಾಗುವುದೆಂದು ಮಾರ್ಮಿಕವಾಗಿ ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ಬೆಂಗಳೂರಿನ ರಾಮಕೃಷ್ಣಾಶ್ರಮದ ಅಧ್ಯಕ್ಷರಾದ ಸ್ವಾಮಿ ಆದಿದೇವಾನಂದಜಿ ಅವರು ವಹಿಸಿದ್ದರು.

ಆರಂಭದಲ್ಲಿ ಪ್ರಾರ್ಥನೆಯಾಗಿ ಪರಮಹಂಸ ಭಾಸ್ಕರಶೇಷಾಚಾರ್ಯ ಅವರಿಂದ ಆದಿವಚನವಾಯಿತು.

ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ಸ್ವಾಗತ ಭಾಷಣ ಮಾಡುತ್ತಾ ಕಾಲಧರ್ಮವು ಮಿಂಚಿನ ವೇಗದಲ್ಲಿ ಬದಲಾಗುತ್ತಿದೆಯಾದರೂ ಎಲ್ಲಾ ಧರ್ಮಗಳು ಮಾನವನ ಕಲ್ಯಾಣಕ್ಕಾಗಿಯೇ ಇವೆ. ನಮ್ಮ ದೇವರು ಹೊರಗಡೆ ಇರಲಿ, ಅವನನ್ನು ಮನೆಯಲ್ಲಿ ಪೂಜಿಸೋಣ. ಆದರೆ ಮನೆಯ ಹೊರಗೆ ನಾವೆಲ್ಲರೂ ಒಡಹುಟ್ಟಿದವರೆಂದು ಭಾವಿಸಿ ಧಾರ್ಮಿಕ ಸಿಂಧುತ್ವವನ್ನು ಬೆಳೆಸೋಣ ಎಂದು ಹೇಳಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ತತ್ವಗಳು ಬದಲಾಗುವುದಿಲ್ಲವೆಂದೂ ನಾವು ಯೋಗ್ಯ ಮಾರ್ಗದಲ್ಲಿ ನಡೆದರೆ ಸುಖ ಶಾಂತಿ ದೊರಕುವುದೆಂದೂ ವಿಶಾಲ ಮನಸ್ಸಿನಿಂದ ವಿಶ್ವಬಾಂಧವ್ಯವನ್ನು ರೂಢಿಸಿಕೊಳ್ಳಬೇಕೆಂದೂ ಕರೆಯಿತ್ತರು.

ಶ್ರೀ ಸುರೇಂದ್ರ ಶೆಣೈಯವರು ಗಣ್ಯ ವ್ಯಕ್ತಿಗಳಿಂದ ಬಂದ ಸಂದೇಶಗಳನ್ನು ಓದಿದರು. ಶ್ರೀಗಳಾದ ಶಿವಮೂರ್ತಿ ಶಾಸ್ತ್ರಿ, ಕೆ. ಎಂ. ಕೃಷ್ಣರಾವ್, ಡಿ. ಎ. ಸುಬ್ಬರಾವ್, ಎಚ್. ಉದ್ದೀನ್, ಫಿರೋಜ್, ಲೋಕನಾಥ ಶಾಸ್ತ್ರಿ, ಡಾ| ಟಿ. ಜಿ. ಕಲಘಟಗಿ, ಫಾ| ಇಗ್ನೇಷಿಯಸ್ ಪಿಂಟೋ ಮೊದಲಾದವರು ಬೇರೆ ಬೇರೆ ತತ್ವ ಧರ್ಮಗಳ ಕುರಿತು ಭಾಷಣಗೈದರು. ಇದೇ ಸಮಾರಂಭದಲ್ಲಿ ದಿ| ರತ್ನವರ್ಮ ಹೆಗ್ಗಡೆಯವರ ಜೀವನ ಚರಿತ್ರೆಯ ಪುಸ್ತಕವನ್ನು ಶ್ರೀ ಕೋಟ ಶಿವರಾಮರು ಬಿಡುಗಡೆಗೊಳಿಸಿದರು. ಕೊನೆಯಲ್ಲಿ ಪ್ರಿನ್ಸಿಪಾಲ್ ಎಸ್. ಪ್ರಭಾಕರರವರು ಧನ್ಯವಾದವನ್ನರ್ಪಿಸಿದರು.

ಅತಿ ಪರಿಚಯದಿಂದಲೂ ಅನಾದರವಾಗುತ್ತದೆ ಅದರಂತೆ ಅಪರಿಚಯದಿಂದ ಅನಾದರವಾಗುವ ಸಂಭವವಿರುತ್ತದೆ.

○ ○ ○

ದಯಮಾಡಿ

ನಿಮ್ಮ ಬಾಕಿ ಚಂದಾ

ಹಣವನ್ನು ಕಳುಹಿಸಿರಿ

ಅಭಿಪ್ರಾಯ:

ಈ ಕೃತ್ಯವನ್ನು ಮೆಚ್ಚಲೇಬೇಕು

ವಿಶ್ವಸಂಸ್ಥೆಯ ರಜತ ಮಹೋತ್ಸವಕ್ಕೆ ಬಂದು ಭಾಗವಹಿಸಿದ ಪರರಾಷ್ಟ್ರ ಧುರೀಣರಿಗೆ ಅಮೆರಿಕದ ಅಧ್ಯಕ್ಷ ನಿಕ್ಸನ್ನರು ಭೋಜನ ಕೂಟವನ್ನು ಏರ್ಪಡಿಸಿ ಸಕಲ ಭಾಗಿ ರಾಷ್ಟ್ರವನ್ನು ಆಹ್ವಾನಿಸಿ ಎಲ್ಲ ರಾಷ್ಟ್ರಗಳೂ ಆಹ್ವಾನವನ್ನು ಸ್ವೀಕರಿಸಿ ಭೋಜನಕೂಟಕ್ಕೆ ಹೋಗಿರುವಾಗ ನಮ್ಮ ರಾಷ್ಟ್ರ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಆಹ್ವಾನವನ್ನು ನಿರಾಕರಿಸಿ ಭೋಜನಕೂಟಕ್ಕೆ ಹೋಗದೆ ಇದ್ದದ್ದು ಸರಿಯೋ ತಪ್ಪೋ ಎಂಬ ರಾಷ್ಟ್ರದಾದ್ಯಂತವಾದ ವಿವಾದವೆದ್ದಿದೆ.

ಸ್ಥೂಲ ದೃಷ್ಟಿಯಿಂದ ವಿವೇಚಿಸಿದಾಗ ಪ್ರಧಾನಿ ಇಂದಿರಾರವರ ಈ ನಿಲುವು ತಪ್ಪೆಂದು ತೋರಿದರೂ ಮಥಿಸಿ ನೋಡಿದರೆ ಪ್ರಧಾನಿಯ ನಿಲುವು ಸಮರ್ಥನೀಯವಾಗಿದೆ.

ಏಕೆಂದರೆ ವಿಶ್ವರಂಗದಾಟದಲ್ಲಿ ಅಮೆರಿಕದ ಅಧ್ಯಕ್ಷ ನಿಕ್ಸನ್ನರು ಸಂಭಾವಿತತನ ತೋರಿಸಲು ಭಾರತ ಪ್ರಧಾನಿಯನ್ನು ಭೋಜನ ಕೂಟಕ್ಕೆ ಆಹ್ವಾನಿಸಿದರೇ ಅಂತರಂಗಿಕವಾಗಿ ಇದು ನಿಕ್ಸನ್ನರ ಆದರದ ಆಹ್ವಾನವಲ್ಲ. ಒಂದು ದೃಷ್ಟಿಯಿಂದ ದುರಹಂಕಾರದ ಆಹ್ವಾನವೆಂದರೂ ತಪ್ಪಾಗಲಿಕ್ಕಿಲ್ಲ. ಹೀಗೆ ಹೇಳಲು ಕಾರಣವೇನೆಂದರೆ ಅಮೆರಿಕವು ಇತ್ತೀಚೆಗೆ ದುರಹಂಕಾರದಿಂದ ನಮ್ಮನ್ನು ಅವರ ಯಾಚಕ ರಾಷ್ಟ್ರವೆಂದು ತಿಳಿದು ತಿರಸ್ಕಾರದಿಂದ ನೋಡಹೊಂಟಿರುವಂತೆ ಆಗಿದೆ. ಹೀಗಿರುವಾಗ ನಾವು ಇದನ್ನು ಸಹಿಸಿಕೊಂಡು ಅವರ ಭೋಜನ ಕೂಟಕ್ಕೆ ಹೋಗುವುದೆ?

ಅಮೆರಿಕದ ದುರಹಂಕಾರಕ್ಕೆ ಈ ಊಟದ ಆಹ್ವಾನ ಮುಂದಿನ ವಿಷಯಗಳನ್ನು ಎತ್ತಿಕೊಳ್ಳುವ. ಪ್ರಧಾನಿ ಇಂದಿರಾಗಾಂಧಿಯವರು ನಿಕ್ಸನ್ನರು ಅಮೆರಿಕಕ್ಕೆ ಹೊರಡುವ ಮುನ್ನ ಅವರನ್ನು ಬೀಳ್ಕೊಡಲು ವಿಮಾನ ನಿಲ್ದಾಣಕ್ಕೆ ಏಕೈಕಳಿದ ರಾಯಭಾರಿಗಳು ಬಂದಿದ್ದರು. ಅಮೆರಿಕದ ರಾಯಭಾರಿ ಕೆನೆತ್ ಬಿ. ಕೀಟಿಂಗ್‌ರವರು ಇರಲಿಲ್ಲ ಅಷ್ಟು ಮಾತ್ರದಿಂದ ಭಾರತದ ಪ್ರಧಾನಿ ತಮ್ಮ ದೇಶಕ್ಕೆ ಹೋಗುತ್ತಿದ್ದರೂ ವಿಮಾನ ನಿಲ್ದಾಣಕ್ಕೆ ಬರದೆ ನಿರ್ಲಕ್ಷ್ಯ ಮಾಡಿದರು ಆ ದೇಶದ ರಾಯಭಾರಿಗಳು, ಇಷ್ಟು ತಾತ್ಸಾರವನ್ನು ಅಮೆರಿಕಕ್ಕೆ ನಮ್ಮ ಪ್ರಧಾನಿಗಳು ಕೇಳಬಾರದೇ? ಎಂದು ನಮಗೆ ಮನನೋಯುವುದು. ಇವೆಲ್ಲಗಳ ಭಿನ್ನಾಭಿಪ್ರಾಯವೇಕೆ ಇದ್ದರೂ ದೇಶದ ಘನತೆಗೆ ಹಿತವಾದ ಪ್ರಧಾನಿಗಳನ್ನು ತಾತ್ಸಾರಿಸಿದ್ದು ನಮಗೆ ಸಹಿಸಲು ಸಾಧ್ಯವಿಲ್ಲ. ಆ ವಿಷಯದಲ್ಲಿ, ಸೇವಕನ ದೃಷ್ಟಿಯಿಂದ ಇಂತಹ ಯಾತನೆ ಇಟ್ಟುಕೊಳ್ಳುವ; ಆದರೆ ಇದರ ಪರಿಮಾರ್ಜನೆ ಮಾಡಲಾದರೂ ನಿಕ್ಸನ್ನರು ನಮ್ಮ ದೇಶದ ಪ್ರಧಾನಿಯನ್ನು ಸ್ವಾಗತಿಸಲು ಹಿರಿಯ ಅಧಿಕಾರಿಗಳನ್ನು ಕಳಿಸಬಹುದಿತ್ತಲ್ಲ. ಈ ಕಿಂಚಿತ್ ಸೌಜನ್ಯದಿಂದ ಸ್ವಾಗತಿಸಲು ಅಮೆರಿಕಕ್ಕೆ ದುರಹಂಕಾರ ಬಿಡಲಿಲ್ಲವೆಂದ ಮೇಲೆ ಇನ್ನೇನುಳಿಯಿತು? ಹೀಗಿರುವಾಗ ನಾವು ಅವರ ಬಾಯುಪಚಾರಕ್ಕೆ ಮರುಳಾಗಿ ನಮ್ಮ ಆತ್ಮಗೌರವವನ್ನು ... ಕೆಂಡ ... ಆಹ್ವಾನಿಸಿದ್ದಕ್ಕೆಂದು ನಮ್ಮನ್ನು ನಾವು ಕಳೆದುಕೊಂಡು ಬಾಳಬೇಕೆ? ಇದು ತರವಲ್ಲ. ಭಾರತೀಯರಿಗೆ ಅಮೆರಿಕದವರಂತೆ ವ್ಯಕ್ತಿತ್ವ ಮತ್ತು ಆತ್ಮಗೌರವ ಉಂಟೆಂದು ನಿಕ್ಸನ್ ಪ್ರಭೃತಿಗಳು ತಿಳಿಯುವುದು ಲೇಸು.

ಅಲ್ಲದೆ ನಮ್ಮಕ್ಕೆ ಹೋಗಬಾರದು ... ಸ್ವದೇಶಿ ... ಬಾರದು ಎಂದು ಅಮೆರಿಕ ಮನಸ್ಸು ಮಾಡಲು, ನಾವೇನು ಆತ್ಮಗೌರವವಿಲ್ಲದ ... ನಮ್ಮ ಪ್ರಧಾನಿ ಅವರ ಅಡಿಯಾಳಲ್ಲ. ಇವರು ಅಂದರೆ ಅಮೆರಿಕ ಕೆಲವೊಂದು ರೀತಿಯ ನೆರವನ್ನು ನೀಡಿದ ಮಾತ್ರಕ್ಕೆ ನಾವು ನಮ್ಮತನವನ್ನು ಮಾರಿ ಅವರಿಗೆ ಅಡಿಯಾಳಾಗಬೇಕೆಂದಿಲ್ಲ.

ಹೀಗೆ ಹೇಳಿದಾಕ್ಷಣ ನಾನು ರಷ್ಯದ ಕಡೆಗೆ ವಾಲುತ್ತೇನೆಂದಲ್ಲ; ರಷ್ಯ ಗೋಮುಖವ್ಯಾಘ್ರ. ಅದನ್ನು ನಂಬಿ ಅಡಿ ಇಟ್ಟರೆ ಯಾವ ದೇಶಕ್ಕೂ ಅದರ ಮುಳುಗು ನೀರು ಗತಿಯೆಂಬುದು ಒಪ್ಪತಕ್ಕದ್ದು. ಆದರೆ ರಷ್ಯವಾಗಲಿ ಅಮೆರಿಕವಾಗಲಿ ನಮಗೆ ಬುದ್ಧಿವಾದ ಹೇಳಲು ಹೊರಡುವಷ್ಟು ನಾವು ಹಿಂದೆ ಸಣ್ಣವರಲ್ಲ. ತಿಳುವಳಿಕೆ ವಿಷಯದಲ್ಲಿ ನಾವು ರಷ್ಯ ಮತ್ತು ಅಮೆರಿಕಕ್ಕಿಂತ ಒಂದು ಹೆಜ್ಜೆ ಮುಂದೆ ಇದ್ದೇವೆ ಹೊರತು ಹಿಂದಿಲ್ಲ. ಅದನ್ನು ಈ ರಾಷ್ಟ್ರಗಳು ಇನ್ನಾದರೂ ಮನಗಾಣುವುದು ಅವಶ್ಯ.

ಆ ವಿಷಯವೇನಂತೆ ಇರಲಿ, ಏನೇ ಇರಲಿ, ಆತ್ಮಗೌರವ ನಮ್ಮ ಅಮೂಲ್ಯ ನಿಧಿ. ಈ ಆತ್ಮಗೌರವವನ್ನು ತಡೆಯಲು ಹೊರಟರೆ ನಾವು ಅವರ ದಿಕ್ಕಾಗಲೀ ರಷ್ಯಾಗಲೀ, ಹೆಚ್ಚೇನು ಇಡಿ ವಿಶ್ವದ ಸರ್ವನಾಶವಾಗುವುದಿದ್ದರೂ ತಲೆಬಾಗಿ ನಡೆಯುವುದಿಲ್ಲವೆಂದು ಸಕಲ ರಾಷ್ಟ್ರಗಳು ತಿಳಿಯುವುದು ತೀರ ಅವಶ್ಯ.

—ಶ್ರೀ ಪಿ. ಎಚ್. ಶಾಂತಾರಾಮ ಶೆಟ್ಟಿ

Gram: VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 15

NAVAYUGA

17—12—1970

ದ್ರಾ. ಮು. ಕ. ಪ್ರೋ. ತ. ಸಂ. ಪ್ರ. ಸ್ವ. ಪಾರ್ಟಿ

ಪಂಡಿತ ಜವಾಹರಲಾಲ ನೆಹರೂಜೀ ಪ್ರಧಾನಿಯಾಗಿದ್ದ ಕಾಲ, ರಷ್ಯಾದ ಪ್ರಮುಖರು ಭಾರತಕ್ಕೆ ಬಂದುಹೋದರು ಕಮ್ಯೂನಿಸ್ಟ್ ಖಿಲಾಡಿಗಳು ಕಾಂಗ್ರೆಸ್ಸಿನೊಳಗೆ ಸೇರಿಕೊಂಡರು, ಕಾಂಗ್ರೆಸ್ಸು ಸೋಶಿಯಲಿಸಮಿನ ಸೊಲ್ಲೆತ್ತಲಾರಂಭಿಸಿತು. ಚೈನಾ ಆಕ್ರಮಣ ನಡೆಯಿತು........

ಕಾಂಗ್ರೆಸಿನ ಮೇಲೆ ಜನತೆಗೆ ಜಿಗುಪ್ಸೆ ಬಂತು, ಕಾಂಗ್ರೆಸ್ ವಿರೋಧಿ ಗಾಳಿ ಬೀಸಲಾರಂಭಿಸಿತು. ರಾಜಕೀಯ ಪಕ್ಷಗಳು ಅದಕ್ಕನುಗುಣವಾಗಿ ವರ್ತಿಸಿದುವು. ಕಾಂಗ್ರೆಸ್ಸು ಒಂದು ಬದಿಯಲ್ಲಿ. ಕಮ್ಯೂನಿಸ್ಟ್, ಮುಸ್ಲಿಂ ಲೀಗ್‌ಗಳನ್ನು ಬಿಟ್ಟುಳಿದ ಪಕ್ಷಗಳೆಲ್ಲಾ ಇನ್ನೊಂದು ಬದಿಯಲ್ಲಿ. ಈ ಧುರಂಧರರೆಲ್ಲರು ಅತ್ತಲೂ ಇತ್ತಲೂ ಸಮಯ—ಸ್ಥಳಗಳನ್ನು ನೋಡಿಕೊಂಡು ಸೇರಿಕೊಂಡರು. ಹೀಗೆ ಒಂದು ರೀತಿಯ ಇಬ್ಬಣವಾಗುವ ಲಕ್ಷಣ ಕಂಡುಬಂತು. ಡಾ| ಶ್ಯಾಮ ಪ್ರಸಾದ ಮುಖರ್ಜಿಯವರಿದ್ದಾಗ ರಾಷ್ಟ್ರೀಯ ಪಕ್ಷಗಳನ್ನು ಒಗ್ಗೂಡಿಸಲು ಪ್ರಯತ್ನಿಸಿ ಬಿಟ್ಟು ಬಿಟ್ಟಿದ್ದರು. ಚಿಕ್ಕ ಪುಟ್ಟ ಕಾರಣಗಳಿಗಾಗಿ ಭಿನ್ನ ಭಿನ್ನ ಪಕ್ಷಗಳು ಒಡೆದಾಡಿಕೊಳ್ಳಲು ಆರಂಭಿಸಿದುವೇ ವಿನಹ ಒಂದಾಗಲು ಮನಸ್ಸು ಮಾಡಲಿಲ್ಲ. ಆಕ್ರಮಣದ ನಂತರ ಅವುಗಳಿಗೆ ಬುದ್ಧಿ ಬರಬೇಕಾಗಿತ್ತು. ಆದರೆ ಕೆಟ್ಟ ಮೇಲೂ ಅವುಗಳಿಗೆ ಬುದ್ಧಿ ಬರಲಿಲ್ಲ. ಸರಕಾರವು ಕುಟುಂಬ ಯೋಜನೆಯ ಹೆಸರಿನಲ್ಲಿ ಜನನ ನಿಯಂತ್ರಣಕ್ಕೆ ಖರ್ಚು ಮಾಡುತ್ತಿದೆಯಾದರೂ ರಾಜಕೀಯ ಪಕ್ಷಗಳು ಜನಿಸದಂತೆ ಯಾವ ಲೂಪನ್ನೂ ನಿರೋಧವನ್ನೂ ಕಂಡು ಹಿಡಿದಿರುವುದಿಲ್ಲ. ಇದ್ದರೂ ತಮಿಳುನಾಡಿನಲ್ಲಿ ಸಮುದ್ರ ಸಮೀಪದಲ್ಲೇ ಇರುವುದರಿಂದಲೋ ಏನೋ ಕಾಂಗ್ರೆಸೇತರ ಪಕ್ಷಗಳಲ್ಲಿ ಹೆಚ್ಚಿನವು ಒಂದಾದುವು. ಇದರಲ್ಲಿ ದ್ರಾವಿಡ ಮುನ್ನೇತ್ರ ಕಳಗಂ ಹಿರಿಯಣ್ಣನ ಪಾಲನ್ನು ತೆಗೆದುಕೊಂಡಿತು. ಮುಸ್ಲಿಂ ಲೀಗು ಮುಂಚಿತವಾಗಿಯೇ ಮಾತುಕತೆ ಮುಗಿಸಿ ಸಿಂಹ ಪಾಲನ್ನು ಗಿಟ್ಟಿಸಿಕೊಂಡಿತು. ಕಮ್ಯೂನಿಸ್ಟರ ಜಂಘಾಬಲವನ್ನು ರಾಜಾಜಿ ನಾಶ ಮಾಡಿಬಿಟ್ಟಿದ್ದರಿಂದ ಎದ್ದುನಿಲ್ಲಲು ಕೆಲ ಸ್ಥಾನಗಳನ್ನು ಮಾತ್ರ ಅವರು ಕೇಳಿದರು. ಫೋರ್ವರ್ಡ್ ಬ್ಲಾಕ್, ತಮಿಳು ಅರಸು ಕಳಗಂ, ಸಂಯುಕ್ತ ಸೋಷ್ಯಲಿಸ್ಟ್ ಪಾರ್ಟಿ, ಪ್ರಜಾ ಸೋಷ್ಯಲಿಸ್ಟ್ ಪಾರ್ಟಿ ಮತ್ತು ಸ್ವತಂತ್ರ ಪಾರ್ಟಿ ತಮತಮಗೆ ಸಿಕ್ಕಿದುದರಲ್ಲೇ ತೃಪ್ತಿಪಟ್ಟುಕೊಂಡು ಒಕ್ಕಟ್ಟಿಗಾಗಿ ಒಂದಾದುವು. ಅಲ್ಲದೆ ಕೆಲವೇ ಸ್ಥಾನಗಳು ಸಿಕ್ಕಿದಲ್ಲಿ ಮಂತ್ರಿಪದವಿ ಸೇತಾನಿಗೆ ನಿಶ್ಚಿತ ತಾನೇ. ಅದಕ್ಕೆ ಸ್ಪರ್ಧೆಗೆ ಬರುವವರು ಯಾರೂ ಇರುವುದಿಲ್ಲ. ಈ ಪಕ್ಷಗಳಲ್ಲದೆ ದ್ರಾವಿಡ ಕಳಗಂ ನಂತಹ ಅರಾಜಕೀಯ (ರಾಜಕೀಯ ಪಕ್ಷವಲ್ಲ) ಪಕ್ಷವೂ ಅದರಲ್ಲಿ ಸೇರಿಕೊಂಡಿತು. ಇನ್ನೂ ಕೆಲ ಚಿಕ್ಕಪುಟ್ಟ ಸ್ಥಳೀಯ ಪಕ್ಷಗಳು ಅದಕ್ಕೆ ಸೇರಿಕೊಂಡವು. ಹೀಗೆ ಸಂಯುಕ್ತ ದಳ ಹೋರಾಡಿ ಗೆದ್ದಿತು. ಇಲ್ಲಿ ಗಮನೀಯ ವಿಷಯವೆಂದರೆ ಸ್ವತಂತ್ರಾಚಾರ್ಯರು ಕಮ್ಯೂನಿಸ್ಟ್ ಪಾರ್ಟಿಯನ್ನು ಕ್ರಮಾಂಕ ಒಂದೆಂದು ಹೇಳಿದ್ದವರು ಈ ಯುಕ್ತಿಯಲ್ಲಿ ಸೇರಿಕೊಂಡದ್ದಿದೆ. ಪ್ರಶ್ನೆ ಕೇಳುವವರಿಲ್ಲದೆ ಹೋಗಲಿಲ್ಲ. ರಾಜಗೋಪಾಲಾಚಾರಿಯವರಿಗೆ ವಕೀಲವಾದ ಜ್ಞಾಪಕವಿಲ್ಲವೆಂದಲ್ಲ. ಅವರು ಉತ್ತರ ಕೊಟ್ಟೇಬಿಟ್ಟರು. ಕಮ್ಯೂನಿಸ್ಟರೊಂದಿಗೆ ಸ್ವತಂತ್ರ ಪಾರ್ಟಿ ಸೇರಿಕೊಂಡಿರುವದಿಲ್ಲ. ಸ್ವತಂತ್ರ ಪಾರ್ಟಿ ಸ್ನೇಹ ಬೆಳೆಸಿಕೊಂಡಿರುವುದು ತನ್ನ ಇಂಗ್ಲಿಷ್ ಇಷ್ಟಿಯ ದ್ರಾ. ಮು.ಕ.ದೊಂದಿಗೆ. ಇತರ ಪಕ್ಷಗಳೊಂದಿಗೆ ಸಂಬಂಧ ಬೆಳೆಸಿಕೊಳ್ಳಲು ದ್ರಾ.ಮು.ಕ.ಕ್ಕೆ ಸ್ವಾತಂತ್ರ್ಯ ಇದೆ. ವಾದದಲ್ಲಿ ಗೆದ್ದರು. ಕೆಲವು ಸ್ಥಾನಗಳು ಸ್ವಪಾರ್ಟಿಗೆ ಸಿಕ್ಕಿದುವು. ತತ್ಕಾಲ ಶಾಂತಿ.

ಆಚಾರ್ಯರು ಭಾವಿಸಿಕೊಂಡದ್ದು ಬೇರೆ, ನಡೆದದ್ದು ಬೇರೆ. ಚುನಾವಣೆ ಮುಗಿದ ಮೇಲೆ ಸಂಯುಕ್ತ ಮಂತ್ರಿಮಂಡಲ ರಚಿಸುವ ಕನಸನ್ನು ಅವರು ಕಂಡಿದ್ದರು. ಎಲ್ಲರೂ ನೆನೆಸಿಕೊಂಡದ್ದಕ್ಕಿಂತ ಅಧಿಕವಾಗಿ ಸ್ಥಾನಗಳು ದ್ರಾ. ಮು. ಕ.ಕ್ಕೆ ಸಿಕ್ಕಿದುವು. ದ್ರಾ. ಮು. ಕ.ಕ್ಕೆ ಯಾರವನ ಹಂಗೇನು? ಇದು ತನ್ನ ಬುದ್ಧಿ ಬಿಟ್ಟೀತೇ? ಅನಂತರದ ನಗರಸಭಾ ಚುನಾವಣೆಯಲ್ಲಿ ತನ್ನ ಶಕ್ತಿಯ ಪರಿಚಯ ಮಾಡಿಸಿಕೊಟ್ಟಿತು. ಆ ಪೆಟ್ಟನ್ನು ತಿಂದರೂ ಅಲ್ಲಿಯ ಶಕ್ತಿಯಿಂದ ಸ್ವಪಾರ್ಟಿ ಸನ್ಮಾನ ಗಳಿಸಿತು. ಸ್ವಪಾರ್ಟಿಯು ವಿಧಾನಸಭಾ ಅಥವಾ ಪರಿಷತ್ತಿನ ಸದಸ್ಯರು ಕೈಲಾಸವಾಸಿಗಳಾದಾಗ ಉಂಟಾದ ಸ್ಥಾನಕ್ಕೆ ದ್ರಾ. ಮು. ಕ. ದೇ ತನ್ನ ಅಭ್ಯರ್ಥಿಗಳನ್ನು ನಿಲ್ಲಿಸಿ ಸ್ವಪಾರ್ಟಿಯು ರಾಜಾಜಿಯವರು ಇಷ್ಟಿಟ್ ರಾಜಕೀಯನ್ನಾಗಿ ಮಾಡಿತು. ಕಾಲ ಬಂದಲ್ಲಿ ಕತ್ತೆಯ ಕಾಲನ್ನೂ ಹಿಡಿಯುವ ಸ್ವಭಾವ ಆಚಾರ್ಯರದ್ದು. ಹೇಗಾದರೂ ಕಾಂಗ್ರೆಸನ್ನು ನಾಶ ಮಾಡಬೇಕೆನ್ನುವ ನಾಶಕಾರಕ ಬುದ್ಧಿಯಿಂದ ಅವರು ತನ್ನ ನಾಶಕ್ಕೇನೇ ನಾಂದಿಯನ್ನುಂಟುಮಾಡಿಕೊಂಡರು. ಅಷ್ಟರಲ್ಲಿ ರಾಜ್ಯಸಭಾ ಚುನಾವಣೆ ಬಂತು. ದ್ರಾ.ಮು.ಕ. ಕೆಲಸ್ಥಾನಗಳಿಗೂ ಮುಸ್ಲಿಂ ಲೀಗು ಒಂದು ಸ್ಥಾನಕ್ಕೂ ಸ್ವಪಾರ್ಟಿ ಒಂದು ಸ್ಥಾನಕ್ಕೂ ಅಭ್ಯರ್ಥಿಗಳನ್ನು ಒಪ್ಪಂದಕ್ಕನುಸಾರವಾಗಿ ನಿಲ್ಲಿಸಿದುವು. ಅತ್ತ ಇಂದಿರಾಜಿಯವರ ದುಂಡಾಳಿತ. ಇತ್ತ ಕರುಣಾನಿಧಿಯವರ ದಬ್ಬಾಳಿಕೆ. ಇವರೊಳಗೆ ಅದೇನು ಮಾತುಕತೆ ನಡೆಯಿತೋ, ಏನೂ ಬಲವಿಲ್ಲದ ಇಂದಿರಾ ಕಾಂಗ್ರೆಸಿನ ಚಿದಂಬರ ಸುಬ್ರಹ್ಮಣ್ಯಂರವರ ಚಿದಂಬರ ರಹಸ್ಯವೆನ್ನುವಂತೆ ಕಣಕ್ಕಿಳಿದರು. ಸಂಯುಕ್ತ ದಳದ ಅಭ್ಯರ್ಥಿಗಳು ಸುಲಭವಾಗಿ ಬರಲು ಸಾಧ್ಯ. ಹಾಗಿದ್ದರೂ ಸ್ವಪಾರ್ಟಿಯು ನೆಲ ಕಚ್ಚಿ ಕಂಗಾಲಾಗಿ ಬಿತ್ತು. ಅದರ ಅಭ್ಯರ್ಥಿಗೆ ಊಟ ಮೆಚ್ಚಲಿಲ್ಲ; ನಿದ್ದೆ ಬರಲಿಲ್ಲ. ಆದಕ್ಕಿಂತ ಕಮ್ಯೂನಿಸ್ಟ್ ಬಲವಿದ್ದ ಮುಸ್ಲಿಂ ಲೀಗು ಮುಸಿಮುಸಿ ನಗುತ್ತ ಸಂತೋಷವಾಗಿತ್ತು. ಬಿಸಿ. ಹಿಂತದ್ದರಿಂದ ಸ್ವಪಾರ್ಟಿಯ ಅಭ್ಯರ್ಥಿಗೆ ಹೆದರಿಕೆ ಉಂಟಾಯಿತು. ಚುನಾವಣೆಯಲ್ಲಿ ಗೆದ್ದ ಮೇಲೆಯೇ ಆ ಹೆದರಿಕೆ ಹೋದದ್ದು.

ಮುಸ್ಲಿಂ ಲೀಗು ಅಂತಹ ಅಂತಸ್ತನ್ನು ಪಡೆದುಕೊಂಡಿತ್ತಾದರೂ ಹಿಂದಿನಿಂದಲೂ ರಾಜಾಜಿಯವರಿಗೆ ಮುಸ್ಲಿಂ ಲೀಗಿನ ಮೇಲೆ ಮುದ್ದು ಹೆಚ್ಚು. ಆ ಮಮತೆಯೇ ಪಾಕಿಸ್ತಾನಕ್ಕೆ ಪ್ರೇರಣೆ. ಈಗ ಕೆಟ್ಟ ಮೇಲಾದರೂ ಬುದ್ಧಿ ಬಂದಿದೆಯೋ ಅಂದರೆ ಅದೂ ಇಲ್ಲ. ಅದಕ್ಕೊಂದು ಉದಾಹರಣೆ:- ವಿಜಯ ದಶಮಿಗೆ ಕೆಲವೇ ದಿನಗಳಿರುವಾಗ ಬೆಂಗಳೂರಿನ "ವಿಕ್ರಮ" ವಾರಪತ್ರಿಕೆಯ ಸಂಪಾದಕರು ಅವಸರ-ಅವಸರವಾಗಿ ರಾಜಾಜಿಯವರ ಭೇಟಿಗೆ ಬಂದರು. ಭೇಟಿಯ ಸಮಯ ಸಂಪಾದಕರು ಕೆಲವಾರು ಪ್ರಶ್ನೆಗಳನ್ನು ಕೇಳಿದರು. ಅದಕ್ಕೆ ರಾಜಾಜಿಯವರು ಉತ್ತರಿತ್ತಿರುವರು. ಪ್ರಶ್ನೋತ್ತರ ಕನ್ನಡದಲ್ಲೇ ನಡೆದಿರುವ ಕಾರಣ ಒಂದು ಪ್ರಶ್ನೋತ್ತರವನ್ನು ಹಾಗೆಯೇ ಇಲ್ಲಿ ಕೊಡಲಾಗಿದೆ. ಪ್ರಶ್ನೆ:- ಕೇರಳದಲ್ಲಿ ಜನರು ಇಂದಿರಾ ಕಾಂಗ್ರೆಸ್ ಕಮ್ಯೂನಿಸ್ಟ್ ಮುಸ್ಲಿಂಲೀಗ್ ಒಕ್ಕೂಟಕ್ಕೆ ಬಹುಮತವಿತ್ತಿದ್ದಾರಲ್ಲ?

ಉತ್ತರ:—ಅಕ್ಷಯ ಮತಗಳು ಬಹುತೇಕವಾಗಿ ನಿಶ್ಚಿತವಾದುವು (committed) ಆಯಾ ಪಕ್ಷಗಳಿಗೆ ಹೋಗಿವೆ. ಕೆಲವರು ಸ್ಥಿರವಾದ ಸರಕಾರ ಬೇಕೆಂಬ ಭಾವನೆಯಿಂದ ಹೊಸ ಕಾಂಗ್ರೆಸ್ಸಿಗೆ ಕೊಟ್ಟಿರಲೂಬಹುದು. ಕಮ್ಯೂನಿಸ್ಟರು ಜನರಿಗೆ ಬೇಕಾಗಿದ್ದಾರೆ. ಆದರೆ ಹೊಸ ವಿಚಾರ ಅಂಗೀಕರಿಸಲು, ಇತರ ಒಳ್ಳೆಯ ಪಕ್ಷಗಳಿಗೆ ಮತ ನೀಡಲು ಜನರ ಹಳೆಯ ಅಭ್ಯಾಸ ಬಿಡುತ್ತಿಲ್ಲ. ಇನ್ನೂ ಅನೇಕರು ಕಾಂಗ್ರೆಸ್ಸಿಗೇ—ಅದು ಹಳೆಯದಿರಲಿ, ಹೊಸದಿರಲಿ, ಹುಟ್ಟಿರಲಿ—ಮತ ನೀಡುವ ಅಭ್ಯಾಸದಿಂದ ಮುಕ್ತರಾಗಿಲ್ಲ."

ಇಲ್ಲಿ ರಾಜಾಜಿಯವರು ಲೀಗಿನ ಕುರಿತು ಚಕಾರವನ್ನು ಎತ್ತಿರುವದಿಲ್ಲ. ಅದನ್ನು ಅಲಕ್ಷಿಸುವುದು ಸರಿಯಲ್ಲ. ಉದ್ದೇಶಪೂರ್ವಕವಾಗಿ ಅವರು ಹಾಗೆ ಮಾಡಿದ್ದಾರೆನ್ನುವುದು ಗಮನೀಯ ವಿಷಯವಾಗಿದೆ. ಮುಸ್ಲಿಂ ಲೀಗಿನ ಮೇಲಿನ ಈ ಮುದ್ದಿನಿಂದಾಗಿಯೇ ದ್ರಾ.ಮು.ಕ.ವು ಭಾರತೀಯ ಜನಸಂಘವನ್ನು ದಳದಲ್ಲಿ ಸೇರಿಸಿಕೊಳ್ಳದಿದ್ದಾಗ ಮಾತೆತ್ತದೆ ಸುಮ್ಮನಿದ್ದರು. ಕಾಂಗ್ರೆಸ್ ವಿರೋಧಿ ಏಕಕೊಂಡಿದ್ದ ಭಾರತೀಯ ಜನಸಂಘ ಈ ದಳದಲ್ಲಿ ಭಾಗವಹಿಸಿಲ್ಲವೆಂಬುದು ಗಮನೀಯ ಅಂಶವಿದೆ.

ಹೀಗೆ ಕಾಂಗ್ರೆಸ್ಸಿನ ಮೇಲಿನ ಹಗೆಯಿಂದಾಗಿ ಕುರುಡಾಗಿ ಹೋಗಿರುವ ಸ್ವಪಾರ್ಟಿ ಕೈಮಿಲಾಯಿಸಿಕೊಂಡದ್ದಾದರೂ ಯಾರೊಂದಿಗೆ? ದೇಶದ್ರೋಹಿ ಕಮ್ಯೂ

(ಹನ್ನೆರಡನೇ ಪುಟ ನೋಡಿರಿ)

"ಪರದೆ ಸರಿದಾಗ..."

ಲೇಖಿಕೆ: ಶ್ರೀಮತಿ ಯಶೋದಾ ಯನ್. ಜೆನ್ನಿ.

ದೇವಸ್ಥಾನದಲ್ಲಿಂದು ಬಹಳ ವೈಭವದ ಪೂಜೆಯಂತೆ. ಸುತ್ತಮುತ್ತಲಿನ ಭಕ್ತವೃಂದದವರಲ್ಲಿ ಮುಖ್ಯವಾಗಿ ಮಹಿಳೆಯರೆಲ್ಲರೂ ವಿಧವಿಧವಾಗಿ ಅಲಂಕರಿಸಿಕೊಂಡು ದೇವರ ದರ್ಶನಕ್ಕೆಂದು ಬಂದು ಸೇರುತ್ತಿದ್ದರು. ಬಂದವರಲ್ಲನೇಕರು ಹರಟೆ, ವಿನೋದದ ಮಾತುಕತೆಗಳೊಂದಿಗೆ ನವೀನ ಅಲಂಕಾರ ಸಾಮಗ್ರಿಗಳ ವಿಚಾರ, ಪರಿಚಯದ ಮನೆಗಳ ವಿಚಾರ ವಿನಿಮಯಗಳನ್ನು ನಡೆಸಿಕೊಂಡು ಪ್ರದಕ್ಷಿಣೆ ಬರುವ ಕೆಲಸವನ್ನು ಯಾಂತ್ರಿಕವಾಗಿ ನಡೆಸಿದ್ದರು. ಮನೆಯಲ್ಲಿ ಮಾಡಲು ಹೆಚ್ಚಿನ ಕೆಲಸಗಳಿಲ್ಲದ್ದರಿಂದಲೂ ತಮ್ಮ ಅಲಂಕಾರ ಪ್ರದರ್ಶನಕ್ಕೆ ಅನುಕೂಲವಾದ ಬೇರೆ ಸ್ಥಳವಿಲ್ಲದ್ದರಿಂದಲೂ ಬಂದವರು ಹೆಚ್ಚಿನವರಾದರೆ ಕೆಲವರು ದೇವರ ಪೂಜೆಯನ್ನು ಕಣ್ಣಾರೆ ನೋಡಿ ಭಕ್ತಿಭಾವದಿಂದ ಕೈಮುಗಿದು ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳಬೇಕೆಂಬ ಬಯಕೆಯಿಂದ ಬಂದಿದ್ದರು. ತಾಯಂದಿರೊಂದಿಗೆ ಬಂದ ತುಂಟ ಮಕ್ಕಳ ಗಲಾಟೆಯು ಹೆಂಗಸರ ಹರಟೆಯನ್ನು ಮೀರಿಸಿ ಕೇಳಿ ಬರುತಿತ್ತು. ಇವೆಲ್ಲರ ಕೇಂದ್ರ ಬಿಂದುವಾಗಿ ಓಡಾಡುವ ಅರ್ಚಕ ಗೋವಿಂದ ಭಟ್ಟರ ಗಡಿಬಿಡಿಯ ಸಂಭ್ರಮವೇ ಸಂಭ್ರಮ.

ಗೋವಿಂದ ಭಟ್ಟರೆಂದರೆ ಸಾಮಾನ್ಯ ವ್ಯಕ್ತಿಯೇನಲ್ಲ. ಇಡಿಯ ಊರೇ ಅವರನ್ನು ಗೌರವಾದರಗಳಿಂದ ಕಾಣುತ್ತಿತ್ತು. ಅವರ ಆಚಾರ-ವಿಚಾರಗಳನ್ನು, ನೇಮ-ನಿಷ್ಠೆಗಳನ್ನು ಕಂಡವರಿಗೆ ಅವರ ಮೇಲೆ ತನ್ನಿಂದ ತಾನಾಗಿಯೇ ಪೂಜ್ಯ ಭಾವನೆ ಬೆಳೆದು ಬರುತ್ತಿತ್ತು. ಮುಂಜಾನೆ ಐದು ಗಂಟೆಯೊಳಗೇ ಅರ್ಧ ಮೈಲು ದೂರದ ಮನೆಯಿಂದ ನಡೆದುಕೊಂಡು ಬಂದು ದೇವಸ್ಥಾನದ ಕೆರೆಯಲ್ಲಿ ಚಳಿ-ಮಳೆಯೆನ್ನದೆ ಮುಳುಗಿ ಮಿಂದು ಮಂತ್ರಪಠಣದೊಂದಿಗೆ ಆರಂಭವಾಗುವ ಅವರ ಕರ್ತವ್ಯನಿಷ್ಠೆಗೆ ಯಾವ ದಿನವೂ ಚ್ಯುತಿ ಬಂದುದೆಂದಿಲ್ಲ. ರೇಶ್ಮೆಯ ಪಂಚೆಯನ್ನುಟ್ಟುಕೊಂಡು, ಹಣೆಯಲ್ಲಿ, ಎದೆಯಲ್ಲಿ ಗೋಪಿಚಂದನದ ನಾಮವನ್ನೆಳೆದುಕೊಂಡು ಗಂಭೀರ ಮುಖಭಾವದಿಂದ ದೇವಸ್ಥಾನದಿಂದ ಬರುವ ಅವರನ್ನು ಕಂಡರೆ ಇದಿರಾದವರು ತಾವಾಗಿಯೇ ಪಕ್ಕಕ್ಕೆ ಸರಿದು ದಾರಿ ಬಿಟ್ಟುಕೊಡುತ್ತಿದ್ದರು. ಏಕೆಂದರೆ ಅವರ ಮಡಿವಂತಿಕೆಯೂ ಅಸಾಧಾರಣವಾದುದು. ದಿನಕ್ಕೆ ನಾಲ್ಕಾರು ಬಾರಿಯಾದರೂ ಸ್ನಾನಮಾಡುವ ಅವರಿಗೆ ತೊಂದರೆ ಕೊಡುವ ದುರುದ್ದೇಶ ಊರಲ್ಲಿ ಯಾರಿಗೂ ಇರಲಿಲ್ಲ. ಈ ಕಾಲದಲ್ಲಿ ಅಂತಹ ಸಂಪ್ರದಾಯಬದ್ಧ ಜೀವನವನ್ನು ಯಾರು ತಾನೇ ನಡೆಸುತ್ತಾರೆ? ಎಂದು ಅನೇಕರಿಂದ ಹೊಗಳಿಸಿಕೊಂಡಿದ್ದರು.

ಇಂದು ದೇವಸ್ಥಾನದಲ್ಲಿ ಭಾರೀ ವಿಶೇಷ ವಿಜೃಂಭಣೆಯಿಂದ ಹೂವಿನ ಪೂಜೆಗೆ ಸಿದ್ಧತೆಗೈಯುವ ಹೊಣೆಯನ್ನು ಹೊತ್ತ ದ್ದಾರೆ ಭಟ್ಟರು. ಯಾರೋ ಪರವೂರಿನ ಮಹಿಳೆಯೊಬ್ಬಳು ಉದಾರತೆಯಿಂದ ಸಾವಿರಾರು ರೂಪಾಯಿ ಖರ್ಚು ಮಾಡಿ ಮಧ್ಯಾಹ್ನವೂ ಹರಕೆ, ಪೂಜೆ ಇತ್ಯಾದಿ ಸೇವೆಗಳನ್ನು ಮಾಡಿಸಿದ್ದಳು. ರಾತ್ರಿಯೂ ಇಂದು ವೈಭವದ ಪೂಜೆ ನಡೆಯುವ ತಯಾರಿಯಾಗುತ್ತಿದೆ. ಆದ್ದರಿಂದಲೇ ಭಟ್ಟರ ಉತ್ಸಾಹ, ಸಂತೋಷ ಮೇರೆ ಮೀರಿತ್ತು. ಆಸಡಗರದಲ್ಲೇ ಓಡಾಡುವ ಭಟ್ಟರು ಅಲ್ಲೇ ಓಡಾಡುತ್ತಾ ಬಂದ ಎರಡು ವರ್ಷದ ಮಗುವಿಗೆ ಡಿಕ್ಕಿ ಹೊಡೆದಾಗ ಮಗು ದೇವಸ್ಥಾನದ ಹಾಸುಗಲ್ಲಿನ ಮೇಲೆ ಬಿದ್ದು ಗಟ್ಟಿಯಾಗಿ ಚೀರತೊಡಗಿತು. ಭಟ್ಟರು ಒಂದು ಕ್ಷಣ ಬಿದ್ದ ಮಗುವನ್ನು ದಿಟ್ಟಿಸಿದರು, ಮರುಕ್ಷಣದಲ್ಲೇ ಅವರಿಗೆ ರೋಷ ಉಕ್ಕೇರಿತು. ಹರಕೆ ಆಗಿಯೂ ಕೊಳಕು ಮಗು ಇಂತಹ ವಿಶೇಷ ದಿನದಲ್ಲಿ ಅವರ ಕೆಲಸದ ಸಡುವೆ ಮುಟ್ಟಿದ್ದುದು ಮಹಾಪಂಥ.

"ಯಾವ ದೇದ ಪ್ರಾಣಿಯಪ್ಪಾ. ಪಾರಪ್ಪ, ಇದರ ತಾಯಿ ಎಲ್ಲಿ ಸತ್ತಳೋ...?" ಎಂದು ಗರ್ಜಿಸಿದ ಧ್ವನಿಗೆ ಅಲ್ಲೇ ದೂರದಲ್ಲಿ ನಿಂತ ಬಡವಾಯಿ ತಾಯಿ ಹೆದರುತ್ತಲೇ ಓಡಿಬಂದು ಮಗುವನ್ನೆತ್ತಿಕೊಂಡಳು. ಮಗುವಿನ ಹಣೆಯಲ್ಲಿ ಗಾಯವಾಗಿ ರಕ್ತ ಸುರಿಯುತಿತ್ತು. ತಾಯಿ ಉಟ್ಟ ಹಳೆಯ ಸೀರೆಯ ಸೆರಗಿನಿಂದ ಗಾಯವನ್ನೊತ್ತಿ ಹಿಡಿದು ಮಗುವನ್ನು ಸಮಾಧಾನಪಡಿಸುವ ಯತ್ನದಲ್ಲಿದ್ದಳು. ಭಟ್ಟರು ಸಿಟ್ಟು ಮತ್ತು ತಿರಸ್ಕಾರದಿಂದ ಗೊಣಗುಟ್ಟುತ್ತಾ ಕೆರೆಯಲ್ಲಿ ಮುಳುಗಲೆಂದು ಹೋದರು. ಅಲ್ಲೇ ಹತ್ತಿರ ನಿಂತು ಆ ದೃಶ್ಯವನ್ನು ನೋಡುತ್ತಿದ್ದ ಹೆಂಗಳೆಯರ ಕೆಂಡ ತಾಯಿಯ ಅವಿವೇಕವನ್ನು ಶಪಿಸುತ್ತಾ ಭಟ್ಟರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸುತ್ತಿದ್ದಾಗ ಆಕೆ ಅವರ ಮಾತುಗಳಿಗಂಜಿ ಮೆಲ್ಲನೆ ದೇವಸ್ಥಾನದ ಹೊರಗೆ ಬಂದು ಜಗಲಿಯ ಮೂಲೆ ಸೇರಿ ಮಗುವನ್ನು ಕಾಲಮೇಲೆ ಮಲಗಿಸಿಕೊಂಡು ಸಾಂತ್ವನಪಡಿಸತೊಡಗಿದಳು.

ಅವಳಿಗೂ ನಿಜವಾಗಿಯೂ ತುಂಬಾ ಪಶ್ಚಾತ್ತಾಪವಾಗಿತ್ತು. ಮಗುವನ್ನು ಸರಿಯಾಗಿ ನೋಡಿಕೊಳ್ಳದೆ ಬಿಟ್ಟುಬಿಟ್ಟುದು ತನ್ನ ತಪ್ಪೇ ಆಗಿರುವಾಗ ಜನರು ನಿಂದಿಸುವುದರಲ್ಲೇನೂ ಹೊಸದಿಲ್ಲ ಎಂದೆನಿಸಿತು. ತನ್ನ ಆಚಾರದಿಂದ ಮಡಿವಂತಿಕೆಯ ಮೂರ್ತಿಯಂತಿದ್ದ ಅವರು ಈ ರಾತ್ರಿ ಕೆರೆಯಲ್ಲಿ ಮಿಂದು ಬರುವಂತಾದುದು ಅನ್ಯಾಯವಲ್ಲವೇ? ಈ ಯೋಚನೆಯಿಂದಾಗಿ ಆಕೆ ಮಗುವಿಗಾದ ನೋವಿನ ಬಗ್ಗೆಯೂ ಅಷ್ಟೊಂದು ಚಿಂತಿಸಲಿಲ್ಲ. ಮೊದಲೇ ಪಾಪಿ, ಇಲ್ಲವಾದರೆ ಹುಟ್ಟಿದ ವರ್ಷದೊಳಗೇ ಹೋದ ಗಂಡ, ಹೆಂಡತಿ ಇರುವಳೆಂಬುದನ್ನು ಮರೆತು ಭಟ್ಕಳದಲ್ಲೇ ಉಳಿಯುತ್ತಾನೆಯೇ? ಯಾವುದೋ ಸಣ್ಣ ವಿಷಯದಲ್ಲಿ ಜಗಳವಾಡಿ ಸಿಟ್ಟುಗೊಂಡು ಭಟ್ಕಳಕ್ಕೆ ಹೋದ ಸರಸುವಿನ ಪತಿ ಕಟ್ಟಿ ಊರನ್ನೇ ಮರೆತುಬಿಟ್ಟಿದ್ದ. ಇದು ಮಗುವಿನ ಹೀನ ಅದೃಷ್ಟವೆಂದೇ ನಂಬಿದ್ದಳು ಸರಸು. ಆಕೆ ದಿನಕ್ಕೊಮ್ಮೆಯಾದರೂ ದೇವಸ್ಥಾನದ ಹತ್ತಿರ ಕೆಲಸಕ್ಕೆಂದು ಹೋಗುವಾಗಲೆಲ್ಲ ದೇವರನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತಿದ್ದಳು. ಹೇಗಾದರೂ ಪತಿ ಸದ್ಬುದ್ಧಿ ಬಂದು ಆತ ಊರಿಗೆ ಬರುವಂತಾಗಲಿ ಎಂದು ನಿತ್ಯವೂ ಬೇಡುತ್ತಿದ್ದರೂ ಕಲ್ಲು ದೇವರ ಮನ ಕರಗಲಿಲ್ಲ. ಮುಖ್ಯ ಅವಳ ಹಣೆಯ ಬರಹವೇ ಅಷ್ಟು ಎಂದು ತನ್ನ ಹೀನ ಅದೃಷ್ಟವನ್ನು ಹಳಿಯುತ್ತಾ ದುಃಖದಿಂದಲೇ ದಿನಗಳೆಯುತ್ತಿದ್ದಳು. ಭಕ್ತನೆಲ್ಲೊಂದು ಬಂದು ದೇವಸ್ಥಾನದೆದುರು ನಿಂತಾಗ ಸರಸುವಿನ ಯೋಚನೆಗಳೆಲ್ಲ ಹಾರಿಹೋದುವು. ಆಕೆ ಬೆರಗಿನಿಂದ ಕಾರಿನತ್ತ ದೃಷ್ಟಿ ಹರಿಸಿದಳು. ಘಮಘಮಿಸುವ ಸುವಾಸನೆಯ ಗಾಳಿಯೊಂದಿಗೆ ಬಾಗಿಲು ತೆರೆದ ಅಪ್ಸರೆಯಂತೆ ಅಲಂಕರಿಸಿಕೊಂಡ ಸ್ತ್ರೀಯೊಬ್ಬಳು ಕೆಳಗಿಳಿದಾಗ ಸರಸು ಕುತೂಹಲದಿಂದ ನೋಡಿದಳು. ಆಕೆಯೇ ಇಂದಿನ ಪೂಜೆ ಮಾಡಿಸುವ ಪುಣ್ಯಸ್ತ್ರೀಯೆಂದೂ ಅವಳನ್ನು ಸ್ವಾಗತಿಸಲು ಬಂದ ಭಟ್ಟರು ಹಾಗೂ ಅವರ ಆನಯಾದುಗಳಿಂದ ತಿಳಿಯಿತು. ವಿದ್ಯುತ್ತಿನ ದೀಪದ ಬೆಳಕಿನಲ್ಲಿ ಕಣ್ಣು ಕೋರೈಸುವಂತೆ ಥಳಥಳಿಸುವ ಜರತಾರೀ ಹೂಗಳಿದ್ದ ಸೀರೆ, ಕೊರಳಲ್ಲಿ ಆಭರಣಗಳ ಹೊರೆ ಇವೆಲ್ಲವುಗಳಿಂದ ಶೋಭಿಸುತ್ತಿದ್ದ ಆಕೆ ಮಂದಗಮನೆಯಾಗಿ ಭಟ್ಟರ ಹಿಂದೆ ಬರುತ್ತಿದ್ದಾಗ ಸರಸು ದಿಗ್ಭ್ರಾಂತಳಾಗಿ ದಿಟ್ಟಿಸಿದಳು. ಎಂತಹ ಭಾಗ್ಯಶಾಲಿನಿಯಾಕೆ ಎಂದು ಮನದಲ್ಲೇ ಹಲವು ಬಾರಿ ಹೇಳಿಕೊಂಡಳು. ಆದರೆ ಹತ್ತಿರ ಬರುತ್ತಿದ್ದಂತೆ ಈಕೆಯನ್ನು ಎಲ್ಲೋ ನೋಡಿದ ನೆನಪು. ಎಲ್ಲಿ...ಎಲ್ಲಿ...ಎಂದು ಯೋಚಿಸುವಷ್ಟರಲ್ಲೇ ಆಕೆ ಒಳಗೆ ನಡೆದಳು. ಯಾರೀಕೆ? ಎಲ್ಲಿ ನೋಡಿದ್ದೇನೆ? ಎಂದು ಎಷ್ಟು ಯೋಚಿಸಿದರೂ ಸರಸುವಿನ ತಲೆಕ್ಕೆ ಹಿಡಿದ ಮಹುಳು ಸ್ಮರಣ ಶಕ್ತಿಯನ್ನು ಕಳೆದುಕೊಂಡಿತ್ತು. ಇನ್ನೊಮ್ಮೆ ಸರಿಯಾಗಿ ನೋಡೋಣವೆಂದರೆ ಆಕೆಯಾಗಲೇ ದೇವಸ್ಥಾನದೊಳಗೆ ಹೋಗಿ ದೇವರೆದುರು ಪೂಜೆಯನ್ನು ಸರಿಯಾಗಿ ನೋಡುವಂತೆ ಮೊದಲ ಸ್ಥಾನವನ್ನು ಸೇರಿಬಿಟ್ಟಿದ್ದಳು. ಭಟ್ಟರು ಅವಳಿಗೆ ಯಾವ ತೊಂದರೆಯೂ ಆಗದಂತೆ ಜನರನ್ನೆಲ್ಲ ದೂರ ಸರಿಸುವಂತೆ ಕರೆದುಕೊಂಡು ಹೋಗಿ ಸರಿಯಾದ ಸ್ಥಳ ದೊರಕಿಸಿಕೊಟ್ಟು ಕರ್ತವ್ಯ ಪಾಲಿಸಿದ್ದರು.

ಪೂಜೆ ಆರಂಭವಾಯಿತು. ಜಾಗಟೆ ನಗಾರಿಗಳು ಗಂಟೆಯ ಢಣ ಢಣ ಶಬ್ದ, ವಾದ್ಯದವರ ರಾಗಾಲಾಪ, ಭಟ್ಟರ ಆರತಿಯೆತ್ತುವ ಸಡಗರ ಇವೆಲ್ಲವುಗಳಿಂದ ಸರಸು ದೂರವೇ ಉಳಿಯಬೇಕಾಯಿತು. ಅಳುತ್ತಿರುವ ಮಗು ನಿದ್ದೆಯ ಮಡಿಲಲ್ಲಿ ಶಾಂತಿ ಪಡೆಯಿತು. ಸರಸು ಅದನ್ನೆತ್ತಿಕೊಂಡೇ ಎಲ್ಲರಿಗಿಂತ ಹಿಂದೆ ನಿಂತು ಪೂಜೆ ನೋಡಬೇಕೆಂದರೆ ಬರಿ ಜನರ ತಲೆಗಳೇ ಕಾಣಿಸುತ್ತಿದ್ದುವು. ಪೂಜೆ ನೋಡಿದರೆ ಪುಣ್ಯವಂತರಾಗುತ್ತಾರೆ ಎನ್ನುವ ನಂಬಿಕೆಯಿಂದ ಬಂದ ಸರಸುವಿಗೆ ಅದನ್ನು ನೋಡುವ ಪುಣ್ಯವಿದ್ದರಲ್ಲವೆ ಎಂದು ನಿಟ್ಟುಸಿರು ಬಿಟ್ಟಳು.

ಪೂಜೆ ಮುಗಿದು ಪ್ರಸಾದ ವಿತರಣೆಯು ಆರಂಭವಾದೊಡನೆ ಜನರ ಗದ್ದಲ ಇನ್ನೂ ಹೆಚ್ಚಿತು. ಸರಸು ಆ ಪೂಜೆಯ ಸುಗ್ಗಲನ್ನು ದೂರದಲ್ಲಿ ನೋಡಿಯೇ ಮುಂದೆ ಹೋಗುವ ಯೋಚನೆಯನ್ನು ಮರೆತುಬಿಟ್ಟಳು. ಬೆಳ್ಳಿಯ ಹರಿವಾಣದಲ್ಲಿ ಜಾಜಿ ಮಲ್ಲಿಗೆಗಳ ಮಾಲೆಗಳ ರಾಶಿ, ಇನ್ನೊಂದರಲ್ಲಿ ಪಂಚಕಜ್ಜಾಯವನ್ನಿಟ್ಟುಕೊಂಡು ಭಟ್ಟರು ಸಪಸರ ವಗನಂತಾಗಿ ಮುಂದೆ ನಿಂತಾಗ ಆಕೆಯ ಸೌಭಾಗ್ಯ ಕಂಡು ಒಳಗೊಳಗೇ ಕರುಬಿದವರು ಕೆಲವರು. ಭಟ್ಟರ ಹರಿವಾಣ ದಕ್ಷಿಣೆಯ ಹಣದಿಂದ ಭಾರವಾದಾಗ ಮುಖದಲ್ಲಿ ನಗೆಸೂಸಿ ಮನಃಪೂರ್ವ ಆಕೆಯನ್ನು ಕೊಂಡಾಡಿ ಹರಸಿದರು. ಮಗುವಿನೊಂದಿಗೆ ನುಗ್ಗಲಾರದ ಸರಸುವಿಗೆ ಕೊನೆಗೂ ಸ್ವಲ್ಪ ಪಂಚಕಜ್ಜಾಯ ಹೂ ದೊರಕಿದಾಗ ಅರೆ ಸಂತಸದಿಂದ ಮಗುವಿನ ಬಾಯನ್ನು ಸಿಹಿಗೊಳಿಸಿ ತೃಪ್ತಳಾದಳು.

ದೇವಸ್ಥಾನದೆದುರು ಶೀಲಿಬಣ್ಣದ ಹೊಳೆಯುವ ಹೊಸ ಕಾರು ನಿಂತಿತ್ತು. ಮನೆಗೆಂದು ಹೊರಟುನಿಂತ ಸರಸುವಿನ ಮಗುವಿನ ದೃಷ್ಟಿ ಕಾರಿನತ್ತ ಹರಿದಾಗ ಅದು ಅವಳನ್ನೆಳೆದುಕೊಂಡೇ ಕಾರಿನ ಬಳಿಗೆ ಹೋಯಿತು. ಕಾರನ್ನು ಮುಟ್ಟಿನೋಡಿ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
126 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¼% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3¼% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸ್:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-1.

ಆಡಳಿತ ಕಛೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1

ವಾರಪತ್ರಿಕೆ
ಉಡುಪಿ, ದ. ಕ.

NAVAYUGA
UDIPI, S. K.

ಸಂಪುಟ : 50
ಸಂಚಿಕೆ : 15

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
ವಿಶೇಷ ಸಂಚಿಕೆಗಳು ಸಹಿತ
ಬಿಡಿ ಪ್ರತಿ : ೦—೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ಮೂರು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಡಿಳ್ಳೀಶ್ವರಿಯ ಡೊಳ್ಳು ಪ್ರಶಂಸಕರು

ಶ್ರೀಮತಿ ಗಾಂಧಿಯವರು ಕರ್ನಾಟಕಕ್ಕೆ ಅನ್ಯಾಯ ಮಾಡುವುದಿಲ್ಲ; ಆಕೆಯಲ್ಲಿ ಭರವಸೆಯಿಡಿ; ಆಕೆಯ ನಿಷ್ಪಕ್ಷಪಾತತೆಯಲ್ಲಿ ನಂಬಿಕೆಯಿಡಿ ಎಂದು ಉಪದೇಶಿಸುತ್ತಿದ್ದ ಆಕೆಯ ಬಾಲ ಬಡುಕರ "ಹರಿಕಥೆ" ನಡೆಯುತ್ತಿದ್ದಾಗಲೇ ಆಕೆ ಕರ್ನಾಟಕದ ತಲೆಯ ಮೇಲೆ ಮತ್ತೊಂದು ಹೊಡೆತ ಕೊಟ್ಟರು. ಆಕೆಯ ಇಂಡಿಕೇಟು ಮಹಾಜನವರದಿಯನ್ನು ಸಂಸತ್ತಿನ ಮುಂದೆ ಮಂಡಿಸಬೇಕೆಂದು ನಿರ್ಧಾರ ಮಾಡಿದ್ದರಿಂದ ಆಯೋಗದ ವರದಿಗೆ ರಾಜಕೀಯ ಪರಿಹಾರವೇ ಬೇಕು ಎಂದು ಶ್ರೀಮತಿ ಗಾಂಧಿ ದೃಢನಿಲುವು ತಳೆದಿರುವುದು ಸುಸ್ಪಷ್ಟ. ಅದ್ದರಿಂದ ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದವು ಇತ್ತೀಚಿಂದ ಹೊಸ ಅವತಾರವನ್ನು ಹೊಂದಿತು ಎಂಬುದೂ ವೇದ್ಯ. ಶ್ರೀಮತಿ ಗಾಂಧಿಯವರ ಪ್ರಚಾರಿಗಳು ಇಂದಿಗೂ ತಮ್ಮ ಇಂದಿರಾ ಪೂಜೆ, ಇಂದಿರಾಸ್ತುತಿ ಮತ್ತು ಇಂದಿರಾ ವಿಶ್ವಾಸದ ಬಗ್ಗೆ ಹೆಗ್ಗಳಿಕೆ ಕೊಚ್ಚುತ್ತಿರಬಹುದು; ಆದರೆ, ಕರ್ನಾಟಕಕ್ಕೆ ಆಕೆಯಿಂದ ನ್ಯಾಯ ಸಿಗಲಿಲ್ಲ; ಸಿಗುವುದೂ ಇಲ್ಲವೆಂಬುದು ಹಗಲಿನಷ್ಟು ಸತ್ಯ.

ಮಹಾಜನ ಆಯೋಗದ ವರದಿಯು ಸಂಸತ್ತಿನ ಮುಂದೆ ಬಂದಾಗ, ಸಂಸತ್ತು ಕರ್ನಾಟಕಕ್ಕೆ ಸರಿಯಾದ ನಿರ್ಣಯ ಮಾಡುವುದು ಸಾಧ್ಯವಿಲ್ಲ. ಏಕೆಂದರೆ ಶ್ರೀಮತಿ ಗಾಂಧಿಯವರ ಸರಕಾರವನ್ನು ಉರುಳಿಸಬಯಸದ ಸಂಸತ್ ಸದಸ್ಯರು ಕನ್ನಡಿಗರ ಪರವಾಗಿ ಮತ ನೀಡುವರೆಂದು ಕನಸಿನಲ್ಲೂ ನಂಬಲಾಗದು. ಶ್ರೀ ಚವನರಾದಿಯೂ ಹಿರಿಯ ಮಂತ್ರಿಗಳು ಮರಾಠಿಗರು ಆಗಿರುವಾಗ, ಶ್ರೀಕಂಠೆಗೆಲ್ಲರಂಥ ಸಮರ್ಥ ಕನ್ನಡಿಗರೇ ಕನ್ನಡಿಗರ ಬೆನ್ನು ಮೂಳೆಯನ್ನು ಮುರಿಯುವ ಕೆಲಸದಲ್ಲಿ ನಿಂತಿದ್ದಾರೆ. ಇಂಡಿಕೇಟಿನಲ್ಲಾಗಲೀ ಸಿಂಡಿಕೇಟಿನಲ್ಲಾಗಲೀ ಕನ್ನಡಿಗರ ಪರವಾಗಿ ಇವರು ಇದುವರೆಗೂ ಬಾಯಿ ಬಿಚ್ಚಿದವರಲ್ಲ. ಕೇಂದ್ರದಲ್ಲಿ ಸಚಿವರಾಗಿರುವ ಕನ್ನಡಿಗರೆಲ್ಲರೂ ಅಲ್ಲಿ ಕನ್ನಡ ಹಿತವನ್ನು ಬದಿಗಿಟ್ಟು, ತಮ್ಮ ಹಿತವನ್ನೇ ನೋಡುತ್ತಿದ್ದಾರೆ; ರಾಜ್ಯಕ್ಕೆ ಬಂದು ತಮ್ಮ ಸ್ಥಾನದ ಭದ್ರತೆಗಾಗಿಯೋ ಎಂಬಂತೆ ಶ್ರೀಮತಿಯನ್ನು ಹೊಗಳಿ ಆಕೆಯ ಅಂಧಭಕ್ತರಾಗಬೇಕೆಂದನ್ನುತ್ತಾರೆ. ಇಷ್ಟರಿಂದಲೇ ಅವರಿಗೆ ಸಂತೃಪ್ತಿ. ಆದ್ದರಿಂದ ಕನ್ನಡಿಗರೀಗ ತಮಗೆ ಬಿದ್ದ ಇಂದಿರಾ ಬಡಿಗೆಯನ್ನು ತಾಳಿಕೊಳ್ಳುವ ಹೊಸ ಶಕ್ತಿ ಸಂಪನ್ನರಾಗಬೇಕಾಗಿದೆ.

ಮಹಾಜನ ಆಯೋಗ ರಚನೆಯನ್ನು ಒತ್ತಾಯಿಸಿದ ಮರಾಠಿಗರು ಅದರ ವರದಿ ಪ್ರಕಟವಾದೊಡನೆಯೇ ಅದನ್ನು ತಿರಸ್ಕರಿಸಿದರು. ಆಗ ಪ್ರಧಾನಿಯವರು ಮರಾಠಿಗರ ಒತ್ತಾಯಕ್ಕೆ ಮಣಿದು ನಿರ್ಧಾರ ಕೈಕೊಳ್ಳುವುದನ್ನು ಮುಂದೂಡುತ್ತ ಬಂದರು. ಆಕೆ ಯಾರ ಒತ್ತಾಯ-ಹಂಗು ದಾಕ್ಷಿಣ್ಯಗಳಿಗೂ ಸಗ್ಗುವುದಿಲ್ಲವೆಂದು ವಿಶ್ವಾಸದ ಮಾತಾಡುತ್ತಿದ್ದ ಇಂಡಿಕೇಟ್ ಧುರೀಣರುಗಳು ವರದಿಯನ್ನು ಸಂಸತ್ತಿನ ಮುಂದೆ ಮಂಡಿಸುವುದಕ್ಕೆ ಯಾರ ಒತ್ತಾಯ ಬಂತೆಂದು ಹೇಳಬಲ್ಲರೇ? ಕರ್ನಾಟಕ ಕಾಂಗ್ರೆಸ್ಸೂ ಇದಕ್ಕೆಂದೂ ಒಪ್ಪಲಿಲ್ಲ. ಆರಂಭದಿಂದಲೂ ಶ್ರೀಮತಿ ಗಾಂಧಿ ರಾಷ್ಟ್ರೀಯ ನೀತಿಯಿಂದ ಈ ಸಮಸ್ಯೆಯನ್ನು ನೋಡಿದ್ದೇ? ಚುನಾವಣೆ—ಗೆಲುವು—ಇವುಗಳಿಗಾಗಿ ಮರಾಠಿಗರಿಗೆ ವಚನ-ಇದು ಆಕೆ ನಡೆದು ಬಂದ ದಾರಿ. ಈಗ ನಡೆದುದಾದರೂ ಅದೇ. ಸಂಸತ್ತಿನಲ್ಲಿ ಮರಾಠಿಗರ ಅನುಕೂಲ ನಿರ್ಧಾರವಾಗುವಂತೆ ಎಲ್ಲ ವ್ಯವಸ್ಥೆಯನ್ನೂ ಆಕೆ ಕೈಕೊಳ್ಳುತ್ತಾರೆ. ಕನ್ನಡಿಗರಿಗಾದ ಅನ್ಯಾಯಕ್ಕೆ ತಾನು ಮೂಲ ಕರ್ತೆಯಾಗಿದ್ದರೂ ಅದಕ್ಕೆ ಸಂಸತ್ತನ್ನು ಬೊಟ್ಟು ಮಾಡುವ ಮುಗ್ಧತೆ ಆಕೆಯದ್ದು. ತಾನು ನೇಮಿಸಿದ್ದ ಆಯೋಗದ ವರದಿಯ ಮೇಲೆ ನಿರ್ಧಾರ ಕೈಕೊಳ್ಳುವ ತನ್ನ ವ್ಯಕ್ತಿಗತ ಹೊಣೆಗಾರಿಕೆಯಿಂದ ನುಸುಳಿಕೊಳ್ಳುವ ಚಾತುರ್ಯವಾಕೆಯದ್ದು.

ಕರ್ನಾಟಕವು ಏನೇ ತಿಪ್ಪರ ಲಾಗ ಹಾಕಿದರೂ ಮಹಾಜನ ವರದಿಯು ಸಂಸತ್ತಿನ ಮೇಜಿನ ಮೇಲೆ ಬರುವುದು ಈಗ ಖಂಡಿತವೇ. ಸರಕಾರದ ಹೊಣೆಗೇಡಿತನದ ಬಗ್ಗೆ ಬಹುಮಾಸ್ತ್ರಗಳು ಎಸೆಯಲ್ಪಟ್ಟರೂ ರಾಜಕೀಯ ನಿರ್ಧಾರವೊಂದನ್ನು ಸಂಸತ್ತು ತೆಗೆದುಕೊಳ್ಳುವುದು ಅಷ್ಟೇ ಖಂಡಿತ. ಈ ನಿರ್ಧಾರ ಕನ್ನಡಿಗರಿಗೆ ಪ್ರತಿಕೂಲವಾಗುವುದೂ ಸ್ವತಃಸಿದ್ಧ. ಶ್ರೀ ವೀರೇಂದ್ರ ಪಾಟೀಲರು ಕರ್ನಾಟಕಕ್ಕೆ ನ್ಯಾಯ ದೊರಕಿಸುವಲ್ಲಿ ಅಶಕ್ತರಾದರು ಎಂದು ಹಂಗಿಸುವ ನಾಲಿಗೆ ಸಿಂಡಿಕೇಟಿನ ಗೋಣು ಮುರಿಯುವ ವಿಚಿತ್ರ ರಾಜಕೀಯವೂ ಇದರಲ್ಲಿ ಅಡಗಿದೆಯೆನ್ನಿ. ಶ್ರೀ ವೀರೇಂದ್ರ ಪಾಟೀಲರ ಪ್ರತಿಷ್ಠೆಗೆ ನಾಯಕತ್ವಕ್ಕೆ ಇನ್ನೊಂದು ಬ್ರೇಕ್ ಸವಲು. ರಾಜ್ಯ ಹಿತಶತ್ರುಗಳಾದ ರಾಜ್ಯದ ಇಂಡಿಕೇಟ್ ಸಚಿವ-ಸಂಸತ್ ಸದಸ್ಯರೇನ ಮಾಡುತ್ತಾರೆ ಎಂಬುದನ್ನೊಂದು ಪ್ರಶ್ನೆ. ಶ್ರೀಮತಿ ಗಾಂಧಿಯವರ ಭಕ್ತರಾಗಿಯೇ ಉಳಿಯುತ್ತಾರೆಯೇ? ಅಥವಾ ರಾಜ್ಯದ ಹಿತಕ್ಕಾಗಿ ರಾಜೀನಾಮೆ ನೀಡುತ್ತಾರೆಯೇ? ಪಾಪ, ದೇಶದ ಹಿತಕ್ಕೆ ದೇಶಪ್ರೇಮವನ್ನು ನಾಟಕೀಯ ಮಾತುಗಳಲ್ಲಿ ಜಾಹೀರುಪಡಿಸುತ್ತ, ಪತ್ರಿಕಾವಾದಿಗಳಲ್ಲಿ ಏತಿಯನ್ನು ಕಾಣುವ ಡಿಳ್ಳೀಶ್ವರಿಯ ಪ್ರಿಯರಾಗಲು ಭಾಷೆ-ಪ್ರದೇಶಗಳೆಂಬ ಸಂಕುಚಿತ ಪ್ರವೃತ್ತಿಗಳಿಗೆ ಮನಸೋಲುವುದು ಸಾಧ್ಯವೇ? ಅವರ ವಿಶಾಲ ಹೃದಯ "ಎಲ್ಲಾದರೂ ಇರು ಎಂತಾದರು ಇರು" ಎಂದು ಹರಸಲು ಉತ್ಸುಕರಾಗಿರುವಾಗ, ಮಹಾಜನ ವರದಿ ಎಲ್ಲಿ ಹೋದರೆ ಏನು? ಆದರೆ, ಜಾಣರಾದ ಕನ್ನಡಿಗರು ತಮ್ಮ ಸತ್ವಶೀಲತೆಯ ಈ ಸನ್ನಿವೇಶದಲ್ಲಿ ಕೈಕಟ್ಟಿ ಕೂತುಕೊಳ್ಳುತ್ತಾರೆಯೇ?

ವಿಷಗಾಳಿ ಆವರ್ತ

ಮದ್ರಾಸು ಇತರ ಸಂಗತಿಗಳಲ್ಲಿ ದಕ್ಷಿಣ ಭಾರತಕ್ಕೆ ಮಾರ್ಗದರ್ಶನ ನೀಡುತ್ತಿರುವಂತೆಯೇ ಚಳುವಳಿಗಳಿಗೂ ನಾಯಕತ್ವ ನೀಡುತ್ತದೆಂದು ಹೇಳಬೇಕು. ಕೆಲವು ವರ್ಷಗಳಿಗೆ ಮೊದಲು ಹಿಂದೀ ವಿರೋಧಿ ಗಾಳಿ ಬೀಸತೊಡಗಿದ್ದು ದಕ್ಷಿಣದ ಈ ಮಹಾನಗರದಿಂದಲೇ. ತಮಿಳನ್ನೇ ಸರ್ವಶ್ರೇಷ್ಠ ಭಾಷೆಯೆನ್ನುವ ಈ ತಮಿಳರು ತಮಿಳು ಮಾಧ್ಯಮದ ವಿರುದ್ಧ ಚಳುವಳಿ ಹೂಡಲಾರಂಭಿಸಿದ್ದಾರೆ. ಇಂಗ್ಲಿಷ್ ಮಾಧ್ಯಮವೇ ಬೇಕು ಎಂಬುದಿವರ ಇರಾದೆಯಾದ್ದಂತಿದೆ. ಜ್ಞಾನಗಂಗೆ ಯಾವ ಮಾಧ್ಯಮದಲ್ಲಿ ಹರಿದರೂ ಚಿಂತೆಯಿಲ್ಲ. ಆದರೆ, ಅದು ಎಲ್ಲರಿಗೂ ಎಟಕುವಂತಾಗಬೇಕಾದುದು ಅಗತ್ಯ. ವಿದೇಶೀ ಭಾಷೆ ಇಂಗ್ಲಿಷಿಗೆ ಸಲ್ಲದ ಸ್ಥಾನಮಾನ ನೀಡುವುದರಿಂದ ಜ್ಞಾನದ ಪರಿಪೂರ್ಣ ಬೆಳವಣಿಗೆ ಅಸಾಧ್ಯವೆಂಬುದು ಸರ್ವವೇದ್ಯ. ಹಾಗಿರುವಾಗ, ಪ್ರಾದೇಶಿಕ ಭಾಷಾ ಮಾಧ್ಯಮದತ್ತ ಜನರೊಲವು ಹರಿದು, ಅದು ಜನಪ್ರಿಯವಾಗುತ್ತಿದೆಯೆನ್ನುವಾಗ, ಅದರ ವಿರುದ್ಧ ಚಳುವಳಿ ಹೂಡುವುದು ಯಾವ ದೇವರಿಗೆ ಪ್ರೀತಿಯೋ! ಹಿಂದೀ ವಿರೋಧಿ ನೀತಿಯ ಹಿಂದೆ ದ್ರಾವಿಡ ಮುನ್ನೇತ್ರ ಕಳಗಂ ಇದ್ದಂತೆ ಈ ತಮಿಳು ಮಾಧ್ಯಮ ವಿರೋಧದ ಹಿಂದೆ ಯಾರಾದರೂ ಇದ್ದಾರೆಯೇ?— ಇದು ಅಸ್ಪಷ್ಟ. ತಮಿಳು ನಾಡಿನ ವಿದ್ಯಾರ್ಥಿಗಳು ಇಂಗ್ಲಿಷ್ ಭಾಷೆಯ ಮೇಲೆ ಹೊಂದಿರುವ ಮೋಹ ಅಸಾಧುವಾದದ್ದು. ಒಂದು ಭಾಷೆ ಮಾತಾಡುವವರನ್ನೇ ಒಡೆಯುವಂಥದ್ದು. ಇದರಿಂದ ಜನತೆಗೇನೂ ಲಾಭವಿಲ್ಲ. ಪ್ರಾದೇಶಿಕ ಮಾಧ್ಯಮದಲ್ಲೂ ಇಂಗ್ಲಿಷ್ ಭಾಷಾಧ್ಯಯನಕ್ಕೆ ಅವಕಾಶವಿದೆ. ಈ ಮಾಧ್ಯಮದಲ್ಲಿ ಕಲಿತವರಿಗೆ ವಿಶಾಲ ಉದ್ಯೋಗಾವಕಾಶವೂ ಇದೆ. ಆದ್ದರಿಂದ ಯಾವ ನಿಂದೆಗೂ ಕಾರಣವಿಲ್ಲ. ಬದಲಿಗೆ ವಿಷಯವನ್ನು ಸ್ಪಷ್ಟವಾಗಿ, ಸಮರ್ಪಕವಾಗಿ ಅಧ್ಯಯನ ಮಾಡುವ ಹೊಸ ಸೌಲಭ್ಯ ದೊರೆಯುತ್ತದೆ. ಹೀಗೇಕೆ ಹಾಲಗಳಲ್ಲಿ ಹೋಳಿಗೆಯೇ ಬೇಕು ಹಾಲು ಬೇಕು ಎನ್ನುವಷ್ಟು ಮೂರ್ಖರಾಗುತ್ತಾರೆಯೋ?

ವಿವಾಹ—ಸತ್ಕಾರ

ಉಡುಪಿಯ ಶ್ರೀ ಪಿ. ಶ್ರೀಪತಿ ಆಚಾರ್ಯರು ಇವರ ಪುತ್ರ ಚಿ| ರಾಮಚಂದ್ರ ಆಚಾರ್ಯರ ವಿವಾಹ ಸಮಾರಂಭವು ಬೆಂಗಳೂರಿನ ಎಡ್ವೋಕೇಟ್ ಶ್ರೀ ಬಿ. ಪಿ. ಹೆಬ್ಬಾರ್ ಇವರ ಪುತ್ರಿ [illegible] ಅವರೊಡನೆ ಇದೇ ತಾ. 4ರಂದು ಬೆಂಗಳೂರಿನ ಜಯನಗರದ ಕಲ್ಯಾಣ ಮಂಟಪದಲ್ಲಿ ಜರಗಿದ ಸಂಬಂಧ ಇದೇ ತಾ. 7ರಂದು ಉಡುಪಿಯ ಬಂಟ್ಸ್ ಹಾಸ್ಟೆಲ್ ರಸ್ತೆಯ ತಮ್ಮ ನಿವಾಸದಲ್ಲಿ ಸತ್ಕಾರ ಸಮಾರಂಭವೊಂದನ್ನು ವ್ಯವಸ್ಥೆಗೊಳಿಸಿದ್ದರು. ಇದರಲ್ಲಿ ಊರ ಹಾಗೂ ಪರವೂರ ಗಣ್ಯ ವ್ಯಕ್ತಿಗಳು ಬಹುಸಂಖ್ಯೆಯಲ್ಲಿ ಪಾಲುಗೊಂಡಿದ್ದು ವಧೂವರರನ್ನು ಆಶೀರ್ವದಿಸಿದರು.

ಗೇಹರಾಜ್ಯದಲ್ಲಿ

ನರಭಕ್ಷಕನಿಗೆ ನರನೆತ್ತರಿನಾಸೆ

"ಕೇಳಿಸ್ತೇನ?"

"ಏನು?"

"ಪಾಕಿಸ್ತಾನದಲ್ಲಿ ಚುನಾವಣೆ ನಡೆಯೋದಿಲ್ಲ, ನಡೆಯೋದಿಲ್ಲ ಅಂತಿದ್ದಂತೇನೇ ಅದು ನಡೆದೂ ಹೋಯ್ತು...."

"ಹ್ಞಂ.... ಅವತ್ತಿನೂ ನೋಡು."

"ಏನ?"

"ಪ್ರಚಂಡ ಮಾರುತ ಪೀಡಿತ ಪ್ರದೇಶಗಳಲ್ಲಿ ಚುನಾವಣೆ ನಡೀಲಿಲ್ಲ...."

"ನೀವೇ ಹೇಳಿ. ಜನ ತುತ್ತು ಹಿಟ್ಟಿಗಾಗಿ ವಿಲಿವಿಲಿ ಒದ್ದಾಡುತ್ತಿರುವಾಗ, ಓಟು ಕೊಡುವುದು ಹೇಗೆ"?

"ಅದೇನೋ ಸರೀನೇ. ಎಲ್ಲಾ ಓಟು ಮುಗಿಯುವ ವರೆಗೆ ತನ್ನ ನವಾಧಿಕಾರವನ್ನು ಉಳಿಸಲು ಜನರಲ್ ಯಾಹ್ಯಾ ಖಾನರಿಗೊಂದು ಸದವಕಾಶ.'

"ಹ್ಞಂ.... ನೋಡಿ, ಚುನಾವಣೆಯ ಫಲಿತಾಂಶವೂ ಭಾರೀ ಸ್ವಾರಸ್ಯವಿದೆಯಂತಲ್ಲ....?'

"ಇರಲೇಬೇಕು ನೋಡು— ಪೂರ್ವ ಪಾಕಿಸ್ತಾನ...."

'ಅಂದ್ರೆ ಪೂರ್ವ ಬಂಗಾಳ...."

"ಹ್ಞಂ, ಅದೇ. ಅಲ್ಲಿ ನಡೆದಿರೋದು ೧೫೩ ಸ್ಥಾನಗಳಿಗೆ ಚುನಾವಣೆ, ಇನ್ನು ಒಂಭತ್ತು ಕ್ಷೇತ್ರಗಳಲ್ಲಿ ಆಗಬೇಕಷ್ಟೆ. ಮತ್ತೆ ಪಶ್ಚಿಮದಲ್ಲಿ ೧೩೮ ಸ್ಥಾನಗಳದ್ದೋದು."

"ಎಲ್ಲಕ್ಕೂ ಚುನಾವಣೆ ನಡೀತು ಅನ್ನಿ."

"ಹೌದು. ಒಟ್ಟು ೨೯೦ ಸ್ಥಾನಗಳಲ್ಲಿ ಅವಾಮಿ ಲೀಗ್ ಹಿರಿಯ ರಾಜ್ಯಕೀಯ ಪಕ್ಷವಾಗಿ ಗೆದ್ದು ಬಂದಿರುವುದು, ಅನಂತರದ್ದು ಜನತಾಪಕ್ಷ...'

'ಜನತಾ ಪಕ್ಷ ಅಂದ್ರೆ...."

"ಆದ ಮಾಜಿ ವಿದೇಶ ಮಂತ್ರಿ ಶ್ರೀ ಝಡ್. ಎ. ಭುಟ್ಟೋ ಅವರ ಪಕ್ಷ. ಆದ ಎಂಭತ್ತಕ್ಕೂ ಹೆಚ್ಚಿದ ಸ್ಥಾನಗಳನ್ನ ಗಳಿಸಿ ಕೊಟ್ಟ ವಸ್ತು ಅವಾಮಿ ಲೀಗು ಅಂದರೆ, ಶ್ರೀ ಶೇಖ್ ಮುಜಿಬುರ್ ರೆಹಮಾನರದ್ದು ಅದು. ನೂರರವತ್ತೈದಕ್ಕೂ ಹೆಚ್ಚು ಸ್ಥಾನ ಪಡೆಯಿತು..'

"ಹೌದು, ಆದ್ರೂ ಒಂದು ತಮಾಷೆ...'

"ಏನ?"

"ಅವಾಮಿ ಲೀಗ ಪೂರ್ವ ಪಾಕಿಸ್ತಾನದಲ್ಲಿ ಮಾತ್ರ ಜೀವಂತ. ಇನ್ನೊಂದ ಅಲ್ಲಿ ನಿರ್ಜೀವ."

"ಒಟ್ಟಿನಲ್ಲಿ ಅವಾಮಿ ಲೀಗೇ ಎತ್ತರದಲ್ಲಿ ನಿಲ್ಲುವುದಾದರೂ ಅದಕ್ಕೆ ನಿಚ್ಚಳ ಬಹುಮತ ಬರುವುದಿಲ್ಲ."

"ಆಗ?"

"ಆಗ ಏನು, ಯಾರನ್ನಾದರೂ ಸೇರಿಕೊಂಡು ಸಮಿಶ್ರ ಸರಕಾರ ಮಾಡಬೇಕಷ್ಟೆ. ಆದರೆ, ಇದು ಅಷ್ಟು ಸುಲಭವಿಲ್ಲ"

"ಯಾಕೆ?"

"ಅವಾಮಿ ಲೀಗು ಭಾರತದೊಡನೆ ಸುಮಧುರ ಸಂಬಂಧವೇರ್ಪಡಬೇಕೆಂದು ಮನೋವಾಕ್ಕಾಯ ಗಳಿಂದ ಬಯಸುತ್ತದೆ. ಆದರೆ, ಭುಟ್ಟೋ ಮಹಾಶಯರು ಇದನ್ನು ಸುತರಾಂ ಒಪ್ಪುವುದಿಲ್ಲ."

"ಅಲ್ಲಾ, ತಾವೇ ಭಾರತದ ಮೇಲೆ ಆಕ್ರಮಣ ಮಾಡಿದ್ದಂತ್ಲೇ ಅವ್ರು ಚುನಾವಣಾ ಭಾಷಣ ಮಾಡ್ತಿದ್ರಂತೆ...."

"ಅದ್ರಲ್ಲಿ ಗೆದ್ದೂ ಬಂದ್ರಲ್ಲ?"

"ಹ್ಞಂ...ಐದು ಕಡೆಗಳಲ್ಲಿ ಪ್ರಚಂಡ ಬಹುಮತದಿಂದ ಗೆದ್ರಂತೆ...."

"ಅದೇ ಅಂದದ್ದು ನೋಡು, ಪೂರ್ವ ಪಶ್ಚಿಮ ಪಾಕಿಸ್ತಾನಗಳಲ್ಲಿ ಪೂರ್ವ ಪಶ್ಚಿಮದಷ್ಟು ಅಂತರ!"

"ಅಂದ್ರೆ...."

"ನೋಡು, ಪೂ. ಪಾ.ದಲ್ಲಿ ರೆಹಮಾನರ ವಿಜಯ ಅಂತಂದ್ರೆ ಭಾರತದೊಡನೆ ಸ್ನೇಹವಿರಬೇಕೆನ್ನುವವರ ವಿಜಯವು. ಪ.ಪಾ.ದಲ್ಲಿ ಭುಟ್ಟೋ ವಿಜಯ ಅಂದ್ರೆ ಭಾರತದೊಡನೆ ಶತ್ರುತ್ವ ಸಾಧಿಸಬೇಕೆನ್ನೋರ ಕೊರಳಿಗೆ ಹೂ ಹಾರ..."

"ನೋಡಿ, ಅಲ್ಲಿನ ಜನತೆಯನ್ನು ರಾಜ್ಯಕೀಯ ಪಕ್ಷಗಳು ಎಲ್ಲಿಗೊಯ್ದು ಮುಟ್ಟಿಸಿವೆ ಎಂಬುದನ್ನು ಇದು ಎತ್ತಿ ತೋರಿಸುತ್ತೆ. ಅಲ್ರಿ, ನಮ್ಮಲ್ಲಿನ ಹಾಗೆ ಅಲ್ಲಿ ಇತರ ಪಕ್ಷಗಳ ಇಲ್ಲವೇನ?"

"ಇಲ್ಲದೇ ಉಂಟೆ? ಮುಸ್ಲಿಂ ಲೀಗಗಳು, ಇಸ್ಲಾಂ ವಾದಿಗಳೂ ನಾಲ್ಕಾರು ಪಕ್ಷ ಕಟ್ಟಿಕೊಂಡಿದ್ದಾರೆ. ಅದ್ರೆ, ದುರ್ದೈವದಿಂದ ಅವರನ್ನ ಪಾಕಿಸ್ತಾನ ಬಿಟ್ಟು ಕಜ್ಜಕ್ಕೆ ಹೋಗಬೇಕೆಂದು ಜನ ತಪ್ಪಣೆ ಮಾಡಿತು...."

"ಅಂದ್ರೆ ಮಣ್ಣು ಮುಕ್ಕಿತು...."

"ಮಣ್ಣು ಮುಕ್ಕಿತು ಅಲ್ಲ, ಜನ ಮಣ್ಣುಗೂಡಿಸಿತು...."

"ಅಲ್ಲಾರೀ, ಇಸ್ಲಾಮಿನ ಹೆಸ್ರಲ್ಲಿ ಅತ್ಯಾಚಾರ ಮಾಡುವವ್ರು..."

"ಯಾರ ಮೇಲೆ?"

"ಹಿಂದುಗಳ ಮೇಲೆ"

"ನೋಡಿ, ಭುಟ್ಟೋ ಮಹಾಶಯರು ಅದನ ಸಾಧಿಸಿದ್ದಾರೆ; ಸಾಧಿಸ್ತಾರೆ. ಆದ್ದರಿಂದ್ಲೇ ಅವ್ರಿಗೇ ಓಟು."

"ಅಂದ್ರೆ ಪಶ್ಚಿಮದಲ್ಲಿ ಭಾರತ ವಿದ್ವೇಷವನ್ನೇ ಬಂಡವಾಳವನ್ನಾಗಿಟ್ಟುಕೊಂಡು ಭುಟ್ಟೋ ಗೆದ್ದರು."

"ಅಲ್ಲವೇ ಮತ್ತೆ? ಅವರ ನೀತಿ ಪೂರ್ವಕ್ಕೆ ಮೆಚ್ಚುಗೆಯಾಗ್ಲಿಲ್ಲ. ಆದ್ದರಿಂದ ಅವಾಮಿ ವಿಜಯವಾಯ್ತು..."

'ಅಲ್ಲ, ಒಂದೇ ಕೋಮಿನವರ ಮನೋವೃತ್ತಿಯಲ್ಲೂ ಎಂತೆಂಥ ವ್ಯತ್ಯಾಸ ಪೂರ್ವ—ಪಶ್ಚಿಮ!'

"ಅಲ್ಲ, ಲಾರ್ಡ್ ಕರ್ಜನ್ ಪ್ರಭುಗಳ ವಿರುದ್ಧ ಬಂಗಾಳದ ಏಕೀಕರಣಕ್ಕಾಗಿ ಒಂದಾಗಿ ಹೋರಾಡಿದ ಹುಲಿಗಳಲ್ಲವೇ ಅವ್ರು?"

"ಹ್ಞಂ...ಅಂದ್ರೆ ಅವಾಮಿ ಪಕ್ಷದ ನೇತೃತ್ವ ಬಂದರೆ, ಭಾರತದ ಬಗೆಗೆ ಪಾಕ್ ನೀತಿ ಬದಲಾಗಬಹುದು..."

'ಅದನ್ನ ಅವ್ರೇ ಅಂದಿದ್ದಾರಲ್ಲಾ. ಅವರೆ—ಕೇಂದ್ರಗಳ ನಡುವಣ ಹಾಲು ನೀರಿನ ಸಂಬಂಧ ಭಾರತ ಪಾಕಿಸ್ತಾನಗಳ ಬೇಕೆಂದು....'

"ಅಂತೂ, ಪಾಕ್ ಚುನಾವಣೆಗಳ ಫಲಿತಾಂಶ ನಮಗೆ ಪರವಾಗಿದೆ ಅನ್ನಬಹುದು....'

"ಅಲ್ವೆ, ಬರೀ ಫಲಿತಾಂಶಪರವಾದ್ರೆ ಏನು ಬಂತು?"

"ಯಾಕೆ?"

"ನೋಡು, ಈಗ ನಡೆದದ್ದು ರಾಷ್ಟ್ರೀಯ ಎಸೆಂಬ್ಲಿಗಾ ಚುನಾವಣೆ. ಈ ಎಸೆಂಬ್ಲಿಯು ಪ್ರಜಾತಂತ್ರವಾದಿ ರಾಜ್ಯಾಂಗ ರೂಪಿಸಬೇಕು. ಅವಾಮಿ ಲೀಗು ದೇಶ— ವಿದೇಶಗಳ ನೀತಿಯಲ್ಲಿ ತಲೆ ತಿರುಕತನವನ್ನು ಬಯಸುವುದಿಲ್ಲ. ಅದು ಭಾರತ ದ್ವೇಷ ನೀತಿಯನ್ನು ದೂರವಿಟ್ಟು ಸುಮಧುರ ಸಂಬಂಧಕ್ಕೆ ತೊಡಗುತ್ತದೆ...."

"ಹೌದ ...."

"ಹಾಗೇನೇ ವಿದೇಶ ವ್ಯವಹಾರ ಮತ್ತು ಸಂರಕ್ಷಣೆಗಳನ್ನ ಬಿಟ್ಟು ಉಳಿದೆಲ್ಲ ವಿಷಯಗಳಲ್ಲೂ ಪ್ರಾಂತಕ್ಕೆ ಸ್ವಾತಂತ್ರ್ಯ ಬೇಕು ಎನ್ನುವ ಲೀಗು ತನ್ನ ಬಹುಮತದ ಬಲದಿಂದ ಅದನ್ನು ಸಾಧಿಸಿದರೆ..."

"ಏನು?"

"ಯಾಹ್ಯಾಖಾನರ ಮಿಲಿಟರಿ ಆಡಳಿತ ಅದನ್ನೆಂತ ಸಹಿಸ ಬಲ್ಲುದು?"

"ಯಾಕೆ?"

"ಅವರೂ ಸಿಂಹಾಸನ ಬಿಟ್ಟು ಹೋಗಬೇಕಾಗುತ್ತದೆ..."

"ಹಾಗಾದರೆ...."

"ಹಾಗಾದರೆ ಮತ್ತೇನೂ ಇಲ್ಲ. ಒಮ್ಮೆ ಮಾನವ ರಕ್ತದ ರುಚಿ ಕಂಡ ಹುಲಿ ಮತ್ತೆ ಮತ್ತೆ ಅದನ್ನೇ ಬಯಸುತ್ತದೆ. ಒಂದು ಬಾರಿ ಅಧಿಕಾರದ ಸವಿ ಉಂಡ ಮಿಲಿಟರಿ ಅಧಿಕಾರಿಗಳು ಮತ್ತೆ ಮತ್ತೆ ಅಧಿಕಾರದಲ್ಲೇ ಉಳಿಯಲು ಬಯಸುತ್ತಾರೆ...."

"ಅಂದ್ರೆ, ಯಾಹ್ಯಾಖಾನರು ಅಷ್ಟು ಒಪ್ಪುವ ಸಂಭವವಿಲ್ಲ"

"ಅದನ್ನೇ ಅವರೀಗ ಚಿಂತಿಸುತ್ತಿದ್ದಾರೆ. ಪ್ರಾಂತೀಯ ಎಸೆಂಬ್ಲಿಯ ಚುನಾವಣಾ ಫಲಿತಾಂಶ ಹೇಗಿದೆಯೆಂದು ನೋಡುತ್ತಾರೆ..."

'ಆಮೇಲೆ'?

"ತನ್ನ ಅಧಿಕಾರದ ಭದ್ರತೆಯ ಬಗ್ಗೆ ಆ ವಾಗಿ ನೋಡುತ್ತಾರೆ."

"ಕೊನೆಗೆ'?

'ಪ್ರಜಾಸತ್ತೆಯನ್ನು ನೆಲೆಗೊಳಿಸುವುದರಿಂದ ತನಗೆ ಹಾನಿಯುಂಟಾದರೂ ಮನಗಾಣುತ್ತಾರೆ. ಆದ್ದರಿಂದ ಸ್ವಲ್ಪ ಬಗ್ಗು ಮತ ಕಡೆಗೆ ಅನ್ನಿ ಎಂದು ಅವಾಮಿಗಳಿಗೆ ದೂರವೂಡುತ್ತಾರೆ.'

"ಹ್ಞಂ.... ಇನ್ನೂ ಕೇವಲ ವರ್ಷದ ದಬದಬ...'

"ಅಥವಾ ಅವಾಮಿ ಲೀಗು ಬಹುಮತದ ನಿರ್ಣಯಕ್ಕೆ ತನ್ನ ಅಸಮ್ಮತಿ ತೋರಿಸಿ ರಾಜ್ಯಕೀಯ ಬಿಕ್ಕಟ್ಟನ್ನು ಹುಟ್ಟಿಸಿ, ಅಸೆಂಬ್ಲಿಯನ್ನೇ ಬರಖಾಸ್ತು ಮಾಡುತ್ತಾರೆ..."

"ಅಂದ್ರೆ, ಅಧಿಕಾರಕ್ಕಾಗಿ ಯಾಹ್ಯಾಖಾನರು ಏನನ್ನೂ ಮಾಡಬಲ್ಲರು...."

"ಯಾಹ್ಯಾರೇಂದೇನು? ನಮ್ಮ ಶ್ರೀಮತಿ ಗಾಂಧಿ ಮಾಡಿಲ್ಲವೆ? ಉಳಿದವರೂ

(ಒಂಭತ್ತನೇ ಪುಟ ನೋಡಿರಿ)

ಕಾರ್ಕಳ ಮುನ್ಸೀಫ್ ಕೋರ್ಟಿನಲ್ಲಿ

O. S. No. 399/1970

ಸಿಂಡಿಕೇಟ್ ಬ್ಯಾಂಕ್, ಮಣಿಪಾಲ ಇದರ ಸುಪರಿಂಟೆಂಡೆಂಟ್ ಆಫ್ ರಿಕವರೀಸ್ A. J. Rebello —ವಾದಿ

ಮತ್ತು

1 B. ಗೋವಿಂದರಾಮ ಶೈ
2 B. ಪುಂಡಲೀಕರಾಮ ಶೈ
—ಪ್ರತಿವಾದಿಗಳು

೨ನೇ ಪ್ರತಿವಾದಿ B. ಪುಂಡಲೀಕರಾಮ ಶೈ, ರಾಮ ಶೈಗಳ ಮಗ, ಉಡುಪಿ ತಾಲ್ಲೂಕು ಬೆಳ್ಳೆ ಗ್ರಾಮ ಇವರಿಗೆ—

ವಾದಿ, ಬ್ಯಾಂಕಿನವರು ನಿಮ್ಮಿಂದ ಕೂಡಾ ತಾರೀಕು 16-8-1967ನೇ ದಿವಸದ ಪ್ರೊ. ನೋಟು ಪ್ರಕಾರ, ಬಡ್ಡಿ ಅಸಲು ಬಡ್ಡಿ ರೂಪಾಯಿ 1786-96ಕ್ಕೆ ಖರ್ಚು ಮೇಲೆ ಕೊಡಾ ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ಸದ್ರಿ ಕೋರ್ಟಿನಲ್ಲಿ ತಾರೀಕು 16-1-1971ನೇ ಬೆಳಗ್ಗೆ 11 ಗಂಟೆಗೆ ಬಿಟ್ಟಿರುವುದರಿಂದ ಸದರಿ ದಾವೆಯ ವಿಷಯದಲ್ಲಿ ಏನಾದ್ರೂ ಉದಾಹರಣೆಯಿರುವ ಕ್ಕೆ ನೀವು ಸದ್ರಿ ತಾರೀಕಿನಲ್ಲಿ ಸ್ವತಃ ಅಥವಾ ವಕೀಲರ ಮುಖಾಂತರ ಹಾಜರಾಗಿ ವ್ಯಾಜ್ಯ ಹೇಳಿಕೊಳ್ಳಬಹುದಾಗಿಯೂ, ತಪ್ಪಿದರೆ ಸದರಿ ದಾವೆಯು ನಿಮ್ಮ ಗೈರ ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬುದಾಗಿಯೂ, ಈ ಮೂಲಕ ನಿಮಗೆ ತಿಳಿಯಪಡಿಸಲಾಗುತ್ತದೆ

S. Rajagopal Achar
Advocate for Plaintiff
Karkala, 10-12-70.

ಚಾರುಚಯನ

ಪ್ರಗತಿಗಾಮಿಗಳ ಪ್ರತಿಗಾಮಿತನ

ರಾಜ್ಯ ಲಾಟರಿಯ ೧೧ನೆ ಡ್ರಾದಲ್ಲಿಯೂ ಮಂಗಳೂರು ನಗರದಲ್ಲಿ ಮಾರಿದ್ದ ಟಿಕೇಟಿಗೆ ಬಂಪರ್ ಬಹುಮಾನ.

೧೦ನೆಯ ಡ್ರಾದಲ್ಲಿಯೂ ಇದೇ ಮಂಗಳೂರಿನಲ್ಲಿ ಮಾರಿದ ಟಿಕೇಟಿಗೇನೇ ಬಂಪರ್ ಬಂದದ್ದು.

ನಿರಂತರ ಎರಡು ಬಾರಿ ಬಂಪರ್ ಮಂಗಳೂರಿಗೇ ಬಂದದ್ದರಿಂದ ಅಲ್ಲಿ ಟಿಕೇಟು ಇಚ್ಛಕರ ಭಾರೀ ಕ್ಯೂ ಇರಬಹುದು.

ಎರಡಾದದ್ದು ಮೂರಾಗೀ ತೀರುತ್ತೆ ಎಂಬ ಆಲದ ಮರದಷ್ಟು ಹಳೆಯ ಗಾದೆಯೇ ಈ ಕ್ಯೂ ನಿಂತವರಿಗೆ ಪ್ರೇರಕ; ಉತ್ತೇಜಕ.

ರಾಜ್ಯ ಲಾಟರಿ ಟಿಕೇಟುಗಳನ್ನು ಕೊಂಡ ಲಕ್ಷಾಧಿಪತಿಯಾಗಬಯಸುವವರೆಲ್ಲ ಮಂಗಳೂರಿಗೇ ಧಾಳಿಯಿಡಬಹುದು.

ಇತರ ಕ್ಷೇತ್ರದ ಏಜಂಟರೂ ತಮ್ಮ ಪಾಲಿನ ಟಿಕೇಟುಗಳನ್ನು ಮಂಗಳೂರಿಗೇ ವಿಶೇಷ ಕಮಿಶನ್ ನೀಡಿ ಮಾರ ಹೇಳಬಹುದು.

ಉಡುಪಿ ಹೋಟೇಲ್, ಮದ್ರಾಸ್ ಇಡ್ಲಿ, ಮೈಸೂರ್ ಮಲ್ಲಿಗೆ, ಬನಾರಸ್ ಸೀರೆ ಇತ್ಯಾದಿ ಇತ್ಯಾದಿ ಸ್ಪೆಶಲ್ಲಿನಂತೆ "ಮಂಗ್ಲೂರ್ ಟಿಕೇಟ್"ಗಳೂ ರಾಜ್ಯ, ರಾಷ್ಟ್ರದಂತ ದೇಶದ ತ್ಯಂತ ಲಭ್ಯಮಾನವಾಗಬಹುದು.

ಕೆಮ್ಮಿನ ಕರಿಜನರೊಬ್ಬ ಬೊಂಬಾಯಿಗೆ ಬಂದು ಉಡುಪಿ ಹೋಟೆಲ್ ತೆರೆದನಂತೆ. ಉಡುಪಿ ನಾಮಬಲದಿಂದಾತ ಕೋಟ್ಯಧೀಶನಾದನಂತೆ.

ಬಿದರಿಯಲ್ಲಿಯೂ ಕೋಲಾ ಹಲ್ಲಿಯೂ ಮಂಗಳೂರು ಟಿಕೇಟು ಮಾರಲ್ಪಟ್ಟರೆ, ಅದು ವ್ಯಾಪಾರೋದ್ಧರ್ಮ.

ಗ್ರಾಹಕರಿಗೇನು ಬೇಕೋ ಅದನ್ನು ಆಸಕ್ತಿಯಿಂದ ಪೂರೈಸುವುದು ವ್ಯಾಪಾರಿ ಕರ್ತವ್ಯ.

ಆದ್ದರಿಂದ ಗ್ರಾಹಕ ಮಂಗಳೂರು ಟಿಕೆಟ್ಟು ಬೇಡುವಾಗ ಇಲ್ಲವೆಂದು ನಿರಾಕರಿಸಲು ಅತ ಎಸ್. ಟಿ. ಬಸ್ಸಿನ ಕಂಡಕ್ಟರನಲ್ಲ ತಾನೆ?

ಎಸ್. ಟಿ. ಬಸ್ಸಿನ ಉದಾಹರಣೆ ಯಾಕೆ ಬಂತು ಎಂದರೆ, ಪ್ರಾಯಶಃ ಅವರಷ್ಟು ಫಟಿಂಗರು ಬೇರೆ ರಾಜ್ಯಸರಕಾರಿ ಉದ್ಯೋಗಿಗಳಿಲ್ಲ.

ಆದಾಯವು ಲಾಭ ತೋರಿಸಬಹುದು; ಆದರೆ, ಈ ಉದ್ಯಮದಲ್ಲಿ ರಾಜ್ಯ ಸರಕಾರ ಹೂಡಿದ ಬಂಡವಾಳಕ್ಕೆ ಯಾವ ಸಲೆಯಲ್ಲಾದರೂ ಬಡ್ಡಿ ಬರುವುದೆಂಬ ದಿದೆಯೆ?

ಇದಕ್ಕೆ ಹಲವಾರು ಕಾರಣಗಳಿರಬಹುದು. ಆದರೆ ನೌಕರರೆಲ್ಲ ನೂರಕ್ಕೆನೂ ಭ್ರಷ್ಟಾಚಾರಿಗಳಿರಬಹುದ; ಅದನ್ನು ಪತ್ತೆಹಚ್ಚುವ ವಿಜಿಲೆನ್ಸ್ ಡಿಪಾರ್ಟ್‌ಮೆಂಟೂ ಅದೇ ಬಂಚಾಸರದ ಕೊಟ್ಟಿಯಲ್ಲಿ ಸಮಾವೇಶಗೊಳ್ಳಬಹುದು.

ಇದು ಪ್ರಜಾಪ್ರಭುತ್ವದ ಸಲ್ಲಕ್ಷಣಗಳಲ್ಲಿ ಒಂದು. ನ್ಯೂಯಾರ್ಕ್ ನಗರದ ಮುಖ್ಯಬೀದಿಗಳಲ್ಲೇ ಈ ಅಸುರನು ತಾಂಡವವಾಡುತಿದ್ದಾನೆಂದರೆ, ತಾಂಡವದ ಜನ್ಮಭೂಮಿಯಾದಕ್ಕೆ ಹೊರತಾಗಬೇಕೆಂದರೆ ಸಾಧ್ಯವಿಲ್ಲ.

ಎಸ್.ಟಿ. ಬಸ್ಸುಗಳಲ್ಲಿನ ಡ್ರೈವರುಗಳಿಗೆ ರೂಟ್ ಗೊತ್ತಿರುವುದಿಲ್ಲ; ಕಂಡಕ್ಟರುಗಳಿಗೆ ಸ್ಟೇಶನ್ ತಿಳಿದಿರುವುದಿಲ್ಲ.

ಒಂದು ಕವಲು ರಸ್ತೆಯಲ್ಲಿ ಮೈಲು ಹೋಗಿ, ಬಸ ರೂಟ್ ತಪ್ಪಿಸಿಯೆಂದು ತಿಮ್ಮಡಚಕ್ರವಾತರಚಿಸ ಮೇಲೆಯೇ ರಿವರ್ಸ್ ಕೊಡೆದುದುಂಟು.

ಉಡುಪಿ—ಮಂಗಳೂರು ಸರ್ವೀಸ್ ಹಿರಿಯಡ್ಕಕ್ಕೆ ಹೋಗದೇವೇ ಈಚೆ ಟರ್ನ್ ಹೋಸದ್ದು ಮುಂದುವರಿಯುತ್ತೆ ಎಂದು ಕಂಡಕ್ಟರು ಅಂದದ್ದುಂಟು.

ಸ್ಟೇಟ್ ಸರ್ವಿಸ್ಸು ಸೆಲ್ಫ್‌ಸರ್ವಿಸ್ಸಿನ ಈ ಯುಗದಲ್ಲಿ, ನೌಕರ ಶಾಹಿಯಲ್ಲಿ "ಸರ್ವಿಸ್ಸು" ಮಾತ್ರವಾಗಿದೆ; ಜನಸರ್ವಿಸ್ಸು ಆಗೋದಿಲ್ಲ; ಆಗ ಬೇಕಾಗಿಯೂ ಇಲ್ಲ.

ಏಕೆಂದರೆ, ಅದು ನಷ್ಟಕರದ್ದು; ಜನಜನಕ್ಕೆ ಹಣ ನಷ್ಟ, ಎಲ್ಲಾಟಿಗೆ ಭಾರಿ ನಷ್ಟ.

"ಎರಡಾದ್ದು ಮೂರಾಗುತ್ತೆ" ಅನ್ನೋದು ಸಂಪ್ರದಾಯ; ಪ್ರತಿಗಾಮಿತನ. ಅದನ್ನು ನಂಬೋಬಾರದ್ದು. ಆದ್ದರಿಂದ ಈ ಬಾರಿ ಬಂಪರ್ ಮಂಗ್ಳೂರಿಗೆ ಬರೋದಿಲ್ಲಾರೀ—ಅಂತ ಪ್ರಗತಿವಾದಿ ಅನ್ನಬಹುದು.

ಎರಡು ಕಣ್ಣುಂಟು, ಅವು ಮೂರಾದರೆ ದ್ವಿವೇದಿ ತ್ರಿವೇದಿ, ಕಾಲ, ದಂಡೆ, ತಟ ಎಲ್ಲಾ ಎರಡೆರಡ; ಅವು ಮೂರಾಗಿಲ್ಲ ಅನ್ನುವಾಗ....ಅತ ಸವ ಥಿಂಸಬಹುದು.

ಆಗ ಸಂಪ್ರದಾಯವಾದಿ ಅನುತ್ತಾನೆ ಪ್ರಗತಿಗಾಮಿತನಕ್ಕೆ ಮತ್ತೊಂದು ಹೆಸರು ಶ್ರೀಮತಿ ಗಾಂಧಿ.

"ಅಲ್ಲವೇ ಮತೆ?"—ಪ್ರಗತಿವಾದಿ ಹುಬ್ಬೇರಿದ್ದು ಹಾರುತ್ತಾನೆ.

"ನೋಡಿ, ಅವರೇ ಅಂತಾರೆ ಎರಡು ಬೇಕು; ಮೂರ ಸಾಕು, ಅಂತ...."

"ಹೆಣ್ಣಾ, ಮೂರು ಆಗುತ್ತೇಂತ ಅಲ್ಲೆಲ್ಲಿ ಹೇಳ್ತಾರೆ?"

"ಹೇಳೋದು ಬೇಡ ನೋಡಿ" ಎರಡಾದ್ದು ಮೂರಾಗೋದಿಲ್ಲಾಂತ ಅವರು ಅನ್ನೋದಿಲ್ಲ ಆದ್ದರಿಂದ ಎರಡಾದ್ದು ಮೂರಾಗೋ ಛಾನ್ಸು ಸೈನ್‌ಟಿಸೈನ್ ಪಾಯಿಂಟ್ ಸೈನ್ ಸೈನ್ ರಿಕರಿಂಗ್ ಪರ್ಸೆಂಟು ಇದ್ದೇ ಇದೇಂತ ಅವರಿ ತಿಳಿದಿದ್ದಾರೆ. ಆದ್ದರಿಂದ, ಎರಡು ಬೇಕು ಅಂದದ್ದು ಮೂರು ಸಾಕು ಅಂತ ದೊಡ್ಡ ಪೂರ್ಣವಿರಾಮ ಹಾಕಿಬಿಟ್ರು...."

"ಅದು ಆಗೋದೇ ಇಲ್ಲ ಕಣ್ರಿ. ಯಾಕಾಂತಂದ್ರೆ, ನೋಡ್ರಿ, ಶ್ರೀಮತಿ ಗಾಂಧಿಗೇನೇ ಇಬ್ರೇ ಇಬ್ರು ಮಕ್ಳು. ರಾಜೀವ ಸಂಜೀವಾಂತ ಮೂರೆಲ್ಲಾ ತ?"

"ಅಲ್ರಿ, ಸೂತ್ರಕ್ಕೆ ಅಪವಾದವಿಲ್ವೆ? ಆಗೆ ಅಲ್ಲೀಂತ್ಲೆ ಆಸ್ಕ್ರೆ ಬೇರೆ ಕಾರ್ಲಯಿಟ್ಟಹುದ. ಆದ್ರೆ ಮೂರ ಮಕ್ಳು ಇದನ್ನು ಎಷ್ಟ್ರಂದಿಲ್ವೆ? ಮೂರು ಗಂಡು—ಮೂರು ಹೆಣ್ಣು ಹೆತ್ತವ್ರಿಲ್ವೆ? ನೋಡ್ರಿ, ಸಿಟಿ ಬಸ್ಸು ಈಗ ಎರಡು ಹೋಯ್ತು; ಇಬ್ಬರೂ ಸೀಟಿಗೆಲ್ಲಾಂತಂದ್ರು. ಈಗ ಮೂರನೆಯದೂ"

ಅನ್ನುವಾಗ ಆದೂ ಬಂತು; ಕಂಡಕ್ಟರ ಕಾರವಾಗ್ಯಾ ಮರೆದೇಹೋದ...

ಏಕೆಬಿಡಿ ಒಂದೆಡೆ ಟಿಕೇಟಿಗೇ ಬಂಪರ್ ಬಂದರೆ, ಲಾಟರಿಯೆ ತ್ತುವ ಯಂತ್ರ ಶೋಷಭರಿತವೆಂದು ಜನ ಗೊಣಗಬಹುದ; ಅದಂಬ್ಲಿಗಳಲ್ಲಿ ಎಬ್ಬಿಸಬಹುದ; ಪ್ರಾದೇಶಿಕ ಪಕ್ಷಪಾತದ ಆರೋಪಗಳಿಗೆ ಅಧಿಕಾರಿಗಳು ಗುರಿಯಾಗಬಹುದು.

ನಮ್ಮ ಜನ ಅಂಥವರೇ.

ಪ್ರಗತಿ ಕಾರ್ಯದಲ್ಲೂ ಇಂಥದೇ ಆರೋಪ. ದಕ್ಷಿಣ ಕನ್ನಡಿಗರು ಭಾರೀ ಬುದ್ಧಿವಂತರ; ಅವರ ತಲೆ ದಬಾಯಿಸಬೇಕು.... ಇ. ಇ.

ಇಂತಹ ಕೃತಿಗಳಿಂದಲೇ ಅಸಂತೃಪ್ತಿ—ಪ್ರಾದೇಶಿಕತೆಗಳ ಜನನ.

ಜಪದಂತೆ ಸರಕಾರವೆಂಬುದು ನಮಗಿನ್ನೂ ಯೋಜನದೂರ. ಸರಕಾರದಂತೆ ಜನವೆಂಬುದಷ್ಟೇ ನಮಗೆ ಗೊತ್ತು.

ರಾಜರಿಲ್ಲದಿದ್ದರೂ "ಯಥಾ ರಾಜಾ ತಥಾ ಪ್ರಜಾ" ಎಂಬುದನ್ನು ಮರೆತು ಬಿಡಲು ನಾವೆಂದೂ ಸಿದ್ಧರಿಲ್ಲ. ನಮ್ಮ ಪ್ರತಿಗಾಮಿತನ ಇದುವೇ.

ಐದು

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

I A 4 in O.S. 125/66

ಗುಲಾಬಿ ಮತ್ತು ಇತರರು — ಅರ್ಜಿದಾರರು ಮತ್ತು

ಚೆನಮು ಮತ್ತು ಇತರರು — ಎದ್ರಿರು.

ಮೇಲಿನ ಅರ್ಜಿಯ ೬೪ನೇ ಎದ್ರಿ— ಬೆಳ್ತಂಗಡಿ ತಾಲೂಕು ಬುರೋಡಿ ಗ್ರಾಮದ ಕಲ್ಲಟಮನೆಯಲ್ಲಿರುವ ಶ್ರೀ ದೇಂಬಯ್ಯನವರ ಮಗ ಶ್ರೀ ಶಿವಣ್ಣ ಮತ್ತು ಬೆಳ್ತಂಗಡಿ ತಾಲೂಕು ಬಜೆ ಗ್ರಾಮದ ಬಾಡುಗುಮನೆ ಎಂಬಲ್ಲಿರುವ ಶ್ರೀಮತಿ ದರ್ಣಮ್ಮನವರ ಮಕ್ಕಳು ಶ್ರೀ ಸೇಸಪ್ಪಣ್ಣ ಹಾಗೂ ದಾಜ (73 ಮತ್ತು 74ನೇ ಎದ್ರಿಯುರವರಿಗೆ ಕೋರ್ಟಿನ ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ಫೈನಲ್ ಡಿಕ್ರಿ ಬಗ್ಗೆ ಅರ್ಜಿದಾರರು ಸಲ್ಲಿಸಿರುವ ಅರ್ಜಿ ನಿಮ್ಮ ಹಾಜರಾತಿ ಬಗ್ಗೆ 18—12—70ಕ್ಕೆ ಇಟ್ಟಿರುತ್ತದೆ. ನಿಮ್ಮ ದೇನಾದರೂ ಆಕ್ಷೇಪ ಇದ್ದಲ್ಲಿ ಸದ್ರಿ ದಿನ ಹಗಲು ಬೆಳಗ್ಗೆ ಗಂಟೆ 11ಕ್ಕೆ ಕೋರ್ಟಿನ ಮುಂದೆ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಅರ್ಜಿಯನ್ನು ತೀರ್ಮಾನಿಸಲಾಗುವುದೆಂದು ತಿಳಿದಿರಲಿ.

ಬಿ. ಕೆ. ಸೂರ್ಯನಾರಾಯಣ ರಾವ್,

ಅರ್ಜಿದಾರರ ಕಡೆ ಎಡ್ವೊಕೇಟ್,

ಬೆಳ್ತಂಗಡಿ, 27.11.70.

Phone: 526 **NAVAYUGA** P. B. No. 22

ILLUSTRATED KANNADA WEEKLY,

UDIPI-1, S. K.

We are in an era in which the right sort of publicity is required for all our efforts towards building and strengthening our nation; and we believe, and rightly too, that the newspapers of the land must play a dominant role in such an endeavour to ensure the progress of the nation.

Your popular weekly, 'Navayuga' founded as far back as 1921, by the late Hon'ble Sri A. B. Shetty, a leader of no mean reputation, has played its part for fifty years now, in instilling in its reader's minds a broad and generous attitude, as well as, the right sense of the values of Life, accademic or cultural. It has carried and shall carry on this message of the founder of the nation and his worthy followers to all the corners of 'Karnataka'—'Mysore'.

As usual, the Republic Day Issue is going to be published on 26th Jan. 1971, and we propose to publish a large number of articles on the various aspects of our political life and cultural heritage from noted writers, so that, we can inculcate in our reading public a right approach to our problems. Side by side, we cannot ignore our responsibility to publicize the wares of different industries, which have to be the backbone of our life, and hence, shall we request you to send your valuable advertisements as early as possible. Your message shall reach the nook and corner of all Mysore and cover the other states too; and, we are sure, you will give the paper the opportunity of serving you and others too through its columns with added zeal and fervour of serving one and all.

Kindly send in your advertisement matter so as to reach us by the 10th January 1971 at the latest.

ADVERTISE IN NAVAYUGA

REPUBLIC DAY SPECIAL

1971

AN INVESTMENT WHICH PAYS

ಭಾರತದಲ್ಲಿ

ಮಂಜು ಕವಿದ ರಾಜ್ಯಕೀಯ

ಲಖ್‌ನೌದಲ್ಲಿ ಸೇರಿದ್ದ ಸಿಂಡಿಕೇಟ್ ಕಾಂಗ್ರೆಸ್ ಅಧಿವೇಶನದಲ್ಲಿ ಸಿಂಡಿಕೇಟಿನ ಇತಿಯ ವರೆಗೆ ಶ್ರೀಮತಿ ಇಂದಿರಾ ಗಾಂಧಿಯವರನ್ನು ನಾನಾ ಗೋಚರವಾಗಿ ಉಂದುಕೊಂಡದ್ದು, ತೀರಾ ಸಾಮಾನ್ಯ. ಅಲ್ಲಿ ಹೆಚ್ಚು ಚರ್ಚೆ ನಡೆದದ್ದು ಪರಸ್ಪರ ಬಾಣ ಬಿಟ್ಟುಕೊಂಡದ್ದು ಕೇವಲ ಒಂದು ಗೊತ್ತುವಳಿಯ ಬಗ್ಗೆ ಮಾತ್ರ. ಅದು ರಾಜ್ಯಕೀಯ ನಿರ್ಣಯದ ಮೇಲೆ. ಆರ್ಥ ನೀತಿ, ವಿದೇಶ ನೀತಿ, ಸ್ವದೇಶ ನೀತಿ— ಇ. ಇ. ಎಲ್ಲ ನೀತಿಗಳಲ್ಲಿ ಶ್ರೀಮತಿ ಗಾಂಧಿಯವರ ಸರ್ಕಾರ ಗೆದ್ದು ಸೋತಿದೆ ಯೆಂಬುದು ಎಲ್ಲರಿಗೂ ಗೊತ್ತು. ಆದುದರಿಂದ ಈ ನೀತಿಗಳ ಖಂಡನೆ ಇತ್ಯಾದಿಗಳಿಗೇನೂ ಮಹತ್ವವಿಲ್ಲ.

ಸಿಂಡಿಕೇಟಿನ ಮುಖ್ಯ ಗುರಿಯೆಂದರೆ: ಆದರ ನಾಯಕರುಗಳು ಹೇಳುವಂತೆ ಶ್ರೀಮತಿ ಗಾಂಧಿಯವರನ್ನು ಗದ್ದುಗೆಯಿಂದ ಉರುಳಿಸುವುದು. ಏಕೆಂದರೆ ಅವರ ಆಡಳಿತ ಅಪವಿತ್ರ; ಅಸಾಧು; ಅಪ್ರಜಾತಂತ್ರಾತ್ಮಕ; ಜನನ ಸರ್ವಾಧಿಕಾರ; ಕಮ್ಯೂನಿಜಂ, ಕಮ್ಯೂನಾಲಿಜಂ, ಈ ಘನೋದ್ದೇಶವನ್ನು, ಪ್ರಜಾರಕ್ಷಣಾ ಕಾರ್ಯವನ್ನು ಈಡೇರಿಸುವುದಕ್ಕಾಗಿ ಸಿಂಡಿಕೇಟ್ ಇತರ ಪ್ರಜಾಪ್ರಭುತ್ವವಾದಿ ಪಕ್ಷಗಳೊಡನೆ ರಾಜ್ಯಕೀಯ ಹೊಂದಾಣಿಕೆಗೆ ಕಟಿಬದ್ಧವಾಗಬೇಕು.

ಶ್ರೀಮತಿ ಗಾಂಧಿಯವರು ಅಧಿಕಾರ ಲಿಪ್ಸರಾಗಿ, ಪಕ್ಷವನ್ನು ಹೋಳು ಮಾಡಿದ್ದೆಂಬುದು ಸರಿಯೇ. ಆದರೆ, ಸಂಸತ್ತಿನಲ್ಲಿ ಅವರು ಯೇನಕೇನ ಪ್ರಕಾರೇಣ ಬಹು ಸದಸ್ಯ ಬೆಂಬಲ ಗಳಿಸಿದ್ದಾರೆಂಬುದೂ ಈ ಬಹುಮತ ಅವರಿಗಿರುವಾಗ, ಉರುಳಿಸ ಒ್ಉವುದು ಅಸಾಧ್ಯವೆಂಬುದೂ ಸರ್ವವೇದ್ಯ. ಅದಕ್ಕೆಂದೇ ರಾಜ್ಯಕೀಯ ಹೊಂದಾಣಿಕೆಯಾಗಬೇಕು.

ಸಿಂಡಿಕೇಟ್ ಭಾರತೀಯ ಜನಸಂಘ ಮತ್ತು ಸ್ವತಂತ್ರ ಪಕ್ಷಗಳ ಕೂಡೆ ಹೊಂದಾಣಿಕೆ ಮಾಡಿಕೊಳ್ಳಕೂಡದು ಎಂಬುದು ಒಂದು ವರ್ಗದ ಅಭಿಪ್ರಾಯ. ಪರಸ್ಪರ ಹೊಂದಾಣಿಕೆಗಾಗಿ ಪ್ರಜಾತಂತ್ರವಾದಿ ಪಕ್ಷಗಳಿಗೆ ಸಿಂಡಿಕೇಟ್ ಕರೆ ನೀಡಿದಾಗ, ಸ್ವತಂತ್ರ ಮತ್ತು ಜನಸಂಘಗಳು ಮೊತ್ತ ಮೊದಲಿಗೆ ಓಗೊಟ್ಟುವು. ಇದನ್ನೇ ಇಂಡಿಕೇಟು ಭವ್ಯ ವೈಚಿತ್ರ್ಯವೆಂದು ಮಹಾ ಜಾತೀಯ ವಾದಿಗಳ ಮತ್ತು ಬಂಡವಾಳಶಾಹಿಗಳ ಜತೆ ಮೈತ್ರಿಗೆ ಮುಂದೆ ಬಂದ ಸಿಂಡಿಕೇಟ್ ಧಾರ್ಮಿಕ ಆರ್ಥಿಕ ನೀತಿಯಿಂದ ಹಿಂದೆ ಸರಿಯಿತು ಎಂದು ಹೇಳತೊಡಗಿತು.

ಬ್ಯಾಂಕುಗಳ ರಾಷ್ಟ್ರೀಕರಣ ಅಥವಾ ರಾಜಧನ ರದ್ದತಿ ಮುಂತಾದವುಗಳಿಗೆ ಸಿಂಡಿಕೇಟ್ ವಿರೋಧವಿಲ್ಲ. ಆದರೆ, ಅವನ್ನು ಜ್ಯಾರಿಗೊಳಿಸಿದ ರೀತಿ ಸರಿಯಲ್ಲವೆಂದು ವಿರೋಧಿಸಿತು. ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು ಎಂಬ ಗಾದೆಯನ್ನು ಇಂಡಿಕೇಟಿಗರು ಆಗ ಉದಾಹರಿಸಿದರು. ಶ್ರೀಮತಿ ಗಾಂಧಿಯವರನ್ನು ತಳ್ಳಿ ಹಾಕುವ

ಇಂಡಿಕೇಟ್ ಪ್ರಯತ್ನಗಳು ಸಫಲವಾಗಲಿಲ್ಲ ರಾಜಧನ ರದ್ದತಿ—ಬ್ಯಾಂಕ್ ರಾಷ್ಟ್ರೀಕರಣಗಳನ್ನು ಜನಸಂಘ ಮತ್ತು ಸ್ವತಂತ್ರ ಪಕ್ಷಗಳು ಬಹಳವಾಗಿ ವಿರೋಧಿಸುತ್ತವೆ.

ನವ್ಯದೇ ಕಾಂಗ್ರೆಸ್ ಎಂದು ಹೇಳುವ ಸಿಂಡಿಕೇಟ್ ತನ್ನ ಧಾರ್ಮಿಕ ನೀತಿಯಿಂದ ಹಿಂದೆ ಸರಿದಿಲ್ಲವೆಂದು ಹೇಳುತ್ತ ಬಂದರೂ ಹಿಂದೆ ನಿಜಲಿಂಗಪ್ಪನವರು ನೆಪಗಳನ್ನು ಆರಿಸುತ್ತ ಬಂದಿದೆ. ಇತರ ಪಕ್ಷಗಳ ಬೆಂಬಲ ಪಡೆಯಲು ಅದು ಕೈಕಾಲು ಬಡಿಯುತ್ತಿದೆ. ಆದುದರಿಂದಲೇ ರಾಜ್ಯಕೀಯ ಗೊತ್ತುವಳಿಗೆ ಬೆಲೆ.

ಗುಜರಾಥ ಮತ್ತು ಕರ್ನಾಟಕಗಳಲ್ಲಿ ಸಿಂಡಿಕೇಟ್ ಪಕ್ಷದ ಸರಕಾರಗಳು ಇದ್ದುವು. ತಮ್ಮ ರಾಜ್ಯದ ಮಟ್ಟಿಗೆ ಈ ಹೊಂದಾಣಿಕೆ ಬೇಡವೆಂದವು. ಹೊಂದಾಣಿಕೆಯ ಹೆಸರಿನಲ್ಲಿ ಪಕ್ಷಗಳ ನಿಲುವು ಮೌಲ್ಯಗಳನ್ನು ಅವಜ್ಞೆಯಿಂದ ಕಾಣಬಾರದು ಎಂದು ಕೆಲವರು ಬುದ್ಧಿಜೀವಿಗಳು ಎಚ್ಚರಿಕೆ ನೀಡಿದರು. ಪಕ್ಷದ ಉನ್ನತ ನಾಯಕರು ಉದಾಹರಣೆಗಾಗಿ ಎಸ್. ಕೆ. ಪಾಟೀಲ, ಎಸ್ಸೆಲ್ಲಾ ಮತ್ತು ಮಹಾಮಾ ಮೊದಲಾದವರು ಹೊಂದಾಣಿಕೆಯನ್ನು ಪ್ರಬಲವಾಗಿ ಸಮರ್ಥಿಸಿದರು. ಡಾ|| ರಾಮ್ ಸುಭಗಸಿಂಗರು ಗೊತ್ತುವಳಿಯನ್ನು ವಿರೋಧಿಸಲಿಲ್ಲ. ಆದರೆ, ನೀತಿಯನ್ನು ಬಲಿಕೊಡಬಾರದು ಎಂದರು. ನಾಯಕರ ಮೇಲೆ ಬಹಿರಂಗ ಟೀಕಾಸ್ತ್ರ ಪ್ರಯೋಗಿಸುವವರು ಪಕ್ಷ ಬಿಟ್ಟು ತೊಲಗಲಿ ಎಂದು ಶ್ರೀ ದೇಸಾಯಿ ಆಜ್ಞೆ ನೀಡಿದರೆ, ಡಾ|| ಸಿಂಗರು ಪಕ್ಷವು ನಾಯಕರಿಗೆ ಮಾತ್ರ ಸೇರಿದ್ದಲ್ಲ; ಶ್ರೀಸಾಮಾನ್ಯರಿಗೂ ಅದರಲ್ಲಿ ಅಧಿಕಾರವಿದೆ. ಶ್ರೀಸಾಮಾನ್ಯರ ಮೇಲೆ ಸರ್ವಾಧಿಕಾರ ಚಲಾಯಿಸುವ ನಾಯಕರೇ ಪಕ್ಷ ಬಿಟ್ಟು ಹೋಗಲಿ ಎಂದೂ ಗುಡುಗಿದರು.

ಅಂದರೆ, ರಾಜ್ಯಕೀಯ ಹೊಂದಾಣಿಕೆಯ ಬಗ್ಗೆ ತೀವ್ರ ಭಿನ್ನಮತವಿದೆಯೆಂಬುದು ಸ್ಪಷ್ಟ. ಅವರೂ ಈಗ ಹೊಂದಾಣಿಕೆಯ ಸ್ವರೂಪವನ್ನು ನಿರ್ಧರಿಸದೆ ಗೊತ್ತುವಳಿ ಸ್ವೀಕೃತವಾಗಿತ್ತು. ಹೊಂದಾಣಿಕೆಯನ್ನು ಸಾಧಿಸುವ ಅಧಿಕಾರ ತನ್ನ ಅಧ್ಯಕ್ಷರಿಗೆ ಸೇರಿತು. ನಿರ್ಣಯವಾದ ಮೇಲೆ ಅದಕ್ಕೆ ಪ್ರತಿಕೂಲವಾದುದು ಶಿಸ್ತಿನ ಉಲ್ಲಂಘನೆ.

ಗೊತ್ತುವಳಿಯ ಪರಿಣಾಮವೇನಾಗಬಹುದು? ರಾಜ್ಯ ಘಟಕಗಳು ಒಪ್ಪಿದರೆ ಮಾತ್ರ ಅಂತಹ ಹೊಂದಾಣಿಕೆ ಸಾಧ್ಯ. ಆದ್ದರಿಂದ ಈ ಗೊತ್ತುವಳಿಯಿಂದ ಅಪೇಕ್ಷಿತ ಪರಿಣಾಮವೇನೂ ಆಗುವುದಿಲ್ಲ. ಹೆಸರಿಗೆ ಬಂತೋ ಹೆಸರಿಗೆ ಕತೆಯಾಯಿತು.

ಈ ನಡುವೆ ಜನಸಂಘದ ಶ್ರೀ ವಾಜಪೇಯಿ ತಮ್ಮ ಬಾಣವನ್ನು ಬಿಟ್ಟಿದ್ದಾರೆ. ತಮಗೆ ಹೇಸಿ ಹೊಂದಾಣಿಕೆ ಬೇಡವೆಂದೂ ಆಗುವುದಾದರೆ ರಾಷ್ಟ್ರೀಯ ಹೊಂದಾಣಿಕೆ ಬೇಕೆಂದೂ ಅವರ ಹೇಳಿಕೆ ನೀಡಿದ್ದಾರೆ. ಅಂದರೆ, ಸಿಂಡಿಕೇಟಿನ ರಾಜ್ಯಕೀಯ ಗೊತ್ತುವಳಿಯ ಮೇಲೆ ಶ್ರೀ ವಾಜಪೇಯಿ ತನ್ನ ವ್ಯಾಖ್ಯಾನ ನೀಡಿದರೆಂದೇ ಹೇಳಬೇಕು. ಇದು ಆಗುವುದೂ ಹಾಗೆಯೇ. ಏಕೆಂದರೆ, ಸಿಂಡಿಕೇಟ್ ಬಯಸುವುದೇನು? ಅದರೊಡನೆ ಸೇರಲು ಪ್ರತಿಪಕ್ಷಗಳಿಂದ ಬರುವ ಪಕ್ಷ ಅವರದ್ದು ಮತ್ತು ಶ್ರೀ ರಂಗಾರದ್ದು. ಏಕೆಂದರೆ, ಇವರೆಡು ಪಕ್ಷಗಳೇ ಕಮ್ಯೂನಿಜಂ ವಿರೋಧಿಗಳು.

ಅವುಗಳೊಡನೆ ಸಂಪೂರ್ಣ ಹೊಂದಾಣಿಕೆಗೆ ಸಿಂಡಿಕೇಟ್ ಸಿದ್ಧವಿದ್ದರೂ ನೈತಿಕ ತೊಂದರೆಗಳಿವೆ. ಜನಸಂಘವನ್ನು ಜಾತೀಯವಾದಿಯೆಂದೂ ಸ್ವತಂತ್ರವನ್ನು ಬಂಡವಾಳಶಾಹಿಯೆಂದೂ ಬ್ರಹ್ಮಾಸ್ತ್ರ ಬಿಟ್ಟು ಕಾಂಗ್ರೆಸಿನಲ್ಲಿ ಕೆಲವರಾದರೂ ಇಂದು ಸಿಂಡಿಕೇಟಿನಲ್ಲಿ ಉಳಿದ್ದಾರೆ. ದಕ್ಷಿಣ ಪಂಥೀಯ ತಮ್ಮ ಅರ್ಥ ನೀತಿಯೆಂದು ಇವರು ಹೇಳುವಾಗ, ಅವನು ಜ. ಸಂ. ಅಥವಾ ಸ್ವ. ಪ. ಒಪ್ಪುವುದಿಲ್ಲ. ಹಾಗಾಗಿ ಈ ಬೆಸಿ ಕೊಂಡಿರುವ ತಾತ್ವಿಕ ಭಿನ್ನಮತಗಳಿಂದಾಗಿ ರಾಷ್ಟ್ರೀಯ ಮಟ್ಟದ ಹೊಂದಾಣಿಕೆ ಸಾಧ್ಯವಿರುವುದಿಲ್ಲ.

ಸಿಂಡಿಕೇಟ್ ಸ್ವತಂತ್ರವಾಗಿ ಏನಾದರೂ ಮಾಡುವುದಕ್ಕೆ ಅಶಕ್ತವಾಗಿದೆಯೆಂದು ಜ. ಸಂಘಕ್ಕೆ ಗೊತ್ತು. ಆದುದರಿಂದಲೇ ಸಿಂಹವನ್ನು ತನ್ನ ಉಗುಲಿಗೆ ಸಿಲುಕಿಸಿ ಕುಣಿದಾಡಿಸುವ ಮಹತ್ವಾಕಾಂಕ್ಷೆಯೂ ಶ್ರೀ ವಾಜಪೇಯಿಯವರಲ್ಲಿ ಇದ್ದಂತಿದೆ. ಸಿಂಡಿಕೇಟು ಹೊಂದಾಣಿಕೆಯ ಹೆಸರಿನಲ್ಲಿ ಸರ್ಕಸ್ ಸಿಂಹವಾಗಬಾರದು ಎಂಬುದು ಬುದ್ಧಿಜೀವಿ ಸಿಂಡಿಕೇಟಿಗರ ಖಚಿತ ಅಭಿಪ್ರಾಯ.

ಇದೇ ಇತ್ತೀಚಿನ ಪರಿಸ್ಥಿತಿ ಇಂಡಿಕೇಟಿಗೂ ಇದೆ. ಆದರೂ ಅದು ರಾಷ್ಟ್ರೀಯ ಹೊಂದಾಣಿಕೆಯಿಲ್ಲವೆಂದು ಹೇಳಿತು. ಇಂದದರ ಸ್ನೇಹಿತರಾಗಿರುವ ದ್ರಾವಿಡರು ಮತ್ತು ಮುಸ್ಲಿಂ ಲೀಗಳಲ್ಲಿ ಪ್ರಾದೇಶಿಕವಾಗೇ ಉಳಿದಿರುವುದರಿಂದ ಅದಕ್ಕೆ ತನ್ನ ಘೋಷಣೆಯಿಂದ ಹಾನಿಯಿಲ್ಲ.

ದೇಶದ ರಾಜ್ಯಕೀಯ ತೀರ ಡೋಲಾಯಮಾನವಾಗಿದೆ. ಶ್ರೀಮತಿ ಗಾಂಧಿಯವರ ಕಮ್ಯೂನಿಸ್ಟ್ ತತ್ವಗಳನ್ನು ವಿರೋಧಿಸುವುದು ಅಗತ್ಯವೇ. ಆದರೆ, ಇದಕ್ಕಾಗಿ ಉಳಿದೆಲ್ಲ ಪಕ್ಷಗಳೂ ಶಾಂತವನ್ನು ನೀ

ಉಳಿತಾಯ ಸಾಧನ

6 3/4%

೭ ವರ್ಷದ
ಪೋಸ್ಟ್ ಆಫೀಸ್ ನಿಶ್ಚಿತ ಕಾಲಾವಧಿ ಠೇವಣಿಗಳು

3 ವರ್ಷದ ಠೇವಣಿಗಳು $6\frac{1}{4}$%. 1 ವರ್ಷದ ಠೇವಣಿಗಳು $5\frac{1}{2}$%.

ಈ ಸರ್ಟಿಫಿಕೇಟುಗಳಲ್ಲಿ ಹಾಗೂ ಇತರ ಶೆರಿಗೆಗರ್ಹವಾದ ಸೆಕ್ಯೂರಿಟಿಗಳಲ್ಲಿ ತೊಡಗಿಸಿದ ಹಣದ ಮೇಲಿನ ಬಡ್ಡಿಯು ರೂ. 3000 ವರೆಗೆ ವರಮಾನ ತೆರಿಗೆ ವಿನಾಯಿತಿ ಪಡೆಯುತ್ತದೆ.

ವಿವರಗಳನ್ನು ಸಮೀಪವಿರುವ ಪೋಸ್ಟ್ ಆಫೀಸಿನಿಂದ ಪಡೆಯಿರಿ.

ರಾಷ್ಟ್ರೀಯ ಉಳಿತಾಯ ಸಂಸ್ಥೆ

davp 70/370

ಬಡೆಕ್ಕಿಲದವರ

‘ಗೀತಾಸಾರ’

(ಕಿರು ಪರಿಚಯ)

ಬರೆದವರು : ‘ದೇವಕೀನಂದನ’

ಕಂದ|| ಎನ್ನೀ ಕಬ್ಬದ ಬಗೆಗಂ
ಕನ್ನಡಿಗರ್ ಕಾವೆ ಕವೆಗ್ಗಳಾ
ದುವನ ಡಿಯಂ||
ಮುನ್ನುಡಿಯೆಂದರಿದಾಸಿದ
ಕಿನ್ನೆಬ್ಬನವರೆ ನುಡಿಸಿ ಬರೆ
ಯಿಸದಾದೆಂ||

ತಮ್ಮ “ಗೀತಾಸಾರ” ಕಾವ್ಯದ ಮುನ್ನುಡಿಯಲ್ಲಿ ಅನ್ಯರಿಂದ ಮುನ್ನುಡಿ ಬರೆಯಿಸದಿರುವುದಕ್ಕೆ ಕವಿಗಳು ಕೊಟ್ಟ ಕಾರಣ. ತನ್ನ ಕೃತಿಗೆ ಅಧಿಕಾರಸ್ಥಲ್ಲಿರುವವರ ಪರಿಚಯ ಪತ್ರ ಬೇಕಿಲ್ಲ. ಅದು ತನ್ನ ಸ್ವಂತ ಯೋಗ್ಯತೆಯ ಮೇಲೆ, ಬಹಳ ಕಾಲ ನಿಲ್ಲಬಲ್ಲುದು ಎಂಬುದು ಕವಿಗಳ ಅಚಲವಾದ ನಂಬಿಗೆ. ಗೀತೆಯಲ್ಲಿ ನಿರೂಪಿತವಾದ ವಿಷಯವನ್ನು ಅನೇಕರು ಬಲ್ಲರು. ಆದ್ದರಿಂದ ಆ ಕುರಿತ ವಿವರದ ಪ್ರಸ್ತಾವನೆಯೂ ಅನಗತ್ಯ ಎಂದು ಅವರ ಭಾವಿಕರಬೇಕು.

ಆದರೆ ದುರದೃಷ್ಟ. ಅದು ಪ್ರಕಟವಾಗಿ ಇಂದಿಗೆ ಹಲವು ವರ್ಷಗಳಾದುವು. ಆ ಕಾವ್ಯದ ಕೆಲ ಪ್ರತಿಗಳು ಉಳಿದಿರುವ ಅಷ್ಟರಲ್ಲಿ, ಅದು ರಸಿಕರ ಕೈಗೆ ಸಿಗಲಿಲ್ಲ ಎಂದು ಹೇಳುವಂತಿಲ್ಲ. ಸಿಕ್ಕಿದ ಕೆಲವರಿಗೆ ಓದುವ ತಾಳ್ಮೆ ಬರಲಿಲ್ಲ. ಓದಿದವರಿಗೆ ಅವರ ಯೋಗ್ಯತೆಯನ್ನು ಒಪ್ಪಿಕೊಳ್ಳುವ ಒಳ್ಳೆಯತನ ಬರಲಿಲ್ಲ. ಆದ್ದರಿಂದ ಕನ್ನಡಿಗರು ತಮ್ಮಲ್ಲಿಯೇ ಆಡಿಕೊಂಡ ಮಾತು ಬಹಿರಂಗಕ್ಕೆ ಬರಲಿಲ್ಲ. ಕವಿಗಳು ನಿರೀಕ್ಷಿಸಿದ ಮುನ್ನುಡಿ ಮೂಡಲೇ ಇಲ್ಲ.

“ಗೀತಾಸಾರ” ಆಕರ್ಷಣೆಯ ಒಳ್ಳೆಯ ಷಟ್ಪದಿ ಕಾವ್ಯ. ಭಾಷಾಂತರವಾದರೂ ಅದೊಂದು ಸ್ವತಂತ್ರ ಗೀತೆಯಂತಿದೆ. ಆದರೂ ಮೂಲಾರ್ಥಕ್ಕೆ ಎಲ್ಲಿಯೂ ಅಪಚಾರವಾಗಿಲ್ಲ. ಮೂಲ ಶ್ಲೋಕದ ವೇಗವನ್ನು ನಾವು ಇಲ್ಲಿ ಕಾಣುವುದಿಲ್ಲ. ಅದಕ್ಕೆ ಕಾರಣ ಕವಿಗಳು ಬಳಸಿಕೊಂಡ ಛಂದಸ್ಸು. ಮೂಲವನ್ನು ಹಿಗ್ಗಿಸಿ ಹೇಳುವ ಅಗತ್ಯತೆ ಅಲ್ಲ—ಇಲ್ಲಿ ತೋರಿ ಬರುತ್ತದೆ. ಆದರೂ ಅವರ ಕಾವ್ಯಕಾಮಿನಿ ಅಡಿ-ತಡೆಯಿಲ್ಲದೆ ನಡೆಯುತ್ತಾಳೆ.

ಮೂಲದ ಹದಿನೆಂಟು ಅಧ್ಯಾಯಗಳನ್ನು ಹದಿನೆಂಟು ಸಂಧಿಗಳನ್ನಾಗಿ ವಿಭಾಗಿಸಿದ್ದಾರೆ. ಜೊತೆಗೆ ಒಂದು ಪೀಠಿಕಾ ಸಂಧಿಯೂ ಇದೆ. ಪ್ರತಿ ಸಂಧಿಯ ಆದಿಯಲ್ಲಿ ಸಂಧಿ ಸೂಚನಾ ಪದ್ಯವೊಂದಿದೆ. ಅವನ್ನು ಸೇರಿಸಿದರೆ ಗೀತಾಸಾರದಲ್ಲಿ ಒಟ್ಟು 518 ಪದ್ಯಗಳಿವೆ. ವಿಷಯ ಗಹನವಾದರೂ ಅದನ್ನು ಸರಳವಾಗಿ, ಸುಲಭವಾಗಿ ಪ್ರಯಾಸವಿಲ್ಲದೆ ಹೇಳುವುದು ಕಂಡುಬರುತ್ತಿದೆ. ಗರ್ವವಿಲ್ಲದ ಯುವಶಿಕ್ಷಣವನ್ನು ಪಡೆದ ಕವಿಗಳ ಅಗಾಧವಾದ ಶಬ್ದ ಸಂಪತ್ತು, ಅದನ್ನು ಬಳಸುವ ಬಗೆ, ಯಾರನ್ನೂ ತಲೆದೂಗಿಸುವಂತೆ ಮಾಡುತ್ತದೆ. ಚಾಮರಸ, ಮಹಾಲಿಂಗರಂಗ, ಲಕ್ಷ್ಮೀಶರ ಹೋಲಿಕೆಯಾಗಿ ನಿಲ್ಲುವ ಯೋಗ್ಯತೆಯನ್ನು ಕಾವ್ಯದುದ್ದಕ್ಕೂ ಬಿಂಬಿಸಿದ್ದಾರೆ. ಅವರ ಇತರ ಕೃತಿಗಳಲ್ಲಿ ಈ ಯೋಗ್ಯತೆಯನ್ನು ಗುರುತಿಸಬಲ್ಲೆವಾದರೂ, ಇದರ ಚರಮ ಸೀಮೆಯನ್ನು ನಾವು ಕಾಣುವುದು ಇಲ್ಲಿಯೇ|

ಪೀಠಿಕಾ ಸಂಧಿಯಲ್ಲಿನ ಆರಂಭದ ಸ್ತುತಿ ಪದ್ಯ ಗದುಗಿನ ಭಾರತವನ್ನೇ ನೆನಪಿಗೆ ತಂದು ಕೊಡುತ್ತದೆ. ಶ್ರೀ ಕೃಷ್ಣನನ್ನು ಅವರು ಹೀಗೆ ಬಿನ್ನೈಸಿಕೊಳ್ಳುತ್ತಾರೆ—

ಭಾಮಿನಿ ಷಟ್ಪದಿ|

ಶ್ರೀ ರಮಣ, ಕರುಣಾಭರಣ, ಸುರ—
ವಾರ ವಂದಿತ ಚರಣ ಭವಭಯ
ದೂರ ನಿರ್ಗುಣ, ನೀ ಜೇಷ್ಠ, ಬಿಡೈತ್ಯ
ಕುಲಹರಣ||
ಚಾರು ಗುಣ ಪರಿಪೂರ್ಣ, ಫಲ್ಗುಣ
ಸಾರಥಿಯೆ, ಕಲಹಿನ್ನರೀಗಂ—
ಸಾರ ರಥ ಚೆಂದದಲಿ ಸಾರಥಿಯಾಗಿ
ಶ್ರೀ ಕೃಷ್ಣ||

ಅರ್ಜುನನ ಬಂಡಿಗೆ ಬೇಡವಾದ ಶ್ರೀ ಕೃಷ್ಣ ಯುದ್ಧಭೂಮಿಯಲ್ಲಿ ಅವನ ಸಾರಥ್ಯ ವಹಿಸಿದ್ದ ನೀನು ನಮ್ಮ ಸಂಸಾರ ರಥದ ಸಾರಥಿಯಾಗಿ ದಡ ದಾಟಿಸು ಎಂದು ಬೇಡಿಕೊಳ್ಳುತ್ತಾರೆ—ಇದು ಹೊರಗಿನ ಅರ್ಥ. ಅನೇಕರು ಕಂಡು ಹಿಡಿಯಲಾರದ ಒಂದು ಧ್ವನಿಯೂ ಈ ಉಕ್ತಿಯಲ್ಲಿದೆ. ನನಗೆ ವಯಸ್ಸಾಯಿತು. ಸಂಸಾರದ ಹೊರೆ ಇನ್ನು ಸಹಿಸಲಾರೆ. ಅದನ್ನು ನೀನೇ ಹೊತ್ತುಕೋ ಎಂದು ಅವರ ಹಿರಿಯ ಮಗ ಕೃಷ್ಣನನ್ನು ಉದ್ದೇಶಿಸಿ ಆಡಿದಮಾತೂ ಇರಬಹುದು.

ಇನ್ನೊಂದು ಪದ್ಯದಲ್ಲಿ ತನಗೆ ಈ ಕೃತಿ ರಚನೆ ಮಾಡುವ ಅರ್ಹತೆಯಿಲ್ಲ. ಆದರಿಂದ “ಶ್ರೀ ವರಕರಿಯೆ ನಡಿಸುವನಲ್ಲದೆ ನಗೆಸ್ಥಾನದ ಸಾಹಸ” ಎಂದು ವಿನಮ್ರತೆಯಿಂದ ನುಡಿದಿದ್ದಾರೆ. ಇನ್ನೊಂದರಲ್ಲಿ ಒಗ್ಗೇನಿದೆ, ಎಂಬುದನ್ನು ಸಂಕ್ಷಿಪ್ತವಾಗಿ ತಿಳಿಸಿದ್ದಾರೆ—ಕವಿ ಕಲ್ಪನೆ ಭವ್ಯವಾಗಿದೆ.

ಕೆಂಪಡವ, ಕಪ್ಪವರ, ಬಹು ಪರಿ—
ಯಿಂದೆ ನವಿವರ ಖೋಟಭೇದಕೆ
ಸಂದವರ, ಕಾವರ ಕರಬರಿ ಬಣ್ಣನೆ
ಯಾದಲ್ಲವಿದು
ಬಾದು ಪರಿಕೀಕದಲಿ ಪೇಳಿದ—
ನೆಂದ ದಸಪತಿಗೆ ಕರ್ಣದ
ಹಂದರದಿ ವಾಕ್ಯಂಗಳನ್ನು ಕೆಯ್ಗೊ
ಳಿಸಲಿಹ ಸೂತ್ರ

ಅವರ ಮಾತಿನಲ್ಲಿಯೇ ಹೇಳುವುದಿದ್ದರೆ “ಖಂಡಿತವಾ ಸೇರಿಕ್ಕನಲಿ” ತೂಗಿದ್ದಾರೆ. ಆ ಪ್ರಯತ್ನದಲ್ಲಿ ಕೃತಕೃತ್ಯರಾಗಿದ್ದಾರೆ.

ಹಳೆಯ ಪರಂಪರೆಯಲ್ಲಿ ಬೆಳೆದುಬಂದ ಅವರು ಆ ದಾರಿಯನ್ನೇ ತುಳಿದಿದ್ದಾರೆ. ಹಳೆಗನ್ನಡ ಕಾವ್ಯಗಳನ್ನು, ಲಕ್ಷಣ ಗ್ರಂಥಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದಾರೆ. ಭಾಮಿನಿ ಷಟ್ಪದಿಯಲ್ಲಿ ಬರೆದ ತನ್ನ ಕಾವ್ಯ ಜನಪ್ರಿಯವಾಗಲಾರದು ಎಂಬ ಶಂಕೆಯನ್ನು ಪ್ರಕಟಿಸಿ, “ಸಕ್ಕರೆ ಬಗೆಗೆ ಬಂದರೆ ಸಾಕು” ಎಂಬ ಸಾಂತ್ವನದ ಮಾತನ್ನು ಆಡಿದ್ದಾರೆ. ಆಧುನಿಕ ಸಾಹಿತ್ಯವನ್ನು ತಮ್ಮ ಕರ್ನಾಟಕ ಪರಿಸ್ಥಿತಿಯಲ್ಲಿ ಹೀಗೆ ಚಿತ್ರಿಸಿದ್ದಾರೆ.

ವಾರ್ಧಿಕ ಷಟ್ಪದಿ
ಒಟ್ಟಿಯಂ ಸ ಉದಲಂಕಾರಗಳಂ
ತೆರೆದ|
ಪೆಟ್ಟಿ ಸಂಧಿಗಳ ಮುರಿದಿಕ್ಕಿ, ರೂಪವ
ನಳಿಸಿ|
ಕಟ್ಟುಸೂರಡೆ ಹರಣವಿಡೆಯೊಡದೊಲು ಪ್ರಯೋಧವಂದಳಿಸಿಧಾತುಗೆಡಿಸಿ||
ಬಟ್ಟಬಯಲೊಳ್ ಕಾವ್ಯ ಯುವತಿ
ಯಂ ಕೆಡಹಿ ಕೆರ್ದು|
ದಟ್ಟಿಕೂಗಿದೊಡಲ್ಲಿನಡೆಗೊಂಬ ಸಜ್ಜನರ
ದಿಟ್ಟಿ ಪರಿದಪುದೆ, ನಲ್ಲಬ್ಬಿಗರ್ ಕಾಂ
ಬರೇಂ ವರಕವಿತರ ಮಾನವೊಲ್ಪುದೆ||

ಹಾಗೆ ಬರೆದವರು ಬೇರೆ ಯಾರು ಬರೆದಾರು?

ಅನುವಾದವಾದ್ದರಿಂದ ಪ್ರತಿಭೆಯ ಪ್ರದರ್ಶನಕ್ಕೆ ಅವಕಾಶ ಕಡಿಮೆ. ಮೊದಲ ಹಾಗೂ ವಿಶ್ವರೂಪ ದರ್ಶನ ಸಂಧಿಗಳಲ್ಲಿ ಕವಿ ಕಲ್ಪನೆಗೆ ಪುಟ ಸಿಗುತ್ತದೆ. ಉಳಿದ ಭಾಗವೆಲ್ಲ ತತ್ವನಿರೂಪಣೆಗೆ ಮೀಸಲು. ಅಲ್ಲಿ ಗೂಢ ವಿಚಾರಗಳನ್ನೂ ಸ್ಪಷ್ಟವಾಗಿ ಹೇಳಿದ್ದಾರೆ. ಶಬ್ದಜಾಲವನ್ನು ಲೀಲಾಜಾಲವಾಗಿ ಹರಡಿದ್ದಾರೆ. ಮೂಲದಲ್ಲಿಲ್ಲದ ವಿಚಾರಗಳನ್ನು ರಸಪುಷ್ಟಿಗಾಗಿ ಬಳಸಿದ್ದಾರೆ. ಅದಕ್ಕೊಂದು ಉದಾಹರಣೆ

ಅರ್ಜುನ ವಿಷಾದ ಯೋಗ ಸಂಧಿಯಲ್ಲಿ, ಅವನ ಬಾಯಿಂದಲೇ ಆಡಿಸಿದ ಮಾತುಗಳಿವು —

ಹಿಡಿದ ಬಿಲ್ಲನು ಕೈಸ್ಸಿ, ಬಾಣವ
ತೊಡಿಸುವಂಥವ ತೋರಿ, ಬಡದಿಂ
ಕಡೆತನಕ ಪೇಳ್ದಂತ ವಿದ್ಯಾಭಾಣತನವಾಡಿ||
ಹಡೆದ ಮಗನಂತೆನ್ನ ಬಚ್ಚಿ
ನಡೆಸ ನಚ್ಚಿನ ಕುಂಭ ಸಂಭವ—
ರೊಡನೆ ಕದನವೆ ಗುರುವಲಾ ತಾನ
ಕಟಿ ಶಕಟಾರಿ||

ಹೀಗೆ ನುಡಿದ ಅರ್ಜುನನ ಕೊನೆಯಲ್ಲಿ “ಸುಮ್ಮನಿಹ ಬರಿಗೈಯನೆನ್ನನು ಕೊಮ್ಮ ಹೊಡೆವೊಡೆ ಹೊಡೆಯಲದರಿಂ ಕ್ಷೇಮವೆನಗಹುದು” ಎಂದು ಕುಳಿತು ಬಿಡುತ್ತಾನೆ.

ಎರಡನೆಯ ಸಂಧಿಯಲ್ಲಿ ಬರುವ “ಸ್ಥಿತಪ್ರಜ್ಞ” ಎಂಬ ಭಾಗ ಹೇಗೆ ಬಂದಿದೆಯೆಂಬುದನ್ನು ರಸಿಕರು ಮನಗಾಣಬೇಕು. ಆ ಪದಪುಂಜ ಮಾಲೆಯ ಸವಿಯನ್ನು ಪರಿಭಾವಿಸಬೇಕು.

ಸುಖವೊಡಾದದ ಕಿಚ್ಚು ತೋಯಿಸಿ
ಬಿಸುವೊಡಾರದು ನೀರು, ಕರವಾ —

(ಬಂಛಕ್ಕವೇ ಪುಟ ನೋಡಿರಿ)

In the Matter of the Canara Manufacturing Corpo – ration (Private), Ltd., Kabettu Road, Karkala, S. K.

Notice under Section 500 of the Companies Act. 1956:

A meeting of the Members and creditors of the Canara Manufaturing Corporation (Private), Ltd., Kabettu Road, Karkala will be held at 10 A. M. on the 24th December, 1970, at the Registered Office of the Company in Karkala to consider the proposal of creditors winding up of the Company and to pass a resolution accordingly if deemed fit. All the members and creditors are requested to attend the meeting.

Karkala,
Date: 24-11-1970.

N. T. Adyanthaya.
Managing Director

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಮಾತಿನ ಮಲ್ಲರ ಭಾರಿ ವೈಹಾಳಿ

ಅಸ್ಸಾಮಿನ ವಿಧಾನಸಭೆಯಲ್ಲೊಂದು ಪ್ರಶ್ನೆ. ಸಂಯುಕ್ತ ವಿರೋಧ ಪಕ್ಷದ ಉಪನಾಯಕರು ಹಾಕಿದ ದೊಡ್ಡ ಪ್ರಶ್ನೆ. ಅದು ಭಾರತ—ಚೀನಾ ಗಡಿಯಾದ ಮ್ಯಾಕಮೋಹನ ರೇಖೆಗೆ ಸಂಬಂಧಪಟ್ಟದ್ದು; ಈ ರೇಖೆಗೆ ಅನ್ವಯಿಸುವ ಅತ್ಯಮೂಲ್ಯ ದಾಖಲೆಗಳು ಅಪಹರಣಕ್ಕೊಳಗಾದ ವಿಷಯವದು.

ಈ ಅಪಹಾರದ ಕೃತ್ಯ ನಡೆದದ್ದು ಕೆಂಪು ಚೀನೀಯ ಗೂಢಚಾರರಿಂದಲ್ಲ; ಪಾಕ್ ನ ಹಿಕ್ಮತಿನಿಂದ ಈ ಸಾಹಸ ಕಾರ್ಯ ನಡೆಯಿತು. ಅವರಿಗೆ ಭಳರೇ ಶಹಭಾಸ್ ಎನ್ನಲೇ ಬೇಕು. ನಮಗೆ?

ನವಂಬರ 3ರಂದು ಪಾಕ್ ಗುಪ್ತಚಾರಿಯರು ಶಿಲ್ಲಾಂಗಿಗೆ ಬಂದರು. ಮೇಜರ್ ಎಸ್. ಕೆ. ಕೋಹಿ ಅವರ ಕಛೇರಿಯನ್ನು ಹೊಕ್ಕರು. ಅಲ್ಲಿಂದ ನಮ್ಮ ಅತ್ಯಮೂಲ್ಯ ದಾಖಲೆಗಳನ್ನು ತಮ್ಮೊಡನೆ ಒಯ್ದು ಹೋದರು. ನಮ್ಮ ಅಧಿಕಾರಿಗಳು ಪಿಳಿ ಪಿಳಿ ಕಣ್ಣು ಬಿಟ್ಟು ಆ ಪಾಕ್ ಮಹಿಳೆಯರ ಥಳಕು—ಬೆಡಗುಗಳನ್ನು ನೋಡುತ್ತ ಕುಳಿತರು.

ಮ್ಯಾಕ ಮೋಹನ ರೇಖೆಯು ಭಾರತ-ಚೀನಾಗಳ ಅಂತರರಾಷ್ಟ್ರೀಯ ಗಡಿ. ಕೆಂಪುಚೀನಾಕ್ಕೂ ನಮಗೂ ಇರುವ ವಿವಾದವಾದರೂ ಇದರ ಬಗ್ಗೆಯೇ. ಸೋವಿಯತ್ತು ಕೆಂಪು ಚೀನದ್ದೆಂದು ತೋರಿಸಿದ ಭೂಭಾಗವಿರುವುದಾದರೂ ಇದರ ದಕ್ಷಿಣಕ್ಕೇನೇ. ಆ ಬಗೆಯ ಅಂತರರಾಷ್ಟ್ರೀಯ ದಾಖಲೆಗಳನ್ನು ನಾವು ಎಷ್ಟು ಜೋಪಾನವಾಗಿ ಸಂರಕ್ಷಿಸುತ್ತಿದ್ದೇವೆ! ಇದು ನಮ್ಮ ದೇಶಭಕ್ತಿ, ಸೇವಾನಿಷ್ಠೆ ಮತ್ತು ಆಡಳಿತ ದಕ್ಷತೆಗೊಂದು ನಿದರ್ಶನ.

ವಿಧಾನ ಸಭೆಯಲ್ಲಿ ಮುಖ್ಯಮಂತ್ರಿ ಮಹೇಂದ್ರ ಮೋಹನ ಚೌಧರಿಯವರು ಈ ಸಂಗತಿ ತಮಗೆ ಗೊತ್ತೇ ಇಲ್ಲವೆಂದು ಹೇಳಿದರು. ಇದರತ್ತ ಶೀಘ್ರ ಗಮನ ಹರಿಸುವುದಾಗಿಯೂ ಮುಂದೊಂದು ದಿನ ಹೇಳಿಕೆ ನೀಡುವುದಾಗಿಯೂ ಭರವಸೆ ನೀಡಿದರು. ಸಭೆಯ ಕಾರ್ಯ ಕಲಾಪಗಳು ಮುಂದುವರಿದುವು.

ಮುಂದೊಂದು ದಿನ ಮುಖ್ಯ ಮಂತ್ರಿ ಚೌಧರಿ ಹೇಳಿಕೆ ಕೊಡುತ್ತಾರೆ. ದಾಖಲೆಗಳು ಕಳವಾದದ್ದು ನಿಜವೆಂದು ಅಧಿಕಾರಿಗಳ ಕರ್ತವ್ಯಲೋಪಕ್ಕೆ ಕ್ಷಮೆ ಕೇಳಬಹುದು; ಅಪಹೃತ ದಾಖಲೆಗಳನ್ನು ಮರಳಿ ಪಡೆಯುವ ಪ್ರಯತ್ನ ನಡೆಸುವುದಾಗಿ ಹೇಳಬಹುದು. ಈ ಸಂಗತಿಯನ್ನು ಕೇಂದ್ರದ ಗಮನಕ್ಕೆ ತರುವುದಾಗಿ ಸೂಚಿಸಬಹುದು. ತಮ್ಮ ಹೃತ್ಪೂರ್ವಕ ವಿಷಾದವನ್ನು ವ್ಯಕ್ತಪಡಿಸಬಹುದು.

ಆ ಅಥವಾ ಅಪಹಾರದ ಆರೋಪವನ್ನೇ ಸಂಪೂರ್ಣ ಅಲ್ಲಗಳೆಯಲೂ ಬಹುದು. ಬುಡವಿಲ್ಲದ ಆರೋಪ ಹೊರಿಸಿ ಸರಕಾರದ ಬಗ್ಗೆ ಜನರಲ್ಲಿ ದುರ್ಭಾವನೆ ಮೂಡಿಸಲು ವಿರೋಧಿ ಪಕ್ಷಗಳ ಭಾರಿ ಷಡ್ಯಂತ್ರವಿದು ಎಂದು ತರಾಟೆಗೆ ತೆಗೆದುಕೊಳ್ಳಬಹುದು. ಮುಖ್ಯ ಮಂತ್ರಿಗಳ ಹೇಳಿಕೆಯ ವೇಳೆ ಸರಕಾರಿ ಪಕ್ಷದ ಮೇಜು ಗುದ್ದಿ ಗುದ್ದಿ ಹರ್ಷೋದ್ಗಾರ ಮಾಡಬಹುದು. ವಿರೋಧಿ ಶೇಮ್ ಶೇಮ್ ಎಂದರಚಿ ಸಭಾತ್ಯಾಗ ಮಾಡಬಹುದು; ಸ್ಪೀಕರರು "ಶಾಂತಂ" ಎಂದು ಮುಂದುವರಿಯಬಹುದು.

ನಮ್ಮ ಸರಕಾರಗಳ ಕಾರ್ಯ ದಕ್ಷತೆಯೆಷ್ಟು ಎಂಬುದಕ್ಕೆ ಇದು ಮೊದಲ ಉದಾಹರಣೆಯಲ್ಲ. ಇದಕ್ಕಿಂತ ಮೊದಲೂ ಹಲವಾರು ಅಮೂಲ್ಯ ನಿಧಿಗಳು ಕಳವಾದದ್ದುಂಟು. ಇತ್ತೀಚೆಗೆ ಒರಿಸ್ಸಾದಲ್ಲಿ ತಾರಿಯೊಬ್ಬಳ ಥಳುಕಿಗೆ ಮರುಳಾದ ಅಧಿಕಾರಿಯೊಬ್ಬರ ಸಂಗತಿ ಬೆಳಕಿಗೆ ಬಂದಿದೆ. ಆಂಧ್ರ ಪ್ರದೇಶದಲ್ಲಿ ಸಚಿವರು ತಂದ ಉತ್ತರವೊಂದು ಕಾಣೆಯಾದ ಘಟನೆ ವರದಿಯಾಗಿದೆ. ಎಲ್ಲಿಯ ವರೆಗೆ ಅಂದರೆ, ತಾಷ್ಕೆಂಟದಲ್ಲಿ ಪ್ರಧಾನಿ ಲಾಲ ಬಹದೂರರು ಮಡಿದಾಗ, ಅವರ ಜೇಬಿನಲ್ಲಿದ್ದ ಡೈರಿಯೇ ಕಾಣೆಯಾದಾಗ ಯಾರು ತಡೆಯಲಿಲ್ಲ. ದೆಹಲಿಯ ಸರಕಾರಿ ಕಛೇರಿಯಿಂದಲೇ ಕೆಲವು ದಾಖಲೆಗಳು ಕಾಣೆಯಾದದ್ದುಂಟು.

ಆದರೆ, ನಾವೂ ನಮ್ಮ ಸರಕಾರಗಳೂ ದಾಖಲೆಗಳ ಮಹತ್ವವನ್ನು ಬೇರೆಯವರಿಗೆ ತಿಳಿ ಹೇಳುವುದರಲ್ಲೇ ಮರೆತು ಬಿಡುತ್ತೇವೆ. ಅವುಗಳ ರಕ್ಷಣೆಯು ಭಾರ ನಮ್ಮದಲ್ಲವೆಂಬಂತೆ ನಡೆದುಕೊಳ್ಳುತ್ತೇವೆ. ಕೇರಳದ ಕನ್ಯೆಯರ ಮಾರಾಟ ಬಹುಕಾಲದಿಂದ ನಡೆಯುತ್ತ ಬರುತ್ತಿತ್ತು. ಆದರೆ ನಮ್ಮ ಸರಕಾರಕ್ಕೆ ಅದರ ಗಂಧಗಾಳಿಯೂ ಇಲ್ಲವೆಂಬಂತೆ ಪ್ರಶ್ನೆ ಎದ್ದಾಗ ನಟಿಸಿತು. ಮುಂದೆ "ವಿಚಾರಿಸಿ" (ಯಾರೊಡನೆ?) ಅದು ನೀಡಿದ ಹೇಳಿಕೆಯೇನು?—"ಮಾರಾಟದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಎಲ್ಲ ಕನ್ಯೆಯರೂ ಸ್ವಇಚ್ಛೆಯಿಂದಲೇ ವಿದೇಶಕ್ಕೆ ಹೋಗಿದ್ದಾರೆ. ಅಲ್ಲಿ ಅವರನ್ನು ಚೆನ್ನಾಗಿ ಕಾಣಲಾಗುತ್ತಿದೆ; ಅವರೂ ಸುಖವಾಗಿದ್ದಾರೆ."—ಕನ್ಯಾವಿಕ್ರಯದ ಪ್ರಶ್ನೆಯನ್ನು ಮೊತ್ತ ಮೊದಲಿಗೆ ಬೆಳಕಿಗೆ ತಂದವಳೇ ಹೀಗೆ ವಿಕ್ರಯಗೊಂಡಿದ್ದ ಕನ್ಯೆಯೊಬ್ಬಳು—ಈಕೆ ತೀರ ಅಪ್ರಸನ್ನಳಾಗಿದ್ದಳು ಎಂಬುದನ್ನು ನಮ್ಮ ವಿದೇಶೀ ಸಚಿವರು ಮರೆತುಬಿಟ್ಟರು.

ನಮ್ಮ ಸರಕಾರ ಜಾತ್ಯತೀತ ನೀತಿಯ ಪರಿಪಾಲಕ. "ಕೇರಳದ ಕನ್ಯೆಯರ ವಿಕ್ರಯವಾಗಲಿಲ್ಲ" ಎಂಬುದು ಕಾನೂನಿನ ದೃಷ್ಟಿಯಿಂದ ಸರಿಯೇ. ಭೂಮಿ ಮಾರಾಟದ ರಜಿಸ್ಟ್ರಿಯಂತೆ ಕನ್ಯಾವಿಕ್ರಯದ ರಜಿಸ್ಟ್ರಿ ನಡೆದಿಲ್ಲ. 'ವಿಕ್ರಯ'ದ ಸಂಗತಿಯನ್ನು ಸರಕಾರ ಒಪ್ಪಿಕೊಂಡರೆ, ಯುರೋಪಿನ ಕ್ರೈಸ್ತ ಚರ್ಚುಗಳ ಅವಕೃಪೆಗೆ ಒಳಗಾಗಬೇಕು. ಅದರ ಪರಿಣಾಮವಾಗಿ ಭಾರತದ ಚರ್ಚುಗಳೂ ಶ್ರೀಮತಿ ಗಾಂಧಿಗೆ ವಿರೋಧ ನೀಡಬಹುದು. "ಹಿಂದು"ಗಳನ್ನು ಹಿಂದಿಕ್ಕಿ ಮುಸ್ಲಿಂ ಲೀಗಿಗಳನ್ನು ಎದೆಗಪ್ಪಿ, ಕ್ರೈಸ್ತರನ್ನು ಎತ್ತಿಕಟ್ಟುವ ಆಕೆ ಇದನ್ನು ಬಯಸುವುದಿಲ್ಲ; ಎಲ್ಲವೂ ಕಾನೂನಿನಂತೆ. ಆದ್ದರಿಂದ ವಿಕ್ರಯ ನಡೆಯಲೇ ಇಲ್ಲ.

ನಮ್ಮದು ಕಾನೂನಿನ ಆಡಳಿತ. ನಾವು ಕಾನೂನಿನ ಮೂಲಕವೇ ಭಾರತಕ್ಕೆ ಹಾಲು—ಜೇನು ಹರಿಯುವಂತೆ ಮಾಡುತ್ತೇವೆ. ಯಾವ ನ್ಯಾಯಾಲಯದಲ್ಲಿಯೂ ಈ ಕಾನೂನು ಅನ್ಯಾಯದ್ದಾಗುವುದಿಲ್ಲ. ಜನತೆಗೇಕೆ ಹಾಲೂ—ಜೇನು ಬಿಡಿ, ನೀರು ಸಿಕ್ಕಿಲ್ಲ ಅಂದರೆ, ಭೂಮಿ ಉಪಟಳ ಅನ್ನುತ್ತೇವೆ! ಹಾಗಿದ್ದರೂ ಹಾಲು ಜೇನು ಹರಿಸುವಲ್ಲಿ ನಾವು ಅಸಮರ್ಥರಾಗಿದ್ದೇವೆಂದು ಎಂದಾಗಲೂ ಒಪ್ಪಿಕೊಳ್ಳುವುದಿಲ್ಲ.

ಮ್ಯಾಕ್ ಮೋಹನ ಗಡಿ ರೇಖೆಯ ದಾಖಲೆಯ ಪ್ರಶ್ನೆಯೂ ಅಷ್ಟೆ. ಅದು ಒಳಗಿಲ್ಲವಾದರೂ ನಾವು ಇದೆಯೆಂದು ಹೇಳಿಕೆ ನೀಡಿ ಬಚಾವಾಗಲು ಸಾಧುವದಿಲ್ಲ. ನಮ್ಮೆಲ್ಲ ಪ್ರಗತಿ—ದಾಖಲೆಗಳು ಕಾಗದ-ಪತ್ರಗಳಲ್ಲಿ, ಮತ್ತು ಮಾತುಗಳಲ್ಲಿ; ಮಾತು ಗಾಳಿಯಲ್ಲಿ ತೇಲಿಹೋಗುತ್ತದೆ. ಕಾಗದ ಪತ್ರಗಳು ಹಾರಿಹೋಗುತ್ತವೆ! ಮಾತಿನ ಮಲ್ಲರು ಮಾತು ಒಲ್ಲದವರ ಮೇಲೆ ಕಾನೂನಿನ ಬಲದಿಂದ ಸವಾರಿ ಮಾಡುತ್ತಿರುತ್ತಾರೆ!

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿದೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 186/1970

ಎ. ನಾಗೇಶ್ ನಾಯಕ್ —ವಾದಿ

ಮತ್ತು

1. ವನಜಸೆಟ್ಟಿ) ಕೀಳಂಜೆ ಬೂದ
2. ಕೃಷ್ಣ ಸೆಟ್ಟಿ) ಸೆಟ್ರ ಮಕ್ಕಳು
3. ಕೊರಗ ಸೆಟ್ಟಿ—ಲಚ್ಚ ಸೆಟ್ರ ಅಳಿಯ ಉಡುಪಿ ಕ್ಯಾಬಾಜಂನಂಜೆಯಲ್ಲಿರುವವರು — ಪ್ರತಿವಾದಿರು

ಇವರೊಳಗೆ

ವಾದಿಯು ಪ್ರತಿವಾದಿಯಿಂದ ತನಗೆ ಬರಬೇಕಾದ ಡಿಮಾಂಡ್ನೋಟಿನ ಸಾಲ ರೂಪಾಯಿ 1222/-ಕ್ಕೆ ಮಾಡಿದ ದಾವೆಯಲ್ಲಿ 2ನೆ ಪ್ರತಿವಾದಿ—ಕೃಷ್ಣ ಸೆಟ್ರಿಗೆ ನೋಟೀಸು ಮಾಡಿದ್ದಲ್ಲಿ ಸಿಕ್ಕಲಿಲ್ಲ. ಆದ್ದರಿಂದ ಅವಗೆ ನೋಟೀಸಿನ ಬಗ್ಗೆ ಈಗ ತಾ. 8-1-71ಕ್ಕೆ ಇಟ್ಟಿದೆ. ಏನಾದರೂ ಆಕ್ಷೇಪ ಇದ್ದರೆ ಆ ದಿವಸ ಬೆಳಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಮನವಿ ಮಾಡಿಕೊಳ್ಳಬೇಕು—ಇಲ್ಲವಾದ್ರೆ ಏಕಪಕ್ಷವಾಗಿ ತೀರ್ಮಾನಿಸಲಾಗುವದು—

(ಕೋರ್ಟು ಹುಕುಂ ಪ್ರಕಾರ)

B. Yogishwara Holla
Advocate for Plaintiff

Udipi, 10-12-70

ಜಪಾನು ಪ್ರವಾಸಾನುಭವ

ನವಂಬರ ತಾ. 16ರಂದು ಎಡ್ವೊಕೇಟ್ ಶ್ರೀ ಬಿ. ಶಿವಾಜಿ ಶೆಟ್ಟಿಯವರು ಮಂಗಳೂರಿನ ಯುವಕ ಕಾಂಗ್ರೆಸಿಗರ ಸಭೆಯಲ್ಲಿ ಶ್ರೀ [illegible] ಸತೀಶ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜಪಾನು ಪ್ರವಾಸದ ಕುರಿತು ಭಾಷಣವಿತ್ತರು.

ಅಂತೆಯೇ ಶ್ರೀ ಶೆಟ್ಟರು ನವಂಬರ 16ರಂದು ಮೂಡಬಿದ್ರಿ ರೋಟರಿ ಕ್ಲಬ್ಬಿನಲ್ಲಿ ಶ್ರೀ ಪಿ. ಜನಾರ್ದನ ಪೈಯವರ ಅಧ್ಯಕ್ಷತೆಯಲ್ಲಿ ಪ್ರವಾಸಾನುಭವವನ್ನು ವಿವರಿಸಿದರು.

ಉದಾರ ಕೊಡುಗೆ

ಶಿರ್ವ ತಾ. 28, ಹಾಜಿ ಶೇಖ್ ಹುಸೇನ್ ಸಾಹೇಬರ ಪುತ್ರರಾದ ಜನಾಬ್ ಎಸ್. ಎ. ಖಾಲಿದ್‌ರವರು ಶ್ರೀಮತಿ ಶೇಖ್ ಹುಸೇನ್ ಸಾಹೇಬರ ಹೆಸರಲ್ಲಿ ಮೆಡಿಕಲ್ ರಿಲೀಫ್ ಎಸೋಸಿಯೇಶನಿನ ಮೂಲಕ ಸ್ಥಳೀಯ ಲೋಕಲ್ ಫಂಡ್ ಆಸ್ಪತ್ರೆಗೆ ಸುಮಾರು ಐನೂರು ರೂಪಾಯಿ ಬೆಲೆಬಾಳುವ ಎರಡು ಉಕ್ಕಿನ ಮಂಚಗಳನ್ನು ದಾನವಾಗಿತ್ತಿರುವರೆಂದು ತಿಳಿದುಬರುತ್ತದೆ.

‘ಗೀತಾಸಾರ’

(ಏಳನೇ ಪುಟದಿಂದ)

ಕೃತಿಪೂರ್ಣಾಸ್ತಿಂತಾರದಾಗದು ಗಾಳಿ ಯೊಣಗಿಸಲೂ||
ಸುಡದು, ಕಂಡಿತವೊದೆಗುದೊಣಗದ
ಜಡದ ಜಾಡ್ಯಕೆ ಸಲ್ಲದಾತ್ಮನು
ಮಿಡುಕದಚಲನು, ಸರ್ವಗನು,
ನಿತ್ಯನು ಚಿರಂತನನು||

ಹೀಗೆ ಹಂತ ಹಂತವಾಗಿ ಮುಂಬರಿದು ಕೃಷ್ಣ, ಅರ್ಜುನನನ್ನು ಯುದ್ಧಕ್ಕೆ ಸಿದ್ಧಗೊಳಿಸುತ್ತಾನೆ. ಯುದ್ಧ ಕ್ಷತ್ರಿಯರಿಗೆ "ಸ್ವರ್ಗದ ಬಲಿದ ಬಾಗಿಲ ತೆರವು, ಸಂತಸದುಲುಹು" ಎಂದು ಹುರಿದುಂಬಿಸುತ್ತಾನೆ. ಸ್ಥಿತಪ್ರಜ್ಞನ ಲಕ್ಷಣವನ್ನು ಹೇಳುವ ಪದ್ಯಗಳೂ ಸೊಗಸಾಗಿವೆ. "ಅರಿದು ತನ್ನೊಳು ತಾನೆ ಸಂತಸವರಿದು." "ಆತ್ಮನಲಿ ಮನವಿರಿಸಿ, ವಿಷಯಾದಿಗಳಿಂ ದೂರನೆಂದೆನಿಸಿ," "ಇರಿಸಿ ಪರಮಾತ್ಮನಲಿ ಮನವನು, ಚಲಿಸುವಿಂದ್ರಿಯಗಳನು ವಿಷಯಾಂತರದಿ ವಿಹರಿಸಿ" "ಮಂದರಾಕ್ಷಿ ಬಹಿರ್ವಿಷಯಾದಿ ಸಖಗಳ ಲೆಕ್ಕಿಸದಿರಲು

ವಶನು".-ಮೊದಲಾದ ಸಾಲುಗಳು ಅವರ ಸಿದ್ಧ ಹಸ್ತವನ್ನು ಅಳೆಯಲು ಅಳತೆಗೋಲಾಗಬಹುದು. ಇವುಗಳಿಗಿಲ್ಲ ಅಳತವಿಟ್ಟಿಂತಿರುವ ಈ ಪದ್ಯವನ್ನು ಮೆಲುಕು ಹಾಕುವ ಎಂದೆನಿಸುತ್ತದೆ.

ಎತ್ತಲಿಸ್ಪದ ಯುಕ್ತನಾದವ—
ಗುತ್ತವಂದ ಮತಿಯುಕ್ತಮತ ಮತಿ
ವೆತ್ತಿರದೊಡಿನ್ನೆತ್ತ ಉತ್ತಮ ಭಾವನಾ
ನಿವರ||
ಉತ್ತಮದ ಭಾವನಗಳಿರದೊಡೆ
ಮತ್ತೆ ಶಾಂತಿಯದೆತ್ತ ಶಾಂತಿಯು
ತತ್ತ ತುಡಿಗೇರಿದೊಡೆ ನಿಜ ಸುಖ
ವೆತ್ತ ಹೇಳೆಂದ||

ಅನಂತರ ಬರುವುದು ಕರ್ಮಯೋಗದ ಪ್ರತಿಪಾದನೆ. ಕ್ಲಿಷ್ಟ ವಿಷಯವನ್ನು ಎಷ್ಟು ಸುಲಭವಾಗಿ ವರ್ಣಿಸಿದ್ದಾರೆಂಬುದಕ್ಕೊಂದು ನಿದರ್ಶನ—

ಮಾಡದಿರುವುದರಿಂದ, ಕರ್ಮವ
ಮಾಡ ತುದಿ ವಿಗಿಲುವುದರಿಂ
ಮಾಡ ನಿಸ್ಸರು ನಿಯತ ಕರ್ಮವ
ನಿರ್ವಹಿಸ ದಲಿ
ಮಾಡೆನೆಂದೊಡೆ ಬರಿದೆ ಹೊಟ್ಟೆಯ
ನೋಡಿ ಕೆಂಡವನಟ್ಟಿ, ಕರ್ಮವ
ದೂಡಿ ಬಿಟ್ಟರೆ ದೇಹ ಯಾತ್ರೆ ಚರಿತ
ವೆಂತಹುದು||

ಹೀಗೆ ಉದಹರಿಸುತ್ತ ಹೋದಲ್ಲಿ ಲೇಖನದ ಗಾತ್ರ ಬೆಳೆಯಬಹುದು. ಈ ಬರಹ ಅದರ ವಿಷಯವನ್ನು ಉಲ್ಲೇಖಿಸುವ ಒಂದು ಸಣ್ಣ ಪ್ರಯತ್ನ. ಅಭಿರುಚಿಯುಳ್ಳವರು ತರಿಸಿ ಓದಲಿ. ವಿಭೂತಿಯೋಗದಲ್ಲಿ ಬರುವ ಪದ್ಯವೊಂದು ಹೀಗಿದೆ—

ಅಕ್ಷರಂಗಳೊಳಾನಕಾರವು
ಹಕ್ಕಿಗಳೊಳಾಂ ವೈನತೇಯನು
ದಿಕ್ಕು ದಿಕ್ಕಿಗು ಮೊಗಗಳುಳ್ಳವ
ನಾಂ ಚತುರ್ಮುಖನು
ಮುಕ್ಕು ಮುರಿದೀಡಾಡಿ ಸರ್ವರ
ಶಿಕ್ಷಿಸಿಲ್ಲುವ ಮೃತ್ಯು ನಾಂ, ಜನ—
ನಕ್ಕೆ ಮರ್ಮವು ಜನಕ, ನಾನು ಸಮಾಸ
ದೊಳು ದ್ವಂದ್ವ

ಈ ರೀತಿಯ ಭಾವಸ್ಫುರಣವನು ಅನುವಾದವೆನ್ನುವುದೇ, ಮೂಲವೆಂಬೀ ಕರಿಯುವುದೇ, ಸಹೃದಯರು ಯೋಚಿಸಬೇಕು. ಕವಿ ಯಾವ ಎತ್ತರಕ್ಕೆ ಏರಬಲ್ಲರು, ಯಾವ ಚಲನೆಯಲ್ಲಿ ವಿಹರಿಸಬಲ್ಲರು, ವಿಶ್ವರೂಪ ದರ್ಶನದಲ್ಲಿ ಬರುವ ಪದ್ಯಗಳು ಸಾಕ್ಷಿ ನುಡಿಯುತ್ತವೆ.

ಮುಟ್ಟಿ ಮುಗಿಲನು ಮಿಂಚುಗಳ
ಮುಮ್ಮೆಳ—
ಕಟ್ಟಿ ಕಾಂತಿ ವರ್ಣ ವಿಚಿತ್ರನೆ
ಬಿಟ್ಟ ಬಾಯುರಿಕೊಡದಂತಹ ಕಣ್ಣು
ಜಗಜಗಿಸ
ಅಟ್ಟಹಾಸದ ಮೊಗವಿದನು ಜಗ—
ಗಿಟ್ಟಿ ಕಂಡಾನೆಲೆ ತಿರುಚೆ ಘೊ—
ರಟ್ಟಿ ದಯೆದೋರೆನೊ ಳೆಂದನು ಪಾ
ರ್ಥ ಕೈಮುಗಿದ||

ಅಥವಾ ಕೃಷ್ಣನ ಸಮಾಧಾನೋಕ್ತಿ; ಭೀಷ್ಮ ದ್ರೋಣಾದಿಗಳು ಆಗಲೇ ಸತ್ತಿದರು. ನೀನು ನೆಪ ಮಾತ್ರಕ್ಕೆ ಯುದ್ಧ ಮಾಡುವೆ. ನಿನ್ನಿಂದ ಅವರು ಸಾಯುವರು ಎನ್ನುವ ಭಾಗ—

ಕಾಲ ನಾನೆಲೆ ಪಾರ್ಥ ಲೋಕೋ—
ನ್ಮೂಲನಕೆ ತೊಡಗಿದೆನು ಬಿಡುವಾ
ಕಾಲ ಬಾರದೆ ಬಡಿವ, ಹಿಡಿದೇ
ಕೊಲಸವಿದನಿನ್ನು
ಜಾಲದ ಬಲ್ಲಗಳಲ್ಲಿ ಸಿಂಧ ನೃ—
ಪಾಲ ಭೀಷ್ಮ ದ್ರೋಣ ಮೊದಲಿತ
ರೋಲ ಕಡುಹಿನ ಕಲಿಗಳಿದರು
ನೋಡು ನೀನೆಂದ||

ಅಥವಾ ವಿಶ್ವರೂಪವನ್ನು ಕಣ್ಣಾರೆ ಕಂಡ ಅರ್ಜುನನ ಬಾಯಿಂದ ಬರುವ

ಜ್ವಲಿತ ಪಾವಕ ವಕ್ತ್ರ ಚಂದ್ರಮ
ಜಲಜ ಬಾಂಧವ ನೇತ್ರ ಧಾತ್ರೀ—
ತಲ ದಿಗಂತಾಂತರ ನಿವಾಸಿತ ಗಾತ್ರ
ಮುಡಿ ಪಾತ್ರ||

ಗೀತಾಸಾರ ಗ್ರಂಥವನ್ನು ಕವಿಗಳು ಡಾಕ್ಟರ್ ಶಾಂತರ ಕೃಪೆಯಿಂದ ಪ್ರಕಟಿಸಿದರು. ಅದನ್ನು ಓಚಿತಲು ಒದಗಿದ ಒತ್ತಡವನ್ನು ಅವರೇ ಕೊನೆಯಲ್ಲಿ ತಿಳಿಸಿದ್ದಾರೆ.

ನುಡಿದು ಹಬ್ಬವ ಮಾನ್ಯರೊಂದೆಡೆ
ಕುಡುಕುದನು ಕೊಡದುಂಬ ನೆಂಟರ
ಗಡಣವೊಂದೆಡೆ ಕೂಡಿ ಕಾಡಿದೆ ಹೆ
ಪ್ಪನೆಚ್ಚರಿಸಿ||

ಗೀತೋಪದೇಶದ ಕೊಂತರ ಗೀತಾಚಾರ್ಯ ಅರ್ಜುನನನ್ನು ಹೀಗೆ ಪ್ರಶ್ನಿಸುತ್ತಾನೆ—

ಕೇಳದೆಯಲಾ ಪಾರ್ಥ ನಿನಗಾಂ
ಪೇಳದ ದನೇಕ ಪ್ರಮತಿಯುಂ
ತಾಳ ತಿಳಿದ್ಯೆ, ನಿನ್ನ ಮುದದಜ್ಞಾನ್ನ
ವೆಂದೆಂಬ||
ರಾಳಗತ್ತಲೆ ಹರಿದ, ತಿಳಿವಿನ
ಬೆಳಕರಬ ಪಡೆದನೆ ಚಿತ್ತದ
ಕೋಳ ಕೊಸರಿತೆ, ಬೆಳಕೆಯೆ ಯುದ್ಧಂ
ದಳದಿ ಪಸರಿತೆ||

ಈ ಸವಾಲಿಗೆ ಅರ್ಜುನ ತನ್ನ ಸ್ಥಿತಿಯಿಂದಲೇ ಉತ್ತರಿಸುತ್ತಾನೆ. ಈ ಗೀತಾ ಛಾಯಾನುವಾದ ರಸವತ್ಕಾವ್ಯ ಕಾವ್ಯವೇ? ಬಿಗುಮಾನವನ್ನು ಬದಿಗಿರಿಸಿ— ಅನುಕೂಲವಾಗ ಒಮ್ಮೆ ಓದಿ—ಇದ್ದುದನ್ನು ಇದ್ದಂತೆ ಹೇಳಿ.

ನರಭಕ್ಷಕರಿಗೆ ನರರಕ್ತದಾಸೆ

(ನಾಲ್ಕನೇ ಪುಟದಿಂದ)

ಕೈಲಾಗದ ಒಡೆಯ ತಿಳಿದ್ದಿ?

"ಹ್ಞಾಂ... ಹಾಗೂ ಪಾಕಿಸ್ತಾನದಲ್ಲಿ ನಿಜವಾದ ಪ್ರಜಾಸತ್ತೆ ಬರುವುದೇ ಇಲ್ಲವೇನೋ"

"ಬಂದೀತು, ಬರಲಿ."

"ಸದ್ಯ ಅಷ್ಟೇ ಅಲ್ಲ..."

'ನಿರಂತರದ ಆಶೆಯ ಟ್ಯುಕೊಳ್ಳುವುದೇ ಒಳ್ಳೆಯದು...."

"ಮತ್ತೆ ನವಾಗಿರೋ ಬಲವಾದದ್ದು ಏನು?"

"ಹ್ಞಾಂ..."

"ಶಬ್ಬಾ...."

—ಗೋರಾ.

ಕುಂದಾಪುರ ಮುನ್ಸೀಫ್ ಕೋರ್ಟಿನಲ್ಲಿ

S. C. 33/1970

ವಾದಿ— ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ, ಉಪ್ಪುಂದ.

ಪ್ರತಿವಾದಿ—ನಾಗಪ್ಪ ಮೈಯ್ಯ, ಮಂಜುನಾಥ ಮೈಯ್ಯರ ಮಗ, ಕುಂದಾಪುರ ತಾಲ್ಲೂಕು, ಉಪ್ಪುಂದ ಗ್ರಾಮ, ಪೋಸ್ಟ್ ಉಪ್ಪುಂದ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ —

ವಾದಿ ದೇವಸ್ಥಾನದ ಹಕ್ಕಿನ ಬಾಬ್ತು ದಾವೆಯಲ್ಲಿ ಕಾಣ್ಸದ ಸ್ಥಳಗಳನ್ನು ಪ್ರತಿವಾದಿಯು ವರ್ಷ 1ರ ಅಕ್ಕಿ ಸೇ ೧ 27½ ನಗದು ರೂ. 4.88 ಕಂಡನ ಎಷ್ಟು ಕದ್ದು ಕ್ಷಿತಗೇಣಿಗೆ ಗೇಣಿಗೆ ಪಡೆಯುದ ಅನಧಿಕೃತ ಬಾಕಿ ಬಾಬ್ತು ಕಳೆದ ಗೇಣಿಗೆ ಬಡ್ಡಿ ಸಹ ರೂ. 168.98 ಬರುವುದು ಕೋರ್ಟಿನಲ್ಲಿ ವಾದಿ ದೇವಸ್ಥಾನದ ಕಡೆಯಿಂದ ದಾವೆ ಹೂಡಿದ ದಾವೆ ತಾ. 23-11-1970ಕ್ಕೆ ಇಟ್ಟಿದೆ. ಆ ಕೇಸು ನಿಮ್ಮ ಉದಾಹರಣೆ ಯುದ್ಧರ ನಿಗದಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ವೇಳ್ಯಾವಸ್ಥದ ಕೋರ್ಟಿನ ಮುಂದೆ ಹಾಜರಾಗಿ ತಿಳಿಸತಕ್ಕದ್ದು.

(ಕೋರ್ಟಿನ ಹುಕುಂ ಪ್ರಕಾರ)

A. Balakrishna Shetty
Advocate for Plaintiff

ಮೊಕ್ಕಾಂ: ಕುಂದಾಪುರ)
ತಾರೀಖು: 11.12.1970.)

ಕಡಲಿಗಾಳು

ಪಂಜಾಬದ ಬಾದಲ್ಲರ ಸಚಿವ ಸಂಪುಟದಲ್ಲಿ (ಅಕಾಲಿ)ದ ಸಚಿವರ ಸಂಖ್ಯೆ ಕಡಿಮೆಯಾಗಬೇಕು ಎಂದು ಅಕಾಲಿಗಳೇ ಹೇಳಿಕೆ ಕೊಡ ಹೊರಟಿದ್ದಾರಂತೆ.

—ತಮ್ಮನ್ನು ಮಂತ್ರಿ ಮಾಡಿ ಎಂದು ಪರ್ಯಾಯವಾಗಿ ಇವರು ಕೇಳುತ್ತಿದ್ದಾರೆಯೋ?

ಅಥವಾ "ನೀನೂ ಮುಂಡೆಯಾಗು" ಎಂಬ ಮಂಡೆ ಕಾವಲೇ?

o o o

ಪ್ರಧಾನಿ ಶ್ರೀಮತಿ ಗಾಂಧಿಯವರು ಶಿಷ್ಟಪಕ್ಷವಾದಿಗಳು. ನ್ಯಾಯಾಂಗದ ವಿಧಾನವಾಗಿ ಕರ್ನಾಟಕ— ಮಹಾರಾಷ್ಟ್ರ ಗಡಿಗೆ ಪರಿಹಾರ ಕಂಡುಹಿಡಿದನಂತರ ಶಾಶ್ವತ ನಿರ್ಣಯ ಅನಗತ್ಯ. ಸಿಂಡಿಕೇಟ್ ಸಮಸ್ಯೆಯನ್ನು ಬೇಗನೇ ಇತ್ಯರ್ಥ ಮಾಡಬೇಕಿತ್ತು— ಸಿಂಡಿಕೇಟಿಗೆ ಶಂಕರಾನಂದ.

—ಈಗ ಸಿಂಡಿಕೇಟೀಕೆ ಫೈಲನ್ನು ಎತ್ತಿಕೊಂಡು ಒಪ್ಪಿಗೆ ನೀಡುವುದಿಲ್ಲ ?

o o o

ಬಂಗಾಳದ ನೆಹರೂ ನಿನ ಕಾರ್ಖಾನೆಗಳಲ್ಲಿ ಮುಷ್ಕರ........ —(ವಾರ್ತೆ)

ಬಂಗಾಳದಲ್ಲಿ ಏನಿದೆ ಅಂದರೆ, ಮುಷ್ಕರ, ಬಂದ್, ಸಂಪು, ಪ್ರದರ್ಶನ, ರಚೆ, ಗೂಂಡಾಗಿರಿ, ದರೋಡೆ, ಬಲಾತ್ಕಾರ, ಸುಲಿಗೆ, ಕೊಲೆ, ಕಳವು........ ಇನ್ನೂ ಇನ್ನೂ ಬುದ್ಧಿಗೆ ನಿಲುಕದ ಪ್ರಜಾಸತ್ತೆಯನ್ನು ಸಜೀವ ಸಮಾಧಿ ಮಾಡುವ ನಾನಾರು ಹತ್ಯಾರುಗಳು!

o o o

ಪೋಪ್ ಪಾಲರನ್ನು ಕೊಲ್ಲಬಂದವನು ಪ್ರಸಿದ್ಧಿ ಪಡೆಯುವ ಆಶಯದಿಂದಲೇ ಹಾಗೆ ಮಾಡಿದನಂತೆ.

ಮಹಾತ್ಮಾ ಗಾಂಧಿಯನ್ನು ಕೊಂದು ಗೋಡ್ಸೆ ಪ್ರಸಿದ್ಧನಾದ. ಮುರಾರ್ಜಿಯವರ ಮಂತ್ರಿತ್ವ ಕಸಿದು ಶ್ರೀಮತಿ ಗಾಂಧಿ ಪ್ರಸಿದ್ಧರಾದರು. ಆನೆಯನ್ನು ಬೊಗಳಿ ನಾಯಿ ಸ್ಪರ್ಧಿಸಬಹುದು.

o o o

೧೦ ಪೈಸೆ ಕಾರ್ಡಿಗೆ ೨೦ ಪೈಸೆ ವೆಚ್ಚವಾಗುತ್ತಿದೆ. ಇನ್ನು ಕೆಲಸದ ಯಾವ ಹಂತದ ಇದು ೩೦ ಪೈಸೆಗೇರುವ ಸಾಧ್ಯತೆಯಿಲ್ಲವೆ.

—ನಮ್ಮ ಯೋಜನೆಗಳಂತೆಯೇ ೧೦ ಕೋಟಿ ರೂಪಾಯಿ ಯೋಜನೆಗೆ ೨೦ ಕೋಟಿ ಖರ್ಚು ತೋರಿಸುತ್ತೇವೆ. ಕೆಲಸ ಮುಗಿದಾಗ ಮೂವತ್ತು ಕೋಟಿ ಸಂದಾಯವಾಗಿರುತ್ತದೆ.

o o o

Gram : VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ದಯಮಾಡಿ
ನಿಮ್ಮ ಬಾಕಿ ಚಂದಾ
ಹಣವನ್ನು ಕಳುಹಿಸಿರಿ

ಜೀವವಿಮೆ: ಒಂದು ಶತಮಾನದ ಪ್ರಗತಿ

ಜೀವವಿಮೆ ಒಂದು ಸೇವಾ ಉದ್ಯಮವಾಗಿದೆ. ಪಾಲಿಸಿದಾರರ ಯೋಗಕ್ಷೇಮದ ಹೊಣೆಹೊತ್ತ ಸಂಸ್ಥೆಯಾಗಿದೆ. ಆದುದರಿಂದ ತನ್ನ ಕೈಂಗಳ ಶೀಘ್ರ ಇತ್ಯರ್ಥಕ್ಕೆ ಉತ್ತಮ ರೀತಿಯಲ್ಲಿ ಪಾಲಿಸಿಗೆ ಸಂಬಂಧಿಸಿದ ಸೇವೆ ಪಡೆಯುವುದಕ್ಕೆ ಕೇಳಲು ಜನರಿಗೆ ಹಕ್ಕಿದೆ. ಉತ್ತಮ ಸೇವೆಯಿಂದಲ್ಲವೆ ಜನರಲ್ಲಿ "ವಿಮೆ ಮಾಡಿಸಬೇಕು" ಎಂಬ ಕಲ್ಪನೆ ಕುದುರುವದ? ಲೈಫ್ ಇನ್ಶುರೆನ್ಸ್ ಕಾರ್ಪೊರೇಷನ್ ತನ್ನ ಕಚೇರಿಗಳಲ್ಲಿನ ಕಾರ್ಯಕ್ಷಮತೆ ಕ್ರಮವಾಗಿ ಹೆಚ್ಚಾಗುವಂತೆ ಪ್ರಯತ್ನಿಸಬೇಕು. ಜನತೆಯ ಆಕಾಂಕ್ಷೆಗಳು ಈಡೇರುವ ರೀತಿ ಎಲ್ಲಿ ತನ್ನ ಅಭಿವೃದ್ಧಿ ಸಿಬ್ಬಂದಿಯನ್ನು ಸಜ್ಜುಗೊಳಿಸಬೇಕು.

ಮೈಸೂರಿನ ಮೇಲ್ಮೆ

ಭಾರತದ ಜೀವ ವಿಮೆಯ ಚರಿತ್ರೆಯಲ್ಲಿ ಮೈಸೂರಿಗೆ ಹೆಮ್ಮೆಯ ಸ್ಥಾನವಿದೆ. ಸರಕಾರೀ ನೌಕರರ ಲಾಭಕ್ಕೆಂದು ಜೀವ ವಿಮೆಯನ್ನು ಪ್ರಥಮವಾಗಿ ಪ್ರಾರಂಭಿಸಿದ ಕೀರ್ತಿ ಮೈಸೂರಿಗಿದೆ. ದೂರದರ್ಶಿಗಳೂ ಮಹಾ ಮುತ್ಸದ್ದಿಗಳೂ ಎನಿಸಿದ್ದ ಮೈಸೂರಿನ ದಿವಾನ್ ಶ್ರೀ ಕೆ. ಶೇಷಾದ್ರಿ ಅಯ್ಯರ್ ಅವರು ಸರಕಾರೀ ನೌಕರಿಯಲ್ಲಿನ ಎಲ್ಲ ಅರ್ಹ ನೌಕರರಿಗೆ ಜೀವವಿಮೆಯನ್ನು ಕಡ್ಡಾಯವಾಗಿ ಮಾಡಿದರು. 1914ರಲ್ಲಿ ಈ ಯೋಜನೆಯನ್ನು ಇನ್ನೂ ವಿಸ್ತರಿಸಿ ರಾಜ್ಯದ ಖಾಸಗೀ ನಾಗರಿಕರೂ ಜೀವ ವಿಮೆಯ ಲಾಭವನ್ನು ಪಡೆಯಲು ಅನುಕೂಲ ಮಾಡಿಕೊಡಲಾಯಿತು. 1956ರಲ್ಲಿ ಜೀವ ವಿಮೆಯು ರಾಷ್ಟ್ರೀಕರಣವಾದ ಮೇಲೂ ಮೈಸೂರು ಸರಕಾರವು ಜೀವ ವಿಮೆಯನ್ನು ಕಡ್ಡಾಯಗೊಳಿಸಿ ತನ್ನ ನೌಕರರ ಸಂಬಳದಲ್ಲಿ ವಿಮಾ ಕಂತುಗಳನ್ನು ಮುರಿಯಲು ವಿಶಾಲ ಬುನಾದಿ ಹಾಕಿತು.

ರಾಷ್ಟ್ರೀಕರಣದ ನಂತರದ ಅವಧಿಯಲ್ಲಿ ಮೈಸೂರು ರಾಜ್ಯದಲ್ಲಿ ಜೀವ ವಿಮೆಯು ಭರದಿಂದ ಪ್ರಗತಿಹೊಂದಿದೆ. ದೇಶದಲ್ಲಿ ಸರಾಸರಿ ಪ್ರತಿ ನೂರು ಕುಟುಂಬಗಳಲ್ಲಿ 13 ಕುಟುಂಬಗಳು ಜೀವವಿಮಾ ಪಾಲಿಸಿಯನ್ನು ಈಗ ಪಡೆದಿದ್ದಾರೆ. ಬೆಂಗಳೂರು ವಿಭಾಗದ ಕ್ಷೇತ್ರದಲ್ಲಿ ಪ್ರತಿ ನೂರು ಕುಟುಂಬಗಳಲ್ಲಿ 33 ಕುಟುಂಬಗಳು ಈಗ ಜೀವ ವಿಮೆಯ ಪಾಲಿಸಿಗಳನ್ನು ಪಡೆದಿವೆ. ಬೆಂಗಳೂರು ಡಿವಿಜನಲ್ ಕಚೇರಿಯ ಅಧೀನದಲ್ಲಿ ಈಗ ಐದು ಸಹಸ್ರ ವಿಮಾ ಏಜಂಟರಿದ್ದಾರೆ; ಬೇರೆ ಶಬ್ದದಲ್ಲಿ ಹೇಳುವದಾದರೆ, ಜೀವವಿಮೆಯ ವಿಷಯದಲ್ಲಿ ಪ್ರತಿ 400 ಕುಟುಂಬಗಳಿಗೆ ಒಬ್ಬ ಏಜಂಟನಿದ್ದಾನೆ.

ಕಳೆದ ಐದು ವರ್ಷಗಳಲ್ಲಿ ಬೆಂಗಳೂರು ವಿಭಾಗದ ಬೆಳವಣಿಗೆ ನಾಗಾಲೋಟದಿಂದ ಸಾಗಿದೆ. 1969—70ರ ಸಾಲಿನಲ್ಲಿ ಬೆಂಗಳೂರ್ ವಿಭಾಗವು ಸುಮಾರು 45·5 ಕೋಟಿ ರೂ.ಗಳ ವ್ಯವಹಾರವನ್ನು ಸಾಧಿಸಿದೆ. ವ್ಯವಹಾರ ಹೆಚ್ಚಳದ ವಿಷಯದಲ್ಲಿ ಬೆಂಗಳೂರ ವಿಭಾಗವು ಜೀವ ವಿಮಾ ಕಾರ್ಪೊರೇಶನ್ನಿನ ದೇಶದ ಎಲ್ಲ ಭಾಗಗಳಿಗಿಂತಲೂ ಅಗ್ರಸ್ಥಾನ ಪಡೆದಿದೆ.

ಗ್ರಾಮಾಂತರ ಪ್ರದೇಶದಲ್ಲಿ ಜೀವ ವಿಮೆಯ ವ್ಯವಹಾರವನ್ನು ದೊಡ್ಡ ಪ್ರಮಾಣದಲ್ಲಿ ಸಾಧಿಸಲು ಗ್ರಾಮದ ಸಹಕಾರಿ ಸಂಸ್ಥೆಗಳಿಗೆ ಏಜನ್ಸಿಗಳನ್ನು ನೀಡಲು ನಿರ್ಧರಿಸಲಾಗಿದ್ದು ಈಗಾಗಲೇ ಮಂಡ್ಯ ಜಿಲ್ಲೆಯ ಕೇಂದ್ರ ಸಹಕಾರಿ ಬ್ಯಾಂಕಿಗೆ ಏಜನ್ಸಿಯನ್ನು ನೀಡಲಾಗಿದೆ.

ರಾಜ್ಯದ ಜೀವವಿಮೆಯು ವಿಷಯದಲ್ಲಿ ಈ ಸಂಸ್ಥೆ ಮಹತ್ವದ ಪಾತ್ರ ವಹಿಸುವ ಲಕ್ಷಣಗಳನ್ನು ತೋರಿಸಿದೆ. ಬೆಂಗಳೂರ ವಿಭಾಗವು ತನ್ನ 'ಸ್ಪ್ರಿಂಗ್ ಗ್ರ್ಯಾಚ್ಯುಟಿ' ಹಾಗು "ಸೂಪರ್ ಅನ್ಯುಯೇಶನ್ ಸ್ಕೀಮ್"ಗಳ ಮುಖಾಂತರ ಸುಮಾರ 20 ಸಂಸ್ಥೆಗಳ ನೌಕರರಿಗೆ ಜೀವವಿಮೆಯ ರಕ್ಷಣೆಯನ್ನು ಒದಗಿಸಿದೆ.

1889ರಿಂದಲೂ ಜೀವವಿಮೆಯ ಲಾಭವನ್ನು ಮೈಸೂರಿನ ಜನತೆ ಅನುಭವಿಸುತ್ತಿದ್ದಾರೆ. ಬೆಂಗಳೂರ ಹತ್ತಿರದಲ್ಲಿ ಯಲಹಂಕದಲ್ಲಿ ಜೀವ ವಿಮಾ ಕಾರ್ಪೊರೇಶನ್ನಿನ "ರೆಸಿಡೆನ್ಶಿಯಲ್ ಫ್ಲ್ಯಾಟ್"ಗಳನ್ನು ನಿರ್ಮಿಸಲು ಯೋಚಿಸುತ್ತಿದೆ.

ಬಡೆಕ್ಕಿಲ ವೆಂಕಟರಮಣ ಭಟ್ಟರಿಗೆ ಸನ್ಮಾನ

ಪುತ್ತೂರಿನ ವಿವೇಕಾನಂದ ಕಾಲೇಜಿನ ಸಾಹಿತ್ಯ ಸಂಘವು ಇತ್ತೀಚೆ ಏರ್ಪಡಿಸಿದ ಶ್ರೀ ಬಡೆಕ್ಕಿಲ ವೆಂಕಟರಮಣ ಭಟ್ಟರ ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ| ಶಿವರಾಮ ಕಾರಂತರು ಮಾತನಾಡುತ್ತ, ಸಾಹಿತ್ಯದಲ್ಲಿ ಹಳೆಯ ತಲೆಮಾರಿನ ಕಾಲ ಮುಗಿಯುತ್ತಿದೆ. ಛಂದಶ್ಶಾಸ್ತ್ರಗಳ ಕಾವ್ಯ ಹಿಂದೆ ಸರಿದಿದೆ. ಪದ್ಯವೋ ಗದ್ಯವೋ ಗುರುತಿಸಲಾಗದ ಕೃತಿಗಳು ಈಗ ಬರುತ್ತಿವೆ. ಜಟಿಲವಾದ ತತ್ವಜ್ಞಾನವನ್ನು ಜನ ಸಾಮಾನ್ಯರಿಗೆ ತಿಳಿಯುವ ಹಾಗೆ ಬರೆಯಲು ಭಾಷೆಯು ಹಿತ ಬೇಕು. ಅದು ಶ್ರೀ ಬಡೆಕ್ಕಿಲರಿಗೆ ಸಾಧಿಸಿದ್ದರಿಂದಲೇ ಅವರು ಗೀತಾಸಾರವನ್ನು ಭಾಮಿನಿ ಷಟ್ಪದಿಯಲ್ಲಿ ಬರೆಯಲು ಸಮರ್ಥರಾದರು. ತನ್ನ ಅಂತರಂಗದ ಸಂಕಷ್ಟಗಳನ್ನು ಓದುಗರ ಮನವುಟ್ಟುವಂತೆ ಕಾವ್ಯದಲ್ಲಿ ಅಭಿವ್ಯಕ್ತಗೊಳಿಸುವುದು ಕವಿಯ ಕರ್ತವ್ಯ ಎಂದರು.

ಸಮಾರಂಭದ ಆರಂಭದಲ್ಲಿ ಪ್ರಿನ್ಸಿಪಾಲ್ ಶ್ರೀ ಜಿ. ಕೆ. ಶೆಟ್ಟಿಯವರು ಸ್ವಾಗತಿಸಿದರು. ಶ್ರೀ ಡಿ. ರಾಮ ಭಟ್ಟರು ನಾಡಿನ ಪ್ರಸಿದ್ಧ ಸಾಹಿತಿಗಳಿಂದ ಬಂದ ಶುಭ ಸಂದೇಶಗಳನ್ನೋದಿದರು. ಸಂಘದ ಉಪಾಧ್ಯಕ್ಷ ಶ್ರೀ ಅಮೃತ ಸೋಮೇಶ್ವರ ಅವರು ಅಭಿನಂದನ ಪತ್ರವನ್ನು ಸಮರ್ಪಿಸಿದರು.

ಅಭಿನಂದನ ಭಾಷಣ ಮಾಡುತ್ತಾ ಶ್ರೀ ನಾರಾಯಣ ರಾವ್ ಕಲ್ಲೆ ಅವರು ಶ್ರೀ ಬಡೆಕ್ಕಿಲ್ಲರ ಕಾವ್ಯ ಪ್ರತಿಭೆ, ರಸಿಕತೆ ದಾರ್ಶನಿಕತೆ ಮತ್ತು ಶಿಷ್ಯಹಿತೈಷಿತೆಗಳನ್ನು ವಿವರಿಸಿದರು. ಮಿತ್ತೂರು ಪುರೋಹಿತ ಶ್ರೀ ಶಂಕರನಾರಾಯಣ ಭಟ್ಟರು ಶ್ರೀ ಬಡೆಕ್ಕಿಲರ ಪಾಂಡಿತ್ಯ ವೈಶಿಷ್ಟ್ಯಗಳನ್ನು ವಿವರಿಸಿದರು. ಶ್ರೀ ಎಸ್. ಆರ್. ಪಾಂಡೆಯವರು ಶ್ರೀ ಬಡೆಕ್ಕಿಲರ ಮುಖ್ಯ ಕೃತಿಗಳಿಂದ ಆರಿಸಿದ ಕೆಲವು ರಸವತ್ತಾದ ಭಾಗಗಳನ್ನು ಓದಿದರು.

ಶ್ರೀ ಬಡೆಕ್ಕಿಲ ವೆಂಕಟರಮಣ ಭಟ್ಟರು ಉತ್ತರ ನೀಡುತ್ತಾ "ಬಾಳು ಬೆಳಗಲು ಶಾ ಪರ್ಥಿಕ, ವ್ಯವಹಾರಿಕಗಳೆರಡನ್ನೂ ಹಿತಮಿತವಾಗಿ ಅಳವಡಿಸಿಕೊಳ್ಳಬೇಕು. ಅಂತಿಮ ಗುರಿಯ ಸಾಧನೆಗೆ ಕರ್ಮಯೋಗ ಶಾಸ್ತ್ರವಾದ ಗೀತೆಯೇ ಅತ್ಯಂತ ಮಾರ್ಗದರ್ಶಿ" ಎಂದು ಹೇಳಿದರು. ಕವಿತೆ ಬರೆಯುವವರು ಜನ ಮೆಚ್ಚುವ ಕೃತಿಗಳನ್ನು ರಚಿಸಬೇಕೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಶ್ರೀ ಭಟ್ಟರಿಗೆ ಶಾಲೊಂದನ್ನು ಉಡುಗೊರೆಯಾಗಿ ನೀಡಲಾಯಿತು.

ಸಿಂಡಿಕೇಟ್ ಬ್ಯಾಂಕ್, ಸುಳ್ಯ ಬ್ರಾಂಚ್

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬ್ಯಾಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡಕೊಂಡ ಸಾಲ ಮತ್ತು ಬಡ್ಡಿಯನ್ನು ದೀರ್ಘ ಕಾಲದಿಂದ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದ ಮತ್ತು ಅವರಿಗೆ ಕ್ರಮವಾಗಿ ನೋಟೀಸು ಕಳುಹಿಸಿ, ನೋಟೀಸು ಕೊಟ್ಟು ಅವುಗಳಿಗೆ ಯಾವ ಪ್ರತಿಕ್ರಿಯೆ ಇಲ್ಲದಿರುವುದರಿಂದ ಈ ಮೂಲಕ ತಿಳಿಸುವುದೇನೆಂದರೆ:— ಸದ್ರಿಯವರಿಂದ ಬ್ಯಾಂಕಿಗೆ ಬರತಕ್ಕ ಅಸಲು ಮತ್ತು ಬಡ್ಡಿ ಮತ್ತು ನೋಟೀಸು ಖರ್ಚು ವಗೈರೆಗಳ ಬಗ್ಗೆ ಈಡಿಟ್ಟ ನಗಗಳನ್ನು ಜನವರಿ ತಾ. 9ನೇ ಶನಿವಾರ 1971 ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಯಾ ಬ್ಯಾಂಕಿಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿ ಬಂದ ಹಣವನ್ನು ಸದ್ರಿಯವರ ಲೆಕ್ಕಕ್ಕೆ ಜಮಾ ಮಾಡಿ ನಮಗೆ ಬಾಕಿ ಆಗಬಹುದಾದ ಹಣವನ್ನು ಸದ್ರಿಯವರಿಂದ ವಸೂಲು ಮಾಡಲಾಗುವುದು.

Sd/-

Manager
SULLIA BRANCH

ಸಾಲದ ನಂಬ್ರ	ಸಾಲ ಪಡೆದವರ ಹೆಸರು ಮತ್ತು ವಿಳಾಸ	ಬಾಕಿ ಹಣ Rs. Ps.
15/68	ಎಮ್. ರಾಮಚಂದ್ರ ಗೌಡ, ಲಿಂಗಪ್ಪ ಗೌಡರ ಮಗ, ಮುಡಪ್ಪಾಡಿ ಗ್ರಾಮ, ಪೋಸ್ಟು ದೇವಚಳ್ಳ.	225 — 00
189/68	ಕೂಸಪ್ಪ ಗೌಡ, ದಾಸಪ್ಪ ಗೌಡರ ಮಗ, ಪೋಸ್ಟು ದೊಡ್ಡತೋಟ.	95 — 00
48/69	ಚಿನ್ನಪ್ಪ ಗೌಡ, ವೆಂಕಪ್ಪ ಗೌಡರ ಮಗ, ಪೋಸ್ಟು ಮಾಂಡೆಕೋಲು.	70 — 00
49/70	ಎಸ್. ಉಪೇಂದ್ರ ನಾಯಕ, ರಾಮಕೃಷ್ಣ ನಾಯಕರ ಮಗ, ಪೋಸ್ಟು ನೆಲ್ಲೂರು ಕೆಮ್ರಾಜೆ.	100 — 00
60/70	ಬೇರಾಜೆ ಉಕ್ರಯ್ಯ ಗೌಡ, ಕೇಪಣ್ಣ ಗೌಡರ ಮಗ, ಪೋಸ್ಟು ಅರಂತೋಡು.	50 — 00

ಮಂಡ್ಯದಲ್ಲಿ ವಿವಾಹ—ಸತ್ಕಾರ

ಮಂಡ್ಯದ ಶ್ರೀ ಲಕ್ಷ್ಮೀ ವಿಲಾಸ ಟೆಕ್ಸ್‌ಟೈಲ್ ಶೋ ರೂಮಿನ ಮೂಲಕ ಶ್ರೀ ಎ ಸೀನಪ್ಪ ಅವರು ತಮ್ಮ ಪುತ್ರ ಚಿ| ಎಂ. ಎಸ್. ಪ್ರಭಾಕರ ಅವರ ವಿವಾಹವು ಚಿಕ್ಕಬಳ್ಳಾಪುರದ ಬಾಲಾಜಿ ಟಾಕೀಸಿನ ಮೂಲಕ ಶ್ರೀ ಎ. ಟಿ. ತಿಮ್ಮರಾಯಪ್ಪ ಅವರ ಪುತ್ರಿ ಸೌ| ವನಜ ಅವರೊಡನೆ ಇದೇ ತಾ. 3 ರಂದು ಬೆಂಗಳೂರಿನ ಚಾಮರಾಜ ಪೇಟೆಯ ಶ್ರೀ ಆನಿಲ್ ತಿಮ್ಮಯ್ಯ ವಿದ್ಯಾರ್ಥಿ ನಿಲಯದಲ್ಲಿ ಜರಗಿದ ಸಂಬಂಧ ತಾ. 6—12—70 ರ ಸಂಜೆ ಮಂಡ್ಯದ ಅಣ್ಣಯ್ಯ ಸೆಟ್ಟಿ ಗೌರಮ್ಮ ಕಲ್ಯಾಣ ಮಂದಿರದಲ್ಲಿ ಸತ್ಕಾರ ಸಮಾರಂಭವೊಂದನ್ನು ವಿಜೃಂಭಣೆಯಿಂದ ಜರಗಿಸಿದರು. ಇದಕ್ಕೆ ಬಹಳಷ್ಟು ಮಂದಿ ಊರಿನ ನಗರದ ಮತ್ತು ಹೊರಗಿನ ಪ್ರತಿಷ್ಠಿತರನೇಕರು ವಧೂವರರನ್ನು ಆಶೀರ್ವದಿಸಿದರು.

ಹೊಸ ಅಂಚೆ ಕಚೇರಿ ಕಟ್ಟಡ ಉದ್ಘಾಟನೆ

ಉಡುಪಿ ಸಂತೆಕಟ್ಟೆಯಲ್ಲಿ ನವೀನವಾಗಿ ನಿರ್ಮಿಸಲ್ಪಟ್ಟ ಅಂಚೆ ತಂತಿ ಕಚೇರಿಯ ಸಾಕಷ್ಟು ಕಾರ್ಯಕ್ಷಮ ಆಕರ್ಷಕ ಸುಂದರ ಹಾಗೂ ಭವ್ಯ ಕಟ್ಟಡವನ್ನು ತಾ. 10-12-70 ರಂದು ಡಾ| ಟಿ.ಎಂ.ಎ ಪೈ ಅವರು ಉದ್ಘಾಟಿಸುತ್ತ ಇಂದಿನ ವೇಗಯುಗದಲ್ಲಿ ಸರಕಾರ ಸೌಕರ್ಯ ಎಷ್ಟಿದ್ದರೂ ತೃಪ್ತಿ ಎನಿಸುವಂತಿಲ್ಲವೆಂದೂ ಮಿತವೆಚ್ಚದಲ್ಲಿ ಅತಿ ಶೀಘ್ರ ಸಂದೇಶ ತಲುಪಿಸುವ ಅಂಚೆ ಇಲಾಖೆಯು ನಗರೀಗೆ ದೊರಕುವ ಸೌಲಭ್ಯಗಳಲ್ಲಿ ಪ್ರಮುಖವಾದುದೆಂದೂ ಹೇಳಿದರು.

ಇಂದಿನ ದಿನಗಳಲ್ಲಿ ರಾಷ್ಟ್ರೀಕರಣ ಎಂದರೆ ಅಂಚೆಕೆ ವ್ಯಕ್ತಪಡಿಸುವ ಮಂದಿಗೆ ಸರಕಾರಿ ಇಲಾಖೆಯಾದ ಅಂಚೆ-ತಂತಿ ಇಲಾಖೆಯು ದಕ್ಷತೆಯ ಗಮನಕ್ಕೆ ಬಂದಂತಿಲ್ಲ ಎಂದು ತಿಳಿಸಿದರಲ್ಲದೆ ಜಿಲ್ಲೆಯಲ್ಲಿ ಈ ಇಲಾಖೆಯ ಪ್ರಗತಿಯನ್ನು ವಿವರಿಸಿದ್ದು, ಇಲಾಖೆಯಿಂದ ಸರ್ವತೋಮುಖ ಅಭಿವೃದ್ಧಿ ಸಾಧಿಸುತ್ತಿರುವ ದ.ಕ. ಜಿಲ್ಲೆಗೆ ಇನ್ನು ದಕ್ಷ ಸೇವೆ ದೊರಕುವಂತಾಗಲೆಂದು ಹಾರೈಸಿದರು.

ಅಧ್ಯಕ್ಷತೆ ವಹಿಸಿದ್ದ ಮೈಸೂರು ಸರ್ಕಲಿನ ಪೋಸ್ಟ್ ಮಾಸ್ಟರ್ ಜನರಲ್ ಶ್ರೀ ಕೆ. ಆರ್. ಡಿ. ಅಯ್ಯಂಗಾರ್‌ರವರು ಮಾತನಾಡುತ್ತಾ ದ. ಕ. ಜಿಲ್ಲೆಯಲ್ಲಿ ಈ ತನಕ ಎರಡು ಕಚೇರಿಗಳು ಸ್ವಂತ ಕಟ್ಟಡದಲ್ಲಿದ್ದು ಇದು ಮೂರನೆಯದಾಗಿದೆ ಎಂದರು.

ಆರಂಭದಲ್ಲಿ ಸೀನಿಯರ್ ಸೂಪರಿಂಟೆಂಡೆಂಟ್ ಆಫ್ ಪೋಸ್ಟ್ ಅಂಡ್ ಟೆಲಿಗ್ರಾಫ್ಸ್ ಶ್ರೀ ಪಿ. ವಿಮಲಾ ದೇವಿ ನಾಯರ್ ಸ್ವಾಗತಿಸಿದರು. ಇನ್ಸ್‌ಪೆಕ್ಟರ್ (ಆರ್ ಎಂ ಎಸ್.) ಶ್ರೀ ನಾರಾಯಣ ಕುಟ್ಟಿ ಅವರು ಧನ್ಯವಾದವಿತ್ತರು. ಅಂತ್ಯದಲ್ಲಿ ಉಪಾಹಾರ ಸತ್ಕಾರ ನಡೆಯಿತು.

ಮಿತ ಕುಟುಂಬ ಯೋಜನೆಗೆ ಅತ್ಯುಪಯುಕ್ತ ಪುಸ್ತಕ

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0-75 ಪೈಸೆ ಮಾತ್ರ.

ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ. ಕಾಲುಕೋಟೆ, ಉಡುಪಿ, ದ. ಕ.

READ & ADVERTISE IN NAVAYUGA WEEKLY

'ಪರದೆ ಸರಿದಾಗ...'

(ಎರಡನೇ ಪುಟದಿಂದ)

ತೃಪ್ತಿಯಿಂದ ನಕ್ಕಿತು. ಮಗುವಿನ ಆನಂದ ಕಂಡು ಸರಸುವೂ ಸ್ವಲ್ಪ ಹೊತ್ತು ಕಾರಿನ ಬಳಿಯೇ ನಿಂತು ದೂರದಿಂದ ನೋಡತೊಡಗಿದಳು.

ಓ....ಅಷ್ಟರಲ್ಲಾಗಲೇ ಕಾರಿನ ಒಡತಿ ಬಂದಳು. ಸರಸು ಅವಸರದಿಂದ ಮಗುವನ್ನೆತ್ತಿಕೊಂಡು ಬದಿಗೆ ಸರಿದು ನಿಂತಳು.

ಜಗನ್ಮೋಹಿನಿಯಂತೆ ಕಂಗೊಳಿಸುವ ಭಾಗ್ಯಶಾಲಿನಿಯ ಹಿಂದಿನಿಂದ ಪ್ರಸಾದದ ಹರಿವಾಣ ಹೊತ್ತ ಭಟ್ಟರು ನಗುತ್ತಾ ಬರುತ್ತಿದ್ದಾರೆ. ಸರಸು ತದೇಕಚಿತ್ತಳಾಗಿ ಆಕೆಯನ್ನೇ ನೋಡುತ್ತಿದ್ದಾಳೆ.

"ಬನ್ನಿ ಭಟ್ರೇ ಮನೆಯ ಹತ್ತಿರ ಬಿಡ್ತೇವೆ" ಎಂದಾಕೆ ನಗುತ್ತಾ ನುಡಿದಾಗ ಸರಸುವಿಗೂ ನಗು ಬಂತು.

ಅಲ್ಲ, ಇಂತಹ ಮಡಿವಂತ ಭಟ್ಟರು ಆಕೆಯೊಂದಿಗೆ ಕಾರಿನಲ್ಲಿ ಕುಳಿತಾರೇ? ಎಂತಹ ಮೂರ್ಖತನದ ಮಾತು ಎಂದು ಮನದಲ್ಲೇ ಅಂದುಕೊಂಡಳು.

ಆದರೆ.... ಸರಸು ನೋಡುತ್ತಿದ್ದಂತೆ ಭಟ್ಟರು ಪೂಜೆಯನ್ನು ಮರೆದು ಏನೋ ಹೇಳಿ ಕಾರನ್ನೇರಿದರು. ಅದೂ ಆ ಸ್ತ್ರೀಯ ಪಕ್ಕದಲ್ಲೇ ಕುಳಿತು ಅತ್ತಿತ್ತ ನೋಡಿದಾಗ ಸರಸುವಿಗೆ ಆಶ್ಚರ್ಯವೇ ಆಯಿತು. ತಾನು ಆದರ....ಗೌರವಗಳಿಂದ ಕಾಣುತ್ತಿದ್ದ ಭಟ್ಟರ ಕೃತ್ಯದಿಂದ ಸರಸುವಿನ ಮನ ತಳಮಳಿಸಿತು. ಕಾರು ಹೊರಟೇ ಬಿಟ್ಟಿತು.

ಸರಸು ಕತ್ತಲಲ್ಲಿ ನಿಂತೇ ಇದ್ದಳು.

"ನೋಡಿದ್ಯಾ ರಘು, ಭಟ್ಟರ ಆಟ..." ಎಂದು ಯಾರೋ ನಕ್ಕಾಗ ಸರಸುವಿನ ಕಿವಿ ಚುರುಕಾಯಿತು. ಆಕೆ ಕುತೂಹಲದಿಂದ ಆಲಿಸಿದಳು.

"ಯಾರೋ ಅವಳು? ಎಲ್ಲಿಯವಳು?"

"ಅವಳಾ...ನಿಂಗೆ ಗೊತ್ತಿಲ್ವಾ...ಮೊದಲು ಇದೇ ಊರಲ್ಲಿ ತುಂಬ ಬಡತನದಲ್ಲಿದ್ದಂತೆ. ಹತ್ತು ವರ್ಷದ ಹಿಂದೆ ಮುಂಬಯಿ ಸೇರಿ ಕಸುಬು ಆರಂಭಿಸಿದ್ದಂತೆ. ಈಗ ಕೈತುಂಬ ಹಣವಾದ್ಮೇಲೆ ಮಾಡಿದ ಪಾಪ ತೊಳೆಯಲು ಪುಣ್ಯ ಪಡಕೊಳ್ಳೋಕೆ ಬಂದಿದ್ದಾಳೆ..."

"ಓಹೋ.... ನಾನೂ ನೋಡಿದಾಗ್ಲೇ ಊಹಿಸ್ದೆ."

ಸರಸುವಿನ ಯೋಚನೆ ಹಿಂದೆ ಹಿಂದೆ ಸರಿಯುತ್ತಿತ್ತು.

ಆಕೆ ನಿಂತಲ್ಲೇ ಚಡಪಡಿಸಿದಳು,

"ಅವಳ ತಂಗಿ ಸರಸು ಅಂತ ಹರಕು ಸೀರೆ ಉಟ್ಕೊಂಡು ಹೋಗ್ತಾಳೆ... ನಿಂಗೆ ಗೊತ್ತಿಲ್ವಾ...."

ಎನ್ನುತ್ತಿದ್ದಂತೆಯೇ ಅವರು ಮುಂದೆ ನಡೆದರು. ಸರಸುವಿನ ಹೃದಯ ಸ್ತಬ್ಧವಾಯಿತು. ಯೋಚನೆಗಳೆಲ್ಲ ಸ್ಪಷ್ಟವಾದವು.

ಹತ್ತು ವರ್ಷಗಳ ಹಿಂದೆ ಊರಲ್ಲಿ ಹೇಳದೆ ಯಾರೊಂದಿಗೋ ಓಡಿಹೋದ ಅಕ್ಕ ಚಂಪಿಯ ಗುರುತನ್ನು ಮರೆತ ಬಡ ಸರಸುವಿನ ಹೃದಯ ಕಳವಳದಿಂದ ನರಳಿತು.

— ಇದು ನಮ್ಮ ಭಾರತ —

ಕನ್ನಂಬಾಡಿಯ ಧೀರ ಕೇತ್ಕರ್

ಮೈಸೂರಿನ ಕಾವೇರೀ ನದಿಯ ಮೇಲೆ ಕೃಷ್ಣರಾಜ ಸಾಗರ ಅಣೆಕಟ್ಟೆಯ ಕೆಲಸವು ಭಾರತದ ಪ್ರಸಿದ್ಧ ಇಂಜಿನಿಯರ್ ಶ್ರೀ ವಿಶ್ವೇಶ್ವರಯ್ಯನವರ ನೇತೃತ್ವದಲ್ಲಿ ಆರಂಭವಾಗಿತ್ತು. ಕಟ್ಟೆಯ ಕೆಲಸವು ಭರದಿಂದ ಸಾಗುತ್ತಿದ್ದಂತೆ ಆತಂಕವೊಂದು ತಲೆದೋರಿತು. ಕಾವೇರಿ ನೆರೆಯಿಂದ ತುಂಬಿ ಹರಿಯತೊಡಗಿದಳು. ಪ್ರವಾಹ ದಡಮೀರಿ ಹರಿಯಿತು. ಕಟ್ಟೆಯ ಅಪೂರ್ಣ ಕಟ್ಟೆ ಮುಳುಗಲು ಬರಿಯ ಎರಡಡಿ ನೀರೇರುವುದು ಬಾಕಿಯಿತ್ತು. ಈ ಕಟ್ಟೆಯೇನಾದರೂ ಮುಳುಗಿಹೋದರೆ, ಅದುವರೆಗಿನ ಶ್ರಮ ಸಂಪತ್ತುಗಳ ನೀರಲ್ಲಿ ಮಾಡಿದ ಹೋಮವಾಗುತ್ತಿತ್ತು. ಎಲ್ಲರೂ ಅಸಹಾಯಕರು. ಪರಿಹಾರದ ಯೋಜನೆಗಳು ಫಲಿಸದು. ವಿಶ್ವೇಶ್ವರಯ್ಯನವರು ಸುಮ್ಮನೆ ಪರಾಜಯ ಒಪ್ಪಿಕೊಳ್ಳುವ ಪ್ರವೃತ್ತಿಯವರಲ್ಲ. ತನ್ನ ಕೈಕೆಳಗೆ ದುಡಿಯುತ್ತಿರುವ ಇಂಜಿನಿಯರನ್ನೆಲ್ಲಾ ಕರೆದರು. ಅವರಲ್ಲಿ ಅಗಾಧ ಜ್ಞಾನವಿತ್ತು, ಬಿಸಿರಕ್ತದ ಕೆಚ್ಚಿತ್ತು. ಅಗತ್ಯಬಿದ್ದಾಗ ಜೀವನವನ್ನೇ ಪಣವಿಡುವ ಧೈರ್ಯವೂ ಇತ್ತು. ಆದರೆ, ಇವರೆಲ್ಲರೂ ಅನುಭವದ ಮೂಸೆಯಿಂದಲೇ ಹೊರ ಬಂದಿದ್ದರು.

ಕಟ್ಟೆಗಳ ರಚನೆಯಲ್ಲಿ ಅಂದು ಬೃಹತ್ ಯಂತ್ರಗಳ ಉಪಯೋಗವಾಗುತ್ತಿರಲಿಲ್ಲ. ಸ್ವಯಂಚಾಲಿತ ಯಂತ್ರಗಳೂ ದೇಶದಲ್ಲಿ ದುರ್ಲಭವಾಗಿದ್ದವು. ಕೆಲಸವೆಲ್ಲವನ್ನೂ ಕೂಲಿಯಾಳುಗಳೇ ಮಾಡುತ್ತಿದ್ದರು. ಕೃಷ್ಣರಾಜಸಾಗರದ ಕಟ್ಟೆಯ ಕೆಲಸಕ್ಕೆ ಹತ್ತು ಸಾವಿರ ಕೂಲಿಯಾಳುಗಳನ್ನು ತೆಗೆದುಕೊಂಡಿದ್ದರು. ಅವರೆಲ್ಲರ ಕೈಗಳ ಚಾತುರ್ಯತೆಯಿಂದಲೇ ಕಟ್ಟೆ ಅಂಗುಲ—ಅಂಗುಲ ಬೆಳೆದುಬಂದಿತ್ತು. ಕಾವೇರಿಯ ಪ್ರವಾಹವಿನ್ನೂ ಏರುತ್ತ ಬಂದರೆ ಅವರೆಲ್ಲರ ಪ್ರಾಣಕ್ಕೆ ಅಪಾಯ ಖಂಡಿತ. ಎಲ್ಲರಿಗೂ ಅಪಾಯಭೀತಿಯ ಎಚ್ಚರಿಕೆ ಕೊಡಲಾಗಿತ್ತು. ಕೆಲಸಗಾರರ ಕುಟುಂಬಗಳನ್ನು ಸುರಕ್ಷಿತ ಎಡೆಗೆ ಸ್ಥಳಾಂತರಿಸಲಾಗಿತ್ತು. ಕಟ್ಟೆಯು ಒಡೆಯಬಹುದೆಂಬ ಅಂಜಿಕೆಯೂ ಬಲವಾಗಿತ್ತು. ಹಾಗಾಗಿ ಎಲ್ಲೆಲ್ಲೂ ಭಯ—ವ್ಯಾಕುಲತೆಗಳ ಸಾಮ್ರಾಜ್ಯವಿತ್ತು. ಎಲ್ಲರ ಪ್ರಾಣಗಳೂ ಗೋಡೆಯ ಮೇಲಿದ್ದುವು.

ತಮ್ಮ ಪ್ರಾಣ ಭಯವನ್ನು ತೊರೆದು ದೀಪಗಳ ಬೆಳಕಿನಲ್ಲಿ ರಾತ್ರಿ ಹೊತ್ತು ಮಜೂರರೇ ಕಟ್ಟೆಯ ಕಾರ್ಯದಲ್ಲಿ ತೊಡಗಿದ್ದರು. ಮಾನವತೆಯ ಪ್ರವಾಹ ಅವರ ಹೃದಯಗಳಿಂದ ಬತ್ತಿಹೋಗಿರಲಿಲ್ಲ. ಕಟ್ಟೆ ಒಡೆದರೆ, ಲಕ್ಷಾಂತರ ಮಾನವರು, ಕೋಟ್ಯಂತರ ಪಶುಗಳು, ಮನೆ—ವಿತ್ತಗಳು ಸಮುದ್ರಪಾಲಾಗುತ್ತವೆಂದು ಅವರು ಚೆನ್ನಾಗಿ ಅರಿತಿದ್ದರು. ಆದರೆ ನೀರಿನ ಸೆಳೆತವನ್ನು ತಡೆಯುವುದು ಎಂತು? ಯಾರ ಮೆದುಳಿಗೂ ತೋಚುತ್ತಿರಲಿಲ್ಲ. ನೆರೆಯ ನೀರಿನಂತೆ ಕ್ಷಣಕ್ಷಣವೂ ಹೆದರಿಕೆ ಹೆಚ್ಚುತಿತ್ತು.

"ಕಟ್ಟೆಯ ಅಡಿಯಲ್ಲಿಟ್ಟಿದ್ದ ಬಾಗಿಲುಗಳನ್ನು ತೆರೆದರೆ, ನೀರಿನ ಸೆಳೆತವೂ ಅದರ ಒತ್ತಡವೂ ಕಡಿಮೆಯಾಗುವುದು"—ಒಬ್ಬ ಇಂಜಿನಿಯರೆಂದರು. ಸ್ವಲ್ಪ ಹೊತ್ತು ಯೋಚಿಸಿ ಎಲ್ಲರೂ ಈ ಸಲಹೆಯನ್ನು ಸಮರ್ಥಿಸಿದರು. ಆದರೆ ಕಟ್ಟೆಯ ಕೆಳಗೆ ಹೋಗಿ ಬಾಗಿಲು ತೆರೆಯುವವರು ಯಾರು? ಪ್ರಾಣವನ್ನು ಅಪಾಯಕ್ಕೊಡ್ಡುವ ಧೀರನಾರು? ಒಬ್ಬರನ್ನೊಬ್ಬರ ಮುಖ ನೋಡತೊಡಗಿದರು. ಯಾರೊಬ್ಬರೂ ಮುಂಬರುವ ಸಾಹಸ ಮಾಡಲು ಹೆದರಿದರು.

ಅಷ್ಟರಲ್ಲಿ ಒಬ್ಬ ದೃಢಕಾಯನಾದ ನವಯುವಕನೇ ಎದ್ದು ನಿಂತನು. ಅವನುಟ್ಟಿದ್ದು ಧೋತಿ ತೊಟ್ಟಿದ್ದು ಸಾದಾ ಅಂಗಿ. ಆತನು ವಿಶ್ವೇಶ್ವರಯ್ಯನವರ ಎದುರು ಬಂದು ತಲೆಬಾಗಿ ನಿಂತನು.

"ನನಗೆ ಅಪ್ಪಣೆ ನೀಡಿ. ನಾನು ಬಾಗಿಲು ತೆರೆದು ಬರುತ್ತೇನೆ"

ಕಟ್ಟೆಯ ಬಾಗಿಲು ತೆರೆಯುವಂತೆಯೇ ಅದನ್ನು ತೆರೆಯಲು ಅಪ್ಪಣೆ ನೀಡಲು [illegible] ಮಾಡುವುದೂ ದೊಡ್ಡ ಸಾಹಸದ ಕೆಲಸ. ವಿಶ್ವೇಶ್ವರಯ್ಯ ಮಾತ್ರ ಯೋಚನಾಮಗ್ನರಾದರು. ಅಷ್ಟರಲ್ಲಿ ಆ ನವಯುವಕ ತನ್ನ ಬಟ್ಟೆಬರೆಗಳನ್ನು ಕಳಚಿದನು. ಅವನ್ನು ನದೀದಂಡೆಯಲ್ಲೆಸೆದು ಓಡಿದನು. ನವಯುವಕನ ಹೃದಯದಲ್ಲಿ ಮಾನವತೆಯ ಕರೆ ಜಾಗೃತವಾಗಿತ್ತು. ಆತ ತಿರುಗಿನೋಡದೆ ಮುಂದುವರಿದನು.

ಈ ಸಾಹಸಿ—ತ್ಯಾಗಿ ನವಯುವಕನ ಕೆಚ್ಚಿಗೆ ಕಾವೇರಿಯೂ ತಲೆಬಾಗಿದ್ದಳು. ಬಾಗಿಲುಗಳು ತೆರೆದುವು; ಕಾವೇರಿಯ ಜಲವೇಗ ಕಡಿಮೆಯಾಯ್ತು.

ಲಕ್ಷಾಂತರ ವಿತ್ತ-ಜೀವಿತಗಳ ರಕ್ಷಣೆಗಾಗಿ ತನ್ನ ಪ್ರಾಣವನ್ನು ಪಣಕ್ಕೊಡ್ಡಿದ ಸತ್ತು ಬದುಕಿದ ಧೀರ ಸಾಹಸಿ ಅಲ್ಲೇ ಕೆಲಸ ಮಾಡುತ್ತಿದ್ದ ಮೆಕೆನಿಕಲ್ ಇಂಜಿನಿಯರ್ ಶ್ರೀ ಬಾಲಚಂದ್ರ ಪಂತ ಕೇತ್ಕರ್. ಕನ್ನಂಬಾಡಿ ಕಟ್ಟೆಯು ವಿಶ್ವೇಶ್ವರಯ್ಯನವರ ತಾಂತ್ರಿಕ ಜ್ಞಾನದ ಪ್ರತೀಕವಾಗಿರುವಂತೆಯೇ ಶ್ರೀ ಕೇತ್ಕರರ ಧೈರ್ಯಸಾಹಸಗಳ ಸ್ಮಾರಕವಾಗಿಯೂ ಇದೆ.

(ಸಂಗ್ರಹ)

In the Court of the Munsif of Karkala

O. S. 256/1968 I. A. 1

Between

Ashwathanarayan Bhatta —Applicant, Plaintiff

Mahabala Kadamba and others —Opponants, Defendants

To defendants, opponants

1) Mahabala Kadamba, 4) Vittala Kadamba -children of Venkamma Kadambedi, Both residents of Pommanaje of Hirgan village of Karkala Taluk.

Please take notice that the plaintiff, applicant has filed the above application for pinal decree for sale of the plaint properties in terms of the Preliminary decree and the same stands posted to 19-12-70 and you are at liberty to appear at 10 A. M. on that day and file your objections if any, failing which pinal decree for the balance amount will be passed in your absence.

P. Ramachandra Rao
Pleader for applicant, Plaintiff.
Karkal, Dated 4-12-1970.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ

ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

NAVAYUGA 17—12—1970
Registered with the Registrar
of News Papers for India
under No. R. N. 3546/'57

REGD. No: B. Gr 176
LICENCE No: 33,
Licensed to Post without Prepayment

ಚಿನ್ನದ ನಾಡು—ಕೋಲಾರ

ಕೋಲಾರ ಎಂದೊಡನೆಯೇ ಸಾಮಾನ್ಯವಾಗಿ ಚಿನ್ನದ ಗಣಿಗಳ ನೆನಪಾಗುತ್ತದೆ. ಕೋಲಾರದ ಚಿನ್ನದ ಗಣಿಗಳು ವಿಶ್ವ ವಿಖ್ಯಾತವಾದುವು. ಇದರಿಂದಲೇ ಅನೇಕ ಕವಿಗಳು ಚಿನ್ನದ ನಾಡೆಂದು ಹಾಡಿಹೊಗಳಿದ್ದಾರೆ. ಇದಲ್ಲದೇ ಕೋಲಾರ ಜಿಲ್ಲೆಯಲ್ಲಿ ಇನ್ನೂ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ. ಇವುಗಳಲ್ಲಿ ಅತ್ಯಂತ ಮಹತ್ವದ್ದು ನಂದಿಬೆಟ್ಟದಲ್ಲಿರುವ ನಂದೀಶ್ವರ ದೇವಾಲಯ. ಬೆಟ್ಟದ ಮೇಲಿನದು ಯೋಗನಂದೀಶ್ವರ ದೇವಾಲಯ, ಬೆಟ್ಟದ ಕೆಳಗಿನದು ಭೋಗನಂದೀಶ್ವರ ದೇವಾಲಯ ಎಂದು ಪ್ರಸಿದ್ಧವಾಗಿವೆ, ಹೀಗೆ ಇನ್ನೊಂದು ಕೋಲಾರಮ್ಮನ ದೇವಾಲಯ. ನಂದೀಬೆಟ್ಟವಲ್ಲದೆ, ಮುರುಗಮಲೆ, ಅಂಬಾಜಿ ದುರ್ಗ, ರಹಮನೆ ದುರ್ಗ, ಒಕ್ಕಲೇರಿ ಟೇಕಲ್ ಗುಡ್ಡ ಹಾಗು ಇವುಗಳ ಸುತ್ತ—ಮುತ್ತಲ ಬೈಲು ಪ್ರದೇಶಗಳು ಈ ಜಿಲ್ಲೆಯ ನಿಸರ್ಗ ರಮಣೀಯತೆಯನ್ನು ಹೆಚ್ಚಿಸಿವೆ.

ಭಾರತೀಯ ಕಾಂದ ಪರಮಾಣು ಸಂಶೋಧನಾ ಶಾಖೆಯ ಅಣುಸ್ಫೋಟ ಹಾಗು ಭೂಕಂಪ ಸಂಚಾರ ಕೇಂದ್ರವಿರುವುದು ಕೋಲಾರ ಜಿಲ್ಲೆಯ ಗೌರಿಬಿದನೂರಿನಲ್ಲಿ. ಇದು ಪ್ರಪಂಚದಲ್ಲಿ ವಿಷುವ ವೃತ್ತಕ್ಕೆ ಸಮೀಪವಿರುವ ಹಾಗೂ ಭಾರತದ ಏಕಮಾತ್ರ ಕೇಂದ್ರ ಎಂಬುದು ಹೆಮ್ಮೆಯ ಸಂಗತಿ.

ಪಶ್ಚಿಮದಲ್ಲಿ ಬೆಂಗಳೂರು, ಉತ್ತರದಲ್ಲಿ ಆಂಧ್ರಪ್ರದೇಶದ ಅನಂತಪುರ, ಪೂರ್ವದಲ್ಲಿ ಚಿತ್ತೂರು, ದಕ್ಷಿಣದಲ್ಲಿ ತಮಿಳುನಾಡಿನ ಉತ್ತರಾರ್ಕಾಟ್ ಮತ್ತು ಸೇಲಂ ಎಂದು ಕನ್ನಡ ಪ್ರದೇಶಕ್ಕೆ ಮಾತ್ರವಾಗಿ ಕೊಂಡಿರದೆ, ತೆಲುಗು, ತಮಿಳುನಾಡುಗಳೊಡನೆಯೂ ನಿಕಟ ಸಂಪರ್ಕವುಳ್ಳ ಜಿಲ್ಲೆ ಕೋಲಾರ, ದಕ್ಷಿಣೋತ್ತರವಾಗಿ 85 ಮೈಲಿ. ಹೀಗೆ ಪೂರ್ವ—ಪಶ್ಚಿಮಕ್ಕೆ ಸುಮಾರು 85 ಮೈಲಿ ವಿಸ್ತಾರವಾದ ಈ ಜಿಲ್ಲೆ ಅನೇಕ ಐತಿಹಾಸಿಕ ಘಟನೆಗಳಿಗೆ, ಪೌರಾಣಿಕ ಕಥೆಗಳಿಗೆ ಆಶ್ರಯವಾಗಿದೆ.

ಕೋಲಾರದ ಇತಿಹಾಸ ಕ್ರಿಸ್ತಶಕಪ್ರಾರಂಭದಲ್ಲಿ ಬಾಣರಾಜರ ಆಳ್ವಿಕೆಯಿಂದ ಗಂಗ ವಂಶದ ರಾಜರ ಆಳ್ವಿಕೆಯವರೆಗೆ ಇಳಿದು ಬಂದು ಹೈದರಾಲಿ, ನಿಜಾಮರ ಸಹೋದರರಿಂದ. ಒಬ್ಬರ ಕೈಯಿಂದ ಇನ್ನೊಬ್ಬರ ಕೈಗೆ ದಾಟಿ ಕೊನೆಗೆ ಬ್ರಿಟಿಷರ ಆಳ್ವಿಕೆಯಲ್ಲಿತ್ತು. ಬಳಿಕ 1792 ರಲ್ಲಿ ಮೈಸೂರು ಸಂಸ್ಥಾನದ ಭಾಗವಾಗಿ, ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ವಿಶಾಲ ಮೈಸೂರಿನ ಆಡಳಿತಕ್ಕೆ ಸೇರಿಕೊಂಡಿತು.

ಇಲ್ಲಿಯ ಭೂಮಿಯಲ್ಲಿ ಕಮ್ಮರಳಿಂದ ಕೂಡಿದ ಕೆಮ್ಮಣ್ಣು, ಕರಿಯ ಎರೆಮಣ್ಣು ಆವೆಮಣ್ಣು ಎಂದು ವೈವಿಧ್ಯವಿದೆ. ಹತ್ತಿ, ರಾಗಿ, ಅವರೆ, ತೊಗರಿ, ಜೋಳ, ಇವೆಲ್ಲ ಇಲ್ಲಿ ಚೆನ್ನಾಗಿ ಬೆಳೆಯುತ್ತವೆ.

ಕೆರೆಬಾವಿಗಳ ನೀರಿನ ಸೌಕರ್ಯವಿರುವ ಭೂಮಿಗಳಲ್ಲಿ ತೋಟ ಬೆಳೆಯುತ್ತದೆ. ಅಲ್ಲದೆ ಈ ಜಿಲ್ಲೆಯಲ್ಲಿ ನೀರುಳ್ಳಿ, ಗೆಣಸು, ಮಾವು, ಭತ್ತ, ಬಾಳೆ, ಹಲಸು, ಪಪ್ಪಾಯಿ, ಕಬ್ಬು, ಮೆಣಸು ಇತ್ಯಾದಿಗಳೂ ಬೆಳೆಯುತ್ತವೆ. ಸುಮಾರು 410 ಚದುರ ಮೈಲಿ ಅರಣ್ಯ ಪ್ರದೇಶವಿರುವ ಈ ಜಿಲ್ಲೆಯಲ್ಲಿ 552000 ಎಕರೆ ಭೂಮಿಯಲ್ಲಿ ಸಾಗುವಳಿ ನಡೆಯುತ್ತದೆ.

ಕೋಲಾರ ಜಿಲ್ಲೆ ಕೆರೆಗಳ ಜಿಲ್ಲೆಯೆಂದರೆ ಅತಿಶಯೋಕ್ತಿಯಲ್ಲ. ಇದರಿಂದ ಮೀನುಗಾರಿಕೆಗೂ ಇಲ್ಲಿ ತುಂಬ ಅವಕಾಶವಿದೆ. ಇಲ್ಲಿ 3950 ಕೆರೆಗಳಿವೆ. ಇವುಗಳಲ್ಲಿ 570 ದೊಡ್ಡ ಕೆರೆಗಳೂ, 3380 ಚಿಕ್ಕ ಕೆರೆಗಳೂ, ಅಲ್ಲದೆ ಪೆನ್ನಾರ ಚಿತ್ರಾವತಿ ನದಿಗಳೂ ಇಲ್ಲಿ ಭೂಮಿಗೆ ನೀರೊದಗಿಸುತ್ತವೆ.

ಕೋಲಾರ ಜಿಲ್ಲೆಯಲ್ಲಿ ಕೋಲಾರ, ಬಂಗಾರಪೇಟೆ, ಮಾಲೂರು ಮುಳಬಾಗಿಲ, ಶ್ರೀನಿವಾಸಪುರ, ಚಿಂತಾಮಣಿ, ಬಾಗೇಪಲ್ಲಿ, ಗೌರಿಬಿದನೂರು, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ. ಗುಡಿಬಂಡೆ ಎಂದು ಹನ್ನೊಂದು ತಾಲೂಕುಗಳಿವೆ. 3227 ಹಳ್ಳಿಗಳಿವೆ. ಜಿಲ್ಲೆಯ ವಿಸ್ತೀರ್ಣ 3118 ಚದುರ ಮೈಲಿ. ಜನಸಂಖ್ಯೆ 1291222. ಪೇಟೆ, ಪಟ್ಟಣಗಳ ಸಂಖ್ಯೆ 13

ಕೋಲಾರದ ಜನರಲ್ಲಿ ತೆಲುಗು, ಕನ್ನಡ, ತಮಿಳು, ಉರ್ದು ಭಾಷೆಗಳನ್ನಾಡುವವರು ಅನೇಕರಿದ್ದಾರೆ. ಕನ್ನಡವನ್ನು ರಾಜ್ಯಭಾಷೆಯೆಂದು ಎಲ್ಲರೂ ಮಾತನಾಡಬಲ್ಲರು. ಕನ್ನಡ ಸಾಹಿತ್ಯಕಲೆಗಳ ಬಗ್ಗೆ ದುಡಿಯುವವರೂ ಈ ಜಿಲ್ಲೆಯಲ್ಲಿ ಅನೇಕರಿದ್ದಾರೆ. ಸಾಹಿತ್ಯಕ್ಷೇತ್ರದಲ್ಲಿ ಸುಪ್ರಸಿದ್ಧರಾದ ಶ್ರೀ ಡಿ. ವಿ. ಗುಂಡಪ್ಪನವರು ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು, ಭಾರತಕ್ಕೆ ಯೋಜನೆಯ ಮಂತ್ರವನ್ನೊದಗಿಸಿದ ದಿ। ಸರ್. ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಕೋಲಾರ ಜಿಲ್ಲೆಯವರೆಂಬುದು ಅಭಿಮಾನದ ವಿಷಯ. ಹೀಗೆ ಅನೇಕ ಸಾಹಿತಿಗಳಿಗೆ, ತಾಂತ್ರಿಕ ವಿಜ್ಞಾನಿಗಳಿಗೆ, ರಾಜಕಾರಣಿಗಳಿಗೆ ಕೋಲಾರ ಜನ್ಮವಿತ್ತಿದೆ.

ಕೋಲಾರ ಜಿಲ್ಲೆ ಶಿಕ್ಷಣಕ್ಷೇತ್ರದಲ್ಲಿಯೂ ದಿನ, ದಿನ ಮುಂದುವರಿಯುತ್ತಿದೆ. ಇಲ್ಲಿ ಒಂದು ಮೊದಲ ದರ್ಜೆಯ ಕಾಲೇಜಿದೆ. ಹದಿನೈದಕ್ಕೂ ಹೆಚ್ಚು ಹೈಸ್ಕೂಲುಗಳಿವೆ. 72ಕ್ಕೂ ಹೆಚ್ಚು ಮಾಧ್ಯಮಿಕ ಶಾಲೆಗಳಿವೆ. 1759ಕ್ಕೂ ಹೆಚ್ಚು ಪ್ರಾಥಮಿಕ ಶಾಲೆಗಳು ಹಾಗು ಶಿಶುವಿಹಾರಗಳಿವೆ. ಏನಿದ್ದರೂ—ಏರುತ್ತಿರುವ ಜನಸಂಖ್ಯೆಯ ಪ್ರಮಾಣದಲ್ಲಿ ಶಿಕ್ಷಣ ಸೌಕರ್ಯಗಳನ್ನಾಗಲೀ, ವಸತಿ, ವೈದ್ಯಕೀಯ ಸೌಕರ್ಯಗಳನ್ನಾಗಲಿ ಒದಗಿಸಲು ಸಾಧ್ಯವಾಗುತ್ತಿಲ್ಲ. ಆದುದರಿಂದಲೇ ಕೋಲಾರಜಿಲ್ಲೆಯಲ್ಲಿ ಕುಟುಂಬ ಯೋಜನೆಯನ್ನು 1965—66ರಲ್ಲಿ ಆರಂಭಿಸಲಾಯಿತು. ಕುಟುಂಬ ಯೋಜನೆಯ ಬಗ್ಗೆ ಸಲಹೆ ನೀಡುವುದಕ್ಕೆ ಶಸ್ತ್ರಕ್ರಿಯೆ ಇತ್ಯಾದಿಗಳನ್ನು ಮಾಡುವುದಕ್ಕೆ ಈ ಜಿಲ್ಲೆಗೂ ಕೇಂದ್ರವಾದ ಕೋಲಾರದ ನರಸಿಂಹರಾಜ ಆಸ್ಪತ್ರೆಯಲ್ಲಿ ನಗರ ಕುಟುಂಬ ಕಲ್ಯಾಣ ಕೇಂದ್ರವಿದೆ. ಇದರ ಜೊತೆಯಲ್ಲಿ ಕುಟುಂಬ ಯೋಜನೆಯ ಶಸ್ತ್ರಕ್ರಿಯೆಗಾಗಿಯೇ ಮೀಸಲಾದ ಒಂದು ಪ್ರತ್ಯೇಕ ವಿಭಾಗವಿದೆ. ಇಷ್ಟಲ್ಲದೆ ರಾಬರ್ಟ್‌ಸನ್‌ಪೇಟೆ ಆಸ್ಪತ್ರೆ ಹಾಗೂ ಹದಿನೈದು ಪ್ರಾಥಮಿಕ ಆರೋಗ್ಯಕೇಂದ್ರಗಳು ಇಲ್ಲಿ ಕುಟುಂಬಯೋಜನೆಯ ಬಗ್ಗೆ ಸೌಕರ್ಯಗಳನ್ನು ಒದಗಿಸುತ್ತಿವೆ. ಹರಿಕಥೆ. ನಾಟಕ, ಬೊಂಬೆಯಾಟ ಭಾಷಣ, ಚಲಚ್ಚಿತ್ರ ಪ್ರದರ್ಶನ, ವಿಶೇಷ ಲೇಖನ ಇತ್ಯಾದಿಗಳಿಂದ ಕೋಲಾರ ಜಿಲ್ಲೆಯಲ್ಲಿ ಕುಟುಂಬ ಯೋಜನೆಯ ಬಗ್ಗೆ ಜನರಲ್ಲಿ ಹೆಚ್ಚಿನ ಆಸಕ್ತಿ ಹುಟ್ಟಿದೆಯೆಂಬುದರಲ್ಲಿ ಸಂದೇಹವಿಲ್ಲ

1965—66ರಿಂದ 1970ನೇ ಅಕ್ಟೋಬರವರೆಗೆ ಈ ಜಿಲ್ಲೆಯಲ್ಲಿ 13219 ಗಂಡಸರಿಗೆ, 3419 ಮಹಿಳೆಯರಿಗೆ ಶಸ್ತ್ರಕ್ರಿಯೆ ನಡೆದಿದೆ. ಸುಮಾರು 20 ಸಾವಿರ ಮಹಿಳೆಯರು ವಂಕಿ ಧರಿಸಿದ್ದಾರೆ. ಸುಮಾರು ನಾಲ್ಕುವರೆ ಲಕ್ಷ ನಿರೋಧಗಳನ್ನು ಹಂಚಲಾಗಿದೆ.

ದ್ರಾ.ಮು.ಕ.ಪ್ರೋ.ತ ಸಂ.ಪ್ರ.ಸ್ವ.ಪಾರ್ಟಿ

(ಒಂದನೇ ಪುಟದಿಂದ)

ನಿಸ್ಪರಿಗೆ ಇವರು ಕೈಕೊಟ್ಟರೋ, ಅಥವಾ ಅವರು ಕೈಹಿಡಿದುಬಿಟ್ಟರೋ ಅದು ಹುಟ್ಟಿನಲ್ಲಿ—ಇಬ್ಬರೂ ಕೈಕೊಡಿಸಿಕೊಂಡಿದ್ದಾರೆಂಬುದು ಮುಖ್ಯ. ಇವರಿಬ್ಬರು ಸೇರಿ ಕೊಟ್ಟದ್ದು ಜನತೆಗೆ ಕೈ. ದೇಶದ ಮೇಲೆ ಆಕ್ರಮಣ ನಡೆಸಿರುವ ಚೈನೀ ಕಮ್ಯುನಿಸ್ಟ್ ಚೇಲಾಗಳೊಂದಿಗೆ ರಾಜಕೀಯ ಚಕ್ಕಂದ. ಇಂದಿರಾಜೀ ರಷ್ಯಾದ ಆದೇಶಕ್ಕನುಸಾರವಾಗಿ ಆಡುತ್ತಿದ್ದಾರೆನ್ನುವ ಸ್ವತಂತ್ರಾಚಾರ್ಯರು ರಷ್ಯಾದ ಬಾಲಬಡುಕ, ಅದರ ಶಾಖೆ ಕಮ್ಯುನಿಸ್ಟ್ ಪಾರ್ಟಿಯೊಂದಿಗೆ ಸೇರಿ ಚುನಾವಣಾ ಚಳಿ ಕಾಯಿಸಿದ್ದಾರೆ. ಇನ್ನು ಮುಸ್ಲಿಂ ಲೀಗಿಗಳು. ಅಂದು ರಾಜಾಜಿಯವರೂ ಈ ಮುಸ್ಲಿಂಲೀಗಿಗಳೂ ಸೇರಿ ಪಾಕಿಸ್ತಾನವನ್ನು ರಚಿಸಿದ್ದರಲ್ಲಿ ಇಂದು ಕಾಂಗ್ರೆಸ್ಸೇತರ ಪ್ರತ್ಯೇಕ ರಾಜ್ಯ ನಿರ್ಮಾಣಕ್ಕಾಗಿ ಕೈಮಿಲಾಯಿಸಿಕೊಂಡಿದ್ದಾರೆ. ಅಬ್ಬ! ಇವರೆಲ್ಲರನ್ನು ಕಂಡ ಚಲಚಿತ್ರದ ಉದಯಸೂರ್ಯನೇ! ಅಂದೊಂದು ಕಪ್ಪೆಯು ಕೊಳದಲ್ಲಿ ಚಂದ್ರ ಬಿದ್ದಿದ್ದಾನೆಂದು ದೊಡ್ಡ ಗಲಾಟೆಯೆಬ್ಬಿಸಿ ಸನ್ಯಾಸಿಯನ್ನೇ ಕರೆದುಕೊಂಡು ಬಂದಿತ್ತಂತೆ. ಇಂದು ಈ ರಾಜಕೀಯ ಕಪ್ಪೆಗಳು ಉದಯ ಸೂರ್ಯ ಸಿಕ್ಕಿದನೆಂಬ ಭ್ರಮೆಯಿಂದ ರಾಜಕೀಯ ಸರೋವರದಲ್ಲಿ ರಾಡಿ ಎಬ್ಬಿಸಿಬಿಟ್ಟವು. ಹಗೆಯ ಕಾಮಾಲೆ ಕಣ್ಣಿನಿಂದ ರಾಜಾಜಿ ನೋಡಿದರು. ಅವರು ಹಾಕಿಕೊಂಡಿರುವ ಕನ್ನಡಕ ಆ ರೀತಿಯದ್ದು. ಎಲ್ಲಾ ಒಂದೇ ಬಣ್ಣ. ಕಾಂಗ್ರೆಸ್ಸನ್ನು ಉರುಳಿಸುವ ಏಕೈಕ ದೃಷ್ಟಿಯಿಂದ ಅವರು ದಾರಿಯಲ್ಲಿದ್ದ ಬಾರೀ ಬಾವಿಯನ್ನು ಕಾಣದೆ ಹೋದರು. ಹಿಂದೆ ಕೇವಲ ಬ್ರಿಟಿಷರನ್ನೋಡಿಸುವದರಲ್ಲಿ ಮಗ್ನರಾಗಿಲ್ಲವೇ? ಅದೇ ರೀತಿ ಇಂದು ಕಾಂಗ್ರೆಸ್ಸನ್ನು ಉರುಳಿಸಲು ಶ್ರಮಿಸುತ್ತಿದ್ದಾರೆ ಅವರು.

ಫೋರ್ವರ್ಡ್ ಬ್ಲಾಕ್, ತಮಿಳು ಅರಸು ಕಳಗಂ, ಸಂಯುಕ್ತ ಸೋಷ್ಯಲಿಸ್ಟ್, ಪ್ರಜಾಸೋಷ್ಯಲಿಸ್ಟ್ ಇತರ ಇಂತಹ ಪಕ್ಷಗಳು ತಮಿಳ್ನಾಡಿನಲ್ಲಿ ದರಿದ್ರ ಬಂದಿಲ್ಲ. ಬರಗಾಲ ಬಂದಿಲ್ಲವೆಂಬುದಕ್ಕೆ ಜೀವಂತ ನಿದರ್ಶನಗಳು. ಅವುಗಳಿಗೆ ದ್ರಾ.ಮು.ಕ. ವಾದರೇನು, ಯಾರಧಿಕಾರದಾರೇನು? ಸಿಂಹ ತಿಂದು ಬಿಟ್ಟ ಮೇಲೆ ಸಿಕ್ಕಿದ ಚೂರು ಚೂರು ಸಾಕು. ಅದರಿಂದಲೇ ತೃಪ್ತಿ. ಅದಕ್ಕೇ ಯೋಗ್ಯತೆ, ಸಾಮರ್ಥ್ಯ. ಇವು ಒಂದಾಗುವದರಲ್ಲಿ ಆಶ್ಚರ್ಯವಿಲ್ಲ. ನಾಳೆ ಬೇರೊಂದು ದಿಕ್ಕಿನಿಂದ ಗಾಳಿ ಬೀಸಿದರೆ ಅತ್ತ ಕೊಡೆ ಹಿಡಿದರಾಯಿತು.

ಇದುವೇ ತಮಿಳ್ನಾಡಿನ ದ್ರಾ.ಮು.ಕ. ಪ್ರೋ. ಸಂ. ಪ್ರ. ಸ್ವ. ಪಾರ್ಟಿ.

—ಶ್ರೀ ಶಿವಶಂಕರ.

ಸಂದರ್ಶಿಸಿರಿ—ಸಂತೃಪ್ತರಾಗಿರಿ!!
ಬೆಳ್ಳಿ ಬಂಗಾರ ವಜ್ರಗಳಿಗೆ, ಆಧುನಿಕ ಫ್ಯಾಷನಿನ ಚಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೇಟ್ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್
—ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ—
ಐಡಿಯಲ್ ಫೋಟೋ ಹೌಸ್ PHONE: 3131
ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ
ಅಧಿಕೃತ ಮಾರಾಟಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು_1
Tele: GOLDKING Estd: 1947 Phone: 3242 Res:3272

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 16

NAVAYUGA

24—12—1970

ದೇಶದ ಪ್ರಗತಿಗೆ ಮಾರಕ —

ರಜ . . . ರಜ . . . ರಜ

ಲೇ: ಪ್ರಿನ್ಸಿಪಾಲ್ ಕೆ. ರಾಮಕೃಷ್ಣ ಉಡುಪ

ಕಳೆದ ಸಪ್ಟೆಂಬರ್ 30ರಂದು ಮಹಾಲಯ ಅಮಾವಾಸ್ಯೆ ಕಾರಣ ರಜಾದಿನವಾಗಿತ್ತು. ಅಕ್ಟೋಬರ್ 2ರಂದು ಗಾಂಧಿ ಜಯಂತಿಯ ರಜಾದಿನ. ಈ ವರ್ಷ 25ರಂದು ಈಜಿಪ್ಟಿನ ನಾಸೇರರು ನಿಧನಗೊಂಡರು. ಅವರಿಗೂ ನಮ್ಮ ಹಿಂದಿನ ಪ್ರಧಾನಮಂತ್ರಿ ನೆಹರೂರವರಿಗೂ "ಗಳಸ್ಯ, ಕಂಠಸ್ಯ" ಸ್ನೇಹ. ಆ ಕಾರಣ ಅವರ ಹೆಣ ಹೊರುವ ಮೂರನೇ ದಿನವಾದ ಅಕ್ಟೋಬರ್ ಒಂದರಂದು ಆ ವ್ಯಕ್ತಿಯ ಶಾಂತಿಗಾಗಿ ರಜಾ ಕೊಡಲಾಯಿತು. ಹೀಗೆ ವಾರದಲ್ಲಿ ಮೂರು ದಿನ ಭಾರತ ಸರ್ಕಾರವೇ ರಜಾ ಕೊಟ್ಟಿರುವಾಗ ಉಳಿದ ಒಂದೆರಡು ದಿನಗಳಲ್ಲಿ ಸರ್ಕಾರೀ ನೌಕರರಿಗೆ ಇಲ್ಲದ ತಲೆನೋವು ಬಂತು! ಅದಕ್ಕಾಗಿ ಅವರು ಕಾಯಿಲೆ ಬಿದ್ದ ಮಾವನನ್ನು ನೋಡಲಿಕ್ಕಾಗಿ ಹೆಚ್ಚಿನವರೆಲ್ಲ ರಜಾ ಹಾಕಿ ಊರು ಬಿಟ್ಟರು. ಹತ್ತು ಜನರಿರುವ ಆಫೀಸಿನಲ್ಲಿ ನಾಲ್ಕಾರು ಜನ ರಜಾ ಕೋರಿದರೆ ಉಳಿದವರು ಆಫೀಸಿನಲ್ಲಿ ರಜೆ ಇದ್ದಂತೆ ಊರು ಸುತ್ತುವುದಕ್ಕೆ ಬೇರೆ ನೆವವೇ ಬೇಕೆ. ಸಂಬಂಧಪಟ್ಟ ವ್ಯವಸ್ಥಾಪಕರು ರಜಾ ಮಾಡಿದ್ದರೆ ನಾನೇನು ಮಾಡಲಿ ಸಾರ್ ಎನ್ನುವುದು ವಾಡಿಕೆ. ಹಾಗಾಗಿ ಜವಾನನೊಬ್ಬನ ಕೈಯಲ್ಲಿ ಸರ್ವಾಧಿಕಾರ ಕೊಟ್ಟು ಉಳಿದವರೂ "ಮಿ.ಟಿ.ಎ ಶೋ" ನೋಡಲು ಹೊರಟರು. ಆ ಜವಾನನೂ ತನಗೆ ದೊರೆತ ಸಂಭಾವನೆಗನುಗುಣವಾಗಿ ಬಂದವರಿಗೆಲ್ಲ ಉತ್ತರ ಕೊಟ್ಟ. ಘಂಟೆ ಐದಾಯಿತು, ಆಫೀಸಿನ ಬೀಗ ಹಾಕಿ ಕಿತ್ತ — ಇದೀಗ ಸರ್ಕಾರೀ ಕಛೇರಿಯೊಂದರಲ್ಲಿ ನಡೆದ ಕತೆ!

ಇಂತಹ ಘಟನೆಗಳು ವರ್ಷದ 52 ವಾರಗಳಲ್ಲಿ ನಾಲ್ಕಾರು ವಾರಗಳಿಂದ ಎಲ್ಲ ಕಛೇರಿಗಳಲ್ಲೂ ಆಗಿಯೇ ಆಗುವುದು. ನವೆಂಬರ್ ಮೊದಲ ವಾರವೂ ಈ ಸಲ ಹೀಗೇ ಆಯಿತು. ನಮ್ಮ ದೇಶ ಇನ್ನೂ ಬಡ ದೇಶವಾಗಿ ಮುಂದುವರಿಯುವುದಕ್ಕೆ ಗತಿ ಗೋತ್ರವಿಲ್ಲದ ಈ ರಜಾಗಳೂ ಕಾರಣ. ಒಂದು ದಿನದ ರಜಾದಿಂದ ಕೆಲಸ ನಿಂತು, ಉತ್ಪಾದನೆ ನಡೆಯದಿದ್ದರೆ ನೂರಾರು ಕೋಟಿ ರೂಪಾಯಿಗಳ ನಷ್ಟ ದೇಶಕ್ಕಾಗುವುದೆಂದು ತಜ್ಞರು ಹೇಳುತ್ತಾರೆ. ಪ್ರಾಕೃತಿಕ ಸಂಪತ್ತಾದ ಉತ್ತಮ ಭೂಮಿ, ಅಮೂಲ್ಯ ಖನಿಜ, ಯೋಗ್ಯ ಹವಾಮಾನ ಇವೆಲ್ಲ ಧಾರಾಳವಾಗಿ ನಮ್ಮಲ್ಲಿವೆ. ಜನಸಂಪತ್ತಂತೂ ಮಿತಿಮೀರಿದೆ. ಇಂತಹ ಸಂಪನ್ನ ನಮ್ಮ ದೇಶದಲ್ಲಿ ಕಾಲಡಿ ಅರೆ ಇರುವಂತಹ ಧನಿಕ ದೇಶದಿಂದ ಹಿಡಿದು, ನಾರ್ವೆಯಂತಹ ಅಂಗೈ ಅಗಲದ ದೇಶದವರೆಗೂ ಬೇಡಿ ತಿಂದಿದ್ದೇವೆ. ಆ ಬಂಡವಾಳ ಕೆಲವೆಲ್ಲ ಸಹಾಯವಾಗಿ ಮತ್ತೆ ಕೆಲವು ಸಾಲವಾಗಿಯೂ ಬಿಟ್ಟಿ ಕೇಳಿದಂತೆ ಸಿಕ್ಕಿದ್ದು. ಸ್ವತಂತ್ರ್ಯ ಬಂದು 3 ದಶಕಗಳು ಕಳೆದರೂ ಆರ್ಥಿಕವಾಗಿ ಹೆಚ್ಚು ಮುಂದುವರಿಯದೆ ನಾವು ಇದ್ದಲ್ಲಿಯೇ ಇದ್ದೇವೆಂದು ಎಲ್ಲರೂ ಹೇಳುತ್ತಾರೆ. ಜಪಾನ್, ಜರ್ಮನಿ ಮುಂತಾದ ರಾಷ್ಟ್ರಗಳು ಮಹಾಯುದ್ಧದಲ್ಲಿ ನೆಲಸಮವಾಗಿ, ಆರ್ಥಿಕ ವ್ಯವಸ್ಥೆ ಸಂಪತ್ತನ್ನು ಜನಸಂಪತ್ತನ್ನೂ ಕಳೆದುಕೊಂಡಿದ್ದವು. ಆದರೆ ಅವು ಈಗ ಹಿಂದಿಗಿಂತಲೂ ಹೆಚ್ಚಿನ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಾಗಿ ಮುಂದುವರಿಯುತ್ತಿವೆ. ಇದೇಕೆ ಹೀಗೆ? ಅವರ ಎಡೆಬಿಡದ ದುಡಿಮೆ, ನಮ್ಮ ಮಿತಿಮೀರಿದ ಸೋಮಾರಿತನ, ಇವೇ ಕಾರಣವಿರಬೇಕೆಂದು ಬೇರೆ ಹೇಳಬೇಕೆ?

ಹೀಗಾಗುತ್ತಿದೆಯೆಂದು ವಿಚಾರಿಸಿದಾಗ ಜವಾಹರಲಾಲರು "ಆರಾಮ್ ಹರಾಮ್ ಹೈ" ಎಂದು ದೊಡ್ಡ ಕಣ್ಣೀರ ಹೇಳಿದರು. ದೇಶದ ಲೋಕಸಭೆ, ವಿಧಾನಸಭೆಗಳ ಮೂಲಕ ನಮ್ಮನ್ನಾಳುವ ಶಾಸಕರೇ ಸಭೆ ನಡೆಯುತ್ತಿರುವಾಗ ಎಲ್ಲಿಯೋ ಇದ್ದುಬಿಟ್ಟು "ಕೋರಂ" ಇಲ್ಲದಂತಾಗುತ್ತದೆ. ದಜನ್‌ಗಟ್ಲೆ ಮಂತ್ರಿಗಳಿದ್ದರೂ ಸಂಸತ್ಸಭೆ ನಡೆಯುವಾಗ ಒಬ್ಬೊಬ್ಬರು ದೊರೆಯುವುದೂ ಅಪರೂಪ. ಆಡಳಿತದ ಪರಮಾಧಿಕಾರ ನಡೆಸುವ ಸಚಿವರೇ ರಾಜಧಾನಿಯಲ್ಲಿರುವುದಕ್ಕಿಂತ ಹೆಚ್ಚಾಗಿ ದೇಶವಿದೇಶಗಳ ಸಂಚಾರ ಸುಖ ಅನುಭವಿಸುತ್ತಿರುತ್ತಾರೆ. ಹೀಗಾಗಿ "ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲಾ" ಬಂದಿದೆಯೆಂದು ವೇದಿಕೆಯ ಮೇಲೆ ಗಾದೆ ಹೇಳಿ ಆ ಪಂಡಿತರು ಉಪನ್ಯಾಸ ಮುಗಿಸಿದರು. ಹೌದು; ಇದೂ ಸರಿ ಇರಬೇಕು. ಇವರೆಲ್ಲ ಗಾಂಧಿ ನೆಹರೂ ಹೆಸರು ಹೇಳಿ ಮುಂದೆ ಬಂದವರು. ಆದರೆ ಆ ಮಹಾ ಪುರುಷರ ಎಡೆಬಿಡದ ದುಡಿಮೆಯನ್ನೇಕೆ ಮರೆತುಬಿಟ್ಟರೋ ಅರ್ಥವಾಗುವುದಿಲ್ಲ.

ಇದೀಗ ರೂಢವಾದ ಘೋಷಿಸಲ್ಪಡದ ರಜೆಗಳ (Undeclared holiday) ಮಾತಾಯಿತು. ಜಾತ್ಯತೀತ ರಾಷ್ಟ್ರವೆಂಬ ದೊಡ್ಡ ಹೆಸರು ಹೇಳಿ ನಾವು ಎಲ್ಲ ಜಾತಿಯ ಹಬ್ಬಗಳಿಗೂ ರಜಾ ಘೋಷಿಸುತ್ತಿದ್ದೇವೆ. ಶನಿವಾರ ಮಧ್ಯಾಹ್ನ ರಜೆಯಿಲ್ಲವಾದರೂ ಒಂದು ಘಂಟೆ ಮೊದಲು ಪ್ರಾರ್ಥನಾ ಮಂದಿರಕ್ಕೆ ಧಾರಾಳವಾಗಿ ಹೋಗಿ, ಅನಾಯಾಸವಾಗಿ ಪಡೆಯಬಹುದು. ನಮ್ಮ ದೇಶದಷ್ಟು ಹಬ್ಬದಿನಗಳು ಬೇರಾವ ದೇಶಗಳಲ್ಲೂ ಇರಲಾರದು. ಆದರೆ ಆ ಪುಣ್ಯ ದಿನದಂದು ಕರ್ತವ್ಯ ಕೆಲಸ ಮಾಡುವುದು ಪಾಪವೆಂದು ಯಾವ ಶಾಸ್ತ್ರಗಳೂ ಹೇಳುವುದಿಲ್ಲ. ಹಾಗೆಂದು ಸರಕಾರಿ ನೌಕರನಂತೆಯೇ ಅವನ ಹೆಂಡತಿ, ಮನೆ ಕೆಲಸದವರೆಲ್ಲರೂ ಕೆಲಸ ಮಾಡದೆ ರಜಾ ಹೋದರೆ ಗತಿಯೇನು? ಅಥವಾ ದೇಶದ ಗಡಿ ಕಾಯುವ ಸೈನಿಕನೂ ರಜಾ ಪಡೆದರೆ ಏನಾದೀತು? ಈ ಪುಣ್ಯ ಕರ್ಮ(?) ಸರ್ಕಾರಿ ನೌಕರರು ಮಾತ್ರ ಮಾಡಿದರೆ ಸಾಕೆ? ಉಳಿದವರು ಪುಣ್ಯ ದಿನಗಳಲ್ಲಿ ಕೆಲಸ ಮಾಡಿ "ಪಾಪ" ಗಳಿಸುವಂತಾಗುವುದು ಸರಿಯೇ? ಈ ತರದ ರಜಾದಿನಗಳಲ್ಲಿ ಸಿಟಿ ಬಸ್, ಸಿನೆಮಾ, ಹೋಟೆಲ್, ಬಾರ್, ಕ್ಲಬ್ಬುಗಳಲ್ಲಂತೂ ಮಿತಿಮೀರಿದ ಜನಸಂದಣಿ. ಇದರಿಂದ ಅಲ್ಲಿಯ ಕೆಲಸಗಾರರಿಗೆ ಪುಣ್ಯದಿನದ ರಜೆಯ ಬದಲಾಗಿ ಮಿತಿಮೀರಿದ ಕೆಲಸ (Over work) ಕೊಡುವುದು ಎಂದರೆ ಇದರ ಅರ್ಥವೇನು?

ಪುಣ್ಯದಿನದಂದು ಸರ್ಕಾರಿ ನೌಕರ ಮಾತ್ರ ದೇವರ ಧ್ಯಾನ ಮಾಡಿದರೆ ಸಾಕು ಆತ ಗಳಿಸಿದ ಪುಣ್ಯ(?) ರಾಜ್ಯಕ್ಕೆಲ್ಲ ಜನರಿಗೆಲ್ಲ ಸಿಗಬಹುದೇ? ಇವರ ಬದಲಾಗಿ ಎಲ್ಲರಿಗೂ ರಜಾ, ಇಲ್ಲವಾದರೆ ಪುಣ್ಯದಿನದಂದು ಸಹ ಬೆಳಗ್ಗೆ ಮಾತ್ರ ಎಲ್ಲರೂ ಪ್ರಾರ್ಥನೆ ಮಾಡಿದರೆ ಸಾಲದೇ? ದೊಡ್ಡವರು ದೇವರ ಕಾರ್ಯ, ಆ ಬಳಿಕ ಸ್ವಾಮಿ ಕಾರ್ಯವೆಂದಿರುವುದು ಸರಿಯಲ್ಲವೇ? ಅಥವಾ "ಸರ್ಕಾರದ ಕೆಲಸ ದೇವರ ಕೆಲಸ" ಎಂದು ಹಿರಿಯ ಹನುಮಂತಯ್ಯನವರು ಹೇಳಿದ್ದಾರೆ. ಆ ಪ್ರಕಾರ ಪುಣ್ಯ ದಿನದಂದು ವಹಿಸಿದ ದುಡಿಮೆ ಮಹಾ ಪುಣ್ಯವೆಂದೇಕೆ ಗಣಿಸಬಾರದು? "ಸ್ವಕರ್ಮಣಾ ತಮಭ್ಯರ್ಚ್ಯ" ಎಂಬ ಗೀತೋಪದೇಶದಂತೆ ಶ್ರದ್ಧಾಸಹಿತವಾಗ ಸ್ವಕರ್ಮವೇ ಆ ದೇವನ ಅರ್ಚನೆಯೆಂದು ಪರಿಗಣಿಸುವುದು ಪಾಪವೇ?

ವಿರಾಮ ಯಾರಿಗೆ ಬೇಕು?

ವಿರಾಮ ರಹಿತ ದುಡಿಮೆ, ದೇಹ ಮನಸ್ಸುಗಳಿಗೆ ಹಿತವಲ್ಲ ಎಂಬ ವಾದವೂ ಇದೆ. ಆದರೆ ನಮ್ಮ ಶಾಲಾ ಕಾಲೇಜುಗಳನ್ನಾಗಲೀ, ಸರ್ಕಾರಿ ಕಛೇರಿಗಳನ್ನಾಗಲೀ, ಅಥವಾ ಲೋಕಸಭೆ ವಿಧಾನಸಭೆಗಳನ್ನಾಗಲೀ ಒಮ್ಮೆ ನೋಡಿಬಂದರೆ ಸಾಕು. ಇವರೆಲ್ಲ ಈ ರಾಷ್ಟ್ರೀಯ ಕಾರ್ಯಕ್ಕೆ ಆರಾಮಕ್ಕಾಗಿಯೇ ಬಂದಿರುವರೆಯೋ ಅಥವಾ ದುಡಿಮೆಗಾಗಿ ಬಂದಿದ್ದಾರೆಯೋ ಎಂಬ ಸಂಶಯ ಬರುವುದರಲ್ಲಿ ಸಂದೇಹವಿಲ್ಲ. ನಮ್ಮ ವಿದ್ಯಾಸಂಸ್ಥೆಗಳಲ್ಲಿ ಸರ್ಕಾರ ನಿರ್ಧರಿಸಿದ ಕೆಲಸದ ದಿನಗಳೇ 180ರಿಂದ 200. ಅದರಲ್ಲೂ ವರ್ಷಾರಂಭದ ಒಂದು ತಿಂಗಳು ವಿದ್ಯಾರ್ಥಿಗಳ ಪ್ರವೇಶ ಕಾರ್ಯ, ಅಧ್ಯಾಪಕರ ನೇಮಕ, ವರ್ಗಾವರ್ಗಿ ಇವುಗಳಲ್ಲೇ ಪಾಠವಿಲ್ಲದ ರಜಾ (Undeclared holidy) ಎಲ್ಲರಿಗೂ ಇದೆ. ವರ್ಷಾಂತ್ಯದ ಒಂದೆರಡು ವಾರ ಪರೀಕ್ಷಾ ತಯಾರಿಯ ರಜೆ (Preparation holiday) ಮಧ್ಯದಲ್ಲಿ ಕೆಲವೆಲ್ಲ ಆಟೋಟಕ್ಕಾಗಿ ರಜಾ. ಇವುಗಳಲ್ಲಿ ಏನಾದರೊಂದು ಸಣ್ಣ ಅಥವಾ ದೊಡ್ಡ ನೆಪಕ್ಕಾಗಿ ವಿದ್ಯಾರ್ಥಿ ಮುಷ್ಕರವಾಗಬೇಕು. ಹಾಗೆ ಆರಂಭವಾದ ಮುಷ್ಕರ ಕನಿಷ್ಟ 2—3 ವಾರವಾದರೂ ನಡೆದು ಒಂದೆರಡು ಜೀವವನ್ನೋ ಅಥವಾ ಅಪಾರ ಆಸ್ತಿಪಾಸ್ತಿಗಳನ್ನೋ ಹೂಣಾರ್ಹುತಿಗೊಂಡೇ ಕೊನೆಗೊಳ್ಳಬೇಕು. ಹೀಗೆ ವರ್ಷದ 365 ದಿನಗಳಲ್ಲಿ 100 ದಿನಗಳು ಮಾತ್ರ ಗಾದರೂ ಗುರು ಶಿಷ್ಯರ ಸಂಬಂಧದ ಮೂಲಕ ಶಿಕ್ಷಣ ದೊರೆತರೆ ಬಹು ದೊಡ್ಡ ವಿದ್ಯಾದಾನ! ಅಷ್ಟರಲ್ಲಿ ವರ್ಷಕ್ಕೊಂದು ತಿಂಗಳು ತಮಗಿರುವ ಹಕ್ಕಿನ ರಜೆಯನ್ನು ಅ

(ಹನ್ನೆರಡನೇ ಪುಟ ನೋಡಿರಿ)

ಕಿವಿಗೆ ಬಿದ್ದ ಸಂಭಾಷಣೆ

ಲೇಖಕರು: ಶ್ರೀ ಪಾಡದರಬೆಟ್ಟು ರಂಗರಾವ್

"ಲಕ್ಷಾರ್ಚನೆ ಟಿಕೆಟ್ ಒಂದು ಕೊಳ್ಳಿರಯ್ಯ, ಊರ ದೇವಾಲಯದ ಕೈಂಕರ್ಯ" ಅಂತ ಹೇಳಿದರೆ ಆ ಮಹಾನುಭಾವರು ಏನು ಕೇಳಿದರು ಗೊತ್ತೆ? ದೇವರ ಕೈಂಕರ್ಯ ಅಂತೀರಿ, ಬಹಳ ಸಂತೋಷ. ಅನ್ನಿ ಅಂತ ಆದರೆ ಎಲ್ಲಾ ಮಾಡಿ, ಟಿಕೇಟು ಎಂಟು ರೂಪಾಯಿದು ಅಂತ ಗೊತ್ತಾದ ಕೂಡಲೇ ಅಷ್ಟು ಕೊಡಲು ಶಕ್ತನಲ್ಲ ಎಂದುಬಿಟ್ಟರು. ಎರಡು ರೂಪಾಯಿ ಆದರೆ ಸಂತೋಷದಿಂದ ಕೊಡುತ್ತಾರಂತೆ. ಅದನ್ನು ನೀವೇ ದೇವಸ್ಥಾನದ ಹುಂಡಿಗೆ ಹಾಕಿಬಿಡಿ, ಲಕ್ಷಾರ್ಚನೆಗೂ ಅದಕ್ಕೂ ಏನೂ ಸಂಬಂಧವಿಲ್ಲ ಅಂತ ಹೇಳಿ ಹೊರಟು ಬಂದುಬಿಟ್ಟೆ. ಮುಖ್ಯ ಕಾಲ ಕೆಟ್ಟುಹೋಯ್ತು. ತಿಂಗಳಿಗೆ ಮುನ್ನೂರೈವತ್ತು ರೂಪಾಯಿ ಸಂಪಾದಿಸ್ತಾನೆ ಮಹಾರಾಯ. ಸೌಕರ್ಯವಾಗಿದ್ದಾನೆ. ಅಂಥವರೇ ಹೀಗೆ ಮಾಡುತ್ತಾರೆ. ಇಷ್ಟು ತಿರುಗಿ ನಾಲ್ಕು ಟಿಕೆಟ್ಟಿಗಿಂತ ಹೆಚ್ಚು ಮಾರಲಿಕ್ಕಾಗಲಿಲ್ಲ. ಜನರಲ್ಲಿ ಭಕ್ತಿ ಶ್ರದ್ಧೆಗಳು ಕಡಿಮೆಯಾದುವು. ಗೊತ್ತಿನವರು ಏನೋ ದಾಕ್ಷಿಣ್ಯಕ್ಕೋಸ್ಕರ ತಕ್ಕೊಂಡರೆ ತಗೋಬೇಕ."

"ನನ್ನ ಕೇಳಿದರೆ ನಾನೂ ದಾಕ್ಷಿಣ್ಯಕ್ಕೋಸ್ಕರ ತಗೊಳ್ಳಬೇಕಾಗುತ್ತೆ ಅಷ್ಟೆ. ಅದು—ಆ ಎರಡು ರೂಪಾಯಿ ಸಂತೋಷದಿಂದ ಕೊಡುತ್ತೇನೆಂದನಲ್ಲ; ಅಂಥಾ ಸಂತೋಷದಿಂದ ಕೊಟ್ಟು ಹಾಗಾಗುವುದಿಲ್ಲ. ನಾನೂ ತುಂಬಾ ತಾಪತ್ರಯಗಳಲ್ಲಿದ್ದೇನೆ."

"ಅದಕ್ಕೆ ಹೇಳ್ತಿಲ್ಲ ಸ್ವಾಮಿ. ನನ್ನ ಸ್ನೇಹಿತರೂ ಅಂತ ಈ ಜಲಿ[illegible]ಟದಲ್ಲಿರುವ [illegible] ಹೇಳಿದೆ ಅಷ್ಟೇ. ತಕ್ಕೊಳ್ಳಿ ಬೇಕೂಂತ ಒತ್ತಾಯವೇನಿಲ್ಲ ಬಿಡಿ."

"ಆ ಮನೆಯವರನ್ನು ಕುರಿತು ನೀವು ನನ್ನ ಹತ್ತಿರ ಹೇಳಿದ ಹಾಗೆಯೇ ನನ್ನನ್ನು ಕುರಿತೂ ಹೇಳುವ ಹಾಗಾಯಿತಲ್ಲ?"

"ಛೆ, ಛೆ, ನಿಮ್ಮ ವಿಷಯದಲ್ಲಿ ಹಾಗೆಲ್ಲ ಹೇಳುವೆನೆ?"

"ಹಾಗಾದರೆ ನನ್ನ ಅಭಿಪ್ರಾಯ ತಿಳಿಯಲು ಬೇಳವಿರಿ ಅಟಕಾಯಿಸು. ನನ್ನ ಕೇಳಿದರೆ ಸಾರ್ವಜನಿಕರ ಭಕ್ತಿಯನ್ನು ಅಳೆಯಲು ಹುಡುಕುವ ಹಾಗೆ ಈಗ ನೀವು ಕೈಕೊಂಡಿರುವ ಕೆಲಸ ಅಂದೇನು. ಇದು ಸರಿಯಾದ ಅಳತೆಗೋಲಾಗಿ ನನಗೆ ಕಾಣುವುದಿಲ್ಲ. ಈಗಿನ ಕಾಲದಲ್ಲಿ ಮುನ್ನೂರರಿಂದ ಐನೂರು ರೂಪಾಯಿ ವರೆಗೆ ಸಂಪಾದನೆ ಉಳ್ಳವರೆಲ್ಲಾ ಜೀವನದ ಜಂಜಾಟವುಳ್ಳ ಸಾಧಾರಣದವರ ಪಟ್ಟಿಗೇ ಬೀಳುತ್ತಾರೆ. ಅಂಥವರನ್ನೆಲ್ಲ ದೇವರ ಭಕ್ತಿ ಇಲ್ಲದವರೆಂದು ತೆಗೆದುಹಾಕಲು ಸಾಧ್ಯವೆ? ಲಕ್ಷಾರ್ಚನೆಯಂತಹ ದೊಡ್ಡ ಕೈಂಕರ್ಯಗಳಿಗೆ ದೊಡ್ಡ ಶ್ರೀಮಂತರು ಮುಂದೆ ಬರಬೇಕು. ಹಿಂದಿನ ಕಾಲದಲ್ಲಿ ದೊಡ್ಡ ದೊಡ್ಡ ಶ್ರೀಮಂತರೂ ಜಮೀನುದಾರರೂ, ರಾಜರೂ ದೈವ ಕೈಂಕರ್ಯವನ್ನು ಮಾಡಿಸಿ, ಸಾರ್ವಜನಿಕರ ಭಕ್ತಿಯನ್ನು ಅಳೆಯುವ ಗೊಡವೆಗೆ ಹೋಗದೆ ಸಂತೋಷವಾಗಿ ಪ್ರಸಾದ ಹಂಚುತ್ತಿರಲಿಲ್ಲವೆ? ಈಗ ಅಂತ ಶ್ರೀಮಂತರನ್ನು ಸರಕಾರವೇ ಮುಗಿಸಿ ಹಾಕಿತು."

"ಹೌದು. ಆಗಿನ ಕಾಲವೂ ಹಾಗಿತ್ತು."

"ನಿಜ. ನೀವು ಹೇಳಿದಂತೆ ಈಗ ಕಾಲ ಬದಲಾವಣೆಯಾದುದೇನೋ ನಿಜವೇ. ಅದಕ್ಕೆ ಕಾರಣ ಮಾನವರಿಗೆ ಬುದ್ಧಿಶಕ್ತಿ ಹೆಚ್ಚಾದುದೇ. ಬುದ್ಧಿ ಶಕ್ತಿ ಹೆಚ್ಚಾದಂತೆ ದೇವರ ನಂಬುಗೆ ಮೂಢಜನರ ಸಹಾಯದ ಕಾರಣವಾಗಿ ತೋರತೊಡಗಿತು. ಬುದ್ಧಿ ಶಕ್ತಿ ವಿಕಾಸ ಹೊಂದದಿರುವ ಕಾಲದಲ್ಲಿ, ಜನರು ಇತರರಿಗೆ ಕೇಡು ಬಗೆಯುವಾಗ, ಅಂದರೆ ದುರ್ವರ್ತನೆಯಲ್ಲಿ ನಡೆಯುವಾಗ ಅದಕ್ಕೆ ತಡೆಯಾಗಿ ದೇವರ ಭಯವಿರಲೆಂದ ದೇವರನ್ನು ಬುದ್ಧಿಶಾಲಿಗಳಾದ ಮನುಷ್ಯರೇ ಅಸ್ತಿತ್ವಕ್ಕೆ ತಂದರು. ಅದು ಎಂದಿಗೂ ಬದಲಿಸಲಾಗದಂತಹ ಅಸ್ತಿತ್ವ. ಮಾನವರ ಮನಸ್ಸು ಎಂಬುದು ಇರುವವರೆಗೆ ಆ ಲವೂ ಈ ಅಸ್ತಿತ್ವವೂ ಇದ್ದೀತು. ಏಕೆಂದರೆ ಎಲ್ಲಾ ಕಾಲದಲ್ಲಿಯೂ ಎಲ್ಲಾ ಮಾನವರೂ ಬುದ್ಧಿ ವಿಕಾಸಗೊಂಡವರಾಗಿರುವುದಿಲ್ಲ. ಎಂದೆಂದಿಗೂ ಪಾಮರರದೊಂದು ಗುಂಪು ಇರುತ್ತೆ. ಅವರಿಗಾಗಿ ಬುದ್ಧಿಶಾಲಿಗಳಾದವರೂ ಆ ಅಸ್ತಿತ್ವವನ್ನು ಕಾಪಾಡಿಕೊಂಡು ಬರುತ್ತಾರೆ. ಪಾಮರ ಜನರನ್ನು ಸನ್ಮಾರ್ಗಕ್ಕೆ ತರಲು ಅದು ಅಗತ್ಯವಾಗಿ ಬೇಕಾದುದೆಂತಲೇ ಎಂತಹ ನಾಸ್ತಿಕವಾದಕ್ಕೂ ಅದು ಜಗ್ಗದೆ ನಿಂತಿದೆ. ಈಗಲೂ ಅಷ್ಟೇ."

"ಹಾಗಾದರೆ ದೇವರ ನಂಬುಗೆ ಇಲ್ಲದವರು ಬುದ್ಧಿವಂತರು, ಬುದ್ಧಿವಿಕಾಸಗೊಂಡವರು ಅಂತ ಹಾಗಾಯಿತು."

"ನಿಜ, ದೇವರ ನಂಬುಗೆಯನ್ನು ಬಿಟ್ಟೇ ಬದುಕಲು ಸಾಧ್ಯವೆಂದು ಅವರು ಕಂಡು ಹಿಡಿದಿದ್ದಾರೆ. ಪಾಮರ ಜನರಿಗಾಗಿ ದೇವಾಲಯಗಳೂ ಕೈಂಕರ್ಯಗಳೂ ಎಂದು ಅವರು ತಿಳಿಯುತ್ತಾರೆ. ಮುಖ್ಯ ಸನ್ಮಾರ್ಗದಲ್ಲಿ ನಡೆಯುವವರಿಗೆ—ಅವರ ಮಟ್ಟಿಗೆ ದೇವರ ನಂಬುಗೆ ಇಲ್ಲದಿದ್ದರೂ ನಡೆಯುತ್ತದೆ. ಅಂಥವರು ಶ್ರೀಮಂತರಾಗಿದ್ದರೆ ಪರರ ಹಿತಕ್ಕಾಗಿ, ಉತ್ಸವ ಅಭಿಷೇಕ ಲಕ್ಷಾರ್ಚನೆಗಳಂತಹ ಕೈಂಕರ್ಯಗಳಿಗೆ ಮುಂದೆ ಬರುತ್ತಾರೆ. ಆಗ ಸಾರ್ವಜನಿಕರು ಅವರವರ ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ಸಂತೋಷದಿಂದ ಕಾಣಿಕೆ ಹಾಕದೆ ಇರುವುದಿಲ್ಲ."

"ದೇವರ ನಂಬುಗೆ ಇಲ್ಲದವರೆಲ್ಲ ಅಧರ್ಮಿಗಳೆಂದ [illegible] ತಪ್ಪಲ್ಲವೆ [illegible]?"

"ಅದು ಬೇರೆ ಕಥೆ. ಅವರು ಬುದ್ಧಿ ವಿಕಾಸದಿಂದ ದೇವರ ಅಸ್ತಿತ್ವವನ್ನು ಅಲ್ಲಗಳೆಯರಲ್ಲ. ಉದಾಸೀನತೆಯಿಂದ. ದೇವರು ದಿಂಡರ ಅಂತ ಸಮಯ ಕಳೆಯಲು ಉದಾಸೀನ. ಅಂಥವರಿಗೆ ಮನೋಬಲವೂ ಇಲ್ಲ ಅವರಿಗೆ. ಅವರು ನಾಸ್ತಿಕರೂ ಅಲ್ಲ, ಆಸ್ತಿಕರೂ ಅಲ್ಲ. ದಾನಧರ್ಮಗಳು ಕೂಡದೆಂದು ಯಾವ ನಾಸ್ತಿಕನೂ ಹೇಳಲಾರು. ದೇವಾಲಯಗಳಲ್ಲಿ ನಡೆಯಬೇಕಾದುದು ದಾನಧರ್ಮಗಳು ತಾನೆ? ಅದು ದೇವರ ಹೆಸರಿನಲ್ಲಿ ನಡೆಯುತ್ತದೆ."

"ಹಾಗಾದರೆ ದೇವರ ಹೆಸರಿನಲ್ಲಿ ಟಿಕೆಟ್ ಮಾರುವುದು ತಪ್ಪು ಎನ್ನುವಿರಾ?"

"ಹಾಗೆ ಹೇಳುವ ಕಾಲ ಇದಲ್ಲವೆಂದು ನನಗೆ ಗೊತ್ತು. ಈಗ ಕಾಲ ಬದಲಾವಣೆಯಾಗಿದೆ ಎನ್ನಲು ಸಂದೇಹವಿಲ್ಲ. ನಾಸ್ತಿಕಗಳೆಂಬ ಕೇವಲ ಅರೆ ಹುಚ್ಚರ ಹೊರತು ಪ್ರತಿಫಲವಿಲ್ಲದೆ ಯಾರೂ ಮೈ ಕೈ ಅಲುಗಿಸುವುದಿಲ್ಲ. ಪರೋಪಕಾರಾರ್ಥಮಿದಂ ಶರೀರಂ ಎಂಬ ಅವರ ವಾಕ್ಯ ಸಾಹಿತಿಗಳಿಗೆ ಮಾತ್ರವೇ ಸಲ್ಲುವಂಥಾದ್ದು. ಉಳಿದ ಎಂತಹ ದೇವರ ಕೈಂಕರ್ಯವೇ ಆಗಲಿ, ಶ್ರಮದ ಬೆಲೆಯು [illegible] ಜಾಗೃತವಾಗಿರುವ ಈ ಕಾಲದಲ್ಲಿ ಬಿಟ್ಟೀ ಚಾಕರಿ ಯಾರು ತಾನೆ ಮಾಡುತ್ತಾರೆ? ಟಿಕೆಟ್ಟು, ಕಮಿಷನ್ನು, ತಿರುಗಾಟದ ಖರ್ಚು, ಶ್ರಮ ಕೂಲಿ ಮುಂತಾದ್ದು ದೊರೆಯುವ ಹಾಗಿದ್ದರೇನೇ ಯಾವ ಕೈಂಕರ್ಯವಾದರೂ ನಡೆಯುತ್ತದೆ. ಕೆಲಸವಿಲ್ಲದೆ ಪರದಾಡುವ ಈ ಕಾಲದಲ್ಲಿ ಇದೂ ಒಂದು ಕೆಲಸದ ಕೆಳಗೇ ಬರುತ್ತದೆ. ನನ್ನ ಅಭಿಪ್ರಾಯವೇನೆಂದರೆ, ಟಿಕೆಟ್ಟನ್ನು ನಿರಾಕರಿಸಿದವರನ್ನು [illegible] ಭಕ್ತಿ ಶ್ರದ್ಧೆ ಇಲ್ಲದವರೆಂದು [illegible] ಬರದು. ಇನ್ನು [illegible] ಈ ಟಿಕೆಟ್ಟು [illegible]ದಲ್ಲದೆಯಷ್ಟೆ? ನಿಮ್ಮ ಸ್ನೇಹಿತರು, ಗುರುತು ಪರಿಚಯದವರ, ನಿಮ್ಮಿಂದ ಏನೋ ಕಾರ್ಯ ಮಾಡಿಸಿಕೊಳ್ಳುವವರು [illegible] ಇರುತ್ತಾರೆ. ಹೆಚ್ಚು ಜನ ಸಂಪರ್ಕ ಇರುವವರ ಮೂಲಕವೇ ಟಿಕೇಟುಗಳು ಮಾರಲ್ಪಡುತ್ತವೆ. ಆಗ ಹಲವರು ನಿಮ್ಮ ಮುಖದಾಕ್ಷಿಣ್ಯಕ್ಕೋಸ್ಕರ ತೆಗೆದುಕೊಳ್ಳುವ ಸಂಭವವೂ ಉಂಟು. ಒಳಗೊಳಗೇ ನೊಂದುಕೊಂಡು ತೆಗೆದುಕೊಳ್ಳುತ್ತಾರಲ್ಲ. ಆಗ ಅದು ಪಾಪ ಮಿಶ್ರಿತವಾದ ಹಣವೇ ಆಯಿತಲ್ಲ. ಅದು ದೇವರಿಗೆ ಪ್ರೀತಿಯೆ?"

"ಭಕ್ತಿ ಶ್ರದ್ಧೆ ಕಡಿಮೆಯಾದ ಈ ಕಾಲದಲ್ಲಿ—"

"ಭಕ್ತಿ ಶ್ರದ್ಧೆ ಕಡಿಮೆಯಾದ ಕಾಲವೆಂದ ನಾನೆಲ್ಲಿ ಹೇಳಿದೆ? ನಾನು ಹೇಳಿದ್ದು ಬುದ್ಧಿವಿಕಾಸವಾಗಿರುವ ಕಾಲವೆಂತಲೇ. [illegible] ಹೇಳುತ್ತೇನೆ ಕೇಳಿ, ಎಂಥ ಮನಿಗಾದ ಒಂದೊಂದು ಸಂದರ್ಭದಲ್ಲಿ ನಿರಾಧಾರ ಪರಿಸ್ಥಿತಿ ಏರ್ಪಟ್ಟಾಗ ದೇವರ ಹೆಸರು ಬಂದೇ ಬರುತ್ತೆ. ಅಷ್ಟೇ ಸಂಕಟ ಬಂದರೆ ವೆಂಕಟರಮಣ ಅನ್ನುವುದು. ಒಟ್ಟಿನ ಮೇಲೆ ಸಾರ್ವಜನಿಕರ ಭಕ್ತಿಯು ಕಾಣಿಕೆ ಎಂಬುದು ಒಂದ ಕಾಸಿನಿಂದ ಹಿಡಿದು ಲಕ್ಷ ರೂಪಾಯಿ ವರೆಗೂ ಬಗೆಬಗೆಯ ರೂಪಗಳಲ್ಲಿ ದೇವಾಲಯಗಳಿಗೆ ಸಲ್ಲುತ್ತಲೇ ಇರುತ್ತದೆ [illegible] ಏನೆಂದ[illegible]ಡಿ?"

ಅದೂ ಒಂದು ಭಕ್ತಿ. ನಂಬುಗೆ. ಕಷ್ಟ ಬಂದಾಗ ಹೇಳಿಕೊಳ್ಳುವುದು."

"ಅಷ್ಟೇ ಅಲ್ಲ. ಸಂತೋಷಕ್ಕಾಗಿ ಹೇಳಿಕೊಳ್ಳುವುದೂ ಹರಕೆಯೇ. ಲಾಟರಿಯಲ್ಲಿ ಇಷ್ಟು ಸಿಕ್ಕಿದರೆ ಇಷ್ಟು ನಿನಗೆ ಹಾಕುತ್ತೇನಪ್ಪಾ ದೇವರೇ ಅಂತ ಮಾತು ಕೊಟ್ಟರೆ ಅದೇ ಹರಕೆ. ಹೀಗೆ ದೇವರಿಗೆ ಕೊಟ್ಟ ಮಾತನ್ನು ನಡೆಸದಿದ್ದರೆ ಮನಸ್ಸು ಪೀಡನೆಗೊಳಗಾಗುತ್ತದೆ. ಅದೇ ಮನಸ್ಸು ಇಟ್ಟುಕೊಂಡು ಮನುಷ್ಯನಿಗೆ ಮಾತು

(ಹನ್ನೊಂದನೇ ಪುಟ ನೋಡಿರಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ನವಯುಗ

ವಾರಪತ್ರಿಕೆ
ಉಡುಪಿ, ದ. ಕ.

NAVAYUGA
UDIPI, S. K.

ಸಂಪುಟ : 50
ಸಂಚಿಕೆ : 16

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
ವಿಶೇಷ ಸಂಚಿಕೆಗಳು ಸಹಿತ
ಬಿಡಿ ಪ್ರತಿ : ೦–೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವುದೇ ಪ್ರಕಟಣೆಗಳು ಕನಿಷ್ಠ ಮೂರು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಇಂದಿರಾಜಿಯ ಪೂರ್ವಕ್ರಮ

ಸಂಸತ್ತಿನ ಚಳಿಗಾಲದ ಅಧಿವೇಶನವು ಮೊನ್ನೆ ತಾನೇ ಕೊನೆಗೊಂಡಿತು. ಪ್ರಸಕ್ತ ಸಂಸತ್ತನ್ನು ವಿಸರ್ಜಿಸಿ ಮಧ್ಯಾವಧಿ ಚುನಾವಣೆಗಳನ್ನು ನಡೆಸಲು ಪ್ರಧಾನಿಯವರು ನಿರ್ಧಾರ ಮಾಡಿದ್ದಾರೆಂಬ ವರದಿಗಳು ದಟ್ಟವಾಗಿ ಹರಡಿದ್ದವು. ಈ ವರದಿಗಳನ್ನು ಅಷ್ಟೇ ದೃಢವಾಗಿ ಪ್ರಧಾನಿಯವರ ಚೇಲಾಗಳೂ ಖುದ್ದಾಗಿ ಶ್ರೀಮತಿ ಗಾಂಧಿಯವರೂ ಅಲ್ಲಗಳೆದಿದ್ದರು. ಆದುದರಿಂದಲೇ ಚುನಾವಣೆಗಳು ನಡೆದೇತೀರುತ್ತವೆಯೆಂದು ಹೆಚ್ಚಿನವರು ನಂಬಿದ್ದರು. ಅಧಿವೇಶನದ ಕೊನೆಯ ದಿನ ವಿಸರ್ಜನೆಯ ಘೋಷಣೆ ನಡೆಯುವುದೆಂಬ ಊಹೆಯೂ ಗಟ್ಟಿಯಾಯಿತು. ಚುನಾವಣೆಗೆ ಬೇಕಾದ ಎಲ್ಲ ಸಿದ್ಧತೆಗಳೂ ಸಂಪೂರ್ಣವಾಗಿರುವಾಗ, ಆದೇಶ ಬಂದೊಡನೆಯೇ ಚುನಾವಣಾ ಆಯೋಗವು ಚುನಾವಣೆ ನಡೆಸಲು ಸಿದ್ಧವಿರುವಾಗ, ಪ್ರಧಾನಿಯೇಕೆ ಹಿಂದೆ ಮುಂದೆ ನೋಡುತ್ತಿದ್ದಾರೆ? ಆಕೆಗೆ ಅನುಕೂಲವಾದ ವಾತಾವರಣ ರಾಜಕೀಯ ರಂಗದಲ್ಲಿ ಮೂಡಲಿಲ್ಲ; ಮೊದಲಿದ್ದ ವಾತಾವರಣವೂ ಆಕೆಗೆ ಮಲಿನವಾಗಿ ಪರಿಣಮಿಸಿದೆ.

ದೇಶದ ರಾಜಕೀಯದಲ್ಲಿ ಮಹತ್ವದ ಪಾತ್ರ ವಹಿಸುವ ಉತ್ತರ ಪ್ರದೇಶದಲ್ಲಿ ಶ್ರೀ ಚರಣಸಿಂಗರಿಗೆ ತಾನು ನೀಡುತ್ತಿದ್ದ ಬೆಂಬಲವನ್ನು ಹಿಂದೆಗೆದುಕೊಳ್ಳುವುದರ ಮೂಲಕ ಪ್ರಧಾನಿಯವರು ತಮ್ಮ ಗೋರಿಯನ್ನು ತಾವೇ ತೋಡತೊಡಗಿದರು. ಅಲ್ಲಿ ರಾಷ್ಟ್ರಪತಿ ಆಳಿಕೆಯನ್ನು ಯೇನಕೇನ ಹೇರಿಸಿ ತಮ್ಮನ್ನು ತಾವೇ ಹುಗಿದುಕೊಂಡರು. ಶ್ರೀ ತ್ರಿಭುವನ ನಾರಾಯಣ ಸಿಂಗರ ನಾಯಕತ್ವದಲ್ಲಿ ಸಂ. ವಿ. ದಳವು ಸರಕಾರ ರಚಿಸುವಲ್ಲಿ ಸಶಕ್ತವಾದುದು ಮಾತ್ರವಲ್ಲದೆ ಮೊನ್ನೆ ಮೊನ್ನೆ ಪ್ರಚಂಡ ಬಹುಮತವನ್ನೂ ಪಡೆದಿರುವುದು ವ್ಯಕ್ತವಾಯಿತು. ಪ್ರಧಾನಿಯಾಗಲೀ, ಅವರ ಚೇಲಾಗಳಾಗಲೀ ಭಾವಿಸಿದಂತೆ ಆಕಾಶ ಕಳಚಿ ಬೀಳಲಿಲ್ಲ. ಅದರ ಜೊತೆಗೆ ಬಿಹಾರದಲ್ಲಿ ಪ್ರಧಾನಿಪರ ಸರಕಾರವು ಉರುಳಿ ಹೋದದ್ದು ಮತ್ತೊಂದು ಆಘಾತ ಆಕೆಗೆ. ಶ್ರೀ ದರೋಗಾ ಪ್ರಸಾದ ರಾಯರ ನಾಯಕತ್ವದ ಪ್ರತಿಷ್ಠೆಯನ್ನು ಶ್ರೀಮತಿ ಗಾಂಧಿಯವರೂ ಶ್ರೀ ಜಗಜ್ಜೀವನರಾಮರೂ ತೇಪೆ ಹಾಕಿ ಪ್ರಶ್ನಾತೀತವೆಂದು ಆದೇಶಿಸಿದ್ದರೂ ಅದರಿಂದ ಪ್ರಯೋಜನವಾಗಲಿಲ್ಲ. ಬಂಗಾಳದಲ್ಲಂತೂ ಪರಿಸ್ಥಿತಿ ಕೈಯುಕ್ತಿ ತರುವ ಆಲೋಚನೆಯನ್ನೇ ಬಿಟ್ಟುಕೊಟ್ಟಿದ್ದಾರೆ— ಗೃಹ-ಯೂನೆ-ಪ್ರಧಾನ-ಮಂತ್ರಿಯವರು; ಇತರತ್ರವಾದರೂ ಪ್ರಧಾನಿಗೆ ಅನುಕೂಲ ವಾತಾವರಣವೇರ್ಪಡಲಿಲ್ಲ; ಆದುದರಿಂದ ಆಕೆ ಸಂಸತ್ತನ್ನು ಈಗ ವಿಸರ್ಜಿಸಲಿಲ್ಲ.

ಆದರೂ ಶ್ರೀಮತಿ ಗಾಂಧಿಯವರು ಬಜೆಟ್ ಅಧಿವೇಶನವನ್ನು ಯಶಸ್ವಿಯಾಗಿ ಎದುರಿಸುವುದು ಸಂದೇಹ. ಬಜೆಟ್ ಮಂಡನೆಯ ಬಳಿಕ ಕುಸು ತಿಳಿಯಾಗಿದ್ದ ವಾತಾವರಣವು ಮತ್ತೂ ಕಲುಷಿತಗೊಳ್ಳುವ ಭೀತಿಯಿದೆ. ಆದುದರಿಂದ ಬಜೆಟ್ ಅಧಿವೇಶನ ಸೇರುವುದಕ್ಕೆ ಮೊದಲೇ ಪ್ರಧಾನಿಯವರು ಸಂಸತ್ತು ವಿಸರ್ಜನೆಗೆ ನಿರ್ಧರಿಸುವ ಸಾಧ್ಯಾಸಾಧ್ಯತೆಗಳು ತುಂಬ ಇವೆ. ಆಕೆಯ ವರ್ತನೆಯೂ ಇದಕ್ಕೆ ಪರಿಪೋಷಕವಾಗಿದೆ. ಬಜೆಟ್ಟು ಹೆಚ್ಚಿನ ತೆರಿಗೆಗಳನ್ನೇ ಹೊತ್ತು ತರುತ್ತದೆ; ಕೊರತೆ ಧನ ವಿನಿಯೋಗ ಇಲ್ಲವೆಂದರೂ ಇದ್ದೇ ಇರುತ್ತದೆ; ರೇಲ್ವೆ ಟಿಕೇಟುಗಳು ಅಂಚೆ ಸಾಧನಗಳ ಬೆಲೆಗಳು ಏರಿಯೇ ತೀರುತ್ತವೆಯೆಂದು ಸಂಬಂಧಿಸಿದ ಮಂತ್ರಿಗಳು ಈಗಾಗಲೇ ಘೋಷಿಸಿದ್ದುಂಟು. ರಾಜಕೀಯವೂ ಬದಲಾಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ. ಮಧ್ಯಪ್ರದೇಶವೂ ಉತ್ತರ ಪ್ರದೇಶ ಬಿಹಾರಗಳ ದಾರಿಯನ್ನು ಹಿಡಿಯುವ ಸಂಭವವಿದೆ.

ಚಳಿಗಾಲದ ಅಧಿವೇಶನದ ಕೊನೆಯ ಹಂತದಲ್ಲಿ ಶ್ರೀಮತಿಗಾಂಧಿಯವರು ತುಸು ಕಂಗಾಲಾಗಿದ್ದುದು ಸಹಜ. ರಾಜಧನ—ರಾಜಮನ್ನಣೆಗಳನ್ನು ರದ್ದುಮಾಡುವ ರಾಷ್ಟ್ರಪತಿ ಆಜ್ಞೆ ಅಕ್ರಮವೆಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ. ರಾಜಧನಾದಿಗಳು ಅವರ ಆಸ್ತಿಯೆಂದು ಒಕ್ಕಣಿಸಿದ್ದು ಆಕೆಗೆ ಹೃದಯಾಘಾತ ತಂದಿದೆ. ಆದುದರಿಂದ ಈ ಸಂಬಂಧದಲ್ಲಿ ಆಕೆ ಹಟ್ಟಿಗೆ ಹೇಳದೆ 'ಅವನ್ನು ರದ್ದು ಮಾಡಲು ಸರಕಾರ ಬದ್ಧ'ವೆಂಬ ಪ್ರತಿಜ್ಞೆ ಮಾತ್ರ ಮಾಡಿ ಸುಮ್ಮನುಳಿದರು. ಜನಪ್ರಿಯ ಪ್ರಧಾನಿ ಶ್ರೀ ಲಾಲಬಹದೂರರ ದುರಂತ ಮರಣದ ಬಗ್ಗೆ ತನಿಖೆ ನಡೆಯಬೇಕೆಂಬ ಬೇಡಿಕೆಯನ್ನು ತಿರಸ್ಕರಿಸುತ್ತ ಶಾಸ್ತ್ರಿಯವರು ಸಹಜವಾಗಿಯೇ ಸತ್ತರು; ಅವರ ಸಾವಿನ ಬಗ್ಗೆ ಸಂದೇಹ ಪಡಬೇಕಾದ ಅಗತ್ಯವಿಲ್ಲವೆಂದು ಹೇಳಿಕೆ ಸರಕಾರ ನೀಡಿತು. ನಾಲ್ಕು ವರುಷ ಸಚಿವಾಲಯದ ಬೀರುವಿನಲ್ಲಿ ಧೂಳು ಮುಕ್ಕುತ್ತಿದ್ದ ಮಹಾಜನ ವರದಿಯನ್ನು ಇದ್ದಕ್ಕಿದ್ದಂತೆಯೇ ಸಂಸತ್ತಿನ ಮುಂದೆ ಮಂಡಿಸಿ, ಮಹಾರಾಷ್ಟ್ರದಲ್ಲಾದರೂ ತನ್ನ ಬೇರು ನೀರು ಹೀರಲು ಅನುಕೂಲತೆಯೊದಗುವಂತೆ ಮಾಡಿಕೊಂಡರು.

ಒಟ್ಟಿನಲ್ಲಿ ಒಂದೂವರೆ ವರ್ಷ ಹಿಂದೆ ಇದ್ದ ಆಕೆಯ ಉತ್ಸಾಹ ಈಗ ಉಳಿದಿಲ್ಲ. ಆಂಧ್ರ ಪ್ರದೇಶದಲ್ಲಾದರೂ ಆಕೆಯ ಪ್ರಭಾವ ಕಡಿಮೆಯಾಗುತ್ತಲೇ ಇದೆ. ತನ್ನ ಮಹತ್ವದ ಸಾಧನೆಯೆಂದು ಹೇಳುವ ಬ್ಯಾಂಕು ರಾಷ್ಟ್ರೀಕರಣದಿಂದಲಾದರೂ ಜನತೆಗೆ ಹೆಚ್ಚಿನ ಸೌಲಭ್ಯ ಒದಗಿಸುವಲ್ಲಿ ಆಕೆ ಸಂಪೂರ್ಣ ವಿಫಲಳಾದುದು ಮಾತ್ರವಲ್ಲ; ಸೇವೆಯಲ್ಲೂ ಅಸಮರ್ಪಕತೆಯನ್ನು ಒದಗಿಸಿದ್ದಾಳೆ. ಸರಕಾರಿ ವಲಯದ ಎಲ್ಲ ಉದ್ಯಮಗಳೂ ನಷ್ಟದಲ್ಲೇ ಮುಂದುವರಿಯುತ್ತಿವೆ.

ಈಯೆಲ್ಲ ರಾಜಕೀಯ —ಆರ್ಥಿಕ ಕಾರಣಗಳಿಂದಾಗಿ, ಶ್ರೀಮತಿ ಗಾಂಧಿ ಸಂಸತ್ತನ್ನು ವಿಸರ್ಜಿಸಲಿಲ್ಲ. ತನಗೆ ಅನುಕೂಲವಾದ ವಾತಾವರಣವೇರ್ಪಡಲು ಸೂಕ್ತ ಕ್ರಮ ಕೈಕೊಂಡಿದ್ದಾರೆ. ಈ ಕ್ರಮಗಳು ಯಶಸ್ವಿಯಾದವೆಂದಾಕೆಗೆ ಮನವರಿಕೆಯಾದರೆ, ಬಜೆಟ್ ಅಧಿವೇಶನಕ್ಕೆ ಮೊದಲೇ ಸಂಸತ್ತು ವಿಸರ್ಜನೆಯಾಗಬಹುದು. ಇಲ್ಲ, ಚುನಾವಣೆಗಳೂ ಮುಂದವರಿದಾವು.

ಸುವರ್ಣ ಉತ್ಸವ

ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವಾದಿಗಳು ಈ ವಾರದಿಂದ ಆರಂಭವಾಗುತ್ತವೆ. ಎರಡೂವರೆ ಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯೆಂದು ಕರೆದುಕೊಳ್ಳುವ ಈ ಸಂಸ್ಥೆ ಕಳೆದ ಐವತ್ತು ವರ್ಷಗಳಲ್ಲಿ ಕನ್ನಡಕ್ಕಾಗಿ ಮಾಡಿದ ಸೇವೆಯನ್ನು ಸ್ಮರಿಸಿಕೊಳ್ಳುವುದು ಅಗತ್ಯ. ಹೂವಿನ ಬದಲಿಗೆ ಅದರ ಎಸಳನ್ನಾಗಲೀ ಅದು ಎಸೆದು ತನ್ನ ಕರ್ತವ್ಯ ಪಾಲನೆಯಲ್ಲಿ ಮುಂದಾದುದು ಪ್ರಶಂಸನೀಯ. ಆದರೂ ಪರಿಷತ್ತು ಸಾಧಿಸಿದ ಸಾಧನೆಗಳು ಏನೇನೂ ಸಾಲದೆನಿಸುತ್ತದೆ. ಕನ್ನಡದ ಬಗ್ಗೆ, ಮುಖ್ಯವಾಗಿ ಕನ್ನಡ ಸಾಹಿತ್ಯದ ಬಗ್ಗೆ, ಕನ್ನಡದ ಪ್ರಚಾರ, ಕನ್ನಡದ ಸ್ಥಾನ—ಮಾನಗಳ ಬಗ್ಗೆ ಅದು ಸಲ್ಲಿಸಿದ ಸೇವೆ ಒಂದು ಮಾತ್ರ. ಆಡಳಿತ ಭಾಷೆ ಕನ್ನಡವಾಗಬೇಕು ಎಂದು ಗೊತ್ತುವಳಿಯನ್ನು ಮಾತ್ರ ಸ್ವೀಕರಿಸಿಯೇ ಅದು ತೃಪ್ತವಾಗುತ್ತಿದೆ. ಇಂದಿನ ಶಿಕ್ಷಣದಲ್ಲಾದರೂ ಕನ್ನಡದ ಮಟ್ಟ ಇಳಿಮುಖವಾಗುತ್ತಿರುವುದನ್ನು ಪರಿಷತ್ತು ಗಮನಿಸಿದಂತಿಲ್ಲ. ಪದವೀಧರರಾದರೂ ಚೊಕ್ಕದಾಗಿ ನಾಲ್ಕು ಕನ್ನಡ ಮಾತಾಡುವುದಕ್ಕೂ ನಾಲ್ಕು ಕನ್ನಡ ಮಾತು ಬರೆಯುವುದಕ್ಕೂ ಅಶಕ್ತರಾಗಿದ್ದಾರೆಂಬುದು ಕನ್ನಡಕ್ಕೆ ಅಪಮಾನ. ಹಾಗಿರುವಾಗ, ಸಾಹಿತ್ಯ ಪರಿಷತ್ತು ಭಾಷಾ ಪಾಠದ ಅಧ್ಯಯನದ ಬಗ್ಗೆ ಇರುವ ಆತಂಕಗಳ ಬಗ್ಗೆ ಸಮೀಕ್ಷೆ ಮಾಡಬೇಕು. ಕನ್ನಡದ ವಿಶೇಷ ಅಧ್ಯಯನ ಮಾಡಿದವರೇ ಅಪ್ಪರ್ ಪ್ರೈಮರಿಯಿಂದಲಾದರೂ ಕನ್ನಡ ಅಧ್ಯಾಪನ ಮಾಡುವಂತೆ ಅವಕಾಶ ಕಲ್ಪಿಸಲು ಸರಕಾರವನ್ನು ಒತ್ತಾಯಿಸಬೇಕು. ತಾನು ನಡೆಸುತ್ತಿರುವ ಪರೀಕ್ಷೆಗಳಿಗೆನೇ ಮನ್ನಣೆಯನ್ನು ಪಡೆಯಲು ಪರಿಷತ್ತಿಗೆ ಸಾಧ್ಯವಾಗಲಿಲ್ಲವೆಂದರೆ ಸರಕಾರವು ಈ ಪರಿಷತ್ತನ್ನು ಹೇಗೆ ನೋಡುತ್ತದೆಯೆಂದು ಬೇರೆ ಹೇಳಬೇಕಾಗಿಲ್ಲ. ಕನ್ನಡದ ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ನೀಡಿದರೆ ಸಾಲದು; ಅದರ ಪ್ರಯೋಜನ ಕನ್ನಡಿಗರಿಗೆ ಆಗಬೇಕು. ಗ್ರಂಥ ಪ್ರಕಾಶನ, ಗ್ರಂಥ ಪ್ರದರ್ಶನ— ಸಾಹಿತ್ಯಕ ಉಪನ್ಯಾಸಾದಿಗಳು ಮೊದಲಾದುವು ನಿರಂತರವಾಗಬೇಕು. ಕನ್ನಡಿಗರ ಸಂಘಟನೆ ಮೊದಲಾಗಬೇಕು. ಕನ್ನಡಿಗರಿಗೂ ಅವರ ಪ್ರಾತಿನಿಧಿಕ ಸಂಸ್ಥೆಗೂ ಇರುವ ಸಂಬಂಧ ಬಿಗಿಯಾಗಬೇಕು. ಸುವರ್ಣ ಮಹೋತ್ಸವಾನಂತರವಾದರೂ ಸಾಹಿತ್ಯ ಪರಿಷತ್ತು ಕನ್ನಡಿಗರ ಸರ್ವತೋಮುಖ ಬೌದ್ಧಿಕ—ಮಾನಸಿಕ ಪ್ರಗತಿಗೆ ನೆರವಾಗುವಂತಾಗಲಿ.

[illegible]

ಗೇಹರಾಜ್ಯದಲ್ಲಿ

ಸಂವಿಧಾನ ಬುಡಮೇಲಾದೀತು

"ಏ, ಕೇಳಿದ್ರೇನೆ?"

"ಏನು?"

"ಮತ್ತಿನ್ನೇನು? ರಾಜ-ಮಹಾರಾಜರ ಮೇಲೆ ಶ್ರೀಮತಿ ಗಾಂಧಿ ಬಿಟ್ಟಿದ್ದ ಬ್ರಹ್ಮಾಸ್ತ್ರವನ್ನು ಸರ್ವೋಚ್ಚ ನ್ಯಾಯಾಲಯ ತುಂಡರಿಸಿತು."

"ಅಂದರೆ?"

"ಏನೆಂಥದೆ? ರಾಜಧನ ಮತ್ತಿತರ ಸೌಲಭ್ಯಗಳನ್ನು ಮಾಜಿ ರಾಜರು ಪಡೆಯುತ್ತಿದ್ದರಲ್ಲ?"

"ಹೌದು...."

"ಅದನ್ನು ಮನ್ನಾ ಮಾಡಲು ಶ್ರೀಮತಿ ಗಾಂಧಿ ಸಂವಿಧಾನ ತಿದ್ದುಪಡಿ ಮಸೂದೆ ತಂದ್ರಲ್ಲಾ....?"

"ಹ್ಞೂಂ...."

"ಆ ಮಸೂದೆ ಸಂಸತ್ತಿನಲ್ಲಿ ಸಾಕಷ್ಟು ಬಹುಮತ ಗಳಿಸದೆ ತಿರಸ್ಕೃತವಾಯ್ತಲ್ಲ—"

"ಹ್ಞೂಂ...."

"ಆಗ ಮಧ್ಯರಾತ್ರಿಯಲ್ಲೇ ಉರಿದೆದ್ದ ಶ್ರೀಮತಿ ಗಾಂಧಿ ವಿಶೇಷ ಘೋಷಣೆ ಮೂಲಕ ರಾಜಧನಾದಿ ರದ್ದು ಮಾಡುವ ಸುಗ್ರೀವಾಜ್ಞೆಗೆ ಪ್ರವಾಸದಲ್ಲಿದ್ದ ರಾಷ್ಟ್ರಪತಿಯ ಸಹಿ ಹಾಕಿಸಿಕೊಂಡರಲ್ಲಾ...."

"ಹೌದ್ರಿ, ತಾನೆಣಿಸಿದಂತೆ ಸಂಸತ್ತು ಕೇಳದಿದ್ದದ್ದರಿಂದ ತನ್ನ ಪರಮೋಚ್ಚತೆಯನ್ನು ಅವರು ಮೆರೆದಾಡ ಬಯಸಿದರು...."

"ಇದು ಪರಮೋಚ್ಚತೆಯಲ್ಲ."

"ಮತ್ತೆ?"

"ಬರಿಯ ಸ್ವೇಚ್ಛೆ ಅಥವಾ ಸರ್ವಾಧಿಕಾರ"....

"ಯಾಕೆ ಹಾಗಂತೀರಿ?"

"ನೋಡು, ತನ್ನ ಇಚ್ಛೆಯನ್ನಷ್ಟೇ ಆಕೆ ಈಡೇರಿಸಿಕೊಳ್ಳಲು ಏಕಪಕ್ಷೀಯ ನಿರ್ಧಾರ ಮಾಡಿದರು; ಆದರೆ, ದೇಶಕ್ಕೊಂದು ಸಂವಿಧಾನವೊಂದಿದೆ; ಕಾರ್ಯಾಂಗಕ್ಕಿಂತ ಬೇರೆಯಾದ ನ್ಯಾಯಾಂಗವೊಂದಿದೆ ಎಂಬುದನ್ನೇ ಮರೆತು ಬಿಟ್ಟರು..."

"ಅದು ಹೌದೂನ್ನಿ. ತನ್ನ ಮಸೂದೆ ತಿರಸ್ಕೃತವಾದೊಡನೆಯೇ ಆಕೆ ಕೆರಳಿದ ಸಿಂಹಿಣಿಯಾದರು..."

"ಸರಿಯೇ. ಆದರೆ ಗಡಿಬಿಡಿ ತೋರಿಸುವುದು ಅನಗತ್ಯವಿತ್ತು...."

"ಹ್ಞೂಂ....ಆಕೆಯ ನ್ಯಾಯವಿದರು ಆಕೆಗೆ ಸರಿದಾರಿ ತೋರಿಸಿಕೊಡಬೇಕಿತ್ತು. ರಾಷ್ಟ್ರಪತಿಗಳಾದರೂ ಸರ್ವೋಚ್ಚ ನ್ಯಾಯಾಲಯದ ಸಲಹೆ ಕೇಳಬಹುದಿತ್ತು...."

"ನೋಡಿ ರಾಜಕೀಯದಲ್ಲಿ ಎಲ್ಲಾ ಪವಾಡಗಳು ಸಹಜವಾದುವುಗಳು. ಅದರಲ್ಲೂ ಭಾರತದ ಭಾಗ್ಯರೇಖೆಯನ್ನೇ ಬದಲಿಸಬೇಕೆಂದು, ಅದೂ ರಾತ್ರಿ ಬೆಳಗಾಗುವುದರೊಳಗೇನೇ, ಭ್ರಾಂತಿ ಹಿಡಿದ ಈ ಪ್ರಗತಿಗಾಮಿಗಳು ನ್ಯಾಯ—ಅನ್ಯಾಯ ಸಾಮಂಜಸ್ಯ—ಅಸಾಮಂಜಸ್ಯಗಳನ್ನೇಕೆ ಚಿಂತಿಸುತ್ತಾರೆ?"

"ಅದು ಹೌದೂನ್ನಿ. ಅಲ್ಲ, ಇನ್ನು ಮುಂದೇನಾದೀತು?"

"ತನ್ನ ಹಠವನ್ನು ಕಾರ್ಯಗತ ಮಾಡಿಯೇ ತೀರ್ಥ ಎನ್ನುತ್ತಾರೆ ಶ್ರೀಮತಿಗಾಂಧಿ. ಸಮಾಜವಾದವನ್ನು ಜಾರಿಗೆ ತರುವಲ್ಲಿ ನೂರಾರು ಅಡೆತಡೆಗಳು ಕಾಣಿಸಿಕೊಳ್ಳುವುದು ಸಹಜವೆಂದ. ಆಕೆ ಅನ್ನುತ್ತಾರೆ."

"ಹೇಗಂತೆ?"

"ಹೇಗೆ ಅಂದರೆ ನೋಡಬೇಕು."

"ಆದರೂ...."

"ನೋಡಮ್ಮ. ಇದಕ್ಕಿರುವ ಮಾರ್ಗವೆರಡು. ಮೊದಲನೆಯದು ಶಾಸಕಾಂಗದ ಏಕಪಕ್ಷೀಯ ಪ್ರಭು. ಇನ್ನೊಂದು ರಾಜಮಹಾರಾಜರೊಡನೆ ಸಂಧಾನಕ್ಕೆ ತೊಡಗುವ ದ್ವಿಪಕ್ಷೀಯ ಕ್ರಮ...."

"ಇವುಗಳಲ್ಲಿ ಶ್ರೀಮತಿ ಏನ ಹೇಳುತ್ತಾರೆ?"

"ಅವಶ್ಯವಾದರೆ ಸಂವಿಧಾನಕ್ಕೆ ತಿದ್ದುಪಡಿ ತಂದಾದರೂ 'ರಾಜತ್ವ'ವನ್ನು ನಿರ್ನಾಮ ಮಾಡುತ್ತೇವೆ ಅನ್ನುತ್ತಾರೆ...."

"ಅದು ಸಾಧ್ಯವಾದೀತೇ?"

"ನೀನು ಕೇಳುವುದ ಸಂಸತ್ತಿನಲ್ಲಿ ಬಹುಮತ ಲಭಿಸೀತೆಯೆಂದು...."

"ಹೌದು...."

"ಸಿಕ್ಕೀತು, ಸಿಕ್ಕದೆಯೂ ಹೋದೀತು. ಶ್ರೀಮತಿ ಗಾಂಧಿಯವರು ಕಮ್ಯುನಿಜಂ-ಸಮಾಜವಾದವನ್ನು ನಂಬಿರುವ ವರೆಗೆ ಆಕೆಗೆ ಸಿಕ್ಕಿತೆಂಬ ಭರವಸೆ. 'ಸಮಾಜವಾದ'ದ ಬಲದಿಂದ ಸಾಧ್ಯವಾದರೂ ಆದೀತು. ಆದರೆ, ಮೊದಲಿನ ಹಾಗೆ ರಾಜಧನಾದಿ ರದ್ದತಿಯ ಬಗ್ಗೆ ತಿದ್ದುಪಡಿ ಮಸೂದೆ ಪಾಸಾದರೂ ಅದು ಪ್ರಶ್ನಾತೀತವಾಗುವುದಿಲ್ಲ."

"ಯಾಕೆ?"

'ರಾಜಧನಾದಿಗಳನ್ನು ನ್ಯಾಯಾಲಯ ಆಸ್ತಿಯ ಮೇಲಿನ ಅಧಿಕಾರವೆಂದು ಉಲ್ಲೇಖಿಸಿದೆ. ಆದ್ದರಿಂದ ಆಸ್ತಿಯ ಮೇಲೆ ಅಧಿಕಾರ ಹೊಂದುವುದು. ಸಂವಿಧಾನದತ್ತ ಮೂಲ ಭೂತ ಅಧಿಕಾರವಾಗುವುದು."

"ಓ, ಇದು ಭಾರೀ ಚಲೋದು ಅಂದರೆ ಮೂಲಭೂತ ಅಧಿಕಾರಗಳನ್ನೇ ಮೊಟಕು ಮಾಡುವಂತೆ ಶ್ರೀಮತಿ ಗಾಂಧಿ ಮಸೂದೆ ತರಬೇಕಾಗುವುದು."

"ಅದು ಸರಿ. ಆದರೆ, ಅದೂ ಅಷ್ಟು ಸುಲಭವಿಲ್ಲ. ಸಂವಿಧಾನದತ್ತ ಮೌಲಿಕ ಅಧಿಕಾರಗಳನ್ನು ಮೊಟಕು ಮಾಡುವ ಅಧಿಕಾರವೂ ಶಾಸನಾಂಗಕ್ಕಿಲ್ಲವೆಂದು ಈ ಹಿಂದೊಂದು ತೀರ್ಪಿನಲ್ಲಿ ಸರ್ವೋಚ್ಚ ನ್ಯಾಯಾಲಯ ಹೇಳಿದ್ದುಂಟು."

"ಅಂದರೆ...."

"ಅಂದರೇನ? ನ್ಯಾಯಾಲಯ ತನ್ನ ನ್ಯಾಯ ನೀಡಿದೆ; ಜನತಾ ನ್ಯಾಯಾಲಯ ತನ್ನ ನ್ಯಾಯವನ್ನು ನೀಡಬೇಕಷ್ಟೆ—ಇ. ಎಂ. ಎಸ್. ನಂಬೂದರಿಯ ಪ್ರತಿಕ್ರಿಯೆ ಸ್ವಾಗತಕರ."

ಅಲ್ರಿ, ದ್ವಿಪಕ್ಷೀಯ ಮಾತುಕತೆಗೆ ತೊಡಗಬಾರದೇಕೆ?"

"ತಮಗಿಂತಲೂ ಸಂವಿಧಾನವನ್ನು ಕೀಳೆಂದ ಭಾವಿಸುವ, ನ್ಯಾಯ ಶಾಸನಗಳೂ ಸಮಾಜವಾದ ವಿರೋಧಿಯೆನ್ನುವ "ಕಮ್ಯುನಿಜಂ' ಪ್ರಿಯ ಇವರಿಗಿಂತ ತಯಾರಾದಾರು? ತಾನೇ ಭಾರತ, ಭಾರತವೇ ತಾನು ಎಂಬ ಸರ್ವಾಧಿಕಾರಿಗೆ ಮಾತುಕತೆಯೆಂತು ಪ್ರಿಯವಾದೀತು? ಶಾಸಕಾಂಗವೇ ಪರಮೋಚ್ಚ; ಪ್ರಧಾನ ಮಂತ್ರಿಯು ಅದಕ್ಕೂ ಪರ ಪರಮೋಚ್ಚವೆಂಬ ಆಕೆಗೆ ಪಿತ್ತ ಕೆದರಿರುವಾಗ, ಮಾತುಕತೆಯ ಮೇಜಿನ ಬಳಿಗೇಕೆ ಬಂದಾರು?'

"ಅಂದರೆ, ಇನ್ನೀಗ ಆಸ್ತಿಯ ಮೇಲಣ ಅಧಿಕಾರವನ್ನೇ ಎಲ್ಲರಿಂದಲೂ ಕಿತ್ತುಕೊಂಡು ಬಿಡುವುದೇ ಸರಿ."

'ಅದು ಒಮ್ಮೆಲೇ ಆಗಬೇಕೆಂದಿಲ್ಲ. ಮೊದಲಿಗೆ ರಾಜರ ಮನ್ನಣಾದಿಗಳನ್ನು ಕಿತ್ತುಕೊಳ್ಳಲು ಸಂವಿಧಾನ ತಿದ್ದುಪಡಿ ಮಸೂದೆ; ಅದನ್ನೂ ನ್ಯಾಯಾಲಯ ಕಿತ್ತು ಹಾಕಿದರೆ, ಮೌಲಿಕ ಅಧಿಕಾರವನ್ನೇ ಮೊಟಕು ಮಾಡುವುದು..."

"ಅದೂ ಆಗದಿದ್ದರೆ....?"

"ಅಲ್ವೆ, ಶ್ರೀಮತಿಯವರ ಮಾತು ಕೇಳುವಾಗ, ನಮ್ಮ ಇಡೀ ಸಂವಿಧಾನವೇ ಬದಲಾಗಬಹುದೆಂಬ ಭೀತಿಯಿದೆ...."

"ಅಂದರೆ, ಹೊಸ ಸಂವಿಧಾನ!"

"ಹ್ಞೂಂ; ಆಕೆಯ ಪ್ರಗತಿವಾದಿ ಸ್ನೇಹಿತರು ಇಂತಹ ಸಲಹೆಯನ್ನೇ ಮುಂದೊಡ್ಡುತ್ತಿದ್ದಾರೆ."

"ಆದರೆ ನೋಡಿ, ಹಾಗೆಲ್ಲ ನನಗೆ ಬೇಡವಾದರೆ, ಅಂತಹ ಮಾತನ್ನಾಕೆ ಕೇಳುವುದೇ ಇಲ್ಲ...."

"ಸಂವಿಧಾನವನ್ನು ಆಕೆ ಶಾಶ್ವತವಾದ ಕಾಗದವಲ್ಲವೆಂದು ಹಲವು ಬಾರಿ ಅಂದು ಸಮಾಜವಾದಕ್ಕೆ ಹಲವಾರು ಅಡೆತಡೆ ಬರುತ್ತವೆಂದು ಹೇಳುವಾಗ,...."

"ಹ್ಞೂಂ...ಇರಬಹುದೂನ್ನಿ....ಒಂದು ವೇಳೆ ಹಾಗಾದರೆ, ನಮ್ಮ ಸಂವಿಧಾನ..."

"ಸೋವಿಯತ್ತಿಗೆ ಸಮೀಪವಾಗುತ್ತದೆ...."

"ಆದರೆ ನೋಡಿ, ಭಾರತದಲ್ಲಿ ಕಮ್ಯುನಿಷ್ಟ ಕಮ್ಯುನಿಸ್ಟರದು; ಇನ್ನೊಂದು ಕ್ಯಾಪಿಟಲಿಸ್ಟರದು. ಮತ್ತೊಂದು ಬಾವಲಿಸ್ಟರದು. ಆಗ ಕಮ್ಯೂನಾಲಿಜಂನ ಹೆಸರು ಹೊತ್ತು ಕಮ್ಯುನಿಜಂ ತಳವೂರುತ್ತದೆ."

"ಮತ್ತೀಗ ಇರುವುದಾದರೂ ಏನು?"

'ಈಗ ಇರೋದು ಹೆಣ್ಣು ನಾಯಿಗೆ ಮಾಲೆ ಹಾಕಿ, ಬಾಲಕ್ಕೆ ಪಟಾಕಿ ಮಾಲೆಕಟ್ಟಿ ಬೆಂಕಿಕೊಡುತ್ತಿರೋ ನಾಟಕ."

"ಇದರ ಕೇಂದ್ರ ಬಿಂದು ಶ್ರೀಮತಿಗಾಂಧಿ, ಸುತ್ತುವರಿದವರು ಕಮ್ಯುನಿಜಂ ಸುಲಿಗೆದಾರರು ಯಾನೆ ವೈಗಳ್ಳರು."

'ಹ್ಞೂಂ....ಇನ್ನು ವಿಧಿ ಏನೇನು ಬರೆದಿದೆಯೋ ಈ ಭಾರತೀಯರ ಹಣೆಯಲ್ಲಿ....'

'ಬರೆದಿರೋದೇನು? ಬರೆಸೋಕೆ ತಾಕತ್ತು ನಮ್ಮಲ್ಲಿದ್ದರೆ ಎಲ್ಲ ಬರೆಯಬಹುದು...'

—ಗೋರಾ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 249/1970

K. ಗುರುರಾಜ ರಾವ್—ವಾದಿ

ಮತ್ತು

ಅಕ್ಕಿ ಮರಕಾಲ್ತಿ ಕೂಡಾ—ಪ್ರತಿವಾದಿಗಳು

2ನೆ ಪ್ರತಿವಾದಿ ರಾಮಪ್ಪ ಮರಕಾಲ, ಅಕ್ಕಿ ಮರಕಾಲ್ತಿ ಮಗ—ಉಡುಪಿ ತಾಲ್ಲೂಕು ಕೊಡವೂರು ಗ್ರಾಮದ ಮಲ್ಪೆಯ ಕೊಳ ಎಂಬಲ್ಲಿರುವವರು ಇವರಿಗೆ ಈ ಮೂಲಕ ತಿಳಿಯ ಪಡಿಸುವುದೇನಂದ್ರೆ

ವಾದಿಯು ತಾ. 4-9-1970ರಲ್ಲಿ 1ನೆ ಪ್ರತಿವಾದಿಗೆ ಬರಕೊಟ್ಟ ಕ್ರಯದಸ್ತಾವೇಜಿನ ಪ್ರತಿಫಲದಲ್ಲಿ ಬಾಕಿಯಾಗಿಗೊಡಿಸಿದ ಕ್ರಯದ ಐವೇಜು ವಸೂಲು ಬಗ್ಗೆ ಆ ಬಾಬ್ತು 2ನೆ ಪ್ರತಿವಾದಿಯು ವಾದಿಗೆ ಬರಕೊಟ್ಟ ಡಿಮಾಂಡ್ ಪ್ರಾಮಿಸರಿ ನೋಟಿನ ಮೇರೆಗೆ ಬರತಕ್ಕ ಐವೇಜಿನ ವಸೂಲು ಬಗ್ಗೆ ಕೂಡಾ ವಾದಿಯು ಮೇಲ್ಕಂಡ ದಾವೆ ದಾಖಲು ಮಾಡಿದ್ದು ಆ ಕುರಿತು 2ನೆ ಪ್ರತಿವಾದಿಗೇನಾದರೂ ಉಜರದಾರಿಯಿರುವ ಸಂಗತಿಯಲ್ಲಿ ಅದನ್ನು ತಾ. 8-1-1971ರಲ್ಲು ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

Narayana Rao K.
Advocate for Plaintiff.

ಉಡುಪಿ, 14—12—1970

ಸಂದರ್ಶಿಸಿರಿ—ಸಂತೃಪ್ತರಾಗಿ!!

ಬೆಳ್ಳಿ ಬಂಗಾರ ವಜ್ರಗಳಿಗೆ, ಆಧುನಿಕ ಫ್ಯಾಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗಿವರ್ಟ್ ಮತ್ತು ಇಂಡು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res:3272

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O. S. 437/70

ರಂಗನಾರಾಯಣ ಜೋಯಿಸ—ವಾದಿ

ಸುಬ್ರಾಯ ಆಚಾರಿ ಕೂಡಾ—ಪ್ರತಿವಾದಿಗಳು

2ನೇ ಪ್ರತಿವಾದಿ ಲಕ್ಷ್ಮಣ ಆಚಾರಿ, ಸುಬ್ರಾಯ ಆಚಾರಿ ಮಗ, ಸುಳ್ಯ ತಾಲ್ಲೂಕು ಬೆಳ್ಳಾರು ಕೆಮ್ಮಿಂಜೆ ಗ್ರಾಮದಲ್ಲಿರುವುದು.

—ಇವರಿಗೆ ಈ ಮೂಲಕ ತಿಳಿಸುವುದೇನಂದರೆ—

ನಿಮ್ಮ ಮೇಲೆ ಕೂಡಾ ವಾದಿಯು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 22-1-1971ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುವುದರಿಂದ ಆ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಹಾಜರಾಗಿ ನಿಮ್ಮ ಸ್ಟೇಟುಮೆಂಟು ದಾಖಲು ಮಾಡದಿದ್ದಲ್ಲಿ ನಿಮ್ಮ ಗೈರು ಹಾಜರಿಯಾಗಿದೆ ಸದ್ರಿ ದಾವೆಯನ್ನು ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

(ಕೋರ್ಟಿನ ಹುಕುಂ ಪ್ರಕಾರ)

Pundarik M.K.
Advocate for Plaintiff

ಪುತ್ತೂರು, 18-12-70.

ಚಾರುಚಯನ

ಕನ್ನಡಿಗರು ದ್ವಿತೀಯ ವರ್ಗದ ಪ್ರಜೆಗಳು

ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವ (೫೧)ವು ಈ ಬಾರಿ ಸಂಪೂರ್ಣವಾಗಿ ಕನ್ನಡದಲ್ಲೇ ನಡೆಯಿತು.

ಕನ್ನಡ ಮಾಧ್ಯಮವನ್ನು ಆರಂಭಿಸಿದ ಮೊತ್ತ ಮೊದಲ ವಿಶ್ವವಿದ್ಯಾಲಯ ಹಲ ಕಾಲ ಕಳೆದ ಬಳಿಕವಾದರೂ ಘಟಿಕೋತ್ಸವವನ್ನು ಕನ್ನಡದಲ್ಲೇ ಆರಂಭಿಸಿ ಮುಗಿಸಿದ್ದು ಸಂತೋಷ.

ಕುಲಪತಿ ರಾಜ್ಯಪಾಲ ಶ್ರೀ ಧರ್ಮವೀರರೂ ಕನ್ನಡದಲ್ಲಿಯೇ ಘಟಿಕೋತ್ಸವವನ್ನು ಆರಂಭಿಸಿದರು. ಈ ಹಿಂದಿನ ರಾಜ್ಯಪಾಲ (ಹಾಲಿ ಉಪರಾಷ್ಟ್ರಪತಿ) ಶ್ರೀ ಗೋಪಾಲಸ್ವರೂಪ ಪಾಠಕರು ಕನ್ನಡ ರಾಜ್ಯೋತ್ಸವ ಸಮಾರಂಭವೊಂದರಲ್ಲಿ ಮಾತಾಡಲು ಕನ್ನಡದಲ್ಲೇ ತೊಡಗಿದ್ದರು.

ಕನ್ನಡದಲ್ಲಿ ಅಭಿವ್ಯಕ್ತಿ ಶಕ್ತಿಯೇನೂ ಕಡಿಮೆಯಿಲ್ಲವೆನ್ನುವುದನ್ನು ಮೈಸೂರಿನ ಘಟಿಕೋತ್ಸವ ಮತ್ತೊಮ್ಮೆ ಸಿದ್ಧಮಾಡಿತು.

ಕನ್ನಡಕ್ಕೆ ಸೂಕ್ತ ಸ್ಥಾನ-ಮಾನಗಳು ಇಂದು ನಮ್ಮ ರಾಜ್ಯದಲ್ಲೇ ಇಲ್ಲ–ಇದು ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿ ಶ್ರೀ ದೇವರೇ ಗೌಡರ ಕೊರಗು. ರಾಷ್ಟ್ರಕವಿ ಕು.ವೆಂ.ಪು. ಆರಂಭಿಸಿದ್ದ ಕನ್ನಡ ಯಜ್ಞವನ್ನು ಪ್ರೊ| ದೇವರೇ ಗೌಡರು ಮತ್ತೆ ಆಸ್ಥೆ ವಹಿಸಿ ಮುಂದುವರಿಸತೊಡಗಿದ್ದಾರೆ.

ಕನ್ನಡ ಮಾಧ್ಯಮವನ್ನು ಉತ್ತೇಜಿಸುವುದು; ಅದಕ್ಕಾಗಿ ಪಠ್ಯಪುಸ್ತಕಗಳ ನಿರ್ಮಾಣ, ಇತರ ಗ್ರಂಥಗಳ ಪ್ರಕಾಶನ —ಇತ್ಯಾದಿಗೆ ಅವರ ಶ್ರಮ ಪರಿಮಿತವಾಗಿಲ್ಲ. ಕನ್ನಡ ಜನದ ಉಸಿರಿನಿಂದ ಹಿಡಿದು ಮಸಣದ ವರೆಗೂ ಕನ್ನಡವೇ ಸ್ಥಾನ ಪಡೆಯಬೇಕು, ಇದು ಪ್ರೊ| ಗೌಡರ ಮನೀಷೆ.

ಇದನ್ನು ಸಂಕುಚಿತ ಭಾವನೆ ಎಂದು ಕರೆದರೆ ತಪ್ಪಾಗುತ್ತದೆ. ತನ್ನ ಉದ್ಧಾರ ತನ್ನಿಂದಲೇ ಎಂಬುದು ತ್ರಿಕಾಲಾಬಾಧಿತ ಸತ್ಯ. ಪ್ರಗತಿಗಾಮಿ ಗಳೆಲ್ಲಾ ಇದು ಒಪ್ಪಿತ. ತನ್ನ ಭಾಷಾ ಸಾಧ್ಯತೆಯಿಂದಲೇ ತನ್ನ ಉದ್ಧಾರವಾಗಲಿ ಎಂದು ಬಯಸುವುದು ಪರಭಾಷೆಯ ಮೇಲಿನ ದ್ವೇಷದಿಂದಲ್ಲ; ಸ್ವಭಾಷೆಯ ಮೇಲಿನ ಪ್ರೇಮದಿಂದ.

ಸುಪ್ರಸಿದ್ಧ ಕವಿಗಳು—ಲೇಖಕರು ಕನ್ನಡವನ್ನು ಹೊಗಳಿದರು; ಅದರ ಹಿರಿಮೆಯನ್ನು ಹಾಡಿದರು.

ತನುಕನ್ನಡ, ಮನಕನ್ನಡವೆಮ್ಮದು ಎಂದು ಪ್ರತಿಜ್ಞೆ ಮಾಡಿಸಿದರು. ಎಂದೆಂದಿಗೂ ನೀನು ಕನ್ನಡವಾಗಿರು ಎಂದು ಹಾರಯ್ಸಿದರು. ಕನ್ನಡದಲ್ಲಿ ಹುಟ್ಟಿ ಕನ್ನಡದಲ್ಲೇ ಸಾಯುವ ತಮ್ಮ ಬಯಕೆಯನ್ನು ಹೊರಗೆಡಹಿದರು.

ಖ್ಯಾತ ಕಾದಂಬರಿಕಾರ ಶ್ರೀ ಅ. ನ. ಕೃ. ರಾಜ್ಯದ ಹೆಸರು ಕರ್ನಾಟಕವಾಗಲೇ ಬೇಕೆಂದು ಹದಿನೈದು ವರ್ಷಗಳಿಂದಲೂ ಬಯಸುತ್ತ ಬಂದಿದ್ದಾರೆ. ಇವರೊಂದಿಗೆ ಸ್ವರಗೂಡಿಸಿದ ಅನೇಕ ಮಹನೀಯರೂ ಇದ್ದಾರೆ. ರಾಜ್ಯಕಾರಣಿಗಳೂ ಇವರಲ್ಲಿ ಸೇರಿದ್ದಾರೆ. ಆದರೂ ರಾಜ್ಯದ ಹೆಸರನ್ನೂ ಕನ್ನಡವಾಗಿಲ್ಲ.

ಹೆಸರು ಬಿಡಿ. ರಾಜ್ಯಭಾಷೆಯಾದರೂ ಕನ್ನಡವಾಗಿದೆಯೆ? "ಇಂಗ್ಲಿಷ್ ಆಫ್ ಸೇಕ್ ಕಮ್ಸ್ ಟು ಮಿ" ಎನ್ನುವ ಇಂಗ್ಲಿಷ್ ಮೋಹ ನಮ್ಮಿಂದ ದೂರವಾಗಿದೆಯೆ?

ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಲು ಸರ್ಕಾರವಿನ್ನೂ ದಿನ—ಮೋಹ ಹಾಕುತ್ತಿದೆ. ಇದು ರಾಜ್ಯಕಾರಣಿಗಳ ದೋಷವಲ್ಲ. ಅಧಿಕಾರಿಗಳ ದೋಷ.

ಅಂದರೆ, ಕನ್ನಡ ಬಾರದ ಅಧಿಕಾರಿಗಳೇ ಇದ್ದಾರೆಂದು ಅರ್ಥವಲ್ಲ; ಆಡಳಿತ ಭಾಷೆ ಕನ್ನಡ ಮಾಡಿದರೆ ಅಧಿಕಾರಿಗಳು ತಮ್ಮ ತ್ರಾಸ ಪಡಬೇಕಾಗುತ್ತೆ ಎಂಬುದು ನಿಜ.

ಆದ್ದರಿಂದ ಪ್ರಾಯೋಗಿಕವಾಗಿ ತಾಲೂಕು ಮಟ್ಟದಲ್ಲಿ, ಆರಂಭವಾಗಲಿ, ಡಿವಿಜನ್ ಮಟ್ಟದಲ್ಲಿ ತೊಡಗಲಿ ಎಂದು ತಮ್ಮ ಮನೆ ಬಾಗಿಲ ಭಿಕ್ಷುಕನನ್ನು ಇತರರ ಬಾಗಿಲತ್ತ ಅಟ್ಟಿದರು.

ತಾಲೂಕು— ಡಿವಿಜನ್ ವಿಭಾಗದ ಲ್ಲಾದರು ಕನ್ನಡ ಆಡಳಿತ ಭಾಷೆಯಾಗಿದೆಯೆ? ಇದು ಅಂಕೆ—ಸಂಖ್ಯೆಗಳ ತಜ್ಞರಿಗೆ ಸೇರಿದ ಸಂಗತಿ.

ಶಾಲೆ— ಕಾಲೇಜುಗಳಲ್ಲಿ ಕನ್ನಡದ ಬಗ್ಗೆ ವಿದ್ಯಾರ್ಥಿಗಳಲ್ಲಿ ಸದ್ಭಾವನೆಯ ಅಭಾವ. ಕನ್ನಡದ ಅಧ್ಯಾಪನ ಸರಿಯಾಗಿ ನಡೆಯುತ್ತಿಲ್ಲ. ವಿದ್ಯಾರ್ಥಿಗಳಲ್ಲಿ ಅಭಿವ್ಯಕ್ತಿ ಶಕ್ತಿ ಕಡಿಮೆ; ಶಬ್ದ ಭಂಡಾರಕ್ಕೆ ದಾರಿದ್ರ್ಯ.

ಇದಕ್ಕೆ ಕನ್ನಡ ಶಿಕ್ಷಣ ಪದ್ಧತಿಯೇ ಕಾರಣ.

ಕೆಲವೆಡೆ ಕನ್ನಡವನ್ನು ಪದವೀಧರರು ಕಲಿಸುತ್ತಾರೆ. ಇವರು ಹೈಸ್ಕೂಲು ಮಟ್ಟದ ಸಂಧಿ, ಸಮಾಸ, ಛಂದಸ್ಸು ಅಲಂಕಾರಗಳನ್ನು ಕಲಿತು ಕಾಲೇಜಿನಲ್ಲಿ ಮರೆತು ಬಿಟ್ಟವರು.

ಮೇಜರ್ ಕನ್ನಡ ತೆಗೆದು ಕೊಂಡವರಾದ್ದರೂ ಇವರ ಶಬ್ದ ಭಂಡಾರಕ್ಕೆ ಇತಿ—ಮಿತಿ ಕಂಬ. ಶಾಸ್ತ್ರೀಯ ಶಬ್ದೋತ್ಪತ್ತಿಯಿಂದ ಇವರು ಗಾವುದ ದೂರ.

ಮತ್ತೆ ಕೆಲವೆಡೆ ಪಂಡಿತರು ಕಲಿಸುತ್ತಾರೆ. ಇವರಲ್ಲಿ ಹೆಚ್ಚಿನವರು ಎಸ್. ಎಸ್. ಎಲ್. ಸಿ. ಪಾಸು ಮಾಡಿರುತ್ತಾರೆ. ವಿಲ್ಸನ್— ಶೇಕ್ಸ್‌ಪಿಯರರ ಹೆಸರೇನೋ ಕೇಳಿದ್ದಾರೆ. ಅವರ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸುವುದನ್ನೂ ಕಲಿತಿರುತ್ತಾರೆ. ಸಾಮಾನ್ಯ ಕಾಗದ ಪತ್ರಗಳನ್ನು ಅಗತ್ಯ ಕಂಡರೆ, ಇಂಗ್ಲಿಷಿನಲ್ಲೂ ಬರೆಯುತ್ತಾರೆ. ಆದರೆ ಬಿ. ಎ. ಎಂಬ ಎರಡಕ್ಷರವಾಗಲೀ ಬಿ ಎಡ್. ಎಂಬ ಮತ್ತೆರಡೂ ವರೆ ಅಕ್ಷರವಾಗಲೀ ಅವರ ಹೆಸರ ಮುಂದಿಲ್ಲ. ಈ ಸಂಕ್ಷಿಪ್ತತೆಯು ಅದಲಿಗೆ ದಂಡಿತವೆಂಬ ಪೂರ್ಣತೆಯೇ ಇದೆ.

ದಕ್ಷಿಣ ಕನ್ನಡದ ಪ್ರೌಢಶಾಲೆಗಳಲ್ಲಿ ಸಾಮಾನ್ಯವಾಗಿ ಪಂಡಿತರೇ ಕನ್ನಡ ಕಲಿಸುತ್ತಾರೆ ಆದ್ದರಿಂದ ಇಲ್ಲಿಯ ಕನ್ನಡದ ಮಟ್ಟ ಇತರೆಡೆಗಿಂತ ಮೇಲಿದೆ— ಇದು ಕಾಲೇಜ ಪ್ರಿನ್ಸಿಪಾಲರೊಬ್ಬರ ಅಂಬೋಣ.

ಎಸ್. ಎಸ್. ಎಲ್. ಸಿ. ಪರೀಕ್ಷೆಗಳಲ್ಲೂ ರಾಜ್ಯದ ತೇರ್ಗಡೆಯ ಪ್ರತಿಶತದಲ್ಲಿ ದಕ್ಷಿಣ ಕನ್ನಡವೇ ಮೊದಲನೆಯದು.

"ಕೇಗೆ ಸ್ಫುಟವಾಗಿ, ಸ್ಪಷ್ಟವಾಗಿ ಬರೆಯುತ್ತಾರೆ!" ಎಂಬುದು ಉಳಿದೆಡೆಯವರಿಗೆ ಅಚ್ಚರಿ.

ಇದರ ಗುಟ್ಟು ಪಂಡಿತರಿಂದ ಕನ್ನಡ ಬೋಧನೆ.

ಕನ್ನಡದ ಬೋಧನೆಯನ್ನು, ಕನ್ನಡದ ಮಟ್ಟವನ್ನು ಎತ್ತರಿಸಬೇಕಾದರೆ "ಪಂಡಿತ ವರ್ಗ"ದಿಂದಲೇ ಸಾಧ್ಯ; "ಪದವೀಧರ"ರಿಂದದು ಸಾಧ್ಯವಿಲ್ಲ.

ಇದು ಪಂಡಿತ ಸಮ್ಮೇಳನದ ಗೊತ್ತು. ವಳಿಯುಲ್ಲ. ಪ್ರಾಥಮಿಕ ಶಿಕ್ಷಕರಾಗಿ, ಪ್ರೌಢ ಶಾಲಾ ಶಿಕ್ಷಕರಾಗಿ, ಕಾಲೇಜು ಪ್ರಾಧ್ಯಾಪಕರಾಗಿ, ಮತ್ತೆ ಪ್ರಿನ್ಸಿಪಾಲರಾದ ಮಹನೀಯರೊಬ್ಬರ ಅನುಭವದ ಮಾತು.

ಆದರೆ, ಕನ್ನಡ ರಾಜ್ಯ (?)ದಲ್ಲಿ ಕನ್ನಡ ಪಂಡಿತರು ದ್ವಿತೀಯ ವರ್ಗದ ಪ್ರಜೆಗಳಾಗಿದ್ದಾರೆ.

ಪ್ರೌಢ ಶಾಲೆಗಳಲ್ಲಿ ಪದವೀಧರರು ಇಂಗ್ಲಿಷ್, ಗಣಿತ ಇತ್ಯಾದಿ ಬೋಧಿಸುವಂತೆ ಇವರು ಕನ್ನಡ, ಸಂಸ್ಕೃತ, ಹಿಂದಿ ಇತ್ಯಾದಿಯಾದ ವಿಷಯಗಳನ್ನು ಬೋಧಿಸುತ್ತಾರೆ.

ಸಾಲದ್ದಕ್ಕೆ ಪದವೀಧರರು ಇಂಗ್ಲಿಷ್ ಪಾಠವನ್ನು ಹಂಚಿಕೊಂಡು, ಉಳಿದ್ದ ಕೆಲಸವನ್ನು ಹಂಚಿಕೊಳ್ಳುತ್ತಾರೆ

ಭಾಷಾ ಅಧ್ಯಾಪಕರಿಗೆ ಇಂತಹ ಸೌಲಭ್ಯವಿಲ್ಲ. ಅವರು ಪುಸ್ತಕ ಬಿಡಿಸಿ ಕೆಂಪು ಶಾಹಿ ಹಿಡಿದ ಕೈಗೆ ಬಿಸಿ ಮುಟ್ಟಿಸಿ ಕೊಳ್ಳಬೇಕು.

ಕನ್ನಡದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅವಜ್ಞೆ ಯೇಕೆ? ಪಂಡಿತರನ್ನು ಅಧಿಕಾರಿಗಳೂ ಸರಕಾರವೂ ದ್ವಿತೀಯ ವರ್ಗದವರೆಂದು ಪರಿಗಣಿಸುತ್ತಿರುವುದರಿಂದ ಹುಡುಗರ ಪಾಲಿಗೆ ಮನೆಯ ಮಂದಿಗೆ ಸಂತೆ.

ಇದು ಅರ್ಥ ಪ್ರಧಾನ ಪ್ರಪಂಚ ವೇತನದ ಪ್ರಮಾಣದಿಂದ ನೌಕರನ ತೂಕ— ಅಳತೆ ನಡೆಯುತ್ತದೆ.

ಈ ಧೋರಣೆಯು ಪಂಡಿತ ವರ್ಗದ ಶಕ್ತಿ ಮೆಟ್ಟಿ ಅವರನ್ನು ಅತಳದಿಂದ ರಸಾತಳಕ್ಕೆ ತುಳಿಯಲ ಆಯೋಗ ಬಿಟ್ಟಿತು.

ರಾಜ್ಯ ಶಿಕ್ಷಣ ಸಚಿವರು ತಲೆಬೇಕಾದ ಪದವೀಧರ ವೇತನ ಶ್ರೇಣಿಯನ್ನೇ ಇವರಿಗೂ ಜಾರಿಗೆ ತರುವುದಾಗಿ ವಿಧಾನ ಪರಿಷತ್ತಿನಲ್ಲಿ ಹೇಳಿ ಒಂದೂವರೆ—ಎರಡು ತಿಂಗಳೊಳಗೆ ನಿರ್ಧಾರ ಕೊರಗೆಡಹುವುದಾಗಿ ತಿಳಿಸಿದರೂ ಇನ್ನೂ ಏನೂ ಹೊರಬಂದಿಲ್ಲ.

ಗಾಳಿವರ್ತಮಾನವನ್ನು ನಂಬುವುದಾದರೆ, ಮಂತ್ರಿಗಳ ಭರವಸೆ ಭರವಸೆಯಾಗೇ ಉಳಿದಿದೆ. ಅಧಿಕಾರವರ್ಗ ಪಂಡಿತರನ್ನು ಪದವೀಧರರಿಗೆ ಸಮಾನರೆಂದು ಒಪ್ಪಿಕೊಳ್ಳಲು ಸಿದ್ಧವಿಲ್ಲ.

ಈ ನೀತಿಯಿಂದ ಏನಾದೀತು?

"ಪಂಡಿತರಾಗಬೇಡಿ" ಚಳುವಳಿಯನ್ನು ಪಂಡಿತರೇ ಆರಂಭಿಸಬಹುದು.

ಕನ್ನಡವನ್ನು ಕೇಳುವವರೇ ಕರ್ನಾಟಕದಲ್ಲಿ ಇಲ್ಲವೆಂದಾದ ಮೇಲೆ ಕರ್ನಾಟಕ ಯಾರೇ ಮೈಸೂರನ್ನು ಯಾರು ಕೇಳುತ್ತಾರೆ? ಏಕೆ ಕೇಳುತ್ತಾರೆ?

ಹಿಂದಿಯಲ್ಲಿ ನಿರ್ದಿಷ್ಟ ಪರೀಕ್ಷೆ ಪಾಸು ಮಾಡಿದ ನೌಕರರಿಗೆ ಭಡ್ತಿ—ಬಹುಮಾನ ನೀಡುವ ಕನ್ನಡ ಸರಕಾರ—

ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವ ತಹತಹದಲ್ಲಿರುವ ಸರಕಾರ—

ಕನ್ನಡದ ಸ್ಥಾನ—ಮಾನವೇರಿಸಬಯಸುವ ಸರಕಾರ—

ಪಂಡಿತ ವರ್ಗವನ್ನು ದ್ವಿತೀಯ ವರ್ಗವೆಂದು ಪರಿಗಣಿಸುವುದು ಕನ್ನಡದ ನಿಮ್ಮ ದಿಗಲ್ಲ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
126 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{1}{4}\%$ ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ $3\frac{1}{2}\%$ ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1

ಸ್ವಾಭಿಮಾನಶೂನ್ಯ ಸ್ವಾರ್ಥಲಾಲಸಿ ಸ್ವತಂತ್ರ ಪಾರ್ಟಿ

ಅದೆಂತಾದರೂ ಕಾಂಗ್ರೆಸ್ಸಿನ ಬಲನ್ನ ಕೆಡಬೇಕೆಂದು ಚಕ್ರವರ್ತಿ ರಾಜಗೋಪಾಲಾಚಾರ್ಯರು ಸ್ವತಂತ್ರಪಾರ್ಟಿಯನ್ನು ಆರಂಭಿಸಿ ಅದನ್ನು ರಾಜಕೀಯ ಬಾನಲ್ಲಿ ತಾರೆಯನ್ನಾಗಿ ಮಿನುಗಿಸಿದರು ಮತ್ತು ಕಾಂಗ್ರೆಸ್‌ನ ಸ್ಥಾನವನ್ನು ಪಡೆಯಲು ಕಾಂಗ್ರೆಸ್ಸೇತರ ಪಕ್ಷಗಳೊಂದಿಗೆ ಮೈತ್ರಿ ಬೆಳೆಸಿಕೊಂಡರು. ಈ ತಂತ್ರದಲ್ಲಿ ತಾವೇ ಗಟ್ಟಿಗಾರರೆಂದು ಆಚಾರ್ಯರು ಭಾವಿಸಿಕೊಂಡಿದ್ದರು. ಅವರಿಗೆ ನೀರು ಕುಡಿಸಲು ತಮಿಳ್ನಾಡಿನಲ್ಲಿ ದ್ರಾವಿಡ ಮುನ್ನೇಟ್ರ ಕಳಗಂ ಮುಂದಕ್ಕೆ ಬಂದಿತು. ಅಧಿಕಾರ ಅಂಕುಶವನ್ನು ಪಡೆಯಲು ಅದ್ಯಾವ ವೇಷ ಹಾಕಲೂ ದ್ರಾ.ಮು.ಕ. ಹೇಸಲಿಲ್ಲ. ಸ್ಥಾನ ಸಿಗುವ ವರೆಗೆ ರಾಜಗೋಪಾಲಾಚಾರಿಯವರನ್ನು ಆಚಾರ್ಯರೆಂದು ಕರೆಯುತ್ತಿದ್ದ ದ್ರಾ.ಮು.ಕ. ಈಗ ಅವರನ್ನು ಪುನಃ ಹಾರುವ, ಮುದುಕ ಮುಂತಾದ ಶಬ್ದಗಳಿಂದ ಕರೆಯಲಾರಂಭಿಸಿದೆ. ಇವೆಲ್ಲವನ್ನು ಅವರಿಂದು ಸಹಿಸಿಕೊಳ್ಳಬೇಕಾಗಿದೆ. ಸಾಯುವಾಗ ತಂದ ಜಾತಿ ಕೆಟ್ಟುಕೊಂಡಾಗಿದೆ. ಅದು ಆದರ್ಶಕ್ಕಾಗಿ ಅಲ್ಲ; ಹಣ ತೀರಿಸಿಕೊಳ್ಳಲು. ಅದಕ್ಕೆ ಪ್ರಾಯಶ್ಚಿತ್ತ ಸುಲಭ ಸಾಧ್ಯವೇನು? ಆದುದರಿಂದ ಅಂದಿಗೆ ಅದೇ ಸುಖ, ಇಂದಿಗೆ ಇದೇ ಸುಖವೆಂದು ದ್ರಾ.ಮು.ಕ.ವನ್ನೇ ಅವರು ಹೊಗಳಲಾರಂಭಿಸಿದರು. ದ್ರಾ.ಮು.ಕ.ವು ಅವರಿಗೆ ಎಡೆಬಿಡದೆ ಪ್ರಹಾರಗಳನ್ನೀಯುತ್ತ ಬಂತು, ನಗರಸಭೆ ಚುನಾವಣೆ ರಾಜ್ಯ ಸಭಾ ಚುನಾವಣೆಗಳಲ್ಲಿ ವ್ಯಾಪಾರ ಮಾಡಿದ ದ್ರಾ.ಮು.ಕ. ಅದರ ವಿಧಾನ ಸಭಾಸ್ಥಾನಗಳನ್ನು ಕಿತ್ತುಕೊಂಡಿತು. ರಾಜ್ಯಸಭಾ ಚುನಾವಣೆಯಲ್ಲಿ ಸ್ವ.ಪಾರ್ಟಿಗೆ ದ್ರಾ.ಮು.ಕ. ನೀರು ಕುಡಿಸಿತು. ಆಗ ಆ ಪಕ್ಷದ ಕೆಲವರಿಗೆ ಬುದ್ಧಿ ಬರಲಾರಂಭವಾಯಿತು. ಆದರೆ ರಾಜಾಜಿಯವರ ವಿರುದ್ಧ ಮಾತಾಡಲು ಧೈರ್ಯವಿಲ್ಲ. ಹಾಗಾಗಿ ಕೆಲವರು ಆ ಪಕ್ಷದಿಂದ ಹೊರಬಂದರು. ಅವರೆಲ್ಲರನ್ನು ಸಂತೈಸಲು ರಾಜಾಜಿ ಪ್ರಯತ್ನಿಸಿದರು.

ದ್ರಾವಿಡ ಮುನ್ನೇಟ್ರ ಕಳಗಂ ಹಿಂದೂ ಧರ್ಮ ವಿರೋಧಿ, ಅದರಲ್ಲೂ ಹೇಳಿ ಕೇಳಿ ಬ್ರಾಹ್ಮಣ ವಿರೋಧಿ ಪಕ್ಷವಿದೆ. ಈ ಕೆಟ್ಟ ಹೆಸರನ್ನು ತಪ್ಪಿಸಿಕೊಳ್ಳಲಿಕ್ಕಾಗಿ ಚುನಾವಣೆಯ ಸಮಯ ಆಚಾರ್ಯರ ಆಧಾರ ಅವರಿಗೆ ಅಗತ್ಯವಿತ್ತು. ಇದೀಗ ಇಂದಿರಾ ಗಾಂಧಿಯವರ ಪದ್ದುಗೆಯ ಆಶ್ರಯ ಸಿಕ್ಕಿರುವಾಗ ಹಾರುವನ ಹಂಗೇಕೆ? ಇದ್ದರೂ ತಾವು ಹಿಂದೂ ಧರ್ಮ ವಿರೋಧಿಗಳಲ್ಲವೆನ್ನುತ್ತಿದ್ದಾರೆ. ದ್ರಾ.ಮು.ಕ.ದ ಧುರೀಣರು, ಅದರ ಅನುಯಾಯಿಗಳು ಸುಬ್ರಹ್ಮಣ್ಯನನ್ನು (ಮುರುಗನನ್ನು) ಪೂಜಿಸುತ್ತಾರೆ. ಅವರ ಪಾಲಿಗೆ ಸುಬ್ರಹ್ಮಣ್ಯನು ಮಾತ್ರ ದೇವರು, ಅಂದರೆ ತಮಿಳು ದೇವರು. (ಹಾಗಿದ್ದರೂ ಅಲ್ಲಾ ಹಾಗೂ ಕ್ರಿಸ್ತನ ಕುರಿತು ಅವರು ಹೀನಾಯವಾಗಿ ಮಾತಾಡುವುದಿಲ್ಲ.) ಮು ಅಂದರೆ ನವಿಲು, ಗ ಅಂದರೆ ಗಮಿಸುವದು, ಅರ್ಥಾತ್ ನವಿಲು ವಾಹನವಾಗಿರುವವನ ಮುರುಗ, ಸುಬ್ರಹ್ಮಣ್ಯ. ಈ ದೃಷ್ಟಿಯಿಂದಲೂ ಅದು ಸಂಸ್ಕೃತ ಶಬ್ದವಿದೆ. ಏನೇ ಇರಲಿ, ಮುರುಗನನ್ನು ನಂಬುವವರು ವಿಭೂತಿ ಹಚ್ಚಿಕೊಳ್ಳುತ್ತಾರೆ. ಈಗೀಗ ಚಲಚಿತ್ರ ನಟನಟಿಯರು ತಿರುಪತಿಗೆ ಹೋಗಿ ಬರುತ್ತಿದ್ದಾರೆ. ಮೆಲ್ಲಮೆಲ್ಲಗೆ ಹಿಂದೂ ಪೂಜಾಪದ್ಧತಿಯನ್ನು ದೈವನಂಬಿಕೆಯನ್ನು ಖಂಡಿಸುತ್ತಿದ್ದವರು, ಅಪಮಾನಗೊಳಿಸುತ್ತಿದ್ದವರು ತಾವೇನೂ ದೇವರಿಲ್ಲವೆನ್ನುವದಿಲ್ಲ, ಬ್ರಾಹ್ಮಣರು ಸಂಸ್ಕೃತ ಮಂತ್ರದಿಂದ ಪೂಜಿಸಬೇಕಾಗಿಲ್ಲ, ನಾವೇ ತಮಿಳಿನಲ್ಲಿ (ಇಂಗ್ಲೀಷಿನಲ್ಲಿ) ಪೂಜಿಸುತ್ತೇವೆನ್ನುವ ಮಟ್ಟಕ್ಕೆ ಬರುತ್ತಿರುವಾಗ [illegible] ಮುಖ್ಯಮಂತ್ರಿ, ಕರುಣಾನಿಧಿಯವರು ಅವರ ರಾಜಕೀಯ ತಂದೆಯ ಪ್ರತಿಮೆಯನ್ನು ಅನಾವರಣಗೊಳಿಸಿದರು. ಆ ಶಿಲೆಯ ಪೀಠದಲ್ಲಿ ದೇವರನ್ನು ನಂಬುವವರು ಮುಟ್ಠಾಳರು ಮುಂತಾದ [illegible] ಕೆತ್ತಲಾಗಿತ್ತು. ಕರುಣಾನಿಧಿಯವರು ಅನಾವರಣಗೊಳಿಸಿದ್ದು ಯಾವುದೆನ್ನುವ ಪ್ರಶ್ನೆ ಬಂತು. ದೇವಸ್ಥಾನಕ್ಕೆ ಸಂಬಂಧಪಟ್ಟ ಮಂತ್ರಿಗಳು ದೇವಸ್ಥಾನಗಳೊಳಗೆ ತಮಗಿಷ್ಟ ಬಂದಂತೆ ನಡೆದುಕೊಳ್ಳಲಾರಂಭಿಸಿದರು. ಬ್ರಾಹ್ಮಣೇತರರನ್ನು ಪೂಜಾರಿಗಳನ್ನಾಗಿಸುವ, ಗರ್ಭಗೃಹದೊಳಗೆ ಯಾರ ಬೇಕಾದರೂ ಹೋಗಬಹುದ. ಹಿಂದೂಗಳಲ್ಲದವರನ್ನು ಧರ್ಮದರ್ಶಿಗಳನ್ನಾಗಿ ನೇಮಿಸುವದು, ದೇವಸ್ಥಾನದೊಳಗೆ ಅಣ್ಣಾದೊರೈಯವರ ಭಾವಚಿತ್ರ ತೂಗಾಡಿಸುವದು....ಇಂತಹ ಪ್ರಗತಿಗೆ ಅವರು ಮುಂದಾದರು. ಧರ್ಮದ ಮೇಲೆ ನಂಬಿಕೆಯುಳ್ಳ, ತಮಿಳಿನಲ್ಲಿ ಮಹಾಭಾರತ ಬರೆದಿರುವ ಆಚಾರ್ಯರು ಇವನ್ನು ಖಂಡಿಸಲೇ ಇಲ್ಲ. ಈ ಕುರಿತು ಅವರು ಏನನ್ನೂ ಆಡುವದಿಲ್ಲ. ಅವರ ಅನುಯಾಯಿಗಳು ಅದನ್ನು ಟೀಕಿಸಲಾರಂಭಿಸಿದರು. ಇಷ್ಟಾಗುವಾಗ ಇನ್ನೊಂದ ಘಟನೆ ಸಂಭವಿಸಿತು.

ಚೆನ್ನೈ (ಮದ್ರಾಸು) ಮಹಾನಗರದಲ್ಲಿ ಮುಖ್ಯ ಸ್ಥಳವಾದ ತ್ಯಾಗರಾಯ ನಗರದಲ್ಲಿ ಪೋಲೀಸ್ ಸ್ಟೇಷನ್, ಲೈನಿನ ಬಳಿ ಇದ್ದಕ್ಕಿದ್ದಂತೆ ರಾತ್ರಿ ವಿನಾಯಕನ ವಿಗ್ರಹ ಬೆಳಕ್ಕೆ ಬಂದಿತು. ಈ ವಿಷಯವನ್ನು ಜನರಿಗೆ ತಿಳಿಯಪಡಿಸಿದವರು ಪೋಲೀಸರೇ, ಅವರದನ್ನು ಕಂಡರಂತೆ. ಶಬ್ದ ಕೇಳಿ ಇನ್ನೂ ಕೆಲವರು ಬಂದು ನೋಡಿದರು. ದೈವ ನಂಬಿಕೆ ಇಲ್ಲವೆನ್ನುತ್ತಿದ್ದ ಸ್ಥಳೀಯ ದ್ರಾ. ಮು. ಕ. ಮುಂದಾಳುಗಳು ಮುಂದಕ್ಕೆ ಬಂದು ನಿಂತರು. ಸುದ್ದಿ ಹಬ್ಬಿತು. ಭಕ್ತಸಾಗರವೇ ಹರಿದುಬಂತು, ಪೋಲೀಸರು ಬಂದೋಬಸ್ತು ಹಾಕಿ ಭಕ್ತಕೋಟಿಗೆ ಯೋಗ್ಯ ಏರ್ಪಾಡ ಮಾಡಿಕೊಟ್ಟರು. ಕಾಂಚಿ ಕಾಮಕೋಟಿ ಪೀಠಾಧೀಶ ಶ್ರೀ ಶ್ರೀ ಶಂಕರಾಚಾರ್ಯರು ಅದಕ್ಕೆ ಪಕ್ಕದಲ್ಲಿರುವ ದೇವಸ್ಥಾನದ ಧರ್ಮದರ್ಶಿಗಳನ್ನು ಕರೆಸಿ ದೇವಸ್ಥಾನ ಕಟ್ಟುವ ಏರ್ಪಾಡಿಗೆ ತಿಳಿಸಿದರು. ಆಡಳಿತ ದ್ರಾ. ಮು. ಕ.ದವರಿಗೆ ಇದನ್ನು ಸಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅವರು ಒಡನೆ ಕಥೆ ಕಟ್ಟಲಾರಂಭಿಸಿದರು. ಸಮೀಪದ ಅಡಯಾರಿನಲ್ಲಿ ಒಂದು ವಿಘ್ನೇಶ್ವರನ ವಿಗ್ರಹ ಕಳವಾಗಿದ್ದು ಇದನ್ನೇ ಹೋಲುತ್ತದೆಂಬ ಗುಲ್ಲೆಬ್ಬಿಸಿದರು. ಸಂಬಂಧಪಟ್ಟವರ್ಯಾರೂ ಮುಂದಕ್ಕೆ ಬಂದು ಅದನ್ನು ಗುರುತಿಸಿ, ತಮ್ಮ ವಶಕ್ಕೊಪ್ಪಿಸಬೇಕೆಂದು ಕೇಳಿಕೊಳ್ಳಲಿಲ್ಲ. ಈ ಸುದ್ದಿ ಹಬ್ಬಿಸಿದವರು ಸಾಧಾರಣ ವ್ಯಕ್ತಿಗಳಲ್ಲ; ಪ್ರಚಲಿತ ಮುಖ್ಯಮಂತ್ರಿ ಕರುಣಾನಿಧಿಯವರು—ಆದರಲ್ಲೂ ಪೋಲೀಸ್ ವಿಚಾರಣೆ ನಡೆಯುತ್ತಿರುವಾಗಲೇ, ಆ ಸ್ಥಳದ ಪೋಲೀಸ್ ಅಧಿಕಾರಿಯೊಬ್ಬ ದೂರದ ಊರಿಗೆ ವರ್ಗಾಯಿಸಲಾಯಿತು. ತಾವು ಹೋದೆಡೆಗಳಲ್ಲಿ ಅದು ಕೃತಕ ಪವಾಡವೆಂದೂ ಅದನ್ನು ಯಾರೋ ತಂದಿಟ್ಟಿದ್ದಾರೆಂದು ಕರುಣಾನಿಧಿಯವರು ಪ್ರಚಾರ ನಡೆಸಿದರು. ಹೀಗೆ ಒಂದು ತಿಂಗಳಾಗುತ್ತ ಬಂತು. ಮಹಾನವಮಿಯ ಸಮಯ, ಮರುದಿನ ವಿಜಯದಶಮಿ, ಅಂದು ವರ್ತಮಾನ ಪತ್ರಿಕೆಗಳಿಲ್ಲ. ಹೆಚ್ಚಾಗಿ ಕಾರ್ಯಾಲಯ, ಕಾರ್ಖಾನೆಗಳಿಗೆ ರಜೆ ಇರುತ್ತದೆ. ಈ ಸಂದರ್ಭವನ್ನು ಕರುಣಾನಿಧಿ ಉಪಯೋಗಿಸಿಕೊಂಡರು. ಮಹಾನವಮಿಯಂದು ನಡುರಾತ್ರಿ ಪತ್ರಿಕಾ ಪ್ರತಿನಿಧಿಗಳನ್ನು ಒಂದೆಡೆ ಕರೆದು, ಆ ವಿಗ್ರಹವನ್ನು ಓರ್ವ ಪೋಲೀಸ್ ಕಾನ್‌ಸ್ಟೇಬಲ್ ಇಟ್ಟಿದ್ದೆಂದೂ ಅದನ್ನಲ್ಲಿಂದ ಕಿತ್ತು ಅವನಿಗೊಪ್ಪಿಸಲಾಗಿದೆಯೆಂದೂ ತಿಳಿಸಿದರು. ಆ ಸ್ಥಳವನ್ನು ಪೋಲೀಸರ ಸರ್ಪಗಾವಲಿಗೆ ಒಪ್ಪಿಸಲಾಯಿತು. ಅದುವರೆಗೆ ಹಿಂದೂ ರಿಲೀಜಿಯಸ್ ಎಂಡೋಮೆಂಟಿನವರು ಅದನ್ನು ನೋಡಿಕೊಳ್ಳುತ್ತಿದ್ದರು. ಹೇರಳವಾಗಿ ಕಾಣಿಕೆ ಶೇಖರವಾಗಿತ್ತು. ಇದೆಲ್ಲಾ ಒಂದು ರಾತ್ರಿಯಲ್ಲಿ ಇತಿಶ್ರೀ ಕಂಡಿತು.

ಭಾರತೀಯ ಜನಸಂಘ, ಸಂಸ್ಥಾ ಕಾಂಗ್ರೆಸ್ಸಿನಂತಹ ರಾಜಕೀಯ ಪಕ್ಷಗಳಿಗೆ ನಿಜವಾಗಿ ಅದೊಂದ ವಿನಾಯಕನಿತ್ತ ಸುವರ್ಣ ಸಂಧಿಯೆನ್ನಬೇಕು. ಆದರೆ ಸ್ಥಳೀಯ ಜನಸಂಘ ಹಾಗೂ ಸಂಸ್ಥಾ ಕಾಂಗ್ರೆಸ್ಸ ಮೆರವಣಿಗೆ, ಪ್ರತಿಭಟನ ಸಭೆಗಳಿಂತ ಮುಂದಕ್ಕೆ ಹೋಗುವದಿಲ್ಲ. ಆದೂ ನಾಲ್ಕಾರು ದಿನ ಕಳೆದ ಮೇಲೆ ಇನ್ನು ಚುನಾವಣೆಯ ಸಮಯ ಈ ವಿಷಯವನ್ನು ಅವರು ಪ್ರಚಾರಕ್ಕೆ ಉಪಯೋಗಿಸಿಕೊಳ್ಳಬಹುದಾದರೂ, ಭಕ್ತವೃಂದಕ್ಕೆ ವಿನಾಯಕನಿಲ್ಲ. ದೇವಸ್ಥಾನಗಳಿಗೆ ಸಂಬಂಧಪಟ್ಟವರ್ಯಾರೂ ಅದನ್ನು ಖಂಡಿಸಲು ಮುಂದಕ್ಕೆ ಬರಲಿಲ್ಲ. ಇದಕ್ಕೆ ಕಾರಣವಿಲ್ಲದಿಲ್ಲ.

ಜನಸಂಘ ಹಾಗೂ ಸಂಸ್ಥಾ ಕಾಂಗ್ರೆಸ್ಸ ಮತ್ತು ತಮಿಳು ಅರಸುಕಚ್ಚಿ ಸ್ವರ ಎತ್ತಲಾರಂಭಿಸಿದೊಡನೆ ಅವರ ಶಕ್ತಿಗೆಯನ್ನು ಅದುಮುವ ರೀತಿಯಲ್ಲಿ ಸ್ವತಂತ್ರಾಚಾರ್ಯರು ಪ್ರಚಾರ ನಡೆಸಿದರು. ಪೋಲೀಸ್ ವಿಚಾರಣೆ ನಡೆದು ವಿಷಯ ಸ್ಪಷ್ಟವಾಗಿರುವದರಿಂದ ಯಾರೂ ಗುಲ್ಲೆಬ್ಬಿಸಬಾರದು, ಗುಲ್ಲೆಬ್ಬಿಸುವದು ಹಿಂದೂ ಧರ್ಮಕ್ಕೆ ಒಳ್ಳೆಯದಲ್ಲ....ಇತ್ಯಾದಿ. ಇದು ಆಚಾರ್ಯರ ಹಿತೋಪದೇಶ ಹಾಗೂ ಮಾರ್ಗದರ್ಶನ. ಇದಕ್ಕೆ ಕೆಲವಾರು ದಿನಗಳ ಹಿಂದೆ, ಧಾರ್ಮಿಕ ವಿಷಯಗಳಲ್ಲಿ ಸರಕಾರ ತಲೆ ಹಾಕಬಾರದೆಂದ ಸ್ವತಂತ್ರ ಪಾರ್ಟಿಯವರು ದ್ರಾ.ಮು.ಕಕ್ಕೆ ಎಚ್ಚರಿಕೆಯನ್ನೀಡಿತ್ತು. ಮತ್ತೇಕೆ ರಾಜಾಜಿಯವರು ಈ ರೀತಿ ಹೇಳಿದರು? ಅದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ, ದ್ರಾ.ಮು.ಕ.ವು ಆದಾಗಲೇ ಸ್ವತಂತ್ರ ಪಾರ್ಟಿಗೆ ಸೀಟಚೀಟಿ ಕೊಡದವಾಗಿ ಬೆದರಿಕೆ ಹಾಕಿತ್ತು. ಶಕ್ತಿಶಾಲಿ ಹಿಡಿಯೂ ಸಿದ್ಧರಿದ್ದ ರಾಜಾಜಿ ದ್ರಾ.ಮು.ಕ.ವನ್ನು ಬಿಡಬಾರದು, ಅದನ್ನು ಸಂತೋಷಗೊಳಿಸಬೇಕೆಂದು ಆ ರೀತಿ ಹೇಳಿಕೆಯನ್ನಿತ್ತರು.

ಇನ್ನೊಂದು ಕಾರಣ ಅವರ ಅಭ್ಯಾಸಬಲ, ಅದುವೇ ಮಹಮ್ಮದೀಯ ಮತದತ್ತ ಮಮತೆ. ತ್ಯಾಗರಾಯನಗರ ಹಣವಂತರೂ, ಬ್ರಾಹ್ಮಣರೂ ಇರುವ ಸ್ಥಳ

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303, 2 72304 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಅಲ್ಲಿ ಈಗೀಗ ಕೆಲವು ಮಹಮ್ಮದೀಯರು (ಬರ್ಮಾದಿಂದ ಬಂದವರೆಂದು ಹೇಳಿಕೊಳ್ಳುತ್ತಿರುವವರು) ಬಳೆ ಮುಂತಾದ ಸ್ತ್ರೀಯರಿಗೆ ಬೇಕಾಗುವ ವಸ್ತುಗಳ ಅಂಗಡಿಗಳನ್ನು ತೆರೆದಿರುವರು. ಅವರು ಒಂದು ದೇವಸ್ಥಾನದ ಬಳಿ ನಮಾಜಿಗಾಗಿ ಮಸೀದಿ ಕಟ್ಟಲು ಪ್ರಯತ್ನಿಸಿದರು. ವಿಷಯ ತಿಳಿದೊಡನೆ ಸ್ಥಳೀಯ ಜನಕ್ಕೆ ಕೂಡದೆಂದು ಕೊರಳೆತ್ತಿತು. ದೊರೆಯ ವರೆಗೆ ದೂರಿನಂತೆ ಮುಖ್ಯಮಂತ್ರಿಯ ಬಳಿ ದೂರು ಹೋಯಿತು. ಅಲ್ಲಿ ಮಸೀದಿ ಕಟ್ಟಿದಲ್ಲಿ ಮರುದಿನದಿಂದ ಆ ರಸ್ತೆಯಲ್ಲಿ ಪಕ್ಕದ ಶಿವ-ವಿಷ್ಣು ದೇವಸ್ಥಾನದಿಂದ ಉತ್ಸವ-ಮೆರವಣಿಗೆ ವಾದ್ಯಘೋಷ ಸಹಿತ ಹೋಗುವಂತಿಲ್ಲ. ಜಗಳವನ್ನು ಸುಲಭವಾಗಿ ಬಗೆಹರಿಸುವದಕ್ಕೆಂದು ಅದಕ್ಕಿಂತ ಸ್ವಲ್ಪ ದೂರದಲ್ಲಿರುವ ಪೋಲೀಸ್ ಲೈನಿನಲ್ಲಿರುವ ಸರಕಾರೀ ಸ್ಥಳವನ್ನು ಮಸೀದಿಗಾಗಿ ಬಿಟ್ಟುಕೊಡುವುದಾಗಿಯೂ ವಿವಾದಕ್ಕೆಡೆಕೊಟ್ಟಿರುವ ಸ್ಥಳದಲ್ಲಿ ಮಸೀದಿ ಕಟ್ಟಬಾರದೆಂದು ಹೇಳಿದರು— ಕರುಣಾನಿಧಿ. ಇತ್ತಂಡದವರೂ ಒಪ್ಪಿಕೊಂಡರು. ಸದ್ಯ, ದೇವಸ್ಥಾನದ ಶಾಂತಿ ಸಮೀಪದಲ್ಲಿಲ್ಲವೆಂಬುದು ಹಿಂದೂಗಳಿಗೆ ತೃಪ್ತಿ. ಮಸೀದಿಗೆ ಸ್ಥಳ ಸಿಕ್ಕಿತೆಂದು ಮಹಮ್ಮದೀಯರಿಗೆ ಪರಮಾನಂದ. ಮಸೀದಿ ಕಟ್ಟಲು ಸರಕಾರ ಬಿಟ್ಟುಕೊಟ್ಟ ಸ್ಥಳದ ಸಮೀಪವೇ ವಿಘ್ನೇಶ್ವರ ಕಂಡುಬಂದದ್ದು. ಮುಸ್ಲಿಂ ತುಷ್ಟೀಕರಣಕ್ಕಾಗಿ ಸಹಸ್ರಾರು ಜನರಿಂದ ಪೂಜಿಸಲ್ಪಟ್ಟ ಮೂರ್ತಿಯನ್ನು, ರಸ್ತೆಯ ಬದಿಯ ಕಲ್ಲು ಕಿತ್ತು ಹಾಕುವಂತೆ ದ್ರಾ.ಮು.ಕ. ಸರಕಾರ ತೆಗೆದು ಹಾಕಿದಾಗ ಅದನ್ನೇ ಸರಿಯೆಂದು ಬಿಟ್ಟರು ರಾಜಗೋಪಾಲಾಚಾರಿಯವರು.

ಇನ್ನು ಈ ಮಂದಿಯನ್ನು ಹೇಗೆ ಬೇಕಾದರೂ ಕುಣಿಸಬಹುದೆಂದು ದ್ರಾ.ಮು.ಕ.ಕ್ಕೆ ಧೈರ್ಯ ಬಂತು. ಅದು ಇತ್ತೀಚೆಗೊಂದು ಪ್ರಕಟಣೆಯನ್ನು ಪ್ರಕಟಿಸಿರುತ್ತದೆ. ಅದು ಅಂಗಡಿ ವ್ಯಾಪಾರಿಗಳಿಗೆ ಸಂಬಂಧಪಟ್ಟದ್ದಿದೆ. ತಮಿಳ್ನಾಡಿನಾದ್ಯಂತ ನವಂಬರ ಇಪ್ಪತ್ತೊಂದರಿಂದ ಜನವರಿ ದಿನಾಂಕ ಒಂದರ ವರೆಗೆ ಐವತ್ತೈದು ದಿನಗಳ ಕಾಲ ಅಂಗಡಿ ಕಾನೂನನ್ನು ಸ್ಥಗಿತಗೊಳಿಸಲಾಗಿದೆ. ರಮಜಾನ್, ಕ್ರಿಸ್‌ಮಸ್ ಹಾಗೂ ಪೊಂಗಲ್ ಹಬ್ಬಗಳಿಗಾಗಿ ಈ ರಿಯಾಯಿತಿಯೆಂದೂ ಪ್ರಕಟಣೆ ತಿಳಿಸಿರುತ್ತದೆ. ಪೊಂಗಲ್ (ಮಕರ ಸಂಕ್ರಾಂತಿ) ಹಬ್ಬ ಬರುವದು ಜನವರಿ ನಡುವಿನಲ್ಲಿ. ಅದಕ್ಕೆ ಜನವರಿ ಒಂದರ ವರೆಗೆ ಅಂಗಡಿ ನಿಯಮಗಳಲ್ಲಿ ರಿಯಾಯಿತಿ! ಎಂತಹ ಪ್ರಕಟಣೆ, ಸ್ವತಂತ್ರಪಾರ್ಟಿ ಅದಕ್ಕೂ ತುಟಿ ಎರಡು ಮಾಡಲಿಲ್ಲ. ಅಲ್ಲದೆ ಈ ಹಿಂದೆ ನಗರ ಸಭೆಯವರು ರಸ್ತೆ ಬದಿಗಳ ಗುಡಿಗಳನ್ನು ತೆಗೆದು ಹಾಕಿದಾಗಲೂ ಸ್ವತಂತ್ರ ಪಾರ್ಟಿ ಸುಮ್ಮನಿದ್ದುದರಿಂದ ದ್ರಾ.ಮು.ಕ.ಕ್ಕೆ ಬಹಳ ಧೈರ್ಯ ಬಂತು. ಅದು ಸ್ವತಂತ್ರ ಪಾರ್ಟಿಯನ್ನು ಹೆದರಿಸಲಾರಂಭಿಸಿತು. ತಾನು ಹೇಳಿದ ಹಾಗೆ ಕೇಳಬೇಕೆಂದೂ, ಇಲ್ಲದಿದ್ದಲ್ಲಿ ಚುನಾವಣಾ ಒಪ್ಪಂದಕ್ಕೆ ತಿಲಾಂಜಲಿ ಕೊಡುವದಾಗಿಯೂ ಬೆದರಿಸಲಾರಂಭಿಸಿತು.

ಸ್ವತಂತ್ರ ಪಾರ್ಟಿ ಸ್ವಾಭಿಮಾನಶೂನ್ಯ ಸ್ವಾರ್ಥಲಾಲಸಿಗಳ ಪಕ್ಷವೆಂಬುದನ್ನು ದ್ರಾ.ಮು.ಕ. ಖಚಿತಪಡಿಸಿಕೊಂಡಿತು.

— ಶ್ರೀ ಶಿವಶಂಕರ

ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣಮಹೋತ್ಸವ ಮತ್ತು ೪೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಮನವಿ

ಕನ್ನಡ ಸಾಹಿತ್ಯ ಪರಿಷತ್ತು ೧೯೧೫ರಲ್ಲಿ ಸ್ಥಾಪಿತವಾಗಿ ಕನ್ನಡ ಭಾಷೆ, ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಗಳ ಅಭಿವೃದ್ಧಿಗಾಗಿ ಶಕ್ತಿಮೀರಿ ದುಡಿದು ಕರ್ನಾಟಕದ ಏಕೈಕ ಪ್ರಾತಿನಿಧಿಕ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದಿದೆ. ಇದರ ಸುವರ್ಣ ಮಹೋತ್ಸವ ಮತ್ತು ೪೭ನೆಯ ಕನ್ನಡ ಸಾಹಿತ್ಯ ಸಮ್ಮೇಳನಗಳು ಇದೇ ಡಿಸೆಂಬರ್ ೨೫ರಿಂದ ೨೯ರ ವರೆಗೆ ಬೆಂಗಳೂರು ನಗರದ ಕೋಟೆ ಪ್ರೌಢ ಶಾಲೆಯ ಮೈದಾನದಲ್ಲಿ ವಿಜೃಂಭಣೆಯಿಂದ ನಡೆಯುವುವು. ದಿನಾಂಕ ೨೫ರಂದು ಗ್ರಂಥ ಪ್ರದರ್ಶನ, ಪತ್ರಿಕಾ ಪ್ರದರ್ಶನ, ಶಿಶು ಸಾಹಿತ್ಯ ಪ್ರದರ್ಶನ, ಚಿತ್ರಕಲಾ ಪ್ರದರ್ಶನ, ಶಾಸನಗಳ ಪ್ರದರ್ಶನ ಇತ್ಯಾದಿ ಪ್ರದರ್ಶನಗಳೂ, ೨೬ರಂದು ಸುವರ್ಣ ಮಹೋತ್ಸವ ಕಟ್ಟಡದ ಶಂಕುಸ್ಥಾಪನೆ, ಕನ್ನಡ-ಕನ್ನಡ ನಿಘಂಟು ಪ್ರಥಮ ಸಂಪುಟ, ಪರಿಷತ್ತಿನ ಪ್ರಕಟಣೆಗಳು ಮತ್ತು ಸ್ಮರಣ ಸಂಚಿಕೆ ಇವುಗಳ ಬಿಡುಗಡೆ, "ಅಂತರ ಭಾರತಿ" ಕಾರ್ಯಕ್ರಮ ಮತ್ತು ಸನ್ಮಾನ ಇತ್ಯಾದಿ ಕಾರ್ಯಕ್ರಮಗಳೂ ನಡೆಯುವುವು. ಭಾರತದ ಉಪರಾಷ್ಟ್ರಪತಿ ಶ್ರೀ ಜಿ. ಎಸ್. ಪಾಠಕ್ ಅವರು ಸುವರ್ಣ ಮಹೋತ್ಸವದ ಉದ್ಘಾಟನೆ ಮಾಡುವರು. ೨೭ರಂದು ಸಾಹಿತ್ಯ ಸಮ್ಮೇಳನಾಧ್ಯಕ್ಷರ ಮೆರವಣಿಗೆ, ಸಮ್ಮೇಳನದ ಉದ್ಘಾಟನೆ, ಕವಿ ಸಮ್ಮೇಳನ ಕಾರ್ಯಕ್ರಮಗಳೂ, ೨೮ರಂದು ಸಾಹಿತ್ಯಗೋಷ್ಠಿ, ಪತ್ರಿಕಾಗೋಷ್ಠಿ, ಮಹಿಳಾಗೋಷ್ಠಿ ಇತ್ಯಾದಿ ಗೋಷ್ಠಿ ಕಾರ್ಯಕ್ರಮಗಳೂ, ೨೯ರಂದು ಜಿಲ್ಲಾ ಸಮಿತಿ ಸದಸ್ಯರ ಮತ್ತು ಹೊರನಾಡ ಕನ್ನಡಿಗರ ಮತ್ತು ಕನ್ನಡ ಸಂಘ ಸಂಸ್ಥೆಗಳ ಸಮ್ಮೇಳನ, ನಿರ್ಣಯಗಳ ಅಂಗೀಕಾರ, ಸಮಾರೋಪ ಸಮಾರಂಭ ಇತ್ಯಾದಿ ಕಾರ್ಯಕ್ರಮಗಳೂ ನಡೆಯುವುವು. ಪ್ರತಿದಿನ ಸಂಜೆ ಮನರಂಜನೆ ಕಾರ್ಯಕ್ರಮಗಳೂ ಇರುವುವು. ಐದು ದಿವಸಗಳ ಈ ಕಾರ್ಯಕ್ರಮಗಳು ಅತಿ ಮಹತ್ವದ್ದಾಗಿಯೂ, ಕನ್ನಡ ನಾಡು ನುಡಿಗೆ ಸಹಾಯಕವಾಗಿಯೂ, ಆಕರ್ಷಣೀಯವಾಗಿಯೂ ಇರುವುವು.

ಹೊರಗಡೆಯಿಂದ ಬರುವ ಆಹ್ವಾನಿತರಿಗೆ ಮತ್ತು ಪ್ರತಿನಿಧಿಗಳಿಗೆ ಊಟ ವಸತಿಗಳ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಈ ಎಲ್ಲ ಏರ್ಪಾಟುಗಳನ್ನು ಸುವ್ಯವಸ್ಥೆಯಿಂದ ನಡೆಸಲು ಬೆಂಗಳೂರು ನಗರದಲ್ಲಿ ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿದೆ. ವಿದ್ಯಾ ಸಚಿವರಾದ ಶ್ರೀ ಕೆ. ವಿ. ಶಂಕರಗೌಡ ಅವರು ಅದರ ಅಧ್ಯಕ್ಷರಾಗಿದ್ದಾರೆ.

೧೦೦ ರೂ. ಕೊಡುವವರನ್ನು ಸ್ವಾಗತ ಸಮಿತಿಯ ಸದಸ್ಯರೆಂದು ಪರಿಗಣಿಸಲಾಗುವುದು. ಪರಸ್ಥಳದಿಂದ ಬರುವ ಸ್ವಾಗತ ಸಮಿತಿ ಸದಸ್ಯರಿಗೆ ಉಚಿತವಾಗಿ ಊಟ, ವಸತಿ ಒದಗಿಸಲಾಗುವುದು.

೫ ರೂ. ಕೊಡುವವರನ್ನು ಸಾಹಿತ್ಯ ಸಮ್ಮೇಳನದ ಪ್ರತಿನಿಧಿಗಳೆಂದು ಪರಿಗಣಿಸಲಾಗುವುದು. ಇವರು ಎಲ್ಲ ಸಭೆಗಳಲ್ಲಿ ಭಾಗವಹಿಸಬಹುದು. ಪರಸ್ಥಳದಿಂದ ಬರುವ ಪ್ರತಿನಿಧಿಗಳು ಮಾತ್ರ ಊಟ ವಸತಿ ಬೇಕಾದಲ್ಲಿ ಪ್ರತಿನಿಧಿ ಶುಲ್ಕ ೫ ರೂ.ಗಳ ಜೊತೆಗೆ ೧೫ ರೂ.ಗಳನ್ನು ಹೆಚ್ಚಿಗೆ ಕೊಡಬೇಕಾಗುವುದು.

ಸಮ್ಮೇಳನಕ್ಕೆ ೨೫೦ ಕಿ.ಮೀ.ಗೆ ಮೀರಿದ ದೂರದಿಂದ ಬರುವ ಎಲ್ಲರಿಗೂ ಹೋಗಿಬರುವ ಎರಡು ಪ್ರಯಾಣಕ್ಕೆ ಒಂದೇ ಭಾಡೆ ಕೊಡುವ ರಿಯಾಯಿತಿಯನ್ನು ರೈಲ್ವೆ ಇಲಾಖೆಯವರು ಮಂಜೂರ ಮಾಡಿದ್ದಾರೆ.

ಪ್ರತಿನಿಧಿಗಳಿಗೆ ಇತರ ಸೂಚನೆಗಳು

೧. ಬೆಂಗಳೂರು ನಗರಕ್ಕೆ ರೈಲು ಮೂಲಕ ಅಥವಾ ಬಸ್ಸು ಮೂಲಕ ಬರುವ ಪ್ರತಿನಿಧಿಗಳನ್ನು ಸ್ವಾಗತಿಸಿ ಅವರ ಬಿಡಾರಗಳಿಗೆ ಕರೆದುಕೊಂಡು ಬರಲು ಬೆಂಗಳೂರ ರೈಲ್ವೆ ನಿಲ್ದಾಣದಲ್ಲಿ ಮತ್ತು ಬೆಂಗಳೂರ ಸುಭಾಷ್ ನಗರದಲ್ಲಿರುವ ಸರಕಾರಿ ಬಸ್ ನಿಲ್ದಾಣದಲ್ಲಿ ಸ್ವಾಗತ ಸಮಿತಿ ಪರವಾಗಿ ಸ್ವಯಂಸೇವಕರು ಕಾದಿರುತ್ತಾರೆ.

೨. ಸಮ್ಮೇಳನಕ್ಕೆ ಬರುವ ಪ್ರತಿನಿಧಿಗಳು ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿರುವ ಸ್ವಾಗತ ಸಮಿತಿ ಕಚೇರಿಗೆ ಮುಂಚಿತವಾಗಿ ಭೇಟಿಕೊಟ್ಟು ತಾವು ಪ್ರತಿನಿಧಿಗಳಾಗಿರುವ ಬಗ್ಗೆ ದಾಖಲೆ ತೋರಿಸಿ ಬ್ಯಾಡ್ಜ್ ಪಡೆಯತಕ್ಕದ್ದು.

೩. ಸ್ವಾಗತಸಮಿತಿ ಸದಸ್ಯರಿಗೆ ಮತ್ತು ಪ್ರತಿನಿಧಿ ಶುಲ್ಕ ೫ ರೂ. ಜೊತೆಗೆ ಊಟ ವಸತಿಗೆಂದು ೧೫ ರೂ. ಹೆಚ್ಚಿಗೆ ಕೊಟ್ಟಿರುವವರಿಗೆ ೨೫ನೇ ತಾರೀಖಿನಿಂದ ೨೯ನೇ ತಾರೀಖು ಪೂರ್ತಿ ವಸತಿ ಸೌಕರ್ಯವನ್ನೂ, ೨೬ರ ಬೆಳಿಗ್ಗೆಯಿಂದ ೨೯ರ ರಾತ್ರಿವರೆಗೆ ಊಟ ಮತ್ತು ಫಲಾಹಾರವನ್ನು ಒದಗಿಸಲಾಗುವುದು.

೪. ಮಹಿಳಾ ಪ್ರತಿನಿಧಿಗಳಿಗೆ ಪ್ರತ್ಯೇಕ ವಸತಿ ಸೌಲಭ್ಯ ಒದಗಿಸಲಾಗಿದೆ.

೫. ಡಿಸೆಂಬರ್ ತಿಂಗಳಿನಲ್ಲಿ ಬೆಂಗಳೂರು ನಗರದಲ್ಲಿ ಕೊರೆಯುವ ಚಳಿಯಿರುವುದರಿಂದ ಪ್ರತಿನಿಧಿಗಳು ಬರುವಾಗ ತಮ್ಮ ಸಂಗಡ ಹಾಸಲು, ಹೊದೆಯಲು ಬೆಚ್ಚನೆಯ ಬಟ್ಟೆಗಳನ್ನು ತರಬೇಕು.

೬. ಸುವರ್ಣಮಹೋತ್ಸವ ಮತ್ತು ಸಮ್ಮೇಳನದಲ್ಲಿ ಭಾಗವಹಿಸುವ ಉಪಾಧ್ಯಾಯರುಗಳಿಗೆ ದಿನಾಂಕ ೨೫ರಿಂದ ೨೯ರ ವರೆಗೆ ವಿಶೇಷ ರಜಾ ಸೌಲಭ್ಯವನ್ನು (ಓ. ಓ. ಡಿ.) ಸರ್ಕಾರ ಮಂಜೂರು ಮಾಡಿದೆ. ಅದರ ಪ್ರತಿಯನ್ನು ಸಮ್ಮೇಳನ ಕಾಲಕ್ಕೆ ಪ್ರತಿನಿಧಿಗಳಾಗಿ ಬರುವ ಉಪಾಧ್ಯಾಯರಿಗೆ ಕೊಡಲಾಗುವುದು. ಇದೇ ಸೌಲಭ್ಯವನ್ನು ಕಾಲೇಜುಗಳಲ್ಲಿರುವ ಅಧ್ಯಾಪಕರುಗಳಿಗೂ, ಇತರೆ ಸರ್ಕಾರಿ ನೌಕರರಿಗೂ ನೀಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸಲಾಗಿದೆ.

ಈ ಎಲ್ಲ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಮಹಾಜನರು ಅಧಿಕ ಸಂಖ್ಯೆಯಲ್ಲಿ ಸ್ವಾಗತ ಸಮಿತಿಯ ಸದಸ್ಯರಾಗುವುದರ ಮೂಲಕವೂ ಮತ್ತು ಪ್ರತಿನಿಧಿಗಳಾಗುವುದರ ಮೂಲಕವೂ ಸುವರ್ಣಮಹೋತ್ಸವ ಮತ್ತು ೪೭ನೆಯ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸಿ ಕನ್ನಡ ನಾಡಿನ ಘನತೆಗೆ ಗೌರವ ತರುವ ಈ ಸಮಾರಂಭಗಳನ್ನು ಯಶಸ್ವಿಯಾಗಿ ನಡೆಸಲು ಉದಾರತೆಯಿಂದ ಸಹಕರಿಸಬೇಕೆಂದು ಪ್ರಾರ್ಥಿಸಲಾಗಿದೆ.

Gram : VISHWA Tel : 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಸಂಗ್ರಾಹ್ಯ ಸಂಕಲನಗಳು

ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಹೆಂಗುಸರ ಕತೆಗಳು	2—00
ಪುಡಿಮುತ್ತುಗಳು	1—50

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಇದು ನಮ್ಮ ಭಾರತ

"ಥ್ಯಾಂಕ್ ಯೂ" ಹೊರಡದ ತುಟಿಗಳು

ಇದು ಬೊಂಬಾಯಿ ಮಹಾನಗರದಲ್ಲಿ ನಡೆದ ಸತ್ಯ ಘಟನೆ.

ಮಧ್ಯಾಹ್ನದ ಹೊತ್ತು ತಾರೀಖು ೩-೧೨ ರ ಅಂಧೇರಿ ಲೋಕಲ್ ಟ್ರೇನ್ ಚರ್ಚ್ ಗೇಟಿನಿಂದ ಹೊರಡುವುದರಲ್ಲಿತ್ತು. ಒಬ್ಬ ಸಿಂಧಿ ವ್ಯಕ್ತಿ ಬಂದು ಹಿಂದೂ ಯಾತ್ರಿಕನ ಪಕ್ಕದಲ್ಲಿ ಕುಳಿತ. ಸಂಜೆಯ ಸಮಾಚಾರ ಪತ್ರಗಳನ್ನು ಮಾರುತ್ತ ಹುಡುಗನೊಬ್ಬ ಪ್ಲಾಟ್‌ಫಾರಂನಲ್ಲಿ ಅತ್ತಿಂದಿತ್ತ ತಿರುಗಾಡುತ್ತಿದ್ದ. ಅವನ ಕುತ್ತಿಗೆಯಿಂದ ಗಟ್ಟಿಯಾಗಿ ಹೊರಡುತ್ತಿತ್ತು—"ಇವಿನಿಂಗ್ ನ್ಯೂಜ್... ಹದಿನೈದು ಪೈಸೇ?"

ಸಿಂಧಿಯು ತನ್ನ ಜೇಬಿನಿಂದ ಹದಿನೈದು ಪೈಸೆಗಳನ್ನು ತೆಗೆದು ಅಂಗೈಯ ಮುಷ್ಟಿಯಲ್ಲಿ ಹಿಡಿದುಕೊಂಡ. ಮುಂದೆ ಆದ ಲೋಪವೆ ಆಡತ್ತ ಕಳೆಸ. ಪತ್ರಿಕೆಕೊಳ್ಳಬೇಕೇ ಬೇಡವೇ ಎಂಬುದನ್ನಾತನಿನ್ನೂ ನಿರ್ಧರಿಸಿದಂತೆ ಕಾಣಲಿಲ್ಲ. ರೇಲು ಹೊರಟಿತು ಎಂಬಾಗ, ಕೊಳ್ಳುವ ನಿಶ್ಚಯ ಮಾಡಿದ. ಹುಡುಗನನ್ನು ಕೂಗಿ, ಆತನ ಕೈಗಳಿಗೆ ಹದಿನೈದು ಪೈಸೆ ಎಸೆದು "ಇವಿನಿಂಗ್ ನ್ಯೂಜ್" ಎಂದು ಪ್ರತಿಗಾಗಿ ಕೈಚಾಚಿದ. ಟ್ರೇನು ಜೋರಾಗಿ ಓಡತೊಡಗಿತ್ತು. ಹುಡುಗ ಪ್ರತಿಯನ್ನು ಎತ್ತಿ ಡಬ್ಬಿಯೊಳಗೆಸೆದ. ದುರ್ದೈವದಿಂದ ಅದು ಒಳಗೆ ಬೀಳದೆ ಪ್ಲಾಟ್‌ಫಾರ್ಮಿನಲ್ಲೇ ಉರುಳಿ ಬಿತ್ತು.

ಗಾಡಿಯ ವೇಗ ಬಹಳಷ್ಟು ಹೆಚ್ಚಿತ್ತು. ಪತ್ರಿಕೆ ಮಾರುವ ಹುಡುಗ ಹಿಂದೆ ಉಳಿದು ಬಿಟ್ಟ. ಓಡಿ ಓಡಿ ಬಂದರೂ ಸಿಂಧಿ ಕುಳಿತಿದ್ದ ಡಬ್ಬಿಗೆ ಬರುವುದು ಸಾಧ್ಯವಾಗಲಿಲ್ಲ. ಗಾಡಿ ಸ್ಟೇಶನ್ನಿನಿಂದ ದೂರವಾಯಿತು.

ಸಿಂಧಿಗೆ ಬಹಳ ಪಶ್ಚಾತ್ತಾಪವೆನಿಸಿತು. ಜತೆಗೆ ಮಿತಿಮೀರಿದ ಸಿಟ್ಟು ಬಂತು. ಆವನು ಹಿಂದೂವಿನೊಡನೆ ಅಳುದನಿಯಲ್ಲಿ ಹೇಳಿದ "ನನ್ನ ಹದಿನೈದು ಪೈಸೆ ನೀರಿನಲ್ಲಿ ಮುಳುಗಿತು. ಪತ್ರಿಕೆಕೊಳ್ಳಬೇಕಾಗಿತ್ತು. ದುರ್ದೈವದಿಂದಲೇ ಆ ನಿರ್ಧಾರ ಮಾಡಿದೆ; ಮೊದಲಿಗೇ ಹಣಕೊಟ್ಟು ಬಿಟ್ಟೆ; ಪತ್ರಿಕೆ ಮಾತ್ರ ಸಿಗಲಿಲ್ಲ."

ಲಕ್ಷಾಂತರ ರೂಪಾಯಿಯ ಮಾಲು ತುಂಬಿದ ಸ್ವಂತ ಹಡಗವೊಂದು ನೀರಿನಲ್ಲಿ ಮುಳುಗಿದಂತೆ ಮರುಗಿದ ಆತನನ್ನು ಹಿಂದೂ ಸಮಾಧಾನಗೊಳಿಸುತ್ತ ನುಡಿದ— "ಇದರಲ್ಲಿ ಅವನದೇನು ತಪ್ಪು? ನೀವೆ ಕೊನೆಯ ಗಳಿಗೆಯಲ್ಲಿ ನಿರ್ಧಾರಕ್ಕೆ ಬಂದಿರಿ. ಆತನಾದರೂ ಪತ್ರಿಕೆ ಒಳಗೆಸೆದ; ಅದು ಮಾತ್ರ ಹೊರಗೆ ಬಿತ್ತು. ಆದರೂ ಆತ ಇತ್ತಲೇ ಓಡೋಡಿ ಬಂದ; ದುರ್ದೈವದಿಂದ ನಿಮಗೆ ಕೊಡ ಬೇಕಾಗಲಿಲ್ಲ. ನೀವೇಕೆ ಚಿಂತೆ ಮಾಡುತ್ತೀರಿ? ಹೇಳಿ ಕೇಳಿ ಬೊಂಬಾಯಿಯಲ್ಲಿ ಪತ್ರಿಕೆ ಮಾರುವ ಹುಡುಗ ಇಂದಲ್ಲ ನಾಳೆಯಾದರೂ ನಿಮಗೆ ಸಿಕ್ಕೇ ಸಿಕ್ಕುತ್ತಾನೆ. ಆತನಾಗೇ ನಿಮ್ಮನ್ನು ಹುಡುಕಿ ಹದಿನೈದು ಪೈಸೆ ಹಿಂದೆ ಕೊಡಬಹುದು. ಅಥವಾ ನೀವೇ ಕೇಳಿ ತೆಗೆದುಕೊಳ್ಳಬಹುದು. ಅದಲ್ಲದೆ, ಇದೇ ಗಾಡಿಯಲ್ಲಿ ಆತ ಹಿಂದಿನ ಡಬ್ಬಿ ಹತ್ತಿ ಬಂದಿರಲೂ ಬಹುದು. ಮರೀನ್ ಲೈನ್ಸ್ ಸ್ಟೇಶನ್ನಿನಲ್ಲಿ ನಿಮ್ಮನ್ನರಸಲೂ ಬಹುದು."

ಸಿಂಧಿಯ ರೋಷ ಕಡಿಮೆಯಾಗಲಿಲ್ಲ. "ಹೌದು; ಸಿಕ್ಕೀತು" ಎಂದು ಮುಖ ಸಿಂಡರಿಸಿದ. ಅಷ್ಟರಲ್ಲೇ ಮರೀನ್ ಲೈನ್ಸ್ ಬಂತು. ಗಾಡಿ ನಿಂತಿತು. ಹಿಂದಿನ ಡಬ್ಬಿಯಿಂದ ಒಬ್ಬ ಸದ್ಗೃಹಸ್ಥ ಪ್ಯಾಂಟು-ಬುಶ್‌ಕೋಟು ಧರಿಸಿದಾತ ಅಲ್ಲಿಗೆ ಬಂದ. "ಚರ್ಚ್‌ಗೇಟಿನಲ್ಲಿ ಇವಿನಿಂಗ್ ನ್ಯೂಜ್ ಕೊಂಡವರು ಯಾರು?" ಎಂದ.

ಹೌದು ಸಿಂಧಿ ತನ್ನ ಬೆಟ್ಟು ಮಾಡಿ ತೋರಿಸಿದ. ಆಗಂತು ಪತ್ರಿಕೆಯನ್ನವನ ಕೈಗಳಿಗೊಪ್ಪಿಸಿದ. ಸಿಂಧಿ ನಗುತ್ತಲೇ ಅದನ್ನು ಓದತೊಡಗಿದ.

ಆಗಂತುಕ ಹೇಳತೊಡಗಿದ—"ಪತ್ರಿಕೆ ಕೆಳಗೆ ಬಿದ್ದಿತ್ತು. ಮಾರುವ ಹುಡುಗ ನಮ್ಮ ಡಬ್ಬಿ ಹತ್ತಲು ಭಾರಿ ಪ್ರಯತ್ನಿಸಿದ; ಪಾಪ, ಹೆಗಲಲ್ಲಿನ ಭಾರ—ಗಾಡಿಯ ವೇಗದಿಂದ ಆವನಿಂದ ಡಬ್ಬಿಗೇರಲಾಗಲಿಲ್ಲ. ಆಗವನು ಇದನ್ನು ನಮ್ಮ ಡಬ್ಬಿಗೆಸೆದು ಆ ಡಬ್ಬಿಯತ್ತ ಬೆಟ್ಟು ಮಾಡಿದ. ಪತ್ರಿಕೆ ನನ್ನ ಕಾಲ ಬಳಿ ಬಿತ್ತು".

"ನಿಮ್ಮದು ಬಹಳ ಉಪಕಾರವಾಯ್ತು" ಹಿಂದೂ ಹೇಳಿದ. ಗಾಡಿ ಮತ್ತೆ ಹೊರಡುವ ಸೂಚನೆ ಬಂತು. "ನನ್ನ ಹೆಂಡತಿ ಮಕ್ಕಳು ಅಲ್ಲಿದ್ದಾರೆ" ಎಂದ ಆಗಂತುಕ ಸಿಂಧಿಯ ಕಡೆಗೊಮ್ಮೆ ನೋಡಿ, ಗುಡ್ ಬೈ ಹೇಳಿ ಹೊರ ಹೊರಟ.

ಆ ಸಮಯದಲ್ಲಾದರೂ ಸಿಂಧಿಯ ತುಟಿಗಳಿಂದ "ಥ್ಯಾಂಕ್ ಯೂ" ಹೊರಡಲಿಲ್ಲ!

ಮಿಲಾಗ್ರಿಸ್ ಕಾಲೇಜ್ ವಾರ್ಷಿಕೋತ್ಸವ

ಕಲ್ಯಾಣಪುರದ ಮಿಲಾಗ್ರಿಸ್ ಕಾಲೇಜಿನ ಚತುರ್ಥ ವಾರ್ಷಿಕೋತ್ಸವವು ತಾ. ೪ರಂದು ವಿಶಿಷ್ಟ ರೀತಿಯಿಂದ ಜರಗಿತು. ಬೆಳಗ್ಗೆ ಪ್ರಿನ್ಸಿಪಾಲರಾದ ಡಾ. ಗುರುರಾಜ ಭಟ್ಟರು ಧ್ವಜಾರೋಹಣ ಗೈದರು. ಬಳಿಕ ವಿದ್ಯಾರ್ಥಿ ಬಂಧುಗಳಿಗೆ ಲಘೂಪಹಾರಗಳನ್ನು ವಿತರಣೆಗೈಯಲಾಯಿತು.

ಸಾಯಂಕಾಲ ಸೈಂಟ್ ಎಲೋಸಿಯಸ್ ಕಾಲೇಜಿನ ಪ್ರಿನ್ಸಿಪಾಲ್ ರೆ.ಫಾ ರಸ್ಕಿನ್ನಾ ಅವರ ಅಧ್ಯಕ್ಷತೆಯಲ್ಲಿ ಜರಗಿದ ಸಮಾರಂಭದಲ್ಲಿ ಮಿಲಾಗ್ರಿಸ್ ಕಾಲೇಜಿನ ಆಡಳಿತ ಮಂಡಲಿನ ಉಪಾಧ್ಯಕ್ಷ Rt ರೆ. ಫಾ. Mgr. W. A. ಲೋಬೋ ಅವರು ಸ್ವಾಗತಿಸಿದರು. ಪ್ರಿನ್ಸಿಪಾಲ್ ಡಾ| ಗುರುರಾಜ ಭಟ್ಟರು ಕಾಲೇಜಿನ ವಾರ್ಷಿಕ ವರದಿಯನ್ನು ಓದಿದರು. ಶ್ರೀ ರಿಚರ್ಡ್ ರೆಬೆಲ್ಲೊ ಸಂದೇಶಗಳನ್ನು ಓದಿದರು. ಶ್ರೀ ಡಾ. ರಾಜ ಗೋಪಾಲ ಕಾಲೇಜಿನ ಪುರಾತತ್ವ ಸಂಘದ ಚಟುವಟಿಕೆಗಳನ್ನು ಸಭ್ಯರ ಅವಗಾಹನೆಗೆ ತಂದು ಕೊಟ್ಟರು. ಅನಂತರ ಪಾಠ, ಸಂಗೀತ, ಪ್ರಬಂಧ, ಛದ್ಮವೇಷ ಮತ್ತು ಆಟೋಟ ಸ್ಪರ್ಧೆಗಳಲ್ಲಿ ವಿಜೇತರುಗಳಿಗೆ ಅಧ್ಯಕ್ಷರು ಬಹುಮಾನ ವಿತರಣೆ ಗೈದರು.

ಅಧ್ಯಕ್ಷ ರೆ. ಫಾ ರಸ್ಕಿನ್ನಾ ರು ಕಾಲೇಜಿನ ಬಹುಮುಖ ಪ್ರತಿಭೆಯನ್ನು ತುಂಬು ಹೃದಯದಿಂದ ಕೊಂಡಾಡಿದರು. ಮ್ಯಾನೇಜರರ, ಪ್ರಿನ್ಸಿಪಾಲರ ಹಾಗೂ ಅಧ್ಯಾಪಕರುಗಳ ಸೇವೆಗಳನ್ನು ಶ್ಲಾಘಿಸಿದರು. ನಮ್ಮ ಜಿಲ್ಲೆಯಲ್ಲಿ ಮಾತ್ರವಲ್ಲದೆ, ರಾಜ್ಯದಲ್ಲೇ ಶ್ರೇಷ್ಠ ವಿದ್ಯಾಕೇಂದ್ರವಾಗಿ ಬೆಳೆಯಲೆಂದು ಆಶಿಸಿ ಸಮಾಜದಲ್ಲಿ ಸುಶಿಕ್ಷಿತರಾದವರು, ಬಲ್ಲವರು, ವಿದ್ಯಾವಂತರು, ನಿರಕ್ಷರಕುಕ್ಷಿಗಳನ್ನೂ ಅವಿದ್ಯಾವಂತರನ್ನೂ ಜ್ಞಾನ ವಿಹೀನರನ್ನೂ ಬಲ್ಲವರನ್ನಾಗಿ ಪರಿವರ್ತಿಸಿ ಸಮಾಜದ ಏಳ್ಗೆಯನ್ನು ಸಾಧಿಸಬೇಕೆಂದು ತಿಳಿಸಿದರು.

ಶ್ರೀ ವಲೆಂಟೈನ್ ಪಸನಾ ಅವರು ಧನ್ಯವಾದಗಳನ್ನು ಸಮರ್ಪಿಸಿದರು. ಬಳಿಕ ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರು ವಿವಿಧ ವಿನೋದಾವಳಿಗಳನ್ನು ಪ್ರದರ್ಶಿಸಿದರು.

ಅತ್ಯಂತ ಪುರಾತನ ಬೌದ್ಧ ಚಿತ್ರ

ದಕ್ಷಿಣ ಉಜ್ಬೆಕಿಸ್ತಾನದಲ್ಲಿ ಹಳೆಯ ತೆರ್ಮೆಜ ಬಳಿಯ ಅಗೆತಗಳ ಕಾಲದಲ್ಲಿ ಬುದ್ಧದೇವರ ಅತ್ಯಂತ ಪುರಾತನ ಚಿತ್ರ ದೊರಕಿದ್ದು ಅದರ ಬಗೆಗೆ ಎಲ್ಲರಿಗೂ ಅತ್ಯಾಸಕ್ತಿಯುಂಟಾಗಿದೆ.

ಅದು ಪೂರ್ಣಾಕೃತಿಯ ಅರ್ಧ ಪ್ರಮಾಣದ್ದು ಸುಮಾರು 2000 ವರ್ಷಗಳ ಹಿಂದೆ ಕುಶಾನರ ಕಾಲಾವಧಿಯಲ್ಲಿದ್ದ ಕರಕೇಪ ಸನ್ಯಾಸಿ ಮಠದ ಭಿತ್ತಿ ಚಿತ್ರದಲ್ಲೊಂದು ಭಾಗವಾಗಿದೆ.

ಈ ಸ್ಥಳ ಸಂಶೋಧನೆಯಲ್ಲಿ ನೇತೃತ್ವ ವಹಿಸಿದ್ದ ಬೋರಿಸ್ ಸ್ಟಾವಿಸ್ಕಿ ಅವರು ಮಧ್ಯ ಏಶಿಯದ ನಾಗರಿಕತೆಗಳ ವ್ಯಾಸಂಗಕ್ಕಾಗಿ ನಿಯುಕ್ತವಾಗಿರುವ "ಯುನೆಸ್ಕೊ" ಸಮಿತಿಯ ಸದಸ್ಯರಾಗಿದ್ದಾರೆ. ಪೂರ್ವಕಾಲದ ಬೌದ್ಧ ಕಲೆಯಲ್ಲಿ ಕಮಲ, ಕುದುರೆ ಅಥವಾ ಚಕ್ರದ ಮೂಲಕ ಸಾಂಕೇತಿಕವಾಗಿ ಬೌದ್ಧ ಅಸ್ತಿತ್ವವನ್ನು ಚಿತ್ರಿಸಲಾಗುತ್ತಿತ್ತೆಂದೂ ಅವರು ಸೂಚಿಸಿದ್ದಾರೆ.

ಮನುಷ್ಯ ರೂಪದಲ್ಲಿ ಅತ್ಯಂತ ಪುರಾತನ ಬೌದ್ಧ ಚಿತ್ರಗಳು ಮೊಟ್ಟಮೊದಲು ದೊರಕಿದ್ದು ಅಜಂತಾ ದೇವಾಲಯಗಳಲ್ಲೇ. ಭಾರತೀಯ ಬೌದ್ಧ ಚಿತ್ರಗಳು ಇನ್ನೂ ಕೆಲವು ಶತಮಾನಗಳಷ್ಟು ಹಿಂದಿನವು.

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಮಾನ್ಯರೆ,

ಇಂದಿನ ಸನ್ನಿವೇಶದಲ್ಲಿ ನಮ್ಮ ಜನರಲ್ಲಿ ತಕ್ಕ ರಾಜಕೀಯ ಜಾಗೃತಿ ಹಾಗೂ ದೇಶದ ಸಾಂಸ್ಕೃತಿಕ ಜೀವನದ ಸಂಚಯವನ್ನು ಮೂಡಿಸುವುದು ತಿಳಿದವರೆಲ್ಲರ ಕರ್ತವ್ಯವಾಗಿದ್ದು, ಈ ದಿಸೆಯಲ್ಲಿ ದೇಶದ ಪತ್ರಿಕೆಗಳು ಅವಶ್ಯವಾಗಿಯೂ ದುಡಿಯಬೇಕೆಂಬ ಎಂಬ ಧ್ಯೇಯ ಧೋರಣೆಗಳನ್ನು ತಳೆದು, ಕೀ. ಶೇ. ಮಾನ್ಯ ಎ. ಬಿ. ಶೆಟ್ಟರು ತಮ್ಮೆಲ್ಲರ ಮೆಚ್ಚುಗೆಯ 'ನವಯುಗ' ಪತ್ರಿಕೆಯನ್ನು ಸ್ಥಾಪಿಸಿ ಇದೀಗ ಐವತ್ತು ವರ್ಷಗಳಾದುವು. ಜನರನ್ನು ಎಚ್ಚರಿಸುವಲ್ಲಿ, ಅವರಲ್ಲಿ ತಕ್ಕ ಕರ್ತವ್ಯಪ್ರಜ್ಞೆಯನ್ನು ಮೂಡಿಸುವಲ್ಲಿ, ಈ ಪತ್ರಿಕೆ ತನ್ನ ಅಳಿಲಸೇವೆಯನ್ನು ಈಗಲೂ ಸಲ್ಲಿಸುತ್ತಲಿದೆ.

ಎಂದಿನಂತೆ ಬರುವ ಜನವರಿ 26, 1971ರಲ್ಲಿ ಪ್ರಕಟವಾಗುವ 'ಗಣರಾಜ್ಯ ಸ್ಥಾಪನೆ'ಯ ಸ್ಮಾರಕ ಸಂಚಿಕೆಯಲ್ಲಿ ನಾಮಾಂಕಿತ ಬರಹಗಾರರ ಲೇಖನಗಳನ್ನು ಪ್ರಕಟಿಸಿ ತನ್ನ ಸೇವೆ ಮಾಡುವುದರೊಡನೆ, ರಾಜ್ಯದ—ದೇಶದ—ಸರ್ವಾಂಗೀನ ಪ್ರಗತಿಗೆ ಕಾರಣವಾದ ನಮ್ಮ ಉದ್ದಿಮೆಗಳು ಏನನ್ನು ತಯಾರಿಸುತ್ತಲಿವೆ? ಏನನ್ನು ಒದಗಿಸುತ್ತಲಿವೆ? ಎಂಬುದನ್ನೂ ಪ್ರಕಟಿಸುವುದು ನಮ್ಮ ಘನ ಉದ್ದೇಶವಾಗಿದ್ದು, ಈ ಬಗ್ಗೆ ತಕ್ಕ ಜಾಹಿರಾತುಗಳನ್ನು ತಾವು ಒದಗಿಸುವಂತೆ ಈ ಮೂಲಕ ಕೇಳಿಕೊಳ್ಳುತ್ತೇವೆ. ಸಿದ್ಧ ವಸ್ತುಗಳ ಬಗ್ಗೆ ತಕ್ಕಷ್ಟು ಪ್ರಚಾರ ಕೈಕೊಂಡರೆನೇ ಇವುಗಳ ವಿತರಣೆ ಹಾಗೂ ಮುಂದೆ ಇವುಗಳ ಸುಧಾರಣೆಗೂ ಅವಕಾಶವಿದೆ ಎಂಬುದನ್ನು ಬೇರೆ ಹೇಳಬೇಕೆ?

ಎಂತಲೇ, ಆದಷ್ಟು ತ್ವರಿತವಾಗಿ 10—1—1971ರೊಳಗೆ ಜಾಹೀರಾತುಗಳು ನಮಗೆ ಮುಟ್ಟುವಂತೆ ಕಳುಹಿಸಿರಿ, ಹಾಗೂ ನಮ್ಮೊಡನೆ ಸಹಕರಿಸಿರಿ ಎಂದು ಪ್ರಾರ್ಥನೆ.

ನವಯುಗದ 1971ರ ಪ್ರಜಾರಾಜ್ಯ ಸಂಚಿಕೆ—

ನಿಮ್ಮ ಸಂಸ್ಥೆಯ ಜಾಹೀರಾತಿಗೆ ಉತ್ತಮ ಸಾಧನವಾಗಿದೆ.

ಉಡುಪಿ ಮುನ್ಸಿಫರ ಕೋರ್ಟಿನಲ್ಲಿ

Ex. Case No. 139/1970.
in O.S. No. 457/1968.

ಕೆನರಾ ಫಿನೆನ್ಸ್ ಯುನಿಟ (ರಿ) ಪ್ರೈ ಇದರ ಪಾರ್ಟ್ನರ್ ಎಂ. ಗೋವಿಂದ
—ಡಿಕ್ರಿಹೋಲ್ಡರ್

ಮತ್ತು

ಸಿ. ಕೆ. ಲಾಮೂರ್ಸ್—ಜಡ್ಜಮೆಂಟ ಡೆಟ್ಟರ್

ಜೆ. ಡಿ.—ಸಿ. ಕೆ. ಲಾಮೂರ್ಸ್, ಇಂಟಿಟ ಶೆಟ್ಟಿಯವರ ಮಗ, ದಿನಾ ಮಾರ್ಕೆಟು ಪ್ರೆಸ್ ರೋಡ್, ಉಡುಪಿ ಕಸಬಾ—ಇವರಿಗೆ

ಮೇಲಿನ ಅದಾಲತ್ತಿನಲ್ಲಿ ಡಿಕ್ರಿಹೋಲ್ಡರ್ ಸ್ಥಾವರ ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿರುತ್ತದೆ. ಆದುದರಿಂದ ಇಸ್ತಿಹಾರಿನ ಶರತ್ತುಗಳನ್ನು ನಿರ್ಣಯಿಸಲಿಕ್ಕೆ 1971ನೇ ಇಸವಿ ಜನವರಿ ತಿಂಗಳು 8ನೇ ತಾರೀಕು ನಿಶ್ಚಯಿಸಲಾಗಿರುವುದರಿಂದ ತಮಗೆ ಇದರಿಂದ ತಿಳಿಸಲಾಗುತ್ತದೆ.

(ಕೋರ್ಟು ಹುಕ್ಕುಂ ಪ್ರಕಾರ.

ಪಿ. ಬಾಲಕೃಷ್ಣ ಆರ್. ಶೆಟ್ಟಿ
ಡಿಕ್ರಿಹೋಲ್ಡರ ಕಡೆ ಎಡ್ವೊಕೇಟು

ಉಡುಪಿ, ದಿ. ೧೪-೧೨-೧೯೭೦.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

Ex. Case 45/1970

ವಾರಿಜ ಸೆಡ್ತಿ ಕೂಡಾ —ಅರ್ಜಿದಾರರು

ಮತ್ತು

1. ಕಮಲ ಸೆಡ್ತಿ, 2 ನಳಿನ ಸೆಡ್ತಿ, 3. ದಯಾನಂದ ಶೆಟ್ಟಿ, 4. ಮನೋರಮ ಸೆಡ್ತಿ, 5. ಉಮಾ ಸೆಡ್ತಿ— ಬೆಳ್ಳೆ ಪಾಲೇಮಾರು ಭಾಗೀರಥಿ ಸೆಡ್ತಿ ರ ಮಕ್ಕಳು—ಉಡುಪಿ ತಾಲ್ಲೂಕು ಇನ್ನಂಜೆ ಗ್ರಾಮದಲ್ಲಿ ಪಳೆ ಪಟೇಲ ಮನೆಯಲ್ಲಿರುವವರು. —ಎದ್ರಿರು

ಜವಾಬ್ದಾರಿ ಕೊಟ್ಟವ—

ವಿಠಲ ರೈ, 1st Division ಕ್ಲಾರ್ಕ್,

D. C. Office, Mangalore.

ಅರ್ಜಿದಾರರು. 1ರಿಂದ 5ನೇ ವರಗಿನವರಿಂದ ಬರತಕ್ಕ 689.30ನ್ನು ವಸೂಲು ಮಾಡುವರೆ ಮಾಡಿದ ಅಮಲ್ದಾರಿಯಲ್ಲಿ 3-4ನೆ ಎದ್ರಿರಿಗೆ ಮತ್ತು ಸೆಕ್ಯೂರಿಟಿ ಕೊಟ್ಟ ವಿಠಲ ರೈಗಳಿಗೆ ಪ್ರೋಹಿಬಿಟರಿ ಆರ್ಡರು ಜ್ಯಾರಿ ಆಗದ ಕಾರಣ ಈ ಮೂಲಕ ಕೋರ್ಟು ಹುಕುಂ ಪ್ರಕಾರ ಪ್ರಕಟಿಸಿಯದೆ. ಸದ್ರಿ ಅರ್ಜಿ ತಾ. 6-1-71ಕ್ಕೆ ಇಟ್ಟಿದೆ. ಆಕ್ಷೇಪ ಹೇಳತಕ್ಕವರಿದ್ದ ಆ ದಿವಸ ಕೋರ್ಟಿನಲ್ಲಿ ಹಾಜರಿ ಮಾಡಿಕೊಳ್ಳತಕ್ಕದ್ದು.

(By order of Court)

B. Yogishwara Holla,
Advocate for Petitioner

Udipi. 17-12-70.

ಶ್ರೀ ಗಂಗರಾಜು ಬಲಿದಾನ

ದಶಂಬ್ರ ೧೩.

ಕರ್ನಾಟಕದ ಇತಿಹಾಸದಲ್ಲೊಂದು "ಸುವರ್ಣ ದಿನ". ಶ್ರೀಮತಿ ಇಂದಿರಾ ಗಾಂಧಿಯವರ ಮಹಾರಾಷ್ಟ್ರಪರ ಪಕ್ಷಪಾತ ನೀತಿಯನ್ನು ಎದುರಿಸಿ ಬಲಿದಾನ ನೀಡಿದ ಶ್ರೀ ಗಂಗರಾಜು ಅವರ ಕೊನೆಯ ದಿನ.

ಐದು ವರುಷಗಳಷ್ಟು ಹಳೆಯದು ಮಹಾಜನ ಆಯೋಗ. ಮೂರು ವರುಷ ಹಳೆಯದು ಅದರ ವರದಿ. ತನ್ನ ವರದಿಗೊದಗಿದ ದುರವಸ್ಥೆಯನ್ನು ಕಣ್ಣಾರೆ ಕಾಣಲು ಮಹಾಜನರು ಉಸಿರು ಹಿಡಿದಿಲ್ಲ; ಇದವರ ಸುಯೋಗ.

ಆಯೋಗದ ವರದಿಯನ್ನು ಎಲ್ಲರೂ ಒಪ್ಪಬೇಕೆಂಬ ಶಾಸ್ತ್ರೀಯ ಒಡಂಬಡಿಕೆಯುಂಟಾಗಿತ್ತು. ಆದರೆ, ಮರಾಠಿಗರು ತತ್ತ್ವವನ್ನು ಗಾಳಿಗೆ ತೂರಿದರು. ತಮ್ಮ ಅಧಿಕಾರ — ಲಾಭಗಳನ್ನಷ್ಟೆ ಪರಿಗಣಿಸಿದರು. ಅಂಥವರಿಗೆ ಶ್ರೀಮತಿ ಗಾಂಧಿ ಒತ್ತಾಸೆ ನೀಡಿದರು.

ಉಭಯ ಪಕ್ಷೀಯರಿಗೂ ಕಡಿಮೆ ಅಸಮಾಧಾನ ವುಂಟಾಗುವಂತಾದರೂ ವಿವಾದ ತೀರ್ಮಾನಿಸಬೇಕು—ಇದು ಇಂದಿರಾವಾದ ಏಕೆ? ಆಯೋಗದವರದಿಯೇ ಅಂತಿಮವೆಂದು ಒಪ್ಪಿದ್ದೀರಿ ಎಂದೇಕೆ ಸ್ಪಷ್ಟವಾಗಿ ಅನ್ನಬಾರದು? ಆತಂಕವೊಂದೆ—ಮರಾಠಿಗರು ಕೈಕೊಟ್ಟರೆ, ಶ್ರೀಮತಿ ಗಾಂಧಿ ಉರುಳುತ್ತಾರೆ.

ಶ್ರೀ ಚವನರು ಪ್ಲಾಸ್ಟಿಕ್ ಛತ್ರ ಪತಿಯಾಗಿರುವುದರೂ ಶ್ರೀಮತಿಯ ಹಿಂದೆ ತಿರುಗುವುದರ ಗುಟ್ಟು ಇದೇ—ಬೆಳಗಾಂವಿ ಗಿಟ್ಟಿಸಿ ಕೊಳ್ಳಲು. ಒಮ್ಮೆ ಆಕೆ ಬೆಳಗಾಂವಿ ಮರಾಠಿಗರಿಗೆ ಕೊಟ್ಟು ಬಿಟ್ಟರೋ ಶ್ರೀ ಚವನರ ರಾಜ್ಯಕೀಯ ಪಥ ಬದಲಾಗುತ್ತದೆ; ಮರಾಠಿ ಕಾಂಗ್ರೆಸ್ಸು ತನ್ನ ನೀತಿಯನ್ನು ಬದಲಿಸುತ್ತದೆ.

ಇದ ಶ್ರೀಮತಿ ಗಾಂಧಿಗೆ ಗೊತ್ತಿಲ್ಲದ ವಿಷಯವಲ್ಲ. ಚವನರಿಂದ ಗೃಹಖಾತೆಯನ್ನು ತಾನೇ ಕಿತ್ತು ಕೊಂಡು, ತನ್ನ ಅರ್ಥ ಶಾಖೆಯನ್ನು ಅವರ ತಲೆ ಮೇಲೇರಿಸಿದ ಶ್ರೀಮತಿ ಗಾಂಧಿ ಮೂರು ಗುರಿಗಳನ್ನು ಸಾಧಿಸಿದ್ದಾರೆ—

ಮಂತ್ರಿಗಳೆಂದರೆ, ಪ್ರಧಾನಿ ಕೋರ್ಟಿನಲ್ಲಿನ ಫುಟ್ ಬಾಲ್‌ಗಳು.

ಚವನರು ಗೃಹಮಂತ್ರಿಯಾಗೇ ಉಳಿದರೆ, ಮರಾಠಿಗರ ರಾಜ್ಯಕೀಯ ಲಾಲಸೆ ಸಿದ್ಧಿಯಾಗಿ ಸಮಸ್ಯೆ ಪರಿಹಾರವಾಗಿ, ತನ್ನ ಅಧಿಕಾರ ದಾಹಕ್ಕೆ ನೀರು ಸುರಿಯಬಹುದು. ಇದಾಗಬಾರದು.

ತನ್ನ ಭೋಗವಾದಿ ಸಮಾಜವಾದದ ಶವವನ್ನು ತಾನೇ ಹೊತ್ತು ಕೊಂಡರೆ, ಜನ ತನ್ನನ್ನೇ ಬಿಟ್ಟು ಮೂಡುತ್ತಾರೆ. ಜೊತೆಗೆ ಜೀವದಾನ ಮಾಡುವಲ್ಲಿನ ಅಸಿದ್ಧಿಯನ್ನು ಚವನರ ಮೇಲೆ ಹೊರಿಸಿದರೆ ತನ್ನೆಡೆಗೆ ಬರುವ ಟೀಕಾಸ್ತ್ರಗಳನ್ನು ಚವನರತ್ತ ತಿರುಗಿಸಿ, ತನ್ನ ಪ್ರಬಲ ಪ್ರತಿಸ್ಪರ್ಧಿಯ ಮಾನ ಭಂಗಮಾಡಿ, ನಿಸ್ತೇಜಗೊಳಿಸಿ ನಿರ್ವೀರ್ಯರನ್ನಾಗಿಸಿ ಬಿಡಬಹುದು.

ಈ ಮೂರು ಚಾಣಕ್ಯತಂತ್ರಗಳಲ್ಲೂ ಶ್ರೀಮತಿ ಗಾಂಧಿ ಯಶಗಳಿಸಿದ್ದಾರೆ. ಆದ್ದರಿಂದ ಅವರು ಸೀಮಾ ವಿವಾದದೊಡನೆ ಒಮ್ಮೆ ಅತ್ತ ಒಮ್ಮೆ ಇತ್ತ ಚೆಂಡಾಡುತ್ತ ಪ್ರತಿಕ್ರಿಯೆ ನಿರೀಕ್ಷಿಸುತ್ತ ಇದ್ದಾರೆ.

ಮುಂದಿನ ಸಾರ್ವತ್ರಿಕ ಚುನಾವಣೆಗಳು ಮುಗಿಯುವ ವರೆಗೂ ವಿವಾದ ಪರಿಹಾರವಾಗುವುದಿಲ್ಲ; ಆಗುವುದು ಶ್ರೀಮತಿ ಗಾಂಧಿಗೂ ಬೇಕಾಗಿಲ್ಲ.

ಆದರೂ ಶ್ರೀಮತಿ ಗಾಂಧಿಯನ್ನು ನಂಬುವ ಸ್ಥಿತಿಯಲ್ಲಿ ಇಂದು ಯಾರೂ ಇಲ್ಲ. ಮಹಾಮಾರಿ ಯಾವಾಗ ಯಾರ ಮರೆ ಹೊಗುತ್ತಾಳೆಂದು ಊಹಿಸುವುದು ಅಸಾಧ್ಯ. ಶ್ರೀಮತಿ ಗಾಂಧಿ ಇಂದೀಗ ಮಸೆದ ಚೂರಿಯನ್ನೂ ಮುಟ್ಟಿ ನಿಂತಿದ್ದಾರೆ.

ಬೆಂಗಳೂರಿನ ಕನ್ನಡ ಪಕ್ಷವು ಕೇಂದ್ರದ ನೀತಿಯನ್ನು ಪ್ರತಿಭಟಿಸಲು ರೈಲು ಸತ್ಯಾಗ್ರಹವನ್ನು ಆರಂಭಿಸಿತು. ರೈಲು ತಡೆದು ನಿಲ್ಲಿಸುವುದೇ ಈ ಸತ್ಯಾಗ್ರಹದ ಉದ್ದೇಶ. ಇದೂ ಒಂದು ಚಳುವಳಿ.

ಇದರಿಂದ ಯಾರಿಗೂ ಹಾನಿಯಿಲ್ಲ. ಮರಾಠಿಗರಂತೆ ರೈಲು ಹಳಿತಪ್ಪಿಸುವುದಲ್ಲ ಹೆಚ್ಚೆಂದರೆ, ರೈಲು ತುಸು ತಡವಾಗಿ ಮುಟ್ಟಬಹುದು; ಹೊರಡಬಹುದು. ಶ್ರೀ ಎಂ. ಗಂಗರಾಜು ರೈಲಿನಡಿಗೆ ಬಿದ್ದು ಸ್ವರ್ಗ ಸೇರಿದರು. ಪ್ರಾಯಶಃ ವೀರ ಸ್ವರ್ಗವೇ ಇರಬಹುದು; ಅವರದ್ದು ಬಲಿದಾನವೇ.

ಇದರ ಬಿಸಿ ಕೇಂದ್ರದ ಪ್ರಧಾನಿಗೆ ತಲಪಿತೋ ಇಲ್ಲವೋ ಆಕೆಯಿಂದ ಸಂತಾಪ ಸೂಚನೆ—ಭರವಸೆ ಬಂದಿತೋ ಇಲ್ಲವೋ ವರದಿಯಾಗಲಿಲ್ಲ.

ಶ್ರೀ ಗಂಗರಾಜುವಿನ ಅಂತ್ಯಸಂಸ್ಕಾರ ಅದ್ದೂರಿಯಿಂದ ನಡೆಯಿತು. ನಾಯಕರ ಮಣಿಗಳೂ ಇದರಲ್ಲಿ ಸೇರಿದ್ದರು. ಸಾವಿರಾರು ಕನ್ನಡ ಪಕ್ಷೀಯರೂ ಕನ್ನಡ ಅಭಿಮಾನಿಗಳೂ ಅದರಲ್ಲಿ ಪಾಲ್ಗೊಂಡಿದ್ದರು.

ಗಡಿ ವಿವಾದದ ಸಂಬಂಧದಲ್ಲಿ ಬಲಿದಾನಗೆಯ್ದ ಮೊದಲನೆಯ ಮಹಾತ್ಮನೆಂಬ ಕೀರ್ತಿ ಶ್ರೀ ಗಂಗರಾಜುವಿಗೆ ಬಂತು.

ಅವರನ್ನು ಕೀರ್ತಿ ಗಿರಿಯ ಉತ್ತುಂಗ ಶಿಖರಕ್ಕೊಯ್ದ ಈ ದುರಂತದ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕೆಂಬ ಬೇಡಿಕೆಯೂ ಮುಂದೆ ಬಂತು.

ಅದೂ ಆಗಬಹುದು.

ಆದರೆ, ಒಂದು ಸಂಗತಿ. ರೈಲು ತಡೆಯುವ ಚಳುವಳಿ ಸಾಧುವೆ? ಎಷ್ಟೋ ಜನ ಯಾತ್ರಿಕರಿಂದ ಕೂಡಿದ ರೈಲನ್ನು ಒಂದು ನಿಮಿಷವಾದರೂ ತಡೆಗಟ್ಟುವುದರಿಂದ ಯಾತ್ರಾರ್ಥಿಗಳ ತಳಮಳವೆಷ್ಟು?

ಬಂದು—ಪ್ರದರ್ಶನ—ಕಲ್ಲೆಸೆತ, ಪುಂಡಾಟಿಕೆಗಳು ಮಾತ್ರ ಸಮಸ್ಯೆಯತ್ತ ಅಧಿನಾಯಕರ ಗಮನ ಸೆಳೆಯುತ್ತವೆ ಎಂಬ ಕಲ್ಪನೆ ನಮ್ಮ ಜನರಲ್ಲಿ ಮೂಡಿದೆ.

ತಮ್ಮ ರಾಜ್ಯಕೀಯ ಸ್ವಾರ್ಥಕ್ಕಾಗಿ ಸತ್ಯವನ್ನು ಅದುಮಿ ಕಾಲ ಅದುಮಿ ಹಿಡಿಯುವ ಪ್ರವೃತ್ತಿ ನಾಯಕರಲ್ಲಿ ರಕ್ತಗತವಾಗಿದೆ. ಅವರು ನಿಸ್ವಾರ್ಥಿಗಳಾದರೆ, ಇಂತಹ ದುರ್ಘಟನೆಗಳು ನಡೆಯುವುದಿಲ್ಲ.

ಒಂದು ಪ್ರಶ್ನೆಯ ಪಾಲನ್ನು ಮುಖ್ಯಕನ್ನು ನೋಡಿ ನೈಜ ಸತ್ಯವನ್ನು ಕಂಡು ಉತ್ತರವರಸಲು ಅಧಿಕಾರ ಸ್ಥಾನದಲ್ಲಿರುವವರು ಸಿದ್ಧರಿಲ್ಲ. ರಾಜ್ಯಕೀಯ ಸ್ವಾರ್ಥಕ್ಕಾಗಿ ಎಲ್ಲರನ್ನೂ ಎಲ್ಲ ಬಾರಿಯೂ ವಂಚಿಸುವ ಹವಣಿಕೆ ಅವರದ್ದು.

ಆಗ, ಇಂತಹ ದುರಂತಗಳು ಅಥವಾ ಬಲಿದಾನಗಳು ಜಾಳಾಗುತ್ತವೆ. ಶಾಂತಿ ಭಂಗವಾಗುತ್ತದೆ.

ಜನತೆಗೆ ಬೆಂಕಿ ನೀಡಿ ಮತ್ತೆ ಆರಿಸಲು ಬಾವಿ ತೋಡುವ ಅಧಿಕಾರಲಾಲಸಿಗಳ ಕಪಿಮುಷ್ಟಿಯಿಂದ ಜನ ಸ್ವತಂತ್ರವಾಗಬೇಕು.

ರೈಲು ಸತ್ಯಾಗ್ರಹಕ್ಕಿಂತ ಶ್ರೀಮತಿ ಗಾಂಧಿಯವರ ಮನೆಯೆದುರೇ ಧರಣಿ ಹೂಡುತ್ತಿದ್ದರೆ, ಉತ್ತಮವಿತ್ತೋ ಏನೋ ಎನಿಸುತ್ತದೆ.

ಆಗ ನಿಂತ ಗಂಗರಾಜುವಾದರೂ ಉಳಿಯುತ್ತಿದ್ದರು. ಶ್ರೀ ರಾಜುರವರ ಈ ಬಲಿದಾನ ವ್ಯರ್ಥವಾಗದಿರಲಿ. ಚುನಾವಣೆಗೆ ಮೊದಲೇ ಮಹಾಜನ ವರದಿಯನ್ನು ಶ್ರೀಮತಿ ಗಾಂಧಿ ಅನುಷ್ಠಾನಕ್ಕೆ ತರಲಿ. ಅಂತಹುದರ ಸೂಚನೆ ಮಾತ್ರ ತೀರ ಅಸ್ಪಷ್ಟ!

ಕಡಲೆ ಕಾಳುಗಳು

ಕಲ್ಲಿನಿಂದ ಬಲವಾಗಿ ಹೊಡೆದು ಒಬನನ್ನು ಕೊಂದುಬಿಟ್ಟ ವರದಿಯೊಂದು ಕೊಳ್ಳೇಗಾಲದಿಂದ ಬಂದಿದೆ.

—ಅದು ಯಾವುದರಲ್ಲೂ ಈ ಶಿಲಾಯುಗದ ಸಾಹಸ ಪ್ರದರ್ಶನ ವಿಚಿತ್ರವೆಂದು ಹೇಳಬಹುದೆ?

—ಪ್ರಗತಿವಾದಿಗಳು ತಾವೆಷ್ಟೇ ಪ್ರಗತಿ ಪಥದಲ್ಲಿ ಕೊಂಡೊಯ್ಯಬಯಸಿದರೂ ಜನ ಹಿಂಬಾಲಿಸದೆ ಹಿಂದೆಯೇ ನಿಲ್ಲುತ್ತದೆ.

—ಇದು ಶ್ರೀ ಸಾಮಾನ್ಯರ ಉದಾಸೀನತೆಯಲ್ಲದೆ ಮತ್ತಿನ್ನೇನು?

—ಶ್ರೀಸಾಮಾನ್ಯ ಉದಾಸೀನತೆಯಿಂದ ಪ್ರತಿವಾದಿತನವನ್ನು ತ್ಯಜಿಸಿ ತಮ್ಮ ಹಿಂದೆ ಬರುವಂತೆ ಮಾಡುವುದು ಹೇಗೆಂಬುದೇ ಪ್ರಗತಿವಾದಿಗಳ ಚಿಂತೆ. ಅವರು ನಿಶ್ಚಿಂತರಾಗುವ ತನಕ ನಾವೆಂದೂ ಪ್ರಗತಿಶೀಲರಾಗೆವು.

o o o

ಸಂಸತ್ ಅಧಿವೇಶನದ ಕೊನೆಯದಿನ ಕೊನೆಗೂ ಮಹಾಜನ ಆಯೋಗದ ವರದಿಯನ್ನು ಸರಕಾರ ಪಾರ್ಲಿಮೆಂಟಿನ ಮುಂದೆ ಇಟ್ಟಿತು.

—ಈ ಮೊದಲು ಹಾಗೆ ಮಾಡುವ ಬಗ್ಗೆ ನಿರ್ಧರಿಸಿಲ್ಲವೆಂದು ಹೇಳಲಾಗಿತ್ತು.

—ಮಹಾರಾಷ್ಟ್ರದ ಶಾಸನ ಸಭೆಗಳು ಘಟಿಸುವಂತಾಗಬೇಕಾದರೆ ಶ್ರೀಮತಿ ಗಾಂಧಿ ಹೀಗೆ ತನ್ನ ಹೊಣೆಗಾರಿಕೆಯಿಂದ ಜಾರಿಕೊಳ್ಳಲೇಬೇಕಾಯ್ತು.

—ಮಹಾಜನ ವರದಿಯು ಏಕಪಕ್ಷೀಯವೆಂದು ಕೇರಳ ಅದನ್ನು ತಿರಸ್ಕರಿಸಿತು.

—ತಾನು ಬಯಸಿದ್ದ ಬೆಳಗಾವಿ ಇತ್ಯಾದಿಗಳನ್ನು ತನಗೆ ನೀಡದ್ದರಿಂದ ಮಹಾರಾಷ್ಟ್ರ ಅದನ್ನು ತಳ್ಳಿ ಹಾಕಿತ್ತು.

—ಕರ್ನಾಟಕವೊಂದೇ ತತ್ವನಿಷ್ಠವಾಗಿ ಅಂಗೀಕರಿಸಿತ್ತು.

—ತತ್ವಗೇಡಿಗಳ ಹೊಣೆಗಾರಿಕೆಯಿಂದ ನುಸುಳದೆ ಮತ್ತೇನು ಮಾಡಿಯಾರು?

ಒಕ್ಕಣ್ಣರ ಊರಿನಲ್ಲಿ ಒಂದು ಕಣ್ಣು ಮುಚ್ಚಿಕೊಂಡೇ ನಡೆಯಬೇಕಂತೆ!

ನಮ್ಮ ತತ್ವ—ಧ್ಯೇಯ—ಆದರ್ಶಗಳನ್ನು ಧಾಳಿ ಧೂಸು ಮಾಡಿ ಅರಾಜಕತೆ ಗೆಡೆಮಾಡಿಕೊಡಬೇಕೆ?

o o o

ಪರಸ್ಪರ ಪ್ರಬಲ ವೈರಿಗಳಾದ ರಾಜಾಜಿ ಮತ್ತು ಕಾಮರಾಜರವರು ಉತ್ತಮ ಸ್ನೇಹಿತರಾಗಿ ಒಗ್ಗೂಡಿ ಪ್ರಜಾಸತ್ತೆಯನ್ನು ಉಳಿಸಲು ನಿರ್ಧರಿಸಿದ್ದಾರೆ.

—ಕಾಮರಾಜರವರು ರಾಜಾಜಿಯವನ್ನು ಎಂದೂ ಗೌರವಿಸಿದ್ದಿಲ್ಲ. ಮಹಾತ್ಮಾಗಾಂಧಿ ರಾಜಾಜಿಯವನ್ನು ಎತ್ತಿ ಹಿಡಿದಿದ್ದರೂ ಕಾಮರಾಜರು ಏಳಬಿಡದ ನಿದರ್ಶನವುಂಟು.

—೯೨ ತುಂಬಿದ ರಾಜಾಜಿಯವರಿಗೆ ತಾವು ವೃದ್ಧರಾಗುತ್ತಿದ್ದೇವೆಂಬುದರ ಮನವರಿಕೆ ಬಲವತ್ತರವಾಗಿದೆಯೋ? ಅಥವಾ ಕಾಮರಾಜರಿಗೇ ತಾನು ಎಪ್ಪತ್ತರ ಗಡಿ ಮುಟ್ಟುತ್ತಿದ್ದೇನೆನಿಸುತ್ತದೆಯೆ?

—ರಾಜಾಜಿ ಹಿಡಿದಿದ್ದ ಪ್ರಾಮುಖ ಊರುಗೋಲು ಅವರನ್ನೇ ಮುಗ್ಗರಿಸಿತು. ಆದುದರಿಂದ ಅವರಿಗೆ ಹೊಸ ಊರುಗೋಲೊಂದು ಬಗತ್ಯ. ಕಾಮರಾಜರಿಗೂ ಊರುಗೋಲು ಬೇಕು.

—ರಾಜಾಜಿ—ಕಾಮರಾಜರ ಜೀವನದಲ್ಲಿ ಅಂತಹ ಅಂತರವೇನು?

—ಇಬ್ಬರೂ ಮೂಲತಃ ತಮಿಳುನಾಡಿಗೆ ಸೇರಿದವರು. ಇಬ್ಬರೂ ಅಖಿಲ ಭಾರತ ಖ್ಯಾತರಾದವರ.

—ರಾಜಾಜಿ ಗೃಹಸ್ಥಾಶ್ರಮವನ್ನು ತೀರಿಸಿ ರಾಜ್ಯಕೀಯಕ್ಷೇತ್ರಕ್ಕೆ ಬಂದವರು. ಕಾಮರಾಜರು ಬ್ರಹ್ಮಚರ್ಯದಿಂದಲೇ ರಾಜ್ಯಕೀಯಕ್ಕೆ ನೆಗೆದವರು. ಇಬ್ಬರೂ ಹಲವರು "ಮೂಜಿ"ಗಳು.

—ಶ್ರೀಮತಿ ಗಾಂಧಿಯವರ ಅಪ್ರಜಾತಂತ್ರ ಆಡಳಿತವನ್ನು ಕೊನೆಗೊಳಿಸಲು; ಪ್ರಜಾಪ್ರಭುಗಳನ್ನೇ ಡಿಲ್ಲಿಯಲ್ಲಿ ಕೂರಿಸಲು ತನ-ಮನ ಧನ ಮುಡಿಪಿಟ್ಟವರು.

—ಈ ಧ್ಯೇಯೋದ್ದೇಶಕ್ಕಾಗೇ ತಂತಮ್ಮ ವೈರವನ್ನು ಬಿಟ್ಟು ಒಂದಾದರು.

—ಭೀಮ ಧೃತರಾಷ್ಟ್ರ ಆಲಿಂಗನದ ನೆನಪು ಬೇಡವೆಂದರೂ ಬರುತ್ತದೆ.

—ರಾಜಾಜಿ—ಕಾಮರಾಜರಿಗೆ ಧ್ರಾ ಲಿಂಗನ ಬೈಬಲ್ಲಿನಲ್ಲಿ ಹೇಳಿದ ತಂದೆ-ಮಗನ ಆಲಿಂಗನವಾದೀತೆ? ದೇಶಕ್ಕೆ ಒಳಿತು ಮಾಡೀತೆ?

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ಜೀವವಿಮಾ ಕಾರ್ಪೊರೇಶನ್ನಿನ ಪ್ರಗತಿ

ಹೊಸ ವ್ಯವಹಾರ ವಿಮೆಯು ಜೀವ ನಾಡಿಯಿದ್ದಂತೆ. ಜೀವ ವಿಮೆಯು ಸಂದೇಶ ಎಷ್ಟು ಮಂದಿಗೆ ಮುಟ್ಟಿದೆ ಎಂಬುದರ ಮೇಲೆ ಕಾರ್ಪೊರೇಷನ್ನಿನ ಪ್ರಗತಿ ಅವಲಂಬಿಸಿದೆ. 1959ರಲ್ಲಿ ಜೀವ ವಿಮಾ ಕಾರ್ಪೊರೇಷನ್ 281.90 ಕೋಟಿ ರೂ.ಗಳ ವ್ಯವಹಾರವನ್ನು ಮಾಡಿದ್ದರೆ 1969–70ರ ಸಾಲಿನಲ್ಲಿ ಅದು 1038.08 ಕೋಟಿ ರೂಗಳ ವ್ಯವಹಾರವನ್ನು ಸಾಧಿಸಿದೆ. ಈಗ ಸುಮಾರು 149 ಲಕ್ಷ ಪಾಲಿಸಿಗಳಿವೆ. 1969-70 ಸಾಲಿನಲ್ಲಿ ಪ್ರೀಮಿಯಂ ಹಣ 260.41 ಕೋಟಿ ರೂಗಳಷ್ಟಾಗಿದ್ದಿತು. ವರುಷವರುಷವೂ ಕಾರ್ಪೊರೇಷನ್ ಪ್ರಗತಿಪಥದಲ್ಲಿದೆ ಎಂಬುದಕ್ಕೆ ಈ ಹೆಚ್ಚಳ ವ್ಯವಹಾರದ ಅಂಕಿಗಳೇ ಸಾಕ್ಷಿ.

ಜೀವ ವಿಮೆಯು ಕೂಡಿಸಿದ ಬಂಡವಾಳ ಮೊತ್ತವು 381 ಕೋಟಿಯಿಂದ, 1969-70 ಸಾಲಿನಲ್ಲಿ 1528 ಕೋಟಿ ರೂಗಳಿಗೆ ಏರಿದೆ. ಇದರಲ್ಲಿ ಸುಮಾರು ಮೂರುನಾಲ್ಕಾಂಶಭಾಗವು ಸಾರ್ವಜನಿಕ ಕ್ಷೇತ್ರಕ್ಕೆ ಹೋಗಿದೆ. ಗೃಹೋದ್ಯಮಕ್ಕೆಂದು ರಾಜ್ಯಸರಕಾರಗಳಿಗೆ ಈ ಕಾರ್ಪೊರೇಷನ್ 114 ಕೋಟಿ ರೂಗಳನ್ನು ಸಾಲವಾಗಿ ನೀಡಿದೆ; ಅಲ್ಲದೆ ಗೃಹ ಮಂಡಳಿಗಳಿಗೆ 60 ಕೋಟಿ ರೂಗಳನ್ನು ಸಾಲವಾಗಿ ನೀಡಿದೆ.

ದೇಶದ ಉದ್ಯಮಗಳ ಉತ್ಕರ್ಷಕ್ಕೆ ವಿದ್ಯುಚ್ಛಕ್ತಿ ಅತ್ಯವಶ್ಯ. ಆದ್ದರಿಂದಲೇ ಜೀವ ವಿಮಾ ಕಾರ್ಪೊರೇಷನ್ ವಿದ್ಯುತ್ ಮಂಡಳಿಗಳಿಗೆ ಇದುವರೆಗೆ 133 ಕೋಟಿ ರೂಗಳನ್ನು ಸಾಲವಾಗಿ ನೀಡಿದೆ. ಗೃಹೋದ್ಯಮ, ವಿದ್ಯುತ್ ಮಂಡಳಿ ಹಾಗು ನಗರಸಭೆ ಮತ್ತು ಅಪವಾದ ಬ್ಯಾಂಕುಗಳಿಗೆ ಅನುಕ್ರಮವಾಗಿ 258, 182, 33 ಹಾಗು 71 ಕೋಟಿ ರೂಗಳನ್ನು ಸಾಲವಾಗಿ ನೀಡಲಾಗಿದೆ

ಕಾರ್ಪೊರೇಷನ್ ಉದ್ಯೋಗಾವಕಾಶಗಳನ್ನು ಸೃಷ್ಟಿಸುವಲ್ಲಿ ಸಮರ್ಥವಾಗಿದ್ದು ಅದರ ಸಿಬ್ಬಂದಿಯು 1959ರಲ್ಲಿ 31 ಸಾವಿರವಿದ್ದರೆ 1969–70 ಸಾಲಿನಲ್ಲಿ 52 ಸಾವಿರ ಸಂಖ್ಯೆಯನ್ನು ತಲುಪಿದೆ.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

G & W. C. No. 2/1970

1. ನಂದ ಕುಮಾರ್, 2. ಶಶಿಧರ—ಮೈನರು, ಗಾರ್ಡಿಯನ್ ಲೀಲಾವತಿ K. Shetty Y. ಕೊರಗ ಶೆಟ್ರ ಪತ್ನಿ, ಉಡುಪಿ ತಾಲ್ಲೂಕು ಹಿರಿಬೆಟ್ಟು ಗ್ರಾಮ—ಅರ್ಜಿದಾರಳು

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ಮೈನರರ ಗಾರ್ಡಿಯನಳನ್ನಾಗಿ ನೇಮಿಸುವರೆ ಅರ್ಜಿದಾರಳು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಖು 22-1-1971ಕ್ಕೆ ತನಿಖೆಗೆ ಇಟ್ಟಿದೆ. ಆಕ್ಷೇಪವುಳ್ಳವರು ಆ ದಿವಸ ಬೆಳಿಗ್ಗೆ 11 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಉದಾಹರಿಸುವರೆ ತಪ್ಪಿದ್ದರೆ ಅವರ ಗೈರ್ ಹಾಜರಿಯಲ್ಲಿ ಸದ್ರಿ ಅರ್ಜಿಯನ್ನು ತೀರ್ಮಾನಿಸಲಾಗುವುದು.

(By order of Court)

Sd/- V.G. KEDLAYA, *M.A.,L.L.B.*

Advocate for Petitioner

ಉಡುಪಿ)

D/ 18-12-70)

ಬಾಳೆ ಮುಹೂರ್ತ

ಶ್ರೀ ಅದಮಾರು ಮಠದ ಪರ್ಯಾಯದ ಪೂರ್ವಭಾವಿಯಾಗಿ ಸಂಪ್ರದಾಯ ಪ್ರಕಾರ ನಡೆಯಲಿರುವ ಪ್ರಪ್ರಥಮ ಕಾರ್ಯವಾದ "ಬಾಳೆ ಮುಹೂರ್ತ" ಸಮಾರಂಭವು ತಾ. 12-12-70ರಂದು ಬೆಳಿಗ್ಗೆ ವಿದ್ವಜ್ಜನರ ಮತ್ತು ಶಿಷ್ಯ ವರ್ಗದವರ ಸಮಾವೇಶದೊಂದಿಗೆ ವಿಜೃಂಭಣೆಯಿಂದ ನೆರವೇರಿತು. ಬೆಳಿಗ್ಗೆ ಅದಮಾರು ಮಠದಲ್ಲಿ ದೇವತಾ ಪ್ರಾರ್ಥನೆಯಾದ ಬಳಿಕ ವಾದ್ಯಘೋಷಗಳಿಂದ ಹೊರಟ ಮೆರವಣಿಗೆಯು ರಥಬೀದಿಗಾಗಿ ಚಂದ್ರೇಶ್ವರ, ಅನಂತೇಶ್ವರ ದೇವರಲ್ಲಿ ಪ್ರಾರ್ಥನೆ ಸಲ್ಲಿಸಿ, ಶ್ರೀ ಕೃಷ್ಣ ಮಠದಲ್ಲಿ ಹರಿವಾಯುಗಳನ್ನು ಗುರುಗೋವುಗಳನ್ನು ಸಂದರ್ಶಿಸಿ, ಮುಹೂರ್ತಕ್ಕೆ ಸರಿಯಾಗಿ ನವಗ್ರಹ ಪ್ರಾರ್ಥನೆಗಳೊಂದಿಗೆ "ಬಾಳೆ ಮುಹೂರ್ತ"ವನ್ನು ನೆರವೇರಿಸಲಾಯಿತು.

ಹೊಸ ಅಂಚೆ ಕಚೇರಿ ಕಟ್ಟಡ

ಉದ್ಘಾಟನೆ ಎಂಬ ಶಿರೋನಾಮದಿಂದ ಕಳೆದ ಸಂಚಿಕೆಯ ಹತ್ತನೆ ಪುಟದಲ್ಲಿ ಪ್ರಕಟವಾದ ಸುದ್ದಿಯ ಕೊನೆಯಲ್ಲಿ— ಈ ಕಟ್ಟಡವನ್ನು ಅತ್ಯಲ್ಪ ಕಾಲಾವಧಿಯಲ್ಲಿ ಆಕರ್ಷಕ ರೀತಿಯಲ್ಲಿ ರಚಿಸಿಕೊಟ್ಟವರು ಜಿಲ್ಲೆಯ ಪ್ರಸಿದ್ಧ ಕಂಟ್ರಾಕ್ಟರ್ ಶ್ರೀ ಪಿ. ಶ್ರೀಪತಿ ಆಚಾರ್ಯರು ಎಂಬ ಅಂಶ ಬಿಟ್ಟು ಹೋದುದಕ್ಕಾಗಿ ವಿಷಾದಿಸುತ್ತೇವೆ.

ಮಂಗಳೂರಲ್ಲಿ ವಸ್ತುಪ್ರದರ್ಶನ ಉದ್ಘಾಟನೆ

ಕಾರ್ನಾಡ್ ಸದಾಶಿವ ರಾವ್ ಸ್ಮಾರಕ ಟ್ರಸ್ಟ್‌ನವರು ಮಂಗಳೂರು ನೆಹರೂ ಮೈದಾನಿನಲ್ಲಿ ಏರ್ಪಡಿಸಿದ ಐದನೆಯ ಅಖಿಲಭಾರತ ಕೃಷಿ ಮತ್ತು ಕೈಗಾರಿಕಾ ಪ್ರದರ್ಶನವನ್ನು ಸ್ನಾತಕೋತ್ತರ ಶಿಕ್ಷಣ ಕೇಂದ್ರದ ಡೈರೆಕ್ಟರ್ ಪ್ರೊ|| ಎಸ್. ವಿ. ಪರಮೇಶ್ವರ ಭಟ್ಟರು ಇದೇ ತಾ. 19ರಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಿ. ಗಂಗಾಧರದಾಸ್ ಅವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಟ್ರಸ್ಟಿನ ಕಾರ್ಯದರ್ಶಿ ಶ್ರೀ ಎಚ್. ಕೆ. ತಿಂಗಳಾಯರು ಅತಿಥಿಗಳ ಪರಿಚಯ ಮಾಡಿದ ಬಳಿಕ ಟ್ರಸ್ಟಿನ ಅಧ್ಯಕ್ಷರೂ ಮಾಜಿ ವಿಧಾನ ಪರಿಷತ್ತಿನ ಅಧ್ಯಕ್ಷರೂ ಆದ ಶ್ರೀ ಕೆ. ಕೆ. ಶೆಟ್ಟರು ಸ್ವಾಗತಿಸಿದರು.

ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು ಮಾತನಾಡುತ್ತಾ, ದೇಶಭಕ್ತ ಶ್ರೀ ಕಾರ್ನಾಡ್ ಸದಾಶಿವರಾಯರಿಗೆ ಸ್ಮಾರಕ ರಚಿಸಲು ಆಸಕ್ತರಾಗಿರುವುದಕ್ಕೆ ಸಂತೋಷ ವ್ಯಕ್ತಪಡಿಸಿ, ಇಂತಹ ವಸ್ತುಪ್ರದರ್ಶನಗಳ ಮಹತ್ವ ವಿವರಿಸಿದರು. ಅವುಗಳು ಮುಂದೇನು ಮಾಡಬೇಕೆಂಬುದರ ಕುರಿತು ಕಣ್ಣು ತೆರೆಯಿಸುವ ಘನವಾದ ಉದ್ದೇಶವನ್ನು ಪೂರೈಸುತ್ತವೆ. ಇಂತಹ ಪ್ರದರ್ಶನಗಳು ಆಗಾಗ ನಡೆಯಲಿ ಎಂದು ಹಾರೈಸಿದರು.

ಕಾರ್ಯದರ್ಶಿ ಶ್ರೀ ನಾರಾಯಣ ರಾವ್ ಅವರು ಧನ್ಯವಾದವಿತ್ತರು.

ವಾರ್ಷಿಕೋತ್ಸವ

ಬೆಳ್ತಂಗಡಿ ಸೈಂಟ್ ತೆರೇಸಾ ಗರ್ಲ್ಸ ಹೈಸ್ಕೂಲ್ ಮತ್ತು ಹಯರ್ ಪ್ರೈಮರಿ ಶಾಲೆಗಳ ವಾರ್ಷಿಕೋತ್ಸವವು ತಾ. 13-12-70ರಂದು ತಹಶೀಲ್ದಾರ್ ಶ್ರೀ ಡಿ. ಎಮ್. ಡಿಸೋಜಾರ ಅಧ್ಯಕ್ಷತೆಯಲ್ಲಿ ಸಂಭ್ರಮದೊಡನೆ ನೆರವೇರಿತು. ಸ್ವಾಗತಗೀತೆ, ವರದಿ ವಾಚನ, ಬಹುಮಾನ ವಿತರಣೆಯಾದ ಬಳಿಕ ಶ್ರೀ ಗುಣಪಾಲ ಜೈನ್, ಸಿಂಡಿಕೇಟ್ ಬ್ಯಾಂಕ್ ಬೆಳ್ತಂಗಡಿ ಅವರು ಸುರಸವಾಗಿ ಭಾಷಣ ಮಾಡಿದರು. ಅಧ್ಯಕ್ಷರ ಭಾಷಣದ ಬಳಿಕ ಕನ್ನಡ ಇಂಗ್ಲೀಷ್, ಹಿಂದೀ ಮತ್ತು ತುಳು, ಈ ನಾಲ್ಕು ಭಾಷೆಗಳಲ್ಲಿ ನಾಟಕಗಳು, ನೃತ್ಯ ಹಾಸ್ಯಾದಿ ಮನರಂಜನೆ, ಇತ್ಯಾದಿಗಳೊಡನೆ ವಾರ್ಷಿಕೋತ್ಸವವು ಯಶಸ್ವಿಯಾಯಿತು.

ಭಾರತದ ಕ್ಷಯರೋಗ ಸಮಿತಿ

21ನೇ ಟಿಬಿ ಮೊಹರು ಮಾರಾಟ ಚಳವಳ

ಕ್ರಿಸ್‌ಮಸ್ ಸಂಚ್ಚಿ

ಇಂದು ಕ್ಷಯರೋಗಿಯೊಬ್ಬನು ಆಸ್ಪತ್ರೆಗೆ ಹೋಗದೆಯೆ ಮತ್ತು ಅವನ ಯಥಾವತ್ತಾದ ಜೀವನ ಮತ್ತು ನಿತ್ಯಕರ್ಮಗಳಿಗೆ ತೊಡಕಿಲ್ಲದೆಯೇ ಅವನ ಸ್ವಂತ ಮನೆಯಲ್ಲಿಯೇ ಗುಣಹೊಂದುವ ಪ್ರಭಾವಶಾಲಿ ಔಷಧಗಳಿವೆ. ಡಾಕ್ಟರರ ಸಲಹೆಯಂತೆ ಕ್ರಮಬದ್ಧ ಔಷಧಿ ಸೇವನೆಯು ಅತ್ಯಾವಶ್ಯಕ. ನಿಮ್ಮ ರಾಜ್ಯದ ಟಿಬಿ ಸಂಸ್ಥೆಯು ನಿಮಗೆ ಸಹಾಯಮಾಡಲು ಸದಾ ಸಿದ್ಧವಿದೆ. ಅವರನ್ನು ವಿಚಾರಿಸಿರಿ.

ನೀವು ಕೂಡಾ ನಿಮ್ಮ ರಾಜ್ಯದ ಟಿಬಿ ಸಂಸ್ಥೆಗೆ ನೆರವಾಗಬೇಕು. ಬಡ ಕ್ಷಯರೋಗಿಗಳಿಗೆ ಮತ್ತು ಅವರ ಕುಟುಂಬಿಕರಿಗೆ ಸಹಾಯಮಾಡಲು ಅವರಿಗೆ ನಿಧಿ ಅಗತ್ಯವಾಗಿದೆ. ಟಿಬಿ ಮೊಹರುಗಳನ್ನು ಖರೀದಿಸಿ ಅವನ್ನು ನಿಮ್ಮ ಟಪ್ಪಾಲು ಪತ್ರಗಳಿಗೆ ಅಂಟಿಸಿರಿ. ಇದು ನೀವು ಅವರಿಗೆ ಮಾಡಬಹುದಾದ ನೇರ ಸಹಾಯವಾಗಿದೆ.

ನೀವು ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಸದವಕಾಶದಲ್ಲಿ ನಿಮ್ಮ ಸ್ನೇಹಿತರಿಗೆ ಮತ್ತು ಪ್ರೀತಿಪಾತ್ರರಿಗೆ ಗ್ರೀಟಿಂಗ್ ಕಾರ್ಡುಗಳು, ಪಾರಿತೋಷಕ ಪೆಕೇಟುಗಳು ಇವನ್ನು ಕಳುಹಿಸುವಾಗ ಅವುಗಳ ಮೇಲೆ ಹೆಚ್ಚಿನ 10 ಪೈಸೆಯ ಟಿಬಿ ಮೊಹರುಗಳನ್ನು ಹಚ್ಚಲು ಮರೆಯದಿರಿ. ಹೀಗೆ ಮಾಡುವುದರಿಂದ ಈ ರಾಷ್ಟ್ರದಲ್ಲಿ ಸ್ವಯಂಸೇವಾ ಟಿಬಿ ನಿರೋಧಕ ಚಳವಳಿಗೆ ನೀವು ಹೆಚ್ಚಿನ ಸಹಾಯಮಾಡಿದಂತಾಗುವುದು.

ಇಂದೇ ಟಿಬಿ ಮೊಹರುಗಳನ್ನು ಪಡೆಕೊಳ್ಳಿರಿ

ಮತ್ತು ಕ್ಷಯಪೀಡಿತ ಸಹೋದರರಿಗೆ ಸಹಾಯ ಮಾಡಿರಿ.

ಮೊಹರುಗಳು ಸಿಗುವ ಸ್ಥಳಗಳು:— ದಕ್ಷಿಣ ಕನ್ನಡಜಿಲ್ಲಾ ಟಿಬಿ ಎಸೋಸಿಯೇಶನ್, ಮಂಗಳೂರು ಮತ್ತು ಅದರ ಬೇರೆ ಬೇರೆ ಏಜನ್ಸಿಗಳು.

ಈ ಸ್ಥಳದ ದಾತೃಗಳು:—

ಶ್ರೀ ಎಂ. ಜನಾರ್ಧನ ರಾವ್,

ಮಂಗಳೂರು ಗಣೇಶ ಬೀಡಿ ವರ್ಕ್ಸ್,

ಮೈಸೂರು.

ನಗೆಗೆಡಲು

ತೆರಿಗೆದಾರನೊಬ್ಬನಿಗೆ ಎರಡನೆಯ ನೋಟೀಸು ಬಂತು! "ಈ ನೋಟೀಸು ತಲುಪಿದ ಎಪ್ಪತ್ತೆರಡು ತಾಸುಗಳೊಳಗೆ ತೆರಿಗೆ ಹಣ ತುಂಬಲು ತಪ್ಪಿದರೆ, ಕಾನೂನಿನ ಕ್ರಮ ಕೈಕೊಳ್ಳಲಾದೀತು.."

ತೆರಿಗೆದಾರ ಹೌಹಾರಿದ. ಮರ್ಯಾದೆಗಾಗಿ ಪರದಾಡುತ್ತಾ ಏನೇನೋ ಮಾಡಿ ಹಣ ಕೂಡಿಸಿದ. ನಗರಸಭೆಯಲ್ಲಿ ಕಟ್ಟಿದ. ಆಗ ಅಧಿಕಾರಿಯಲ್ಲಿ ಅಂದ— "ನೀವು ಕಳಿಸಿದ ಮೊದಲನೇ ನೋಟೀಸು ನನ್ನ ಗಮನಕ್ಕೆ ಬಾರದೆ ಹೋಯ್ತು. ಕ್ಷಮಿಸಿ ಬಿಡಿ."

"ಓ, ಪರವಾಗಿಲ್ಲ. ಆದರೆ ನೋಡಿ, ನಾವು ಮೊದಲನೆಯ ನೋಟೀಸು ಕಳಿಸುವ ಪರಿಪಾಠವನ್ನೇ ಇಟ್ಟುಕೊಂಡಿಲ್ಲ. ಎರಡನೆಯ ನೋಟೀಸಿಗೇ ತೆರಿಗೆ ವಸೂಲಿ ಮಾಡುವ ಶಕ್ತಿಯಿದೆ ಎಂಬುದು ಅನುಭವವೇದ್ಯವಾದದ್ದರಿಂದ ಎರಡನೆಯ ನೋಟೀಸನ್ನೇ ಮೊದಲು ಕೊಟ್ಟುಬಿಡುತ್ತೇವೆ."

o o o

ಇಬ್ಬರು ಮಿತ್ರರು ಒಂದುಗೂಡಿದರು. ಒಬ್ಬನು ಕೇಳಿದ— "ಅಲ್ಲ, ನೀನು ಬರುವ ಸಂಬಳದಲ್ಲಿ ಹೇಗೆ ಸಧಾರಿಸಿಕೊಳ್ಳುತ್ತಿ?"

'ಅದು ಬಹಳ ಸುಲಭ. ನಾನು ಹಳೆಯ ಸಾಲಗಳನ್ನು ಮರಳಿಸುವ ಗೋಜಿಗೇ ಹೋಗುವುದಿಲ್ಲ.'

"ಇದು ಸರಿಯಷ್ಟೆ. ಆದರೂ ಹೊಸ ಸಾಲಗಳು..."

'ಅವನ್ನು ಹಳೆಯ ಸಾಲವಾಗುವಂತೆ ಮಾಡುತ್ತೇನೆ.'

o o o

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O.S. No. 214/70

ಕಾರ್ಕಳ ಶ್ರೀ ದೂರಿಯಮ್ಮ ಟೆಂಪಲ್ —ವಾದಿ

ಮೀನಾಕ್ಷಿ ಶೆಟ್ತಿ ಸಹಾ —ಪ್ರತಿವಾದಿರು

8ನೇ ಪ್ರತಿವಾದಿ — ಶ್ರೀ ಸಂಜೀವ ಶೆಟ್ಟಿ, ದಾರಮ್ಮ ಶೆಟ್ತಿರ ಮಗ, Jalami Maudzi. Opposite Portugues Church, Gokhale Road, Dadar, Bombay-1 ಎಂಬಲ್ಲಿರುವವ ಇವರಿಗೆ.—

ವಾದಿ ದೇವಸ್ಥಾನಕ್ಕೆ ನೀವು ವಗೈರೆಯಿಂದ ಕಳೆದ ಪ್ರಭವ ಸಂವತ್ಸರದ ಆದಿಯಿಂದ ಸೌಮ್ಯ ಸಂವತ್ಸರ ಅಂತ್ಯದ ವರೇಗೆ ಬರಮೂಲಗೇಣಿ ಗೇಣಿ ಬಾಕಿ ರೂಪಾಯಿ 4864.85ನ್ನು ಬರಮಾಡುವರೆ ವಾದಿ ದೇವಸ್ಥಾನದವರು ದಾಖಲು ಮಾಡಿದ ಮೇಲ್ಕಂಡ ದಾವೆಯನ್ನು ನಿಮಗೆ ನೋಟೀಸಿನ ಬಗ್ಗೆ ತಾರೀಖು 11-1-1971ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ದಿವಸ ಪೂರ್ವಾಹ್ನ ಗಂಟೆ 11ರ ಸಮಯ ಸದ್ರಿ ಕೋರ್ಟು ಮುಂದೆ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರ್ ಹಾಜರಿಯಲ್ಲಿ ಸದ್ರಿ ದಾವೆಯನ್ನು ತೀರ್ಮಾನಿಸಲಾಗುವುದು.

(ಕೋರ್ಟು ಹುಕುಂ ಪ್ರಕಾರ)

B. Vasudeva Rao

Advocate for Plaintiff

Karkala, 19-12-70

READ &

ADVERTISE IN

NAVAYUGA WEEKLY

ಕಿವಿಗೆ ಬಿದ್ದ ಸಂಭಾಷಣೆ

(ಎರಡನೇ ಪುಟದಿಂದ)

ಕೊಟ್ಟು ನಡೆಸದಿದ್ದರೆ ಯಾವ ಪೀಡನೆಗೂ ಒಳಗಾಗುವುದಿಲ್ಲ. ಕೊಟ್ಟ ಮಾತು ನಡೆಸಿದ್ದರೆ ಪುಣ್ಯಾಪುಣ್ಯ ಕಾಣೆ? ಹಾಗಾಗಬಾರದೆಂತಲೇ ದೇವರ ಅಸ್ತಿತ್ವ ಬೇಕಾಗುತ್ತದೆ."

"ಅಂತೂ ಕಡೆಗೆ ದೇವರು ಇಳಿಗೇ ಬಂದಿರಲ್ಲಾ!"

"ಬಾರದೆ ಉಂಟೆ? ಮನುಷ್ಯನು ಮನುಷ್ಯನಿಗೆ ಕೊಟ್ಟ ಮಾತನ್ನು ತಪ್ಪಿ ತಪ್ಪಿ ಬಿಟ್ಟು ನಡೆಯಬಿಟ್ಟರೆ ಅದಕ್ಕಿಂತ ಮೇಲಿನ ಆಶ್ಚರ್ಯವಿಲ್ಲವೆಂಬುದು, ಕಾಲವ್ಯತ್ಯಾಸವಾಗಿ ನೋಡಿದಿರಾ?"

"ಅದೇನದು?"

"ಸಮಾಚಾರ ಗೊತ್ತಿಲ್ಲವೆ? ನನಗೆ ಎರಡೂವರೆ ಲಕ್ಷ ರೂಪಾಯಿ ಲಾಟರೀ ಪ್ರೈಸ್ ಬಂದರೆ ನಿಮಗೆ ಒಂದು ಲಕ್ಷ ಕೊಡುತ್ತೇನೆ ಅಂತ ಹೇಳಿದವರು, ಹೇಳಿದ ಹಾಗೇ ನಡೆದ ಸಮಾಚಾರವನ್ನು ಪತ್ರಿಕೆಗಳು ಬಾಲ್ಸ ಪಟ್ಟಿ ಪ್ರಕಟಿಸಿ 'ಮಲ್ಲಿಗೆ' ಪತ್ರಿಕೆಯಿಂದ ಆಶ್ಚರ್ಯವನ್ನು ವ್ಯಕ್ತಪಡಿಸಿ ಮನುಷ್ಯರು ಮನುಷ್ಯರ ನಡುವೆ ಇಲ್ಲಿ ಪಡೆದುಕೊಳ್ಳುವಂತಾಗಿದೆ. ಅದಕ್ಕೆ ತಾವೇ ಪ್ರತಿಯೊಂದಕ್ಕೂ ರಶೀದಿ, ಸ್ಟಾಂಪು, ಪತ್ರ, ಚೀಟಿ ಎಲ್ಲಾ ಮಾಡಿಕೊಳ್ಳುವುದು? ಅಷ್ಟು ಮಾಡಿಯೂ ಕೊಟ್ಟ ಮಾತು ನಡೆಸಬೇಕಾದರೆ ಬಹಳ ಚಪ್ಪಲಿ ಸವೆಸಬೇಕಾಗುತ್ತದೆ. ಆ ಲಾಟರೀ ಪ್ರೈಸ್ ಗಳಿಸಿಕೊಂಡವರು ಪ್ರತ್ಯಕ್ಷ ಪ್ರಯೋಜನವಾಗುವಂತಹ ಹರಕೆಯನ್ನೇ ಹೇಳಿಕೊಂಡರು. ಹೇಳಿಕೊಂಡ ಹಾಗೇ ನಡೆದೂಬಿಟ್ಟರು. ಹಾಗೆ ಮತ್ತೆ, ದೇವರ ಹೆಸರಿನಲ್ಲಿ ಹೇಳಿಕೊಂಡು ಹರಕೆ ಸಲ್ಲಿಸಿದರೋ ಅದು ಹೇಗೆ ವಿನಿಯೋಗವಾಗುತ್ತದೋ, ದೇವರಿಗೇ ಗೊತ್ತು. ದೇವರಂತೂ ಅನುಭವಿಸುವುದಿಲ್ಲವಷ್ಟೆ? ಅದರ ಬದಲಿಗೆ ತನಗೆ ತಿಳಿದ ಒಬ್ಬ ಮನುಷ್ಯನ ಹೆಸರಿನಲ್ಲೇ ಹರಕೆ ಹೇಳಿಕೊಳ್ಳುವುದು ಒಳ್ಳೆಯದಲ್ಲವೆ?"

"ಹಾಗಾದರೆ ದೇವರಿಗೆ ಹರಕೆ ಹೇಳಿಕೊಳ್ಳುವುದು ತಪ್ಪು ಅನ್ನುವಿರಿ?"

"ಹಾಗೆಂದರೆ ದೇವರ ಅಸ್ತಿತ್ವವನ್ನು ನಂಬದ ಪಾಪಾತ್ಮರು. ದೇವರ ಹತ್ತಿರ ಬೇಡಿಕೊಳ್ಳುವುದೂ ಹರಕೆ ಹೇಳಿಕೊಳ್ಳುವುದೂ ನಮಗೊಬ್ಬರಿಗೆ ಇದಾಗಬೇಕು ಲಾಭ ದೊರೆಯಬೇಕು ಎಂತಲೇ. ಇವರು ಪ್ರಾರ್ಥನೆಯುವರ ಮನೋಭಿಲಾಷೆ ನನಗೇನಾದರೂ ಹೆಚ್ಚಿಗೆ ಲಾಭ ಬಂದರೆ ಅದು ದೇವರ ದಯದಿಂದ ಅನುತ್ತೇನೆ. ಹಾಗಾದರೆ ದೇವರೇ ನನಗಾಗಿ ಕೊಡುವ, ಕೊಡಿಸುವ. ಲಾಭಗಳನ್ನು ಹುಟ್ಟಿಸುವ, ಸೃಷ್ಟಿಸಿದವನು ದೇವನೆಂದೇ ಮನಸ್ಸು ನೋಡಿ ಅದು ವಿಶೇಷ ಬೇರೆ ಕತೆ. ಈಗ ಬೇಕು, ಮುಖ್ಯ ಅವನಿಗೆ ಪಾಪ ಸಲಿಸಬೇಕಾದ್ದು ಕೃತಜ್ಞತಾರೂಪದ ಕೃತಿ ಮಾತ್ರ. ಅದು ಅವನ ಸೃಷ್ಟಿಯೊಳಗಿನ ಇತರ ಜೀವರಿಗೆ, ಪ್ರಾಣಿಗಳ ರಕ್ಷಣೆಗೆ ಇಳಿಯುವಂತಿರಬೇಕು. ಅದು ದೇವರ ಹೆಸರಿನಿಂದ ಆಗಬೇಕು. ಅದಕ್ಕಾಗಿ ದೇವಾಲಯಗಳಲ್ಲಿ ಸಂಗ್ರಹ ಸೇರಬೇಕು. ಇಂತಹ ಕೃತಜ್ಞತೆಯ ಸೇವೆ ಕಾಣಿಕೆ. ಅದನ್ನು ಬಿಟ್ಟರೆ ಇನ್ನೊಂದು ದಂಧೆವನ್ನೋ ವ್ಯಾಪಾರವನ್ನೋ ಅವನಿಗೇ ತಂದುಕೊಡುವುದು ಲಾಭಕೊಡುವುದು ಮಾತ್ರ ಬಿಸಾಡಿ ಹಾಗೆ. ಸ್ವಲ್ಪ ಮಾತ್ರ ಸಮರ್ಪಿಸುವುದೇ ಹರಕೆ-ಕಾಣಿಕೆ, ಏನಂತೀರಿ?"

"ಏನನ್ನೇ ನೀವು ಹೇಳುವುದು ಯೋಚಿಸಬೇಕಾದ ವಿಷಯವೇ. ಬರುತ್ತೇನೆ, ನಮಸ್ಕಾರ."

NATIONAL CONFERENCE IN TB & CHEST DISEASES

The Twenty-sixth National Conference on Tuberculosis and Chest Diseases will be held in Bangalore from the 2nd to 5th January, 1971. Dr. K. Somayya of Hyderabad is President of the Conference. The Mysore State TB Association will play the host.

The main Subjects selected for the conference are: 'Progress and Evaluation of National Tuberculosis Control Programme', 'Chemotherapy', 'Role of Steroids in Tuberculosis', 'Empyema', 'B.C.G.' and 'Social aspects of Tuberculosis'.

ಗುಜ್ಜಾಡಿಯ ಗುಹಾಲಯ

ಕುಂದಾಪುರ ಪಟ್ಟಣದಿಂದ ಸುಮಾರು 8 ಮೈಲು ದೂರದಲ್ಲಿರುವ ಗುಜ್ಜಾಡಿ ಎಂಬಲ್ಲಿಗೆ ಒಮ್ಮೆ ಬರಬೇಕೆಂದೂ ಅಲ್ಲಿರುವ ಪ್ರಾಚೀನ ಅವಶೇಷಗಳನ್ನು ಅವಲೋಕಿಸಬೇಕೆಂದೂ ನನ್ನ ಮಿತ್ರರೊಬ್ಬರು ಒಂದು ವರ್ಷದಿಂದ ಒತ್ತಾಯ ಮಾಡಿದ್ದರು. ಇದೇ ತಾರೀಕು 6ಕ್ಕೆ ನನ್ನ ಸಹೋದ್ಯೋಗಿಯೂ, ಹಾಗೂ ನಮ್ಮ Indological Association ನ ಕಾರ್ಯದರ್ಶಿಗಳಾದ ಡಾ. ರಾಜಗೋಪಾಲರನ್ನು ನನ್ನ ಮಿತ್ರರಾದ ವಸಂತರಾಯರ ಜೊತೆಯಲ್ಲಿ ಕರೆದುಕೊಂಡು ಗುಜ್ಜಾಡಿಗೆ ಹೋಗಿದ್ದೆ. ಅಲ್ಲಿನ ಐತಿಹಾಸಿಕ ವಿವರಗಳು ನನಗೆ ತಿಳಿದುಬಂದಂತೆ ಈ ಕೆಳಗೆ ಕೊಟ್ಟಿದ್ದೇನೆ.

ಗುಜ್ಜಾಡಿ ಎಂದರೆ ಗುಜ್ಜರವಾಡಿ ಎಂಬುದರ ರೂಪಾಂತರವಿರಬೇಕು. ಮಧ್ಯಕಾಲೀನ ಶಾಸನಗಳಲ್ಲಿ ಈ ಹೆಸರು ಉಲ್ಲೇಖಗೊಂಡಿದೆ. ಗೂರ್ಜರ ಒಂದು ಸಮುದಾಯದ ಜನರ ಕುಟುಂಬಗಳು ಇಲ್ಲಿ ವಾಸ್ತವ್ಯವಾಗಿದ್ದಿರಬೇಕು.

ಗುಜ್ಜಾಡಿಯ ಪ್ರಧಾನ ಪ್ರದೇಶದಲ್ಲಿ ಪ್ರಶಾಂತ ವಾತಾವರಣದಲ್ಲಿ ಗುಹೇಶ್ವರವೆಂದು ಕರೆಯಲ್ಪಡುವ ಒಂದು ಗುಹಾಲಯವಿದೆ. ಇದು ಜೀರ್ಣೋದ್ಧಾರಗೊಂಡು ನಯನ ಸೆಳೆಯುವಂತಹದಾಗಿದೆ. ಇದಕ್ಕೆ ಸಂಬಂಧಿಸಿದ ಕಟ್ಟಡಗಳೆಲ್ಲಾ ಅರ್ವಾಚೀನವಿದ್ದಂತೆ ಕಂಡು ಬರುತ್ತದೆ.

ಗುಹೇಶ್ವರನ ಗುಹೆಗೆ ಹೋಗುವ ಮೊದಲು ಮರಗಳಲ್ಲಿನ ಛಾಯೆಯಂತೆ ಮಧ್ಯ ಕಂಡು ಬರುವ ಒಂದು ಗಣೇಶ ಗುಡಿಯಿದೆ. ಇದಕ್ಕೆ ಭಕ್ತಾದಿಗಳ ಸೇವೆ ತಕ್ಕಮಟ್ಟಿಗೆ ದೊರಕುವಂತಿದೆ. ಗಣೇಶನೆಂದು ಆರಾಧಿಸಲ್ಪಡುವ ಈ ಬಿಂಬವು ಬಹುಪ್ರಾಚೀನವೆನ್ನುವ ಲಕ್ಷಣಗಳು ದೊರೆಯುವುದಿಲ್ಲ. ಇದರ ಸಮೀಪ ಕ್ರಿ.ಶ. 1412ಕ್ಕೆ ಅನ್ವಯಿಸುವ ಒಂದು ಶಿಲಾಶಾಸನವು ಅಂಗಳದಲ್ಲಿ ನೆಟ್ಟಿದೆ. ಇದನ್ನು ಸಂಪೂರ್ಣವಾಗಿ ಓದಲು ಸಾಧ್ಯವಾಗಲಿಲ್ಲ. ಇದು ವಿಜಯನಗರದ ದೇವರಾಯನ ಕಾಲದ ಶಾಸನವಾಗಿದೆ. ಪ್ರಾಯಶಃ ಈ ದೇವಾಲಯಕ್ಕೆ ಬಿಟ್ಟ ದತ್ತಿಯ ವಿಚಾರ ನಮೂದಿಸಿದ್ದಿರಬಹುದು.

ಗುಹೇಶ್ವರ ದೇವಾಲಯವು ಒಂದು ಸ್ವಾಭಾವಿಕ ಗುಹೆಯಾಗಿದೆ ಎನ್ನಬಹುದು. ಇದು ಪ್ರಾಕೃತಿಕ ಹರಳುಗಳ ಗುಹೆಯಾಗಿದ್ದಿರಬೇಕು. ಒಬ್ಬ ಮನುಷ್ಯ ಬಗ್ಗಿ ಒಳ ಹೋಗುವಷ್ಟು ದ್ವಾರದಲ್ಲಿದೆ. ಒಳ ಹೊಕ್ಕು ಸ್ವಲ್ಪ ಮುಂದೆ ಕೆಳಗಿಳಿದು ಮುಂದೆ ಸರಿದಾಗ ಸುಮಾರು 10-12 ಮಂದಿ ನಿಲ್ಲಬಹುದಾದಷ್ಟು ಸ್ಥಳವಿದೆ. ಈ ಸ್ಥಳ ಒತ್ತಿಗೆ 6 ಮಂದಿ ಕುಳಿತು ಕೊಳ್ಳುವಷ್ಟು ಖಾಲಿ ಜಾಗವಿದೆ. ಇಲ್ಲಿ ನೆಲದ ತಳದಲ್ಲಿ ಬೇರೂರಿದ ಕಲ್ಲಿನಂತಿರುವ ಲಿಂಗವು ಗುಹೇಶ್ವರನಾಗಿ ಆರಾಧಿಸಲ್ಪಡುತ್ತಾನೆ. ಮಧ್ಯಕಾಲೀನ ಗಾತ್ರದ ಚಿಕ್ಕದಾದ ಒಂದು ದೇವೀ ವಿಗ್ರಹವೂ (ಮಹಾಕಾಳಿ ಇರಬಹುದೇ?) ಒಂದು ನಂದಿಯೂ ಭಿನ್ನವಾದ ಮೂರು ವೇಣುಗೋಪಾಲಕೃಷ್ಣ ವಿಗ್ರಹಗಳೂ ಇವೆ. ಶನಿಕಪಲ್ಲಿಯೋ ಮಂಟಪದಲ್ಲಿನ ತಿರುಗಣೆಯೇ ಇರುವ ಮೂರು ಶಿಲೆಗಳು ಷಣ್ಮುಖನೆಂಬುದಾಗಿ ಸೇವೆ ಸ್ವೀಕರಿಸುತ್ತಿವೆ. ಅರ್ಚಕರಾದ ಶ್ರೀ ಮಂಜುನಾಥ ಭಟ್ಟರು ದಿನಕ್ಕೆ ಎರಡಾವರ್ತಿ ಪೂಜೆಯನ್ನು ಸಲ್ಲಿಸುತ್ತಾರೆ. ಇದು ಸ್ತುತ್ಯಾರ್ಹವಾಗಿದೆ. ಈ ದೇವಾಲಯಕ್ಕೆ ರೂ. 72/- ವರ್ಷಕ್ಕೆ ತಸ್ತೀಕು ಬರುತ್ತದೆ. ಜೀರ್ಣೋದ್ಧಾರ ಮಾಡಿದಾಗ ಈ ದೇವಾಲಯದ ಕಾಲವನ್ನು ವಿಜಯನಗರದ ಕಾಲವಾಗಬಹುದೆನ್ನಿಸುತ್ತದೆ.

ಗುಜ್ಜಾಡಿಯಲ್ಲಿ ಇನ್ನಿತರ ಮೂರು ಶಾಸನಗಳೂ ಕಂಡು ಬರುತ್ತವೆ. ಇವೆಲ್ಲವೂ ಕ್ರಿ. ಶ. 14—15ನೇ ಶತಮಾನದವುಗಳಾಗಿವೆ. ಶ್ರಮವಹಿಸಿ ಜಾಗರೂಕರಾಗಿ ಇವುಗಳನ್ನು ಓದಬೇಕಷ್ಟೆ!

ಗುಜ್ಜಾಡಿಗೆ ಸಂದರ್ಶನವಿತ್ತಾಗ ಇನ್ನೊಂದು ವಿಶೇಷ ಸಂಗತಿಯು ತಿಳಿಯಿತು. ವಂಶಪಾರಂಪರ್ಯವಾಗಿ ಶ್ರೀ ವೂಡ್ ಶ್ರೀನಿವಾಸ ಕೊಡಂಚ ಮತ್ತು ಶ್ರೀ ವಸಂತ ಕೊಡಂಚ ಎಂಬವರ ಮನೆಯಲ್ಲಿ ಸುಮಾರು 200 ವರ್ಷಗಳಷ್ಟು ಪ್ರಾಚೀನವಾಗಬಹುದಾದ 10 ಬಣ್ಣದ ಚಿತ್ರಗಳನ್ನು ಕಂಡೆವು. ಶ್ರೀ ಶ್ರೀನಿವಾಸ ಕೊಡಂಚರು ಅಭಿಪ್ರಾಯ ಪಡುವಂತೆ ಅವರ ಚಿಕ್ಕಂದಿನಲ್ಲಿರುವಾಗ 64 ಇಂತಹ ಬಣ್ಣದ ಚಿತ್ರಗಳು ಗಾಜಿನ ಮೇಲೆ ಬರೆದಿದ್ದು ಈಗ ಬರೇ 10 ಮಾತ್ರ ಉಳಿದಿವೆ. ಇವುಗಳನ್ನು ಗಂಗೊಳ್ಳಿಯ ಮುಸಲ್ಮಾನ್ ಕುಟುಂಬ ಒಂದು ತಯಾರಿಸಿಕೊಟ್ಟಿತ್ತಂತೆ. ಇವುಗಳ ವಿವರ ಹೀಗಿದೆ. ಐದು ಚಿತ್ರಗಳು 15"×12" ಗಾತ್ರದವುಗಳಾಗಿವೆ. ಐದು ಚಿತ್ರಗಳು 18"× 5" ಗಾತ್ರದವುಗಳಾಗಿವೆ. ಬಾಲ್ಯಶೃಂಗಾರದಿಂದ ಕೂಡಿದ ಹೆಂಗಸರ ಚಿತ್ರಗಳಾಗಿವೆ. ಒಂದು ಬೆಣ್ಣೆ ಕೃಷ್ಣನದು; ಒಂದು ಕಾಳಿಂಗ ಮರ್ದನ ಕೃಷ್ಣನದು; ಒಂದು ರಾಮ ಪಟ್ಟಾಭಿಷೇಕ ನಿರೂಪಿಸುವಂತಹುದು; ಒಂದು ಲಂಕೆಯಲ್ಲಿದ್ದ ಸೀತಾದೇವಿಯನ್ನು ಆಂಜನೇಯನು ದರ್ಶನ ಮಾಡುವಂತಹುದು; ಒಂದು ಸರಸ್ವತಿಯ ಚಿತ್ರ; ಇನ್ನೊಂದು ರಾಜಭವನದ ಚಿತ್ರ. ಇವು ಕಲಾದೃಷ್ಟಿಯಿಂದ ಅತ್ಯಮೂಲ್ಯವಾದವುಗಳಾಗಿವೆ. ಇವುಗಳೆಡೆಗೆ ನಮ್ಮ ಗಮನವನ್ನೆಳೆದ ಶ್ರೀ ಕೊಡಂಚರಿಗೆ ಕೃತಜ್ಞತೆಗಳು.

—ಡಾ। ಪಿ. ಗುರುರಾಜ ಭಟ್ಟ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಪೂರೈಸುವ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit — ಫೋನ್. 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0-75 ಪೈಸೆ ಮಾತ್ರ,
ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಲಾಗುವುದು
ನವಭಾರತ ಪುಸ್ತಕ ಭಂಡಾರ
ಕಾಲುಕೋಟೆ, ಉಡುಪಿ, ದ. ಕ.

NAVAYUGA 24—12—1970
Registered with the Registrar of News Papers for India under No. R. N. 3546/'57

REGD. No. B. ೭. 176
LICENCE No. 33,
Licensed to Post without Prepayment

ರಜಾ...ರಜಾ...ರಜಾ

(ಒಂದನೇ ಪುಟದಿಂದ)

ಧ್ಯಾಪಕನಾದರೂ ಏಕೆ ಬಿಡಬೇಕು? ಬೇಡಿದೊಡನೆ ತಲೆನೋವು ಬಂದೇ ಬರುತ್ತದೆ. ಅಧ್ಯಾಪಕನಿಗೆ ರಜಾ ಶಿಷ್ಯನಿಗೆ ಆರಾಮ!

ಹೀಗೆ ಅಂತಹುದೇ ಸ್ವಾತಂತ್ರ್ಯವಿರುವ ಈಗಿನ ವಿದ್ಯಾಪದ್ಧತಿಯಲ್ಲಿ ದುಡಿತವೆಲ್ಲಿದೆ? ಹಾಗಿರುತ್ತ ಮತ್ತೆ, ವಿಶ್ರಾಂತಿ ಏಕೆ? ಕೆಲವು ಮಂದಿ ಅಧ್ಯಾಪಕರು ಖಾಸಗೀ ಪಾಠಗಳನ್ನು ಮನೆಯಲ್ಲಿ ಧಾರಾಳವಾಗಿ ಆರಾಮವಾಗಿಯೇ ಶಾಲೆಗೆ ಬರುವುದೂ ಇದೆಯಂತೆ!

ಕಛೇರಿಗಳ ವಿಚಾರವಂತೂ ಇನ್ನೂ ವಿಚಿತ್ರ. ಬರುವುದು ತಡ ಹೋಗುವುದು ಬೇಗ, ಬಂದ ಬಳಿಕವೂ ಅವರಿವರ ಪ್ರಮೋಶನ್ ಸಮಾಚಾರ, ಕಡಿಮೆ ಕೆಲಸ ಹೆಚ್ಚು ವೇತನಗಳ ವಿಚಾರ ವಿಮರ್ಶೆ, ದೊಡ್ಡವರ ಅಥವಾ ಸಿನೆಮಾ ತಾರೆಯರ ಜೀವನ ಕಥೆ ಇವೆಲ್ಲ ಮುಗಿಯುವ ವೇಳೆ "ಲಂಚ್ ಇಂಟರ್ವಲ್" ಬಂದೇ ಬರುತ್ತದೆ. ಅದಾದ ಬಳಿಕ ಕೆಲಸಕ್ಕೆ ತೊಡಗಿದರೂ ಜವಾಬ್ದಾರಿಯನ್ನು ಇನ್ನೊಬ್ಬರ ಮೇಲೆ ಹಾಕಿ ಫೈಲ್ ದೂಡುವುದು ಕಾಲಹರಣ ಮಾಡುವುದೇ—ಇದೇ ಹೆಚ್ಚಿನವರ ಉದ್ದೇಶವಾಗಿರುವುದಲ್ಲದೆ ಕೆಲಸ ಸಾಗಿಸುವುದೆಲ್ಲ ಇಂತಹ ಕೆಲಸದಿಂದ ಆಯಾಸವೇ ಆಗುವುದು. ಸಾಧ್ಯವಿಲ್ಲದಿರುವಾಗ ವಿರಾಮವೇಕೆ ಬೇಕು?

ಸಂತೋಷದ ದುಡಿಮೆ

ಪರಿಶ್ರಮ ಪಟ್ಟಾಗ ಆಯಾಸವಾಗುವುದು ವ್ಯಕ್ತಿಯ ಅಭಿರುಚಿ ಅಭ್ಯಾಸಗಳನ್ನೂ ಹೊಂದಿಕೊಂಡಿದೆ: ಇದೀಗ ಮನಶ್ಶಾಸ್ತ್ರಜ್ಞರ ಸಿದ್ಧಾಂತ. ಕ್ರಿಕೆಟ್ ಆಟ ಪ್ರಿಯರಿಗೆ ಬೆಳಗಿನಿಂದ ಸಾಯಂಕಾಲದವರೆಗೆ ಆ ಬಿಸಿಲಲ್ಲಿ ಆಡುವುದಾಗಲಿ ನೋಡುವುದಾಗಲಿ ವಿನೋದದ ವಿಚಾರ. ಆ ಆಟದಲ್ಲಿ ಅಭಿರುಚಿ ಇಲ್ಲದಾತನಿಗೆ ಅದು ತಲೆ ನೋವಿಗೆ ಕಾರಣ. ನಡು ರಾತ್ರಿಯವರೆಗೆ ಕಾದಂಬರಿ ಓದುವುದು, ಇಸ್ಪೀಟ್ ಆಡುವುದು ಇವೆಲ್ಲ ಕೆಲವರಿಗೆ ವಿನೋದ. ಕೆಲವರಿಗೆ ಬೇಸರ. ಇದೇ ತರದಲ್ಲಿ ತನ್ನ ಕೆಲಸವನ್ನು ಮೆಚ್ಚಿ ಸಂತೋಷದಿಂದ ದುಡಿಯುವವನಿಗೆ ಕೆಲಸವೂ ತೃಪ್ತಿ ಸಂತೋಷಗಳನ್ನು ಕೊಡುವುದು. ಕೆಲವು ಸಮರ್ಥ ಅಧ್ಯಾಪಕರು ತರಗತಿಗೆ ನಗುಮೊಗದಿಂದಲೇ ಹೋಗುವರು. ಸರಳವಾದ ಭಾಷೆಯಲ್ಲಿ ವಿನೋದಮಯವಾದ ಶೈಲಿಯಲ್ಲಿ ಗಹನ ವಿಚಾರವನ್ನು ವಿವರಿಸುವರು. ಅವರ ಪಾಠದ ಒಂದು ಘಂಟೆ ಸಾಗಿದ್ದೇ ತಿಳಿಯುವುದಿಲ್ಲ. ಗುರುವಿಗೂ ಶಿಷ್ಯನಿಗೂ ತರಗತಿಯಲ್ಲಿ ಆಯಾಸವೇ ಆಗುವುದಿಲ್ಲ. ಅದರ ಬದಲಾಗಿ ಹರಳೆಣ್ಣೆ ಮುಖ ಮಾಡಿಕೊಂಡು ದುರುಗುಟ್ಟುತ್ತ ಬುಸುಗುಟ್ಟುವ ಅಧ್ಯಾಪಕ ಎಲ್ಲರನ್ನೂ ಸಾಕು ಸಾಕಾಗಿಸುತ್ತಾನೆ. ಇದೇ ತರ ಎಲ್ಲ ಕೆಲಸದಲ್ಲಿ ತೊಡಗಿದ ಕೆಲಸ ಕಛೇರಿಯಲ್ಲಾಗಲಿ, ಕಾರ್ಖಾನೆಯಲ್ಲಾಗಲಿ ಉತ್ಸಾಹ ಧಣಿ ಜೀತಕ್ಕೆ ಬೇಕಾದುದು. ಎಂಬ ತೃಪ್ತಿ ಸಂತೋಷದಿಂದ ನಡೆಸಬೇಕು. ಆಗ ದುಡಿಮೆಯಿಂದ ಆಯಾಸವಾಗುವುದಿಲ್ಲ. ಇದು ಮನಶ್ಶಾಸ್ತ್ರಜ್ಞರ ಅಭಿಪ್ರಾಯ; ಅನುಭವದ ವಿಚಾರವೂ ಹೌದು. ಹಾಗಿರುತ್ತ ದುಡಿತದಿಂದ ಆಯಾಸ, ಆಯಾಸ ಪರಿಹಾರಕ್ಕಾಗಿ ವಿರಾಮ, ರಜಾ ಎಂಬೀ ವಿಚಾರದಲ್ಲೂ ಪುನರಾಲೋಚನೆ ಅಗತ್ಯ.

ಮನಸ್ಸಿಲ್ಲದೆ ತರಗತಿಗೆ ಹೋಗುವ ವಿದ್ಯಾರ್ಥಿಗೆ ಪಾಠವೆಂದರೆ ತಲೆನೋವು. ಒಂದು ಘಂಟೆಯ ಅಭ್ಯಾಸವೆಂದರೆ ಒಂದು ಯುಗವೇ ಉರುಳಿದಂತೆ. ಅದೇ ರೀತಿಯಲ್ಲಿ ಮೇಲಧಿಕಾರಿಗೆ, ಕೆಳನೌಕರರಿಗೆ ಶಾಪಕೊಡುತ್ತ ಜೋಲು ಮುಖದಿಂದ ಕಛೇರಿಗೆ ಹೋಗುವಂತೆ ಒಂದೇ ಘಂಟೆಯ ಕೆಲಸದಿಂದ ನೌಕರ ಸುಸ್ತಾಗುತ್ತಾನೆ. ನಾಲ್ಕಾರು ವರ್ಷದ ಸೇವೆಯಿಂದಲೇ ನಿರ್ಜೀವ ಜಂತುವಾಗುತ್ತಾನೆ. ಇವೆಲ್ಲ ಅವರವರು ತಮ್ಮ ಕೆಲಸದಲ್ಲಿ ತೋರುವ ಬೇಸರ ವೈರಾಗ್ಯಗಳಿಂದಾಗಿ.

ಮುಷ್ಕರದ ರಜಾ

ನಮ್ಮ ದೇಶದಲ್ಲಿ ಇತ್ತೀಚೆಗೆ ಮೂಡಿ ಬೆಳೆಯುತ್ತಿರುವ ಇನ್ನೊಂದು ದೊಡ್ಡ ಗಂಡಾಂತರವೆಂದರೆ ಸಂಪು, ಮುಷ್ಕರಗಳು. ಅದರಿಂದೊದಗುವ ಅನಾವಶ್ಯಕ ರಜಾಗಳು. ದಿನ ಬೆಳಗಾದರೆ ಶಾಲಾ ಕಾಲೇಜುಗಳಲ್ಲಾಗಲಿ, ದೊಡ್ಡದೊಡ್ಡ ಕಛೇರಿ ಕಾರ್ಖಾನೆಗಳಲ್ಲಾಗಲಿ ಒಂದಲ್ಲ ಒಂದು ನೆಪದಿಂದ ಮುಷ್ಕರ ಮೇಲಧಿಕಾರಿಗಳಿಂದ ಸಂಸ್ಥೆಯ ಬಂದ್ Lock-out ಇದರಿಂದಾಗಿ ಎಷ್ಟೋ ಜನರಿಗೆ ಬಲಾತ್ಕಾರದ ರಜಾ.

ಉಚ್ಚ ಶಿಕ್ಷಣ ಯಾವ ದೇಶದಲ್ಲೂ ಕಡ್ಡಾಯವಾಗಿಲ್ಲ. ನಮ್ಮಲ್ಲಂತೂ ಪ್ರಾಥಮಿಕ ಶಿಕ್ಷಣ ಕಡ್ಡಾಯಗೊಳಿಸುವುದೇ ಸಂಪೂರ್ಣ ಸಾಧ್ಯವಾಗಿಲ್ಲ. ಉಚ್ಚಶಿಕ್ಷಣದ ಮಾತು ದೂರ ಉಳಿಯಿತು. ಬದಲು ಮನಸ್ಸಿಲ್ಲದ ಯುವಕರು ಒತ್ತಾಯದಿಂದ ಕಾಲೇಜಿಗೆ ಸೇರುವುದೇ ಅನಾವಶ್ಯಕ. ಸೇರಿದ ಬಳಿಕ ತಾನು ಓದದೆ ಇತರರೂ ಓದಬಾರದೆಂದು ಮುಷ್ಕರ ಸಂಘಟಿಸುವುದರಲ್ಲೇನರ್ಥ? ಹೆಚ್ಚಿನ ವಿದ್ಯಾಸಂಸ್ಥೆಗಳ ಮುಷ್ಕರ, ಆ ಮೂಲಕ ಬಲಾತ್ಕಾರದ ರಜಾಗಳಿಗೆ ಶೇಕಡಾ [illegible] ಕಡಿಮೆಯಾದ ಸೋಮಾರಿಗಳೇ ಕಾರಣ. ಉಳಿದವರೆಲ್ಲ ಓದುವ ಬಯಕೆಯವರೇ. ಆದರೆ ಅವರು ಗೂಂಡಾಗಿರಿಗೆ ಪ್ರತಿಗೂಂಡಾಗಿರಿ ಮಾಡುವವರಲ್ಲವಾದ್ದರಿಂದ ಪರಿಸ್ಥಿತಿ ವಿಕೋಪಗೊಳ್ಳುತ್ತಿದೆ.

ಅದಕ್ಕಾಗಿ ಅಂತಹ ಸಮಾಜ ದ್ರೋಹಿಗಳನ್ನು ನಿರ್ದಾಕ್ಷಿಣ್ಯವಾಗಿ ಶಿಕ್ಷಣ ಸಂಸ್ಥೆಯಿಂದ ದೂರವಿಡಬೇಕು. ಅಥವಾ ಶಿಕ್ಷಿಸಲು ಸಮಾಜ ಹಾಗೂ ಸರ್ಕಾರ ಸಿದ್ಧವಿರಬೇಕು. ಶಾಸನಗಳನ್ನು ಮುರಿಯುವ, ಸಮಾಜ ಘಾತಕ ಕಾರ್ಯ ಮಾಡುವ ವಿದ್ಯಾರ್ಥಿಯಿರಲಿ, ವಿದ್ವಾಂಸನಿರಲಿ, ಕ್ಷಮಾರ್ಹನಲ್ಲವೆಂದಾಗಬೇಕು. ಆಗ ಮಾತ್ರ ದೇಶ ಉಳಿಯಲು ಸಾಧ್ಯ.

ನಮ್ಮ ದೇಶದ ಹೆಚ್ಚಿನ ನೌಕರ ಮ[illegible]ಗಳಿಗೆ ಮೂಲ "ಕಡಿಮೆ ಕೆಲಸ, ಹೆಚ್ಚು ಸಂಬಳ"ದ ಮಂತ್ರ. ಕೇಂದ್ರ ರೈಲ್ವೆ ನಿಲ್ದಾಣದಿಂದ ಒಂದು ರೈಲು ಗಾಡಿ ಹೊರಡುವಾಗ ಹತ್ತಾರು ಗಟ್ಟಿಮುಟ್ಟಾದ ಜನ ಒಳಹೊಕ್ಕು, ಹಾಸಿಗೆ ಬಿಡಿಸಿ ಮಲಗಿಕೊಂಡು ಮತ್ತಾರನ್ನೂ ಮುಂದಿನ ನಿಲ್ದಾಣದಲ್ಲಿ ಒಳಹೋಗಲು ಬಿಡದಿದ್ದರೇನಾಗಬಹುದು? ಒಳಗಿದ್ದವರೇ ನೇರ ಸುಖವಾಗಿ ಸಾಗಬಹುದು. ಉಳಿದವರೆಲ್ಲ ಪ್ರಯಾಣವಿಲ್ಲದೆ ಸುಮ್ಮನಿರಬೇಕಾಗಬಹುದು.

ಅದೇ ತರದಲ್ಲಿ ಕಾರ್ಖಾನೆಯಲ್ಲೋ ಬ್ಯಾಂಕಿನಲ್ಲೋ ಕಡಿಮೆ ಕೆಲಸ, ಹೆಚ್ಚಿನ ವೇತನಕ್ಕೆ ಬಲಾತ್ಕಾರ ಮಾಡಿದರೆ ಸಂಸ್ಥೆಯನ್ನೇ ಮುಚ್ಚಬೇಕು; ಇಲ್ಲವೇ ಕೆಲಸಗಾರ ಹೇಳಿದಂತೆ ಕೇಳಿ ಮುಂದಿನ ಅನರ್ಥಗಳಿಗೆ ಸಿದ್ಧನಾಗಿರಬೇಕು. ಬಂಗಾಳದ ಎಷ್ಟೋ ಸಂಸ್ಥೆಗಳು (ನೌಕರರಿಗೆ ಕೈತುಂಬ ಸಂಬಳ ಕೊಡುತ್ತಿದ್ದವುಗಳು ಸಹ) ಸಂಪಿನ ಕಾವು ತಡೆಯಲಾರದೆ ಕಾರ್ಖಾನೆ ಮುಚ್ಚಬೇಕಾಯಿತು. ಕೆಲಸಗಾರರು ಬೀದಿಪಾಲಾಗಬೇಕಾಯಿತು. ಇನ್ನು ಕೆಲವು ಸಂಸ್ಥೆಗಾರರು ಎರಡನೇ ದಾರಿ ಹಿಡಿದ ಪರಿಣಾಮ ಲಾಭಾಂಶ ಕುಂಠಿತ. ಸಂಸ್ಥೆ ಬೆಳೆಯದೆ ಹೊಸ ಉದ್ಯೋಗಾವಕಾಶ ಕುಂದಿ ದೇಶದ ನಿರುದ್ಯೋಗಿಗಳ ಸಂಖ್ಯೆ ಮತ್ತಷ್ಟು ಹೆಚ್ಚಿದಂತಾಯಿತು.

ಮುಷ್ಕರ, ನಿಧಾನದ ಕೆಲಸ ಇವುಗಳಿಂದ ಕಂಗೆಟ್ಟ ಮತ್ತೆಷ್ಟೋ ಮಾಲಿಕರು ಯಂತ್ರೀಕರಣಕ್ಕೆ ತೊಡಗಿ ಗಣಕಯಂತ್ರಗಳ ಮೂಲಕ ಹೆಚ್ಚಿನ ಕೆಲಸ ನಡೆಸಲು ನೌಕರರೇ ಕಾರಣರಾದರು. ಅದರ ಪರಿಣಾಮವಾಗಿಯೂ ಹೊಸ ಉದ್ಯೋಗಾವಕಾಶ ಕಡಿಮೆಯಾಗಿ ದೇಶದ ನಿರುದ್ಯೋಗ ಬವಣೆಗಳು ಮತ್ತಷ್ಟು ಹೆಚ್ಚುವಂತಾಯಿತು. ಮೊದಲು ರೈಲು ಹತ್ತಿ ಮಲಗಿಕೊಂಡವರು ಸುಖವಾಗಿ ಪಯಣ ಹೋದರು. ಉಳಿದವರನ್ನು ಕೇಳುವವರಾರ?

ಹೊಸ ಕ್ರಾಂತಿ ಬರಲಾರದೆ?

ಇತ್ತೀಚೆಗೆ ನಮ್ಮ ಘನಸರ್ಕಾರ ಮಾಜೀ ರಾಜರ ರಾಜಧನ ರದ್ದುಗೊಳಿಸಿತು. ಸ್ವತಃ ಬೇಸಾಯ ಗೈಯದೆ ಭೂಮಾಲಿಕರಿಂದ ಭೂಮಿಯನ್ನು ಕಿತ್ತುಕೊಳ್ಳಲಾಯಿತು. "ದುಡಿಮೆಯಿಲ್ಲದೆ ದುಡ್ಡು ಕಾಸು ದೇಶಕ್ಕೇ ಹಾಳು" ಎಂಬೀ ಸಮಾಜವಾದದ ತತ್ವಕ್ಕನುಗುಣವಾಗಿದೆ ಎಂದು ಕ್ರಾಂತಿಕಾರರೆಲ್ಲ ಇದನ್ನು ಬಾಯಿ ತುಂಬ ಹೊಗಳಿದರು.

ಆದರೆ ಇದೇ ತತ್ವವನ್ನು ಮುಂದಕ್ಕೊಯ್ದರೆ? [illegible]ಗಳಲ್ಲಿ ಮಾಸೋ, ನಾಪಾಸೋ ಆದ ನೌಕರರಿಗೆ ದಿನ ಬರೇ ನಾಲ್ಕು ಘಂಟೆಯ ಕೆಲಸಕ್ಕೆ ಬರುವ ರೂ. 300-400ರ ವೇತನ ಸಾಲದೆಂದು ಇತ್ತೀಚೆ ಬ್ಯಾಂಕ್ ನೌಕರರ ಮುಷ್ಕರ [illegible] ಸರ್ಕಾರ ಬಗ್ಗಿರುವುದು. ಅವರ ಸಂಬಳ ಮತ್ತಷ್ಟು ಏರಿತ.

ಗ್ರಾಮದ ದಣಿಗಳಲ್ಲಿ ಕೆಲಸಕ್ಕೆಂದು ಪದವೀಧರರಿಗೆ ನಾನೂರು ರೂಪಾಯಿ ವೇತನದ ಕೆಲಸವೂ ಸಿಗದಿದ್ದರೆ ತಪ್ಪೇನಂತೆ? ಬೆವರು ಸುರಿಸಿ ಕೆಲಸದಲ್ಲಿ ದುಡಿದ ಬಡ ರೈತರಿಗೆ ತಿಂಗಳಿಗೆ ಐವತ್ತು ರೂಪಾಯಿಯ ವರಮಾನವೂ ಬರದಿದ್ದರೆ ಹಾಳಾಗಿ ಹೋಗಲಿ! ತನಗಂತೂ ಕೈ ತುಂಬ ಹಣ ಬರಬೇಕು. ಧಾರಾಳ ರಜಾ ವಿರಾಮಗಳು ಬೇಕು. ಇಲ್ಲವಾದರೆ ಅನಿರ್ದಿಷ್ಟ ಕಾಲದ ಮುಷ್ಕರ! ಈ ತರನ ಸಮಾಜವಾದ ಬೆಳೆಯುತ್ತಿದೆ.

ದೂರದೃಷ್ಟಿಯಿಂದ ನೋಡಿದರೆ ಇವೆಲ್ಲ ಬಹಳ ಕಾಲ ಬಾಳಲಾರವು. ರಾಜ ಜಮೀನ್ದಾರರ ಹೆಚ್ಚಿನ ಹಣವನ್ನು ಕಸಿದುಕೊಂಡಂತೆಯೇ "ಕಡಿಮೆ ದುಡಿತ ಹೆಚ್ಚಿನ ವೇತನ"ವೂ ಹೊಸ ಕ್ರಾಂತಿಗಾಮಂತ್ರಣವಿತ್ತು ನಿರ್ನಾಮವಾಗುವುದು ನಿಶ್ಚಯ. ಕೆಲವು ಕ್ರಾಂತಿಕಾರರಾದರೂ ರೈಲು ಗಾಡಿಯ ಬಾಗಿಲೊಡೆದು ಒಳಹೋಗಿ ಮಲಗಿದ್ದವರನ್ನು ಎಬ್ಬಿಸದೇ ಬಿಡುವುದಿಲ್ಲ. ಕೆಲವರು ಮಲಗಿ ಹೆಚ್ಚಿನವರು ಹೊರಗೋ ಒಳಗೋ ನಿಲ್ಲುವಂತಾದರೆ ಯಾರೆಷ್ಟು ಸಹಿಸಿಯಾರು? ಎಲ್ಲರೂ ಕುಳಿತುಕೊಳ್ಳೋಣ ಎಂದು ಬಲಾತ್ಕಾರ ನಡೆಸಲಾರದೇ? ದೇಶ ಹೀಗಾದರೆ ಏನೇನ? ನಾನೊಬ್ಬ ಬೆಚ್ಚಗೆ ಮಲಗಿದ್ದರೆ ಸಾಕು ಎಂಬ ಮನೋಭಾವ ಎಂದಿಗೂ ಅಪಾಯಕಾರಿ.

(ಕೃಪೆ-ಕನ್ನಡ ಪ್ರಭ)

ದಯಮಾಡಿ
ನಿಮ್ಮ ಬಾಕಿ ಚಂದಾ
ಹಣವನ್ನು ಕಳುಹಿಸಿರಿ

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ 50
ಸಂಚಿಕೆ 17

NAVAYUGA

31—12—1970

(ಒಂದು ಪರಿಚಯ) ಶ್ರೀ ಬಡೆಕ್ಕಿಲದವರ 'ಸೂಕ್ತಿವಾದ'

ಲೇಖಕರು—
ದೇವಕಿನಂದನ

ಬರೆದವರು—ಬಡೆಕ್ಕಿಲ ನೆಂಕಟರಮಣ ಭಟ್
ಪ್ರಕಟಣೆ—1960. ಬೆಲೆ ಅರ್ಧ ರೂಪಾಯಿ.
ಆದರ್ಶ ಪ್ರೆಸ್, ಪುತ್ತೂರು, ದ. ಕ.

ಆಕರ್ಷಕ ರಕ್ಷಾ ಕವಚವಿಲ್ಲ. ಮುಖ ಪುಟದಲ್ಲಿ ಅರೆಬೆತ್ತಲೆ ನಿಂತ ಹೆಣ್ಣಿನ ಕಣ್ಸೆಳೆವ ಬಣ್ಣದ ಚಿತ್ರವಿಲ್ಲ. ಸೂಕ್ತಿವಾದ ಪುಸ್ತಕದಲ್ಲಿ ಸಾಮಾನ್ಯವಾಗಿ ಕಾಣ ಬರುವ ಯಾವ ಬಾಹ್ಯಾಡಂಬರವೂ ಇಲ್ಲ. ಅದು ತನ್ನ ಸ್ವಂತ ಯೋಗ್ಯತೆಯ ಮೇಲೆ ನಿಲ್ಲಬಯಸುವಂತಿದೆ.

ಸೂಕ್ತಿವಾದ—ಈ ಹೆಸರು ಕೇಳಿಯೇ ಹಲವರು ಕೊಳ್ಳಲು ಹಿಂಜರಿಯಬಹುದು. ಹಳೆಯ ಕಂತೆ ಪುರಾಣವೆಂದು ಹಲವರು ಓದಲು ಹಿಂದೆಗೆಯಬಹುದು ಅದರ ಮೇಲೆ ಅದೊಂದು ಕಾವ್ಯ!

ಯಾರಿಗೆ ಬೇಕಾಗಿದೆ? ಆದರೂ ಸೂಕ್ತಿವಾದ—ರಾಶಿ ರಾಶಿಯಾಗಿ ಬೀಳುತ್ತಿರುವ ಕಸದ ರಾಶಿಯಲ್ಲಿ—ಕಣ್ಣಿಗೆ ಬೀಳುವ ಒಂದು ಒಳ್ಳೆಯ ಕಾವ್ಯ ಖಂಡ. ಸೂಕ್ತಿವಾದದಲ್ಲಿ ನಿರೂಪಿತವಾದದ್ದು ಆಧ್ಯಾತ್ಮಿಕ ವಿಷಯಗಳು. ಸಾಂಸಾರಿಕ, ರಾಜಕೀಯ, ಆರ್ಥಿಕ, ಸಾಹಿತ್ಯಕ—ಕಟು ವಿಮರ್ಶೆ. ನುಂಗಲು ಕಹಿಗುಳಿಗೆ. ಆದರೂ ರುಚಿಯಾಗಿದೆ. ಹೊಟ್ಟೆ ಹುಣ್ಣಾಗುವಷ್ಟು ನಗು ಬರುತ್ತದೆ. ಆದರೆ ಸದ್ಯದ ಸ್ಥಿತಿಯನ್ನು ಕಂಡು ಕಣ್ಣೀರು ಮಿಡಿಯುತ್ತದೆ. ಕಾವ್ಯದಲ್ಲಿ ಬರುವ ಒಂದೊಂದು ಸಾಲೂ ಮೆಲುಕು ಹಾಕಲು ಯೋಗ್ಯವಾದ್ದು. ಪ್ರಯತ್ನ ಪಟ್ಟರೂ ಮರೆಯುವುದು ಸಾಧ್ಯವಿಲ್ಲ.

ಸೂಕ್ತಿವಾದ ಒಂದು ಹಾಡುಗಬ್ಬ. ಕಾಂಭೋಧಿ ರಾಗದಲ್ಲಿ ಹಾಡಲು ಬರುವ ಸುಶ್ರಾವ್ಯ ಕಾವ್ಯ. ಎಂಭತ್ತೈದರ ಎತ್ತರದಲ್ಲಿರುವ ಕವಿಗಳು ತಮ್ಮನ್ನು ಸಂಬೋಧಿಸಿ ಆಡುವ ಮಾತುಗಳು ಅತ್ಯಂತ ಸೊಗಸಾದವು. ಎಲ್ಲವನ್ನೂ ಸೂತ್ರರೂಪದಲ್ಲಿ ತಿಳಿಸಿದ್ದಾರೆ. ಪ್ರಯತ್ನಪಟ್ಟರೆ ಒಂದೊಂದು ಸಾಲಿನ ಮೇಲೂ ಪುಟಗಳ ವ್ಯಾಖ್ಯೆ ಬರೆಯಬಹುದು. ಕಗ್ಗವನ್ನೂ ಮೀರಿಸುವ ಯೋಗ್ಯತೆ ಲಾಲಿತ್ಯದಲ್ಲಿ; ಪದಬಂಧದಲ್ಲಿ. ಆದರೆ ಗಾತ್ರದಲ್ಲಿ ಕಗ್ಗಕ್ಕೆ ಸರಿದೊರೆಯಾಗಲಾರದು.

ಇಂಗ್ಲಿಷರು ಇಲ್ಲಿರುವುದು ನಮ್ಮ ಅನೇಕ ಬವಣೆಗಳಿಗೆ ಕಾರಣ ಎಂಬುದು ಅನೇಕರ ನಂಬುಗೆಯಾಗಿತ್ತು; ಅವರು



ಶ್ರೀ ಬಡೆಕ್ಕಿಲ ನೆಂಕಟರಮಣ ಭಟ್

ಹೋದರೆ ಎಲ್ಲ ಸರಿಹೋಗುತ್ತದೆ ಎಂಬುದು ಕೆಲವರ ತಿಳುವಳಿಕೆ. ಅವರು ಹೋದರು. ಆದರೆ ನಮ್ಮ ಸ್ಥಿತಿಯಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಇದ್ದುದೂ ಹೋಯಿತು ಮದ್ದಿನ ಗುಣದಿಂದ. ಅದರಿಂದ ನಮ್ಮೆಲ್ಲರಿಗೆ ನಿರಾಶೆಯಾಯಿತು. ಹೊಂಗನಸುಗಳು ಕರಗಿ ನೀರಾದುವು. ಹೀಗೆ ನಿರಾಶರಾದ ಕವಿಗಳು ತಮ್ಮ ಕೊಳ್ಳುದಿಯನ್ನು ಹಾಡಿನ ರೂಪದಲ್ಲಿ ತೋಡಿ ಕೊಂಡಿದ್ದಾರೆ. ಇದು ಕಾವ್ಯದ ಕಡಿಕೆ. ಕಾವ್ಯದ ಓಟ ಓತ ಪ್ರೋತ. ಭಾವಕ್ಕೊಪ್ಪುವ ಭಾಷೆ. ಛಂದೋಬದ್ಧವಾದ ಕಾವ್ಯ. ಮೊದಲಲ್ಲಿ ಬರುವ ಪ್ರಾರ್ಥನಾ ಪದ್ಯ ಇಂತಿದೆ—

ಕಾಂಭೋಧಿ ರಾಗ: ಝಂಪೆ ತಾಳ

ಪರಿಪೂರ್ಣ ಸಚ್ಚಿದಾನಂದ, ನಿರ್ಮಲ ನಿತ್ಯ
ನಿರುಪಮ, ನಿರವಲಂಬ, ನಿಜ ನಿರ್ವಿಕಲ್ಪ॥
ಪರತರ, ಪರಬ್ರಹ್ಮ ನಿಜಬಲಾ ಪರತತ್ತ್ವ
—ದಿರವನರಿದಪ ಪರತ ಸುಖಿ ಯಾಗು ಮನ್ನ॥

ಆನಂತರ ಬರುವುದು ನಮ್ಮ ಮುಖಂಡರ ಹೆಗ್ಗಳಿಕೆಯ ಮಾತುಗಳು. ಅವರು ಉದ್ವೇಗದಿಂದ ತಂದಿಕ್ಕುವ ಶಾಸನಗಳು. ಅದರಿಂದಾಗುವ ಅನಾಹುತಗಳ ವಿವರದ ಪಟ್ಟಿ. ಆತ್ಮ ಪ್ರಶಂಸೆಗಳಲ್ಲಿ ನಮ್ಮನ್ನು ಬಿಟ್ಟರೆ ಬೇರಿಲ್ಲ. ನಮ್ಮ ಅಗ್ಗಳಿಕೆಗೂ ಕೊರತೆಯಿಲ್ಲ. ಅದರ ಪರಿಣಾಮ? ಅದನ್ನೇ ಹೀಗೆ ವರ್ಣಿಸಿದ್ದಾರೆ.

ಆಳುವುದು ನಾವು, ನಮ್ಮದಿ ರಾಜ್ಯವಿದು, ಕರ—
ಕೀಳಗೆಯು ನಮ್ಮ ಗುರಿ, ನಾವೆ ಧವಗೇದು॥
ಹೇಳುವರ ಹೆಗ್ಗಳಿಕೆಯುಳ್ಳಗಿದೆ, ಸಜ್ಜನರ
ಬಾಳು ಹಾಳಾಗಿ ಪಕಬಾಯ್ತಲ್ಲ ತಮ್ಮ॥

ಒಳ್ಳೆಯವರ ಬಾಳು ಹಾಳಾಗಿದೆ ಎನ್ನುವುದರಲ್ಲಿ ಯಾವ ಅನುಮಾನವೂ ಈಗ ಉಳಿದಿಲ್ಲ.

ನಮ್ಮ ದೇಶದ ಸ್ತ್ರೀಯರ ಸಂಖ್ಯೆ ಪುರುಷರಷ್ಟೇ ಇದೆ; ಅವರೀಗ ಮತದಾರರು ಬೇರೆ. ಅವರಿಗೆ ಸಮಾನ ಹಕ್ಕುಗಳನ್ನೂ, ತಂದೆಯ ಆಸ್ತಿಯಲ್ಲೊಂದು ಭಾಗವನ್ನೂ ಕೊಡುವ ವ್ಯವಸ್ಥೆ ಈಗ ಶಾಸನಗಳ ಮೂಲಕ ಆಗಿದೆ. ಇವುಗಳಿಂದ ತಿಳುವಳಿಕೆಯಿಲ್ಲದ ಹೆಂಗಳೆಯರನ್ನು ವಂಚಿಸಬಹುದು. ಆದರೆ ಫಲಸ್ಥಿತಿ ಹಾಗಿದೆಯೋ? ಇದು ಕವಿಗಳ ಹಾಕುವ ಸವಾಲು.

ಗಂಡು ಹೆಣ್ಣಪ್ಪ, ಹೆಣ್ಣು ಗಂಡಪ್ಪ ಕಾಲದಲಿ
ಗಂಡು ಹೆಣ್ಣಳಿಂಬ ಭೇದ ಸಲ್ಲೆಂಬ॥
ಮಂಡನೋಕ್ತಿಯು ಸಾರಿ ಸಹಾಸಲೆಂ ಪ್ರಕೃತಿ
ಹೆಂಡಲೆಯುಸಾರು ಕೈಗೆಂಡದಾ ತಮ್ಮ॥

ಕುಡಿಯುವುದನ್ನು ತಪ್ಪೆಂದು ಗಾಂಧೀಜಿ ಅಪ್ಪಣೆ ಕೊಡಿಸಿದರು. ಅದನ್ನು ಪಾಲಿಸಬೇಕೆಂದು, ಭಾವಪರವಶರಾಗಿ ಶಾಸನದ

(ಹದಿನಾರನೆ ಪುಟ ನೋಡಿರಿ)

ಶ್ರೀ ಬಡೆಕ್ಕಿಲದವರ ಸನ್ಮಾನ—ಸಂಸ್ಮರಣ ಸಂಚಿಕೆ

ಗಂಡ ಪೆಂಡಿರನತ್ಯುಗ್ರದಿಂ ಪೀಡಿಸಲ್...?

ಮಹಾಜನ ವರದಿಯನ್ನು ಶ್ರೀಮತಿ ಗಾಂಧಿಯವರು ಸಂಸತ್ತಿನ ಮುಂದೆ ಮಂಡಿಸಿದರು ಇದು ಇತರರ ದೃಷ್ಟಿಯಲ್ಲಿ ಅನಾವಶ್ಯಕ. ಆಕೆಗೆ ಮಾತ್ರ ಅತ್ಯಾವಶ್ಯಕ.

ವರದಿಯನ್ನು ಅನುಷ್ಠಾನಕ್ಕೆ ತರಲು ಎಡೆಗೊಡದ ಆಕೆಯಿಂದ ಸಾಧ್ಯವಾಗಲಿಲ್ಲ. ಯಾರಿಗೂ ಸಗ್ಗದ, ಸೊಪ್ಪು ಹಾಕದ ಶ್ರೀಮತಿ ಗಾಂಧಿಯವರು ಮರಾಠಿಗರ ಮುಂದೆ ತಗ್ಗಿ ನಡೆದರು.

ತನ್ನನ್ನು ನಿಷ್ಪಕ್ಷಪಾತಿಯೆಂದು ಕರೆದು ಕೊಳ್ಳುವ ಆಕೆ ಮಹಾಜನ ವರದಿಯು ಪಕ್ಷಪಾತದಿಂದ ಕೂಡಿದ್ದು ಎಂಬ ಮರಾಠಿಗರ ಪಕ್ಷ ವಹಿಸಿದರು; ತಾನೂ ಪಕ್ಷಪಾತಿಯೆಂದು ತೋರಿಸಿಕೊಟ್ಟರು.

ಮಹಾಜನ ವರದಿಯನ್ನು ಸಂಸತ್ತಿನ ಮುಂದೆ ಮಂಡಿಸಿದ್ದರಿಂದ ಗಡಿ ವಿವಾದ ಇನ್ನೂ ಬಹುಕಾಲ ಪರಿಹಾರವಾಗುವುದಿಲ್ಲವೆಂಬುದಂತೂ ಖಚಿತವಾಯ್ತು. ಅದರ ಬಗ್ಗೆ ಸರಕಾರ ನಿರ್ವಂಚನೆಯಿಂದಿದೆಯೆಂದೂ ಇಂಡಿಕೇಟು ತನ್ನ ಸದಸ್ಯರಿಗೆ ಮುಕ್ತ ಮತದಾನದ ಅಧಿಕಾರ ನೀಡುತ್ತದೆ ಎಂದೂ ಶ್ರೀಮತಿ ಗಾಂಧೀ ಅನುಯಾಯಿಗಳು ಹೇಳುತ್ತಾರೆ.

"ಶ್ರೀಮತಿ ಗಾಂಧಿಗೆ ಪರಿಹಾರ ಕಗ್ಗಂಟಾಗಿತ್ತು. ಆದುದರಿಂದ ಅವರು ಸಂಸತ್ತಿನ ಮುಂದೆ ಮಹಾಜನ ವರದಿಯನ್ನು ತಂದರು. ಇಷ್ಟರಿಂದಲೇ ಕನ್ನಡಿಗರಿಗೆ ಅನ್ಯಾಯವಾಯಿತು ಎಂದು ಆಕಾಶ ಕಳಚಿ ಬಿದ್ದಿತೆಂಬಂತೆ ಕೂಗುವುದು ಸರಿಯಲ್ಲ; ಪಾರ್ಲಿಮೆಂಟಿನಿಂದ ಕರ್ನಾಟಕಕ್ಕೆ ನ್ಯಾಯ ಸಿಗುತ್ತದೆ."-ಇದು ಕೇಂದ್ರದ ನ್ಯಾಯಾಂಗ ಸಚಿವ ಶ್ರೀ ಕೆಂಗಲ್ ಹನುಮಂತಯ್ಯನವರ ಹೇಳಿಕೆ.

ಶ್ರೀಮತಿ ಗಾಂಧಿಯಲ್ಲಿ ಭರವಸೆಯಿಡಲೇ ಬೇಕು ಎನ್ನುವ ಮತಿಭ್ರಂಶ ನೋಡಿ.

ಸಂಸತ್ತಿನ ಪರಮಾಧಿಕಾರವನ್ನು ಯಾರೂ ಪ್ರಶ್ನಿಸುವಂತಿಲ್ಲ. ಆದರೆ, ಬಹುಮತದ ನಿರ್ಣಯ ಯಾವಾಗಲೂ ನ್ಯಾಯವಾಗಿರುತ್ತದೆ. ಎಂದು ಹೇಳ ಬರುವಂತಿಲ್ಲ. ಮುಕ್ತ ಮತದಾನದ ಮಾತಾದರೂ ಕೊನೆಯ ಗಳಿಗೆಯಲ್ಲಿ ಒತ್ತಾಯದ ಮತದಾನವಾಗುವುದಿಲ್ಲವೆಂದು ಹೇಳಲಾಗದು.

ಕನ್ನಡಿಗರನ್ನೂ ಮರಾಠಿಗರನ್ನೂ ಬಿಟ್ಟರೆ; ಉಳಿದವರು ಸಹಜವಾಗಿ ಈ ವಿಷಯದಲ್ಲಿ ನಿರ್ಲಿಪ್ತರು. ಅವರು ಗಡಿವಿವಾದದ ಮೂಲವನ್ನಾಗಲೀ, ಅದರ ಸಮಸ್ಯೆಯನ್ನಾಗಲೀ ಅಧ್ಯಯನ ಮಾಡಿದವರಲ್ಲ.

ಮಹಾಜನ ವರದಿಯೇ ಅವರಿಗೆ ಎಲ್ಲದಕ್ಕೂ ಆಧಾರ. ಈ ವರದಿಯಂತೆ ವಿವಾದ ಪರಿಹಾರ ಮಾಡುವುದು ನ್ಯಾಯವಲ್ಲವೆಂಬುದರಿಂದಲೇ ಪ್ರಧಾನಿಯವರು ತಮ್ಮ ಮುಂದದನ್ನು ಇಟ್ಟಿದ್ದಾರೆಂದು ಎಂ. ಪಿ. ಗಳ ನಿರ್ಧಾರ.

ಹಾಗಾದರೆ ನ್ಯಾಯವಾವುದು? ವರದಿಯ ಶಿಫಾರಸುಗಳನ್ನು ವಾಪಾಸು ಮಾಡಿ, ಬೆಳಗಾಂವಿಯನ್ನು ಮರಾಠಿಗರಿಗೆ ನೀಡುವುದು! ಸಂಸತ್ತು ಇದನ್ನು ಅನುಮೋದಿಸುವುದು ಅವಾಸ್ತವವಲ್ಲ.

ಮತ ಸ್ವಾತಂತ್ರ್ಯದ ಲಾಭವನ್ನು ಕರ್ನಾಟಕಕ್ಕೆ ಪರವಾಗಿ ಯಾರು ಉಪಯೋಗಿಸುತ್ತಾರೆ? ಕರ್ನಾಟಕದ ಇಂಡಿಕೇಟ್, ಎಂ. ಪಿ. ಗಳೆಲ್ಲರೂ ಹೀಗೆ ಮಾಡುತ್ತಾರೆ ಎನ್ನುವುದು ಸಂದೇಹಾಸ್ಪದ. ಮತ್ತೆ ಉಳಿದವರ ಪಾಡೇನು?

ನಮ್ಮ ರಾಜ್ಯದ ಪ್ರತಿನಿಧಿಗಳೂ ಕೇಂದ್ರ ಸಂಪುಟದಲ್ಲಿದ್ದಾರೆ. ಶ್ರೀಮತಿ ಗಾಂಧಿ ಸ್ತುತಿ ಮಾಡುತ್ತಲೇ ದಿನ ದೂಡುವ ಶ್ರೀ ಕೆಂಗಲ್ಲ ಶ್ರೀ ರಾವ್, ಶ್ರೀಮತಿ ಮಹಿಷಿಯರಿದ್ದಾರೆ. ಮರಾಠಿಗರೂ ಮಂತ್ರಿಗಳಾಗಿದ್ದಾರೆ ಆದರೆ, ಮರಾಠಿ ಮಂತ್ರಿಗಳಿಂದ ತಮ್ಮ ರಾಜ್ಯಕ್ಕೆ ಆಗುವ ಕೆಲಸಗಳು ಕನ್ನಡ ಮಂತ್ರಿಗಳಿಂದ ಆಗುತ್ತಿಲ್ಲ.

ಅಂದರೆ, ನಮ್ಮ ಮಂತ್ರಿಗಳನ್ನು ಶ್ರೀಮತಿ ಗಾಂಧಿ ಹೇಗೆ ನೋಡುತ್ತಾರೆ, ನಮ್ಮ ಮಂತ್ರಿಗಳು ಆಕೆಯ ಮುಂದೆ ಹೇಗಿದ್ದಾರೆ ಎಂದು ಬೇರೆ ಹೇಳಬೇಕಾಗಿಲ್ಲ.

ಶ್ರೀಮತಿಗೆ ತನ್ನ ಬಗ್ಗೆ ಪ್ರಚಾರ ನಿರತರಾಗುವವರು ಬೇಕಾಗಿತ್ತು; ಅಂತಲೇ ಅವರನ್ನು ಮಂತ್ರಿ ಮಾಡಿದರು. ಕನ್ನಡಿಗರನ್ನು ಆಕೆ ಚೆನ್ನಾಗಿ ಅರಿತಿದ್ದಾರೆ. ಮೈಸೂರಿಗರಿಗೆ ಜೈಕಾರ ಹೇಳಿಯೇ ಗೊತ್ತು.

ಇಂದು ಇಂಡಿಕೇಟಿನ ಅಧ್ಯಕ್ಷರುಗಳಿಗಾದರೂ ಬೇಕಾದದು ಅದೇ; ಯಾರಾದರೂ ಜೈಕಾರ ಹೇಳಬೇಕು.

ಶ್ರೀ ಎಂ. ವಿ. ಕೃಷ್ಣಪ್ಪ, ಶ್ರೀ ದೇವರಾಜ ಅರಸು, ಶ್ರೀ ದಯಾನಂದ ಸಾಗರ್ ಮೊದಲಾದವರು ರಾಜ್ಯದ ಸಚಿವರಿದ್ದಾಗ ಇಲ್ಲಿ ಜೈ ಕಾರಾಕೆಂದರು. ಸಚಿವಸ್ಥಾನ ಹೋದಾಗ, ಅನಾಥರಾದರು. ಕಾಂಗ್ರೆಸ್ ವಿಭಜನೆಯಿಂದಾಗಿ ಅವರು ಇಂದಿರಾ ವಂದಿಗಳಾದರು. ಇಲ್ಲವಾದರೆ, ತಮ್ಮದೇ ಹೊಸತೊಂದು ಪಕ್ಷ ಕಟ್ಟಿಕೊಳ್ಳುತ್ತಿದ್ದರೋ ಏನೋ!

ಶ್ರೀ ಕೆಂಗಲ್ಲರ ವ್ಯಕ್ತಿತ್ವಕೊಂದು ಬೆಲೆಯಿದೆ. ಆದರೆ ತನ್ನ ಬೆಲೆಯನ್ನು ತಾನೇ ಕಟ್ಟಿಕೊಳ್ಳುವ ಜಮಾನ ಅವರಿಗೆ ಆದ್ದರಿಂದಲೇ ಪಂ. ನೆಹರು ಅವರ ಯೋಗ್ಯತೆಯನ್ನು ಅರಿತಿದ್ದರೂ ಕೇಂದ್ರಕ್ಕೆ ಕರೆಯಲಿಲ್ಲ. ದೂರದಲ್ಲೇ ಇರಿಸಿ ಅವರ ಬಾಯಿ ಮುಚ್ಚಿಸುತ್ತಿದ್ದರು. ಅವರಿಗೆ ಬಾಯಿ ತೆರೆಯುವ ಅವಕಾಶ ಶ್ರೀಮತಿ ಗಾಂಧಿ ನೀಡಿದರು; ತನ್ನ ಮಂತ್ರಿಯನ್ನಾಗಿ ಕಂಗಳಿಗೆ ವರು ಬಾರಿ ಕರ್ನಾಟಕಕ್ಕೆ ಆಸ ಹತ್ತಿದರು.

ಮಹಾಜನ ವರದಿಯನ್ನು ಸಂಸತ್ತಿನಲ್ಲಿ

(ಹದಿನೈದನೇ ಪುಟ ನೋಡಿರಿ)

ರಜತೋತ್ಸವ ಆಚರಿಸುತ್ತಿರುವ

ಭದ್ರಾ ಕೋ-ಆಪರೇಟಿವ್ ಸ್ಟೋರ್ಸ್ ಲಿಮಿಟೆಡ್

ಭದ್ರಾವತಿ

ಇದರ ಸಾಮಾನ್ಯ ಸದಸ್ಯರೂ, ಅಸಂಖ್ಯ ಗ್ರಾಹಕರೂ

ಭದ್ರಾವತಿಗೆ

ಎಂಭತ್ತೈದು ವರ್ಷಗಳ ಪ್ರಸಿದ್ಧ ವಿದ್ವಾಂಸ, ಹಿರಿಯ ವೈಚಾರಿಕ ಕವಿ

ಸಂಗೀತ ಸಾಹಿತ್ಯ ಸರಸ ಕಲಾ ನಿಪುಣ

ಶ್ರೀ ಬಡೆಕ್ಕಿಲ ವೆಂಕಟರಮಣ ಭಟ್ಟರನ್ನು

ತುಂಬು ಹೃದಯದಿಂದ

ಸ್ವಾಗತಿಸಿ, ಅವರಿಗೆ ತಮ್ಮ ಶುಭಾಶಯ ಸಲ್ಲಿಸುತ್ತಾರೆ.

31-12-70

ರಜತೋತ್ಸವ ಸಮಿತಿ

ಆಡಳಿತ ಮಂಡಳಿ

ಭದ್ರಾ ಸ್ಟೋರ್ಸ್

ನವಯುಗ

ವಾರಪತ್ರಿಕೆ
ಉಡುಪಿ, ದ. ಕ.

NAVAYUGA
UDIPI, S. K.

ಸಂಪುಟ : 50
ಸಂಚಿಕೆ : 17

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
ವಿಶೇಷ ಸಂಚಿಕೆಗಳು ಸಹಿತ
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಠ ಮೂರು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ಪ್ರಾಮಾಣಿಕ ಅಭಿಪ್ರಾಯ

ಇತ್ತೀಚೆಗಿನ ದಿನಗಳಲ್ಲಿ ನಿವೃತ್ತ ಮಹಾ ದಂಡನಾಯಕ ಫೀ| ಮಾ| ಕೆ. ಎಂ. ಕಾರ್ಯಪ್ಪನವರು ದೇಶದಲ್ಲಿ ಸರ್ವಾಧಿಕಾರ ಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತ ಬಂದಿದ್ದಾರೆ. ಅವರ ಈ ಅಭಿಮತವನ್ನು ಒಪ್ಪದ ಅನೇಕರು (ಸಂಸತ್ತಿನಲ್ಲಿ ಕೂಡ) ಇದಕ್ಕೆ ತಮ್ಮ ವಿರೋಧ ಪ್ರಕಟಿಸುತ್ತ ಬಂದಿದ್ದಾರೆ. ಹೀಗೆ ತಮ್ಮ ಅಭಿಪ್ರಾಯದ ವಿರೋಧಿಗಳಿಗೆ ಫೀ| ಕಾರ್ಯಪ್ಪನವರು ಮಣಿಪಾಲದಲ್ಲಿ 318 ರೋಟರಿ ಡಿಸ್ಟ್ರಿಕ್ಟಿನ ಸಮ್ಮೇಳನದಲ್ಲಿ ಸಮರ್ಪಕವಾದ ಉತ್ತರ ನೀಡಿದ್ದಾರೆ.

ದೇಶದಲ್ಲಿ ಇಂದು ಒಂದಲ್ಲ ಒಂದು ಕಾರಣದಿಂದ ಅನೈಕ್ಯವು ಹೆಚ್ಚುತ್ತ ಬರುತ್ತಿದೆ. ಉಪಶಮನಕ್ಕೆಂದು ಮಾಡುವ ಪ್ರಯತ್ನಗಳು ನಡೆಯುತ್ತ ಹೋದಂತೆ ಇದು ಮತ್ತೂ ಮತ್ತೂ ಹೆಚ್ಚುತ್ತಲೇ ಹೋಗುತ್ತದೆ. ಏಕೆಂದರೆ, ರೋಗವೊಂದಿಷ್ಟು; ಔಷಧಿಯೊಂದಿಷ್ಟು ಆಗುತ್ತಿದೆ. ಅನೈಕ್ಯವನ್ನು ಐಕ್ಯದಲ್ಲಿ ಪರ್ಯವಸಾನಗೊಳಿಸುವುದು ನಮ್ಮ ನಾಯಕರಿಗೆ ಬೇಕಾಗಿಲ್ಲ; ತಮ್ಮ ರಾಜಕೀಯ ಬೇಳೆ ಬೇಯಿಸಲು ಅವರಿಗೆ ಐಕ್ಯವು ಇಂಧನವೊದಗಿಸುವುದಿಲ್ಲ. ಇದರಿಂದ, ದೇಶಕ್ಕೆ ಶುಭವನ್ನುಂಟುಮಾಡುವ ಸರ್ವಾಧಿಕಾರ ಬೇಕು ಎನ್ನುತ್ತಾರೆ ಫೀ| ಕಾರ್ಯಪ್ಪನವರು. ರಾಜಕೀಯ ಬರಡೆಮ್ಮೆಯ ಉಪಟಳದಿಂದ ನೊಂದವರು ಅವರ ಮಾತನ್ನು ಮೆಚ್ಚುವುದು ನಿಸ್ಸಂದೇಹ.

ನಮ್ಮೆಲ್ಲ ಬವಣೆಗಳಿಗೂ ಫೀ| ಕಾರ್ಯಪ್ಪನವರು ಒಂದೇ ಒಂದು ಕಾರಣವನ್ನು ಮುಂದೊಡ್ಡಿದ್ದಾರೆ. ಅದುವೇ ನಾಯಕತ್ವದ ಅಭಾವ. ಪಂ| ಜವಾಹರಲಾಲರ ನಂತರ ದೇಶಕ್ಕೆ ಸರ್ವಮಾನ್ಯ ನಾಯಕರೇ ದೊರೆಯಲಿಲ್ಲ. ಲಾಲ ಬಹದ್ದೂರ ಶಾಸ್ತ್ರಿಯವರು ಪ್ರಧಾನಿಯಾದಾಗಲೇ ಪಾಕ್ ಆಕ್ರಮಣ ನಡೆದದ್ದರಿಂದ, ಅದು ಮುಗಿದೊಡನೆ ಶಾಸ್ತ್ರಿಯವರೂ ಇಲ್ಲವಾದುದರಿಂದ ಆಗ ಅಂದಿನ ಅನಾಯಕತ್ವದ ಪ್ರಶ್ನೆ ಏಳಲಿಲ್ಲ. ಆದರೆ, ಕಳೆದ ಐದು ವರ್ಷಗಳಿಂದಲೂ ನಡೆದ ರಾಜಕೀಯ ಸಂಘಟನೆ-ವಿಘಟನೆ-ಗಳ ಘಟನೆಗಳನ್ನು ಪರಿಶೀಲಿಸುವಾಗ, ಎಲ್ಲರೂ ನಾಯಕರೆನಿಸುವ, ಅದಕ್ಕಾಗಿ ಸಂಭದ ಜನಪ್ರಿಯತೆಗಳಿಸುವ ಅಭಿಲಾಷೆಯಿಂದ ಕೂಡಿದ್ದಾರೆಂದು ಹೇಳಬಹುದು. ಹೇಗಾದರೂ ಮತಗಳಿಸುವ ಇರಾದೆಯಿಂದಿರುವ ಅವರು ಎಂತಹ ಕೀಳು ಮಟ್ಟಕ್ಕಿಳಿಯಲು ಸಿದ್ಧರಾಗಿದ್ದಾರೆ. ಸಮಸ್ಯೆಗಳನ್ನು ಬಿಡಿಸಲು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುವುದನ್ನು ಬಿಟ್ಟು, ಜನಮೆಚ್ಚುಗೆ ಹೊಂದುವ ಆಸೆಯಿಂದ ಮತ್ತೂ ಮತ್ತೂ ಸಿಕ್ಕು ಹಾಕಿಕೊಳ್ಳುತ್ತಾರೆ. ಸಾಗುತ್ತಿರುವ ರಾಜಕೀಯ ಪ್ರತಿನಿಧಿಗಳೇ ಸ್ವೀಕರರ ಮುಂದೆ ಧರಣಿ ನಡೆಸುತ್ತಿರುವಾಗ, ಅವರು ಪ್ರಜೆಗಳ ನಾಯಕತ್ವವನ್ನೆಂತು ವಹಿಸಿಯಾರು? ಇದು ಸುಲಭದ ಪ್ರಸಿದ್ಧಿಗೆ ಸಾಧನವೊಂದಾಗಿರಬಹುದು.

ಯುವಕರು ಕೆಟ್ಟವರಲ್ಲವೆಂದ ಫೀ| ಕಾರ್ಯಪ್ಪನವರು ಅವರ ಪಥಭ್ರಷ್ಟರಾಗುವುದಕ್ಕೆ ಸಮರ್ಥ ನಾಯಕತ್ವದ ಅಭಾವವೇ ಕಾರಣವೆಂದು ಹೇಳಿದರು. ಹಿರಿಯರಾದವರು ಕಿರಿಯರ ಮೇಲೆ ಸವಾರಿ ಮಾಡುವುದನ್ನು ಬಿಟ್ಟು ಅವರನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು ಎಂದ ಅವರು ಬುದ್ಧಿಜೀವಿಗಳೂ ಯುವಕರೂ ಹಳ್ಳಿಗಳಿಗೆ ತೆರಳಿ ಹಳ್ಳಿಗರ ಜೀವನ ಸಹನೀಯವಾಗುವಂತೆ ಪ್ರಯತ್ನಿಸಬೇಕೆಂದು ಕರೆ ನೀಡಿದರು. ಪಟ್ಟಣಿಗರಿಗಿಂತಲೂ ಸಂಸ್ಕೃತಿ ಸಂಪನ್ನರಾದ ಗ್ರಾಮೀಣ ಜನತೆಗೆ ಜೀವನದ ಸಕಲ ಸೌಲಭ್ಯಗಳನ್ನು ಒದಗಿಸಲು ಪ್ರಯತ್ನಿಸಬೇಕೆಂದು ವಿನಂತಿಸಿದರು. ಫೀ| ಕಾರ್ಯಪ್ಪನವರು ಹೇಳಿದ ಮಾತುಗಳಲ್ಲಿ ಹೊಸತೇನೂ ಇಲ್ಲ. ಇದು ನಮ್ಮ ನಾಯಕಾಗ್ರಣಿಗಳಾದರೂ ಇಂಥದೇ ಕರೆ ನೀಡಿದ ಮಾತ್ರಕ್ಕೆ ತೃಪ್ತರಾಗುತ್ತಾರೆ, ಗ್ರಾಮ ಸೇವೆಯಲ್ಲಿ ನಿರತರಾಗಲು ಯಾವ ಉತ್ತೇಜನವನ್ನೂ ಕೊಡುವುದಿಲ್ಲ. ಬೆಲೆಯೇರಿಕೆಯು ಗಗನ ಮುಟ್ಟಿರುವಾಗ ತನ್ನ ನೌಕರರ ವೇತನಾದಿಗಳನ್ನು ಮತ್ತೂ ಮತ್ತೂ ಏರಿಸುತ್ತಲೇ ಸರಕಾರ ಹೋಗುತ್ತದೆ; ಲಕ್ಷ ಸಂಖ್ಯೆಯ ನೌಕರರ ಹೊಟ್ಟೆ ಹೊರೆಯಲು ಸರಕಾರ ಕೋಟಿಗಟ್ಟಲೆ ಯ ಶ್ರೀಸಾಮಾನ್ಯರನ್ನು ಸುಲಿಯುತ್ತಿದೆ. ಅವರ ಜೀವನವನ್ನು ಮತ್ತೂ ಮತ್ತೂ ಪಾತಳಿಗಿಳಿಸುತ್ತಿದೆ.

ನಾವೆಲ್ಲಿ ಜಾರಿಬಿದ್ದಿದ್ದೇವೆಂದು ಮರೆಮಾಚದೆ ಹೇಳುವುದು ಪ್ರಜಾಸತ್ತೆಯಲ್ಲಿ ಅಗತ್ಯ. ಆದರೆ, ಹಾಗೆ ಹೇಳಿದಾಗ, ಅಧಿಕಾರಶಾಹಿಗಳಿಗೆ ಸಿಟ್ಟು ಬರುತ್ತದೆ" ಎಂದ ಫೀ| ಕಾರ್ಯಪ್ಪನವರು ಇಂದಿನ "ಜನಪ್ರಿಯ ಜನನಾಯಕ"ರನ್ನೇ ಬೊಟ್ಟು ಮಾಡಿದ್ದಾರೆನ್ನಬಹುದು. ಬಹುಮತದ ಅಸ್ತ್ರವೆಂಬುದು ನಮ್ಮ ರಾಜಕೀಯ ನಾಯಕರ ಕೈಯಲ್ಲಿ ಮಂಗನ ಕೈಯಲ್ಲಿ ಕೊಟ್ಟಂತಾಗಿದೆ. ಜನಹಿತವನ್ನು ಅಲಕ್ಷಿಸಿ ತಮ್ಮ ಹಿತವನ್ನು ಸಾಧಿಸಲು ಏನೇನು ಬೇಕೋ ಅವೆಲ್ಲವನ್ನೂ ಅವರು ಮಾಡುತ್ತಿದ್ದಾರೆ. ಕಂಡದ್ದನ್ನು ಕಂಡಂತೆ ಆಡಿದರೆ ಕೆಂಡದಂತೆ ಕೋಪ ಬರುವುದು ಸಹಜವೇ. ಇಂತಹ ಅಪ್ರಾಮಾಣಿಕ ನಾಯಕರ ಸೊಗ ಜನಭಾರದಿಂದ ಎಂದು ಜಾರುತ್ತದೆ?

ಹೊನ್ನಹಬ್ಬ

ಕನ್ನಡ ಸಾಹಿತ್ಯ ಪರಿಷತ್ತಿನ ಹೊನ್ನಹಬ್ಬವು ಬೆಂಗಳೂರು ಕೋಟೆ ಪ್ರೌಢಶಾಲೆಯ ಪ್ರಾಂಗಣದಲ್ಲಿ ಹಾಕಿದ ಮಂಟಪದಲ್ಲಿ ವಿಜೃಂಭಣೆಯಿಂದ ನಡೆಯಿತು; ಸಭಾಮಂಟಪಕ್ಕೆ ಕನ್ನಡದ ಕೋಗಿಲೆಗಳಾಗಿ ಜೀವಿಸಮೊದಲಿಳ್ಳುವ ವೆಂಕಟರಾಮಪ್ಪರ ಹೆಸರು ದಲಾಗಿತ್ತು. ಉದ್ಘಾಟನೆ-ಅಧ್ಯಕ್ಷತೆ ಮೊದಲಾದುವುಗಳಲ್ಲಿ ರಾಜಕೀಯ ನಾಯಕರೇ ಎಂದಿನಂತೆ ಸಿಂಹಪಾಲು ದೊರಕಿಸಿಕೊಂಡಿದ್ದರು. ಮಂಟಪದಲ್ಲಿ ಸೇರಿದ ಕನ್ನಡ ವಾಗ್ದೇವಿಯ ಉಪಾಸಕರಿಗೆ ತಮಗೆ ತಿಳಿದಷ್ಟು ಕನ್ನಡ ಸಂಸ್ಕೃತಿ—ಇತಿಹಾಸ—ಕಲೆಗಳ ಭಂಡಾರವನ್ನವರು ಹೊರಗೆಡಹಿದರು. ರಾಜ್ಯಪಾಲ ಶ್ರೀ ಧರ್ಮವೀರರು "ಭಾಷೆಯು ದೇಶದ ಪ್ರಜೆಗಳ ಪರಸ್ಪರ ಸಂಪರ್ಕಕ್ಕೆ. ರಾಜ್ಯ-ರಾಜ್ಯಗಳ ಐಕ್ಯಭಾವನೆಗೆ ಅಡ್ಡಗೋಡೆಯಾಗಿ ಬೆಳೆಯುತ್ತಿರುವುದರ ಬಗ್ಗೆ ತಮ್ಮ ಖೇದವನ್ನು ವ್ಯಕ್ತಪಡಿಸಿದರು.

ಆದರೆ, ಇಂತಹ ಅಡ್ಡಗೋಡೆಗಳನ್ನು ನಿರ್ಮಿಸುವವರು ವಾಗ್ದೇವಿಯ ಉಪಾಸಕರಲ್ಲ; ರಾಜಕೀಯ ನಾಯಕರು. ಇದಕ್ಕೆ ಯೋಗ್ಯ ನಿದರ್ಶನವೂ ಅದೇ ವೇಳೆ ದೊರೆಯಿತು. ಸಮ್ಮೇಳನದ ... ಸಂಪುಟವನ್ನು ಉದ್ಘಾಟಿಸಿದ ಕೇಂದ್ರ ಸಚಿವ ಕೆಂಗಲ್ ಹನುಮಂತಯ್ಯನವರು "ಮಹಾರಾಷ್ಟ್ರದ ಗಡಿ ವಿವಾದದಲ್ಲಿ ಕನ್ನಡಿಗರು ಉದ್ರಿಕ್ತರಾಗಬಾರದು" ಎಂದು ಉಪದೇಶಿಸಿ ಜೋರಿನ ಸಭ್ಯರ ಪ್ರತಿಭಟನೆಗೆ ಕಾರಣರಾದರು. ನೇರ ದಿಕೆಯನ್ನರಿಯದೆ ತಮ್ಮ ಅಭಿಪ್ರಾಯಗಳನ್ನು ಎಲ್ಲರ ಮೇಲೂ ಹೇರುತ್ತಿರುವ ರಾಜಕೀಯ ನಾಯಕರೇ ಎಲ್ಲ ದ್ವೇಷ ವೈಷಮ್ಯಗಳಿಗೆ ಕಾರಣೀಭೂತರೆಂಬುದು ಹಗಲಿನಷ್ಟು ಸತ್ಯ.

ಕನ್ನಡಿಗರ ಸಂಕುಚಿತ ಪ್ರವೃತ್ತಿಯವರಲ್ಲ. ಅವರನ್ನು ಅವರ ಸಂಸ್ಕೃತಿ ಹಾಗೆ ಬೆಳೆಸಿಯೂ ಇಲ್ಲ. ಹೊನ್ನಹಬ್ಬದ ವೇಳೆ "ಚತುರ್ದಶ ಭಾರತಿ" ಎಂಬ ವಿವಿಧ ಭಾರತೀಯ ಭಾಷಾ ಸಾಹಿತಿಗಳ ವಿಚಾರಗೋಷ್ಠಿಯು ಏರ್ಪಟ್ಟದ್ದೇ ಇದಕ್ಕೆ ಸಾಕ್ಷಿ. ಇದೇ ಗೋಷ್ಠಿಯ ಅಧ್ಯಕ್ಷತೆಯಿಂದ ರಾಷ್ಟ್ರಕವಿ ಕುವೆಂಪು "ಚತುರ್ದಶ ಭಾರತಿಯ ಆಲಿಂಗನದಿಂದ ಭಾರತೀಯ ಅಮೃತನಾಗುತ್ತಾನೆ" ಎಂದದ್ದು ಕನ್ನಡಿಗರ ಹೃದಯದ ವೈಶಾಲ್ಯದ ಪ್ರತೀಕ.

ವಿವಿಧ ಗೋಷ್ಠಿಗಳೊಡನೆ ಮನರಂಜನ ಕಾರ್ಯಕ್ರಮಗಳೊಡನೆ ಹೊನ್ನಹಬ್ಬ ಯಶಸ್ವಿಯಾಗಿ ನಡೆಯಿತು. ಕನ್ನಡ ಸಾಹಿತ್ಯ ಪರಿಷತ್ತು ಇನ್ನೂ ಹೆಚ್ಚಿನ ಹೊಣೆಗಾರಿಕೆ ನಿರ್ವಹಿಸಲು ಕಟಿಬದ್ಧವಾಯಿತೆಂದು ಹಾರಯ್ಸೋಣವೆ?

ಕೇಂದ್ರ ಸಚಿವ ಸಂಪುಟದ ಸಲಹೆಯ ಮೇರೆಗೆ ರಾಷ್ಟ್ರಪತಿ ಶ್ರೀ ವಿ. ವಿ. ಗಿರಿಯವರು ಲೋಕಸಭೆಯನ್ನು ವಿಸರ್ಜಿಸಿ ಹೊಸ ಚುನಾವಣೆಗಳಿಗೆ ಆಜ್ಞೆ ಮಾಡಿದ್ದಾರೆ.

ಭದ್ರಾವತಿಯಲ್ಲಿ ಇಂದು ಜರಗುವ ವಯೋವೃದ್ಧರೂ ಜ್ಞಾನವೃದ್ಧರೂ ವೈಚಾರಿಕ ಕವಿಪುಂಗವರೂ ಆದ ಶ್ರೀ ಬಡೆಕ್ಕಿಲ ವೆಂಕಟರಮಣ ಭಟ್ಟರ ಸ್ವಾಗತ - ಸನ್ಮಾನ ಸಮಾರಂಭದ ಸುಸಂದರ್ಭದಲ್ಲಿ ಅವರಿಗೆ ನಮ್ಮ ಶುಭಾಶಯಗಳು.

ಶ್ರೀ ಬಡೆಕ್ಕಿಲ ವೆಂಕಟರಮಣ ಭಟ್ಟರ

'ಭೀಮ ವಿಜಯ'

ಒಂದು ಮೈಲುಗಲ್ಲು

"ಭೀಮ ವಿಜಯ"ಕ್ಕೆ ಕವಿ ರನ್ನನ ಸಾಹಸ ಭೀಮ ವಿಜಯವೇ ಆಧಾರ. ಆದರೆ ಎಲ್ಲಿಯೂ ಕೃತಿ ಚೌರ್ಯವಿಲ್ಲ. ಕವಿಗಳ ಹಳ್ಳನ್ನು ಊರ್ಜಿತಗೊಳಿಸಿ ಈ ಪ್ರಬಂಧ ವನ್ನು ರಚಿಸಿದುದಾಗಿ ಕವಿಗಳು ಮುನ್ನುಡಿಯಲ್ಲಿ ತಿಳಿಸಿದ್ದಾರೆ. ಇದು ಅಗ್ಗಳಿಕೆಯ ಮಾತು ಅಲ್ಲ. ಅದರ ಜೊತೆಗೆ ತಮ್ಮ ಕವಿತಾಸಾಮರ್ಥ್ಯವನ್ನು, ವಿದ್ವತ್ತನ್ನು, ಸಂಗೀತ ಜ್ಞಾನವನ್ನು, ಭಾಷೆಯ ಮೇಲೆ ತಮಗಿರುವ ಪ್ರಭುದ್ಧತೆಯನ್ನು ತೋರಿಸಿದ್ದಾರೆ. ಈ ಯಕ್ಷಗಾನ ಪ್ರಬಂಧವನ್ನು ಆದ್ಯಂತ ಓದಿದವರಿಗೆ ಆಗುವ ರಸಾನುಭವ ಅಪ್ರಿಮಿತ್ತವಲ್ಲ.

ಅಲ್ಲಲ್ಲಿ ಮುಂದಿನ ಸಂದರ್ಭಗಳನ್ನು ಸೂಚಿಸಲು—ಇತರ ಎಲ್ಲ ಯಕ್ಷಗಾನ ಕವಿಗಳಂತೆ—ವಾರ್ಧಿಕ, ಭಾಮಿನಿ ಷಟ್ಪದಿಗಳನ್ನು, ಕಂದ ಪದ್ಯಗಳನ್ನು ಬಳಸಿ ದ್ದಾರೆ. ಭಾಗವತರು ಹಾಡಲು ಬಳಸುವ ವಿವಿಧ ರಾಗಗಳಲ್ಲಿ ರಚಿಸಿದ ಪದ್ಯಗಳು ಪ್ರಸಂಗದ ಉದ್ದೇಶ್ಯ ಮಾಡಿಬಂದಿವೆ. ಯಕ್ಷಗಾನ ಕೃತಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಭಾಷಾ ದೋಷಗಳಾಗಲೀ, ಛಂದೋಭಂಗಗಳಾಗಲೀ ಇಲ್ಲದಿರುವುದು.

ರಸಪೋಷಣೆಗಾಗಿ ಬಳಸುವ ಶಬ್ದಗಳು ತುಂಬ ಮನೋಜ್ಞ. ಆ ಪದ್ಯಗಳನ್ನು ಹಾಡಲು ಸೂಚಿಸಿದ ರಾಗಗಳೂ ಅಂತೆಯೇ! ಭಾವ ಪರಿಪುಷ್ಟಿಗೆ ಅಗತ್ಯವಾದುವುಗಳು. ಅಣ್ಣನ ಸಂಧಿಸು ಮಾತನ್ನು ಅಲ್ಲಗಳೆದು ರಣಾಂಗಣಕ್ಕೆ ಬರುವ ಭೀಮನ ಭಂಗಿಯನ್ನು ಕಂದಪದ್ಯವೊಂದರಲ್ಲಿ ಕವಿಗಳು ಹೀಗೆ ವರ್ಣಿಸಿದ್ದಾರೆ—

ಬಂದಂ ರಣವೇದಿನಿಯೊಳ್|
ನಿಂದಂ, ನಿಜ ಗದೆಸುನಾಂಕಿ ಕೌಂಕಳ ಕೊಳತ್ತಾ-|
ಬಂದಂ ಬೀಗೆ ಯೋಜನೆಯೊಳು|
ಸಂದಂ ರಿಪು ರಾಜನಿವಹ ಭೀಮಂ ಭೀಮಂ||

ಎಲ್ಲರನ್ನು ಕಳೆದುಕೊಂಡು ಒಂಟಿಯಾಗಿ ಉಳಿದ ಸುಯೋಧನ, ತನ್ನವರು ತನಗೆ ದ್ರೋಹ ಬಗೆದರೆಂದು ಸಂಜಯನ ಮುಂದೆ ತೋಡಿಕೊಳ್ಳುವ ಕೇದಾರ ಗೌಳ ರಾಗದಲ್ಲಿನ ಪದ್ಯವೊಂದು ಹೀಗಿದೆ—

ಕಂಡೆಯಾ ಕಾಲಗತಿಯಾ|ಸೌಖ್ಯದಿಂ|
ದುಂಡು ಜಾರುವರ ಕೃತಿಯ||
ಕೊಂಡಾಡಲರಿಯೆನಾನೂ| ಪ್ರಚ್ಛನ್ನ|
ಪಾಂಡವರ ನೋಡು ನೀನೂ||
ಉಳಿವುದರಿಗಳನು ಜಯಿಸಿ|ತೀರದಿರ|
ಲಳಿವುದೆಲ್ಲಸವ ಜಯಿಸಿ||
ಗಳಹಿದರೆ ಸುಭಟರಕರೇ| ಸೂರ್ಗ್ಗ-|
ಳಕಸೆಗಳಗವರು ಬಹರೆ||

ಪದ ಬಂಧದಲ್ಲಿ ಮೂಡಿ ಬಂದ ಸೊಗಸು, ಭಾವಗಳನ್ನು ತೋಡಿಕೊಳ್ಳುವ ವಿಧಾತ, ಹುದುಗಿರುವ ಲಾಲಿತ್ಯ, ಓದಿ ಅನುಭವಿಸಬೇಕಾದ್ದು. ಭೀಮ-ದ್ರೌಪದಿಯರ ಸಂಭಾಷಣೆಯೂ ತುಂಬ ಸೊಗಸಾಗಿ ಬಂದಿದೆ. ತಾಳ ಮದ್ದಳೆಯ ಕೂಟಗಳಲ್ಲಿ ಸ್ವತಃ ಅರ್ಥ ಹೇಳುತ್ತಿದ್ದ ಕವಿಗಳು—ಅರ್ಥ ಹೇಳಬಯಸುವವರಿಗೆ ತುಂಬ ಅವಕಾಶ ಕಲ್ಪಿಸಿದ್ದಾರೆ—

ಸಂಜಯ ಸುಯೋಧನನನ್ನು ಸಾಂತ್ವಿಸಲೆಳಸುತ್ತಾನೆ. ಆ ಸಂಧಿಯಲ್ಲಿ ಪಾಂಡವರ ಗುಣಗಾನ ಮಾಡುತ್ತಾನೆ. ಒಪ್ಪಂದ ಮಾಡಿಕೊಳ್ಳಲು ಒತ್ತಾಯಿಸುತ್ತಾನೆ. ಇದರಿಂದ ನಖ-ಶಿಖಾಂತ ಉರಿದ ಕೌರವನ ಬಾಯಿಂದ ಬರುವ ಮಾತುಗಳಿವು:

ಭಾ| ಷ| ಸಂಜಯನೆ ಬಿಡು ಸಾಕು ಗುರುಜನ|
ರೆಂಜಲಲ್ಲಾ ಸಂಧಿಸೆನಲಿದು|
ರಂಜನೆಯ ಧುರ್ಯೋಧನಾಂಕಿತ ನಾಮನಾದೆನಗೆ||

ಅಥವಾ ಪಂಚಗಾತಿರಾಗ, ಮಟ್ಟಿತಾಳದ ಕೆಳಕೆ ಕೊಟ್ಟಿರುವ ಪದ್ಯವನ್ನು ಅವಧರಿಸಿರಿ—

ಹುಟ್ಟ—ನಾವು, ಸೋಲು ಗೆಲವಿ|
ವಿಷ್ಟು ದೈವಪಿಸ್ಟವೆಮ್ಮ||
ಹುಟ್ಟು ಗುಣವನವಕೆ ಬಿಡರೆ|
ಬಿಟ್ಟು ಕೊಡ ವೆನೆ||
ತೊಟ್ಟ ಗದೆಯು ನೆರವಿಗೆನ್ನ|
ಟ್ಟೆ ನೆರವೆ ಸಾಕ, ರಿಪುಗ-|
ಳಟ್ಟಹಾಸ ನಿಲಿಸಿ ತಲೆಯ|
ಮೆಟ್ಟಿ ನಿಲ ವೊಡೇ||

ಅಲ್ಲಿಂದ ಕಾಲ್ತೆಗೆದ ಸುಯೋಧನ ಕೈಯಂ ತಲೆಗಿಂಬಾಗಿಸಿ ಮಲಗಿದ್ದ ತಾತ ಭೀಷ್ಮರಲ್ಲಿಗೆ ಬರುತ್ತಾನೆ. ಅವರೂ ಸಂಧಾನದ ಮಾತನ್ನು ಮುಂದು ಮಾಡುತ್ತಾರೆ—ಅವರ ಸೂಚನೆಯನ್ನು ಅತ್ಯಂತ ವಿನಯದಿಂದ ತಿರಸ್ಕರಿಸಿ ತನ್ನ ನಿಲುವನ್ನು ಸಮರ್ಥಿಸಿಕೊಳ್ಳುವ ತೋಡಿ ರಾಗದಲ್ಲಿರುವ ಕೌರವನ ಮಾತಿಗೆ ಯಾರೂ ತಲೆದೂಗ ಬೇಕು.

ಅವಿಭಾಜ್ಯ ಸಾಮ್ರಾಜ್ಯ ವಿದನೆರಡು ಮಾಡಿ|
ಅವನೀಶ ನಾನೊಂದನಾಳುವೆನೆ ನೋಡಿ||
ಬವರವಲ್ಲದೆ ಮಿಕ್ಕ ನುಡಿ ನುಡಿಯಬೇಡಿ|
ಕುವರ ಜಯಿಸೆಂದು ಹರಸುವ ಮನವ ಮಾಡಿ||

ಆಗ ಅಲ್ಲಿಗೆ ಬಂದ ತಾಯಿ ತಂದೆಯರೊಡನೆ ನಡೆಯುವ ಮಾತುಗಳು, ಅಜ್ಜನ ಉಪದೇಶದಂತೆ ವೈಶಂಪಾಯನ ಸರೋವರ ಸೇರಲು ಹೊರಟು ನಿಂತ ಕೌರವ ಮಾರ್ಗ ಮಧ್ಯದಲ್ಲಿ, ಯುದ್ಧ ಭೂಮಿಯಲ್ಲಿ, ಸತ್ತು ಬಿದ್ದ ಬಂಧ-ಬಾಂಧವರಿಗಾಗಿ ಹರಿಸುವ ಅಳಲ ಹೊಳೆ ತುಂಬ ಹೃದಯ ಸ್ಪರ್ಶಿ.

ವೈರಿಯನ್ನು ಎಲ್ಲಿಯೂ ಕಾಣದೆ ಕೆರಳಿದ ರಣಕೇಳೀ ಕುತೂಹಲಿಯಾದ ಭೀಮನ ಆರ್ಭಟೆಯೂ ಅಷ್ಟೇ ಸೊಗಸಾಗಿ ಮೂಡಿದೆ. ಅವನಿಗಿದಿರಾದ ಧೃತರಾಷ್ಟ್ರ-ಗಾಂಧಾರಿಯರ ಕೂಡೆ ಅವನು ನಡೆಸಿದ ಸಂಭಾಷಣೆಯೂ ನಾಟಕೀಯವಾಗಿದೆ—ಬೇಡರ ಪಡೆಯಿಂದ, ಸುಯೋಧನ ಅಡಗಿ ಕುಳಿತ ಸ್ಥಳದ ಸುಳಿವು ಸಿಕ್ಕಿ, ಕೃಷ್ಣನ ಸಲಹೆಯಂತೆ ಭೀಮ ಆ ಎಡೆಗೆ ನುಗ್ಗುತ್ತಾನೆ. ಹಂಗಿಸಿ, ಬೈದು, ಜರಿದು ಸುಯೋಧನನನ್ನು ಯುದ್ಧಕ್ಕೆ ಕರೆಯುತ್ತಾನೆ. "ಬಾರೆಲಾ ಭಿಕಾರಿ ಕೌರವಾ" ಎನ್ನುವ ಪದ್ಯ ಓದುವಾಗ ಘೋರ ವೈರವಿರೂ ನೆಟ್ಟಗಾಗದಿರದು. ರನ್ನನ "ಗದಾಯುದ್ಧ"ಕ್ಕೆ ಯಾವ ರೀತಿಯಲ್ಲಿಯೂ ಕಡಿಮೆ ಎಷ್ಟು ಮಂತಿಲ್ಲ—

"ನೀರೊಳಿರ್ದುಂ ಬೆಮರ್ತನುರಗಪತಾಕಂ" ಎಂದು ದುರ್ಯೋಧನನನ್ನು ರನ್ನ ವರ್ಣಿಸಿದರೆ, ಭೀಮನ ಮೂದಲಿಕೆಯಿಂದ ಕೋಪೋದ್ದೀಪಿತನಾದ ಕೌರವ ಕೊಳದಿಂದೆದ್ದು ಬರ ವುದನ್ನು ಹೀಗೆ—

"ಜಡನಿಧಿಯು ಬಗಿದೆದ್ದು ನಡೆಕಹ
ನಿಡಬ ವೈಶ್ವಾನರನೊ" ಎಂದು ಚಿತ್ರಿಸಿದ್ದಾರೆ—

ಪುನಃ ಒಡಂಬಡಿಕೆಯ ಮಾತನ್ನು ಧರ್ಮರಾಯ ಅವನ ಮುಂದಿಡುತ್ತಾನೆ. ಕೌರವನು ಕೊಡುವ ಪ್ರತ್ಯುತ್ತರ ಮಾತುಗಳವು—ಶಂಕರಾಭರಣ ರಾಗದಲ್ಲಿರುವ ಆ ಪದ್ಯವನ್ನು ಚಪ್ಪರಿಸಲು ಒಂದು ನಾಲಗೆ ಸಾಲದು.

"ಆಳು ನೀವರಸಾಗಿ ನೆಲವ ನಮ್ಮ|
ನಾಳಾಗಿ ನಡೆಸಿಕೊ ಬಿಟ್ಟು ಛಲವ||
ಹಾಳುಗೈಯದೆ ಬಾಳನೊಲವ| ಕೂಡಿ
ಬಾಳುವುದೆ ಸೌಖ್ಯ||

ಕೌರವ ಈ ಸಲಹೆಯನ್ನು ತಳ್ಳಿ ಹಾಕಿ ತನ್ನ ಛಲ ಮೆರೆಸುತ್ತಾನೆ—ಆ ಸಮಯಕ್ಕೆ ಸರಿಯಾಗಿ ಅಲ್ಲಿಗೆ "ಭಾನುರಾಂಕದ, ಕರದ ನೇಲದ, ಸುಹಾಸ ವದನದ, ನೀಲಾಂಬರ ರಾಮ ಬಲಭದ್ರ" ಬರುತ್ತಾನೆ— ಗದಾ ಯುದ್ಧದ ಏರ್ಪಾಡು ನಡೆಯುತ್ತದೆ. ಆ ಭಾಗವೆಲ್ಲ ಕೃತಿಯ ಅಂಗವು. ಒಂದೆರಡು ಕಂದ ಪದ್ಯಗಳು ತುಂಬ ಸೊಗಸಾಗಿವೆ.

ಭೀಮ ವಿಜಯ ಒಂದು ಸೊಗಸಾದ ಯಕ್ಷಗಾನ ಪ್ರಬಂಧ—ಅದಕ್ಕೆ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನವಿದೆ—ನಂದಳಿಕೆ, ಪಾರ್ತಿಸುಬ್ಬರ ಸಂಪ್ರದಾಯಗಳನ್ನು ಮುನ್ನಡೆಸುವ ಯೋಗ್ಯತೆ ಶ್ರೀ ಬಡೆಕ್ಕಿಲದವರಿಗೆ ಯಕ್ಷಗಾನ ಕೃತಿ ರಚನೆಯಲ್ಲಿ.

ಭೀಮ ವಿಜಯ, ಮಾಜಗ್ರತಿಯ ಎರಡೂ ರಸಿಕರ ಮನಸೆಳೆಯಬಲ್ಲವು. ಅವರ ಮಾನ್ಯತೆಗೆ ಅರ್ಹವಾದವು.

—ದೇವಕಿ ನಂದನ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

Ex. C. No. 141/1970

ಕಾಳಮ್ಮ ಹೆಗ್ಗಡ್ತಿ —ಅರ್ಜಿದಾರಳು

ಮತ್ತು

ಪಾರಮ್ಮ ಹೆಗ್ಗಡ್ತಿ ಕೂಡಾ —ಯದ್ರಿರು

ಇವರೊಳಗೆ

ನೋಟೀಸು

ಉಡುಪಿ ತಾಲ್ಲೂಕು ಉಕ್ಕರಳ್ಳಿ ಗ್ರಾಮದಲ್ಲಿರುವ ಶೇಷಮ್ಮ ಹೆಗ್ಗಡ್ತಿಯ ಮಗ 2ನೇ ಯದ್ರಿ ಅನಂತ ಹೆಗ್ಡೆ ಮತ್ತು ಸಿದ್ಧಕ್ಕ ಹೆಗ್ಗಡ್ತಿಯ ಮಗಳು 3ನೇ ಯದ್ರಿಳು ತುಂಗಮ್ಮ ಹೆಗ್ಗಡ್ತಿಗೆ ಸಹಾ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲಿನ ವಾದಿ ಅರ್ಜಿದಾರಳು ಉಡುಪಿ ಮುನ್ಸಿಫ್ ಕೋರ್ಟು ಕ್ರಮ ನಂಬ್ರ 165/61ರ ಮೇಲೆ ಪಡೆದ ಪ್ರಿಲಿಮಿನರಿ ವ ಫೈನಲ್ ಡಿಕ್ರಿ ಮೇರೆಗೆ ಬಹಾ ಐವೇಜು ವಸೂಲು ಬಗ್ಗೆ ಪ್ರಿಲಿಮಿನರಿ ಡಿಕ್ರಿಯಲ್ಲಿ ಜಪ್ತಿಯಾಗಿ ಕಾಣ್ಸಿದ ಆಸ್ತಿ ಏಲಂ ಬಗ್ಗೆ ದಾಖಲು ಮಾಡಿದ ಸದ್ರಿ ಅಮಲ್‌ಜಾರಿ ನಂಬ್ರ ವು ನಿಮ್ಮ ಹಾಜರಿ ಬಗ್ಗೆ ತಾ. 20-1-1971 ಕ್ಕೆ ಇಟ್ಟದ್ದು, ನಿಮ್ಮದೇನಾದರೂ ಉದಾಹರಣೆಯೂ ಆಕ್ಷೇಪವಿದ್ದಲ್ಲಿ ಕೋರ್ಟು ಮುಂದೆ ಆ ದಿನ ಬೆಳಿಗ್ಗೆ 11 ಗಂಟೆಗೆ ಖುದ್ದಾಗಿಯೂ ವಕೀಲರ ದ್ವಾರಾ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ನಂಬ್ರವನ್ನು ಏಕಪಕ್ಷವಾಗಿ ತೀರ್ಮಾನಿಸಲಾಗುವುದು.

(ಕೋರ್ಟು ಹುಕ್ಕುಂ ಪ್ರಕಾರ)

ಪಿ. ಎನ್. ಕೃಷ್ಣಮೂರ್ತಿ ರಾವ್

ಅರ್ಜಿದಾರಳ ಕಡೆ ಎಡ್ವಕೇಟ್

ಉಡುಪಿ, ದ. ಕ.

ತಾರೀಖು: 26.12.1970.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

Ex. c. No. 166/1970.

ಶ್ರೀ ದುರ್ಗಾಪರಮೇಶ್ವರಿ ದೇವರು-

ಇದರ ಟ್ರಸ್ಟೀ ಶ್ರೀ. ಕೆ. ಸುಬ್ರಹ್ಮಣ್ಯ ಭಟ್ಟ —ಅರ್ಜಿದಾರ

ಮತ್ತು

ಯು. ಕೆ. ಚಂದ್ರಶೇಖರ ರಾವ್ ಕೂಡಾ —ಯದ್ರಿರು.

ಇವರೊಳಗೆ

ನೋಟೀಸು

ಕೊಡಗ್ ಡಿಸ್ಟ್ರಿಕ್ಟಿನ ಮರ್ಕೇರದ ಕೋನೇಶನ್ ಗಾರ್ಡನ್‌ನಲ್ಲಿರುವ ಯು. ಕೆ. ಕೃಷ್ಣರಾಯರ ಮಗ 1ನೇ ಯದ್ರಿ ಯು. ಕೆ. ಚಂದ್ರಶೇಖರ ರಾವ್, ಬೆಳ್ಳಾರೆ ಕನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್‌ನಲ್ಲಿರುವ (ಈಗಿನ ಸಿಂಡಿಕೇಟ್ ಬ್ಯಾಂಕ್) ರಾಮಕೃಷ್ಣಯ್ಯರ ಮಗ 2ನೇ ಯದ್ರಿ ಕೆ. ಬಿ. ಸದಾನಂದ ರಾವ್, ಉಡುಪಿ ಟೌನಿನ ಕರ್ನಾಟಕ ಬೇಂಕಿನ ಏಜಂಟ್, ಶಂಕರನಾರಾಯಣ ರಾಯರ ಮಗ 3ನೇ ಯದ್ರಿ ಕೆ. ಬಿ. ರಾಮರಾವ್, ಉಡುಪಿ ತಾಲ್ಲೂಕು ಶಂಕರಪೇಟೆಯ ಸೂರಪ್ಪಯ್ಯನವರ ಮಠದಲ್ಲಿರುವ ರಾಮಚಂದ್ರಯ್ಯರ ಮಗಳು 4ನೇ ಯದ್ರಿಳು ಯು. ರಾಜಮ್ಮ, ಬೊಂಬಾಯಿ-ಡೋಬಿತಲಾವ್ ಬಸ್ತೀನಿಯ ಬಿಲ್ಡಿಂಗ್‌ನಲ್ಲಿರುವ ಮರಿಯನ್ ಡಿ'ಸೋಜರ ಮಗಳು 8ನೇ ಯದ್ರಿಳು ಅಲೆಕ್ಸಿನ ಸೋಜಾ ಬ್ರ್ಯಾ, ಮಂಗಳೂರು ಟೌನ್ ಬೊಂದೇಲ್ ಸಂಕಾರಿ ಆಸ್ಪತ್ರೆಯ ಮಾಜಿ ಹೆಡ್ ಕ್ಲಾರ್ಕರ ಹೆಂಡ್ತಿ 9ನೇ ಯದ್ರಿಳು ಅಗ್ನೆಟ್ಟೋ ಬ್ರ್ಯಾ, ಮತ್ತು ಬೊಂಬಾಯಿ 2, ಡೋಬಿತಲಾವ್, ಬಸ್ತೀನಿಯೋ ಬಿಲ್ಡಿಂಗ್‌ನಲ್ಲಿರುವ 18ನೇ ಮತ್ತು 14ನೇ ಯದ್ರಿರು ಸಬೀನಾ ಡಿ'ಸೋಜಾ ಮತ್ತು ಕ್ಲೋರಿ ಬ್ರ್ಯಾಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:-

ಮೇಲಿನ ವಾದಿ ಅರ್ಜಿದಾರನು ಪಡೆದ ಉಡುಪಿ ಮುನ್ಸೀಫ್ (1ನೇ ಎಡಿಶನಲ್ ಮುನ್ಸೀಫ್ ಕೋರ್ಟು) ಕೋರ್ಟು ಕ್ರಮ ನಂಬ್ರ 46/1962ರಲ್ಲಾದ ಪ್ರಿಲಿಮಿನರಿ ವ ಫೈನಲ್ ಡಿಕ್ರಿ ಮೇರೆಗೆ ತನಗೆ ಬಹಾ ಐವೇಜು ವಸೂಲು ಬಗ್ಗೆ ಪ್ರಿಲಿಮಿನರಿ ಡಿಕ್ರಿಯಲ್ಲಿ ಜವಾಬ್ದಾರಿ ಕಾಣ್ಸಿದ ಆಸ್ತಿ ಏಲಂ ಬಗ್ಗೆ ದಾಖಲು ಮಾಡಿದ ಸದ್ರಿ ಅಮಲ್ ಜ್ಯಾರಿ ನಂಬ್ರವು ನಿಮ್ಮ ಹಾಜರಿ ಬಗ್ಗೆ ತಾ. 25-1-1971 ಕ್ಕೆ ಇಟ್ಟದ್ದು ನಿಮ್ಮದೇನಾದರೂ ಆಕ್ಷೇಪಣೆ ವಿದ್ದಲ್ಲಿ ಈ ಕೋರ್ಟು ಮುಂದೆ ಆ ದಿನ ಬೆಳಿಗ್ಗೆ 11 ಗಂಟೆಗೆ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ನಂಬ್ರವನ್ನು ತೀರ್ಮಾನಿಸಲಾಗುವುದು.

(ಕೋರ್ಟು ಹುಕ್ಕುಂ ಪ್ರಕಾರ)

ಪಿ. ಎನ್. ಕೃಷ್ಣಮೂರ್ತಿ ರಾವ್,

ಅರ್ಜಿದಾರನ ಕಡೆ ಎಡ್ವೊಕೇಟ್

ಉಡುಪಿ, ದ.ಕ.,

ತಾರೀಖು: 26.12.1970.

ಕಾಸರಗೋಡಿನ 'ತಳಂಗೆರೆ'ಯ ಕನ್ನಡ ಶಾಸನ

(ಪರಿಚಯ)

ದ. ಕ. ಜಿಲ್ಲೆಯ ಅವಿಭಾಜ್ಯ ಸ್ಥಳವಾಗಿದ್ದ ಕಾಸರಗೋಡು ತಾಲೂಕು 1956ರ ರಾಜ್ಯವಿಭಾಗದ ಅವಸ್ಥೆಯಿಂದಾಗಿ ಕೇರಳ ರಾಜ್ಯಕ್ಕೆ ಸೇರಿದುದು ಬಲು ವಿಷಾದನೀಯವಾಗಿದೆ. ಅಲ್ಲಿ ಹಲವಾರು ಜನಗಳು ಭಾಷೆಯವರು ಇದ್ದಂತೆ ಕನ್ನಡಿಗರೂ ಅಷ್ಟೇ ತುಂಬಿದ್ದಾರೆ (ಇತ್ತೀಚೆಗೆ ಜನರ ಕೃತಕ ವಲಸೆಗಳಿಂದಾಗಿ ಎಲ್ಲೆಡೆ ವ್ಯಾಪಿಸಿದಂತೆ ಅಲ್ಲೂ ಕೇರಳೀಯರು ಇದ್ದಾರೆ.) ತುಳುನಾಡಿನ ತೆಂಕು ಗಡಿ ಕಾಸರಗೋಡಿನ ಪಯಸ್ವಿನೀ ನದಿಯೆಂದು ಹೇಳುವುದು. "ಪಯಸ್ವಿನೀಂ ಕೇರಳಭೂಷಣಾಯಿತಾಂ" ಎಂದು ಹದಿಮೂರನೆಯ ಶತಕದಲ್ಲಿದ್ದ "ಶ್ರೀ ಮಧ್ವಾಚಾರ್ಯ"ರ ಚಾರಿತ್ರಿಕ ವಿಚಾರಗಳುಳ್ಳ "ಸುಮಧ್ವವಿಜಯ"ದಲ್ಲಿದೆ! ಆ ಕಾಲಕ್ಕಿಂತಲೂ ಹಿಂದೆಯೇ ಅಲ್ಲಿ ಕನ್ನಡಿಗ ರಾಜರಿದ್ದು, ಅವರ ಮನೆತನವೇ—ಜಯಸಿಂಹರಾಜ—ಶ್ರೀ ಮಧ್ವಾಚಾರ್ಯರಿಗೆ ತ್ರಿವಿಕ್ರಮ ಪಂಡಿತಾಚಾರ್ಯರೊಡನೆ ನಡೆದ ಸಂವಾದದಲ್ಲಿ ಮಧ್ಯಸ್ಥಿಕೆಯನ್ನು ವಹಿಸಿದ್ದು, ಹಾಗೂ ಶ್ರೀ ಮಧ್ವಾಚಾರ್ಯರನ್ನು ಗೌರವಿಸಿದ್ದು ತಿಳಿಯುತ್ತದೆ. (ಅದೇ ಸುಮಧ್ವ ವಿಜಯ ಹಾಗೂ ಅದರ ಟೀಕೆಗಳನ್ನು ನೋಡಿರಿ.) ಪ್ರಕೃತ ಲೇಖನದಲ್ಲಿ ಆ ಜಯಸಿಂಹರಾಜನ ಪೂರ್ವಜರಲ್ಲೊಬ್ಬನಾದ ಜಯಸಿಂಹನೆಂಬವನು ಬರೆಸಿದ 'ತಳಂಗೆರೆ'ಯ ಕನ್ನಡ ಶಾಸನವೊಂದನ್ನು ಆಧರಿಸಿ ತುಸು ಬರೆಯಲಿದೆ. ಇದು ಎ. ಇಂ. 29 ಪುಟ 203ರಲ್ಲಿ ಮೊದಲು ಪ್ರಕಟವಾಗಿದೆ. ಈಗ (1961ರಲ್ಲಿ) ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯು "ಶಾಸನ ಸಾಹಿತ್ಯ ಸಂಚಯ"ದಲ್ಲಿ ಟಿಪ್ಪಣಿಗಳೊಡನೆ ಭಾಷಾಂತರಗಳೊಡನೆ ಪ್ರಕಾಶಿತವಾಗಿದೆ. (ಪುಟ 24) ಇಲ್ಲಿ ಆ ಶಾಸನದ ಪೂರ್ತಿ ಪಾಠವಿಲ್ಲವಾದ (ಒಳ್ಳೆಯ ಭಾಗಗಳನ್ನು ಆಯ್ದುಕೊಂಡುದಾದರೂ) ಇಲ್ಲಿಯ ಕೆಲವು ಸಾಲುಗಳು ಆತನ ವೈಶಿಷ್ಟ್ಯವನ್ನು ತಿಳಿಸುವುದು ಮಾತ್ರವಲ್ಲ, ಆಗಿನ ಕನ್ನಡ ಭಾಷೆಯ ಸೊಬಗು ಹಾಗೂ ಆಗಿನ ರೀತಿಯಲ್ಲಿ "ತಳಂಗೆರೆ" ಕನ್ನಡದಲ್ಲಿ ಸೇರಿತ್ತೆಂದೂ ವಿಶಿಷ್ಟವಾಗಿ ತೋರಿಸುತ್ತದೆ. ಈ ಬಗೆಗೆ ಸದ್ಯಃ ಸಂಕಲನದಲ್ಲಿ ಹೇಳಿದ ಮಾತುಗಳಿವು:

"ಮೊನ್ನೆ ಮೊನ್ನೆಯವರೆಗೆ ಮಂಗಳೂರು (ದ. ಕ.) ಜಿಲ್ಲೆಯಲ್ಲಿದ್ದ ಕಾಸರಗೋಡು ತಾಲೂಕು ರಾಜ್ಯ ಪುನಾರಚನೆಯ ಕಾಲಕ್ಕೆ (೧೯೫೬) ಕೇರಳ ರಾಜ್ಯದಲ್ಲಿ ಸೇರ್ಪಡೆಹೊಂದಿತು." "ಜಯಸಿಂಹನೆಂಬ ದೊರೆ ತನ್ನರಸಿ ಪೋಚಬ್ಬರಸಿಗೆ "ಕನ್ಯಾದಾನ"ವಾಗಿ ಭೂಮಿಯನ್ನು ಬಿಟ್ಟುದನ್ನು ಈ ಶಾಸನ ಉಲ್ಲೇಖಿಸುತ್ತದೆ. ಕನ್ಯಾದಾನ ಎಂಬುದನ್ನು ಹೆಣ್ಮಕ್ಕಳಿಗೆ ಕೊಟ್ಟ ಭೂದಾನವೆಂಬರ್ಥದಲ್ಲಿ ಬಳಸಿದಂತಿದೆ! ಈ ಬಗೆ ಅಷ್ಟೊಂದು ಚೆನ್ನಾಗಿಲ್ಲ! ಏನೆಂದರೆ, ರಾಜನು ತನ್ನರಸಿಗೆ—ಆಕೆ ಚಿಕ್ಕವಳಾಗಿರಲಿಕ್ಕಿಲ್ಲ—ಕೊಟ್ಟ ಭೂದಾನಕ್ಕೆ 'ಕನ್ಯಾದಾನ'ವೆಂದು ಹೇಳಲೆಡೆಯಿಲ್ಲ! ಆಕೆ ಕನ್ಯಾಪ್ರಾಯದವಳಾಗಿರಲಿಕ್ಕಿಲ್ಲ! ಹೆಣ್ಮಕ್ಕಳಿಗೆ ಕೊಡುವ—ಉಚಿತವಾದ ಬಳುವಳಿಯು ಭೂದಾನಕ್ಕೆ ಆ ಹೆಸರು ಎಲ್ಲೆಲ್ಲೂ ಕೇಳಬಂದಿಲ್ಲ! ಈ "ಕನ್ಯಾದಾನ"ವೆಂಬಲ್ಲಿಯ "ಕನ್ಯಾ" ಶಬ್ದವು ಅರಸಿಗೆ ಸಂಬಂಧಿಸಿಲ್ಲ, ಹಾಗೆಯೆ ಭೂಮಿಗೂ ಸೇರಿದಂತಿಲ್ಲ! ಹಾಗಂತ, ಈ ದಾನವು ಹೊಸತಾದುದರಿಂದ "ಕನ್ಯಾದಾನ"ವೆಂದು ಹೇಳಬೇಕು.

'ರಾಷ್ಟ್ರಕವಿ' ಶ್ರೀ ಗೋವಿಂದ ಪೈಯವರು ಅದೊಮ್ಮೆ ನನಗೆ ಬರೆದ ಖಾಸಗಿ ಪತ್ರದಲ್ಲಿ "ಕನ್ಯಾ ಕವಿತೆ"ಯೆಂದು ಬಳಸಿದ್ದಾರೆ. ಅಂದರೆ, ಹೊಸತು—ಇದುವರೆಗೆ ಬೇರೆಯವರಿಗೆ ಕೊಡದ ಹಾಗೂ ಅಪ್ರಕಟಿತವಾದ "ಕವಿತೆ"ಯೆಂದು ಅದು ಬಳಸಲಾಗಿದೆ. (ಶ್ರೀ ಗೋವಿಂದ ಸ್ಮಾರಕ ಗ್ರಂಥವಾದ "ದೀವಿಗೆ"ಯಲ್ಲಿ ಕೊನೆಗೆ ಸೇರಿದ "ಪತ್ರ ಸಂಕಲನ"ವೆಂಬ ವಿಭಾಗ ಹಾಗೂ ಉಡುಪಿಯ ಎಂ. ಜಿ. ಎಂ. ಕಾಲೇಜಿನ ಪ್ರಕಟನೆಯಾಗಿ ಬಂದ ಅದೇ ವಿಭಾಗ ನೋಡಿರಿ) ಅಂತೆ, ಈ "ಕನ್ಯಾದಾನ"ವಾಗಿದ್ದ ಭೂದಾನವೆಂದರೆ ಹೊಸತಾದ—ಹೊಸ ರೀತಿಯ ಭೂಮಿಯನ್ನು ದಾನ ಕೊಟ್ಟುದೆಂದೇ ಸೂಚಿತವಾಗುತ್ತದೆ! ಆ ನೆಲವನ್ನು ಚೆನ್ನಾಗಿಸಿ, ಮಾಡಿಯೇ ಕೊಟ್ಟುದರಿಂದಲೂ, "ಕನ್ಯಾದಾನ"ದಂತಿರುವ ಈ ಭೂದಾನ ಬರಿ ನೆಲವಲ್ಲ; ಅಲ್ಲಿ ಆ ಮೊದಲು ಬೇರೆಯವರಿಗೆ ಅಧಿಕಾರವಿಲ್ಲ, ಬೇರೆಯವರಿಗೆ ಅದು ಕೊಡಲಾಗಿಲ್ಲ, ಆ ಪೋರಿಗೆ ಅಲಂಕೃತ ಹಾಗೂ ಸಾಂಗವಾಗಿರುವಂತೆ ಆ ನೆಲವನ್ನು ಮಾಡಿಸಿ, ದಾನಗೊಟ್ಟನೆಂದೇ ವೇದ್ಯವು. "ಕನ್ಯಾದಾನ"ವಾಗಿ "ಭೂದಾನ"ವೆಂದರೆ ಹೆಣ್ಮಕ್ಕಳಿಗೆ ಮಾತ್ರವಲ್ಲ; ಆದಾರಿಗೂ ಆ ಮೊದಲು ಕೊಟ್ಟಿರದ ಹೊಸ ನೆಲವನ್ನು ದಾನಗೊಡುವುದೆಂದೇ ಅರ್ಥವಾಗುತ್ತದೆ! (ಕನ್ಯೆಯು ಅಪ್ರಾಪ್ತ ವಯಸ್ಕಳು, ಹಾಗೂ ಪ್ರೌಢೆಯಲ್ಲ. ಆ ಮೇರೆಗೆ "ಕನ್ಯಾ ಕವಿತೆ" ಯೆಂದರೆ ಅಪೂರ್ಣಾಂಗವೆಂದು, ಅಪಕ್ವವೆಂದು ತಿಳಿಯಲಾಗದು. ಅಂತೆ, ಈ ಭೂದಾನವಾಗಿತ್ತುದು ಸಂಪೂರ್ಣಗೊಳಿಸಿದ ನೆಲವೆ. ಅರಸಿಗೆ ಇತ್ತುದು ಮೊತ್ತಮೊದಲಾದುದರಿಂದ, ಈ ದಾನವು ಮಾತ್ರ "ಕನ್ಯಾರೀತಿಯ ದಾನ"ವೆಂದೇ ನಿರ್ಧರವಾಗುತ್ತದೆ!)

ಈ ಬಗೆತಕ್ಕೆ ಇದೇ ಶಾಸನದಲ್ಲಿ ಅರಸಿಯ ಮಾತು ಬೆಂಬಲಿಸುತ್ತದೆ; "ಯಾರೂ ಮನ್ನಿಸದ ಊರನ್ನು" ಹಾಗೂ "ಯಾರಿಗೂ ಬೇಡವಾದ ಎಡೆಯನ್ನು" ಕೊಡುವಂತೆ ಆಕೆ ಹೇಳುತ್ತಾಳೆ. ಈ ಮೊದಲು ಬೇರೆಯವರಿಗೆ ಕೊಟ್ಟಿರುವ ನೆಲವನ್ನು ಕಸಿದುಕೊಳ್ಳುವುದು ಅಧರ್ಮವಾಗಿದೆ. ಆದುದರಿಂದ ಬೇರೆಯವರಿಗೆ ಕೊಡದಿರುವ ಹಾಗೂ ನಿರುಪಯುಕ್ತವಾದ ಎಡೆಯ ದಾನವೇ "ಕನ್ಯಾದಾನ"ದಂತೆ ಇಲ್ಲಿ ಪರಿಗಣಿಸಿದೆಯೆನ್ನಲಡ್ಡಿಯಿಲ್ಲ! ಆ ಕಥೆ ಮಾತಿನಂತೆ, ಇದು ಮೊದಲು ಯಾರೂ ಒಲ್ಲದ ನೆಲವನ್ನು ಹಸನಾಗಿಸಿಕೊಟ್ಟನು. ಅಂದರೆ, ಈ ರೀತಿಯೂ ಇಲ್ಲಿಗೆ ಅನುಕೂಲಾರ್ಥವಾಗಿದೆ.

ಇದೀಗ, ಸಂಕಲನ ವಿಭಾಗವನ್ನು ವಾಚಕರ ಅವಗಾಹನೆಗೆ ಇಲ್ಲಿ ಬರೆದು, ಅದರ ಬಗ್ಗೆ ತುಸು ವಿವೇಚನೆಯನ್ನು ಮಾಡಬೇಕಾಗಿದೆ.

ಕನ್ಯಾದಾನಂಗೊಟ್ಟ ಭೂಮಿ

ಕಂ|| ಶ್ರೀಚಪಳತೆಯಂ ವಚನ
ಶ್ರೀ ಚತುರಾನನ ವಿರಾಮಮಂ
ಬಿಸುಟು ಜಯ |
ಶ್ರೀ ಚಾರು ನೇತ್ರೆಯೊಡನೆರೆ|
ದಾಚಂದ್ರಾರ್ಕ್ಕಂ ವಿರಾಜಿಸಲ್
ಜಯಸಿಂಹಂ||

ವಚನ|| ಕನ್ಯಾದಾನಮಂ ಕೆನಗಿತ್ತನೆ ನೆಡ್ಡಿಪೆನು ಪೋಚಬ್ಬರಸಿ ಸನ್ತೋಷದಿಂ ಬಟ್ಟನೆತ್ತಿದ್ದಡೆ,

ಇನ್ನುಪ್ರಭುಪರೆಲ್ಲಂ|
ಪಿನ್ನಿರೆಗಂ ದೊರೆಗೆ ಮಾರದದರಿಂದಾಗುಂ|
ಮನ್ನಿಸದೂರಂ ಗುಣಾಕಂ
ಪನ್ನ ಪಮನ್ನೀವುದೆನಗೆ ಕನ್ಯಾದಾನಂ||

ಆಕ್ಕ್ಯಮೆಂದು,

ಉತ್ಸಾಹ|| ಊರ ಕಡೆಯ ತೊರೆಯ ತಡಿಯ ಕರಿಯ ಕಲ್ಲ ಮೋರದಾಸ | ಕ್ರೂರ ಪೊಲೆಯರಿಪ್ಪ ಕೇರಿಯೊಳವ
ನೀರ ಭೂಮಿಯುಂ
ಸಾರ ಭೂರುಹಂಗಳಿಲ್ಲದೀ
ಯೊಳಗೆ ನೆರೆದ ಕೆರೆಯುಮಂ
ಭೋರುಯಾಕ್ಷಿ ತನ ಧನದಿ
ನೊಪ್ಪೆ ಮಾಡಿಸಿಳ್ದುದಂ||

ವಚನ|| ಇಪ್ಪತ್ತರುವೊಲ್ಲದ ಕಲ್ಯಾಣಬೆಟ್ಟಂ ಸಮತಳಂ ಮಾಡಿಯೆಡೆಯಿಲ ಹುಸೆಯುಮಂ ನನ್ದನವನಂಗಳುಮಂ ಮಾಡಿಸಿ, ಕೆರೆಯುಂ ಕಟ್ಟಿಸಿ, ತೊರೆಯ ಸಿರಿಯ ಪೊಸವಳ ನೆಲನಂ ಸಿರಿಸಾಮಾನ್ಯತಾಳ್ದಿಂ ಸುಕ್ಷೇತ್ರಂ ಮಾಡಿಸಿದುದನದು ಮನ್ನಮೂಡಿಯುಕ್ಕೂವೊಳಲ್ಪ ನೆಲದಾ ಭೂಮಿಯನೊಳಕೊಣ್ಡ ಗಳನಗಳಿಸಿ, ಆಸನ್ನ ಭಾಷ್ಪಗಾಮಿಗಳರಿಯೆ ಕನ್ಯಾದಾನಂಗೊಟ್ಟ ಭೂಮಿಯು ಕಾಲ ಕಾಲಾಂತರದೊಳರಾನುಮೀ ಧರ್ಮವ ನಳಿದು ಕೊಳಲಾಟಿಸಿದ ಪಂಚ ಮಹಾಪಾತಕಂ ತನ್ನ ತಾಯಂ ಕೊಳಲಿನ್ನು ತನ್ನ ತನ್ದೆಯಂ ಕೊಂದು, ತನ್ನ ಮಕ್ಕಳ ನೆತ್ತರಂ ಕುಡಿದು, ಪಸುವುಂ ಬ್ರಾಹ್ಮಣರುಮಂ ಕುರುಕ್ಷೇತ್ರದೊಳಳಿದಾತನ ಪುಗುವ ನರಕಮಂ ಪುಗುವನಕ್ಕೆ. ಈ ಕನ್ಯಾದಾನಮಂ ಕೊಣ್ಡ ತವಲ್ಪಾಯುಷ್ಯನುಮ ಪುತ್ರಕನು ಮಪ್ಪನಕ್ಕೆ.

ಊರ ಕಟ್ಟಳೆ

ಕಂ|| ಆರಾದೊಡಕ್ಕೆ ಧಾತ್ರೀ|
ಭಾರಮುಮಾರಂ ನೆಲ್ಲಾರಾನ್ತರ
ಕಸ್ತೂನ್ತ|
ಬೀರರಕ್ಷರದಾಂ ಬೀಡದೆ|
ನೋರಂತಿರೆ ಕಾವುದೀ ವ್ಯವಸ್ಥೆಯ
ನಾರಂ||

ವಚನ|| ಆದೆನ್ತೆನ್ದೊಡೆ, ಆ ನಾಳ್ಗಳುರಂ ಪೊಕ್ಕನ್ದು ಪುಲ್ಲದಕ್ಕನೆಕ್ಕಪ್ಪೊಡವೇಣಾನುಮಂ ಬಿಡದೊಡಂ ಕೆಲೆಗೆ ಸಾಲ್ರತನ್ನಪ್ಪ ದೆಪ್ರೇಹಂಗೆಯು ಬನ್ದೊರಂ ಪೆಂಕೆಯ್ದವನಂ ಮೂರು ದಿವಸಂ ಸರ್ವ ಪರಿಹಾರಂ ಕಾದು ಕೆಡಿಸುವುದು, ಊರ್ವ್ವರ ಜೋಗಪ್ಪೆಯ ಮಂಕಪೊಳ್ ಪೆಣ್ಣಣ್ಣುಸಗಳಲ್ಲದೆ ಗಣ್ಡುಗೂಸುಗಳ ಮಂತಕ್ಕಡಿಹಾರವಲ್ಲದೆಸಲ್ಲದು; ಪೆಣ್ಗೂಸುಗಳಲ್ಲದೊಡೆ ಗಣ್ಡುಮಕ್ಕಳ್ಗೆ ಸಲ್ಗುಂ.

ಉದ್ಧೃತ ಪದ್ಯ—ಗದ್ಯ ಭಾಗಗಳ ಬಗೆಗೆ ಸಂಕಲನಕಾರರ ಟಿಪ್ಪಣಿಗಳಲ್ಲಿ ಬರೆದು ನೋಡುವುದು ಅವಶ್ಯವಿದೆ!

(೧) ಕನ್ಯಾದಾನ ಕೊಡುವ ತನ್ನ ಅಪೇಕ್ಷೆಯನ್ನು ರಾಜ ತಿಳಿಸಿದಾಗ ಪೋಚಬ್ಬರಸಿ 'ಯಾರೂ ಮನ್ನಿಸದ ಊರನ್ನ"—'ಯಾರಿಗೂ ಬೇಡವಾದ ಎಡೆಯನ್ನ—ಬೇಡುತ್ತಾಳೆ. ಆತ ಅಗಲಿಂದ, ಯಾರೂ ಒಲ್ಲದ ಕಲ್ಯಾಡ ಬೆಟ್ಟವನ್ನು ಸಮತಳಗೊಳಿಸಿ, ಒಳಿಲ ಮನೆ—ತೋಟ—ಕೆರೆಗಳನ್ನು ಮಾಡಿಸಿ, ಪ್ರವಾಹವನ್ನು ಸೆರೆಯಿಟ್ಟು, ಒಳ್ಳೆ ನೆಲವನ್ನು ಹಿಂದು ಆ ಮೊಸನಿಂದ ಸುಕ್ಷೇತ್ರವಾಗಿ ಗೆಯ್ಸಿ ಆಕೆಗೆ ಕೊಡುತ್ತಾನೆ.

ಕಲ್ಯಾಡ ಬೆಟ್ಟದಲ್ಲಿ ಯಾರೂ ಮನ್ನಿಸದ—ಯಾರೂ ಒಲ್ಲದ ನೆಲವು ಒಗಳುಕೀರ ನೆಲವಾಗಿತ್ತು. (ಉಪ್ಪು ನೀರುಳ್ಳ ನೆಲದಲ್ಲಿ ಏನೂ ಹೆಚ್ಚು ಬೆಳೆ ಆಗಲಾರ

(ಹನ್ನೆರಡನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
126 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¼% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)
ರಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು—1

ಶಿಲ್ಪಕಲೆಯ ಸಿರಿಬೀಡು—ಹಾಸನ

ಒಂದೆಡೆ ಕಾಫಿ, ಏಲಕ್ಕಿ ತೋಟಗಳು; ಇನ್ನೊಂದೆಡೆ ಭತ್ತದ ಗದ್ದೆಗಳು, ತೆಂಗಿನ ತೋಟಗಳು; ಮಗದೊಂದೆಡೆ ಬೆಟ್ಟ, ಗುಡ್ಡ, ಕೆರೆತೊರೆ, ಕಾಡು— ಹೀಗೆ ಎಂದು ನಿತ್ಯನೂತನವಾಗಿ ಜನಮನದ ಕಣ್ಸೆಳೆಯುವ ಜಿಲ್ಲೆ ಹಾಸನ. ಇಷ್ಟಲ್ಲದೆ ಶಿಲ್ಪಕಲೆಯ ಪರಾಕಾಷ್ಠತೆಯನ್ನು ಮುಟ್ಟಿದ ಹಳೆಬೀಡು, ಬೇಲೂರು, ಶ್ರವಣಬೆಳಗೊಳಗಳು ಭಾರತ ಮಾತ್ರವಲ್ಲ ಇಡೀ ಜಗತ್ತಿನ ಕಣ್ಣನ್ನು ಸೂರೆಗೊಂಡಿವೆ. ಸರ್ವಮತ ಸಮನ್ವಯಕ್ಕೆ ಹಾಸನ ಒಂದು ನಿದರ್ಶನ. ಬೇಲೂರು ದೇವಾಲಯದಲ್ಲಿರುವ ಸಂಸ್ಕೃತ ಶಾಸನದಲ್ಲಿ "ಶಿವಭಕ್ತರಿಗೆ ಶಿವನಾಗಿ, ವೇದಾಂತಿಗಳಿಗೆ ಬ್ರಹ್ಮನಾಗಿ, ಬೌದ್ಧರಿಗೆ ಬುದ್ಧನಾಗಿ, ನೈಯಾಯಿಕರಿಗೆ ಕರ್ತನಾಗಿ, ಜೈನರಿಗೆ ಅರ್ಹಂತನಾಗಿ, ಮೀಮಾಂಸಕರಿಗೆ ಕರ್ಮವಾಗಿ ಕಾಣಿಸಿಕೊಳ್ಳುವ ಮೂರುಲೋಕದ ಅಧಿಪತಿಯಾದ ಕೇಶವ ಇಷ್ಟಾರ್ಥ ಸಿದ್ಧಿಗಳನ್ನು ನೀಡಲಿ" ಎಂದು ಮಾಡಿದ ಪ್ರಾರ್ಥನೆ ಕನ್ನಡಿಗರ ವಿಶಾಲ ಹೃದಯಕ್ಕೆ, ಸರ್ವಮತ ಸಹಿಷ್ಣುತೆಗೆ ಅನುಪಮ ಉದಾಹರಣೆ.

ಹೊಯ್ಸಳರ ಆಳಿಕೆಗೊಳಗಾದ ಈ ಪ್ರದೇಶ ಒಮ್ಮೆ ಇಡೀ ದಕ್ಷಿಣ ಭಾರತದ ರಾಜಧಾನಿಯಾಗಿ ಮೆರೆದಿತ್ತು. 12ನೇ ಶತಮಾನದ ಇಮ್ಮಡಿ ವೀರಬಲ್ಲಾಳ "ದಕ್ಷಿಣ ಚಕ್ರವರ್ತಿ" ಎಂದು ಪಡೆದ ಬಿರುದೇ ಇದಕ್ಕೆ ಸಾಕ್ಷಿ.

ತುಮಕೂರು, ಮಂಡ್ಯ ಜಿಲ್ಲೆಗಳು ಪೂರ್ವಕ್ಕೆ, ದಕ್ಷಿಣ ಕನ್ನಡ ಜಿಲ್ಲೆ ಪಶ್ಚಿಮಕ್ಕೆ, ಚಿಕ್ಕಮಗಳೂರು ಜಿಲ್ಲೆ ಉತ್ತರಕ್ಕೆ, ಮೈಸೂರು, ಕೊಡಗು ಜಿಲ್ಲೆಗಳು ದಕ್ಷಿಣಕ್ಕೆ ತಾಗಿಕೊಂಡಿರುವ ಹಾಸನ ಜಿಲ್ಲೆ ಮೈಸೂರು ರಾಜ್ಯದ ಪಶ್ಚಿಮ ಜಿಲ್ಲೆಗಳಲ್ಲಿ ಒಂದಾಗಿದೆ. ಉತ್ತರ—ದಕ್ಷಿಣಕ್ಕೆ 80 ಮೈಲಿ; ಪೂರ್ವ—ಪಶ್ಚಿಮಕ್ಕೆ 72 ಮೈಲಿ ವಿಸ್ತರಿಸಿಕೊಂಡಿರುವ ಈ ಜಿಲ್ಲೆಯ ವಿಸ್ತೀರ್ಣ 268 ಚದುರ ಮೈಲಿಗಳು.

ಸಮುದ್ರ ಮಟ್ಟದಿಂದ 3149 ಅಡಿಗಳ ಎತ್ತರದಲ್ಲಿರುವ ಈ ಜಿಲ್ಲೆಯ ಹವೆ ಅತ್ಯಂತ ಹಿತಕರ ಹಾಗೂ ಹರ್ಷಕರವಾಗಿದೆ. ಬೆಂಗಳೂರಿನ ಹವೆಗಿಂತಲೂ ಹಾಸನದ ಹವೆ ತಂಪು. ಇದರಿಂದಲೇ ಹಾಸನವನ್ನು "ಬಡವರ ನೀಲಗಿರಿ" ಎಂದು ಕರೆಯುತ್ತಾರೆ.

ಮೈಸೂರು ರಾಜ್ಯಕ್ಕೆ ಬರುವ ಪ್ರವಾಸಿಗಳು ಬೇಲೂರು, ಹಳೇಬೀಡು, ಶ್ರವಣಬೆಳಗೊಳಗಳನ್ನು ನೋಡದೆ ಹಿಂತಿರುಗುವುದು ಅಪೂರ್ವ. ಹಾಸನ ಪಟ್ಟಣದಿಂದ 24 ಮೈಲಿ ಸಾಗಿದರೆ ಗಾಳಿಬಿಸಿಲುಗಳಿಗೆ ಅಚ್ಚಳಿಯದೆ ನಿಂತು ತನ್ನ ಶಿಲ್ಪಕಲೆಯ ಮಹಾವೈಭವವನ್ನು ಜಗತ್ತಿಗೇ ಸಾರುತ್ತಿರುವ ಬೇಲೂರಿನ ಚೆನ್ನಕೇಶವಸ್ವಾಮಿ ದೇವಾಲಯ ಹೊಯ್ಸಳ ವಿಷ್ಣುವರ್ಧನನ ಕಲಾಪ್ರೇಮದ ಸಂಕೇತವಾಗಿದೆ. ವಿಷ್ಣುವರ್ಧನ ಜೈನಮತದಿಂದ ಶ್ರೀವೈಷ್ಣವಮತಕ್ಕೆ ಸೇರಿಕೊಂಡುದಕ್ಕೆ ಇದು ಸಾಕ್ಷಿ.

ಒಂದು ಕಾಲದಲ್ಲಿ ಹೊಯ್ಸಳರ ರಾಜಧಾನಿಯಾಗಿ ಯಶೋದುಂದುಭಿಯನ್ನು ಮೊಳಗಿದ ದ್ವಾರಸಮುದ್ರವೇ ಇಂದಿನ ಹಳೇಬೀಡು. ಇಲ್ಲಿಗೆ ಬೇಲೂರಿನಿಂದ 10 ಮೈಲಿ. ಇಲ್ಲಿಯ ಹೊಯ್ಸಳೇಶ್ವರ ಹಾಗು ಕೇದಾರೇಶ್ವರ ದೇವಾಲಯಗಳು ಮನೋಹರವಾಗಿವೆ.

ಶ್ರವಣಬೆಳಗೊಳ ಇದು ಜೈನರ ಕಾಶಿ. ವಿಂಧ್ಯಗಿರಿಯೆಂದು ಪುರಾಣ ಪ್ರಸಿದ್ಧವಾದ ದೊಡ್ಡಬೆಟ್ಟದ ಮೇಲೆ 58 ಅಡಿಗಳ ಗೋಮಟೇಶ್ವರ ಸ್ವಾಮಿಯ ವಿಗ್ರಹ ಮಾನವನ ಹಿರಿಮೆಯ ದ್ಯೋತಕವೋ ಎಂಬಂತೆ ಗಂಭೀರವಾಗಿ ತಲೆಯೆತ್ತಿ ನಿಂತಿದೆ. 12 ವರ್ಷಗಳಿಗೊಮ್ಮೆ ಇಲ್ಲಿ ನಡೆಯುವ ಗೊಮ್ಮಟ ಮಸ್ತಕಾಭಿಷೇಕ ಅಖಿಲ ಭಾರತದ ಜೈನರ ಹಾಗು ಪ್ರವಾಸಿಗಳ ತಂಡವನ್ನೇ ಆಕರ್ಷಿಸುತ್ತದೆ.

ಇವಲ್ಲದೆ ಹಾಸನ ಜಿಲ್ಲೆಯಲ್ಲಿ ರಾಮನಾಥಪುರ, ಗರುಡನಗಿರಿ, ಹಾರನಹಳ್ಳಿ, ಕಂಬೂರು, ಬೂವನಹಳ್ಳಿ, ದೊಡ್ಡಗದ್ದವಳ್ಳಿ, ಕೊಂಡಜ್ಜಿ, ಕೋರವಂಗಲ, ಪೂಳಿ, ಶಾಂತಿಗ್ರಾಮ, ಮರ್ಕುಲಿ, ಶೆಟ್ಟಿಹಳ್ಳಿ, ಹೊಳೆನರಸೀಪುರ, ಶ್ರೀರಾಮದೇವರಕಟ್ಟೆ, ಮಂಜರಾಬಾದ್, ಬಿಸಲೆ, ಸಕಲೇಶಪುರ ಇತ್ಯಾದಿ ಅನೇಕ ಪ್ರೇಕ್ಷಣೀಯ ಸ್ಥಳಗಳು ಈ ಜಿಲ್ಲೆಯ ಕೀರ್ತಿಯನ್ನು ಬೆಳಗಿವೆ.

ಈ ಜಿಲ್ಲೆಯಲ್ಲಿ ಕೆಂಪು, ಕಪ್ಪು, ಮಣ್ಣುಗಳಲ್ಲದೆ ಮರಳುಮಿಶ್ರಿತವಾದ ಮಣ್ಣು ಎಂದು ಮೂರು ವಿಧದ ಭೂಗುಣವನ್ನು ಕಾಣುತ್ತೇವೆ. ಹೆಚ್ಚಿನಭಾಗವು ಇಲ್ಲಿ ಫಲವತ್ತಾಗಿದೆ. ಮಲೆನಾಡಿನ ಕಣಿವೆಗಳಲ್ಲಿ ಭತ್ತ ಬೆಳೆದರೆ ಎತ್ತರ ಪ್ರದೇಶಗಳಲ್ಲಿ ಹಾಗು ಕಣಿವೆಗಳ ಮಗ್ಗುಲಲ್ಲಿ ಕಾಫಿ, ಏಲಕ್ಕಿ ತೋಟಗಳಿವೆ. ಕೆಲವು ಕಡೆ ತೆಂಗು ವ್ಯವಸಾಯ, ಇನ್ನೂ ಕೆಲವು ಕಡೆ ಕಬ್ಬಿನ ವ್ಯವಸಾಯ ಈ ಜಿಲ್ಲೆಯಲ್ಲಿ ನಡೆಯುತ್ತಿದೆ. ರಾಗಿ, ಹುರುಳಿ, ಜೋಳ, ಮೆಣಸು, ತೊಗರಿ, ಕಡಲೆ, ಹತ್ತಿ, ಅಡಿಕೆ, ಹೆಸರು, ಉದ್ದು, ಹೊಗೆಸೊಪ್ಪು, ಚಹಾ, ಆಲೂಗಡ್ಡೆ, ಮುಸುಕಿನ ಜೋಳ—ಇವೆಲ್ಲ ಈ ಜಿಲ್ಲೆಯ ಬೆಳೆಗಳು. ಅಲ್ಲದೆ "ಸೀ ಐಲೆಂಡ್" ಹತ್ತಿಯ ಬೆಳೆಗೆ ಈ ಜಿಲ್ಲೆ ಅತಿ ಪ್ರಸಿದ್ಧ. 61,640 ಎಕರೆಗಳಷ್ಟು ಅರಣ್ಯಗಳಿರುವ ಈ ಜಿಲ್ಲೆಯಲ್ಲಿ ಸುಮಾರು 1,25,958ಕ್ಕೂ ಹೆಚ್ಚು ಎಕರೆಗಳಷ್ಟು ಜಮೀನಿನಲ್ಲಿ ವ್ಯವಸಾಯ ನಡೆಯುತ್ತಿದೆ.

ಹಾಸನ ಜಿಲ್ಲೆಯು 97ಕ್ಕೂ ಹೆಚ್ಚು ಬೇರೆ ಬೇರೆ ಸಣ್ಣ ಪ್ರಮಾಣದ ಕೈಗಾರಿಕೆಗಳಿವೆ. ಅಲ್ಲದೆ ಬೇಸಾಯ ಹಾಗು ತೋಟದ ವ್ಯವಸಾಯಕ್ಕೆ ಬೇಕಾದ ಸಲಕರಣೆಗಳನ್ನು ತಯಾರಿಸುವ ಕಾರ್ಖಾನೆ, ಮರ ಸಿಗಿಯುವ ಕಾರ್ಖಾನೆ, ಬೆಂಕಿಕಡ್ಡಿ, ತೆಂಗಿನನಾರು, ಸಾಬೂನು ಹಾಗು ಎಣ್ಣೆ ತಯಾರಿಸುವ ಕಾರ್ಖಾನೆಗಳು ಈ ಜಿಲ್ಲೆಯಲ್ಲಿವೆ. ಕೈಗಾರಿಕೆಗಳಿಗೆ ಬೇಕಾದ ಅನೇಕ ಕಚ್ಚಾ ವಸ್ತುಗಳು ಈ ಜಿಲ್ಲೆಯಲ್ಲಿ ದೊರೆಯುತ್ತವೆ. ಇದರಿಂದ ಇಲ್ಲಿ ಸುಮಾರು 25ಕ್ಕೂ ಹೆಚ್ಚು ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ. ಇವುಗಳಲ್ಲಿ ಆಟದ ಸಾಮಾನು, ಕಲ್ನಾರಿನ ಸಿಮೆಂಟ್ ಶೀಟ್, ಪೈಪು, ಹೆಂಚು, ರಾಗಿಮಾಲ್ಟ್, ಹಣ್ಣು ಪ್ಯಾಕಿಂಗ್, ಸ್ಪ್ರಿಂಕ್ಲರ್ಸ್, ಮಿಶ್ರ ಗೊಬ್ಬರದ ಉತ್ಪಾದನೆ ಇತ್ಯಾದಿಗಳನ್ನು ಕೈಕೊಳ್ಳಲಾಗಿದೆ.

ಇಲ್ಲಿ ಒಂದು ಇಂಜಿನಿಯರಿಂಗ್ ಕಾಲೇಜ್, ಒಂದು ಪಾಲಿಟೆಕ್ನಿಕ್, ಒಂದು ಕೈಗಾರಿಕಾ ತರಬೇತಿ ಕೇಂದ್ರ ಹಾಗು ಒಂದು ವೃತ್ತಿ ಶಿಕ್ಷಣ ತರಬೇತಿ ಶಾಲೆ—ಇವೆಲ್ಲ ತಾಂತ್ರಿಕ ಶಿಕ್ಷಣ ಹಾಗು ತರಬೇತಿ ಕೊಡುತ್ತಿವೆ.

ದಕ್ಷಿಣ ರೈಲ್ವೆಯು ಕೈಗೊಂಡಿರುವ ಕೆಲಸಗಳಲ್ಲಿ ಅತಿ ದೊಡ್ಡದಾದ ಕೆಲಸವೆಂದರೆ ಹಾಸನ–ಮಂಗಳೂರು ರೈಲ್ವೆ ಮಾರ್ಗ. ಸುಮಾರು 24 ಕೋಟಿ ರೂ. ವೆಚ್ಚದ 117 ಮೈಲಿಯ ಈ ರೈಲ್ವೆ, ಸುಮಾರು 50 ಸಾವಿರ ಚದುರಮೈಲಿ ಪ್ರದೇಶದ ಒಳನಾಡಿನಿಂದ ಕರಾವಳಿಗೆ ವಸ್ತು ಸಾಮಗ್ರಿಗಳನ್ನು ಹಾಗು ಖನಿಜಗಳನ್ನು ಮಂಗಳೂರು ಬಂದರಕ್ಕೆ ಸಾಗಿಸುವ ದೃಷ್ಟಿಯಿಂದ ಮಹತ್ವದ ರೈಲುದಾರಿಯಾಗಿದೆ. ಇದು ರೈಲುಮಾರ್ಗ ತಯಾರಿಸುವ ಇಂಜಿನಿಯರಿಂಗ್ ನೈಪುಣ್ಯಕ್ಕೆ ಒಂದು ಸವಾಲಿನಂತಿದೆ. ಈ ರೈಲುಮಾರ್ಗದಲ್ಲಿ ನೇತ್ರಾವತಿ, ಕುಮಾರಧಾರೆ, ಹೇಮಾವತಿ ಹಾಗು [illegible] ನದಿಗಳಿಗೆಂದು 77 ದೊಡ್ಡ ಸೇತುವೆಗಳು 528 ಸಣ್ಣ ಸೇತುವೆಗಳು, 19 ರಸ್ತೆ ಹಾಗು ರಸ್ತೆ ಕೆಳಗಿನ ಸೇತುವೆಗಳನ್ನು ಕಟ್ಟಬೇಕಾಗುವುದು. ಅಲ್ಲದೆ 38 ಸುರಂಗಗಳುಳ್ಳ ಈ ರೈಲ್ವೆ ಕೆಲಸ ಇಡೀ ದೇಶದಲ್ಲೇ ಅತ್ಯಂತ ಕಠಿಣವಾದುದು. ಅತ್ಯಂತ ದೊಡ್ಡ ಸುರಂಗ 1740 ಅಡಿ ಉದ್ದವಾಗಿದೆ. ಅಲ್ಲದೆ 156 ಲೆವೆಲ್ ಕ್ರಾಸಿಂಗ್‌ಗಳು ಈ ರಸ್ತೆಯಲ್ಲಿವೆ. 1971ರ ವೇಳೆಗೆ ಮುಗಿಯುವ ನಿರೀಕ್ಷೆಯಿರುವ ಈ ರೈಲುಮಾರ್ಗ ಮೈಸೂರು ರಾಜ್ಯದ ಆರ್ಥಿಕ ಪರಿಾಭಿವೃದ್ಧಿಗೆ ಹೆಚ್ಚಿನ ಸಹಾಯಕವಾಗುವುದರಲ್ಲಿ ಸಂದೇಹವಿಲ್ಲ.

ಹಾಸನ ಜಿಲ್ಲೆಯ ಜನಸಂಖ್ಯೆ 1951ರ ಜನಗಣತಿಯ ಪ್ರಕಾರ 9 ಲಕ್ಷ. ಆದರೆ ಜನಸಂಖ್ಯೆಯ ಸಮಸ್ಯೆ ಇತರ ಜಿಲ್ಲೆಗಳಲ್ಲಿರುವಂತೆ—ಈ ಜಿಲ್ಲೆಯಲ್ಲಿಯೂ ಇದ್ದೇ ಇದೆ. ಆದುದರಿಂದ 1965ರಿಂದ ಇಲ್ಲಿ ಕುಟುಂಬ ಯೋಜನಾ ಕಾರ್ಯ ಪ್ರಾರಂಭವಾಗಿದೆ. ಈ ಜಿಲ್ಲೆಯ 6 ಆಸ್ಪತ್ರೆಗಳು, 11 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಅರ್ಹ ದಂಪತಿಗಳಿಗೆ ಕುಟುಂಬ ಯೋಜನೆಯ ಬಗ್ಗೆ ನೆರವಾಗುತ್ತಿವೆ. 1970 ಅಕ್ಟೋಬರ್ ಕೊನೆಯ ವರೆಗೆ ಈ ಜಿಲ್ಲೆಯಲ್ಲಿ ಒಟ್ಟು 20721 ಶಸ್ತ್ರಕ್ರಿಯೆ ನಡೆದಿದೆ. 9564 ಮಹಿಳೆಯರಿಗೆ ವಂಕಿಧಾರಣೆಯಾಗಿದೆ. 389475 ನಿರೋಧ್‌ಗಳನ್ನು ಹಂಚಲಾಗಿದೆ. ಅಲ್ಲದೆ ಕಳೆದ ನವೆಂಬರ್ 8ರಿಂದ ಒಂದು ವಾರ ನಡೆದ ಕುಟುಂಬ ಯೋಜನಾ ಶಿಬಿರದಲ್ಲಿ 220 ಮಂದಿಗೆ ಶಸ್ತ್ರಕ್ರಿಯೆ ಮಾಡಲಾಗಿದೆ.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ. ೧೦.

ಶ್ರೀ ಬಡೆಕ್ಕಿಲ
ಕನ್ನಡದ ಹಳೆಯುಳಿಕೆ

ಅವರಿಗೀಗ ಎಂಭತ್ತೈದನೆ ವರ್ಷ.

ನೋಡಿದವರು ಒಪ್ಪಿಕೊಳ್ಳುವುದು ಕಷ್ಟ.

ಈ ವಯಸ್ಸಿನಲ್ಲಿಯೂ ಉತ್ಸಾಹದ ಚಿಲುಮೆ. ತರುಣರನ್ನು ತಲೆ ತಗ್ಗಿಸುವಂತೆ ಮಾಡುತ್ತಾರೆ, ಸಾಹಿತ್ಯ ಸೃಷ್ಟಿಯಲ್ಲಿ ನಿರತರಾಗಿದ್ದಾರೆ.

ಸೃಷ್ಟಿ ಮಾಡಿದ್ದು ಅಪ್ಪಟ ಬಂಗಾರ.

ಉಪಯೋಗಿಸಿದ ಕಾಗದ, ಬಳಸಿದ ಮಸಿ, ಬರೆಯಲು ವ್ಯಯಿಸಿದ ಸಮಯ ಎಲ್ಲ ಸಾರ್ಥಕ.

ಓದಿ ಬೀದಿಗೆಸೆಯುವ ಕಸದ ರಾಶಿಯಲ್ಲ. ಮನೆಯನ್ನು ಬೆಳಗುವ, ಮನಸ್ಸನ್ನು ಅರಳಿಸುವ, ಸದಾ ಮೆಲುಕು ಹಾಕುತ್ತಿರಬೇಕೆನ್ನುವ ಆಸೆ ಹುಟ್ಟಿಸುವ ಅಮರ ಕೃತಿಗಳು.

ಒಂದೊಂದು ಕೃತಿ ಒಂದೊಂದು ವೈ[illegible]ಗಳು; ರಂಗು ತಾಣ.

ನಿರೂಪಣೆಗೆ ಬಳಸಿದ ಛಂದಸ್ಸಿನಲ್ಲಿ ವೈವಿಧ್ಯ. ಆರಿಸಿಕೊಂಡ ವಿಷಯ ಯಾವುದೇ ಇರಲಿ, ಅದಕ್ಕೊಪ್ಪುವ ಹಿತ-ಮಿತವಾದ ಭಾಷೆ, ಹರಿತವಾದ ವಿಚಾರಗಳು, ಹಲವನ್ನು ನೀವು ಒಪ್ಪಲಾರಿರಿ. ನಿಮ್ಮನ್ನು ಒಪ್ಪುವಂತೆ ಮಾಡುವ ಜಾಣ್ಮೆ.

ನಿರ್ಭೀತ ನಿಲುವು; ನಿಷ್ಠುರ ಮಾತುಗಳು.

ಕಷ್ಟ ಬಂತೆಂದು ಕುಗ್ಗದ ಭಾಗ್ಯ ಬಂತೆಂದು ಬೀಗದ ಧೀಮಂತ ಬದುಕು.

ತಾರುಣ್ಯದಲ್ಲಿ ಜಿಲ್ಲೆಯ ಪ್ರಸಿದ್ಧ ಅರ್ಥಧಾರಿಗಳು. ಅವರ ವಾಗ್ವಿಲಾಸಕ್ಕೆ ಸೋಲದವರಿಲ್ಲ. ಪಾತ್ರಗಳ ಮಹತಿಯನ್ನು ಕಡೆದು ನಿಲ್ಲಿಸುವ ಕಲೆಗಾರಿಕೆ.

ಕಷ್ಟ ಬರಬಾರದು ನಿಜ. ಆದರೆ ಅದನ್ನು ಬರದಂತೆ ಮಾಡಲು ಯಾರಿಂದಲೂ ಸಾಧ್ಯವಿಲ್ಲ.

ಅವು ಬರುವ ಪ್ರಮಾಣದಲ್ಲಿ ಅಂತರ ಇರಬಹುದು. ಅವು ಹಾಗೆ ಬರುವುದರಿಂದ ಹೃದಯ ಪರಿಪಾಕವಾಗುತ್ತದೆ—ಇದು ಅವರ ವಿಚಾರ ಧಾರೆ.

ಅವರ ಬದುಕಿನಲ್ಲಿ ಶೀಲ—ಚಾರಿತ್ರ್ಯಗಳ ಶ್ರೀಮಂತಿಕೆಗೆ ಸೋತವರು. ಅವರ, ದಿ. ಮುಳಿಯದವರ ಕೆಳೆ ಅದಕ್ಕೊಂದು ನಿದರ್ಶನ.

ಅವರಿಗೆ ಲಕ್ಷಣ ಗ್ರಂಥಗಳು ಕಂಠಪಾಠ, ಹಳೆಗನ್ನಡ ಕಾವ್ಯಗಳು ಕರತಲಾಮಲಕ. ಯಕ್ಷಗಾನ ಕಾವ್ಯಗಳಲ್ಲಿ ಬಳಸುವ ರಾಗಗಳ ಜ್ಞಾನ ಖಚಿತ. ಅವುಗಳ ಹಿಮ್ಮೇಳ—ಹಾಡುಗಾರಿಕೆಗಳ ಬಗೆಗಿನ ತಿಳುವಳಿಕೆ ಆಳವಾದ್ದು. ಅವರೊಂದು ನಡೆಯುತ್ತಿರುವ ಜ್ಞಾನ ಕೋಶ.

ಎಳವೆಯಲ್ಲಿ ಅಡಿಕೆ, ಕಾಫಿ, ಯಾಲಕ್ಕಿಯ ಬೆಳೆಗಳನ್ನು ಹುಲುಸಾಗಿ ಬೆಳೆಸಿದವರು. ಅನಂತರ ಅವುಗಳ ವ್ಯಾಪಾರಕ್ಕೆ ಕೈ ಹಾಕಿ ಸಾಹುಕಾರರಾದವರು—ಬ್ಯಾಂಕುಗಳ ಬೆಳವಣಿಗೆ, ವಾಣಿಜ್ಯದ ಅಭಿವೃದ್ಧಿ, ಸಾರಿಗೆ ಸೌಕರ್ಯದ ಹೆಚ್ಚಳವನ್ನು ಗುರುತಿಸಿದವರು. ಅವುಗಳಲ್ಲಿ ಪಾಲ್ಗೊಂಡು ಕೈ ಸುಟ್ಟು ಕೊಂಡವರು.

ಅವರ ಕೈ ಸೋತಿತು; ಮನ ಸೋಲಲಿಲ್ಲ.

ಅವರಿಗೆ ಕಷ್ಟ ಬಂತು. ಬಂಧುಗಳು ಇದ್ದುದನ್ನು ಅಪಹರಿಸಲು ಮುಂದೆ ಬಂದರು. ಹಿತವರು ಶತ್ರುಗಳಾದರು. ಕೈಗೆ ಬಂದ ಮಗ ಕಾಲಧರ್ಮವನ್ನೈದಿದ. ಮಗಳೊಬ್ಬಳು ಎಳವೆಯಲ್ಲಿ ಪತಿಯನ್ನು ಕಳೆದು ಕೊಂಡಳು, ಈ ಕೋಟಲೆದ ಕೋಟೆಯನ್ನು ಅವರು ದಾಟಿ ಬಂದರು.

ಜಗ್ಗಲಿಲ್ಲ! ಬಗ್ಗಲಿಲ್ಲ—ಅಯ್ಯೋ ಅನ್ನಲಿಲ್ಲ.

ಈ ಕುಮುಲ ತಿಕ್ಕಾಟದ ಮಧ್ಯೆ ಮೂಡಿ ಬಂತು ಅವರ "ಗೀತಾಸಾರ"—ಈ ಶತಮಾನದ ಉತ್ಕೃಷ್ಟ ಷಟ್ಪದಿ ಕಾವ್ಯ—

ಅವರಂತೆ ಕಂದ ವೃತ್ತಗಳನ್ನು ಲಕ್ಷಣ ಬದ್ಧವಾಗಿ ಬರೆಯುವವರು ಇಂದು ಇಲ್ಲ ಎಂದರು— ದಿವಂಗತ ಗೋವಿಂದ ಪೈಗಳು. ಅದನ್ನಿಂದು ಸಮರ್ಥಿಸುತ್ತಾರೆ ಶ್ರೀ ಡಿ. ವಿ. ಜಿ. ವೀಸೀಯಂತಹ ಹಿರಿಯರು. ಅದಕ್ಕೆ ಸಾಕ್ಷಿಯಾಗಿ ನಿಂತಿದೆ ಅವರ 'ಭಾರತ ರಾಜ್ಯಭಾರಂ'. ಹೊಸ ವಿಚಾರಗಳನ್ನು ಹಳೆಯ ಕ್ರಮದಲ್ಲಿ ಅವರು ಸೊಗಸಾಗಿ ಚಿತ್ರಿಸಿದ್ದಾರೆ.

ಹಳೆಯ ಕವಿಗಳನ್ನು ಹೊಗಳುಭಟ್ಟರೆಂದು ಕರೆಯುವವರ ಸಂಖ್ಯೆಗೆ ಇಂದು ಕೊರತೆಯಿಲ್ಲ—ಹಾಗೆ ಹೇಳುವ ಜನ ಇಂದು ಅಧಿಕಾರದಲ್ಲಿರುವವರನ್ನು ಹೊಗಳಿ ಹೊಟ್ಟೆ ಹೊರೆಯುತ್ತಿದ್ದಾರೆ—ಶ್ರೀ ಬಡೆಕ್ಕಿಲದವರ ಕೃತಿಗಳು ಅದಕ್ಕೊಂದು ಅಪವಾದ. ಅವರು ಜನಪ್ರಿಯತೆಗೆ ಜೋತು ಬೀಳುವ ಸ್ವಭಾವದವರಲ್ಲ.

ಅವರ ಅಜ್ಜ ಶ್ರೀ ವೆಂಕಟೇಶ್ವರ ಭಟ್ಟರು ಬ್ರಿಟಿಷ್ ಸರಕಾರದ ವಿರುದ್ಧ ದಂಗೆ ಎದ್ದವರು. ಸೆರೆಮನೆಯಲ್ಲಿ ಸತ್ತವರು. ಆ ಹಿರಿಯರ ಧೀರ ಧೈರ್ಯ ಅವರಲ್ಲಿ ಹುದುಗಿದೆ. ಅವರ ತಂದೆ ಶ್ರೀ ಶಂಕರನಾರಾಯಣ ಭಟ್ಟರು ಅನ್ಯಾಯವನ್ನು ಸಹಿಸದವರು. ತನಗೆ ಗೊತ್ತಿಲ್ಲದಂತೆ ತನ್ನ ಮಗಳನ್ನು ತಮ್ಮನೊಬ್ಬ ದುಡ್ಡು ತಿಂದು ಮದುವೆ ಮಾಡಿಕೊಡುವ ಎತ್ತುಗಡೆಯಲ್ಲಿದ್ದಾನೆ ಎಂದು ತಾಯಿಯೊಬ್ಬಳು ತಮ್ಮ ಕಷ್ಟವನ್ನು ತೋಡಿಕೊಂಡಳು. ಶಂಕರನಾರಾಯಣ ಭಟ್ಟರು ತಮ್ಮ ಬೆಂಬಲಿಗರೊಂದಿಗೆ ಆ ವಿವಾಹ ಮಂಟಪವನ್ನು ಪ್ರವೇಶಿಸಿ, ಹುಡುಗಿಯನ್ನು ಹೊತ್ತು ಅಲ್ಲಿಂದ ತಂದು, ಬೇರೊಬ್ಬನಿಗೆ ಮದುವೆ ಮಾಡಿಸಿದರು. ಈ ಸಂಬಂಧದಲ್ಲಿ ಅವರು ಕೋರ್ಟಿನ ಕಟ್ಟೆಯನ್ನೂ ಹತ್ತಿದರು. ಈ ಮನೋಧರ್ಮವೂ ಅವರಲ್ಲಿದೆ. ಅನ್ಯಾಯವೆಂದು ಕಂಡುಬಂದಾಗ ಯಾರನ್ನೂ ಎದುರಿಸುವ ಅಚಲ ನಿರ್ಧಾರ. ಆಗ ಅವರ ಅರಸರನ್ನೂ ಎದುರಿಸುತ್ತಾರೆ. ಗುರುವಾಕ್ಯವನ್ನೂ ಎದುರಿಸುತ್ತಾರೆ.

ಮಠಗಳು ಧರ್ಮಕ್ಕಾಗಿಯೋ? ಅಥವಾ ಮಠಕ್ಕಾಗಿ ಧರ್ಮವೇ?

ಧರ್ಮಕ್ಕಾಗಿ ಗುರುಗಳೇ – ಗುರುಗಳಿಗಾಗಿ ಧರ್ಮವೋ? ಇದು ಅವರ ಸವಾಲು!

ಈ ಜಿಜ್ಞಾಸೆಯನ್ನೇ ಸಾಂಗತ್ಯದಲ್ಲಿ ಬರೆದ "ಸಮಾಜ ಸಂಗೀತ"ಕ್ಕೆ ವಸ್ತು ಮಾಡಿಕೊಂಡಿದ್ದಾರೆ. ಅವರ ಸಾಮಾಜಿಕ ಪ್ರಜ್ಞೆ ಈಗಲೂ ಜಾಗ್ರತ.

ಇದು ಬದುಕಿನ ನೆಲೆಯನ್ನು ಕಾಣುವ ರೀತಿ.

ಅವರಿಗೆ ಇಂಗ್ಲೀಷು ಬಾರದು. ಅವರಿಗೋ ಓದುವ ಆಸೆಯಿತ್ತು. ಆದರೆ ಕಲಿಸುವವರಿರಲಿಲ್ಲ. ನಾನು ಕಲಿತಿದ್ದರೆ ನನ್ನ ಮಕ್ಕಳಿಗೆ ಕಲಿಯಲು ಏನೂ ಉಳಿಯುತ್ತಿರಲಿಲ್ಲ ಎಂದು ಈಗ ಹೇಳುತ್ತಾರೆ.

ಅವರು ಕನ್ನಡದ ಹಳೆಯುಳಿಕೆ.

ಬರವಣಿಗೆ ಸಂಪ್ರದಾಯಬದ್ಧ. ಆರಿಸಿಕೊಳ್ಳುವ ವಿಷಯ ಆಧುನಿಕ.

ಅವರು "ಬರೆದರೆ, ಪಂಪ, ರನ್ನ, ನಾರಣಪ್ಪ, ಲಕ್ಷ್ಮೀಶ, ರತ್ನಾಕರವರ್ಣಿಯಂತೆ ಬರೆಯಬೇಕು. ಆಗಲಿಲ್ಲ. ಬರೆದೇನು ಪ್ರಯೋಜನ?" ಎಂದು ಕೇಳುತ್ತಾರೆ.

ಬರಿಯ ಕೇಳುವುದು ಮಾತ್ರವಲ್ಲ-ಹಾಗೇ ನಿರರ್ಗಳ ಬರೆಯುತ್ತಾರೆ—ಅವರು ಸೈ ಎನಿಸಿಕೊಂಡ ಶ್ರೀ ಪಂಜೆ, ಮುಳಿಯ, ಪೈ, ಮುದವೀಡು, ಆಲೂರು, ಹುರುಳಿ—ಯಾರೂ ಇಂದಿಲ್ಲ. ಅವರ ಬದುಕಿನಿಂದ ನಾಡನುಡಿ ಶ್ರೀಮಂತವಾಗಿದೆ.

ಅವರ ಸೋದರಳಿಯಂದಿರು ನಾಲ್ಕು ಭಾಷೆಗಳನ್ನು ಬಲ್ಲ, ಒಳ್ಳೆಯ ಸಂಶೋಧಕ ಲೇಖಕರು. ಮಗಳೊಬ್ಬರು ಮೂರು ಭಾಷೆಗಳಲ್ಲಿ — ಕನ್ನಡ — ಹಿಂದಿ—ಸಂಸ್ಕೃತ —ಬರೆಯುತ್ತಾರೆ— ಬರೆಯುವ ಯೋಗ್ಯತೆಯ ಮಕ್ಕಳು, ಮೊಮ್ಮಕ್ಕಳನ್ನು ಅವರು ಹೊಂದಿದ್ದಾರೆ.

ಅವರ ಬಳುವಳಿಯಾಗಿ ಬಿಟ್ಟು ಹೋಗುತ್ತಿರುವುದು ಒಂದು ಪರಂಪರೆ [illegible]— ಬಡೆಕ್ಕಿಲದ ಪರಂಪರೆ ಎನ್ನಬಹುದು,

—ದೇವಕೀನಂದನ

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಅಂದ್ಲಪ್ರಯೋಗ ಬೋಧಿನಿ

ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ. 450 ಪುಟಗಳ ಸುಂದರ ಕೈಪಿಡಿ ಪ್ರತಿಗೆ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ| ಪಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ವೈದ್ಯಗ್ರಂಥ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ. ಹಿಂಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪುತ್ತೂರು IIIrd Addl. ಮುನ್ಸಿಫ್ ಕೋರ್ಟಿನಲ್ಲಿ

R. R. C. 1780/70

ಕೆ. ಕೆ. ನಾರಾಯಣ —ಅರ್ಜಿದಾರ
ಶಂಕರ ನಾರಾಯಣ ಭಟ್ಟ ಸಹಾ-ಎದುರುದಾರರು
೩ನೇ ಎದು:- ಮಹಾಲಿಂಗ ಭಟ್ಟ ಸುಬ್ರಹ್ಮಣ್ಯ ಭಟ್ಟರ ಮಗ,
C. 27 B. Sector- Bokaro Steel City, Hazaribagh District.

ಸದ್ರಿ ೩ನೇ ಎದುರಿಗೆ ಕೋರ್ಟು ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ— 68-69ಕ್ಕೆ ಅರ್ಜಿದಾರನು ನಿಮ್ಮ ಮೇಲೆ ಕೊಡಬೇಕಾದ ಗೇಣಿ ಬಾಕಿ ಅರ್ಜಿಯನ್ನು ನಿಮ್ಮ ನೋಟೀಸಿನ ಬಗ್ಗೆ ತಾ. 29.1.71ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟಿನ ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷ ಮಾಡಿ ಯುಕ್ತವಾದಂತೆ ತೀರ್ಮಾನಿಸಲಾಗುವುದು,

Sd/ M. Rammohan Rao
Advocate for Petitioner.
Puttur, 20—12—70

ಶ್ರೀ ನಾರಾಯಣರಾವ್ ಕಲ್ಲಿ

'ಭಾರತ ರಾಜಭಾರಂ'

ದಾರ್ಶನಿಕ ಕವಿ ಬಡೆಕ್ಕಿಲ ವೆಂಕಟರಮಣ ಭಟ್ಟರ ಉಜ್ವಲ ಕೃತಿ

ಪೌರ್ವಾತ್ಯ ಗಾತ್ರದ ಹೊಳೆವ ಕನಕ ಕಾಂತಿಯ ಸ್ವರ್ಣವರ್ಣದ ಅಜಾನೇ ವಯಸ್ಸಿನ ದಕ್ಷಿಣ ಕನ್ನಡದ ದಾರ್ಶನಿಕ ರಾಷ್ಟ್ರ ಕಾಲಜ್ಞಾನಿ ಕವಿ ಶ್ರೀಮಾನ್ ಬಡೆಕ್ಕಿಲ ವೆಂಕಟ್ರಮಣ ಭಟ್ಟರು ತಮ್ಮ ಸ್ವಭಾವ, ಗುಣ, ನಡಾವಳಿಯಿಂದ ಜನಪ್ರಿಯರು—ಅವರ ಪಾರಲೌಕಿಕ ಅನುಭವ ಆಧಾರವಾದುದು. ಅವರು ಪುತ್ತೂರಿನಿಂದ ನಾಲ್ಕೂವರೆ ಮೈಲು ದೂರದಲ್ಲಿ ಈಗ ಬಂಟವಾಳ ತಾಲೂಕಿಗೆ ಸೇರಿರುವ ಬಡೆಕ್ಕಿಲದ ಗೀತಾಮಂದಿರದಲ್ಲಿ ಸ್ಥಿತಪ್ರಜ್ಞರಾಗಿ ಸುತ್ತಲಿನ ಪರಿಸರಕ್ಕೆ ಉಪಯುಕ್ತರಾಗಿ ತ್ರಿಕರಣ ಪೂರ್ವಕವಾಗಿ ಜನಹಿತ ಸಾಧಿಸುವ ನಿಷ್ಕಾಮ ಕರ್ಮ ಕರ್ಮಯೋಗಿಯಾಗಿ ಆದರ್ಶ ಜೀವನ ನಡೆಸಿಕೊಂಡು ಎಲ್ಲರಿಗೂ ಪ್ರಿಯರಾಗಿರುವರು.

ಅವರ ದರ್ಶನಕ್ಕೆ ಹೋಗುವುದು ಕಷ್ಟ, ತ್ರಾಸದಾಯಕವೆನಿಸಿದರೂ, ಅಲ್ಲಿಗೆ ಹೋದವರಿಗೆ ಬೇಸರವಿಲ್ಲ. ಸದಾ ಹಸನ್ಮುಖಿಯಾದ ಅವರು ಬಂದೊಡನೆ ಸ್ವಾಗತಿಸಿ ಆದರಿಸುವರು- ಪಾರಮಾರ್ಥಿಕದಿಂದ ಆರಂಭವಾಗಿ ಲೌಕಿಕದವರೆಗೆ ಕಾವ್ಯ, ಸಂಗೀತ, ನಾಟಕ, ಯಕ್ಷಗಾನ ಹಾಗೂ ಸಾಮಾನ್ಯವಾಗಿ ಎಲ್ಲ ಲಲಿತ ಕಲೆಗಳ ಆವರಿಗೆ ವಿಚಾರಿಸಲಾಗುತ್ತ ಕಲಾ ನಿಪುಣ, ಸಾಹಸಿ, ನಿರ್ಭೀತ ಮತ್ತು ನಿಶ್ಚಿಂತ ವ್ಯಕ್ತಿಯಾದ ಅವರೊಡನಿರುವುದೆಂದರೆ ಅದೊಂದು ಪರಮಾನಂದದ ಕೂಟ.

ಕದಂಬ ರಾಜರ ಕಾಲದಲ್ಲಿ ಅವರ ಹಿರಿಯರು ಉತ್ತರ ಕನ್ನಡದಿಂದ ಇಲ್ಲಿಗೆ ಬಂದವರು. ಈ ಜಿಲ್ಲೆಯಲ್ಲಿ ಅವರ ವಂಶಕ್ಕೆ ಸುಮಾರು ನಾಲ್ಕು ಶತಮಾನಗಳ ಉತ್ತಮ ಪೂರ್ವ ಪರಂಪರೆಯಿದೆ. ಅವರ ಪೂರ್ವಜರು ರಾಷ್ಟ್ರಾಭಿಮಾನಿಗಳು, ತ್ಯಾಗಿಗಳು ಮತ್ತು ಉತ್ತಮ ಮಾರ್ಗದರ್ಶಕರು. ಅದೇ ಮಾರ್ಗದಲ್ಲಿ ಶ್ರೀಮಾನ್ ಬಡೆಕಿಲ ವೆಂಕಟ್ರಮಣ ಭಟ್ಟರು ಸಾಗಿದವರು. ತಮ್ಮ ಜೀವಮಾನವನ್ನು ಸಾರ್ಥಕ ಮಾಡಿಕೊಂಡವರ—ಅವರನ್ನು ತಿಳಿದುಕೊಳ್ಳುವಾಗ ಗೀತಾಸಾರವೇ ಪುರುಷರೂಪವನ್ನೆತ್ತಿ ಧರೆಗಿಳಿದುದೋ ಎಂಬಂತೆ ತಿಳಿದುಕೊಳ್ಳುವವರಿಗೆ ಭಾಸವಾಗುವದು. ಅವರ ಮನೆಯ ಮಕ್ಕಳೆಲ್ಲ ವಿದ್ಯಾಭರಣಕರು, ನೂರಾರು ಮಕ್ಕಳಲ್ಲಿ ಹಿರಿಯರಾದ ಶ್ರೀ ಬಡೆಕ್ಕಿಲ ಕೃಷ್ಣ ಭಟ್ಟರು ಭದ್ರಾವತಿಯಲ್ಲಿ ವಕೀಲರು. ಕಿರಿಯರಾದ ಶ್ರೀ ಈಶ್ವರ ಭಟ್ಟರು ಪುತ್ತೂರಿನಲ್ಲಿ ವಕೀಲರು—ಇವರ ಅಣ್ಣ ಕವಿ ಶ್ರೇಷ್ಠರ ಎರಡನೆ ಪುತ್ರ ರಾಮ ಭಟ್ಟರು ಪುತ್ತೂರಿನಲ್ಲಿ ಡಾಕ್ಟರರು. ಅವರ ಹಿರೇಮಗಳು ಶ್ರೀಮತಿ ಲಕ್ಷ್ಮಿ ಅಮ್ಮನವರು ವಿದುಷಿ- ಸಂಸ್ಕೃತದಲ್ಲಿ ಲೇಖ ಬರೆಯುವವರು ಹಾಗೂ ಕವಯಿತ್ರಿ. ಅವರ ಮನೆಯಲ್ಲಿ ಕೆಲಸ ಕಡಿಸುವ ಎಲ್ಲರು ವೈಯ್ಯಾಕರಣರು ಮತ್ತು ಸಾಹಿತಿಗಳು. ಅವರು ಬರೆದ ಗ್ರಂಥಗಳಲ್ಲಿ ಭೀಮ ವಿಜಯ ಮತ್ತು ವಾಜಿಗ್ರಹಣವೆಂಬ ಎರಡು ಯಕ್ಷಗಾನ ಕಾವ್ಯಗಳೂ ಸೂಕ್ತಿವಾದ (ಕಠಿಣ)ವೆಂಬ ಹಿತೋಕ್ತಿ ಬೋಧೆ- ಇದರಲ್ಲಿ ಅವರು ಸುಮಾರು ಹದಿನೈದು ವರುಷಗಳ ಕೆಳಗೆಯೇ ಕಾಲಜ್ಞಾನಿಯಾಗಿ ಮುಂದಾಗಲಿರುವ ವಿಷಯವನ್ನು—ತಮ್ಮಹಿರಿ—

ಅಂದರೆ ಕಿರಿಯ ಪೀಳಿಗೆಗೆ ಉಪದೇಶಿಸಿದ್ದಾರೆ-"ಕರ್ನಾಟಕ ಪರಿಸ್ಥಿತಿ"ಯೆಂಬ ಕಾವ್ಯವು ನಾಡಿನ-ಅಂದು ಮತ್ತು ಇಂದು-ವಿಚಾರವನ್ನು ಮಾರ್ಮಿಕವಾಗಿ ಅದರ ಸಾರವಾಗಿ ಚಿತ್ರಿಸಿದೆ. ಇನ್ನೊಂದು ಉತ್ತಮ ಮಟ್ಟದ ಆಧುನಿಕ ಪದ್ಧತಿ ಕಾವ್ಯ. ಇನ್ನು ಪ್ರಕಟವಾಗಲಿರುವ "ಸಮಾಜಸಂಗೀತ"ವು ರಗಳೆಯಲ್ಲಿ ಬರೆದ ಯತಿಮಾರ್ಗವನ್ನು ಚಿತ್ರಿಸುವ ಉತ್ತಮ ಕಾವ್ಯ—ಸರಳ ಶೈಲಿಯಲ್ಲಿದ್ದು ಸಾಮಾಜಿಕ ಅಹಿತವನ್ನು ವ್ಯಂಗ್ಯವಾಗಿ ಟೀಕಿಸುವ ಸರಸ ಕಾವ್ಯ.

'ಭಾರತ ರಾಜ್ಯಭಾರಂ' ಎಂಬ ಕಿರು ಹೊತ್ತಿಗೆಯು ಇತ್ತೀಚೆಗೆ ಪ್ರಕಟವಾದದು. ಇದರಲ್ಲಿ ಮೂರು ವೃತ್ತಗಳು ಹಾಗೂ 58 ಕಂದಗಳು ಸೇರಿ ಒಟ್ಟು 61 ಪದ್ಯಗಳಿವೆ. ಕವಿಶ್ರೇಷ್ಠರಾದ ಶ್ರೀ ಬಡೆಕ್ಕಿಲರು 'ಭಾರತ ರಾಜ್ಯಭಾರ'ವನ್ನು ವಿಶ್ಲೇಷಿಸಿದ ಬಗೆ ಉತ್ಕೃಷ್ಟವಾದುದಿದೆ.

'ಕವಿಗಳು ಭೂದೇವರುಗಳು ಪದಯುಗ ಳಾಧಾರಮುಕ್ತಿವ ಜ್ಜೀವನಂ' ಎಂದು ಮೊತ್ತಮೊದಲು ಲಕ್ಷ್ಮೀ ಭಗಿನಿಯೂದ ಭೂದೇವಿಯನ್ನು ನುತಿಸಿ ತಮ್ಮ ಕಾವ್ಯವನ್ನು ಆರಂಭಿಸಿರುವರ—ಈ ಕಾವ್ಯದಲ್ಲಿ ಭಾರತವನ್ನು ಆಂಗ್ಲೇಯರು ಬಿಟ್ಟು ಹೋದಂದಿನಿಂದ ಈ ವರೆಗಿನ ರಾಜ್ಯಭಾರವನ್ನು ಕುರಿತು ವಿವರವಾಗಿ ಚಿತ್ರಿಸಿರುವರು. ಆಂಗ್ಲೇಯರೇ ರಾಜ್ಯ ಭಾರಂ ತೊರೆವಂದೊಂದರ್ಧ ಮಂ ಹಿಂದುಗಳಿಗೆ ಪೆರತೊಂದರ್ಧ ಭಾಗಂ ಮಹಮ್ಮದೀಯರ್ಗೆಂ ಬಿತ್ತರಂ ಸಂಕಪಡಿ ಪಡೆದರತ್ತಂಡ ಜಿಂದರ್ ಮಾತರಂ ದರ್" ಎಂದು ಆರಂಭಿಸಿ ಎಲ್ಲ ಸ್ಥಿತ್ಯಂತರಗಳನ್ನು ವಿವರಿಸಿದ್ದಾರೆ. ಭಾರತದ ವಿಭಜನೆಗೆ ಸಿದ್ಧರಿಲ್ಲದ ಕಾಂಗ್ರೆಸ್‌ನ ನಾಯಕರಿಗೆ ಪಾಕಿಗೊಟ್ಟು ಬ್ರಿಟಿಷರು ಬಿಟ್ಟುಕೊಟ್ಟಂತೆ ತೆಗೆದುಕೊಂಡರು, ತತ್ಪರಿಣಾಮವಾಗಿ ವಿಪತ್ಪರಂಪರೆಗಳು ತಲೆದೋರಿದವು—ಅಧಿಕಾರದ ಬೆನ್ನು ಹತ್ತಿ ಅಂಗಚ್ಛೇದವಾದರೇನು ಭಾರತವೆಂಬ ಹೆಸರಿಗೆ ಕೊರತೆಯೇ? ಕೂಡಲೇ ರಾಜ್ಯ ಘಟನೆಯಾಗಿ 'ಜಾತ್ಯತೀತ'ವೆನಿಸಿತು. ಇದು ಕಾಗದದಲ್ಲಿ ಅಲ್ಲ. ಜಾತ್ಯಂಧತೆ ವಿಶೇಷವಾಗಿ ವಿಭಾಗವೆಂಬರೇ ನಮ್ಮ ನಾಶಕ್ಕೆ ಕಾರಣವಾಯಿತು ಎಂದು ವಿವರಿಸಿರುವರು.

ಆರಂಭದಲ್ಲಿಯ ಆಡಳಿತದ ದೋಷಗಳನ್ನೆತ್ತಿ ಭಾಷಣ ಬರಹ ಉಪದೇಶ ಮತ್ತು ಘೋಷಣೆ ಮುಂತಾದವುಗಳಲ್ಲಿ ಲೋಕರೆಲ್ಲಂ ದಾರಿದ್ರ್ಯ ರಾಹಿತ್ಯ ಸುಖ ಸಂತೋಷಗಳನೆ ಪಡೆವರು ಮುಕ್ತರುಂ ಕಾಣಿಸಿತು ಎಂದಿರುವರು. ಆರಂಭದಿಂದಲೂ ಸ್ವಾವಲಂಬನೆ, ಶಾಂತಿ, ಭದ್ರತೆಯ ಬಗ್ಗೆ ಅಪೇಕ್ಷಿಸದೆ ಅಲ್ಪಸಂಖ್ಯಾತರೆಂಬ

ಭಾವದಿಂದ ಕೇತುಗಳನ್ನು ಬೆಳೆಯಿಸಿಕೊಂಡು ನಮ್ಮ ರಾಷ್ಟ್ರ ಬಂದಿತು. ಪಸ್ತರಿಣಾಮವಾಗಿ ಸೂತ್ರಧಾರಿಗಳು ಎಲ್ಲಿಡೆಯಿಂದ ರಘುರಾಮರಾಜ್ಯದ ನೆವನನ್ನು ಹಿಂಡಿ ಗಾವಿಲರ ಸಂಪದರಾದ ಭಕ್ತಿಗಳು ಎಂದು ಹೃದಯ ಸ್ಪರ್ಶಿಯಾಗಿ ಬಣ್ಣಿಸಿರುವದು.-ಸ್ವರ್ಗರಹಿತವಾದಿ(ಡಿ)-ದೇಶಕ ರಾಷ್ಟ್ರಪ್ರೇಮಿಯ ಹೃದಯ-ದ್ರಾವಕವಾದ ಕೊರಗನ್ನು ಈ ಪದ್ಯಗಳಲ್ಲಿ ಓದುಗರು ಕಾಣುವಂತಿದೆ. ಒಂದೊಂದು ರಾಜ್ಯದಲ್ಲಿ ಒಂದೊಂದು ಕಾಯಿದೆಯಾಗಿ ದಿಗ್ಭ್ರಮೆಯಿಂ ಬೆಳೆಗಳ ಬೆಲೆ ಒಂದಕ್ಕೆ ಇಪ್ಪತ್ತರಷ್ಟು ಏರಿತು. ಕಾಲಕ್ಕೆ ಹಲವಾರು ಪಕ್ಷಗಳು ತಲೆದೋರಿದವು-ಇದರಿಂದ ಜನಾನುಕೂಲವಾಗುವದೆಂದು ಸಾರಿ ತಂತಮ್ಮ ಬೇಳೆ ಬೇಯಿಸಲು ಕುಮತಿಗಳು ಮುಂದಾದರು - ಅಧಿಕಾರಕ್ಕೆ ಬರುವಾಗ ಜನಪ್ರಿಯವಾದ ಕಾಂಗ್ರೆಸ್ ಕುಲ-ಜಾತಿ-ಪಂಥಗಳ ಹೆದ್ದಾರಿಯನ್ನು ತುಳಿದು ಬಹುಮತ ಪಕ್ಷವೇ ಅಲ್ಪಮತ ಪಕ್ಷವಾಗಿ ಆದಾಯ ವೆಚ್ಚಗಳ ಲೆಕ್ಕ ನೋಡದೆ-ಎರಡನ್ನೂ ಬಾಯಿಗೂಡಿಸುವ ಮಾರ್ಗವನ್ನು ಮೊದಲೇ ಮಾಡಿಕೊಳ್ಳದೆ ಕಂಡಕಂಡವರಿಂದ ಸಾಲ ಪಡೆಯುವಂತಾಯಿತು-ಸ್ವಾತಂತ್ರ್ಯದ ನೆಪದಿಂದ—ಸಮಾಜವಾದದ ಘೋಷಣೆಯಿಂದ "ಸ್ವತಂತ್ರಂ" ಎಂಬುದು ಮತದ ಮೋಡಿಯೊಳಕ್ಕಿದೆ ಇಲ್ಲಿ ಇಳಿಸು ಸ್ವಾತಂತ್ರ್ಯ-ಎಂಬುದು. ನಿಜ ಪರಿಸ್ಥಿತಿಯೆಂದರೆ ಲೋಕಹಿತವನ್ನು ಪೇಕ್ಷಿಸದವರು ಹಿತರಕ್ಷಣೆಯಂ ಬೇಕಾದಂತೆ ಸಾಗುವ ಪೀಠಾಕರರಿಂದ ಕೃಷಿಕ ಜನಾಂಗ ಪೀಕ್ಷಮಾಯಿತು. ಅಂದರೆ ತನ್ನ ಉದ್ದೇಶವನ್ನು ಸಫಲಗೊಳಿಸದೆ ಕೃಷಿಕರ ಉದ್ಧಾರದ ಆಶ್ವಾಸನೆಕೊಟ್ಟು ಅವನ ಸರ್ವನಾಶವಾಯಿತು. ಹೇಗೆಂದರೆ ಕಂದಾಯ ಕೊಡಲು ದುಡ್ಡಿಲ್ಲ ಬಂಡಾ ಎಕ್ಕೆ ಒಕ್ಕಲೊಡೆಯನು; ಹಾಗೆ ಹೀಗೆ ಉಳಿದ ಆಯಕ್ಕೆ ಹಲವು ಮಂದಿ ಒಡೆಯರಾಗಿ ಮಾಡಿದ ಸಾಲಕ್ಕೆ ದೇವನೊಡೆಯನೆಂಬುದೆ ಬ್ಯಾಂಕ್-ಎಂಬಂತಾಯಿತು. ರಸ್ತೆ ಸಾರಿಗೆ ವ್ಯವಸ್ಥೆಗಾಗಿ ಇದ್ದ ತೋಟಗಳು ನಾಶವಾದವು. ನೂರಾರು ಮಂತ್ರಿಗಳು ಹಲವಾರು ತಂತ್ರಜ್ಞರ, ಯಂತ್ರಗಳು ಅರ್ಹರ ಸ್ಥಾನದಲ್ಲಿ ಅನರ್ಹರು ಬಂದು ಕಾರುಬಾರ ಮಾಡಿ—ಸ್ವಾತಂತ್ರ್ಯಗಳೆಂಬುದೇ ಇಲ್ಲದಂತಾಯಿತು. ವಿಷವೆಂಬುದು ಅಣುವಲ್ಲವೇ. ಅದನ್ನು ತಿನ್ನಲು ಬೋಧಿಸುವ ಪರದೇಶದ ಪಾಂಡಿತ್ಯಕ್ಕೆ ಕೊನೆಯಿಲ್ಲದಂತಾಯಿತು- ತಪ್ಪಿತಸ್ಥರಿಗೆ ಶಿಕ್ಷೆಯ ಭೀತಿಯಿಲ್ಲ-ದಂಡನೀತಿ ಚೆನ್ನಾಗಿದ್ದರೆ ಜಾತೀಯ ಗಲಭೆ ಘಂಗಲಿ, ಅಂತಃಕಲಹವಾಗಲಿ ಬರುತ್ತಿರಲಿಲ್ಲ. ಎಲ್ಲದಕ್ಕೂ ಹೊಣೆಗೆಟ್ಟ ದುರ್ನೀತಿಯ ನಿರಂಕುಶ ಪ್ರಭುತ್ವವೇ ಮೂಲಕಾರಣವಾಯಿತು. ಆ ಮೇಲೆ ತನ್ನ ಧೋರಣೆಯೇ ಚೀನ ಮತ್ತು ಪಾಕಿಸ್ತಾನಗಳ ದಾಳಿಗೆ ಕಾರಣವಾಯಿತು. ದೇಶಾಭಿಮಾನಿಗಳು ಪರರೊಡನೆಗೆ ಹೊಚ್ಚರಿಸಲಾರಂಭಿಸಿದರು. ಅಂಥ ನೀಚಕೆಳಿಟಿಯಂ ಕಂಡು ಕಣ್ಮುಚ್ಚಿದರು. ಅಧಿಕಾರಿಗಳಿಗೆ ಅಬಲ ಜನ ದಾಳಿಂ ರೋಗರನ್ನು ಮರೆಹೊಕ್ಕು ಬಾಳಬೇಕೇ?

ಇಂದಿನ ಈ ದುಸ್ಥಿತಿಯಲ್ಲಿ 'ಭಾರತಸೇವಿಸ್ಪುದೋ ಸಗಳಾಕಂ ಬೇಡಿರದೋ ತಿಳಿಯದಾದುದು || ಹಿಂಸಾಚಾರ ಮಡೋನ್ಮತ್ತರ ಪಾತಿವಾರಿದ ಅಪಾರ್ತಿ ಮಾರಕಕ್ರಮದಿಂ ||' ಎಂದು ನಿಜಸ್ಥಿತಿಯನ್ನು ಕನ್ನಡಿಗರ ಮುಂದಿಟ್ಟಿರುವರು.

ಲಂಚ ಭ್ರಷ್ಟಾಚಾರಗಳಿಂದು ಸರ್ವವ್ಯಾಪಿಯಾದ ಈ ಆಡಳಿತೆಯ ಬಾಳುವೆ ಸುಗಮವಾಗಲಿ ಸಂಚಕರಲ್ಲಿ ಮಂಚಕನಾದವಗೆ ಮಾಂಧಿತ ಮಾದಕ್ಕೆ ಪ್ರಭುತ್ವ ಪದವಿ ದೊರೆಯುತ್ತಿದೆ. ಭಾರತದಲ್ಲಿ ಹುಟ್ಟಿದವರೆಲ್ಲ ಭಾರತೀಯರೇ ಸರಿ. ಅವರಲ್ಲಿ ಕೆಲವರಿಗೆ ಜಾತೀಯ ತಕರಾರು, ಕೆಲವರಿಗೆ ಅಲ್ಪ ಅಲ್ಪಸಂಖ್ಯಾತರೆಂಬ ಸಂಖ್ಯಾಕಟ್ಟದ ಚೌಕಟ್ಟು ಏಕೆ? ಭಾರತೀಯರೆಲ್ಲರೂ ಭಾರತದಲ್ಲಿ ಬಾಳಬೇಕು. ಬದುಕ ಭಾಗ್ಯ—ಉಳಿವಿನ ಬಗ್ಗೆ ರಾಷ್ಟ್ರ ಅಭ್ಯರ್ಥಿ ಆಡಳಿತೆ ಸರ್ವಸ್ವಾತಂತ್ರ್ಯ ಕೇಳುವದು ಬಿಟ್ಟು ಮನಸ್ಸಿನಲ್ಲಿ ಸರ್ವರ ಆಡಳಿತೆ ನಡೆಸಿದ್ದರಿಂದ ಅತಂತ್ರತೆ ತೋರಿದೆ. ವರ್ಣ ಕಲಹ, ಜಾತಿ ಕಲಹ, ವರ್ಗಕಲಹಗಳನ್ನೆಲ್ಲ ರಾಜಕೀಯ ಅಷ್ಟೇಯ ಸಿದ್ಧಿಗಾಗಿ ಕಲ್ಪಿಸಿ-ಪಕ್ಷ ಪಕ್ಷಾಂತರಗಳಿಗೆಲ್ಲ ಎಡೆಗೊಟ್ಟು ಬೆಲೆಯ ಕೊಳವೆಯಾಗ ಭಾರತದಲ್ಲಿ ನಾವು ಕಾಣುವ ದುರಂತ ಚಿತ್ರ ಮಾತ್ರ. ಈ ದುರಾಡಳಿತ ಸ್ವಭಾವವಾಗಿ ನೆಕ್ಕರನೋಕಳಿಗೆ ಬೆಂಬಲವಾದ ತಂದೋಲನಂ ಪಂಡರಕತಿಯಿಂ ಸತ್ಯಸಂಗಾಯಿಸಲು ಅಣ್ಣರ ಕೃತಿಯೊಳು ಪ್ರಜಾಪ್ರಭುತ್ವಯ ಗುರುತೆಂಬ ದಾಸರು. ಇಂದಿನ ಆಡಳಿತೆಯಲ್ಲಿ ನಡೆದುದು ಆತನವ ನಂಬುದು ನ್ಯಾಯ್ಯ ಪಟ್ಟಣಿಗರ್ (ಸಮಾಜವಾದಿಗಳು) ಸತ್ಯವನ್ನು ಸರ್ವಮನೋರದೆ ಆ ಭಿಪ್ರಾಯ ಈಗ ಚಿತ್ರವಾಣಿ ಬಾಳ ಭಾರತ ಭಯಂಕರ ತೀವ್ರವಾಯಿತು—ಎಂದು ಮನಗಾಲಂ ತೋಡಿ ಜನಕೆಯು ಮುಂದಿಟ್ಟ ವಿಶ್ಲೇಷ, ದರ್ಶನಕಾರ ಬಡೆಕ್ಕಿಲ ವೆಂಕಟರಮಣ ಭಟ್ಟರು ಇಟ್ಟಿರುವರು—ಲಂಚ, ವಂಚನೆ, ಮೋಸ, ಅನ್ಯಾಯ ಸ್ವವಿಲ್ಲದ ಮನುಷ್ಯನಲ್ಲ. ಅನವಾಗಿ ಬಾಳಿಕೆಯಿಲ್ಲದಂಬುದನ್ನು ಇಂದಿನ ಭಾರತದ ನಿಜಸ್ಥಿತಿ ಕಿಚ್ಚೇನ? ವ್ಯಕ್ತಿ ಕಯ್ಯಾಡುವ ವರ್ಗಾ ಲಂಚದ ಬದುಕೆ ಕೇಡಿಲ್ಲ—ಒಟ್ಟು ಅರಾಜಕತೆಗೆ ಭಾರತ ರಾಜ್ಯಭಾರವೇ ಕಾರಣವೆಂಬುದನ್ನು ಕವಿಬಲರು ಚೆನ್ನಾಗಿ ಮನಗಾಣಿಸಿದ್ದಾರೆ.

ಕವಿಶ್ರೇಷ್ಠ ಬಡೆಕ್ಕಿಲ ವೆಂಕಟರಮಣ ಭಟ್ಟರು ರಾಷ್ಟ್ರದ ಇಂದಿನ ಪರಿಸ್ಥಿತಿಯಿಂದ ನೊಂದು ಇಂದಿನ ಆಡಳಿತೆ ಮತ್ತು ಅದರ ಪರಿಣಾಮವನ್ನು ಚೆನ್ನಾಗಿ ವಿವರಿಸಿರುವರು. ಅವರು ಕರ್ಚ್ಚಿನ ಕವಿ ಮಾತ್ರವಲ್ಲ ಕನ್ನಡಿಗರ ನೆಚ್ಚಿನ ಕವಿ.

ಶ್ರೀ ಬಡೆಕ್ಕಿಲರ
ಬಹುಮುಖೀ ಕಾವ್ಯಾರಾಧನೆ

ಶ್ರೀ ಬಡೆಕ್ಕಿಲ ವೆಂಕಟರಮಣ ಭಟ್ಟರಿಗೆ ಈಗ ಎಂಬತ್ತೈದು ವರ್ಷ. ಇತರರಲ್ಲಿ ನಿರುತ್ಸಾಹದ ಒರತೆ ಮೂಡಿ ಬರುವ ಪ್ರಾಯ. ಆದರೆ, ಶ್ರೀ ಭಟ್ಟರಲ್ಲಿ ಉತ್ಸಾಹದ ಚಿಲುಮೆ ಈ ಹರೆಯದಲ್ಲೂ ನಿರಂತರ ಚಿಮ್ಮುತ್ತಿರುವುದೇ ಸೋಜಿಗ.

ಅವರು ಕಲಿತದ್ದು ಕನ್ನಡ ಶಾಲೆ. ಕನ್ನಡವಲ್ಲದೆ ಮತ್ತಾವ ಸಾಹಿತ್ಯಿಕ ಭಾಷೆಯ ಪರಿಜ್ಞಾನವೂ ಅವರಿಗಿಲ್ಲ. ಆದರೆ, ಕನ್ನಡವನ್ನು ಕೂಪ ಮಂಡೂಕದಂತೆ ಅವರು ಬೆಳೆಸಿಕೊಂಡು ಬರಲಿಲ್ಲ. "ಎಲ್ಲಾ ಬಲ್ಲೆನು; ಏನನ್ನೂ ಅರಿಯೆ" ಎಂಬ ನಾಣ್ಣುಡಿಯನ್ನು ಇಂದಿನ ಸುಶಿಕ್ಷಿತರ [illegible] ಕಾಣುವಾಗ, ಶ್ರೀ ಬಡೆಕ್ಕಿಲರಂತೆ ಒಂದನ್ನೇ ಆಳವಾಗಿ ಅಧ್ಯಯನ ಮಾಡುವುದೇ ಒಳಿತೋ ಏನೋ ಎಂಬ ಸಂದೇಹ ಹುಟ್ಟುತ್ತದೆ.

ಶ್ರೀ ಭಟ್ಟರು ಇಂಗ್ಲಿಷ್ ಕಲಿಯಲಿಲ್ಲ; ಸಂಸ್ಕೃತ-ಹಿಂದಿ ಇನ್ನೂ ಏನೇನೋ ಓದಲಿಲ್ಲ; ಕಾರಣ ಸೋಮಾರಿತನವಲ್ಲ; ಉದಾಸೀನತೆಯಲ್ಲ; ಭಾಷಾ ವಿದ್ವೇಷವಲ್ಲ; ಸಾಧನ—ಸೌಭಾಗ್ಯಗಳ ಅಭಾವ.

ಕರ್ನಾಟಕ ಪರಿಸ್ಥಿತಿಯನ್ನು ವಿವರಿಸುವಾಗ—

ಅರಿವಂ ಕಬ್ಬಿಗಂ ಬರೆದಾತನೆಂದೆನ್ನ
ದೂರದಿರಿ ಕಣ ಕಟ್ಟಿದೀ ವಿತನಗಾದ
ಘೋರ-ಪವಮಾನವಂ ಸೈಸದ ಮೃಳ
ಲಿಂಗೆ ಬಂದೆನ್ನ ಮಯಿ ತೋಳೆದವ
ಧಾರಿಣೀ ಪವರಿಲ್ಲರೆಂಬಂತೆ ಪೇಳಿಸಿದ
ಳು ರಾಯ [illegible] ನೀಡಿ ಗೀತಾಸಾರದು
ಪದೇಶ
ಸಾ [illegible] ಬರೆದನೆಲ್ಲರಹುದೆಂ
ಬಂತೆ ಕರ್ನಾಟ ಕರ್ಮವೆಂದು

ಎಂದು ತನ್ನ ಮನೋಭಾವನೆಯನ್ನು ಪ್ರಕಟಿಸಿರುವರು.

ಅವರ ಕಾವ್ಯಗಳು ರನ್ನ ಪಂಪರ ಕೃತಿಗಳ ಶ್ರೇಣಿಗೆ ಸೇರಿದುವು ಎಂದೋ ಅಲ್ಲವೋ ಎಂಬ ನನ್ನ ಮುಂದೆ ವಿದ್ವನ್ಮಣಿಗಳು ನಿರ್ಧರಿಸಲಿ. ಆದರೆ ವಿಷಯದಲ್ಲಿ ಒಂದು ಮಾತು ಹೇಳಲೇ ಉಚಿತವಾದುದು. ಅವರ ಕೀರ್ತಿ ಪತಾಕೆ ಪದವಿಗಾಗಿ ಹಾರಿದವರಲ್ಲ. ರಾಜ್ಯಪ್ರಶಸ್ತಿ ಹಾಗೂ ರಾಷ್ಟ್ರ ಪ್ರಶಸ್ತಿ ಬಯಸಿ ಹೋದವರಲ್ಲ, ಕಾಡಿದವರಲ್ಲ. ಅವರ ಗೀತಾಸಾರವು ಮೂಲಿಂಗರಂಗನ "ಅನುಭವಾಮೃತ" ರಾಘವಾಂಕನ ಹರಿಶ್ಚಂದ್ರ ಕಾವ್ಯ, ಕುಮಾರವ್ಯಾಸ, ಜಾಮಿನಿ(?) ಕಾವ್ಯಗಳಿಗೆ ಸಮಾನ ಶ್ರೇಣಿಯಲ್ಲಿದೆ. ದಕ್ಷಿಣ ಕನ್ನಡ ಜಿಲ್ಲೆಯು ಕನ್ನಡ ನಾಡಿಗೆ ಕೊಟ್ಟ ಉಜ್ವಲ ಕವಿರತ್ನವೇ ಶ್ರೀ ಬಡೆಕ್ಕಿಲರು. ಇದನ್ನು ಮುಂದಾದರೂ [illegible] ಮತ್ತು ಕನ್ನಡಿಗರು ನಿರ್ಣಯಿಸಬೇಕಾದುದು. ಎಂಭತ್ತೈದರ ವಯಸ್ಸಿನ ಈ ಜ್ಞಾನಿ ದಾರ್ಶನಿಕ ಕವಿ ಶ್ರೀ ಬಡೆಕ್ಕಿಲ ವೆಂಕಟರಮಣ ಭಟ್ಟರು ದೀರ್ಘಾಯುರಾರೋಗ್ಯಭಾಗ್ಯ ಸಂಪನ್ನರಾಗಿ ತನ್ನ ಉಜ್ವಲ ಕವಿತೆಗಳಿಂದ ಕನ್ನಡ ನಾಡನ್ನು ಬೆಳಗಿಸಿ ಕನ್ನಡಿಗರ ಕೀರ್ತಿ ಧ್ವಜವನ್ನು ಮೆರೆಯಿಸಲಿ—ಇದುವೇ ಕನ್ನಡಿಗರ ಹಾರೈಕೆ.

ಅವರಿಗೆ ಕನ್ನಡವೆಂದರೆ ಜೀವ. ಪ್ರಾಚೀನ ಹಳೆಗನ್ನಡದ ಗ್ರಂಥಗಳಲ್ಲಿ ಒಂದನ್ನೂ ಅವರು ಬಿಡಲಿಲ್ಲ. ಕನ್ನಡದ ವ್ಯಾಕರಣ—ಅಲಂಕಾರ ಶಾಸ್ತ್ರಗಳಿಗೆ ಅವರೇ ಇಂದಿರುವ ಕೈಗನ್ನಡಿ. ಪಂಪನಿಂದ ಹಿಡಿದು ಪಂಪಳಿಕೆಯವರ ವರೆಗಿನ ಹೆಚ್ಚಿನ ಕವಿಗಳ ಹೃದಯವನ್ನು ಅವರು ಓದಿದ್ದಾರೆ; ಆದ್ದರಿಂದಲೇ ಅವರ ಒಲವು ಸಹಜವಾಗಿ ಹಳೆಯ ಧಾಟಿಯತ್ತ ಹರಿಯಿತು.

ಶ್ರೀ ಬಡೆಕ್ಕಿಲರು ವಾಜಿಗ್ರಹಣ ಮತ್ತು ಭೀಮ ವಿಜಯವೆಂಬ ಯಕ್ಷಗಾನ ಕೃತಿಯನ್ನು ರಚಿಸಿದರು. ಯಕ್ಷಗಾನ ಕವಿಗಳಲ್ಲಿ ಪಾರ್ತಿ ಸುಬ್ಬ ಮತ್ತು ನಂದಳಿಕೆಯವರ ಸಮ ಜೋಡಿಯಲ್ಲಿ ನಿಲ್ಲತಕ್ಕ ಯೋಗ್ಯತೆ ಶ್ರೀ ಬಡೆಕ್ಕಿಲರಿಗಿದೆ. ಇವರು ಸ್ವಯಂ ಯಕ್ಷಗಾನ ಅರ್ಥಧಾರಿಗಳಾಗಿದ್ದರಿಂದ ನಂದಳಿಕೆಯವರ ಅರ್ಥ ಕ್ಲಿಷ್ಟತೆ ಇವರಲ್ಲೀ ಕಾವ್ಯರಚನೆಗಳಾದ್ದರಿಂದ ಪಾರ್ತಿಸುಬ್ಬನ "ಕೀರ ಸಂದೇಶ"ಯೂ ಇಲ್ಲಿ [illegible] ಹಾಕಿವಿಯು ಗದಾಯುದ್ಧವೇ ಭೀಮ ವಿಜಯದ ಆಕರ. ಇದರಲ್ಲಿ ಬರುವ ಕಂದಪದ್ಯಗಳು ಕವಿ ಚಕ್ರವರ್ತಿಗೆ ಆಹ್ವಾನವನ್ನೇ ನೀಡುವಂತಿವೆ.

"ಗೀತಾಸಾರ"ವು ಶ್ರೀ ಬಡೆಕ್ಕಿಲರ ಇನ್ನೊಂದು ಕೃತಿ. ಅರ್ಜುನನಿಗೆ ಶ್ರೀ ಹೇಳಿದ ವಿಶ್ವೇಶನಿಷತ್ತನ್ನು ಭಾಮಿನಿ ಷಟ್ಪದಿಯಲ್ಲಿ ಬರೆದಿದ್ದಾರೆ. ಇದರ ಶೈಲಿ ಸಾರಪ್ಪನನ್ನು ಹೋಲುತ್ತದೆ. ಕನ್ನಡನಾಡಿನ ಬಗ್ಗೆ ಶ್ರೀ ಬಡೆಕ್ಕಿಲರು ನಲುವತ್ತು ವರ್ಷಗಳಿಂದಲೂ ಹಂಬಲಿಸುತಿದ್ದವರು. ಆದರೇ ಅವರ "ಕರ್ನಾಟಕ ಪರಿಸ್ಥಿತಿ" ಎಂಬ ವಾರ್ಧಕ ಷಟ್ಪದಿ ಕಾವ್ಯ-ಪ್ರಕಟವಾಯಿತು. ಇಲ್ಲಿ ಕನ್ನಡದ ಪರಿಸ್ಥಿತಿಯನ್ನು ಯಥಾರ್ಥವಾಗಿ ವರ್ಣಿಸಿರುವುದು ಗಮನೀಯ. ಕವಿ ಲಕ್ಷ್ಮೀಶನಿಂದ ಸ್ಫೂರ್ತಿಗೊಂಡೇ ಅವರು ವಾರ್ಧಕವನ್ನಾರಿಸಿಕೊಂಡರು.

"ಸಂಕ್ರಾಂತಿ" ಇತ್ತೀಚಿನ, ಸ್ವಾತಂತ್ರ್ಯೋತ್ತರ ಯುಗದ ವೇಲೆ ಬೆಳಕು ಬೀರುವ ಕೃತಿ. ಇದು ಡಿ. ವಿ. ಜಿ. ಯವರ "ಮಂಕುತಿಮ್ಮನ ಕಗ್ಗ"ವನ್ನೇ ಬಹುಮಟ್ಟಿಗೆ ಹೋಲುತ್ತದೆ. ಆಧುನಿಕ ವಿದ್ಯಮಾನಗಳ ಮೇಲೆ ಇಲ್ಲಿನ ಚಾಟಿಯೇಟು ಆಸ್ವಾದನೀಯವಾಗಿದೆ. ಬಹುದು; ಕವಿಗಳು ತೀವ್ರಗಾಮಿಗಳೆಂದೂ ಆರೋಪಿಸಬಹುದು. ಆದರೆ, ಕಾವ್ಯವನ್ನು ಆರ್ಥಯಿಸಿ ಬಳಿಕ, ಪ್ರಗತಿಯ ಹೆಸರಲ್ಲಿ ಏನೇನು ನಡೆಯುತ್ತಿದೆಯೋ ಅವುಗಳ ಹೊಲಸನ್ನು ಎತ್ತಿ ತೋರಿಸಿ, ನಿಜವಾದ ಪ್ರಗತಿಪಥದ ದಿಗ್ದರ್ಶನ ಇಲ್ಲಿ ನಮಗೆ ಗೋಚರವಾಗುತ್ತದೆ.

ಶ್ರೀ ಬಡೆಕ್ಕಿಲರ ಕಾವ್ಯಕ್ಕೆ ವಯಸ್ಸಾಗುತ್ತ ಹೋದಂತೆ ಅವರ ಅನುಭವ ಪರಿಪಕ್ವವಾಗುತ್ತ ಬರುತ್ತಿದೆ. ಇತ್ತೀಚೆಗೆ ಅವರು "ರಾಜ್ಯಭಾರ"ವೆಂಬ ಹೊಸ ಕೃತಿಯನ್ನು ಬರೆದರು. ಆಳವಡಿಸಿದ ಛಂದಸ್ಸು ಕಂದ. ಇಲ್ಲಿ ಅವರ ಕಂದ ರಚನಾ ಸಾಮರ್ಥ್ಯ ಗೌರೀಶಂಕರವನ್ನೇರಿದೆ.

"ಸಮಾಜ ಸಂಗೀತ"ವೆನ್ನುವುದು ಸಾಂಗತ್ಯದಲ್ಲಿ ಬರೆದ ಸಮಾಜ ಮತ್ತು ಮಠ ಸಂಸ್ಥಾನಗಳಿಗೆ ಸಂಬಂಧಪಟ್ಟ ಕೃತಿ. ಸೊಗಸಾದ ನಿರೂಪಣೆ, ಸಹಜ ಶೈಲಿಗಳಿಂದ ರತ್ನಾಕರ ವರ್ಣಿಯ ನಂತರವೂ ಸಾಂಗತ್ಯದಲ್ಲಿ ಬರೆಯುವ ಕವಿಗಳಿದ್ದಾರೆಂಬ ಕೀರ್ತಿ ಶ್ರೀ ಬಡೆಕ್ಕಿಲರಿಗೆ ಸಲ್ಲಬೇಕು.

"ಹೊಟ್ಟೆಯೂ ಅವಯವಗಳೂ" ಎಂಬ ಒಂದು ಚಂಪೂ ಕಾವ್ಯವನ್ನೂ ಅವರು ಬರೆದಿದ್ದಾರೆ. ಆದರೆ, ದುರ್ದೈವದಿಂದ ಅದೀಗ ಉಪಲಬ್ಧವಿಲ್ಲ. ಮಂಗಳೂರಿನ "ಕನ್ನಡ ಕೋಗಿಲೆ"ಗೂ ಅವರು ಹಲವಾರು ಕವಿತೆಗಳನ್ನು ಬರೆದದ್ದುಂಟು. ಅವೂ ಅಲಭ್ಯ.

ಶ್ರೀ ಬಡೆಕ್ಕಿಲರದು ಕೆಚ್ಚೆದೆಯ ಭವ್ಯ ಪರಂಪರೆ. ಅನ್ಯಾಯದ ವಿರುದ್ಧ ಹೋರಾಡುವ ವೀರ ಪ್ರವೃತ್ತಿ. ಅವರ ಹಿರಿಯರು ಲಕ್ಷ್ಮಿ—ಶಿವರಲ್ಲೇ, ಅಂದರೆ, ದೇಶವ್ಯಾಪೀ ಸ್ವಾತಂತ್ರ್ಯ ಸಂಗ್ರಾಮವಾರಂಭವಾಗುವುದಕ್ಕೆ ಮೊದಲೇ ಬ್ರಿಟಿಷರ ವಿರುದ್ಧ ಬಂಡೆದ್ದ ಉಜ್ವಲ ದೇಶಪ್ರೇಮಿಗಳು.

ಶ್ರೀ ಬಡೆಕ್ಕಿಲರ ಜೀವನವೇನೂ ಸುಗಮವಾಗಲಿಲ್ಲ. ಕೃಷಿ—ವ್ಯವಸಾಯ—ಸಾಹುಕಾರಿಕೆ ಎಂದು ದುಡಿದ ಅವರು, ಕರ್ನಾಟಕ ಬ್ಯಾಂಕಿನ ಸ್ಥಾಪಕರಲ್ಲೂ ಒಬ್ಬರಾಗಿ ನೆರವಾಗಿದ್ದರು. ಆದರೆ, ಅವರ ಮುಂದೆ ಕೈ ಬೀಸಿಬಿಟ್ಟುಕೊಂಡರು. ಬಡತನದ ಜೀವನವನ್ನೇ ಹಂಬಲಿಸಿ ಬಂದರು. ಮಾನವ ಸಹಜ. ಕಷ್ಟ ಕಾರ್ಪಣ್ಯಗಳೂ ವಿಘ್ನ ವಿಡಂಬರಗಳೂ ಒಂದರ ಮೇಲೊಂದೆಂಬಂತೆ ಕಾಡಿದರೂ ಇವರು ಅವಾವುದಕ್ಕೂ ಸೊಪ್ಪು ಹಾಕದೆ ಕಲೆಯ ಕೃಷಿಯೇ ನಿಂತರು.

ತಮ್ಮ ಹಿರಿಯರ ಚರಿತ್ರಾರ್ಹ ಹಳೆಯ ಮನೆಯಲ್ಲೇ ಎಂಬತ್ತೈದು ವಸಂತಗಳನ್ನು ಕಳೆದ ಶ್ರೀ ವೆಂಕಟರಮಣ ಭಟ್ಟರು ಇನ್ನೂ ಉತ್ಸಾಹದ ಚಿಲುಮೆಯಾಗೇ ಇದ್ದಾರೆ. ತಮ್ಮ ಮಕ್ಕಳ-ಮೊಮ್ಮಕ್ಕಳಾದರೂ ಬಡೆಕ್ಕಿಲರ ಪರಂಪರೆಯನ್ನೆ ಮುಂದುವರಿಸಿಕೊಂಡು ಹೋಗುತ್ತಿರುವುದನ್ನು ಕಣ್ಣಾರೆ ಕಂಡು ಆದರ್ಶಾಗಿ ಹೆಮ್ಮೆಪಡುತ್ತಾರೆ.

೨೦ನೆಯ ಶತಮಾನದ ಆರಂಭ ಛಂದೋಬದ್ಧ ಕವಿತೆಗಳಿಗೆ ಹೆಸರಾಯಿತು. ತಿರುಮಲೆ ತಾತಾಚಾರ್ಯ ಶರ್ಮ, ಗೋವಿಂದ ಪೈ, ಪಂಜೆ ಮಂಗೇಶರಾಯ, ಪಂಪಳಿಕೆ ಮುಂತಾದವರೂ ಹಳೆಯ ಜಾಡಿನಲ್ಲೇ ಬೆಳೆದು ಬಂದವರು. ಶ್ರೀ ಬಡೆಕ್ಕಿಲರೂ ಅದೇ ದಾರಿ ಮೆಟ್ಟಿದವರು. ಮುಂದೆ ಭಾವಗೀತೆಗಳ ಯುಗ ಆರಂಭವಾಯಿತು; ಇದೀಗ ನವ್ಯ ಕಾವ್ಯಗಳ ಮಳೆ ತೊಡಗಿದೆ. ಬದಲಾದ ಕಾವ್ಯದ ವೇಷಭೂಷಣಗಳನ್ನು ಅಳವಡಿಸಿಕೊಂಡ ಹಲವು ಕವಿಗಳು ಉತ್ತುಂಗಕ್ಕೇರಿದರು.

ಶ್ರೀ ಬಡೆಕ್ಕಿಲರದು ಕಂದ—ಷಟ್ಪದಿ—ಸಾಂಗತ್ಯ ಮತ್ತು ಸಂಗೀತಾತ್ಮಕ ಕೃತಿಗಳಲ್ಲೇ ಉಳಿಯಿತು. ಛಂದಸ್ಸನ್ನು ಪ್ರತಿಭೆಯ ಪ್ರಥಮ ವೈರಿಯೆಂದು ದೂಷಿಸುವ "ಕವಿರೇಕ ಪ್ರಜಾಪತಿಃ" ಎಂದು ಹೇಳಿಕೊಳ್ಳುವವರ ಕಾಲದಲ್ಲಿ ಶ್ರೀ ಬಡೆಕ್ಕಿಲರನ್ನು ಗುರುತಿಸುವ ಗೋಜಿಗೆ ಹೋದವರು ಕಡಿಮೆ. ಕಾವ್ಯಾನುಶೀಲನೆಗೆ ಲಂಗೋ—ಪಟ್ಟ ಹೇರದಿರುವುದು ಅಪ್-ಟು-ಡೇಟ್ ಫ್ಯಾಷನ್ನಿದು. ಅವರೂ ಹಳೆಯ ಸೀರೆ ಹೊದ್ದರೂ ಮನಿತೆಯೇ ಅಲ್ಲವೆಂದು ತೀರ್ಮಾನಿಸುವುದು ನಮ್ಮ ಬುದ್ಧಿ ಶಕ್ತಿಯು ಎಷ್ಟು ಎತ್ತರದಲ್ಲಿದೆ ಎಂಬುದಂತೆ ಕನ್ನಡಿ ಹಿಡಿಯುತ್ತದೆ.

ಶ್ರೀ ಬಡೆಕ್ಕಿಲರನ್ನು ಅವಜ್ಞೆಯಿಂದ ಕಂಡಿದ್ದಾರೆ—ಕನ್ನಡಿಗರ, ಪೈ, ಪಂಜೆ ಮುಳಿಯ, ಮುಂತಾದವರಿಂದ ಮಾತ್ರವಲ್ಲ, ಆಲೂರು, ಡಿ. ವಿ. ಜಿ. ಪುತಿನ ಮೊದಲಾದವರಿಂದಲೂ ಪ್ರಶಂಸೆಗೆ ಪಾತ್ರರಾದ ಶ್ರೀ ಬಡೆಕ್ಕಿಲ ಭಟ್ಟರು ಎಲೆ ಮರೆಯ ಕಾಯಿಯಾಗೇ ಉಳಿದಿದ್ದಾರೆ. ಇದರಿಂದ ಶ್ರೀ ಭಟ್ಟರಿಗೇನೂ ಅಭಾವವೆನಿಸುವುದಿಲ್ಲ. ನಮ್ಮ ಬೆಲೆಯೆಷ್ಟು ಎಂಬುದನ್ನು ಅದು ತೋರಿಸಿಕೊಡುತ್ತದೆ.

ಶ್ರೀ ಬಡೆಕ್ಕಿಲ ಭಟ್ಟರ ಯೋಗ್ಯತೆಯನ್ನು ಗುರುತಿಸಿ, ಅವರ ಆಸನವು ಮೈಸೂರಿನಲ್ಲಾದರೂ ಭದ್ರಾವತಿಯಲ್ಲಿ ಸನ್ಮಾನಿಸುವಂತಾದುದು, ಕನ್ನಡಿಗರ ಆತ್ಮಗೌರವ ಪೂರ್ಣ ಕವಿ ಗೋಗಿಲ್ಲವೆಂಬುದನ್ನು ತೋರಿಸುತ್ತದೆ.

ಕನ್ನಡದಲ್ಲಿ ಅಪರೂಪವಾದ
ಪುಸ್ತಕ

ಸ್ವಪ್ನಲೋಕ

ಮನೋವಿಶ್ಲೇಷಣದ ಬೆಳಕಿನಲ್ಲಿ ಕನಸುಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ವಿವರಗಳನ್ನೊಳಗೊಂಡ 'ಕಾರ್ತಿಕೇಯ' ವಿರಚಿತ ಕಿರುಹೊತ್ತಗೆ ಬೆಲೆ 0—50

ಂ ಂ ಂ

ದಿ। ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ ಪ್ರಸಂಗ ಪುಸ್ತಕಗಳು

ಸಾಹಸ ಭೀಮ ವಿಜಯ	0-50
ವಾಲಿ ಸುಗ್ರೀವ (ದುರಂತ ಯಕ್ಷಗಾನ ನಾಟಕ)	0-60
ಲವ ಪಗಡೆ	0-40
ಭಾರತದ ಗರ್ವಭಂಗ	0-40
ಭರತೇಶ ದಿಗ್ವಿಜಯ	0-50

ಪ್ರತಿ ಪುಸ್ತಕಕ್ಕೂ ಬುಕ್ ಪೋಸ್ಟಿನಿಂದ ಕಳಿಸಲು 0-30 ಪೈಸೆ ಅಂಚೆ ವೆಚ್ಚ.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ. ಕ.

ಮೂರು + ಮೂರು = ಹದಿಮೂರು

ಸಂಸತ್ತಿನಲ್ಲಿ ಮಹಾಜನ ವರದಿಯ ಮಂಡನೆಯಾದ ಬಳಿಕ ಕರ್ನಾಟಕದ ಹಲವೆಡೆಗಳಲ್ಲಿ ಪ್ರದರ್ಶನ—ಮೆರವಣಿಗೆ ನಡೆಯಿತು, ಬಂದು ಆಯಿತು. ಕೆಲವೆಡೆ ಹಿಂಸಾಕಾಂಡವೂ ನೆರವೇರಿತು. ಇವೆಲ್ಲ ಏಕೆ? ಪ್ರಧಾನಿಯವರು ಹೊಣೆಗಾರಿಕೆಯಿಂದ ನುಣುಚಿಕೊಂಡರು ಎಂದು; ಸಂಸತ್ತಿನಿಂದ ಕನ್ನಡಿಗರಿಗೆ ನ್ಯಾಯದಾನವಾಗುವ ಆಶೆ ಬಿಟ್ಟುಹೋದರೆಯೆಂದು.

ಇವೆಲ್ಲ ಗೊಂದಲ ನಡೆಯುತ್ತಿದ್ದಾಗ, ಪ್ರಧಾನಿ ಜಮ್ಮು—ಕಾಶ್ಮೀರದಲ್ಲಿ ತಂಗಾಳಿಗೆ ಮೈಯೊಡ್ಡಿ ದೇಶದ್ರೋಹಿಗಳಿಗೆ ಎಚ್ಚರಿಕೆ ನೀಡಿದರು. ಅವರ ಜತೆಗೆ ಕೇಂದ್ರ ಸಚಿವ ಡಾ| ಕರಣಸಿಂಗರೂ ಇದ್ದರು. ಪಾಕಿಸ್ತಾನದ ಪಶ್ಚಿಮದಲ್ಲಿ ಭಾರತದ ಚಿರ ಶತ್ರುತ್ವವನ್ನೇ ಬಯಸುವ ಭುಟ್ಟೋ ಮಹಾಶಯರ ಜನತಾಪಕ್ಷವು ಬಹುಮತ ಪಡೆದುದರ ಹಿನ್ನೆಲೆಯಲ್ಲಿ ಈ ಪ್ರಧಾನಿ ಸಂದರ್ಶನ, ಮಂತ್ರಿವರು ನೀಡಿದ ಗಂಭೀರ ಎಚ್ಚರಿಕೆಗೆ ತುಂಬ ಮಹತ್ತ್ವವುಂಟು.

ಈ ವೇಳೆಯಲ್ಲೇ ನಡೆದುದು ಬೆಂಗಳೂರು ನಗರಪಾಲಿಕೆಯ ಚುನಾವಣೆ. ಕರ್ನಾಟಕವು ಸಿಂಡಿಕೇಟಿನ ಗಂಡು ಭೂಮಿಗೆ ಮತ್ತೊಂದು ಹೆಸರು. ಗುಜರಾತಕ್ಕಿಂತಲೂ ಕರ್ನಾಟಕವೇ ಗಟ್ಟಿ. ಸಿಂಡಿಕೇಟ್ ಅಧ್ಯಕ್ಷ ಶ್ರೀ ಎಸ್ಸೆನ್ನರ ಸ್ವರಾಜ್ಯವೂ ಇದುವೇ. ಹಾಗಿರುವಾಗ ಕರ್ನಾಟಕದ ರಾಜಧಾನಿ ಬೆಂಗಳೂರು ಚುನಾವಣೆಗಳಲ್ಲಿ ಸಿಂಡಿಕೇಟೇ ಗೆದ್ದು ಬರಬೇಕಿತ್ತು. ಆದರೆ, ದುರ್ದೈವದಿಂದ ಹಾಗಾಗಲಿಲ್ಲ.

ಸಿಂಡಿಕೇಟಿಗೆ ಚುನಾವಣೆಯ ಪ್ರಚಾರ ಮಾಡಲು ಹಲವಾರು ಸಾಧನಗಳಿದ್ದವು. ಇಂಡಿಕೇಟಿಗರು ಮಹಾಜನ ವರದಿಯನ್ನು ಸಂಸತ್ತಿನ ಮುಂದಿಡದಂತೆ ನೋಡಿಕೊಳ್ಳಲು ಅಶಕ್ತರಾಗಿದ್ದುದು ಒಂದು. ಶ್ರೀಮತಿ ಗಾಂಧಿಯವರು ತನ್ನ ವ್ಯಕ್ತಿಗತ ಹಟ ಸಾಧನೆಯಿಂದ ಹೊರಡಿಸಿದ್ದ ರಾಜಧನಾದಿ ರದ್ದತಿಯ ಸುಗ್ರೀವಾಜ್ಞೆಯನ್ನು ಸರ್ವೋಚ್ಚ ನ್ಯಾಯಾಲಯವು ಕಿತ್ತುಹಾಕಿದ್ದು ಎರಡು...... ಕಾವೇರಿಯ ನೀರಿನಲ್ಲಿ ಕನ್ನಡಿಗರಿಗೆ ನ್ಯಾಯವಾದ ಪಾಲು ನೀಡಲು ಇಂಡಿಕೇಟ್ ಸರಕಾರ ಹಿಂದೆ ಮುಂದೆ ನೋಡುತ್ತಿರುವುದು ಮೂರು...ಹೀಗೆ ಇನ್ನು ಕೆಲವು.

ಹಾಗಿದ್ದರೂ ನಗರಪಾಲಿಕೆಯ ಚುನಾವಣೆಗಳಲ್ಲಿ ಸಿಂಡಿಕೇಟು ಜಯಗಳಿಸಲಿಲ್ಲ. ಬರಿಯ ಬೆರಳೆಣಿಕೆಯ ಸ್ಥಾನಗಳನ್ನು ಗಳಿಸಿದ್ದು ಆಶ್ಚರ್ಯ ಜನಕ. ಅದರ ಮೇಲೆ, ಇಂಡಿಕೇಟು ೨೪ ಸ್ಥಾನಗಳನ್ನು ಪಡೆದು ಅತ್ಯಧಿಕ ಸ್ಥಾನ ಗಳಿಸಿದ ಪಕ್ಷವಾದದ್ದು ಇನ್ನೊಂದು ಸೋಜಿಗ; ದ್ರಾವಿಡ ಮುನ್ನೇತ್ರ ಕಳಗಂ ಎಂಟು ಸ್ಥಾನಗಳನ್ನು ಗಿಟ್ಟಿಸಿಕೊಂಡದ್ದು ವಿಸ್ಮಯಕಾರಕವೇ. ಕನ್ನಡದ ರಾಜಧಾನಿಯಲ್ಲಿ ಕನ್ನಡ ಚಳವಳಿಗಾರರೂ ತಲೆಯೆತ್ತದಂತಾದುದು ಇನ್ನೂ ವಿಚಿತ್ರ. ಕಾರ್ಮಿಕ ವರ್ಗದವರು ಬಹಳಷ್ಟಿದ್ದರೂ ಕಮ್ಯುನಿಸ್ಟರು ತಲೆಹಾಕಿಲ್ಲದಂತಾದುದು ವಿಸ್ಮಯವಲ್ಲದೆ ಮತ್ತೇನ?

ಆದರೆ, ವಿವೇಚನೆ ಮಾಡುವಾಗ, ಇದರಲ್ಲಿ ನಡೆಯಲಾಗದದೇನೂ ಇಲ್ಲ. ಈ ಹಿಂದೆ ಪ್ರಚಂಡ ಬಹುಮತ ಪಡೆದು ಆಡಳಿತ ನಡೆಸಿದ್ದ ಪೌರಸಮಿತಿಯೇ ಅವಮಾನ ಜನಕ ಸೋಲು ಉಣ್ಣಬೇಕಾಯಿತೆಂಬಾಗ ಉಳಿದವರ ಪಾಡೇ ಇದ್ದುದರಲ್ಲಿ ನೆಮ್ಮದಿಯದು.

ಸಿಂಡಿಕೇಟ್ ಇಂಡಿಕೇಟ್‌ಗಳು ತಮತಮಗೇ ಬಹುಮತ ದೊರೆಯುತ್ತದೆಂದು ದೃಢವಾಗಿ ನಂಬಿದ್ದರೂ ಅವರಿಬ್ಬರ ಲೆಕ್ಕಾಚಾರ ತಲೆಕೆಳಗಾಯಿತು, ಒಬ್ಬರದು ಮೂರು ಮೂರು ಹದಿಮೂರು ಆಯಿತ; ಮತ್ತೊಬ್ಬರದು ಎಂಟು ಎಂಟು ಹದಿನೆಂಟು ಆಯಿತು.

ಚುನಾವಣೆಗೆ ಪೂರ್ವಭಾವಿಯಾಗಿ ನಾಲ್ಕು ವರ್ಷಗಳ ಕಾಲ ನಗರದ ಆಳಿಕೆ ಮುಖ್ಯ ಅಧಿಕಾರಿಯ ಕೈಯಲ್ಲಿತ್ತು. ಕಾರ್ಪರೇಟರರ ಅಧಿಕಾರವನ್ನು ಸರಕಾರ ಕಿತ್ತುಕೊಂಡದ್ದು, ಕಾರ್ಪರೇಟರು ನ್ಯಾಯಾಲಯದ ಮರೆ ಹೊಕ್ಕದ್ದು, ಅಲ್ಲವರಿಗೆ ಆಶ್ರಯ ಸಿಗದೆ ಹೋದದ್ದು ಜಗಜ್ಜನಿತ.

ಮತದಾನವಾದರೂ ತೀರ ನಿರುತ್ಸಾಹದಿಂದಲೇ ನಡೆದದ್ದು ಸರ್ವವೇದ್ಯ. ನೂರಕ್ಕೆ ಐವತ್ತರಷ್ಟು ಮಾತ್ರ ಮತದಾನ ನಡೆಯಿತು ಎಂದರೆ, ನಾಗರಿಕರಲ್ಲಿ ಅರ್ಧಾಂಶದಷ್ಟು ಜನರು ತಮ್ಮ ನಾಗರಿಕ ಅಧಿಕಾರವನ್ನು ಬಳಸಲಿಲ್ಲವೆಂದೇ ಹೇಳಬೇಕು. ಚುನಾವಣೆಯು ರಜಾದಿನವಂದು ನಡೆದುದು ಈ ಅನಾಸ್ಥೆಗೆ ಕಾರಣವೆನ್ನುವಂತಿಲ್ಲ; ಯಾಕೋ ಮತ ನೀಡುವುದರಲ್ಲೇ ಉದಾಸೀನತೆಯನ್ನು ಇವರು ತೋರಿದ್ದಾರೆಂಬುದು ಸ್ವಯಂ ವೇದ್ಯ.

ಪತ್ರಿಕಾ ವರದಿಗಳನ್ವಯ, ಉನ್ನತ ವರ್ಗದವರು ಚುನಾವಣೆಗಳಿಗೆ ಅಘೋಷಿತ ಬಹಿಷ್ಕಾರ ಹಾಕಿದಂತಿತ್ತು. ಮಧ್ಯಮ ವರ್ಗದವರೂ ಅತ್ಯಂತ ನಿರಾಶರಾಗಿದ್ದರು. ಸರ್ವಸಾಮಾನ್ಯವಾಗಿ "ಶ್ರೀಸಾಮಾನ್ಯರು" ಮಾತ್ರ ಅಧಿಕ ಸಂಖ್ಯೆಯಲ್ಲಿ ಮತದಾನ ಮಾಡಿದ್ದರು. ಕಾರ್ಮಿಕ ವರ್ಗವೆಲ್ಲ ಇಂಡಿಕೇಟಿಗೆ ಬೆಂಬಲ ನೀಡಿರಬೇಕು; ಅದ್ದರಿಂದಲೇ ಕಮ್ಯುನಿಸ್ಟರು ಸಂಪೂರ್ಣ ಸೋತು ಹೋದರು. ಕಮ್ಯುನಿಸ್ಟರೂ ಇಂಡಿಕೇಟಿಗರೂ ಒಳಗಿಂದೊಳಗೆ ಒಡಂಬಡಿಕೆ ಮಾಡಿಕೊಂಡಿದ್ದರೂ ಇರಬಹುದು. ಪ್ರತ್ಯಕ್ಷ ಒಡಂಬಡಿಕೆ ಮಾಡಿಕೊಂಡು ಕೇರಳದಲ್ಲಿನಂತೆ ಜನರು ಸಂದೇಹಗ್ರಸ್ತರಾಗದಂತೆ ಈ ಸಲ ನಡೆದಿರಲೂ ಬಹುದು.

ದ್ರಾವಿಡ ಮುನ್ನೇತ್ರ ಕಳಗಂ ಎಂಟು ಸ್ಥಾನಗಳನ್ನು ಪಡೆದು ಎರಡನೆಯ ಮಹಾ ಪಕ್ಷವೆನ್ನುವ ಕೀರ್ತಿಗಳಿಸಿತು. ತಮಿಳರ ಪ್ರಾಬಲ್ಯ ಮತ್ತು ಐಕ್ಯವೆಷ್ಟಿದೆಯೆಂಬುದಕ್ಕೆ ಇದುವೇ ಸಾಕ್ಷಿ.

ಬೆಂಗಳೂರು ಕಾರ್ಪರೇಶನ್ನಿನ ಚುನಾವಣೆಗಳು ರಾಜ್ಯದ ರಾಜಕೀಯ ದಿಕ್ಸೂಚಿಯೆಂದು ಇಂಡಿಕೇಟ್ ಕನ್ವೀನರ್ ದೇವರಾಜ ಅರಸರು ಹೇಳುತ್ತಾರೆ. ಆದರೆ, ಇದನ್ನು ಒಪ್ಪಲಾಗದು. ಕಾಂಗ್ರೆಸ್ ಅಖಂಡವಾಗಿರುವಾಗಲೂ ನಗರ ಪಾಲಿಕೆಯಲ್ಲಿ ಅಧಿಕಾರ ನಡೆಸಲು ಅದು ಅಶಕ್ತವಾದದ್ದುಂಟು. ಹೆಚ್ಚಾಗಿ ನಗರಗಳಲ್ಲಿನ ಮಧ್ಯಮ ವರ್ಗದ ಜನರು ವಾಮ ಪಕ್ಷಗಳಿಗೇನೇ ಬೆಂಬಲ ನೀಡುವುದು ನಡೆದು ಬಂದ ದಾರಿ.

ಆದರೂ ಬುದ್ಧಿಜೀವಿಗಳು ಬೆಂಗಳೂರು ಚುನಾವಣೆಗಳಿಂದ ಕಲಿತುಕೊಳ್ಳಬೇಕಾದ ಪಾಠವಿದೆ. ಮತದಾನವೆಂಬುದು ಪ್ರಜಾಸತ್ತೆಯು ನಾಗರಿಕನಿಗೆ ನೀಡುವ ಪರಮಾಧಿಕಾರ. ಪೌರಪ್ರಜೆಯಿಂದ ಈ ಅಧಿಕಾರವನ್ನು ಉಪಯೋಗಿಸದೆ ವ್ಯರ್ಥಗೊಳಿಸುವುದೆಂದರೆ, ತಾವು ಪ್ರಜಾಸತ್ತೆಗೆ ಅನರ್ಹರೆಂದು ತೋರಿಸಿಕೊಳ್ಳುವುದೇ ಆಗಿದೆ. ಬೆಂಗಳೂರಿನ ಬುದ್ಧಿಜೀವಿಗಳು ತಮ್ಮ ಮತಗಳನ್ನು ಚಲಾಯಿಸುತ್ತಿದ್ದರೆ, ಈಗ ಪ್ರಕಟಗೊಂಡ ಫಲಿತಾಂಶದಲ್ಲಿ ಹಲವು ಏರುಪೇರುಗಳನ್ನು ನಿರೀಕ್ಷಿಸಬಹುದಿತ್ತು.

ಬುದ್ಧಿಜೀವಿಗಳ ಕರ್ತವ್ಯ ಬಾಹಿರತೆಯಿಂದ ಬುದ್ಧಿಹೀನರದ್ದೇ ಮೇಲುಗೈಯಾಗುತ್ತದೆ; ಅವರೇ ಎಲ್ಲರ ಮೇಲೂ ಸವಾರಿ ಮಾಡುವಂತೆ ಸೂಕ್ತ ಅವಕಾಶ ಮಾಡಿ ಕೊಟ್ಟಂತಾಗುತ್ತದೆ. ಚುನಾವಣೆಗಳಲ್ಲಿ ಮತಾಧಿಕಾರವನ್ನು ಚಲಾಯಿಸದೆ ಇರುವುದು ಸಾಧುವೆಂದು ಯಾರೂ ಅನ್ನಲಾರರು; ಏಕೆಂದರೆ, ಒಂದೇ ಒಂದು ಮತಕ್ಕೂ ಅನೇಕ ಪಾತಾಳಗಳನ್ನು ಒಂದುಗೂಡುವ ಶಕ್ತಿ ಪ್ರಜಾಸತ್ತೆಯಲ್ಲಿದೆ.

ಆದುದರಿಂದ ನಮ್ಮ ರಾಜಕೀಯ ಪಕ್ಷಗಳ ಜವಾಬ್ದಾರಿಯೇ ತುಸು ಹೆಚ್ಚಿದೆಯೆಂಬುದನ್ನು ಬೆಂಗಳೂರು ಚುನಾವಣೆಗಳು ತೋರಿಸಿವೆ.

ಮತದಾರರಲ್ಲಿ ಪೌರಪ್ರಜ್ಞೆಯನ್ನೂ ಮತಚಲಾಯಿಸುವ ಕರ್ತವ್ಯ ಪ್ರಜ್ಞೆಯನ್ನೂ ಮೂಡಿಸುವ ಆವಶ್ಯಕತೆಯಿದೆ. ಬುದ್ಧಿಜೀವಿಗಳು ಈ ಕರ್ತವ್ಯ ಪಾಲನೆಯಲ್ಲಿ ಅನಾಸಕ್ತರಾದರೆ, ದೇಶದ ಭವಿಷ್ಯವನ್ನೇ ಅಂಧಕಾರಮಯವಾಗಿಸುತ್ತಾರೆ. ದೇಶದ ಗೋರಿಯನ್ನು ತಾವೇ ತೋಡುತ್ತಾರೆ. "ಭಾರತೀಯರು ಪ್ರಜಾಸತ್ತೆಗೆ ಅನರ್ಹರು" ಎಂಬುದನ್ನು ಸಿದ್ಧಮಾಡಿ ತೋರಿಸುತ್ತಾರೆ.

ರಾಜಕೀಯ ರಂಗವು ಹೊಲಸಾಗಿರಬಹುದು; ಅದನ್ನು ಶುದ್ಧ ಮಾಡಲು ಸ್ವರ್ಗಲೋಕದಿಂದ ಯಾರೂ ಇಳಿದು ಬರುವುದಿಲ್ಲ. ಬುದ್ಧಿಜೀವಿಗಳೆಲ್ಲರೂ ಹೊಲಸೆಂದು ಅದರಲ್ಲಿ ನಿರಾಸಕ್ತರಾದರೆ, ಅವರೂ ಮುಂದೊಂದು ದಿನ ನಾಶಕ್ಕೊಳಗಾಗುವುದು ನಿಸ್ಸಂಶಯ.

ಪ್ರಜಾಸತ್ತೆಯ ಉಳಿವಿಗಾಗಿ ಹೋರಾಡುವ ಪ್ರತಿಯೊಬ್ಬರೂ ನಾಗರಿಕರಿಗೆ ಕರ್ತವ್ಯ ಪಾಲನೆಯ ಪಾಠವನ್ನು ರಕ್ತಗತ ಮಾಡಿಕೊಡಬೇಕು. ಇಲ್ಲವಾದರೆ, ದೇಶದ ಆರೋಗ್ಯ ಸಂಪೂರ್ಣ ಅಯೋಗ್ಯವಾಗುತ್ತದೆ.

ಒಬ್ಬಾಕೆ ನೇರವಾಗಿ ಬಂದವಳೇ ಬಡಬಡಿಸಿದಳು— "ಡಾಕ್ಟರ್, ನನಗೇನಾಗಿದೆ, ಬೇಗನೇ ಹೇಳಿ...."

"ಅಮ್ಮಾ, ನೀವು ತುಂಬ ಮೇಕಪ್ ಮಾಡುತ್ತೀರಿ. ಕಪ್ಪು ಕನ್ನಡಕ ಹಾಕುತ್ತೀರಿ. ತುಟಿಗೆ ರಂಗು ಸವರುತ್ತೀರಿ. ಕೂದಲಿಗೆ ಬಣ್ಣ ಬಳಿಯುತ್ತೀರಿ. ತೋಳಿಲ್ಲದ ಕುಪ್ಪಸ ತೊಡುತ್ತೀರಿ. ಅದರ ಮೇಲೆ ತಪ್ಪು ಕೋಣೆಗೆ ಬಂದಿದ್ದೀರಿ. ನಾನೊಬ್ಬ ಪತ್ರಿಕರ್ತನಷ್ಟೆ. ಡಾಕ್ಟರು ಆಚೆ ಕೋಣೆಯಲ್ಲಿದ್ದಾರೆ...."

o o o

ಒಬ್ಬ— ನನಗೆ ಲಾಟರಿ ಎರಡೂವರೆ ಲಕ್ಷ ಬಂದರೆ, ಅದನ್ನು ದಾನ-ಧರ್ಮ ಮಾಡುತ್ತೇನೆ—ನನಗೇನೂ ಬೇಡ.

ಇನ್ನೊಬ್ಬ— ನನಗೆ ಸಿಕ್ಕರೆ, ಬಹುಮಾನ ತೆಗೆದುಕೊಳ್ಳುವುದಕ್ಕೇ ಹೋಗುವುದಿಲ್ಲ. ಬಡ ಸರ್ಕಾರ ಅದನ್ನು ಜನತಾ ಜನಾರ್ದನನ ಹಿತಕ್ಕಾಗಿ ಖರ್ಚು ಮಾಡಲಿ.

ಪುತ್ತೂರು IInd ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

E. X. C. 401/69 (O. S. 99/65)

B. ಅನಂತರಾಜ ಶೆಟ್ಟಿ — ಅರ್ಜಿದಾರ

ಕಮಲಾವತಿ ಸಹಾ — ಎದುರು

೨ನೇ ಎದುರು:— ರತ್ನರಾಜ—ಶಾಂತಿರಾಜ ಇಂದ್ರರ ಮಗ—ವಿಟ್ಲ ಕಸಬಾ

ಸದ್ರಿ ೨ನೇ ಎದುರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ನಿಮ್ಮ ತಂದೆಯವರ ಬಾಬ್ತು ವಿಟ್ಲ ಕಸಬಾ ಗ್ರಾಮದ ಕೃಷಿಗಳ ಹಕ್ಕನ್ನು ಯೇಲಂಗೆ ಅಪೇಕ್ಷಿಸಿ ಮಾಡಿದ ಈ ಅಮಲುದರಿಯಲ್ಲಿ ನಿಮ್ಮ ನೋಟೀಸಿನ ಬಗ್ಗೆ ತಾ. 6–1–71ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉಜರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಗೈರ್ಹಾಜರಿ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

Sd/ M. Rammohan Rao

Advocate for Petitioner.

Puttur, 20—12—70

ಸಂದರ್ಶಿಸಿರಿ!—ಸಂತೃಪ್ತರಾಗಿರಿ!!

ಬೆಳ್ಳಿ ಬಂಗಾರ ವಜ್ರಗಳಿಗೆ, ಆಧುನಿಕ ಫ್ಯಾಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮ್‌ಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res;3272

ಸೃಷ್ಟಿನಿಯಮ—ತ್ಯಾಗ

ಜಗನ್ನಾಥ ಎಂಬ ಶಿಲ್ಪಿಯ ತಯಾರಾಗಿತ್ತು. ಅತೀವಾಸೀಕ ಸೌಂದರ್ಯ ಪ್ರಸಾದಕಗಳೂ ಮನೋರಂಜಕ ವಿಚಿತ್ರ ವಿಚಿತ್ರ ಸಾಧನೋಪಕರಣಗಳೂ ತುಂಬಿತ್ತು. ಹೊಸತಾಗಿ ನಿರ್ಮಾಣಗೊಂಡ ಈ ಕಟ್ಟಡದ ಮಾತುಕತೆ ಎಲ್ಲೆಲ್ಲೂ ನಡೆಯುತ್ತಲೇ ಇತ್ತು.

ಅದೇ ವೇಳೆ ಗೋಡೆಯಲ್ಲಿ ಸೇರಿಕೊಂಡ ಕಲ್ಲೊಂದು ಪಂಚಾಂಗದಲ್ಲಿ ಹುದುಗಿದ್ದ ಕಲ್ಲನ್ನು ಪ್ರಶ್ನಿಸಿತು—

"ಅಣ್ಣಾ, ಕಗ್ಗತ್ತಲೆಯಲ್ಲಿ ಮಣ್ಣಿನಡಿಯಲ್ಲಿ ಹುದುಗಿರಲು ಬೇಸರವೆನಿಸದೇನು? ರವಿಯ ಕಿರಣವನ್ನು ಪ್ರಪಂಚದ ಸೌಂದರ್ಯವನ್ನು ಕಣ್ಣಾರೆ ಕಂಡು ಆನಂದಿಸಬೇಕೆಂಬ ಆಶೆ ನಿನಗಿಲ್ಲವೇನು? ಬುನಾದಿ ಕಲ್ಲಾದ ತಪ್ಪಿಗೆ ನೀನು ಕ್ಷಣ ಕ್ಷಣವೂ ಪರಿತಪಿಸುತ್ತಿಲ್ಲವೇನು?"

"ಇಲ್ಲ; ಎಂದಿಗೂ ಇಲ್ಲ; ಎಂದೆಂದಿಗೂ ಇಲ್ಲ. ನೀನು ತಿಳಿದದ್ದು ಬರಿಯ ಭ್ರಮೆ ನಾನೀಗ ಇರುವಲ್ಲಿಯೇ ಇರಲು ಹಂತೆಯೇ ಅತ್ಯಂತ ಸಂತುಷ್ಟ. ಜನರ ಕಣ್ಣಿನಿಂದ ಮರೆಯಾಗಿ ಈ ಭವ್ಯ ಭವನ ನಿರ್ಮಾಣದಲ್ಲಿ ಸಹಯೋಗ ನೀಡುವ ಭಾಗ್ಯವೇನು ಕಡಿಮೆಯದೆ? ಪರರಿಗಾಗಿ ಜೀವಿಸುತ್ತಿರುವವನ ಬದುಕು—ನಿಜವಾಗಿ ಸಾರ್ಥಕ. ತನ್ನ ಅಸ್ತಿತ್ವಕ್ಕೆ ಭಂಗ ತಂದುಕೊಂಡು ಪರರ ಅಸ್ತಿತ್ವವನ್ನು ಸುರಕ್ಷಿತವಿಡುವುದು ಈ ಸೃಷ್ಟಿಯ ಗೌರವಮಯ ವಿಧಾನ."

"ಆದರೂ ಅಣ್ಣಾ, ಯಾವ ತ್ಯಾಗವನ್ನು ಎಂತಹ ಬಲಿದಾನವನ್ನು ಜನರು ತನ್ನ ಕಣ್ಣಾರೆ ಕಾಣಲಾರರೋ ಅದು ತ್ಯಾಗವೆಂತು, ಬಲಿದಾನವೆಂತು? ಅಂತಹರಿಂದ ಉಪಯೋಗವೇನು? ಹಿನ್ನ ತ್ಯಾಗ ಬಲಿದಾನಗಳನ್ನು ಜನರು ನೆನಪಿಸಿಕೊಳ್ಳುವುದಾದರೂ ಬೇಡವೆ? ಇವರೇ ಷ್ಟು ಮಾಡುತ್ತಾರೆ?—ವಿಶಾಲ ಭವನದ ಬಗ್ಗೆ ಪ್ರಶಂಸೆಗೆ ತೊಡಗುತ್ತಾರೆ; ನನ್ನ ಕ್ಷಾದರೂ ಗಸಸುನವರುಂಟೆ. ಹಿನ್ನೀ ಅದ್ಭುತ ಬಲಿದಾನದ ಫಲವಾಗಿ ನಿನಗೇನು ಪುರಸ್ಕಾರ ಬಂತು?"

"ಜನ ಪ್ರಶಂಸೆ— ಜನ ಮಾತುಕತೆಗಳೊಡನೆ ನನಗೇಕೆ ಸಂಬಂಧ? ಬೀಜ ತಾನು ಸತ್ತು ಗಿಡವನ್ನು ಬೆಳೆಸುತ್ತದೆ. ನಾನು ಸತ್ತಿಲ್ಲ; ಇಲ್ಲಿ, ಮಣ್ಣಿನಾಳದಲ್ಲಿ ಇನ್ನೂ ಜೀವಂತವಿದ್ದೇನೆ; ಬೀಜವಾದರೂ ತನ್ನನ್ನು ಸಂಪೂರ್ಣ ನಾಶ ಮಾಡಿಕೊಂಡಿತು. ಅದರ ಬಲಿದಾನ—ತ್ಯಾಗದ ಮುಂದೆ ನನ್ನದೇನು ಮಹಾ? ಬೀಜವು ಅಂತಹ ಮಹಾ ಆತ್ಮೋತ್ಸರ್ಗಕ್ಕೆ ಸಿದ್ಧ

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ವಿದೇಶಗಳಿಗೆ

ಭಾರತದ ಟೆಲಿಪ್ರಿಂಟರುಗಳು

ಲೇಖಕರು: ಎ. ಎಸ್. ಭಾಟನಾಗರ್:
ಸಂಪರ್ಕ ಇಲಾಖೆಯ ಡೈರೆಕ್ಟರು.

ಇಂದು ಅನೇಕ ಹೊಸ ಹೊಸ ಸಂಪರ್ಕ ಸಾಧನಗಳು ಬಳಕೆಯಲ್ಲಿರುವುದನ್ನು ನಾವು ಕಾಣುತ್ತೇವೆ. ಇಂತಹ ಉಪಕರಣಗಳ ಪೈಕಿ ಟೆಲಿಫೋನ್ ಒಂದನ್ನು ಬಿಟ್ಟರೆ ಅಷ್ಟೇ ಪರಿಣಾಮಕಾರಿಯಾದ ಇನ್ನೊಂದು ಉಪಕರಣವೆಂದರೆ ಟೆಲಿಪ್ರಿಂಟರ ಯಂತ್ರ.

ಟೆಲಿಫೋನಿನಲ್ಲಿಲ್ಲದ ಒಂದು ವೈಶಿಷ್ಟ್ಯ ಈ ಯಂತ್ರದಲ್ಲಿದೆ. ಟೆಲಿಪ್ರಿಂಟರುಗಳ ಮೂಲಕ ರವಾನೆಯಾಗುವ ಸಂದೇಶಗಳು ಯಂತ್ರದಲ್ಲಿ ಪ್ರಿಂಟ್ ಆಗುತ್ತವೆ. ಮುದ್ರಿತ ಸಂದೇಶಗಳು ವಿಶೇಷತಃ ಪತ್ರಿಕೆಗಳಿಗೆ, ಕೈಗಾರಿಕೆ ಮತ್ತು ವ್ಯಾಪಾರ ವರ್ಗದವರಿಗೆ ಬಹಳ ಮಹತ್ವದ್ದಾಗಿವೆ. ಟೆಲಿಪ್ರಿಂಟರ್ ಯಂತ್ರ ಪತ್ರಿಕಾ ಪ್ರಪಂಚದಲ್ಲಿ ಹೊಸ ಕ್ರಾಂತಿಯನ್ನು ತಂದಿದೆ. ವಿಶ್ವದ ಯಾವುದೇ ಮೂಲೆಯಲ್ಲೇ ಏನೇ ಸಂಭವಿಸಿದರೂ ಅದರ ಸಮಾಚಾರವನ್ನು ಕ್ಷಣ ಮಾತ್ರದಲ್ಲಿಯೇ ಟೆಲಿಪ್ರಿಂಟರ್ ಪತ್ರಿಕೆಗಳಿಗೆ ತಲುಪಿಸುತ್ತದೆ. ಅಂಚೆ ತಂತಿ ಕಚೇರಿಗಳಿಗೆ, ರೈಲ್ವೆಗಳಿಗೆ ಮತ್ತು ವಿಮಾನ ಸಾರಿಗೆ ಸಂಸ್ಥೆಗಳಲ್ಲಿ ಈ ಯಂತ್ರಗಳು ಅತ್ಯಂತ ಅಮೂಲ್ಯವಾಗಿವೆ.

ಟೆಲೆಕ್ಸ ಯಂತ್ರದ ಅಭಿವೃದ್ಧಿಯಿಂದಾಗಿ ವಾಣಿಜ್ಯ ಮತ್ತು ಕೈಗಾರಿಕಾ ರಂಗಗಳಲ್ಲಿ ಈ ಯಂತ್ರಗಳ ಬಳಕೆ ದಿನೇ ದಿನೇ ಹೆಚ್ಚುತ್ತಿದೆ.

ಉತ್ಪಾದನೆಯ ವಿಸ್ತರಣೆ

ಭಾರತದಲ್ಲಿ ಟೆಲಿಪ್ರಿಂಟರುಗಳ ಉತ್ಪಾದನೆ 1961-62ರಲ್ಲಿ ಪ್ರಾರಂಭವಾಯಿತು. ಮದ್ರಾಸಿನ ಗಿಂಡಿಯಲ್ಲಿರುವ ಸರಕಾರಿ ಕ್ಷೇತ್ರದ ಹಿಂದುಸ್ಥಾನ್ ಟೆಲಿಪ್ರಿಂಟರ್ಸ್ ಲಿಮಿಟೆಡ್ ಕಾರ್ಖಾನೆಯಲ್ಲಿ ಈ ಟೆಲಿಪ್ರಿಂಟರ್ ಯಂತ್ರಗಳು ತಯಾರಾಗುತ್ತಿವೆ. ಪ್ರೈವೆಟ್ ಲಿಮಿಟೆಡ್ ಕಂಪೆನಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಈ ಕಂಪನಿ, ಇಟಲಿಯ ಮೆಸರ್ಸ್ ಒಲಿವೆಟ್ಟಿ ಅಂಡ್ ಕಂಪನಿ, ಎಸ್. ಪಿ. ಎ. ಅವರ ಸಹಕಾರದಿಂದ ಸ್ಥಾಪನೆಗೊಂಡಿತು. ಒಂದು ಶಿಫ್ಟಿನಲ್ಲಿ ಟೇಪ್ ಟೈಪ್ ಮಾದರಿಯ 1300 ಟೆಲಿಪ್ರಿಂಟರ್ ಯೂನಿಟ್‌ಗಳನ್ನು ಉತ್ಪಾದನೆ ಮಾಡುವ ಗುರಿಯಿದ್ದಿತು. ಟೆಲಿಪ್ರಿಂಟರುಗಳಿಗಾಗಿ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಕಾರ್ಖಾನೆಯನ್ನು ಗಣನೀಯವಾಗಿ ವಿಸ್ತರಿಸಲಾಯಿತು. 1969—70ರಲ್ಲಿ ಈ ಕಾರ್ಖಾನೆಯ ಉತ್ಪಾದನೆ 5310 ಯೂನಿಟ್‌ಗಳಷ್ಟಿದ್ದಿತು.

ಕಡಿಮೆ ಬೆಲೆಯಲ್ಲಿ

ಹಿಂದುಸ್ಥಾನ್ ಟೆಲಿಪ್ರಿಂಟರ್ಸ್ ಕಾರ್ಖಾನೆ ಇಂಗ್ಲೀಷ್ ಟೆಲಿಪ್ರಿಂಟರುಗಳಲ್ಲದೇ ದೇವನಾಗರಿ ಟೆಲಿಪ್ರಿಂಟರುಗಳನ್ನೂ ತಯಾರಿಸುತ್ತಿದೆ. ದೇಶದಲ್ಲಿ ಬೆಲೆಗಳು ಏರುತ್ತ ನಡೆದಿರುವ ಒಂದು ಹಿನ್ನೆಲೆಯಲ್ಲಿ ಈ ಕಾರ್ಖಾನೆಯು ಟೆಲಿಪ್ರಿಂಟರುಗಳ ಮಾರಾಟದ ಬೆಲೆಯನ್ನು ಕಡಿಮೆ ಮಾಡುತ್ತ ನಡೆದಿದೆ. ಇದು ಕಾರ್ಖಾನೆಯ ಗಮನಾರ್ಹ ಸಾಧನೆಗಳಲ್ಲೊಂದು.

ಟೆಲಿಪ್ರಿಂಟರ್ ಕಾರ್ಖಾನೆ ರಫ್ತು ಮಾರುಕಟ್ಟೆಯನ್ನು ಪ್ರವೇಶಿಸಿದೆ. ಈ ಕಂಪನಿಯು 1968—69ರಲ್ಲಿ 2.4 ಲಕ್ಷ ರೂಗಳಷ್ಟು ಮತ್ತು 1969—70ರಲ್ಲಿ 4.7 ಲಕ್ಷ ರೂ. ಗಳಷ್ಟು ರಫ್ತು ವ್ಯಾಪಾರವನ್ನು ಮಾಡಿದೆ. 1969-70ರಲ್ಲಿ 48 ಲಕ್ಷ ರೂ. ಗಳಷ್ಟು ಬೆಲೆಯ ಟೆಲಿಪ್ರಿಂಟರುಗಳ ರಫ್ತಿಗಾಗಿ ಬೇಡಿಕೆ ಬಂದಿದ್ದಿತು. ಕಂಪನಿಯು ರಫ್ತು ಅಭಿವೃದ್ಧಿಗಾಗಿ ನಡೆಸಿದ ಯತ್ನಗಳಿಂದಾಗಿ ರಫ್ತು ವ್ಯಾಪಾರದ ದರದಲ್ಲಿ ಹೆಚ್ಚಳವಾಗಿದೆ. ಅರಬ್ ರಾಷ್ಟ್ರಗಳಿಗಾಗಿ ಅರಬ್ ಲಿಪಿಯ ಟೆಲಿಪ್ರಿಂಟರುಗಳನ್ನು ಇರಾಕಗಾಗಿ ಪರ್ಶಿಯನ್ ಲಿಪಿಯ ಟೆಲಿಪ್ರಿಂಟರುಗಳನ್ನು ತಯಾರಿಸಿರುವುದು ಈ ಸಂಸ್ಥೆಯ ಇನ್ನೊಂದು ಸಾಧನೆಯಾಗಿದೆ. ಕುವೈತದಿಂದ 26.5 ಲಕ್ಷ ರೂ. ಬೆಲೆಯ ಟೆಲಿಪ್ರಿಂಟರುಗಳಿಗಾಗಿ ಬೇಡಿಕೆ ಬಂದಿದೆ. ಇರಾಕಿನ ರೈಲ್ವೆಗಳೂ 20 ಲಕ್ಷ ರೂ. ಬೆಲೆಯ ಟೆಲಿಪ್ರಿಂಟರ ಯಂತ್ರಗಳಿಗಾಗಿ ಬೇಡಿಕೆಯನ್ನು ಸಲ್ಲಿಸಿವೆ.

ವಿಶ್ವ ಮಟ್ಟದಲ್ಲಿ ಕರೆಯಲಾದ ಟೆಂಡರುಗಳಲ್ಲಿ ಅಂತರಾಷ್ಟ್ರೀಯ ಮಟ್ಟದ ಸ್ಪರ್ಧೆಯನ್ನು ಎದುರಿಸಿ ಕಾರ್ಖಾನೆಯು ಇರಾನ್ ಮತ್ತು ಕುವೈತ್ ದೇಶಗಳಿಂದ ಬೇಡಿಕೆಗಳನ್ನು ಪಡೆದಿರುವುದು ಅಭಿಮಾನ ಪಡತಕ್ಕದಾದ ಸಂಗತಿ. ಮುಂಬರುವ ವರುಷಗಳಲ್ಲಿ ಅಧಿಕ ಪ್ರಮಾಣದಲ್ಲಿ ಟೆಲಿಪ್ರಿಂಟರುಗಳನ್ನು ರಫ್ತು ಮಾಡುವ ಉದ್ದೇಶವನ್ನು ಇಟ್ಟುಕೊಂಡಿದೆ.

ವಾಗದೆ ಹೋದರೆ, ಮರವೆಲ್ಲಿ, ಹೂವೆಲ್ಲಿ, ಹಣ್ಣೆಲ್ಲಿ? ಒಂದೊಂದು ದೊಡ್ಡ ಕೆಲಸಕ್ಕೆ ಒಂದಲ್ಲ ಒಂದು ಪಂಚಾಂಗ ಬೇಕು; ಪಂಚಾಂಗವಾಗಲೂ ಬೇಕು. ಅದು ಪ್ರೇಕ್ಷಕ ನದ ಪರವಾಗ ರಿಯಾಗಿರಲೂ ಬೇಕು. ಇದು ಸೃಷ್ಟಿಕ್ರಮ ಇದಕ್ಕೆ ತಪ್ಪಿದರೆ ಸೃಷ್ಟಿ ಹೇಗೆ ಮುಂದುವರಿದೀತು?"

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾರ್ಟಿಯವರ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

I. A. 1 ಮತ್ತು 3 in M.A. 6/69

M. K. ದೇವರಾಜ್ — ಅಪ್ಪೆಲೆಂಟ

ಮತ್ತು

1. ಚೆನ್ನಮ್ಮ ಹೆಂಗಸು, 2. ಶಿಕಾರಿ ಶೆಟ್ಟಿ, 3. ಮೋನಮ್ಮ, 4. ಮಹಾಬಲ, 5. ಗುಲಾಬಿ, 6. ಸರೋಜ, 7. ಬೇಬಿ (ಮೈನರ್) ಗಾರ್ಡಿಯನ್ ತಾಯಿ 1ನೆ ಚೆನ್ನಮ್ಮ ಹೆಂಗಸು —1ನೆಯವಳು ಸಿದ್ದು ಸೆಟ್ಟಿ ಹೆಂಡತಿ 2ರಿಂದ 7ನೆಯವರು ಸಿದ್ದು ಸೆಟ್ರ ಮಕ್ಕಳು—ಎದ್ರುರು. ಕಾರ್ಕಳ ತಾಲ್ಲೂಕು ಕಾರಂಜೆ ಗ್ರಾಮದ ಎಲಿಯೂರು ಅಟ್ಟೆಬೆಟ್ಟು ಎಂಬಲ್ಲಿ ಇರುವವರು

ಯಿವರೊಳಗೆ

ಶ್ರೀ M.K. ದೇವರಾಜ್, ಎಪೆಲೆಂಟ್-ರಿಸ್ಪೊಂಡೆಂಟ್ 2 to 7ನೆ ಎದ್ರುರಂತೆ, 1ನೆ ಎದ್ರುರ ಗಂಡ ಸಿದ್ದು ಸೆಟ್ಟಿ ಮೇಲೆ ಮಾಡಿದ ಮೋಕದ್ದಮೆ ಅಪ್ಪೀಲಿನಲ್ಲಿ ಸದ್ರಿ ಸಿದ್ದು ಸೆಟ್ಟಿ ವ್ಯಾಪಕ ಕಾರಣ ಅವರ ವಾರಿಸದಾರರಾಗಿ ಎದ್ರುರನ್ನು ಸೇರಿಸಿ ಎರಡು ಸಾರಿ ನೋಟೀಸು ಮಾಡಿಸಿದರೂ ಸಿಕ್ಕದೆ ಎದ್ರುರಿಗೆ ಅಲ್ಲಿ ವಾಸಸ್ಥಾನವೇ ಇಲ್ಲ ಎಂತ ನೋಟೀಸ್ ವಾಪಾಸು ಬಂದದ್ರಿಂದ ಸದ್ರಿಯವರ ನೋಟೀಸಿನ ಬಗ್ಗೆ ಈಗ ತಾ. 19-1-1971ಕ್ಕೆ ಮುಟ್ಟಿದೆ ಎಂಬದಾಗಿ ಈ ಮೂಲಕ ಪ್ರಕಟಿಸಿ ತಿಳಿಸಿಯದೆ. ಅಪ್ಪೀಲಿನಲ್ಲಿ ಎದ್ರುರುಗಳಂತಾದಿದ್ದರೆ ಸದ್ರಿ ದಿವಸ ಈ ಕೋರ್ಟು ಮುಂದೆ ಬೆಳಿಗ್ಗೆ 11 ಗಂಟೆಗೆ ಹಾಜ್ರಾಗಿ ಆಕ್ಷೇಪ ಮಾಡತಕ್ಕದ್ದು. ಇಲ್ಲವಾದ್ರೆ ಅಪ್ಪೀಲು ಏಕಪಕ್ಷವಾಗಿ ತೀರ್ಮಾನಿಸಲಾಗುವದು.

(ಕೋರ್ಟು ಹುಕುಂ ಪ್ರಕಾರ)

B. Yogishwara Holla
Advocate for Appellant

Udipi, 19—12—70.

ದಯಮಾಡಿ
ನಿಮ್ಮ ಬಾಕಿ ಚಂದಾ
ಹಣವನ್ನು ಕಳುಹಿಸಿರಿ

ಕಾಸರಗೋಡಿನ 'ತಳಂಗೆರೆ'ಯ ಕನ್ನಡ ಶಾಸನ

(ಐದನೇ ಪುಟದಿಂದ)

ದು.) ಅಲ್ಲಿ ಪ್ರವಾಹವನ್ನು ನೆರೆಯುಟ್ಟು ದರಿಂದ ಅದನ್ನು ಕುರುಕ್ಷೇತ್ರವಾಗಿಸಲಾಯಿತು. (ಗುಡ್ಡೆಗೂ ಬಳಿ ಜರಿಕೆಯಲ್ಲಿ ತುಂಬ ನೀರ ನೆರೆಯಿರುವುದು). ಅಲ್ಲಿಗೆ ಅಗಳು (ರಕ್ಷಣೆ ರಕ್ಷೆಗೆಂದು ಭದ್ರವಾದ—ಎತ್ತರದ ಆಗರ.) ಹಾಕುವುದಂಟು. ಭೂದಾನವನ್ನು 'ಕನ್ಯಾದಾನ'ವಾಗಿ ಕೊಟ್ಟನೆಂಬುದು ಇಲ್ಲಿ ಕಾವ್ಯರೀತಿಯ ನವಸೃಷ್ಟಿಯ ಶಬ್ದರೂಪಕವಾಗಿದೆ. ನಾವು ಈ ಮೊದಲೆಂದ ಅರ್ಥವೇ ಇಲ್ಲಿಗೆ ಹೊಂದಿಕೆಯಾಗುತ್ತದೆ. 'ಓಡಿಲು' ಎಂದರೆ, ಆನೆವಣ್ಣನ ಹಂಚು' ಹೀಗೆ ತುಳುವರಲ್ಲಿ ಹೆಚ್ಚು ಹೇಳುವುದು! "ಒವಳು" ಒವರು (ಉಬಾರ) ಎಂದು ಈಗ ರೂಪಾಂತರವಾಗಿದೆ!

(೨) ಎಂತಹ ತಪ್ಪನ್ನಾದರೂ ಮಾಡಿ ಬಂದವರನ್ನು ಮೂರು ದಿನ ಸರ್ವ ಪರಿಹಾರಂ ಕಾದು ಕಳಿಸವುದು ಈ ಊರ ವಿಶೇಷವಾಗಿತ್ತೆಂದು ತಿಳಿಯುತ್ತದೆ. ಅಳಿಯ ಸಂತಾನ ಕಟ್ಟಳೆಗನ್ನು ಇಲ್ಲಿ ಕೊನೆಯಲ್ಲಿ ಸೂಚಿಸಿದಂತಿದೆ. (ಟಿಪ್ಪಣಿ).

ಇಲ್ಲಿ ಆ ಮೊದಲು ಈ ದತ್ತಿಗೆ (ದಾನಕ್ಕೆ) ಅಡ್ಡಿ ಮಾಡುವವರ, ಹಾನಿ ಮಾಡುವವರ, ಬಗ್ಗೆ ಹೇಳಿದದು ಉಲ್ಲೇಖನೀಯ: 'ತನ್ನ ತಾಯ ಕೊಲೆ ನೆನ್ದು ತನ್ನ ತನ್ದೆಯ ಕೊಂದು ತನ್ನ ಮಕ್ಕಳ ನೆತ್ತರು ಕುಡಿದು, ಪಶುವುಂ ಬಾರ್ಪ್ಪರುಮಂ ಕುರುಕ್ಷೇತ್ರದೊಳದಾತನ ಪೋಗುವ ನರಕಮಂ ಪುಗುವನಕ್ಕೆ' ಎಂಬಲ್ಲಿ, ತಾಯನ್ನು ಕೊಲಲು (ಕಾಪಾಡಳು) ತಂದೆ—ಮಕ್ಕಳ ಹತ್ಯೆ ಸರಿಯಲ್ಲೆಂಬ ವಿಚಾರ ಇಲ್ಲಿ ವಿಶೇಷತಃ ಸೂಚಿಸಲಾಗಿದೆ ಪಸು (ಗೋವು) ಮತ್ತು ಬ್ರಾಹ್ಮಣರನ್ನು ಕುರುಕ್ಷೇತ್ರದಲ್ಲಿ ಅಳಿವುದು ಪಾತಕವೆಂಬುದು ಇತರತ್ರ ಹೇಳಿದಂತಿದೆ. "ಅಳಿದಾತನ ಪುಗುವ" ಎಂಬಲ್ಲಿ 'ಪ್ರಥಮಾ' ವಿಭಕ್ತಿಯ ಬದಲು "ಷಷ್ಠಿ" ವಿಭಕ್ತಿ ಬಳಸಿದ್ದು ವ್ಯಾಕರಣ ಂಶವಾಗಿದೆ.ಶಾಸನವು ಹಾಳಾಗದಂತೆ ಈ ತೆರೆದ ವಾಚಕಗಳು ಹೆಚ್ಚಾಗಿವೆ ಅಂತೆ, 'ಈ ಕನ್ಯಾದಾನವಂ ಕೆಡಿಸ್ದ ತನಲ್ಪಾಯುಷ್ಯನುಂ ಅಪುತ್ರಿಕನುಂ ಅಪ್ಪನಕ್ಕೆ" ಎಂಬಲ್ಲಿ ನಿಸ್ಸಂತತಿಗೂ ಈ ಉಕ್ತಿಯು ಹಿಡೀಕೆಯಾಗಿದೆ. ದಾನಗಳನ್ನು ಕೆಡಿಸದ ಹಾಗೆ ಜನರಲ್ಲಿ ಇಂತಹ ಪಾಪಗಳ ಶಂಕೆಗಳು ತಡೆಯಾಗುತ್ತವೆ!

ಇನ್ನು ಬೇರೆಡೆ ಎಂತಹ ತಪ್ಪು ಮಾಡಿದರೂ ಆಶ್ರಯಕ್ಕಾಗಿ ಬಂದವರನ್ನು ಅದೆಲ್ಲಾ ಪರಿಹಾರಕವಾಗಿ 3ದಿನಕ್ಕೆ ಕಾದು ಕಳುಹವುದೆಂದರೆ, ಅಪರಾಧಿಯು 3ದಿನದಿಂದ ಹೆಚ್ಚು ಕಾಲದಲ್ಲಿ ದೊರೆಯದಿದ್ದರೆ ಪರಿಹಾರವಾಗುವುದೆಂಬ ಆಶಯದೊಂದಿಗೆ ಆ 3ದಿನದಲ್ಲಿ ಅದೇನೂ ತೊಂದರೆಯಾಗದಂತೆ ಕಾದು ಕಳಿಸುವುದೂ ಗಮನೀಯ! ಇದು ಈ ಊರ ವಿಶೇಷವಾಗಿತ್ತೆಂದು ತಿಳಿಯುತ್ತದೆ ಎಂಬುದು ಅನಗತ್ಯ! ಏನೆಂದರೆ, ಆಶ್ರಯವನ್ನು ಹೊಂದಿ (ಅಪೇಕ್ಷಿಸಿ) ಬಂದರೆ ಕಾಯುವುದು ರಾಜನಾದವನ ಕರ್ತವ್ಯ. ಅದನ್ನು ಊರವರು ಪಾಲಿಸಬೇಕೆಂದೇ ಈ ರಾಜಾಜ್ಞೆಯಾಗಿದೆ. "ಅತಿಥಿ"ಯಾದವನು 'ಭಗ್ನಾಶ'ನಾಗಿ ಮರಳಿದರೆ ಈತನ ಪುಣ್ಯವೆಲ್ಲಾ ಹೋಗಲಾಗುತ್ತದೆಯೆಂದು ಸಉಕ್ತಿಯಿದೆ. ಆ ಮೇರೆಗೆ, ಆಶ್ರಯಕ್ಕಾಗಿ ಬರುವಲ್ಲಿ ಧಿಕ್ಕರಿಸಬಾರದೆಂಬುದು ವಿಶಾಲ ಧರ್ಮಶಾಸ್ತ್ರದಲ್ಲಿ ರಾಜ ಧರ್ಮವಾಗಿದೆ! ಇದು ಸಾಮಾನ್ಯ ಪ್ರಜಾಧರ್ಮವಾಗಿ ಪರಿಗಣಿಸಿ, ಇಲ್ಲಿ ಬರೆಯಲಾಗಿದೆ.

ಇನ್ನು ಕಟ್ಟಕಡೆಯಲ್ಲಿರುವ ಒಂದು ವಿಶೇಷವೆಂಬುದು ಹಕ್ಕಿನ ಒಕ್ಕಣೆಯದು! ಈ ವಂಶಕ್ಕೆ ಜೋಗವ್ವೆಯ ವಂಶವೆಂಬ ಹೆಸರು ಹೇಳಿದೆ (ಇದರ ಮೂಲ-ವಿವರ ಇತರತ್ರ ಪರಿಶೋಧನೀಯಗಳ) ಈ ವಂಶದಲ್ಲಿ ಹೆಣ್ಮಕ್ಕಳಿಗೆ ಅಧಿಕಾರವದೆ,ಗಂಡು ಮಕ್ಕಳಿಗೆ ಅಧಿಕಾರ ಸಲ್ಲದ! ಪರಂತು, 'ಹೆಣ್ಣು ಮಕ್ಕಳಿಲ್ಲವಾದರೆ ಗಂಡು ಮಕ್ಕಳಿಗೆ ಅದು ಸಲ್ಲತಕ್ಕದ್ದು' ಎಂಬುದೂ ಇದೆ. "ಜಯಸಿಂಹಚರಿತೆ"ಯೆಂಬ ಖಂಡ ಕಾವ್ಯದಲ್ಲಿ (ಪೌರಾಣಿಕ ಕತೆಯ ಆಧಾರದಿಂದ ಉಡುಪಿಯ ದಿ| ಬಿ. ಶ್ರೀನಿವಾಸ ಭಟ್ಟರು ಸಂಸ್ಕೃತದಲ್ಲಿ ಬರೆದುದರಲ್ಲಿ) ಪ್ರವಾಸಿಯಾಗಿ ಬಂದ ರಾಜಪುತ್ರಿಯ ಬಾಧಾ ಪರಿಹಾರವಾದ ಮೇಲೆ ಇಲ್ಲಿಯೊಬ್ಬನಿಗೆ ಅವಳನ್ನು ಮದುವೆ ಮಾಡಿ ಆ ಸಂತತಿಗೆ ಇಲ್ಲಿಯ ಆಧಿಪತ್ಯವಾಯಿತೆಂಬುದ ಇಲ್ಲಿ ಸ್ಮರಣೀಯವು. ಆ ರಾಜನಿಗೆ ಒಬ್ಬಳೇ ಮಗಳಾದುದರಿಂದ ಈ ತರದ ಕನ್ಯಾಪುತ್ರಿಕಾ" ನ್ಯಾಯ ಪರಿಗ್ರಹಣೀಯವಾಗಿದೆ! (ಅರ್ಜುನನು ಮಣಿಪುರದಲ್ಲಿ ಚಿತ್ರಾಂಗದೆಯನ್ನು ವರಿಸೆ, ಅಪುತ್ರನಾದ ಆಕೆಯ ತಂದೆಯ ಆಶಯದಂತೆ ಆಕೆ ಮತ್ತು ಹುಟ್ಟಿದ ಮಗು ಅಲ್ಲೇ ಅರಮನೆಯಲ್ಲಿರುವಂತೆ ಒಪ್ಪಿದದು ಇಲ್ಲಿಗೆ ನೆನಪಿಸಬಹುದು!) ಅಳಿಯಸಂತಾನ ಕ್ರಮವು ಭೂತಾಳಪಾಂಡ್ಯನಿಂದ ಪ್ರಾರಂಭವಾಯಿತೆನ್ನುವರು. ಆದರೆ. ಅಶೋಕನ ಶಾಸನದ 'ಸಾತಿಯ ಪುತ್ರ'ರೆಂಬುದರ ಮೇರೆಗೆ ಆ ಕಾಲಕ್ಕೇ ಸ್ತ್ರೀಪ್ರಧಾನ ಸಂತತಿ ಕ್ರಮ (ಮಾತೃಕುಲ ಪದ್ಧತಿ) ಇತ್ತೆಂದು ಹೇಳಬಹುದಾಗಿದೆ. (ನನ್ನ 'ಸಾಹಿತ್ಯದ ಹಿನ್ನೆಲೆ'ಯಲ್ಲಿ ಈ ಬಗ್ಗೆ ಬರೆದಿದೆ). ಇಲ್ಲೂ ಆ ಕ್ರಮ ಹೇಳಿದೆ!

ಇತರ ವಿಚಾರಣೆಗಳು: ಶ್ರೀ ಮಧ್ವಾಚಾರ್ಯರನ್ನು ಭೆಟಿಯಾದ ಜಯಸಿಂಹನೆಂಬ ರಾಜನು (13ನೆ ಶತಕದವ) ಈ ರಾಜನ ವಂಶದವನೆಂಬುದಕ್ಕೆ ಸಂದೇಹವಿಲ್ಲ. (ಈತನ ವಂಶಚಿತ್ರ, ಸವಿಸ್ತಾರವಾಗಿ ದೊರೆತಿಲ್ಲ, ಆ ಮೇರೆಗೆ ಶ್ರೀ ಮಧ್ವಾಚಾರ್ಯರ ಸಮಕಾಲೀನ ಜಯಸಿಂಹನ ಬಗೆಗೆ ಇದುವರೆಗೆ ಸಸಂಶಯರಾಗಿ ವಿದ್ವಾಂಸರು ಬರೆಯುತ್ತಿದ್ದರು: ಶ್ರೀ ಗೋವಿಂದ ಪೈ, ಅವರ 'ಶ್ರೀ ಮಧ್ವಾಚಾರ್ಯರ ಕಾಲ ನಿರ್ಣಯ').

ಈ ಶಾಸನ ಹನ್ನೆರಡನೆಯ ಶತಕದ್ದೆಂದು ಹೇಳಲಾಗಿದೆ. ಕಾಸರಗೋಡು ತಾಲೂಕಿನಲ್ಲಿ ಆಗಲೂ ತುಳುವರೂ ಕನ್ನಡಿಗರೂ ತುಂಬಿದ್ದರೆಂದು ಇದರಿಂದ ತಿಳಿಯುತದೆ. ಈ ಶಾಸನದಲ್ಲಿ ಹೇಳಿದ "ಓಡಿಲು" 'ಒವಳು' ಇತ್ಯಾದಿಗಳು ತುಳುವರಲ್ಲಿ ಈಗಲೂ ರೂಪಾಂತರವಾಗಿ ಬಳಕೆಯಲ್ಲಿವೆ. "ಅಳಿಯಸಂತಾನ" ಕ್ರಮವಾದರೋ ದ್ರಾವಿಡರಲ್ಲಿ ಬಳಕೆಯಿದ್ದ ರೀತಿಯಾದರೂ, ಇದೀಗ ತುಳುವರಲ್ಲಿನ್ನೂ ಭೂತಾಳಪಾಂಡ್ಯನ ಹೆಸರಿನಲ್ಲಿ ಪ್ರಸಿದ್ಧವಾಗಿ ಬಲವಾಗುತ್ತಿರುವುದೇ ಆಗಿರುತ್ತದೆ. ಇದರ ಪ್ರಾಚೀನತೆ ಅಶೋಕ ರಾಜ ಹಾಗೂ ವ್ಯಾಸ ಭಾರತ ಕಾಲದಿಂದಲೆ ತಿಳಿಯಬರುತ್ತದೆ. (ಸಭಾಪರ್ವ, ಭೀಷ್ಮಪರ್ವಗಳಲ್ಲಿ. ದೇಶವಾಚಕಗಳಲ್ಲಿ 'ಸತೀನರಾಃ' 'ಸತಿಯಾ' ಎಂದಿದೆ!) ಈ ಅಳಿಯಸಂತಾನ ಕ್ರಮವು ಜನನ-ಮರಣಗಳ ಆಶೌಚ ಹಾಗೂ ಆಸ್ತಿಯ ಹಕ್ಕುದಾರಿಕೆಗಳಲ್ಲಿ ಸ್ಪುಟವಾಗಿದೆ! ಕಾಸರಗೋಡು ಕನ್ನಡದ ಅವಿಭಾಜ್ಯ ಪ್ರದೇಶವೆಂದು ಇದರಿಂದ ಸುಸ್ಪಷ್ಟವದೆ! ಈ ವಿಚಾರಕ್ಕೆ ಮುಂದಾಳುಗಳು ಈಗಾದರೂ ತುಸ ಬೆಂಬಲಿಸಬೇಕಾಗಿದೆ!

ವಿ. ಸೂ. ಈ ಶಾಸನದಲ್ಲಿ ಹೇಳಿದ — ನಾನು ಇಲ್ಲಿ ಮೊದಲಾಗಿ ವಿವರಿಸಿದ "ಕನ್ಯಾದಾನ' ಮತ್ತು ಈ ಶಾಸನದ ಕೊನೆಯ 'ಅಳಿಯಸಂತಾನ' ಕ್ರಮದ ಬಗೆಗೆ ಮಂಗಳೂರ ಶ್ರೀ ಮುಕುಂದ ಪ್ರಭುಗಳು ನನಗೆ ತಿಳಿಸಿದ ವಿಚಾರವಿಲ್ಲದೆ: "ಕನ್ಯಾದಾನ" ಆತನು ಹೆಂಡತಿಗೆ ಕೊಟ್ಟದ್ದು ಮಾತ್ರವಲ್ಲ, ಜೋಗವ್ವೆಗೆ ರಾಣಿ ಕೊಟ್ಟಾಗಲೂ ಅದು ಅವಳ ಹೆಣ್ಣು ಸಂತತಿಗೇ ಸಲ್ಲಬೇಕೆಂದು ಕೇಳಿದ್ದು, ಹೆಣ್ಣು ಸಂತತಿಯಿಲ್ಲದಲ್ಲಿ ಮಾತ್ರ ಗಂಡಿಗೆ ಸಲ್ಲಬೇಕೆಂದೂ ಹೇಳಿದೆ ಎಂದು ನನ್ನ ನೆನಪು, ಅಲ್ಲದೆ, ಅದರ ಕೊನೆಗೆ ಈ ಕಟ್ಟಳೆಯನ್ನು ಮೀರಿದವರು ಹೆಣ್ಣು ಸಂತತಿಯಿಲ್ಲದೆ ಹೋಗಲಿ ಎಂಬ ಆಶಯ ಬರುವ ಶಾಪವಾಕ್ಯವಿದೆ. ಸಾಮಾನ್ಯವಾಗಿ ಶಾಸನಗಳಲ್ಲಿ "ಗಂಡು ಸಂತತಿ ಇಲ್ಲದೆ ಹೋಗಲಿ" ಎನ್ನುವ ಒಕ್ಕಣೆ ಬರುತ್ತದೆ. ಇದರಲ್ಲಿ ಹೆಣ್ಣು ಸಂತತಿಗೆ ಪ್ರಾಧಾನ್ಯ ಕೊಟ್ಟಿರುವುದನ್ನು ನೋಡುವಾಗ ಇಲ್ಲಿಯು "ಅಳಿಯಸಂತಾನ"ದ ಪ್ರಧಾನತೆಯನ್ನು ಕಾಣಬಹುದೆಂದು ನನಗೆ ತೋರುತ್ತದೆ.

(ಶ್ರೀ ಗೋವಿಂದ ಪೈಗಳ ಪ್ರಯೋಗವಾದ "ಕನ್ಯಾಕವಿತೆ"ಯ ಬಗೆಗೆ ಹೀಗೆ ಅರಿಯುವಿರು:) "ಕನ್ಯಾಕವಿತೆ" ಎಂಬಲ್ಲಿ ಶ್ರೀ ಗೋವಿಂದ ಪೈಗಳು ಇಂಗ್ಲೀಷಿನ Mailan Poem(= ಮೊದಲನೆಯದೆಂದೇ ಅರ್ಥ) ಎಂಬ ಪ್ರಯೋಗವನ್ನು ಕನ್ನಡದಲ್ಲಿ ಬಳಸಿದ್ದಾರೆ. ಅಷ್ಟೇ. ಪ್ರಪ್ರಥಮ ಪ್ರಯತ್ನಕ್ಕೆ ಇಂಗ್ಲೀಷಿನಲ್ಲಿ ಈ ಶಬ್ದದ ಪ್ರಯೋಗವಿದೆ. ಹೀಗೆ ಮೊದಲ ಬಾರಿಗೆ ಪ್ರಕಟವಾಗುವಲ್ಲಿ ಆ ಕವಿತೆಗೆ "ಕನ್ಯಾಕವಿತೆ" ಎಂದು ಹೆಸರಿಸಿದರೇ ಏನೋ, ಸಂಸ್ಕೃತದಲ್ಲಾಗಲೀ ಕನ್ನಡದಲ್ಲಾಗಲೀ ಅನ್ಯತ್ರ "ಕನ್ಯಾ" ಪ್ರಯೋಗ ಈ ಅರ್ಥದಲ್ಲಿ ಆಗಿದೆಯೋ ನೋಡಬೇಕು—ನನ್ನ ನೆನಪಿನಲ್ಲಿ ಇಲ್ಲ.

ಇಂಗ್ಲೀಷಿನಲ್ಲಿ ಇನ್ನೊಂದು ಪ್ರಯೋಗ Virgin (=ಕನ್ಯಾ), ಇದನ್ನು 'ವರ್ಜಿನ್' ಕಾಡ. (ಈ ಮೊದಲು ಕಡಿಯಲ್ಪಡದ ಮರಗಳುಳ್ಳ) ಇತ್ಯಾದಿ ಇದೆ.

[ಈ ವಿಚಾರ ತಿಳಿಸಿದ ಬಗೆಗೆ ಶ್ರೀಯುತರಿಗೆ ನಾನು ಆಭಾರಿ, ಈ ಬಗೆಗೆ ಸೂಕ್ತವಾದ ವಿಚಾರ ಸಂಶೋಧನೆ ನಡೆಯಬೇಕಾಗಿದೆ.]

—ಶ್ರೀ ಕೆ. ವೆಂಕಟರಾಯಾಚಾರ್ಯ ಸುರತ್ಕಲ್ಲು.

Gram: VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous ser[illegible]ce.
Attached bath rooms with running hot and col[illegible] water.
Telephone attached rooms.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

I. A. 1 ಮತ್ತು 3 in M.A. 20/69

M. K. ದೇವರಾಜ್ — ಅಪ್ಪೆಲಾಂಟು

ಮತ್ತು

1. ಚಿನ್ನಮ್ಮ ಹೆಂಗಸು, 2. ವಿಠಲ ಸೆಟ್ಟಿ, 3. ಮೋನಮ್ಮ, 4. ಮಹಾಬಲ, 5. ಗುಲಾಬಿ, 6. ಸರೋಜ, 7. ಬೇಬಿ (ಮೈನರ್) ಗಾರ್ಡಿಯನ್ ತಾಯಿ 1ನೆ ಚಿನ್ನಮ್ಮ ಹೆಂಗಸು —1ನೆಯವಳು ಸಿದ್ದು ಸೆಟ್ರ ಹೆಂಡತಿ 2 to 7ನೆಯವರು ಸಿದ್ದು ಸೆಟ್ರ ಮಕ್ಕಳು—ಎದುರ್ರು.

ಕಾರ್ಕಳ ತಾಲ್ಲೂಕು ಶಾರಂಜೆ ಗ್ರಾಮದ ಎಲಿಯೂ ಅರೆಗ್ಲಟ್ಟು ಎಂಬಲ್ಲಿ ಇರುವವರು ಯಾವರೊಳಗೆ

ಶ್ರೀ M.K. ದೇವರಾಜ್, ಎಡವಕೇಟ್‌-ರಿಸ್ಪಾಂಡೆಂಟ್ 2 ರಿಂದ 7ನೆ ಎದ್ರುರ ತಂದೆ, 1ನೆ ಎದ್ರುರ ಗಂಡ ಸಿದ್ದು ಸೆಟ್ರ ಮೇಲೆ ಮಾಡಿದ ಮೇಲ್ಮಂಡ ಅಪ್ಪೀಲಿನಲ್ಲಿ ಸದ್ರಿ ಸಿದ್ದು ಸೆಟ್ಟಿ ಮೃತಪಟ್ಟ ಕಾರಣ ಅವರ ವಾರೀಸುದಾರರಾಗಿ ಎದ್ರುರನ್ನು ಸೇರಿಸಿ ಎರಡು ಸಾರಿ ನೋಟೀಸು ಮಾಡಿಸಿದರೂ ಸಿಕ್ಕದ ಎದ್ರುರಿಗೆ ಅಲ್ಲಿ ವಾಸ ಮಾಡುವವರೇ ಇಲ್ಲ ಎಂತ ನೋಟೀಸ್ ವಾಪಾಸು ಬಂದದ್ದರಿಂದ ಸದ್ರಿಯವರ ನೋಟೀಸಿನ ಬಗ್ಗೆ ಈ ತಾ. 19-1-1971ಕ್ಕೆ ಇಟ್ಟದೆ ಎಂಬದಾಗಿ ಈ ಮೂಲಕ ಪ್ರಕಟಿಸಿ ತಿಳಿಸಿಯದೆ. ಅಪ್ಪೀಲಿನಲ್ಲಿ ಎದ್ರುರೆಂದು ಕಂಡಿದ್ದ ಸದ್ರಿ ದಿವಸ ಈ ಕೋರ್ಟಿನ ಮುಂದೆ ಬೆಳಗ್ಗೆ 11ಗಂಟೆಗೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ಇಲ್ಲವಾದ್ರೆ ಅಪ್ಪೀಲು ಏಕಪಕ್ಷವಾಗಿ ತೀರ್ಮಾನಿಸಲಾಗುವದು.

(ಕೋರ್ಟು ಹುಕುಂ ಪ್ರಕಾರ)

B. Yogishwara Holla
Advocate for Appellant
Udipi, 19—12—70.

ಕಡಲೆಕಾಳುಗಳು

ಮಹಾರಾಷ್ಟ್ರ—ಕರ್ನಾಟಕ—ಕೇರಳ ಗಡಿವಿವಾದವು ಅಸಾಧಾರಣ ಪರಿಸ್ಥಿತಿಯನ್ನೇ ಹೊಂದಿದುದರಿಂದ ಮಹಾಜನ ವರದಿಯನ್ನು ಸಂಸತ್ತಿನ ಮುಂದಿಡದೆ ಅನ್ಯ ಮಾರ್ಗವೇ ಪ್ರಧಾನಿ ಗಾಂಧಿಗೆ ಇರಲಿಲ್ಲವೆಂದು ಕೇಂದ್ರದ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವ ಕೆಂಗಲ್ ಹನುಮಂತಯ್ಯ ಪತ್ರಿಕಾಗೋಷ್ಠಿಯೊಂದರಲ್ಲಿ ಹೇಳಿದರು.

—ಇದುವರೆಗೆ ಇಂತಹ ವರದಿಯನ್ನು ಸಂಸತ್ತಿಗೆ ತಂದದ್ದಿಲ್ಲ; ಮಹಾಜನ ವರದಿಯನ್ನು ಮಾತ್ರ ಹಾಗೆ ಮಾಡದೆ ನಿರ್ವಾಹವೇ ಅಲ್ಲಿಗೆ ಉಳಿಯಲಿಲ್ಲವೆಂದವರು ಮುಂದುವರಿಸಿ ಹೇಳಿದರು.

—ಮಹಾಜನ ವರದಿಯ ಬಗ್ಗೆ ಕೇಂದ್ರ ಸಚಿವ ಸಂಪುಟದಲ್ಲೇ ಭಿನ್ನಾಭಿಪ್ರಾಯ ಮೂಡಿತ್ತು ಎಂದೂ ಹೇಳಿ ಅವರು ಪ್ರಧಾನಿಯ ಕೃತಿಯನ್ನು ಸಮರ್ಥಿಸಿದರು.

—ಕೆಂಗಲ್ಲರು ದೆಹಲಿಯಲ್ಲಿರುವುದಕ್ಕಿಂತ ಬೆಂಗಳೂರಲ್ಲಿಯೇ ಹೆಚ್ಚಾಗಿರುವುದಾದರೂ ಇಂತ ಸಮರ್ಥನೆಗೆ ಕಾವೆ?

—ಮುಂದಾದರೂ ಶ್ರೀಮತಿ ಗಾಂಧಿಯಲ್ಲಿ ವಿಶ್ವಾಸವಿಡಿ ಎಂದ ಕೆಂಗಲ್ ಪಾರ್ಲಿಮೆಂಟು ಒಂದು ವೇಳೆ ಕನ್ನಡಿಗರಿಗೆ ಅನ್ಯಾಯ ಮಾಡಿದರೆ, ಅದನ್ನು ಧಿಕ್ಕರಿಸಿ ಅಲ್ಲಿ ನ್ಯಾಯವೊದಗಿಸುತ್ತಾರೆಯೇ ಎಂಬುದನ್ನು ಹೇಳಲಿಲ್ಲ.

—ಸಂಸತ್ತಿನ ಪರಮೋಚ್ಚತೆಯನ್ನವರು ಮೊದಲೇ ಒಪ್ಪಿದ್ದಾರೆ. ಪ್ರಧಾನಿಯು ಪಾರ್ಲಿಮೆಂಟಿಗೂ ಉಚ್ಚ ಎಂಬುದನ್ನು ಅವರು ಬಹಿರಂಗವಾಗಿ ಹೇಳಲಿಲ್ಲ.

○ ○ ○

ಕಾಸರಗೋಡು ರಾಜಿನಾಮೆಯಿಂದ ಮಹಾಜನ ವರದಿ ಕಾರ್ಯರೂಪಕ್ಕೆ ಬರುವುದು ಸಾಧ್ಯವಿಲ್ಲ. ವರದಿಯನ್ನು ಅಕ್ಷರಶಃ ಕಾರ್ಯರೂಪಕ್ಕೆ ತರಲಾಗುವ ಬಗ್ಗೆ ಲಿಖಿತ ಭರವಸೆ ತಂದರೆ, ಮರುಕ್ಷಣವೇ ತಾವು ರಾಜಿನಾಮೆ ನೀಡುವುದಾಗಿ ಮುಖ್ಯಮಂತ್ರಿ ಪಾಟೀಲರು ಆಹ್ವಾನ ನೀಡಿದರು.

—ಭರವಸೆ ನೀಡುವವರಾರ? ಪ್ರಧಾನಿ ಅಸಹಾಯಕರು; ಸಂಸತ್ತಿನಿಂದ ಅವರು ವರದಿಯನ್ನು ಹಿಂದೆಗೆಯುವುದು ಅಸಾಧ್ಯ.

—ತಾನು ಅಧಿಕಾರದಲ್ಲಿರುವವರೆಗೆ ಬೆಳಗಾಂವಿಯನ್ನು ಕೈಬಿಡಲಾರೆ ಎಂದಿದ್ದರು ಪಾಟೀಲರು.

—ಬೆಳಗಾಂವಿ ಕರ್ನಾಟಕಕ್ಕೆ ಸಿಕ್ಕರೂ ಸಿಗದೆಹೋದರೂ ಅವರು ರಾಜಿನಾಮೆ ಕೊಡಬೇಕೆ?

—ಅಂದರೆ, ಮಹಾಜನ ಆಯೋಗದ ಇತ್ಯರ್ಥವಾದೊಡನೆಯೇ ಪಾಟೀಲರ ಇತಿಶ್ರೀಯೂ ಆಗಬೇಕೆ?

○ ○ ○

ಮಧ್ಯಂತರ ಚುನಾವಣೆ ನಡೆಸಲು ಇಂಡಿಕೇಟ್ ಕಾರ್ಯಕಾರಿಣಿ ಒಪ್ಪಿಗೆ ನೀಡಿತು. ಬೇರೇ ಬೇಡವೇ ಎಂಬುದನ್ನು ಸರಕಾರ ನಿರ್ಧರಿಸಬೇಕು ಎಂದಿತು.

ಸರಕಾರ ಅಂದರೆ ಯಾರು?

—ಪ್ರಧಾನಿ ಗಾಂಧಿ ತಾನೆ?

—ಅಂದರೆ, ಪ್ರಧಾನಿ ಗಾಂಧಿ ಬಯಸಿದರೆ ಮಾತ್ರ ಮಧ್ಯಾವಧಿ ಚುನಾವಣೆ, ಇಲ್ಲವಾದರೆ ಇಲ್ಲ.

—ಅಂದರೆ, ಪ್ರಧಾನಿಗೆ ಸಲಹೆ ನೀಡಿ ಅದನ್ನು ಕಾರ್ಯರೂಪಕ್ಕೆ ತರುವ ಶಕ್ತಿ ಪಕ್ಷದ ಕಾರ್ಯಕಾರಿಣಿಗೆ ಇಲ್ಲವೆಂದಾಯ್ತು.

—ಅಂದರೆ, ಪ್ರಧಾನಿ ಗಾಂಧಿಗೇನನಿಸುತ್ತದೋ ಅದನ್ನು ಮಾಡಲು ಆಕೆಗೆ ಪೂರ್ಣ ಸ್ವಾತಂತ್ರ್ಯ.

—ಅರ್ಥ ಆಕೆ ಸರ್ವಾಧಿಕಾರಿ.

—ಒಂದೂವರೆ ವರ್ಷಗಳಿಗೆ ಮೊದಲು ಆಕೆಯ ಸರ್ವಾಧಿಕಾರವನ್ನು ಕೆಲವರು ಒಪ್ಪದ್ದರಿಂದಲೇ ಕಾಂಗ್ರೆಸ್ ಹೋಳಾಯಿತು.

—ಶ್ರೀಮತಿ ಗಾಂಧಿಗೆ ಪ್ರಧಾನಿಪಟ್ಟ—ಆಕೆಯ ಸರ್ವಾಧಿಕಾರ—ಅಧಿಕಾರ ಲೋಲುಪರ ಪರದಾಟ—ರಾಣಿ ನೊಣವನ್ನು ಸುತ್ತುವರಿವ ಜೇನು ನೊಣಗಳಂತೆ ಇಂದಿರೆಯ ಸುತ್ತು ಇಂಡಿಕೇಟಿಗರು ಸುತ್ತುವರಿದರು.

—ಆದರೆ, ಪ್ರಧಾನಿಯವರು ಸಂಸತ್ತನ್ನು ವಿಸರ್ಜಿಸುವುದು ಮಾತ್ರವಲ್ಲ; ಸಂವಿಧಾನವನ್ನೇ ಬುಡಮೇಲು ಮಾಡಲು ಹೊಂಚು ಹಾಕುತ್ತಿದ್ದಾರೆ.

ರೋಟರಿ ಸಮ್ಮೇಳನದ ಉದ್ಘಾಟನೆ

ತಾ. 25ರಂದು ರೋಟರಿ ಇಂಟರ್‌ನ್ಯಾಶನಲ್ 318ನೇ ಜಿಲ್ಲಾ ಸಮ್ಮೇಳನವನ್ನು ಪೇಜಾವರ ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿಯವರು ಉದ್ಘಾಟಿಸುತ್ತಾ, ರೋಟರಿ ತತ್ವಗಳಾದ ನ್ಯಾಯ, ಹಿತ ಮತ್ತು ಸೌಹಾರ್ದಗಳೇ ಶ್ರೀಕೃಷ್ಣನ ತತ್ವಗಳೆಂದರು.

ಕಲ್ಕತ್ತದ ಮಾಜಿ ರೋಟರಿ ಗವರ್ನರ್ ಶ್ರೀ ಸರಳ್‌ದೇವ್ ಮಾತನಾಡುತ್ತಾ, ಭಾರತೀಯ ಸಮಾಜದಲ್ಲಿ ಪೀಳಿಗೆ ಅಂತರ ವಿಶಾಲವಾಗಿದ್ದು, ದೇಶದಾದ್ಯಂತ ಯುವಜನರಲ್ಲಿ ಅಶಾಂತಿ ಕಾಣಿಸಿಕೊಂಡಿದೆ. ಈ ಸಂದರ್ಭದಲ್ಲಿ ಹಿರಿಯರು, ಚಿಂತಕ ಪೀಳಿಗೆ ಅಂತರವನ್ನು ಹತ್ತಿರ ತರಬೇಕು ಎಂದರು. ಮುಂದುವರಿಸಿ ವ್ಯಕ್ತಿಗಳು ಒಂದೆಡೆ ಕಲೆತು ಪರಸ್ಪರ ಚರ್ಚಿಸಿ ಸಮಸ್ಯೆಗಳ ನಿವಾರಣೆಗೆ, ಮಾನವೀಯ ಸೇವೆಗೆ ದಾರಿ ಹುಡುಕುವುದಕ್ಕೆ ರೋಟರಿ ಅವಕಾಶ ನೀಡುತ್ತ ಬಂದಿದೆ. ಸಾಮಾಜಿಕ, ಆರ್ಥಿಕ, ಆರೋಗ್ಯ ಹಾಗೂ ಮತ್ತಿತರ ಸಮಸ್ಯೆಗಳ ಕಡೆಗೆ ರೋಟರಿ ಇನ್ನೂ ಹೆಚ್ಚು ಗಮನ ನೀಡಬೇಕು ಎಂದೂ ಸಲಹೆ ನೀಡಿದರು.

ಸಮ್ಮೇಳನದ ಅಧ್ಯಕ್ಷ ಪ್ರೊ| ವಿ. ಚಂದ್ರಶೇಖರ್, ನಗರಸಭಾಪತಿ ಡಾ| ವಿ. ಎಸ್. ಆಚಾರ್ಯ, ಮಣಿಪಾಲ ರೋಟರಿ ಕ್ಲಬ್ ಸ್ಥಾಪಕ ಡಾ| ಟಿ. ಮಾಧವ ಪೈ, ಅವರು ಸ್ವಾಗತಿಸಿದರು. ರೋಟರಿ ಜಿಲ್ಲಾ ಗವರ್ನರ್ ಶ್ರೀ ರಮೇಶ ಪೈ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಆತಿಥೇಯ ಕ್ಲಬ್ಬಿನ ಅಧ್ಯಕ್ಷ ಶ್ರೀ ಪಿ. ಎಸ್. ಆಚಾರ್ಯ ವಂದನಾರ್ಪಣೆಗೈದರು. ಆರಂಭದಲ್ಲಿ ನಡೆದ ಮೆರವಣಿಗೆ ವೈಭವಪೂರ್ಣವಾಗಿತ್ತು.

ತುಳು ಚಿತ್ರದ ಚಿತ್ರೀಕರಣಾರಂಭ

ಮಲ್ಪೆ, ದ. 24, ಶ್ರೀ ಎಂ. ವಧ್ವರಾಜರ ಭವ್ಯ ನಿವಾಸ—"ಸ್ವಾಗತಮ್" ನಲ್ಲಿ ಮಂಗಳೂರಿನ ಶರಾವ್ ಪಿಕ್ಚರ್ಸ್ ಅವರ "ದಾರೆದ ಬುಡೆದಿ" ತುಳು ಚಿತ್ರದ ಚಿತ್ರೀಕರಣದ ಪ್ರಾರಂಭೋತ್ಸವವನ್ನು ಶ್ರೀ ಎಂ. ವಧ್ವರಾಜರು ನೆರವೇರಿಸಿ ಸಹಕಾರ, ಶುಭಕೋರಿದರು.

ಮುಖ್ಯ ಅತಿಥಿಗಳಾದ ಡಾ| ಟಿ. ಎಂ. ಎ. ಪೈಯವರು ಮಾತನಾಡುತ್ತಾ, ತುಳು ಸಂಸ್ಕೃತಿ ಹಾಗೂ ತುಳು ಜನ ಜೀವನವನ್ನು ಪ್ರತಿಬಿಂಬಿಸುವಂತಹ ತುಳು ಚಿತ್ರಗಳು ಬರಲೆಂದೂ ಹಾರೈಸುತ್ತಾ, ಶ್ರೀ ವಧ್ವರಾಜರಂತಹ ಸಾರ್ವಜನಿಕರ ಪ್ರೋತ್ಸಾಹ...



ಮುಕಳ ನೆರವಿನಿಂದ ಈ ರಂಗದಲ್ಲೂ ಸಾಧನೆ ನಡೆಸಲಿ ಎಂದೂ ಹಾರೈಸಿದರು.

ಕರಾವಳಿ ಪಿಕ್ಚರ್ಸ್‌ನ ಶ್ರೀ ಕೆ. ಎನ್. ಟೈಲರ್ ಮಾತನಾಡುತ್ತಾ, ತುಳು ಭಾಷೆಯಲ್ಲಿ ಚಿತ್ರ ಬರಬೇಕೆಂಬುದೇ ತಮ್ಮ ಆಶಯವೆಂದೂ ಇದರಲ್ಲಿ ಲಾಭ ನಷ್ಟದ ಪ್ರಶ್ನೆ ಇಲ್ಲವೆಂದೂ ತಿಳಿಸಿ ಸಹಕಾರ ಕೋರಿದರು.

ಸಂಪೂರ್ಣವಾಗಿ ಸ್ಟುಡಿಯೋದ ನೆರವಿಲ್ಲದೆಯೇ ಚಿತ್ರಣವಾಗುತ್ತಿರುವ ಈ ಚಿತ್ರದಲ್ಲಿ ಲೀಲಾವತಿ, ವಿಜಯ ಕಲಾ, ಶಶಿಕಲಾ, ಸುಜಾತಾ, ಕೆ. ಎನ್. ಟೈಲರ್, ಸೋಮಶೇಖರ, ಕೆ. ಜೆ. ರಾಜ್ ಮೊದಲಾದವರು ಅಭಿನಯಿಸುತ್ತಿದ್ದಾರೆ.

ಭವಾನಿ ಶಂಕರ್ ಅವರ ಕಥೆ, ಕೆ. ಎನ್. ಟೈಲರ್‌ರ ಸಂಭಾಷಣೆ, ರಾಜನ್, ನಾಗೇಂದ್ರರ ಸಂಗೀತವನ್ನೊಳಗೊಂಡ ಈ ಚಿತ್ರವನ್ನು ಪ್ರಶಸ್ತಿ ವಿಜೇತ ನಿರ್ದೇಶಕ ಆರೂರು ಪಟ್ಟಾಭಿಯವರು ನಿರ್ದೇಶಿಸುತ್ತಿದ್ದಾರೆ. ಚಿತ್ರವು ಫೆಬ್ರವರಿಯಲ್ಲಿ ಬಿಡುಗಡೆಯಾಗುವ ನಿರೀಕ್ಷೆ ಇದೆ.

ಸೀತಾನದಿ ಜಾನುವಾರು ಜಾತ್ರೆ

ಸೀತಾನದಿ ತೀರದಲ್ಲಿ ನಡೆಯುತ್ತಿರುವ 84 ನೇ ಜಾನುವಾರು ಜಾತ್ರೆಯ ಅಂಗವಾಗಿ [illegible] ಜಾನುವಾರು ಪ್ರದರ್ಶನವನ್ನು ಏರ್ಪಡಿಸಲಾಗಿದ್ದು ಕಾರ್ಕಳ ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ ಎನ್. ಎಮ್. ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿ ಶ್ರೀ ಟಿ. ಜಿ. ರಾಮಕೃಷ್ಣನ್ ಉತ್ತಮ ಜಾನುವಾರುಗಳಿಗೆ ಬಹುಮಾನ ವಿತರಣೆ ಗೈದರು.

ಪ್ರಾರಂಭದಲ್ಲಿ ಹೆಬ್ರಿ ಪಂಚಾಯಿತು ಉಪಾಧ್ಯಕ್ಷ ಶ್ರೀ ಸುಭೋದ ಬಲ್ಲಾಳರು ಸ್ವಾಗತ ಭಾಷಣ ಮಾಡಿದರು. ಜಾನುವಾರು ಸಂತೆಯ ಸಲಹಾ ಸಮಿತಿಯ ಅಧ್ಯಕ್ಷ ಹಾಗೂ ಹೆಬ್ರಿ ಪಂಚಾಯಿತಿಗಳ ಅಧ್ಯಕ್ಷ ಶ್ರೀ ಬೇಲಂಜೆ ವಿಠ್ಠಲ ಶೆಟ್ಟಿ ಇವರು ಇದರಲ್ಲಿ ನಡೆಯುತ್ತಿರುವ ಕ್ರಮ ಹಾಗೂ ಪ್ರಗತಿಯನ್ನು ಶ್ರೀ ಅಡ್ಯಂತಾಯರು ಕೊಂಡಾಡಿದರು. ಶ್ರೀ ರಾಮಕೃಷ್ಣನ್ ಜಾನುವಾರುಗಳು ಕೃಷಿಕರಿಗೆ ಅತಿ ಮಹತ್ವದ ವಿಷಯವೆಂದೂ ಜಿಲ್ಲೆಯ ಜಾನುವಾರು ಸಂತತಿಯನ್ನು ಉತ್ತಮಗೊಳಿಸುವ ಪ್ರಯತ್ನ ಆಗಬೇಕೆಂದೂ, ಹೇಳಿ ಬಹುಮಾನ ವಿತರಣೆ ಮಾಡಿದರು. ಅಂತ್ಯದಲ್ಲಿ ತಾಲೂಕು ಬೋರ್ಡಿನ ಮುಖ್ಯಾಧಿಕಾರಿಣಿ ಶ್ರೀಮತಿ ಎ. ಶಶಿಕಲಾ ಅವರು ಧನ್ಯವಾದಗಳನ್ನರ್ಪಿಸಿದರು.

ಉತ್ತಮ ರೈತರಿಗೆ ಫೌಂಡೇಷನ್ ಪ್ರಶಸ್ತಿ

ಮಣಿಪಾಲ, ಡಿ. ೧೯: ಅತ್ಯುತ್ತಮ ರೀತಿಯಲ್ಲಿ ಸಾಗುವಳಿ ಮಾಡಿ ಉತ್ತಮ ಫಲಿತಾಂಶ ಪಡೆದ ರಾಜ್ಯದ ಐದು ಮಂದಿ ರೈತರಿಗೆ ಫೌಂಡೇಶನ್ ಪ್ರಶಸ್ತಿಗಳನ್ನು ಪ್ರತಿವರ್ಷ ನೀಡಬೇಕೆಂದೂ ಇದಕ್ಕಾಗಿ ರೂ. 1500 ಪ್ರತ್ಯೇಕಿಸಿಡಬೇಕೆಂದೂ ಮಣಿಪಾಲದಲ್ಲಿರುವ ಸಿಂಡಿಕೇಟ್ ಎಗ್ರಿಕಲ್ಚರ್ ಫೌಂಡೇಷನಿನ ಶ್ರೀ ಎಚ್. ಎಸ್. ಪೈಯವರ ಅಧ್ಯಕ್ಷತೆಯಲ್ಲಿ ಸೇರಿದ ಆಡಳಿತ ಮಂಡಳಿಯು ನಿರ್ಣಯಿಸಿದೆ. ಜನವರಿ ತಿಂಗಳ ಕೊನೆಯಲ್ಲಿ ಬೆಳೆ ವಿಮಾ ಯೋಜನೆಯ ಕುರಿತು ವಿಚಾರ ಸಂಕೀರ್ಣವೊಂದನ್ನೇರ್ಪಡಿಸಲು ನಿರ್ಧರಿಸಲಾಯಿತು.

ಫೌಂಡೇಷನ್ ವತಿಯಿಂದ ಜಿಲ್ಲೆಯಲ್ಲಿರುವ ಉತ್ತಮ ತೆಂಗಿನ ತೋಟಗಳಿಗೆ ಪ್ರವಾಸ ಕೈಗೊಳ್ಳಬೇಕೆಂಬ ಸೂಚನೆಯನ್ನು ಅಂಗೀಕರಿಸಲಾಯಿತು.

ಪ್ರಾರಂಭದಲ್ಲಿ ಕಾರ್ಯದರ್ಶಿ ಶ್ರೀ ಕೆ. ಎಂ. ಉಡುಪರು ಫೌಂಡೇಷನ್ 1970ರಲ್ಲಿ ನಿರ್ವಹಿಸಿದ ಕಾರ್ಯಕಲಾಪಗಳ ವರದಿಯನ್ನು ಸಭೆಯ ಮುಂದಿರಿಸಿದರು.

ಗೇಹರಾಜ್ಯದಲ್ಲಿ

ರೊಟ್ಟಿ ತುಪ್ಪಕ್ಕೆ....

"ಏ, ಇಲ್ಲಿಕೇಳೀ..."

"ಏನು?"

"ದೇಶದ ರಾಜಧಾನಿಯಲ್ಲಿ...."

"ಅಂದರೆ ನವದಿಲ್ಲಿಯಲ್ಲಿ...."

"ಭಾರೀ ಚಟುವಟಿಕೆ...."

"ಯಾಕೋ...."

"ಯಾಕೆಂದರೆ ಅದು ರಾಜಧಾನಿ."

"ಹ್ಞೂನ್ನ್. ಅದೇನೂ ಇಂದು ನಿನ್ನೆ ರಾಜಧಾನಿಯಾದದ್ದಲ್ಲ."

"ಅದು ಸರೀನ್ನು. ಈಗ ದಿಲ್ಲಿ ಕಿವಿಗಳು ದಿಲ್ಲೀಶ್ವರಿಯ ಮುಖವನ್ನೇ ನೋಡುತ್ತವೆ...."

"ಅಂದ್ರೆ, ಮಧ್ಯಕಾಲೀನ ಚುನಾವಣೆಗೆ ಆದೇಶ ನೀಡುತ್ತಾಳೆಯೋ ಎಂದು..."

"ಹ್ಞೂಂ, ಪ್ರಾಯಃ ಇಷ್ಟರಲ್ಲೇ ಆಕೆ ನಿರ್ಧಾರಕ್ಕೆ ಬಂದಿದ್ದಾರೆ. ಇನ್ನು ರಾಷ್ಟ್ರಪತಿಯವರು ಒಪ್ಪಿಗೆ ನೀಡುವುದು ಮಾತ್ರ ಬಾಕಿ."

"ಅಥವಾ ಆದೂ ಆಗಬಹುದು; ಆಜ್ಞೆಗೆ ತಾರೀಕು ಹಾಕುವುದು ಮಾತ್ರ ಉಳಿದಿರಬಹುದು...."

"ಯಾಕೆ ಹಾಗಂತೀಯ?"

"ತನ್ನ ಮಂತ್ರಿಗಳ ಸಲಹೆಯನ್ನು ರಾಷ್ಟ್ರಪತಿ ಗಿರಿಯವರು ಅಂಗೀಕರಿಸದೆ ಇದ್ದಾರೆಯೆ?"

"ನೋಡು, ಬ್ಯಾಂಕು ರಾಷ್ಟ್ರೀಕರಣದ ಮೊದಲಾಜ್ಞೆ, ರಾಜಧನಾದಿ ರದ್ದತಿಯ ಆಜ್ಞೆ; ಉತ್ತರ ಪ್ರದೇಶದಲ್ಲಿ ರಾಷ್ಟ್ರಪತಿ ಆಳಿಕೆ ಘೋಷಿಸಿದ ಆಜ್ಞೆಗಳು ತೀರ ಹಾಸ್ಯಾಸ್ಪದವಾದುದರಿಂದ...."

"ಅಲ್ರೀ, ಇದೇನು ನ್ಯಾಯಾಲಯಕ್ಕೆ ಹೋಗೋದುಂಟೆ? ಪ್ರಧಾನಿ ಹೇಳ್ತಾರೆ; ಅವ್ರು ಕೇಳ್ತಾರೆ. ಅದಕ್ಕೇ ಅವ್ರನ್ನು ಆ ಸ್ಥಾನಕ್ಕೆ ಏರ್ಸಿದ್ದಲ್ಲ?"

"ನೋಡಮ್ಮಾ, ಮೊನ್ನೆ ಕೊಟ್ಟಿಕ್ಕಲ್‌ನಲ್ಲಿ ಚಿಕಿತ್ಸೆ ಪಡೆದ ಅವರು ಹತ್ತು ವರ್ಷ ಎಳೆತನದ ಅನುಭವ ಹೊಂದಿದ್ದಾರಂತೆ!"

"ಸರಿ ಹೋಯ್ತು ಬಿಡಿ; ಇನ್ನೂ ಎರಡವಧಿಗೆ ರಾಷ್ಟ್ರಪತಿಯಾಗಿ ಅವರು ಅವಶ್ಯ ಮುಂದುವರಿಯಬಹುದು...."

"ಶ್ರೀಮತಿ ಗಾಂಧಿಯೇ ಪ್ರಧಾನಿಯಾಗಿ ಮುಂದುವರಿದರೆ...."

"ಯಾಕೆ ಅದ್ರಲ್ಲೂ ಸಂದೇಹವೆ?"

"ಸಂದೇಹವೇನಿಲ್ಲ. ಆದ್ರೂ ತಂದೆಯಂತೆ ಮಗಳಾಗುವುದಿಲ್ಲ."

"ನೋಡಿ, ಪ್ರಧಾನಿ ಸಂಸತ್ ವಿಸರ್ಜನೆಯ ಸಲಹೆ ನೀಡಿದರೆ, ಅದನ್ನು ರಾಷ್ಟ್ರಪತಿಗಳು ಅಂಗೀಕರಿಸಬಾರದೆಂದು ಹಲವಾರು ನಾಯಕರು ಹೇಳಿದ್ದಾರೆ...."

"ಹೌದು. ಪ್ರಧಾನಿಯ ಸರಕಾರ ಅಲ್ಪ ಮತೀಯ ಪಕ್ಷದ್ದು. ಅದ್ದರಿಂದ ಆಕೆಗೆ ಅಂತಹ ಸಲಹೆ ನೀಡುವ ಅಧಿಕಾರವಿಲ್ಲ. ಅಂತಹ ಸಲಹೆ ನೀಡಿದರೆ, ಆಕೆಗೆ ರಾಜಿನಾಮೆ ನೀಡಲು ಹೇಳಬೇಕು; ಪರ್ಯಾಯ ಸರಕಾರ ರಚನೆ ಸಾಧ್ಯವೆನ್ನುತ್ತಾರೆ ಈ ನಾಯಕರು."

"ಅದೇ ಈಗ ಸಮಸ್ಯೆ. ಗಾಂಧಿ ಸರಕಾರ ಅಲ್ಪ ಸಂಖ್ಯಾತರದ್ದು ಹೌದು; ಆದರೆ, ಅದು ಪಾರ್ಲಿಮೆಂಟಿನಲ್ಲಿ ಬಹುಮತ ಪಡೆದಿದೆ. ಅದ್ದರಿಂದ...."

"ಆಕೆಯ ಬೆಂಬಲಿಗರು ಪರ್ಯಾಯ ಸರಕಾರಕ್ಕೂ ಬೆಂಬಲ ನೀಡುವರೆಂಬುದನ್ನು ಅಲ್ಲಗಳೆಯುವುದು ಅಸಾಧ್ಯ...."

"ಅದ್ದರಿಂದ ರಾಷ್ಟ್ರಪತಿ ಏನು ಮಾಡಬೇಕು?"

"ನೋಡಮ್ಮಾ, ಏನು ಮಾಡಬೇಕೆಂದು ನಮ್ಮ ರಾಷ್ಟ್ರಪತಿಗಳು ಹೆಚ್ಚು ತಲೆಕೆಡಿಸಲ ಹೋಗುವುದಿಲ್ಲ. ಪ್ರಧಾನಿ ಗಾಂಧಿ ಹೇಳಿದ್ದಕ್ಕೆಲ್ಲ ಅಸ್ತು ಅನ್ನುತ್ತಲೇ ಬಂದಿದ್ದಾರೆ."

"ಅದು ಸರೀನ್ನಿ. ಆಕೆ ಹೇಳಿದಂತೆ ಕೇಳದಿದ್ದರೆ, ರಾಷ್ಟ್ರಪತಿಗಳ ಮೇಲೆಯೇ ಮಹಾಭಿಯೋಗ ಹೊರಿಸಿದರೆ ಗತಿಯೇನು?"

"ಹ್ಞೂಂ...ತಮ್ಮ ರೊಟ್ಟಿಯನ್ನು ತುಪ್ಪಕ್ಕೆ ಮುಳುಗಿಸುವುದೊಂದೇ ಚಿಂತೆ ಎಲ್ಲರಿಗೂ..."

"ಅಲ್ಲಾರಿ, ಮುಸ್ಲಿಂ ಲೀಗನ್ನು ಮತ್ತೆ ಅಖಿಲ ಭಾರತೀಯ ಪಕ್ಷವಾಗಿ ಬೆಳೆಸುವ ಬಗ್ಗೆ ಒಂದು ಸಭೆ ಸೇರಿತಂತೆ..."

"ಹ್ಞೂಂ...ಪ್ರಧಾನಿ ಇಂದಿರಾ ಗಾಂಧಿ ಹೆತ್ತ ರಾಜಕೀಯ ಕೂಸುಗಳಲ್ಲಿ ಇದೂ ಒಂದು..."

"ಮತ್ತೆ ನೋಡಿ, ಅವರು ಜಾತೀಯವಾದವನ್ನು ಖಂಡತುಂಡವಾಗಿ ಖಂಡಿಸುತ್ತಾರೆ ...."

"ಯಾರಲ್ಲಾಂತಾರೆ? ಬಾಯಲ್ಲಿ ರಾಮ; ಹೊಟ್ಟೆಯಲ್ಲಿ ಭೀಮ."

"ಸತ್ಯ ಹೇಳ್ರಿ, ಮುಸ್ಲಿಂ ಲೀಗು ಮುಸ್ಲಿಮರ ಹಿತವನ್ನಷ್ಟೇ ಸಾಧಿಸುವುದರಿಂದ ಅದು ಸಂಪೂರ್ಣ ಜಾತೀಯವಾಯ್ತು..."

"ಹೌದು; ಭಾರತೀಯ ಜನಸಂಘವನ್ನು ಮಾತ್ರ ಇಂದಿರಾ ಜಾತೀಯವೆನ್ನುತ್ತಾರೆ; ಮುಸ್ಲಿಂ ಲೀಗು ಆಕೆಗೆ ಜಾತ್ಯತೀತ...."

"ಜನಸಂಘದಲ್ಲಾದರೂ ಕೆಲವಾರು ಮುಸ್ಲಿಮರಿದ್ದಾರೆ; ಆದರೆ, ಲೀಗಿನಲ್ಲಿ ಹಿಂದುಗಳಿಲ್ಲ...."

"ಅಲ್ಪಸಂಖ್ಯಾತರೆಂದು ಹೇಳಿ ರಾಜಕೀಯದಲ್ಲಿ ಹೊಸ ದ್ವಿರಾಷ್ಟ್ರವಾದವನ್ನು ಮುಸ್ಲಿಂ ಲೀಗು ಬೆಂಬಲಿಸುತ್ತಿದೆ..."

"ಇಲ್ಲವಾದರೆ, ತಮ್ಮ ಜನಸಂಖ್ಯೆಗನುಸಾರವಾಗಿ ಪ್ರಾತಿನಿಧ್ಯ ಬೇಡುವುದೆಂದರೇನು?"

'ನಾವು ಕೊಡುತ್ತೇವೆ; ಆದ್ದರಿಂದ ಬೇಡುತ್ತಾರೆ....'

"ಹೀಗೇ ಅಲ್ಲವೆ, ಅಂದು ದೇಶ ಒಡೆದದ್ದು?"

"ಶ್ರೀಮತಿ ಗಾಂಧಿ ಇದೇ ದಾರಿ ತುಳಿದರೆ ಆಕೆಯೂ ದೇಶ ಒಡೆಯಬಲ್ಲಳು...."

"ನೋಡಿ ಬೆಂಗ್ಳೂರು ನಗರಪಾಲಿಕೆಯಲ್ಲೂ ಮುಸ್ಲಿಂ ಲೀಗ್ ಗೆದ್ದು ಬಂದಿದೆ...."

"ಅದ್ರಲ್ಲೇನು ವಿಶೇಷ? ಎಲ್ಲೆಡೆಯೂ ಮುಸ್ಲಿಮರಿದ್ದಾರೆ; ಅವರು ತಮ್ಮ ಜನಾಂಗದವರಲ್ಲಿ ಅಭ್ಯರ್ಥಿ ನಿಲ್ಲಿಸುತ್ತಾರೆ; ಗೆಲ್ಲಿಸುತ್ತಾರೆ..."

"ಅಲ್ಲ, ಈ ಬಗೆಯ ಜಾತೀಯತೆಯಿಂದ ದೇಶದ ಐಕ್ಯಕ್ಕೆ ಹಾನಿಯಿಲ್ಲವೆ?"

"ಮುಸ್ಲಿಂ ಲೀಗಿನವರು ಪ್ರತ್ಯೇಕ ರಾಜಕೀಯ ಸಂಘಟನೆಯಿಂದ ತಮಗೂ ದೇಶಕ್ಕೂ ಲಾಭ ತರುವುದಿಲ್ಲವೆಂಬುದರ ಅರ್ಥವಿದೇ.'

"ಆದರೆ, ಪ್ರಧಾನಿ ಗಾಂಧಿಗೆ ಮುಸ್ಲಿಂ ಲೀಗು ಬೇಕು; ಮತ್ತದು ಜೀವಂತವಾಗೇ ಉಳಿಯಬೇಕು."

"ಮುಸ್ಲಿಮರ ಅಲ್ಪಸಂಖ್ಯಾತರನ್ನು ಪ್ರತ್ಯೇಕವಿಟ್ಟು ತಮ್ಮ ರಾಜಕೀಯ ಬೇಳೆ ಬೇಯಿಸುವುದು ಆಕೆಗೆ ಸಾಧ್ಯವಾಗಬೇಕು."

"ಆದರೆ, ನೋಡಿ, ಇಂತಹ ಮುಸ್ಲಿಂ ಪ್ರತ್ಯೇಕವಾದವೂ ಬೆಳೆಯುತ್ತ ಬಂದಂತೆ ಹಿಂದೂ ಪ್ರತ್ಯೇಕತಾವಾದವೂ ಬೆಳೆಯುತ್ತ ಬಂದರೆ ಕೋಮು ಸೌಹಾರ್ದವೆಲ್ಲಿಂದ? ರಾಷ್ಟ್ರ ಶಾಂತಿ ಹೇಗೆ?"

"ನೋಡಮ್ಮಾ, ಇಂದು ದೇಶದ ಬಗ್ಗೆ ಶಾಂತಿಯ ಬಗ್ಗೆ ಯಾರು ಚಿಂತಿಸುತ್ತಾರೆ? ಅಥವಾ ಅವು ಬೇಕಾದರೂ ಯಾರಿಗೆ? ಸತ್ಯ ಹೇಳು—ಕಾಂಗ್ರೆಸ್ಸು ಒಡೆದ ಮೇಲೆ ಕೇಂದ್ರ ಸರಕಾರ ಮಾಡಿದ ಸಾಧನೆಯಾದರೂ ಏನು?"

"ಅಲ್ಲಾರಿ, ಪಶ್ಚಿಮ ಬಂಗಾಳವೆಲ್ಲ ಧ್ವಂಸವಾಗಿ ಹೋಯ್ತು...."

"ಅಲ್ಲದೆ ಮತ್ತೇನ? ನಕ್ಸಲೀಯ ಚಟುವಟಿಕೆಗಳು ಕಮ್ಯುನಿಸಂ ಪ್ರೇರಿತವಲ್ಲ; ಯುವಜನಾಂಗದ ಅಸ್ತಿತ್ವದ ಅಭಿವ್ಯಕ್ತಿ ಎಂದು ಅವನ್ನು ತನ್ನ ಪ್ರಗತಿವಾದಕ್ಕೆ ಅಸ್ತ್ರ ತಂದುಕೊಂಡರು. ಆದರೆ, ಈಗ ತಾವೇ ವರದಾನ ಮಾಡಿದ ಭಸ್ಮಾಸುರನ ಕಾಟದಿಂದ ಕಂಗೆಟ್ಟಿವೆ..."

"ಇನ್ನು, ವಿಷ್ಣುವಿಗೇ ಮೊರೆಹೋಗಬೇಕು...."

"ಪರರಿಗೆ ಮೊರೆಹೋಗುವಷ್ಟು ಬುದ್ಧಿ ಹೊಳೆಯಲ್ಲ...."

"ಮತ್ತೆ, ದೇಶವನ್ನೇ ಹಾಳು ಮಾಡುತ್ತಾಳೆ...."

ಹಾಗೇಕೆ ಅನ್ನುತ್ತೀಯ? ಯುವಜನತೆಯ ಪ್ರತಿನಿಧಿ ತಾನೆಂದುಕೊಳ್ಳುವ ಆಕೆ ಯುವಕರು ತೋರಿಸಿದ ದಾರಿ ನಡೆಯುತ್ತಾರೇನು?"

"ಛೆ, ಎಂದಿಗೂ ಸಾಧ್ಯವಿಲ್ಲ. ಇಂದು ಪಶ್ಚಿಮ ಬಂಗಾಳವೊಂದರಲ್ಲಿ ಶಾಂತಿ ವ್ಯವಸ್ಥೆಗಳನ್ನು ನೆಲೆಗೊಳಿಸಲು ಅಶಕ್ತರಾದವರು ಏನ ಮಾಡುತ್ತಾರೋ!"

"ಪರಿಸ್ಥಿತಿ ಸುಧಾರಿಸುತ್ತಿದೆ ಎಂದು ಹೇಳಿಕೆ ನೀಡುತ್ತಾರೆ....'

"ಕಾಯಿಲೆ ಗುಣವಾಗುತ್ತಿದೆ ಎಂದು ಸಾಯುವವರೆಗೂ ಹೇಳಿಕೆ ಹೊರಡಿಸುವ ಡಾಕ್ಟರಂತೆ...."

'ಅಲ್ಲ, ಆಕೆ ಮತ್ತೇನು ಮಾಡಿಯಾರು? ಮುಖ್ಯ ಜನ ಶಾಂತವಾಗಬೇಕು......"

"ಜನ ಶಾಂತವಾಗಬೇಕು ಹೌದು; ಅದಕ್ಕೂ ಮೊದಲು ಜನರನ್ನು ಎತ್ತಿಕಟ್ಟುವವರು ಶಾಂತರಾಗಬೇಕು...."

"ಹ್ಞೂಂ......"

"ಹ್ಞಾಂ......"

"ಹ್ಞೂ......"

——ಗೋರಾ

ಗಂಡ ಪಿಂಡಿರನತ್ಯುಗ್ರದಿಂ ಪೀಡಿಸಲ್....?

(ಎರಡನೇ ಪುಟದಿಂದ)

ಮಂಡಿಸಿದ ವೇಳೆ ಯಾವ ಪ್ರತಿಕ್ರಿಯೆ ಆಯಿತು?

ಕರ್ನಾಟಕದ ಶಾಲೆ ಕಾಲೇಜುಗಳಲ್ಲಿ ಆಕ್ರೋಶ ವ್ಯಕ್ತವಾಯಿತು. ಬೆಳಗಾಂವಿ ಧಾರವಾಡ-ಹುಬ್ಬಳ್ಳಿ-ಬೆಂಗಳೂರುಗಳಲ್ಲಿ ಇದು ಕೆಲವೆಡೆ ಹಿಂಸಾಕಾಂಡಕ್ಕೂ ನಾಂದಿಯಾಯಿತು.

ಆದರೆ, ಮಹಾರಾಷ್ಟ್ರದಲ್ಲಿ ಏನೂ ಅವಾಂತರವಾಗಲಿಲ್ಲ.

ಬೆಳಗಾಂವಿಯಲ್ಲಿ ಕನ್ನಡ-ಮರಾಠಿಗರು ಪರಸ್ಪರ ಕಚ್ಚಾಡಿಕೊಂಡರು, ವಿರುದ್ಧ ಮೆರವಣಿಗೆಗಳು ನಡೆದುವು. ಹಿಂಸೆಗೆ ತಿರುಗಿತು. ಕೊನೆಗೂ ಪೊಲೀಸ್ ಧಾಳಿ ಜನರಿಗೆ ಬರಬೇಕಾಯಿತು.

ಮುಖ್ಯಮಂತ್ರಿಯವರು ಜನತೆಗೆ ಶಾಂತಿಯನ್ನು ಸಂರಕ್ಷಿಸುವ ಬಗ್ಗೆ ಕರೆ ನೀಡಿದರು. ಮುಂದಿನ ಕ್ರಮ ಜರುಗಿಸಲು ವಿಧಾನ ಸಭೆಯ ತುರ್ತು ಅಧಿವೇಶನ ಕರೆದರು. ಅನ್ಯಾಯವನ್ನು ನ್ಯಾಯದಿಂದಲೇ ಎದುರಿಸಬೇಕೆಂಬ ದೃಢ ನಿರ್ಧಾರವನ್ನು ಪ್ರಕಟಿಸಿದರು.

ಜನ ಶಾಂತವಾಯಿತೆ? ಆದರೂ ಆಗಬಹುದು. ಕೇಂದ್ರದ ಅನ್ಯಾಯ ತೀರ್ಮಾನದ ಬೇಗೆ ಕನ್ನಡಿಗರ ಹೃದಯಾಂತರಾಳದಲ್ಲಿ ಸದಾ ನೆಲಸೇ ನೆಲಸುತ್ತದೆ.

ಮುಂದೇನು?

ಕರ್ನಾಟಕದ ಎಂ. ಪಿ ಗಳು ಸಾಮೂಹಿಕವಾಗಿ ರಾಜೀನಾಮೆ ನೀಡುವುದು—ರಾಜ್ಯ ವಿಧಾನ ಸಭಾ ಸದಸ್ಯರು ಮೂರು ತಿಂಗಳೊಳಗೆ ವರದಿಯನ್ನು ಸಂಸತ್ತಿನಿಂದ ಹಿಂಪಡೆಯದಿದ್ದರೆ, ಸಾಮೂಹಿಕ ರಾಜೀನಾಮೆ ಕೊಡುವ ಅಲ್ಟಿಮೇಟಂ ನೀಡಿದ್ದಾರೆ.

ಪಾಪ, ಸಂಸತ್ತನ್ನೇ ಬೇಗನೇ ವಿಸರ್ಜಿಸುವ ಆಲೋಚನೆಯಲ್ಲಿ ಪ್ರಧಾನಿಯಿದ್ದಾರೆಂಬ ತತ್ವ ಅವರಿಗೆ ಹೊಳೆಯಲಿಲ್ಲ.

ರಾಜ್ಯದ ಎಮ್ಮೆಲ್ಲೆಗಳೂ ಎಮ್ಮೆಲ್ಸಿಗಳೂ ಸಾಮೂಹಿಕ ರಾಜೀನಾಮೆ ನೀಡಬೇಕೆಂದು ಮತ್ತೊಂದು ಸಲಹೆ.

ಈ ರಾಜೀನಾಮೆಗಳಿಂದ ಏನು ಸಾಧಿತವಾದೀತು?

ತಾನು ಅಧಿಕಾರದಲ್ಲಿರುವ ವರೆಗೆ ಬೆಳಗಾಂವಿಯನ್ನು ಬಿಟ್ಟುಕೊಡುವುದಿಲ್ಲವೆಂದು ಮುಖ್ಯಮಂತ್ರಿ ಪಾಟೀಲರು ಗರ್ಜಿಸಿದ್ದಾರೆ.

ಅಂದರೆ, ಬೆಳಗಾಂವಿ ಕನ್ನಡದಿಂದ ಬೇರೆಯಾದ ದಿನ ಪಾಟೀಲರೂ ರಾಜೀನಾಮೆ ನೀಡುತ್ತಾರೆ.

ಈಗ ಆರಂಭವಾದುದು ಕೇಂದ್ರ ರಾಜ್ಯ ಸಮರ. ಬೆಳಗಾಂವಿಯನ್ನು ಕಿತ್ತುಕೊಂಡು ಮರಾಠಿಗರಿಗೆ ಕೊಡುವುದೇ ಸಮರೋದ್ದೇಶ.

ದೀಕ್ಷಿತರು ಶ್ರೀ ಜವನಾರಾದರೆ ಪುರೋಹಿತರು ಶ್ರೀಮತಿ ಗಾಂಧಿ. ಭಾರೀ ಪ್ರತಿಫಲದ ಆಸೆಯಿಂದ ಆಶಯದಕ್ಕೆ ಸಿದ್ಧರಾಗಿದ್ದಾರೆ. ಕನ್ನಡದ ಸಿಂಡಿಕೇಟ್ ಸರಕಾರ ಅವರ ಬಲಿಪಶು.

ಕರ್ನಾಟಕ ಮನೇ ವ್ಯಸನಗಳಲ್ಲಿ ಒಕ್ಕಲಿಗರು—ಲಿಂಗಾಯತರ ಜಗಳವಿದೆಯೆಂದರೆ, ಅದು ಜಾತೀಯತೆಯನ್ನು ಕೆದಕಿದಂತಾಗಲಿಲ್ಲ. ಸತ್ಯ ಸಂಗತಿ. ಅಧಿಕಾರದಲ್ಲೂ ಇದೇ ಜಗಳ. ಶ್ರೀ ನಿಜಲಿಂಗಪ್ಪನವರು ಒಕ್ಕಲಿಗರನ್ನು ಮೆಟ್ಟಿ ಲಿಂಗಾಯತರನ್ನು ಎತ್ತಿ ಕಟ್ಟಿದರು. ಆ ದಿನದಿಂದಲೇ ಹಳೆಯ ವೈಷಮ್ಯ (ಒಕ್ಕಲಿಗರಿಗೆ) ಅನ್ಯಾಯವಾಗಿದೆಯೆಂಬ ದೂರು

ಕಾಂಗ್ರೆಸ್ ವಿಭಜನಾ ನಂತರ ಒಕ್ಕಲಿಗರು ಬಹುತೇಕ ಇಂಡಿಕೇಟ್ ಸೇರಿದರು. ಅವರ ಉದ್ದೇಶ ಲಿಂಗಾಯತರನ್ನು ಮೆಟ್ಟಿ ಅಧಿಕಾರ ಸೂತ್ರ ಹಿಡಿಯುವುದು.

ಬೆಳಗಾಂವಿ ಲಿಂಗಾಯತರ ನೆಲ, ಒಕ್ಕಲಿಗರಿಗೂ ಅದಕ್ಕೂ ಸಂಬಂಧವಿಲ್ಲ. ಬೆಳಗಾಂವಿಯನ್ನು ಮರಾಠಿಗಳಿಗೆ ನೀಡುವುದರ ಮೂಲಕ ಲಿಂಗಾಯತರ ಜನಪ್ರಿಯತೆ ದೂರಮಾಡಿ ತಮ್ಮ ರೊಟ್ಟಿಯನ್ನು ತುಪ್ಪಕ್ಕೆ ಬೀಳಿಸುವ ತಂತ್ರ ಅವರದು.

ಅಧಿಕಾರಕ್ಕಾಗಿ ಅವರು ರಾಜ್ಯಕ್ಕೆ ದ್ರೋಹ ಬಗೆಯುತ್ತಾರೆ. ಕನ್ನಡವನ್ನೇ ಎರಡು ಹೋಳು ಮಾಡಿರೆಂದೂ ಅವರು ಕೂಗಿದ್ದುಂಟು. ಪತಿಯೇ ಪತ್ನಿಯನ್ನು ಹಿಂಸಿಸಿದರೆ?

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S.C. No. 62/1970

ರಘುರಾಜ ಶೆಟ್ಟಿ — ವಾದಿ

ವಿರುದ್ಧ

ಪ್ರಭಾಕರ ಬಂಡಾರಿ — ಪ್ರತಿವಾದಿ

ಸದ್ರಿ ದಾವೆಯ ಪ್ರತಿವಾದಿ ಪ್ರಭಾಕರ ಬಂಡಾರಿ, ಹಳಿನ ಕಟ್ಟಮನೆ ಚಂದಪ್ಪ ಶೆಟ್ಟಿಯ ಮಗ, ಕುಂದಾಪುರ ತಾಲ್ಲೂಕು ಮೊಳಹಳ್ಳಿ ಗ್ರಾಮದ ಹಳಿನಕಟ್ಟಮನೆಯಲ್ಲಿರುವವರಿಗೆ

ನೀವು ವಾದಿಯ ಪೂರ್ವಾಧಿಕಾರಿ ಉಡುಪಿ ತಾಲ್ಲೂಕು ಹೆಗ್ಗುಂಜೆ ಗ್ರಾಮದ ಹೊಸಮನೆ ಕೃಷ್ಣಯ್ಯ ಶೆಟ್ಟಿಯ ಮಗಳು ಗಿರಿಜಮ್ಮ ಶೆಡ್ತಿಗೆ ರೂಪಾಯಿ 300-00ಕ್ಕೆ ತಾರೀಕು 16.10.1967ರಲ್ಲು ಬರೆಸಿಕೊಟ್ಟ ಡಿಮಾಂಡ ನೋಟಿನ ಅಸಲು ಬಡ್ಡಿ ಹಣಗಳನ್ನು ವಸೂಲು ಮಾಡುವ ಹಕ್ಕು ಸದ್ರಿ ಗಿರಿಜಮ್ಮ ಶೆಡ್ತಿಯಿಂದ ವಾದಿಯು ತಾರೀಕು 10-8-1969ರಲ್ಲು ಟ್ರಾನ್ಸ್‌ಫರ್ ಪಡಕೊಂಡಿರುತ್ತಾರೆ. ಆ ಪ್ರಕಾರ ಪ್ರತಿವಾದಿಯಿಂದ ವಾದಿಗೆ ಬರತಕ್ಕ ಸದ್ರಿ ಡಿಮಾಂಡ ನೋಟಿನ ಅಸಲು ಬಡ್ಡಿ ವಗೈರೆ ಹಣಗಳ ಬಗ್ಗೆ ನಿಂದು ಮೇಲೆ ಮಾಡಿದ ಸದ್ರಿ ದಾವೆಯು ತಾರೀಕು 28-1-1971ಕ್ಕೆ ಅಖೈರು ತೀರ್ಮಾನಕ್ಕೆ ಮುಂದೂಡಲಾಗಿಯದೆ. ಆ ಕುರಿತು ನಿಂದು ಆಕ್ಷೇಪ ಇದ್ದಲ್ಲಿ ಸದ್ರಿ ತಾರೀಕಿನ ದಿವಸ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ಹಾಜರು ಆಗಿ ಜವಾಬು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ದಾವೆಯನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಪ್ರಕಾರ)

N. ಸುಧಾಕರ ಶೆಟ್ಟಿ,
ವಾದಿಯ ಕಡೆ ಎಡ್ವೋಕೇಟ್

ಕುಂದಾಪುರ ತಾ. 19.12.70.

ಇದು ನಮ್ಮ ಭಾರತ

ಮಾನವತೆಯೊಂದೇ ಧರ್ಮ

ಪಂಜಾಬದಿಂದ ಹಿಂದುಗಳು ಭಯಭೀತರಾಗಿ ದೇಶತ್ಯಾಗ ಮಾಡಿದ ಸಂದರ್ಭವದು. ಲಾಹೋರದಿಂದ ಪೇಶಾವರದ ಗಾಡಿ ಹೊರಟಿತ್ತು. ಗಾಡಿಯ ಹಿಂದಿನ ಡಬ್ಬಿಯ ಯಾತ್ರಿಕರು ಹೆಚ್ಚಾಗಿ ಲಕ್ಷ್ಯ ಇಳಿದರು, ಆ ಡಬ್ಬಿಯಲ್ಲಿ ಒಬ್ಬಾಕೆ ಹುಡುಗಿ ಮತ್ತಾಕೆಯ ತಮ್ಮನೊಬ್ಬ ಉಳಿದರು. ಹುಡುಗಿಯ ಹೆಸರು ಗೀತಾ. ಇವರಿಬ್ಬರೂ ಪಾಕಿಸ್ತಾನಿಗಳ ಹೆದರಿಕೆಯಿಂದ ಭಾರತಕ್ಕೆ ಹೊರಟಿದ್ದರು. ದೌರ್ಭಾಗ್ಯವೆಂಬಂತೆ ಅವರು ಪೇಶಾವರದ ರೇಲನ್ನು ಹತ್ತಿದ್ದರು. ಗಾಡಿ ಹೋಗುತ್ತಲೇ ಇತ್ತು.

ಒಂದಷ್ಟು ದೂರ ಗಾಡಿ ಹೋಗುತ್ತಲೇ ದಟ್ಟವಾದ ಕಾಡು ಗೋಚರಿಸಿತು. ಯಾರೋ ಗಾಡಿಯನ್ನು ತಡೆದು ನಿಲ್ಲಿಸಿದರು. ಪಠಾಣರ ಗುಂಪೊಂದು ಯಾತ್ರಿಕರ ಮೇಲೆ ಕವಿದು ಬಿತ್ತು. ಅವರು ಸಂಪತ್ತು—ಸಾಮಾನು ಎತ್ತಿ ನಡೆದ ಬಿಟ್ಟರು. ಒಬ್ಬ ಕ್ರೂರ ಪಠಾಣನ ದೃಷ್ಟಿ ಮಲಗಿದ್ದ ಗೀತಾ ಮತ್ತಾಕೆಯ ತಮ್ಮನ ಮೇಲೆ ಬಿತ್ತು. ಅವನು ತನ್ನ ಮಿತ್ರನೊಬ್ಬನನ್ನು ಕೂಡಿ ಅವರಿಬ್ಬರಿಗೂ ಮೂರ್ಛೆ ತರುವ ಔಷಧಿಯನ್ನು ಮೂಸಿಸಿ ಗೀತಳನ್ನು ಹೆಗಲ ಮೇಲೆ ಎತ್ತಿ ಕಾಡಿನಲ್ಲಿ ಅದೃಶ್ಯನಾದನು.

"ಖಾನ, ಅಮೂಲ್ಯ ವಸ್ತುವಿದು, ನೋಡಿದೆಯೆಂದರೆ, ಹಿಗ್ಗಿ ಹೀರೇಕಾಯಿ ಹೋಗುತ್ತೀಯೋ!" ಪಠಾಣನು ರಾಕ್ಷಸೀ ನಗು ಹೊರಸೂಸುತ್ತ ಹೇಳಿದನು.

"ಹಾಗಾದರೆ, ತೋರಿಸಿಬಿಡು ನೋಡೋಣ ನಿನ್ನನ್ನು ಖುಶೀ ಮಾಡುತ್ತೇನೆ".

"ಅದೆಲ್ಲ ಆಗದು. ಮೊದಲು ವ್ಯವಹಾರ ಸಿದ್ಧವಾಗಬೇಕು."

"ಸರಿ. ನೀನೇ ಹೇಳು. ಏನು ಬೇಕಿತ್ತು?"

"ಐದು ಸಾವಿರ ನಗದು."

"ಏನು ಹುಚ್ಚನಂತೆ ಮಾತಾಡುತ್ತೀಯ? ಐದು ಸಾವಿರದಲ್ಲಿ ಐವರು ಹೆಂಗಸರನ್ನು ಕೊಂಡುಕೊಳ್ಳಬಹುದಾದ ಕಾಲವಿದು. ಸ್ವಲ್ಪ ಯೋಚಿಸಿ ಮಾತನಾಡು."

"ಅಪ್ಪಪ್ಪ, ನಾಲ್ಕು ಸಾವಿರಕ್ಕೆ ಪೈ ಕಡಿಮೆಯಾದರೂ ಸಾಧ್ಯವಿಲ್ಲ."

"ಹ್ಞಾಂ. ಒಪ್ಪಿದೆ. ಆದರೆ, ಮೊದಲು ವನಗಾತೆಯನ್ನು ತೋರಿಸು".

"ಸರಿ. ಅರೆ ಹಮೀದ್, ಆ ಹೆಣ್ಣನ್ನು ಕರೆದು ತಾ."

ಗೀತಳನ್ನು ಹಮೀದ ಕರೆತಂದನು. ಆಕೆಯು ನಾಲ್ಕು ಸಾವಿರ ರೂಪಾಯಿಗಳಿಗೆ ಮತ್ತೊಬ್ಬ ಪಠಾಣನಿಗೆ ವಿಕ್ರಯವಾದಳು. ಆದರೆ, ರಾತ್ರಿಯು ಹೆಚ್ಚು ಆಗೆ ಅದು ಹೇಗೋ ಅಲ್ಲಿಂದ ತಪ್ಪಿಸಿಕೊಂಡಳು ಅನತಿ ದೂರದಲ್ಲಿ ಫಕೀರ ಸ್ವಾಮಿಗಳ ನೆಲೆಯಿತ್ತು. ಗೀತಾ ಹೇಗೋ ಹೇಗೋ ಅವರ ಬಳಿ ತಲುಪಿದಳು.

"ಮಗಳೆ, ನೀನು ಯಾರು?"

"ಸ್ವಾಮೀ, ಆಪತ್ತಿನಲ್ಲಿ ಸಿಲುಕಿದ ಹಿಂದೂ ಕನ್ಯೆ ನಾನು. ಒಬ್ಬ ಪಠಾಣನೊಬ್ಬನು ನನ್ನನ್ನೆತ್ತಿ ಓಡಿದನು. ಆತನು ಇನ್ನೊಬ್ಬ ಪಠಾಣನಿಗೆ ನನ್ನನ್ನು ಮಾರಿದನು. ಪ್ರಯಾಸದಿಂದ ತಪ್ಪಿಸಿಕೊಂಡು ಈಗ ತಮ್ಮ ಆಶ್ರಯಕ್ಕೆ ಬಂದಿದ್ದೇನೆ. ನನ್ನ ರಕ್ಷಣೆ ನೀಡಬೇಕು."

"ಚಿಂತಿಸ ಬೇಡ ಮಗಳೆ, ಪ್ರತಿಜಾತಿಯಲ್ಲೂ ಕೆಲವರು ರಾಕ್ಷಸೀ ಮನೋವೃತ್ತಿಯುಳ್ಳವರಿರುತ್ತಾರೆ.'

"ಸೈನಿಕರ ಮೂಲಕ ನಾನು ಈ ದಿನವೇ 'ನಿನ್ನನ್ನು ಭಾರತ ಸರಕಾರಕ್ಕೆ ಒಪ್ಪಿಸುತ್ತೇನೆ.'

'ಖಾನ್ ಸಾಹೇಬರೇ, ತಾವು ಮಾನವ ಸ್ವರೂಪದ ದೇವರು. ಈ ಸಮಯದಲ್ಲಿ ಮಾನವನ ರೋಮ ರೋಮಗಳಲ್ಲಿ ವಿಷವೇ ತುಂಬಿರುವಾಗ, ತಾವು ಎಲ್ಲರನ್ನೂ ತಮ್ಮ ಒಡಹುಟ್ಟಿದವರೆಂದು ತಿಳಿಯುತ್ತೀರಿ.'

ಮಗಳೆ, ಮಾನವರೆಲ್ಲರೂ ಈಶ್ವರನ ಒಡಹುಟ್ಟಿದವರು. ಯಾವ ಜಾತಿಯವನಾದರೇನಂತೆ? ಯಾವ ಮತದವನಾದರೇನಂತೆ? ಎಲ್ಲರದೂ ಒಂದೇ ಜಾತಿ—ಮನುಷ್ಯ ಜಾತಿ; ಎಲ್ಲರದೂ ಒಂದೇ ಧರ್ಮ—ಮಾನವ ಧರ್ಮ."

'ತಾವು ಮನುಷ್ಯರಲ್ಲ, ದೇವರು. ತಮ್ಮ ಅಭಿಪ್ರಾಯ ದೇವರನ್ನು ತಲುಪಿದ್ದು.'

ಗೀತಾಳು ಭಾರತಕ್ಕೆ ಸಕುಶಲ ಮುಟ್ಟಿದಳು.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

NAVAYUGA 31—12—1970
Registered with the Registrar
of News Papers for India
under No. R. N. 3546/'57

REGD. No. B. Gr 176
LICENCE No. 33,
Licensed to Post without Prepayment

ಶ್ರೀ ಬಡಕ್ಕಿಲದವರ 'ಸೂಕ್ತಿವಾದ'

(ಒಂದನೆ ಪುಟದಿಂದ)

ಮೂಲಕ ಕುಡಿಯುವುದನ್ನು ಪ್ರತಿಬಂಧಿಸಿತು. ಈ ಶಾಸನ ಬಂದಮೇಲೆ ಕುಡಿಯುವವರ ಸಂಖ್ಯೆ ಹೆಚ್ಚಿತು. ಹಿಂದೆ ಕೆಲವರು ಕದ್ದುಮುಚ್ಚಿ ಕುಡಿಯುತ್ತಿದ್ದರು. ನಾವು ಕುಡಿಯುತ್ತೇವೆ ಎಂದು ಹೇಳಲು ನಾಚಿಕೊಳ್ಳುತ್ತಿದ್ದರು. ಅವರು ಬೀದಿಗೆ ಬರುತ್ತಿರಲಿಲ್ಲ. ಆದರೆ ಇಂದು? ಕುಡಿಯದಿದ್ದವರು ಕೈಲಾಗದವರು. ಅದರ ವಿಡಂಬನೆ ಕಾವ್ಯದಲ್ಲಿ ಹೀಗೆ ಮೂಡಿದೆ.

ಕುಡುಕತನಕಾಗಿ ಕೈದುಡುಕಿದಧಿಕ ನಿಶಾ ಕ—
ಲ್ಗಡಿಕರುಬ್ಬಟೆ ಪೆರ್ಚಿದುದ ಕಾಣಿರೇನೊ
ಕಡೆಗೆಯುಮ್ಮದಿನ್ನು ಪೇಶಾಸ್ತ್ರಿಗೆನೆ ಕದ್ದು
ನಡೆಯುದಂತದಕೆ ನಾಚಿದುವರಾರ್ ತಮ್ಮ||

ನಮ್ಮ ಭೂಸುಧಾರಣಾ ಶಾಸನವೂ ಅವರ ಮೊನಚಾದ ಲೇಖನಿಗೆ ಸಿಲುಕಿದೆ— ಭೂಮಿ "ಹೊಂದಿ, ಹಂಚೋರ್ವನಿಂದೋರ್ವಗಪ್ಪುದು ಸಹಜ." ಅಲ್ಲಿ ಕೈ ಬದಲಾವಣೆ ಅನಿವಾರ್ಯ. ಅದ್ದರಿಂದ ಈ ಶಾಸನ ಆಗಸ್ಮೇಧಿಯೂರನ್ನು ವಂಚಿಸಲು ಈ ಶಾಸನ ತಂದರು! ಕೈಗೆ ದಕ್ಕಿದ ಭೂಮಿ, ಕಲಕಾಲಾಂತರ ರೈತರ ಕೈಯಲ್ಲಿ ಉಳಿಯುವ ವ್ಯವಸ್ಥೆ ಇರಲಿ. ಆ ವ್ಯವಸ್ಥೆ ಇಲ್ಲ, ಅದೇ ಆಳುವವರ ಒಳಹುಳುಕು.

ನೆಳೆದೊಬ್ಬನಿಂದಿನ್ನು ನೆಲವನಿನ್ನೊಬ್ಬಂಗೆ
ಉಳುವಾತಗಿತ್ತೊಡೆಂ, ಕಡೆತನಕ ಪದದಿ||
ಉಳಿಸಿ ಕೊಳುವಂತೆ ಸದುವವರಿಲ್ಲದೊಡೆ
ಹುಳುಕು ನಮ್ಮಣ್ಣರೊಳ ಹುಳುಕಲ್ತೆ ತಮ್ಮ||

ಇನ್ನೊಂದು ಪದ್ಯದಲ್ಲಿ ನಮ್ಮ ನಾಯಕರ ಗುಣ ವರ್ಣನೆ ಇದೆ—ನಾಯಕತ್ವದ ಪ್ರಾಪ್ತಿಗೆ ಅವುಗಳಿದ್ದರೆ ಸಾಕು. ಆ ಪಟ್ಟ ಪ್ರಾಪ್ತಿಗೆ ಆತ ಏನು ಮಾಡಬೇಕು. ಅದನ್ನು ಕೆಳಗೆ ಕೊಟ್ಟಿದ್ದೇನೆ.

ಜಾತಿಭೇದವನಳಿಸಿ, ಪಕ್ಷಭೇದವ ಬೆಳೆಸಿ
ರೀತಿ ನೀತಿಗಳ ಕಡೆಗಣಿಸಿ ಧಿಕ್ಕರಿಸಿ||
ಸೋತವರನಿಳಿಸಿ, ಗೆದ್ದವರ ಸಂತೈಸಿ, ಫಲಿ—
ಮಾತನಾರವನೆ ನೇತಾರನೆಲೆ ತಮ್ಮ||

ನಮ್ಮ ಕಾಲೇಜು ವಿದ್ಯಾರ್ಥಿಗಳು, ಸಮಸ್ಯೆಯ ಶಿಶುಗಳಾಗಿದ್ದಾರೆ. ಅವರಿಂದು ಎಲ್ಲರ ತಲೆ ತಿನ್ನುತಿದ್ದಾರೆ. ಅವರನ್ನು ಸರಿಯಾದ ದಾರಿಯಲ್ಲಿ ಒಯ್ಯುವವರು ವಿರಳವಾಗುತ್ತಿದ್ದಾರೆ ತಮ್ಮ ಲಾಭಕ್ಕೆ ಮಕ್ಕಳನ್ನು ಬಳಸುವವರೇ ಹೆಚ್ಚು ಮಂದಿ. ಈ ಶೋಚನೀಯ ಸ್ಥಿತಿಯ ವರ್ಣನೆಗೆ ಹಲವು ಪದ್ಯಗಳನ್ನು ಮೀಸಲಿರಿಸಿದ್ದಾರೆ-ಎರಡನ್ನು ಮಾತ್ರ ಕೆಳಗೆ ಕೊಟ್ಟಿದೆ.

ಕಲಿದೋದುವಲಿಕು ಬಿಚ್ಚುಗರಪ್ಪ ಮಾನ ವಿರದ
ಒರೆದೊರೆದು ತಿದ್ದಿ ತಿಳಿಸಿದರು ಬಗೆವುದದ
ಕರಿಯಾತಕ ಕಲಿವೆಡೆಗೆ ತುರುಕಿದರೆ ಬರ್ಪುದೇಂ
ಹರಿದ ಹಳೆ ಹಚ್ಚಡದ ಜೋಲಿಗೆಯೊಲೊ ತಮ್ಮ||

ಬೇಡಿದಂತೆಲ್ಲ ಕೈಯೊಗ್ಗದಿರಲೊಂದಾಗಿ
ಕೂಡಿ ಕಿಕ್ಕಿರಿದಿಕ್ಕಿ ಕಿರಿಚಿ, ಬೀಧರ ಕಾಡಿ, ಕಂಡೊಡವೆಗಳ ಪಾಳ್ಗೈವ
ಕಾಡ ಮಂಗಗಳಾಟವಾದಪೆಂ ತಮ್ಮ||

ಪ್ರಾಂತಗಳ ವಿಂಗಡಣೆ ಭಾಷೆಯ ಆಧಾರದ ಮೇಲೆನಡೆಯಿತು. ಅದರೊಂದಿಗೆ ಹುಟ್ಟಿಕೊಂಡಿತು ಗಡಿ ಗಲಾಟೆ. ಆ ಹೆಸರಿನಲ್ಲಿ ನಿತ್ಯ ನಡೆಯುತ್ತಿರುವ ಹರತಾಳ, ಸಭೆ, ಮೆರವಣಿಗೆ, ಕಲಹ, ಕೊಲೆ-ಸುಲಿಗೆ ಮುಗಿಲು ಮುಟ್ಟಿದೆ. ಇದರಿಂದ ತತ್ತರಿಸಿದ ಕವಿಗಳು ಎತ್ತಿದ ಉದ್ಗಾರವಿದು.

ಗಡಿಗಸಣೆಯೆಂಬೊಂದು ಗಾಳಿ ಚರ್ವೆ ಯೆದ್ದಿರ್ಪ
ಕಿಡಿಕಾರಿ, ಹೊಗೆಹೊಗೆಯ ಹೊತ್ತಿ ಹೊಡಕರಿಸಿ
ಸುಡುವುದಡಿಗಡಿಗೆ, ಕಂಡೆಡೆಗಳನು ಹೊರನೊಳಗು
ಬಿಡದೆ ಕಣಿಸುವರಾರು ಬಿರುವರೊಳು ತಮ್ಮ||

ಹೊರಗಿನಿಂದ ಬಂದವರನ್ನು ಅಂತಃಕರಣದಿಂದ ಬರಮಾಡಿಕೊಂಡು ಅವರಿಗೆ ರಾಜೋಚಿತ ಮರ್ಯಾದೆಯನ್ನೂ, ಭೂರಿ ಭೋಜನವನ್ನೂ ಹಾಕಿ ಸತ್ಕರಿಸುತ್ತೇವೆ. ಅವರು ತಮ್ಮ ನಾಯಕರ ಸಿದ್ಧಿ-ಸಾಧನೆಗಳನ್ನು ಮುಕ್ತ ಕಂಠದಿಂದ ಹೊಗಳುತ್ತಾರೆ, ಅಧಿಕಾರದಲ್ಲಿರುವವರು ಅದರಿಂದ ಬೀಗುತ್ತಾರೆ, ನಿಜವಾದ ಭಾರತ ಅವರ ಕಣ್ಣಿಗೆ ಬೀಳುವುದಿಲ್ಲ. ಕವಿಗಳು ಈ ಚುಚ್ಚು ಮಾತಿನಲ್ಲಿ ಅವನ್ನಿಂತು ಎಚ್ಚರಿಸುತ್ತಾರೆ—

ತಂಡೋಪತಂಡಂ ಬಂದುಂಡು ಪೊಗಳ್ವ ಪರ-
ಮಂಡಲದ ಮನ್ನೆಯರು ಭಾರತಾಂಬಿಕೆಯ
ದುಂಡು ಮೋರೆಯ ಮುಸ್ಸ್ಮಿತಿ ಕಾಣ್ಬರಲ್ಲದೆಡೆ
ಗುಂಡಿಗೆಯ ಬಡತನವ ಕಾಣರೊ ತಮ್ಮ||

ಸ್ವಾತಂತ್ರ್ಯ ಬಂದ ಮೊದಲುಗೊಂಡು ನಾವು ಅಭಿವೃದ್ಧಿ ಕಾರ್ಯಕ್ಕಾಗಿ ಸಾಲ ಎತ್ತುತ್ತಲೇ ಬಂದಿದ್ದೇವೆ. ಅದು ಹನುಮಂತನ ಬಾಲದಂತೆ ಬೆಳೆದಿದೆ. ಅದನ್ನು ಎಂದು, ಯಾರು, ಹೇಗೆ ತೀರಿಸುತ್ತಾರೋ ತಿಳಿಯದು. ತ.ದಿ. ಕಲೆಯಲ್ಲಿ ಈ ಪ್ರವೃತ್ತಿಯನ್ನು ಕವಿ ಹೀಗೆ ಛೇಡಿಸುತ್ತಾರೆ.

ಹತ್ತೆಂಟು ದೇಶಗಳ ತಿರುಗಿ ಕಂಡುದನಿಲ್ಲಿ
ಬಿತ್ತಿ ಬೆಳೆಯಿಸಲಾರದಾದೊಡದು ಚಂದ
ಎತ್ತು ಬಿತ್ತುವ ಕೆಲಸಕ್ಕಾಗಿ ಮೊದಲೇ ಸಾಲ
ಬಿತ್ತಿ ತಂದರೆ ಚಂದವೆತ್ತಣದೊ ತಮ್ಮ||

ವಿಮರ್ಶಿಸಿದ ಎಲ್ಲ ವಿಷಯಗಳ ಮೇಲೂ ತಮ್ಮ ಖಚಿತವಾದ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಅದನ್ನು ಓದಿದವರು ಎಷ್ಟು ಮಂದಿ? ಅವರು ಹುಟ್ಟಿ ಬೆಳೆದು ಬಾಳುವ ಕನ್ನಡ ಜಿಲ್ಲೆಯವರು ಓದಿದ್ದಾರೋ—ಇಲ್ಲವೋ? ಅವರ ಇತರ ಕೃತಿಗಳನ್ನೋ ಓದಿದಾಗ ಅವರು ಈ ಶತಮಾನದ ಬೆಳವಣಿಗೆಗೆ ಬರುವ ಕವಿಗಳಲ್ಲಿ ಒಬ್ಬರೆಂದು ಧೈರ್ಯವಾಗಿ ಹೇಳಬಹುದು. ಆದರೆ ಓದಿ, ಒಪ್ಪಿಕೊಳ್ಳುವ ಪೂರ್ವಗ್ರಹ ರಹಿತವಾದ ಮನಸ್ಸು ಬೇಕಲ್ಲ. ಅವರ ನುಡಿನಲ್ಲೇ ಈ ಲೇಖನ ಮುಗಿಸುವೆ.

ಕಾಸು ಕವಡೆಗಳ ಬೆಲೆಯರಿದ ಮಾಕ್ಕಳುಗಳಿಂ
ಲೇಸಿದೆಂದೆನಗಿಂದು ಬಂಜೆತನವೆಂದು
ಬಾಸೆರೆದ್ ಒಸಗೆದ್ ಸಂತಸಗೊಂಡು ನಗೆ—
ಸೂಸಿ ಮುದ್ದಿಸಲಿ ಕಿರುದೂಸಿದನ ತಮ್ಮ,

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಮಾನ್ಯರೆ,

ಇಂದಿನ ಸನ್ನಿವೇಶದಲ್ಲಿ ನಮ್ಮ ಜನರಲ್ಲಿ ತಕ್ಕ ರಾಜಕೀಯ ಜಾಗೃತಿ ಹಾಗೂ ದೇಶದ ಸಾಂಸ್ಕೃತಿಕ ಜೀವನದ ಪರಿಚಯವನ್ನು ಮೂಡಿಸುವುದು ತಿಳಿದವರೆಲ್ಲರ ಕರ್ತವ್ಯವಾಗಿದ್ದು, ಈ ದಿಸೆಯಲ್ಲಿ ದೇಶದ ಪತ್ರಿಕೆಗಳು ಅವಶ್ಯವಾಗಿಯೂ ದುಡಿಯಬೇಕು ಎಂಬ ಧ್ಯೇಯ ಧೋರಣೆಗಳನ್ನು ತಳೆದು, ಶ್ರೀ. ಕೆ. ಮಾನ್ಯ ಎ. ಬಿ. ಶೆಟ್ಟರು ತಮ್ಮೆಲ್ಲರ ಮೆಚ್ಚುಗೆಯ 'ನವಯುಗ' ಪತ್ರಿಕೆಯನ್ನು ಸ್ಥಾಪಿಸಿ ಇದೀಗ ಐವತ್ತು ವರ್ಷಗಳಾದುವು. ಜನರನ್ನು ಎಚ್ಚರಿಸುವಲ್ಲಿ, ಅವರಲ್ಲಿ ತಕ್ಕ ಕರ್ತವ್ಯಪ್ರಜ್ಞೆಯನ್ನು ಮೂಡಿಸುವಲ್ಲಿ, ಈ ಪತ್ರಿಕೆ ತನ್ನ ಅಳಿಲಸೇವೆಯನ್ನು ಈಗಲೂ ಸಲ್ಲಿಸುತ್ತಲಿದೆ.

ಎಂದಿನಂತೆ ಬರುವ ಜನವರಿ 26, 1971ರಲ್ಲಿ ಪ್ರಕಟವಾಗುವ 'ಗಣರಾಜ್ಯ ಸ್ಥಾಪನೆ'ಯ ಸ್ಮಾರಕ ಸಂಚಿಕೆಯಲ್ಲಿ ನಾಮಾಂಕಿತ ಬರಹಗಾರರ ಲೇಖನಗಳನ್ನು ಪ್ರಕಟಿಸಿ ತನ್ನ ಸೇವೆ ಮಾಡುವುದರೊಡನೆ, ರಾಜ್ಯದ—ದೇಶದ—ಸರ್ವಾಂಗೀಣ ಪ್ರಗತಿಗೆ ಕಾರಣವಾದ ನಮ್ಮ ಉದ್ದಿಮೆಗಳು ಏನನ್ನು ತಯಾರಿಸುತ್ತಲಿವೆ? ಏನನ್ನು ಒದಗಿಸುತ್ತಲಿವೆ? ಎಂಬುದನ್ನೂ ಪ್ರಕಟಿಸುವುದು ನಮ್ಮ ಘನ ಉದ್ದೇಶವಾಗಿದ್ದು, ಈ ಬಗ್ಗೆ ತಕ್ಕ ಜಾಹಿರಾತುಗಳನ್ನು ತಾವು ಒದಗಿಸುವಂತೆ ಈ ಮೂಲಕ ಕೇಳಿಕೊಳ್ಳುತ್ತೇವೆ. ಸಿದ್ಧ ವಸ್ತುಗಳ ಬಗ್ಗೆ ತಕ್ಕಷ್ಟು ಪ್ರಚಾರ ಕೈಕೊಂಡರೇನೇ ಇವುಗಳ ವಿತರಣೆ ಹಾಗೂ ಮುಂದೆ ಇವುಗಳ ಸುಧಾರಣೆಗೂ ಅವಕಾಶವಿದೆ ಎಂಬುದನ್ನು ಬೇರೆ ಹೇಳಬೇಕೆ?

ಎಂತಲೇ, ಅದಷ್ಟು ತ್ವರಿತವಾಗಿ 10—1—1971ರೊಳಗೆ ಜಾಹೀರಾತುಗಳು ನಮಗೆ ಮುಟ್ಟುವಂತೆ ಕಳುಹಿಸಿರಿ, ಹಾಗೂ ನಮ್ಮೊಡನೆ ಸಹಕರಿಸಿರಿ ಎಂದು ಪ್ರಾರ್ಥನೆ.

ನವಯುಗದ 1971ರ ಪ್ರಜಾರಾಜ್ಯ ಸಂಚಿಕೆ—

ನಿಮ್ಮ ಸಂಸ್ಥೆಯ ಜಾಹೀರಾತಿಗೆ ಉತ್ತಮ ಸಾಧನವಾಗಿದೆ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. No. 90/1970

ಚಂದಮ್ಮ ಸೆಡ್ತಿ —ವಾದಿಳು
ಗುಲಾಬಿ ಹೆಗ್ಗಡ್ತಿ ಕೂಡಾ 6 ಜನರು —ಪ್ರತಿವಾದಿರು

ಸದ್ರಿ ದಾವೆಯ 1.2.4ನೆ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

1ನೆ ಪ್ರತಿವಾದಿಳು ಗುಲಾಬಿ ಹೆಗ್ಗಡ್ತಿ, 2ನೆ ಪ್ರತಿವಾದಿಳು ಪದ್ಮಾವತಿ ಹೆಗ್ಗಡ್ತಿ, 4ನೆ ಪ್ರತಿವಾದಿ ವಿಟ್ಠಲ ಹೆಗಡೆ—ಮುತ್ತಕ್ಕ ಹೆಗ್ಗಡ್ತಿರ ಮಕ್ಕಳು.

1ನೆ ಪ್ರತಿವಾದಿಳು ಉಡುಪಿ ತಾಲ್ಲೂಕ ಕಚ್ಚೂರು ಗ್ರಾಮದ ಬಾರಕೂರಲ್ಲಿಯೂ 2ನೆ ಪ್ರತಿವಾದಿಳು ಕುಂದಾಪುರ ತಾಲ್ಲೂಕ ಕೋಣಿ ಗ್ರಾಮದಲ್ಲಿಯೂ 4ನೆ ಪ್ರತಿವಾದಿಯು ಉಡುಪಿ ತಾಲ್ಲೂಕ ಶಿರಿಯಾರ ಗ್ರಾಮದ ಗಿಂಬಳಕಟ್ಟೆಯಲ್ಲಿಯೂ ವಾಸ ಇರುತ್ತಾರೆ.

ಇವರಿಗೆ

ಪ್ರತಿವಾದಿರಿಂದ ವಾದಿಗೆ ತಾ. 16.1.1946 ನೆ ವಿಭಾಗ ಪತ್ರದ ಪ್ರಕಾರ ಬರಿ ಜೀವನಾಂಶದ ಸಗ್ರಿ ಬಗ್ಗೆ ವಾದಿಳು ನಾಲಿಶು ಮಾಡಿದ ಮೇಲಿನ ದಾವೆಯು ತಾರೀಕು 28.1.1971 ನೇ ದಿವಸ ಬೆಳಿಗ್ಗೆ 11 ಗಂಟೆಗೆ ಸದ್ರಿ ಕೋರ್ಟಿನಲ್ಲಿ ತನಿಖೆಗೆ ಇಟ್ಟದೆ ಎಂಬ ಸಂಗ್ತಿ ಈ ಮೂಲಕ ನಿಮಗೆ ತಿಳಿಸೋಣಾಗಿಯದೆ.

[ಕೋರ್ಟಿನ ಹುಕುಂ ಪ್ರಕಾರ]

M. ಅಂತಯ್ಯ ಶೆಟ್ಟಿ
ಎಡ್ವೊಕೇಟ್

ಕುಂದಾಪುರ,)
ತಾರೀಕು 19.12.70)

Edited, Printed & Published by K. H. Shetty at the Navayuga Press, Udipi, S. India.